ಡಾ. ಸಿದ್ಧಯ್ಯ ಪುರಾಣಿಕರ (ಕಾವ್ಯಾನಂದ)

# ಸಮಗ್ರ ಗದ್ಯ – ಭಾಗ ೧

## ಶರಣ ಚರಿತಾಮೃತ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002

**SAMGRA GADYA BHAGA - 1 (SHARANA CHARITAMRUTA) :**
Written by Dr. Siddayya Puranik, Published by: Director,
Department of Kannada and Culture, Kannada Bhavan,
J.C. Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮೊದಲನೆಯ ಮುದ್ರಣ : ೨೦೧೯

ಪ್ರತಿಗಳು : ೧೦೦೦

ಪುಟಗಳು : xxvi + ೯೧೮

ಕಾಗದ : ೮೦ GSM N.S. Maplitho

ಬೆಲೆ : ರೂ.

ಡಾ. ಸಿದ್ಧಯ್ಯ ಪುರಾಣಿಕರ (ಕಾವ್ಯನಂದ) ಸಮಗ್ರ ಗದ್ಯ
ಕೃತಿಗಳು ೩ ಭಾಗದಲ್ಲಿ ಪ್ರಕಟವಾಗಿವೆ.

**ಭಾಗ ೧ – ಬೆಲೆ ರೂ.**
**ಭಾಗ ೨ – ಬೆಲೆ ರೂ.**
**ಭಾಗ ೩ – ಬೆಲೆ ರೂ.**

ರಕ್ಷಾಪತ್ರ ವಿನ್ಯಾಸ : **ಲಾವಣ್ಯ ಮುದ್ರಣ,** ಬೆಂಗಳೂರು.

ಛಾಯಾಕ್ಷರ ಜೋಡಣೆ : **ಎಂ.ಎಸ್.ಗ್ರಾಫಿಕ್ಸ್, ಬೆಂಗಳೂರು**

ಮುದ್ರಕರು :
**ಲಾವಣ್ಯ ಮುದ್ರಣ**
ನಂ.19, ವಿದ್ಯಾಪೀಠ ವೃತ್ತ, ಬಿ.ಎಸ್.ಕೆ. 1ನೇ ಹಂತ,
ಬೆಂಗಳೂರು – 560 050
ಮೊಬೈಲ್ : 98450 63381

# ಪ್ರಕಾಶಕರ ಮಾತು

ಕನ್ನಡ ಓದುಗರಿಗೆ ಸುಲಭ ಬೆಲೆಯಲ್ಲಿ ಉತ್ತಮ ಕೃತಿಗಳು ಲಭ್ಯವಾಗಬೇಕೆನ್ನುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವಾರು ಪ್ರಕಟಣಾ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯರೂಪಕ್ಕೆ ತರುತ್ತಿದೆ.

ಡಾ. ಸಿದ್ಧಯ್ಯ ಪುರಾಣಿಕರ ಜನ್ಮ ಶತಮಾನೋತ್ಸವದ ಅಂಗವಾಗಿ ಅವರ ಸಮಗ್ರ ಕಾವ್ಯ, ಸಮಗ್ರ ವಚನ, ಸಮಗ್ರ ನಾಟಕ ಮತ್ತು ಸಮಗ್ರ ಗದ್ಯದ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಕಾಣೆಯಾಗುತ್ತಿದ್ದ ಕಾಲದಲ್ಲಿ ಅದಕ್ಕೆ ಆಸರೆಯಾಗಿ ನಿಂತು ಕನ್ನಡವನ್ನು ಪುನರುಜ್ಜೀವಗೊಳಿಸಿದ ಡಾ. ಸಿದ್ಧಯ್ಯ ಪುರಾಣಿಕರು ನಿರ್ಜೀವವಾಗುತ್ತಿದ್ದ ಕನ್ನಡ ಸಂಘ–ಸಂಸ್ಥೆಗಳಿಗೆ ಜೀವ ತುಂಬಿದವರು. ಸರ್ಕಾರದ ಅಧಿಕಾರಿಯಾಗಿ ದಕ್ಷ, ಸ್ವಚ್ಛ ಮತ್ತು ನಿಸ್ಪೃಹ ಆಡಳಿತಗಾರರೆಂದು ಪ್ರಖ್ಯಾತಿ ಪಡೆದಿದ್ದರು.

ಡಾ. ಸಿದ್ಧಯ್ಯ ಪುರಾಣಿಕರು "ಕಾವ್ಯಾನಂದ" ಕಾವ್ಯನಾಮದಿಂದ ಕವಿತೆ, ಕಥೆ, ಕಾದಂಬರಿ, ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ನಾಟಕ, ವಚನ ಸಾಹಿತ್ಯ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸುಮಾರು 38 ಕೃತಿಗಳನ್ನು ರಚಿಸಿದ್ದಾರೆ. ಉತ್ತಮ ವಾಗ್ಮಿ, ವಿಮರ್ಶಕ ಮತ್ತು ವಿದ್ವಾಂಸರಾಗಿದ್ದು ಡಾ. ಸಿದ್ಧಯ್ಯ ಪುರಾಣಿಕರಿಗೆ ಅನೇಕ ಸಮ್ಮೇಳನಗಳ ಅಧ್ಯಕ್ಷತೆಯ ಗೌರವ, ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಬಿಲ್ವಾರ ಪ್ರಶಸ್ತಿ ಮುಂತಾದ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಅನೇಕ ಕೃತಿಗಳು ಇತರ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಕುವೆಂಪುರವರು ಡಾ. ಸಿದ್ಧಯ್ಯ ಪುರಾಣಿಕರು ಒಬ್ಬ ಅಪರೂಪದ ವ್ಯಕ್ತಿ ಎಂದು ಹೀಗೆ ಹೇಳಿದ್ದಾರೆ :

"ಜ್ಞಾನ, ಅಧಿಕಾರ, ವಿನಯ, ಸೌಜನ್ಯಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬಾ ಅಪರೂಪ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವಾಗಿದೆ. ಇದಕ್ಕೆ ಅಪರೂಪವಾಗಿ ನಿಂತ ಪ್ರತಿಭಾಶೀಲ – ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು. ಮೊದಲ ಬಾರಿಗೇ ಅವರು ನನ್ನನ್ನು ತಮ್ಮ ಬರವಣಿಗೆಯಿಂದ ಹೇಗೋ ಹಾಗೆ ಸುಸಂಸ್ಕೃತ ವ್ಯಕ್ತಿತ್ವದಿಂದಲು ಆಕರ್ಷಿಸಿದರು. ಆ ಆಕರ್ಷಣೆ ದಶಕಗಳ ಕಾಲ ಮಾಸದೆ ಹಾಗೆಯೇ ಉಳಿದಿದೆ."

ಈ ಎಲ್ಲಾ ಸಮಗ್ರ ಕೃತಿಗಳನ್ನು ಹೊರತರಲು ಸಹಕರಿಸಿದ ಜಂಟಿ ನಿರ್ದೇಶಕರಾದ ಶ್ರೀ ಕೆ.ಎಚ್. ಚೆನ್ನೂರ ಅವರಿಗೆ ಮತ್ತು ಇತರ ಅಧಿಕಾರಿ ಸಿಬ್ಬಂದಿಗೆ, ಕರಡುಪ್ರತಿಯನ್ನು ತಿದ್ದಲು ನೆರವಾದ, ವಿದ್ವಾಂಸರಾದ ಶ್ರೀ ಶಾ.ಮಂ. ಕೃಷ್ಣರಾಯ ಅವರಿಗೆ, ಈ ಸಂಪುಟಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಲಾವಣ್ಯ ಮುದ್ರಣದ ಮಾಲೀಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಮತ್ತು ಈ ಎಲ್ಲ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಲು ಅನುಮತಿ ನೀಡಿದ ಡಾ. ಸಿದ್ಧಯ್ಯ ಪುರಾಣಿಕರ ಪುತ್ರರಾದ ಶ್ರೀ ಪ್ರಸನ್ನಕುಮಾರ ಪುರಾಣಿಕ ಅವರಿಗೆ ನನ್ನ ಕೃತಜ್ಞತೆಗಳು.

ಕನ್ನಡದ ಧೀಮಂತ ಕವಿ, ವಿಮರ್ಶಕರಲ್ಲಿ ಒಬ್ಬರಾದ ಡಾ. ಸಿದ್ಧಯ್ಯ ಪುರಾಣಿಕರ ಸಮಗ್ರ ಕೃತಿಗಳು ಸುಲಭ ಬೆಲೆಯಲ್ಲಿ ಕನ್ನಡಿಗರಿಗೆ ಒದಗಿಸುವುದು ನಮ್ಮ ಆಶಯ. ಈ ಕೃತಿಗಳನ್ನು ಸಾಹಿತ್ಯಾಸಕ್ತರು ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇವೆ.

– **ಶ್ರೀ ಎಸ್. ರಂಗಪ್ಪ** FCA, (ಕ.ಆ.ಸೇ.)
ನಿರ್ದೇಶಕರು

# ಮುನ್ನುಡಿ

**"ಸಾಮಾನ್ಯತೆ ಭಗವಂತನ ರೀತಿ**
**ಸಾಮಾನ್ಯವೆ ಭಗವತ್ ಪ್ರೀತಿ"**

ಶ್ರೀ ಸಿದ್ಧಯ್ಯ ಪುರಾಣಿಕರು ಅರ್ವಾಚೀನ ಶ್ರೀ ಸಾಮಾನ್ಯರಿಗೆ ಪ್ರಾಚೀನ ಸಾಮಾನ್ಯತಾಶ್ರೀಯನ್ನು ಸುಲಭ ಮಧುರ ರೂಪದಲ್ಲಿ ಊಣಬಡಿಸಿದ್ದಾರೆ, ಅವರ ಈ 'ಶರಣ ಚರಿತಾಮೃತ'ದಲ್ಲಿ,

ಭಾಷೆಯಲ್ಲಿ, ಛಂದಸ್ಸಿನಲ್ಲಿ, ಭಾವಗಳಲ್ಲಿ, ವಸ್ತುವಿನ ಆಯ್ಕೆಯಲ್ಲಿ, ದರ್ಶನದಲ್ಲಿ ವೀರಶೈವ ಶ್ರದ್ಧಾಭಕ್ತಿಗಳಿಂದ ಪ್ರಚೋದಿತವಾದ ಕನ್ನಡ ಸಾಹಿತ್ಯದ ದ್ವಿತೀಯ ನವೋದಯದ ಅಗ್ರಗಣ್ಯ ವೈಶಿಷ್ಟ್ಯವೆಂದರೆ 'ಕಾಯಕ' ತತ್ವಬೋಧೆ: ಜೀವನಯಾಪನೆಗಾಗಿ ಯಾರೇ ಆಗಲಿ ಯಾವ ವೃತ್ತಿಯನ್ನೇ ಕೈಗೊಳ್ಳಲಿ ಧರ್ಮ ದೃಷ್ಟಿಯಲ್ಲಿ ಉಚ್ಚ ನೀಚ ಭೇದವಿಲ್ಲ; ಶ್ರದ್ಧೆ ಭಕ್ತಿ ಶರಣಾಗತಿ ಪ್ರಪತ್ತಿ ಸಮರ್ಪಣೆ ಸಮತೆ ಇವುಗಳ ಅನುಷ್ಠಾನವಿದ್ದಲ್ಲಿ ಅವರು ಅತ್ಯಂತ ಪವಿತ್ರರೂ ಪೂಜ್ಯರೂ ಆಗಿ ಸರ್ವೋಚ್ಚ ದಿವ್ಯ ಪದವಿಗೇರುತ್ತಾರೆ.

ಉತ್ತಮ ವರ್ಗದವರಿಗೆ ಮಾತ್ರ ಮೀಸಲು ಎಂದು ಭ್ರಮಿಸಿದ್ದ ಭಕ್ತಿ, ಜ್ಞಾನ, ಭಗವದನುಭೂತಿ ಮತ್ತು ಆಧ್ಯಾತ್ಮಿಕ ಉನ್ನತಿ ಇವುಗಳಿಗೆ ಸಾಮಾನ್ಯ ಜನರೂ ಕೆಳವೃತ್ತಿಯವರೆಂದೂ ಕೀಳು ಜಾತಿಯವರೆಂದೂ ಮೂಲೆಗೆ ತಳ್ಳಿಸಿ ಕೊಂಡು ಅನಾಮಧೇಯರೂ ಅಜ್ಞಾತರೂ ಆಗಿ, ದೇವಸ್ಥಾನಗಳಿಗೂ ರಾಜಾಸ್ಥಾನಗಳಿಗೂ ಬಹುದೂರದಲ್ಲಿಯೆ ನಿಂತಿರುತ್ತಿದ್ದವರೂ ಸಾಧಕರಾಗಿ, ಶರಣರಾಗಿ, ಸಿದ್ಧರಾಗಿ ಪರಮ ಶ್ರೇಯಸ್ಸಿನ ಮಹೋನ್ನತ ಶಿಖರಗಳಿಗೆ ಏರಿದ ರೋಮಾಂಚಕ ನಿದರ್ಶಗಳನ್ನೊಳಗೊಂಡ ಈ ಕಥನ ಕೃತಿ ನಮ್ಮ ಸಾಮಾನ್ಯ ಜನವರ್ಗಕ್ಕೆ ಆಶೆ ಧೈರ್ಯ ಆತ್ಮಗೌರವಗಳನ್ನು ದಯಪಾಲಿಸಿ. ಅವರನ್ನು ರಾಜಕೀಯ ಪ್ರಜಾಸತ್ತೆಗೆ ಮಾತ್ರವಲ್ಲದೆ ಆಧ್ಯಾತ್ಮಿಕವಾದ ಆತ್ಮಶ್ರೀಯ ಪ್ರಜಾಸತ್ತೆಗೂ ಅಧಿಕಾರಗಳನ್ನಾಗಿ ಮಾಡುವುದರಲ್ಲಿ ಸಂದೇಹವಿಲ್ಲ.

ಸಂಸ್ಕೃತದಲ್ಲಿ ಈ ಅರ್ಥ ಬರುವ ಒಂದು ಸೂಕ್ತಿ ಇದೆ:

ಯಾರಿಗಿರದೋ ನಿಜಪ್ರಜ್ಞೆ
ಬಹುಶ್ರುತನೊ ಕೇವಲ,
ಸಾರೊಳಗಿಹ ಸೌಟಿನಮೊಲೆ
ಶಾಸ್ತ್ರಾರ್ಥದಿ ಸುವಿಫಲ !

ಇಲ್ಲಿ ಬರುವ ಅನೇಕ ಜೀವನ ಚರಿತ್ರೆಗಳಲ್ಲಿ ಬಹುಪಾಲು ಭಾವೋಪಯೋಗಿಯಾಗಿರುವ ಪ್ರತಿಮಾವಿಧಾನದ ಪ್ರತೀಕಗಳಂತಿವೆ. ಅವುಗಳಲ್ಲಿ ಎಲ್ಲದರಲ್ಲಿಯೂ ಲೋಕಸಂವಾದವನ್ನೆ ನಿರೀಕ್ಷಿಸಿ, ವಾಚ್ಯಾರ್ಥದಲ್ಲಿಯೂ ಅವು ಅಕ್ಷರಶಃ ಸತ್ಯಗಳೆಂದು ಭಾವಿಸಿ, ಪವಾಡಗಳನ್ನೆ ಅಧ್ಯಾತ್ಮದ ಪ್ರಗತಿಯ ಲಕ್ಷಣಗಳೆಂದು ತಿಳಿದು ಮೌಢ್ಯದ ಅಧೋಗತಿಗೆ ನಮ್ಮ ಜನತೆ ಇಳಿಯಬಾರದು. ಶರಣರ ಜೀವನ ಚರಿತ್ರೆಯ ತಾತ್ಪರ್ಯವನ್ನೂ ಹೃದಯವನ್ನೂ ದರ್ಶನಧ್ವನಿಯನ್ನೂ ಗ್ರಹಿಸಿ, ಆಧುನಿಕವಾದ ವೈಜ್ಞಾನಿಕ ದೃಷ್ಟಿಯಿಂದಲೂ ವಿಚಾರಬುದ್ಧಿಯಿಂದಲೂ ಅವರು ಮುಂದುವರಿದರೆ ಸರ್ವಧರ್ಮ ಸಮಾನತೆಯ ಮೇಲೆ ನಿಂತಿರುವ ಭಾರತರಾಷ್ಟ್ರಕ್ಕೆ ಶಾಸ್ವತವೂ ಸ್ಥಿರವೂ ಆಗಿರುವ ಅಡಿಪಾಯ ಸಿದ್ಧವಾಗುತ್ತದೆ ; ಲೋಕಕ್ಕೂ ಮಾರ್ಗದರ್ಶನವಾಗಬಹುದು.

ಇಂತಹ ಉತ್ತಮ ಗದ್ಯಕೃತಿಯನ್ನು ಕನ್ನಡ ಜನತೆಗೆ ನೀಡಿದ ಅದರ ಭಾವುಕ ಕವಿಯೂ ಅಂತಹ ಸಾಹಿತ್ಯವನ್ನು ಪ್ರಕಟಿಸಿ ಜನತಾಪ್ರಜ್ಞೆಯನ್ನು ಫಲವತ್ತಾಗಿ ಮಾಡುತ್ತಿರುವ ವಯಸ್ಕರ ಶಿಕ್ಷಣ ಸಮಿತಿಯೂ ಅಭಿನಂದನಾರ್ಹರು.

**– ಕುವೆಂಪು**

೧೩–೮–೧೯೬೪
ಮೈಸೂರು

# ಮುಮ್ಮಾತು

ಕನ್ನಡ ಸಾಹಿತ್ಯದ ದ್ವಿತೀಯ ನವೋದಯಕ್ಕೆ. ನಮ್ಮ ನಾಡಿನ ನವಧರ್ಮೋದಯಕ್ಕೆ. ನಾಡಿಗರ ನವಜನ್ಮಕ್ಕೆ, ನವಜೀವನಕ್ಕೆ. ನೈತಿಕ ಪುನರುತ್ಥಾನಕ್ಕೆ ಮತ್ತು ಶ್ರೀಸಾಮಾನ್ಯರ ಸಮುದ್ಧರಣಕ್ಕೆ ಕಾರಣವಾದ ಶಿವಶರಣರ ಪವಿತ್ರ ಚರಿತ್ರೆಯ ಅಮೃತಸರೋವರದಲ್ಲಿ ಅವಗಾಹನ ಮಾಡುವ ಮೊದಲು ಈ ಸರೋವರಕ್ಕೆ ಸೆಲೆಗಳಾವುವು. ಈ ಅಂದೋಲನಕ್ಕೆ ಹಿನ್ನಲೆ ಯಾವುದು, ಈ ಮಹಾಮಾನವರು ನಂಬಿದ್ದ ಬಾಳಬೆಲೆಗಳಾವುವು–ಎಂಬುದನ್ನು ಸಂಗ್ರಹವಾಗಿ ವಿವರಿಸುವುದು ಅಗತ್ಯವೆನಿಸುತ್ತಿದೆ.

ಪ್ರಪಂಚದ ಪ್ರಾಚೀನತಮ ಧರ್ಮಗಳಲ್ಲಿ ಶೈವಧರ್ಮವೂ ಒಂದು. ಸೈಂಧವೀ ಸಂಸ್ಕೃತಿಯ ಜನಾಂಗದಲ್ಲಿ, ಮೆಸೋಪೋಟೇಮಿಯಾ, ಬಾಬಿಲೋನ್–ಗ್ರೀಕ್–ಈಜಿಪ್ಟ್ ಮುಂತಾದ ನದೀಸಂಸ್ಕೃತಿಗಳ ಜನಾಂಗಗಳಲ್ಲಿ, ಆಗ್ನೇಯ ಏಷ್ಯಾದ ದೇಶಗಳಲ್ಲಿ ನೇಪಾಳ ಭೂತಾನಗಳಲ್ಲಿ ಶಿವೋಪಾಸನೆಯಿದ್ದಿತು. ಈಗಲೂ ಅಲ್ಲಲ್ಲಿ ಉಳಿದಿದೆ. ಭಾರತದಲ್ಲಿ ಅದು ಇಂದಿಗೂ ವ್ಯಾಪಕ ಧರ್ಮಗಳಲ್ಲೊಂದಾಗಿ ಉಳಿದಿದೆ. ವೇದಗಳಲ್ಲಿ ಶಿವೋಪಾಸನೆಗೆ ಆಧಾರವಾದ ಮಂತ್ರಗಳಿವೆ; ರಾಮಾಯಣ ಮಹಾಭಾರತಗಳಲ್ಲಿ ಶಿವಾರಾಧನೆ ಬಂದಿದೆ ; ಶಿವಪುರಾಣಗಳು ಪ್ರಸಿದ್ಧವಾಗಿಯೇ ಇವೆ ; ರಾಕ್ಷಸರೆಂದು ವರ್ಣಿತರಾಗಿರುವ ರಾವಣ ಬಾಣಾದಿ ವೀರರು ಪರಮ ಶಿವಭಕ್ತರೆನಿಸಿದ್ದಾರೆ ; ಬುದ್ಧನಿಂದ ಉಪದಿಷ್ಟನಾದ ಅಲಾಲಕುಮಾರ ಋಷಿಯು ಶೈವನೆಂದುತಿಳಿದುಬಂದಿದೆ ; ಕಾಳಿದಾಸ ಭೋಜಾದಿ ಮಹಾಕವಿಗಳೂ ಉಪಮನ್ಯ ಮೊದಲಾದ ಋಷಿಗಳೂ ಶ್ರೀ ಶಂಕರಭಗವತ್ಪಾದರೂ ಶಿವೋಪಾಸಕರೆಂಬುದು ಸರ್ವಶ್ರುತವಿದೆ; ಕುಶಾನ, ಹೂಣ, ಭಗನಾಗ, ಮರ್ತಾರಕ, ಚೋಳ, ಪಲ್ಲವ, ಕದಂಬ, ಚಾಳುಕ್ಯ, ವಿಜಯನಗರ, ಕಾಕತೀಯ ಇತ್ಯಾದಿ ರಾಜವಂಶಗಳ ಅರಸರನೇಕರು ಶಿವಭಕ್ತರಾಗಿದ್ದುದು ಇತಿಹಾಸಪ್ರಸಿದ್ಧ ವಿಷಯವಾಗಿದೆ ; ಭಾರತದ ದ್ವಾದಶ ಜ್ಯೋರ್ತಿಲಿಂಗಗಳು ಅಗಣಿತ ಶಿವಮಂದಿರಗಳೂ ಶಿವಧರ್ಮದ ಜನಪ್ರಿಯತೆಗೆ, ವ್ಯಾಪಕತೆಗೆ ನಿದರ್ಶನಗಳಾಗಿವೆ ನಿಂತಿವೆ. ಇತಿಹಾಸ ಪೂರ್ವಕಾಲದಿಂದಲೂ ಶಿವನನ್ನು ಉಗ್ರ–ಸೌಮ್ಯ, ಭೀಕರ–ಸುಂದರ, ಕಠೋರ–ಕರುಣಾಮಯ ರೂಪಗಳಲ್ಲಿ ಭಾರತದ ಒಳಗೂ ಹೊರಗೂ ಅಸಂಖ್ಯರು ಆರಾಧಿಸುತ್ತ ಬಂದಿರುವುದು ನಿರ್ವಿವಾದವಾದುದಾಗಿದೆ.

ಉತ್ತರದ ಕಾಶ್ಮೀರದಲ್ಲಿ ವಸುಗುಪ್ತ–ಕಲ್ಲಟರ ಸ್ಪಂದಶಾಸ್ತ್ರ ಮತ್ತು ಸೋಮಾನಂದನ ಪ್ರತ್ಯಭಿಜ್ಞಾ ಶಾಸ್ತ್ರಗಳೂ ದಕ್ಷಿಣದ ತಮಿಳುನಾಡಿನಲ್ಲಿ ಅಪ್ಪಾರ್, ತಿರುಜ್ಞಾನಸಂಬಂಧಿ, ಸೌಂದರ ನಂಬಿ, ಸಿರಿಯಾಳಸೆಟ್ಟಿ, ಮಾಣಿಕ್ಯ ವಾಚಕರ್, ನಂಬಿಯಾಂಡಾರ್ ನಂಬಿ ಮೊದಲಾದ ಪುರಾತನರಿಂದ ರೂಪುಗೊಂಡ ಶೈವ ಸಿದ್ಧಾಂತವೂ ಶಿವಧರ್ಮವೃಕ್ಷದ ಶಾಖೆಗಳಾಗಿ ಒಡಮೂಡಿದುವು. ಸಂಸ್ಕೃತದಲ್ಲಿ ಸದ್ಯೋಜ್ಯೋತಿ, ಭೋಜರಾಜ, ರಾಜಾನಕ, ರಾಮಕಂಠ, ಶ್ರೀಕಂಠಸೂರಿ, ಸೋಮಶಂಭು, ಅಘೋರ ಶಿವ, ತ್ರಿಲೋಚನ ಶಿವ ಮೊದಲಾದ ಶೈವಾಚಾರ್ಯರೂ ತಮಿಳಿನಲ್ಲಿ ಉಯ್ಯವಂದದೇವರ್. ತಿರುಕ್ಕಡವೂರ ಉಯ್ಯವಂದ ದೇವರ್, ಮೆಯ್‌ಕಂಡ ದೇವರ್, ಅರುಳ್‌ನಂದಿ, ಮನವಾಸಗಂ ಕಡಂದ ದೇವರ್, ಉಮಾಪತಿ, ಶಕ್ಕೀರರ್ ಮುಂತಾದ ಶಿವಜ್ಞಾನ ಸಿದ್ಧರೂ ಅನೇಕ ಉದ್ಬೋಧಕ ಉದ್ಗ್ರಂಥಗಳನ್ನು ರಚಿಸಿ ಶಿವಧರ್ಮವು ಸರ್ವತ್ರ ಪಸರಿಸುವಂತೆಸಗಿದರು.

ಶಿವಧರ್ಮದ ಈ ಎರಡೂ ಪ್ರವಾಹಗಳ ಮತ್ತು ವೈದಿಕ ಧರ್ಮಪ್ರವಾಹದ ತ್ರಿವೇಣಿ ಸಂಗಮವಾಗಿ ಶರಣಧರ್ಮವು ತಲೆದೋರಿತು. ಶರಣರು ಉದಯಿಸಿದ ಹನ್ನೊಂದನೆಯ ಶತಮಾನದ ಉತ್ತರಾರ್ಧ ಮತ್ತು ಹನ್ನೆರಡನೆಯ ಶತಮಾನದ ಪೂರ್ವಾರ್ಧಗಳಲ್ಲಿ ಕನ್ನಡನಾಡು ರಾಜ್ಯಕ್ರಾಂತಿ ರಾಜಕೀಯ ಸಂಕ್ಷೋಭೆ–ಅಶಾಂತಿ–ಅನಿಶ್ಚಿತತೆ, ಮತಮತಗಳ ತುಮುಲಗಳ ವಿತಂಡ ತಾಂಡವಕ್ಕೆ ರಂಗವಾಗಿದ್ದಿತು. ಬುದ್ಧಯುಗದಿಂದೀಚೆಗೆ ಉದ್ಧರಿಸುವರಿಲ್ಲದೆ ದುರ್ಗತಿಗೀಡಾಗಿದ್ದ ಜನತೆಯ ಮೂಕಶೋಕವು ನಿಟ್ಟುಸಿರಾಗಿ ಹೊರಟು ದೇವಮಾನವರ ಬರುವಿಕೆಗಾಗಿ ದಾರಿ ಕೊರೆಯುತ್ತಲಿದ್ದಿತು. ಅಲ್ಲಲ್ಲಿ ಕಗ್ಗೊಲೆ–ಎಲ್ಲೆಲ್ಲೂ ಕಗ್ಗತ್ತಲೆ !

ಈ ಕಗ್ಗತ್ತಲೆಯ ಬಸಿರನ್ನು ಬಗಿದು ಬಂದರು ಶಿವಶರಣರು–ಬಸವನ ನೇತೃತ್ವದಲ್ಲಿ. 'ಕತ್ತಲೆ ಸತ್ತು ಬೆಳಕು ಬೀದಿವರಿಯಿತ್ತು ; ಈ ಬೆಳಗಿನ ಬಳಗದ ಬರುವಿಕೆಯಿಂದ. ಪತಿತರು, ಪಾಪಾತ್ಮರೆಂಬ ನಂಬಿಕೆಯಿಂದ ನಿರ್ವಿಣ್ಣರಾಗಿ, 'ನಡೆವಣ ನುಡಿವೆಣ'ಗಳಾಗಿ ಹೋಗಿದ್ದ ಜನತೆಗೆ, ಈ ಜನ್ಮದ ದುಃಖವೆಲ್ಲ ಪೂರ್ಣಜನ್ಮದ ಪಾಪದ ಫಲವೆಂಬ ನಂಬಿಕೆಯಿಂದ ನಿಷ್ಕ್ರಿಯರಾಗಿ ಹೋಗಿದ್ದ ಜನತೆಗೆ, ಈ ದುರವಸ್ಥೆಯಿಂದ ತಮಗೆಂದಿಗೂ ಮುಕ್ತಿಯಿಲ್ಲವೆಂಬ ನಂಬಿಕೆಯಿಂದ ನಿರಾಶವಾಗಿದ್ದ ಜನತೆಗೆ ಶರಣರ ಅಭಯವಾಣಿ ಅಪೂರ್ವಚೈತನ್ಯದಾಯಿನಿಯಾಗಿ, ಧೈರ್ಯವೀವ ದಿವ್ಯಧ್ವನಿಯಾಗಿ ಕೇಳಿಸಿತು :

'ಎಲವೊ, ಎಲವೋ ಪಾಪಕರ್ಮದ ಮಾಡದವನೆ,
ಎಲವೊ ಎಲ್ಲವೋ, ಬ್ರಹ್ಮಹತ್ಯದ ಮಾಡಿದವನೆ,
ಒಮ್ಮೆ 'ಶರಣೆ'ನ್ನೆಲವೋ !
ಒಮ್ಮೆ 'ಶರಣೆಂ'ದರೆ ಪಾಪಕರ್ಮ ಓಡುವುವು !
ಸರ್ವ ಪ್ರಾಯಶ್ಚಿತ್ತಕೆ ಹೊನ್ನ ಪರ್ವತಂಗಳೈದವು–

ಒರ್ವಂಗೆ ಶರಣೆನ್ನು, ನಮ್ಮ ಕೂಡ ಸಂಗಮದೇವಂಗೆ !'

'ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧ'ಸಿತು ಪರಿತರಿಗೆ, ಪದಹತರಿಗೆ ! ಎಂಥ ಆತ್ಮವಿಶ್ವಾಸವನ್ನು ಹುಟ್ಟಿಸಿರಬೇಕು ಅವರಲ್ಲಿ ಈ ಅಮೃತವಾಣಿ :

"ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಎರಡಾಳಿನ ಭಾಷೆ ಕೇಳಿರಯ್ಯಾ'
'ಕೊಲುವೆ'ನೆಂಬ ಭಾಷೆ ದೇವನದು; 'ಗೆಲುವೆ'ನೆಂಬ ಭಾಷೆ ಭಕ್ತನದು !
ಸತ್ಯವೆಂಬ ಕೂರಲಗನೇ ಸೆಳೆದು ನಿಮ್ಮ ಸದ್ಭಕ್ತರೇ ಗೆದ್ದರು ನೋಡಾ–
ಕೂಡಲ ಸಂಗಮದೇವಾ !'

ನಿನ್ನ ಮೊನ್ನೆಯುವರೆಗೆ ಸಮಾಜದ ಶೋಷಕರಿಗೆ ಎದುರಾಗಿ ನಿಲ್ಲುವ ಎದೆಗಾರಿಕೆಯಿಲ್ಲದಿದ್ದ ಪಾಮರರು ಸೃಷ್ಟಿಕರ್ತನಿಗೇ ಸವಾಲು ಹಾಕುವ ಸಾಹಸಕ್ಕೂ ಸಿದ್ಧರಾದರು ! 'ಆದಿಯಲ್ಲಿ ದೇವ ನಿಮ್ಮನಾರು ಬಲ್ಲರು?....ಸಾಧು ಸಜ್ಜನ ಭಕ್ತರಿಚ್ಛೆಗೆ ಬಂದಿಪ್ಪೆಯಾಗಿ ಈಗ ದೇವನಾದೆ, ಶಂಭು ಜಕ್ಕೇಶ್ವರಾ' ಎಂದು ಸತ್ಯಕ್ಕ ಸಾರಿದರೆ, 'ಸ್ವರ್ಗಲೋಕ ತಾನಿರ್ದಲ್ಲಿ; ಜ್ಯೋತಿರ್ಮಯ ಲೋಕ ತಾನಿರ್ದಲ್ಲಿ ; ಸಚರಾಚರಂಗಳೆಲ್ಲ ತಾನಿರ್ದಲ್ಲಿ ! ತನ್ನಿಂಧಿಕವಪ್ಪ ದೈವ ಒಂದಿಲ್ಲವಾಗಿ, ಇವೆಲ್ಲ ತನ್ನಾಧೀನವಲ್ಲದೆ ಅವರಾಧೀನ ತಾನಲ್ಲ ನೋಡಾ, ಅಪ್ರಮಾಣ ಕೂಡಲಸಂಗಮದೇವಾ!' ಎಂದು ಇನ್ನೊಬ್ಬ ಶರಣ ಸಾರಿದ. ಇನ್ನೂ ಮುಂದುವರಿದು ಉಗ್ಘಡಿಸಿದ :

'ಕಲ್ಲು ದೇವರು ದೇವರಲ್ಲ ; ಮಣ್ಣು ದೇವರು ದೇವರಲ್ಲ ;
ಪಂಚಲೋಹದಲ್ಲಿ ಮಾಡುವ ದೇವರು ದೇವರಲ್ಲ ;
ಸೇತುಬಂಧ ರಾಮೇಶ್ವರ ಗೋಕರ್ಣ ಕಾಶಿ
ಕೇದಾರ ಮೊದಲಾದ ಅಷ್ಟಾಷಷ್ಟಿ ಪುಣ್ಯ ತೀರ್ಥಗಳು
ಪುಣ್ಯಕ್ಷೇತ್ರಂಗಳಲ್ಲಿಹ ದೇವರು ದೇವರಲ್ಲ !
ತನ್ನ ತಾನರಿದು ತಾನಾರೆಂಬುದ ತಿಳಿದಡೆ
ತಾನೇ ದೇವ ನೋಡಾ, ಅಪ್ರಮಾಣ ಕೂಡಲ ಸಂಗಮದೇವಾ !'

ಏನಿದಾಶ್ಚರ್ಯ? ತಿರಸ್ಕೃತರಾಗಿ ತುಚ್ಛೀಕೃತರಾಗಿ ಜೀವನ್ಮೃತರಾಗಿ ಹೋಗಿದ್ದ ಸಾಮಾನ್ಯ ಮಾನವರಿಗೆ ಈ ಅದಮ್ಯ ಆತ್ಮವಿಶ್ವಾಸ ಹೇಗೆ ಬಂದಿತು?

'ಜಗವ ಸುತ್ತಿಹುದು ನಿಮ್ಮ ಮಾಯೆಯಯ್ಯ :
ನಿನ್ನ ಸುತ್ತಿಹುದು ನನ್ನ ಮನ ನೋಡಯ್ಯ !
ಜಗಕೆ ನೀ ಬಲ್ಲದನು, ನಿನಗೆ ನಾ ಬಲ್ಲಿದನು !
ಕರಿಯು ಕನ್ನಡಿಯೊಳಡಗಿದಂತೆ

ನೀವೆನ್ನ ಮನದ ಕೊನೆಯೊಳಡಗಿಹಿರಿ ಕೂಡಲ ಸಂಗಮದೇವಾ !'

ಮನದ ಕೊನೆಯಲ್ಲಿ ದೇವದೇವನನ್ನು ಅಡಗಿಸಿಕೊಂಡು ಅಡ್ಡಾಡುವ ಗುಡಿಯಾಗಿ ನಡೆವ ಮಾನವ ಪಾಪಾತ್ಮನೆ, ಪಾಮರನೆ, ಪತಿತನೆ?* ಸುತರಾಂ ಅಲ್ಲ–ಪರಿಸ್ಥಿತಿಯ ಒತ್ತಡಕ್ಕೆ ಒಳಗಾಗಿ, ಸಮಾಜದ ಅನ್ಯಾಯಕ್ಕೆ ತಲೆಬಾಗಿ, ಸಹವಾಸ ದೋಷಕ್ಕೆ ಗುರಿಯಾಗಿ ದುರ್ಬಲ ನಿಮಿಷಗಳಲ್ಲಿ ಮಾನವ ಜಾರಬಹುದು. ಜಾರದವರಾರು? ಆದರೆ ಅಷ್ಟಕ್ಕೇ ಅವನನ್ನು ಅಂಥ ಕೂಪದಲ್ಲಿ ತಳ್ಳಿಬಿಡುವುದೆ? ಧರ್ಮದ ದ್ವಾರ ತೆರೆದಿರಲಿ ; ಪ್ರವೇಶಕ್ಕೆ ಪ್ರತಿಬಂಧಕಾಜ್ಞೆ, ಇರದಿರಲಿ ; ಒಳಗೆ ಬರುವ ಅವಕಾಶ ಎಲ್ಲರಿಗೂ ಇರಲಿ. ಒಮ್ಮಿಲ್ಲೊಮ್ಮೆ ಒಳಗೆ ಬಂದಾರು. ಬರದಿದ್ದರೂ 'ಬಾ' ಎಂದು ಕರುಣೆ ಕರೆಯಲಿ, ಕರುಳು ಕರೆಯಲಿ. ಆಗ ಮಣ್ಣೂ ಹೊನ್ನಾದೀತು !

ಇದು ಸಾಧ್ಯವೆಂಬುದನ್ನು ಸಿದ್ಧಮಾಡಿ ತೋರಿಸಿದರು ಶರಣರು. 'ಜ್ಯೋತಿ ಮುಟ್ಟಿದ ಬತ್ತಿಗಳೆಲ್ಲ ಜ್ಯೋತಿಗಳಾದುವು ; ಸಕಳೇಶ್ವರ ದೇವರ ಮುಟ್ಟಿದವರೆಲ್ಲ ಅವನಂತಾದರು'; ಶರಣ ಭೃಂಗವ ನೆನೆದ ಕೀಡೆಗಳೂ ತುಂಬಿಗಳಾಗಿ ಝೇಂಕರಿಸಿದುವು ! ಹುಟ್ಟು, ಕುಲ, ಕಸಬು, ಲಿಂಗ, ವರ್ಣ, ಸಿರಿ, ಪದವಿ, ವಿದ್ಯೆ ಇತ್ಯಾದಿಗಳು ತಂದಿಟ್ಟಿದ್ದ ವಿಷಮತೆಗಳು ವಿಷ ಹರಡಿದ್ದ ಸಮಾಜದಲ್ಲಿ ಸಮಾನತೆಯ ಸುಧೆ ಸಂಚರಿಸಿ ಸಾಮಾನ್ಯರಿಗೆ ವೃತಸಂಜೀವಿನಿಯಾಗಿ ಪರಿಣಮಿಸಿತು. ಆ ಕಚ್ಚಾ ಸರಕು (Raw material of humanity) ಅಮೂಲ್ಯ ವಸ್ತುಗಳಾಗಿ ಹೊರಬಿದ್ದಿತು. ಯುಗಯುಗಗಳಿಂದ ಅದುಮಲ್ಪಟ್ಟು ಮುದುಡಿಹೋಗಿದ್ದ ಸುಪ್ತ ಚೇತನಗಳು ಸ್ವಾತಂತ್ರ್ಯವನ್ನು ಪಡೆದು, ಸ್ವಾಧೀನತೆಯನ್ನು ಪಡೆದು ವಿಕಾಸ ಗೀತೆಯನ್ನು ಹಾಡಿದುವು.

ಕುಲವೆ ? "ಶಿಖಿ ಬ್ರಾಹ್ಮಣ, ನಯನ ಕ್ಷತ್ರಿಯ, ನಾಸಿಕ ಬಣಜಿಗ
ಅಧರ ಒಕ್ಕಲಿಗ, ಕರ್ಣ ಗೊಲ್ಲ, ಕೊರಳು ಕುಂಬಾರ,
ಬಾಹು ಪಾಂಚಾಳ, ಅಂಗೈ ಉಪ್ಪಾರ, ನಖ ನಾಯಿಂದ,
ಒಡಲು ದೊಂಬ, ಬೆನ್ನು ಅಗಸ, ಧರ್ಮ ಜಾಡ,
ಪೃಷ್ಠಸ್ಥಾನ ಕಬ್ಬಿಲ, ಒಳದೊಡೆ ಹೊಲೆಯ, ಮೊಣಕಾಲು ಈಡಿಗ,
ಕಣಕಾಲು ಸಮ್ಮಗಾರ, ಮೇಗಾಲು ಮಚ್ಚಿಗ,
ಚಲಪಾದವೆಂಬ ಅಂಗಾಲು ಶುದ್ಧ ಮಾದಿಗ ಕಾಣಿರೋ !
ಇಂತಿ ಹದಿನೆಂಟು ಕುಲ ತನ್ನಲ್ಲುಂಟು !

---

* ಸ್ವಾಮಿ ವಿವೇಕಾನಂದರ ಉತ್ತರವಿದಕ್ಕೆ: "Ye divinities on earth sinners? It is a sin to call a man so. It is a standing libel on human nature!- (From his speech in the parliament of Religions.)

ಇವು ಇಲ್ಲವೆಂದು ಜಾತಿಗೆ ಹೋರುವ ಅಜ್ಞಾನಿಗಳ
ನಮ್ಮಾ ಸೊಡ್ಡಳ ದೇವರು ಮೆಚ್ಚನಯ್ಯ !"
ಕಸಬೆ ? "ಕೃಷಿ ಕೃತ್ಯ ಕಾಯಕವಾದೊಡೇನು?
ತನುಮನ ಬಳಲಿಸಿ ತಂದು ದಾಸೋಹವ ಮಾಡುವ
ಪರಮ ಸದ್ಭಕ್ತನ ಪಾದವ ತೋರಯ್ಯ ಎನಗೆ !
ಅದೆಂತೆನೆ, ಆತನ ತನು ಶುದ್ಧ ಆತನ ಮನಶುದ್ಧ
ಆತನ ನಡೆ ಶುದ್ಧ, ನುಡಿಯೆಲ್ಲ ಪಾವನವು !
ಆತಂಗೆ ಉಪದೇಶವ ಮಾಡಿದಾತನೇ ಪರಮ ಸದ್ಗುರು
ಅಂತಪ್ಪ ಸದ್ಭಕ್ತನ ಮನೆಯ ಕೈಲಾಸವೆಂದು ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮನೇ ಜಗತ್ಪಾವನ !
ಇಂತಪ್ಪವರ ನಾನು ನೆರೆನಂಬಿ
ನಮೋ ನಮೋ ಎಂಬೆನಯ್ಯ, ಕೂಡಲ ಸಂಗಮದೇವಾ !"
ಲಿಂಗವೆ ? "ಮೊಲೆ ಮೂಡಿಬಂದರೆ ಹೆಣ್ಣೆಂಬರು ;
ಗಡ್ಡ ಮೀಸೆ ಬಂದರೆ ಗಂಡೆಂಬರು ;
ಒಳಗೆ ಸುಳಿವಾತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ – ರಾಮನಾಥ ?"
ವರ್ಣವೆ? "ಸಪ್ತಧಾಮ ಸಮಂ ಪಿಂಡಂ ಸಮಯೋನಿ ಸಮುದ್ಭವಂ
ಆತ್ಮ ಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ"
'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ,
ಕರ್ಣದಲಿ ಜನಿಸಿದವರುಂಟೆ ಜಗದೊಳಗೆ?'
ಸಿರಿಯೆ? "ದೂಷಕನೊಬ್ಬ ದೇಶವ ಕೊಟ್ಟೊಡೆ ಆಸೆ ಮಾಡಿ ಅವನ
ಹೊರೆಯಲಿರಬೇಡ.
ಮಾದರ ಶಿವಭಕ್ತನಾದರೆ ಆತನ ಹೊರೆಯಲ್ಲಿ
ಭೃತ್ಯನಾಗಿರ್ಪುದು ಕರಲೇಸಯ್ಯ,
ತೊತ್ತಾಗಿರ್ಪುದು ಕಡಲೇಸಯ್ಯ !
ಕಾಡ ಸೊಪ್ಪು ತಂದು, ಓಡಿನಲ್ಲಿ ಹುರಿದಿಟ್ಟು,
ಕೂಡಿಕೊಂಡಿಪ್ಪುದು ನಮ್ಮ ಕೂಡಲ ಸಂಗಮ ಶರಣರ !'
ಪದವಿಯೆ? "ಪರಮ ಪದವಿಯ ನಿಮ್ಮ ಕೊರಳಿಲ್ಲಿ ಕಟ್ಟಿಕೊಳ್ಳಿ !
ಪರಮಪದವಿಯ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ
ಎನಗೆ ನಿಮ್ಮ ತೊತ್ತು ಸೇವೆಯೇ ಸಾಕು–
ಮಹಾಲಿಂಗ ಕಲ್ಲೇಶ್ವರಾ,
ಪರಮ ಪದವಿಯ ನಿಮ್ಮ ತಲೆಯಲ್ಲಿ ಸುತ್ತಿಕೊಳ್ಳಿ !"

ವಿದ್ಯೆಯೆ? "....ನಮೇ ಪ್ರಿಯಶ್ಚತುರ್ವೇದಿ
ಮದ್ಭಕ್ತಃ ಶ್ವಪಚೋಪಿವಾ
ತಸ್ಮಾದೇವ ತತೋಗ್ರಾಹ್ಯಂ
ಸಚ ಪೂಜ್ಯೋಯಥಾಹ್ಯಹಂ, (ಎಂಬುದಾಗಿ)
ಕೂಡಲ ಸಂಗಮದೇವನನರಿದು ಪೂಜಿಸಿದಾತ
ಷಡುದರುಶನಕ್ಕಧಿಕ, ಜಗಕ್ಕೆ ಪಾವನ ನೋಡಾ !"

ಎಂಥ ವಿಸ್ಮಯಕರ ಕ್ರಾಂತಯಿದು ! ಹದಿನಾರಾಣೆ ಕನ್ನಡಿಗರಿಂದ ಕನ್ನಡ ನಾಡಿನಲ್ಲಿ ಕನ್ನಡದ ಮೂಲಕ ನಡೆದ ಕ್ರಾಂತಿ ! 'ಚಂದನದ ಸನ್ನಿಧಿಯಲ್ಲಿ ಬೇವು ಬೊಬ್ಬುಲಿ ಮರಂಗಳು ಪರಿಮಳಿತ'ವಾಗುವಂತೆ ಶರಣರ ಸಂಗದಿಂದ ಪಾಮರರು ಕ್ಷುಲ್ಲಕತೆಯ ಅಭಿಶಾಪದಿಂದ ಬಿಡುಗಡೆ ಪಡೆದು ದಿವ್ಯಜೀವನಪಥದ ಪಯಣಿಗರಾದರು, ಮೇಲ್ಮೆಯ ಮದ ನಿರ್ಮಿಸಿದ್ದ ಬಂಧನಗಳ ಬಲೆಯನ್ನು ದಾಟಿ ಮಾನವವಿಮೋಚನೆಯ ಅಭೂತಪೂರ್ವ ಆಂದೋಲನದ ಅಧ್ವರ್ಯುಗಳಾದರು. ಆದಿ ಜನರು, ಅಂಬಿಗರು, ಗೋವಳರು, ತುರುಗಾಹಿಗಳು, ಚರ್ಮಕಾರರು, ಬೇಸಾಯಗಾರರು, ಸ್ತ್ರೀಯರು, ಪುರುಷರು, ಬಡವರು, ಬಲ್ಲಿದರು– ಎಲ್ಲರೂ ತಮ್ಮ ತಾವರಿದು ತಮ್ಮಿಂದ ತಮ್ಮ ಉದ್ಧಾರವನ್ನು ಮಾಡಿಕೊಂಡು ತಾವು ತಾವಾಗಿ ತೊಳಗಿ ಬೆಳಗಿದರು.

"ಜ್ಯೋತಿಯ ಬೆಳಕಿನಲ್ಲಿ ಜ್ಯೋತಿಯ ಕಾಂಬಂತೆ,
ಕಣ್ಣಿಂದ ಕನ್ನಡಿಯ ನೋಡಿ ಕಣ್ಣಕಲೆಯ ಕಾಂಬಂತೆ
ತನ್ನಿಂದ ತಾ ನೋಡಿ ತನ್ನನರಿಯಬೇಕು !
ತನ್ನನರಿಯದವ ನಿಮ್ಮನೆತ್ತ ಬಲ್ಲನೋ?"

ಎಂದು ಕೇಳಿದ ಅವರು ಆತ್ಮೋದ್ಧಾರವನ್ನು ಮಾಡಿಕೊಂಡು ಬಸವಣ್ಣನೊಡನೆ ಹಾಡಿದರು :

" ದೇವಾ, ನಿಮ್ಮ ಪೂಜಿಸಿ ಚೆನ್ನನ ಕುಲ ಚೆನ್ನಾಯಿತ್ತಯ್ಯಾ ;
ದೇವಾ, ನಿಮ್ಮ ಪೂಜಿಸಿ ದಾಸನಕುಲ ದೇಸೆವಡೆಯಿತ್ತು ;
ದೇವಾ, ನಿಮ್ಮಡಿಗೆರಗಿದ ಮಡಿವಾಳಯ್ಯ ನಿಮ್ಮಡಿಯಾದ !
ನೀನೊಲಿದ ಕುಲಕ್ಕೆ, ನೀನೊಲ್ಲದ ಹೊಲೆಗೆ ಮೋರೆಯುಂಟೆ ದೇವಾ?
ಶ್ವಪಚೋಪಿ ಮುನಿಶ್ರೇಷ್ಠೋ ಯಸ್ತು ಲಿಂಗಾರ್ಚನೇರತಃ
ಲಿಂಗಾರ್ಚನಾ ವಿಹೀನೋಪಿ ಬ್ರಾಹ್ಮಣಃ ಶ್ವಪಚಾಧಮಃ
ಎಂದುದಾಗ, ಜಾತಿ ವಿಜಾತಿಯಾದರೇನು? 'ಅಜಾತ ಶರಣೆ'ನ್ನದವನು–
ಆತನೆ ಹೊಲೆಯ, ಕೂಡಲಸಂಗಮದೇವಾ !"

ಆಲೋಚಿಸಿದಂತೆಲ್ಲ ಅದ್ಭುತವಾಗಿ ತೋರುವುದು ಆ ಕ್ರಾಂತಿ. ಅದು ಜನವಾಣಿಯನ್ನೇ ದೇವವಾಣಿಯನ್ನಾಗಿಸಿದ ಕ್ರಾಂತಿ ; ಕೀಳು ಕಸಬನ್ನು ಕಾಯಕವನ್ನಾಗಿ, ಕಾಯಕವನ್ನು ಕೈಲಾಸವನ್ನಾಗಿ ಮಾರ್ಪಡಿಸಿದ ಕ್ರಾಂತಿ; 'ಹಾಳು' ಹೆಣ್ಣನ್ನು ಮಹಾದೇವಿಯನ್ನಾಗಿ, ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನನನ್ನಾಗಿ ಪರಿವರ್ತಿಸಿದ ಕ್ರಾಂತಿ; ತೀರ್ಥ, ಶಕುನ, ಸೂತಕ, ತಿಥಿ, ವಾರ, ನಕ್ಷತ್ರ, ರಮಲ, ಜೋತಿಷ್ಯ, ಬಹುದೇವತಾ ಪೂಜೆ, ಪಶುಬಲಿ, ಅಂಧಶ್ರದ್ಧೆ, ಅವಿಚಾರಪರತೆ, ದಾಂಭಿಕತೆ, ಅಸಹಿಷ್ಣುತೆ ಇತ್ಯಾದಿಗಳ ಕಪಿಮುಷ್ಟಿಯಿಂದ ಮಾನವನನ್ನು ಮುಕ್ತಮಾಡಿ ಮಾನವತೆಯ ನಾಂದಿಯನ್ನು ಹಾಡಿದ ಕ್ರಾಂತಿ ; ಕಲ್ಲಿಗೆರೆಯುವ ಹಾಲನ್ನು ಜೀವಿಗೆರೆಯೆಂದು ಸಾರಿ, ಕಲ್ಲು ದೇವರ ಗೀಳು ಬಿಡಿಸಿ ಜೀವಿಗಳ ಹೃದಯದಲ್ಲಿ ದೇವನನ್ನು ಕಾಣಹಚ್ಚಿದ ಕ್ರಾಂತಿ.*

ಇಲ್ಲಿಗೆ ನಿಲ್ಲಲಿಲ್ಲ ಆ ಕ್ರಾಂತಿ. 'ಒಬ್ಬರ ಮನವ ನೋಯಿಸಿ, ಒಬ್ಬರ ಮನೆಯ ಘಾತವಮಾಡಿ ಗಂಗೆಯ ಮುಳುಗಿದರೆ ಆಗುವುದೇನಯ್ಯ?

ತಪವತ್ತ ಹೆರರ ಕೇಡಿಂಗೆ ಬಗೆವುದೆತ್ತ? ಪಂಚಾಚಾರವೆತ್ತ, ಪಾತಕಕೆ ಮನ ಬಗೆವುದೆತ್ತ?..........ತನುವ ನೋಯಿಸಿ, ಮನವ ಬಳಲಿಸಿ ನಿಮ್ಮ ಪಾದವಿಡಿದವರೊಳರೆ? ಈ ನುಡಿ ಸುಡದಿಹುದೆ?' ಎಂದು ಕೇಳಿ, 'ಕೂಡಲಸಂಗಮದೇವಾ, ಶಿವಭಕ್ತರ ನೋವೇ ಅದು ಲಿಂಗದ ನೋವು' ಎಂದು ಘೋಷಿಸಿತು ಆ ಕ್ರಾಂತಿ ; ನಡೆಯಲರಿಯದೆ ಲಿಂಗವ ಪೂಜಿಸಿ ಫಲವೇನು? ಅವರ ಸುಖವೆನ್ನಸುಖ, ಅವರ ದುಃಖವೆನ್ನದುಃಖ, ಕೂಡಲಸಂಗನ ಶರಣರ ಮನನೊಂದರೆ ಆನು ಬೆಂದೆನಯ್ಯ !' ಎಂದು ನುಡಿಸಿತು ಆ ಕ್ರಾಂತಿ ; 'ಕೋಪಿ ಮಜ್ಜನಕ್ಕೆರೆದರೆ ರಕ್ತದ ಧಾರೆ, ಪಾಪಿ ಹೂವನೇರಿಸಿದರೆ ಮಸೆದಾಯುಧದ ಗಾಯ'ವೆಂದು ತಿರ್ಮಾನಿಸಿ, 'ಕೊಲುವ ಕೈಯೊಳು ಪೂಜೆ, ಮೆಲುವ ಬಾಯೊಳು ಮಂತ್ರ, ಹಾಸ್ಯಾಸ್ಪದವೆಂದು ಹೇಳಿತು ಆ ಕ್ರಾಂತಿ !

'ಉಣ್ಣದ ಲಿಂಗಕ್ಕೆ ಬೋನವ ಹಿಡಿ'ಯೆಂಬ 'ಉಂಬುವ ಜೀವಿಗೆ ನಡೆ' ಯೆಂಬ ಮೂಢತನವನ್ನು ಹೊಡೆದೋಡಿಸಿ, 'ಎರೆದರೆ ನೆನೆಯದು, ಮರೆದರೆ ಬಾಡದು, ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ. ಕೂಡಲ ಸಂಗಮದೇವಯ್ಯಾ. ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು.....ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ...ಮರಕ್ಕೆ ಬಾಯಿ ಬೇರು, ಲಿಂಗದ ಬಾಯಿ ಜಂಗಮ.....ವೃಕ್ಷಸ್ಯ ವದನಂ ಭೂಮಿಃ ಸ್ಥಾವರಸ್ಯತು ಜಂಗಮಂ' ಎಂದು

---

* "ಮನವಚನಕಾಯ ಶುದ್ಧವಾಗಿಪ್ಪಾತನ ಹೃದಯದಲ್ಲಿ
ನಿಮ್ಮ ಕಂಡೆನೆಂದಾತ ಅಂಬಿಗರ ಚೌಡಯ್ಯ."

ಎಚ್ಚರಿಸಿತು ಆ ಕ್ರಾಂತಿ ; ಹೆಣ್ಣು ಹೊನ್ನು ಮಣ್ಣು ಮಾಯೆಯೆಂಬ ಮರುಳುತನವನ್ನು ಹೋಗಾಲಾಡಿಸಿ 'ಮನದ ಮುಂದಣ ಆಸೆಯೇ ಮಾಯೆ' ಎಂದು ಮನಗಾಣಿಸಿಕೊಟ್ಟು, 'ಭಕ್ತನ ಮನ ಹೆಣ್ಣಿನೊಳಗಾದರೆ ವಿವಾಹವಾಗಿ ಕೂಡುವುದು ; ಭಕ್ತನ ಮನ ಮಣ್ಣಿನೊಳಗಾದರೆ ಕೊಂಡು ಆಲಯವ ಮಾಡುವುದು, ಭಕ್ತನ ಮನ ಹೊನ್ನಿನೊಳಗಾದರೆ ಬಳಲಿ ದೊರಕಿಸುವುದು–ಕಪಿಲಸಿದ್ಧಮಲ್ಲಿಕಾರ್ಜುನ' ಎಂದು ಸಾಂತ್ವನನೀಡಿ, 'ಸತಿ–ಪತಿಗಳೊಂದಾದ ಭಕ್ತಿ ಹಿತವಾಯಿತ್ತು ಲಿಂಗಕ್ಕೆ'–ಎಂದು ವಿಶ್ವಾಸವಿತ್ತು, 'ಉಭಯ ದೃಷ್ಟಿಯಿಂದ ದೃಷ್ಟವ ಕಾಂಬಂತೆ ದಂಪತಿ–ಏಕಭಾವವಾಗಿ ನಿಂದಲ್ಲಿ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು' ಎಂದು ತೀರ್ಪಿ ಹೇಳಿತು ಆ ಕ್ರಾಂತಿ ! ಇಷ್ಟೇ ಅಲ್ಲ, ಅರಣ್ಯಕ್ಕೆ ಹೋಗುವುದು ಮರುಳುತನ, 'ಆರುವನೊಲ್ಲೆನೆಂದು ಅರಣ್ಯಕ್ಕೆ ಹೋಗುವುದು ದುರುಳುತನ; ಸಂಸಾರದೊಳಗಿದ್ದರೂ 'ಬಂದ ಪದಾರ್ಥವ ಲಿಂಗಾರ್ಪಿತವ ಮಾಡಿಕೊಂಬ' ಶರಣನೇ ಜಾಣನೆಂದು ತಿಳಿಹೇಳಿ, 'ಒಡಲುಗೊಂಡು, ಒಡಲುವಿಡಿಯದೆ, ಒಡಲಿಲ್ಲದ ನಿಜವ ಬೆರಸ' ಬಲ್ಲವನಾಗು ಎಂದು ಬೋಧಿಸಿತು ಆ ಕ್ರಾಂತಿ.

ಆ ಕ್ರಾಂತಿಯ ಪರಿಣಾಮವಾಗಿ ಮಾತು ಜ್ಯೋತಿರ್ಲಿಂಗವಾಯಿತು, ಮರ್ತ್ಯವು–ಕರ್ತಾರನ ಕಮ್ಮಟವಾಯಿತು., ಅಲ್ಲಿ ಸಲ್ಲುವುದಕ್ಕೆ ಇಲ್ಲಿ ಸಲ್ಲುವುದೇ ಆಧಾರವಾಯಿತು,

ಅರಿವೇ ಗುರುವಾಯಿತು., ಆಚಾರವೇ ಶಿಷ್ಯವಾಯಿತು, ಶಿವನೇ ದೈವ, ಕೊಲ್ಲದಿರ್ಪುದೇ ಧರ್ಮ, ಅಧರ್ಮದಿಂದ ಬಂದುದ ನೊಲ್ಲದಿಪ್ಪುದೇ ನೇಮ, ಆಸೆಯಿಲ್ಲದಿಪ್ಪುದೇ ತಪ, ರೋಷವಿಲ್ಲದಿಪ್ಪುದೇ ಜಪ, ವಂಚನೆಯಿಲ್ಲದಿಪ್ಪುದೇ ಭಕ್ತಿ, ಹೆಚ್ಚು ಕುಂದಿಲ್ಲದಿಪ್ಪುದೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನಾಣೆಯಾಗಿ ಸಮಯಾಚಾರವಾಯಿತು; ಸತ್ಯ ನುಡಿವುದೇ ದೇವಲೋಕವಾಯಿತು, ಮಿಥ್ಯವ ನುಡಿವುದೇ ಮರ್ತ್ಯಲೋಕವಾಯಿತು; ಆಚಾರವೇ ಸ್ವರ್ಗವಾಯಿತು; ಅನಾಚಾರವೇ ನರಕವಾಯಿತು; ಆಚಾರವೇ ಕುಲ, ಅನಾಚಾರವೇ ಹೊಲೆಯೆನಿಸಿತು, ಮೃದುವಚನಗಳೇ ಸಕಲ ಜಪತಪಗಳಾದುವು, ಸದುವಿನಯವೇ ಸದಾಶಿವನೊಲಿಮೆಯಾಯಿತು, ದಯವೇ ಧರ್ಮದ ಮೂಲವಾಯಿತು, ಕಾಯಕವೇ ಕೈಲಾಸವಾಯಿತು, ಭಕ್ತನ ಅಂಗಳವೇ ವಾರಣಾಸಿಯಾಯಿತು, ಕಾಯವೇ ಕಾಶಿ, ಒಡಲೇ ಕೇದಾರ, ಮಾಡಿ ನೀಡುವ ಹಸ್ತವೇ ಸೇತುಬಂಧ ರಾಮೇಶ್ವರ, ದೇಹವೇ ದೇಗುಲವಾದುವು; ಪರಧನವನೊಲ್ಲದಿಪ್ಪುದೇ ವ್ರತವಾಯಿತು, ಪರಸ್ತ್ರೀಯರ ಕೂಡದಿಪ್ಪುದೇ ಶೀಲವಾಯಿತು, ಬಂದುದ ಕೈಕೊಂಡು ಇದ್ದುದ ವಂಚನೆಯ ಮಾಡದೆ, ನಡೆಯ ತಪ್ಪದೆ, ನುಡಿದು ಹುಸಿಯದೇ, ಕೂಡಲಸಂಗನ ಶರಣರು ಬಂದೊಡೆ ಒಡವೆಯರಿಗೆ ಒಡವೆಯನ್ನು ಒಪ್ಪಿಸುವುದೇ ಶಿವನ ಸೊಮ್ಮು ಶಿವನಿಗೆ ಸಲ್ಲಿಸುವುದೇ, ಸರ್ವಜೀವನ ಕೊಲ್ಲದಿರ್ಪುದೇ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದೇ ನೇಮವಾಯಿತು; ಆಶೆಯೇ ದಾಸತ್ವ, ನಿರಾಶೆಯೇ ಈಶತ್ವವಾಯಿತು ; ಬಂದುದೇ ಪರಿಣಾಮ, ನಿಂದುದೇ ನಿವಾಸವಾಯಿತು; ಕಾಯವೇ ಪೀಠ, ಪ್ರಾಣವೇ

ಲಿಂಗವಾಯಿತು ; ನಿದ್ರೆಗೈದಡೆ ಜಪ, ಎದ್ದರೆ ಶಿವರಾತ್ರಿ, ನಡೆದುದೇ ಪಾವನ, ನುಡಿದುದೇ ಶಿವತತ್ತ್ವವಾಯಿತು.

ಶರಣರು ಕಟ್ಟಿದ ಸಮಾಜದಲ್ಲಿ 'ಉಂಬಲ್ಲಿ ಉಡುವಲ್ಲಿ ಕುಳವಳಿಯಿ'ತ್ತೆಂಬುದು ಹೋಯಿತು, 'ಕೊಂಬಲ್ಲಿ ಕೊಡುವಲ್ಲಿ ಕುಲವನರಸು'ವುದು ಹೋಯಿತು ; 'ತನ್ನೆಡೆಯಲ್ಲಿ ಕತ್ತೆ ಸತ್ತುಬಿದ್ದುದನರಿಯದೆ ಪರರೆಡೆಯಲ್ಲಿ ನೊಣವನಾರಿಸುವ ಮರುಳುತನ' ಮಾಯವಾಯಿತು; 'ಲೋಕದ ಡೊಂಕ' ತಿದ್ದುವ ಬುದ್ಧಿ ಹೋಗಿ ತಮ್ಮ ತಮ್ಮ ಮನದ ಡೊಂಕು ತಿದ್ದಿಕೊಳ್ಳುವ ಬುದ್ಧಿ ಬೆಳೆಯಿತು ; 'ಕಾಯಕಕಾರದೆ ಮೈಸೋಂಬತನದಿಂದೆ ಬೇರೆ ಕೂಳಗಳಿಸಲಾರದೆ ಹಸಿದಿರುವುದೂ ಒಡಲ ಸೀರೆಯ ಗಳಿಸಲಾರದೆ ಕಚ್ಚುಟವ ಕಟ್ಟಿಕೊಂಡಿರುವುದೂ ಮೀಯಲು ಎಣ್ಣೆಯ ಗಳಿಸಲಾರದೆ ಮಂಡೆ ಬೋಳಾಗಿಪ್ಪುದೂ ದಿಟದಿಂದ ಬಿಡಿಸಲರಿಯದೆ ಸಂಸಾರದ ಸೆರೆಯನವಧರಿಸಿಕೊಂಡಿಪ್ಪು'ದೂ ಕಾಣದಾದವು; 'ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದು ಕುದುರೆಯ ಬೇಡು'ವುದು ನಿಂತಿತು; ಸತ್ತ ಮೇಲೆ ಬೆರೆಸುವೆನೆಂದು ಕಬ್ಬಿನ ಸೋಗೆಯ ಮೆಲ್ಲವು ಹೊಲ್ಲತನ ಇಲ್ಲವಾಯಿತು ; ಆತ್ಮಸ್ತುತಿ ಪರನಿಂದೆಗಳು ಆಡಗಿದುವು ; ಆಡಿ ಅಳುಪುವುದು, ಲೇಸಮಾಡಿ ಮರುಗುವುದು, ಬೇಡಿದವರಿಗಿಲ್ಲೆನ್ನುವುದು ಹೋದುವು; ಇಬ್ಬರು ಮೂವರು ದೇವರೆಂದು ಉಬ್ಬುಬ್ಬಿ ಮಾತನಾಡುವುದು ಮಾಯವಾಯಿತು; ತನಗೆ ಮುನಿವರಿಗೆ ತಾ ಮುನಿಯುವುದು ತೊಲಗಿತು; ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಳ್ಳುವುದು ಹೋಯಿತು; ನೀರ ಕಂಡಲ್ಲಿ ಮುಳುಗುವುದೂ ಮರವ ಕಂಡಲ್ಲಿ ಸುತ್ತುವುದೂ ಇಲ್ಲವಾದುವು; ಹೊಲೆಯೊಳಗೆ ಹುಟ್ಟಿ ಕುಲವನರಸುವುದು ಕಾಣದಾಯಿತು; ಹೊನ್ನನೇಗಿಲಲಿ ಉತ್ತು ಎಕ್ಕೆಯಬೀಜವ ಬಿತ್ತುವ ಬುದ್ಧಿಶೂನ್ಯತೆ ಬಯಲಾಯಿತು ; ಗೆದ್ದಲುಮನೆಯಮಾಡಿ ಸರ್ಪಂಗೀಡು ಮಾಡುವ ಮೂಢತನ ಮಾಯವಾಯಿತು ; ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪುವುದೂ ಪುರಾತನರಂತೆ ನುಡಿಯುವುದೂ ಕಿರಾತರಂತೆ ನಡೆಯುವುದೂ ನಿಂತುವು.

ಪುಣ್ಯಪಾಪಗಳು ಅವರಿಷ್ಟವಾದುವು ಶರಣರಿಗೆ. 'ಅಯ್ಯಾ' ಎಂಬುದೆ ಸ್ವರ್ಗ, 'ಎಲೆವೋ' ಎಂಬುದೆ ನರಕವಾಯಿತು ; ಅಂತರಂಗವೆಲ್ಲ ಅರುಹು, ಬಹಿರಂಗವೆಲ್ಲ ಲಿಂಗವಾದುವು ; ಅಂಗಕ್ರಿಯೆಗಳೆಲ್ಲ ಲಿಂಗಕ್ರಿಯೆಗಳೆನಿಸಿದುವು ; ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯತ್ವಗಳು ಅಳವಟ್ಟುವು ಅವರಿಗೆ ; ಉಂಡು ಉಪವಾಸಿ–ಬಳಸಿ ಬ್ರಹ್ಮಚಾರಿಗಳಾದವರು ; ಅರಿವೇ ಗುರುವಾಯಿತು, ಆಚಾರವೇ ಶಿಷ್ಯನಾಯಿತು, ಜ್ಞಾನವೇ ಲಿಂಗ, ಪರಿಣಾಮವೇ ತಪ, ಸಮತೆಯೆಂಬುದೇ ಯೋಗದಾಗು ಆಯಿತವರಿಗೆ, ದೇಹ ಧರಿಸಿಯೂ ನಿರ್ದೇಹಿಗಳಾಗಿ, ಈ ಜಗತ್ತಿನಲ್ಲಿರುವಾಗಲೇ ಜೀವನ್ಮುಕ್ತರಾಗಿ, ಸಂಸಾರದಲ್ಲಿದ್ದೂ ನಿಜವನರಿದ ನಿಶ್ಚಿಂತರಾಗಿ, ಮಹವನರಿದ ಮಹಾಂತರಾಗಿ ಬಾಳಿ ಬೆಳಕಾದರವರು.

ಸಮಾಜದಲ್ಲಿ ಸಮಾನತೆ, ಸ್ವಯಂಪೂರ್ಣತೆ, ಶ್ರಮಗೌರವ–ಗುಣಗೌರವಗಳನ್ನು ಸ್ಥಾಪಿಸಿದಂತೆ ಸಿದ್ಧಾಂತದಲ್ಲಿ ಸಮನ್ವಯವನ್ನು ಸಾಧಿಸಿದರು ಶರಣರು. ಅವರು ರೂಪಿಸಿಕೊಂಡ ಸಾಧನ–ಸೋಪಾನ ಷಟ್‌ಸ್ಥಲಗಳಲ್ಲಿ ಭಕ್ತಮಹೇಶ ಸ್ಥಲಗಳು ಭಕ್ತಿಯನ್ನೂ ದ್ವೈತವನ್ನೂ ಪ್ರಸಾದಿ ಪ್ರಾಣಲಿಂಗಿ ಸ್ಥಲಗಳು ಜ್ಞಾನವನ್ನೂ ವಿಶಿಷ್ಟಾದ್ವೈತವನ್ನೂ ಶರಣ ಮತ್ತು ಐಕ್ಯಸ್ಥಲಗಳು ವೈರಾಗ್ಯವನ್ನೂ ಅದ್ವೈತವನ್ನೂ ಸೂಚಿಸುತ್ತವೆ ಎಂದು ಪಂಡಿತೋತ್ತಮರಾದ ಡಾ ॥ ಶಿ.ಚೆ. ನಂದೀಮಠರು ವಿವರಿಸಿದ್ದಾರೆ.[೧] ಇವುಗಳಲ್ಲಿ ಯಾವುದೇ ಸ್ಥಲದಲ್ಲಿ ನಿಂತು ಉಳಿದೈದು ಸ್ಥಲಗಳನ್ನು ಸಾಧಿಸಲು ಸಾಧ್ಯವಾಗುವಂತೆ ಮಾಡಿ ಸಾಮಾನ್ಯರಿಗೂ ಅಸಾಮಾನ್ಯರಿಗೂ ಕೂಡಿಯೇ ಸುಗಮ ಮಾರ್ಗವನ್ನು ಕಲ್ಪಿಸಿರುವರು.[೨] 'ಭಕ್ತಂಗೆ ಕ್ರಿ ಮಹೇಶ್ವರಂಗೆ ನಿಶ್ಚಯ, ಪ್ರಸಾದಿಗೆ ಅರ್ಪಣ, ಪ್ರಾಣಲಿಂಗಿಗೆ ಯೋಗ, ಶರಣಂಗೆ ನಿಬ್ಬೆರಗು, ಐಕ್ಯಂಗೆ ನಿರ್ಲೋಪ'ವೆಂದೂ 'ವಿಶ್ವಾಸದಿಂದ ಭಕ್ತ ಆ ವಿಶ್ವಾಸದೊಳಗಣ ನಿಷ್ಠೆಯಿಂದ ಮಹೇಶ್ವರ, ಆ ನಿಷ್ಠೆಯೊಳಗಣ ಸಾವಧಾನದಿಂದ ಪ್ರಸಾದಿ, ಆ ಸಾವಧಾನದೊಳಗಣ ಸ್ವಾನುಭಾವದಿಂದ ಪ್ರಾಣಲಿಂಗಿ, ಆ ಸ್ವಾನುಭಾವದೊಳಗಣ ಅರುವಿನಿಂ ಶರಣ, ಆ ಅರಿವು ನಿಜದಲ್ಲಿ ಸಮರಸಭಾವವ ನೈದಿದ ನಿರ್ಭಾವಪದದೊಳು ನಿಂದ ಭೇದವೇ ಐಕ್ಯ'ವೆಮದೂ ಈ ಷಟ್‌ಸ್ಥಲಗಳ ವಿವರಣೆ ಬಂದಿದೆ.[೩] ದಾಸೋಹದ ಸಂಗಣ್ಣ ಮತ್ತು ಅಲ್ಲಮಪ್ರಭುಗಳಿಂದ ಅನುಕ್ರಮವಾಗಿ.

ಅಷ್ಟಾವರಣಗಳೇ ಅಂತ; ಪಂಚಾಚಾರಗಳೇ ಪ್ರಾಣ, ಷಟ್‌ಸ್ಥಲಗಳೇ ಆತ್ಮವೆಂದು ಹೇಳಲಾಗಿದೆ. ಅಷ್ಟಾವರಣಗಳಲ್ಲಿ ಗುರುಲಿಂಗ ಜಂಗಮರು ಪೂಜ್ಯರು; ವಿಭೂತಿ, ರುದ್ರಾಕ್ಷಿ, ಮಂತ್ರಗಳು ಪೂಜೆಗೆ ಸಾಧನಗಳು, ಪಾದೋದಕ ಪ್ರಸಾದಗಳು ಪೂಜೆಯ ಫಲಗಳು, 'ಮಣ್ಣಿನಲ್ಲಿ ಹುಟ್ಟಿದ ಹೊನ್ನು, ಕಲ್ಲಿನಲ್ಲಿ ಹುಟ್ಟಿದ ರತ್ನ, ಚಿಪ್ಪಿನಲಿ ಹುಟ್ಟಿದ ಮುತ್ತು, ವೃಕ್ಷದಲ್ಲಿ ಹುಟ್ಟಿದ ಗಂಧ–ಇವು ತಮ್ಮ ಸ್ವಸ್ಥಲಗಳ ಮೀರಿ, ಪರಸ್ಥಾನಂಗಳಲ್ಲಿ ನಿಂದು ಪ್ರಾಪ್ತಿಯನೈದುವಂತೆ, ಪಿಂಡ ಅಂಡದಲ್ಲಿ ಹುಟ್ಟಿ ಅಂಡವನತಿಗಳೆದು ನಿಜಪಿಂಡವಾದಂತೆ, ಗುರುವಿನ ಕರಕಮಲದಲ್ಲಿ ಹುಟ್ಟಿ, ಲಿಂಗಮೂರ್ತಿಯು ಸರ್ವಾಂಗದಲ್ಲಿ ಬೆಳೆದು, ಜಂಗಮವಪ್ಪನಿರಂಗ ಪ್ರಸಾದದಲ್ಲಿ ಬೆರೆದು ಅವಿರಳನಾದವಂಗೆ ಬಂಧಮೋಕ್ಷ ಕರ್ಮಂಗಳ ಬೆಂಬಳಿಗೆ ಸಲ್ಲ'ದೆಂದು ದಾಸೋಹದ ಸಂಗಣ್ಣ ಸಾರಿದ್ದಾನೆ.[೪] ತನುವನರ್ಪಿಸಿ ಗುರುವನ್ನೂ

---

೧ ಕನ್ನಡ ನಾಡಿನ ಚರಿತ್ರೆ (ಎರಡನೆಯ ಭಾಗ ) ಪು. ೨೨೧

೨ "ಅದಾವ ಸ್ಥಲವಂಗಂಗೊಂಡರೂ ಆ ಸ್ಥಳದಲ್ಲಿ ಷಡ್ವಿಧಲಿಂಗದಲ್ಲಿ ಬೆರಸಿ ಬೇರಿಲ್ಲದಿರಬಲ್ಲದೆ ಸದ್ಭಕ್ತನೆಂಬೆನಯ್ಯ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ."

೩ ವಚನಶಾಸ್ತ್ರಸಾರ, ಭಾ. ೧, ಪು. ೯೪.

೪ ವಚನಶಾಸ್ತ್ರಸಾರ, ಭಾ. ೧, ಪು. ೧೬೬.

ಮನವನರ್ಪಿಸಿ ಲಿಂಗವನ್ನೂ ಧನವನರ್ಪಿಸಿ ಜಂಗಮುವನ್ನೂ ಒಲಿಸಿಕೊಂಡು, ತನುಮನಧನಗಳ ವಿಕಾರಗಳನ್ನು ನೀಗಿ, ಪಾದೋದಕ ಪ್ರಸಾದಗಳ ಸೇವನೆಯಿಂದ, ಪಂಚಾಚಾರಗಳ ಪಾಲನೆಯಿಂದ ಪಾವನರಾಗಿ ; ಇಲ್ಲಿಯೂ ಅಲ್ಲಿಯೂ ಸಲ್ಲಬೇಕೆಂಬುದೇ ಶರಣರ ಸುಬೋಧಸಾರ. ಬಹಿರಂಗದ ಗುರುಲಿಂಗ–ಜಂಗಮವನ್ನು ಅಂತರಂಗದಲ್ಲಿಯೂ ಆರಾಧಿಸಬೇಕು. "ತನ್ನ ತಾನರಿದರೆ ತನ್ನರಿವೆ ಗುರು, ತಾನೇ ಲಿಂಗ, ತನ್ನ ನಿಷ್ಠೆಯೇ ಜಂಗಮ. ಇಂತೀ ತ್ರಿವಿಧವು ಒಂದಾದಡೆ ರಾಮೇಶ್ವರ ಲಿಂಬವು ತಾನೆ !"೫

ಸತ್ಯಶುದ್ಧ ಕಾಯಕದಲ್ಲಿ ನಿತ್ಯನಿರತರಾಗಿ, ಗಳಿಸಿದುದರಲ್ಲಿ ಅಗತ್ಯವಿರುವಷ್ಟನ್ನು ಮಾತ್ರ ಪರಿಗ್ರಹಿಸಿ, ಅಸಂಗ್ರಹಬುದ್ಧಿಯಿಂದ ಉಳಿದುದನ್ನು ಗುರು–ಲಿಂಗ–ಜಂಗಮ ಸೇವೆಗೆ, ಸಮಾಜ ಸೇವೆಗೆ ಸಲ್ಲಿಸಿ ಬಯಸಿ ಬಂದುದು ಅಂಗಭೋಗ, ಬಯಸದೆ ಬಂದುದು ಲಿಂಗಭೋಗವೆಂದು ಬಗೆದು, ಒಲ್ಲೆನೆಂಬ ವೈರಾಗ್ಯವಕ್ಕೂ ಒಲಿವೆನೆಂಬ ಕಾಯಗುಣಕ್ಕೂ, ಒಳಗಾಗದೆ, ಬೇಕು ಬೇಡೆನ್ನದೆ, ಲಿಂಗ ಭೋಗೋಪಭೋಗಿಗಳಾಗಿ, ಲೇಸೆನಿಸಿಕೊಂಡು, ಸರ್ವರಿಗೆ ಲೇಸನೇ ಬಯಸುತ್ತ ಬದುಕುವುದೇ ಶರಣರಿಗೆ ಬಾಳ ಬೆಲೆಯಾಯಿತು. ಬಹಳ ದಿನ ಬದುಕುವುದೇ ಭಾಗ್ಯವಲ್ಲ ; ಸ್ವಲ್ಪ ದಿನ ಬದುಕಿದರೂ 'ಸೈ' ಎನಿಸಿಕೊಂಡು ಬದುಕಬೇಕು :

> "ಹಾವು, ಹದ್ದು, ಕಾಗೆ ಅನಂತ–ಕಾಲ ಬದುಕವೆ?
> ಬೇಡವೋ ಮಾನವಾ, ಲೇಸೆನಿಸಿಕೊಂಡು ಬದುಕೋ, ಮಾನವಾ !
> ಲೇಸೆನಿಸಿಕೊಂಡು ಐದು ದಿನ ಬದುಕಿದರೇನು?
> ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದರೇನು?
> ಲೇಸೆನಿಸಿಕೊಂಡು ಮೂರು ದಿನ ಬದುಕಿದರೇನು?
> ಲೇಸೆನಿಸಿಕೊಂಡು ಎರಡು ದಿನ ಬದುಕಿದರೇನು?
> 'ಜೀವಿತಂ ಶಿವಭಕ್ತಾನಾಂ ವರಂ ಪಂಚದಿನಾನಿ ಚ
> ಅಜಕಲ್ಪ ಸಹಸ್ರೇಭ್ಯೋ ಭಕ್ತಿಹೀನಸ್ಯ ಶಂಕರಿ'
> ಕೂಡಲಸಂಗನ ಶರಣರ ವಚನದಲ್ಲಿ
> ಲೇಸೆನಿಸಿಕೊಂಡು ಒಂದು ದಿನ ಬದುಕಿದರೇನು?"

ಆದುದರಿಂದ, ಲೇಸ ಬಯಸುತ್ತ, ಲೇಸಗೈಯುತ್ತ, ಲೇಸೆನಿಸಿಕೊಂಡು ಹದುಳಿಗರಾಗಿ,

೫ ಇದನ್ನೂ ಗಮನಿಸಿ: "ಕಾಯಗುರು, ಪ್ರಾಣಲಿಂಗ, ಜ್ಞಾನ ಜಂಗಮ. ಕಾಯದಲ್ಲಿ ಶುದ್ಧ ಪ್ರಸಾದ, ಪ್ರಾಣದಲ್ಲಿ ಸಿದ್ಧ ಪ್ರಸಾದ ಜ್ಞಾನದಲ್ಲಿ ಪ್ರಸಿದ. ಇಂತೀ ತ್ರಿವಿಧ ಪ್ರಸಾದ ನಿರ್ಣಯ ಕೂಡಲ ಚೆನ್ನಸಂಗಾ, ನಿಮ್ಮ ಶರಣಂಗೆ."

ಹೊಲಬಿಗರಾಗಿ, ಹಲವರಿಗೆ ಹೊರೆಯಾಗದೆ ಕೆಲವರಿಗಾದರೂ ನೆರವಾಗಿ ಬದುಕಬೇಕು. ಆಗ ಬದುಕಿಗೂ ಬೆಲೆ, ಬದುಕುವವರಿಗೂ ಬೆಲೆ. ಹೀಗೆ ತಾವೂ ಬದುಕಿ, ಅದರಂತೆ ನಾವೂ ಬದುಕಲು ದಾರಿ ತೋರಿ ಹೋಗಿದ್ದಾರೆ ಶರಣರು.

ಅವರು ನಡೆದ ದಾರಿಯಲ್ಲಿ ಅವರ ನುಡಿಯ ಬೆಳಕಿನಲ್ಲಿ ನಾವು ಸಾಗಿದರೆ ಮಾತ್ರ ಅವರನ್ನು ನೆನೆವ ಅರ್ಹತೆ ನಮಗೆ ಬರುತ್ತದೆ. ಇದಿಲ್ಲದೆ ಅವರನ್ನು ಬರಿದೆ ಸ್ಮರಿಸಿ ಪ್ರಯೋಜನವಿಲ್ಲ, ಅವರ ವಚನ ಪಠಿಸಿ ಪ್ರಯೋಜನವಿಲ್ಲ, ಅವರ ಚರಿತ್ರೆ ಓದಿ ಫಲವಿಲ್ಲ:

> "ಕೆಂಚ ಕರಿಕನ ನೆನೆದರೆ ಕರಿಕನಾಗಬಲ್ಲನೆ?
> ಕರಿಕ ಕೆಂಚನ ನೆನೆದರೆ ಕೆಂಚನಾಗಬಲ್ಲನೆ?
> ದರಿದ್ರ ಸಿರಿವಂತನ ನೆನೆದರೆ ಸಿರಿವಂತನಾಗಬಲ್ಲನೆ?
> ಸಿರಿವಂತ ದರಿದ್ರನ ನೆನೆದರೆ ದರಿದ್ರನಾಗಬಲ್ಲನೆ?
> ಮುನ್ನಿನ ಪುರಾತನರ ನೆನೆದು ಧನ್ಯನಾದಹೆನೆಂಬ
> ಮಾತಿನ ರಂಜಕರನೇನೆಂಬೆ, ಕೂಡಲಸಂಗಮದೇವಾ?"

ಮಾತಿನ ರಂಜನೆಯೆ ಶರಣಧರ್ಮ? ನೀತಿಯ ನಡೆವಳಿಕೆ, ಪ್ರೀತಿಯ ದಿನ ಬಳಕೆ, ನಡೆನುಡಿಗಳ ಹೊಂದಾಣಿಕೆಯದು. 'ಮಾತಿನ ಮಾಲೆಯಲ್ಲಿ ಸಿಲುಕುವುದೇ ಶಿವಾಚಾರ?' ಎಂದು ಸೊಡ್ಡಳಬಾಚರಸ ಕೇಳಿಯೇ ಇದ್ದಾನೆ. ಮಾತಿನಂತೆ ನೀತಿಯಿಲ್ಲದ ಜಾತಿಡೊಂಬರಿಗೆ, ಇಷ್ಟವತೋರಿ ಮೃಷ್ಟಾನ್ನವ ಹೊಡೆವ ಭ್ರಷ್ಟರಿಗೆ, ವೇಷವ ಹೊತ್ತು ದೋಷದಿ ನಡೆವವರಿಗೆ, ನಾರು ಬೇರಿನ ಕುಟಿಲ ಕುಹಕದ ಕಪಟಯೋಗಿಗಳಿಗೆ, ಮೀಂಬುಲಿಗನ ಹಕ್ಕಿಯಂತೆ ನೀರತಡೆಯಲ್ಲಿರ್ದು ಮೂಗ ಹಿಡಿದು ಧ್ಯಾನವಮಾಡುವವರಿಗೆ, ನುಣ್ಣಗೆ, ಬಣ್ಣಗೆ ನುಡಿದು ಕಣ್ಣು ಗಾಣದೆ ಕಾಡ ಬೀಳುವ ಅಣ್ಣಗಳಿಗೆ, ಸೊಮ್ಮಿನ ಹಮ್ಮು ಬಿಮ್ಮುಗಳುಳ್ಳವರಿಗೆ, ದೇಶದೇಶಾಂತರದಲ್ಲಿ ತೊಳಲಿ ಬಳಲಿ, ಕೆಲರ ಹಳಿದು ಕೆಲರ ಹೊಗಳಿ ವೃಥಾ ಕಾಲಕಳೆದವರಿಗೆ ಶರಣಧರ್ಮದಲ್ಲಿ ಸ್ಥಾನವಿಲ್ಲ; 'ಕುಲವಳಿದು, ಛಲವಳಿದು, ಮದವಳಿದು, ಮತ್ಸರವಳಿದು, ಸರ್ವಾಹಂಕಾರವಳಿದು, ಶ್ರೀಮನ್ನಿಜ ಉಳಿದು, ತಾನಳಿದು, ತಾನುಳಿದು ಸಹಜ ನಿಜಪದವಿಯಲ್ಲಿ ತಾನು ತಾನಾದವರಿಗೆ ಅದು ಮೀಸಲು.

ಈ ಶರಣಧರ್ಮದ ಸಾರವನ್ನೆಲ್ಲ ಈ ಮುಮ್ಮಾತಿನಲ್ಲಿ ಶೇಖರಿಸುವುದು ಸಾಧ್ಯವಾಗಿದೆಯೆಂದು ಹೇಳಲಾಗದು. ಮುಂಬರುವ ಚರಿತ್ರೆಗಳಲ್ಲಿ ಅದರ ಇನ್ನುಳಿದ ಅಂಗಗಳು, ಅಂಶಗಳು ಪ್ರಕಟವಾಗುವುವು. ಇವಿಷ್ಟು ವಚನಗಳನ್ನು ಮನನ ಮಾಡಿಕೊಂಡು ಅವರ ಚರಿತೆಯ ಅಮೃತಪಾನಕ್ಕೆ ಅಣೆಯಾಗೋಣ :

'ಮಣಿಗಳ ಸೂತ್ರದಂತೆ ತ್ರಿನಯನ ನೀನಿಪ್ಪೆಯಯ್ಯ.
ಎಣಿಸುವಡೆ ತನು ಭಿನ್ನ, ಆತ್ಮನೊಬ್ಬನೇ.
ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು
ಮಣಿವುತಿರ್ಪೆನಯ್ಯ, ರಾಮನಾಥ'
ಮರದೊಳಗಣ ಪತ್ರ ಫಲಂಗಳು
ಮರಕಾಲವಶದಲ್ಲಿ ತೋರುವಂತೆ
ಹರನೊಳಗಣ ಪ್ರಕೃತಿ ಸ್ವಭಾವಂಗಳು
ಹರಭಾವದಿಚ್ಛೆಗೆ ತೋರುವುವು
ಲೀಲೆಯಾದಡೆ ಉಮಾಪತಿ,
ಲೀಲೆ ತಪ್ಪಿದಡೆ ಸ್ವಯಂಭು, ಗುಹೇಶ್ವರ.

ಶಿವಶಕ್ತಿ ಸಂಪುಟನೆಂಬುದೆಂತು ಹೇಳಿರಣ್ಣಾ.
ಶಿವನೇ ಚೈತನ್ಯಾತ್ಮಕನು, ಶಕ್ತಿಯೇ ಚಿತ್ತು.
ಇಂತೀ ಚೈತನ್ಯಾತ್ಮಕನೇ ಚಿತ್ ಸ್ವರೂಪೆಂದು,
ಅರಿಯಬಲ್ಲಡೆ ಆತನೇ ಶರಣ ಗುಹೇಶ್ವರ

"ದೇವನೊಬ್ಬ, ನಾಮ ಹಲವು–ಕೂಡಲ ಸಂಗಮದೇವಾ !"
"ಕುಂಭ ಸಹಸ್ರ ಉದಕ–ದೊಳಗೆ ಬಿಂಬಿಸಿ ತೋರುವ ಸೂರ್ಯ
ನೊಬ್ಬನಲ್ಲದೆ ಹಲಬರುಂಟೇನಯ್ಯ?
ಸಕಲ ದೇಹಗಳೊಳಗೆ ಭ್ರಮಿಸಿ ತುಂಬಿಪ್ಪ
ಪರವಸ್ತು ನೀನೊಬ್ಬನಲ್ಲದೆ ಮತ್ತಾರನೂ
ಕಾಣೆನಯ್ಯ, ಅಖಂಡೇಶ್ವರಾ !"

"ಮರ್ತ್ಯವೆಂಬುದು ಕರ್ತಾರನ ಕಮ್ಮಟವಯ್ಯ !
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು !
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು"

"ಎನ್ನರಿವೆ ನಿನ್ನರಿವಯ್ಯ, ನಿನ್ನರಿವೆ ಎನ್ನರಿವಯ್ಯ ;
ಎನ್ನ ಜೀವನವೇ ನಿನ್ನ ಜೀವನವಯ್ಯ, ನಿನ್ನ ಜೀವನವೆ ಎನ್ನ ಜೀವನವಯ್ಯ;
ಎನ್ನ ಸುಖವೇ ನಿನ್ನ ಸುಖವಯ್ಯ, ನಿನ್ನ ಸುಖವೇ ಎನ್ನ ಸುಖವಯ್ಯ ;
ಎನಗೆ ನಿನಗೆ ಸಂದು ಸಂಶಯವಿಲ್ಲವಯ್ಯ !
ಸಂದುಂಟೆಂದು ನುಡಿವುದೆಲ್ಲವು ಬಂಧನ ನುಡಿ ! ಕಾಣೆರೋ

ಆದಿಯಲು ಸಂದಿಲ್ಲ ಅನಾದಿಯಲು ಸಂದಿಲ್ಲ, ಎಂದೂ ಸಂದಿಲ್ಲ
ಶರಣ ಲಿಂಗಕ್ಕೆ, ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೆ !"

"ಕುಲಸ್ವಾಮಿ, ನಿನ್ನಿಂದ ಹೆಜ್ಜೆಯಲ್ಲದೆ ನಾನೊಂದು ಹೆಜ್ಜೆಯನಿಡೆನಯ್ಯ ;
ನಿನಗೊಂದು ಹೆಜ್ಜೆ ನನಗೊಂದು ಹೆಜ್ಜೆಯಿಲ್ಲ.
ನಿನ್ನ ಹೆಜ್ಜೆ ನನ್ನ ಹೆಜ್ಜೆ ಒಂದಾದುದ
ಜಗದ ಅನ್ಯಾಯಿಗಳೆತ್ತಬಲ್ಲರು, ರಾಮನಾಥ?"

"ಎಣ್ಣೆ ಬೇರೆ, ಬತ್ತಿ ಬೇರೆ, ಎರಡೂ ಕೂಡಿ ಸೊಡರಾಯಿತ್ತು ;
ಪುಣ್ಯ ಬೇರೆ, ಪಾಪ ಬೇರೆ, ಎರಡೂ ಕೂಡಿ ಒಡಲಾಗಿತ್ತು ;
ಮಿಗಬಾರದು, ಮಿಗದಿರಬಾರದು ;
ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು ;
ಕಾಯುಗುಣವಳಿದು ಮಾಯಾಜ್ಯೋತಿ ವಾಯುವ ಕೂಡುವ ಮುನ್ನ
ಭಕ್ತಿಯ ಮಾಡಬಲ್ಲಾತನೇ ದೇವ, ಗುಹೇಶ್ವರ."

"ಆತ ಅಂಗವ ತೊಟ್ಟಡೇನು, ಪರಾಂಗನೆಯ ಸೋಂಕ ;
ಕರವಿದ್ದರೇನು, ಮತ್ತೊಂದನಪಹರಿಸಿ ತೆಗೆಯ ;
ಕರ್ಣವಿದ್ದಡೇನು, ಮತ್ತೊಂದು ಅನ್ಯಶಬ್ದವ ಕೇಳ ;
ಕಂಗಳಿದ್ದಡೇನು, ಲಿಂಗವಲ್ಲದುದು ನೋಡ ;
ನಾಸಿಕವಿದ್ದಡೇನು, ಅರ್ಪಿತವಲ್ಲದುದು ವಾಸಿಸ ;
ಜಿಹ್ವೆಯಿದ್ದಡೇನು, ಪ್ರಸಾದವಲ್ಲದುದ ಸ್ವೀಕರಿಸ.
ಇಂತೀ ಎಲ್ಲದರಲ್ಲಿ ಸರ್ವವ್ಯವಧಾನಿಯಾಗಿ
ನಡೆ, ನುಡಿ, ಅರಿವು ಶುದ್ಧಾತ್ಮನು
ಏಲೇಶ್ವರ ಲಿಂಗವು ತಾನೇ"

"ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾ ಕೈಮುಟ್ಟಿ ಎತ್ತಿದೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ !
ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ.
ಇಂತಲ್ಲದೆ ನಾನು ಅಳಿಮನವ ಮಾಡಿ ಪರದ್ರವ್ಯಕ್ಕೆ
ಆಶೆ ಮಾಡಿದೆನಾದರೆ ನೀನಾಗಲೇ ಎನ್ನ ನರಕದಲ್ಲಿ ಅದ್ದಿ
ಎದ್ದು ಹೋಗಾ, ಶಂಭು ಜಕ್ಕೇಶ್ವರಾ !"

“ಭಕ್ತನು ಶಾಂತನಾಗಿರಬೇಕು ;
ತನ್ನ ಕುರಿತು ಬಂದ ಠಾವಿನಲಿ ಸತ್ಯನಾಗಿರಬೇಕು ;
ಭೂತಹಿತವಚನವ ನುಡಿಯಬೇಕು ;
ಲಿಂಗ ಜಂಗಮದಲ್ಲಿ ಕುಂದು ನಿಂದೆಗಳಿಲ್ಲದಿರಬೇಕು ;
ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು ;
ತನುಮನಧನ ಗುರುಲಿಂಗಜಂಗಮಕ್ಕೆ ಸಮರ್ಪಿಸಬೇಕು ;
ಅಪಾತ್ರದಾನವ ಗೈಯದಿರಬೇಕು ;
ಸಕಲ ಇಂದ್ರಿಯಗಳೂ ತನ್ನ ವಶಗತವಾಗಿರಬೇಕು ;
ಇದೇ ಮೊದಲಲ್ಲಿ ಬೇಹ ಶೌಚ ನೋಡಾ !
ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ
ಇದೇ ಸಾಧನ, ನಮ್ಮ ಕೂಡಲ ಚೆನ್ನಸಂಗಮದೇವಾ”

“ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯವ ನುಡಿಯಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ “

“ದೇಹ ನಾನೆಂದು ನಂಬಿದೆ, ಎಲೆ ಮನವೆ !
ದೇಹದಲ್ಲಿಹ ಗುಣಂಗಳು ನಿನ್ನಲ್ಲಿಲ್ಲ ಕಂಡಯ್ಯ, ಮನವೆ !
ಪೃಥ್ವಿಯ ಗುಣ ಶಾಂತಿ, ಉದಕದ ಗುಣ ಸ್ವಾದ,
ಅಗ್ನಿಯ ಗುಣ ಸರ್ವಭಕ್ಷಣ, ವಾಯುವಿನ ಗುಣ ನಿರ್ಮಲತ್ವ.
ಆಕಾಶದ ಗುಣ ನಿರ್ವಯಲ–
ಈ ಪಂಚತತ್ವದ ಗುಣ ನಿನ್ನಲ್ಲಿರಲು ನೀನೇ
ಪಂಚಮುಖ ನೋಡಾ ಮದವೆ, ಕಪಿಲ ಸಿದ್ಧಮಲ್ಲಿಕಾರ್ಜುನ.”

“ನಿನ್ನರಿಕೆಯ ನರಕವೇ ಮೋಕ್ಷಕಂಡಯ್ಯ ;
ನಿನ್ನರಿಯದ ಮುಕ್ತಿಯೇ ನರಕ ಕಂಡಯ್ಯ ;
ನೀನೊಲ್ಲದ ಸುಖವೇ ದುಃಖ ಕಂಡಯ್ಯ
ನೀನೊಲಿದ ದುಃಖವೇ ಪರಮ ಸುಖ ಕಂಡಯ್ಯ ;
ಚೆನ್ನಮಲ್ಲಿಕಾರ್ಜುನಯ್ಯ
ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧನವೆಂದಿಪ್ಪೆನು !”

“ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ,
ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ,
ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ,
ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಿಕ
ಸೌರಾಷ್ಟ್ರ ಸೋಮೇಶ್ವರಲಿಂಗ ಬೇರಿಲ್ಲ ಕಾಣಿರೋ !”

“ಹಾಲುಳ್ಳಲ್ಲಿ ಹಬ್ಬವ ಮಾಡಿ ಗಾಳಿಯಿದ್ದಲ್ಲಿ ತೂರಿಕೊಳ್ಳಿ !
ಬಳಿಕಲರಸಿದರುಂಟೆ ಪರಮ ಸುಖವು?
ನಿಜಗುರು ಸ್ವಂತಂತ್ರ ಕಪಿಲ ಸಿದ್ಧಮಲ್ಲೇಶ್ವರನಲ್ಲಿ
ಹರಿಗೋಲ ಪಡೆದಲ್ಲಿ ತೊರೆಯ ದಾಂಟಿಕೊಳ್ಳಿರೋ !”

“ತನ್ನದಾದರೇನು ಕನ್ನಡಿ? ಅನ್ಯರದಾದರೇನು ಕನ್ನಡಿ?
ತನ್ನ ರೂಪು ಕಂಡಡೆ ಸಾಲದೆ?
ಸದ್ಗುರು ಆವನಾದಡೇನು?
ತನ್ನನರುಹಿದಡೆ ಸಾಲದೆ–
ಸಿಮ್ಮಲಿಗೆಯ ಚೆನ್ನರಾಮಾ !”

■

# ಪರಿವಿಡಿ


ಪ್ರಕಾಶಕರ ಮಾತು iii

ಮುನ್ನುಡಿ v

ಮುಮ್ಮಾತು vii

ಮಹಾನುಭಾವ ಮಾದರ ಚೆನ್ನಯ್ಯ ೧

ಶಿವನಾಟದ ಸವಿಗಂಡ ಗುಂಡಯ್ಯ ೧೦

ಕೋಳೂರ ಕೊಡಗೂಸು ೧೮

ಮರೆಯಲಾಗದ ಮೆರೆಮಿಂಡದೇವ
ನೆನಪಾರದ ನಂಬಿಯಣ್ಣ ೨೮

ದೇವರ ದಾಸಮಯ್ಯ–ಶಂಕರ ದಾಸಮಯ್ಯ
ಢಕ್ಕೆಯ ಮಾರಯ್ಯ ೩೯

ರಾಗಯೋಗಿ ರಾಗದ ಸಂಕಣ್ಣ ೭೦

ಇಳಿಹಾಳ ಬೊಮ್ಮಯ್ಯ ೭೬

ಏಕಾಂಗವೀರ ಏಕಾಂತದ ರಾಮಯ್ಯ ೮೫

ನಿಜವ ಕಂಡ ಕೊಂಡಗುಳಿ ಕೇಶಿರಾಜ
ನಿಜಸುಖನಿಲಯ ತೆಲುಗು ಜೊಮ್ಮಯ್ಯ ೯೨

ಬಾಗಿದ ತಲೆಯ ಮುಗಿದ ಕೈಯ ಬಸವ ೧೦೩

ಸಸಿಯ ಸಲಹಿದ ಪ್ರಭುದೇವ ೧೩೮

ಚಿನ್ಮಯಾನಂದ ಚೆನ್ನಬಸವಣ್ಣ ೧೭೬

ಸಮತೆಯ ಗಾರುಡಿಗ ಸಿದ್ಧರಾಮ ೨೦೬

ನೀರತಾವರೆ ಅಕ್ಕಮಹಾದೇವಿ ೨೩೬
ಮಲ್ಲರಸ–ಮಾದರಸ–ಮಾದಯ್ಯ ೨೭೪
ಹುತಾತ್ಮರಾದ ಹರಳಯ್ಯ ಮಧುವರಸರು ೨೮೭
ಕಿನ್ನರಿಯ ಬ್ರಹ್ಮಯ್ಯ, ಕಲಕೇತ ಬ್ರಹ್ಮಯ್ಯ ೨೯೭
ಮೇದಾರ ಕೇತಯ್ಯ ೩೦೬
ಆತ್ಮವಾನ್ ಅಮುಗಯ್ಯ ೩೧೪
ಸುಜ್ಞಾನಿದೇವನಿಂದ ಸುಜ್ಞಾನೋದಯ ೩೨೨
ಮಹದ ಬೆಳಗೆ ತಾನಾಗಿನಿಂದ ಮರುಳು ಶಂಕರದೇವ ೩೩೧
ನಿಜೈಕ್ಯ ಅಜಗಣ್ಣ–ಸದ್ಯೋನ್ಮುಕ್ತೆ ಮುಕ್ತಾಯಕ್ಕ ೩೪೦
ಹುಟ್ಟು ಹೊಂದಳಿದ ಹಡಪದ ಅಪ್ಪಣ್ಣ–ಲಿಂಗಮ್ಮರು* ೩೪೯
ವೈರಾಗ್ಯವೇ ಗಟ್ಟಿಗೊಂಡ ಘಟ್ಟಿವಾಳಯ್ಯ ೩೫೯
ಮರೆದು ಹಿಡಿದು ಅರಿದು ಬಿಟ್ಟ
ಮೋಳಿಗಯ್ಯ ಮಹಾದೇವಿಯರು ೩೬೭
ಆಸೆಯ ಜೈಸಿದ ಆಯ್ದಕ್ಕಿ ಮಾರಯ್ಯ ಲಕ್ಕಮ್ಮರು ೩೮೨
ಕಾಯಕದ ಕೈಗನ್ನಡಿ ನುಲಿಯ ಚಂದಯ್ಯ ೩೯೧
ಅಜೇಯವೀರ ಮಡಿವಾಳ ಮಾಚಯ್ಯ ೩೯೭
ತ್ರಿಮಲದೂರ ತುರುಗಾಹಿ ರಾಮಣ್ಣ ೪೦೭
ಸಿದ್ಧಪುರುಷ ಸೊಡ್ಡಳ ಬಾಚರಸ ೪೧೨
ನಿಜದಿ ಬೆರೆದ ಗಜೇಶ ಮಸಣಯ್ಯ ೪೧೮
ದಯವೆ ದೇಹ ಧರಿಸಿದಂತಿದ್ದ ದಸರಯ್ಯ–ವೀರಮ್ಮರು ೪೨೫
ದೇವಮಾನವ ಡೋಹರ ಕಕ್ಕಯ್ಯ ೪೩೩
ಬಹುರೂಪಿ ಚೌಡಯ್ಯ ೪೩೮
ರಾಯಸದ ಮಂಚಣ್ಣ – ರಾಯಮ್ಮರು ೪೪೮
ದಂಭದ ವೈರಿ ಅಂಬಿಗರ ಚೌಡಯ್ಯ ೪೫೩

ಮೈ–ಮನಕೆ ಮದ್ದನಿತ್ತ ವೈದ್ಯ ಸಂಗಣ್ಣ ೪೬೦
ನಗೆಯ ಮಾರಿ ತಂದೆ ೪೬೬
ಮಂಗಳ ತರಂಗ ಉರಿಲಿಂಗದೇವ,
ಉರಿಲಿಂಗಪೆದ್ದಿ–ಕಾಳವ್ವೆಯರು ೪೭೪
ಶೀಲಸಾರ್ವಭೌಮ ಸೋಮನಾಥ ೪೮೮
ಕವೀಶ್ವರ ಹರೀಶ್ವರ ೫೦೩
ಮಹಾಮಹಿಮ ಮಾದೇಶ್ವರ ೫೩೭
ನಿರುಪಮ ಜ್ಞಾನಿ ನಿಜಗುಣ ಶಿವಯೋಗಿ ೫೪೭
ಮಧುರ ಭಕ್ತಿಯ ಮುಪ್ಪಿನ ಷಡಕ್ಷರಿ ೫೬೨
ಶಿವಾನುಭವವಿಭು ಮಾಯಿದೇವಪ್ರಭು ೫೭೫
ತೋಂಟದ ಸಿದ್ಧಲಿಂಗೇಶ್ವರ ೫೮೬
ಕಾಡಸಿದ್ಧೇಶ್ವರ–ಸ್ವತಂತ್ರ ಸಿದ್ಧಲಿಂಗೇಶ್ವರ ೬೦೨
ಘನತೆವೆತ್ತ ಘನಲಿಂಗದೇವ ೬೧೪
ಮಹಾಯೋಗಿ ಮನ್ಮಥಸ್ವಾಮಿ ೬೨೦
ಸ್ವಾನುಭವ ಸಾರ್ವಭೌಮರು ೬೩೧
ಶಿಷ್ಟಜನಮಂದಾರ ಕೊಟ್ಟೂರ ಬಸವೇಶ್ವರ ೬೪೭
ಋಷಿಕವಿ ಶಿವಪ್ರಕಾಶ ಸ್ವಾಮಿಗಳ್ ೬೫೫
ಗುಡಗುಂಟೆಯ ಅಮರೇಶ್ವರ ೬೬೨
ಮೂವರು ಮಹಾನುಭಾವರು ೬೬೯
ಸ್ವಯಂಜ್ಯೋತಿ ಷಣ್ಮುಖ ಶಿವಯೋಗಿ ೬೮೩
ಕರುಣಾಕರ ಶರಣಬಸವೇಶ್ವರ ೬೯೩
ಪರಮಗುರು ಮರಿಸ್ವಾಮಿಗಳು, ವರಶಿಷ್ಯ ಕರಡೆಪ್ಪನವರು ೭೦೬
ಸಮ್ಯಕ್‌ಜ್ಞಾನಿ ಸರ್ಪಭೂಷಣ ಶಿವಯೋಗಿಗಳು ೭೧೭
ಬಾಲಲೀಲಾ ಮಹಾಂತ ಶಿವಯೋಗಿಗಳು, ಮುಳಗುಂದ ೭೩೦

ಮೈಲಾರ ಬಸವಲಿಂಗಶರಣರು ೭೪೩
ಚಿನುಮಯ ಘನಮಠ ಶಿವಯೋಗಿ ೭೫೨
ಜಂಗಮಜ್ಯೋತಿ ಮುರುಘೇಂದ್ರ
ಮಹಾಶಿವಯೋಗಿಗಳು ೭೬೧
ಪುರಾತನ–ನೂತನಗಳ ಸೇತುವೆ ೭೭೨
ಹಿಮ್ಮಾತು ೭೯೨
ಅನುಬಂಧ–೧ : ಸಹಾಯಕ ಸಾಹಿತ್ಯ ಸೂಚಿ ೭೯೮
ಅನುಬಂಧ–೨ : ಶರಣ ವಂಶವಲ್ಲರಿ ೮೩೦
ಅನುಬಂಧ–೩ : ಹಿಂದಿನ ಆವೃತಿಗಳ ಪ್ರಕಾಶಕರ ಮಾತು ೮೮೬
ಅನುಬಂಧ–೪ : ನಿವೇದನೆಗಳು ೮೯೪
ಅನುಬಂಧ–೫ : ಸಿದ್ಧಯ್ಯ ಪುರಾಣಿಕರ ಜೀವನ ವಿವರ ೯೦೮
ಅನುಬಂಧ–೬ : ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ ೯೧೧

# ಮಹಾನುಭಾವ ಮಾದರ ಚೆನ್ನಯ್ಯ

"ಸೂಳೆಗೆ ಹುಟ್ಟಿದ ಕೂಸಿನಂತೆ ಆರನಾದೊಡೆಯೂ ಅಯ್ಯ ಎನಲಾರೆನಯ್ಯಾ. ಚೆನ್ನಯ್ಯನೆಮ್ಮಯ್ಯನು. ಚೆನ್ನಯ್ಯನ ಮಗ ನಾನು. ಚೆನ್ನಯ್ಯನ ಮನೆಯ ದಾಸನ ಮಗ ನಾನು. ಚೆನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪಯ್ಯ. ಅಯ್ಯಗಳ ಅಯ್ಯ ನಮ್ಮ ಮಾದಾರ ಚೆನ್ನಯ್ಯ. ಕುಲತಿಲಕ ನಮ್ಮ ಮಾದಾರ ಚೆನ್ನಯ್ಯ. ಉನ್ನತ ಮಹಿಮೆ, ಉಮೇಶನಿಂದಧಿಕ. ಚಿಕ್ಕಮ್ಮ ಚೆನ್ನಯ್ಯಗಳೆತ್ತಿ ಮುದ್ದಾಡಿದರೆನ್ನ. ಮಹಾದಾನಿ ಕೂಡಲ ಸಂಗಮದೇವಾ. ಮಾದರಿ ಚೆನ್ನಯ್ಯನ ಮಗ ನಾನಯ್ಯ!"

ಬಸವಣ್ಣನವರಂಥವರು ಇಷ್ಟು ಮನವುಕ್ಕಿ, ಮೈಯುಬ್ಬಿ ಕೊಂಡಾಡಿರುವ ಈ ಚೆನ್ನಯ್ಯನಾರು ? ಈ ಮಹಾನುಭಾವನನ್ನು ಎಷ್ಟು ಹೊಗಳಿದರೂ ತೃಪ್ತಿಯಿಲ್ಲ ಬಸವಣ್ಣನವರಿಗೆ. "ಅಪ್ಪನು ನಮ್ಮ ಮಾದಾರಿ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ, ಚಿನ್ನಯ್ಯನೆಮ್ಮಯ್ಯ ಕಾಣಿರಯ್ಯ" "ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದೊಡೆ ಚೆನ್ನ. ಪ್ರಮಥರೊಳಗೆ ಚೆನ್ನ, ಪುರಾತನರೊಳಗೆ ಚೆನ್ನ. ಸವಿದು ನೋಡಿ ಅಂಬಲಿ ರುಚಿಯಾಯಿತ್ತೆಂದು ಕೂಡಲ ಸಂಗಮದೇವರಿಗೆ ಬೇಕೆಂದು ಕೈದೆಗೆದ ನಮ್ಮ ಚೆನ್ನ" "ಹಾಲ ನೇಮ, ಹಾಲ ಕೆನೆಯ ನೇಮ, ಕೆನೆಯ ತಪ್ಪಿದ ಬಳಿಕ ಕಿಚ್ಚಡಿಯ ನೇಮ, ಬೆಣ್ಣೆಯ ನೇಮ, ಬೆಲ್ಲದ ನೇಮ–ಅಂಬಲಿಯ ನೇಮದವರೂರನೂ ಕಾಣೆ. ಕೂಡಲ ಸಂಗನ ಶರಣರಲ್ಲಿ ಅಂಬಲಿಯ ನೇಮದಾತ ಮಾದಾರ ಚೆನ್ನಯ್ಯ!" "ವೇದ ನಡನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದುದಯ್ಯ! ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯಾ. ಆಗಮ ಹೊರತೊಲಗಿ ಆಗಲಿದ್ದಿತಯ್ಯ – ನಮ್ಮ ಕೂಡಲ ಸಂಗಯ್ಯನು ಚೆನ್ನಯ್ಯನ ಮನೆಯಲುಂಡ ಕಾರಣ!"

ಬಸವಣ್ಣನವರ ಈ ಭಾವಪೂರಿತ ವಚನಗಳನನ್ನೋದುತ್ತಿದ್ದಂತೆ ಚೆನ್ನಯ್ಯನ ಮಹೋನ್ನತ ವ್ಯಕ್ತಿತ್ವ ಕಣ್ಣೆದುರು ರೂಪುಗೊಳ್ಳುತ್ತದೆ. "ಉನ್ನತ ಮಹಿಮೆ, ಉಮೇಶನಿಂದಧಿಕ!" ಇದಕ್ಕಿಂತ ಅಧಿಕವಾದ ವ್ಯಕ್ತಿಚಿತ್ರವನ್ನಾರು ಬರೆಯಬಲ್ಲರು ನಾಲ್ಕೇ ನಾಲ್ಕು ಶಬ್ದಗಳಲ್ಲಿ! ಬಸವಣ್ಣನವರಿಂದ ಇಷ್ಟೊಂದು ವಿಧವಿಧವಾದ ನುತಿಸಿಕೊಂಡ ಮಾದಾರ ಚೆನ್ನಯ್ಯ ನಿಜವಾಗಿಯೂ ಮಹಾನುಭಾವ.

ಕಂಚಿಯಲ್ಲಿ ಕೂಡ ಕನ್ನಡದ ಕಹಳೆ ಮೊಳಗುವಂತೆ ಮಾಡಿದ ಮಹಾತ್ಮನೀತ. 'ಪೆರಿಯ ಪುರಾಣ'ವನ್ನು ಬರೆಸಿ ಶಿವಭಕ್ತಶಿರೋಮಣಿಯೆನಿಸಿ, ಮೆರೆಯುತ್ತಿದ್ದ ಕರಿಕಾಲ ಚೋಳನು ಕಾಂಚಿಯಲ್ಲಿ ರಾಜ್ಯವಾಳುತ್ತಲಿದ್ದ ಕಾಲವದು. ಚೆನ್ನಯ್ಯ ಕರಿಕಾಲ ಚೋಳನ ಆಶ್ವಾಲಯಕ್ಕೆ ಹುಲ್ಲು ಒದಗಿಸುವ ಕಾಯಕ ಕೈಕೊಂಡಿದ್ದ ಈ ಕಾಯಕವನ್ನೇ ಜೀವನಾಧಾರವನ್ನಾಗಿ ಮಾಡಿಕೊಂಡಿದ್ದ ಕಬಾಡಿಗರಿಗೆಲ್ಲ ಹಿರಿಮಣಿಯಾತ.

ಈ ಲಿಂಗಾಭಿಮಾನಿ, ಲಿಂಗಾನುಭಾವಿ, ಲಿಂಗಪ್ರಾಣಿಯು ನಿತ್ಯವೂ ಈ ಕಬಾಡಿಗರನ್ನು ಕೂಡಿಕೊಂಡು ಕಾನನಕ್ಕೆ ಹೋಗುತ್ತಿದ್ದ. ಅಲ್ಲಿ ಎಲ್ಲರೂ ಕೂಡಿ ಹಲ್ಲು ಕೊಯ್ದು ಹೊರೆ ಕಟ್ಟುತ್ತಿದ್ದರು. ಉಳಿದವರು ಅಷ್ಟರಿಂದಲೇ ತುಷ್ಟರಾದರೆ ಚೆನ್ನಯ್ಯನ ಪರಿಯೇ ಬೇರೆ. ತನುವು ಚೋಳ, ನಿಗಾಳ ಮನವು ಲಿಂಗದಿ ಮೇಳ, ವ್ಯಕ್ತದಿ ಮಾದಾರಿ, ಗುಪ್ತದಿ ಮಹೇಶ್ವರನಾಗಿ ಬಾಳುತ್ತಿದ್ದನಾತ.

"ಒಳಗೆ ಭಕ್ತಿಯ ಗುಣ್ಣು ಹೊರಗೆ ಜಾತಿಯ ಸೊಂಪು
ಒಳಗೆ ಮುಕ್ತಿಯ ನುಣ್ಣು ಹೊರಗೆ ಜನ್ಮದ ಪೆಂಪು
ತಿಲದ ತೈಲದ ತೆರದೆ ಕಾಷ್ಠದಗ್ನಿಯ ತೆರದೆ
ನೆಲದ ಮರೆಯೊಳಗೆ ತೋರುವ ನಿಧಾನದ ತೆರದೆ
ಪೆರರರಿಯದಂತೊಳಗೆ ಲಿಂಗಾರ್ಚನೆಯೊಳಿರ್ಪ
ಅರಿವಂತೆ ಹೊರಗೆ ಕುಲಧರ್ಮ ಕರ್ಮದೊಳಿರ್ಪ
ಆತನ ಶಿವಾರ್ಚನೆಯನೆಣಿಸಲೆನ್ನಳವಲ್ಲ
ಭೂತೇಶ್ವರಂಗೆ ಕೌತುಕಂ, ಉಳಿದವರ್ಗಳವಳ"

ಎಂದು ಹರಿಹರ ಮಹಾಕವಿಯವನ ಶಿವಮಾನಸ ಪೂಜೆಯ ಸೊಗಸನ್ನು ಚಿತ್ರಿಸಿದ್ದಾನೆ.

ಚೆನ್ನಯ್ಯ ಕಂಡುದುದ ಶಿವಲಿಂಗಕ್ಕೆ, ಕೊಂಡುದುದ ಗುರುಲಿಂಗಕ್ಕೆ, ಕೇಳಿದುದ ಪ್ರಸಾದಲಿಂಗಕ್ಕೆ, ವಾಸಿಸಿದುದ ಆಚಾರಲಿಂಗಕ್ಕೆ, ಸ್ಪರ್ಶಿಸಿದುದ ಜಂಗಮ ಲಿಂಗಕ್ಕೆ, ನೆನದುದ ಮಹಾಲಿಂಗಕ್ಕೆ ಅರ್ಪಿಸುವುದುದನ್ನು ಅಳವಡಿಸಿಕೊಂಡಿದ್ದ ಅನುಭಾವಿ, ತನ್ನ ಷಡಿಂದ್ರಿಯಗಳಲ್ಲಿ ಷಡ್ಲಿಂಗಗಳನ್ನು ಧರಿಸಿ ಸರ್ವವನ್ನು ಶಿವಾರ್ಪಿತಮಾಡುತ್ತಲಿದ್ದ ಶಿವಶರಣ.

"ಕಂಡ ಚೆಲ್ವಕ್ಷಿ ಮುಖದಿಂದ ಲಿಂಗಾರ್ಪಿತಂ
ಕೊಂಡ ನಾಲಗೆಯ ರುಚಿಯಿಂದಲರ್ಪಿತಂ

ಕೇಳ್ದ ಸವಿನುಡಿ ಕಿವಿಯ ಮುಖದಿಂದಲರ್ಪಿತಂ
ಸೋಂಕಿಡ ಮೃದುದ್ರವ್ಯವಂಗದಿಂದರ್ಪಿತಂ
ಮುಂತೆಳಸಿ ನೆನೆದ ರುಚಿ ಮನದಿಂದಲಿರ್ಪಿತಂ"
ಒಟ್ಟಿನಲ್ಲಿ ಅದೊಂದು ಅನುಭಾವಕ್ಕೆ ಅರ್ಪಿತವಾದ ಬಾಳು.

ಹುಲ್ಲು ಕೊಯ್ದು ಹೊರೆ ಕಟ್ಟುವವರೆಗೆ ಅಂತರರಂಗದಲ್ಲಿ ಪೂಜೆ, ಈ ಹೊರೆ ಮುಗಿಯುತ್ತಲೆ ಬಹಿರಂಗದಲ್ಲಿ ಪೂಜೆ. 'ಸೂರಿಜನ ಹರ್ಷ ವಸ್ತಾರಿ' ಯಾದ ಕಾವೇರಿಯ ತೀರದಲ್ಲೊಂದು ತಣ್ಣೆಳಲ ತಾಣ. ಅಲ್ಲೊಂದು ಮಲ್ಲಿಗೆಯ ಮಂಟಪ. ಅಲ್ಲಿ ನುಣ್ಮಳಲಿ ಕಟ್ಟೆಯ ಕಟ್ಟಿ ತಳಿರ ಹಾಸನ್ನು ಹಾಸಿ ಲಿಂಗಪೂಜೆಗೆ ಕೂರುವನು.

"ಬಾರಮ್ಮ ಬಾರ ಶಿವಭಕ್ತ್ಯೈಕ ಬಂಧುವೆ
ಬಾರಯ್ಯ ಬಾರ ಕಾರುಣ್ಯರಸ ಸಿಂಧುವೆ
ಗುರುವೆ ವರಗುರುವೆ ಸದ್ಗುರುವೆ ಗುರುಲಿಂಗವೆ
ಭರದಲರ್ಚಿಪ ಜನದ ಮನದ ಸರ್ವಾಂಗವೆ"

ಎಂದು ಸೆಜ್ಜೆಯಿಂದ ಶಿವ ಕುರುಹಾದ ಲಿಂಗವನ್ನು ತೆಗೆದು, ಕರದ ಸರಸಿಜ ಪೀಠದಲ್ಲಿರಿಸಿ, ಅಗ್ಗವಣಿಯನೆರೆದು, ಮೊಲ್ಲೆ ಮಲ್ಲಿಗೆಗಳನ್ನು ಧರಿಸಿ ಹೊಂಗಿ ಹೊರೆಯೇರಿ,

"ಅಡಿಗಡಿಗೆ ನೋಡಿ ಮಾತಾಡಿ ಮೈವೆರ್ಚುತುಂ
ಹಾಡಿ ತಣಿವುತೆ ಮತ್ತೆ ಮತ್ತೆ ಮಿಗೆ ಕೊರ್ಬುತುಂ
ಪುಳಕಿಸುತೆ ಪುಟವೇರಿ ತವಕಿಸುತೆ ಮದವೇರಿ
ಎಳಿಸುತಂ ದಳವೇರಿ ಬಳಸುತುಂ ಬಲ್ಪೇರಿ
ನುಡಿಯತಂ ಗದಗದಿಸಿ ಬೆಮರುತಂ ಸಡಗರಿಸಿ
ನಡೆವುತುಂ ಡೆಂಡಣಿಸಿ ಬೀಳುತಂ ತರಹರಿಸಿ
ಮೇಲ್ಲನೆಚ್ಚತ್ತು ಶಿವಲಿಂಗಮಂ ನಡೆನೋಡಿ
ಲಲ್ಲೆಗರೆವುತ್ತೆ ಪರಮ ಸ್ನೇಹಮಂ ಮಾಡಿ"

ಕಣ್ಗಳಲ್ಲಿ ಲಿಂಗಮೂರ್ತಿಯನ್ನು ತುಂಬಿಕೊಂಡು, ಮಾತಿನಲ್ಲಿ ಲಿಂಗ ಕೀರ್ತಿಯನ್ನು ತುಂಬಿಕೊಂಡು, ಚಿತ್ತದಲ್ಲಿ ಲಿಂಗಪ್ರೀತಿಯನ್ನು ತುಂಬಿಕೊಂಡು ಎಲ್ಲರೊಡನೆ ಹುಲ್ಲ ಹೊರೆ ಹೊತ್ತು ಚೋಳರಾಯನ ಕುದುರೆಗಳ ಪಾಳೆಯಕ್ಕಿ ಬಂದು ಹುಲ್ಲ ಹೊರೆ ಹಾಕಿ ಮನೆಗೆ ಬರುತ್ತಿದ್ದನು.

ಅಲ್ಲಿ ಚೆನ್ನಯ್ಯಗಳ ಪುಣ್ಯಾಂಗನೆ ಅಂಬಲಿಯನ್ನು ಮಾಡಿ ಆತನ ಬರವನ್ನೇ ನಿರೀಕ್ಷಿಸುತ್ತ ಕುಳಿತಿರುತ್ತಿದ್ದಳು. ಚೆನ್ನಯ್ಯನು ಆ ಅಂಬಲಿಯಲ್ಲಿ ತನ್ನ ಭಕ್ತಿಯ ಅಮೃತವನ್ನು ಬೆರೆಸಿ ಶಿವನಿಗರ್ಪಿಸಿ ತಾನೂ ಸೇವಿಸುತ್ತಿದ್ದನು. ಆ ಅಂಬಲಿಯ ರುಚಿಗೆ ಶಿವನ ಬಾಯಲ್ಲಿ ನೀರೂರುತ್ತಿತ್ತು. ಒಲವಿದ್ದಲ್ಲಿ ಅಂಬಲಿಯೇ ಅಮೃತ. ಕಂಬಳಿಯೇ ಚೀನಾಂಬರವಲ್ಲವೆ?

ಚೆನ್ನಯ್ಯನ ಗುಪ್ತ ಭಕ್ತಿ ಹೀಗೆಯೇ ಸಾಗಿತು. ಆರುವತ್ತು ವರ್ಷಗಳು ಕಳೆದುವು. ಆದರೂ ಶಿವನೊಬ್ಬನನ್ನುಳಿದು ಇನ್ನಾರಿಗೂ ಚೆನ್ನಯ್ಯನ ನನ್ನಿಯ ಭಕ್ತಿ ಗೊತ್ತಿರಲಿಲ್ಲ. ಎಲ್ಲರ ಕಣ್ಣಿನಲ್ಲಿ ಅವನೊಬ್ಬ ಕರಿಕಾಲ ಚೋಳನ ಕುದುರೆಗಳಿಗೆ ಹುಲ್ಲು ತಂದೊದಗಿಸುವ ಕೂಲಿಕಾರ. ಕುಲದಿಂದ ಮಾದರವನು, ವೃತ್ತಿಯಿಂದ ಕೂಲಿಕಾರ. ಶಿವನಿಗಿದನ್ನು ಸೈರಿಸಲಾಗಲಿಲ್ಲ. ತನ್ನ ಭಕ್ತರಲ್ಲಿಯೇ ಶ್ರೇಷ್ಠನಾದ, ಗರಿಷ್ಠನಾದ ಚೆನ್ನಯ್ಯನಿಂತು ಆಜ್ಞಾತನಾಗಿಯೆ ಉಳಿಯಬೇಕೆ? ಅನ್ಯರಿಗೆ ಈತನ ಹಿರಿಮೆ ಗರಿಮೆಗಳು ಗೊತ್ತಾಗಲೇಬಾರದೆ? ಇದು ಸರಿಯಲ್ಲ. ಒಮ್ಮೆ ಜಗತ್ತಿಗೆಲ್ಲ ಈ ಜಗದ್ವಂದ್ಯನ ನಿಜಸ್ವರೂಪ ಗೊತ್ತಾಗಲೇಬೇಕು. ಘನತೆಯ ಗುರುತು ಧನವಲ್ಲ, ಮನವೆಂಬುದು ಲೋಕಕ್ಕೆ ಮನದಟ್ಟಾಗಬೇಕು.

ಒಮ್ಮೆ ಚೆನ್ನಯ್ಯ ರಾತ್ರಿಯಲ್ಲಿ ಅಂಬಲಿ ಸುರಿಯುತ್ತಿರುವಾಗ ಶಿವನೂ ಲವಲವಿಸಿ ಅದನ್ನು ಸುರಿದು ಸಂತೃಪ್ತನಾದನು. ಕರಿಕಾಲ ಚೋಳನಿಗೆ ಚಿಂತೆಯುಂಟಾಗಿದ್ದಿತಂತೆ ನಾನು ಮುದುಕನಾದೆ, ನನ್ನ ತರುವಾಯ ಶಿವನಿಗೆ ಸಕಲ ನೈವೇದ್ಯಗಳನ್ನು ಸಲ್ಲಿಸುವರಾರೆಂದು! ಆತನ ಮಮಕಾರ ನಿರಸನಕ್ಕಾಗಿ ಚೆನ್ನಯ್ಯನ ಮನೆಯಲ್ಲಿ ಉಂಡನಂತೆ ಶಿವನು.

> "ಕೊಂಡನೇನೆಂಬೆನಾಂ ಚೆನ್ನಯ್ಯನೊಂದಾಗಿ
> ಉಂಡನಭವಂ ಸ್ವರ್ಗಮರ್ತ್ಯಕ್ಕೆ ಪೊಸತಾಗಿ
> ಒಂದು ಸುರಿಯೊಳಗೆ ಕೈವಂದುದೇ ಶಿವಪದಂ
> ಮುಂದೆ ಸವಿದರ್ಪಿಸುವದಕ್ಕಿಲ್ಲ ಘನಪದಂ
> ಎಂದಂಜಿಕೊಂಡನಾ ಶಿವನು!...."

ಮೊದಲನೆಯ ಸುರುಕಿಗೇ ಶಿವಪದವನ್ನು ಕೊಟ್ಟುಬಿಟ್ಟ ; ಮುಂದನ ಸುರುಕುಗಳಿನ್ನೇನು ಕೊಡಲೆಂದು ಶಿವನೇ ಚಿಂತಿಸಿದನಂತೆ! ಅದೆಂಥ ಅಂಬಲಿ ಚೆನ್ನಯ್ಯ ನದು!

ಬೆಳಗಾಯಿತು–ಇಂದು ಚೆನ್ನಯ್ಯನ ಭಕ್ತಿ ಭುವಿಯಲ್ಲೆಲ್ಲ ಬೆಳಗುವುದೆಂಬುದನ್ನು ಸಾರುತ್ತ. ಕರಿಕಾಲ ಚೋಳ ಎಂದಿನಂತೆ ಮುಂಜಾನೆಯ ಪೂಜೆಗಾಗಿ ದೇವಾಲಯಕ್ಕೆ

ಬಂದನು. ರಾಜೋಚಿತವಾಗಿ ಪೂಜಾದಿಗಳನ್ನು ಮುಗಿಸಿ ದಿವ್ಯಾನ್ನ, ದೇವಾನ್ನ, ಅಮೃತಾನ್ನಗಳನ್ನಿರಿಸಿ 'ಆರೋಗಿಸು ತಂದೆ' ಎಂದು ತೆರೆಯ ಹಿಂದೆ ನಿಂತನು. ಸ್ವಲ್ಪ ಹೊತ್ತು ತಡೆದು ಬಂದು ನೋಡುತ್ತಾನೆ–ಎಂದಿನಂತೆ ಶಿವನವುಗಳನ್ನು ಸೇವಿಸದೆ ಕಂಠವನ್ನು ಕತ್ತರಿಸಿಕೊಳ್ಳಲು ಮೇಲೆತ್ತಿದನು.

"ಒರೆಯ ಕತ್ತಿಯ ಚೋಳ ಹಿರಿದು ಕತ್ತಿಗೆ ಇಡಲು
ಕೊರಳ ಶಿವಲಿಂಗ ಕೈಹಿಡಿದು–ಎಲೆ ಚೋಳ
ತರವಲ್ಲ ಹತ್ಯೆ ಭಕ್ತನಿಗೆ..."

"ಸೈರಿಸು ಸೈರಿಸು ಚೋಳ ಭೂಪಾಲ" ಎಂದು ಶಿವನದನ್ನು ತಡೆದು, "ಚೆನ್ನಯ್ಯನ ಅಂಬಲಿಯು ಬಹಳ ರುಚಿಯಾಗಿದ್ದುದರಿಂದ ಬಹಳ ಸುರಿದುಬಿಟ್ಟೆ. ಇಂದು ಹಸಿವೆ ಇಲ್ಲ. ನೀನು ಬೇರೆ ಭಾವಿಸಿಕೊಳ್ಳಬೇಡ" ಎಂದು ಸಂತೈಸಿದನು. ಚೆನ್ನಯ್ಯನ ಅಂಬಲಿ! ಶಿವನದನ್ನು ಸವಿದು ತನ್ನ ರಾಜಾನ್ನವನ್ನು ಧಿಕ್ಕರಿಸಿದ! ಚೋಳರಾಯನು ಬೆರಗಾದ.

"ತೋರಿರೇ ಚಂದ್ರಮೌಳಿಯ ಭಕ್ತ ಚೆನ್ನನಂ ತೋರಿರೇ
ಷಡ್ವರ್ಗ ಕರ್ಣನಂ ಚೆನ್ನನಂ ತೋರಿರೇ
ಚೆನ್ನನಂ ತೋರಿ ಎನ್ನಂ ಕಾಯ್ದುಕೊಳ್ಳಿರೇ
ಚೆನ್ನಯ್ಯ ನೆನ್ನಯ್ಯ ನಿರ್ದೆಡೆಯನರುಪಿರೇ
ಚೆನ್ನಯ್ಯನಿರ್ಪ ಗುಡಿಯಿದೇ ಎಂದು ತೋರಿರೇ
ಚೆನ್ನಯ್ಯ ಭಕ್ತನೆನ್ನಯ್ಯನಂ ತೋರಿರೇ...."

ಎಂದು ಹುಲುಬುತ್ತ, ಕಾಂಚೀ ಪಟ್ಟಣದ ಸಂದಿಗೊಂದಿಗಳನ್ನೆಲ್ಲ ಅರಸುತ್ತ. ಕೇರಿಯಲ್ಲಿದ್ದ ಚೆನ್ನಯ್ಯನ ಕುಟೀರಕ್ಕೆ ಬಂದನು. ಹಿಂದೆ ಹಿಂದೆ ರಾಜದೂತರೂ ರಾಜಪರಿವಾರವೂ ಬಂದುವು. ಚೆನ್ನಯ್ಯ ಗಾಬರಿಯಾದ. ಚೋಳರಾಯ

"ಭಕ್ತಗುಡಿಸಿರ್ದ ಗುಡಿಸಲೊಳಿರ್ಪನಂ ಕಂಡು
ಮುಕ್ತಿ ಮೂವಡಿಸಿ ಮುಂದಡಸಿರ್ದನಂ ಕಂಡು
ಪುಳಕಿಸುತ್ತೆ ಪುಟವೇರುತುರ್ಬತುಂ ಕೊರ್ಬುತುಂ
ಇಳಿವಶ್ರು ಜಲದಿಂದೆ ಮೂಡುತಂ ಮುಳುಗುತಂ
ಎನ್ನೊಡೆಯನಿದನಿದನೆ ಚೆನ್ನಯ್ಯನೆಂದೆನುತ
ಎನ್ನ ಸುಧೆಯಿದನಿದನೆ ಚೆನ್ನಯ್ಯನೆಂದೆನುತ
ಇಳುಪಿದಂ ಸರ್ವಾಂಗಮಂ ಚೆನ್ನನಂಘ್ರಿಯೊಳ್!"

ಚೆನ್ನಯ್ಯ ಚಿತ್ತವಿಹ್ವಲನಾಗಿ, 'ಏನಿದು ದೊರೆಗಳೆ, ಕುಲಹೀನನಾದ ನನಗೆ ಸೂರ್ಯಕುಲೋತ್ಪನ್ನ ಸಾರ್ವಭೌಮರಾದ ತಾವು ನಮಸ್ಕರಿಸುವುದೆ! ಎಂಥ ಅನುಚಿತವಿದು' ಎಂದನು. ಅದಕ್ಕೆ ಚೋಳರಾಯನಿತ್ತ ಉತ್ತರ ಸರ್ವಾಗಮ ಸಾರ .



**'ಇಳುಪಿದಂ ಸರ್ವಾಂಗಮಂ ಚೆನ್ನನಂಘ್ರಿಯೊಳ್'**

"ಎಲೆ ದೇವ! ದೇವನೊಲ್ದನ ಕುಲಂ ಸತ್ಕುಲಂ
ಘನಮಹಿಮನೊಲ್ದ ಜಾತಿಯೇ ಜಾತಿ ನಿರ್ಮಲಂ
ಶರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ?
ಸರ್ವಜ್ಞ ನಿಮ್ಮ ಕೆರವಿಂಗೆನ್ನ ಶಿರ ಸರಿಯೆ?"

ಮುಂದೆ ಬಸವಣ್ಣನವರ ಬಾಯಿಂದ ಹೊರಟ "ಕುಲವೇನೋ, ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು!" "ನೀನೊಲಿದ ಕುಲಕ್ಕೆ, ನೀನೊಲಿಯದ ಹೊಲೆಗೆ ಮೇರೆಯುಂಟೇ ದೇವಾ?" "ದೇವ ನಿಮ್ಮ ನಂಬದವನೇ ಹೊಲೆಯ!" "ದೇವ ನಿಮ್ಮ ಶರಣರ ಚಮ್ಮಾವುಗೆಗಳಿಗೆ ಈ ಪೃಥ್ವಿ ಸರಿ ಬಾರದಯ್ಯ" ಎಂಬ ವಚನಗಳಿಗೆ ಪೂರ್ವಪೀಠಿಕೆಯಂತಿದೆ ಈ ಉತ್ತರ.

ತನ್ನ ಗುಪ್ತ ಭಕ್ತಿಯನ್ನಿಂತು ಬಯಲಿಗೆಳೆದುದಕ್ಕಾಗಿ ಚೆನ್ನಯ್ಯ ಶಿವನ ಮೇಲೆ ಸಿಟ್ಟಾಗಿ ತನ್ನ ಶಿರ ಕೊಯ್ದುಕೊಳ್ಳಲು ಮುಂದಾದನಂತೆ.

"ಶಿವಲಿಂಗ ಕಾಣುತಲಿ ಶಿವನೆಂದು ಚೆನ್ನಯ್ಯ
ಅವಸರದಿ ಹೊಕ್ಕು ಗುಡಿಯನ್ನು–ಕೇಳಿದನು
ಶಿವ ನಿನಗೆ ತರವೆ ಈ ಆಟ?
ಹಿಡಿಸೆನ್ನ ತರಿಸಿದಿರಿ ಒಡೆಯ ಚೋಳನ ಕೂಡ
ಕಡುಮಾತು ಹೇಳು ಮಾಡಿರುವ ಅಪರಾಧ
ಬಡಭಕ್ತನಾಗಿ ನಾನಿದ್ದೆ
ಬೇಡಿಲ್ಲ ಪದವಿಯನು ಕಾಡಿಲ್ಲ ಕೊಡದಿರಲು
ಮಾಡಿ ಶಿವಭಕ್ತಿ ಅರಿಯದೆಲೆ ನಾನಿದ್ದೆ
ಕೇಡು ಜನಕೇಳಿ ನಾನಿರಲೆ?
ಇದೆ ಕೊಳ್ಳು ಶಿವ ನಿನ್ನ ಹದವಾದ ಶಿವಭಕ್ತಿ
ಎದೆಮಾತು ಎಂದು ಕಂಭಕ್ಕೆ–ತಲೆಗೊಡಲು
ಸದರು ಝುಗಝುಗಿಸಿ ಶಿವನೆದ್ದ॥"

ಶಿವನಾತನನ್ನು ಎಂತೋ ರಮಿಸಿ ಶಿವಪದವನ್ನಿತ್ತನಂತೆ. ಚೋಳರಾಯ ಚೆನ್ನಯ್ಯನನ್ನು ಆನೆಯಮೇಲೆ ಅಂಬಾರಿಯಲ್ಲಿ ಕುಳ್ಳಿರಿಸಿ ನಗರದಲ್ಲೆಲ್ಲ ಮೆರೆಸಿದನಂತೆ. ಇವಾವೂ ಮುಖ್ಯವಲ್ಲ. ಮಾದರವನಾಗಿ ಹುಟ್ಟಿ ವೇದವನ್ನೋದುವವರಿಗೂ ಪೂಜ್ಯನಾದ ಚೆನ್ನಯ್ಯನ ಗುಪ್ತಭಕ್ತಿ, ನಿಷ್ಕಾಮ ಭಕ್ತಿ, ನಿರಾಡಂಬರ ಭಕ್ತಿ

ಮುಖ್ಯವಾದುದು. ಸಂಖ್ಯೆಯಲ್ಲಿ ಸ್ವಲ್ಪವಾದರೂ ಅರ್ಥದಲ್ಲಿ ಅಲ್ಪವಲ್ಲದ ಅವನ ವಚನಗಳಲ್ಲಿ ಆತನ ಆದರ್ಶ ಹೆಪುಗಟ್ಟಿದಂತಿವೆ. ಇದೊ ಕೇಳಿ :

"ನಡೆ ನುಡಿ ಸಿದ್ಧಾಂತವಾದಲ್ಲಿ ಕುಲಹೊಳೆ ಸೂತಕವಿಲ್ಲ. ನುಡಿ ಲೇಸು, ನಡೆಯಧರ್ಮವಾದಲ್ಲಿ ಅದೇ ಹೊಲೆ. ಇಲ್ಲವೆ ಹೊಲೆ ಪರದಾರಂಗಳಲ್ಲಿ? ಹೊಲಬನರಿಯದೆ ಕೆಟ್ಟು ನಡೆಯುತ್ತ ಮತ್ತೆ ಕುಲಜರೆಂಬ ಒಡಲವರುಂಟೆ? ಆಚಾರವೇ ಕುಲ, ಅನಾಚಾರವೇ ಹೊಲೆ. ಇಂತೀ ಉಭಯವ ತಿಳಿದು ಅರಿಯಬೇಕು ಕಯ್ಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ– ಅರಿ ನಿಜಾತ್ಮ ರಾಮ ರಾಮನ!"

"ವೇದಶಾಸ್ತ್ರಕ್ಕೆ ಹಾರುವನಾಗಿ, ವೀರ ವಿತರಣಕ್ಕೆ ಕ್ಷತ್ರಿಯನಾಗಿ, ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ ವ್ಯವಹಾರದೊಳಗಾಗಿ, ಕೃಷಿಯ ಮಾಡುವುದಕ್ಕೆ ಶೂದ್ರನಾಗಿ– ಇಂತೀ ಜಾತಿಗೋತ್ರದೊಳಗಾದ ನೀಚ ಶ್ರೇಷ್ಠವೆಂಬೆರಡು ಕುಲವಲ್ಲದೆ ಹೊಲೆ ಹದಿನೆಂಟು ಜಾತಿಯೆಂಬ ಕುಲವಿಲ್ಲ. ಬ್ರಹ್ಮವನರಿದಲ್ಲಿ ಬ್ರಾಹ್ಮಣ; ಸರ್ವ ಜೀವಹತಕ್ಕೊಳಗಾದಲ್ಲಿ ಸಮ್ಮಗಾಱು. ಈ ಉಭಯವನರಿದು ಮರೆಯಲಿಲ್ಲ. ಕೈಯುಳಿಗತ್ತಿ ಅಡಿಗೂಂಟಕ್ಕೆಡೆಯಾಗ– ಬೇಡ, ಅರಿ ನಿಜಾತ್ಮ ರಾಮ ರಾಮನ!

"ನರಕುಲ ಹಲವಾದಲ್ಲಿ ಯೋನಿಯ ಉತ್ಪತ್ತಿಯೊಂದೇ ಬೇಡ; ಮಾತಿನ ರಚನೆ ಎಷ್ಟಾದೊಡೇನು ನಿಹಿತವ ನರಿವುದೊಂದೆ ಭೇದವಸ್ತು; ಜಾತಿಗೋತ್ರ ವಿಶೇಷವೆಂಬಲ್ಲಿ ದಿವಾ ರಾತ್ರೆಯೆಂಬುಭಯವನಳೆವುದಕ್ಕೆ ಬೆಳಗೆರಡೆಂಬುದಲ್ಲದಿಲ್ಲ. ಕುಲ ಉಭಯಶಕ್ತಿ ಪುರುಷತ್ವವಲ್ಲದಿಲ್ಲ. ಬೇರೆ ಹಲವು ತೆರನುಂಟೆಂದೊಡೆ ಮೀರಿ ಕಾಬ ಶ್ರುತದೃಷ್ಟವಿನ್ನಾವುದು? ಎಲ್ಲಕ್ಕೂ ನೀರು, ನೆಲೆ, ಸೂರ್ಯ ಸೋಮ ಆರೈದು ನೋಡುವ ದೃಷ್ಟಿಯೊಂದೇ. ಬೊಂಬೆ ಹಲವಂದ ಕಾಣ್ಬಂತೆ ಅವರಂಗವ ತಿಳಿದು ನಿಂದಲ್ಲಿ ಹಲವು ಕುಲದ ಹೊಲೆಯೊಂದೂ ಇಲ್ಲವೆಂದೆ. ಕೈಯುಳಿಗತ್ತಿ ಅಡಿಗೊಂಟಕ್ಕೆಡೆಯಾಗಬೇಡ, ಅರಿ ನಿಜಾತ್ಮ ರಾಮ ರಾಮನ!"

"ಸಾಂಖ್ಯ ಶ್ವಪಚ, ಅಗಸ್ತ್ಯ , ಕಬ್ಬಿಲಿಗ, ದೂರ್ವಾಸ ಮಚ್ಚಿಗ, ದಧೀಚಿ ಕೀಲಿಗ, ಕಶ್ಯಪ ಕಮ್ಮಾರ, ರೋಮಜ ಕಂಚುಗಾರ, ಕೌಂಡಿಲ್ಲ ನಾವಿದ ನೆಂಬುದರಿದಮೇಲೆ ಕುಲ ಉಂಟೆಂದು ಛಲಕ್ಕೆ ಹೋರಲೇತಕ್ಕೆ? ಇಂತೀ ಸಪ್ತ ಋಷಿಗಳೆಲ್ಲರೂ ಸತ್ಯದಿಂದ ಮುಕ್ತರಾದರೆಂಬುದನರಿಯದೆ ಅಸತ್ಯದಲ್ಲಿ ನಡೆದು "ನಾವು ವಿಪ್ರರು, ನಾವು ಘನ"ವೆಂದು ಹೋರುವ ಹೊತ್ತು ಹೋಕರ ಮಾತೇತಕ್ಕೆ? ಕೈಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ, ಅರಿ ನಿಜಾತ್ಮ ರಾಮ ರಾಮನ!"

ಮುಂಬರುವ ಬಸವಾದಿ ಪ್ರಮಥರ ತತ್ವಗಳಿಗೆ ಮುನ್ಸೂಚನೆ ಈ ವಚನಗಳಲ್ಲಿದೆ. ಎಂಥ ಮಹಾನುಭಾವ ಮಾದರ ಚೆನ್ನಣ್ಣ!

"ಚೆನ್ನನ ನಿಧಿ ಚೆನ್ನದ ಸುಧೆ!
ಚೆನ್ನನ ಸಕಳಾಯು ಚೆನ್ನನಮೃತ ಸಮುದ್ರಂ ॥
ಚೆನ್ನಂ ರಕ್ಷಿಸುಗೆನ್ನಂ ।
ಚೆನ್ನನ ಸುತನೆಂದು ಹಂಪೆಯ ವಿರೂಪಾಕ್ಷ ॥"

ಎಂದು ಹರಿಹರನಂತೆ ನಾವೂ ಪ್ರಾರ್ಥಿಸೋಣ.

"ಅಂಬಲಿಯೊ ಅಮೃತವೊ ಶಂಭುಹರನೆಂಜಲವೊ
ಹಂಬಲಿಸಿ ಹರನು ಉಣ್ಣುವುದೊ ಶರಣನಿಗೆ
ನಂಬಿ ಶಿವಕೊಟ್ಟ ಶಿವಪದವೊ॥"

■

# ಶಿವನಾಟದ ಸವಿಗಂಡ ಗುಂಡಯ್ಯ

ಭಲ್ಲುಕೆಯಲ್ಲಿ (ಇಂದಿನ ಭಾಲ್ಕಿ–ಬೀದರಜಿಲ್ಲೆ) ಒಬ್ಬ ಶಶಿಮೌಳಿಯ ಶರಣನಿದ್ದ. ಘಟಕಾಯಕನಾಯಕನಾಗಿದ್ದ ಆ ಭಕ್ತನ ಹೆಸರು ಕುಂಬಾರ ಗುಂಡಯ್ಯ. ಹೆಂಡತಿಯ ಹೆಸರು ಕೇತಲದೇವಿ. ಅವನ ವೃತ್ತಿ ತತ್ವಮಯವಾಗಿದ್ದ ರೀತಿಯಿದು:

"ಆಧಾರಮೆಯಾಧಾರಮದಾಗಿರೆ
ಮಿಗೆ ಷಟ್ಚಕ್ರಮೆ ಚಕ್ರಮದಾಗಿರೆ
ಸೊಗಯಿಪ ನಾಭಿಯೆ ನಾಭಿಯದಾಗಿರೆ
ಕನಸಿನ ಕಾಯಂ ಮೃತ್ತಿಕೆಯಾಗಿರೆ
ನೆನಹುಂ ಚಟದಾರಂಗಳವಾಗಿರೆ
ನಿಷ್ಠೆಯೆ ತಿರುಹುವ ದಂಡವದಾಗಿರೆ
ಮಾಡುವ ಭಕ್ತಿ ಕಟಾಹಮದಾಗಲು
ಕೂಡಿದ ಕರಣದೆ ಮರ್ದಿಸುತಾಗಲು
ಮಿಗೆ ಶೋಷಣದಾತಪದಿಂದಾರಿಸಿ
ಬಗೆ ಮಿಗಲುದರಾಗ್ನಿಗಳಿಂದಹಿಸಿ
ಇಂತೊಳಗಣ ಘಟಕಾಯಕಮೊಪ್ಪಲು
ಸಂತತ ಹೊರಗಣ ಮಾಟಮದೊಪ್ಪಲು
ಕುಂಬರ ನೆನೆಸಿರ್ಪಂ ಗುಂಡಯ್ಯಂ"

ಇಂತು ಒಳಗಣ ಘಟಕಾಯಕ ಹೊರಗಣ ಘಟಕಾಯಕಗಳೆರಡನ್ನೂ ಮಾಣದೆ ಕೂಡಿ ನಡಸುತ್ತಿದ್ದ ಜಾಣನಾಗಿದ್ದ ಗುಂಡಯ್ಯ. ಹೊರಗೆ ಚಕ್ರಕ್ಕೆ ಆಧಾರವಾಗಿ ಹುಗಿದ ಮರದ ತುಂಡೇ ಅವನಿಗೆ ಆಧಾರ ಚಕ್ರ; ಅದರ ಮೇಲಿನ ತಿಗರಿಯೇ ಅವನ ಷಟ್ ಚಕ್ರ ; ತಿಗರಿಯಲ್ಲಿಯ ಮೂಳೆ ನೆಡುವ ರಂಧ್ರವೇ ಅವನ ನಾಬಿ (ಮಣಿಪೂರಕ ಚಕ್ರ) ; ಶರೀರವೇ ಮಡಕೆ ಮಾಡುವ ಮಣ್ಣು ; ನಿಷ್ಠೆಯೇ ದಂಡ: ಅದರಿಂದ ತಿರುಗಿಸಿ ಮಾಡಿದ ಮಡಕೆಗಳನ್ನು ನೆನಹೆಂಬ ಚಟಿದಾರಗಳಿಂದ ಕೊಯ್ದು, ಕರಣಗಳಿಂದ ತಿದ್ದಿ ಬಡಿದು, ಆರಿಸಿ ಭಕ್ತಿಯೆಂಬ ಆವಿಗೆಯಲ್ಲಿ ಹಾಕಿ

ಉದರಾಗ್ನಿಗಳಿಂದ ಸುಟ್ಟು ಗಟ್ಟಿ ಮಾಡಿಡುತ್ತಿದ್ದ. ಆ ಮಡಕೆಗಳನ್ನೇ ಬಾರಿಸುತ್ತ ಕಾಣಿದಾಡುತ್ತಿದ್ದ.

"ಮಡಕೆಗಳ ಬಾರಿಸುತ ತೊಡಗಿದ್ದ ಕುಣಿತದೊಳು
ಹೆಡೆಯೆತ್ತಿ ನಾಗಮಣಿಯಂತೆ–ಗುಂಡಯ್ಯ
ತಡೆತಡೆದು ಹೆಜ್ಜೆ ಹಾಕುತಲಿ ॥"

ಇದು ಅವನ ನಿತ್ಯದ ತತ್ವಮಯ ಕಾಯಕ. ಅವನ ಪಾಲಿಗೆ

"ಕಾಯಕವೆ ಶಿವಭಕ್ತಿ ಕಾಯಕವೆ ಶಿವಭಜನೆ
ಕಾಯಕವೆ ಲಿಂಗ ಶಿವಪೂಜೆ–ಶಿವಯೋಗ
ಕಾಯಕವೆ ಕಾಯ್ವ ಕೈಲಾಸ॥"

ಕಾಯಕದಲ್ಲಿ ನಿರತನಾಗಿ ಪ್ರಾಣಲಿಂಗ ಪೂಜೆಯಲ್ಲಿ ಮಗ್ನನಾಗಿರುತ್ತಿದ್ದ ಗುಂಡುಯ್ಯ

"ಪ್ರಾಣಲಿಂಗಿಯು ಗುಂಡ ಏನೊಂದು ಹೊರಗರಿಯ
ಪ್ರಾಣಲಿಂಗದೊಳು ಶಿವಬೆಳಕು–ಬೀಳುತಲಿ
ತಾಣ ಕಳೆಯೇರಿ ಕಾಯಕವು ॥
ಮೂರು ಲಿಂಗದ ಕಳೆಯ ಬೀರುತಲಿ ಗುಂಂಡಯ್ಯ
ತೋರಿ ಆ ಕಳೆಯು ತನ್ನೊಳಗೆ – ಒಡಮೂಡಿ
ಸೂರಿ ಕಾಯಕವೆ ಜನಕಾಯ್ತು॥"

ಅವನ ಜೀವನದ ಪ್ರತಿಕ್ಷಣವೂ ಪೂಜೆ, ಮಾಡುವುದೆಲ್ಲ ಆರಾಧನೆ. 'ಮನದೊಳ್ ಕಣ್ಣೊಳ್ ಪೂಜಾಭಾವ' ತುಂಬಿರುತ್ತಿದ್ದ ಕುಂಬಾರ ಗುಂಡಯ್ಯನಿಗೆ

"ಊಟಂ ನಿದ್ರೆಗೆ ಮನವಿಲ್ಲಿಲ್ಲಂ
ನೋಟಂ ನುಡಿಗೆಡೆ ಇಲ್ಲೆಡೆ ಇಲ್ಲಂ
ಶಿವಪೂಜೆಯ ಕರಡಿಗೆಯಂತಿರ್ಪಂ
ಶಿವಪೂಜೆಯ ಗವಸಣಿಕೆಯೊಲಿರ್ದಂ"

ಗುಂಡಯ್ಯನು ಶಿವನನ್ನು ಸ್ಮರಿಸಿದಂತೆಲ್ಲ ಮಡಕೆಗಳೆಲ್ಲ ತಮ್ಮಿಂದ ತಾವೇ ತಾಯಾರಾಗುತ್ತಿರುವುವೋ ಎಂಬಂತೆ ತೋರುತ್ತಿದ್ದಿತು. ಇದರಿಂದ ಗುಂಡಯ್ಯನ ಭಕ್ತಿ ಇನ್ನಷ್ಟು ಪುಟವೇರಿ ಆ ಮಡಕೆಗಳನ್ನೇ ಬಾರಿಸುತ್ತ ರಾತ್ರಿಯೆಲ್ಲ ಶಿವಧ್ಯಾನದಲ್ಲಿರುತ್ತಿದ್ದನು. 'ಬಾಜಿಪ ಕೈ ಮುಚ್ಚಿದ ಕಣ್ಣೊಪ್ಪಿರೆ' ಮಾನಸ ಪೂಜಾ ಮಗ್ನನಾಗಿರುತ್ತಿದ್ದ ಅವನು.

ಬಂದುದನರಿಯದೆ ಹೋದುದನರಿಯದೆ
ನಿಂದರನರಿಯದೆ ನೆರೆದರನರಿಯದೆ
ಮಾಟವನರಿಯದೆ ನಿದ್ರೆಯನರಿಯದೆ
ನೋಟವನರಿಯದೆ ನೆನೆವುದನರಿಯದೆ

ಶಿವನಲ್ಲಿ ಸಮರಸನಾಗಿಬಿಡುತ್ತಿದ್ದನು. ಅಲ್ಲಿ ಪೂಜ್ಯ ಪೂಜಕ ಭೇದ ಉಳಿದಿರಲಿಲ್ಲ. ಪೂಜಕನೇ ಪೂಜ್ಯನಾದ ಪರಮೋನ್ನತಿಯದು.

ಗುಂಡಯ್ಯನತ್ತ ಗಮನ ಹೊರಳಿದ್ದ ಶಿವನಿಗೆ ಕೈಲಾಸದಲ್ಲಿ ಮನಸ್ಸಿಲ್ಲದಾಯಿತು; ಸುರರ ಓಲಗ ಸಾಕಾಯಿತು; ಗೌರಿ ಗುಹ ಗಣಪರ ನೆನಪೂ ಹಾರಿ ಹೋಯಿತು.

ಕಣಕಣಿಸಿ ಕರಡೆಗಳು ಝಣಝಣಿಸಿ ತಾಳಗಳು
ಧಣ ಧಣ ದಿತ್ತ ಮದ್ದಳೆಯು–ಕಿವಿಯೊಳಗೆ
ಘನಸೂರು ಹಿಡಿಯೆ ಗುಂಡನಿಗೆ–
ಅವನಿಲ್ಲಿ

ತೂಗಾಡುತ ಮಡಿಕೆಗಳು ಬಾರಿಸಿ
ಅಡ್ಡಂ ತ್ರಿಕಟಂ ಬಲಿವುತೆ ಬಾರಿಸಿ
ಕುಣಿವುತೆ ಕೂಗುತೆ ನಲವಿಂ ಬಾರಿಸಿ
ಮಣಿವುತೆ ತಣಿವುತೆ ಮುದದಿಂ ಬಾರಿಸಿ

ಕುಣಿಯತೊಡಗಲು ಕೈಲಾಸದಲ್ಲಿ ಶಿವನ ಹೃದಯವೂ ಕುಣಿಯತೊಡಗುತ್ತಿತ್ತು. ಒಂದು ದಿನ ಶಿವನು ತಾನು ಕೈಲಾಸದಲ್ಲಿ ಕುಳಿತಿರುವೆನೆಂಬುದನ್ನೂ ಮರೆತು ಬಿಟ್ಟನು. ಎಷ್ಟೆಂದರೂ ಅಮರಸಿಂಹ ಹೇಳಿರುವಂತೆ 'ಮಹಾನಟ' ನಲ್ಲವೇ ಅವನು? 'ಸಂಗೀತ ವಿದ್ಯಾ ವಿನೋದ'ದಲ್ಲಿ ಹೇಳಿರುವಂತೆ 'ವಿಭುರಾದಿ ನಟಃ ಸುರಾಣಾಂ' ಅಲ್ಲವೇ ಅವನು? ಗುಂಡಯ್ಯನ ರಿಂಗಣ ಕೈಲಾಸದ ಅಂಗಣಕ್ಕೇರಿದಾಗ ಕುಣಿಯದಿರಲು ಅವನಿಗೆ ಸಾಧ್ಯವೆ? ಗುಂಡಯ್ಯ ಹರವಶನಾಗಲು ಹರ ಪರವಶನಾಗಿ ಕುಣಿಯತೊಡಗಿದನು.

ಶಿವಪದದಂದುಗೆ ಘಲಘಲಕೆಂದೆನೆ
ನವಕಟಕಧ್ವನಿ ಝುಂಝುಣರೆಂದೆನೆ
ಮರ್ತ್ಯದ ದನಿ ಕೈಲಾಸದ ನೃತ್ಯಂ
ಸತ್ಯದ ದನಿ ಶಿವಲೋಕದ ನೃತ್ಯಂ

ಮರ್ತ್ಯದ ದನಿ ಸತ್ಯ ದನಿಯಾದಾಗ ಶಿವನೃತ್ಯ ಚಿಮ್ಮುವುದೆಂಬುದನ್ನು ಗುಂಡಯ್ಯ ಸಿದ್ಧಪಡಿಸಿದ ತನ್ನ ಶುದ್ಧಮನದ ಸದ್ಭಕ್ತಿಯಿಂದ. ಇದ್ದಕ್ಕಿದ್ದಂತೆ ಎದ್ದು ಶಿವನು ಕುಣಿಯತೊಡಗಿದುದನ್ನು ಕಂಡು ಹರನ ಒಡ್ಡೋಲಗ ಬೆಕ್ಕಸ ಬೆರಗಾಯಿತು. ಪಾರ್ವತಿಯು ಎಚ್ಚರಿಸಿ 'ಇದಾವ ಉನ್ಮಾದ ದೇವಾ' ಎಂದು ಕೇಳಿದಾಗ ಶಿವನು ಉತ್ತರಿಸಿದ :

"ಗುಂಡನ ಹೃದಯದೊಳಾಡುತ್ತಿರ್ದೆಂ
ತಂಡದ ಸುಖದೊಳ್ಮೂಡುತ್ತಿರ್ದೆಂ
ಇರುತಂ ಸ್ಥಾನದ ಭೇದಮನರಿಯದೆ
ಸುರನರಲೋಕದ ವಿವರಣೆಯನರಿಯದೆ
ಅಲ್ಲಿಯುಮಿಲ್ಲಿಯು ಮೂಡುತ್ತಿರ್ದೆಂ
ಸಲ್ಲೀಲೆಯೊಳೆನ್ನಂ ಮರೆದಿರ್ದೆಂ!"

ಕಾತ್ಯಾಯನಿಯ ಕೌತುಕಕ್ಕೆ ಕೊನೆಯಿಲ್ಲದಾಯಿತು. 'ನಿಮ್ಮುವ ನಾಡಿಪ ಭಕ್ತನದಾವಂ?' ಎಂದು ಕೇಳಿದಳು. ತನ್ನ ಮನವನ್ನು ಸೂರೆಗೊಂಡಿದ್ದ ಆ ಮಹಾಭಕ್ತನನ್ನು ಶಿವೆಗೆ ತೋರಿಸಲು ಶಿವನು ಸುಮ್ಮತಿಸಿದ. ಅಂಬರದಲ್ಲಿ ಅಂಬಿಕೆಯನ್ನು ನಿಲ್ಲಿಸಿ ತಾನೊಬ್ಬನೇ ಗುಂಡಯ್ಯನ ಗುಡಿಸಲ ಮುಂದೆ ಇಳಿದ. ಏಕನಿಷ್ಠೆಯಿಂದ ಘಟಕಾಯಕದಲ್ಲಿ ನಿರತನಾಗಿ ಹೊರಗೆ ಮೆರೆದ ಶರಣನನ್ನು ಕಂಡು ಪುಲಕಿತಗಾತ್ರನಾಗಿ ಅವನನ್ನು ಎಚ್ಚರಿಸಲೆಂದು ಅವನ ಮನದ ಲಿಂಗವನ್ನು ತನ್ನೆಡೆಗೆ ಆಕರ್ಷಿಸಿಕೊಂಡು ಅದರೊಳಗೆ ತಾನು ಬೆರೆತು ಗುಂಡಯ್ಯನ ಬಾಗಿಲದ ಎದುರಿನಲ್ಲಿಯೇ ಲಿಂಗವಾಗಿ ಮೂಡಿದ. ಈ ಹೊರಗಿನ ಲಿಂಗವನ್ನು ಕಂಡ ಮೇಲಂತೂ ಗುಂಡಯ್ಯನ ಆನಂದಕ್ಕೆ ಎಲ್ಲೆಯೇ ಇಲ್ಲದಂತಾಯಿತು ; ಭಕ್ತಿಯ ಉತ್ಸಾಹ, ಆವೇಶ, ಉನ್ಮಾದಗಳೂ ಮೇರೆ ಮೀರಿದುವು.

ಕೊರ್ಬಿದನುರ್ಬಿದನುಲಿದಾಳ್ದಿರ್ದಂ
ಸರ್ಬಸುಖಂಗಳ್ಸಲೆ ಬರುತಿರ್ದಂ
ಕುಣಿದಾಡುತೆ ಮಡಕೆಗಳಂ ಬಾರಿಸಿ
ಕುಣಿದಾಡುತೆ ಕುಡಿಕೆಗಳಂ ಬಾರಿಸಿ
ಕುಣಿವುತೆ ಕೊರಲೆತ್ತುತೆ ನೆರೆತೂಗುತೆ
ಕೊನೆವುತೆ ತೂಗಾಡುತೆ ಸುಖಿಯಾಗುತೆ
ಕೊಂಕುತೆ ಬಂಕುತೆ ಹಾರೈಸುತ್ತಂ
ಬಿಂಕಂಬೆತ್ತು ಬುಬೆಂದಾಡುತ್ತಂ

ಆಡುವ ಗುಂಡಯ್ಯನ ಹೊಸ ನೃತ್ಯಂ
ನೋಡುವ ಶಿವನಂ ಮುಟ್ಟಿತು ಸತ್ಯಂ !

ಭಕ್ತಕಾಯ ಮಮಕಾಯನೆಂದ ಶಿವನು ಭಕ್ತಕಾಯ ಕುಣಿಯತೊಡಗಲು ಸಮ್ಮನಿರುವುದು ಸಾಧ್ಯವೇ?

"ಸುಖದಾಟಂ ತನ್ನಂ ಬೆಂಬತ್ತಲು
ಸುಖಮುಖದಿಂ ಮನಮಂ ಸುತ್ತಲು
ಒಳಗಾಡಿದೆನಿನಿತುಂ ದಿನವೆನುತುಂ
ಇಳೆಯರಿಯಲ್ ಪೊರಗಾಡುವೆನೆನುತಂ"

ತಾನೂ ಕುಣಿಯತೊಡಗುತ್ತಾನೆ. ಶಿವನ ನೃತ್ಯವೇನು ಸಾಮಾನ್ಯವೆ? ಅದು ವಿಶ್ವವ್ಯಾಪಿ. ಅದರ ವಿಶ್ವರೂಪವನ್ನು ಹರಿಹರ ಸೆರೆಹಿಡಿದ್ದಾನೆ. ತನ್ನ ಅಮರ ಕೃತಿ 'ಕುಂಬರ ಗುಂಡಯ್ಯನ ರಗಳೆಯಲ್ಲಿ' ;

"ದಶಭುಜಮಂ ದಿಕ್ತಟಕಂ ಪಸರಿಸಿ
ಎಸೆವ ಕರಂಗಳನೆತ್ತಲ್ ನೇಮಿಸಿ
ಒಂದು ಪದಂ ಪಾತಾಳವನೊತ್ತಲ್
ಒಂದು ಪದಂ ಬ್ರಹ್ಮಾಂಡವನೊತ್ತಲ್
ಜಡೆಗಳ್ ಬೆಂಬಳಿವಿಡಿದಾಡುತ್ತಿರೆ
ಮುಡಿಯೊಳ್ ಸುರನದಿ ತುಳ್ಕಾಡುತ್ತಿರೆ
ತಡಿಯೊಳ್ ಶಶಿ ಕಳೆಯಲ್ಲಾಡುತ್ತಿರೆ
ಕಡು ಚೆಲ್ವಳಕಂ ಕುಣಿದಾಡುತ್ತಿರೆ
ಮಿಸುಗುವ ಡಮರುಗ ಢಂ ಢಂ ಢಣಲೆನೆ
ತಿಸುಳದಿ ಹರಿಯುವ ತಾರಂ ತಿರ್ರನೆ
ತಿರುಗುತ್ತಿರೆ ಅಹಿಗಳ್ ಹೆಡೆಯೆತ್ತಲ್
ಕರಿಯ ತೊವಲ್ ನಭಮಂ ಜೋಹರಿಸಲು
ಸರಸಿಜಭವನ ಶಿರಂ ಬೊಬ್ಬಿಡುತಿರೆ
ಸುರರ ಶಿರೋಮಾಲೆಗಳುಲಿವುತ್ತಿರೆ
ಪೊಂಗೆಜ್ಜೆಗಳರವಂ ಘುಲುಘುಲುಕೆನೆ
ತೊಂಗಲ ಗಂಟೆ ಢಣಂ ಢಂ ಢಣಲೆನೆ
ಆಡಿದ ನಾಡಿದನಾಹಾ ಶಂಕರ–
ನಾಡಿದನಾ ಗುಂಡನ ಮುಂದೀಶ್ವರ!"

ಸ್ವಾಮಿಯು ಸಾತ್ವಿಕೋದ್ರೇಕದಿಂದ ಕುಣಿಯುವುದನ್ನು ಕಂಡು ಸುರರು ಸುರಲೋಕದ ವಾದ್ಯಗಳನ್ನು ತರುತ್ತಾರೆ; ತುಂಬುರ ನಾರದರು ಉಗ್ಗಡಿಸುತ್ತ ಬರುತ್ತಾರೆ. ಶಂಕರನವುಗಳನ್ನೆಲ್ಲ ಬೇಡವೆನ್ನುತ್ತಾನೆ. ತನ್ನ ಭಕ್ತರ ಮಡಕೆಯ ವಾದ್ಯವೊಂದೇ ಸಾಕೆನ್ನುತ್ತಾನೆ. ಮತ್ತಷ್ಟು ಮೈಮರೆತು ಕುಣಿಯತೊಡಗುತ್ತಾನೆ. ಅತ್ತ ಗುಂಡ ಇತ್ತ ಶಿವ ಮತ್ತರಾಗಿ ಕುಣಿಯತೊಡಗಿದುದನ್ನು ಕಂಡು ನೋಡುತ್ತ ನಿಂತಿದ್ದ ಗಣತತಿಗೂ ಕುಣಿವಾಸೆ ಮೊಳೆಯುತ್ತದೆ. ಗಣತತಿ ಕುಣಿಯಲು



**'ಶಿವನಂ ಕಂಡಾ ಗಣತತಿ ಕುಣಿಯಲು....ಸರ್ವಸ್ಥಾವರ ಜಂಗಮ ಕುಣಿಯಲು'**

ಸಚರಾಚರದ ಕಣಕಣವೂ ಕುಣಿಯತೊಡಗುತ್ತದೆ. ಕುಂಬಾರಗುಂಡಯ್ಯನ ಕುಣಿತ ವಿಶ್ವಲಾಸ್ಯ (Cosmic Dance) ವಾಗಿ ಪರಿವರ್ತಿತವಾಗುತ್ತದೆ.

"ಶಿವನಂ ಕಂಡಾ ಭಕ್ತಂ ಕುಣಿಯಲು
ಶಿವಭಕ್ತನ ಕೂಡಭವಂ ಕುಣಿಯಲು
ಈರ್ವರನೀಕ್ಷಿಸಿ ಗಣತತಿ ಕುಣಿಯಲು
ಸರ್ವಸ್ಥಾವರ ಜಂಗಮವಾಡಲು..."

ವಿಶ್ವದ ಕೇಂದ್ರಬಿಂದುವೇ ಕಲಕುವಂತಾಗುತ್ತದೆ. ಇನ್ನು ಸುಮ್ಮನಿದ್ದರೆ ಅನಾಹುತವಾದೀತೆಂದು ಜಗನ್ಮಾತೆ ಪಾರ್ವತಿ ಶಿವನನ್ನು ಸಮತೆಗೆ ತರುತ್ತಾಳೆ. ಶಿವ ಗುಂಡಯ್ಯನನ್ನು ಬಿಗಿದಪ್ಪಿ.

"ಈ ಮೂರು ಲೋಕದೊಳು ಹೂಮಾಲೆ ನಿನಗೀವೆ
ಭೂಮಿಯೊಳು ನಿನಗೆ ಮೆಚ್ಚಿದೆನು–ಎಲೆ ಗುಂಡ
ಸೀಮೆ ಮಿೀರಿಹುದು ಶಿವಭಕ್ತಿ"
"ಶಿವಲೋಕದೊಳು ನಿನಗೆ ಶಿವಪದವ ಉಣಿಸುವೆನು
ಶಿವಗಣಕೆ ಸಾರಿ ಹೇಳುವೆನು–ಗುಂಡಯ್ಯ
ಶಿವಶರಣನೆಂದು ನಡೆ ಮೊದಲು!"

ಶಿವನ ಈ ಕರೆಗೆ ಗುಂಡಯ್ಯನಿತ್ತ ಉತ್ತರ ವಿಶ್ವದನಿತು ಬಿತ್ತರವನ್ನೊಳ ಗೊಂಡಿದೆಯೆಂದರೆ ತಪ್ಪಾಗದು ;

"ಬೇಡೆನಗೆ ಕೈಲಾಸ ಬಾಡುವುದು ಕಾಯಕವು
ನೀಡೆನಗೆ ಶಿವನೆ ಕಾಯಕವ–ಕುಣಿದಾಡಿ
ನಾಡ ಹಂದರಕೆ ಹಬ್ಬಿಸುವೆ!"

ಮಹಾಕವಿ ಹರಿಹರನ ಗುಂಡಯ್ಯ ಶಿವನು ಕರೆದಾಕ್ಷಣ ಶಿವಲೋಕಕ್ಕೆ ಹೋಗಲು ಸಮ್ಮತಿಸುತ್ತಾನೆ. ಆದರೆ ಜನಪದ ಕವಿ ಸಾವಳಿಗೇಶನ ಕುಂಬಾರ ಗುಂಡಯ್ಯ ಕೈಲಾಸ ಬೇಕಿಲ್ಲ, ಕಾಯಕವೆ ಸಾಕೆನಗೆಂದು ಮಹಾಕವಿಂಯೂ ಗುರುತಿಸದ ಮಹೋನ್ನತಿಗೆ ಮುಟ್ಟಿದ್ದಾನೆ. 'ಕುಣಿದಾಡಿ ಕಾಯಕವನ್ನು ನಾಡ ಹಂದರಕ್ಕೆ ಹಬ್ಬಿಸುವೆನೆಂದು ಶಿವನೆದುರು ಶಪಥಮಾಡಿದ ಕಾರಣ ಗುಂಡಯ್ಯ ನಿಜವಾಗಿಯೂ ನಾಡ ನಂದಾದೀಪವಾದನು. ನಾಡ ಜನವೂ ಇದನ್ನು ಒಪ್ಪಿ ಗುಂಡಯ್ಯನನ್ನು ಹಾಡಿ ಹೊಗಳಿತು.

"ತೊಂಡಲವು ಶಿವಗಣಕೆ ಗುಂಡಯ್ಯ ನೀನಾದಿ
ಇಂಡೆ ಕೊರಳೊಳಗೆ ನೀನಾದಿ– ಶಿವಭಕ್ತ
ಗುಂಡ ನೀನೆಂದು ಜನ ಭಜಿಸಿ"

ಒಕ್ಕಲಿಗರು ತಮ್ಮ ಬೆಳೆಗಳ ರಕ್ಷಣೆಗಾಗಿ ಹೊಲಗಳಲ್ಲಿ 'ಬೆದರು' ಎಂದು ಒಂದು ಕೋಲಿಗೆ ಗಡಿಗೆಯೊಂದನ್ನು ನೇತುಹಾಕಿ ಅದಕ್ಕಿ ಸುಣ್ಣ ಬರೆಯುತ್ತಾರೆ. ಅದನ್ನು ಕಾವಲುಗಾರನೆಂದೇ ತಿಳಿದು ಪಶುಗಳು ಬೆಳೆಯೊಳಗೆ ನುಗ್ಗುವುದಿಲ್ಲ. ಆ ಗಡಿಗೆಯು ಗುಂಡನೆಂದೇ ಒಕ್ಕಲಿಗರು ನಂಬಿದ್ದಾರೆ.

"ಬೆಚ್ಚು ಗಡಿಗೆಯು ಗುಂಡ ನುಚ್ಚು ಜೋಕನು ಚಿರಗ
ಬೆಚ್ಚಾರೆ ಹೊಲಕೆ ಒಕ್ಕಲಿಗ–ಚೆರಗೊಗೆದು
ಬಚ್ಚಿಡಲು ಹುಲುಸು ಹೊಲದೊಳಗೆ ॥"
"ಬೆಚ್ಚುಹಾಕಿದ ಗಡಿಗಿ ಮುಚ್ಚಿಟ್ಟ ಹೊಲ ಹುಲುಸು
ಬಚ್ಚಾದ ಬೆಳೆಯ ಕಣವುಕ್ಕಿ–ಗುಂಡಯ್ಯ
ಹೆಚ್ಚಾಯ್ತು ನಿನ್ನ ಶಿವಭಕ್ತಿ॥"

ಆ ಬೆಚ್ಚುಗಡಿಗೆಯನ್ನು ಹೂಳಿದ ಹೊಲ ಹುಲುಸಾಗುವುದಂತೆ. ಇಷ್ಟೇ ಅಲ್ಲ, ಚಳೀಗಾಲದಲ್ಲಿ ಬೆಳವಲದಲ್ಲಿ ಬೆಳೆಗಳಿಗೆ ಹಿತಕರವಾದ ಗಾಳಿಯೊಂದು ಬೀಸುತ್ತದೆ. ಅದನ್ನು ಕುಂಬಾರ ಗಾಳಿಯೆಂದು ಕರೆದು ಹಳ್ಳಿಗರು ಕುಂಬಾರ ಗುಂಡಯ್ಯನ ನೆನಹನ್ನು ನಿತ್ಯ ಜೀವನದಲ್ಲಿ ನಿಲ್ಲಿಸಿಕೊಂಡಿದ್ದಾರೆ.

"ಗುಂಡ ತಿಗರಿಯ ತಿರುವಿ ರುಂಡಧಾರಿಯು ಕುಣಿದು
ಥಂಡಿ ಬೀಳುತಲಿ ಬೆಳವಳಕೆ–ಕುಂಬಾರ
ಗಿಂಡಿರಸಗಾಳಿ ಬೀಸುತ್ತಲಿ"

ಆ ರಸಗಾಳಿ ವರ್ಷದಲ್ಲೊಮ್ಮೆ ಬೀಸಿದರೆ ಗುಂಡಯ್ಯನ ಭಕ್ತಿಯ ರಸಗಾಳಿ ಹಗಲಿರುಳು ಬೀಸುತ್ತಿದೆ–ಬೀಸುತ್ತಿರಲಿ!

■

# ಕೋಳೂರ ಕೊಡಗೂಸು

ಹೆತ್ತವರ ನೋಂಪಿಯನೆ ಮುತ್ತಾಗಿ ಪಾಲಿಸಲು
ಸತ್ಯ ಶಿವಶರಣೆ ಕೊಡುಗೂಸು । ಶಿವಲಿಂಗ
ಎತ್ತಿ ತನ್ನೊಳಗೆ ಒಳಕೊಂಡ ॥"

–ಹಂತಿಯ ಹಾಡು

"ಯಾರಿಗೆ ಹಾಲೆರೆದು ಬಂದೆ ಅವ್ವಾ?"
"ಕಲ್ಲಿನಾಥನಿಗೆ ಎರೆದು ಬಂದೆನವ್ವ"
"ಈ ಕಲ್ಲಿನಾಥನಾರವ್ವ?"

"ಯಾರೆಂದು ಕೇಳುವಿಯಲ್ಲ ಮಗಳೆ? ಆತನು ಎಲ್ಲರ ತಂದೆ, ಈ ಲೋಕದ ಸ್ವಾಮಿ, ದೇವರು"

"ಆತನು ಹೇಗಿರುವನಮ್ಮ?"

"ಆತನ ರೂಪವನ್ನು ನೋಡಿಲ್ಲವೆ ಚಿತ್ರದಲ್ಲಿ? ಐದು ಮುಖ, ಹತ್ತು ಭುಜ, ತಲೆ ಮೇಲೆ ಗಂಗೆ–ಚಂದ್ರರು, ಹಣೆಯ ಮೇಲೆ ಉರಿಗಣ್ಣು, ಕೊರಳಲ್ಲಿ ಸರ್ಪಾಭರಣ, ತೊಡೆಯ ಮೇಲೆ ಪಾರ್ವತಿ, ಮುಂದೆ ನಂದಿ......"

"ಆಹಾ, ಸ್ವಾಮಿಯ ರೂಪ ಎಷ್ಟು ಚೆನ್ನಾಗಿದೆ!"

ತಾಯಿ ಮಗಳ ನಡುವೆ ಈ ಸಂಭಾಷಣೆ ನಡೆದದ್ದು ಅನೇಕ ಶತಮಾನಗಳ ಹಿಂದೆ–ಇಂದಿನ ಕಲಬುರಗಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಕನ್ನೆ ಕೋಳೂರ ಗ್ರಾಮದಲ್ಲಿ. ಅಲ್ಲಿ.

"ಸಂಗಯ್ಯ[೧] ಸೋಮಲೆಯು ದಂಪತಿಗಳಿರುತಿರಲು
ಲಿಂಗಿಗಳ ಮಗಳು ಕೊಡಗೂಸು[೨] ! ಕೋಳೂರ
ಸಂಗಮೇಶನಿಗೆ[೩] । ಘನಭಕ್ತಿ"॥

---

೧ ಶಿವದೇವನೆಂದು ವೃಷಭೇಂದ್ರ ವಿಜಯದಲ್ಲಿ ಹೇಳಿದೆ.
೨ ಮೊದಲು ಚೆನ್ನಕ್ಕನೆಂಬ ಹೆಸರಿದ್ದಿತೆಂದು ತೋರುತ್ತದೆ.
೩ ಕಲ್ಲಿನಾಥನೆಂಬ ಉಲ್ಲೇಖಗಳೂ ದೊರೆಯುತ್ತವೆ–ಹರಿಹರನ ರಗಳೆ, ವೃಷಭೇಂದ್ರ ವಿಜಯಗಳಲ್ಲಿ.

ಆ ಕೊಡಗೂಸಿಗೆ ಚಿಕ್ಕಂದಿನಲ್ಲಿಯೇ ಉಕ್ಕಿಬರುತ್ತದೆ ಶಿವಭಕ್ತಿ

"ಮನದ ಬಸಿರೊಳಗೆ ಗರ್ಭಿಣಿಯಾದಳಾ ಕೂಸು
ನೆನಹಿನೊಳು ರತಿಯನೆಡೆಗೊಂಡಳಾ ಕೂಸು
ಆನೊಮ್ಮೆ ಹಾಲನೆರೆವುದನೆಂದು ಕಾಣ್ಬೆನೋ
ಆನೊಮ್ಮೆ ಶಿವನ ಚರಣವನೆಂದು ಕಾಣ್ಬೆನೋ"[೪] ॥

ಎಂದು ಹಾರೈಸಿ ಹಂಬಲಿಸತೊಡಗುತ್ತಾಳೆ. ಆ ಹಂಬಲ ಹೆಚ್ಚಾಗಲು–

ಮನೆಯೊಳಂಗಣದೊಳಗೆ ಶೂಲಿಯಂ ಪಾಡುತುಂ
ಮನದೊಳಗೆ ಮನೋಹರನ ನೆನೆದು ನಲಿದಾಡುತುಂ
ಅಟದೊಳು ಕಲ್ಲಿನಾಥನ ನೆನಹು ತನಗಲ್ಲಿ
ಪಾಠದೊಳು 'ಕಲ್ಲಿನಾಥಾ' ಎಂದು ನೆನೆವಲ್ಲಿ
ಬಳೆಪುತಿರ್ಪಳು ಹರನನೊಳಗಿರಿಸಿ ಕೊಡಗೂಸು
ತಳೆವುತಿರ್ದಳು ಶಿವನ ಭಾವವಂ ಕೊಡಗೂಸು"[೪] ॥

"ನಾನೊಮ್ಮೆ ಕಲ್ಲಿನಾಥನಿಗೆ ಹಾಲು ಕುಡಿಸಬೇಕು. ಕುಡಿಸಿ ಕುಣಿದಾಡಬೇಕು. ಆತನು ನನ್ನ ಕೈಯಿಂದಲೂ ಹಾಲು ಕುಡಿದಾನೆ, ಕುಡಿಯಲಿಕ್ಕಿಲ್ಲವೆ? ಅಮ್ಮನು ಕುಡಿಸಿದರೆ ಕುಡಿದು, ನಾನು ಕುಡಿಸಿದರೆ ಕುಡಿಯುವುದಿಲ್ಲವೆ? ಅದು ಹೇಗೆ ಕುಡಿಯುವುದಿಲ್ಲವೋ ನೋಡುತ್ತೇನೆ" ಹೀಗೆ ಮನದಲ್ಲಿಯೇ ಎಣಿಕೆ ಹಾಕುತ್ತಿದ್ದಳು ಆ ಭಾವಜೀವಿಯಾಗಿದ್ದ ಬಾಲಕಿ.

ಆಕೆಯ ಆಸೆ ಈಡೇರುವ ಮಂಗಲದಿನವೂ ಬಂದಿತು. ತಾಯಿ ಸೋಮಲೆಯನ್ನು ಕರೆಯಲು ಆಕೆಯ ತಮ್ಮ ತವರೂರಿನಿಂದ ಬಂದ. ಅವನ ಮದುವೆ ನಿಶ್ಚಯವಾಗಿದ್ದಿತು. ಅಕ್ಕನನ್ನು ಉಳಿದು ಮದುವೆಯಾಗುವುದೆ?

"ಎಲ್ಲರಿಗೂ ಹಿರಿಯೋಳೆ ಮಲ್ಲಿಗೆ ತುರುಬೋಳೆ
ಎಲ್ಲರಿಗಿಂತ ಕಿರಿಯೋನ । ಮದುವೇಗೆ
ನೀವೆಲ್ಲಾ ಬಂಧುಗಳು ಬರಬೇಕು"[೫] ॥

---

೪ ಹರಿಗರನ ರಗಳೆ
೫ ಜಾನಪದ ಕಥನ ಗೀತೆಗಳು

ಎಂದು ಕರೆದ. ಕಿರಿ ತಮ್ಮನ ಕರೆಯನ್ನು ಕೇಳಿ ಸೋಮಲೆಗೆ ಏನೂ ತೋಚದಾಯಿತು. ಕಲ್ಲಿನಾಥನಿಗೆ ಹಾಲು ಸಲ್ಲಿಸುವ ನಿತ್ಯನೇಮವನ್ನು ಬಿಟ್ಟು ಹೇಗೆ ಹೋಗುವುದು?

"ಶಿವನ ಪೂಜೆಯ ಬಿಟ್ಟು ಅವರ್ಹೆಂಗೆ ಬಂದಾರೊ
ಅವರಿಲ್ಲದೆ ನಾನ್ಹೇಗೆ ಬರಲೊ । ತಮ್ಮಯ್ಯ
ಮನೆಮಗಳು ಚಿಕ್ಕೋಳ ಕರೆದೊಯ್ಯೋ"[೫] ॥

ತಮ್ಮನಿಗೆ ದುಮ್ಮಾನವಾಯಿತು. ಅಕ್ಕನಿಲ್ಲದೆ ಚಿಕ್ಕ ಕೊಡುಗೂಸು ಬಂದರೆ ಆದಾವ ಶೋಭೆ, ಆದಾವ ಸೊಗಸು? ಅತ್ತ ಅವಳ ನಿತ್ಯ ನೇಮ, ಇತ್ತ ತನ್ನ ಮದುವೆ । ಏನು ಮಾಡಬೇಕು?

ಕೊಡಗೂಸಿಗೆ ತನ್ನ ಬಯಕೆ ಫಲಿಸುವ ಗಳಿಗೆ ಬಂದಂತೆ ಭಾಸವಾಯಿತು. ತಾನೇ ಧೈರ್ಯಮಾಡಿ ತಾಯಿಗೆ ಹೇಳಿದಳು :

"ಚಿಕ್ಕೋಳು ಮುಯ್ಯಿ ಇಕ್ಕಿದರೆ ಒಪ್ಪುವರು ಮಲ್ಲಯ್ಯ
ಹೆತ್ತ ತಾಯಿ ಹೋಗಿ ಮದುವೇಗೆ । ಪರಮೇಶ್ವರನ
ನಾ ಎಚ್ಚರಿಸಿ ಹಾಲ ಸಲಿಸೇನು ।"[೫] ॥

ತಾಯಿ ಹೃದಯ ತೊನೆಯುತ್ತದೆ–ತನಯಳ ಮಾತುಗಳನ್ನು ಕೇಳಿ. ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಚೆನ್ನಕ್ಕನಿಗೆ ಎಷ್ಟು ದೈವಭಕ್ತಿ ಎಂದು. ಆನಂದದಿಂದ ಚೆನ್ನಕ್ಕನನ್ನು ಅಪ್ಪಿಬಿಡುತ್ತಾಳೆ ಸೋಮಲೆ. "ಮಗಳೆ, ನಮಗೊದಗಿದ್ದ ಈ ಧರ್ಮಸಂಕಟವನ್ನು ಧೈರ್ಯದಿಂದ ದೂರಮಾಡಿದೆ. ಮೂರು ದಿನಗಳವರೆಗೆ ಹೇಗಾದರೂ ಇದ್ದು ನಮ್ಮ ನಿತ್ಯನೇಮವನ್ನು ನಡೆಸಿಕೊಡು."

"ಚೆಜ್ಜೆ ದನಿಕೇಳಿ ಎದ್ದು ಮಜ್ಜಣಮಿಂದು
ರುದ್ರಾಕ್ಷಿ ತೊಟ್ಟು ಮಡಿಯುಟ್ಟು । ಸಿದ್ಧರ ಊಳಿಗದ
ಶಿವಗುಡಿಗೆ ನೀನು ಹೋಗಮ್ಮ'[೫] ॥
"ತಾಯಿ ಚೆನ್ನಮ್ಮ ಬಾಲರೊಡನಾಡಿಕೆ
ಕೀಲು ಬೊಂಬೆಗಳ ತರುವೆ ನಿನಗೆ–ಕೋಳೂರ
ಬೋಳು ಮಲ್ಲಯ್ಯನವರಿಗೆ ಹಾಲ ಸಲ್ಲಿಸಮ್ಮ'[೫] !

---

೫ ಜಾನಪದ ಕಥನ ಗೀತೆಗಳು
೫ ಜಾನಪದ ಕಥನ ಗೀತೆಗಳು
೫ ಜಾನಪದ ಕಥನ ಗೀತೆಗಳು

ಎಂದು ಹೇಳಿ ಮೈದಡವಿ ಮುಂಡಾಡಿ, ಮನೆಯಲ್ಲಿ ಎಲ್ಲ ವ್ಯವಸ್ಥೆ ಮಾಡಿರಿಸಿ–

"ನಾ ಹೊಗ್ತೀನಿ ಹೊಸ್ತಿಲೆ ಹೋಗ್ತೀನಿ ಬಾಗಿಲೆ
ನಾಗೋಲೆ ಬರೆವ ನಡುಮನೆ–ಜೋತ್ಯಮ್ಮ
ನಾ ಹೋಗ್ತೀನಿ ನನ್ನ ತವರಿಗೆ"

ಎಂದು ಮನೆಯ ಮೂಲೆ ಮೂಲೆಗೂ ತುಳಿಲೆಂದು, ಮಗಳನ್ನು ಕಾಪಾಡಿರೆಂದು ಕೋರಿ ಪತಿಯೊಡನೆ ತವರಿಗೆ ಹೋಗುತ್ತಾಳೆ.[೬]

ಕೊಡಗೂಸಿಗೆ ನಿದ್ರೆಯೇ ಬರಲಿಲ್ಲ ಆ ರಾತ್ರಿ. ಯಾವಾಗ ಬೆಳಗಾಗುವುದೋ, ಯಾವಾಗ ದೇವಾಧಿದೇವನಿಗೆ ಹಾಲು ಕುಡಿಸುವೆನೋ ಎಂದು ಎಣಿಕೆ ಹಾಕುತ್ತಲೇ ಇರುಳನ್ನು ಕಳೆದಳು.

"ಕಾಳೆ ದನಿಕೇಳಿ ಬಾಲೆ ಮಜ್ಜಣ ಮಿಾದು
ನಾವೊಣನ ತೊಟ್ಟು ಮಡಿಯುಟ್ಟು–ಕೋಳೂರ ಹೆಣ್ಣು
ದೇವರೂಳಿಗಕೆ ನಡೆದಾಳೊ೬" ॥
ತಾಯಿತಂದೆಗಳು ಹೇಳಿದಂತೆ :–
"ಹಸುಗರೆದ ನೊರೆಹಾಲ ಹೊಸಮಡಿಕೆಯೊಳು ಹಾಕಿ
ಬಿಸಿ ತುಪ್ಪ ತೇಲಿ ಕೆನೆಬಂದ–ಹಾಲನ್ನು
ನಸುನಗುತ ಕೊಂಡು ಗುಡಿಹೊಕ್ಕು ॥
ಸಂಗಮೇಶ್ವರ ಮುಂದೆ ಅಂಗಬಾಗಿಸಿ ಇಟ್ಟು
ಮಂಗಲವನೆತ್ತಿ ಕೊಡಗೂಸು – ಕೈಮುಗಿದು
ಕಂಗೆಡದೆ ಹಾಲ ಕುಡಿ ಲಿಂಗ"[೭] ॥

ಎಂದು ಬೇಡಿಕೊಳ್ಳುತ್ತಾಳೆ. ಲಿಂಗ ಕುಡಿಯದೆ ಸುಮ್ಮನಿರಲು–

---

೬ ಹಂತಿಯ ಪದದಲ್ಲಿ ಕಥಾಂತರ ಹೀಗಿದೆ ; ತಂದೆಯೇ ಕೊಡಗೂಸನ್ನು ಕರೆದು ಹೀಗೆ ಹೇಳಿ ಹೋಗುತ್ತಾನೆ.
ನೆರೆಯೂರ ದೇವರಿಗೆ ಹರಕೆಯದು ದಿನ ಬಂತು
ತರಳೆ ಕೊಡಗೂಸ ಬಳಿ ಕರೆದು–ಹೇಳಿದನು
ಮರೆಯದಲೆ ಹಾಲು ಸಂಗನಿಗೆ ॥
ಮೂರು ದಿನಗಳು ತಡೆದು ತೇರೆಳೆದು ಬರುವೆನು
ಹಾರೈಸಿ ದೊಡವೆ ನಾ ತರುವೆ–ನಮ್ಮುದ್ದೆ
ತೀರೀಸೀ ವ್ರತವ ಬರುವತನಕ ॥

೭ ಹಂತಿಯ ಪದ

"ಕಾಳ ಹಸುವಿನ ಹಾಲು ಕಾದರೆ ಕಡುರುಚಿ
ಹಾಲು ಸಕ್ಕರೆ ಅದು ಕೂಡಿ–ತಂದಿವ್ನಿ
ಬೋಳು ಮಲ್ಲಯ್ಯ ಹಾಲ ಸಲಿಸೇಳಿ ।"

ಎಂದು ಪುನರಪಿ ಪ್ರಾರ್ಥಿಸಿಕೊಳ್ಳುತ್ತಾಳೆ. ಆಗಲೂ ಶಿವ ಸುಮ್ಮನಿರಲು–

"ಬೆಲ್ಲಗಣಕೆಯ ಹಣ್ಣ ಮೆಲ್ಲಾದೆ ನಾ ತಂದೆ
ಬೆಲ್ಲಾವ ತಂದೆ ಒಳಲಂಚ–ಕೋಳೂರ
ಮಲ್ಲಯ್ಯ ಹಾಲ ಸಲಿಹೇಳಿ"[೫]

ಎಂದು ಅಂಗಲಾಚಿ ಬಿನ್ನವಿಸಿಕೊಳ್ಳುತ್ತಾಳೆ. ಆಗಲೂ ಶಿವಲಿಂಗ ಸುಮ್ಮನಿರಲು ತಾನೆದುರಿಗಿದ್ದರೆ ಕುಡಿಯನೆಂದು ಭಾವಿಸಿ



**ಎನ್ನರಸ ನೊರೆವಾಲನೊಲುಮೆಯಲಿಸವಿಯಯ್ಯ**

---

೫ ಜಾನಪದ ಕಥನ ಗೀತೆಗಳು

"ದೊಡ್ಡ ಬಟ್ಟಲ ಹಾಲು ಒಪ್ಪದಿ ಬಚ್ಚಿಟ್ಟು
ನಿಂದಿವ್ನಿ ಕಂಬದ ಮರೆಯಲ್ಲಿ–ಮಲ್ಲಯ್ಯ
ಪ್ರೀತೀಲಿ ಹಾಲ ಸಲಿಸಪ್ಪ"[೮]

ಎಂದು ಕಂಬದ ಮರೆಗೆ ಕೆಲಹೊತ್ತು ನಿಂತು ಬಂದು ನೋಡುತ್ತಾಳೆ– ಆಗಲೂ ಹಾಲು ಹಾಗೇಯೇ ಉಳಿದಿದ್ದಿತು. ಕೊಡಗೂಸಿನ ಎಳೆಯ ಎದೆ ಆಗ ದಡದಡಸಿತು–

"ದಡದಡಿಪೆದೆ, ಬಿಸಿ ಮಸುಗುವ
ನಿಡುಸುಯ್, ಕಂಪಿಪ ಕರಂಗಳಿರ್ಪೊಣಡಿದ ಬಾಯ್
ಗುಡುಗುಡನೆ ಸುರಿದ ಕಣ್ಣನಿ–
ಯೊಡನಿರೆ ಕೊಡಗೂಸು ನೋಡಿ ಲಿಂಗಮನಾಗಳ್"[೯]

ಹೃದಯ ಕರ್‍ರನೆ ಕರಗಿ ನದಿಯಾಗಿ ಹರಿದಂತೆ ಹಲುಬಿದಳು–

"ಎನ್ನ ರನ್ನವೆ ಎನ್ನ ಹೊನ್ನೆ ಹಾಲ್ಗುಡಿಯಯ್ಯ
ಎನ್ನ ಪರಿಸವೆ ಎನ್ನ ಚನ್ನೆ ಹಾಲ್ಗುಡಿಯಯ್ಯ
ಎನ್ನರಸ ನೊರೆವಾಲನೊಲುಮೆಯಿಂ ಸವಿಯಯ್ಯ
ಎನ್ನ ಸುಖನಿಧಿಯೆ ನೀನೆನ್ನಾಣೆ ಸವಿಯಯ್ಯ
ನೊರೆಯಾರಿ ಬಿಸಿಗುಂದಿ ಸವಿಗೆಡುವುದೆಲೆದೇವ
ನೊರೆವೆರಸಿ ಸವಿಪಾಲನಾರೋಗಿಸೆಲೆದೇವ ।"[೧೦]

ಇಷ್ಟಾದರೂ ಶಿವಲಿಂಗ ಸುಮ್ಮನಿರುತ್ತದೆ. ಕೊಡಗೂಸು ಕಂಗೆಡುತ್ತಾಳೆ.
"ಪಸಿವೇನಾಗದೊ ದೇವ ಕೇಳ್ ನಿನಗೆ ಪಾಲೇಂ ಕಾಯದೋ ಪೊತ್ತಿತೋ
ಬಿಸುಪಾರಿರ್ದುದೊ ಕಮ್ಮನಾಗದೊ ತನಿತ್ತಿಂಪೇರದೋ ಕಣ್ಗೆರಂ–
ಜಿಸದೋ ಮೇಣ್ ಪೊಗೆಸುತ್ತಿದತ್ತೊ ಪೆರರಿಂ ಕಣ್ಣೆಂಜಲಾದತ್ತೊ ಬಲ್
ಬಿಸಿಯಾಗಿರ್ದುದೊ ಮೊಸಲೋಸರಿಸಿತೋ ಪೇಳೀಂಟದಿರ್ಪಂದಮಂ"[೯]॥

ಎಂದು ಬಗೆಬಗೆಯಾಗಿ ಬೇಡಿಕೊಳ್ಳುತ್ತಾಳೆ. "ನನಗೆ ಇನ್ನೇನಾದರೂ ಬೇಕೆ? ಸಕ್ಕರೆ, ಜೇನು, ಬಾಳೆಹಣ್ಣು, ಪುರಿಗಡುಬು, ತರಗು, ಚಕ್ಕುಲಿ, ಚಿಗುಲಿ,

---

೮ ಜಾನಪದ ಕಥನ ಗೀತೆಗಳು
೯ ವೃಷಭೇಂದ್ರ ವಿಜಯ
೧೦ ಹರಿಹರನ ರಗಳೆ
೯ ವೃಷಭೇಂದ್ರ ವಿಜಯ

ಕರಂಜಿಕಾಯಿ, ಅತಿರಸ, ಲಡ್ಡುಗೆ, ಸಕ್ಕರೆ ಫೇಣಿ, ಸೀಕರಣೆ–ಏನು ಬೇಕು ಹೇಳು ತಂದೆ ; ಏನು ಬೇಕಾದರೂ ಮನೆಯಲ್ಲಿದೆ–ಈಗಲೆ ತಂದುಕೊಡುವೆ. ಕೊಡದಿದ್ದರೆ ಕೊಡಗೂಸಲ್ಲ ನಾನು. ಬರಿ ಹಾಲು ಬೇಡವಾಗಿದ್ದರೆ ಬೋನವನ್ನು ತರುವೆ, ಏನು ಬೇಕು ಹೇಳುವುದಿಲ್ಲವೆ? ಹಾಲು ಕುಡಿಯುವುದಿಲ್ಲವೆ? ನನ್ನ ತಂದೆ ತಾಯಿಗಳು ಮೂರು ದಿನಗಳಲ್ಲಿ ಮರಳಿ ಬರುತ್ತಾರೆ ನನಗೆ ತರತರದ ಆಟಿಕೆಗಳನ್ನು ತರುತ್ತಾರೆ. ನಿನಗೂ ಅವುಗಳನ್ನು ಕೊಡುವೆನು. ನಿನ್ನನ್ನೂ ನೆರೆಯೂರ ವೀರಭದ್ರನ ತೇರಿಗೆ ಕರೆದೊಯ್ಯುವೆನು. ನನ್ನ ಮಾತು ಕೇಳಿ ಹಾಲು ಕುಡಿ. ಹಟ ಮಾಡಬೇಡ, ಸಣ್ಣವಳೆಂದು ಸುಮ್ಮನಿರಬೇಡ. ಹಬ್ಬಕ್ಕೆ ನನಗೆ ಹೊಸ ಬಟ್ಟೆ, ಚಿನ್ನದ ಒಡವೆಗಳನ್ನು ಕೊಡುವರು. ನಿನಗೂ ಕೊಡುವೆ. ಮಾತಾಡೊ ಮಾತಾಡೊ ಲಿಂಗವೆ–ನೀನು ಮಾತಾಡಲೊಲ್ಲೇಕೊ ಲಿಂಗವೆ !...."

ಕೊಡಗುಸಿನ ಕರುಳು ಕರಗಿಸುವ ಮೊರೆಯನ್ನು ಕೇಳಿಯೂ ಶಿವ ಸುಮ್ಮನಿದ್ದುದನ್ನು ಕಂಡು ಪಾರ್ವತಿಗೆ ತಡೆಯದಾಗುತ್ತದೆ. 'ಎಷ್ಟು ಆಳಲಿಸುವಿರಿ, ಅದೆಷ್ಟೆ ಬಳಲಿಸುವಿರಿ ಕೂಸನ್ನು? ಕುಡಿದುಬಿಡಬಾರದೆ !' ಎಂದು ಎಚ್ಚರಿಸುತ್ತಾಳೆ. ನಸುನಕ್ಕು ನುಡಿಯುತ್ತಾನೆ ಶಿವ. "ನಾನೇನು ಮಾಡಲಿ? ಈ ಬಾಲಕಿಯ ಮಾತುಗಳು ಅವಳು ತಂದ ಹಾಲಿಗಿಂತ ಸವಿಯಾಗಿವೆ–ಹಾಲು ಕುಡಿದುಬಿಟ್ಟರೆ ಈ ಸವಿ ಸಿಗದಂತಾಗುತ್ತದೆ. ಇನ್ನಷ್ಟು ಅವಳ ಮುಗ್ಧಭಕ್ತಿಯ ಮಾಧುರ್ಯವನ್ನು ಸವಿಯುವೆ."

ತಾನೆಷ್ಟು ರೋರಾಡಿದರೂ ಶಿವ ಸುಮ್ಮನಿದ್ದುದನ್ನು ಕಂಡು ಕೊಡಗೂಸು 'ನೊಂದು ಕಂದಿದಳ್, ಕುಂದಿದಳ್, ಕೊರಗಿದಳ್, ಕೋಡಿದಳ್, ಬಾಡಿದಳ್, ಭೀತಿ ಕಾಲೂರಿ ದುಃಖಂ ತೀವಿ ಗದಗದಿಸೆ, ಮಾತು ಹಿಮ್ಮೆಟ್ಟಿ ಹಿಂದುಳಿದು ತೊದಳಂಕುರಿಸೆ ಅತ್ತು. ಬಾಯ್ಬಿಟ್ಟು, ಸುರ್‍ರನೆ ಸುಯ್ದು, ಸುಗಿದು, ಬೇಳಾಗಿ, ಬೆಚ್ಚಿ ಸೈಗೆಡೆದು, ಎದ್ದು ಡೆಂಡಣಿಸಿ, ಬಾಯಾರಿ–

"ಹಂಬಲಿಸಿ ಬೇಡಿದರು ನಂಬದಲೆ ಶಿವಲಿಂಗ
ಕಂಬಗಲ್ಲಂತೆ ನಿಂತಿರಲು–ಕೊಡಗೂಸು
ಶುಂಭು ನಿನ್ನೊಡನೆ ಸಾಕಾಟ !" ೧೧

ಎಂದು 'ಹಾಲ್ಗುಡಿಯದ ನಿನಗೆ ನನ್ನ ಹರಣವನ್ನೇ ಕುಡಿಸುವೆ' ನೆಂಬಂತೆ ಕಲ್ಲ ಕಂಬಕ್ಕೆ ತಲೆಯೊಡ್ಡಿ ಘಳಿಲನೆ ಹಾಯುತ್ತಾಳೆ. ಹರನಾಗ ಹೊರಬಿದ್ದು ತರಳೆಯ ತಲೆಕಾಯ್ದು ಹಾಲನ್ನು ಕುಡಿಯುತ್ತಾನೆ–

---

೧೧ ಹಂತಿಯ ಪದ

“ಹಾಲೊಳಗೆ ಭಕ್ತಿ ಸಕ್ಕರೆಯ ಸವಿಯಂ ಕುಡಲು
ಹಾಲನಾರೋಗಿಸಿದನಿಳೆ ಕೌತುಕಂ ಬಡಲು !”[೧೨]

ಕೊಡಗೂಸಿನ ಆನಂದವನ್ನೇನು ವರ್ಣಿಸುವುದು? । ಆದರೂ ಹುಸಿಮುನಿಸಿನಿಂದ ಹೇಳುತ್ತಾಳೆ; ‘ಇಷ್ಟೆಲ್ಲ ಕಾಡಿದ ನಿನ್ನನ್ನು ಇಷ್ಟಕ್ಕೆ ಬಿಡುವೆನೆ? ಅಪ್ಪ ಬರಲಿ, ಆತನಿಗಿದೆಲ್ಲವನ್ನೂ ಹೇಳಿ ನಿನಗೆ ತಕ್ಕ ಶಾಸ್ತಿ ಮಾಡಿಸುತ್ತೇನೆ’ ಹರನೆದೆ ಹಿಗ್ಗುತ್ತದೆ. ಹಾಗೆಯೇ ಆಗಲನ್ನು !’ ಎಂದು ಆಡಗುತ್ತಾನೆ.

ಮಾರನೆಯ ದಿನ ಕೊಡಗೂಸು ಹಾಲು ತಂದಿರಿಸುತ್ತಲೇ ಮರುಮಾತನಾಡದೆ ಹರನದನ್ನು ಕುಡಿಬಿಡುತ್ತಾನೆ. ಮೂರನೆಯ ದಿನವು ಇದರಂತೆ ಹರನಿಗೆ ಹಾಲು ಕುಡಿಸಿ ಬರಿ ಬಟ್ಟಲದೊಡನೆ ಕೊಡಗೂಸು ಮನೆಗೆ ಮರಳುತ್ತಲಿದ್ದಾಗ ಅವಳ ತಂದೆ ತಾಯಿಗಳೂ ಹಿಂದಿರುಗುತ್ತಾರೆ. ಮಗಳ ಕೈಯೊಳಗಣ ಬರಿ ಬಟ್ಟಲನ್ನು ನೋಡಿ ತಂದೆಗೆ ಸಂದೇಹವುಂಟಾಗುತ್ತದೆ. ‘ಹಾಲೇನಾಯಿತು ಮಗಳೆ–ನೀನೇ ಕುಡಿದೆಯೋ, ನಿನ್ನ ಗೆಳತಿಯರಿಗೆ ಕೊಟ್ಟೆಯೋ, ಚೆಲ್ಲಿ ಬಿಟ್ಟೆಯೋ?’ ಎಂದು ಕೇಳುತ್ತಾನೆ. ‘ಕಲ್ಲಿನಾಥನಿಗೆ ಕುಡಿಸಿ ಬಂದೆ’ನೆಂದು ಕೊಡಗೂಸು ಹೇಳುತ್ತಾಳೆ.

ತಂದೆಯ ಸಂದೇಹವಿನ್ನೂ ಹೆಚ್ಚುತ್ತದೆ. ‘ಕಲ್ಲಿನಾಥನಿಗೆ ಕುಡಿಸಿದೆಯಾ? ಸುಳ್ಳು ಹೇಳುವೆಯಾ? ಕಲ್ಲಿನ ಲಿಂಗವೆಂದಾದರೂ ಹಾಲು ಕುಡಿಯುವುದೆ? ನಿಜ ನುಡಿ, ಏನು ಮಾಡಿದೆ ಹಾಲನ್ನು?’ ಎಂದು ಗದರಿಸುತ್ತಾನೆ. ಕೊಡಗೂಸು ಅಧೀರಳಾಗದೆ ಮತ್ತೆ ಅದೇ ಉತ್ತರವನ್ನು ಕೊಡಲು, ‘ಹಾಗಾದರೆ ನಾಳೆ ನಮ್ಮೆದುರಿಗೆ ಕಲ್ಲಿನಾಥನಿಗೆ ಹಾಲು ಕುಡಿಸಿ ತೋರಿಸು’ ಎಂದು ತಂದೆ ಆಹ್ವಾನವೀಯುತ್ತಾನೆ ಮಗಳಿಗೆ. ‘ಆಗಲಿ!’ ಎನ್ನುತ್ತಾಳೆ ಮಗಳು, ಶಿವಭಕ್ತಿಯ ಮುಗಳು!

ಮರುದಿನದ ಬೆಳಗು ಎಲ್ಲ ಬೆಳಗುಗಳಂತಿರಲಿಲ್ಲವೆಂದು ಹೇಳುತ್ತದೆ ಹಂತಿಯ ಹಾಡು–

“ಅಂದಿನಾ ದಿನದುದಯ ಎಂದಿನ ಹಾಗಿರದೆ
ಚೆಂದದಲಿ ಸೂಸಿ ಕಿರಣಗಳ–ನೇಸರನು
ಬಂದ ಕೂಡಗೂಸ ಬೆಳಗಿಸಲು !
ಬೆಳಗು ಬೇಗನೆ ಬಂತು ತಿಳಿಸಲೀ ಜಗಕೆಲ್ಲ
ಸುಳಿ ಸುಳಿದು ಬೀಸೆ ಗಾಳಿಗಳು–ಶಿವಗಣಕೆ
ಕಳಿಸುವವೊ ಸುದ್ದಿ ಕೋಳೂರ !

---

೧೨ ಹರಿಹರನ ರಗಳೆ

ಹೊಂಬಣ್ಣ ಹೂಬಿಸಿಲು ತುಂಬೆಲ್ಲ ಚೆಲ್ಲಿರಲು
ತುಂಬಿ ಬಟ್ಟಲದ ಹಾಲನ್ನು–ಕೊಡಗೂಸು
ಶಂಭುಹರ ಗುಡಿಗೆ ನಡೆತಂದು–"

ಕಣ್ಣರಳಿಸಿ ನೋಡಿದಳು ಕಲ್ಲಿನಾಥನನ್ನು ಅನಾಥನಾಥನನ್ನು–

"ಹೊಳೆವ ಲಿಂಗವ ಬೆಳಕು ಒಳಗುಡಿಯ ತುಂಬಿತ್ತು
ಒಳಸೂಸಿ ಬಿಸಿಲ ಕೂಡಿತ್ತು–ಗುಡಿ ಹೊರಗೆ
ಎಳೆ ಬಿಸಿಲು ನೋಡಿ ನಗುತಿತ್ತು!"

ತಂದೆ ತಾಯಿಗಳು ಆತುರದಿಂದ ನೋಡುತ್ತಲಿರಲು ಶಿವಲಿಂಗಕ್ಕೆ ಕೈಮುಗಿದು ಹಾಲು ಬಟ್ಟಲನ್ನು ಮುಂದಿರಿಸಿ 'ಕುಡಿ ತಂದೆ' ಎಂದು ನುಡಿದಳು ಕೊಡಗೂಸು. ಆದರೆ 'ಧರೆಯು ಅರಿಯಲಿ ನೋಡಿ ಪರಮ ಭಕ್ತಳ ಹಿರಿಮೆ' ಎಂದು ಹರ ಸುಮ್ಮನಿರುತ್ತಾನೆ. ಕಕ್ಕಾವಿಕ್ಕಿಯಾಗುತ್ತಾಳೆ ಕೊಡಗೂಸು. ಹೆದರಿ ಹವ್ವನೆ ಹಾರಿ 'ಹರನೇ ಹಾಲು ಕುಡಿದೆನ್ನ ಮಾನ ಕಾಯಿ' ಎಂದು ಹಲುಬಿಯೇ ಹಲುಬುತ್ತಾಳೆ. ಆದರೂ ಕಲ್ಲಿನಾಥ ಕಲ್ಲಾಗಿಯೇ ಕುಳಿತುಬಿಡುತ್ತಾನೆ. ತಂದೆಯ ತಲೆ ಕಾಯುತ್ತದೆ.

"ಕಳ್ಳಿ ಚೆನ್ನಮ್ಮ ಇಲ್ಲದ ಮಾತಾಡಿಯ
ಕಲ್ಗೋಳು ಹಾಲು ಸಲಿಸಾವೆ–ಸುಳ್ಳಾಡಿ
ನೀ ಹಾಲ ನಿತ್ಯ ಕುಡಿದಿಯಾ!"

ಎಂದು ಅಬ್ಬರಿಸುತ್ತಾನೆ. ಗಡಗಡನೆ ನಡುಗುತ್ತಲಿದ್ದ ಕೊಡಗೂಸನ್ನು ಹೊಡೆಯ ಹೋಗುತ್ತಾನೆ–

"ಎಲೆ ಪಾಪಿ ನೀ ಮಗಳೆ ಹೊಲೆಕುಂದ ತಂದೆಮಗೆ
ತಲೆಕಾಯ್ದು ತಂದೆ ಹೊಡೆಹೋದ–ಕೊಡಗೂಸು
ತಲೆಯ ಹಾಯ್ಸಿದಳು ಲಿಂಗಕ್ಕೆ !"

ಆಗ 'ಬಿಚ್ಚಿ ಲಿಂಗದ ಪೀಠ ಮುಚ್ಚಿಕೊಂಡಿತು ಕೂಸು!' 'ಅಯ್ಯೋ, ಅಯ್ಯೋ ಮರೆಯಾದೆಯಾ ಮಗಳೆ!' ಎನ್ನುತ್ತ ಮಗಳ ಮುಡಿಯನ್ನು ಹಿಡಿದುಕೊಂಡ ತಂದೆ. 'ಆ ಹೊಗುವಳೀ ಹೋಗುವಳಿದೆಯಿದೆ ಹೋಹಳೆಂದತಿ ಶೀಘ್ರದಲ್ಲಿ ನಿರ್‌ಮೋಹದಲ್ಲಿ ಪಿತನೈದಿ ಚಂಡಿಕೆಯಂ ಪಿಡಿಯಲೊಡನೆ' ಕೇಶಗಳು ಹೊರಗುಳಿದು ಕೊಡಗೂಸು ಒಳಗಾಗಿಬಿಡುತ್ತಾಳೆ !

"ದೇವಗನ್ನೇರು ಕೂಡಿ ಹೂವಿನಾ ಮಳೆಗರೆದು
ಜೀವ ಲೋಕದಲಿ ಶಿವಭಕ್ತಿ–ಹೊಳೆಯಾಗಿ
ದೇವಲೋಕದಲ್ಲಿ ಮಿಗೆ ಹರಿದು !"

ಆ ಲೋಕ ಈ ಲೋಕಗಳೆರಡೂ ಪಾವನವಾಗುತ್ತವೆ. ಕೋಳೂರ ಕೊಡಗೂಸಿನ ಕತದಿಂದ. ಇಂತಿದು ಕೊಡಗೂಸಿನ ಕಡೆತನಕುಳಿವ ಕತೆ. ಇದು,

"ಕಾಳಗದ ಕತೆಯಲ್ಲ ಊಳುಗದ ಮಾತಲ್ಲ
ತೋಳಹೋದಮ್ಮನ ಕತೆಯಲ್ಲ–ಈ ಕತೆ
ಗ್ಯಾನದಲ್ಲಿ ಕೇಳಿ ಫಲವುಂಟು!"

ಎಂದು ಜನಪದ ವೇದ ಎಚ್ಚರಿಸುತ್ತಿದೆ. ಪುರಾತನ ದೇವಿಯರ ತ್ರಿವಿಧಿಯ ಈ ಪದ್ಯವನ್ನು ನಾವೂ ವಚಿಸಿ ಶುಚಿಯಾಗಬಹುದಲ್ಲವೆ?

"ಬಾಲವಯದಲಿ ಸತತ ಹಾಲನೀಶಗೆ ಕುಡಿಸಿ
ಸಾಲೋಕ್ಯ ಪದವ ಮೀರಿ ನಿಜದೊಳು ನಿಂದ
ಕೋಳೂರ ಹೆಣ್ಣೆ ಶರಣಾಗು !"

■

# ಮರೆಯಲಾಗದ ಮೆರೆಮಿಂಡದೇವ
# ನೆನಪಾರದ ನಂಬಿಯಣ್ಣ

'ಜಗತ್ರಯದ ಪುಣ್ಯ ರೂಪುಗೊಂಡಿತ್ತೋ, ಸತ್ಯಲೋಕದ ಶೈವಾಗಮ ತೇಜದಿಕ್ಕೆಯೋ' ಎನಿಸಿ ಮೆರೆದುದು ತಿರುವಾರೂರು. ಅದರ ಮೊದಲಿನ ಹೆಸರು ವಲ್ಮೀಕಪುರ. ಅದರ ಹಿರಿಮೆಯನ್ನೇನು ಬಣ್ಣಿಸುವುದು?

'ಶ್ರೀ ಶಿವನ ಸೆಜ್ಜೆಯೆನಿಸಿರ್ಪ ತಿರುವಾರೂರ
ಭಾಸುರದ ಪೆರ್ಮೆಯನದೇನೆಂಬೆನೆಲೆ ಧೀರ?'

ಅದು ಶಂಭು ನೆಲೆಸಿದ ಪುರ. ಅಲ್ಲಿ ಶಾಳಿ ಸಹಿತ ಬೀಗದೆ ಶಿವಭಕ್ತಾಳಿಯಂತೆ ತಲೆಬಾಗಿ ಬೆಳೆಯುತ್ತಿತ್ತು; ಅಲ್ಲಿ ಗಿಳಿಗಳು ಸಹ ಶಿವನ ಪೂಜಾರಸವನುಂಡ ಭಕ್ತರಂತೆ, ಶಿವಗೋಷ್ಠಿ ರಸದಿಂದ ಬೆಳೆವ ಶರಣರಂತೆ ತೆನವಾಲನುಂಡು ಬಳೆವುತ್ತಿದ್ದುವು; ಅಲ್ಲಿಯ ತರುಕುಲ ನಿರಾಕುಲ ಶಿವನ ರೂಪವನು ಬಯಸಿ ಬಳೆದುವು! ಅಲ್ಲದೆ, ಹರನ ಬಾಯ್ದೆರೆಗಂಡು ಬಿರಿದ ದಾಡಿಮಗಳು, ಪಾರ್ವತಿಯ ಮುಡಿಗಂಡು ಬೆಳೆದ ಕೇಕೆಗಳು, ಶರ್ವನ ಸುಬಾಹು ಕಂಡು ಒಗೆದ ಶಾಖೆಗಳು, ಉರಗನಾಭರಣಮಂ ಕಂಡಾದ ಲತೆಗಳು, ಹರಹಸ್ತರಾಗದಿಂ ಬೆಳೆದ ಅಶೋಕೆಗಳು, ಶಿವನ ಊರುದಂಡದಿಂದಾದ ಬಾಳೆಗಳು, ಹರನ ಕರನಖದಿಂದಾದ ಕೋಕಿಗಳು, ಹರನ ಚರಣಂಗಂಡು ನೆಗೆದ ಸರಸಿಜಗಳು, ಹರಕಾಂತಿಯಿಂದಾದ ವಿಮಲ ಸರಸಿಗಳು, ದೇವಿಯರ ನಡೆಯಿಂದಾದ ಹಂಸೆಗಳು, ದೇವಿಯರ ದರಹಾಸದಿಂದ ಬಳೆದ ಕುಸುಮ ಸಂಕುಳ, ಶಿವಗೀತದೊಳು ಬೆರಸಿ ಬೆಳೆದ ಮಧುಕರಗಳು ಕಂಗೊಳಿಸುತ್ತಿದ್ದುವು. ಎಲ್ಲವೂ ಶಿವಮಯವಲ್ಲಿ!

ಅಲ್ಲೊಬ್ಬ ಶಿವಭಕ್ತ. ಹೆಸರು ಮೆರೆಮಿಂಡದೇವ. ಅವನು ಶಿವರಾತ್ರಿಯ ವ್ರತಧಾರಿ, ಜಂಗಮಪ್ರಾಣಿ. ಅವನು ಚೆಂಗೋಂಟೆಯಲ್ಲಿದ್ದನೆಂದು ಬಸವ ಪುರಾಣದಲ್ಲಿ ಹೇಳಿದೆ. ಎಲ್ಲಿದ್ದರೂ ವಲ್ಮೀಕೇಶ್ವರನಿಗೆ ಶಿವರಾತ್ರಿಯ ಸಮಾರಾಧಾನೆಯ ವ್ರತವನ್ನು ಕೈಕೊಂಡಿದ್ದ ಶರಣನಾತ. 'ಪಾದತೀರ್ಥವ ಕೊಂಡಲ್ಲಿ ತೃಷೆಯರತು, ಪ್ರಸಾದವ ಕೊಂಡಲ್ಲಿ ಹಸಿವರತು, ಭೃತ್ಯಭಾವವಾದಲ್ಲಿ ನಾನೀ ನೆಂಬುದಿಲ್ಲದೆ ಅಹಂಕಾರ

ವಿಸರ್ಜನವಾಗಿರಬೇಕು ಐಘಟ ದೂರ ರಾಮೇಶ್ವರ ಲಿಂವನರಿವುದಕ್ಕೆ' ಎಂದು ನಂಬಿ ಅದರಂತೆ ಆಚರಿಸುತ್ತಲಿದ್ದ ನಿಜ ಶರಣನಾತ. ಅಹಂಕಾರ ವಿಸರ್ಜನವೇ ಅವನ ಜೀವನ ಸೂತ್ರ ಬಾಳಿನ ಉಸಿರು.

ಈ ಅಹಂಕಾರ ನಿರಸನ ಸೂತ್ರವನ್ನೇ ನಂಬಿ ಹುಡಿಹತ್ತದ ಗಾಳಿಯಂತೆ, ನೀರು ಅಂಟದ ಪದ್ಮಪತ್ರದಂತೆ, ಮೋಡ ಮುಸುಕಿದರೂ ಮಲಿನವಾಗದ ಅಂಬರದಂತೆ ಭವದಲ್ಲಿದ್ದೂ ಭವ ಹೊದ್ದರಂತೆ ಇದ್ದ ಮೆರೆಮಿಂಡದೇವ ವಲ್ಮೀಕೇಶ್ವರ (ತಿರುವಾರೂರೇಶ್ವರ)ನಿಗೆ ತಿಂಗಳು ತಿಂಗಳೂ ಶಿವರಾತ್ರಿ ಸೇವೆಯನ್ನು ಹನ್ನೆರಡು ವರ್ಷಗಳವರೆಗೆ ತಪ್ಪದೆ ನಡಸಿದ; ನಡಸಿ ಭಕ್ತಿ ಶೃಂಗಾರನಾದ, ಶಿವಸುಖಸಾರನಾದ.

ಒಮ್ಮೆ ಅವನು ವಲ್ಮೀಕೇಶ್ವರನ ಮಂದಿರದಲ್ಲಿ ಜಾಗರಣೆಯನ್ನು ಮುಗಿಸಿ ಮೂರನೆಯ ದಿನ ಭಕ್ತಗೋಷ್ಠಿಯಲ್ಲಿ ಶಿವಸಂಕಥಾವಿನೋದದಿಂದಿದ್ದಾಗ ಆಗಿನ ಇನ್ನೊಬ್ಬ ಹೆಸರಾಂತ ಭಕ್ತನಾದ ನಂಬಿಯಣ್ಣನೂ ವಲ್ಮೀಕೇಶ್ವರನ ದರ್ಶನಕ್ಕಾಗಿ ಬಂದನು. ನಂಬಿಯಣ್ಣ ಶೃಂಗಾರಲಕ್ಷ್ಮಿಯ ಮುಖಮುಕುರ ಶೃಂಗಾರ ಲಕ್ಷ್ಮಿಯ ಉಪಾಸನೆಯಿಂದಲೇ ಕೈವಲ್ಯ ಲಕ್ಷ್ಮಿಯನ್ನು ಒಲಸಿಕೊಳ್ಳಲು ಯತ್ನಿಸುತ್ತಲಿದ್ದ ಸಂಸಾರಯೋಗಿಯಾತ. 'ತ್ರಿಣಯಂ ತಾನೊಲಿದು ಗಣಿಕೆಯರ ಮನೆಗೆ ಕುಂಟಣಿಯಾಗಿ ನಡೆಸಿದ್ದ' ಹೆಗ್ಗಲಿಕೆಯ ನಂಬಿಯಣ್ಣನಾತ. ಪ್ರಾತಃಸ್ಮರಣೀಯರಾದ ಪುರಾತನರಲ್ಲಿ ಒಬ್ಬರಾದ ಜಡೆಯ ನಾಯನಾರು ಮತ್ತು ಯಸ್ಯಜ್ಞಾನಿ ದೇವಿಯರಿಗೆ ಮಗನಾಗಿ ಹುಟ್ಟಿ ಉತ್ತುಮಗ ಚೋಳನ ಸಾಕುಮಗನಾಗಿ ಬೆಳೆದಿದ್ದ ಸೌಂದರ ನಂಬಿಯಾತ. ಪ್ರತಿನಿತ್ಯ ಶಿವಲಿಂಗದೆದುರು ನಿಂತು ತಾನೇ ರಚಿಸಿಸಿದ ಒಂದೊಂದು ತಿರುಪಾಡು ಹಾಡುತ್ತ ಪಡಿಹೊನ್ನು ಪಡೆಯುತ್ತ, ಬೆಲೆವೆಣ್ಣಳಾದ ಪರವೆನಾಚಿ, ಸಂಕಿಲನಾಚಿಯರೊಡನೆ ಸಂಗಸುಖವನ್ನು ಅನುಭವಿಸುತ್ತ, 'ನೋಡುವ ಚೆಲ್ವುಮಂ, ನುಡಿವ ವಾಕ್ಯಮುಮಂ, ಮನದುಳ್ಕಿದಳ್ಕಿರಿಂ ಕೂಡುವ ಸೌಖ್ಯಮಂ, ತನಗೆ ಬಂದ ಮಹೋನ್ನತ ಸಂಪದಂಗಳಂ, ಪಾಡಿಸುನಳ್ತಿಯಂ, ಸವಿವ ಸರ್ವ ಪದಾರ್ಥ ಸುಖಂಗಳಂ ಕರಂಗೂಡೆ ಶಿವಾರ್ಪಿತಂಗುಡುತೆ; ಭೋಗಯೋಗ ಸಂಗಮವಾಗಿದ್ದ ಶೃಂಗಾರ ಯೋಗಿಯಾತ.

ಆತನು ದೇವಲಯುಕ್ಕೆ ಎಲ್ಲರಂತೆ ವಿನೀತನಾಗಿ ಬರಲಿಲ್ಲ– ರಾಜಶೀವಿಯೊಡನೆ, ವಿಭವ ವೈಭವದೊಡನೆ, ವಿಲಾಸ ವಿಭ್ರಮದೊಡನೆ ಬಂದನು. ಪರವೆಯ ನಳಿದೋಳಿನ ಆಲಿಂಗನದಿಂದ ಲೇಪಿತವಾಗಿದ್ದ ಕುಂಕುಮ ಕೇಸರಿಯ ಲೇಖೆ ರಂಜಿಸುತ್ತಲಿದ್ದ ಕತ್ತೆತ್ತಿ, ಮುಡಿದ ಮಲ್ಲಿಗೆಯ ಮಾಲೆಯ ಅಮಂದ ಸುಗಂಧದಿಂದ ಮಾರ್ಗವೆಲ್ಲ ಮಗಮಗಿಸುತ್ತಿರಲು, ತಳೆದ ಮುತ್ತಿನ ಸರದ

ಕಾಂತಿಯಿಂದ ಎಡಬಲಗಳೆಲ್ಲ ತಳತಳಿಸಿ ಬೆಳಗುತ್ತಿರಲು, ಶಿವನ ಮದಕರಿಯಂತೆ ಬಂದನು. ಅತ್ತಿತ್ತ ಪರಿಚಾರದ ನಾರಿಯರು ಹೂವಿನ ಬೀಸಣಿಗೆಯಿಂದ ಸುರಭಿತ ಮರುತವನ್ನು ಬೀಸುತ್ತಿರಲು, ಸ್ತುತಿ ಪಾಠಕರು ಪರಾಕು ಹೊಡೆಯಿತ್ತಿರಲು, ಕೈಯೊಡ್ಡಿದವರಿಗೆಲ್ಲ ಹಿಡಿ ಹೊನ್ನು ಕೊಡತ್ತ'

"ಜೀಯ ಜೀಯವಧಾರೆನುತ್ತವೆ
ಗಾಯಕರು ತಾಳಂಗಳನುಗುಡ
ಗೇಯರಸದಾ ಲಹರಿಗಳು ದೆಸೆದೆಸೆಗೆ ಬೀರುತಿರೆ
ಆ ಯತೀಂದ್ರರು ಪರಸಲೆಲ್ಲರು
ಘೇಯೆನುತ ನುತಿಸಲ್ಕಭೀಷ್ಟ
ಶ್ರೀಯ ನೀವುತ್ತೋವು ತೆಡೆಗೆಡೆಗೊತ್ತಿ ನಡೆವುತ್ತ"

ಬಂದನು.

ಬಂದವನೆ ಮಂದಿರದಲ್ಲಿದ್ದ ಶಿವಗಣಗಳ, ಶಿವಭಕ್ತರ ಕಂಡೂ ಕಾಣದಂತೆ ನೇರವಾಗಿ ಗರ್ಭಗುಡಿಯತ್ತ ನಡೆದನು. ಯಾರನ್ನೂ ಕಣ್ಣೆತ್ತಿ ನೋಡಲಿಲ್ಲ. ಯಾರಿಗು ಶರಣೆನ್ನಲಿಲ್ಲ. ತನ್ನ ಬಿಮ್ಮಿನಲ್ಲಿಯೇ ತನ್ಮಯನಾಗಿ ನಡೆದನು. ಉಳಿದ ಭಕ್ತರೆಲ್ಲ ಬೆಪ್ಪಾಗಿ ಕುಳಿತರು– ಅವನ ರಾಜತೇಜವನ್ನು ನೋಡುತ್ತ. ಮೆರೆಮಿಂಡದೇವನಿಗೆ ಸುಮ್ಮನಿರುವುದು ಸಾಧ್ಯವಾಗಲಿಲ್ಲ. ಅವನ ಬಾಯಿಂದ ಅಮೃತ ವಚನವೊಂದು ಹೊರಬಿದ್ದಿತು.

"ಐಶ್ವರ್ಯವುಳ್ಳವರಿಗೆ ನಿಜಭಕ್ತಿಯಿಲ್ಲ ; ದಂಭದ ವೇಷಧಾರಿಗೆ ನಿಜತತ್ವದ ಜ್ಞಾನವಿಲ್ಲ; ಕುಟಿಲರ ನೆಮ್ಮುಗೆಗೆ ಘನಲಿಂಗದ ನೆಮ್ಮುಗೆಯಿಲ್ಲ ಐಘಟದೂರ ರಾಮೇಶ್ವರಲಿಂಗ !"

ಮಹಾತ್ಮಾ ಏಸುಕ್ರಿಸ್ತನ ಅಮರವಾಣಿಯನ್ನು ನೆನಪಿಗೆ ತರುವ ಅಮೃತೋಕ್ತಿಯಿದು. 'ಸೂಜಿಯ ಕಣ್ಣಿನೊಳಗೆ ಒಂಟೆಯೊಂದನ್ನು ಹೋಗಿಸಬಹುದು. ಐಶ್ವರ್ಯಾಂಧರನ್ನು ನರಕದಿಂದ ಸ್ವರ್ಗಕ್ಕೆ ಕಳಿಸುವುದು ಸಾಧ್ಯವಿಲ್ಲ !' ಎಂದ ಏಸುಕ್ರಿಸ್ತ. ತರುವಾಯದಲ್ಲಿ ಬಂದ ಬಸವಣ್ಣನೂ ನುಡಿದ, 'ಹಾವು ತಿಂದವರ ನುಡಿಸಬಹುದು; ಗರಹೊಡೆದವರ ನುಡಿಸಬಹುದು; ಸಿರಿಗರ ಹೊಡೆದವರ ನುಡಿಸಲಾಗದು!' ಎಂದು. ಮೆರೆಮಿಂಡದೇವ ನೆರೆದ ಭಕ್ತರೆಲ್ಲ ಬೆರಗಾಗುವಂತೆ ಉಚ್ಚಸ್ವರದಲ್ಲಿ ಸಾರಿದ, " ಐಶ್ವರ್ಯವುಳ್ಳವಂಗೆ ನಿಜಭಕ್ತಿಯಿಲ್ಲ ! ದಂಭದ ವೇಷಾಧಾರಿಗೆ ನಿಜತತ್ವದ ಜ್ಞಾನವಿಲ್ಲ!"

ಭಕ್ತಗಣದಲ್ಲಿ ಗುಜುಗುಜು ಗಜಿಬಿಜಿ ನಡೆಯಿತು"–ಮೆರೆಮಿಂಡದೇವನೆನ್ನುವುದು ನಿಜ. ಭಕ್ತನಾದವಗೆ ಬಿಂಕ ಸಲ್ಲದು. ಇವನಾರು, ಶಿವಭಕ್ತರನ್ನು ನಿರ್ಲಕ್ಷಿಸಿ ದೇವದರ್ಶನಕ್ಕೆ ನಡೆದಿರುವವನಲ್ಲ...." ಆಗಲೂ ನಂಬಿಯಣ್ಣ ಕಣ್ಣೆರೆಯಲಿಲ್ಲ.

ಮೆರೆಮಿಂಡದೇವ ಉಗ್ಘಡಿಸಿದ–" ಇವನನ್ನು ಒಳಗೆ ಬಿಡಬೇಡಿರಿ ! ಇವನು ಭಕ್ತನಲ್ಲ. ಇವನು ಯುಕ್ತನಲ್ಲ. ಇವನು ಭವಮುಕ್ತನಲ್ಲ !"

ನಂಬಿಯಣ್ಣ ಕೆಣಕಿದ ನಾಗರದಂತೆ ಹೊಡಮರಳಿ ನೋಡಿ ಕೇಳಿದನು; "ನಾನು ಭಕ್ತನಲ್ಲವೆಂದು ಹೇಳುವ ನೀನಾರು? ತನ್ನ ತಿರುಪಾಡುಗಳಿಂದ ತಿರುವಾರೂರೇಶ್ವರನನ್ನು ಮೆಚ್ಚಿಸಿ ಪಡಿಹೊನ್ನು ಪಡೆದ ನಂಬಿಯಣ್ಣ ಭಕ್ತನಲ್ಲವೆ?"

ಮೆರೆಮಿಂಡದೇವ ಇನ್ನು ನಿಷ್ಠುರನಾಗಿ ನುಡಿದ ; "ಶಿವಭಕ್ತರನ್ನು ಕಡೆಗಣಿಸಿದ ನಂಬಿಯಣ್ಣ ಭಕ್ತನಲ್ಲವೇ ಅಲ್ಲ; ಇಷ್ಟೇ ಅಲ್ಲ, ಇಂಥ ಅಹಂಕಾರಿಗೆ ಪಡಿಹೊನ್ನನಿತ್ತವನು ಪರಮಾತ್ಮನೇ ಅಲ್ಲ!"



**ಇವನನ್ನು ಒಳಗೆ ಬಿಡಬೇಡಿರಿ ? ಇವನು ಭಕ್ತನಲ್ಲ. ಇವನು ಮುಕ್ತನಲ್ಲ, ಇವನು ಭವಮುಕ್ತನಲ್ಲ!**

ಒಳಗೆ ಗರ್ಭಗುಡಿಯಲ್ಲಿದ್ದ ವಲ್ಮೀಕೇಶ್ವರ ನಡುಗಿರಬೇಕು– ಮೆರೆಮಿಂಡದೇವನ ಈ ನುಡಿಗಳನ್ನು ಕೇಳಿ. ಪರಿಸ್ಥಿತಿ ವಿಕೋಪಕ್ಕೆ ಹೋದುದನ್ನು ನೋಡಿ ಪೂಜಾರಿ ಶಿವಭಕ್ತರನ್ನು ಸಾಂತ್ವನಗೊಳಿಸಲು ಹೇಳಿದ :

"ನಚ್ಚಿ ನಂಬಿಯ ಚೆಲುವ ಹಾಡಿಗೆ
ಮೆಚ್ಚಿಯೋ ನಿಜಭಕ್ತಿ ನಿಷ್ಠೆಗೆ
ಮೆಚ್ಚಿಯೋ ನಾವರಿಯೆವಿದನೀ ವಾಲ್ಮೀಕೇಶ್ವರನು
ನಿಚ್ಚ ಸಾವಿರ ಹೊನ್ನು ಪಡಿಯಂ
ವೆಚ್ಚಕುಡುಗದೆ ಕೊಡುವನಾತನೊ
ಳೊಚ್ಚತಂಗೊಂಡೇನನಾದೊಡೆ ಬೇಡಿದುದನೀವ ! ಬ.ಪು

ಆದುದರಿಂದ ಅವನನ್ನು ಅವನ ಗೊಡವೆಗೆ ಬಿಟ್ಟುಬಿಡಿರಿ."

ಇದಕ್ಕೆ ಉತ್ತರವಾಗಿ ಮೆರೆಮಿಂಡದೇವ ನಿರ್ದಾಕ್ಷಿಣ್ಯವಾಗಿ ನುಡಿದ; "ಈ ನಂಬಿಯಣ್ಣನಷ್ಟೇ ಅಲ್ಲ, ಈ ಹುಂಬ ನಂಬಿಗೊಲಿದ ಶಂಭುವನ್ನೂ ಶಿಭಕ್ತ ಸಮಾಜದಿಂದ ಬಹಿಷ್ಕರಿಸಿದ್ದೇವೆ ಅರ್ಚಕರೆ ! ಇದರಂತೆ ಇದೀಗಲೇ ಡಂಗುರ ಸಾರಿಸುವೆ !"

ನಂಬಿಯಣ್ಣನಿಗಾಗಿ ರೇಗಿಹೋಯಿತು. "ತನ್ನ ತಂದೆತಾಯಿಗಳು ಪರಮ ಶಿವಭಕ್ತರೆಂದು ಪುರಾತನದ ಪಂಜ್ತಿಯಲ್ಲಿ ಸೇರಿದವರು; ತಾನು ಶಂಭುವಿನ ನಂಬಿಗೆಯನ್ನು ಸೂರೆಗೊಂಡ ಸದ್ಭಕ್ತ, ಉತ್ತುಂಗ ಚೋಳನ ಅರಮನೆಯಲ್ಲಿ ಬೆಳೆದ ಅದೃಷ್ಟವಂತ, ಹರನೂ ಹರಭಕ್ತರೂ ಮನವಾರೆ ಮೆಚ್ಚುವಂಥ ತಿರುಪಾಡುಗಳನ್ನು ರಚಿಸಬಲ್ಲ ರಸಋಷಿ ! ತನ್ನನ್ನು ಭಕ್ತನಲ್ಲವೆಂದು ಬೀಗಳೆಯುವ ಇವನಾರು!" ಎಂದವನ ಕ್ರೋಧ ಕಿಡಿಗೆದರಿತು. ಗರ್ಭಗುಡಿಯನ್ನು ಪ್ರವೇಶಿಸಿಯೇ ತೀರುವೆನೆಂದು ಮುಂದುವರಿದ. ನೆರೆದ ಭಕ್ತಗಣ ಬಿಡಲಿಲ, ತಡೆದು ನಿಲ್ಲಿಸಿದರು. ನಿಂತಲ್ಲಿಯೇ ಕಂತುಹರನನ್ನೊಲಿಸಿ ಅವರ ಗರ್ವಭಂಗಮಾಡಬೇಕೆಂದು ಭಕ್ತಿ ನಿರ್ಭರನಾಗಿ ಹಾಡತೊಡಗಿದ ನಂಬಿಯಣ್ಣ :

"ಪಿಚ್ಚನೇ ಪೆರೆಸೂಡಿದನೆ ಪರಮ ಪಶುಪತಿಯೆ
ಅಚ್ಚ ಸವಿಯೇ ಸುಖವೆ ಸಖನೆ ನಂಬಿಯ ಪತಿಯೆ
ನೀನೆ ಆಳ್ಮಾಡಿಕೊಳಲಲ್ಲೆನಲ್ ಬಪ್ಪುದೇ?
ನೀನೆ ತೊಳ್ತಾಳ್ವಡಿನ್ನಲ್ಲೆನಲ್ ಒಪ್ಪುದೇ?

ನೀನೆ ಬಂದಾಳ್ಮಾಡೆ ಯುಕ್ತಿ ಕೊಂಬುದೆ ದೇವ?
ನೀನೆ ಬಂದಾಳೆನಲು ಧರ್ಮಮುಂಟೇ ದೇವ?
ಪ್ರೇರಕಂ ನೀಂ ಬರಲು ಸಾಕ್ಷಿಯುಂಟೇ ತಂದೆ!
ಮಾರಾರಿ ನೀಂ ಬರೆ ವಿಚಾರವುಂಟೇ ತಂದೆ?
ಇನ್ನೇನು ತೊತ್ತಾದೆನಲ್ಲೆನಲ್ ಒಪ್ಪುದೇ?
ಇನ್ನಂತುವಿಂತುವೆಂತುಂ ಹೊಳೆಯಒಪ್ಪುದೇ?
ಮಚ್ಚಿ ಬಂದಾಳಾದೆನಲ್ಲೆನಲ್ ಬಪ್ಪುದೇ?
ನಚ್ಚಿ ನಿನಗಾಳಾದೆನಲ್ಲೆನಲ್ ಬಪ್ಪುದೇ?.....(ನಂಬಿಯಣ್ಣನ ರಗಳೆ)

ಎಷ್ಟು ಗೋಗರೆದರೂ ಓಗೊಡಲಿಲ್ಲ ವಲ್ಮೀಕೇಶ್ವರ. ಮೆರೆಮಿಂಡದೇವ ಹಟ ಹಿಡಿದು ಕುಳಿತಿದ್ದ – "ಭಕ್ತಕಾಯ ಮಮಕಾಯವೆಂಬ ತನ್ನ ವಚನವನ್ನಾದರೂ ಉಳಿಸಿಕೊಳ್ಳಲಿ ವಾಲ್ಮೀಕೇಶ್ವರ, ಇಲ್ಲವೆ ಜಂಭದ ದಂಭದ ನಂಬಿಯನ್ನಾದರೂ ಉಳಿಸಿಕೊಳ್ಳಲಿ" ಎಂದು.

ತನ್ನ ತಿರುಪಾಡು ಅರಣ್ಯರೋದನವಾದುದನ್ನು ಕಂಡು ನಂಬಿಯಣ್ಣನ ಚಿತ್ತದಲ್ಲಿ ಭಯದ ಬಿತ್ತನ್ನು ಬಿತ್ತಿದಂತಾಯಿತು. ಭಕ್ತ ಸಮಾಜಕ್ಕೆ ತಾನು ತೋರಿದ ನಿರ್ಲಕ್ಷ್ಯವೇ ಶಿವನು ಸುಮ್ಮನಿರುವುದಕ್ಕೆ ಕಾರಣವಿರಬೇಕೆಂಬುದು ಮನವರಿಕೆಯಾಗಿ ಅವನ ಮೈನಡುಗಿತು. ಹಿಂದೊಮ್ಮೆ ತನ್ನ ತಂದೆತಾಯಿಗಳು ತನಗಿತ್ತ ಉಪದೇಶ ಸ್ಮರಣೆಗೆ ಬಂದಿತು : "ಭಕ್ತರ ಪ್ರಾಣ ಪರಮಾತ್ಮ, ಪರಮಾತ್ಮನ ಪ್ರಾಣ ಭಕ್ತರು, ಭಕ್ತ ನುಡಿ ಭಗವಂತನ ಸ್ತುತಿ, ಭಕ್ತರ ಉಪೇಕ್ಷೆ ಭಗವಂತನ ಉಪೇಕ್ಷೆ; ಭಕ್ತರನ್ನು ಕಡೆಗಣಿಸಿ ಭಗವಂತನನ್ನು ಮೆಚ್ಚಿಸಲಾಗದು! ಅದು ಮಕ್ಕಳನ್ನು ನಿರ್ಲಕ್ಷಿಸಿ ತಂದೆಯನ್ನು ಮೆಚ್ಚಿಸಲೆಳೆಸುವ ಮರುಳುತನ!"

ಕೃತಕರ್ಮಕ್ಕಾಗಿ ನಂಬಿಯಣ್ಣನಿಗೆ ಪಶ್ಚಾತ್ತಾಪವಾಯಿತು. ಅವನ ಮರವೆಯ ಮಬ್ಬು ಕರಗಿತು; ಅರಿವಿನ ಕಣ್ಣು ತೆರೆಯಿತು. ಹಿಂದಿರುಗಿ ಬಂದು ಭಕ್ತರಿಗೆ ಬಾಗಿ,

"ನಿಮ್ಮ ಕಂದನು ನಿಮ್ಮ ಶಿಷ್ಯನು
ನಿಮ್ಮ ಪರಿಚಾರಕರ ಚಾರಂ
ನಿಮ್ಮ ಧರ್ಮದ ಕವಿಲೆ ನಿಮ್ಮಯ ಡಿಂಗರಿಗ ನಾನು
ನಿಮ್ಮ ಭೃತ್ಯನು ನಿಮ್ಮ ಭಟ್ಟನು

ನಿಮ್ಮ ಬಂಟನು ನಿಮ್ಮ ಲೆಂದನು
ನಿಮ್ಮ ದಾಸನೆನಿಪ್ಪ ಎನ್ನಂ ಕಾಯ್ದು ಕರುಣಿಸಿರಿ!"

ಬ.ಪು.ಸಂ.೨೬ ಪ. ೨೩

ಎಂದು ಬೇಡಿಕೊಂಡನು; ಭಕ್ತ ಬಳಗದಲ್ಲಿ ಮರಳಿ ಕರೆದುಕೊಳ್ಳಿರೆಂದು ಬಿನ್ನವಿಸಿಕೊಂಡನು.

ನಂಬಿಯಣ್ಣ ಐಶ್ವರ್ಯದ ಆಟ್ಟಹಾಸವನ್ನು ತೊರೆದು ನಿಜಭಕ್ತನಾದುದನ್ನು ನೋಡಿ ಮೆರೆಮಿಂಡದೇವನಿಗೆ ಪರಮಾನಂದವಾಯಿತು. ಅವನಂಥ ಶಿವಭಕ್ತನನ್ನು ಜಡಿದು ಝುಂಕಿಸಿದುದಕ್ಕಾಗಿ ಅನುತಾಪವೂ ಆಯಿತು. ಅದಕ್ಕೆ ಶಿಕ್ಷೆಯೆಂದು ತನ್ನನ್ನು ತಾನೇ ಇರಿದುಕೊಳ್ಳಲು ಉದ್ಯುಕ್ತನಾಗಲು ನಂಬಿಯಣ್ಣ ಬಿಡಿಸಿ ಬರಸೆಳೆದಪ್ಪಿದನು : "ಮರುಗದಿರು ಮೆರೆಮಿಂಡದೇವ, ನನ್ನ ಮರವೆಯ ಕಳೆದ ಗುರು ನೀನು!" ಎಂದು ಸಂತೈಸಿದನು. ಇಬ್ಬರೂ ಒಬ್ಬರನ್ನೊಬ್ಬರು ಮೆಚ್ಚಿ ಹರುಷ ಹಚ್ಚಿ ನಲಿದಾಡಿದರು.

ಹಿಂದಿರುಗಿ ಹೊರಡುವ ಮುನ್ನ ನಂಬಿಯಣ್ಣ ನುಡಿದ : "ಮೆರೆಮಿಂಡದೇವ, ನಾನಿನ್ನು ಹೊರಡುವೆ–ನನಗೆ ನಿನ್ನ ಕೊನೆಯ ಸಂದೇಶವನ್ನು ನೀಡು !"

ಮೆರೆಮಿಂಡದೇವ ಮಾರ್ನುಡಿದ : "ನಾನೇನ ಬಲ್ಲೆ ನಂಬಿಯಣ್ಣ ! ನಿನ್ನಂಥ ನಿರ್ಮಲ ಭಕ್ತನಿಗೆ ಬೋಧಿಸುವ ಯೋಗ್ಯತೆ ನನ್ನದಲ್ಲ ! ನಾನು ನಂಬಿರುವುದೇನೆಂಬುದನ್ನು ಮಾತ್ರ ಹೇಳುಬಲ್ಲೆ. ಸರಿದೋರಿದರೆ ನೀನೂ ಅದನ್ನು ನಂಬಬಹುದು: ಇಲ್ಲದಿರೆ ಬಿಡಬಹುದು."

"ನೀನು ನಂಬಿದುದೇ ನನಗೆ ಸಾಂಬನಾಜ್ಞೆ ಮೆರೆಮಿಂಡದೇವ. ಇದುವರೆಗೆ ಹೆಣ್ಣುಹೊನ್ನುಗಳ, ಮನ್ನಣೆ ನೆಗಳ್ತೆಗಳ ಬೆನ್ನು ಹತ್ತಿ ಬಳಲಿ ಬೆಂಡಾದೆ. ನನಗೀಗ ನಿಜದ ತಿಳಿವನ್ನು ನೀಡು !"

"ನಿಜ ನುಡಿದೆ ನಂಬಿಯಣ್ಣ. ಧನವ ಗಳಿಸಿದವ ಹೆಣನಾದ! ಧರೆಯ ಗಳಿಸಿದವ ಅರಿಗಳಿಗೆ ಒಡಲಾದ! ಕನ್ಯೆಯ ಗಳಿಸಿದವ ಕುಕ್ಕುರ ಯೋನಿಯಲ್ಲಿ

---

೧ ನಂಬಿಯಣ್ಣನಲ್ಲಿಂದ ಪಾರಾಗಿ ಹೋದನೆಂದೂ ಶಂಭವೂ ಹಿಂಬಾಲಿಸಿ ನಂಬಿಯಣ್ಣನಿಗೆ ತನ್ನ ಭಕ್ತ ಚಿತ್ತಾಧೀನತೆಯನ್ನು ಬಿತ್ತರಿಸಿದನೆಂದೂ ಭಕ್ತರ ಹಾಡುಗಳನ್ನೂ ಹಾಡಿ ಅವರನ್ನು ಒಲಿಸಿಕೊಳ್ಳುವಂತೆ ತಿಳಿಸಿ ಹೇಳಿದನೆಂದೂ ಅದರಂತೆ ನಂಬಿಯಣ್ಣನು ನಡೆದು ಕೃತಾರ್ಥನಾದನೆಂದೂ ಕಥಾಂತರವಿದೆ.

ಸಿಕ್ಕದಂತಾದ ! ಇವುಗಳಿಗಾಗಿ ಕುಕ್ಕುಳಗುದಿಯಬೇಡ! ಸತ್ಯಕ್ಕೆ ಒಳಗಾಗು, ಅಸತ್ಯಕ್ಕೆ ಹೊರಗಾಗು– ಐಘಟದೂರ ರಾಮೇಶ್ವರ ಲಿಂಗವನರಿವುದಕ್ಕೆ !"

ಈ ಮಾತು ಜೀವನ ಪಥದ ಜ್ಯೋತಿಯಾಗಿ ತೋರಿತು ನಂಬಿಯಣ್ಣನಿಗೆ. ಮನದಲ್ಲಿಯೇ ಮೆಲುಕುಹಾಕಿದನದನ್ನು– 'ಸತ್ಯಕ್ಕೆ ಒಳಗಾಗು, ಅಸತ್ಯಕ್ಕೆ ಹೊರಗಾಗು! ಎಂಥ ಅನುಭವರಸಾಯನವಿದು ಮತ್ತೊಮ್ಮೆ ಮೆರೆಮಿಂಡದೇವನನ್ನು ತಬ್ಬಿ ಉಬ್ಬಿ ಹೊರಳುತ್ತ ಹೇಳಿದ : "ಮರೆಯಲಾಗದ ಮೆರೆಮಿಂಡದೇವ ನೀನು !" ಬೀಳ್ಕೊಡುತ್ತ ಉತ್ತರವಿತ್ತ ಮೆರಮಿಂಡದೇವ : "ನೆನಪಾರದ ನಂಬಿಯಣ್ಣ ನೀನು!" ನೆರೆದ ಭಕ್ತೆಲ್ಲ ಮಾರ್ದನಿಗೊಟ್ಟರು : "ಮರೆಯಲಾಗದ ಮೆರೆಮಿಂಡದೇವ, ನೆನಪಾರದ ನಂಬಿಯಣ್ಣ ! ಇಬ್ಬರೂ ಧನ್ಯರು, ಇಬ್ಬರೂ ಮಾನ್ಯರು, ಭಕ್ತರೇಣ್ಯರು!"

ಹೌದು, ಇಬ್ಬರೂ ಮರೆಯಲಾಗದ ಮಹಾನುಭಾವರು. ಇಬ್ಬರೂ ಆರುವತ್ತು ಮೂರು ಪುರಾತನರ ಸಾಲಿನಲ್ಲಿ ಸೇರಿ ಅಮರರಾದರು. ಅವರಿಬ್ಬರಲ್ಲಿ ಮೆರೆಮಿಂಡದೇವನಂತೂ ತಮಿಳುನಾಡಿನ ಮತ್ತು ಕನ್ನಡನಾಡಿನ ಶಿವಭಕ್ತರ ನಡುವಣ ಸೇತುವೆಯಂತಿದ್ದಾನೆ. ಕನ್ನಡಿಗನಾಗಿ ಹುಟ್ಟಿ ತಮಿಳುನಾಡಿಗೆ ಹೋಗಿದ್ದನೋ ಅಥವಾ ತಮಿಳುನಾಡಿನಲ್ಲಿಯೇ ಹುಟ್ಟಿ ಕನ್ನಡವನ್ನೊಲಿದು ಕಲಿತನೋ ತಿಳಿಯದು. ಕನ್ನಡದಲ್ಲಿ ಉನ್ನತಮಟ್ಟದ ವಚನಗಳನ್ನು ರಚಿಸಿದ್ದಾನೆ–ತಮಿಳು ತಂತಿಗಳಿಂದ ಕನ್ನಡದ ಸ್ವರ ಹೊರಡುವಂತೆ ಮಾಡಿದ್ದಾನೆ.

ಆ ಸ್ವರ ಜೀವವಿಕಾರದ ಅಪಸ್ವರವಲ್ಲ, ಶಿವಭಾವದ ಸುಸ್ವರ :
"ಶರೀರ ಬೆಳೆದು ಪ್ರಳಯಕ್ಕೊಳಗು ;
ಬುದ್ಧಿ ಬೆಳೆದು ಸುಖಕ್ಕೊಳಗು ;
ಸುಖ ಬೆಳದು ವಿಕಾಸಕ್ಕೊಳಗು ;
ವಿಕಾರ ಸಕಲ ಮರಣಕ್ಕೆ ಒಳಗಾಯಿತ್ತು !
ಇಂತಿವಕ್ಕೆ ಹೊರಗಾಗು, ಸತ್ಯಕ್ಕೆ ಒಳಗಾಗು–ಐಘಟದೂರ
ರಾಮೇಶ್ವರಲಿಂಗವನರಿವುದಕ್ಕೆ !"

'ಇವಕ್ಕೆ ಹೊರಗಾಗು, ಸತ್ಯಕ್ಕೆ ಒಳಗಾಗು' ಇದು ಮೆರೆಮಿಂಡದೇವನ ಸಂದೇಶ. ಈ ಸಂದೇಶವನ್ನಷ್ಟೇ ಸಾರಿ ತೃಪ್ತನಾಗಲಿಲ್ಲ ಮೆರೆಮಿಂಡದೇವ–ಬದುಕುವ ಹದನನ್ನೂ ತಿಳಿಸಿದ್ದಾನೆ. 'ಅಸಿಯಾಗಲಿ, ಕೃಷಿಯಾಗಲಿ, ಮಸಿಯಾಗಲಿ–ಮಾಡುವಲ್ಲಿ ಹುಸಿಯಿಲ್ಲದಿರಬೇಕು ! ಅದು ಅಸಮಾಕ್ಷನ ಬರವು, ಪಶುಪತಿಯ ಇರವು. ಐಘಟದೂರ ರಾಮೇಶ್ವರ ಲಿಂಗವು ತಾನೆ !" ಇದೆಂಥ ಹದುಳದ ಹಾದಿಯನ್ನು

ತೋರಿದ್ದಾನೆ ಮೆರೆಮಿಂಡದೇವ ! ಮಸಿಯಿಂದ ಬುದ್ಧಿಜೀವಿಗಳನ್ನೂ, ಅಸಿಯಿಂದ ಯೋದ್ಧರನ್ನೂ, ಕೃಷಿಯಿಂದ ಶ್ರಮಜೀವಿಗಳನ್ನು ಸಾಂಕೇತಿಕವಾಗಿ ಸಂಬೋಧಿಸಿ ಈ ಮೂದೆರನಾದ ಕಾಯಕಗಳಲ್ಲಿ ಯಾವುದನ್ನಾದರೂ ಅವಲಂಬಿಸಿರಿ–ಆದರೆ ಅದರಲ್ಲಿ ಹುಸಿ ಪ್ರವೇಶಿಸದಂತೆ ಎಚ್ಚರಿಕೆ ವಹಿಸಿರಿ. ಹುಸಿ ಹೋಯಿತೋ–ಪಶುಪತಿ ಬರುತ್ತಾನೆ ! ಹುಸಿ ಬಂದಿತೊ–ಅಸಮಾಕ್ಷ ಹೋಗುತ್ತಾನೆ! ಹುಸಿ–ಪಶುಪತಿ ಇಬ್ಬರೂ ಒಂದೆಡೆಗೆ ಇರುವುದು ಸಾಧ್ಯವಿಲ್ಲ ! ಆದುದರಿಂದ 'ಅಸತ್ಯಕ್ಕೆ ಹೊರಗಾಗು, ಸತ್ಯಕ್ಕೆ ಒಳಗಾಗು !' ಎಂಥ ಸುಂದರ–ಬಂಧುರ ಸಂದೇಶವಿದು!

ಇಷ್ಟೂ ಸಾಲದು, "ಕಾಮನ ಬ್ರಹ್ಮಂಗಿಕ್ಕಿ, ಮೋಹವ ವಿಷ್ಣುವಿಂಗಿಕ್ಕಿ ಲೋಭವ ರುದ್ರಂಗಿಕ್ಕಿ, ಮದವ ಮದನಂಗೆ ಕೊಟ್ಟು ಕಳೆದುಳಿಯಬೇಕು– ಐಘಟದೂರ ರಾಮೇಶ್ವರ ಲಿಂಗವನರಿವುದಕ್ಕೆ !" ಇದಕ್ಕೆ ವಿರುದ್ಧವಾಗಿ, 'ಕಾಮದಲ್ಲಿ ಅಳಿದು, ಕ್ರೋಧದ ದಳ್ಳುರಿಯಲ್ಲಿ ಬೆಂದು, ಮೋಹದ ಸಮುದ್ರದಲ್ಲಿ ಮುಳುಗಿ, ನಾನಾಭವರಸಂಗಳನುಂಡು ಪೊರಸರಾಗಿ ಹೋಗು'ವವರಿಗೆ ರಾಮೇಶ್ವರ ಲಿಂಗವಿಲ್ಲ. "ಆಸೆ ತ್ರಿವಿಧದ ಗೊತ್ತು. ನಿರಾಸೆ ಏಕಮಯನ ಗೊತ್ತು. ಅಲ್ಲ ಅಹುದೆಂಬುದು ಬಲ್ಲವನ ಮತವಲ್ಲ ! ಎಲ್ಲಿಯೂ ಸದ್ಗುಣ, ಎಲ್ಲರಲ್ಲಿಯೂ ನಿಜಭಾವ ಪರಿಪೂರ್ಣ ತಾನಾಗಿರಬೇಕು–ಐಘಟದೂರ ರಾಮೇಶ್ವರ ಲಿಂಗವನರಿವುದಕ್ಕೆ !"

'ಎಲ್ಲಿಯೂ ಸದ್ಗುಣ, ಎಲ್ಲರಲ್ಲಿಯೂ ನಿಜಭಾವ'– ಎಂಥ ಸಮನ್ವಯ ಸೂತ್ರವಿದು । ಇದಿಷ್ಟನ್ನೇ ಸಾಧಿಸಿದರೂ ಸಾಕು–ಬದುಕು ಬಂಗಾರವಾದೀತು!

ಭಕ್ತರಲ್ಲಿ ಭಕ್ತನಾದ ಮೆರೆಮಿಂಡದೇವ ಭಕ್ತಿಯ ಬಗ್ಗೆ ಏನು ಹೇಳಿರುವನೋ ನೋಡುವಾ : "ಭಕ್ತಿ ಹೋಯಿತ್ತು ಗುರುವಿನಲ್ಲಿ ಇದಿರಾಂತಲ್ಲಿ; ಭಕ್ತಿ ಹೋಯಿತ್ತು ಜಂಗಮದಲ್ಲಿ ಸಂದೇಹವ ಮಾಡಲು; ಭಕ್ತಿ ಹೋಯಿತ್ತು ಲಿಂಗದ ಅಂಗದ ಸಂಗವನರಿಯದೆ ! ಅರ್ಥಿಗಾರಿಕೆಯಲ್ಲಿ ಮಾಡುವ ವ್ಯರ್ಥರ ಭಕ್ತಿ ಇತ್ತಲೆ ಉಳಿಯಿತ್ತು–ಐಘಟದೂರ ರಾಮೇಶ್ವರ ಲಿಂಗವನರಿಯದೆ !"

'ಪಾಕವನರಿತು ಮಾಡುವ ಗರತಿಗೂ' ಗೊತ್ತಿರದ ಪಾಕವಿಧಾನವೊಂದನ್ನು ತಿಳಿಸಿದ್ದಾನೆ ಮೆರೆಮಿಂಡದೇವ : "ಕುಂಭ ಘಟದಂತೆ ಕುರುಹಾಗಿ, ತುಂಬಿದ ಜಲದಂತೆ ಮನವಾಗಿ, ತಂಡುಲದಂತೆ ಚಿತ್ತ ಶುದ್ಧವಾಗಿ, ಮಾಡುವ ಕ್ರಿ ಅಗ್ನಿಯಂತಾಗಿ–ಇಂತಿವು ಕೂಡಿ ಘಟಿಸಿ ಕ್ರೀ ಜ್ಞಾನ ಶುದ್ಧವಾಗಿ ಇರಬೇಕು– ಐಘಟದೂರ ರಾಮೇಶ್ವರ ಲಿಂಗವನರಿವುದಕ್ಕೆ." ಇದು ಮೆರೆಮಿಂಡದೇವನು ತೋರಿದ ಪಾಕವಿಧಾನ–ಕಾಯವೆಂಬ ಕುಂಭದಲ್ಲಿ ಮನತುಂಬಿದ ಜಲವನೆರೆದು ಶುದ್ಧ ಚಿತ್ತದ

ಅಕ್ಕಿಯನ್ನು ಹಾಕಿ ಕ್ರಿಯೆಯೆಂಬ ಅಗ್ನಿಯಿಂದ ಶುದ್ಧಜ್ಞಾನಕ್ರಿಯಾ ಸಾಮರಸ್ಯದ ಪರಮಾನ್ನವನ್ನು ಮಾಡುವ ಪಾಕವಿಧಾನ.

"ಕೈಕಾಲಿನಲ್ಲಿ ಕೊಂಡಡೇನು–ಬಾಯಿಗೆ ಬಂದಲ್ಲದೆ ಒಡಲ ಎಡೆಯಿಲ್ಲ. ಮಾತಿನಲ್ಲಿ ಆಡಿದಡೇನು, ಮನದಲ್ಲಿ ಅರಿದಡೇನು? ಆ ಇರವು ಆತನ ಮುಟ್ಟಬೇಕು–ಐಘಟದೂರ ರಾಮೇಶ್ವರ ಲಿಂಗವನರಿವುದಕ್ಕೆ !" ಮೆರೆಮಿಂಡದೇವನ ಇರವು ಆತನ ಮುಟ್ಟಿತೆಂದು ಮತ್ತೆ ಹೇಳಬೇಕಿಲ್ಲ. ಅವನ "ದ್ವೈತವಳಿದು ಅದ್ವೈತವಾಯಿತು!

ಜ್ಞಾನವಳಿದು ಕ್ರಿಯೆಯಲ್ಲಿ ಸಂದು ದಿವ್ಯಜ್ಞಾನವಾಯಿತು !" ಅವನ "ಕಾಯದ ಕುರುಹು ಮರೆತರೂ ಅರಿವು ನಿಂತಿದೆ." ಅವನಿಗೆ ಕುರುಹಿಂದ ಅರಿವನರಿತು ಅರಿವು ಕುರುಹ ನಷ್ಟಮಾಡಿ ನಿಂದಲ್ಲಿಯೇ ಐಘಟದೂರ ರಾಮೇಶ್ವರ ಲಿಂಗವು ಅಂಗವರತು ನಿಂದ ನಿಲವು' ಸಾಧ್ಯವಾಗಿದೆ.

ಇಲ್ಲದಿದ್ದರೆ ಇಂಥ ಜ್ಯೋತಿರ್ಮಯವಾದ ಮಾತುಗಳು ಹೊರಡುತ್ತಿದ್ದುವೆ ಮೆರೆಮಿಂಡದೇವನಿಂದ :

"ಸತ್ಕ್ರಿಯೆಯೆಂಬುದೇ ಜ್ಞಾನ, ಜ್ಞಾನದೊಡಲೇ ಕ್ರಿ–ಸುಗಂಧವನಿರಿಸಿಕೊಂಡಿಪ್ಪ ಕರಂಡದಂತೆ."

"ಮನಮುಟ್ಟದ ಪೂಜೆ ಮಣ್ಣಗೋಡೆಯ ತೊಳೆದು ನಿರ್ಮಲವನರಸುವಂತೆ."

"**ತಾ** ಮೊವನ್ನಕ್ಕ ಲಿಂಗಕ್ಕೆ ಮಜ್ಜನ, ತಾನುಂಬನ್ನಕ್ಕ ಲಿಂಗಕ್ಕೆ ನೈವೇದ್ಯ, ತನ್ನ ತನುಭೋಗವ ಮಾಡುವನ್ನಕ್ಕ ಲಿಂಗಾರ್ಪಿತ ಮುಖವಾಗಬೇಕು."

"ಕುಸುಮ ಒಣಗಿದಾಗ ಸೌರಭವಡಗಿತ್ತು, ಸಾರವರತಾಗ ಸಸಿ ಹೊಂದಿತ್ತು."

"ಮನೆಯಲ್ಲಿ ಮನುಜರು ಅಡಗುವರಲ್ಲದೆ ಮನುಜರಲ್ಲಿ ಮನೆ ಅಡಗುವುದೆ?"

"ಸ್ಥೂಲದಿಂದ ಕಾಂಬುದು, ಸೂಕ್ಷ್ಮದಿಂದ ಅರಿವುದು, ಕಾರಣದಲ್ಲಿ ಮಾಡುವುದು."

"ಕುಸುಮ ಬಲಿದು ದೆಸೆಗೆ ವಾಸನೆ ಪಸರಿಸುವಂತೆ"

"ಅಪ್ಪುವಿಲ್ಲದ ಏರಿ , ಚಿತ್ತವಿಲ್ಲದ ಘಟ, ನಿಜತತ್ತ್ವವನರಿಯದ ಪೂಜೆ ವ್ಯರ್ಥ"

"ಚಿನ್ನ ವಿಶೇಷ, ಮಣ್ಣು ಅಧಮವೆಂದರೆ ಅದು ನಿಂದು ಕರಗುವುದಕ್ಕೆ ಮಣ್ಣಿನ ಕೊಪ್ಪೆಯೇ ಮನೆಯಾಯಿತ್ತು" ಮುಂತಾದ ಮಿಂಚಿನ ಮಾತುಗಳು ಹೊರಡುತ್ತಿದ್ದುವೆ ಅವನ ಅನುಭವದ ಉಸಿರಾಗಿ?

ಇವೆಲ್ಲವನ್ನೂ ನೆನಪಿಡದಿದ್ದರೆ ಹೋಗಲಿ–ಇದೊಂದು ವಚನವನ್ನಾದರೂ ನೆನಪಿಟ್ಟರೆ ಸಾಕು : "ನೀರೊಳಗಣ ಕಿಚ್ಚು ತಾಯಲ್ಲಿ ಅಡಗಿತ್ತು ; ಶಿಲೆಯೊಳಗಣ ಕಿಚ್ಚು ತಾಯನುಳುಹಿ ಇದಿರ ಸುಟ್ಟಿತ್ತು; ಮರದೊಳಗಣ ಕಿಚ್ಚು ಮರವ ಸುಟ್ಟು ಇದಿರ ಸುಟ್ಟು ಪರಿಸ್ಪಂದಕ್ಕೆ ಹರಿಯಿತ್ತು ! ಇಂತೀ ತ್ರಿವಿಧದ ಜ್ಞಾನದ ಭೇದ ವನರಿ–ಐಘಟದೂರ ರಾಮೇಶ್ವರ ಲಿಂಗವನರಿವುದಕ್ಕೆ."

■

# ದೇವರ ದಾಸಮಯ್ಯ–ಶಂಕರ ದಾಸಮಯ್ಯ
# ಢಕ್ಕೆಯ ಮಾರಯ್ಯ
### ಸು. ೧೦೦೮ ರಿಂದ ೧೦೫೦

ಎಲ್ಲವೂ ಹೊಟ್ಟೆಗಾಗಿ, ಗೇಣುಬಟ್ಟೆಗಾಗಿ, ಒಕ್ಕಲಿಗ ಹೊಟ್ಟೆಗೀಯುವ, ನೇಕಾರ ಬಟ್ಟೆ ಒದಗಿಸುವ. ಎಲ್ಲರೂ ಇವರಿಬ್ಬರಿಗೆ ಉಪಕೃತರು. ಆದುದರಿಂದಲೇ ರಾಟಿ ಮೇಟಿಗಳೆರಡು ನಿಲ್ಲೆ ಜಗದಾಟವೇ ಕೆಡುಗು–ಎಂದ ಸರ್ವಜ್ಞ. 'ನಮೋ ಸೂತ್ರಕಾರೇಭ್ಯಃ ವಸ್ತ್ರಕಾರೇಭ್ಯಃ' ಎಂದು ನಮಿಸಿದರು ಮಂತ್ರ ಋಷಿಗಳು.

ಶಿವನ ಗಣತತಿಯಲ್ಲಿ ನಂದಿ ಒಕ್ಕಲಿಗರ ಆರಾಧ್ಯ ದೈವತನಾದರೆ ದೇವಾಂಗ ನೇಕಾರರ ಇಷ್ಟದೈವತ. ನಂದಿ ಬಸವಣ್ಣನಾಗಿ ಭೂಲೋಕಕ್ಕೆ ಬಂದರೆ ದೇವಾಂಗ ದೇವರ ದಾಸಮಯ್ಯನಾಗಿ ಧರೆಗಿಳಿದನೆಂದು ಹೇಳುತ್ತಾರೆ. ಆದರೆ ಬಿತ್ತಿ ಬೆಳೆಯುವ ಒಕ್ಕಲಿಗರ ದೇವರು ಬರುವ ಮುನ್ನವೇ ಬಟ್ಟೆನೆಯ್ಯುವವರ ಗುರು ಬಂದುದು ಹೊಟ್ಟೆಯ ಪ್ರಶ್ನೆಗಿಂಗ ಬಟ್ಟೆಯ ಪ್ರಶ್ನೆ ಮೊದಲಿನದೆಂಬುದನ್ನು ದೃಢಪಡಿಸಿದಂತಿದೆ. ಪ್ರಾಣಕ್ಕಿಂತ ಮಾನ ಹೆಚ್ಚಿನದಲ್ಲವೆ?

ಇಂದಿನ ಕಲಬುರಗಿ ಜಿಲ್ಲೆಯ ಸುರಪುರ ತಾಲೂಕಿನಲ್ಲಿರುವ ಮುದನೂರು ಹಿಂದೆ ಧರ್ಮಕೇಂದ್ರವಾಗಿದ್ದಿತು. ಚಿಕ್ಕಮುದೇನೂರಿನ ಗೋಪಾಲಸ್ವಾಮಿ ದೇವಾಲಯದ ಶಾಸನದಲ್ಲಿ ಅದನ್ನು 'ದಕ್ಷಿನವಾರಣಾಸಿ ಮುದೆನೂರು' ಎಂದು ವರ್ಣಿಸಲಾಗಿದೆ. ರಾಮನಾಥ ದೇವಾಲಯ ಮೊದಲಾದ ದೇವಾಲಗಳಿಂದಲೂ ರಾಮತೀರ್ಥ, ಲಕ್ಷ್ಮಣತೀರ್ಥ, ಹಾಲುತೀರ್ಥ, ಸಂಗಮತೀರ್ಥ, ಪಾಂಡುತೀರ್ಥ, ಮರಳುತೀರ್ಥ, ಸಕ್ಕರೆತೀರ್ಥಗಳೆಂಬ ಸಪ್ತ ತೀರ್ಥಗಳಿಂದಲೂ ಸುತ್ತಲೂ ಬಳಸಿ ಬೆಳೆದ ಬಾಳೆ, ಕಬ್ಬು, ತೆಂಗುಗಳ ತೋಟಗಳಿಂದಲೂ ಪಾವನತೆ ರಮಣೀಯತೆಗಳ ಸಂಗಮದಂತೆ ಶೋಭಿಸುತ್ತಲಿರುವ ಈ ಗ್ರಾಮದಲ್ಲಿ ಹನ್ನೊಂದನೆಯ ಶತಮಾನದ ಪ್ರಾರಂಭದಲ್ಲಿ ಇಲ್ಲವೆ ಹತ್ತನೆಯ ಶತಮಾನದ ಕೊನೆಯಲ್ಲಿ ಶಂಕರೀ–ರಾಮಯ್ಯರೆಂಬ[೧]

---

೧. ದೇವಾಂಗ ಪುರಾಣದಲ್ಲಿ ತಂದೆ ವೀರರುದ್ರನೆಂದು ಹೇಳಿದೆ, ತಾಯಿಯ ಹೆಸರು ಹೇಳಲಿಲ್ಲ.

ಶಿವಭಕ್ತ ದಂಪತಿಗಳು ಸದಮಲ ಸಂಸಾರವನ್ನು ನಡೆಸಿದ್ದರು. ಇವರ ಪುಣ್ಯೋದರದಲ್ಲಿ ಹುಟ್ಟಿದ ಪವಿತ್ರಾತ್ಮನೇ ದಾಸ, ದಾಸಯ್ಯ, ದಾಸಿಮಯ್ಯ, ದಾಸಿದೇವ, ದೇವದಾಸ, ಜೇಡರದಾಸಿಮಯ್ಯ, ದೇವರದಾಸಿಮಯ್ಯ, ದಾಸಿಮಾರ್ಯೇತ್ಯಾದಿ ಹೆಸರುಗಳಿಂದ ಹೆಸರಾಗಿ ಹೋಗಿರುವ ದೇವರ ದಾಸಮಯ್ಯ.

ಇವನು ವಚನವಾಹಿನಿಗೆ ಗಂಗೋತ್ರಿಯೆಂದು ಹೇಳುತ್ತಾರೆ. ಆದರೆ ಸ್ವಯಂ ದಾಸಮಯ್ಯನೇ, 'ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ, ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ, ನಿಮ್ಮ ಶರಣರ ಸೂಳ್ನುಡಿಯ ಅರಗಳಿಗೆ ಇತ್ತೊಡೆ ನಿಮ್ಮನಿತ್ತೆ ಕಾಣಾ, ರಾಮನಾಥಾ!' ಎಂದೂ 'ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದು ಮಾಂಬುದೆ? ಕಡೆಗೀಲು ಬಂಡಿಗಾಧಾರ. ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥಾ' ಎಂದೂ ಹೇಳಿರುವುದರಿಂದ ವಚನವಾಹಿನಿಯ ಉಗಮ ಮುದನೂರಿನಲ್ಲಿಯೇ ಆಗಿರದೆಂದು ತೋರುತ್ತದೆ. ಆದರೆ ದೇವರ ದಾಸಮಯ್ಯ ವಚನ ಸಾಹಿತ್ಯದ ಪ್ರವರ್ತಕನಲ್ಲದಿದ್ದರೂ ಅದರ ಪ್ರಥಮ ಶಿಲ್ಪಿಯೆಂಬುದರಲ್ಲಿ, ಸಂದೇಹವಿಲ್ಲ. ಗಾತ್ರದಲ್ಲಿ, ಪಾತ್ರತೆಯಲ್ಲಿ, ಸೂತ್ರಾತ್ಮಕತೆಯಲ್ಲಿ, ಚಿತ್ತಾಕರ್ಷಕತೆಯಲ್ಲಿ, ಸಾಹಿತ್ಯಿಕ ಮೌಲ್ಯದ ಮೇಲ್ಮೆಯಲ್ಲಿ ಉನ್ನತ ಸ್ಥಾನವನ್ನು ಪಡೆದಿರುವ ವಚನಗಳನ್ನು ವೆಗ್ಗಳವಾಗಿ ರಚಿಸಿ ಆ ಸಾಹಿತ್ಯ ಪ್ರಕಾರಕ್ಕೊಂದು ಮೂರ್ತಸ್ವರೂಪವನ್ನಿತ್ತವನು ದೇವರ ದಾಸಮಯ್ಯನೆಂದು ಧಾರಾಳವಾಗಿ ಹೇಳಬಹುದು. ಬಸವಣ್ಣನವರಿಂದ ಸರ್ವಜ್ಞನವರೆಗೆ ಅನೇಕರು ಇವನ ವಚನಗಳಿಂದ ಪ್ರಭಾವಿತರಾದುದು ಕಂಡು ಬಂದಿದೆ. ಬಸವಣ್ಣನವರಂತೂ ದೇವರದಾಸಮಯ್ಯನನ್ನು ಬಹಳ ಸ್ಮರಿಸಿದ್ದಾರೆ. "ಭಕ್ತಿ ಎಂತಹಯ್ಯ? ದಾಸಯ್ಯ ಮಾಡಿದಂತಹದಯ್ಯ!" 'ದಾಸಯ್ಯ ಶಿವದಾನವನೆರೆಯ ನೋಡಯ್ಯ' 'ನೆರೆನಂಬೋ ನೆರೆನೆಂಬೋ ದಾಸ–ದುಗ್ಗಳೆಯಂತೆ' 'ದಾಸಯ್ಯನ ಮನೆಯಲ್ಲು ಬೇಡಿದೆ' 'ತನುಮನಧನದಲ್ಲಿ ವಂಚನೆಯನರಿಯರಲ್ಲ ದಾಸಯ್ಯ ಸಿರಿಯಾಳರು' 'ದಾಸಿಮಯ್ಯನಂತೆ ಉಡಕೊಡಬಲ್ಲನೆ?' 'ದಾಸದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದವ ಪಡೆದ' 'ದಾಸನ ವಸ್ತ್ರವ ನೀ ಬೇಡಿದಾತ ದೇವಾ' 'ದಾಸನ ವಸ್ತ್ರವ ಬೇಡದ ಮುನ್ನ ತವನಿಧಿಯನಿತ್ತಡೆ ನಿಮ್ಮ ದೇವರೆಂಬೆ' ದಾಸನ ವಸ್ತ್ರವ ಬೇಡುವುದೊಂದು ಗುರುವತನವೆ?' ಇತ್ಯಾದಿ ಉಕ್ತಿಗಳಲ್ಲಿ ಅವನನ್ನು ಸಗೌರವ ಸ್ಮರಿಸಿರುವುದಲ್ಲದೆ ವಚನ ರಚನೆಯಲ್ಲಿಯೂ ಅಲ್ಲಲ್ಲಿ ಅವನನ್ನು ಅನುಕರಿಸಿದ್ದಾರೆ. ಉದಾಹರಣೆಗಾಗಿ ಕೆಳಗಣ ವಚನಗಳೊಳಗಣ ಭಾವ ಸಾಮ್ಯವನ್ನು ಅವಲೋಕಿಸಬಹುದು.

| ದೇವರ ದಾಸಮಯ್ಯ | ಬಸವಣ್ಣ |
| --- | --- |
| "ಸಾಗರದೊಳಗಣ ಕಿಚ್ಚಿನ ಸಾಕಾರದಂತೆ,<br>ನನೆಯೊಳಗಣ ಫಲ ಪುಷ್ಪಗಳ ರುಚಿ<br>ಪರಿಮಳಗಳಂತೆ" | "ಉದಕದೊಳಗೆ ಬಯ್ಚಿಟ್ಟ ಬಯಕೆಯ<br>ಕಿಚ್ಚಿನಂತಿದ್ದಿತ್ತು. ಸಸಿಯೊಳಗಣ ರಸದ<br>ರುಚಿಯಂತಿದ್ದಿತ್ತು" |
| "ಸಣ್ಣ ನೆನೆಯೊಳಗಣ ಪರಿಮಳದ<br>ಇದಿರಿಂಗರುಹಿಸಬಲ್ಲುದೆ ವಾಯು?<br>ಕೊಡಗೂಸಿನೊಳಗಣ ಮೊಲೆ<br>ಮುಡಿಯ ಹಡೆದೆ<br>ತಾಯಿತಂದೆಗಳೆಂದರೆ ಕಾಣಿಸಿ<br>ಕೊಡಬಲ್ಲದೆ?" | "ನೆನೆಯೊಳಗಣ ಪರಿಮಳದಂತಿದ್ದಿತ್ತು.<br>ಕೂಡಲ ಸಂಗಮದೇವಾ, ನಿಮ್ಮ ನಿಲುವು<br>ಕನ್ನೆಯ ಸ್ನೇಹದಂತಿದ್ದಿತ್ತು" |
| "ಸತಿಯರ ಸಂಗವನು, ಅತಿಶಯದ<br>ಗ್ರಾಸವನು.<br>ಪೃಥಿವಿಗೀಶ್ವರನ ಪೂಜೆಯನು<br>ಅರಿವುಳ್ಳಡೆ ಹೆರರ ಕೈಯಿಂದ | "ತನ್ನಾಶ್ರಯದ ರತಿ ಸುಖವನು,<br>ತಾನುಂಬ ಊಟವನು ಬೇರೆ ಮತ್ತೊಬ್ಬರ<br>ಕೈಯಲಿ ಮಾಡಿಸಬಹುದೆ?"<br>ಮಾಡಿಸುವರೆ?" |
| "ಅಡಗ ತಿಂಬರು ಕಣಕದಡಿಗೆಯಿರಲ್ಕೆ,<br>ಸುರೆಯ ಕುಡಿವರು ಹಾಲಿರಲ್ಕೆ,<br>ಸ್ವಸ್ತ್ರೀ ಇದ್ದಂತೆ ಪರಸ್ತ್ರೀಯರಿಗೆ<br>ಆಳುಪುವರು" | "ಅಂಗದಿಚ್ಛೆಗೆ ಮಧ್ಯಮಾಂಸ ತಿಂಬರು,<br>ಕಂಗಳಿಚ್ಛೆಗೆ ಪರವಧುವ ನೆನೆವರು" |
| "ಕಾತ ಕಳವೆಯಂತೆ ತಲೆವಾಗದಿದ್ದ<br>ತಲೆ ಶೂಲದ ತಲೆಯಯ್ಯ" | "ಬೀಗಿ ಬೆಳೆದ ಗೊನೆವಾಳೆಯಂತೆ<br>ಬಾಗಿಕೊಂಡಿದ್ದರೆ ಬೇಡಿದ ಪದವಿ....." |
| "ಗಂಡುನುಳ್ಳಮ್ಮನ ಗೌರಿ ಎಂದು<br>ಕಂಡಡೆ" | ಪರವಧುವನು ಮಹಾದೇವಿಯೆಂಬೆ" |
| "ಬರು ಶಠಗನ ಭಕ್ತಿ ದಿಟವೆಂದು<br>ನೆಚ್ಚಿಲುಬೇಡ;<br>ಮಠದೊಳಗಣ ಬೆಕ್ಕು ಇಲಿಯ ಕಂಡು<br>ಪುಟನೆಗೆದಂತಾಯಿತ್ತೆನ್ನ ಭಕ್ತಿ" | ಅಂದಣವನೇರಿದ ಸೊಣಗನಂತೆ<br>ಕಂಡೊಡೆ, ಬಿಡದು ಮುನ್ನಿನ<br>ಸ್ವಭಾವವನು" |

ಹೀಗೆ ಇನ್ನು ಹಲವು ಸಾಮ್ಯ–ಸಾದೃಶ್ಯಗಳನ್ನು ಉದಾಹರಿಸಬಹುದು. ವಚನ ರಚನೆಯ ವಿಧಾನದಲ್ಲಷ್ಟೇ ಅಲ್ಲ. ಶರಣಧರ್ಮದ ಮುಖ್ಯಸೂತ್ರಗಳಲ್ಲಿಯೂ ದೇವರದಾಸಮಯ್ಯ ಬಸವೋದಯಕ್ಕೆ ಮೊದಲು ಮೂಡಿದ ಬೆಳ್ಳಿ ಚಿಕ್ಕೆ. 'ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' 'ಗಂಸ ಭಕ್ತನಾಗಿ ಹೆಂಡತಿ ಭವಿ' ಯಾಗಿರಬಾರದು, 'ನಡೆನುಡಿ ಸತ್ಯ ಸದಾಚಾರ'ಗಳೇ ಮುಖ್ಯವೆಂದರಿವುದು, 'ಶಂಭುವಿನ ನಂಬುಗೆ'ಯೇ ಮಾರ್ಗವೆಂದರಿವುದು, 'ಪರಮಧುವ ನೆನೆಯದೆ ಪರಧನವ ತುಡುಕದೆ....ಗುರುಲಿಂಗ ಜಂಗಮಕ್ಕೆ ವರದಾಸನಾಗ'ಬೇಕು, 'ಮಡಿದಿಯ ಪ್ರಾಣಕ್ಕೆ ಮೊಲೆಮುಡಿ ಇದ್ದಿತ್ತೆ? ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ?' 'ಅನುಭಾವವೇ ಭಕ್ತಿಗಾಧಾರ' 'ಪ್ರಾಣಪ್ರಕೃತಿಗಳ ಕಳೆಯ ಲಿಂಗವೆಂದರಿದು ಅಂಗೈಸಿ ಅನುಭವಿಸಬೇಕು' 'ಅಗ್ನಿ ಸುಡುಲರಿವುದಲ್ಲದೆ ಸುಳಿಯಲರಿಯದು ; ವಾಯು ಸುಳಿಯಲರಿವುದಲ್ಲದೆ ಸುಡಲರಿಯದು ; ಅಗ್ನಿವಾಯು ಕೂಡಿದಲ್ಲದೆ ಅಡಿಯಿಡಲರಿಯವು, ಹಾಗೆ ಕ್ರಿಯಾ – ಜ್ಞಾನಗಳೂ ಅನ್ಯೋನ್ಯ ಸಾಪೇಕ್ಷಗಳು, 'ವೇಷಕ್ಕೆ ಅಂಜಿ ದೋಷಕ್ಕೆ ಹೇಸಿ' ನಡೆಯಬೇಕು. ಆಹುದೊಂದು ಪರಿಶುದ್ಧ ಕಾಯಕವಿಡಿದು ಪವಿತ್ರ ಜೀವನ ನಡೆಸಬೇಕು–ಇತ್ಯಾದಿಯಾದ ದೇವರದಾಸಮಯ್ಯನ ಉಕ್ತಿಗಳೇ ಮುಂದೆ ಶರಣಧರ್ಮದ ತತ್ತ್ವಗಳಿಗೆ ತಳಹದಿಯಾದುವೆಂದು ಹೇಳಲು ಅಭ್ಯಂತರವಿಲ್ಲ.

ದೇವರದಾಸಮಯ್ಯನಿಗೆ ಈ ಸ್ಥಾನ ಸುಮ್ಮನೆ ಸಿಕ್ಕಿಲ್ಲ–ಸತತ ಸಾಧನೆಯ ಸಫಲತೆಯಾಗಿ ಸಿಕ್ಕಿದೆ. ಬಾಲ್ಯವನ್ನು ಹುಟ್ಟೂರಾದ ಮುದನೂರಿನಲ್ಲಿ ಕಳೆದು ಅಲ್ಲಿ ದೊರೆತ ಅಲ್ಪ ವಿದ್ಯಾಭ್ಯಾಸದಿಂದ ಅತೃಪ್ತನಾಗಿ ತನ್ನ ಜ್ಞಾನ ತೃಷೆಯನ್ನು ಹಿಂಗಿಸುವ ಗುರುವನ್ನು ಅರಸುತ್ತ ಹೊರಡುತ್ತಾನೆ ದಾಸಮಯ್ಯ. ಆಗ ಶ್ರೀಶೈಲ ಆತ್ಮಶ್ರೀಶೈಲವಾಗಿದ್ದಿತು, 'ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ'ವೆಂದು ಬಸವಣ್ಣನವರೇ ಹೇಳಿದ್ದಾರೆ. ಅಲ್ಲಿ ಪಂಡಿತಾರಾಧ್ಯ ಪೀಠದ ಮೂರನೆಯ ಅಧಿಪತಿಗಳಾದ ಚಂದ್ರಗುಂಡ ಶಿವಾಚಾರ್ಯರು ಶಿವಜ್ಞಾನ ಸಮುದ್ರರಾಗಿ ವಿರಾಜಿಸುತ್ತಿದ್ದರು. 'ಘಟದೊಳಗೆ ತೋರುವ ಸೂರ್ಯನಂತೆ ಸರ್ವರಲ್ಲಿ ಶಿವಚೈತನ್ಯವಿಪ್ಪುದು. ಇದ್ದರೇನು? ಸರ್ವರಿಗೆ ಸಾಧ್ಯವಲ್ಲ. ಮುಟ್ಟಿಮುಟ್ಟದು. ಆದ ಕೂಡುವರೆ ಗುರುವಿನಿಂದಲ್ಲದಾಗದು ಕಾಣಾ, ರಾಮನಾಥಾ' ಎಂದುಸುರಿದ ದಾಸಮಯ್ಯ ಆ ಗುರುಗಳ ಶಿಷ್ಯನಾಗುವ ಸೌಭಾಗ್ಯವನ್ನು ಪಡೆದು, ಗುರುಕರುಣದಿಂದ ತನ್ನಲ್ಲಾದ ಪರಿವರ್ತನೆಯನ್ನು ತಾನೇ ಮನೋಜ್ಞವಾಗಿ ಹೇಳಿದ್ದಾನೆ :

“ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ ಆ ತೃಣವನಾ ಕೆಂಡ ನುಂಗಿದಂತೆ, ಗುರುಚರಣದ ಮೇಲೆ ತನುವೆಂಬ ತೃಣವ ತಂದಿರಿಸಿದರೆ ಆತನ ಸರ್ವಾಂಗವೆಲ್ಲ ಲಿಂಗ ಕಾಣಾ ರಾಮನಾಥಾ!”

ದಾಸಮಯ್ಯ ಸರ್ವಾಂಗಲಿಂಗಿಯಾಗಿ ಹೊರಟನಲ್ಲಿಂದ. “ಗುರು ಕರುಣಿಸಲು ಸಂಸಾರ ವಿಷಯ ಕೆಟ್ಟತ್ತು ; ಮಾಯಾ ಪ್ರಪಂಚ ಬಿಟ್ಟಿತ್ತು; ಹುಟ್ಟರತು ಹೋಯಿತ್ತು; ನೆಟ್ಟನೆ ಗುರುಪಾದವ ಮುಟ್ಟಿ ಭವಗೆಟ್ಟೆನು ಕಾಣಾ ರಾಮನಾಥಾ” ಎಂದು ಹಾಡುತ್ತಾ ಹೊರಟನು.

ದಾಸಮಯ್ಯ ದೇವರ ದಾಸಮಯ್ಯನಾಗಿ ಹೊರಬಿದ್ದ ಗುರುಕುಲದಿಂದ. ಗುರುಗಳ ಆದೇಶದಂತೆ ಜನಮಂಗಲ ಕಾರ್ಯಕ್ಕಾಗಿ ಹೊರಬಿದ್ದ. ಹೋದೆಡೆಗಳಲ್ಲೆಲ್ಲ ಅವನಿಗೆ ಗೆಲವು ಒಲಿದು ಬಂದಿತು. ಅವನ ಮುಖಮಂಡಲದ ತೇಜಸ್ಸು ಮನುಜರ ಮನದ ತಿಮಿರಕ್ಕ ಭಾನುಪ್ರಾಕಾಶವಾಗಿ ಬೆಳಗಿತು. ಸದಯ ಹೃದಯ, ಸುಜ್ಞಾನ ಪೂರ್ಣಮಸ್ತಕ, ಪಾವನ ಜೀವನಗಳ ಪ್ರಭಾಪುಂಜರಂಜಿತನಾಗಿ ಮೌಢ್ಯಪ್ರಭಂಜನೆಗಾಗಿ ಹೊರಟ ದಾಸಮಯ್ಯ.

ದಾರಿಯಲ್ಲಿ ದೇವಾಂಗಸಮಾಜದ ಜನರು ಕಂಡರು. ದೇವಾಂಗರು, ಪಟಕಾರರು, ಸಾಲಿಗರು ನೆಯ್ಗೆಯವರು, ಶೀಲವಂತರು ಮೊದಲಾದ ಹೆಸರುಗಳಿಂದ ದಕ್ಷಿಣ ಭಾರತದಲ್ಲೆಲ್ಲ ಪ್ರಸರಿಸಿರುವ ದೇವಾಂಗರು ಭಿನ್ನ ಭಿನ್ನ ವರ್ತನೆಗಳುಳ್ಳುವರಾಗಿ ಭಿನ್ನ ವಿಚ್ಛಿನ್ನರಾಗಿದ್ದರು. ದಾಸಮಯ್ಯನವರನ್ನು ಕುರಿತು, ‘ಗುರುಕಾರುಣ್ಯವಾದ ಬಳಿಕ ಅಂಗದ ಮೇಲೆ ಲಿಂಗವಿರಬೇಕು. ಲಿಂಗವಿಲ್ಲದ ಗುರುಕಾರುಣ್ಯವು ಬತ್ತಿದ ಕೆರೆಯುಲ್ಲಿ ತಾವರೆಯು ಬಿತ್ತಿದಂತೆ’ ಎಂದು ಬೋಧಿಸಿದನು. ಅವನ ಉಪದೇಶಾಮೃತಪಾನಮಾಡಿ ಅವರೆಲ್ಲ ಶಿವನ ನಡೆ, ಶಿವನ ನುಡಿ, ಶಿವಭಾವ, ಶಿವಭಕ್ತಿ, ಶಿವಜ್ಞಾನ, ಶಿವಧ್ಯಾನಗಳನ್ನು ಅಳವಡಿಸಿಕೊಂಡು ಶಿವಾಚಾರಿಗಳಾದರು.

ಲಿಂಗಧಾರಿಗಳಾದ ಮಾತ್ರಕ್ಕೆ ಮುಕ್ತರಾದೆವೆಂದು ತಿಳಿಯಲಾಗದು. “ಮೆಳೆಯ ಮೇಲಣ ಕಲ್ಲು ಜಗದೆರೆಯನಾಗಬಲ್ಲುದೆ? ಮೆಲೆ ಶಿವಭಕ್ತನಾಗಬಲ್ಲುದೆ? ನಿಮ್ಮ ತನುಮನಧನವರಿಯದಿರ್ದಡೆ ಸದುಭಕ್ತರಹರೆ?” ಎಂದು ಕೇಳಿ, “ಹಂದಿ ಶ್ರೀಗಂಧವ ಹೂಸಿದಡೇನು, ಗಂಧರಾಜನಾಗಬಲ್ಲುದೆ? ನವಿಲು ನಲಿಯಿತ್ತೆಂದಡೆ ಅದ ಕಂಡು ಕಾಡಕೋಳಿ ಪುಚ್ಛವ ತೆರಕೊಂಡಂತೆ ಕರ್ಮಿಗಳ ಭಕ್ತಿ” “ಹೊರವೇಷದಲ್ಲಿ ವಿಭೂತಿ ರುದ್ರಾಕ್ಷಿಯ ಹೂಸಿದಡೇನು? ತೆರನನರಿದು ಮರವೆಯ ಕಳೆದು ಮಾತಿನಂತೆ ನೀತಿಯುಳ್ಳೊಡೆ ಅವರನು ಅಜಾತರೆಂಬೆ ಕಾಣಾ” ಎಂದು ತಿಳಿ ಹೇಳಿದನು.

ಅಹಂಕಾರಿಗಳಿಗೆ, "......ಬೆಬ್ಬನೆ ಬೆರತು, ಬೆಬ್ಬನೆ ಬೀಗಿ ಅಹಂಕಾರಭರಿತನಾಗಿಪ್ಪವನ ಮನೆಯ ಲಿಂಗಸನುಮತರು ಹೊಗರು ಕಾಣಾ" ಎಂದು ಕಿವಿ ಹಿಂಡಿದನು.

ಒಮ್ಮೆ ಹೇರಡವಿಯೊಳಗಿಂದ ಹಾಯ್ದು ಹೋಗುತ್ತಿದ್ದಾಗ ಆ ಹೆಗ್ಗಾಡಿನ ಕಾಡುಜನರು ಕಣ್ಣಿಗೆ ಬಿದ್ದರು. ಬೇಟೆಯಿಂದ ಬದುಕುತ್ತಲಿದ್ದ ಅವರು ಕಾರ್ತವೀರ್ಯಾರ್ಜುನನ ವಂಶಜರಂತೆ. ಅವರ ಹಿಂಸಾಮಯ ಹೀನ ಜೀವನವನ್ನು ಕಂಡು ಕನಿಕರ ಹುಟ್ಟಿ ದಾಸಮಯ್ಯ ಅವರೊಡನೆ ಕೆಲವು ದಿನಗಳವರೆಗೆ ವಾಸಿಸಿದ; ತನ್ನ ಬೋಧೆಯ ಬಲದಿಂದ ಅವರು ಹಿಂಸೆಗೆ ಹೇಸುವಂತೆ ಮಾಡಿದ ; ಅವರು ವಿಶುದ್ಧ ಕಾಯಕಕ್ಕೆ ಒಲಿದು ಒಳಿತಿನ ದಾರಿಯನ್ನು ತಿಳಿಯವಂತೆ ಮಾಡಿದ; ದಯಾಧರ್ಮದ ಅನುಯಾಗಿಗಳಾಗುವಂತೆ ಮಾಡಿದ. "ನಾನೊಂದು ಸುರಗಿಯನೇನೆಂದು ಹಿಡಿವೆನು? ಏನು ಕಿತ್ತೇನನಿರಿವೆನು? ಜಗವೆಲ್ಲ ನೀನಾಗಿಪ್ಪೆ ಕಾಣಾ ರಾಮನಾಥಾ" ಎಂದು ವಿಶ್ವಸಾಮರಸ್ಯದ ದಿವ್ಯ ದರ್ಶನ ಅವರಿಗೆ ಆಗುವಂತೆ ಮಾಡಿದ. ಅಜ್ಞರಲ್ಲಿ ಸುಜ್ಞಾನೋದಯವಾಗಯಿತು; ಬೇಟೆಗಾರರು ಭಕ್ತರಾದರು; ಕಿರಾತರು ಪುರಾತನರ ಮಾರ್ಗ ಹಿಡಿದರು.

ಮುಂದೆ ನಂದಿಯೆಂಬ ಗ್ರಾಮದಲ್ಲಿ ವಿಪ್ರರಿಗೆ ಸದ್ಬೋಧೆಯ ಸುಧೆಯನ್ನುಣಿಸಿ, ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲ ಒಂದೇ ಕುಲ, ಹೊಲೆಯರೆಂದು ಹಳಿಯುವುದು ಹೊಲ್ಲ ಎಂದು ಹೇಳಿ "ಹೊಲೆಯರ ಬಾವಿಯಲೊಂದು ಎಲುವು ನಟ್ಟಿದ್ದರೆ ಹೊಲೆಹೊಲೆಯೆಂಬುದೀ ಲೋಕವೆಲ್ಲ; ಹಲವು ಎಲುವಿದ್ದ ಬಾಯಲ್ಲಿ ಅಲ್ಲದುದ ನುಡಿದರೆ ಅದು ಹೊಲೆಯರ ಬಾವಿಗಿಂತ ಕರಕಷ್ಟ ಕಾಣಾ" ಎಂಬ ಸಮ್ಯಕ್ ದೃಷ್ಟಿಯು ಅವರಿಗೆ ತಲೆದೋರುವಂತೆ ಮಾಡಿದನು.ಕುಲಮದಕ್ಕೆ ಕೊಡಲಿಯೇಟನ್ನು ಹಾಕಿದನು.

ಗೌಡಗೆರೆಯಲ್ಲಿ ಮುದ್ದಯ್ಯ ಗೌಡನೆಂಬ ದೊಡ್ಡ ರೈತನಿದ್ದನು. ಆ ಊರಿನ ರೈತರಿಗೆಲ್ಲ ಆತ ಹಿರಿಯಮಣಿ. ಉಂಡುಟ್ಟು ಸುಖವಾಗಿರಲು ಸರ್ವಸೌಕರ್ಯಗಳು ಶಿವಕೃಪೆಯಿಂದ ಲಭ್ಯವಾಗಿದ್ದರೂ ಮುದ್ದಯ್ಯಗೌಡನ ಮನಸ್ಸಿಗೆ ನೆಮ್ಮದಿಯಿರಲಿಲ್ಲ. 'ಮನುಷ್ಯನಾಗಿ ಹುಟ್ಟಿದುದು ಹೊಟ್ಟೆ ಹೊರೆವುದಕ್ಕಾಗಿ ಮಾತ್ರವೇ?' ಎಂಬ ಪ್ರಶ್ನೆ ಅವನನ್ನು ಕಾಡುತ್ತಲಿದ್ದಿತು. ದೇವರದಾಸಮಯ್ಯನಲ್ಲಿಗೆ ಆಗಮಿಸಲು ಅವನಿಗೆ ಆನಂದವಾಯಿತು. ತನ್ನ ಪ್ರಶ್ನೆಗೆ ಉತ್ತರ ಸಿಕ್ಕರೆ ಅವನಿಂದಲೇ ಸಿಕ್ಕಬೇಕೆಮದೆನಿಸಿತವನಿಗೆ. ತನಗೆ ತಿಳಿವಿನ ದಾರಿ ತೋರಬೇಕುಂದು ದಾಸಮಯ್ಯನಿಗೆ ಪ್ರಾರ್ಥಿಸಿಕೊಂಡನು. ಅವನ ದೃಶಭಕ್ತಿಗೊಲಿದು ದಾಸಮಯ್ಯ ಅವನಿಗೂ ಆ ಊರಿನ ಉಳಿದೆಲ್ಲ ರೈತರಿಗೂ ಶಿವದೀಕ್ಷೆಯಿತ್ತು ಶಿವಮಂತ್ರವನ್ನು ಬೋಧಿಸಿ,

“ಕಾಯ ನಿಮ್ಮ ದಾನ, ಜೀವ ನಿಮ್ಮ ದಾನ; ಕಾಯ ಜೀವವುಳ್ಳಲ್ಲಿ ನಿಮ್ಮ ಪೂಜಿಸದ ನಾಯಿಗಳನೇನೆಂಬೆ ಹೇಳಾ, ರಾಮನಾಥಾ” ಎಂದು ಬಾಳಿನ ಗುರಿಯನ್ನು ತೋರಿಸಿದನು. “ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ಗಾಳಿ ನಿಮ್ಮ ದಾನ ; ಎತ್ತ ನಿಮ್ಮ ದಾನ, ಬಿತ್ತು ನಿಮ್ಮ ದಾನ, ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ ; ನಿಮ್ಮ ದಾನವನುಂಡು ಅನ್ಯರನು ಹೊಗಳುವ ಕುನ್ನಿಗಳನೇನೆಂಬೆ, ರಾಮನಾಥಾ” ಎಂದು ಎಚ್ಚರಿಸಿದನು. ಕಾಯವಿರುವಾಗಲೆ ದೇವನನ್ನು ಪೂಜಿಸಿ ಕರ್ಮವನ್ನು ಹರಿದುಕೊಳ್ಳಬೇಕು; ಧನವಿರುವಾಗಲೆ ಧರ್ಮವನ್ನು ಗಳಿಸಿಕೊಳ್ಳಬೇಕು– ಎಂಬ ಅವನ ಉಪದೇಶ ಆ ರೈತರಿಗೆ ದಾರಿದೀಪವಾಯಿತು, ಬಾಳ ಬುತ್ತಿಯಾಯಿತು.

ಇಂದಿನ ಆಂಧ್ರ ಪ್ರದೇಶದ ಮೇದಕ ಜಿಲ್ಲೆಯಲ್ಲಿರುವ ಪೊಟೆಂಚರು ಅಂದು ಪೊಟ್ಟಲಕೆರೆಯೆಂಬ ಹೆಸರಿನಿಂದ ಪ್ರಖ್ಯಾತವಾಗಿದ್ದಿತು. ಅಲ್ಲಿ ಆಗ ಚಾಲುಕ್ಯರ ಬಲಾಢ್ಯ ಚಕ್ರವರ್ತಿ ೧ನೆಯ ಜಯಸಿಂಹ ರಾಜ್ಯವಾಳುತ್ತಲಿದ್ದನು. ಅವನು ೧೦೦೮ ರಿಂದ ೧೦೪೨ ರವರೆಗೆ ವೈಭವದಿಂದ ಆಳಿದನು. ಅವನ ಈ ರಾಜಧಾನಿಯಲ್ಲಿಯೂ ಅನೇಕರು ದಾಸಮಯ್ಯನಿಗೆ ಶಿಷ್ಯರಾದರು. ಅವರು ಕಟ್ಟಿಸಿಕೊಟ್ಟ ಮಠದಲ್ಲಿ ಕೆಲವು ದಿನ ಕಳೆದು ಅವರನ್ನೆಲ್ಲ ಶಿವಪಥದ ಪಥಿಕರನ್ನಾಗಿ ಮಾಡಿ ಮುದನೂರಿಗೆ ಮರಳಿದ ದಾಸಮಯ್ಯ.

“ಸತಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ” ಎಂದು ನಂಬಿದ್ದ ದಾಸಮಯ್ಯ ಮದುವೆಗೆ ಮನಸ್ಸು ಮಾಡಿದ. ಅವನಿಗೆ ಕನ್ಯೆ ಕೊಡದವರಾರು? ಆದರೆ ದಾಸಮಯ್ಯನಿಗೆ ಬರಿ ಹೆಣ್ಣು ಬೇಕಾಗಿರಲಿಲ್ಲ. ಒಲವಿನ ಕಣ್ಣು ಬೇಕಾಗಿದ್ದಿತು; ಸಹಧರ್ಮಿಣಿ ಬೇಕಾಗಿದ್ದಳು. ಅಲ್ಲಲ್ಲಿ ಅರಸುತ್ತಲಿರುವಾಗ ಗೊಬ್ಬೂರು ಗ್ರಾಮದ ಮಲ್ಲಿನಾಥ–ಮಹಾದೇವಿಯರ ಮಗಳಾಗಿದ್ದ ದುಗ್ಗಳೆ ದಾಸಮಯ್ಯನ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಅವನಿಗೆ ಒಪ್ಪಿಗೆಯದಳು. ನೀರಿಲ್ಲದೆ ಅನ್ನಮಾಡಿ ನೀಡಬೇಕೆಂಬುದು ದಾಸಮಯ್ಯನ ಪರೀಕ್ಷೆಯಾಗಿದ್ದಿತು. ಪಾದೋದಕದಿಂದ ಅನ್ನಮಾಡಿ ನೀಡಿದಳು ದುಗ್ಗಳೆ. ಪಾದೋದಕ ನೀರಲ್ಲ, ಪಾದೋದಕ ಪಾದೋದಕವೇ!

ದಾಸಮಯ್ಯ ದುಗ್ಗಳೆಯ ಧರ್ಮಜ್ಞತೆಗೆ ಒಲಿದು ಅವಳ ಕೈಹಿಡಿದ. ಅಗ್ಗಳೆಯಾದ ದುಗ್ಗಳೆಯ ಕೈಹಿಡಿದು ಶಿವಭಕ್ತಿಯ ಸಂಸಾರ ನಡಸಗೊಡಗಿದ. ಅವರಿಬ್ಬರ ದಾಂಪತ್ಯ ಅಮೋಘವಾದುದು. ಇಂದಿಗೂ ಮುದನೂರಿನ ರಾಮನಾಥ ಮಂದಿರದಲ್ಲಿ ದಾಸಮಯ್ಯನ ಮಗ್ಗದ ಸ್ಥಳವನ್ನು ತೋರಿಸುತ್ತಾರೆ. ಅಲ್ಲಿ ಕುಳಿತು ದುಗ್ಗಳೆ ನೂತ ನೂಲಿನಿಂದ ವಸ್ತ್ರಗಳನ್ನು ನೆಯ್ಯುತ್ತಿದ್ದ ದಾಸಮಯ್ಯ. ಆ ವಸ್ತ್ರಗಳನ್ನು ಮಾರಿ ಬಂದ ಹಣದಿಂದ ಗಣಾರಾಧನೆ ಮಾಡಿ ತಾವೂ ಪ್ರಸಾದ ಸಂತುಷ್ಟಚಿತ್ತರಾಗಿ

ಬಾಳತೊಡಗಿದರು. ಆ ನೆಯ್ಗೆಯ ಕಾಯಕದ ನಿಜತೆಯನ್ನು ದಾಸಮಯ್ಯನೇ ವಿವರಿಸಲಿ : "ಉಂಕಿಯ ನಿಗುಚಿ, ಸರಿಗೆಯ ಸಮಗೊಳಿಸಿ, ಸಮಗಾಲನಿಕ್ಕಿ ಅಣಿಯೊಳು ಏಳ ಮೆಟ್ಟಿದೆ ! ಹಿಡಿದ ಲಾಲಿಯು ಮುಳ್ಳು ಕಂಡಿಕೆಯ ನುಂಗಿತ್ತು; ಈ ಸೀರೆಯ ನೆಯ್ದವ ನಾನೋ ನೀನೋ, ರಾಮನಾಥಾ?"

ಅವರಿಬ್ಬರ ಸಮರಸ ಸಂಸಾರವನ್ನು ಕವಿಯೇ ಚಿತ್ರಿಸಲಿ

"ಬಡವರಾಗಿಯೆ ಭಕ್ತಿಗೊಡೆಯರಾಗಿರ್ಪರು
ಒಡಲಿಚ್ಚೆಗೆಳಿಸಿ ಪರದ್ರವ್ಯಮಂ ನೋಡರು
ಕಾಯಕದ ಧರ್ಮದಾರ್ಜನೆ ಲಿಂಗ ಸೊಮ್ಮೆಂದು
ದಸರಿ ದೇವಾಂಗಂಗಳೆಂಬ ಸೀರೆಯ ನೆಯಿದು
ಹಸನಾಯಿತೆಂದೊಡವರಿತ್ತ ಕೂಲಿಯನೊಯಿದು
ತಮ್ಮ ಸ್ವೇಚ್ಛೆಯಲ್ಲಿ ಲಿಂಗಾರ್ಚನೆಯ ಮಾಡುವರ್
ನಿರ್ಮಳ ನಿಜೈಕ್ಯ ಶುದ್ಧಮನವಾಗಿರುತಿಹರ್
ದುಗ್ಗಳವ್ವೆಯು ನೂತ ನೂಲು ಚಿತ್ತೈಸೆನುತೆ



**'ದುಗ್ಗಳೆ ನೂಲುತ್ತಿದ್ದಳತ್ತ, ಇತ್ತ ದಾಸಮಯ್ಯ ನೇಯುತ್ತಿದ್ದ'**

ಅಗ್ಗಳದ ಬೆಳುಹತ್ತಿಯಂ ತಂದು ಶೋಧಿಸುತೆ
ಸತ್ಯ ತಳಗಲ್ಲು ಸಾತ್ವಿಕದ ಕಡುಹಂ ಪಿಡಿದು
ಮರ್ತ್ಯದವೆಗುಣವ ಕಳೆವಂತೆ ಗೋಪಿಯ ಕಳೆದು
ಕರಣಾದಿ ಗುಣ ಕಸವ ಕಳೆದು ಭೂರುಹ ಹಿಂಜಿ
ಅರಳೆಯಂ ಹೊಡಚಿ ಹೊಸೆದನು ಮಾಡಿದಾ ಹಂಜಿ
ಭಕ್ತಿ ಭೈಸಿಕೆಯಾ ಮಣೆಯ ಮೇಲೆ ಕುಳ್ಳಿರ್ದು
ಯುಕ್ತಿ ಕರಣಂ ಮುಕ್ತಿ ಕದಿರಂ ಪಿಡಿದು
ಹಂಜಿಯಂ ಕದಿರಲಮರಿಸಿ ಪಿಡಿದು ನೂಲುತುಂ
ಕುಂಜರಾಸುರ ವೈರಿ ಶರಣೆಂದು ಪಾಡುತುಂ"

ದುಗ್ಗಳೆ ನೂಲುತ್ತಿದ್ದಳತ್ತ ; ಇತ್ತ ದಾಸಮಯ್ಯ ನೇಯ್ಯುತ್ತಿದ್ದ. ಹೇಗೆ ?

"ಮನ ನಲಿದು ಹಾಸ ಮೊಳನಿಕ್ಕಿಯುಂಕಿಯ ಮಾಡಿ
ಶಿವರಸದ ಗಂಜಿಯೆಂದೆಂಬ ಸುಮತಿಯ ತುಳಿದು
ಶಿವಜ್ಞಾನದಾಚಾರವೆಂಬ ಕುಂಚಿಗೆವಿಡಿದು
ಉಂಕಿಯಂ ಹಸಮಾಡಿ ನೋಡಿ ಎಳೆಯಂ ಕೆಚ್ಚಿ
ಲೋಕತ್ರಯದ ಗುಣವ ನೆಯ್ದಪೆನೆಂದು ಮನಹೆಚ್ಚಿ
ದೂಸಕರ್ ಮಗ್ಗೆ ಶಿವಸಮಯ ಮಗ್ಗದ ಕುಳಿಗೆ
ದಾಸಯ್ಯ ನೆಯ್ಗೆಯಂ ತಂದು ಹಣ್ಣಿದನೊಳಗೆ
ಜನನ ಹಾಸಿಂಗೆ ಸ್ಥಿತಿಯೆಂಬ ಹೊಕ್ಕುಗಳಾಗೆ
ಮನವು ಲಿಂಗದೆ ಲೀಯವಾದ ಸೂತ್ರಗಳಾಗೆ
ಮೊದಲ ಸೆರಗಿಂಗೆ ಸೌರಾಷ್ಟ್ರ ಪುರಮುಮನೆಯ್ದು
ತದನಂತರದ ನಡುವೆ ಕಾಶೀಪುರವನೆಯ್ದು
ಕೇತಾರ ಶ್ರೀರುದ್ರವೆಂಬ ಚೌಸೆರಗುಮಂ
ಸಾತ್ವಿಕಂ ದಾಸಯ್ಯ ನೆಯ್ದ ಬಹು ಚಿತ್ರಮಂ !"

–ದಾಸಮಯ್ಯನ ರಗಳೆ

ಬಹುಚಿತ್ರತರವಾದ ಸೀರೆಯೇನೋ ಸಿದ್ಧವಾಯಿತು. ಆದರೆ ಆ 'ಸೀರೆಯನೆಯ್ದವ ನಾನೋ ನೀನೋ, ರಾಮನಾಥ ? ತನುಮನವೆಲ್ಲ ಶಿವಮಯವಾಗಿ ನೆಯ್ಯುತ್ತಲಿದ್ದ ದಾಸಮಯ್ಯನ ಸೀರೆಯನ್ನು ಶಿವನೇ ನೆಯ್ದನೆಂದರೂ ಸಲ್ಲುತ್ತದೆ.

ಆ ದಿವ್ಯದೇವಾಂಗವನ್ನು ಸಿದ್ಧಾಪುರದ ಸಂತೆಗೊಯ್ದ ದಾಸಮಯ್ಯ–ಮಾರುವ ಆಸೆಯಿಂದ. ಆದರೆ ಅದಕ್ಕೆ ಬೆಲೆಕಟ್ಟುವ ಎಂಟೆರ್ದೆ ಯಾರಿಗೂ ಇರಲಿಲ್ಲ. ಯಾರು ಬಂದರೂ ನೋಡಿ ತಲೆಕೊಡಹಿ ಹಿಂದಿರುಗುವವರೆ. ಕೊಳ್ಳುವ ಧೈರ್ಯವನ್ನು ಯಾರೂ ತೋರಲಿಲ್ಲ. "ಕೊಂಬರು ಶರಣೆಂಬುವರಯ್ಯ" ನಿರುಪಾಯನಾಗಿ ಮುದನೂರಿಗೆ ಹೊರಟ ದಾಸಮಯ್ಯ.

ಹಾದಿಯಲ್ಲಿ ಹಾಗಲಹಣ್ಣಿನಂಥ ಮುಪ್ಪಿನ ಜಂಗಮನೊಬ್ಬ ಎದುರಾದ. ಚಳಿಯಿಂದ ನಡುಗುತ್ತಲಿದ್ದ ಆ ಬರಿಮೈಯ ಬಡಪಾಯಿ ದಾಸಮಯ್ಯನನ್ನು ಕಂಡು ಕಂಪಿಸುವ ಸ್ವರದಲ್ಲಿ ಕೇಳಿದ : "ಹೊದೆಯಲೇನಾದರೂ ಕೊಡಬಲ್ಲೆಯಾ ತಂದೆ?" ಬೇರೆ ವಸ್ತ್ರವಿಲ್ಲದ್ದರಿಂದ ಆ ದಿವ್ಯಾಂಬರವನ್ನೇ ಕೊಟ್ಟು ಬಿಟ್ಟ ದಾಸಮಯ್ಯ ಅವನ ಔದಾರ್ಯವನ್ನು ನೋಡಿ ಆ ಜಂಗಮ ಇನ್ನೂ ಅವನ ಮನವನ್ನು ಒತ್ತಿನೋಡಬೇಕೆಂದು, 'ನನಗೇಕೆ ಇಮಥ ಬೆಲೆಯುಳ್ಳ ವಸ್ತ್ರ ತಂದೆ, ಹಳೆಯ ಹರುಕು ಬಟ್ಟೆಯಿಲ್ಲವೆ?' ಎಂದು ಕೇಳಿದ. 'ಒಮ್ಮೆ ನಿಮಗೆ ಅರ್ಪಿತವಾದುದು ನಿಮ್ಮ ಸೊಮ್ಮು ಸ್ವಾಮಿ; ಬೇರೇನೂ ಭಾವಿಸದೆ ಹೊದ್ದುಕೊಳ್ಳಿ. ಚಳಿ ಬಹಳವಿದೆ' ಎಂದು ಉತ್ತರವಿತ್ತ ದಾಸಮಯ್ಯ. ಆ ಜಂಗಮ ಅಷ್ಟಕ್ಕೂ ಬಿಡಲಿಲ್ಲ. ದಾಸಮಯ್ಯನ ಮನೋದಾರ್ಢ್ಯವನ್ನು ಇನ್ನೂ ಒರೆಗೆ ಹಚ್ಚಿದ. ದೇವತೆಗಳೂ ಕರುಬುವಂತಿದ್ದ ಆ ದಿವ್ಯಾಂಬರವನ್ನು ಪರಪರನೆ ಹರಿದು ಚಿಂದಿ ಚಿಂದಿ ಮಾಡಿದ ; ಕಾಲ ಹುಣ್ಣಿಗೊಂದು ಚಿಂದಿ ಸುತ್ತಿದ, ತಲೆಗೊಂದು ತುಂಡು ಸುತ್ತಿಕೊಂಡ, ಮೈಗೊಂದು ಭಾಗ ಹೊದ್ದುಕೊಂಡ; ಇನ್ನೂ ಏನೇನೋ ರಾದ್ಧಾಂತ ಮಾಡಿಬಿಟ್ಟ ! ಅದೆಲ್ಲವನ್ನೂ ಅವಿಚಲಿತ ಚಿತ್ತದಿಂದಲೇ ನೋಡಿದ ದಾಸಮಯ್ಯ ಅವನ ಪ್ರಫುಲ್ಲ ಮುಖ ಮಂಡಲ ಇನ್ನಷ್ಟು ಪ್ರಫುಲ್ಲವಾಗಿಯೇ ಕಂಡಿತು. ಅಲ್ಲಿ ವಿಷಾದದ ನೆರಳು ಕೂಡ ಸುಳಿದಿರಲಿಲ್ಲ ; ಕೊರಗಿನ ಗೆರೆ ಸಹ ಬಿದ್ದಿರಲಿಲ್ಲ ; ನೊಂದೆದೆಯ ಕಂದು ಕಾಣಿಸಲಿಲ್ಲ ! ಆನಂದದಿಂದಲೇ ಮನೆಗೆ ಹೋದ. ನಡೆದುದನ್ನು ನಗುನಗುತ್ತಲೇ ದುಗ್ಗಳೆಗೆ ತಿಳಿಸಿದ, ಆ ಸಾಧ್ವಿಯ ಮೊಗದಾವರೆಯೂ ಮುದುರಲಿಲ್ಲ, ನಗೆಮಲ್ಲಿಗೆ ಬಾಡಲಿಲ್ಲ ! ಹಿಂದೊಮ್ಮೆ ಮನೆಗೆ ಬಂದ ಅತಿಥಿಗಳಿಗೆ ಉಣಬಡಿಸಲು ಮನೆಯಲ್ಲಿ ಏನೂ ಇಲ್ಲದಿರಲು ತಾನು ತವರಿನಿಂದ ತಂದಿದ್ದ ಕನಕಕಂಕಣವನ್ನೇ ಮಾರಿದ್ದಳಾಕೆ! ಈ ವಸ್ತ್ರ ಹಾಳಾಯಿತೆಂದು ಗೋಳಿಡುವಳೇ ಅವಳು ? ಇಬ್ಬರೂ ಇದ್ದುದನ್ನೇ ಶಿವಪ್ರಸಾದವೆಂದು ಸೇವಿಸಿ ಸಂತೋಷಚಿತ್ತರಾಗಿ ಪವಡಿಸಿದರು.

ಬೆಳಗಾಯಿತು. ಸತಿಪತಿಗಳಿಬ್ಬರೂ ಶಿವನಾಮವನ್ನು ಸ್ಮರಿಸುತ್ತ ಎದ್ದರು. ತಮ್ಮ ಕಣ್ಣುಗಳನ್ನು ತಾವೇ ನಂಬದಾದರು. ಹಳೆಮನೆ ಹೊಸಮನೆಯಾಗಿದೆ. ನಿಟ್ಟು ನಿಟ್ಟಿಗೆ ಧಾನ್ಯದ ಚೀಲುಗಳು ಒಟ್ಟಿವೆ; ಅದುವರೆಗೆ ಭಕ್ತಿನಿಧಿ ಮಾತ್ರ ಆಗಿದ್ದ ಆ

ಮನೆಗೆ ತವನಿಧಿ ಬಂದಿದೆ ! ಆ ತವನಿಧಿಯ ಮಹಿಮೆಯಿಂದ ಯಾರಿಗೆ ಎಷ್ಟು ಕೊಟ್ಟರೂ ಸವೆಯದ ಆ ಧಾನ್ಯಸಂಗ್ರಹ ! ದ್ರೌಪದಿಯ ಅಕ್ಷಯ ಪಾತ್ರೆ ಅದು. 'ಇದು ಸಾಧ್ಯವೆ?' ಎಂಬ ಪ್ರಶ್ನೆಗೆ ಉತ್ತರವಾಗಿ ನಿಲ್ಲುತ್ತವೆ ಬಸವಣ್ಣನವರ ನನ್ನಿಯ ನುಡಿಗಳು : "ದಾಸದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದವ ಪಡೆದ" "ದಾಸನ ವಸ್ತ್ರವ ಬೇಡದ ಮುನ್ನ ತವನಿದಿಯನಿತ್ತಡೆ ನಿಮ್ಮ ದೇವರೆಂಬೆ" "ದಾಸನಂತೆ ತವನಿಧಿಯ ಬೇಡಿದನೆ?" ಈ ಮಾತುಗಳನ್ನು ಕುರುಡು ನಂಬುಗೆಯ ಕೊನರುಗಳೆಂದು ಕಡೆಗಣಿಸಬಹುದೆ?

ಈ ದಿವ್ಯ ಜೀವನದ ದಂಪತಿಗಳಿಗೆ ತವನಿಧಿ ದೊರೆತುದೊಂದು ಅಚ್ಚರಿಯೆ? ಎಂಥ ನಿರ್ಮಲ ನಿರ್ಝರ ಅವರ ಜೀವನ ! ಒಮ್ಮೆ ದಾಸಮಯ್ಯ ಕರೆಯುತ್ತಲೇ ದುಗ್ಗಳೆ ಎತ್ತಿದ್ದ ಒನಕೆಯನ್ನು ಹಾಗೆಯೇ ಬಿಟ್ಟು ಓಡಿಬಂದಳಂತೆ ; ಹಗಲು ದೀಪವನ್ನು ತರಲು ಹೇಳಿದರೂ ಮರುಮಾತನಾಡದೆ ತಂದಳಂತೆ ; ಹಿಮದಂತೆ ತಣ್ಣಗಿದ್ದ ಅಂಬಲಿಯನ್ನು ಉಣಬಡಿಸಿದಾಗ 'ಅಂಬಲಿ ಬಹಳ ಬಿಸಿಯಾಗಿದೆ, ಗಾಳಿ ಬೀಸು' ಎನ್ನುತ್ತಲೆ ಪಿಟ್ಟೆನ್ನದೆ ಸೆರಗಿನಿಂದ ಗಾಳಿ ಬೀಸುತೊಡಗಿದಳಂತೆ ! ಪಂಪನಂತೆ 'ಪೆರತಾವುದು ಸಂಸಾರಸಾರ ಸರ್ವಸ್ವಫಲಂ?' ಎಂದು ನಾವೂ ಉದ್ಗರಿಸಬಹುದಲ್ಲವೆ ಈ ಸಾರಮಯವಾದ ಸಂಸಾರ ಚಿತ್ರವನ್ನು ನೋಡಿ?

ದಿನದಿನಕ್ಕೆ ದಾಸ-ದುಗ್ಗಳೆಯರ ಧವಳಕೀರ್ತಿ ದಶದಿಕ್ಕುಗಳಿಗೆ. ಹರಡತೊಡಗುತ್ತದೆ. ಹೆಂಗಳೆಯರು ಕುಟ್ಟುವಾಗ, ಬೀಸುವಾಗ. ಕೂಸನ್ನು ಮಲಗಿಸುವಾಗ ಹಾಡತೊಡಗುತ್ತಾರೆ, "ದಾಸಮಯ್ಯ ನೆಯ್ದ ದೇವಾಂಗದೊಸ್ತರವ ಜಗದೀಶ್ವರ ತಾನೆ ಕೊಳ್ಳಲು ಬಂದ ದೇವಾಂಗದೊಸ್ತರವ" ಎಂದು ಮಧುರ ಮಂಜುಲವಾಗಿ. ಗಂಡಸರು ಬಿತ್ತುವಾಗ, ಹರಗುವಾಗ, ಒಕ್ಕುವಾಗ ದಾಸ-ದುಗ್ಗಳೆಯರ ಪವಿತ್ರ ಜೀವನವನ್ನು ನೆನೆಯುತ್ತ ನನೆ ಕೊನೆಯೇರತೊಡಗುತ್ತಾರೆ. ದಾಸ-ದುಗ್ಗಳೆಯರ ಕೀರ್ತಿ ಮುದನೂರ ಗಡಿಗೆರೆಗಳನ್ನು ದಾಟಿ ಪೊಟ್ಟಲಕೆರೆಗೆ ತಲುಪುತ್ತಲೂ ಮೊದಲೇ ಅಂತರಂಗದಲ್ಲಿ ದಾಸಮಯ್ಯನ ಶಿಷ್ಯಳಾಗಿದ್ದ ಜಯಸಿಂಹನ ರಾಣಿ ಸುಗ್ಗಲೆ ಬಹಿರಂಗವಾಗಿಯೆ ತನ್ನ ಗುರುವಿನ ಚರಣ ಪೂಜಿಸಿ ಕೃತಾರ್ಥಳಾಗಬೇಕೆಂದು ನಿರ್ಧರಿಸುತ್ತಾಳೆ. ಆಕೆಯ ಸಾತ್ವಿಕ ಭಕ್ತಿಯ ಕರೆಗೆ ಒಗೊಟ್ಟು ಮತ್ತೆ ಪೊಟ್ಟಲಕೆರೆಗೆ ಹೋಗುತ್ತಾನೆ ದಾಸಮಯ್ಯ. ಸುಗ್ಗಲೆಗೆ ಶಿವದೀಕ್ಷೆಯಿತ್ತು ಶಿವಜ್ಞಾನವನ್ನು ನೀಡುತ್ತಾನೆ.

ರಾಜಧಾನಿಯಲ್ಲಿ ಕೋಲಾಹಲವೇಳುತ್ತದೆ. ಮಹಾರಾಣಿಯೇ ಮುಂದಾಗಿ ಧರ್ಮಾಂತರ ಹೊಂದಿದರೆ ಮುಂದಾವ ಗತಿಯೆಂದು ಸಂಪ್ರದಾಯಶರಣರು ಹುಯಿಲೆಬ್ಬಿಸುತ್ತಾರೆ. ಜಯಸಿಂಹ ನ್ಯಾಯಪಕ್ಷಪಾತಿ. 'ಸುಗ್ಗಲೆಯು ಶಿವಮತವನ್ನು

ಸ್ವೀಕರಿಸಿದುದು ಯುಕ್ತವೋ ಆಯುಕ್ತವೋ ಎಂಬುದು ಶಾಸ್ತ್ರಾರ್ಥದಿಂದಲೇ ಸಿದ್ಧವಾಗಲಿ' ಎಂದು ಆಜ್ಞಾಪಿಸುತ್ತಾನೆ. ಸುಗ್ಗಲೆಗೆ ಸಂತೋಷವಾಗುತ್ತದೆ. ತನ್ನ ಗುರು ಎಂಥವರನ್ನೂ ವಿಚಾರಮಂಥನದಲ್ಲಿ ಸೋಲಿಸಬಲ್ಲನೆಂಬ ವಿಶ್ವಾಸವಿದ್ದಿತವಳಿಗೆ. ತುಂಬಿದ ರಾಜ ಸಭೆಯಲ್ಲಿ ಶಾಸ್ತ್ರಾರ್ಥ ನಡೆಯುತ್ತದೆ. ಸಕಲ ಮತದವರೂ ದಾಸಮಯ್ಯನ ಮೇಲೆ ಪ್ರಶ್ನೆಗಳ ಸುರಿಮಳೆಯನ್ನೆ ಸುರಿಸುತ್ತಾರೆ. ದಾಸಮಯ್ಯ ಎಲ್ಲರಿಗೂ ಎಲ್ಲರೂ ಮೆಚ್ಚುವಂತೆ ಉತ್ತರವಿತ್ತು ವಿಜಯಿಯಾಗುತ್ತಾನೆ. ಜಯಸಿಂಹನು ಸುಗ್ಗಲೆಯ ಶಿವಮತ ಸ್ವೀಕಾರಕ್ಕೆ ಒಪ್ಪಿಗೆಯ ಮುದ್ರೆಯನ್ನೊತ್ತುತ್ತಾನೆ. ದಾಸಮಯ್ಯನ ಕೀರ್ತಿ ಇನ್ನಷ್ಟು ಹೆಚ್ಚುತ್ತದೆ.

ದುಗ್ಗಳೆಯಂಥ ಸತಿ, ಸುಗ್ಗಲೆಯಂಥ ಶಿಷ್ಯಳನ್ನು ಪಡೆದ ದಾಸಮಯ್ಯನೇ ಧನ್ಯನು. "ಮತಿಯಲ್ಲಿ, ಗುಣದಲ್ಲಿ, ಪತಿಭಕ್ತಿಯಲ್ಲಿ, ಉಮಾಪತಿ ಪೂಜೆಯಲ್ಲಿ ಅತಿ ಜಾಣೆಯೆನಿಸಿದ ಸತಿ ದುಗ್ಗಳವ್ವೆ ಶರಣಾಗು" ಎಂದು ಪುರಾತನ ದೇವಿಯರ ತ್ರಿವಿಧಿ ದುಗ್ಗಳೆಯ ಅಗ್ಗಳಿಕೆಯನ್ನು ಉಗ್ಘಡಿಸಿದರೆ, "ಜಯಸಿಂಹ ಕ್ಷಿತಿಪಾಲಕಂಗೆ ಜಗಮೆಲ್ಲಂ ಬಣ್ಣಿಸಲ್ ಪೂಣ್ದು ಭಾಷೆಯನೇ ಸುಗ್ಗಲದೇವಿ ಕೊಟ್ಟ ತೆರದಿಂ" ಎಂದು ಕ್ರಿಶ. ೧೨೨೦ರ ಹಳೇಬೀಡಿನ ಶಾಸನ ಸುಗ್ಗಲೆಯ ಕೀರ್ತಿಯನ್ನು ಘೋಷಿಸುತ್ತದೆ.

ಇಂಥ ಸತಿ, ಇಂಥ ಶಿಷ್ಯಳು ಸಿಕ್ಕಮೇಲೆ ದಾಸಮಯ್ಯನ ಧವಳ ಯಶದ ದುಂದುಭಿ ದಿಗ್ ದಿಗಂತಗಳಲ್ಲಿ ಮೊಳಗದಿರುತ್ತದೆಯೆ? ಬರುಬರುತ್ತ ದಾಸನ ಕುಲವೆಂಬುದೊಂದು ಕುಲವೇ ತಲೆದೋರಿತೆಂದು ತೋರುತ್ತದೆ. "ದಾಸನಕುಲವಾದಾತ ಈಶಗಲ್ಲದೆ ಶರಣೆನ್ನ, ಆಶೆಮಾಡ ನೋಡಾ ಅನ್ಯ ದೈವಂಗಳಿಗೆ" ಎಂಬ ಅವನ ವಚನದಲ್ಲಿ ಈ ಊಹೆಗೆ ಅವಕಾಶವಿದೆ; ಗೊಬ್ಬೂರಿನ ಕ್ರಿ.ಶ. ೧೧೪೮ರ ಶಾನಸದಲ್ಲಿ ಬರುವ "ಪಿರಿಯಗೊಬ್ಬೂರ ಶೇಷ ಮಹಾಜನಂಗಳ ದಿವ್ಯ ಶ್ರೀ ಪಾದಪದ್ಮಾರಾಧಕರು, ಶ್ರೀ ರಾಮೇಶ್ವರ ದೇವರ ಗಂಧವಾರಣರ್ ಜಾಡಕುಲತಿಲಕ ಜಾಡರ ದಾಸಮಯ್ಯ ಪ್ರಿಯಪುತ್ರರು ಮುಪ್ಪ ಸಕಲ ಜಾಡಗೊತ್ತಳಿಗಳ ಕುಲದೇವ ದೇವನಪ್ಪ ಗೊಜ್ಜೇಶ್ವರ ದೇವರಪೂಜೆ....." ಎಂಬ ವರ್ಣನೆಯಲ್ಲಿ ಈ ಊಹೆಗೆ ಪುಷ್ಟಿ ದೊರೆಯುತ್ತದೆ; ಅರಸೀಕೆರೆ ತಾಲ್ಲೂಕಿನಲ್ಲಿರುವ ಹಿರಿಯೂರು ಗ್ರಾಮದ ಕ್ರಿಶ. ೧೨೬೫-೬೬ರ ಶಾಸನದಲ್ಲಿ ಬರುವ,

"ಸಿರಿಯಾಳ್ವ ಬಸವಯ್ಯನೊಳ್ಪೆಸೆವ......ಮಂ ಬಾಣನು
ದ್ದರ ಭೋಗಂ ಸಲೆ ಚೋಳನುದ್ಭಟನನತರ್ಕ್ಯಂ ಸಿಂಥಬಲ್ಲಾಳನೀ
ಧರೆ ಕೊಂಡಾಡುವ ದಾಸಿಮಯ್ಯ ನೆಸೆದಿರ್ದೀ ಭಕ್ತ ಸಂದೋಹವಾ

ದರದಿಂ ಕಾಕರ ಕಂಡ ನಂಬಿ ನಿನಗೀಗುದ್ಬೋಧ ಸಂಪತ್ತಿಯಂ"

ಎಂಬ ಭಾಗದಲ್ಲಿ ದಾಸಮಯ್ಯನನ್ನು 'ಧರೆ ಕೊಂಡಾಡುವ ದಾಸಮಯ್ಯ' ಎಂದು ವಿಶೇಷಿಸಿ ಹೇಳಿರುವುದು ಇದಕ್ಕೆ ಇನ್ನಷ್ಟು ಪುಷ್ಟಿಯನ್ನೀಯುತ್ತದೆ.

ಶಿವಕೃಪೆ, ರಾಜಮನ್ನಣೆ, ಶಿಷ್ಯಸ್ತೋಮ, ಆದರ್ಶಸತಿ–ಎಲ್ಲವೂ ಸೇರಿ ದಾಸಮಯ್ಯನಂಥ ಮಹಾಶರಣನ ಮನದಲ್ಲಿಯೂ ಮಮಕಾರವನ್ನು ಮೂಡಿಸಿದುವೆಂದು ತೋರುತ್ತದೆ. ಹರಿಹರನಿದನ್ನು ಹೀಗೆ ಬಣ್ಣಿಸಿದ್ದಾನೆ: "ಮುದನೂರೊಳ್ ಜೇಡರ ದಾಸಯ್ಯಂ ರಾಮನಾಥ ಪ್ರಸಾದ ಸಗರ್ವ ಹೃದಯಂ ಶಿವನಿಂ ತವನಿಧಿಯಂ ಪಡೆದೊಂದು ದಿವಸಂ ಶಿವನಂತೆ ಕುಡುವರೆನ್ನಂತೆ ಪಡೆವರಿಲ್ಲೆಂಬ ಗರ್ವಂ ತನ್ನಮನದೊಳ್ ಪೊಳೆಯೆ, ಮನಸಿಜ ಹರನೀತನ ಗರ್ವಮಂ ಕಂಡು ತನ್ನಿಂದಧಿಕನಂ ಕೊಂಡೊಯ್ದು ತೋರ್ಪೆನೆಂದು ಶಿವಂ ಸರ್ವಜ್ಞಂ ನಿಜಶರಣ ಪ್ರಣಯ ಕಲಹಲೀಲಾ ಲೋಲಂ......"

ಏನು ಮಾಡಿದ ಶಿವ ? ದಾಸಮಯ್ಯನ ಮಮಕಾರ ಮುಗುಳೊಡೆಯದಂತೆ ಅದನ್ನು ಅಷ್ಟಕ್ಕೇ ಚಿವುಟಿ ಬಿಡುವ ಏರ್ಪಾಟು ಮಾಡಿದ–ಅದಾಗಲೇ ರಾಯ್ಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಕಂದಗಲ್ಲು ಗ್ರಾಮದಲ್ಲಿ ಗೋವಿಂದಭಟ್ಟನೆಂಬ ನಾಮದಿಂದ ಜನಿಸಿ ದುಮ್ಮವ್ವೆಯೆಂಬ[೧] ಸತಿಯೊಡನೆ ಕಾಶೀಯಾತ್ರೆಗೆಂದು ಹೊರಟು ಕೃಷ್ಣಾತೀರದ ನವಿಲೆಗೆ ಬಂದು ಅಲ್ಲಿ ಜಡೆಯ ಶಂಕರನ ಕೃಪೆಯಿಂದ ಶಂಕರ ದಾಸಮಯ್ಯನಾಗಿ ಹೊಸ ಹುಟ್ಟನ್ನು ಪಡೆದಿದ್ದ ಶರಣಮಣಿಯಿಂದ.

ವಾರಣಾಸಿಗೆಂದು ಹೊರಟಿದ್ದ ಗೋವಿಂದದೇವ ನವಿಲೆಯ ಜಡೆಯ ಶಂಕರ ಸ್ವಾಮಿಯನ್ನು ಕಂಡು–

"ಇನ್ನೇಕೆ ವಾರಣಾಸಿಯ ಪಯಣ ತನಗೆಂದು
ಇಲ್ಲಿರ್ಪೆನಿಲ್ಲಿರ್ಪೆ ನಿನ್ನಗಲೆ ನಿನ್ನಗಲೆ–
ನೊಲ್ಲೆನಿನ್ನೆಲ್ಲಿಗಂ ಪೋಗೆನಾನಿಂತುಸಲೆ
ಎಂದು ತನ್ನೂರ್ಗೆ ಭರದಿಂ ಮರಳಿ ನಡೆತಂದು
ಸಂದಣಿಪ ಮೋಹದಿಂ ನಿಚ್ಚ ನಿಚ್ಚಂ ಬಂದು
ಜಡೆಯ ಶಂಕರ ದೇವರಂ ದರ್ಶನಂ ಮಾಡಿ
ಎಡೆವಿಡದ ಭಕ್ತಿಯಿಂ ಕಿವಿವಿಡಿದು ನಲಿದಾಡಿ

---

೧. 'ಅಮ್ಮವ್ವೆ'ಯೆಂದು ಹರಿಹರ ಹೇಳುತ್ತಾನೆ.

ಕಂಪಿಸುತೆ ಪುಳಕಿಸುತೆ ಕೊರ್ಬುತ್ತೆ ಕೊನರುತ್ತೆ
ಸೊಂಪೇರಿ ಝೊಂಪಿಸುತೆ ಬೆಮರುತ್ತೆ ಕರಗುತ್ತೆ
ಮುನಿಮುನಿದು ಜಿನುಜಿನುಗಿ ತೊನೆತೊನೆದು ತೂಗಾಡಿ
ಮನವಿಳಿದು ಮದವುಡುಗಿ ಮುದಪೊದವಿ ಮೆರೆದಾಡಿ
ಮಿಗೆ ನಚ್ಚಿ ಮೈವೆಚ್ಚಿ ಮರುಗಿ ಬೆರಲಂ ಕಚ್ಚಿ
ಬಗೆ ತಿಳಿದು ಬಲ್ಪಳಿದು ಸುಖಮುಳಿದು ಕಣ್ ಮುಚ್ಚಿ
ಭಕ್ತಿ ಸುಖಮಂ ತನ್ನ ಮನದಣಿಯಲನುಭವಿಸಿ" (ಹ.ರ)

ಆನಂದವೇ ಆನಂದವಾಗಿರುತ್ತಾನೆ. ಎಂಥ ಭಕ್ತಿ ಸುಖವಿದು ! ಇಂಥ ಭಕ್ತಿ ಸುಖವನ್ನಿತ್ತ ಜಡೆಯ ಶಂಕರಸ್ವಾಮಿಯನ್ನು ತೊರೆದು ವಾರಣಾಸಿಗೆ ಹೋಗುವುದೆ? ಸಾಧ್ಯವಿಲ್ಲ ! ತುಂಬಿದೆದೆಯಿಂದ ತೂಪಿರಿದ :

"ಎನಗೆ ದಿವ್ಯಕ್ಷೇತ್ರವುಂ ನೇತ್ರವುಂ ನೀನೆ !
ಎನಗೆ ನಿತ್ಯಾವಾಸಮುಂ ದೇಶಮುಂ ನೀನೆ !
ಎನಗೆ ಪುಣ್ಯಪ್ರಕರಮುಂ ಸುಕರಮುಂ ನೀನೆ !
ಎನಗೆ ವಿಮಲಜ್ಞಾನಮುಂ ಮಾನಮುಂ ನೀನೆ !
ಎನಗೆ ನಿರುಪಮ ಕರ್ತನುಂ ಮಿತ್ರನುಂ ನೀನೆ !

ಸ್ವಾಮಿ ತನ್ನ ಸದ್ಭಕ್ತನ ನಿಷ್ಕಲಂಕ ಭಕ್ತಿಗೆ ಮೆಚ್ಚಿದ. ಒಂದು ರಾತ್ರಿ ಅವನ ಕನಸಿನಲ್ಲಿ ಕಾಣಿಸಿಕೊಂಡು ಹೇಳಿದ : "ನೀನು ಪ್ರತಿನಿತ್ಯ ಕಂದಶಿಲೆಯಿಂದ ನವಿಲೆಗೆ ಬಂದು ಹೋಗುವುದು ಬೇಡ. ನೀನು ನವಿಲೆಯಲ್ಲಿಯೇ ನೆಲೆಯಾಗಿ ನಿಲ್ಲು ನಾನು ನಿನಗೆ ನಿಜಬೋಧೆಯನ್ನಿತ್ತು ಕರುಣಿಸುವೆನು."

ಶಂಕರದಾಸಮಯ್ಯನ ಹೃದಯದಲ್ಲಿ ಹರುಷದ ಹಾಲ್ಗಡಲು ಉಕ್ಕಿತು. ಕಂದಶಿಲೆಯನ್ನು ಬಿಟ್ಟು ನವಿಲೆಯಲ್ಲಿಯೇ ಮನೆ ಮಾಡಿದ. ಹಗಲಿರುಳೆನ್ನದೆ ಜಡೆಯ ಶಂಕರನ ಸೇವೆಯಲ್ಲಿ ತನ್ಮಯನಾಗಿಬಿಟ್ಟ. ಸಕಲ ಲೋಕೈಕಗುರು ಶಂಕರನು ಮೆಚ್ಚಿ ಭಕ್ತನ ಉತ್ತಮಾಂಗದ ಮೇಲೆ ವರದ ಹಸ್ತವನ್ನಿರಿಸಿದ, "ತನ್ನುಮಂ ಭಕ್ತಿಯಂ ಪಂಚಾಕ್ಷರಿಯ' ನರುಹಿದ; ಉನ್ನತ ಜ್ಞಾನವನ್ನಿತ್ತ; ಅವನ 'ಅಂತಸ್ಥದಲ್ಲಿ ಸಾಮರ್ಥ್ಯಮಂ ಬಿತ್ತಿದ; ಕಾರುಣ್ಯಮಂ ನೀಡಿ 'ನೊಸಲೊಳಗೆ ನೊಸಲಿಟ್ಟು ಭರದಿಂದೆ ಮುಂಡಾಡಿದ.

ಶಂಕರನ ನೊಸಲ ಸಂಸರ್ಗದಿಂದ ದಿಟ್ಟಿ ಗರ್ಭಿಣಿಯಾಗಿ, 'ಕಣ್ಣಪ್ಪನೀಶಂಗೆ ಕಣ್ಣಿತ್ತ ತೆರದಲ್ಲಿ' ಶಿವನ ಫಾಲನೇತ್ರ ಶಂಕರದಾಸಯ್ಯನಿಗೂ ಹಣೆಗಣ್ಣನ್ನು

ಹಡೆದುಕೊಟ್ಟಿತಂತೆ; 'ಜ್ಯೋತಿಯಿಂ ಜ್ಯೋತಿಯಂ ಪೊತ್ತಿಸಿದ ತೆರನಾ'ಯ್ತಂತೆ. "ಹೀಗೆ ಹಣೆಗಣ್ಣು ಹುಟ್ಟುವುದು ಸಾಧ್ಯವೆ" ಎಂಬ ಶಂಕೆ ಸುಳಿವ ಮುನ್ನವೆ 'ಜ್ಞಾನಾಗ್ನಿ ಕಣ್ದೆರೆವೊಲಿರ್ದುದಾನಂತರಂ' ಎಂದು ಸಂದೇಹ ಪರಿಹರಿಸುತ್ತಾನೆ ಹರಿಹರ.

ಗೋವಿಂದದೇವ ಶಂಕರ ದಾಸಮಯ್ಯನಾಗಿ, ಉಮ್ಮವ್ವೆ ಶಿವದಾಸಿಯಾಗಿ ಅವರಿಬ್ಬರ ಹೊಸಬಾಳು ಹಸನಾಗಿ ಮುಂದುವರಿಯುತ್ತದೆ. 'ಹೊಸ ಮಸೆಯ ತಿಸುಳಕ್ಕೆ ನೊಸಲ ಕಣ್ಣಾದಂತೆ, ಉರಿವಗ್ನಿ ಹೆರೆನೊಸಲ ಹಸೆಯೇರಿ ನಿಂದಂತೆ' ಇದ್ದ ಶಂಕರದಾಸಮಯ್ಯನ ಹಣೆಗಣ್ಣು ನಿಷ್ಕಾರಣವಾಗಿ ನಿರ್ದೋಷಿಗಳನ್ನು ದಹಿಸದಿರಲೆಂದು ಶಿವನದಕ್ಕೆ ನಂದಿಯ ಮೊಗವಾಡವನ್ನಿಕ್ಕುತ್ತಾನೆ. ಆಗ ಅದು, 'ಬಗೆಯಲರಿವಿನಮರೆಯ ನಿಜದ ಬೆಳಗಾಗಿ' ಸುಡುವುದನ್ನುಳಿದು ಕಾಪಾಡುವ ಶಕ್ತಿಯಾಗುತ್ತದೆ.

ಶಂಕರದಾಸಮಯ್ಯ 'ಗರ್ವವನುಡಿದು, ದುರಿತುಕುಲಮಂ ಜಡಿದು, ಭವ ವೃಕ್ಷಮಂ ಕಡಿದು, ಪುಣ್ಯಪರಿಮಳಂಗಳಂ ಮುಡಿದು, ನಂದಿಯ ಮೊಗವಾಡವಂ ಪಡೆದು, ಪರರರ್ಥವಂ ಪೊರ್ದುವ ಪಿರಿಯತನಂ ಬೇಡ, ಆರಾಧಿಸಿ ಕೊಂಬ ಭಾರಕ್ಕಾನಾರೆಂ' ಎಂದು ಭೃತ್ಯನಾಗಿದ್ದ ವಕ್ರಪಾದನಿಂದ ನಿತ್ಯ ಒಂದು ಮನೆಯಧಾನ್ಯದ ಬಿಕ್ಷ ತರಿಸಿ ತನ್ನ ಹೊಲಿಗೆಯ ಕಾಯಕದಿಂದ ಬಂದ ಹಣ ಮತ್ತು ಭಿಕ್ಷದ ಧಾನ್ಯ– ಇವುಗಳಿಂದ ಗಣಾರಾಧನೆಯನ್ನು ಸಾಗಿಸುತ್ತ ಸಂತೋಷವಾಗಿದ್ದನು.

ಅವನ ಸೂಜಿಕಾಯಕದ ಪರಿಯೇ ಬೇರೆ. ದೇಹಿಯಾದ ಜೀವಾತ್ಮನನ್ನೇ ಸೂಜಿಯನ್ನಾಗಿ ಮಾಡಿ, ಮಾಯಾ ಪಾಶಗಳನ್ನು ಸೂತ್ರ ಮಾಡಿ, ಕಾಲತ್ರಯಗಳೆಂಬ ಕತ್ತರಿಯಿಂದ ಭವ ಬಂಧ ವಸ್ತ್ರಗಳನ್ನು ಕತ್ತಿರಿಸುವನು; ಮೊಹವೆಂಬ ಸರಿಯನ್ನು ಹಚ್ಚಿ ಅಜ್ಞಾನವೆಂಬ ಹತ್ತಿಯನ್ನು ಅಂತರಂಗದೊಳಗೆ ತುಂಬುವನು; ತಲೆಗೆ ಕಿರೀಟವಾಗುವಂತೆ ಚಿಪ್ಪುಗಳನ್ನು ಕೂಡಿಸಿ ಆಸೆಗಳೆಂಬ ಕಸಿಗಳಿಂದ ಕಟ್ಟುವನು ; ಸಪ್ತ ಧಾತುಗಳೆಂಬ ಪಟ್ಟಿಗಳಲ್ಲಿ ಆಯುಃಕರ್ಮಗಳೆಂಬ ಎಳೆಗಳನ್ನು ಸೇರಿಸಿ ಆಕಾಶರೂಪವಾದ ಗೂಡಾರವನ್ನು ಮಾಡಿ ಕನಕಾದ್ರಿಯೆಂಬ ಕಂಬದಿಂದ ನಿಲ್ಲಿಸುವನು. ಇಂಥ ಚಿತ್ರ ಪತ್ರವನ್ನು ಹೊಲಿಯುವ ವಸ್ತ್ರಭಿನ್ನಕನಾಗಿ ಶಂಕರ ದಾಸಮಯ್ಯ ಸಂತೋಷ ಸಾಮ್ರಾಜ್ಯವನ್ನು ಸೂರೆಗೊಂಡಿದ್ದನು. ಇದು ಶಂಕರ ದಾಸಮಯ್ಯ ಪುರಾಣದಲ್ಲಿ ಬರುವ ಅವನ ಸೂಜಿಕಾಯಕದ ಚಿತ್ರಣ.

ವಕ್ರಪಾದನು ದಿನಾಲು ಐಮಾನಕ್ಕಿಂತ ಹೆಚ್ಚಾಗದಂತೆ ಧಾನ್ಯ ಭಿಕ್ಷವನ್ನು ತರುತ್ತಿದ್ದನು. ಅದು ಅರ್ಪಿತಕ್ಕಾಗುತ್ತಿತ್ತು; ಸೂಜಿಕಾಯಕದಿಂದ ಬಂದ ಹಣ ಮೇಲುವೆಚ್ಚಕ್ಕಾಗುತ್ತಿತ್ತು.

ಹೀಗೆ ಹಿಗ್ಗಿನಿಂದವರ ಬಾಳು ಸಾಗಿತ್ತು. ಒಮ್ಮೆ ವಕ್ತ್ರಪಾದ ಎಂದಿನಂತೆ ಒಂದು ಮನೆಗೆ ಹೋಗಿ ಭಿಕ್ಷೆ ಬೇಡಲು, 'ಮನೆಯವರ್ ಜೋಳವಿಲ್ಲದೆ ಶಂಕರಗಂಡಂ ಪಿರಿದಯ್ಯಾ ಪಿರಿವೆಂದು ನುಡಿಯೆ' ವಕ್ತ್ರಪಾದ ಹಿಂದಿರುಗಿ ಬಂದು ಶಂಕರದಾಸಮಯ್ಯನಿಗೆ ನಡೆದ ಸಂಗತಿಯನ್ನು ವಿವರಿಸಿದನು. ಶಂಕರದಾಸಮಯ್ಯ ವಿಷಣ್ಣನಾದ. "ಜೋಳಕ್ಕೆ ಶಂಕರ ಗಂಡನೆಂಬ ಹೆಸರಿದೆಯೆ? ನನಗೆ ಇದುವರೆಗೂ ಗೊತ್ತಿರಲಿಲ್ಲವಲ್ಲ ! ಇನ್ನೊಲ್ಲೆ, ಶಂಕರನ ಹೆಸರಿಗೆ ಶರಣೆನ್ನುವುದನ್ನು ಬಿಟ್ಟು ಭುಂಜಿಸುವ ಕೆಲಸ ಮಾಡಲಾರೆ ! ವೇಳೆಯಾಳಿಯನಲ್ಲದೆ ಜೋಳವಾಳಿಯವನಲ್ಲಲ್ಲ!" ಎಂದು 'ಲೋಯಿಸರದ ಹಳುಕಮಂ ಚೂರ್ಣಜೀರ್ಣಮಂ ಗುಂಜಾಸುಬೀಜಮ ನೊಂದುಗೂಡಿಯರೆದು' ಅದನ್ನೇ ಶಿವಪ್ರಸಾದವೆಂದು ಸೇವಿಸತೊಡಗಿದನು.

"ಅಹಂಭಾವವನ್ನು ಬಿಡು; ದಾಸೋಹಿಯಾಗು; ಲಿಂಗದೇಹಿಗಳೆಲ್ಲರನ್ನೂ ಶಿವಲಿಂಗವೆಂದೇ ತಿಳಿ; ಮೃಡಭಕ್ತರು ಮನೆಗೆ ಬಂದರೆ ಪೂಜೆಯಲ್ಲಿದ್ದರೂ ಎದ್ದು ಹೋಗಿ ಸತ್ಕರಿಸು, ಪರಧನವ, ಪರವಧುವ ವಿಷವೆಮದು ತಿಳಿ ; ಸುಳ್ಳನ್ನು ತ್ಯಜಿಸು; ಸತ್ಯವನ್ನು ಪಾಲಿಸು; ಪರನಿಂದೆಯನ್ನು ಸನಿಹಕ್ಕೆ ಸುಳಿಯಗೊಡದಿರು; ಹಿಡಿದ ನೇಮವನ್ನು ನಡಸು; ಸದ್ಭಕ್ತರ ಸಂಗವನ್ನು ಬಿಡದಿರು; ಮುಖಕ್ಕೆ ಹತ್ತಿರ ಮಲಿನವನ್ನು ಮುಕುರದಲ್ಲಿ ನೋಡಿ ಕಳೆದುಕೊಳ್ಳುವಂತೆ ಆತ್ಮನಿಗಂಟದ ಮಲತ್ರಯಗಳನ್ನು ಲಿಂಗದಲ್ಲಿ ಕಂಡು ನಿರಹಂಕಾರ ಹಸ್ತದಿಂದ ಒರೆಸಿ ಕಳೆದುಕೋ' ಎಂಬ ಜಡೆಯ ಶಂಕರ ಸ್ವಾಮಿಯ ಸುಬೋಧಸಾರದಂತೆಯೇ ಶಂಕರ ದಾಸಮಯ್ಯನ ಶರಣಜೀವನ ಸಾಗಿದ್ದತು.

ನಿರಹಂಕಾರ ಹಸ್ತದಿಂದಲೇ ಆತ್ಮನಿಗಂಟಿದ ಮಲಿನವನ್ನು ಒರೆಸುವುದು ಸಾಧ್ಯ. ನಿರಹಂಕಾರವೇ ಆತ್ಮದರ್ಶನಕ್ಕೆ ದ್ವಾರ. ಅದು ತೆರೆಯದೆ ಒಳಗೆ ಪ್ರವೇಶವಿಲ್ಲ. ಹೀಗಿರುವಾಗ ಮುದನೂರ ದಾಸಮಯ್ಯನಲ್ಲಿ ಆಗತಾನೆ ಅಹಮಹಮಿಕೆ ಅಂಕುರಿಸತೊಡಗಿದ್ದಿತು. ಅದನ್ನು ಬೆಳೆಯಗೊಡುವುದು ಒಳ್ಳೆಯದಲ್ಲವೆಂದು ಶಿವನು ಶಂಕರದಾಸಮಯ್ಯನ ಕನಸಿನಲ್ಲಿ ಕಾಣಿಸಿಕೊಂಡು, 'ಮಗನೆ, ಮುದನೂರಿಗೆ ಹೋಗಿ ಉಪಾಯದಿಂದ ದೇವರದಾಸಮಯ್ಯನ ಹಮ್ಮು ಕರಗುವಂತೆ ಮಾಡು' ಎಂದು ಹೇಳಿ ಮರೆಯಾದನು.

ಶಿವನಾಜ್ಞೆಯನ್ನು ಶಿರದಲ್ಲಿ ಧರಿಸಿ ಶಂಕರದಾಸಮಯ್ಯ ನವಿಲೆಯಿಂದ ಹೊರಟನು. "ನೋಡಿದರ್ಗೆ ಶೈವಸಂಪದಮನೀವುತುಂ, ನುಡಿಸಿದರ್ಗೆ ಧರಣೀಶ್ವರತ್ವಮಂ ಕರುಣಿಸುತ್ತುಂ. ಮೆಟ್ಟಿದ ಪ್ರಾಣಿಗಳಂ ಸ್ವರ್ಗಕ್ಕೆ ಕಳಿಪುತ್ತುಂ, ಮುಟ್ಟಿದರಂ ಮುಕ್ತಿಪಥಕ್ಕೆ ಸಲಿಸುತ್ತುಂ, ಕೆಲವಡೆಗೆಯ್ದು ಪಲವೂರ್ಗಳಂ ಕಳೆದು ಭಕ್ತಿರಸಂ ಮಡುಗಟ್ಟಿದಂತಿರ್ದ

ಮುದನೂರ" ಸಮೀಪಕ್ಕೆ ಬಂದನು. ದೇವರ ದಾಸಮಯ್ಯನಿತ್ತ ಧಾನ್ಯವನ್ನು ಬಂಡಿಗಳಲ್ಲಿ, ಎತ್ತಿನಮೇಲೆ, ನೆತ್ತಿಯಮೇಲೆ, ಕುದುರೆಯಮೇಲೆ, ಕತ್ತೆಯಮೇಲೆ ಇರಿಸಿಕೊಂಡು ಮುದನೂರಿನಿಂದ ಹೊರಟಿದ್ದ ಜನರ ತಂಡತಂಡಗಳು ಎದುರಾದುವು. ಅವುಗಳನ್ನು ನೋಡಿ ಶಂಕರಕದಾಸಮಯ್ಯನಿಗೆ ದೇವರ ದಾಸಮಯ್ಯನ ಮನದಲ್ಲಿ ಮಮಕಾರಮಕರಿಸಲು ಕಾರಣವೇನೆಂಬುದು ಹೊಳೆಯಿತು.

ಶಂಕರದಾಸಮಯ್ಯ ಮುದನೂರು ಮುಟ್ಟುತ್ತಲೆ ದುಗ್ಗಳೆಯೊಡನೆ ಧಾವಿಸಿ ಬಂದ ದೇವರದಾಸಮಯ್ಯ ಸಂಭ್ರಮದ ಸ್ವಾಗತವನ್ನಿತ್ತ ಶಂಕರದಾಸಮಯ್ಯನಿಗೆ, ಶಂಕರದಾಸಮಯ್ಯನಂಥ ಶ್ರೇಷ್ಠ ಶರಣ ತಮ್ಮೂರಿಗೆ ಆಗಮಿಸಿದುದನ್ನು ಕಂಡು ದಾಸ–ದುಗ್ಗಳೆಯರಿಗೆ ಹಿಗ್ಗಿನ ಸುಗ್ಗಿಯಾಯಿತು. ಅವರಿಬ್ಬರೂ–

"ಆಗರವ ಕಂಡರಸುಗಿಳಿಯೊಳು
ಮೇಘಮಂ ಕಂಡಾಡ್ವ ನವಿಲೊಳು
ಪೂಗಳಂ ಕಂಡಾರಡಿಯವೊಲುಂ ಮಾಂದಳಿರ ಕಂಡ
ಕೋಗಿಲಂದದಿ ಶಶಿಯಕಂಡಿನಿ
ಸಾಗರದೊಲಿರ್ದರ್ ಶರಣರನು–
ರಾಗರಸದೊಳಗೊಪ್ಪಿದರು ರೋಮಾಂಚ ಸುಗ್ಗಿಯೊಳು"

ಶಂ.ದಾ.ಪು.

ಸ್ವಲ್ಪ ಸಮಯದವರೆಗೆ ಶಿವಾನುಭವಸದ್ಗೋಷ್ಠಿಯಲ್ಲಿದ್ದು ಶಂಕರದಾಸಮಯ್ಯಗಳು ವಕ್ತ್ರಪಾದನಿಗೆ ರಾತ್ರಿಯ ಆರೋಗಣೆಗೆ ಧಾನ್ಯದ ಭಿಕ್ಷೆ ತರಲು ಹೇಳಿದರು. ಅದನ್ನು ಕೇಳಿ ಮರುಕದಿಂದ ಮುದನೂರು ದಾಸಯ್ಯ, "ಮೇಲನರಿಯದೆ, ಶಿವಭಕ್ತರ್ ಪಿರಿಯರ್ಗೆ ಪಿರಿಯರುಂಟೆಂಬುದನರಿಯದೆ, ವಿಚಾರಿಸದೆ, ಶೀತಕರಂಗೆ ತಂಪನೀವಂತೆ, ಭಾಸ್ಕರಂಗೆ ಬೆಳಗಂ ಕುಡುವಂತೆ, ವಹ್ನಿಗೆ ಉಷ್ಣವಂ ಕುಡುವಂತೆ, ಕೈಮುಗಿದು–ದೇವತಾರೋಗಣೆಗೆ ಧಾನ್ಯಮಂ ತರಪುಗಲೇಕೆ? ಎನ್ನ ಮನೆಯೊಳ್ ಸುಕುಮಾರ ಧಾನ್ಯಮುಂಟು. ಇಲ್ಲಿ ನೀವರ್ಪನ್ನೆವರಂ ಧಾನ್ಯಕ್ಕೆ ಪೋಗಲಾಗದು. ಆವ ನಿರೋಧಂ ಬೇಡ. ಹತ್ತು ಇಪ್ಪತ್ತುಸಾವಿರ ನೆಲ್ಲ ಹೇರಂ ಕಳೀಪುವೆಂ. ಅವಂ ಕೆಯ್ಕೊಳ್ವುದು, ಎಂದು ಸ್ವಾಧಿನತೆ ಮಿಕ್ಕು ಸ್ನೇಹರಸದೊಡನೆ ಸಂಪನ್ನತೆಗೂಡಿ, ಬಿನ್ನಪಂಗೆಯ್ದನು."

ನಸುಕಟಕಿಯ ನುಡಿದ ಶಂಕರ ದಾಸಮಯ್ಯ : "ನಿಜ, ನಿಜದಾಸಯ್ಯ – ನೀವು ತಪನಿಧಿಯುಳ್ಳ ಸಿರಿವಂತರು, ನಾವು ತಿರಿದುಂಬ ದರಿದ್ರರು. ಏನು ಮಾಡುವುದು, ನಮ್ಮ ದೇವರೇ ತಿರುಕ. ಅವನನ್ನು ಉಪಾಸಿಸುವ ನಮಗೆ ಸಿರಿಂತಿಕೆ

ಎಲ್ಲಿಂದ ಬರಬೇಕು ? ನಿಮ್ಮ ದಾನಬುದ್ಧಿ ಹೆಚ್ಚಿನದು. ನಮ್ಮೂರ ಒಕ್ಕಲಿಗರೂ ಧಾನ್ಯ ಬೆಳೆಯುತ್ತಾರೆ ; ಬೇಡಿದವರಿಗೆ ಮಾತ್ರ ಕೊಡುತ್ತಾರೆ. ನೀವಾದರೋ ಬೇಡದೆ ಕೊಡುವವರು. ನೀವು ಕೊಡುವೆವೆಂದುದೇ ಸಾಕು ನಮಗೆ. ನಿಮ್ಮ ತವನಿಧಿಯ ಮಹಿಮೆಯೆಂಥದೋ–ಕೊಡುವೆವೆಂದು ನೀವು ಹೇಳುತ್ತಲೇ ನಮಗೆ ಧಾನ್ಯ ದೊರೆತುಬಿಟ್ಟಿತು ! ಉಪಕೃತರಾದೆವು !"

ದೇತರದಾಸಮಯ್ಯ ದಿಙ್ಮೂಢನಾದ. ಒಂದು ಮಾಡಲು ಹೋದರೆ ಇನ್ನೊಂದಾಗಿಬಿಟ್ಟಿದ್ದಿತು. ಮ್ಲಾನ ಮುಖದೊಡನೆ ಮನೆಗೆ ಮರಳಿದ. ಅವನ ಬಾಡಿದ ಮುಖವನ್ನು ನೋಡುತ್ತಲೆ ಏನೋ ಅಚಾತುರ್ಯ ನಡೆದಿದೆಯೆಂದು ದುಗ್ಗಳೆ ತರ್ಕಿಸಿದಳು. ಕಾಲು ತೊಳೆದು ಮಣೆಯಿತ್ತು ಕುಳ್ಳಿರಿಸಿ ಮುಖ ಬಾಡಿದ ಕಾರಣವನ್ನು ಕೇಳಿದಳು–"ವ್ರತವಿಹೀನರ ಮನೆಗೆ ಪೋದಿರೊ? ಪತಿತರಂ ನುಡಿಸಿದಿರೊ? ವೆಗ್ಗಳೆ ವ್ರತಿಗಳಂ ತಪ್ಪೆಂದಿರೋ? ಸಲ್ಲದುದ ಗ್ರಹಿಸಿದಿರೊ? ಹಿತರ ಹಿಂಗಿದಿರೊ? ವಿವೇಕೋನ್ನತಿಯ ಮರೆದಿರೊ?"

ಕೊನೆಯಲ್ಲಿ ಕೇಳಿದುದೇ ಕಾರಣವೆಂದ ದಾಸಯ್ಯ–ವಿವೇಕೋನ್ನತಿಯ ಮರೆದುದೇ ಕಾರಣವೆಂದು ಒಪ್ಪಿಕೊಂಡು ನಡೆದುದನ್ನು ವಿವರಿಸಿದ. ದುಗ್ಗಳೆ ದುಃಖದಿಂದ ನುಡಿದಳು :

"ಬೇಡುವರೆ ಶಿವಪೂಜಕರು? ನಾ
ಡಾಡಿ ಮಾನವರೋ? ಅವರೊಳಿಂ
ತಾಡಬಹುದೆ? ಅವರಿಗಿ ಸಿರಿಯುಳ್ಳವರೆ ನೀವು?
ರೂಢಿಸುವ ಮೋಕ್ಷವನು ದೇವರ
ಬೇಡಿಕೊಳ್ಳದೆ ನಾಲ್ಕು ನೆಲ್ಲನು
ಬೇಡಿಕೊಂಡರಿಗೇಕೆ ಮಾಹೇಶ್ವರರೊಳಗೆ ಹಮ್ಮು?" ಶಂ.ದಾ.ಪು.

ತನ್ನ ತಪ್ಪು ತಿಳಿಯಿತು ದಾಸಯ್ಯನಿಗೆ–ಮೊಕ್ಷದ ಅಕ್ಷಯ ಸುಖವನ್ನು ಬೇಡದೆ ನಾಲ್ಕು ನೆಲ್ಲನೀವ ತವನಿಧಿಯನ್ನು ಪಡೆದ ತಪ್ಪು ತಿಳಿದು ಪಶ್ಚಾತ್ತಾಪವಾಯಿತು. ಆ ತವನಿಧಿಯಿಂದ ತನಗೆ ದೊರೆತುದೇನು ? ಹಮ್ಮು–ಸರ್ವಪತನಕ್ಕೆ ಮೂಲವಾದ ಮೂಲಾಹಂಕಾರ! ಆ ತವನಿಧಿಯೂ ತವಿಲಾಗಿ ಹೋಗಿದ್ದಿತು ಶಂಕರದಾಸಿಮಯ್ಯನಿಗೆ ಉಪಕಾರಿಯಾಗುವೆನೆಂಬ ಹಮ್ಮು ತೋರಿ ! ಸೊಮ್ಮು ಹಮ್ಮಿಗೆ ಮೂಲ; ಹಮ್ಮು ಅವನತಿಗೆ ಆದಿ.

ದಾಸ ದುಗ್ಗಳೆಯರಿಬ್ಬರೂ ಧಾವಿಸಿ ಬಂದು ಶಂಕರದಾಸಮಯ್ಯನ ಅಡಿಗೆರಗಿ ನುಡಿದರು.

"ಹಸುಳ ಬೈದರೆ ಪಡೆದವರು ಲಾ–
ಲಿಸುವರಲ್ಲದೆ ಕೋಪಿಸುತ ಜೀ–
ವಿಸುವರೇ ನಾ ನಿಮ್ಮ ಮಗ–ಮನ್ನಿಸು ಕೃಪಾಂಬುಧಿಯೆ !"

ಶಂ.ದಾ.ಪು.

ಶಂಕರದಾಸಮಯ್ಯನ ಅಂತರಂಗ ಕರುಣಾರಸದಿಂದ ತೊಪ್ಪನೆ ತೊಯ್ದು ಹೋಯಿತು. 'ಮರುಕಮಂಕುರಮಾದುದಂಗದೊಳು !'

"ಭರದೊಳೆದ್ದಾ ಗಂಡಪೆಂಡಿರ
ಸಿರಗಳಂ ಪಿಡಿದೆತ್ತಿ ವಂದಿಸಿ
ಹರುಷದಿಂ ಗದ್ದುಗೆಯೊಳವರನು ಮೂರ್ತಗೊಳಿಸಿದನು"

ಶಂ.ದಾ.ಪು.

ಶಿವದಾಸಿ ಪ್ರಸಾದವನ್ನು ಸಿದ್ಧಗೊಳಿಸಿದಳು. ವಕ್ತ್ರಪಾದ ಶಂಕರದಾಸಮಯ್ಯ ತಂಗಿದ್ದ ಮನೆಯ ಅಂಗಣವನ್ನು ಅಗೆದನಂತೆ ಗುರುವಿನ ಆಜ್ಞೆಯಂತೆ; ಅಲ್ಲಿ ಚಿನ್ನದ ಮಗಿಗಳೂ, ಹರಿವಾಣಗಳೂ, ತಟ್ಟೆಗಳೂ, ಪಾತ್ರೆಗಳೂ, 'ಹೊಗರೊಗುವ ಹೊಸ ಹೇಮದದ್ದಣಿಗೆಗಳೂ' ದೀಪಸ್ತಂಭಗಳೂ ದೊರೆತುವಂತೆ ; ನೆರೆದ ನೂರಾರು ಭಕ್ತರೊಡನೆ ಪ್ರಸಾದ ಸೇವನೆ ನಡೆಯಿತಂತೆ. ಧನ್ಯನಾಗಿದ್ದ ದಾಸಮಯ್ಯ

"ಮತಿಯ ಕೊಡುವುದು, ಶರಣಸಂಗದ
ರತಿಯ ಹುಟ್ಟಿಸುತಿಹುದು, ಮೋಕ್ಷದ
ಗತಿಯ ತೋರಿಸುವುದು, ಷಡೂರ್ಮಿಯ ಪಿಂಗಿಸುತ್ತಿಹುದು
ಹಿತವೆನಿಸುಲೆಹುದಜ್ಞದೇಳ್ಗೆಯ
ಹತವ ಮಾಳ್ಪುದು, ವೀರಶೈವೋ–
ರ್ಜಿತಕೆ ಕಾರಣಮೀ ಪ್ರಸಾದವೆನುತ್ತಲೂಡಿಸಿದ."

ಶಂ.ದಾ.ಪು.

ಪ್ರಸಾದಸೇವನೆಯಿಂದ ಪರಮಾನಂದಭರಿತರಾಗಿ ದಾಸ–ದುಗ್ಗಳೆಯರು ಮನೆಗೆ ಬಂದು ನೋಡುತ್ತಾರೆ– ಮಾಯವಾಗಿದ್ದ ತವನಿಧಿ ಮುನ್ನಿಗಿಂತಲೂ ಹೆಚ್ಚಾಗಿ ಹಿಂದಿರುಗಿದೆ ! ಆ ತವನಿಧಿ ಮರಳಿದ್ದಿತೋ ಇಲ್ಲವೋ–ಅದಕ್ಕಿಂತ ಮಿಗಿಲಾದ ತವನಿಧಿಯೊಂದು ಅವರಿಗೆ ದೊರೆತಿದ್ದಿತು. ಅದೇ ನಿರಹಂಭಾವದ ತವನಿಧಿ. ಈ ತವನಿಧಿಯನ್ನು ಪಡೆದ ಮೇಲೆ ಆ ತವನಿಧಿಗಾವ ಮಹತ್ವ?

ಶಂಕರದಾಸಮಯ್ಯನ ಮೇಲಿನ ಮಮತೆಯಿಂದ ಹರಿಹರನೀ ಘಟನೆಯನ್ನು ಹೆಣೆದಿರಲಾರ. ದೇವರದಾಸಮಯ್ಯನ ಮೇಲೂ ಅವನಿಗೆ ಅಷ್ಟೇ ಮಮತೆಯಿದ್ದಿ–ತೆಂಬುದಕ್ಕೆ ಅವನ ಪಂಪಾಶತಕದಲ್ಲಿರುವ ಈ ಪದ್ಯ ಸಾಕ್ಷಿ :

"ಬಿಡು ಮಾಣ್ ಮಾಣೆಲೆ ಬೊಮ್ಮವಾದಿ ಸಟೆಯುಂ ನೀಂ ನಂಬಿಗೋಯೆನ್ನನೇ
ಮೃಡನಂದಾಡನೆ ನಮ್ಮ ಗುಂಡಯ್ಯನ ಮುಂದಾ ದಾಸಮಯ್ಯಂ ಕುಡ–
ಲ್ಕುಡನೇ ಸೀರೆಯ ನುಣ್ಣನೇ ಸಿರಿಯನಾಳ್ವಂ ಪೇಳೆ ಕೈಲಾಸಮಂ
ಕುಡನೇ ಸೂರೆಯನೆಮ್ಮ ನಿಂಬಿಗೆ ವರೂಪಾಕ್ಷಂ ಲಲಾಟೇಕ್ಷಣಂ"
ಇದಲ್ಲದೆ ತನ್ನ ಲಿಂಗಾರ್ಚನೆಯ ರಗಳೆಯಲ್ಲಿ–
"ಕೇಶಿರಾಜನ ದುಗ್ಗಳವ್ವೆ ದಾಸಮಯ್ಯನಂ
ಭಾಷೆಗೀಶನ ತಂದೆ ಮಿಸುಪಾದಿಮಯ್ಯನಂ"

ಎಂದು ದಾಸ–ದುಗ್ಗಳೆಯರಿಗೆ ತನ್ನ ಭಕ್ತಿಯ ಮುಡಿಪನ್ನು ಸಲ್ಲಿಸಿದ್ದಾನೆ. ಆದರೂ ಶಂಕರದಾಸಮಯ್ಯರ ಪ್ರಸಂಗವನ್ನು ಹಮ್ಮಿನ, ಹೆಮ್ಮೆಯ, ಬಿಮ್ಮಿನ ಅನಾಹುತವನ್ನು ಎತ್ತಿ ತೋರಿಸಲು ಬಿತ್ತರಿಸಿದ್ದಾನೆ.

ಈ ಹಮ್ಮು ಎಂತೆಂಥವರನ್ನೂ ಬಿಟ್ಟಿಲ್ಲವೆಂದು ತೋರುತ್ತದೆ. ಶಂಕರ ದಾಸಮಯ್ಯನೂ ಮುಂದೆ ಕಲ್ಯಾಣದಲ್ಲಿ ಪರವಾದಿಗಳನ್ನು ಜಯಿಸಿ, ಪೆಂಬೇರ ಮೈಲಾರನಿಂದ ಕೊಡೆವಿಡಿಸಿಕೊಂಡು, ಉಜ್ಜಯಿನಿಯ ಮಹಾಕಾಳಿಯಿಂದ ಕೊಡೆವಿಡಿಸಿಕೊಂಡು, ನವನಾಥಸಿದ್ಧರ ಶಿಷ್ಯರನ್ನು ಸೋಲಿಸಿ ಈ ಹೆಮ್ಮೆಯ ಸುಳಿಗೆ ಸಿಕ್ಕಿರಬೇಕು. ಅವನ ಅಹಂಕಾರವನ್ನೂ ಅಳುಕಿಸುವ ಪುಣ್ಯಾತ್ಮ ಹುಟ್ಟಿದ್ದ. ಅವನು ಶಿವನಿಂದ ತವನಿಧಿಯ ಪಡೆದವನಲ್ಲ ; ತ್ರಿಶೂಲಿಯಿಂದ ನೊಸಲಕಣ್ಣು ಪಡೆದವನಲ್ಲ; ಅವನೊಬ್ಬ ಡೊಳ್ಳು ಬಾರಿಸುವ ಸಾಮಾನ್ಯ ಮಾನವ !

ಅವನ ಹೆಸರು ಢಕ್ಕೆಯ ಮಾರಯ್ಯ. ಉಡಿಯಲ್ಲಿ ತಲೆಯಲ್ಲಿ ಬೇವಿನ ಸೊಪ್ಪನ್ನು ಕಟ್ಟಿಕೊಂಡು. ಮಾರಿಯ ಮೂರ್ತಿಯೊಂದನ್ನು ಮುಂದಿಟ್ಟುಕೊಂಡು, ಅದನ್ನು ಕುಣಿಸುತ್ತ ಅಂಗಣದಿಂದ ಅಂಗಣಕ್ಕೆ ರಿಂಗಣಗುಣಿಯುತ್ತ ಹೋಗುವನವನು. ಜೊತೆಗೆ ಶರಣಮಾರ್ಗವನ್ನು ಜನತೆಗೆ ಬೋಧಿಸುವನು. ಆನರು ಪ್ರೀತರಾಗಿ ಕೊಟ್ಟಷ್ಟನ್ನು ಸ್ವೀಕರಿಸಿ ಅದರಲ್ಲಿಯೇ ದಾಸೋಹವನ್ನು ಸಾಗಿಸುವನವನು. ವಚನಗಳನ್ನು ರಚಿಸಿ ಹಾಡಿ ಜನಮನ ಸಂಸ್ಕಾರಗೈಯ್ಯುವನವನು. ಅವನೆಂಥ ಕಾಯಕಯೋಗಿ !

ಇದೋ ಕೇಳಿ : "ಆವ ಕಾಯಕದಿಂದಾದಡೂ ಆಗಲಿ, ಭಾವಶುದ್ಧವಾಗಿ ಮಾಡುವುದೇ ಜಂಗಮಪೂಜೆ. ನಿಯಮ–ಕ್ರಿಯೆ ತಪ್ಪದೆ ಮಾಡುವುದೇ ದೇವ ಪೂಜೆ. ಆವ ಪ್ರಸಂಗ ಬಂದಡೂ ಖಂಡಿಸುವುದೇ ಪಂಡಿತನಿರವು. ತ್ರಿವಿಧ ಬಂದು ಮುಂದೆ ನಿಂದಿರಲು ಅದರಂದವ ನೋಡದಿಪ್ಪುದೇ ನಿಸ್ಸಂಗ ಸುಸಂಗಿಯ ಇರವು. ಇಂತೀ ವಿಚಾರವನರಿದಲ್ಲಿ ಢಕ್ಕೆಯ ದನಿ ಹೊರಗಾಯಿತ್ತು. ಕಾಲಾಂತಕ ಭೀಮೇಶ್ವರಲಿಂಗವು ಒಳಗಾಯಿತ್ತು !"

"ಆವ ಕಾಯಕವಾದೋಡೇನು, ಭಾವಶುದ್ಧವಾಗಿ ಮಾಡಿದಡೆ' ದೇವ ಪೂಜೆ!" ಎಂಥ ಉದಾತ್ತ ವಾಣಿಯಿದು ! ಕಾಯಕಧರ್ಮದ ಮೂಲ ಸೂತ್ರವಿದು. ಮಾರಯ್ಯನದನ್ನು ಅರಿತಿದ್ದನೆಂದೇ ಢಕ್ಕೆಯನ್ನು ನುಡಿಸುವುದರ ಜೊತೆಗೆ ತನ್ನ ಅಂತರಂಗವನ್ನೂ ಇಂತು ನುಡಿಸಿದ ; "ಕಾಯವೆಂಬ ಢಕ್ಕೆಯಮೇಲೆ ಜೀವವೆಂಬ ಹಿಡಿಚೆಂಡು ಬೀಳೆ 'ತ್ರಿವಿಧವ ತಾ, ತಾ–ಎಂಬಾಶೆ ಹಿಂ–ಡಿ, ಡಿಂ–ಡಿ' ಎನ್ನುತ್ತಿದೆ. ಇಂತೀ ಉಲುಹಿನ ಭೇದದಲ್ಲಿ ಹೊಲಬುದಪ್ಪದೆ ಗೆಲಬೇಕು–ಕಾಲವೆಂಬ ಮಾರಿಯ, ಕಾಲಾಂತಕ ಭೀಮೇಶ್ವರ ಲಿಂಗವನರಿಯಬಲ್ಲಡೆ !"

ಮಾರಯ್ಯ ಮುಂದಿಟ್ಟು ಆಡಿಸುತ್ತಿದ್ದುದು ಕಾಲವೆಂಬ ಮಾರಿಯನ್ನು, ಹೊಲಬುದಪ್ಪದೆ ಆ ಮಾರಿಯನ್ನು ಗೆಲ್ಲಿರೆಂದು ಹೇಳುತ್ತ ತಿರುಗುತ್ತಿದ್ದನಾತ ! ಅವನ ಢಕ್ಕೆ ಉಲುಹೆಂಬ ಢಕ್ಕೆ. 'ಅಹಂಕಾರಾತ್ಮ ಘಟದ ಮಾರಿಯ ಹೊತ್ತು, ಉಲುಹೆಂಬ ಢಕ್ಕೆಯ ಪಿಡಿದು ಭವವೆಂಬ ಬಾಗಿಲಲ್ಲಿ ತಿರುಗಾಡುತ್ತಲಿದ್ದೇನೆ ! ಢಕ್ಕೆಯ ದನಿಯ ಬಿಡಿಸಾ ಕಾಲಾಂತಕ ಭೀಮೇಶ್ವರಲಿಂಗ ! – ಎಂಬ ಮಾರಯ್ಯ ಶಿವಾನುಭವಸಾರಯ್ಯನಲ್ಲವೆ?

'ಮಾರಿ ಕೀಳುದೈವ–ಅದನ್ನು ಹೊತ್ತು ತಿರುಗುವುದೇಕೆ?' ಎಂದು ಯಾರೋ ಕೇಳಿರಬೇಕು. ಅವರಿಗಿದು ಉತ್ತರವಿರಬೇಕು :

"ತ್ರಿವಿಧದೇವ, ಕುಲ, ಜಾತಿ–ಅವನಾದಡೂ ಆಗಲಿ,
ಪಂಡಿತ, ವಿದಗ್ಧ, ಜಾಣ, ಗಂಭೀರಸಂಪದನಾದಡೂ ಆಗಲಿ,
ಯಾಚಕತನದಲ್ಲಿ ಘಾತುಕತನದಿಂದ ಬೇಡುವುದು ಜೀವನ !
ಆ ಜೀವನವ ಮರೆದೊರಗಿರುವುದು ಮಾರಿ !
ಆ ಮರವೆಯ ಹರಿದುದೇ ಕಾಲಾಂತಕ ಭೀಮೇಶ್ವರಲಿಂಗ !"

'ಮರವೆಯೇ ಮಾಯೆ, ಅದನ್ನು ಹರಿವುದೇ ಬೀಮೇಸ್ವರಲಿಂಗ'ವೆನ್ನುತ್ತಾನೆ ಮಾರಯ್ಯ. ಇದು ಅರಿವಿನ ಆಳದಿಂದ ಉದಿಸಿ ಬಂದ ಅಮೃತೋಕ್ತಿ. ಮರವೆ ಎಂಬ ಮಾಯೆ ಎಲ್ಲರನ್ನೂ ಕುಣಿಸಿ ಆಡಿಸುವಳು :

"ಬ್ರಹ್ಮಂಗೆ ಸರಸ್ವತಿಯಾಗಿ ಬೆನ್ನಲಿ ಬಂದಳಾ ಮಾಯೆ ;
ವಿಷ್ಣುವಿಗೆ ಲಕ್ಷ್ಮಿಯಾಗಿ ಭವಕ್ಕೆ ತಿರುಗಿಸಿದಳಾ ಮಾಯೆ ;
ರುದ್ರಂಗೆ ಉಮಾದೇವಿಯಾಗಿ ಶಿರ ತೊಡೆಯಲ್ಲಿ ಕಾಡಿದಳು ಮಾಯೆ ;
ಎಳ್ಳಿಗೆ ಎಣ್ಣೆ, ಮುಳ್ಳಿಗೆ ಮೊನೆ, ಹೂವಿಗೆ ಗಂಧವಾಗಿ
ಅವರವರಂಗದಲ್ಲಿ ಹಿಂಗದೆ ಪ್ರತಿರೂಪವಾಗಿ ಸಂದಿಲ್ಲದೆ ಕಾಡುತ್ತಿದ್ದಾಳೆ ಮಾಯೆ !
ಢಕ್ಕೆಯ ಉಲುಹು ಅಡಗುವುದಕ್ಕೆ ಮುನ್ನವೆ ನಿಶ್ಚಯಿಸಿಕೊಳ್ಳಿ–
ಕಾಲಾಂತಕ ಭೀಮೇಶ್ವರಲಿಂಗವನರಿಯಬಲ್ಲೊಡೆ !"

ಇಂಥ ಮಾಯೆಯನ್ನೇ ಕುಣಿಸುತ್ತ ತಿರುಗಿದ ಧೀರ ಮಾರಯ್ಯ. ಯಾವ ರೂಪವನ್ನು ತೊಟ್ಟು ಬಂದರೂ ಅವಳನ್ನು ಕುಣಿಸದೆ ಬಿಡನವನು.

"ಅರಿವುಳ್ಳವಂಗೆ ಅರಿವನರಿದಿಹೆನೆಂಬುದೇ ಮಾಯೆ !
ಮೂರ ಮರೆದು ಬೇರೊಂದುವ ಕಂಡೆನೆಂಬುದೇ ಮಾಯೆ !
ನುಡಿಯ ನುಡಿವವರಲ್ಲಿ ಎಡೆಮಾತನಾಡಿ ವಾದಿಸುವುದೇ ಮಾಯೆ !
ಘಟಪಟವೆಂಬ ಮಾಯೆಯ ಹೊತ್ತು
ಭವವೆಂಬ ಬಾಗಿಲಲ್ಲಿ ತಿರುಗಾಡುತ್ತಿದ್ದೇನೆ !"

ಎಂಥ ಸಾಮರ್ಥ್ಯವಂತ ಮಾರಯ್ಯ ! ಎಲ್ಲರನ್ನೂ ಕಾಡುವ ಮಾಯೆ ಅವನಿಗೆ ಕೈವಶಳಾಗಿ ಅವನು ಕುಣಿಸಿದಂತೆ ಕುಣಿಯುವುದು ಅವನಿಗೆಂತು ಸಿದ್ಧಿಸಿತು?

"ಮಹಾದೇವನ ಮರೆದವರಿಗೆ ಮಾಯಾಂಗನೆ ಮಾರಿಯಾದಳು ! ಸತ್ಕ್ರಿಯೆಸಜ್ಜನ ಯುಕ್ತಿಯಿಂದ ಸದಾಶಿವನನರಿಯಲಾಗಿ ಉಮಾದೇವಿಯಾದಳು ! ಇಂತೀ ಗುಣವ ಮರೆದಡೆ ಮಾಯೆಯಾಗಿ, ಅರಿದಡೆ ಉಮೆಯಾಗಿ, ತನಗನ್ಯ ಭಿನ್ನವಿಲ್ಲದೆ ಢಕ್ಕೆಯ ಉಲುಹು ಅಡಗುವುದಕ್ಕೆ ಮುನ್ನವೇ ಕಾಲಾಂತಕ ಭೀಮೇಶ್ವರಲಿಂಗವನರಿಯಬೇಕು!"

ಮಾರಯ್ಯನ ಮಹಾವಾಕ್ಯವಿದು : "ಮರೆದಡೆ ಮಾಯೆ, ಅರಿದಡೆ ಉಮೆ !" ಅವನಂತೆ ಮಾಯೆಯ ಮೂಲಸ್ವರೂಪವನ್ನು ವಿವರಿಸಿದವರು ವಿರಳ :

"ಮಾಯಾಗುಣ ರೂಪಾದಲ್ಲಿ ಮಲಕ್ಕೊಡಲಾಯಿತ್ತು ;

ಮಲಸ್ವರೂಪಾಗಿ ನಿಂದಲ್ಲಿ ಬಲವಂತರೆಲ್ಲರೂ ಮಲದ ಬೆಂಬಳಿಯಲ್ಲಿ ಮರುಳಾದರು :

ಮರುಳಾಟದಲ್ಲಿ ಮಾರಿ ಒಲವರವಾಗಿ ಮನಶುದ್ಧವಿಲ್ಲದವರ ಮನೆಮನೆಯಲ್ಲಿ ವಿಕಾರವ ಮಾಡುತ್ತಿದ್ದಾಳೆ! ಈ ಮಾರಿಯ ಮುರಿದು ದ್ವಾರಾವತಿಯ ಕೆಡಿಸಿ. ಕೈಯ ಢಕ್ಕೆಯ ಗತಿ ಹಿಂಗಿ ಮಾಯೆಯ ಬಾಗಿಲ ಭ್ರಾಂತಿಯ ಬಿಟ್ಟಲ್ಲಿ ಕಾಲಾಂತಕ ಭೀಮೇಶ್ವರಲಿಂಗವನರಿಯಬಹುದು"

ಇಂಥ ಮಾಯೆಯನ್ನು, 'ಉತ್ಪತ್ತಿ ಸ್ಥಿತಿಲಯವೆಂಬುದಕ್ಕೆ ಮಾಯಾದೇವಿ ಒಂದೇ ಗೊತ್ತಾಗಿ, ಬಲ್ಲ ಬಲ್ಲವರೆಲ್ಲರ ತನ್ನಲ್ಲಿಯೇ ಅಡಗಿಸುತ, ಅರಿದವರೆಲ್ಲರಿಗೆ ದೇವಿಯಾಗಿ, ಮರೆದವರೆಲ್ಲರಿಗೆ ಮಾರಿಯಾಗಿ' ಕಾಡುವ ಮಾಯೆಯನ್ನು ಮೊರದಲ್ಲಿ ಹೊತ್ತು ಮೆರೆಸಿದಾತ, ತನ್ನಿಚ್ಛೆಯಂತೆ ಕುಣಿಸಿದಾತ ಮಾರಯ್ಯ !

ಇಂಥ ಮಾರಯ್ಯನ ಮಹಿಮೆಯನ್ನರಿಯದೆ ಶಂಕರದಾಸಮಯ್ಯ ಸೋತ. ತನ್ನ ಕಾಯಕದಂತೆ ಢಕ್ಕೆಯ ಮಾರಯ್ಯನೊಮ್ಮೆ ಶಂಕರದಾಸಮಯ್ಯನ ಮನೆಯ ಮುಂದೆಯೂ ಮಾರಿಯನ್ನು ಕುಣಿಸಿ ಮೊರವನ್ನು ಮುಂದೆ ಮಾಡಿದ–'ಮೊರಕ್ಕೆ ಮೂರು ಕೊಟ್ಟು ಕಳಿಸ'ರೆಂದು. ಆದರೆ ಶಂಕರದಾಸಮಯ್ಯ ಶಂಕರನೊಬ್ಬನೇ ದೈವವೆಂದು ನಂಬಿದಾತ; ಇತರ ದೇವತೆಗಳನ್ನೆಲ್ಲ ತನ್ನ ಹಣೆಗಣ್ಣಿನಿಂದ ಸುಟ್ಟು ಹಾಕಬಲ್ಲನೆಂದು ಭಾವಿಸಿದಾತ. ಅವನು ಮಾರಿಗೆ ಮೂರನಿಕ್ಕುವನೆ? ತನ್ನ ಮನೆಯಂಗಣದಲ್ಲಿ ಕ್ಷುದ್ರದೇವತೆಯೊಂದನ್ನು ಕುಣಿಸುತ್ತ ನಿಂತಿದ್ದ ಮಾರಯ್ಯನನ್ನು ಕಂಡವನ ಕ್ರೋಧಾಗ್ನಿ ಕಿಡಿಗೆದರಿತು. ತನ್ನ ನೊಸಲ ಕಣ್ಣನ್ನು ತೆರೆದ – ಮಾರಯ್ಯನನ್ನೂ ಅವನ ಮಾರಿಯನ್ನೂ ಉರಿಸಿಬಿಡಬೇಕೆಂದು. ಆದರೆ ಆ ಹಣೆಗಣ್ಣಿನ ಉರಿ ಮಾರಯ್ಯನನ್ನು ಮುಟ್ಟುವ ಮೊದಲೇ ತಣ್ಣಗಾಯಿತು ! ಶಂಕರದಾಸಮಯ್ಯನ ಉರಿಗಣ್ಣನ್ನೇ ಹೀರಿಬಿಟ್ಟಿದ್ದಳು ಮಾರಿ !

ಶಂಕರದಾಸಮಯ್ಯನ ಅಹಂಭಾವಕ್ಕೆ ಕೊಡಲಿಯೇಟು ಬಿದ್ದಿತು ! ನಿಂತಲ್ಲಿಯೇ ಕುಸಿದು ಕುಳಿತ. ಹುಟ್ಟಿದಂದಿನಿಂದ ಇಂಥ ಸೋಲನ್ನೇ ಕಂಡರಿಯದ ಅವನು ಈ ಸೋಲಿನಿಂದ ತೇಜೋಹೀನನಾಗಿಬಿಟ್ಟ. ಅವನನ್ನು ಸಂತೈಸುತ್ತ ನುಡಿದ ಮಾರಯ್ಯ. "ಉರಿಗಣ್ಣಿಗಿಂತ ಅರಿವಿನ ಕಣ್ಣು ಹೆಚ್ಚಿನದುಶಂಕರದಾಸಮಯ್ಯ ! ಉರಿಗಣ್ಣು ಕ್ರೋಧದ ಪ್ರತೀಕ, ಕ್ರೋಧ ಆಜ್ಞಾನದ ಪ್ರತೀಕ, ಅಜ್ಞಾನವೇ ಮಾಯೆ, ಮಾರಿ ! ಆ ಮಾರಿಯ ನೆನಪು ಕೊಡಲು ಈ ಮಾರಿಯನ್ನು ತಂದೆ. ಕ್ರೋಧದ ಕುರುಹಾಗಿದ್ದ ಉರಿಗಣ್ಣು ಇಂಗಿ ಹೋದುದಕ್ಕಾಗಿ ದುಃಖಿಸಬೇಡ, ಆನಂದಪಡು!"

ಈ ಜ್ಞಾನೋಪದೇಶ ಶಂಕರದಾಸಮಯ್ಯನ ಕ್ರೋಧವನ್ನೆಲ್ಲ ಕುಡಿದುಬಿಟ್ಟಿತು! ಶಾಂತನಾಗಿ ಶಂಕೆಯೊಂದಕ್ಕೆ ಸಮಾಧಾನವನ್ನು ಕೇಳಿದ: "ಶಿವನಿರಲು ಈ ಅನ್ಯದೈವವನ್ನೇಕೆ ಆಶ್ರಯಿಸಿದಿರಿ ಮಾರಯ್ಯ?"

ಮಾರಯ್ಯನಿದಕ್ಕೆ ಮರೆಯಲಾಗದ ಉತ್ತರವನ್ನಿತ್ತ, "ತನಗಿದಿರಿಟ್ಟು ಕಾಂಬದೆಲ್ಲವೂ ತನಗನ್ಯ ದೈವ ! ತಾ ಕುರುಹಳಿದು, ತನಗನ್ಯವೆಂಬುದೊಂದಿಲ್ಲವಾಗಿ ಅದು ತನಗೆ ಭಿನ್ನವಿಲ್ಲದ ದೈವ !"

ಶಂಕರದಾಸಮಯ್ಯನ ಸಂಶಯ ಕರಗಿಹೋಯಿತು. ಕುರುಹು ಉಳಿದಿರುವವರೆಗೆ ಮಾತ್ರ ತನ್ನದು–ಅನ್ಯವಾದುದು ಎಂಬ ಭೇದ; ಕುರುಹು ಅಳಿದ ಮೇಲೆ ಇನ್ನೆಲ್ಲಿಯ ಭೇದ? ಮೇಲಾಗಿ, ಮಾರಯ್ಯ ಮಾರಿಯ ಕುಣಿತವನ್ನು ಕಾಯಕವನ್ನಾಗಿ ಪರಿಗ್ರಹಿಸಿದ್ದಾನೆ. ಕಾಯಕಕ್ಕೆ ಯಾವ ಕಜ್ಜವಾದರೇನು? "ಆವ ಕಾಯಕವಾದೊಡೇನು, ಭಾವ ಶುದ್ಧಾಗಿ ಮಾಡುವುದೇ ದೇವಪೂಜೆ" ಯಲ್ಲವೆ ?

ಮಾರಯ್ಯನೊಬ್ಬ ಸಾರಾಯಶರಣನೆಂಬುದು ಶಂಕರದಾಸಮಯ್ಯನಿಗೆ ಮನವರಿಕೆಯಾಯಿತು. ಅವನಿಂದ ಶಿವಯೋಗದ ಗುಟ್ಟನ್ನೂ ಅರಿಯುವ ಆಸೆ ಅಂಕುರಿಸಿತು ಅವನಲ್ಲಿ. ಕೇಳಿಯೇ ಬಿಟ್ಟ. ಆರಯ್ದು ನುಡಿದ ಮಾರಯ್ಯ :

"ಸ್ಥೂಲಮಯ ಸೂಕ್ಷ್ಮಮಯ ಕಾರಣಮಯಂಗಳಲ್ಲಿ
ಇಷ್ಟಪ್ರಾಣ ಭಾವಂಗಳ ಉಚಿತವನರಿದು ಮಾಡುವುದೇ ಯೋಗ.
ಆ ಯೋಗವ ಪ್ರಯೋಗಿಸಿ ನಿಂದಲ್ಲಿ
ಕಾಲಾಂತಕ ಭೀಮೇಶ್ವರ ಲಿಂಗದಲ್ಲಿ ಉಭಯವಳಿದ ಭಾವ"

ಶಂಕರದಾಸಮಯ್ಯನಿದನ್ನು ಕೇಳಿ ಸಂತುಷ್ಟನಾದ. ಇಬ್ಬರೂ ಎಷ್ಟೋ ಹೊತ್ತು ಶಿವಾನುಭವ ಸುಖಗೋಷ್ಠಿಯಲ್ಲಿ ಕಳೆದರು. ಮಾರಯ್ಯ ಬೇರೂರಿಗೆ ತೆರಳಿದ. ಶಂಕರದಾಸಮಯ್ಯ ನವಿಲೆಯಲ್ಲಿಯೇ ಸತಿ ಶಿವದಾಸಿಯೊಡನೆ ಸೂಜಿಕಾಯಕ ಶಿವದಾಸೋಹಗಳಲ್ಲಿ ಉಳಿದ ದಿನಗಳನ್ನು ಕಳೆಯತೊಡಗಿದ. ದೇವರ ದಾಸಮಯ್ಯನ ಹಮ್ಮು ಅವನ ತವನಿಧಿಯನ್ನು ನುಂಗಿದುದನ್ನೂ ತನ್ನ ಹಮ್ಮು ತನ್ನ ನೊಸಲಕಣ್ಣನ್ನೇ ನುಂಗಿದುದನ್ನೂ ನೆನದು ಆಗಾಗ ತನ್ನಷ್ಟಕ್ಕೆ ತಾನೆ ಎಚ್ಚರಿಸಿಕೊಳ್ಳುತ್ತಿದ್ದ : ಹಮ್ಮಿನಿಂ ಹರಿಭವಕೆ ಬಂದಂ; ಹಮ್ಮಿನಿಂದಜ ಶಿರಿವ ನೀಗಿದ : ಹಮ್ಮಿನಿಂ ಸುರರಾಜ ಭೋಷವ ಹೋಗಲಾಡಿದನು; ಹಮ್ಮಿನಿಂ ದಕ್ಷಾಧ್ವ ಕೆಟ್ಟುದು ; ಹಮ್ಮಿನಿಂ ಹತವಾದ ಸುರರು ; ಹಮ್ಮಿನಿಂ ನೃಸಿಂಹನಳಿದಂ ಹಮ್ಮುಸಲ್ಲದು ಯೋಗ್ಯರೊಳು !"

ಶಂಕರದಾಸಮಯ್ಯ–ಶಿವದಾಸಿಯರಿಗೆ ಸದ್ಯೋಜಾತನೆಂಬ ಮಗನಿದ್ದನು. ಅವನಿಗೆ. "ಅಕ್ಷರಂಗಳ ಕಲಿಸಿ, ವೇದಪರೀಕ್ಷೆಗಳನೋದಿಸಿ, ಸುಕಾವ್ಯವ ಶಿಕ್ಷಿಸಿ, ಮಹಾ ಶಬ್ದಶಾಸ್ತ್ರವ ಪೇಳ್ದು, ಅಲಂಕಾರ ಲಕ್ಷಣವ ವಿಸ್ತರಿಸಿ, ನಾಟಕ ಶಿಕ್ಷೆಯಂತರಶಾಸ್ತ್ರದುತ್ತರ ರಕ್ಷೆಯಂ ಬೋಧಿಸಿದ" ಶಂಕರದಾಸಮಯ್ಯ ಸದ್ಯೋಜಾತ

ಜೀವನದ ಹೊಣೆಯನ್ನು ಹೊರಲು ಸಿದ್ಧನಾಗಲು ಶಂಕರದಾಸಮಯ್ಯ ಶಿವದಾಸಿಗೆ ಹೇಳಿದ : 'ನಾಳೆ ಸೋಮವಾರ ಶಿವಸಾಯುಜ್ಯ ನಮಗೆ. ಶಿವದಾಸಿಯೂ ಸಂತೋಷದಿಂದ ಒಪ್ಪಿದಳು. ಇಬ್ಬರೂ ಸೋಮವಾರ ಪರಮಾತ್ಮನಲ್ಲಿ ಬೆರೆದರು.

"ಬಿಟ್ಟು ಹಮ್ಮುವ ಜೀವನುಂ ಪರಮನಪ್ಪಂತೆ
ನೆಟ್ಟನೆ ಜ್ಯೋತಿ ಪರಮಜ್ಯೋತಿಯಪ್ಪಂತೆ
ಕೊಡನುದಕವಾ ಮಹಾಜಲದೊಳೆ ಬೆರೆಯುವಂತೆ
ಜಡೆಯಶಂಕರ ದೇವರೊಳೆ ಪೊಕ್ಕರೊಲ್ದಂತೆ !"

ಇಂತಿದು 'ಆಸೆಯಳಿದ, ಜಗತ್ಪ್ರಪಂಚಿನ ವೇಷಮಲ್ಲದ, ವಿಷಯತತಿಯ ಅಭಿಲಾಷೆಯಿಲ್ಲದ, ನಿರ್ಮಳ ಜ್ಞಾನಕ್ಕೆ ಪಕ್ಕಾದ, ಈಷಣತ್ರಯದೂರಮಾದ, ಮಹಾಶರಣ ಕಾಲಾರಿ ಶಂಕರದಾಸಮಯ್ಯನ' ಚರಿತೆ. ಆತನು ವಚನಕಾರನಿದ್ದುದೇನೋ ನಿಜ. ಆದರೆ ಆತನ ಅಂಕಿತವಾವುದೆಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಭೈರವೇಶ್ವರನ ಕಾವ್ಯಕಥಾಸೂತ್ರರತ್ನಾಕರದಲ್ಲಿ ಮತ್ತು ಶೂನ್ಯಸಂಪಾದನೆಯಲ್ಲಿ 'ನಿಜಗುರು ಶಂಕರದೇವಾ' ಎಂಬುದು ಅವನ ಅಂಕಿತವೆಂದು ಹೇಳಿದರೆ ಶಂಕರದಾಸಮಯ್ಯ ಪುರಾಣದ ಪೀಠಿಕೆಯಲ್ಲಿ 'ಘನ ಗುರು ಶಿವಲಿಂಗ ರಾಮನಾಥಾ' ಎಂಬುದು ಅವನ ಅಂಕಿತವೆಂದು ಹೇಳಲಾಗಿದೆ. ಯಾವ ಅಂಕಿತವನ್ನು ಅಂಗೀಕರಿಸಿದರೂ ಅವನ ಉಪಲಬ್ಧ ವಚನಗಳು ಅನುಕ್ರಮವಾಗಿ ಎರಡು ಮತ್ತು ಒಂದು ಮಾತ್ರ ಅವನ ಉಳಿದ ವಚನಗಳು ದೊರೆತರೆ ಅವನ ವ್ಯಕ್ತಿತ್ವಕ್ಕೆ ಇನ್ನೂ ಹೆಚ್ಚಿನ ಮೆರುಗು ಬರುವುದು.

ಇದಕ್ಕೆ ವ್ಯತಿರಕ್ತವಾಗಿ ದೇವರದಾಸಮಯ್ಯನ ೧೫೩ ಉತ್ತಮ ವಚನಗಳು ಉಪಲಬ್ಧವಾಗಿವೆ. ಈ ವಚನಗಳನ್ನಲ್ಲದೆ ಅವನು ಒಟ್ಟು ಹದಿನಾಲ್ಕು ಕೃತಿಗಳನ್ನು ರಚಿಸಿದನೆಂದು ವೇದೋಕ್ತ ಮೂಲಸ್ತಂಭನ (ವೇದಸಾರೋಪನಿಷತ್) ಗ್ರಂಥದ ಕೆಳಗಣ ಶ್ಲೋಕದಲ್ಲಿ ಹೇಳಿದೆ :

"ಅಂಬಾಸ್ತುತಿಂ ಗುರುಸ್ತೋತ್ರಂ ತಥಾ ಶೃಂಗಾರ ನಿರ್ಣಯಂ
ತಂತುಸೂತ್ರಂ ತಥಾ ಶ್ರಾವಣಾಂಕುಶಂ ಕಾಲವೇದನಾಂ
ಏಕವಿಂಶತಿ ಸದ್ದೀಕ್ಷಾ ವಿಧಿರ್ಲಕ್ಷಣ ನಿರ್ಣಯಃ
ಪಂಡಿತಾರಾಧ್ಯ ಚರಿತಂ ಶೈವ ಸಿದ್ಧಾಂತಮೇವಚ
ತಥಾ ವಿಭು ಶಿಖಾರತ್ನಂ ಮೂಲಸ್ತಂಭನ ಭಾಷ್ಯ ಕಂ
ತಥಾ ವೀರಾಗಮವ್ಯಾಖ್ಯಾಂ ಟೀಕಾಂ ಶೈವಾಗಮಸ್ಯ ಚ



ದಾಸದುಗ್ಗಳೆಯರಿಬ್ಬರೂ ಧಾವಿಸಿ ಬಂದು ಶಂಕರದಾಸಮಯ್ಯನ ಅಡಿಗೆರೆಗಿದರು

ಏತಚ್ಚತುರ್ದಶ ಗ್ರಂಥಾನ್ ತತ್ತ್ವಜ್ಞಾನ ಪ್ರಬೋದಕಾನ್
ದೇವದಾಸಾವ ತಾರೇತು ದೇವಾಂಗಃ ಕೃತವಾನಭೂತ್"

ಇದುವರೆಗೆ ಇವಾವೂ ಸಿಕ್ಕಿಲ್ಲ. ಆದರೂ ಕನ್ನಡ ಸಾಹಿತ್ಯದಲ್ಲಿ ಉನ್ನತ ಸ್ಥಾನವಿದೆ ಅವನಿಗೆ. ಕಿರಿದಾದ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನು ತುಂಬುವ ಅವನ ಜಾಣ್ಮೆ ಪ್ರಭುದೇವರನ್ನು ನೆನಪಿಗೆ ತರುತ್ತದೆ. "ಇವನ ವಚನಗಳಲ್ಲಿ ಜೀವಕಳೆ ಇದೆ. ದೇವರ ದಾಸಮಯ್ಯನು ತಾನು ಹೇಳಬೇಕಾದ ಮಾತುಗಳನ್ನು ಮನಮುಟ್ಟುವ ಹಾಗೆ ಹೇಳುತ್ತಾನೆ. ಆ ವಚನಗಳಲ್ಲಿ ತತ್ತ್ವದ ಶುಷ್ಕವಾದ ನಿರೂಪಣೆಯಿಲ್ಲ. ಉದಾತ್ತವಾದ ಭಾವಗಳನ್ನು ಬಹು ಚಮತ್ಕಾರವಾಗಿ ಸುಲಭವಾದ ಮಾತುಗಳಲ್ಲಿ ಓದಿದೊಡನೆಯೇ ಮನಸ್ಸಿಗೆ ಹಿಡಿಯುವ ಹಾಗೆ ಒಂದೊಂದು ಅರ್ಥಗರ್ಭಿತವಾದ ಉಪಮಾನದಿಂದ ಒಂದೊಂದು ದೊಡ್ಡ ಚಿತ್ರವೇ ಕಣ್ಣೆದುರಿಗೆ ನಿಂತಹಾಗೆ ಬರೆಯುವುದರಲ್ಲಿ ದೇವರ ದಾಸಮಯ್ಯನು ಬಹುಕುಶಲನು" ಎಂದು ದೊಡ್ಡ ಪಂಡಿತರಾದ ದೊ.ಲ. ನರಸಿಂಹಾಚಾರ್ಯರು ಇವನ ವಚನಗಳ ಸಾಹಿತ್ಯಿಕ ಗುಣಗಳನ್ನು ಸಾರವತ್ತಾಗೆ ಸಂಗ್ರಹಿಸಿ ಹೇಳಿದ್ದಾರೆ.

ಕಹಿಯಾದುದನ್ನೂ ಸಿಹಿಯಾಗಿ ಹೇಳಬಲ್ಲ ದೇವರ ದಾಸಮಯ್ಯ :

"ತೀವಿ ಕುಳ್ಳಿರ್ದ ಸಭೆ ಈಯಬಲ್ಲುದೆ ದಾನ ಧರ್ಮವ?
ಸಾವರೆ ಸಂಗ್ರಾಮಕ್ಕೆ ಹೋದವರೆಲ್ಲ?
ನೂರಕ್ಕೊಬ್ಬ, ಸಹಸ್ರಕ್ಕೊಬ್ಬ–
ಹುಣಸೆಯ ಹೂವೆಲ್ಲ ಕಾಯಾಗಬಲ್ಲುದೆ, ರಾಮನಾಥ?"

ಇದೇ ಭಾವ ಮುಂದೆ ಚೆನ್ನಬಸವಣ್ಣನ ಚುರುಕಾದ ಪ್ರತಿಭೆಯ ಪ್ರಭಾವಕ್ಕೆ ಸಿಕ್ಕಿ 'ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ' ಎಂದು ರೂಪಾಂತರವಾಯಿತು. ಈ ಬಣ್ಣನೆಯ ಬಿನ್ನಾಣವನ್ನು ನೋಡಿರಿ :

"ಎನ್ನೊಡಲಾದರೆ ಎನ್ನಿಚ್ಛೆಯಲ್ಲಿರದೆ ?
ನಿನ್ನೊಡಲಾದರೆ ನಿನ್ನಿಚ್ಛೆಯಲ್ಲಿರದೆ ?
ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ–
ಅದು ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ, ರಾಮನಾಥ"
"ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ :
ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ !
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡಾ ರಾಮನಾಥಾ !"

ಈ ನವುರಾದ ತಿಳಿಹಾಸ್ಯ ಅದೆಷ್ಟು ಆಪ್ಯಾಯನಕರ :

"ಎಡರಡಸಿದಲ್ಲಿ ಮೃಡ ನಿಮ್ಮ ನೆನೆವರು :
ಎಡರಡಸಿದ ವಿಪತ್ತು ಕಡೆಯಾಗಲೊಡನೆ
ಮೃಡ, ನಿಮ್ಮನೆಡಹಿಯೂ ಕಾಣರು, ರಾಮನಾಥ!"
"ಹರಿದ ಗೋಣಿಯಲ್ಲೊಬ್ಬ ಕಳವೆಯ ತುಂಬಿದ:
ಇರುಳೆಲ್ಲ ನೆಡದನಾ ಸುಂಕಕ್ಕಂಜಿ :
ಕಳವೆ ಎಲ್ಲ ಹೋಗಿ ಬರಿಯ ಗೋಣಿ ಉಳಿಯಿತ್ತು !
ಅಳಿಮನದವನ ಭಕ್ತಿ ಇಂತಾಯಿತ್ತು. ರಾಮನಾಥ !"

ಈ ಭಾವ ಭಾಷೆಗಳ ಹೃದಯಂಗಮ ಸಂಗಮ, ಶಬ್ದಾರ್ಥಗಳ ಸಮಾನ ರಮಣೀಯತೆ :

"ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ;
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ;

ಶರೀರದೊಳಗೆ ಆತ್ಮನ ಆರು ಕಾಣದಂತಿರಿಸಿದೆ;
ನೀನು ಬೆರಸಿದ ಭೇದಕ್ಕೆ ಬೆರಗಾದೆನಯ್ಯ, ರಾಮನಾಥ !"

"ಎಣ್ಣೆ ಇರ್ದು ಎಳ್ಳು ನೆನೆಯದ ಭೇದವ
ಕಿಚ್ಚೆದ್ದು ಕಲ್ಲು ಸಿಡಿಯದ ಭೇದವ
ಕಾಮವಿರ್ದು ಕನ್ನೆಯನನುಭವಿಸದ ಭೇದವ
ಪರವಿರ್ದು ಪ್ರಾಣಪ್ರಕೃತಿಯು ಹರಿಯದ ಭೇದವ
ನರರೆತ್ತ ಬಲ್ಲರೈ, ರಾಮನಾಥ !"

"ಒಡಲೊಳಗಣ ಕಿಚ್ಚು ಒಡಲ ಸುಡದ ಭೇದವ
ಕುಡಿದ ಉದಕದಲ್ಲಿ ಆ ಕಿಚ್ಚು ನಂದದ ಭೇದವ
ಮೃಡ, ನೀ ಪಾಣಪ್ರಕೃತಿಯೊಳಡಗಿದ ಭೇದವ
ಲೋಕದ ಜಡರೆತ್ತ ಬಲ್ಲರೈ ರಾಮನಾಥ !"

"ಆದಿ ಪ್ರಕೃತಿಯ ಮಕ್ಕಳಂದಿನವರು
ಜೀವ ಪ್ರಕೃತಿಯ ಮಕ್ಕಳಂದಿನವರು
ಆದಿ ಪ್ರಕೃತಿ ಜೀವಪ್ರಕೃತಿಯ
ಭೇದವ ಬಲ್ಲವರ ಪಾದವೇ ಗತಿ ಎನಗೆ ರಾಮನಾಥ !"

"ನೀನೀಶನೀಯದೆ ಮಾನೀಶನೀವನೆ ?
ನೀನೀಸುವ ಕಾರಣ ಮಾನೀಶನೀವನು
ಆ ಮಾನೀಶನ ಹೃದಯದೊಳು ಹೊಕ್ಕು
ನೀನೀಸುವ ಕಾರಣದಿಂದೆ ನೀನೇ ಶರಣೆಂಬೆನಯ್ಯ, ರಾಮನಾಥ !"

ಹೀಗೆ ಉದಾಹರಿಸುತ್ತ ಹೋದರೆ ಎಲ್ಲಿಗೆ ನಿಲ್ಲಿಸಬೇಕೆಂಬುದೇ ತಿಳಿಯದಾಗುತ್ತದೆ. ಕಣ್ಣು ಮೀಸಲು ಶಿವನ, ಕೈ ಮೀಸಲು ಶಿವನ, ಕಾಲು ಮೀಸಲು ಶಿವನ, ತನು ಮೀಸಲು ಶಿವನ, ಮನವೆಲ್ಲ ಮೀಸಲು ಶಿವನ ! ಈ ಮೀಸಲು ಬೀಸರವೋಗದಂತಿದ್ದರೆ ಆತನೆ ಜಗದೀಶ ಕಾಣಾ, ರಾಮನಾಥ" ಎಂದು ಸಾರಿ ಮೀಸಲು ಬಾಳನ್ನು ಬಾಳಿದ ದಾಸಮಯ್ಯ ಮೀಸಲು ವಚನಗಳನ್ನು, ಮೀಸಲು ಬೀಸರವೋಗದ ವಚನಗಳನ್ನು ಉಸಿರಿದುದುದ ಅರಿದಲ್ಲ. ಶಿವನು ಅವನಿಗೆ ತವನಿಧಿಯನ್ನು ಕೊಟ್ಟಿದ್ದನೋ ಇಲ್ಲವೋ ಶಿವನಿಗೇ ಗೊತ್ತು. ಆ ತವನಿಧಿಯಂತೂ ಈಗ ಕಾಣದಾಗಿದೆ. ಆದರೆ ದಾಸಮಯ್ಯನ ವಚನಗಳ ತವನಿಧಿ ಮಾತ್ರ ಅಚ್ಚಳಿಯದೆ ಉಳಿದಿದೆ, ಆಚಂದ್ರಾರ್ಕ ಉಳಿಯುವುದು.

ಆ ವಚನಗಳಲ್ಲಿ ಲೋಕಾನುಭವವಿದೆ, ಶಿವಾನುಭವವಿದೆ, ವಸ್ತು ಸ್ಥಿತಿಯ ವಿವರಣೆಯಿದೆ, ಆದರ್ಶದ ಆಹ್ವಾನವಿದೆ, ಅತೀತದ ಮೊರೆಯಿದೆ, ಅನಂತದ ಕರೆಯಿದೆ. ಇದಕ್ಕಿಂತ ಹೆಚ್ಚಿನ ಲೋಕಾನುಭವ, ವಾಸ್ತವತೆಯ ಚಿತ್ರ ಇನ್ನೇನಿದ್ದೀತು:

"ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ
ವಿಷವೇರಿತ್ತಯ್ಯ ಅಪಾದ ಮಸ್ತಕಕ್ಕೆ !
ಹಸಿವಿಗನ್ನವನಿಕ್ಕಿ ವಿಷವನಿಳುಹ ಬಲ್ಲಡೆ
ವಸುಧೆಯೊಳಗಾತನೆ ಗಾಯಡಿಗ, ರಾಮನಾಥ !"
"ತನು ತನ್ನ ಹೊರೆಯಲ್ಲಿದ್ದರೇನು ಎಷ್ಟು ದಿನ–
ಮನ ತಾನು ಹರಿದತ್ತ ಹರಿದ ಬಳಿಕೆ?
ಕೆನೆಯಿಲ್ಲದ ಮೊಸರ ಕಡೆದರೆ ಅಲ್ಲಿ ಒಂದು
ಹನಿ ತುಪ್ಪವಿಲ್ಲ ಕಾಣಾ, ರಾಮನಾಥಾ !"

ಇಂಥ ವಚನಗಳಲ್ಲಿ 'ಹೂವಿನೊಳಗಣ ಕಂಪ ಹೊರಸೂಸಿ ಸುಳಿವ ಅನಿಲನಂತೆ, ಅಮೃತದೊಳಗಣ ರುಚಿಯ ನಾಲಗೆಯ ತುದಿಯಲ್ಲಿ ಅರಿವ ಚೇತನದಂತೆ, ನಿಲವಿಲ್ಲದ ಕಳೆಯಲ್ಲಿ ವೇಧಿಸುವ ಪರಿ'ಯನ್ನು ತೋರುತ್ತಾನೆ ದಾಸಮಯ್ಯ. "ಇಂದಿಂಗೆ ನಾಳಿಂಗೆಂದು ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ ಬಡತನವೆ?" ಎಂದು ವಿಶ್ವಾಸವೀಯುತ್ತಾನೆ ; "ತನ್ನೊಳಗಣ ಅರಿವು ತನ್ನಲ್ಲಿ ತೋರಿದಲ್ಲದೆ ಅನ್ಯರಲ್ಲಿ ತೋರಬಲ್ಲುದೆ ? ತನ್ನಲ್ಲಿ ತಾನೇ ಇದ್ದಂತೆ ಇದ್ದಿತು. ತನ್ನ ತಾನೆ ಪಕ್ವಕ್ಕೆ ಬಂದು, ತನ್ನಲ್ಲಿ ಹುಟ್ಟಿದ ನೆನಹಿನ ಬಿನ್ನಾಣವನು ಏನೆಂಬೆನಯ್ಯ, ರಾಮನಾಥಾ?' ಎಂದು ತನ್ನಿಂದ ತಾನೆ ಪಕ್ವವಾಗುವ ಪರಿಯನ್ನು ತಿಳಿಸುತ್ತಾನೆ ; "ಕೀಳಿಂಗಲ್ಲದೆ ಹಯನು ಕರೆಯದು 'ಪಕ್ಷಕ್ಕಲ್ಲದೆ ಪರಿಣಾಮಗೋಚರಿಸದು' 'ವೇಷಕ್ಕೆ ಅಂಜು, ದೋಷಕ್ಕೆ ಹೇಸು' 'ತನ್ನನಳಿದು ಘನವನೋಡಲದೇಕೆ?' 'ಕಬ್ಬಿನೊಳಗಣ ಸವಿಯ ಕಬ್ಬು ಬಲ್ಲುದೆ ತನ್ನತಾನೆ?' 'ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡೆಗೀಲು' 'ಉಣ್ಣೆಕೆಚ್ಚಲು ಹತ್ತಿ ಉಂಬುದೆ ನೊರೆವಾಲ?' 'ಕಬ್ಬುನ ಹುಳಿವಡೆ ಇನ್ನೇವೆ?' 'ಊರ ಮೆಚ್ಚುಗೆಗೆ ಮಾಡುವನ ಭಕ್ತಿ ದೂರದ ಹೊಲದಂತೆ' 'ಮಾತಿನಂತೆ ನೀತಿಯುಳ್ಳೊಡೆ ಅವರನ ಜಾತರೆಂಬೆ' 'ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೆ?' 'ಒಂದಂಗದೊಳಡಗಿದ ನೂರಂಗದ ಪರಿ' ಮುಂತಾದ ಸುಧಾಮಯ ಸೂಕ್ತಿಗಳಲ್ಲಿ ಲೌಕಿಕ ಮತ್ತು ಪಾರಲೌಕಿಕ ಅನುಭವವನ್ನು ಸೂರೆ ಮಾಡಿದ್ದಾನೆ ದಾಸಮಯ್ಯ.

ದಾಸಮಯ್ಯನಿಗೂ ಒಬ್ಬ ಮಗನುದಿಸಿದನೆಂದೂ ಅವನ ಹೆಸರು ವಿರೂಪಾಕ್ಷನೆಂದಿದ್ದಿತೆಂದೂ ಅವನು ಮಠಾಧೀಶನಾಗಿ ಯಶೋಭರಿತನಾಗಿ ಕೊಂಡಗುಳಿಯ ಕೇಶಿರಾಜನ ದೀಕ್ಷಾಗುರುವಾಗಿ ಮೆರೆದನೆಂದೂ ಹೇಳಲಾಗಿದೆ.



**"ಮರೆದಡೆ ಮಾಯೆ, ಅರಿದಡೆ ಉಮೆ !" ಎಂದ ಢಕ್ಕೆಯ ಮಾರಯ್ಯನ ಮಹಿಮೆ ಕಂಡ ಶಂಕರ ದಾಸಮಯ್ಯ ಸೋತ.**

ದಾಸಮಯ್ಯನು ದಿವ್ಯಜೀವನವನ್ನು ಬಾಳಿ 'ಆಡಬಾರದ ಬಯಲು, ನೋಡಬಾರದ ಬಯಲು, ನುಡಿಯಬಾರದ ಬಯಲು ಹಿಡಿಯಬಾರದ ಬಯಲ'ನ್ನು ಬೆರೆದು ತಾನೂ ಬಯಲಾದ. ಇರುವವರೆಗೆ ಶಿವನ ಇಚ್ಛೆಯೇ ತನ್ನಿಚ್ಛೆಯಾಗಿ ಇದ್ದ. ಜೀವನದ ಪರಮೋದ್ದೇಶವೇ ಅದು. ಅದನ್ನು ಅವನೇ ಉಸುರಿ ಹೋಗಿದ್ದಾನೆ:

"ಕುಲಸ್ವಾಮಿ, ನೀ ನಿಂದ ಹೆಜ್ಜೆಯಲ್ಲದೆ
ನಾನೊಂದು ಹೆಜ್ಜೆಯನಿಡೆನಯ್ಯ !
ಎನಗೊಂದು ಹೆಜ್ಜೆಯಿಲ್ಲ !
ನಿನ್ನ ಹೆಜ್ಜೆ ಎನ್ನಹೆಜ್ಜೆ ಒಂದಾದ ಭೇದವ
ಜಗದ ಅನ್ಯಾಯಿಗಳೆತ್ತ ಬಲ್ಲರೈ. ರಾಮನಾಥ !"

ಅವನ ಹೆಜ್ಜೆ ಯಾವುದೆಂಬುದನ್ನು ಎಲ್ಲರೂ ಅರಿಯಲಾರರು, ಅರಿಯುವ ಅವಶ್ಯಕತೆಯೂ ಇಲ್ಲ. ದೇವರದಾಸಮಯ್ಯನಂಥವರು ಅದನ್ನು ಅರಿತು ಶಿವನ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ತಮ್ಮ ಹೆಜ್ಜೆಪಾಡುಗಳನ್ನು ನಮಗಾಗಿ ಉಳಿಸಿ ಹೋಗಿದ್ದಾರೆ. ಅವರ ಚರಣಚಿಹ್ನೆಗಳನ್ನು ಗುರುತಿಸಿಕೊಂಡು ಅವುಗಳನ್ನು ಅನುಸರಿಸಿ ನಡೆದರೂ ಸಾಕು–ನಮ್ಮ ಬಾಳೂ ಬೆಳಕಿನ ಬಾಳಾಗುವುದು.

ದೇವರ ದಾಸಮಯ್ಯ ನೇಕಾರ, ಜೇಡರ ದಾಸಮಯ್ಯ ಹೊಲಿಗೆಯವ, ಇಳಿಹಾಳ ಬೊಮ್ಮಯ್ಯ ಒಕ್ಕಲಿಗ, ಕುಂಬಾರ ಗುಂಡಯ್ಯ ಕುಂಭಕಾರ, ಮಾದರ ಚೆನ್ನಯ್ಯ ಚರ್ಮಕಾರ, ಢಕ್ಕೆಯ ಮಾರಯ್ಯ ಸಾರುವ ಕಾಯಕದವ. ಜೀವನಕ್ಕೆ ಅತ್ಯಗತ್ಯವಾದ ಈ ಕಾಯಕಗಳ ನಾಯಕರಿಂದಲೇ ಶರಣ ಧರ್ಮದ ರೂಪರೇಖೆಗಳು ಸಿದ್ಧವಾದುವು. ಇವರೆಲ್ಲರೂ ಶರಣಧರ್ಮೋದಯದ ಮಂಗಲ ಪ್ರಭಾತದ ವಿಹಂಗಮಗಳು. ದೇವರ ದಾಸಮಯ್ಯನ ತವನಿಧಿ ಸಂಪತ್ತಿನ ಪ್ರತೀಕ; ಶಂಕರ ದಾಸಮಯ್ಯನ ಹಣೆಗಣ್ಣು ಜ್ಞಾನದ ಪ್ರತೀಕ ; ಇಳಿಹಾಳ ಬೊಮ್ಮಯ್ಯನ ನೇಗಿಲು ಕರ್ಮದ ಪ್ರತೀಕ ; ಢಕ್ಕೆಯ ಮಾರಯ್ಯನ ಢಕ್ಕೆ ಆತ್ಮಸಾಕ್ಷಿಯ ಪ್ರತೀಕ. ಸಂಪತ್ತು ವಿಪತ್ತಾದಾಗ ಜ್ಞಾನದ ಆಶ್ರಯವನ್ನು ಪಡೆದು ಮುಕ್ತನಾಗು; ಜ್ಞಾನ ದಾರಿತಪ್ಪಿಸಿದಾಗ ಕರ್ಮವನ್ನವಲಂಬಿಸಿ ಕೃತಾರ್ಥನಾಗು; ಕರ್ಮಜ್ಞಾನಗಳು ಅನ್ಯೋನ್ಯ ಸಾಪೇಕ್ಷಗಳು ಕುರುಡ ಕುಂಟರಂತೆ; ಕರ್ಮ ಜ್ಞಾನಗಳೂ ಹಮ್ಮಿಗೆ ಕಾರಣವಾದಾಗ ಅಂತರಾತ್ಮನ ಒಳದನಿಯನ್ನು ಆಲಿಸಿ ಉದ್ಧಾರವಾಗು–ಎಂಬುದು ಅವುಗಳ ಅಂತರಾರ್ಥ ! ಅದನ್ನರಿತು ಆಚರಿಸಿದವರಿಗೆ ಅಮೃತತ್ವಸಿದ್ಧಿ ! ಬರಲಿ ಆ ಬುದ್ಧಿ !

■

# ರಾಗಯೋಗಿ ರಾಗದ ಸಂಕಣ್ಣ

ಗಿರಿರಾಜನಂದನೆಯೊಳೊರೆದನೀಶಂ ಕೇಳು,
ಪರಮ ಕೈಲಾಸದಲ್ಲಿರೆನು ; ಶ್ರೀ ಮೇರುಮಂ–
ದಿರದಲ್ಲಿರೆನು ; ಸದ್‌ಭಕ್ತರೆನ್ನಂ ಕುರಿತು ಗಾನಮಂ ಮಾಡುತಿರಲು
ನೆರೆದ ಸಜ್ಜನರ ಮಧ್ಯದೊಳಿರ್ಪೆ : ಘೃತಕ್ಷೀರ
ಸುರುಚಿರದ ಮಧುಶರ್ಕರಾಳಿಗಳಿಗಿಂದಲತಿ
ಪಿರಿದು ಸ್ವಾದಮನೀವುದಾ ಗಾನದಲ್ಲಿ ಮನಮಗ್ನನಾಗಿರ್ಪೆನೆಂದು ॥

ಗುರುರಾಜ ಚಾರಿತ್ರ ೨–೨೧.

ಸಂಗೀತಕ್ಕೆ ಸೋಲದ ಮಾನವನನ್ನು ನಂಬಲಾಗದು. ಅವನೆದೆ ಕಲ್ಲೆದೆ. ಅಲ್ಲ, ಕಲ್ಲು ಕೂಡ ಕರಗುವುದು ಸ್ವರಶಕ್ತಿಗೆ. ಅದಕ್ಕೂ ಕಠಿನಗುಣ ಗಣಾಶ್ರಯನಾತ, ಶಿವನಂತೂ ಸಂಗೀತಲೋಲ, ನಾಟ್ಯಲೋಲ, ಕಲಾಲೋಲ; ಕಲೆಗಾರರಿಗೆಲ್ಲ ಅವನು ಆರಾಧ್ಯಮೂರ್ತಿ ಎಂದ ಮೇಲೆ ಶಿವಶರಣರು ಕಲೆಯನ್ನು ಕಡೆಗಣಿಸುವರೆ?

ನಂದಿ ಷಣ್ಮುಖರು ಮದ್ದಳೆ ಬಾರಿಸಿ, ಶಾರದೆ ನಾರದರು ವೀಣೆ ನುಡಿಸಿ, ಭೃಂಗಿ ನಾಟ್ಯವಾಡಿ ಶಿವನನ್ನು ಮೆಚ್ಚಿಸಿದಂತೆ, ಮಾರದಸ ಯೋಗಿ ವೀಣೆ ಬಾಜಿಸಿ, ಲಿಂಗಾಸುದೇವಿ ಚೆಂಗ ಬಾಜಿಸಿ, ಬಾಚಲೆ ಮದ್ದಳೆ ಬಾರಿಸಿ, ಸಿದ್ಧಾದೇವಿ ತಾಕ ಕೇಳಿಸಿ, ಬೊಂತಾದೇವಿ ಉಷ್ಟಾಂಗದಿಂದ ಸ್ವರಶುದ್ಧವಾಗಿ ಊದಿ, ಪೋಚಲೆ ಪರಿಪರಿಯ ದಂಡಿಗೆಯ ನುಡಿಸಿ, ಕಿನ್ನರಿಯ ಬ್ರಹ್ಮಯ್ಯ ಕಿನ್ನರಿಯ ಕೇಳಿಸಿ, ಮುರುಘರು ಕೊಳಲನ್ನು ನುಡಿಸಿ, ಮಾರಯ್ಯ ಕೋಡಗವ ಕುಣಿಸಿ, ಜಕ್ಕಿಯರ ಬ್ರಹ್ಮಯ್ಯ ಮರದ ಬೊಂಬೆಯ ಕುಣಿಸಿ, ಬಹುರೂಪಿ ಚೌಡಯ್ಯ ಬಹುರೂಪವ ನಾಡಿ. ಕುಂಬಾರ ಗುಂಡಯ್ಯ ಕುಣಿದು ಶಿವನನ್ನು ಒಲಿಸಿದರು. “ಗಾನವಾದ್ಯಂ ನೃತ್ಯಗೂಡಿ ತೂರ್ಯಕ್ರಮದಿ ಮೇನಕಾಜಾನಾಥನಂಪ್ರಿಯಂ ಭಜಿಸುವವ...ಭೋಗ ಮೋಕ್ಷಂಗಳಂ ಪಡೆವನು”[೧]. ರಾಗದ ಸಂಕಣ್ಣ ತೂರ್ಯತ್ರಯದಲ್ಲಿ ಮೊದಲನೆಯದಾದ

---

೧. ಗುರುರಾಜ ಚಾರಿತ್ರ ಸಂ. ೭–ಪ.೭೫

ಗಾನಗಂಗೆ ಹರಿಸಿ ಗಂಗೋತ್ತಮಾಂಗನನ್ನು ಒಲಿಸಿದನು.

ಕಲ್ಯಾಣದಲ್ಲಿ ೧೦೭೬ ರಿಂದ ೧೧೨೬ ರವರೆಗೆ ರಾಜ್ಯವಾಳಿದ ವಿಕ್ರಮಾದಿತ್ಯನು ಸದ್ಭಕ್ತನಾಗಿದ್ದನು. ಅವನ ಆಶ್ರಯದಲ್ಲಿಯೇ ರಾಗದ ಸಂಕಣ್ಣನಿದ್ದನೆಂದು ಊಹಿಸಲಾಗಿದೆ. ಅವನು ಗಾನಯೋಗಿ. ತನ್ನಿಂದ ತಾನೇ ಪಲ್ಲವಿಸಿದ್ದಿತು ರಾಗವೃಕ್ಷ ಅವನಲ್ಲಿ. ನಿತ್ಯವೂ ಶಿವಾಲಯಕ್ಕೆ ಹೋಗುವುದು, ಅಲ್ಲಿ ಭಕ್ತಿ ಪರವಶನಾಗಿ ಪದಪದ್ಯಗಳನ್ನು ಹೃದ್ಯವಾಗಿ ಹಾಡುವುದು, ಮನೆಗೆ ಬಂದು ಮತ್ತೆ ಮರುದಿನದ ಸಂಗೀತಸೇವೆಗಾಗಿ ಸಿದ್ಧತೆ ನಡೆಸುವುದು ಅವನ ಕಾಯಕವಾಗಿದ್ದಿತು. ಅವನು ನಾದಲೋಲ, ಭಕ್ತಿಲಂಪಟ, ಭಾವಜೀವಿ ಅವನ ಗಾನ ನೈಪುಣ್ಯ ಎಲ್ಲರ ಮನೆಮಾತಾಯಿತು. ವಿಕ್ರಮಾದಿತ್ಯನ ಕಿವಿಗಳವರೆಗೂ ಅವನ ಕಲೆಯ ಕೀರ್ತಿ ಮುಟ್ಟಿತು.

ವಿಕ್ರಮಾದಿತ್ಯನ ಭಕ್ತಹೃದಯ ಸಂಕಣ್ಣನ ಸ್ತೋತ್ರ ಸಂಗೀತಕ್ಕಾಗಿ ಹಾತೊರೆಯಿತು. ಅರಸನ ಅಪೇಕ್ಷೆಯಂತೆ ರಾಗದ ಸಂಕಣ್ಣ ಅವನ ಓಲಗಕ್ಕೂ ಹೋಗಿ ಶಿವಸ್ತೋತ್ರ ಸಂಗೀತವನ್ನು ಹಾಡಿ ಬರತೊಡಗಿದನು. ವಿಕ್ರಮಾದಿತ್ಯನು ಪರಮಪ್ರೀತನಾಗಿ ನಿತ್ಯವೂ ಅವನಿಗೆ ೧೨ ವರಹಗಳನ್ನು ಕೊಡತೊಡಗಿದನು. ಸಂಕಣ್ಣನು ತನ್ನ ಸಂಗೀತ ದಾಸೋಹದೊಡನೆ ಜಂಗಮದಾಸೋಹವನ್ನೂ ಮಾಡುತ್ತ ಆನಂದದಿಂದಿರತೊಡಗಿದನು.

ಆದರೆ ವಿಕ್ರಮಾದಿತ್ಯನ ಓಲಗದ ಇತರ ಗಾಯಕರಿಗೆ ಇದರಿಂದ ಅಸೂಯೆ ಉದಿಸದಿರಲಿಲ್ಲ. ಅವರು ಶಾಸ್ತ್ರೋಕ್ತವಾಗಿ ಸಂಗೀತ ಕಲಿತವರು. ಹೀಗಿದ್ದೂ ಎಲ್ಲಿಯೋ ಒಂದೆರಡು ಪಲ್ಲವಿಗಳನ್ನು ಕಲಿತ ಈ ಸಂಕಣ್ಣನಿಗೆ ಮೆಚ್ಚಿ ಅರಸನು ತಮ್ಮನ್ನು ಮರೆತುಬಿಡಬೇಕೆ? ಎಂದು ಉದ್ವಿಗ್ನರಾದವರು. ಸಂಕಣ್ಣನನ್ನು ಸ್ಪರ್ಧೆಗೆ ಎಳೆದರು. ವಿಕ್ರಮಾದಿತ್ಯನ ಸಮ್ಮುಖದಲ್ಲಿ ತಮ್ಮ ಸಂಗೀತ ವೈದುಷ್ಯವನ್ನೆಲ್ಲ ಸೂರೆಮಾಡಿ ಸಂಕಣ್ಣನಿಗೆ ಹಾಡಲು ಹೇಳಿದರು. ಸಂಕಣ್ಣ ಶಾಸ್ತ್ರೋಕ್ತ ಸಂಗೀತಗಾರನಲ್ಲ. ಆದರೆ ಭಗವದ್ಭಕ್ತ. ಅವನು ವೈದುಷ್ಯವಿಲ್ಲದೆ ಹಾಡಿದನು. ಅವನ ಹಾಡಿನಲ್ಲಿ ಶಾಸ್ತ್ರವಿರಲಿಲ್ಲ. ಆದರೆ ಭಕ್ತಿಭಾವದ ಭಾಗೀರಥಿಯೇ ಹರಿಯುತ್ತಿದ್ದಿತು! 'ನಾಯಮಾತ್ಮಾ ಪ್ರವಚನವೇನಲಭ್ಯಃ ನ ಮೇಧಯಾ ನ ಬಹುನಾಶ್ರುತೇನ' ಎಂಬುದರ ಅರಿವು ಅಂದು ಎಲ್ಲರಿಗೂ ಆಯಿತು. ಸಂಕಣ್ಣನ ಸರಳ ನಿರಾಡಂಬರ ಸಂಗೀತ ಸಭಿಕರ ಹೃದಯಗಳನ್ನು ಮಯಣದಂತೆ ಕರಗಿಸಿತು. ವಿಕ್ರಮಾದಿತ್ಯನು ಸಂಕಣ್ಣನ ಶಾಸ್ತ್ರವಿಲ್ಲದ ಸಂಗೀತವನ್ನೇ ಎಂದಿಗಿಂತ ಅಧಿಕವಾಗಿ ಮನ್ನಿಸಿದನು. ಅವನಿಗೆ 'ರಾಗರಸಾಂಕ' ಎಂಬ ಬಿರುದನ್ನು ಕೊಟ್ಟು ಗೌರವಿಸಿದನು. ಸಂಗೀತ ವಿದ್ವಾಂಸರ

ಹೊಟ್ಟೆಯುರಿಯಿತು. ‘ಎಷ್ಟೆಂದರೂ ಅರಸನಿವ ಅರಸಿಕ. ಶಾಸ್ತ್ರಜ್ಞಾನ ಸಾಲದು. ಎಂತಲೇ ಏನೊಂದೂ ಬಾರದ ಈ ಶುಂಭ ಸಂಕಣ್ಣನನ್ನು ಇಷ್ಟೊಂದು ಮನ್ನಿಸುತ್ತಲಿದ್ದಾನೆ’ ಎಂದು ಒಟಗುಟ್ಟುತ್ತ ಹೊರಟುಹೋದರು. ಅವರು ತನ್ನನ್ನು ಜರಿದರೆಂದು ಸಂಕಣ್ಣ ಕುಗ್ಗಲಿಲ್ಲ; ಅರಸ ತನ್ನನ್ನು ಗೌರವಿಸಿದನೆಂದು ಹಿಗ್ಗಲಿಲ್ಲ. ಎಂದಿನಂತೆ ಶಿವಾಲಯಕ್ಕೆ ಹೋಗಿ ಎಂದಿಗಿಂತಲೂ ಹೆಚ್ಚಾದ ಭಕ್ತಿಯ ಉದ್ರೇಕದಿಂದ ಸಂಗೀತದ ಸೇವೆ ಸಲ್ಲಿಸಿ ಬಂದನು. ತನ್ನ ಕಾಯಕದಲ್ಲಿ ತನ್ಮಯನಾಗಿದ್ದು ಬಿಟ್ಟನು.

ಅವನ ಚಿತ್ರದ ಚಿನ್ನವನ್ನೊರೆಯುವ ಇನ್ನೊಂದು ಪರೀಕ್ಷಾ ಪ್ರಸಂಗ ಬಂದಿತು. ಗೌಳದೇಶದ ಗಾಯಕ ಶಿಖಾಮಣಿಯೊಬ್ಬ ವಿಕ್ರಮಾದಿತ್ಯನ ಕೀರ್ತಿವಾರ್ತೆಯನ್ನು ಕೇಳಿ ಕಲ್ಯಾಣಕ್ಕೆ ಬಂದನು. ಅರಸನ ಓಲಗದಲ್ಲಿ ರಾಗರಸಾಂಕನಿಗಿದ್ದ ಮನ್ನಣೆಯ ಬಣ್ಣನೆಯನ್ನು ಕೇಳಿ ಕಲಾವಿದ ಸಹಜವಾದ ಈರ್ಷೆಯವನಲ್ಲಿ ಮೊಗವೆತ್ತಿತ್ತು. ರಾಗರಸಾಂಕನೊಡನೆ ಸ್ಪರ್ಧಿಸಲು ಬಂದಿರುವುದಾಗಿ ಅರಸನಿಗೆ ಅರಿಕೆ ಮಾಡಿಕೊಂಡನು. ವಿಕ್ರಮಾದಿತ್ಯನೂ ಇದಕ್ಕೆ ಒಪ್ಪಿದನು. ತನ್ನ ರಾಗರಸಾಂಕನ ಶಕ್ತಿಯಲ್ಲಿ ಅವನಿಗೆ ಅಷ್ಟೊಂದು ವಿಶ್ವಾಸವಿದ್ದಿತು.

ಆದರೆ ಸಂಕಣ್ಣನಿಗೆ ದಿಗಿಲು. ಗೌಳದೇಶದ ಗಾಯಕ ಸಾಮಾನ್ಯನಾಗಿರಲಿಲ್ಲ. ಅವನೊಡನೆ ಸ್ಪರ್ಧಿಸಿ ಜಯಿಸುವುದು ಸುಲಭವಾಗಿರಲಿಲ್ಲ. ಸಂಕಣ್ಣನ ಮನಸ್ಸು ಸಹಜವಾಗಿಯೇ ಶಿವನತ್ತ ಹೊರಳಿತು. ‘ನೀನೆ ಗತಿ ನೀನೆ ಮತಿ’ ಎಂದು ಶಿವನಲ್ಲಿ ಮೊರೆಯಿಟ್ಟನವನು, “ಎನ್ನ ಮಾನಾಪಮಾನ ನಿನ್ನದಯ್ಯ ! ಎನ್ನ ಹಾನಿ ವೃದ್ಧಿ ನಿಮ್ಮದಯ್ಯ ! ಕೊಲ್ಲು ಕಾಯಿ ನಿಮ್ಮ ಧರ್ಮ” ಎಂದು ಮುಂದೆ ಅದೇ ಕಲ್ಯಾಣದಲ್ಲಿ ಬಸವಣ್ಣವರು ಮೊರೆಯಿಟ್ಟಂತೆ ಹರನಲ್ಲಿ ಮೊರೆಯಿಟ್ಟನವನು.

ರಾತ್ರಿಯಾಯಿತು. ಧಾತ್ರಿಯೆಲ್ಲ ಕತ್ತಲೆಯಲ್ಲಿ ಕಾಣದಂತಾಗಿಬಿಟ್ಟಿತು. ಸಾಲದುದಕ್ಕೆ ಕಾರ್ಮೋಡ ಕವಿಯಿತು. ‘ಕಾರೆಂಬ ಕತ್ತಲೆ, ಭೋರೆಂಬ ಮಳೆ.’ ಗೌಳದೇಶದ ಗಾಯಕ ಕಲ್ಯಾಣದ ಕಾರ್ಗಾಲದ ವೈಭವವನ್ನು ನೋಡುತ್ತ ತಾನಿಳಿದ ಮನೆಯಲ್ಲಿ ಕುಳಿತಿದ್ದನು. ಇದ್ದಕ್ಕಿದ್ದಂತೆ ಆ ಕಾರಿರುಳನ್ನು ಕಲಕಿ ಜಡಿಮಳೆಯನ್ನು ಜಡಿದು ನಾದಮಾಧುರ್ಯ ತೇಲಿ ಬಂದಿತು ಮನೆಯೊಳಕ್ಕೆ \. ಗೌಳದೇಶದ ಗಾಯಕ ಬೆಚ್ಚಿಬಿದ್ದ ಅಚ್ಚರಿಯಲ್ಲಿ. ‘ಯಾರ ಮಧುರ ಸ್ವರವಿದು ! ಎಂಥ ಮಾರ್ದವವಿದರಲ್ಲಿ! ಎಂಥ ರಾಗ ವಿನ್ಯಾಸ, ಸ್ವರವಿಲಾಸ ! ಎಲ್ಲಿಯ ಸೊಲ್ಲಿದು ! ಆಯುಷ್ಯವನ್ನೆಲ್ಲ ಗಾಯನ ಕಲಿಯುವುದರಲ್ಲಿಯೇ ಕಳೆದಿದ್ದೇನೆ. ಆದರೆ ಈ ಶಾರೀರ, ಈ ಕಲಾಪ್ರೌಢಿಮೆ, ಈ ಸಂಗೀತ ಸಿದ್ಧಿಯನ್ನು ಹಿಂದೆಂದೂ ಕೇಳಿ ಕಂಡಿರಲಿಲ್ಲವಲ್ಲ ! ಯಾರಿವನು?’ ಎಂದು ಧಿಗ್ಗನೆದ್ದು ಹೊರಗೆ ಬಂದನು; ಹೊರಗೆ ಬಂದು ನೋಡಿ ಬೆರಗಾದನು.

ಅಲ್ಲಿ–ಕಾರಿರುಳಿನ ಕಾರ್ಗತ್ತಲೆಯಲ್ಲಿ, ಭೋರೆಂದು ಸುರಿವ ಬಲ್ ಸರಿಯಲ್ಲಿ, ಕಟ್ಟಿಗೆಯ ಹೊರೆ ಹೊತ್ತು ನಿಂತಿದ್ದಾನೆ ಹರಕು ಬಟ್ಟೆಯ ತರಳನೊಬ್ಬ ! ಮಳೆಯಲ್ಲಿ ಮೈಯೆಲ್ಲ ತೊಯ್ದು ಚಳಿಗೆ ನಡುಗುತ್ತ ನಿಂತಿದ್ದಾನೆ. ಕೋಲ್ಮಿಂಚು ಹೊಯ್ದಾಗೆ ಅವನ ಲಕಲಕಿಸುವ ಮುಖ ಕ್ಷಣಮಾತ್ರ ಕಂಡು ಮತ್ತೆ ಕಾಣದಾಗುತ್ತದೆ. ಕಾಳಿಮೆಯ ಗರ್ಾದಲ್ಲಡಗಿ ಕಾರಿರುಳ ಭಯವನ್ನು ಕಳೆಯಲೆಂದೋ ಕೊರೆವ ಚಳಿಯನ್ನು ಮರೆಯಲೆಂದೋ ಮಧುರ ಮಂಜುಲ ಸ್ವರದಲ್ಲಿ ಹಾಡುತ್ತ ತನ್ನನ್ನೇ ಮರೆತು ನಿಂತಿದ್ದಾನೆ ! ಗೌಳದೇಶದ ಗಾಯಕನ ಮೈ ನವಿರೆದ್ದಿತು. ಆ ಬಾಲಕನ ಬಗ್ಗೆ ಭಕ್ತಿ ಚಿಮ್ಮಿತು ಅವನ ಹೃದಯದಲ್ಲಿ. 'ಇವನು ಮನುಜನಲ್ಲ. ಮಹಾತ್ಮ !' ಎಂದು



**ಮಳೆ ನಿಂತಿತು–ಗಾಯನ ನಿಲ್ಲಲಿಲ್ಲ. ಬಾಲಕನು ಹಾಡುವುದನ್ನು ನಿಲ್ಲಿಸಿದಾಗ ಗೌಳದೇಶದ ಗಾಯಕನ ಶರಣಾಗತಿ ಸಂಪೂರ್ಣವಾಗಿತ್ತು.**

ಮುಂದೆ ಬಂದು ವಂದಿಸಿ, ತಾನು ಅದುವರೆಗೆ ಬಹುಮಾನವಾಗಿ ಪಡೆದಿದ್ದ ಕಡಗ ಪದಕ ಪೆಂಡೆ ಹಾರಗಳನ್ನವನಿಗೆ ಅರ್ಪಿಸಿ, 'ಸ್ವೀಕರಿಸುವುದು–ಸ್ವೀಕರಿಸಿ ಉದ್ಧರಿಸುವುದು!' ಎಂದು ಕೋರಿದನು.

ಆದರೆ ಆ ಬಾಲಕನ ಗಾನ ಸಮಾಧಿ ಸಡಿಲಲಿಲ್ಲ. ಬಾಹ್ಯ ಪ್ರಪಂಚವನ್ನು ಮರೆತು ಅವನು ಹಾಡಿಯೇ ಹಾಡಿದನು–ಗೌಳದೇಶದ ಗಾಯಕ ಮೈಮರೆತು ಕೇಳಿಯೇ ಕೇಳಿದನು. ಮಳೆ ನಿಂತಿತು–ಗಾಯನ ನಿಲ್ಲಲಿಲ್ಲ. ಬಾಲಕನು ಹಾಡುವುದನ್ನು ನಿಲ್ಲಿಸಿದಾಗ ಗೌಳದೇಶದ ಗಾಯಕನ ಶರಣಾಗತಿ ಸಂಪೂರ್ಣವಾಗಿತ್ತು. ವಿನಮ್ರತೆಯಿಂದ ಕೇಳಿದನವನು.

"ಬಾಲ ಸರಸ್ವತಿ, ನಿನಗೆ ಸಂಗೀತ ಕಲಿಸಿದ ಗುರುವಾರು?"

"ನನ್ನ ಗುರು ನನಗೆ ಕಲಿಸಿಲ್ಲ."

"ಹಾಗಾದರೆ?"

"ಅವರು ಹಾಡುವುದನ್ನು ಕೇಳಿ ಕೇಳಿ ನಾನೇ ನನಗೆ ತಿಳಿದಷ್ಟು ಕಲಿತುಕೊಂಡಿದ್ದೇನೆ."

"ಅದ್ಭುತ, ಅಚ್ಚರಿ !"

"ಇದೆಲ್ಲಿಯ ಅದ್ಭುತ? ನೀವು ನನ್ನ ಗುರುಗಳು ಹಾಡುವುದನ್ನು ಕೇಳಬೇಕು."

ಕೇಳಿಸುವೆಯಾ ನಿನ್ನಗುರುಗಳು ಹಾಡುವದನ್ನು?

"ಅಗತ್ಯವಾಗಿ."

"ಯಾವಾಗ?"

"ಬೇಕಾದಾಗ–ಈಗೆಂದರೆ ಈಗಲೆ !"

"ಬೇಕಾದಾಗ ಭೆಟ್ಟಿಯಾಗಬಹುದೆ ನಿನ್ನ ಗುರುಗಳನ್ನು?"

"ಶರಣರ ಭೆಟ್ಟಿಗೆ ಸಮಯಾಸಮಯದ ಪ್ರಶ್ನೆಯೆಲ್ಲಿ.?"

"ನಿನ್ನ ಗುರುಗಳು ಶರಣರೂ ಆಗಿರುವರೆ?"

"ಭವಕ್ಕೆ ಶರಣು ಹೋಗದೆ ಶಿವನಿಗೆ ಶರಣುಹೋದವರೆಲ್ಲ ಶಿವಶರಣರು."

"ನಿನ್ನ ಶರಣ ಗುರುವಿನ ಹೆಸರೇನು ?"

"ರಾಗರಸಾಂಕ."

ಗೌಳದೇಶದ ಗಾಯಕ ಬೆಚ್ಚಿಬಿದ್ದನು. ಬೆಳಗಾಗುತ್ತಲೆ ಯಾರೊಡನೆ ತಾನು ಸ್ಪರ್ಧಿಸಬೇಕಾಗಿದೆಯೋ ಆ ರಾಗರಸಾಂಕನು ಈ ಬಾಲಕನ ಗುರುವೆ ? ಈ ಬಾಲಕನೇ ಇಂಥ ಸಂಗೀತಸಾರೋದಯನಾಗಿರುವಾಗ ಇವನ ಗುರುವು ಎಂಥ ಸಂಗೀತ ಸಾರೋದ್ಧಾರನಾಗಿರಬೇಡ ! ಅವನೊಡನೆ ಸ್ಪರ್ಧೆಯೆ ! ಇದಕ್ಕಿಂತ ಮೂರ್ಖತನವಿನ್ನೆಂಟೆ ? ಶರಣನೊಡನೆ ಸೆಣಸಾಟವೆ !

ಬಾಲಕನನ್ನು ಬೀಳ್ಕೊಟ್ಟು ಗೌಳದೇಶದ ಗಾಯಕನು ಒಳಗೆ ಹೋದನು. ತನ್ನ ಗಂಟು ಮೂಟೆ ಕಟ್ಟಿಕೊಂಡು ಕತ್ತಲಿರುವುದರೊಳಗಾಗಿ ಕಾಲುಕಿತ್ತನು. ಬೆಳಗಾದಾಗ ಕಲ್ಯಾಣದಿಂದ ಗಾವುದ ಗಾವುದ ದೂರದಲ್ಲಿದ್ದನು. ಮರುದಿನ ಸ್ಪರ್ಧೆ ನೆಡಯಲಿಲ್ಲ. ಯಾಕೆ ನೆಡಯಲಿಲ್ಲ? ಗೌಳದೇಶದ ಗಾಯಕನೇ ಅಲ್ಲಿರಲಿಲ್ಲ? ಯಾವಾಗ ಕಲ್ಯಾಣ ಬಿಟ್ಟುಹೋದನವನು? ಯಾರೂ ಅರಿಯರು. ಎಲ್ಲರಿಗೂ ಆಶ್ಚರ್ಯ. ವಿಕ್ರಮಾದಿತ್ಯನಿಗೂ ಆಶ್ಚರ್ಯ.

ಸಂಕಣ್ಣ ಮಾತ್ರ ಎಂದಿನಂತೆಯೇ ಅವಿಚಲಚಿತ್ತನಾಗಿದ್ದನು. ಸರಳ ಭಕ್ತನಾಗಿದ್ದನು. ಅದೇ ತಾದಾತ್ಮ್ಯ, ಅದೇ ತನ್ಮಯತೆ ! ಸ್ತುತಿ, ನಿಂದೆ, ಹಿಗ್ಗು, ಕುಗ್ಗು, ಏರಿಳಿತ, ಮಾನಾಪಮಾನ, ಸೋಲು ಗೆಲುವುಗಳು ಏನೆಂಬುದನ್ನೇ ಅರಿಯದ ಆ ಶರಣ ಶಿವಾಲಯದಲ್ಲಿ ಸಂಗೀತ ಸೇವೆ ಸಲ್ಲಿಸುತ್ತಲೇ ಕೊನೆಯ ದಿನಗಳನ್ನು ಕಳೆದನು. ದಾಸೋಹವನ್ನು ಮಾಡುತ್ತಲೇ ಮುಂದಿನ ದಿನಗಳನ್ನು ಮುಗಿಸಿದನು. ಶಿವನೆದುರು ಹಾಡಿ ಹಾಡಿ ಶಿವನೇ ತಾನಾಗಿಬಿಟ್ಟನು !

ಮಧ್ಯರಾತ್ರಿಯಲ್ಲಿ ಗೌಳದೇಶದ ಗಾಯಕನನ್ನು ಸಂಧಿಸಿದ ಆ ಬಾಲಕನಾರು? ಯಾರು ಬಲ್ಲರು ! ಶಿವನೇ ಸಂಕಣ್ಣನ ಸಹಾಯಕ್ಕಾಗಿ ಬಾಲಕನಾಗಿ ಬಂದಿದ್ದನೆ? ಇರಬಹುದು ! ಭಕ್ತಕಾಯ ಮಮಕಾಯವೆಂದು ಹೇಳುವ ಶಿವನು ಭಕ್ತರ ಸಹಾಯಕ್ಕೆ ಬರದಿರುವನೆ ?

ಶಿವನು ಬಂದಿದ್ದರೆ ಬಂದಿದ್ದಾನು. ಸಂಕಣ್ಣನಿಗೆ ಅದರ ಪರಿವೆಯೂ ಇಲ್ಲ. ಅವನಿಗೆ ಗೊತ್ತಿದ್ದುದು ಈ ಲೋಕದಲ್ಲಿ ಒಂದೇ–ಕಾಯಕ. ಆ ಕಾಯಕದಲ್ಲಿಯೇ ಕೈಲಾಸವನ್ನು ಕಂಡನವನು. ಮುಂದೆ ಅದೇ ಕಲ್ಯಾಣದಲ್ಲಿ ನಿಂತು ಬಸವಣ್ಣನವರು ಹಾಡಿದರು.

"ತಾಳಮಾನ ಸರಿಸವ ಸರಿಯೆ;
ಓಜೆ ಬಜಾವಣೆಯ ಲೆಕ್ಕವನರಿಯೆ;
ಅಮೃತಗಣ ದೇವಗಣವನರಿಯೆ;
ಕೂಡಲ ಸಂಗಮದೇವಾ, ನಿನಗೆ ಕೇಡಿಲ್ಲವಾಗಿ
ಅನು ಒಲಿದಂತೆ ಹಾಡುವೆ !"

–ರಾಗರಸಾಂಕನ ಜೀವನಚಿತ್ರದಂತಿದೆ ಈ ವಚನ

■

# ಇಳಿಹಾಳ ಬೊಮ್ಮಯ್ಯ

ಇಳಿಹಾಳ ಬೊಮ್ಮಯ್ಯ ಮನೆಗೆಲಸ ಕಾಯಕವ
ನಲುಮೆಯಲ್ಲಿ ಸುಗ್ಗಿ ದಾಸೋಹ–ಹರಸೇವೆ
ಸಲ್ಲಿಸಿ ಲಿಲಂಗದೊಳು ಬಯಲಾದ ॥

–ಹಂತಿಯ ಪದ

ಈಗಿನ ಬಾಲಗಕೋಟೆಯ ಉತ್ತುರಕ್ಕೆ ಹತ್ತು ಮೈಲಿಗಳಾಚೆ ಘಟಪ್ರಭಾ ನದಿಯ ದಂಡೆಯಮೇಲೆ ಒಂದು ಹಳ್ಳಿ ಇದೆ. ಅದಕ್ಕೆ ಈಗ ಇಲ್ಲಾಳೆಂದು ಕರೆಯುತ್ತಾರೆ. ಹಿಂದೆ ಅದೇ ಇಳಿಹಾಳೆಂಬ ಹೆಸರಿನಿಂದ ಎಸೆಯುತ್ತಿತ್ತು. ಪೆರ್ಮಾಡಿರಾಯನ ಕಾಲದಲ್ಲಿ ಆ ಊರಿನಲ್ಲಿ ಮೊಮ್ಮಯ್ಯನೆಂಬ ಶಿವಶರಣ ಪ್ರಸಿದ್ಧನಗಾಗಿ ಹೋದನು.

ಮೆರೆವ ಪೆಮ್ಮಡಿರಾಯ ತರದೇವಾಡಿಯ ಗೆದ್ದು
ಹಿರಿದಾತು ನಾಡು ಹಿಗ್ಗಿ ನಾಡಂದು–ತೆಂಕಣಕೆ
ಹುಲಿಯವಗೆ ರೈತ ಬೊಮ್ಮಯ್ಯ ॥
ಮೆಚ್ಚಿ ಪೆಮ್ಮಡಿರಾಯ ಕೆಚ್ಚೆದೆಯ ಬೊಮ್ಮನಿಗೆ
ಇಚ್ಛಿಸಿದ ಭೂಮಿ ವತನಾಗಿ–ಒಪ್ಪಿಸಲು
ನೆಚ್ಚಿ ರೈತಾಗಿ ನಡಕೊಂಡ ॥

–ಹಂತಿಯ ಪದ

'ಇಳಿಹಾಳ ಹೊಳೆದಂಡೆ ಬೆಳೆವ ಕಣಜದ ಭೂಮಿ.' ಅಲ್ಲಿ ಒಕ್ಕಲಿಗನಾಗಿ ದುಡಿದವನಿಗೆ ಕೊರತೆಯೆಲ್ಲಿ? ಕಾಯಕದ ಮೂಲಕವಾಗಿಯೆ, ಕೈವಲ್ಯ ಪಡೆವುದೆಂಬ ಶರಣಧರ್ಮಕ್ಕನುಗುನವಾಗಿ ಕೃಷಿಕಾಯಕ ಕೈಕೊಂಡಿದ್ದ ಬೊಮ್ಮಯ್ಯ ಕೃಷಿ ಪ್ರಧಾನವಾದ ಕರ್ನಾಟಕದಲ್ಲಿ.

ಆ ನೇಗಿಲ ಯೋಗಿ ಅಂತರಂಗ ಬಹಿರಂಗ ಕೃಷಿಗಳೆರಡುನ್ನೂ ಅವ್ಯಾಹತವಾಗಿ ನಡೆಸಿದ್ದ.

"ತೆರಿಗೆ ಅರಸಗೆ ತೆತ್ತು ಹರುಷದಲಿ ಬೊಮ್ಮಯ್ಯ
ಕರೆ ಕರೆದು ಊರ ರೈತರನು–ಹುದುವಿನಲಿ
ಹುರಿದುಂಬಿ ನಡಸಿ ಹೊಲಗೆಲಸ"

–ಹಂತಿಯ ಪದ

ಸಿರಿಯನ್ನು ಸಂಪಾದಿಸಿದನಾತ. 'ಒಂದಕ್ಕೆ ಎರಡಾಗಿ ಚೆಂದಾಗಿ ಮಳೆ ಬೆಳೆಯು, ಬಂದಿಳಿದು ಸಿರಿಯು ಹೊಲದೊಳಗೆ–ಬೊಮ್ಮಯ್ಯ–ಕಂದಾಯಕೊಟ್ಟು ಪಾಲ್ಕೊಟ್ಟು' ಉಳಿದುದನ್ನು ದಾಸೋಹಕ್ಕಾಗಿ ವಿನಿಯೋಗಿಸುತ್ತಿದ್ದನು.

"ಬಂದ ಸಿರಿ ಸಂಪತ್ತು ತಂದೆಂದು ಬಗೆಯದಲೆ
ನೊಂದಿಸದೆ ಕೊಡುವ ರೈತರಿಗೆ–ಬೊಮ್ಮಯ್ಯ
ಹೊಂದಿ ದಾಸೋಹ ನಡೆಸಿದ್ದ"[೧]

ಅವನು ಉದಾರಚರಿತ, ವಿಶ್ವಕುಟುಂಬಿ. ಸಾಮಾನ್ಯವಾಗಿ ಒಕ್ಕಲಿಗರೆಲ್ಲರೂ ಉದಾರಚರಿತರೇ. ಬೊಮ್ಮಯ್ಯ ಅವರಲ್ಲಿಯೇ ಎದ್ದು ಕಾಣುವ ವ್ಯಕ್ತಿ ಔದಾರ್ಯದಲ್ಲಿ, ವಿತರಣದಲ್ಲಿ, ವಿನಯದಲ್ಲಿ. ಅವನು ಅನುಸರಿಸಿದ ನೀತಿಯಿದು:

ಕಡೆಯ ಬಲಕಿನ ತಾಳು ಎಡೆಯಾಯ್ತು ಅರಸನಿಗೆ
ಎಡಗಡೆಯ ತಾಳು ಪಶು ಪಕ್ಷಿ ಜೀವನಕೆ
ನಡುವಿನ ತಾಳು ರೈತನಿಗೆ ![೧]
ಒಂದು ತಾಳಿನ ಬೆಳೆಯು ಬಂದವರಿಗಿಲ್ಲೆನ್ನ
ಮುಂದು ಕೊಡುಗೈಯು ಒಕ್ಕಲಿಗ–ನಾಡೊಳಗೆ
ಹೊಂದಿ ದಾಸೋಹ ಶಿವಮತಕೆ ![೨]

ಹೀಗೆ ಅರಸನಿಂದ ತಿರುಕನವರೆಗೆ, ಪಶುಪಕ್ಷಿಗಳಿಂದ ಭಿಕ್ಷುಕರವರೆಗೆ ಎಲ್ಲರಿಗೂ ಆಧಾರವಾಗಿ ಸಾಗಿತ್ತು ಅವನ ಬಹಿರಂಗದ ಬೇಸಾಯ. ಅವನ ಅಂತರಂಗದ ಕೃಷಿ ಹೇಗೆ ಸಾಗಿದ್ದಿರಬಹುದೆಂಬುದನ್ನು ಸರ್ಪಭೂಷಣ ಶಿವಯೋಗಿಗಳ ಈ ಹಾಡಿನಿಂದ ಊಹಿಸಬಹುದಲ್ಲವೆ?

ಶರೀರವೆಮದೆಂಬುವ ಹೊಲವ ಹಸನ ಮಾಡಿ
ಪರತತ್ವ ಬೆಳೆಯನೆ ಬೆಳೆದುಣ್ಣಿರೋ ! ॥ಪ॥

---

೧. ಹಂತಿಯ ಪದ
೨. ಹಂತಿಯ ಪದ

ಶಮೆದಮೆ ಎಂದೆಂಬ ಎರಡೆತ್ತುಗಳ ಹೂಡಿ
ವಿಮಲ ಮಾನಸವ ನೇಗಿಲನೆ ಮಾಡಿ
ಮಮಕಾರವೆಂದೆಂಬ ಕರಿಕೆಯ ಕಳೆದಿಟ್ಟು
ಸಮತೆಯೆಮದೆಂಬ ಗೊಬ್ಬರವ ಚೆಲ್ಲಿ ॥
ಗುರುವರನುಪದೇಶವೆಂಬ ಬೀಜವ ಬಿತ್ತಿ
ಮೆರೆವ ಸಂಸ್ಕಾರ ವೃಷ್ಟಿಯ ಬಲದಿ
ಅರಿವೆಂಬ ಪಯಿರನ್ನೆ ಬೆಳಸುತ್ತ ಮುಸುಕಿರ್ದ
ದುರಿತದುರ್ಗುಣವೆಂಬ ಕಳೆಯ ಕಿತ್ತು ॥
ಸ್ಥಿರ ಮುಕ್ತಿಯೆಂದೆಂಬ ಧಾನ್ಯವ ಬೆಳೆದುಂಡು
ಪರಮಾನಂದದೊಳು ದಣ್ಣನೆ ದಣಿದು
ಗುರುಸಿದ್ಧನಡಿಗಳಿಗೆರಗುತ್ತ ಭವವೆಂಬ
ಬರವನು ತನ್ನ ಸೀಮೆಗೆ ಕಳುಹಿ ॥[೧]

ಮೊಮ್ಮಯ್ಯನು ಭವವೆಂಬ ಬರವನ್ನೇನೋ ತನ್ನ ಸೀಮೆಗೆ ಕಳುಹಿಸಿದನು; ಆದರೆ ಅನಾವೃಷ್ಟಿಯಿಂದ ಉದ್ಭವಿಸುವ ಬರವನ್ನು ಅದರ ಸೀಮೆಗೆ ಹೇಗೆ ಕಳಿಸಬಲ್ಲನು ? ಅದು ಶಿವನ ಸ್ವಾಧೀನದಲ್ಲಿರುವ ವಿಷಯ. ಬೊಮ್ಮಯ್ಯನೇನೋ 'ಮಣ್ಣು ಕಾಯವು ಕೇಳೊ ಮಣ್ಣಾಗಿ ಹೋಗುವುದು । ಸಣ್ಣಾಗಿ ಸವೆಸಿ ಜಂಗಮಕೆ–ದಾಸೋಹ । ಕಣ್ಣೊಂದೆ ಸಾಕೊ ಶಿವಮತಕೆ' ಎಂದು ನಂಬಿ ಶಂಭು ಭಕ್ತನಾಗಿ ದಾಸೋಹ ಜೀವನವನ್ನು ಸಾಗಿಸಿದ್ದನು. ಆದರೆ ಅವನ ನಿರಾಡಂಬರ ಭಕ್ತಿಗೂ ಅಗ್ನಿಪರೀಕ್ಷೆ ಒದಗಿತು.

ದಿನ ಹೋಗಿ ಬೆಳಸಾಗಿ ದಿನ ಬಂತು ಬರಗಾಲ
ಕೊನೆಗಾಲ ಲೋಕ ಮುಳುಗುದಕೆ–ಶಿವಮತಕೆ
ಅನುಗಾಲ ಬೆಲಕು ಹಬ್ಬುದಕೆ

ಆ ಬರಗಾಲದ ಭೀಕರತೆಯನ್ನು ಬಣ್ಣಿಸುವುದಸಾಧ್ಯ !

ತುಂಬಿ ಹರಿಯುವ ಹೊಳೆಯು ಸಿಂಬಿಯಾಯಿತು ಬತ್ತಿ
ಕಮಬನಿಯ ಸುರಿಸಿ ನೀರಡಸಿ–ಪಶುಪಕ್ಷಿ
ಇಂಬು ಬೇಡಿದುವು ಮುಖವೆತ್ತಿ !

---

೧ ಕೈವಲ್ಯ ಕಲ್ಪವಲ್ಲರಿ

ಕೂಳಿರದೆ ಜನಬಿದ್ದು ಹಾಳಾತು ಇಳಿಹಾಳು
ಗೂಳೇವ ಕಟ್ಟಿ ಹೊರಗಡಿಯ–ಸೇರಿದರು
ಗೋಳುಂಡು ಸೊರಗಿ ನರಲೋಕ ![೨]

ಎಲ್ಲರಂತೆ ಬೊಮ್ಮಯ್ಯನ ಭೂಮಿಯೂ ಹಾಳುಬಿದ್ದಿತು ! ಅವನು ಅರಸನಿಗೇನನ್ನು ಕೊಡಬೇಕು? ಪಾಲಿನವರಿಗೇನನ್ನು ಕೊಡಬೇಕು? ದಾಸೋಹವನ್ನೆಂತು ನಡೆಸಬೇಕು? ಎಲ್ಲೆಲ್ಲಿ ನೋಡಿದರೂ ಹಾಹಾಕಾರ ! ಬರದ ಉರಿಯಿಂದ ಹುರುಪಳಿಸಿ ಹೋಯಿತು ಬಾಳ ಬಳ್ಳಿ !

ಎಲ್ಲರ ಬನ್ನದ ಸೊಲ್ಲು ಕೇಳಿ ಕೊನೆಗೊಮ್ಮೆ ಮಳೆಯಿತ್ತ ಶಿವ.

"ಕೊರಲಕೂಗನು ಕೇಳಿ ಹರಗಾಯಿತೆಚ್ಚರಿಕೆ
ಮರುಕ ಎದೆತುಂಬಿ ಶಿವಲಿಂಗ–ಸುರಿಸಿದನು
ಮರಮಳೆಯು ಬಿದ್ದು ಜನಹಿಗ್ಗಿ !"

ಮಳೆಯೇನೋ ಆಯಿತು. ಬಿತ್ತುವುದೇನನ್ನು? ಬೀಜಗಳೇ ಸಿಕ್ಕದಂತಾಗಿದ್ದಿತು. ಇದ್ದುದನ್ನೆಲ್ಲ ಜಠರಾಗ್ನಿಯನ್ನು ಅರಿಸಲು ಉಂಡುಬಿಟ್ಟಿದ್ದರು ಎಲ್ಲರೂ. ಬೊಮ್ಮಯ್ಯ ಬೀಜಕ್ಕಾಗಿ ಎಲ್ಲೆಲ್ಲಿಯೋ ಅಲೆದ. ಕೊನೆಗೆ ಬಹು ಪ್ರಯಾಸದಿಂದ ಐಗಳದಷ್ಟು ಕಡಲೆ ಬೀಜಗಳನ್ನು ಕೊಂಡು ತಂದ. ಮರ ಮಳೆಯೇನೋ ಆಗಿದ್ದಿತು. ಆದರೆ ಬಿತ್ತುವ ಹಸಿಯಾಗಿರಲಿಲ್ಲ.

'ಕಾದ ಕಬ್ಬುನ ಮೇಲೆ ಹೊಯ್ದಂತೆ ಮಳೆಯಾತು
ಸೇದಿ ನೀರುಂಡು ಬಲುಕಡಗಿ–ಭೂದೇವಿ
ಕಾದು ಅರೆಜಳಕೆ ಹಸಿ ಆರಿ' – ಹಂ.ಪ

ಹೋಗಿದ್ದಿತು. ಏನು ಮಾಡುವುದೆಂದು ಯೋಚಿಸಿದ ಬೊಮ್ಮಯ್ಯ. "ಮಳೆಯಾಗಿ ಸಿಗಲಿಲ್ಲ ಒಳೆ ಹಸಿಯು ಬಿತ್ತುದಕೆ । ಜಳಕಾರಿ ಹಸಿಯು ತಳಕಾತು–ಯೋಚಿಸಿದ! ಒಳೆ ನೆನೆಸಿ ಬೀಜ ಬಿತ್ತೋಣ !"

ಯೋಚಿಸಿದಂತೆ ರಾತ್ರಿಯೆಲ್ಲ ಕಡಲೆಯನ್ನು ನೀರಿನಲ್ಲಿ ನೆನೆಸಿ ಮರುದಿನ ಬೀಜಗಳ ಬುಟ್ಟಿಯನ್ನು ಹೊತ್ತುಕೊಂಡು ಹೊಲಕ್ಕೆ ಹೋದ. ಇನ್ನೇನು ಬಿತ್ತಲು ಪ್ರಾರಂಭಿಸಬೇಕು, ಅಷ್ಟರಲ್ಲಿ ಅದಕ್ಕೂ ಅಡೆತಡೆಯುಂಟಾಯಿತು ! 'ಸಿರಿಗಿರಿ ಮಹಾಂತ ಮಲ್ಲಯ್ಯ, ಉಘೇ ಉಘೇ ಉಘೇ' ಎಂಬ ಉದ್ಘೋಷ ಕೇಳಿ ಬಂದಿತು. ತನು ಪುಲಕಿತನಾಗಿ ಆಲಿಸಿದ ಇಳಿಹಾಳ ಬೊಮ್ಮಯ್ಯ :

---

೨. ಕೈವಲ್ಯ ಕಲ್ಪವಲ್ಲರಿ

"ಕಯ್ಯ ತಾಳಂಗಳ ಕವಿದು ಬಾರಿಸುತ
ಮೈಯೆಲ್ಲ ಬಾಯಾಗಿ ಮೃಡನ ಹಾಡಿರಿ ಭೋ !
ಹುಬ್ಬುತ್ತ ಕೊಬ್ಬುತ್ತ ಉಬ್ಬಿಯಾಡುತ್ತ
ಪಬ್ಬತದೊಡೆಯಂಗೆ ಭಕ್ತಿ ಮಾಡಿರಿ ಭೋ!
ಹಾಡುತ್ತ ಆಡುತ್ತ ನೋಡುತ್ತ ಭಕ್ತಿ
ಮಾಡಿ ಭೋ ಸರಿಗಿರಿ ಮಲ್ಲಿಕಾರ್ಜುನಗೆ !
ಸಿರಿಗಿರಿ ಮಲ್ಲಯ್ಯ ಶರಣೆನ್ನಿರಯ್ಯ
ಸಿರಿಗಿರಿ ಮಲ್ಲಯ್ಯ ಶರಣೆನ್ನಿರಯ್ಯ......"

ಓಹೋ–ಶ್ರೀಶೈಲದ ಪರಿಷೆ ! ಬೊಮ್ಮಯ್ಯನ ಮೈಯ್ಯಲ್ಲಿ ಮಿಂಚಿನ ಸಂಚಾರವಾಯಿತು ! ನಿಂತು ಅವರ ಬರವನ್ನು ನಿರೀಕ್ಷಿಸತೊಡಗಿದ. ಶ್ರೀಶೈಲ ಯಾತ್ರಿಕರು ಬಂದರು–ಬರಗಾಲದ ರಾಯಭಾರಿಗಳಂತೆ ಬಂದರು ! ಎಂದು ಊಟ ಮಾಡಿದ್ದರೋ, ಎಲ್ಲರೂ ಹಸಿದು ಕಂಗಾಲಾಗಿದ್ದರು. ಬೊಮ್ಮಯ್ಯನ ತಲೆಯಮೇಲಿರುವ ಬುಟ್ಟಿಯನ್ನು ಕಂಡು ಅವರ ಹಾರಿಹೋಗುತ್ತಲಿದ್ದ ಹರಣಗಳು ಹಿಂದಿರುಗಲಾರಂಭಿಸಿದುವು. ಬೇಡಿಯೇ ಬಿಟ್ಟರು ಬುತ್ತಿಯೆಂದು. ಹಸಿವೆ ಏನನ್ನು ಮಾಡಿಸದು?

"ಬುಟ್ಟಿಯೊಳಗಿನ ಬುತ್ತಿ ಕೊಟ್ಟು ಕಾಯೋ ತಂದೆ
ಕಟ್ಟಿಹುದು ನಿನಗೆ ಕಲ್ಯಾಣ–ಒಕ್ಕಲಿಗ
ಸಿಟ್ಟಾಗಬೇಡ ಬೇಡಿಕೆಗೆ !"
ಹಂಪ

ಸಿಟ್ಟಾಗುವುದಿರಲಿ–ಪಿಟ್ಟೆನ್ನಲಿಲ್ಲ ಬೊಮ್ಮಯ್ಯ. ಬುಟ್ಟಿಯನ್ನಿಳಿಸಿ ನೆನದು ಗುಗ್ಗರಿಯಂತಾಗಿದ್ದ ಕಡಲೆಕಾಳುಗಳನ್ನು ಹಿಡಿಹಿಡಿಯಾಗಿ ಹಂಚಿದ ಎಲ್ಲರಿಗೂ !

"ಶರಣ ಬೊಮ್ಮನ ಕರುಣೆ ಕರಗಿ ಹರಿಯಿತು ಕೇಳಿ
ಎರಡೊಂದು ಮನಕೆ ಬಗೆಯದೆಲೆ–ಬೊಮ್ಮಯ್ಯ
ಹರುಷದಲ್ಲಿ ಬೀಜ ಹಂಚಿದನು !
ಹಸಿದ ಪರಸಿಗೆ ಬೊಮ್ಮ ತುಸುತುಸುವೆ ಹಂಚಿದನು
ಹಸನಾಗ ಬೀಜ ಬುಟ್ಟಿಯೊಳು–ಐದುಳಿದು
ಬಸಗೆ ಹುಲುಸೆಂದು ಹೇಳಿದುವು !



**'ಹಂಚಿ ಉಳಿದುವು ಪಂಚ ಬೀಜಗಳು'**

ಆಗಲೂ ಸಂಚಲಿಸಲಿಲ್ಲ ಸರಣ ಬೊಮ್ಮಯ್ಯನ ಚಿತ್ತ ! ಅವನೆಂಥ ದೃಢಚಿತ್ತನೋ! ತಾನಿತ್ತ ನೆನೆಗಾಳುಗಳನ್ನು ತಿಂದು ನೆನಸುತ್ತ ಹೋದ ಯಾತ್ರಿಕರನ್ನು ನೋಡಿ ಹಿಗ್ಗಿತವನೆದೆ. ಬುಟ್ಟಿಯಲ್ಲಿ ಉಳಿದಿದ್ದ ಐದು ಬೀಜಗಳನ್ನು ನೋಡಿದ. ಗಾಳಿ ಹಾಡಿತೋ, ಬಯಲು ನುಡಿಯಿತೋ ತಿಳಿಯದು: ಆ ಐದು ಬೀಜಗಳ ಬಗ್ಗೆ ಭಾವವೊಂದು ತೇಲಿಬಂದಿತು–

ಪಂಚಮುಖ ಮಾದೇವ ಪಂಚಬೀಜಗಳಾಗಿ
ಸಂಚಾಗಿ ಬಂದ ಬೊಮ್ಮಯ್ಯನ–ಕಾಯಕವ
ಮಿಂಚಿ ತೋರಿಸಲು ಜಗದೊಳಗೆ !

ಆ ಐದರ ಐಸಿರಿಯನ್ನೇ ಶಿವಪ್ರಸಾದವೆಂದು ಭಾವಿಸಿದ ಬೊಮ್ಮಯ್ಯ ! ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಇಲ್ಲೆನ್ನದೆ ನೀಡುವವನು ಅವನಿರಲು ನಾನೇಕೆ ವ್ಯಸನ ಪಡಬೇಕು? ಶಿವ ಮಾಡಿಸಿದಂತಾಗಲಿ–ಎಂದು ಆ ಐದು ಬೀಜಗಳನ್ನೇ ಅಲ್ಲೊಂದು ಇಲ್ಲೊಂದು ಅರೆಜಳದಿಂದ ಆರಿದ್ದ ಆ ಭೂಮಿಯಲ್ಲಿ ಊರಿದ ಬೊಮ್ಮಯ್ಯ :

"ಉಳಿದೈದು ಬೀಜಗಳ ಇಳಿಹಾಳ ಬೊಮ್ಮಯ್ಯ
ಹೊಲದೊಳಗೆ ಹೂಳಿ ಅಲ್ಲೊಂದು ಇಲ್ಲೊಂದು
ಎಳೆದುಗಿವಿನಂತೆ ಮನೆ ಸೇರಿದನು" ಹಂ.ಪ

ಎಲ್ಲರೂ ಬೊಮ್ಮಯ್ಯನಂತೆ ನಿಜವನರಿದ ನಿಶ್ಚಿಂತರು ಎಲ್ಲಿರುತ್ತಾರೆ? ಅವನ ಪಾಲುಗಾರರು ಬೊಮ್ಮಯ್ಯನು ಬೀಜಗಳನ್ನೂ ದಾನಮಾಡಿ ಬಂದುದನ್ನು ಕೇಳಿ ಕೆರಳಿ ಕಿಡಿಕಿಡಿಯಾದರು. 'ಬೀಜಗಳ ಕೊಡು ನಮಗೆ ಮೋಜಲ್ಲ ಬೊಮ್ಮಯ್ಯ ಮಾಜಿಕಾಲಲ್ಲ–ಬರಗಾಲ !' ಎಂದು ಹಟ ಹಿಡಿದರು. ಬೊಮ್ಮಯ್ಯ ಶಾಂತನಾಗಿಯೇ ಉತ್ತರವಿತ್ತ:

"ನಮ್ಮದೇನ್ನುವ ಬದುಕು ಸೊಮ್ಮು ಶಿವನದು ಕಾಣೊ
ಹುಮ್ಮಸವು ಬೇಡ ರೈತರಿಗೆ– ಕೈಲಾಸ
ಒಮ್ಮನದಿ ನೀಡ ಕೈಮುಂದೆ !"

ಆದರೆ ಅವನ ಈ ಉದಾರವಾಣಿ ಅರ್ಥವಾಗಲಿಲ್ಲವರಿಗೆ–ವ್ಯರ್ಥವಾಯಿತು.' ಬೋರಗಲ್ಲಿನ ಮೇಲೆ ನೀರು ಎರೆದಂತಾಯಿತು.' ಬೊಮ್ಮಯ್ಯನಿಗೆ ಬಿರಿನುಡಿಗಳನ್ನಾಡುವುದನ್ನು ಅವರೇನೂ ಬಿಡಲಿಲ್ಲ. ಬೊಮ್ಮಯ್ಯನವರ ಬಿರುನುಡಿಗಳನ್ನು ಕೇಳಿಯೂ ಕೇಳದಂತೆ ಪ್ರಸನ್ನಚಿತ್ತನಾಗಿಯೇ ಇದ್ದ. ಶಿವನನ್ನು ಸಂಪೂರ್ಣವಾಗಿ ನಂಬಿದವರಿಗೆ ಚಿಂತೆಯೆಲ್ಲಿ, ಮೋಹವೆಲ್ಲಿ, ಶೋಕವೆಲ್ಲಿ?

'ನನ್ನನ್ನು ನಂಬಿದವರ ಯೋಗಕ್ಷೇಮವನ್ನು ನಾನೇ ವಹಿಸಿಕೊಳ್ಳುತ್ತೇನೆ' ಎಂದು ಆಬಯುವಿತ್ತಿಲ್ಲವೆ ಭಗವಂತ? ಅದರಂತೆ ಇಳಿಹಾಳ ಬೊಮ್ಮಯ್ಯನ ಯೋಗಕ್ಷೇಮವನ್ನೂ ಅವನೇ ವಹಿಸಿಕೊಂಡ. ಬೊಮ್ಮಯ್ಯನೇನೋ'ಬೊಮ್ಮವನು ಅರಿದಿಹರೆ ಸುಮ್ಮನೆ ಇರಬೇಕು' ಎಂಬ ಸೂತ್ರದಂತೆ ಶಿವಕೃಪೆಯೊಂದನ್ನು ನೆಮ್ಮಿ ಸುಮ್ಮನಿದ್ದುಬಿಟ್ಟ. ಆದರೆ ಶಿವ ಸುಮ್ಮನಿರಲಿಲ್ಲ. ಅವನ ಭೂಮಿ ಆ ಐದು ಬೀಜಗಳಿಂದಲೇ ಬೆಳೆಯುವಂತೆ ಮಾಡಿದ:

"ಪಂಚಬೀಗಳೆಲ್ಲ ಸಂಚರಿಸಿ ಹೊಲದೊಳಗೆ
ಮಂಚಿಗೆಯ ನಿಲವು ಬೆಳೆ ಬಂದು–ನಗುತಿರಲು
ಸಂಚಿತವು ಪುಣ್ಯ ಬೊಮ್ಮನದು ! ಹಂ.ಪ

ನೋಡಿದ ಜನರೆಲ್ಲ ಬೆರಗಾಗಿ ಬೆರಳು ಕಚ್ಚಿದರು. ಅಂಥ ಬೆಳೆ ಹಿಂದೆಂದೂ ಬಂದಿರಲಿಲ್ಲ, ಆ ನಿಟ್ಟಿನಲ್ಲಿ !

ಬೆಚ್ಚಿ ಬಿದ್ದಿತು ಜನವು ಅಚ್ಚರಿಯ ಮಡಿಲೊಳಗೆ
ಮೆಚ್ಚಿದರೆ ಶಿವನು ಕಡಮೇನು–ಜಗದೊಳಗೆ
ಹೆಚ್ಚುವುದು ದೀಪ ಶರಣರದು ! ಹಂ.ಪ

ಎಲ್ಲರೂ ಅಚ್ಚರಿಯ ಮಡುವಿನಲ್ಲಿ ಮುಳುಗಿದರೆ ಬೊಮ್ಮಯ್ಯ ಭಕ್ತಿಯ ಬಾಂದೊರೆಯಲ್ಲಿ ಮಿಂದು ಆನಂದತುಂದಿಲನಾದ. 'ಕಾಲಿಡಲು ಕೂಡ ಸ್ಥಳವಿಲ್ಲದಂತೆ' ಕಡಲೆ ಬೆಳೆದಿದ್ದಿತು ಹೊಲದಲ್ಲಿ ! ಅವನೊಲಿದರೆ ವಿಷವೂ ಅಮೃತವಾಗುವಾಗ ಬರಿನೆಲ್ಲ ಬೆಳೆದುದಾವ ಚೋದ್ಯವೆಂದು ಅವನು ಶಿವನನ್ನು ಮೊದಲಿಗಿಂತಲೂ ಬಲವಾಗಿ ನಂಬಿದ. ಬೆಳೆಯನ್ನು ಒಕ್ಕಿ ತೂರಿ ರಾಶಿಮಾಡಿದ. ಅವನು ಕಡಲೆಯನ್ನು ತೂರುತ್ತಿರಲು ಬಾನು ಹಾಡಿತು :

ಮೂರು ಕಾಲಿನ ಮೆಟ್ಟು ಮೂರು ಲಿಂಗಗಳೇನೊ
ತೂರುವಾ ಜೀವ ಚಿತ್ಕಳೆಯು–ವಚನಗಳು
ತೂರಿದಾ ರಾಶಿ ಶಿವಮತಕೆ !

ಆ ಕಡಲೆಯರಾಶಿ ಮುಂಬರುವ ಬಸವಾದಿ ಪ್ರಮಥರ ವಚನರಾಶಿಗೆ ಸಂಚಕಾರವಾಯಿತು. ಅಂಚೆಕಾರನಾಯಿತು. ಉಳಿದ ಒಕ್ಕಲಿಗರೆಲ್ಲ ಬರಿ ಕಣಗಳಲ್ಲಿ ಬಾಯ್ಬಿಡುತ್ತಲಿದ್ದಾಗ ಈ ಭಕ್ತಿಯ ಬೇಸಾಯಗಾರ ಅರಸನಿಗೂ ಕರಕೊಟ್ಟ, ಕೋರುಗಾರರಿಗೂ ಪಾಲು ಕೊಟ್ಟ , ಬೇಡಿದವರಿಗೂ ಕೊಟ್ಟ , ಬೇಡದವರಿಗೂ ಕೊಟ್ಟ ! ಅವನ ಅಪಾರ ಕರುಣೆಯೇ ಅಂತಹುದು. ಅದಿ ಅಕ್ಷಯ ಪಾತ್ರೆಯಾಗಿ ರಕ್ಷಿಸಿತು ಬರಗಾಲದಿಂದ ನೊಂದವರನ್ನು, ಬರಗಾಲದಲ್ಲಿ ಬೆಂದವರನ್ನು.

ಹೇಳದೆ ಕಾಯಕವನ್ನು ಕಲಿಸಿದ ಗುರು ಬೊಮ್ಮಯ್ಯ. ಅವನ ಕೈ ಮುಟ್ಟಿದ ಹೊಲಗೆಲಸ ಶಿವಪೂಜೆಯಾಯಿತು; ಕೃಷಿಕರ್ಮ ಧರ್ಮಸಾಧನೆಯು ಸಾಧನವಾಯಿತು ! ಎಲ್ಲರಿಗೂ ಹಂಚಿ ತನಗುಳಿದಷ್ಟರಲ್ಲಿಯೇ ತುಷ್ಟನಾದನು ಮಾತ್ರವಲ್ಲ–ದಾಸೋಹವನ್ನು ನಡೆಸಿದನಾ ಧನ್ಯಾತ್ಮ : "ನಡಸಿದನು ದಾಸೋಹ ಹೊಡೆಯಾಗಿ ಶಿವಭಕ್ತಿ । ಬುಡವಾತು ಶಿವನ ಮಂಟಪಕೆ !"

ಹೀಗೆ ಇರವೆಲ್ಲ ಹರಭಕ್ತಿಯಾಗಿ ಬಾಳಿ ಬಯಲಾದ ಬೊಮ್ಮಯ್ಯ. "ಇರುತಿರುತ ಬೊಮ್ಮಯ್ಯ ಹರಸೇವೆ ಸಲ್ಲಿಸುತ । ಅರಿತು ಲಿಂಗದೊಳು ಬಯಲಾದ–ಭೂಲೋಕ! ಗುರುಭಜನೆ ಮಾಡಿ ಗುಡಿ ಕಟ್ಟಿ" ವರುಷಕ್ಕೊಮ್ಮೆ ತೇರನೆಳೆಯುತ್ತಿದೆ.

ಇಂದಿಗೂ ಈ ನಾಡ ಒಕ್ಕಲಿಗರು ಪ್ರಸಂಗ ಒದಗಿದಾಗ ಪ್ರಾರ್ಥಿಸುವುದು ಬೊಮ್ಮಯ್ಯನನ್ನೇ ! ಏನೆಂದು?

"ಶರಣು ಶರಣೆಂಬುವೆನು ಹರಣ ಹಾರುವ ತನಕ
ಕರುಣಸಿರಿ ಶರಣ ಬೊಮ್ಮಯ್ಯ–ನಮಗಿನ್ನು
ಹರಸರಿ ಹುಲುಸು ಹುಲ್ಹುಲ್ಲಿಗೋ !" ಎಂದು

ಈ ನಾಡಿನ ಹುಲ್ಲು ಹುಲ್ಲಿಗೂ ಹುಲುಸನ್ನು ಹರಸಬಲ್ಲ ಶರಣ ಬೊಮ್ಮಯ್ಯ ಈ ನಾಡಿನ ಒಕ್ಕಲಿಗರ ರಕ್ಷೆಯಾಗಿ ಚಿರಕಾಲ ನಿಲ್ಲಲಿ–ಕೀರ್ತಿಕಾಯದಲ್ಲಿ !

■

# ಏಕಾಂಗವೀರ ಏಕಾಂತದ ರಾಮಯ್ಯ

ಇಂದಿನ ಕಲಬುರುಗಿ ಜಿಲ್ಲೆಯಲ್ಲಿ ತಾಲ್ಲೂಕು ಸ್ಥಳವಾಗಿರುವ ಆಳಂದೆ (ಅಲ್ದಿ) ಹಿಂದೆ ಕ್ರಿ.ಶ. ಎಂಟನೆಯ ಶತಮಾನದ ಆದಿಯಲ್ಲಿಯೇ 'ಆಲಂದೆ ತೀರ್ಥ' ವೆಂದು ಪ್ರಖ್ಯಾತವಾಗಿದ್ದಿತು. ಅಲ್ಲಿಯ ಶಿಲಾಶಾಸನದಲ್ಲಿ ಉಕ್ತವಾಗಿರುವ ಸೋಮನಾಥ ದೇವಾಲಯವು ಪ್ರಸಿದ್ಧವಾದುದಾಗಿದ್ದಿತು. ಅಬ್ಬಲೂರು ಶಾಸನದಲ್ಲಿ.

"ಪ್ರಕಟಿತಕಮಮರಾವತಿಯೊಳ್ ।
ಸುಕೇಶಿಯುಂ ಮಂಜುಘೋಷೆಯುಂ ತಾಮಿರ್ಬರ್ ॥
ಸಕಲ ಮಧೂತತಿಯೆಲ್ಲಂ ।
ಸುಕೇಶಿಯರ್ ಮಂಜುಘೋಷೆಯರ್ ತತ್ಪುರದೊಳ್ ॥"

ಎಂದು ಆಲಂದೆಯನ್ನು ವರ್ಣಿಸಿದೆ.

ಅಲ್ಲಿ ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದ ವತ್ಸಗೋತ್ರದ ಪುರುಷೋತ್ತಮಭಟ್ಟ ಸೀತಾದೇವಿಯರು ಶ್ರೀ ಸೋಮನಾಥನ ನಚ್ಚಿನ ಭಕ್ತರಾಗಿದ್ದರು. ಸೋಮನಾಥನ ವರದಿಂದಲೇ ಕುವರನೊಬ್ಬನನ್ನು ಪಡೆದರು. ಅವನಿಗೆ 'ರಾಮ' ಎಂಬ ಮುದ್ದಾದ ಹೆಸರನ್ನಿಟ್ಟು ಲಾಲಿಸಿ ಪಾಲಿಸಿದರು. ಸೋಮನ ವರದಿಂದ ಹುಟ್ಟಿದ ರಾಮನು ಆತ್ಮಾರಾಮವಿರಾಮನಾಗಿಬಿಟ್ಟನು.

ಅವನು ಶಿವಯೋಗ ಬಳೆದಂತೆ ಬಳೆದನು. ನುಡಿದು ತಪ್ಪದ ಹಿಡಿದು ಬಿಡದ ನಡತೆ ಅವನದು. ನಿರಾಸಕ್ತ, ನಿಸ್ಪೃಹ, ನಿರಾಡಂಬರ ಜೀವಿ. ಯಾವಾಗಲೂ ಏಕಾಂತದಲ್ಲಿದ್ದು ಶಿವಯೋಗಸಾಧನೆಯನ್ನು ಮಾಡುವುದರಲ್ಲಿಯೇ ತಲ್ಲೀನನಾಗಿರುತ್ತಿದ್ದನು. ಅವನ ಈ ಏಕಾಂತ ಪ್ರಿಯತೆ ಅವನಿಗೆ 'ಏಕಾಂತದ ರಾಮಯ್ಯ' ನೆಂಬ ಅನ್ವರ್ಥಕ ನಾಮವನ್ನು ತಂದುಕೊಟ್ಟಿತು.

ಹೀಗೆ ಯೋಗಸ್ಥನಾಗಿರಲು ಒಮ್ಮೆ ಏಕಾಂತರಾಮಯ್ಯನಿಗೆ ಶಿವಶರಣರ ಸ್ಥಾನಗಳನ್ನು ನೋಡಬೇಕೆಂಬ ಅಭಿಲಾಷೆಯುಂಟಾಯಿತು. ಹೊರಟ :

" ಸಕಲ ಭವಿಗಳ ಪಾಪಮಂ ನೋಡಿ ಕಳೆವುತಂ
ಸಕಳ ದೇಶಂಗಳಂ ಪಾವನಂ ಮಾಡುತಂ" ಹೊರಟ. ಹ.ರ.

ಮೊದಲ ಕೇಂದ್ರಸ್ಥಾನವಾದ ಕಲ್ಯಾಣಕ್ಕೆ ಹೋಗಿ, ಅದಕ್ಕೆ ಸಮೀಪದಲ್ಲಿರುವ ಶಿವಪುರದಲ್ಲಿ ಕೆಲವು ದಿನ ಶಿವಾನುಭವಗೋಷ್ಠಿಯಲ್ಲಿದ್ದು, ಅಲ್ಲಿಂದ ಪುಲಿಗೆರೆಗೆ (ಇಂದಿನ ಲಕ್ಷ್ಮೇಶ್ವರಕ್ಕೆ) ಹೋದನು. ಅಲ್ಲಿ ಸೋಮಯ್ಯನಿಂದ ಸ್ಥಾಪಿತವಾಗಿದ್ದ ಸೋಮನಾಥ ಲಿಂಗಕ್ಕೆರಗಿ ಆಗ ಅನೇಕ ಶರಣರ ಅವಾಸ ಸ್ಥಾನವಾಗಿದ್ದ ಬನವಾಸಿ ಪ್ರಾಂತದತ್ತ ನಡೆದನು. ಅಲ್ಲಿ ಬಳ್ಳಿಗಾವಿ, ರೇವಣ ಸಿದ್ಧಗಿರಿ, ಮುತ್ತಿಗಿ, ಹಿರೇಜಂಬೂರು ಮೊದಲಾದ ಪುಣ್ಯಸ್ಥಳಗಳನ್ನು ಸಂದರ್ಶಿಸಿ ಬನವಾಸಿಯ ಪೂರ್ವಕ್ಕೆ ೨೪ ಮೈಲಿಗಳ ಮೇಲಿರುವ ಅಬ್ಬಲೂರಿಗೆ ಬಂದನು. ಅದು–

> 'ಹೊಳೆ ಹೊಳೆವ ಹೊಸಪರಿಯ ಸೋಮವೀಧಿಗಳಿಂದ
> ನಳನಳಿಸುತಿಪ್ಪ ಜಿನಭವನ ಕೋಟೆಗಳಿಂದ
> ದೆಸೆದೆಸೆಗೆ ಸಂಭ್ರಮಿಪ ಜೈನರೊತ್ತೊತ್ತೆಯಿಂದ' ಹ.ರ.

ಎಸೆಯುತ್ತಿದ್ದಿತು. ಅಲ್ಲಿ ಏಕಾಂತದ ರಾಮಯ್ಯನು ಶಿವಾಲಯವೊಂದನ್ನು ಹುಡುಕುತ್ತ ಅಲೆದಾಡಿದನು. ಅದು ಜೈನರ ಕೇಂದ್ರವಾಗಿದ್ದ ಕಾರಣ ಅವನಿಗೆ ಎಲ್ಲ ಕಡೆಗೆ ಜಿನಮಂದಿಗಳೇ, ಜೈನ ಬಸದಿಗಳೇ ಕಂಡುವು. ಊರೆಲ್ಲ ಅಲೆದ ಮೇಲೆ ಬ್ರಹ್ಮೇಶ್ವರ ದೇವಾಯವೆಂಬ ಬೀಳಾದ ಶಿವಾಲಯವೊಂದು ಗೋಚರಿಸಿತವನಿಗೆ ಶಿವಾಲಂಯು ಸಿಕ್ಕಿತೆಂದು ಆನಂದವಾದರೂ ಅಲ್ಲಿಗೆ ಹೋದವೋಲೆ ಉದ್ದೇಗವಾಯಿತವನಿಗೆ ಅದೊಂದು ಹಾಳು ಗುಡಿ. ಅಲ್ಲಿದ್ದ ಬ್ರಹ್ಮೇಶ್ವರ. 'ಪೂಜೆ ಇಲ್ಲದೆ ಮಜ್ಜನಕ್ಕೆರೆವರಿಲ್ಲದಲೆ....ತಂದೆ ಪುತ್ರನ ಬರವ ಮೋಹದಿಂ ನೋಳ್ಪಂತೆ' ನೋಡುತ್ತ ಕುಳಿತಿದ್ದ. ಶೋಕ ಉಕ್ಕಿ ಬಂದಿತು ಏಕಾಂತದ ರಾಮಯ್ಯನಿಗೆ:

> 'ಧೊಪ್ಪೆನಲ್ ಶಂಕರನ ಚರಣತಳದೊಳು ಬಿರ್ದು
> ಕುಪ್ಪಳಿಸಿ ಕಣ್ಣೀರೊಡೆಯಲಳಲುತ್ತಿರ್ದು'

ಲಿಂಗವನ್ನಪ್ಪಿಕೊಂಡು ಅಡಿಗಡಿಗೆ ಮುಂಡಾಡಿ ಮನದಣಿವಂತೆ ಪೂಜೆಯಂ ಮಾಡಿ ಮಲಗಿದನಲ್ಲಿಯೇ.

ಬೆಳಗಾಯಿತು, 'ವಸುಧೆಗಿನ ಕಿರಣ ಶಿವಭಕ್ತಿ ಪಸರಿಸುವಂತೆ ದೆಸೆದಿಕ್ಕನಾವರಿಸಿ ತೊಳಗಿ ಬೆಳಗಿತು.' ಏಕಾಂತರಾಮಯ್ಯನೆದ್ದು ಶಿವಪೂಜೆಗೆ ಹೂವ ತರಲೆಂದು ರಂಗಮಂಪಟದ ಮಧ್ಯಕ್ಕೆ ಬರಲು ಅಲ್ಲಿ ಲಿಂಗದ ಕಡೆಗೆ ಕಾಲುಮಾಡಿ ಜೈನನೊಬ್ಬನು ಮಲಗಿದ್ದುದು ಕಂಡುಬಂದಿತು. ಅದನ್ನು ಕಂಡು ರಾಮಯ್ಯನಿಗೆ ದುಃಖವಾಯಿತು. ಅವನನ್ನು ಎಬ್ಬಿಸಿ 'ದೇವರ ಕಡೆಗೆ ಕಾಲುಮಾಡಿ ಮಲಗುವುದು ತರವೆ?' ಎಂದು ಕೇಳಿದನು. 'ಯಾವ ದೇವನಿವನು?' ಎಂದು ಕೇಳಿದನು ಆ ಜೈನ. ಬಹುಶಃ ಅಲ್ಲಿ ದೇವರಿದ್ದುದೇ ಅವನಿಗೆ ಗೊತ್ತಿರಲಿಲ್ಲ. ರಾಮಯ್ಯ ನುಡಿದ : 'ತ್ರಿಪುರಗಳನ್ನು



**'ದೇವರ ಕಡೆಗೆ ಕಾಲು ಮಾಡಿ ಮಲಗುವುದು ತರವೆ?'**

ಸುಟ್ಟ, ಕಾಲನನ್ನುರುಹಿದ, ಕಾಮನನ್ನು ದಹಿಸಿದ, ಸೋಮನನ್ನು ಸೂಡಿದ, ವಿಷವನ್ನು ಆಪೋಶನಗೈದ, ಬಾಣನಿಗೆ ಮಯೂರನಿಗೆ, ಕಾಳಿದಾಸನಿಗೆ, ನಂಬಿಯಣ್ಣನಿಗೆ, ಓಹಿಲನಿಗೆ, ಉದ್ಭಟನಿಗೆ, ಕೊಡಗೂಸಿಗೆ ಅನುಗ್ರಹಿಸಿದ ದೇವನಿವ– ಅರಿಯೆಯಾ?' ಅಸಕ್ಕವನು ಮಾರ್ನುಡಿದ :

"ಎಲೆಭಕ್ತ ತೆಗೆ ಪುರಾಣದ ಮಾತು ನಿನಗೇಕೆ?
ಎಲೆ ಭಕ್ತ ಹಿಂದಾದ ಹಳೆಯ ಮಾತುಗಳೇಕೆ?
ಇಂದೆಮ್ಮ ಮುಂದೆ ನಿನ್ನಯ ತಲೆಯನರಿದು ಪಡೆ !"
"ಪಡೆದರೇನು ಮಾಡುವಿ?"
"ನಾನೂ ನಿನ್ನ ದೇವರ ಭಕ್ತನಾಗುವೆ."
"ಹಾಗೆಯೇ ಆಗಲಿ."

ಏಕಾಂತದ ರಾಮಯ್ಯ ತನ್ನ ಶಿರಸ್ಸನ್ನು ಕತ್ತರಿಸಿ ಬೇರಿಟ್ಟು ಮರಳಿ ಪಡೆವನೆಂಬ ವಾರ್ತೆ ಸುತ್ತಲೂ ಹಬ್ಬಿ, ಸಾವಿರಾರು ಜನರು ನೋಡಲು ಬಂದರು. ಅಗ್ಗಣಿಯ ಹೊನ್ನಿ ತಂದೆ. ಅಗ್ಗಳೆಯ ದೇವರಸ ಇತ್ಯಾದಿ ಭಕ್ತರೂ ಬಂದರು. ಆಗ ರಾಮಿ ತಂದೆ–

'ಏನೆಂಬೆನೇನೆಂಬೆ ನೆಲೆಲೆಲೆಲೆ ಕೌತುಕಂ
ಆನರಿಯೆ ನಾನರಿಯೆನಾಹ ಧೀರಾಂತಕಂ' ಹ.ರ.

ಎಂದು ಜನ ಬೆಚ್ಚಿ ಬೆರಗಾಗುತ್ತಿರಲು ಘರಿಲೆಂದು ಶಿರವನರಿದು ಬೇರಿಟ್ಟನಂತೆ. ಅದನ್ನು ಹೊನ್ನ ಹರಿವಾಣದಲ್ಲಿರಿಸಿ ಏಳು ದಿನಗಳವರೆಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಮೆರೆಸಿ ತಂದು ಮತ್ತೆ ಮುಂಡದ ಮೇಲೆ ರುಂಡವನ್ನು ಪೀಠಿಕೆಯ ಮೇಲೆ ಲಿಂಗವನ್ನು ಇಳಿವುವಂತೆ ಇಳಿಸಲು–

'ಆಯೇಳ್ದನಾಯೇಳ್ದನೆಮ್ಮಯ್ಯ ರಾಮಯ್ಯ !
ಆಯೇಳ್ದ ನಾಯೇಳ್ದ ನೆಲೆಲೆಲೆಲೆ ರಾಮಯ್ಯ !
ಆ ನಡೆದನತ್ತತ್ತಲೇಕಾಂತರಾಮಯ್ಯ !
ಈ ನಡೆದನಿತ್ತಿತ್ತಲೇಕಾಂತ ರಾಮಯ್ಯ !' ಹ.ರ.

ಎಂದು ನೆರೆದ ಜನ ಅಚ್ಚರಿಗೊಳ್ಳುತ್ತಲಿರಲು ಏಕಾಂತರಾಮಯ್ಯ ಮರಳಿ ಹರಣ ಪಡೆದನಂತೆ. ಅಬ್ಬಲೂರು ಶಾಸನದಲ್ಲಿಯೇ ಈ ಪವಾಡದ ವರ್ಣನೆಯಿದೆ. ಶ್ರದ್ಧೆಯಿದನ್ನು ಸತ್ಯವೆಂದು ನಂಬಿದೆ. ನಂಬದಿದ್ದವರೂ ಏಕಾಂತ ರಾಮಯ್ಯನನ್ನು ಮಹಾಪುರುಷನೆಂದು ಒಪ್ಪಲೇಬೇಕು. ಅವನು ಮಹಾಮಾನವನಾಗಿರದಿದ್ದರೆ ಅಬ್ಬಲೂರಿನಲ್ಲಿ ವೀರಸೋಮೇಶ್ವರಲಿಂಗದ ಪ್ರತಿಷ್ಠಾಪನೆಯಾಗುತ್ತಿರಲಿಲ್ಲ; ಬ್ರಹ್ಮೇಶ್ವರ ದೇವಾಲಯದ ಜೀರ್ಣೋದ್ಧಾರವಾಗುತ್ತಿರಲಿಲ್ಲ; ಬಿಜ್ಜಳನು ಮಂಗಳವಾಡದಲ್ಲಿ ಮಾಂಡಲಿಕನಾಗಿದ್ದಾಗಿ ಏಕಾಂತ ರಾಮಯ್ಯನ ಕೀರ್ತಿಯನ್ನು ಕೇಳಿ ಕರೆಸಿಕೊಂಡು ಗೌರವಿಸಿ, ಅವನು ಸ್ಥಾಪಿಸಿದ ವೀರಸೋಮನಾಥದೇವರ ಪ್ರಸಾದ, ಜೀರ್ಣೋದ್ಧಾರ, ಲಿಂಗಭೋಗ, ನೈವೇದ್ಯಗಳಿಗಾಗಿ ಬನವಾಸಿ ಹನ್ನೆರಡು ಸಾವಿರ ಪ್ರಾಂತದಲ್ಲಿ ಅಬ್ಬಲೂರಿನ ಉತ್ತರಕ್ಕೆ ಎರಡು ಮೈಲಿಗಳಲ್ಲಿರುವ ಗೋಗಾವೆ (ಈಗಿನ ಭೋಗಾವಿ) ಗ್ರಾಮವನ್ನು ಕ್ರ.ಶ. ೧೧೫೫ ರಲ್ಲಿ ಉಂಬಳಿ ಹಾಕಿ ಕೊಡುತ್ತಿರಲಿಲ್ಲ; ಚಾಳುಕ್ಯವಂಶದ ನೂರ್ಮಡಿ ತೈಲಪನ ಮಗನಾದ ನಾಲ್ಕನೆಯ ಸೋಮೇಶ್ವರನೂ ಅವನ ಸೇನಾನಾಯಕನಾದ ಬರ್ಮದೇವನೂ 'ನೆರೆ ಹಳ್ಳಿಯ ಕೊಪ್ಪ' ಎಂಬ ಗ್ರಾಮದಲ್ಲಿ ಬೀಡು ಬಿಟ್ಟಾಗ ಅವನ ಯಶಶ್ಚಂದ್ರಿಕೆಯಿಂದ ಆಕರ್ಷಿತರಾಗಿ ಅವನನ್ನು ಕರೆಸಿಕೊಂಡು, ಮನ್ನಿಸಿ ಅವನು ಸ್ಥಾಪಿಸಿದ ವೀರಸೋಮನಾಥ ದೇವಾಲಯದ ಜೀರ್ಣೋದ್ಧಾರಕ್ಕೂ

ಲಿಂಗಭೋಗ, ರಂಗಭೋಗ, ನೈವೇದ್ಯ, ಉತ್ಸವಾದಿ ಪರ್ವಗಳಿಗೂ ಅನ್ನದಾನ–ವಿದ್ಯಾದಾನಾದಿ ಕಾರ್ಯಗಳ ನಿರ್ವಹಣೆಗಾಗಿಯೂ ಅಬ್ಬುಲೂರು ಗ್ರಾಮವನ್ನೇ ಅದರ ಮೇಲಾಳಿಕೆ, ಮನ್ನೇಯಸುಂಕ ದಂಡದೋಷ, ನಿಧಿನಿಕ್ಷೇಪ ಸಹಿತವಾಗಿ ಧಾರೆಯೆರೆದು ಕೊಡುತ್ತಿರಲಿಲ್ಲ ; ಕದಂಬ ರಾಜನಾದ ಕಾಮದೇವನು ಹಾನಗಲ್ಲಿನಲ್ಲಿ ಮಾಂಡಳಿಕನಾಗಿ ರಾಜ್ಯವಾಳುತ್ತಲಿದ್ದಾಗ ಒಮ್ಮೆ ಅಬ್ಬಲೂರಿಗೆ ಹೋಗಿ ವೀರಸೋಮನಾಥ ದೇವಾಲಯದಿಂದಲೂ ಅದರ ನಿರ್ಮಾಪಕನಾದ ಏಕಾಂತದ ರಾಮಯ್ಯನಿಂದಲೂ ಪ್ರಭಾವಿತನಾಗಿ ಅವನನ್ನು ಹಾನಗಲ್ಲಿಗೆ ಕರೆದೊಯ್ದು ಅವನೊಡನೆ ಶಿವಗೋಷ್ಠಿಯನ್ನು ನಡಸಿ ಸಂತೋಷಚಿತ್ತನಾಗಿ ಹಾನಗಲ್ಲು ಐದುನೂರರ ಪ್ರಾಂತದಲ್ಲಿ ಮುಂದಗೋಡಿನ ಹತ್ತಿರದಲ್ಲಿರುವ ‘ಮಲ್ಲವಳ್ಳಿ’ ಗ್ರಾಮವನ್ನು ವೀರಸೋಮನಾಥ ದೇವರ ಅಂಗಭೋಗ ರಂಗಭೋಗಾದಿ ಪರ್ವಗಳಿಗಾಗಿ ದಾನಕೊಡುತ್ತಿರಲಿಲ್ಲ; ಅದೇ ವಂಶದ ಮಲ್ಲಿದೇವನು ಸಹ ಈ ದೇವಾಲಯಕ್ಕೆ ಉಂಬಳಿ ಬಿಡುತ್ತಿರಲಿಲ್ಲ.

ಏಕಾಂತ ರಾಮಯ್ಯನು ಶಿವಯೋಗ ಸಿದ್ಧಿಯನ್ನು ಪಡೆದಿದ್ದನೆಂಬುದರಲ್ಲಿ ಸಂದೇಹವೇ ಇಲ್ಲ. ಅವನ ಅಂಗಚೈತನ್ಯ ಅವನಿಗೆ ಅಧೀನವಾಗಿದ್ದಿತು. ಆಲಂದೆಯಲ್ಲಿ ಉದಿಸಿ, ಅಬ್ಬಲೂರಿನಲ್ಲಿ ಗೆಲುವುಗಂಬ ನೆಟ್ಟ ಇವನು ಬಸವಣ್ಣನವರ ಹಿರಿಯ ಸಮಕಾಲೀನನೆಂದು ಹೆಸರಾಗಿದ್ದಾನೆ. ಅವರ ತರುವಾಯದಲ್ಲಿಯೂ ಕೆಲವು ವರ್ಷ ಅವನು ಜೀವಿಸಿರಬೇಕೆಂದು ತೋರುತ್ತದೆ. ಬಿದ್ದವರನ್ನು ಉದ್ಧರಿಸಿದ ಸಿದ್ಧಪುರುಷರಲ್ಲಿ ಸ್ಥಾನವಿದೆ ಅವನಿಗೆ; ಬದ್ಧರನ್ನು ಮುಕ್ತರನ್ನಾಗಿ ಮಾಡಿದ ಮಹಿಮರಲ್ಲಿ ಸ್ಥಳವಿದೆ ಅವನಿಗೆ. ಬಿಜ್ಜಳನು ಕ್ರಿ.ಶ. ೧೧೫೫ ಅಥವಾ ಅದಕ್ಕೂ ಸ್ವಲ್ಪ ಮೊದಲು ಬನವಾಸಿ ನಾಡಿನಲ್ಲಿ ಮಾಂಡಳಿಕನಾಗಿ ಆಳುತ್ತಿದ್ದನೆಂದು ತಿಳಿದುಬಂದಿದೆ. ಆದುದರಿಂದ ಏಕಾಂತದ ರಾಮಯ್ಯನು ೧೧೫೫ ಕ್ಕಿಂತಲೂ ಮೊದಲೇ ಪ್ರಸಿದ್ಧನಾಗಿ ಕದಂಬ ವಂಶದ ಕಾಮದೇವನ ಕಾಲದವರೆಗೆ ಸುಮಾರು ೪೦–೫೦ ವರ್ಷ ತೋಜೋಮಯನಾಗಿ ರಾರಾಜಿಸಿದನೆಂದು ಹೇಳುಬಹುದಾಗಿದೆ. ಅಬ್ಬಲೂರಿನ ಸೋಮೇಶ್ವರ ದೇವಾಲಯದ ಶಿಲಾಲಿಪಿ ಮತ್ತು ಭಿತ್ತಿ ಚಿತ್ರಗಳು ಅವನ ಕೀತೀಪತಾಕೆಗಳಾಗಿ ಇಂದಿಗೂ ನಿಂತಿವೆ.

ರಾಜರಿಂದ ರೈತರವರೆಗೆ, ಸಾಮಂತ ಶ್ರೀಮಂತರಿಂದ ಸಾಮಾನ್ಯರವರೆಗೆ ಸರ್ವರಿಮದ ಸೇವ್ಯನಾಗಿದ್ದ ಏಕಾಂತದ ರಾಮಯ್ಯ ವಚನಕಾರನೂ ಆಗಿದ್ದಾನೆ. ಅವನ ಹತ್ತೇ ವಚನಗಳು ಸಿಕ್ಕಿದ್ದರೂ ಅವುಗಳಲ್ಲಿ ಅವನ ವ್ಯಕ್ತಿತ್ವದ ಕುರುಹುಗಳನ್ನು ಕಾಣಬಹುದಾಗಿದೆ :

"ಅಶನ ವ್ಯಸನ ಸರ್ವ ವಿಷಯಾದಿಗಳಲ್ಲಿ ಹುಸಿದು
ಪಿಸುಣತ್ವದಿಂದ ಗಸಣಿಗೊಂಡು ಮಾಡಿಸಿಕೊಂಬುದು ಸಂಬಂಧವಲ್ಲ.
ತಿಲರಸ ವಾರಿಯ ಭೇದದಂತೆ ಮಣಿಮೊಳಗಿದ್ದ ಸೂತ್ರದಂತೆ
ಅಂಗವತೀರ್ಚಿ ಪಾಯ್ದುನಿಂದ ಅಹಿಯ ಅಂಗದಂತೆ
ಸದ್ಗುರುಸ್ಥಲದ ಸಂಬಂಧ– ಎನ್ನಯ್ಯ ಚೆನ್ನರಾಮೇಶ್ವರ
ಲಿಂಗವನರಿಯಬಲ್ಲಡೆ"

–ಎಂಬ ವಚನದಲ್ಲಿ ಸದ್ಗುರು ಸ್ಥಲದ ಸಂಬಂಧವನ್ನು ವಿವರಿಸಿದ ರಾಮಿತಂದೆ

"ಮನಲಿಂಗದಲ್ಲಿ ನಿಂದಿತ್ತೆಂಬಲ್ಲಿ ಆ ಮನಲಿಂಗಕ್ಕೆ ನೆಲೆಯೆ,
ಲಿಂಗಮನದ ಸಂಗಿಯೊ–ಎಂಬುದ ತಿಳಿದೆನೆಂಬುದು ಸಂಗಿಯೊ
ನಿಸ್ಸಂಗಿಯೊ?
ಬೀಜದೊಳಗಣ ತಿರುಳ ಭೇದಿಸಿ ಪುಟ್ಟುವಲ್ಲಿ ಅದು ತನ್ನ
ಸುನಾದದಿಂದವೋ ಅಪ್ಪುವಿನ ಬಿಂದುವಿನ ಭೇದದಿಂದವೊ?
ಈ ಉಭಯನೆಲೆ ಘಟಿಸಿದಲ್ಲಿ ಯೋಗಕೂಟ ವಾತ್ಮಲಿಂಗ ಭೇದಯುಕ್ತಿ.
ಭೇದಾಭೇದ ನಿಂದಲ್ಲಿ ಎನ್ನಯ್ಯ ಚೆನ್ನರಾಮನ ಕೂಟ ಬೆಳಗು"

ಎಂದು ಲಿಂಗಭೇದ ಯುಕ್ತಿಯನ್ನು ವಿಶದೀಕರಿಸಿದ್ದಾನೆ.

"ಗುರುಭಕ್ತನಾದಲ್ಲಿ ಘಟಧರ್ಮವಳಿದು
ಲಿಂಗಭಕ್ತನಾದಲ್ಲಿ ಸಂಚಲವಳಿದು
ಜಂಗಮ ಭಕ್ತನಾದಲ್ಲಿ ತ್ರಿವಿಧಾಂಗಸಲೆಸಂದು
ಇಂತೀ ತ್ರಿವಿಧಭಕ್ತಿಯಲ್ಲಿ ತ್ರಿಕರಣ ಶುದ್ಧನಾದಾತ್ಮಂಗೆ
ಮರ್ತ್ಯಕ್ಕೆ ಕೈಲಾಸವೆಂಬ ಕಾಲುಮಾಡಿಲ್ಲ–
ಅತಿನಿತ್ಯಮುಕ್ತನೆನ್ನಯ್ಯ ಚೆನ್ನರಾಮನಾಗಿ"

ಎಂಬ ವಚನದಲ್ಲಿ ತ್ರಿವಿಧಭಕ್ತಿಯಿಂದ ತ್ರಿಕರಣಶುದ್ಧಿಯನ್ನು ಸಂಪಾದಿಸಿ ನಿತ್ಯಮುಕ್ತನಾಗುವ ಮಾರ್ಗವನ್ನು ತೋರಿದ್ದಾನೆ ರಾಮಯ್ಯ.

"ಶಿಲೆ ಹಲವು ತೆರದಲ್ಲಿ ಹೊಲಬಿಗರಿಗೆ ಹೊಲಬಾಗಿ
ಒಲವರವಿಲ್ಲದೆ ಅವರ ಭಾವದಲ್ಲಿ ನಿಲುವುದು ಶಿಲೆಯೊ ಮನವೊ?
ಆ ನಿಜದ ನೆಲೆಯ ತಿಳಿವುದು"

ಎಂದು ಎಚ್ಚರಿಸಿ ಶಿಲೆಯನ್ನು ಲಿಂಗವನ್ನಾಗಿ ಮಾರ್ಪಡಿಸುವ ಮನವೇ ಲಿಂಗವಾಗುವಂತೆ ಮಾಡುವ ಮರ್ಮವನ್ನೂ ನಿಜದ ನೆಲೆಯನ್ನೂ ತಿಳಿಸಿದ್ದಾನೆ ಏಕಾಂತದ ರಾಮಯ್ಯ.

ಏಕಾಂತದ ರಾಮಯ್ಯ ಲೋಕಾಂತವಾಗಿ ನುಡಿದುದು ಬಹಳ ಸ್ವಲ್ಪ, ಮಾತಿಗಿಂತ ಕೃತಿ ಮೇಲು ಎಂದು ನಂಬಿದ್ದನೆಂದು ತೋರುತ್ತದೆ ರಾಮಯ್ಯ. ಆದರೂ ಅವನು ಅಚ್ಚಶರಣರಿಗೆಲ್ಲ ಮೆಚ್ಚಾದ. ಹರಿಹರನು ಭಕ್ತರ ಬಾಯಿಂದ–

"ಶಿವನ ಕೀರ್ತಿಗೆ ಮೂರ್ತಿಯಾದೆ ಎಲೆ ರಾಮಯ್ಯ
ಭವನ ಕೀರ್ತಿಯ ಲತೆಗಡರ್ಪಾದೆ ರಾಮಯ್ಯ
ಸಂದುದು ಸದಾಚಾರ ನಿನ್ನಿಂದೆ ರಾಮಯ್ಯ
ಸಂದುದೀಶ್ವರನಲ್ಲಿಗೇಕಾಂತ ರಾಮಯ್ಯ
ಸಂದಭಕ್ತರ ಕಣ್ಣಪುಣ್ಯವೇ ರಾಮಯ್ಯ"

ಎಂದು ಅವನನ್ನು ಕೊಂಡಾಡಿಸಿರುವುದರಲ್ಲಿ ಅತ್ಯುಕ್ತಿಯೇನಿಲ್ಲ.

■

# ನಿಜವ ಕಂಡ ಕೊಂಡಗುಳಿ ಕೇಶಿರಾಜ
# ನಿಜಸುಖನಿಲಯ ತೆಲುಗು ಜೊಮ್ಮಯ್ಯ

ಏಕಾಂತರಾಮಯ್ಯನ ಚರಿತ್ರೆಗೆ ಪರಮಪ್ರಮಾಣವಾಗಿ ದೊರೆತಿರುವ ಅಬ್ಬಲೂರಿನ ಶಿಲಾಶಾಸನವನ್ನು ನಿಲ್ಲಿಸಿದಾತ ಕೊಂಡಗುಳಿಯ ಕೇಶಿರಾಜ. 'ಕೇಶವರಾಜ ಚಮೂಪಂ ಶಾಸನವಂ ಪೇಳ್ದನ್; ಅಂತದಂ ತಿರ್ದಿ ನಿರಾಯಸದೆ ಬರೆದನ್ ಈಶನ ದಾಸಂ ಶಿವಚರಣಕಮಳ ಶರಣಂ ಶರಣಂ' ಎಂದು ಅದರಲ್ಲಿಯೇ ಉಲ್ಲೇಖವಿದೆ. ಈ ಶಾಸನದಲ್ಲಿ ಸಂಸ್ತುತರಾಗಿರುವ ಒಹಿಲ, ದಾಸಿ, ಚೆನ್ನ, ಸಿರಿಯಾಳ, ಹಲಾಯುಧ, ಬಾಣ, ಉದ್ಭಟ, ಮಲೆಯೇಶ್ವರರ ಜೊತೆಯಲ್ಲಿ ಬರುವ ಕೇಶವರಾಜ ಕೊಂಡಗುಳಿ ಕೇಶರಾಜನ ಪಿತಾಮಹನಾಗಿರಬಹುದು.

ಷಿಕಾರಿಪುರ ೧೧೯ ಮತ್ತು ೧೨೩ನೆಯ ಶಾಸನಗಳಲ್ಲಿ ಇವನನ್ನು 'ಕೇಶವದೇವ ಪಂಪಾಂಬಿಕಾ ಪೌತ್ರಂ ಹೊಳಮರಸ ದುರ್ಗಾಂಬಿಕಾ ಪುತ್ರಂ ಲಖ್ಮಾದೇವಿಯ ಮನೋನಯನ ವಲ್ಲಭಂ, ಭಯಲೋಭದುರ್ಲಭಂ, ಕದನತ್ರೀಣೇತ್ರಂ, ಮಹಾಸಾಮಂತ ಸೇನಾಪತಿ ಭಾಹತ್ತರ ನಿಯೋಗಾಧಿಷ್ಠಾಯಕಂ, ಸಕಲ ಲಕ್ಷ್ಮೀನಾಯಕಂ, ವೈರಿ ಭಯದಾಯಕಂ ಎಂಬೀ ಬಿರುದು ಗುಣನಾಮಯಥಾರ್ಥ ಶ್ರೀಮತ್ ಕೇಶಿಮಯ್ಯ ದಂಡನಾಯಕಮ್' ಎಂದು ಬಣ್ಣಿಸಲಾಗಿದೆ. 'ಮಲೆವವರಿಲ್ಲ, ಗಂಡೆಸೆವರಿಲ್ಲ, ಇದಿರಿಪ್ಪವರಿಲ್ಲ, ತೇಜವೆಂದುಲಿವರಿಲ್ಲ, ಟೆಂಟಣಿಪರಿಲ್ಲ.....ಕಬ್ಬದ ಗೀತದಲ್ಲಿ ಮಾರ್ತಲೆಯುವರಿಲ್ಲ' ಎಂದೂ 'ಧುರದೊಳ್ ಕೇಶವ ದಂಡನಾಥನ ಭುಜೋತ್ಖಾತಾಸಿ ಘಾತಕ್ಕೆ ವಿಶ್ವರಿಪೂರ್ವಿಶ್ವರರಂಜಿ ಪುತ್ತೆಡರ್ದು ಜೀವಂಬೆತ್ತ'ರೆಂದೂ 'ಇನಜಂ ಕೊಟ್ಟ ತೊವಲ್, ಶಿಬಿಮುನಿ ಕೊಟ್ಟ ಅಡಗು, ಆ ದಧೀಚಿ ಕೊಟ್ಟ ಎಲುಬುಗಳೇಂ ಧನದಂತೆ ಸೇವ್ಯವೆ? ಪೇಳ್ ! ಎನುತಂ ಹೊಂಗಳನೆ ಕೇಶವಂ ಕುಡುತಿರ್ಪಂ' ಎಂದೂ 'ನಿತ್ಯೋದ್ಭವನಿಧಿ, ಚಮೂನಾಥ ಚೂಡಾಮಣಿ'ಯೆಂದೂ ಅವನ ಅಸದೃಶ ಮೂರ್ತಿಯಂ ಕಂಡು ಕಾಮಂ ಪರಿ ಮುಕ್ತಾಕಾರನಾದಂ, ಅವನ ದುರ್ವಾರ ವಿಕ್ರಾಂತಮಂ ಕಂಡು ಕೇಸರಿ ಅಡಂಗಿತ್ತು, ಅವನ ಬಹಳ ತೇಜೋಂಶು ಸಂದೋಹ ದೆಳ್ತರವಂ ಕಾಣುತ್ತೆ ನಿಚ್ಚಂ ಮುಗುಳುದಯಿಪನ, ನಕ್ಷೋಭನೋ ವಾಸರೇಂದ್ರಂ ಎಂದೂ ಪ್ರಶಂಸಿಸಿ, 'ವಿದ್ಯಾಬಳದಿಂ ದಂಡಾಧಿಪಂ ಕೇಶವನ ನೆನೆದವಂ ನಾಡೆಯುಂ ಧನ್ಯನಲ್ತೆ !' ಎಂದು ಸಾರಲಾಗಿದೆ.

ಹರಿಹರ ರಾಘವಾಂಕರಿವನನ್ನು ತಮ್ಮ ಕಾವ್ಯಾರಂಭದಲ್ಲಿ ಸ್ತುತಿಸಿದ್ದಾರೆ. ಪಾಲ್ಕುರಿಕೆ ಸೋಮನಾಥನ ಗಣಸಹಸ್ರನಾಮಾವಳಿಯಲ್ಲಿ ಇವನ ಹೆಸರು ಬಂದಿದೆ. ಇನ್ನೂ ಅನೇಕ ಕಾವ್ಯಗಳಲ್ಲಿ ಕೇಶಿರಾಜನನ್ನು ಕೊಂಡಾಡಲಾಗಿದೆ. ಕವಿಯಾಗಿ, ಶಿವಾನುಭವಿಯಾಗಿ, ಪರಾಕ್ರಮಶಾಲಿಯಾಗಿ ಪರಮೋದ್ಧಾರನಾಗಿ, ಮಂತ್ರಿಯಾಗಿ, ಶಿವಮಂತ್ರ ಸಿದ್ಧನಾಗಿ, ಚಾರಿತ್ರ್ಯ ಚಕ್ರವತಿಯಾಗಿ, ವಿದ್ಯಾಪೋಷಕನಾಗಿ–ಒಟ್ಟಿನಲ್ಲಿ ಕನ್ನಡನಾಡಿನ ಪುಣ್ಯಪುರುಷರಲ್ಲಿ ಒಬ್ಬನಾಗಿ ಕೇಶಿರಾಜ ಕೀರ್ತಿರಾಜನಾಗಿದ್ದಾನೆ.

ಕಲಬುರಗಿ ಜಿಲ್ಲೆಯ ಜೇವರಗಿ ತಾಲೂಕಿನಲ್ಲಿವರುವ ಕೊಂಡಗುಳಿ ಗ್ರಾಮ ಕೇಶಿರಾಜನ ಜನ್ಮಸ್ಥಾನ. ಅಲ್ಲಿ ಇವನ ಹೆಸರಿನ ದೇವಾಲಯ ಇಂದಿಗೂ ಕಂಗೊಳಿಸುತ್ತಿದೆ. ಅದು ಹಿಂದೆ ಭಕ್ತಿಯ ಬೀಡಾಗಿ ಬೆಳಗಿದ ಗ್ರಾಮ. ಅಲ್ಲಿ ಶ್ರೀ ವಿರೂಪಾಕ್ಷದೇವರೆಂಬ ಗುರುಗಳ ಕರಕಂಜ ಸಂಜಾತನಾಗಿ, ಶ್ರೀ ಸೋಮನಾಥನ ನಿಸ್ಸೀಮ ಭಕ್ತನಾಗಿ, 'ಅನಂದ ಜಲದೊಡನೆ ಅಟ್ಟಹಾಸಂ ನಿಮಿರೆ, ಉಬ್ಬರದ ಭಕ್ತಿ ಚಿತ್ತಮನಡರೆ' ಕೇಶಿರಾಜ ನಿತ್ಯ ಎಂಟು ಪದ್ಯಗಳನ್ನು ಬರೆಯುತ್ತ, ಅವುಗಳನ್ನು ಸೋಮನಾಥನಿಗೆ ಅರ್ಪಿಸುತ್ತ, ವಸ್ತುಕ ವರ್ಣಕಗಳೆರಡರಲ್ಲೂ ಶಿವಸ್ತುತಿಗಳನ್ನು ರಚಿಸುತ್ತ, ಶಂಕರ ಸ್ತೋತ್ರವೇ ತನ್ನ ವೃತ್ತಿಯಾಗಿ ಬಾಳುತ್ತಲಿದ್ದ. ಕಂದ ತ್ರಿಪದಿ, ರಗಳೆ, ವಚನ, ದಂಡಕ, ಅಷ್ಟಕ ಮೊದಲಾದ ಎಲ್ಲ ಛಂದೋ ರೂಪಗಳಲ್ಲಿಯೂ ಬಂಧುರವಾದ ಕೃತಿಗಳನ್ನು ಕೇಶಿರಾಜ ರಚಿಸಿದನೆಂದು ಹೇಳುತ್ತಾರೆ. ಅವನ 'ಷಡಕ್ಷರಕಂದ'ವಂತೂ ಸಿಕ್ಕಿದೆ. ವಚನಗಳನ್ನೂ ಬರೆದಿರಬಹುದೇನೊ. ರಗಳೆಗಳನ್ನೂ ಅಷ್ಟಕ ದಂಡಕಗಳನ್ನೂ ಇವನು ಬರೆದುದೇ ನಿಜವಾಗಿದ್ದರೆ 'ಶಿವಗಣದ ರಗಳೆ'. 'ಮುಡಿಗೆಯ ಅಷ್ಟಕ'ಗಳನ್ನು ಬರೆದ ಹರಿಹರನಿಗೂ 'ವೀರಭದ್ರ ದಂಡಕ'ವನ್ನು ಬರೆದ ರಾಘವಾಂಕನಿಗೂ ಇವನು ಮೇಲ್‌ಪಂಕ್ತಿಯಾಗುತ್ತಾನೆ.

ಕೇಶಿರಾಜನ ಕೀರ್ತಿ ಕಲ್ಯಾಣದ ಪೆರ್ಮಾಡಿರಾಯನ ಕಿವಿಯವರೆಗೆ ಮುಟ್ಟುತ್ತದೆ. ಅವನು ಚಾರರನ್ನು ಕಳಿಸಿ ಕೇಶಿರಾಜನನ್ನು ಕಲ್ಯಾಣಕ್ಕೆ ಬರಮಾಡಿಕೊಳ್ಳುತ್ತಾನೆ. ಕೇಶಿರಾಜ ಆಗಮಿಸುತ್ತಲೆ ಅವನನ್ನು ಸತ್ಕರಿಸಿ 'ಸಮಗದ್ದುಗೆಯನಿತ್ತು. ಚಮರ ಸೀಗುರಿಯನಿತ್ತು, ಧವಳ ಛತ್ರಮನಿತ್ತು ಹಿರಿಯ ಪ್ರಧಾನಿಕೆಯನ್ನು' ಒಲಿದು ಕೊಡುತ್ತಾನೆ. ಕೇಶಿರಾಜನ ಕುಶಲ ರಾಜ್ಯನಿರ್ವಹಣೆಯಿಂದ ಅವನ ರಾಜ್ಯ ಸುಖೀರಾಜ್ಯವಾಗಿ ಶೋಭಿಸತೊಡಗುತ್ತದೆ. ಪೆರ್ಮಾಡಿರಾಯನಿಗೆ ಪರಮಾನಂದವಾಗುತ್ತದೆ. ಕೇಶಿರಾಜನಲ್ಲಿ ಪೂರ್ಣ ವಿಶ್ವಾಸವನ್ನಿಟ್ಟು ನಿಶ್ಚಿಂತನಾಗಿರುತ್ತಾನೆ. ಕೇಶಿರಾಜನನ್ನು ಕೇಳಿದೆ ಏನನ್ನೂ ಮಾಡದಷ್ಟು ಕೇಶಿರಾಜನಲ್ಲಿ ಪೆರ್ಮಾಡಿರಾಯನ ವಿಶ್ವಾಸ ಬೆಳೆಯುತ್ತದೆ.

“ಮಂತ್ರಕ್ಕೆ ನೆರೆ ಕೇಶಿರಾಜ ದಣ್ಣಾಯಕರ್
ತಂತ್ರಕ್ಕೆ ಮಿಗೆ ಕೇಶಿರಾಜ ದಣ್ಣಾಯಕರ್
ಮಾತಿಗೆಲ್ಲಂ ಕೇಶಿರಾಜ ದಣ್ಣಾಯಕರ್
ನೀತಿಗೆಲ್ಲಂ ಕೇಶಿರಾಜ ದಣ್ಣಾಯಕರ್”

ಒಬ್ಬರ ಉತ್ಕರ್ಷ ಇನ್ನೊಬ್ಬರಿಗೆ ಸಹನೆಯಾಗದಿರುವುದು ಸೃಷ್ಟಿಯ ನಿಯಮವೆಂದೇ ತೋರುತ್ತದೆ. ಕೇಶಿರಾಜನ ಉತ್ತರೋತ್ತರ ಉತ್ಕರ್ಷವನ್ನು ಸೈರಿಸದವರೂ ಕಲ್ಯಾಣದಲ್ಲಿದ್ದರು. ಅವರು ಸಮಯ ಕಾದಿದ್ದರು.

ಕೇಶಿರಾಜನ ದೇಹ ಮಾತ್ರ ದಣ್ಣಾಯಕನ ಕಾರ್ಯ ಮಾಡುತ್ತಿದ್ದಿತು; ಅವನ ಮನವೆಲ್ಲ ಶಿವಶರಣರಲ್ಲಿ.

“ನೆನಹು ಶರಣರ ಮೇಲೆ ನಿಟ್ಟೆ ಶರಣರ ಮೇಲೆ
ಮುನಿಸು ಶರಣರ ಮೇಲೆ ನೇಹ ಶರಣರ ಮೇಲೆ
ಶರಣರೊಡತಣ ಸುಖಂ ಶರಣರೊಡತನ ಲೀಲೆ
ಗುರುತರ ಸ್ನೇಹದಾತುರದೆ ಶರಣರ ಮೇಲೆ !”



**ಮರುಕ್ಷಣದಲ್ಲಿ ಕಂಕಣ, ಕೇಯೂರ, ಕಟಕ, ಮುಕುಟ, ಖಡ್ಗ ಮುದ್ರಿಕೆಗಳೆಲ್ಲ ಅರಸನ ಮುಂದಿದ್ದುವು**

ಹೀಗೆ ಶರಣರ ಸಂಗದಲ್ಲಿಯೇ ಬಾಳು ಸಾಗಿರಲು ಒಮ್ಮೆ ಪೆರ್ಮಾಡಿರಾಯನು ಅವಸರದ ಆಪ್ತಾಲೋಚನೆಗಾಗಿ ಕೇಶಿರಾಜನನ್ನು ಕರೆಸಿದನು. ಆಗ ಕೇಶಿರಾಜನು 'ಪಾಡುವ ಪುರಾತನರ ಗೀತದೊಳ್ ಕರಗುತಂ, ಶಿವನ ಪದ್ಯವನೋದಿ ಮಿಗೆ ಬೀಗಿ ಬಿರಿವುತಂ, ಪಸಿವು ತೃಷೆ ನಿದ್ರೆ ನುಡಿ ನೋಟಂಗಳಂ ಮರೆದು, ದೆಸೆ ವಾಯುವಾಗಸಂ ಧರೆಯೆಂಬುದಂ ಮರೆದು' ಕುಳಿತಿದ್ದನು. ಅರಸನ ಕರೆ ಬರುತ್ತಲೆ 'ಸಿರಿಯ ಸಂಗಂ ಶರಣ ಸಂಗಕ್ಕೆ ಪಗೆಯಾಯ್ತು!' ಎಂದು ಉಮ್ಮಳಿಸಿ, ಶರಣಗೋಷ್ಠಿಯನ್ನು ತೊರೆದು ಹೋಗಲಾರದೆ, ಹೋಗದಿರಲಾರದೆ ತಡಮಾಡಿ ಅರಸನ ಓಲಗಕ್ಕೆ ಹೋದನು. ಅವನೆಂದರೆ ಆಗದವರು ಅದೇ ಸಮಯವಂದು ತಿಳಿದು ಅರಸನ ಕಿವಿ ತುಂಬಿದ್ದರು; 'ಕೇಶಿರಾಜನಿಗೆ ತನ್ನ ಅರಸನಿಗಿಂತ ಶರಣರಲ್ಲಿ ಅಧಿಕ ಆಸಕ್ತಿಯಿದೆ. ದೊರೆಯನ್ನು ಕಡೆಗಣಿಸಿ ಶರಣರನ್ನು ಸೇವಿಸುತ್ತ ಕಾಲ ಕಳೆವುದು ದೊರೆಗೆ ದ್ರೋಹಗೈದಂತೆ' ಇತ್ಯಾದಿ ಇತ್ಯಾದಿ.

ಚಾಡಿಗೆ ವಾಲದ ಕಿವಿಯಿಲ್ಲ. ಪೆರ್ಮಾಡಿರಾಯನೂ ಕೇಶಿರಾಜನ ಬಗೆಗಿದ್ದ ತನ್ನ ಅಪಾರವಾದ ವಿಶ್ವಾಸವನ್ನೂ ಮರೆತು ತಪ್ತನಾಗಿ ಕುಳಿತಿದ್ದ. ಕೇಶಿರಾಜ ಬರುತ್ತಲೆ ಕನಲಿ ಕೇಳಿದ 'ಬರಲು ಇಷ್ಟು ತಡವೇಕೆ ದಣ್ಣಾಯಕರೆ?' ಕೇಶಿರಾಜ ನಿಜಸ್ಥಿತಿಯನ್ನೇ ನಿವೇದಿಸಿಕೊಂಡ–'ಶರಣರ ಸಂಗದಲ್ಲಿದ್ದೆ ಪ್ರಭು; ಅವರಿಗೆ ತಿಳಿಸಿ ಬರುವುದರೊಳಗಾಗಿ ತಡವಾಯಿತು.' ಪೆರ್ಮಾಡಿರಾಯನಿಗಾಗ ಕೊಂಡೆಯವರು ಕೊಂಡಗುಳಿ ಕೇಶಿರಾಜನ ಬಗ್ಗೆ ಹೇಳಿದ್ದುದೆಲ್ಲ ನಿಜವೆನಿಸಿ ತೋರಿತು. ನಿಷ್ಠುರನಾಗಿ ನುಡಿದ, "ನನ್ನ ಕಾರ್ಯ, ಶರಣರ ಕಾರ್ಯ–ಇವುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಳ್ಳಿರಿ ದಣ್ಣಾಯಕರೆ !"

'ಆಗಲಿ ಪ್ರಭು !'–ಶರವೇಗದಿಂದ ಬಂದಿತು ಕೇಶಿರಾಜನ ಉತ್ತರ. ಮರು ಕ್ಷಣದಲ್ಲಿ ಕಂಕಣ, ಕೇಯೂರ, ಕಟಕ, ಮುಕುಟ, ಖಡ್ಗ, ಮುದ್ರಿಕೆಗಳೆಲ್ಲ ಅರಸನ ಮುಂದಿದ್ದುವು. ಅರಸ ಅವಾಕ್ಕಾದ. ಕೊಂಡೆಯವರು ತಮ್ಮ ಕಣ್ಣುಗಳನ್ನು ತಾವೇ ನಂಬದಾದರು. ಅರಸನ ವಿವೇಕ ಮತ್ತೆ ಮರಳಿತು. 'ಅಧಿಕಾರ ತ್ಯಾಗಬೇಡ. ನಿಮ್ಮ ಶರಣಸೇವೆ–ರಾಜ್ಯಸೇವೆಗಳೆರಡೂ ನಿಮ್ಮಿಷ್ಟದಂತೆ ನಡೆಯಲಿ' ಎಂದು ಕೇಶಿರಾಜನನ್ನು ತಡೆದ. ಆದರೆ ಕೇಶಿರಾಜ ಕೊನೆಯ ನಿರ್ಧಾರವನ್ನು ಕೈಕೊಂಡುಬಿಟ್ಟಿದ್ದ.[೧]

---

೧ ಕೇಶಿರಾಜನೂ ಬಸವಣ್ಣನವರೂ ನಂದಿಯ ಮುದ್ರೆಯ ಉಂಗುರ ಧರಿಸಿದ್ದಂತೆ ಗುರುಪದ ಮುದ್ರಿಕೆಯ ಉಂಗುರವನ್ನು ಬೆರಳಿನಲ್ಲಿ ಧರಿಸಿದ್ದನೆಂದೂ ಕೊಂಡೆಯವರು ಪೆರ್ಮಾಡಿರಾಯನಿಗೆ 'ಕೇಶಿರಾಜ ನಿಮಗೆ ವಂದಿಸುವುದಿಲ್ಲ. ಗುರುಪದ ಮುದ್ರಿಕೆಗೆ ವಂದಿಸುತ್ತಾನೆ' ಎಂದು ಚಾಡಿ

'ಕೇಳರಸ ನಿನ್ನ ಸಿರಿ ನಿನಗಿಕ್ಕೆ ನಿನಗಿಕ್ಕೆ
ಶೂಲಿಯಣುಗರ ಸಂಗ ಸಂಪದವದೆನಗಿಕ್ಕೆ' (ಹ.ರ.)

ಎಂದು ಹೇಳಿ ಆ 'ಆಶಾಂಬರನ ಸುತ ಕಾಷಾಯಾಂಬರವನುಟ್ಟು, ಸೇವಕನ ವೃತ್ತಿಯಂ ಮನದ ಕಾಲಿಂದೊದೆದು, ದೇವ ಸೋಮಯ್ಯನವರ ಚಿತ್ತ ಹಸ್ತದಿಂದ ಪಿಡಿದು, ನಿಷ್ಠೆಯೊಳ್ ನಿಸ್ಪೃಹದ ಬಟ್ಟೆಯೊಳ್' ನಡೆದು ಬಿಟ್ಟ ನಿಜ ಶರಣ ಕೇಶಿರಾಜ. ಅಧಿಕಾರಸಂಪತ್ತು. ವೈರಾಗ್ಯಸಂಪತ್ತಿಗೆ ಶರಣುಹೋಯಿತು; ಆಶೆ ಆಶಾರಹಿತತೆಗೆ 'ನಮೋ' ಎಂದಿತು.

'ಸಾಹಿತ್ಯ ಸಾರ್ವಭೌಮಂ ಸುಕೃತಕುಲ ಸೇವ್ಯಂ' ಕೇಶಿರಾಜ ಕಾಷಾಯಾಂಬರ ಧಾರಿಯಾಗಿ ಮನೆಗೆ ಬಂದು ನಡೆದುದೆಲ್ಲವನ್ನೂ ಮಡದಿ ಗಂಗಾದೇವಿಗೆ ತಿಳಿಸಿದನು. ಆ ಹದಿಬದೆ ತಿಲಮಾತ್ರವೂ ತಳಮಳಿಸಲಿಲ್ಲ ಕಳವಳಿಸಲಿಲ್ಲ, ಹಳಹಳಿಸಲಿಲ್ಲ. ಅಧಿಕಾರದ ಬೇಲಿಯ ಮೇಲೆ ಹಬ್ಬಿದ್ದ ಭಕ್ತಿಯ ಬಳ್ಳಿ ಮುಳ್ಳಿನ ಸಂಗವನ್ನು ತೊರೆದು ಶರಣಸಂಗದ ಸಹಕಾರ ವೃಕ್ಷವನ್ನು ಆಶ್ರಯಿಸಿತೆಂದು ಹಿರಿಹಿರಿ ಹಿಗ್ಗಿದಳು. ಮನೆಯಲ್ಲಿದ್ದ ವಸ್ತು ವಾಹನಗಳನ್ನೆಲ್ಲ, ವಸ್ತ್ರಭೂಷಣಗಳನ್ನೆಲ್ಲ ಪೆರ್ಮಾಡಿರಾಯನ ಅರಮನೆಗೆ ಕಳಿಸಿ ತಾನೂ ಕಾವಿಯ ಸೀರೆಯನ್ನುಟ್ಟು ಶರಣಾಯಣಕ್ಕೆ ಸನ್ನದ್ಧಳಾದಳು. ಇಬ್ಬರೂ ರಾಜಧಾನಿಗೆ ಬೆನ್ನು ತೋರಿ ಶಿವಪುರಕ್ಕೆ ಹೋದರು.

ಅಲ್ಲೊಬ್ಬ ಈಶನ ಮೀಸಲಭಕ್ತನಿದ್ದ. ಹೆಸರು ವಂಶವರ್ಧನ. ಅವನ ಭಕ್ತಿಯ ಬಿನ್ನಹಕ್ಕೆ ಮನ್ನಣೆಯನ್ನಿತ್ತು ಅವನ ಗುಡಿಸಲಲ್ಲಿ ತಂಗಿದರು, ಕೇಶಿರಾಜ ಗಂಗಾದೇವಿಯರು. ಅರಮನೆಯನ್ನು ತೊರೆದು, 'ಸಂಸಾರಮಂ ಪಿಂಗಿಸಿ, ಭವವನ್ನು ಭಂಗಿಸಿ, ಆಸೆಯನ್ನುಲ್ಲಂಘಿಸಿ, ನಿರ್ಲೇಪವನೊಳಕೊಂಡು, ನಿಸ್ಪೃಹತೆಯ ಕೆಳೆಗೊಂಡು, ನಿಷ್ಪ್ರಪಂಚವನೆಡೆಗೊಂಡು' ಬಡಭಕ್ತನೊಬ್ಬನ ಗುಡಿಸಲಿನಲ್ಲಿ ಇರತೊಡಗಿದರು ಆ ಆದರ್ಶಪ್ರಿಯರು. ಅವರಲ್ಲಿ ವಾಸಿಸಲು ಅಲ್ಲಿಯೇ 'ಶಾಂತಿ ಪಲ್ಲವಿಸಿ, ಸತ್ಯಂಪೂತು, ಪರಿಣಾಮಂಫಲಿತ'ವಾಯಿತು. ಗೆಲ್ಲಕ್ಕೆ ಹೋರದೆ, ತರ್ಕಕ್ಕೆ ತಲೆಯೊತ್ತದೆ, ವಾಸೆಗೆ ಘಾಸಿಯಾಗದೆ, ಮತ್ಸರಕ್ಕೆ ಮಲೆಯದೆ, ತಮ್ಮ ಇಷ್ಟಲಿಂಗಕ್ಕೆ ಆನಂದರಸದ ಮಜ್ಜನ, ಪುಳಕದ ಪೂಜೆ, ನಿಜಶ್ವಾಸ ಪರಿಮಳಧೂಪ, ಗೀತದಾರತಿ ಗೋಷ್ಠಿ

---

ಹೇಳಿದರೆಂದೂ ಪೆರ್ಮಾಡಿರಾಯನವರ ಮಾತಿಗೆ ಕಿವಿಗೊಟ್ಟು ಒಮ್ಮೆ ಆ ಉಂಗುರವನ್ನು ನೋಡುವ ನೆಪದಿಂದ ತನ್ನ ಕೈಗೆ ತೆಗೆದುಕೊಂಡು 'ಈಗ ನನಗೆ ವಂದಿಸಿರಿ' ಎಂದು ಕೇಶಿರಾಜನಿಗೆ ಹೇಳಿದನೆಂದೂ ಅದಕ್ಕವನು ಒಪ್ಪದಿರಲು ಅದೇ ಅಧಿಕಾರ ತ್ಯಾಗಕ್ಕೆ ಕಾರಣವಾಯಿತೆಂದೂ ಪರಂಪರೆ ನಂಬಿದೆ.

ಯಾರೋಗಣೆಗಳನ್ನು ಅರ್ಪಿಸುತ್ತ ಇರತೊಡಗಿದರು ಅವರು. ಸಾವಿರ ಸಾವಿರ ಸಂಖ್ಯೆಯಲ್ಲಿ ಶಿವಭಕ್ತರು ಬರತೊಡಗಿದರು ಅಲ್ಲಿಗೆ.'

ಒಮ್ಮೆ ಶಿವಪುರದಿಂದ ಕಲ್ಯಾಣದ ತ್ರಿಪುರಾಂತಕೇಶ್ವರ ದೇವರ ದೇಗುಲದವರೆಗೆ ಮಂಟಪಗಳನ್ನು ಕಟ್ಟಿ, 'ಈಳೆಯ ಹಣ್ಣ ತೆಕ್ಕೆಯ, ಬಾಳೆಯ ಹಣ್ಣಿನಿಕ್ಕೆಯ, ಮಧೂಫಲದ ಮಂತಣದ, ನಾರಿಕೇಳದ ನೆರವಿಯ, ಮದ್ದಳೆಯ ಮಸಕದ, ಕರಡೆಯ ಕಡುಪಿನ, ಕೌಸಾಳದುರವಣೆಯ, ತಾಳದ ತವಕದ, ಮೇಳವಣೆಯ ಗಿರುಗಟೆಯ ಗಾಢದ, ಬೊಂಬುಳಿಯ ಭರವಸದ, ಕೊಂಬಿನ ಕೋಳಾಹಳದ, ದೆಸೆಯಂ ಸುತ್ತಿ ನಭವಂ ಮುತ್ತಿ ಭೋರೆಂದೋರಂತೆ ಮಸಗುವ ಮಂಗಳ ವಾದ್ಯಗಳ' ಮೆರವಣಿಗೆಯನ್ನು ಮಾಡಿದರು. ಅದನ್ನರಿತ ಪೆರ್ಮಾಡಿರಾಯ ಕೇಶಿರಾಜನನ್ನು ಮತ್ತೆ ಅರಮನೆಗೆ ಕರೆಸಿಕೊಂಡು ಸತ್ಕರಿಸಿ ಕಳಿಸಿದನು.

ಅದೇ ಸಮಯಕ್ಕೆ ಭಕ್ತಾಗ್ರಣಿಯೆಂದು ಅಲ್ಲಿ ಹೆಸರಾಗಿದ್ದ ತೆಲುಗು ಜೊಮ್ಮಯ್ಯಗಿನ ಶಿವಭಕ್ತಿಯ ಖ್ಯಾತಿಯನ್ನು ಕೇಳಿ ಕೇಶಿರಾಜ ಅವನ ಮನೆಗೆ ಹೋದನು. ಆಗ ಜೊಮ್ಮಣ್ಣ ಮನೆಯಲ್ಲಿರಲಿಲ್ಲ. ಅವನು ವೃತ್ತಿಯಿಂದ ಬೇಟೆಗಾರ. ಕಲ್ಯಾಣದ ಕಣ್ಣಪ್ಪ. ತನ್ನ ಕಾಯಕದಂತೆ ಬೇಟೆಗೆ ಹೋಗಿದ್ದ. ಅವನ ಮನೆ ಸಮೀಪಿಸುತ್ತಲೆ ಮೂಗು ಮುಚ್ಚಿಕೊಂಡ ಕೇಶಿರಾಜ. ಜೊಮ್ಮಯ್ಯ ಕೊಂದು ತಂದ ಪ್ರಾಣಿಗಳ ರಕ್ತ ಮಾಂಸಗಳಿಂದ, ಆಸ್ಥಿ ಚರ್ಮಗಳಿಂದ ದುರ್ಗಂಧದ ತವರುಮನೆಯಾಗಿದ್ದಿತು ಅವನ ಮನೆ. ಹೇಸಿ ಹಿಂದಿರುಗಿದ ಕೇಶಿರಾಜ.

ತೆಲುಗು ಜೊಮ್ಮಯ್ಯ ಬೇಟೆಯಿಂದ ಬಂದಮೇಲೆ ಕೇಶಿರಾಜ ಬಂದು ಹೋದ ಸುದ್ದಿಯನ್ನು ಕೇಳಿದ. ಅವರಿದ್ದ ಗುಡಿಸಲಿಗೆ ಓಡಿಹೋದ. ಕೇಶಿರಾಜನನ್ನು ಮನೆಗೆ ಕರೆದ. ಕೇಶಿರಾಜ ಕುಂಟು ನೆವ ಮುಂದೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ. ಜೊಮ್ಮಯ್ಯ ಕೇಳಲಿಲ್ಲ. ಅವನ ಕರೆಯನ್ನು ನಿರಾಕರಿಸುವುದು ಕೇಶಿರಾಜನಿಗೆ ಸಾಧ್ಯವಾಗಲಿಲ್ಲ. 'ಆವ ಕಾಯಕವಾದೊಡೇನು–ಭಾವಶುದ್ಧಿಯಿಂದ ಮಾಡಿದುದೆಲ್ಲ ದೇವಪೂಜೆ.' ಅಂಥ ಭಾವಶುದ್ಧಿಯುಳ್ಳ ಭಕ್ತನ ಬಿನ್ನಪವನ್ನು ನಿರಾಕರಿಸುವುದು ಭಕ್ತನಾದವನಿಗೆ ಸಾಧ್ಯವೆ? ಅವನನ್ನು ಕಡೆಗಣಿಸಿ ಶಿವನನ್ನು ಮೆಚ್ಚಿಸುವುದು ಸಾಧ್ಯವೆ?

ಅಂಜುತ್ತ ಹಿಂಜರಿಯುತ್ತ ಜೊಮ್ಮಯ್ಯನ ಮನೆಗೆ ಹೋದ ಕೇಶಿರಾಜ. ಜೋಮ್ಮಯ್ಯ ಪ್ರಸಾದ ಸೇವನೆಗೆ ಕರೆದ. ಕೇಶಿರಾಜನ ಕಾಯವೆಲ್ಲ ಕಂಪಿಸಿತು.

---

೧ ತೆಲುಗು ಬೊಮ್ಮಯ್ಯನೆಂದೂ ಇದೆ–ಬಸವಪುರಾಣದಲ್ಲಿ.

ಅಡಗಿನ ಅಡಿಗೆಯನ್ನೇ ಆರೋಗಣೆಗೆ ಬಡಿಸಿಬಿಟ್ಟರೆ ಹೇಗೆ? ಉಪಾಯವಿಲ್ಲ, ಶಿವನು ಮಾಡಿಸಿದಂತಾಗಲಿ, ಎಂದು ಎದ್ದ. ಆದರೆ ಜೊಮ್ಮಣ್ಣ ಕೇಶಿರಾಜ ಶಂಕಿಸಿದ್ದಂತೆ ಮಾಂಸಾರವನ್ನೇನೂ ನೀಡಲಿಲ್ಲ; ಶಾಕಾಹಾರವನ್ನೇ ಎಡೆ ಮಾಡಿದ. ಕೇಶಿರಾಜನ ತಲೆಯ ಮೇಲಿನಿಂದ ಬೆಟ್ಟದ ಭಾರ ಇಳಿದಂತಾಯಿತು. ಆ ಪಾವನ ಪ್ರಸಾದವನ್ನು ಸವಿದು ಪರಮಾನಂದಭರಿತನಾದನು. ತೆಲುಗು ಜೊಮ್ಮಯ್ಯನ ನಿಲವನ್ನು ತಿಳಿಯದೆ ಬರಲು ಮೊದಲು ನಿರಾಕರಿಸಿದ್ದನ್ನು ನೆನೆದು ಪಶ್ಚಾತ್ತಾಪಪಟ್ಟನು. ತೆಲುಗು ಜೊಮ್ಮಯ್ಯ ಸಾಮಾನ್ಯನಾಗಿರಲಿಲ್ಲ. 'ತೆಲುಗು ಜೊಮ್ಮಯ್ಯಂಗೆ ಒಲಿದೆ ದೇವಾ', 'ತೆಲುಗು ಜೊಮ್ಮಯ್ಯನಿಗೆ ಒಲಿದಾತ ಮತ್ತೊಬ್ಬ ದೇವನೇ ಅಯ್ಯ?' ಎಂದು ಬಸವಣ್ಣನವರಿಂದ ಬಣ್ಣಿಸಿಕೊಂಡ ಭಕ್ತೋತ್ತಮನವನು. ಬಹುಶಃ ತೆಲುಗು ದೇಶದಲ್ಲಿ ಹುಟ್ಟಿ ಕಲ್ಯಾಣಕ್ಕೆ ಬಂದು ಅಲ್ಲಿ ತನ್ನ ಸದ್ದಿಲ್ಲದ ಸಾಧನೆಯಿಂದ

ಶಿವನ ಒಲವನ್ನು ಸೂರೆಗೊಂಡಿದ್ದ ಶರಣನವನು. ಶ್ರೀಶೈಲದ ಶಿವಾನಂದ ಶಿವಯೋಗಿಯನ್ನು ಮುದಿಗರಡಿಯೆಂದು ಹಾಸ್ಯಮಾಡಿದ ತಪ್ಪಿಗಾಗಿ ಅವನ ಶಿಷ್ಯ ಪುನೀತಯ್ಯನಿಂದ ಶಪಿತರಾಗಿ ಜಿಂಕೆಗಳಾಗಿ ಹುಟ್ಟಿದ್ದ ಗಂಧರ್ವರಿಗೆ ಶಾಪವಿಮೋಚನೆಯನ್ನು ಮಾಡಿ ಪೂರ್ವಪದವಿಯನ್ನು ನೀಡಲೆಂದೇ ಜೋಮ್ಮಯ್ಯ ಬೇಟೆಗಾರನಾಗಿ ಭುವಿಗೆ ಬಂದಿದ್ದನೆಂದು ಪುರಾಣಗಳಲ್ಲಿ ಹೇಳಲಾಗಿದೆ. ಬಹುಶಃ ಬೇಟೆಗಾರಿಕೆ ಮತ್ತು ಶಿವಭಕ್ತಿಗಳೆರಡೂ ಪರಸ್ಪರ ಹೊಂದಿಕೆಯಾಗದ ಕರ್ಮಗಳೆಂದು ಭಾವಿಸಿ ಈ ಹೊಂದಾಣಿಕೆಯ ಕಥೆಯನ್ನು ಹೆಣೆದಿರಬೇಕು. ಆದರೆ ಧರ್ಮವ್ಯಾಧ, ಕಣ್ಣಪ್ಪಾದಿ ಭಕ್ತರು ವೃತ್ತಿಯಿಂದ ವ್ಯಾಧರಾಗಿದ್ದರೂ ಭಕ್ತರಲ್ಲಿ ಭಕ್ತರೆನಿಸಿ ಕೊಂಡಿರುವುದನ್ನು ನೋಡಿದರೆ ಈ ಕಟ್ಟುಕಥೆಯ ಅಗತ್ಯವಿರಲಿಲ್ಲವೆಂದು ತೋರುತ್ತದೆ.

ಅದುವರೆಗೆ ಬರಿಯ ಬೇಟೆಗಾರನಾಗಿ ಬದುಕಿದ್ದ ಬೊಮ್ಮಯ್ಯ ಕೇಶಿರಾಜನ ಕೈವಾಡದಿಂದ ಜ್ಞಾನಿಯಾಗಿ, ವಚನಕಾರನಾಗಿ, ಪೆರ್ಮಾಡಿರಾಯನ ಮಂತ್ರಿಯಾದನೆಂದೂ ಪೆರ್ಮಾಡಿರಾಯನ ಪಟ್ಟದರಸಿ ಲಕುಮಾದೇವಿ ಜೊಮ್ಮಯ್ಯನ ಪ್ರಭಾವದಿಂದ ಶಿವಭಕ್ತಳಾದಳೆಂದೂ ಹೇಳಲಾಗಿದೆ. ಇರಬಹುದು. ಉಪಲಬ್ಧವಿರುವ ಅವನ ನಾಲ್ಕು ವಚನಗಳನ್ನು ನೋಡಿದರೆ ಅವನು ಅಮಾತ್ಯನಾಗಿದ್ದುದು ಅಸಂಭವವೇನೆನಿಸುವುದಿಲ್ಲ.

"ಕಾಮಸನ್ನಿಭನಾಗಿ ತಾ ಚೆಲುವನಾದಡೆ ಕಾಮಿನೀ ಜನವೆಲ್ಲ ಮೆಚ್ಚಬೇಕು; ದಾನಗುಣವುಳ್ಳವು–ಕರೆದೀವನಾದಡೆ ಯಾಚಕ ಜನವೆಲ್ಲ ಮೆಚ್ಚಬೇಕು; ವೀರನಾದಡೆ ವೈರಿಗಳು ಮೆಚ್ಚಬೇಕು; ಖೂಳನಾದಡೆ ತನ್ನ ತಾ ಮೆಚ್ಚಿಕೊಂಬ ! ಎನ್ನ ದೇವ ತೆಲುಗೇಶ್ವರನಲ್ಲಿ ತಾನು ಭಕ್ತನಾದೊಡೆ ದೇವರು ಮೆಚ್ಚುವ, ಜಗವೂ ಮೆಚ್ಚುವುದು....."

ತಾನು ಭಕ್ತನಾಗಿ ದೇವರನ್ನು ಮೆಚ್ಚಿಸಿ ಜಗವನ್ನೂ ಮೆಚ್ಚಿಸಿಕೊಂಡಿದ್ದ ಜೊಮ್ಮಯ್ಯ ಸಚಿವ ಸ್ಥಾನಕ್ಕೇರಿದ್ದರೆ ಅಚ್ಚರಿಪಡಬೇಕಾದುದೇನೂ ಇಲ್ಲ

'ಲಿಂಗಹೀನನಾಗಿ ಗುರುಕಾರುಣ್ಯ ಉಂಟೆ?' ಓದಿದೆ ನೋಡಿದೆನೆಂದೆಂಬೆ–ನಿನ್ನೋದು ವಾದಕ್ಕೆ ಹೋಯಿತ್ತು ! ಅರಿದುದನೆಲ್ಲವನರಿದೆ, ಅರಿಯದುದಕ್ಕೆಂತೊ?' ಎಂದು ಕೇಳುವವ ಕೇವಲ ವ್ಯಾಧನಾಗಿರಲಾರ, ಹೊರಗೆ ಮೃಗಗಳ ಬೇಟೆಯಾಡಿದ ಅವನು ಒಳಗೆ ವಿಷಯ ವ್ಯಸನ ವಾಸನೆಗಳ ಬೇಟೆಯನ್ನಾಡಿರಬೇಕು. ಇಲ್ಲದಿದ್ದರೆ, 'ನವನಾಳವನ್ನು ಕಟ್ಟಿ ವಿಕಳನಾಗಲು ಬೇಡ ! ಬಳಸಿ ಬಟ್ಟೆಯ ಕಾಣದೆ ಮಾಯೆಯ ಬಾಗಿಲ ಹೊದ್ದಿಹೆ ! ಮಕ್ಕಳ ತೊಟ್ಟಿಲಮೇಲೆ ಕಟ್ಟಿಹ ಕೆಂಪಿನ ಹಣ್ಣಿರ್ದು ನಿಲುಕಲುಬಾರದು. ನೆನಹು ನೆಲೆಗೊಳ್ಳದಾಗಿ ನಿಜಭಾವ ನಿಜರೂಪವೆಂತೊ? ಗಜೆಬಜೆಯಿಲ್ಲದ ಮನಕ್ಕೆ ಸಹಜವ ತೆಲುಗೇಶ್ವರ ತೋರಿದ' ಎಂದು ಗಜೆಬಜೆಪುಗದ ಆನಂದ ಸಂವಿತ್ತನ್ನವನು ಪಡೆದು ಒಡ ನುಡಿಯುತ್ತಿರಲಿಲ್ಲ. 'ಮಕ್ಕಳ ತೊಟ್ಟಿಲ ಮೇಲೆ ಕಟ್ಟಿದ ಕೆಂಪಿನ ಹಣ್ಣಿನ' ಉಪಮೆ ಅದೆಷ್ಟು ಆಕರ್ಷಕವಾಗಿದೆ!

"ಬ್ರಹ್ಮಾಂಡ ಕೋಟಿಗಳುರುಳಿ ಬೀಳುವಲ್ಲಿ
ಕಾಕೆಯ ಹಣ್ಣೆಂದು ಮೆಲಿದನೊಬ್ಬ ಶರಣನು !
ಮುಗಿಲನು ಮುಟ್ಟುವನು ! ಉದ್ದವ ನೋಡಿ !
ಗಗನವ ನುಂಗುವನ ಬಾಯಗಲವ ನೋಡಾ !
ತಾಳಮರನ ಕೀಳುವಂಗೆ ಜೊಗಚೆಯ ಆಗಿಯೇನೆಂಬನು !
ಇಂತಪ್ಪ ಶರಣರು, ತೆಲುಗೇಶ್ವರಾ, ನಿಮ್ಮವರು"

ಶರಣರ ನಿಲವನ್ನು ಮೈನವಿರೇಳುವಂತೆ ಬಣ್ಣಿಸಬಲ್ಲ ಬೇಟೆಗಾರ ನವ ಪೆರ್ಮಾಡಿರಾಯನ ಪ್ರಧಾನಿಯಾಗಿದ್ದಾನೆಂದರೆ ಆಗಿರಲಿಕ್ಕಿಲ್ಲವೆಂದು ಹೇಗೆ ಹೇಳಬೇಕು?

ಒಟ್ಟಿನಲ್ಲಿ ಹೇಳುವುದಾದರೆ ತೆಲುಗು, ಜೊಮ್ಮಯ್ಯ, ಕರ್ನಾಟಕದ ಕಣ್ಣಪ್ಪ, ಒಂದೆರಡು ವಿಷಯಗಳಲ್ಲಿ ಕಣ್ಣಪ್ಪನನ್ನೂ ಮೀರಿಸಿದವ ಜೊಮ್ಮಯ್ಯ. ಕಣ್ಣಪ್ಪ ಮಂತ್ರಿಯಾಗಲಿಲ್ಲ, ವಚನ ರಚಿಸಲಿಲ್ಲ–ಜೊಮ್ಮಯ್ಯನಂತೆ. ಬೇಟೆಗಾರಿಕೆಯಲ್ಲಿ, ಭಕ್ತಿರತಿಯಲ್ಲಿ ಇಬ್ಬರೂ ಒಂದೇ,. ವಿವೇಕವೆಂಬ ಈಟಿಯಿಂದ ಮೋಹವೆಂಬ ಸಿಂಹವನ್ನು ಸಂಹರಿಸಿ, ಜ್ಞಾನವೆಂಬ ಖಡ್ಗದಿಂದ ಮೌಢ್ಯವೆಂಬ ಮದಗಜವನ್ನು ಸೀಳಿ, ಶಿವಭಕ್ತಿಯೆಂಬ ಮೊನೆಗತ್ತಿಯಿಂದ ಸಂಸಾರವೆಂಬ ಸರ್ಪವನ್ನು ಸವರಿ, ವಿಚಾರವೆಂಬ ಬಾಣದಿಂದ ಪಾಪವೆಂಬ ಪೆಡಂಭೂತವನ್ನು ಕೆಡಹಿ,

ನಿರಹಂಕಾರವೆಂಬ ಕಠಾರಿಯಿಂದ ಮದವೆಂಬ ಮುಳ್ಳುಹಂದಿಯನ್ನು ಕೊಂದು, ಧ್ಯಾನವೆಂಬ ಮಚ್ಚುಗತ್ತಿಯಿಂದ ಆಸೆಯೆಂಬ ಕೋಣವನ್ನು ಕತ್ತರಿಸಿ, ಶಿವಾಚಾರವೆಂಬ ಕೊಡಲಿಯಿಂದ ದುರಾಚಾರವೆಂಬ ಕರಡಿಯನ್ನು ಕಡಿದು, ವೈರಾಗ್ಯವಂಬ ಶೂಲದಿಂದ ಇಂದ್ರಿಯ ವ್ಯಾಪಾರಗಳೆಂಬ ಸಾರಗಗಳನ್ನು ತಿವಿದು, ಗಜಬಜೆಯಿಲ್ಲದ ಮನದ ಸ್ಥಿತಿಯನ್ನು ಪಡೆದು, ಸಹಜವ ಕಂಡುಂಡು ನಿಜಸುಖನಿಲಯನಾಗಿದ್ದ ತೆಲುಗು ಜೊಮ್ಮಯ್ಯ.

"ಭುವನ ಪಾವನನೆನಲೊಸೆದು ಜನ
ವವಿರತಂ ಕೀರ್ತಿಸುತಿರಲು ನಿಜ
ಶಿವ ಸಮರ್ಚನ ವೇಳೆಯೊಳು ತನ್ನಂ ಮರೆದು ಮರೆದು
ವಿವಿಧ ಜಂಗಮದಾಸ ಭಾವೋ–
ತ್ಸವದೊಳೊಸೆದೊಸೆದಿಂತು ಕಟಕರೋ
ಳವಿರಳಾನಂದದಿ ತೆಲುಗ ಜೊಮ್ಮಯ್ಯ"

ದಿನಗಳೆದು ಕೊನೆಗೆ ಶಿಪುರದಲ್ಲಿಯೇ ಶಿವನನ್ನು ಕೂಡಿದನು.

ಜೋಮ್ಮಯ್ಯನೊಡನೆ ಕೆಲವು ದಿನ ಕಳೆದು ಕೇಶಿರಾಜ ಕೊಂಡಗುಳಿಯತ್ತ ಪ್ರಯಾಣ ಬೆಳೆಸಿದ. ಕಳಿಸಲು ಬಂದಿದ್ದ ಜೊಮ್ಮಯ್ಯನನ್ನು ನಿಲಿಸಿ, ಆಲಿಂಗಿಸಿ, ಬೀಳ್ಕೊಟ್ಟು, ಬೆಟ್ಟ ಘಟ್ಟ ಕೆರೆ ತೊರೆಗಳನ್ನು ದಾಟುತ್ತ ಹೊರಟ. ದಾರಿಯಲ್ಲಿ ಭೋರೆಂದು ಹರಿವ ಹೆದ್ದೊರೆಯೊಂದು ಅಡ್ಡ ಬಂದಿತು.[೧] ಅದರ ತಟದಲ್ಲಿ ರಮಣೀಯವಾದ ಸ್ಥಾನವೊಂದು ಕೇಶಿರಾಜನ ಚಿತ್ತವನ್ನು ಸೆಳೆಯಿತು.[೨] ಅಲ್ಲಿಯೇ ಲಿಂಗಾರ್ಚನೆಗೆ ಕುಳಿತುಬಿಟ್ಟ ಕೇಶಿರಾಜ. ಲಿಂಗಕ್ಕೆ ಹೊಸದಾಸಣದ ಹೂವೇರಿಸಿ ಅದರಲ್ಲಿಯೇ ನೆಟ್ಟ ನೋಟವುಳ್ಳವನಾಗಿ ಕುಳಿತಿರಲು ಮೇಲಿನಿಂದ ಹದ್ದೊಂದು ದಾಸಣದ ಹೂವನ್ನು ಮಾಂಸದ ತುಂಡೆಂದೇ ಭ್ರಮಿಸಿ ಬಂದೆರಗಿತು. ಲಿಂಗ ಜಾರಿ ನದಿಯಲ್ಲಿ ಬಿದ್ದು ಬಿಟ್ಟಿತು. ಹುಡುಕಿ ತರಲು ಬಳಿಯಲ್ಲಿದ್ದ ಭಕ್ತರು ಧಾವಿಸಿದರು. ಕೇಶರಾಜನವರನ್ನು ತಡೆದ. ಒಂದು ಹರಿಗೋಲನ್ನು ತರಿಸಿ ಅದನ್ನೇರಿದ.

ಎನ್ನ ಸತಿಯಲ್ಲದನ್ಯಕ್ಕೆಳಸಿ ನಿಂದೊಡಂ
ನುಡಿವಲ್ಲಿ ಸತ್ಯವಲ್ಲದೆ ಬೇರೆ ನುಡಿದೊಡಂ

---

೧ ಬಹುಶಃ ಭೀಮಾನದಿಯೇ ಇರಬೇಕು.

೨ ಮುಂದೆ ಷಣ್ಮುಖ ಶಿವಯೋಗಿಗಳು ಯೋಗಸಿದ್ಧಿಯನ್ನು ಪಡೆದ ಜೋಗಿಯ– ಕೊಳ್ಳವೇ ಆಗಿರಬೇಕು. ಇದು ಕೊಂಡಗುಳಿಗೆ ಹೋಗುವ ಹಾದಿಯಲ್ಲಿಯೇ ಇದೆ.

ನಡೆವಲ್ಲಿ ನಾ ದುರಾಚಾರದಿಂ ನಡೆದೊಡಂ
ಮನಸಿನೊಳ್ನೀನಲ್ಲದನ್ಯವಂ ನೆನೆದೊಡಂ
ಕನಸಿನೊಳ್ ನೀನಲ್ಲದನ್ಯವಂ ಕಂಡೊಡಂ
ಇದು ದಿಬ್ಬವೆಂದೆನುತೆ ಹರಿಗೋಲನೇರಿದಂ ! (ಹ.ರಿ.)

ಏರಿದಂ, ಕರಂ, ಮೀರಿದಂ, ನಿರ್ಮಳಂ ನಿಶ್ಚಳಂ ವೀರಕಳೆಯೇರಿದಂ, ನಿರ್ಮಳಂ ನಿರುಪಮಂ ನಿಷ್ಠೆಯಂ ಹೇರಿದಂ ! ನದಿಯ ನಡುವೆ ನಿಂದು–

......ಸೋಮನಾಥ ಬಾರೈ ಬಾರ
ಮೃಡ ಭರ್ಗ ಭೀಮ ಭಾಳಾಕ್ಷ ಬಾರೈ ತಂದೆ
ಎನ್ನ ತವನಿಧಿಯೆ ಬಳಲಿಸದೆ ಬಾರೈ ತಂದೆ
ಎನ್ನ ಸುಖನಿಧಿಯೆ ಕಾಡದೆ ಕರುಣಿಸೆಲೆ ತಂದೆ
ಚಂದ್ರಧರ ಮದನಹರ ನಿನ್ನ ಮೊಗಮಂ ತೋರ
ಇಂದ್ರಾದಿ ಸುರನಿಕರ ವಂದ್ಯ ಪದಮಂ ತೋರ– (ಹ.ರ)

ಎಂದು ಹೃದಯವೇ ಹಾಡಾಗಿ ಹಾಡತೊಡಗಿದ. ಶಿವನಿಗೆ ಬರಿಬಂದಿತು. ಮೂಡಿದ, ಮೈದೋರಿದ–'ಭಕ್ತಿರಸದಿಂ ಮುಕ್ತಿಪದವೊಗೆದು ಬರ್ಪಂತೆ' ನದಿಯಿಂದ ಮೇಲೆದ್ದು ಮೂಡಿ ಬಂದ. ಕೇಶಿರಾಜ ಕುಣಿದ, ತಣಿದ, ತೂಗಾಡಿದ, ಸೈಗೆಡೆದ! ಶರಣಸತಿಗೆ ಮತ್ತೆ ಲಿಂಗಪತಿ ಲಭ್ಯನಾದ !

ಕೊಂಡಗುಳಿಗೆ ಹಿಂದಿರುಗಿ ಹೋದ ಬಳಿಕ ಕೇಶಿರಾಜ ಮುನ್ನಿನಂತೆ ಪದ್ಯ ರಚನೆ, ಪರಮಾತ್ಮ ಪೂಜೆಗಳಲ್ಲಿ ಕೊನೆಯ ದಿನಗಳನ್ನು ಕಳೆದನೆಂದು ತೋರುತ್ತದೆ. ಅವನ ಕೃತಿಗಳಲ್ಲಿ 'ಷಡಕ್ಷರ ಮಂತ್ರಮಹಿಮೆ'ಯೊಂದೇ ಈಗ ಉಪಲಬ್ಧವಿದೆ. ಇದೊಂದು ೧೧೦ ಕಂದಗಳ ಸುಂದರ ಕೃತಿ. ವರ್ಣಿತ ವಿಷಯ ಶಿವ ಮಂತ್ರಮಹಿಮೆ.

"ಕೋಟಿ ಜಪಂ ಕೋಟಿ ತಪಂ
ಕೋಟಿ ಮಹಾ ದಾನಧರ್ಮ ಪರಹಿತ ಚರಿತಂ
ಕೋಟ್ಯಂತರ ಪಾಪಂಗಳ
ದಾಟಿಪ ಜಪಮೋಂ ನಮಶ್ಶಿವಾಯ ಪದಂ"

ಎಂಬ ನಿಷ್ಠೆಯೇ ಹಾಡಾಗಿ ಹೊಮ್ಮಿದೆ ಈ ಕೃತಿಯಲ್ಲಿ. ಅತ್ಯಂತ ಅಚಲವಾದ ವಿಶ್ವಾಸದಿಂದ ಹೇಳುತ್ತಾನೆ ಕೇಶಿರಾಜ :

ಆಟಮಟದ ಮಾತನಾಡಿಯೆ
ತುಟಿಮಿಡುಕಲದೇಕೆ ಜನನ ಮರಣಾರ್ಣವ ದಾ ।

ತಟವಂ ಸಾರ್ಚಿಪ ತೆಪ್ಪಂ
ದಿಟವಿದು ಕೇಳೋಂ ನಮಶ್ಶಿವಾಯೆಂಬ ಪದಂ ॥
ಕೂಗಿಡುತಿಹ ಸಕಲೇಂದ್ರಯ–
ಕಾಗರಮೆನಿಸಿರ್ದ ತನುವಿವವಗುಣಗಣಮಂ ॥
ನೀಗುವೊಡೆ ಶಂಕರನ ಜಪ
ಮಾಗಳು ಬಿಡದೋಂ ನಮಶ್ಶಿವಾಯೆಂಬ ಪದಂ ॥
ತರಿಯಲ್ ಮೋಹದ ಕೆಚ್ಚಂ ।
ಹರಿಯಲ್ ಭವಪಾಶಮಂ ಮನೋಜನ ಬಿಲ್ಲಂ ।
ಮುರಿಯಲ್ ಮಾಯೆಯ ಬೇರಂ
ಕೊರೆಯಲ್ ಜಮಮೋಂ ನಮಶ್ಶಿವಾಯೆಂಬ ಪದಂ ॥

ಕೇಶಿರಾಜ ನಮ್ಮೆಲ್ಲರ ಲೇಸನೆ ಬಯಸಿ ಹೇಳುತ್ತಾನೆ– 'ತಲ್ಲಣದ, ತವಕ ದವಕದ, ಗೆಲ್ಲದ, ಹೋರಟೆಯ, ಸಟೆಯ ಸಂಸಾರದೊಳೇನಿಲ್ಲ ! ನೆನೆಮನವೆ ಗೌರೀವಲ್ಲಭನಂ !' ಅವನು ತನ್ನ ಮನಕ್ಕೆ ಬೋಧಿಸಿಕೊಂಡ ಈ ಮಾತು ಜನಕ್ಕೂ ಜ್ಯೋತಿಯಾಯಿತು– 'ಜ್ಯೋತಿರ್ ಜನೇಭ್ಯಃ' ಆಯಿತು.

ಹೀಗೆ ನಿತ್ಯನಿತ್ಯ ತನ್ನ ಆತ್ಮ ನೈವೇದ್ಯವನ್ನು ಪದ್ಯರೂಪದಲ್ಲಿ ಪರಮಾತ್ಮನಿಗರ್ಪಿಸುತ್ತ ಕೇಶಿರಾಜ ಶಿವಾಚಾರ ಕುಲರಾಜನಾಗಿ, ನಿಜವ ಕಂಡು ಸಹಜವ ನುಂಡು ಲಿಂಗದಲ್ಲಿ ಸಮರಸನಾಗಿಹೋದ. ಬಸವಣ್ಣನವರೊಡನೆ ಸಂಗಮೇಶ್ವರಕ್ಕೆ ಹೋದನೆಂದೂ ಹೇಳಿದೆ. ಇದು ಸಂಭವನೀಯವಲ್ಲವೆಂದು ತೋರುತ್ತದೆ. ಕವಿಯಾಗಿ ಕೊಂಡಗುಳಿಯಲ್ಲಿ ಜೀವನವನ್ನು ಆರಂಭಿಸಿ, ಚಮೂಪತಿಯಾಗಿ ಕೆಲದಿನ ಕಳೆದು., ಭಕ್ತನಾಗಿ ಶಿವಪುರದಲ್ಲಿ ಬೆಳಗಿ, ಕೊನೆಗೆ ಕವಿಯಾಗಿಯೇ ಕೊಂಡಗುಳಿಯಲ್ಲಿ ಕಾಲಕಳೆದ ಕೇಶಿರಾಜ ಕಾಲವನ್ನು ಗೆದ್ದು ಅಮರನಾಗಿದ್ದಾನೆ. ಅವನ ಬಹುಮುಖ ವ್ಯಕ್ತಿತ್ವ ಅವನಿಗೆ ಶರಣಗಣದಲ್ಲಿ ಗಣ್ಯಸ್ಥಾನವನ್ನು ನೀಡಿದೆ.

ಶರಣವ್ರಾತ ನಿವಾತ ನಿಶ್ಚಲ ಶಿವಾನಂದ ಪ್ರಸಂಗೋದ್ಭವ
ಸ್ಫುರಿತ ಪ್ರೋಲ್ಲಸಿತಾಂತರಂಗ ಸುಖಭಾವೋಜ್ಜೀವರಾಜೀವ ಭಾ–
ಸ್ಕರ ದ್ಯೋತಿತ ಸೋಮನಾಥ ಚರಣಾಂಭೋಜಾತ ಸೌಗಂಧ ಬಾ–
ಸುರಭೃಗಂ ಪ್ರಭು ಕೇಶಿರಾಜ ವಿಭುವೊಪ್ಪಿರ್ದಂ ಮಹೋತ್ಸಾಹದಿಂ !

■

# ಬಾಗಿದ ತಲೆಯ ಮುಗಿದ ಕೈಯ ಬಸವ

"ಎನಗೆ ನಾನೇ ಹಗೆ ನೋಡಯ್ಯ,
ಎನಗೆ ನಾನೇ ಕೆಳೆ ನೋಡಯ್ಯ,
ನಿಮ್ಮ ಸದ್ಭಕ್ತರೊಡನೆ ವಿರೋಧ ಮಾಡಿದೊಡೆ ಎನ್ನ ಕೊಲ್ಲುವುದಾಗಿ
ನಿಮ್ಮ ಪುರಾತನರಿಗಂಜಿ ಬೆಸೆಗೊಂಡೊಡೆ ಎನ್ನ ಕಾಯ್ದುದಾಗಿ
ಅನ್ಯಹಗೆಯೆಲ್ಲಿ, ಕೆಳೆಯೆಲ್ಲಿ?
ಬಾಗಿದ ತಲೆಯ ಮುಗಿದ ಕೈಯಾಗಿರಿಸು– ಕೂಡಲ ಸಂಗಮದೇವಾ!

ಇದು ಪ್ರಾರ್ಥನೆ–ಕ್ರಿ.ಶ. ೧೨೨೫ರಲ್ಲಿ ವಿಜಾಪುರ ಜಿಲ್ಲೆಯ ಇಂಗಳೇಶ್ವರ ಬಾಗೇವಾಡಿಯ ಪ್ರತಿಷ್ಠಿತ ಬ್ರಾಹ್ಮಣ ಕುಟುಂಬವೊಂದರಲ್ಲಿ ಮಾದರಸ–ಮಾದಲಾಂಬಿಕೆಯರಿಗೆ ಮಗನಾಗಿ ಹುಟ್ಟಿ, ಶಿವಭಕ್ತಿ ಶಿವಪೂಜೆಗಳೇ ಸಾಕಾರವಾದಂತೆ ಬೆಳೆದು, ಎಂಟನೆಯ ವಯಸ್ಸಿನಲ್ಲಿಯೇ ಉಪನಯನವನ್ನು ನಿರಾಕರಿಸಿ, ಕೂಡಲ ಸಂಗಮಕ್ಕೆ ಹೋಗಿ, ಅಲ್ಲಿ ಜಾತವೇದ ಮುನಿಗಳ ಗುರುಕುಲದಲ್ಲಿ ಹನ್ನೆರಡು ವರ್ಷ ವ್ಯಾಸಂಗಮಾಡಿ ವೇದಾಗಮ ವಿಶಾರದನಾಗಿ, ಶಾಸ್ತ್ರಜ್ಞಾನಸಂಪನ್ನನಾಗಿ, ಮಾವ ಬಲದೇವ ಮಂತ್ರಿಯ ಮಗಳಾದ ಗಂಗಾಬಿಕೆಯ ಕೈಹಿಡಿದು, ಬಲದೇವನ ತರುವಾಯ ಬಿಜ್ಜಳಭೂಪಾಲನ ಮಹಾ ಪ್ರಧಾನನಾಗಿದ್ದ ಬಸವಣ್ಣನ ಪ್ರಾರ್ಥನೆ ! ಇದು ಆ ಸ್ಥಾನದಲ್ಲಿದ್ದವರು ಮಾಡುವ ಪ್ರಾರ್ಥನೆಯೆ? ಅಧಿಕಾತ, ಐಶ್ವರ್ಯ,ಸ್ಥಾನಮಾನಗಳು ನಾ ಮುಂದೆ ನೀ ಮುಂದೆ ಎಂದು ಮೇಲ್ವಾಯ್ದು ಬಂದು ಮುತ್ತತ್ತಲಿರುವ ಹೊತ್ತಿನಲ್ಲಿ ನನ್ನನ್ನು 'ಬಾಗಿದ ತಲೆಯ ಮುಗಿದ ಕೈಯ ಬಸವವನ್ನಾಗಿರಿಸು' ಎಂದು ಬೇಡುತ್ತಾರೆ ಬಸವಣ್ಣನವರು ! ಅವರು ಬಲ್ಲರು,'ಬೀಗಿ ಬೆಳೆದ ಗೊನೆವಾಳೆಯಂತೆ ಬಾಗಿಕೊಂಡಿದ್ದರೆ ಬೇಡಿದ ಪದವಿಯನೀವ, ಕೂಡಲ ಸಂಗಮದೇವ' ಎಂಬುದನ್ನು. ಆದುದರಿಂದಲೇ–

"ತಮತಮಗೆಲ್ಲ ನೊಸಲಕಣ್ಣವರು ; ತಮತಮಗೆಲ್ಲ ನಂದಿವಾಹನರು;
ತಮತಮಗೆಲ್ಲ ಖಟ್ವಾಂಗ ಕಪಾಲ ತ್ರಿಶೂಲಧರರು !
ದೇವರಾರು ಭಕ್ತರಾರು–ಹೇಳಿರಯ್ಯ?

ಕೂಡಲ ಸಂಗಮದೇವಾ. ನಿಮ್ಮ ಶರಣರು ಸ್ವತಂತ್ರರು–
ಎನ್ನ ಬಚ್ಚ ಬರಿಯ ಬಸವನೆನಿಸಯ್ಯ !

ಎಂದು ಕೋರಿದವರು

ಲೋಕವೇನೋ ಅವರು ಮಾದರಸ–ಮಾದಲಾಂಬಿಕೆಯರ ಮಗನೆಂದು ನಂಬಿದೆ. ಆದರೆ ಅವರು ತಮ್ಮ ತಂದೆ ತಾಯಿಗಳ ಹೆಸರನ್ನು ಹೇಳಿದುದೇ ಬೇರೆಯಾಗಿದೆ:



**'ಬಾಗಿದ ತಲೆಯ ಮುಗಿದ ಕೈಯಾಗಿರಿಸು–ಕೂಡಲ ಸಂಗಮ ದೇವಾ !'**

‘ಚೆನ್ನಯ್ಯನ ಮನೆಯ ದಾಸಿಯ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು–
ಇವರಿಬ್ಬರು ಹೊಲದಲಿ ಬೆರಣಿಗೆ ಹೋಗಿ ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು–
ಕೂಡಲಸಂಗಮದೇವ ಸಾಕ್ಷಿಯಾಗಿ !”

ಇನ್ನಾರು ಇಂಥ ತಂದೆ ತಾಯಿಗಳು ಹೆಸರನ್ನು ಹೀಗೆ ಹೆಮ್ಮೆಯಿಂದ ಹೇಳಿಕೊಂಡಾರು! ಅವರ ವಿನಯಶ್ರೀ ಅನುಪಮವಾದುದು:

“ಆವನಾದರೇನು, ಶ್ರೀ ಮಹಾದೇವನ ನೆನೆವವನ
ಬಾಯ ತಂಬುಲ ಮೆಲುವೆ, ಬೀಳುಡಿಗೆಯ ಹೊದೆವೆ,
ಪಾದರಕ್ಷೆಯ ಕಾಯ್ದು ಬದುಕುವೆ !”

ಎಂಬುದು ಅವರ ಬಾಳಗುರಿ !

‘ಸಮಸ್ತ ಭಕ್ತನಿಕಾಯವನು ಪಾವನವ ಮಾಡಿದ ರಾಯ ಪೂರ್ವಚಾರ್ಯ, ಭಕ್ತಜನ ಭಾಗ್ಯ ಶುಭೋದಯ, ಶರಣಸರೋಜಸಂಕುಳ ಸಹಸ್ರಕರ’ ಬಸವಣ್ಣ ತನಗಾಗಿ ಆರಿಸಿಕೊಂಡುದು ಕರ್ತೃತ್ವವನ್ನಲ್ಲ–ತೊತ್ತುತನವನ್ನು ! ‘ಅಯ್ಯ, ನಿಮ್ಮ ವಂಶಾವಳಿಯಲು ಒಬ್ಬ ತೊತ್ತಿನ ಮಗ ಹುಟ್ಟಿದ; ಆತನ ತೊತ್ತಿನ ಮಗ ನಾನಯ್ಯ! ಬಳಿದೊತ್ತು, ಬಳಗದೊತ್ತು, ವಂಶದೊತ್ತು ನಾನಯ್ಯ ! ಕೂಡಲ ಸಂಗಮದೇವಾ ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ ನನ್ನ ತೊತ್ತ ತನಕ್ಕೆ ಕೇಡಿಲ್ಲ !’ ಇದೆಂಥ ಗರಿಮೆ, ಹಿರಿಮೆ ಅವರದು !

ಎಲ್ಲರೂ ಹಾರೈಸಿ ಹಂಬಲಿಸುವ ಪದವಿ–ಮಂತ್ರಿ ಪದವಿ ಅವರದಾಗಿದ್ದಿತು. ಈ ಮಂತ್ರಿ ಪದವಿಗಾಗಿ ಎಂಥೆಂಥ ತಂತ್ರಗಳು ನಡೆಯುತ್ತವೆ ಜಗತ್ತಿನಲ್ಲಿ? ಅಂಥ ಮಂತ್ರಿ ಪದವಿ ತಮ್ಮನ್ನು ಹುಡುಕಿಕೊಂಡು ಬಂದಿದ್ದರೂ ಅದರ ಬಗ್ಗೆ ವ್ಯಾಮೋಹವಿರಲಿಲ್ಲ ಅವರಿಗೆ. ಅವರಿಗೆ ಬೇಕಾಗಿದ್ದ ಪದವಿಯೇ ಬೇರೆ : “ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ, ರುದ್ರಪದವಿಯನೊಲ್ಲೆ–ಮತ್ತಾವ ಪದವಿಯನೊಲ್ಲೆನಯ್ಯಾ! ಕೂಡಲ ಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನು ಅರಿದಿಪ್ಪ ಮಹಾಪದವಿಯನೆ ಕರುಣಿಸಯ್ಯ !”

ಸದ್ಭಕ್ತರಾದರೆ ಸಾಕು–ಅವರು ಯಾರಾದರೇನು? ಎಂತಿರ್ದರೇನು? ‘ಆವಾವ ಭಾವದಲಿ ಶಿವನ ನಂಬಿದ ಶರಣರು ಎಂತಿರ್ದರೇನಯ್ಯ? ಆವಾವ ಭಾವದಲಿ ಶಿವನ ನಂಬಿದ ಮಹಿಮರು ಎಂತಿರ್ದರೇನಯ್ಯ?....ಕುಲವನರಸುವರೆ ಭಕ್ತರಲ್ಲಿ

ಜಾತಿಸಂಕರವಾದ ಬಳಿಕ?' ಕುಲಮದ, ಅರ್ಥಮದ, ಅಧಿಕಾರಮದ ಮೊದಲಾದ ಅಷ್ಟ ಮದಗಳನ್ನು ಹಿಟ್ಟುಗುಟ್ಟಲೆಂದೇ ಹುಟ್ಟಿದ ಬಸವಣ್ಣನವರು ಶಿವನ ನಂಬಿದ ಶರಣರಲ್ಲಿ ಕುಲವನರಸುವರೆ? ಜಾತಿಸಂಕರಕ್ಕಾಗಿಯೇ ಶಂಕರನ ಕಿಂಕರನಾಗಿ ಬಂದಿದ್ದ ಬಸವಣ್ಣನವರು ಶಿವನ ನಂಬಿದ ಶರಣರಲ್ಲಿ ಕುಲವನರಸುವರೆ? ಅವರಷ್ಟು ನಿಷ್ಠುರವಾಗಿ, ನಿರ್ದಾಕ್ಷಿಣ್ಯವಾಗಿ ಕುಲವನ್ನು ಖಂಡಿಸಿದವರು ಅವರೇ ಎಂದು ಹೇಳಬೇಕು. ಈ ವೀರವಾಣಿಗೆ ಉತ್ತರ ಕೊಡುವವರಾರು?

"ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ :
ಜಲಬಿಂದಿವಿನ ವ್ಯವಹಾರವೊಂದೇ !
ಆಶೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲ ಒಂದೇ !
ಏನನೋಡಿ ಏನ ಕೇಳಿ ಏನು ಫಲ?
ಕುಲಜನೆಂಬುದಕ್ಕಾವುದು ದೃಷ್ಟ?
ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ
ಆತ್ಮಾ ಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ?
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋಡಿ ಹಾರುವನಾದ
ಕರ್ಣದಲಿ ಜನಿಸಿದವರುಂಟೆ ಜಗದೊಳಗೆ?
ಇದು ಕಾರಣ, ಕೂಡಲಸಂಗಮದೇವಾ
ಲಿಂಗಸ್ಥಲವನರಿದವನೆ ಕುಲಜನು !"

ಕುಲಜ–ಕುಲಹೀನ ಎಂಬ ವರ್ಗೀಕರಣ ಜನ್ಮದಿಂದಲ್ಲ, ಕರ್ಮದಿಂದಲೂ ಅಲ್ಲ–ನೀತಿಯಿಂದ, ಆತ್ಮದೀಧಿತಿಯಿಂದ, ಪ್ರೀತಿಯಿಂದ : 'ಕೊಲುವನೇ ಮಾದಿಗ, ಹೊಲಸ ತಿಂಬುವನೇ ಹೊಲೆಯ, ಕುಲವವೇನೋ, ಅವಂದಿರ ಕುಲವೇನೊ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು !'

ಹುಟ್ಟಿನಿಂದಲೇ ಹೆಚ್ಚಿನವರು ನಾವೆಂದು ಹೋರಾಡದಿರಿ ! ಹುಟ್ಟಿನಲ್ಲಾವ ಹಿರಿಮೆಯಿದೆ? ಎಲ್ಲರೂ ಹುಟ್ಟುವುದು ಹೊಲೆಯಲ್ಲಿಯೇ ! ಕುಲಜನೆನಿಸಿಕೊಳ್ಳುವ ಹಂಬಲವಿದ್ದರೆ, ಹೆಬ್ಬಯಕೆಯಿದ್ದರೆ ಸಂಗನ ಶರಣರಂತೆ ಸಕಲ ಜೀವಾತ್ಮರಿಗೆ ಲೇಸನೇ ಬಯಸಿರಿ, ಲೇಸನೇ ನುಡಿಯಿರಿ, ಲೇಸಾಗಿ ನಡೆಯಿರಿ. ಲೇಸಿನಲ್ಲಿದೆ ಕುಲಜತೆ, ಲೇಸಿನಲ್ಲಿದೆ ಘಟನೆ, ಲೇಸಿನಲ್ಲಿದೆ ಪೂಜ್ಯತೆ–ಇದು ಬಸವಣ್ಣನವರ ನಿಲುವು. ಈ ನಿಲುವನ್ನು ಎಷ್ಟು ವಿಧವಾಗಿ ಎತ್ತಿ ಹಿಡಿದರೂ ಒತ್ತಿ ಹೇಳಿದರೂ ತೃಪ್ತಿಯಿಲ್ಲ ಅವರಿಗೆ : "ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ

ಮಗ, ಮಂಡೋದರಿ ಕಪ್ಪೆಯ ಮಗಳು ! ಕುಲವನರಿಸಿದಿರಿಂ ಭೋ, ಕುಲದಿಂದ ಮುನ್ನೇನಾದಿರಿಂ ಭೋ ! ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿಲ್ಯನೆಂಬ ಋಷಿ ಮೂರು ಭುವನವರಿಯೆ ನಾವಿದಕಾಣಿಂ ಭೋ! ನಮ್ಮ ಕೂಡಲ ಸಂಗಲ ವಚನವಿಂತೆಂದುದು : 'ಶ್ವಪಚೋಪಿ' ಯಾದರೇನು– ಶಿವಭಕ್ತನೇ ಕುಲಜನು !'

ಇನ್ನೂ ಸಂಶಯ ಹರಿಯದೆ? ಇನ್ನೂ 'ಹೊಲೆ, ಹೊಲೆ' ಎಂದು ಹಲುಬುವಿಯಾ? "ಹೊಲೆಯೊಳಗೆ ಹುಟ್ಟಿ ಕುಲವನರಸುವ, ಎಲೆವೋ ಮಾತಂಗಿಯ ಮಗ ನೀನು! ಸತ್ತುದನೆಳೆವ ನೆತ್ತಣ ಹೊಲೆಯ? ಹೊತ್ತು ತಂದು ನೀವು ಕೊಲುವಿರ!" ನಾಚಿಕೆಯಿಲ್ಲವೆ ಅನ್ಯರಿಗೆ ಅಂತ್ಯಜರೆನ್ನಲು, ಹೆರವರಿಗೆ ಹೊಲೆಯರೆಂದು ಹೀಯಾಳಿಸಲು? "ಜಾತಿವಿಡಿದು ಸೂತಕವನರಸುವೆ, ಜ್ಯೋತಿವಿಡಿದು ಕತ್ತಲೆಯನರಸುವೆ, ಇದೇಕೋ ಮರುಳ ಮಾನವಾ? ...ನಿಜಭಾವ ಲಕ್ಷ್ಮಿ ಸರಸ್ವತಿಯೊಲಿದರೆ ಕುಲವನರಸಲದೇಕೆ?"

'ನಿಜಭಾವ ಲಕ್ಷ್ಮಿ ಸರಸ್ವತಿ'ಯರನ್ನು ಒಲಿದು ಆರಾಧಿಸಿರಿ. 'ಆರಾಧಿಸಿದರೆ ಅಮೃತದ ಬೆಳಸು, ವಿರೋಧಿಸಿದರೆ ವಿಷದ ಬೆಳಸು !" ಎಚ್ಚರ, ನೀವು ನೆನಪಿಡದಿದ್ದರೂ ನಿಮ್ಮ ಗೋತ್ರವಾವುದೆಂದು ಕೇಳುವವರಿದ್ದಾರೆ. ಅವರಿಗೆ ಏನು ಹೇಳುವಿರಿ?

'ಗೋತ್ರನಾಮವ ಬೆಸಗೊಂಡರೆ
ಮಾತುನೂಂಕದೆ ಸುಮ್ಮನಿದ್ದಿರಿದೇನಯ್ಯಾ?
ತಲೆಯಕುತ್ತಿ ನೆಲವ ಬರೆಯುತ್ತಿದ್ದಿರಿದೇನಯ್ಯಾ?
ಗೋತ್ರ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ ನೆಂಬುದು,
ಕೂಡಲಸಂಗಯ್ಯ !,

ಬಸವಣ್ಣನವರ ಹೊಸ ಸಮಾಜಕ್ಕೆ ಗೋತ್ರಕರ್ತರು ಮಾದಾರ ಚೆನ್ನಯ್ಯ– ಡೋಹರ ಕಕ್ಕಯ್ಯರು !ಬಸವಣ್ಣನಲ್ಲ, ಚೆನ್ನಬಸವಣ್ಣನಲ್ಲ, ಪ್ರಭುದೇವರಲ್ಲ, ಅಕ್ಕಮಹಾದೇವಿಯಲ್ಲ, ಸಿದ್ಧರಾಮನಲ್ಲ– ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯರು!

ಎಂಥ ದಿಟ್ಟತನದ ಹೆಜ್ಜೆಯಿದು ! ಇದು ಕೇವಲ ಬಾಯಿಮಾತಲ್ಲ, ಅಂತರಂಗದ ವಿಶ್ವಾಸ :

'ದೇವ, ದೇವಾ, ಬಿನ್ನಪವನವಧಾರು :
ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರಾದವರನೆಲ್ಲರನೊಂದೇ ಎಂಬೆ ;
ಹಾರುವ ಮೊದಲು ಶ್ವಪಚ ಕಡೆಯಾಗಿ

ಭವಿಯಾದವರನೊಂದೇ ಎಂಬೆ.
ಹೀಗೆಂದು ನಂಬುವುದೆನ್ನ ಮನವು, ಹೀಗೆಂದು ನುಡಿಯುವುದೆನ್ನ ಮನವು.
ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳರೆ
ಹಲುದೋರೆ ಮೂಗ ಕೊಯ್ಯಿ ಕೂಡಲಸಂಗಮದೇವಾ !'

ಬಸವಣ್ಣನವರ ದೃಷ್ಟಿಯಲ್ಲಿ ಮಾನವಸೃಷ್ಟಿಯಲ್ಲಿ ಎರಡೇ ಜಾತಿ : ಒಂದು ಭಕ್ತರ ಜಾತಿ, ಇನ್ನೊಂದು ಭವಿಗಳ ಜಾತಿ. ಶರಣರ ಪರಿಭಾಷೆಯಲ್ಲಿ ಭಕ್ತ–ಭವಿ ಇವು ಆಸ್ತಿಕ–ನಾಸ್ತಿಕಕ್ಕೆ ಪರ್ಯಾಯಪದಗಳು. 'ಶ್ರೀ ವಿಭೂತಿ ರುದ್ರಕ್ಷಿ ಉಳ್ಳವರ ಭಕ್ತರೆಂಬೆ, ಇಲ್ಲದವರ ಭವಿಯೆಂಬೆ. ಕೂಡಲ ಸಂಗಮದೇವಾ, ಸದ್ಭಕ್ತರ ನೀನೆಂಬೆ' ಎಂದು ಬಸವಣ್ಣನವರೇ ಭವಿ–ಭಕ್ತರ ಭೇದವನ್ನು ಬಿಡಿಸಿ ಹೇಳಿದ್ದಾರೆ. ಅದೇಕೆ, 'ತನು ಭಕ್ತನಾಯಿತ್ತು, ಎನ್ನ ಮನ ಭವಿ ಕೂಡಲ ಸಂಗಮದೇವಾ !, ಎಂದು ಅವರೇ ಭವಿಭಕ್ತರಿಬ್ಬರೂ ಒಬ್ಬನಲ್ಲಿಯೇ ನೆಲೆಸಿರುವುದು ಸುಸಂಭವವೆಂದು ಸಾರಿ, ತನು ಭಕ್ತನಾದೊಡೆ ಸಾಲದು ಮನವೂ ಭಕ್ತನಾಗಬೇಕೆಂದು ಎಚ್ಚರಿಸಿದ್ದಾರೆ. ಶ್ರೀ ವಿಭೂತಿ ರುದ್ರಾಕ್ಷಿಗಳಿಂದ ತನು ಮಾತ್ರ ಭಕ್ತನಾದೀತು ; ಮನ ಭಕ್ತನಾಗಲು ಅದು ಭಕ್ತಿಗೆ ನೆಲೆಯಾಗಬೇಕು. ತನು ಮನಗಳೆರಡೂ ಭಕ್ತಿಗೆ ನೆಲೆಯಾದವರೇ ನಿಜವಾದ ಭಕ್ತರು. ಅಂಥ ಭಕ್ತರೆಲ್ಲ ಸಮಾನರು. ಅವರಲ್ಲಿ ಜಾತಿ–ಜನ್ಯ, ಉದ್ಯೋಗ–ಜನ್ಯ, ಲಿಂಗ–ಜನ್ಯ, ಅಧಿಕಾರ–ಐಶ್ವರ್ಯ–ಜನ್ಯ ಶ್ರೇಷ್ಠತೆ ಕನಿಷ್ಠತೆಗಳಿಲ್ಲ. ನೀಚೋಚ್ಚ ಭಾವನೆಗಳಿಲ್ಲ. ಮೇಲುಕೀಳುಗಳ ಕಾಳಕೂಟವಿಲ್ಲ ! ವಿಷಮತೆಯ ವಿಷವಿಲ್ಲ ! ಅವರಲ್ಲಿ–ಸಮಾನತೆಯ ಸುಧಾರಸವಿದೆ. ಅಂಥವರು ಹೊಲೆಯರಾಗಿ ಹುಟ್ಟಿದ್ದರೂ ಅವರ ಹೊರೆಯೇ ಲೇಸು, ಅವರ ನೆರೆಯೇ ಲೇಸು : 'ಹೊಲೆಯ ಹೊಲಬಿಗನಾದೊಡೆ ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯ ! ಹೊಲಬುಗೆಡದೆ 'ಲಿಂಗಶರಣೆ' ನ್ನಿರಯ್ಯ ! ಹೊಲಬುಗೆಡಬೇಡ, 'ಶಿವಶರಣೆ'ನ್ನಿರಯ್ಯ ! ನಮ್ಮ ಕೂಡಲಸಂಗನ ಮಹಾಮನೆಯೊಳು ಮಾದಾರ ಚೆನ್ನಯ್ಯ ಹೊಲಬಿಗನಯ್ಯ !'

ಸೊಮ್ಮುಳ್ಳವರ, ಕುಲದ ಹಮ್ಮುಳ್ಳವರ, ಪದವಿಯ ಬಿಮ್ಮುಳ್ಳವರ ಹೊರೆಯಲ್ಲಿರುವುದು ತರವಲ್ಲ. ಲೇಸಬಿಡದ, ಹೊಲಬುಗೆಡದ ಹೊಲೆಯರ ಹೊರೆಯಲ್ಲಿರುವದೇ ಚೆನ್ನ. 'ಸಂಗವೆರಡುಂಟು; ಒಂದ ಬಿಡು, ಒಂದ ಹಿಡಿ : ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ'. ಅವರು ಕುಲಹೀನರೆಂದೇ ಕರೆಯಲ್ಪಡಲಿ, ಕಡು ಬಡವರಾಗಿಯೇ ಇರಲಿ, ಹುಟ್ಟಿನಿಂದ ಹೊಲೆಯರಾದರೂ ಹೊಲಬನರಿದ ಶ್ರೇಷ್ಠರವರು ; ಮನೆಯಿಂದ ಬಡವರಾದರೂ ಮನದಿಂದ ಸಿರಿವಂತರವರು. ಆದುದರಿಂದ ಅವರ ಸಂಗವನ್ನೇ ಹಿಡಿ ; ಉಳಿದವರ ಸಂಗ ಬಿಡು–

‘ದೂಷಕನೊಬ್ಬ ದೇಶವ ಕೊಟ್ಟರೆ ಆಸೆಮಾಡಿ ಅವನ ಹೊರೆಯಲಿರಬೇಡ–
ಮಾದಾರ ಶಿವಭಕ್ತನಾದರೆ ಆತನ ಹೊರೆಯಲ್ಲಿ ಭೃತ್ಯನಾಗಿರ್ಪುದು
ಕರಲೇಶಯ್ಯ! ತೊತ್ತಾಗಿರ್ಪುದು ಕರಲೇಸಯ್ಯ !
ಕಾಡಸೊಪ್ಪು ತಂದು, ಓಡಿನಲ್ಲಿ ಹುರಿದಿಟ್ಟು, ಕೂಡಿಕೊಂಡಿಪ್ಪುದು
ಕೂಡಲಸಂಗನ ಶರಣರ !’

ಅವರ ಆತ್ಮದ ಐಸಿರಿಯ ಮುಂದೆ ಅರಸರ ಐಶ್ವರ್ಯ ಕಃಪದಾರ್ಥ : ‘ಅರಸರ ಮನೆಯಲ್ಲಿ ಅರಿಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಶಯ್ಯ’ ಎಂಬ ನಂಬಿಕೆ ಬಸವಣ್ಣನವರ ಬಾಳ ಉಸಿರು. ‘ನಿನ್ನವರ ನೀನೆಂಬೆ’ನೆಂದು ನಂಬಿದ್ದ ಅವರು ಭಕ್ತರು ಬಂದರೆ ಅವರ ಕುಲವನ್ನು, ಕಾಯಕವನ್ನು, ಸಿರಿಯನ್ನು ಬಡತನವನ್ನು, ವಯಸ್ಸನ್ನು, ಲಿಂಗಭೇದವನ್ನು, ಕೆಂಚಕರಿಕತನವನ್ನು ಕೇಳುವರೆ? ‘ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೆ? ಲಿಂಗದೇವನ ಪೂಜಿಸಿ ಕುಲವನರಸುವರೆ ಅಯ್ಯಾ?’ ಭಕ್ತರ ಮೂಲವನ್ನು ಬೆದಕದಿರು. ‘ದಾಸೀಪುತ್ರನಾಗಲಿ ವೇಶ್ಯಾಪುತ್ರನಾಗಲಿ– ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ ! ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ ಪಂಚಮಹಾಪಾತಕ ನರಕ ಕಾಣಾ, ಕೂಡಲಸಂಗಮದೇವಾ!’

ಕೃತ್ರಿಮ ಕುಲಭೇದಕ್ಕೆ ಕುಠಾರದಂತಿದೆ ಈ ವಚನ. ದಾಸೀಪುತ್ರರೂ ವೇಶ್ಯಾಪುತ್ರರೂ ಸಮಾಜದಲ್ಲಿ ಅತ್ಯಂತ ಕೀಳರೆಂದು ಕಡೆಗಣಿಸಲ್ಪಟ್ಟವರು. ಅವರೂ ಶಿವದೀಕ್ಷಾ ಸಂಪನ್ನರಾದರೆ ಉಳಿದ ಶಿವಭಕ್ತರಿಗೆ ಸರಿಸಮಾನರಷ್ಟೇ ಆಗುವುದಿಲ್ಲ– ವಂದನೆಗೆ, ಪೂಜೆಗೆ, ಪಾದೋದಕ ಪ್ರಸಾದ ಪಡೆದುಕೊಳ್ಳುವುದಕ್ಕೆ ಸಹ ಯೋಗ್ಯರಾಗುತ್ತಾರೆ ಬಸವಣ್ಣನವರು ಕಟ್ಟಿದ ಭಕ್ತ ಸಮಾಜದಲ್ಲಿ ! ಸಮಾನತೆಯ ತತ್ತ್ವವನ್ನು ಇದಕ್ಕಿಂತ ಉದಾತ್ತವಾಗಿ ಬಿತ್ತರಿಸುವುದು ಕಷ್ಟ. ‘ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡರೆ ನಿಮ್ಮಾಣೆ, ನಿಮ್ಮ ಪುರಾತನರಾಣೆ! ತಲೆದಂಡ, ತಲೆದಂಡ, ಕೂಡಲಸಂಗಮದೇವಾ, ಭಕ್ತರ ಕುಲವನರಸಿದರೆ ನಿಮ್ಮ ರಾಣಿವಾಸದಾಣೆ !’ ಎಂದು ಆಣೆಯನ್ನಿಟ್ಟುಕೊಂಡ ಅವರು ಮಾನವತೆಯ ಮಹಾಪ್ರವಾದಿಗಳು.

ಇನ್ನೊಬ್ಬರ ಕುಲವನ್ನು ಅರಸದಿರುವದು ಸುಲಭ; ಆದರೆ ತಾನು ಹುಟ್ಟಿದ ಕುಲವನ್ನು ಮರೆಯುವುದು ಕಠಿನ–ಅದೂ ಉತ್ತಮ ಕುಲದಲ್ಲಿ ಹುಟ್ಟಿದಾಗ. ಬಸವಣ್ಣನವರಿಗೆ ಹುಟ್ಟಿದ ಕುಲದ ಹೆಮ್ಮೆ ಹೇವಗಳೂ ಇರಲಿಲ್ಲ : ‘ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ ! ಕಕ್ಕಯ್ಯ

ನೊಕ್ಕುದನಿಕ್ಕು ನೋಡಯ್ಯ ! ದಾಸಯ್ಯ ಶಿವದಾನವ ನೆರೆಯ ನೋಡಯ್ಯ ! ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ–ಉನ್ನತ ಮಹಿಮ–ಕೂಡಲಸಂಗಮದೇವಾ, ಶಿವಧೋ,ಶಿವಧೋ !' ಎಂದು ತಮ್ಮ ಉತ್ತಮಕುಲದ ಕಷ್ಟದ ಹೊರೆಯನ್ನು ಸಹ ಕೊಡಹಿಬಿಟ್ಟರು ಬಸವಣ್ಣನವರು. ಅದರ ನೆನಪು ಕೂಡ ಆಗದಿರಲೆಂದು ತಮ್ಮ ನಿಜವಾದ ತಾಯಿತಂದೆಗಳ ಹೆಸರನ್ನು ಒಮ್ಮೆಯೂ ಹೇಳಿಕೊಳ್ಳಲಿಲ್ಲ. ಯಾರ ಹೆಸರನ್ನು ಹೇಳಿದರು ಹಾಗಾದರೆ?

'ಅಪ್ಪನು ನಮ್ಮ ಮಾದರ ಚೆನ್ನಯ್ಯ; ಬೊಪ್ಪನು ನಮ್ಮ ಡೋಹರ ಕಕ್ಕಯ್ಯ;
ಚಿಕ್ಕಯ್ಯನೆಮ್ಮಯ್ಯ ಕಾಣಿರಯ್ಯ !
ಅಣ್ಣನು ನಮ್ಮ ಕಿನ್ನರಿಯ ಬೆಮ್ಮಯ್ಯ–
ಎನ್ನನೇತಕ್ಕರಿಯಿರಿ, ಕೂಡಲಸಂಗಯ್ಯ?'

ತಂದೆ ತಾತರ ವಿಷಯ ತಿಳಿಯಿತು. ತಾಯಿಯಿಲ್ಲವೆ ಬಸವಣ್ಣನವರಿಗೆ? ಇದ್ದಾಳೆ, ಇದ್ದಾಳೆ :

'ಎಮ್ಮ ತಾಯಿ ನಿಂಬೆವ್ವ, ನೀರ ನೆರೆದುಂಬುಳು;
ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು'

ಯಾರೋ ಕೇಳಿರಬೇಕು– 'ಏನು ಬಸವಣ್ಣ, ಉತ್ತಮ ಕುಲದಲ್ಲಿ ಹುಟ್ಟಿ ಈ ಮಾದರ–ಡೋಹರ–ಮಡಿವಳ–ಬಾಣಸಿಗರ ವಂಶಾವಳಿಯನ್ನು ಹೇಳಿಕೊಳ್ಳಬಹುದೆ?' ಎಂದು. ಅದಕ್ಕೆ ಉತ್ತರವಿರಬಹುದು ಈ ವಚನ : 'ಸೆಟ್ಟಿಯೆಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹರನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚೆನ್ನಯ್ಯನ? ಆನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯ!'

ಎಲ್ಲ ಹಾರುವರಂತಲ್ಲ ಈ ಹಾರುವ, ಇವನು ಹಾರುವ ಹಾರುವ. ಏನೆಂದು ಹಾರುವ?

"ಹಾರುವ ಹಾರುವನಪ್ಪೆ ನಾನು –ಸದ್ಭಕ್ತರೆನ್ನವರೆನ್ನವರೆಂದು;
ಹಾರುವೆ ಹಾರುವೆನವ್ವಾ ನಾನು–ಶರಣರು ಎನ್ನವರೆನ್ನವರೆಂದು;
ಕೂಡಲ ಸಂಗಣ ಶರಣರು ಒಕ್ಕುದನಿಕ್ಕಿ ಸಲಹುವರೆಂದು"

"ಹಾರುವೆನಯ್ಯಾ ಭಕ್ತರ ಬರವ ಗುಡಿ ಕಟ್ಟಿ,
ಹಾರುವೆನಯ್ಯ ಶರಣರ ಬರವ ಗುಡಿಕಟ್ಟಿ;
ಕೂಡಲಸಂಗಮದೇವರು ವಿಪ್ರಕರ್ಮವ ಬಿಡಿಸಿ ಅಶುದ್ಧನ
ಶುದ್ಧನ ಮಾಡಿದನಾಗಿ."

ಇಂಥ ಹಾರುವ ಭಕ್ತರ ಕುಲವನ್ನು ಎಣಿಸುವನೆ, ಗಣಿಸುವರೆ?

"ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬವನ ಕುಲವೇನೊ?
ದೇವ, ನೀನೊಲಿದವನ, ಸ್ವಾಮೀ, ನೀ ಹಿಡದವನ ಕುಲವೇನೊ?
ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ–
ಕೂಡಲಸಂಗಮದೇವಾ"

ಎಂದು ಉದ್ಘೋಷಿಸಿದರವರು. ದೇವನನ್ನು ಪೂಜಿಸಿದಮೇಲೆಯೂ ಕುಲ ಉಳಿಯುತ್ತದೆಯೆ? ಉಳಿದರೆ ಅವನೆಂಥ ದೇವ, ಅದೆಂಥ ಪೂಜೆ ! ಅವನನ್ನು ಪೂಜಿಸಿ, ಭವವನ್ನು ಗೆದ್ದು, ಕುಲದ ಕಟ್ಟನ್ನು ಕತ್ತರಿಸಿ, ಕುಲಕ್ಕೆ ತಿಲಕರಾದವರ ಉದಾಹರಣೆಗಳಿಲ್ಲವೆ?

"ದೇವ ನಿಮ್ಮ ಪೂಜಿಸಿ ಚೆನ್ನವ ಕುಲ ಚೆನ್ನಾಯಿತ್ತು ;
ದೇವ ನಿಮ್ಮ ಪೂಜಿಸಿ ದಾಸನ ಕುಲ ದೇಸಿ ವಡೆದಿತ್ತು ;
ದೇವ ನಿಮ್ಮಡಿಗೆರಗಿ ಮಡಿವಾಳ ಮಾಚಯ್ಯ ನಿಮ್ಮಡಿಯಾದ ;
ನೀನೊಲಿದ ಕುಲಕ್ಕೆ, ನೀನೊಲಿಯದ ಹೊಲೆಗೆ ಮೇರೆಯುಂಟೆ ಅಯ್ಯ?
ಶ್ವಪಚೋಪಿ ಮುನಿಶ್ರೇಷ್ಠಃ ಯಸ್ತು ಲಿಂಗಾರ್ಚನೇರತೇ ।
ಲಿಂಗಾರ್ಚನ ವಿಹೀನೋಪಿ ಬ್ರಾಹ್ಮಣಃ ಶ್ವಪಚಾಧಮಃ ॥

ಎಂದುದಾಗಿ, ಜಾತಿ ವಿಜಾತಿಯಾದರೇನು ಅಜಾತಂಗೆ ಶರಣೆನ್ನದವನು–

ಆತನೇ ಹೊಲೆಯ, ಕೂಡಲಸಂಗಮದೇವಾ !"

ಈ ಮಾನವತಾವಾದದ ನಾದಕ್ಕೆ–

"ವೇದ ನಡನಡುಗಿತ್ತು; ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ !
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತ್ತಯ್ಯಾ !
ಆಗಮ ಹೆರ ತೊಲಗಿ ಆಗಲಿ ಇದ್ದಿತ್ತಯ್ಯ !"

ಯಾರೋ ಎಚ್ಚರಿಸಿರಬೇಕು–ಇದು ವೇದವಿರುದ್ಧವಾದುದು, ಶಾಸ್ತ್ರವಿರುದ್ಧ–ವಾದುದು ಎಂದು ಅದಕ್ಕೆ–

"ವೇದಕ್ಕೆ ಬರೆಯ ಕಟ್ಟುವೆ ; ಶಾಸ್ತ್ರಕ್ಕೆ ನಿಗಳವನಿಕ್ಕುವೆ ;
ತರ್ಕದ ಬೆನ್ನ ಬಾರನೆತ್ತುವೆ ; ಆಗಮದ ಮೂಗ ಕೊಯಿವೆ !
ನೋಡಯ್ಯಾ, ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ !"

ಎಂದು ಉತ್ತರವಿತ್ತರು ಬಸವಣ್ಣನವರು ! ಇದಕ್ಕೇನುತ್ತರ ಕೊಡುವುವು ವೇದಶಾಸ್ತ್ರ ಪುರಾಣಗಳು?

ಬಸವಣ್ಣನವರ ಈ ಮಾನವ ಪ್ರೇಮಕ್ಕೆ, ಸರ್ವಸಮಾನತೆಯ ಸೂತ್ರಕ್ಕೆ ವಿಶ್ವಕುಟುಂಬತ್ವ–ವಿಶ್ವಬಂಧುತ್ವಕ್ಕೆ ಮೂಲಾಧಾರವಾವುದು? ಶಾಸ್ತ್ರಾಧಾರವಂತೂ ಅಲ್ಲವೇ ಅಲ್ಲ–

'ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ !
ವೇದ ಘನವೆಂಬೆನೆ? ಪ್ರಾಣಿವಧೆಯ ಹೇಳುತ್ತಿದೆ !
ಸ್ಮೃತಿ ಘನವೆಂಬೆನೆ? ಮುಂದಿಟ್ಟು ಅರಸುತ್ತಿದೆ !
ಅಲ್ಲೆಲ್ಲಿಯೂ ನೀವಿಲ್ಲದಕಾರಣ !'

ಹಾಗಾದರೆ ಎಲ್ಲಿರುವನವನು? ಬಸವಣ್ಣನವರನ್ನೇ ಕೇಳೋಣ

"ಸಮುದ್ರ ಘನವೆಂಬೆನೆ? ಧರೆಯ ಮೇಲಡಗಿತ್ತು !
ಧರೆ ಘನವೆಂಬೆನೆ? ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು!
ನಾಗೇಂದ್ರ ಘನವೆಂಬೆನೆ? ಪಾರ್ವತಿಯ ಕಿರಿಕುಣಿಕೆಯ ಮುದ್ರಿಕೆಯಾಯಿತು!
ಅಂತಹ ಪಾರ್ವತಿ ಘನವೆಂಬೆನೆ? ಪರಮೇಶ್ವರನ ಅರ್ಧಾಂಗಿಯಾದಳು.ಅಂತಹ ಪರಮೇಶ್ವರ ಘನವೆಂಬೆನೆ? ನಮ್ಮ ಕೂಡಲ ಸಂಗನ ಶರಣರ
ಮನದ ಕೊನೆಯ ಮೊನೆಯ ಮೇಳಡಗಿದನು !"

ಇಲ್ಲಿದೆ ಬಸವಣ್ಣನವರ ಮಾನವಪ್ರೇಮದ ಮೂಲಾಧಾರ ! ಶಿವನಿಗೂ ಸ್ಥಳ ಕೊಡುವವನು ಜೀವಿ–ತನ್ನ ಮನದ ಕೊನೆಯ ಮೊನೆಯಲ್ಲಿ! ಆದುದರಿಂದ ಜೀವಿ ಅಲ್ಪನಲ್ಲ, ಕ್ಷುದ್ರನಲ್ಲ, ಕ್ಷುಲ್ಲಕನಲ್ಲ. ಜಗದಾದಿಯಿಂದಲೂ ಜೀವಿಯೆಷ್ಟು ವಿಕಾಸ ಹೊಂದುತ್ತ ಬಂದಿರುವನೋ ಅಷ್ಟೇ ದೇವನೂ ದೊಡ್ಡವನಾಗುತ್ತ ಬಂದಿದ್ದಾನೆ. ಜೀವಿಯ ಜ್ಞಾನವೆಷ್ಟೋ, ದೃಷ್ಟಿಯೆಷ್ಟೋ ಅಷ್ಟೇ ಅವನ ದೇವಕಲ್ಪನೆಯಲ್ಲವೆ? ತನ್ನ ತಿಳಿವಳಿಕೆಗಿಂತ, ತನ್ನ ಪರಮೋಚ್ಚವಾದ ಕಲ್ಪನೆಗಿಂತ ದೊಡ್ಡ ದೇವನನ್ನು ಜೀವ ಊಹಿಸುವನಾದರೂ ಹೇಗೆ? ಆದುದರಿಂದಲೇ ಅಣ್ಣನವರು ಉಗ್ಘಡಿಸಿದರು :

"ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ ;
ನಿನ್ನ ಸುತ್ತಿಪ್ಪುದು ನನ್ನ ಮನನೋಡಯ್ಯಾ ;
ನೀನು ಜಗಕ್ಕೆ ಬಲ್ಲಿದನು; ಅನು ನಿನಗೆ ಬಲಿದನು, ಕಂಡಯ್ಯಾ ;
ಕರಿಯು ಕನ್ನಡಿಯೊಳಡಗಿದಂತಯ್ಯಾ ,
ಎನ್ನೊಳಗೆ ನೀನಡಿದೆ, ಕೂಡಲ ಸಂಗಮದೇವಾ !"

ತಾನು ಅಲ್ಲನೆಂಬ, ಕ್ಷುದ್ರನೆಂಬ, ಕಃಪದಾರ್ಥವೆಂಬ ಭಾವನೆಗೆ ಬಲಿಯಾಗಿ ಬಳಲುವ ಜೀವಿಗೆ ಎಂಥ ಆತ್ಮವಿಶ್ವಾಸ ಹುಟ್ಟಿಸುವ ವಚನವಿದು ! ಆ ಅಚಿಂತ್ಯವಾದ ಪರಾತ್ಪರ ಶಕ್ತಿಗೆ ಎದುರಾಗಿ ನಿಂತು, 'ನೀನು ಜಗಕ್ಕೆ ಬಲ್ಲಿದನು, ನಾನು ನಿನಗೆ ಬಲ್ಲಿದನು !' ಎಂದು ಆಹ್ವಾನವನ್ನು ತೂರಬಲ್ಲ ಧೀರತ್ವವನ್ನು ಜೀವಿಗೆ ಧಾರೆಯೆರೆದ ಬಸವಣ್ಣನವರಿಗೆ ಮಾನವತೆಯಲ್ಲಿದ್ದ ವಿಶ್ವಾಸವೆನಿತೋ, ಪ್ರೇಮವೆನಿತೊ !

"ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಯ್ಯಾ ;
ಎರಡಾಳಿನ ಭಾಷೆಯ :
'ಕೊಲುವೆ'ನೆಂಬ ಭಾಷೆ ದೇವನದು ;
'ಗೆಲುವೆ'ನೆಂಬ ಭಾಷೆ ಭಕ್ತನದು !
ಸತ್ಯವೆಂಬ ಕೂರಲಗನೆ ತಳೆದು ಸದ್‌ಭಕ್ತರು ಗೆದ್ದರು ,
ಕಾಣಾ, ಕೂಡಲಸಂಗಮದೇವಾ !"

ಶಿವನೊಡನೆ ಸ್ಪರ್ಧೆ ನಡೆದರೆ ಶಿವಭಕ್ತರೇ ಗೆಲ್ಲುತ್ತಾರೆಂದು ವಿಶ್ವಾಸವೀಯುತ್ತಲಿದ್ದಾರೆ ಬಸವಣ್ಣನವರು ! ಇನ್ನಾರು ಇಂಥ ವಿಶ್ವಾಸವನ್ನಿತ್ತಾರು? ಧಾರ್ಮಿಕ, ರಾಜಕೀಯ, ಆರ್ಥಿಕ ಸಾಮಾಜಿಕ ಅರಾಜಕತೆಗಳಿಗೆ ಈಡಾಗಿ, ಜಗದ ಪೆಟ್ಟುಗಳಿಂದ ಜೀವನ ನಿಷ್ಠೆ ಪುಡಿಪುಡಿಯಾಗಿ, ಬಾಳು ಗೋಳಾಗಿ ಗೋಗರೆಯುತ್ತಲ್ಲಿದ್ದ ಅಂದಿನ, ಅದೇಕೆ, ಇಂದಿನ ಜನತೆಗೆ ಅದೆಂಥ ಸಂಜೀವಿನೀ ಶಕ್ತಿಯಿದೆ ಈ ಸಂದೇಶದಲ್ಲಿ ! ಬಸವಣ್ಣನವರ ಬೋಧೆಯಲ್ಲಿ ನಿಜವಾಗಿಯೂ ಮೃತಸಂಜೀವಿನೀ ಶಕ್ತಿಯಿದೆ.

ಈ ಶಕ್ತಿ ಸ್ರೋತಸ್ವಿನಿಗೆ ಉಗಮಸ್ಥಾನ ಅವರಿಗೆ ಮಾನವತೆಯಲ್ಲಿದ್ದ ಅಪಾರವಾದ ವಿಶ್ವಾಸ. ಕೃತ್ರಿಮ ಸಮಾಜದ ಕುಟಿಲ ನೀತಿಗಳಿಂದ ಮಾನವ ಮಾನವರಲ್ಲಿ ಭೇದವನ್ನೆಣಿಸುವ ಬುದ್ಧಿ ಬೆಳೆದು ಮೇಲು ಕೀಳುಗಳ ಕಾಳಕೂಟ ಹರಡಿರಬಹುದು; ಜಾತಿ-ಕುಲ-ಪಂಥಗಳ ಜೇಡಜಾಲ ಹಬ್ಬಿರಬಹುದು; ಇದಕ್ಕೆ ಮಾನವರೇ ಬರೆದ ಶಾಸ್ತ್ರಗಳ ಬೆಂಬಲವೂ ಇರಬಹುದು. ಆದರೇನು? ಮಾನವನು ಮಾನವನೇ ! ಇನ್ನೇನೂ ಅಲ್ಲ, ಆಗಲಾರ ! ಮಾನವನನ್ನು ಮಾನವನನ್ನಾಗಿ ಕಾಣುವ ದೃಷ್ಟಿ ಬರಲಿ. ಆ ದೃಷ್ಟಿ ಬರುತ್ತಲೇ ಮನುಜಸೃಷ್ಟಿಯೇ ಹೊಸದಾಗಿ ಹೊಳೆದೀತು, ತಳತಳಿಸಿ ಬೆಳಗೀತು ! ಇದನ್ನು ಶಾಸ್ತ್ರ ಒಪ್ಪಲಿ, ಬಿಡಲಿ; ನಿನ್ನ ಹೃದಯ ಒಪ್ಪುವುದೋ ಇಲ್ಲವೊ? ಹೃದಯ ಒಪ್ಪಿದರೆ ಸಾಕು. ಇದನ್ನು ನಂಬು. ಇದಕ್ಕೆ ಶಾಸ್ತ್ರಾಧಾರ ಹುಡುಕುವ ಹವ್ಯಾಸಕ್ಕೆ ಹೋಗಬೇಡ !

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು
ಎದೆಯ ದನಿಗಿಂ ಮಿಗಿಲು ಶಾಸ್ತ್ರವಿಹುದೇನು !

ಎಂದು ಇಂದಿನ ಮಹಾಕವಿ ಕೇಳಿಲ್ಲವೆ? ಯಾವುದು ಬೇಕು ನಿಮಗೆ? ಹೃದಯಹೀನಶಾಸ್ತ್ರ ಬೇಕೊ ಶಾಸ್ತ್ರರಹಿತ ಹೃದಯ ಬೇಕೊ? ಮತಗ್ರಂಥ ಬೇಕೊ ಮಾನವ ಪ್ರೇಮ ಬೇಕೊ?

ಮಾನವ ಪ್ರೇಮವಿಲ್ಲದ ದೇವತಾರ್ಚನೆಯೂ ನಿಷ್ಫಲವಾದುದು ! ಕಲ್ಲನಾಗರ ಕಂಡರೆ ಹಾಲನೆರೆಯೆಂಬ, ದಿಟನಾಗರ ಕಂಡರೆ ಕೊಲ್ಲೆಂಬ, ಉಂಬುವ ಜಂಗಮ ಬಂದರೆ ನಡೆಯೆಂಬ, ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬ ಭಕ್ತ ಅದೆಂಥ ಭಕ್ತಿ? ಬರಡು ಭಕ್ತಿ, ಬಂಜೆ ಭಕ್ತಿ!

"ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ,
ಬಂಧುಗಳು ಬಂದಾಗಳಿಲ್ಲೆನ್ನ;
ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ,
ಬಂದ ಪುರಾತನರಿಗೆ ಇಲ್ಲೆಂಬ !
ಸಾವಾಗ ದೇಹವ ದೇಗುಲಕ್ಕೊಯ್ಯೆಂಬ !
ದೇವರಿಗೆ ಹೆಣ ಬಿಟ್ಟೆ ಹೇಳಿತ್ತೆ, ಕೂಡಲ ಸಂಗಮದೇವಾ !"

ಇದು ದೇವರ ಕಣ್ಣಲ್ಲಿಯೂ ಮಣ್ಣೆರಚುವ ಭಕ್ತಿ–ಜೀವಿಗಳನ್ನು ವಂಚಿಸಿ ಜಡವನ್ನು ಪೂಜಿಸುವ ಭಕ್ತಿ ! ಇದು ಬಹು ಪ್ರಿಯಾವಾದುದು ಬಹಿರಂಗದ ಭಕ್ತಿರಿಗೆ. ಏಕೆ?

"ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ :
ಅದು ಬೇಡದು , ಬೆಸಗೊಳ್ಳದು–
ತಂದೊಮ್ಮೆ ನೀಡಬಹುದು.
ಕಾಡುವ ಬೇಡುವ ಜಂಗಮ ಬಂದರೆ
ನೀಡಲು ಬಾರದು–ಕೂಡಲಸಂಗಮದೇವಾ !"

ಜಂಗಮವನ್ನು ಕಡೆಗಣಿಸಿ, ಜಡವನ್ನು ಪೂಜಿಸುವ ಜಡಮತಿಗಳಿಗೆ ಸ್ಥಾವರದ ಸ್ವರೂಪ ತಿಳಿದಿದೆಯೆ?

"ಎರೆದರೆ ನೆನೆಯದು, ಮರೆದರೆ ಬಾಡದು;
ಹುರುಳಿಲ್ಲ, ಹುರುಳಿಲ್ಲ ಲಿಂಗಾರ್ಚನೆ !
ಕೂಡಲಸಂಗಮದೇವಯ್ಯಾ , ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು!"

ಸ್ಥಾವರವನ್ನು ಮೆಚ್ಚಿಸಿಹೋಗಿ ಜೀವಿಗಳನ್ನು ಕಡೆಗಣಿಸಿದ ಪಾಖಂಡಿಗಳೇ– ಕಿವಿಗೊಟ್ಟು ಕೇಳಿ ; 'ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು! 'ಅದು ಹೇಗೆ?' ಎಂದು ಕೇಳಿವಿರಾ?

"ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯಾ ;
ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ,
ಜಂಗಮಾಪ್ಯಾಯನವಾದರೆ ಲಿಂಗಸಂತುಷ್ಟಿಯಯ್ಯಾ :
'ವೃಕ್ಷಸ್ಯ ವದನಂ ಭೂಮಿಃ ಸ್ಥಾವರಸ್ಯ ತು ಜಂಗಮಂ'
"ಇದು ಕಾರಣ, ಕೂಡಲ ಸಂಗಮ ದೇವರಲ್ಲಿ
ಜಂಗಮಾಪ್ಯಾಯನವಾದರೆ ಲಿಂಗ ಸಂತುಷ್ಟಿ !"

'ಸ್ಥಾವರಕ್ಕೆ ಬಾಯಿ ಜಂಗಮ' 'ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು' 'ಭಕ್ತಿಯೆಂಬ ಭಾಂಡಕ್ಕೆ ಜಂಗಮವೇ ಸುಂಕಿಗ' ಎಂದು ಸಾರಿ ಅದುವರೆಗೆ ಸ್ಥಾವರ ದೇಗುಲ ಸ್ಥಾವರ ಪೂಜೆಗಳಲ್ಲಿಯೇ ಮುಳುಮುಳುಗಿ ತೊಳಲುತ್ತಲಿದ್ದ ಜನತೆಗೆ, ಜಡಕ್ಕಾಗಿ ಜೀವಿಗಳನ್ನು ದುರ್ಲಕ್ಷಿಸಿದ್ದ ಶಾಸ್ತ್ರಕಾರರಿಗೆ ಜಂಗಮರ ಚರಸೃಷ್ಟಿಯ ಮಹತಿಯನ್ನು ಮನಗಾಣಿಸಿಕೊಟ್ಟವರು ಬಸವಣ್ಣನವರು ;

"ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರೆರೆದರೆ
ಮೇಲೆ ಪಲ್ಲವಿಸಿತ್ತು ನೋಡಾ !
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದರೆ
ಮುಂದೆ ಸಕಲಾರ್ಥವನೀವ ನೋಡಾ !"

ಎಂದು ಕಲ್ಲ ಮೇಲೆ ನೆಟ್ಟ ದೃಷ್ಟಿಯನ್ನು ಕಿತ್ತು ಮನುಜನ ಮೇಲೆ, ಪ್ರಾಣಿ ಕೋಟಿಯ ಮೇಲೆ ಇರಿಸಿದವರು ಬಸವಣ್ಣನವರು ;

"ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ !
ಜಲವೊಂದೇ ಶೌಚಾಚಮನಕ್ಕೆ !
ಫಲಮೊಂದೇ ಷಟುದರ್ಶನ ಮುಕ್ತಿಗೆ !
ಕುಲವೊಂದೇ ತನ್ನ ತಾನರಿದವಂಗೆ !
ನಿಲವು ಒಂದೇ, ಕೂಡಲ ಸಂಗಮದೇವಾ,
ನಿಮ್ಮನರಿದವಂಗೆ !"

ಎಂಬ ಮಾನವ ಕುಲೈಕ್ಯದ ಮಹಾಮಂತ್ರವನ್ನು ಸಾರಿದವರು ಬಸವಣ್ಣನವರು!

ಅವರ ದೃಷ್ಟಿಯಲ್ಲಿ ಎರಡೇ ವರ್ಗಗಳು ವಿಶ್ವದಲ್ಲಿ : ಅರಿದವರ ಕುಲವೊಂದು, ಅರಿಯದವರ ಕುಲವಿನ್ನೊಂದು. ಅರಿಯದವರು ಕೊನೆಯುವರೆಗೆ ಅರಿಯದವರಾಗಿಯೇ ಉಳಿಯಬೇಕಿಲ್ಲ. ಅರಿತವರ ಸಂಗಮಾಡಿ ತಾವೂ ಅರಿತವರಾಗಬಹುದು, ಭವಿತನವನ್ನು ನೀಗಬಹುದು, ಶಿವಪಥದಲ್ಲಿ ಸಾಗಬಹುದು.

"ಕುಂಡಲಿಗನೊಂದು ಕೀಡೆಯ ತಂದು ತನ್ನಂತೆ ಮಾಡಿತಲ್ಲ !
ಎಲೆ ಮಾನವಾ, ಕೇಳಿ ನಂಬಯ್ಯ ! ನೋಡಿ ನಂಬಯ್ಯ !
ತ್ವಚ್ಚಿಂತಯಾ ಮಹಾದೇವ ತ್ವಮೇವಾಸ್ಮಿನ ಸಂಶಯಃ !
ಭ್ರಮದ್‌ಭ್ರಮರ ಚಿಂತಾಯಾಂ ಕೀಟೋಪಿ ಭ್ರಮರಾಯತೇ ॥
ಕೂಡಲ ಸಂಗನ ಶರಣರ ಅನುಭಾವ ಇದರಿಂದ ಕಿರುಕುಳವೆ–ಎಲೆ
ಮಾನವಾ?"

ಜಡ ಚೇತನವಾಗುತ್ತದೆ, ಕೀಟ ಭ್ರಮರವಾಗುತ್ತದೆ, ವಾನರ ನರನಾಗುತ್ತಾನೆ, ನರನು ಹರನಾಗನೆ? ಶರಣರ ಅನುಭಾವ ಕುಂಡಲಿಗನ ಶಕ್ತಿಗಿಂತ ಕಿರುಕುಳವೆ? ಕುಂಡಲಿಗನ ಸಂಗದಿಂದ ಕೀಟ ಕುಂಡಲಿಗನಾದರೆ ಕುಂಡಲಿನಿಯ ಸಹಾಯದಿಂದ ಭವಿ ಭಕ್ತನಾಗನೆ? ಭಕ್ತ ಮುಕ್ತನಾಗನೆ? ಆಗನೆಂದು ನುಡಿಯವವರಿಗಾಗಿ ಅಣ್ಣನ ಉತ್ತರ ಸಿದ್ಧವಿದೆ :

".....ನಮ್ಮ ಶಿವಭಕ್ತರನು ಹೊಲೆಯ, ಮಾದಿಗ, ಕಬ್ಬಿಲ, ಕಮ್ಮಾರ, ಕಂಚುಗಾರ,ಅಕ್ಕಸಾಲೆ, ಕುಂಬಾರ, ಅಗಸ, ನಾವಿಂದ, ಜೇಡ, ಬೇಡನೆಂದು ನುಡಿವುತ್ತಿಪ್ಪಿರಿ : ನಿಮ್ಮ ಉತ್ತರ ಸತ್ಕುಲಂಗಳ ನಾವು ಎತ್ತಿ ನುಡಿಯಬಹುದೆ–ಮಾರ್ಕಾಂಡೇಯ ಮಾದಿಗನೆಂದು, ಸಾಂಖ್ಯ ಶ್ವಪಚನೆಂದು, ಕಶ್ಯಪ ಕಮ್ಮಾರನೆಂದು, ರೋಮಜ ಕಂಚುಗಾರನೆಂದು, ಅಗಸ್ತ್ಯ ಕಬ್ಬಿಲನೆಂದು, ವ್ಯಾಸ ಬೇಡನೆಂದು, ವಶಿಷ್ಠ ಡೊಂಬನೆಂದು, ದೂರ್ವಾಸ ಮಚ್ಚಿಗನೆಂದು, ಕೌಂಡಿಲ್ಯ ನಾವಿದನೆಂದು?......ಇಂತಪ್ಪ ಋಷಿ ಜನಂಗಳೆಲ್ಲ ಶ್ರೀ ಗುರುವಿನ ಕಾರುಣ್ಯವಂ ಪಡೆದು.....ಉತ್ತಮ ವರ್ಣಶ್ರೇಷ್ಠರಾದರು ಕಾಣಿರೋ ! ಇದು ಕಾರಣ, ನಮ್ಮ ಕೂಡಲ ಸಂಗಯ್ಯನನ್ನು ಅರಿದು ಪೂಜಿಸುವಾತನೇ ಉತ್ತಮ ಸದ್‌ಬ್ರಾಹ್ಮಣನು; ಅರಿಯದನೀಗಳೇ ಕೆಟ್ಟ ಹೊಲೆಯ ಕಾಣಿರಣ್ಣಾ !"

ವ್ಯಾಸ–ವಾಲ್ಮೀಕಿ–ವಶಿಷ್ಠಾದಿಗಳಿಗೆ ಸಾಧ್ಯವಾದುದು ಎಲ್ಲರಿಗೂ ಸಾಧ್ಯವಿದೆ. ಸಾಧ್ಯವಿಲ್ಲವೆಂಬ ಮಂಕು ಕವಿದಾಗ ಅದನ್ನು ಕಳೆದು ಧರ್ಮದ ದಿವ್ಯಜ್ಯೋತಿ ಮತ್ತೆ ಪ್ರಜ್ವಲಿಸಿ ಪ್ರಕಾಶಿಸುವಂತೆ ಮಾಡಿದ ಧರ್ಮಾತ್ಮರು ಬಸವಣ್ಣನವರು. ಆದುದರಿಂದಲೇ ಇಂದಿಗೂ ಹಳ್ಳಿಗರು ಸಹ,

"ವೇದವೆಂಬುದು ವಾದಭೇದ ಹುಟ್ಟಿಸಿ ಜಗಕೆ
ದಾದು ಯಾರಿಲ್ಲ ಹೇಳುದಕೆ–ಬಸವಣ್ಣ
ಭೇದ ಆಳುಕಿಸಿದ ಕುಲಕುಲಕೆ !

ಎಂದು ಹಾಡಿ ಹರಸುತ್ತಲಿದ್ದಾರೆ :

"ಉತ್ತಿಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯಶಿವಮಂತ್ರ ನಿನ್ಹೆಸರು–ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ !"

ಎಂದು ಕೊಂಡಾಡುತ್ತಲಿದ್ದಾರೆ. ಇದಕ್ಕಿಂತ ಚೆನ್ನಾಗಿ ಇನ್ನಾರು ಬಣ್ಣಿಸಬಲ್ಲರು ಬಸವಣ್ಣನ ಹಿರಿಮೆಯನ್ನು?

ತತ್ತ್ವತಃ ಸಕಲ ಮಾನವರ ಸಮಾನತೆಯನ್ನು ಒಪ್ಪಿಕೊಳ್ಳುವುದು ಸುಲಭ; ಆದರೆ ತಾತ್ವಿಕವಾಗಿ ಒಪ್ಪದುದನ್ನು ವ್ಯಾವಹಾರಿಕವಾಗಿ ಕಾರ್ಯಾನ್ವಿತಗೊಳಿಸುವುದು ಕಠಿನ, ಬಸವಣ್ಣನವರು ಬಾಯಿಮಾತಿನ ಮಲ್ಲರಲ್ಲ, ನುಡಿದಂತೆ ನಡೆದ ಕಡುಗಲಿಗಳು:

"ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ,
ನಡೆಯೊಳಗೆ ನುಡಿಯ ಪೂರೈಸುವೆ :
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ !
ಒಂದು ಜವೆ ಕೊರೆತೆಯಾದರೆ ಎನ್ನನದ್ದಿ ನೀನೆದ್ದು ಹೋಗು–
ಕೂಡಲಸಂಗಮದೇವಾ !"

ಎಂಬುದು ಅವರ ಭಾಷೆ. ಬಸವನ ಭಾಷೆ ಭಾಷೆ. ಭಕ್ತಿ ಸುಭಾಷೆಯೆಂದರೇನು?

"ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗಮನು?
ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ?
ಶಿವಭಕ್ತನಾಗಿ ಭಕ್ತಪಕ್ಷವಿಲ್ಲದಿದ್ದರೆ ಕಾಗೆ ಕೋಳಿಯಿಂದ ಕರಕಷ್ಟ !"

ಎಂಬುದೇ ಭಕ್ತಿ ಸುಭಾಷೆ. ಇದಕ್ಕೆ ತಕ್ಕಂತೆ–

ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ, ನಿಮ್ಮ
ಪುರಾತನರಾಣೆ ! ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ !"

ಎಂದು ಉಸಿರಿ ಅದರಂತೆ ಆಚರಿಸಿದ ಕ್ರಿಯಾವೀರರವರು. 'ನಡೆಯಲರಿಯದೆ, ನುಡಿಯಲರಿಯದೆ ಲಿಂಗವ ಪೂಜಿಸಿ ಫಲವೇನು? ಅವರ ಸುಖವೆನ್ನ ಸುಖ;

ಅವರ ದುಃಖವೆನ್ನ ದುಃಖ ! ಕೂಡಲ ಸಂಗನ ಶರಣರ ಮನನೊಂದರೆ ಆನು ಬೆಂದೆನಯ್ಯಾ !' ಎಂದು ಶರಣರ ಸುಖದುಃಖವೇ ತಮ್ಮ ಸುಖದುಃಖವೆಂದು ತಿಳಿದಿ ಬಾಳಿದರವರು.

ಬಂಜೆ ಬೇನೆಯನ್ನರಿಯದಂತೆ ಶುಷ್ಕ ತತ್ತ್ವವಾದಿ ಭಕ್ತರ ಬೇನಯನ್ನರಿಯನು. ೨೧ ವರ್ಷ ಮಯಸ್ಸುಳ್ಳ ಎಲ್ಲರಿಗೂ ಮತದಾನದ ಅಧಿಕಾರ, ನಾಗರಿಕ ಸ್ವಾತಂತ್ರ್ಯಗಳು ಸಮಾನವಂದು ಸಾರಿ ಪ್ರಜಾಪ್ರಭುತ್ವ ತೃಪ್ತವಾಗುವಂತೆ ತತ್ತ್ವತಃ ಸರ್ವರೂ ಸಮಾನರೆಂದು ಸಾರಿ ಧರ್ಮ ಪ್ರಭುತ್ವವೂ ತೃಪ್ತವಾದರೆ ದುಃಖಿತರಿಗೆ, ದಲಿತರಿಗೆ, ವಂಚಿತರಿಗೆ, ಅಬಲರಿಗೆ ಆದರಿಂದಾವ ಸುಖ? 'ತನುವ ನೋಯಿಸಿ, ಮನವ ಬಳಲಿಸಿ ನಿಮ್ಮ ಪಾದವಿಡಿದವರೊಳರೆ? ಈ ನುಡಿ ಸುಡದಿಹುದೆ? 'ಕೂಡಲ ಸಂಗಮದೇವಾ, ಶಿವಭಕ್ತರ ನೋವೇ ಅದು ಲಿಂಗದ ನೋವು ! ಎಂದು ಎಚ್ಚರಿಸಿದರು ಬಸವಣ್ಣನವರು. ಶಿವಭಕ್ತರ ನೋವೇ ತಮ್ಮ ನೋವೆಂದು ಭಾವಿಸಿ, ಅವರು ನೊಂದರೆ ತಾವು ಬೆಂದು, ಅವರು ಹಿಗ್ಗಿದರೆ ತಾವು ಹಿಗ್ಗಿ, ಅವರು ಕುಗ್ಗಿದರೆ ತಾವು ಕುಗ್ಗಿ ಭಕ್ತಬಂಧುವಾಗಿ, ಭಕ್ತಿ ಸಿಂಧುವಾಗಿ ಬಾಳಿದರು ಬಸವಣ್ಣನವರು.

ಭಕ್ತರು ಉಳ್ಳವರಿರಲಿ, ಇಲ್ಲದವರಿರಲಿ, ಪಂಡಿತರಿರಲಿ, ಪಾಮರರಿರಲಿ ಎಲ್ಲರನ್ನೂ ಅಷ್ಟೇ ಆದರೆ ವಿಶ್ವಾಸಗಳಿಂದ ಕಂಡರವರು. 'ಕುದುರೆ ಸತ್ತಿಗೆಯವರ ಕಂಡತೆ ಹೊರಳಿ ಬಿದ್ದು ಕಾಲಹಿಡಿವರು; ಬಡಭಕ್ತರು ಬಂದರೆ 'ಎಡೆಯಿಲ್ಲ, ಅತ್ತಸನ್ನಿ' ಎಂಬರು, ಎನ್ನೊಡೆಯ ಕೂಡಲ ಸಂಗಯ್ಯ ಅವರ ತಡಗೆಡಹಿ ಮೂಗ ಕೊಯ್ಯದೆ ಮಾಣ್ಣನೆ?' ಎಂದು ಮುಖನೋಡಿ ಮಣೆ ಹಾಕುವ ಗಣಿಕಾ ಭಕ್ತಿಯನ್ನು ಖಂಡಿಸಿದರು. 'ಕಟ್ಟಿದಿರಿನಲ್ಲಿ ಶಿವ ಭಕ್ತನ ಕಂಡು ದೃಷಿಯಾರೆ ಶರಣೆಂದೊಡೆ ಹುಟ್ಟೇಳು ಜನ್ಮದ ಪಾಪ ಬಿಟ್ಟು ಹಿಂಗುವುದು ನೋಡಾ !' 'ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತರಿಗೆ ಕೈಮುಗಿವಾತನೇ ಭಕ್ತ. ಮೃದುವಚನಗಳೇ ಸಕಲ ಜಪಂಗಳಯ್ಯ ; ಮೃದುವಚನಗಳೇ ಸಕಲ ತಪಂಗಳಯ್ಯ ; ಸದು ವಿನಯವೇ ಸದಾ ಶಿವನ ಒಲುಮೆಯಯ್ಯಾ !' ಎಂದು ನಿಜಭಕ್ತನ ನಿಲವನ್ನು ತಿಳಿಸಿದರು. ಭಕ್ತರ ಕುಲಕಾಯಕಗಳನ್ನು ಗಮನಿಸದೆ ಅವರು ಕಂಡೊಡನೆ ಕೈಮುಗಿಯಬೇಕು. ಇದು ಮುಗಿದ ಕೈಯ ಬಾಗಿದ ತಲೆಯ ಬಸವನಿತ್ತ ಬೋಧೆ ! ಅವನೆಂಥವನೆಂದು ಏಕೆ ವಿಚಾರಿಸುವೆ? "ಎಂತಹನಾದರೇನು, ಲಿಂಗಮುಟ್ಟದವನೇ ಕೀಳುಜಾತಿ ; ಕುಲವಹುದು ತಪ್ಪದು ಲಿಂಗಮುಟ್ಟಲೊಡನೆ : ಹೊನ್ನಹುದು ತಪ್ಪದು ಮುರಷ ಮುಟ್ಟಲೊಡನೆ !" ಭಕ್ತಭಕ್ತರಲ್ಲಿ ಭೇದಹೊಲ್ಲ. ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬೇಕು. ಭಕ್ತನಿರ್ದತಾವೇ ದೇವಲೋಕ ; ಭಕ್ತನಂಗಣವೇ ವಾರಣಾಸಿ; ಕಾಯಕವೇ ಕೈಲಾಸ ! ಇದಕ್ಕಿಂತ ಉನ್ನತಸ್ಥಾನವನ್ನು ಭಕ್ತರಿಗೆ ಕೊಡುವುದು ಸಾಧ್ಯವಿದೆಯೆ?

ಇದೂ ಸಾಲದು, ಸಮಾನತೆ ಸತ್ಯಲೋಕಕ್ಕಿಳಿಯಲೂ ಇದೂ ಸಾಲದು. ಭಕ್ತರೆಲ್ಲರೂ ಸವಾನರೆಂಬುದು ಸತ್ಯವಾದರೆ ಅವರಲ್ಲಿ ಪರಸ್ಪರ ಅನ್ನೋದಕಗಳು,ಶರೀರ ಸಂಬಂಧಗಳು ನಡೆಯಬೇಕು; 'ರೋಟಿ ಬೇಟಿ' ನಡೆಯಬೇಕು. ಆಗ ಸಮಾನತೆಗೆ ಸಫಲತೆ. ಇದನ್ನಳಿದು 'ಉಂಬಲ್ಲಿ ಉಡುವಲ್ಲಿ ಕ್ರಿಯಳಿಯಿತ್ತೆಂಬ, ಕೊಂಬಲ್ಲಿ ಕೊಡುವಲ್ಲಿ ಕುಲವನರಸುವ' ಪ್ರವೃತ್ತಿಯೂಳಿದರೆ ಸಮಾನತೆ ಗಗನ ಕುಸುಮ ಪರಿಮಳವಾಗುತ್ತದೆ. 'ಒಕ್ಕುದ ಕೊಂಬೆನವರಲ್ಲಿ ಕೂಸಕೊಡುವೆ' ನೆಂಬ ನಿರ್ಧಾರಬೇಕು ಬಸವಣ್ಣನವರಂತೆ. 'ಉಂಬುವುದು ಉಡುವುದು ಶಿವಾಚಾರ ; ಕೊಂಬುವುದು ಕೊಡುವುದು ಕುಲಾಚಾರವೆಂಬ ಅನಾಚಾರಿಯ ಮಾತ ಕೇಳಲಾಗದು! ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರ ಒಂದೇ ಎಂದು ಕೊಟ್ಟುಕೊಂಬುವುದು ಸದಾಚಾರವು; ಉಳಿದುದೆಲ್ಲ ಅನಾಚಾರ !' ಎಂಬ ನಿಶ್ಚಿತತೆ ಇರಬೇಕು ಚೆನ್ನಬಸವಣ್ಣನಂತೆ ಈ ಬಗ್ಗೆ ಬಸವಣ್ಣನವರ ಸ್ಪಷ್ಟ ಅಭಿಪ್ರಾಯವಿದು :

"ಸರ್ವರೂ ರುದ್ರಗಣಂಗಳೆಂಬೆ ; ಸರ್ವರೂ ಸದ್ಭಕ್ತರೆಂಬೆ !
ಅವರಲ್ಲಿ ಕುಲನ ನೋಡದರೆ ಆಚಾರನ ನೋಡಿ
ಅವರಿಂಗೆ ಬೇಕಾದ ಹೆಣ್ಣು ಕೊಟ್ಟು
ತಮಗೆ ಬೇಕಾದ ಹೆಣ್ಣು ತಂದುಕೊಂಬುದು"

ಇದು ಬಸವಣ್ಣನವರು ಗೈದ ಆಮೂಲಾಗ್ರ ಸಾಮಾಜಿಕ ಪರಿವರ್ತನೆ ! ಯಾರೋ ಎಚ್ಚರಿಸಿರಬೇಕು, "ಬಸವಣ್ಣ, ನೀನು ನಡಸಿರುವ ಸಮಾಜ ಸಂಸ್ಕರಣಕ್ಕೆ ಸಮಾಜವಿನ್ನೂ ಸಿದ್ಧವಿಲ್ಲ ; ಕಾಲ ಅನುಕೂಲವಿಲ್ಲ ; ಸನ್ನಿವೇಶ–ಆವರಣಗಳು ಸಜ್ಜಾಗಿಲ್ಲ. ಈ ಅವಸರದ ಕ್ರಾಂತಿಯ ಪರಿಣಾಮ ಭೀಕರವಾಗಬಹುದು" ಎಂದು. ಅದಕ್ಕ ಉತ್ತರವೇನೋ ಈ ವಚಹ :

"ಆರು ಮುನಿದು ನಮ್ಮನೇನ ಮಾಡುವರು?
ಊರು ಮುನಿದು ನಮ್ಮನೆಂತು ಮಾಡುವರು?
ನಮ್ಮ ಕುನ್ನಿಗೆ ಕೂಸ ಕೊಡಬೇಡ !
ನಮ್ಮ ಸೊಣಗಂಗೆ ತಳಿಗೆಯಲಿಕ್ಕಬೇಡ !
ಆನೆಯ ಮೇಲೆ ಹೋಹನ ಶ್ವಾನಕಚ್ಚಬಲ್ಲುದೆ.....
ನಮಗೆ ನಮ್ಮ ಕೂಡಲ ಸಂಗಯ್ಯನುಳ್ಳನ್ನಕ್ಕ!"

ಬಸವಣ್ಣನವರು ವೀರ–ವಿನಯಗಳ ಕೂಡಲಸಂಗಮವೆಂದು ಡಾಕ್ಟರ್ ಡಿ.ಎಸ್.ಕರ್ಕಿಯವರು ಹೇಳಿರುವುದು ನಿಜವಾದುದು. 'ಮಾಡುವ ಭಕ್ತನ

ಕಾಯಬಾಳೆಯ ಕಂಬದಂತಿರಬೇಕು ; ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದರೆ ಒಳಗೆ ಕೆಚ್ಚಿಲ್ಲದಿರಬೇಕು' ಎಂದ ಅವರೇ, 'ಭಕ್ತಿಯಿಲ್ಲದ ಬಡವ ನಾನಯ್ಯ : ಕಕ್ಕಯ್ಯನ ಮನೆಯಲ್ಲು ಬೇಡಿದೆ, ಚೆನ್ನಯ್ಯನಮನೆಯಲ್ಲು ಬೇಡಿದೆ, ದಾಸಯ್ಯನ ಮನೆಯಲ್ಲು ಬೇಡಿ : ಎಲ್ಲಾ ಪುರಾತನರು ನೆರೆದು ಭಕ್ತಿ ಭಿಕ್ಷೆಯನಿಕ್ಕಿದರೆ ಎನ್ನಪಾತ್ರೆ ತುಂಬಿತ್ತು' ಎಂದು ಹೇಳಿದ ಅವರೇ,

> "ಆಯುಷ್ಯ ತೀರಿದಲ್ಲದೆ ಮರಣವಿಲ್ಲ; ಭಾಷೆತಪ್ಪಿದಲ್ಲದೆ ದಾರಿದ್ರ್ಯವಿಲ್ಲ!
> ಅಂಜಲದೇಕೋ ಲೋಕ ವಿಗುರ್ಬಣೆಗೆ? ಅಂಜಲದೇಕೋ
> ಕೂಡಲಸಂಗಮದೇವಾ, ನಿಮ್ಮ ಆಳಾಗಿ?"

ಎಂದೂ, 'ಲೋಕವಿರೋಧಿ ಶರಣನಾರಾರಿಗೂ ಅಂಜುವವನಲ್ಲ' ಎಂದೂ, 'ಎನಿಸೆನಿಸೆಂದೊಡೂ ನಾನು ಧೃತಿಗೆಡೆನಯ್ಯ ! ಎಲುದೋರಿದರೆ, ನರಹರಿದರೆ, ಕರುಳು ಕುಪ್ಪಳಿಸಿದರೆ ನಾ ಧೃತಿಗೆಡೆನಯ್ಯಾ ! ಸಿರಹರಿದು ಅಟ್ಟೆ ನೆಲಕ್ಕೆ ಬಿದ್ದರೆ ನಾಲಿಗೆ 'ಕೂಡಲ ಸಂಗಾ ಶರಣೆ'ನ್ನುತ್ತಿದ್ದಿತಯ್ಯಾ!" ಎಂದು ಉಗ್ಘಡಿಸಲೂ ಬಲ್ಲರು. ಅವರ ಈ ದೃಢಧೃತಿಯ ಪರಿಣಾಮವೇ ಹರಳಯ್ಯ ಮಧುವರಸರ ಪುತ್ರಪುತ್ರಿಯರ ಮದುವೆ ! ಆ ಮದುವೆಯ ಪರಿಣಾಮವೇ ಕಲ್ಯಾಣದ ಕಗ್ಗೊಲೆ!

ಪರಿಣಾಮ ಹೀಗಾಗುವುದೆಂದು ಬಸವಣ್ಣನವರು ಊಹಿಸಿದ್ದರೋ ಇಲ್ಲವೋ ಹೇಳಲಾಗದು. ಒಂದು ಮಾತು ಮಾತ್ರ ನಿಚ್ಚಳವಾಗಿದೆ : 'ತತ್ತ್ವವೆಂಬ ಆನೆಯ ಮೇಲೆ ಹೊರಟಿದ್ದೇನೆ. ಸ್ವಾರ್ಥವೆಂಬ ಶ್ವಾನ ಬೊಗಳಬಹುದಾಗಲಿ ಕಚ್ಚಲಿಕ್ಕಿಲ್ಲ ; ಕಚ್ಚಿದರೂ ನಮ್ಮ ಕೂಡಲ ಸಂಗಮದೇವನುಳ್ಳಕ್ಕ ನನಗಾವ ಭಯ? ಸ್ವಾಮಿಯ ಕಾರ್ಯಕ್ಕೆ ಸ್ವಾಮಿಯೇ ರಕ್ಷಕನಾಗಿ ನಿಲ್ಲನೆ?' ಎಂದವರು ಮುಂದುವರಿದರು.ಆದರೆ ಸ್ವಾರ್ಥದ ಶ್ವಾನ ಕಚ್ಚಿಯೇ ಬಿಟ್ಟಿತು ಕಲ್ಯಾಣವನ್ನೇ ! ಪ್ರಭುದೇವರು ರಚಿಸಿದ್ದ ಪರಮಾನಂದದ ಸರೋವರ ಬತ್ತಿಹೋಯಿತು ! ಬಸವಣ್ಣ ಕಟ್ಟಿದ್ದ ಮಹಾಮನೆ ಮುರಿದು ಹೋಯಿತು ! ಶರಣರು ಶೃಂಗರಿಸಿದ್ದ ಅನಭವಮಂಟಪ ಹಾಳಾಗಿ ಹೋಯಿತು.

ತಮಗೆ ಪ್ರಿಯವಾದ ತತ್ತ್ವಕ್ಕಾಗಿ, ಸಮಾನತೆಯ, ಸಹೋದರತೆಯ, ಸರ್ವೋದಯದ ಸಕಲ ಸದ್ಗತಿಯ ತತ್ತ್ವಕ್ಕಾಗಿ, 'ಮರಣವೇ ಮಹಾನವಮಿ'ಯೆಂದು ನಿರ್ಭಯರಾಗಿ ಮುನ್ನಾಗ್ಗಿದವರು ಬಸವಣ್ಣನವರು. ಅವರ ಜೀವನವೊಂದು ಅದ್ಭುತಗಳ ರಂಗಸ್ಥಳ, ಎಂಟನೆಯ ವಯಸ್ಸಿನಲ್ಲಿಯೇ ಮಾತಾಪಿತೃಗಳನ್ನೂ ಮನೆಮಾರುಗಳನ್ನೂ ತೊರೆದು ಹೋದುದು ಮೊದಲನೆಯ ಅದ್ಭುತ; ೨೪ನೆಯ ವಯಸ್ಸಿನಲ್ಲಿ ಮಹಾಮಾತ್ಯ ಪದವಿಯನ್ನು ಅಲಂಕರಿಸಿದುದು ಎರಡನೆಯ

ಅದ್ಭುತ;೨೬ನೆಯ ವಯಸ್ಸಿನಲ್ಲಿ ವಿಶ್ವವಿಭೂತಿಗಳ ಮಾಲಿಕೆಗೆ ಸೇರಿದುದು ಮೂರನೆಯ ಅದ್ಭುತ; ಉಚ್ಚವರ್ಣದಲ್ಲಿ ಜನಿಸಿ ಪರಿತೋದ್ಧಾರಕ್ಕಾಗಿ ಪ್ರಾಣತೆತ್ತುದು ಇನ್ನೊಂದು ಅದ್ಭುತ ! ಮನುಕುಲದ ಇತಿಹಾಸದಲ್ಲಿ ಆಗೊಮ್ಮೆ ಈಗೊಮ್ಮೆ ತಲೆದೋರುವ ಕಾರಣಪುರುಷರಲ್ಲಿ ಅವರೊಬ್ಬರು.

ಅವರ ಭಕ್ತಿಯ ಪರಾಕಾಷ್ಠತೆಯನ್ನೇನು ವರ್ಣಿಸುವುದು? ಭೀಮಕವಿ ಬಸವ ಪುರಾಣದಲ್ಲಿ–

"ಬಸವನೆಂದುಸುರಿದೊಡೆ ಸಾಲದೆ
ಪಶುವಿಗಾದೊಡೆ ಭಕ್ತಿ ದೊರಕುಗು
ಬಸವನೆಂದುಸುರಿದೊಡೆ ಸಾಲದೆ ಶಿಶುಗಹುದು ಭಕ್ತಿ !
'ಬಸವ ಬಸವಾ' ಎಂಬ ಭಕ್ತರ
ದೆಸೆಯನೀಕ್ಷಿಸುತಿರ್ಪ ಪಕ್ಷಿ
ಪ್ರಸರಕಾದೊಡೆಯೆಸೆಯದೇ ಶಿವಭಕ್ತಿ ವಸುಧೇಯಲ್ಲಿ !
'ಬಸವ, ಬಸವಾ' ಎಂದೊಡೆಯ್ದದೆ
ನಿಶಿತ ಕುಲಿಶಂ ಕುಸುಮವಪ್ಪುದು
'ಬಸವ,ಬಸವಾ' ಎಂದೊಡೆಯ್ದದೆ ಪಲವುಸುರಲೇನು
ಮಸೆದ ಹಗೆಗಳು ನಂಟರಪ್ಪರು
'ಬಸವ,ಬಸವಾ' ಎಂದೊಡೆಯ್ದದೆ
ದೆಸೆಯೊಳುರುಪುವದಾವ ಶಿಖಿ ಬೆಳುದಿಂಗಳಾಗಿರ್ಕು !"

(ಸಂ. ೭, ಪ. ೨೩–೨೫)

ಎಂದು ಬಸವಣ್ಣನವರ ಭಕ್ತಿಯ ಶಕ್ತಿಯನ್ನು ಬಣ್ಣಿಸಿರುವುದರಲ್ಲಿ ಅತ್ಯುಕ್ತಿಯಿಲ್ಲವೆಂಬುದಕ್ಕೆ ಒಂದೆರಡು ಘಟನೆಗಳನ್ನು ಉದಾಹರಿಸಬಹುದು.

ಒಮ್ಮೆ ಕಳ್ಳರು ಕನ್ನವಿಕ್ಕುತ್ತಾರೆ ಅವರ ಅರಮನೆಗೆ. ಮಲಗಿದ್ದ ನೀಲಾಂಬಿಕೆಯರ ಕಿವಿಯೋಲೆಯನ್ನು ಕಳ್ಳಕಿತ್ತುಕೊಳ್ಳುತ್ತಲಿರುವಾಗಿ ಅವರೆದ್ದು, 'ಅಯ್ಯೋ ಕಳ್ಳವರು' ಎಂದು ಕೈ ಕೊಡಹುತ್ತಾರೆ. ಅಣ್ಣನವರು ಎಚ್ಚತ್ತು ಏನೆನ್ನಬೇಕು?

"ಒಡನಿರ್ದ ಸತಿಯೆಂದು ನೆಚ್ಚಿರ್ದೆನಯ್ಯಾ,
ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯಾ !
ಅಯ್ಯೋ, ನಮ್ಮಯ್ಯನ ಕೈ ನೊಂದಿತು !
ತೆಗೆದು ಕೊಡಾ ಎಲೆ ಚಾಂಡಾಲಗಿತ್ತಿ !

ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದೊಡೆ
ಕೂಡಲ ಸಂಗಮದೇವನಲ್ಲದೆ ಮತ್ತಾರೂ ಅಲ್ಲ !"

ಆ ಕಳ್ಳರ ಅವಸ್ಥೆ ಏನಾಗಿರಬೇಕು?ಪಶ್ಚಾತ್ತಾಪದ ಅಗ್ನಿಯಲ್ಲಿ ದಗ್ಧರಾಗಿ ಶುದ್ಧರಾದರವರು, ಬಸವನ ಭಕ್ತರಾದರವರು. ಹಿಂದೆ ಅದೇ ಅರಮನೆಯಲ್ಲಿ ಬಸವಣ್ಣನವರನ್ನು ಕೊಲ್ಲಲೆಂದು ಬಂದಿದ್ದ ಚೋರ ಚಿಕ್ಕಯ್ಯ ಪರಿವರ್ತಿತನಾಗಿ ನಿಜಲಿಂಗ ಚಿಕ್ಕಯ್ಯನಾಗಿರಲಿಲ್ಲವೆ? ಇಂದು ವಿನೋಬಾವಾಣಿಗೆ ಕಿವಿಗೊಟ್ಟು ಕಳ್ಳರು ಶರಣು ಬಂದಿಲ್ಲವೆ ಆ ಶಾಂತಿದೂತನಿಗೆ? 'ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ' ಎಂಬ ಉಕ್ತಿಯಿಂದ ಬಸವಣ್ಣನವರು 'ನಾವು ಕಳ್ಳರಲ್ಲ' ಎನ್ನುವರೆಲ್ಲರೂ ತಮ್ಮ ತಮ್ಮ ಎದೆ ಮುಟ್ಟಿ ನೋಡಿಕೊಳ್ಳುವಂತೆ ಮಾಡಿದ್ದಾರೆ !.

ಮತ್ತೊಮ್ಮೆ ಅವರ ಆಕಳುಗಳನ್ನು ಕದ್ದೊಯ್ದರು ಕಳ್ಳರು. ಆ ಸುದ್ದಿ ಬಸವಣ್ಣನವರಿಗೆ ತಿಳಿಯಲು,

"ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂ ಭೋ, ನಿಮ್ಮ ಧರ್ಮ !
ಬೊಬ್ಬಿಡದಿರಿಂ ಭೋ, ನಿಮ್ಮ ಧರ್ಮ !
ಆರದಿರಿಂ ಭೋ, ನಿಮ್ಮ ಧರ್ಮ !
ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ !
ಕೂಡಲ ಸಂಗಮದೇವ ಏಕೋಭಾವ"

ಎಂದು ನೊಂದು 'ತಮ್ಮ ಕರುಗಳನ್ನು ನೆನೆದು ಆ ಆಕಳುಗಳು ಹುಲ್ಲು ಕಚ್ಚದೆ ನಿಂತಿರಬಹುದು. ಕಾರಣ ಈ ಕರುಗಳನ್ನೂ ಕೊಂಡೊಯ್ದು ಆ ಕಳ್ಳರಿಗೆ ಒಪ್ಪಿಸಿ ಬನ್ನಿರಿ' ಎಂದು ಆಳುಗಳೊಡನೆ ಕರುಗಳನ್ನು ಕಳಿಸಿಕೊಟ್ಟರು. ಕಳ್ಳರು ಬಳ್ಳಿದರಾದರು, ಭಕ್ತರಾದರು, ಬಸವನ ಬಳಗಕ್ಕೆ ಸೇರಿದರು. 'ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ' ಎಂಬ ಅಮೃತೋಕ್ತಿಯನ್ನು ಉಳ್ಳವರೆಲ್ಲರೂ ನೆನಪಿಟ್ಟರೆ ಅದೆಷ್ಟು ಹಿತಕರ !

ಇದು ಬಸವಣ್ಣನವರ ಭಕ್ತಿಯ ಶಕ್ತಿ ; ಅವರ ಹೃದಯ ಪರಿವರ್ತನೆಯ ಹಾದಿ ; ಚಿಂತಾಮಣಿಯವರು ಹೇಳಿರುವಂತೆ, 'ರಾವಣನನ್ನು ಕೊಂದು ವಿಭೀಷಣನಿಗೆ ಪಟ್ಟ ಕಟ್ಟುವುದಕ್ಕಿಂತ ರಾವಣನನ್ನೇ ವಿಭೀಷಣನನ್ನಾಗಿ ಮಾರ್ಪಡಿಸುವ,ಬಸವಣ್ಣನವರ ಧೋರಣೆ. ಅವರು ಅನೇಕ ಪವಾಡಗಳನ್ನು ಗೈದರೆಂದು ಹೇಳುತ್ತಾರೆ.'ಎಂಬತ್ತೆಂಟು ಪವಾಡವ ಮೆರೆದು ಹಗರಣದ ಚೋಹದಂತಾಯಿತೆನ್ನ ಭಕ್ತಿ !" ಎಂದು ಅವರೇ ಹೇಳಿಕೊಂಡಿದ್ದಾರೆ. ಆ ಎಂಬತ್ತೆಂಟು ಪವಾಡಗಳನ್ನು ನಂಬಬಹುದು, ನಂಬದಿರಬಹುದು. ಆದ್ರೆ ಅಹಿಂಸೆಯ ಮಾರ್ಗದಿಂದ, ಹೃದಯ ಪರಿವರ್ತನೆಯ ಹಾದಿಯಿಂದ,

ಆತ್ಮೀಯತೆಯ–ಅನುಕಂಪದ–ಅನುರಾಗದ ದಾರಿಯಿಂದ ದುಷ್ಟರನ್ನು ಶಿಷ್ಟರನ್ನಾಗಿಸಿದ, ದುರ್ಜನರನ್ನು ಸಜ್ಜನರನ್ನಾಗಿ ಮಾರ್ಪಡಿಸಿದ, ಪಾತಕಿಗಳನ್ನು ನೀತಿವಂತರನಾಗಿ ಪರಿವರ್ತಿಸಿದ ಪವಾಡವನ್ನು ನಂಬದಿರುವುದು ಹೇಗೆ?

ಇಷ್ಟಾದರೂ ಎಷ್ಟು ವಿನಯ ಅವರಲ್ಲಿ !
"ಬಸವ ಬಾರಯ್ಯ ! ಮೃತ್ಯುಲೋಕದೊಳಗೆ ಭಕ್ತರುಂಟೆ? ಹೇಳಯ್ಯ!
ಮತ್ತಾರೂ ಇಲ್ಲವಯ್ಯ, ಮತ್ತಾರೂ ಇಲ್ಲವಯ್ಯ, ಮತ್ತಾರೂ ಇಲ್ಲವಯ್ಯ–
ನಾನೊಬ್ಬನೇ ಭಕ್ತನು; ಮೃತ್ಯುಲೋಕದೊಳಗಣ ಭಕ್ತರೆಲ್ಲರೂ
ಜಂಗಮಲಿಂಗ ನೀನೆ ಅಯ್ಯಾ–ಕೂಡಲ ಸಂಗಮದೇವಾ !"

ಎನ್ನುವ ಆ ಮಹಾತ್ಮನ ವಿನಯಶ್ರೀ ಅದೆಷ್ಟು ಅವರ್ಣನೀಯವಾದುದು! ತಾನು ಭಾನುವಾಗಿ ಕಲ್ಯಾಣದ ಬಾನಿನಲ್ಲಿ ಮೂಡಲು ಅಸಂಖ್ಯಾತ ಶರಣ ಕಮಲಗಳು ಅರಳಿದುವು ಅಲ್ಲಿಯ ಅರಿವಿನ ಸರೋವರದಲ್ಲಿ. ಅವುಗಳ ಮಕರಂದದಿಂದಾದ ಮಧುರ ಮಧು ಸೇರಿ ಅನುಭವಮಂಟಪದ ಅಮೃತ ಕುಂಭ ತುಂಬಿ ತುಳಿಕಿತು. ಇಷ್ಟೇ ಅಲ್ಲ, ಬಿಜ್ಜಳನ ರಾಜ್ಯದಲ್ಲೆಲ್ಲ ಶಾಂತಿ, ಸುಖ, ಸಂತೋಷಗಳು ಹೊರಸೂಸಿ ಹರಿದುವು. ಅವರ ಆದರ್ಶ ಅಮಾತ್ಯತ್ವದಲ್ಲಿ.ಅವರು ಗೈದ ಜನಹಿತ ಕಾರ್ಯಗಳನ್ನು ಚಾಮರಸ ಸಂಗ್ರಹಿಸಿದ್ದಾನೆ :

ಕೆರೆ ಸರೋವರ ಬಾವಿ ಕಾಲುವೆ–
ಯೊರತೆ ಪೂಗಿಡ ತೋಟ ಕಿಕ್ಕಿರಿ–
ಗಿರಿದ ಮಾದಲ ಮಾವು ನೇರಿಲ ಹಲವು ನಾರಂಗ
ಅರವಟಿಗೆ ಛತ್ರಗಳು ಪಥದಲಿ
ತುರುಗಿದುವು ಬಸವೇಶ ಮಾಡಿಸೆ
ಮೆರೆದುವಾ ಕಾನನದ ಪಥಿಕರ ಡಗೆಯೆನಾರಿಸುತ ॥
ಲೇಸೆನಿಸೆ ವಿಶ್ರಮಿಸುವರಿಗೆ ನಿ–
ವಾಸಗೇಹಗಳಲ್ಲಿಗಲ್ಲಿಗೆ
ಹಾಸುಗಳು ಹಲವಂದದುಪಚಾರದ ಪದಾರ್ಥಗಳು
ಭಾಸುರತೆಯೆನಿಸಿದುರ್ದುವಾ ಬಸ–
ವೇಶಮಾಡಿಸಲಡವಿಯಲಿ ಸಂ–
ತೋಷವನೆ ಸಲೆ ಬೀರುತಿರ್ದುವು ಸಕಲ ಪ್ರಥಿಕರಿಗೆ ॥

(ಪ್ರಭುಲಿಂಗಲೀಲೆ : ಗತಿ ೧೪–ಪ. ೪–೫)

ಈ ಜನ ಕಲ್ಯಾಣಕಾರ್ಯಗಳಿಗೆ ಬೇಕಾಗುವ ಹಣಕ್ಕಾಗಿ ಇದ್ದ ತೆರಿಗೆಯ ವ್ಯವಸ್ಥೆಯ ಪುನರ್‌ಘಟನೆ ಮಾಡಿ ಬಂಕದೆರೆ, ಸಿದ್ಧಾದಾಯ, ಬಿಟ್ಟಿಕೊಟ್ಟಣ, ಅಂಕೆಯ ಸೊಲ್ಲಿಗೆ, ಕವಣೆ, ಕಡ್ಡಾಯದಂಕೆ ಅಪುತ್ರಿಕೆ, ದಂತ, ಉಂಡಿಗೆ, ಸುಂಕ, ತಳವರಿಕೆ, ಗುತ್ತಿಗೆಗಳೆಂಬ ಹದಿಮೂರು ಹೊಸ ಕರಗಳನ್ನು ನಿಯೋಜಿಸಿದರು ಬಸವಣ್ಣನವರು.ಇವುಗಳಲ್ಲಿ ಉಂಡಾಡಿಗಳ ಮೇಲೆ ಹೇರಿದ ಬಂಕದೆರೆ, ವಿದ್ಯಾಭ್ಯಾಸದ ಕರ ಕವಣೆ, ಸುಖಸಾಧನಗಳ ಮೇಲಿನ ಸುಂಕ ಉಂಡಿಗೆ, ನೀರಾವರಿಯ ತೆರಿಗೆ ದಂತಗಳು ಇಂದಿಗೂ ಅನುಕರಣೀಯವಾಗಿದ್ದು ಆಡಳಿತದಲ್ಲಿಯೂ ಅವರು ಅದೆಷ್ಟು ದಕ್ಷರೂ ವಿಚಕ್ಷಣರೂ ಆಗಿದ್ದರೆಂಬುದಕ್ಕೆ ನಿದರ್ಶನಗಳಾಗಿವೆ.

ಇಷ್ಟಾದರೂ ಅವರು ಬೇಡಿದುದು ಭೃತ್ಯಾಚಾರವನ್ನೇ ! ಬಸವಣ್ಣನವರ ಬಾಳಿನ ಘನತೆಯ ಗುರುತು ಅವರ ಭೃತ್ಯಾಚರ, ಅನುಭವ ಮಂಟಪದ ಅಧ್ಯಕ್ಷ ಸ್ಥಾನಕ್ಕೆ ಅಲ್ಲಮಪ್ರಭುಗಳನ್ನು ಆರಿಸಿದರು ; ಷಟ್‌ಸ್ಥಲಾಚಾರ್ಯ ಪಟ್ಟಕ್ಕೆ ಚೆನ್ನಬಸವಣ್ಣನವರನ್ನು ನಿಯಮಿಸಿದರು ; ಇನ್ನುಳಿದ ಅಧಿಕಾರ ಸ್ಥಾನಗಳಿಗೆ ಇನ್ನಾರಾರನ್ನೋ ಆರಿಸಿದರು. ತಾವು ಮಾತ್ರ 'ಮುಗಿದ ಕೈಯ ಬಾಗಿದ ತಲೆಯ ಬಚ್ಚ ಬರಿಯ ಬಸವ'ನಾಗಿಯೇ ಕೊನೆಯವರೆಗೆ ಉಳಿದರು.

"ದಾಸಿಯ ವರ್ಗದಲ್ಲಿಪ್ಪೆನು ಶಿವಶರಣರ ಮನೆಯಲ್ಲಿ :
ಅವರೊಕ್ಕುದನಂಡು ಮಿಕ್ಕುದ ಕಾಯ್ದುಕೊಂಡಿಪ್ಪಕಾರಣ
ಕಾಲಮುಟ್ಟಲಮ್ಮವು ; ಕಲ್ಪಿತ ತೊಡೆಯಿತ್ತು ; ಎನ್ನ ಭವಬಂಧನ
ಹಿಂಗಿತ್ತು ! ಕರ್ಮ ನಿರ್ಮಳವಾಯಿತ್ತು ! ಅವರ ತೊತ್ತಿನ ತೊತ್ತಿನ
ಮರುದೊತ್ತಿನ ಮಗನೆಂದು ಕೂಡಲ ಸಂಗಮದೇವ
'ಇತ್ತಬಾ' ಎಂದೆತ್ತಿಕೊಂಡನು !"

ಎಂದು ತೊತ್ತುತನವನ್ನೇ ತಮಗಾಗಿ ಆರಿಸಿ ಅಪ್ಪಿಕೊಂಡರು. ಎಲ್ಲರಿಂದ ತಾವೇ ಕಿವಿ ಹಿಂಡಿಸಿಕೊಂಡರಲ್ಲದೆ ತಾವಾರ ಕಿವಿಯನ್ನೂ ಹಿಂಡುವ ಗೊಡವೆಗೆ ಹೋಗಲಿಲ್ಲ. 'ತೊತ್ತಿಗೆ ತೊತ್ತತನವಲ್ಲದೆ ಅರಸರ ಸುದ್ದಿ ಎಮಗೇಕಯ್ಯ?' ಎಂದು ಭೃತ್ಯಾಚಾರದ ಬೆಳಗಾಗಿ ಬಾಳಿದರು. ಒಮ್ಮೆ ಬೇಡುವ ಶರಣರು ಬರಲಿಲ್ಲವೆಂದು ಕೋಡಿ ಬಾಡಿದರಂತೆ ಅವರು. 'ಕಂದಿದೆನಯ್ಯ ಎನ್ನ ನೋಡುವರಿಲ್ಲದೆ' ಕುಂದಿದೆನಯ್ಯ ಎನ್ನ ನುಡಿಸುವರಿಲ್ಲದೆ ! ಬಡವಾದೆನಯ್ಯ ಎನ್ನ ತನುಮನ ಧನವ ಬೇಡುವರಿಲ್ಲದೆ! ಕಾಡುವ ಬೇಡುವ ಶರಣರ ತಂದು ಕಾಡಿಸು ಬೇಡಿಸು ಕೂಡಲ ಸಂಗಮದೇವಾ!' ಎಂದು ಬೇಡಿಕೊಂಡರವರು. ಇದನ್ನು ಕೇಳಿ ಖಂಡಿತವಾದಿ ಮಡಿವಾಳ ಮಾಚಯ್ಯ 'ಬಸವಣ್ಣನವರಿಗೂ ನಾನು ಕೊಡುವವನೆಂಬ ಕೋಡು ಮೂಡಿತೆ !' ಎಂದು

ಜಡಿದು ನುಡಿದರು. ಅದನ್ನು ಕೇಳಿ ಅಣ್ಣನವರು ವಿಷಣ್ಣರಾಗಲಿಲ್ಲ ; ತಮ್ಮ ತಪ್ಪನ್ನು ಒಪ್ಪಿಕೊಂಡು ಶರಣರ ಕ್ಷಮೆ ಕೋರಿದರು ; ಹೀಗೆಯೇ ಪ್ರಭುದೇವರು, ಕಕ್ಕಯ್ಯಗಳು, ಮೋಳಿಗೆಯ ಮಾರಯ್ಯಗಳು, ಕಿನ್ನರಿಯ ಬ್ರಹ್ಮಯ್ಯಗಳು ಅವರ ತಪ್ಪನ್ನು ಎತ್ತಿ ತೋರಿದುದುಂಟು. ಆಗಲೂ ಬಸವಣ್ಣನವರು ಕಿಂಚಿತ್ತಾದರೂ ಖಿನ್ನರಾಗದೆ ಕಿಂಕರತ್ವವನ್ನೇ ಮೆರೆದರು ; ತಪ್ಪನ್ನು ಒಪ್ಪಿಕೊಂಡು ಶರಣರ ಕರುಣೆಗೇ ಶರಣುಹೊಕ್ಕರು ! ಈ ಮನಸ್ಸಿನ ಮಹೋತ್ತಮತೆಗೆ ಎಷ್ಟು ಸಲ ಮಣಿದರೂ ಕಡಮೆಯೇ ! ಈ ಕೋರಿಕೆಯನ್ನು ಕೇಳಿ :

"ಅವರಿವರೆನ್ನದೆ ಚರಣಕ್ಕೆರಗಲು ಅಯ್ಯತನವೇರಿ
ಬೆಬ್ಬನೆ ಬೆರೆವೆ ನಾನು : ಕೆಚ್ಚು ಬೆಳೆಯಿತಯ್ಯಾ !
ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳ್ಳುಕನ ಮಾಡಿ
ಬೆಳುಗಾರದಂತೆ ಮಾಡು, ಕೂಡಲ ಸಂಗಮದೇವಾ !"

ಜನರೇನೋ 'ಭಕ್ತಿ ಭಾಂಡಾರಿ, ಧರ್ಮಾವತಾರಿ' ಎಂದು ಹೊಗಳಿ ಚರಣಕ್ಕೆ ಎರಗುತ್ತಾರೆ. ಅದರಿಂದ ನಾನು ಹೆಚ್ಚೆಂಬ ಕೆಚ್ಚು ಬೆಳೆಯುತ್ತದೆ. ಆ ಕೆಚ್ಚಿಗೆ ಕಿಚ್ಚನಿಕ್ಕಲು ಬೇಡಿಕೊಂಡ ಬಸವಣ್ಣನವರಿಗೆ ಹೊಗಳಿಕೆಯೆನ್ನುವುದು ಹೊನ್ನ ಶೂಲವಾಗಿ, ಮನ್ನಣೆಯು ಮಸೆದಲಗಾಗಿ ತೋರಿದುದು ಅರಿದಲ್ಲ :

'ಎನ್ನವರೊಲಿದು ಹೊನ್ನ ಶೂಲದಲಿಕ್ಕಿದರೆನ್ನ ಹೊಗಳಿ ಹೊಗಳಿ !
ಎನ್ನ ಹೊಗಳತೆ ಎನ್ನ ಮೈಗೊಂಡಿತಲ್ಲ !
ಆಯ್ಯೋ, ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲ !
ನೊಂದೆನು, ಸೈರಿಸಲಾರೆನು–ಕೂಡಲ ಸಂಗಮದೇವಾ,
ನೀನೆನಗೊಳ್ಳಿದನಾದರೆ ಎನ್ನ ಹೊಗಳತೆಗಡ್ಡ ಬಾರಾ, ಧರ್ಮಿ !'

ಹೌದು, ಅವರೇನೋ ನನ್ನ ಮೇಲಿನ ಮಮತೆಯಿಂದ ನನ್ನನ್ನು ಹೊಗಳುತ್ತಾರೆ. ಆದರೆ ಅದರಿಂದ ನನ್ನ ಗತಿಯೇನಾಗುವುದೆಂಬುದು ಅವರಿಗೇನು ಗೊತ್ತು?

"ಎನ್ನವರೆನಗೊಲಿದು ಹೊನ್ನಶೂಲದಲಿಕ್ಕಿದರಯ್ಯ !
ಅಹಂಕಾರ ಪೂರಾಯ ಗಾಯದಲ್ಲಿ ಆನೆಂತು ಬದುಕುವೆನು,
ಎಂತು ಜೀವಿಸುವೆನಯ್ಯ ! ಜಂಗಮವಾಗಿ ಬಂದು ಜರಿದು,
ಶೂಲವನಿಳುಹಿ, ಪ್ರಸಾದ ಮದ್ದನಿಕ್ಕಿ ಸಲಹು, ಕೂಡಲ
ಸಂಗಮದೇವಾ !"

ಮೇಲಾಗಿ, ಎನ್ನಲ್ಲಿ ಏನಿದೆಯೆಂದು ಅವರು ನನ್ನನ್ನು ಹೊಗಳುವರು? ಭಕ್ತಿಯಿದೆಯೆಂದೆ?

"ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದಿನಿತಿಲ್ಲ ! ಎನ್ನ ಭಕ್ತನೆಂಬುದು !
ಎನ್ನ ಸಮಯಾಚಾರಿಯೆಂಬರು ! ನಾನೇನು ಪಾಪವ ಮಾಡಿದೆನೋ!
ಬೆಳೆಯದ ಮುನ್ನವೇ ಕೊಯ್ದರೆ ಹೇಳಯ್ಯ?
ಇರಿಯದ ವೀರ ! ಇಲ್ಲದ ಸೊಬಗುವ ಎಲ್ಲಾ ಬಡೆಯರು ಏರಿಸಿ ನುಡಿವರು!
ಎನಗಿದು ವಿಧಿಯೆ ಕೂಡಲ ಸಂಗಮದೇವಾ?"

ಹೊಗಳಿಕೆ ಬೇಡವಾಯಿತು ಬಸವಣ್ಣನವರಿಗೆ. ಅದೇನೋ ಸರಿ. ತೆಗಳಿಕೆಯೂ ಬೇಡವಾಯಿತೆ? ಹೊಗಳಿಕೆಗೆ ಹಿಗ್ಗದವರು ಸಿಕ್ಕಬಹುದು; ತೆಗಳಿಕೆಗೆ ಕುಗ್ಗದವರೂ ಉಂಟೆ? ಇದ್ದರೆ ಅವರೇ ಮಹಾನುಭಾವರು. ಇಲ್ಲಿ ನೋಡಿ, ಈ ಮಹಾನುಭಾವನನ್ನು!

"ಹೊಯ್ದವರೆನ್ನ ಹೊರಿದವರೆಂಬೆ ;
ಬಯ್ದವರೆನ್ನ ಬಂಧುಗಳೆಂಬೆ ;
ನಿಂದಿಸಿದವರೆನ್ನ ತಂದೆ ತಾಯಿಗಳೆಂಬೆ ;
ಅಳಿಗೊಂಡವರೆನ್ನ ಆಳ್ದರೆಂಬೆ ;
ಜರೆದವರೆನ್ನ ಜನ್ಮ ಬಂಧುಗಳೆಂಬೆ ;
ಹೊಗಳಿದವರೆನ್ನ ಹೊನ್ನ ಶೂಲದಲ್ಲಿಕ್ಕಿದವರೆಂಬೆ,
ಕೂಡಲ ಸಂಗಮದೇವಾ !"

ಹೊಗಳಿಕೆಗೆ ಹಿಗ್ಗದೆ ತೆಗಳಿಕೆಗೆ ಕುಗ್ಗದೆ ಇರುವುದು ಮಹಾತ್ಮರ ಗುಣ. ಆದರೆ ಹೊಗಳಿಕೆಗೆ ಕುಗ್ಗಿ ತೆಗಳಿಕೆಗೆ ಹಿಗ್ಗುವ ಬಸವಣ್ಣನವರ ಗುಣಕ್ಕೆ ಏನೆನ್ನಬೇಕು? ಅಂತರಂಗ ಬಹಿರಂಗ ಶುದ್ಧಿಯ ಮರ್ಮವನ್ನೂ ತಿಳಿಸುತ್ತ 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ' ಎಂಬ ಪಂಚಶೀಲಗಳ ಜೊತೆಗೆ 'ಇದಿರ ಹಳಿಯಲು ಬೇಡ' ಎಂಬ ಆರನೆಯ ಶೀಲವನ್ನೂ ಸೇರಿಸಿದ ಅವರ ಆತ್ಮದ ಔನ್ನತ್ಯಕ್ಕೆ ಏನೆನ್ನಬೇಕು?

ಅವರ ಕೈಂಕರ್ಯ, ವಿನಯಶ್ರೀ ಎಷ್ಟು ದೂರದವರೆಗೆ ವ್ಯಾಪಿಸಿದ್ದಿತೆಂದಬುದಕ್ಕೆ ಈ ವಚನ ಸಾಕ್ಷಿ :

"ಭಕ್ತದೇಹಿಕ ದೇವನಪ್ಪ ದೇವನು ಸದ್ಭಕ್ತರ ಬಳಿಯಲ್ಲಿ ಬಪ್ಪನಾಗಿ
ಆಳ್ದನು ಬರಲು ಆಳುಮಂಚದ ಮೇಲೆ ಇಪ್ಪುದು

ಗುಣವೇ ಹೇಳಾ,ಕೂಡಲ ಸಂಗಮದೇವಾ?
ಜಂಗಮ ರೂಪಾಗಿ ಸಂಗಯ್ಯ ಬಂದಾನೆಂದು
ಎಂದೆಂದೂ ನಾನು ಮಂಚವನೇರದ ಭಾಷೆ !"

ಹೌದು. 'ತನ್ನನರಸಿಬಪ್ಪವರ ತಾನರಸಿ ಬಪ್ಪ' ಪರಮಾತ್ಮ ತನ್ನ ಸದ್ಭಕ್ತರ ಬಳಿಗೆ ಭಕ್ತರ ರೂಪದಲ್ಲಿಯೇ ಬರುತ್ತಿರುತ್ತಾನೆ. ಅವನು ಆಳ್ದನು. ಆಳ್ದನು ಬಂದಾಗ ಆಳು ಮಂಚದ ಮೇಲಿರಬಹುದೆ? ಸಂಗಯ್ಯನು ಯಾವಾಗ ಜಂಗಮರೂಪವಾಗಿ ಬರುವನೋ ಹೇಳಲಾಗದು. ಆತ ಬಂದಾಗ ಅವಸರವಸರವಾಗಿ ಮಂಚವನ್ನಿಳಿವೆನೆಂದರೆ ಆಗುವುದೆ? ಇಲ್ಲ. ಆದುದರಿಂದ ಎಂದೆಂದೂ ಮಂಚವನ್ನೇರದ ಭಾಷೆ ತೊಟ್ಟರು ಬಸವಣ್ಣನವರು !

ಈ ಭಾಷೆಯಲ್ಲದೆ ಬೇರೆ ಭಾಷೆಗಳನ್ನೂ ತೊಟ್ಟರು ಭಕ್ತಿಭಾನು ಬಸವಣ್ಣನವರು. ಒಂದೊಂದು ಭಾಷೆಯೂ ಅವರ ಮನದ ಮಹೋನ್ನತಿಯ ಗೆಲವು ಗಂಬ. 'ನಿಚ್ಚಲು ಶಿವರಾತ್ರಿಯಂ ಮಾಳ್ಪ ಅಚ್ಚರಿಯೆನಿಪ ಭಾಷೆ, ಭಕ್ತರನು ಆಚ್ಚಶಿವನೆಂದಿರ್ಪ ಭಾಷೆ, ಶಿವೈಕ್ಯರೆಗ್ಗುಗಳ ಎಚ್ಚರಿಸದಿಹ ಭಾಷೆ, ಶರಣರ ಹೆಚ್ಚು ಕುಂದುಗಳಂ ನುಡಿಯದಿಹ ಸಚ್ಚರಿತ್ರದ ಭಾಷೆ, ಏನುವಂ ವಂಚಿಸದೆ ಭಾಷೆ, ಮೃಡನನಾದೊಡೆಯೊಂದು ಬಾರಿಗೆ ಕಡಗಿ ಬೇಡದ ಭಾಷೆ, ಬಯಸಿದುದನು ಈವ ಭಾಷೆ, ನುಡಿದು ಪುಸಿಯದ ಭಾಷೆ, ಛಲವನಳಿಯದ ಭಾಷೆ, ಭಕ್ತರ ಸಲುಗೆಯಂಸಲಿಸುವ ಭಾಷೆ, ಅಚಲಿತ ದಾಸೋಹವಂ ಅವಿರತಂ ಮಾಡುವ ಭಾಷೆ, ಕನಸಿನೊಳಂ ಪಿನಾಕಿಗೆ ಗೆಲವನೀಯದ ಭಾಷೆ ಭಕ್ತರಿಗೆ ಗೆಲವಂ ಕೊಟ್ಟುತಾಂ ಶರಣೆಂಬುವ ಭಾಷೆ, ಭವೌಘಬಾಧೆಗೆ ಸಿಲ್ಕದಿಹ ಭಾಷೆ, ಕರಣ ವಿಷಯಕ್ಕಿಂಬುಗುಡದ ಭಾಷೆ, ಷಡರಿಗಳಂ ಪರಿಹರಿಪ ಭಾಷೆ, ಶಿವೈಕ್ಯಭಕ್ತಿಯನಲರಿಸುವ ಭಾಷೆ, ನೆಟ್ಟನೆ ಈಶಾಚಾರಮಂ ಮುಂದಿಟ್ಟು ಬಳೆಯಿಪ ಭಾಷೆ, ತಲೆಹರಿದು ಅಟ್ಟೆಯಿಳಿದೊಡೆ ಶರಣೆನ್ನುತ್ತಿಹ ಭಾಷೆ, ತಲೆಗಟ್ಟೆ ಬಿಟ್ಟೊಡಂವಂದಿಸುವ ಭಾಷೆ–ಇವೆಲ್ಲವಂ ತುದಿಮುಟ್ಟಿಸುವ ಭಾಷೆ' ಇತ್ತಾದಿ ಬಸವಭಾಷೆಗಳನ್ನು ಬಸವ ಪುರಾಣದಲ್ಲಿ ಬಣ್ಣಿಸಲಾಗಿದೆ. ಬಸವಣ್ಣನವರ ವಚನಗಳಲ್ಲಿಯೇ ಅವರ ಇಂಥ ಭಾಷೆಗಳು ದೊರೆಯುತ್ತವೆ :

"ಅಯ್ಯಾ , ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದೊಡೆ
ನಿಮ್ಮಣೆ, ನಿಮ್ಮ ಪ್ರಮಥರಾಣೆ"
"ಭಕ್ತರಲ್ಲಿ ಕುಲವನರಿಸಿದೊಡೆ ನಿಮ್ಮ ರಾಣಿವಾಸದಾಣೆ"
"ಒಡೆನಯ್ಯ, ಬೇಡೆನಯ್ಯ, ಕೂಡಲ ಸಂಗಮದೇವಾ"

"ಎಲ್ಲಿ ನೋಡಿದಲ್ಲಿ ಮನವೆಳಸಿದರೆ ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಪರಮಧುವನು ಮಹಾದೇವಿಯೆಂಬೆ"
"ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ, ಸುರಗಿಯ ಮೊನೆಗಂಜೆ–
ಒಂದಕ್ಕಂಜುವೆ, ಒಂದಕ್ಕಳುಕುವೆ : ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ"
"ಅನ್ಯವಧುವೆಂಬುದು ನಿಮ್ಮ ರಾಣಿವಾಸ"
"ಒಣಗಿಸಿ ಎನ್ನ ಘಣಘಣಲನೆ ಮಾಡಿದರೆಯೂ
ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ"
"ಸುಖ ಬಂದರೆ ಪುಣ್ಯದ ಫಲವೆನ್ನೆನು : ದುಃಖ ಬಂದರೆ ಪಾಪದ ಫಲವೆನ್ನೆನು;
ನೀ ಮಾಡಿದೊಡಾಯಿತ್ತೆಂದನು"
"ಕಾಯದ ಕಳವಳಕ್ಕಂಜಿ 'ಕಾಯಯ್ಯಾ' ಎನ್ನೆನು ;
ಜೀವನೋಪಾಯಕ್ಕಂಜಿ 'ಈಯಯ್ಯಾ' ಎನ್ನೆನು :
ಉರಿಬರಲಿ, ಸಿರಿಬರಲಿ, 'ಬೇಕು ಬೇಡೆ'ನ್ನೆನಯ್ಯಾ !
ಆ ನಿಮ್ಮ ಹಾರೆನು, ಮಾನವರ ಬೇಡೆನು !"
"ನಾಳೆ ಬಪ್ಪುದು ನಮಗಿಂದೇ ಬರಲಿ,
ಇಂದು ಬಪ್ಪುದು ನಮಗೀಗೇ ಬರಲಿ !
ಇದಕಾರಂಜುವರು? ಇದಕಾರಳುಕುವರು?"
"ಮರಣವೇ ಮಹಾನವಮಿ ನನಗೆ"
"ಕರ್ಮವೆಂಬ ಅಂಕದೊಡನೆ ತೊಡರಿದೆ !
ಭಿನ್ನಪವನವಧಾರು, ನಿಮ್ಮಾಳಿನ ಭಾಷೆಯ :
'ಕಡೆಗಳಕ್ಕೆ ನೂಂಕುವೆ, ಕೆಡಹುವೆನಂಕವ' !"
"ಅರ್ಥವನರ್ಥವ ಮಾಡಿ ಕೋಳಾಶಗಳಂಗೆಯ್ಯುತ್ತಿರಲಿ !
ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತ್ತಿರಲಿ !
ಮುಟ್ಟುವ ಸ್ತ್ರೀಯ ಕಣ್ಣ ಮುಂದೆ ಅಭಿಮಾನಗೊಂಡು ನೆರೆಯುತ್ತಿರಲಿ!
ಇಕ್ಕುವ ಸೂಲ ಪ್ರಾಪ್ತಿಸಲಿ !
ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ !
ಮತ್ತೆಯೂ ಲಿಂಗಾರಾಧನೆಯ ಮಾಡುವೆ, ಜಂಗಮಾರಾಧನೆಯ ಮಾಡುವೆ,

ಪ್ರಸಾದಕ್ಕೆ ತಪ್ಪೆನು ! ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದರೆ ನೀನಂದೇ
ಮೂಗ ಕೊಯ್ಯಿ !"
"ನಾನು ಆರಂಬವ ಮಾಡುವೆನಯ್ಯಾ ಗುರುಪೂಜೆಗೆಂದು ;
ನಾನು ಬೆವಹಾರವ ಮಡುವೆನಯ್ಯಾ ಲಿಂಗಾರ್ಚನೆಗೆಂದು ;
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು.
ನಾನಾವ ಕರ್ಮಂಗಳ ಮಾಡಿದರೆಯೂ ಆಕರ್ಮಫಲಭೋಗವ
ನೀ ಕೊಡುವೆಯೆಂಬುದ ನಾನು ಬಲ್ಲೆನು ;
ನಿಮ್ಮ ಸೊಮ್ಮು ನಿಮಗೆ ಸಲಿಸುವೆನು–ನಿಮ್ಮಾಣೆ !"
"ಹೊಲೆ ಹೊಲೆಯರ ಮನೆಯ ಹೊಕ್ಕು
ಸಲೆ ಕೈಕೂಲಿಯ ಮಾಡಿಯಾದರೂ
ನಿಮ್ಮ ನಿಲವಿಂಗೆ ಸಲುವೆನಲ್ಲದೆ ಎನ್ನೊಡಲವಸರಕ್ಕೆ ಕುದಿದೆನಾದರೆ
ತಲೆದಂಡಾ"
"ನಡೆನುಡಿ ಹುಸಿಯುಂಟಾದರೆ ಕೂಡಲಸಂಗನ ತೋರಿದ
ಚೆನ್ನಬಸವಣ್ಣನಾಣೆ!"
"ಲಿಂಗಕ್ಕಲ್ಲದೆ ಮನವನು ; ಜಂಗಮಕ್ಕಲ್ಲದೆ ಮಾಡೆನೀ ಧನವನ್ನು;
ಪ್ರಸಾದಕ್ಕಲ್ಲದೆ ಮಾಡೆನೀ ತನುವನು !"
"ಲಿಂಗ ಜಂಗಮದ ಪ್ರಸಾದಕ್ಕಿಲ್ಲದೆ ಬಾಯ್ದೆರೆಯೆನೆಂಬುದೆನ್ನ ಭಾಷೆ"
"ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಚೆಗೆ,
ಒಲ್ಲೆನಯ್ಯಾ ಪರಸತಿಯರ ಸಂಗವ"
"ಕಂಡುದಕ್ಕೆಳಸೆನೆನ್ನ ಮನದಲ್ಲಿ ; ನೋಡಿ ಸೋಲೆನೆನ್ನ ಕಣ್ಗಳಲ್ಲಿ;
ಆಡಿ ಹುಸಿಯೆನೆನ್ನ ಜಿಹ್ವೆಯಲ್ಲಿ !"
"ಅಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ :
ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ ನೀ ಸಾಕ್ಷಿಯಾಗಿ 'ಚಿಃ' ಎಂದೆ"
"ಆಸೆ ರೋಷ ಹರುಷಾದಿಗಳೆಂಬ ಕರುಣೇಂದ್ರಿಯ ಮುಟ್ಟಲೀಯದೆ
ಆಚಾರವ ಶಿವಾಚಾರವ ಮಾಡುವೆ"
"ಒಡಲ ಕಳವಳಕ್ಕೆ ಬಾಯ ಸವಿಗೆ ಬಯಸಿ ಉಂಡೆನಾದರೆ
ನಿಮ್ಮ ತೊತ್ತಿನ ಮಗನಲ್ಲ"
"ನಿಮಗೆತ್ತಿದ ಕರದಲ್ಲಿ ಮತ್ತೊಂದಕ್ಕೆ ಕೈಯಾನೆನು"

"ಭಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ ; ಯುಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ,
ಸಾರಿ ಶರಣನೆನಿಸುವೆನಯ್ಯಾ ಮೆಲ್ಲಮೆಲ್ಲನೆ ; ಎಡಹುಗುಳಿಗಳದಾಟ
ಬರಬರ ಲಿಂಗೈಕ್ಯನೆನಿಸುವೆನಯ್ಯಾ ಮೆಲ್ಲಮೆಲ್ಲನೆ ;
ಕೂಡಲ ಸಂಗಮದೇವ, ನಿಮ್ಮಿಂದಧಿಕನೆನಿಸುವೆನಯ್ಯಾ !"

ಎಂಥ ಭಾಷೆಗಳಿವು ಬಸವನ ಭಾಷೆಗಳು ! ಒಂದೊಂದು ಭಾಷೆಯೂ ಅವರ ಉಜ್ವಲ ವ್ಯಕ್ತಿತ್ವದ ಅಮೃತ ಮಯೂಖವಾಗಿದೆ. 'ನಿಮ್ಮಿಂದಧಿಕನೆನಿಸುವೆನಯ್ಯ!' ಎಂಥ ಆತ್ಮ ವಿಶ್ವಾಸವಿದು ! 'ನಿಮ್ಮಿಂದಧಕನೆನಿಸುವೆನಯ್ಯಾ !' ಒಮ್ಮೆಗೆ ಅಲ್ಲ– ಮೆಲ್ಲಮೆಲ್ಲನೆ ! ಬಿರುಗಾಳಿಗೆ ಅರಳುವುದಿಲ್ಲ ಬಳ್ಳಿಯ ಮೊಗ್ಗು; ಬರಿ ಆವೇಶಕ್ಕೆ ಅರಳುವುದಿಲ್ಲ ಆತ್ಮಕಮಲ ! ಮೆಲ್ಲಮೆಲ್ಲನೆ ಮಂದಾನಿಲ ಮತ್ತೆ ಮತ್ತೆ ಮುತ್ತಿಟ್ಟ ಮೇಲೆ ಮೊಗ್ಗೆ ಅರಳುತ್ತದೆ ; ಮೆಲ್ಲಮೆಲ್ಲನೆ ಸದ್ದಿಲ್ಲದ ಸತತ ಸಾಧನೆ ಮಾಡಿದರೆ ಆತ್ಮದ ಅರವಿಂದ ಅರಳುತ್ತದೆ.

"ವೇದಶಾಸ್ತ್ರದವರ ಹಿರಿಯರೆನ್ನೆ ; ಮಾಯಾಭ್ರಾಂತಿ ಕವಿದ ಗೀತಜ್ಞರ ಹಿರಿಯರೆನ್ನೆ !

ಇವರು ಹಿರಿಯರುಗಳೆ? ಯಾಗನಟ್ಟುವಿಗಪಾಣರು !
ಇವರಿಂದಧಿಕವ ಸಾಧಿಸುವರೇನು ಕಿರಿಯರೆ?
ಇಂತು ವಿದ್ಯೆ, ಗುಣ ಜ್ಞಾನ, ಧರ್ಮ, ಆಚಾರ ಶೀಲಂಗಳ–
ನಮ್ಮ ಕೂಡಲ ಸಂಗನ ಶರಣರು ಸಾಧಿಸಿದ ಸಾಧನೆಯನೇ ಸಾಧಿಸುವುದು

ಎಂದು ನಂಬಿ ನಡೆದ ಬಸವಣ್ಣನವರು ಸಾಧನ ಮಾರ್ಗದಲ್ಲಿ ಮುಂದುವರಿದು ಹುಟ್ಟಿಸಿದ ದೇವನನ್ನೂ ಹಿಂದುಳಿಸಿದರು !

ಆ ಸಾಧನೆಯ ಸುಂದರ ಚಿತ್ರ ಅವರ ಅಮೃತೋಪಮ ವಚನಗಳಲ್ಲಿ ಪ್ರತಿಬಿಂಬಿತವಾಗಿದೆ :

"ಸಂಸಾರ ಸಾಗರದ ತೆರೆ ಕೊಬ್ಬಿ, ಮುಖದ ಮೇಲೆ ಅಲೆಯುತ್ತಿದ್ದುದೇ ನೋಡಾ !

ಸಂಸಾರ ಸಾಗರ ಉರದುದ್ದವೆ? ಹೇಳಾ !
ಸಂಸಾರ ಸಾಗರ ಕೊರಲುದ್ದವೆ? ಹೇಳಾ !
ಸಂಸಾರ ಸಾಗರ ಸಿರದುದ್ದವಾದ ಬಳಿಕ ಏನ ಹೇಳುವೆನಯ್ಯಾ?
ಅಯ್ಯಾ, ಅಯ್ಯಾ, ಎನ್ನ ಹುಯ್ಯಲಕೇಳಯ್ಯ !
ಕೂಡಲ ಸಂಗಮದೇವಾ, ನಾನೇವೆನೇವೆನಯ್ಯಾ !"

ಎಂಬ ಹೃದಯದ ಹುಯ್ಯಲಿನಿಂದ ಪ್ರಾರಂಭವಾದ ಅವರ ಸಾಧನೆ–

"ಕೆಸರಲ್ಲಿ ಬಿದ್ದ ಪಶುವಿನಂತಾನು ದೆಸೆದೆಸೆಗೆ ಬಾಯಬಿಡುತ್ತಿದ್ದೇನಯ್ಯ!*
"ಸಮುದ್ರದೊಳಗಣ ಸಿಂಪಿನಂತೆ ಬಾಯ ಬಿಡುತ್ತಲಿದ್ದೇನಯ್ಯ !"
"ಅಯ್ಯಾ , ಆಯ್ಯಾ, ಎಂದು ಕರೆಯುತ್ತಲಿದ್ದೇನೆ !
ಅಯ್ಯಾ , ಅಯ್ಯಾ , ಎಂದು ಬರಲುತ್ತಲಿದ್ದೇನೆ !
'ಓ' ಎನ್ನಲಾಗದೆ ಅಯ್ಯಾ ! ಆಗಳೂ ನಿಮ್ಮುವ ಕರೆಯುತ್ತಲಿದ್ದೇನೆ.
ಮೌನವೇ ಕೂಡಲ ಸಂಗಮದೇವಾ?"
"ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
'ಅಂಬೇ, ಅಂಬೇ' ಎಂದು ಕರೆಯುತ್ತಲಿದ್ದೇನೆ !
ಅಂಬೇ, ಅಂಬೇ' ಎಂದು ಒರಲುತ್ತಲಿದ್ದೇನೆ–ಕೂಡಲ ಸಂಗಮದೇವ
'ಬಾಳು, ಬಾಳೆಂ' ಬನ್ನಕ್ಕ !"

ಎಂಬ ಕರುಳಿನ ಕೂಗಾಗಿ ಮುಂದುವರಿದ ಅವರ ಸಾಧನೆ–

"ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸದಿರಯ್ಯಾ !
ಪಸುವೇನಬಲ್ಲುದು? ಹಸುರೆಂದೆಳಸುವುದು !"
"ಬಡಪಶು ಪಂಕದಲ್ಲಿ ಬಿದ್ದೊಡೆ ಕಾಲ ಬಡಿವುದಲ್ಲದೆ
ಬೇರೆಗತಿಯುಂಟೆ? ಶಿವಶಿವಾ, ಹೋದಹೆ ಹೋದಹೆನಯ್ಯಾ !
"ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ !"
"ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ !
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ !
ಕೂಡಲ ಸಂಗಮದೇವಯ್ಯ , ನಿಮ್ಮ ಮನೆಯ ಮಗನೆಂದೆನಿಸಯ್ಯಾ!"

ಎಂದು ಪ್ರಾರ್ಥನೆಯಾಗಿ ಪುಟಗೊಂಡ ಅವರ ಸಾಧನೆ–

"ಭಕ್ತಿಯೆಂಬುದ ಮಾಡಬಾರದು : ಕರಗಸದಂತೆ
ಹೋಗುತ್ತ ಕೊಯ್ವುದು ಬರುತ್ತ ಕೊಯ್ವುದು !"
"ಕೂಡಲ ಸಂಗನ ಭಕ್ತಿ ಬಾಳ ಬಾಯಿಧಾರೆ !"
"ಮುನ್ನೂರರುವತ್ತು ದಿನ ಶ್ರಮವ ಮಾಡಿ ಕಳನೇರಿ
ಕೈಯ ಮರೆದಂತಾಯಿತ್ತೆನ್ನ ಭಕ್ತಿ !"
"ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ !"
"ಹೊಸತಿಲ ಪೂಜಿಸಿ ಹೊರವಟ್ಟುಹೋದ ಒಕ್ಕಲತಿಯಂತಾಯಿತ್ತೆನ್ನ ಭಕ್ತಿ!"

ಎಂಬ ತೀಕ್ಷ್ಣ ಆತ್ಮ ನಿರೀಕ್ಷಣವಾಗಿ, ಪರೀಕ್ಷಣವಾಗಿ ಸಾಗಿದ ಅವರ ಸಾಧನೆ–

"ಅಯ್ಯಾ, ನೀ ಮಾಡಲಾದ ಬಗತ್ತು, ನಿ ಮಾಡಲಾದ ಸಂಸಾರ,
ನೀ ಮಾಡಲಾದ ಮರವೆ, ನೀ ಮಾಡಲಾದ ದುಃಖ–
ಅಯ್ಯಾ , ನೀ ಬಿಡಿಸಿದರೆ ಬಿಟ್ಟಿತ್ತು ತಾಮಸವಯ್ಯಾ !
"ನಾ ನೀಮಾಯೆಯ ಗೆದ್ದೆನೆಂಬ ಹಮ್ಮಿದೇಕೆ. ಕೂಡಲ ಸಂಗಮದೇವಾ?"
ಎನ್ನ ವಾಮಕ್ಷೇಮ ನಿಮ್ಮದಯ್ಯಾ : ಎನ್ನ ಹಾನಿ ವೃದ್ಧಿ ನಿಮ್ಮದಯ್ಯಾ ;
ಎನ್ನ ಮಾನಾಪಮಾನ ನಿಮ್ಮದಯ್ಯಾ! ಬಳ್ಳಿಗೆ ಕಾಯಿ ದಿಮ್ಮಿತ್ತೆ?"

ಎಂಬ ಸಂಪೂರ್ಣ ಶರಣಾಗತಿಯಾಗಿ ಮಾಗಿದ ಅವರ ಸಾಧನೆ–

"ಎನ್ನ ಕಾಯವ ದಂಡಿಗೆಯ ಮಾಡಯ್ಯ ! ಎನ್ನ ಸಿರವ
ಸೋರೆಯಮಾಡಯ್ಯ !
ಎನ್ನ ನರವ ತಂತಿಯ ಮಾಡಯ್ಯ ! ಎನ್ನ ಬೆರಳ ಕಡ್ಡಿಯ ಮಾಡಯ್ಯ!
ಬತ್ತೀಸರಾಗವ ಹಾಡಯ್ಯ ! ಉರದಲೊತ್ತಿ ಬಾರಿಸು !

ಎಂಬ ಆತ್ಮನಿವೇದನದಲ್ಲಿ ರಸದುಂಬಿ,

"ಆಡಿ ಕಾಲು ದಣಿಯುವು, ನೋಡಿ ಕಣ್ಣು ದಣಿಯವು,
ಹಾಡಿ ನಾಲಗೆ ದಣಿಯದು ! ಇನ್ನೇವೆನಿನ್ನೇವೆ !
ನಿಮ್ಮ ಕೈಯಾರೆ ಪೂಜಿಸಿ ಮನದಣಿಯಲೊಲ್ಲದಿನ್ನೇವೆನಿನ್ನೇವೆ !
ಕೂಡಲ ಸಂಗಮದೇವ ಕೇಳಯ್ಯಾ , ನಿಮ್ಮುದರವ ಬಗಿದಾನು
ಹೋಗು ಭರವೆಬೆಗೆ !"

ಎಂಬ ಮಹೋತ್ಸಾಹದಲ್ಲಿ ಕುಳಿತು,

"ಸಮಸ್ತ ಕತ್ತಲೆಯ ಮಸಕ ಕಳೆದಿಪ್ಪ ಇವರ ನೋಡಾ !
ಬೆಳಗಿಂಗೆ ಬೆಳಗು ಸಿಂಹಾಸನವಾಗಿ ಬೆಳಗು ಬೆಳಗ ಕೂಡಿದ ಕೂಟವ
ಕೂಡಲ ಸಂಗಯ್ಯ ತಾನೆ ಬಲ್ಲ !"

ಎಂಬ ಅಮೃತ ಫಲವಾಗಿ ಸಫಲವಾಯಿತು. ಆ ಅಮೃತಫಲವ ಇತಿಹಾಸ ಇಲ್ಲಿದೆ:

"ಭಕ್ತಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ
ಅಂಗವೆಂಬ ಎಲೆಯಾಯಿತ್ತು ;
ಅಂಗವೆಂಬ ಎಲೆಯ ಮೇಲೆ

ವಿಚಾರವೆಂಬ ಹೂವಾಯಿತ್ತು ;
ಆಚಾರವೆಂಬ ಕಾಯಾಯಿತ್ತು ;
ನಿಷ್ಪತ್ತಿಯೆಂಬ ಹಣ್ಣಾಯಿತ್ತು !
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ !"

ಈ ಹಣ್ಣು ಎಷ್ಟು ಬೇಗ ಉದುರಿ ಹೋಯಿತಲ್ಲ ! ಏನು ಮಾಡುವುದು ! ಕೂಡಲ ಸಂಗಯ್ಯನೇ ಕಾದು ಕುಳಿತಿದ್ದ–ಯಾವಾಗ ಅದು ತೊಟ್ಟು ಬಿಟ್ಟು ಕಳಚಿ ಬೀಳಿವುದೋ ಎಂದು ! ಯಾವಾಗ ಅದನ್ನು ಎತ್ತಿಕೊಳ್ಳುವೆನೋ ಎಂದು ! ೨೬ ವರ್ಷಗಳವರೆಗಾದರೂ ಹೇಗೆ ತಾಳಿದನೋ ತಿಳಿಯದು ! ಕಟ್ಟುವ ಕೆಡಿಸುವ ಕಾರ್ಯದಲ್ಲಿಯೇ ಕಾಲ ಕಳೆವ ಅವನು ಕಲ್ಯಾಣವನ್ನು ಕಟ್ಟಿಸಿಯೂ ನೋಡಿದನು.ಕೆಡಿಸಿಯೂ ನೋಡಿದನು ! ಬಸವಣ್ಣನವರೂ ಇದನ್ನು ಅರಿತಿದ್ದರೆಂದು ತೋರುತ್ತದೆ:

"ಏನ ಮಾಡುವೆ? ಎನ್ನ ಪುಣ್ಯದ ಫಲವು !
ಶಾಂತಿಯ ಮಾಡಹೋದರೆ ಬೇತಾಳನಾಯಿತ್ತು !
ಕೂಡಲ ಸಂಗಮದೇವರ ಪೂಜಿಸಿಹೆನೆಂದರೆ
ಭಕ್ತಿಯೆಂಬ ಮೃಗವೆನ್ನನಟ್ಟಿ ಬಂದು ನುಂಗಿತ್ತಯ್ಯ !"

ಎಂದು ಉದ್ಗರಿಸಿದರು ! ತಾವು ಕಟ್ಟಿದ ಕಲ್ಯಾಣ ತಮ್ಮ ಕಣ್ಣಮುಂದೆಯೇ ಕಟುಕರ ಕೇರಿಯಾಗುವುದನ್ನು ನೋಡಲಾರದೆ ಕಲ್ಯಾಣವನ್ನು ತೊರೆದು ಕೂಡಲಸಂಗನಲ್ಲಿ ಬೆರೆದರು.

ಬಸವಣ್ಣನವರ ಮಾನವೋದ್ಧರಣದ ಮಹಾಪ್ರಯೋಗ ಎಷ್ಟರಮಟ್ಟಿಗೆ ಯಶಸ್ವಿಯಾಯಿತೆಂಬುದನ್ನು ಈಗಿನವರಾದ ನಾವು ಅಳೆಯುವುದು ಅಷ್ಟು ಸುಲಭವಲ್ಲ. ಈಗ ಸಮಾನತೆ, ಸಹೋದರತೆ, ಸ್ವತಂತ್ರತೆ ಮೊದಲಾದ ತತ್ತ್ವಗಳು ಎಲ್ಲರ ಸೊತ್ತಾಗಿವೆ. ಅವುಗಳ ಬಗ್ಗೆ ವಿರೋಧವೇ ಉಳಿದಿಲ್ಲ. ಆದರೆ ಅವುಗಳ ಬಗ್ಗೆ ಕನಸು ಕಾಣಲು ಕೂಡ ಬಾರದಷ್ಟು ವಿರೋಧವಿದ್ದಾಗ ಅವುಗಳನ್ನು ಎದೆಗಾರಿಕೆಯಿಂದ ಎತ್ತಿಹಿಡಿದು ಅವುಗಳಿಗಾಗಿ ಆತ್ಮಾರ್ಪಣ ಮಾಡಿದ ಬಸವಣ್ಣನವರು ಭಾರತಕ್ಕಷ್ಟೇ ಅಲ್ಲ, ಭುವನವೆಲ್ಲಕ್ಕೆ ಭೂಷಣಪ್ರಾಯರು. 'ಅವರೂ ಎಲ್ಲರನ್ನೂ ಸಮಾನರೆಂದು ಕಾಣಲಿಲ್ಲ ; ಶಿವದೀಕ್ಷೆ ಪಡೆದವರನ್ನು ಮಾತ್ರ ಸಮಾನರೆಂದು ಕಂಡರು' ಎಂದು ವಾದಿಸುವವರೂ ಇದ್ದಾರೆ. ಆದರೆ ಆ ರೀತಿ ಮಾಡದೆ ಬರಿ ಬಾಯಿಮಾತಿನ ಸಮಾನತೆಯೊಂದನ್ನೇ ಸಾರಿ ಹೋಗಿದ್ದರೆ ಮಾತಿನ

ಸಮಾನತೆಯುಳಿಯುತ್ತಿದ್ದಿತು–ಸಮಾಜವಾಗಿ ಮೈದಳೆದ ಸಮಾನತೆ ಸಿದ್ಧಿಸುತ್ತಿರಲಿಲ್ಲ. ಮೇಲಾಗಿ, ಅಂತ್ಯಜನೊಬ್ಬನಿಗೆ ಮೊದಲು ಅವನನ್ನು ಮುಟ್ಟದೆ ಶಿವದೀಕ್ಷೆ ಕೊಡುವುದಕ್ಕಾಗುವುದೆ? ದೂರದಿಂದ ಲಿಂಗವನ್ನು ತೂರುತ್ತಿದ್ದರೆ ಅವನ ಕೈಗೆ? ಕಕ್ಕಯ್ಯನು ಹೇಳಿಯೇ ಇದ್ದಾನೆ–ಬಸವಣ್ಣನೆನ್ನ ಮುಟ್ಟಿ ಪಾವನವ ಮಾಡಿದನೆಂದು. ಮುಟ್ಟುವುದೇ ಮಹಾಪಾಪವಾಗಿದ್ದಾಗ ಮುಟ್ಟಿ ಬಳಗೆ ಕರೆದುಕೊಳ್ಳುವುದಲ್ಲದೆ ಅವರು ವಂದನೆಗೆ, ಪೂಜೆಗೆ, ಪಾದೋದಕ ಪ್ರಸಾದಾದಿಗಳಿಗೆ ಯೋಗ್ಯರಾಗುವಂತೆ ಮಾಡಿದುದು ಮಹತ್ಕಾರ್ಯವಲ್ಲವೆ?

ಯಾವುದೊಂದು ತತ್ತ್ವದ ಯಶಸ್ಸು ಅದನ್ನು ಅನುಸರಿಸುವ ಅನುಯಾಯಿಗಳ ಸಂಖ್ಯೆಯಿಂದ ಆಚರಣೆಯಿಂದ ನಿರ್ಧರಿತವಾಗುವುದಿಲ್ಲ. ಪ್ರಪಂಚದ ಪ್ರವಾದಿಗಳಿಗೆ ಅವರ ಜೀವಿತಕಾಲದಲ್ಲಿ ದೊರೆತ ಅನುಯಾಯಿಗಳು ಅತ್ಯಲ್ಪ ; ಆಮೇಲೆ ದೊರೆತವರು ಹೆಚ್ಚು ಜನ. ಸಂಖ್ಯೆ ಹೆಚ್ಚಿದರೂ ಅವರು ಸತ್ ಶಿಷ್ಯರೆನ್ನುವಂತಿಲ್ಲ. ತಮ್ಮ ಪ್ರವಾದಿಯನ್ನು ದೇವರೆಂದು ಪೂಜಿಸಿ ಅವನ ತತ್ತ್ವಗಳನ್ನು ತಿಳಿಯುತ್ತ ತಿರುಗುವವರೇ ಹೆಚ್ಚು. ಆದರೆ ಇಂಥವರನ್ನು ನೋಡಿ ಆ ಪ್ರವಾದಿಯ ತತ್ತ್ವಗಳು ವಿಫಲವಾದುವಂದು ವಾದಿಸುವುದು ತಪ್ಪು. ತತ್ತ್ವ ಅವರಿವರ ಅನುಸರಣೆಯ ಮೇಲೆ ನಿಂತಿರುವುದಿಲ್ಲ : ತತ್ತ್ವ ತತ್ತ್ವದ ಮೇಲೆ ನಿಂತಿರುತ್ತದೆ. ಅಂಥದೊಂದು ತ್ರಿಕಾಲಾಬಾಧಿತ ತತ್ತ್ವಕ್ಕಾಗಿ ಬಾಳಿ, 'ತತ್ತ್ವಕ್ಕೆ ಬಾಗಿ ನಡೆದವರ ತೊತ್ತಾಗಿ ಬದುಕುವೆ'ನೆಂದು ನುಡಿದು, ನುಡಿದಂತೆ ನಡೆದು, ತತ್ತ್ವನಿಷ್ಠೆಗಾಗಿಯೇ ಕೊನೆಗೆ ಸರ್ವಸ್ವವನ್ನೂ ತ್ಯಾಗಮಾಡಿದ ಬಸವಣ್ಣನವರು ಮಹಾಮಾನವರು. ಅವರ ಪ್ರಯೋಗ ಸಫಲವಾಗಿದೆಯೇ ವಿನಹ ವಿಫಲವಾಗಿಲ್ಲ.

ಆಗಿದ್ದರೆ ಅಂದಿನಿಂದ ಇಂದಿನವರೆಗೆ ಅನೇಕ ಕವಿಗಳು, ಶರಣರು, ಶಿವಯೋಗಿಗಳು, ಪಂಡಿತರು, ಪಾಮರರು ಅವರನ್ನು ಅನನ್ಯಭಕ್ತಿಯಿಂದ ಆರಾಧಿಸುತ್ತಿರಲಿಲ್ಲ, ಸ್ತುತಿಸುತ್ತಿರಲಿಲ್ಲ, ಸ್ಮರಿಸುತ್ತಿರಲಿಲ್ಲ. ಅವರೆಲ್ಲರ ಸ್ತುತಿಗಳನ್ನು ಸಂಗ್ರಹಿಸಿದರೆ ಅದೊಂದು ಬೃಹತ್‌ಕೋಶವೇ ಆದೀತು ! ಅವರೆಲ್ಲರ ಸ್ತವನಗಳನ್ನು ಇಲ್ಲಿ ಉದ್ಧರಿಸುವುದು ಸಾಧ್ಯವಿಲ್ಲವಾದರೂ ಒಬ್ಬಿಬ್ಬರ ಅವಿಸ್ಮರಣೀಯವಾದ ಸ್ತುತಿಗಳನ್ನು ಉದಾಹರಿಸದೆ ತೃಪ್ತಿಯಿಲ್ಲ. ಅಕ್ಕಮಹಾದೇವಿಯ ಉಕ್ತಿಗಳಿವು ;

"ನಮ್ಮ ಬಸವಣ್ಣನು ಜಗದ್ಧಿತಾರ್ಥವಾಗಿ ಬಂದು ಐವತ್ತೆರಡು ವಿಧವನೊಳಕೊಂಡು ಚರಿಸಿದನು. ಅದೆಂತೆಂದೊಡೆ : ಗುರುಕಾರುಣ್ಯಾವೇದ್ಯನು. ಶರಣ ಸಂಗಮೇಶ್ವರನು, ತ್ರಿವಿಧಕ್ಕೆ ಆಯತನು, ತ್ರಿಕರಣಶುದ್ಧನು, ತ್ರಿವಿಧಲಿಂಗಾಂಗ ಸಂಬಂಧಿ, ಪರಸ್ತ್ರೀಯರ ಬೆಸರ, ಪರಧನವನೊಲ್ಲ, ಪರನಿಂದೆಯನಾಡ, ಅನೃತವ

ನುಡಿಯ ಹಿಂಸೆಯ ಮಾಡ, ತಾಮಸಭಕ್ತ ಸಂಗವ ಮಾಡ, ಚತುರ್ವಿಧ ಪದವಿಯಹಾರ, ಅರಿಷಡ್ವರ್ಗಕ್ಕಳುಕ , ಕುಲಾದಿ ಮದಂಗಳ ಬಗೆಗೊಳ್ಳ ದ್ವೈತಾದ್ವೈತವ ನುಡಿವನಲ್ಲ, ಸಂಕಲ್ಪ ವಿಕಲ್ಪವ ಮಾಡುವನಲ್ಲ, ಕಾಲೋಚಿತವಬಲ್ಲ, ಕ್ರಮಯುಕ್ತನಾಗಿಹ, ಷಟ್‌ಸ್ಥಲ ಭರಿತ, ಸರ್ವಾಂಗಲಿಂಗಿ, ದಾಸೋಹ ಸಂಪನ್ನ........."

ಇವು ಹರಿಹರನ ಸಿರಿನುಡಿಗಳು : "ಎಲೆ ಬಸವ, ಬಸವಣ್ಣ ಬಸವರಸ, ಬಸವಿ ದೇವ ಕೇಳಯ್ಯ : ನಿನ್ನ ನೇಮವಿದಾರ್ಗುಂಟು? ಗುರುಲಿಂಗದೊಳೆರಡಿಲ್ಲದಿಪ್ಪೆ, ಶರಣರಂ ಸಂಗನೆಂದೆ ಕಾಣ್ಬೆ, ಬಂದ ಭಕ್ತರನತ್ಯಾದರಿಪೆ, ಬಪ್ಪ ಭಕ್ತರಂ ಹರುಷದೊಳಿದಿರ್ಗೊಂಬೆ, ಬೇಡಿದುದ ಶರಣರ್ಗಿಲ್ಲೆನ್ನದೀವೆ, ಬೇಡಲೊಲ್ಲದ ವರ್ಗೆಮಿಗಿಲಾಗಿ ಆರಾಧಿಪೆ, ಜಾಗೃತ್ ಸ್ವಪ್ನಸುಷುಪ್ತಿಯವ ಸ್ಥಾತ್ರಯಂಗಳೊಳು ಶರಣರಂ ಸಂಗನೆಂದಲ್ಲದೆ ಕಾಣೆ, ನಿಚ್ಚಶಿವರಾತ್ರಿಯನಚ್ಚರಿಯಿಂ ಮಾಳ್ಪೆ, ಜಂಗಮ ಪ್ರಾಣಿಯಾಗಿರ್ಪೆ , ಶಿವಲಿಂಗಾರ್ಪಿತವಿಲ್ಲ ದುದನಾಘ್ರಾಣಿಸೆ, ನೋಡೆ, ನುಡಿಯೇ, ಮುಟ್ಟೆ, ಪರಾಂಗನೆಯರಂ ಹೆತ್ತ ತಾಯ್ಗಳೆಂಬೆ, ಪರದ್ರವ್ಯಮಂ ಕಿಲ್ಬಿಷವೆಂದು ಮುಟ್ಟೆ ನಡೆದು ತಪ್ಪೆ, ನುಡಿದು ಹುಸಿಯೆ, ಹಿಡಿದು ಬಿಡೆ, ಬಿಟ್ಟು ಹಿಂಗಲೀಯೆ, ಕೊಟ್ಟು ನೆನೆಯೆ, ನಟ್ಟು ಕೀಳೇ, ಮುಟ್ಟಿ ಪೆರಪಿಂಗೆ, ಕೂಡಿ ತೆಪ್ಪೆ ನೋಡಿ ನಿರಾಕರಿಸೆ, ನೆನೆದು ಮರೆಯೆ, ಮನದೊಳೋವರಿಯಿಲ್ಲ, ಬುದ್ಧಿಯೊಳು ವಿಸಂಚವಿಲ್ಲ, ಅಹಂಕಾರದೊಳು ಗರ್ವವಿಲ್ಲ, ಚಿತ್ತದೊಳು ಹೊಲೆಯಿಲ್ಲ ಕಾಮವಿಲ್ಲ–ಕೋಪದ ಮಾತೇಕೆ? ಲೋಭದ ಗಾಳಿ ತೀಡದು ಮೋಹಕೆ ತೆರಹಿಲ್ಲ, ಮದದ ಸೊಗಡು ಹೊದ್ದದು, ಮತ್ಸರಕ್ಕಿಂಬಿಲ್ಲ ! ಬಸವರಾಜ, ನಿನ್ನ ಗುಣಂಗಳಂ ಬಣ್ಣಿಸಲೆಮ್ಮಳವಲ್ಲ. ಈಶನ ಮೀಸಲಪ್ಪ ಭಕ್ತಿ ನಿನಗೆಣೆಯಿಲ್ಲ, ಪಡಿಯಿಲ್ಲ, ಪಾಸಟಿ ಯಾವಂ? ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಗಳಂ ಬೆಳೆದು ಗಣಪರ್ವಂಗಳಂ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ, ನಿನ್ನ ದೆಸೆಯಿಂದೆಮ್ಮ ಭಕ್ತಿ ಬಣ್ಣವೇರಿತು !"

ಹಿಂದೆ ಶಿವಭಕ್ತರಷ್ಟೇ ಬಸವಣ್ಣನವರ ಗುಣಗಾನ ಮಾಡಿದ್ದರೆ ಇಂದು ಸರ್ವಮತೀಯರೂ ಬಸವಣ್ಣನವರು ಕನ್ನಡಿಗರೆಂದು, ಭಾರತೀಯರೆಂದು ಹೆಮ್ಮೆಯಿಂದ ಅವರ ಗುಣಗನ ಮಾಡುತ್ತಲಿದ್ದಾರೆ. 'ಬಸವನನ್ನು ಮೀರಿಸಿದ, ಕೊನೆಗೆ ಆತನಿಗೆ ಸರಿಸಮಾನನಾದರೂ ಆದ ಮಹಾ ವಿಭೂತಿಯು ಬೇರೆ ಇರುವನೆಂದು ನಾನು ಧೈರ್ಯವಾಗಿ ಹೇಳಲಾರೆ'ನೆಂದರು, ಬೆನಗಲ್ ರಾಮರಾಯರು. "ಬಸವಣ್ಣನವರ ಸುಮಾನರು ಯಾರು ಎಂದರೆ 'ಅವರೇ' ಎಂದು ಹೇಳಬೇಕಾಗುತ್ತದೆ"ಯೆಂದರು ಅ.ನ. ಕೃಷ್ಣರಾಯರು. ಬಸವಣ್ಣನವರು

ಕನ್ನಡಿಗರಾಗಿ ಹುಟ್ಟಿ, ಕನ್ನಡ ನಾಡನ್ನೇ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು, ಕನ್ನಡ ನುಡಿಯನ್ನೇ ತಮ್ಮ ಧರ್ಮಪ್ರಸಾರಕ್ಕೆ ಮಾಧ್ಯಮವನ್ನಾಗಿ ಮಾಡಿಕೊಂಡರೆಂಬ ಅಭಿಮಾನದಿಂದ ಈ ಅಭಿಪ್ರಾಯಗಳಿಲ್ಲ ಅತ್ಯುಕ್ತಿಯಿದೆಯೆಂದು ಒಪ್ಪೋಣ. ಆದರೆ ಬಸವಣ್ಣನವರು ಜಗತ್ತಿನ ಜೀವಜ್ಯೋತಿಗಳಲ್ಲಿ ಒಬ್ಬರೆಂಬುದಕ್ಕೆ ಇದಿರಿಲ್ಲ.

ಬಸವಣ್ಣನವರಿಗೆ ಭೂಲೋಕದ ಬಗ್ಗೆ ಜುಗುಪ್ಸೆಯಿಲ್ಲ. ಈ ಲೋಕದ ಬಗ್ಗೆ ಅವರಿಗೆ ಅತೀವ ಆಸಕ್ತಿ. ಅವರ ದೃಷ್ಟಿಯಲ್ಲಿ "ಮರ್ತ್ಯವೆಂಬುದು ಕರ್ತಾರನ ಕಮ್ಮಟ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು ; ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು." ದೇವಲೋಕದ ಭ್ರಮೆಯಲ್ಲಿ ಬಿದ್ದು ಮರ್ತ್ಯಲೋಕವನ್ನು ಮರೆಯುವುದು ಮರುಳುತನ. ಮರ್ತ್ಯಲೋಕ ದೇವಲೋಕ ಬೇರುಂಟೆ? 'ಸತ್ಯವ ನುಡಿವುದು ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ; ಆಚಾರವೇ ಸ್ವರ್ಗ , ಅನಾಚಾರವೇ ನರಕ; ಆಯ್ಯಾ ಎಂದೊಡೆ ಸ್ವರ್ಗ, ಎಲೆವೋ ಎಂದೊಡೆ ನರಕ; ಅವನೊಲಿದುದೇ ಕುಲ, ಅವನೊಲಿಯದಿದ್ದುದೇ ಹೊಲೆ; ಅವನನರಿದರೆ ಜ್ಞಾನ, ಅವನನರಿಯದ ಜ್ಞಾನ ಅಜ್ಞಾನ; ಅವನೊಲಿದುದೇ ಪುಣ್ಯ, ಅವನೊಲಿಯದುದೇ ಪಾಪ; ಪುಣ್ಯ ಪಾಪಂಗಳೆಬುವು ತಮ್ಮ ಇಷ್ಟ; ಸುಖ ದುಃಖಗಳು ತಮ್ಮ ಕೈಯಲ್ಲಿ ಬೈದರೆ ಬೈಗಳು ಕೈಯಮೇಲೆ, ಹೊಯ್ದರೆ ಹೊಯ್ಗಳು ಕೈಯ ಮೇಲೆ; ಹಿಂದಿನ ಕಬ್ಬಿನ ಸೋಗೆಯ ಮೆಲಿದಂತೆ; ಇಲ್ಲೆ ಕೈವಲ್ಯ, ಈ ಜನ್ಮದಲ್ಲಿಯೇ ಜೀವನ್ಮುಕ್ತಿ ಇದು ಅವರ ಅಮರ ಸಂದೇಶ, ಆದುದರಿಂದ ಇಲ್ಲಿ ಇಲ್ಲದುದು ಅಲ್ಲಿ ಇಲ್ಲ, ಅಲ್ಲಿಗಾಗಿ ಬಾಯಿ ಬಿಡುವುದು ಬೇಡ.

ಸಂಗಯ್ಯನೇ ಬಂದು ಕೈಲಾಸಕ್ಕೆ ಕರೆದಾಗ,

"ಸಂಗಯ್ಯ ಬಾಯೆಂದು ಕರೆವೆನೀನೆನ್ನುವಂ
ಪಿಂಗಲೀಯದು ಶರಣಗೋಷ್ಠಿ ಕೇಳೆನ್ನುವಂ
ಶರಣರೊಕ್ಕುದರ ಸವಿ ಕೈಲಾಸದೊಳಗುಂಟೆ?
ಶರಣಸಂಗದ ಸುಖಂ ಕೈಲಾಸದೊಳಗುಂಟೆ?"

ಎಂದು ಬಸವಣ್ಣನವರು ಉತ್ತರವಿತ್ತರೆಂದು ಹರಿಹರ ಹೇಳಿದ್ದಾನೆ. ಅದೇಕೆ? ಬಸವಣ್ಣನವರೇ ಹೇಳಿದ್ದಾರೆ.

"ಲಿಂಗದಲ್ಲಿ ಸಮ್ಯಕ್ಕರು, ಲಿಂಗದಲ್ಲಿ ಸಮರ್ಥರು,
ಲಿಂಗದಲ್ಲಿ ಸೊಮ್ಮು-ಸಂಬಂಧವರಿತ ಸ್ವಾಮಿಭೃತ್ಯರೆಲ್ಲರೂ ಕೇಳಿರಿ:
ನಿಮ್ಮ ಬೇಡೆ ! ಅಚಿಜದಿರಿ !

ಎನಗೆ ಮರ್ತ್ಯಲೋಕದ ಮಹಾಗಣಂಗಳುಂಟು !
ಇದು ಕಾರಣ, ಕೂಡಲ ಸಂಗಮದೇವರ ಲೋಕವ
ಹಂಚಿಕೊಳ್ಳಿರಿ ನಿಮ ನಿಮಗೆ !"

ಈ ಲೋಕದವರಿಗೆ ಆ ಲೋಕದ ಹುಚ್ಚು ಬಿಡಿಸಿ ಈ ಲೋಕವನ್ನೇ ದೇವಲೋಕವನ್ನಾಗಿ ಮಾರ್ಪಡಿಸಿಸುವ ದಾರಿಯನ್ನು ತೋರಿದ್ದಾರೆ ಬಸವಣ್ಣನವರು! ಅವರಿಗೆ ಈ ಲೋಕದ ಬಗ್ಗೆ ಅದೇನು ಆಸಕ್ತಿಯೋ, ಆಸ್ಥೆಯೋ, ಅಳ್ತಿಯೋ – ಪ್ರಮಥರಾಣೆ!" ಎಂದು ಅಣೆಯಿಟ್ಟುಕೊಂಡು ಹೋಗಿದ್ದಾರೆ. ಈ ಆಣೆಯನ್ನವರು ನಡಸಿಕೊಡಲಿ! ಅಥವಾ, ಅವರ ತತ್ತ್ವಗಳನ್ನು ಜೀವಂತಗೊಳಿಸಿ ನಾವು ನಡೆಸಿಕೊಡೋಣ : ಜಯ ಬಸವೇಶ !

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವಬೆಳಕನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವದು !

■

# ಸಸಿಯ ಸಲಹಿದ ಪ್ರಭುದೇವ

“ತನುವ ತೋಟವ ಮಾಡಿ, ಮನವ ಗುದ್ದಲಿಯ ಮಾಡಿ
ಆಗಿದು ಕಳೆದೆನಯ್ಯ ಭ್ರಾಂತಿನ ಬೇರ!
ಒಡೆದು ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯ ಬ್ರಹ್ಮಬೀಜವ !
ಅಖಂಡ ಮಂಡಲವೆಂಬ ಬಾವಿ, ಪವನವೇ ರಾಟಾಳ,
ಸುಷುಮ್ನ ನಾಳದಿಂದ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹರೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ
ಆವಾಗಳು ಈ ತೋಟದಲ್ಲಿ ಜಾಗರವಿದ್ದು
ಸಸಿಯ ಸಲಹಿದೆನು ಕಾಣಾ, ಗುಹೇಶ್ವರಾ !”

ಎಲ್ಲ ತೋಟಿಗರಂತಲ್ಲ ಈ ತೋಟಿಗ. ಇವನ ತೋಟಗಾಗಿಕೆಯೇ ಬೇರೆ ಬಗೆಯದು–ತನುವಿನ ತೋಟಗಾರಿಕೆ. ಆ ತೋಟಗಾರಿಕೆಗೆ ತಲೆದೂಗಲೇಬೇಕು. ಇವನು ಬರಿಯ ತೋಟಿಗನಾಗಿರಲಾರ–ಪರಮಾರ್ಥದ ಪ್ರಭುವಾಗಿರಲೇಬೇಕು.

ನಿಜ, ಪ್ರಭುವಾಗಿ ಹುಟ್ಟಿ, ಪ್ರಭುವೆನಿಸಿ ಬೆಳೆದು, ಪ್ರಭುವಾಗಿಯೇ ಪ್ರಪಂಚದ ಪಂಡಿತ ಪಾಮರರನ್ನು ಉದ್ಧರಿಸಿ, ಪರಮಪ್ರಭುವಾಗಿ, ಪರಮಾನುಭವದ ಪ್ರಭೆಯಾಗಿ, ವಿರಾಗವಿಭುವಾಗಿ ಮೆರೆದನಾತ,. ಅಂತಯೇ ಮಗ್ಗೆಯ ಮಾಯಿದೇವರಂಥ ಮಹಾಜ್ಞಾನಿಗಳೂ

“ಪ್ರಭುವೆ ಮಹಾಗುರುಪ್ರಭುವೆ ಲಿಂಗಕಳಾ ಪ್ರಭುವೇ ಚರಾಭಿದ–
ಪ್ರಭುವೆ ಶಿವಾತ್ಮವಿತ್ಪ್ರಭುವೆ ಯೋಗಿವರ ಪ್ರಭುವೇ ಚಿದಂಗನಾ
ಪ್ರಭುವೆ ಸದಾಮಲ ಪ್ರಭುವೆ ರಕ್ಷಿಸುದೇವ ಗುಹೇಶ್ವರಾಲ್ಲಮ
ಪ್ರಭುವೆ ನಿರಂಜನ ಪ್ರಭುವೆ ಮತ್ಪ್ರಭುವೇ ಪ್ರಭುವೇ ಶಿವಾಧವಾ”

ಎಂದು ನುತಿಸಿದರು. ತುತುಸಿದವರಾರು ಆ ತಿಳಿವಿನ ಪ್ರಭುವನ್ನು? ಹೊಗಳದವರಾರು ಆ ಹಿರಿಯ ಆತ್ಮವನ್ನು? ಪ್ರಾರ್ಥಿಸದವರಾರು ಆ

ಪರಿಪೂರ್ಣನನ್ನು, ಪೂರ್ಣಪ್ರಜ್ಞನನ್ನು, ಪರಂಜ್ಯೋತಿಯನ್ನು? ಹರಿಹರನಿಂದ ಹಳ್ಳಿಗರವರೆಗೆ ಎಲ್ಲರೂ ಈ 'ನೀರ, ನೇಹಿಗ, ಬಂಟ, ಸಂವಾದಿ, ಗುರು, ಪ್ರೀತಿಯ ಜಾತಿಗಾರ'ನನ್ನು ಕೊಂಡಾಡಿದ್ದಾರೆ, ಕೀರ್ತಿಸಿದ್ದಾರೆ.

"ಸಾಧನ ಚತುಷ್ಟಯದ ಹಂಗ ಹೊದ್ದದನಿವಂ
ಬೋಧೆಯಕ್ಕರವರಿದು ನಿಜವಾದ ನಿಲವಿವಂ
ಕರತಳಾಮಳಕವಾದುದು ತತ್ತ್ವವೀತಂಗೆ
ಪರಮಶಿವಯೋಗ ನಿಜವಾದುದೀತಂಗೆ
ಶಶಿರವಿಗಳಂತೆ ಬೆಳಬೆಳಗುತಿರ್ದಂ ನೋಡೆ
ಉಸಿರಲಿಲ್ಲದ ಪರಬ್ರಹ್ಮವಾದಂ ಕೂಡೆ
ನಡೆದುದೇ ಬಟ್ಟೆಯಾದುದು ಶಿವನ ಮದಕರಿಗೆ
ನುಡಿದುದೇ ವೇದವಾದುದು ಲಿಂಗವಂತಂಗೆ
ಶಿವನ ನೋಳ್ಪಂತೆಲ್ಲವಂ ನೋಳ್ಪನಲ್ಲಮಂ
ಭವನೊಳಗೆ ಇರುತೆಲ್ಲರೊಳಗಿರ್ಪನಲ್ಲಮಂ"

ಎಂದು ಹರಿಹರ ಹಾಡಿದರೆ,

"ಅಲ್ಲಮನೆ ಗುರುವಾದ ಕಲ್ಯಾಣಮಂಟಪಕೆ"
"ಗುಣಿಗುರುವು ಕಣಕೆ ಪ್ರಭುಲಿಂಗ"
"ಬುದ್ಧಯ್ಯ ಬೂದಯ್ಯ ಎದ್ದು ತೂರಿದ ಮೆದವ
ಬಿದ್ದರಾಶೆಲ್ಲ ವಚನಗಳೊ–ಅಲ್ಲಮಗೆ
ಹುದ್ದೆ ಕಲ್ಯಾಣ ಗದ್ದುಗೆಯೊ"

ಎಂದು ಹಳ್ಳಿಗರು ಹಾಡಿದರು. ಹಾಡದ ಶಿವಕವಿಗಳಾರು ಈ ಶಿವನ ಮದಕರಿಯನ್ನು ಕುರಿತು? ಚಾಮರಸನಂತೂ 'ಅಲ್ಲಮಪ್ರಭು ಸಂಪ್ರದಾಯದಸಲ್ಲಲಿತ ಸನ್ಮಾರ್ಗ'ವನ್ನು ವಿವರಿಸಲೆಂದೇ 'ಪ್ರಭುಲಿಂಗಲೀಲೆ' ಯನ್ನು ಬರೆದ ;ಅದೇ ಉದ್ದೇಶದಿಂದಲೇ ಒಂದಲ್ಲ ಐದು ಶೂನ್ಯಸಂಪಾದನೆಗಳು ಸಂಕಲಿತವಾದುವು; ಎಳಂದೂರ ಹರೀಶ್ವರನ ಪ್ರಭುದೇವರ ಪುರಾಣ ರಚಿತವಾಯಿತು. ಇನ್ನುಳಿದ ಕೃತಿಗಳನ್ನು ಎಷ್ಟೆಂದು ಹೆಸರಿಸುವುದು? ಅವನ ವಿರಾಟ್ ವ್ಯಕ್ತಿತ್ವ ಇಷ್ಟೆಲ್ಲ ಕೃತಿಗಳನ್ನೂ ಮೀರಿ ನಿಂತಿದೆ.

"ಜಗದಗಲ ಮಂಟಪಕ್ಕೆ ಮುಗಿಲಗಲದ ಮೇಲು ಕಟ್ಟಿನಲ್ಲಿ
ಚಿತ್ರ ವಿಚಿತ್ರವ ನೋಡುತ್ತ ಧ್ಯಾನ ವಿಶ್ರಾಂತಿಯಲ್ಲಿ

ದಿಟ ದಿಟವೆಂಬುದೊಂದು ದರ್ಶನವ ನೋಡುತ್ತ ನೋಡುತ್ತ
ಗಗನ ಗಂಭೀರದಲ್ಲಿ ಉದಯವಾಯಿತ್ತ ಕಂಡೆ–
ಗುಹೇಶ್ವರಲಿಂಗ ತಾನೆಯಾಗಿ !"

ಎಂಬ ಭವ್ಯ ದಿವ್ಯದರ್ಶನವನ್ನು ಕಂಡುಂಡ ಆ ಚಿಜ್ಜ್ಯೋತಿಯ, ಜಗಜ್ಜ್ಯೋತಿಯ ನಿಲವನಾರು ಬಣ್ಣಿಸಬಲ್ಲರು? "ಕಂಗಳ ಕರುಳ ಕೊಯ್ದವರ, ಮನದ ತಿರುಳ ಹುರಿದವರ, ಮಾತಿನ ಮೊದಲ ಬಲ್ಲವರು ನನಗೊಮ್ಮೆ ತೋರಾ, ಗುಹೇಶ್ವರಾ!" ಎಂದು ಕೇಳಿದನು ಈ ದೀಪಧಾರಿ, ಚಿದ್ಗಗನ ವಿಹಾರಿ. ಆತನಿಗೆ ಇಂಥ ವ್ಯಕ್ತಿ ಸಿಕ್ಕನೋ ಇಲ್ಲವೋ–ನಮಗಂತೂ ಸಿಕ್ಕಿದ್ದಾನೆ ! ಆತನೇ ಅಲ್ಲಮಪ್ರಭು–'ಮನದೊಳಗೆ ಘನವು ವೇದ್ಯವಾದ' ಅಲ್ಲಮಪ್ರಭು. ಮನದೊಳಗೆ ಘನವು ವೇದ್ಯವಾದ ಬಳಿಕ ಉಳಿದುದೇನು? "ಪುಣ್ಯವಿಲ್ಲ, ಪಾಪವಿಲ್ಲ, ಸುಖವಿಲ್ಲ, ದುಃಖವಿಲ್ಲ, ಕಾಲವಿಲ್ಲ, ಕರ್ಮವಿಲ್ಲ, ಜನನವಿಲ್ಲ, ಮರಣವಿಲ್ಲ !" ಆದುದರಿಂದ 'ಗುಹೇಶ್ವರಾ, ನಿಮ್ಮ ಶರಣನು ಘನ ಮಹಿಮ ನೋಡಯ್ಯ!'

ಈ ಘನಮಹಿವನನ್ನು ಪಡೆದ ಪುಣ್ಯ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆ ಗ್ರಾಮದ ನಿರಹಂಕಾರ–ಸುಜ್ಞಾನಿಯದಾಯಿತು. ನಾಗವಾಸದಧಿಪತಿ ನಾಯಕನಿಗೆ ಮಗನಾಗಿ ಹುಟ್ಟಿದನೆಂದು ಹರಿಹರ ಹೇಳುತ್ತಾನೆ. ಅದೇನೇ ಇರಲಿ, 'ಶಿವಪದಕ್ಕೆ ಪೊಸತೊಡವೆನಿಸಿ, ಭಕ್ತಿವಾರಿಧಿಗೆ ವಿಧುವೆನಿಸಿ' ಬಳೆಯುತ್ತಾನೆ ಅಲ್ಲಯ್ಯ. ಆತನು ಬೆಳೆದಂತೆ ಆತನ ವಿದ್ಯೆಯೂ ಬೆಳೆಯುತ್ತದೆ. ಶಿಶುವೇಷದ ಪ್ರಭು 'ಒಡನೆ ಅಂಬೆಗಾಲಿಕ್ಕೆ ಸದ್ಧರ್ಮ ಪೆರ್ಚಿತ್ತು ; ದಡದಡಿಪ ದಟ್ಟಡಿಯನಿಕ್ಕೆ ಭೂಕಾಂತೆ ಸಂತೋಷವೇರಿದಳು ; ನಡೆಗಲಿಯಲು ಮೃಡ ಭಕ್ತಿ ವರ್ಧಿಸಿತು ; ನುಡಿಗಲಿಯಲು ಜ್ಞಾನಲತೆ ಪರ್ಬಿ ಪಸರಿಸಿತು ; ಕಡುಬುದ್ಧಿಗಲಿಯೆ ಪಂಚಾಚಾರ ಪರಶಿವನ ನೈಷ್ಠೆ ಸಂಪೂರ್ಣಮಾಯ್ತು !" ಅವನು 'ಗಳಿಗೆ ಸಂಖ್ಯೆಗೆ ನುಡಿಯ ಕಲಿತನು; ಗಳಿಗೆ ಸಂಖ್ಯೆಗೆ ನಡೆಯ ಕಲಿತನು ; ಗಳಿಗೆ ಸಂಖ್ಯೆಗೆ ಬಳೆದನವರ ಮನೋರಥದ ಕೂಡ......ಆತನೋದದೆ ವೇದಶಾಸ್ತ್ರ ಸಮೇತವಾತನ ನಾಲಗೆಯ ತುದಿಗಾತು ಬೆಸನನು ಬೇಡು'ತಿದ್ದುವು :

ಆತನು ಹದಿನಾರರ ಹರೆಯಲ್ಲಿ ಕಾಲಿಟ್ಟ ಕೂಡಲೆ ಗಂಡುಗಾಡಿ ಗೆಲವಿನ ಕೇಕೆಯನ್ನು ಹಾಕಿತು. 'ಧರಣಿಯೊಳು ಚೆಲುವಿಂಗೆ ತಾನೇ ಬಿರುದ ಕಟ್ಟಿದನೆಂಬ ಸೂಬಗಿನ , ಪ್ರಭುರಾಯನನ್ನು ಕಂಡವರ ಕಣ್ಣ ಬರ ಹಿಂಗುತ್ತಿತ್ತು. ಅವನನ್ನು ಧವನನ್ನಾಗಿ ಪಡೆಯಲು ಕಡುಚೆಲುವೆಯರೆಷ್ಟು ಜನರು ನೋಂತಿದ್ದರೋ! ಆದರೆ ಅವರಲ್ಲಿ ಒಬ್ಬರ ಆಸೆಯೂ ಈಡೇರಲಿಲ್ಲ. 'ಸಕಲ ಮಾಯೆಯನು ಇಲ್ಲೆನಿಸ'ಲೆಂದೇ

ಬಂದಿದ್ದ ಅಲ್ಲಯ್ಯ ಸಂಸಾರದ ಸುಳಿಗೆ ಸಿಲುಕುವನೆ? ಮಾಯೆಯ ಸ್ವರೂಪವನ್ನು ಸಮೂಲಾಗ್ರವಾಗಿ ಅರಿತ ಅವನು ಮಾಯೆಯ ಬಲೆಗೆ ಬೀಳುವನೆ?

"ಬ್ರಹ್ಮ ಘನವೆಂಬೆನೆ? ಬ್ರಹ್ಮನನು ನುಂಗಿತ್ತು ಮಾಯೆ !
ವಿಷ್ಣು ಘನವೆಂಬೆನೆ? ವಿಷ್ಣುವನು ನುಂಗಿತ್ತು ಮಾಯೆ !
ರುದ್ರ ಘನವೆಂಬೆನೆ? ರುದ್ರನನು ನುಂಗಿತ್ತು ಮಾಯೆ !
ತಾ ಘನವೆಂಬೆನೆ? ತನ್ನನೂ ನುಂಗಿತ್ತು ಮಾಯೆ !
ಇಂತು ಸರ್ವವು ನಿನ್ನ ಮಾಯೆ ! ಒಬ್ಬರನೊಬ್ಬರನೊಳಕೊಂಡಿತ್ತೆ ಹೇಳಾ?"

ಎಂದು ಕೇಳಿದ ಅವನು,

"ದೇವರನ್ನೆಲ್ಲರ ಹೊಡೆತಂದು ದೇವಿಯರೊಳು ಕೂಡಿತ್ತು ಮಾಯೆ !
ಹರಹರಾ, ಮಾಯೆ ಇದ್ದೆಡೆಯ ನೋಡಾ !
ಶಿವಶಿವಾ, ಮಾಯೆ ಇದ್ದೆಡೆಯ ನೋಡಾ !
ಎರಡೆಂಬತ್ತು ಕೋಟಿ ಪ್ರಮಥಗಣಂಗಳು, ಅಂಗಾಲ ಕಣ್ಣುಳ್ಳವರು,
ಮೈಯೆಲ್ಲಾ ಕಣ್ಣುಳ್ಳವರು, ನಂದಿವಾಹನ ರುದ್ರರು ಇವರೆಲ್ಲರು ಮಾಯೆಯ
ಕಾಲುಗಾಹಿನ ಸರಮಾಲೆ ಕಾಣಾ ಗುಹೇಶ್ವರಾ !"

ಎಂದು ಮಾಯೆಯ ಅಜೇಯತೆಯನ್ನು ವರ್ಣಿಸಿದ ಅವನು ಮಾಯೆಯ ಜಾಲದಲ್ಲಿ ಸಿಕ್ಕಿಕೊಳ್ಳುವನೆ? ದೇವದಾನವ ಮಾನವರು ಮಾಯೆಯ ತೊತ್ತಿನ ತೊತ್ತುತನದಲ್ಲಿದ್ದರೂ ಮಾಯಾ ಕೋಲಾಹಲನೆನಿಸಿ ಮೆರೆದ ಪ್ರಭುದೇವ :

ಅವನನ್ನು ಸೋಲಿಸಿ ಶರಣಾಗತನನ್ನಾಗಿ ಮಾಡಿಕೊಳ್ಳಲು ಮಾಯೆ ಯತ್ನಿಸದಿರಲಿಲ್ಲ. 'ಸತ್ಯದಲ್ಲಿ, ಸದ್ಭಕ್ತಿಯಲ್ಲಿ, ಸದ್ವೃತ್ತಿಯಲಿ, ಸಚ್ಚರಿತದಲಿ, ಸಂಪತ್ತಿನಲಿ ಸಲೆ ಸೊಗಸಿ ಮೆರೆದಿಹ ಬೆಳುವಲ ದೇಶ'ದ ರಾಜಧಾನಿ ಬನವಸೆಯಲ್ಲಿ, 'ಅವನೀಕಾಂತೆಯ ವದನವೋ, ಶೃಂಗಾರ ಸಾರದ ಸದನವೋ' ಎನಿಸಿ ಶೋಭಿಸುತ್ತಲಿದ್ದ ಬನವಸೆಯಲ್ಲಿ ಮಮಕಾರ ಭೂಪಾಲ–ಮೋಹಿನೀದೇವಿಯರಿಗೆ

೧ ಹರಿಹರನ ಪ್ರಕಾರ ಮಾಯೆ ಬಳ್ಳಿಗಾವಿಯ ಧನದತ್ತನಿಗೆ 'ಕಾಮಲತೆ'ಯೆಂಬ ಮಗಳಾಗಿ ಹುಟ್ಟಿದಳು. ಶಶಿಕಿರಣದಂತೆ, ಕುಸುಮಶರದಂತೆ, ಸೊಬಹಿನ ಸೊಂಪನೊಳಕೊಂಡು ಬೆಳೆದಿದ್ದ ಅವಳು ಯಾರಂತಿದ್ದಳು, ಎಂದು ಕೇಳಬೇಡಿ!"

ರತಿಗಿತಿಯ ರಂಭೆಗಿಂಬೆಯ ಮಾತು ಬೇಡಿಲ್ಲಿ !
ಮತಿಗಿತಿಗೆ ಪೊಗಳ್ವಗಿಗಳ್ವಾಸೆಗಳು ಪುಗವಿಲ್ಲಿ !'

ಅಂಥ ಸುಂದರಿ ಅವಳು. ಅವಳಿಗೆ ತುಂಬುಯೌವನ ತಲೆದೋರಿದಾಗ ಇನ್ನೇನು ಬಣ್ಣಿಸುವುದು? ಮುಪ್ಪಿನೆದೆಯಲ್ಲಿಯೂ ಕಾಮ ಕೊನರುತ್ತಿತ್ತು ಕಾಮಲತೆಯನ್ನು

ಮಗಳಾಗಿ ಹುಟ್ಟಿದಳು ಮಾಯೆ ! ಮಮಕಾರ–ಮೋಹಗಳಿಗೆ ಮಾಯೆ ಮಗಳಾಗಿ ಹುಟ್ಟಿದುದು ಸಹಜವೇ ಸರಿ.೧ ಎಂಥ ಮಾಯೆ ಅವಳು!

"ಬೆತ್ತ ಬಿದಿರಿಡಿರ್ದ್ದ, ತರುಲತೆ ಹುತ್ತ ಬೆಳೆದ ಸಮಾಧಿವಂತರು ಚಿತ್ತ ಸಂಚಲವಾಗಿ ನೆನಹಿನ ನೇಮು ನೆಲೆಗೆಡಲು ಎತ್ತಳಿಂದೀ ಮಾಯೆ ಹುಟ್ಟಿತೆನುತ್ತ ಚಿಂತಾಕ್ರಾಂತ"ರಾದಂತೆ ! 'ಸಿಸುವ ನೋಡಿದ ಕಣ್ಗೆ ಮಾಯವೆ ಮುಸುಕ'ವುದಂತೆ! ಅವಳು 'ಹೊಡಮರಳ ಕಲಿತರೆ ವಿರಕ್ತರ ದೃಡತೆ ಹೊಡೆಗೆಡೆ'ಯಿತಂತೆ ! 'ದಟ್ಟಡಿಯಿಡಲು ಬಾಲಬ್ರಹ್ಮಚಾಗಳ ಶೌಚ' ಕೆಟ್ಟುವಂತೆ ! 'ನುಡಿಗಲಿಯಲು ಮೌನಿಗಳ ಬಾಯ್ಗಳಲಿಡಿದ ಮುದ್ರೆಗಳು ಒಡೆದು'ವಂತೆ ! ಆಕೆಯ ಬೆಳವಿಗೆಯ ಬಲುಹನ್ನು, ಚೆಲುವನ್ನು ಏನು ಹೇಳುವುದು? 'ಬೀರುತಿದ್ದು ಮುದ್ದುತನವನು, ಹೋರುತಿರ್ದಳು ಸಕಲ ಚೆಲುವನು, ಮೀರುತಿರ್ದಳು ಸಕಲ ಸೊಬಗನು, ದಿನ ದಿನಕೆ ಕಳೆಯೇರುತಿರ್ದಳು ಮಾಯೆ ವಿವಿಧ ವಿಲಾಸವೃತ್ತಿಯಲಿ೧'

ಅವಳ ಸಹಜ ಸೌಂದರ್ಯಕ್ಕೆ ಪ್ರಾಯದ ಪೆಂಪು ಕೂಡಲು ಕೇಳುವದೇನು? 'ಮನಸಿಜನ ಮನೆದೇವಿ, ಕುಸುಮಾಸ್ತ್ರನ ಕುಲೋತ್ತಮೆ, ಅನಂಗನ ಅಧಿದೈವ, ಕಂದರ್ಪನ ಕರಾಸಿಯ ವೀರಸಿರಿ'ಯಾಗಿ ಶೋಭಿಸಿದಳು.

---

ಕಂಡಾಗ ! ಹೀಗಿರಲು ಅದೇ ಊರಿನ ಗೊಗ್ಗೇಶ್ವರ ದೇವಾಲಯದಲ್ಲಿ ಮೃದಂಗಧಾರಿ ಅಲ್ಲವನು

"ಅತಿರಸಾಮೃತ ಕಾಂತಿಯುತ ಸುಖಾಸ್ಪದಮೆಂಬ
ನುತಗತಿ ನವೀನಗತಿ ರಸಗತಿಗಳೆಂದೆಂಬ
ನುಣ್ಗತಿ ಸುಗಂಭೀರಗತಿ ಸಾಂದ್ರಗತಿಯೆಂಬ
ಜಾಣ್ಗತಿ ಮಧುರಗತಿ ಮನೋಹರಗತಿಯೆಂಬ
ಸುಗತಿ ಶರ್ವಂತೆ ಕರ್ಣಾಭರಣವಾಗುತಿರೆ
ಬಗೆಗೆ ಪರಮಾನಂದ ರಸದ ತೆರೆಯಾಗುತಿರೆ"

ಮದ್ದಳೆಯನ್ನು ನುಡಿಸುವ ಕಾಯಕವನ್ನು ಕೈಕೊಂಡನು. ಒಮ್ಮೆ ಕಾಮಲತೆಯಲ್ಲಿಗೆ 'ವಿಟರಂಗೋರಿಗೊಳಿಸುತ' ಬಂದು ರಂಗಮಂಟಪದಲ್ಲಿ ಅಲ್ಲಮನನ್ನು ಕಂಡಳು. ಪಾದರಿಯ ಪೊದುರುಂಬಿನ ಪೊಸಬನನ್ನು, ಕೇದಗಿಯ ವಿಸುಪೆಸಳ ಕಿರುಮಿಂಡನನ್ನು,ಕತ್ತುರಿಯ ತಿಲಕದ ಕುಮಾರನನ್ನು, ಮುತ್ತಿನೇಕಾವಳಿಯ ಮುಗ್ಧನನ್ನು, ಹೊಳೆವ ಬೆಳತಿಗೆಗಂಗಳ ಎಳೆಯನನ್ನು, ಸವಿಗೂಡುವ ಸುಗತಿಗಳ ಸೊಬಗನನ್ನು ಕಂಡಳು. ಕಂಡು,

ನಿಂದಂತೆ ನಿಂದಳಲ್ಲಮನ ನಿಲವಂ ಕಂಡು
ಸಂದಳಾ ಪೊಸರೂಪುರೇಖೆಗೆ ಮನಂಗೊಂಡು !'

ಅವಳೊಮ್ಮೆ ಬನವಸೆಯ ಮಧುಕೇಶ್ವರ ಮಂದಿರಕ್ಕೆ ತನ್ನ ಸಖಿಯರಾದ ಕಾಮರೇಖೆ, ಕಳಾವಿಳಾಸಿ, ಪ್ರೇಮಕಾರಣಿ, ರಾಗಿ, ಲೋಭಿಣಿ, ಭೋಗಿ, ಮದಮಾನಿ ಮೊದಲಾದವರನ್ನು ಕೂಡಿಕೊಂಡು ಪೂಜೆಗಾಗಿ ಹೋದಳು. 'ಪುಷ್ಪಾಂಜಲಿಯ ಪಸರಿಸುತ' ಲಿಂಗದ ಮುಂದೆ ಮೆಯ್ಯಿಕ್ಕಿದಳು. ಲಿಂಗಪೂಜೆಯನ್ನು ಸಾಂಗಗೊಳಿಸಿದಳು. ಆರತಿಯನ್ನೆತ್ತಿದಳು. ರಂಗಮಂಟಪಕ್ಕೆ ಬಂದು ವಿವಿಧ ವೀಣೆಗಳ ಸೂಸಿ ಹೊಮ್ಮುವ ಸರದ ಮೇಳಾಪದಲ್ಲಿ ದೇಸಿ ರಾಗವನ್ನು ಆಲಾಪಿಸಿದಳು. ಹಾಡುತ್ತ ಹಾಡುತ್ತ ಕುಣಿತ ಪ್ರಾರಂಭವಾಯಿತು. "ಬಳಿಕಲೊಯ್ಯನೆ ಚರಣ ಚಾರಣ ಚಳತೆಯಲ್ಲಿ, ನಿಜಹಸ್ತ ವಿಸ್ತರದಳತೆಯಲಿ, ಝಳಪಿಸುವ ಬೆರಳಿನಲುಳಿಯ ಹವಣಿನಲಿ, ಘಲಘಲಿಸುವಂದುಗೆಯ ಕಂಕಣಗಳ ಝಣತ್ಕಾರದಲಿ ಮಾಯಾಲಲನೆ ರಂಗಂ ಬೊಕ್ಕುನಿದಳು ನಿಜದ ನಿರಿಗೆಯಲಿ !" ಆಮೇಲೆ, "ತಾಳದಲಿ ತರಹರಸಿ, ಮೇಳದಲಿ ಮೈನಿಗುರಿ ಕರಸಂಚಾಳಿಯಲಿ ಚಳಬಳಿಸಿ, ತಿರುಪಿನ ಮಡುಪಿನಲಿ ಮಣಿದು, ತೋಳ ಮೈಯಲಿ ತೊನೆದು, ನೋಟದ ಥಾಳದಲಿ ಧವಳಿಸಿ, ಮರಾಳಗತಿಯಲಿ ಕಾಮಿನಿಯೊ ತಾ ಭರತಸಂಭವ ಭೂಮಿಯೋ ಪೇಳೆನಲು–ಪಾತ್ರವಾಡಿದಳು !"

ಆಗ 'ಸಂಗಿಯಂತಿರೆ ನಟಿಸಿ ತಾ ನಿಸ್ಸಂಗಿಯಾಗಿಹ ಪರಿಯನೀ' ಅಂಗನೆಗೆ ತಿಳಿಸಲೆಂದು ಅಲ್ಲಿಗೆ ಅಲ್ಲಮಪ್ರಭು ಬಂದನು. 'ಕಂಗಳಲಿ ನಡೆ ನೋಡಿದೊಡೆ ಹೆರೆ ಹಿಂಗಬಾರದ ಚೆಲುವ ಮುಖದ, ಸುರಂಗಸೂಸುವ ದಂತಪಜ್ತಿಯ, ತೊಳಪ ಕಣ್ಣುಗಳ–ಸರ್ವಾಂಗ ಭಂಗಿಯ ಸೌಮ್ಯತೆಯ' ಧರಿಸಿ ಬಂದನು. ಬಂದು ಮಧುಕೇಶ್ವರ ಮಂದಿರದ ಮುಂದೆ ನಿಂದು 'ನಾನಾ ಪರಿಯ ವಹಣಿಗಳಿಂದ, ತಾಳ ಸಮೇಳ ಸದ್ಗತಿಯಿಂದ, ಉಗ್ಘಡಣೆಯ ಗಡಾವಣೆಯಿಂದ' ಕೇಳುವರೆಲ್ಲ ಬೆರಗಾಗೆ ಹಲವಂದದಲಿ ಮದ್ದಳೆಯ ಬಾರಿಸಿದನು.

'ಕಾರ ಮುಗಿಲಿನ ಗರ್ಜನೆಯ ಕಿವಿಯಾರೆ ಕೇಳುವ ಸೋಗೆ' ಯಂತಾಯಿತು ಮಾಯೆಯ ಸ್ಥಿತಿ. ಆ ಮದ್ದಳೆಯ ದನಿಗೆ ಮನಸೋತಳವಳು. ಸಖಿಯನ್ನು ಕಳಿಸಿ ಅಲ್ಲಮನನ್ನು ಕರೆಸಿಕೊಂಡಳು ರಂಗಮಂಟಪಕ್ಕೆ ಅವನನ್ನು ನೋಡುತ್ತಲೆ ಅವಳ ಪಾಲಿಗೆ ರಂಗಮಂಪಟ ಅನಂಗಮಂಟಪವಾಗಿ ತೋರತೊಡಗಿತು. 'ಮೊಳೆತುವಾಕ್ಷಣ ಕಾಮಬಾಣದ ಹಿಳುಕುಗಳು ! ಹಿರಿದಾಗಿ ಚಿತ್ತಜನಳವಿಯಲಿ ಸಿಲ್ಕಿದಳು ಮಾಯೆ ಮಹಾನುರಾಗದಲಿ!' ಕಾಮರೇಖೆ ಕಳಾವಿಳಾಸಿ ಮೊದಲಾದ ಸಖಿಯರಿಗೆ ತಮ್ಮ ಒಡತಿಯ ವ್ಯಾಮೋಹದ ಅರ್ಥವಾಯಿತು. ತಮ್ಮ ಚಾತುರ್ಯವನ್ನೆಲ್ಲ ವಿನಿಯೋಗಿಸಿ ಮಮಕಾರ ಭೂಪಾಲನು ಅಲ್ಲಮನನ್ನು ಮಾಯಾದೇವಿಯ ನಾಟ್ಯಾಚಾರ್ಯನನ್ನಾಗಿ ನಿಯಮಿಸುವಂತೆ ಮಾಡಿದರು. ತನ್ನ ಬಯಕೆ ಕೈಸಾರಿತೆಂದು ಮಾಯೆ ಹಿಗ್ಗಿದಳು.

ಅವಳ ಹಿಗ್ಗು ಸಿಗ್ಗಾಗಲು ಬಹಳ ದಿನ ಬೇಕಾಗಲಿಲ್ಲ. 'ಸುಧೆಯ ಸೋನೆಯು ಸುರಿಯುತಿಹ ಕಾಲದಲಿ ತೃಪ್ತಿಯನು ಹೊಂದಲರಿಯದೆ ಕ್ಷುಧೆಗೆ ತೃಷೆಗಳ ಮಾಡಿ ಕೋಟಲೆಗೊಂಬ ಮರುಳಂತೆ–ಮುದವನಲ್ಲಮ ಕರುಣಿಸಿದ ಕಾಲದಲಿ ನಿತ್ಯವನರಿಯಲರಿಯದೆ ಬೇಟದಲಿ ಕುದಿದು ಕೋಟಲೆಗೊಳ್ಳು'ತ್ತಿದ್ದಳು ಮಾಯೆ. ಅವಳ ಸಖಿಯರು ಅದನ್ನರಿತು ಉಪಾಯದಿಂದ ಮಾಯೆ–ಅಲ್ಲಮರನ್ನು ಏಕಾಂತದಲ್ಲಿ ಕೂಡಿಸಿದರು–'ತಮವ ತರಣಿಯನೊಂದು ಮಾಡುವೆವೆಂಬ ಭಾವ ಭ್ರಮಿತ ಬುದ್ಧಿಯಲಿ !'

ಮಾಯೆಯ ಇಚ್ಛೆ ಆಗಲೂ ಈಡೇರಲಿಲ್ಲ. 'ದೇವ ಮಾನವ ದಾನವರುಗಳ ಡಾವಣಿಯ ದನವಾಗಿ ಕಟ್ಟುವ' ಮಾಯಾದೇವಿ ತನ್ನ ಎಲ್ಲ ಸಮ್ಮೋಹಕತೆಯನ್ನೂ ಸೂರೆ ಮಾಡಿದಳು ಅಲ್ಲಮನನ್ನು ಒಲಿಸಿಕೊಳ್ಳಲು. ಅಲ್ಲಮನಂಥ ವಿರಾಗವಿಭುವಿಗೂ ಅದೊಂದು ಅಗ್ನಿ ಪರೀಕ್ಷೆಯಾಗಿ ಪರಿಣಮಿಸಿತು. ಆದರೆ ಅದರಲ್ಲಿ ಸುಲಭವಾಗಿ ಜಯಶೀಲನಾದ ಅಲ್ಲಮ ; "ಎಸೆಯದಿರು, ಎಸೆಯದಿರು ಕಾಮಾ ನಿನ್ನ ಬಾಣ! ಹುಸಿಯಲೇಕೊ? ಕಾಮಕ್ರೋಧಲೋಭಮೋಹಮದಮತ್ಸರ ಇವು ಸಾಲವೆ ನಿನಗೆ? ಗುಹೇಶ್ವರ ಲಿಂಗದ ವಿರಹದಲ್ಲಿ ಬಂದವರ ಮರಳಿ ಸುಡಲುಂಟೆ ಮರುಳ ಕಾಮಾ?" ಎಂದು ಮನ್ಮಥನ ಸೊಕ್ಕು ಮುರಿವಂತೆ ಸೊಲ್ಲಿಸಿ ಮಾಯೆ ಬೀಸಿದ ಬಲೆಯಿಂದ ನಿರ್ಲಿಪ್ತನಾಗಿ ನಿಂತನು.

ಕಾತರವನ್ನು ತಡೆಯಲಾಗದೆ ಮಾಯೆ ಮೇಲೆ ಬಿದ್ದು ಅಲ್ಲಮನನ್ನು ಅಪ್ಪಿದಳು. ಆದರೆ 'ಜಗವನೇಡಿಸಿ ಕಾಡುವಾ ಮಾಯೆಗೆ ನವೀನವೆನಿಪ್ಪ ಮಾಯಾವಿಗನು ತಾನಾ'ದನು ಅಲ್ಲಮನು. 'ಬಯಲ ಚಪ್ಪರಿವಂತೆ ಚುಂಬನ, ಬಯಲ ನಪ್ಪುವವೊಲು ಸಮಪ್ಪಿಕೆ, ಬಯಲಿನೀಕ್ಷಿಸುವಂತೆ ನೋಟದ ಕೂಟದನುಭವಣೆ !' ಮಾಯೆ ಮೂರ್ಛಿತಳಾದಳು ! 'ಚಿಂತಾಕುಲತೆಯಿಂದಲಿ ಬೆರಗು ಹೊಡೆದು ಬಿದ್ದುಬಿಟ್ಟಳು!'

ಸಖಿಯರು ಸಾವಿರ ಪ್ರಯತ್ನಗಳನ್ನು ಮಾಡಿದರು–ಅಲ್ಲಮನನ್ನೊಲಿಸಲು. ಎಲ್ಲ ವ್ಯರ್ಥವಾಯಿತು. ಮಾಯೆಯ ಸ್ಥಿತಿ ಇನ್ನೂ ಚಿಂತಾಜನಕವಾಯಿತು. ತನ್ನ ಆಜ್ಞೆಯಂತೆ ಅಲ್ಲಮನನ್ನು ಸೋಲಿಸಲು ಹೋಗಿದ್ದ ತನ್ನ ತಾಮಸ ಕಳೆ ಮಾಯೆ ತಾನೇ ಅಲ್ಲಮನ ಮೋಹದಲ್ಲಿ ತಲ್ಲಣಿಸತೊಡಗಿದುದನ್ನು ಕಂಡು ಅವಳಿಗೆ ತಿಳಿ ಹೇಳಲು ವಿಮಲೆಯನ್ನು ಕಳಿಸಿದಳು ಪಾರ್ವತಿ. ವಿಮಳೆ ಇಳಿದು ಬಂದು ಮಾಯೆಯನ್ನು ಕಂಡು ಅವಳಿಗೆ ತನ್ನ ಕಾರ್ಯದ ನೆನಪು ಕೊಟ್ಟಳು. 'ತಾಯಿ ನಿಯಮಿಸಿ ಕಳಿಸಿದ್ದ ಕಾರ್ಯವೆತ್ತ. ನೀನು ನಡೆಸಿರುವ ಕಾರ್ಯವೆತ್ತ !' ಎಂದು ಎಚ್ಚರಿಸಿದಳು. 'ಬಳಿಕ ಮಾಯಾಂಗನೆಯ ಮನಸಿಗೆ ತಿಳಿವು ತಿಣ ತಿಟ್ಟವಿಟ್ಟಿತು,

ಹೊಳಹು ಹೊಮ್ಮಿತು. ತನ್ನ ಪೂರ್ವದ ಕಥನ ಕಾರಣದ ಬೆಳವಿಗೆಗೆ ಬೆದೆಯಾಯ್ತು ನೆನಹಿನ ನೆಳಲು ಮಿಂಚಿದುದೊಳಗೊಳಗೆ !' ಪಶ್ಚಾತ್ತಾಪದಿಂದ ನುಡಿದಳು ಮಾಯೆ:

"ವಿಮಳೆ, ಅಲ್ಲವನನ್ನು ಸೋಲಿಸುವುದನ್ನು ಬಿಟ್ಟು ನಾನೇ ಅವನಿಗೆ ಮನಸೋತು ಮಾತೆ ಬೆಸಸಿದ್ದ ಕಾರ್ಯವನ್ನೇ ಕಡೆಗಣಿಸಿ ಬಿಟ್ಟಿರುವೆನಲ್ಲ! ನನಗಾವ ಶಿಕ್ಷೆ ಕಾದಿದೆಯೋ ಕೈಲಾಸದಲ್ಲಿ !"

"ಇನ್ನೂ ಕಾಲ ಕೈಮೀರಿ ಹೋಗಿಲ್ಲ ಮಾಯೆ ! ಮದ್ದಳೆಯ ಅಲ್ಲಮನನ್ನು ಈಗಲಾದರೂ ಗೆದ್ದು ತಾಯಿಯ ಪಣವನ್ನು ಗೆಲಿಸು, ನಡೆ !"

'ಮದ್ದಳೆಯ ಅಲ್ಲಮ !' ಆ ಹೆಸರು ಕಿವಿಗೆ ತಾಗುತ್ತಲೆ ಮಾಯೆಯ ಮೈಯಲ್ಲಿ 'ಮಿಂಚಿನ ಹೊಳೆ ತುಳುಕಾಡಿತು !' ತಾಂ ತಧಿ ತಕಧಿನ್ನ ತಕಿಟಿತ್ತ ತಕಧಿನ್ನ ತಕತದಿ ನಕಧಿನ್ನ ಧಿನ ಕಧಿ ಕತಧಿನ್ನ ಧಿಮಿಕಟ ತಕಧಿನ್ನ ದಿತಕಧಿ ನಕಧಿನ್ನ....ಮೃದಂಗನಾದ ತರಂಗಗಳು ಅವಳ ಮೋಹ ತರಂಗಗಳೊಡನೆ ತಾಕಲಾಡಿದುವು ! ತನ್ನ ಪರಾಭವವನ್ನು ಮರೆಮಾಡುತ್ತ ಮಾಯೆ ನುಡಿದಳು :

"ವಿಮಳೆ, ನೀನು ಹೇಳುವ ಅಲ್ಲಮನು ನಿರ್ವಿಕಾರ ನಿರಂಜನಮೂರ್ತಿ. ಅವನೆಲ್ಲಿ, ಈ ಮದ್ದಳೆಯ ಅಲ್ಲಮನೆಲ್ಲಿ?"

"ಭಾವ ಭ್ರಮಿತ ಬುದ್ಧಿಯ ಬಿಟ್ಟು ವಿಚಾರಿಸು ಮಾಯೆ ! ನೋಟ ಮಾತ್ರದಿಂದ ಮೂಜಗದ ಮಾನವರ ಬೇಟೆಯಾಡುವ ಮಾಯೆಯ ಬೇಟದ ಬಲೆಗೆ ಸಿಲುಕದೆ ಬಯಲಿನೊಳಗೆ ಬಯಲಿಗನಾಗಿ ಜಾರಿ ಹೋದವನು ಮದ್ದಳೆಯ ಅಲ್ಲಮನೆ? ನಡೆ, ಕಡೆಯ ಪ್ರಯತ್ನವನ್ನು ಮಾಡು !"

"ಅವನಿದ್ದೆಡೆಗೆ ನನ್ನನ್ನು ಕರೆದೊಯ್ಯುವಿಯಾ ವಿಮಳೆ? ಬೇಗ ಕರೆದೊಯ್ಯಿ!"

"ಕರೆದೊಯ್ಯುವೆ : ಆದರೆ ಅವನನ್ನು ನೀನು ಸೋಲಿಸುವುದಕ್ಕಾಗಿ, ನೀನೇ ಅವನಿಗೆ ಸೋಲಲಿಕ್ಕಾಗಿಯಲ್ಲ !"

"ವಿಮಲೆ, ಅವನೇ ನನಗೆ ಸೋಲಲಿ, ನಾನೇ ಅವನಿಗೆ ಸೋಲಲಿ–ನಮ್ಮಿಬ್ಬರ ಸಮಾಗಮವಾದರೆ ಸಾಕು, ಮಾತೆಯ ಶಪಥ ಸಫಲವಾಗುವುದು, ಅಲ್ಲವೆ?"

"ಒಪ್ಪಿದೆ."

"ಹಾಗಾದರೆ ಬೇಗೆ ಕರೆದುಕೊಂಡು ಹೋಗು ನನ್ನನ್ನು ಅಲ್ಲಮನಲ್ಲಿಗೆ"

ಅಡವಿ ಅಡವಿ ಅಲೆದು ಅಲ್ಲಮನನ್ನು ಕಂಡರವರು. ವಿಮಳೆ ಮುಂದಾಗಿ ಮಾತಿಗೆ ಮೊದಲು ಮಾಡಿದಳು : ಪ್ರಭುವೆ, ಈಸು ದಿನ ಮಾಯಾದೇವಿಗೆ ಆಸೆದೋರಿ ಈಗ ಭಾಸಿಗೊಳಿಸುವುದು ತರವೆ?"

**ಅಲ್ಲಮ** : ಆರು ಮೊದಲಲಿ ಬಯಸ ಹೇಳಿದರು? ಆರು ಕಾಣುತ ಕರೆಸ ಹೇಳಿದರು? ಯಾರು ಬಾರದ ಬಯಸಿ ಕಾಮಿನಿ ಬಳಲ ಹೇಳಿದರು?"

**ಮಾಯೆ** : "ಧೂರ್ತ, ಈಶ ಸೇವೆಯಲ್ಲಿದ್ದ ಮುಗುದೆಗೆ ಬೀಸಿ ಜಾಲವ ಬಲೆಗೆ ಸಿಲುಕಿಸಿ ಮೋಸಗೊಳಿಸಿದರಾರು?"

**ಅಲ್ಲಮ** : "ಮಾಯೆ, ಧೂರ್ತರಾರೆಂಬುದನು ಸಕಲ ಸಾಧಕಸಿದ್ಧ ಮುನಿಗಳ ಕೇಳಿ ನೋಡು !"

**ಮಾಯೆ** : "ಬಲ್ಲೆ ನಿನ್ನಯ ವಿರತಿ ಗಿರತಿಯ ಅಲ್ಲಮಾ ! ನೆನಪಿರಲಿ, ನಾನು ಮೂಜಗವ ಮುತ್ತಿರುವ ಮಾಯೆ ! ಹರಿಯೆದೆಯ ಮೆಟ್ಟಿದೆನು! ಶಂಕರನ ಅರ್ಧಾಂಗವನು ತುಳಿದಿಹೆನು ! ಬ್ರಹ್ಮನ ಬಾಯ ಮುದ್ರಿಸಿಹೆನು ! ಸುರನರೋರಗರಂಬ ಮರವೆಯ ಮರುಳ ತಂಡವನೆನ್ನ ತೊತ್ತಿನ ಶರಣು ಹೊಗಿಸಿಹೆನು ! ಕಾನನದ ಮರುಳರನ್ನೇನ ಕೇಳುವೆ?"

**ಅಲ್ಲಮ** : "ಬರಿ ಮಾತನಾಡದಿರು ಮಾಯೆ ! ಹರಿಹರ ಬ್ರಹ್ಮಾದಿಗಳನ್ನು ಆಡಿಸುವೆ ರೋರಾಡಿ ಕಾಡುವೆನೆಂಬೆ : ನಿನ್ನನ್ನು ಯಾರು ನಾನಾ ರೀತಿಯಲ್ಲಿ ಆಡಿಸುತ್ತಲಿಹರು ಬಲ್ಲೆಯಾ?"

**ಮಾಯೆ** : "(ಮೆತ್ತಗಾಗಿ) ಯಾರನ್ನು ಯಾರು ಆಡಿಸುವರೆಂಬ ವಿಚಾರವಂತಿರಲಿ ಪ್ರಿಯಕರ, ಕೃಪಾಕರನಾಗಿ ಮಾಯೆಯ ಮನದಾಸೆಯನ್ನು ಈಡೇರಿಸು."

**ಅಲ್ಲಮ** : "ಸುಮ್ಮನೆ ಕಾಡಿ ಬೇಡಿ ಬಾಡದಿರು ಮಾಯೆ ! ಬಂದ ಹಾದಿಯಿಂದ ಹಿಂದಿರುಗುವುದೆ ಹಿತ ನಿನಗೆ !

**ಮಾಯೆ** : "ನಿನ್ನ ಸನ್ನಿಧಿಯಲ್ಲಿದ್ದು ನಿನ್ನಿಂದ ಶಿವತತ್ತ್ವಾನುಭವವನ್ನು ತಿಳಿದು ನಾನೂ ಶಿವನ ಸನ್ನಿಧಿಯನ್ನು ಸೇರಬೇಕೆಂಬ ಸದಿಚ್ಛೆಯಿಂದ ಬಂದಿರುವೆ ಸ್ವಾಮಿ–ಸ್ವೀಕರಿಸು, ಸ್ವೀಕರಿಸು ! ನಿರಾಕರಿಸದಿರು!"

**ಅಲ್ಲಮ** : "ಚಿನ್ನವೊಂದೇ ಅಕ್ಕಸಾಲೆಯಲ್ಲಿ ಒಡವೆಯಾಗಬಲ್ಲುದು ಮಾಯೆ, ಮಿಕ್ಕ ಧಾತುವಲ್ಲ !"

**ವಿಮಳೆ** : "ನಿನ್ನ ಪಾದದ ಪರುಷಸ್ಪರ್ಶದಿಂದ ಮಾಯೆಯೆಂಬ ಲೋಹವೂ ಸುವರ್ಣವಾಗದೆ ಸ್ವಾಮಿ? ಅವಳಲ್ಲಿ ಹುರುಳಿಲ್ಲದಿರಬಹುದು–ನಿನ್ನಲ್ಲಿ ಕರುಣವೂ ಇಲ್ಲವೆ? ನಿನ್ನ ಕರುಣವೇ ಅವಳ ಹರಣ ಪ್ರಭುವೆ !"

**ಅಲ್ಲಮ** : "ಲೋಹವಾದರೂ ಇದ್ದರೆ ಪುರುಷ ಮುಟ್ಟಿ ಚಿನ್ನವಾಗಬಹುದು ವಿಮಳೆ–ಪರುಷದ ಸೋಂಕಿನಿಂದ ಹಳೆ ಹಂಚೆಲ್ಲಿಯಾದರೂ ಹೊನ್ನಾಗಬಲ್ಲುದೆ?"

**ಮಾಯೆ** : "ಹಾಯ್ ವಿಧಿಯೆ ! ಇನ್ನೂ ಏನೇನ ಕೇಳಿಸುವೆ ನನಗೆ? ನಾನು ಕಬ್ಬುನಕ್ಕಿಂತಲೂ ಕೀಳೆ? ಹಳೆ ಹಂಚೆ? ಇಷ್ಟು ಮಾನಹೀನಗಳಾದ ಮೇಲೂ ಮರಣ ಬರಲಿಲ್ಲವಲ್ಲ ನನಗೆ ; ಮರಣಕ್ಕೂ ಕರುಣ ಬರಲಿಲ್ಲವೆ ನನ್ನ ಮೇಲೆ?"

**ವಿಮಳೆ** : "ನೀನು ಮುಟ್ಟಿದ ಮಣ್ಣೂ ಚಿನ್ನವಾದೀತು ಪ್ರಭುವೆ ! ಮನಸು ಬಂದೋಪಾದಿಯಲ್ಲಿ ಕಾದು ರಕ್ಷಿಸವಳ ! ಮಾಯೆಯ ಸಂಗಕ್ಕೇಕೆ ಅಂಜುವೆ? ನೀನು ನಿರಂಜನನಲ್ಲವೆ? ನಿರಂಜನನು ಮಾಯೆಗಂಜುವನೆ?"

**ಅಲ್ಲಮ** : "ನೀನೂ ಭ್ರಮಿತಳಾಗಿ ನುಡಿದರೆ ಹೇಗೆ ವಿಮಳೆ? ಕೂಡಬಲ್ಲ ವಸ್ತುಗಳಿದ್ದರೆ ತಾವಾಗಿಯೇ ಕೂಡಿಕೊಳ್ಳುತ್ತವೆ. ಅದು ನಿಸರ್ಗದ ನಿಯಮ. ತರಣಿತಮಗಳೆಂದಾದರೂ ಒಂದಾಗುವುವೆ? ಹೋಗಿರಿನ್ನು–ನಾನು ಹೊರಟೆ !"

**ಮಾಯೆ** : "ಹೋಗುವಿಯೆಲ್ಲಿಗೆ ಅಲ್ಲಮಾ–ಬಿಡೆ ನಿನ್ನ, ಬಿಡೆ ನಿನ್ನ ! ಕಟ್ಟಿ ಕೆಡಹುವೆ ನನ್ನ ಬಾಹುಬಂಧನದಲ್ಲಿ !"

**ಅಲ್ಲಮ** : "ಬಯಲು ಬಂಧಿಸುವಿಯಾ ಮಾಯೆ? ಹ್ಹ ಹ್ಹ ಹ್ಹ ..........ಬ್ರಹ್ಮ ವಿಷ್ಣುಗಳ ಮಾಯೆ ತೊತ್ತಳದುಳಿವಂದು, ದೇವದಾನವರ ಮಾಯೆ ಆಗಿದಗಿದು ತಿಂಬಂದು, ರುದ್ರಗಣ ಪ್ರಮಥಗಣಗಳೆಂಬವರ ಮಾಯೆ ಮರುಳ್ಮಾಡಿ ಕಾಡುವಂದು, ನೊಸಲ ಕಣ್ಣು ಪಂಚಮುಖ ದಶಮುಖದವರಿಗೆ ಮಾಯೆ ಅರ್ಧಾಂಗಿಯಾದಂದು, ಅಷ್ಟಾಶೀತಿ

ಸಹಸ್ರ ಋಷಿಯರುಗಳ ಮಾಯೆ ತಪೋಮದದಲು ಕೆಡಹುವಂದು
ನಾನು ಮಾಯಾ ಕೋಳಾಹಳನಾಗಿರ್ದೆ ಕಾಣಾ ಗುಹೇಶ್ವರಾ !"

ಹೊರಟುಹೋದನು ಪ್ರಭು ! ಅವನ ವಚನ ವಾಯುಮಂಡಲವನ್ನೆಲ್ಲ ವ್ಯಾಪಿಸಿ ವಿಮಳೆ ಮಾಯೆಯರ ಹೃದಯ ಕುಹರಗಳಲ್ಲಿ ಪ್ರತಿಧ್ವನಿಸಿತು! ಅವರ ಯತ್ನವೆಲ್ಲ ನೀರಿಗೆ ಹೆಪ್ಪೆರೆದಂತೆ ನಿರರ್ಥಕವಾಯಿತು.[೧]

ಅಲ್ಲಮಪ್ರಭು ತಾನೊಬ್ಬನೆ ನಿರ್ಮಾಯನಾಗಿ ತೃಪ್ತನಾಗಲಿಲ್ಲ, 'ತನ್ನ ಕಟಾಕ್ಷ ಕಾಂತಿಯಲಿ ಹಿಂಗಿಸುವೆನೆಲ್ಲರ ಮನೋಮಯದಂಗದೊಳ ಹೊರಗಿಡಿದ ತಮದ ತರಂಗಗಳನು' ಎಂದು ಸುಳಿಯತೊಡಗಿದ. ಆ ಸುಳಿವಿನ ಸೊಗಸನ್ನು ಅವನೇ ಬಣ್ಣಿಸಿದ್ದಾನೆ.

"ಬಿರುಗಾಳಿ ಬೀಸಿ ಮರ ಮುರಿವಂತೆ ಸುಳುಹ ಸುಳಿಯದೆ
ತಂಗಾಳಿ ಪರಮಳದೊಡಗೂಡಿ ಸುಳಿವಂತೆ ಸುಳಿಯಬೇಕು :
ಸುಳಿದಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು ;
ಸುಳಿದಡೆ ನೆಟ್ಟನೆ ಭಕ್ತನಾಗಿ ನಿಲಬೇಕು !"
ಸುಳಿದು ಜಂಗಮವಾಗಲರಿಯದ, ನಿಂದು ಭಕ್ತನಾಗಲರಿಯದ
ಉಭಯ ಭ್ರಷ್ಟರನೇನೆಂಬೆ, ಗುಹೇಶ್ವರಾ ?"

ಪ್ರಭು ಪರಮಾನುಭವದ ಪರಿಮಳ ಬೆರೆದ ಸುಳಿಗಾಳಿಯಾಗಿ ಸುಳಿದನು ; ಮಾನವರ ಮನದ ಮೊಗ್ಗುಗಳನ್ನು ಅರಳಿಸುವ ತಂಗಾಳಿಯಾಗಿ ಸುಳಿದನು

---

೧ ಈ ಹಿಂದೆ ಹರಿಹರನು ಚಿತ್ರಿಸಿದ ಪ್ರಕಾರ ಅಲ್ಲಮ–ಕಾಮಲತೆಯರು ಗೊಗ್ಗೇಶ್ವರ ದೇವಾಲಯದಲ್ಲಿ ಒಬ್ಬರನ್ನೊಬ್ಬರು ಸಂಧಿಸಿದುದನ್ನು ವಿವರಿಸಲಾಗಿದೆ. ಮುಂದೆ ಕಾಮಲತೆ–ಅಲ್ಲಮರು ಕೆಲವು ದಿನಗಳವರೆಗೆ ಕೂಡಿ ಇದ್ದರೆಂದೂ ಕಾಮಲತೆ ಜ್ವರದಿಮದ ಅಕಾಲಮರಣಕ್ಕೆ ತುತ್ತಾಗಲು ಅಲ್ಲಮನು ಅವಳ ವಿರಹದಲ್ಲಿ ಹುಚ್ಚನಾಗಿ ದೇವಾಲಯ ಹೇಳುತ್ತಾನೆ. ಆದರೆ ಅವನೂ 'ಕಾಮಲತೆಗೊಲ್ದರ್ದನೆಂಬುದದು ಪುಸಿನೋಡ ! ಪ್ರೇಮವದು ಶಿವಲಿಂಗ ಪೂಜೆ ಇದಿರಂ ನೋಡ' ಎಂದು ಹಾಡಬೇಕಾಯಿತು. ಇಷ್ಟೇ ಅಲ್ಲ.

"ದೇಹಾದಿ ಗುಣಂಗಳಂ ಮೀರಿದವನಲ್ಲಮಂ
ಮೋಹವರತುಂ ತಾನೆ ತಾನಾದನಲ್ಲಮಂ
ಪೊರೆಯಮಾಯೆಗೆ ಪುಸಿತನಾದನಿಂದಲ್ಲಮಂ
ಲಿಂಗನಿಜಮುದು ನೊಚ್ಚತಂ ಗೊಂಡನಲ್ಲಮಂ"

ಎಂದು ಅವನು ಮಾಯಾ ಕೋಲಾಹಲತೆಯತ್ತ ಸಂಜ್ಞೆ ಮಾಡಿದ್ದಾನೆ.

;ಆತ್ಮ ಕಮಲಗ ಅಲರಿಕೆಗೆ ಜಂಗಮ ಸೂರ್ಯನಾಗಿ ಸುಳಿದನು. ಎಲ್ಲೆಲ್ಲಿಯೋ ಸುಳಿದು ತಾಯಿನಾಡಾದ, ಸೈಪಿನ ಬೀಡಾದ ಬೆಳವಲಕ್ಕೆ ಬಂದನು. ಅಲ್ಲಿ ಒಂದು 'ತಳಿತ ಕೆಂದಾವರೆಯ, ನೆಯ್ದಿಲುಗೊಳನ, ನಾನಾಪರಿಯ ಪೂಗಿಡಗಳ, ಲತಾಮಂಟಪದ ತೋಟವ' ಕಂಡನು. ದುಂಬಿಗಳ ಝೇಕಾರದಲ್ಲಿ ಓಂಕಾರವನ್ನೂ ಅರಳಿದ ಹೂಗಳಲ್ಲಿ ಶಿವನ ಮೃದುಹಾಸವನ್ನೂ ತಳಿತ ತರುರಾಜಿಯಲ್ಲಿ ಅವನ ಮೃವೆಳಗನ್ನೂ, ಹಾಡುವ ಹಕ್ಕಿಗಳಲ್ಲಿ ಅವನ ಸಲ್ಲಲಿತ ಸ್ತವನವನ್ನೂ ಕೇಳುತ್ತಿದ್ದ–ಕಾಣುತ್ತಿದ್ದ ಅಲ್ಲಮನು ಆ ತೋಟವನ್ನು ಕಂಡು ಸಹಜವಾಗಿಯೇ ಆಕರ್ಷಿತನಾದನು.ಒಳಗೆ ಹೋದನು. ತೋಟಿಗ ಗೊಗ್ಗಯ್ಯ ಆದರದಿಂದ ಸ್ವಾಗತಿಸಿದನು. 'ಮಿಕ್ಕು ಬೇಸಾಯವನು ಮಾಡುವ ಹೆಕ್ಕಳದ ಹೋರಟೆಯ ಕಾಣುತ ಅಕ್ಕರಿಂದಲಿ ಮೋಡಿ ಕರುಣರಸಾರ್ದ್ರ ಚಿತ್ತದಲಿ...... ಆ ತೋಟಿಗನ ಬುದ್ಧಿಗೆ ತಿಳಿವ ನೀಡುವೆನೆನುತ' ಗೊಗ್ಗಯ್ಯನಿಗೆ ನೇರದಾರಯನ್ನು ತೋರಿದನು ಪ್ರಭು.

"ಅವ ಬೇಸಾಯವನು ಮಾಡಲು ಜೀವವಧೆಗಳು ತಪ್ಪುವು ; ಅದರಲಿ ದೇವನೊಲಿವನೆ? ನೋವು ನಿಲುವುದೆ? ಸಾವು ಹಿಂಗುವುದೆ? ಧಾವತಿಯೆ ಕಡೆತನಕ ತಪ್ಪದು. ಇದಾವುದೂ ಅಲ್ಲದ ಮತವು, ಇಲ್ಲಿ ಭಕ್ತಿಯ ಮಾಡುತಲಿ ಕಡೆಯಲ್ಲಿ ಕೈಲಾಸವನು ಹೊಕ್ಕೊಡೆ ಎಲ್ಲಿಹವು ಬಿಡು ನೋವುಸಾವುಗಳೆಂಬ ಸಂಕಟವು. ಜೀವವಣುಮಾತ್ರವನು ನೋಯಿಸಿ ಭಕ್ತಿಯಲಿ ಕೈಲಾಸಪುರದೊಳಗೆ ಭವನ ಬಸುರೋಳಗಿರ್ದೊಡೆಯು ಸಂಭವಿಸುವುವು ಕಡು ನೋವು ಸಾವುಗಳು ! ಕೊಂದವಗೆ ಕೊಲೆ ತಪ್ಪದು ! ಬಂಧನ ಪ್ರದಬಾಹ್ಯಕರ್ಮಗಳ ಒಂದುಗೂಡಿದೊಡೆ ಅವರಿಗೆ ಸಂದ ನಿಜಸುಖವಿಲ್ಲ, ಗೊಗ್ಗಯ್ಯ !"

ಗೊಗ್ಗಯ್ಯನಿಗೆ ಏನೂ ತೋಚದಾಯಿತು. ಇಷ್ಟು ಮಾತ್ರ ಅರಿವಾಯಿತು–" ತಾನು ಅದುವರೆಗೆ ಮಾಡುತ್ತಲಿದ್ದುದು 'ಕಲ್ಲ ಕಡಲೆಯ ಮೆಲುವ ಪರಿ.' 'ಅನನ್ಯ ಶರಣತೆಯಿಂದ ಹೇಳಿದ, "ಪ್ರಭುವೆ, ನಾನರಿಯನೈ ; ನೀ ಬಲ್ಲೆ ನಿನ್ನಯ ಮನದ ಹಿರಿವನು. ಸಲ್ಲದು ಉಳಿದರಿಗೆ."

---

'ಮಿನುಮಿನುಗಿ ಹೊಳೆ ಹೊಳೆದು ನಸುವೆಳಗುದೋರುತುಂ, ತನಗೆ ಕೌತುಕವೇರೆ ಥಳಥಳಿಸಿ ಬೆಳಗುತುಂ...ಶಿವಜ್ಞಾನದಂಕುರಂ ತೋರ್ಪಂತೆ, ಮುಕ್ತ್ಯಂಗನೆಯ ಕುಚದ ಕುಡಿತೋರ್ಪಂತೆ ಹೊನ್ನ ಕಲಶಂ' ತೋರೆ ಆ ಸುದ್ದಿ ಆ ಪುರದ ನೃಪತಿಗೆ ತಿಳಿದು ಅವನು ಪುರಜನ ಪರಿಜನರೊಡನೆ ಬಂದನೆಂದೂ 'ಕೋಟಿ ಗುದ್ದಲಿಗಳಿಕ್ಕಿದುವು

ಏನಾದರೊಂದು ದೃಷ್ಟಾಂತ ತೋರದೆ ಗೊಗ್ಗಯ್ಯನಿಗೆ ತತ್ತ್ವದ ತಿಳಿವಾಗದೆಂದು ತಿಳಿದು ಅಲ್ಲಮನು ಗೊಗ್ಗಯ್ಯನು ಆಗುಳಿ ಕಿತ್ತ ಹೆಂಟೆಯ ಕೆಳಗೆ ಹೊಳೆವ ಹೊಂಗಳಸವೊಂದನ್ನು ತೋರಿದನು. ಗೊಗ್ಗಯ್ಯನಿಗೆ ಪರಮಾಶ್ಚರ್ಯವಾಯಿತು. ಇಬ್ಬರೂ ಅಗುಳತ್ತ ಹೋಗಲು ಒಳಗೆ ಒಂದು ದೇಗುಲವಿದ್ದುದು ಕಂಡು ಬಂದಿತು.[೧]

ಅಲ್ಲೊಬ್ಬ ಶಿವಯೋಗಿ 'ಮೌನದಿಂ ನಿಬ್ಬೆರಗು ಹೊಡೆದು ಅವಧಾನದ ಅನಿಮಿಷದೃಷ್ಟಿ ಲಿಂಗಧ್ಯಾನ'ದಲ್ಲಿದ್ದುದು ಗೋಚರಿಸಿತು. ಲಿಂಗದಲಿ ನೆರೆನೆಟ್ಟ ನೋಟ; ಕಂಗಳೇ, ಕರುಳಾಗಿವೆ ; ಎಲುವೆ ಅಂಗವಾಗಿವೆ ! ಏನಿದಚ್ಚರಿ !

"ಅರಳ್ದ ನಯನದ್ವಯಂ ವಿಕಸಿತ ಕುಸುಮವಾಗೆ
ಕರತಳದ ಶಿವಲಿಂಗವಮೃತರಸ ಫಲವಾಗೆ
ಕಲ್ಪತರುವಿನ ತೆರದೊಳಿರ್ದನಾ ಶಿವಯೋಗಿ
ಕಲ್ಪನೆಯ ವಶವಲ್ಲದಪ್ರತಿಮ ಶಿವಯೋಗಿ
ಕಣ್ಣಲ್ಲಿ ಜೀವಮಂ ಪಿಡಿದಿರ್ದ ಮಾಳ್ಕೆಯಿಂ
ತಿಣ್ಣವೆನೆ ಲಿಂಗಮಂ ಪಿಡಿದಿರ್ದನೊಲ್ಮೆಯಿಂ !

ಆ ಚಲಿಸದಲುಗದ ನಿಜಲಿಂಗಸಿದ್ಧನು ಕೆಲನನೀಕ್ಷಿಸದೆ ಕುಳಿತಿರಲು 'ಬತ್ತಿಯಲ್ಲೆಣ್ಣೆಯಿಲ್ಲದೆ ದೀಪ್ತಿ ಬೆಳಬೆಳಗಿ ಸುತ್ತಲುಂ ಶಿವಕಳೆಯೆ' ಸೂರೆಯಾಗಿದ್ದಿತು! ತಿಳಿದ ನಿರ್ಮಲ ತತ್ತ್ವದ ಅಚ್ಚ ಬೆಳಗು, ತಳತಳಿಸಿ ಬೆಳೆದ ಶಿವದ ಬೆಳಗು ಪಸರಿಸಿದ್ದಿತು!

ಪ್ರಭು ಪುಲಕಿತನಾದ. 'ಇದೆ ಕಣಾ ಶಿವಲಿಂಗ ಭಕ್ತಿಯ ಸಾಧಿಸುವ ಪರಿ !' ಎಂದು ಆ ನಟ್ಟಾಲಿಯ ನಿಬ್ಬೆರಗನ್ನು ಗೊಗ್ಗಯ್ಯನಿಗೆ ತೋರಿಸಿದ. ಇದನು ಸಾಧಿಸದೆ ಅನ್ಯ ವ್ಯವಸಾಯದಲಿ ಸಾವೊಡೆ ಕಬ್ಬಿನಿಚ್ಚೆಗೆ ಬಿದಿರ ಮೆಲಿದಂತೆ' ಎಂದು ಬೋಧಿಸಿದ. ಕುರಿಗಳೋಪಾದಿಯಲಿ ಕಬ್ಬಿನ ಹೊರಗಣೆಲೆಯನೆ ಮೇವುದು ಬಾಹ್ಯಕರ್ಮ ; ಕಬ್ಬನೊಳಗಣ ರಸವ ಗಜದಂತೆ ನೆರೆ ಸವಿವುದು ಅಂತರಂಗದ ಕರ್ಮ, ಎರಡೂ ಕೂಡಿ ನಡೆದರೆ ಕಬ್ಬು ತಿಂದಂತೆ ; ಹೊರಗಣ ಕರ್ಮದ ಹೋರಟೆಯಲ್ಲಿಯೇ ಬಳಲಿದರೆ ಬಿದಿರು ಮೆಲಿದಂತೆ ! ಇದು ಪ್ರಭುವಿನ ಪ್ರಸಾದವಾಣಿ, ಪ್ರಸನ್ನವಾಣಿ.

---

ಕೆಲಬಲದಲ್ಲಿ ! ನೋಟಕಚ್ಚರಿಯೆನಲ್ ಅಗಿಯತೊಡಗಿದು'ವೆಂದೂ ಆಗ ದೇವಾಲಯ ಹೊರಬಿದ್ದಿತೆಂದೂ ಹರಿಹರ ಹೇಳುತ್ತಾನೆ.

ಆ ಅನಿಮಿಷ ಶಿವಯೋಗಿಯನ್ನು ನೋಡುತ್ತಲಿದ್ದಂತೆ ಅಲ್ಲಮನ ಭಕ್ತಿ ಉಕ್ಕೇರಿತು. ತಾನು ಆರಸುತ್ತಲಿದ್ದ ಗುರು ಅವನೇ ಎಂಬ ನಂಬಿಕೆ ಅವನ ಮನವನ್ನಿಂಬುಗೊಂಡಿತು. 'ಗುರುವೆ ಕರುಣಿಸು, ಭಕ್ತಿಭಾವದ ಕರುವೆ ಕರುಣಿಸು, ಲಿಂಗ ನಿಷ್ಠೆಯ ಗರುವೆ ಕರುಣಿಸು ಕರುಣಿಸೆಂದು' ಶರಣ ವೊಕ್ಕನು. ತಾನು ಪರರಿಗೆ ಪರಮನಾದರೂ ಗುರುಕಾರುಣ್ಯವಿಲ್ಲದೆ ಪರತತ್ತ್ವ ಕರತಲಾಮಲಕನಾಗದೆಂಬುದನ್ನು ಅರಿತ ಅಲ್ಲಮನು–

"ಪೊಗಳಲ್ಕೆ ತೊಡಗಿದಂ ಸಿದ್ಧ ಶಿವಯೋಗಿಯಂ
ಮಿಗೆ ಮೋಕ್ಷಲಕ್ಷ್ಮಿಯೊಡಗೂಡಿರ್ದ ಭೋಗಿಯಂ
ದೇವ ನಿರ್ಮಳ ನಿತ್ಯ ನಿರುಪಮ ಮಹಾಯೋಗಿ
ದೇವ ನಿರ್ಮಳ ನಿಜಾನಂದಕರ ಶಿವಯೋಗಿ
ಶಿವನನೊಚ್ಚತವಾಗಿ ಕೈಕೊಂಡು ಶಿವಯೋಗಿ
ಭವನ ಮೂರ್ತಿಗೆ ಸೋಲ್ತು ಕಣ್ಣಿಟ್ಟಚಲಯೋಗಿ
ನೋಟದೊಳು ಲಿಂಗಮಂ ಸೆರೆಗೆಯ್ದ ಶಿವಯೋಗಿ
ಕೂಟದೊಳು ಕಣ್ಣಿತನುವಾದ ಬೆಡಗಿನ ಯೋಗಿ"

ಯಾರೀ ಶುದ್ಧ ಸಿದ್ಧ ಶಿವಯೋಗಿ? ಹಮ್ಮೀರಪುರವೆಂದು ಖ್ಯಾತಿವೆತ್ತಿದ್ದ ಶಿಲಾಪುರ (ಪಟ್ಟದಕಲ್ಲು) ನಗರದಲ್ಲಿ ತ್ರೈಲೋಕ್ಯ ಚೂಡಾಮಣಿ ರಾಜನು ಸಕಲೈಶ್ವರ್ಯ ಸಂಪನ್ನನಾಗಿ ರಾಜ್ಯವಾಳುತ್ತಿದ್ದನು. ಅವನು ಪುತ್ರ ಪ್ರಾಪ್ತಿಗಾಗಿ ತಪಸ್ಸು ಮಾಡಿ ಸುಕುಮಾರನೊಬ್ಬನನ್ನು ಪಡೆದನು. ಮನುರಾಜ, ರಾಜೇಂದ್ರ, ಹಮ್ಮೀರ ಎಂಬ ಹೆಸರುಗಳಿಂದ ಹೆಸರಾದನಾ ಸುಕುಮಾರನು.

'ವೀರ ವಿರತಣ ವಿದ್ಯಾಭಿಲೋಲಂ, ಶಿವಗುರು ಚರಲಿಂಗ ಸದ್ಭಕ್ತಿ ಸಂಪದ ಭಾಸುರ ಶೀಲಂ, ಸಕಲಜನ ಪರಿಪಾಲನಾನುಕೂಲಂ, ವಿಲಸಿತಕೀರ್ತಿ ವಿಶಾಲ ಸುಚರಿತ್ರಂ' ಎಂದು ಹಮ್ಮೀರಕಾವ್ಯದಲ್ಲಿ ಅವನನ್ನು ವರ್ಣಿಸಲಾಗಿದೆ.

ರಾಜ್ಯ ವಿಲಾಸದಲ್ಲಿದ್ದರೂ ಮನದ ವಿಕಾಸಕ್ಕೆ ಹೆಚ್ಚು ಗಮನವಿತ್ತ ಮನುರಾಜ. ಅವನೊಮ್ಮೆ ಅರಣ್ಯದಲ್ಲಿ ಬೇಟೆಯಾಡಿ ದಣಿದು, ಪ್ರಸಾದ ಸ್ವೀಕರಿಸುವ ಮುನ್ನ ಶಿವಲಿಂಗ ದರ್ಶನ ಮಾಡಿಕೊಳ್ಳಲು ಅಡವಿಯೆಲ್ಲಾ ಹುಡುಕಿದ. ಎಲ್ಲಿಯೂ ಶಿವಲಿಂಗ ಕಾಣಲಿಲ್ಲ. ಮನುರಾಜ ಖಿನ್ನನಾಗಿ ಕುಳಿತಿರಲು ಲಿಂಗ ಮುದ್ರೆಯಿದ್ದ ಗೂಳಿಯೊಂದು ಕಾಣಿಸಿತು. ಮನರಾಜದಕ್ಕೆ ಮಣಿದ. ಮಣಿದಾಗ ಅದರ ರಸನಾಗ್ರದಲ್ಲಿದ್ದ ಇಷ್ಟಲಿಂಗ ದೃಷ್ಟಿಗೆ ಬಿದ್ದಿತು. ಕೈನೀಡಲು ಆ ಲಿಂಗ ಮನುರಾಜನ ಕರತಲಕ್ಕೆ ಬಂದಿತು.

ಅಂದಿನಿಂದ ಯಾವಾಗಲೂ ಆ ಲಿಂಗದಲ್ಲಿಯೇ ಅನಿಮಿಷ ದೃಷ್ಟಿಯಿಂದ ನೆಟ್ಟ ನೋಟವುಳ್ಳವನಾಗಲು ಅನಿಮಿಷಯ್ಯನೆಂಬ ಅನ್ವರ್ಥಕ ನಾಮ ಅವನದಾಯಿತು. ದೇಶಕೋಶ, ಭೋಗಭಾಗ್ಯಗಳನ್ನು ತೊರೆದು ಅನಿಮಿಷಾರಣ್ಯದಲ್ಲಿ೧ ಶಿವಯೋಗ ಸಮಾಧಿಯಲ್ಲಿದ್ದುಬಿಟ್ಟನು ಅನಿಮಿಷಯ್ಯ.

ಪರಮ ಪರಾಪರ ಪರಪದ
ಪರ ಪರಶಿವ ಶಂಭು ಶಾಂತ ಶಂಕರ ಗಿರಿಜಾ ।
ವರನೋಳ್ ಸಮರಸ ನಿಜ ನಿ–
ರ್ಭರ ಯೋಗಂ ಬಲಿದನಮಳ ಕರಣಂ ಶರಣಂ ॥

(ರಾಜೇಂದ್ರ ವಿಜಯಂ, ಪು. ೫–ಪು. ೬೫)

ಇಂಥ ಅಮಳಕರಣನ, ಶರಣನ ದರ್ಶನವಾಗಲು ಪ್ರಭುದೇವರಿಗೆ 'ಅರಸುವ ಬಳ್ಳಿ ಕಾಲಸುತ್ತಿತ್ತೆಂಬಂತೆ, ಬಯಸುವ ಬಯಕೆ ಕೈಸಾರುವಂತೆ, ಬಡವ ನಿಧಾನವನೆಡಹಿ ಕಂಡಂತೆ' ಆಯಿತು. "ನಾನರಸುತ್ತಲೊರಸುತ್ತ ಬಂದು ಭಾವಕ್ಕಗಮ್ಯನ ಕಂಡೆನಯ್ಯ ! ಎನ್ನ ಅರಿವಿನ ಹರಿವ ಕಂಡೆನಯ್ಯ ! ಎನ್ನ ಒಳ ಹೊರಗೆ ಸರ್ವಾಂಗ ಪರಮ ಪ್ರಕಾಶದೊಳು ಬೆಳಗುವ ಜ್ಯೋತಿಯ ಕಂಡ ನೋಡಾ ! ಕುರುಹಳಿದ ಕರಸ್ಥಲದ ನಿಬ್ಬೆರಗಿನ ನೋಟದ ಎನ್ನ ಪರಮ ಗುರುವ ಕಂಡು ಬದುಕಿದೆನು ಕಾಣಾ, ಗುಹೇಶ್ವರಾ!" ಎಂದು ತಮ್ಮ ಧನ್ಯತೆಯನ್ನು ಧ್ವನಿಪೂರ್ಣವಾಗಿ ಬಣ್ಣಿಸಿದರು. "ಪುಣ್ಯವುಳ್ಳ ಕಾಲಕ್ಕೆ ಪಾಷಾಣ ಪರುಷವಪ್ಪುದು ತಪ್ಪದು ನೋಡಯ್ಯ. ಮಣ್ಣು ಹೊನ್ನಪ್ಪುದು ! ಮುನ್ನ ಮುನ್ನವೇ ಅಚ್ಚೊತ್ತಿದ ಭಾಗ್ಯವೆನ್ನ ಕಣ್ಣ ಮುಂದೆ ಕಾಣ ಬಂದಿತ್ತು ನೋಡಾ ! ಮಣ್ಣ ಮರೆಯ ದೇಗುಳದೊಳಗೊಂದು ಮಾಣಿಕ್ಯವ ಕಂಡ ಬಳಿಕ ಇನ್ನು ಮುನ್ನಿನಂತಪ್ಪುದೇ, ಗುಹೇಶ್ವರಾ?" ಎಂದು ಮಾರ್ಮಿಕವಾಗಿ ಆ ಮರೆಯಲಾಗದ ಘಟನೆಯನ್ನು ವಿವರಿಸಿದರು. "ಅರಗಿನ ದೇಗುಲದಲ್ಲಿ ಒಂದು ಉರಿಯ ಲಿಂಗವ ಕಂಡೆ.

ಒಳಗೊಂದು ಅನಿಮಿಷ ಲಿಂಗವ ಕಂಡು ಎನ್ನ ಮನೋಪುಷ್ಪದಲ್ಲಿ ಪೂಜೆಯ ಮಾಡಿದೆ' ಎಂದು ಹಿಗ್ಗಿ ಹಾಡಿದರು.

---

೧ ಈಗ ಬಳ್ಳಿಗಾವೆಗೆ ಸಮೀಪದಲ್ಲಿರುವ ಅನಿಮಿಷಕೊಪ್ಪವೇ ಅನಿಮಿಷಾರಣ್ಯ ವಾಗಿದ್ದರಬೇಕೆಂದು ಊಹಿಸಲಾಗಿದೆ. ಬಳ್ಳಿಗಾವಿಯಿಂದ ಉತ್ತರಕ್ಕೆ ಒಂದು ಮೈಲಿಯಲ್ಲಿರುವ ಮಾಳಗೊಂಡಕೊಪ್ಪದ ಸಮೀಪದಲ್ಲಿ ಅನಿಮಿಷನ ದೇವಾಲಯವೂ ಅದರಲ್ಲಿ ಒಂದೆಡೆ ಗೊಗ್ಗಯ್ಯನ ಸಮಾಧಿಯೂ ಇವೆ.

“ನೀನೆನಗೆ ಗುರುವಪ್ಪೊಡೆ ನಾ ನಿನಗೆ ಶಿಷ್ಯನಪ್ಪೊಡೆ
ಎನ್ನ ಕಾಯದ ಕರ್ಮವ ತೊಡೆದು, ಎನ್ನ ಕರಣಾದಿ ಗುಣಂಗಳ ಕಳೆದು
ನೀನೆನ್ನ ಕಾಯದಲ್ಲಿ ಅಡಗಿ, ನೀನೆನ್ನ ಪ್ರಾಣದಲ್ಲಿ ಅಡಗಿ,
ನೀನೆನ್ನ ಭಾವದಲ್ಲಿ ಅಡಗಿ,
ನೀನೆನ್ನ ಕರಸ್ಥಳಕ್ಕೆ ಬಂದು ಕಾರುಣ್ಯವ ಮಾಡು, ಗುಹೇಶ್ವರಾ !”

ಎಂದು ಪ್ರಾರ್ಥಿಸಿದರು. ‘ಹತ್ತೆ ಬಂದಿರೆ ಸೂಜಿಗಲ್ಲನು ಹತ್ತಿ ಮೋಹಿಪ ಸೂಜಿಯಂತಿರೆ’ ಅನಿಮಿಷನ ಕೈಯ ಲಿಂಗ ಪ್ರಭುಲಿಂಗನ ಕರಸ್ಥಳಕ್ಕೆ ಬಂದಿತು ! ‘ನೋಟವೇ ಪ್ರಾಣಸ್ವರೂಪಿನ ಮಾಟವಾದ ನಿಮಿತ್ತ ಲಿಂಗದ ಕೂಟದೊಡನಾದ ಅನಿಮಿಷಯ್ಯನ ಜೀವಕಳೆ ಒಂದು ನಾಟಿತೀತನ ದಿವ್ಯದೇಹದ ಕೋಟರದಲಿ !”

ಅಲ್ಲಮನಂಥವನಿಗೂ ಆಶ್ಚರ್ಯವಾಯಿತು ! “ಕಾಣಲಾರದ ಲಿಂಗವೆನ್ನ ಕರಸ್ಥಳಕ್ಕೆ ಬಂದರೆ ಹೇಳಲಮ್ಮೆ, ಕೇಳಲಮ್ಮೆ ! ಎನಗಿದು ಸೂಜಿಗ! ಗುಹೇಶ್ವರನೆಂಬ ಲಿಂಗ ನಿರಾಕಾರ ಬಯಲು ಸಾಕಾರವಾಗಿ ಎನ್ನ ಕರಸ್ಥಳಕ್ಕೆ ಬಂದರೆ ಹೇಳಲಮ್ಮೆ, ಕೇಳಲೆಮ್ಮೆ !” ಎಂದು ಅಚ್ಚರಿಗೊಂಡ ಅಲ್ಲಮ ; ಅನಿಮಿಷ ಶಿವಯೋಗಿ ಮುಟ್ಟದೆ, ಮಾತನಾಡದೆ ತನಗೆ ದೀಕ್ಷೆಯಿತ್ತುದಕ್ಕೆ ಬೆರಗಾದ. “ಕಾಣಬಾರದ ಗುರುವು ಕಂಗೆ ಗೋಚರವಾದರೆ ಹೇಳಲಿಲ್ಲದ ಬಿನ್ನಪ, ಮುಟ್ಟಲಿಲ್ಲದ ಹಸ್ತ ಮುಸ್ತಕ ಸಂಯೋಗ, ಹೂಸಲಿಲ್ಲದ ವಿಭೂತಿಯ ಪಟ್ಟ, ಕೇಳಲಿಲ್ಲದ ಕರ್ಣಮಂತ್ರ ತುಂಬಿ ತುಳುಕದ ಕಲಶಾಭಿಷೇಕ, ಆಗಮವಿಲ್ಲದ ದೀಕ್ಷೆ, ಪೂಜೆಗೆ ಬಾರದ ಲಿಂಗ, ಸಂಗವಿಲ್ಲದ ಸಂಬಂಧ ಸ್ವಯವಪ್ಪ ಅನುಗ್ರಹ ಅನುಗೊಂಡು” ದನ್ನು ನೆನೆದು ನನೆಕೊನೆವೋದ!

“ಅಂಗೈಯೊಳಮೃತ ಫಲವಂ ಪಡೆದನಲ್ಲಮಂ
ಲಿಂಗದ ನಿಜವನೋಚ್ಚತಂ ಗೊಂಡನಲ್ಲ ಮಂ
ದೇಹಾದಿ ಕರಣಮಂ ಮೀರಿರ್ದನಲ್ಲಮಂ
ಮೋಹವರತುದು ತಾನೆ ತಾನಾದನಲ್ಲಮಂ”

ಇಷ್ಟೇ ಅಲ್ಲ, ಮುಂದು ಹಿಂದು, ಹಿಂದು ಮುಂದಾಗಿಹೋಯಿತು ! “ಅರುಹಿತ ಕುರುಹಿದೇನೋ ! ಒಳಗೆ ಅನಿಮಿಷ ನಂದಿನಾಥನಿರಲು ಪೂಜಿಸುವ ಭಕ್ತನಾರೋ, ಪೂಜೆಗೊಂಬ ದೇವರಾರೋ ! ಮುಂದು ಹಿಂದು, ಹಿಂದು ಮುಂದಾದರೆ, ಮಹೇಶ್ವರಾ, ನೀನು ನಾನು, ನಾನು ನೀನಾದಡೆ !”

ಪ್ರಭು ಪ್ರಭೆಯಾದನು, ಪರಿಪೂರ್ಣನಾದನು, ಪರಂಜ್ಯೋತಿಯಾದನು ! ಮುಗಿಲೆತ್ತರಕ್ಕೆ ಬೆಳೆದು ನಿಂತಿತವನ ಆತ್ಮದ ಔನ್ನತ್ಯ ! “ಪುಣ್ಯಪಾಪವಿಲ್ಲವಾಗಿ ಯಮನ ಹಂಗಿಲ್ಲ; ಬಂದುದುನುಂಬೆನಾಗಿ ಮಾನವರ ಹಂಗಿಲ್ಲ ; ಭವಗೆಟ್ಟೆನಾಗಿ

ದೈವದ ಹಂಗಿಲ್ಲ ; ಸತ್ಯ ಜ್ಞಾನಾನಂದವೇ ತಾನಾಗಿ ಇನ್ನಾರ ಹಂಗೂ ಇಲ್ಲ ! ಇನ್ನಾರ ಹಂಗೂ ಇಲ್ಲದಾತ ಗುಹೇಶ್ವರನಲ್ಲಯ್ಯನೊಬ್ಬನೇ" ಎನ್ನುವ ಮಹೋನ್ನತಿ ಅವನದಾಯಿತು.

ಶಿವಭಕ್ತಿಯ ರಹಸ್ಸವನ್ನು ಗೊಗ್ಗಯ್ಯನಿಗೆ ಬೋಧಿಸಿ 'ಜಗತೀ ಜನವ ಸುಖಿಗಳ ಮಾಡುವೆನು ನಾನೆನುತ' ಹೊರಟನಾತ. "ದೀನ ಮನದವನಂತೆ ಕಂಡ ನಿಧಾನವನು ತಾನೊಬ್ಬನುಂಬನೆ? ದಾನಿ ನೀನ್ಯೆ ! ನಿನ್ನ ಪರಿ ನೀ ಕಂಡ ಶಿವಪಥವ ಮಾನವರಿಗರುಹುಲು ನಡೆದ ನೀನೇ ಜಗದ ಗುರು !" ಎಂದು ನುತಿಸಿ ನಮಿಸಿ ಬೀಳ್ಕೊಟ್ಟ ಗೊಗ್ಗಯ್ಯ.

ಪ್ರಭುದೇವರ ಪತಿತೋದ್ಧರಣ ಯಾತ್ರೆ ಪ್ರಾರಂಭವಾಯಿತು. " ತರುನಿಕಾಯದ ಕೋಟರಂಗಳಲ್ಲಿ, ಗಿರಿಕುಳದ ಗಹ್ವರಂಗಳಲ್ಲಿ, ನಿರ್ಮಳಿನ ಪುಳಿನಸ್ಥಳಗಳಲ್ಲಿ, ಪರಿಮಳದ ಚಂದನದ ತರುಗಳಲ್ಲಿ, ಸಂಪಗೆಯ ಬಿರಿಮುಗುಳ ಪೂವಸೆಗಳಲ್ಲಿ, ಮಾವರದ ಮಾಧವಿಯ ಮಂಟಪಗಳಲ್ಲಿ, ತಾವರೆಯ ತಣ್ಣೆಳಲ್ಲ ತಿಳಿಗೊಳಗಳಲ್ಲಿ" ಲೀಲಾವಿಗೋಲನಾಗಿ–

"ಇರುತ ಲಿಂಗಕ್ಕೆ ನೋಟದೊಳೆ ಮಜ್ಜನಕೆರೆದು
ಅರಳ್ದಕ್ಷಿಯೆಂಬ ಪೂವಿಂದೆ ಪೂಜಿಸಿ ಮರೆದು
ನರುಸುಯ್ಯ ಕಂಪಿಂದೆ ನವ ಧೂಪಮಂ ಕೊಟ್ಟು
ನೆರೆಮನದ ಬೆಳಗಿನಾರತಿಯೆತ್ತಿ ಪೊಡಮಟ್ಟು
ನಿಟ್ಟೆಯಿಂ ನೇಹಮುಮನಾರೋಗಿಸಲ್ ಕೊಟ್ಟು
ಕಟ್ಟಕ್ಕರಚಲಿತಾನಂದಮಂ ಮುಂದಿಟ್ಟು
ಸಕಳ ಸುಖಮಂ ಕಣ್ಗಳಿಂದೆ ಕೈಗೂಡುತುಂ
ಸಕಳ ಭೋಗಂಗಳಂ ನೋಟದಿಂ ನೀಡುತುಂ"

ನಿಜದ ನೆನಹಿನಲ್ಲಿ ನಿಜಾನಂದತುಂದಿಲನಾಗಿರತೊಡಗಿದನು.

ಮುಂದೆ ಮುಕ್ತಾಯಕ್ಕನಿಗೆ ಮುಕ್ತಾತ್ಮಳಾಗುವ ಮಾರ್ಗವನ್ನು ತೋರಿ, ಸಿದ್ಧರಾಮನೊಡನೆ ಕಲ್ಯಾಣಕ್ಕೆ ಹೋದರು ಪ್ರಭುದೇವರು. ಹಡಪದ ಅಪ್ಪಣಗಳು ನೋಡಿ ಓಡಿ ಹೋಗಿ 'ಮೃಡನ ದೃಶ್ಯಾದೃಶ್ಯ ರೂಪಗಳೊಡೆಯರಿಬ್ಬರು' ಬಂದಿರುವರೆಂದು ಬಸವಣ್ಣನವರಿಗೆ ಬಿನ್ನವಿಸಿಕೊಂಡನು. ಲಿಂಗಾರ್ಚನೆಯ ಪರಮಸುಖದಲ್ಲಿ ಪರವಶರಾಗಿದ್ದ ಬಸವಣ್ಣನವರು ಲಿಂಗಪೂಜೆಯನ್ನು ನಿಲ್ಲಿಸಿ ಏಳಲಾರದೆ 'ಎನ್ನ ಕಾಯವೆ ಭಕ್ತ, ಪ್ರಾಣವೆ ಜಂಗಮವಾದ ಬಳಿಕ ಅಲ್ಲಿ ಇಲ್ಲಿ ಭೇದವಿಲ್ಲೆಂದು, ಆ ಜಂಗಮವನೊಡಗೊಂದು ಬನ್ನಿರೆಂದು' ಹಡಪದ ಅಪ್ಪಣ್ಣನನ್ನು

ಹಿಂದಿರುಗಿ ಕಳುಸಿದರು. ಬಸವಣ್ಣನವರನ್ನು ಒರೆದು ಅರೆದು ಅವರನ್ನು ಅಪರಂಜಿಯನ್ನಾಗಿ ಮಾಡಲೆಳಸಿ 'ಆನಾಗದ ಮುನ್ನವೇ ತಾನಾದೆನೆಂಬವರಲ್ಲಿಗೆ ಗುಹೇಶ್ವರ ಲಿಂಗವು ಅಡಿಯಿಡುವನಲ್ಲ' ಎಂದು ಹೇಳಿ ಕಳಿಸಿಬಿಟ್ಟರು ಪ್ರಭುದೇವರು. ಹೌದು, 'ಒಡಲ ಕಕ್ಕುಲತೆಗೆ ಆಸನವನುಂಡು, ವ್ಯಸನದ ಕಕ್ಕುಲತೆಗೆ ಹಣವ ಬೇಡಿ, ಕೊಟ್ಟಡೆ ಕೊಂಡಾಡಿ, ಕೊಡದಿರ್ದರೆ ದೂರಿಕೊಂಡು ಹೋಹ' ಜಂಗಮರಲ್ಲ ಅವರು 'ನಿಮ್ಮಲ್ಲಿ ಭಕ್ತಿಯುಂಟು, ತಮ್ಮಲ್ಲಿ ಭಕ್ತಿಯುಂಟು, ಎಮ್ಮಲ್ಲಿ ಭಕ್ತಿಯುಂಟು' ಎಂಬ ಮಾತಿನ ಮಾಲೆಗೆ ಮೆಚ್ಚುವರೆ ಅವರು? 'ಬಂದವರಾರೆಂದರಿಯದೆ, ನಿಂದ ನಿಲವಯನರಿಯದೆ ಕೆಮ್ಮನೆ ಅಹಂಕಾರವ ಹೊತ್ತುಕೊಂಡು ಇಪ್ಪವರಿಗೆ ನಮ್ಮ ಗುಹೇಶ್ವರ ಲಿಂಗನೊಲ್ಲ ನೋಡಾ !' ಎಂದು ನಿಷ್ಠುರವಾಗಿ ನುಡಿದರು.

ಅಷ್ಟರಲ್ಲಿ ಚಿಕ್ಕದಣ್ಣಾಯಕ ಚೆನ್ನಬಸವಣ್ಣನವರು ಬಂದು, ನಡೆದ ಪ್ರಮಾದವನ್ನರಿತು ಬಸವಣ್ಣನವರ ಬಳಿಗೆ ವೇಗವಾಗಿ ಹೋಗಿ ಕೇಳಿದರು; "ಅಂಗದಮೇಲೆ ಲಿಂಗವುಳ್ಳದೆಲ್ಲವೂ ಸಂಗಮನಾಥನೆಯ ನಂಬಿದ ನಂಬುಗೆಯೂ ಬಂದು ಶರಣರ ನಿಲವನ್ನರಿಯದಿದ್ದರೆ ತಪ್ಪಿತ್ತು ನೋಡಾ ಗುರುವೆ. ಸಂಗಮನಾಥ ಮನೆಗೆ ಲಿಂಗವಿಡಿದು ಬಂದರೆ ಧಿಮ್ಮನೆ ಇದಿರೆದ್ದು ವಂದಿಸಬೇಕು ; ನೋಡಯ್ಯಾ! ಕೂಡಲ ಚೆನ್ನಸಂಗನ ಶರಣರ ಪ್ರಭುದೇವರು ಸಿದ್ಧರಾಮಯ್ಯದೇವರು ಬಂದು ಬಾಗಿಲಲ್ಲಿರಲು ಕಣ್ಣರಿಯದಿದ್ದರೂ ಕರುಳಿರಿಯ ಬೇಡಾ, ಸಂಗನ ಬಸವಣ್ಣಾ?"

ಬಸವಣ್ಣನವರಿಗೆ 'ಅನಂತ ಕೋಟಿ ಸನ್ಮಾನವ ಮಾಡಿದಡೇನು? ಒಂದು ನಿಮಿಷದ ಉದಾಸೀನ ಕೆಡಿಸಿತ್ತು!' ಎಂಬುದರ ಅರಿವಾಯಿತು. 'ಹಮ್ಮದಂಬೋಗಿ, ನಡನಡುಗಿ, ಭಯಾರ್ಣವದೊಳ್ ಮುಳುಂಗಿ, ಕಂಗಳ ಬಾಷ್ಪುವಿನೊಳು ಮುಂದುಗಾಣದೆ–ಇನ್ನೇವೆನಿನ್ನೇವೆ, ಕೆಮ್ಮನೆ ಕೆಟ್ಟೆನು ! ನಿಮ್ಮ ಶರಣರು ಬಂದು ಬಾಗಿಲೊಳಿರಲು ಧಿಮ್ಮನೆ ಇದಿರೆದ್ದು ವಂದಿಸಲರಿಯದೆ ಕೆಟ್ಟ ಕೇಡನೇನೆಂದು ಪಮಿಸುವೆನು?' ಎಂದು ಓಡಿ ಬಂದು ಪ್ರಭುವಿಗೆ ಪೊಡಮಟ್ಟು ನುಡಿದರು : "ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲವಯ್ಯ ! ಇನ್ನು ತಪ್ಪಿದೆನಾದರೆ ನಿಮ್ಮ ಪಾದವೆ ದಿವ್ಯ ! ಕೂಡಲ ಸಂಗಮ ದೇವಯ್ಯ, ನಿಮ್ಮ ಪ್ರಮಥರ ಮುಂದೆ ಕಿನ್ನರ ಬೊಮ್ಮಣ್ಣಗಳ ಪಾದವೆ ಸಾಕ್ಷಿ !"

ಪ್ರಭುದೇವರು ಪಡಿನುಡಿದರು : "ಜಂಗಮವೆ ಹೊರಗಿರಲು ಒಳಗೆ ಲಿಂಗಾರ್ಚನೆ ಯಾವುದಯ್ಯಾ? ಪ್ರಾಣವ ಹೊರಗಿರಿಸಿ ಎಡೆಯಾಡುವ ದೇಹವುಂಟೆ? ಶರಣರು ಬಂದು ಬಾಗಿಲ್ಲಿ ನಿಂದಿರಲು ತನ್ನ ತಾ ಮರೆದವರ ಕಂಡಡೆ......"

ಬಸವಣ್ಣನವರು ಮುಂದೆ ಮಾತಾನಾಡಗೊಡದೆ ಒಪ್ಪಿಕೊಂಡನು : "ಮುನ್ನೂರರುವತ್ತು ದಿನ ಸ್ರವವಮಾಡಿ ಕಳನನೇರಿ ಕೈಮರೆದಂತಾಯಿತ್ತೆನ್ನ ಭಕ್ತಿ!...... ಜಂಗಮ ಲಿಂಗವಾಗಿ ಬಂದು ನೀವಿರುತ್ತಿರಲು ಸ್ಥಾವರಕ್ಕೆ ಮೆಚ್ಚಿ ಮರುಳಾದೆನು! ಎನ್ನ ತಪ್ಪನೆಣಿಸಿಹೆನೆಂದರೆ ಕಡೆಯಿಲ್ಲ! ನಾನು ಮರವೆಯ ಮರುಳು, ನೀನು ಅರಿವಿನ ತಿರುಳು ; ನಾನು ರಂಜಕ, ನೀನು ನಿರಂಜನ ; ನಾನು ಪಶು, ನೀನು ಪಶುಪತಿ! ಭ್ರಮಿಸಿದೆನು ನಾನೆನ್ನ ಮದದಲಿ, ಕ್ಷಮಿಸುವುದು ನೀ ನಿನ್ನ ಗುಣದಲ್ಲಿ.

ಅಷ್ಟಕ್ಕೂ ಬಿಡಲಿಲ್ಲ ಅಲ್ಲಮಪ್ರಭು. ಬಸವಣ್ಣನವರಲ್ಲಿ ಆಗತಾನೆ ಉದಯವಾಗತೊಡಗಿದ್ದ ಅಹಮಹಮಿಕೆಯನ್ನು, ಮಾಟಕೂಟದ ಮಮಕಾರವನ್ನು ಅದು ಬಲಿವ ಮೊದಲೇ ಚಿವುಟಿ ಹಾಕಬೇಕೆಂದಿದ್ದ ಪ್ರಭುದೇವರು ಮತ್ತೆ ಒತ್ತಿನೋಡಿದರು ಬಸವಣ್ಣನವರ ಮನವನ್ನು : "ತನುವಿನಲ್ಲಿ ತನು ಸವೆಯದು ; ಮನದಲ್ಲಿ ಮನ ಸವೆಯದು ; ಧನದಲ್ಲಿ ಧನ ಸವೆಯದು–ಭಕ್ತಿಯುಕ್ತಿಯ ಮಾತು ನಿನಗೇಕೆ ಹೇಳಾ, ಬಸವಾ? ಮಾಟ ಕೂಟವೆಂಬ ಕೀರ್ತಿಗೆ ಸಿಲುಕಿ ಜಂಗಮವೆ ಲಿಂಗವೆಂಬುದ ಮರೆದೆಯಲ್ಲ ಬಸವಾ? ಗುಹೇಶ್ವರನ ಶರಣರಿಗೆ ತ್ರಿಕರಣವನೊಪ್ಪಿಸಿದಲ್ಲದೆ ಭಕ್ತನಾಗಬಾರದು ಕಾಣಾ, ಸಂಗಣಬಸವಣ್ಣಾ !"

ಪ್ರಭುದೇವರರೊಡ್ಡಿದ ಸೂಕ್ಷ್ಮಾತಿಸೂಕ್ಷ್ಮವಾದ ಜಾಲವನ್ನು ಬಸವಣ್ಣನವರು ಗುರುತಿಸಲಾರದೆ ಹೋದರು. ಎಷ್ಟೆಂದರೂ ಅವರು ಹೃದಯ ಪ್ರಧಾನರು, ಬುದ್ಧಿ ಪ್ರಧಾನರಲ್ಲ. ಏಕೋಭಾವದಿಂದ ಬಿನ್ನವಿಸಿಕೊಂಡರು ; "ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ ನಿಮ್ಮ ಶರಣರಿಗೆ ! ಎನಗೆ ಬೇಕೆಂಬ ಭಾವ ಮನದಲ್ಲಿ ಹೊಳೆದರೆ ಘನಮಹಿಮ, ನಿಮ್ಮ ಪಾದದಾಣೆ! ಮನವಚನ ಕಾರಯದಲ್ಲಿ ನೀವಲ್ಲದೆ ಮತ್ತೊಂದರನರಿದರೆ ಕೂಡಲಸಂಗಮದೇವಾ, ಭವ ಘೋರದಲ್ಲಿಕ್ಕಯ್ಯ !

ಬಾಣದಂತೆ ಬಂದಿತು ಪ್ರಭುದೇವರ ಮರು ಪ್ರಶ್ನೆ : "ಮೇರು ಗಿರುಗಳೆಲ್ಲವು ಪ್ರಮಥರೊಡವೆ ; ರಜತಗಿರಿಗಳೆಲ್ಲವು ಪುರಾತನರೊಡವೆ ; ಚತುರ್ದಶ ಭುವನವೆಲ್ಲವು ಲಿಂಗದೊಡವೆ : ಪೃಥ್ವಿಯೆಂಬುದು ಕರ್ತಾರನ ಕಮ್ಮಟ ಅಚ್ಚಿನ ಮೊಳೆ, ಬಾಣಸದ ಮನೆ ; ತನುಮನಧನಂಗಳೆಲ್ಲವು ನಮ್ಮ ಗುಹೇಶ್ವರಲಿಂಗದ ಸೊಮ್ಮು ! ನೀನೇನ ಕೊಟ್ಟು ಭಕ್ತನಾದೆ ಬಸವಣ್ಣಾ?"

ಬಸವಣ್ಣನವರು ನಿರುತ್ತರರಾದರು. "ಅನಿತ್ಯವನ್ನು ನಿತ್ಯಕ್ಕರ್ಪಿಸಿ ಭಕ್ತನಾದೆನೆಂದರೆ ಅದು ಅಜ್ಞಾನ ನೋಡಾ !' ಈ ಮಾತಿಗೆ ಮರುಮಾತೆಲ್ಲಿ? ಅನುತಾಪದ ಉಸಿರಾಗಿ ಬಂದಿತವರ ಬಿನ್ನಪ : "ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ ! ಉಪ್ಪ

ಅಪ್ಪುವಿನಲ್ಲಿ ಅದ್ದಿ ಮೆಲಿದಂತಾಯಿತ್ತೆನ್ನ ಭಕ್ತಿ ! ಕೂಡಲ ಸಂಗಮದೇವಾ, ನಾನು ಮಾಡಿದೆನೆಂಬ ಕಿಚ್ಚು ಎನ್ನನೆ ಸುಟ್ಟಿತ್ತು ! ಇನ್ನು ಸಾಲದೆ ಹೇಳಾ, ಪ್ರಭುವೆ?"

ಸಾಲದೆಂದು ಹೇಳಲು ಹಠವಾದಿಯಲ್ಲ ಪ್ರಭು. ಅರಕೆಗಳನು ತುಂಬುವುದು, ಕೊರತೆಗಳನ್ನು ಸರಿಪಡಿಸುವುದು, ದೋಷಗಳನ್ನು ದೂರೀಕರಿಸುವುದುದ, ನ್ಯೂನತೆಗಳನ್ನು ನಿರ್ನಾಮ ಮಾಡುವುದು, ಅದಿರನ್ನು ಸೋಸಿ ಅಪರಂಜಿಯನ್ನು ಮಾಡುವುದು, ಕರಗಿಸಿ ಕಾಳಿಕೆ ಕಳೆಯುವುದು, ಒರೆಗೆ ಬಣ್ಣಕ್ಕೆ ತಂದು ಪುಟವಿಕ್ಕಿ ನೋಡುವುದು ಆತನ ಉದ್ದೇಶವಾಗಿದ್ದಿತು–ಕಾಡುವುದಲ್ಲ, ಪೀಡಿಸುವುದಲ್ಲ, ಏಡಿಸುವುದಲ್ಲ! ಬಸವಣ್ಣನನ್ನು ಬಿಗಿದಪ್ಪಿದುವು ಆತನ ಅಮೃತಕರಗಳು. ಮಮತೆಯ ಮಂದಾಕಿನಿಯಾಗಿ ಹರಿಯಿತು ಶ್ರೀವಾಣಿ :

> "ಸೂಳೆ ಹಲಬರನುರುಳಿದಳೆಂದು ನಿಂದಿಸುವರಿಲ್ಲ. ಕೇಳಾ !
> ಪತಿವ್ರತೆ ತನ್ನ ಪುರುಷನಲ್ಲದೆ ಮತ್ತೊಬ್ಬನ ಮುಖವನೋಡಿದರೆ
> ಅವಳ ಚಾಂಡಾಲಗಿತ್ತಿಯೆಂಬುದು ಲೋಕವೆಲ್ಲವು !
> ಕೀರ್ತಿವಾರ್ತೆಗೆ ಮಾಡುವ ಭಕ್ತ ತಪ್ಪಿದರೆ ಅದ ಮನಕ್ಕೆ ತರಲಿಲ್ಲ;
> ಸಜ್ಜನ ಸದ್ಭಕ್ತನೆಡಹಿದರೆ ಅದ ಸೈರಿಸಬಾರದು ಕೇಳಾ !
> ನಮ್ಮ ಗುಹೇಶ್ವರಲಿಂಗಕ್ಕೆ ಆದಿಯಿಂದತ್ತ ನೀನೇ ಭಕ್ತನಾದ ಕಾರಣ
> ಮನನೊಂದಿತ್ತು ಕಾಣಾ, ಸಂಗನಬಸವಣ್ಣಾ !"

ಪ್ರಭುವಿನ ಮನೋಧರ್ಮಕ್ಕೆ ಮಣಿಮುಕುರದಂತಿದೆ ಈ ವಚನ. ಸಜ್ಜನ ಸದ್ಭಕ್ತನೆಡಹಿದರೆ ಸೈರಿಸಲಾಗುತ್ತಿದ್ದಿಲ್ಲ ಆ ದಯಾಮಯನಿತಗೆ. ಇನ್ನೂ ಕೇಳಿ, "ಮುನಿಯದಿರಿ, ಮುನಿಯದಿರಿ–ನಿಮಗೊಂದು ಯುಕ್ತಿಯ ಹೇಳುವೆನು. ಅದೆಂತೆಂದೊಡೆ ನೀವೆನ್ನ ವಂಶೀಭೂತರಾದಕಾರಣ ನಿಮ್ಮ ಹೆಚ್ಚು ಕುಂದು ಎನ್ನದಾಗಿ, ನಿಮ್ಮ ಆಸ್ತಿ ನಾಸ್ತಿ ಎನ್ನದಾಗಿ, ನಿಮ್ಮ ಹಾನಿವೃದ್ಧಿ ಎನ್ನದಾಗಿ ! ಹಾವ ಹಿಡಿದರು ಬೇಲಿಯ ಹೊಗೆದೆ ಹೋಹರೇ ಅಯ್ಯ ? ವ್ಯಾಧನು ಸೂಸಲ ಚೆಲ್ಲಿ, ಜಂತ್ರವ ಹಣ್ಣಿ, ಅಡಿಗಲ್ಲನೊಡ್ಡಿ ಹೋದ ಬಳಿಕ ಸೂಸಲ ಕಂಪಿಂಗೆ ಹೆಗ್ಗಣ ಬಂದು ಬಿದ್ದಂತೆ ಬಿದ್ದರಲ್ಲ ಮಾಯದ ಬಲೆಯಲ್ಲಿ ! ಕೋಪವೆಂಬ ರಾಡನೊಡ್ಡಿ, ತಾಪವೆಂಬ ಅಡಿಗಲ್ಲನಿರಿಸಿ, ಹುಸಿ ಎಂಬ ಮೀಟಗಣೆಯ ಜಂತ್ರಿಸಿ, ಹೊನ್ನು ಹೆಣ್ಣುಮಣ್ಣೆಂಬ ಸೂಸಲಚೆಲ್ಲಿ ಕೆಡಹಿದನಲ್ಲಾ ನಿಃಕರುಣಿ ಮುಕ್ಕಣ್ಣ ವ್ಯಾಧನು ! ಹೊನ್ನು ಹೆಣ್ಣು ಮಣ್ಣಿನಾಶೆಯ ಬಿಟ್ಟು, ಕೋಪತಾಪವಂ ಬಿಟ್ಟು , ಭ್ರಾಂತಿಭ್ರಮೆಯಂ ಬಿಟ್ಟು ಜಂಗಂನಾಗಬೇಕು ಕೇಳಿರೋ ಮರುಗಳುಗಳಿರಾ! ಇಂತೀ ಕುಡಲೋಭದ ರುಚಿಯ ಹಿಂಗಿ ಜಂಗಮವಾದಲ್ಲದೆ ಭವಹಿಂಗದು ಕಾಣಾ, ಗುಹೇಶ್ವರಾ !"

ಪ್ರಭುವಿನ ಕರುಣೆಯ ಮರುಜೀವಣಿ ಬಸವಣ್ಣನಂಥ ಸಜ್ಜನಸದ್ಭಕ್ತರಿಗಾಗಿ ಇದ್ದಿತು– 'ಇಷ್ಟಲಿಂಗಕ್ಕೆ ತೋರಿ ಮೃಷ್ಟಾನ್ನವ ಹೊಡೆವವ'ರಿಗಾಗಿ ಇರಲಿಲ್ಲ. ಚೆನ್ನಬಸವಣ್ಣವರಂತೆ ಪ್ರಭುದೇವರು 'ಅಂಗದ ಮೇಲೆ ಲಿಂವುಳ್ಳುದೆಲ್ಲವು ಸಂಗಮನಾಥ'ನೆಂಬ ಭಾವನೆಯನ್ನು ಪುರಸ್ಕರಿಸಲಿಲ್ಲ. 'ಸದಾಚಾರಸದ್ಭಕ್ತಿ ಇಲ್ಲದ ಶರಣತ್ವ ಉಂಟೆ?' ಎಂಬ ಪ್ರಶ್ನೆಯನ್ನು ಎತ್ತಿದರು ಅವರು. ಅಂಗದ ಮೇಲೆ ಲಿಂಗ ಧರಿಸಿದಾಕ್ಷಣ ಮರೆದ ಮಾನವ ಹೋಗಿ ಅರಿದ ಶರಣನಾಗುವನೆ?

> "ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು? ಹಸಿವು
> ಹೋಹುದೆ?
> ಅಂಗದ ಮೇಲೆ ಲಿಂಗ ಸ್ವಾಯತವಾದರೇನು?
> ಇಟ್ಟಕಲ್ಲು ಮೆಳೆಯ ಮೇಲೆ ಸಿಕ್ಕಿದರೆ ಆ ಕಲ್ಲು ಲಿಂಬೆ? ಮೆಳೆ ಭಕ್ತನೆ?
> ಇಟ್ಟಾಗ ಗುರುವೆ? ಇಂತಪ್ಪವರ ಕಂಡರೆ ನಾನು ನಾಚುವೆನಯ್ಯಾ,
> ಗುಹೇಶ್ವರಾ !'

ಬಸವಣ್ಣನವರ ಮಹಾಮನೆಗೆ ನಿಜಭಕ್ತರೊಡನೆ ಮಿಥ್ಯಾಭಕ್ತರೂ ಬರುತ್ತಿದ್ದರೆಂದು ತೋರುತ್ತದೆ. ಬಸವಣ್ಣನವರಾದರೋ, "ಆರಾರ ಮನದಲ್ಲಿ ಏನೇನಿಹದೆಂದರಿಯೆ : ಒಳ್ಳಿಹರೆಂದೆನಲಮ್ಮೆ ; ಹೊಲ್ಲಹರೆಂದೆನಲಮ್ಮೆ, ಶಿವಭಕ್ತರಾದ ಕಾರಣ" ಎಂದು ತಮಗಾಗಿ ಲಾಂಛನವ ಕಂಡು ನಂಬುವೆ : ಅವರಂತರಂಗವ ನೀವೇ ಬಲ್ಲಿರಿ" ಎಂಬ ದಾರಿಯನ್ನು ಆಯ್ದುಕೊಂಡಿದ್ದರು. ಆದರೆ ಅಲ್ಲಮ ಪ್ರಭುಗಳ ದಾರಿ ಬೇರೆ. ಅದು ಸತ್ಯನಿಷ್ಠುರತೆಯ ದಾರಿ. ದಾಂಭಿಕರನ್ನು ಕಂಡರೆ "ಅಂಗಜೀವಿಗಳೆಲ್ಲ ಅಶನಕ್ಕೆ ನೆರೆದು ಲಿಂಗವಾರ್ತೆಯ ನುಡಿವರಯ್ಯ ! ಕಾಯ ಜೀವಿಗಳೆಲ್ಲ ಕಳವಳಿಸಿ ನುಡಿವರಯ್ಯ ! ಮನಬಂದ ಪರಿಯಲ್ಲಿ ನುಡಿವವರಿಗೆ ಗುಹೇಶ್ವರನೆಂಬ ಲಿಂಗ ನಿಮಗೆಲ್ಲಿಯದೋ !" ಎಂದು ನಿರ್ದಾಕ್ಷಿಣ್ಯವಾಗಿ ನುಡಿದು ಬಿಡುತ್ತಿದ್ದರು.

ಭಕ್ತರಾಗುವುದೊಂದು ಹುಡುಗಾಟವೆ? 'ಸತ್ಯವ ನುಡಿಯದೆ, ಸದಾಚಾರದಲ್ಲಿ ನಡೆಯದೆ, ಸದ್ಭಕ್ತಿಯ ಹಿಡಿಯದೆ, ನಿಜ ಮುಕ್ತಿ ಪಡೆಯದೆ, ಸತ್ಕ್ರಿಯೆ ವಶವಾಗದೆ, ಸಮ್ಯಕ್ ಜ್ಞಾನವ ಮುಟ್ಟದೆ, ಆಚಾರವನರಿಯದೆ, ವಿಭವವಳಿಯದೆ, ಕೋಪ ಮುರಿಯದೆ, ತಾಪವುಡುಗದೆ, ಬರಿದೆ ಭಕ್ತರಾದೆವೆಂದು ಬೆಬ್ಬನೆ ಬೆರೆ'ದರೆ ಬಂತೇನು?ವೃಥಾ ಲಿಂಗ ಧರಿಸಿ, 'ಪಾಷಾಣಕ್ಕೆ ಹಂಗಿಗರಾದರೆ' ಫಲವೇನು? ಲಿಂಗಸಂಗಿಗಳೆಂದು ನಟಿಸುತ್ತ 'ಹುಸಿಯನೆ ಕೊಯ್ದು, ಹುಸಿಯನೆ ಪೂಜಿಸಿ ಗಸಣಿಗೊಳಗಾಗಿ ಮಹಾ ಘನವನರಿಯದೆ ಹೋದರೆ' ಪ್ರಯೋಜನವೇನು? 'ದೇಹವೇ ಪೀಠಿಕೆ, ಜೀವವೇ ಲಿಂಗ'ವಾಗದೆ. 'ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆಯಾಗಿ

ಆಕಾಶಗಂಗೆಯಲ್ಲಿ ಮಜ್ಜನ, ಹೂವಿಲ್ಲದ ಪರಿಮಳದ ಪೂಜೆ, ಹೃದಯ ಕಮಲದಲ್ಲಿ ಶಿವಶಿವ ಎಂಬ ಶಬ್ದ' ಸಮನಿಸದೆ ಲಿಂಗಧಾರಿಗಳಾಗಿ ಲಾಭವೇನು? "ಪ್ರಣತೆಯೂ ಇದೆ : ಬತ್ತಿಯೂ ಇದೆ, ಜ್ಯೋತಿಯ ಬೆಳಗುವೊಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೊ? ಗುರುವಿದೆ, ಲಿಂಗವಿದೆ : ಶಿಷ್ಯನ ಸುಜ್ಞಾನೋದಯುವಾಗದನ್ನಕ್ಕರ ಭಕ್ತಿಯೆಲ್ಲಿಯದೋ?"

ಶಿಷ್ಯರಲ್ಲಿ ಸುಜ್ಞಾನೋದಯವನ್ನುಂಟುಮಾಡಲೆಂದೇ ಪ್ರಭು ದೇಶಪರ್ಯಟನವನ್ನು ಕೈಗೊಂಡಿದ್ದ. "ಒಳಗೆ ನೋಡಿಹೆನೆಂದರೆ ಒಳಗೆ ನೋಡಲಿಲ್ಲ; ಹೊರಗೆ ನೋಡಿಹೆನೆಂದರೆ ಹೊರಗೆ ನೋಡಲಿಲ್ಲ : ಜ್ಞಾನವೆಂತುಂಟೋ?"ಎಂಬ ಪ್ರಭುವಿನ ಪ್ರಶ್ನೆ ಅರಿದಿಹೆನೆಂಬ ಅಜ್ಞಾಶನಿಗಳ ಅಹಂಕಾರದ ಬುಡವನ್ನೇ ಅಲ್ಲಾಡಿಸುತ್ತಿತ್ತು. ಅರಿದವರು ಅರಿದೆವೆಂದು ಒರೆಯುವರೆ? "ಅರಿದೆವು, ಅರಿದೆವು ಎಂಬಿರಿ : ಅರಿದಪರಿ ಎಂತು ಹೇಳಿರೆ? ಅರಿದವರು ಅರಿದೆವೆಂಬರೆ? ಅರಿಯಬಾರದ ಘನವನು ಅರಿದವರು ಅರಿಯದಂತಿರ್ಪರು ಕಾಣಾ, ಗುಹೇಶ್ವರಾ" ಎಂಬ ಅವರ ಗುಡುಗು ಅಜ್ಞಾನಿಗಳೂ ಅಲ್ಪಜ್ಞಾನಿಗಳೂ ಮರವೆಯ ಮಬ್ಬಿನಿಂದ ಎಚ್ಚರಿಯುವಂತೆ ಮಾಡಿತು.

ಇಂಥ ಪರಮಾರಾಧ್ಯ ಪ್ರಭುದೇವರ ಪ್ರಬೋಧೆಯಿಂದ "ಶುದ್ಧರಾಗದರಾರು? ಸಮತೆಯ ಶ್ರದ್ಧೆಯಾಗದರಾರು? ನಿರುಪಮ ಸಿದ್ಧಿಯಾಗದರಾರು? ನಿತ್ಯವ ಪಡೆಯದವರಾರು? ಸಿದ್ಧರಾಗದರಾರು? ಸೌಖ್ಯಸಮೃದ್ಧಿಯಾಗದರಾರು?' ಸರ್ವಜೀವದಯಾಪ್ರದಾಯಕನಾದ ಪ್ರಭು 'ಅಲ್ಪಜ್ಞಾನ ಮಾರ್ಗವ ಹೊಳ್ಳುಮಾಡಿ, ವಿಶುದ್ಧ ಪೂರ್ಣಜ್ಞಾನಮಾರ್ಗದಲ್ಲಿ ಸುಖವ ಬಯಸಲು ಬಲ್ಲ ಭಕ್ತರಿಗೆ ಅರಿವು ತೋರಿ'ಸಿದನು; 'ಹಾಳುಬಿದ್ದಿಹ ಅಂತರಂಗವ' ಅಂತರ್ಮಾರ್ಗದೋಜೆಯಿಂದ ತುಂಬಿದನು; 'ಹೃದಯ ಸ್ಥಳದ ಮತಿಮಾನಸಸರೋವರ ತಿಳಿದು' ಅಲ್ಲಿ ಅಧ್ಯಾತ್ಮದ ಅರಿವಿಂದ ಅರಳುವಂತೆ ಮಾಡಿದನು ; 'ಹುಸಿಯ ಮಾಯೆಯ ಹುಸಿಸಿ' ತೋರಿದನು; 'ತನುಮನೋವಾಯುಗಳ ಸಂಚಲವನನಲನಲಿ ಸಲೆಸುಡುವ ಸುಮತಿಯ, ಜೀಮುಪರಮರನು ಅನುಗೊಳಿಸಿ ನಿರ್ವಯಲ್ಲವಮಾಡುವ ನೆನಹಿನುಪದೇಶವ' ನೀಡಿದನು ; 'ಧರಣಿಯೊಳಗೆ ಆರಾರು ಅದಾವಾಚರಣೆಗಳನ್ನು ಆಚರಿಸುತ್ತಿಹರೊ ಆ ಪರಿಯಲ್ಲಿ ಅವರವರಿಗೆ ಯಥೋಚಿತ ಸುಪ್ರಸನ್ನತೆಯ ಕರುಣಿಸುವೆನೆಂದೆನುತ ಸಚರಾಚರರಿಗುಪಕಾರಾರ್ಥವಾಗಿಯೆ ಲೀಲೆಯಲಿ' ಸುಳಿದನು: 'ಅವ ಪರಿಗಳಲಾರ ಬುದ್ಧಿಯ ಭಾವವಿಹುದವರವರಿಗೆ ಆ ಪರಿ ಭಾವವನು ಶುದ್ಧೈಸಿ ಸಮ್ಯಗ್ ಜ್ಞಾನ ಜ್ಯೋತಿಯ ತೀವಿ ಸುಖಿಗಳಮಾಡಿ'ದನು ; 'ಬೆಸಲಾದ ಮನಮಾಣಿಕವ ತಮ್ಮ ಶರೀರಶರಧಿಯಲಿ ಸಾಧಿಸಿಯೆ, ಶಿವಸಾಣೆಯಲ್ಲಿ ಸಲೆತೇದು, ಮಿಗೆ ಸುಜ್ಞಾನ ಕಾಂತಿಯನೆಯ್ದಿಸುವುದುನು' ತನ್ನ ಭಕ್ತರಿಗೆ ತಿಳಿಸಿದನು ; ಒಟ್ಟಿನಲ್ಲಿ,

‘ತಾನೆ ತನ್ನಯ ಕರುಣದಿಂರಲಿ ಮಾನವರ ಮನದಂಧಕಾರಕೆ ಭಾನುವಾದನು’ ಆ ಜ್ಞಾನಭಾಸ್ಕರನು!

ಆತನಿಗೆ ಜಾತಿಯ ಸೂತಕ ಅಂಟಲಿಲ್ಲ. ‘ಆತನಲ್ಲಮ, ಸಕಲ ಸಮಯಪ್ರೀತ, ಅಲ್ಲಿಯು ಶೈವದಲಿ ಸುಪ್ರೀತ, ಅದರೊಳು ವೀರಶೈವದಲತಿ ಮಹಾಪ್ರೀತ’ ಎಂದು ಚಾಮರಸನು ಆತನ ವಿಶಾಲ ಧರ್ಮದೃಷ್ಟಿಯನ್ನು ನಿರೂಪಿಸಿ, ‘ಬಾಲರನು, ವೃದ್ಧರನು, ಭೂಮೀಪಾಲರನು, ಬಡವರನು, ಸದಮಲಶೀಲರನು, ಗುಣಿಗಳನು, ಗೋ ಬ್ರಾಹ್ಮರನು ಭಕ್ತರನು–ಲೋಲತೆಯಲಿ ಸಮಸ್ತ ಜಾತಿಯ ಜಾಲವನು ಸರ್ವರನು ಕರುಣದಿ ಪಾಲಿಸುತಲಿರುತಿರ್ದನೆಮ್ಮಯ ಗುರುಗುಹೇಶ್ವರನು’ ಎಂದು ಅವನ ಸರ್ವಸಮನ್ವಯ ಸಮದರ್ಶಿತ್ವಗಳನ್ನು ಸುಂದರವಾಗಿ ಬಿತ್ತರಿಸಿದ್ದಾನೆ. ಇದಕ್ಕೆ ಅವನ ವಚನಗಳೂ ಸಾಕ್ಷಿಯಾಗಿ ನಿಂತಿವೆ :

“ಕಾಮವ ಸುಟ್ಟು ಹೋಮವನುರುಹಿ ತ್ರಿಪುರಸಂಹಾರದ
ಕೀಲವನರಿಯ ಬಲ್ಲಡೆ
ಯೋಗಿಯಾದಡೇನು? ಭೋಗಿಯಾದಡೇನು? ಶೈವನಾದಡೇನು?
ಸನ್ಯಾಸಿಯದಡೇನು?
ಅಸನವ ತೊರೆದಾತ, ವ್ಯಸನವ ಮರೆದಾತ– ಗುಹೇಶ್ವರಲಿಂಗದಲ್ಲಿ
ಅವರ ಹಿರಯರೆಂಬೆನು”

ಎಂದು ತನ್ನ ಹೃದಯದ ಹಿರಿಮೆಯನ್ನು ಹೊರಹೊಮ್ಮಿಸಿದ್ದಾನೆ ಪರಿಪೂರ್ಣ ಪ್ರಭುದೇವ. ಆ ಹೃದಯದಲ್ಲಿ ಎಲ್ಲರಿಗೂ ಸ್ಥಾನವಿತ್ತು ; ಆದರೆ ಸಂಕುಚಿತತೆಗೆ ಸ್ಥಾನವಿರಲಿಲ್ಲ. ಅದು ಸಾಗರೋಪಮವಾದುದು, ಗಗನೋಪಮವಾದುದು, ವಿಶ್ವ ವಿಶಾಲವಾದುದು ! ಯಾರೀ ಭವಿಭಕ್ತರೆಂಬ ಬರಡು ವಾದ ಹೂಡಿರಬೇಕು ಅವರೆದುರು. ಅದಕ್ಕುತ್ತರ ಈ ಮುತ್ತಿನಂತಹ ವಚನ :

“ಭವಿಯ ಕಳೆದೆವೆಂಬ ಮರುಳು ಜನಂಗಳು ನೀವು ಕೇಳಿರೆ !
ಭವಿಯಲ್ಲವೇ ನಿಮ್ಮ ತನುಮನಗುಣಾದಿಗಳು ?
ಭವಿಯಲ್ಲವೇ ನಿಮ್ಮ ಪ್ರಾಣಗುಣಾದಿಗಳು ?
ಇವರೆಲ್ಲರು ಭವಿಗಳ ಹಿಡಿದು ಭವಭಾರಿಗಳಾದರು ;
ನಾನು ಭವಿಯ ಪೂಜಿಸಿ ಭವಂ ನಾಸ್ತಿಯಾದೆನು, ಗುಹೇಶ್ವರಾ !”

ಕೆಲವರಿಗೆ ನಾವು ಮದ್ಯಮಾಂಸ ಮುಟ್ಟುವವರಲ್ಲವೆಂಬ ಹಮ್ಮು ಇದ್ದಿತೆಂದು ತೋರುತ್ತದೆ. ಅವರನ್ನು ಕುರಿತು ಆಡಿದುದಿರಬೇಕು ಈ ವಚನ: ಮದ್ಯ ಮಾಂಸಾದಿಗಳ ,ಮುಟ್ಟೆನೆಂದೆಂಬಿರಿ, ನೀವು ಕೇಳಿರೆ: ಮದ್ಯವಲ್ಲವೇನು ಅಷ್ಟಮದಂಗಳು? ಮಾಂಸವಲ್ಲವೇನು ಸಂಸಾರ ಸಂಗವು? ಈ ಉಭಯವನತಿಗಳೆದಾತನೆ ಗುಹೇಶ್ವರಲಿಂಗದಲ್ಲಿ ಲಿಂಗೈಕ್ಯನು!"

ಇನ್ನು ಕೆಲವರಿಗೆ ತಾವು ನಡೆಸುತ್ತಲಿದ್ದ ನೇಮಗಳ ಬಿಂಕವಿದ್ದಿತೆಂದು ತೋರುತ್ತದೆ. ಅವರಿಗಾಗಿ ಈ ವಚನ : "ಹಾಲನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ ; ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ ; ಅಗ್ಗವಣಿಯ ನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ ; ಪುಷ್ಪದ ನೇಮವ ಹಿಡಿದಾತ ದುಂಬಿಯಾಗಿ ಹುಟ್ಟುವ ! ಇವು ಷಟ್‌ಸ್ಥಳಕ್ಕೆ ಹೊರಗು, ಭಕ್ತಿನಿಷ್ಠೆಯಿಲ್ಲದವರ ಮೆಚ್ಚ ಗುಹೇಶ್ವರಾ!"

ಇದು ಪೂಜೆ ಪೂಜೆಯೆಂದು ಪ್ರಲಾಪಿಸುವರಿಗಾಗಿ : "ಅಗ್ಗವಣಿ, ಪತ್ರೆ, ಪುಷ್ಪ, ಧೂಪ, ದೀಪ, ನಿವಾಳಿಯಲ್ಲಿ ಪೂಜಿಸಿ ಬಳಲುತ್ತಿದ್ದಾರೆ. ಏನಂದರಿಯರು, ಎಂತೆಂದರಿಯರು. ಜನಮರುಳೋ ಜಾತೆಮರುಳೋ ಎಂಬಂತೆ ಎಲ್ಲರೂ ಪೂಜಿಸಿ ಏನನೂ ಕಾಣದೆ ಲಯಕ್ಕೊಳಗಾಗಿ ಹೋದರು, ಗುಹೇಶ್ವರಾ !"

ಮೇಲಾಗಿ, ಪೂಜಿಸಿದ ಫಲ ಯಾರಿಗೆ? ಪೂಜಿಸಿದವನಿಗೆಯೆ? ಇಲ್ಲ. "ಮಜ್ಜನಕ್ಕೆರೆದು ಫಲವ ಬೇಡುವರಯ್ಯ : ತಮಗೆಲ್ಲಿಯದೋ ಆ ಫಲವು ಸೀತಾಳಕ್ಕಲ್ಲದೆ? ಪತ್ರೆ ಪುಷ್ಪದಲ್ಲಿ ಪೂಜಿಸಿ ಫಲವ ಬೇಡುವರಯ್ಯ : ತಮಗೆಲ್ಲಿಯದೋ ಆ ಫಲ ಗಿಡಗಳಿಗಲ್ಲದೆ? ಸುಯಿಧಾನವನರ್ಪಿಸಿ ಪ್ರಸಾದದ ಫಲವ ಬೇಡುವರು: ತಮಗೆಲ್ಲಿಯದೋ ಆ ಫಲ ಹದಿನೆಂಟು ಧಾನ್ಯಕ್ಕಲ್ಲದೆ? ಲಿಂಗದೊಡವೆಯ ಲಿಂಗಕ್ಕೆ ಕೊಟ್ಟು ಫಲವ ಬೇಡುವ ಸರ್ವ ಅನ್ಯಾಯಿಗಳನೇನೆಂಬೆ, ಗುಹೇಶ್ವರಾ?"

ಇದು ವೇದವಾದರತರಿಗಾಗಿ : "ವೇದ ವೇಧಿಸಲರಿಯದೆ ಕೆಟ್ಟುವು ; ಶಾಸ್ತ್ರ ಸಾಧಿಸಲರಿಯದೆ ಕೆಟ್ಟುವು ; ಪುರಾಣ ಪೂರೈಸಲರಿಯದೆ ಕೆಟ್ಟುವು ; ಹಿರಿಯರು ತಮ್ಮ ತಾವರಿಯದೆ ಕೆಟ್ಟರು. ತಮ್ಮ ಬುದ್ಧಿ ತಮ್ಮನೆ ತಿಂದಿತ್ತು! ನಿಮ್ಮನೆತ್ತ ಬಲ್ಲರು, ಗುಹೇಶ್ವರಾ!"

ಇದು ವೇಷಗಾರರರನ್ನು ಕುರಿತು : "ಕಳ್ಳಗಂಜಿ ಕಾಡಹೊಕ್ಕರೆ ಹುಲಿತಿಂಬುದ ಮಾಂಬುದೇ? ಹುಲಿಗಂಜಿ ಹುತ್ತವ ಹೊಕ್ಕಡೆ ಸರ್ಪ ತಿಂಬುದ ಮಾಂಬುದೇ? ಕಾಲಕ್ಕಂಜಿ ಭಕ್ತನಾದಡೆ ಕರ್ಮ ತಿಂಬುದ ಮಾಂಬುದೆ? ಮೃತ್ಯುವಿನ ಬಾಯಿ ತುತ್ತಾದ ವೇಷಡಂಭಕರನೇನೆಂಬೆ, ಗುಹೇಶ್ವರಾ!" ಏನೆಂದರೂ ಸರಿಯೆ ಇಂಥ ನಾಮಧಾರಿಗಳಿಗೆ.

ದಾಂಭಿಕತೆ, ಅಂಧಶ್ರದ್ಧೆ ಅಹಂಮನ್ಯತೆ, ಬಾಹ್ಯಾಡಂಬರ,ಅಜ್ಞಾನ, ಅಲ್ಪಜ್ಞಾನ, ಅಸತ್ಯ, ಅಸಹನೆ, ವಿಷಮತೆ, ವಿಕಾರವಶತೆಗಳಿಗೆ ವೈರಿಯಾಗಿಯೇ ಬಂದಿದ್ದರು ಪ್ರಭುದೇವರು. 'ಹುಸಿಯನೇ ಕೊಯ್ದು ಹುಸಿಯನೇ ಪೂಜಿಸು'ವವರನ್ನು ಕಂಡರಂತೂ ಅವರಿಗೆ ಅರೆಕ್ಷಣವೂ ಆಗುತ್ತಿರಲಿಲ್ಲ "ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ ನುಡಿಯಲಾಗದು! ಲಕ್ಷಕ್ಕೊಮ್ಮೆ ನುಡಿಯಲಾಗದು! ಕೋಟಿಗೊಮ್ಮೆ ನುಡಿಯಲಾಗು!" ಎಂದು ಖಂಡಿತವಾಗಿ ಹೇಳಿಬಿಟ್ಟರು. 'ಉಪಚಾರದ ಗುರುವಿಂಗೆ ಉಪಚಾರದ ಶಿಷ್ಯರು, ಉಪಚಾರದ ಲಿಂಗವು, ಉಪಚಾರದ ಜಂಗಮವು, ಉಪಚಾರದ ಪ್ರಸಾದವು'–ಇಂಥವರು 'ಅಂಧಕನ ಕೈಯ ಅಂಧಕನು ಹಿಡಿದಂತೆ' ಎಂದು ನಿರ್ದಾಕ್ಷಿಣ್ಯವಾಗಿ ನುಡಿದುಬಿಟ್ಟರು. "ಕುಲಮದ, ಛಲಮದ, ವಿದ್ಯಾಮದದವರ ತೋರದಿರಾ! ಅವರ ಆರೂಢ ಪದವಿಯನೆನಗೆ ತೋರದಿರಾ! ಅವರ ಗರ್ವಗಂಭೀರತನವನೆನಗೆ ತೋರದಿರಾ! ಶಮೆದಮೆಯುಳಿದು ದಶಮುಖನಿಂದ ಲಿಂಗದಲ್ಲಿ ಲೀಯವಾದವರನಲ್ಲದೆ ಎನಗೆ ತೋರದಿರಾ, ಗುಹೇಶ್ವರಾ!" ಎಂದು ಕೇಳಿಕೊಂಡರು.

ತೋರದಿರೆಂಬುದೇನೋ ಸರಿ. ತೋರಿದರೇನು ಮಾಡುವುದು? ಧಿಕ್ಕರಿಸುವುದೇ? ತಿರಸ್ಕರಿಸುವುದೆ? ನಿರಾಕರಿಸುವುದೇ? ಚಿಃ, ಅದು ಅಲ್ಲಮಪ್ರಭು ಸಂಪ್ರದಾಯವಲ್ಲ. 'ಹಗಲನಿರುಳು ಮಾಡಿ, ಇರುಳ ಹಗಲು ಮಾಡಿ, ಆಚಾರವ ಅನಾಚಾರವ ಮಾಡಿ ಅನಾಚಾರವ ಆಚಾರವ ಮಾಡಿ, ಭಕ್ತರ ಭವಿಯ ಮಾಡಿ, ಭವಿಯಭಕ್ತರಮಾಡಿ ನುಡಿವವರನ್ನು' ಕಂಡರೆ ಅವರಿಗೆ ಆಗುತ್ತರಲಿಲ್ಲವಾದರೂ ಅಂಥವರು ಎದುರಾದರೆ ಅವರನ್ನೂ ಉದ್ಧರಿಸುತ್ತಿದ್ದರವರು. ಗೋರಕ್ಷಕನ ಗರ್ವಭಂಗ ಮಾಡಿ ಅವನನ್ನು ಶಿವಪಥಕ್ಕೆ ತಂದುದು ಇದಕ್ಕೊಂದು ಉದಾಹರಣೆ.

ಸಿದ್ಧರ ಕೇಂದ್ರವಾಗಿದ್ದಿತು ಶ್ರೀಶೈಲ. ಆ ಸಿದ್ಧರ ದೃಷ್ಟಿ ಸಿದ್ಧಿಗಳ ಮೇಲೆ. ಅಣಿಮಾದಿ ಅಷ್ಟಸಿದ್ಧಿಗಳೇ ಅವರ ಗುರಿಗಮ್ಯಗಳಾಗಿದ್ದುವು. ಅವರಿಗೆಲ್ಲ ಅಧ್ಯಕ್ಷಗೋರಕ್ಷ. ಪ್ರಭುದೇವರು ಅಲ್ಲಿಗೆ ಹೋಗಲು 'ಆವ ಕಡೆಯಿಂ ಬಿಜಯಮಾಡಿದಿರಿ? ಆವ ಕಾರಣ ಬಂದು ಬರವು?' ಎಂದು ಕೇಳಿದ ಗೋರಕ್ಷ. 'ಒಡಲಿನಾಸೆಗೆ ಕುದಿದು ಕೋಟಲೆಬಡುವವರ ಕಳವಳವ ಕಳಚಲು ನಡೆದು ಬಂದವರಾವೆಲ್ಲೈ' ಎಂದು ಉತ್ತರವಿತ್ತ ಪ್ರಭು. ತಾನು ಸಾಧನೆಯ ಬಲದಿಂದ ವಜ್ರದೇಹಿಯಾಗಿರುವುದನ್ನು ಕುರಿತು ಆಡಿದ ಕಟಕಿಯದೆಂದು ಗೋರಕ್ಷಕನಿಗೆ ಹೊಳೆಯಿತು. ಸರಿ, ಸಾಮರ್ಥ್ಯದ ಪರೀಕ್ಷೆಯಾಗಿ ಹೋಗಲಿ ಎಂದು ಕೈದು ಒಂದನ್ನು ಪ್ರಭುವಿನ ಕೈಗಿತ್ತು, 'ಏಳೇಳು, ಹಿಡಿ ಹಿಡಿ, ಹೊಯ್ದು ನೋಡಾ ನೀನು

ನಿನ್ನಾಪನಿತು ಸತ್ವದಲಿ!' ಎಂದು ಆಹ್ವಾನಿಸಿದ. ಪ್ರಭು ಆ ಖಡ್ಗದಿಂದ ಗೋರಕ್ಷನ ದೇಹಕ್ಕೆ ಅಪ್ಪಳಿಸಿದ. ಖಡ್ಗ ಖಡಿಲೆಂದಿತು. ಆದರೆ ಗೋರಕ್ಷನ ಮೈ ಕೂದಲೂ ಕೊಂಕಾಗಲಿಲ್ಲ. ಗೆಲವಿನ ನಗೆ ನಕ್ಕ ಗೋರಕ್ಷ. ಪ್ರಭುವೂ ಅವನ ಅಟ್ಟಾಹಾಸವನ್ನು ನೋಡಿ ಮನದಲ್ಲಿಯೇ ನಕ್ಕು 'ಹಿಡಿದುಕೋ ಖಂಡೆಯನಾದೊಡೆ ಹೊಡೆದು ನೋಡೆಮ್ಮವನು' ಎಂದು ಕರೆದ. ಗೋರಕ್ಷ ತನ್ನ ಸಾಮರ್ಥ್ಯವನ್ನೆಲ್ಲ ಉಪಯೋಗಿಸಿ ಖಡ್ಗದಿಮದ ಹೊಯ್ದು ಅಲ್ಲಮನ ದೇಹಕ್ಕೆ. ಖಡ್ಗ ಖಣಿಲೆನಲಿಲ್ಲ. ಬಯಲ ಭೇದಿಸಿದಂತಾಯಿತು. ಗೋರಕ್ಷನಿಗೆ ಎಂದಿಲ್ಲದ ಆಶ್ಚರ್ಯ! ತನ್ನ ವಜ್ರದೇಹ ಆ ಮಹಾತ್ಮ ನಿರ್ದೇಹದ ಮುಂದೆ ಕ್ಷುಲ್ಲಕವಾಗಿ ಕಂಡಿತವನಿಗೆ. ಅದರ ರಹಸ್ಯವನ್ನು ತಿಳಿಸಲು ಪ್ರಭುವಿವೆ ಪ್ರಾರ್ಥಿಸಿಕೊಂಡನವನು. 'ಎಲು ತೊಗಲು ಮಲಮೂತ್ರ ನೆತ್ತರ ಕೊಳಚೆಯಾಗಿಹ ಹೇಸಿಕೆಯ ಒಡಲ'ನ್ನು ವಜ್ರದೇಹವನ್ನಾಗಿ ಮಾಡಿಕೊಂಡರೆ ಮೋಕ್ಷವಿಲ್ಲ ; ಕಾಯ ಮಾಯಾ ಛಾಯೆ ಬಲಿದರೆ ಸಿದ್ಧನವನಲ್ಲ. ಕಾಯಮಾಯಾ–ಛಾಯದಾಗಿನ ದಾಯವನು ಕಳೆದುಳಿದನಾದಡೆ ರಾಯನಾತನು ಸಿದ್ಧರಲಿ ಗೋರಕ್ಷ ಕೇಳೆಂದ.'

ಗೋರಕ್ಷನಿಗೆ ಜ್ಞಾನೋದಯುವಾಯಿತು. 'ನೋಡಿದರೆ ಮದ ಮತ್ಸರಗಳೆದ್ದೋಡಿದುವು! ಕರುಣದಲಿ ಗುರು ಮಾತಾಡಿದೊಡೆ ಮಗ್ಗಿದುದು ಮನಸಿನ ಮರವೆ ನಿಮಿಷದಲಿ ; ನೀಡಿ ಕೈಮುಟ್ಟಿದೊಡೆ ಕಾಯದ ಜೋಡಿ ಹೋಯಿತು! ವಿಮಲ ತನುಮನ ಮೂಡಿತಾ ಗೋರಕ್ಷನಲಿ ಪ್ರಭುಲಿಂಗಲೀಲೆಯಲಿ!'

ಅಲ್ಲಿಂದ ಮುಂದೆ ನಿಬಿಡಾರಣ್ಯದಲ್ಲಿ ನಡೆದುಗೋಗುತ್ತಿರುವಾಗ 'ಕೊಲುವುದನೆ ಸಲೆಕೊಂದು ಹಸಿವಿನ ಹೊಲೆಯನಲಿಯದೆ....ನಾನಾ ಪ್ರಕಾರ ಜೀವಜಾಲವನು ಅಳಿದು ಹೊಟ್ಟೆಯ ಹೊರೆದು ದುರ್ಗತಿಗಿಳಿವ' ಬೇಡನೊಬ್ಬನನ್ನು ಕಂಡ ಪ್ರಭುರಾಯ, 'ತನ್ನ ಕಣ್ಗಿದಿರಾದ ಮೂಢನನಿನ್ನು ತಿಳಿಹದೆ ನಾನು ಹೋಹುದು' ಸರಿಯಲ್ಲವೆಂದು ಆ ಕಿರಾತನೆಂಬ ಕಾರ್ಬೊನ್ನನ್ನು ತನ್ನ ಕರುಣದ ಸಿದ್ಧರಸರಿಂದ ಹೊನ್ನನ್ನಾಗಿ ಮಾಡಿದನು ಪ್ರಭುರಾಯ. ವನ್ಯ ಮೃಗಗಳ ಭೇಟೆಯನ್ನು ಬಿಡಿಸಿ ಅಂತರಂಗದ ಅಹಂಕಾರ ಮೃಗಗಳ ಬೇಟೆಯಾಡಲು ಕಲಿಸಿದನು ಆ ಬೇಡನಿಗೆ. ಕಾಡಿನಲ್ಲಿರುವ ಖಗಮೃಗಗಳನ್ನುಳಿದು ಮೈಗಾಡಿನಲಿರುವ ಖಗ ಮೃಗಗಳನ್ನು ಸುಜ್ಞಾನಾಗ್ನಿಯಲ್ಲಿ ಕುದಿಸಿ ಉಣ್ಣಲು ಕಲಿಸಿದನು ಆ ವ್ಯಾಧನಿಗೆ.

ಮುಂದೆ ಹೋಗುತ್ತಿರಲು ಮರವೆಯ ಹಲವು ರೂಪಗಳಿಗೆ ಗುರಿಯಾಗಿ ಹೋಗುತ್ತಲಿದ್ದ ಜನರು ಕಂಡರು. ಅವರಲ್ಲಿ 'ಕಾಮಿನಿಯರಿಗೆ ಸೋತು ಕಾಮನ ಸೀಮೆಯಲಿ ಸಲೆ ಸತ್ತು ಹುಟ್ಟುವ ಕಾಮಿಗಳಿಗೆ' ಕುಂಡಲೀ ಶಕ್ತಿಯ ಮಹಾರತಿಯನ್ನು

ಕಲಿಸಿದನು. ರಸದ ಸಿದ್ಧಿಯ ವ್ಯಸನದಲ್ಲಿದ್ದವರಿಗೆ ಅಂತರಂಗದ ಬಿಂದುವೆನು ರಸವ ಕಟ್ಟಿ ಭಯಂಗಳ ವರ್ಜಿಸುವುದನು ಕಲಿಸಿದನು ; 'ನಾರು ಸೀರೆಗೆ ಮರಗಳನ್ನು, ಆಹಾರದಾಶೆಗೆ ಕಂದಮೂಲವ, ನೀರ ತೃಷೆಗನವರತ ನಾನಾ ನದಿ ಸರೋವರವ ಹಾರಿಕೊಂಡಿಹ ಘೋರತರ ಸಂಸಾರ'ದಲ್ಲಿದ್ದ ಮುನಿಗಳಿಗೆ ಪಶುಯಾಗಕ್ಕೆ ಪ್ರತಿಯಾಗಿ ಆತ್ಮಯಾಗವನ್ನು ಕಲಿಸಿದನು. ಹೀಗೆ ಬಾಹ್ಯ ಕರ್ಮ ಭಕ್ತಿಗಳೆಷ್ಟೋ ಅಷ್ಟನ್ನೂ ಅಂತಮಾರ್ಗಕ್ಕೆ ಹೊಂದಿಸಿ* ತಿಳಿವಿನ ದಾರಿಯನ್ನು ತೋರಿದನು ಪ್ರಭುರಾಯ.

ಹೀಗೆ 'ಆಡಿ ಕೆಲವರಿಗೆ, ಕರುಣದಲಿ ಮಾತಾಡಿ ಕೆಲವರಿಗೆ, ನುಡಿಸಿ ಕೆಲರಿಗೆ, ನೋಡಿ ಕೆಲರಿಗೆ, ಜರೆದು ಕೆಲರಿಗೆ, ಜಡಿದು ಕೆಲವರಿಗೆ, ಹಾಡಿ ಕೆಲರಿಗೆ, ಹರಿಸಿ ಕೆಲರಿಗೆ, ನಿತ್ಯ ಸುಖವನು ಕೂಡಿ' ಕಲ್ಯಾಣಕ್ಕೆ ಮರಳಿದನು ಪ್ರಭುರಾಯ. ಅಲ್ಲಿ 'ಅಂತರಂಗದ ನಾಡು' ಆಳುವರಿಲ್ಲದೆ ಹಾಳು ಬಿದ್ದಿದ್ದಿತು.

'ಅನುಭವ ಮಂಟಪ'ವೆಂಬ 'ಮಹದರಿವಿನ ಅಂಬರ ಪೀಠ' ಅವನಿಗಾಗಿ ಸಿದ್ಧವಾಗಿದ್ದಿತು. ಅದರ ವೈಭವನ್ನೇನು ವರ್ಣಿಸಿವುದು? "ಅಂಗದ ಪ್ರಕೃತಿ ಲಿಂಗದಲ್ಲಿ ಅಳಿದು, ಮನದ ಪ್ರಕೃತಿ ಅರಿವಿನಲ್ಲಿ ತಿಳಿದು, ಜೀವನ ಭ್ರಾಂತಿ ನಿಶ್ಚಿಂತದಲ್ಲಿ ಅಳಿದು, ನಿಃಶೂನ್ಯ ನಿರಾಮಯವಾದ ನಿವಾಸಕ್ಕೆ ಸದಾಚಾರವೆಂಬ ಕೆಸರಗಲ್ಲನಿಕ್ಕಿ, ಸರ್ವಾಚಾರ ಸಂಪತ್ತೆಂಬ ಹೂಗಲ್ಲ ಮುಟ್ಟಿ, ಅಂತಃಕರಣ ಚತುಷ್ಟಿಯದ ನಾಲ್ಕು ಕಂಭವ ನಿಲಿಸಿ, ಜ್ಞಾತೃವೆಂಬ ಭಿತ್ತಿಯ ಮೇಲೆ ಜ್ಞಾನವೆಂಬ ಶಿಖರಿಯನನುಗೊಳಿಸಿ, ಜ್ಞೇಯವೆಂಬ ಹೊನ್ನ ಕಲಶವಂ ಶೃಂಗಾರಮಂ ಮಾಡಿ, ಬ್ರಹ್ಮರಂಧ್ರದ ಊರ್ಧ್ವದ್ವಾರವೆಂಬ ನಿಜದ್ವಾರಮಂ ಮಾಡಿ ನಿರ್ವಯಲಿ ನಲಿ ನೆಲೆಗೊಳಿಸಿ, ಬಸವ ಪ್ರಿಯ ಕೂಡಲ ಚೆನ್ನ ಸಂಗನ ಪ್ರಭುದೇವರ ಬರವಿಂಗೆ ಶೂನ್ಯಸಿಂಹಾಸನವ ರಚಿಸಿ ಬರವ ಹಾರುತ್ತಿರ್ದ ನಮ್ಮ ಪರಮಗುರು ಸಂಗನ ಬಸವಣ್ಣನು' ಎಂಬ ಹಡಪದ ಅಪ್ಪಣ್ಣನ ವಚನ ಯದಾಹರಿಸಿದರೆ ಸಾಕೆನ್ನಿಸುತ್ತಿದೆ.

'ಪರಮಪುರುಷನಾದಾವ ವೇಷವ ಧರಿಸಿ ಬಹನೋ' ಎಂದು ಬಸವಾದಿಗಳು ಬರವ ಹಾರುತ್ತಿರುವಾಗ ಬಂದನು– ನಿರಾಮಯ ಪ್ರಭುರಾಯ ಬಂದನು. ವಿಕೃತ ವೇಷವನ್ನು ತೊಟ್ಟು ಬಂದನು. ಸೊಡ್ಡಳ ಬಾಚರಸ ಬಣ್ಣಿಸಿರುವಂತೆ "ಅಟ್ಟ

---

* **"ಲೇಪಿಸಿದಹಂಕಾರವೇ ಪಶು । ಯೂಪಕಂಭವೆ ಮನಸು ಪವನ ।**
ಸ್ಥಾಪಿತವೆ ಬಂಧಿಸುವ ಪಾಶ ವಿವೇಕವೇ ಶಸ್ತ್ರ ॥
ವ್ಯಾಪಿಸಿಹ ಸುಜ್ಞಾನ ವಹ್ನಿ ಸ । ದಾ ಪುನೀತಮಯಾತ್ಮನಧ್ವಂ ।
ಈ ಪರಿಯನರುಹಿಸಿದನಾ ಪ್ರಭು ಪರಮ ಮುನಿಗಳಿಗೆ ॥"

**– ಪ್ರ. ಲಿಂ. ಲೀ. ಗ. ೨೦. ಪ. ೩೮**

ಹಾಯುತ್ತ, ಭೋಂಕನೆ ನಿಲ್ಲುತ್ತ, ಒಮ್ಮೆ ಜಿನುಗುತ್ತ, ಒಮ್ಮೆ ಮರುಳನಂತೆ ಮಂಕಿನಂತೆ ದೆಸೆದೆಸೆಯ ನೋಡುತ್ತ, ಆಡುತ್ತ, ಹಾಡುತ್ತಾ,ಬಯ್ಯುತ್ತ, ಕೆರಳಿನಡಿಯುತ್ತ, ನಗುತ್ತ, ಮರುಳಾಟವನಾಡುತ್ತ" ಬಂದನು. ಮಡಿವಾಳ ಮಾಚಯ್ಯ ಕಂಡಂತೆ. "ಬಾಲನಹನೊಮ್ಮೆ, ಲೋಲನಹನೊಮ್ಮೆ, ವೃದ್ಧನಹನೊಮ್ಮೆ, ಮತ್ತನಹನೊಮ್ಮೆ, ಹೊಳೆದು ತೋರುವನೊಮ್ಮೆ, ತೋರಿಯಡಗುವನೊಮ್ಮೆ!" ಅವನ ಲೀಲೆಯೇ ಲೀಲೆ!

ಎಲ್ಲರೂ ವಿಸ್ಮಿತರಾಗಿ ನೋಡುತ್ತಲಿರಲು, "ಬಲಕ್ಕೆ ಮುರಿದನು. ಪಾಳೆಯ ಉತ್ತರ ಬಾಗಿಲಲ್ಲಿ ತಲೆವಾಗಿ ಹೊಕ್ಕು. ಗತಿಯ ಪವಣಿನ ಧವಳಾರಮಪ್ಪ ಪಶ್ಚಿಮ ದ್ವಾರದಿಂ ತ್ರಿವಿಧಗತಿಯ ಶೂನ್ಯ ಸಿಂಹಾಸನದ ಮೇಲೆ ಮುಕ್ತಕೇಶದ ಪರಮಗುರುರಾಜ ಸೇರಿದ ಕಲಿದೇವರ ದೇವನು!" * ಶರಣಸಂದೋಹವೆಲ್ಲ 'ಉಘೇ' ಉಘೇ' ಎಂದು ಉಗ್ಘಡಿಸಿತು. ಬಸವಣ್ಣನವರ ಬಹುದಿನದ ಕನಸು ನನಸಾಯಿತು. "ಕಾಣಬಾರದ ವಸ್ತು ಕೈಸೇರಿತಯ್ಯ ! ಆನಂದದಿಂದ ಆಡುವೆ, ಹಾಡುವೆ, ಎನ್ನ ಕಣ್ಣ ತುಂಬ ನೋಡುವೆ, ಎನ್ನ ಮನ ಒಲಿದು ಭಕ್ತಿಯ ಮಾಡುವೆ!" ಎಂದು ಕುಣಿದಾಡಿದರು.

ಆದರೆ 'ಅರಳುಗಂಗಳವರಿಗೆ ಹರಳುಗಂಗಳವರು ಸೈರಿಸದಂತೆ, ತುರುಬುಳ್ಳವರಿಗೆ ಬರಿ ಮಂಡೆಯವರು ಸೈರಿಸದಂತೆ, ಅಲ್ಲಮನ ಮೇಲ್ಮೆಯನ್ನೂ ಸಹಿಸದಾದರು ಕೆಲವು ತಿಳಿಗೇಡಿಗಳು. ಸಿಟ್ಟಾಗಿ ಹೋದವರು. 'ವಿಪಿನದೊಳು ಮದಕರಿಯ ಹಿಂಡು ಆನಂದದ ಲೀಲೆಯೊಳಾಡುತ್ತಿರಲು ಕೇಸರಿ ಬರಲು ಮದಕರಿಗಳೆಲ್ಲ ಕೆದರಿ ಓಡುವ ತೆರನಂತೆ ಸಾಕಾರಸೊಡ್ಡಳ ನಿಮ್ಮ ಶರಣ ಪ್ರಭುದೇವರು ಬರಲೊಡನೆ ಹರಿದುದಯ್ಯಾ ನೆರೆದ ಶಿವಗಣಂಗಳು!' ಎಂದು ಮೂದಲಿಸಿ ಮಾತನಾಡಿದರು ಸೊಡ್ಡಳ ಬಾಚರಸರಂಥವರು. ಆದರೆ ಜಂಗಮಪ್ರಾಣಿ ಬಸವಣ್ಣನಿಗೆ ನಿಂತ ನೆಲ 'ಕುಸಿದ ಹಾಗಾಗಿದ್ದಿತು. ಇದನ್ನರಿತ ಅಲ್ಲಮಪ್ರಭು, 'ಕಡೆಯಿಲ್ಲದ ದೇಶವ ತಿರುಗಿದೆನು. ಹವಣಿಲ್ಲದ ಕಂಥೆಯ ತೊಟ್ಟೆನು. ಹಸಿವಿಲ್ಲದ ಕಪ್ಪರವ ಹಿಡಿದು ಭಕ್ತಿ ಭಿಕ್ಷವ ಬೇಡ ಬಂದೆ, ಗುಹೇಶ್ವರ ಹಸಿದನು. ಉಣಲಿಕ್ಕೆ

---

* **"ಕುಂಡಲಿಯನಂಡಲೆದು ರವಿ ಶಿಶಿ । ಮಂಡಲಂಗಳ ಮೀರಿ ಕಾಮದ ।**
ಕಂಡಿಗಳ ಕೀಲಿಸಿ ಸುಸುಮ್ನಾ ನಾಳದೊಳಗಡರಿ ॥
ಮಂಡಿಸಿದನಾ ಶೂನ್ಯ ಪೀಠದ । ಮಂಡೆಯೊಳು ತೊಳು ತೊಳಗಿ ಬೆಳಗಿಯ।
ಖಂಡ ತೇಜೋ ಮೂರ್ತಿಯಲ್ಲಮ ಲಿಂಗಲೀಲೆಯಲಿ ॥"

**– ಪ್ರ. ಲಿಂ. ಲೀ. ಗ. ೨೨. ಪ. ೫೦**




**ಶಿವಶರಣರ ಸಮೂಹದಲ್ಲಿ ಪ್ರಭುವಿನ ಸ್ಥಾನ ಪ್ರಭುವಿನದೇ'**

ಕೇಳಾ, ಸಂಗನ ಬಸವಣ್ಣಾ!' ಎಂದು ಆರೋಗಣೆಯ ಅಪೇಕ್ಷೆಯನ್ನು ವ್ಯಕ್ತಮಾಡಿದನು. ಆ ಎಲ್ಲ ಶಿವಗಣಂಗಳಿಗಾಗಿ ಸಿದ್ಧಗೊಳಿಸಿದ್ದ ಭಕ್ಷ್ಯಭೋಜ್ಯಗಳನ್ನೆಲ್ಲ ಒಬ್ಬನೇ ಆರೋಗಿಸಿದನು. 'ಬಸುರಿ ಹೆಂಗಸಿನೂಟ ಹೊಟ್ಟೆಯ ಶಿಶುವ ತಣಿಸುವಂತೆ, 'ತೊರೆಯುದಕವ ಕೆರೆಯುಂಡು ತೃಪ್ತವಾಗಲು ಆ ಕೆರೆಯುದಕವ ಹಲವು ಕೆಲವು ಸ್ಥಾವರಜಂಗಮಂಗಳುಂಡು ತೃಪ್ತಿ ಪಡೆವಂತೆ' ಪ್ರಭುದೇವರ ತೃಪ್ತಿ ಅಸಂಖ್ಯಾತರ ತೃಪ್ತಿಯಾಯಿತು! ಬಸವನ ಭಕ್ತಿ, ಪ್ರಭುವಿನ ಶಕ್ತಿ ಎರಡೂ ಬಾಂದಳಕ್ಕೇರಿ ಮೆರೆದುವು!

ಶಿವಶರಣರ ಸಮೂಹದಲ್ಲಿ ಪ್ರಭುವಿನ ಸ್ಥಾನ ಪ್ರಭುವಿನದೇ. ಅಲ್ಲಮ ವ್ಯೋಮದಲ್ಲಿ ಬಸವ ಭಾಸ್ಕರ, ಚೆನ್ನಬಸವ ಚಂದ್ರ, ಅಕ್ಕ ಅರುಂಧತಿ, ಸಿದ್ಧರಾಮ ಗುರು, ಉಳಿದವರು ಇತರ ಗ್ರಹತಾರೆಗಳು. ಕಲ್ಯಾಣದ ಪುಷ್ಪಾಚಯದಲ್ಲಿ ಅರಳಿದ ಹೂಗಳಾಗಿ ಎಲ್ಲ ಶರಣರೂ ಶೋಭಿಸಿದರೆ ಸಸಿಯ ಸಲಹಿದ ತೋಟಿಗ ಪ್ರಭುರಾಯ. 'ಸಮತೆ ಸೈರಣೆಯ ಬೇಲಿಯನಿಕ್ಕಿ ಆವಾಗಲೂ ಜಾಗರವಿದ್ದು' ಆ ತೋಟವ ಕಾಯ್ದ ತೋಟಿಗ ಅಲ್ಲಮಪ್ರಭುರಾಯ. "ನಾ ದೇವನಲ್ಲದೆ ನೀ ದೇವನಾದರೆ ಎನ್ನನೇಕೆ ಸಲಹೆ? ಆರೈದು ಒಂದು ಕುಡಿತೆ ನೀರನೆರೆವೆ. ಹಸಿದಾಗ ಒಂದು ತುತ್ತು ಒಗರವನಿಕ್ಕುವೆ. ನಾ ದೇವ ಕಾಣಾ, ಗುಹೇಶ್ವರಾ! ಎಂದು ಹೇಳುವ ಕೆಚ್ಚು ಇನ್ನಾರಿಗಿದೆ? "ಸಚರಾಚರ ಒಂದು ಕಿಂಚಿತ್ ! ಚತುರ್ಯುಗವೆಂಬುದೊಂದು ಕಿಂಚಿತ್ ! ಅಪ್ಪುದೆಂಬುದೊಂದು ಕಿಂಚಿತ್ ! ಆಗದೊಂಬುದೊಂದು ಕಿಂಚಿತ್ ! ತಾನು ಶುದ್ಧನಾದ ಶರಣಂಗೆ ಗುಹೇಶ್ವರನೆಂಬುದೊಂದು ಕಿಂಚತ್ !" ಎಂದು ನುಡಿವ ಧೈರ್ಯ ಇನ್ನಾರಿಗಿದೆ? ಹಿಂದಣ ಕವಿಗಳೆನ್ನ ತೊತ್ತಿನ ಮಕ್ಕಳು ! ಮುಂದಣ ಕವಿಗಳೆನ್ನ ಕರುಣದ ಕಂಗಳು! ಆಕಾಶದ ಕವಿಗಳೆನ್ನ ತೊಟ್ಟಿಲ ಕೂಸುಗಳು ! ಹರಿಬ್ರಹ್ಮರೆನ್ನ ಕಕ್ಷಿಕುಳ ! ನೀ ಮಾವ, ನಾನಳಿಯ–ಗುಹೇಶ್ವರಾ!" ಎಂದು ಹೇಳುವ ಎಂಟೆದೆ ಯಾರಿಗಿದೆ? "ಎನ್ನ ಕರಸ್ಥಲದೊಳಗಿದ್ದು ಎನ್ನೊಡನೆ ನುಡಿಯೆ, ಅಯ್ಯಾ! ನಿನ್ನ ಹಲ್ಲ ಕಳೆದರೆ ಒಡೆಯರುಂಟೆ?" ಎಂದು ಕೇಳುವ ಸಾಮರ್ಥ್ಯವಿನ್ನಾರಿಗಿದೆ? "ಹರಿ ಹೊಲಬ ನರಿಯ ; ಬ್ರಹ್ಮ ಮುಂದನರಿಯ ; ರುದ್ರಲೆಕ್ಕವ ಮರೆದು ಜಪವನೆಣಿಸುವ ; ಈಶ್ವರ ಪವನಯೋಗದಲ್ಲಿ ಮಗ್ನನಾದ ; ಸದಾಶಿವನು ಭಾವದಲ್ಲಿ ಭ್ರಮಿತನಾದ ! ಒಂದೊಡಲೊಳಗಣ ಬಾಲಕರೈವರು ನಿಮ್ಮನೆತ್ತಬಲ್ಲರು, ಗುಹೇಶ್ವರಾ?" ಎಂದು ಪ್ರಶ್ನಿಸುವ ಶಕ್ತಿ ಇನ್ನಾರಿಗಿದೆ? "ದೇವಲೋಕದವರೆಲ್ಲರು ವ್ರತಗೇಡಿಗಳೆಂಬೆ! ಮರ್ತ್ಯಲೋಕದವರ ಭಕ್ತದ್ರೋಹಿಗಳೆಂಬೆ! ದೇವಸಂಭ್ರಮ ಗಣಪದವಿಯ ಪಡೆದವರೆಲ್ಲ ಕುಂಭಕರ್ಣನಂತೆ ಅತಿನಿದ್ರಿತರೆಂಬೆ! ಅನಂತರಶೀಲರ ಕಂಡರೆ ಕೈ ಕೂಲಿಕಾರರೆಂಬೆ–ಗುಹೇಶ್ವರ ಲಿಂಗೈಕ್ಯವನರಿಯರಾಗಿ!" ಎಂದು ಸಾರುವ ಸಾಹಸವಿನ್ನಾರಿಗಿದೆ?

'ಮಾತಿನ ಮೊದಲನರಿತ' ಪ್ರಭುವಿನ ಮಾತೆಲ್ಲ ಜ್ಯೋತಿರ್ಲಿಂಗ. ಅಲ್ಲಯ್ಯನದು ಅಧಿಕಾರವಾಣಿ. ಅದು ವಿದ್ಯುನ್ಮಯ ವಾಕ್ಯಗಳಲ್ಲಿ ವ್ಯಕ್ತವಾಯಿತು. ಅವನ ಮಹಾವಾಕ್ಯಮಂಜರಿ ಮರವೆಯ ಮಂಜಿನ ಮೋಹರಕ್ಕೆ ಪಂಜಿನ ಪುಂಜದಂತೆ ಇದ ಕೇಳಿ:

"ಮರನೊಳಗಣ ಪ್ರತ್ರಫಲಂಗಳು ಮರಕಾಲವಶದಲ್ಲಿ ತೋರುವಂತೆ
ಹರನೊಳಗಣ ಪ್ರಕೃತಿ ಸ್ವಭಾವಂಗಳು ಹರಭಾವದಿಚ್ಛೆಗೆ ತೋರುವುವು!
ಲೀಲೆಯಾದೊಡೆ ಉಮಾಪತಿ, ಲೀಲೆ ತಪ್ಪಿದರೆ ಸ್ವಯಂಭು, ಗುಹೇಶ್ವರಾ!"

ಆ ಸ್ವಯಂಭುಲಿಂಗಕ್ಕೆ ಇದು ಪೂಜೆ :

"ಗಗನವೇ ಗುಂಡಿಗೆ, ಆಕಾಶವೆ ಅಗ್ಗವಣಿ, ಚಂದ್ರಸೂರ್ಯರಿಬ್ಬರು ಪುಷ್ಪ,
ಬ್ರಹ್ಮಧೂಪ, ವಿಷ್ಣುದೀಪ, ರುದ್ರನೊಗದ ಸುಯಿಧಾನ ನೋಡಾ !
ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ !"

ಇದ್ದಲ್ಲಿಯೇ ಈ ವಿಶ್ವಲಿಂಗಕ್ಕೆ ಪೂಜೆ ಮಾಡುತ್ತಿರು :

"ಇಹಲೋಕ ಪರಲೋಕ ತಾನಿದ್ದಲ್ಲಿ; ಗಗನಮೇರು ಮಂದಿರ ತಾನಿದ್ದಲ್ಲಿ;ಸಕಲ ಭುವನ ತಾನಿದ್ದಲ್ಲಿ ; ಸತ್ಯನಿತ್ಯ ನಿರಂಜನ ತತ್ತ್ವ ತಾನಿದ್ದಲ್ಲಿ ; ಉತ್ತರೊತ್ತರ ಛತ್ರವಳೆಯ ತಾನಿದ್ದಲ್ಲಿ ; ಚಂದ್ರಸೂರ್ಯ ತಾರಾ ಮಂಡಲ ತಾನಿದ್ದಲ್ಲಿ;ಅಂತರ ಮಹದಂತರ ತಾನಿದ್ದಲ್ಲಿ ; ಸ್ವತಂತ್ರ ಗುಹೇಶ್ವರಲಿಂಗ ತಾನಿದ್ದಲ್ಲಿ !"

ಇದನ್ನು ಮರೆದು, ಮರವೆಯಲ್ಲಿ ಬೆರೆದು,

"ಸತ್ತು ಹುಟ್ಟಿ ಕೆಟ್ಟವರೆಲ್ಲರೂ ದೇವಲೋಕಕ್ಕೆ ಹೋದರೆಂಬ ಬಾಲಭಾಷೆಯ ಕೇಳಲಾಗದು! ಸಾಯದ ಮುನ್ನ ಸ್ವಯವನರಿದೊಡೆ ದೇವನೊಲಿವ,
ಗುಹೇಶ್ವರ!"

ಆ ಸ್ವಯವನರಿವ ಪರಿ ಯಾವುದು?

"ಸುತ್ತಿ ಸುತ್ತಿ ಬಂದಡಿಲ್ಲ ; ಲಕ್ಷಗಂಗೆಯ ಮಿಂದಡಿಲ್ಲ; ತುತ್ತತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ ; ನಿತ್ಯನೇಮದಿಂದ ತನುವಮುಟ್ಟಿಕೊಂಡಡಿಲ್ಲ,
ನಿಚ್ಚಕ್ಕೆ ನಿಚ್ಚನೆನೆವ ಮನವ ಚಿತ್ತದಲ್ಲಿ ನಿಲ್ಲಿಸಬಲ್ಲದೆ ಬಚ್ಚಬರಿಯ ಬೆಳಗು,
ಗುಹೇಶ್ವರಲಿಂಗವು !"

ಆ ಬಚ್ಚಬರಿಯ ಬೆಳಗು ನಮ್ಮದಾಗಬೇಕು. ಆಗದಿದ್ದರೆ ಲಿಂಗವ ಪೂಜಿಸಿ ಫಲವೇನು?

"ಮೇರುವ ಸಾರಿದ ಹೊಂಬಣ್ಣವಾಗದಿರ್ದರೆ ಆ ಮೇರುವಿಂದತ್ತಣ
ಹುಲು ಮೊರಡಿ ಸಾಲದೆ, ದೇವಾ? ನಿಮ್ಮ ಪೂಜಿಸಿ ಧಾವತಿಗೊಂಬಡೆ
ಆ ಧಾವತಿಯಿಂದ ಮುನ್ನಿನ ವಿಧಿಯೇ ಸಾಲದೆ? ಗುಹೇಶ್ವರಾ, ನಿಮ್ಮ
ಪೂಜಿಸಿ ಸಾವೊಡೆ ನಿಮ್ಮಿಂದ ಹೊರಗಣ ಜವನೆ ಸಾಲದೆ?"

ಇದೇನೋ ಸರಿ, ಆದರೆ ಎಲ್ಲ ಪೂಜೆಗೆ ಸಾವ ಜಯಿಸುವ ಶಕ್ತಿಯಿದೆಯೆ? ಇಲ್ಲ. ಯಾವ ಪೂಜೆಗಿದೆ ಹಾಗಾದರೆ? "ಆಯತವಾಯಿತು ಅನುಭಾವ, ಏಕಾರ್ಥವಾಗಿ ಅರಿವಿನ ಹೃದಯ ಕಣ್ದೆರೆದು ಅನಂತಲೋಕಾಲೋಕದ ಅಸಂಖ್ಯಾತ ಮಹಾಗಣಂಗಳೆಲ್ಲರೂ ಲಿಂಗಭಾವದಲ್ಲಿ ಭರಿತರಾಗಿ, ಗಗನ ಸಿದ್ಧಾಂತದಿಂದ ಉಪದೇಶಕ್ಕೆ ಬಂದು ಭಕ್ತಿರಾಜ್ಯವನೆ ಹೊಕ್ಕು, ನಿಜಲಿಂಗಸುಕ್ಷೇತ್ರವನೆ ಕಂಡು,ಅಮೃತಸರೋವರದೊಳಗಣ ವಿವೇಕ ವೃಕ್ಷ ಪಲ್ಲವಿಸಲು, ವಿರಕ್ತಿ ಎಂಬ ಪುಷ್ಪ ವಿಕಸಿತವಾಗಲು, ಪರಮಾನಂದ ಮಠದೊಳಗೆ ಪರಿಣಾಮ ಪಶ್ಚಿಮ ಜ್ಯೋತಿಯ ಬೆಳಗಿನಲ್ಲಿ ಪರುಷದ ಸಿಂಹಾಸನವನಿಕ್ಕಿ ಪ್ರಾಣಲಿಂಗಮೂರ್ತಿ ಗೊಂಡಿರಲು ದಕ್ಷಿಣವ ದಾಂಟಿ, ಉತ್ತರಾಬ್ಧಿಯಲ್ಲಿ ನಿಂದು, ಆಖಂಡಪರಿಪೂರ್ಣ ಪೂಜೆಯ ಮಾಡುವರಿಗೆ ನಮೋ ನಮೋ ಎಂಬೆ ಗುಹೇಶ್ವರಾ!"

ಈ ವಚನಗಳನ್ನು ಓದುತ್ತಿದ್ದಂತೆ, 'ಮನದ ಸಂಚದೋವರಿಯೊಳಗೆ ಮಿಂಚಿನಗೊಂಚಲು ಬಳ್ಳಿವರಿಯಿತ್ತಯ್ಯ!" ಎಂದು ಸೊಡ್ಡಳಬಾಚರಂತೆ ನಾವೂ ನುಡಿಯಬೇಕೆನ್ನಿಸುತ್ತದೆ. ಪ್ರಭುವಿನ ವ್ಯಕ್ತಿತ್ವ 'ಜಗದಗಲ, ಮುಗಿಲಗಲ, ಮಿಗೆಯಗಲ'ವಾಗಿ ಮೂಡಿ ನಿಲ್ಲುತ್ತದೆ.

ಯಾವಾಗಲೂ ಪರಮಾನುಭಾವದ ಪರಮೋಚ್ಚ ಶಿಖರದಲ್ಲಿಯೇ ವಿರಾಜಿಸುವುದಿಲ್ಲ ಪ್ರಭುರಾಯ. ಪಾಮರರ ಸಲುವಾಗಿ ಒಮ್ಮೊಮ್ಮೆ ಕೆಳಗಿಳಿದು ಬಂದೂ ದರ್ಶನವೀಯುತ್ತಾನೆ. ಆಗ ಅವನ ವಚನಗಳು ಸೀಯಾಳದಂತೆ, ಸುಲಿದ ಬಾಳೆಯ ಹಣ್ಣಿನಂತೆ, ನೊರೆವಾಲಿನಂತೆ.

ಈ ಸಾಮಾನ್ಯ ದೃಷ್ಟಾಂತದಿಂದ ಅಸಾಮ್ಯಾನವಾದುದನ್ನು ಅರುಹುವ ಪರಿ:

"ಕಾಲುಗಳೆರಡು ಗಾಲಿ ಕಂಡಯ್ಯ; ದೇಹವೆಂಬುದು ತುಂಬಿದ ಬಂಡಿ ಕಂಡಯ್ಯ
ಬಂಡಿಯ ಹೊಡೆವರೈವರು ಮಾನಿಸರು:ಒಬ್ಬರಿಗೊಬ್ಬರು ಸಮವಿಲ್ಲವಯ್ಯ!
ಅದರಿಚ್ಛೆಯನರಿದು ಹೊಡೆಯದಿದ್ದರೆ ಅದರಚ್ಚು ಮುರಿದಿತ್ತು, ಗುಹೇಶ್ವರಾ!"

ಈ ಮನ ಮೆಚ್ಚುವ ವಿಡಂಬನ :

"ಸಂಸಾರವೆಂಬ ಹೆಣಬಿದ್ದರೆ ತಿನಬಂದ ನಾಯ ಜಗಳವ ನೋಡಿರೆ !
ನಾಯಜಗಳವ ನೋಡಿ ಹೆಣವೆದ್ದು ನಗುತ್ತಿದೆ !
ಗುಹೇಶ್ವರನೆಂಬ ಲಿಂಗ ಅಲ್ಲಿಲ್ಲ ಕಾಣಿರೆ !"

ಈ ಕಾಲಲೀಲೆಯ ವೈಚಿತ್ರ್ಯದ ಚಿತ್ರ :

"ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ
'ಆಗಲಿ, ಮಹಾ ಪ್ರಸಾದ'ವೆಂದನಯ್ಯ ! ತ್ರೇತಾಯುಗದಲ್ಲಿ ಶ್ರೀಗುರು
ಶಿಷ್ಯಂಗೆ ಬಯ್ದು ಬುದ್ಧಿಯ ಕಲಿಸಿದರೆ 'ಆಗಲಿ, ಮಹಾಪ್ರಸಾದ'ವೆಂದನಯ್ಯ!
ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದರರೆ
'ಆಗಲಿ, ಮಹಾಪ್ರಸಾದ'ವೆಂದನಯ್ಯ ! ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ
ವಂದಿಸಿ ಬುದ್ಧಿಯ ಕಲಿಸಿದರೆ 'ಆಗಲಿ, ಮಹಾಪ್ರಸಾದ'ವೆಂದನಯ್ಯ !
ಗುಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು !"

ಈ ಕತ್ತಲೆಯ ಬಿತ್ತರದ ಬಿತ್ತರಣೆ

"ಹಿಡಿವ ಕೈಯ ಮೇಲೆ ಕತ್ತಲೆಯಯ್ಯ !
ನೋಡುವ ಕಂಗಳ ಮೇಲೆ ಕತ್ತಲೆಯಯ್ಯ !
ನೆನೆವ ಮನದ ಮೇಲೆ ಕತ್ತಲೆಯಯ್ಯ !
ಕತ್ತಲೆಯೆಂಬುದು ಇತ್ತಲೆಯಯ್ಯ–
ಗುಹೇಶ್ವರನೆಂಬುದು ಅತ್ತಲೆಯಯ್ಯ !"

ಈ ಸುಖದ ಶೋಧನೆಯ ಸೊಗಸು :

"ಭಕ್ತಿಯೆಂಬುದು ಯುಕ್ತಿಯೊಳಗು, ಪೂಜೆಯೆಂಬುದು ನಿರ್ಮಾಲ್ಯದೊಳಗು:
ಪ್ರಸಾದವಂಬುದು ಒಗರದೊಳಗು;ಆಚಾರವೆಂಬುದು ಅನಾಚಾರದೊಳಗು;
ಧರ್ಮವೆಂಬುದು ಅಧರ್ಮದೊಳಗು; ಸುಖವೆಂಬುದು ದುಃಖದೊಳಗು;
ವ್ರತವೆಂಬುದು ವೈರಾಗ್ಯದೊಳಗು; ನೇಮವೆಂಬುದು ಉದ್ಯೋಗದೊಳಗು;
ಆಶೆಯೆಂಬುದು ಹಿಂಸೆಯೊಳಗು; ಇವಾರಂಗಳಲು ಇಲ್ಲದೆ, ಗುಹೇಶ್ವರಾ;
ನಿಮ್ಮ ಶರಣ ಸುಖಿಯಾಗಿದ್ದನು !;

ಈ ಮಾಯೆಯ ಮೂಲದ ದರ್ಶನ :

"ಹೊನ್ನುಮಾಯೆಯೆಂಬರು, ಹೆಣ್ಣುಮಾಯೆಯೆಂಬರು, ಮಣ್ಣುಮಾಯೆ
ಯೆಂಬರು, ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆ
ಯಲ್ಲ, ಮನದ ಮುಂದಣಾಸೆಯೆ ಮಾಯೆ ಕಾಣಾ ಗುಹೇಶ್ವರಾ."

ಈ ದೇವತ್ವದ ಗುಟ್ಟನ್ನು ರಟ್ಟುಮಾಟುವ ಜಾಣ್ಮೆ :

"ಎಣ್ಣೆ ಬೇರೆ, ಬತ್ತಿ ಬೇರೆ : ಎರಡೂ ಕೂಡಿ ಸೊಡರಾಯಿತ್ತು. ಪುಣ್ಯ ಬೇರೆ, ಪಾಪ ಬೇರೆ ! ಎರಡೂ ಕೂಡಿ ಒಡಲಾಯಿತ್ತು. ಮಿಗಬಾರದು, ಮಿಗದಿರ ಬಾರದು ! ಒಡಲಿಚ್ಚೆಯ ಸಲಿಸದೆ ನಿಮಿಷವಿರಬಾರದು ! ಕಾಯಗುಣವಳಿದು ಮಾಯಾ ಜ್ಯೋತಿ ವಾಯುವ ಕೂಡದ ಮುನ್ನ ಭಕ್ತಿಯ ಮಾಡಬಲ್ಲಾತನೆ ದೇವ, ಗುಹೇಶ್ವರಾ !"

ಪ್ರಭುವಿನ ವಚನಗಳಲ್ಲಿ ಇನ್ನೊಂದು ವೈಶಿಷ್ಟ್ಯವಿದೆ. ಅವನಂತೆ ಬೆಡಗಿನ ವಚನಗಳನ್ನು ಬೆಡಗಿನ ಕಡವರವಾಗಿ ಬಿತ್ತರಿಸಿದವರಿಲ್ಲ. ಮೊದಲ ಸಲ ಓದಿದಾಗ ಏನೊಂದು ಅರ್ಥವಾಗದಿದ್ದರೂ ಅರ್ಥದ ಒಂದು ಎಳೆ ಸಿಕ್ಕರೆ ಸಾಕು–ಇಡಿಯ ವಚನದ ಅರ್ಥ ವಿಶದವಾಗುತ್ತ ಆನಂದದ ಉಯ್ಯಾಲೆಯಲ್ಲಿ ತೂಗುಯ್ಯಾಲೆಯ ನಾಡುತ್ತ ಹೋಗುತ್ತದೆ ಮನಸ್ಸು ಮಾದರಿಗಾಗಿ:

"ಭಕ್ತಿ ಮೂರರ ಮೇಲೆ ಚಿತ್ರವ ಬರೆಯಿತ್ತು.
ಪ್ರಥಮ ಭಿತ್ತಿಯ ಚಿತ್ರ ಚಿತ್ರದಂತಿದ್ದಿತ್ತು ;
ಎರಡನೆಯ ಭಿತ್ತಿಯ ಚಿತ್ರ ಹೋಗುತ್ತ ಬರುತ್ತ ಇದ್ದಿತ್ತು ;
ಮೂರನೆಯ ಬಿತ್ತಿಯ ಚಿತ್ರ ಹೋಯಿತ್ತು–ಮರಳಿಬಾರದು !
ಗುಹೇಶ್ವರಾ, ನಿಮ್ಮ ಶರಣ ತ್ರಿವಿಧದಿಂದತ್ತಲೆ !"

ಇಲ್ಲಿ ಮೂರು ಭಿತ್ತಗಳೆಂದರೆ ಸ್ಥೂಲ–ಸೂಕ್ಷ್ಮ–ಕಾರಣಗಳೆಂಬ ಮೂರು ತನುಗಳು, ಮೂರು ಚಿತ್ರಗಳೆಂದರೆ ಇಷ್ಟ–ಪ್ರಾಣ–ಭಾವಗಳೆಂಬ ಮೂರು ಲಿಂಗಗಳು–ಎಂಬುದು ಅರ್ಥವಾದರೆ ಇಡಿಯ ವಚನದ ಅನುಪಮವಾದ ಅರ್ಥ ಸೌಂದರ್ಯ ವೇದ್ಯವಾಗಿ ಅಮಿತಾನಂದವಾಗುತ್ತದೆ.

ಅರ್ಥ ತಿಳಿಯದಿದ್ದರೂ ಭಾವಭಾಷೆಗಳ ಭವ್ಯತೆಗೇ ಬೆರಗಾಗಿ ಹರುಷವಾಗುವಂಥ ವಚನಗಳೂ ಉಂಟು :

"ವಾಯು ನಿದ್ರೆಗೈದಡೆ ಆಕಾಶ ಜೋಗುಳ ಹಾಡಿತ್ತು !
ಬಯಲು ಬಳಲಿದೆನೆಂದೊಡೆ ನಿರಾಳ ಮೊಲೆಗೊಟ್ಟಿತ್ತು !
ಆಕಾಶವಡಗಿತ್ತು, ಜೋಗುಳ ನಿಂದಿತ್ತು !
ಗುಹೇಶ್ವರನೈದಾನೆ ಇಲ್ಲದಂತೆ !"

ಪ್ರಭುವಿನ ಭಾಷೆಯೇ ಪ್ರಭಾವಶಾಲಿಯಾದುದು. ಅದಕ್ಕೆ ಉಜ್ವಲ ವಿಚಾರಗಳೂ ಸೇರಿ ಸಿಡಿಲ ಹೆಗಲನ್ನೇರಿ ಮಿಂಚು ಬಂದಂತಾಗುತ್ತವೆ ಆ ವಚನಗಳು :

‘ಸಿಡಿಲು ಹೊಯ್ದ ಬಾವಿಗೆ ಸೋಪಾನವೇಕೊ ?’

‘ಅಂಗೈಯಲೊಂದು ಅರಳ್ದಲೆಂದು ಹಿಡಿದುಕೊಂಡು ಕಂಗಳ ಮುಕ್ತ ಪವಣಿಸುವಾಕೆ ನೀನಾರು ಹೇಳಾ?’

‘ನಾರು ಬೇರಿನ ಕುಟಿಲಕುಹಕದ ಕಪಟಯೋಗವಲ್ಲಿದು ನಿಲ್ಲು ಭೋ !’

‘ಬಯಲ ಬಿತ್ತಲು ಇಲ್ಲ, ಒಕ್ಕಲೂ ಇಲ್ಲ, ತೂರಲೂ ಇಲ್ಲ!’

‘ಮನದ ಕೊನೆಯ ಮೊನೆಯ ಮೇಲೆ ನೆನೆದ ನೆನಗು ಜನನ ಮರಣದ ನಿಲಿಸಿ,

ಜ್ಞಾನಜ್ಯೋತಿಯ ಉದಯ ಭಾನುಕೋಟಿಯ ಮೀರಿ ಸ್ವಾನುಭವದ ಉದಯ
ಜ್ಞಾನಶೂನ್ಯದಲಡಗಿದ ಘನವನೇನೆಂಬೆ, ಗುಹೇಶ್ವರಾ ?’
ಹೊರಗನೆ ಕೊಯ್ದು, ಹೊರಗನೆ ಪೂಜಿಸಿ ಹೊರಗಾಗಿ ಹೋಯಿತ್ತು
ತ್ರಿಜಗವೆಲ್ಲ !’

‘ತಂದೆತಾಯಿಯಿಲ್ಲದ ಕಂದಾ, ನಿನ್ನಿಂದ ನೀನೇ ಹುಟ್ಟಿ ಬಳೆದೆಯಲ್ಲ !’

‘ಒಂದು ಇಲ್ಲದ ಬಿಂದುವ, ತಂದೆಯಿಲ್ಲದ ಕಂದನ, ಮಾತೆಯಿಲ್ಲದ ಜಾತನ,
ಗಮನವಿಲ್ಲದ ಗಮ್ಯನ’

‘ಬಂದು ಬಾರದ ನಿಂದ ನಿರಾಳ ಗುಹೇಶ್ವರ’

‘ತನ್ನ ತಾನರಿದವಂಗೆ ಇದಿರೆಂಬುದಿಲ್ಲ’

‘ಕೆಂಡದ ಮಳೆ ಕರೆದಲ್ಲಿ ಉದಕವಾಗಿರಬೇಕು’

‘ಒಲವಿನ ಕೂಟಕ್ಕೆ ಹಾಸಿಗೆಯ ಹಂಗೇಕೆ?

‘ತನುವಿನ ಕೊರತೆಗೆ ಸುಳಿಸುಳಿದು, ಮನದ ಕೊರತೆಗೆ ನೆನೆನೆನೆದು, ಭಾವದ ಕೊರತೆಗೆ ತಿಳಿತಿಳಿದು, ಶಬ್ದದ ಕೊರತೆಗೆ ಉಳಿದುಳಿದು ಗುಹೇಶ್ವರನೆಂಬ ಲಿಂಗವು ಮನದಲ್ಲಿ ನೆಲೆಗೊಳ್ಳದಾಗಿ’

‘ರೂಪವನೆ ಕಂಡರು, ನಿರೂಪವನೆ ಕಾಣರು; ಅನುವನೇ ಕಂಡರು, ಘನವನೇ ಕಾಣರು ; ಆಚಾರವನೆ ಕಂಡರು, ವಿಚಾರವನೆ ಕಾಣರು ; ಗುಹೇಶ್ವರಾ, ನಿಮ್ಮ ಕುರುಹನೇ ಕಂಡರು, ಕೂಡಲರಿಯದೆ ಕೆಟ್ಟರು !’

‘ಹೊನ್ನತೂಗಿದ ತ್ರಾಸು ಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ?’

‘ಕಾಲಿಲ್ಲದ ಗಮನ, ಕೈಯಿಲ್ಲದ ಸೋಂಕು, ಬಾಯಿಯಿಲ್ಲದ ರುಚಿ’

‘ಹರಿವ ನೀರಿಗೆ ಮೈಯೆಲ್ಲ ಕಾಲು ; ಉರಿವ ಅಗ್ನಿಗೆ ಮೈಯೆಲ್ಲ ನಾಲಗೆ;

ಅರಿದ ಶರಣಂಗೆ ಸರ್ವಾಂಗ ಲಿಂಗ !'

'ಸತ್ಯವೆಂಬುದೇ ಸುಶೀಲ'

'ಹಸಿದಡೆ ಉಣಬಹುದೆ ನಸುಗುನ್ನಿಯ ತುರುಚೆಯ?'

'ನೆನಹು ಸತ್ತಿತ್ತು, ಭ್ರಾಂತು ಬೆಂದಿತ್ತು, ಅರಿವು ಮರೆಯಿತ್ತು, ಕುರುಹುಗೆಟ್ಟಿತ್ತು!'

'ಕೊಟ್ಟ ಕುದುರೆಯನೇರದೆ ಮತ್ತೊಂದು ಕುದುರೆಯ ಬಯಸುವವರು
ವೀರರೂ ಅಲ್ಲ, ಧೀರರೂ ಅಲ್ಲ !'

'ನಾಮವಿಲ್ಲದ ದೇವರಿಗೆ ನೇಮವೆಲ್ಲಿಯದೊ ?'

'ಅರಿಯದಿರೆರಡು, ಅರಿದರೊಂದೆ !'

'ಅಮರತೆಯ ಹೊಲಬನರಿಯದೆ ಜಗವೆಲ್ಲ ಬರಡಾಯಿತ್ತು !'

'ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ'

'ತನ್ನ ವಚನ ತನಗೆ ಹಗೆಯಾದರೆ ಅದೇ ಪ್ರಳಯ !'

'ಮಾತೆಂಬುದು ಜ್ಯೋತಿರ್ಲಿಂಗ'

'ಬೆಟ್ಟಕ್ಕೆ ಚಳಿಯಾದಡೆ ಏನ ಹೊದ್ದಿಸುವಿರಯ್ಯಾ ? ಬಯಲುಬತ್ತಲೆ ಇರ್ದರೆ
ಏನ ಉಡಿಸುವಿರಯ್ಯಾ ?'

ಹೀಗೆ ಸಾವಿರಾರು ಸಾರವತ್ತಾದ ಸೂಕ್ತಿ ಮೌಕ್ತಿಕಗಳು ಮಿನುಗುತ್ತಲಿವೆ ಅವನ ವಚನಗಳಲ್ಲಿ. 'ಎರಡೆಂಬತ್ತುಕೋಟಿ ವಚನವ ಹಾಡಿ ಹಲವು ಹಂಬಲಿಸಿತೆನ್ನ ಮನವು !' ಎಂದು ಉದ್ಗರಿಸಿದ ಪ್ರಭು. ತನ್ನ ವಚನಗಳ ಸಂಖ್ಯೆಯನ್ನು ಸೂಚಿಸಿರುವನೋ ಬಸವಯುಗದ ವಚನಗಳ ಸಂಖ್ಯೆಯನ್ನು ಸೂಚಿಸಿರುವನೋ ತಿಳಿಯದು. ಸಾಹಿತ್ಯ ಕ್ಷೇತ್ರದಲ್ಲಿ ಸಂಖ್ಯೆಗೆ ಮಾತ್ರ ಮಹತ್ವವಿಲ್ಲ, ಸಂಖ್ಯೆಯೇನೇ ಇರಲಿ, ಪ್ರಭುವಿನ ವಚನಗಳು ಕನ್ನಡ ಸಾಹಿತ್ಯಲೋಕದ ರನ್ನದ ಗಣಿಯೆಂಬುದರಲ್ಲಿ ಇದಿರು ಮಾತಿಲ್ಲ.

'ನಿಂದಿಸರಿದವಗೆ ಹಗೆಯಿಲ್ಲ, ಹೊಗಳಿದವಗೆ ಕೆಳೆಯಿಲ್ಲ'ವೆಂಬ ಉದಾರ ತತ್ತ್ವವೇ ಉದಯಿಸಿದಂತೆ ಬಂದು, 'ತಾಪತ್ರಯದಲ್ಲಿ ಬೆಂದ ಒಡಲ ಹಿಡಿದು ತಂದು, ಜ್ಞಾನವೆಂಬ ಉರಿಗೆ ಆಹುತಿಯ ಕೊಟ್ಟು, ಜ್ಞಾನವೆಂಬ ಕಾಯವ ಹಿಡಿದು ನಿಶ್ಶೂನ್ಯವೆಂಬ ತೇಜದಲ್ಲಿ ಸುಟ್ಟು' ಕೊನೆಗೆ ನಿಶ್ಶೂನ್ಯವೆಂಬ ಶಬ್ದವನ್ನೂ ಭಸ್ಮವ ಧರಿಸಿ ಲಿಂಗೈಕ್ಯನಾಗಿ, ಲೋಕದ ಸ್ಥಿತಿಗತಿಯ ಮರೆದು ನಿರ್ವಾಣದಲ್ಲಿ ನಿಂದ ಪ್ರಭುದೇವರು ಅನುಭವಮಂಟಪದ ಅಧ್ಯಕ್ಷರಷ್ಟೇ ಅಲ್ಲ, ಎಲ್ಲರ ಮನದ ಮಂಟಪದ ಅಧ್ಯಕ್ಷರಾಗಿಯೂ ಬೆಳಗಿದರು. ಕೊನೆಗೆ ಶ್ರೀಶೈಲದ ಕದಳಿಯಲ್ಲಿ, ಮಗಳು

ಮಹಾದೇವಿಯಕ್ಕ ಬಯಲಾದ ಕದಳಿಯಲ್ಲಿ 'ಬಯಲನಪ್ಪಿ ಬಯಲಾದರು.' 'ಕಾಯವೆಂಬ ಕದಳಿಯ ಹೊಕ್ಕು, ಪ್ರಾಣವೆಂಬ ಗಹ್ವರದೊಳಗೆ, ಸಕಲೇಂದ್ರಿಯವೆಂಬ ಕೋಣೆಕೋನೆಗಳಲ್ಲಿ ತಿರುಗಾಡುತ್ತಾ ಬರಲಾಗಿ ಮೇರು ಮಂದಿರದ ತ್ರಿಕೋಣೆಯಲ್ಲಿ ಬೆಳಗಾಯಿತ್ತು!' ಗುಹೇಶ್ವರ ಲಿಂಗವೆಂಬೊಂದು, ರೂಪಾಯಿತ್ತು !'

ಆತನ ವಚನಗಳಲ್ಲಿಯೇ ಹೇಳುವುದಾದರೆ ಆತನು ಕಂಡುದೆಲ್ಲ ಪಾವನವಾಯಿತು; ಕೇಳಿತ್ತೆಲ್ಲ ಪರಮ ಬೋಧೆಯಾಯಿತು; ಮುಟ್ಟಿದ್ದೆಲ್ಲವು ಪರುಷದ ಸೋಂಕಾಯಿತು; ಒಡನೆ ಕೂಡಿದವರೆಲ್ಲರೂ ಸದ್ಯೋನ್ಮುಕ್ತರಾದರು; ಸುಳಿದ ಸುಳುಹೆಲ್ಲ ಜಗತ್ಪಾವನವಾಯಿತು; ಮೆಟ್ಟಿದ ಧರೆಯೆಲ್ಲ ಅವಿಮುಕ್ತ ಕ್ಷೇತ್ರವಾಯಿತು; ಸೋಂಕಿದ ಜಲವೆಲ್ಲ ಪುಣ್ಯತೀರ್ಥವಾಯಿತು ; ಶರಣೆಂದು ಭಕ್ತಿಯ ಮಾಡಿದವರೆಲ್ಲ ಸಾಯುಜ್ಯರಾದರು! ಆತ ನಿಜವನರಿದ ನಿಶ್ಚಿಂತ, ಮರಣವಗೆಲಿದ ಮಹಾಂತ, ಘನವ ಕಂಡ ಮಹಿಮ, ಪರವನೊಳಕೊಂಡು ಪರಿಣಾಮಿ, ಬಯಲ ಬೆರಸಿದ ಭರಿತ, ನಿರಾಳವನೊಳಕೊಂಡು ಸಹಜ. ಆತನು ಸಲಹಿದ ಸಸಿಗಳೆಲ್ಲ ಕಲ್ಪ ವೃಕ್ಷಗಳಾದವು, ಕಲ್ಪಲತೆಗಳಾದುವು ಆದರೆ ಆ ತೋಟವೂ ಹಾಳಾಗದಿರಲಿಲ್ಲ : ಅದು ಕಾಲಲೀಲೆ ! "ತೋಟವ ಬಿತ್ತಿದರೆಮ್ಮವರು ; ಕಾಹ ಕೊಟ್ಟರು ಜವನವರು! ನಿತ್ಯವಲ್ಲದ ಸಂಸಾರದ ವೃಥಾ ಹೋಯಿತ್ತಲ್ಲಾ ! ಗುಹೇಶ್ವರನಿಕ್ಕಿದ ಕಿಚ್ಚು ಹೊತ್ತಿಕ್ಕಲುಂಟು, ಅಟ್ಟುಣ್ಣಲಿಕ್ಕಿಲ್ಲ !" ಎಂದು ಅವರೇ ಉದ್ಗರಿಸಿದ್ದಾರೆ. ಈಶ್ವರನ ಅಗ್ನಿ ಯಾವಾಗಲೂ ಸುಡಲು ಸಿದ್ಧವಾಗಿರುವುದೂ ಅಟ್ಟುಣ್ಣಲು ಇಲ್ಲದಾಗುವುದೂ ಅದೃಷ್ಟದ ಆಟ, ಅವ್ಯಕ್ತದ ಲೀಲೆ !

ಆದರೂ ಅಲ್ಲಮನ ಸೊಲ್ಲು ಕಾಲನ ಕೋರೆದಾಡೆಯನ್ನೂ ಮುರಿದು ಮೊರೆಯುತ್ತಲಿದೆ–'ಹಿಂದಣ ಅನಂತವನು ಮುಂದಣ ಅನಂತವನು' ಸಂಧಿಸುವ ಸೇತುವೆಯಾಗಿ :

"ನೆನೆ ನೆನೆಯೆಂದೊಡೆ ಏನ ನೆನೆವೆನಯ್ಯಾ ? ಎನ್ನ ! ಕಾಯವೇ ಕೈಲಾಸವಾಯಿತ್ತು : ಮನವೇ ಲಿಂಗವಾಯಿತ್ತು ತನುವೇ ಸೆಜ್ಜೆಯಾಯಿತ್ತು! ನೆನೆವಡೆ ದೇವನುಂಟೆ ! ನೋಡುವಡೆ ಭಕ್ತನುಂಟೆ ? ಗುಹೇಶ್ವರ ಲಿಂಗ ಲೀಯವಾಯಿತ್ತು"

ಆ ಸೊಲ್ಲನ್ನು, ತನಿಸೊಲ್ಲನ್ನು, ಅಲ್ಲಯ್ಯನ ಸೊಲ್ಲನ್ನು ಕೇಳುವ ಕಿವಿ ನಮ್ಮದಾಗಲಿ! ಚಾಮರಸನೊಡನೆ ನಾವೂ ಪ್ರಾರ್ಥಿಸೋಣ :

"ಹಿರಿಯರಿಗೆ ಕಿರಿಯರಿಗೆ ಸದಮಲ
ಚರಿತರಿಗೆ ಚತುರರಿಗೆ ಸಜ್ಜನ

ಶರಣರಿಗೆ ಮುಗ್ಧರಿಗೆ ಸಕಲಕಳಾವಿದಗ್ಧರಿಗೆ
ಗರುವರಿಗೆ ಹಿರವರಿಗೆ ಸಚರಾ
ಚರರಿಗನುದಿನ ಕರುಣದಿಂದಲಿ
ವರದನಾಗಲಿ ಗುರುಗುಹೇಶ್ವರ ಲಿಂಗ ಲೀಲೆಯಲಿ!”
ಪ್ರಾಣ ಲಿಂಗೈಕ್ಯ ವಿಜ್ಞಾನರಹಸ್ಯಂ ಯೇನದರ್ಶಿತಂ
ಜಗದ್ಧಿತಾರ್ಥಂ ತಸ್ಮೈಮತ್ ಪ್ರಭವೇ ಶ್ರೀ ಪ್ರಭವೇ ನಮಃ–ಗುರುರಾಜ

■

# ಚಿನ್ಮಯಾನಂದ ಚೆನ್ನಬಸವಣ್ಣ

ವೀರಶೈವಾಚಾರ ಮಾರ್ಗ ವಿ
ಚಾರವಭ್ಯಂತರದೊಳೀಪರಿ
ಯೋರಣಿಸಿ ಹರಕರ್ಮಭಕ್ತಿ ಜ್ಞಾನವಿಗುದೆಂದು
ಧಾರಣೀಯಲರಿವಂತೆ ಕರುಣಾ
ಕಾರನಾಗಿ ಷಡುಸ್ಥಲವನು
ದ್ಧಾರಿಸಿದ ಗುರು ಚೆನ್ನಸಂಗನ ಬಸವ ಶರಣಾರ್ಥಿ ॥

–ಚಾಮರಸ

ಮೂರು ಮಗಮಗಿಸುವ ಹೂಗಳ ಮಧ್ಯದಲ್ಲಿ ಬಸವಣ್ಣನೆಂಬ ಹಣ್ಣು ಬಿಟ್ಟಿತು. ಅವರಲ್ಲಿ ಎರಡು ಹೂಗಳಿಂದ–ಗಂಗಾಂಬಿಕೆ ನೀಲಾಂಬಿಕೆಯರೆಂಬ ಹೂಗಳಿಂದ–ಸತೀತ್ವದ ಅಮಂದ ಸುಗಂಧ ಸೂಸುತ್ತಿದ್ದಿತು ; ಮೂರನೆಯ ಹೂವಿನಿಂದ–ನಾಗಲಾಂಬಿಕೆಯೆಂಬ ಹೂವಿನಿಂದ– ಅಕ್ಕನ ಅಕ್ಕರತೆಯ ಮಕರಂದ ತೊಟ್ಟಿಕ್ಕುತ್ತಿದ್ದಿತು. ಗಂಗಾಂಬೆ ನೀಲಾಂಬೆಯರು ಬಸವಣ್ಣನ ಒಲವಿನ ಹೊನಲಿಗೆ ಎರಡು ದಂಡೆಗಳಾಗಿದ್ದರೆ ಅಕ್ಕ ನಾಗಾಂಬೆ ಆ ಹೊನಲಿಗೆ ತಾಯಿವರಳಿನಂತಿದ್ದಳು.ಈ ಮೂವರಲ್ಲಿ ಒಬ್ಬೊಬ್ಬರಿಗೂ ಒಂದೊಂದು ಮಧುರ ವ್ಯಕ್ತಿತ್ವವಿದೆ.

ಬಸವಣ್ಣನ ತಾಯಿ ಮಾದಲಾಂಬಿಕೆಗೆ ಬಲದೇವ ಸಿದ್ಧರಸರು ಸಹೋದರರಾಗಿದ್ದರು. ಇಬ್ಬರೂ ಚಾಳುಕ್ಯ ರಾಜ್ಯದಲ್ಲಿ ಉನ್ನತಾಧಿಕಾರದಲ್ಲಿದ್ದರು. ಬಲದೇವನು ಬಿಜ್ಜಳನ ಮಹಾಮಂತ್ರಿಯಾಗಿದ್ದರೆ ಸಿದ್ಧರಸನು ಬಿಜ್ಜಳನು ಪ್ರಾಪ್ತವಯಸ್ಕನಾಗುವವರೆಗೆ ಅವನ ರಾಜಧರ್ಮದರ್ಶಿಯಾಗಿದ್ದು ಅವನನ್ನು ಊರ್ಜಿತ ಸ್ಥಿತಿಗೆ ತಂದವನು. ಬಲದೇವನ ಮಗಳು ಗಂಗಾಂಬಿಕೆ, ಸಿದ್ಧರಸನ ಮಗಳು ನೂಲಲೋಚನೆ. ಬಲದೇವನು ತಾನು ಜೀವಿಸಿರುವಾಗಲೇ ತನ್ನ ಮಗಳು ಗಂಗಾಂಬಿಕೆಯ ವಿವಾಹವನ್ನು ಬಸವಣ್ಣನೊಡನೆ ನೆರವೇರಿಸಿದ್ದನು. ಆದರೆ ಸಿದ್ಧರಸನು



ಶಿವೈಕ್ಯನಾದ ಮೇಲೆ ನೀಲಾಂಬಿಕೆಯನ್ನು ತನ್ನ ತಂಗಿಯೆಂದೇ ತಿಳಿದು ಬೆಳಸಿದ್ದ ಬಿಜ್ಜಳನು ತಾನೇ ಮುಂದಾಗಿ ಅವಳ ವಿವಾಹವನ್ನು ಬಸವಣ್ಣನೊಡನೆ ಮಾಡಿದ್ದನು. ಗಂಗಾಂಬೆ ನೀಲಾಂಬೆಯರು ಆದರ್ಶ ಅಕ್ಕತಂಗಿಯರಾಗಿ, ಆದರ್ಶ ಸತಿಯರಾಗಿ, ಉಚ್ಚ ಶರಣೆಯರಾಗಿ, ವಚನಕಾರ್ತಿಯರಾಗಿ, ಬಸವಣ್ಣನವರ ನಿತ್ಯ ದಾಸೋಹದ ದಕ್ಷಸಂಯೋಜಕರಾಗಿ, ಶರಣರಿಗೆಲ್ಲ ತನಿವಗೆಯ ತಾಯಂದಿರಾಗಿ ಬಾಳಿದರು.

ಇವರಿಬ್ಬರಲ್ಲಿ ನೀಲಾಂಬಿಕೆ ಬಸವ ಭಕ್ತರಿಗೆಲ್ಲ ಅಚ್ಚುಮೆಚ್ಚಿನ ತಾಯಿಯೆನಿಸಿದ್ದಾಳೆ. ಇಂದಿಗೂ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು, 'ಲಿಂಗಪೂಜೆಯ ಮಾಡುತ್ತಿದ್ದಳು–ನಿಜ ಭಕ್ತಿ ನೀಲಾ' ಎಂಬ ಹಾಡನ್ನು ಭಕ್ತಿಭಾವಭರಿತರಾಗಿ ಹಾಡುತ್ತಾತೆ. ಆಕೆಯ ಶಾಂತಿ–ಸಹನೆಗಳು ಪೃಥ್ವಿಗೆ ಸಮಾನವಾದುವುಗಳು ; ಆಕೆಯ ಹೃದಯ ಹಿಂದೂಮಹಾಸಾಗರದಷ್ಟು ವಿಶಾಲವಾದುದು ; ಆಕೆಯ ದೃಷ್ಟಿ ಹಿಮಾಲಯದಷ್ಟು ವ್ಯಾಪಕವಾದುದು ! ಬಸವಣ್ಣನವರ ದಾಸೋಹಕ್ಕೆ ನಾನಾಪ್ರಕಾರದ, ನಾನಾ ಸ್ವಭಾವಗಳ, ನಾನಾ ಅಭಿರುಚಿಗಳ ಜನರು ಬರುತ್ತಿದ್ದರು. ಅವರೆಲ್ಲರಿಗೂ ಅವರವರು ಬಯಸಿ ಬೇಡಿದುವನ್ನು ಮಾಡಿ ನೀಡುವುದು ಆ ಮಾತಾಯಿಯ ಪಾಲಿಗೆ ಬಂದ ಕಠೋರ ಕರ್ತವ್ಯವಾಗಿದ್ದಿತು. ಅದನ್ನಾಕೆ ಅಸದೃಶವಾಗಿ ನಿರ್ವಹಿಸಿ ನಾಡ ಜನರ ನೆನಹಿನಲ್ಲಿ ನಂದಾದೀಪವಾಗಿ ಬೆಳಗುತ್ತಲಿರುವಳು.

ಇಷ್ಟಿದ್ದರೂ ಆಕೆಯ ಶಾಲೀನತೆ ವಿನಯಪರತೆಗಳು ಅನಿರ್ವಚನೀಯ ವಾದುವುಗಳು. ಇದನ್ನು ಆಲಿಸಿ ; "ಇಷ್ಟಲಿಂಗವೇ ಬಸವಣ್ಣನೆಂದರಿದು ತಮ್ಮ ಇಷ್ಟಲಿಂಗದಲ್ಲಿ ನಿರವಯಲನೈಯ್ದಿದರು ಅಕ್ಕ ನಾಗಲಾಂಬಿಕೆಯರು ; ಜಂಗಮ ಪ್ರಸಾದವ ಬಸವಣ್ಣನೆಂದರಿದು ಜಂಗಮ ಪ್ರಸಾದದಲ್ಲಿ ನಿರವಯಲನೈಯ್ದಿದರು ಅಕ್ಕಮಹಾದೇವಿಯಮ್ಮನವರು ; ಪ್ರಸಾದಲಿಂಗವೇ ಬಸವಣ್ಣನೆಂದರಿದು ತಮ್ಮ ಪ್ರಸಾದಲಿಂಗದಲ್ಲಿ ನಿರವಯಲನೈಯ್ದಿದರು ಮುಕ್ತಾಯಕ್ಕಗಳು ; ಆಚಾರಲಿಂಗವೇ ಬಸವಣ್ಣನೆಂದರಿದು ತಮ್ಮ ಆಚಾರಲಿಂಗದಲ್ಲಿ ನಿರವಯಲನೈಯ್ದಿರು ಅಸಂಖ್ಯಾತ ಮಹಾಗಣಂಗಳೆಲ್ಲರು. ಗುಹೇಶ್ವರಲಿಂಗದಲ್ಲಿ ಪ್ರಭುದೇವಸಾಕ್ಷಿಯಾಗಿ ಬಸವಪ್ರಿಯ ಕೂಡಲ ಸಂಗಮದೇವಾ, ಬಸಣ್ಣನವರಿಂದ ನಿರವಯಲ ಲಿಂಗವ ಕಂಡೆನು."

ಈ ವಚನದಲ್ಲಿ ಒಡಮೂಡಿರುವ ನೀಲಾಂಬಿಕೆಯ ಪತಿಭಕ್ತಿಗೆ ತಲೆದೂಗಬೇಕೊ, ಅನ್ಯ ಶರಣೆಯರ ಬಗ್ಗೆ ಆಕೆಗಿರುವ ಅಕೃತಕ ಅದರಕ್ಕಾಗಿ ಅಭಿಮಾನಪಡಬೇಕೊ, ಇಲ್ಲವೆ ಅವರ ಅನುಭಾವದ ಎತ್ತರಕ್ಕೆ ಕೈಮುಗಿಯಬೇಕೋ ತಿಳಿಯದು. ಆ ಮಹಾಮಾತೆಗೆ ಎತ್ತೆತ್ತ ನೋಡಿದಡೆ ಅತ್ತತ್ತ ಬಸವಣ್ಣನೇ ಕಣ್ಣಿಗೆ ಕಾಣುತ್ತಿರಬೇಕು ಇಲ್ಲದಿದ್ದರೆ–

"ಬಸವಣ್ಣನೆಂಬ ಆಚಾರಲಿಂಗವ ಪಿಡಿದು ಅನುಮಿಷ ಬಸವಣ್ಣನಂತಾದ;
ಬಸವಣ್ಣನೆಂಬ ಗುರುವ ಪಿಡಿದು ಮಡಿವಾಳಯ್ಯ ಬಸವಣ್ಣನಂತಾದ ;
ಬಸವಣ್ಣನೆಂಬ ಲಿಂಗವ ಪಿಡಿದು ಚೆನ್ನಬಸವಯ್ಯ ಬಸವಣ್ಣನಂತಾದ ;
ಬಸವಣ್ಣನೆಂಬ ಜಂಗಮವ ಪಿಡಿದು ಸಿದ್ಧರಾಮಯ್ಯ ಬಸವಣ್ಣನಂತಾದ;
ಪ್ರಭುದೇವ ಬಸವಣ್ಣನೆಂಬ ಗುಹೇಶ್ವರ ಲಿಂಗವ ಪಿಡಿದು
ಜ್ಯೋತಿರ್ಮಯನಾದ;
ಅಸಂಖ್ಯಾತ ಮಹಾಗಣಂಗಳೆಲ್ಲರು ಬಸವಣ್ಣನೆಂಬ ನಿರವಯ
ಲಿಂಗವ ಪಿಡಿದು
ಶರಣಸತಿ ಲಿಂಗಪತಿಯಾದರು. ಗುಹೇಶ್ವರಲಿಂಗದಲ್ಲಿ
ಪ್ರಭುದೇವರ ಸಾಕ್ಷಿಯಾಗಿ ಬಸವಪ್ರಿಯ ಕೂಡಲ ಸಂಗಮದೇವಾ,
ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು !"

ಎಂಬ ಉದ್ಗಾರ ಅವರಿಂದ ಹೊರಡುತ್ತಿರಲಿಲ್ಲ.

ಆ ಮಾತಾಯಿಯ ಅವಸಾನವೂ ಆಕೆಯ ಜೀವನದಷ್ಟೆ ಅನುಪಮವಾಗಿದೆ. 'ಶರಣರ ಮಹಿಮೆಯನ್ನು ಮರಣದಲ್ಲಿ ನೋಡು' ಎನ್ನುವುದು ಸುಳ್ಳಲ್ಲ.

ಬಸವಣ್ಣನವರು ಕಲ್ಯಾಣ ಬಿಟ್ಟು ಕೂಡಲಸಂಗಮಕ್ಕೆ ಹೊರಟು ಮಹಾಸತಿ ನೀಲಾಂಬಿಕೆಯನ್ನು ಕರೆದುತರಲು ಆತ್ಮೀಯರಾದ ಅಪ್ಪಣ್ಣನನ್ನು ಕಳಿಸುತ್ತಾರೆ. ಪತಿಯ ಆಜ್ಞೆಯಂತೆ ಕಲ್ಯಾಣವನ್ನು ತೊರೆದು. ಕಪ್ಪಡಿ ಸಂಗಮಕ್ಕೆಂದು ಹೊರಟಿದ್ದ ಆಕೆ ತಂಗಡಿಗಿಯನ್ನು ತಲುಪುವಷ್ಟರಲ್ಲಿ ಬಸವಣ್ಣನವರು ಸಂಗಮನಾಥನನ್ನು ಬೆರೆದು ಬಿಟ್ಟರೆಂದು ಸುದ್ದಿ ತಿಳಿಯುತ್ತದೆ. ನೀಲಾಂಬಿಕೆ ಅಧೀರಳಾಗದೆ ಅಲ್ಲಿಯೇ ಇಷ್ಟಲಿಂಗಪೂಜೆಗೆ ಕುಳಿತು ಇಷ್ಟಲಿಂಗದಲ್ಲಿಯೇ ಆಡಗುತ್ತಾಳೆ. ಭಕ್ತರು ಅಲ್ಲಿಯೇ ಆಕೆಯ ಮತ್ತು ಆಕೆಯ ಅಂಗರಕ್ಷಕನಾಗಿ ಹಿಂವಾಲಿಸಿದ್ದ ಹಡಪದ ಅಪ್ಪಣ್ಣನ ಮಂದಿರಗಳನ್ನು ಕಟ್ಟಿದ್ದಾರೆ. ಇಂದಿಗೂ ಹಳ್ಳಿಯ ಹೆಂಗಸರು ಹೃದಯ ಕರಗುವಂತೆ ಈ ಹಾಡನ್ನು ಹಾಡಿ ಕಂಬನಿಗರೆಯುತ್ತಾರೆ;

ನೋಡು ನೋಡು ನೋಡು ನೋಡು ನೋಡು ಲಿಂಗವೆ
  ನೋಡು ಬಸವಯ್ಯನವರು ಮಾಡಿದಾಟವ ! ॥ಪ॥
ಹರಳಯ್ಯ ಮಧುವಯ್ಯನವರಿಗೆ ಎಳಹೊಟೆ
  ದುರುಳ ಬಿಜ್ಜಳನು ಕಟ್ಟಿದನೆಂದರೆ ॥
ಇರಬಾರದಿಲ್ಲೀಗ ಶರಣರಿಗರುಹಿರೆಂ
  ದರಸು ಬಸವರಾಜ ಪೇಳ್ದನಂತೆ ॥
ನುಡಿಯಲಾಲಿಸು ಬೇಗ ಕೆಡುವುದೀ ಕಲ್ಯಾಣ
  ಒಡೆಯ ಸಂಗಮನೊಳು ಬೆರೆದನಂತೆ !
ತಡಮಾಡಬೇಡಿರಿ ಮಡದಿಯರಿಗರುಹಿರೆಂದು
  ಬಡೆಯ ಬಸವರಾಜ ನುಡಿದನಂತೆ ॥
ಅಲ್ಲಿಗೆ ಎಮ್ಮನ್ನು ಬರಲು ಹೇಳಿದರಂತೆ
  ಅಲ್ಲಿರ್ಪ ಸಂಗಯ್ಯನಿಲ್ಲಿಲ್ಲವೆ ?
ಅಲ್ಲಿ ಇಲ್ಲಿ ಎಂಬ ಉಭಯ ಸಂದೆಗವೇಕೆ
  ಬಲ್ಲ ಮಹಾತ್ಮರಿಗಿದು ತರವೆ ?
ಅಪ್ಪ ಅಣ್ಣಯ್ಯಗಳು ಕರೆಯಲು ಬಂದಿಹರು
  ಕಪ್ಪಡಿ ಸಂಗಮನಾಥ ಕೇಳೋ !
ಪುಷ್ಪಕ್ಕೆ ಪರಿಮಳ ಬೆರೆದಂತೆ ಎನ್ನ
  ನಪ್ಪಿದ ಲಿಂಗವೆ ಮಾತನಾಡೋ !
ಸಂಗನ ಬಸವನ ನಿರೂಪವ ತಾಳುತೆ

ಹಿಂಗದೆ ಕರವೆತ್ತಿ ನಮಿಸುತಲಿ
ಸಂಗನ ಬಸವಯ್ಯನಾತನೆ ಈತನೆ
–ನ್ನಂಗಯ್ಯ ಲಿಂಗವೆ ಮಾತನಾಡೋ !

ಹಳ್ಳಿಗರಷ್ಟೇ ಅಲ್ಲ, ಬಲ್ಲಿದರಲ್ಲಿ ಬಲ್ಲಿದರೂ ಆಕೆಯ ನಿಜಭಕ್ತಿಯ ನಿಲವನ್ನು ಭಕ್ತಿನಿರ್ಭರರಾಗಿ ಬಣ್ಣಿಸಿದ್ದಾರೆ. ಉಭಯ ಕವಿತಾ ವಿಶಾರದ ಷಡಕ್ಷರದೇವ,

"ನಿಜೇಷ್ಟಲಿಂಗ ಸಾಂಗಪೂಜನೋತ್ಸವೇ ಸಮುತ್ಸುಕಾಂ
ಗುರೂಕ್ತ ಶೀಲ ಪಾಲನಾ ಪಟೀಯಸೀಂ ಮಹೀಯಸೀಂ
ಕಲಾತರಂಗಿಣೀಂ ಸಮಸ್ತ ಸದ್ಗುಣಾವಭಾಸಿನೀಂ
ವೃಷಾಧಿರಾಜ ವಲ್ಲಭಾಂ ನಮಾಮಿ ನೀಲಲೋಚನಾಂ"

ಎಂದು ತನ್ನ 'ನೀಲಾಂಬಿಕಾ ಸ್ತೋತ್ರ'ದಲ್ಲಿ ತನ್ನ ಭಕ್ತಿಯ ಮುಡಿಪನ್ನು ಸಲ್ಲಿಸಿದ್ದಾನೆ. ಬೀಸುವ ಹೆಣ್ಣುಮಕ್ಕಳು ಬೀಸುವುದನ್ನು ಮುಗಿಸುವಾಗ

"ಆದಾವ ಮುಕ್ಕಿಗೆ ನಾನ್ಯಾರ ಹಾಡಲಿ
ರಾಜ್ಯಾವ ಸಲುವಾ ಬಸವಣ್ಣನ್ಹೇಣುತಿ
ನೀಲವ್ವ ನಿನ ಹಾಡಿ ನಿಲಿಸೇನ"

ಎಂದು ಹಾಡಿ ಕಲ್ಲು ನಿಲ್ಲಿಸುತ್ತಾರೆ. ಅವರು ಇತ್ತಿರುವ ತೀರ್ಪು ಇದು :

"ಬಸವಣ್ಣನಂತಹ ಭಕ್ತಿವಂತರಿಲ್ಲ
ನೀಲಮ್ಮನಂತಹ ಶರಣೆಯರಿಲ್ಲ
ಹೇಮರೆಡ್ಡಿ ಮಲ್ಲಮ್ಮನಂಥ ಸೊಸೆಯರಿಲ್ಲ"

ನೀಲಾಂಬೆ ಲಿಂಗಪ್ರಾಣಿಯಾದರೆ ಗಂಗಾಂಬೆ ಗುರುಪ್ರಾಣಿ. ಜಂಗಮ ಪ್ರಾಣಿ ಬಸವಣ್ಣನಿಗೆ ಗುರುಪ್ರಾಣಿ ಗಂಗಾಂಬೆ, ಲಿಂಗಪ್ರಾಣಿ ನೀಲಾಂಬೆಯರು ಸತಿಯರಾದುದು ಗಮನಾರ್ಹವಾದುದಾಗಿದೆ. ಗುರುಲಿಂಗ ಜಂಗಮದ ತ್ರಿಕೂಟವಲ್ಲಿ ತಲೆದೋರಿದ್ದಿತು. ಗಂಗಾಂಬಿಕೆ ಕಪ್ಪಡಿ ಸಂಗಮಕ್ಕೆ ಹೋಗಲಿಲ್ಲ. ತನ್ನ ಗುರು ರುದ್ರಮುನಿಯ ಆದೇಶದಂತೆ ಉಳಿವೆಯತ್ತ ಹೊರಟಿದ್ದ ಶರಣ ಸಮೂಹದೊಡನೆ ಹೊರಟು ಅವರು ಎದುರಿಸಿದ ದುರ್ಧರ ಪ್ರಸಂಗಗಳನ್ನೆಲ್ಲ ಎದುರಿಸಿದಳು. ತಾನೂ ಶಸ್ತ್ರತಾಳಿ ಕಲಿತನದಿಂದ ಕಾದಿದಳು. ಕಾದರವಳ್ಳಿಯಲ್ಲಿ ಕೊನೆಯ ಕಾಳಗವಾದ ಮೇಲೆ ಅಲ್ಲಿಗೆ ಮೂರು ನಾಲ್ಕು ಮೈಲಿಗಳಲ್ಲಿರುವ ಮುಗಟಖಾನ ಹುಬ್ಬಳಿಯಲ್ಲಿ ಸಮಾಧಿಸ್ಥಳಾದಳೆಂದು ಹೇಳುತ್ತಾರೆ. 'ಗಂಗಾಪ್ರಿಯ ಕೂಡಲ ಸಂಗಮದೇವಾ' ಎಂಬ ಅಂಕಿತವುಳ್ಳ ಆಕೆಯ ವಚನಗಳು ಎಲ್ಲ ಸಿಕ್ಕಿಲ್ಲ. ಸಿಕ್ಕ ಒಂದೆರಡು ವಚನಗಳಲ್ಲಿ

ಆಕೆಯ ಅಂತರಂಗದ ಅವಿರಳ ಪ್ರಕಾಶಪಡಿಮೂಡಿದೆ. "ಸಾಂದ್ರವಾಗಿ ಹರಗಣ ಭಕ್ತಿಯ ಮಾಳ್ಪನೆಂತವ್ವ ಮಾದಲಾಂಬಿಕಾ ನಂದನನು! ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯವ ಮಾಳ್ಪನೆಂತವ್ವ ಮಾದರಸದ ಮೋಹದ ಮಗನು । ಲಿಂಗಾರ್ಚನೆ ಲಿಂಗತೃಪ್ತಿ ಅನುಗ್ರೈವನೆಂತವ್ವ ಗಂಗಾಪ್ರಿಯ ಕೂಡಲ ಸಂಗನ ಶರಣ !"

ದೊರೆತ ಇನ್ನೊಂದು ವಚನದಲ್ಲಿ ಬಿಜ್ಜಳನ ಕೊಲೆಗೆ ಬಸವಣ್ಣ ಕಾರಣನಲ್ಲ, ಮಡಿವಾಳ ಮಾಚಯ್ಯ ಮೊದಲಾದ ಗಣಾಚಾರದ ಗಣಂಗಳು–ಎಂಬುದು ಧ್ವನಿತವಾಗುತ್ತದೆ : "ಮಡಿವಾಳಣ್ಣಂಗ್ಯಾಕೆ ಬಾರದವ್ವ ಕರುಣರಸ? ಮಡಿವಾಳಣ್ಣಂಗ್ಯಾಕೆ ಬಾರದವ್ವಾ ಸೈರಣೆಯರಸ? ಮಡಿವಾಳಣ್ಣಂಗ್ಯಾಕೆ ಬಾರದವ್ವಾ ಮಹತ್ವದ ದಯಾರಸ? ಮಡಿವಾಳಣ್ಣಂಗ್ಯಾಕೆ ಬಾರದವ್ವಾ ಗಂಗಾಪ್ರಿಯ ಕೂಡಲಸಂಗನ ಶರಣರ ಪ್ರಾಣದಾನರಸ?"

ಅಕ್ಕ ನಾಗಮ್ಮ ಇವರಿಬ್ಬರಿಗೂ ವಯಸ್ಸಿನಲ್ಲಿ ಅಷ್ಟೇ ಅಲ್ಲ– ಅನುಭವ, ಸಾಧನೆ ಸಿದ್ಧಿಗಳೆಲ್ಲದರಲ್ಲಿಯೂ ಹಿರಿಯಳು. ಬಸವಣ್ಣನನ್ನು ನೆರಳಿನಂತೆ ಹಿಂಬಾಲಿಸಿ, ತಾಯಿಯಂತೆ ಆತನನ್ನು ಪಾಲಿಸಿ ಪೋಷಿಸಿ, ಅಕ್ಕನಾಗಿ ಅಕ್ಕರತೆಯ ಸಕ್ಕರೆಯನ್ನು ಉಣಿಸಿ ತಣಿಸಿ, ಮುಂದೆ ಆತನನ್ನೇ ಗುರುವೆಂದು ಅಂಗೀಕರಿಸಿ ಅಧ್ಯಾತ್ಮದ ಅಮೃತ ಸರಸಿಯಲ್ಲಿ ಆತ್ಮ ಹಂಸನಾಗಿ ಆನಂದದಿಂದ ಓಲಾಡಿ, ತೇಲಾಡಿ, ಕೊನೆಗೆ ಬಸವನ ಬಳಗವನ್ನು ರಕ್ಷಿಸಲು ಖಡ್ಗಧಾರಿಯಾಗಿ ಕಲಿಗಿಂತ ಕಲಿಯಾಗಿ ಕಾದಿದ ವೀರಮಾತೆಯಾಕೆ. ಸಿಂಗರಾಜಪುರಾಣದ ಪ್ರಕಾರ ಶಿವಸ್ವಾಮಿಯ ಸತಿಯಾಗಿ, ಬಸವಣ್ಣನೊಡನೆ ಕಪ್ಪಡಿಸಂಗಮಕ್ಕೆ ಹೋಗುವ ಹೊತ್ತಿಗೆ ಬಹುಶಃ ಚೆನ್ನಬಸವನ ತಾಯಿಯಾಗಿದ್ದು, ಅಲ್ಲಿ ತಾನೂ ಗುರುಕುಲವಾಸದ ಉದಾತ್ತ ಜೀವನವನ್ನು ಸಾಗಿಸಿ, ಇಂಗುಳೇಶ್ವರದ ಗುಹೆಯಲ್ಲಿ ಯೋಗಸಾಧನೆಯನ್ನು ಪೂರೈಸಿ, ಕಲ್ಯಾಣಕ್ಕೆ ಬಸವಣ್ಣನೊಡನೆ ಪರವನೊಳಗೊಂಡ ಪರಿಣಾಮಿಯಾಗಿ ಹೋಗಿ, ಅಲ್ಲಿ ಆತನ ಎಲ್ಲ ಕಾರ್ಯಗಳಿಗೆ ಆಧಾರಸ್ತಂಭಳಾಗಿ ಬಾಳಿ ಬೆಳಗಿದಳಾಕೆ. ಅಲ್ಲಿಯೂ ಆಕೆಯ ಅವಿರತ ಯೋಗಸಾಧನೆ ಮುಂದುವರೆಯಿತು. ಇಂದಿಗೂ ಅಂದಗೆಡದೆ ಕಲ್ಯಾಣದಲ್ಲಿ ಕಂಗೊಳಿಸುತ್ತಲಿರುವ ಅಕ್ಕ ನಾಗಮ್ಮನ ಗವಿ ಆಕೆಯ ಯೋಗಸಾಧನೆಯ ಅಮರ ಪ್ರತೀಕವಾಗಿದೆ. ಅದೊಂದು ರುದ್ರ ಮನೋಹರವಾದ ಗುಹೆ. ಈಗಲ್ಲಿ ಆಕೆಯ ಸುಂದರಮೂರ್ತಿಯೂ ಸ್ಥಾಪಿತವಾಗಿದೆ. ಕಲ್ಯಾಣದ ಇನ್ನುಳಿದ ಅನೇಕ ಕುರುಹುಗಳು ಕಾಣದಾಗಿದ್ದರೂ ಅಕ್ಕ ನಾಗಮ್ಮನ ಗವಿ ಅಚ್ಚಳಿಯದೆ ಉಳಿದಿರುವುದು ಅಚ್ಚರಿಯಲ್ಲವೆ?

ಅಕೆಯ ಬಸವಣ್ಣನ ಮೇಲಿನ ಪ್ರೀತಿ ಅಸದೃಶವಾದುದು. ತಾಯಿಯನ್ನಗಲಿ

ಬಂದಿದ್ದ ಬಸವಣ್ಣನಿಗೆ ಆಕೆಯೇ ತಾಯಿಯಾದಳು.

"ಬಸವನೇ ಮುಖಸೆಜ್ಜೆ, ಬಸವನೇ ಅಮಳೋಕ್ಯ.
ಬಸವನ ನಾನೆತ್ತಿ ಮುದ್ದಾಡಿಸಿದೆನು !
ಬಸವ, ಸಂಗನಬಸವದೇವಾ ಜಯತು !
ಬಸವ, ಸಂಗನಬಸವಲಿಂಗಾ ಜಯತು !
ಬಸವಗೂ ಎನಗೂ ಭಾವಬೇಧವಿಲ್ಲ !
ಬಸವ ಪ್ರಿಯ ಚೆನ್ನಸಂಗಯ್ಯನಲ್ಲಿ
ಬಸವನ ಬೆಸಲಾದ ಬಾಣತಿ ನಾನಯ್ಯ–ಬಸವಾ, ಬಸವಾ, ಬಸವಾ !"

ಹೀಗೆ ತಾಯಿಯಾಗಿ ತಮ್ಮನನ್ನು ಮುದ್ದಾಡಿ ಬೆಳಸಿದ ಅಕ್ಕನೇ ಮುಂದೆ–

"ಎನ್ನ ಕುಸಸೂತಕವ ಕಳೆದಾತ ಬಸವಣ್ಣ ;
ಎನ್ನ ಛಲಸೂತಕವ ಕಳೆದಾತ ಬಸವಣ್ಣ ;
ಎನ್ನ ತನುಸೂತಕವ ಕಳೆದಾತ ಬಸವಣ್ಣ ;
ಎನ್ನ ಮನಸೂತಕವ ಕಳೆದಾತ ಬಸವಣ್ಣ ;
ಎನ್ನ ನೆನಹುಸೂತಕದ ಕಳೆದಾತ ಬಸವಣ್ಣ ;
ಎನ್ನ ಭಾವಸೂತಕವ ಕಳೆದಾತ ಬಸವಣ್ಣ ;
ಎನ್ನ ಕುರುಹು ಮರಹಿನ ಸಂದು ಸಂಶಯವ ಬಿಡಿಸಿದಾತ ಬಸವಣ್ಣ ;
ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ ;
ಬಸವಣ್ಣ ಪ್ರಿಯ ಚೆನ್ನಸಂಗನ ಹೃದಯದಲ್ಲಿ
ನಿಜನಿವಾಸಿಯಾಗಿ ಇರಿಸಿದ ಎನ್ನ ತಂದೆ ಸಂಗನ ಬಸವಣ್ಣ"

ಎಂದು ಬಸವಣ್ಣನನ್ನೇ ಗುರುವನ್ನಾಗಿ, ತಂದೆಯನ್ನಾಗಿ ಭಾವಿಸಿದಳು. ಜ್ಯೋತಿಯಾಗಿ ಬೆಳಗಿದಳು, ತಾರೆಯಾಗಿ ತೊಳಗಿದಳು, ಪರಾಶಕ್ತಿಯಾಗಿ ಪ್ರಕಾಶಿಸಿದಳು.

ಈ ನಾಲ್ವರ–ಬಸವಣ್ಣ, ಅಕ್ಕನಾಗಮ್ಮ, ಗಂಗಾಂಬೆ, ನೀಲಾಂಬೆಯರ ಪುಣ್ಯ ಪ್ರಭಾವದ ಪ್ರಭಾವಳಿಯಲ್ಲಿ ಬೆಳೆದಾತ ಚೆನ್ನಬಸವಣ್ಣ. ಅವನೆಂಥ ಸುಕೃತ ಶಾಲಿ! ಆತನು ಕತ್ತೆತ್ತಿ ನೋಡಿದರೆ ಎತ್ತಲೂ, ಸುತ್ತಲೂ ಲಿಂಗಪೂಜೆಯನ್ನೇ, ಜಂಗಮಾರಾಧನೆಯನ್ನೇ ಕಾಣುತ್ತಿರಬೇಕು ; ಆತನು ಕಿವಿಗೊಟ್ಟು ಕೇಳಿದರೆ ಶಿವಾನುಭವ ಗೋಷ್ಠಿಯನ್ನೇ ಕೇಳುತ್ತಿರಬೇಕು; ಆತನು ನಾಸಿಕದಿಂದ ವಾಸಿಸಿದರೆ ಪೂಜಾ ಪರಿಮಳದ್ರವ್ಯಗಳ ಸೌರಭ ಸಂದೋಹವನ್ನೇ ವಾಸಿಸುತ್ತಿರಬೇಕು ;

ಆತನು ಸ್ಪರ್ಶಿಸಿದರೆ ಗುರುಗಳ, ಶರಣರು ಬಸವಣ್ಣ ಅಕ್ಕನಾಗಮ್ಮಾದಿಗಳ ಶ್ರೀಪಾದ ಶುಭಹಸ್ತಗಳನ್ನೇ ಸ್ಪರ್ಶಿಸತುತ್ತಿರಬೇಕು ; ಆತನು ಸೇವಿಸಿದರೆ ಶಿವಪ್ರಸಾದವನ್ನೇ ಸೇವಿಸುತ್ತಿರಬೇಕು !

ಇಂಥ ಆವರಣದಲ್ಲಿ ಬೆಳೆದ ಚೆನ್ನಬಸವಣ್ಣ ಚಿಕ್ಕಂದಿನಲ್ಲಿಯೇ ಚಿನ್ಮಯಮೂರ್ತಿಯಾಗಿದ್ದರೆ ಆಶ್ಚರ್ಯವೇನು? ಅವನು ಅರಿವಿನ ಗುರುವನಾದುದು ಅಚ್ಚರಿಯಲ್ಲ–ತಿಳಿವಿನ ತುತ್ತತುದಿಯನ್ನು ಮೆಟ್ಟಿ ನಿಂತುದು ಆಶ್ಚರ್ಯ, ಬಸವಣ್ಣನವರೇ ಬೆರಗಾಗಿ ನುಡಿದರು : 'ಇಂದು ಹುಟ್ಟಿದ ಕೂಸಿಗೆ ಇಂದೇ ಜವ್ವನವಾಯಿತ್ತಯ್ಯ !' ಎಂದು ; 'ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ! ಸುಗಂಧ ಬಂಧುರದಂತೆ ಹುಟ್ಟತ್ತವೆ ಪರಿಮಳ!' ಎಂದು.

ಅಷ್ಟೇಕೆ, ಹಡೆದ ತಾಯಿ ಅಕ್ಕನಾಗಮ್ಮನೂ ಬೆಕ್ಕಸ ಬೆರಗಾಗಿ ನುಡಿದಳು:

"ಎನ್ನ ತನು ಚೆನ್ನಬಸವಣ್ಣನ ಬಯಲ ಬೆರಿಸಿತ್ತು ;
ಎನ್ನ ಮನ ಸಂಗನ ಬಸವಣ್ಣನ ನಿಜಪದವ ಬೆರಿಸಿತ್ತು ;
ಎನ್ನ ಪ್ರಾಣ ಅಲ್ಲಮ ಪ್ರಭುದೇವರ ಅರಿವ ಬೆರಿಸಿತ್ತು
ಇಂತೀ ಮೂವರೂ ಒಂದೊಂದ ಹಂಚಿಕೊಂಡ ಕಾರಣ
ಎನಗೇನೂ ಇಲ್ಲದೆ ಬಸವಣ್ಣ ಪ್ರಿಯ ಚೆನ್ನಸಂಗಯ್ಯನ
ಹೃದಯ ಕಮಲದಲ್ಲಿ ನಿಜನಿವಾಸಿಯಾಗಿರ್ದೆನು !"

ಇನ್ನೂ ಮುಂದೆ ಸಾಗಿ,

"ಎನ್ನ ಭವದ ಬಳ್ಳಿಯ ಬೇರು ಹರಿದಿತ್ತಯ್ಯ–
ಸಂಗನ ಬಸವಣ್ಣನ ಒಕ್ಕುದ ಕೊಂಡೆನಾಗಿ ;
ಎನ್ನ ಮನದ ಕಪಟ ಹಿಂಗಿತ್ತಯ್ಯ–
ಚೆನ್ನಬಸವಣ್ಣನ ಕರುಣವ ಪಡೆದೆನಾಗಿ ;
ಎನ್ನ ಅಂತರಂಗದ ಸಂದೇಗಸಂಶಯ ತೊಲಗಿತ್ತಿಂದು–
ಬಸವಣ್ಣ ಪ್ರಿಯ ಚೆನ್ನಸಂಗಯ್ಯನಲ್ಲಿ
ಎನ್ನ ಪರಮಗುರು ಅಲ್ಲಮಪ್ರಭುದೇವರ
ಶ್ರೀಚರಣ ಕಂಡೆನಾಗಿ!"

ಎಂದು ಪ್ರಾಂಜಲಮನದಿಂದ ಮಗನ ಕರುಣದಿಂದ ಮನದ ಕಪಟ ಹಿಂಗಿದುದನ್ನು ಒಪ್ಪಿಕೊಂಡಿದ್ದಾಳೆ. ನುಡಿಯಲ್ಲಿ ನಿಷ್ಠುರ, ನಡೆಯಲ್ಲಿ ಕಠೋರನೆನಿಸಿದ ಮಡಿವಾಳ ಮಾಚಯ್ಯ ಸಹ ಚೆನ್ನಬಸವಣ್ಣನನ್ನು ಮುಕ್ತಕಂಠದಿಂದ ಕೊಂಡಾಡಿದ:

“ವಾಯದ ಮಾಯದ ಸಂಭ್ರಮದೊಳಗೆ ಸಿಲುಕಿತ್ತು ನೋಡಾ ಭುವನವೆಲ್ಲ!
ಮಾಯೆಗೆ ಹೊರಗಾದ ನಿರ್ಮಾಯನ ಕಂಡೆನು !
ತಾನೆಂಬ ನುಡಿಗೆ ನಾಚಿ, ನೀನೆಂಬ ನುಡಿಗೆ ಹೇಸಿ,
ತಾನೆತಾನಾದ ಘನಮಹಿಮನು !
ಕಾಯದಲ್ಲಿ ಕುರುಹಿಲ್ಲ, ಭಾವದಲ್ಲಿ ಭ್ರಮೆಯಿಲ್ಲ,
ಜ್ಞಾನತಾನೆಂಬ ಭೇದವಿಲ್ಲ ;
ಸಾಮಯನಲ್ಲ, ನಿರವಯನಲ್ಲ–
ಕಲಿದೇವರದೇವಾ, ನಿಮ್ಮ ಶರಣ ಚೆನ್ನಬಸವಣ್ಣನು !”

ಸಿದ್ಧರಾಮಯ್ಯ ಸ್ತುತಿಸಿದ :

“ಅಧ್ಯಾತ್ಮ ಅಧ್ಯಾತ್ಮವೆಂದೆಂಬಿರಿ : ಅಧ್ಯಾತ್ಮವಾರಿಗೆ ?
ಶ್ರೀ ಗುರುಸ್ವಾಮಿ ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ
ಕರಸ್ಥಳಕ್ಕೆ ಕೊಟ್ಟ ಬಳಿಕ ಬೇರೆ ಯೋಗ ಉಂಟೆ ?
ತನ್ನ ಹಸ್ತವ ಮಸ್ತಕದಲ್ಲಿಟ್ಟು
ವಾಯುಪ್ರಾಣಿಯಾಗಿದ್ದುದಕೊಂದು ಲಿಂಗಪ್ರಾಣಿಯ ಮಾಡಿದ ಬಳಿಕ
ಮರಳಿಯೋಗವುಂಟೆ ಶಿವಯೋಗವಲ್ಲದೆ ?
ಲಿಂಗಾರ್ಚನೆಯಮಾಡಿ ಜಂಗಮ ಪ್ರಸಾದವ ಕೊಂಡಬಳಿಕ
ಮರಳಿ ಯೋಗಕ್ಕೆ ಬಡಂಬಡುವುದೆ ಅರಿವು ?
ಇಂತಪ್ಪವನತಿಗಳೆದು ಶುದ್ಧಶಿವಯೋಗಿಯ ಮಾಡಿದಾತ ಚೆನ್ನಬಸವಣ್ಣ.
ಅನು ಚೆನ್ನಬಸವಣ್ಣನ ಕರುಣದಿಂದ
ಅಭ್ಯಾಸಯೋಗವನತಿಗಳೆದು ಶಿವಯೋಗದಲ್ಲಿ ನಿತ್ಯನಾಗಿ
ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯನೆಂಬ
ಷಡುಸ್ಥಲಕ್ಕಧಿಕಾರಿಯಾದೆ : ನಿನ್ನವರ ಸಲುಗೆಗೆ ಸಂದೆ !’

ಅಕ್ಕಮಹಾದೇವಿ ಅಳ್ತಿಯಿಂದ ಹಾಡಿದಳು :

“ಮಾಟಕೂಟವಿಲ್ಲ ಬಸವಣ್ಣಂಗೆ ;
ನೋಟಕೂಟವೆಂಬುದಿಲ್ಲ ಪ್ರಭುದೇವರಿಗೆ ;
ಭಾವಕೂಟವೆಂಬುದಿಲ್ಲ ಅಜಗಣ್ಣಂಗೆ ;
ಸ್ನೇಹಕೂಟವೆಂಬುದಿಲ್ಲ ಬಾಚರಸರಿಗೆ ;

ಇವರೆಲ್ಲರ ಕೂಟವೆಂಬುದಿಲ್ಲ ಚೆನ್ನಬಸವಣ್ಣಂಗೆ."

ಪೂರ್ಣಯೋಗಿ ಪ್ರಭುದೇವರು ಸಹ :

"ಕಿರಿಯರಾದಡೇನು ? ಹಿರಿಯರಾದಡೇನು ?
ಅರಿವಿಂಗೆ ಹಿರಿದು ಕಿರಿದುಂಟೆ /
ಆದಿಯನಾದಿ ಇಲ್ಲದಂದು,
ಅಜಾಂಡ ಬ್ರಹ್ಮಾಂಡ ಕೋಟಿಗಳುದಯವಾಗದಂದು
ಗುಹೇಶ್ವರಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ
ಎಂಬುದು ಕಾಣಬಂದಿತ್ತು ಕಾಣಾ, ಚೆನ್ನಬಸವಣ್ಣಾ"

ಎಂದೂ, 'ಸ್ವಯಂಭುಜ್ಞಾನಿ ಗುಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನೊಬ್ಬನೇ' ಎಂದೂ, 'ಅವಿರಳಜ್ಞಾನಿ ಚೆನ್ನಬಸವಣ್ಣ' ಸರ್ವಸಂದೇಹವ ಕಳೆದಿಪ್ಪ ಚೆನ್ನಬಸವಣ್ಣ', ಸರ್ವ ಸಂಸಾರವಿರಹಿತ ಚೆನ್ನಬಸವಣ್ಣ' 'ಬಯಲ ಬಣ್ಣಕ್ಕೆ ತಂದು ನೆಳಲ ಶೃಂಗಾರವ ಮಾಡಿದ ಗುಹೇಶ್ವರನ ಶರಣ ಚೆನ್ನಬಸವಣ್ಣ' 'ಸುಷುಮ್ನ ಸೂಕ್ಷ್ಮನಿಧಿಯ ಮಧ್ಯದ ಕೂಪದ ಕಂಭದ ಮೇಲೆ ಪಂಚೇಂದ್ರಿಯಗುಹ್ಯವ ತೊಡೆದು ರಸವ ಕಟ್ಟಬಲ್ಲ ಗುಹೇಶ್ವರನ ಶರಣ ಚೆನ್ನಬಸವಣ್ಣ' 'ಲೋಕಲೋಕವನತಿಗಳೆದು ನಿಜದಲ್ಲಿ ನಿವಾಸಿಯಾಗಿಪ್ಪ ಗುಹೇಶ್ವರನ ಶರಣ ಚೆನ್ನಬಸವಣ್ಣ'ನೆಂದೂ ಕೀರ್ತಿಸಿ, "ಪ್ರಕೃತಿಗುಣವುಳ್ಳನ್ನಕ್ಕರ ಭಕ್ತನಲ್ಲ; ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವುಳ್ಳನ್ನಕ್ಕರ ಶರಣರಲ್ಲ; ಹಸಿವು, ತೃಷೆ, ನಿದ್ರೆ ವಿಷಯವುಳ್ಳನ್ನಕ್ಕರ ಪ್ರಸಾದಿಯಲ್ಲ; ಆಚಾರದಲ್ಲಿ ಅನುಭಾವಿ, ಪ್ರಸಾದದಲ್ಲಿ ಪರಿಣಾಮಿ, ಗುಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನೆಂಬ ಪ್ರಸಾದಿಗೆ ನಮೋ ನಮೋ ಎನುತಿರ್ದೆನು" ಎಂದು ತಮ್ಮ ಮೆಚ್ಚುಗೆಯ ಹೆಚ್ಚುಗೆಯನ್ನು ಬಿತ್ತರಿಸಿದ್ದಾರೆ.

ಈ ಹೊಗಳಿಕೆಯ ಹೊನಲಿನಲ್ಲಿ ಹರಿದುಹೋಗಲಿಲ್ಲ ಚೆನ್ನಬಸವಣ್ಣ. ಅಹಂಕಾರ ಅಜ್ಞಾನಿಯ ಲಕ್ಷಣ; ವಿನಯ ಜ್ಞಾನಿಯ ಲಕ್ಷಣ. ಇದು ಚೆನ್ನಬಸವಣ್ಣನ ವಿನಯ ಸಂಪತ್ತು :

"ನರಸುರಾದಿಗಳೆಲ್ಲರೂ ನಿಮ್ಮ ಹೊಲೆಯಲ್ಲಿದ್ದರು ;
ಮನುಮುನಿ ಯತಿವ್ರತಿಗಳೆಲ್ಲರೂ ನಿಮ್ಮ ತೋಹಿನೊಳಡಗಿದ್ದರು,
ಗಂಗೆವಾಳುಕರೆಲ್ಲರೂ ನಿಮ್ಮ ನುಡಿಯೊಳಗಡಿದರು ;
ಗಂಗೆಗೌರೀವಲ್ಲಭರೆಲ್ಲರೂ ಚತುರ್ಮುಖ ಪಂಚಮುಖ ಷಣ್ಮುಖ
ದಶಮುಖರೆಲ್ಲರೂ

ನಿಮ್ಮ ಮಡಿಯ ಗಳಿಗೆಯೊಳಡಗಿದರು !
ಕೂಡಲ ಚೆನ್ನಸಂಗಮದೇವರು ಸಾಕ್ಷಿಯಾಗಿ
ನಿಮ್ಮ ನಿರಾಳ ಪ್ರಸಾದದಿಂದ ನಿರವಯಲ ಹಾದಿಯ ಕಂಡೆನಲ್ಲದೆ
ನಿಮ್ಮಿಂದಲಾನು ಘನವೆ ಮಡಿವಾಳ ಮಾಚಯ್ಯ?"
ಎಂದು ಮಡಿವಾಳಯ್ಯನ ಮಹಿಮೆಯನ್ನು ಕೊಂಡಾಡಿದ ವಿನಯ–
"ಅಜಕೋಟಿ ವರುಷದವರೆಲ್ಲರೂ ಹಿರಿಯರೆ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ?
ನಡು ಮುರಿದು, ಗೂಡುಗೂರಿ, ತಲೆ ನಡುಗಿ, ನೆರೆತೆರೆಹೆಚ್ಚಿ,
ಅಜ್ಞಾನಿಗಳೆಲ್ಲರೂ ಹಿರಿಯರೆ?
ಅನುವರಿದು, ಘನವಬೆರಿಸಿ, ಹಿರಿದುಕಿರಿದೆಂಬ ಭೇದವ ಮರೆದು,
ಕೂಡಲ ಚೆನ್ನಸಂಗಯ್ಯನಲ್ಲಿ ಬೆರೆಸಿಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯಿತ್ತು!"
ಎಂದು ಅಕ್ಕನ ಅಗ್ಗಳಿಕೆಯನ್ನು ಹೊಗಳಿದ ವಿನಯ–
"ಭಾವದಲ್ಲಿ ಗಮನ, ಪ್ರಾಣದಲ್ಲಿ ಲೋಭ, ಜಿಹ್ವೆಯಲ್ಲಿ ರುಚಿ,
ಶ್ರೋತ್ರದಲ್ಲಿ ಕುಶಬ್ದ, ನಾಸಿಕದಲ್ಲಿ ದುರ್ಗಂಧ, ನೋಟದಲ್ಲಿ ಕಾಮ, ಶಬ್ದದಲ್ಲಿ
ವಿರೋಧ–
ಇಂತಹ ಭವಿಯ ಕಳೆದು ಭಕ್ತನಮಾಡಿದ ಪರಿ ಎಂತೆಂದೊಡೆ,
ಆಕಾರವಿಲ್ಲದಂದಿನ, ನಿರಾಕಾರವಿಲ್ಲದಂದಿನ,
ಕಾಮನ ಸುಟ್ಟ ಭಸ್ಮವಿಲ್ಲದಂದಿನ,
ತ್ರಿಪುರವ ಸುಟ್ಟ ಭಸ್ಮವಿಲ್ಲದಂದಿನ,
ಆದಿ ಆಧಾರವಿಲ್ಲದಂದಿನ ಚಿದ್ವಿಭೂತಿಯನೆ
ತಂದು ಪಟ್ಟವ ಕಟ್ಟಿದರೆ ಭಾವಕ್ಕೆ ಗುರುವಾಯಿತ್ತು.
ಪ್ರಾಣಕ್ಕೆ ಲಿಂಗವಾಯಿತ್ತು. ಜಿಹ್ವಗೆ ಪ್ರಸಾದವಾಯಿತ್ತು,
ಶ್ರೋತ್ರಕ್ಕೆ ಶಿವಮಂತ್ರವಾಯಿತ್ತು,
ನಾಸಿಕಕ್ಕೆ ಸುಗಂಧವಾಯಿತ್ತು , ನೋಟಕ್ಕೆ ಜಂಗಮವಾಯಿತ್ತು , ಶಬ್ದಕ್ಕೆ ಸಂಭಾಷಣೆಯಾಯಿತ್ತು. ಇಂತು ಪೂರ್ವದ ಗುಣಂಗಳೆಲ್ಲವ ಕಳೆದು
ಪುನರ್ಜಾತನಾದ ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ

ಬಸವಣ್ಣನಿಂದ ಸರ್ವಾಂಗಲಿಂಗವಾದೆನು"

ಎಂದು ಬಸವನ ಬೆಳಕನ್ನು ಬಣ್ಣಿಸಿದ ವಿನಯ–

"ಇಲ್ಲದ ಸಂಸಾರ ಕಣ್ಣಮುಂದೆ ರೂಪಾಗಿ ಕಾಡುತಿರ್ದರೆ
ಸುಜ್ಞಾನವೆಂಬ ಅಂಜನವನೆಚ್ಚಿ , ಸಕಲ ಭ್ರಮೆಯೆಂಬ ಕತ್ತಲೆಯ ಕಳೆದು,
ನಿಜಸಂಬಂಧವ ನೆಲೆಗೊಳಿಸಿ, ನಿತ್ಯದಲ್ಲಿ ಅಚ್ಚೊತ್ತಿದನಾಗಿ,
ಕೂಡಲ ಚೆನ್ನಸಂಗಯ್ಯನಲ್ಲಿ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎಂಬೆನು."

ಎಂದು ಪ್ರಭುವಿನ ಪ್ರಭೆಯನ್ನು ಪ್ರಶಂಸಿಸಿದ ವಿನಯ–ಕೊನೆಗೆ,

"ಕಬ್ಬನಗಿದ ಗಾಣ ಬಲ್ಲುದೆ ಹಾಲ ಸವಿಯ ?
ಗಗನದಲಾಡುವ ಪಕ್ಷಿ ಬಲ್ಲುದೆ ರವಿಯ ನಿಲವ?
ಹಗರಣಕ್ಕೆ ಪೂಜಿಸುವರು ಬಲ್ಲರೆ ನಿಮ್ಮ ಶರಣರ ಸುಳುಹ?
ನಡು ಮುರಿದು ಗೂಡು ಗೂರಿದರೆನು–ಲಿಂಗದ ನಿಜವನರಿಯದನ್ನಕ್ಕ?
ಸಾಮನ್ನಕ್ಕ ಜಪವಮಾಡಿದರೇನು–ಲಿಂಗದ ಪ್ರಾಣ ತನ್ನ ಪ್ರಾಣ
ಒಡಗೂಡದನ್ನಕ್ಕ? ಇಂತಿವರೆಲ್ಲರೂ ಅಭ್ಯಾಸಶಕ್ತಿ ಗರುಹಿಗರು ನಮ್ಮ ಕೂಡಲ
ಚೆನ್ನಸಂಗಯ್ಯನಲ್ಲಿ
ಮಾಯಾಕೋಳಾಹಳ ಸಿದ್ಧರಾಮಯ್ಯ ದೇವರಿಗೆ ಅಹೋರಾತ್ರಿಯಲ್ಲಿ
ನಮೋ ನಮೋ ಎಂದು ಬದುಕಿರ್ದೆನು ಕಾಣಾ ಪ್ರಭುವೆ"

ಎಂದು ಶಿಷ್ಯ ಸಿದ್ಧರಾಮಯ್ಯನ ಶ್ರೇಷ್ಠತೆಯನ್ನೂ ಸಾರಿದ ವಿನಯ ಚೆನ್ನಬಸವಣ್ಣನದು. ಕೂಡಲ ಚೆನ್ನಸಂಗಯ್ಯನರುಹಿದರೆ ಅರಿದೆನಲ್ಲದೆ ನನಗೆ ಬೇರೆ ಸ್ವತಂತ್ರಜ್ಞಾನವಿಲ್ಲ ಕೇಳಯ್ಯ' ಎಂಬ ವಿಶುದ್ಧವಿನಯ ಅವನದು. 'ನಾನು ಬಲ್ಲೆನೆಂಬ ಗರ್ವವಿಲ್ಲದೆ, ನಾವು ಕೊಟ್ಟ ಅನುಗ್ರಹದ ಬಿನ್ನಪವನವಧರಿಸುವುದು' ಎಂಬ ಕೈಂಕರ್ಯ ಅವನದು. ಅವನ ಸುಜ್ಞಾನದ ಶಸ್ತ್ರಕ್ಕೆ ಸದುವಿನಯವೇ ಸಾಣೆಯಾಗಿದ್ದಿತು. ಯಾರಾದರೂ ಅವನ ಘನತೆಯನ್ನು ಕೊಂಡಾಡಿದರೆ :

"ಎನಗಿಲ್ಲದ ಘನವನೇರಿಸಿ ನುಡಿದರೆ ಅದು ನಿಮ್ಮ ಲೀಲೆ :
ನಾನದ ಬೇಕೆನ್ನೆ, ಬೇಡೆನ್ನೆನದಂತಿರಲಿ
ನಮ್ಮ ಶ್ರೀಪಾದದ ಕೃಪೆಯಿಂದ ನಿಮ್ಮ ನಿಲವನರಿದೆನು"
ಎಂದು ಬಿನ್ನವಿಸಿಕೊಳ್ಳುತ್ತಿದ್ದನಾ ಚಿದ್ವಿಭೂತಿ, ಚಿನ್ಮಯಮೂರ್ತಿ,

ಬಸವಣ್ಣ ಗುರು, ಚೆನ್ನಬಸವಣ್ಣ ಲಿಂಗ, ಪ್ರಭುದೇವ ಜಂಗಮ ; ಬಸವಣ್ಣ ಸದ್ರೂಪ, ಚೆನ್ನಬಸವಣ್ಣ ಚಿದ್ರೂಪ, ಪ್ರಭುದೇವ ಆನಂದರೂಪ; ಬಸವಣ್ಣ ಭಕ್ತಿ, ಚೆನ್ನಬಸವಣ್ಣ ಜ್ಞಾನ, ಪ್ರಭುದೇವ ವೈರಾಗ್ಯ; ಬಸವಣ್ಣ ಕಾಯ, ಚೆನ್ನಬಸವಣ್ಣ ಪ್ರಾಣ, ಪ್ರಭುದೇವ ಆತ್ಮ; ಬಸವಣ್ಣ ಪ್ರಣತಿ, ಚೆನ್ನಬಸವಣ್ಣ ತೈಲ, ಪ್ರಭುದೇವ ಜ್ಯೋತಿ–ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಈ ಮೂವರ ಸಂಬಂಧ ಮನೋಜ್ಞವಾದುದು. ಈ ಸೊಲ್ಲಿಸಲಾಗದ ಸಂಬಂಧವನ್ನೂ ಸೊಲ್ಲಿಸಿದ್ದಾನೆ ಚೆನ್ನಬಸವಣ್ಣ :

ಅನುಮಿಷಂಗೆ ಲಿಂಗವ ಕೊಟ್ಟಾತ ಬಸವಣ್ಣ.
ಆ ಲಿಂಗ ನಿನಗೆ ಸೇರಿತ್ತಾಗಿ ಬಸವಣ್ಣನ
ಸಾಂಪ್ರದಾಯದ ಕಂದನು ನೋಡಾ ನೀನು.
ಭಕ್ತ ದಳದುಳದಿಂದ ಚೆನ್ನಸಂಗಮನಾಥನೆಂಬ
ಲಿಂಗವನವಗ್ರಹಿಸಿಕೊಂಡೆನಾಗಿ
ಬಸವಣ್ಣನ ಸಾಂಪ್ರದಾಯದ ಕಂದನು ನೋಡಾ ನೀನು.
ಇಂತಿಬ್ಬರಿಗೆಯೂ ಒಂದೇ ಸ್ಥಳಕುಳವಾದ ಕಾರಣ
ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣನ ಮಹಾಮನೆಯ ಪ್ರಸಾದ
ಇಬ್ಬರಿಗೆಯು ಒಂದೇ ಕಾಣಾ, ಪ್ರಭುವೆ !"
"ಕಾಯ ಒಂದು, ಪ್ರಾಣ ಒಂದು, ಭಾವ ಒಂದು,
ನಿರ್ಭಾವ ಒಂದು. ಒಂದಲ್ಲದೆ ಎರಡುಂಟೆ?
ಗುರು ಒಂದು, ಲಿಂಗ ಒಂದು, ಉಪದೇಶ ಒಂದು–
ಕೂಡಲ ಚೆನ್ನಸಂಗಯ್ಯನ ಶರಣ ಬಸವಣ್ಣನ ಗರುಡಿಯಲ್ಲಿ
ಇಬ್ಬರಿಗೂ ಅಭ್ಯಾಸ ಒಂದೇ ಕಾಣಾ ಪ್ರಭುವೆ!"

ಇಂಥ ದಿವ್ಯಜ್ಞಾನಿಯಾದ ಚೆನ್ನಬಸವಣ್ಣ ಎರಡುಪಟ್ಟ (೨೪ ವರ್ಷ) ಮಾತ್ರ ಬದುಕಿದ್ದನೆಂದರೆ 'ಇದು ಸಾಧ್ಯವಿಲ್ಲ'ವೆನಿಸಬಹುದಲ್ಲವೆ? ಆದರೆ ಸೋಜಿಗವೆನಿಸಿದರೂ ಸತ್ಯಸಂಗತಿಯಿದು. ಬಸವಣ್ಣನವರಿಗೆ ಮೂರುಪಟ್ಟ, ಚೆನ್ನಬಸವಣ್ಣನವರಿಗೆ ಎರಡುಪಟ್ಟವೆಂಬುದು ಕಾಲನ ನಾಲಗೆಯ ಮೇಲೆ ನೆಲೆಸಿ ನಿಂತಿರುವ ಸತ್ಯ. ಈ ಇಪ್ಪತ್ತು ವರ್ಷಗಳ ಯುವಕ 'ಅರಿವರತು, ಮರಹು ನಷ್ಟವಾಗಿ, ಸ್ವತಂತ್ರ ಶಿವಾಚಾರಿಯಾದ ಸ್ವಯಂಭು ಜ್ಞಾನಿ'ಯಾದುದು, 'ಮಾಯದ ಹೊಡೆಗಿಚ್ಚ ಗೆದ್ದ' ಮೀರನಾದುದು, 'ಕೂಡಲ ಚೆನ್ನಸಂಗಯ್ಯನಲ್ಲಿ ಅನುಮಿಷ ಪ್ರಭುವಿಂಗೆ ಬಸವಣ್ಣ

ಗುರುವಾದ ಕಾರಣ ನಾನು ನಿನಗೆ ಚಿಕ್ಕ ತಮ್ಮ ಕೇಳಾ, ಪ್ರಭುವೆ!' ಎಂದು ಪ್ರಭುದೇವರಿಗೆ ಹೇಳುವಷ್ಟು ಸಮರ್ಥನಾದುದು ಪವಾಡಗಳಲ್ಲಿ ಪವಾಡ.

ನಿಜ, ಚೆನ್ನಬಸವಣ್ಣ ಪ್ರಭುದೇವ ಅನುಜಾಗ್ರಜರು. ಇಬ್ಬರದೂ ಅದೇ ಪ್ರಸನ್ನ ಗಂಭೀರ ವಚನರಚನಾವಿನ್ಯಾಸ, ಅದೇ ನಿಜದ ನಿಷ್ಠುರತೆ, ಅದೇ ಒರೆ ದೊರೆದು ಕಾಸಿ ಸೋಸಿ ನೋಡುವ ರೀತಿನೀತಿಗಳು, ಅದೇ ಪಾದರಸದಂಥ ಪ್ರತಿಭೆ. ಅಲಗಿನ ಮೊನೆಯಂತೆ ನಿಶಿತವಾದ ಮತಿ, ಆಕಾಶದಂತೆ ಅನಂತವೂ ನಿರ್ಲಿಪ್ತವೂ ಆದ ಮನಸ್ಸು, ಅದೇ ನಿರಹಂಭಾವದ ನಿಲವು. ಇಬ್ಬರ ಕೈಯಲ್ಲಿಯೂ ಕನ್ನಡ ಮಾತು 'ಹೊಸಮಸೆಯ ತಿಸುಳ'ದಂತೆ ಥಳಥಳಿಸಿ ಹೊಳೆದುವು. ಇಲ್ಲಿ ನೋಡಿ :

'ಅರಿದಾಗಲಿದ್ದಿತ್ತು. ಮರೆದಾಗ. ಬಿದ್ದಿತ್ತು'
'ಅರಿವುಳ್ಳಾತಂಗೆ ಅಗ್ಗವಣಿಯ ಹಂಗೇಕೆ?'
'ಅಂಗವೆ ಸೆಜ್ಜೆ, ಆಚಾರವೆ ಶಿವದಾರ, ತ್ರಿಕರಣಶುದ್ಧಿಯೇ ಕುಳಿಕೆ'
'ಅಹಂ ಎಂಬುದೇ ದೇಹ, ದಾಸೋಹಂ ಎಂಬುದೇ ನಿರ್ದೇಹ'
'ಅಂಗಸಂಗವೆಂಬುದೇ ಅನಾಚಾರ, ಲಿಂಗಸಂಗವೆಂಬುದೇ ಸದಾಚಾರ'
'ಅಂಗವೇ ಮಣ್ಣು ಲಿಂಗವೇ ಮರನು, ಫಲವೇ ಜಂಗಮ, ರುಚಿಯೇ ಪ್ರಸಾದ'
'ಆಚಾರವೇ ಅಂಗ, ಅರಿವೇ ಪ್ರಾಣ'
ಆಚಾರ ಸಹಿತ ಭಕ್ತ, ಅನಾಚಾರ ಸಹಿತ ನರ'
'ಇದ್ದುದ ವಂಚನೆ ಮಾಡದಿಪ್ಪುದೇ ಶೀಲ, ಇಲ್ಲದುದಕ್ಕೆ ಕಡನ
ಮಾಡುದಿಪ್ಪುದೇ ಶೀಲ'
ಒಕ್ಕುದೆಂಬುದೆ ಕಾಯ, ಮಿಕ್ಕುದೆಂಬುದೇ ಪ್ರಾಣ'
'ಕಾಯ ಗುರು, ಪ್ರಾಣ ಲಿಂಗ, ಜ್ಞಾನ ಜಂಗಮ'
'ಕಾಯದಲ್ಲಿ ಶುದ್ಧಪ್ರಸಾದ, ಪ್ರಾಣದಲ್ಲಿ ಸಿದ್ಧಪ್ರಸಾದ, ಜ್ಞಾನದಲ್ಲಿ ಪ್ರಸಿದ್ಧ ಪ್ರಸಾದ'
'ಜಂಗಮ ಪ್ರೇಮಿಗೆ ಜಡಮತಿಯುಂಟೆ?'
'ತನುವಿನ ಪ್ರಾಣ ಆಚಾರ, ಮನದ ಪ್ರಾಣ ಅನುಭಾವ'
'ದೇವಾ, ನೀವು ನಿಮ್ಮಂತೆ; ಉಳಿದುದೆಲ್ಲವೂ ನೀವಿರಿಸಿದಂತೆ'
'ನಾನಿಲ್ಲದ ಮುನ್ನ ನೀನಿರ್ದುದಿಲ್ಲವಯ್ಯ!'
'ನಿಮ್ಮನುಭಾವಿಯ ನೀವೆಂಬೆನಯ್ಯ'

'ಪದವೇ ಲಿಂಗ, ಅರ್ಥವೇ ಭಕ್ತಿ'

'ಬಯಸಿ ಬಂದುದು ಅಂಗಭೋಗ, ಬಯಸದೆ ಬಂದುದು ಲಿಂಗಭೋಗ'

'ಬೇಕೆಂಬುದು ಕಾಯಗುಣ, ಬೇಡೆಂಬುದು ವೈರಾಗ್ಯ'

'ಮರ್ಮವಿಡಿದು ಮಾಡುವಂಗೆ ಕರ್ಮವಿಲ್ಲ'

'ಮನಶುದ್ಧವುಳ್ಳಾತಂಗೆ ಮಂತ್ರದ ಹಂಗೇಕೆ ?'

'ಮುತ್ತು ನೀರಿನಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ?'

'ವ್ಯಾಕುಳವೆ ಭವಿ, ನಿರಾಕುಳವೆ ನಿರ್ಭವಿ'

'ಸಂತೆಯೊಳಗೆ ಸಮಾಧಿಯುಂಟೆ?'

'ಸುರೆಯ ಮಡಕೆಗೆ ಬೂದಿಯ ಹೊಸಿದರೇನು; ಒಳಗೆ ಶುದ್ಧವಾಗದನ್ನಕ್ಕರ?'

'ಜ್ಞಾನಿಗೆ ಕತ್ತಲಿಲ್ಲ, ಅಜಾತಂಗೆ ಹೊಲೆಯಿಲ್ಲ'–ಇತ್ಯಾದಿ

ಚೆನ್ನಬಸವನ ಬೆಳಕಿನ ಬಿತ್ತುಗಳು ಅಲ್ಲಮನ ಅರಿವಿನ ಆಣಿಮುತ್ತುಗಳನ್ನೇ ಹೋಲುತ್ತಿವೆಯಲ್ಲವೆ? ಅದೇ ಸೂತ್ರಪ್ರಾಯ ಸಂಕ್ಷಿಪ್ತತೆ, ಅದೇ ನಿಶ್ಚಿತತೆ–ಖಚಿತತೆಗಳು, ಅದೇ ಔಚಿತ್ಯಪ್ರಿಯತೆಗಳು ಒಡೆದು ಕಾಣುವುದಿಲ್ಲವೆ ಇಲ್ಲಿಯೂ?

ಶಿವದೀಕ್ಷೆ ಹೊಂದಿದವರೆಲ್ಲ ಸದ್ಭಕ್ತರಾಗರೆಂಬ ನಿಲವಿನಲ್ಲಿಯೂ ಇಬ್ಬರದೂ ಒಂದೇ ಮತ. ಬಸವಣ್ಣನವರಂತೆ 'ಸರ್ವರೂ ಸದ್ಭಕ್ತರೆಂಬೆ' ಎನ್ನುವ ದೃಷ್ಟಿ ಇವರದಲ್ಲ.

"ಸತ್ಯವ ನುಡಿಯದ, ಸದಾಚಾರದಲ್ಲಿ ನಡೆಯದ, ಸದ್ಭಕ್ತಿಯ ಹಿಡಿಯದ,
ನಿಜ ಮುಕ್ತಿ ಪಡೆಯದ, ಸತ್ಕ್ರಿಯೆ ವಶವಾಗದ, ಸಮ್ಯಕ್‌ಜ್ಞಾನದ ಮುಟ್ಟದ
ಸುಡು, ಸುಡು! ಈ ವೇಷದ ಭಾಷೆಯ ನೋಡಿ ಗುಹೇಶ್ವರಲಿಂಗದಲ್ಲಿ
ನಗುತ್ತಿದ್ದಾನೆ ಕಾಣಾ, ಚೆನ್ನಬಸವಣ್ಣಾ !"

ಎಂದು ಪ್ರಭುದೇವನು ನುಡಿದರೆ,

"ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ ಸಂಗಮನಾಥನೆಂಬ ಭಾವನೆ
ಬಸವಣ್ಣಂಗಾಯಿತ್ತಲ್ಲದೆ ಎನಗೆ ಆ ಭಾವವಿಲ್ಲ ನೋಡಾ !
ಲಿಂಗೈಕ್ಯ ಶರಣರ ಕಂಡರೆ ನಂಬಿನೆಚ್ಚಿ ಅವರ ಪಾದಕ್ಕೆ ಎರಗುವುದೆನ್ನ
ಮನವು"

ಎಂದು ಚೆನ್ನೆಬಸವಣ್ಣ ಮಾರ್ನುಡಿಯುತ್ತಾನೆ. ಇನ್ನೂ ಮುಂದೆ ಸಾಗಿ,

"ಬಟ್ಟಬಯಲೆಲ್ಲ ಗಟ್ಟಿಗೊಂಡಡೆ ಸ್ವರ್ಗಮರ್ತ್ಯ ಪಾತಾಳಕ್ಕೆ
ಠಾವಿನ್ನೆಲ್ಲಿಯದೊ?

ಮೇಘಜಲವೆಲ್ಲ ಮುತ್ತಾದಡೆ ಸಪ್ತಸಾಗರಂಗಳಿಗೆ ಉದಕವಿನ್ನೆಲ್ಲಿಯದೊ?
ಕಷ್ಟಜೀವಿ ಮನುಜರೆಲ್ಲ ನೆಟ್ಟನೆ ಶಿವಜ್ಞಾನಿಗಳಾದೊಡೆ
ಮುಂದೆ ಭವದ ಬಳ್ಳಿಗೆ ಬೀಜವಿನ್ನೆಲ್ಲಿಯದೊ?
ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ,
ಕೋಟಿಗೊಬ್ಬ ಶರಣ!"

ಎಂದು ತನ್ನ ತೀರ್ಪನ್ನೇ ತಿಳಿಸಿಬಿಟ್ಟಿದ್ದಾನೆ! ಎಂಥ ತ್ರಿಕಾಲಾಬಾಧಿತವಾದ ತೀರ್ಪು ಇದು!

ನೋಡುವ ದೃಷ್ಟಿ ಎರಡು ವಿಧ : ಒಂದು ಸಮನ್ವಯ ದೃಷ್ಟಿ, ಎರಡನೆಯದು ವಿಶ್ಲೇಷಣ ದೃಷ್ಟಿ. ಮೊದಲನೆಯ ದೃಷ್ಟಿಗೆ ಎಲ್ಲೆಡೆಯಲ್ಲಿಯೂ ಒಳ್ಳೆಯದು ಮಾತ್ರ, ಲೇಸು ಮಾತ್ರ, ಶಿವಮಾತ್ರ ಕಾಣುತ್ತದೆ ; ಎರಡನೆಯ ದೃಷ್ಟಿಗೆ ಒಳಿತಿನ ಹಿಂದೆ ಕಳ್ಳನಂತೆ ಅಡಗಿ ಕುಳಿತಿರುವ ಅಲ್ಲವಾದುದೂ ಕಾಣುತ್ತದೆ. ಮೊದಲನೆಯದು ಏಕೀಕರಿಸಿ, ಸಮೀಕರಿಸಿ ನೋಡುವ ದೃಷ್ಟಿ ; ಎರಡನೆಯದು ವಿಭಜಿಸಿ, ವಿಶ್ಲೇಷಿಸಿ, ವಿವೇಚಿಸಿ ನೋಡುವ ದೃಷ್ಟಿ. ಬಸವಣ್ಣನವರದು ಮೊದಲನೆಯ ದೃಷ್ಟಿ. ಆ ದೃಷ್ಟಿಗೆ ಕಂಡು ಬಂದುದು ಮನುಜ ಸೃಷ್ಟಿಯ ಒಂದು ಮಗ್ಗಲು. ಅದರ ಇನ್ನೊಂದು ಮಗ್ಗಲನ್ನು ಕಾಣಲು ಎರಡನೆಯ ದೃಷ್ಟಿಯೂ ಬೇಕಾಗಿದ್ದಿತು. ಅಲ್ಲಮ–ಚೆನ್ನಬಸವರು ಈ ಎರಡನೆಯ ದೃಷ್ಟಿಯನ್ನು ಪಡೆದುಕೊಂಡು ಬಂದಿದ್ದ ಕಾರನ ಬಸವಣ್ಣನು ಬಿತ್ತಿದ ಬೆಳೆಯಲ್ಲಿ ಕಳೆ ಬೆಳೆದಾಗ, ಕಸ ಬೆಳೆದಾಗ, ಅದನ್ನು ಕಳೆಯಲು ಎಡೆ ಹೊಡೆವ ಕಾರ್ಯವನ್ನವರು ಮಾಡಿದರು. ಅವರು ಆ ಕಾರ್ಯ ಮಾಡದೇ ಹೋಗಿದ್ದರೆ ಬೆಳೆಗಿಂತ ಕಳೆ ಹೆಚ್ಚಾಗಿ ಕಳೆಗೆಟ್ಟು ಹೋಗುತ್ತಿದ್ದಿತು, ಬಸವಣ್ಣನ ಭಕ್ತಿ ಕ್ಷೇತ್ರದ ಕೃಷಿಕಾಯಕ.

ಇನ್ನೂ ಒಂದು ಉದಾಹರಣೆಯಿಂದ ಬಸವ–ಚೆನ್ನವರಲ್ಲಿದ್ದ ದೃಷ್ಟಿಭೇದವನ್ನು ಸ್ಪಷ್ಟಗೊಳಿಸಬಹುದು. ಇಬ್ಬರೂ ಕಾಯಕದ ಮಹತ್ವವನ್ನು ಕೀರ್ತಿಸಿದ್ದಾರೆ. ಆದರೆ ಒಬ್ಬರು ಅದರ ಒಪ್ಪಿನ ಮುಖವನ್ನು ಕಂಡರೆ, ಇನ್ನೊಬ್ಬರು ಅದರ ತಪ್ಪಿನ ಮುಖವನ್ನು ಕಂಡಿದ್ದಾರೆ :

"ಕೃಷಿಕೃತ್ಯ ಕಾಯಕದಿಂದಾದಡೇನು ?
ತನುಮನ ಬಳಲಿಸಿ ತಂದು ದಾಸೋಹವ ಮಾಡುವ
ಪರಮ ಸದ್‌ಭಕ್ತನ ಪಾದವ ತೋರಯ್ಯಾ ಎನಗೆ !
ಅಂದೆಂತೆನೆ : ಆತನ ತನುಶುದ್ಧ, ಆತನ ಮನಶುದ್ಧ,

ಆತನ ನಡೆಶುದ್ಧ, ನುಡಿಯೆಲ್ಲ ಪಾವನವು !
ಆತಂಗೆ ಉಪದೇಶವ ಮಾಡಿದಾತನೇ ಪರಮ ಸದ್ಗುರು !
ಅಂತಪ್ಪ ಸದ್‌ಭಕ್ತನ ಮನೆಯ ಕೈಲಾಸವೆಂದು ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್–ಪಾವನ !
ಇಂತಪ್ಪವರ ನಾನು ನೆರೆನಂಬಿ 'ನಮೋ ನಮಃ' ಎಂಬೆನಯ್ಯ
ಕೂಡಲ ಸಂಗಮದೇವಾ"

ಎಂದು ಬಸವಣ್ಣನವರು ಹೃದಯವುಕ್ಕಿ ಹಾಡಿದರೆ,

"ತನುಮನ ಬಳಲದೆ, ಉದ್ದಂಡ ವೃತ್ತಿಯಲ್ಲಿ ಧನವ ಗಳಿಸಿ
ಗುರುಲಿಂಗ ಜಂಗಮಕ್ಕೆ ವೆಚ್ಚಿಸಿ ದಾಸೋಹವ ಮಾಡಿ
ಭಕ್ತರಾದೆವೆಂಬವರ ಮುಖವ ತೋರದಿರಯ್ಯಾ ಎನಗೆ !
ಅವ ಪರಧನಚೋರ ; ಅವಪಾಪಿ, ಕೋಪಿ, ಪರಿಭ್ರಷ್ಟ !
ಅವನ ಕಾಯಕವ ವಿಚಾರಿಸದೆ ಉಪದೇಶವ ಕೊಟ್ಟ
ಗುರುವಿಂಗೆ ರೌರವ ನರಕ !
ಅವನ ಆಯತವ ವಿಚಾರಿಸದೆ ಅವನ ಮನೆಯಲ್ಲಿ ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮಕ್ಕೆ ಏಳನೆಯ ಪಾತಕ !
ಇಂತಪ್ಪ ಗುರು–ಶಿಷ್ಯ–ಜಂಗಮದ ಬಾಳುವೆ
ಹುಲಿ ಕಪಿಲೆಯ ತಿಂದು ಮಿಕ್ಕಿದುದ ನರಿ ತಿಂದಂತಾಯಿತ್ತು.
ಕೂಡಲ ಚೆನ್ನಸಂಗಮದೇವಾ!"

ಲೇಸಿನ ಬಸವಾಯಣವೊಂದು ಕಡೆಗೆ ; ಆ ಲೇಸಿನ ಬಟ್ಟೆಯನ್ನು ಬಿಟ್ಟು ಕೆಟ್ಟ ದಾರಿಯನ್ನು ತುಳಿಯುವವರಿಗೆ ಚಾಟಿಯೇಟನ್ನು ಕೊಡುವ ಚೆನ್ನಬಸವಣ್ಣನಿನ್ನೊಂದು ಕಡೆಗೆ. 'ಸುರೆಯ ಮಡಕೆಗೆ ಹೊರಗೆ ಬೂದಿಯ ಹೂಸಿದರೇನು? ಒಳಗೆ ಶುದ್ಧವಾಗದನ್ನಕ್ಕರ?' ಎಂಬುದು ಚೆನ್ನಬಸವಣ್ಣನ ಚಿರಂತನ ಪ್ರಶ್ನೆ. ಪರುಷ ಸೋಂಕಿದರೆ ಕಬ್ಬುನವೂ ಕಡವರವಾಗುವುದೆಂದು ಇದಕ್ಕೆ ಯಾರಾದರೂ ಉತ್ತರವಿತ್ತರೆ ಅದಕ್ಕೆ ಅವನು 'ಕಬ್ಬುನದ ಶುನಕನ ತಂದು ಪರುಷವ ಮುಟ್ಟಿಸಲೊಡನೆ ಹೊನ್ನ ಶುನಕವಪ್ಪುದಲ್ಲದೆ ಪರುಷವಾಗಲರಿಯದು ನೋಡಾ!' ಎಂದು ಖಂಡಿತವಾಗಿ ಹೇಳಿಬಿಡುತ್ತಾನೆ. ಅಲ್ಲಮನ ಉತ್ತರ ಇನ್ನೂ ನಿಖರವಾದುದು. ಮಾಯೆಯ ಪಕ್ಷವಹಿಸಿ ಮಾತನಾಡುತ್ತ.

“ಕೀಳುಗಬ್ಬುನವೆಣ್ಣ ಕೋಪಿಸಿ
ಕಾಲಲೊದೆದೊಡೆ ಮೇಣು ಕರುಣಿಸಿ
ತೋಳಲಪ್ಪಿದಡೇನು ಪರುಷದ ಗಂಡನದರಂತೆ
ಬಾಲೆಗೆಂತಾದೊಡೆಯ ನಿನ್ನ ಸ
ಮೇಳ ಘಟಿಸಿದ ಬಳಿಕ ಮಾಯೆಯ
ಪಾಲಸಲು ಬೇಕೆನುತ” ಬಿನ್ನವಿಸಿಕೊಂಡ ವಿಮಳೆಗೆ
ಉತ್ತರವೀಯುತ್ತಾ ಅಲ್ಲಮ ;
“ವನಿತೆ, ನಿನ್ನಯ ಮಾತಹುದು ; ಕ–
ಬ್ಬುನವದಾದೊಡೆ ಪರುಷ ಮುಟ್ಟಲು
ಕನಕವಹುದಲ್ಲದೆ ವೃಥಾ ಹಳೆ ಹಂಚು ಹೊನ್ನಹುದೆ?”

ತಾನೂ ಪರುಷದ ಸ್ಪರ್ಶದಿಂದ ಹೊನ್ನಾಗಬೇಕೆಂದು ಹಾರೈಸುವ ವಸ್ತು ಕನಿಷ್ಠ ಕಬ್ಬುನವಾದರೂ ಆಗಿರಬೇಡವೆ? ಹಳೆ ಹಂಚು ಮುಂದೆ ಬಂದು ನನ್ನನ್ನೂ ಹೊನ್ನನ್ನಾಗಿ ಮಾರ್ಪಡಿಸೆಂದು ಪರುಷಕ್ಕೆ ಪ್ರಾರ್ಥಿಸಿಕೊಂಡರೆ ಪರುಷವೇನು ಹೇಳಬೆಕು? “ಮೊದಲು ಕಬ್ಬುನವಾದರೂ ಆಗಿ ಬಾ!” ಎಂದಲ್ಲವೆ?

ಪ್ರಭು–ಚೆನ್ನಬಸವಣ್ಣನವರಲ್ಲಿ ಈ ವಿಷಯದಲ್ಲಿಯೂ ವಿಚಾರಸಾಮ್ಯವಿದೆ ;

ಬೇರೆ ಹಲವು ವಿಷಯಗಳಲ್ಲಿಯೂ ಮತ್ತೈಕ್ಯವಿದೆ. ಇಬ್ಬರೂ ಬಹಿರಂಗಕ್ಕಿಂತ ಅಂತರಂಗಕ್ಕೆ ಹೆಚ್ಚು ಮಹತ್ವ ಕೊಡುವವರು ;

“ಹೊರಗನೇ ಕೊಯ್ದು ಹೊರಗನೇ ಪೂಜಿಸಿದೊಡೆ
ಪ್ರಯೋಜನವಿಲ್ಲ, ಪರಿಣಾಮವಿಲ್ಲ, ಸುಖ ದೊರೆಕೊಳ್ಳದು ನೋಡಾ !
ಅದೆಂತೆಂದೊಡೆ : ಸರ್ವ ಜೀವಂಗಳಲ್ಲಿ ಹಿಂಸೆಯ ಮಾಡದಿಪ್ಪುದೇ ಪ್ರಥಮ ಪುಷ್ಪ;
ಸರ್ವೇಂದ್ರಿಯಂಗಳ ನಿಗ್ರಹಿಸಿಕೊಂಡಿರಬಲ್ಲಡೆ ದ್ವಿತೀಯ ಪುಷ್ಪ ;
ಸರ್ವಾಹಂಕಾರವ ಮರೆತು ಶಾಂತನಾಗಿರಬಲ್ಲಡೆ ತೃತೀಯ ಪುಷ್ಪ ;
ಸರ್ವ ವ್ಯಾಪಾರವಳಿದು ನಿರ್ವ್ಯಾಪಾರಿಯಾಗಿರಬಲ್ಲಡೆ ಚತುರ್ಥ ಪುಷ್ಪ;
ದುರ್ಭಾವ ಪ್ರಕೃತಿಯಳಿದು ಸದ್ಭಾವ ಎಡೆಗೊಂಡಿರಬಲ್ಲಡೆ ಪಂಚಮ ಪುಷ್ಪ;
ಉಂಟು ಉಪವಾಸಿ ಬಳಸಿ ಬ್ರಹ್ಮಚಾರಿಯಾಗಿರಬಲ್ಲೊಡೆ ಪುಷ್ಠಮ ಪುಷ್ಪ ;

ಅನೃತವ ಮರೆದು ಸತ್ಯವ ನುಡಿಯಬಲ್ಲೊಡೆ ಸಪ್ತಮ ಪುಷ್ಪ ;
ಸಕಲ ಪ್ರಪಂಚವಳಿದು ಸಹಸಪೂಜೆಯ ಮಾಡಬಲ್ಲ ಶರಣರು
ನಿಮ್ಮ ಪ್ರತಿಬಿಬದಂತಿಪ್ಪರು ಕಾಣಾ ಕೂಡಲ ಚೆನ್ನಸಂಗಮದೇವಾ !"

ಈ ಅಷ್ಟಕಮಲದ ಸಹಸ್ರಪೂಜೆ ಅದೆಷ್ಟು ಅನುಪಮವಾದುದು ! 'ಬಂಡಿ ತುಂಬ ಪತ್ರೆಯ ತಂದು ಕಂಡ ಕಂಡಲ್ಲಿ ಪೂಜೆಯ ಮಾಡುವ' ಬಾಹ್ಯಕರ್ಮದಿಂದ ಪರಿಣಾಮವಿಲ್ಲವೆಂದು ಬಸವಣ್ಣನವರೂ ಎಚ್ಚರಿಸಿದರಾದರೂ ಬಹಿರಂಗದ ಕ್ರಿಯೆಗೆ ಅಂತರಂಗದ ಅನುಸಂಧಾನವನ್ನು ಹೊಂದಿಸಿ ಮುಂದುವರಿವ ಹವಣನ್ನು ಹುಡುಕುವ ಗೋಜಿಗೆ ಅವರು ಹೋಗಲಿಲ್ಲ. ಅಲ್ಲಮಪ್ರಭುಗಳಿಗೂ ಚೆನ್ನಬಸವಣ್ಣನವರಿಗೂ ಆ ಕಾರ್ಯವನ್ನು ಬಿಟ್ಟುಕೊಟ್ಟು ತಾವು ಮಾತ್ರ ಸಹಜ ಭಕ್ತಿಯ ಸುಖಸಮುದ್ರದಲ್ಲಿ ಲೋಲಾಡಿ ತೇಲಾಡಿದರು. ಇವರಿಬ್ಬರಲ್ಲಿ ಅಲ್ಲಮ ಪ್ರಭುದೇವ ಷಟ್‌ಸ್ಥಲವನ್ನೂ ತಳಹದಿಯನ್ನು ಹಾಕುವ ಕೆಲಸವನ್ನು ಹೆಚ್ಚಾಗಿ ಚೆನ್ನಬಸವಣ್ಣನೇ ಮಾಡಬೇಕಾಯಿತು– ಅದೂ ಅಂತರಂಗದ ಅರಿವು, ಬಹಿರಂಗದ ಕ್ರಿಯೆ ಎರಡೂ ಸಮರಸವಾಗಿ ಸಾಗುವ ರೀತಿಯಲ್ಲಿ. ಹೀಗೆ :

"ಅಂತರಂಗದ ಅರಿವು, ಬಹಿರಂಗದ ಕ್ರಿಯೆ
ಈ ಉಭಯಸಂಪುಟ ಒಂದಾದ ಶರಣಂಗೆ ಹಿಂಗಿತ್ತು ತನು ಸೂತಕ,
ಹಿಂಗಿತ್ತು ಮನಸೂತಕ, ಕೂಡಲ ಚನ್ನಸಂಗಯ್ಯನಲ್ಲಿ
ಸಂಗವಾದದ್ದು ಸರ್ವೇಂದ್ರಿಯ"

ಅರಿವು, ಕ್ರಿಯೆ–ಎರಡೂ ಬೇರೆ ಬೇರೆ ಅಲ್ಲವೇ ಅಲ್ಲ ; ಎರಡೂ ಒಂದೇ:

"ಕ್ರಿಯೆಯೆ ಜ್ಞಾನ, ಜ್ಞಾನವೇ ಕ್ರಿಯೆ :
ಜ್ಞಾನವೆಂದರೆ ತಿಳಿಯುವುದು, ಕ್ರಿಯೆಯೆಂದರೆ ತಿಳಿದಂತೆ ಮಾಡುವುದು.
ಪರಸ್ತ್ರೀ ಭೋಗಿಸಬಾರದೆಂಬುದೇ ಜ್ಞಾನ ;
ಅದರಂತೆ ಆಚರಿಸುವುದೇ ಕ್ರಿಯೆ ; ಅಂತು ಆಚರಿಸದಿದ್ದರೆ
ಅದೇ ಅಜ್ಞಾನ ನೋಡಾ, ಕೂಡಲ ಚೆನ್ನಸಂಗಮದೇವಾ !"

ಆದುದರಿಂದ ಷಟ್‌ಸ್ಥಲದ ಸೌಪಾನಿಕ ವಿಕಾಸಕ್ರಮದಲ್ಲಿ ಮಾಡುವ ಭಕ್ತನಿಗೆಯೇ ಮೊದಲನೆಯ ಸ್ಥಾನ :

"ಕಿಂಕುರ್ವಾಣತೆಯಿಂದ ಉಳ್ಳುದನರಿತು ಮಾಡುವಲ್ಲಿ ಭಕ್ತ ;
ನಿಷ್ಠೆ ನಿಬ್ಬೆರಸಿ ಗಟ್ಟಿಗೊಂಡು, ಅಭಿಲಾಷೆ ಸಮನಿಸದೆ,

ಪರಿಚ್ಛೇದ ಬುದ್ಧಿಯುಳ್ಳಲ್ಲಿ ಮಾಹೇಶ್ವರ,
ಅನರ್ಪಿತವ ಸಮನಿಸದೆ ಬಂದು ಕಾಯದ ಕರಣದ ಕೈಗಳಲ್ಲಿ ಕೊಟ್ಟು
ಲಿಂಗಸಹಿತ ಭೋಗಿಸುವಲ್ಲಿ ಪ್ರಸಾದಿ ;
ಪ್ರಾಣಕ್ಕೆ ಪ್ರಾಣವಾಗಿ, ಕಾಲಸ್ಥಿತಿಯನರಿದು,
ಎಚ್ಚರಿಕೆ ಕುಂದದಿಪ್ಪಲ್ಲಿ ಪ್ರಾಣಲಿಂಗಿ ;
ತನಗೆ ಲಿಂಗವಾಗಿ ಲಿಂಗಕ್ಕೆ ತಾನಾಗೆ ಹೆಚ್ಚು ಬೇರಿಲ್ಲದಿರ್ದಡೆ ಶರಣ ;
ಸದಾಚಾರ ಸಂಪತ್ತಿನಲ್ಲಿ ಬಂದ ಅನುಭಾವವನು ಮೀರಿ
ಹೆಸರಡಗಿದ ಸುಖವದು ಲಿಂಗೈಕ್ಯ , ಕೂಡಲ ಚೆನ್ನಸಂಗಮದೇವಾ."
ಈ ಸದಾಚಾರ ಸಂಪತ್ತು ಯಾವುದು?
"ಸಚಾಚಾರಿಯಾದೊಡೆ......ಒಬ್ಬರಿಗೊಬ್ಬರು ಶರಣೆಂಬುದೇ ಸರ್ವತೀರ್ಥ;
ಆ ಭಕ್ತನ ದೇಹವೇ ತ್ರಿಕೂಟದ ಶಿವಾಲಯ, ವಿನಯವೇ ಅಗ್ಗವಣಿ,
ಸಜ್ಜನವೇ ಮಜ್ಜನ, ಸದಾನಂದ ಹಿರವೇ ಲಿಂಗಪೂಜೆ, ಸತ್ಯವೇ
ಅಡ್ಡಣಿಗೆ, ಸಮತೆ ಹರಿವಾಣ, ಮನವೇ ಮೀಸಲು, ಗುರುವು
ಲಿಂಗವಾರೋಗಣೆಯ ಮಾಡುತ್ತಲಿರಲು ಹರುಷವೇ ಹಸ್ತಮಜ್ಜನ,
ಪ್ರೀತಿಯೇ ಕರ್ಪೂರವೀಳ್ಯ, ಕಲಿತನವೇ ಜಾಗಟಿ, ವಿರಕ್ತಿ ಮದ್ದಳೆ"

ಹೀಗೆ ದೇಹದಲ್ಲಿ ನಡೆಯುವ ವ್ಯಾಪಾರಗಳನ್ನೇ ಶುದ್ಧೀಕರಿಸಿ, ಉದಾತ್ತೀಕರಿಸಿ, 'ಒಡಲುಗೊಂಡು, ಬಡಲುವಿಡಿಯದೆ, ಬೊಡಲಿಲ್ಲದ ನಿಜವ ಬೆರಿಸುವ' ಭೇದವನ್ನು ತಿಳಿಸುವವರಲ್ಲಿ ಗಣ್ಯನೆನಿಸಿದ್ದಾನೆ ಚನ್ನಬಸವಣ್ಣ. ಇದೊಂದು ಅದ್ಭುತ ರೂಪಕ :

"ಕಾಯಪುರವೆಂಬ ಪಟ್ಟಣದೊಳಗೆ ಮನವೆಂಬರಸು, ತ್ರಿಕರಣವೆಂಬ ಪ್ರಧಾನಿ, ವಶೀಕರಣವೆಂಬ ಶಾನುಭೋಗ, ಆಶೆ ರೋಷವೆಂಬ ದ್ವಾರಪಾಲಕರು, ತ್ರಿಮಲವೆಂಬ ಕೋಟೆ, ಬಂದಿಸರುವ ಹಸಿವು-ತೃಷೆ-ವಿಷಯಾದಿಗಳ ಬೊಬ್ಬೆಯುಬ್ಬರ! ಪಂಚೇಂದ್ರಿಯಗಳೆಂಬ ಕಾಹುಲು ಕವಿವುತ್ತಿದೆ ; ಅರಿಷಡ್ವಾದಿಗಳ ಪೆರ್ಬಲದ ಗುಂಪಿನ ಆರ್ಭಟಿಸುವ ಸಂಚಲವೆಂಬ ತೇಜಿ, ಅಷ್ಟಮದವೆಂಬ ಎಂಟಾನೆ, ಮೊದಲ ನಾಯಕರಿಪ್ಪತ್ತೈದು ಮಂದಿ, ಪ್ರಜೆ ಪಸಾಯತರು ನೂರನಲ್ವತ್ತೆಂಟು, ದೇಹ ವಿಕಾರದ ಸರಿಗಳ ಸಂದಣಿ, ಈರೈದು ಮೂವರ ಕಂಟಕವತ್ಯುಗ್ರ, ಮುದುವರಿದ ಕಹಳೆಯ ಮೋಹರದ ಸಂಭ್ರಮ! ದುರ್ಮದವೆಂಬ ರಾಜೇಂದ್ರನು ನಿತ್ಯತ್ವದಿಂದ ರಾಜ್ಯಂ ಗೈಯುತ್ತಿರಲು ಶೂನ್ಯವೆಂಬ ಪಟ್ಟಣದೊಳಗೆ ಅನಾಮಯನೆಂಬ ಶರಣ ಸುಸ್ವತಂತ್ರ ಲೀಲೆಯಿಂದೆಚ್ಚತ್ತು ನೋಡಿ ಗಹಗಹಿಸಿ ನಗುತ್ತಿಹನು!" ಹೀಗೆ ಇನ್ನೂ ಮುಂದುವರಿದು

ಪ್ರಣವದ ಪ್ರಭೆಯ ಜ್ಯೋತಿರ್ಮಯ ಲಿಂಗದಲ್ಲಿ ಸ್ವೈರಗಾದ ನಿಜ ಶರಣನ ವಿಜಯ ಘೋಷದಲ್ಲಿ ಮುಗಿವ ಈ ವಚನವನ್ನೋದಿ ಚೆನ್ನಬಸವಣ್ಣನ ಬಗ್ಗೆ ಅವನ ಮಾತಿನಲ್ಲಿಯೇ,

"ಸಿಡಿಲ ಮಿಂಚಿನ ಬೆಳಗನೊಂದೆಡೆಯಲ್ಲಿ ಹಿಡಿಯಲುಂಟೆ?
ಈ ಉಭಯ ಒಂದಾದವರ ಕಂಡರೆ ನೀನೆಂಬೆ, ಚೆನ್ನಸಂಗಯ್ಯ"

ಎಂದು ನುಡಿಯಬೇಕೆನ್ನಿಸುತ್ತದೆ. 'ಆತನು ಬೌದ್ಧಿಕ ಸಾಮ್ರಾಜ್ಯದ ನಿರಂಕುಶ ಚಕ್ರವರ್ತಿ. ಪ್ರತಿವಾದಿಗಳು ತಲ್ಲಣಿಸಿ ಹೋಗುವಂತಹ ಪ್ರತಿಭೇ–ಪ್ರಚಂಡತೆ ಆತನದು' ಎಂದು ವಚನ ವಿದ್ಯಾಶ್ರೀ ಎಂ.ಆರ್. ಶ್ರೀ ಅವರ ಮಾತು ಅಕ್ಷರಶಃ ನಿಜವಾದುದು.

ಷಟ್‌ಸ್ಥಳ ಸಿದ್ಧಾಂತಕ್ಕೆ ಸುಭದ್ರವಾದ ಶಾಸ್ತ್ರೀಯವಾದ ತಳಹದಿಯನ್ನು ಹಾಕಲು ಹೊರಟಿದ್ದ ಚೆನ್ನಬಸವಣ್ಣ ಬಿಡವಚನಗಳನ್ನು ಬರೆದು ತೃಪ್ತನಾಗಲಿಲ್ಲ. ಕರಣಹಸುಗೆ, ಮಿಶ್ರಾರ್ಪಣ, ಪದಮಂತ್ರಗೋಪ್ಯ, ಮಂತ್ರಗೋಪ್ಯ, ಕಾಲಜ್ಞಾನಗಳನ್ನೂ ಬರೆದು ಅದಕ್ಕೆ ಶಾಶ್ವತವಾದ ಸ್ವರೂಪವನ್ನು ತಂದುಕೊಟ್ಟಿದ್ದಾನೆ. ಷಟ್‌ಚಕ್ರದ ವಚನ, ರಾಜಯೋಗದ ವಚನ, ರುದ್ರಭಾರತ ಸೃಷ್ಟಿ–ಎಂಬ ಕೃತಿಗಳನ್ನೂ ರಚಿಸಿದನೆಂದು ವದಂತಿಯಿದೆ. ಇವುಗಳೆಲ್ಲ ಮಹತ್ವದ ಕೃತಿಗಳು. ಇಂದಿಗೂ ಷಟ್‌ಸ್ಥಲ ರಹಸ್ಯವನ್ನು ಅರಿಯಲೆಳಸುವವರಿಗೆ ಇವು ಕೈದೀವಿಗೆಗಳು. ಕರಣಹಸಿಗೆ, "ಒಬ್ಬಾನೊಬ್ಬ ಒಕ್ಕಲಿಗನು ಮಳೆಯ ಹದದಿ ಭೂಮಿಯ ಬೆಳೆಯನರಿದು ಹರಗಿ, ಹಸನುಮಾಡಿ, ಹದಿನೆಂಟು ಧಾನ್ಯಗಳನ್ನು ಬಿತ್ತಿ, ಸುರಕ್ಷಿತವಾಗಿ ಸಲಹಿ, ಫಲಪೂರಿತವಾದ ಬಳಿಕ ಕೊಯ್ದು, ಕಟ್ಟಿ, ಬಣವೆಯನೊಟ್ಟಿ, ಕಣಮಾಡಿ ಒಕ್ಕಿ ರಾಶಿಯಂ ಮಾಡಿದ ಬಳಿಕ–ಇಷ್ಟು ಗೋದಿ, ಇಷ್ಟು ಜೋಳ–ಸೆಜ್ಜೆ, ಇಷ್ಟು ತೊಗರಿ, ಅವರಿ ಹೆಸರು ಇಷ್ಟಿಷ್ಟಾದುವೆಂದು ಅಳೆದಳೆಯ ಬೇರೆಮಾಡುವ ಹಾಗೆ–ಈ ಬ್ರಹ್ಮಾಂಡವೆಂಬ ಕ್ಷೇತ್ರಕ್ಕಧಿಪತಿಯಪ್ಪ ಪರಶಿವನೆಂಬ ಹಲಾಯುಧನು (ಒಕ್ಕಲಿಗನು) ಬಿತ್ತಿದ ತತ್ತ್ವಂಗಳ" ವಿಭಾಗ ಮಾಡಿ ತೋರಿಸಿದ ಗ್ರಂಥ ಅದರಲ್ಲಿ ದೇಹದ ರಚನೆ, ಮನಸ್ಸಿನ ವ್ಯಾಪಾರ, ಇಂದ್ರಿಯಾದಿಗಳ ಕಾರ್ಯ, ಸಪ್ತವ್ಯಸನಗಳು, ಷಡೂರ್ಮಿಗಳು ಮೊದಲಾದುವನ್ನೆಲ್ಲ ವಿಸದವಾಗಿ ವರ್ಣಿಸಲಾಗಿದೆ. ಷಟ್‌ಸ್ಥಲಕ್ಕೆ ಪೀಠಿಕೆಯಾಗಿ ಪರವವಸ್ತುವಿನ ಸ್ವರೂಪ, ನಿಷ್ಕಲ, ಸಕಲ ನಿಷ್ಕಲ ಮತ್ತು ಸಕಲಗಳನ್ನೂ ಸಾದಾಖ್ಯಗಳನ್ನೂ ಮೂವತ್ತಾರು ತತ್ತ್ವಗಳನ್ನೂ ವಿವರಿಸಿ ಲಿಂಗದ ಉತ್ಪತ್ತಿ, ಪ್ರವೃತ್ತಿ ಮಾರ್ಗದಲ್ಲಿ ದೇಹೋಪಾದಿಗಳು ಬಂದು ಸೇರುವ ಕ್ರಮ, ನಿವೃತ್ತಿಮಾರ್ಗದಲ್ಲಿ ಅವುಗಳಿಂದ ಬಿಡುಗಡೆ ಹೊಂದುವ ಕ್ರಮ–ಇತ್ಯಾದಿಗಳನ್ನೆಲ್ಲ ಮನಂಬಗುವ ಶೈಲಿಯಲ್ಲಿ ನಿರೂಪಿಸಿದ್ದಾನೆ. 'ವಿಜಯ ಭೈರವಿ'ಯೆಂಬ ಆಗಮ ಇದಕ್ಕೆ ಆಕರವಾಗಿ ಇದ್ದಿರಬಹುದಾದರೂ ಕನ್ನಡದಲ್ಲಿ

ಇಂಥ ಗಡುಚಾರ ವಿಷಯವನ್ನು ಇಷ್ಟು ಲೀಲಾಜಾಲವಾಗಿ ಪ್ರಥಮತಃ ವಿವರಿಸಿದ ಶ್ರೇಯಸ್ಸು ಚೆನ್ನಬಸವಣ್ಣನದೇ. ಮುಂದೆ ಬಂದವರೆಲ್ಲ ಈ ವಿಷಯದಲ್ಲಿ ಈತನ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ಸಾಗಿದ್ದಾರೆ. ಶತಮಾನಗಳ ತರುವಾಯ ಬಂದ ಮರಿತೋಂಟದಾರ್ಯರಂಥ ಮಹಾ ಜ್ಞಾನಿಗಳೂ –

"ಶಿವತತ್ತ್ವಾಮೃತಾಸ್ವಾದ ಚೇತಸೇ ಯೋಗಿನೇ ನಮಃ
ಶ್ರೀ ಚೆನ್ನಬಸವೇಶಾಯ ಷಟ್‌ಸ್ಥಲ ಬ್ರಹ್ಮವಾದಿನೆ"

ಎಂದಿವನನ್ನು ಮುಕ್ತಕಂಠದಿಂದ ಕೀರ್ತಿಸಿದ್ದಾರೆ.

"ಮಿಶ್ರಾರ್ಪಣ"ದಲ್ಲಿ ತ್ರಿವಿಧಾರ್ಪಣದ ಸ್ವರೂಪ, ಸುಬುದ್ಧಿ–ನಿರಹಂಕಾರ–ಸೌಮನಸ್ಯ–ಸುಜ್ಞಾನ–ಸದ್ಭಾವಗಳ ನೆಲೆಗಳು, ತ್ರಯಾಂಗ–ತ್ರಿಲಿಂಗಗಳ ವಿವರಣೆ ಇತ್ಯಾದಿಗಳಿವೆ. 'ಪದಮಂತ್ರಗೋಪ್ಯ'ದಲ್ಲಿ ಸಿದ್ಧರಾಮಣ್ಣನಿಗೆ ಶಿವಯೋಗದ ಸ್ವರೂಪವನ್ನು ವಿವರಿಸಲಾಗಿದೆ. ಘಟಚಕ್ರದಲ್ಲಿ ಸೃಷ್ಟಿಯ ಉತ್ಪತ್ತಿ–ಸ್ಥಿತಿ–ಲಯಗಳು, ಶರೀರದ ರಚನೆ, ಜೀವ–ದೇಹಗಳ ವಿವಿಧ ಚೇಷ್ಟೆಗಳು, ಯೋಗ ಚತುಷ್ಟಯದ ಲಕ್ಷಣಗಳು, ಶಿವಯೋಗದ ಲಕ್ಷಣ ಮೊದಲಾದುವುಗಳ ವಿಸ್ತೃತ ಉಲ್ಲೇಖವಿದೆ. ಕಾಲಜ್ಞಾನ, ಕಲ್ಯಾಣ, ವರ್ಣನೆಗಳಲ್ಲಿ ಗಂಭೀರ ಗದ್ಯದ ಗತಿ ವಿಲಾಸವಿದೆ. ಈ ಆರು ಕೃತಿಗಳಲ್ಲಿ ತನ್ನ ತಿಳಿವಿನ ಹೆಬ್ಬೆಳಸನ್ನು ತೂರಿಬಿಟ್ಟಿದ್ದಾನೆ ಚೆನ್ನಣ್ಣ. 'ಒಬ್ಬರ ಕಂಡೊಬ್ಬರು ಮಾಡುವರಲ್ಲದೆ ತಮ್ಮ ತಾವು ವಿಚಾರಿಸಿಕೊಳ್ಳಲರಿಯರು. ಇಂತೀ ವಿವರವನರಿಯದ ಅಜ್ಞಾನಿಗಳಿಗೆ ಭಕ್ತ ಮಾಹೇಶ್ವರರೆನಲಾಗದಯ್ಯ 'ಎಂದು ಚೀಃ' ಎಂದು ಚೆನ್ನಣ್ಣನು ಈ ಆರು ಕೃತಿಗಳಲ್ಲಿ ವಿವರಗಳನ್ನು ಒದಗಿಸಿ ಎಲ್ಲರೂ ತಮ್ಮ ಅಜ್ಞಾನವನ್ನೂ ಅಲ್ಲಜ್ಞಾನವನ್ನೂ ನೀಗಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾನೆ. ಅರ್ಧವುರ್ಧ ಜನರೆಂದರೆ ಅವನಿಗಾಗದು, 'ಅರೆ ಭಕ್ತರಾದವರ ನೆರೆಯಲ್ಲಿರಲಾಗದು!'ಎಂದು ಸ್ಪಷ್ಟವಾಗಿ ಹೇಳಿದ್ದಾನೆ.

ಆದರೆ ಸಾಧಕರ ಬಗ್ಗೆ ಸಹಾನುಭೂತಿ ಸಾಕಷ್ಟಿದೆ 'ಅವನಲ್ಲಿ. "ನಿಧಾನವನಗಿವೆನೆಂದು ಹೋದರೆ ವಿಘ್ನಬಪ್ಪುದು ಮಾಬುದೇ ಅಯ್ಯ? ಸದಾಶಿವ ಪೂಜಿಸುವೆನೆಂದು ಹೋದರೆ ತುರುವಿ ಹಿಡಿದವವಯ್ಯ ಸಕಲ ವಿಪತ್ತುಗಳು ! ಎದೆ ಭಂಗವಿಲ್ಲದೆ ನಿಲ್ಲಬಲ್ಲಡೆ ಸದಮಲ ಸುಖವೀವ, ನಮ್ಮ ಕೂಡಲ ಚೆನ್ನಸಂಗಮದೇವ" ಎಂದು ಸಾಧಕರಿಗೆ ಧೈರ್ಯವಿತ್ತನಾತ. ಲೋಕದ ಲೋಗರ ಮಾತಿಗೆ ಕಿವಿಗೊಡಬೇಡಿರಿ. ಅವರಿಗೆ ಶರಣರ ನಡೆ ಅರ್ಥವಾಗದು. ಅವರನ್ನು ಮೆಚ್ಚಿಸುವುದು ಆಗದ ಮಾತು.

"ಸರ್ವಸಂಗ ಪರಿತ್ಯಾಗ ಮಾಡಿದ ಶಿವಶರಣರ ಲೋಕದ
ಸಂಸಾರಿಗಳೆಂತು ಮೆಚ್ಚುವರಯ್ಯ ?
ಊರೊಳಗಿದ್ದರೆ ಉಪಾಧಿಕನೆಂಬುರು, ಅಡವಿಯೊಳಗಿದ್ದರೆ
ಮೃಗನೆಂಬದು,
ಹೊನ್ನಬಿಟ್ಟರೆ ದರಿದ್ರನೆಂಬರು, ಹೆಣ್ಣ ಬಿಟ್ಟರೆ ನಪುಂಸಕನೆಂಬರು,
ಪುಣ್ಯವಬಿಟ್ಟರೆ ಪೂರ್ವಕರ್ಮಿಯೆಂಬರು, ಮಾತನಾಡದಿದ್ದರೆ
ಮೂಗನೆಂಬರು,
ಮಾತನಾಡಿದರೆ 'ಜ್ಞಾನಿಗೇಕಯ್ಯ ಮಾತು?' ಎಂಬರು,
ನಿಜವನ್ನಾಡಿದರೆ ನಿಷ್ಠುರಿ ಎಂಬರು, ಸಮತೆಯ ನುಡಿದರೆ
ಅಂಜುವನೆಂಬರು,
ಇದು ಕಾರಣ ಕೂಡಲ ಚನ್ನಸಂಗಯ್ಯ–ನಿಮ್ಮ ಶರಣ
ಲೋಕದಿಚ್ಚೆಗೆ ನುಡಿಯ, ಲೋಕದಿಚ್ಚೆಗೆ ನಡೆಯ!"

ಲೋಕದಿಚ್ಚೆಗೆ ನುಡಿಯದೆ ಲಿಂಗದ ನುಡಿಯಾಗಿ, ಲಿಂಗಮೆಚ್ಚಿ ಅಹುದೆನ್ನುವಂತೆ ನುಡಿಯಿರಿ ; ಲೋಕದಿಚ್ಚೆಗೆ ನಡೆಯದೆ ಸ್ವತಂತ್ರಶೀಲರಾಗಿ ಶಿವಾಚಾರದ ಪಥದಲ್ಲಿ ಮುನ್ನಡೆಯಿರಿ. ಸದಾಚಾರವೇ ಶಿವಾಚಾರ, ಅನಾಚಾರವೇ ಭವಾಚಾರ. ಶಿವಾಚಾರಿಯಾದವನು 'ಅನ್ಯರ ಕೈಯಾಂತು ಬೇಡ; ಲಿಂಗವ ಮುಟ್ಟಿದ ಕೈ ಮೀಸಲು, ಕಂಗಳಲ್ಲಿ ಒಸೆದು ನೋಡ ಪರವಧುವ ; ಮನದಲ್ಲಿ ನೆನೆಯ ಪರಹಿಂಸೆಯ; ಲಿಂಗವ ಪೂಜಿಸಿ ಲಿಂಗವ ಬೇಡ ; ಆ ಲಿಂಗದ ಹಂಗನೊಲ್ಲ. ' ಪರಧನ, ಪರಸ್ತ್ರೀ, ಪರನಿಂದೆ, ಪರಹಿಂಸೆ, ಹುಸಿ ; ಕಳವು, ವಿಷಯಾದಿಗಳನ್ನು ಹೊದ್ದಲೀಯದೆ ಸದಾಚಾರದ ಹೆದ್ದಾರಿಯಲ್ಲಿ ನಡೆದು, ಗತಿ–ಪಥ ಮುಕ್ತಿಯ ಬಯಸಿ ಮಾಡದೆ, ಕೈಲಾಸವೆಂಬುದೊಂದು ಹುಲು ಮೊರಡಿಯ ಹಾಗೆಂದು ತಿಳಿದು, ಮನದ ಮತ್ಸರವ ಕಳೆದು, ಮನದ ಕೊನೆಯ ಮನೆಯ ಮೇಲೆ ಲಿಂಗವ ಕುಳ್ಳಿರಿಸಿ, ತನುಗುಣವ ಕಳೆದು ಪ್ರಸಾದ ಕಾಯವ ಮಾಡಿ, ಧನಗುಣವ ಕಳೆದು ಮಮಕಾಯವೆನಿಸಿ, ಅರಿಷಡ್ವರ್ಗ ಮಲತ್ರಯಗಳೆಂಬ ಭವಿಗಳನು ಅತಿಗಳೆದು, ಅನ್ನಪಾನಾದಿಗಳ ಹಂಗನಳಿದು, ಅಹಂಕಾರ ಮಮಕಾರಂಗಳನಳಿದು, ಮಹದಾಶ್ರಯದಲ್ಲಿ ಮನಲೀಯುವಾಗು, ಲಿಂವನೊಂದನೇ ನೆನೆದು, ಲಿಂಗಕ್ಕೆಂದೇಮಾಡಿ, ಲಿಂಗಕ್ಕೆಂದೇ ಕೊಟ್ಟು, ಸಕಲಪದಾರ್ಥಂಗಳ ಲಿಂಗಕ್ಕೆಂದೇ ಭಾವಿಸಿ, ಲಿಂಗಕ್ಕೆಂದೇ ನಿಃಕಾಮಿಯಾಗಿ ಕಾಮಿನಿ, ಲಿಂಗಕ್ಕೆಂದೇ ಬಯಸಿ ಲಿಂಗಪ್ರಾಣಿ ಮಾಗಬೇಕು. 'ನಿಮ್ಮ ಕರಣಂಗಳೇ ಎನ್ನ ಹರಣಂಗಳಾಗಿ, ಎನ್ನ ಕರಣಂಗಳೇ

ನಿಮ್ಮ ಕಿರಣಂಗಳಾಗಿ ಇರುವ ಕಾರಣ ಕೂಡಲ ಚೆನ್ನಸಂಗಮದೇವಾ, ನೀನಾಡಿದಂತೆ ನಾನಾಡಿದೆನಯ್ಯ!' ಎಂದು ಹೇಳುವಂತಾಗಬೇಕು. ಕೊನೆಗೆ,

"ನಿಷ್ಠೆಯುಳ್ಳಾತಂಗೆ ನಿತ್ಯ ನೇಮದ ಹಂಗೇಕೆ ?
ಸತ್ಯವುಳ್ಳಾತಂಗೆ ತತ್ವವಿಚಾರದ ಹಂಗೇಕೆ ?
ಮನಶುದ್ಧವುಳ್ಳಾತಂತೆ ಮಂತ್ರದ ಹಂಗೇಕೆ ?
ಅರಿವುಳ್ಳಾತಂಗೆ ಅಗ್ಗವಣಿಯ ಹಂಗೇಕೆ ?
ಭಾವಶುದ್ಧವುಳ್ಳಾತಂಗೆ ಹೂವಿನ ಹಂಗೇಕೆ ?
ಕೂಡಲ ಚೆನ್ನಸಂಗಯ್ಯ, ನಿಮ್ಮನರಿದಾತಂಗೆ ನಿಮ್ಮ ಹಂಗೇಕೆ ?"

ಎಂದು ಕೇಳುವ ಕೆಚ್ಚು ಬರಬೇಕು. ಇದು ಚೆನ್ನಬಸವಣ್ಣನ ಪ್ರಸನ್ನವಾಣಿ.

ಈ ಉದಾರವಾಣಿಯನ್ನು ಕೇಳಿದ ಕಿವಿಗಳು ಕೃತಾರ್ಥವಾದುವು. 'ತಾನಳಿದು, ತಾನುಳಿದು, ಸಹಜ ನಿಜಪದವಿಯಲ್ಲಿ ಕೂಡಲ ಚೆನ್ನ ಸಂಗಯ್ಯನಲ್ಲಿ ತಾನು ತಾನಾದ' ಚೆನ್ನಬಸವಣ್ಣನನ್ನು 'ಷಟ್‌ಸ್ಥಲ ಚಕ್ರವರ್ತಿ'ಯೆಂದು, 'ಯುಗಜಗವ ಮೀರಿದ ಶರಣ'ನೆಂದು ಗೌರವಿಸಿದರು ಶರಣರು. 'ಕೂಡಲ ಚೆನ್ನ ಸಂಗಯ್ಯನಲ್ಲಿ ಸಾಹಿತ್ಯವನರಿದ ಪ್ರಸಾದಿಶರಣ'ನಾತ, 'ಆರಾದರೂ ನಿಮ್ಮ ನೆನೆವರಯ್ಯ. ನಾನಿಮ್ಮ ನೆನೆವನಲ್ಲ, ಅದೇನು ಕಾರಣವೆಂದರೆ, ನಿಮ್ಮ ನೆನೆವ ಮನ ನೀವೆಯಾದಿರಾಗಿ!' ಎಂದು ಸಾರುವ ಆತನ ನಿಲುವನ್ನು ಯಾರು ಬಣ್ಣಿಸಬಲ್ಲರು?

"ತನು ನಿಮ್ಮನಪ್ಪಿ ಮಹಾತನುವಾದ ಬಳಿಕ ಮನವೆಂಬುದು ಮತ್ತೆಲ್ಲಿಯದೊ?
ಮನ ನಿಮ್ಮನಪ್ಪಿ ಘನಮನವಾದ ಬಳಿಕ ಮನವೆಂಬುದು ಮತ್ತೆಲ್ಲಿಯದೋ?
ಪ್ರಾಣ ನಿಮ್ಮನಪ್ಪಿ ಪ್ರಾಣಪಥದಲ್ಲಿ ಸಿಲುಕಿದ ಬಳಿಕ
ಪ್ರಾಣವೆಂಬುದು ಮತ್ತೆಲ್ಲಿಯದೊ?"

ಎಂದು ಕೇಳುವ ಆತನ ಎತ್ತರವನ್ನು ಯಾರು ಅಳೆಯಬೇಕು?

"ಎಲ್ಲರ ವರ್ಣಿಸಬಹುದು ; ಎನ್ನನಲ್ಲ ಗುರುದೇವನ ವರ್ಣಿಸಲಾರದು. ಅಲ್ಲನ ನುಡಿಸಬಹುದು ; ಎನನಲ್ಲ ಕಪಿಲಸಿದ್ದೇಂದ್ರನ ರೂಪು, ಚೆನ್ನಬಸವನ ನುಡಿಸಿ ಗೆಲ್ಲಬಾರದು ಖುಲ್ಲತನದಿಂದಲಾದರೂ ಕಲ್ಲಯ್ಯ" ಎಂದು ಸಿದ್ಧರಾಮಯ್ಯನಂಥವರು ನುಡಿದಿರುವಾಗ ಸಿದ್ದಯ್ಯನ ಪಾಡೇನು?

ಅನುಭವ ಮಂಟಪದಿಂದ ಅಮೃತ ಹರಿಯುತ್ತಿತ್ತು. ಅದನ್ನುಂಡವರು ಅಮರರಾಗುತ್ತ ನಡೆದಿದ್ದರು. ಚೆನ್ನಬಸವಣ್ಣನಿಗೆ ಸಂತಸವೇ ಸಂತಸ, ಸಂಭ್ರಮವೇ

ಸಂಭ್ರಮ. 'ಸತ್ಯಸದಾಚಾರವ ಹರಹಿ ಮರ್ತ್ಯರ ಪಾವನ ಮಾಡಿದ' ಬಸವಣ್ಣ ಭುವಿಗೆ ಬರಲು 'ಮರ್ತ್ಯಲೋಕ ಶಿವಲೋಕವೆಂಬುದೊಂದು ನಿಚ್ಚಣಿಗೆಯಾದುವು ನೋಡಾ!' ಎಂದೆನಿಸಿತವನಿಗೆ. 'ಸಕಲ ಧರ್ಮಂಗಳಂ ತೀವುವ ಕರಂಡಗೆಯೆನಿಸಿಪ್ಪ ಸತ್ಯದ ಸಾಗರ, ಭಕ್ತಿಯ ತವರ್ಮನೆ, ಮುಕ್ತಿಗೆ ಮುಖ, ಪುಣ್ಯದ ಪುಂಜ, ಅಭಿನವ ಕೈಲಾಸ' ಕಲ್ಯಾಣದಲ್ಲಿ ರುದ್ರಲೋಕವೆ ಮರ್ತ್ಯಲೋಕಕ್ಕಿಳಿದಂತಿದ್ದಿತು. ಅಲ್ಲಿ ಸತ್ಯರು ಸಾತ್ವಿಕರು, ನಿತ್ಯರು, ನಿಜೈಕ್ಯರು, ಮಹಾಜ್ಞಾನಿಗಳು, ಪರಮಶಿವಯೋಗಿಗಳು, ಶಿವಾನುಭಾವಸಂಪನ್ನರು, ಶಿವಲಿಂಗಪ್ರಾಣಿಗಳು, ಶಿವಪ್ರಸಾದ ಪಾದೋದಕ ಸಂಬಂಧಿಗಳು, ಶಿವಾಚಾರವೇದ್ಯರು, ಶಿವಾಗಮಸಾಧ್ಯರು ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರಿದ್ದರು. ಅವರನ್ನು ಕಂಡು, 'ಗುರುಸ್ಥಲವೆಂಬುದು ತಾನು ಸ್ವಯಂಜ್ಯೋತಿ ಪ್ರಕಾಶವು. ಅಂತಪ್ಪ ಸ್ವಯಂಜ್ಯೋತಿ ಪ್ರಕಾಶವಂ ತಂದು ಉರಿಜ್ಯೋತಿಯ ಹೊತ್ತಿಸಿದೊಡೆ ಆ ಜ್ಯೋತಿ ತನ್ನಂತೆ ಮಾಡಿತ್ತು!' ಎಂದು ಹಾಡಿದ ಚೆನ್ನಬಸವಣ್ಣ–'ದೀಪಾದ್ದೀಪ ಇವೋತ್ಪಿತಃ' ಎಂದು ಕಾಳಿದಾಸ ಹಾಡಿದಂತೆ.

ಬಸವ–ಬಿಜ್ಜಳರ ಸಂಬಂಧವನ್ನು ಚೆನ್ನಣ್ಣ ಬಣ್ಣಿಸಿದಂತೆ ಇನ್ನಾರೂ ಬಣ್ಣಿಸಿಲ್ಲ. 'ಇಂತೀ ಅಸಂಖ್ಯಾತರಿಗೆ ಒಡನಾಡಿಯಾಗಿದ್ದಾತ ಸಂಗನ ಬಸವಣ್ಣ–ಸತ್ಯಸಾತ್ವಿಕ ಬಸವಣ್ಣ, ನಿತ್ಯನಿಜೈಕ್ಯ ಬಸವಣ್ಣ. ಇಂತಹ ಬಸವಣ್ಣನ ಭಕ್ತಿಯನು ಒರೆದೊರೆದು ನೋಡಿ ಪ್ರಬಲಿತವ ಮಾಡುವ ಅಶ್ವಪತಿ ಗಜಪತಿ ನರಪತಿರಾಜ ರಾಜಾಧಿರಾಜ ಬಿಜ್ಜಳರಾಯನು.' 'ಪರವಾದಿ ಬಿಜ್ಜಳನು ಒರೆಗಲ್ಲ ಹಿಡಿದು ಶಿವಭಕ್ತಿಯ ಸಂಪಾದನೆಯ ಮಾಡುವಲ್ಲಿ ಮುವ್ವತ್ತಾರು ಕೊಂಡೆಯರ ಪರಿಹರಿಸಿ, ಶಿವಾಚಾರದ ಧ್ವಜವನೆತ್ತಿಸಿದನಯ್ಯಾ ಬಸವಣ್ಣನು!' ಅವರಿಬ್ಬರಲ್ಲಿ ಘರ್ಷಣವಿದ್ದಿತೆಂಬುದು ಗಾಳಿಗೋಪುರವಾಗುವುದಿಲ್ಲವೆ ಇದನ್ನೋದಿ?

"ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಒಂದು ಮನೆಯ ಕಟ್ಟಿದರೆ ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತ್ತು. ಆ ಮನೆಗೆ ತಲೆಬಾಗಿ ಹೊಕ್ಕವರೆಲ್ಲರೂ ನಿಜಲಿಂಗ ಪದಮಂ ಪಡೆದರು" ಎಂದು ಸಿದ್ಧರಾಮಯ್ಯನೂ ಹಿಗ್ಗಿ ಹಾಡಿದ, ಆದರೆ ಕರುಣೆಯಿಲ್ಲದ ಕಾಲ ಹೊಂಚು ಹಾಕಿ ಕುಳಿತಿದ್ದ. ಕಾಲ್ಯಾಣಮೂರ್ತಿ ಬಸವಣ್ಣನವರೇ ಕಾಲ್ಯಾಣ ಬಿಟ್ಟು ಹೊರಡಬೇಕಾಯಿತು. ಭಾರವಾದ ಹೃದಯದಿಂದ ಹೇಳಿದರು ಚೆನ್ನಬಸವಣ್ಣನಿಗೆ–

"ನಾನು ಬಂದ ಕಾರ್ಯಕ್ಕೆ ನೀವು ಬಂದಿರಿ,
ನೀವು ಬಂದ ಕಾರ್ಯಕ್ಕೆ ನಾನು ಬಂದೆ,
ನಾನೂ ನೀವೂ ಬಂದ ಕಾರ್ಯಕ್ಕೆ ಬಂದಾತನಲ್ಲವಾ ಪ್ರಭುದೇವರು ;

ಮುಂದೆ ಕೆಲವು ದಿನವಸಕ್ಕೆ.....
ಕಲ್ಯಾಣವೆಂಬುದು ಪ್ರಣತಿಯಾಯಿತ್ತು.
ನಾನು ತೈಲವಾದೆನು, ನೀವು ಬತ್ತಿಯಾದಿರಿ,
ಪ್ರಭುದೇವರು ಜ್ಯೋತಿಯಾದರು !
ಪ್ರಣತಿ ಒಡೆಯಿತ್ತು, ತೈಲವರತಿತ್ತು, ಜ್ಯೋತಿ ಬಯಲಾಗಿತ್ತು!"

ಹೌದು, ಕಲ್ಯಾಣವೆಂಬ ಪ್ರಣತಿ ಒಡೆಯಿತು ! ಭಕ್ತಿಯೆಂಬ ತೈಲವರತಿತ್ತ! ಆಚಾರವೆಂಬ ಬತ್ತಿ ಸುಟ್ಟು ಕರಿಯಿತು ! ಶಿವಪ್ರಕಾಶದ ಜ್ಯೋತಿ ಬಯಲಾಯಿತು!

ಶರಣರ ಯೋಗಕ್ಷೇಮದ ಹೊಣೆಯನ್ನು ಚೆನ್ನಬಸವಣ್ಣನ ಉಡಿಯಲ್ಲಿರಿಸಿ, ಮಡಿವಾಳ ಮಾಚಿದೇವ, ಕಿನ್ನರಿ ಬ್ರಹ್ಮಯ್ಯಾದಿಗಳ ಕಾವಲಿರಿಸಿ, ಕಲ್ಯಾಣ ತೊರೆದು ಹೋದರು ಬಸವಣ್ಣನವರು. 'ಲಿಂಗಜಂಗಮ, ಜಂಗಮಲಿಂಗವೆಂಬುದು ತೋರಿ ನಿಜೈಕ್ಯನಾದೆಯಲ್ಲ ನಿಜಗುರು ಬಸವಣ್ಣ! ಪ್ರಸಾದಕಾಯ, ಕಾಯ ಪ್ರಸಾದವೆಂಬುದ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ, ಎನ್ನನಾಗುಮಾಡಿ ಮುಂದುವರಿದಿಯಯ್ಯ ಬಸವಣ್ಣ! ಲಿಂಗಪ್ರಾಣ, ಪ್ರಾಣಲಿಂಗವೆಂಬುದ ಎನ್ನಂತರಂಗದಲ್ಲಿ ಸ್ಥಾಪ್ಯವಮಾಡಿ, ಎನ್ನ ನಿನ್ನಂತೆಮಾಡಿ, ನಿಜಲಿಂಗದೊಳಗೆ ನಿರವಯವಾದೆಯಲ್ಲ ಬಸವಣ್ಣ ! ಎನ್ನ ಮನವ ಮಹಾತತ್ತ್ವದಲ್ಲಿ ಲಯವಮಾಡಿ ನಿರ್ವಯಲಾದೆಯಲ್ಲಾ ಬಸವಣ್ಣಾ ! ನಿನ್ನ ಒಕ್ಕುವಿಕ್ಕ ಶೇಷವನಿಕ್ಕಿ ಆಗುಮಾಡಿ, ನಿನ್ನಂತರಂಗದಲ್ಲಿ ಅವ್ವೆ ನಾಗಾಯಿಯ ನಿಂಬುಗೊಂಡಡೆ ಎನ್ನಮನ ನಿಮ್ಮ ಪಾದದಲ್ಲಿ ಕರಗಿ ಕೊರಗಿತ್ತಯ್ಯ ಸಂಗನ ಬಸವಣ್ಣ ! ಕೂಡಲ ಚೆನ್ನಸಂಗಯ್ಯಂಗೆ ಸುಜ್ಞಾನ ವಾಹನವಾಗಬೇಕೆಂದು ನಿರವಯವಾದೆಯಲ್ಲಾ ಸಂಗನಬಸವಣ್ಣಾ!" ಎಂದು ಚೆನ್ನಬಸವಣ್ಣ ವಿಲಾಪಿಸಿದನು :

"ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದರೆ
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲ ಪಸರಿಸಿತಯ್ಯ !
ಸ್ವರ್ಗಮರ್ತ್ಯ ಪಾತಾಳದೊಳಗೆ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರೋ ಅಣ್ಣಾ !
ಶಶಿಧರನಟ್ಟದ ಮಣಿಹ ಪೂರೈಸಿತ್ತೆಂದು ನೀವು ಲಿಂಗೈಕ್ಯವಾದರೆ
ನಿಮ್ಮೊಡನೆ ಭಕ್ತಿಹೋಯಿತ್ತಯ್ಯ ! ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯ!
ನಿಮ್ಮೊಡನೆ ಅಸಂಖ್ಯಾತರು ಹೋದರು ಅಣ್ಣಾ !
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತು ಬಸವಣ್ಣಾ !
ಎನ್ನನೊಯ್ಯದೆ ಹೋದೆಯಲ್ಲ ಪಂಚಪರುಷ ಮೂರುತಿ ಬಸವಣ್ಣಾ !

ಬಸವಣ್ಣಪ್ರಿಯ ಚೆನ್ನಸಂಗಯ್ಯಂಗೆ
ಪ್ರಾಣಲಿಂಗವಾಗಿ ಹೋದೆಯಲ್ಲಾ ಸಂಗನಬಸವಣ್ಣಾ !"

ಎಂದು ಅಕ್ಕನಾಗಮ್ಮ ಪ್ರಲಾಪಿಸಿದಳು. ತಮಗೆ ಆಧಾರವಾಗಿದ್ದ ಬಸವಣ್ಣ ಹೊರಟು ಹೋಗಲು ಆ ತಾಯಿ–ಮಗನ ಸ್ಥಿತಿ ಏನಾಗಿರಬೇಡ?

ಆದರೂ ಅಳುತ್ತ ಕೂರುವ ಕಾಲವದಾಗಿರಲಿಲ್ಲ : ಅಳುತ್ತ ಕೂರುವವರೂ ಅವರಾಗಿರಲಿಲ್ಲ. ಕ್ರೂರವಿಧಿಯು ಅಪ್ಪಳಿಸಿದಷ್ಟೂ ಕಲ್ಲಾಗಿ ನಿಂತರವರು. ಧೈರ್ಯದಿಂದ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿದರು. ಪರಿಸ್ಥಿತಿಯನ್ನು ಹತೋಟಿಗೆ ತರಲು ಹೆಣಗಿದರು. ಶಾಂತಿ ಸ್ಥಾಪಿತವಾಗುವ ಸುಲಕ್ಷಣಗಳೂ ತೋರತೊಡಗಿದ್ದುವು. ಆದರೆ ಉಗ್ರವಾದಿಗಳ ದುಡುಕಿನಿಂದ ಬಿಜ್ಜಳನ ಕೊಲೆಯಾಗಿ ಹೋಯಿತು. ಕಾಲ ಕೈಮೀರಿ ಹೋಯಿತು! ಕಲ್ಯಾಣದಲ್ಲಿ ನಿಲ್ಲಲು ಶರಣರಿಗೆ ಸಾಧ್ಯವಾಗದೆ ಹೋಯಿತು. ಆ ಪ್ರಸಂಗದಲ್ಲಿ ಅಕ್ಕ ನಾಗಮ್ಮ, ಚೆನ್ನಬಸವಣ್ಣ, ಗಂಗಾಂಬೆಯರು ತೋರಿದ ಧೀರತನ ಯಾವ ಇತಿಹಾಸಕ್ಕಾದರೂ ಅಲಂಕಾರಣವಾಗಬಲ್ಲುದು.

"ಭಕ್ತನು ಶಾಂತನಾಗಿರಬೇಕು ; ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು; ಭೂತಹಿರವಚನವ ನುಡಿಯಬೇಕು ; ಸಕಲ ಪ್ರಾಣಿಗಲ ತನ್ನಂತೆ ಭಾವಿಸುವುದು ; ಸಕಲೇಂದ್ರಿಯಗಳ ತನ್ನ ವಶವ ಮಾಡಬೇಕು" ಎಂದು ಶಾಂತಿ–ಮೈತ್ರಿ–ಸ್ಥೈರಣೆ–ಸಂಯಮಗಳ ಸಂದೇಹವನ್ನಿತ್ತಿದ್ದ ಚೆನ್ನಬಸವಣ್ಣನೇ ಶಸ್ತ್ರಧಾರಿಯಾಗಿ ಶರಣರ ಸೇನಾಪತಿಯಾದ–ಶಾಪಾದಪಿ ಶರಾದಪಿ ಎನ್ನುವ ಉಕ್ತಿಗೆ ಸಾಕ್ಷಿಯಾಗಿ ! ಶರಣರನ್ನೂ ಕೂಡಿಕೊಂಡು ಸಾವಿನ ಬಾಯಿಂದ ಹೊರಬೀಳುವಂತೆ ಕಲ್ಯಾಣದಿಂದ ಹೊರಬಿದ್ದ. ಅದುವರೆಗೆ ಆರಾಧನೆ ಮಾಡಿದ ಕೈಗಳು ಆಯುಧ ಧರಿಸಿದುವು ಆತ್ಮರಕ್ಷಣೆಗಾಗಿ! ಶಿವಾಚಾರಿಗಳು ಗಣಾಚಾರಿಗಳಾದರು ಶಿವಗಣದ ರಕ್ಷಣೆಗಾಗಿ ! ಅಳಿಯ ಬಿಜ್ಜಳನ ಸೇನೆ ಬೆನ್ನಟ್ಟಿ ಬಂದರು ಸೇಡಿಗಾಗಿ ! ಮೊದಲು ಮರುಗೋಡದ ಬಳಿಯಲ್ಲಿ ಸಣ್ಣಪುಟ್ಟ ಕದನಗಳಾದುವು. ಕೊನೆಗೆ ಕಾತರವಳ್ಳಿಯಲ್ಲಿ ಕಡುತರವಾದ ಕಾಳಗವಾಯಿತು. ಯದ್ಧರಂಗದಲ್ಲಿ ಅಳಿಯ ಬಿಜ್ಜಳ ಎಚ್ಚರತಪ್ಪಿ ಬಿದ್ದು ಬಿಟ್ಟನು. ಇನ್ನೇನು ಅವನ ವಧೆಯಾಗಬೇಕು. ಅಕ್ಕ ನಾಗಮ್ಮ ಅಡ್ಡ ಬಂದು ಅವನ ಪ್ರಾಣ ಉಳಿಸಿದಳು ! ಮತ್ತೆ ಹಿಂಸೆಯ ಮೇಲೆ ಅಹಿಂಸೆ ವಿಜಯವನ್ನು ಪಡೆಯಿತು !

ಆಳಿದುಳಿದ ಶರಣರು ಉಳಿವೆಯತ್ತ ನಡೆದರು. ಅಲ್ಲಿ ಪರ್ವತಶ್ರೇಣಿಗಳ ಮಧ್ಯದಲ್ಲಿ ಕಿನ್ನರಿಬ್ರಹ್ಮಯ್ಯನ ನದಿ ಕಲಕಲನಿನಾದ ಮಾಡುತ್ತ ಹರಿಯುತ್ತಿದೆ. ಅದರ ಕಲಕಲರವ ಕಾಡಿನ ಕಂಠದಿಂದ ಹೊರಟ ಕಿನ್ನರಗಾನವೋ ಎಂಬಂತಿದೆ. ಅದರ ದಂಡೆಗಿರುವು ಅದ್ಭುತ ಗುಹೆ ಮಹಾಮನೆಯಲ್ಲಿ ಅವರು ಆಶ್ರಯ ಪಡೆಯುತ್ತಾರೆ.

ನದಿಯ ದಿಕ್ಕನ್ನು ತಿರುಹಿ ಗುಹೆಯ ಬಾಗಿಲ ಮುಂದೆ ಬೀಳ್-ನೀರಾಗಿ ಬೀಳುವಂತೆ ಮಾಡುತ್ತಾರೆ. ಕಂದಕವನ್ನು ತೋಡಿಕೊಂಡು ಸಾಧ್ಯವಿರುವಷ್ಟು ಸುರಕ್ಷಿತತೆಯನ್ನು ಸಾಧಿಸಿಕೊಂಡು ಸಾಧನೆಯಲ್ಲಿ ಕಾಲಕಳೆಯುತ್ತಾರೆ. ಅಲ್ಲಿ ಉಳಿದವರೆಷ್ಟು? ಅಳಿದವರೆಷ್ಟು? ಉಳಿದವರು ಎಷ್ಟು ದಿನ ಬದುಕಿದ್ದರು? ಏನು ಮಾಡಿದರು? ಈ ಪ್ರಶ್ನೆಗಳಿಗೆ ಇನ್ನೂ ಸರಿಯಾದ ಉತ್ತರ ಸಿಕ್ಕಿಲ್ಲ.

'ನಮ್ಮ ಪುರಾತನರು ಬೀಜಕ್ಕೊಬ್ಬರುಳಿದಾರು!' ಎಂದು ಚೆನ್ನಬಸವಣ್ಣನೇ ತನ್ನ ಕಾಲಜ್ಞಾನದಲ್ಲಿ ಸಾರಿದ್ದ. ಆತನ ನುಡಿ ನಿಜವಾಯಿತು. ನಾಗಲಾಂಬಿಕೆ, ಹಡಪದ ರೇಚಯ್ಯ, ನುಲಿಯ ಚಂದಯ್ಯ, ಮೋಳಿಗೆಯ ಮಾರಯ್ಯ, ಹಿಪ್ಪರಿಗೆಯ ಮಲ್ಲಿಕಾಜುನ, ರುದ್ರಮುನಿ, ಮುಕ್ತಿಮುನಿ, ಚೆನ್ನಬಸವಣ್ಣ, ಗಂಗಾಂಬೆ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದವರು ಮಾತ್ತ ಉಳಿದರು ಆ ಕಲ್ಯಾಣದ ಕಗ್ಗೊಲೆಯಲ್ಲಿ, ಆ ತರುವಾಯದ ಕಾಳಗಗಳಲ್ಲಿ! ಪ್ರಭುದೇವರೂ ಅಕ್ಕಮಹಾದೇವಿಯೂ ಶ್ರೀಗಿರಿಯ ಕದಳೀವನವನ್ನು ಆಶ್ರಯಿಸಿದರು. ಅಲ್ಲಿಯೇ ಬಯಲಾದರು. ಇತ್ತೀಚೆಗೆ ಹಿರಿಯ ಪಂಡಿತರಾದ ಟಿ. ಹೆಚ್. ಎಂ. ಸದಾಶಿವಯ್ಯನವರ ನೇತೃತ್ವದಲ್ಲಿ ಸಾಹಸಿಗಳ ತಂಡವೊಂದು ದುರ್ಗಮವಾದ ಕದಳೀವನವನ್ನು ಕಂಡುಹಿಡಿದು ಬಂದಿರುವುದೊಂದು ಆನಂದದ ಸಂಗತಿ. ಅಲ್ಲಿ ಅಲ್ಲಮ ಪ್ರಭುಗಳ ಮತ್ತು ಅಕ್ಕಮಹಾದೇವಿಯರ ಸುಂದರವಿಗ್ರಹಗಳೂ ಅಕ್ಕನ ಯೋಗ ಮಂಟಪವೂ, ಕದಳಿಯ ಅವಿನಾಶಿಯಾದ ವನವೂ ಇವೆಯಂತೆ. ನಾಗಲಾಂಬಿಕೆಯು ಮುಂದೆ ತರೀಕೆರೆಯ ಹತ್ತಿರ ಎಣ್ಣೆಹೊಳೆಯೆಂಬ ಹೆಸರಿನ ನದೀಭಾಗಕ್ಕೆ ಹೋಗಿ ಅಲ್ಲ ಶರಣ ಧರ್ಮವನ್ನುಳಿಸಲು ಹೆಣಗಿ ಅಲ್ಲಿಯೇ ಲಿಂಗೈಕ್ಯಳಾದಳೆಂದೂ ನುಲಿಯ ಚಂದಯ್ಯನು ಅಲ್ಲಿಗೆ ಎಂಟು ಹತ್ತು ಮೈಲಿಗಳ ಮೇಲಿರುವ ನಂದೀಗ್ರಾಮದಲ್ಲಿದ್ದು ಅಲ್ಲಿಯೇ ಬಯಲಾದನೆಂದೂ ಉಳಿದವರು ಉಳಿವೆಯ ಮಹಾಮನೆಯಲ್ಲಿಯೇ ನಿರವಯರಾದರೆಂದೂ, ರುದ್ರಮುನಿ-ಮುಕ್ತಿಮುನಿಯರ ಪರಾಕ್ರಮದಿಂದ ಶರಣಧರ್ಮ ಸಂಪೂರ್ಣ ನಷ್ಟವಾಗದೆ ಉಳಿಯಿತೆಂದೂ ಹೇಳುತ್ತಾರೆ. ಊಹೆಯ ಊರಗೋಲನ್ನು ಹಿಡಿದಯ ಕಾಲಗರ್ಭದಲ್ಲಿ ಅಡಗಿರುವ ಶರಣರ ಕೊನೆಯ ದಿನಗಳ ಕಥೆಯನ್ನು ಕಟ್ಟಿದ ಪರಿಯಿತು.

ಒಂದು ಮಾತು ಮಾತ್ರ ನಿಜ, ಬಸವಣ್ಣನವರ 'ಮಹಾಮನೆ'ಯಲ್ಲಿ ಉದಯವಾದ ಶರಣಧರ್ಮ ದಿವಾಕರನು ಉಳಿವೆಯ ಹತ್ತಿರದ 'ಮಹಾಮನೆ'ಯಲ್ಲಿ ಅಸ್ತಂಗತನಾದನು! ಕಾಲಾಯ ತಸ್ಮೈ ನಮಃ! ಕಲ್ಯಾಣ ಶರಣರ ಕೊನೆ ಅದೆಂತೇ ಆಗಿರಲಿ, ಒಂದು ಮಾತನ್ನು ಎಲ್ಲರೂ ಒಪ್ಪಲೇಬೇಕು. ಅಂದು ಅವರು ಆತ್ಮಯಜ್ಞದಲ್ಲಿ ಧುಮುಕಿ ಧರ್ಮಕ್ರಾಂತಿಯನ್ನೂ ಸಮಾಜ ಕ್ರಾಂತಿಯನ್ನೂ, ಕಾಯಕ ಕ್ರಾಂತಯನ್ನೂ

ಸಾಹಿತ್ಯ ಕ್ರಾಂತಿಯನ್ನೂ ಮಾಡದೆ ಹೋಗಿದ್ದರೆ ನಾವಿಂದು ಇರುವ ಸ್ಥಿತಿಯಲ್ಲಿ ಇರುತ್ತರಲಿಲ್ಲ. ಇನ್ನೂ ಕಾಡಿ ಸ್ಥಿತಿಯಲ್ಲಿ ಇರುತ್ತಿದ್ದೇವು. ನಮ್ಮನ್ನು ಶತಮಾನಗಳ ಹಿಂದೆಯೇ ಮನುಷ್ಯರನ್ನಾಗಿ ಮಾಡಿದ ಮಹಾತ್ಮರವರು.

ಇನ್ನೊಂದು ಚೆನ್ನಣ್ಣನ ವಚನವನ್ನು ಓದಿಯೇ ವಿರಮಿಸೋಣ :

"ಶಿವಭಕ್ತಿಯುಳ್ಳವಂಗೆ ಕಾಮಬೇಡ, ಕ್ರೋಧಬೇಡ, ಲೋಭಬೇಡ,
ಮೋಹಬೇಡ, ಮದಬೇಡ, ಮತ್ಸರಬೇಡ.
ಶಿವಭಕ್ತಿಯುಳ್ಳವಂಗೆ ಕಾಮಬೇಕು, ಕ್ರೋಧಬೇಕು, ಲೋಭಬೇಕು,
ಮೋಹಬೇಕು, ಮದಬೇಕು, ಮತ್ಸರಬೇಕು,

ಬೇಕೆಂಬುದಕ್ಕಾವ ಗುಣ?

ಕಾಮಬೇಕು ಲಿಂಗದಲ್ಲಿ ಕ್ರೋಧಬೇಕು ಕರಣಂಗಳಲ್ಲಿ,
ಲೋಭಬೇಕು ಪಾದೋದಕ ಪ್ರಸಾದದಲ್ಲಿ,
ಮೋಹಬೇಕು ಗುರುಲಿಂಗಜಂಗಮದಲ್ಲಿ,
ಮದಬೇಕು ಶಿವಾಚಾರ ಘನವೆಂಬಲ್ಲಿ,

ಬೇಡೆಂಬುದಕ್ಕಾವಗುಣ ?

ಕಾಮಬೇಡ ಪರಸ್ತ್ರೀಯಲ್ಲಿ,
ಕ್ರೋಧಬೇಡ ಗುರುವಿನಲ್ಲಿ,
ಲೋಭಬೇಡ ತನುಮನದಲ್ಲಿ,
ಮೋಹಬೇಡ ಸಂಸಾರದಲ್ಲಿ,
ಮದಬೇಡ ಶಿವಭಕ್ತರಲ್ಲಿ,
ಮತ್ಸರಬೇಡ ಸಕಲ ಪ್ರಾಣಿಗಳಲ್ಲಿ !
ಇಂತೀ ಷಡ್ವಿಧಗುಣವನರಿದು ಮೆರೆಯಬಲ್ಲಡೆ
ಆತನೆ ಸದ್ಭಕ್ತ ಕಾಣಾ ಕೂಡಲ ಚೆನ್ನಸಂಗಮದೇವಾ !"

ಇಂಥ ಅರಿವಿನ ಆಣಿಮುತ್ತುಗಳನ್ನು ಸರಮಾಡಿ ಕನ್ನಡಿಗರು ಕೊರಳಿಗೆ ತೊಡಿಸಿ ಹೋದನೆಂದೇ ಇಂದಿಗೂ ಹಳ್ಳಿಯ ಹೆಂಗಸರು–

ಸೋಬಾನವೆನ್ನೊದು ಯಾರು ಮಾಡ್ಯಾರ ಗುರುವೆ
ದೇವ ಶ್ರೀ ಚೆನ್ನಬಸವಯ್ಯನ । ಸೋ । ಸೊಗಲದ

ಸೋಮಯ್ಯೆಗ ಮದಿವಿ ಮಾಡ್ಯಾರ । ಸೋ ॥
ಸೋಅನ್ನು ಸಬುದವ ಯಾರು ಕಲಿಸ್ಯಾರ ಗುರುವೆ
ದೇವಗುರು ಚೆನ್ನಬಸವಯ್ಯ । ಸೋ । ಸೊಗಲದ
ಸೋಮಯ್ಯೆಗ ಮದಿವಿಮಾಡಿದರ । ಸೋ ॥ ಎಂದು ಹಾಡುತ್ತಾರೆ.

ಅವರ ಮಾತಿನಲ್ಲಿಯೇ ಮುಗಿಸೋಣ :
ಚಿನ್ನಾವ ಚಿದ್ಬಿಂದು ಚಿತ್ಕಳೆಯ ಮೀರಿದ
ಚಿನ್ನಯ ಮೂರ್ತಿ ನೀನಿರುವಿ । ಸೋ
ಚಿನ್ಮಯ ಮೂರ್ತಿ ನೀನಿರುವಿ ಷಡತಲದಯ್ಯ ॰
ಚೆನ್ನಬಸವಂಗೆ ಜಯಜಯ । ಸೋ॥

■

# ಸಮತೆಯ ಗಾರುಡಿಗ ಸಿದ್ಧರಾಮ

"ಮನವೇ ಸರ್ಪ, ತನುವೇ ಹೆಳಿಗೆ ;
ಹಾವಿನೊಡತನ ಹುದುವಾಳಿಗೆ !
ಇನ್ನಾವಾಗ ಕೊಂದಹುದೆಂದರಿಯೆ ;
ಇನ್ನಾವಾಗ ತಿಂದಹುದೆಂದರಿಯೆ !
ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲೊಡೆ
ಅದೇ ಗಾಡುಡ, ಕೂಡಲ ಸಂಗಮದೇವರಾ !"

ಎಂದರು ಬಸವಣ್ಣನವರು.

"ಒಡಲೆಂಬ ಹುತ್ತಕ್ಕೆ ನುಡಿವ ನಾಲಿಗೆ ಸರ್ಪ
ಕಡು ರೋಷವೆಂಬ ವಿಷವೇರೆ ಸಮತೆ ಗಾ
ರುಡಿಗನಂತಕ್ಕು ಸರ್ವಜ್ಞ!"

ಎಂದನು ಸರ್ವಜ್ಞ

ಸಿದ್ಧರಾಮೇಶ್ವರನೂ ಗಾರುಡಿಗ, ಸಮತೆಯ ಗಾರುಡಿಗ, ಆತನ ಸಮತಾ ದೃಷ್ಟಿ ಅದೆಷ್ಟು ಅನುಪಮವಾದುದು:

"ಆರೇನೆಂದರೂ ಓರಂತಿಪ್ಪುದೇ ಸಮತೆ ;
ಆರು ಜರಿದರೂ ಅವರೆನ್ನ ಮನದ ಕಾಳಿಕೆಯ ಕಳೆದರೆಂಬುದೇ ಸಮತೆ;
ಆರು ಸ್ತೋತ್ರ ಮಾಡಿದರೂ ಅವರೆನ್ನ ಜನ್ಮದ ಹಗೆಗಳೆಂಬುದೇ ಸಮತೆ;
ಇಂತಿದು ಗುರುಕಾರುಣ್ಯ. ಮನ ವಚನ ಕಾಯದಲ್ಲಿ ಅಹಿತವಿಲ್ಲದೆ,
ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ, ನಿಮ್ಮವರ ನೀವೆಂಬುದೇ ಸಮತೆ."

ಇದು ಸಿದ್ಧರಾಮನು ಆದರ್ಶವಾಗಿರಿಸಿಕೊಂಡಿದ್ದ ಸಮತೆಯ ಸ್ವರೂಪ. ತನಗೆ ತೊಂದರೆ ಕೊಡದಿದ್ದಾಗ ಮನವಚನಕಾಯದಲ್ಲಿ ಅಹಿತವಿಲ್ಲದೆ ಎಲ್ಲರನ್ನು ಶಿವಾಂಶೆಕರೆಂದು ಕಾಣುವುದು ಕಷ್ಟವಲ್ಲ. ಆದರೆ ಜಗತ್ತಿನ ರೀತಿ ನೀತಿಗಳು ವಿಚಿತ್ರವಾದುವು. ಸುಮ್ಮನೆ ನಮ್ಮ ಮನೆಯಲ್ಲಿ ನಾವು ತಣ್ಣಗಿರುವೆವೆಂದರೂ ಕಲ್ಯಾಣವನ್ನೇ ಕೋರುತ್ತಾ ಇರುವೆವೆಂದರೂ ಕೆಲವರು ಕೇಳುವುದಿಲ್ಲ. ಕಾಡುತ್ತಾರೆ,

ಪೀಡಿಸುತ್ತಾರೆ. ಹಿಂಸಿಸುತ್ತಾರೆ. ಆಗ ಸಮತೆಯನ್ನು ಕಾಪಾಡಿಕೊಳ್ಳುವುದು ಸಾಮಾನ್ಯರ ತುತ್ತಲ್ಲ. ಆದರೆ ಸಿದ್ಧರಾಮನಂಥ ಸಾಮ್ಯಯೋಗಸಿದ್ಧರಿಗೆ ಅದು ಅರಿದೇನಲ್ಲ :

"ಅವನಾಗಿ ಒಬ್ಬನು ನಿಡುಮುಳ್ಳಿನ ಮೇಲೆ ಎನ್ನ ಪೊರಳ್ಚುಗೆ,
ಮೇಣು ಪಾಂಸೆಯ ಹಾಸಿನ ಮೆಲೆ ಪೊರಳ್ಚುಗೆ !
ಪೋರಳ್ಚಿದೊಡೆ ಮನ ವಿಸ್ಕಂದವಾಗದೊಂದೀಯಂದದಲ್ಲಿಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು ಪೊರ್ದಿಪ್ಪುದು ಹೇಳಾ
ಕಪಿಲಸಿದ್ಧ ಮಲ್ಲಿಕಾರ್ಜುನಾ?"

ಎಂದು ಕೇಳುವ ಸಿದ್ಧರಾಮನಿಗೆ, ಪೂಜೆ ನೆಗಳ್ತೆಗಳಿಂದೇನಾದರೂ, ಮನವಿಸ್ಕಂದವಾಗುವುದೆ ? ಇಲ್ಲ :

"ಅವನಾಗಿ ಒಬ್ಬನು ಆವಿಚಾರದಿಂದ ಶಿರಸಿನ ಮೇಲೆ ಕೈದುವನಿಕ್ಕುಗೆ,
ಮೇಣು ಗಂಧಾಕ್ಷತೆ ಪುಷ್ಪದಲ್ಲಿ ಪೂಜೆಯ ಮಾಡುಗೆ,
ಪೂಜೆ ಮಾಡಿದೊಡೆ ಮನ ವಿಸ್ಕಂದವಾಗದೊಂದೀಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನನ್ನೆಂದು ಪೂರ್ದಿಪ್ಪುದು ಹೇಳಾ
ಕಪಿಲ ಸಿದ್ಧಿ ಮಲ್ಲಿಕಾರ್ಜುನಾ?"

ಎಂದು ಬೆಸಗೊಳ್ಳುವ ಸಿದ್ಧರಾಮಯ್ಯನಿಗೆ ಯಾರಾದರೂ ಪರಿಹಾಸ್ಯ ಮಾಡಿದರೆ ಮನ ವಿಸ್ಕಂದವಾಗುವುದೆ? ಇಲ್ಲ :

"ಅವನಾವನೋರ್ವನು ನಾಸ್ತಿಕವನಾಡಿ ನಗುತಿಪ್ಪುದನು ತಾ ಕೇಳಿ
ಮತ್ತಾವನಾಗಿ ಬಂದು ಪೇಳ್ದೊಡೆ
ಮನ ವಿಸ್ಕಂದವಾಗದೊಂದೀಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು ಪೂರ್ದಿಪ್ಪುದು ಹೇಳಾ
ಕಪಿಲ ಸಿದ್ಧ ಮಲ್ಲಿಕಾರ್ಜುನಾ?"

ಎಂದು ಪ್ರಶ್ನಿಸುವ ಸಿದ್ಧರಾಮಯ್ಯನಿಗೆ ಅನ್ನ ನೀಡುವೆನೆಂದು ಮಣ್ಣ ನೀಡಿದರೆ ಮನವೇನಾದರೂ ವಿಸ್ಕಂದವಾಗುವುದೆ? ಇಲ್ಲ :

"ಅವನಾಗಿ ಒಬ್ಬನು ಕರವ ಪಿಡಿದು ಒಡಗೊಂಡೊಯ್ದು
ಒಳ್ಳಿತನಾದರೂ ನೀಡುಗೆ, ಮೇಣು ಮಣ್ಣನಾದರೂ ನೀಡುಗೆ,
ನೀಡದೊಡೆ ಮನ ವಿಸ್ಕಂದವಾಗದೊಂದೀಯಂದದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು ಪೊರ್ದಿಪ್ಪುದು ಹೇಳಾ
ಕಪಿಲ ಸಿದ್ದ ಮಲ್ಲಿಕಾರ್ಜುನಾ?"

ಎಂದು ಕೇಳುವ ಸಿದ್ಧರಾಮಯ್ಯನಿಗೆ ಸಿರಿ ಕೆಟ್ಟತೆಂದೇನಾದರೂ ಮನ ವಿಸ್ಕಂದವಾಗುವುದೇ ? ಇಲ್ಲ;

"ಸಿರಿಯಾಯಿತ್ತೆಂದು ಉಚ್ಚವದಿಂದುಬ್ಬದೆ
ಕೆಟ್ಟತೆಂದು ಮನನೊಂದು ಭಿನ್ನನಾದಂತಿರದೆ
ಮನ ವಿಸ್ಕಂದವಾಗದೊಂದೀಯಂದದಲ್ಲಿಪ್ಪಂತಪ್ಪ
ನಿಮ್ಮದೊಂದು ಸಮತಾಗುಣ ಎನ್ನನೆಂದು ಪೂರ್ದಿಪ್ಪುದು ಹೇಳಾ
ಕಪಿಲ ಸಿದ್ಧ ಮಲ್ಲಿಕಾರ್ಜುನಾ?"

ಎಂಥ ಎಣೆಯಿಲ್ಲದ ಸಮತಾಗುಣವಿದು, ಸಿದ್ಧರಾಮನದು ! ಸಮತೆಯನೆ ಹಾರೈಸಿ, ಸಮತೆಯನೆ ಅರಸಿ, ಸಮತೆಯನೆ ಸಾಧಿಸಿ, ಸಮತೆಯೆ ಸಾಕಾರವಾದಂತಿದ್ದ ಸಿದ್ಧರಾಮಯ್ಯ ಶರಣ ಸಂದೋಹದಲ್ಲಿ ತನ್ನದೇ ಆದ ವಿಶಿಷ್ಟ ವ್ಯಕ್ತಿತ್ವದಿಂದ ಬೆಳಗಿದ್ದಾನೆ. ಆದರೆ ಈ ಸಮತೆ ಯಾರದೇ ಅನುಗ್ರಹದಿಂದಾಗಲಿ, ಸುಲಭವಾಗಿಯಾಗಲಿ ಸಿಕ್ಕಿಲ್ಲ ಅವನಿಗೆ. ಅದು ಸತತ ಸಾಧನೆಯ ಫಲ.ಅವನ ಜೀವನವೊಂದು ನಿರಂತರ ಸಾಧನೆಯ ಸುಂದರ ಕಾವ್ಯ. ಸಮತೆಯೇ ಆ ಕಾವ್ಯದ ನಾಂದಿ, ಪೀಠಿಕೆ, ಭರತ ವಾಕ್ಯ ! ಅದರ ಸಾರ ಸರ್ವಸ್ವ.

ಎಂಟುನೂರು ವರ್ಷಗಳಾಚೆಗೆ ಶಿವಸಿದ್ಧ ಕುಲಚಕ್ರವರ್ತಿ ರೇವಣ ಸಿದ್ಧೇಶ್ವರರು ರಾಣಿ ಚಾಮಲಾದೇವಿ ಸಿದ್ಧವಾಗಿರಸಿದ್ದ ವಿವಿಧ ವಾಹನಗಳನ್ನುಳಿದು ಪಾದಚಾರಿಯಾಗಿ ಹೊರಟಿದ್ದಾರೆ ಸೊನ್ನಲಾಪುರದ ಬೀದಿಯಲ್ಲಿ. ಯಾರ ಮನೆಗೆ? ಅರಮನೆಗಲ್ಲ, ಗುರುಮನೆಗಲ್ಲ, ಗರುವರ ಮನೆಗಲ್ಲ–ಮುದ್ದಯ್ಯನೆಂಬ ವೃದ್ಧ ಭಕ್ತನ ಮನೆಗೆ. ಆ ಮುದ್ದಯ್ಯನಾರು? ಒಬ್ಬಭಕ್ತ–ಸತಿ ಸುಗ್ಗವ್ವೆಯೊಡನೆ ಶಿವನು ಮೆಚ್ಚುವಂತೆ ಸಂಸಾರ ಮಾಡಿ ಸಂತಾನವಿಲ್ಲದೆಯೇ ಮುಪ್ಪನ್ನು ಅಪ್ಪಿದ್ದ ಬಡಭಕ್ತ, 'ಅಂಥ ಸಾಮಾನ್ಯ ಭಕ್ತನ ಮನೆಗೆ ಪರಮಗುರು ರೇವಣಸಿದ್ಧೇಶ್ವರರು ಪಾದಚಾರಿಯಾಗಿ ಹೋಗಬೇಕೆ?' ಎಂದು ರಾಣಿ ಚಾಮಲಾದೇವಿ ಕೇಳಿದಳಂತೆ; ಅದಕ್ಕೆ ಉತ್ತರವಾಗಿ ರೇವಣಸಿದ್ಧೇಶ್ವರರು ಹೇಳಿದರಂತೆ : "ಮುದ್ದಯ್ಯ–ಸುಗ್ಗವ್ವೆಯರಿಗೆ ಸಾಕ್ಷಾತ್ ಶಿವಸ್ವರೂಪನಾದ ಶಿವಯೋಗಿಯೊಬ್ಬನು ಮಗನಾಗಿ ಹುಟ್ಟಲಿದ್ದಾನೆ. ಆದುದರಿಂದ ಕಾಲ್ನಡಿಗೆಯಿಂದ ಹೊರಟಿರುವೆ ವತ್ಸೆ" ಎಂದು.

ಎಲ್ಲರಿಗೂ ಅಂತವಿಲ್ಲದ ಆಶ್ಚರ್ಯ– 'ಸುಗ್ಗವ್ವೆ–ಮುದ್ದಯ್ಯರು ಸಾಮಾನ್ಯರು. ಮೇಲಾಗಿ ಮುಪ್ಪಡರಿ ತಲೆ ನಡುಗುತ್ತಿರುವವರು. ಅವರಿಗೆ ಈ ಅಪರ ವಯಸ್ಸಿನಲ್ಲಿ ಶಿವಸ್ವರೂಪಿ ಶಿವಯೋಗಿಯೊಬ್ಬನು ಮಗನಾಗಿ ಹುಟ್ಟುವನೆ?' ಎಂದು. ಆವರ

ಆಶ್ಚರ್ಯ ಇನ್ನೂ ಕೊನರಿ ಪಲ್ಲವಿಸಿ ಚೆಲ್ಲವರಿಯುವಂತೆ ಹುಟ್ಟಿದನು– ತೇಜೋವಿರಾಜಿತ ತನಯನೊಬ್ಬನು ಹುಟ್ಟಿದನು. ಶರಣರ ಚರಿತ್ರ ಧರಣಿಗೆ ವಿಚಿತ್ರ.

ಹುಟ್ಟಿದ ಮಗನಿಗೆ 'ಸಿದ್ಧರಾಮ'ನೆಂದೇ ಹೆಸರಿಡಲು ಹೇಳಿಹೋಗಿದ್ದರು ರೇವಣ ಸಿದ್ಧೇಶ್ವರರು. ಆದರೆ ಭಾವುಕರಾದ ಸುಗ್ಗವ್ವೆ–ಮುದ್ದಯ್ಯರು ಮನೆಯ ದೇವರಾದ ಧೂಳಿಮಾಕಾಳಯ್ಯನ ಹೆಸರಿಟ್ಟುಬಿಟ್ಟರು. ಆದರೆ 'ಧೂಳಿಮಾಕಾಳಯ್ಯ' ಎಂದು ಕರೆದರೆ ಓಗೊಡುತ್ತಿದ್ದಿಲ್ಲವಂತೆ , ಆ ಕಾರಣಿಕ ಶಿಶು ; 'ಸಿದ್ಧರಾಮ' ಎಂದು ಕರೆದೆರ ಮಾತ್ರ ಉತ್ತರ ಬರುತ್ತಿದ್ದಿತಂತೆ.

ಮುಪ್ಪಿನ ಕಾಲದಲ್ಲಿ ಮಗನನ್ನು ಪಡೆದೆವಲ್ಲ–ಎಂಬ ತಂದೆ ತಾಯಿಗಳ ಆನಂದ ಬಹಳ ದಿನ ಉಳಿಯಲಿಲ್ಲ. ಮಗ ಮೊದ್ದು, ಜಡಭರತ, ಮಂದಮತಿ ! ಯಾವಾಗಲೂ ಮಂಕು ಮಂಕಾಗಿ, ಯಾವುದರಲ್ಲಿಯೂ ಆಸಕ್ತಯಿಲ್ಲದೆ, ಯಾರೊಡನೆಯೂ ಮಾತನಾಡದೆ, ತಾನಾಗಿಬಂದು ತಿನ್ನದೆ, ಉಣ್ಣದೆ ಎಂತೆಂತೋ ಇರುತ್ತಿದ್ದನು. ಮಗನಾಗಲಿಲ್ಲವೆಂಬ ಚಿಂತೆಯನ್ನು ಮರೆದು ಸಾವಿನ ದಾರಿ ಕಾಯುತ್ತ ಕುಳಿತಿದ್ದೆವು. ಇಂಥ ಮೊದ್ದು ಮಗನನ್ನು ಕೊಟ್ಟು ಮತ್ತೆ ನಮ್ಮನ್ನು ಚಿಂತೆಯ ಚಿತೆಯಲ್ಲಿ ಉರಿಸತೊಡಗಿದನಲ್ಲಾ ಆ ಶಿವ– ಎಂದು ಸುಗ್ಗವ್ವೆ–ಮುದ್ದಯ್ಯರು ಸುಯ್ದರು. ಮನೆಯಲ್ಲಿರುವುದಕ್ಕಿಂತ ದನಕಾಯಲಾದರೂ ಕಳಿಸಿದರೆ ಮಗನಿಗೆ ಹಸಿವೆಯಾಗಿ ಉಣ್ಣಲು ಕಲಿತಾನೆಂದು ಧೂಳಿಮಾಕಾಳನನ್ನು ದನ ಕಾಯುವ ಕಾರ್ಯಕ್ಕೆ ನಿಯಮಿಸಿದರು.

ಆದರೆ ಅಲ್ಲಿಯೂ ಸಿದ್ಧರಾಮಯ್ಯ ತನ್ನ ವಿಚಿತ್ರ ವರ್ತನೆಯನ್ನು ಬಿಡಲಿಲ್ಲ. ತಾಯಿ ಕಟ್ಟಿಕೊಟ್ಟ ಬುತ್ತಿಯನ್ನು ಸಂಗಡಿಗರಿಗೆ ತಿನ್ನಿಸಿ ತಾನು ಒಂದು ಮಾವಿನ ಮರದಡಿಯಲ್ಲಿ ಶಿವಲಿಂಗವನ್ನು ಪೂಜಿಸುತ್ತ ಕುಳಿತುಬಿಡುತ್ತಿದ್ದ. ಸಂಜೆಯಾಗಲು ಎಲ್ಲರೊಡನೆ ಕರುಗಳ ಟಿಂಟಿಣಿಯಲ್ಲಿ ಯಾವುದೋ ಅವ್ಯಕ್ತ ಮಧುರ ಸಂದೇಶವನ್ನು ಕೇಳುತ್ತ ಮನಗೆ ಬರುತ್ತಿದ್ದ.

ದಿನಗಳು ಉರುಳುತ್ತವೆ. ಯಾರೂ ಅರಿಯದಂತೆ, ಸಿದ್ಧರಾಮನ ಸದ್ದಿಲ್ಲದ ಸಾಧನೆ ಸಾಗುತ್ತದೆ. ಅವನ ಬಾಲ್ಯದ ಮರೆಯ ಬ್ರಹ್ಮ ಮೆಲ್ಲಮೆಲ್ಲನೆ ಕಣ್ದೆರೆಯ ತೊಡಗುತ್ತಾನೆ. ಪಶುಪಾಲನೆ ಪಶುಪಾತಿಯ ಉಪಾಸನೆಯಾಗಿ ಪಾಶಚ್ಛೇದನಕ್ಕೆ ದಾರಿ ಮಾಡಿಕೊಡುತ್ತದೆ. ಆದರೂ ತಂದೆ ತಾಯಿಗಳಿಗೆ, ಲೋಗರ ಕಣ್ಣಿಗೆ ಅವನೊಬ್ಬ ಬೆಪ್ಪ–ಮುದ್ದುಗೌಡರ ಮೊದ್ದು ಮಗ!

ಒಂದು ಸಂಜೆ ಸಿದ್ಧರಾಮ ತನ್ನ ತಂದೆಯು ಬಿತ್ತಿದ ನವಣೆಯ ಹೊಲದ ಬದಿಯಲ್ಲಿ ನಿಂತಿದ್ದಾನೆ. ಸಂಗಡಿಗರೆಲ್ಲ ಎಲ್ಲೋ ದೂರದೂರ ಹೋಗಿದ್ದಾರೆ.

ಸಿದ್ಧರಾಮಯ್ಯನೋ ತೆನೆಗಳ ಭಾರದಿಂದ ಬಾಗಿ ಹೆತ್ತು ಹೊತ್ತು ಸಲಹಿದ ಭೂಮಿ ತಾಯಿಗೆ ನಮಸ್ಕರಿಸುವಂತೆ ನಿಂತಿದ್ದ ನವಣೆಯ ಹೊಲವನ್ನು ನೋಡುತ್ತ ನಿಂತಿದ್ದಾನೆ. ಸಂಜೆಯ ರಂಜಿಸುವ ಹೊಂಬಿಸಿಲಿನಲ್ಲಿ ಆ ಬಂಗಾರ ಬೆಳೆ ಬಂದು ಹಕ್ಕಿಗಳಿಗೆ ಹಾಲ್ದೆನೆಯ ಗುಟುಕು ಕೊಡುತ್ತ ಸೃಷ್ಟಿಯ ಅನಂತಕರುಣೆಗೆ ಉದಾಹರಣೆಯಾಗಿ ನಿಂತಿದೆ. ಅದನ್ನು ನೋಡುತ್ತ ಭಾವಸಮಾಧಿಯಲ್ಲಿ ನಿಲ್ಲುತ್ತಾನೆ ಸಿದ್ಧರಾಮಯ್ಯ.

ಆಗ ಬರುತ್ತಾರೆ ಓರ್ವ ಜಂಗಮ ಮೂರ್ತಿಗಳು. ಗಂಭೀರವಾದ ಮುಖಮುದ್ರೆ, ಹೊಳೆ ಹಳೆವ ಕಣ್ಣುಗಳು, ವಿಶಾಲಫಾಲದಲ್ಲಿ ಒಪ್ಪುವ ವಿಭೂತಿ, ಮೈತುಂಬ ಕಾವಿ,. ಕೊರಳಿನಲ್ಲಿ ರುದ್ರಾಕ್ಷಿಮಾಲೆ, ಕಾಲಲ್ಲಿ ಹಾವುಗೆ, ಕೈಯಲ್ಲಿ ತಂಬೂರಿ. ಅವರನ್ನು ಕಾಣುತ್ತಲೇ ಸಿದ್ಧರಾಮನ ಹೃದಯು ಅವರ ಮೂರ್ತಿಗೆ ಮಂದಿರವಾಗಿಬಿಡುತ್ತದೆ. ಓಡಿಹೋಗಿ ಅವರ ಕಾಲಿಗೆರಗುತ್ತಾನೆ. ‘ಶಿವಮಸ್ತು ವತ್ಸ’ ಎನ್ನುತ್ತ ಹಿಡಿದೆತ್ತಿದರು ಜಂಗಮ ಪುಂಗವರು. ಅವರ ಅಮೃತ ಹಸ್ತ ಸ್ಪರ್ಶದಿಂದ ಸಿದ್ದರಾಮನ ತನು ಪುಲಕಿತವಾಯಿತು. ಅವನ ಅಂಗಾಂಗಗಳಲ್ಲಿ ಅದುವರೆವಿಗೂ ಅವನು ಅರಿಯದಿದ್ದ ಶಕ್ತಿಯೊಂದರ ಸಂಚಾರವಾದಂತಾಯಿತು. ‘ಏಳು ಮಗು’ ಎಂಬ ಅವರ ಮಾತು ಅವನ ಮರವೆಯ ಮಂಜಿಗೆ ರವಿಕಿರಣ ಪುಂಜವಾಗಿ ಪರಿಣಮಿಸಿತು. ‘ಏಳು ಮಗು’ ಆಹಾ! ಅದೆಂಥ ಸ್ವರ, ಅದೆಂಥ ಕರೆ !

ಸಿದ್ಧರಾಮನು ಹಾಸಿದ ಕಂಬಳಿಯ ಮೇಲೆ ಕುಳಿತು ಅವನು ಹೊಸೆದಿತ್ತ ರಸ ರಸವಾದ ನವಣೆಯ ಬೆಳಸಿಯನ್ನು ಸೇವಿಸಿದರು, ಆ ಜಂಗಮ ಮೂರ್ತಿಗಳು.ಅಷ್ಟಕ್ಕೆ ಅವರ ಹಸಿವೆ ಹಿಂಗಿದಂತೆ ತೋರಲಿಲ್ಲ. ಮನೆಗೆ ಹೋಗಿ ಮಜ್ಜಿಗೆ ಅಂಬಲಿ ತರುವೆಯಾ?’ ಎಂದು ಕೇಳಿದರು. ‘ಓ ತರುತ್ತೇನೆ’ ಎಂದ ಸಿದ್ಧರಾಮಯ್ಯ. ಆದರೆ ತಾನು ತರುವವರೆಗೆ ಅವರಲ್ಲಿ ಇರುವರೋ ಇಲ್ಲವೋ ಎಂಬ ಶಂಕೆ ಬಾಧಿಸಲು, ಅಂಜುತ್ತ ಅಳುಕುತ್ತ ಕೇಳಿದ :

“ತಮ್ಮ ಹೆಸರೇನು ?”

“ಮಲ್ಲಯ್ಯ”

“ತಾವಿರುವುದೆಲ್ಲಿ?”

“ಶ್ರೀಶೈಲದಲ್ಲಿ”

‘ಶ್ರೀಶೈಲ’ ಎಂಬ ಶಬ್ದವನ್ನು ಕೇಳುತ್ತಲೆ ಮಂತ್ರಮುಗ್ಧನಾದ ಸಿದ್ಧರಾಮಯ್ಯ. ಯಾವ ಜನ್ಮದ ಅಪೂರ್ತ ಆಕಾಂಕ್ಷೆಯ ಅದಮ್ಯ ಆಕರ್ಷಣೆಯೋ ಅದು ! ‘ನಾನೂ ಅಲ್ಲಿಗೆ ಬರಲೆ?’ ಎಂದು ಕೇಳಿದ ಸಿದ್ಧರಾಮಯ್ಯ. ‘ಬರುವೆಯಂತೆ, ಮೊದಲು ಅಂಬಲಿ ಮಜ್ಜಿಗೆ ತರುವುದಿಲ್ಲವೆ?’ ಎಂದರು ಜಂಗಮ ಮಲ್ಲಯ್ಯನವರು.

ತರುತ್ತೇನೆ. ಆದರೆ ನಾನು ಬರುವವರೆಗೂ ನೀವಿಲ್ಲಿಯೇ ಇರಬೇಕು' ಎಂದು ಹೇಳಿ ಅನಮಾನಿಸುತ್ತಲೇ ಹೋದ ಸಿದ್ಧರಾಯ್ಯ–ಮುಗ್ಧರಾಮಯ್ಯ.

ಸುಗ್ಗವ್ವೆಯ ಸಂತೋಷಕ್ಕೆ ತುದಿಮೊದಲಿಲ್ಲವಾಯಿತು, ಕೊನೆಗೊಮ್ಮೆ ತನ್ನ ಮಗ ತಾನಾಗಿಯೇ ಬಂದು ಅಂಬಲಿ ಮಜ್ಜಿಗೆ ಬೇಡಿದನಲ್ಲಾ – ಎಂದು. ತನ್ನ ಕಿವಿಯನ್ನು ತಾನೇ ನಂಬದಾದಳು. 'ಇದೊಂದು ಕನಸಾಗಿರಬಹುದೆ?' ಎಂದು ಶಂಕಿಸಿದಳು. ಆದರೆ 'ಬೇಗ ಕೊಡಮ್ಮ' ಎಂದು ಸಿದ್ಧರಾಮ ಆತುರ, ಕಾತರ, ಅವಸರಗಳನ್ನು ಏಕಕಾಲಕ್ಕೆ ವ್ಯಕ್ತಗೊಳಿಸುತ್ತಲಿದ್ದಾಗ ಕನಸೆಂದು ಹೇಗೆ ಭಾವಿಸುವುದು? ಅವಸರವಸರವಾಗಿ ನಕ್ಷತ್ರದಂತಹ ಅನ್ನ ಮಾಡಿ ಅದಕ್ಕೆ ಬೆಳುದಿಂಗಳಿನಂತಹ ಮೊಸರು ಸೇರಿಸಿ ಬುತ್ತಿಮಾಡಿ ಗಂಟು ಕಟ್ಟಿ "ಕಂದ ಕೋ" ಎಂದು ಕೈಗಿತ್ತಳು.ಕೊಂಡವನೇ ಕವಣೆಗಲ್ಲಿನಂತೆ ನವಣೆಯ ಹೊಲಕ್ಕೆ ಓಡಿಬಂದನು ಸಿದ್ಧರಾಮ.ಆಗತಾನೇ ಸಂಜೆಯ ಮಬ್ಬು ಹಬ್ಬುತ್ತಲಿದ್ದಿತು. ಸಂಗಡಿಗರ ಸುಳುವಿಲ್ಲ. ಮಲ್ಲಯ್ಯನೂ ಅಲ್ಲಿರಲ್ಲಿಲ್ಲ. ತಾನು ಹಾಸಿದ್ದ ಕಂಬಳಿ ಮಾತ್ರ ಕುರುಹಾಗಿ ಬಿದ್ದಿತ್ತು ಅಲ್ಲಿ. ಸಿದ್ಧರಾಮ ಶಿಲಾಪ್ರತಿಮೆಯಂತೆ ಸ್ವಲ್ಪ ಕಾಲ ಸ್ತಬ್ಧನಾಗಿ, ನಿಶ್ಶಬ್ಧನಾಗಿ ನಿಂತುಬಿಟ್ಟ! ಒಳಗಿನ ಉದ್ವೇಗ ಉದ್ಗಾರವಾಗಿ ಹೊರಬಿದ್ದಿತು 'ಮಲ್ಲಯ್ಯ' 'ಮಲ್ಲಯ್ಯ!'

ಸಂಜೆಯ ಶಾಂತಿಯಲ್ಲಿ ಅವನ ಕೂಗು ಸ್ವರ–ಶರವಾಗಿ ದೂರ ದೂರದವರೆಗೆ ಹೋಯಿತು. ಆದರೆ ಗಾಳಿಯ ಸೂಯ್‌ದನಿಯೇ ಅದಕ್ಕೆ ಉತ್ತರವಾಯಿತು. ಮಲ್ಲಯ್ಯನಿಲ್ಲ, ಮಲ್ಲಯ್ಯ ಅಲ್ಲಿಲ್ಲ ! ಎಲ್ಲಿಗೆ ಹೋದ? ಇರುವೆನೆಂದು ಹೇಳಿ ಎಲ್ಲಿಗೆ ಹೋದ?

"ದೇವ ನಿಂತವನೆಂದು ನಂಬಲಾಗದಯ್ಯ !
'ಬಾ' ಎಂದು ಹೇಲಿ ಬಯಲಾದ ದೇವ ನೊಳ್ಳಿದನೆ ?
ದೇವ ನಿಂತವನೆಂದು ನಂಬಲಾಗದಯ್ಯ
ತನ್ನ ಕಾರ್ಯಕ್ಕೆ ಹೆಣಗಾಡಿಸಿದ ನೊಳ್ಳಿದನೆ ?
ಕಪಿಲ ಸಿದ್ಧಮಲ್ಲಯ್ಯ, ನಿನ್ನ ಲೀಲೆ ತಿಳಿಯದಾರಿಂಗೆ !"

ಸಿದ್ಧರಾಮನ ನಿರಾಶೆಯೇ ನಿಶೆಯ ಕಾಳಿಮೆಯಾಯಿತೋ ಎಂಬಂತೆ ಸುತ್ತಲೂ ಕತ್ತಲೆ ಆವರಿಸಿತು. ಆದರೂ ಕಂಗೆಡಲಿಲ್ಲ ಸಿದ್ಧರಾಮಯ್ಯ. ಹೊರಟ ಮಲ್ಲಯ್ಯನನ್ನು, ಶ್ರೀಶೈಲದ ಮಲ್ಲಯ್ಯನನ್ನು ಅರಸುತ್ತ ಹೊರಟೇಬಿಟ್ಟ. 'ಮಲ್ಲಯ್ಯ' 'ಮಲ್ಲಯ್ಯ' ಎಂದು ಹಲುಬುತ್ತ ಹೊರಟೇಬಿಟ್ಟ! ನಟ್ಟರುಳಿನಲ್ಲಿ ನಟ್ಟಿಡವಿಯಲ್ಲಿ ಪ್ರತಿಧ್ವನಿಸಿತವನ ಕೂಗು :

"ಗಿಡಗಳೊಳು ಹೊಕ್ಕು ಮಲ್ಲಯ್ಯ ಮಲ್ಲಯ್ಯ, ಕ
ಮ್ಮಡುಗಳೊಳು ಹೊಕ್ಕು ಮಲ್ಲಯ್ಯ ಮಲ್ಲಯ್ಯ, ಪೇ
ರಡವಿಯೊಳು ಹೊಕ್ಕು ಮಲ್ಲಯ್ಯ ಮಲ್ಲಯ್ಯ
ಮಾರ್ದನಿಗೊಡುವ ಗುಹೆ ಗುಹೆಗಳ
ನಡುವೆ ಹೊಕ್ಕಯ್ಯ ಮಲ್ಲಯ್ಯ ಮಲ್ಲಯ್ಯ ಹೊದ
ರೆಡೆಯ ಹೊಕ್ಕಯ್ಯ ಮಲ್ಲಯ್ಯ ಮಲ್ಲಯ್ಯ ಬಾ
ತಡೆಯದೋಯೆನ್ನ ಮಲ್ಲಯ್ಯ ಮಲ್ಲಯ್ಯ, ಯೆಂ
ದೊದರಿ ಕರೆದಂ ಕರೆದನು!" –ಸಿದ್ಧರಾಮ ಚಾರಿತ್ರ

ಕರೆದೇ ಕರೆದ ಸಿದ್ಧರಾಮ. 'ಓ' ಎಂಬ ಉತ್ತರ ಯಾವ ಮೂಲೆಯಿಂದಲೂ ಬರಲಿಲ್ಲ! ಮೇಲೆ ನಕ್ಷತ್ರಗಳು ಪಿಳಿ ಪಿಳಿ ಕಣ್ಣುಬಿಟ್ಟು ಸುಮ್ಮನಿದ್ದುವು ; ತರುಮರಗಳು ತರಗೆಲೆ ಸುರಿಸಿ ಸುಮ್ಮನಾದುವು ; ಗಿರಿ ಗುಹೆಗಳು ಪ್ರತಿಧ್ವನಿಸಿ ಸುಮ್ಮನಾದುವು! ಆದರೂ ಎದೆಗೆಡಲಿಲ್ಲ ಸಿದ್ಧರಾಮಯ್ಯ, ಮಲ್ಲಯ್ಯನನ್ನು ಕಂಡೇತೀರುವೆನೆಂಬ ಅಚಲ ನಿರ್ಧಾರದಿಂದಲೇ ಹೊರಬಿದ್ದ ಅವನು ಮುಂದಿಟ್ಟ ಕಾಲು ಹಿಂದಿಡಲಿಲ್ಲ.

"ಕೈಗಳ ಬಿಚ್ಚಿ ವಿಸಾಟರೆ ಬಿಡೆನು !
ಮೈಗಳ ಕಡಿದು ಹರಹಿದಡೆ ಬಿಡೆ ಬಿಡೆನು ನಿಮ್ಮ ಚರಣ !
ನೀನು ಎನ್ನ ತನುವಳಿದರೆ ನಿಮ್ಮ ಜ್ಞಾನ ತನುವಿನಿಂದ
ಹೊದ್ದುವೆನು ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ!"

ಎಂಬ ನಿಷ್ಠುರ ನಿರ್ಧಾರ ಅವನದು! ಯಾವ ಧೈರ್ಯದಿಂದ ಇಂಥ ನಿಶ್ಚಲ ನಿಶ್ಚಯಕ್ಕೆ ಬಂದಿದ್ದನಾತ?

"ಮಗನಿಗಾದ ನೋವು ತಂದೆತಾಯಿಗಳಿಗಾಗದೆ ಅನ್ಯರಿಗೆಲ್ಲಿಹುದೋ
ಕಪಿಲಸಿದ್ಧ ಮಲ್ಲಯ್ಯ, ನಮ್ಮ ನೋವೆ ನಿಮ್ಮ ನೋವು!"

ಸಿದ್ಧರಾಮನಿಗೆ ನೋವಾದರೆ ಮಲ್ಲಯ್ಯನಿಗೆ ನೋವಾಗದೆ ಇರುತ್ತದೆಯೇ? ಆಗದಿದ್ದರೆ ಅವನೆಂಥ ಗುರು, ಅವನೆಂಥ ತಂದೆ?

ಇತ್ತ ಸಿದ್ಧರಾಮಯ್ಯನ 'ಮಲ್ಲಯ್ಯ, ಮಲ್ಲಯ್ಯ!' ಎಂಬ ಹುಯ್ಯಲು, ಅತ್ತ ಸಿದ್ಧರಾಮನ ತಾಯಿ ತಂದೆಗಳ 'ಸಿದ್ಧರಮಾ, ಸಿದ್ಧರಾಮಾ!' ಎಂಬ ಗೋಳ್ಕರೆ ! ಗಾಳಿಯ ತೆರೆಗಳೆಲ್ಲ ಗೋಳಿಡುವಂತೆ ತೋರಿತಂದು!

ಶ್ರೀಶೈಲದ ಯಾತ್ರೆಗೆ ಹೊರಟಿದ್ದ ಯಾತ್ರಿಕರು 'ಮಲ್ಲಯ್ಯ, ಮಲ್ಲಯ್ಯ' ಎಂದು ಒರಲುತ್ತ ಹೊರಟಿದ್ದ ಮುಗ್ಧರಾಮನನ್ನು ನೋಡಿ ಮರುಗಿದರು. ಮೈದಡವಿ ಮಾತಾಡಿಸಿದರು. ಅವನು ಅರಸುತ್ತಲಿದ್ದ ಮಲ್ಲಯ್ಯನಾರೆಂದು ಕೇಳಿದರು. 'ಶ್ರೀಶೈಲದ ಮಲ್ಲಯ್ಯ' ಎಂದವನು ಉತ್ತರವಿತ್ತನು. ಯಾತ್ರಿಕರಿಗೆ ಪರಮಾಶ್ಚರ್ಯವಾಯಿತು 'ಈ ಎಳೆವರೆಯದಲ್ಲಿ ಇಂಥ ಭಕ್ತಿ!' ಎಂದು. 'ನಾವೂ ಶ್ರೀಶೈಲಕ್ಕೆ ಹೊರಟಿದ್ದೇವೆ. ನಮ್ಮೊಡನೆ ನಡೆ. ಅಲ್ಲಿ ಮಲ್ಲಯ್ಯನನ್ನು ತೋರಿಸುವೆವು' ಎಂದು ಆಶ್ವಾಸನವಿತರು. 'ಶ್ರೀಶೈಲ' ಮತ್ತು 'ಮಲ್ಲಯ್ಯ' ಎಂಬ ಶಬ್ದಗಳನ್ನು ಕೇಳುತ್ತಲೇ ಹಾರಿಹೋದ ಹರಣ ಮರಳಿ ಬಂದಂತಾಯಿತು, ಸಿದ್ಧರಾಮನಿಗೆ. ಸಿದ್ಧರಮನಿಗೆ. ಅವರೊಡನೆ ಆನಂದದಿಂದ ಹೊರಟ.

ಕೆಲವು ದಿನಗಳು ಕಳೆದುವು ಮಾರ್ಗಕ್ರಮಣದಲ್ಲಿ. ಒಂದು ಸಂಜೆ ಮುಂದೆ ಮಲೆಯ ಮಾಲೆ ಕಂಗೊಳಿಸಿತು. ಸಂಜೆಯ ಮಿಸುನಿ ಬಿಸಿಲಿನಲ್ಲಿ ಬಂಗಾರದ ಬೆಟ್ಟದಂತೆ ತೋರಿದ ಆ ಗಿರಿರಾಜಿಯನ್ನು ಕಂಡು ಸಿದ್ಧರಾಮನ ಕಣ್ಣುಗಳು ಅರಳಿದುವು. 'ಇದಾವ ಬೆಟ್ಟ?' ಎಂದು ಯಾತ್ರಿಕರನ್ನು ಕೇಳಿದ ; 'ಶ್ರೀಶೈಲ' ಎಂದವರು ಹೇಳಿದರು. ಸಿದ್ಧರಾಮನ ಮನ ಕಂಪಿಸಿತು ; ಮೈ ಝೋಂಪಿಸಿತು! ಯಾವ ಶ್ರೀಶೈಲ ಸ್ವಪ್ನವು ತನಗರಿಯದಂತೆಯೇ ತನ್ನನ್ನು ಎಂದಿನಿಂದಲೂ ಕೈಮಾಡಿ ಕರೆಯುತ್ತಲಿದ್ದಿತ್ತೋ ಆ ಶ್ರೀಶೈಲವೇ ಕಣ್ಣೆದುರಿಗೆ ಕಾಣಿಸಿಕೊಂಡಾಗ ಅದೆಂಥ ಭಾವ ನರ್ತಿಸಿರಬೇಕು ಅವನ ಮನೋರಂಗದ ಮೇಲೆ? ಮಲ್ಲಯ್ಯನ ಅಮೃತಕರವಾಗಿ ಆ ಗಿರಿ ತೋರಿತವನಿಗೆ.

'ಇನ್ನೇನು ಮಲ್ಲಯ್ಯನ ದರ್ಶನ ದೂರವಿಲ್ಲ' ಎನ್ನುತ್ತ ಭಾವಾವೇಶದಲ್ಲಿ ಸರಸರನೆ ಗಿರಿಯನ್ನು ಏರಿದ ಸಿದ್ಧರಾಮ. ಶ್ರೀಶೈಲ ಮಲ್ಲಿಕಾರ್ಜುನನ ದಿವ್ಯ ದೇಗುಲದ ಭವ್ಯ ಗೋಪುರ ಕಾಣಿಸಿತು. 'ಶ್ರೀಶೈಲ ಶಿಖರಂ ದೃಷ್ಟ್ವಾ ಪುನರ್ ಜನ್ಮಂ ನ ವಿದ್ಯತೆ' ಎನ್ನುತ್ತ ಯಾತ್ರಿಕರೆಲ್ಲ ಕೈಮುಗಿದರು ಆ ಗೋಪುರಕ್ಕೆ 'ಮಲ್ಲಯ್ಯನೆಲ್ಲಿ', 'ಮಲ್ಲಯ್ಯನೆಲ್ಲಿ?' ಎಂದು ಉಕ್ಕುವ ತವಕದಿಂದ ಸಿದ್ಧರಾಮ ಕೇಳಿದ. ಯಾತ್ರಿಕರು ಅವನನ್ನು ಗರ್ಭಗುಡಿಯೊಳಗೆ ಕರೆದೊಯ್ದು ಮಲ್ಲಿಕಾರ್ಜುನ ಸ್ವಾಮಿಯ ಜ್ಯೋತಿರ್ಲಿಂಗವನ್ನು ತೋರಿಸಿದರು. ಸಿದ್ಧರಾಮ ನಿರಾಶೆಯಿಂದ ಕುಸಿದುಹೋದ. "ಇವನು ಮಲ್ಲಯ್ಯನೆ? ಚಿಃ, ತಾನು ಕಂಡ ಆ ತೇಜೋಮೂರ್ತಿ ಮಲ್ಲಯ್ಯನೆಲ್ಲಿ, ಈ ಶಿಲೆಯ ಮೂರ್ತಿಯೆಲ್ಲಿ? ಈ ಶಿಲೆಯನ್ನು ಕಾಣಲು ನಾನಿಷ್ಟುದೂರ ಬಂದೆನೆ? ಕೊನೆಗೂ ಮಲ್ಲಯ್ಯ ಮೋಸಮಾಡಿದ! ಅವನಿಗೆ ಚೆನ್ನಾಗಿ ಪಾಠ ಕಲಿಸಬೇಕು....!"

ಸಿದ್ಧರಾಮನ ಮುಗ್ಧ ಹೃದಯದಲ್ಲಿ ಇನ್ನೂ ಯಾವ ಯಾವ ಭಾವಗಳು ತೆಕ್ಕನೆ ತೀವಿ ತುಮುಲ ಯುದ್ಧ ಮಾಡಿದುವೋ! ಒಮ್ಮೆಗೆ ಹೊರಗೆ ಹೊರಟನವನು. ಯಾತ್ರಿಕರೆಲ್ಲ ವಿಸ್ಮಿತರಾಗಿ ನೋಡುತ್ತಿರಲು ಕಾಡಿನಲ್ಲೆ ಕಾಣದಾಗಿಬಿಟ್ಟನು! ಮತ್ತೆ 'ಮಲ್ಲಯ್ಯ, ಮಲ್ಲಯ್ಯ' ಎಂಬ ಸೋಲ್ಲು ತರುಮರಗಳ ಸ್ವರದಂತೆ ಕಾಡಿನಲ್ಲೆಲ್ಲ ವ್ಯಾಪಿಸಿ ಕಂದರಗಳಲ್ಲಿ ಪ್ರತಿಧ್ವನಿಸಿತು. ಇಲ್ಲ, ಮಲ್ಲಯ್ಯನಲ್ಲಿಲ್ಲ.

ಸಿದ್ಧರಾಮನ ಉದ್ವೇಗ ವಿದ್ಯುದ್ವೇಗದಿಂದ ಅವನನ್ನು ಎತ್ತಲೋ ಎಳೆದೊಯ್ಯುತ್ತಲಿದ್ದಿತು. ಎಲ್ಲೆಲ್ಲಿಯೋ ಸುತ್ತಾಡಿ ಎಲ್ಲಿಗೋ ಬಂದು ನಿಂತನವನು. ಕೆಳಗೆ ನೋಡಿದ–'ಆ' ಎಂದು ಆಕಳಿಸುವ ಭೈರವನ ಬಾಯಿಯಂತೆ ಕಮರಿಯೊಂದು



**ನಿಮಿಷಾರ್ಧದಲ್ಲಿ ಕಣ್ಮುಚ್ಚಿ ಕಮರಿಯೊಳಗೆ ಹಾರಿಬಿಟ್ಟ ಸಿದ್ಧರಾಮ...**
**ಸಿದ್ಧರಾಮ ಎದ್ದಾಗ ಮಲ್ಲಯ್ಯನ ತೊಡೆಯ ಮೇಲೆ ಮಲಗಿದ್ದ.**

ಕಾಣಿಸಿತು. ತಾನು ನಿಂತಿರುವುದು ಶ್ರೀಶೈಲದ ರುದ್ರಗಮ್ಮರಿಯ ತಲೆಯ ಮೇಲೆ ಎಂಬುದು ಅವನಿಗೆ ತೊತ್ತಾಯಿತೋ ಇಲ್ಲವೋ ಯಾವ ಕಮರಿಯೇ ಆಗಿರಲಿ, ಸತ್ವಪರೀಕ್ಷೆಗಿದೇ ಸ್ಥಳ. ಮತ್ತೇಕೆ ಹೊತ್ತುಗಳೆಯುವುದು? ಸತ್ವ ಪರೀಕ್ಷೆ ನಡೆದುಹೋಗಲಿ! ನಿಮಿಷಾರ್ಧದಲ್ಲಿ ಕಣ್ಮುಚ್ಚಿ ಕಮರಿಯೊಳಗೆ ಹಾರಿಬಿಟ್ಟ ಸಿದ್ಧರಾಮ! ಇನ್ನೇನು ಆರಿಸಿದರೂ ಅವನ ಎಲುವು ಕೂಡ ಸಿಗದಾಗ ಬೇಕು ಆ ರುದ್ರ ಭೀಕರ ಕಮರಿಯಲ್ಲಿ! 'ಅಯ್ಯೋ' ಎಂದು ಹುಯ್ಯಲಿಟ್ಟುವು ನೆಲಗಾಳಿ ಬೆಳಕು ನೀರುಗಳು.

ಸಿದ್ಧರಾಮ ಎದ್ದಾಗ ಮಲ್ಲಯ್ಯನ ತೊಡೆಯಮೇಲೆ ತಾನು ಮಲಗಿರುವುದು ಅವನಿಗೆ ಗೊತ್ತಾಯಿತು! ಪ್ರೀತಿಯಿಂದ ಮೈಸವರುತ್ತಲಿದ್ದಿತು ಮಲ್ಲಯ್ಯನ ವರದ ಹಸ್ತ ! ಸಿದ್ಧರಾಮ ತನ್ನ ಕಣ್ಣುಗಳನ್ನು ತಾನೆ ನಂಬದಾದನು. ಮಲ್ಲಯ್ಯ ಮುಗುಳ್ನಗೆ ನಕ್ಕ. ಆತನ ಮಂದಹಾಸದ ಮಿಂಚಿನಲ್ಲಿ ಸಿದ್ಧರಾಮನ ಸಂಶಯದ ಕತ್ತಲೆ ಕರಗಿಹೋಯಿತು. ಧಿಗ್ಗನೆದ್ದು ಮಲ್ಲಯ್ಯನನ್ನಪ್ಪಿ ಹಾಡಿದ :

"ಎನ್ನ ತನು ಕರಗಿದ ಎನ್ನ ಮನ ಕರಗಿದ ದುಃಖವಿದಾರದಯ್ಯ ?
ಅಯ್ಯ ಅಯ್ಯ, ಅಂದಳುವುದಕ್ಕೆ ಇದಾರದಯ್ಯ ?
ಮನವೆಂಬ ಕೂರಸಿಗೆ ಗುರಿಮಾಡಿದವರಾರಯ್ಯ ?
'ಹಾ' ಎಂಬ ಧ್ವನಿಯ ಕೇಳಲಾರದೆ ಕಂಡು
ಕರುಣದಿಂದ ಶಿರವ ಹಿಡಿದೆತ್ತಿ, ಎನ್ನ
ಕಣ್ಣನೀರು ತೊಡೆದನು ಕಪಿಲಸಿದ್ಧ ಮಲ್ಲಿನಾಥಯ್ಯ!"

ಎಷ್ಟು ಹೊತ್ತು ಹಾಗೆಯೇ ನೀರವ ವಾತ್ಸಲ್ಯದ ನಿರ್ಮಲ ರಸದಲ್ಲಿ ಮುಳು ಮುಳುಗೆ ಏಳುತ್ತಲಿದ್ದನೋ ಸಿದ್ಧರಾಮಯ್ಯ, ಬಿನ್ನಹಕೆ ಬಾಯಿಲ್ಲದ ಭಕ್ತಿರಸದಲ್ಲಿ ಓಲಾಡಿ ಲೋಲಾಡುತ್ತಲಿದ್ದನೋ ಮಲ್ಲಯ್ಯ !

ಪರವಶತೆ ಸಡಲಿ ಎಚ್ಚರಮೂಡಿದ ಮೇಲೆ ಮಲ್ಲಯ್ಯನೆಂದು–"ಇನ್ನು ನೀನು ಮನೆಗೆ ಮರಳಬೇಕು ಮಗು!"

ಸಿಡಿದೆದ್ದ ಸಿದ್ಧರಾಮಯ್ಯ ! "ಮತ್ತೆ ನಿನ್ನ ಠಕ್ಕತನವನ್ನು ತೋರದಿರು. ನಿನ್ನನ್ನುಳಿದು ನಾನೆಲ್ಲಿಗೂ ಹೋಗೆ! ಈ ಸಲ ನೀನೆನ್ನ ತಪ್ಪಿಸಿಕೊಳ್ಳಲಾರೆ!"

"ಹಾಗೆನ್ನದಿರು, ನಿನ್ನ ತಂದೆತಾಯಿ ನಿನ್ನನ್ನು ಕಾಣದೆ ಮಮ್ಮಲ ಮರುಗುತ್ತಲಿರುವರು. ನೀನು ಹೋಗಿ ನಿನ್ನ ತಂದೆತಾಯಿಗಳು ದುಃಖವನ್ನು ದೂರ ಮಾಡಬೇಕು?"

"ತಂದೆ ತಾಯಿಗಳು ! ನನಗೆ ಬೇರಾವ ತಂದೆತಾಯಿಗಳಿದ್ದಾರೆ? ನೀನೇ ನನ್ನ ತಂದೆ ತಾಯಿ, ಬಂಧು, ಬಳಗ ಎಲ್ಲ!"

"ನಿನ್ನ ನಿಷ್ಠೆಗೆ ಮೆಚ್ಚಿದೆ ಸಿದ್ಧರಾಮಯ್ಯ. ಆದರೆ ಈ ಕಾಡಿನಲ್ಲಿ ನನ್ನೊಡನೆ ಕಲ್ಲುಮರದಂತೆ ಬಾಳಲು ನಾನು ನಿನ್ನನ್ನು ಹುಟ್ಟಿಸಿಲ್ಲ. ನಿನ್ನಿಂದ ಲೋಕೋಪಕಾರವಾಗಬೇಕಾಗಿದೆ ; ದುಃಖಿತರ ದುಃಖನಿವಾರಣೆಯಾಗಬೇಕಾಗಿದೆ. ನೀನು ಸೊನ್ನಲಾಪುರಕ್ಕೆ ಹೋಗಿ ಅದನ್ನೇ ಅಭಿನವ ಶ್ರೀಶೈಲವನ್ನಾಗಿಮಾಡು."

"ನೀವಿಲ್ಲದೆ ಸೊನ್ನಲಾಪುರ ಶ್ರೀಶೈಲವಾಗುವುದು ಹೇಗೆ ತಂದೆ? ನೀವು ನನ್ನೊಡನೆ ಬಂದರೆ ಮಾತ್ರ ನಾನು ಹಿಂದಿರುಗಿ ಹೋಗುವೆನು."

"ನಾನೂ ಬರುವೆ–ಆದರೆ ಈ ರೂಪದಲ್ಲಲ್ಲ."

"ಯಾವ ರೂಪದಲ್ಲಿ ಬರುವಿರಿ ತಂದೆ."

"ಬಿರುಗಾಳಿ ಬೀಸಲು ಮಂದಾರ ಮರದಡಿಯಲ್ಲಿ ಲಿಂಗವಾಗಿ ಗೋಚರಿಸುವೆನು!"

"ಸತ್ಯವೆ?"

"ಸತ್ಯವಾಗಿ ಸಿದ್ಧರಾಮ–ಸಂಶಯಪಡದೆ ಸೊನ್ನಾಲಾಪುರಕ್ಕೆ ಹೋಗು, ನಿನ್ನಿಂದ ಅನೇಕರ ಉದ್ಧಾರವಾಗುವುದು. ಶುಭವಾಗಲಿ ನಿನಗೆ!"

ಸೊನ್ನಲಾಪುರದಲ್ಲಿ ಬೆಗಿನ ಜಾವದಲ್ಲಿ ಮನೆಮನೆಗೆ ಮಂಗಳೆಯರು ಬೀಸುತ್ತಲೋ. ಹಾಲು ಕರೆಯುತ್ತಲೋ, ಮೊಸರು ಕಡೆಯುತ್ತಲೋ ಹಾಡುತ್ತಲಿದ್ದಾರೆ;

"ಹಾದಿ ಹಾದಿಗೆ ಗುಡಿಯ ಬೀದಿ ಬೀದಿಗೆ ಕೆರೆಯ
ಸಾಧಿಸಿದ ಕಟ್ಟಿ ಸಿದ್ಧರಾಮ–ಸೊನ್ನಲಿಗೆ
ಸಾಧು ಸಿದ್ಧನಿಗೆ ಮನೆಯಾಯ್ತು!"

ಹೌದು, ಸಿದ್ಧರಾಮ ಕರ್ಮಯೋಗಿಯಾಗಿದ್ದ. ಅವನ ಕ್ರತುಶಕ್ತಿ ಒಂದು ಕೌತುಕವೆನಿಸಿದ್ದಿತು. ಸೊನ್ನಲಾಪುರದ ಮತ್ತು ಸುತ್ತಮುತ್ತಲಿನ ಗ್ರಾಮಗಳ ನಿವಾಸಿಗಳಿಗೆ, 'ಬಂಗಾರ ಗುದ್ದಲಿಯೆ ಬಾ ನನ್ನ ಹೆಗಲಿಗೆ' ಎಂದು ಯೋಗದಂಡವನ್ನು ಬಿಸುಟು, ಹಾರೆ ಗುದ್ದಲಿಗಳನ್ನು ಹಿಡಿದರು ಸಿದ್ಧರಾಮ ಯೋಗಿಗಳು. ಅವರ ಎರಡು ಕೈಗಳಿಗೆ ಸಾವಿರ ಕೈಗಳು ನೆರವಾದುವು. ಅವರು ಗುದ್ದಲಿ ಎತ್ತಲು ನೂರಾರು ಗುದ್ದಲಿಗಳು ಮೇಲೆದ್ದುವು, ಕ್ಷಾಮದಿಂದ ಕಂಗೆಟ್ಟ ಶಿಷ್ಯ ಸಮೂಹ ಶ್ರಮದಾನವನ್ನಿತ್ತು. ಮಲ್ಲಿಕಾರ್ಜುನನ ಮಂದಿರವನ್ನು ಕಟ್ಟಿ ನಿಲ್ಲಿಸಿತು. ಪಶು, ಪಕ್ಷಿ,

ಕ್ರಿಮಿಕೀಟಾದಿ ಸಕಲ ಜೀವರಾಶಿಗಳ ಬಾಯಾರಿಕೆಯನ್ನು ಕಳೆವ ಕೆರೆಯೊಂದನ್ನು ಕಟ್ಟಿ ಮುಗಿಸಿತು. ಆ ಮಂದಿರ ಪುಣ್ಯಕ್ಷೇತ್ರವಾಯಿತು; ಆಕೆರೆ ಪಾವನ ತೀರ್ಥವಾಯಿತು. ಸೊನ್ನಲಾಪುರದ ಸದ್ಭಕ್ತರ ಸಂತೋಷ ನೆರೆಬಂದ ತೊರೆಯಂತೆ ತುಂಬಿ ಹೊರಸೂಸಿ ಹರಿಯಿತು.

ಈ ಎಲ್ಲ ಕಾರ್ಯಗಳಲ್ಲಿ ಸಾಮ್ಯಯೋಗಿ ಸಿದ್ಧರಾಮಯ್ಯನಿಗೆ ಬಲಭುಜವಾಗಿ ನಿಂತಿದ್ದನೊಬ್ಬ. ಅವನ ಹೆಸರು ಹಾವಿನ ಹಾಳ ಕಲ್ಲಯ್ಯ. ಹುಟ್ಟಿದುದು ವಿಜಾಪುರದ ವಾಯವ್ಯ ದಿಕ್ಕಿಗೆ ೩೫ ಮೈಲಿಗಳ ಮೇಲಿರುವ ಹಾವಿನ ಹಾಳಿನಲ್ಲಿ ಶಿವನಯ್ಯ–ಸೋಮವ್ವೆಯರಿಗೆ ಮಗನಾಗಿ. ಅಕ್ಕಸಾಲೆಯ ಕಾಯಕವನ್ನು ಮಾಡುತ್ತಿದ್ದ ಶಿವನಯ್ಯ ಗ್ರಾಮದೇವತೆ ಕಲ್ಲಿನಾಥನ ಕೃಪೆಯಿಂದ ಕಲ್ಲಯ್ಯನನ್ನು ಕಂದನನ್ನಾಗಿ ಪಡೆದಿದ್ದ. ಆದರೆ ಕಲ್ಲಿನಾಥನ ಪೂಜೆಯೇ ಕಲ್ಲಯ್ಯನ ಕಾಯಕವಾಗಿ ಬಿಟ್ಟಿತು. ಯಾವಾಗಲೂ,

"ಒಳಗೆ ಶೋಧಿಸಿ, ಹೊರಗೆ ಅಳವಡಿಸಿ
ಭಾವದಿಂದ ಗುಡಿ ತೋರಣ ಕಟ್ಟುವೆನಯ್ಯ!
ಎನ್ನಲಿಂಗವೇ ಬಾರಯ್ಯ!
ಎನ್ನಂತರಂಗದ ಪರಂಜ್ಯೋತಿರ್ಲಿಂಗವ ನಿದಿರುಗೊಂಬೆನು,
ಬಾರಯ್ಯ ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಧರ್ಮ!"

ಎಂದು ಕರೆಯುತ್ತ, ಮೊರೆಯಿಡಿತ್ತಲಿದ್ದನು. ಅವನ ಹುಯ್ಯಲನ್ನು ಕೇಳಿಯೋ ಎಂಬಂತೆ ರೇವಣ ಸಿದ್ಧೇಶ್ವರರು ಹಾವಿನ ಹಾಳಿಗೆ ಆಗಮಿಸಿದರು. ಅವರ ತನುಜ ರುದ್ರಮುನಿ ದೇವರಿಂದ ದೀಕ್ಷೆ ಪಡೆದು ಧನ್ಯನಾದ ಕಲ್ಲಯ್ಯ.

"ಗುರು ಕರುಣ, ಚರಣಸೇವೆ ಭವದ ಬಳ್ಳಿಯ
ಬೀಜವನತಿಗಳೆದಿತ್ತು. ಘನಘನ ಪಥವ ತೋರಿತ್ತು ನೋಡಾ!
ಉದಯಿಸಿತ್ತು ನಿರಾಕುಲ ನಿರಹಂಕರಣ ಮಹಾಲಿಂಗ ಕಲ್ಲೇಶ್ವರಾ"

ಎಂದು ಹಿಗ್ಗಿ ಹಾಡಿದನವನು. ಅವನ ಭವದ ಬಳ್ಳಿ ಬಾಡಿದುದು. ಬಾಡದೇನು? "ಶರಣನ ಮನದಲ್ಲಿ ಸಂಚಲಿತವಿಲ್ಲದೆ ಲಿಂಗವನಿಂಬುಗೊಂಡ ಶರಣಂಗೆ ಬೆದರಿ ಓಡವೇ ಕರ್ಮಂಗಳು? ಉರಿದು ಹೋಗವೇ ಭವಂಗಳು? ಕರ್ಪೂರ ಉರಿಯ ಸೋಂಕಿದಂತೆ ಗುರುಪಾದವ ಸೋಂಕಿ ಜ್ಞಾನವಾದ ಬಳಿಕ ಜಡವಿಹುದೇ ಒಡಲೊಳು, ಮಹಾಲಿಂಗ ಕಲ್ಲೇಶ್ವರಾ?"

ಒಮ್ಮೆ ಕಲ್ಲಿನಾಥನನ್ನು ಪೂಜಿಸುತ್ತಲಿದ್ದಾಗ ಕಲ್ಲಯ್ಯನಿಗೆ ಹಾವು ಕಚ್ಚಿತಂತೆ ಕಚ್ಚಿ ತಾನೇ ಸತ್ತುಬಿದ್ದಿತಂತೆ. ತನ್ನನ್ನು ಕಚ್ಚಿದ ಹಾವನ್ನೇ ಬದುಕಿಸಬೇಕೆಂದು ಹಟಹಿಡಿದನೆಂತೆ

ಕಲ್ಲಯ್ಯ. ಕಲ್ಲಿನಾಥನದನ್ನು ಬದುಕಿಸಿದನಂತೆ ಮುಂದೆ 'ಭೂತಂಗಳೊಳು ಅನುಕಂಪೆ ತಾನೆ ಪರಬ್ರಹ್ಮ' ಎಂಬ ನಂಬಿಕೆಯೇ ರೂಪಾದಂತಿದ್ದ ಸಿದ್ಧರಾಮನ ಶಿಷ್ಯನಾಗಲಿದ್ದ ಕಲ್ಲಯ್ಯನಲ್ಲಿ ಇಂಥ ಭೂತದಯೆ ಇದ್ದುದೇನಾಶ್ಚರ್ಯ?

ಶಿವನಯ್ಯ ಮಗನ ಮನದ ಸ್ಥಿತಿಯನ್ನು ನೋಡಿ ಕಳವಳಕ್ಕೀಡಾದನು. ಹೀಗೆಯೇ ಬಿಟ್ಟರೆ ಇವನು ಸನ್ಯಾಸಿಯಾಗಿಬಿಡಬಹುದೆಂಬ ಚೆನ್ನೆಯೊಬ್ಬಳನ್ನು ಕನ್ನೆಯಾಗಿ ಗೊತ್ತುಮಾಡಿ ಮದುವೆಯ ಸಿದ್ಧತೆಯನ್ನು ನಡೆಸಿದನು. ಮದುವೆಯ ಹಸಿರು ಹಂದರ ಸುಂದರವಾಗಿ ಸಿದ್ಧವಾಯಿತು. ಮಂಗಲವಾದ್ಯಗಳ ಮನೋಹರ ಸ್ವರ ತೆರೆತೆರೆಯಾಗಿ ಹರಿಯತೊಡಗಿತು. ಹೆಣ್ಣು ಗಂಡುಗಳು ಬಣ್ಣಬಣ್ಣದ ಉಡಿಗೆ ತೊಡಿಗೆಗಳಿಂದೆ ಅಲಂಕೃತರಾಗಿ ಓಡಾಡುತ್ತಲಿದ್ದಾರೆ. ಮದುಮಗಳ ಪೋಡಶ ಶೃಂಗಾರ ನಡೆದಿದೆ. ಅವಳು ಮನಸ್ಸಿನಲ್ಲಿಯೇ ಮುಂದಿನ ವೈವಾಹಿಕ ಜೀವನದ ಚಿತ್ರಮಾಲೆಯನ್ನು ಬರೆಯುತ್ತಲಿದ್ದಾಳೆ. ಇನ್ನೇನು ಮದುವೆಯ ಮುಹೂರ್ತ ಸಮೀಪಿಸಿತು. ಮದುಮಗನೆಲ್ಲಿ? ಎಲ್ಲಿ? ಎ......ಲ್ಲಿ?!

ಅಲ್ಲಿರಲಿಲ್ಲ ಕಲ್ಲಯ್ಯ, ಮದಮಗನಾಗಬೇಕಾಗಿದ್ದ ಕಲ್ಲಯ್ಯ ಯಾರೂ ಅರಿಯದಂತೆ ಸೊನ್ನಲಿಗೆಯತ್ತ ಸಾಗಿದ್ದ :

"ಎನಗೆ ತಂದೆತಾಯಿ ಬಂಧು ಬಳಗ ಸಿದ್ಧರಾಮನೆ,
ಎನಗೆ ಗತಿಯು ಮತಿಯು ಹಿತವು ಎಲ್ಲ ಸಿದ್ಧರಾಮನೆ"

ಎನ್ನುತ್ತ ಸಿದ್ಧರಾಮನ ಸನ್ನಿಧಿಯನ್ನು ಸೇರಲು ಹೊರಟ್ಟಿದ್ದನು.

ಸಿದ್ಧರಾಮನನ್ನು ಆರಾಧ್ಯನನ್ನಾಗಿ ಸ್ವೀಕರಿಸಿ ಕಲ್ಲಯ್ಯನೂ ಕರ್ಮಯೋಗಿಯಾದನು. ಸಿದ್ಧರಾಮನ ದೇವಾಲಯ ನಿರ್ಮಾಣ, ಜಲಾಶಯ ನಿರ್ಮಾಣ, ಬಡವರ ಮದುವೆ ಮಾಡುವುದು, ದಾಸೋಹಾದಿ ಕಾರ್ಯಗಳಿಗೆ ಕೇಂದ್ರ ಶಕ್ತಿಯಾದನು. ಸಿದ್ಧರಾಮನನ್ನು ಸೇವಿಸಿ ತಾನೂ ಸಿದ್ಧನಾದನು. ಶ್ವಾನನಿಂದ ವೇದನ್ನೋದಿಸಿ ಪವಾಡವನ್ನೂ ಮೆರೆದನಂತೆ. ಸಿದ್ಧರಾಮನ ಕೆಳಗಣ ವಚನ ಇದಕ್ಕೆ ಸಾಕ್ಷಿ.

ಓದಿದ ಫಲ ಕೊಚಭಟ್ಟನಂತಾಗಬಾರದು ;
"ಓದಿದ ಫಲ ಪಾರಾಶರನಂತಾಗಬಾರದು ;
ಓದಿದ ಫಲ ಮಯೂರನಂತಾಗಬಾರದು ;
ಓದಿದ ಫಲ ನಮ್ಮ ಹಾವಿನ ಹಾಳ ಕಲ್ಲಯ್ಯನ
ಮನೆಯ ಶ್ವಾನನಂತಾಗಬೇಕು ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನ ॥"

(ವ.ಶಾ.ಸಾ. ಭಾಗ ೩ ಪುಟ ೫೪)

ಹಾವಿನ ಹಾಳ ಕಲ್ಲಯ್ಯ ವಚನಕಾರರನೂ ಅಹುದು. ಬಹಳ ಭಾವಗರ್ಭಿತವಾದ ವಚನಗಳನ್ನು ಬರೆದಿದ್ದಾನೆ. "ಭಾವದ ಸುಖ ಭವಗೆಡಿಸಿತ್ತು' ಎಂದು ಸಾರಿದ ಅವನು ಭಾವ ನಿರ್ಭರದ ವಚನಗಳನ್ನು ಬರೆದುದು ಅರಿದಲ್ಲ.

"ಒಲಿದು ಒಲಿಸಿಕೊಳ್ಳಬೇಕು; ಒಲಿದಲ್ಲದೆ ಇಲ್ಲ.
ಹಲವು ಕೊಂಬೆಗೆ ಹಾರದಿರು ಮರುಳೆ !
ಅಟ್ಟಿನೋಡುವ, ಮುಟ್ಟಿನೊಡುವ, ತಟ್ಟಿನೋಡುವ, ಒತ್ತಿ ನೋಡುವ–
ಒತ್ತಿದೊಡೆ ನಿಷ್ಠೆಯ ಬಿಡದಿರ್ದಡೆ ತನ್ನನೀವ–ಮಹಾಲಿಂಗೇಶ್ವರಾ !"

"ಅರಿವೇ ಗುರು, ಆಚಾರವೇ ಶಿಷ್ಯ , ಜ್ಞಾನವೇ ಲಿಂಗ,
ಪರಿಣಾಮವೇ ತಪ, ಸಮತೆ ಎಂಬುದೇ ಯೋಗ ನೋಡಾ !
ಈಸುವ ನರಿಯದೆ ಲೋಚು ಬೋಳಾದರೇನು?
ಮಹಾಲಿಂಗ ಕಲ್ಲೇಶ್ವರ ದೇವರು ನಗುವರು"

"ಅತ್ಯಾಸೆ ಎಂಬುದೇ ಪಾಪ; ಬೇರೆ ಪಾಪವಿಲ್ಲ ಕಂಡಿರೇ !
ಪರಿಣಾಮವೆಂಬುದೇ ಪರಮಾನಂದ, ಬೇರೆ ಪರಮಾನಂದವಿಲ್ಲ ಕಂಡಿರೇ!
ಇಹಪರದಾಸೆ ಇಲ್ಲದಿಹುದೇ ಶಿವಯೋಗ–
ಬೇರೆ ಶಿವಯೋಗವಿಲ್ಲ ಕಂಡಿರೇ ಅಯ್ಯಾ, ಮಹಾಲಿಂಗ ಕಲ್ಲೇಶ್ವರ ಬಲ್ಲ !"

"ಅರ್ಥವೆಂಬುದೇ ಪಾಪ ; ಬೇರೆ ಪಾಪವಿಲ್ಲ ಕಂಡಯ್ಯ !
ಪರಿಣಾಮವೆಂಬುದೇ ಪುಣ್ಯ ; ಬೇರೆ ಪುಣ್ಯವಿಲ್ಲ ಕಂಡಯ್ಯ !
ಪಾಪಪುಣ್ಯವನತೆಗಳೆದ ಉಳುಮೆ ಶಿವಯೋಗ–
ಮಹಾಲಿಂಗ ಕಲ್ಲೇಶ್ವರನು ಬಲ್ಲ !"

ಮುತ್ತಿನಂತನಹ ಮಾತುಗಳಿವು. 'ಬಲ್ಲಿದ ನಡೆದುದೇ ಬಟ್ಟೆ' ಎಂದು ಸೊಲ್ಲಿಸಿರುವ ಕಲ್ಲಯ್ಯನ ಮಾತಿಗೆ ಅವನ ವಚನಗಳೇ ಉದಾಹರಣೆಯಾಗಿ ನಿಂತಿವೆ. ಸಮತೆಯ ಗಾರುಡಿಗನಾದ ಸಿದ್ಧರಾಮನ ಶಿಷ್ಯ ಕಲ್ಲಯ್ಯನು. 'ಸಮತೆಯೆಂಬುದೇ ಯೋಗನೋಡಾ ! ಸಮತೆ ಸಮಾಧಾನ ನೆಲೆಗೊಳ್ಳದಿದ್ದರೆ ಆ ಯೋಗ ಅಜ್ಞಾನದಾಗು! ಸಹಸ್ರ ಋಷಿಗಳು ಸಮತೆ ಸಮಾಧಾನ ನೆಲೆಗೊಳ್ಳದೇ ನಾನಾ ಯೋನಿಯಲ್ಲಿ ಬಂದರು. ಮಹಾಲಿಂಗ ಕಲ್ಲೇಶ್ವರ ದೇವಾ, ಸಮತೆ ನೆಲೆಗೊಂದು ಸಮಾಧಾನ ಸಹಜವಾದುದೇ ಮುಕ್ತಿಕ್ಷೇತ್ರ !' ಎಂದು ಸಾರಿಸಾರಿ ಹೇಳಿರುವುದು ಸ್ವಾಭಾವಿಕವಾದುದೇ. ಕೆಳಗಣ ವಚನವಂತೂ ಅವನ ಅನುಭಾವ ಶ್ರೀಗಿರಿಯ ಶಿಖರದಂತಿದೆ :

"ತಾನಿಲ್ಲದ ಮುನ್ನವೇ ಗುರುವೆಲ್ಲಿಯದೋ,
ಲಿಂಗವೆಲ್ಲಿಯದೋ, ಜಂಗಮವೆಲ್ಲಿಯದೋ,
ಪ್ರಸಾದವೆಲ್ಲಿಯದೋ, ಪರವೆಲ್ಲಿಯದೋ, ಸ್ವಯವೆಲ್ಲಿಯದೋ?
ತನಗೆ ತೋರಿದ ಗುರು, ತನಗೆ ತೋರಿದ ಲಿಂಗ,
ತನಗೆ ತೋರಿದ ಜಂಗಮ, ತನಗೆ ತೋರಿದ ಪ್ರಸಾದ
ತನಗೆ ತೋರಿದ ಪರ, ತನಗೆ ತೋರಿದ ಸ್ವಯ !
ಗುರುವೆಂದರಿದವನು ತಾನೇ, ಲಿಂಗವೆಂದರಿದವನು ತಾನೇ.
ಜಂಗಮವೆಂದರಿದವನು ತಾನೇ, ಪ್ರಸಾದವೆಂದರಿದವನು ತಾನೇ,
ಪರವೆಂದರಿದವನು ತಾನೇ, ಸ್ವಯವೆಂದರಿದವನು ತಾನೇ !
ಇಂತೆಲ್ಲವ ಹೆತ್ತರಿವು ತಾನೇ ಸ್ವಯಂಜ್ಯೋತಿ ಮಹಾಲಿಂಗ ಕಲ್ಲೇಶ್ವರಾ !"

ಮದುವೆಯನ್ನು ನಿರಾಕರಿಸಿ ಮನೆ ಬಿಟ್ಟು ಬಂದು ಮಹೋನ್ನತಿಗೆ ಸಂದ ಕಲ್ಲಯ್ಯನೂ ಹೆಣ್ಣಿನ ಮೋಹದ ಬಲೆಯಲ್ಲಿ ಬೀಳದೆ ಉಳಿಯಲಿಲ್ಲವೆಂದು ಹೇಳುತ್ತಾರೆ. ಸಿದ್ಧರಾಮನ ಆಶ್ರಮಕ್ಕೆ ಸೋರ್ಮ್ಮಡಿಯ ಸದ್ಭಕ್ತೆಯೊಬ್ಬಳು ಬಂದಳೆಂದೂ ಕಲ್ಲಯ್ಯನವಳ ನಲ್ಲನಾಗಿ ನಲ್ ಬಾಳು ಬಾಳಿ 'ಕಲ್ಲವ್ವೆ' ಎಂಬ ಮಗಳನ್ನು ಪಡೆದನೆಂದೂ ಹೇಳಲಾಗಿದೆ. ರಾಘವಾಂಕನ 'ಸಿದ್ಧರಾಮ ಚಾರಿತ್ರ'ದಲ್ಲಿ 'ಕಾಂತೆಯೊಬ್ಬಳು ಜಂಗಮನ ಕೂಡಿಕೊಂಡು ಹಾಡುತ್ತಮಿರೆ ಗುರು ಮೆಚ್ಚುತ್ತ ಸಂತತಂ ದಾನವಿತ್ತವರ ಸಲಹಲ್ಕೆ' ಎಂದು ಸೂಚ್ಯವಾಗಿ ಉಲ್ಲಿಖಿತವಾಗಿರುವ ಈ ಸಂಗತಿ ಕಲ್ಲಯ್ಯನನ್ನು ಕುರಿತುದಲ್ಲ, ಬೇರೊಬ್ಬ ಜಂಗಮನನ್ನು ಕುರಿತುದು ಎಂದೂ ಊಹಿಸಲಾಗಿದೆ. ಅದೇನೇ ಇರಲಿ, ಆ ಪ್ರಸಂಗದಲ್ಲಿ ಶುದ್ಧ ಸಾತ್ವಿಕಯೋಗಿ ಸಿದ್ಧರಾಮನು ತೋರಿದ ಸಮತೆ ಅಸಾಮಾನ್ಯವಾದುದು. ತಾನು ಸರ್ವಸಂಗಪರಿತ್ಯಾಗಿಯಾಗಿ, ಯೋಗಿಯಾಗಿದ್ದರೂ ಹೆಣ್ಣಿನ ಬಗ್ಗೆ ಹೇಯ ಭಾವನೆ ಇರಲಿಲ್ಲ ಸಿದ್ಧರಾಮೇಶ್ವರರಿಗೆ. ಹೆಣ್ಣಿನ ಬಗ್ಗೆ ಅವರಿಗೆ ಅದೆಂಥ ಗೌರವ !

"ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು ;
ತಾ ಮಾಡಿದ ಹೆಣ್ಣು ತೊಡೆಯನೇರಿತ್ತು ;
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು ;
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು !
ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ–
ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧಮಲ್ಲಿಕಾರ್ಜುನ ನೋಡಾ !"

ಹೌದು, ಆ ಪರಮಪುರಷನಲ್ಲಿ ಅವಿನಾಭಾವದಿಂದ ಬೆರೆತು ಬೇರಿಲ್ಲದಿಪ್ಪ ಶಕ್ತಿಯೇ ಸ್ತ್ರೀ. ಆದುದರಿಂದ ಈಶ್ವರೀ ಶಕ್ತಿಯೇ ಸ್ತ್ರೀ. ಅವಳ ಅವಹೇಳನ ಮಲ್ಲಿಕಾರ್ಜುನನ ಅವಹೇಳನ. ಅವಳ ಮನ್ನಣೆ ಮಲ್ಲಿಕಾರ್ಜುನನ ಮನ್ನಣೆ.

ಅದುದರಿಂದ ಯಾರಾದರೂ ಮದುವೆಯಾಗಲು ಇಚ್ಚಿಸಿದರೆ ಅದು ಸ್ಪೃಹಣೀಯವೇ, ಗರ್ಹಣೀಯವಲ್ಲ, ತಮಗೇನೋ ಸಂಸಾರ ಬೇಡವೆನ್ನಿಸಿತು. ಕಲ್ಲಯ್ಯನಿಗೂ ಮೊದಲು ವೇಡವೆನಿಸಿತ್ತು. ಈಗ ಬೇಕೆನಿಸಿದೆ. ಮೊದಲು ಬೇಡವೆನಿಸಿದುದೂ ತಪ್ಪಲ್ಲ ; ಈಗ ಬೇಕೆನಿಸಿದುದೂ ತಪ್ಪಲ್ಲ ; ಈಗ ಬೇಕೆನಿನಿದುದೂ ತಪ್ಪಲ್ಲ ಕಾರಣ :

"ಭಕ್ತನ ಮನ ಹೆಣ್ಣಿನೊಳಗಾದರೆ ವಿವಾಹವಾಗಿ ಕೂಡುವುದು ;
ಭಕ್ತನ ಮನ ಮಣ್ಣಿನೊಳಗಾದರೆ ಕೊಂಡು ಆಲಯವ ಮಾಡುವುದು ;
ಭಕ್ತನ ಮನ ಹೊನ್ನಿನೊಳಗಾದರೆ ಬಳಲಿ ದೊರಕಿಸುವುದು ನೋಡಾ,
ಕಪಿಲಸಿದ್ಧಮಲ್ಲಿಕಾರ್ಜುನ !"

'ಹೆಣ್ಣು, ಮಣ್ಣು, ಹೊನ್ನು ಮಾಯೆ' ಎಂಬ ಭ್ರಮೆಯ ತಿರುಗಣಿಯಲ್ಲಿ ಸಿಕ್ಕಿ ತಿರ್ರನೆ ತಿರುಗುತ್ತಲಿದ್ದ ಜೀವಿಗಳಿಗೆ 'ಹೆಣ್ಣು ಹೊನ್ನು ಮಣ್ಣುಗಳನ್ನು ಹಳಿಯದಿರು; ನಿನ್ನ ಮನ ಅವುಗಳಿಗೆ ಒಳಗಾದರೆ ಬಳಲಿಯಾದರೂ ದೊರಕಿಸಿ ಸುಖಿಯಾಗು" ಎಂಬ ಸಂದೇಶವನ್ನಿತ್ತ ಸಿದ್ಧರಾಮ ಶಿವಯೋಗದಷ್ಟೇ ಸಂಸಾರ ಯೋಗವೂ ಸದ್ಗತಿಗೆ ಸಾಧಕವೆಂದು ಸಾರಿದ ಧೀರನಾಗಿದ್ದಾನೆ. ಮುಂದೆ ಸಿದ್ಧರಾಮನ ಸನ್ಮಾರ್ಗದರ್ಶಕರಾದ ಅಲ್ಲಮಪ್ರಭುಗಳು ಸಿದ್ಧರಾಮನ ಸಂದೇಶಕ್ಕೆ ಅಧ್ಯಾತ್ಮಿಕ ತಳಹದಿಯನ್ನು ಹಾಕಿ ಅದಕ್ಕೆ ಶಾಶ್ವತ ಸತ್ಯದ ಸ್ವರೂಪವನ್ನು ಕೊಟ್ಟರು.

ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ ;
ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ ;
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೆ ಮಾಯೆ ಕಾಣಾ, ಗುಹೇಶ್ವರಾ !"

ಈ ಮನದ ಮುಂದಣ ಆಸೆ ಮಾಯೆಯಾಗಿ ಕಾಡುವುದಲ್ಲದೆ ಹೆಣ್ಣು ಕಾಡುವುದೆ? ಹೊನ್ನು ಕಾಡುವುದೆ? ಮಣ್ಣು ಕಾಡುವುದೆ? ಅವು ತಾವಿರುವಂತೆ ಇರುತ್ತವೆ. ಬಯಸಿ, ಭ್ರಮಿಸಿ ಕಳವಳಕ್ಕೊಳಗಾಗುವುದು ಮನ. ಇದು ನಿತ್ಯ ಸತ್ಯ.

ಸಿದ್ಧರಾಮೇಶ್ವರರು ಮಡಿದ ಮಗನಿಗಾಗಿ ಶೋಕಿಸುತ್ತ ಬಂದ ತಾಯಿಯೊಬ್ಬಳಿಗೆ ತಿಳಿಹೇಳಿದುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಗಂಡ ತೀರಿಹೋದ ಒಂದು

ವಾರದೊಳಗಾಗಿಯೇ ಮಗ ತೀರಿಹೋಗಿದ್ದ. ಆಕೆಯ ಸ್ಥಿತಿ ಅದೆಷ್ಟು ಕರುಣಾಜನಕವಾಗಿರಬೇಡ? ಕಂಬನಿಯ ಕೋಡಿ ಹರಿಸುತ್ತ ಬಂದಳಾಕೆ–ಅಳಲು ಕರುಣೆಗೆ ಬರೆದ ಜೀವಂತ ಪತ್ರದಂತೆ ಬಂದಳಾಕೆ ! 'ನನ್ನ ಮಗನನ್ನು ಬದುಕಿಸಿಕೊಡಿ' ಎಂದು ಸಿದ್ಧರಾಮನ ಚರಣಗಳಲ್ಲಿ ಮೈಯಿಕ್ಕಿದಳಾಕೆ. ಬೆಂಕಿ ಹತ್ತಿರ ಮನೆಯೊಂದರಲ್ಲಿ ತಾಯಿ ಸುಟ್ಟು ಹೋಗಿರಲು ತಬ್ಬಲಿಯಾಗಿದ್ದ ಬೆಕ್ಕಿನ ಮರಿಯ ಮೇಲೆ ಮರುಕ ಹುಟ್ಟಿ ಅದನ್ನು ಮಠದಲ್ಲಿ ಸಾಕಿ ಸಲಹಿದ್ದ ಸಿದ್ಧರಾಮಯ್ಯ, ಶ್ವಾನವೊಂದನ್ನು ಸಂಪ್ರೀತಿಯಿಂದ ಸಾಕಿದ್ದ ಸದ್ಧರಾಮಯ್ಯ ತನ್ನ ಮಗನನ್ನು ಮಗನನ್ನು ಬದುಕಿಸಿ ಕೊಡರೆ? ಎಂದು ನಂಬಿ ಬಂದಿದ್ದಳಾ ಭಕ್ತೆ.

ಆದರೆ ಸಿದ್ಧರಾಮಯ್ಯನವರು ಆ ತಾಯಿಯನ್ನು ಸಂತೈಸಿದ ಪರಿ ಧರ್ಮದಾನಿ ಬುದ್ಧನು ಕಿಸಾಗೌತಮಿಯನ್ನು ಸಂತೈಸಿದ ರೀತಿಯನ್ನು ನೆನಪಿಗೆ ತರುವಂತಹುದು. "ಮಡಿದ ಗಂಡನಿಗಾಗಿ, ಮಡಿದ ಮಗನಿಗಾಗಿ ಶೋಕಿಸುವೆ. ಏಕೆ? ಇನ್ನೂ ನಿನ್ನ ಮನದ ಮುಂದಣ ಆಸೆ ತೀರಿಲ್ಲ. ಅದು ತೀರುವುದೆಂದಿಗೆ? ಸಾವಿರ ವರ್ಷ ಆಯುಷ್ಯ ಕೊಟ್ಟರೂ ತೀರುವುದಿಲ್ಲ ಅದು. ಅದಕ್ಕಿ ಒಳಗಾಗಿ ದುಃಖಕ್ಕೀಡಾಗುವುದುದ ಹೆಡ್ಡತನ. ಅದು ಮಾಯೆಯ ಕೈಗೊಂಬೆಯಾಗಿ ಕುಣಿಯುವ ಹೇಡಿತನ. ಮನದ ಮುಂದಣ ಆಸೆ ಮುಗಿಯಬೇಕು–ನೂರು ವರ್ಷಕ್ಕಾಗಲಿ, ಐದು ವರ್ಷಕ್ಕಾಗಲಿ. ತಡವಾಗಿ ಮುಗಿಯಬೇಕಾದುದು ಬೇಗ ಮುಗಿದರೆ ದುಗುಡವೇತಕ್ಕೆ?" ಆ ಭಕ್ತೆ ಸದ್ಯೋನ್ಮುಕ್ತೆಯಾಗಿ ಹಿಂದಿರುಗಿದಳು.

ಹೀಗೆ ಸಕಲ ಜೀವಾತ್ಮರಿಗೆ ಬಂಧುವಾಗಿ, ಕೃಪಾಸಿಂಧುವಾಗಿ, ಅವರ ಆನಂದ ಸಿಂಧುವಿಗೆ ಪೂರ್ಣೇಂದುವಾಗಿ, ದುಃಖಿತರ ದುಃಖವನ್ನು ದೂರ ಮಾಡುತ್ತ, ಬಡವರಿಗೆ ಕಡವರರಾಗಿ, ಅವರ ಮದುವೆಗಳನ್ನು ಸಹ ಮಠದಲ್ಲಿಯೇ ಮಾಡಿಸುತ್ತ, ಮಲ್ಲಿಕಾರ್ಜುನನಲ್ಲಿ ನಿಷ್ಠೆ ಭೂತಂಗಳೊಳು ಅನುಕಂಪೆಗಳೇ ಜೀವನ ಸೂತ್ರಗಳಾಗಿ ಇರತೊಡಗಿದರು ಸಿದ್ಧರಾಮಯ್ಯನವರು. ಹೊಲಗಳಲ್ಲಿ, ಮನೆಗಳಲ್ಲಿ, ಕುಳಿತಲ್ಲಿ, ನಿಂತಲ್ಲಿ ಜನರು ಹಿಗ್ಗಿನಿಂದ ಹಾಡಿದರು–"ಸಿದ್ಧರಾಮ ಹೋ, ನಿಜ ಗುರು ಸಿದ್ಧರಾಮ ಹೋ !" ಎಂದು ಹೆಂಗೆಳೆಯರು ಕುಟ್ಟುತ್ತ ಬೀಸುತ್ತ ಹಾಡಿದರು.

"ಬೀದಿ ಬೀದಿಗೆ ಗುಡಿಯ ಹಾದಿ ಹಾದಿಗೆ ಕೆರೆಯ
ಸಾಧಿಸಿದ ಕಟ್ಟಿ ಸಿದ್ಧರಾಮ ! ಸೊನ್ನಾಲಿಗೆ
ಸಾಧು ಸಿದ್ಧನಿಗೆ ಮನೆಯಾಯ್ತು"

ಮುಂದೆ ಕೆಲದಿನಗಳಲ್ಲಿ ಅದೇ ಸೊನ್ನಲಾಪುರದ ಹೆಂಗೆಳೆಯರು ಬೇರೆ ರೀತಿಯಿಂದ ಹಾಡಿದರು. ಮೊದಲಿನ ಹಾಡಿನಲ್ಲಿ, ಈ ಹಾಡಿನಲ್ಲಿ ಮಹದಂತರವಿದ್ದಿತು.

ಸಿದ್ಧಪುರುಷನು ಎಂದು ಸಿದ್ಧರಾಮನಿಗೆ ಚಿಮ್ಮಿ
ಉದ್ದಂಡನಾಗಿ ಆಳಿದನು–ಪ್ರಭುದೇವ
ಹೆದ್ದಾರಿ ಬಂದ ಶಿವ ಬೆಳಕು. ॥
ಸಿದ್ಧರಾಮನ ಬಿಮ್ಮು ಬಿದ್ದುಹೋಯಿತು ಕರ
ಬುದ್ಧ ಪ್ರಭುದೇವ ತಿಳಿಹೇಳಿ–ಸೊನ್ನಾಲಿಗೆ
ಸಿದ್ಧ ಶರಣಾದ ಶಿವ ಮತಕೆ ॥
ಅಲ್ಲಮ ಸಿದ್ಧರಾಮ ಬಲ್ಲಿದೆಲ್ಲರು ಬರಲು
ಕಲ್ಯಾಣ ಮನೆಗೆ ಕಳೆ ಬಂತು–ಬಸವಯ್ಯ
ಎಲ್ಲಿ ಹೋದಲ್ಲಿ ಬೆಲ್ಲಾದ !"

ಸಿದ್ಧರಾಮನ ಸಮತೆಯನ್ನೂ ತಲೆಕೆಳಗೆ ತಲೆಕೆಳಗೆ ಮಾಡಿದ್ದಿತು ಸಿದ್ಧತನದ ಬಿಮ್ಮು. ಸರಿ, ಅದನ್ನು ಅಳಿಸಲು ಯಾರಾದರೂ ಬರಬೇಕಲ್ಲ. ಹಮ್ಮು, ಬಿಮ್ಮು, ಸೊಮ್ಮುಗಳ ಉರಿವಣಿಗೆಯನ್ನು ಅರಿಸುವುದೇ ಶರಣಧರ್ಮದ ಸಾರಿವಾಗಿದ್ದಿತು. ಹಮ್ಮು ದೇವರ ದಾಸಿಮಯ್ಯನಲ್ಲಿಯೇ ಇರಲು. ಶಂಕರ ದಾಸಿಮಯ್ಯನಲ್ಲಿಯೇ ಇರಲು, ಸಿದ್ಧರಾಮಯ್ಯನಲ್ಲಿಯೇ ಇರಲಿ, ಕೊನೆಗೆ ಬಸವಣ್ಣನಲ್ಲಿಯೇ ಇರಲಿ– ಬಯಲಾಗಲೇಬೇಕು. ಅದು ಇದ್ದಲ್ಲಿ ಶರಣ ಧರ್ಮವಿಲ್ಲ ; ಧರ್ಮವಿದ್ದಲ್ಲಿ ಅದು ಇಲ್ಲ. ಎರಡೂ ಒಂದೆಡೆ ಇರಲಾರವು !

ಅಲ್ಲಯ್ಯನು ಬಂದನು. 'ನೂಲ ಸಂಕಲೆಗಡಿದು, ಕನಕದ ಕೋಳವನು ಕಾಲಿಂಗೆ ಕೀಲಿಪ ಹಾಳು ಮತಿಯುವನಂತೆ, ಸತಿ ಸುತ ಕೂಟ ಭಯುವೆಂದು ಬಾಳಿಕೆಯನತಿಗಳೆದು, ಮರಳಿಯು ಬೋಳುಮಂಡೆಯ ಕೀರ್ತಿಗೋಸುಗ ಕೋಳುಹೋದನೆ ಸಿದ್ಧರಾಮ !' ಎಂದು ಕನಿಕರಿಸಿ ಬಂದನು. 'ಚಿಕ್ಕ ಸಂಸಾರವನ್ನು ಸಡಿಲಿಸಿ ಹೊಕ್ಕನಲ್ಲಾ ಹಿರಿಯ ಸಂಸಾರ ! ಅಕ್ಕಟಾ, ವಿಖ್ಯಾತಿ ಪೂಜಾಲಾಭದಿಚ್ಛೆಯಲ್ಲಿ ಸಿಕ್ಕಿಬಿದ್ದನು ಸಿದ್ಧರಾಮಯ್ಯನು" ಎಂದು ಮನ ಕರಗಿ ಬಂದನು. ತಿಳಿವಿನ ಸುಳಿಗಾಳಿಗಾಗಿ ಸಾಗಿ ಬಂದನು ; ಅರಿವಿನ ಪರಮಳವಾಗಿ ತೇಲಿಬಂದನು.

ಬಂದು ಸಿದ್ಧರಾಮಯ್ಯನ ಶಿಷ್ಯರಾಗಿ ಕೆರೆಯನ್ನು ಕಟ್ಟುತ್ತಿದ್ದ ಒಡ್ಡರನ್ನು ಕೆಣಕಿದನು; 'ಎಲ್ಲಿಹನು ನಿಮ್ಮ ಒಡ್ಡರಾಮಯ್ಯ?' ಎಂದು ಗೇಲಿ ಮಾಡಿದನು. ಸಿಟ್ಟಿನಿಂದ ಸಿಡಿದೆದ್ದು ಬಂದ ಸಿದ್ಧರಾಮನ ಕ್ರೋಧಾಗ್ನಿಯನ್ನು ತನ್ನ ಅಮೃತಸ್ಮಿತದಿಂದ ತಣ್ಣಗಾಗಿಸಿದನು. ಸಿದ್ಧರಾಮನ ಕಾವ್ಯಕರ್ಮದ ನಿರರ್ಥಕತೆಯನ್ನು ನಗುನಗುತ್ತ ತಿಳಿಸಿಕೊಟ್ಟನು :

"ಅನ್ನವನಿಕ್ಕಿ, ನನ್ನಿಯ ನುಡಿದು, ಅರವಟ್ಟಿಗೆಯನಿಕ್ಕಿ
ಕರೆಯ ಕಟ್ಟಿಸಿದರೆ ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ
ಶಿವನ ನಿಜವು ಸಾಧ್ಯವಾಗದು. ಗುಹೇಶ್ವರನ ಅರಿದ ಶರಣಂಗೆ
ಅವ ಫಳವೂ ಇಲ್ಲ"

ಸಿದ್ಧರಾಮನು ಸ್ತೈವೆರಗಾದ. 'ತಾನು ಅದುವರೆಗೆ ಮಾಡಿದ ಜನಹಿತ ಕಾರ್ಯಗಳೆಲ್ಲ ನಿರರ್ಥಕವೆ?' ಜನಮಗಳರತಿ, ಜನಕಲ್ಯಾಣೇಚ್ಛೆ ಫಲಾಪೇಕ್ಷೆಯಿಂದ ಮಾಡುವ ಕಾಮ್ಯ ಕರ್ಮವೆ? ಹಾಗಾದರೆ ಕಾಗತಿಃ?

ಲೋಕೋಪಯೋಗಿ ಕಾರ್ಯಗಳು ಅನಿಷ್ಟವೇನಲ್ಲ. ಆದರೆ ಅವುಗಳಲ್ಲಿಯೇ ಆಸಕ್ತನಾಗಿ ಅವುಗಳಿಗಿಂತಲೂ ಹಿರಿದಾದ ಅಂತರಂಗದ ಪ್ರಪಂಚವನ್ನು ಉಪೇಕ್ಷಿಸುವುದು ಅನಿಷ್ಟ. ಹೊರಗೆ ಕೆರೆ ಕಟ್ಟುವುದು ಎಷ್ಟು ಅಗತ್ಯವೊ ಅಷ್ಟೇ, ಅದೇಕೆ–ಅದಕ್ಕೂ ಹೆಚ್ಚು ಅಗತ್ಯವಾದುದು ಒಳಗಿನ ಕೆರೆ. ಅದೆಂಥ ಕೆರೆ?

"ತನುವೆಂಬ ಏರಿಗೆ ಮನವೆಂಬ ಕಟ್ಟೆ,
ಆಚಾರವೆಂಬ ಸೋಪಾನ, ಪರಮಾನಂದವೆಂಬ ಜಲವ ತುಂಬಿ
ಕೆರೆಯ ಕಟ್ಟಬಲ್ಲವರನಾರನೂ ಕಾಣೆ !
ನಾ ಕಟ್ಟಿದ ಕೆರೆ ಸ್ಥಿರವಾಯಿತ್ತು. ಗುಹೇಶ್ವರ ನಿಮ್ಮಾಣೆ !"

ಅನ್ನವನಿಕ್ಕಿದರೆ ಮತ್ತೆ ಹಸಿವಾಗುತ್ತದೆ; ಅರವಟಿಗೆಯನ್ನಿಟ್ಟು ನೀರು ಕುಡಿಸಿದರೆ ಮತ್ತೆ ನೀರಡಿಕೆಯಾಗುತ್ತದೆ ; ಕೆರೆ ಕಟ್ಟಿಸಿದರೆ ಒಮ್ಮಿಲ್ಲೊಮ್ಮೆ ಒಡೆದು ಹೋಗುತ್ತದೆ. ತನುವಿನಲ್ಲಿಯೇ ಸ್ಥಿರವಾದ ಕೆರೆಯನ್ನು ಕಟ್ಟಿ ಅದರಲ್ಲಿ ಪರಮಾನಂದದ ಜಲವನ್ನು ತುಂಬಿ, ಆ ಆನಂದದ ಅರವಟಿಗೆಯನ್ನಿರಿಸಿ, ಆ ಆನಂದದ ಅಮೃತವನ್ನು ಒಮ್ಮೆ ಪಾನ ಮಾಡಿದವರು, ಮತ್ತೆ ಹಸಿಯದಂತೆ ನೀರಡಿಸದಂತೆ ಮಾಡುವುದರಲ್ಲಿಯೇ ಮೇಲ್ಮೆಯಿದೆ. ಇದು ಪ್ರಭುವಿತ್ತ ಪ್ರಭಾಮಯ ಸಂದೇಶ ಸಿದ್ಧರಾಮನಿಗೆ.

ಸಿದ್ಧರಾಮನ ನಿಷ್ಠೆಯ ಗಂಡಭೇರುಂಡಕ್ಕೆ ಎರಡು ಮುಖಗಳೂ–ಒಂದು ಸಾಕಾರದೊಳು ನಿಷ್ಟೆ ; ಇನ್ನೊಂದು ಭೂತಗಳೊಳು ಅನುಕಂಪೆ–ಆ ಅನುಕಂಪೆಯಿಂದ ಪ್ರೇರಿತವಾದ ಜನಹಿತ ಕಾರ್ಯ ಎರಡನೆಯ ಮುಖದ ನಿಜಸ್ವರೂಪ ತಿಳಿಯಿತು. ಮೊದಲನೆಯ ಮುಖವೊಂದಿದೆಯಲ್ಲ. ಅದಕ್ಕೇನೆನ್ನುವನು ಈ ಮಹವನರಿದ ಮಹಾಂತ? ಮಲ್ಲಿಕಾರ್ಜುನನಲ್ಲಿ ನಿಷ್ಠೆಯನ್ನು ನೂರ್ಮಡಿಸಿ ಅವನ ಅರ್ಚನೆ, ಉಪಾಸನೆಗಳಲ್ಲಿಯೇ ಉಳಿದ ದಿನಗಳನ್ನು ಕಳೆಯಬಹುದಲ್ಲವೆ?

ಈ ವಿಶ್ವಾಸದ ಬುಡಕ್ಕೂ ಏಟು ಕೊಟ್ಟ ಅಲ್ಲಯ್ಯ !

"ದೇಹದೊಳಗೆ ದೇವಾಲಯವಿದ್ದು ಮತ್ತೆ ಬೇರೆ ದೇವಾಲಯವೇಕೆ?
ಗುಹೇಶ್ವರಾ, ನೀನು ಕಲ್ಲಾದರೆ ನಾನೇನಪ್ಪೆನಯ್ಯ?"

ಇಷ್ಟೇ ಅಲ್ಲ–ಇನ್ನೂ ಮುಂದುವರಿದು,

"ಕಲ್ಲಮನೆಯ ಮಾಡಿ, ಕಲ್ಲದೇವರ ಮಾಡಿ
ಕಲ್ಲ ಕಲ್ಲಮೇಲೆ ಕೆಡೆದರೆ ದೇವರೆತ್ತ ಹೋದರೊ?
ಲಿಂಗಪ್ರತಿಷ್ಠೆ ಮಾಡುದವಂಗೆ ನಾಯಕ ನರಕ, ಗುಹೇಶ್ವರಾ !"

ಸಿದ್ಧರಾಮನ ತಿಳಿವಿನ ಕಣ್ಣು ತೆರೆಯತೊಡಗಿತು

"ಅಣುವಿನೊಳಗೆ ಅಣುವಾಗಿದ್ದಿರಿ, ಎಲೆ ದೇವಾ–ನೀವು ;
ಮನದೊಳಗೆ ಘನವಾಗಿದ್ದಿರಿ, ಎಲೆ ದೇವಾ !
ಜಗದೊಳಗೆಲ್ಲಿಯೂ ನೀವಿಲ್ಲದೆಡೆಯುಂಟೆ?
ಎಂಬತ್ತು ಲಕ್ಷ ಶಿವಾಲಯಂಗಳ ನೀವು ಮಾಡಿ
ಒಳಗಿಪ್ಪುದ ಕಂಡು ನಾನು ಮಾಡಿದೆನಲ್ಲದೆ
ಕಪಿಲ ಸಿದ್ಧ ಮಲ್ಲಿನಾಥಯ್ಯ, ಎನಗೆ ಬೇರೆ ಸ್ವತಂತ್ರವುಂಟೆಂದು ಅರಿಯೆನು'

ಎಂದು ಒಪ್ಪಿದನು ;

"ಸಕಲ ಲಿಂಗವ ಹಿಡಿದು ಅಗಲದೆ ನಡೆಯೆಂದಿರಾಗಿ
ನಡೆವುತ್ತಿದ್ದೆನು. ಲಿಂಗಪ್ರತಿಷ್ಠೆಯ ಮಾಡೆಂದು ಎನಗೆ
ನಿರೂಪಿಸುತ್ತಿದ್ದ ಕಾರಣ ಮಾಡುತ್ತಿದ್ದೆನಲ್ಲದೆ ಎನಗೆ
ಬೇರೆ ಸ್ವತಂತ್ರ ಉಂಟೆ? ಹಿಂದೆ ನೀವು ಕೊಟ್ಟ ನಿರೂಪ
ನಿಮಗೆ ಹುಸಿಯಾದರೆ
ಇನ್ನು ಮುಂದೆ ಸ್ವಯವಪ್ಪಂತೆ ನಡಿಸಾ, ಕಪಿಲಸಿದ್ಧ ಮಲ್ಲಿನಾಥಯ್ಯ !"

ಎಂದು ಕೋರಿದನು. ಆಗ ಪ್ರಭುವಿನ ಪ್ರಸಾದವಾಣಿ ನುಡಿಯಿತು.

"ಕೆರೆ ದೇಗುಲಂಗಳೆಲ್ಲವೂ ಹಿಂದಣ ಅಡಿವೆಜ್ಜೆಗೊಳಗು ;
ಕರ್ಮಕಾಂಡ ಯೋಗಂಗಳೆಲ್ಲವು ಭವದ ತೆಕ್ಕೆಗೆ ಒಳಗು ;
ಹಿಂದಣ ಮುಂದಣ ಸಂದನಳಿದು–
ಗುಹೇಶ್ವರ ಲಿಂಗದಲ್ಲಿ ಸಂದಿರಬೇಕು ಸಿದ್ಧರಾಮಯ್ಯ !"

ಸಿದ್ಧರಾಮಯ್ಯನ ಸಂಶಯ ಸಂಪೂರ್ಣ 'ಅಳಿಯಲಿಲ್ಲ. ಆ ಕರ್ಮ ಬೇಡ, ಈ ಕರ್ಮ ಬೇಡವೆಂದರೆ ಒಪ್ಪಬಹುದು ; ಕರ್ಮವನ್ನೇ ಬೇಡವೆಂದರೆ ಹೇಗೆ? ಕರ್ಮವಿಲ್ಲದೆಯೆ ಬದುಕಬಹುದೆ?

"ಕೃಷಿಯ ಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೊ?
ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೊ?
ಬೇಯದೆ ಆಸನವನುಂಬ ಠಾವಾವುದು, ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗ?"

ಎಂದು ಕೇಳಿಯೇಬಿಟ್ಟನು. ಅದಕ್ಕೆ ಅಲ್ಲಮನಿತ್ತ ಉತ್ತರ ಮುತ್ತಿನ ಹಾರದಂತಿದೆ;

"ಕರ್ಮವೇ ಪ್ರಾಣವೆಂದು ಮಾಡುವಾಗ ಜ್ಞಾನವನರಿವ ನೆಲೆ ಶುದ್ಧವಿನ್ನಾವುದು?
ಸಾಮನ್ನಕ್ಕೂ ಸಾಧನೆಯ ಮಾಡಿ ಕಾದುವ ಠಾವಿನ್ನಾವುದು?
ಅರಿದುದನತಿಗಳೆದು ಮೇಲರಿದುದ ಕರಿಗೊಳುತ್ತ
ತುಪ್ಪವ ನೀಡಿದ ತಂಡುಲದಂತೆ ಕಾಯದೆ ಶುದ್ಧವಾಗಿರಬೇಕು
    ಗುಹೇಶ್ವರ ಲಿಂಗವನರಿವುದಕ್ಕೆ ಸಿದ್ಧರಾಮಯ್ಯ !"

ಪ್ರಾಣವಿರುವವರೆಗೆ ಕರ್ಮ ಬಿಡದು ನಿಜ. ಆದರೆ ಕರ್ಮವೇ ಪ್ರಾಣವಾಗಿರಬಾರದು. ಸಾಯುವವರೆಗೆ ಸಾಧನೆಯನ್ನು ಮಾಡಿದರೆ ಯುದ್ಧ ಮಾಡುವುದು ಯಾವಾಗ ? ಸಾಯುವವರೆಗೆ ಕರ್ಮವನ್ನೇ ಆಶ್ರಯಿಸಿದರೆ ಜ್ಞಾನೋದಯ ಯಾವಾಗ?

ಸಿದ್ಧರಾಮಯ್ಯನು ಮತ್ತೊಂದು ಮುಖವನ್ನು ಹುಟ್ಟಿಸಿದನು– ವಾದಕ್ಕೆ ಯಾವುದು ಕರ್ಮ, ಯಾವುದು ಅಕರ್ಮ ಈ ಜೀವನದಲ್ಲಿ? ಉಸಿರಾಡಿಸುವುದೂ ಕರ್ಮವೇ ! ಅಷ್ಟೇಕೆ, ಅಲ್ಲಮನು ಧರಿಸಿರುವ ಇಷ್ಟಲಿಂಗದ ಪೂಜೆ ಕರ್ಮವಲ್ಲವೇ? ಸ್ಥಾವರ ಲಿಂಗಪೂಜೆ ಕರ್ಮ, ಇಷ್ಟಲಿಂಗಪೂಜೆ ಅಕರ್ಮವೇ? ಕೇಳಿಯೇಬಿಟ್ಟ.

"ಕೈಯಲ್ಲಿ ಹಿಡಿದು ಕಾಂಬುದು ಕರ್ಮ ಪೂಜೆಯಲ್ಲವೆ?
ಮನದಲ್ಲಿ ನೆನೆದು ಮಾಡುವುದೆಲ್ಲವು ಕಾಯಕ ಕರ್ಮವಲ್ಲವೆ?
ಭಾವಶುದ್ಧವನರಿವ ಪರಿ ಇನ್ನಾವುದು ಹೇಳಾ,
    ಕಪಿಲಸಿದ್ಧ ಮಲ್ಲಿಕಾರ್ಜುನಾ?"

ಇದಕ್ಕೆ ಅಲ್ಲಮನ ಉತ್ತರ ಚಿತ್ರತರವಾದುದು :

"ಚಿನ್ನವನೊರೆಯಬಹುದಲ್ಲದೆ ಬಣ್ಣವನೊರೆಯಬಹುದೆ?
ಹೂವ ಮುಡಿಯಬಹುದಲ್ಲದೆ ಗಂಧವ ಮುಡಿಯಬಹುದೆ?

ಕರ್ಮವ ಮಾಡಬಹುದಲ್ಲದೆ ವಸ್ತುವನರಿಯಬಹುದೆ?
ಗುಹೇಶ್ವರನೆನಬಹುದಲ್ಲದೆ ಲಿಂಗವು ತಾನಾಗಬಾರದು, ಸಿದ್ಧರಾಮಯ್ಯ !"

ಸಿದ್ಧರಾಮನು ಸುಮ್ಮನಾಗಲಿಲ್ಲ– ಇಷ್ಟಕ್ಕೂ. ಮತ್ತ ಮರಳಿ ತನ್ನ ಸಾಕಾರ ನಿಷ್ಠೆಯ ಕಡೆಗೇ ಬರುತ್ತಿರುವಂತೆ ಮಾತನಾಡುತ್ತಲಿರುವವನಲ್ಲ ಅಲ್ಲಮಪ್ರಭು? "ಬಣ್ಣವ ನೊರೆಯಲಾಗದು, ಚಿನ್ನವ ನೊರೆ ; ಗಂಧವ ಮುಡಿಯಲಾಗದು, ಹೂವ ಮುಡಿ; ನಿರಾಕಾರವ ನಿಲುಕಿಸಲಾಗದು, ಸಾಕಾರವ ಹಿಡಿ" ಎಂಬುದು ಇವನ ಇಂಗಿತವೆ? ಹಾಗಾದರೆ ನಾನು ಕಟ್ಟಿದ ದೇಗುಲಗಳನ್ನು, ಪ್ರತಿಷ್ಠಿಸಿದ ಲಿಂಗಗಳನ್ನು ಬೀಳುಗಳೆದ ಕಾರಣ? ಕೇಳಿಯೇಬಿಡೋಣ :

"ಕಾಯವೇ ಪೀಠಿಕೆ, ಪ್ರಾಣವೇ ಲಿಂಗವಾಗಿರಲು ಬೇರೆ ಕುರಹೇಕಯ್ಯ?
ಕುರುಹು ಪಿಡಿದು ಕೂಡುವ ನರವಯಲುಂಟೆ? ಜಗದೊಳಗೆ
ನಷ್ಟವ ಕೈಯ್ಯಲ್ಲಿ ಹಿಡಿದು ದೃಷ್ಟವ ಕಂಡಿಹೆನೆಂದರೆ
ಕಪಿಲಸಿದ್ಧ ಮಲ್ಲಿನಾಥಯ್ಯನು ಸಾಧ್ಯವಹ ಪರಿಯ ಹೇಳಾ !"

ಅಲ್ಲಮನಿಗೆ ಸಿದ್ಧರಾಮನ ಸಂಶಯ ಅರ್ಥವಾಯಿತು. ಸ್ಥಾವರಲಿಂಗ ಇಷ್ಟಲಿಂಗ ಒಂದೇ ಎಂಬ ಭ್ರಮೆ ಆ ಸಂಶಯಕ್ಕೆ ಮೂಲವೆಂಬುದು ಮನವರಿಕೆಯಾಯಿತು. ಆಗ ಉಸುವರಿದನು.

"ಇಷ್ಟಲಿಂಗದ ಪ್ರಾಣಲಿಂಗದ ಭೇದವನಾರು ಬಲ್ಲರು ಹೇಳಾ?
ಅಂತರಂಗವೆಂಬ ಶಬ್ದಕ್ಕೆ ಬಹಿರಂಗ ಮುಂದುಗೊಂಡಿಪ್ಪುದು.
ಮನವನೆಡೆಗೊಂಡ ಲಿಂಗದರಿವು ವಿಚಾರ ವ್ಯಾಕುಳಕ್ಕೊಳಗಾಗಬಾರದೆಂದು
ಮನ ಭಾವ ಜ್ಞಾನ ನೋಟವ ತಂದು ಕರಸ್ಥಲದಲ್ಲಿ ನಿಕ್ಷೇಪಿಸಿ,
ಅಂತರಂಗ ಬಹಿರಂಗವೆಂಬುದನರಿಯದೆ ಅನಿಮಿಷನಾಗಿಪ್ಪನಾ ಶರಣನು.
ಪ್ರಾಣಲಿಂಗದ ಪ್ರಸನ್ನಮುಖವ ನೋಡಿ ಪರಿಣಾಮಿಸಲೋಸುಗ
ಕರತೇಜವೆಂಬ ದರ್ಪಣವ ಹಿಡಿದು ಇರ್ಪನು ನೋಡಯ್ಯಾ
ಗುಹೇಶ್ವರ ಲಿಂಗದಲ್ಲಿ ನಿಜವನೆಯ್ದಿದೆನೆಂದರೆ–
ಕುರುಹುವಿಡಿದು ಕುರುಹುಗೆಡಬೇಕು ಸಿದ್ಧರಾಮಯ್ಯ !"

"ಕುರುಹುವಿಡಿದು ಕುರುಹುಗೆಡಬೇಕು ಸಿದ್ಧರಾಮಯ್ಯ !" ಸಿದ್ಧರಾಮಯ್ಯನ ಮೈಯಲ್ಲಿ ವಿದ್ಯುತ್ ಸಂಚಾರವಾಯಿತು. ಕುರುಹುವಿಡಿದು ಕುರುಹುಗೆಡುವುದನ್ನು ಕಲಿಸುವ ಇಷ್ಟಲಿಂಗದ ಬಗ್ಗೆ ತಿಳಿದುಕೊಳ್ಳಬೇಕೆಂಬ ಲವಲವಿಕೆ ಪಲ್ಲವಿಸಿತು ಅವನಲ್ಲಿ.

"ಅಯ್ಯಾ ನಿಮ್ಮ ಕರಸ್ಥಲದ ಘನವನುಪಮಿಸಬಲ್ಲವರಿಲ್ಲವಯ್ಯಾ !
ನಿಮ್ಮ ಮಹಿಮೆಯನರಿವರೆ ನಾನೇತರೊಳಗೇನಯ್ಯ !
ಆ ಇಷ್ಟಲಿಂಗದೊಳಗೆ ಮುಟ್ಟದ ಶರಣನೊಳಗೆ ಹುಟ್ಟಿದ
ಕರಸ್ಥಲವೆಷ್ಟೆಂಬುದ ತಿಳುಹಿ ಎನ್ನನುಳುಹಿಕೊಳ್ಳಾ
ಕಪಿಲಸಿದ್ಧ ಮಲ್ಲಿಕಾರ್ಜುನ"

ಎಂದು ಕೇಳಿಕೊಂಡನು.

ಅದಕ್ಕೆ ಪ್ರಭುದೇವರು. "ಷಡುಸ್ಥಲದಂತುವ ಸಂಧಿಸಿ ಒಂದುಮಾಡಿಕೊಂಡಿಪ್ಪ ಕರಸ್ಥಲದನುವನು ಗುಹೇಶ್ವರನ ಶರಣ ಸಂಗನ ಬಸವಣ್ಣ ಬಲ್ಲ, ಬೆಸಗೊಂಬ ಬಾರಾ" ಎಂದು ಕರೆಯಿತ್ತರು. ಕಾರಮುಗಿಲಿನ ಕರೆಯ ಕೇಳಿದ ಸೋಗೆಯಂತಾಯಿತು ಸಿದ್ಧರಾಮನ ಸ್ಥಿತಿ. ಅಷ್ಟರೊಳಗಾಗಿ ಬಸವಣ್ಣನವರ ಕೀರ್ತಿವಾರ್ತೆಯನ್ನು ಕೇಳಿರಬೇಕು ಸಿದ್ಧರಾಮ. ಅಂತೆಯೇ ಬಸವಣ್ಣನೆನ್ನುತ್ತಲೆ ಆನಂದದಿಂದ ಉಬ್ಬಿ:

"ಅಯ್ಯಾ, ನಿಮ್ಮ ಕರಸ್ಥಲದ ಘನ ನಿಮ್ಮಲ್ಲಿ ಇರಲಿ !
ಅಯ್ಯಾ, ನಿಮ್ಮ ಪರಸ್ಥಲದ ಘನ ನಿಮ್ಮಲ್ಲಿ ಇರಲಿ !
ಕರಸ್ಥಲವನೊಲ್ಲೆ, ಪರಸ್ಥಲವನ್ನೊಲ್ಲೆ, ಅವುದನು ಒಲ್ಲೆ ನೋಡಯ್ಯ !
ಕಪಿಲಸಿದ್ಧ ಮಲ್ಲಿನಾಥಯ್ಯ, ನೀ ಒಲಿದು ಸಂಗನ ಬಸವಣ್ಣನ
ಶ್ರೀಪಾದವ ತೋರಿಹೆನೆಂಬ ಮಾತಿಂಗೆ ಮಾರುವೋದೆನು !
ಇನ್ನು ತೋರಿ ಎನ್ನನುಳುಹಿಕೊಳ್ಳಾ !"

ಎಂದು ಕೋರಿದನು. 'ತಥಾಸ್ತು' ಎಂದರು ಪ್ರಭುದೇವರು.

ಇಬ್ಬರೂ ಇನಶಶಿಗಳಂತೆ ಕಲ್ಯಾಣದತ್ತ ನಡೆದರು. ಕಲ್ಯಾಣವನ್ನು ಕಂಡು ಸಿದ್ಧರಾಮನು ರೋಮಾಂಚಿತನಾದನು. ಬಸವಣ್ಣನ ಮನೆಯ ಅಂಗಳವನ್ನು ಕಂಡಾಗಲಂತೂ ಆತನ ಹಿಗ್ಗು ಬುಗ್ಗೆಯಾಗಿ ಚಿಮ್ಮಿತು. "ನಿಶ್ಚಲ ಶರಣರ ಮನೆಯಲ್ಲಿ ಅಷ್ಟಾಷಷ್ಠಿ ತೀರ್ಥಂಗಳು ನೆಲಸಿಪ್ಪವಯ್ಯಾ' ಎಂಬ ಅನುಭವ ಅವನಿಗಾಯಿತು. "ಸಿರಿಯಾಳ ಮನೆಗಟ್ಟಿ ಬೇರೂರಿಗೆ ಒಕ್ಕಲು ಹೋದ. ದಾಸಿಮಯ್ಯ ಮನೆಕಟ್ಟಿ ವ್ಯವಹಾರವನಾಡಿ ಹೋದ. ಸಿಂಧು ಬಲ್ಲಾಳ ಮನೆಗಟ್ಟಿ ಕೈಕೂಲಿಗಾರನಾಗಿ ಹೋದ. ಗಂಗೆವಾಳುಕರು ಮನೆಗಟ್ಟಿ ಲಿಂಗದ ಹೊಲಬನರಿಯದೆ ಹೋದರು. ಇವರೆಲ್ಲರು ಮನೆಯ ಮಾಡಿ ಮಹವನರಿಯದೆ, ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ ಪದವಿಗೊಳಗಾದರು. ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮನೆಯ ಕಟ್ಟಿದರೆ ಮರ್ತ್ಯಲೋಕವೆಲ್ಲವು ಭಕ್ತಿ ಸಾಮ್ರಾಜ್ಯವಾಯಿತ್ತು!

ಆ ಮನೆಗೆ ತಲೆವಾಗಿ ಹೊಕ್ಕವರೆಲ್ಲರು ನಿಜಲಿಂಗಪದಮಂ ಪಡೆದರು. ಆ ಗೃಹವ ನೋಡಬೇಕೆಂದು ನಾನು ಹಲಕಾಲ ತಪಿಸಿದ್ದೆನು. ಕಪಿಲಸಿದ್ಧ ಮಲ್ಲಿನಾಥಾ, ನಿಮ್ಮ ಶರಣ ಸಂಗನಬಸವಣ್ಣನ ಮಹಾಮನೆಗೆ ನಮೋ ನಮೋ ಎಂದು ಬದುಕಿದೆನು!" ಎಂದು ಆ ಮಹಾಮನೆಗೆ ಕೈಮುಗಿದನು.

ನಿಜ, ಬಸವಣ್ಣ ಕಟ್ಟಿದುದು ಮಹಾಮನೆ–ಮರ್ತ್ಯಲೋಕವೆಂಬ ಮಹಾಮನೆ, ಮರ್ತ್ಯಲೋಕವೆಲ್ಲ ಒಂದು ಕುಟುಂಬ. ಆದರೆ ಮಾನವ ಮಾನವರಲ್ಲಿ ಅಜ್ಞಾನಜನ್ಯ ಸ್ವಾರ್ಥಪ್ರಚೋದಿತ ಭೇದ ಭಾವನೆಗಳು ಬೋರೂರಿ ಆ ಮಹಾಮನೆ ಒಡೆದು ಅನೇಕ ಮನೆಗಳಾಗಿ ಮಾರ್ಪಟ್ಟಿದ್ದಿತು. ಅಲ್ಲಮಪ್ರಭುಗಳು ಅಪ್ಪಣೆ ಕೊಡಿಸಿರುವಂತೆ, "ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು ಕರ್ತನಟ್ಟಿದನಯ್ಯಾ ಒಬ್ಬ ಶಿವಶರಣನ. ಆ ಶರಣ ಬಂದು ಕಲ್ಯಾಣವೆಂಬ ಶಿವಪುರವ ಕೈಲಾಸವ ಮಾಡಿ, ರುದ್ರಗಣ ಪ್ರಮಥಗಣಗಳೆಲ್ಲರ ಹಿಡಿತಂದು, ಅಸಂಖ್ಯಾತರೆಂದು ಹೆಸರಿಟ್ಟು ಕರೆದು ಜಗವರಿಯಲು ಶಿವಾಚಾರದ ಧ್ವಜವನೆತ್ತಿ, ಮರ್ತ್ಯಲೋಕ ಶಿವಲೋಕವೆರಡಕ್ಕೆ ನಿಚ್ಚಣಿಗೆಯಾದನು."

ಅಂಥ ಶರಣನ ಮನೆಯನ್ನು ಕಂಡು ಯಾರಿಗೆ ಆನಂದವಾಗಲಿಕ್ಕಿಲ್ಲ? ಸಿದ್ಧರಾಮನಿಗಲ್ಲಿ ತಾನು ಅರಸುತ್ತಲಿದ್ದ ಬಳ್ಳಿ ಕಾ ತೊಡಕಿದಂತೆ ಎನಿಸಿತು. ಬಸವಣ್ಣನ ಅಳಿಯ ಯುಗಜಗವ ಮೀರಿದ ಶರಣ ಚನ್ನಬಸವಣ್ಣ ಗುರುವಾದನವನಿಗೆ.ಆತನಿಂದ ಇಷ್ಟಲಿಂಗ ಧಾರಣೆಯೂ ಆಯಿತು ಸಿದ್ಧರಾಮನಿಗೆ. ಈ ವಿಷಯ ರಾಘವಾಂಕನ ಸಿದ್ಧರಾಮಚರಿತೆಯಲ್ಲಿ ಬಂದಿಲ್ಲವಾದರೂ ಸಿದ್ಧರಾಮ ಸಾಹಿತ್ಯದಲ್ಲಿಯೇ ಇದಕ್ಕೆ ಸಾಕಷ್ಟು ಸಾಕ್ಷ್ಯಗಳಿವೆಯಾಗಿ ಆಯಿತೆಂದು ಹೇಳಲು ಅಭ್ಯಂತರವೇನಿಲ್ಲ. ಸಿದ್ಧರಾಮ ಸುಲಭವಾಗಿ ಇಷ್ಟಲಿಂಗ ದೀಕ್ಷೆಯನ್ನು ಒಪ್ಪಿಕೊಳ್ಳಲಿಲ್ಲ. ಅವನೂ ಅತಿಮಾನವನೇ ಅಲ್ಲವೆ? ಹೇಳಿದ :

"ಬೆಳಗು ಬೆಳಗು ಹಳಚುವಲ್ಲಿ ಕತ್ತಲೆ ಉಳಿಯಬಲ್ಲುದೆ ಅಯ್ಯಾ?
ಶರಣರು ಶರಣರು ಮಹಾನುಭಾವಗೋಷ್ಠಿಯಂ ಮಾಡುವಲ್ಲಿ
ಸಂಗದೊಳಿರ್ದವರ ಅಜ್ಞಾನವಳಿದು ನಿಜವನ್ನೈದುವರಯ್ಯಾ !
ನಿಮ್ಮ ಮಹಾನುಭಾವದ ಸೋಂಕಿನ ಸೆರಗಿನೊಳಿರ್ದು
ನಾನು ಪರಮ ಸುಖಿಯಾಗಿ ಮನಮಗ್ನನಾದೆನು ಕಾಣಾ ಪ್ರಭುವೆ"

ಇದಕ್ಕೆ ಪ್ರಭುದೇವರೂ ಬೆಂಬಲವಿತ್ತರು–ವಿಷಯ ನಿಷ್ಕರ್ಷೆ ಸರಿಯಾಗಿ ಆಗಲೆಂದು:

“ನಿಮ್ಮನರಿದ ಶರಣಂಗೆ ಶಿವಪೂಜೆಯ ಮಾಡುವ ದಂದುಗವದೇಕೊ?
ಒಲುವೆಯ ಕೂಟಕ್ಕೆ ಹಾಸಿನ ಹಂಗೇಕೋ?
ಮಿಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೊ?
ಗುಹೇಶ್ವರ ಲಿಂಗವು ಪ್ರಾಣವಾಗಿಪ್ಪ ಸಿದ್ಧರಾಮಯ್ಯಂಗೆ
ಕುರುಹು ಮುನ್ನೇಕೋ ಚೆನ್ನಬಸವಣ್ಣಾ?”
“ಆಕಾಶವನಡರುವಂಗೆ ಅಟ್ಟಗೋಲ ಹಂಗೇಕೊ?
ಸಮುದ್ರವ ದಾಟುವಂಗೆ ಹರಿಗೋಲ ಹಂಗೇಕೊ?
ಸೀಮೆಯ ಮೀರಿದ ನಿಸ್ಸೀಮಂಗೆ ಸೀಮೆಯ ಹಂಗೇಕೊ?
ಗುಹೇಶ್ವರ ಲಿಂಗದಲ್ಲಿ ನಿಸ್ಸೀಮ ಸಿದ್ಧರಾಮಯ್ಯಂಗೆ
ಲಿಂಗವೆಂದೇನು ಹೇಳಾ, ಚೆನ್ನಬಸವಣ್ಣಾ?”

‘ಇದಕ್ಕಾವ ಉತ್ತರ ಕೊಡಬಹುದು?’ ಎಂದು ಶಂಕಿಸುವವರು ಬೆರಗಾಗಿ ಬೆರಳು ಕಚ್ಚುವಂತೆ ಬಂದಿತ್ತು ಚೆನ್ನಬಸವಣ್ಣನ ಉತ್ತರ :

“ಆಕಾಶದಾಲಾಡುವ ಪಟಕ್ಕಾದರೂ ಮೂಲಸೂತ್ರವಿರಬೇಕು !
ಕಲಿಯಾದಡು ಕಜ್ಜವಿಲ್ಲದೆಯಾಗದು ! ಭೂಮಿ ಇಲ್ಲದೆ ಬಂಡಿ ನಡೆವುದೆ!
ಅಂಗಕ್ಕೆ ಲಿಂಗಸಂಗವಿಲ್ಲದೆ ನಿಸ್ಸಂಗವಾಗಬಾರದು.
ಕೂಡಲ ಚೆನ್ನಸಂಗಯ್ಯನಲ್ಲಿ ಸಂಗವಿಲ್ಲದೆ ನಿಸ್ಸಂಗಿಯೆಂದು
ನುಡಿಯಬಹುದೆ ಪ್ರಭುವೆ?”

ಅಷ್ಟಕ್ಕೂ ಬಿಡಲಿಲ್ಲ ಪ್ರಭುದೇವರು–ನಿರ್ದೇಹಿಯಾದ ಮೇಲೆ ದೇಹಕ್ಕಾವ ಬೆಲೆಯೆಂದು ನುಡಿದರು. ಅದಕ್ಕೂ ಮಿಂಚಿನಂತೆ ಮೂಡಿ ಬಂದಿತು ಚೆನ್ನಬಸವಣ್ಣನ ಉತ್ತರ :

“ತಿಳಿದುಪ್ಪ ಗಟ್ಟಿದುಪ್ಪಕ್ಕೆ ಭೇದ ಉಂಟೆ?
ದೀಪಕ್ಕೆ ದೀಪ್ತಿಗೆ ಭಿನ್ನ ಉಂಟೆ?
ಆತ್ಮಕ್ಕೆಯೂ ದೇಹಕ್ಕೆಯೂ ಸಂದುಂಟೆ?
ಕ್ಷೀರಕ್ಕೆಯೂ ಸ್ವಾದುವಿಂಗೆಯೂ ಭಿನ್ನ ಉಂಟೆ?
ಇದು ಕಾರಣ ಸಾಕಾರವೆ ನಿರಾಕಾರವೆಂದರಿದು.
ಅಂಗಲಿಂಗ ಸಂಬಂಧವಿಲ್ಲದವ ಸಂಗಭಂಗವೆಂದು,
ಕೂಡಲ ಚೆನ್ನಸಂಗನ ಶರಣರು ಮೆಚ್ಚರಯ್ಯಾ, ಪ್ರಭುವೆ !”

ತನುತ್ರಯವಿರಲು ಲಿಂಗತ್ರಯವಿಲ್ಲದೆ ನಡೆಯುವುದೆ? ಅಂಗವ ಬಿಟ್ಟು ಆತ್ಮನುಂಟೆ? ಇಷ್ಟದ ಮರೆಯ ದೃಷ್ಟವ ಕಾಣುವುದೇ ಸನ್ಮತ.

ಚೆನ್ನಬಸವಣ್ಣನ ಉತ್ತರ ಎಲ್ಲರಿಗೂ ಒಪ್ಪಿಗೆಯಾಯಿತು; ಪ್ರಭುದೇವರಿಗೂ ಒಪ್ಪಿಗೆಯಾಯಿತು.

"ಎಳ್ಳಿಂಗೆ ಪರಿಮಳವ ಕಟ್ಟಿದಲ್ಲದೆ ಎಣ್ಣೆಗೆ ಪರಿಮಳ ವೇಧಿಸುದು ;
ದೇಹದಲ್ಲಿ ಇಷ್ಟಲಿಂಗ ಸ್ಥಾಪಿಸಿದಲ್ಲದೆ ಪ್ರಾಣಲಿಂಗ ಸಂಬಂಧವಾಗದು.
ಇದು ಕಾರಣ ಗುಹೇಶ್ವರಲಿಂಗದಲ್ಲಿ ಇಷ್ಟಲಿಂಗ ಸಂಬಂಧಿಯಾದಲ್ಲದೆ
ಪ್ರಾಣಲಿಂಗ ಸಂಬಂಧಿಯಾಗಬಾರದು ಕಾಣಾ, ಸಿದ್ಧರಾಮಯ್ಯ"

ಎಂದು ಹೇಳಿದರು. ಸಿದ್ಧರಾಮನೂ ಸಮ್ಮತಿಸಿದ. ಲಿಂಗಾಂಗಿಯಾಗಿ ಆನಂದದಿಂದ ಉಸಿರಿದ :

"ಹಿಂದೆ ಬಯಸಿದೆ ಕಾಳುತನದಲ್ಲಿ ಎನ್ನ ಮಂದಮತಿಯ ನೋಡಿರಯ್ಯ !
ಕೆರೆ ಬಾವಿ ಹೂದೋಟ ಚೌಕ ಛತ್ರಂಗಳ ಮಾಡಿ, ಜೀವಂಗಳ
ಮೇಲೆ ಕೃಪೆಯುಂಟೆಂದು, ಎನ್ನದಾನಿ ಎಂಬರು. ಅನು ದಾನಿಯಲ್ಲ, ಅಯ್ಯಾ!
ನೀ ಹೇಳಿದಂತೆ ನಾಮಾಡಿದೆನು. ನೀ ಬರಹೇಳಿದಲ್ಲಿ ನಾನು ಬಂದೆನು...
ಎನ್ನ ತನ್ನಂತೆ ಮಾಡಿದ ಗುರುಚೆನ್ನಬಸವಣ್ಣನ
ಕರುಣದಿಂದ ಅಭ್ಯಾಸಯೋಗವನತಿಗಳೆಂದು ಶಿವಯೋಗದಲ್ಲಿ ನಿತ್ಯನಾಗಿ
ಷಡುಸ್ಥಲಕ್ಕಧಿಕಾರಿಯಾದೆ ನಿನ್ನವರ ಸಲುಗೆಗೆ ಸಂದೆ........"

ಮುಂದೆ ಪ್ರಮಥ ಪಂಚಕದಲ್ಲಿ ಒಬ್ಬನಾಗಿ ಹೊಳೆದ ಸಿದ್ಧರಾಮಯ್ಯ.

"ಎನ್ನ ತನ್ನವನೆನಿಸಿ ಮನ್ನಿಸಿದ ಭಕ್ತಿಯೊಳು
ಸನ್ನುತನು ಆದೆನ್ನೈ ಸಕಲದೊಳಗೆ
ಬಿನ್ನಾಣದೇಹವನು ತನ್ನಂತೆ ಮಾಡಿದನು
ಚೆನ್ನಬಸವಣ್ಣನೈ ಶ್ರೀ ಮಲ್ಲಿಕಾರ್ಜುನಾ"

ಎಂದು ಮಿಶ್ರಸ್ತೋತ್ರದ ತ್ರಿವಿಧಿಯಲ್ಲಿಯೂ

ಬಸವ ಬಸವಾ ಬಸವ ಬಸವೇಶ ಬಸವರಸ ।
ಬಸವಯ್ಯ ನಿಮ್ಮಡಿಗೆ ಶರಣು ಶರಣು ॥
ಬಸವ, ಬಸವಲಿಂಗ, ಬಸವಪ್ಪ, ಬಸವೇಶ ।
ಬಸವಯ್ಯ ಶರಣೆಂಬಿ ಯೋಗಿನಾಥ ॥

ಎಂದು ಬಸವ ಸ್ತೋತ್ರ ತ್ರಿವಿಧಿಯಲ್ಲಿಯೂ

"ಗುರುಚರವೆ ಗುರುಪರವೆ ಗುರುವಿಷಲಿಂಗವೆ ।
ಗುರುಶುದ್ಧ ಪ್ರಸಾದ ಪರಂಜ್ಯೋತಿಯೆ ।
ಕರುಣಾಕರನೆ ಎನ್ನ ತಡಿಗೆ ಸೇರಿಸಿದವನೆ ।
ಗುರುಪ್ರಭುವೆ ಶರಣಯ್ಯ ಯೋಗಿನಾಥ"

ಎಂದು ಅಷ್ಟಾವರಣ ಸ್ತೋತ್ರ ತ್ರಿವಿಧಿಯಲ್ಲಿಯೂ ಚೆನ್ನಬಸವ, ಬಸವ, ಅಲ್ಲಮರನ್ನು ಅಳ್ತಿಯಿಂದ ಸ್ತುತಿಸಿದ್ದರೂ ತಾನೂ ಸ್ವತಂತ್ರ ಪ್ರಭೆ– ಪ್ರತಿಭೆಗಳಿಂದ ಬೆಳಗಿದನಾತನು. ಆತನ ವಚನಗಳು ವಚನ ಭಾಂಡಾರದ ಅಮೂಲ್ಯ ರತ್ನಗಳಾಗಿ ರಾಜಿಸುತ್ತಿವೆ :

"ಮನವೆಂಬುದು ಬೇರಿಲ್ಲ । ಮಹಾದೇವನ ಮಹಾ ಅರುಹು ನೋಡಾ।
ಸಂಕಲ್ಪ ವಿಕಲ್ಪಗಳ ಧರಿಸಿದಲ್ಲಿ ಮನವೆನಿಸಿತ್ತು ; ಅದು ಅಳಿದಲ್ಲಿ
ಮಹಾ ಜ್ಞಾನವೆನಿಸಿತ್ತು !
ಅಳಿದ ಭಾವ ತಲೆದೋರಿದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನನೆನೆಸಿತ್ತು"

"ದೇಹ ನೋಡುವಡೆ ಪಾಂಚಭೌತಿಕ, ತಾನೋಡುವೊಡೆ ಜೀವಾಂತಿಕ ;
ಧನನೋಡುವೊಡೆ ಕುಬೇರನದು ; ಮನನೋಡುವೊಡೆ ವಾಯುವ ಕೂಡಿದ್ದು;
ವಿಚಾರಿಸಿ ನೋಡಿದೊಡೆ ಬ್ರಹ್ಮನದು ;
ನಾಮಾಡುವೆನೆಂದೊಡೆ ಅದು ಅದಿಶಕ್ತಿ ಚೈತನ್ಯ ;
ನಾತಿಳಿದಿಹೆನೆಂದರೆ ಅದು ಜ್ಞಾನದ ಬಲ ;
ಆ ಜ್ಞಾನವು ನಾ ಎಂದೊಡೆ ಇದಿರಿಟ್ಟು ತೋರುತ್ತಿದೆ ;
ತೋರುವ ಆನಂದ ಮೂರ್ತಿ ನಾ ಎಂದೊಡೆ ಅದು ಸಾಕ್ಷಿಯಾಗಿ ನಿಂತಿತ್ತು;
ಸಾಕ್ಷಿಯೆಂಬುದದು ತಿಳಿದು ತಿಳಿಯದೊಂಬುದಕ್ಕೆ ಬಯಲಾದ ನಮ್ಮ
ಕಪಿಲಸಿದ್ಧ ಮಲ್ಲಿಕಾರ್ಜುನ ತಂದೆ"

"ಸಮದೃಷ್ಟಿಯಾಗದವನ ಸದ್ಭಕ್ತನೆಂತೆಂಬೆ? ವಿಷಯಗಳಳಿಯದವನ
ಮಹೇಶನೆಂತೆಂಬೆ?
ಶಿವಕರುಣ ವಿಡಿಯದನ್ನಕ್ಕ ಪ್ರಸಾದಿಯೆಂತೆಂಬೆ?
ಅಂಗೇಂದ್ರಿಯಂಗಳಳಿಯದವನ ಪ್ರಾಣಲಿಂಗಿಯೆಂತೆಂಬೆ?
ಸಂಕಲ್ಪ ಹರಿಯದನ್ನಕ್ಕ ಶರಣನೆಂತೆಂಬೆ? ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ
ಕೂಟವನರಿಯದವನ ಐಕ್ಯನೆಂತೆಂಬೆ?"

"ಲಿಂಗವ ಪೂಜಿಸುವವರ ಕಂಡರೆ ಎನ್ನುಮನವು ಉಬ್ಬಿತ್ತು ನೋಡಯ್ಯ! ಜಂಗಮವ ಪೂಜಿಸುವರ ಕಂಡರೆ ಹೋದ ಪ್ರಾನ ಬಂದಂತಾಯಿತ್ತಯ್ಯ! ತನ್ನತಾನರಿಯುವವರ ಕಂಡರೆ ಕಪಿಲಸಿದ್ಧಮಲ್ಲಯ್ಯನೀತನೆಂದು ನಂಬಿತ್ತು ನೋಡಯ್ಯ ಎನ್ನ ಮನವು !"

"ಮಾಡಿದರು, ಮಾಡಿದರು, ತಮ್ಮ ಹಿತಕ್ಕಲ್ಲದೆ ಮತ್ತಾರ ಹಿತಕ್ಕಲ್ಲ ನೋಡಯ್ಯ ನೋಡಿದರು, ನೋಡಿದರು–ತಮ್ಮ ಹಿತಕ್ಕಲ್ಲದೆ ಮತ್ತಾರ ಹಿತಕ್ಕಲ್ಲ ನೋಡಯ್ಯ ತನ್ನ ಬಿಟ್ಟನ್ಯ ಹಿತವ ನೋಡಿದರೆ ಕೂಡಿಕೊಂಬ ಕಪಿಲಸಿದ್ಧ ಮಲ್ಲಯ್ಯನವರ."

"ತಿಳಿ ನೀರೆಂಬಿ, ತಿಳಿ ನೀರೆಂಬಿ;
'ತಿಳಿನೀ' ಎಂದು ಒಂದು ದಿನ ಅಂದಿಲ್ಲೆಲೆ ಮಾನವಾ;
ಕ್ಷಣ ಕ್ಷಣಕ್ಕೆ 'ತಿಳಿ ನೀ' ಎಂದರೆ
ತಳುವದೆ ತನ್ನ ನಿಜವ ಕೊಡನೆ ಕಪಿಲಸಿದ್ಧ ಮಲ್ಲೇಂದ್ರ?"

"ದುಷ್ಕರ್ಮಗಳ ಮಾಡುವರನಂತರುಂಟು – ಸತ್ಕರ್ಮಗಳ
ಮಾಡುವವರೊಬ್ಬರೂ ಇಲ್ಲ ನೋಡಯ್ಯ !
ದುಷ್ಕರ್ಮವೆಂದರೆ ವಿಷಯವಾಸನೆ ; ಸತ್ಕರ್ಮವೆಂದರೆ
ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡುವ ವಾಸನೆ !"

ಮುಂತಾದ ಅನೇಕ ಅನರ್ಘ್ಯ ವಚನಗಳನ್ನು ಹಾಡಿ ಹೋಗಿದ್ದಾನೆ ಸಿದ್ಧರಾಮಯ್ಯ.

"ಆರುವತ್ತೆಂಟು ಸಹಸ್ರ ವಚನಗಳ ಹಾಡಿ ಹಾಡಿ
ಸೋತಿತೆನ್ನ ಮನ ನೋಡಯ್ಯ ;
ಹಾಡುವುದೊಂದೆ ವಚನ, ನೋಡುವುದೊಂದೆ ವಚನ ;
ವಿಷಯ ಬಿಟ್ಟು ನಿರ್ವಿಷಯವಾಗುವುದೊಂದೇ ವಚನ"

ಎಂದು ತಾನು ಹಾಡಿರುವುದು ಅರುವತ್ತೆಂಟು ಸಹಸ್ರ ವಚನಗಳೆಂಬ ಸೂಚನೆಯನ್ನೂ ಉಳಿಸಿ ಹೋಗಿದ್ದಾನೆ.

"ಕಪಿಲಸಿದ್ಧ ಮಲ್ಲಯ್ಯ ಏಲೇಶಂಗೆ ಪ್ರಾಣವ
ಕೊಟ್ಟಿದ್ದದಾವ ಬಲ ಹೇಳಯ್ಯ?"

ಎಂದು ಏಲೇಶನಿಗೆ ಪ್ರಾಣದಾನವಿತ್ತ ಪವಾಡದ ನೆನಪನ್ನೂ ಉಳಿಸಿ ಹೋಗಿದ್ದಾನೆ. ೧೨೫೬ರಲ್ಲಿ ಸೊರಬ ತಾಲ್ಲೂಕಿನ ಕೇರಿಸಾಲೆ ಗ್ರಾಮದಲ್ಲಿ ಮಹಾಮಂಡಲೇಶ್ವರ ಬೀರರಸನು ಬರೆಸಿದ ಶಾಸನದಲ್ಲಿಯೂ ೧೨೬೫ರಲ್ಲಿ ಮಹಾಪ್ರಧಾನ ದೇವರಾಜನು ಚಂಗೂರು ಗ್ರಾಮವನ್ನು 'ಕಪಿಲಸಿದ್ಧ ಮಲ್ಲಿಕಾರ್ಜುನ'

ದೇವರಿಗೆ ಧಾರೆಯೆರೆದು ಬರೆಸಿದ ಶಾಸನದಲ್ಲಿಯೂ ಅವನ ಎರಡೆರಡು ವಚನಗಳು ಉದಾಹೃತವಾಗಿವೆ. ಅವೆರಡರಲ್ಲಿಯೂ ಸೊನ್ನಲಿಗೆಯು ದಕ್ಷಿಣ ವಾರಣಾಸಿಯೆಂದೂ ಅಭಿನವ ಶ್ರೀಶೈಲವೆಂದೂ ವರ್ಣಿಸಲ್ಪಟ್ಟಿದೆ.

ಹೌದು, ಸೊನ್ನಲಿಗೆಯನ್ನು ಅಭಿನವ ಶ್ರೀಶೈಲವನ್ನಾಗಿ ಪರಿವರ್ತಿಸಿದ ಪ್ರಮಥಪುಂಗವ ಸಿದ್ಧರಾಮ. ಕಲ್ಯಾಣದ ಕ್ರಾಂತಿಯ ತರುವಾಯವೂ ಆತನು ಉಳಿವೆ ಶ್ರೀಶೈಲಗಳಿಗೆ ಹೋಗದೆ ಸೊನ್ನಲಾಪುರಕ್ಕೇ ಹಿಂದಿರುಗಿದ. ಅಲ್ಲಿ ಮತ್ತೆ ಮಾನವೋದ್ಧರಣ ಕಾರ್ಯದಲ್ಲಿ ತೊಡಗಿದನೆಂದು ತೋರುತ್ತದೆ. ನಿರಂಜನ ವಂಶರತ್ನಾಕರದ ಪ್ರಕಾರ ಮೊದಲನೆಯ ಶೂನ್ಯಸಿಂಹಾಸನಾಧೀಶ್ವರರು ಪ್ರಭುದೇವರು;

ಎರಡನೆಯವರು ಚನ್ನಬಸವೇಶ್ವರರು ; ಮೂರನೆಯವರು ಸಿದ್ಧರಾಮೇಶ್ವರರು.

ಸಿದ್ಧರಾಮೇಶ್ವರರು ಅಲ್ಲಮಪ್ರಭುಗಳು ಕಲ್ಯಾಣ ಬಿಡುವುದಕ್ಕೆ ಮೊದಲೇ ಸೊನ್ನಾಲಿಗಿಗೆ ಹಿಂದಿರುಗಿರಬಹುದು? ಅಲ್ಲಿ ಸಿದ್ಧರಾಮೇಶ್ವರರು ಮತ್ತೆ ದುಃಖಿಗಳ ಅರ್ತಿನಾಶನ ಕಾರ್ಯದಲ್ಲಿ ಮಗ್ನರಾಗಿ ತಮ್ಮನ್ನು ತಾವು ಮರೆತಿರಲು ರಾಘವಾಂಕನ ಸಿದ್ಧರಾಮ ಚಾರಿತ್ರದ ಪ್ರಕಾರ ಮತ್ತೊಮ್ಮೆ ಪ್ರಭುದೇವರು ಶ್ರೀಶೈಲಕ್ಕೆ ಹೋಗುವ ಮುನ್ನ ಅಭಿನವ ಶ್ರೀಶೈಲ ಸೊನ್ನಲಿಗೆಗೆ ಆಗಮಿಸಿ ಸಿದ್ಧರಾಮುನನ್ನು ಎಚ್ಚರಿಸಿರಬಹುದೆ? ಇವೆಲ್ಲ ಊಹೆಗಳು. ವಸ್ತುಸ್ಥಿತಿ ಏನಿದೆಯೋ ಆ ಗುಹೇಶ್ವರನಿಗೇ ಗೊತ್ತು.

ಇಷ್ಟು ಮಾತ್ರ ನಿಜ. ಕಲ್ಯಾಣಕ್ರಾಂತಿಯ ತರುವಾಯದಲ್ಲಿಯೂ ಕೆಲವು ದಿನಗಳವರೆಗೆ ಸಿದ್ಧರಾಮದೇವರು ಇದ್ದರು. ಪ್ರತಿದ್ಧರಾಗಿಯೇ ಇದ್ದರು. ಬಿಜ್ಜಳನ ತಮ್ಮ ಕರ್ಣದೇವನು ಕಲ್ಯಾಣದಲ್ಲಿ ಪಟ್ಟವನ್ನೇರಬೇಕಾಗಿದ್ದಿತು. ತನಗೆ ಸಿದ್ಧರಾಮನೇ ಪಟ್ಟಗಟ್ಟಬೇಕೆಂದು ಅವನಿಗೆ ಆಸೆ. ಕರೆತರಲು ಕಾಣಿಕೆಯೊಡನೆ ಉಚಿತಪರಿವಾರವನ್ನು ಕಳಿಸಿದನು ಮಂತ್ರಿಯ ಮುಂದಾಳುತನದಲ್ಲಿ. ಸಿದ್ಧರಾಮದೇವರು ಬರದಿರಲು ಕರ್ಣದೇವರು ಮತ್ತೆ ಸೊಡ್ಡಳಬಾಚರಸರನ್ನು ಕಳುಹಿಸಿದನು.

ಇಬ್ಬರೂ ಶರಣರು. ಒಬ್ಬರನ್ನೊಬ್ಬರು ತಬ್ಬಿಕೊಂಡು ಬಾಷ್ಪಸ್ನಾನವನ್ನು ಮಾಡಿಸಿದರು. ಕಲ್ಯಾಣ ಕೆಟ್ಟಮೇಲೂ ಮತ್ತೆ ತಮ್ಮಿಬ್ಬರ ಸಮಾಗಮವಾದುದಕ್ಕಾಗಿ ಅವರಿಬ್ಬರಿಗೂ ಅನಿರ್ವಚನೀಯವಾದ ಆನಂದವಾಗಿದ್ದಿತು. ಸಿದ್ಧರಾಮದೇವರು ಕರ್ಣದೇವನ ಭವಿಷ್ಯವನ್ನು ಬಲ್ಲವರಾದುದರಿಂದ ಬಾಚರಸುರು ಬಂದರೂ ಕಲ್ಯಾಣಕ್ಕೆ ಕರ್ಣದೇವನಿಗೆ ಪಟ್ಟಗಟ್ಟಲು ಹೋಗಲಿಲ್ಲ : “ಶಿವನನ್ನು ನಂಬಿ ರಾಜ್ಯವಾಳುತ್ತಿರಲಿ” ಎಂಬ ಶುಭ ಸಂದೇಶವನ್ನು ಇತ್ತು ಬಾಚರಸರನ್ನು ಬೀಳ್ಕೊಟ್ಟರು.

ಹೀಗೆ ಕೊನೆಯವರೆಗೆ ಸಮತೆಯ ಸಿದ್ಧರಾಗಿ ಬಾಳಿ, ಸಿದ್ಧರಾಮ ಶಿವಯೋಗಿಗಳ ಸೊನ್ನಲಿಗೆಯಲ್ಲಿಯೇ ಸಮಾಧಿಸ್ಥರಾದರು. ಇಂದಿಗೂ ಕೆರೆಯ ಮಧ್ಯದಲ್ಲಿ ಅಧ್ಯಾತ್ಮದ ಅರವಿಂದದಂತೆ ಅವರ ದೇವಾಲಯ ಆಸ್ತಿಕರಿಗೆಲ್ಲ ಪವಿತ್ರ ಯಾತ್ರಾ ಸ್ಥಾನವಾಗಿದೆ. ಶಿಷ್ಯ ಕಲ್ಲಯ್ಯನ ಸಮಾಧಿಯೂ ಅನತಿ ದೂರದಲ್ಲಿಯೇ ಸಿದ್ಧರಾಮ ದೇವಾಲಯದ ಪೌಳಿಯಲ್ಲಿಯೇ ಇದ್ದು ನಿಸ್ಸೀಯ ಶಿಷ್ಯಭಕ್ತಿಗೆ ನಿದರ್ಶನಾವಾಗಿ ಉಳಿದಿದೆ;

ಕಂತುವನೆ ಕಂಗೆಡಿಸಿಯೊಳಪೊ–
ಕ್ಕಂತರಂಗ ವಿಚಾರವೆಲ್ಲದ
ಸಂತೆಯಂಗಡಿಯಂತೆ ಸೊನ್ನಲಪುರದೊಳೊಡ್ಡೈಸಿ
ಚಿಂತಿತಾರ್ಥವನರ್ಥಿಗಿತ್ತು ನಿ–
ರಂತರಖಿಳರಿಗರಿವನೀವ ಮ–
ಹಂತನೆನಿಸಿದ ಸಿದ್ಧರಾಮಯ್ಯಂಗೆ ಶರಣಾರ್ಥಿ !

– ಪ್ರ.ಲಿಂ.ಲೀಲೆ

***

ಯೋಗಿ ಬಂದಿದಾರೇನ ಬಾಗಿ ಶರಣಾದೇನೆ
ಯೋಗದ ಕೀಲ ತಿಳಿಸುವರೇನ
ಯೋಗದ ಕೀಲ ತಿಳಿಸುವರೇನ–ಸಿದ್ಧರಾಮ
ರಾಮಭೋಗದ ಆಚೆ ಒಯ್ವರೇನು?

–ಜಯದೇವಿತಾಯಿ ಲಿಗಾಡೆ

■

# ನೀರತಾವರೆ ಅಕ್ಕಮಹಾದೇವಿ

ಇನ್ನೂ ಇಪ್ಪತ್ತರ ಗೆರೆ ದಾಟಿಲ್ಲವೆಂದು ತೋರುತ್ತಿದೆ. ಏರುಜವ್ವನದಲ್ಲಿಯೇ ವೈರಾಗ್ಯ ಆವರಿಸಿತೆ ಇವಳನ್ನು? ಏನಿದು ವಿಚಿತ್ರ : ದಿಗಂಬರವೇ ದಿವ್ಯಾಂಬರವಾಗಿದೆ: ಕೇಶರಾಶಿಯೇ ವೇಷಭೂಷಣವಾಗಿದೆ ; ರುದ್ರಾಕ್ಷಿಯೇ ಮೈದೊಡಿಗೆಯಾಗಿದೆ ; ವಿಭೂತಿಯೇ ಒಳಗುಂದದರಿಶಿನವಾಗಿದೆ ! ಇವಳೆಂಥ ಮದುವಳಿಗೆ ! ತನ್ನ ಮದುವೆಯ ಓಲೆಯನ್ನು ತಾನೇ ಒಯ್ಯುತ್ತಿರುವಂತಿದೆ. ಗಿರಿದರಿಗಳತ್ತ ಗಮನವಿಲ್ಲ; ವೃಕ್ಷಪಕ್ಷಿಗಳತ್ತ ಲಕ್ಷ್ಯವಿಲ್ಲ. ನಡೆದಿದ್ದಾಳೆ ದಿವ್ಯನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿ ! ಆಗಾಗ ಏನೇನನ್ನೋ ಉಸಿರುತ್ತ ನಡೆದಿದ್ದಾಳೆ. ಏನದು? ಕಿವಿಗೊಟ್ಟು ಕೇಳಿ :

"ಹಸಿವೇ ನೀನು ನಿಲ್ಲು ನಿಲ್ಲು,
ತೃಷೆಯೇ ನೀನು ನಿಲ್ಲು ನಿಲ್ಲು,
ನಿದ್ರೆಯೇ ನೀನು ನಿಲ್ಲು ನಿಲ್ಲು,
ಕಾಮವೇ ನೀನು ನಿಲ್ಲು ನಿಲ್ಲು,
ಕ್ರೋಧವೇ ನೀನು ನಿಲ್ಲು ನಿಲ್ಲು,
ಮೋಹವೇ ನೀನು ನಿಲ್ಲು ನಿಲ್ಲು,
ಲೋಭವೇ ನೀನು ನಿಲ್ಲು ನಿಲ್ಲು,
ಮದವೇ ನೀನು ನಿಲ್ಲು ನಿಲ್ಲು,
ಮಚ್ಚರವೇ ನೀನು ನಿಲ್ಲು ನಿಲ್ಲು,
ಸಚರಾಚರವೇ ನೀನು ನಿಲ್ಲು ನಿಲ್ಲು,
ನಾನು ಚೆನ್ನಮಲ್ಲಿಕಾರ್ಜುನ ದೇವರ
ಅವಸರದ ಓಲೆಯನ್ನೊಯ್ಯುತ್ತಲಿದ್ದೇನೆ ! ಶರಣಾರ್ಥಿ !"

ಮಾನವ ಹಸಿವೆ ತೃಷೆಗಳ ಶಿಶು, ನಿದ್ರೆ ಕಾಮಗಳ ಕೂಸು, ಇವೆಲ್ಲವುಗಳಿಗೂ ನಿಲ್ಲಲು ಹೇಳಿ ಹೊರಟಿರುವಳಲ್ಲ ಈ ಭಯವಿಲ್ಲದ ಬಾಲೆ ! ಈ ಹಸಿವೆ ತೃಷೆಗಳ, ನಿದ್ರೆ ಕಾಮಗಳ ತೃಪ್ತಿಗಾಗಿಯೇ ಮಾನವ ಮನೆಕಟ್ಟಿದ, ಸಂಸಾರ ಹೂಡಿದ, ಸಮಾಜಶಾಸ್ತ್ರ, ಶಾಸನ, ಸರಕಾರ–ಏನೇನೋ ಏರ್ಪಡಿಸಿಕೊಂಡ. ಎಷ್ಟೊಂದು

ಹೋರಾಟ ಇವುಗಳ ಸಲುವಾಗಿ ಎಲ್ಲೆಲ್ಲಿಯೂ ! ಇವುಗಳಿಗಾಗಿಯೇ ಅಲ್ಲವೆ ಕೊಲೆ ಸುಲಿಗೆ ಕಳವು ಕದನಗಳು? ಇವುಗಳ ಬಾಧೆಯನ್ನು, ಬಲುಮೆಯನ್ನು, ಬಂಧನವನ್ನು ಅದೆಂತು ಜಯಿಸಿದಳು ಈ ವೀರವಿರಾಗಿಣಿ? ಯತಿಗಳನ್ನೂ ವ್ರತಿಗಳನ್ನು ಧೃತಿಗೆಡಿಸುವ ಕಾಮಕ್ರೋಧಾದಿ ವೈರಿಗಳ ದಾಳಿಯನ್ನೆಂತು ಎದುರಿಸಿದಳು ಈ ಅಬಲೆ? ಪಂಚೇಂದ್ರಿಯಗಳ ಉರವಣೆಯನ್ನು, ಪಂಚಬಾಣನ ಉರವಣೆಯನ್ನು ಅದೆಂತು ಮೀರಿದಳು ಈ ಧೀರೆ? ಎಲ್ಲ ಅಚ್ಚರಿ ! ಅದಾದ ಧೈರ್ಯವೋ ಇವಳಿಗೆ–ಘೋರಾರಣ್ಯದಲ್ಲಿ, ಭಯಾನಕವಾದ ಗಿರಿದರಿಗಳಲ್ಲಿ, ಬಿಸಿಲು–ಮಳೆ–ಗಾಳಿಗಳ ಹೆದರಿಕೆಯಿಲ್ಲದೆ, ಖಗಮೃಗಗಳ ಭಯವಿಲ್ಲದೆ, ಹಸಿವೆ ತೃಷೆಗಳ ಹಂಗಿಲ್ಲದೆ ಹೊರಟಿದ್ದಾಳೆ :

"ಹಸಿವಾದೊಡೆ ಭಿಕ್ಷಾನ್ನಗಳುಂಟು ! ತೃಷೆಯಾದೊಡೆ ಕೆರೆಹಳ್ಳಬಾವಿಗಳುಂಟು!
ಶಯನಕ್ಕೆ ಹಾಳುದೇಗುಲಗಳುಂಟು ! ಚೆನ್ನಮಲ್ಲಿಕಾರ್ಜುನಯ್ಯ ,
ಆತ್ಮಸಂಗಾತಕ್ಕೆ ನೀನೆನಗುಂಟು !"

ಇದು ಅವಳು ಹಸಿವೆ ತೃಷೆಗಳ, ನಿದ್ರೆ ಕಾಮಗಳ ಪೀಡೆಯನ್ನು ಪರಿಹರಿಸಿಕೊಂಡ ಪರಿ.

ಆಹಾರ–ನಿದ್ರಾ–ಭಯ–ಮೈಥುನಗಳು ಸಮಸ್ತ ಮನುಜರಿಗೂ ಸಾಮಾನ್ಯವಾದುವುಗಳು. ಒಂದೊಂದೂ ಹಲವು ಮುಖವಾಗಿರುವುದು. ಹಸಿವೆಯೂ ಹೊಟ್ಟೆಯ ಹಸಿವೆ, ಇಂದ್ರಿಯಗಳ ಹಸಿವೆ, ಹೊನ್ನು–ಹೆಣ್ಣು–ಮಣ್ಣುಗಳ ಹಸಿವೆ, ಸ್ಥಾನಮಾನಗಳ ಹಸಿವೆ ಇತ್ಯಾದ ಹಲವು ಬಗೆಯಾಗಿದೆ; ನೀರಡಿಕೆಯು ಬಾಯಾರಿಕೆ, ನೆತ್ತರಿನ ನೀರಡಿಕೆ, ಕೀರ್ತಿಯ ದಾಹ ಇತ್ಯಾದಿ ಹಲವು ರೀತಿಯದಾಗಿದೆ; ನಿದ್ರೆಯ ಪ್ರತಾಪವನ್ನೇನು ವರ್ಣಿಸುವುದು?

"ದೇವದಾನವ ಮಾನವಾದಿಗಳೊಳಗಾದ ಎಲ್ಲ ಜೀವರುಗಳಲ್ಲಿ
ಹಿರಿಯ ಕಿರಿದೆನ್ನದೆ ನಿದ್ರೆಯ ಬಲೆಯ ಬೀಸಿ ಸರಿದು ತೆಗೆಯಲೊಡನೆ
ಅರಿವು ಮರೆಯಿತ್ತು, ನೋಟ ಜಾರಿತ್ತು, ಬುದ್ಧಿ ತೊರೆಯಿತ್ತು , ದೇಹವೊರಗಿತ್ತು!
ಇದು ನಿಚ್ಚನಿಚ್ಚ ಬಹಹೋಹ ಸಕೀಲವನಾರೂ ಅರಿಯರು ನೋಡಾ,
ಕೂಡಲ ಸಂಗಮದೇವಾ !"

ಎಂದು ಬಸವಣ್ಣನವರೇ ಹೊಸ ಬಗೆಯಲ್ಲಿ ಬಣ್ಣಿಸಿದ್ದಾರೆ ಅದರ ಅತುಲ ಪ್ರತಾಪವನ್ನು ! ಇನ್ನು ಭಯವೋ, ಅದು ಜಗದ್ವ್ಯಾಪಿ. ಭುವಿಯೆಲ್ಲ ಭಯದಿಂದ ಮುಚ್ಚಿಹೋಗಿದೆ. ಹುಟ್ಟಿದರೆ ಸಾವಿನ ಭಯ, ಸಾವು ತಪ್ಪಿದರೆ ರೋಗದ ಭಯ,

ರೋಗ ತಪ್ಪಿದರೆ ದಾರಿದ್ರ್ಯದ ಭಯ, ದಾರಿದ್ರ್ಯ ತಪ್ಪಿದರೆ ಇದ್ದುದು ಇಲ್ಲವಾದೀತೆಂಬ ಭಯ–ಅದಕ್ಕೆ ಆದಿ ಅಂತ್ಯ ಉಂಟೆ? ಅವನ ?ಭಯದಿಂದ ಅಗ್ನಿ ಸುಡುತ್ತದೆ. ಗಾಳಿ ಚಲಿಸುತ್ತದೆ, ನೀರು ಹರಿಯುತ್ತದೆ. ಭೂಮಿ ಬೆಳೆಯುತ್ತದೆ, ಆಕಾಶ ಮಳೆಗರೆಯುತ್ತದೆಯೆಂದು ಪಳವಾತಿನಲ್ಲಿ ಹೇಳಿರುವುದು ಭಯಕ್ಕೆ ಕೊಟ್ಟ ಬಿರಿದಿನಂತಿಲ್ಲವೆ? ಧರ್ಮಕ್ಕೂ ಭಯವೇ ಮೂಲ, ಬಹುದೇವತಾಕಲ್ಪನೆಗೂ ಭಯವೇ ಮೂಲ, ಪೂಜೆ ಪ್ರಾರ್ಥನೆಗಳಿಗೂ ಭಯವೇ ಮೂಲ. ಹೀಗೆ ಭಯವು ಸಹಸ್ರರೂಪಿ, ವಿಶ್ವವ್ಯಾಪಿ !

ಇವೆಲ್ಲವುಗಳನ್ನೂ ಮೀರಿದುದು ಕಾಮ ! ಕಾಮ ಬಯಸಿ ಬೇಡುತ್ತದೆ ; ಬಯಸಿದುದು ಸಿಕ್ಕರೆ ಬಯಕೆ ಇನ್ನೂ ಹೆಚ್ಚಾಗುತ್ತದೆ ; ಸಿಕ್ಕದಿದ್ದರೆ ಕ್ರೋಧ ಹುಟ್ಟುತ್ತದೆ ; ಕ್ರೋಧದಿಂದ ಸಮ್ಮೋಹ ಸಂಜನಿಸುತ್ತದೆ. ಸಮ್ಮೋಹದಿಂದ ಸ್ಮೃತಿವಿಭ್ರಮ, ಸ್ಮೃತಿವಿಭ್ರಮದಿಂದ ಬುದ್ಧಿನಾಶ, ಬುದ್ಧಿನಾಶದಿಂದ ಸರ್ವನಾಶ–ಹೀಗಿದೆ ಕಾಮದ ಅನಿಷ್ಟ ಪರಂಪರೆ ! ಆದರೂ ಮನುಷ್ಯ ಕಾಮದಲ್ಲಿಯೇ ಹುಟ್ಟಿ, ಕಾಮದಲ್ಲಿಯೇ ಬೆಳೆದು, ಕಾಮಕ್ಕಾಗಿ ಕಳವಳಿಸಿ ಕಂಗೆಟ್ಟು, ಕಾಮದಲ್ಲಿಯೇ ದಿನಗಳೆದು, ಕಾಮಕಾಮವೆನ್ನುತ್ತಲೇ ಕೊನೆಯುಸಿರನ್ನೆಳೆಯುತ್ತಾನೆ ; ಅದರಿಂದ ಪಾರಾದವರಾರು? 'ಗರಿತೋರೆ ಗಂಡರೆಂಬುವರ ಕಾಣೆ, ನಿರಿಸೋಂಕಲು ಮುನಿಯಿಲ್ಲ ನೋಡಯ್ಯಾ!' ಎಂದು ಬಸವಣ್ಣನವರೇ ಕಾಮದ ಅದಮ್ಯತೆಯನ್ನು ಮಾರ್ಮಿಕವಾಗಿ ಬಿತ್ತಿರಿಸಿದ್ದಾರೆ.

ಈ ನಾಲ್ಕನ್ನೂ ಎಳೆವರೆಯದಲ್ಲಿಯೇ ಏಕಾಂಗವೀರಳಾಗಿ ಎದುರಿಸಿ, ಈ ನಾಲ್ಕನ್ನೂ ತನ್ನ ಉಜ್ವಲ ವೈರಾಗ್ಯದಿಂದ ಸೋಲಿಸಿ, ಈ ನಾಲ್ಕನ್ನೂ ಮೀರಿ ಮಹೋನ್ನತಿಯನೇರಿ ಮೆರೆದ ಈಕೆ ಮಹಾದೇವಿ ! ಇನ್ನಾರಿಗಿದೆ ಈ ಆತ್ಮ ವಿಶ್ವಾಸ, ಅಭಯ ಸಂಪತ್ತು, ಅಜಿಂಕ್ಯ ಧೈರ್ಯ?

"ಆರೂ ಇಲ್ಲವಳೆಂದು ಅಳಿಗೊಡಲು ಬೇಡ ಕಂಡಯ್ಯ !
ಏನುಮಾಡಿದಡೆಯೂ ನಾನಂಜುವಳಲ !
ತರಗೆಲೆಯ ಮೆಲ್ಲಿದ್ದು ನಾನಿಹೆನು, ಸುರಿಗೆಯ ಮೇಲೊರಿಗೆ ನಾನಿಹೆನು !
ಚೆನ್ನಮಲ್ಲಿಕಾರ್ಜುನಯ್ಯ, ಕರೆಕೆಡೆ ಕಾಡಿದೊಡೆ
ಒಡಲನು ಪ್ರಾಣವನು ನಿಮಗೊಪ್ಪಿಸಿ ಶುದ್ಧಳಹೆನು !"

ಒಂದು ಒಡಲು, ಅದಕ್ಕೊಂದು ಪ್ರಾಣ–ಇವೆರಡೇ ಅಲ್ಲದೇ ಈ ನಾಲ್ಕೂ ಕೇಡುಗಳಿಗೆ, ಪೀಡೆಗಳಿಗೆ ಮೂಲ? ಇವುಗಳಿಗೆ ತರಗೆಲೆಗಳನ್ನಾದರೂ ತಿನ್ನಿಸೇನು,ಇವುಗಳನ್ನು ಸುರಗಿಯ ಮೇಲಾದರೂ ಒರೆಗಿಸೇನು, ಕೊನೆಗೆ ಚೆನ್ನಮಲ್ಲಿಕಾರ್ಜುನನ ಚರಣಗಳಿಗಾದರೂ ಒಪ್ಪಿಸೇನು–ಇವುಗಳಿಗೆ ದಾಸಿಯಾಗೆ

ನಾನು, ಇವುಗಳ ಕತದಿಂದ ಆ ನಾಲ್ಕು ಅಧೋಗಾಮಿ ಪ್ರವೃತ್ತಿಗಳಿಗೆ ಆಳಾಗೆ ನಾನು ! ಇದು ಅವಳ ಅಚಲ ನಿರ್ಧಾರ ! ಯುಗಯುಗಗಳ ಇತಿಹಾಸದಲ್ಲಿ ಈ ವಯಸ್ಸಿನ ಬಾಲೆಯೊಬ್ಬಳು ಇಂಥ ನಿರ್ಧಾವನ್ನು ಕೈಕೊಂಡುದು ಅದೇ ಮೊದಲ ಸಲವೆಂದು ತೋರುತ್ತದೆ!

ಅವಳ ಈ ನಿರ್ಧಾರವನ್ನು ಈಶ್ವರನೂ ಒರಗೆ ಹಚ್ಚಿದನೇನೋ–ನಿಸರ್ಗ ಕ್ಷೋಭೆಗಳನ್ನು ಮುಂದೆ ಮಾಡಿ. ಅದಕ್ಕೂ ಅಲುಗಲಿಲ್ಲ, ಅಳುಕಲಿಲ್ಲ, ಅಂಜಲಿಲ್ಲ ಅವಳು. ತಾನೇರುತ್ತಲಿದ್ದ ಪರ್ವತಕ್ಕಿಂತಲೂ ನಿಶ್ಚಲವಾಗಿದ್ದಿತವಳ ನಿರ್ಧಾರ.

"ಕಿಡಿ ಕಿಡಿ ಕೆದರಿದಡೆ ಎನಗೆ ಹಸಿವು ತೃಷೆ ಅಡಗಿತೆಂಬೆನು !
ಮುಗಿಲು ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂವೆನು !
ಗಿರಿ ಮೇಲೆ ಬಿದ್ದಡೆ ಎನ್ಗೆ ಪುಷ್ಪವೆಂಬೆನು !
ಚೆನ್ನಮಲ್ಲಿಕಾರ್ಜುನಯ್ಯ, ಶಿರಹರಿದು ಬಿದ್ದೊಡೆ
ಪ್ರಾಣಿ ನಿಮಗರ್ಷಿತವೆಂಬೆನು !"

ಇದಕ್ಕೂ ಕಠೋರವಾದ ಸತ್ವಪರೀಕ್ಷೆ ಇದೆಯಾದರೂ ಎಲ್ಲಿ? ಇದ್ದರೂ ಈ ಪರೀಕ್ಷೆಗೆ ಎದೆಗೆಡದ ಆ ಮಹಾದೇವಿ ಅದಕ್ಕೆ ಅಂಗುವಳೆ? "ಚಂದನವ ಕಡಿದು ಕೊರಡು ತೇದೊಡೆ ನೊಂದೆನೆಂದು ಕಂಪ ಬಿಟ್ಟಿತ್ತೆ? ತಂದು ಸುವರ್ಣವ ಕಡಿದೊರೆದೊಡೆ ಬೆಂದ ಕಳಂಕ ಹಿಡಿದಿತೆ? ಸಂದು ಸಂದು ಕಡಿದು ಕಬ್ಬನು ಗಾಣದಲಿಕ್ಕಿ ಬೆಂದು ಪಾಕಗೊಂಡು ಸಕ್ಕರೆಯಾಗಿ ನೊಂದೆನೆಂದು ಸವಿಯಬಿಟ್ಟಿತ್ತೆ?" ತೊಂದರೆಗಳಿಗೆ ನೊಂದು ತೊರೆಯುವಳೆ ಮಹಾದೇವಿ ತನ್ನ ಆದರ್ಶವನ್ನು, ಊರ್ಧ್ವಗಾಮಿತ್ವವನ್ನು, ತತ್ತ್ವವನ್ನು?

ಪ್ರತಿಕೂಲಗಳಿಗೆ ಪ್ರತ್ಯುತ್ತರ ಮಾತ್ರವಲ್ಲಿ ಅವಳ ಈ ವೀರ ವೈರಾಗ್ಯ , ಅದು ಅವಳ ಅಂತರಂಗದ ಅಭೀಪ್ಸೆ–ಆಶಾರಹಿತತ್ವದ ಅಭೀಪ್ಸೆ. ಆಶೆಯೇ ಪಾಶೆಯೇ ಜೀವಗಳೆಂಬ ಕುರಿಗಳನ್ನು ಸಂಸಾರವೆಂಬ ಕಟುಕರ ಕಂಬಕ್ಕೆ ಕಟ್ಟುತ್ತದೆ ; ಆಶೆಯೇ ನಮ್ಮನ್ನು ದೇಶಕ್ಕೆಲ್ಲ ದಾಸರನ್ನಾಗಿ ಮಾಡುತ್ತದೆ. 'ಆಶೆಯೇ ದಾಸತ್ವ, ನಿರಾಶೆಯೇ ಈಶತ್ವ'ವೆಂದು ಶರಣರು ಸಾರಿಯೇ ಇದ್ದಾರೆ. ಈ ಆಶೆಗೆ ದಾಸಳಾಗಿ ಬೇಡುವ ಬಾಯಿ, ಒಡ್ಡಿದ ಕೈ, ಬಾಗಿದ ತಲೆಯಾಗಲೆ? ಸಚರ ಸೃಷ್ಟಿಯನ್ನು ಬೇಡಿದರೂ ಅಷ್ಟೇ, ಅಚರ ಸೃಷ್ಟಿಯನ್ನು ಬೇಡಿದರೂ ಅಷ್ಟೇ–ಅಧೋಗತಿ ತಪ್ಪುವುದಿಲ್ಲ. ಇದು ಅವಳ ಕಂಡುಕೊಂಡ ಅಮೃತಾನುಭವ :

"ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆ–
ಗಿಡ ಗಿಡ ತಪ್ಪದೆ ಬೇಡಿದೆನೆನ್ನಂಗಕ್ಕೆಂದು !

ಅವು ನೀಡಿದುವು ತಮ್ಮ ಲಿಂಗಕ್ಕೆಂದು !
ಅನು ಬೇಡಿ ಭವಿಯಾದೆನು–ಅವು ನೀಡಿ ಭಕ್ತರಾದುವು !
ಇನ್ನು ಬೇಡಿದೆನಾದರೆ ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮಾಣೆ !”

ಇದೊಂದೇ ವಚನವನ್ನು ಹಾಡಿ ಹೋಗಿದ್ದರೂ ಅಕ್ಕಮಹಾದೇವಿಗೆ ಅಧ್ಯಾತ್ಮ ಪ್ರಪಂಚದಲ್ಲಿ ಅಮರತ್ವ ದೊರೆಯುತ್ತಿತ್ತು ! ಒಡಲ ಕಳವಳವನ್ನು, ಪ್ರಾಣದ ತಳಮಳವನ್ನು, ಹಸಿವು ತೃಷೆಗಳ, ನಿದ್ರೆಕಾಮಗಳ ದಾಳಿಯನ್ನು ಅಲುಗದ ನಿರ್ಧಾರದಿಂದ ಎದುರಿಸಿ, ಜಯಿಸಿ, ಗಿಡ ಮರಗಳಿಗೂ ಕೈಯೋಡ್ಡಿ ಬೇಡದಂಥ ಆಶಾರಹಿತತ್ವವನ್ನು ಸಾಧಸಿದ ಈ ಅಕ್ಕನಿಗೆ ಎಷ್ಟು ಮಣಿದರೂ ಕಡಿಮೆಯೇ.

ಇದಕ್ಕೂ ವೊದಲು ಅವಳ ತುಳಿದ ದಾರಿ ಸ್ವಲ್ಪ ಬೇರೆ ಬಗೆಯದಾಗಿದ್ದಿತು.’ನಾನು ಬೇಡಿದರೂ ನೀಡದಂತೆ ವಾಡು’ ಎಂಬ ನಿಷೇಧಾತ್ಮಕ(ಟಿಜರಿಚಿಣುತಜ) ವೈರಾಗ್ಯದ ದಾರಿಯದು.

“ಮನೆಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ !
ಬೇಡಿದೊಡೆ ಇಕ್ಕದಂತೆ ಮಾಡಯ್ಯ !
ಇಕ್ಕಿದೊಡೆ ನೆಲಕ್ಕೆ ಬೀಳುವಂತೆ ಮಾಡಯ್ಯ !
ನೆಲಕ್ಕೆ ಬಿದ್ದೊಡೆ ನಾನೆತ್ತಿಕೊಂಬುದಕ್ಕೆ ಮುನ್ನವೆ
ಶುನಿ ಎತ್ತಿಕೊಂಬಂತೆ ಮಾಡಯ್ಯ, ಚೆನ್ನಮಲ್ಲಿಕಾರ್ಜುನಯ್ಯ !”

ಈ ನಿಷೇಧಾತ್ಮಕ ವೈರಾಗ್ಯವೇ ಮಾಗಿ, ಪಕ್ವವಾಗಿ ತರುಮರಗಳನ್ನೇ ಆಗಲಿ ಬೇಡುವುದೆ ಬೇಡವೆಂಬ ನಿಶ್ಚಯಾತ್ಮಕ (positive) ವೈರಾಗ್ಯದ ತನಿವಣ್ಣಾಗಿ ತೊಟ್ಟ ಬಿಟ್ಟು ಬಿದ್ದಿತು–ಅವಳ ಬಾಳು ಗೆದ್ದಿತು. ಕಾಯಕ್ಕೆ ನೆಳಲಾಗಿ ಕಾಡುವ, ಪ್ರಾಣಕ್ಕೆ ಮನವಾಗಿ ಕಾಡುವ, ಮನಕ್ಕೆ ನೆನಹಾಗಿ ಕಾಡುವ, ನೆನಹಿಂಗೆ ಅರಿವಾಗಿ ಕಾಡುವ ಮಾಯೆಯನ್ನು, ಜಗದ ಜಂಗುಳಿಗಳಿಗೆ ಬೆಂಗೋಲನೆತ್ತಿ ಬಿಟ್ಟೆನೆಂದರೆ ಬಿಡದ–ಬಿಡದಿದ್ದರೆ ಬೆಂಬತ್ತುವ ಮಾಯೆಯನ್ನು, ಯೋಗಿಗೆ ಯೋಗಿಣಿಯಾಗಿ, ಸವಣಗೆ ಸವಣಿಯಾಗಿ, ಯತಿಗೆ ಪರಾಕಿಯಾಗಿ ಕಾಡುವ ಮಾಯೆಯನ್ನು, ಹರಿಯ, ಅಜನ, ಇಂದ್ರನ, ಚಂದ್ರನ ನುಂಗಿದ ಮಾಯೆಯನ್ನು ಬಲ್ಲೆನೆಂಬ ಬಲುಗೈಯರ ನುಂಗಿದ ಮಾಯೆಯನ್ನು, ಅರಿಯೆನೆಂಬ ಅಜ್ಞಾನಿಗಳ ನುಂಗಿದ ಮಾಯೆಯನ್ನು ಈರೇಳು ಭುವನವನಾರಡಿಗೊಂಡ ವಾಯೆಯನ್ನು ವಾಣಿಸಿ, ಜಯಿಸಿ, ಮುಕ್ತಾತ್ಮಳಾಗಿ ಸ್ತುತ್ಯಳಾದವಳು. “ಎನ್ನ ಕಾಯ ಮಣ್ಣು, ಜೀವ ಬಯಲು : ಆವುದ ಹಿಡಿವೆನಯ್ಯಾ ದೇವಾ?” ಎಂಬ ಪ್ರಶ್ನೆಯಿಂದ ಪ್ರಾರಂಭವಾದ ಅವಳ ಬೆಳಕಿನ ಬಾಳು, ‘ಕಾಯದೊಳಗೆ ಆಕಾಯವಾಯಿತು ; ಜೀವದೊಳಗೆ

ನಿರ್ಜೀವವಾಯಿತ್ತು ; ಭಾವದೊಳಗೆ ನಿರ್ಭಾವವಾಗಿತ್ತು' ಎಂಬ ಅನುಭವವಾಗಿ ಅವಳಿ, 'ಒಡಲಿಲ್ಲದ, ನುಡಿಯಿಲ್ಲದ, ಕಡೆಯಿಲ್ಲದ ನಲ್ಲನ ಒಡಗೂಡಿ ಸುಖಿಯಾದೆ ಕೇಳಿರಯ್ಯ ! ಓಸರಿಸೆನನ್ಯಕ್ಕೆ, ಆಸೆಮಾಡೆನು ಮತ್ತೆ ಭಿನ್ನಸುಖಕ್ಕೆ ! ಅರಳಿದು ಮೂರಾಗಿ, ಮೂರಳಿದು ಎರಡಾಗಿ, ಎರಡಳಿದು ಒಂದಾಗಿ ನಿಂದೆನಯ್ಯ' ಎಂಬ ಶಿವಾನುಭವದ ಸೌರಭವನ್ನು ಸೂಸಿ, 'ಲಿಂಗವೆನ್ನೆ, ಲಿಂಗೈಕ್ಯವೆನ್ನೆ, ಸಂಗವೆನ್ನೆ, ಸಮರಸವೆನ್ನೆ, ಆಯಿತ್ತೆನ್ನೆ, ಆಗದೆನ್ನೆ, ನೀನೆನ್ನೆ, ನಾನೆನ್ನೆ–ಚೆನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವಾದ ಬಳಿಕ ಏನೂ ಎನ್ನೆ' ಎಂಬ ದಿವ್ಯದರ್ಶನದ ಅಮೃತಫಲವಾಗಿ ಮುಕ್ತಾಯಗೊಂಡಿತು. ಮಹಾದೇವಿಯ ಮಹಾಜೀವನದ ಮಹಾಮುಕ್ತಾಯವದು!

"ಹುಟ್ಟು ಹೊರೆಯ ಕಟ್ಟಳೆಯ ಕಳೆದನವ್ವ ! ಹೊನ್ನು ಮಣ್ಣಿನ ಮಾಯೆಯ ಮಾಣಿಸಿದನವ್ವ ! ಎನ್ನ ತನುವಿನ ಲಜ್ಜೆಯನಿಳುಹಿ, ಎನ್ನ ಮನದ ಕತ್ತಲೆಯ ಕಳೆದು, ಚೆನ್ನಮಲ್ಲಿಕಾರ್ಜುನಯ್ಯನೊಳಗಾದವಳನೇನೆಂದು ನುಡಿಸುವಿರವ್ವ?" ಎಂದು ಕೇಳಿದ ಮಹಾದೇವಿಯಕ್ಕನ ಬಾಳೂ ಪ್ರಭುವಿನಂತೆ ಮಾಯೆಯ ಆಹ್ವಾನವನ್ನು ಎದುರಿಸಿ ಗೆದ್ದು ಸಿದ್ಧಿಯನ್ನು ಪಡೆದ ಬಾಳು. ಅವರಿಬ್ಬರ ಆದರ್ಶಗಳು ಒಂದೇ ಆಗಿದ್ದುವು. ಅಂತೇಯೇ ಅಲ್ಲಮನಿಗೆ ತಕ್ಕ ಶಿಷ್ಯಳಾದಳುಅಕ್ಕಮಹಾದೇವಿ : ಅಕ್ಕಮಹಾದೇವಿಗೆ ತಕ್ಕ ಗುರುವಾದನು ಪ್ರಭುದೇವ. ಕಲ್ಯಾಣ ವಿಪ್ಲವದ ತರುವಾಯ ಎಲ್ಲರೂ ಉಳಿವೆ ಮೊದಲಾದ ಬೇರೆ ಸ್ಥಳಗಳಿಗೆ ಹೋದರೆ ಇವರಿಬ್ಬರೂ ಶ್ರೀಶೈಲಕ್ಕೆ ತೆರಳಿದರು–ಒಡಲಿಲ್ಲದ ನಿಜವ ಬೆರೆಸಲು.

ಅಕ್ಕನ ವಚನವಿದು : "ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿಧಾನವಾಗಿ ಕಾಡಿತ್ತು ನೋಡಾ ! ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಧಾನವಾಗಿ ಕಾಡಿತ್ತು ನೋಡಾ !" ಪುರುಷನ ಮುಂದೆ ಮಾಯೆ ಸ್ತ್ರೀಯಾಗಿ ಕಾಡಿದುದನ್ನು ಪ್ರಭುವಿನ ಚರಿತ್ರೆಯಲ್ಲಿ ಕಂಡೆವು; ಸ್ತ್ರೀಯ ಮುಂದೆ ಮಾಯೆ ಪುರುಷನಾಗಿ ಕಾಡಿದುದನ್ನು ಅಕ್ಕಮಹಾದೇವಿಯ ಚರಿತ್ರೆಯಲ್ಲಿ ಕಾಣುವೆವು.

ಈ 'ಲಾವಣ್ಯದ ತಿರುಳು, ತಂಬೆಲರ ತಂಪಿನ ಸಂಜೀವನೆ, ಹುಟ್ಟಿದುದು 'ಧರಣೀತಳಕೆ ತೊಡವೆನಿಸಿರ್ದ' ಉಡುತಡಿ ಎಂಬ ಗ್ರಾಮದಲ್ಲಿ. ಇದು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಭುದೇವರ ಜನ್ಮಸ್ಥಳವಾದ ಬಳ್ಳಿಗಾವಿಗೆ ಸಮೀಪದಲ್ಲಿಯೇ ಇದೆ.*

---

ಇಂದಿನ ಕಲಬುರಗಿ ತಾಲ್ಲೂಕಿನಲ್ಲಿರುವ ಮಹಾಗಾಂವ್ ಗ್ರಾಮವೇ ಮೊದಲಿನ ಉಡುತಡಿ ಎಂಬ ಅಭಿಪ್ರಾಯವೂ ಇದೆ. ಆದರೆ ಅಕ್ಕಮಹಾದೇವಿಯ ಕಲ್ಯಾಣದ ಪಯಣದ ವಿವರಗಳ ಪ್ರಕಾರ ಉಡುತಡಿಯು ಕಲ್ಯಾಣದಿಂದ ಸಾಕಷ್ಟು ದೂರದಲ್ಲಿರಬೇಕಾಗುತ್ತದೆ. ('ಅಕ್ಕನ ಹಂಬಲ'ವೆಂಬ ನಾಟಕದಲ್ಲಿ ಧರ್ಮಜ್ಞ ಶೇಖರ

ಮಲೆನಾಡಿನ ಪ್ರಕೃತಿಸೌಂದರ್ಯದ ಮಡಿಲಿನಲ್ಲಿ ಮೋಹದ ಮಗುವಿನಂತೆ ಮಲಗಿರುವ ಈ ಗ್ರಾಮದಲ್ಲಿ ನಿರ್ಮಲ ಸುಮತಿಯರ ಶಿವಭಕ್ತಿಮಯ ಸಂಸಾರ ಸಾಗಿದ್ದಿತು. ಅವರ ಹೆಸರು ಶಿವಭಕ್ತ ಶಿವಭಕ್ತೆಯೆಂದು ಹರಿಹರನೂ ಓಂಕಾರಸೆಟ್ಟಿ ಮತ್ತು ಲಿಂಗಮ್ಮ ಎಂದು ಮಹಾದೇವಿಯಕ್ಕನ ಸಾಂಗತ್ಯದ ರಾಚಯ್ಯ ಕವಿಯೂ ಹೇಳಿದ್ದಾರೆ. ನಿರ್ಮಲ ಸುಮತಿಯರೆಂಬುವು ಹೆಚ್ಚು ಸಮ್ಮತವಾದ ಹೆಸರುಗಳು.

ಸುಮತಿಯ ಗರ್ಭಶುಕ್ತಿಯಲ್ಲಿ ಅಗ್ಗಳದ ಆಣಿಮುತ್ತಾಗಿ ಹುಟ್ಟಿದಳು ಅಕ್ಕಮಹಾದೇವಿ. 'ತೀವಿ ತನುವಿನಲತಿ ಮಹತ್ತರ ದೇವತಾ ಕಳೆಯಿರಲು ಮಿಗೆ ಮಹದೇವಿಯೆಂಬ' ಹೆಸರನಿಟ್ಟರು. ಅವಳು, 'ತಾಯ ಮಗ್ಗುಲ ತಂಪಿನೊಳುಂ, ಮೊಲೆವಾಲಿಂಪಿನೊಳುಂ, ತೊಟ್ಟಿಲ ತೂಕದೊಳುಂ, ಮುಟ್ಟುವರ ಮೋಹದೊಳುಂ, ಸೋಂಕುವರ ಸುಖದೊಳುಂ,' ಬಾಲಲೀಲೆಯನ್ನು ಮೆರೆಯುತ್ತ ಶಶಿಕಳೆಯಂತೆ ಬೆಳೆಯುತ್ತಾಳೆ. ಆ 'ಅರಳೆಲೆಯ ಸಿರಿವಂತೆಯ, ಸೂಸಕದ ಸುಮ್ಮಾನಿಯ, ಭಸಿತದ ಭಾವಕಿಯ, ಅಂಜನದ ರಂಜನೆಯ, ಮಾಗಾಯ ಮುಗುದೆಯ, ಹೊನ್ನೋಲೆಯ ಚೆನ್ನೆಯ, ಮೂಗುತಿಯ ಮುಗುಳಿನ, ಹುಲಿಯುಗುರ ಸುಲಲಿತೆಯ, ನೇವಳದ ನೀರೆಯ, ರತ್ನದಾಳಿಯ ರಾಜಹಂಸೆಯ, ಹೊಂಗಡಗದ ಲಿಂಗವಂತೆಯ, ಕಂಕಣದ ಕಾಮಧೇನುವಿನ, ತೊಡಿಗೆಯ ಬೆಡಂಗಿಯ, ಅಂದುಗೆಯ ಮಂದಯಾನೆಯ, ಗಜ್ಜೆಗಳ ಸಜ್ಜನೆಯ' ಶೈಶವದ ಸೌಂದರ್ಯವನ್ನಾರು ಬಣ್ಣಿಸಬಲ್ಲರು?

ಹತ್ತು ವರ್ಷ ವಯಸ್ಸಾಗಲು ಆ 'ನೇಮದ ಕಾಮಿನಿಗೆ, ಭಸಿತದ ಭಾಮಿನಿಗೆ, ರುದ್ರಾಕ್ಷಿಯ ಭದ್ರಾಂಗಿಗೆ' ಶೈವಾಚಾರ್ಯರಿಂದ ಗುರುಕಾರುಣ್ಯವಾಗಿ ಅವಳು ಲಿಂಗಪ್ರಾಣಿಯಾಗುತ್ತಾಳೆ. ಈ ಗುರುಗಳಾರೋ ತಿಳಿಯದು. ಅವರು ಗುರುವರೇಣ್ಯರೇ ಆಗಿರಬೇಕು. "ಶ್ರೀ ಗುರುಲಿಂಗದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ ಮೇಲೆ ಇರಿಸಿದಾಗಲೇ ಎನ್ನ ಭವಂನಾಸ್ತಿಯಾಯಿತ್ತು ! ಎನ್ನ ತನ್ನಂತೆ ಮಾಡಿದ. ಎನಗೆ ತನಗೆ ತೆರಹಿಲ್ಲದಂತೆ ಮಾಡಿ ತೋರಿದನು ನೋಡಾ: .....ಎನ್ನ ಶ್ರೀ ಗುರುಲಿಂಗದೇವ ಚೆನ್ನಮಲ್ಲಿಕಾರ್ಜುನ" ಎಂದು ಒಂದು ವಚನದಲ್ಲಿ ಎರಡು ಸಲ 'ಗುರುಲಿಂಗದೇವ' ಶಬ್ದವನ್ನಾಕೆ ಉಪಯೋಗಿಸಿರುವ ಕಾರಣ 'ಗುರುಲಿಂಗದೇವ' ಅವಳ ಗುರುವಿನ ಹೆಸರಾಗಿದ್ದರೂ ಇರಬಹುದು.

---

ಟಿ.ಎಚ್.ಎಂ. ಸದಾಶಿವಯ್ಯನವರ ಪ್ರಸ್ತಾವನೆ ನೋಡಿರಿ) ಆದುದರಿಂದ ಶಿವಮೊಗ್ಗ ಜಿಲ್ಲೆಯ ಉಡುತಡಿಯೇ ಅಕ್ಕನ ಹುಟ್ಟೂರೆಂಬುದು ಹೆಚ್ಚು ಸಮಂಜಸ, ಸಂಭವನೀಯ, ಅಕ್ಕಪಕ್ಕದ ಬಳ್ಳಿಗಾವೆ ಉಡುತಡಿಗಳಲ್ಲಿಯೇ ಒಂದೇ ಆದರ್ಶದ ಅಕ್ಕ ಅಲ್ಲಮರು ಹುಟ್ಟಿದುದು ಗಮನಾರ್ಹವಾಗಿದೆ.

ಅಕ್ಕಮಹಾದೇವಿಯ ಗುರುಭಕ್ತಿ ಅಸದೃಶವಾದುದು. "ಹುಟ್ಟಿದೆನು ಶ್ರೀ ಗುರುವಿನ ಹಸ್ತದಲ್ಲಿ' ಎಂದೇ ತನ್ನ ಆತ್ಮಚರಿತ್ರೆಯನ್ನು ಆರಂಭಿಸುವಳಾಕೆ. 'ಸಂಸಾರ ನಿಸ್ಸಾರವೆಂದು ತೋರಿದನೆನಗೆ ಗುರು. ಅಂಗವಿಕಾರದ ಸಂಗವನಿಲಿಸಿ ಲಿಂಗವನಂಗದ ಮೇಲೆ ಸ್ಥಾಪ್ಯವ ಮಾಡಿದನೆನ್ನ ಗುರು. ಹಿಂದಣ ಜನ್ಮವ ತೊಡೆದು ಮುಂದಣ ಪಥವನ್ನು ತೋರಿದನೆನ್ನತಂದೆ. ಚೆನ್ನಮಲ್ಲಿಕಾಜುನನ ನಿಜವನರುಹಿದನೆನ್ನ ಗುರು !' ಎಂದು ಅಕ್ಕನೇ ತನ್ನ ಗುರುವಿನ ಘನತೆಯನ್ನು ಹಾಡಿರುವುದರಿಂದ ಅವಳಿಗೆ ಕೌಮಾರ್ಯದಲ್ಲಿಯೇ ಸಂಸಾರ ನಿಸ್ಸಾರವೆಂಬುದನ್ನು ಮನಗಾಣಿಸಿ ಮಲ್ಲಿಕಾರ್ಜುನನ ಮೋಹದಲ್ಲಿ ಮುಳಿಗಿಸಿದವರು ಆ ಗುರುಗಳೇ ಆಗಿರಬೇಕು. ಅಂತೆಯೇ, 'ನಿತ್ಯವೆನ್ನ ಮನೆಗೆ ನಡೆದುಬಂದಿತ್ತು; ಮುಕ್ತಿ ಎನ್ನ ಮನೆಗೆ ನಡೆದುಬಂದಿತ್ತು; ಜಯ ಜಯ ಗುರುವೆ, ನಮೋ ಪರಮ ಗುರುವೆ, ನಮೋ ಚೆನ್ನಮಲ್ಲಿಕಾರ್ಜುನನ ತಂದೆನಗೆ ತೋರಿಕೊಟ್ಟ ಗುರುವೇ ನಮೋ ನಮೋ" ಎಂದವಳು ತನ್ನ ಗುರುಗಳನ್ನು ಬಗೆದುಂಬಿ ಬಣ್ಣಿಸಿದ್ದಾಳೆ.

ಮಹಾದೇವಿ ಮಲ್ಲಿಕಾರ್ಜುನನ ವರದಿಂದಲೇ ಹುಟ್ಟಿದಳಂತೆ ಉಡುತಡಿಯಲ್ಲಿ ಮಲ್ಲಿಕಾರ್ಜುನನ ದೇವಾಲಯವೊಂದು ಇದೆಯೆಂದು ಡಾ॥ ಹಳಕಟ್ಟಿಯವರು ಹೇಳಿದ್ದಾರೆ (ಶಿವಶರಣೆಯರು ಚರಿತ್ರೆಗಳು – ಪುಟ ೧೦೪). ಆ ದೇವಾಲಯಕ್ಕೆ ಅವಳ ತಂದೆತಾಯಿಗಳೊಡನೆ, ಗೆಳತಿಯರೊಡನೆ ಆಗಾಗ ಹೋದಾಗ ಅವಳಿಗೆ ತಿಳಿಯದಂತೆಯೇ ಅವಳ ಹೃದಯದಲ್ಲಿ ಮಲ್ಲಿಕಾರ್ಜುನನ ಮೋಹ ಮೊಳೆತಿರಬೇಕು. ಬಾಲ್ಯದಿಂದಲೂ ಬೆಳೆದ ಆ ಭಕ್ತಿ ಗುರುಕಾರುಣ್ಯದಿಂದ ಪಲ್ಲವಿಸಿಸಿ, ಪಸರಿಸಿ, ಅವಳ ಬಾಳ ಹಂದರಕ್ಕೇ ಹಬ್ಬಿನಿಂತಿತು. ತನ್ನ ಸೃಷ್ಟಿಯ ವಚನದಲ್ಲಿ 'ಚೆನ್ನ ಎಂದೆಡೆ ಮಾದಾರ ಚೆನ್ನಯ್ಯಗಳು; ಮಲ್ಲಿಕಾ ಎಂದೆಡೆ ಮಲ್ಲಿಕಾ ದೇವಿಯು; ಅರ್ಜುನಯ್ಯ ಎಂದಡೆ ಕಿರೀಟಿಯು' ಎಂದು ತನ್ನ ಅಂಕಿತದ ಅಂತರಾರ್ಥವನ್ನು ಅರುಹಿರುವ ಆಕೆಗೆ ಚೆನ್ನಮಲ್ಲಿಕಾರ್ಜುನನ ಪ್ರೇಮವೇ ಜೀವನದ ಜೀವಾಳವಾಗಿ, ಚೆನ್ನಮಲ್ಲಿಕಾರ್ಜುನನೇ ಅವಳ ಅಸುವಾಗಿ, ಉಸಿರಾಗಿ ಸರ್ವಸ್ವವಾಗಿಬಿಟ್ಟಿದ್ದರೆ ಏನಾಶ್ಚರ್ಯ?

ದಿನಗಳೆದಂತೆಲ್ಲ ಮಹಾದೇವಿಗೆ ಮಲ್ಲಿಕಾರ್ಜುನನ ಮೋಹ ಹೆಚ್ಚುತ್ತ ನಡೆಯಿತು. ಗುರುವೇ ತೆತ್ತಿಗನಾದ, ಲಿಂಗವೇ ಮದುವಣಿಗನಾದ, ಆನೆ ಮದುವಳಿಗೆಯಾದೆ, ವಸುಧೆಯ ಭಕ್ತರೆಲ್ಲರೂ ನಿಬ್ಬಣಿಗರಾದರು. ಕೊಟ್ಟರು ಸಾದೃಶ್ಯವಪ್ಪ ಗಂಡನ ನೋಡಿ. ಇದು ಕಾರಣ ಚೆನ್ನಮಲ್ಲಿಕಾರ್ಜುನನ್ನೇ ಗಂಡ ನನಗೆ,' ಎಂಬ ನಂಬಿಕೆ ಬಲಗೊಳ್ಳುತ್ತ ನಡೆಯಿತು. ಮೊದಲೇ ತನ್ನ ತಾಣದಿಂದ ತಪ್ಪಿಸಿಕೊಂಡು ಬಂದವಳಂತಿದ್ದ ಅವಳಿಗೆ ತಾನಿದ್ದ ಆವರಣ ಇನ್ನೂ ಅಸಹನೀಯವಾಯಿತು.

"ಈ ಮನೆಯಲ್ಲಿ ತನ್ನ ತಂದೆತಾಯಿಗಳ ಸಂಸಾರ ಹೂಡುವ ಮುನ್ನ ಎಷ್ಟು ಜನರು ಸಂಸಾರ ಹೂಡಿ ಸೋತುಹೋದರೋ ! ವಂಶಪರಂಪರವಾಗಿ ಬೆಂಬತ್ತಿ ಬಂದಿರುವು ಈ ಸಂಸಾರ ತನ್ನ ಬೆನ್ನು ಹತ್ತಿದರೆ ಹೇಗೆ? ಇದನ್ನು ತಪ್ಪಿಸಲು ಈಗಿನಿಂದಲೇ ಆ ಮಲ್ಲಿಕಾರ್ಜುನಿಗೆ ಮೊರೆಯಿಡಬೇಕು." ಇದೇ ಆ ಮೊರೆ:

"ಸಂಸಾರವೆಂಬ ಹಗೆಯಯ್ಯ ತಂದೆ !
ಎನ್ನ ವಂಶವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯ !
ಎನ್ನುವನರಸಿಯರಸಿ ಹಿಡಿದುಕೊಲ್ಲುತ್ತಿದೆಯಯ್ಯ !
ನಿಮ್ಮ ಮರೆಹೊಕ್ಕೆ ಕಾಯಯ್ಯ ! ಎನ್ನ ಬಿನ್ನಪವನವಧಾರು
ಚೆನ್ನಮಲ್ಲಿಕಾರ್ಜುನಾ !

"ಯಾವ ಜನ್ಮದ ಯಾವ ಋಣನುಬಂಧವೋ, ರಕ್ತಸಂಬಂಧವೋ ಕಾಣೆ– ಈ ಮನೆಯಲ್ಲಿ ಹುಟ್ಟಿದೆ. ಈ ಮೊದಲು ಎಲ್ಲೆಲ್ಲಿ ಎಷ್ಟೆಷ್ಟು ಸಲ ಹುಟ್ಟಿರುವೆನೋ, ಪಡಬಾರದ ಕಷ್ಟಪಟ್ಟಿರುವೆನೋ ಯಾರು ಬಲ್ಲರು? ಮತ್ತೆ ಹುಟ್ಟಿ ಹುಟ್ಟಿ ಸಾಯುತ್ತ ನಡೆಯಲೆ?" ಇದಾಗದು. "ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಲ್ಲ–ಎಂಬತ್ತುನಾಲ್ಕು ಲಕ್ಷ ಯೋನಿಯೊಳಗೆ ಬಂದೆ ಬಂದೆ ! ಬಾರದ ಭವಂಗಳನುಂಡೆನುಂಡೆ ! ಶುಭಶುಭಂಗಳ ಕಂಡೆ ಕಂಡೆ ! ಹಿಂದಣ ಜನ್ಮಂಗಳೇನಾದರೂ ಆಗಲಿ, ಮುಂದೆ ನೀಕರುಣಿಸಾ, ಚೆನ್ನಮಲ್ಲಿಕಾರ್ಜುನಾ !"

'ನಾತೊಟ್ಟ ಜನ್ಮಗಳ ಲೆಕ್ಕಾ , ಇಡುವವರ ಸೊಕ್ಕಾ , ಯಮಾ ನೋಡಿ ನಕ್ಕಾ!' ಎಂದು ಇಂದಿನ ಅಂಬಿಕಾತನಯದತ್ತ ಹೇಳಿದಂತೆ ಅಕ್ಕಮಹಾದೇವಿಯೂ ಹೇಳಿದಳು. ಭವಭವಗಳ ಪರಿಭ್ರಮಣಕ್ಕೆ ಹೇಸಿದಳು. ಸಂಸಾರದಿಂದ ವಿಮುಖಳಾದಳು. ಅವಳ ಒಲವೇ ಆದಿಯಿಂದಲೂ ಇನ್ನೊಂದು ಕಡೆಗಿತ್ತು , ಇಲ್ಲಿರಲಿಲ್ಲ. "ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ ! ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ ನೆನೆವೆನಯ್ಯ! "ಕಂದ, ನೀನಿತ್ತಬಾ' ಎಂದು ನೀವು ನಿಮ್ಮಂದವ ತೋರಯ್ಯಾ–ಚೆನ್ನಮಲ್ಲಿಕಾರ್ಜುನಾ!" ಎಂದು ಬಾಲ್ಯದಿಂದಲೂ ಬೇಡಿದ ಆ ಬಾಲೆ ಇನ್ನೂ ಮುಂದುವರಿದು,

"ಹರನೆ, ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ!
ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ ಶಶಿಧರನ ಹತ್ತಿರಕೆ ಕಳುಹಿದ–
ರೆಮ್ಮವರು, ಭಸ್ಮವನೇ ಹೂಸಿ ಕಂಕಣವನ್ನೇ ಕಟ್ಟಿದರು–
ಚೆನ್ನಮಲ್ಲಿಕಾರ್ಜುನಯ್ಯ, ನನಗೆ ನೀನಾಗಬೇಕೆಂದು !

ಎಂದು ಚೆನ್ನಮಲ್ಲಿಕಾರ್ಜುನನ್ನೇ ವಲ್ಲಭನನ್ನಾಗಿ ಆರಿಸಿಕೊಂಡುಬಿಟ್ಟಳು. "ಭಾವಿಸಿ ನೋಡಿದೊಡೆ ಅಂಗವಾಯಿತ್ತು. ಅಂಗಗುಣವಳಿದುಳಿದ ಬಳಿಕ ನಿನಗಂಗವಾನೆ ! ಭಿನ್ನರುಚಿಯ ಬಿಟ್ಟು ಲಿಂಗರುಚಿಯಾದ ಬಳಿಕ ಚೆನ್ನಮಲ್ಲಿಕಾರ್ಜುನನ ಕೊಂಡು ಸಾವಭಾಷೆ !" ಎಂದು ಭಾಷೆಯನ್ನು ತೊಟ್ಟಳು."ಭವಭವದಲ್ಲಿ ತೊಳಲಿ ಬಳಲಿತ್ತೆನ್ನಮನ. ಆನೇವೆನಯ್ಯ ! ಹಸಿದುಂಡೊಡೆ ಉಂಡು ಹಸಿವಾಯಿತ್ತು. ಇಂದು ನೀನೊಲಿದೆಯಾಗಿ ಎನಗೆ ಅಮೃತದ ಆಪ್ಯಾಯನವಾಯಿತ್ತು ಇದು ಕಾರಣ, ನೀನಿಕ್ಕಿದ ಮಾಯೆಯನ್ನು ಮುಟ್ಟಿದೆನಾದೊಡೆ ಆಣೆ, ನಿಮ್ಮಾಣೆ ಚೆನ್ನಮಲ್ಲಿಕಾರ್ಜುನ !" ಎಂದು ಆಣೆಯಿಟ್ಟುಕೊಂಡಳು.

'ಅಮೃತದ ಆಪ್ಯಾಯನ'ವಾದ ಮೇಲೆ ಅನ್ಯವಿಷಯಕ್ಕೆಳಸುವುದೆ ಅವಳ ಮನ? ಅನ್ಯವಿಷಯಕ್ಕೆ, ಅಲ್ಲ ವಿಷಯಕ್ಕೆ ಒಲಿಯಲು ಅವಳೇನು ಅಲ್ಪಾತ್ಮಳೆ?

"ಗಿರಿಯಲ್ಲದೆ ಹುಲ್ಲು ಮೊರಡಿಯಲ್ಲಾಡುವುದೆ ನವಿಲು?
ಕೊಳನಲ್ಲದೆ ಕಿರಿವಳಕೆಳಸುವುದೆ ಹಂಸೆ?
ಮಾಮರ ತಳಿತಲ್ಲದೆ ಸ್ವರಗೈವುದೆ ಕೋಗಿಲೆ?
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೇ ಭ್ರಮರ?
ಎನ್ನ ದೇವ ಚೆನ್ನಮಲ್ಲಿಕಾರ್ಜುನನಲ್ಲದೆ ಅನ್ಯವಿಷಯಕ್ಕೆಳಸುವುದೆ
ಎನ್ನ ಮನ?"

ಎಂದವಳು ಕೇಳಿಯೇ ಇದ್ದಾಳೆ.

ಬಯಸುವುದು ಜೀವಗುಣ, ಬಯಸಲಿ, ಆದರೆ ಅಲ್ಪವಾದುದನ್ನು ಬಯಸದಿರಲಿ. ನ ಅಲ್ಪೇ ಸುಖಮಸ್ತಿ ! ಅಲ್ಪವಾದುದರಲ್ಲಿ ಆವ ಸುಖವಿದೆ? ಭೂಮಾತ್ ಸುಖಂ ! ಭೂಮತೆಯಲ್ಲಿ, ಭವ್ಯತೆಯಲ್ಲಿ ಆದುದರಿಂದ ಕ್ಷುದ್ರವಾದುದನ್ನು, ಕ್ಷಣಿಕವಾದುದನ್ನು ಬಯಸದಿರಲಿ ; ಶಾಶ್ವತವಾದುದನ್ನು ಶಿವವಾದುದನ್ನು ಬಯಸಲಿ ! ಇದು ಆಸೆಯ ಉದಾತ್ತೀಕರಣ. ಅಕ್ಕನಿದಕ್ಕೆ ಉಜ್ವಲ ಉದಾಹರಣೆ.

ಬರಿ ಬಯಸುವುದಲ್ಲ, ಉನ್ನತವಾದ ಬಯಕೆಗೆ ತಕ್ಕಂತೆ, ಉದಾತ್ತವಾದ ಉದ್ದೇಶಕ್ಕೆ ತಕ್ಕಂತೆ ವರ್ತನೆಯೂ ಇರಬೇಕು. ಇಲ್ಲದಿದ್ದರೆ ಅಟ್ಟಕ್ಕೆ ಹಾರದ ಬೆಕ್ಕು ಬೆಟ್ಟಕ್ಕೆ ಹಾರುವೆನೆಂದು ಬಡಿವಾರ ಕೊಚ್ಚಿಕೊಂಡಂತಾಗುತ್ತದೆ. ಬಯಸುವುದು ಉನ್ನತಿಯನ್ನು, ಹೊರಟಿರುವುದು ಅವನತಿಯ ಕಡೆಗೆ–ಹೀಗಾದರೆ ಗುರಿ ಮುಟ್ಟುವುದು ಸಾಧ್ಯವೆ?

"ಕಂಗಳಲಿ ಕಾಂಬೆನೆಂದು ಕತ್ತಲೆಯ ಹೊಕ್ಕೊಡೆಂತಹುದಯ್ಯ?
ಬೆಟ್ಟದ ತುದಿಯ ಮುಟ್ಟಲೆಂದು ಹಳ್ಳಕೊಳ್ಳಂಗಳಲಿ ಇಳಿದೊಡೆಂತಹುದಯ್ಯ?
ನೀನಿಕ್ಕಿದ ಸುಯಿದಾನವನೊಲ್ಲದೆ ಬೇರೆ ಬಯಸಿದೊಡೆಂತಹುದಯ್ಯ?
ಚೆನ್ನಮಲ್ಲಿಕಾರ್ಜುನನ ಘನವನರಿಯಲೆಂದು ಕಿರಿಕುಳಕ್ಕೆ ಸಂದೊಡೆ
ಎಂತಹುದಯ್ಯ?"

ಕಿರುಕುಳಕ್ಕೆ ಸಲ್ಲದ, ಕಿರುಕುಳವನೊಲ್ಲದ ಈ ಮಹಾಜೀವನಕ್ಕೆ ಗೆಳತಿಯರ ಕಿರುಕುಳ ಬೇರ ! "ಬಳ್ಳಿಯಂತೆ ಬೆಳೆಯುತ್ತಿರುವೆ–ನಿನಗಿನ್ನು ಮರದ ಆಸರೆ ಬೇಡವೆ? ಈ ಮಂದಾರ ಕುಸುಮಮಾಲೆಯನ್ನು ಧರಿಸುವ ಕೊರಳು ಬೇಡವೆ? 'ಮೀಸಲಳಿಯದ ಮನೋರಥದಂತೆ, ಬಾಸಣಿಸಿದಮೃತದಂತೆ, ಮುದ್ರಿಸಿದ ಪುಣ್ಯದಂತೆ, ಮೂಡಿದ ಭಕ್ತಿಯಂತೆ, ಕೂಡಿದ ಪೂಜೆಯಂತೆ, ಕಾಮನ ಬಾಣದಂತೆ, ಸೋಮನ ಕಿರಣದಂತೆ, ವಸಂತನ ವಶೀಕರಣದಂತೆ, ವನಲಕುಮಿಯ ವಿಲಾಸದಂತೆ, ಮಲಯಾನಿಲನ ಮದದಂತೆ, ಮೌವನ ಮದೋನ್ಮತ್ತ ವಿಳಾಸವಿಭ್ರಮ ಕಳಾಪರಿಪೂರ್ಣ ಶರೀರೆ'ಯಾಗಿರುವೆ–ನಿನಗಿನ್ನು ಪತಿಯ ಜೊತೆ ಬೇಡವೇ" ಎಂಬ ಕಿರುಕುಳ !

ಅಕ್ಕನಿದಕ್ಕೆ ಏನೆಂದು ಉತ್ತರವೀಯಬೇಕು?
"ಕಂಗಳೊಳಗೆ ತೊಳಗಿ ಬೆಳಗುವ ದಿವ್ಯಸ್ವರೂಪನ ಕಂಡು ಮೈಮರೆದೆನಯ್ಯ!
ಮಣಿಮುಕುಟದ, ಫಣಿಕಂಕಣದ, ನಗೆಮೊಗದ, ಸುಲಿಪಲ್ಲ
ಸೊಬಗನ ಕಂಡು ಮನಸೋತೆನವ್ವ !
ಇಂತಾಗಿ ಚೆನ್ನಮಲ್ಲಿಕಾರ್ಜುನನೆನ್ನ ಮದುವಣಿಗ
ಆನು ಮದುವಣಿಗಿ ಕೇಳಾ, ತಾಯೆ !"

ಈ ವರ್ಣರಂಜಿತ ವರ್ಣನೆಯನ್ನು ಕೇಳಿ ಕೆಳದಿಯರ ಮೈಗಳು ಜುಮ್ಮೆಂದಿರಬೇಕು. 'ಆಹಾ, ಎಂಥ ಚೆಲುವನಿರಬೇಕು ಆ ಚೆನ್ನಮಲ್ಲಿಕಾರ್ಜುನ! ಎಲ್ಲಿ ನೋಡಿದಳೋ ಮಹಾದೇವಿ ಈ ಸುಂದರಾಕಾರನನ್ನು–ನಗೆಮೊಗೆದ, ಸುಲಿಪಲ್ಲ ಸೊಬಗನನ್ನು ! ತನಗೆ ಅನುರೂಪನಾದ ವರನಿಗೇ ಬಲಿದಿದ್ದಾಳೆ ಮಹಾದೇವಿ !' ಎನಿಸಿರಬೇಕು ಅವರಿಗೆ. ಆಸಕ್ತಿ ಅರಳಿ, ಕೂತುಹಲ ಕೆರಳಿ ಕೇಳಿದರು–

"ಎಂಥ ಸುಂದರನಿವನು ಸಖಿ ! ಎಲ್ಲಿ ಕಂಡೆ ಇವನನ್ನು?"

"ಅಕ್ಕ ಕೇಳವ್ವ, ನಾನೊಂದು ಕನಸಕಂಡೆ;
ಅಕ್ಕಿಯಡಕೆ ತೆಂಗಿನಕಾಯಕಂಡೆ ;
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲಗೊರವನು

ಭಿಕ್ಷಕ್ಕೆ ಬಂದುವ ಕಂಡೆನವ್ವ !
ಮಿಕ್ಕುಮೀರಿ ಹೋಹನ ಬೆಂಬತ್ತಿ ಕೈವಿಡಿದೆನು !
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು !"

"ಆಗಲೇ ಮದುವೆ ಕೂಡ ಆಗಿಹೋಯಿತೆ? ಕೆಳದಿಯರಿಗೂ ತಿಳಿಸದೆ ಕೈ ಹಿಡಿದುಬಿಟ್ಟೆಯಾ? ಅಷ್ಟೊಂದು ಆತುರವೆ, ಕಾತರವೆ?"

"ಕನಸಿನಲ್ಲಿ ಎಂದು ಮೊದಲೇ ಹೇಳಿರುವೆನಲ್ಲ?"

"ಕನಸಿನಲ್ಲಿ ಕಂಡು ಕೈಹಿಡಿದೆಯಾ? ಸರಿಯಾಯಿತು ! ನಾವು ಹೋಗಿ ಹುಡುಕಿಕೊಂಡಾದರೂ ಬರುತ್ತೇವೆ. ಸರಿಯಾಗಿ ಕುರುಹನ್ನಾದರೂ ಹೇಳು."

"ಕುರುಹ ಕೇಳುವೆಯಾ? ಹೊಳೆವ ಜಡೆಯ ಮೇಲೆ ಎಳೆವೆಳದಿಂಗಳು; ಫಣಿಮಣಿ ಕರ್ಣಕುಂಡಲದವ ನೋಡವ್ವ ! ರುಂಡಮಾಲೆಯ ಕೊರಳವನ ಕಂಡರೆ ಒಮ್ಮೆ ಬರಹೇಳವ್ವ ! ಗೋವಿಂದನ ನಯನ ಉಂಗುಟದ ಮೇಲಿಪ್ಪುದು! ಚೆನ್ನಮಲ್ಲಿಕಾರ್ಜುನನ ಚೆನ್ನಕುರುಹವ್ವ !

"ಇದೇನೆ, ಶಿವಶಂಕರನನ್ನು ಲಕ್ಷ್ಯದಲ್ಲಿರಿಸಿಕೊಂಡೇ ನಿನ್ನ ನಲ್ಲನ ರೂಪನ್ನು ಬಣ್ಣಿಸುತ್ತಿರುವಂತಿದೆ?

"ಅವನನ್ನು ಲಕ್ಷ್ಯದಲ್ಲಿರಿಸಿಕೊಂಡು ಮಾಡಿದ ವರ್ಣನೆಯಿದಲ್ಲ ಗೆಳತಿ, ಇದು ಅವನ ವರ್ಣನೆಯೇ !"

"ಏನೆಂದಿ? ಅವನ ವರ್ಣನೆಯೆ !"
"ಹೌದು, ಅವನ ವರ್ಣನೆಯೆ !"
"ಹಾಗಾದರೆ ಅವನೇ, ಶಿವನೇ ನೀನು ಮೆಚ್ಚಿರುವ ಮದುವಣಿಗನೆ?"
"ಇದನ್ನು ಇನ್ನೊಮ್ಮೆ ಬಾಯಿಬಿಟ್ಟು ಹೇಳಬೇಕೆ?"
"ಮಹಾದೇವಿ, ನಿನಗೆ ನಿಜವಾಗಿಯೂ ಹುಚ್ಚು ಹಿಡಿದಿದೆ !"

"ಹೌದು, ನಿಜವಾಗಿಯೂ ಹುಚ್ಚು ಹಿಡಿದಿದೆ–ಚೆನ್ನಮಲ್ಲಿಕಾರ್ಜುನನ ಹುಚ್ಚು ಹಿಡಿದಿದೆ ! ಆ ಹುಚ್ಚುಹಿಡಿದೇ ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ! ಏರಿಲ್ಲದ ಗಾಯದಲ್ಲಿ ನೊಂದೆನವ್ವಾ ! ಸುಖವಿಲ್ಲದ ಧಾವತಿಗೊಂಡೆನವ್ವಾ !" ಚೆನ್ನಮಲ್ಲಿಕಾರ್ಜುನಗೊಲಿದು ಬಾರದ ಪರಿಭವಂಗಳಲಿ ಬಂದೆನವ್ವಾ !"

“ನಿನಗೆ ಸನ್ನಿಪಾತವೇನಾದರೂ ಬಡಿದುಕೊಂಡಿದೆಯೋನೆ? ಮಲ್ಲಿಕಾರ್ಜುನನೆಂದಾದರೂ ನಿನ್ನನ್ನು ಮದುವೆಯಾಗಬಲ್ಲನೆ? ನಿನಗೇಕೆ ಈ ಉನ್ಮಾದ ತಲೆಗೇರಿತು?”

“ಏನು ಮಾಡಲಿ ಸಖಿ, ದಿನದಿನಕ್ಕೆ ಅವನ ಮೋಹ ಮೇಲೆ ಮೀರುತ್ತ ನಡೆದಿದೆ ! ಏನು ಮೋಡಿಯೋ ಅವನದು, ಏನು ಗಾಡಿಯೋ ಅವನದು–ಎನ್ನ ಮದನದ ಮಾರುಗೊಂಡನವ್ವಾ ! ಎನ್ನ ತನುವ ಸೂರೆಗೊಂಡನವ್ವಾ ! ಎನ್ನ ಸುಖವನೊಪ್ಪುಗೊಂಡನವ್ವಾ ! ಎನ್ನಿರವನಿಂಬುಗೊಂಡನವ್ವಾ ! ಇದು ಕಾರಣ, ಚೆನ್ನಮಲ್ಲಿಕಾರ್ಜುನನ ಒಲುಮೆಯವಳಾನು !”

“ಇದುವರೆಗೆ ದೇವಾಲಯದ ಮಲ್ಲಿಕಾರ್ಜುನ ಲಿಂಗಕ್ಕೆ ಮನಸೋತಿದ್ದ ಮಹಾದೇವಿ ಈಗ ನಿಜವಾದ ಮಲ್ಲಿಕಾರ್ಜುನನನ್ನೇ ಮದುವೆ–ಯಾಗುವಳೆಂದಂತಾಯಿತು.”

“ಹೌದು, ಊಡಿದಡುಣ್ಣದು, ನೀಡಿದಡರಿಯದು, ಕಾಡದು ಓಯೆನ್ನದು ನೋಡಾ–ಶಿವಲಿಂಗವವ್ವ ! ಊಡಿದಡುಂಬ, ನೀಡಿದಡರಿವ, ಕಾಡುವ ಬೇಡುವ ಕರುಣದ ಚೆನ್ನಮಲ್ಲಿಕಾರ್ಜುನನ ಪಾದವಿಡಿದು ನಾನು ಬದುಕಿದೆನವ್ವಾ !”

“ಅದೆಲ್ಲ ಸರಿ ಮಹಾದೇವಿ, ಇಹಲೋಕದ ಪತಿಯೊಬ್ಬನ ಕೈಹಿಡಿದೂ ಆ ಪರಲೋಕದ ಮಲ್ಲಿಕಾರ್ಜುನನ ಪಾದವನ್ನು ಹಿಡಿಯಬಹುದಲ್ಲ?”

“ಇದೆಂಥ ಮಾತು ಗೆಳತಿ? ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ? ಲೌಕಿಕಕ್ಕೊಬ್ಬ ಗಂಡನೆ? ಪಾರಮಾರ್ಥಕ್ಕೊಬ್ಬ ಗಂಡನೆ? ಎನ್ನ ಗಂಡ ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿನ ಗಂಡರೆಲ್ಲ ಮುಗಿಲಮರೆಯ ಬಣ್ಣದ ಬೊಂಬೆಗಳು ನೋಡಾ !”

“ಮರ್ತ್ಯಲೋಕದ ಮಾನವರನ್ನು ಮದುವೆಯಾಗುವುದೇ ಇಲ್ಲವೆಂಬುದು ಮಹಾದೇವಿಯ ಅಂತಿಮ ನಿರ್ಧಾರವೆ?”

“ನಿಸ್ಸಂಶಯವಾಗಿ, ಎರದ ಮುಳ್ಳಿನಂತೆ ಪರಗಂಡರೆನಗವ್ವ ! ಸೋಂಕಲಮ್ಮ, ಸುಳಿಯಲಮ್ಮೆ, ನಂಬಿನಚ್ಚಿ ಮಾತಾಡಲಮ್ಮೆನವ್ವಾ ! ಚೆನ್ನಮಲ್ಲಿಕಾರ್ಜುನನಲ್ಲದ ಗಂಡನ ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ !”

ಇನ್ನು ಈ ವಾದವನ್ನು ಮುಂದುವರಿಸಿ ಪ್ರಯೋಜವಿಲ್ಲವೆಂದು ಸಖಿಯರೆಲ್ಲ ಸುಮ್ಮನಾದರು ; ಮಹಾದೇವಿ ಬಾರದ ವಸ್ತುವಿಗಾಗಿ ಬಾಯ್ಬಿಡುತ್ತಲಿರುವುದನ್ನು

ಕಂಡು ಮನದಲ್ಲಿಯೇ ಮರುಗಿದರು. ರಾಜಭವನಕ್ಕೆ ಭೂಷಣವಾಗಬಲ್ಲ ಆ ರೂಪರಾಶಿ ಮೈದೋರದ ಮಲ್ಲಿಕಾರ್ಜುನನಿಗಾಗಿ ಹಂಬಲಿಸಿ ಹಾಳಾಗ ಬೇಕಾಯಿತಲ್ಲ–ಎಂದು ನೊಂದು ಕುಂದಿದರು. ಆದರೆ ಮಾಡುವುದೇನು? ಕಾಲ ಕೈಮೀರಿ ಹೋಗಿದ್ದಿತು. ಮಹಾದೇವಿಯ ನಿರ್ಧಾರ ನಿಶ್ಚಲವಾಗಿದ್ದಿತು.

ಮಹಾದೇವಿ ಈಗ ಮಲ್ಲಿಕಾರ್ಜುನನ ವಿರಹದಲ್ಲಿ ಪರಿತಪಿಸುತ್ತಲಿರುವ ವಿರಹಿಣಿ. ಆವಳ ವಿರಹವೇದನೆಯನ್ನು ಅವಳೇ ಬಣ್ಣಿಸಬಲ್ಲಳು ;

"ಕಳವಳದ ಮನವು ತಲೆಕೆಳಗಾದುದವ್ವಾ !
ಸುಳಿದು ಬೀಸುವ ಗಾಳಿ ಉರಿಯಾಯಿತ್ತವ್ವಾ !
ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ !
ಹೊಳಲಸುಂಕಿಗನಂತೆ ತೊಳಲುತ್ತಿದ್ದೆನವ್ವಾ !
ತಿಳುಹೌ ಬುದ್ಧಿಯ ; ಹೇಳಿಕರೆತಾರೆಲೆಗೌ !
ಚೆನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವಾ !"

ಈ ಅವಸ್ಥೆಯಲ್ಲಿ ಅವಳ ಇರವು ಎಂತಿರಬೇಕು ?

"ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆ ನೋಡಯ್ಯ !
ಇರುಳು ನಾಲ್ಕು ಜಾವ ನಿಮ್ಮ ವಿಕಳಾವಸ್ಥೆಯಲ್ಲಿರ್ಪೆ ನೋಡಯ್ಯ !
ಇರುಳು ಹಗಲು ನಿಮ್ಮ ಕಳವಳದಲ್ಲಿ ಮರೆದೊರಗಿದೆನಯ್ಯಾ !
ಚೆನ್ನಮಲ್ಲಿಕಾರ್ಜುನಾ, ನಿಮ್ಮೊಲುಮೆ ನಟ್ಟು
ಹಸಿವು ತೃಷೆ ನಿದ್ರೆಯ ಮರೆತೆನು !"

ಇಂಥ ಸಮಯದಲ್ಲಿ ಸಖಿಯರ ಸಹಾಯವನ್ನು ಕೋರುವುದು ಪ್ರೇಮ ಪರಿತಪ್ತರಿಗೆಲ್ಲ ಸಹಜವಾದುದು. ಮಹಾದೇವಿಯೂ ಸಖಿಯರ ಸಹಾಯವನ್ನು ನಿರೀಕ್ಷಿಸಿದ್ದರೆ ಅರಿದೇನಲ್ಲ.

"ಎರೆಯಂತೆ ಕರಕರಗಿ ಮಳಲಂತೆ ಜರಿಜರಿದು
ಕನಸಿನಲಿ ಕಳವಳಿಸಿ ಆನು ಬೆರಗಾದೆ !
ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬಂದೆ !
ಆಪತ್ತಿಗೆ ಸಖಿಯರ ನಾನಾರುವನು ಕಾಣೆ !
ಅರಸಿ ಕಾಣದ ತನುವ ಬೆರಸಿ ಕೂಡದ ಸುಖವ
ಎನಗೆ ನೀ ಕರುಣಿಸು ಚೆನ್ನಮಲ್ಲಿಕಾರ್ಜುನಾ !"

ಪಾಪ, ಸಖಿಯರೇನು ಮಾಡುವರು? ಅವರ ಅಳವಿಗೆ ಮೀರಿ ಕಜ್ಜವದು.

ಅವರೆಂತು ಸಖಿ ಮಹಾದೇವಿಗೆ 'ಅರಸಿ ಕಾಣದ ತನುವ ಬೆರಸಿಕೂಡದ ಸುಖವ' ಕೊಡಬಲ್ಲರು? ಈ ಆಗದ ನೀಗದ ಹಂಬಲವನ್ನು ತೊರೆದು, ಹವ್ಯಾಸವನ್ನು ಮರೆದು ಸುಖಿಯಾಗೆಂದು ಸಖಿ ಮಹಾದೇವಿಗೆ ಮತ್ತೆ ಮತ್ತೆ ಹೇಳುತ್ತಿರಬೇಕು. ಅದಕ್ಕೆ ಮಹಾದೇವಿಯ ಉತ್ತರವೇನು?

"ಬಂಜೆ ಬೇನೆಯನರಿಯಳು, ಮಲತಾಯಿ ಮುದ್ದುಬಲ್ಲಳೆ?
ನೊಂದನೋವ ನೋರದವರೆತ್ತಬಲ್ಲರು?
ಚೆನ್ನಮಲ್ಲಿಕಾರ್ಜುನನಿರಿಲಗು ಒಡಲಲ್ಲಿ ಮುರಿದು ಹೊರಳುವಳ
ನೀವೆತ್ತ ಬಲ್ಲಿರೇ ಎಲೆ ತಾಯಿಗಳಿರಾ?"

ಇದನ್ನು ಕೇಳಿ ಸಖಿಯರೇನೋ ಸುಮ್ಮನಾಗಿರಬಹುದು. ಜನರ ಬಾಯಿ ಸುಮ್ಮನಿರುವುದೆ? ಏನಾದರೊಂದು ಹಿಸುಣತನವನ್ನು ಪಿಸುಗುಟ್ಟಿರಬೇಕು. ಅದನ್ನು ಕೇಳಿದ ಅಕ್ಕ–

"ಬೆಟ್ಟದ ಮೇಲೊಂದು ಮನೆಯಮಾಡಿ ಮೃಗಗಳಿಗಂಜಿದಡೆಂತಯ್ಯ?
ಸಮುದ್ರದ ತಡಿಯಲ್ಲಿ ಮನೆಯಮಾಡಿ ನೊರೆತೆರೆಗಳಿಗಂಜಿದಡೆಂತಯ್ಯ?
ಸಂತೆಯೊಳಗೊಂಡು ಮನೆಯಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ?
ಮಲ್ಲಿಕಾರ್ಜುನದೇವ ಕೇಳಯ್ಯ, ಲೋಕದೊಳಗೆ ಹುಟ್ಟಿರ್ದಬಳಿಕ
ಸುತ್ತಿನಿಂದೆಗಳು ಬಂದಡೆ ಮನದಲಿ ಕೋಪವ ತಾಳದೆ
ಸಮಾಧಾನಿಯಾಗಿರಬೇಕು."

ಅಕ್ಕನೇನೋ ಸಮಾಧಾನದಿಂದಲೇ, ಸ್ಥೈರಣೆಯಿಂದಲೇ, ಸಮತೆಯಿಂದಲೇ ಸಾಧನ ಪಥದಲ್ಲಿ ಮುಂದುವರಿಯುತ್ತ ನಡೆದಿದ್ದಳು. ಆದರೆ ಸಿದ್ಧಿ ಮಾರೀಚನ ಮಾಯಮೃಗದಂತೆ ಕೈಗೆ ಸಿಲುಕದೆ ಮುಂದೊಡುತ್ತಲಿದ್ದಿತು. ಜನದ ಪರಿಹಾಸಕ್ಕದು ಪುಟವಿಕ್ಕುತ್ತಲಿದ್ದಿತು. ಸಖಿಯರ ಮರುಗು, ತಂದೆತಾಯಿಗಳ ಕೊರಗು, ಜನರ ಅಣಕ, ಕಟಕಿ, ಕಟುಮಾತುಗಳು–ಇವಾವೂ ಉಳಿಯುತ್ತಿರಲಿಲ್ಲ ಚೆನ್ನಮಲ್ಲಿಕಾರ್ಜುನ ಒಲಿದಿದ್ದರೆ. ಆದರೆ ಅಷ್ಟು ಸುಲಭಸಾಧ್ಯನೆ ಅವನು? 'ಹಿಡಿದೆನೆಂದೊಡೆ ಹಿಡಿಗೆಬಾರದ, ತಡೆವೆನೆಂದೊಡೆ ಮೀರಿಹೋಹ' ಅವನು ಒಲಿಯುವುದು ಸುಲಭವೆ? ಆದುದರಿಂದ–

"ಒಮ್ಮೆ ಕಾಮನಕಾಲ ಹಿಡಿವೆ, ಒಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ!
ಸುಡಲೀವಿರಹವ ! ನಾನಾರಿಗೆ ಧೃತಿಗೆಡುವೆ !
ಚೆನ್ನಮಲ್ಲಿಕಾರ್ಜುನದೇವನೆನ್ನನೊಲ್ಲದಕಾರಣ
ಎಲ್ಲರಿಗೆ ಹಂಗಿತಿಯಾದೆನವ್ವಾ !"

ಆದರೇನು? ಒಲವಿನಲ್ಲಿ ಸೋಲೂ ಗೆಲುವು, ಗೆಲವೊ ಸೋಲು. ಸೋಲನ್ನೊಪ್ಪುವುದು ಶರಣಧರ್ಮವಲ್ಲ. 'ಅವನೊಲಿಯಲಿ, ಒಲಿಯದಿರಲಿ; ನಾನೊಲಿದಿರುವೆನಲ್ಲ–ನನಗದೇ ಸಾಕು ! ಇದರಲ್ಲಿ ನಾನು ವಿಫಲಳಾದರೂ ಸಫಲಳೇ ! ಒಲಿಯದೆ ಬದುಕುವುದಕ್ಕಿಂತ ಒಲಿದು ಇಲ್ಲದಾಗುವುದು ಮೇಲು ! ಎಂಬುದು ಅಕ್ಕನ ನಂಬಿಕೆ :

"ಅಯ್ಯಾ, ನೀಕೇಳಿದರೆ ಕೇಳು, ಕೇಳದಿರ್ದೊಡೆ ಮಾಣು–
ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ !
ಅಯ್ಯಾ , ನೀ ಒಲಿದರೆ ಒಲಿ, ಬಲಿಯದಿರ್ದೊಡೆ ಮಾಣು–
ನಾನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ !
ಅಯ್ಯಾ , ನೀ ಮೆಚ್ಚಿದರೆ ಮೆಚ್ಚು, ಮೆಚ್ಚದಿರ್ದೊಡೆ ಮಾಣು–
ನಾನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯಾ !
ಅಯ್ಯಾ, ನೀನೋಡಿದೊಡೆ ನೋಡು, ನೋಡದಿರ್ದೊಡೆ ಮಾಣು–
ನಾನಿನ್ನನೋಡಿ ಹಿಗ್ಗಿಹಾರೈಸಿದಲ್ಲದೆ ಸೈರಿಸಲಾರೆನಯ್ಯಾ !
ಚೆನ್ನಮಲ್ಲಿಕಾರ್ಜುನಯ್ಯ ನಾನಿಮ್ಮ ಪೂಜಿಸಿ
ಹರುಷದಲೋಲಾಡುವೆನಯ್ಯಾ!"

ಒಲಿದುದಕ್ಕೆ ಮಿಲನವೇ ಫಲವೇನಲ್ಲ. ಮಿಲನ ದೊರೆಯಲಿ, ದೊರೆಯದಿರಲಿ– ಒಲಿವುದನ್ನು ತೊರೆಯಲಾಗದು. ಒಲಿದವರಿಗೆ ಸುಖದುಃಖಗಳ ಪರವೆಯೇಕೆ? ಆದುದರಿಂದ 'ನಚ್ಚುಗೆ ಮನ ನಿಮ್ಮಲ್ಲಿ, ಮೆಚ್ಚುಗೆ ಮನ ನಿಮ್ಮಲ್ಲಿ, ಸಲ್ಲುಗೆ ಮನ ನಿಮ್ಮಲ್ಲಿ, ಸೋಲುಗೆ ಮನ ನಿಮ್ಮಲ್ಲಿ, ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ, ಕರಗುಗೆ ಮನ ನಿಮ್ಮಲ್ಲಿ, ಕೊರಗುಗೆ ಮನ ನಿಮ್ಮಲ್ಲಿ–ಎನ್ನ ಪಂಚೇಂದ್ರಿಯಂಗಳು ಕಬ್ಬುನ ಉಂಡ ನೀರಿನಂತೆ ನಿಮ್ಮಲ್ಲಿ ಬೆರಸುಗೆ !'

ಮಹಾದೇವಿಯ ಮಲ್ಲಿಕಾರ್ಜುನರತಿ ಬೆಳೆಯುತ್ತ ಹೋದಂತೆ ಜನರ ಪಿಸುಮಾತುಗಳೂ ಹೆಚ್ಚಾಗುತ್ತಲೇ ಹೋಗಿರಬೇಕು. ಅದಕ್ಕೂ ಎದೆಗೆಡಲಿಲ್ಲ ಅಕ್ಕಮಹಾದೇವಿ.

"ಹೆದರದಿರು ಮನವೆ, ಬೆದರದಿರು ಮನವೆ,
ನಿಜವನರಿದು ನಿಶ್ಚಿಂತವಾಗಿರು !
ಫಲವಾದ ಮರನ ಕಲ್ಲಲ್ಲಿ ಇಡುವುದೊಂದು ಕೋಟಿ–
ಎಲುವದ ಮರನ ಇಡುವರೊಬ್ಬರ ಕಾಣೆ !

ಭಕ್ತಿಯುಳ್ಳವರ ಬೈಯುವರೊಂದು ಕೋಟಿ,
ಭಕ್ತಿಯಿಲ್ಲದವರ ಬೈವವರೊಬ್ಬರ ಕಾಣೆ"

ಎಂದು ಸಮಾಧಾನಪಟ್ಟುಕೊಂಡಳು. ಅವಳ ನಿಷ್ಠೆ ಪರಕಾಷ್ಠತೆಯನ್ನು ಮುಟ್ಟಿತು.

"ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯ !
ನಿನ್ನನರಿಯದ ಮುಕ್ತಿಯೇ ನರಕಕಂಡಯ್ಯ !
ನೀನೊಲ್ಲದ ಸುಖವೇ ದುಃಖಕಂಡಯ್ಯ !
ನೀನೊಲಿದ ದುಃಖವೇ ಪರಮಸುಖಕಂಡಯ್ಯ !
ಚೆನ್ನಮಲ್ಲಿಕಾರ್ಜುನಯ್ಯ, ನೀಕಟ್ಟಿಕೆಡಹಿದ ಬಂಧನವೇ ನಿರ್ಬಂಧನ ವೆಂದಿಪ್ಪೆನು !"

ಎನ್ನುವ ಮಟ್ಟಿಗೆ ಅವಳ ನಿಷ್ಠೆಗಟ್ಟಿಕೊಂಡಿತು. ಮಹದಾನಂದಮಯ ಬಂಧನಗಳಲ್ಲಿಯೇ ಮುಕ್ತಿಯ ಸ್ವಾದವೆನಗೆಂದು ಕವೀಂದ್ರ ರವೀಂದ್ರರನ್ನು ನೆನಪಿಗೆ ತರುತ್ತಾಳೆ ಅಕ್ಕ–'ನೀಕಟ್ಟಿ ಕೆಡಹಿದ ಬಂಧನವೇ ನಿರ್ಬಂಧವೆಂದಿಪ್ಪೆನು' ಎಂದು ನುಡಿದು. ಅಕ್ಕನ ಮಾತು ಅಮೃತವೆನ್ನುವುದು ಸುಳ್ಳಲ್ಲ. ಅವಳು ಬರೆದುದೆಲ್ಲ ಕಾವ್ಯವಾಯಿತು. ಇಷ್ಟೇ ಅಲ್ಲ. ಅವಳೇ ಕಾವ್ಯವಾಗಿಬಿಟ್ಟಳು. 'ಮೊರೆವನಾದವ ಕೇಳಿ ಉರಿವ ಜ್ಯೋತಿಯ ನೋಡಿ ಸುರಿವಮೃತವನು ಸವಿದುಂಡ' ಅವಳ ಜೀವನವೇ ಕಾವ್ಯ, ದಿವ್ಯ ಕಾವ್ಯ !

"ಜಗವಂದ್ಯಗೆ ಬೇಟವ ಮಾಡಿದೆ ನಾ
ಹಗೆಯಾದೆನು ಸಂಸಾರಕ್ಕೆಲ್ಲ !"

ಎಂದವಳು ಮುಂದುವರಿಸಿದಳು ಶಿವರತಿಯನ್ನು. ಅವಳ ನಿಷ್ಠೆಯ ನಿಶ್ಚಲತೆಯ ಪರೀಕ್ಷಾ ಕಾಲವೂ ಬಂದಿತು. ಊರದೊರೆ ಕೌಶಿಕನೊಮ್ಮೆ ವೈಹಾಳಿಯಿಂದ ಹಿಂದಿರುಗುತ್ತ ಮನೆಯ ಬಾಗಿಲಲ್ಲಿ ನಿಂತಿದ್ದ ಮಹಾದೇವಿಯನ್ನು ನೋಡಿದನು. ಅವಳ ಸ್ಫುರದ್ರೂಪಕ್ಕೆ, ಸುರಸೌಂದರ್ಯಕ್ಕೆ ಮನಸೋತನು. ಬಿರುಗಾಳಿಗೆ ಸಿಕ್ಕ ಹಡಗದಂತೆ ಹೋಯ್ದಾಡಿತವನೆದೆ. ಸಮಯ ಕಾದಿದ್ದ ಕಾಮ ಸಮ್ಮೋಹನಾಸ್ತ್ರವನ್ನೆಸೆದ. ಸರಿ, 'ಮಹಾದೇವಿಯಂ ಕೊಂಡೊಡುಳಿವೆನಲ್ಲದೊಡಳಿವೆ'ನೆಂದು ಹಾಸಿಗೆ ಹಿಡಿದ ಕೌಶಿಕ.

ಅವನ ಪರವಾಗಿ ಹೆಗ್ಗಡಿತಿಯರು ಬಂದರು. ಮಹಾದೇವಿಯ ತಂದೆತಾಯಿಗಳಿಗೆ ಕೌಶಿಕನ ಅಭಿಲಾಷೆಯನ್ನು ತಿಳಿಸಿದರು. ನಿರ್ಮಲ ಸುಮತಿಯರಿಗೆ ನಿಂತನೆಲ್ಲ ಕುಸಿದ ಹಾಗಾಯಿತು. ನಿರಾಕರಣದ ಪರಿಣಾಮ ತಿಳಿದುದೇ ಆಗಿದ್ದಿತು,

ಅಕ್ಕಮಹಾದೇವಿಗೂ ದಿಕ್ಕು ತೋಚದಾಯಿತು ;

"ಹಿಂದಣ ಹಳ್ಳ , ಮುಂದಣ ತೊರೆ : ಸಲ್ಲುವ ಪರಿಯೆಂತು ಹೇಳಾ?
ಹಿಂದಣ ಕೆರೆ, ಮುಂದಣ ಬಲೆ : ಹದುಳವಿನ್ನೆಲ್ಲಿಯದು ಹೇಳಾ?
ನೀನಿಕ್ಕಿದ ಮಾಯೆ ಕೂಲುತಿಪ್ಪುದು–ಕಾಯಯ್ಯ , ಕಾಯಯ್ಯ
ಚೆನ್ನಮಲ್ಲಿಕಾರ್ಜುನ !"

ಎಂದು ಮೊರೆಯಿಟ್ಟಳು ! ಮೊದಲೇ ಮಾನವರನ್ನು ಮದುವೆಯಾಗೆನೆಂದು ನಿರ್ಧರಿಸಿದ್ದಾಳೆ. ಅದರಲ್ಲಿ ಭವಿ ಬಂದು ಬೇಡಿದರೆ? 'ಭವಿಸಂಗವಳಿದು ಶಿವಭಕ್ತನಾದ ಬಳಿಕ ಭಕ್ತಂಗೆ ಭವಿಸಂಗವತಿ ಘೋರನರಕ ! ಶರಣಸತಿ, ಲಿಂಗಪತಿಯಾದ ಬಳಿಕ ಶರಣಂಗೆ ಸತಿಸಂಗವತಿ ಘೋರನರಕ ! ಚೆನ್ನಮಲ್ಲಿಕಾರ್ಜುನ, ಲಿಂಗೈಕ್ಯಂಗೆ ಪ್ರಾಣಗುಣವಳಿಯದವರ ಸಂಗವೇ ಭಂಗ !" ಎಂದು ನಂಬಿದ್ದ ಅಕ್ಕನ ಅವಸ್ಥೆ ಏನಾಗಿರಬೇಡ?

ಕರೆ ಬಂದಿರುವುದು ಅರಮನೆಯಿಂದ ನಿಜ. ಆದರೇನು?

"ರತ್ನದ ಸಂಕೋಲೆಯಾದರೆ ತೊಡರಲ್ಲವೆ?
ಮುತ್ತಿನ ಬಲೆಯಾದರೆ ಬಂಧನವಲ್ಲವೆ?
ಚಿನ್ನದ ಕತ್ತಿಯಲ್ಲಿ ತಲೆಯ ಹೊಯಿದರೆ ಸಾಯದಿರ್ಪರೆ?
ಲೋಕದ ಭಜನೆಯ ಭಕ್ತಿಯಲ್ಲಿ ಸಿಕ್ಕಿದರೆ ಜನನ ಮರಣ ಬಿಡುವುದೆ,
ಚೆನ್ನಮಲ್ಲಿಕಾರ್ಜುನ?"

ಏನು ಮಾಡುವುದೀಗ? "ಅಲ್ಲೆಂದೊಡೆ ಉಂಟೆಂಬುದೀಮಾಯೆ! ಒಲ್ಲೆನೆಂದೊಡೆ ಬಿಡದೀಮಾಯೆ ! ಎನಗಿದು ವಿಧಿಯೆ! ಚೆನ್ನಮಲ್ಲಿಕಾರ್ಜುನಯ್ಯ, ಒಪ್ಪಿಮರೆವೊಕ್ಕೊಡೆ ಮತ್ತುಂಟೆ? ಕಾಯಯ್ಯ, ಶಿವಧೋ !"

ಒಮ್ಮೆ ಒಪ್ಪಿದರೆ ಮುಂದೆ ತಪ್ಪದು. ಈ ಮಾಯೆಯನ್ನು ಈಗಲೇ ನಿರಾಕರಿಸಬೇಕು! ಆದುದರಿಮದ ರಾಜದರ್ಪವಾಗಿ ಬಂದಿರುವ ಈ ಮಾಯೆಗೆ ಸೊಪ್ಪು ಹಾಕಬಾರದು! ......ಈ ಮಾಯೆಯ ಕರೆಯನ್ನು ಒಪ್ಪಬಾರದು, ಒಪ್ಪಬಾರದು!

ನಿರ್ಮಲಸುಮತಿಯರು ಸ್ತಂಭೀಭೂತರಾಗಿದ್ದಾರೆ. ಮಹಾದೇವಿಯ ಮನದಲ್ಲಿ ಬಿರುಗಾಳಿಯೆದ್ದಿದೆ. ಬಂದ ಹೆಗ್ಗಡಿತಿಯರು ಬೆರಗಾಗಿ ನೋಡುತ್ತಲಿದ್ದಾರೆ–ಸಿರಿಯ ಕರೆಗೂ ಓಗೊಡದ ಭಕ್ತಿಶ್ರೀಯ ಬಂಧುರತೆಯನ್ನು ! ಯಾರು ಮೌನವನ್ನು ಮುರಿಯಬೇಕು?

ಸಖಿಯರು ಮುಂದಾದರು : “ಯಾವ ಯೋಚನೆಯಲ್ಲಿರುವೆ ಮಹಾದೇವಿ? ಒಪ್ಪಿಬಿಡು ! ನೀನು ನಮ್ಮ ರಾಣಿಯಾದುದನ್ನು ನೋಡುವ ಭಾಗ್ಯ ನಮ್ಮದಾಗಲಿ!”

“ನನ್ನ ಅಧಃಪಾತವನ್ನು ನೋಡಲು ನಿಮಗಿಷ್ಟು ಆಸೆಯೆ?”

“ಇದು ಅಧಃಪಾತವೆ?”

“ಇನ್ನೇನು? ಕಲ್ಲಹೊತ್ತು ಕಡಲೊಳಗೆ ಮುಳುಗಿದೊಡೆ ಎಡರಿಂಗೆ ಕಡೆಯುಂಟೆ ಅವ್ವ? ಕಂಡ ಕಂಡ ಠಾವಿನಲ್ಲಿ ಮನಬೆಂದೊಡೆ ಗಂಡ ಚೆನ್ನಮಲ್ಲಿಕಾರ್ಜುನ ನೆಂತೊಲಿವನವ್ವ?”

“ಮತ್ತೆ ನಿನ್ನ ಮಲ್ಲಿಕಾರ್ಜುನ ! ಎಲ್ಲಿದ್ದಾನೆ ಆ ನಿನ್ನ ಚೆನ್ನಮಲ್ಲಿಕಾರ್ಜುನ? ಇನ್ನಾದರೂ ಈ ಅಸಾಧ್ಯವಾದ ಆಸೆಯನ್ನು ಬಿಡಬಾರದೆ? ದೊರೆಯೂ ದೇವರಿಗೆ ಸಮಾನ ಗೆಳತಿ. ದೊರೆಯನ್ನೇ ಮಲ್ಲಿಕಾರ್ಜುನನೆಂದು ನಂಬಿ ಕೈಹಿಡಿದು ಸುಖಿಯಾಗು.”

“ನಿಮಗೆಷ್ಟು ಸಲ ತಿಳಿಸಿ ಹೇಳಲಿ ತಾಯಿ, ನಾನಿದಾಗಲೇ ಒಬ್ಬನನ್ನು ಮದುವೆಯಾಗಿಬಿಟ್ಟಿದ್ದಾನೆ. ಮತ್ತ ಮದುವೆಯೆ?”

ಸುಮ್ಮತಿಗಿನ್ನು ಸುಮ್ಮನಿರಲಾಗಲಿಲ್ಲ. ಅದೆಷ್ಟೋ ಸಲ ತಾನೂ ತಿಳಿಸಿ ಹೇಳಿ ವಿಫಲ ಮನೋರಥಳಾಗಿದ್ದರೂ ಹೆತ್ತಕರುಳಿನ ಒತ್ತಡಕ್ಕೆ ಒಳಗಾಗಿ ನುಡಿದಳು :

“ನಿನ್ನ ಗೆಳತಿಯರು ನಿನ್ನ ಹಿತಕ್ಕಾಗಿಯೇ ಹೇಳುತ್ತಲಿದ್ದಾರೆ ಮಗಳೆ, ಅವು ಮಾತಿಗೆ ಬೆಲೆ ಕೊಡು. ನಿರಾಕರಿಸುವ ಮುನ್ನ ವಿಚಾರಿಸು.”

ಸಾಕಷ್ಟು ವಿಚಾರಿಸಿಯೇ ತೀರ್ಮಾನಿಸಿದ್ದೇನೆ ತಾಯೆ. ಸುಮ್ಮನೆ ಕಾಡಬೇಡಿರಿ: “ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವ !

ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗಾನೊಲಿಗೆ ಎಲೆ ಅವ್ವಾ,

ನೀನು ಕೇಳಾತಾಯೆ–ಭವವಿಲ್ಲದ, ಭಯವಿಲ್ಲದ ನಿರ್ಭಯ ಚೆಲುವಂಗೊಳಿದೆನಾನು ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ.

ಇದು ಕಾರಣ, ಚೆನ್ನಮಲ್ಲಿಕಾರ್ಜುನನೆ ಚೆಲುವಗಂಡನೆನಗೆ !

ಈ ಸಾವಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು !”

ಇದಕ್ಕೆ ಉತ್ತರ ಕೊಡುವ ಸಾಹಸವನ್ನು ಯಾರೂ ಮಾಡಲಿಲ್ಲ. ಮಹಾದೇವಿ ಮತ್ತೆ ಮಲ್ಲಿನಾಥನಿಗೆ ಮೊರೆಯಿಟ್ಟಳು : “ನಾನು ನಿನಗೊಲಿದೆ, ನೀನು ಎನಗೊಲಿದ!

ನೀನೆನ್ನನಗಲಿದಿಪ್ಪೆ, ನಾ ನಿನ್ನನಗಲದಿಪ್ಪೆನಯ್ಯ ! ನಿನಗೆ ನನಗೆ ಬೇರೊಂದು ರಾವುಂಟೆ? ನೀನು ಕರುಣೆ ಎಂಬುದ ನಾನು ಬಲ್ಲೆನು. ನೀನಿರಿಸಿದ ಗತಿಯೊಳಗೆ ಇಪ್ಪಳಾನಯ್ಯಾ !

"ನೀನೇ ಬಲ್ಲೆ, ಚೆನ್ನಮಲ್ಲಿಕಾರ್ಜುನ !"

ಮಲ್ಲಿನಾಥನವಳಿಗೆ ಏನು ಪ್ರೇರಣೆಯಿತ್ತನೋ–ಹೆಗ್ಗಡಿತಿಯರಿಗೆ ಹೇಳಿದಳು:

"ಆ ನರೇಂದ್ರನೆ ಬಂದು ನನ್ನ ಮನೋನುರಾಗವ ಸಲಿಸುವಂತಿರೆ ಶಪಥ ಮಾಡಲಿ !"

ಮಹಾಸುಮಾನದಲ್ಲಿ ಮಹಾದೇವಿಯ ಮನಗೆ ಬಂದು ಕೌಶಿಕ. ತನ್ನ ಘನತೆ ಹೆಚ್ಚುವಂತೆ ನುಡಿದೆ : "ಲಲನೆ ಕೇಳೌ ನಿನ್ನ ಬಯಕೆಯ ಸಲಿಸುವೆನು ಮೊದಲಲ್ಲಿ; ಬಳಿಕಾನೊಲಿಸಿ ಕೊಂಬೆನು ನಿನ್ನನು ; ಅಂತಲ್ಲದೆ ದುರುಕ್ತಿಯಲಿ ನೆಲನೊಡೆಯ ನಾನೆಂಬ ಗರ್ವದ ಬಲುಹು ಗಿಲುಹನು ಮಾಡಿದೊಡೆ.....ಹುಸಿಯ ನುಡಿವನ, ಜೀವಹಿಂಸೆಯ ದೆಸೆಗೆ ನಲಿವನ, ತಾಯಿಮಕ್ಕಳ ಬೆಸುಗೆಯನು ಬಿಚ್ಚಿದನ, ಮಿತ್ರಂಗೆರಡು ಬಗೆದವನ, ಹಿಸುಣಿಗಣ ಕೃಪಣನ ವೃಥಾ ಕೋಪಸುವವನ ದುರ್ಗತಿಗಳಾಗಲೆನಗೆ!"

ದೊರೆ ಕೌಶಿಕ ಧರ್ಮಪರನೆಂಬುದು ಮನವರಿಕೆಯಾಯಿತು ಮಹಾದೇವಿಗೆ. ಅಂದಣವನ್ನೇರೆಇ ಅರಮನೆಗೆ ಹೋದಳು. ಕಾತರನಾಗಿದ್ದ ಕೌಶಿಕ ಮನೋನುರಾಗವಾಗುವುದೆಂದು ಮಹಾದೇವಿಯನ್ನು ಕೇಳಿದ. ಅವಳು 'ನೀನು ಶಿವಭಕ್ತನಾದೊಡೆ ಕೂಡುವೆನು ನಿನ್ನ' ಎಂದು ಉತ್ತರವೀಯಲು ಸುಮಾನಹೋಗಿದುಮಾನವಾಯಿತವನಿಗೆ. ಅದೊಂದನ್ನು ಬಿಟ್ಟು ಇನ್ನೇನನಾದರೂ ಸಲಿಸುವೆನೆಂದು ಪರಿಪರಿಯಿಂದ ಪ್ರಾರ್ಥಿಸಿದನವನು. ಆದರೆ ಮಹಾದೇವಿ ಮದುವೆಯನ್ನು ಮುರಿಯಲು ಬಂದಿದ್ದಳು, ಕರೆಯಲಲ್ಲ. ಆದುದರಿಂದ ಯಾವ ಪ್ರಲೋಭನಕ್ಕೂ ಒಳಗಾಗಲಿಲ್ಲ. ಕೈಸಾರಿದ್ದ ರೂಪರಾಶಿ ಕೈಗೆ ನಿಲುಕದೆ ಹೋಗುತ್ತಿರುವುದನ್ನು ಕಂಡು ಕೌಶಿಕನು ದುಡುಕಿದನೇನೋ–ಮಹಾದೇವಿ ಅವನ ಮೋಹದ ಮಬ್ಬು ಇಳಿವಂತೆ, ಮಾಯೆಯ ಕತ್ತಲೆ ಹರಿವಂತೆ ಉಟ್ಟಸೀರೆಯ ತೊಟ್ಟ ತೊಡಿಗೆಯ ತೆಗೆದೊಗೆದು ನುಡಿದಳು : "ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿ ತಡಿಕೆ, ಕೀವಿನ ಹಡಿಕೆ–ಸುಡಲೀ ದೇಹವ ! ಒಡಲುವಿಡಿದು ಕೆಡದಿರು–ಚೆನ್ನಮಲ್ಲಿಕಾರ್ಜುನನರಿ ಮರುಳೆ !"

ಕೌಶಿಕ ಸ್ತಂಭಿತನಾದ ! ಮಾನವ ಶರೀರದ ನಿಜಸ್ವರೂಪವನ್ನು ಕಂಡು ನಿರ್ವೇದಗೊಂಡನೋ, ದಿಗಂಬರತೆಯಲ್ಲಿ ಪೂಜ್ಯತೆಯನ್ನು ಕಂಡು

ಪರಾಙ್ಮುಖನಾದನೋ ತಿಳಿಯದು. ಅಂತೂ ಇಂತೂ ಕಂತುವಿನ ಸಂತೆ ಮುಗಿಯಿತು. “ಮೀಸಲಳಿಯಿತು ಬಯಕೆ, ಮನದಭಿಲಾಷೆ ಜಾರಿತು, ಕಾಮದಾತುರವೋ ಸರಿಸಿತು, ವಿವೇಕ ವರ್ಧಿಸಿತು !' ಕೌಶಿಕನ ಹೃದಯ ಪರಿವರ್ತನೆಯಾಗಿದ್ದಿತು. ಆಶಾರಹಿತೆ ಅಕ್ಕಮಹಾದೇವಿ ಕೇಶಾಂಬರಧಾರಿಯಾಗಿ ರಾಹುಮುಸುಕಿದ ಚಂದರ ಕಳೆಯಂತೆ ಹೊರಟುಹೋಗುತ್ತಿರುವುದನ್ನು ನೋಡುತ್ತ ನಿಂತುಬಿಟ್ಟ–ವಿಸ್ಮಿತನಾಗಿ ನಿಬ್ಬೆರನಾಗಿ....

ಅಕ್ಕಮಹಾದೇವಿಯೋ– 'ಉಟ್ಟಸೀರೆಯ ಸೆಳೆದು ತೊಟ್ಟ ತೊಡಿಗೆಯ ಹರಿದು ಬಿಟ್ಟೆನೋ ನಾನು ಬಿಡುಮುಡಿಯ, ಎಲೆದೇವ, ಕೊಟ್ಟೆನೋ ಎನ್ನ ತನುಮನವ !' ಎಂದು ಹಾಡುತ್ತ ಅರಮನೆಯಿಂದ ಹೊರಬಿದ್ದು ಎತ್ತಲೋ ಹೊರಟುಬಿಟ್ಟಳು. ಹುಟ್ಟುಗೆಡಲು ಹೊರಟಿದ್ದ ಅವಳು ಹುಟ್ಟಿದ ಮನೆಗೂ ಹೋಗಲಿಲ್ಲ. ತಂದೆತಾಯ ಬಂಧುಬಳಗಕ್ಕೆ ಸುದ್ದಿ ತಿಳಿಯಲು ದಿಗ್ಭ್ರಾಂತರಾಗಿ ಧಾವಿಸಿ ಬಂದರು. 'ಹೆತ್ತಹೊಟ್ಟೆಗೆ ಹುಡಿಹೊಯ್ದು ಹೋಗದಿರು' ಎಂದು ಸುಮತಿ ಶೋಕಿಸಿದಳು; 'ನಿನ್ನ ಹಾಗೆಯೇ ಶರಣಸತಿ ಲಿಂಗಪತಿ ತತ್ತ್ವವನ್ನು ಒಪ್ಪಿ ಅಪ್ಪಿದ ವರನೊಬ್ಬನ ಕೈಹಿಡಿದು ನಿನ್ನಿಚ್ಛೆಯಂತೆಯೇ ಇರು' ಎಂದು ಹಲುಬಿದಳು. ಅಕ್ಕನ ಉಕ್ಕಿನ ನಿರ್ಧಾರ ಕರಗಲಿಲ್ಲ. ಅಬ್ಬೆಯನ್ನು ತಬ್ಬಿ ಹೇಳಿದಳು :

> “ಒಳಗಿನ ಗಂಡನವ್ವಾ, ಹೊರಗಿನ ಮಿಂಡನವ್ವಾ–ಎರಡನು ನಡಿಸಲು ಬಾರದವ್ವಾ;
> ಲೌಕಿಕ ಪಾರಮಾರ್ಥಿಕವೆಂಬೆರಡನು ನಡಿಸಲು ಬಾರದವ್ವಾ !
> ಚೆನ್ನಮಲ್ಲಿಕಾರ್ಜುನಯ್ಯನಲ್ಲಿ ಬಿಲ್ಲು ಬೆಳವಲಕಾಯಿ ಒಂದಾಗಿ ಹಿಡಿಯಲು ಬಾರದವ್ವಾ”

ಅದುವರೆಗೆ ನೀರವವಾಗಿದ್ದ ನಿರ್ಮಲ ನುಡಿದ: “ನೀನು ಮದುವೆಯಾಗದಿದ್ದರೆ ಹೋಗಲಿ, ನಮ್ಮನ್ನು ತೊರೆದು ಹೋಗದಿರು ಮಗಳೆ ! ನಿನಗೆ ಮನೆಯಲ್ಲಿಯೇ ಏಕಾಂತವಾಸದ, ಏಕಾಂತ ಸಾಧನೆಯ ವ್ಯವಸ್ಥೆ ಮಾಡಿಕೊಡುವೆ. ಇಲ್ಲಿಯೇ ಸಮಾಧಿಯನ್ನು ಸಾಧಿಸುವಿಯಂತೆ!”

ತಟ್ಟನೆ ಬಂದಿತು ಅಕ್ಕನ ಉತ್ತರ : “ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯ? ಕ್ಷಮೆದಮೆ ಶಾಂತಿ ಸೈರಣೆಯಿರಲು ಸಮಾಧಿಯ ಹಂಗೇಕಯ್ಯ? ಲೋಕವೇ ತಾನಾದ ಬಳಿಕ ಏಕಾಂತದ ಹಂಗೇಕಯ್ಯ, ಚೆನ್ನಮಲ್ಲಿಕಾರ್ಜುನ?”

ತಂದೆ ನಿರುತ್ತರನಾದ. ತಾಯ ಗೋಗರೆದಳು : “ಹೇಗಾದರೂ ಇರು, ಎಂತಾದರೂ ಇರು ಮಗಳೆ, ನಮ್ಮೊಡನೆಯೇ ಇರು ! ನಮ್ಮನ್ನಗಲಿ ಹೋಗದಿರು. ನನ್ನಾಣೆ ಹೋಗದಿರು !'

ಆ ಹೆತ್ತಕರುಳಿನ ಕರೆಗೂ ಕಿವುಡಾಗಿದ್ದಿತವಳ ಕಿವಿ ! ಆದರ್ಶದ ಕರೆಗೆ ಓಗೊಟ್ಟು ಬಸವಣ್ಣ ತಂದೆತಾಯಿಗಳನ್ನು ತೊರೆದು ಹೋದಂತೆ, ಅಲ್ಲಮಪ್ರಭು ಜನನೀಜನಕರನ್ನು ತ್ಯಜಿಸಿ ಹೊರಟಂತೆ ಸಿದ್ಧರಾಮ ಮಾತಾಪಿತರನ್ನು ಆಗಲಿ ಹೋದಂತೆ ಅಕ್ಕಮಹಾದೇವಿಯೂ ಹೊರಟು ನಿಂತಿದ್ದಳು. ಅವರೆಲ್ಲ ಒಂದೇ ಆದರ್ಶಕ್ಕಾಗ ಅವತರಿಸಿದವರು. ಅವರನ್ನು ತಡೆದು ನಿಲ್ಲಿಸಬಲ್ಲುವೆ ತಂದೆತಾಯಿಗಳ ಕರುಳಿನ ಕರೆಗಳು? ಸಾಗರಾಭಿಮುಖವಾಗಿ ಹೊರಟು ಸಿಂಧು ಗಂಗೆಯನ್ನು ತಡೆದು ನಿಲ್ಲಿಸಿದುವೆ ಹಿಮಾಲಯದ ವಿಲಾಪಗಳು? ಮಾರ್ನುಡಿದಳು ಮಹಾದೇವಿ; "ಮನಮನತಾರ್ಕಣೆಯ ಕಂಡು ಅನುಭವಿಸಲು ನೆನಹೇ ಘನವಹುದಲ್ಲದೆ ಅದು ಹವಣಲ್ಲಿ ನಿಲುವುದೆ ಎಲೆ ಅವ್ವ? ನೀನು ಮರುಳವ್ವೆ ! ಎನ್ನದೇವ ಚನ್ನಮಲ್ಲಿಕಾರ್ಯನಯ್ಯಗೊಲಿದು ಸಲೆ ಮಾರುಪೋದೆನು ! ನಿನ್ನ ತಾಯ ತನವನೊಲ್ಲೆಹೋಗೆ?"

ಸುಮತಿಗೆ ಸಿಡಿಲು ಬಡಿದಂತಾಯಿತು. ಆದರೆ ಮಾಡುವಳೇನು? ಬಿಟ್ಟ ಬಾಣವನ್ನು ಹಿಂದಿರುಗಿಸಬಹುದು, ಬೆಟ್ಟವಿಳಿವ ನದಿಯನ್ನೂ ಹಿಂದಿರುಗಿಸಬಹುದು, ಮಹಾದೇವಿಯನ್ನು ಹಿಂದಿರುಗಿಸುವುದು ಸಾಧ್ಯವಿರಲಿಲ್ಲ. ನಿರ್ಮಲನೂ ನಿರುಪಾಯನಾಗಿ ಕೊನೆಯ ಕೋರಿಕೆಯೊಂದನ್ನು ಮುಂದಿಟ್ಟ : ಹೋಗಲೇ ಬೇಕಾದರೆ ಹೋಗು ಮಗಳೆ. ಆದರೆ ದಿಗಂಬರಿಯಾಗಿ ಮಾತ್ರ ಹೋಗಬೇಡ ! ನೀನಿನ್ನೂ ಯುವತಿ. ಯಾರ ಬೆಂಗಾವಲೂ ಇಲ್ಲದೆ ಹೊರಟಿರುವೆ...."

ನಕ್ಕಳಾ ಅಕ್ಕ :

"ಮರೆಯ ನೂಲು ಸರಿಯೆ ನಾಚುವುದು ನೋಡಾ ಗಂಡುಹೆಣ್ಣೆಂಬ ಜಾತಿ!
ಪ್ರಾಣದೊಡೆಯನೀ ಜಗದಲ್ಲಿ ತೆರಹಿಲ್ಲದಿಪ್ಪೊಡೆ ನಾಚಲೆಡೆಯುಂಟೆ ಹೇಳಾ?
ಚೆನ್ನಮಲ್ಲಿಕಾರ್ಜುನಯ್ಯ ಜಗವೆಲ್ಲ ಕಣ್ಣಾಗಿ ನೋಡುತ್ತಿರೆ
ಮುಚ್ಚಿ ಮರೆಯಿಸುವೆನೆಂತು ಹೇಳಾ ಎಲೆ ಅಯ್ಯ ?"

ಇದಕ್ಕೆ ಯಾರು ಉತ್ತರ ಹೇಳಬೇಕು? ಮಹಾದೇವಿಯು ಒಂದೊಂದು ಮಾತೂ ಮಹತೋಮಹೀಯಾನ್ ! ಕೇಳಿದವರ ಮನವೂ ಮಹತ್ತಾಗುವ ಮಾತುಗಳವು ! ನಿರ್ಮಲ ಸುಮತಿಯರಿಗೂ ಮನವರಿಕೆಯಾಯಿತು : 'ಮಹೋದ್ದೇಶಕ್ಕಾಗಿ ಹುಟ್ಟಿದ್ದ ಮಹಾಜೀವ ಮಹಾದೇವಿ ! ಅವಳನ್ನು ತಡೆಯಲೆತ್ನಿಸುವುದು ಹುಚ್ಚುತನ ! ನೆರೆಬಂದ ತೊರೆಯಂತೆ ಭಕ್ತಿಭರದಲ್ಲಿ ಆಕೆ ಹೊರಟಿದ್ದಾಳೆ. ಹೋಗಲಿ!'

ಆದರೂ ಆವರಿಸಿದ್ದ ತಂದೆತಾಯ್ತನ ಮತ್ತೆ ನುಡಿಸಿತು ; "ಹೋಗಿ ಬಾ

ಮಗಳೆ ! ಮಲ್ಲಿಕಾರ್ಜುನನ ಕೃಪಾಕಟಾಕ್ಷ ನಿನಗೆ ರಕ್ಷೆಯಾಗಿರಲಿ! ಜೋಕೆ ಮಗಳೆ, ಜೋಕೆ–ನೀನೆಷ್ಟೆಂದರೂ ಹೆಣ್ಣುಜೀವ !"

ಅಮೃತಸ್ಮಿತದೊಡನೆ ಅಕ್ಕ ಉತ್ತರವಿತ್ತಳು :

"ಹೆಣ್ಣು ಹೆಣ್ಣಾದೊಡೆ ಗಂಡಿನ ಸೂತಕ ;
ಗಂಡು ಗಂಡಾದೊಡೆ ಹೆಣ್ಣಿನ ಸೂತಕ !
ಮನದ ಸೂತಕ ಹಿಂಗಿದೊಡೆ ತನುವಿನ ಸೂತಕಕ್ಕೆ ತೆರಹುಂಟೆ ಅಯ್ಯಾ?
ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ !
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನೆಂಬ ಗರುವಂಗೆ
ಜಗವೆಲ್ಲ ಹೆಣ್ಣು ನೋಡಾ !"

ಬೆಪ್ಪಾದರು ಕೇಳಿದವರು ! 'ಗಂಡ ಗಂಡರನೆಲ್ಲ ಹೆಂಡಿರಾಗಿ ಆಳುವ' ಆ ಗರುವನ ಮುಂದೆ ಗಂಡರೆಂಬವರುಂಟೆ? ಎಲ್ಲರೂ ಹೆಣ್ಣಲ್ಲವೆ ಅವನ ಕಣ್ಣಲ್ಲಿ? ಮಹಾದೇವಿ ಮಾತ್ರ ಹೆಣ್ಣೆ , ಹೆಣ್ಣು ಜಾತಿ ಮಾತ್ರ ಹೆಣ್ಣೆ? ಲಿಂಗ ಪತಿ ಶರಣಸತಿ ತತ್ತ್ವವನ್ನೊಪ್ಪಿದ ಮೇಲೂ ಗಂಡು ಹೆಣ್ಣಿನ ಭೇದವೆ? ಲಿಂಗಭೇದದ ಭ್ರಾಂತಿಯೆ?

ಹರಸಿ ಬೀಳ್ಕೊಟ್ಟರು ನಿರ್ಮಲ ಸುಮತಿಯರು; ಹೊರಟಳು ಮಹಾದೇವಿ. ಹೇಗೆ ಹೊರಟಳೆಂಬುದನ್ನು ಹರಿಹರನೇ ಹೇಳಲಿ :

"ಒದೆದು ಸಮಸ್ತ ರಾಜ್ಯಸುಖರ್ಮ ಸುಖದಿಂ ಬಿಸುಟ್ಟಲ್ಪ ಭೋಗ ಸಂ–
ಪದವನೆ ನೂಂಕಿ ಸಂಸ್ಕೃತಿಯ ದಂದುಗಮಂ ಬಿದಿರ್ವಾಸೆಯೆಂಬಿವಂ
ವಿದಳಿಸಿ ಕಾಮಮತ್ತಗಜ ಮಸ್ತಕದಾಮದಮಂ ಸಡಿಲ್ಪಿಮಾಣದೆ
ಮಹಾದೇವಿಯಾಹ ಪೊರಮಟ್ಟಳನೂನ ವಿರಕ್ತೆ ಭಕ್ತಿಯಿಂ !"

ಹೊರಟಳು 'ಮಲ್ಲಿಕಾರ್ಜುನನ ಭಕ್ತಿಯ ಭಾವಕಿ, ಚೆನ್ನಮಲ್ಲಿಕಾರ್ಜುನನ್ನು ಸುಧಾನಿಧಾನನಿಳಯಂ, ಕರುಣಾಕರ ಚೆನ್ನಮಲ್ಲಿಕಾರ್ಜುನನ ಸುಖಂ ಮಹಾದೇವಿ!' ಎಲ್ಲಿಗೆ?

"ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತ್ತು ;
ಒಳಗೂ ಕಲ್ಯಾಣ, ಹೊರಗೂ ಕಲ್ಯಾಣ !
ಇದರಂತುವನಾರು ಬಲ್ಲರಯ್ಯ?
ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯ !
ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ ತವಕವೆನ
ಗಾಯಿತ್ತು ಕೇಳಾ, ಚೆನ್ನಮಲ್ಲಿಕಾರ್ಜುನಾ !"

ಸರಿ, ಕಲ್ಯಾಣದತ್ತ ಪಯಣ !

'ಜಿನಧರ್ಮಾವಾಸಮಾಗಿ'ಮೆರೆದ ಕನ್ನಡನಾಡಿನಲ್ಲಿ ದಿಗಂಬರತ್ವ ಹೊಸದೇನೂ

ಅಲ್ಲ. ಆದರೆ ಏರುಂಜವ್ವನದ ಬಾಲೆಯೋರ್ವಳು ಬರಿಮೈಯಿಂದ ಹೊರಟುದು ಯಾರಿಗಾದರೂ ಅಚ್ಚರಿಯನ್ನು ಉಂಟುಮಾಡಿರಬೇಕು. ಕೆಲವರಾದರೂ ಕಾಡಿರಬೇಕು ಅಕ್ಕನನ್ನು. ಅದಕ್ಕೆ ಅಕ್ಕ ಅಳುಕದೆ.

"ಮುಡಿಬಿಟ್ಟು ಮೊಗಬಾಡಿ ತನು ಕರಗಿದವಳ
ಎನ್ನನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ?
ಎನ್ನನೇಕೆ ಕಾಡುವಿರಿ ಎಲೆ ತಂದೆಗಳಿರಾ?
ಬಲುಹಳಿದು ಭವಗೆಟ್ಟು ಛಲವಳಿದು ಭಕ್ತೆಯಾಗಿ
ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ?"

ಎಂದು ಕೇಳಿದಳು. ಅಷ್ಟಕ್ಕೆ ನಾಚಿಹೋದರು ಕೆಲವರು; ಅಷ್ಟಕ್ಕೂ ನಾಚಿಕೆ ಬರದೆ ಬೆಂಬತ್ತಿದರು ಕೆಲವು ನಿರ್ಲಜ್ಜರು ! ಅವರಿಗೆ–

ನೋಡುವ ಕಂಗಳಿಗೆ ರೂಪಿಂಬಾಗಿರಲು
ನೀವು ಮನನಾಚದೆ ಬಂದಿರಣ್ಣಾ !
ಕೇಳಿದ ಕಿವಿಯ ಸೊಗಸಿಗೆ ನೀವು ಮರುಳಾಗಿ ಬಂದಿರಣ್ಣಾ !
ನಾರಿಯೆಂಬ ರೂಪಿಂಗೆ ನೀವ ಒಲಿದು ಬಂದಿರಣ್ಣಾ !
ಮೂತ್ರಬಿಂದುವೊಸರುವ ನಾಳವೆಂದು
ಕಂಗಾಣದೆ ಮುಂದುಗೆಟ್ಟು ಬಂದಿರಣ್ಣಾ !
ಬುದ್ಧಿಗೇಡಿತನದಿಂದ ಪರಮಾರ್ಥದ ಸುಖವ ಹೋಗಲಾಡಿಸಿಕೊಂಡು
ಇದಾವ ಕಾರಣವೆಂದರಿಯದೆ ನೀವು ನರಕಹೇತುವೆಂದರಿದೂ
ಮನ ಹೇಸದೆ ಬಂದಿರಣ್ಣಾ !
ಚೆನ್ನಮಲ್ಲಕಾರ್ಜುನನಲ್ಲದೆ ಮಿಕ್ಕ ಪುರುಷರೆನಗೆ ಸಹೋದರರು !
"ಛೀ ಹೋಗಾ ಮರುಳೆ !"

ಎಂದು ಛೀ ಮಾಡಿ ಕಳಿಸಿದಳು.

"ಅಣ್ಣಾ ನಾನು ಹೆಂಗುಸಲ್ಲ, ನಾನು ಸೂಳೆಯಲ್ಲ !
ಅಣ್ಣಾ , ನನ್ನನ್ನು ಕಂಡು ಕಂಡು ಆರೆಂದು ಬಂದಿರಣ್ಣಾ?
ಎಲೆ ಅಣ್ಣಾ , ನೀವು ಮರುಳರಲ್ಲಾ !"

ಎಂದು ತಿಳಿಹೇಳಿ ಕಳಿಸಿದಳು.

ಇಂತು ಕಂತುವಿನ ಅನಂತ ಧಾಳಿಗಳನ್ನೆದುರಿಸುತ್ತ, ವಿಘ್ನಪರ್ವತಗಳನ್ನು ಕಸಗೂಡಿಸಿದಂತೆ ಲೀಲಾಜಾಲವಾಗಿ ಬದಿಗೆ ಸರಿಸುತ್ತ ಲೋಕ ವಿರೋಧಿಯಾಗಿ ಲೋಕದ ಉಪಟಳವನ್ನು ನೀರು ಕುಡಿದಂತೆ ನಿರಾಯಾಸವಾಗಿ ನುಂಗುತ್ತ ಕಲ್ಯಾಣವನ್ನು ತಲುಪಿಸಿದಳು ಮಾತಾಯಿ ಮಹಾದೇವಿ !ಕಲ್ಯಾಣವನ್ನು ಕಂಡು ಕುಣಿಯಿತವಳೆದೆ :

"ಕಲ್ಯಾಣವೆಂಬುದನಾರಿಗೆ ಹೊಗಬಾರದು, ಹೊಗಬಾರದು, ಹೊಗಬಾರದು. ಅಸಾಧ್ಯವಯ್ಯ ! ಆಸೆ ಆಮಿಷ ಅಳಿದವಂಗಲ್ಲದೆ ಕಲ್ಯಾಣದತ್ತಲಡಿ ಇಡಬಾರದು! ಒಳಹೊರಗು ಶುದ್ಧವಾದವರಿಗಲ್ಲದೆ ಕಲ್ಯಾಣ ಹೊಗಬಾರದು !



**"ಅಳಿಸಂತುಳವೆ, ಮಾಮರವೆ, ಬೆಳುದಿಂಗಳೆ ಕೋಗಿಲೆಯೆ..... ಎನ್ನೊಡೆಯ ಚೆನ್ನಮಲ್ಲಿಕಾರ್ಜುನನ ಕಂಡರೆ ಕರೆದು ತೋರಿರೆ".......**

ನಾನೆಂಬುದು ಹರಿದವಂಗಲ್ಲದೆ ಕಲ್ಯಾಣವ ಹೊಗಬಾರದು !
ಒಳಗು ತಿಳಿದು, ಚೆನ್ನಮಲ್ಲಿಕಾರ್ಜುನಂಗೊಲಿದು ಉಭಯಲಜ್ಜೆಯಳಿದೆನಾಗಿ
ಕಲ್ಯಾಣವ ಕಂಡು ನಮೋ ನಮೋ ಎನುತಿರ್ದೆನು !"
ಎಂದು ನಲಿದಾಡಿದಳು.

ಕಲ್ಯಾಣದಲ್ಲಿ ಕಾಲಿಡುತ್ತಲೆ ಕಿನ್ನರಯ್ಯನ ಕಠೋರ ಪರೀಕ್ಷೆಗೆ ಒಳಗಾದಳು. ಆದರೂ 'ಕಿನ್ನರನಂತಪ್ಪ ಸೋದರನೆನಗೆ' ಎಂದು ಧನ್ಯತೆಯನ್ನು ಸೂಚಿಸಿ ಬಸವ ದರ್ಶನಕ್ಕೆ ಧಾವಿಸಿದಳು. ಆವನಿದ್ದ ಅರಮನೆ ಅವಿಮುಕ್ತಿ ಕ್ಷೇತ್ರವಾಗಿ ತೋರಿತವಳಿಗೆ. ಬಸವಣ್ಣನ ದರ್ಶನ ಭಾಗ್ಯ ದೊರೆತಾಗಲಂತೂ ಅವಳ ಧನ್ಯತೆ ತನ್ನ ಚರಮಸೀಮೆಯನ್ನು ಮುಟ್ಟಿತು.

"ಅರಿಸಿ ತೊಳಲಿದರಿಲ್ಲ, ಹರಸಿ ಬಳಲಿದರಿಲ್ಲ, ಬಯಸಿ ಹೊಕ್ಕರಿಲ್ಲ, ತಪಸು
ಮಾಡಿದರಿಲ್ಲ–ಅದು ತನ್ನ ಅಹಕಾಲಕ್ಕಲ್ಲದೆ ಸಾಧ್ಯವಾಗದು,
ಶಿವನೊಲಿದಲ್ಲದೆ ಕೈಗೂಡದು ! ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ
ನಾನು ಸಂಗನ ಬಸವಣ್ಣನ ಶ್ರೀಪಾದವ ಕಂಡು ಬದುಕಿದೆನು !

ಎಂದು ಬಗೆದುಂಬಿ ಹಾಡಿದಳು, ಹರುಷ ಶರಧಿಯಲ್ಲಿ ಓಲಾಡಿದಳು. ಅವಳ ಅಸುಭಾವದ ಔನ್ನತ್ಯವನ್ನು ಕಂಡು ಬಸವಣ್ಣನವರೂ ಹಿರಿಹಿರಿ ಹಿಗ್ಗಿದರು. ಅಕ್ಕನಾಗಮ್ಮ, ನೀಲಲೋಚನೆ, ಗಂಗಾಂಬೆಯರ ಹರುಷದ ಹಾಲ್ಗಡಲು ಉಕ್ಕಿ ಹರಿಯಿತು. ಅಕ್ಕಮಹಾದೇವಿ ಬಸವನ ಬಳಗಕ್ಕೆ ಸೇರಿಹೋದಳು.

ಅನುಭವ ಮಂಟಪದಲ್ಲಿ ಅಕ್ಕನ ಅಗ್ನಿಪರೀಕ್ಷೆ ನಡೆಯಿತು. ಅಲ್ಲಮಪ್ರಭುಗಳ ಪರೀಕ್ಷೆ ಕೇಳುವುದೇನಿದೆ? ಆ ಕಠಿನ–ಕಠೋರ ಪರೀಕ್ಷೆಯಲ್ಲಿಯೂ ಪಾರಂಗತಳಾದಳು. ಅಧ್ಯಾತ್ಮಸಾಗರದ ಅನರ್ಘ್ಯರತ್ನ ಅಕ್ಕಮಹಾದೇವಿ.

ಪ್ರಭುದೇವರ ಪ್ರಾರಂಭದ ಪ್ರಶ್ನೆಯೇ ಎಂಥವರನ್ನೂ ಅಪ್ರತಿಭರನ್ನಾಗಿ ಮಾಡುವಂತಹುದು :

"ಉದಮದದ ಯೌವನವನೊಳಕೊಂಡ ಸತಿ ನೀನು ಇತ್ತಲೇಕೆ ಬಂದೆಯವ್ವಾ
ನಿನ್ನ ಪತಿಯ ಕುರುಹ ಹೇಳಿದರೆ ಬಂದು ಕುಳ್ಳಿತು : ಅಲ್ಲದಿರೆ ತೊಲಗು ತಾಯೆ
ನಮ್ಮ ಗುಹೇಶ್ವರನ ಶರಣರಲ್ಲಿ ಸಂಗಸುಖ ಸನ್ನಿಹಿತವ ಬಯಸುವರೆ
ನಿನ್ನ ಪತಿ ಯಾರೆಂಬುದ ಹೇಳಾ, ಎಲೆ ಅವ್ವಾ !"

ಈ ಪ್ರಶ್ನೆಯಿಂದ ಪ್ರಾರಂಭವಾಗಿ ಅಕ್ಕನ ಗೆಲವಿನಲ್ಲಿ ಮುಕ್ತಾಯವಾದ ಈ

ಸಂವಿತ್‌ಪೂರ್ಣ ಸಂವಾದ ಅನುಭವಮಂಟಪದ, ಅದೇಕೆ–ಅಧ್ಯಾತ್ಮ ವಿದ್ಯೆಯ ಇತಿಹಾಸದಲ್ಲಿಯೇ ಅಸದೃಶವಾದುದು. ಕಾರ್ಗಾಲದ ಕೋಲ್ಮಿಂಚುಗಳ ಕುಣಿದಾಟದಂತಿರುವ ಆ ಸಂವಾದವನ್ನು ಇಡಿಯಾಗಿಯೇ ಉದ್ಧರಿಸಬೇಕು.

ಪ್ರಭುವಿನ ಪ್ರಶ್ನೆಗೆ ಅಕ್ಕನ ಉತ್ತರ :

"ಪಚ್ಚೆಯ ನೆಲೆಗಟ್ಟು, ಕನಕದ ತೋರಣ, ವಜ್ರದ
ಕಂಭ, ಪವಳದ ಚಪ್ಪರವನಿಕ್ಕಿ ಮದುವೆಯ ಮಾಡಿದರು,
ಎಮ್ಮವರೆನ್ನ ಮದುವೆಯ ಮಾಡಿದರು–
ಕಂಕಣ ಕೈದಾರ ಸ್ಥಿರಸೇಸೆಯನಿಕ್ಕಿ
ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು !"

ಮುಂದಿನ ಪ್ರಶ್ನೋತ್ತರ ಪರಂಪರೆ :

"ತನು ಸೀರೆಯನಳಿದು ನಿರ್ವಾಣವಾದಲ್ಲಿ ಮನದ ಭ್ರಾಂತು ನಿಶ್ಚಯವಾಗದು.
ಕೇಶವೆಂಬ ಸೀರೆ ಅಂಗಕ್ಕೆ ಮರೆಯಾಯಿತ್ತು. ಭಾವ ಶುದ್ಧವಾದಲ್ಲಿ
ಸೀರೆಯನಳಿದು ಕೂದಲ ಮರೆಸಲೇತಕ್ಕೆ?"

"ಫಲ ಒಳಗೆ ಪಕ್ವವಾಗಿಯಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು.
ಕಾಮನ ಮುದ್ರೆಯ ಕಂಡು ನಿಮಗೆ ನೋವಾದೀತೆಂದು ಆ ಭಾವದಿಂದ ಮುಚ್ಚಿದೆ.
ಇದಕ್ಕೆ ನೋವೇಕೆ? ಕಾಡದಿರಣ್ಣಾ, ಚೆನ್ನಮಲ್ಲಿಕಾರ್ಜುನದೇವನ ಒಳಗಾದವಳ"
"ನೀ ದೇವರೊಳಗೋ ದೇವರು ನಿನ್ನೊಳಗೋ ಎಂಬ ಠಾವನರಿಯೆ.
ಸಿಪ್ಪೆ ಒಪ್ಪಗೆಟ್ಟಾಗ ಹಣ್ಣಿನ ಸರ ಕೊಳಕಾಯಿತ್ತು ! ಅದು ಗುಹೇಶ್ವರನೊಪ್ಪದ ಮಾತು !"
"ಗುಣದೋಷವ ಸಂಪಾದನೆಯ ಮಾಡುವನ್ನಕ್ಕ ಕಾಮದ ಒಡಲು, ಕ್ರೋಧದ
ಗೊತ್ತು, ಲೋಭದ ಇಕ್ಕೆ, ಮೋಹದ ಮಂದಿರ,
ಮದದ ಆವರಣ, ಮತ್ಸರದ ಹೊದಿಕೆ. ಆ ಭಾವವರತಲ್ಲದೆ ಚೆನ್ನಮಲ್ಲಿಕಾರ್ಜುನನ ಕೇಳುವುದಕ್ಕಿಂಬಿಲ್ಲ."
"ಕಾಮದಿಂದ ಕಂಡ, ಕ್ರೋಧದಿಂದ ಆಸ್ತಿ, ಲೋಭದಿಂದ ಸಕಲ ವಿಷಯಂಗಳು–
ಮೋಹದಿಂದ ನೋಡಿಹೆನೆಂಬುದೆಲ್ಲವು ಕಾಮನ ಬಲೆಯೊಳಗು.
ಕಾಮನಗೆದ್ದ ಠಾವಾವುದು ಹೇಳಾ, ಗುಹೇಶ್ವರಲಿಂಗಕ್ಕೆ?"

"ಕೆಂಡದ ಶವದಂತೆ, ಸೂತ್ರತಪ್ಪಿದ ಗೊಂಬೆಯಂತೆ, ಜಲವರತ ತಟಾಕದಂತೆ,
ಬೆಂದ ನುಲಿಯಂತೆ ಮತ್ತೆ ಹಿಂದಣಂಗ ಉಂಟೆ ಅಣ್ಣಾ–ಚೆನ್ನಮಲ್ಲಿಕಾರ್ಜುನ
ನಂಗವೆ ಆಶ್ರಯವಾದವಳಿಗೆ?"
"ರೂಪಿಂಗೆ ಕೇಡುಂಟು, ನಿರೂಪಿಂಗೆ ಕೇಡಿಲ್ಲ;
ರೂಪು ನಿರೂಪುವನೊಡಗೂಡುವ ಪರಿ ಎಂತು ಹೇಳಾ?
ಅಸಂಬಂಧ ಸಂಬಂಧವಾಗಿ ಇದೆ ! ದೇಹ ಇಂದ್ರಿಯವೆಂಬ
ಜಾತಿಸೂತಕವಿರಲು ಗುಹೇಶ್ವರ ಲಿಂಗವ ಮುಟ್ಟಬಾರದು ಕೇಳವ್ವಾ !"

"ಹಾವಿನ ಹಲ್ಲಕಳೆದು ಹಾವನಾಡಿಸಬಲ್ಲರೆ ಹಾವಿನಸಂಗವೆ ಲೇಸು ಕಂಡಯ್ಯ.
ಕಾಯದ ಸಂಗವ ವಿವರಿಸಬಲ್ಲರೆ ಕಾಯದ ಸಂಗವೆ ಲೇಸು ಕಂಡಯಯ.
ತಾಯಿರಕ್ಕಸಿಯಾದಂತೆ ಕಾಯ ವಿಕಾರವು ! ಚೆನ್ನಮಲ್ಲಿಕಾರ್ಜುನಯ್ಯ,
ನೀನೊಲಿದವರ ಕಾಯಗೊಂಡಿದ್ದರೆನಬೇಡ !"

"ತನುಗುಣವ ವಿವರಿಸಿಹೆನೆಂದರೆ ಮನಶುದ್ಧವಾಗಬೇಕು ;
ಮನದಗುಣವ ವಿಹರಿಸಿಹೆನೆಂದರೆ ಇಂದ್ರಿಯ ಶುದ್ಧವಾಗಬೇಕು ;
ತನುಮನ ಇಂದ್ರಿಯಂಗಳು ಶುದ್ಧಸುಯಿದಾನಿಯಾಗಿ ಲಿಂಗಮುಖಕ್ಕೆ
ವೇದ್ಯವಾದಲ್ಲದೆ ಗುಹೇಶ್ವರನ ಬೆಸಗೊಳಬಾರದು ಕೇಳಾ ತಾಯೆ !"
"ತನು ಶುದ್ಧವಾಯಿತ್ತು ಶಿವಭಕ್ತರೊಕ್ಕುದ ಕೊಂಡು ; ಎನ್ನ
ಮನ ಶುದ್ಧವಾಯಿತ್ತು ಅಸಂಖ್ಯಾತರ ನೆನೆದು; ಎನ್ನ
ಕಂಗಳು ಶುದ್ಧವಾಯಿತ್ತು ಸಕಲ ಪುರಾತನರ ನೋಡಿ; ಎನ್ನ
ಶ್ರೋತ್ರ ಶುದ್ಧವಾಯಿತ್ತು ಅವರ ಕೀರ್ತಿಯ ಕೇಳಿ ; ಎನ್ನ
ಭಾವನೆಯೆನಗಿದು ಜೀವನವು ಕೇಳಾ, ಲಿಂಗ ತಂದೆ !
ನೆಟ್ಟನೆ ನಿಮ್ಮುವ ಪೂಜಿಸಿ ಭವಗೆಟ್ಟೆನು ಕಾಣಾ ಚೆನ್ನಮಲ್ಲಿಕಾರ್ಜುನ !"
"ಕೂಡಲಿಲ್ಲದ ಘನವ ಕೂಡುವ ಪರಿ ಎಂತವ್ವ?
ಹೇಳಿದರೆ ಅದಕ್ಕದೆ ಕೊರತೆ ! ಗುಹೇಶ್ವರ ಲಿಂಗವ ಬೇರುಮಾಡಿ
ಬೆರಸುವ ಪರಿ ಎಂತು ಹೇಳಾ?"

"ಗಟ್ಟಿದುಪ್ಪ ತಿಳಿದುಪ್ಪಕ್ಕೆ ಹಂಗುಂಟೆ ಅಯ್ಯಾ?
ದೀಪಕ್ಕೆ ದೀಪ್ತಿಗೆ ಭೇದ ಉಂಟೆ ಅಯ್ಯಾ?
ಅಂಗಕ್ಕೆ ಆತ್ಮಕ್ಕೆ ಭಿನ್ನ ಉಂಟೆ ಅಯ್ಯಾ?

ಎನ್ನಂಗವನು ಶ್ರೀಗುರು ಮಂತ್ರವ ಮಾಡಿ ತೋರಿದನಾಗಿ
ಸಾವಯ ನಿರವಯಕ್ಕೆ ಭಿನ್ನವಿಲ್ಲವಯ್ಯಾ !
ಚೆನ್ನಮಲ್ಲಿಕಾರ್ಜುನ ದೇವರ ಬೆರಸಿ ಮತಿಗೆಟ್ಟವಳ
ಏತಕ್ಕೆ ನುಡಿಸುವಿರಯ್ಯಾ ಪ್ರಭುವೆ?"
"ನಾ ಸತ್ತೆನೆಂದು ಹೆಣ ಕೂಗಿದುದುಂಟೆ?
ಬೈಚಿಟ್ಟ ಬಯಕೆ ಕರೆದುದುಂಟೆ?
ಹೆಪ್ಪಿಟ್ಟಹಾಲು ಸಿಹಿಯಪ್ಪುದೆ?
ಈ ಮಾತು ಒಪ್ಪವಲ್ಲ, ಗುಹೇಶ್ವರ ಲಿಂಗಕ್ಕೆ !"
"ಸತ್ತ ಹೆಣ ಕೂಗಿದುದುಂಟು:
ಬೈಚಿಟ್ಟ ಬಯಕೆ ಕರೆದುದುಂಟು;
ಹೆಪ್ಪಿಟ್ಟ ಹಾಲು ಸಿಹಿಯಾದುದುಂಟು;
ಇದ ನಿಶ್ಚೈಸಿ ನೋಡಿ ಚೆನ್ನಮಲ್ಲಿಕಾರ್ಜುನ ದೇವರಲ್ಲಿ !"
"ಇದು ಎನಗೆ ಆಶ್ಚರ್ಯ ! ಹೇಳವ್ವಾ , ಕಾಯವಿಲ್ಲದ ಸುಖವ,
ಜೀವವಿಲ್ಲದ ಭವನ–ಆ ಠಾವ ಹೇಳಾ, ಗುಹೇಶ್ವರಲಿಂಗಕ್ಕೆ."
"ಮರೆದೊರಗಿ ಕನಸ ಕಂಡು ಹೇಳುವಲ್ಲಿ ಸತ್ತ ಹೆಣ ಎದ್ದಿತ್ತು ;
ತನ್ನ ಋಣನಿಧಾನ ಎದ್ದು ಕರೆಯಿತ್ತು ;
ಹೆಪ್ಪಿಟ್ಟ ಹಾಲು ಗಟ್ಟಿತುಪ್ಪವಾಗಿ ಸಿಹಿಯಾಯಿತ್ತು !
ಇದಕ್ಕೆ ತಪ್ಪಸಾಧಿಸಲೇಕೆ, ಚೆನ್ನಮಲ್ಲಿಕಾರ್ಜುನದೇವರ ದೇವನಣ್ಣಗಳಿರಾ !"
"ಇದು ಲೇಸಾಯಿತ್ತು !..."

ಉಶ್ ! ಈ ಒಂದು ಒಪ್ಪಿಗೆಯ ಸಾಲಿಗಾಗಿ, ಮೆಚ್ಚುಗೆಯ ಮಾತಿಗಾಗಿ ಎಂಥ ಪ್ರಖರವಾದ ಪರೀಕ್ಷೆಗೆ ಗುರಿಯಾದಳು ಅಕ್ಕಮಹಾದೇವಿ ! ನಿಜವಾಗಿಯೂ ಇದು ಅವಳ ದಾರ್ಶನಿಕ ದಿಗ್ವಿಜಯ ! ಅದುವರೆಗೆ ಅನುಭವ ಮಂಟಪ ಉಸಿರುಕಟ್ಟಿದಂತೆ ಸ್ತಬ್ಧವಾಗಿತ್ತು. ನಿಶ್ಯಬ್ದವಾಗಿತ್ತು. 'ಇದು ಲೇಸಾಯಿತ್ತು' ಎಂದು ಪ್ರಭುದೇವರು ಪದವೀದಾನ ಮಾಡುತ್ತಲೆ ಶರಣಶರಣೆಯರ ಸಿರಿಗೊರಳಿನಿಂದ ಮೆಚ್ಚುಗೆಯ ಮಾತುಗಳ ಸುರಿಮಳೆಯಾಯಿತು :

"ಅಜಕಲ್ಪಕೋಟ ವರುಷದವರೆಲ್ಲರೂ ಹಿರಿಯರೆ?
ಹುತ್ತೇರಿ ಬೆತ್ತಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ?
ನಡುಮುರಿದು, ಗುಡುಗೂರಿ, ತಲೆನಡುಗಿ, ನೆರೆತೆರೆಹೆಚ್ಚಿ, ಮತಿಗೆಟ್ಟು,

ಒಂದನಾಡಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೆ?
ಅನುವನರಿದು, ಘನವ ಬೆರಸಿ, ಹಿರಿದುಕಿರಿದೆಂಬ ಭೇದವ ಮರೆದು,
ಕೂಡಲಚೆನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತ್ತು"

ಎಂದು ಚೆನ್ನಪಸವಣ್ಣ ಬಣ್ಣಿಸಿದರೆ,

"ಅಹುದಹುದು, ಮತ್ತೇನು? ಮರಹಿಂಗೆ ಹಿರಿದು ಕಿರಿದುಂಟಲ್ಲದೆ
ಅರಿವಿಂಗೆ ಹಿರಿದುಕಿರಿದುಂಟೆ ಹೇಳಯ್ಯಾ?
ಸಾವಂಗೆ ಭಯ ಉಂಟಲ್ಲದೆ ಅಜಾತಂಗೆ ಭಯ ಉಂಟೆ ಹೇಳಯ್ಯ?
ಕಪಿಲಸಿದ್ಧಮಲ್ಲಿನಾಥನಲ್ಲಿ ಮಹಾದೇವಿಯಕ್ಕನ ನಿಲವಿಂಗೆ
ಶರಣೆಂದು ಶುದ್ಧನಾದೆನು ಕಾಣಾ, ಚೆನ್ನಬಸವಣ್ಣಾ"

ಎಂದು ಸಿದ್ಧರಾಮಯ್ಯ ಕೀರ್ತಿಸಿದನು;

"ಹೆಂಗೂಸಿನಂಗವ ನೋಡಿರೆ, ಪುರಾತನರು !
ಬಾಲತನದಂಗವ ನೋಡಿರೆ, ಪುರಾತನರು !
ಬ್ರಹ್ಮವನಾಚರಿಸಿ ತನ್ನ ಮರೆದಿಪ್ಪುದ ನೋಡಿರೆ, ಲಿಂಗವಂತರು !
ತನ್ನಲ್ಲಿ ತಾನು ನಿಶ್ಚಯವಾಗಿ, ಭಾಷೆ ಬೇಸರವೋಗದೆ ಇಷ್ಟಇರವು
ಕೂಡಲಸಂಗಮದೇವರಲ್ಲಿ ನಮ್ಮ ಮಹಾದೇವಿಯಕ್ಕಂಗಾಯಿತ್ತು"

ಎಂದು ಬಸವಣ್ಣನವರು ಕೊಂಡಾಡಿದರು; ಪರೀಕ್ಷೆ ತೆಗೆದುಕೊಂಡ ಪ್ರಭು ದೇವರೇ,

"ತನುಗುಣನಾಸ್ತಿಯಾಗಿ ಲಿಂಗಸಂಗಿಯಾದಳು ;
ಮನಗುಣನಾಸ್ತಿಯಾಗಿ ಅರಿವು ಸಂಗಿಯದಳು ;
ಭಾವಗುಣನಾಸ್ತಿಯಾಗಿ ಮಹಾಪ್ರಭೆ ತಾನಾದಳು ;
ತಾನಿದಿರೆಂಬೆರಡಳಿದು ನಮ್ಮ ಗುಹೇಶ್ವರಲಿಂಗದಲ್ಲಿ ಸ್ವಯಲಿಂಗವಾದ
ಮಹಾದೇವಿಯಕ್ಕನ ನಿಲವಿಂಗೆ ಶರಣೆನುತಿರ್ದೆನು"

ಎಂದು ಪ್ರಶಂಸಿಸಿದರು. ಶರಣಶರಣೆಯರೆಲ್ಲರೂ ಹಾಡಿ ಹೊಗಳಿದರು.

ನತಮಸ್ತಕಳಾಗಿ ನುಡಿದಳು ಮಹಾದೇವಿ : "ಎನಗೇಕಯ್ಯ? ನಾ ಪ್ರಪಂಚಿನ ಪುತ್ಥಳಿ. ಬೆರಳು ತಾಳಹಣ್ಣ ಹಿಸುಕಿದರೆ ಮೆಲಲುಂಟೆ?....ಎನ್ನ ಭಕ್ತಿ ಬಸವಣ್ಣನ ಧರ್ಮ, ಎನ್ನ ಜ್ಞಾನ ಪ್ರಭುದೇವರ ಧರ್ಮ, ಎನ್ನ ಪರಿಣಾಮ ಚೆನ್ನಬಸವಣ್ಣನ ಧರ್ಮ ; ಈ ಮೂವರೂ ಒಂದೊಂದ ಕೊಟ್ಟರೆನಗೆ ಮೂರು ಭಾವವಾಯಿತ್ತು. ಆ ಮೂರನು ನಿಮ್ಮಲ್ಲಿ ಸಮರ್ಪಿಸಿದ ಬಳಿಕ ಎನಗಾವ ಜಂಜಡವಿಲ್ಲ.

ಚೆನ್ನಮಲ್ಲಿಕಾರ್ಜುನ ದೇವರ ನೆನಹಿನಲ್ಲಿ ನಿಮ್ಮ ಕರುಣದ ಶಿಶು ನಾನು !" ಅವಳ ವಿನಯಶ್ರೀ ಶರಣರಿಗೆ ಸಂತಸದ ಸುಗ್ಗಿಯನ್ನು ತಂದಿತು.

ಅಣ್ಣನ ಅರಮನೆಯಲ್ಲಿ ಅಕ್ಕನ ಅಧ್ಯಾತ್ಮಜೀವನ ಅರಳತೊಡಗಿತು. ಅಕ್ಕ ನಾಗಾಂಬೆಯ ಕಕ್ಕುಲತೆಯ ತಣ್ಣೆಳಲಿನಲ್ಲಿ, ಅಣ್ಣನ ಅಳ್ತಿಯ ಆವರಣದಲ್ಲಿ ನೀಲಾಂಬೆ ಗಂಗಾಂಬೆಯರ ಅಕ್ಕರೆಯ ಅರೈಕೆಯಲ್ಲಿ ಅವಳ ಆತ್ಮಶ್ರೀ ಅಭಿವರ್ಧಿಸ ತೊಡಗಿತು. ಅಲ್ಲಿ ಆಕೆಗೆ ಇಷ್ಟಲಿಂಗವೇ ಪತಿಯೆಂಬ ಭಾವ ಬಲಿಯುತು. ಅಯ್ಯಾ, ದೂರದಲ್ಲಿರ್ದಿಹೆಯೆಂದು ಬಾಯಾರಿ ಬಳಲುತ್ತಿದ್ದೆನಯ್ಯ ನಾನು! ಅಯ್ಯಾ, ಸಾರಿ ಬಂದು ನೀನೆನ್ನ ಕರಸ್ಥಲದಲ್ಲಿ ಮೂರ್ತಗೊಂಡರೆ ಇನ್ನು ಆ ರತಿಯೆಲ್ಲವೂ ಲಿಂಗ ಆಲಿ ನಿಮ್ಮಲ್ಲಿ ನಟ್ಟುವುನೋಡಯ್ಯ ! ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮನೆನ್ನ ಕರಸ್ಥಲದಲ್ಲಿ ನೋಡಿ ನೋಡಿ ಕಂಗಳೇ ಪ್ರಾಣವಾಗಿದ್ದೇನಯ್ಯಾ !" ಎಂದು ಆನಂದದಿಂದ ಹಾಡಿದಳು :

"ಅಷ್ಟ ವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯ?
ನೀನು ಬಹಿರಂಗ ವ್ಯವಹಾರ ದೂರಸ್ಥನು.
ಅಂತರಂಗದಲ್ಲಿ ಧ್ಯಾನವಮಾಡಿ ಒಲಿಸುವೆನೆ ಅಯ್ಯ?
ನೀನು ವಾಙ್ಮನಾತೀತನು.
ಜಪಸ್ತೋತ್ರದಿಂದ ಒಲಿಸುವೆನೆ ಅಯ್ಯ? ನೀನು ನಾದಾತೀತನು.
ಭಾವಜ್ಞಾನದಿಂದೊಲಿಸುವೆನೆ ಅಯ್ಯ? ನೀನು ಮತಿಗತೀತನು.
ಹೃದಯಕಮಲದಲ್ಲಿಂಬಿಟ್ಟು ಕೊಂಬೆನೆ ಅಯ್ಯ?
ನೀನು ಸರ್ವಾಂಗ ಪರಿಪೂರ್ಣನು.
ಅಯ್ಯ, ನಿನ್ನ ಒಲಿಸಲೆನ್ನಳವಲ್ಲ :
ನೀನೊಲಿವುದೇ ಸುಖವಯ್ಯ, ಚೆನ್ನಮಲ್ಲಿಕಾರ್ಜುನ"

ಎಂದು ಲಲ್ಲೆ ನುಡಿದಳು. ಇದಕ್ಕೂ ಮಲ್ಲಿಕಾರ್ಜುನ ಮೆಚ್ಚದಿರಲು ತನ್ನಲ್ಲಿಯೇ ಏನೋ ಆರಕೆಯಿದೆ, ಆದುದರಿಂದಲೇ ಅವನು ಒಲಿಯದಾಗಿರುವನೆಂದು ಆತ್ಮ ಶೋಧನೆಯನ್ನು ನಡೆಸಿದಳು. ಆ ಆತ್ಮಶೋಧನೆಯ ಫಲ ಈ ವಚನ :

"ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು ;
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು ;
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು ;
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು ;

ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು ;
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು;
ತ್ರಿಕರಣಶುದ್ಧ ವಿಲ್ಲದವರಲ್ಲಿ ತಾಂಬೂಲವನ್ನೊಲ್ಲೆಯಯ್ಯಾ ನೀನು ;
ಎನ್ನಲ್ಲಿ ಏನುಂಟೆಂದು ಎನ್ನಕರಸ್ಥಲವನಿಂಬುಗೊಂಡೆ ಹೇಳಾ,
ಚೆನ್ನಮಲ್ಲಿಕಾರ್ಜುನಾ?"

ಈಗ ಅಕ್ಕನು,

"ನೀನು ದಂಡು ಮಂಡಲಕ್ಕೆ ಹೋದೆನೆಂದೊಡೆ ನಾನು ಸುಮ್ಮನಿಹೆನು.
ನೀನು ಎನ್ನ ಕೈಯೊಳಗಿರ್ದು, ಎನ್ನ ಮನದೊಳಗಿರ್ದು ನುಡಿಯ
ದಿರ್ದೊಡಾನು ಎಂತು ಸೈರಿಸುವೆನಯ್ಯಾ?"

ಎಂದು ಪರಿತಪಿಸುವ ಅವಸ್ಥೆಯನ್ನು ದಾಟಿದ್ದಾಳೆ.

"ಸಜ್ಜನಳಾಗಿ ಮಜ್ಜನಕ್ಕೆರೆವೆ : ಶಾಂತಳಾಗಿ ಪೂಜೆಯ ಮಾಡುವೆ :
ಸಮರತಿಯಿಂದ ನಿಮ್ಮ ಹಾಡುವೆ. ಚೆನ್ನಮಲ್ಲಿಕಾರ್ಜುನಯ್ಯ,
ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ"

ಎಂದು ಅಖಂಡ ತೃಪ್ತಿಯ ಅವಸ್ಥೆಯನ್ನು ಮುಟ್ಟಿದ್ದಾಳೆ. ಹಾಗೆಯೇ ಸಾಧನ ಮಾರ್ಗದಲ್ಲಿ ಮುಂದುವರಿದು–

"ತನು ತಮ್ಮ ರೂಪಾದ ಬಳಿಕ ನಾನಾರಿಗೆ ಮಾಡುವೆ?
ಮನ ನಿಮ್ಮ ರೂಪಾದ ಬಳಿಕ ನಾನಾರನಾರಾಧಿಸುವೆ?
ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ನಾನಾರನರಿವೆ?
ಚೆನ್ನಮಲ್ಲಿಕಾರ್ಜುನಾ, ನಿಮ್ಮಲ್ಲಿ ನೀವಾಗಿ
ನಿಮ್ಮಿಂದ ನಿಮ್ಮ ಮರೆದನಯ್ಯಾ !"

ಎನ್ನುವ ಕೊನೆಯ ಸ್ಥಿತಿಗೆ ತಲುಪುತ್ತಾಳೆ. ಇದು ಅಧ್ಯಾತ್ಮದ ಅಂತಿಮ ಅವಸ್ಥೆ!

ಇಲ್ಲಿಗೆ 'ಚೆನ್ನಮಲ್ಲಿಕಾರ್ಜುನ ಬಂದಾನೆಂದು ಬಟ್ಟೆಗಳ ನೋಡಿ ಬಾಯಾರುವ' 'ತಡವಾದೊಡೆ ಬಡವಾಗುವ' 'ಬಾರದಿರ್ದಡೆ ಕರಗಿ ಕೊರಗುವ' 'ಬೆರಿಸುವರೆ ಬೇಗ ತೋರಾ ! ಹೊರಹಾಕದಿರಯ್ಯ !' ಎನ್ನುವ, 'ಆಲಿಸೆನ್ನ ಬಿನ್ನಪವ, ಪಾಲಿಸೆನ್ನ ಬಿನ್ನಪವ, ಲಾಲಿಸೆನ್ನ ಬಿನ್ನಪವ; ಏಕೆನ್ನ ಮೊರೆಯ ಕೇಳೆ?' ಎಂದು ಅಳಲುವ ಆರ್ತತೆ ಮುಗಿದುದು ; "ಸಜ್ಜೆಯುಪ್ಪರಿಸಿ ಶಿವಲಿಂಗ ನೀನೆನ್ನ ಕರಸ್ಥಲಕ್ಕೆ ಬರೆ ಪ್ರಜ್ವಲಿಸಿ ತೊಳತೊಳಗಿದೆ ! ಬೆಳಗುತ್ತಿಹ ಕಾಂತಿಯಲಿ ಜ್ವರಿಸಿ, ತನುಮನ ದೃಷ್ಟಿನೆಟ್ಟು ಲಿಂಗದಲ್ಲಿ ಜಜ್ಜರಿಸಿ ಸುರಿವ ಶಿವಸುಖರತಿಯೊಳೋಲಾಡುತ್ತ, ಸಜ್ಜನ ಸದ್ಭಕ್ತಿರತಿಯೊಡನೆ ಕೂಡಿಯಾಡಿಲಜ್ಜೆಗೆಟ್ಟು ನಿಮ್ಮ ನೆರೆವೆ, ಚೆನ್ನಮಲ್ಲಿಕಾರ್ಜುನ"

ಎಂಬ ಆತ್ಮವಿಶ್ವಾಸ ಮೂಡಿದುದು; ಇನ್ನು ತನ್ನ ಚರಮಗಮ್ಯಸ್ಥಾನಕ್ಕೆ ಹೊರಡುವುದೆಂಬ ಆಸೆ ಕುಡಿಯೊಡೆದುದು.

ಸರಿ, 'ಪರಮಸುಖ ಪರಿಣಾಮ ಮನಮೇರೆದಪ್ಪಿ ನಾನು ನಿಜವನ್ನೈದುವ ಠಾವ ಹೇಳಾ, ಚೆನ್ನಮಲ್ಲಿಕಾರ್ಜುನಯ್ಯ?' ಎಂದು ಪ್ರಭುವಿಗೆ ಪ್ರಾರ್ಥಿಸಿಕೊಂಡಳು. ಅವಳ ಒಲವನ್ನರಿತಿ ಪ್ರಭುದೇವರು ಹೇಳಿದರು : "ನಾನೀನೆಂಬುಭಯಸಂಗವಳಿದು ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ತುಟ್ಟ ತುದಿಯ ಮೆಟ್ಟಿ ನೋಡಲು ಬಟ್ಟಬಯಲು ಕಾಣಬಹುದು ನೋಡಾ ! ಆ ಬಯಲ ಬೆರಸುವರೆ ತ್ರಿಕೂಟ ಗಿರಿಯೊಳಗೊಂದು ಕಾಣಬಾರದ ಕದಳಿಯುಂಟು ನೋಡಾ ! ಕದಳಿಯ ತಳದಲ್ಲಿ ಒಳಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ! ನಡೆಯಲ್ಲಿಗೆ ತಾಯೆ, ಗುಹೇಶ್ವರಲಿಂಗದಲ್ಲಿ ಪರಮಪದವಿ ನಿನಗೆ ಸ್ವಯಂವಹುದು ನೋಡಾ!"

'ಶ್ರೀಶೈಲ, ತ್ರಿಕೂಟ, ಕದಳಿ' ಎಂಬ ಶಬ್ದಗಳು ಕಿವಿಗೆ ತಾಗುತ್ತಲೆ ರೋಮಾಂಚಿತ–ಳಾದಳು ಅಕ್ಕಮಹಾದೇವಿ. ತಾನು ಚಿಕ್ಕಂದಿನಿಂದಲೂ ಕಾಣುತ್ತಲಿದ್ದ ಕನಸೇ ಶ್ರೀಶೈಲ; ಅಲ್ಲಿ ತಾನು ತಾನಾದ ತ್ರಿಕೂಟಗಿರಿ ; ಅದರೊಳಗೊಂದು ಕಾಣಬಾರದ ಕದಲು–ಆಹಾ, ಅದೆಷ್ಟು ಪಾವನ ರಮಣೀಯಸ್ಥಾನವಿರಬಹುದು ! ಅಲ್ಲಿಗೆ ಹೋಗಲೇಬೇಕು. ಇನ್ನು ತಡಮಾಡಕೂಡದು. ಆಲಿಸು, ಕದಳಿಯ ಕರೆ! ಕದಳಿಯ ಕರೆ, ತ್ವರೆ ತ್ವರೆ !

ಅಕ್ಕಮಹಾದೇವಿ ತಮ್ಮನ್ನು ಆಗಲುವಳೆಂಬುದು ತಿಳಿಯುತ್ತಲೂ ಶರಣ ಸಮೂಹವನ್ನು ನಿರಾಶೆಯ ನಿಶೆಯು ಆವರಿಸಿತು. ಆದರೆ ಆಕೆಯನ್ನು ತಡೆದು ನಿಲ್ಲಿಸಬಲ್ಲವರಾರು? ನಿಲ್ಲಿಸಬಲ್ಲ ಅಲ್ಲಮಪ್ರಭುಗಳೇ ಅಪ್ಪಣೆಯಿತ್ತಿದ್ದಾರೆ. ಇನ್ನೇನು, ಅನಿವಾರ್ಯವಾದುದನ್ನು ಅನುಭವಿಸಲೇಬೇಕು !

ಅದೊಂದು ಹೃದಯಸ್ಪರ್ಶಿಯಾದ ಸನ್ನಿವೇಶ. ಅಕ್ಕನು ಶರಣೆಯರನ್ನೆಲ್ಲ ತಕ್ಕೈಸಿ, ಶರಣರಿಗೆ ಶರಣೆಂದು ಹೊರಡಲು ಅನುಮತಿ ಬೇಡುತ್ತಲಿದ್ದಾಳೆ. ಎಲ್ಲರ ಕಣ್ಣುಗಳಲ್ಲಿಯೂ ಅವರರಿಯದಂತೆಯೇ ನೀರೂರಿದೆ ; ಎಲ್ಲರ ಕೆನ್ನೆಗಳು ತೊಯ್ದಿವೆ! ಇಂಥ ಅಕ್ಕನನ್ನು ಅಗಲುವುದು ಹೇಗೆ? ಷಟ್‌ಸ್ಥಲ ಚಕ್ರವರ್ತಿ ಚೆನ್ನಣ್ಣನೇ ತೂಗಿ ನೋಡಿ ಹಾಡಿದ್ದ : "ಆದ್ಯರ ಅರುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ ; ಪ್ರಭುದೇವರು ಹತ್ತು ವಚನಕ್ಕೆ ಅಜಗಣ್ಣನ ಐದು ವಚನ ; ಅಜಗಣ್ಣನ ಐದು ವಚನಕ್ಕೆ ಕೂಡಲ ಚೆನ್ನಸಂಗಯ್ಯನಲ್ಲಿ ಮಹಾದೇವಿಯಕ್ಕಗಳ ಒಂದು ನಿರ್ವಚನ" ಎಂದು. ಇಂಥ ಅಕ್ಕನನ್ನು ಅಗಲುವುದು ಹೇಗೆ? 'ಅವ್ವ ನೀಲವ್ವನ ಮೋಹದ ಮಗಳು, ಅಪ್ಪ ಬಸವಣ್ಣನ ಸುಚಿತ್ತದ ಪುತ್ಥಳಿ, ನಿಃಕಳಂಕ ಸದ್ಗುರು ಪ್ರಭುದೇವರ ಸತ್ಯದ ಸೊಸೆ,

ಚಿಕ್ಕಯ್ಯ ಪ್ರಿಯ ಸಿದ್ಧಲಿಂಗನೊಡಹುಟ್ಟಿದಾಕೆ, ಚೆನ್ನಮಲ್ಲಿಕಾರ್ಜುನನ ಅರ್ಧಾಂಗಿ' ಅಕ್ಕಮಹಾದೇವಿಯನ್ನು ಆಗಲುವುದು ಹೇಗೆ ?

ಅಕ್ಕನಿಗೂ ದುಃಖ ಉಕ್ಕಿ ಬಂದಿದ್ದಿತು. "ಅಯ್ಯ, ನಿಮ್ಮ ಮಹಂತರ ಕೂಡಿದ ಸುಖವನುಪಮೆಗೆ ತರಬಾರದಯ್ಯ ! ಅಯ್ಯ, ನಿಮ್ಮ ಮಹಂತರ ಕೂಡಿ ಅಗಲುವ ಧಾವತಿಯಿಂದ ಸಾವುದೇ ಕರಲೇಸಯ್ಯ ! ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ನಿಜವನರಿದ ಮಹಾಮಹಿಮರನಗಲಿ ನಿಲಲಾರೆನಯ್ಯ !" ಎಂದು ನೊಂದಳು, ಬೆಂದಳು, ಕಂದಿದಳು, ಕುಂದಿದಳು.

ಆದರೂ ಹೊರಡಬೇಕು ಹೊರಡಲೇಬೇಕು ! ಕದಳಿಯ ಕರೆ ಎಳೆಯುತ್ತಲಿದೆ, ಶ್ರೀಶೈಲದ ಕರೆ ಸೆಳೆಯುತ್ತಲಿದೆ ! ಹೊರಡಲೇಬೇಕು ! ಹಿಂದೆ ತಂದೆತಾಯಿಗಳನ್ನು ತೊರೆದು ಬಂದೆ ; ಇಂದು ತಂದೆ ಬಸವ ತಾಯ ನೀಲಮ್ಮರನ್ನು ತೊರೆದು ಹೊರಡು ! ಅಂದು ಬಂಧುಬಳಗವನ್ನೆಲ್ಲ ಬಿಟ್ಟು ಬಂದೆ ; ಇಂದು ಕಿನ್ನರನಂಥ ಬಂಧುಗಳನ್ನೂ ಶರಣ ಶರಣೆಯರ ಬಳಗವನ್ನೂ ಬಿಟ್ಟು ಹೊರಡು ! ಕದಳಿ ಕರೆಯುತ್ತಲಿದೆ, ತ್ವರೆಮಾಡು, ತ್ವರೆಮಾಡು !

ಹೊರಡುವಾಗ ವಾಣಿಯ ವೀಣೆ ನುಡಿದಂತೆ ನುಡಿದಳು :

"ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ; ಬೆಳೆದೆನು ಅಸಂಖ್ಯಾತರ ಕರುಣದೊಳಗೆ!
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ
ಸಕ್ಕರೆಯನಿಕ್ಕಿದರು
ನೋಡಾ ! ಇಂತಪ್ಪ ತ್ರಿವಿಧಾಮೃತವ ದಣಿಯಲೆರೆದು ಸಲಹಿದರೆನ್ನ !
ವಿವಾಹವ ಮಾಡಿದಿರಿ : ಸಯವಪ್ಪ ಗಂಡಗೆ ಕೊಟ್ಟಿರಿ !
ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ ನೆರೆಯ ಬಂದಿರಿ !
ಬಸವಣ್ಣ ಮೆಚ್ಚಲು ಒಗತನವ ಮಾಡುವೆ; ಚೆನ್ನಮಲ್ಲಿಕಾರ್ಜುನನ ಕೈವಿಡಿದು,
ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು !
ಅವಧರಿಸಿ ನಿಮ್ಮಡಿಗಳೆಲ್ಲರು ! ಮರಳು ಬಿಜಯಂಗೈವುದು, ಶರಣಾರ್ಥಿ !"

ಮರಳು ಹೊರಡಲು ಚೈತನ್ಯ ಯಾರಿಗಿದ್ದಿತು? ಕಾಲು ಕೀಳದಾಗಿ ನಿಂತಲ್ಲಿಯೆ ನಿರ್ಜೀವ ಪ್ರತಿಮೆಗಳಂತೆ ನಿಂತುಬಿಟ್ಟಿದ್ದರು ಶರಣಶರಣೆಯರು ಅಕ್ಕನೇ ಒಂದೊಂದೇ ಭಾರವಾದ ಹೆಜ್ಜೆಗಳನ್ನಿಡುತ್ತ ನಡೆದಳು. ಅವಳಿತ್ತ ಆಶ್ವಾಸನ ಗಾಳಿಯ ಅಲೆಗಳೊಡನೆ ತೇಲಿಬಂದಿತು ; 'ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲತಾರೆನು..... ಹೂವ ತಹೆ, ಹುಲ್ಲತಾರೆನು..... ಹೂವ ತಹೆ... ಹೂವ ತಹೆ...'

ನಿಂತವರೆಲ್ಲ ನಿಟ್ಟುಸಿರಿಟ್ಟರು. ಅಕ್ಕನು ಕಾನುವವರೆಗೂ ಹುಬ್ಬುಗೈಹಚ್ಚಿ ನೋಡುತ್ತ ನಿಂತಿದ್ದರು. ಅವಳು ಕಾಣದಾದ ಮೇಲೆ ಉಕ್ಕಿಬರುವ ಬಿಕ್ಕುಗಳನ್ನು ಹತ್ತಿಕ್ಕುತ್ತ, ಒತ್ತಿ ಬರುವ ಕಂಬನಿಗಳನ್ನು ತಡೆಯುತ್ತ ಕಲ್ಯಾಣಕ್ಕೆ ಮರಳಿದರು. ಆದರೆ ಆ ಕಲ್ಯಾಣವೂ ಎಂದಿನಂತಿರಲಿಲ್ಲ. ಕಲ್ಯಾಣವೂ ಮುದವಿಹೀನವಾಗಿತ್ತು, ಮ್ಲಾನವಾಗಿತ್ತು, ಮೌನವಾಗಿತ್ತು !

* * *

ಈಗ ಮತ್ತೆ ಪೂರ್ವಪರಿಚಿತ ಪರಿಸರದಲ್ಲಿದ್ದೇವೆ ನಾವು–ಶ್ರೀಶೈಲದ ಹಾದಿಯಲ್ಲಿದ್ದೇವೆ :

"ಹಸಿವೇ ನೀನು ನಿಲ್ಲು ನಿಲ್ಲು ; ತೃಷೆಯೇ ನೀನು ನಿಲ್ಲು ನಿಲ್ಲು ;
ನಿದ್ರೆಯೇ ನೀನು ನಿಲ್ಲು ನಿಲ್ಲು ; ಕಾಮನೇ ನೀನು ನಿಲ್ಲು ನಿಲ್ಲು ;
ಕ್ರೋಧವೇ ನೀನು ನಿಲ್ಲು ನಿಲ್ಲು ; ಮೋಹವೇ ನೀನು ನಿಲ್ಲು ನಿಲ್ಲು ;
ಲೋಭವೇ ನೀನು ನಿಲ್ಲು ನಿಲ್ಲು ; ಮದವೇ ನೀನು ನಿಲ್ಲು ನಿಲ್ಲು ;
ಮಚ್ಚರವೇ ನೀನು ನಿಲ್ಲು ನಿಲ್ಲು ; ಸಚರಾಚರವೇ ನೀನು ನಿಲ್ಲು ನಿಲ್ಲು
ನಾನು ಚೆನ್ನಮಲ್ಲಿಕಾರ್ಜುನ ದೇವರ ಅವಸರದ ಓಲೆಯನ್ನು
ಒಯ್ಯುತ್ತಲಿದ್ದೇನೆ–ಶರಣಾರ್ಥಿ, ಶರಣಾರ್ಥಿ, ಶರಣಾರ್ಥಿ !"

ಶ್ರೀಶೈಲಕ್ಕೆ ನಿತ್ಯವೂ ಯಾತ್ರಿಕರು ಹೋಗುತ್ತಾರೆ–ಎಂದಿನಿಂದಲೂ. ಆದರೆ ಅಕ್ಕನಂತೆ ಹೋದವರೆಷ್ಟು ಜನ? ವಿಷಯಗಳನ್ನೂ ವಿಕಾರಗಳನ್ನೂ ಎಂದೋ ಹಿಂದುಳಿಸಿದ್ದಳು–ಈಗ ಪರಿಷಡ್‌ವರ್ಗಗಳನ್ನೂ ಅದೇಕೆ, ಸಚರಾಚರವನ್ನೂ ಹಿಂದುಳಿಸುತ್ತ ಹೊರಟಿದ್ದಾಳೆ ! ಅವಳ ಶ್ರೀಶೈಲಾರೋಹಣ ಆತ್ಮನ ಊರ್ಧ್ವಗಾಮಿ ಪಯಣದ ಪ್ರತೀಕವಾಗಿ ಉಳಿಯುವುದು ಆಚಂದ್ರಾರ್ಕವಾಗಿ ! ಶ್ರೀಶೈಲದ ಸೋಪಾನಗಳನ್ನು ಏರುತ್ತ, ಹರ್ಷವೇರುತ್ತ, ಹಾಡುತ್ತ ಹೊರಟಿದ್ದಾಳೆ :

"ವನವೆಲ್ಲ ಕಲ್ಪತರು, ಗಿಡವೆಲ್ಲ ಮರುಜೀವಣಿ, ಶಿಲೆಗಳೆಲ್ಲ ಪರುಷ, ನೆಲವೆಲ್ಲ
ಅವಿಮುಕ್ತಿ ಕ್ಷೇತ್ರ, ಜಲವೆಲ್ಲ ನಿರ್ಜರಾಮೃತ, ಮೃಗವೆಲ್ಲ ಪುರುಷ ಮೃಗ,
ಎಡಹುದು ಹರಳೆಲ್ಲಾ ಚಿಂತಾಮಣಿ ! ಚೆನ್ನಮಲ್ಲಿಕಾರ್ಜುನಯ್ಯನ ನೆಚ್ಚಿನ
ಗಿರಿಯ ಸುತ್ತಿ ನೋಡುತ್ತ ಬಂದು ಕದಳಿಯ ಬಸವ ಕಂಡೆ ನಾನು !"

ಕದಳಿಯ ವನವನ್ನು ಕಾಣುತ್ತಲೂ ಕರಣಂಗಳೆಲ್ಲ ಕಳೆಯೇರಿದುವು ಮಹಾದೇವಿಗೆ.

"ಕದಳಿಯೆಂಬುದು ತನು ; ಕದಳಿಯೆಂಬುದು ಮನ ; ಕದಳಿಯೆಂಬುದು
ಸರ್ವ ವಿಷಯಂಗಳು. ಕದಳಿ ಎಂಬುದು ಭವಘೋರಾರಣ್ಯ . ಕದಳಿ

ಯೆಂಬುದ ಗೆದ್ದು ತವೆ ಬದುಕಿ ಬಂದು ಕದಳಿಯ ಬನದಲ್ಲಿ ಭವಹರನ ಕಂಡೆನು ! ಭವಗೆಟ್ಟು ಬಂದ ಮಗಳೆಂದು ಕರುಣದಿಂ ತೆಗೆದು ಬಿಗಿಯಪ್ಪಿದರೆ ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನೆ"

ಎಂದು ಆನಂದಪರವಶಳಾಗಿ ಹಾಡುತ್ತ ಚೆನ್ನಮಲ್ಲಿಕಾರ್ಜುನನನ್ನು ಕೂಡಿದಳು– ಕೊನೆಗೂ ತಾನೊಲಿದ ಸಾವಿಲ್ಲದೆ ಚೆಲುವನನ್ನೇ ಕೂಡಿ ಕೇಡಿಲ್ಲದ ಪದವಿಯನ್ನು ಪಡೆದಳು !

ಈ ಪರಮಪದವಿ ಒಮ್ಮೆಗೆ ದೊರೆಯಲಿಲ್ಲ ಅವಳಿಗೆ. ಜೀವನು ಹಾರೈಸಿ ಹಾರೈಸಿ ಹಾರೈಸಿ ದೇವನಾಗುವುದಕ್ಕೆ ಉದಾಹರಣೆ ಅಕ್ಕಮಹಾದೇವಿ. ಆ ಹಾರೈಕೆಯ ತೀಕ್ಷ್ಣತೆ, ಉತ್ಕಟನೆಗಳ ಪಡಿನೆಳಲು ಅವಳು ಒಡನುಡಿದ ವಚನಗಳಲ್ಲಿ ಒಡಮೂಡಿದೆ.

"ಅಳಿಸಂಕುಳವೆ, ಮಾಮರವೆ, ಬೆಳುದಿಂಗಳೆ, ಕೋಗಿಲೆಯೆ,
ನಿಮ್ಮೆಲ್ಲರನೂ ಒಂದ ಬೇಡವೆನು। ಎನ್ನೊಡೆಯ ಚೆನ್ನಮಲ್ಲಿಕಾರ್ಜುನನ
ಕಂಡರೆ ಕರೆದು ತೋರಿರೆ !"

ಎಂಬ ಕೋರಿಕೆಯಲ್ಲಿ ಕೊನರಿ,

"ಚಿಲಿಮಿಲಿಯೆಂದೋದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ!
ಸ್ವರವೆತ್ತಿ ಪಾಡುವ ಕೋಗಿಳೆಗಲೆರಾ, ನೀವು ಕಾಣಿರೆ, ನೀವು ಕಾಣಿರೆ !
ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ !
ಸರುವರದೊಳಾಡುವ ಹಂಸಗಳಿರಾ, ನೀವು ಕಾಣಿರೆ, ನೀವು ಕಾಣಿರೆ !
ಗಿರಿಗಹ್ವದೊಳಗಾಡುವ ಪುಳಿಂದಿಯರಿರಾ, ನೀವು ಕಾಣಿರೆ, ನೀವು ಕಾಣಿರೆ!
ಚೆನ್ನಮಲ್ಲಿಕಾರ್ಜುನನೆಲ್ಲಿದ್ದಾನೆಂದು ಹೇಳಿರೆ !"

ಎಂಬ ಬೇಡಿಕೆಯಲ್ಲಿ ಬಳ್ಳಿವರಿದು

"ವನವೆಲ್ಲ ನೀವೆ ; ವನದೊಳಗಣ ದೇವ ತರುವೆಲ್ಲಾ ನೀವೆ ;
ತರುವಿನೊಳಗಾಡುವ ಖಗಮೃಗವೆಲ್ಲಾ ನೀವೆ ;
ಚೆನ್ನಮಲ್ಲಿಕಾರ್ಜುನ, ಸರ್ವಭರಿತವಾಗಿ ಮುಖದೋರ !"

ಎಂಬ ಪ್ರಾರ್ಥನೆಯಾಗಿ ಪಲ್ಲವಿಸಿ,

"ಮೂಲದ್ವಾರದ ಬೇರಮೆಟ್ಟಿ ಭೂಮಂಡಲವನೇರಿದೆ;
ಆಚಾರದ ಬೇರ ಹಿಡಿದು ಐಕ್ಯದ ತುದಿಗೇರಿದೆ;
ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನೇರಿದೆ;
ಕೈವಿಡಿದು ಕರೆದುಕೊಳ್ಳಾ, ಚೆನ್ನಮಲ್ಲಿಕಾರ್ಜುನ !"

ಎಂಬ ಬಿನ್ನಹದಲ್ಲಿ ಮೊಗ್ಗಾಗಿ,

"ಹೊಳೆವ ಕೆಂಜಡೆಗಳ, ಮಣಿಮುಕುಟದ, ಒಪ್ಪುವ ಸುಲಿಪಲ್ಲ,
ನಗೆಮೊಗದ, ಕಂಗಳಕಾಂತಿಯಿಂದ ಈರೇಳು ಭುವನವಂ ಬೆಳಗುವ
ದಿವ್ಯಸ್ವರೂಪನ ಕಂಡೆ ನಾನು ! ಕಂಡೆನ್ನ ಕಂಗಳ ಬರಹಿಂಗಿತ್ತಿಂದು !
ಗಂಡಗಂಡರನೆಲ್ಲ ಹೆಂಡಹೆಂಡಿರಾಗಿ ಆಳುವ ಗರುವನ ಕಂಡೆ ನಾನು !
ಜಗದಾದಿಶಕ್ತಿಯೊಳು ಬೆರಸಿಯೊಡನಾಡುವ ಪರಮಗುರು
ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು !"

ಎಂಬ ದಿವ್ಯ ಸಾಕ್ಷಾತ್ಕಾರದ ಧನ್ಯತೆಯಲ್ಲಿ ಅರಳಿ ಮಗಮಗಿಸಿತು ಮಹಾದೇವಿಯಕ್ಕನ ಸಾಧನಸುಮಶ್ರೀ !

ಪರಮಾತ್ಮನನ್ನು ಕಾಣುವ ಕಾತರದಲ್ಲಿ ಕರಗಿಹೋದವರನೇಕ ; ಕಂಡ ಕೆಲವರಲ್ಲಿ ತಾವು ಕಂಡ ದಿವ್ಯದರ್ಶನವನ್ನು ಬಣ್ಣಿಸಿ ಹೋದವರು ಎಲ್ಲಿಯೋ ಒಬ್ಬರು. ಅಂಥ ವಿರಲ ಅನುಭಾವಿಗಳಲ್ಲಿ ಅಕ್ಕಮಹಾದೇವಿಯೊಬ್ಬಳು. ಮಲ್ಲಿಕಾರ್ಜುನನ್ನು 'ಕಂಡು ಎನ್ನ ಕಂಗಳ ಬರ ಹಿಂಗಿತ್ತು' ಎಂದಿರುವಳಾಕೆ. ಆಕೆಯ ಉಜ್ವಲ ವ್ಯಕ್ತಿತ್ವವನ್ನು ಕಂಡವರ ಕಂಗಳ ಬರ, ಭಾವವೆಂಬ ಹಾಲು–ಸುಜ್ಞಾನವೆಂಬ ತುಪ್ಪ–ಪರಮಾರ್ಥವೆಂಬ ಸಕ್ಕರೆ– ಈ ತ್ರಿವಿಧಾಮೃತದಿಂದ ತುಂಬಿ ತುಳುಕುವ ಅವಳ ವಚನಗಳನ್ನು ಓದುವವರ ನಾಲಿಗೆಯ ಬರ, ಅಮೃತದ ಬಳ್ಳಿಯ ಕುಡಿಗಳಂತಿರುವ ಅವಳ ನುಡಿಗಳನ್ನು ಕೇಳುವವರ ಕಿವಿಗಳ ಬರ, ಅವಳ ಅನುಪಮ ಚಾರಿತ್ರ್ಯದ ಪರಿಮಳವನ್ನು ವಾಸಿಸುವವರ ನಾಸಿಕದ ಬರ– ಎಲ್ಲ ಬರಗಳೂ ಹಿಂಗುತ್ತವೆ !

ವಚನಧರ್ಮದರ್ಶಕರಾದ ಎಂ.ಆರ್. ಶ್ರೀನಿವಾಸಮೂರ್ತಿಗಳು ಅಪ್ಪಣೆ ಕೊಡಿಸಿರುವಂತೆ, "ಮಹಾದೇವಿಯಕ್ಕನ ಜೀವನ ಚರಿತ್ರೆ ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪರಮಾರ್ಥ ಸಾಧನೆಯ ಒಂದು ಮಹಾ ಪ್ರಕರಣ." ಆಕೆಯ ಜೀವಸೃಷ್ಟಿಯ ಅದ್ಭುತಗಳಲ್ಲಿ ಒಬ್ಬಳು. ಇಪ್ಪತ್ತು ಇಪ್ಪತ್ತೆರಡು ವರ್ಷಗಳ ವಯದಲ್ಲಿಯೇ ಅಸಾಧ್ಯವಾದುದನ್ನು ಸಾಧ್ಯವಾಗಿಸಿದ ಅದ್ಭುತಶಕ್ತಿ ಅಕ್ಕಮಹಾದೇವಿ! 'ಕಾಮನ ಗೆಲಿದೆನಯ್ಯ ಬಸವಣ್ಣಾ, ನಿಮ್ಮ ದಯದಿಂದ; ಸೋಮಧರನ ಹಿಡಿಪ್ಪೆನಯ್ಯ ಬಸವಣ್ಣ, ನಿಮ್ಮ ದಯದಿಂದ ; ನಾಮದಲ್ಲಿ ಹೆಣ್ಣರೂಪಲ್ಲದೆ ಭಾವಿಸಲು ಗಂಡುರೂಪು ನೋಡಾ !' ಎಂದು ಅತುಲ ಆತ್ಮವಿಶ್ವಾಸದಿಂದ ಸಾರಿದ ಆಕೆ ಅದರಂತೆಯೇ ಆಚರಿಸಿ, ಆ ಆಚಾರದ ಬೇರ ಹಿಡಿದು ಐಕ್ಯದ ತುದಿಯನ್ನೇರಿದಳು. ಕಾಡುವ ಕಾಮನಿಗೆ ಕಿಚ್ಚನಿಕ್ಕಿ

ಅಚ್ಚಲಿಂಗೈಕ್ಯಳಾದಳು. "ಲಿಂಗದ ಭಂಗವ ಲಿಂಗ ಸುಖದಿಂದ ಗೆಲಿದೆ; ಮನದ ಭಂಗವ ಅರಿವಿನ ಮುಖದಲ್ಲಿ ಗೆಲಿದೆ ; ಜೀವನ ಭಂಗವ ಶವಾನುಭಾವದಿಂ ಭಂಗವ ಅರಿವಿನ ಮುಖದಲ್ಲಿ ಗೆಲಿದೆ ; ಜೀವನ ಭಂಗವ ಶಿವಾನುಭಾವದಿಂ ಗೆಲಿದೆ ; ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ ! ಜವ್ವನದ ಹೊರಮಿಂಚಿನಲ್ಲಿ ನಿಮ್ಮ ಕಣ್ಣಿಗೆ ತೋರುವ ಕಾಮನ ಸುಟ್ಟುರುಹಿದ ಭಸ್ಮನೊಡಯ್ಯ ! ಚೆನ್ನಮಲ್ಲಿಕಾರ್ಜುನನು ಕಾಮನ ಕೊಂದು ಮನಸಿಜನಾಗುಳಿದರೆ ಮನಸಿಜನ ತಲೆಯ ಬರೆಹವ ತೊಡೆದೆನು !" ಎಂದು ಅವಳಂತೆ ಎದೆತಟ್ಟಿ ಹೇಳಿದವರೆಷ್ಟು ಜನ?

"ಲೋಕವ ಹಿಡಿದು ಲೋಕವ ಹಿಂಗಿದೆಂತಿಪ್ಪೆನು.....ಹತ್ತರೊಳಗೆ ಹನ್ನೊಂದಾಗಿ ನೀರತಾವರೆಯಂತಿಪ್ಪೆನು" ಎಂದು ಅಕ್ಕನು ಭಾಷೆಯಿತ್ತಿದ್ದಳು. ಅದರಂತೆಯೇ ಅವಳ ಬಾಳಿದಳು. ಕರುನಾಡಿನ ಕಾಸಾರದಲ್ಲಿ ತಿಳಿಬಾಲಿನ ತಾವರೆಯಾಗಿ, ಅಧ್ಯಾತ್ಮದ ಅರವಿಂದವಾಗಿ ಅರಳಿದಳಾಕೆ. ಸುತ್ತು ಸೌರಭವನ್ನು ಬೀರಿ ತಾವರೆಯಷ್ಟೇ ನಿರ್ಮಲವಾದ, ಪರಿಶುದ್ಧವಾದ ಬಾಳನ್ನು ಬಾಳಿ ಬಯಲಾದಳು. ಪ್ರಭುದೇವರು ಹೇಳಿರುವಂತೆ 'ತನ್ನ ಸ್ವಾನುಭವದ ಉದಯದಿಂದ ತನ್ನ ತಾನರಿದ ನಿಜ ಶಕ್ತಿ'ಯಾದಳಾಕೆ; 'ಭಿನ್ನವಿಲ್ಲದರಿವು, ಮನ್ನಣೆಯ ಮಮಕಾರವ ಮೀರಿದ ಭಾವ'ಗಳನ್ನು ಅಳವಡಿಸಿಕೊಂಡು 'ತನ್ನಂದ ತಾನಾದಳು' ಅಕ್ಕಮಹಾದೇವಿ !

ಆಕೆಗೆ ಹಳ್ಳಿಗರ ಹಾಡಿನಲ್ಲಿಯೇ ನಮ್ಮ ಭಕ್ತಿಯನ್ನು ಸಲ್ಲಿಸೋಣ :

"ಅಕ್ಕನ ಬಲಗೊಂಬೆ ಅಕ್ಕಯ್ಯನ ಬಲಗೊಂಬೆ
ಅಕ್ಕಮಾದೇವಿ ಬಲಗೊಂಬೆ–ನಮ್ಮೂರ
ಅಕ್ಕದೇವಿಯನು ಬಲಗೊಂಬೆ !"
ಸುಂಕರಾಶಿಯ ಕಣಕೆ ಸಂಕದೇವನ ಬಲವು
ಕಂಕಿಯಾಕಣಕೆ ನಿನಬಲವು–ಮಾದೇವಿ
ಸೋಂಕಿದರೆ ರಾಶಿ ಕಣತುಂಬಿ !

■

# ಮಲ್ಲರಸ- ಮಾದರಸ- ಮಾದಯ್ಯ

'ಏರಿ ನೋಡಲು ಸತ್ಯಲೋಕಕೆ ಹಾರಿಸುವ ಗಿರಿ ಶಿಖರಗಳು ! ಮೀರಿ ಹೊಕ್ಕೊಡೆ ಸಪ್ತ ಪಾತಾಳದ ಸಘಾಟಿಕೆಯ ತೋರಿಸುವ ಬಿಂಕದ ಬಿಲಂಗಳು ! ನಡೆವ ಲತೆಗಳು, ನಗುವ ಗಿಡಗಳು, ನುಡಿವ ಶಿಲೆಗಳು, ಕುಡಿದೊಡೆ ಅಂತಃಕರಣ ಶುದ್ಧಿಯಕೊಡುವ ಮಡುಗಳು, ದಿವ್ಯರುಚಿಗಳನೀವ ಗುಲ್ಮಗಳು, ಜಾತಿ ವೈರವ ತೊಡದ ಖಡ ಮೃಗಗಳು !' ಇದು ಶ್ರೀಗಿರಿ–ಸಾಧಕರ, ಸಿದ್ಧರ, ಭಕ್ತರ, ಮುಕ್ತರ ನಿವಾಸ ಸ್ಥಾನ–ಮಲ್ಲಿಕಾರ್ಜುನ ಭ್ರಮರಾಂಬೆಯರ ಸ್ವಯಂಭು ಶಿವಾಲಯ ! 'ಶ್ರೀಶೈಲ ಶೀಕರಂ ದೃಷ್ಟ್ವಾ ಪುನರ್ಜನ್ಮಂ ವಿದ್ಯತೇ' ಎಂಬ ನೆಗಳ್ತೆವೆತ್ತ ಪವಿತ್ರಕ್ಷೇತ್ರ, ಅಲ್ಲಿ ಜಲವೆಲ್ಲ ತೀರ್ಥ, ಶಿಲೆಯೆಲ್ಲ ಶಿವಲಿಂಗ, ಧೂಳಿಯೆಲ್ಲ ಭಸ್ಮ ! ಅಲ್ಲಿ ಗಾಳಿ ಕಸಗುಡಿಸುತ್ತದೆ, ಮೋಡ ಸಂಪ್ರೋಕ್ಷಣೆ ಗೈಯುತ್ತವೆ, ಪೈರುಗಳು ರಂಗವಲ್ಲಿಯಾಗಿ ನಿಲ್ಲುತ್ತವೆ, ಗುಗ್ಗುಲದ ಮರ ಧೂಪವನ್ನೂ ಜ್ಯೋತಿರ್ಲತೆಗಳು ದೀಪವನ್ನೂ ತರುಲತೆಗಳು ಪತ್ರಪುಷ್ಪ ಫಲಗಳನ್ನೂ ಪೂರೈಸುತ್ತವೆ. ಇಂತು ಮಲ್ಲಿಕಾರ್ಜುನನಿಗೆ ನಿಸರ್ಗವೇ ನಿತ್ಯಪೂಜೆಯನ್ನು ಮಾಡುತ್ತಿದೆ.

ಅಲ್ಲೊಬ್ಬ ಮಹಾಯೋಗಿ. ಅವನು,

"ಶ್ರೀಮದಾನಂಗ ರೂಪಂ ವಿಗತ ತಾಪಂ ಪ್ರ
ಭಾ ಮೂಲಭಸ್ಮಲೇಪಂ ಸ್ಮಯವಿಲೋಪಂ ಪ
ರಾಮೃತಕಲಾ ಕಲಾಪಂ ತೃಣೀಕೃತ ಪುಷ್ಪಚಾಪಂ ಗತಾಘಲೇಪಂ
ಆ ಮಹೇಶ ಸುಖಾಬ್ಧಿ ಚಂದ್ರಂ ಯತೀಂದ್ರಂ ವ
ರಾಮಲ ಪ್ರಗಲಸಾಂದ್ರಂ ಶಾಂತಿರುಂದ್ರಂ
ಮತಿಸರೋಜ ದಿನೇಂದ್ರಂ ೧"

ಆಗಿದ್ದನು. ಅವನ ಹೆಸರು ಶಿವಯೋಗಿ ಮಲ್ಲರಸ.

---

೧ ಪದ್ಮರಾಜಪುರಾಣ ಸಂ. ೧, ಪ. ೧೬.

ಮಲ್ಲರಸನು ಮೊದಲು ಅರಸನೇ ಆಗಿದ್ದನು. ಕಲ್ಲುಕುರಿಕೆಯ ಅರಸನಾಗಿ ಶೈವಸಾಮ್ರಾಜ್ಯವನ್ನೂ ಭೂಸಾಮ್ರಾಜ್ಯವನ್ನೂ ಕೂಡಿಯೆ ರಕ್ಷಿಸಿದನು ಕೆಲಕಾಲ. ಅಮೇಲೆ ವಿರಕ್ತಿ ಹುಟ್ಟಿ ಶ್ರೀಶೈಲದ ಬಿಲ್ವವನವೊಂದರಲ್ಲಿ ಶಿವಯೋಗ ಸಾಧನೆಯಲ್ಲಿ ನಿಮಗ್ನನಾಗಿಬಿಟ್ಟನು ; ಸಾಕಾರ ಶಿವತತ್ತ್ವವಾಗಿಬಿಟ್ಟನು.

ಇತ್ತ ಮಲ್ಲರಸನ ಮಗ ಮಾದರಸ ಅರಸೊತ್ತಿಗೆಯನ್ನು ನಡೆಸಿದನು ಕೆಲಕಾಲ.[೨] ಅವನೂ–

"ಶಿವಧ್ಯಾನರಕ್ತಂ ಶಿವಜ್ಞಾನಯುಕ್ತಂ
ಶಿವಾದ್ವೈತಭಾಜಂ ಶಿವೈಕ್ಯಾಬ್ಧಿರಾಜಂ
ಶಿವಪ್ರೇಮಧಾಮಂ ಶಿವಾನಂದಭೂಮಂ
ಶಿವಪ್ರಾಣಿ"[೩]

ಯಾಗಿದ್ದನು. ಒಮ್ಮೆ ಶ್ರೀಗಿರಿಗೆ ಹೋಗಿ ಬಂದ ಯಾತ್ರಿಕರಿಂದ ಶ್ರೀಶೈಲದ ಸೊಬಗನ್ನೂ ಶಿವಯೋಗಿ ಮಲ್ಲರಸರ ಮಹಿಮೆಯನ್ನೂ ಕೇಳಿದನು. ಒಳಗೊಳಗೇ ಮೊಳೆಯುತ್ತಲಿದ್ದ ವೈರಾಗ್ಯ ಒಮ್ಮೆಗೆ ಹೊಮ್ಮಿ ಹೊರಸೂಸಿತು. ರಾಜ್ಯವನ್ನು ತ್ಯಜಿಸಿ ಶಿವಯೋಗ ಸಾಮ್ರಾಜ್ಯವನ್ನರಿಸಿ ಶ್ರೀಶೈಲಾಭಿಮುಖವಾಗಿ ನಡೆದನು. ದಾರಿಯಲ್ಲಿ ಅಂಬೆಯೆಂಬ ಗ್ರಾಮದ ಜನರು ಅವನನ್ನು ತಮ್ಮ ಅನಿರ್ವ್ಯಾಜ ಪ್ರೀತಿಯ ಪಾಶದಿಂದ ಕಟ್ಟಿಹಾಕಿದರು. ಮಾದರಸ ಅಂಬೆಯಲ್ಲಿಯೇ ಉಳಿದ ಕೆಲದಿನ. ಆ ಲಿಂಗನಿಕೇತನಾವಿಳಸಮನಮರ್ದ ಅಂಬೆಯಲ್ಲಿ ಸಕಳೇಶಮಾದರಸನ ಶಿವಾರಾಧನೆ ನಡೆಯಿತು. ತಂತ್ರೀವಾದ್ಯ ಕಳಾಮಹಿತನಾದ ಮಾದರಸ ರಾವಣವೀಣೆ, ರುದ್ರವೀಣೆ, ಕೂರ್ಮವೀಣೆ, ಕೈಲಾಸವೀಣೆ, ಗೌರೀವೀಣೆ, ಸ್ವಾಯಂಭುವೀಣೆ, ಕಿನ್ನರಿವೀಣೆ, ಪಿನಾಕಿವೀಣೆ ಮೊದಲಾದ ಮೂವತ್ತೆರಡು ವೀಣೆಗಳನ್ನೂ ವೇಣು ಸ್ವರಮಂಡಲಗಳನ್ನೂ ಶ್ರುತಿಗೊಳಿಸಿ, ಕಳೆವೆರ್ಚಿಸಿ–

ಕತ್ತರಿ ಬಿತ್ತರಂ ನಿಮಿರೆ, ತಾಕುಳಿ ಪೊಣ್ಮೆ, ಪೊದಳ್ದ ದೇಶಿ ಮೈ
ವೆತ್ತಿರೆ ತೇನತೇನ ಮೊದಗೊತ್ತಿರೆ ತಾನರವಂ ಲಯಂ ಜವಂ
ಬೆತ್ತಿರೆ, ಮೂರ್ಛನಾಪ್ರಸರಮೊಂದಿರೆ, ಜೇನ್ವೊಳೆ ಸೂಸಿದಂತರಿಂ
ಪೊತ್ತಿರಿಸುತ್ತ ರಾಗರಸಮುರ್ವ್ವಿರೆ ತೋರುತೆ ಬಿನ್ನಣಂಗಳಂ

---

೨ ಐಹೊಳೆಯಲ್ಲಿ ವೇದಭಾಸ್ಕರ ಮತ್ತು ಗುಣವತಿಯರ ಗರ್ಭದಲ್ಲಿ ಜನಿಸಿ, ಆ ಪಟ್ಟಣದ ಒಡೆಯನಾಗಿ ಮುಂದೆ ಶ್ರೀಗಿರಿಗೆ ಹೋದನೆಂದು ಡಾ॥

೩ ವೃಷಭೇಂದ್ರ ವಿಜಯ–ಬ.ಪು.ಶ.ಶಾ

ಮಾಳವಮಾ ಶ್ರೀರಾಗಂ
ತಾಳಗಮುರುನಾಟಿ ಶಂಕರಾಭರಣಂ ಬಂ–
ಗಾಳಂ ಗುರ್ಜರಿ ತೋಡಿ ವ–
ರಾಳಿಕೆ ಕಲ್ಯಾಣಿ ದೇಶಿ ಕನ್ನಡರಾಗಂ–

ಎಂಬುರುಸ್ಫುರಿತರಾಗಸಂಚಯವನ್ ಓಜೆಯಿಂ ಬಾಜಿಸುತ್ತಾನೆ[೪]–ಬಾಜಿಸುತ್ತ ಶಿವನನ್ನು ಪೂಜಿಸುತ್ತಾನೆ.

ಪ್ರತಿದಿನದ ಪೂಜೆಗೆ ಹನ್ನೆರಡು ಹೊನ್ನು ಬೇಕಾಗುತ್ತಿದ್ದುವು. ಅಂಬೆಯ ಭಕ್ತರು ಪಾಳಿಯಿಂದ ಆ ವೆಚ್ಚವನ್ನು ಬದಗಿಸುತ್ತಿದ್ದರು. ಒಂದು ದಿನ ಒಬ್ಬ ಬಡ ಭಕ್ತನ ಪಾಳಿ ಬಂದಿತು. ಬೇರಾವ ಮಾರ್ಗದಿಂದಲೂ ಅಂದಿನ ಪೂಜೆಯ ವೆಚ್ಚವನ್ನು ಒದಗಿಸುವುದು ಸಾಧ್ಯವಾಗದಿರಲು ಆ ಭಕ್ತ ತನ್ನ ಮಗಳು ಮಾದಾಂಬೆಯನ್ನೇ ಒತ್ತೆಯಿಟ್ಟು ಹನ್ನೆರಡು ಹೊನ್ನು ಒದಗಿಸುತ್ತಾನೆ. ಮಾದರಸನಿಗಿದು ತಿಳಿಯಲು ಅವನಿಗೆ ಅತೀವ ದುಃಖವಾಗುತ್ತದೆ. ಹೊನ್ನು ಕೊಟ್ಟು ಮಾದಾಂಬೆಯನ್ನು ಒತ್ತೆಯಿಂದ ಮುಕ್ತಳನ್ನಾಗಿ ಮಾಡುತ್ತಾನೆ. ತನ್ನಿಂದ ಭಕ್ತರಿಗಿ ಇಂಥ ತೊಂದರೆಯಾಗುವುದು ಬೇಡವೆಂದು ಅಲ್ಲಿಂದ ಹೊರೆಡುತ್ತಾನೆ. ಶ್ರೀಗಿರಿಗೆ ಬರುತ್ತಾನೆ–ಹಿಂದೆ ತಂದೆಯೂ ಇಂದು ಗುರುವೂ ಆಗಿದ್ದ ಮಲ್ಲರಸರನ್ನು ಅರಿಸಿ. ದಾರಿಯಲ್ಲಿ–

ದೇಹಧರ್ಮದಾಶೆ ಬೇರೆ, ಭಕ್ತಿಯಿಲ್ಲದ ಬೇಗೆ ಬೇರೆ–
ಎನಗೆಂದೇ ಮಾಡಿದಿರೇ ಈ ಸಕಲ ಪ್ರಪಂಚವನು?
ಎನಗೆಂದೇ ಮಾಡಿದಿರೇ ಈ ಸಕಲ ವ್ಯಾಪಾರಂಗಳನು?
ಎನಗೆ ನಿಶ್ಚಿಂತ ಪದವಿಯನಿನ್ನೆಂದಿಗೀವೆಯಯ್ಯಾ ಸಕಳೇಶ್ವರಾ?

ಎಂದು ಹಲುಬಿದನು ;

ದೊರೆಕೊಂಡಂತೆ ಮನದಣಿದಿಪ್ಪವರ
ದುಃಖಕ್ಕೆ ದೂರವಾಗಿಪ್ಪವರ
ಒಳಗನರಿದು ಹೊರಗೆ ಮರೆದಿಪ್ಪವರ
ಸದಾನಂದದಲ್ಲಿ ಸುಖಿಯಾಗಿಪ್ಪವರ
ಎನಗೊಮ್ಮೆ ತೋರಿಸಾ ಸಕಳೇಶ್ವರದೇವಾ !
ಎನಗದೇ ವರದ ಕೊಡು ಕಂಡೆಯಾ ತಂದೆ –

---

೪ ವೃಷಭೇಂದ್ರ ವಿಜಯ

ಎಂದು ಹಾರೈಸಿ

ದೇಶದೇಶಾಂತರವ ತಿರುಗಿ ತೊಳಲಿ ಬಳಲಿ
ಕೆಲರ ಹಳಿದು ಕೆಲರ ಹೊಗಳಿ
ವೃಥಾ ಹೋಯಿತ್ತೆನ್ನ ಸಂಸಾರ !
ಗಿರಿಯ ಶಿಖರದ ಮೇಲೆ ಲಿಂಗಧ್ಯಾನದಲ್ಲಿ ಮೌನಿಯಾಗಿರಿಸು ಸಕಳೇಶ್ವರಾ!

ಎಂದು ಹಂಬಲಿಸಿದನು.

ಶ್ರೀಶೈಲ ಬಂದಿತು. ಅದನ್ನು ಕಾಣುತ್ತಲೆ ಅವನ ಆನಂದ ಉಕ್ಕಿ ಹರಿಯಿತು.ಗುರುವನ್ನು ಕಾಣುವ ತವಕದಿಂದ ಬರುತ್ತಿರುವಾಗ ಸೋಜಿಗವೊಂದು ನಡೆಯಿತು.

ಹರತೇಜಃಪುಂಜಪೂರ್ಣಾಕೃತಿಯೋ, ಶಿವವಿರಾಣ್ಮೂರ್ತಿಯೋ, ಭಸ್ಮಧಾತ್ರೀ
ಧರಮೋ, ಶ್ರೀ ಪರ್ವತಾಗ್ರಸ್ಥಿತ ಮುನಿಜನಪುಣ್ಯಸ್ಫುರದಾಶಿಯೋ ಯೆಂ
ಬಿರವಂ ಕೈಕೊಂಡು ಮಾರ್ಗಂಬಿಡಿದು ಮಹೀನಭೋಭಾಗಮಂ
ಮುಟ್ಟಿಯೋಗೀ
ಶ್ವರನುತ್ತುಂಗಾಂಗನಡ್ಡಂಗೆಡಿದಿರೆ ಪದಪಿಂ ಕಂಡನಾಮಾದಿರಾಜಂ–

ನೆಲದಿಂದ ಮುಗಿಲವರೆಗೆ ವಿಭೂತಿಯ ಗಿರಿಯಂತೆ ಬೆಳೆದು ಬಿದ್ದಿದ್ದ ಶಿವಯೋಗಿ ಮಲ್ಲರಸ ! ಮಾದರಸನಿಗೆ ದಿಕ್ಕೇ ತೋಚದಾಯಿತು.

"ಜಗದಗಲ ಕಲ್ಲು ನೆಲಕ್ಕೆ ಬಿದ್ದಡೆ ಕೆಲಕ್ಕೆ ಸಾರುವನೆಗ್ಗ !
ನಗುತ್ತಲು ತಲ್ಲಣಿಸದೆ ಶಿವಶರಣೆನ್ನುತ್ತಿಹುದು.
ನಗುತ್ತಲು ತಲ್ಲಣಿಸದೆ ಹರಶರಣೆನ್ನುತ್ತಿಹುದು.
ಸಕಳೇಶ್ವರದೇವ ವಿಮುಖವಾದಡೆ
ನೆನಹೆಂಬಲಗಿನಿಂದ ಕೈಮಾಡುತ್ತಿಹುದು"

ಎಂದು ಹಾಡಿ 'ಗುರುವೆ, ಪರವೆ, ಗತಿಯೆ, ಮತಿಯೆ ವರವಾಗು, ಮೈದೋರು' ಎಂದು ನೆನಹುದುಂಬಿ ನಿಲ್ಲಲು ಮಲ್ಲರಸ ಮೈದೋರಿ ಮೈದಡವಿ ತನ್ನ ಆಶ್ರಮಕ್ಕೆ ಕೊಂಡೊಯ್ಯುತ್ತಾನೆ. ಅಲ್ಲಿ ಶಿವತತ್ತ್ವ ಬೋಧೆಗೈದು, ಮಾದಿರಾಜನ ಅರಿವಿನ ಕಣ್ಣು ತೆರೆಸುತ್ತಾನೆ. ಕೆಲದಿನಗಳಾದ ಮೇಲೆ ನೀನಿನ್ನೂ ಭೂಮಿಯಲ್ಲಿ ಕೆಲಕಾಲವಿರಬೇಕು. ಕಲ್ಯಾಣದಲ್ಲಿ ಬಸವಾದಿ ಪ್ರಮಥರ ಉದಯವಾಗಿದೆ. ಅಲ್ಲಿಗೆ ಹೋಗೆನ್ನುತ್ತಾನೆ. ಮಾದರಸನ ಕಿವಿಯಲ್ಲಿ ಕಾದ ಕಬ್ಬುನವನ್ನಿರಿಸಿದಂತಾಗುತ್ತದೆ.

'ನೀನೆನ್ನನೊಲ್ಲದಿದ್ದರೆ ನಾನಾರ ಸಾರಿ ಬದುಕಲಯ್ಯಾ !
ಮೇಕುದೋರಿ ಗಂಡನ ಮಾಡಿಕೊಂಡವರುಂಟೆ?
ನಿಮ್ಮಿಂದಲಧಿಕರುಂಟೇ ಹೇಳಾ !
ತಲೆಯೂರಿ ತಪ್ಪಿಸಿದೊಡೆ ಅಲ್ಲಿ ಮೂರ್ತಿಯ ತೋರುವಾತನು ನೀನೆ. ಕಣ್ಣು
ಮುಚ್ಚಿ ಕಮರಿಯ ಹಾಯ್ದರೆಯೂ ಅಲ್ಲಿ ಪದವಿಯ ಕೊಡುವವನುನೀನೆ.
ನೀನು ಕರುಣಿಸುವನ್ನಕ್ಕರ ನಾನು ಹೀಗಿದೇನೆ ಹೇಳಾ ಸಕಳೇಶ್ವರಾ !"

ಎಂದು ಅರಿಕೆಮಾಡಿಕೊಳ್ಳುತ್ತಾನೆ. ಪ್ರಯತ್ನದಿಂದವನಿಗೆ ಪ್ರಬೋಧವನ್ನು ಉಂಟುಮಾಡಲೆಂದು ಮಲ್ಲರಸ ಮಾದರಸವನನ್ನು ಒಂದು ಹಿರಿಯ ಬೊಬ್ಬುಲಿ ಮರದ ನೆರಳಿನಲ್ಲಿ ಕುಳ್ಳಿರಿಸಿ ಇದೀಗ ಬಂದೆನೆಂದು ಹೋಗುತ್ತಾನೆ. ಹೋಗಿ ವಿಕೃತ ರೂಪದ ಹೇಸಿ ವೇಷದ ಗೊಲ್ಲನಾಗಿ ಬರುತ್ತಾನೆ.

ಬಿರಿದ ಬೆರಳ್ಗಳ ಬಿಟ್ಟೆಯಡಿಗಳ
ಮುರಿದ ತೊಡೆಗಳ ಕುಸಿದ ನಡುವಿನ
ಹೊರಟ ಬೆನ್ನಿನ ಬೀಸುಗೈಗಳ ಡೊಂಕುಗಾಲುಗಳ
ನರೆಗೊರಳ ನೊರೆವಾಯ ಹಾವಸೆ
ವರಿದ ಪಲ್ಗಳ ಜೋಲ್ದುಟಿಯ ನಸು
ಮುರುಟುಗಿವಿಗಳ ಹರಿಕಗಡ್ಡದ ಕೆಂಪು ಮೀಸೆಗಳ (ಬ.ಪು.)

ಆ ಕುರುಬ ಮುಳುಗತ್ತಿಯಿಂದ ಮಾದರಸ ಕುಳಿತಿದ್ದ ಬೊಬ್ಬುಲಿ ಮರದ ಕಾಯಿ ಸೊಪ್ಪುಗಳನ್ನೇ ಕಡಿಕಡಿದು ಕುರಿಗಳಿಗೆ ಮೆಯ್ಯಿಸತೊಡಗುತ್ತಾನೆ. ಮಾದರಸನ ತಲೆ ಕಾಯುತ್ತದೆ. "ಎಲೆಲೆ ಖುಲ್ಲಗೊಲ್ಲ, ಈ ವಿಸ್ತೀರ್ಣವಾದ ಅರಣ್ಯದಲ್ಲಿ ನಿನಗೆ ಬೇರೆ ಮರಗಳೇ ಇಲ್ಲವೆ? ಪಾಪಿ, ನಾನಿಲ್ಲಿ ಕುಳಿತಿರುವುದನ್ನೂ ಲಕ್ಷಿಸದೆ ಇದನ್ನೇ ಕಡಿಯುತ್ತಲಿರುವೆಯಾ?" ಎಂದು ಅಬ್ಬರಿಸುತ್ತಾನೆ. ಗೊಲ್ಲ ಗಹಗಹಿಸಿ ನಗುತ್ತನೆ. 'ಕೋಪಿಸುವನೇ ಪಾಪಿಯಲ್ಲದೆ ಪಾಪಿನಾನಹೆನೆ? ನನಗೆ ಬೇರೆಯ ಮರಗಳಿಲ್ಲವೆ ಎಂದು ಕೇಳುತ್ತಿರುವಿ. ನಿನಗೆ ಬೇರೆಯ ಮರಗಳಿವೆ ಕುಳಿತುಕೊಳ್ಳಲು ಈ ಕಾಡಿನಲ್ಲಿ? ನೋಡಲು ತಾಪಸನಂತೆ ತೋರುವಿ. ಇದೆಯೋ ನಿನ್ನ ತಪಸ್ಸು?'

'ಕುದಿವ ಕೋಪಾಂಬುಧಿಯ ತೆರೆಯಿಂ
ಕದಡದೇ ಮಾನಸ ಸರೋವರ?
ಮುದಿತ ಕೋಪದ ಕಿಚ್ಚಿನಿಂದವೆ ಬತ್ತದೆಂತಿಹುದು?
ಹೃದಯವೆಂಬರವಿಂದ ಮಕರಂ–

ದದ ಕೆಸರು ಕೋಪಾಗ್ನಿಯಿಂ ಕಂ–
ದದೆ? ವಿಕಾಶವನೆಯ್ದುವುದೆ ಸಾನಂದ ಶುಚಿದಬ್ಜ?' (ಬ.ಪು.)

ವಿಫಲ ತಾಪಸ, ಮನೆಮಾರುಗಳನ್ನೆಲ್ಲ ತೊರೆದು, ಆಸೆಗಳನ್ನು ತ್ಯಜಿಸಿ ಸನ್ಯಾಸಿಯಾದೆ. ಆದರೆ ಕೋಪ ತಪಗಳು ಒಂದಾಗಿ ಇರಲಾರವೆಂಬುದನ್ನು ಅರಿಯದಾದೆಯಾ? ಕೋಪವಂಟಿದ ತಪದಿಂದಾವ ಪ್ರಯೋಜನ?

"ಕಪಟಿಯ ಜಪಮುಂ ಕೋಪಿಯ
ತಪಮುಂ, ಪಿಶುನನ ಮೃದೂಕ್ತಿಯುಂ, ಪರನಿಂದಾ
ಲಪಿತನ ವಿದ್ಯೆಯುಮಗ್ಗದ
ಕೃಪಣನ ಸನ್ಮಾನಮುಂ ನಿರರ್ಥಕಮಲ್ತೆ? (ವ್ಯ.ವಿ.)"

ಎಂದು ಜಡಿದುನುಡಿದನು. ಮಾದರಸನ ಮದ ಮುರಿಯಿತು. ಇಂಥ ಜ್ಯೋತಿರ್ಲಿಂಗದಂಥ ಮಾತನ್ನಾಡುತ್ತಿರುವ ಈ ಗೊಲ್ಲನಾರಾಗಿರಬಹುದೆಂದು ಅವನು ಬೆರಗಾಗಿ ನೋಡುತ್ತಿರುವಾಗಲೇ ಕುರುಬನ ರೂಪ ಹೋಗಿ ಮಲ್ಲರಸನ ಮೂರ್ತಿ ನಿಂತಿತ್ತು ಅವನೆದುರಿಗೆ. ಮಾದರಸ ಮಲ್ಲರಸನ ಅಡಿಯಲ್ಲಿ ಕೆಡೆದು ನುಡಿದ–

ತಮತಮಗೆ ಸಮತೆಯ ಹೇಳಬಹುದಲ್ಲದೆ
ತಮತಮಗೆ ಸಮತೆಯ ನುಡಿಯಬಹುದಲ್ಲದೆ
ಕನಲಿಕೆಯ ಕೆಳದಿಪ್ಪವರಾರು ಹೇಳಾ?
ಒಬ್ಬರನೊಬ್ಬರು ಹಳಿಯದಿಪ್ಪವರಾರು ಹೇಳಾ?
ಮುನಿಸ ಮುಂದಿಟ್ಟಿಪ್ಪರು–
ಇದು ಯೋಗಿಹಾ ಸಕಳೇಶ್ವರ ದೇವಾ
ನೀ ಕರುಣಿಸಿದವರಿಗಲ್ಲದಿಲ್ಲ !

ಶಿವಯೋಗಿ ಮಲ್ಲರಸ ಮಾದರಸನನ್ನು ಸಾಂತ್ವನಗೊಳಿಸುತ್ತ ಹೇಳಿದ– 'ಹರಣ ತೊರೆಯವೆನೆಂದರು ಬಾವಿಯಲಿ ಬಿದ್ದು ಮೇಲೆದ್ದುಬಲು ಮೆಟ್ಟಲುಗಳನ್ನು ಹುಡಿಕುವವನ ಹಾಗೆ, ಹೊಳೆಯಲ್ಲಿ ಹರಿದು ಹೋಗುತ್ತಲಿದ್ದ ಕರಡಿಯನ್ನು ಕಂಡಬಳಿಯೆಂದು ತಬ್ಬಿ, ಆಮೇಲೆ ನಾ ಬಿಟ್ಟರೂ ಅದು ಬಿಡಲೊಲ್ಲದೆಂದು ಗೋಳಾಡುವವನ ಹಾಗೆ, ಆಶಾಪಾಶವನ್ನು ಹರಿದೊಗೆದೆನೆಂದು ಹೇಳಿ ರೋಷವನ್ನು ಹಿಡಿಯಲಾಗದು. ಹಾಗೆ ಮಾಡಿದರೆ ಕಾಂಕ್ಷಿತದಿ ಕಸುಗಾಯನ್ನು ಕೊಯ್ದಂತಾಗುತ್ತದೆ.ಅದು ಹಣ್ಣಾಗದು. ಹಾಗೆ, ಕಾಮಕ್ರೋಧಗಳನ್ನು ಬಿಡದವರಿಗೆ

ಶಿವನೊಲಿಯನು' ಮಾದರಸನಿದನ್ನು ನತಮಸ್ತಕನಾಗಿ ಒಪ್ಪಿದ.



**ಶಿವಯೋಗಿ ಮಲ್ಲರಸ ಮಾದರಸನನ್ನು ಸಾಂತ್ವನಗೊಳಿಸುತ್ತ ಹೇಳಿದ :**
**"ಕಾಮಕ್ರೋಧಗಳನ್ನು ಬಿಡದವರೆಗೆ ಶಿವನೊಲಿಯನು"**

"ಜನಮೆಚ್ಚೆ ಶುದ್ಧನಲ್ಲದೆ ಮನಮೆಚ್ಚಿ ಶುದ್ಧನಲ್ಲವಯ್ಯ ;
ನುಡಿಯಲ್ಲಿ ಜಾಣನಲ್ಲದೆ ನಡೆಯಲ್ಲಿ ಜಾಣನಲ್ಲವಯ್ಯ ;
ವೇಷದಲ್ಲಿ ಅಧಿಕನಲ್ಲದೆ ಭಾಷೆಯಲ್ಲಿ ಅಧಿಕನಲ್ಲವಯ್ಯ–
ಧನ ದೊರಕದೆ ನಿಸ್ಪೃಹನಲ್ಲದೆ ಧನ ದೊರಕಿ ನಿಸ್ಪೃಹನಲ್ಲವಯ್ಯ

ಏಕಾಂತ ದ್ರೋಹಿ, ಗುಪ್ತಪಾತಕಿ, ಯುಕ್ತಿಶೂನ್ಯಂಗೆ
ಸಕಳೇಶ್ವರದೇವ ಒಲಿ ಒಲಿ ಎಂದಡೆಂತೊಲಿವನಯ್ಯ !"

ಎಂದು ವಿನಯದಿಂದ ಉತ್ತರಸಿದ. ಮಲ್ಲರಸನವನನ್ನು ಎತ್ತಿ ಅಪ್ಪಿ, 'ಶಾಂತನಾಗು ಮಾದರಸ, ನೀನೇನೂ ಅಪಕ್ವಮತಿಯಲ್ಲ. ನೀನು ಕಲ್ಯಾಣಕ್ಕೆ ಹೋಗಲು ಹಿಂಜರಿದ ಕಾರಣ ನಾನೇ ಆಟವನ್ನಾಡಿದೆ. ಅನಾದಿ ವೃಷಭನೇ ಅಲ್ಲಿ ಬಸವ ರೂಪದಿಂದ ಅವತರಿಸಿದ್ದಾನೆ. ಅಲ್ಲಿಗೆ ಹೋಗಿ ಸಲ್ಲಲಿತ ಶರಣಮಾರ್ಗದಲ್ಲಿ ನಡೆ. ನನ್ನಿಂದೇನಾದರೂ ಬೇಡುವುದಿದ್ದರೆ ಬೇಡು' ಎಂದು ಸಮಾಧಾನಕಾರಕವಾದ ಮಾತನ್ನಾಡಿದನು. ಇದಕ್ಕೆ ಮಾದರಸನ ಉತ್ತರ ಅವನ ಎತ್ತರವನ್ನು ತೋರಿಸುತ್ತದೆ:

"ಅಯ್ಯಾ, ನಿಮ್ಮಲ್ಲಿ ಆಯುವ ಬೇಡುವೆನೆ? ಸಂಸಾರಕ್ಕಾನಂಜುವೆ !
ಅಯ್ಯಾ, ನಿಮ್ಮಲ್ಲಿ ಸ್ತ್ರೀಯ ಬೇಡುವೆನೆ ? ಪರಾಂಗನೆಯ ಪಾಪ !
ಅಯ್ಯಾ, ನಿಮ್ಮಲ್ಲಿ ಮುಕ್ತಿಯ ಬೇಡುವೆನೆ ? ಅದು ನಿಮ್ಮ ಪದವಿ !
ಸಕಳೇಶ್ವರದೇವಾ, ನಾನೇನನೊಲ್ಲೆ ; ನಿಮ್ಮ ಶರಣರ ಸಂಗವಿದ್ದೊಡೆ ಸಾಕು !"

ಕಲ್ಯಾಣದಲ್ಲಿ ಶರಣರ ಸಂಗ ಸಿಕ್ಕಿತು ಸಕಲೇಶ ಮಾದರಸನಿಗೆ. "ಮೂರು ತರದ ಮುಕ್ತಿಯೆಂತಪ್ಪ ವರವ ಕೊಟ್ಟಡೆಯೊಲ್ಲೆನು. ಜಂಗಮಲಿಂಗಕ್ಕೆ ಅರ್ಥ ಪ್ರಾಣಾಭಿಮಾನವ ಕೊಟ್ಟು ಅಹಂಕಾರವಿಲ್ಲದಿಹ ಪುರಾತನರ ಮನೆಯ ಬಚ್ಚಲ ಬಾಲಹುಳುವಾಗಿ ಹುಟ್ಟಿಸಿಯ್ಯ ಸಕಳೇಶ್ವರದೇವಾ, ನಿಮ್ಮ ಧರ್ಮ, ನಿಮ್ಮ ಧರ್ಮ' ಎಂದು ಹಾರೈಸಿದ್ದ ಆತನಿಗೆ ಬಸವಾದಿ ಪುರಾತನರ ಸಂಗ ಸೌಭಾಗ್ಯ ಸಿಕ್ಕಿ ಧನ್ಯನಾದನು. ಮತ್ತೆ ಮೂವತ್ತೆರಡು ವೀಣೆಗಳ ತಂತಿಗಳೂ ಶ್ರುತಿಗೊಂಡುವು. ಮತ್ತೆ ಅವುಗಳಿಂದ ಮಧುರ ನಾದರಂಗಗಳು ಹೊರಟು ನಾದಪ್ರಿಯ ಶಿವನನ್ನು ಮೆಚ್ಚಿಸತೊಡಗಿದುವು. ಅವುಗಳಲ್ಲಿ ಆಗಾಗ ಆತನ ವಚನಗಳ ಉಸಿರೂ ಸೇರಿ ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು ಸೇರಿದಂತಾಗುತ್ತಿತ್ತು.

ಮಲ್ಲರಸನ ಶಿಷ್ಯ ಮಾದರಸನಾದರೆ ಮಾದರಸನ ಶಿಷ್ಯ ಮಾತಯ್ಯ–ಚಿಕ್ಕ ಮಾದಯ್ಯ–ಹೂಗಾರ ಮಾದಯ್ಯ. ಹೆಂಡತಿ ಮಾದೇವಿ, ಮಗ ಲಿಂಗಣ್ಣ. ಮಾದಯ್ಯ ಕಾಯಕ, ಮಾದೇವಿ ಪ್ರೀತಿ, ಲಿಂಗಣ್ಣ ಜ್ಯೋತಿಯಾಗಿದ್ದರಾಮನೆಗೆ. ಬೆಳಗಾಗುತ್ತಲೇ ವನಕ್ಕೆ ಹೋಗಿ ಹೂಪತ್ರಿ ತಂದು ಶರಣರ ಶಿವಪೂಜೆಗೆ ಒದಗಿಸುವುದೇ ಅವನ ಸತ್ಯಶುದ್ಧಕಾಯಕ.

ಹಿಗ್ಗದಲೆ ಹಣ ಬರಲು ಕುಗ್ಗದಲೆ ಬರದಿರಲು
ಎಗ್ಗಿಲದೆ ಮಾಡಿ ಕಾಯಕವ–ಮಾದಯ್ಯ

ಬುಗ್ಗೆ ಪುಟಿದಂತೆ ದಾಸೋಹ.

ಒಮ್ಮೆ ಚಳಿಗಾಲದಲ್ಲಿ ಎಂದಿನಂತೆ ರವಿ ಮೂಡುವ ಮುನ್ನ ಮಾದಯ್ಯ ಬನದಲ್ಲಿ ಹೂಪತ್ರಿಗಳನ್ನು ಎತ್ತುತ್ತಿರುತ್ತಾನೆ.

'ಬಸವ ಭಕ್ತನಿಗಾಗಿ ಎಸಳೆಂಟು ಒಡೆದಿರುವೆ
ಹಸನಾದ ಹೂವು ಮಲ್ಲಿಗೆಯು–ನಾನಿರುವೆ
ನೊಸಲಗಣ್ಣಿಗೆ ಮೀಸಲವು
ಬಾರೊ ಬಾ ಮಾದಯ್ಯ ಬೇರೊಂದ ಬಗೆಯದಲೆ
ಹಾರುಗುಂಗಿಗಳು ಮುಟ್ಟಿಲ್ಲ–ಹೊನ್ನವರಿ
ಭೂರಿ ಕೊಯ್ದೆತ್ತು ಶರಣರಿಗೆ
ಕರಿಕಿ ದವನದ ಕೊನರು ನೆರೆತು ಮೈ ಮರೆತಾಡಿ
ಕರೆಯುವವೊ ಬೀಸಿ ಚಳಿಗಾಳಿ–ಮಾದನಿಗೆ
ಸಿರಪೇಚು ನಾವು ಲಿಂಗನಿಗೆ'

ಎಂದು ಅದೇ ಅರಳಿದ ಹೂಗಳು ನಾಮುಂದೆ ನೀಮುಂದೆಯೆಂದು ಮಾದಯ್ಯನನ್ನು ಕರೆಯುತ್ತಿವೆ. ಅವನೂ ಅವುಗಳ ಅಭಿಲಾಷೆಯನ್ನು ಈಡೇರಿಸಲು ಅತ್ತಿಂದ ಇತ್ತ, ಇತ್ತಿಂದ ಅತ್ತ ಸುತ್ತುತ್ತ ಹೂಗಳನ್ನೆತ್ತುತ್ತಲಿದ್ದಾನೆ. ಶಿವನು ಅವನನ್ನು ಪರೀಕ್ಷಿಸಲು ಬರುತ್ತಾನೆ.

"ಚಳಿಗೆ ಬನವೇ ನಡುಗಿ ಬಳಲುತಿದೆ ಮಾದಯ್ಯ
ಚಳಿಗಂಜಿ ಹೊಳಲ ಕಿಚ್ಚಿಟ್ಟು–ಜನಕಾಸಿ
ಸುಳಿಹೊಗೆಯ ಮಂಜು ನೋಡಲ್ಲಿ"
"ಶರಣರೆಲ್ಲರು ಕೂಡಿ ಕರುಣೆಯಿಲ್ಲದೆ ನಿನ್ನ
ತರಲು ಹೂಪತ್ರಿ ಕಳಿಸಿಹರು–ನಿನ್ನೋಡಿ
ಮರುಗುವೆನು ಎನ್ನ ಎದೆ ಕರಗಿ"

ಎಂದು ಕಪಟನಾಟಕವನ್ನು ರಚಿಸುತ್ತಾನೆ.

'ನಡೆ ನಾವು ಹೋಗೋಣ ಜಡಮತಿಗಳನು ಬಿಟ್ಟು
ಮೃಡಲ ಕೈಲಾಸ ಭುವನಕೆನೆ–ಮಾದಯ್ಯ
ಸುಡಲಿ ಬೇಡೆನಗೆ ಕೈಲಾಸ"

ವೆಂದು ಸ್ಪಷ್ಟವಾಗಿ ಹೇಳಿಬಿಡುತ್ತಾನೆ. ಯಾಕೆ?

'ಕಾಯಕವೆ ಕೈಲಾಸ ಮಾಯೆಕೊಲ್ಲುವ ಕೆಲಸ
ಆಯು ಬೆಳೆಸುದಕ್ಕೆ ಸಾನುಸವು–ಜಗದೊಳಗೆ
ಹೇಯ ಸಂಸಾರ ನೀಗುದಕೆ'

ಎಂಬುದು ಅವನ ನಂಬಿಕೆ. ಶಿವನು ಅಷ್ಟಕ್ಕೇ ಬಿಡಲಿಲ್ಲ. ಗಣಪದವಿಯ ಆಶೆಯನ್ನು ತೋರಿದ. ಮಾದಯ್ಯನು ಉತ್ತರವಿತ್ತ–ಶಿವನು ನಿರುತ್ತರನಾಗುವಂತೆ.

ಶಿವ ನೀನು ಹರಸಿದರೆ ಭವದೊಳಗೆ ಹೆಚ್ಚಿನದೆ
ಶಿವಪದಕೆ ಮಿಗಿಲು ಕಾಯಕವು–ಜಗದೊಳಗೆ
ಶಿವಮತಕೆ ಮಾಡೊ ದಾಸೋಹ.
ನಿನ್ನ ಸಗ್ಗಕೆ ಹೆಚ್ಚು ನನ್ನ ಕಾಯಕ ಶಿವನೆ
ನನ್ನಿಯಲಿ ಸೇವೆ ಶರಣರಿಗೆ–ಸಲ್ಲಿಸಲು
ಹೊನ್ನ ಬೆಳೆ ನಿಜವು ಜಗದೊಳಗೆ ॥

ಈ ಉತ್ತರವನ್ನು ಕೇಳಿ ಶಿವನ ಅವಸ್ಥೆಯೇನಾಗಿರಬಹುದು?

ಕೇಳಿ ಮಾದನ ವಾದ ತಾಳಿ ಶಿವತಾ ಮೌನ
ಹೇಲಿದಲೆ ನಾಚಿ ಬೈಲಾದ ಜಗದೊಳಗೆ
ಕೋಲು ಮಿಂಚಾಗಿ ಮಳೆಸುರಿಸಿ !

ಕಲ್ಯಾಣದ ತುಂಬ ಮಾದಯ್ಯನ ಮಾತೇ ಮಾತು. ಗಣಪದವಿಯನ್ನು ತೃಣವೆಂದು ತ್ಯಜಿಸಿ ಕಾಯಕದಲ್ಲಿಯೇ ಕೈಲಾಸವನ್ನು ಕಂಡು ಮಾದಯ್ಯನಿಗೆ ಕಲ್ಯಾಣಕ್ಕೆ ಕಲ್ಯಾಣವೇ ಮಣಿಯಿತು.

ಆದರೆ ಅವನ ಅವಸಾನ ದೂರವಿರಲಿಲ್ಲ. ಒಂದು ರಾತ್ರಿ ಅವನ ಪ್ರಾಣಪಕ್ಷಿ ದೇಹಪಂಜರವನ್ನು ತೊರೆದು ಹಾರಿಹೋಯಿತು. ಹದಿಬದೆ ಮಾದೇವಿ ಶಿವನಾಜ್ಞೆ ಅನುಲ್ಲಂಘನೀಯವೆಂದರಿದು, ಪಾದೋದಕದಿಂದ ಪತಿಯ ಕಳೇಬರವನ್ನು ತೊಳೆದು, ಭಸ್ಮಹೂಸಿ ಕುಳ್ಳಿಸಿರಿ, ತಾನೇ ಕ್ರಿಯಾಸಮಾಧಿನನ್ನಗೆಯತೊಡಗಿದಳು. ಮಲಗಿದ ಮಗ ಲಿಂಗಣ್ಣನಾಶಾಬ್ದಕ್ಕೆ ಎದ್ದು 'ಅಪರಾತ್ರಿಯಲೇನು ತೋಡುತ್ತಿರುವಿ ಅವ್ವ'ಎಂದು ಕೇಳಿದ. 'ನಿನ್ನ ತಂದೆಗೆ ನಾಳೆ ಪೂಜೆಗೆ ಮೀಸಲು ನೀರುಬೇಕಂತೆ. ಆದ್ದರಿಂದ ಇಲ್ಲಿ ಒರತೆ ತೋಡುತ್ತಲಿದ್ದೇನೆ' ಎಂದಳಾ ತಾಯಿ. ಲಿಂಗಣ್ಣನಿಗೆ ಒಂದೂ ಅರ್ಥವಾಗಲೊಲ್ಲದು. ಎದುರಿಗೆ ಮೋರೆ ಬಿಗಿದುಕೊಂಡು ಮೌನವಾಗಿ ಕುಳಿತ ತಂದೆ, ಗುದ್ದಲಿ ಹಿಡಿದು ನೆಲ ತೋಡುತ್ತಿರುವ ತಾಯಿ, ಮಧ್ಯರಾತ್ರಿಯ ನಿಶ್ಶಬ್ದತೆ. ಮರಣವೇನೆಂಬುದನ್ನರಿಯದ ಆ ತರಳ ತನ್ನ ತಂದೆಯು ತಾಯಿಯ ಮೇಲೆ

ಸಿಟ್ಟಾಗಿ ಕುಳಿತಿರುವನೆಂದೂ ತಾಯಿ ಆತನನ್ನು ಸಮಾಧಾನ ಪಡಿಸಲು ಇಂಥ ಅಪರಾತ್ರಿಯಲ್ಲಿ ನೆಲ ಅಗೆಯುತ್ತಿರುವಳೆಂದೂ ತರ್ಕಿಸಿದ. 'ನಿಜ ಹೇಳಮ್ಮ, ನನ್ನನನ್ನು ನೋಡಿಯೂ ಸುಮ್ಮನೇಕೆ ಕುಳಿತಿದ್ದಾನೆ. ಇಂದೆಂಥ ಸಿಟ್ಟು ಬಂದಿದೆ ಅಪ್ಪನಿಗೆ?' ಎಂದು ಮತ್ತೆ ಮತ್ತೆ ಕೇಳಿದ. ತಾಯಯು ಮತ್ತೆ ಮತ್ತೆ ಅದೇ ಉತ್ತರವನ್ನಿತ್ತಳು. ತಡೆಯದಾಗಲು ತಂದೆಯ ಅಡಿಯಲ್ಲಿ ಕೆಡೆದು,

'ತಂದೆ, ತಪ್ಪನ್ನು ಮರೆತು ಇಂದು ತಾಯಿಯ ಕ್ಷಮಿಸು' ಎಂದು ಅಂಗಲಾಚಿದ ಲಿಂಗಣ್ಣ. ಮಾದೇವಿಯವನನ್ನು ಮೇಲೆತ್ತಿ,

'ಎಲೆಮಗುವೆ ನೀನರಿಯೆ ಮಲಗು ಸುಮ್ಮನೆ ಹೋಗು
ತೊಲಗದಾ ಸಿಟ್ಟು ಶರಣರದು–ನನ್ಮೇಲೆ
ಇಳಿಸಲೀ ಒರತೆ ತೋಡುವೆನು'

ಎಂದು ಹೇಳಿ ಮಗುವನ್ನು ಮತ್ತೆ ಮಲಗಿಸಿದಳು. ಆದರೆ ಅವನ ಕಸಿವಿಸಿ ಕಡಿಮೆಯಾಗಲಿಲ್ಲ. ಅಗೆಯುತ್ತ ಅಗೆಯುತ್ತ ತಾಯಿ ಕುಣಿಯಲ್ಲಿ ಕಾಣದಾಗಲು ಓಡಿ ಹೋಗಿ ಸಕಲೇಶಮಾದರಸರನ್ನೆಬ್ಬಿಸಿದನು. ಬಿಕ್ಕುತ್ತ ಹೇಳಿದನು–

"ಸಕಲ ಮತಕುಲ ಗುರುವೆ ಸಕಲೇಶಮಾದರಸು
ನಕಲಿ ಮಾತಲ್ಲ ಅಯ್ಯಯ್ಯೊ–ತಂದೆಯೇ
ಆಕಟ ನನ್ನಪ್ಪ ಮುನಿದಿರುವ
ಬಿರ್ರೆಂದು ಬಿಕ್ಕೊಂಡು ಗುರ್ರೆಂದು ಅವ್ವನಿಗೆ
ಕಿರ್ರೆಂದು ನಾನು ಕೂಗಿದರು–ಸುಮ್ಮಿರುವ
ಜರ್ರೆಂದು ಜರೆದು ಮುಸುಕಿನೊಳು"

ನೀವೇ ಬಂದು ಆತನ ಸಿಟ್ಟು ಇಳಿಸಿರಿ.

ಸಕಲೇಶಮಾದರಸನು ಧಾವಿಸಿ ಬರುತ್ತಾನೆ. ಮಾದೇವಿ ಕಂಬನಿದುಂಬಿ ಕಾಲಿಗೆರಗುತ್ತಾಳೆ. ನಡೆದುದೇನೆಂಬುದು ವಿದತವಾಗುತ್ತದೆ ಮಾದರಸನಿಗೆ–

'ಏಳೇಳು ಮಾದಯ್ಯ ಏಳು ಲಿಂಗಾರ್ಚನೆಗೆ
ಕೋಳಿ ಕೂಗುದಕೆ ಜಾವಿಲ್ಲ–ಕಾಯಕತೆ
ಏಳು ಕಲ್ಯಾಣಶರಣರಿಗೆ'

ಎಂದು ಕರೆಯುತ್ತಾನೆ.

'ಹೋಗಿ ತರುವರು ಯಾಗು ಮಾಗಿಯೊಳು ಹೂ ಪತ್ರಿ

ಚಾಗಿ ಮಾದಯ್ಯ ಹೋಗೇಳು–ಶಿವಪೂಜೆ
ಸಾಗುವುದು ಹೇಗೆ ಶರಣರದು?'

ಎಂದು ಎಚ್ಚರಿಸುತ್ತಾನೆ. 'ನ್ಯಾಯವೇ ಮರೆಯುವದು ಕಾಯಕವ ಶರಣರಿಗೆ?' ಎಂದು ಪ್ರಶ್ನಿಸುತ್ತಾನೆ. 'ಕಾಯಕ' ಎಂಬ ಶಬ್ದದಲ್ಲಿ ಅದೆಂಥ ಶಕ್ತಿಯಿದ್ದಿತೋ ಆ ಕಾಲದಲ್ಲಿ ! ಮೃತನಾದ ಮಾದಯ್ಯ ಮಲಗಿ ಏಳುವವನಂತೆ ಎದ್ದು ಕೂಡುತ್ತಾನೆ.

'ಏಳೇಳು ಕಾಯಕಕೆ' ಕೇಳಿ ಮಾದನ ಜೀವ
ಗಾಳಿಯೊಳು ಬಂಧು ಕಳೆತುಂಬಿ–ಹುಸಿದೇಹ
ತಾಳಿ ಹೊಸಬೆಳಕ ಕಣ್ದೆರೆದು !

ಇತ್ತ ಮಾದಯ್ಯ ಮೇಲೇಳುತ್ತಾನೆ. ಅತ್ತ ಮಲಗಿದ್ದ ಜಗವೂ ಮೇಲೇಳುತ್ತದೆ. ಮಾದರಸ–ಮಾದಯ್ಯನ ಮಹಿಮೆ ಬೆಳಗಿನ ಸುಳಿಗಾಳಿಯಲ್ಲಿ ಸೇರಿ ಎಲ್ಲರಿಗೂ ತಂಪನ್ನೂ ಕಂಪನ್ನೂ ಬೀರುತ್ತದೆ.

ಹದಿಬದೆಯು ತೋಡಿರುವ ಎದೆಯುದ್ದ ಶಿವಗುಣಿಯು
ಪೊದಳಿದಾ ಒರತೆ ಕಲ್ಯಾಣ ಪುರುದೊಳಗೆ
ಕದಳಿಬನವೆಂದು ಹೆಸರಾಯ್ತು !
ಇದಾದ ಮೇಲೆ ಮಾದಯ್ಯ–ಮಾದೇವಿ–ಲಿಂಗಣ್ಣರು
'ಶಿವಭಕ್ತಿ ಶಿವಭಜನೆ ಶಿವಕೂಟ ಶಿವಗೋಷ್ಠಿ
ಶಿವಸೇವೆ ಲಿಂಗ ಮಾದೇವಿ ಮಾದಯ್ಯ
ಶಿವನೆಂದು ಮಾಡಿ ಶಿವಮತಕೆ'

ಶಿವನಡಿಗಳನ್ನು ಸೇರುತ್ತಾರೆ. ಸಕಲೇಶಮಾದರಸನು ಕಲ್ಯಾಣದಿಂದ ಹೊರಟು ಗೋಪೆಯ ಶಿವದೇವನೆಂಬ ವೀರವ್ರತಿಯ ಪುರಕ್ಕೆ ಬರುತ್ತಾನೆ. ಶಿವದೇವನಿಗೆ ಬಸವಾದಿ ಪ್ರಮಥರು ಐಕ್ಯರಾದುದನ್ನು ಅರುಹುತ್ತಾನೆ. ಶಿವದೇವ ಪ್ರಾಣಲಿಂಗದಲ್ಲಿ ಅಡಗಿಬಿಡುತ್ತಾನೆ. ಮಾದರಸನು ಮುಂದೆ ನಡೆದು ಮಹಾಲಿಂಗರಾಮನವೀರನೆಂಬ ಪರಮ ಶಿವಭಕ್ತನಿಗೆ ದರುಶನವನ್ನೀಯುತ್ತಾನೆ. ಅವನ ಕೋರಿಕೆಯಂತೆ ಅವನ ಮಸ್ತಕದ ಮೇಲೆ ಹಸ್ತವನ್ನಿಡಲು ಅವನು ಲಿಂಗೈಕ್ಯನಾಗುತ್ತಾನೆ. ಮುಂದೆ ಮಾದರಸನು ಶ್ರೀಶೈಲಕ್ಕೆ ಹೋಗಿ ಮಲ್ಲರಸನನ್ನು ಕಾಣುತ್ತಾನೆ. ಮಲ್ಲರಸ ಮಾದರಸರು ನದಿಯ ನದಿ ಬೆರೆಸಿದಂತೆ ಬೆರೆಯುತ್ತಾರೆ. ಶ್ರೀಗಿರಿಯಲ್ಲಿ ಬಯಲಾಗುತ್ತಾರೆ.

ಸಕಲೇಶಮಾದರಸರ ಸಾಧನೆಯ ಸಾರ ಈ ವಚನಗಳು :

"ಸಂಸಾರವ ಬಿಟ್ಟುದೆ ಆಚಾರವಯ್ಯ ;

ಕಾಯದಿಚ್ಛೆಗೆ ಕಂಡವರಿಗೆ ಕಾರ್ಪಣ್ಯಬಡದಿಪ್ಪುದೆ ಶೀಲ ;
ಲಿಂಗದಾಣತಿಯಿಂದ ಬಂದುದ ಕೈಕೊಂಬುದೆ ವ್ರತ ;
ಮನ ಘನವನಗಲದಿಪ್ಪುದೆ ಭಕ್ತಿ ;
ಸಕಳೇಶ್ವರದೇವಾ, ನಿಮ್ಮನರಿದವನೆ ಶರಣ ."
"ಆಶೆಯಿಂದ ಬಿಟ್ಟು ಕಿರಿಯರಿಲ್ಲ ;
ನಿರಾಶೆಯಿಂದ ಬಿಟ್ಟು ಹಿರಿಯರಿಲ್ಲ ;
ದಯೆಯಿಂದ ಬಿಟ್ಟು ಧರ್ಮವಿಲ್ಲ ;
ವಿಚಾರದಿಂದ ಬಿಟ್ಟು ಸಹಾಯಿಗಳಿಲ್ಲ ;
ಸಚರಾಚರಕ್ಕೆ ಸಕಳೇಶ್ವರದೇವರಿಂದ ಬಿಟ್ಟು ದೈವವಿಲ್ಲ"–

■

# ಹುತಾತ್ಮರಾದ ಹರಳಯ್ಯ ಮಧುವರಸರು

ಶರಣಸಮಾಜದ ನಕ್ಷತ್ರಲೋಕದಲ್ಲಿ ತತ್ತ್ವಕ್ಕಾಗಿ ಜೀವತೆತ್ತ ಧೀರತೆಯ ಧ್ರುವತಾರೆಗಳಾಗಿ ಬೆಳಗುತ್ತಲಿರುವವರು ಹರಳಯ್ಯ ಮಧುವರಸರು. ಭಾರತ ದೇಶಕ್ಕೆ, ಹಿಂದೂ ಸಮಾಜಕ್ಕೆ ಕ್ಷಯರೋಗವಾಗಿ ಅಂಟಿಕೊಂಡು ಬಂದಿದ್ದ, ಈಗಲೂ ಅಲ್ಲಲ್ಲಿ ಅಂಟಿಕೊಂಡಿರುವ, ಅಸ್ಪೃಶ್ಯತೆಯ ನಿವಾರಣೆಗಾಗಿ ಆಹುತಿಯಾದ ಹುತಾತ್ಮರವರು. ದೇಶಕ್ಕಾಗಿ, ಧರ್ಮಕ್ಕಾಗಿ, ಹೆಣ್ಣಿನ ಮಾನರಕ್ಷಣೆಗಾಗಿ, ಸ್ವಾಮಿನಿಷ್ಠೆಗಾಗಿ ಹುತಾತ್ಮರಾದವರ ಉದಾಹರಣೆಗಳು ವಿರಳವಲ್ಲ ವಿಶ್ವದ ಇತಿಹಾಸದಲ್ಲಿ. ಆದರೆ ಹರಳಯ್ಯ ಮಧುವರಸರ ಬಲಿದಾನವೇ ಬೇರೆ ರೀತಿಯದು. ಇಂದಿಗೂ ಜಗತ್ತಿನ ನಾನಾಭಾಗಗಳಲ್ಲಿ ವರ್ಣಭೇದ, ವಂಶಭೇದ, ಜಾತಿಭೇದ ಮುಂತಾದ ಅನೇಕ ರೂಪಗಳಲ್ಲಿ ಬೇರು ಬಿಟ್ಟಿರುವ ಮಾನವ ಮಾನವರಲ್ಲಿಯ ಮೇಲು ಕೀಳಿಗೆ, ತಾರತಮ್ಯಭಾವಕ್ಕೆ, ಭೇದಬುದ್ಧಿಗೆ, ಅಸಹನೆಗೆ, ವಿಷಮತೆಗೆ ಕೊಡಲಿಯೇಟಾಗಲು ಬಯಸಿ ತಮ್ಮ ಆತ್ಮ ಒಪ್ಪಿದ ಅಮೃತತ್ತ್ವಕ್ಕೆ ತಾವೇ ಆಹುತಿಯಾದ ಅನುಪಮ ಹುತಾತ್ಮರಿವರು.

ಕಲ್ಯಾಣದ ಕೇರಿಯೊಂದರಲ್ಲಿ ಕುಟೀರವೊಂದು ಕಂಗೊಳಿಸುತ್ತಿತ್ತು. ಅಲ್ಲಿಂದ "ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ಕಂಬವ ನೆಟ್ಟು, ಆಗು ಹೋಗೆಂಬ ದಡಿಗೋಲಿನಲ್ಲಿ ಅಗಡದ ಎಮ್ಮೆಯ ಧರ್ಮವ ತೆಗೆದು, ಉಭಯನಾಮವೆಂಬ ನಾರಿನಲ್ಲಿ ತಿತ್ತಿಯನೊಪ್ಪವ ಮಾಡಿ, ಭಾವವೆಂಬ ತಿರುಗುಡಿನಲ್ಲಿ ಸರ್ವಸಾರವೆಂಬ ಕಾರದ ನೀರ ಹೊಯ್ದು, ಅಟ್ಟೆಯ ದುರ್ಗುಣವ ಕೆಟ್ಟು ಮೆಟ್ಟುವರೆ ಅವರಿಗೆ ಮೆಟ್ಟಿಸ ಬಂದೆ ಮೆಟ್ಟಡಿಯ ಚಪ್ಪಲ" ಎಂಬ ಸ್ವರ ತೇಲಿ ಬರುತ್ತಿತ್ತು. ಅದು ಶಿವಶರಣ ಹರಳಯ್ಯನ ಕುಟೀರ. ಹೆಂಡತಿಯ ಹೆಸರು ಕಲ್ಯಾಣಿ, ಮಗನ ಹೆಸರು ಶೀಲವಂತಯ್ಯ.

ಎಲ್ಲರಿಗೆ ಕಾಯಕವುಳ್ಳ ಕಟ್ಟಿನ ನೇಮ
ಹಳ್ಳಯ್ಯಗಳಿಗೆ ವ್ರತ ಬಂದು–ಶರಣರ
ಮೆಲ್ಲಡಿಗಳಿಗೆ ಚರಣವ
ಚರಣವ ಗೈವುತ ಶರಣಾಳಿಗೀವುತ

ಕರುಣದಿಂದವರು ಕುಡುವುದನು ಕೈಕೊಂಡು
ಹರನ ಜಂಗಮಕೆ ಉಣಿಸುವ ।[೧]

ಹುಟ್ಟಿನಿಂದ ಹೊಲೆಯನಾದರೂ ಶಿವಕಲೆಯ ನೆಲೆಯನ್ನರಿತು ಶರಣನಾಗಿದ್ದ ಹರಳಯ್ಯ.

ಕುಲದಲ್ಲಿ ಹೊಲೆಯನವ ಹೊಲಬಿನಲ್ಲಿ ಹೊಲೆಯಲ್ಲ
ಹೊಲೆಯ ನೆಲೆಬಲ್ಲ ಘನಶರಣ–ಹರಳಯ್ಯ
ನೆಲೆಸಿ ಕಲ್ಯಾಣಪುರದೊಳಗೆ ॥
ತನುಮನಧನ ಸವೆಸಿ ಮನೆಯ ಕಾಯಕ ಮಾಡಿ
ಅನುಭಾವಿಯಾದ ಹರಳಯ್ಯ–ಮಂಟಪಕೆ
ಮಣಿಮಾಲೆಯಾದ ಶಿವಮತಕೆ ॥[೨]

ಹೊಲೆಯನಾಗಿ ಹುಟ್ಟಿ ಶಿವಮತದ ಮಣಿಮಾಲೆಯಾಗುವುದು ಸಾಮಾನ್ಯ ಸಾಧನೆಯೆ? ಸಾಮಾನ್ಯರನ್ನು ಅಸಾಮಾನ್ಯರನ್ನಾಗಿ ಮಾಡಿದುದೇ ಶರಣ ಧರ್ಮದ ಶ್ರೇಷ್ಠತೆ. ಹರಳಯ್ಯನಿದಕ್ಕೆ ಹೆಮ್ಮೆಯ ನಿದರ್ಶನ.

ಒಮ್ಮೆ ಕಲ್ಯಾಣದ ಬೀದಿಯಲ್ಲಿ ಬಸವಣ್ಣನವರು ಹೊರಟ್ಟಿದ್ದರು. ಇಕ್ಕೆಲದ ಭಕ್ತಸಮೂಹ ಶರಣೆನ್ನಲು ತಾವೂ ಶರಣೆನ್ನುತ್ತ ಹೊರಟ್ಟಿದ್ದರು. ನೋಡುವ ಕಣ್ಣುಳಿಗೆ ಹಬ್ಬದಂತಿತ್ತು ಆ ನೋಟ. ಹರಳಯ್ಯನು 'ಶರಣು ಬಸವಯ್ಯ' ಎಂದು ತನ್ನ ಭಕ್ತಿಯ ಕಾಣಿಕೆಯನ್ನು ಅರ್ಪಿಸಿದ.

ಪೊಪ್ವಾಡ ಪುರುಷನೆ ಪರವಾದಿದಲ್ಲಣನೆ
ಪಾವನ ಮೂರ್ತಿ ಪುರುಷವೆ ಬಸವಣ್ಣ
ದೇವ ನಿಮ್ಮಡಿಗೆ ಶರಣಾರ್ಥಿ ॥
ಶರಣೆಂದು ಹರಳನಿಗೆ ಮರಳಿ ಬಸವೇಶ್ವರನು
ಶರಣು ಶರಣಾರ್ಥಿ ಎನುತಲಿ ತಾ ತನ್ನ
ಅರಮನೆಗಾಗಿ ನಡೆದನು ॥[೩]

ಹರಳಯ್ಯನ ಕರುಳು ಕಿವುಚಿದಂತಾಯಿತು, "ಇದೆಂಥ ಪ್ರಮಾದವಾಯಿತು. ನಾನು ಒಮ್ಮೆ ಶರಣೆಂದರೆ ಅಣ್ಣನವರು ಎರಡುಸಲ ಶರಣೆಂದು ಹೋದರಲ್ಲ.

---

೧ ಹರಳಯ್ಯನ ತ್ರಿಪದಿ.
೨ ಹಂತಿಯ ಪದ
೩ ಹರಳಯ್ಯನ ತ್ರಿಪದಿ.

ಅವರು ಎರಡು ಸಲ ಶರಣೆಂದಾಗ ನಾನು ಕಲ್ಲಿನ ಕಂಬದಂತೆ ನಿಂತುಬಿಟ್ಟೆನಲ್ಲ. ಅವರ ಅಡಿಗಳ ಹುಡಿಯಲ್ಲಿ ಹೊರಳಿ ಮಾಡಿಯಾಗಬಾರದಿತ್ತೆ !

"ಶರಣೆಂದು ನಾನೆಂದೆ ಶರಣು ಶರಣೆಂದಾತ
ಶರಣೊಂದ ಮೇಲೆ ಹೊರಿಸಿದನು–ಬಸವನಿಗೆ
ಶರಣ ನಾ ಹೇಗೆ ತೀರಿಸಲಿ?

ಎಂದು ಹಳಹಳಿಸತೊಡಗಿದ, ತಳಮಳಿಸತೊಡಗಿದ ಹರಳಯ್ಯ.

ಕಲ್ಯಾಣಗುಣಗಳೇ ಹೆಣ್ಣಾಗಿ ಹುಟ್ಟಿದಂತಿದ್ದ ಕಲ್ಯಾಣಿ ಹೇಳಿದಳು ; " ಸುಮ್ಮನೆ ಸುಯ್ಯುವಿರೇಕೆ? ಅಣ್ಣನವರಿಗೊಂದು ಜೋಡು ಪಾದರಕ್ಷೆ ಮಾಡೋಣ. ಅವುಗಳನ್ನು ಅವರ ಶ್ರೀ ಚರಣಗಳಿಗೆ ಅರ್ಪಿಸಿ, 'ಕ್ಷಮಿಸಿ'ರೆಂದು ಕೇಳಿಕೊಳ್ಳೋಣ. ಕರುಣಾನಿಧಿಗಳಾದ ಅವರು ಕ್ಷಮಿಸದಿರರು."

ಹೆಂಡತಿಯ ಸಲಹೆ ಹರಳಯ್ಯನಿಗೆ ಒಪ್ಪಿತವಾಯಿತು. ಅವರಿಬ್ಬರೂ ಇನ್ನೊಂದು ವಿಚಾರಮಾಡಿದರು. ಎಲ್ಲರಿಗೂ ಸಲ್ಲಿಸುವ ಪಾದರಕ್ಷೆಗಳನ್ನು ಅಣ್ಣನವರಿಗೂ ಅರ್ಪಿಸಿದರೆ ಹೇಗೆ? ಅವರಿಗಾಗಿ ಸಿದ್ಧಗೊಳಿಸುವ ಪಾದರಕ್ಷೆಗಳಲ್ಲಿ ಏನಾದರೂ ವಿಶೇಷತೆ ಇರಲೇಬೇಕು. ತಮ್ಮಿಬ್ಬರ ತೊಡೆಯ ಚರ್ಮದ ಮೇಲು ಹೊದಿಕೆ ಆ ಚೆಮ್ಮಾವುಗೆಗಳಿಗಿರಬೇಕು!

ಮರುದಿನವೆ ಹರಳಯ್ಯ ಕೊರೆದ ಬಲದೊಡಿ ಧರ್ಮ
ಹರನೆಂದು ಮಡದಿಯೆಡದೊಡೆಯ–ತಾ ಕೊಯ್ದು
ಭರದಿ ಹದಮಾಡಿ ಒಣಗಿಸಿದ ॥[೧]

ಆಮೇಲೆ ತನ್ನ ಕಾಯಕದ ಕೌಶಲ್ಯವನ್ನೆಲ್ಲ ಬಳಸಿ ಬೆಳಗುವ ಚೆಮ್ಮಾವುಗೆಗಳನ್ನು ಮಾಡಿದ.

ಒಪ್ಪವನಿಕ್ಕಿದ ಎಪ್ಪತ್ತುಗೊಂಡೆಯ
ಸರ್ಪನ ಹೆಡೆಗೈಯುತಲಿ ಚಿಮ್ಮಾವುಗೆಯ
ಸುಪ್ಪಾಣಿಯಿಂದ ನಯವಿಟ್ಟು ॥

---

೧ ಹಂತಿಯಪದ (ಮನುಷ್ಯರ ಧರ್ಮ ೨೪ ತಾಸುಗಳಲ್ಲಿ ಕೊಳೆತುಹೋಗುತ್ತದೆ. ಅದರಿಂದ ಮೆಟ್ಟುಗಳನ್ನು ಮಾಡಿದರೆಂಬುದು ಕಟ್ಟು ಕಥೆಯೆಂದು ಒಮ್ಮೆ ಒಬ್ಬ ಸಂಶಯಾತ್ಮರು ಲೇಖಕನಿಗೆ ಹೇಳಿದ್ದರು. ಈಜಿಪ್ಟಿನ ಪಿರಮಿಡ್ಡುಗಳಲ್ಲಿ ಸಾವಿರಾರು ವರ್ಷಗಳ ಶವಗಳಿವೆ. ಹದಮಾಡಿ ಇರಸಬಹುದು)

ಮರುದಿನ ಸ್ನಾನಮಾಡಿ ನೊಸಲಿನಲ್ಲಿ ಭಸಿತವನ್ನಿಟ್ಟು ಕಂಠಕರಗಳಲ್ಲಿ ರುದ್ರಾಕ್ಷಿ ಶೋಭಿಸುತ್ತಿರಲು,'ಸದ್ಭಕ್ತಿ ಸೀಮೆ ಪರಂಜ್ಯೋತಿ ಹರಳಯ್ಯ ' ಆ ಪಾದರಕ್ಷೆಗಳನ್ನು ಶುಭ್ರವಸ್ತ್ರದಲ್ಲಿ ಸುತ್ತಿಟ್ಟುಕೊಂಡು ಧರ್ಮಸ್ವರೂಪ ಬಸವಣ್ಣನವರ ಅರಮನೆಗೆ ಹೋದನು. ಅಲ್ಲಿ ಅರಮನೆಯ ಅಂಗಳದಲ್ಲಿ ನಿಂತು ನಾಲ್ದೆಸೆಗೆ ನೋಟವನ್ನು ಹರಿಸಿ ನೋಡಿದ :

ಕಿಕ್ಕಿರಿದು ಜನ ಬಂದು ಸಕ್ಕರೆಗೆ ಇರಿವೆಗಳು
ಮುಕ್ಕರಿದವೊ ವಚನ ಅಮೃತಕೆ ಎಂಬಂತೆ
ಉಕ್ಕಿ ಅರಮನೆಯ ಹೊರಸೂಸಿ ॥

'ಈ ಜನಸಂದಣಿಯನ್ನು ದಾಟಿ ಹೋಗಿ ಅಣ್ಣನವರನ್ನು ಕಾಣುವುದೆಂತು'– ಎಂದು ಹರಳಯ್ಯ ದಿಙ್ಮೂಢನಾಗಿ ನಿಂತುಬಿಟ್ಟ. ಕಣ್ಣರಿಯದಿದ್ದರೂ ಕರುಳರಿಯದೆ? ಬಸವಣ್ಣನವರಿಗೆ ಹರಳಯ್ಯ ಬಂದುದು ಹೇಗೋ ಗೊತ್ತಾಯಿತು.

ಶಿವನಾಣೆ ಬಸವನಿಗೆ, ಶಿವಭಕ್ತಪರಿತ್ಯಾಗಿ
ತವಕದಲಿ ಬಂದ ಬಾಗಿಲಕೆ–ಹರಳಯ್ಯ
ಶಿವರೂಪವೆಂದು ನಮಿಸಿದನು ॥

ಇಷ್ಟಕ್ಕೆ ಬಿಡಲಿಲ್ಲ ಬಸವಣ್ಣ. ಸತಿ ನೀಲಾಂಬೆಯಿಂದಲೂ ಶರಣೆನ್ನಿಸಿದರು. ಹರಳಯ್ಯನಿಗೆ ಗಾಯದ ಮೇಲೆ ಬರೆ ಕೊಟ್ಟಂತಾಯಿತು. ಒಂದು ಶರಣಿನ ಹೊರೆಯನ್ನಿಳುಹಿ ಹೋಗಲೆಂದು ಬಂದರೆ ಭಕ್ತಜನ ಭಾಗ್ಯ ಶುಭೋದಯ ಬಸವಣ್ಣನವರು ತನಗೇ ಮತ್ತೆ ನಮಿಸಬೇಕೆ? ಸಾಲದುದಕ್ಕೆ ತಾಯಿ ನೀಲಮ್ಮನವರಿಂದಲೂ ಶರಣೆನ್ನಿಸಬೇಕೆ? ಶಿವಶಿವಾ, ಇನ್ನಷ್ಟು ಅಧೋಗತಿಗೆ ಇಳಿದೆನಲ್ಲ–ಗತಿ ಯಾವುದು–ಎಂದು ಮಿಡುಕುತ್ತಲಿದ್ದ ಮೃಡಶರಣ ಹರಳಯ್ಯನನ್ನು ಸಂತೈಸುತ್ತ ಬಸವಣ್ಣ ಹೇಳಿದ "ಹರಳಯ್ಯ , ಹೊಲೆಯಲ್ಲಿ ಹುಟ್ಟಿದನೆಂಬ ಭಾವನೆಯನ್ನು ಇನ್ನಾದರೂ ಬಿಟ್ಟುಬಿಡು.

ಹೊಲೆಯಲಲ್ಲದೆ ಲೋಕ ತಲೆಯಲ್ಲಿ ಹುಟ್ಟುವುದೆ?
ಹೊಲೆಯ ಎಣಿಸಿದರೆ ಕುಲವುಂಟೆ? ಶರಣರಿಗೆ
ಹೊಲಬುಳಿದು ಬೇರೆ ಕುಲವುಂಟೆ?

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯ. ಜಲಬಿಂದುವಿನ ವ್ಯವಹಾರ ಒಂದೇ. ಕರ್ಣದಲಿ ಜನಿಸಿದವರುಂಟೆ ಜಗದೊಳಗೆ? ಯಾಕೆ ಹಗಲೆಲ್ಲ ಹೊಲೆಯ ನಾನು ಎಂಬು ಭಾವನೆಯಿಂದ ಬಳಲುತ್ತಲಿರುವಿರಿ? ಯಾರು ಹೇಳುವರು ನೀವು

ಹೊಲೆಯರೆಂದು. ಹಾಗೆ ಹೇಳುವವರೇ ಹೊಲೆಯರು. ಕೊಲ್ಲುವನೆ ಮಾದಿಗನು; ಹೊಸು ತಿಂಬುವನೆ ಹೊಲೆಯ. ಶಿವಭಕ್ತರಾಗಿ ಭಾವವನ್ನು ಗೆದ್ದ ನೀವು ಹೊಲೆಯರೆ? ಅಲ್ಲಲ್ಲ ನೀವು ಶರಣರು. ಶರಣರ ಕಾಯವೇ ಕೈಲಾಸ. ಕೈಲಾಸಕ್ಕೆ ನಾನು ನಮಿಸಿದರೆ ತಪ್ಪೆ?"

ಹರಳಯ್ಯನಿಗೆ ಏನುತ್ತರ ಕೊಡಬೇಕೆಂಬುದು ತಿಳಿಯಲಿಲ್ಲ. ಅವನು ಕಲಿತವನಲ್ಲ; ಆದರೆ ಆತ್ಮಶ್ರೀಯನ್ನು ಸಂಪಾದಿಸಿದವ. "ಯತೋ ವಾಚೋ ನಿವರ್ತಂತೇ" ಆ ಸ್ಥಿತಿಯನ್ನು ಪಡೆದವ. ಅಣ್ಣನವರ ಅಮೃತವಾಣಿಗೆ ಉತ್ತರವಾಗಿ ಏನನ್ನು ತಾನೆ ನುಡಿಯಬಲ್ಲ? ನಾಲಗೆ ಮಾಡಲಾಗದುದನ್ನು ಕಣ್ಣು ಮಾಡಿತು. ಆನಂದದ ಅಶ್ರುಗಳನ್ನು ಉಕ್ಕಿಸಿತು. ಅವುಗಳಿಂದ ಅಣ್ಣನವರ ಪಾದ ತೊಳೆಯುತ್ತ ಹರಳಯ್ಯನೆಂದ: "ಅವುದು ತಪ್ಪು ಅವುದು ಒಪ್ಪೆಂಬುದನ್ನು ನಾನೇನ ಬಲ್ಲೆ ತಂದೆ? ಎನ್ನ ಭರಭಾರ ನಿಮ್ಮದು. ಎನ್ನ ಯೋಗಕ್ಷೇಮ ನಿಮ್ಮದು. ಎನ್ನ ಹಾನಿವೃದ್ಧಿ ನಿಮ್ಮದು. ನಾನು ತಮಗಾಗಿ ತಂದಿರುವ ಈ ಚೆಮ್ಮಾವುಗೆಗಳನ್ನಾದರೂ ಸ್ವೀಕರಿಸಿ ನನ್ನ ಕುಲಕೋಟಿಯನ್ನೆಲ್ಲ ಉದ್ಧರಿಸುವ ಕೃಪೆ ಮಾಡಿರಿ !"

ಬಸವಣ್ಣನವರು ಬಿಚ್ಚಿ ನೋಡಿದರೆ ಹರಳಯ್ಯನಿತ್ತ ಗಂಟನ್ನು. ಶರಣಸತಿ ಲಿಂಗಪತಿಯ ಮದುವೆಗಾಗಿ ನೆಯ್ದ ಜೋಡು ಬಾಸಿಗಗಳಂತೆ ಕಂಡವಾ ಕೆರಗಳವರಿಗೆ. ಅವುಗಳಿಗಂಟಿದ್ದ ಮನುಷ್ಯ ಚರ್ಮವನ್ನು ಕಂಡು ಚಕಿತರಾಗಿ ಕೇಳಿದ್ದರು : 'ಇದೇತರ ಚರ್ಮ ಹರಳಯ್ಯ?

"ಇದು ನನ್ನ ಮತ್ತು ಕಲ್ಯಾಣಿಯ ತೊಡೆಯ ಚರ್ಮ .....ತಂದೆ."

"ತೊಡೆಯ ಚರ್ಮ ! ಇದೆಂಥ ಘೋರಕೃತ್ಯವನ್ನು ಗೈದಿರುವಿರಿ ಹರಳಯ್ಯನವರೆ! ಯಾವ ಪಾಪಾಕ್ಕಾಗಿ ಈ ಪ್ರಾಯಶ್ಚಿತ್ತವೆಂದು ಕೊಂಡಿರಿ?"

"ತಾವು ಅಂದು ನಾನೊಂದು ಸಲ ಶರಣೆಂದುದಕ್ಕೆ ಪ್ರತಿಯಾಗಿ ಎರಡು ಸಲ ಶರಣೆಂದುದಕ್ಕೆ ತಂದೆ."

"ನಭೂತೋ ನ ಭವಿಷ್ಯತಿ ನಿಮ್ಮ ಭಕ್ತಿ ಶ್ರೀ ಹರಳಯ್ಯ ! ಭಕ್ತಿಯ ಇತಿಹಾಸದಲ್ಲಿಯೇ ನೀವೂ ನಿಮ್ಮ ಸತಿ ಕಲ್ಯಾಣಮ್ಮನೂ ತೋರಿರುವ ಈ ಆತ್ಮ ನೈವೇದ್ಯಕ್ಕೆ ಪ್ರತಿಯಿಲ್ಲ ! ಇಂಥ ಚರ್ಮದ, ಕರ್ಮವ ಕಳೆದ ನಿರ್ಮಲದೇಹಿ ಶರಣನ ಮೈದೊವಲ ಹೊದ್ದ ಚೆಮ್ಮಾವುಗೆಗಳನ್ನು ನಾನು ಮೆಟ್ಟಲೆ? ಶಿವಶಿವಾ, ಈ ನುಡಿ ಸುಡದೆ? ಹರಳಯ್ಯ, ಇವುಗಳನ್ನು ಕಾಲಿನಿಂದ ಮೆಟ್ಟಲಾರೆ, ಇದೋ

ತಲೆಯ ಮೇಲಿಟ್ಟು ಕುಣಿಯುವೆ. (ತಲೆಯ ಮೇಲಿಟ್ಟು ಭಕ್ತಿಯ ಉದ್ವೇಗದಿಂದ) ಅಯ್ಯಾ ನಿಮ್ಮ ಶರಣರ ಚೆಮ್ಮಾವುಗೆಗೆ ಈ ಪೃಥ್ವಿ ಸರಿಬಾರದಯ್ಯ !"

"ಇದೇನನ್ನು ಮಾಡಿದಿರಿ ಬಸವರಸರೆ! ನನ್ನನ್ನು ಇನ್ನಷ್ಟು ರಸಾತಳಕ್ಕೆ ನೂಕಿಬಿಟ್ಟರಲ್ಲ! ಅಯ್ಯೋ! ಪಾಪ ತೊಳೆದುಕೊಳ್ಳಲೆಂದು, ಮನದ ತಾಪ ಕಳೆದುಕೊಳ್ಳಲೆಂದು ಬಂದು ಇನ್ನಷ್ಟು ಪಾಪ ಲೇಪಿಸಿಕೊಂಡು ಹಿಂದಿರುಗ ಬೇಕಾಯಿತಲ್ಲ! ತಂದೆ, ಕಂದನನ್ನೀರೀತಿ ಪಾಪಕೂಪದಲ್ಲಿ ನೂಕಬಹುದೆ?"

ನೀನು ಪಾಪಿಯೆ ಹರಳಯ್ಯ? ಪಾಪಿಗಳ ಪಾಪಹರಣ ಮಾಡುವ ಪವಿತ್ರಾತ್ಮ ನೀನು. ಸುಮ್ಮನೆ ಮಮ್ಮಲ ಮರುಗಬೇಡ. ಈ ಚೆಮ್ಮಾವುಗೆಗಳನ್ನು ಮೆಟ್ಟುವ ಯೋಗ್ಯತೆ ಕೂಡಲ ಸಂಗನೊಬ್ಬನಿಗೆ ಮಾತ್ರ ಇದೆ. ಇವುಗಳನ್ನೊಯ್ದು ಶಿವನ ಶ್ರೀ ಚರಣಗಳೆಂದು ಕಾಯ್ದಿರಿಸಿರಿ. ಅವುಗಳನ್ನು ಮುಟ್ಟಿದವರ ಮನದ ಮೈಲಿಗೆ ಕಳೆದು ಮತಿಗೆ ಮಂಗಳ ದೊರೆವುದು!" ನಿರುಪಾಯನಾಗಿ ಹರಳಯ್ಯ ಹಿಂದಿರುಗೆ ಹೊರಟ. ಹಾದಿಯಲ್ಲಿ ಮಧುವರಸರೂ ಹೊರಟಿದ್ದರು.

ಹನ್ನೆರಡುಸಾವಿರ ಚೆನ್ನ ಕರಣಿಕರಿಗೆ
ಮಾನ್ಯಗಜಸಿಂಹ ಮಧುವರಸ ಊಟಕೆ
ತನ್ನ ಅರಮನೆಗೆ ಬರುತಿರ್ದ ॥

ಮಂಗಳವಾಡಿದಲ್ಲಿ ಮೊದಲು ಬಿಜ್ಜಳರಾಯನಲ್ಲಿ ಅಧಿಕಾರಕ್ಕೆ ಸೇರಿಕೊಂಡಿದ್ದ ಮಧುವರಸನು ಮುಂದೆ ಬಿಜ್ಜಳನು ಕಲ್ಯಾಣಕ್ಕೆ ಬಂದು ಒಬ್ಬ ಶ್ರೇಷ್ಠ ಅಧಿಕಾರಿಯಾದ. ಹುಟ್ಟಿನಿಂದ ಬ್ರಾಹ್ಮಣ, ವಿಚಾರದಲ್ಲಿ ಸನಾತನಿ. ಸಹಜವಾಗಿಯೇ ಬಸವಣ್ಣನವರ ವರ್ಣಸಂಕರ ಮಾರ್ಗಕ್ಕೆ ವಿರೋಧಿ. ವರ್ಣಾಶ್ರಮ ವ್ಯವಸ್ಥೆಯಲ್ಲಿ ಅವನಿಗೆ ಪ್ರಾಮಾಣಿಕವಾದ ವಿಶ್ವಾಸ. ಹರಳಯ್ಯನನ್ನು ನಿಲ್ಲಿಸಿ ಕೇಳಿದ.

ಏನು ಹರಳನೆ ಹೇಳು ಏನು ಬಗಲೊಳು ಗಂಟು
ಏನು ಎಲ್ಲಿಂದ ಬರವಾಯ್ತು ಹೇಳೆನೆಗೆ
ಏನು ತೋರೆನೆಗೆ ಬಗಲೊಳಗೆ ॥

ಹರಳಯ್ಯ ಹೌಹಾರಿದ. ಅಣ್ಣನವರು ಮೆಟ್ಟಲು ನಿರಾಕರಿಸಿದ ಆ ಪಾದರಕ್ಷೆಗಳನ್ನು ಮಧುವರಸ ಮೆಟ್ಟಲು ಮನಸ್ಸು ಮಾಡಿದರೆ? ಅವನ ಸಂಶಯ ನಿಜವಾಯಿತು. ಆ ಮೆಟ್ಟುಗಳನ್ನು ನೋಡಿ, ಬಸವಣ್ಣನವುಗಳನ್ನು ಮೆಟ್ಟಲು ನಿರಾಕರಿಸಿದುದನ್ನು ಕೇಳಿ ಮಧುವರಸನಿಗೆ ಅವುಗಳನ್ನು ಮೆಟ್ಟಿಯೇತೀರಬೇಕೆಂಬ ದುಷ್ಟ ಬುದ್ಧಿಯುಂಟಾಯಿತು. ಹರಳಯ್ಯ ಪರಿಪರಿಯಿಂದ ತಿಳಿಸಿ ಹೇಳಿದರೂ ಕೇಳದೆ

ಮೆಟ್ಟಿದ. ಮೈಗೆಲ್ಲ ಬೆಂಕಿಯಿಟ್ಟಂತಾಯಿತು. ಆದರ ಉರಿಪನ್ನೇನು ಹೇಳುವುದು?

ಸುಣ್ಣ ಕದಿಗುಣಿಯೊಳಗೆ ಹಣ್ಣಾಗಿ ಬೆಂದಂತೆ
ಎಣ್ಣೆ ಬಲುಕಾಸಿ ಕಣ್ಣೊಳಗೆ ಸುರಿದಂತೆ
ಡೊಣ್ಣೆ ಮುಳ್ಳುಗಳು ನೆಟ್ಟಂತೆ !

ಮನೆಗೆ ಬಂದು ಮಧುವರಸ ಮದ್ದು ತಿಂದ, ನೀರು ಮಿಂದ, ಏನೇನೋ ಮಾಡಿಕೊಂಡ. ಮೈಯುತಿ ಹೋಗಲಿಲ್ಲ. ಒಮ್ಮೆ ಒಂದು ವಿಚಿತ್ರ ನಡೆಯಿತು. ಮಧುವರಸರ ಸ್ನಾನಕ್ಕೆ ನೀರು ತರುತ್ತಲಿದ್ದ ಮಾದೇವಿ ಮಾಡಿದ ವಿಚಿತ್ರವದು.

ಹೊರಳಿದವು ದಿನಮಾಸ ಬರಲು ಪುಣ್ಯದ ದಿನವು
ಹಿರಿ ದಾದಿ ಮರೆತು ಮನೆಗೆಲಸ ನೋಡಿದಳು
ನರೆಯೋಣಿ ದೊಂಬರಾಟಗಳ

'ಹೊತ್ತು ಮುಣುಗಿತು ಶಿವೆ, ಕತ್ತಲಾಯಿತು, ನೀರ ಎತ್ತ ದೂರ ಹೋಗಿ ತರಲೆಂದು' ಆಕೆ ಯೋಚಿಸುತ್ತಿರಲು ಎದುರಿಗೊಂದು ಬಚ್ಚಲಗುಂಡಿ ಕಾಣಿಸಿತು.

ಹರಳ ಬಳಸಿದ ನೀರು ಹರಿದು ಬಚ್ಚ ಗುಂಡಿ
ಮೆರೆಯುವದು ಇಂದು ಕಲ್ಯಾಣ-ಕೇರಿಯೊಳು
ಹರಳಯ್ಯ ಗುಂಡಿ ಶಿವತೀರ್ಥ

ಆ ಶಿವತೀರ್ಥದಿಂದಲೇ ಅಂದು ನೀರು ತಂದುಬಿಟ್ಟಳು. ಆ ನೀರನ್ನು ಮೀಯುತ್ತಗಲೇ ಮಧುವರಸನ ಮೈಯುರಿ ಮಾಯವಾಯಿತು. ಅವನಿಗಾದ ಆಶ್ಚರ್ಯಕ್ಕೆ ಇತಿಮಿತಿಯಿಲ್ಲ ! ಮಾದೇವಿಯನ್ನು ಕರೆಸಿ ಕೇಳಿದನು.


'ಇಂದು ಎಲ್ಲಿಂದ ನೀರ ತಂದೆ ಮಾದೇವಿ?'
'ತಪ್ಪಯಿತು ಕ್ಷಮಿಸಿ ದೊರೆಯೆ'
'ತಪ್ಪಿಲ್ಲ, ನನ್ನ ಉದ್ಧಾರವಾಯಿತು. ಭಯ ಬೇಡ, ನಿಜ ಹೇಳು.'
'ಶರಣ ಹರಳಯ್ಯನ ಬಚ್ಚಲಗುಂಡಿಯಿಂದ ತಂದೆ ದೊರೆಯೆ.'

ಮಧುವರಸನಿಗಾಗ ಹೊಳೆಯಿತು- ಅಂದು ಗೈದ ಅವಿವೇಕ ತನ್ನನ್ನು ತಿಂದು ತೇಗಿತೆಂದು. ಪಶ್ಚಾತ್ತಾಪದಿಂದ ದಗ್ಧವಾಯಿತವನ ಸೊಮ್ಮಿನ ಹೆಮ್ಮೆ, ಹುಟ್ಟಿನ ಹೇವ, ಕುಲಮದ, ಹರಳಯ್ಯನಿಗೆ ಕಳಿಸಿಲು ಉಡುಗೊರೆಯನ್ನು ಸಿದ್ಧಗೊಳಿಸ ತೊಡಗಿದ ಹರಳಯ್ಯನ ಹೃದಯವನ್ನು ಬಲ್ಲ ಮಾದೇವಿ ಹೇಳಿದಳು. ಮಧುವರಸ

ಕಟ್ಟಿದರೇನು, ಕೊಟ್ಟು ಕಳುಹಿದರೇನು
ಮುಟ್ಟುವರಲ್ಲ ಪರಸೊಮ್ಮನೆಂದಳು ತಾ
ಕೊಟ್ಟಳುತ್ತರವ ಮಹಾದೇವಿ

ಮಧುವರಸ ಹರಳಯ್ಯನ ಋಣ ತೀರಿಸುವುದೆಂತು ಎಂದು ದೀರ್ಘವಾಗಿ ಆಲೋಚಿಸಿದ, ಕೊನೆಗೆ,

ಅಡಿಗಡಿಗೆ ವಂದಿಸುವೆ, ನಡೆವೆ ನಾನಲ್ಲಿಗೆ
ಕುಡುವೆನು ನನ್ನ ಮಗಳನು–ಎಂದೆನುತ
ನುಡಿದನು ಮಧುವರಸ ಮುದದಿಂದ ॥



**ಇಬ್ಬರು ಶಿವಭಕ್ತರ ನಡುವಣ ಶರೀರ ಸಂಬಂಧವೆಂದು ಬಸವಾದಿ ಪ್ರಮಥರೂ ಶುಭಮಸ್ತು ಎಂದರು.**

'ಅಹುದು, ಹರಳಯ್ಯನಿಗೊಬ್ಬ ವಜ್ರದ ಹರಳಿನಂಥ ಮಗನಿದ್ದಾನೆ. ನನಗೊಬ್ಬ ರತ್ನದಂಥ ಮಗಳಿದ್ದಾಳೆ. ಅವಳನ್ನು ಹರಳಯ್ಯನ ಮಗನಿಗೆ ಕೊಟ್ಟುಬಿಟ್ಟರೆ ನನ್ನ

ತಪ್ಪು ತೊಳೆದು ಹೋಗುತ್ತದೆ' ಎಂದು ತೀರ್ಮಾನಿಸಿ ಹರಳಯ್ಯನ ಮನೆಗೆ ಹೋಗುತ್ತಾನೆ. ಹರಳಯ್ಯನು ಕಕ್ಕಾವಿಕ್ಕಿಯಾಗುತ್ತಾನೆ

ತಂದೆನು ಮಗಳನು ಇಂದು ನಿಮ್ಮಲ್ಲಿಗೆ
ಸಂದುದು ಎಂದು ಭಸಿತವನಿಟ್ಟರಿ
ಇಂದು ನಿಮ್ಮಡಿಗೆ ಎರಗುವೆ

ಇಂದು ನಿಮ್ಮಡಿಗೆ ಎರಗುವೆ ಎಂದು ಮಧುವರಸ ಮಾತಿಗೆ ಮೊದಲು ಮಾಡಲು ಹರಳಯ್ಯ ಅವಾಕ್ಕಾಗಿಬಿಟ್ಟ. ಇದು ಸಲ್ಲದ ಶರೀರ ಸಂಬಂಧವೆಂದು ವಿರೋದಿಸಿದ. ಆದರೆ ಮಧುವರಸನ ಹೃದಯಪರಿವರ್ತನೆ ಪರಿಪೂರ್ಣವಾಗಿ ಆಗಿದ್ದಿತು. ಮಂದಿಟ್ಟ ಹೆಜ್ಜೆಯನ್ನು ಹಿಂದಿಡಲು ಅವನು ಒಪ್ಪಲಿಲ್ಲ. ಇಬ್ಬರೂ ಲಿಂಗಾಂಗಿಗಳಾಗಿ ಶಿವಮತಕ್ಕೆ ಸೇರಿದ್ದರಾಗಿ ಅದು ಇಬ್ಬರು ಶಿವಭಕ್ತರ ನಡುವಣ ಶರೀರ ಸಂಬಂಧ– ವಿಪ್ರ ಅಂತ್ಯಜರ ನಡುವಣ ಸಂಬಂಧವಲ್ಲ–ಎಂದು ಬಸವಾದಿ ಪ್ರಮಥರೂ ಈ ಕಾರ್ಯಕ್ಕೆ ಶುಭಮಸ್ತು ಎಂದರು. ಮದುವೆ ನಡೆದುಹೋಯಿತು. ಶರಣರ ಬಳಗವೆಲ್ಲ. ಸಂತೋಷ ಸಾಗರದಲ್ಲಿ ಮುಳುಗಿತು–ತಮ್ಮ ಸಮಾನತೆಯ ತತ್ತ್ವ ಗೆದ್ದಿತಂದು. ಆದರೆ ಈ ತತ್ತ್ವಕ್ಕೆ ವಿರೋಧಿಗಳಾಗಿದ್ದ ಸನಾತನಿಗಳು ಸುಮ್ಮನಿರಲಿಲ್ಲ. ಪ್ರಳಯವೇ ಸಮೀಪಿಸಿದಂತೆ ಅವರಿಗೆನಿಸಿತು.

'ಅಪರಾಧ ನಡೆಯಿತು ವಿಪರೀತ ಬಂದಿದೆ
ತಪಸಿಗಳ ತಂಡ ಇರುವಲ್ಲಿ ಮಧುವರಸ
ಶ್ವಪಚರಿಗೆ ಹೆಣ್ಣ ಕೊಡಬಹುದೆ?'

ಎಂಬ ಪ್ರಶ್ನೆ ಬಿಜ್ಜಳ ಭೂಪಾಲ ಕಿವಿಯವರೆಗೂ ಹೋಯಿತು. ಅರಸ ಕರೆಸಿ ಕೇಳಿದ ಮಧುವರಸನನ್ನು : 'ಹೊಲೆಯರಿಗೆ ಹೆಣ್ಣು ಕೊಡಬಹುದೆ ವಿಪ್ರನಾದ ನೀನು?' ಮಧುವರಸನು ಅಷ್ಟರೊಳಗಾಗಿಯೇ ಶ್ರೇಷ್ಠ ಶರಣನಾಗಿ ಬಿಟ್ಟಿದ್ದ. ಅಮೃತದ ಸೆಲೆಯಂತೆ ಅವನ ಉತ್ತರ ಹೊರಹೊಮ್ಮಿತು :

"ಹೊಲೆಯ ಹೊಲೆಯನ್ನೆನ್ನುವಿರಿ– ಯಾರು ಹೊಲೆಯರಲ್ಲ ದೊರೆಯೆ? ಎಲ್ಲರೂ ಹೊಲೆಯಲ್ಲಿ ಹುಟ್ಟಿ ಹೊಲೆಯಲ್ಲಿ ಬೆಳೆಯುವವರೇ. ಮೂವರು ಸಮಗಾರರ ಬಾಗಿಲಲ್ಲಿ ಐವರು ಹಾರುವರು ಹಾರೈಸುತ್ತಿದ್ದಾರೆ. ಒಬ್ಬನಿಗೆ ಕೊಂಬ ಕೊಟ್ಟ, ಒಬ್ಬನಿಗೆ ಕೊಳಗ ಕೊಟ್ಟ, ಒಬ್ಬನಿಗೆ ಗರ್ಭವ ಕೊಟ್ಟ, ಒಬ್ಬನಿಗೆ ಏನೂ ಇಲ್ಲದೆ ತಬ್ಬಿಬ್ಬಾಯ್ತು–ಮಾದಿಗರ ಮನೆಯ ಹೊಕ್ಕು ಮಾದಗಿತ್ತಿಯರ ತಿಂದ ಅರ್ಕೇಶ್ವರ ಲಿಂಗವನರಿತ ಕಾರಣ ! ಇನ್ನೂ ತಿಳಿಯದೆ? ಊರೊಳಗಣ ದೇವಾಲಯದಲ್ಲಿ ಐವರು ಹೊಲೆಯರು ಹೊಕ್ಕು ದೇವರ ಪೂಜಿಸುತ್ತಿದ್ದಾರೆ. ಹೊಲೆಯರು ಮುಟ್ಟಿ

ದೇವಾಲಯ ಹೊರಗಾಯಿತ್ತು. ದೇವರೊಳಗಡೆ ಕುಲಜರು ಹೊಲಬುದಪ್ಪಿ ಹೊಲೆಗೊಳಗಾಯಿತ್ತು–ಆರ್ಕೇಶ್ವರ ಲಿಂಬಗವನರಿತು ಕಾರಣ.”

ಈ ಬೆಳಗಿನ ವಚನಗಳಲ್ಲಿ ಅಡಗಿದ ಅರ್ಥ ಬಿಜ್ಜಳನಿಗೆ ತಿಳಿಯಲಿಲ್ಲ. ಬಸವಣ್ಣನವರನ್ನು ಕೇಳಿದ. “ಇಬ್ಬರೂ ಶಿವಮತವನ್ನು ಸ್ವೀಕರಿಸಿರುವರಾಗಿ ಮಧುವರಸ ವಿಪ್ರನಾಗಿ ಉಳಿದಿಲ್ಲ, ಹರಳಯ್ಯ ಹೊಲೆಯನಾಗಿ ಉಳಿದಿಲ್ಲ ದೊರೆಗಳೆ. ಇಂದೊಂದು ಸಜಾತೀಯ ವಿವಾಹ, ವಿಜಾತೀಯ ವಿವಾಹವಲ್ಲ. ದೊರೆಗಳದನ್ನು ದೊಡ್ಡದನ್ನಾಗಿ ಮಾಡಬಾರದು.”

ಬಿಜ್ಜಳ ಬದ್ಧಿ ಬಸವಣ್ಣನವರ ವಾದವನ್ನು ಒಪ್ಪಿತು ; ಆದರೆ ಅವನ ಹೃದಯ ಒಪ್ಪಲಿಲ್ಲ. ಪ್ರತಿಗಾಮೀ ಶಕ್ತಿಗಳು ಪ್ರಗತಿಪರ ಶಕ್ತಿಗಳ ಮೇಲೆ ವಿಜಯ ಪಡೆದುವು. ಜಗತ್ತಿನಲ್ಲಿ ಸಮಾನತೆಯ ಸಸಿಯು ಹಸಿರಾಗಿ ಉಳಿಯಲು ಹರಳಯ್ಯ ಮಧುವರಸರ ರಕ್ತ ಬಸಿಯಿತು, ಅವರಿಬ್ಬರಿಗೂ ಮರಣದಂಡನೆಯಾಯಿತು.

ಹೂವಿನಾ ಮಳೆಯಾಗಿ ಹೂವಿನಾ ತೇರೇರಿ
ಹೂವಾದರವರು ಶಿವಪದಕೆ–ಶಿವಶರಣ
ಪಾವನದ ಮಾಲೆ ಸೇರಿದರು !

ಜಗತ್ತಿನಲ್ಲಿ ತತ್ತ್ವನಿಷ್ಠೆಗೆ, ಬಲಿದಾನಕ್ಕೆ, ಆತ್ಮಾರ್ಪಣಕ್ಕೆ ಬೆಲೆಯಿರುವವರೆಗೆ ಹರಳಯ್ಯ ಮಧುವರಸರಿಬ್ಬರೂ ಸಗೌರವ ಸ್ಮರಿಸಲ್ಪಡುವರು. ಅವರ ಎಳ ಹೂಟಿಯ ತರುವಾಯ ಕಲ್ಯಾಣದಲ್ಲಿ ಬಿಜ್ಜಳನ ವಧೆಯಾಯಿತು. ಬಸವಣ್ಣನವರು ಮೊದಲೇ ಸಂಗಮಕ್ಷೇತ್ರಕ್ಕೆ ಹೋಗಿ ಬಿಟ್ಟಿದ್ದರು. ಚೆನ್ನಬಸವಣ್ಣ, ಕಿನ್ನರಿ ಬ್ರಹ್ಮಯ್ಯ, ಮಾಚಯ್ಯ ಮೊದಲಾದ ಶರಣಕುಲಮಣಿಗಳ ನೇತೃತ್ವದಲ್ಲಿ ಹೊರಟ ಶರಣ ಸಮೂಹವನ್ನು ಅಳಿಯ ಬಿಜ್ಜಳನು ಬೆನ್ನಟ್ಟಿದ. ಅಲ್ಲಲ್ಲಿ ಯುದ್ಧಗಳಾದುವು. ರಕ್ತದ ಕಾಲುವೆಗಳು ಹರಿದುವು. ಕಲ್ಯಾಣ ಹಾಳುಬಿದ್ದಿತು. ಶರಣರ ಬಳಗ ಬಯಲಾಯಿತು. ಆದರೂ ಹರಳಯ್ಯ ಮಧುವರಸರ ಬಲಿದಾನ ವ್ಯರ್ಥವಾಗಲಿಲ್ಲ. ಅವರ ರಕ್ತ ಕಲ್ಯಾಣದ ನೆಲದಲ್ಲಿ ಇಂಗಿ ಕನ್ನಡ ನಾಡಿನಲ್ಲಿ ಅನೇಕ ಕಡೆಗೆ ಶರಣಧರ್ಮದೀಪಕರಾಗಿ ಹುಟ್ಟಿ ಶಿವಶರಣರ ಜ್ಯೋತಿಪ್ರಕಾಶವಾಗಿ ಹರಡಿತು. ಇಂದಿಗೂ ಕಲ್ಯಾಣದ ಕಣಕಣದಿಂದ ಅವರ ಅಮರ ಕಥೆ ನಿನದಿಸುತ್ತಲಿದೆ.

ಹರನ ಶಿಖರದ ಮೇಲೆ ಸಿರಿಗಂಧಮರ ಹುಟ್ಟಿ
ಕಿರೀಟದೊಳು ಎರಡು ಗಿಣಿ ಕೂತು ಹಾಡಿದವು
ಹರಳಯ್ಯನೆಂಬ ಹಳೆ ಕಥೆಯ–

■

# ಕಿನ್ನರಿಯ ಬ್ರಹ್ಮಯ್ಯ, ಕಲಕೇತ ಬ್ರಹ್ಮಯ್ಯ

ಕಿನ್ನರಿಯ ಬೊಮ್ಮಯ್ಯ ಕಿನ್ನರಿಯ ಬಾರಿಸಲು
ಕುನ್ನಿ ಹಸು ಮರೆತು ಕಿವಿಗೊಟ್ಟು । ಕಲ್ಯಾಣ
ಚೆನ್ನಾತು ಲೋಕ ಬೆಲುವಾತು

–ಹಂತಿಯ ಪದದಿಂದ

ಕಲ್ಯಾಣದ ತ್ರಿಪುರಾಂತಕೇಶ್ವರ ದೇವಾಲಯದಿಂದ ಕಿನ್ನರಿಯ ಸ್ವರ ತೆರೆತೆರೆಯಾಗಿ ಹರಿದುಬರುತ್ತಲಿದೆ. ಅದರೊಡನೆ ಈ ಉದಾರವಾಣಿಯೂ ಬಯಲ ಬೆರೆತ ಬಾವನ್ನದ ನರುಗಂಪಿನಂತೆ ಬೆರೆತು ಬರುತ್ತಲಿದೆ.

"ನಿನ್ನ ಹರೆಯದ ರೂಹಿನ ನುಡಿಯ ಜಾಣೆನ ಚೆಲುವಿನ ಸಿರಿಯ
ಸಂತೋಷದ ಕರಿ ತುರಗ ರಥ ಪದಾತಿಯ ನೆರವಿಯ
ಸತಿಸುತರ ಬಂಧುಗಳ ಸಮೂಹದ
ನಿನ್ನ ಕುಲದಭಿಮಾನದ ಗರ್ವವ ಬಿಡು ! ಮರುಳಾಗದಿರು !"
ಅಕಟಕಟಾ, ರೋಮಜನಿಂದ ಹಿರಿಯನೆ?
ಮದನನಿಂದ ಚೆಲುವನೆ? ಸುರಪತಿಯಿಂದ ಸಂಪನ್ನನೆ?
ವಾಮದೇವ ವಸಿಷ್ಠರಿಂದ ಕುಲಜನೆ?
ಅಂತಕನ ದೂತರು ಬಂದು ಕೈವಿಡಿದೆಳೆದೊಯ್ಯುವಾಗ ನುಡಿಗೆಡೆಯಿಲ್ಲ!
ಕೇಳೋ ನರನೆ, ಎನ್ನ ಮಹಾಲಿಂಗ ತ್ರಿಪುರಾಂತಕ
ದೇವರ ಪೂಜಿಸಿದೆಯಾದರೆ ಕೇಡಿಲ್ಲದ ಪದ ದೊರಕೊಂಬುದು ಮರುಳೆ!"

ಇದೊಬ್ಬ ಅಕ್ಕಸಾಲಿಗನ ಸ್ವರವೆಂದರೆ ನಂಬಲಾಗುವುದೆ? ಸೋಜಿಗವೆನಿಸಿದರೂ ಸತ್ಯ–ಶರಣರ ಚರಿತ್ರ !

ಆಂಧ್ರ ದೇಶದ ಪೂಡೂರು ಗ್ರಾಮದಲ್ಲಿ ಕಲಿದೇವಿ[೧] ಎಂಬ ಭಕ್ತೆಯ ಪುತ್ರನಾಗಿ ಜನಿಸಿದ "ಕಿನ್ನರಯ್ಯಗಳು[೨] ಅಕ್ಕಸಾಲೆಯ ಕಾಯಕದಲ್ಲಿದ್ದು ಆಭರಣಂಗಳ

೧–೨ ಆಕರ ಗಣಭಾಷಿತ ರತ್ನಮಾಲೆ, ೭೭೦ ಅಮರಗಣಾಧೀಶ್ವರರ ಚರಿತ್ರೆಗಳು.

ಮಾಡುವಾಗ ಜಂಗಮ ಬಂದು ಬೇಡಲು ಅದರೊಳಗೆ ಕತ್ತಿರಿಸಿಕೊಟ್ಟು ಮತ್ತೆ ಒಡವೆಯವರಿಗೆ ತೂಕಕ್ಕೆ ಸರಿಮಾಡಿಕೊಟ್ಟು ಇರುತ್ತಿರಲು ಮತ್ತೊಂದು ದಿನ ತಮ್ಮ ಗುರುಗಳು ಆಭರಣವ ಮಾಡೆಂದು ಹೊನ್ನನು ಕೊಡಲು ಅವಮಾಡಿ ತೂಗಲು ಕಡಿಮೆಯಾದುದು ಕಂಡು ಗುರುವು ಕೋಪಿಸಲು 'ಕಿನ್ನರಯ್ಯ' ಎಮ್ಮಲ್ಲಿ ವಂಚನೆಯಿಲ್ಲ, ಈ ಕಾಯಕವ ಬಿಡಿಸಲೆಂದು ಶಿವನು ಹೀಗೆ ಮಾಡಿದನು.[೩] ಎಂದು ಅಕ್ಕಸಾಲಿಗನ ಕಾಯಕ ಬಿಟ್ಟು" ಕಿನ್ನರಿಯನ್ನು ಹಿಡಿಯುತ್ತಾನೆ. ಬ್ರಹ್ಮಯ್ಯ ಹಣಮುಮನೊಂದು ಹಾಗಮ'[೪] ದಿನಕ್ಕೊಮ್ಮೆ ಕೊಡತೊಡಗುತ್ತಾನೆ. ಅಷ್ಟರಲ್ಲಿ–

ಬಸವನಸದೃಶ ಭಕ್ತಿ ಭಾವನೆ
ವಸುಧೆಯೊಳು ನೆರೆತೀವಿ ಪಸರಿಸಿ
ದೆಸೆದೆಸೆಗಳಂ ಮುಸುಕೆ"

ಆ ಧರ್ಮಸ್ವರೂಪವನ್ನು ಕಾಣಲು ಕಿನ್ನರಯ್ಯ ಕಲ್ಯಾಣಕ್ಕೆ ಬರುತ್ತಾನೆ. ಬಡಬಗ್ಗರಾಧಾರವಾದ ಉಳ್ಳಿಯನ್ನು ಬಸವಣ್ಣ ಹೀಯಾಳಿಸಲು ಆತನಿಗೆ ಚೆನ್ನಾಗಿ ಪಾಠ ಕಲಿಸುತ್ತಾನೆ. ತ್ರಿಪುರಾಂತಕೇಶ್ವರ ದೇವಾಲಯದಲ್ಲಿದ್ದು

"ಸಂಗೀತ ವಿದ್ಯೆಯದು ಸಂಗಡವೆ ಬಂದದ್ದು
ಲಿಂಗಿಗಳ ಹಿರಿಮೆ ಹಾಡುತಲಿ। ಕಲ್ಯಾಣ
ಲಿಂಗ ಮಂಟಪವ ಕೂಡಿದನು"
"ಶಿವಕೊಟ್ಟ ಕಿನ್ನರಿಯ ಭವದೊಳಗೆ ನುಡಿಸುತಲಿ
ಶಿವಬೋಧೆ ಜನಕೆ ಮಾಡುತಲಿ। ಬೊಮ್ಮಯ್ಯ
ಭವಿಗಳಿಗೆ ಊಡಿ ಶಿವಮಂತ್ರ"
ದಿನಗಳೆಯುತ್ತಾನೆ.

ಹೀಗಿರುತ್ತಿರುವಾಶಗ ಒಮ್ಮೆ ಒಂದು ಕುರಿ–ಹರಿಕೆಯ ಕುರಿ–ಕೊರಳ ನೇಣನ್ನು ಹರಿದು ಗುಡಿಯಲ್ಲಾದರೂ ಪ್ರಾಣ ಉಳಿದೀತೆಂದು ಭಾವಿಸಿ, ತ್ರೀಪುರಾಂತಕೇಶ್ವರನ ಗುಡಿಯನ್ನು ಹೊಕ್ಕುಬಿಡುತ್ತದೆ. ಅದನ್ನು ಬೆಂಬತ್ತಿ ಒಬ್ಬ ವಿಟ ದೇಗುಲವನ್ನು ಪ್ರವೇಶಿಸುತ್ತಾನೆ. ತನ್ನ ವೇಶ್ಯೆಯ ದೇವತೆಗೆ ಬಲಿ ಕೊಡಲೆಂದು ಅದನ್ನವನು

೩ ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರ ಮತ್ತು ಬಸವ ಪುರಾಣದ ಕಥಾಸಾರ!
೪ Ibid ೫ ಬಸವ ಪುರಾಣ

ಬಿಗಿದು ತಂದಿರುತ್ತಾನೆ. ಕುರಿಯ ಮೂಕ ಮೊರೆಯನ್ನು ಕೇಳಿ ಕಿನ್ನರಯ್ಯ–

"ಹೋಗದಿರು ಹೋಗದಿರು ತಮ್ಮಾ
ಹೋಗದಿರು ನಿನಗುಚಿತವಲ್ಲಿದು
ದೇಗುಲದೊಳು ಹೊಕ್ಕುದೀ ಕುರಿ ಸಾವ ಭಯಕಂಜಿ
ಹೋಗು ! ಕೊಲುವುದು ದೋಷ ! ನೀನಂ
ತಾಗದೊಡೆ ನೀ ಬಿಲಿತ ಬೆಲೆಯನ
ದೀಗ ಹೇಳು ಇಮ್ಮಡಿಯಾದೊಡಂ ಕೊಳ್ಳು" (ಬ.ಪು.)

ಎಂದು ತಿಳಿ ಹೇಳುತ್ತಾನೆ.

ಅದಕ್ಕೆ ಆ 'ಬಿಜ್ಜಳನ ಊಳಿಗದ ಬೊಜ್ಜನಾಯಕ' ತಿರಸ್ಕಾರದಿಂದ–

"ತಿರುಕ ಜಂಗಮ ನೀನು ಮುರುಕ ಕಿನ್ನರಿ ನಿನಗೆ
ಕುರಿಬಿಟ್ಟು ನಿಲ್ಲು ಬೊಮ್ಮಯ್ಯ–ಎನ್ನದಕೆ
ಕರವೆತ್ತಿ ಹಿಡಿದ ಕಿನ್ನರಿಯ ॥
ಕಿನ್ನರಿಯ ಬಾರಿಸಲು ಚೆನ್ನಿಗರು ಕೇಳಿದರು
ಚೆನ್ನ ಸುರುವಿದರು ಗುಡಿಮುಂದೆ–ಬೊಜಗನಿಗೆ
ಹೊನ್ನು ಸಾಸಿರವ ಎಣಿಸಿದರು !"

ಸಾವಿರ ಹೊನ್ನನ್ನಾದರೂ ಕೊಟ್ಟು ಕಿನ್ನರಯ್ಯ ಒಂದು ಕುರಿಯ ಜೀವ ಉಳಿಸಿಕೊಳ್ಳುತ್ತಾನೆ. ಅವನು ನಿಜವಾಗಿಯೂ 'ಸರ್ವಜೀವದಯಾಪರಂ ನಿಗರ್ವಿಲೋಕೈಕ ಪೂಜ್ಯಂ ಶರಣ ಮಾರ್ಗದಲ್ಲಿ.[೧]

ಒಂದಕ್ಕೆ ಸಾವಿರಮಡಿ ಲಾಭವಾದುದನ್ನು ಕಂಡು ಆ ವಿಟ ದಿಟಕ್ಕೂ ಉಬ್ಬಿಕೊಬ್ಬಿ ಹೋಗುತ್ತಾನೆ. ಉಕ್ಕುವ ಉಕ್ಕಂದದೊಡನೆ ತನ್ನ ವಾರನಾರಿಯ ಮನೆಗೆ ಹೋಗಿ ನಡೆದ ಸಂಗತಿಯನ್ನೆಲ್ಲ ತಿಳಿಸಿ, ಅವಳೆದುರು ಸಾವಿರ ಹೊನ್ನನ್ನು ಸುರಿಯುತ್ತಾನೆ– ಅವಳ ಎಂದಿಲ್ಲದ ಸಂತಸಗೊಳ್ಳುವಲೆಂಬ ಆಶೆಯಿಂದ. ಆದರೆ ಅವನ ಆಶೆ ನಿರಾಶೆಯಾಗುತ್ತದೆ.

"ನನ್ನನ್ನು ಹೊನ್ನಿಗಾಗಿ ಬಾಯ್ಬಿಡುವ ಹೆಣ್ಣೆಂದು ತಿಳಿದೆಯಾ? ನಾನು ಹೊನ್ನು ಕಾಣದ ಹೆಣ್ಣೆ ? ನಿನ್ನ ಧನಗಿನವೆನಗೆ ಬಾತಿಯೇ? ಎನ್ನ ಸೊಬಗಂ ನೋಳ್ಪೆಯಾದೊಡೆ ಹೊನ್ನನೀಗಳೆ ಬಿತ್ತಿಸುವೆನೀ ಕೇರಿ ಕೇರಿಯಲಿ !" ನನ್ನ ದೇವತೆಗೆಂದು ತಂದ

---

೧ ಬಸವ ಪುರಾಣ ಸಂ. ೨೭ ಪ. ೧೧

ಹರಕೆಯ ಕುರಿಯನ್ನು ಹಣಕ್ಕೆ ಮಾರಿ ಬೇರೆ ಕುರಿಯನ್ನು ಬಲಿಕೊಟ್ಟರೆ ಆ ದೇವತೆ ನಮ್ಮನ್ನು ಉಳಿಸುವಳೆ? ಹೋಗು, 'ಅದೇ ಕುರಿಯನ್ನು ತಂದು ತೋರೆನ' ಎಂದವಳು ಮೂದಲಿಸಿ ಕಳಿಸಿಬಿಟ್ಟಳು.

ಕಾಮಾತುರರಿಗೆ ಭಯವೆಲ್ಲಿ, ಲಜ್ಜೆಯೆಲ್ಲಿ, ಮಾನವೆಲ್ಲಿ, ಮನ್ನಣೆಯೆಲ್ಲಿ? ಆ ಕಾಮುಕ ಮತ್ತೆ ಕಿನ್ನರಯ್ಯನ ಕಣ್ಣು ತಪ್ಪಿಸಿ ಆ ಕುರಿಯನ್ನು ಕದ್ದೊಯ್ಯಲು ಪ್ರಯತ್ನಿಸುತ್ತಾನೆ. 'ನಂಜು ನಿನಗಿದು ಲಿಂಗ ಮುದ್ರೆ ಸುರಂಜಿಸುವ ಕುರಿ ಬೇಡ, ಒಯ್ಯಬೇಡ' ಎಂದು ಬ್ರಹ್ಮಯ್ಯ ತಿಳಿಸಿ ಹೇಳಿದರೂ ಕೇಳಿದೆ ಕುರಿಯನ್ನು ಎಳೆದೊಯ್ಯ ಯತ್ನಿಸುತ್ತಾನೆ. ಕಿನ್ನರಯ್ಯನ ಕೋಪಕ್ಕೆ ಆಹುತಿಯಾಗುತ್ತಾನೆ. ಅವನ ಬಳಗದವರು ಬಿಜ್ಜಳನ ಬಳಿಗೆ ಹೋಗಿ ಗೋಳಾಡಿ ದೂರಿಡುತ್ತಾರೆ. ಬಿಜ್ಜಳನು ಕೆರಳಿ ಕಿಡಿಕಿಡಿಯಾಗುತ್ತಾನೆ. ವಿಚಾರಣೆ ನಡೆಯುತ್ತದೆ. 'ಕಿನ್ನರಯ್ಯ ಕೊಟ್ಟ ವಿವರಣೆ ಸತ್ಯವೆಂದು ನಂಬಲು ಸಾಕ್ಷಿ ಯಾರು?' ಎಂಬ ಪ್ರಶ್ನೆ ಎದುರಾಗುತ್ತದೆ. ಆಗ ಅಲ್ಲಿದ್ದವರು ಮೂವರೇ ಕಿನ್ನರಯ್ಯ, ವಿಟ, ತ್ರಿಪುರಾಂತಕೇಶ್ವರ , ವಿಟ ಹತನಾಗಿದ್ದಾನೆ. 'ತ್ರಿಪುರಾಂತಕೇಶ್ವರನೇ ಸಾಕ್ಷಿ ಹೇಳಲಿ' ಎಂದು ಕಿನ್ನರಯ್ಯ ನುಡಿಯುತ್ತಾನೆ. ಎಲ್ಲರೂ ಪರಿಹಾಸ ಗೈಯುತ್ತಾರೆ. 'ಕಲ್ಲುದೇವರೆಲ್ಲಿಯಾದರೂ ಸಾಕ್ಷಿ ನುಡಿಯುವುದೆ?' ಎಂದು. ಆಗ ಅವರ ಅಣಕ ಅಡಗುವಂತೆ ಲಿಂಗದಿಂದ ಶಬ್ದ ಹೊರಡುತ್ತಾದೆ.

ಏಳುದಿನ ಹಗಲೆಲ್ಲ ಏಳುದಿನ ಇರುಳೆಲ್ಲ
ಹೇಳಿತಾ ಲಿಂಗ ಸಾಕ್ಷಿಯನು–ಹೌಹಾರಿ
ಕೇಳಿದರು ಬಂದ ಜನವೆಲ್ಲ !
ನಡುನಡುಗಿತಾ ಭೂಮಿ ತಡೆತಡೆದವಾ ಗಾಳಿ
ಕಡಲುಗಳು ಉಕ್ಕಿ ಒದರಿದವು–ಆಕಾಶ
ಖಡಿಲೆಂದು ಸಿಡಿದು ಮಾಯಾಗಿ !

ಇಷ್ಟೇ ಅಲ್ಲ, ಆ ವಿಟನಿಗೂ ಪ್ರಾಣದಾನವಾಯಿತು. ಬಿಜ್ಜಳ ಮೊದಲ್ಗೊಂಡು ಸಜ್ಜನರೆಲ್ಲರೂ ಸ್ವೈವೆರಗಾದರು.

ಜೋಡುಕೈಗಳ ಮುಗಿದು ಹಾಡಿದರು ಜನರೆಲ್ಲ
ನಾಡೊಳಗೆ ಹಿರಿಮೆ ಶರಣನದು–ಪಶುಪಕ್ಷಿ
ಕಾಡೊಳಗೆ ಹಾಡಿ ನಲಿದಾಡಿ !

ಬಸವಣ್ಣನಂತೂ ಹರುಷ ಹೆಚ್ಚಿ

ಅಚ್ಚ ಶಿವನೊಂದಚ್ಚು ಭಕ್ತಿಯ
ನಚ್ಚು ಶರಣರ ಮಚ್ಚು ಹಿರಿಯರ
ಮೆಚ್ಚು ಸತ್ಯರ ಕೊಚ್ಚು ಪರವಾದಿಗಳೆದೆಯ ಕಿಚ್ಚು
ಮಚ್ಚರಿಸುವರ ಬಿಚ್ಚು ಕುಜನರ
ಬೆಚ್ಚು ಶಾಂತಿಯ ಹೆಚ್ಚು ಧೂರ್ತರ
ಕೊಚ್ಚು ಕಲಿತನದಚ್ಚು ಸುಖ ಕಣಿ ಮುಚ್ಚುಮರೆಯಿಲ್ಲ (ಬ.ಪು.)

ಎಂದು ಹಾಡಿ ಹೊಗಳಿದನು. ಬಹುಶಃ ಬ್ರಹ್ಮಯ್ಯನಿಗೆ ತಾನೊಬ್ಬ ಅನುಪಮ ಶರಣನೆಂಬ ಭಾವನೆಯು ಬಂದಿರಬೇಕು ಇದರಿಂದ. ಆದರೆ ಅ ಹಮ್ಮಿನ ಹೆಮ್ಮೆಯ ಬೇರನ್ನು ಕಿತ್ತು ಅವನಿಗೆ ಸಮತೆಯ ಪಾಠವನ್ನು ಕಲಿಸುವ ಗುರುವೊಬ್ಬ ಅಲ್ಲಿಯೇ ಇದ್ದ.

ಅವನ ಹೆಸರೂ ಬ್ರಹ್ಮಯ್ಯ. ಆದರೆ ಅವನ ವೇಷ ಭಾಷೆ. ವಿಚಿತ್ರ. ಆ ಬ್ರಹ್ಮಯ್ಯ ಕಿನ್ನರನಾದರೆ ಇವನು ಭೃಂಗೀಶ. ಅವನ ಕಾಯಕ ಸಂಗೀತವಾದರೆ ಇವನದು ನೃತ್ಯ. "ಮುಂಜುಟ್ಟ ಕಟ್ಟಿ ನೊಸಲಲ್ಲಿ ವಿಭೂತಿಯನ್ನಿಟ್ಟು ಕಿವಿಯಲ್ಲಿ ಕೆಂದಳಿರ ಧರಿಸಿ ಕಾವಿಯ ಕಪ್ಪಡವನುಟ್ಟು ಎಡದ ಪಾದದಲ್ಲಿ ಅಂದುಗೆ ಬಲದ ಪಾದದಲ್ಲಿ ಗೆಜ್ಜೆ ದಕ್ಷನ ಕುರಿದಲೆಯ ಕೋಡಿನ ತೆರಬಲಿದ ಕೊಂಬು ಎಡಗೈಯಲ್ಲಿ, ಬಲಗುದುಗೆ ಗಲದಕೈಯಲ್ಲಿ ಹಿಡಿದು ತಿರುಹುತ್ತ, ಮುಗುಳ್ನತೆಯ ನಗುತ್ತ, ಶಿವಭಕ್ತರ ಗೃಹಕ್ಕೆ ಬಂದು ಮೋರೆಯ ಮುರುಕಿಸುತ್ತ ನಗಿಸುತ್ತಂ ಭೃಂಗೀಶ್ವರನಂತೆ ಕೋಡಂಗಿಯಾಟವನಾಡುತ್ತಾ ಶಿವಭಕ್ತರಲ್ಲಿ ಧಾನ್ಯವ ಬೇಡಿ ತಂದು ಜಂಗಮಾರ್ಚನೆಯ ಮಾಡುತ್ತಿರಲು"

ನಿಚ್ಚಲರ್ಜಿಸಿ ತಂದ ಬತ್ತವು
ವೆಚ್ಚ ಕಿಬ್ಬಳವಾಗಿ ಕುಂದವು
ಹೆಚ್ಚವದರಿಂ ಜಂಗಮಾವಳಿಗೊಲಿದು ಮಾಡುತ್ತ
ಅಚ್ಚಿಗವನುಳಿದಮಳ ಚಿತ್ತಂ
ಹೆಚ್ಚಿ ಸತತಂ ದಾಸ ಭಾವದ
ಸಚ್ಚರಿತದಿಂದಸಮಭಕ್ತಿ ಸಮನ್ನತಿಯೊಳಿರಲು (ಬ.ಪು.)

ಎಡರಡಸಿದ ಬಡಭಕ್ತನೊಬ್ಬ ಕಿನ್ನರ ಬ್ರಹ್ಮಯ್ಯನನ್ನು ಕಂಡು, ತನ್ನ ಬಡತನವನ್ನು ನೀಗಿಕೊಳ್ಳುವ ಆಸೆಯಿಂದ ಬರುತ್ತಾನೆ. ಆ ಬ್ರಹ್ಮಯ್ಯನನ್ನು ಕಾಣಲೆಂದು ಹೊರಟು ಈ ಬ್ರಹ್ಮಯ್ಯನ ಬಳಿಗೆ ಬರುತ್ತಾನೆ. ಕಲಿಕೇತವೇಷದ ಮೂಲಕ ಕಲಿಕೇತ

ಬ್ರಹ್ಮಯ್ಯನೆಂಬ ಹೆಸರು ಹೊಂದಿದ್ದ ಈ ಬ್ರಹ್ಮಯ್ಯ ಬಂದ ಕಾರಣವನ್ನು ಕೇಳುತ್ತಾನೆ. ಆ ಬಡಭಕ್ತ ತನ್ನ ಹೃದ್ಗತವನ್ನು ತಿಳಿಸುತ್ತಾನೆ. ಕಲಕೇತ ಬ್ರಹ್ಮಯ್ಯ ನಕ್ಕು, 'ಆ ಕೈ ಕೂಲಿಕಾರ, ಫಲವನರ್ಥಿಸಿ ಪೂಜಿಸುವ ಸಾಮಾನ್ಯ ಭಕ್ತ ನಿನಗೇನು ಕೊಡಬಲ್ಲ? ಆ ಬೆಲೆಗೆ ಕೆಲಸಂಗೆಯ್ವ ಬಂಟ ನಿನಗೇನ ಕೊಡಬಲ್ಲ? ಅಷ್ಟು ದೂರ ವ್ಯರ್ಥ ಹೋಗಿ ಬಳಲಬೇಡ. ಇದೋ, ತೆಗೆದುಕೊ" ಎಂದು ತನ್ನ ಟಗರಿನ ಕೊಂಬನ್ನು ಅಲ್ಲಾಡಿಸುತ್ತಾನೆ. ಕೇತುವಿನ ಬಾಯಿಂದ ಅವನು ಮೊದಲು ನುಂಗಿದ್ದ ಸೂರ್ಯನ ಶರೀರದ ಕಿಡಿಗಳು ಹೊರಚೆಲ್ಲಿದಂತೆ ಹೊನ್ನಿನ ರಾಶಿ ಬೀಳುತ್ತದೆ.

'ಸಾಸಿವೆಯ ಮೇಲೆ ಸಾಗರವನ್ನಿರಿಸಿ' ದಂತಾಗುತ್ತದೆ ಆ ಬಡಭಕ್ತನ ಅವಸ್ಥೆ! ತಾನೆತ್ತುವಷ್ಟನ್ನು ಹೊತ್ತುಕೊಂಡು ಹೋಗಿ ಬಸವಣ್ಣನನ್ನು ಬೇಡುತ್ತಾನೆ–ಒಂದು ಆಳು ಕೊಟ್ಟರೆ ಉಳಿದಷ್ಟು ಹೊನ್ನನ್ನು ಕೊಂಡೊಯ್ವೆನೆಂದು ಹೊಂಗಿ ಹೊರೆಯೇರಿ, ಈ ಬ್ರಹ್ಮಯ್ಯನ ಮನೆಗೆ ಧಾವಿಸುತ್ತಾನೆ ಬಸವಣ್ಣ. ಈ ಸುದ್ದಿ ಮುಟ್ಟಿ ಕಿನ್ನರಿ ಬ್ರಹ್ಮಯ್ಯನೂ ಓಡಿ ಬರುತ್ತಾನೆ.

ಹೊಡವಡುತಲಿಹ ಕಿನ್ನರಯ್ಯನ
ನೊಡನೆ ಕೈವಿಡಿದೆತ್ತಿ ಕಲಕೇ–
ತೊಡೆಯನೆತ್ತಿ ಸಂಭ್ರಮವೊಗೆವುತಿರೆ ತೆಗೆದು ಬಿಗಿದಪ್ಪಿ
ಜಡವಿರಹಿತಂ ನಿಃ ಪ್ರಪಂಚದ
ಬೆಡಗಿನೊಳ್ಪಿನ ಮರೆಯ ಶೀಲಂ
ಪಿಡಿಸಿ ಲಿಂಗಪ್ರಾಣಮಥನಸದನುಭಾವಮನರುಹಿ ॥ (ಬ.ಪು.)

ಬಸವಣ್ಣ ಕಿನ್ನರಯ್ಯರಿಬ್ಬರನ್ನೂ ಸತ್ಕರಿಸಿ ಕಳಿಸಿಕೊಡುತ್ತಾನೆ–ಕೆಳಗಣ ಸಂದೇಶವನ್ನಿತ್ತು.

"ಬೇಡಲೇತಕ್ಕೆ ಕಾಯಕವ ಮಾಡಿಹೆನೆಂದು? ಕೊಡೆದೊಡೆ ಒಡಗೂಡಿ ಒಯ್ಯಲೇತಕ್ಕೆ? ಭಕ್ತರು ಮಾಡಿಹರೆಂದು ಗಡಿತಡಿಗಳಲ್ಲಿ ಕವಾಟ ಮಂದಿರಗಳ ಮುಂದೆ ಗೊಂದಿಗಳಲ್ಲಿ ನಿಂದು ಕಾಯಲೇತಕ್ಕೆ? ಈ ಗುಣ ಕಾಯಕದಂದವೆ? ಈ ಗುಣ ಹೊಟ್ಟೆಗೆ ಕಾಣದ ಸಂಸಾರದ ಪಟ್ಟುವನ ಇರವು. ಉಭಯ ಭ್ರಷ್ಟಂಗೆ ಕೊಟ್ಟ ದ್ರವ್ಯ ಮೇಖಲೇಶ್ವರ ಲಿಂಗಕ್ಕೆ ಮುಟ್ಟದೆ ಹೋಯಿತು."

ಬೇಡಿ ಮಾಡಿವುದು ಕೂಲಿ, ಕಾಯಕವಲ್ಲ; ಮಾಡುವೆನೆಂಬುದು ಮನದಲ್ಲಿ ಹೊಳೆದರೆ ಅದೂ ಕರ್ಮ, ಕಾಯಕವಲ್ಲ ! ಬಯಸದೆ ಭ್ರಮಿಸದೆ ಭಕ್ತಿಯಿಂದ ಮಾಡುವ ಕಾಯಕವೇ ಕಾಯಕ–ಎಂಬ ಹಿರಿದಾದ ಹೊಲಬನ್ನು ಹೇಳಿಕೊಟ್ಟ



**ಕಲಕೇತ ಬ್ರಹ್ಮಯ್ಯ – ಕಿನ್ನರಿ ಬ್ರಹ್ಮಯ್ಯ**

ಕಲಕೇತಯ್ಯ ಕಾಯಕಯೋಗಿಯೆನಿಸಿ ಕಲ್ಯಾಣದಲ್ಲಿಯೇ ಕೊನೆಯುಸಿರನ್ನೆಳೆಯುತ್ತಾನೆ – "ಜಗಕ್ಕಹುದಾದುದನಿತ್ತು, ಜಗಕ್ಕಲವಾದುದ ಕೊಟ್ಟು, ಜಗಹಿಡಿದುದು ಬಿಟ್ಟು, ತಾನರಿದುದ ಮರೆತು, ಆ ಮರವೆಗೊಡಲಾದುದ ಮರೆದು, ಉಭಯದ ಕೋಡ ಕಿತ್ತು, ನಲಿದೊಲವಿನ ಕೊಂಬಿನನಿರಿಗೆಯಲ್ಲಿ ಒಲಿದಾಡಿ, ಮೇಖಲೇಶ್ವರ ಲಿಂಗವನೊಡಗೂಡಿ" ನಿಲ್ಲುತ್ತಾನೆ. ಕಿನ್ನರಿಯ ಬ್ರಹ್ಮಯ್ಯ ಪುಟವಿಟ್ಟ ಚಿನ್ನವಾಗಿ ಇನ್ನೂ ಪ್ರಕಾಶಿಸುತ್ತಾನೆ. ಬಸವಣ್ಣನ ಹತ್ತಿರದ ಮಿತ್ರರಲ್ಲೊಬ್ಬನಾಗುತ್ತಾನೆ. ಅಕ್ಕಮಹಾದೇವಿ ಅನುಭವ ಮಂಟಪಕ್ಕೆ ಬರಲು ಆಕೆಯನ್ನು ಸ್ವಾಗತಿಸುವ ಸೌಭಾಗ್ಯ ಈತನದಾಗುತ್ತದೆ. ಮೊದಲು ಕಂಡಾಗ 'ಕಾಯದಲ್ಲಿ ಕಳವಳವಿರಲು, ಪ್ರಾಣದಲ್ಲಿ

ಮಾಯೆಯಿರಲು ಏತರ ಮನ, ಇದೇತರ ನಿರ್ವಾಣ? ಮಹಾಲಿಂಗ ತ್ರಿಪುರಾಂತಕನು ನಿನ್ನ ಸಂಸಾರಿಯೆಂಬನಲ್ಲದೆ ಸಜ್ಜನೆಯೆಂದು ಕೈವಿಡಿವನಲ್ಲ ಕೇಳಾ ಮರುಳೆ"ಎಂದು ನಿಷ್ಠುರ ನುಡಿಯುತ್ತಾನೆ. ಆದರೆ ಅನುಭವ ಮಂಟಪದಲ್ಲಾದ ಅಗ್ನಿಪರೀಕ್ಷೆಯಲ್ಲಿ ಅಕ್ಕನ ಆತ್ಮಶ್ರೀ ತೊಳಗಿ ಬೆಳಗಲು–

"ಶರಣು ಶರಣಾರ್ಥಿ ಎಮ್ಮವ್ವ, ಶರಣು ಶರಣಾರ್ಥಿಯಾಮೂರ್ತಳೆ, ಶರಣು ಶರಣಾರ್ಥಿ ಎನ್ನಕ್ಕ ಮಹಾದೇವಿ ಮಹಾಲಿಂಗ ತ್ರಿಪುರಾಂತಕನೊಡ್ಡಿದ ತೊಡಕ, ನೀವು ಬಿಡಿಸಿದರಾಗಿ ನಿಮ್ಮಿಂದ ನಾನು ಬದುಕಿದೆನು. ಎಲೆ ತಾಯೆ, 'ಶರಣು ಶರಣಾರ್ಥಿ" ಎಂದು ತನ್ನ ಧನ್ಯತೆಯನ್ನು ವಚನವಾಗಿ ಹರಿಸುತ್ತಾನೆ. ಮರುಳಶಂಕರ ದೇವರ ಗುಪ್ತ ಭಕ್ತಿಯನ್ನು ಕಂಡು' ಆಕಾರವೆಂಬನೆ? ನಿರಾಕಾರವಾಗಿದೆ ! ನಿರಾಕಾರವೆಂಬನೆ? ಅತ್ತತ್ತ ತೋರುತ್ತಿದೆ. ತನ್ನನಳಿದು ನಿಜ ಉಳಿದ ಮಹಾಲಿಂಗ ತಿಪುರಾಂತಕನ ನಿಲವ ಕಂಡು ಒಳಕೊಂಡ ಮರುಳಶಂಕರ ದೇವಮೂರ್ತಿಯ ನಿನ್ನಿಂದ ಕಂಡು ಬದುಕಿದೆನು ಕಾಣಾ ಸಂಗನ ಬಸವಣ್ಣಾ ಎಂದು ಕೊಂಡಾಡುತ್ತಾನೆ. 'ಜಂಗಮವೆ ಹೊರಗೆ ಬಂದಿರಲು ಒಳಗೆ ಲಿಂಗಾರ್ಚನೆ ಎಂತಯ್ಯ?' ಎಂದು ಕಲಹ ಲೀಲಾಲೋಲಚಿತ್ತನಾಗಿದ್ದ ಪ್ರಭುದೇವರಿಗೆ "ತನು ಸಜ್ಜೆ ಮನ ಲಿಂಗವಾದ ಬಳಿಕ ಅನುವ ಬೇರೆ ಮತ್ತೆ ಅರಸಲುಂಟೆ? ತನುವೆ ಬಸವಣ್ಣ, ಮನವೆ ಪ್ರಭುದೇವರೆಂಬ ಘನವೊಳಕೊಂಡಿರ್ದ ಬಳಿಕ ಗುಣಾವಗುಣವ ಸಂಪಾದಿಸುವರೆ? ಮಹಾಲಿಂಗ ತ್ರಿಪುರಾಂತಕ ದೇವಾ, ಸಂಗನ ಬಸವಣ್ಣನಲ್ಲಿ ನಿಮ್ಮಡಿಗಳಲ್ಲಿ ಸಂದು ಸಂಶಯವುಂಟೇ? 'ಬಿಜಯಂಗೈವುದಯ್ಯ ಪ್ರಭುವೆ !' ಎಂದು ಆಹ್ವಾನಿಸುತ್ತಾನೆ.

ಬರುಬರುತ್ತ ಕಿನ್ನರಯ್ಯನು ಬಸವಣ್ಣನವರ ಆತ್ಮಸಖನಾಗುತ್ತಾನೆ. ಕಿನ್ನರಯ್ಯನ ಪ್ರಾಣಪಕ್ಷಿಹಾರಿ ಹೋಗಿರಲು ತಾಯಿಯನ್ನು ಕಳೆದುಕೊಂಡ ತಬ್ಬಲಿಯಂತೆ ಹೋರಾಡಿ ರೋದಿಸುತ್ತಾನೆ ಬಸವಣ್ಣ.

> ಕಿನ್ನರೇಶ್ವರ ಬೊಮ್ಮಿ ದೇವಾ
> ಎನ್ನ ಜೀವಾ ಎನ್ನ ಭಾವಾ
> ಎನ್ನ ಲಿಂಗವೆ ಎನ್ನ ಗುರುವೆ ಎನ್ನ ಸುರತರುವೆ
> ಎನ್ನ ಪರುಷದ ಕಣಿಯೆ ಗುಣಿಯೇ
> ಎನ್ನ ಚಿಂತಾಮಣಿಯೆ ಮೇರುವೆ
> ಎನ್ನ ಸಜ್ಜನಮಿತ್ರನೇ ನೀನಿಂದು ಬಯಲಾದ್ಯೆ ! (ಬ.ಪು.)

ಎಂದು "ಕಿನ್ನರನ ಗುಣವೃಂದಮಂ ನೆನೆ ನೆನೆದು ಲೋಚನವಾರಿಯಲಿ ನೆನೆದು ನೊಂದು ಶೋಕ ಪಾವಕನಿಂದ ತನು ಬೆದಬೆದನೆ ಬೇವುತ್ತ" ದುಃಖಿಸುತ್ತಾನೆ. ತನ್ನ ಪ್ರಾಣವನ್ನೇ ಪಣಕ್ಕೆ ಹಚ್ಚಿ ಈ ಪ್ರಾಣಸಖನನ್ನು ಮತ್ತೆ ಪಡೆಯುತ್ತಾನೆ.

ಕಿನ್ನರಯ್ಯನೂ ಇದಕ್ಕೆ ತಕ್ಕಂತೆಯೇ ವರ್ತಿಸುತ್ತಾನೆ. ಹರಳಯ್ಯ ಮಧುವರಸರ ಎಳಹೂಟಿಯ ತರುವಾಯ ಕಲ್ಯಾಣವನ್ನು ಬಿಟ್ಟು ಶಿವಶರಣರು ಉಳಿವಿಯತ ಹೊರಡಲು ಚನ್ನಬಸವೇಶ್ವರ ಮಡಿವಾಳ ಮಾಚಯ್ಯನವರೊಡನೆ ಕಿನ್ನರಿ ಬ್ರಹ್ಮಯ್ಯನೂ ಶರಣರ ರಕ್ಷಾಮಣಿಯಾಗಿದ್ದು ಯುದ್ಧ ಮಾಡುತ್ತಾನೆ. ಕಾದ್ರೋಳಿ ಯುದ್ಧದಲ್ಲಿ ಪ್ರಾಯಶಃ ಮಡಿವಾಳ ಮಾಚೀದೇವನು ಮರಣಹೊಂದಲು ಮುಂದೆ ತಾನೇ ಶಿವಶರಣರ ಗಣನಾಯಕನಾಗಿ ಸಾಹಸೋತ್ಕರ್ಷವನ್ನು ತೋರುತ್ತಾನೆ. ಕೊನೆಗೆ ಗೊಂಡಾರಣ್ಯದ ಮಧ್ಯದಲ್ಲಿರುವ ಮಹಾಮನೆಯ ಮುಂದೆ ಅಳಿಯ ಬಿಜ್ಜಳನ ಸೈನ್ಯದೊಡನೆ ಕೊನೆಯ ಕಾಳಗವನ್ನು ಮಾಡುತ್ತಾನೆ. ಅಲ್ಲಿ ತಡಸಲು ತಡಸಲಾಗಿ ಇಳಿಜಾರಿನಲ್ಲಿ ಹರಿದುಬರುವ ಹೊಳೆಯನ್ನು ಮಹಾಮನೆ ಗುಹೆಯ ದ್ವಾರದಿಂದ ೨೦೦ ಅಡಿ ಎತ್ತರದಲ್ಲಿ ಭೂಮಿ ಅಗೆದು ಒಳಕ್ಕೇ ತಿರುಗಿಸಿ ಆ ಗುಹೆಯನ್ನೇ ಜಲದುರ್ಗವನ್ನಾಗಿ ಪರಿವರ್ತಿಸುತ್ತಾನೆ. ಅಲ್ಲಿ ಅಳಿದುಳಿದ ಕೆಲವೇ ಶಿವಶರಣರೊಡನೆ ಕೊನೆಯವರೆಗೆ ಕಲಿತನದಿಂದ ಕಾದಿ ಶರಣಮರಣವನ್ನು ಪಡೆಯುತ್ತಾನೆ. ಇಂದಿಗೂ ಕಿನ್ನರಿ ಬ್ರಹ್ಮಯ್ಯನ ಹೊಳೆಯೆಂದು ಹೆಸರಾಗಿರುವ ಆ ಹೊಳೆ ಜಲಪಾತ ಗೀತದಲ್ಲಿ ಕಿನ್ನರಯ್ಯನ ಕೀರ್ತಿಯನ್ನು ಹಾಡುತ್ತಲಿದೆ. ಮಹಾಮನೆಗೆ ಸಮೀಪದಲ್ಲಿರುವ ಕಿನ್ನರಯ್ಯನ ಸಮಾಧಿಯ ಮೇಲೆ ಶೋಭಿಸುವ 'ಕಿನ್ನರಯ್ಯ' ಎಂಬ ಉಲ್ಲೇಖವಿರುವ ಶಿಲಾಶಾಸನವು ಜಗತ್ತಿಗೆ ಕಿನ್ನರಿ ಬ್ರಹ್ಮಯ್ಯನ ನಿರ್ಮಲ ಚರಿತ್ರವನ್ನು ಸಾರಿಸಾರಿ ಹೇಳುತ್ತಲಿದೆ. ಅವನ ಹೆಸರು ಗಣಸಹಸ್ರದಲ್ಲಿ ಸೇರಿ ಪಠಸಿದವರ ಪಾಪ ಪರಿಹಾರ ಮಾಡುತ್ತಲಿದೆ.

# ಮೇದಾರ ಕೇತಯ್ಯ

ಮರಣ ಬಂದರು ಕೂಡ ಶರಣ ಕಾಯಕ ಮುಗಿಸಿ
ಹರುಷದಲಿ ಹರಣ ನೀಗಿದನು–ಕೇತಯ್ಯ
ಹರನಿತ್ತ ಪದವ ಕರುಣೆಯಲಿ
ಶಿವನ ಬುಟ್ಟಿಯ ಮಾಡಿ ಭುವನ ಕಳಸಕೆ ಕಟ್ಟಿ
ಶಿವದೀಪ ಹಚ್ಚಿ ಕಲ್ಯಾಣ ಪುರದೊಳಗೆ
ಶಿವಬೆಳಕ ಕಂಡ ಕೇತಯ್ಯ

ಮೇದಾರ ಕೇತಯ್ಯನು ಹುಟ್ಟಿದೂರಾವುದು? ಕೈ ಹಿಡಿದ ಮಡದಿಯಾರು? ಪಂಡಿತರ ಸಾಹಿತ್ಯದಲ್ಲಿ ಈ ಪ್ರಶ್ನೆಗಳಿಗೆ ಉತ್ತರವಿಲ್ಲ. ಆದರೆ ಜನಪದ ಸಾಹಿತ್ಯದಲ್ಲಿ ಉತ್ತರವಿದೆ.

ಮಲೆನಾಡ ಗುಡಿಯೊಳಗೆ ಉಳಿವೆ ಬೆಟ್ಟದ ಕೆಳಗೆ
ಬೇಲೂರ ಕೇತ ಮೇದಾರ–ಕಾಡೊಳಗೆ
ಬೆಳೆದಾಡಿ ಕಲೆತ ಶಿವಮತವ
ಕೇತಯ್ಯನಿನ ಮಡದಿ ಸಾತೆವ್ವಳೆಂಬುವಳು
ಜಾತಿ ಮೇದರರದು ಕಸಬಿನಲಿ–ನಾಡೊಳಗೆ
ನೀತಿ ಶಿವಮತದ ಒರೆಗಲ್ಲು

ಕಾಡಿಗೆ ಹೋಗಿ ಬಿದಿರುಗಳನ್ನು ಕಡಿದು ತರುವುದು, ಅವುಗಳಿಂದ ಬುಟ್ಟಿ ಮೊರಗಳನ್ನು ಹೆಣೆಯುವುದು, ಅವುಗಳನ್ನು ಮಾರಿ ಬಂದ ಹಣದಿಂದ ದಾಸೋಹ ನಡೆಸಿ ತಾನು ಜೀವಿಸುವುದು–ಇದು ಆತನ ಸತ್ಯಶುದ್ಧ ಕಾಯಕ.

ಬತ್ತೀಸ ರಾಗದೊಳು ಸುತ್ತು ಹಾಡಿದ ಬಿದಿರು
ಹೊತ್ತೊಯ್ವ ಕಂಬಿ ಪರುವತಕೆ ! ಮಾಗಡದ
ಸತ್ಯುಳ್ಳ ತೇರು ಬೆಳವಲಕೆ
ಚೆನ್ನಂಗಿ ಬಿದಿರೆಳೆಯ ನುಣ್ಣ ಮಾಟದ ತೇರ

ಹೊನ್ನ ಮಾಗಡದ ಹೂದೇರ–ಮೇದಾರ
ಅಣ್ಣಂದಿರಂದು ಕಟ್ಟಿದರು
ಹೀಗೆ ಬಾಳು ಸಾಗಿಸುತ್ತಿರುವಾಗ ಬಸವಣ್ಣನ ಕರೆ ಕೇಳಿಸುತ್ತದೆ.
ಉದಿತ ಜೀವನ ರಾಟೆ ಕದಿರ ಕಾಯಕ ಮಾಡಿ
ನೆದರೆಂಬ ನೂಲ ಬಲು ನೂತ–ಬಸವಣ್ಣ
ಸದರೆಂದು ನೇದ ಹೊಸ ಮತವ

ಜೀವಿಗಳನ್ನೇ ರಾಟೆಗಳನ್ನಾಗಿಸಿ, ಕಾಯಕವನ್ನೇ ಕದಿರನ್ನಾಗಿ ಮಾಡಿ, ದರ್ಶನದ ನೂಲನ್ನು ನೂತು ಹೊಸ ಮತವನ್ನು ನೆಯ್ದ ಆ ಮಹಾತ್ಮನ ಕರೆಗೆ ಕಿವಿಗೊಡದವರಾರು?

ಬಸವ ಸಾರಿದನಂದು ಕುಶಲದಲಿ ವಚನಗಳ
ಮುಸುಕಿರುಳು ಹರಿದು ನಸುಕಾತ–ಜಗದೊಳಗೆ
ಹೊಸ ಮತದ ಸೂರ್ಯನುದಿಸಿದನು !

ಆ ಸೂರ್ಯನ ಕಿರಣಗಳು ಈ ಸತಿಪತಿಗಳ ಕಣ್ಣುಗಳನ್ನು ಸೆಳೆದುವು.

ಕೇತು ಕೇಳಿದನಂದು ಸಾತವ್ವ ಹೇಳಿದಳು
ಜೀತ ಶಿವಮತಕೆ ನಾವಿಂದು–ಪತಿದೇವ
ಮಾತಾಡಿ ಬಹಳ ಫಲವೇನು?

"ಮಾತಾಡಿ ಬಹಳ ಫಲವೇನು?" ಆ ತಾಯಿಯ ಈ ಪ್ರಶ್ನೆಯನ್ನು ಇಂದು ನಾವು ನಮಗೆ ಕೇಳಿಕೊಳ್ಳಬೇಕು. ಮಾತು ಕಡಿಮೆ ಮಾಡಿ ಏನು ಮಾಡಬೇಕು?

ಮಲೆನಾಡ ಕಾಡೊಳಗೆ ಅಲೆದಾಡಿ ಕಲಿತಿರುವ
ಚೆಲುವ ಶಿವಮತದ ಬೆಳಕನ್ನು–ತಿಳಿಯುದಕ್ಕೆ
ಒಲಿದು ಕಲ್ಯಾಣ ಸೇರೋಣ

ಸರಿ, ಇಬ್ಬರೂ ಸೇರಿದರು ಕಲ್ಯಾಣ. ಬಸವಣ್ಣನವರನ್ನು ಕಂಡು ಕುಣಿದಾಡಿದ ಕೇತಯ್ಯ.

"ಎನ್ನ ಚಿತ್ತಕ್ಕೆ ಆಚಾರಲಿಂಗವಾದಾತ ಬಸವಣ್ಣ ;
ಎನ್ನ ಬುದ್ಧಿಗೆ ಗುರುಲಿಂಗವಾದಾತ ಬಸವಣ್ಣ;
ಎನ್ನ ಅಹಂಕಾರಕ್ಕೆ ಶಿವಲಿಂಗವಾದಾತ ಬಸವಣ್ಣ ;
ಎನ್ನ ಮನಕ್ಕೆ ಜಂಗಮಲಿಂಗವಾದಾತ ಬಸವಣ್ಣ ;

ಎನ್ನ ಜ್ಞಾನಕ್ಕೆ ಪ್ರಸಾದಲಿಂಗವಾದಾತ ಬಸವಣ್ಣ ;
ಎನ್ನ ಭಾವಕ್ಕೆ ಮಹಾಲಿಂಗವಾದಾತ ಬಸವಣ್ಣ ;
ಎನ್ನ ಸ್ಥೂಲ ತನುವಿಂಗೆ ಇಷ್ಟಲಿಂಗವಾದಾತ ಬಸವಣ್ಣ ;
ಎನ್ನ ಸೂಕ್ಷ್ಮತನುವಿಗೆ ಪ್ರಾಣಲಿಂಗವಾದಾತ ಬಸವಣ್ಣ ;
ಎನ್ನ ಕಾರಣತನುವಿಂಗೆ ಭಾವಲಿಂಗವಾದಾತ ಬಸವಣ್ಣ ;
ಇಂತೆಂದರಿದೆನಾಗಿ ಗೌರೇಶ್ವರ ಲಿಂಗದಲ್ಲಿ ಸುಖಿಯಾದೆನು"

ಹೀಗೆ ಧನ್ಯತೆಯ ಉಯ್ಯಲೆಯಲ್ಲಿ ತೂಗುಯ್ಯಾಲೆಯನಾಡುತ್ತ ತನ್ನ ನಿತ್ಯ ಕಾಯಕದಲ್ಲಿ ನಿಮಗ್ನನಾಗಿರುತ್ತಾನೆ ಕೇತಯ್ಯ್.

"ದಿನದಿನಕೆ ಕೇತಯ್ಯ ಕನಕಾದ ಶರಣರಿಗೆ
ಜನಕಾದ ಕೇತ ನಿಚ್ಚಣಿಕೆ–ನಿಜಪದಕೆ
ಹೊನಲಾದ ಹೊಲಸು ತೊಳೆವುದಕೆ
ಹೊಸ ಮತವೆ ಲಿಂಗಾಗಿ ಕಸಬೆಂಬ ಕರಡಿಗೆಯು
ಹಸನಮನವದಕೆ ಶಿವದಾರ–ದಾಸೋಹ
ಉಸಿರು ಶಿವಶರಣ ಕೇತುನಿಗೆ"

ತನ್ನ ಜೀವನದ ಉಸಿರಾದ ದಾಸೋಹಕ್ಕಾಗಿ ಕೇತಯ್ಯ 'ಹರಮತದ ಹಾಡುಗಳ ಮೊರದೊಳಗೆ ಹೆಣೆಹೆಣೆದು' ಕರಡಿಗೆಯ ತುಂಬಿ ಕಲ್ಯಾಣಪೇಟೆಯಲ್ಲಿ ಶರಣರಿಗೆ ಮಾರುತ್ತಾನೆ ! ಈ ಶರಣನ ಕರಸ್ಪರ್ಶಕ್ಕಾಗಿ ಕಾತರಿಸುತ್ತಿದ್ದುವೋ ಎಂಬಂತೆ "ಅಡವಿಯೊಳು ಬಿದಿರು ಬಲು ಬೆಳೆದು ಕೇತನಿಗೆ ಸಡಗರದಿ ತೂಗಿ ಕರೆಯುವುದು!" ಸರಿ, ತೂಗಿ ಕರೆವ ಬಿದಿರು ತರುವುದು, ಬುಟ್ಟಿ ಹೆಣೆವುದು, ಮಾರಿ ದಾಸೋಹ ನಡೆಸುವುದು. ಸತ್ಯಸತಿ ಸಾತವ್ವ ಪತಿಗೆ ತಕ್ಕ ಸತಿ. ಪತಿಗೆ ಕಾಯಕ ಮಾಡಿ ಬೇಸರವಿಲ್ಲ, ಸತಿಗೆ ದಾಸೋಹ ಮಾಡಿ ಬೇಸರವಿಲ್ಲ. ನೂರೊಂದು ಸಾವಿರದ ಭೂರಿಜಂಗಮರು ಈ ದಾಸೋಹದಲ್ಲಿ ತೃಪ್ತಿ ಪಡೆಯುತ್ತಾರೆ. ಕೇತಯ್ಯನ ಕೀರ್ತಿ ಕಲ್ಯಾಣವನ್ನು ತುಂಬಿ ಹೊರಸೂಸಿ ಹರಿಯತೊಡಗುತ್ತದೆ.

ಒಮ್ಮೆ ಶಿವನೊಂದು ನಾಟಕ ನಡಸುತ್ತಾನೆ. ಕೇತಯ್ಯನು ಯಾವ ಬಿದಿರನ್ನು ಕಡಿದರೂ ಅದರೊಳಗಿನಿಂದ ಹೊನ್ನು ಸುರಿಯುವಂತೆ ಮಾಡುತ್ತಾನೆ. ಕಾಯಕದಿಂದ ಬರದ ಕಸವರವೂ ಕಸವೆಂದು ಬಗೆದಿದ್ದ ಕೇತಯ್ಯ ಆ ಹೊನ್ನನ್ನು ಮುಟ್ಟುವುದಂತಿರಲಿ, ಆ ಹೊನ್ನು ಮುಟ್ಟಿದ ಬಿದಿರು ಸಹ ತನ್ನ ಕಾಯಕಕ್ಕೆ ಅಯೋಗ್ಯವಾದುದೆಂದು ಬಿಟ್ಟುಬಿಡುತ್ತಾನೆ.

ಬಂಗಾರ ಹುಳುಹತ್ತಿ ಭಂಗವಾಗಿದೆ ಬಿದಿರು
ಕಂಗಳಿಗೆ ಬೇಡ ಹೊಲೆಯೆಂದ–ದಾಸೋಹ
ಸಂಗ ಜೋಡಣೆಗೆ ಕುಂದೆಂದ !

ಆ ಬಿದಿರನ್ನು ಬಿಟ್ಟು ಬೇರೊಂದು ಬಿದಿರನ್ನು ಕಡೆಯುತ್ತಾನೆ ಕೇತಯ್ಯ. ಬೇರೊಂದು, ಬೇರೊಂದು ಮತ್ತೊಂದು, ಇನ್ನೊಂದು–ಆದರೆ ಯಾವ ಬಿದಿರು ಕಡಿದರೂ ಹೊನ್ನು ಸುರಿಯುವುದು ನಿಲ್ಲಲಿಲ್ಲ.



**ಹರಮತದ ಹಾಡುಗಳ ಮೊರದೊಳಗೆ ಹೆಣೆಹೆಣೆಯ ಶರಣರಿಗೆ**
**ಮಾರಿದ ಮೇದಾರ ಕೇತಯ್ಯ**

ಮೆಳೆಮೆಳೆಯ ತಿರುಗಿದೆನು ಗಳವೊಂದು ಬಿದಿರಿಲ್ಲ
ಮೆಳೆತುಂಬಿ ನೋಡಿ ಮುತ್ತುಮಣಿ–ಮಾಣಿಕವ
ಮಳವಳಸಿ ತಿಳಿದ ಹೊಲೆಯೆಂದು

ಬಿದಿರು ಸಿಗಳಿಲ್ಲವೆಂದಲ್ಲ, ಕಾಯಕ–ಅದರೊಡನೆ ದಾಸೋಹ ತಪ್ಪುವುದಲ್ಲ ಎಂದು ಕೊರಗಿದ ಕೇತಯ್ಯ. ಏನುಮಾಡುವುದೆಂದು ಧ್ಯಾನಿಸುತ ನಿಂತಾಗ ಎದುರಿಗೊಂದು ಬಲ್ ಬೆಳೆದ ಬಿದಿರು ಕಾಣುತ್ತದೆ.

ಗಗನವನೆ ಮುದ್ದಿಡುತ ಸೊಗಯಿಸಿತು ಬಿದಿರೊಂದು
ಮಿಗೆ ಬೆಳೆದು ನಿಂತು ಕಾಡೊಳಗೆ–ಕೇತಯ್ಯ
ಬಗೆದದನೆ ಕೊಯ್ದು ಬೆಲ್ಲುದಕೆ

ಕಸುಬಗತ್ತಿಯನ್ನು ಮಸೆದು, ನಡುವಿಗೆ ಬಿಗಿದು ಗಳವನ್ನೇರಿ ಕಡಿಯತೊಡಗುತ್ತಾನೆ. ಹರಮತದ ಹಾಡುಗಳ ಮೊರದೊಳಗೆ ಹೆಣೆಹೆಣೆಯ ಶರಣರಿಗೆ ಮಾರಿದ ಮೇದಾರ ಕೇತಯ್ಯ

ಕಾಲು ಜಾರಿ ಕೆಳಗೆ ಬೀಳುತ್ತಾನೆ. 'ಕೂರಲಗು ಬಲು ನಟ್ಟು ಏರಿ ಮುರಿಯಿತು ಎದೆಗೆ !' ರಕ್ತ ಚಿಮ್ಮಿ ಹರಿಯತೊಡಗಿತು ! ಆದರೂ ಅಂದಿನ ದಾಸೋಹ ಮುಗಿಸದೆ ದೇಹವಿಡಲಾಗದೆಂದ ಧೀರಕೇತಯ್ಯ.

"ಹಾರದಿರು ಪಡಗಡಲ ಏರಿ ಇಳಿಯುವ ರವಿಯೆ
ಮಾರಹರನಾಣೆ ಎನ್ನಾಣೆ–ಶಿವಶರಣ
ಧೀರ ಕಾಯಕದ ಮನದಾಣೆ !"

ಎಂದು ಅಸ್ತಂಗತನಾಗುತ್ತಲಿದ್ದ ಸೂರ್ಯನಿಗೆ ಅಣೆಯಿಟ್ಟ. ಕಡಿದ ಬಿದಿರನ್ನು ಹೊತ್ತುಕೊಂಡು ನೆತ್ತರು ಬಸಿಯುತ್ತಿದ್ದಂತೆಯೇ ಮನೆಮುಟ್ಟಿದ. ಎಂದಿನಂತೆ ಬಿದಿರು ಕೆತ್ತಿ ಮೊರೆ ಹೆಣೆದ. ಬೇಗ ಮಾರಿಕೊಂಡು ಬರಲು ಹೆಂಡತಿಯನ್ನು ಕಳಿಸಿದ. ಆ ಹದಿಬದೆ ಇದಿರಾಡದೆ ಎಂದಿನಂತೆ ಮೊರ ಮಾರಿ ಅಂದಿನ ದಾಸೋಹ ನಡೆಸಿದಳು. ಬಂದ ಜಂಗಮರೆಲ್ಲ ಉಂಡು ಕೇತಯ್ಯನನ್ನು ಕೊಂಡಾಡುತ್ತ ಹೋದರು. ಆಮೇಲೆ ಕೇತಯ್ಯ ಹೆಂಡತಿಯನ್ನು ಕರೆದು, ಎದೆಯಲ್ಲಿ ಮುರಿದಿದ್ದ ಅಲಗನ್ನು ಕೀಳೆಂದು ಹೇಳಿದ. ಆ ಸಾಧ್ವಿ ಕಿತ್ತಳು.

ಶಿವನೆಂದು ಎದೆ ನೋಡಿ ತವಕದಲಿಕಿತ್ತೊಗೆದು
ಶಿವಶಿವನೆ ಮುಗಿತು ಕಾಯಕವು–ಎಂದೆನುತ
ಶಿವಯೋಗ ರವಿಯು ಮುಳುಗಿದನು !

ಇತ್ತ ಶಿವಯೋಗಿ ರವಿ ಕೇತಯ್ಯ ಮುಳುಗಿದನು ; ಅತ್ತ ಆಗಸದ ರವಿಯೂ ಮುಳುಗಿದನು !

ನೋಡಲಾರದೆ ರವಿಯು ಪಾಡ ಶಿವಶರಣರಿಗೆ
ಹೂಡುವುದು ಆಟ ಕತ್ತಲೆಲಯು–ತಂದೆಂದು
ಬಾಡಿತಾಕಾರ ಕಣ್ಮುಚ್ಚಿ !

ಸಾಧ್ವಿ ಸಾತವ್ವನ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಗುತ್ತದೆ.

ಪತಿಯೆ ಲಿಂಗಾಗಿದ್ದ ಸತಿ ಶರಣೆ ನಾನಿದ್ದೆ
ರತುನ ಕಾಯಕವೆ ಶಿವಪೂಜೆ ಇಂದ್ಹೋತು
ಜತನೇಕೆ ಇನ್ನು ಬಾಳ್ವದಕೆ–
ಎಂದು ರೋರಾಡಿ ರೋದಿಸುತ್ತಾಳೆ–ರಾತ್ರಿಯೆಲ್ಲ !
ಬೆಳಗಾಗುತ್ತದೆ :
ಬೆಳಕು ಮನೆ ಮನೆ ಹೊಕ್ಕು ಕಳವಳಿಯು ಬರುವಂತೆ
ತಿಳಿಸುವುದೊ ಸುದ್ದಿ ಯೆಂಬಂತೆ–ರವಿ ಕಿರಣ
ಹೊಳಪಿಳಿದು ಚೆದುರಿ ಚೆಲ್ಲಿದುವು !

ಬೆಳಗಾಗುತ್ತಲೇ ಶಿವಶರಣರ ಮನೆಗಳಿಗೆ ಹೂ ಪತ್ರಿಗಳನ್ನು ತಲುಪಿಸುವ ಕಾಯಕವನ್ನು ಕೈಕೊಂಡಿದ್ದ ಹೂಗಾರ ಮಾದಣ್ಣ ಕೇತಯ್ಯನ ಮನೆಗೂ ಬಂದು ಕೇತಯ್ಯ ಶಿವನಡಿಗೆ ಸಂದ ಸುದ್ದಿಯನ್ನು ಮಂಟಪಕ್ಕೆ ಮುಟ್ಟಿಸುತ್ತಾನೆ.

ಕಲ್ಯಾಣ ಮಂಟಪವು ನಿಲ್ಲದಲೆ ಕೂಡೆದ್ದು
ತಲ್ಲಣಿಸಿ ಬಂತು ಆ ಮನಿಗೆ–ಕೇತನಿಗೆ
ಸಲ್ಲುವ ಸಮಾಧಿ ಮಾಡುದಕೆ

ಜಂಗಮಪ್ರಾಣಿ ಬಸವಣ್ಣ ಈ ಸುದ್ದಿ ಕೇಳುತ್ತಲೇ ತಾನೂ ಪ್ರಾಣ ತೊರೆದು ಬಿಡುತ್ತಾನೆ. ಶರಣರೆಲ್ಲರಿಗೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ. ಅಮೃತ ಹೋಗಿ ಹಾಲಾಹಲ ಹರಡಿದಂತಾಗುತ್ತದೆ. ಮಡಿವಾಳ ಮಾಚಯ್ಯ ಬರುತ್ತಾನೆ.

"ಭಾಪುರೆ ಬಸವಣ್ಣ ಭಾಪು ಶಿವಮತ ಮಣಿಯೆ
ಭಾಪು ನಿನ್ಹೆಸರು ಅಮರಾತು–ಜಗದೊಳಗೆ
ಭಾಪು ನಿನಗಾರು ಸರಿಯುಂಟು"–

ಎಂದು ಬಸವಣ್ಣನವರ ಜಂಗಮಪ್ರಾಣಿತ್ವವನ್ನು ಕೊಂಡಾಡಿ.

ಹೊಗಳುತಲಿ ಮಾಚಯ್ಯ ತೆಗೆದುಟ್ಟ ಕಂತೆಯನು

ನೆಗೆನಗೆದು ಘಂಟೆ ಬಾರಿಸಲು–ಮೂಜಗವು
ಮಗುವಾಗಿ ಕೇಳಿ ಹೌಹಾರಿ !

ಆ ವೀರ ಘಂಟೆಯ, ವಿಜಯ ಘಂಟೆಯ ಶಬ್ದಕ್ಕೆ ಶಿವನ ಸಮಾಧಿ ಭಂಗಗೊಳ್ಳುತ್ತದೆ. ಕೇತಯ್ಯ ಬಸವಣ್ಣನವರೂ ಶಿವಯೋಗ ನಿದ್ರೆಯಿಂದ ಎಚ್ಚರಾಗುತ್ತಾರೆ. ಶರಣ ಸಮೂಹ ಕುಣಿದಾಡುತ್ತದೆ.

'ಎನ್ನ ಕಾಯದ ಕಳವಳವ ನಿಲಿಸಿ ಗುರುಲಿಂಗವ ತೋರಿದ. ಎನ್ನ ಮನದ ವ್ಯಾಕುಳವ ನಿಲಿಸಿ ಜಂಗಮವ ತೋರಿದ. ಇತು ಅಂತರಂಗ ಬಹಿರಂಗದಲ್ಲಿ ತಾನೆಯಾಗಿ ಎನ್ನ ಪಾವನದ ಮಾಡಿದನು. ಅಮರಗಣಂಗಳು ಮುನಿದು ಎನ್ನ ಕೈಲಾಸಕ್ಕೊಯ್ದರೆ, ಸದ್ಯೋನ್ಮುಕ್ತಿಯ ತೋರಲೆಂದು ಮರ್ತ್ಯಕ್ಕೆ ಮರಳು ತಂದ ಸಂಗನಬಸವಣ್ಣನೆ ಗುರುವೆನಗೆ. ಸಂಗನ ಬಸವಣ್ಣನೆ ಪರವೆನಗೆ. ಸಂಗನ ಬಸವಣ್ಣನ ಕರುಣದಿಂದ ಘನಕ್ಕೆ ಘನಮಹಿಮ ಅಲ್ಲಮಪ್ರಭುವಿನ ಶ್ರೀಪಾದವ ಕಂಡು ಬದುಕಿದೆನು ಕಾಣಾ ಗೌರೇಶ್ವರಾ' ಎಂದು ಕೇತಯ್ಯ ಹಾಡುತ್ತಾನೆ. ಮತ್ತೆ ಕಾಯಕ ಮುಂದುವರಿಸುವ, ಮತ್ತೆ ದಾಸೋಹ ಮಾಡುವ ಭಾಗ್ಯ ದೊರೆಯಿತಲ್ಲ–ಎಂದು ಹಿರಿಹಿರಿ ಹಿಗ್ಗುತ್ತಾನೆ. ತನ್ನ ಕಾಯಕದ ತತ್ತ್ವಾರ್ಥವನ್ನಿಂತು ಒರೆಯುತ್ತಾನೆ:

"ಒಂದು ಬಿದಿರಿಗೆ ಕವೆ ಮೂರು. ಆ ಕವೆಯ ಒಳಗೆ ಲಕ್ಷ ಸಿಬಿರು, ಮೂರು ಕವೆಯ ತೊಟ್ಟಿಸಿ, ಲಕ್ಷ ಸಿಬಿರು ಬಿಡಿಸಿ ಸೀಳಿದ ಬಿದಿರ ಹೊರೆ ಹೊರೆಯಲ್ಲಿ ನೆಯ್ದದೆ ತೊಟ್ಟಿಲು. ಸಂದು ಕಾಣದಂತೆ ನಾಲ್ಕು ಕಾಲನಿಕ್ಕಿ , ಅಂದವಾದ ತೊಟ್ಟಿಲ ದಂಡೆಯನಿಕ್ಕಿ ಶ್ರುತದೃಷ್ಟವೆಂಬೆರಡು ದ್ವಾರದಲ್ಲಿ ತೊಟ್ಟಿಲ ಕಟ್ಟಿ ಗೌರೇಶ್ವರ ಲಿಂಗಕ್ಕೆ ಹುಟ್ಟು ಹೋಗೋ ಎಂದು ಜೋಗುಳ ಹಾಡಿದೆ !"

ಇದೆಂಥ ಜೋಗುಳ, ಇದೆಂಥ ತೊಟ್ಟಿಲು, ಇದೆಂಥ ಕೂಸು, ಇವಳೆಂಥ ತಾಯಿ !

'ಭಕ್ತಂಗೆ ಸುಖವೂ ಸರಿ, ದುಃಖವೂ ಸರಿ, ಉರಿಸಿರಿ ಉಭಯವೂ ಸರಿ ಎನ್ನದಿರ್ದಡೆ ಭಕ್ತಿಗದೇ ಹಾನಿ' ಎಂದು ಭಕ್ತನ, ಭಕ್ತಯ ಮರ್ಮವನ್ನು ತಿಳಿಸಿದ್ದಾನೆ ಕೇತುಯ್ಯ. "ಪ್ರಾಣಸ್ಥಾನದಲ್ಲಿ ಆಪ್ಯಾಯನವಾಯಿತ್ತು; ಲಿಂಗಜಂಗಮ ತನುಸ್ಥಳದಲ್ಲಿ ಆಪ್ಯಾಯನವಾಯಿತ್ತು ; ಆಚಾರಲಿಂಗಸ್ಥಲ ಗುರುಲಿಂಗಸ್ಥಳ ಈ ಉಭಯಸ್ಥಲ ನಿಃಸ್ಥಳವಾಗಿ ತಾನೊಂದೆ ತೋರುತ್ತಿರ್ದಿತು. ಆ ತೋರುವ ತೋರಿಕೆಯೆ ಬಸವಣ್ಣನೆನಗೆ. ಆ ಬಸವಣ್ಣನ ಕರುಣದಿಂದ ಪ್ರಭುದೇವರ ಶ್ರೀ ಪಾದವ ಕಂಡು ಬದುಕಿದೆನು ಕಾಣಾ ಗೌರೇಶ್ವರಾ" ಎಂದು ಸ್ಥಳದ ನೆಲೆಕಲೆಗಳನ್ನು ತಿಳಿಸಿದ್ದಾನೆ

ಕೇತಯ್ಯ. "ಇಂದ್ರಿಯಂಗಳ ಕೊಂದಿಹನೆಂದಡೆ ಅವು ಕಂದರ್ಪನ ಹಂಗು ; ಕಂದರ್ಪನ ಕೊಂದಿಹೆನೆಂದೊಡೆ ಅವು ಕಂಗಳ ಲಾಭ ; ಕಂಗಳು ಮುಚ್ಚಿಯಲ್ಲದೆ ಲಿಂಗವ ಕಾಣಬಾರದು. ಅದು ನಿರಂಗಂಗಲ್ಲದೆ ಜಗದ ಹಂಗಿನವರಿಗಿಲ್ಲ ಎಂದೆ ಗೌರೇಶ್ವರಾ" ಎಂದು ಜಗದ ಹಂಗು ಹರಿದು ಆನಂಗನನ್ನುಳಿದು ನಿರಂಗನಾಗುವ ರೀತಿಯನ್ನು ಅರುಹಿದ್ದಾನೆ–ಕೇತಯ್ಯ. ಎಲ್ಲಕ್ಕೂ ಹೆಚ್ಚಾಗಿ ಕಾಯಕದ, ದಾಸೋಹದ ಮೇಲ್ಮೆಯನ್ನು ಮುಗಿಲೆತ್ತರಕ್ಕೆ ಮುಟ್ಟಿಸಿದ್ದಾನೆ ಕೇತಯ್ಯ.

ಶರಣ ಶಿವಕಾಯಕವ ಒರೆಗೆ ಹಚ್ಚುವರಾರು
ಹರಸಹಿತ ಸೋತು ಬದುಕಿಸಿದ–ಮೇದಾರ
ವರಕೇತ ನಿನಗೆ ಸರಿಯಾರು?

■

# ಆತ್ಮವಾನ್ ಅಮುಗಯ್ಯ

ನೇಗಿಯದೆ ಕಾಯಕವ ಜಾಗಿ ಅಮುಗನು ಮಾಡಿ
ಯೋಗ ಹೊಂದಿದನು.......ಹೂಳಜೆಯ ಜನಭಜಿಸಿ
ತೂಗಿ ದಾಸೋಹ ತೇರೆಳೆದು

ಹೂಳಜೆ, ಪುಳುಜ, ಪೂರ್ಣಜಾ ಎಂದು ಹಿಂದೆ ಕರೆಯಲ್ಪಟ್ಟು ಇಂದು' ಪುಳೂಜ' ಎಂದು ಕರೆಯಲ್ಪಡುತ್ತಿರುವ ಹಳ್ಳಿ ಭೀಮಾತೀರದಲ್ಲಿ ವಿಜಾಪುರದಿಂದ ಉತ್ತರಕ್ಕೆ ೪೫ ಮೈಲು, ಸೊಲ್ಲಾಪುರದಿಂದ ಪಶ್ಚಿಮಕ್ಕೆ ೨೮ ಮೈಲುಗಳ ಅಂತರದಲ್ಲಿದೆ. ಅಲ್ಲಿ ಸಿದ್ಧ ಸೋಮನಾಥನ ದೇವಾಲಯವಿದೆ. ಅದು ಹಿಂದೆ ಪ್ರಸಿದ್ಧ ದೇವಾಲಯವಾಗಿದ್ದಿತು. ಆದರ ಪ್ರಸಿದ್ಧಿಗೆ ಕಾರಣರಾದವರು ಆತ್ಮಜ್ಞಾನಿ ಅಮುಗಿದೇವಯ್ಯಗಳು. ಸಿದ್ಧಸೋಮನಾಥ ಅವರ ಇಷ್ಟದೇವತೆ, ಅವರ ವಚನಗಳ ಅಂಕಿತ.

ಸೊನ್ನಲಿಗೆಯಲ್ಲಿ ನೆಯ್ಗೆಯ ಕಾಯಕವನ್ನು ಕೈಕೊಂಡು ಧರ್ಮಪತ್ನಿ ವರದಾನಿಯೊಡನೆ ಶಿವಾಚಾರನಿರತನಾಗಿದ್ದ ಅಮುಗಿದೇವಯ್ಯ ಅವನ ವೃತ್ತಿಯ ಉದಾತ್ತೀಕರಣವಾಗಿದ್ದುದು ಹೀಗೆ–

"ಟಾಣ ಕೋಳುಗಳೆರಡು ಕಾಣಿ ಮಗ್ಗದೊಳೇನೊ
ತಾಣ ಹೊಂದಿದನು ಜಗದೊಳಗೆ–ಹೊಸಮತಕೆ
ಕಾಣಿ ದಾಸೋಹ ಕಾಯಕವು"

ಕಾಯಕ, ದಾಸೋಹ–ದಾಸೋಹಕ್ಕಾಗಿ ಕಾಯಕ, ಕಾಯಕಕ್ಕಾಗಿ ಕಾಯ. ಹೊಸಮತದ ಸರಿತೂಕ–ಸಮತೂಕ ಕೆಡದಿರಲೆಂದು ಕಟ್ಟಿದ ಕಾಣಿಕಾಯಕ, ದಾಸೋಹ. 'ಕಾಣಿಯ ಲೋಭ ಕೋಟಿಯ ಲಾಭವನ್ನು ಕೆಡಿಸಿತು.' ಈ ಹೊಸ ಮತದ ಕಾಣಿಯ ಲೋಭ ಕೋಟಿ ಜನರ ಲಾಭವನ್ನು ಕೆಡಿಸೀತು. ಹಾಗಾಗದಂತೆ ಹೆಣಗಿದ ಅಮುಗಿದೇವಯ್ಯ ಶುದ್ಧಾತ್ಮ, ಧರ್ಮಜೀವಿ, ಭಕ್ತ, ಜೀವನ್ಮುಕ್ತ. ಇಷ್ಟಲಿಂಗ ಧರಿಸಿದವರ ಸೇವೆ ಮಾಡೆನೆಂಬುದು ಶಪಥ. ಅವರನ್ನು ದ್ವೇಷಿಸುತ್ತಿರಲಿಲ್ಲ ; ಆದರೆ ಅವರನ್ನು ಸೇವಿಸಲಾರ ಅಷ್ಟೆ.

ಆಗ ಸೊನ್ನಲಿಗೆಯ ಅಧಿಪತಿ ಸಿದ್ಧಯೋಗಿ ಸಿದ್ಧರಾಮ. ಅವನ ಯೋಗಸಿದ್ಧಿಯು ಆದಾಗಲೇ ಕೆಲವು ಮಹಿಮೆಗಳನ್ನು ಮೆರೆದಿದ್ದಿತಾಗಿ ಅವನಿಗೆ ಇದಿರು ಮಾತನ್ನಾಡುವ ಧೈರ್ಯ ಯಾರಿಗೂ ಇರಲಿಲ್ಲ. ಆತನ ಆಜ್ಞೆಯನ್ನು ಶಿವನಾಜ್ಞೆಯೆಂದೇ ಸರ್ವರೂ ಪಾಲಿಸುತ್ತಿದ್ದರು.

ಆದರೆ ಆತನ ಆಜ್ಞೆಯನ್ನೂ ಉಲ್ಲಂಘಿಸಬಲ್ಲ ಆತ್ಮವಾನನೊಬ್ಬನು ಅಲ್ಲಿಯೇ ಇದ್ದುದು ಎಲ್ಲರಿಗೂ ಗೊತ್ತಾಗುವ ಪ್ರಸಂಗವೊಂದು ಒದಗಿ ಬಂದಿತು. ಸಿದ್ಧರಾಮೇಶ್ವರನೊಮ್ಮೆ ಮಲ್ಲಿಕಾರ್ಜುನನಿಗೆ ಮಹಾಪರ್ವವೊಂದನ್ನು ಮಾಡಲು ನಿರ್ಧರಿಸಿದನು. ರಾಶಿ ರಾಶಿಯಾಗಿ ಸಾಮಗ್ರಿಗಳನ್ನದಕ್ಕೆ ಸಂಗ್ರಹಿಸಲಾಯಿತು. ಅವುಗಳನ್ನು ಕುಟ್ಟುವ, ಕೇರುವ ಹಸನು ಮಾಡುವ ಕಾರ್ಯವನ್ನು ಸೊನ್ನಲಿಗೆಯ ಸಮಸ್ತರಿಗೂ ಸರಿಯಾಗಿ ಹಂಚಲಾಯಿತು. ಅಮುಗಿದೇವಯ್ಯನ ಪಾಲಿಗೂ ಹತ್ತು ಕೊಳಗ ಬತ್ತ ಬಿಟ್ಟಿಯ ಕೊಟ್ಟಣವಾಗಿ ಕಟ್ಟುವುದಕ್ಕೆಂದು ಬಂದಿತು. "ಸಿದ್ಧರಾಮೇಶ್ವರ ಇಷ್ಟಲಿಂಗ ಧರಿಸಿಲ್ಲ, ನಾನವನನ್ನು ಸೇವಿಸಲಾರೆ' ಎಂದು ಅಮುಗಿದೇವಯ್ಯ ತಂದವರಿಗೆ ತಳಿಸಿ ಹೇಳಿದ. ಅವರು ಕೇಳದಾಗಲು ತಂದ ಬತ್ತವನ್ನೆಲ್ಲ ತಿಪ್ಪೆಗೆ ಚೆಲ್ಲಿಸಿಬಿಟ್ಟ.

ಸಿದ್ಧರಾಮೇಶ್ವರ ಕ್ರುದ್ಧನಾದ. 'ನಾನು ಸರ್ವಾಂಗಲಿಂಗಿ; ನನ್ನ ರೋಮ ರೋಮಗಳೆಲ್ಲ ಲಿಂಗಮಯವಾಗಿವೆ ; ನನಗೆ ಇಷ್ಟಲಿಂಗ ಧರಿಸೆಂದು ಹೇಳುವ ಇವನ ಗರ್ವವೆಷ್ಟು? ಇವನು ಸೊನ್ನಲಿಗೆಯಲ್ಲಿ ಇರಕೂಡದು !'

ಗ್ರಾಮಾಧಿಪತಿಯ ಈ ಅಪ್ಪಣೆಯನ್ನು ಕೇಳಿ ಅಮುಗಿದೇವಯ್ಯ ಅಂಜಲಿಲ್ಲ, ಅಳುಕಲಿಲ್ಲ. ಸಂತೋಷವಾಗಿ ಸೊನ್ನಲಿಗೆಯನ್ನು ಬಿಟ್ಟು ಹೋಗಲು ಸಿದ್ಧನಾದ. ಎಲ್ಲಿಗೆ?

ಇನ್ನೆಲ್ಲಿಗೆ? ಶರಣ ಸರೋಜಗಳಿಗೆ ಸರೋವರವಾಗಿದ್ದ ಕಲ್ಯಾಣಕ್ಕೆ. ಅಲ್ಲಿ ನಡೆದಿದ್ದಿತು ಅಮೃತಮಂಥನ; ಅಲ್ಲಿ ಮೂಡುತ್ತಲಿದ್ದಿತು ಹೊಸದೊಂದು ದರ್ಶನ, ದಿವ್ಯದರ್ಶನ.

> ಸೋಸಿ ವಚನದ ತಿರುಳ ಬೀಸಿದವು ಸಿವಗಾಳಿ
> ಮೂಸ ಬಂದಂತೆ ಗುಂಗಿಗಳು–ಹೂಗಳಿಗೆ
> ರಾಶಿ ಜನ ಬಂತು ಮಂಟಪಕೆ

'All roads lead to Rome' – 'ಎಲ್ಲ ದಾರಿಗಳೂ ರೋಮ್ ನಗರಕ್ಕೇ ಕರೆದೊಯ್ಯುವುವು' ಎಂದು ಪಾಶ್ಚಾತ್ಯರಲ್ಲಿ ಹೇಳಿಕೆಯೊಂದುಂಟು. ಆಗಿನ



**ಆದರ್ಶ ದಂಪತಿಗಳು ಕಾಲುನಡಿಗೆಯಿಂದಲೇ ಕಲ್ಯಾಣಕ್ಕೆ ಹೊರಟರು**

ಪರಿಸ್ಥಿತಿಯಲ್ಲಿ All roads lead to Kalyan ಎಂದು ಹೇಳಬಹುದಾಗಿದಿತು. ಭಾರತ ವರ್ಷದ ಮೂಲೆ ಮೂಲೆಗಳಿಂದ ಶಿವ ವಿದ್ಯಾವಿಲೋಲರೆಲ್ಲ ಕಲ್ಯಾಣಕ್ಕೆ ಬರತೊಡಗಿದ್ದರು. ಯಾಕೆ? ಅಲ್ಲಿ 'ಶರಣ ಸರೋಜ ಸಂಕುಳ ಸಹಸ್ರಕರನ' ಉದಯವಾಗಿದ್ದಿತು. ಆತನು ಕಟ್ಟಿದ್ದ–

ವಚನ ಮಂಟಪ ಬಳ್ಳಿ ಶುಚಿ ಮೊಗ್ಗೆ ಹೂ ಬಿಡಲು
ರುಚಿ ಜೇನ ಹುಟ್ಟ ಹೊಸ ಮತವ–ಕಟ್ಟಿದರು
ವಚನ ಶಾಸ್ತ್ರಕರು ನಾಡೊಳಗೆ

ಆಮೂಗಿದೇವಯ್ಯನೂ ಅಲ್ಲಿಗೇ ಹೋಗಲು ನಿರ್ಧರಿಸಿದ. ಮನೆಯ ಸಾಮಾನುಗಳನ್ನೆಲ್ಲ ಮೂರು ಮೂಟೆಗಳಾಗಿ ಕಟ್ಟಿದ. ಒಂದು ತಾನು ಹೊತ್ತುಕೊಂಡು; ಇನ್ನೊಂದನ್ನು ಹೆಂಡತಿಗೆ ಹೊರಿಸಿದ. 'ಮೂರನೆಯ ಮೂಟೆಯನ್ನು ತರುವವರು?' ಎಂಬ ಹೆಂಡತಿಯ ಪ್ರಶ್ನೆಗೆ ಉತ್ತರವಾಗಿ ಹೇಳಿದ. "ಭಕ್ತರ ಬಂಧುವೆಂದು ಹೇಳಿಕೊಳ್ಳುವ ಶಿವನೇ ಬೇಕಾದರೆ ಹೊತ್ತು ತರುವನು–ಬೇಡವಾದರೆ ಬಿಡುವನು!"

ಸೊನ್ನಲಿಗೆಯಿಂದ ಕಲ್ಯಾಣ ೮೦ ಮೈಲಿ ದೂರ. ಆದರೂ ಆ ಆದರ್ಶ ದಂಪತಿಗಳು ಕಾಲುನಡಿಗೆಯಿಂದಲೇ ಕಲ್ಯಾಣದ ಹತ್ತಿರದ ಶಿವಪುರವನ್ನು ತಲುಪಿ ನೋಡುತ್ತಾರೆ–ಆ ಬಿಟ್ಟು ಬಂದಿದ್ದ ಮೂರನೆಯ ಗಂಟು ಅವರಿಗಿಂತ ಮೊದಲೇ ಶಿವಪುರ ಮುಟ್ಟಿದೆ ! ಶಿವನಿಚ್ಛೆ ತಾವು ಶಿವಪುರದಲ್ಲಿಯೇ ಇರಬೇಕೆಂದಿದೆಯೆಂದು ಊಹಿಸಿ ಅವರಲ್ಲಿಯೇ ಕಾಯಕನಿರತರಾದರು.

ಈ ಸತಿಪತಿಗಳು ಸೊನ್ನಲಿಗೆ ಬಿಟ್ಟು ಹೊರಟ ಮಾರನೆಯ ದಿನವೇ ಸಿದ್ಧರಾಮೇಶ್ವರನು ಹಮ್ಮಿದ್ದ ಪರ್ವ ಪ್ರಾರಂಭವಾಯಿತು. ಮೊದಲು ಮಲ್ಲಿಕಾರ್ಜುನನಿಗೆ ಎಣ್ಣೆಮಜ್ಜನ ನಡೆಯಿತು. ಆಗ ಮೂರ್ತಿಯ ಮುಖದಿಂದ ಎಲ್ಲರೂ ಬೆರಗಾರುವಂತೆ ಸ್ವರ ಹೊರಟಿತು. "ಅಮುಗಿದೇವಯ್ಯನು ಹೊರಿಸಿದ್ದ ಹೊರೆ ಹೊತ್ತು ತಲೆ ನೋವಾಗಿದೆ–ಮೆಲ್ಲಗೆ ಮಜ್ಜನ ಮಾಡಿರಿ"

ಪರಮ ಮಾಗಿ ದೇವ ತನ್ನ
ಹೊರೆಯ ಹೊರಿಸಲಾಗಿ ತಲೆಯು
ಉರಿದುದಕ್ಕೆ ನಮ್ಮ ಕಾಡಿದಪಿರೊ ಕಾಣೆನು ಮುಪ್ಪಿನ ಷಡಕ್ಷರಿ.

ಸಿದ್ಧರಾಮೇಶ್ವರ ಚಕಿತನಾದ. ತಾನು ಗೈದ ಅಪರಾಧದ ಅರಿವಾಯಿತವನಿಗೆ. ಅಮುಗಿದೇವನನ್ನು ಅರಸುತ್ತ ಶಿವಪುರವನ್ನು ತಲುಪಿದನು. ಅಮುಗಿದೇವನ ಕ್ಷಮೆ ಕೋರಿ ಮತ್ತೆ ಸೊನ್ನಲಿಗೆಗೆ ಬರಲು ಒತ್ತಾಯಪಟಿಸಿದನು. ಆಗಲೂ ಅಮುಗಿದೇವಯ್ಯ ಇಷ್ಟಲಿಂಗಧಾರಣೆಯ ತನ್ನ ಕಟ್ಟನ್ನು ಸಡಿಲಿಸಲಿಲ್ಲ. ಸಿದ್ಧರಾಮಯ್ಯನು ಇಷ್ಟಲಿಂಗ ಧರಿಸಿ ಬಂದ. ಆಗ ಅಮುಗಿದೇವಯ್ಯ ಕಲ್ಯಾಣಕ್ಕೆ ಹೊರಟು ನಿಂತಿದ್ದ. ಇಬ್ಬರೂ ಮುಂದೆ ಕಲ್ಯಾಣದಲ್ಲಿ ಕೂಡಿಯೇ ಇರುವುದಿದೆಯಲ್ಲ ಎಂದು ಸಿದ್ಧರಾಮಯ್ಯನನ್ನು ಸಾಂತ್ವನಗೊಳಿಸಿ ಕಲ್ಯಾಣಾಭಿ ಮುಖವಾಗಿ ನಡೆದ. ಕಲ್ಯಾಣವು ಅವನಿಗೆ ಸಾದರ ಸ್ವಾಗತವನ್ನು ನೀಡಿತು :

“ನೇಗಿ ಕಾಯಕ ಹೂಡಿ ತಾಗು ಬಾಗಿನ ಶರಣ
ಕೂಗಿ ನೇಯುತಲಿ ಕಲ್ಯಾಣ–ಮಂಟಪವು
ಬಾಗಿ ಶರಣೆಂದು ಬಾರೆಂದು”

ಅಲ್ಲಿ ಅವನ ಕಾಯಕದ ಕಲ್ಪಲತೆ ಕೊನರಿ ಕುಡಿಯೊಡೆಯಿತು. ಅವನ ಅನುಭವದ ಚಿಲುಮೆ ಚಿಮ್ಮಿ ಹರಿಯಿತು.

“ಮಿದ್ದಿದನು ಶಿವಗೋಷ್ಠಿ ಬಿದ್ದು ವೇದಗಳಂದು
ಹುದ್ದೆ ಹೊಂದಿದುವು ಜಗದೊಳಗೆ–ವಚನಗಳು
ಸುದ್ದಿ ನಾಡ್ತುಂಬಿ ಜನಹಿಗ್ಗಿ ॥”

ಅನುಭವ ಮಂಟಪದಲ್ಲಿಯೂ ಅಮುಗಿದೇವಯ್ಯ ಗಣ್ಯನಾದ, ಮಾನ್ಯನಾದ. ತಾನೇ ಹಾಡಿದ ವಚನವೊಂದರಂತೆ ಅವನು, “ಹುಡಿಹತ್ತದ ಗಾಳಿಯಂತೆ, ಕಾಡಿಗೆ ಹತ್ತದ ಆಲಿಯಂತೆ ನೆಯಿ ಹತ್ತದ ನಾಲಗೆಯಂತೆ, ಮಂಗಲ ಮಣ್ಣಬೆರೆಸದಂತೆ” ಬಾಳಿದ; ಸಕಲ ಸುಖಂಗಳ ಸುಖಿಸಿ ಬೇರಿದ್ದ ಅವನ ದೃಷ್ಟಿಯಲ್ಲಿ ಶರಣ ‘ಇಹಪರನಲ್ಲ, ಪರಾಪರನಲ್ಲ, ಕಾಮಿಸಿ ಕಾಮಿಯಲ್ಲ, ಭಾವಿಸಿ ಭಾವಿಯಲ್ಲ–ಅನಾಯಾಸ ನಿರಂಜನನು, ಸಿದ್ಧ ಸೋಮನಾಥಲಿಂಗನ ಶರಣನು ಬಳಸಿಯೂ ಬಳಸುವವನಲ್ಲ’ ಅವನ ಬಾಳೂ ಇದೇ ಆದರ್ಶಕ್ಕೆ ತಕ್ಕಂತೆ ಇದ್ದಿತು. “ಬಿಸಿಲು ಮಳೆಯಲ್ಲಿ ನೆನೆಯದಂತೆ, ಬಯಲು ಮೂರ್ತಿಗೊಳ್ಳದಂತೆ” ಬಾಳಿದನು.

ಇಂತು ಸುಗಮವಾಗಿ ಸಾಗಿದ್ದ ಶರಣರ ಬಾಳ ನೌಕೆ ಬಿರುಗಾಳಿಗೆ ಸಿಕ್ಕಿತು. ಹರಳಯ್ಯ ಮಧುವರಸರ ಕೊಲೆ, ಬಿಜ್ಜಳ ವಧೆ, ತದನಂತರದ ಕಾಳಗಗಳೇ ಆ ಬಿರುಗಾಳಿ. ಎಲ್ಲ ಶರಣರೊಡನೆ ಅಮುಗಿದೇವಯ್ಯನೂ ಕಲ್ಯಾಣ ಬಿಟ್ಟು ಹೊರಟ.

ಮಂಟಪದ ಹೆಜ್ಜೇನ ಗಂಟೇರು ಕೆಡಿಸಿದರೆ
ಕುಂಠಿತವೆ ಜೇನ ನೊಣಗಳಿಗೆ–ಹುಟ್ಟಿಡಲು
ಬಂಟ ಶರಣರಿಗೆ ಕಂಟಕವೆ?

ಎಲ್ಲರೂ ತಮ್ಮ ತಮ್ಮ ಹಾದಿ ಹಿಡಿದರು. ಅವರಲ್ಲಿ ಎನಿಬರೋ ಹಾದಿಯಲ್ಲಿಯೇ ಬೆನ್ನಟ್ಟಿ ಬಂದ ಬಿಜ್ಜಳನ ಸೇನೆಗೆ ತುತ್ತಾದರು. ಅಮುಗಿದೇವಯ್ಯ ಮಾತ್ರ ಸುರಕ್ಷಿತವಾಗಿ ತನ್ನ ಇಷ್ಟದೇವತೆಯಿದ್ದ ಪುಳಜ ಗ್ರಾಮವನ್ನು ತಲ್ಪಿದ.

ಸಿದ್ಧ ಸೋಮೇಶ್ವರನಿಗೆ ಇದ್ದೂರು ಮಣಿ ಮಣಿದು
ಸುದ್ದಿ ಅಮುಗಯ್ಯ ಶರಣೆಂದು ಪಬ್ಬುತಲಿ
ಬಿದ್ದು ಜನ ಬಂತು ನೋಡುದಕೆ.

ಅಲ್ಲಿ ಸುಮಾರು ಮೂವತ್ತು ವರ್ಷ ಜೀವಿಸಿದ್ದ. ಈ ಅವಧಿಯಲ್ಲಿ ಬಿಜ್ಜಳನ ವಂಶ ನಿರ್ನಾಮವಾಗಿ ಚಾಲುಕ್ಯರ ರಾಜ್ಯ ಸ್ಥಾಪಿತವಾಗಿ ಅದೂ ಆರು ವರ್ಷಗಳಲ್ಲಿಯೇ ನಷ್ಟವಾಯಿತು. ದೇವಗಿರಿಯ ಯಾದವ ರಾಜನಾದ ಭಿಲ್ಲಮ (೧೧೮೭-೧೧೯೧) ವಿಜಾಪುರ ಜಿಲ್ಲೆಯನ್ನು ಗೆದ್ದಕೊಂಡ. ಅವನ ತರುವಾಯ ಅವನ ಮಗ ಜೈತುಗ ೧೧೯೧ ರಿಂದ ೧೨೧೦ ರವರೆಗೆ ಆಳಿದ. ಅವನ ಮಗ ಸಿಂಘಣ ಉತ್ತರ ಕರ್ನಾಟಕವನ್ನೆಲ್ಲ ಕಿತ್ತುಕೊಂಡ.

ಇತ್ತ ಈ ರಾಜಕೀಯ ಅಲ್ಲೋಲಕಲ್ಲೋಲಗಳು ನಡೆದಿರಲು ಆತ್ತ ಅಮುಗಿದೇವಯ್ಯನ ಆತ್ಮಶ್ರೀ ತನ್ನ ತುತ್ತತುದಿಯನ್ನು ಮುಟ್ಟಿದ್ದಿತು. ಅಲೆಯುವ ಗಾಳಿಯ ಸಲೆಗಳನ್ನೇರಿ ಆತನ ಕೀರ್ತಿ ಸೌರಭ ಸುತ್ತಲೂ ಸುಳಿಯತೊಡಗಿದ್ದಿತು. ಸಿಂಘಣನವರೆಗೂ ಆ ಕೀರ್ತಿಯ ವಾರ್ತೆ ಹೋಯಿತು. ಅವನಿಗೆ ಅಮುಗಯ್ಯನ ದರ್ಶನ ಪಡೆಯಬೇಕೆಂಬ ಆಸೆ ಹುಟ್ಟಿತು.

"ತರದೆ ವಾಡಿಯ ರಾಯ ಹುರಿಯಾಳು ಜೈತುಗಿಯ
ಹಿರಿಮಗನು ಶೂರ ಸಿಂಘಣನು-ಕೇಳಿದನು
ಶರಣ ಅಮುಗಯ್ಯ ಗುರುವೆಂದು"
"ಕೇಳಿ ಕಾಣಲು ಬಯಸಿ ನಾಳೆನದೆ ಹೂಳಜೆಗೆ
ಪಾಳೆಯೊಡಗೂಡಿ ಮುಟ್ಟಿದನು-ಕೈಮುಗಿದ
ತಾಳಿ ಮನದೊಳಗೆ ಗುರುವೆಂದು"

ಅಮುಗಿದೇವಯ್ಯ ಸಿಂಘಣನಿಗೆ ಶಿವತತ್ತ್ವವನ್ನು ಬೋಧಿಸಿದನು; ಶಿವ ಮಂತ್ರೋಪದೇಶಗೈದನು. ಸಿಂಘಣನೊಬ್ಬನೇ ಅಲ್ಲ, ಸಿಂಘಣನ ಸೈನ್ಯವೆಲ್ಲ ಸಂತೋಷ ಸಾಗರದಲ್ಲಿ ಮುಳಗಿತು :

"ಶಿವಮಂತ್ರ ಸಿಂಘಣಗೆ ಶಿವಶರಣನೂದಿದನು
ಶಿವನೆಂದು ದಂಡು ಭಜಿಸುತಲಿ-ಬಂದವರು
ಶಿವ ಮತಕೆ ಮೆಚ್ಚಿ ಕೈಮುಗಿದು"

ಸಿಂಘಣನು ಸಂತುಷ್ಟನಾಗಿ ಸಿದ್ಧಾರ್ಥ ಸಂವತ್ಸರದ ಮಾಘ ಶುಕ್ಲ ೧೧ ನೆಯ ದಿವಸ ದೇವತಾರ್ಚನೆಯ ಸಮಯದಲ್ಲಿ ಇತ್ಥೆಯೆಂಬ ಗ್ರಾಮವನ್ನು ಧಾರೆಯೆರೆದುಕೊಟ್ಟನು.

"ಶುದ್ಧೇಕದಶ ಮಾಘ ಸಿದ್ಧಾರ್ಥ ವರುಷದೊಳು
ಸಿದ್ಧ ಸೋಮೇಶ ಭಕ್ತನಿಗೆ-ಸಿಂಘಣನು

ಇಷ್ಟೇ ಅಲ್ಲ. ಇದ್ದೂರಗಡಿತ್ಥೆ ವತನಿತ್ತ"

"ದೀಪಮಾನೆಯ ಕೊಟ್ಟ ಧೂಪಮಾನೆಯ ಕೊಟ್ಟ
ಸೋಪಾನ ಕಟ್ಟಿ ಭೀಮೆಯೊಳು–ಇಳಿಯುದಕೆ
ಸೋಪಾನ ಮಾನೆ ವತನಿತ್ತ"

ಇಲ್ಲಿಗೇ ಮುಗಿಯಲಿಲ್ಲ.

"ಸೋಯಿದೇವನ ಕೂಡ ಜೋಯಿ ದೇವನು ಕೂಡಿ
ಕಾಯಕದ ಅಮುಗ ಗುರುವೆಂದು–ಊಳಿಗಕೆ
ದಾಯಿಮಾನೆಂದು ವತನಿತ್ತ"

ಸಿಂಘಣನ ಸೈನ್ಯಾಧಿಕಾರಿಗಳಾದ ಸಾಹಣಿ ಕುಮಾರ, ಸೋಯಿದೇವ, ಗಂಗಿದೇವ, ಸಂಕಮದೇವ, ಬಿಜ್ಜನಾಣ, ರವಿಯದೇವ, ಜೋಯಿದೇವರೂ ಈ ದೇವಾಲಯಕ್ಕೆ ದಾನ ಕೊಟ್ಟಿದ್ದಾರೆ. ಇದೆಲ್ಲ ದಂತ ಕಥೆಯಲ್ಲ, ಶಾಸನಸ್ಥ ವಿದಯ. ಪುಳುಜೆಯಲ್ಲಿರುವ ಕ್ರಿ.ಶ.೧೯೯೯ ರ ಶಿಲಾಶಾಸನವೇ ಉದ್ಘೋಷಿಸುತ್ತಿದೆ : "......ಪ್ರತಾಪ ಚಕ್ರವರ್ತಿ ಶ್ರೀ ಸಿಂಘಣ ದೇವರಸರು ಸರ್ವ ಸಿದ್ಧಾರ್ಥಿ ಸಂವತ್ಸರದ ಮಾಘ ಶುದ್ಧ ೧೧ ಸೋಮವಾರ ವ್ಯತಿಪಾತದಂದು ಪೂರ್ಣಜೆಗೆ ಬಂದಲ್ಲಿ ದೇವಾರ್ಚನೆಯ ಸಮಯದಲು ಶ್ರೀ ಸ್ವಯಂಭು ಸಿದ್ಧನಾಥ ದೇವರ್ಗೆಂದಾಯಿದ್ಥೆಯನು ಸರ್ವನಮಶ್ಯವಾಗಿ ಅಮ್ಮುಗಿ ದೇವರಸರ್ಗೆ ಅಕರ ಪರಿಹಾರವಾಗಿ ಧಾರಾಪೂರ್ವಕಂ ಮಾಡಿಕೊಟ್ಟರು" ಎಂದು. ಈ ಮಾನೆಗಳು ಈಗಲೂ ಇವೆ. ಹೊಳೆಜೆಯ ಸಿದ್ಧ ಸೋಮಲಿಂಗನ ರಥೋತ್ಸವವು ಇಂದಿಗೂ ಶುದ್ಧೇಕದಸ ಮಾಘದಲ್ಲಿ ಪ್ರತಿ ವರ್ಷವೂ ನಡೆಯುತ್ತಿದೆ. ಇತ್ಥೆಗ್ರಾಮವು ಇಟೆ ಹೆಸರಿನಿಂದ ಪುಳುಜದ ಪಶ್ಚಿಮಕ್ಕೆ ೨ ಮೈಲುಗಳಲ್ಲಿದೆ.

ಈ ಶಾಸನದಲ್ಲಿ ಅಮುಗಿದೇವನನ್ನು "ಮುನಿವತ್ ಪೂಜಿತೋ ಯತಿಃ ಶಿವಾಚಾರೈಕ ನಿರತೋ ಲಿಂಗೈಕ್ಯೋಲಿಂಗವೇದಕಃ ಏತಚ್ಚಿತ್ತ ಗುಣೈರ್ಯುಕ್ತೋ ಅಮ್ಮಿದೇವೋ ಮಹಾ ಯತಿಃ ಎಂದೂ 'ಮಾಹೇಶ್ವರ ಗುಣಕುಲಾನ್ವಯ ದಿವಾಕರ'ನೆಂದೂ, 'ಸಿದ್ಧ ಕುಲಾನ್ವಯಾರ್ಣವ'ನೆಂದೂ 'ಭಕ್ತ ಜನ ಚಿಂತಾಮಣಿ', ಶರಣ ಸಂತಾನ'ನೆಂದೂ ವರ್ಣಿತನಾಗಿದ್ದಾನೆ.

ಸಿಂಘಣನು ಶಿಷ್ಯನಾದ ಮೇಲೆ ಅಮುಗಿದೇವಯ್ಯನ ಕೀರ್ತಿ ಬಾನೆತ್ತರಕ್ಕೆ ಹಬ್ಬಿತು

"ಸಿಂಘಣನ ಗುರುಭಕ್ತಿ ಲಿಂಗವಂತರು ಕೇಳಿ

ಜಂಗು ಕಟಿಗೊಂಡು ಹಾಡಿದರು–ಹೊಸ ಮತವು
ನುಂಗಿ ನಾಡನ್ನೆ ನೀರ್ಕುಡಿದು"

ಹೀಗೆ ಬಸವಾದಿ ಪ್ರಮಥರ ತರುವಾಯವೂ ಮುವ್ವತ್ತು ವರ್ಷಗಳವರೆಗೆ ಬಸವನ ಹೊಸ ಮತದ ಹೆಜ್ಜೊಡರನ್ನು ಪಜ್ಜಳಿಸಿ ಅಮುಗಿದೇವಯ್ಯ ಲಿಂಗೈಕ್ಯನಾದ.

"ಮಾಗಿಯಾ ಕಾಲದೊಳು ಬೇಗಿನೊಳು ಶಿವಪೂಜೆ
ಬಾಗಿ ಅಮುಗಯ್ಯ ಮಾಡುತಲಿ–ಲಿಂಗದೊಳು
ಸಾಗಿ ಬಯಲಾಗಿ ಬೆಳಗಾಗಿ"

ಅಮುಗಿದೇವ ಹೊರಗಣ್ಣಿಗೆ ಮರೆಯಾಗಿ ಅನೇಕ ಭಕ್ತರ ಮನದ ಮನೆಯಲ್ಲಿ ವಾಸಿಸಿದ

"ಉಗುಳು ನುಂಗದೆ ಭಜಿಸಿ ಹಗಲಿರುಳು ಮಾಡುವರು
ಹೊಗಳುವದು ಪರಿಸಿ–ಅಮುಗಯ್ಯ ಶರಣೆಂದು
ಸೊಗಸಿನೊಳು ಹಾಡಿ ತೇರೆಳೆದು"

ಜನದ ಮನದಲ್ಲಿ ಮಾತ್ರವಲ್ಲ, ಕನ್ನಡದ ಅನಭಾವ ಸಾಹಿತ್ಯದಲ್ಲಿಯೂ ಅಮುಗಿದೇವಯ್ಯ ಅಮರನಾಗಿ ನೆಲೆಸಿದ್ದಾನೆ. ಆತನ ಒಂದೆರಡು ವಚನಗಳನ್ನು ನೋಡಿದರೂ ಅವನೆಂಥ ಉಚ್ಚ ಅನುಭಾವಿಯೆಂಬುದು ನಿಚ್ಚಳವಾಗುತ್ತದೆ.

"ಶಿವನ ನೆನೆದರೆ ಭವ ಹರಿವುದೆಂಬ ವಿವರಗೇಡಿಗಳ ಮಾತ ಕೇಳಲಾಗದು. ಅದೇನು ಕಾರಣವೆಂದರೆ, ಜ್ಯೋತಿಯ ನೆನೆದರೆ ಕತ್ತಲೆ ಹರಿವುದೆ? ಮೃಷ್ಟಾನ್ನವ ನೆನೆದರೆ ಹೊಟ್ಟೆ ತುಂಬುವುದೆ? ರಂಭೆಯ ನೆನೆದರೆ ಕಾಮದ ಕಳವಳ ಹಿಂಗುವುದೆ? ನೆನದರಾಗದು. ನಿಜದಲ್ಲಿ ನಿಂದು ನಿರ್ಧರಿಸದನ್ನಕ್ಕ ಸದ್ಗುರು ಸಿದ್ಧ ಸೋಮನಾಥನೆಂಬ ಲಿಂಗವ ನೆನಯಬಾರದು."

"ಅಲಗಿನ ಮೊನೆಯನೇರಬಹುದು, ಹುಲಿಯ ಬಿಲವ ಹೊಗಬಹುದು, ಸಿಂಹದ ಕೊರಳಿಗೆ ಹಾಯಬಹುದು, ಸಿದ್ಧ ಸೋಮನಾಥ ನಿಮ್ಮ ಮುಂದೆ ಮನ ಸಹಿತ ಕುಳ್ಳಿರಲಾಗದು !"

ಅಮುಗಿದೇವಯ್ಯನ ಐಕ್ಯಸ್ಥಲ ಪ್ರತಿಬಿಂಬಿತವಾಗಿದೆ ಕೆಳಗಣ ವಚನದಲ್ಲಿ. "ಆಲಿಕಲ್ಲ ಕಡಿದು ಪುತ್ಥಳಿಯ ಖಂಡಿಸುವಂತೆ, ಉಪ್ಪಿನ ಪಟ್ಟಣವನುದಕದಲ್ಲಿ ಅದ್ದುವಂತೆ, ಕರ್ಪೂರದ ಪ್ರಣತಿಯಲ್ಲಿ ಜ್ಯೋತಿಯ ಬೆಳಗುವಂತೆ ಸಿದ್ಧ ಸೋಮನಾಥ ಲಿಂಗಗ್ರಾಹಿಯವಗ್ರಾಹಿಯಾಗಿ."

■

# ಸುಜ್ಞಾನಿದೇವನಿಂದ ಸುಜ್ಞಾನೋದಯ

ಮಣ್ಣು ಬೆರೆತ ಹೊನ್ನು ಕಾಸಿ ಸೋಸಿದರೆ ಮತ್ತೆ ಹೊನ್ನಾಗಬಲ್ಲುದು: ಕೆಟ್ಟ ಮಾನವ ಮತ್ತೆ ಉತ್ತಮ ಮಾನವನಾಗಬಲ್ಲ. ಕಾಸಿ ಸೋಸುವವ ಸಿಕ್ಕರೆ ಯಾವ ಗಣಿಯ ಅದಿರಾದರೂ ಚಿನ್ನವಾಗಬಲ್ಲುದು ; ಕುಶಲ ಶಿಲ್ಪಿ ಸಿಕ್ಕರೆ ಯಾವ ಶಿಲೆಯೂ ಸುಂದರ ಮೂರ್ತಿಯಾಗಬಲ್ಲುದು; ಚತುರ ಚಿತ್ರಕಾರ ಸಿಕ್ಕರೆ ಯಾವ ಪಟವೂ ಚೇತೋಹಾರಿ ಚಿತ್ರವಾಗಬಲ್ಲುದು ; ವಿದಗ್ಧ ವಾದ್ಯಕಾರ ಸಿಕ್ಕರೆ ಯಾವ ಕುಂಬಳಕಾಯಿಯೂ ತಂಬೂರಿಯಾಗಬಲ್ಲುದು ; 'ಕರಿಗಿಸಿ ಮನದ ಕಾಳಿಕೆಯ ಕಳೆಯ' ಬಲ್ಲ ಗುರು ಸಿಕ್ಕರೆ ಯಾವ ಪತಿತನೂ ಪಾವನನಾಗಬಲ್ಲನು. 'ಮನುಜರು ಕ್ರೂರರಿರಬಹುದು, ಮಾನವ ಮಾತ್ರ ದಯಾಳು' ಎಂದ ಕವೀಂದ್ರ ರವೀಂದ್ರರ ಉಕ್ತಿಯ ಅರ್ಥವೂ ಇದೇ. ಜಗತ್ತಿನಲ್ಲಿ ಹುಟ್ಟುವ ಪ್ರತಿಯೊಂದು ಕೂಸೂ ಪರಮಾತ್ಮನಿನ್ನೂ ಮನುಜ ಲೋಕದ ಬಗ್ಗೆ ನಿರಾಶನಾಗಿಲ್ಲವೆಂದು ಸಂದೇಶವನ್ನೇ ತರುತ್ತದೆಯೆಂದು ಅವನು ಸಾರಿದ್ದಾರೆ.

ಮನುಜನ ಮೂಲಮಾನವತೆಯಲ್ಲಿ ವಿಶ್ವಾಸವಿದ್ದಿತೆಂದೇ ಶಿವಶರಣರು ಅಂತ್ಯಜರ ಅಂತರಂಗದಲ್ಲಿಯೇ ಮಾನವತೆಯ ಮಂಗಳ ಜ್ಯೋತಿಯನ್ನು ಹೊತ್ತಿಸಲು ಸಮರ್ಥರಾದರು. ಪರಿಸ್ಥಿತಿಯ ಒತ್ತಡದಿಂದ, ಸಮಾಜದ ನಿರ್ಲಕ್ಷ್ಯದಿಂದ, ಸ್ವಾರ್ಥಿಗಳ ಸುಲಿಗೆ ಶೋಷಣೆಗಳಿಂದ, ಹುಟ್ಟಿನೊಡನೆಯೇ ಅಂಟಿಕೊಂಡು ಬಂದ ಕನಿಷ್ಠತೆಯ ಅಭಿಶಾಪದಿಂದ, ತಂದೆ ತಾಯಿಗಳ ದುಸ್ಸಹ ದಾರಿದ್ರ್ಯದಿಂದ, ದುಸ್ಸಂಗದ ದುಷ್ಪರಿಣಾಮದಿಂದ, ವಿದ್ಯೆಯ ಅಭಾವದಿಂದ, ಅವಕಾಶದಿಂದ ವಂಚಿತರಾದುದರಿಂದ ಪರಿತರಾದವರನ್ನು, ಪದದಲಿತರಾದವರನ್ನು ಪಾಪಿಗಳೆಂದು ತಿರಸ್ಕರಿಸಿ ಅಂತ್ಯಜರೆಂದು ಬಹಿಷ್ಕರಿಸಿದರೆ ಅವರೆಂದಾದರೂ ಮುಂದೆ ಬಂದಾರೆ? ಬಾಗಿ ಮೇಗೆತ್ತುವವರಿಲ್ಲದೆ ಕೆಳಗೆ ತುಳಿಯಲ್ಪಟ್ಟವರು ಎಂದಿಗೂ ಮೇಲಕ್ಕೇಳಲಾರರು. ಶಿವಶರಣರು ಬಿದ್ದವರ ಎತ್ತಿಗರು, ಅನಾಥರ ತಂದೆ ತಾಯಿಗಳು, ಪತಿತರ ಹಿತ ಬಂಧುಗಳು.

ಆದುದರಿಂದಲೇ ಅವರು ಎಂಥ ನಿಮ್ನ ವರ್ಗದವರನ್ನೂ ಉದ್ಧರಿಸದೆ ಬಿಡಲಿಲ್ಲ. ಸಮಾಜದ ಯಾವ ಅಂಗವೂ ಅವರ ದೃಷ್ಟಿಯಿಂದ ದೂರ ಉಳಿಯಲಿಲ್ಲ. ಯಾವ

ಅಂಗ ಭಂಗವಾದರೂ ವಿಕಲಾಂಗತೆಯ ದೋಷ ತಪ್ಪಿದ್ದಲ್ಲ ಶರೀರಕ್ಕೆ ; ಯಾವ ವರ್ಗ ಪತಿತವಾದರೂ ಅಂಗ ವೈಕಲ್ಯದ ದೋಷ ತಪ್ಪಿದ್ದಲ್ಲ ಸಮಾಜಕ್ಕೆ ! ಹರಿಜನರಿರಲಿ, ಗಿರಿಜನರಿರಲಿ–ಎಲ್ಲವೂ ಉದ್ಧಾರವದಾಗಲೇ ಸವಾಜದ ಉದ್ಧಾರವೆಂಬ ಸರ್ವೋದಯ ತತ್ತ್ವವೇ ಇದು.

ಸುಜ್ಞಾನಿದೇವ ಸಾಧಿಸಿದುದೂ ಈ ಶರಣತತ್ತ್ವ–ಸರ್ವೋದಯ ತತ್ತ್ವದ ವಿಜಯವನ್ನೇ! ಅಧಿಕಾರದ ದರ್ಪದಿಂದಲ್ಲ, ಸಂಪತ್ತಿನ ಸಾಮರ್ಥ್ಯದಿಂದಲ್ಲ, ಶಾಸ್ತ್ರದ ಸತ್ತೆಯಿಂದಲ್ಲ, ದಂಡದ ದಬ್ಬಾಳಿಕೆಯಿಂದಲ್ಲ, ಬಹಿಷ್ಕಾರದ ಬೆದರಿಕೆಯಿಂದಲ್ಲ– ಹೃದಯ ಪರಿವರ್ತನದ ಮಧುರ ಮಾರ್ಗದಿಂದ ವ್ಯಾಘ್ರನಂತಿದ್ದ ವ್ಯಾಧನೊಬ್ಬನನ್ನು ಸಾಧಕನನ್ನಾಗಿ, ಶರಣನನ್ನಾಗಿ ಪರಿವರ್ತಿಸಿದ ಪವಾಡ ಅವನದು. ಅಂಗುಲಿಮಾಲನನ್ನು ತಿದ್ದಿದ ಬುದ್ಧದೇವನ್ನು ನೆನಪಿಗೆ ತರುವ ಸುಜ್ಞಾನಿದೇವ ಬಳ್ಳಿಗಾವೆ ಬನವಸೆ ಬಾಗೇವಾಡಿಗಳಿಂದ ಬಂದವನಲ್ಲ, ಕನ್ನಡ ನಾಡಿನ ಯಾವುದೇ ಭಾಗದಿಂದ ಬಂದವನಲ್ಲ–ಉತ್ತರದ ಓಡೀಸಾದಿಂದ ಬಂದವನೆಂಬುದನ್ನು ನೆನೆದಾಗ ಬೆರಗಿನಿಂದ ಬೆರಳು ನಾಸಿಕಾಗ್ರದಲ್ಲಿ ನಿಲ್ಲುತ್ತದೆ !

ಓಡೀಸಾದಲ್ಲಿರುವ ಕರ್ಣಿಕಾಪುರ ಸುಜ್ಞಾನಿದೇವರು ವಾಸವಗಿದ್ದ ಸ್ಥಳವಂತೆ. ಶಿವಾಚಾರನಿಷ್ಠರಾಗಿ ಶಿವಧ್ಯಾನಚಿಂತನೆಗಳಲ್ಲಿ ಕಾಲಕಳೆಯುತ್ತಿದ್ದ ಅವರ ಕಿವಿಗಳಿಗೂ ಕಲ್ಯಾಣದ ಕರೆ ಕೇಳಿಸಿತಂತೆ. ಸರಿ, ತಮ್ಮ ಅನುಯಾಯಿಗಳೊಡನೆ ಹೊರಟೇ ಬಿಟ್ಟರಂತೆ ಶರಣಕರಂಡ ಕಲ್ಯಾನಕ್ಕೆ, ಶರಣ ಸುರಭೂಜವನ ಕಲ್ಯಾಣಕ್ಕೆ.

ಮಧ್ಯದಲ್ಲಿ ಮಾತಂಗ ಪರ್ವತದ ಘೋರಾರಣ್ಯದೊಳಗೆ ಹೋಗುತ್ತಲಿರುವಾಗ ಅವರ ದೃಷ್ಟಿಗೊಂದು ದುರಂತ ದೃಶ್ಯ ಕಂಡಿತು. ಮೈಯೆಲ್ಲ ಗಾಯಗಳಾಗಿ ರಕ್ತ ಸೋರುತ್ತಿದ್ದರೂ ಜೀವದಾಸೆಗಾಗಿ ದಿಕ್ಕೆಟ್ಟು ಓಡುತ್ತ ಹಲವರು ಬರುತ್ತಲಿದ್ದರು. ಅವರನ್ನು ಕಂಡು ಹೌಹಾರಿದ ಸುಜ್ಞಾನಿದೇನ ಶಿಷ್ಯರು ಕೇಳಿದರು.

"ನಿಲ್ಲಿರಣ್ಣ, ಎಲ್ಲಿಂದ ಬಂದಿರಿ? ಏಕೆ ಭಯಭೀತರಾಗಿರುವಿರಿ? ಎಷ್ಟು ಗಾಯಗಳಾಗಿವೆಯಲ್ಲ : ಎಷ್ಟು ರಕ್ತ ಸೋರುತ್ತಿದೆಯಲ್ಲ ! ಏನಾಯಿತ್ತು? ಯಾರಿಂದ ಈ ಘೋರ ಕೃತ್ಯ ನಡೆಯಿತು?"

"ನೀವೆಲ್ಲಿಗೆ ಹೊರಟಿರುವಿರಿ?"

"ಕಲ್ಯಾಣಕ್ಕೆ!"

"ಕಲ್ಯಾಣಕ್ಕಲ್ಲ, ಹುಲಿಯ ಬಾಯಿಗೆ !"

"ಹು ಹು ಹು....ಹುಲಿಯ ಬಾಯಿಗೆ !"

"ಹೌದು , ಹುಲಿಗಿಂತಲೂ ದುಷ್ಟನಾದ ಮಾತಂಗತಮ್ಮನ ದವಡೆಗೆ ! ಸುಮ್ಮನೆ ಬಂದ ದಾರಿಯಿಂದ ಹಿಂದಿರುಗಿರಿ. ಜೀವ ಬೇಡವಾಗಿದ್ದರೆ ಮಾತ್ರ ಮುಂದೆ ಹೆಜ್ಜೆಯಿಡಿರಿ !"

ಸುಜ್ಞಾನಿದೇವರ ಶಿಷ್ಯರು ಕಾಲಿಗೆ ಬುದ್ಧಿ ಹೇಳಿದರು. ಸುಜ್ಞಾನಿದೇವರೊಬ್ಬರೇ ಉಳಿದರು. ಆದರೂ ಅಧೀರರಾಗಲಿಲ್ಲವರು, ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಿಲ್ಲ. ಅಡಿಯ ಹಿಂದಿಡೆ ನರಕ ! ಸಾವನ್ನು ಬೆನ್ನಟ್ಟಿ ನಡೆದ ಸಾವಿತ್ರಿಯಂತೆ ನಡೆದರು; ಕತ್ತಲೆಯನ್ನು ಬೆನ್ನಟ್ಟಿ ನಡೆದ ಬೆಳಕಿನಂತೆ ನಡೆದರು ; ಅಸತ್ಯವನ್ನು ಬೆನ್ನಟ್ಟಿ ನಡೆದ ಸತ್ಯದಂತೆ ನಡೆದರು ; ಹಿಂಸೆಯನ್ನು ಬೆನ್ನಟ್ಟಿ ನಡೆದ ಅಹಿಂಸೆಯಂತೆ ನಡೆದರು.

ಸ್ವಲ್ಪ ದೂರ ಹೋಗುವುದರೊಳಗಾಗಿ ಗಂಗೆಗೆದುರಾದ ಬಂಡೆಯಂತೆ ದಾರಿಗೆ ಅಡ್ಡ ನಿಂತಿದ್ದ ಆ ಕ್ರೂರ ಘೋರ ಮಾತಂಗತಮ್ಮ ! ದೂರದಿಂದ ನೋಡಿಯೇ ಎದೆಯೊಡೆದು ಬೀಳುವಂತಹ ಭೀಕರಾಕಾರ ಅವನದು. ಆದರೂ ಸುಜ್ಞಾನಿದೇವ ಕಂಗೆಡಲಿಲ್ಲ ಭಯದ ಛಾಯೆ ಸಹ ಅವರ ಮೃದುಸ್ಮಿತರುಚಿರ ಮುಖಮಂಡಲದ ಮೇಲೆ ಬೀಳಲಿಲ್ಲ ! ಸ್ಥಿತಪ್ರಜ್ಞನ ಪ್ರಫುಲ್ಲ ವದನದೊಡನೆಯೇ ಹತ್ತಿರ ಹೋದರು– ಹಾವಿನ ಹತ್ತಿರ ಹೋಗುವ ಗಾರುಡಿಗನಂತೆ !

ಮಾತಂಗತಮ್ಮ ಬೆಕ್ಕಸಬೆರಗಾದ ! ತನ್ನ ಹೂಂಕಾರ ಮಾತ್ರದಿಂದ ಮಡಿದವರುಂಟು. ನನ್ನ ಹತ್ತಿರ ಬರುತ್ತಿರುವನಲ್ಲ ಹೆದರದೆ, ಹಿಂಜರಿಯದೆ ! ಯಾರಿವನು? ಕನಲಿ ಕೂಗಿದ–

"ಯಾರು ನೀನು?"

"ಯಾತ್ರಿಕ."

"ಎಲ್ಲಿಗೆ ಹೊರಟೆ?"

"ಕಲ್ಯಾಣಕ್ಕೆ."

"ಹೆಗಲ ಮೇಲೇನಿದೆ?"

"ನೀನೇ ನೋಡಿಕೋ !"

ಮಾತಂಗತಮ್ಮ ಸುಜ್ಞಾನಿದೇವನ ಹೆಗಲ ಮೇಲಿದ್ದ ಗಂಟನ್ನು ಕಸಿದುಕೊಂಡು ಬಿಚ್ಚಿ ನೋಡಿದ. ಅವನು ಅದುವರೆಗೂ ನೋಡದಿದ್ದ ವಸ್ತುಗಳೇ ಅದರಲ್ಲಿದ್ದುವು. ಲಿಂಗ, ಭಸ್ಮ, ರುದ್ರಾಕ್ಷಿಮಾಲೆ....! ಲಿಂಗಗಳು ಅವನ ಚಿತ್ತವನ್ನು ಸೆಳೆದುವು. ಥಳಥಳನೆ ಹೊಳೆವ ಅವುಗಳನ್ನು ನೋಡಿ ನೀಲರತ್ನಗಳೇನೋ–ಎಂದು ಅವನು ಭ್ರಮಿಸಿರಬೇಕು! ಕುತೂಹಲದಿಂದ ಕೇಳಿದ–

“ಇವೇನು?”

“ಲಿಂಗಗಳು !”

“ಲಿಂಗಗಳು?”

“ಹೌದು, ಲಿಂಗಗಳು !”

“ಹಾಗೆಂದರೇನು?” ”ಲಿಂಗ ಪರಮಾತ್ಮನ ಕುರುಹು.”

“ಅದೇನನ್ನು ಕೊಡುತ್ತದೆ?”

“ಬೇಡಿದುದನ್ನು !”

“ಬೇಡಿದುದನ್ನು? ಹೊನ್ನು, ಹೆಣ್ಣು, ರಾಜ್ಯ, ಐಶ್ವರ್ಯ?”

“ಹೌದು, ಅದೆಲ್ಲವನ್ನೂ ಕೊಡುತ್ತದೆ. ಮತ್ತೇನನ್ನು ಬೇಡಿದರೂ ಕೊಡುತ್ತದೆ!”

“ಹಾಗಾದರೆ ನನಗೊಂದು ಲಿಂಗವನ್ನು ಕೊಡು !”

“ನಿನಗೊಬ್ಬನಗೇ ಕೊಡಲು ಬರುವುದಿಲ್ಲ. ನಿನಗೂ ನಿನ್ನ ಹೆಂಡರಿಗೂ ಕೂಡಿಯೇ ಕೊಡಬೇಕು. ಅಂದರೆ ಅದರ ಉಪಯೋಗ. ನಿನ್ನ ಹೆಂಡತಿಯನ್ನೂ ಕರೆಸು !”

“ಕರೆದು ತರಲು ಯಾರೂ ಇಲ್ಲವಲ್ಲ?”

“ನೀನು ಹೋಗಿ ಕರೆದು ತಾ !”

“ಹಿ ಹಿ ಹಿ ಹಿ ಹಿ....” ಮಾತಂಗತಮ್ಮನ ವಿಕಟಹಾಸದ ವಿಕಾರಸ್ವರ ಆ ಭೀಮಾರಣ್ಯದಲ್ಲಿ ಪ್ರತಿಧ್ವನಿಸಿತು ! ಬನ ನಡುಗಿತು, ಬೆಟ್ಟ ಅದುರಿತು! ಹುಬ್ಬು ಗಂಟಿಕ್ಕಿ ಕೇಳಿದ–”ನನ್ನನ್ನು ಮೋಸಗೊಳಿಸಬೇಕೆನ್ನುವಿಯಾ?”

“ಇಲ್ಲ, ನನಗೆ ಮೋಸವೆಂಬುದೇ ಗೊತ್ತಿಲ್ಲ. ಮೋಸಗಾರರಿಗೆ ಲಿಂಗ ಒಲಿಯುವುದೇ ಇಲ್ಲ?”

“ನಿಜವಾಗಿ ಮೋಸ ಮಾಡುವುದಿಲ್ಲವೆ?”

“ನಿಜವಾಗಿ, ಲಿಂಗಯ್ಯನ ಅಣೆಯಾಗಿ !”

ಮಾತಂಗಮ್ಮ ಕನ್ನುಗನೆಂಬ ತನ್ನ ಕಾವಲನೊಬ್ಬನನ್ನು ಕರೆದು ತನ್ನ ಹೆಂಡತಿಯನ್ನು ಕರೆದುತರಲು ಕಳಿಸಿದ. ಸುಜ್ಞಾನಿದೇವ ಕನ್ನುಗನನ್ನು ಬೇರೆ ಕರೆದು ಕಿವಿಯಲ್ಲಿ ಹೇಳಿದ– “ಕನ್ನುಗ ನಿನ್ನೊಡೆಯ ತನ್ನ ಹೆಂಡತಿಗೂ ಈ ಲಿಂಗಬೇಕೆಂದು ಹಟ ಹಿಡಿದಿದ್ದಾನೆ. ಗಂಡನ ಮೇಲೆ ಭಕ್ತಿಯಿಲ್ಲದ ಹೆಂಡತಿಗೆ ಇದನ್ನು ಕೊಡಬಾರದು. ಆದುದರಿಂದ ನಿನ್ನೊಡೆಯನ ಹೆಂಡತಿಯನ್ನು ಇಲ್ಲಿಗೆ ಕರೆತರುವ ಮೊದಲು ಅವಳ ಮನಸ್ಸಿನ ಪರೀಕ್ಷೆಯಾಗಬೇಕು. ಕಾರಣ ನೀನವಳಿಗೆ ‘ನಿನ್ನ ಗಂಡ

ಯಾರೊಡನೆಯೋ ಕಾದಿ ಸತ್ತುಬಿದ್ದಿದ್ದಾನೆ. ಅವನ ಶವಸಂಸ್ಕಾರಕ್ಕೆ ಬಾ' ಎಂದು ಕರೆ. ಇದನ್ನು ಕೇಳಿ ಬಂದರೆ ಬರಲಿ, ಬರದಿದ್ದರೆ ಬಿಡಲಿ!" ಎಂದು ಹೇಳಿ ಕಳಿಸಿದರು.

ಮಾತಂಗತಮ್ಮನ ಮಡದಿಗೆ ಹಿಡಿಸಲಾಗದಷ್ಟು ಹಿಗ್ಗಾಯಿತು. 'ಈ ಕ್ರೂರ ಘೋರರಕ್ಕಸನ ಸೆರೆಯಿಂದು ಹರಿಯಿತು!' ಎಂದು ಆನಂದದಿಂದ ಅವಳು ಮುತ್ತುಗನೆಂಬ ಮತ್ತೊಬ್ಬ ಬೇಡನೊಡನೆ ಓಡಿಹೋಗಿಬಿಟ್ಟಳು ! ಸುಜ್ಞಾನಿದೇವನ ಯುಕ್ತಿ ಫಲಿಸಿತು!

ಈ ಸುದ್ದಿಯನ್ನು ಕೇಳಿ ಹಲ್ಲು ಮಸೆದ ಮಾತಂಗತಮ್ಮ ! ಕಿಡಕಿಡಿ ಕಾರುವ ಕಣ್ಣುಗಳು, ಕುಣಿಯುವ ಕೋರೆಮೀಸೆ, ಅವಡುಗಚ್ಚಿದ ಬಾಯಿ! ಮೊದಲೇ ಭೀಕರನಾಗಿದ್ದ ಅವನು ಇನ್ನೂ ಭಯಂಕರನಾದನು ! 'ಈಗಿಂದೀಗಲೇ ಹೋಗಿ ಆ ನೀಚ ಮುತ್ತುಗಳನ್ನು ಕತ್ತರಿಸಿ ಚೆಲ್ಲುವೆನು!' ಎಂದು ಸಿಡಿದೆದ್ದನು.

ಸುಜ್ಞಾನಿದೇವ ನಗುತ್ತ ನುಡಿದರು–

"ಮಾತಂಗ, ಮುತ್ತುಗನನ್ನು ಕೊಂದು ಏನ ಗಳಿಸುವಿ?"

"ಏನ ಗಳಿಸುವೆ?"

"ಅಪಕೀರ್ತಿಯನ್ನು ಗಳಿಸುವಿ!"

"ಅಪಕೀರ್ತಿಯನ್ನು? ಇದೇನು ನುಡಿವಿ? ಕೈಹಿಡಿದ ಮಡದಿಯನ್ನು ಓಡಿಸಿಕೊಂಡು ಹೋದ ವೈರಿಯನ್ನು ಸಂಹರಿಸಿದರೆ ಅಪಕೀರ್ತಿಯೆ?"

"ಹೌದು, ನೀನು ಸಾಯುವವರೆಗೆ, ಅದೇಕೆ ಸತ್ತಮೇಲೂ ತೊಲಗದ ಅಪಕೀರ್ತಿ ನಿನ್ನದಾಗುವುದು !"

"ಅದು ಹೇಗೆ?"

"ಮಾತಂಗ ತನ್ನಂಥ ಸಮರ್ಥರೇ ಯಾರೂ ಇಲ್ಲವೆಂದು ಜಂಭ ಕೊಚ್ಚಿಕೊಳ್ಳುತ್ತಿದ್ದ. ಅವನೆಂಥ ಸಮರ್ಥನೋ! ಅವನ ಹೆಂಡತಿಯೇ ಅವನನ್ನು ಬಿಟ್ಟು ಓಡಿಹೋದಳು. ಅವಳನ್ನು ಬಿಟ್ಟು ಅವಳು ಬೆನ್ನು ಹತ್ತಿ ಹೋದವನನ್ನು ಕೊಂದ ಮಾತಂಗ–ಎಂಬ ಅಪಕೀರ್ತಿ ನಿನ್ನದಾಗುವುದು!"

"ನೀನೆನ್ನುವುದು ನಿಜ. ಮೊದಲು ನನ್ನ ಹೆಂಡತಿಯನ್ನೇ ತುಂಡರಿಸಿ ಬರುವೆನು!"

"ಅದೂ ಬೇಡ !"

"ಏಕೆ ಬೇಡ?"

"ಕೊಂದರೆ ಅವಳು ಮಾಡಿದ ಪಾಪವನ್ನು ಕೊಂದಂತಾಯಿತೆ? ನಿನ್ನನ್ನು ಬಿಟ್ಟು ಏಕೆ ಹೋಗಿರವಹುದೆಂಬುದನ್ನಷ್ಟು ವಿಚಾರಿಸು !"

"ಏಕೆ ಹೋಗಿರಬಹುದು?"

"ನೀನು ಮಾಡುವ ಹಿಂಸಾಕೃತ್ಯಗಳು, ಪಾಪಕಾರ್ಯಗಳು ಅವಳಿಗೆ ಜಿಗುಪ್ಸೆಯನ್ನುಂಟು ಮಾಡಿರಬಹುದು !"

"ಮತ್ತೇನ ಮಾಡಬೇಕು?"

"ಮಾಡಲು ಬೇರೆ ಒಳ್ಳೆಯ ಕೆಲಸಗಳೇ ಇಲ್ಲವೆ?"

"ಅವುಗಳನ್ನು ಮಾಡಲು ಮನಸ್ಸಿಲ್ಲ"

"ಹಾಗಾದರೆ ಲಿಂಗವನ್ನು ಪೂಜಿಸಿ ನೀನು ಬೇಡಿದುದನ್ನು ಪಡೆಯಲಾರೆ!"

"ಹೇಗಾದರೆ ಪಡೆಯಬಲ್ಲೆ?"

"ಋಣತಪ್ಪಿದ ಹೆಂಡಿರಲ್ಲಿ, ಗುಣ ತಪ್ಪಿದ ಗಂಡರಲ್ಲಿ ಸುಖವಿಲ್ಲ. ಓಡಿಹೋದ ಹೆಂಡತಿಯ ವಿಚಾರವನ್ನೇ ಮರೆತುಬಿಡು. ಅವಳು ಮುತ್ತುಗನೊಡನಾದರೂ ಸುಖವಾಗಿರಲಿ. ಯಾರಿಗೆ ಎಲ್ಲಿ ಸುಖವೆನಿಸುವುದೋ ಅಲ್ಲಿರಲಿ. ನಿನ್ನ ಸುಖದ ಬಗ್ಗೆ ನೀನು ಯೋಚನೆ ಮಾಡು !"

"ಅಯ್ಯೊ, ನನ್ನ ಸುಖ ನನಗೆ ಬೇಕಿಲ್ಲವೆ? ಈ ಸುಖಕ್ಕಾಗಿಯೇ ಸಾವಿರಾರು ಜನರನ್ನು ಸುಲಿದೆ. ನೂರಾರು ಜನರನ್ನು ಕೊಂದೆ, ಆ ಜಾರೆಯನ್ನು ತಂದೆ......"

"ಸುಖ ಸಿಕ್ಕಿತೆ?"

"ಯಾತರ ಸುಖ ಸಿಕ್ಕಿತು? ಅವಳೇ ಓಡಿಹೋದಳಲ್ಲ !"

"ಸುಖ ಇವಾವುದರಲ್ಲೂ ಇಲ್ಲವೆಂದಂತಾಯಿತು."

"ಇಲ್ಲವೆಂದೇ ತೋರುತ್ತದೆ !"

"ಹೌದು, ಇವಾವುದರಲ್ಲೂ ಸುಖವಿಲ್ಲ"

"ಹಾಗಾದರೆ ಸುಖ ಎಲ್ಲಿದೆ?"

"ನಿನ್ನಲ್ಲಿ !"

"ನನ್ನಲ್ಲಿ?"

"ಹೌದು ನಿನ್ನಲ್ಲಿ, ನಿನ್ನ ಮನಸ್ಸಿನಲ್ಲಿ ! ಹೊರಗೆ ಏನೆಲ್ಲ ಇದ್ದರೂ ಒಳಗೆ ಮನಸ್ಸು ಕುದಿಯುತ್ತಿದ್ದರೆ ಅದಕ್ಕೆ ಸುಖ ಎನ್ನುವಿಯಾ?"

"ಇಲ್ಲ, ನಾನಿದನ್ನು ಅನುಭವಿಸಿದ್ದೇನೆ. ಇಷ್ಟು ವರ್ಷ ಎಷ್ಟು ಜನರನ್ನು ಸುಲಿದು ಸಂಪಾದಿಸಿದರೂ ಮನಸ್ಸಿಗೆ ನೆಮ್ಮದಿಯಿಲ್ಲದೆ, ಶಾಂತಿಯಿಲ್ಲದೆ ಒದ್ದಾಡಿದ್ದೇನೆ. ನನಗೆ ನಿಜವಾದ ಸುಖದ ದಾರಿ ತೋರಿಸು. ನನಗೆ ನಿಜವಾದ ಸುಖದ ದಾರಿ ತೋರಿಸು!"

"ತೋರಿಸುತ್ತೇನೆ. ನಡೆ ನನ್ನೊಡನೆ."

"ಎಲ್ಲಿಗೆ?"

"ಕಲ್ಯಾಣಕ್ಕೆ."

"ಅಲ್ಲೇನಿದೆ?"

"ಅಲ್ಲಿ ನಿಜವಾದ ಸುಖವನ್ನು ಕಂಡು ಸಂತೋಷದ ಸಾಗರದಲ್ಲಿಯೇ ಮುಳುಗಿ ಮುಳುಗಿ ಏಳುತ್ತಿರುವ ಅನೇಕರಿದ್ದಾರೆ."

"ಬರುತ್ತೇನೆ. ಆದರೆ ಮೊದಲು ನೀನು ಮಾತು ಕೊಟ್ಟಂತೆ ನನಗೊಂದು ಲಿಂಗವನ್ನು ಕೊಡು. ಹೆಂಡತಿಯಂತೂ ಹೋದಳಲ್ಲ !"

"ಆ ಹೆಂಡಿತಿಯ ಉಸಾಬರಿ ಬಿಡು. ಈಗ ನೀನೇ ಹೆಂಡಿತಿಯಾಗಬೇಕಲ್ಲ."

"ಯಾರು? ನಾನು ಹೆಂಡತಿಯಾಗಬೇಕು? ಯಾರಿಗೆ ಹೆಂಡತಿಯಾಗಬೇಕು?"

"ಹಿಡಿ, ಈ ಲಿಂಗವನ್ನು. ಈ ಲಿಂಗಕ್ಕೇ ನೀನು ಹೆಂಡತಿಯಾಗಬೇಕು. ಎಂದರೆ ನಿಜವಾದ ಹೆಂಡತಿಯು ಗಂಡನನ್ನು ಪ್ರೀತಿಸುವಂತೆ ನೀನಿನ್ನು ಈ ಲಿಂಗವನ್ನು ಪ್ರೀತಿಸಬೇಕು !"

"ನೀನು ಹೇಳುವ ಮಾತೇ ಹೊಸವು. ಒಂದೂ ಅರ್ಥವಾಗುತ್ತಿಲ್ಲ !"

"ಎಲ್ಲ ಅರ್ಥವಾಗುವುದು. ನಡೆ ನನ್ನಯ್ಯ ನನ್ನೊಡನೆ ಕಲ್ಯಾಣಕ್ಕೆ !"

"ನನ್ನಯ್ಯ ! ನನಗೆ ನನ್ನಯ್ಯನೆಂದು ಕರೆದೆಯಾ?"

"ಹೌದು, ನೀನಿನ್ನು ನನ್ನಯ್ಯ: ನಿನಗಿದೇ ಹೆಸರು ಇನ್ನು ಮೇಲೆ !"

ಮಾತಂಗಪರ್ವತದಿಂದ ಕಲ್ಯಾಣಕ್ಕೆ ಬರುವುದರೊಳಗಾಗಿ ವ್ಯಾಧ ಹೋಗಿ ವಾಲ್ಮೀಕಿಯಾಗಿಬಿಟ್ಟಿದ್ದ ! ದಾರಿಯಲ್ಲಿ ಸುಜ್ಞಾನಿದೇವ ಅವನಿಗೆ ಸತ್ಯಶರಣರ ಚರಿತ್ರೆಗಳನ್ನು ಹೇಳುತ್ತ, ತನ್ಮೂಲಕ ಶರಣಧರ್ಮದ ಸಾರವನ್ನು ಬೀರುತ್ತ ಶರಣರ ಬಾಳಿನ ಸವಿಯನ್ನು ತೋರುತ್ತ ಬಂದನು. ಮಾತಂಗನ ಮನದಶಿಲೆ ಮೂರ್ತಿಯಾಯಿತು. ಅವನ ದೇಹ ಆ ಮೂರ್ತಿಗೆ ಮಂದಿರವಾಗಿ ಮಾರ್ಪಟ್ಟಿತು.

ಕಲ್ಯಾಣದಲ್ಲಿ ಶರಣರ ಸಾನ್ನಿಧ್ಯ ದೊರೆತಮೇಲಂತೂ ನನ್ನಯ್ಯ ಅಯ್ಯನಾಗಿಬಿಟ್ಟ, ಶಿವದತುಯ್ಯಲಾಗಿಬಿಟ್ಟ. ಸುಜ್ಞಾನಿದೇವನಿಂದವನಿಗೆ ಸುಜ್ಞಾನೋದಯ–ವಾಗಿದ್ದಿತು. ಕಲ್ಯಾಣಕ್ಕೆ ಬಂದು ಸುಜ್ಞಾನಿದೇವ ನನ್ನಯ್ಯ–



**ಸುಜ್ಞಾನಿ ದೇವನಿಂದ ಮಾತಂಗ ತಮ್ಮನಿಗೆ ಸುಜ್ಞಾನೋದಯವಾಯಿತು**

ಇಬ್ಬರಿಗೂ ಶಿವದರ್ಶನ ಸಿದ್ಧಿಸಿತು. ನನ್ನಯ್ಯನ ಗುರುಭಕ್ತಿ ಗಾದೆಯಾಗಿಬಿಟ್ಟಿತು. ಇಂದಿಗೂ ನನ್ನಯ್ಯನ ಚರಿತ್ರೆ ಗುರುಭಕ್ತಿಯ ಗೆಲವುಗಂಬವಾಗಿ ನಿಂತಿದೆ. ಸುಜ್ಞಾನಿದೇವನಂಥ ಗುರು, ನನ್ನಯ್ಯನಂಥ ಶಿಷ್ಯರು ಹುಡುಕಿದರೂ ಸಿಕ್ಕುವುದು ಕಷ್ಟ.

ಇವರ ಬರವಿನಿಂದ ಬಸವಣ್ಣನವರು ಹಿಗ್ಗಿ ಹೋದರು. ಹಿಂಸೆಗೆ ಹೆದರದೆ ಹಿಂಸೆಯ ಹೃದಯದಲ್ಲಿಯೇ ಅಹಿಂಸೆಗೆ ಪಟ್ಟಗಟ್ಟಿದ ಸುಜ್ಞಾನಿದೇವ, ಪಂಚಪಾತಕಗಳನ್ನೇ ಪಕ್ವಾನ್ನಮಾಡಿ ತಿಂದು ಕೊಬ್ಬಿದ್ದರೂ ಪುಣ್ಯದ ಹಾದಿಯನ್ನು ತೋರಿಸುವ ಕರುಣಾಳು ಬೆಳಕು ಬಂದ ಕೂಡಲೇ ಪಾಪದ ಪಥವನ್ನು ಬಿಟ್ಟು ಸೈಪಿನ ಸನ್ಮಾರ್ಗವನ್ನು ಹಿಡಿದ ಮಾತಂಗ–ಇಬ್ಬರೂ ಕಲ್ಯಾಣದಲ್ಲಿ ಸುಕೃತದ ಸುಧೆಯಾಗಿ ಬಾಳಿ ಕೇಡಿಲ್ಲದ ಪದವಿಯನ್ನು ಪಡೆದರು.

■

# ಮಹದ ಬೆಳಗೆ ತಾನಾಗಿನಿಂದ ಮರುಳು ಶಂಕರದೇವ

"ಮೂರನೊಳಕೊಂಡ, ಆರ ಮೀರಿನಿಂದ ಘನವನೇನೆಂಬೆನಯ್ಯ !
ನುಡಿವರೆ ವಾಚಾತೀತ ನೋಡುವರೆ ಕಂಗಳೆರಡೆಯ್ದನಯ್ಯ !
ಮಹದ ಬೆಳಗೆ ತಾನಾಗಿ ನಿಂದ ಮರುಳು ಶಂಕರದೇವರ ನಿಲವ
ಬಸವಣ್ಣನಿಂದ ಕಂಡು ಬದುಕಿದೆನು ಕಾಣಾ ಕಲಿದೇವರ ದೇವಾ"

ಮಡಿವಾಳ ಮಾಚಯ್ಯ.

ಮರುಳು ಶಂಕರದೇವನು ಕಾಳಿಂಗದಿಂದ ಕಲ್ಯಾಣಕ್ಕೆ ಬಂದನೆಂದು ಕವಿಚರಿತೆ ಹೇಳುತ್ತದೆ. ಅಫಗಾಣಿಸ್ತಾನದಿಂದ ಬಂದನೆಂದು ಹಳಕಟ್ಟಿಯವರು ಹೇಳುತ್ತಾರೆ. ಅವನು ಬರ್ಬರ ದೇಶದಲ್ಲಿರುವ ಕಣ್ಣುತ್ತೂರು ಗ್ರಾಮದಲ್ಲಿ ವಿರಕ್ತನಾಗಿದ್ದ ನೈಸರನ ಆಶ್ರಮದಲ್ಲಿದ್ದು ಪ್ರಸಾದ ಮಹಿಮೆಯನ್ನು ತಿಳಿದವನಾಗಿ ಕಲ್ಯಾಣಕ್ಕೆ ಆಗಮಿಸಿದನೆಂದೂ ಅವರು ಹೇಳುತ್ತಾರೆ. ಮೊದಲೇ ಪ್ರಸಾದಿಯಾಗಿದ್ದ ಮರುಳು ಶಂಕರದೇವ ಕಲ್ಯಾಣಕ್ಕೆ ಬಂದು ಮಹಾ ಪ್ರಸಾದಿಯಾಗಿ ಮಹದ ಬೆಳಗೆ ತಾನಾಗಿ ಬೆಳಗುತ್ತಾನೆ. ಅವನ ಈ ವಚನವನ್ನು ಅವನಿಗೇ ಅನ್ವಯಿಸಿ ಹೇಳಬಹುದು :

"ಇಷ್ಟ ಲಿಂಗಕ್ಕೆ ಅಂಗವನರ್ಪಿತವ ಮಾಡಬೇಕು; ಪ್ರಾಣಲಿಂಗಕ್ಕೆ ಮನ ಸಮರ್ಪಿಸಬೇಕು; ಭಾವಲಿಂಗಕ್ಕೆ ತೃಪ್ತಿಯನರ್ಪಿತವಮಾಡಬೇಕು. ಈ ಮರ್ಮವನರಿದು ಮಾಡಬಲ್ಲೊಡೆ ಪ್ರಸಾದಿಯು..... ಲಿಂಗಕ್ಕೆಯೂ ತನಗೆಯೂ ಎಡೆದೆರಹಿಲ್ಲದೆ ಲಿಂಗಸಹಿತವಾಗಿಯೇ ಕೇಳುವ, ಲಿಂಗಸಹಿತವಾಗಿಯೇ ಘ್ರಾಣಿಸುವ, ಲಿಂಗಸಹಿತವಾಗಿಯೇ ರುಚಿಸುವ, ಲಿಂಗಸಹಿತವಾಗಿಯೇ ನೋಡುವ, ಲಿಂಗಸಹಿತವಾಗಿಯೇ ತೊಳಗುವ, ಇಂತಪ್ಪ ಮಹಾಮಹಿಮ ಸದ್ಭಕ್ತನ ಅಂಗವೆಲ್ಲವೂ ಲಿಂಗ, ಸಂಗವೆಲ್ಲವೂ ಲಿಂಗ, ಅಂಗ ಸಂಗವೆಲ್ಲವೂ ಲಿಂಗಸಂಗವಾದ ಕಾರಣ, ಅಂಗಕ್ರಿಯೆಗಳೆಲ್ಲವೂ ಲಿಂಗಕ್ರಿಯೆಗಳಾದ ಕಾರಣ, ಲಿಂಗಭೋಗವೆಲ್ಲವೂ ಲಿಂಗಭೋಗವಾದ ಕಾರಣ ಇಂತಪ್ಪ ಮಹಾಮಹಿಮ ಸದ್ಭಕ್ತನ ಶ್ರೀ ಚರಣಕ್ಕೆ

ನನ್ನ ಶಿರವನಿರಿಸಿ ಪೂಜಿಸುವೆ ಕಾಣಾ ಶುದ್ಧ ಸಿದ್ಧ ಪ್ರಸಿದ್ಧ ಪ್ರಭುವೇ ಶಾಂತ ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಸದ್ಭಕ್ತನ ನಿಲವಿನ ಪರಿಯ ನೀವೇ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ."

ಈ ವಚನದಲ್ಲಿ ಮರುಳು ಶಂಕರದೇವನ ಮೂರ್ತಿಸ್ವರೂಪವು ಮನೋಜ್ಞವಾಗಿ ಮೂಡಿ ನಿಂತಿದೆ. ಈತನು ಕರ್ನಾಟಕದ ಹೊರಗಿನಿಂದ ಬಂದವನೆಂಬುದರಲ್ಲಿ ಸಂದೇಹವಿಲ್ಲ. ಕಲ್ಯಾಣದಲ್ಲಿ ಇದ್ದುದು ವರ್ಷ ಮಾತ್ರವೆಂದು ಹೇಳಿದೆ. ಹನ್ನೆರಡು ವರ್ಷಗಳಲ್ಲಿ ಕನ್ನಡ ಕಲಿತು ಇಂಥ ನಿತಾಂತ ಸುಂದರ ವಚನಗಳನ್ನು ರಚಿಸಿದುದು ಮರುಳು ಶಂಕರದೇವನ ಸಾಹಸವೆಂದೇ ಹೇಳಬೇಕು.

ಈತನ ತಂದೆ ತಾಯಿಗಳಾರೆಂದು ಯಾರೋ ಕೇಳಿರಬೇಕು. ಗುರುಕ–ರೋದ್ಭವನಾಗಿ ಪೂರ್ವಜನ್ಮವಳಿದು ಪುರರ್ಜಾತನಾದ ಮರುಳು ಶಂಕರದೇವ ಏನೆಂದು ಉತ್ತರ ಕೊಡಬೇಕು? ಕೇಳಿ :

"ಮಹಾ ಶ್ರೀ ಗುರುವೇ ತಂದೆ, ಮಹಾ ಜಂಗಮವೇ ತಾಯಿ. ಇವರಿಬ್ಬರ ಸಂಗ ಸಂಯೋಗದಿಂದ ಆನು ಹುಟ್ಟಿದೆ ನೋಡಯ್ಯ. ಆನು ಹುಟ್ಟಿದ ಬಳಿಕ ಆ ತಂದೆತಾಯಿಗಳಿಬ್ಬರು ಲಿಂಗವೆಂಬ ಹೆಣ್ಣು ತಂದು ಎನ್ನ ಕೊರಳಲ್ಲಿ ಕಟ್ಟಿ ಮದುವೆಯ ಮಾಡಿದರಯ್ಯ. ಆ ಹೆಣ್ಣಿನ ಕೈಪಿಡಿದು ಆನು ಬದುಕಿದೆನು. ಆ ಹೆಣ್ಣಿನ ಸಂಗ ಸಂಯೋಗದಿಂದ ಮಗನೆಂಬ ಮಹಾಲಿಂಗ ಹುಟ್ಟಿದನಯ್ಯಾ., ಆ ಮಗ ಹುಟ್ಟಿದ ಮುನ್ನವೇ ಎನಗೆ ಮರಣವಾಯಿತ್ತು. ಲಿಂಗವೆಂಬ ಹೆಂಡತಿ ಮುಂಡೆಯಾದಳು. ತಂದೆತಾಯಿಗಳಿಬ್ಬರೂ ಎನ್ನೊಂದಾಗಿ ಅಡಗಿಹೋದರು. ಇನ್ನು ಮುಂದಿನ ಪರಿಯೆಂತುಟೆಲ್ಲವಾಗಿ ಆನು ಬದುಕಿದೆನು ಕಾಣಾ ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತಮಲ್ಲಿಕಾರ್ಜುನ ದೇವಯ್ಯ.....ನಿಮ್ಮ ಶರಣರ ಕರುಣದಿಂದ ಎನ್ನ ಕರ್ಮ ನಿರ್ಮಳವಾಯಿತ್ತಯ್ಯ, ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ !"

ಇಲ್ಲಿ ಬಂದಿರುವ ಶರಣಪತಿ–ಲಿಂಗಸತಿ ಭಾವ ಗಮನಾರ್ಹವಾಗಿದೆ. ಉಳಿದ ಶರಣರಲ್ಲಿ ಕಂಡುಬರುವುದು ಶರಣಸತಿ–ಲಿಂಗಪತಿ ಭಾವ. ಮರುಳು ಶಂಕರದೇವನಲ್ಲಿ ಮಾತ್ರ ಶರಣಪತಿ–ಲಿಂಗಸತಿ ಭಾವ ತಲೆದೋರಿದೆ. ಈ ಜೀವಪತಿ–ದೇವಸತಿಭಾವ ಸೂಫಿ ಸಂಪ್ರದಾಯದಲ್ಲಿ ಮಾತ್ರ ಇದೆ. ಮರುಳು ಶಂಕರದೇವನು ಅಫಗಾಣಿಸ್ತಾನದತ್ತಣಿಂದ ಬಂದಿರಬೇಕೆಂಬುದಕ್ಕೆ ಇದೂ ಒಂದು ಅಂತಸ್ಥ ಆಧಾರವಾಗಬಲ್ಲುದಲ್ಲದೆ?

ಎರಡನೆಯ ಅಂತಸ್ಥ ಆಧಾರ ಆತನ ಅಹಿಂಸಾನಿಷ್ಠೆ. ತನ್ನ ಉದರ ನಿರ್ವಾಹಕ್ಕಾಗಿ ಯಾವ ಕೃತ್ಯವನ್ನು ಮಾಡಿದರೂ, ಯಾವ ವೃತ್ತಿಯನ್ನು ಕೈಕೊಂಡರೂ ಜೀವಜಾಲಕ್ಕೆ

ನೋವು ತಪ್ಪದೆಂದು ಭಾವಿಸಿ ಶಿವಲಿಂಗ ಭಕ್ತರು ಸೇವಿಸಿದ ಶೇಷ ಪ್ರಸಾದವನ್ನು ಸೇವಿಸಿ ಜೀವಿಸಿದ ಮಹಾತ್ಮನಿವನೆಂದು ಪ್ರಭುಲಿಂಗಲೀಲೆಯಲ್ಲಿ ಪ್ರಭುದೇವರಿಂದ ಸಿದ್ಧರಾಮನಿಗೆ ಹೇಳಿಸಿದ್ದಾನೆ ಚಾಮರಸ. ಈ ಅಪ್ರತಿಮ ಅಹಿಂಸಾನಿಷ್ಠೆಗೆ ಇವನ ಮೇಲೆ ಪ್ರಾರಂಭದಲ್ಲಿ ಬೌದ್ಧಮತದ ಪ್ರಭಾವ ಬಿದ್ದಿರಬೇಕೆಂದೂ ಅಫಗಾಣಿಸ್ತಾನವು ಆಗ ಬೌದ್ಧಮತದ ಕೇದ್ರವಾಗಿದ್ದುದರಿಂದ ಮರುಳು ಶಂಕರದೇವನು ಅಲ್ಲಿಂದ ಬಂದಿರಬೇಕೆಂದು ಅನುಮಾನಿಸಬಹುದಾಗಿದೆ.

ಬಸವಣ್ಣನವರ ಅರಮನೆಯ ಅಂಗಳದಲ್ಲಿ ಪ್ರಸಾದ ಕುಂಡದ ಪಕ್ಕದಲ್ಲಿಯೇ ಹನ್ನೆರಡು ವರ್ಷಕಾಲ ಇದ್ದರೂ ಮರುಳು ಶಂಕರದೇವ ಯಾರ ದೃಷ್ಟಿಗೂ ಬಿದ್ದಿರಲಿಲ್ಲವಂತೆ. ಭಕ್ತನ ಭಾಗ್ಯಶುಭೋದಯನಾದ ಬಸವಣ್ಣನಿಗೇ ಅವನಲ್ಲಿದ್ದುದು ಗೊತ್ತಾಗಿರಲಿಲ್ಲವೆಂದಮೇಲೆ ಉಳಿದವರ ಪಾಡೇನು?

ಪ್ರಭುದೇವರು ಬಸವಣ್ಣನವರ ಅರಮನೆಯ ಅಂಗಳಕ್ಕೆ ದಯಮಾಡಿಸಿದಾಗ,

"ನಮಃ ಶಿವಾಯ ! ಮಹದಾಕಾಶದ ಮರೆಯಲ್ಲಿರ್ದ ಶಾಂತ್ಯರ್ಕನ ನಿಲವೊ? ದಶಮರುತನ ಹೊಯಿಲಿಲ್ಲದೆ ತಾನೆ ಲಿಂಗದ ಜ್ಞಾನಜ್ಯೋತಿಯ ನಿಲವೂ? ತನ್ನಿಂದ ತಾನಾಗಿ ಮುಕ್ತಿಯೆ ಕರಿಗೊಂಡ ಮುಕ್ತಿಯ ಮುತ್ತಿನ ಧವಳದ ಕಾಂತಿಯ ನಿಲವೊ?...ತನ್ನ ನಿಲವನರಿಯದೆ ವಾದಿಸುತ್ತಿರಲು ಉರಿಲಿಂಗೋದ್ಭವವಾದ ಉರಿಲಿಂಗದ ನಿಲವೋ? ಆವನಿಲವೆಂದರಿಯಬಾರದು. ಗುಹೇಶ್ವರನ ಕಂಗಳಿಗೆ ಒಂದಾಶ್ಚರ್ಯ ತೋರಿತ್ತು ಕಾಣಾ ಸಂಗನ ಬಸವಣ್ಣ?"


ಎಂದು ನುಡಿದರು.

'ಅದಾವ ಆಶ್ಚರ್ಯ ಪ್ರಭುವೆ?' ಎಂದು ಬಸವಣ್ಣನವರು ಬೆಸಗೊಳ್ಳಲು, ಪ್ರಭುದೇವರು,

"ಬೀದಿಯಲ್ಲಿ ಬಿದ್ದ ಮಾಣಿಕ್ಯವ, ಹೂಳಿರ್ದ ನಿಧಾನವನಾರಿಗೂ ಕಾಣಬಾರದು ನೋಡಾ, ಮರಣವುಳ್ಳವರಿಗೆ ಮರುಜವಣಿ ಸಿಕ್ಕುವುದೆ? ಪಾಪಿಯ ಕಣ್ಣಿಂಗೆ ಪರುಷ ಕಲ್ಲಾಗಿಪ್ಪಂತೆ ಇಪ್ಪರಯ್ಯಾ ಶಿವಶರಣರು. ನಮ್ಮ ಗುಹೇಶ್ವರನ ಶರಣ ಮರುಳು ಶಂಕರದೇವರ ನಿಲವನೋಡಾ ಸಂಗನಬಸವಣ್ಣಾ ! ನಿನ್ನ ಭಕ್ತಿವೃಕ್ಷದ ಪಸರಣೆಯನ್ನು ಆಶ್ರಯಿಸಬೇಕೆಂದು ಒಸೆದ ಬಂದ ಮಹಾತ್ಮರು ಅಗಣಿತ. ಅವರಲ್ಲಿ ಈಗನಿಗೆ ವಸುಮತಿಯಲ್ಲಿ ಎಣೆಯಿಲ್ಲ. ಇಂತಪ್ಪ ಅಸಮರೆಲ್ಲರೂ ನಿನ್ನ ಬಾಗಿಲವನ್ನು ಮುಸುರಿಕೊಂಡಿಹರಾಗಿ ನೀನೇ ಕೃತಾರ್ಥನಲ್ಲವೆ?"

ಇದಕ್ಕೆ ಮರುಳು ಶಂಕರದೇವ ಸ್ವರ ಸೇರಿಸಿದ,

"ನಿಮ್ಮ ಶರಣ ಬಸವಣ್ಣನ ಪರಿಯ ನೀವೆ ಬಲ್ಲಿರಲ್ಲದೆ ನಾನೆತ್ತ ಬಲ್ಲೆ




**ಶಿವಲಿಂಗ ಭಕ್ತರು ಸೇವಿಸಿದ ಶೇಷ ಪ್ರಸಾದದಿಂದ ಜೀವಿಸಿದ ಮಹಾತ್ಮ ಮರುಳು ಶಂಕರದೇವ**

ನಯ್ಯಾ? ನಿಮ್ಮ ಧರ್ಮ, ನಿಮ್ಮ ಧರ್ಮ !"

ಪ್ರಭುದೇವರೊಡನೆ ಆಗಮಿಸಿದ್ದ ಸಿದ್ಧರಾಮಯ್ಯನಿಗೆ ಬಸವಣ್ಣ ಮೊದಲಾದ ಶರಣರನ್ನು ಕಂಡಾಗಲೇ ಸಂತಸ ಉಕ್ಕಿಬಂದಿತ್ತು. ಮರುಳು ಶಂಕರದೇವರನ್ನು ಕಂಡಮೇಲಂತೂ ಕೌತುಕವು ಕೊನರಿ ನಿಂತಿತು. " ಈ ಮಹಿಮನ ಹೊಸಪರಿಯ ರೀತಿಯನು ನಮಗರುಹಿಸಲುಬೇಕೆಂದು" ಪ್ರಭುದೇವರಿಗೆ ಪ್ರಾರ್ಥಿಸಿದನು. ಪ್ರಭುದೇವರು ಪರಮಾನಂದದಿಂದ–

"ಮರುಳು ಶಂಕರದೇವನು ಅರಿವಿನ ತಿರುಳು. ಲಿಂಗಾಗಮದ ಹೊಳಹಿನ ಹುರುಳು, ನಿರ್ಮಳ ಧರ್ಮವರ್ಮದ ಚಾರು ಚಾರಿತ್ರ , ಶಾಂತಿಯ ಚಿತ್ತವೃತ್ತಿಯ ಪರಮಪಾವನಮೂರ್ತಿ. ಕರಣವೆಲ್ಲವು ಕರಿಗೆ, ಅಂತಃಕರಣ ಶುದ್ಧಿಯ ಪಡೆದು, ಶಂಕರನ ಸಾಧಕರೊಕ್ಕು ಮಿಕ್ಕುದನುಂಡು, ಕಾಮದಲ್ಲಿ ಕಂಗೆಡದೆ, ಕ್ರೋಧಸ್ತೋಮದಲಿ ಮುಂಗೆಡದೆ, ಲೋಭದ ಸೀಮೆಯಲಿ ಸಿಕ್ಕದೆ, ವಿಮೋಹದ ಬಲೆಗೆ ಬಗೆಗುಡದೆ, ಆ ಮದೋನ್ನತ ಮತ್ಸರಂಗಳ ನೇವಿಸದೆ ಲಿಂಗಪ್ರಸಾದದ ಪ್ರೇಮಿಯಾದ ಮಹಾತ್ಮನೀತ. ಕೇಳುವ, ಆಲೋಕಿಸುವ, ರುಚಿಸುವ, ಕಂಪರಿವ, ಸೋಂಕುವ, ತಾಳು ವಿಷಯೇಂದ್ರಿಯದ ತವಕವ ತೆಗೆದು ತರಹರಿಸಿ, ಬಾಳಿಕೆಗೆ ನಿರ್ಬಾಧಕದ ಸಂಮೇಳವೆಂದು ಈಶಪ್ರಸಾದವ ಮೆಚ್ಚಿದ ಮಹಿಮನೀತ. ಇಂದ್ರಿಯವನಲೆಗಳೆದು, ಅಳುಪಿನ ದಂಧುಗವ ಧಿಕ್ಕರಿಸಿ, ಭವಬಂಧನದ ಬೇರಿಗೆ ಕಿಚ್ಚನಿಕ್ಕಿದ ಅಚ್ಚಶರಣನೀತ."

ಎಂದು ಮಹಾಪ್ರಸಾದಿ ಮರುಳು ಶಂಕರದೇವನ ಮಹೋನ್ನತಿಯನ್ನು ಬರೆದರು.

"ಕಂಗಳೊಳಗೆ ಕರುಳಿಲ್ಲ. ಕಾಯದೊಳಗೆ ಮಾಯವಿಲ್ಲ. ಮನದೊಳಗೆ ಅಹಂಕಾರವಿಲ್ಲ. ದೇಹವೆಂದರಿಯ, ನಿರ್ದೇಹವೆಂದರಿಯ. . . ಲಿಂಗ ಜಂಗಮದ ಒಕ್ಕುಮಿಕ್ಕು ಪ್ರಸಾದ ಕೊಂಡು ಮಿಕ್ಕು ಮೀರಿನಿಂದ ಮಹಾ ಪ್ರಸಾದಿಯ ನೋಡಾ! ತನ್ನನರಿದಿಹರೆಂದು ಜಗದ ಕಣ್ಣಿಗೆ ಮಾಯದ ಮಂಜ ಕವಿಸಿ, ನಿಜಪದದಲ್ಲಿ ತದುಗತನಾದ, ಕೂಡಲಸಂಗಮ ದೇವರಲ್ಲಿ ಮರುಳುಶಂಕರದೇವರ ನಿಲವ ನೋಡಾ ಚೆನ್ನಬಸವಣ್ಣಾ!"

ಎಂದು ಬಸವಣ್ಣನವರು ಬಣ್ಣಿಸಿದರು ;

"ಸತ್ಯಶರಣರ ಅಂಗದೊಳಗೆ ಬಿದ್ದ ಆಗುಳನೆತ್ತಿಕೊಂಡಿಪ್ಪೆನೆಂದು ನಿಮ್ಮ ಪ್ರಸಾದದ ಕುಳಿಯೊಳಗೆ ಹನ್ನೆರಡು ವರುಷ ಪರಿಯಂತರ ಪ್ರಸಾದಿಯಾಗಿರ್ದ. ಕೂಡಲ ಚೆನ್ನಸಂಗಮದೇವರಲ್ಲಿ ಮರುಳು ಶಂಕರದೇವರ ಶ್ರೀಪಾದದ ಘನವನು ನಿಮ್ಮಿಂದ ಕಂಡು ಬದುಕಿದೆನು ಕಾಣಾ ಸಂಗನ ಬಸವಣ್ಣಾ !"

ಎಂದು ಚೆನ್ನಬಸವಣ್ಣನವರು ಕೀರ್ತಿಸಿದರು ;

"ಅಂಗವಿದ್ದು ಅಂಗವಿಲ್ಲ. ಸಂಗಘನ ಪದದಲ್ಲಿ ವೇದ್ಯವಾದ ಮರುಳು
ಶಂಕರದೇವರ ನಿಲವ ಪ್ರಭು ಬಸವಣ್ಣನಿಂದ ಕಂಡು ಬದುಕಿದೆನು
ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ !"

ಎಂದು ಸಿದ್ಧರಾಮಯ್ಯನವರು ಹಾಡಿದರು ;

"ಯುಗಜುಗಂಗಳ ಅಳಿವುಳಿವನರಿಯದೆ, ಹಗಲಿರುಳೆಂಬವ ನೆನಹಿನಲ್ಲೂ ಅರಿಯದೆ, ಲಿಂಗದಲ್ಲಿ ಪರವಶನಾಗಿರ್ದ ಪರಮಪರಿಣಾಮಿಯ ನೇನೆಂದುಪಮಿಸುವೆನಯ್ಯಾ? ಅಹಾ, ಎನ್ನ ಮುಕ್ತಿಯ ಮುಕುರದ ಇರವ ನೋಡಾ! ಆಹಾ, ಎನ್ನ ಸತ್ಯದ ಸ್ವಾನುಭಾವದ ಕಳೆಯ ನೋಡಾ ! ಆಹಾ, ಅಪ್ಪ"

ಎಂದು ಹೇಳಿದರು.

ಆಗ 'ಆದಿಯನಣಗ ಮುಖಕ್ಕರ್ಪಿಸಿ, ಅನಾದಿಯ ಪ್ರಾಣ ಮುಖಕ್ಕರ್ಪಿಸಿ, ಮನವೆಂಬುದ ಅರಿವಿನ ಮುಖಕ್ಕರ್ಪಿಸಿ, ತಾನೆಂಬುದ ನಿರಾಕಾರದಲ್ಲಿ ನಿಲಿಸಿ. ಪರಿಣಾಮ ಪ್ರಸಾದದಲ್ಲಿ ತದ್ಗತನಾಗಿ, ಪ್ರಸಾದವೆ ಪ್ರಾಣವಾಗಿ, ಪ್ರಸಾದವೇ ಕಾಯವಾಗಿ, ಪ್ರಸಾದವೆ ಧ್ಯಾನ, ಪ್ರಸಾದವೆ ಜ್ಞಾನ ಲಿಂಗಭೋಗೋಪಭೋಗಿಯಾಗಿದ್ದ' ಮರುಳು ಶಂಕರದೇವರು 'ವಸಂತಮಾಸ ಬರಲು ಚೂತದಿಂದ ಅಂಕುರ ಮೊರಮಡುವಂತೆ, ಸೂಜಿಕಲ್ಲ ಕಾಣುತ ಸೂಜಿ ಮೆಲ್ಲನೆ ತನ್ನ ಸ್ಥಾನದಿಂದೇಳುವಂತೆ, ಹುಣ್ಣಿಮೆಯ ಚಂದ್ರನುದಯಕ್ಕೆ ಸಿಂಧು ಮೆಲ್ಲನೆ ಮುಂದಕ್ಕುಬ್ಬಿ ನಡೆದು ಬರುವಂತೆ, ಪ್ರಸಾದಕುಂಡದ ಪಕ್ಕದಿಂದ ಹೊರಬಂದು ಪ್ರಭುದೇವರಿಗೆ ಸಾಷ್ಟಾಂಗ ಪ್ರಣತನಾಗಿ ಪರಿಣಮದ ಪಸರಣೆಯಲ್ಲಿ ಪಲ್ಲವಿಸಿ ಭಕ್ತಿಭಾವದ ಬುಲ್ಲವಣೆಯಲ್ಲಿ ಹಿಗ್ಗುತ–

"ಗುರುವ ಕಂಡೆನು ಎನ್ನ ಭಾಗ್ಯದ
ತರುವ ಕಂಡೆನು ಎನ್ನ ಮುಕ್ತಿಯ
ಸಿರಿಯ ಕಂಡೆನು"

ಎಂದು ನಲಿದಾಡುತ್ತ–

"ಬಾರೆನ್ನ ಕುಲವೆ ಚಲವೇ । ಬಾರೆನ್ನ ಸುಕೃತದೊಲವೆ ನಿತ್ಯದ ಬಲವೇ ॥
ಬಾರೆನ್ನ ಬಗೆಯ ನಲವೇ । ಬಾರೆನ್ನಯ ನಿಜದ ನಿಲವೆ ಪರಮ ಪ್ರಭುವೇ"॥

ಎಂದು ಕುಣಿದಾಡುತ್ತ–

"ಗರ್ಭದೊಳಗೆ ಶಿಶು ನವಮಾವ ಹಾರಿಕೊಂಡಿರ್ದಂತೆ ಇರ್ದೆನಯ್ಯಾ ! ಎನ್ನ ಜನ್ಮ ಸಫಲವಾಯಿತ್ತಯ್ಯ ! ಎನಗೆ ಹರಿಯಿತ್ತು ತಮವೆಂಬ ಸಂಸಾರ ಬಂಧ. ಅಡಗಿ ಉಡುಗಿ ಕಂಡೆನೆಂಬ ಭ್ರಮೆ ಭಾವಕ್ಕೆ ಬಯಲಾಯಿತ್ತು. ನಿತ್ಯನಿರಂಜನ ಪರಂಜ್ಯೋತಿ ಪ್ರಕಾಶವಾಯಿತ್ತು. ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತಮಲ್ಲಿಕಾರ್ಜುನ ದೇವಯ್ಯ, ಬಸವರಾಜ ದೇವರ ದಯದಿಂದ ಪ್ರಭುದೇವರ ಶ್ರೀ ಮೂರ್ತಿಯಂ ಕಂಡು ಬದುಕಿದೆನು ! ಪ್ರಭುದೇವರ ಕಾರುಣ್ಯದಿಂದ ಬದುಕಿದೆನು. ಶರಣು ಶರಣಾರ್ಥಿ ಸಕಲ ಪುರಾತನರಿಗೆ"

ಎಂದು ಎಲ್ಲರಿಗೂ ತಲೆಬಾಗಿ ನಿಂದರು.

"ಕಂಡೆಯಾ ಬಸವಣ್ಣಾ ! ಕಣ್ಣಿನೊಳಗಣ ಬೊಂಬೆಯ ಸೂತ್ರದ ಇರವಿನಂತೆ, ಕುಂದಣದೊಳಡಗಿ ತೋರುವ ಮೃದುಭಾಯದಂತೆ, ನವನೀತದೊಳಡಗಿದ ಸಾರದ ಸವಿಯಂತೆ ಅಂಗವಿಲ್ಲದ ಕುರುಹು ! ಭಾವವಿಲ್ಲದ ಬಯಲು ! ಬಳಗನರಿಯದೆ ಜ್ಯೋತಿಯ ಕಂಡೆಯಾ ಗುಹೇಶ್ವರ ಲಿಂಗದಲ್ಲಿ ಮರುಳು ಶಂಕರದೇವರ ಸಂಗನಸಬಸವಣ್ಣ !"

ಎಂದು ಹರ್ಷೋತ್ಕರ್ಷದಿಂದ ಪ್ರಭುದೇವರು ನುಡಿದರು.

ಬಸವಣ್ಣನವರಿಗೆ ಬಣ್ಣಿಸಲು ಬಾರದ ಬೇಗುರಿ. 'ಹನ್ನೆರಡು ವರುಷ ಈ ಮಹಾತ್ಮನು ನನ್ನ ಮನೆಯ ಅಂಗಳದಲ್ಲಿಯೇ ಇದ್ದರೂ ನಾನರಿಯದಂತೆ ಇದ್ದೆನಲ್ಲ!" ಎಂಬ ವಿಚಾರ ಅವರ ಚಿತ್ತವನ್ನು ಕದಡಿತ್ತು :

"ಅಯ್ಯಾ, ನಿಮ್ಮ ಶರಣರು ಬಂದೆನ್ನ ಅಂಗಳದೊಳಗೆ ರಕ್ಷಿಸಿಹೆನೆಂದಿರಲು, ನಾನು ತೆರಹುಮರಹಾಗಿರ್ದು ಕೆಟ್ಟೆನಯ್ಯಾ ! ನಾನು ಕೆಟ್ಟಕೇಡಿಂಗೆ ಕಡೆಯಿಲ್ಲವಯ್ಯಾ !. . . ನಿಮ್ಮ ಶರಣರ ಇರವನರಿಯದೆ ಬವದುಃಖಿಯಾದೆನಯ್ಯಾ ! . . .ನಡುದೊರೆಯೊಳಗೆ ಹರಿಗೋಲನಿಳಿದಂತಾಯಿತೆನ್ನ ಭಕ್ತಿ ! ಕೂಡಲಸಂಗಮದೇವಾ, ಈ ಮರುಳು ಶಂಕರ ದೇವರ ಕೃಪೆ ಎನ್ನಗಿನ್ನೆಂದಪ್ಪುದು ಹೇಳಾ ಪ್ರಭುವೆ"

ಎಂದು ನೊಂದು ನುಡಿದರು.

ಪ್ರಭುದೇವರು ಬಸವಣ್ಣನವರನ್ನು ಸಂತೈಸುತ್ತ ನುಡಿದರು.:

"ಬಸವಣ್ಣ, ಮದಂಗಳ ಹಂಗನುಳಿದು, ನಿಷ್ಠೆನಿಬ್ಬೆರಗಾಗಿ ನಿಂತ ಚಿತ್
ಸುಖಿಯ ನೋಡಾ ! ಬಸವಪ್ರಿಯ ಕೂಡಲ ಚೆನ್ನಸಂಗಮದೇವಯ್ಯಾ,
ಪರಮಪ್ರಸಾದಿ ಮರುಳು ಶಂಕರದೇವರ ನಿಲವ ಪ್ರಭು ಬಸವಣ್ಣನಿಂದ
ಕಂಡು ಬದುಕಿದೆನು, ಬದುಕಿದೆನು !

ಎಂದು ಹಡಪದ ಅಪ್ಪಣ್ಣಗಳು ಹಾಡಿದರು ;

"ತನ್ನನಳಿದು ನಿಜ ಉಳಿದ ಮಹಾಲಿಂಗ ತ್ರಿಪುರಾಂತಕರ ನಿಲವಕಂಡು
ಒಳಕೊಂಡ ಮರುಳು ಶಂಕರದೇವರ ಮೂರ್ತಿಯ ನಿನ್ನಿಂದ ಕಂಡು
ಬದುಕಿದೆನು ಕಾಣಾ ಸಂಗನ ಬಸವಣ್ಣಾ !"

ಎಂದು ಕಿನ್ನರ ಬ್ರಹ್ಮಯ್ಯನವರು ಕೊಂಡಾಡಿದರು.

ಮರುಳು ಶಂಕರದೇವರು ಎಲ್ಲರಿಗೂ ನತರಾಗಿ ನುಡಿದರು–

“ಎನ್ನ ಜ್ಞಾನಾತ್ಮನ ಚೇತನನಯ್ಯಾ ಪ್ರಭುದೇವರು ! ಎನ್ನ ಪರಮಾತ್ಮನ ಚೇತನನಯ್ಯಾ ಸಿದ್ಧರಾಮದೇವರು ! ಎನ್ನ ಚಿನ್ಮಯಾತ್ಮನ ಚೇತನನಯ್ಯಾ ಸಂಗನ ಬಸವಣ್ಣನು ! ಎನ್ನ ನಿರ್ಮಳಾತ್ಮನ ಚೇತನನಯ್ಯಾ ಷಡುಸ್ಥಲ ಬ್ರಹ್ಮಿ ಚೆನ್ನಬಸವಣ್ಣನು ! ಎನ್ನ ಮಹಾತ್ಮನ ಚೇತನನಯ್ಯಾ ಬಸವಣ್ಣನ ನಿಜ ಸುಖಿ ಅಪ್ಪಣ್ಣನು ! ಎನ್ನ ಜೀವಾತ್ಮನ ಚೇತನನಯ್ಯಾ ಮಡಿವಾಳ ಮಾಚಯ್ಯನು ! ಎನ್ನರಿವಿನ ಚೇತನಾತ್ಮಕನಯ್ಯಾ ಕಿನ್ನರ ಬ್ರಹ್ಮಯ್ಯನು ! ಇಂತಪ್ಪ ಪ್ರಮಥರ ಕರುಣದಿಂದ ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತಚೆನ್ನಮಲ್ಲಿಕಾರ್ಜುನದೇವರಯ್ಯ, ಬದುಕಿದೆನು ಕಾಣಾ ! ನಿಮ್ಮ ಧರ್ಮ, ನಿಮ್ಮ ಧರ್ಮ!”

ಶರಣರು ಇಷ್ಟಕ್ಕೆ ಸಂತುಷ್ಟರಾಗಲಿಲ್ಲ. ಅವರಿಗೆ ಬೇಕಾಗಿದ್ದಿತು ಮರುಳು ಶಂಕರದೇವರ ಮಹಾನುಭಾವ. ಅದನ್ನೇ ನೀಡಬೇಕೆಂದು ಬೇಡಿಕೊಂಡರು. ಮನೋಜ್ಞವಾಗಿ ಹೇಳಿದರು ಮರುಳು ಶಂಕರದೇವರು :

“ಸಂಸಾರವೆಂಬ ಸಾಗರವ ದಾಂಟುವರೆ ಆರುಹೆಂಬ ಹರಿಗೋಲನಿಕ್ಕಿ, ಜ್ಞಾನವೆಂಗ ಅಂಬಿಗ ಈ ಹರಿಗೋಲೊಳಗೆ ಕುಳ್ಳಿರ್ದು, ಸುಜ್ಞಾನವೆಂಬ ಸಟ್ಟುಗವ ಪಿಡಿದು, ಮಹಾಜ್ಞಾನವೆಂಬ ಘಾತಗಳೆಯಂ ಪಿಡಿದು, ನಾನೀ ಹೊಳೆಯಂ ಕಂಡು ಅಂಬಿಗನ ಕೇಳಿದರೆ ನಾ ನಿನ್ನ ಹಾಯಿಸಿಕೊಟ್ಟೇನೆಂದನು. ನಾನು ನಿನ್ನ ನಂಬಿ ಹರಿಗೋಲನೇರಿದೆನು ಕಾಣಾ ಅಂಬಿಗರಣ್ಣಾ. ಇಂತು ನಾನು ಹರಿಗೋಲಲ್ಲಿ ಕುಳ್ಳಿರ್ದು ನಡೆಹೊಳೆಯಲ್ಲಿ ಹೋಗಲಿಕೆ ಕಾಮವೆಂಬ ಕೊರಡು ಅಡ್ಡಬಿದ್ದಿತ್ತು ; ಕ್ರೋಧವೆಂಬ ಸುಳುಹಿನೊಳಗೆ ಸಿಕ್ಕಿತ್ತು; ಅಹಂಕಾರವೆಂಬ ಮೀನು ಬಂದು ನಿಂದಿತ್ತು ; ಮಾಯವೆಂಬ ಮೊಸಳೆ ಬಾಯ ಬಿಡುತ್ತಿತ್ತು ; ಮೋಹವೆಂಬ ನೊರೆ ತೆರೆ ಹೆಚ್ಚಿ ಬರುತ್ತಿದ್ದಿತ್ತು; ಲೋಭವೆಂಬ ಕಡಲು ಎಳೆದೊಯಿವುತ್ತಿದ್ದಿತ್ತು ; ಮದವೆಂಬ ಮರಹು ನೂಕುತ್ತಿದ್ದಿತ್ತು; ಇವೆಲ್ಲವನೂ ಪರಿಹರಿಸಿ ಹೊಳೆಯ ದಾಂಟಿಸಿದನು ಅಂಬಿಗರಣ್ಣನು. ಈ ಹೊಳೆಯ ದಾಂಟಿಸಿದ ಕೂಲಿಯ ನನ್ನ ಬೇಡಿದರೆ, ಕೂಲಿಯ ಕೊಡಲೇನು? ಇಲ್ಲಾ ಎಂದರೆ ಕೈಸೆರೆಯಾಗಿ ಎನ್ನನೆಳೆದೊಯ್ದನಯ್ಯಾ! ಅರುವೆಯ ಕೊಟ್ಟ ಕೂಲಿಗೆ ಕರುವ ಕಾಯಿಸಿಕೊಂಡನಯ್ಯ ! ಅರಿಯದೆ ಹರಿಗೋಲನೇರಿ ತೊರೆಯದಾಂಟಿದ ಕೂಲಿಗೆ ಕರುವ ಕಾದೆ ಕಾಣಾ ! ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತ ಚೆನ್ನಮಲ್ಲಿಕಾರ್ಜುನ ದೇವಯ್ಯಾ, ನಿಮ್ಮ ನಂಬಿ, ನಾನು ಕೆಟ್ಟು, ಬಟ್ಟಬಯಲಾಗಿ ನಿಂದೆನಯ್ಯ , ನಿಮ್ಮ ಧರ್ಮ, ನಿಮ್ಮ ಧರ್ಮ!”

ಕೇಳುತ್ತಿದ್ದ ಶರಣರು ಶಿಲಾಪ್ರತಿಮೆಗಳಂತೆ ಸ್ತಂಭೀಭೂತರಾಗಿ ನಿಂತುಬಿಟ್ಟರು ಮರುಳು ಶಂಕರದೇವರ ಸದ್ದಿಲ್ಲದೆ ಸಾಧನೆ, ಅವರನ್ನು ಮೂಕರನ್ನಾಗಿ ಮಾಡಿ

ಬಿಟ್ಟಿದ್ದಿತು. ಪ್ರಭುದೇವರು ಪ್ರೀತರಾದರು. ಮರುಳು ಶಂಕರದೇವರಿಗೆ ನಿಜದ ನಿಲವನ್ನು ತಿಳಿಸಿ ನಿಜ ಪದವನ್ನು ಕರುಣಿಸಿದರು. ಮರುಳು ಶಂಕರದೇವರ ಮನದಾಸೆ ಫಲಿಸಿತು. 'ನಾನು ಬಸವಣ್ಣನ ಮುಂದೆ ಬಯಲಾಗಿ ಹೋದೆನಯ್ಯಾ!'ಎಂದು ನಿರವಯವಾಗಿಬಿಟ್ಟರು. ಆಗ ಅವರ ಬಾಯಿಂದ ಮಾತು ಜ್ಯೋತಿಯಾಗಿ ಹೊರಟಿತು :

"ಶಿಷ್ಯನೆಂಬ ಧರೆಯ ಮೇಲೆ ಶ್ರೀ ಗುರುವೆಂಬ ಬೀಜವ ಬಿತ್ತಿ, ಅರಿವೆಂಬ ಗೊಬ್ಬರವನಿಕ್ಕಿ, ಜ್ಞಾನವೆಂಬ ಉದಕವನೆರೆಯಲಿಕೆ, ಲಿಂಗವೆಂಬ ಆಕಾರ ಮೊಳೆದೋರಿತ್ತು ಕಾಣಿರೇ ! ಜಂಗಮವೆಂಬ ಸಸಿ ಬೆಳದು ವೃಕ್ಷ ಪಲ್ಲವಿಸಿತ್ತು; ಸುಜ್ಞಾನವೆಂಬ ನನೆ ಬಿರಿಮುಗುಳಾಯಿತ್ತು; ಮಹಾಜ್ಞಾನವೆಂಬ ಪುಷ್ಪ ವಿಕಸಿತವಾಯಿತ್ತು ; ಖಂಡಿತವೆಂಬ ಮಂಗಳವಾಯಿತ್ತು; ಅಖಂಡಿತವೆಂಬ ಕಾಯಿ ಬಲಿಯಿತ್ತು; ಪರಮಜ್ಞಾನವೆಂಬ ಹಣ್ಣಾಯಿತ್ತು ; ಆ ಹಣ್ಣು ಬಲಿದು ತೊಟ್ಟು ಬಿಟ್ಟು ಬಟ್ಟ ಬಯಲಲ್ಲಿ ಬಿದ್ದಿತ್ತು. ಆ ಹಣ್ಣು ಕಂಡು ಇದೆಲ್ಲಿಯದೆಂದು ನಾನು ವಿಚಾರ ಮಾಡಲ್ಕೆ ಬಿತ್ತಿದವರಾರೆಂದು ಹೇಳುವವರಿಲ್ಲ. ಬಿತ್ತಿದವನ ಸೊಮ್ಮು ನಾವು ಕೇಳಬಾರದು. ಆ ಹಣ್ಣಕೊಂಡು ನಾನು ಬಿತ್ತಿದಾತನನರಿಸಿಕೊಂಡು ಹೋಗಲ್ಕೆ ನಾನೆತ್ತ ಹೋದೆನೆಂದರಿಯೆನಯ್ಯ, ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಶಾಂತಚೆನ್ನಮಲ್ಲಿಕಾರ್ಜುನ ದೇವಯ್ಯಾ !"

ಕಂಟಕವ ಕಳೆದನೆಲೆ ಶಿವ । ದಾಂಟದೆ ಸಂಸಾರಶರಧಿಯಂ ಕರದೊಳ್ ನೀ
ನಂಟಿ ನೆಲೆಗೊಂಡ ಕಾರಣ । ಮೀಂಟಿದೆನಾನಂದಸುಧೆಯ ಪರಮಪ್ರಭುವೆ॥

ಚೆನ್ನಬಸವಣ್ಣನವರು ಕಣ್ಣೀರಮಿಡಿದು ಹಾಡಿದರು, ಉಳಿದವರು ದನಿಗೂಡಿದರು.

"ಮಾಡಬಾರದ ಭಕ್ತಿಯನೆ ಮಾಡಿ, ನೋಡಬಾರದ ನೋಟವನೆ ನೋಡಿ,
ಕೂಡಬಾರದ ಕೂಟವನೆ ಕೂಡಿ, ಸುತ್ತಿಸುವರಿಗೆ ಸುತ್ತಿಗೆಬಾರದೆ,
ಮುಟ್ಟುವರಿಗೆ ಮುಟ್ಟಬಾರದೆ ಬಟ್ಟಬಯಲಾಗಿ ಹೋದ ಮರುಳುಶಂಕರ
ದೇವರ ಮಹಾತ್ಮೆಗೆ ನಮೋ ನಮೋ ಎಂದು ಬದುಕಿದೆನು ಕಾಣಾ
ಕೂಡಿಲ ಚೆನ್ನ ಸಂಗಮದೇವಾ !"

■

# ನಿಜೈಕ್ಯ ಅಜಗಣ್ಣ-ಸದ್ಯೋನ್ಮುಕ್ತೆ ಮುಕ್ತಾಯಕ್ಕ

ಅಣ್ಣನನ್ನಗಲಿ ಹೋಗಲಾಗದೆ ಗೋಗರೆಯುತ್ತಿದ್ದಳು ಒಬ್ಬ ತಂಗಿ ಲಕ್ಕುಂಡಿಯಲ್ಲಿ-ಎಂಟುನೂರು ವರ್ಷಗಳ ಹಿಂದೆ. ಅಂದೇಕೆ, ಇಂದಿಗೂ ಅಣ್ಣನನ್ನಗಲುವ ತಂಗಿ ಅದೇ ತೆರನಾಗಿ ಕಂಬನಿದುಂಬುತ್ತಾಳೆ. ಅಗಲುವ ಅಣ್ಣ ಅಣ್ಣನಷ್ಟೇ ಅಲ್ಲ, ಅಂತರಂಗವನ್ನರಳಿಸಿದ ಗುರುವೂ ಆಗಿರುವಾಗ ಅದೆಷ್ಟುವೇದನೆಯಾಗಲಿಕ್ಕಿಲ್ಲ ತಂಗಿಗೆ? ಆ ಲಕ್ಕುಂಡಿಯ ತಂಗಿಗೆ ಅಣ್ಣನಾಗಿ, ಗುರುವಾಗಿ ತನಗೆ ಅಕ್ಕರೆಯನ್ನೂ ಅಕ್ಕರವನ್ನೂ ಎರದು ಬೆಳೆಸಿದ್ದ, ಅಣ್ಣನನ್ನು ಅಗಲುವಾಗ ಅಳಲ ಮುಗಿಲೊಡ್ಡೇ ಮೇಲೆ ಕಳಚಿದಂತಾಗಿದ್ದಿತು.

"ತಂಗಿ ಮುಕ್ತಾಯಿ, ಅಳಬೇಡವಮ್ಮ. ಶಿವನ ಕೃಪೆಯಿಂದ ಎರಡು ಮನೆಗಳನ್ನು ಮಗಮಗಿಸುವ ಮಗನನ್ನು ಪಡೆದು ನನ್ನ ಆಗಲಿಕೆಯ ದುಃಖವನ್ನು ಮರೆಯುವಿ" ಎಂದು ಸಂತೈಸಿದ ಅಣ್ಣ.

"ಅಜಗಣ್ಣ, ಮತ್ತೆ ಎಂದಿಗೆ ನಿನ್ನ ದರ್ಶನ? ಅಣ್ಣನಾಗಿ ನನ್ನನ್ನು ಒಲವಿನ ತೊಟ್ಟಿಲದಲ್ಲಿ, ಮಮತೆಯ ಉಯ್ಯಾಲೆಯಲ್ಲಿ ತೂಗಿ ಆಡಿಸಿ ಬೆಳೆಸಿದೆ; ಗುರುವಾಗಿ ನನ್ನೆದೆಯಲ್ಲಿ ಅರಿವಿನ ಹಣತೆಯನ್ನು ಹೊತ್ತಿಸಿದೆ. ನಿನ್ನನ್ನಗಲಿ ಹೇಗಿರಲಿ, ನಿನ್ನನ್ನು ಹೇಗೆ ಮರೆಯಲಿ ! ಅಣ್ಣಾ...."

"ಹುಚ್ಚಿ, ನೀನೇನು ಪರದೇಶಕ್ಕೆ ಪ್ರಯಾಣ ಬೆಳೆಸುತ್ತಿರುವೆಯಾ? ಲಕ್ಕುಂಡಿಗೆ ಮಸಳಿಕಲ್ಲು ಬಹುದೂರವೆ? ನೀನು ಕರೆಸಿದಾಗ ಬರುವೆ. ನೆನೆಸಿದಾಗ ಬರುವೆ. ದುಮ್ಮಾನವನ್ನು ಮರೆದು ಸುಮ್ಮಾನದಿಂದ ಪತಿಯ ಮನೆಗೆ ಹೋಗಮ್ಮ ! ಗಂಡನ ಮನೆಯಲ್ಲಿಯೇ ಹೆಣ್ಣಿನ ಬಾಳ ಧನ್ಯತೆ, ಜೀವನ ಸಾರ್ಥಕ್ಯ !"

"ಆಲಕ್ಕೆ ಹೂವಿಲ್ಲ ಬೇವಿಗೆ ಸಿಹಿಯಿಲ್ಲ
ಜಾಣಾರ ಮಾತಿಗೆ ಇದಿರಿಲ್ಲ-ತಂಗ್ಯಮ್ಮ
ಹೆಣ್ಣೀಗೆ ತವರು ಸ್ಥಿರವಲ್ಲ !"

"ಹೋಗಿ ಬರುವೆನಣ್ಣ, ಹೋಗಿ ಬರುವೆ ಗುರುವೆ ! ಹೊರಡುವ ಮುನ್ನ



**ಮುಕ್ತಾಯಕ್ಕ ಅಣ್ಣನ ಅಡಿಗಳಿಗೆ ಮತ್ತೆ ಮತ್ತೆ ಎರಗಿದಳು**

ಒಂದು ಕುರುಹ ಕೊಡು !"

"ಅದೇತರ ಕುರುಹು?"

"ನಿನಗೇನಾದರೂ ಆದರೆ ನನಗೆ ತಿಳಿಯುವ ಕುರುಹು"

"ತಂಗಿ, ಮೂರು ಕುರುಹು ಹೇಳುವೆ. ನೀನುಟ್ಟ ಸೀರೆಯ ನಿರಿಗೆ ಕಳಚುವುದು; ತೋರಮುಡಿಗಟ್ಟು ಬಿಚ್ಚುವುದು; ಕಡೆವ ಮೊಸರು ಕಲ್ಲಾಗುವುದು.ಆಗ ನಾನು ಲಿಂಗೈಕ್ಯನಾದೆನೆಂದು ತಿಳಿ!"

ಅಣ್ಣನ ಅಡಿಗಳಿಗೆ ಮತ್ತೆ ಮತ್ತೆ ಎರಗಿ ಭಾರವಾದ ಹೃದಯ, ತೊಯ್ದ ಕಣ್ಣು, ಕಿತ್ತರೂ ಕೀಳದ ಕಾಲುಗಳೊಡನೆ ಹೊರಟಳು ಮುಕ್ತಾಯ ಮಸಳಿಕಲ್ಲಿನ ಕಡೆಗಡ.

ತಂಗಿ ಹೋದ ಹಾದಿಯನ್ನು ಹುಬ್ಬುಗೈಹಚ್ಚಿ ನೋಡುತ್ತ ನಿಂತ ಅಜಗಣ್ಣ. ಉಕ್ಕಿಬಂದ ದುಃಖವನ್ನು ಹತ್ತಿಕ್ಕಿ ಹಿಡಿದ.

ತಂಗೀಯ ಕಳುಹ್ಯಾನು ತೆವರೇರಿ ನಿಂತಾನು
ಅಂಗೀಲಿ ನೀರ ಒರಿಸ್ಯಾನು–ಅಣ್ಣಯ್ಯ
ಇಂದೀಗೆ ತಂಗೆ ಎರವೆಂದ !

* * *

ಅಲ್ಲಿ ಮಸಳಿಕಲ್ಲಿನಲ್ಲಿ ಮುಕ್ತಾಯಿ ಅಣ್ಣನನ್ನು ನೆನೆಯದ ದಿನವಿಲ್ಲ; ಇಲ್ಲಿ ಲಕ್ಕುಂಡಿಯಲ್ಲಿ ಅಜಗಣ್ಣ ಶಿವನನ್ನು ನೆನೆಯದ ಕ್ಷಣವಿಲ್ಲ. ಬಹಿರಂಗದ ಕೃಷಿಯನ್ನು ಅಂತರಂಗದ ಕೃಷಿಗೆ ಆಧಾರವನ್ನಾಗಿ ಮಾಡಿಕೊಂಡಿದ್ದ ಅಜಗಣ್ಣ ಅನವರತ ಪಂಚಾಕ್ಷರೀ ಮಂತ್ರದ ಜಪ, ಲಿಂಗದೇವನ ಧ್ಯಾನದಲ್ಲಿ ಮಗ್ನನಾಗಿರುತ್ತಿದ್ದನು.

ಒಂದು ದಿನ ರಾತ್ರಿ ಅಜಗಣ್ಣ ಹೊಲದಲ್ಲಿರುವಾಗಿ ಒಂದು ದಿವ್ಯ ದೃಶ್ಯವನ್ನು ಕಂಡನು. ಸರ್ಪವೊಂದು ತನ್ನ ಫಣಾಮಣಿಯನ್ನು ನೆಲದ ಮೇಲಿರಿಸಿ ಅದರ ಬೆಳಕಿನಲ್ಲಿ ಆಹಾರ ಹುಡುಕಲು ಹೋದಂತೆಯೂ ತನ್ನ ಶಿವಮಂತ್ರೋಚ್ಚಾರ ಸ್ವರವನ್ನು ಕೇಳಿ ಆ ಸರ್ಪವು ಲಗುಬಗೆಯಿಂದ ಬಂದು ಆ ಫಣಾರತ್ನವನ್ನು ಮುನ್ನಿನಂತೆ ಹೆಡೆಯಲ್ಲಿ ಹುದುಗಿಸಿಕೊಂಡು ಹರಿದು ಮಾಯವಾದಂತೆಯೂ ತೋರಿತು. ಆ ದೃಶ್ಯವು ಅಜಗಣ್ಣನ ಮನಸ್ಸಿನ ಮಾರ್ಗವನ್ನೇ ಪಲ್ಲಟಿಸಿಬಿಟ್ಟಿತು. ಸರ್ಪಕ್ಕೆ ರತ್ನವೊಂದಿರುವಂತೆ ಮಾನವನಿಗೂ ರತ್ನವೊಂದಿದೆ. ಅದೇ ಇಷ್ಟಲಿಂಗ. ಆ ಇಷ್ಟಲಿಂಗವೆಂಬ ರತ್ನವನ್ನು ಸರ್ಪದಂತೆ ಜತನವಾಗಿರಿಸಲಾರನೆ ಮಾನವ?

ಇದೇ ಆಲೋಚನಾಲಹರಿಯಲ್ಲಿಯೇ ರಾತ್ರಿಯು ತೇಲಿಹೋಯಿತ್ತು. ಅಜಗಣ್ಣನಿಗೆ ಅರುಣೋದಯದೊಡನೆ ಹರನ ಕರುಣೋದಯವೂ ಆಯಿತು. ಗುಪ್ತಭಕ್ತಿಯ ರಹಸ್ಯ ಹೊಳೆಯಿತು; ಅದೃಶ್ಯ ಪೂಜೆಯ ಗುಟ್ಟು ಮನದಟ್ಟಾಯಿತು. ಅಂದಿನಿಂದ ಬಹಿರಂಗದ ಪೂಜೆ ಮಾಯವಾಗಿ ಅಂತರಂಗದ ಆರಾಧನೆಗೆ ಆರಂಭವಾಯಿತು. ಪರಾತ್ಪರವೂ ಗೂಢವೂ ಶರೀರಸ್ಥವೂ ಆದ ಲಿಂಗವನ್ನು ಪಾಪಿ. ಕೋಪಿ, ವ್ರತಭ್ರಷ್ಟ, ಜಾರ, ಚೋರ, ಹುಸಿಕ, ನಿಂದಕರ ಕಣ್ಣಿಗೆ ಬೀಳದಂತೆ ಗುಪ್ತವಾಗಿ ಪೂಜಿಸುವುದರಲ್ಲಿ ಅವನಿಗೆ ಅಮಿತಾನಂದವೆನಿಸತೊಡಗಿತು. ಮನದಲ್ಲಿ ಪೂಜೆ, ಮನದಲ್ಲಿ ಮಂತ್ರ ಮನದಲ್ಲಿ ಧ್ಯಾನ, ಮನದಲ್ಲಿ ಜಪತಪಾದಿಗಳು ಅಳವಟ್ಟ ಅವನಿಗೆ ಶಿವಮಾನಸ ಪೂಜೆಯಲ್ಲಿ ಆನಂದವೇ ಜಯವಾಯಿತು, ಸುಬುದ್ಧಿಯೇ ಗಂಧವಾಯಿತು, ವಿರತಿಯೇ ವಿಭೂತಿಯಾಯಿತು, ಸ್ವಾನುಭವವೇ ದೀಪವಾಯಿತು, ಸದ್ಭಾವವೇ ಧೂಪವಾಯಿತು, ಸ್ವಾತ್ಮಾರ್ಪಣವೇ ನೈವೇದ್ಯವಾಯಿತು, ಸಮ್ಯಕ್‌ಜ್ಞಾನವೇ

ಆರತಿಯಾಯಿತು, ಆತ್ಮವೇ ಪುಷ್ಪವಾಯಿತು, ಭಕ್ತಿಯೇ ತಾಂಬೂಲವಾಯಿತು, ಮೋಹವೇ ಕರ್ಪೂರವಾಯಿತು.

ಊರವರಿಗೆಲ್ಲ ಅಚ್ಚರಿ. ಯಾವಾಗಲೂ ಉಚ್ಚಸ್ವರದಿಂದ ಶಿವಮಂತ್ರ ಪಠನ ಮಾಡುತ್ತಿದ್ದ ಅಜಗಣ್ಣ ಮೂಕನಂತಾಗಿದ್ದಾನೆ ; ಯಾವಾಗಲೂ ಪೂಜೆಯಲ್ಲಿರುವವ ಪೂಜೆಯನ್ನೇ ಮರೆತಿದ್ದಾನೆ ! ಇದೆಂಥ ವಿಪರೀತ ಪರಿವರ್ತನೆ ! ಏನಾಗಿರಬಹುದು? ಭ್ರಮೆಯೆ, ಉನ್ಮಾದವೆ, ಸನ್ನಿಪಾತವೆ, ವಿಪರೀತ ಬುದ್ಧಿಯೆ?

ಶಿವನೊಬ್ಬನಿಗೇ ಗೊತ್ತು–ಅಜಗಣ್ಣನ ನಿಜಯೋಗ. ಅವನಿಗೆ ಅಜಗಣ್ಣನನ್ನು ಯಾವಾಗ ಆಲಿಂಗಿಸುವೆನೋ ಎಂಬ ತವಕವುಂಟಾಯಿತು. ದೇವತೆಗಳು ಪ್ರೀತಿಸುವವರು ಬೇಗ ಸಾಯುತ್ತಾರೆ–ಎಂದು ಹೇಳುತ್ತಾರೆ. ಅಜಗಣ್ಣನ ಅವಸಾನವೂ ಸಮೀಪಿಸಿತು.

ಒಮ್ಮೆ ಹೊರಗಿನಿಂದ ಬಂದ ಅಜಗಣ್ಣನ ತಲೆಗೆ ತಲೆಬಾಗಿಲು ತಾಕಿತು. ಅದೇ ನೆಪ ಸಾಕೆಂದ ಶಿವ. ಅಜಗಣ್ಣ ನಿರವಯನಾದ, ಬಯಲನ್ನು ಬೆರಸಿದ, ಉರಿಯುಂಡ ಕರ್ಪೂರವಾದ.

ಮುಕ್ತಾಯಕ್ಕೆ ಆನೆ ಕಿತ್ತೆಸೆದ ಬಳ್ಳಿಯಂತಾಗಿಬಿಟ್ಟಳು ! ಅವಳ ಶೋಕ ಸಮುದ್ರ ಉಕ್ಕೇರಿತು. ಹುಚ್ಚಿಯಾಗಿ ಅಡವಿ ಅಡವಿ ಅಲೆಯತೊಡಗಿದಳು. ಮರಮರವೂ ಮಾರ್ದನಿಗುಡತೊಡಗಿತು–

"ಉಟ್ಟುದ ತೊರೆದವಂಗೆ ಊರೇನು, ಕಾಡೇನು?
ನಷ್ಟ ಸಂತಾನಕ್ಕೆ ಕುಲವೇನು, ಚಲವೇನು?
ಹುಟ್ಟುಗೆಟ್ಟಾತಂಗೆ ಪುಣ್ಯವೇನು, ಪಾಪವೇನು?
ಅದು ಕೆಟ್ಟುದು, ಅದು ಕೆಟ್ಟುದು !"
"ಒಡಲ ಕ್ಷುಧೆಯಕ್ಕೆಗೆ ಹೋಗಿ ಅಡವಿಯಲ್ಲತ್ತರೆ
ಅಡವಿಯೆತ್ತಬಲ್ಲುದು ಸುಖದುಃಖವನು?
ಒಡಲ ಕಳವಳ ಆವರಿಸಿತ್ತು ಜಗಮನು.
ಒಡಲುಗೊಂಡವರೆತ್ತ ಬಲ್ಲರು ಲಿಂಗವನು?
ಒಡಲ ಕಳವಳ ಒಡಲು ತಾನಳಿವಾಗ
ಅಡವಿಯಲ್ಲತ್ತರೆಡೆಯೆಲ್ಲಿಂದ ಅಜಗಣ್ಣ ತಂದೆ
ತನ್ನ ತಾನರಿಯದೆ ಬಟ್ಟ ಬಯಲಲ್ಲಿ ಬಿದ್ದ ಅಜಗಣ್ಣ ತಂದೆ !"

ಕಲ್ಲನ್ನು ಸಹ ಕರಗಿಸಬಲ್ಲ ಅವಳ ಕರುಣ ಕ್ರಂದನ ಕೇಳಿ ತರುಮರಾದಿಗಳೂ ಇಬ್ಬನಿಯ ಕಂಬನಿ ಸೂಸಿದುವು. ಆದರೂ, ಆದರೂ ಅಜಗಣ್ಣ 'ಓ' ಎನ್ನಲಿಲ್ಲ! ಇದ್ದರಲ್ಲವೆ'ಓ' ಎನ್ನುವುದು? ಮುಕ್ತಾಯಕ್ಕನ ದುಖವನ್ನು ಪರಿಹರಿಸುವವರಾರು? ಯಾರೂ ಇಲ್ಲವೆ? ಈ ಹೆಣ್ಣು ಜೀವ ಹೀಗೆಯೇ ಕೊರಗಿ ಕೊರಗಿ ಕರಗಿ ಹೋಗಬೇಕೆ?

ಅವಳ ಅಳಲೂ ಇಲ್ಲವಾಗುವ ಅಮೃತ ಮುಹೂರ್ತ ಬಂದಿತು : ಸೊನ್ನಲಾಪುರಕ್ಕೆ ಹೊರಟ ಅಲ್ಲಮಪ್ರಭು ಅಲ್ಲಿಗೆ ಆಗಮಿಸಿದರು. ಅರಸುತ್ತಿದ್ದ ಬಳ್ಳಿ ಕಾಲ ತೊಡರಿದಂತಾಗುತ್ತದೆ. ಲಕ್ಕುಂಡಿಯ ಪಕ್ಕದಲ್ಲಿ

"ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತು ಅಜಗಣ್ಣ, ನಿನ್ನ ಯೋಗ !
ನಿಮ್ಮ ನುಡಿಗಳೆಲ್ಲವೂ ಪ್ರತಿಬಿಂಬಗಳಾದುವೆ ಅಣ್ಣಾ !
ಕೊಡನೊಳಗಣ ಜ್ಯೋತಿಯ ಅಡಗಿಸಲರಿಯದೆ
ಮಿಗೆವರಿದಂತಾದೆಯೋ ಅಜಗಣ್ಣ ! ನಾನೆಂತು
ಬದುಕುವೆನಣ್ಣಾ !"

ಎಂದು ರೋರಾಡಿ ರೋದಿಸುತ್ತಿದ್ದ ಮುಕ್ತಾಯಿಯಕ್ಕನ ಬಳಿಗೆ ಕಿಸಾಗೋತಮಿಯ ಹತ್ತಿರ ಬುದ್ಧದೇವ ಬಂದಂತೆ ಪ್ರಭುದೇವರು ಬಂದರು. ಅವಳ ಅಂತವಿಲ್ಲದ ಅಳಲನ್ನು ಕಂಡು ಕನಿಕರದಿಂದ ಕೇಳಿದರು.

"ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು
ಕಂಗಳ ಮುತ್ತ ಪವಣಿಸುವಾಕೆ ನೀನಾರು ಹೇಳಾ?
ಅರಿವಿನೊಳಗಣ ಮರಹಿದೇನು ಹೇಳಾ?"

"ಅರೆಂದು ಕುರುಹ ಬೆಸಗೊಳಲು ಏನೆಂದು ಹೇಳುವೆನಯ್ಯಾ?
ಕಾಯದೊಳಗೆ ಮಾಯವಿಲ್ಲ: ಭಾವದೊಳಗೆ ಭ್ರಮೆಯಿಲ್ಲ.
ಕರೆದು ಬೆಸೆಗೊಂಬರೆ ಕುರುಹಿಲ್ಲ–ತಲೆಯಳಿದು ನೆಲೆಗೆಟ್ಟು
ಬೆಳಗುವ ಜ್ಯೋತಿ ಎನ್ನ ಅಜಗಣ್ಣ ತಂದೆಯ
ಬೆನ್ನಬಳಿಯವಳಾನಯ್ಯ ! ನೀನಾರು ಹೇಳಯ್ಯ?"

"ಶರಣು ಶರಣಾರ್ಥಿ ಎಲೆತಾಯೆ–ನಾ ನಿಮ್ಮ ಭಾವನಲ್ಲಯ್ಯನು;
ನೀನೆನಗೆ ನಗೆವೆಣ್ಣು. ಕಳವಳದ ಕಂದೇರವಿದೇನು ಹೇಳಾ?"
"ಮದವಳುದು ಮಹವನೊಡಗೂಡಿದ ಎನ್ನ

ಅಜಗಣ್ಣನನಗಲಿದ ದುಃಖ ಪ್ರಭುವೆ !"

"ಅರಿವರತು ಮರುಹುಗೆಟ್ಟು ತನ್ನಲ್ಲಿ ತಾನು ಸನ್ನಿಹಿತನಾದಂಗೆ
ದುಃಖಿಸುವರೆ ಹೇಳಾ? ಶೋಕಿಸುವರೆ ಹೇಳಾ !"

"ಎಂತು ಮರೆವೆನಯ್ಯಾ ಎನ್ನ ಅಜಗಣ್ಣ ತಂದೆಯನು?"

"ಕಂಡೆ, ಕಾಣೆ; ಕೂಡಿದೆ, ಅಗಲಿದೆನೆಂಬುದು ಭ್ರಾಂತಿ ತಾಯೆ !"

"ಅಜಗಣ್ಣ ಎನ್ನ ಮತಿಗೆ ಮರವೆಯ ಮಾಡಿ ಹೋದ ಪ್ರಭುವೆ !"

"ಒಮ್ಮೆ ಕಂಡೆ, ಒಮ್ಮೆ ಕಾಣೆ, ಒಮ್ಮೆ ಕೂಡಿದೆ, ಒಮ್ಮೆ ಅಗಲಿದೆ
ನೆಂದರೆ ಕರ್ಮ ಬೆಂಬತ್ತಿ ಬಿಡದು. ನಿನ್ನೊಳಗೆ ನಿನ್ನ
ತಿಳಿದು ನೋಡಲು ಭಿನ್ನ ಉಂಟೆ?"

"ಹೋಹ ಬಟ್ಟೆಯನರಿಯದನ್ನಕ್ಕರ ತಾನಾಗಬಾರದು ಪ್ರಭುವೆ"

"ಮನವ ಮನೆಯ ಮಾಡಿಕೊಂಡಿಪ್ಪ ಲಿಂಗದ ಅನುವನರಿಯ
ಬಲ್ಲರೆ, ಗುಹೇಶ್ವರಲಿಂಗ ದೂರವಿಲ್ಲ ತಾಯೆ !"

"ಅಜಗಣ್ಣನೆಂಬ ಗುರುವಿಲ್ಲದೆ ಆರೂಢಿಯ ಕೂಟ ಸಮನಿಸದು ಪ್ರಭುವೆ"

"ನಿನಗೆ ನೀನೆ ಗುರುವಲ್ಲದೆ ನಿನ್ನಂದಧಿಕಮಪ್ಪ ಗುರು ಉಂಟೆ ತಾಯೆ?"

"ಗುರು ತಾನಾದಡೂ ಗುರುವಿಡಿದಿರಬೇಕು ಪ್ರಭುವೆ"

"ಸಹಜ ಸಂಬಂಧಕ್ಕೆ ಗುರುವಲ್ಲದೆ ಅಸಹಜಕ್ಕೆ ಗುರು ಉಂಟೆ ತಾಯೆ?"

"ನೆರೆಯರಿತು ಮರೆಯ ಬಲ್ಲರೆ ಎನ್ನ ಅಜಗಣ್ಣನಂತೆ ಶಬ್ದಮುಗ್ಧ
ವಾಗಿರಬೇಕಲ್ಲದೆ ಶಬ್ದಸಂದಣಿಯ ಮಾತು ಸಮಯವಲ್ಲ ನೋಡಾ ಪ್ರಭುವೆ"

"ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ತ್ವ,
ತಾಳೋಷ್ಟಸಂಪುಟವೆಂಬುದು ನಾದಬಿಂದುಕಳಾತೀತ. ಗುಹೇಶ್ವರನ
ಶರಣರು ನುಡಿದು ಸೂತಕಿಗಳಲ್ಲ ತಾಯೆ !"

"ನಡೆದು ನಡೆದು ನಡೆದು ಕಂಡವರು ನುಡಿದು ನುಡಿದು ಹೇಳುತ್ತಿಹರೆ?
ನುಡಿದು ನುಡಿದು ಹೇಳುವನ್ನಕ್ಕರ ನಡೆದುದೆಲ್ಲ ಹುಸಿಯೆಂಬೆನು"

"ತನ್ನ ತಾನರಿದಡೆ ನುಡಿಯೆಲ್ಲಾ ತತ್ತ್ವನೋಡಾ !
ತನ್ನ ತಾ ಮರೆದಡೆ ನುಡಿಯೆಲ್ಲಾ ಮಾಯೆ ನೋಡಾ !

ಅರಿದು ಮರೆದ ಶಿವಯೋಗಿಯ ಶಬುದವೆಲ್ಲಾ ಉಪದೇಶವಲ್ಲದೆ ಭಿನ್ನ ಉಂಟೆ?"

"ನುಡಿಯ ಹಂಗಿನ್ನೂ ನಿಮಗೆ ಹಿಂಗದು–ನಡೆಯನೆಂತು ಪರರಿಗೆ ಹೇಳುವಿರಿ?"

"ಶರಣ ನಡೆದರೆ ನಿರ್ಗಮನಿ, ನುಡಿದರೆ ನಿಶ್ಶಬ್ದ ತಾಯೆ !"

"ಕೈ ಯದು ಕುರುಹು, ಬಾಯದು ಬೊಬ್ಬೆ, ಉಲಿಯದಿರೋ ಭಾವಾ ಉಲಿಯದಿರೋ !"

"ಅರಿವುಗೆಟ್ಟು, ಮರಹಳಿದು, ಭಾವಭ್ರಾಂತು ನಿಭ್ರಾಂತರಾದವರ
ಕೈಯಲ್ಲಿ ಕುರುಹನರಸುವರೆ ತಾಯೆ?"

"ನುಡಿಯೆನೆಂಬಲ್ಲಿಯೆ ನುಡಿಯಿದೆ ; ನಡೆಯೆನೆಂಬಲ್ಲಿಯೆ ನಡೆಯಿದೆ;
ಭಾವಿಸೆನೆಂಬಲ್ಲಿಯೆ ಭಾವವಿದೆ ; ಅರಿದು ಮರೆದೆನೆಂಬಲ್ಲಿಯೆ ಅರಿವು
ಮರವೆಯಿದೆ ! ಅರಿದು ಮರೆದ ಪರಿಯೆಂತು ಹೇಳಾ?"

"ತನ್ನಲ್ಲಿ ತಾನು ತದ್‌ಗತಮಾಗಿಪ್ಪ ಶಿವಯೋಗಿಗೆ ಭಿನ್ನವಿಲ್ಲ ನೋಡಾ !"

"ಸಿಡಿಲು ಹೊಯಿದ ಬಾವಿಗೆ ಸೋಪಾನವೇಕೊ?–ತನ್ನಲ್ಲಿ ತಾನು
ತದ್‌ಗತವಾದ ಬಳಿಕ ಬೊಮ್ಮ ಪರಬೊಮ್ಮವಾದೆನೆಂಬುದಿಲ್ಲ ಪ್ರಭುವೆ !"

"ನುಡಿಯಿಂದ ನಡೆಗೆಟ್ಟಿತ್ತು; ನಡೆಯಿಂದ ನುಡಿಗೆಟ್ಟಿತ್ತು.
ಭಾವದ ಗುಸುಟು ಅದು ತಾನೆ ನಾಚಿ ಮಾದುದು ನೋಡಾ !
ಗುಹೇಶ್ವರನೆಂಬ ಅರಿವು ಸಿನೆ ಬಂಜೆಯಾದುದಲ್ಲಾ !"

"ಅಹುದಹುದು, ಶಿವಶರಣರ ಮಹಿಮೆ ಆರಿಗೆಯೂ ಕಾಣಬಾರದು
ಅರಿವಡೆ ಮತಿಯಿಲ್ಲ, ನೆನೆವರೆ ಮನವಿಲ್ಲ. ಎನ್ನ ಅಜಗಣ್ಣ
ತಂದೆಯನೊಳಕೊಂಡಿಪ್ಪ ನಿಮ್ಮ ಮಹಿಮೆಗೆ ನಮೋ ನಮೋ ಎನುತಿರ್ದೆನು!"

ಉಶ್ ! ತಲೆಯ ಮೇಲಿನ ಬೆಟ್ಟ ಕೆಳಗಿಳದಂತಾಯಿತು ಪ್ರಭುದೇವರಿಗೆ. ಅಧ್ಯಾತ್ಮ ಪ್ರಪಂಚದ ಅತಿರಥಿ ಮಹಾರಥಿಗಳನ್ನೆಲ್ಲ ಒಂದೇ ಉಸಿರಿನಲ್ಲಿ ಅಪ್ರತಿಭರನ್ನಾಗಿ ಮಾಡಿಬಿಡುತ್ತಿದ್ದ ಪ್ರಭುದೇವರನ್ನೂ ವಾದದಲ್ಲಿ ತಬ್ಬಿಬ್ಬಾಗುವಂತೆ ಮಾಡಿದ ಮುಕ್ತಾಯಕ್ಕ ಮಹಿಳಾ ಪ್ರಪಂಚಕ್ಕೇ ಕೀರ್ತಿಯ ಕಳಸ ! ಅದೇನೀ ಸಂವಾದದ ವಿದ್ಯುದೂರ್ಮಿಪ್ರಭೆ! ಇಂಥ ಶಿಷ್ಯಳು ಸಿಕ್ಕಿದುದಕ್ಕಾಗಿ ಪ್ರಭುದೇವರಿಗೂ ಹೆಮ್ಮೆಯೆನಿಸಿರಬೇಕು. ಇವರಿಬ್ಬರ ಕೈಯಲ್ಲಿ ಕನ್ನಡಕ್ಕೆ ಶ್ರುತಿಯ ಶ್ರೀಮಂತಿಕೆ ಬಂದಿದೆ, ಸ್ಮೃತಿಯ ಶಕ್ತಿ ಬಂದಿದೆ !

ಮನದ ಸ್ತಿಮಿತತೆಯನ್ನು ಪಡೆದ ಮುಕ್ತಾಯ ಪ್ರಭುವಿಗೆ ಬಾಗಿ ಬೇಡುತ್ತಾಳೆ.

"ದೇವ ನಿಮ್ಮವರುಗಳ ಪರಿಯನು
ನೀವೆ ಬಲ್ಲಿರಿ ಹಾವಿನಡಿಯನು
ಹಾವುಗಳು ನೆರಡಬಲ್ಲವಲ್ಲವೆ ನಮಗೆ ಗೋಚರವೆ?

ಭಾವಿಸುವೊಡೆಮಗಿನ್ನು ಗತಿ ಮತಿ
ಯಾವುದೆಂದೆನುತಲ್ಲಮಪ್ರಭು
ದೇವರಿಗೆ ಮುಕ್ತಾಯಿ ಬಿನ್ನೈಸಿದಳು ಭಕ್ತಿಯಲಿ"

ಪರಮಪ್ರೀತರಾಗಿ ಪ್ರಭುದೇವರು ನುಡಿದರು. "ಅಕ್ಕಾ, ನಿನ್ನ ಹೆಸರಿಗೆ ತಕ್ಕ ಬಯಕೆಯನ್ನೇ ನೀನು ಬಯಸಿದೆ. ಹರಿಗೋಲನ್ನು ಆಶ್ರಯಿಸಿ ತೊರೆಯನ್ನು ದಾಟುವವರಂತೆ ಹೊರಗೆ ಮಾಡುವ ಮಾಟವೆಲ್ಲವ ಮರೆದು ಅಂತರ್ ಮಾರ್ಗವೊಂದನ್ನೇ ಲಿಂಗವನ್ನರಿಯಬೇಕೆನ್ನುವವರು ಆಶ್ರಯಿಸಬೇಕು. ಶಿಶುಗಳಿಗೆ ಮೊದಲು ತಾಯ ಹಾಲೇ ಜೀವನವೆನಿಸಿದರೂ ಬರುಬರುತ್ತ ಹಸುವಿನ ಹಾಲನ್ನೂ ಆಮೇಲೆ ಅನ್ನವನ್ನೂ ಉಣ್ಣಲು ಕಲಿಸಿ ಬೆಳೆಸುವಂತೆ ನೀನೂ ಮೆಲ್ಲಮೆಲ್ಲನೆ ಹೊರಗನ್ನು ಮರೆದು ನಿರಾಳದಲ್ಲಿ ನಿಲ್ಲುವುದನ್ನು ಕಲಿಯಬೇಕು. ಆಗ ನಿತ್ಯಾನಂದ ನಿನ್ನದಾಗುವುದು."

ಮುಕ್ತಾಯಿಯ ಮನದ ದುಗುಡ ಮಾಯವಾಯಿತು. ಅಲ್ಲಿ ಸಮತೆ ನೆಲೆಸಿ ಶಾಂತಿ ಸೂಸಿತು. ನೂಲ ಹಿಡಿದು ಬೆಟ್ಟದ ಮೇಲೇರುವವರಂತೆ ಪ್ರಭುವಿನ ಬೋಧೆಯ ಸೂತ್ರವನ್ನು ಹಿಡಿದು ಬ್ರಹ್ಮರಂಧ್ರವನ್ನೊಡಹಾಯ್ದು ನಿಜದ ನಿರಾಳದಲ್ಲಿ ನಿಂತಳಾತಾಯಿ. ಅವಳ ಆಗಿನ ಸ್ಥಿತಿಯನ್ನೇ ಕನ್ನಡಿಸುವಂತಿದೆ ಈ ವಚನ.

"ಅಳಿಯೊಳಡಗಿದ ಪರಿಮಳದಂತೆ, ಪತಂಗದೊಳಡಗಿದ ಅನಲನಂತೆ,
ಶಶಿಯೊಳಡಗಿದ ಷೋಡಶ ಕಳೆಯುಂತೆ, ಉಲುಹಡಗಿದ ವಾಯುವಿನ
ಪರಿಯಂತೆ, ಸಿಡಿಲೊಳಡಗಿದ ಗಾತ್ರದ ತೇಜದಂತೆ ಇರಬೇಕಯ್ಯ
ಯೋಗ–ಎನ್ನ ಅಜಗಣ್ಣ ತಂದೆಯಂತೆ !"

ಹೀಗೆ ಯೋಗಯುಕ್ತಳಾಗಿ ಕೆಲದಿನ ಕಳೆದು ಮಹವನಿಂಬುಗೊಂಡಳು ಮುಕ್ತಾಯಿ. ಆಗ ಅವಳ ಮುಖದಿಂದ ಹೊರಟ ಮಾತುಗಳು ಅವಳ ಆತ್ಮದ ಐಸಿರಿಗೆ ಸ್ಮಾರಕವಾಗಿ ನಿಂತಿವೆ.

"ಘನಮಹಿಮ ಶರಣರ ಸಂಗದಿಂದ ಘನಕ್ಕೆ ಘನ ವೇದ್ಯವಾದ ಬಳಿಕ ಅರಿಯಲಿಲ್ಲ, ಮರೆಯಲಿಲ್ಲ ; ಕೂಡಲಲ್ಲ, ಆಗಲಿಲ್ಲ. ಮನ ಮೇರೆದಪ್ಪಿ ನಿರವಯಲಾದ ಸುಖದ ಶೂನ್ಯ ನಿಶ್ಶೂನ್ಯವೆಂದು ನುಡಿಯಲುಂಟೆ? ಶಬ್ದ ಮುಗ್ಧವಾಗಿ ಎನ್ನ ಅಜಗಣ್ಣ ತಂದೆಯ ಬೆರಸಿದ ಬಳಿಕ ಉರಿಯುಂಡ ಕರ್ಪುರದಂತಾದೆನಯ್ಯಾ !"

ಅಜಗಣ್ಣ–ಮುಕ್ತಾಯಿ, ಅಣ್ಣ–ತಂಗಿ ಇಬ್ಬರೂ ಪರಮನನ್ನು ಬೆರೆದ ಶರಣ ಕುಲದೀಪಕರು. ಅಜಗಣ್ಣನ ಐಕ್ಯಸ್ಥಲ ಮನೆಮಾತಾಗಿ ಉಳಿದಿದೆ. ಆತನ ವಚನಗಳೂ

ಅಷ್ಟೇ ಉನ್ನತ ಮಟ್ಟದವೆಂದು ತೋರುತ್ತದೆ. ಇಲ್ಲದಿದ್ದರೆ ಚೆನ್ನಬಸವಣ್ಣನವರು "ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ" ಎಂದು ತೀರ್ಮಾನಿಸುತ್ತಿರಲಿಲ್ಲ. ಪ್ರಭುದೇವರಂಥವರು

> "ಕಾಣದುದ ಕಂಡೆ; ಕೇಳುದುದ ಕೇಳಿದೆ; ಮುಟ್ಟಲಾರದುದ ಮುಟ್ಟಿದೆ;
> ಅಸಾಧ್ಯವ ಸಾಧಿಸಿದೆ; ತಲೆಗೆಟ್ಟುದ ತಲೆವಿಡಿದೆ; ನೆಲೆಗೆಟ್ಟುದ ನಿರ್ಧರಿಸಿದೆ;
> ಗುಹೇಶ್ವರಾ, ನಿಮ್ಮ ಶರಣ ಅಜಗಣ್ಣಂಗೆ ಶರಣೆಂದು ಬದುಕಿದೆನು"
> ಎಂದು ಹಾಡುತ್ತಿರಲಿಲ್ಲ.

ದುರ್ದೈವದಿಂದ ಅಜಗಣ್ಣನ ವಚನಗಳು ಉಪಲಬ್ಧವಾಗಿಲ್ಲ. ಅವು ಒಮ್ಮಿಲ್ಲೊಮ್ಮೆ ದೊರೆತರೆ ಅವನ ಉಜ್ವಲ ವ್ಯಕ್ತಿತ್ವ ಇನ್ನೂ ಉಜ್ವಲವಾಗಿ ಹೊಳೆದೀತು.

ಮುಕ್ತಾಯಕ್ಕ ಅಂಗನೆಯರ ಇತಿಹಾಸದಲ್ಲಿಯೇ ಅಪೂರ್ವ ವ್ಯಕ್ತಿ. ಗಾರ್ಗಿಯ ಸಂವಾದಶಕ್ತಿ, ಮಹಾದೇವಿಯ ವಿರಕ್ತಿ, ದ್ರೌಪದಿಯ ಅಗ್ರಜಾನುರಕ್ತಿ, ಮೈತ್ರೇಯಿಯ ಆತ್ಮದರ್ಶನಾಸಕ್ತಿ, ಏಕಲವ್ಯನ ಗುರುಭಕ್ತಿಗಳೆಲ್ಲ ಸೇರಿ ಮುಕ್ತಾಯಿಯಾಗಿ ಮೂರ್ತೀಭವಿಸಿದಂತಿವೆ.

ಆಯ್ಕೆಯ ಅವಕಾಶವನ್ನಿತ್ತರೆ ಎಲ್ಲ ಅಣ್ಣಂದಿರೂ ಇಂಥ ತಂಗಿಯನ್ನೇ ಆರಿಸಿಕೊಂಡಾರು ; ಎಲ್ಲ ತಂಗಿಯರೂ ಇಂಥ ಅಣ್ಣನನ್ನೇ ಬೇಡಿಕೊಂಡಾರು ! ಈ ಅಣ್ಣ–ತಂಗಿಯರ ಬಾಳು ಅನ್ಯಾಸದೃಶವಾದುದು; ಕನ್ನಡಿಗರೆಲ್ಲ ಹೆಮ್ಮೆಪಡುವಂತಹುದು. ಅಣ್ಣನನ್ನು ಕಳೆದುಕೊಂಡ ತಂಗಿಯರೆಲ್ಲ ಮುಕ್ತಾಯಿಯ ಚರಿತ್ರೆಯಿಂದ ಸಾಂತ್ವನ ಪಡೆದಾರು; ತಂಗಿಯುಳ್ಳ ಅಣ್ಣಂದಿರೆಲ್ಲ ಅಜಗಣ್ಣನ ಚರಿತ್ರೆಯಿಮದ ಸ್ಫೂರ್ತಿ ಪಡೆದಾರು.

> ಭಕ್ತಿ ಸಾಗರ ಮೇಣ್ ವಿರಕ್ತಿಯಾ ನೆಲೆವನೆಯು
> ಮುಕ್ತಿಯಾ ಕೋಶ–ಇವನಂಗದೊಳು ತಳೆದ
> ಮುಕ್ತಾಯಕ್ಕನೆ ಶರಣಾಗು

■

# ಹುಟ್ಟು ಹೊಂದಳಿದ ಹಡಪದ ಅಪ್ಪಣ್ಣ–ಲಿಂಗಮ್ಮರು*

"ಪರರಾಶೆಯೆಂಬ ಜ್ವರ ಹತ್ತಿ ನಾನು ಕಳವಳಿಸಿ ನುಡಿವೆನಯ್ಯ
ಹೊನ್ನು ಹೆಣ್ಣು ಮಣ್ಣು ಬಯಸಿ ವಿಕಳತೆಗೊಂಡಂತೆ ಪ್ರಲಾಪಿಸುತ್ತ
ನುಡಿವೆನಯ್ಯ. ಈ ಕಳವಳವ ನಿಲಸಿ ನಿಮ್ಮ ಕರುಣಾಮೃತವೆಂಬ ಕಾಷಾಯವನೆರೆದು
ಪರರಾಶೆಯೆಂಬ ಜ್ವರವ ಮಾಣಿಸು
ಬಸವಪ್ರಿಯ ಕೂಡಲ ಚೆನ್ನ ಸಂಗಮದೇವ."

ಹೃದಯ ಕರ್ರನೆ ಕರಗಿ ಹೊರಟ ಈ ವಚನ ಹಡಪದ ಅಪ್ಪಣ್ಣನದು.ಮೊದಲಿನಿಂದ ಕೊನೆಯವರೆಗೆ ಬಸವಣ್ಣನನ್ನು ನೆರಳಿನಂತೆ ಹಿಂಬಾಲಿಸಿ ಧನ್ಯನಾದವ, ಮಾನ್ಯನಾದವ ಹಡಪದ ಅಪ್ಪಣ್ಣ. ಉದಯಕ್ಕೆ ಅಣ್ಣನವರ ಹಸ್ತ ಪಾದಗಳಿಗೆ ನೀರು ಕೊಡುವುದರಿಂದ ಆರಂಭವಾಗುತ್ತಿದ್ದ ಆತನ ಸೇವೆ ರಾತ್ರಿ ಅಣ್ಣನವರು ಪವಡಿಸುವವರೆಗೆ ಅವ್ಯಾಹತವಾಗಿ ಸಾಗಿರುತ್ತಿದ್ದಿತು. ಅಣ್ಣನಿಗೆ ವೀಳೆಯವನ್ನು ಕಟ್ಟಿಕೊಡುವವನೂ ಅವನೇ. ಅರಮನೆಗೆ ಬರುವವರ ಯೋಗಕ್ಷೇಮ ವಿಚಾರಿಸುವವನೂ ಅವನೇ. ಅಣ್ಣನವರಿಗೆ ಅತ್ಯಂತ ಆತ್ಮೀಯರಾಗಿದ್ದವರ ಗುಂಪಿಗೆ ಅಪ್ಪಣ್ಣನೂ ಸೇರಿದ್ದ–ಶುದ್ಧ ಮನಸ್ಸಿನ ಸೇವೆಯ ಬಲದಿಂದ.

ಒಂದೆರಡು ಪ್ರಸಂಗಗಳನ್ನು ನೆನೆದರೆ ಅಪ್ಪಣ್ಣನಿಗೆ ಅಣ್ಣನವರ ಅರಮನೆಯಲ್ಲಿದ್ದ ಹೊಣೆಗಾರಿಗಕೆಯು ಸ್ಥಾನದ ಕಲ್ಪನೆಯಾಗುವುದು. ಪ್ರಭುದೇವರು ಸಿದ್ಧರಾಮಯ್ಯನವರೊಡನೆ ಬಸವಣ್ಣನವರ ಅರಮನೆಗೆ ಆಗಮಿಸಿದಾಗ ಅಣ್ಣನವರು ಲಿಂಗಪೂಜೆಯಲ್ಲಿ ಪರವಶರಾಗಿ ಕುಳಿತುಬಿಟ್ಟಿದ್ದರು. ಅಪ್ಪಣ್ಣನವರು ಬಂದು ಬಿನ್ನವಿಸಿಕೊಂಡರು.

---

* "ಹುಟ್ಟಲೇಕೋ ನರರ ಜನ್ಮದಲ್ಲಿ? ಕಟ್ಟಲೇಕೋ ಕೊರಳಲ್ಲಿ ಲಿಂಗವ? ಕಟ್ಟಿಯೂ ಕಾಣದೆ, ತೊಟ್ಟನೆ ತೊಳಲಿ ಅರಸಲೇಕೋ ಧರೆಯ ಮೇಲೆ? ಅರಸಿಯೂ ಕಾಣದೆ, ಸತ್ತು ಹುಟ್ಟಿ ಹುಟ್ಟಿ ಹೂಳಿಸಿಕೊಳಲೇಕೊ? ಇದನರಿದರಿದು ಹುಟ್ಟು ಹೊಂದಳಿದ ಶರಣರ ನಿತ್ಯ ನಿತ್ಯ ನೆನೆದು ಬದುಕಿದೆ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ."

"ದೇವದೇವ, ಮಹಾಪ್ರಸಾದ. ಕಂಗಳಲ್ಲಿ ಕರುಳಿಲ್ಲ; ಕಾಯದಲ್ಲಿ ಹೊರೆಯಿಲ್ಲ; ನುಡಿಯಲ್ಲಿ ತಡೆಯಿಲ್ಲ; ನಡೆಯಲ್ಲಿ ಗತಿ ಇಲ್ಲ. ಇದೆಂತಹ ಸುಳುಹೆಂದರಿಯೆ ! ಇದೆಂತಹ ನಿಲವೆಂದು ತಿಳಿಯಬಾರದು–ಮರುಳಿಲ್ಲದ ಮರುಳು, ಅರಿವಿಲ್ಲದ ಅರಿವು, ಬಸವಪ್ರಿಯ ಕೂಡಲ ಚೆನ್ನ ಸಂಗಯ್ಯನ ಬರವು ಕೌತುಕವಾಯಿತ್ತು ಚಿತ್ತೈಸಯ್ಯ , ಸಂಗನ ಬಸವಣ್ಣಾ !"

ಅಣ್ಣನವರು ಲಿಂಗಾರ್ಚನೆಯನ್ನು ಬಿಟ್ಟು ಏಳಲೊಲ್ಲದೆ. "ಎನ್ನ ಕಾಯವೆ ಭಕ್ತ, ಪ್ರಾಣವೆ ಜಂಗಮವಾದ ಬಳಿಕ ಅಲ್ಲಿ ಎಲ್ಲಿ ಎಂಬ ಭೇದವಿಲ್ಲೆಂದು" ಪ್ರಭುದೇವರನ್ನು ಕರೆತರಲು ಹಡಪದ ಅಪ್ಪಣ್ಣನವರನ್ನೇ ಕಳಿಸುತ್ತಾರೆ. ಅಷ್ಟು ವಿಶ್ವಾಸ ಅಪ್ಪಣ್ಣನವರ ಮೇಲೆ.

ಅಣ್ಣ ಒಪ್ಪಿಸಿದ ಕೆಲಸವನ್ನು ಅಪ್ಪಣ್ಣನವರೂ ಒಪ್ಪವಾಗಿಯೇ ಮಾಡುತ್ತಾರೆ. ಪ್ರಭುದೇವರ ಬಳಿಗೆ ಹೋಗಿ, "ಮನಮನವೇಕಾರ್ಥವಾಗಿ, ಕಾಯಕ್ಕೆ ಕಾಯ ಸಂಬಂಧವಾಗಿ, ಪ್ರಾಣಕ್ಕೆ ಪ್ರಾಣ ಸಮದರುಶನವಾಗಿದ್ದವರಲ್ಲಿ ತೆರೆಮರೆಯೆಂಬುದಿಲ್ಲ ನೋಡಯ್ಯ ! ಸಂಗ ನಿಸ್ಸಂಗವಾಗಿಪ್ಪವರಲ್ಲಿ ಉಪಚರ್ಯಕ್ಕೆ ಇಂಬಿಲ್ಲ ನೋಡಯ್ಯ! ಬಸವಪ್ರಿಯ ಕೂಡಲ ಚೆನ್ನಸಂಗಯ್ಯನ ಶರಣ ಬಸವಣ್ಣನಟ್ಟಿದನು–ಕೃಪೆ ಮಾಡು ಗುರುವೆ" ಎಂದು ಬಿನ್ನವಿಸಿಕೊಳ್ಳುತ್ತಾರೆ.

ಪ್ರಭುದೇವರು ಈ ಮಾತಿನ ಅದ್ವೈತಕ್ಕೆ ಮರುಳಾಗಲಿಲ್ಲ, 'ಆನಾಗದ ಮುನ್ನವೆ ತಾನಾದೆವೆಂಬವರಲ್ಲಿಗೆ ಗುಹೇಶ್ವರಲಿಂಗ ಅಡಿಯಿಡುವುದಿಲ್ಲ' ಎಂದು ನಿರ್ದಾಕ್ಷಿಣ್ಯವಾಗಿ ನುಡಿದುಬಿಟ್ಟರು. ಹಡಪದಪ್ಪಣ್ಣನವರು ಬಸವಣ್ಣನವರ ಬಳಿಗೆ ಬಂದು, 'ಕಾಯ ಭಕ್ತನಾದರೆ ಭೃತ್ಯಾಚಾರ ಬೇಡವೆ?' ಎಂದು ಎಚ್ಚರಿಸಿದರು. ಅಣ್ಣನವರು 'ತನ್ನ ಮಠಕ್ಕೆ ತಾ ಬಹಡೆ ಮುನಸುಂಟೆ?' ಎಂದು ಮತ್ತೆ ಅಟ್ಟಿದರು ಅಪ್ಪಣ್ಣನವರನ್ನು.

ಅಪ್ಪಣ್ಣನವರಿಗೆ ಉಭಯಸಂಕಟ. ಇದ್ದುದರಲ್ಲಿಯೇ ಧೈರ್ಯ ತಂದುಕೊಂಡ ಮತ್ತೆ ಪ್ರಭುದೇವರನ್ನು ಪ್ರಾರ್ಥಿಸಿಕೊಂಡರು :

"ನಿಮ್ಮ ತನು, ನಿಮ್ಮ ಮನ, ನಿಮ್ಮ ಧನ. ನಿಮ್ಮದಲ್ಲದೆ ಅನ್ಯವೊಂದಣು ಮಾತ್ರವಿಲ್ಲ ನೋಡಯ್ಯ ! ಭಕ್ತನ ಮಠವೆಂದು ಮುನ್ನವೆ ಅರಿದರಿದು ಬಂದು ಮತ್ತೊಂದ ಮತ್ತೊಂದ ನೆನೆವರೆ? ಬಸವಪ್ರಿಯ ಕೂಡಲ ಚೆನ್ನ ಸಂಗಯ್ಯನ ಶರಣ ಬಸವಣ್ಣಂಗೆ ಸ್ವತಂತ್ರ ಭಾವವುಳ್ಳಡೆ ನಿಮ್ಮ ಪಾದದಾಣೆ"

ಪ್ರಭುದೇವರ ಪರೀಕ್ಷೆ ತೀಕ್ಷ್ಣವಾದುದು. 'ಅರೆಭಕ್ತರೊಡತಣ ಸಂಗ ನಮ್ಮ

ಗುಹೇಶ್ವರ ಲಿಂಗಕ್ಕೆ ಸೊಗಸದು' ಎಂದು ಬಿಟ್ಟರು. ಅಪ್ಪಣ್ಣನವರು ಒಡೆಯ ಬಸವಣ್ಣನವರ ಸಮರ್ಥನೆ ಮಾಡದಿರಲು ಸಾಧ್ಯವೆ?

> "ಲಿಂಗ ಜಂಗಮ, ಜಂಗು ಲಿಂಗವೆಂಬುದನಾರುಬಲ್ಲರಯ್ಯ? ಮರ್ತ್ಯ ಲೋಕ ಶಿವಲೋಕದಲ್ಲಿ ಬಸವಣ್ಣನಲ್ಲದೆ ಲಿಂಗಕ್ಕಾಧಾರವಿಲ್ಲವೆಂದು ಮರ್ತ್ಯಲೋಕದಲ್ಲಿ ಬಂದವತರಿಸಿದನಯ್ಯ ಬಸವಣ್ಣನು ! ಜಂಗಮ ಮುಖ ಲಿಂಗವೆಂಬುದನರಿದು, ತನ್ನನರ್ಪಿಸಿ, ಇದಿರ ತಪ್ಪಿಸಿ ಇರಬಲ್ಲ ನಯ್ಯಾ ಬಸವಣ್ಣನು. ಅಂಗಮುಖವೆಲ್ಲ ನಷ್ಟವಾಗಿ, ಭೃತ್ಯಾಚಾರವೆ ತನುವಾಗಿರಬಲ್ಲನಯ್ಯಾ ಬಸವಣ್ಣನು ! ಪ್ರಾಣಕಳೆಯರತು ಅಂತು ಜಂಗಮನೆ ಪ್ರಾಣವಾಗಿ ಹಂಗು ಹರಿಯಿಲ್ಲದಿರಬಲ್ಲನಯ್ಯಾ ಬಸವಣ್ಣನು! ಉಪಾಧಿಯೆಂಬ ಕೀರ್ತಿವಾರ್ತೆಯ ಜರೆದು, ನಿರುಪಾಧಿಕವೆಂಬಗ ವಿವೇಕಕ್ಕೆ ಅತೀತನಾಗಿ ಸಹಜ ದಾಸೋಹಿಯಾಗಿರಬಲ್ಲನಯ್ಯ ಬಸವಣ್ಣನು ! ಬಸವ ಪ್ರಿಯ ಕೂಡಲಚೆನ್ನಸಂಗನ ಶರಣ ಬಸವಣ್ಣನೆ ನಿಮಗೆ ಭಕ್ತನಲ್ಲದೆ ಮತ್ತಾರನು ಕಾಣೆನಯ್ಯಾ !

ಇಷ್ಟಾದರೂ ಪ್ರಭುದೇವರು ಕದಲದಿರಲು ಅಪ್ಪಣ್ಣನವರು ಒಳಗೆ ಹೋಗಿ ಬಸವಣ್ಣನವರಿಗೆ, "ದೇವದೇವ, ಮಹಾಪ್ರಸಾದ.......ನಿಮ್ಮ ಶರಣರು ಎನ್ನಿಚ್ಚೆಗೆ ಬಪ್ಪರೆ?" 'ಚಕಿತಮಭಿದತ್ತೇ ಶ್ರುತಿರಪಿ' ಎನಲು, ಎಮ್ಮ ನುಡಿ ಶರಣರ ತಾಗಬಲ್ಲುದೆ? ಹಣೆಯ ಹೊಣೆಯ ತೋರಿ ಉದರವ ಹೊರೆವ ನಿಮ್ಮ ಮರೆಯಲಡಗಿಪ್ಪ ಹಡಪಿಗ ನಾನಯ್ಯಾ !" ಎಂದು ಬಿನ್ನವಿಸಿಕೊಳ್ಳುತ್ತಾರೆ.

ಇದೆಂಥ ಹಡಪಿಗ ! ಒಂದೊಂದು ವಚನದಲ್ಲಿ.* ಋಗ್ವೇದ, ಯಜುರ್ವೇದ, ಅದಿತ್ಯ ಪುರಾಣ, ಲಿಂಗ ಪುರಾಣಗಳ ಶ್ಲೋಕಗಳನ್ನು ಉದ್ಧರಿಸಬಲ್ಲ ಹಡಪಿಗ ! ಎಂತಹ ಅಗಾಧ ಪಾಂಡಿತ್ಯ ಈ ಹಡಪಿಗನದು ! ಶಿವ ರಹಸ್ಯ ಶಿವಧರ್ಮ, ಸ್ಕಂದ ಪುರಾಣ, ಆಗಮ, ವೇದಗಳು, ಉಪನಿಷತ್ತುಗಳು, ಇನ್ನೂ ಎಲ್ಲಿಂದಲೋ ಆಧಾರಗಳನ್ನು ಉದ್ಧರಿಸಬಲ್ಲ ಪಾಂಡಿತ್ಯ ! ಇದರಲ್ಲಿ ಆಶ್ಚರ್ಯವೇನಿಲ್ಲ. ಅಪ್ಪಣ್ಣನವರೇ ಹೇಳಿಲ್ಲವೆ–

> 'ಕೀಡೆ ತುಂಬಿಯ ನೆನೆಯೆ, ನೋಡಲಾಕ್ಷಣ ತುಂಬಿಯಾಗಿಹುದು. ರೂಢಿ ಯೊಳು ಅಗಮ್ಯ ಶರಣರ ಪಾದವೇ ಗೂಡಾಗಿ ನಿಂದಿರೆ ಬಸವಪ್ರಿಯ ಕೂಡಲ ಚೆನ್ನ ಸಂಗನ ಬಸವ'

---

* ಗಣಭಾಷಿತ ರತ್ನಮಾಲೆ ಪು ೧೦೧.

ಎಂದು? ಬಸವಣ್ಣನವರೊಡನೆ ಒಡನಾಡಿ ಅಪ್ಪಣ್ಣನವರು ಆತ್ಮಜ್ಞಾನಿಗಳಾಗಿ ಬಿಟ್ಟರು.

ಪ್ರಭುದೇವರನ್ನು ಗುರುತಿಸುವಲ್ಲಿ ಅಪ್ಪಣ್ಣನವರಿಗೇ ಅಗ್ರತಾಂಬೂಲ. ಮೊಟ್ಟಮೊದಲು ಪ್ರಭುದೇವರು ಆಗಮಿಸಿದಾಗ, 'ಪ್ರಭುದೇವರೆಂಬ ಭಾವ ತೋರುತ್ತಿದೆ' ಎಂದು ಊಗಿಸಿದ ಅಪ್ಪಣ್ಣನವರೇ, ಮುಂದೆ ಪ್ರಭುದೇವರು ದೇಶಾಂತರ ಹೋಗಿ ಬಂದಾಗ ' ಬಯಸುವ ಬಯಕೆ ಕೈಸಾರುವಂತೆ, ನಿಧಿ ನಿಧಾನ ಮನೆಗೆ ಬಪ್ಪಂತೆ, ಪರಿಮಳವನರಿಸಿ ಬರ್ಪ ಭ್ರಮರನಂತೆ, ಚಿಂತಾ ಮಣಿಯ ಪುತ್ಥಳಿ ನಡೆಗಲಿತಂತೆ, ಬಸವಪ್ರಿಯ ಕೂಡ ಚೆನ್ನಸಂಗಯ್ಯನಲ್ಲಿ ಪ್ರಭುದೇವರ ಬರವು ಕಾಣಬರುತ್ತಿದೆ ನೋಡಾ ಸಂಗನ ಬಸವಣ್ಣಾ' ಎಂದು ಸುಂದರವಾಗಿ ಬಣ್ಣಿಸಿದರು.

ಅಪ್ಪಣ್ಣನವರ ಜೀವನದ ಅತ್ಯಂತ ಮಹತ್ವದ ಸನ್ನಿವೇಶ ಅವರು ಬಸಣ್ಣನವರು ಕಲ್ಯಾಣವನ್ನು ತೊರೆದು ಕಪ್ಪಡಿ ಸಂಗಮಕ್ಕೆ ನಿರ್ಗಮಿಸಿದಾಗ ಅವರನ್ನು ಹಿಂಬಾಲಿಸಿದುದು ಮತ್ತು ತಾಯಿ ನೀಲಲೋಚನೆಯವರನ್ನು ಕರೆದು ತರಲು ಅಣ್ಣನವರಿಂದ ಆಜ್ಞಪ್ತರಾದುದು. ಅಪ್ಪಣ್ಣನವರು ಮಹಾಪ್ರಸಾದವೆಂದು ಕಲ್ಯಾಣಕ್ಕೆ ಬಂದು ನೀಲಾಂಬಿಕೆಯವರಿಗೆ ಅಣ್ಣನವರ ನಿರೂಪವನ್ನು ತಿಳಿಸಿದರು. ಅದೊಂದು ದಾರುಣವಾದ ಸನ್ನಿವೇಶ. ಕಲ್ಯಾಣವು ಆದಾಗಲೇ ಕಟುಕರ ಕೇರಿಯಾಗಿದೆ. ಶರಣರೆತ್ತೆತ್ತಲೋ ಚೆದುರಿ ಹೋಗಿದ್ದಾರೆ. ಭೀಷಣವಾಗಿದೆ ಕಲ್ಯಾಣ. ಅಂಥ ಸಮಯದಲ್ಲೂ ನೀಲಾಂಬಿಕೆಯವರು ಬರುವುದಿಲ್ಲವೆಂದು ಹಟ ಹಿಡಿಯುತ್ತಾರೆ.

> "ನಾವಲ್ಲಿದ್ದರೇನು? ಇಲ್ಲಿದ್ದರೇನು ಬಸವನಲ್ಲಿ ಎಮಗೆ ತೆರಹಿಲ್ಲವಯ್ಯಾ
> ಅಪ್ಪಣ್ಣಾ–ನಾನಾರ ಸೇರುವೆನೆಂದು ಚಿಂತಿಸಲೇತಕ್ಕೆ? ನಾನಾರ ಹೊದ್ದುವೆ
> ನೆಂದು ಭ್ರಮೆಬಡಲೇತಕ್ಕೆ? ನಾನಾರ ಇರವನರಿವೆನೆಂದು ಪ್ರಳಾಪಿಸ
> ಲೇತಕ್ಕೆ? ಪರಿಣಾಮಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ
> ಬೆಳಗಿದ ಬಳಿದ, ಸಂಗಯ್ಯನ ಹಂಗು ನಮಗೇತಕ್ಕಯ್ಯಾ ಅಪ್ಪಣ್ಣ !"

ಎಂದು ನುಡಿದಬಿಡುತ್ತಾರೆ.

ಆದರೂ ಅಪ್ಪಣ್ಣನವರು ತಮ್ಮ ಸೇವಾ ಸಂಜನಿತ ಆತ್ಮೀಯತೆಯ ಬಲದಿಮದ ಅವರನ್ನು ಒಪ್ಪಿಸಿ ಕಪ್ಪಡಿ ಸಂಗಮದತ್ತ ಕರೆದುಕೊಂಡು ನಡೆದರು. ಆದರೆ ಪತಿಯ ಅಂತ್ಯದರ್ಶನದ ಭಾಗ್ಯ ಸತಿ ನೀಲಲೋಚನೆಯವರಿಗಿರಲಿಲ್ಲ. ಅವರಿಬ್ಬರೂ ಸಂಗಮಕ್ಕೆ ಎರಡು ಮೈಲಿಗಳ ಅಂತರದಲ್ಲಿರುವ ತಂಗಡಿಗೆ ತಲ್ಪುತ್ತಲೇ ಬಸವಣ್ಣನವರು ಐಕ್ಯರಾದ ವಾರ್ತೆ ಅವರ ಕಿವಿಗಳನ್ನು ಕೊರೆಯುತ್ತ ಹೊಕ್ಕಿತು. ನೀಲಲೋಚನೆ,

“ನಿಜದರಿವನರುಹಿಸಿಕೊಟ್ಟ ಗುರವೆ, ನಿರ್ಮಳ ಪ್ರಭೆಯ ತೋರಿದು ಗುರವೆ, ನಿಜವನನುಭವಕ್ಕೆ ತಂದ ಗುರವೆ, ಸುಖದುಃಖವನೊಂದು ರೂಪ ಮಾಡಿದ ಗುರುವೆ, ನಿಮ್ಮ ಘನವಕಾಂಬ ಕಣ್ಣು ಕ್ರಮಗಟ್ಟಿತ್ತು ! ಭಕ್ತಿ ಬಯಲಾಯಿತ್ತೆ ಬಸವಾ! ಎತ್ತಲಡಗಿದೆಯಯ್ಯಾ ಸಂಗಯ್ಯನ ಗುರುಬಸವಾ ! ಅಡವಿಯಲ್ಲಿ ಕಣ್ಣುಗೆಟ್ಟ ಪಶುವಿನಂತೆ ನಾನು ಪ್ರಳಾಪಿಸುತಿರ್ದೆನಯ್ಯಾ !” ಎಂದು ಕಲ್ಲು ಕರುಗುವಂತೆ ಕಂಬನಿಗರೆದರು. ದುಃಖದ ಉದ್ವೇಗ ಹೆಚ್ಚಲು ಹೃದಯವಿದ್ರಾವಕ ಹಾಡಿದನ್ನು ಹಾಡಿದರು ;

ನೋಡು ನೋಡು ನೋಡು ನೋಡು ನೋಡು ಲಿಂಗವೆ
ನೋಡು ಬಸವಯ್ಯನವರು ಮಾಡಿದಾಟವ !
ಹರಳಯ್ಯ ಮಧುವಯ್ಯನವರಿಗೆ ಎಳೆಹೂಟ
ದುರುಳ ಬಿಜ್ಜಳನು ಕಟ್ಟಿದನೆಂದರೆ
ಇರಬಾರದಿಲ್ಲೀಗ ಶರಣರಿಗರುಹಿರೆಂ
ದರಸು ಬಸವರಾಜ ಪೇಳ್ದನಂತೆ !
ಅಪ್ಪ ಅಣ್ಣಯ್ಯಗಳೆನ್ನ ಕರೆಯ ಬಂದಿಹರು
ಕಪ್ಪಡಿ ಸಂಗಮನಾಥ ಕೇಳೋ
ಪುಷ್ಪಕ್ಕೆ ಪರಿಮಳ ಬೆರೆದಂತೆ ಎ
ನ್ನಪ್ಪಿದ ಲಿಂಗವೆ ಮಾತನಾಡೋ !
ಸಂಗನ ಬಸವಣ್ಣನೆಂದ ನಿರೂಪಕೆ
ಹಿಂಗದೆ ಕರವೆತ್ತಿ ಮುಗಿಯುತಲಿ
ಸಂಗಮನಾಥನೆ ಈತನೆಂದು ಎ
ನ್ನಂಗೈಯ ಲಿಂಗದೊಳಡಗುವೆನು !

ಹಾಡುತ್ತ ಹಾಡುತ್ತ ನೀಲಾಂಬಿಕಾ ತಾಯಿಯ ಹರಣ ಹರನಲ್ಲಿ ಲೀನವಾಗಿ ಬಿಡುತ್ತದೆ. ಹಡಪದ ಅಪ್ಪಣ್ಣ ಅನಾಥ ಕಂದನಂತೆ ಕ್ರಂದನಗೈಯುತ್ತಾನೆ. “ಎನ್ನ ತನು ನಿಮ್ಮಸೇವೆಯಲ್ಲಿ ಸವೆದು, ಎನ್ನ ಮನ ನಿಮ್ಮ ನೆನಹಿನಲ್ಲಿ ಸವೆದು, ಎನ್ನ ಅರಿವು ನಿಮ್ಮ ಘನದೊಳಗೆ ಸವೆದು ನಿಶ್ಚಲ ನಿಜೈಕ್ಯವಾಗಿ ಬಸವಪ್ರಿಯ ಕೂಡಲ ಚೆನ್ನಸಂಗಯ್ಯ, ನೀನಾನೆಂಬುದು ಏನಾಯಿತ್ತೆಂದರಿಯೆ” ಎನ್ನುತ್ತ ತಾನೂ ಲಿಂಗದೊಳಗಾಗುತ್ತಾನೆ. ಬಸವಣ್ಣ ನೀಲಾಂಬಿಕೆಯರು ಅಡಗಲು ಅವರ ಛಾಯೆಯಂತಿದ್ದ ಅಪ್ಪಣ್ಣನೂ ಅಡಗುತ್ತಾನೆ.

ಇಂದಿಗೂ ತಂಗಡಿಗಿಯಲ್ಲಿ ಪೂರ್ವಕ್ಕೆ ನೀಲಾಂಬಿಕೆಯ ದೇವಾಲಯ ಶೋಭಿಸಿದರೆ ಪಶ್ಚಿಮಕ್ಕೆ ಹಡಪದ ಅಪ್ಪಣ್ಣನವರ ದೇಗುಲ ಕಂಗೊಳಿಸುತ್ತಿದೆ. ರಾಮನಿಗೆ ಹನುಮಂತ ಹೇಗೋ ಹಾಗೆ ಬಸವಣ್ಣನಿಗೆ ಅಪ್ಪಣ್ಣ. ಆತನಂಥ ನಿಸ್ಸೀಮ ನಿಷ್ಠೆಯ ಅನುಯಾಯಿಗಳು ಅಪರೂಪ. ಅವನ ವಚನಗಳಂತೂ ಆಣಿಮುತ್ತುಗಳಂತಿವೆ.

**ಈ ಗುರುಭಕ್ತಿ :**

"ಅಂಗಕ್ಕೆ ಆಚಾರ, ಮನಸ್ಸಿಗೆ ಅರುಹು, ಕಂಗಳಿಗೆ ಲಿಂಗವ ತೋರಿದಾತ ಚೆನ್ನಮಲ್ಲೇಶ್ವರನಯ್ಯಾ..... ಇಂತಪ್ಪ ಚೆನ್ನಮಲ್ಲೇಶ್ವರನ ಶ್ರೀಪಾದವ ಮುಟ್ಟಿ ಹುಟ್ಟುಗೆಟ್ಟು ಹೋದೆನಯ್ಯ !"

**ಈ ಸದಿಚ್ಛೆ ;**

"ಲಿಂಗನಯನದಲ್ಲಿ ನೋಡುತ್ತ, ಲಿಂಗ ಜಿಹ್ವೆಯಲ್ಲಿ ನುಡಿಯುತ್ತ, ಲಿಂಗಹಸ್ತದಲ್ಲಿ ಮುಟ್ಟುತ್ತ, ಲಿಂಗನಾಸಿಕದಲ್ಲಿ ವಾಸಿಸುತ್ತ, ಲಿಂಗಸ್ತೋತ್ರವ ಕೇಳುತ್ತ, ಲಿಂಗ ಪಾದದಲ್ಲಿ ನಡೆವುತ್ತ ಸರ್ವಾಂಗ ಲಿಂಗಮಯವಾದ ಶರಣರ ಸಂಗಸುಖದೊಳಗೆನ್ನನಿರಿಸಯ್ಯ ಬಸವಪ್ರಿಯ ಕೂಡಲ ಚೆನ್ನಬಸವಣ್ಣ!"

**ಈ ಕೆಚ್ಚು :**

"ವಜ್ರದ ಮನೆಯೊಳಗಿದ್ದು ಗೊರಲೆ ಮುಟ್ಟೀತೆಂಬ ಸಂದೇಹವೇಕೆ? ಭದ್ರಗಜದ ಮೇಲೆ ಬರುತಿರ್ದು ಕೆಳಗಿರ್ದ ಗುಜ್ಜನಾಯಿ ಮುಟ್ಟೀತೆಂಬ ಸಂದೇಹವೇಕೆ? ಸಜ್ಜನ ಸದ್ಭಕ್ತರ ಸಂಗದೊಳಗಿರ್ದು ಸತ್ತೆನೋ ಬದುಕಿದೆನೋ ಎಂಬ ಸಂದೇಹವೇಕೆ?"

**ಈ ಆತ್ಮನೈವೇದ್ಯ :**

"ಮೀಸಲು ಸೂಸಲಾಗಿ, ದೋಸೆ ಕಡುಬು ಹೊಯ್ದು ಹಬ್ಬದ ಮಾಡಿಹೆನೆಂಬ ಹೇಸಿಗಳ ಮಾತ ಕೇಳಲಾಗದು. ಅದೇಕೆ ಎಂದರೆ ಲಿಂಗ ಜಂಗಮದ ಬಾಸೆಗೆ ಸಲ್ಲದಾಗಿ. ಇನ್ನು ಮೀಸಲಾವುದೆಂದರೆ ಬಾಸೆಗೇರಿಸಿದ ತನವೆ ಉದ್ಧರಿಸಬಲ್ಲ ಹಡಪಿಗ ! ಎಂತಹ ಅಗಾಧ ಪಾಂಡಿತ್ಯ ಈ ಹಡಪಿಗನದು"

ಶಿವರಹಸ್ಯ, ಶಿವಧರ್ಮ, ಸ್ಕಂದ ಪುರಾಣ, ಆಗಮ, ವೇದಗಳು, ಉಪನಿಷತ್ತುಗಳು, ಇನ್ನೂ ಎಲ್ಲೆಲ್ಲಿಂದಲೋ ಆಧಾರಗಳನ್ನು ಉದ್ಧರಿಸಬಲ್ಲ ಪಾಂಡಿತ್ಯ! ಇದರಲ್ಲಿ ಆಶ್ಚರ್ಯವೇನಿಲ್ಲ. ಅಪ್ಪಣ್ಣನವರೇ ಹೇಳಿಲ್ಲವೆ–

'ಕೀಡೆ ತುಂಬಿಯ ನೆನೆಯೆ, ನೋಡಲಾಕ್ಷಣ ತುಂಬುಯಾಗಿಹುದು,

ರೂಢಿಯೊಳು ಅಗಮ್ಯ ಶರಣರ ಪಾದವೇ ಗೂಡಾಗಿ ನಿಂದಿರೆ ಬಸವಪ್ರಿಯ ಕೂಡಲ ಚೆನ್ನಸಂಗನ ಬಸವ.'

ಎಂದು. ಬಸವಣ್ಣನವರೊಡನೆ ಒಡನಾಡಿ ಅಪ್ಪಣ್ಣನವರು ಆತ್ಮಜ್ಞಾನಿಗಳಾಗಿ ಬಿಟ್ಟರು.

"ಬಾಸೆಗೇರಿಸಿದ ತನುವೆ ಅಡ್ಡಣೆಗೆ, ಘನವೇ ಪರಿವಾಣ, ಮನ ಮೀಸಲೋಗರ. ಈ ಅನುವನರಿದು ಮಹಾಲಿಂಗಕ್ಕೆ ಅರ್ಪಿತವ ಮಾಡುವೆನೆ ಸದ್ಭಕ್ತನು, ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ"

**ಈ ಆತ್ಮ ವಿಶ್ವಾಸ :**

"ಅನ್ನ ಉದಕವ ಕೊಂಡಿಹೆನೆಂದರೆ ಭೂಮಿಯ ಹಂಗು, ಹೊನ್ನು ಹಿಡಿದಿಹೆ
ನೆಂದರೆ ಲಕ್ಷ್ಮಿಯ ಹಂಗು ; ಹೆಣ್ಣು ಹಿಡಿದಿಹೆನೆಂದರೆ ಕಾಮನ ಹಂಗು ;
ಹಾಲು ಕೊಂಡಿಹೆನೆಂದರೆ ಹಸುವಿನ ಹಂಗು ; ಹಣ್ಣು ಕೊಂಡಿಹೆನೆಂದರೆ
ತರುಮರದ ಹಂಗು ; ತರಗೆಲೆಯ ಕೊಂಡಿಹೆನೆಂದರೆ ವಾಯುವಿನ ಹಂಗು;
ಬಯಲ ಅಪೋಷಣೆಗೊಂಡಿಹೆನೆಂದರೆ ಆಕಾಶದ ಹಂಗು ! ಇದನರಿದು,
ಇವೆಲ್ಲವನುಳಿದು, ವಿಶ್ವಬ್ರಹ್ಮಾಂಡಕ್ಕೆ ನಡೆ ನುಡಿ ಚೈತನ್ಯವಾದ ಜಂಗಮದ
ಪಾದವಿಡಿದು, ಅವರು ಬಿಟ್ಟ ಪ್ರಸಾದ, ಉಟ್ಟ ಮೈಲಿಗೆ, ಉಗುಳ್ದ
ತಂಬುಲ–ಈ ತ್ರಿವಿಧವ ಕೊಂಡು ಎನ್ನ ಬವ ನಾಸ್ತಿಯಾಯಿತ್ತು.
ಮರ್ತ್ಯಲೋಕದ ಮಹಾಗಣಂಗಳ ಸಾಕ್ಷಿಯಾಗಿ ನಾ ನಿಜಮುಕ್ತನಾದೆನಯ್ಯ
ನೀವು ಸಾಕ್ಷಿಯಾಗಿ–ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ !"
"ಆಟದಲಿ ಕೆಲಹೊತ್ತುಗಳೆಂದು, ಕೂಟದಲಿ ಕೆಲಹೊತ್ತುಗಳೆದು,
ನೋಟದಲಿ ಕೆಲಹೊತ್ತುಗಳೆದು, ಊಟದ ಹೊತ್ತಿಗೆ ಲಿಂಗವ ನೆನೆವ,
ಹಸಿವಿನಾಶೆಗೆ ಅಶನವ ಕೊಂಬ, ವಿಷಯದಾಸೆಗೆ ಹುಸಿಯ ನುಡಿವ,
ವ್ಯಸನವ ಹಸನಾಗಿ ಹೊತ್ತು ತಿರುಗುವ, ಹೊಟ್ಟೆ ಹೊಟ್ಟೆಯೆಂದು
ಹೊಟ್ಟೆಗೆ ಹಸಿದು, ಹೊಟ್ಟೆಗೆ ಕುದಿದು, ಹೊಟ್ಟೆಗೆ ಹೊರೆದು, ಹೊಟ್ಟೆಗೆ
ತುಂಬಿ, ತಾವು ಬಂದ ಬಟ್ಟೆಯನರಿಯದೆ ಕೆಟ್ಟುಹೋಗುವ ಜನರಿಗೆಲ್ಲ"

ಅಪ್ಪಣ್ಣನವರ ಅರಿಕೆಯಿದು :

"ಉದಯ, ಮಧ್ಯಾಹ್ನ, ಅಸ್ತಮಾನ, ಕತ್ತಲೆ, ಬೆಳಗು, ವಾರ, ಲಗ್ನ, ತಿಥಿ,

ಮಾಸ, ಸಂವತ್ಸರ–ಹೋಗುತ್ತ ಬರುತ್ತಲಿವೆ. ಇವ ನೋಡಿದವರೆಲ್ಲ ಇದರೊಳಗೆ ಹೋಗುತ್ತ ಬರುತ್ತ ಇದ್ದಾರೆ. ಜಗಕ್ಕೆ ಇವೀಗ ಇಷ್ಟವಾಗಿಪ್ಪವು. ಎನ್ನ ದೇವಂಗೆ ಇವೊಂದು ಇಲ್ಲ. ದಿನ–ಕಾಲ–ಯುಗಜುಗ–ಪ್ರಳಯಕ್ಕೆ ಹೊರಗಾದ ಆ ದೇವನ ಅಂಗವಿಸಿ ಮುಟ್ಟಿ ಹಿಡಿದ ಕಾರಣ ಎಮ್ಮ ಶರಣರು ಪ್ರಳಯಕ್ಕೆ ಹೊರಗಾದರು. ಇದನರಿದು, ಅಂತಪ್ಪ ಶರಣರ ಪಾದವ ನಂಬಿ ಹುಟ್ಟುಗೆಟ್ಟು ಬಟ್ಟಬಯಲಾದೆನಯ್ಯ ಬಸವ ಪ್ರಿಯ ಕೂಡಲ ಚೆನ್ನಬಸವಣ್ಣ !"

ಇಂಥ ಅಧ್ಯಾತ್ಮವಾದಿ ಅಪ್ಪಣ್ಣನಿಗೆ ತಕ್ಕ ಸತಿ ಲಿಂಗಮ್ಮ. ಆಕೆಯ ಜೀವನದ ವಿವರಗಳೇನೂ ಸಿಕ್ಕಿಲ್ಲವಾದರೂ ಆಕೆಯ ಉಜ್ವಲ ವಚನಗಳಿವೆಯಲ್ಲ! ಆ ವಚನಗಳಲ್ಲಿ ಒಡಮೂಡಿ ನಿಂತಿರುವ ಆಕೆಯ ವ್ಯಕ್ತಿತ್ವ ಮಹೋನ್ನತವಾದ ವ್ಯಕ್ತಿತ್ವ. ಅವಳಿಗೂ ಚೆನ್ನ ಮಲ್ಲೇಶ್ವರನೆ ಗುರು. ಅವನೂ ಮಹಾನುಭಾವನೇ ಆಗಿರಬೇಕು.ಆದರೆ ಆತನ ಬಗ್ಗೆ ಏನೊಂದೂ ತಿಳಿಯದಿರುವುದು ನಮ್ಮ ದುರ್ದೈವ.

ಕೈಲಾಸ–ಮರ್ತ್ಯವೆಂಬ ಭೇದ ಲಿಂಗಮ್ಮನಿಗೆ ಒಪ್ಪಿಗೆಯಿಲ್ಲ : "ಕೈಲಾಸ ಮರ್ತ್ಯ ಲೋಕವೆಂಬರು. ಕೈಲಾಸವೆಂದರೇನೋ? ಮರ್ತ್ಯ ಲೋಕವೆಂದರೇನೊ? ಅಲ್ಲಿಯ ನಡೆಯೂ ಒಂದೇ, ಇಲ್ಲಿಯ ನಡೆಯೂ ಒಂದೇ ಕಾಣಿರಯ್ಯ ! ಕೈಲಾಸದವರೇ ದೇವರ್ಕಳೆಂಬವರು ; ಮರ್ತ್ಯ ಲೋಕದವರೇ ಮಹಾಗಣಂಗಳೆಂಬವರು. ಸುರಲೋಕದೊಳಗೆ ಸಾಸಿರಕಾಲಕ್ಕಲ್ಲದೆ ಅಳಿವಿಲ್ಲವೆಂಬರು ; ನರಲೋಕದೊಳಗೆ ಸತ್ತು ಹುಟ್ಟುತ್ತಿಹರೆಂಬುರು. ಇದ ಕಂಡು ನಿಮ್ಮ ಶಿವಶರಣರು ಸುರಲೋಕವನು ನರಲೋಕವನು ತೃಣವೆಂದು ಭಾವಿಸಿ ಭವವ ದಾಂಟಿ ತಮ್ಮ ತಮ್ಮ ಹುಟ್ಟನಳಿದು ಮಹಾ ಬೆಳಗನೇ ಕೂಡಿ ಬೆಳಗಿನಲ್ಲಿ ಬಯಲಾದರಯ್ಯಾ!"

ಯಾರು ಶರಣರು :

"ಆಸೆಯನಳಿದು, ರೋಷವ ನಿಲಿಸಿ, ಜಗದ ಪಾಶವ ಹರಿದು, ಈಶ್ವರನೆನಿಸಿ" ಕೊಂಬವರು ಶರಣರು; "ತನುವ ಕರಗಿಸಿ, ಹರಿವ ಮನವ ನಿಲ್ಲಿಸಿ, ಅಂಗಗುಣವನೆ ಅಳಿದು, ಲಿಂಗ ಗುಣವನೆ ನಿಲಿಸಿ, ಭಾವವಳಿದು ಭವಕೆ ಸವಿ"ದವರು ಶರಣರು. ಅಂಥ ಶರಣರ 'ತೊತ್ತಿನ ತೊತ್ತಿನ ಪಡಿದೊತ್ತಿನ ಮಗಳಂತೆ' ತಾನು! 'ತಳ್ಳಿ ಬಳ್ಳಿಯನೆ ಹರಿದು ಅವರಲ್ಲಿಯೇ ನೆಲೆಗೊಂಡ ಕಾರಣ ಚೆನ್ನ ಮಲ್ಲೇಶ್ವರ ಪಾದದಲ್ಲೇ ನಿರ್ಮುಕ್ತ'ಳಾದಂತೆ ! 'ಕಾಣಬಾರದ ಕದಳಿಯ ಹೊಕ್ಕನೂನ ಕದಳಿಯ ದಾಂಟಿದ'ಳಂತೆ ! ಜ್ಞಾನ ಜ್ಯೋತಿಯ ಕಂಡಳಂತೆ ; ಚೆನ್ನಬಸವಣ್ಣನ ಕರುಣದ ಶಿಶುವಾದ ಕಾರಣ ತಾನು ತಾನಾಗಿಪ್ಪ ಮಹಾ ಬೆಳಗಿನಲ್ಲಿ ಓಲಾಡಿ ಸುಖಿಯಾದಳಂತೆ!

ಎಂಥ ಪುಣ್ಯವಂತೆ ಈ ಮುಕ್ತಿಕಾಂತೆ !

ಈ ಹೆಣ್ಣು ಹೃದಯದ ಸುಧೆಯನ್ನು ಸವಿದು ಸಂತಸಗೊಳ್ಳದವರಾರು?

"ಮನ ಕತ್ತಲೆ, ತನು ಹಮ್ಮು, ನೆನಹು ಮರವೆ–ಇವರೊಳಗೆ ಇದ್ದು ಘನವ



**ಹಾಡುತ್ತ ಹಾಡುತ್ತ ನೀಲಾಂಬಿಕಾತಾಯಿಯ ಹರಣ ಹರನಲ್ಲಿ ಲೀನವಾಗಿಬಿಡುತ್ತದೆ**

ಕಂಡಿಹೆನೆಂಬ ಅಣ್ಣಗಳಿರಾ, ನೀವು ಕೇಳಿರೋ ! ಘನವ ಕಾಂಬುದಕ್ಕೆ ಮನವೆಂತಾಗಬೇಕೆಂದರೆ ಅಕ್ಕಿಯ ತಳಿಸಿದಂತೆ, ಅಲ್ಲವ ಸುಲಿದಂತೆ, ಕನ್ನಡಿಯ ನೋಡಿದಂತೆ ಮನನಿರ್ಮಳವಾದಲ್ಲದೆ ಘನವ ಕಾಣಬಾರದು !"

ಇದು ಇದ್ದೂ ಇಲ್ಲದಂತಿರುವ ಸೊಗಸು :

"ನೋಡಿಹೆನೆಂದರೆ ನೋಟವಿಲ್ಲ; ಕೇಳಿಹೆನೆಂದರೆ ಕಿವಿಯಿಲ್ಲ ; ವಾಸಿಸಿಹೆನೆಂದರೆ ನಾಸಿಕವಿಲ್ಲ ; ನುಡಿದಿಹೆನೆಂದರೆ ಬಾಯಿಯಿಲ್ಲ; ಹಿಡಿದಿಹೆನೆಂದರೆ ಹಸ್ತವಿಲ್ಲ;

ನಡೆದಿಹೆನೆಂದರೆ ಕಾಲಿಲ್ಲ; ನೆನೆದಿಹೆನೆಂದರೆ ಮನವಿಲ್ಲ; ಇಂತು ನೆನಹು ನಿಷ್ಪತ್ತಿಯಾಗಿ ಶರಣರ ಪಾದದಲ್ಲಿಯೆ ಬೆರೆದು ಸುಖಿಯಾದೆನಯ್ಯಾ !"

ಇದು ಮಹಾನಿರ್ವಾಣದ ಮನೋಜ್ಞ ನಿರೂಪಣೆ :

"ತನು ಕರಗಿತ್ತು , ಮನ ನಿಂದಿತ್ತು, ಉಲುಹು ಅಡಗಿತ್ತು , ನೆಲೆಗೆ ನಿಂದಿತ್ತು , ಮನ–ಪವನ–ಬಿಂದು ಒಡಗೂಡಿತ್ತು, ಉರಿ ಎದ್ದಿತು, ಊರ್ಧ್ವಕ್ಕೋಡಿತ್ತು, ಶರಧಿ ಬತ್ತಿತ್ತು, ನೊರೆ ತೊರೆ ಅಡಗಿತ್ತು, ಅಷ್ಟಮದವೆಲ್ಲ ಹಿಟ್ಟುಗುಟ್ಟಿತ್ತು, ಕರಣಂಗಳೆಲ್ಲ ಉರಿದುಹೋಯಿತ್ತು, ಸಪ್ತಧಾತು ಕೆಟ್ಟಿತ್ತು, ರಸವರತ್ತಿತ್ತು, ಅಪ್ಪು ಬರತಿತ್ತು–ತೊಟ್ಟು ಬಿಟ್ಟು ಬಟ್ಟಲುಯಲೊಳಗೆ ಬಿದ್ದು ನಾನೆತ್ತ ಹೋದೆನೆಂದರಿಯೆನಯ್ಯ ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ !"

ಇದು ಅವಳ ಅಧ್ಯಾತ್ಮ ಜೀವನದ ಸಾರ ಸಂಗ್ರಹ :

"ಅಯ್ಯ, ನಾ ಮರ್ತ್ಯದಲ್ಲಿ ಹುಟ್ಟಿ ಕಷ್ಟಸಂಸಾರಿ ಎನಿಸಿಕೊಂಡೆ. ಕತ್ತಲೆಯಲ್ಲಿ ಮುಳುಗಿದೆ. ಕರ್ಮಕ್ಕೆ ಗುರಿಯಾಗುತ್ತಿದ್ದರೆ ಹೆತ್ತ ತಾಯಿಯೆಂಬ ಗುರುಸ್ವಾಮಿ ಎನ್ನ ಕೊರಳಿಗೆ ಗಂಡನೆಂಬ ಲಿಂಗವ ಕಟ್ಟಿದರು. ತಂದೆ ಜಂಗಮ ಲಿಂಗವು ಎನ್ನ ಪ್ರಾಣಕ್ಕೆ. ಪ್ರಸಾದವ ಊಡಿದನು. ಆಗಲೆ ಕತ್ತಲೆ ಹರಿಯಿತು; ಕರ್ಮ ಹಿಂಗಿತ್ತು; ಮನ ಬತ್ತಲೆಯಾಯಿತು; ಚಿತ್ತ ಸುಯಿಧಾನವಾಯಿತ್ತು; ನಿಶ್ಚಿಂತವಾಯಿತ್ತು ! ನಿಜವ ನೆಮ್ಮಿ ನೋಡುವನ್ನಕ್ಕ ಎನ್ನ ಅತ್ತೆ ಮಾವರು ಅರುತುಹೋದರು; ಅತ್ತಿಗೆ ನಾದಿನಿಯರು ಎತ್ತಲೋ ಓಡಿಹೋದರು; ಸುತ್ತಲಿರುವ ಬಂಧುಗಳೆಲ್ಲ ಬಯಲಾದರು; ಎನ್ನ ತಂದೆ ತಾಯಿ ಕಟ್ಟಿದ ಚಿಕ್ಕಂದಿನ ಗಂಡನ ದಿಟ್ಟಿಸಿ ನೋಡುವ ನೋಟ ಹೋಗಿ ಎನ್ನ ಮನಕ್ಕೆ ಸಿಲ್ಕಿತ್ತು. ಅಂಗ ಲಿಂಗವೆಂಬ ಉಭಯವಳಿಯಿತ್ತು. ಸಂಗ ಸುಖ ಹಿಂಗಿತ್ತು. ಮಂಗಳದ ಮಹಾ ಬೆಳಗಿನಲ್ಲಿ ಓಲಾಡಿ ಸುಖಿಯಾದೆನಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ"

ಈ ಶರಣದಂಪತಿಗಳಿಗೆ ಶರಣೆಂದು ಶುದ್ಧರಾಗದವರಾರು?

■

# ವೈರಾಗ್ಯವೇ ಗಟ್ಟಿಗೊಂಡ ಘಟ್ಟಿವಾಳಯ್ಯ

"ತನು ನಿರ್ವಾಣವೋ ಮನ ನಿರ್ವಾಣವೋ ಭಾವ ನಿರ್ವಾಣವೋ !
ಲೆಕ್ಕವಿಲ್ಲದ ಆಶೆ ಮನದೊಳಗೆ ಹೊಕ್ಕು ತಿರುಗಾಡುತಿಹ
ಚಿಕ್ಕು ಮಕ್ಕಳಿಗೆಲ್ಲಿಯದೊ ನಿರ್ವಾಣ, ಘಟ್ಟಿವಾಳಂಗಳಲ್ಲದೆ,
ನಿಃಕಳಂಕ ಮಲ್ಲಿಕಾರ್ಜುನ?"

ಎಂದು ಮೋಳಿಗೆಯ ಮಾರಯ್ಯನಂಥ ನಿಷ್ಠುರ ಆದರ್ಶವಾದಿಯಿಂದ ಮನದುಂಬು ಹೊಗಳಿಸಿಕೊಳ್ಳಬೇಕಾದರೆ ಘಟ್ಟಿವಾಳಯ್ಯನು ಗಟ್ಟಿಗನಾಗಿಯೇ ಇರಬೇಕು. ಇಲ್ಲದಿದ್ದರೆ ಆತನದೊಂದು ಸಂಪಾದನೆ ಶೂನ್ಯ ಸಂಪಾದನೆಯಲ್ಲಿ ಸೇರುತ್ತಿದ್ದಿತೆ? "ಅಶನಕ್ಕಂಜಿ ವೇಷವನೆ ಹೊತ್ತು ದೇಶವ ತೊಳಲುವ ಹಿರಿಯರ ಗಂಡ ; ಕಾಲದ ಗಂಡ; ಕರ್ಮದ ಗಂಡ; ಲಿಂಗವಿಡಿದು ಸಾವ ಹಿರಿಯರ ಗಂಡ–ಗುಹೇಶ್ವರಾ, ನಿಮ್ಮ ಶರಣ ಘಟ್ಟಿವಾಲ ಅಲ್ಲಮನಂತಿಂತೆಂಬವರ ಗಂಡ !" ಎಂದು ಪ್ರಭುದೇವರು ಸಹ ಪ್ರಾಂಜಲ ಮನಸ್ಸಿನಿಂದ ಪ್ರಶಂಸಿಸುತ್ತಿದ್ದರೆ?

'ದೃಢಶರಣ ಸೀಮಂತಮಣಿ'ಯೆಂದು ಅದ್ರುಶ್ಯಕವಿ ಘಟ್ಟಿವಾಳಯನನ್ನು ಕೊಂಡಾಡಿದ್ದಾನೆ. ಕೈಲಾಸದಲ್ಲಿ ಶಿವನೆದುರಿಗೆ ಶಪಥ ಮಾಡಿದನಂತೆ ಗಣನಾಥನೊಬ್ಬ– "ಪೊಡವಿಯ ಜಡಸ್ತ್ರೀಯೊಬ್ಬಳನ್ನು ಮದುವೆಯಾಗಿ ಬಿಡದೆ ನಡೆಸುವೆ ಭಕ್ತಿ ಜ್ಞಾನ ಕ್ರಿಯಂಗಳನ್ನು ; ನಡೆಯದಿರ್ದಡೆ ಅವಳ ಬಿಟ್ಟು ಸುವಿರಕ್ತಿಯಂ ಪಿಡಿವೆ" ಎಂದು. ಇದನ್ನು ಕೇಳಿ ಹರಗಣಗಳು, 'ನುಡಿದಂತೆ ನಡೆವ ಗಟ್ಟಿಗನೆಂದು ಗಹಗಹಿಸಿ' ಕಳಿಸಿಕೊಟ್ಟರಂತೆ. ಕಾರಣ ಇವನಿಗೆ ಘಟ್ಟಿವಾಳಯ್ಯನೆಂಬ ಹೆಸರು ಬಂದಿತಂತೆ.

ಹೆಸರು ಹೇಗೋ ಬರಲಿ–ಹೆಸರಿಗೆ ತಕ್ಕಂತೆ ನಡೆದನಲ್ಲ. ಅದೇ ಅವನ ಹೆಚ್ಚುಗೆ. 'ಹೆಸರು ಹಾಲಪ್ಪ, ಕುಡಿಯಲು ಮಜ್ಜಿಗೆಯಿಲ್ಲ' ಎಂಬಂತೆ ಇರುವವರೇ ಹೆಚ್ಚು. ಘಟ್ಟಿವಾಳಯ್ಯನಂತೆ ಹೆಸರಿಗೆ ತಕ್ಕಂತೆ ನಡೆವವರು ಆಗೊಬ್ಬ ಈಗೊಬ್ಬ ಅಲ್ಲೊಮ್ಮೆ ಇಲ್ಲೊಮ್ಮೆ. ದುರ್ಗುಣಘರಟ್ಟ ಘಟ್ಟಿವಾಳಯ್ಯ ದಾಂಭಿಕರಿಗೆ, ನಾಮಧಾರಿಗಳಿಗೆ ವೇಷಗಾರರಿಗೆ, ಮೋಸಗರರಿಗೆ ಸಿಂಹಸ್ವಪ್ನವಾಗಿ ಉಳಿದಿದ್ದಾನೆ.

ಘಟ್ಟಿವಾಳಯ್ಯನ ಹುಟ್ಟೂರಾವುದೆಂಬುದು ತಿಳಿದುಬಂದಿಲ್ಲ. ಯಾವುದೋ ಹೆಸರರಿಯದ ಹಳ್ಳಿ ಈ ಮಹಾನುಭಾವನಿಗೆ ಜನ್ಮವಿತ್ತು ಧನ್ಯವಾಗಿದೆ. ಇವನ ಮೊದಲಿನ ಹೆಸರು ಮುದ್ದಣ್ಣನಂತೆ. ಮೊದಲಿನಿಂದಲೇ ಮಹಾದೇವನಿಗೆ ಮನವನ್ನು ಮಾರಿಕೊಂಡವನೆಂತೆ. ಮದ್ದಳೆಯನ್ನು ನುಡಿಸುತ್ತ ನರ್ತಿಸುತ್ತ ಶಿವಾನುಭವವನ್ನು ಸಾರಿ ಹೇಳುವ ಕಾಯಕವನ್ನು ಕೈಕೊಂಡಿದ್ದನಂತೆ. ಈ ಕಾಯಕದಿಂದ ದೊರೆತಷ್ಟರಲ್ಲಿ ತೃಪ್ತನಾಗಿ ದಾಸೋಹ ಧನ್ಯನಾಗಿ ಜೀವಿಸಿದ್ದನಂತೆ.

ಬರುಬರುತ್ತ ಅವನ ಹೃದಯ ವಿಶ್ವದಷ್ಟು ವಿಶಾಲವಾಯಿತು. ಅವನ ವಿಶ್ವಕುಟುಂಬಿಯಾದ; ಅಹಿಂಸಾ ಮೂರ್ತಿಯಾದ; ಎಲ್ಲವನ್ನೂ ತೃಣವೆಂದು ತಿಳಿದು ತೊರೆದು ಆಶಾರಾಹಿತ್ಯದ ಅಂತಿಮ ಸೀಮೆಯನ್ನು ಮುಟ್ಟಿ ಇರತೊಡಗಿದ.

ಪೂರ್ಣ ವೈರಾಗ್ಯ ಪ್ರಾಪ್ತವಾಗುವ ಮುನ್ನ ಮದುವೆಯ ಮೋಡವೊಂದು ಸುಳಿದುಹೋಯಿತು ಅವನ ಬಗೆಯ ಬಾನಿನಲ್ಲಿ. ಮನೆಗೆ ಮಡದಿ ಬಂದಳು. ಆದರೆ ಕಾಮನನುರುಹಿ ಕಾಮಿನಿಯೊಡಗೂಡಿದ ಕಾಲಸಂಹರನ ಭಕ್ತನಾದ ಮುದ್ದಣ್ಣ ಕೈ ಹಿಡಿದ ಮಡದಿಯ ಕಡೆಗೆ ಎಷ್ಟು ಲಕ್ಷ್ಯವಿತ್ತಿರಬಹುದು? ಈ ಹರನ ಹುಚ್ಚು ಹಿಡಿದ ಮರವೆಯ ಗಂಡನನ್ನೇ ತನ್ನ ಪಾಲಿನ ದೇವರೆಂದು ತಿಳಿದು ತಾಳಿಕೊಳ್ಳುವಷ್ಟು ಸಾಧ್ವಿಯಾಗಿರಲಿಲ್ಲ ಅವನ ಸತಿ. ಅವಳು ಸಂಪತ್ತಿಗೆ, ಸುಖಭೋಗಕ್ಕೆ, ಉಲ್ಲಾಸಕ್ಕೆ, ವಿಲಾಸಕ್ಕೆ ಮನಸೋತ ಸುದತಿಯಾಗಿದ್ದಳು. ಅವಳಿಗೆ ಮುದ್ದಣ್ಣನ ಸಂಸಾರ ನಿಸ್ಸಾರವಾಗಿ ಕಂಡಿತು. ಹದಿಬದೆಯ ಹಾದಿಯಿಂದ ಜಾರಿದಳು, ಜಾರೆಯಾದಳು.

ಘಟ್ಟಿವಾಳಯ್ಯನಿಗಿದು ಗೊತ್ತಾಗಲು ಸಿಟ್ಟಾಗಲಿಲ್ಲವನು. ಅದುವರೆಗೆ ಅದುಮಿ ಹಿಡಿದಿದ್ದ ವೈರಾಗ್ಯದ ಕಡಿವಾಣವನ್ನು ಸಡಿಲುಬಿಟ್ಟ. ವೈರಾಗ್ಯವೇ ಗಟ್ಟಿಗೊಂಡು ಘಟ್ಟಿವಾಳಯ್ಯನಾಗಿ ಕಲ್ಯಾಣಕ್ಕೆ ಹೊರಟ. ಹಾದಿಯಲ್ಲಿ ಅವನ ಬಗೆಯ ಬೀಣೆ ನುಡಿಯತ್ತಲಿದ್ದಿತು–

> 'ಹೊನ್ನು ಹೆಣ್ಣುಂ ಮಣ್ಣು ತನ್ನದೆಂಬವ ಮೂರ್ಖ
> ಹೊನ್ನು ಭೂಪಾಲರಿಗೆ ಹೆಣ್ಣೊಲಿದ ಕಾಮುಕಗೆ
> ಮಣ್ಣು ಬಲವಂತಗಲ್ಲದೆ ಬರಿಯ ಭ್ರಾಂತಿಯಲ್ಲಿ ಕಣ್ಣುಗೆಟ್ಟರೆ ಬರುವದೇ
> ಎನ್ನ ಧನಜ್ಞಾನವೆಂಬಾಗಮದ ವಚನವಿನ್ನರಿದುಕೊ !...."

ಆ ವಿಪಂಚಿಯ ಇಂಚರಕ್ಕೆ ತಕ್ಕಂತೆ ಹೆಜ್ಜೆಯಿಡುತ್ತ

> "ಅತ್ತೆಯ ಮಾತ ಸೊಸೆ ಕೇಳಳಮ್ಮ
> ಅತ್ತೆಯನೆ ಒತ್ತಿ ದುರ್ಭಾಷೆಯಮ್ಮ

ಪತಿವ್ರತವು ಕೆಟ್ಟು ಹೋದಿತಮ್ಮ–ಇನ್ನು
ಪತಿಯ ಮಾತನು ಸಡ್ಡುಗೊಳ್ಳರಮ್ಮ"

ಎಂದು ಕಾಲಜ್ಞಾನವನ್ನು ಸಾರುತ್ತ ನಡೆದು ಕಲ್ಯಾಣವನ್ನು ಸೇರಿದ. ಕಲ್ಯಾಣದ ಕುಸುಮಕರಂಡಕ್ಕೆ ಹೊಸ ಹೂವೊಂದು ಸೇರಿ ಹೊಸ ಸೌರಭವನ್ನು ಬೀರಿತ್ತು.

ಕಲ್ಯಾಣದ ಕರಂಡದಲ್ಲಿ ಕುಸುಮಗಳಿದ್ದಂತೆ ಮುಳ್ಳುಗಳೂ ಇದ್ದುವೆಂದು ತೋರುತ್ತದೆ. ಅದು ಪ್ರಕೃತಿ ನಿಯಮ. ಬಸವಣ್ಣನವರ ವಸುಧೈವ ಕುಟುಂಬಕ ವೃತ್ತಿಯಿಂದಾಗಿ ವೇಷಧಾರಿಗಳೂ ಹಲವರು ಅಶನದಾಶೆಗಾಗಿ ಬಸವ ದಾಸೋಹದಲ್ಲಿ ಸೇರಿಕೊಮಡಿರಬಹುದು. ಘಟ್ಟಿವಾಳಯ್ಯನಾದರೋ

"ಆಸೆಗಾಗಿ ವೇಷವ ಹೊತ್ತ ತಿರುಗುವ ವೇಷಗಾರರ ಗಂಡ !
ಈಕ್ಷಣತ್ರಯಕಾಗಿ ಈಶನ ಪೂಜಿಸುವ ದಾಸರ ಗಂಡ !
ಇಷ್ಟನರಿತು ತನುವಿಗೆ ಆಸೆಯ ಮಾಡುವ ಭಾಷೆವಂತರ ಗಂಡ !"

ಅವನಂಜುವುದು 'ತ್ರಿವಿಧದ ಹಂಗಳಿದವರಿಗೆ' ಮಾತ್ರ. ಅಂಥವನು ಬಸವ ದಾಸೋಹದಲ್ಲಿ ಸೇರಿದ್ದ ವೇಷಗಾರರನ್ನು, ಆಶೆಯ ದಾಸರನ್ನು ಸೈರಿಸುವುದೆಂತು? ಅವರನ್ನು ಕುರಿತು–

"ಕಾಯ ಜೀವವನರಿದೆನೆಂಬರೆಲ್ಲರೂ ಹೋದರಲ್ಲಾ ಹೊಲಬುದಪ್ಪಿ !
ಹೊನ್ನು ಹೆಣ್ಣು ಮಣ್ಣಿಗೆ ಹೋರಿಯಾಡುವರೆಲ್ಲರು !
ಬಸವಣ್ಣನ ಬಾಗಿಲಲ್ಲಿ ಬಂಧಿತರಾಗಿ ನೊಂದವರಿಗೇಕೆ
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ? ಇಲ್ಲ ಇಲ್ಲಾ ಎಂದೆ !"

ಎಂದು ವಿಡಂಬಿಸಿದನು. ಪುಂಡ ಜಂಗಮರು ಸಿಟ್ಟಿಗೆದ್ದು ಅವನನ್ನು ಹಿಡಿದೆಳೆದು ನೋಯಿಸಿ ಅವನ ಇಷ್ಟಲಿಂಗವನ್ನು ಕಸಿದುಕೊಂಡರು. ಘಟ್ಟಿವಾಳಯ್ಯ ಆ ಗುಂಡನ್ನೇ ಕೊರಳಲ್ಲಿ ಕಟ್ಟಿಕೊಂಡು ಬಂದು ಬಸವಣ್ಣನವರ ಅರಮನೆಯ ಬಾಗಿಲಲ್ಲಿ ಕುಳಿತುಬಿಟ್ಟನು. ಊಟಕ್ಕೆ ಬಂದ ಜಂಗಮರಿಗೆ ಒಳಗೆ ಹೋಗಲು ಹಾದಿಯಿಲ್ಲದಂತೆ ಕುಳಿತುಬಿಟ್ಟನು. ಒಳಗಿನವರು ಹೊರಗೆ ಬದಂತಾಯಿತು ಹೊರಗಿನವರು ಒಳಗೆ ಹೋಗದಂತಾಯಿತು. ಗಜಿಬಜಿಯೆದ್ದಿತು. ಬಸವಣ್ಣನವರವರೆಗೂ ಈ ಸಮಾಚಾರ ಮುಟ್ಟಿತು. ಅವರು ಪ್ರಭುದೇವರು, ಚೆನ್ನಬಸವಣ್ಣ ಮೊದಲಾದ ಶರಣ ಗಣದೊಡನೆ ಆಗಮಿಸಿದರು. ಎಲ್ಲವನ್ನೂ ಅರಿತವರಾಗಿ ಘಟ್ಟಿವಾಳಯ್ಯನ ಇಷ್ಟಲಿಂಗವನ್ನು ಕೊಟ್ಟುಬಿಡಲು ಆ ಜಂಗಮರಿಗೆ ಹೇಳಿದರು. ಪುಂಡ ಜಂಗವರು ಸುಮ್ಮನೆ ಕೊಡಲಿಲ್ಲ. ಘಟ್ಟಿವಾಳಯ್ಯನಿಗೆ ಈಗ ಈ ಗುಂಡು ಲಿಂಗವಾಗಿದೆ. ಇಷ್ಟಲಿಂಗವೊಂದನ್ನು

ಮರಳಿ ಕೊಟ್ಟರೆ ಎರಡು ಲಿಂಗಗಳಾಗುವುದಿಲ್ಲವೆ? ಒಬ್ಬನಿಗೆ ಎರಡು ಲಿಂಗಗಳೆ? ಒಬ್ಬ ಶರಣ ಸತಿಗೆ ಇಬ್ಬರು ಪತಿಯರೆ? ಎಂದು ಕಟಕಿಯಾಡಿದರು. ಅದಕ್ಕೆ




**ವೈರಾಗ್ಯವೇ ಗಟ್ಟಿಗೊಂಡು, ಘಟ್ಟವಾಳಯ್ಯನಾಗಿ ಕಲ್ಯಾಣಕ್ಕೆ ಹೊರಟ**

ಘಟ್ಟಿವಾಳಯ್ಯನು, "ಒಂದು ಎರಡಾಗಬಲ್ಲದು. ಎರಡು ಮೂರಾಗಬಲ್ಲದು, ಆ ಮೂರು, ಆರಾಗಬಲ್ಲದು, ಆ ಆರು ಮುವ್ವತ್ತಾರಾಗಬಲ್ಲದು. ಆ ಮುವ್ವತ್ತಾರು ಇನೂರು ಹದಿನಾರಾಗಬಲ್ಲದು. ಇದು ಲಿಂಗದ ನಿಜವು, ಲಿಂಗದ ನೆಲೆಯು" ಎಂದು ಎಲ್ಲರೂ ಬೆರಗಾಗುವಂತೆ ಉತ್ತರವಿತ್ತನು.

ಪ್ರಭುದೇವರು ಜಂಗಮರ ತಪ್ಪು ಮನ್ನಿಸುವುದೆಂದು ಸಂತೈಸಲು, ಘಟ್ಟಿವಾಳಯ್ಯ ನಿಷ್ಠುರವಾಗಿ ನುಡಿದನು.

> "ಇರುವುದು, ಕಡಿವುದು, ಕೊಲುವುದು ಮಲದೇಹಿಗಳಿಗಲ್ಲದೆ ನಿರ್ಮಲ ದೇಹಿಗಳಿಗುಂಟೆ? ಹಾದಿಯ ಬೆಳ್ಳನ ಕಳ್ಳರು ತಾಗಿದರೆ ಇನ್ನಾರಿಗೆ ಮೊರೆಯಿಡುವ? ಈ ಉರುಳುಗಳ್ಳರ ಭಕ್ತರು ಜಂಗಮವೆಂದರೆ ಒಪ್ಪನಯ್ಯಾ, ಚಿಕ್ಕಯ್ಯಪ್ರಿಯ ಸಿದ್ಧಲಿಂಗ ! ಇಲ್ಲ ಇಲ್ಲಾ ಎಂದೆ."

ಪ್ರಭುದೇವರು ಘಟ್ಟಿವಾಳಯ್ಯನ ಭಾವವನ್ನು ಒಪ್ಪಿದರೂ ಭಾಷೆಯನ್ನು ಒಪ್ಪಲಿಲ್ಲ. ಅರಿವು ಕಣ್ದೆರೆಯುವಂತೆ ಹೇಳಿದರು.

> "ಅರಿವ ಬಲ್ಲೆನೆಂದು ಬಿರುನುಡಿಯ ನುಡಿವರೆ? ಸತ್ಯವನರಿದವಂಗೆ ಮಿಥ್ಯ ಭಾವ ಉಂಟೆ? ತಥ್ಯ ಮಿಥ್ಯ ಉಭಯ ಭಾವವಳಿದಿರಬೇಕು. ಸಮಯವೆಂಬುದು ಸಂಪದ. ಅದು ನಿನಗನ್ಯವೆ? ಸರ್ವಮಯಸಂಪದ ನಾದಲ್ಲಿ ಗುಹೇಶ್ವರಲಿಂಗಕ್ಕೆ ತಥ್ಯಮಿಥ್ಯವಿಲ್ಲ ಘಟ್ಟಿವಾಳಯ್ಯ !"

ಘಟ್ಟಿವಾಳಯ್ಯ ದಿಟ್ಟತನದಿಂದಲೇ ಉತ್ತರಿಸಿದ–

> "ಚಿನ್ನವ ಕೊಂಬಲ್ಲಿ ಅದರ ಬಣ್ಣವ ಕಂಡು, ಬಣ್ಣದವಾಸಿಯ ಕುರು ಹಿಟ್ಟು, ಅದು ತನವೆ ಚೆನ್ನಾದಡೆ ಕೊಂಬ; ಅಲ್ಲದೊಡೊಲ್ಲ , ಇದಕ್ಕೆ ಗೆಲ್ಲಸೋಲವೇಕೆ? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎನು ತಿರ್ದನು."

ಪ್ರಭುದೇವರು ಪ್ರತ್ಯುತ್ತರವಿತ್ತರು :

> "ಕುರುಹುಳ್ಳನ್ನಕ್ಕ ಸಮಯದ ಹಂಗು,. ಅರಿದಿಹೆನೆಂಬನ್ನಕ್ಕ ಆತ್ಮನ ಹಂಗು. ಅಲ್ಲಹುದೆಂಬನ್ನಕ್ಕ ಎಲ್ಲರ ಹಂಗು. ಗುಹೇಶ್ವರನೆಂಬನ್ನಕ್ಕ ಲಿಂಗದ ಹಂಗು ಬೇಕು ಘಟ್ಟಿವಾಳಣ್ಣಾ !"

ಬಿಟ್ಟ ಕಣೆಯಂತೆ ಬಂದಿತು ಘಟ್ಟಿವಾಳಯ್ಯನ ಉತ್ತರ :

"ಎನಗೆ ಹಳ್ಳದ ಹೊಡಕೆಯೆ ಶಿವದಾರವಾಗಿ, ಬೆಟ್ಟದ ಗುಂಡೆ ಲಿಂಗವಾಗಿ, ಕಾಡುಸೊಪ್ಪು ಹಾಕಿದ ಮಡಕೆಯ ಉದಕವೆ ಮಜ್ಜನವಾಗಿ ಪೂಜಿಸುತ್ತಿದ್ದೆ. ಬಸವನ ಮನೆಗೆ ಹೋಹ ವ್ರತಗೇಡಿಗಳ ನೋಡಿ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎನುತಿರ್ದೆ !"

ಆಗ ಜಂಗಮರು ಜಡಿದು ನುಡಿದರು–

"ಅಂಬುತಾಗಿಹೆನೆಂದಡೆ ಧನುವಿನ ಸಂಗದಿಂದಲ್ಲದೆ ತಾಗದು. ಹಣ್ಣು ಸವಿ ಎಂದಡೆ ವೃಕ್ಷದ ಶಾಖೆಯ ಸಂಗದಿಂದಲ್ಲದೆ ಬೆಳೆಯದು. ಲಿಂಗವನರಿತೆನೆಂದು ಶರಣರ ಸಂಗವ ಬಿಟ್ಟಡೆ ಅದು ಎದೆಯಲ್ಲಿ ನಿಂದ ನಂಜು ಕಾಣಾ ಭಂಗಿತನಾದವನೆ!"

ಸ್ವಾನುಭವ, ಸಮಯಾಚಾರಗಳಲ್ಲಿ ಯಾವುದು ಯಾವುದಕ್ಕೆ ಅಧೀನ? ಸ್ವಾನುಭವ ಸಮಯಾಚಾರಕ್ಕೆ ಅಧೀನವೆಂದರು ಜಂಗಮರು; ಸಮಯಾಚಾರ ಸ್ವಾನುಭವಕ್ಕೆ ಅಧೀನವೆಂದನು ಘಟ್ಟಿವಾಳಯ್ಯ. ಇದನ್ನು ಜಂಗವರು ಒಪ್ಪದಿರಲು,

> "ರೋಗಿಗೆ ಹಾಲು ಸಿಹಿಯಪ್ಪುದೆ? ಗೂಗೆಗೆ ರವಿ ಲೇಸಪ್ಪುದೆ?
> ಚೋರಂಗೆ ಬೆಳಗು ಗುಣವಪ್ಪುದೆ? ಭವಸಾಗರದ ಸಮಯದಲ್ಲಿದ್ದವಂಗೆ
> ನಿರ್ಭಾವನ ಭಾವವನೆತ್ತ ಬಲ್ಲರು? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ
> ಇಲ್ಲಾ ಎಂದೆ"

–ಎಂದು ಝುಂಕಿಸಿದನು.

ಈ ಸಂದರ್ಭದಲ್ಲಿ ಜಂಗಮರ ಆಹ್ವಾನವನ್ನೊಪ್ಪಿ ಘಟ್ಟಿವಾಳಯ್ಯ ಆ ಗುಂಡನ್ನೇ ತನ್ನ ಕರಸ್ಥಲದಲ್ಲಿ ಅಡಗಿಸಿಕೊಂಡನೆಂದೂ ಆಗ ಎಲ್ಲರೂ ಆತನಿಗೆ ಕ್ಷಮೆ ಬೇಡಿದರೆಂದೂ ಪ್ರಭುದೇವರು–

"ಅಂಗದ ಮೇಲಣ ಲಿಂಗಕ್ಕಿಂತ ಅಂಗದೊಳಣ ಲಿಂಗವ ಹಿಂಗದಂತಿರಬೇಕು–ಘಟ್ಟಿವಾಳಯ್ಯನಂತೆ" ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದರೆಂದೂ "ಕೂಡಲ ಚೆನ್ನ ಸಂಗಾ, ನಿಮ್ಮ ಶರಣ ಘಟ್ಟಿವಾಳನಲ್ಲದೆ ನೆರೆ ಅರಿವವರಾರೋ?" ಎಂದು ಚೆನ್ನಬಸವಣ್ಣನವರು ಹೊಗಳಿದರೆಂದೂ 'ನಿರಂತರ ಸಹಜ'ನೆಂದು ಬಸವಣ್ಣನವರು ಬಣ್ಣಿಸಿದರೆಂದೂ ಹೇಳಿದೆ. ಗುಂಡನ್ನು ಕರಸ್ಥಲದಲ್ಲಿ ಅಡಗಿಸಿದನೆಂಬುದಕ್ಕೆ ಅವುದೋ ಸಾಂಕೇತಿಕ ಅರ್ಥವಿರಬೇಕು. ಆ ಜಂಗಮರ ಕಠಿಣ ಗುಣಗಣವನ್ನು ತನ್ನ ಲಿಂಗಭಕ್ತಿಯಲ್ಲಿ ಅಡಗಿಸಿದನೆಂಬುದನ್ನು ಪ್ರತಿಮಾ ವಿಧಾನದಿಂದ ಹೇಳಿರಬೇಕು.

ಒಟ್ಟಿನಲ್ಲಿ ಘಟ್ಟಿವಾಳಯ್ಯನು ಅಂಗಗುಣಗಳಳಿದು ಲಿಂಗ ದೇಹಿಯಾಗಿದ್ದ ಶರಣನೆಂಬುದಕ್ಕೆ ಇದಿರು ಮಾತಿಲ್ಲ. ಜೀವಕ್ರಿಯೆಗಳೆಲ್ಲ ದೇವಕ್ರಿಯೆಗಳಾಗಿ ಪರಿವರ್ತಿತವಾಗಿದ್ದುವು ಅವನಲ್ಲಿ. ಕಾಯದ ಹಸ್ತದೊಳಗಣ ಲಿಂಗ, ಪ್ರಾಣನ ಹಸ್ತದೊಳಗಣ ಲಿಂಗ, ಭಾವಹಸ್ತದೊಳಗಣ ಲಿಂಗ–ಇವುಗಳ ಅನುಸಂಧಾನದಿಂದ ಅವಿರಳ ಪರಂಜ್ಯೋತಿಯಾಗಿಬಿಟ್ಟಿದ್ದ ಘಟ್ಟಿವಾಳಯ್ಯ.

ಅವನ ಪರಿಶುದ್ಧ ಆಚರಣೆಯನ್ನು ಕಂಡು ವೇಷಧಾರಿಗಳೂ ಮೀಸಲು ಭಕ್ತರಾದರು. ಕೊನೆಯವರೆಗೂ ತನ್ನ ನರ್ತನಕಾಯಕವನ್ನು ತಪ್ಪದೆ ನಡೆಸಿ, ಕಾಯಕದ

ಮೂಲಕ ಜನರ ನಡೆ ನುಡಿಗಳನ್ನು ತಿದ್ದಿ, ಶಿವಾಚಾರ ಪಥದಲ್ಲಿ ಶಿವನ ಮದಕರಿಯಂತೆ ನಿರ್ಭಯವಾಗಿ ನಡೆದು, ಅರಮನೆ–ಅರಣ್ಯ ಗುಡಿ–ಗುಂಡಾರ, ತಿಪ್ಪೆ–ಉಪ್ಪರಿಗೆ, ಕಲ್ಲು–ಕನಕ, ಬಡವ–ಒಡೆಯ, ಸಂಪತ್ತು–ವಿಪತ್ತು, ಮಾನಾಪಮಾನ. ಜಯಾಪಜಯಗಳೆಲ್ಲವನ್ನು ಸಮನಾಗಿ ಕಂಡು ನಿರ್ದ್ವಂದ್ವನಾಗಿ, ನಿತ್ಯ ಸತ್ವಸ್ಥನಾಗಿ ಸತ್ಯವನ್ನು ಸಾಧಿಸಿದವನು.

ಶರಣರ ಹಿರಿಮೆಯನ್ನು ಮರಣದಲ್ಲಿ ನೋಡೆಂದು ಹೇಳಿದೆ. ಒಂದು ದಿನ ಎಂದಿನಂತೆ ನರ್ತನ ಕಾಯಕಕ್ಕಾಗಿ ಹೊರಟ ಘಟ್ಟಿವಾಳಯ್ಯ ಹಿಂದಿರುಗಿ ಬರಲೇ ಇಲ್ಲ. ಕಾಯಕ ನಡೆಸುತ್ತಲೇ ಕಲ್ಯಾಣದ ಓಣಿಯೊಂದರಲ್ಲಿ ದೇಹವಿಟ್ಟ. ಈ ಸುದ್ದಿ ನಾನೀನೆನ್ನುವುದರೊಳಗಾಗಿ ಬಸವಣ್ಣನವರಿಗೆ ಮುಟ್ಟಿತು. ಅವರು ಶರಣರೊಡನೆ ಸಮಾಧಿಯ ಸಿದ್ಧತೆಯೊಡನೆ, ಅಲ್ಲಿಗೆ ಧಾವಿಸಿದರು. ಆದರೆ ಘಟ್ಟಿವಾಳಯ್ಯನು ಅಷ್ಟರಲ್ಲಿಯೇ ನಿರವಯ ಸಮಾಧಿಯನ್ನು ಹೊಂದಿಬಿಟ್ಟಿದ್ದನು. "ಸತ್ತು ಸಮಾಧಿಯಲ್ಲಿರಲಿಲ್ಲ; ಕಾಯವೆರಸಿ ಕೈಲಾಸಕ್ಕೆ ಹೋಗಲಿಲ್ಲ ; ನಿತ್ಯವಾದ ಚರಲಿಂಗ ಹಸ್ತದಲ್ಲಿಯೇ ನಮಗೆ ನಿರವಯ ನಿಜಸಮಾಧಿ. ಇದ ಮೀರಿದವರಿಗೆ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ" ಎಂಬುದು ಘಟ್ಟಿವಾಳಯ್ಯನ ಪ್ರೀತಿಯ ವಚನವಾಗಿದ್ದಿತು. ಅದೇ ಪ್ರಕಾರ ಜಂಗಮಹಸ್ತಸ್ಪರ್ಶವಾಗುತ್ತಲೆ ಅವರು ನಿರವಯ ಸಮಾಧಿಯನ್ನು ಪಡೆದು ಪ್ರಮಥಪುಂಗವರಲ್ಲಿ ಒಬ್ಬರಾದರು. ನಮಗಾಗಿ ತೇಜಸ್ವಿ ಜೀವನದ ಮಾದರಿಯೊಂದನ್ನೂ. ತೆಜೋರಾಶಿಗಳಂತಿರುವ ನೂರಾರು ವಚನಗಳನ್ನೂ ಬಿಟ್ಟು ಹೋಗಿರುವರು. ಇಷ್ಟೇ ಅಲ್ಲ, ಕಾಲಜ್ಞಾನವೊಂದನ್ನೂ ಬಿಟ್ಟು ಹೋಗಿರುವರು. ಇದೋ ಆಲಿಸಿ ಕೆಲವನ್ನು :

"ಹೊರಗಣ ಮಲತ್ರಯಕ್ಕೆ ಒಳಗಣ ಅರಿವ ನೀಡಾಡಲೇಕೆ?
ಅಲ್ಪ ಸುಖಕ್ಕೆ ಮಚ್ಚಿ ಕುಕ್ಕರನಂತೆ ಸಿಕ್ಕ ಸಾಯಲೇಕೆ,
ನಿಶ್ಚಯವಾಗಿ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗವನರಿಯ ಬಲ್ಲಡೆ?"
"ತನುವ ಮರೆಯಲೆಂದು ಗುರುವ ತೋರಿ,
ಮನವ ಮರೆಯಬೇಕೆಂದು ಲಿಂಗವ ತೋರಿ,
ಧನವ ಮರೆಯಬೇಕೆಂದು ಜಂಗಮವ ತೋರಿ,
ಲೇಸ ಮರೆದು ಕಷ್ಟಕ್ಕೆ ಕಡಿದಾಡುವ ಭಾಷೆಹೀನರ ಕಂಡು
ನಾಚಿಕೆಯಾಯಿತ್ತು ! ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ !"
"ಮೂರು ಬಿಟ್ಟವಂಗಲ್ಲದೆ ಸತ್ಯ ಸಾಗಿಸಬಾರದು.
ಆರ ಬಿಟ್ಟವಂಗಲ್ಲದೆ ಆಧರಿಸಬಾರದು.

ಎಂಟ ಬಿಟ್ಟವಂಗಲ್ಲದೆ ಸಾಕಾರದ ಕಂಟಕವನರಿಯಬಾರದು.
ರಣದಲ್ಲಿ ಓಡಿ ಮನೆಯಲ್ಲಿ ಬಂಟನಾಡುವನಂತೆ !
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂಬೆನು."
"ಏನೆಂದೆನಲಿಲ್ಲ, ನುಡಿದು ಹೇಳಲಿಕ್ಕಿಲ್ಲ,
ನಿಜದಲ್ಲಿರ್ದ ಬೆರಗು ಕುರುಹು ಅರಿವುದೆ?
ಅದು ತನ್ನಲ್ಲಿ ತಾನಿಲ್ಲ. ಏನೆಂದೆನಲಿಲ್ಲದ ಬಯಲು,
ಅಲ್ಲಿ ಏನನೂ ಅರಸಲಿಲ್ಲ. ಇದಿರಿಲ್ಲ, ತಾನಿಲ್ಲ,
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ !

■

# ಮರೆದು ಹಿಡಿದು ಅರಿದು ಬಿಟ್ಟ ಮೋಳಿಗಯ್ಯ ಮಹಾದೇವಿಯರು

ಏಳಿಸಿ ಭೋಗಪೂಗದನುರಾಗಮನುದ್ಗ ಶಿವಾನುಭಾವದೊಳ್
ಮೇಳಿಸಿ ಚಿತ್ತಮಂ ನಿಜಪದಾನತರಂ ಶಿವಭಕ್ತಿ ಭಾಗ್ಯದೊಳ್
ಬಾಳಿಸಿ ಕರ್ಮವಾಸನೆ ತೊಡಂಕದ ಪಾಂಗನಮರ್ಚುತಾಗಳುಂ
ಮೋಳಿಗೆ ಮಾರನೀಶ್ವರ ಕುಮಾರನಪಾಕೃತ ಮಾರನೊಪ್ಪಿದಂ

ಷಡಕ್ಷರದೇವ॥

ಜಗತ್ತಿನ ಎಲ್ಲ ರಮ್ಯ ಸ್ಥಾನಗಳನ್ನು ಹಿಂದುಳಿಸಲು ಪಂಚಭೂತಗಳು ಹೂಡಿದ ಸಂಚಿನಂತಿರುವ ನಿಸರ್ಗಸ್ವರ್ಗ ಕಾಶ್ಮೀರ. ಅದು ಸ್ವಯಂಭು ಸೌಂದರ್ಯದ ನಿಧಿ ನಿಕ್ಷೇಪ, ಇಳೆಯ ಸೊಬಗಿನ ಸೂರೆ ! ಕೇಶರ, ಕಸ್ತೂರಿ, ಕವಿತೆ, ಹೂವು, ಹಣ್ಣು, ಹೆಣ್ಣುಗಳ ಈ ನಾಡಿನ ಗಾಡಿಯನ್ನು, ಮೋಡಿಯನ್ನು ನೋಡಿಯೇ ಅನುಭವಿಸಬೇಕು. ವಸುಗುಪ್ತ ಉತ್ಪಲಾಚಾರ್ಯ ಶಂಕರಾಚಾರ್ಯರ ದಿವ್ಯಧ್ವನಿ ಪಡಿನುಡಿಯುತ್ತಲಿರುವ, ಕಲ್ಹಣಾದಿ ಕವಿಗಳ ಕವಿತೆ ನಿನದಿಸುತ್ತಲಿರುವ ಕಾಶ್ಮೀರದ ದರಿ ಕಂದರಗಳಲ್ಲಿ, ಗಿರಿಗುಹೆಗಳಲ್ಲಿ, ಕೊಳ್ಳ ಕಣಿವೆಗಳಲ್ಲಿ, ನದಿ ನಿರ್ಝರಗಳಲ್ಲಿ ಸೃಷ್ಟಿಯು ಒಮ್ಮೆ ರೂಪಸಿಯಾಗಿ, ಒಮ್ಮೆ ತಾಪಸಿಯಾಗಿ, ಒಮ್ಮೆ ಶಂಕರಿಯಾಗಿ, ಒಮ್ಮೆ ಭಯಂಕರಿಯಾಗಿ, ಒಮ್ಮೆ ಶ್ರೀಕರೆಯಾಗಿ, ಒಮ್ಮೆ ಭೀಕರೆಯಾಗಿ, ಒಮ್ಮೆ ತುಹಿನ ಮನೋಹರೆಯಾಗಿ, ಒಮ್ಮೆ ಗಹನಗಭೀರೆಯಾಗಿ, ಒಮ್ಮೆ ರೋಮಾಂಚನಕಾರಿಯಾಗಿ, ಒಮ್ಮೆ ಕಂಪನಕಾರಿಯಾಗಿ ಕಂಗೊಳಿಸುತ್ತಾಳೆ.

ಪಾಲ್ಕುರಿಕೆ ಸೋಮನಾಥ ಮಹಾಕವಿಯಿಂದ 'ಪ್ರಚ್ಛನ್ನ ರುದ್ರ, ಅವಿಚ್ಛಿನ್ನ ಕೀರ್ತಿ, ಸ್ವಚ್ಛ ಸದಾಚಾರ ಸಂಪತ್ ಪ್ರಪೂರ್ತಿ, ವಿಜಿತ ಕಾಮಕ್ರೋಧ ವಿಮಲ ಮಾನಸ, ನಿಜಗತಿ ಲಿಂಗೈಕ್ಯ ನಿಷ್ಠಾಪರ, ಮಂಗಳ ಚರಿತ, ಲಿಂಗ ಪದರ್ಥ, ಅಂಗವಿಕಾರದೂರೈಕವರ್ತನ, ಅವಿರಳ ತತ್ವಾನುಭವ ಸುಖಾಂಬೋಧಿ'ಯೆಂದು ಕೀರ್ತಿತನಾಗಿರುವ ಮೋಳಿಗೆಯ ಮಾರಯ್ಯ ಮೊದಲು ಕಾಶ್ಮೀರದ ಒಂದು ಭಾಗವಾಗಿದ್ದ 'ಸಪಾದಲಕ್ಷ' ಇಲ್ಲವೆ 'ಸವಾಲಕ್ಕ'ದ ದೊರೆಯಾಗಿದ್ದನೆಂಬುದಕ್ಕೆ ಅವನ

ಮತ್ತು ಅವನ ಸತಿ ಮಹಾದೇವಿಯ ವಚನಗಳಲ್ಲಿಯೇ ಆಧಾರಗಳು ದೊರೆಯುತ್ತವೆ.

'ಬಂದೆನಾ ಬಸವಣ್ಣನ ಕಥನದಿಂದ'

'ನಾನೇಕೆ ಬಂದೆ ಸುಖವ ಬಿಟ್ಟು? ಬಂದುದಕ್ಕೆ ಒಂದೂ ಆದುದಿಲ್ಲ'

'ಬಂದುದ ಕಂಡು ಎನ್ನ ಸಿರಿ ಉರಿಯೊಳಾಯಿತ್ತು'

ಎಂದು ಮಾರಯ್ಯನ ವಚನಗಳಲ್ಲಿಯೂ

"ಸಕಲದೇಶ ಕೋಶ ವಾಸ ಭಾಂಡಾರ ಸವಾಲಕ್ಷ ಮುಂತಾದ ಸಂಬಂಧ

ಸ್ತ್ರೀಯರ ಬಿಟ್ಟು ಬಂದೆನೆಂಬ ಕೈ ಕೂಲಿಯೆ ನಿಮ್ಮ ಭಕ್ತಿ?"

'ಸವಾಲಕ್ಷದಲ್ಲಿ ಹುಟ್ಟಿ ಸಕಲ ಕ್ರಮಂಗಳಲ್ಲಿದ್ದು ಭೋಗಿಸಿ...."

ಎಂದು ಮಹಾದೇವಿಯರ ವಚನಗಳಲ್ಲಿಯೂ ಪ್ರತ್ಯಕ್ಷವಾಗಿ ಆಧಾರ ದೊರೆತರೆ "ಆನೆ ಕುದುರೆ ಬಂಡಿ ಭಾಂಡಾರವಿದ್ದೊಡೇನೋ? ತಾನುಂಬುದು ಪಡಿಯಕ್ಕಿ" "ಸುಗಂಧವ ಕೊಡುವ ಮೃಗವೆಂದರೆ ನೋಯಿಸಿ ಬಂಧಿಸಿದರೆ ದುರ್ಗಂಧವಲ್ಲದೆ ಗಂಧ ಬಂದುದುಂಟೆ?" ಎಂಬ ಅರಸೊತ್ತಿಗೆಯ, ಕಸ್ತೂರಿಮೃಗದ ಉಲ್ಲೇಖವಿರುವ ಮಾರಯ್ಯನ ವಚನಗಳಲ್ಲಿ ಅಪ್ರತ್ಯಕ್ಷವಾಗಿ ಆಧಾರ ದೊರೆಯುತ್ತವೆ.

ಸಂಪ್ರದಾಯ ನಂಬಿದಂತೆ ಮಾರಯ್ಯನ ಮೊದಲಿನ ಹೆಸರು ಮಹಾದೇವ ಭೂಪಾಲ; ಮಹಾದೇವಿಯ ಮುನ್ನಿನ ಹೆಸರು ಗಂಗಾದೇವಿ. ಮಾಂಡವ್ಯಪುರ ರಾಜಧಾನಿ. ಅಲ್ಲಿ ಮಹಾದೇವಿ ಭೂಪಾಲ ಸುಖವಿಲಾಸ ಶಿವಭಕ್ತಿ ವಿಲಾಸಗಳ ಸಮನ್ವಯವನ್ನು ಸಾಧಿಸುತ್ತ ರಾಜ್ಯವಾಳುತ್ತಲಿದ್ದ. ಅವನಿಗೆ ಜಂಗಮರಲ್ಲಿ ನಿಷ್ಠೆ ಬಹಳ.ಗಂಗಾದೇವಿ ಪತಿಗೆ ತಕ್ಕ ಸತಿ. ಇಬ್ಬರೂ ಆರು ಸಾವಿರ ಜಂಗಮರ ಆರಾಧನೆಯನ್ನು ನಿತ್ಯ ನಡಸುತ್ತ ಭೋಗಯೋಗಗಳ ಹದವನ್ನರಿತು ಬಾಳುವೆ ಮಾಡುತ್ತಿದ್ದರು. ಇವರ ಜಂಗಮ ಭಕ್ತಿಯ ಬೆಳ್ಗಸವು ಕಲ್ಯಾಣದವರೆಗೂ ಹಬ್ಬಿತು.

"ನಿನ್ನನರಿವುದಕ್ಕೆ ಹೆಣ್ಣು ಹೊನ್ನು ಮಣ್ಣೆಂಬ ಸನ್ನೆಯ ತೊರೆಯ ಹಾಯಬೇಕು. ಆ ಮೂರನರಿವಲ್ಲಿ, ಮರೆದು ಹಿಡಿವಲ್ಲಿ, ಅರಿದು ಬಿಡುವಲ್ಲಿ, ಆ ಉಭಯದ ಒಡಲು ಹರಿದು ತೋರಿಕೆ ನಷ್ಟವಾಗಿ ನಿಂದವಂಗಲ್ಲದೆ ನಿನ್ನ ಚರಣದ ಬಾಗಿಲ ಬಾದಳವನೇರಬಾರದು. ಅದಕೆ ಸನ್ನೆಗಟ್ಟಿಗೆಯೆ ಚೆನ್ನ ನಿಃಗಳಂಕ ಮಲ್ಲಿಕಾರ್ಜುನ.

ಬಸವಣ್ಣನೇ ಹಸುಬೆಯ ಸೆಟ್ಟಿಯಾಗಿ ಕಾಶ್ಮೀರಕ್ಕೆ ಬಂದು ಈ ಆರು ಸಾವಿರ ಜಂಗಮರನ್ನು ಕೊಂಡೊಯ್ದನೆಂದು ಪುರಾಣಗಳು ವಾದಿಸುತ್ತವೆ. ಬಸವಣ್ಣನವರ ವ್ಯಕ್ತಿತ್ವದಲ್ಲಿದ್ದ ಗುರುತ್ವಾಕರ್ಷಣಶಕ್ತಿಯೇ ಅವರನ್ನು ಕಲ್ಯಾಣಕ್ಕೆ ಕರೆತಂದಿರಬಹುದೆಂದು ವಿವೇಕ ನಂಬುತ್ತದೆ.

ಅದೇನೇ ಇರಲಿ, ತಾವು ನಂಬಿದ್ದ ಆತು ಸಾವಿರ ಜಂಗಮರು ಒಮ್ಮೆಗೆ ಇಲ್ಲದಾಗಲು ಮಹಾದೇವ ಭೂಪಾಲ ಗಂಗಾದೇವಿಯರಿಬ್ಬರು ದಿಙ್ಮೂಢರಾದರೂ.ಅವರನ್ನು ಅರಸಲು ಎಲ್ಲ ಕಡೆಗೂ ಚಾರರನ್ನು ಅಟ್ಟಿದರು. ಅವರಲಲ್ಲಿ ಚೋತ ಚಿಕ್ಕಯ್ಯನೆಂಬ ಚಾರ ಕಲ್ಯಾಣಕ್ಕೆ ಹೋಗಿ ಜಂಗಮನ ವೇಷ ಹಾಕಿ ಬಸವಣ್ಣನವರ ಮಹಾಮನೆಯನ್ನು ಪ್ರವೇಶಿದ ದುರುದ್ದೇಶದಿಂದ.

'ಲಾಂಛನವ ಕಂಡು ನಂಗುವೆ. ಅವರಂತರಂಗವ ನೀವೇ ಬಲ್ಲಿರಿ, ತೊತ್ತಿಂಗೆ ತೊತ್ತುಗೆಲಸವಲ್ಲದೆ ಅರಸರ ಸುದ್ದಿ ಎಮಗೇಕಯ್ಯ? ರತ್ನಮೌಕ್ತಿಕದಚ್ಚು ಕೂಡಲಸಂಗಮದೇವಾ, ನಿಮ್ಮ ಶರಣರು' ಎಂದು ಚೆಂಗಳೆಯರಂತೆ, ದಾಸ ದುಗ್ಗಳೆಯರಂತೆ ನೆರೆ ನಂಬಿದ್ದ ಬಸವಣ್ಣನವರು ಈ ಕಪಟವೇಷದ ಜಂಗಮನನ್ನೇ ನಿಜವಾದ ಜಂಗಮನನ್ನು ಸತ್ಕರಿಸುವಂತೆ ಎದೆದುಂಬಿ ಸತ್ಕರಿಸಿದರು. ಚೋರ ಚಿಕ್ಕಯ್ಯನ ಸ್ಥಿತಿ ಪರುಷವನ್ನಪ್ಪಿದ ಕಾರ್ಬೊನ್ನಿನಂತಾಯಿತು. ಜ್ಯೋತಿಯನ್ನು ಮುಟ್ಟಿದ ಬತ್ತಿಯಂತಾಯಿತು. ಚೋರ ಹೋಗಿ ಚರಮೂರ್ತಿಯಾದ. ಅಣ್ಣನವರ ಅಡಿದಾವರೆಗಳಲ್ಲಿ ಧೊಪ್ಪನೆ ಕೆಡೆದು ಕ್ಷಮೆಯ ಭಿಕ್ಷೆ ಬೇಡಿಕೊಂಡ. ಶರಣರ ಬಳಗದಲ್ಲಿ ಸೇರಿಹೋದ.

ಮಹಾದೇವ ಭೂಪಾಲನಿಗಿದು ತಿಳಿಯಿತು. ಅವನ ಭವದ ಬಳ್ಳಿಯ ಬೇರು ಕಿತ್ತು ಹೋಯಿತು. ಅರಸೊತ್ತಿಗೆ, ಸಿರಿ, ಸುಖಭೋಗ–ಎಲ್ಲವೂ ಒಮ್ಮೆಗೆ ಬೇಡವಾಗಿಬಿಟ್ಟುವು. ಭೋಗದ ಮೇಲೆ ತ್ಯಾಗವು ವಿಜಯವನ್ನು ಪಡೆಯಿತು. ಮಗ ಲಿಂಗಾರತಿಗೆ ಪಟ್ಟಗಟ್ಟಿ ಕಲ್ಯಾಣಾಭಿಮುಖವಾಗಿ ಹೊರಟುಬಿಟ್ಟ. ಗಂಗಾದೇವಿಯೂ ರತ್ನಭರಣಗಳನ್ನು ತೆಗೆದಿಟ್ಟು ರುದ್ರಾಕ್ಷಿಗಳನ್ನು ಧರಿಸಿ, ಪೀತಾಂಬರವನ್ನು ತೆಗೆದಿಟ್ಟು ಎಳಗಾವಿಯನ್ನುಟ್ಟು ಪತಿಯೊಡನೆ ಹೊರಡಲು ಸಿದ್ಧಳಾದಳು.

> "ಸಂಪತ್ತು, ಸೌಖ್ಯ, ಸಂತೋಷಗಳನ್ನು ತೊರೆದು ನನ್ನೊಡನೆ ಬರುವಿ
> ಯೇಕೆ? ಮಗನೊಡನೆ ಸುಖವಾಗಿರು"
> ಎಂದು ಮಹಾದೇವ ಭೂಪಾಲ.
> "ಸುಧೆಯನು ಸವಿಯಲರಿಯದೆ ಕೆಚ್ಚಲ ಕಚ್ಚಿ
> ರುಧಿರವನೀಂಟುವುಣ್ಣಿಯೊಳು !
> ಸದಮಲ ಮುಕ್ತಿಯ ಸುಖಮಿರೆ ಬಿಟ್ಟು ಮಾ
> ಯದ ಸಿರಿಯಲ್ಲಿ ನಾನಿಹೆನೆ?"*

---

* ಕವಿ ಗೌರವಾಂಕ ವಿರಚಿತ ಮೋ. ಮಾ. ಪು. ಸಂ. ೫, ಸ. ೯.

ಯಾಜ್ಞವಲ್ಕ್ಯರಿಗೆ ಮೈತ್ರೇಯಿಯಿತ್ತ ಉತ್ತರದಂತಿದ್ದ ಗಂಗಾದೇವಿಯ ಈ ಉತ್ತರದಿಂದ ಮಹಾದೇವ ಭೂಪಾಲ ಮನದಲ್ಲಿಯೇ ಹಿಗ್ಗಿದನು. ಆದರೂ ಇನ್ನಷ್ಟು ಅವಳ ಚಿತ್ತವನ್ನು ಒರೆದು ನೋಡಬೇಕೆಂದೆಣಿಸಿ, 'ನಿನಗೆ ವಿರಕ್ತಿ ಹುಟ್ಟಿದುದೇ ನಿಜವಾದರೆ ನಡುಬೀದಿಯಲ್ಲಿ ನಿರ್ವಾಣವಾಗುವೆಯಾ' ಎಂದು ಕೇಳಿದನು. ಗಂಗಾದೇವಿ ಅದಕ್ಕೂ ಸಿದ್ಧಳಾದಳು. ಮಹಾದೇವಿ ಭೂಪಾಲ ಅದನ್ನು ತಡೆದು, 'ನಿನ್ನಿಂದೆನಗೆ ಮುಕ್ತಿ ಪಲ್ಲವಿಸುವುದು' ಎಂದು ಒಪ್ಪ ಅವಳೊಡನೆ ಕಲ್ಯಾಣಕ್ಕೆ ಹೊರಟನು. ಕುಸುಮದೊಡನೆ ಕಂಪು, ಹೊನ್ನಿನೊಡನೆ ಹೊಳಪು, ಶಬ್ದದೊಡನೆ ಅರ್ಥ ಕೂಡಿ ನಡೆವಂತೆ ಅವರಿಬ್ಬರೂ ಕಲ್ಯಾಣದತ್ತ ನಡೆದರು. ಅರಮನೆ, ರಾಜಧಾನಿ, ರಾಜ್ಯ, ರಾಜಭೋಗ ಒಂದೊಂದಾಗಿ ಹಿಂದುಳಿದುವು–ಇವರ ಆತ್ಮಗಳು ಮುಂದೆ ನಡೆದುವು. ದಾರಿಯಲ್ಲಿ ಮಹಾದೇವಿ ಭೂಪಾಲನ ಚಿಂತನೆ ಮಿಡಿಯಿತು–

"ಆನೆ ಕುದುರೆ ಬಂಡಿ ಭಂಡಾರವಿದ್ದಡೇನೋ,
ತಾನುಂಬುದು ಪಡಿಯಕ್ಕಿ ಒಂದಾವಿನ ಹಾಲು, ಮಲಗುವುದರ್ಧ ಮಂಚ.
ಈ ಹುರುಳಿಲ್ಲದ ಸಿರಿಯ ಮೆಚ್ಚಿ ಕೆಡಬೇಡ ಮನುಜಾ !"

ಅತ್ತ ಗಂಗಾದೇವಿಯರ ಮನದ ಭೃಂಗ ಹಾಡಿತು–

"ಸಂಸಾರ ಸಾಗರದಿಂದಲುದಿಸಿದ ಸುಖವೇ ದುಃಖವೆಂದರಿಯದೆ,
ಆ ಸುಖವನೇ ಮೆಚ್ಚಿ, ಭವದುಃಖವೆಂಬ ಕ್ರೂರ ಜನ್ಮ ಚಕ್ರಕ್ಕೀಡಾಗಿ,
ಅಲ್ಲಿ ತನ್ನ ಮರೆದು, ತನ್ನಗಿಲ್ಲದ ಭ್ರಮೆಯ ತನ್ನದೆಂದು,
ಅಂತಪ್ಪ ಘೋರದೊಳಗೋಲಾಡುತ್ತಿಪ್ಪ
ಅಜ್ಞಾನಿ ಜೀವಿಗಳು ನಿಮ್ಮನೆತ್ತ ಬಲ್ಲರಯ್ಯಾ
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ."

ಹೀಗೆ ದೇವೋನ್ಮಾದದ ನಿಬ್ಬೆರಗಿನಲ್ಲಿ ನಡೆದ ಆ ದಂಪತಿಗಳಿಗೆ ಕಾಶ್ಮೀರದಿಂದ ಕಲ್ಯಾಣದವರೆಗಿನ ದೂರದ ದಾರಿ ಹೇಗೆ ಮುಗಿಯಿತೆಂಬುದೇ ತಿಳಿಯಲಿಲ್ಲ. ಕಣ್ಣೆತ್ತಿ ನೋಡಿದಾಗ ಕಲ್ಯಾಣ ಕಂಗೊಳಿಸುತ್ತಿದ್ದಿತು–ಬಸವ ಕಲ್ಯಾಣ, ಬಸವನ ಬಳಗದ ಕಲ್ಯಾಣ ! ಕಂಡ ಕಣ್ಣು ಕೃತಾರ್ಥವಾದುವು. ಆನಂದ ಉಕ್ಕೇರಿ ಬಾಷ್ಪಬಿಂದುಗಳಾಗಿ ಹರಿಯಿತು. ಇಬ್ಬರೂ ಕಲ್ಯಾಣವನ್ನು ಪ್ರವೇಶಿಸಿದರು.

ಅನುಭವ ಮಂಟಪದಲ್ಲವರಿಗೆ ಅನುಪಮವಾದ ಸ್ವಾಗತ ದೊರೆಯಿತು.

ಸಿದ್ಧಾರ್ಥನು ತಾನೊಬ್ಬನೇ ರಾಜ್ಯತ್ಯಾಗ ಮಾಡಿದರೆ ಮಹಾದೇವ ಭೂಪಾಲ ಗಂಗಾದೇವಿಯರಿಬ್ಬರೂ ರಾಜ್ಯತ್ಯಾಗ ಮಾಡಿ ಲೌಕಿಕ ಜೀವನದಂತೆ ಪಾರಲೌಕಿಕ

ಜೀವನದಲ್ಲಿಯೂ 'ಗಂಡು ಹೆಣ್ಣುಗಳೆಂಡು ಗಂಡಭೇರುಂಡದೊಲು–ಎರಡು ಮುಖ, ಒಂದಾತ್ಮ'ವೆಂಬುದನ್ನು ನಿದರ್ಶಿಸಿದರು. ಬಸವಣ್ಣನವರಿಗಂತೂ 'ಸಾಸಿವೆಯ ಮೇಲೆ ಸಾಗರವನ್ನಿರಿಸಿ'ದಂತಾಯಿತು. ಅವರೂ ಅವರೊಡನೆ 'ಅಸಂಖ್ಯಾತ'ರೂ ಆನಂದದಿಂದ ನಲಿದಾಡಿದರು.

'ಅನುಭವ ಮಂಟಪ'ವು ಮಹಾದೇವ ಭೂಪಾಲನನ್ನು ಮೋಳಿಗೆಯ ಮಾರಯ್ಯನನ್ನಾಗಿ, ರಾಣಿ ಗಂಗಾದೇವಿಯನ್ನು ಮಹಾದೇವಿಯನ್ನಾಗಿ ಮಾರ್ಪಡಿಸಿತು. ಮಾರಯ್ಯನವರ ಪಾಲಿಗೆ ಮೋಳಿಗೆಯ, ಕಟ್ಟಿಗೆಯ ಹೊರೆಯ, ಸೌದೆ ತಂದು ಮಾರಿ ದಾಸೋಹ ಸಾಗಿಸುವ ಕಾಯಕ ಬಂದಿತು. ಅವರದನ್ನು ಆನಂದದಿಂದ ಅಂಗೀಕರಿಸಿದರು. ಆಶ್ಚರ್ಯ , ಪರಮಾಶ್ಚರ್ಯ : ಕಾಶ್ಮೀರದ ದೊರೆ ಕಟ್ಟಿಗೆ ಮಾರಿ ಬದುಕಲು ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದಿದ್ದಾನೆ ! 'ಮರ್ತ್ಯಕ್ಕೆ ಮಹವ ತಂದ ಬಸವಣ್ಣನ' ಮಹಾಕ್ರಾಂತಿಯ ಮನೋಜ್ಞವಾದ ಮಾದರಿಯಿದು.

ಕಲ್ಯಾಣದ ಕೊನೆಯೊಂದರಲ್ಲಿ ಸಣ್ಣ ಗುಡಿಸಲೊಂದು. ಅದರಲ್ಲಿ ಮಾರಯ್ಯ ಮಹಾದೇವಿಯರ ಶರಣ ಜೀವನ ಸಾಗಿದ್ದಿತು. ನಿತ್ಯವೂ ಹೊತ್ತಾರೆ ಎದ್ದು ಲಿಂಗಪೂಜೆಗೈಯ್ದು ವನಕ್ಕೆ ತೆರಳುತ್ತಿದ್ದ ಮಾರಯ್ಯ. ಅಲ್ಲಿ ವನಕ್ಕೆ ಕೈಮುಗಿದು,

'ಶಿವ ನಿಮಿತ್ತಾರ್ಥದ ಸಲೆವೃತ್ತಿಯೆನಗೆ
ಅಮಿತದಿಂ ಕಟ್ಟಿಗೆಯ ನಾನೊಯ್ವೆನೆಂದು
ಅಂಗರಕ್ಷಣೆಗಲ್ಲ ಹರಗಣರ ತೃಪ್ತಿಗೆ
ಮಂಗಲಾಕರ ನಿನಗೆ ಮುಂದೆ ದೊರೆಕುವುದು'

–ಶ.ಲೀ.ಸಂ. ೯ ಪ. ೧೦ ೧೧

ಎಂದು ಹಾಡಿ ಕಟ್ಟಿಗೆಯನ್ನು ಕಡಿದು ಹೊರೆ ಕಟ್ಟಿ ಹೊತ್ತು ತರುತ್ತಿದ್ದ. ಅದನ್ನು ಮಾರಿ ಬಂದ ಒಕ್ಕಳ ಭತ್ತದಿಂದ ಜಂಗಮಾರಾಧನೆ ನಡೆಸುತ್ತಿದ್ದ. ಆ ಭತ್ತದಿಂದ ಮಹಾದೇವಿ ಮಾಡುತ್ತಿದ್ದ ಅಂಬಲಿಯಲ್ಲಿ ಅಮೃತದ ರುಚಿಯಿರುತ್ತಿದ್ದಿತು. ಅದನ್ನು ಸವಿದ ಜಂಗಮರಿಗೆ ಬಸವಣ್ಣನವರ ಅರಮನೆಯ ರಸರಸಾಯನಗಳೆಲ್ಲ ಸಪ್ಪೆಯಾಗಿ ತೋರತೊಡಗಿದುವು. ಮಾದೇವ ಚೋಳರಾಜನ ರಾಜಾನ್ನವನ್ನುಳಿದು ಮಾದಾರ ಚನ್ನಯ್ಯನ ಅಂಬಲಿಯನ್ನು ಆಸೆಪಟ್ಟು ಸುರಿದಂತೆ ಜಂಗಮರೆಲ್ಲ ಬಸವರಸರ ಅರಮನೆಯ ರಸಾನ್ನಗಳನ್ನು ಮರೆತು ಮಾರಯ್ಯನ ಅಂಬಲಿ ಸವಿಯಲು ಮೇಲಾಡಿ ಬರತೊಡಗಿದರು.

ಬಸವಣ್ಣನವರು ಬೆರಗಾದರು ಸಹಜಭಕ್ತಿಯ ಸೀಮಾಪುರುಷರಾಗಿ ಮೆರೆಯ ತೊಡಗಿದ್ದ ಮಾರಯ್ಯನವರ, ನಿಜಭಕ್ತಿತರಂಗಿಣಿಯಾಗಿ ಶೋಭಿಸತೊಡಗಿದ್ದ ಮಹಾದೇವಿಯರ ಪಾವನತರವಾದ ಜೀವನವನ್ನು ಕಣ್ಣಾರೆ ಕಾಣಬೇಕೆಂಬಾಸೆ ಅಂಕುರಿಸಿತವರಿಗೆ. 'ಕಡವರದೊಳಗಣ ಭಕ್ತಿಶ್ರೀಯದು ಬಡತನದೊಳಗಣ ಬಕುತಿಯ ನೋಡಲು ಹೋದಂತೆ' ಮಾರಯ್ಯನವರ ಮನೆಗೆ ಹೋದರು. ವೇಷ ಮರೆಸಿಬಂದು ಅವರ ಹುಲುಗುಡಿಸಲ ಮುಂದೆ ನಿಂತು ನೋಡಿದರು–ಸಪಾದಲಕ್ಷ ರಾಜ್ಯವನ್ನು ತೃಣೀಕರಿಸಿ ಬಂದ ರಾಜರಾಣಿಯರಿಬ್ಬರೂ ಆ ಪುಟ್ಟ ಪರ್ಣಶಾಲೆಯಲ್ಲಿ ಪರಮಾನಂದದೊಡನೆ ಜೀವಿಸುತ್ತಿರುವುದನ್ನು ನೋಡಿ ಅವರು ಹೃದಯ ತುಂಬಿ ಬಂದಿತು.

"ಈ ಸದನಮಂ ನೋಡಿದಾತನ
ದೋಸವೆಲ್ಲಂ ಸುಟ್ಟು ಹೋಗದೆ
ಈ ಸದನದೊತ್ತಿನಲಿ ಚರಿಸುವವಂ ಕೃತಾರ್ಥನಲಾ !
ಈ ಸದನ ಸೀಮೆಯೊಳಗೊಸೆದಿರು
ವಾಶ್ರಿಸುವ ಜೀವಿಗಳ ಭಾಗ್ಯವ
ದೇಸೊ ಈ ಗೃಹರೇಣು ಸಿಕ್ಕಿದವಂಗಹುದು ಮುಕ್ತಿ !"

–ಬ. ಪು.ಕಾಂಡ ೫೮, ಸಂ. ೨೯, ಪ. ೧೬

ಎಂಬ ಉದ್ಗಾರ ಅವರ ಶ್ರೀಮುಖದಿಂದ ಹೊರಬಿದ್ದಿತು.

ಮರುಕ್ಷಣದಲ್ಲಿಯೇ ಬೆರಗು ಕೊರಗಾಗಿ ಮಾರ್ಪಟ್ಟಿತು. 'ಇಂಥ ರಾಜ ದಂಪತಿಗಳು ಇಂಥ ಬಡತನದ ಬಾಳನ್ನು ಬಾಳಬೇಕೆ?' ಎಂದು ಬಸವಣ್ಣನವರು ಮಮ್ಮಲ ಮರುಗಿದರು. ವೇಷ ಮರೆಸಿ ಬಂದು ಮಾರಯ್ಯನವರು ವನಕ್ಕೆ ಹೋಗಿದ್ದ ಹೊತ್ತಿನಲ್ಲಿ ಮಹಾದೇವಿಯರಿಗೆ ಬೆಸಗೊಂಡರು,

"ತಾಯೆ, ನಮ್ಮ ಲಿಂಗದೇವನು ಹಸಿದಿದ್ದಾನೆ;
ಮನೆಯೊಳಗುಳ್ಳುದನ್ನೇ ಗಡಣಿಪುದು."

ಮಾತಾಯಿ ಮಹಾದೇವಿಯರು ಹಿರಿ ಹಿರಿ ಹಿಗ್ಗಿದರು. ಅಗ್ಗವಣಿ ಕೊಟ್ಟು, ಮಣೆಹಾಕಿ ತಾವು ತಮ್ಮ ಅಮೃತ ಹಸ್ತದಿಂದ ಮಾಡಿದ್ದ ಅಂಬಲಿಯನ್ನು ಬಡಿಸಿದರು. ಅದನ್ನು ಸೇವಿಸಿದ ಬಸವಣ್ಣನವರ ಆನಂದಕ್ಕೆ ಎಲ್ಲೆಯೇ ಇಲ್ಲದಂತಾಯಿತು. ಮಹಾಶರಣರ ಮನೆಯ ಪ್ರಸಾದವದು. ಅದು ಭವರೋಗಕ್ಕೆ ದಿವ್ಯೌಷಧ, ಅದು ಭಕ್ತಿಯ ಬೆಳಸು, ನಿಜಪದದ ನೆಲೆವನೆ, ಪುಣ್ಯದ ಪುಂಜ....

ಮನದಲ್ಲಿ ಈ ವಿಚಾರಲಹರಿ ಮುಂದುವರಿಯುತ್ತಿರುವಂತೆಯೇ ಅಣ್ಣನವರ ಆರೋಗಣೆ ಮುಗಿಯಿತು. ಮಾತಾಯಿ ಮಹಾದೇವಿಯವರಿಗೆ ಮತ್ತೆ ಮತ್ತೆ ಶರಣೆಂದು ಅವರಿಗೆ ಗೊತ್ತಾಗದಂತೆ ಮಜ್ಜನಶಾಲೆಯೊತ್ತಿನಲ್ಲಿ ಎರಡು ಸಾವಿರ ಹೊಂಗಳ ಎರಡು ಜಾಳಿಗೆಗಳನ್ನು ಮರೆಮಾಡಿಟ್ಟು ಹೊರಟುಹೋದರು ಶರಣಜನಸುಭೂಜ ಬಸವಣ್ಣನವರು.

ಹೊತ್ತಿನರಸ ನೆತ್ತಿಯ ಮೇಲೆ ಬಂದಾಗ ಕಟ್ಟಿಗೆಯ ಹೊರೆ ಹೊತ್ತು ಮಾರಯ್ಯ ಮನಗೆ ಬಂದ. ಮಹಾದೇವಿ ಕಾಲು ತೊಳೆಯಲು ನೀರು ಕೊಟ್ಟು ಎಂದಿನಂತೆ ಪತಿಯನ್ನು ಪ್ರಫುಲ್ಲವದನಳಾಗಿ ಸ್ವಾಗತಿಸಿದಳು. ಮಾರಯ್ಯ ಸ್ನಾನ ಮಾಡಿ ಶುಚಿರ್ಭೂತನಾಗಿ ಲಿಂಗಾರ್ಚನೆಗೆ ಕುಳಿತು. ಮಜ್ಜನಶಾಲೆಯೊತ್ತಿನಲ್ಲಿದ್ದ ಹೊನ್ನು ಜಾಳಿಗೆಗಳು ಕಂಡುವು.

“ಇವೇನು? ಎಲ್ಲಿಂದ ಬಂದುವು? ಯಾರು ಕೊಟ್ಟರು?'
'ನಾನರಿಯೇ ನಾಥ, ನೀವಿಲ್ಲದಾಗ ಅಯ್ಯಗಳೊಬ್ಬರು ಬಂದು
ಲಿಂಗಾವಸರ ಮಾಡಿ ಹೋದರು. ಅವರಾರೋ ನಾನರಿಯೆ'
'ಇನ್ನಾರು? ಅಣ್ಣನವರೇ ಬಂದಿರಬೇಕು. ನಾವು ಬಣಗು ಭಕ್ತರೆಂದು
ಹಣವನಿರಿಸಿ ಹೋಗಿರಬೇಕು. ನಮ್ಮ ಲಿಂಗಯ್ಯನಿತ್ತ ಕಾಯಕ
ನಮಗಿರಲು ಈ ಹೊಲೆ ಹೊನ್ನು , ಹಣ ಹದ್ದು ನಮಗೇಕೆ?
ಅಣ್ಣನವರಿಗಿಷ್ಟು ತಿಳಿಯಬಾರದೆ? ತಮ್ಮಲ್ಲಿ ಹೊನ್ನಿದೆಯೆಂದು
ಕಾಯಕಕ್ಕೆ ಅಪಮಾನವೆಸಗಬೇಕೆ?'

'ಅವರ ಉದೇಶ ಆದಾಗಿರಲಿಕ್ಕಿಲ್ಲ ನಾಥ. ಅಣ್ಣನವರು
ಭಕ್ತರ ಬಂಧುಗಳು, ಅನಿಮಿತ್ತ ಬಂಧುಗಳು.
ಶಿವಭಕ್ತರ ನೋವೇ ಲಿಂಗದ ನೋವೆಂದು ನಂಬಿ ನಡೆದಿರುವ ಅವರಿಗೆ
ನಮ್ಮ ಬಡತನದ ಬಾಳನ್ನು ನೋಡಿ ಕನಿಕರವೆನಿಸಿರಬೇಕು.'

'ಅಲ್ಲಯೇ ತಪ್ಪಿದೆ ಮಹಾದೇವಿ ! ಬಡತನ, ಒಡೆತನಗಳ ಭ್ರಾಂತಿ
ಬಸವಣ್ಣನವರಿಗೂ ಬಿಡಬಾರದೆ? ಯಾರು ಬಡವರು?
ಯಾರು ಒಡೆಯರು? ದುಡಿಯಲಾಗದವರು ಒಡೆಯರಾಗಿದ್ದರೂ
ಬಡವರೇ; ದುಡಿಯುವವರು ಬಡವರಾಗಿದ್ದರೂ ಒಡೆಯರೇ !
ಇದು ಕಾಯಕ ತತ್ತ್ವ. ಅಣ್ಣನವರಿಗೆ ಇದರ ಮರವೆಯಾಗದಂತೆ

ಮಾಡಬೇಕು. ಹೊರಗೆ ಯಾರಾದರೂ ಜಂಗಮಪುಂಗವರು
ಹೋಗುತ್ತಿರುವರೋ ನೋಡು."

ಮಹಾದೇವಿ ಹೊರಗೆ ನೋಡಿ,

**"ಇಬ್ಬರು ಜಂಗಮರು ಹೋಗುತ್ತಲಿದ್ದಾರೆ."**

ಮಾರಯ್ಯ ಆ ಜಂಗಮರಿಬ್ಬರನ್ನು ಕರೆದುತಂದನು. ಅವರಿಗೆ ಆರೋಗಣೆ ಮಾಡಿಸಿ ಒಬ್ಬೊಬ್ಬರಿಗೆ ಒಂದೊಂದು ಹೊನ್ನಜಾಳಿಗೆಯಿತ್ತು ಕಳಿಸಿಕೊಟ್ಟನು. ಅಲ್ಲಿಗೇ ಬಿಡಲಿಲ್ಲ. ಬಸವಣ್ಣನವರ ಅರಮನೆಗೆ ಹೋಗಿ ಅಲ್ಲಿದ್ದ ಜಂಗಮರನ್ನೆಲ್ಲ ಆರೋಗಣೆಗೆ ಆಮಂತ್ರಿಸಿದನು. ಮೋಳಿಗೆಯ್ಯನ ಮನೆಯ ಅಂಬಲಿಯ ಅಮೃತದ ರುಚಿಯನ್ನರಿತಿದ್ದ ಅವರೆಲ್ಲ ಆನಂದದಿಂದ ಬಂದರು. ಮೋಳಿಗೆಯ್ಯ ಅವರಿಗೆಲ್ಲ ಅಂಬಲಿ ಉಣಿಸಿ ಅವರ ಪಾದೋದಕವನ್ನು ತಾನು ತಂದಿದ್ದ ಕಟ್ಟಿಗೆಯ ಹೊರೆಯ ಮೇಲೆ ಸಿಂಪಡಿಸಿದನೆಂದೂ, ಅದರಿಂದ ಆ ಕಾಷ್ಠಗಳೆಲ್ಲ ಕನಕ ದಂಡಗಳಾದುವೆಂದೂ ಮೋಳಿಗೆಯ್ಯ ಅವುಗಳನ್ನು ತುಂಡು ತುಂಡಾಗಿ ಕತ್ತರಿಸಿ ಒಬ್ಬೊಬ್ಬರಿಗೆ ಒಂದೊಂದು ತುಂಡು ಕೊಟ್ಟು ಕಳಿಸಿದನೆಂದೂ ಇದನ್ನು ಕೇಳಿ ಬಸವಣ್ಣನವರು ತಮ್ಮ ತಪ್ಪು ತಿಳಿದವರಾಗಿ ಮೋಳಿಗಯ್ಯನಲ್ಲಿಗೆ ಓಡಿಬಂದು 'ಮಾರಾರಿಗೆ ಧನುವಾಗುತೆ ಬಾಗಿದ ಮೇರುವಿನಂದದಿ' ಬಾಗಿ ಕನಕವಿರಾಗಿ ಕಾಯಕಯೋಗಿ ಮಾರಯ್ಯನಿಗೆ ತಮ್ಮ ತಪ್ಪನ್ನು ಮನ್ನಿಸುವುದೆಮದು ಮೊರೆಯಿಟ್ಟರೆಂದೂ ಮೋಳಿಗಯ್ಯ ಅಣ್ಣನವರನ್ನು ಅಪ್ಪಿ 'ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು. ಒಡವೆ, ಬಡೆತನ, ಬೇಡುವವ, ಕೊಡುವವ ಎಂಬ ಭಾವ ಸಹಿತ ಬರಲಾರದು ಭಕ್ತನಾದವಂಗೆ. ಶಿವನ ಸೊಮ್ಮು, ಎಂದು ಕಾಯಕದ ಗುಟ್ಟನ್ನು ತಿಳಿಸಿಕೊಟ್ಟನೆಂದೂ ಮೋಳಿಗಯ್ಯನ ಬಗ್ಗೆ ಬರೆದಿರುವ ಎಲ್ಲ ಪ್ರಾಚೀನ ಕವಿಗಳೂ ಬರೆದಿದ್ದಾರೆ. ಮೋಳಿಗಯ್ಯನವರು ಆ ಎರಡೂ ಹೊನ್ನು ಜಾಳಿಗೆಗಳನ್ನು ಕಸವೆಂದು ಎಸೆದುಬಿಟ್ಟರೆಂದೂ ಅನೇಕ ದಿನಗಳವರೆಗೆ ಅವು ಅವರ ಮನೆಯ ಮುಂದೆ ಬಿದ್ದಿದ್ದುವೆಂದೂ ಕೆಲವೆಡೆ ಹೇಳಿದೆ.

'ಕಾಷ್ಠವು ಕನಕದಂಡವಾಗುವುದು ಸಾಧ್ಯವೆ?' ಎಂಬ ಶಂಕೆಗೆ 'ಶ್ರದ್ಧೆಯಿದ್ದರೆ ನಂಬು; ಇಲ್ಲದಿದ್ದರೆ ಬಿಡು' ಎಂಬುದೇ ಉತ್ತರ. ಈ ಪವಾಡ ನಡೆದಿರಬೇಕು ಎಂಬುದಕ್ಕೆ ಮಾರಯ್ಯನವರ ವಚನಗಳಲ್ಲಿಯೇ ಅಂತಸ್ಥ ಆಧಾರ ದೊರೆಯುತ್ತದೆ.

"ಬಡವನೆಂದು ನಿಮ್ಮವರು ನಿಧಾನವನೀವರಯ್ಯಾ !
ನಾ ಬಡವನಾದಡೆ ನೀ ಬಡವನೆ ಎನ್ನ ನಿಃಕಳಂಕ ಮಲ್ಲಿಕಾರ್ಜುನಾ?"

"ಇಂತಪ್ಪ ಮಹಾ ಪ್ರಣಮಂಗಳೇ ಬಸವಣ್ಣನಾಗಿ, ಆ ಬಸವಣ್ಣನೆ

ಮಹಾ ಪ್ರಣಮಂಗಳಾಗಿ, ತನ್ನ ಮಠಕ್ಕೆ ತಾನೇ ಬಂದು ಭಕ್ತಿವಸ್ತುವನಿತ್ತಡೆ
ಇವನಾನು ನಿಃಕಳಂಕ ಮಲ್ಲಿಕಾರ್ಜುನನ ಭಕ್ತರಿಗಿತ್ತು ಬದುಕಿದೆನಯ್ಯಾ"

ಎಂಬ ವಚನಗಳಲ್ಲಿ ಬಸವಣ್ಣನವರು ಮಾರಯ್ಯನವರ ಮನೆಗೆ ಬಂದು, ಅವರು ಬಡವರೆಂದು ಕನಿಕರಿಸಿ ಹೊನ್ನನ್ನು ಬಿಟ್ಟು ಹೋದುದೂ ಅದನ್ನವರು ಜಂಗಮರಿಗಿತ್ತು ಬಿಟ್ಟುದೂ ಧ್ವನಿವಾಗುವುದಿಲ್ಲವೆ?

".....ನಾ ಹೊತ್ತ ಕಟ್ಟಿಗೆಯ ಸರಬು ಮತ್ತೆ ಸುವರ್ಣ ದಂಡವಾದಾಗ ಅದಾರ ನಿಶ್ಚಯದ ವಿಶ್ವಾಸ? ಅವು ತಮ್ಮ ಚಿತ್ತದ ದೃಢತೆಯಿಂದ"




**ಬಸವಣ್ಣನವರು ತಮ್ಮ ತಪ್ಪು ತಿಳಿದವರಾಗಿ ಓಡೋಡಿ ಬಂದು ಮನ್ನಿಸುವಂತೆ ಮೊರೆಯಿಟ್ಟರು**

"ಎನ್ನ ಕಾಯಕದ ಕಾಷ್ಠ ಚಿನ್ನವಾದಲ್ಲಿ, ಮತ್ತಾವಾವ ಗುಣ ಅವಗುಣ

ಹಿಂಗಿ ಲೇಸಾದಲ್ಲಿ ಅದು ತನ್ನಯ ವಿಶ್ವಾಸದಿಂದ"

ಎಂಬ ಮಾರಯ್ಯನವರ ವಚನಗಳಲ್ಲಿ.

"ಕಾಷ್ಠವ ಸುವರ್ಣವ ಮಾಡಿದೆನೆಂಬ ಘಾತುಕತನವೇ ನಿಮ್ಮ ಭಕ್ತಿ?"

ಎಂಬ ಮಹಾದೇವಿಯಮ್ಮನವರ ವಚನದಲ್ಲಿ ಕಾಷ್ಠವನ್ನು ಹೊನ್ನಾಗಿಸಿದ ಘಟನೆ ಪ್ರತಿಧ್ವನಿತವಾಗುವುದಿಲ್ಲವೆ?

ಚೋರ ಬಸವ ಪುರಾಣ, ಮೋಳಿಗಯ್ಯನ ಪುರಾಣಗಳು ಮಾರಯ್ಯನವರು ಬೇರೆ ಪವಾಡಗಳನ್ನೂ ಮೆರೆದರೆಂದು ತಿಳಿಸುತ್ತವೆ. ಆದರೆ ಮಾರಯ್ಯನವರ ಮೇಲ್ಮೆನಿಂತಿರುವುದು ಪವಾಡಗಳ ಮೇಲಲ್ಲ, ಅವರ ಸತ್ಯಶುದ್ಧ ನಿತ್ಯನಿರ್ಮಲ ಜೀವನದ ಮೇಲೆ. ಕಾಶ್ಮೀರದ ಅರಸನಾದವನು ಕಲ್ಯಾಣಕ್ಕೆ ಬಂದು ಕಟ್ಟಿಗೆಯ ಹೊರೆ ಮಾರಿ ಶರಣಜೀವನವನ್ನು ಸಾಗಿಸಿದುದು, ಕನ್ನಡವನ್ನು ಕಲಿತು ಕನ್ನಡ ಸಾಹಿತ್ಯದಲ್ಲಿ ಶಾಶ್ವತವಾಗಿ ನಿಲ್ಲಬಲ್ಲ ವಚನಗಳನ್ನು ರಚಿಸಿದುದು, ಬಸವಣ್ಣನವರ ಹೊನ್ನಿನ ಹಂಗಿಗೂ ಒಳಗಾಗೆನೆಂದು 'ತನ್ನ ಸುಬುದ್ಧಿಯಿಂದ, ಸುಕಾಯಕದಿಂದ ಗುರುಲಿಂಗ ಜಂಗಮಕ್ಕೆ ತನು ಮನ ಧನವ ಸವೆಯಿಸಿ ಚಿತ್ತಶುದ್ಧನಾಗಿರುವೆ' ವ್ರತವನ್ನು ಕೈಕೊಂಡು ಕೊನೆಗಾಣಿಸಿದುದು, "ಇಂದಿಂಗೆ ನಾಳಿಗೆಂದು ಸಂದೇಹವ ಮಾಡಿದಡೆ ಲಿಂಗಕ್ಕೆ ದೂರ, ಜಂಗಮಕ್ಕೆ ಸಲ್ಲ, ಪ್ರಸಾದವಿಲ್ಲ. ಇದಕ್ಕೆ ಗೆಲ್ಲ ಸೋಲಬೇಡ–ನಿಃಕಳಂಕ ಮಲ್ಲಿಕಾರ್ಜುನ ಲಿಂಗವೇ ಸಾಕ್ಷಿ'ಯೆಂದು ನಿತ್ಯ ತೃಪ್ತಿಯ ನಿರಾಡಂಬರ ಜೀವನವನ್ನು ಸಾಗಿಸಿದುದು, ಮನದಾಶೆಯ ಬಿಟ್ಟು ರೋಷವ ಕಿತ್ತು, ಮಹದಾಶ್ರಿತನಾಗಿ, ನಾನೆಂಬುದ ತಾನರಿದು, ನಾನೀನೆಂಬ ಉಭಯವೇನೇನೆಂದರಿಯದೆ ತಾನು ತಾನಾಗಿ 'ಅಪರವನರಿತೆನೆಂದು ಪರಮನಬಿಡದೆ, ನಿಃಕ್ರಿಯವನರಿತೆನೆಂದು ಕ್ರಿಯೆಯ ಬಿಡದೆ' ಭಕ್ತಿಯಿಂದ ಜ್ಞಾನವನ್ನೂ ಜ್ಞಾನದಿಂದ ವೈರಾಗ್ಯವನ್ನೂ ವೈರಾಗ್ಯದಿಂದ ನಿಜದ ನಿಶ್ಚಯವನ್ನೂ ಗಳಿಸಿ, 'ಬಂದುದನು ಇಲ್ಲವೆನ್ನದೆ ಬಾರದುದು ಬಯಸದೆ, ಉಣಬಂದವರಿಗಿಕ್ಕಿ ಬೇಡ ಬಂದವರಿಗೆ ಕೊಟ್ಟು ಅಂಬಲಿಯನ್ನೇ ಅಮೃತವನ್ನಾಗಿಸಿ ಆನಂದದ ಅರವಟ್ಟಿಗೆಯನ್ನಿರಿಸಿ, 'ಸಕಲರೊಳು ತನುಗೂಡಿ ವಿಕಸಿತನಾಗಿ' ಚಿನ್ಮಯನಲ್ಲಿ ತನ್ಮಯರಾದುದೂ, 'ಪ್ರಕೃತಿಯೆಂಬ ಕುಂಭಕ್ಕೆ ಹೊರಗಾಗಿ ನಿಜ ನಿಜಗೂಡಿದ ಬೆಳಗಾಗಿ ನಿಃಕಳಂಕ ಮಲ್ಲಿಕಾರ್ಜುನ ಲಿಂಗದಲ್ಲಿ ತುಂಬಿ ಇಂಬಾಗಿ' ಹೋದುದೂ ಪವಾಡಗಳಲ್ಲಿ ಪವಾಡವಲ್ಲವೆ? ಅವರ ಜೀವನವೇ ಅದ್ಭುತರಮ್ಯ ಪವಾಡ !

ನಾಯ್ಯನಿಷ್ಠುರ, ದಾಕ್ಷಿಣ್ಯಪರ ನಾನಲ್ಲ. ಲೋಕವಿರೋಧಿ ಶರಣನಾರಾರಿಗೂ ಅಂಜುವವನಲ್ಲ'ವೆಂದರು ಬಸವಣ್ಣನವರು. ದೂರಯ್ಯನವರೀಮಾತಿಗೆ ಮೂರ್ತಿಮಂತ ನಿದರ್ಶನ. ಅವರು ಕಠೋರ ಆದರ್ಶವಾದಿಗಳು. ಆದರ್ಶಕ್ಕೆ ಕಿಂಚಿತ್ತಾದರೂ ವಿರೋಧವಾಗಿ ವರ್ತಿಸುವವರನ್ನು ಅವರೆಂದೂ ಕ್ಷಮಿಸರು. ತಮ್ಮನ್ನೂ ಕ್ಷಮಿಸುರು–ತಮ್ಮಲ್ಲಿ ದೋಷ ತಲೆಯೆತ್ತಿದರೆ.

"ತನ್ನಲ್ಲಿ ಬಂದ ಗುಣದೋಷವ ಅನ್ಯರು ನುಡಿದರೆಂದು ಭಿನ್ನವ ಮಾಡಿ ನೋವನ್ನಕ್ಕ ಭಕ್ತಂಗೆ ಸತ್ಯವಿಲ್ಲ, ವಿರಕ್ತಂಗೆ ಜ್ಞಾನವಿಲ್ಲ. ನಾನು ಇವನಾಡಿನೊಂದುಹರೆಂಬ ಭಾವ ಎನಗಿಲ್ಲ. ಕಣ್ಣಿನೊಳಗಣ ಕಸ, ಕಾಲೊಳಗಣ ಮುಳ್ಳು ಅವ ಬಗೆಯಿಂದ ಹೋದರದು ಲೇಸು–ನಿಃಕಳಂಕ ಮಲ್ಲಿಕಾರ್ಜುನ" ಎಂಬುದವರ ಜೀವನ ಸೂತ್ರ. ಎಂತಲೇ 'ಬಸವಣ್ಣಂಗೆ ಎನ್ನ ನಿವೇದಿಸಿದೆನಾಗಿ ಉಭಯವೆಂಬುದು ಇಲ್ಲವಾದೆ, ನಿರಾಲಂಬದಲ್ಲಿ ನಿಜವಾಸಿಯಾಗಿರ್ದೆನಯ್ಯ 'ನಿಮ್ಮ ಶರಣ ಪ್ರಭುವಿನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನಯ್ಯ' 'ಗುರುಸ್ಥಲ ಸಂಗನ ಬಸವಣ್ಣನಾದ, ಲಿಂಗಸ್ಥಲ ಚೆನ್ನಬಸವಣ್ಣನಾದ, ಜಂಗಮಸ್ಥಲ ಪ್ರಭುವಾಗಿ ಬಂದ' ಎಂದು ಸುತ್ತಿಸಿದ ಮಾರಯ್ಯನವರೇ "ಮಹಾಮನೆಯ ಮಾಡಿ ಕೆಟ್ಟ ಬಸವಣ್ಣ ; ಹೇಳಿ ಕೆಟ್ಟ ಚೆನ್ನಬಸವಣ್ಣ; ಉಂಡಿಹೆನೆಂದು ಗರ್ವದಲ್ಲಿ ಕುಳಿತು ಕೆಟ್ಟ ಪ್ರಭುದೇವರು...ಇವರೆಲ್ಲ ಆಡುವ ಅಂದಣಗಿತ್ತಿಯ ಮನೆಯ ಉಂಬಳಿಕಾರರಾದರು!" ಎಂದು ಖಂಡಿಸದಿರಲಿಲ್ಲ. ಹಾಗಾದರೆ ಅವರಿಗೆ ತಿಳಿ ಹೇಳಿ ದಾರಿಗೆ ತರಲಿಲ್ಲವೇಕೆ? ಮಾರಯ್ಯನವರ ಉತ್ತರವಿದು :

"ಬಯಲು ಬತ್ತಲೆಯಾದಡೆ ಹೊದ್ದಿಸುವರಿನ್ನಾರೋ?
ಏರಿ ನೀರು ಕುಡಿದಡೆ ಬಿಡಿಸುವರಿನ್ನಾರೋ?
ಮಹಾಮೇರು ನಡೆವಡೆ ಪಥಕ್ಕೆ ಇಂಬುಗೊಡುವರಿನ್ನಾರೋ?
ಅರಿದವ ಮರೆದವನಾದಡೆ ಅರಿವ ಹೇಳುವರಿನ್ನಾರೋ?
ನಿಮ್ಮ ನಿಜವ ನೀವೇ ಬಲ್ಲಿರಿ, ನಿಃಕಳಂಕ ಮಲ್ಲಿಕಾರ್ಜುನ !"

ದಿವ್ಯಪಥದಲ್ಲಿ ನಡೆವಾಗ ಎಡಹದಿರುವುದು ಸಾದ್ಯವಿಲ್ಲ. ಎಡಹಿದೆವೆಂದು ನಡೆವುದನ್ನೇ ನಿಲ್ಲಿಸಲಾಗುದು. 'ಉಪೇಕ್ಷೆಯಿಂದ ಉರಿವ ಬೆಳಗು ಪವನನ ಪ್ರಳಯಕ್ಕೆ ಒಳಗು' ಉಪೇಕ್ಷೆಯಿಲ್ಲದೆ ನಿರಪೇಕ್ಷೆಯಿಂದ ಉರಿವ ಸ್ವಯಂಜ್ಯೋತಿಯಾಗಿ ನಡೆಯಬೇಕು; ನಿಹಿತಾಚಾರಂಗಳಲ್ಲಿ ನಿರತನಾಗಿ ಕಾಯದ ಕರ್ಮ, ಜೀವನದ ಭಾವ, ಜ್ಞಾನದ ಒಳಗನರಿಯಬೇಕು; ಲಕ್ಷ್ಮಿಯ ಮನೆಯ ತೊತ್ತಿನ ತೊತ್ತಾಗದೆ, 'ಮುಯ್ಯ ಬಂಧುಗಳಂತೆ ಬಡ್ಡಿಯಾಶೆಗೆ ಕೊಟ್ಟ ಲುಬ್ಧನಂತೆ' ಕೈಲಾಸದಾಸೆಗಾಗಿ

ಕೈ ಕೂಲಿಯ ಭಕ್ತಿ ಮಾಡದೆ, ಒಂದನರಿದು, ಮೂರಮರೆದು, ಐದು ಹರಿದು, ಆರಮೆಟ್ಟಿ, ಎಂಟನೀಂಟಿ, ಅರಿದು ಪರಂಜ್ಯೋತಿ ಪ್ರಕಾಶವಾಗಿ ಬೆಳಗಬೇಕು. ಹೀಗೆ ಬೆಳಗಿದರು ಮಾರಯ್ಯನವರು.

ಮಹಾದೇವಿಯವರು? ಅವರೂ ಹೀಗೆಯೇ ಬೆಳಗಿದರು ! ಮಾರಯ್ಯ ಮಹಾದೇವಿಯರ ದಾಂಪತ್ಯಶುಭಕ್ಕೆ ಶೋಭೆ ಸೇರಿದಂತೆ ಶಿವಕ್ಕೆ ಶಕ್ತಿ ಸಮ್ಮಿಲಿತವಾದಂತೆ, ಪ್ರಕಾಶಕ್ಕೆ ಮಾಧುರ್ಯ ಬೆರೆದಂತೆ ಮಂಗಲಮಯವಾಗಿದ್ದಿತು. ಮಾರಯ್ಯನ ಪುಣ್ಯದ ಪುಂಜ ಮಹಾದೇವಿಯಮ್ಮ. ಅವರಿಬ್ಬರೂ ಕಾಮನ ಕಾಲುದೊತ್ತಾಗಿ ಬಾಳಿ ಕಾಲನ ಬಾಯಿದುತ್ತಾಗಿ ಸತ್ತವರಲ್ಲ; ಲಿಂಗಸುಖ ಪ್ರಸಾದದ ಪರಮಾನಂದ ಪರಿಣಾಂ ಪಯೋನಿಧಿಯೊಳಗೋಲಾಡಿದ ಆತ್ಮ ಹಂಸಗಳು.

'ಭಕ್ತಿ ಜ್ಞಾನ ಕ್ರಿಯೆಯ ಮಾಟಂಗಳಲ್ಲಿ ಚಿತ್ತಶುದ್ಧವಿಲ್ಲದ ಸತಿಯಾದರೂ ಒಲ್ಲೆ, ಪುತ್ರ ಬಂಧುಗಳಾದರೂ ಒಲ್ಲೆ' 'ಹೀಗಿರು ಎಂದರೆ ಹಾಗಿರದಿದ್ದರೆ ಅವಳು ಸತಿಯಲ್ಲ, ನಾನು ಪತಿಯಲ್ಲ' ಎಂದು ನಿಷ್ಠುರವಾದಿಗಳಾದ ಮಾರಯ್ಯನವರಿಂದಲೇ, 'ಎನ್ನ ಭಕ್ತಿಗೆ ನೀ ಶಕ್ತಿಯಾದ ಕಾರಣ, ಎನ್ನ ಸತ್ಯಕ್ಕೆ ನೀ ಸತಿಯಾದ ಕಾರಣ ಎನ್ನ ಸುಖ ದುಃಖ ನಿನ್ನ ಸುಖ ದುಃಖ. ಅನ್ಯವಿಲ್ಲ–ಇದಕ್ಕೆ ಭಿನ್ನಭೇದವೇನು ಹೇಳಾ ನಿಃಕಳಂಕ ಮಲ್ಲಿಕಾರ್ಜುನ?' ಎಂದು ಹೊಗಳಿಸಿಕೊಳ್ಳಬೇಕಾದರೆ ಮಹಾದೇವಿಯಮ್ಮನ ಮಹವನಿಂಬುಗೊಂಡ ನಿಲವನ್ನೇನು ಬಣ್ಣಿಸುವುದು?

'ಮಾರಯ್ಯನ ಭಕ್ತಿಗೆ ಶಕ್ತಿಯಾಗಿ, ಆವರ ಸತ್ಯಕ್ಕೆ ಸತಿಯಾದ ಮಹಾದೇವಿಯಮ್ಮನವರು., 'ನಿಮ್ಮ ಭಕ್ತಿ ಸೂತ್ರದಿಂದ ಎನ್ನ ಸ್ತ್ರೀಜಾಗಿ ನಿಮ್ಮ ನಿಃಕಳಂಕ ಮಲ್ಲಿಕಾರ್ಜುನನೆಂಬವರು ನೀವೇ' ಎಂದು ಪತಿಯೆದುರು ಆತ್ಮನಿವೇದವ ಮಾಡಿದುದರಲ್ಲಿ ಅಚ್ಚರಿಯೇನು? 'ನೀನಷ್ಟವಾದಲ್ಲಿ ಎನ್ನ ಭಾವ ನಷ್ಟ. ಭಾವ ನಷ್ಟವಾದಲ್ಲಿ ಎನ್ನಯ್ಯನಿಲ್ಲ. ನೀನು ಪ್ರಿಯನಲ್ಲ. ಇಮ್ಮಡಿ ದೇವನಲ್ಲ. ನಿಃಕಳಂಕ ಮಲ್ಲಿಕಾರ್ಜುನನೆಂಬ ಭಾವ ಎಲ್ಲಿ ಅಡಗಿತ್ತೆಂದರಿಯೆ' ಎಂದು ಸಮರಸದ ಸಂಗೀತ ಹಾಡಿದ್ದರೆ ಸೂಜಿಗವೇನು?

"ಜ್ಞಾನಸಿಂಧು ಸಂಪೂರ್ಣವಾಗಿ ನಿನ್ನರಿವಿನ ಗುಡಿಯ ಬಾಗಿಲ ತೆರೆದೊಮ್ಮೆ ತೋರಾ !" ಎಂದು ಬೇಡಿದ ಮಹಾದೇವಿಯರು ಕೊನೆಯ ದಿನಗಳಲ್ಲಿ ತಮ್ಮ ಪತಿಗೇ ಅರಿವಿನ ಗುಡಿಯ ಬಾಗಿಲ ತೆರೆದು ತೋರಿದರು. ಆಗ ಮಾರಯ್ಯನವರನ್ನು ಎದುರಿಸಿದ ಪ್ರಶ್ನೆಯಿದು–

"ಊರು ಕೆಟ್ಟು ಸೂರಿಯಾಡುವಲ್ಲಿ ಅರಿಗಾರೂ ಇಲ್ಲ !
ಬಸವಣ್ಣ ಸಂಗಮಕ್ಕೆ, ಚೆನ್ನಬಸವಣ್ಣ ಉಳುವಿಗೆ , ಪ್ರಭು ಕದಳಿಗೆ,

> ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ತಮ್ಮ ಲಕ್ಷ್ಯಭಾವಕ್ಕೆ ಮುಕ್ತಿಯನೆಯ್ದಿಹರು!
> ನನಗೊಂದು ಬಟ್ಟೆಯ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ !"
> ಹೌದು," ಎನಗೆ ಮರ್ತ್ಯದ ಮಣಿಹ ಕೃತ್ಯವಿನ್ನೆಷ್ಟು ದಿನ ಹೇಳಾ !"
> "ನಿಮಗೆ ಮರ್ತ್ಯದ ಮಣಿಹ ಕೃತ್ಯವಿನ್ನೆಷ್ಟು ಪರಿಯಂತರ?
> ಎನಗೆ ಕಟ್ಟುಗುತ್ತಿಗೆಯೆ? ನಾ ಕಟ್ಟಿಗೆಯ ಹೊತ್ತು
> ಶಿವಭಕ್ತರ ಮನೆಗೆ ನೀವು ಕೊಟ್ಟ ಕಾಮಕದ ಕೃತ್ಯ
> ಇನ್ನೆಷ್ಟು ದಿನ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ !"

ಹೌದು, ಇನ್ನೆಷ್ಟು ದಿವಸ ಈ ಮರ್ತ್ಯದ ಮಣಿಹ? ಎಂದಿಗೆ ಇದರಿಂದ ಮುಕ್ತಿ? ಬಸವ ಸಂಗಮಕ್ಕೆ, ಚೆನ್ನಬಸವಣ್ಣ ಉಳುವೆಗೆ, ಪ್ರಭು ಕದಳಿಗೆ.... ನಾನು? ಅಯ್ಯೋ, ನಾನು? ನಾನೆಲ್ಲಿಗೆ? ನನಗೆಲ್ಲಿ ನೆಲೆ? 'ಎನಗಂದಂದಿಂಗೆ ನೂರಿಪ್ಪತ್ತು ಸಂದಿತ್ತು.' 'ಅಲ್ಲಿಗೆ ಹೊಲಬ ಕಾಣದೆ ಇಲ್ಲಿಗೆ ನೆಲೆಯು ಕಾಣದೆ' ತಲ್ಲಣಗೊಂಡಿರುವುದು ಎಲ್ಲಿಯವರೆಗೆ?.....'

> ಮಹಾದೇವಿಯ ಮಧುರವಾಣಿ ಉತ್ತರವೀಯುತ್ತದೆ :
> "ಬೆಳಗಿನ ಮುಖದಿಂದ ಬೆಳಗಿನ ಕಳೆಯನರಿವಂತೆ ನಿನ್ನಿಂದ ನೀನೆ ತಿಳಿ
> ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಭಿನ್ನಭಾವವಿಲ್ಲದೆ!"
> ಮಾರಯ್ಯನ ಮಾರುತ್ತರವಿದು–
> "ಮರ್ತ್ಯವೆಂಬುದು ನಾಬಲ್ಲನ್ನಕ್ಕ ಕರ್ಕಶದ ಜಗ. ಇದು ಕಾರಣದಲ್ಲಿ
> ಕೈಲಾಸದ ಬಟ್ಟೆಯನರಸಬೇಕು. ಎನ್ನ ಸತ್ಯಕ್ಕೆ, ಎನ್ನ ಭಕ್ತಿಗೆ, ಎನ್ನ
> ಮನಕ್ಕೆ, ಎನ್ನ ಮುಕ್ತ್ಯಾಂಗನೆ, ಎನ್ನ ನಿಶ್ಚಯಕ್ಕೆ ಒಂದು ಗೊತ್ತ
> ತೋರಾ ! ನಿಃಕಳಂಕ ಮಲ್ಲಿಕಾರ್ಜುನನು ಎಲ್ಲಿಹನು ಹೇಳಾ !

ಮಹಾದೇವಿಯ ಮಹಾನುಭಾವದ ಉತ್ತರವಿದು–

"ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದೆಹೆನೆಂಬುದು ಕೈಕೂಲಿ....ಸಕಲ ದೇಶ ಕೋಶವಾಸ ಭಾಂಡಾರ ಸವಾಲಕ್ಷ ಮುಂತಾದ ಸಂಬಂಧ ಸ್ತ್ರೀಯರ ಬಿಟ್ಟು ಬಂದೆನೆಂಬ ಕೈಕೂಲಿಯೆ ನಿಮ್ಮ ಭಕ್ತಿ?...ಕೂಟಕ್ಕೆ ಕುರುಹಾದುದನರಿಯದೆ, ಆತ್ಮಕ್ಕೆ ಅರಿವಾದುದನರಿಯದೆ, ಕೈಲಾಸವೆಂಬ ಸೂತ್ರದ ಒಳಗಿಗೆ ಮನಸೋತಿರಲ್ಲಾ !.... ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆ ಎನಲೇತಕ್ಕೆ? ಪರುಷ ಕೈಯಲ್ಲಿದ್ದು ಕೂಲಿಯ ಮಾಡಲೇತಕ್ಕೆ? ನಿತ್ಯ ಅನಿತ್ಯವ ತಿಳಿದು ಮರ್ತ್ಯ ಕೈಲಾಸವೆಂಬುದು ಭಕ್ತರಿಗೆ ಮುಕ್ತಿಯಲ್ಲ!.... ಅಲ್ಲಿ ಇಲ್ಲಿ ಎಂಬ ಗೆಲ್ಲ ಗೂಳಿತನ ಬೇಡ !....ಎನ್ನಯ್ಯ ಪ್ರಿಯ

ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಅಲ್ಲಿ ಇಲ್ಲಿ ಎಲ್ಲಿಯೂ ತಾನೆ ! .... ಆತ್ಮ ನಿಶ್ಚಯವಾದಲ್ಲಿಯೇ ಕೈವಲ್ಯ ! ತತ್ವವನರಿದಲ್ಲಿಯೇ ಬಳಗು. ಈ ಗುಣ ಸರಮಲ ಭಕ್ತನ ಮುಕ್ತಿ–ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಲಂಕ ಮಲ್ಲಿಕಾರ್ಜುನ ನಿಕ್ಕಿದ ಗೊತ್ತು!"

ದಿವ್ಯಜ್ಞಾನಿ ಮಹಾದೇವಿಯ ನುಡಿಗಳು ಮಾರಯ್ಯನೆದೆಯ ಮರವೆಯ ನೆಲವನ್ನು ಬಗೆದು ನಿಜಾನುಭೂತಿಯ ನಿಕ್ಷೇಪವನ್ನು ಹೊರದೆಗೆದುವು. ಅವನ ಆತ್ಮದ ಝೇಂಕಾರ ವಾಯುಮಂಡಲದಲ್ಲಿ ನಿನದಿಸಿತು :

"ಕಾಯ ಸಮಾಧಿಯನೊಲ್ಲೆ, ನೆನಹು ಸಮಾಧಿಯನೊಲ್ಲೆ !
ಕೈಲಾಸವೆಂಬ ಭವಸಾಗರವನೊಲ್ಲೆ !
ಎನ್ನ ಅಲ್ಲಿಗೆ ಇಲ್ಲಿಗೆ ಎಂದೆಳೆಯದೆ ನಿನ್ನಲ್ಲಿ ಕೂಟಸ್ಥನ ಮಾಡು
ನಿಃಕಳಂಕ ಮಲ್ಲಿಕಾರ್ಜುನ !

ಇದಕ್ಕೆ ಮಹಾದೇವಿಯ ಎದೆಯ ಇಂಚರ ಮಾರ್ದನಿಗೊಟ್ಟಿತು :

"ಕ್ರಿಯಾಪೂಜೆ ಒಡಲಾದ ಮತ್ತೆ ಪೂಜಿಸಲಿಲ್ಲ;
ಜ್ಞಾನನೇತ್ರ ಮುಸುಕು ತೆಗೆದ ಮತ್ತೆ ಏನುವ ನೋಡಲಿಲ್ಲ;
ಧ್ಯಾನವು ನಿಧಾನಿಸಿ ನಿಂದ ಮತ್ತೆ ಏನುವ ನೆನೆಯಲಿಲ್ಲ...
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ
ಕ್ರಿಯಾ ನಿರ್ವಾಹ ಸ್ಥಲ"

ಎಲ್ಲರೂ ಎಲ್ಲೆಲ್ಲೋ ಹೋದರೂ ಕಲ್ಯಾಣಕ್ಕೆ ಹತ್ತಿರದಲ್ಲಿಯೇ ಗವಿಯೊಂದರಲ್ಲಿದ್ದು, ಸಕಲದಲ್ಲಿ ಅಳಿದು ನಿಃಕಲದಲ್ಲಿ ಉಳಿದ ಈ ಶರಣ ದಂಪತಿಗಳ ಮೇಲಣ ಆತ್ಮಗೀತಗಳು ಬಯಲ ಬಸಿರಿನಲ್ಲಿ ಲಯವಾಗುತ್ತಿರುವಂತೆ ಅವರ ಆತ್ಮಗಳೂ ವಿಶ್ವಾತ್ಮನಲ್ಲಿ ಲೀನವಾದುವು. ಆ ಗೀತಗಳನ್ನಾಲಿಸಿ ಮೋಳಿಗಯ್ಯನ ಕೊನೆಯ ಕಟ್ಟಿಗೆಯ ಹೊರೆ ಕೊನರಿತು. ಇಂದಿಗೂ ಅದು ಕಾಯಕದ ಕಲ್ಪವೃಕ್ಷದಂತೆ ಕಂಗೊಳಿಸುತ್ತಲಿದೆ ಮಾರಯ್ಯನ ಗವಿಯ ಮುಂದೆ–ಕಲ್ಯಾಣಕ್ಕೆ ಪೂರ್ವದಲ್ಲಿ ಹನ್ನೆರಡು ಮೈಲಿಗಳ ಮೇಲೆ! ಇಂದಿಗೂ ಆಲಿಸುವ ಲಾಲಸೆಯುಳ್ಳವರ ಕಿವಿಗಳಿಗೆ ಅವರಿಬ್ಬರ ಅಮರವಾಣಿ ಅಮೃತದಾಯಿನಿಯಾಗಿ ಕೇಳಿಸುತ್ತಿದೆ–

"ಅಂಬು ಇಲ್ಲದಿದ್ದರೆ ಅಂಬುಜವನಾರು ಬಲ್ಲರು?
ನೀರಿಲ್ಲದಿದ್ದರೆ ಹಾಲನಾರು ಬಲ್ಲರು?
ನಾನಿಲ್ಲದಿದ್ದಡೆ ನಿನ್ನನಾರು ಬಲ್ಲರು?
ನಿನಗೆ ಎನಗೆ ಬೇರೊಂದೆಡೆಯುಂಟೆ, ನಿಃಕಳಂತ ಮಲ್ಲಿಕಾರ್ಜುನ?"

"ತಾನಳುದು ಮತ್ತೆ ತಾನಾದುದ ಕಂಡೆ ;
ತಾನಾಗಿ ಮತ್ತೆ ಅಳಿದುದ ಕಂಡೆ ;
ಏನೂ ಇಲ್ಲದೆ ನೀನಾಗಿ ಮತ್ತೆ ನಾನಾದುದ ಕಂಡೆ–
ನಿಃಕಳಂಕ ಮಲ್ಲಿಕಾರ್ಜುನ ಲಿಂಗದಲ್ಲಿ ನಿಶ್ಚಿಂತನಾಗಿ !"
"ನುಡಿದ ನುಡಿ ಎಲ್ಲವು ಮಹಾಪ್ರಸಂಗವಾದ ಮತ್ತೆ
ಲೆಖ್ಖವಿಲ್ಲದ ವೇದ, ಸಂಖ್ಯೆ ಇಲ್ಲದ ಶಾಸ್ತ್ರ, ಕಡೆನಡು ಮೊದಲಿಲ್ಲದ
ಪುರಾಣವನೋದಲೇತಕ್ಕೆ?.....ಬೆಳಗಿನ ಮುಖದಿಂದ
ಬೆಳಗಿನ ಕಳೆಯನರಿವಂತೆ ನಿನ್ನಿಂದ ನೀನೆ ತಿಳಿ
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನ
ಭಿನ್ನಭಾವವಿಲ್ಲದೆ."

■

# ಆಸೆಯ ಜೈಸಿದ ಆಯ್ದಕ್ಕಿ ಮಾರಯ್ಯ ಲಕ್ಕಮ್ಮರು

ಅನುಭವ ಮಂಟಪದಲ್ಲಿ ಒಮ್ಮೆ ಆಯ್ದಕ್ಕಿ ಮಾರಯ್ಯನ ಮಿನುಗುವ ಮಾತು ಜ್ಯೋತಿಸಿತು :

"ಕಾಯಕದಲ್ಲಿ ನಿರತನಾದರೆ ಗುರುದರುಶನವಾದರೂ ಮರೆಯಬೇಕು;
ಲಿಂಗ ಪೂಜೆಯಾದಡೂ ಮರೆಯಬೇಕು ;
ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು ;
ಕಾಯಕವೆ ಕೈಲಾಸವಾದ ಕಾರಣ, ಅಮರೇಶ್ವರ ಲಿಂಗವಾಯಿ
ತ್ತಾದಡೂ ಕಾಯಕದೊಳಗು !"

ಕೇಳಿದವರ ಕಿವಿ ನಿಮಿರಿದುವು ; ಪ್ರಾಣ ಪುಲಕಿತವಾಯ್ತು ; ಮೈಯಲ್ಲಿ ಮಿಂಚಿನ ಸಂಚಾರವಾದಂತಾಯಿತು ! ನಿಜ, ಕಾಯಕದ ಬಗ್ಗೆ ಸುಳಿವ ಶಾಸನವಾಗಬಲ್ಲ ವಚನವಿದು. ಇನ್ನೇನು, ಪ್ರಭುದೇವರ ಅಂಗೀಕೃತಿಯ ಮುದ್ರೆಯಿದಕ್ಕೆ ಬಿದ್ದು ಹೋಗುವುದು–ಎಂದೆಣಿಸಿದರು ಎಲ್ಲರೂ.

ಆದರೆ ಪ್ರಭುದೇವರ ಪರಿಯೇ ಬೇರೆ. ಅವರ ಒರೆಗಲ್ಲಿಗೆ ಹತ್ತಿ ಅಚ್ಚಳಿಯದೆ ಉಳಿದು ಬರುವ ಎಂಟೆರ್ದೆ ಯಾರಿಗೆ?

'ಕಾಯಕಕ್ಕೆ ಪಟ್ಟಗಟ್ಟಲು ಕಾರಣ ಮಾರಯ್ಯನವರೆ?' ಎಂದು ಕೇಳಿಯೇ ಬಿಟ್ಟಿರು ಪರಂಜ್ಯೋತಿ ಪ್ರಭುದೇವರು. ಅಧೀರರಾಗದೆ ಮಾರಯ್ಯನವರು ಮಾರುತ್ತರವಿತ್ತರು :

"ಗುರುಲಿಂಗ ಜಂಗಮದಲ್ಲಿ ಬೆರಸಿ ದಾಸೋಹವ ಮಾಡುವಲ್ಲಿ, ಹೊನ್ನು ಹೆಣ್ಣು ಮಣ್ಣು ಇವೆ ಮೂಲ ಮೊದಲು. ಮಾಟ ಸ್ವಸ್ಥವಾದಲ್ಲಿ ಮೂರ ಮರೆಯಬೇಕು. ಅಮರೇಶ್ವರ ಲಿಂಗವನರಿವುದಕ್ಕೆ."

"ಮಾಟಸ್ವಸ್ಥವಾಗುವ ಪರಿಯಾವುದು ಮಾರಯ್ಯ? ಕಂಗಳ ಮುಂದಣ ಗೊತ್ತ ಹರಿದು, ಕಾವ್ಯದ ಮುಂದಣ ಚಿತ್ತವ ಹರಿದು, ಮಾಡಿಹೆನಂಬ ಮಾಟಕೂಟದ ಚಿತ್ತನಿಂದಲ್ಲದೆ ಸ್ವಸ್ಥವಿಲ್ಲ"

ಎಂದು ಮರು ಪ್ರಶ್ನೆಯೊಡ್ಡಿದರು ಪ್ರಭುದೇವರು.

ಮಾರಯ್ಯನೂ ಜಗ್ಗಲಿಲ್ಲ. 'ಕಾಯಕದಲ್ಲಿ ನೆಲೆಗೊಂಡ ಮನಸ್ಸನ್ನು ಮತ್ತೊಂದಕ್ಕೆ ಮರುಳಿಸುವುದೆಂದರೇನು?' ಅವನ ಮನಸ್ಸಿದನ್ನು ಒಪ್ಪಲಿಲ್ಲ. "ಒಂದ ಬಿಟ್ಟು ಒಂದ ಕಂಡಿಹೆನೆಂದರೆ ಅದು ಕಾಣಬಾರದ ಬಯಲು. ಒಂದರಲ್ಲಿ ಸಲೆಸಂದು ಹಿಂಗದ ಭಾವ ನೆಲೆಗೊಂಡಲ್ಲಿ ಅಮರೇಶ್ವರ ಲಿಂಗವು ತಾನೆ" ಎಂದು ನಿವೇದಿಸಿಕೊಂಡ. ತಟಿಲ್ಲತೆಯಂತೆ ತಲೆದೋರಿತು ಪ್ರಭುದೇವರ ಮರು ಮಾತು –

> "ಮಾಡಿಹೆ ಮಾಡಿಹೆನೆಂಬನ್ನಬರ ತನ್ನ ಅವಧಿಗೆ ಬಂದುದನರಿವಪರಿ
> ಇನ್ನೆಂತೂ? ಅಗಳ ನೀರಡಿಸಿ ನಿಂದಂತೆ ಆಗಬೇಡ–ಗುಹೇಶ್ವರಲಿಂಗ
> ವನರಿವುದಕ್ಕೆ ಮಾರಯ್ಯ !"

ನೀರಲ್ಲಿ ನಿಂತು ನೀರಡಿಕೆಯೆಂಬ ಅಗಸನಂತಾಗದಿರು ಎಂದು ಎಚ್ಚರಿಸಿದ ಪ್ರಭುದೇವರಿಗೆ ಮಾರಯ್ಯ ಮಣಿಯದೆ ಮತ್ತೆ ಉತ್ತರವಿತ್ತ

> "ತೊಟ್ಟು ಬಿಡದನ್ನಕ್ಕ ಮತ್ತಾಬುಡದಾಸೆ ಬೇಕು. ಮರ್ತ್ಯದ ಹಂಗು
> ಳ್ಳನ್ನಕ್ಕ ಸತ್ಯಶರಣರ ಸಂಗ, ನಿತ್ಯ ಜಂಗಮಸೇವೆ ಕೃತ್ಯವಿರಬೇಕು–
> ಅಮರೇಶ್ವರಲಿಂಗವನರಿವುದಕ್ಕೆ."

ಪ್ರಭುದೇವರು ಮಾರಯ್ಯನ ಮತಿಗಂಟಿದ ಡೊಂಕನ್ನು ತಿದ್ದುತ್ತ ಹೇಳಿದರು–

"ಮಾಡುವ ಮಾಟದಿಂದವೆ ಬೇರೊಂದನರಿಯಬೇಕು. ಅರಿವಿಂಗೆ ನೆಮ್ಮುಗೆ ಒಡಗೂಡಬೇಕು. ಅರಿವಿಂಗೆ ನೆಮ್ಮುಗೆ ಒಡೆಗೂಡಿದ ಬಳಿಕ ಬಯಲ ಭ್ರಮೆಯ ಕಳೆದು ನಮ್ಮ ಗುಹೇಶ್ವರಲಿಂಗದಲ್ಲಿ ನಿಜಪದವ ನೈದುವುದು ಮಾರಯ್ಯ"

ಮಾಟ ಮಾಟಕ್ಕೆ ನಿಲ್ಲಬಾರದು; ಕಾಯಕ ಕೇವಲ ಕಾಯಕವಾಗಿ ಉಳಿಯಬಾರದು. ಮಾಟದಿಂದಲೇ ಬೇರೋಂದನರಿಯಬೇಕು; ಕಾಯಕ ಅರಿವಿನತ್ತ ಕರೆದೊಯ್ಯಬೇಕು. ಅಲ್ಲಿಗೂ ಮುಗಿಯಲಿಲ್ಲ–ಆ ಅರಿವು ನೆಮ್ಮುಗೆಯನ್ನು ಒಡಗೂಡಿ ಬಯಲ ಭ್ರಮೆಯನ್ನು ಕಳೆಯಬೇಕು. ಆಗ ನಿಜಪದ ಸಾಧ್ಯ.

"ಮಾಟ–ಅರಿವು–ನೆಮ್ಮುಗೆ; ಮಾಟ–ಅರಿವು–ನೆಮ್ಮುಗ..." ಈ ಮೂರು ಮಾತುಗಳನ್ನು ಮೆಲುಕು ಹಾಕತೊಡಗಿತು ಮಾರಯ್ಯನ ಮನ. ಈ ಮೂರು ಮಾತುಗಳಲ್ಲಿ ಮೂರು ಲೋಕಗಳು ಅಡಗಿವೆಯೆನಿಸಿತು ಮಾರಯ್ಯನಿಗೆ. ಮನದ ತಿಮಿರ ಮೆಲ್ಲಮೆಲ್ಲನೆ ಸರಿದು, ಪ್ರಭುವಿನ ಪ್ರಸಾದವಾಣಿಯ ಪ್ರಭೆಯು ಅಲ್ಲಿ ಪಸರಿಸುತ್ತಿರುವಂತೆ ತೋರಿತವನಿಗೆ. ಇನ್ನೂ ಎಷ್ಟು ಹೊತ್ತು ಹಾಗೆಯೇ ಮನಮಗ್ನಯೋಗದಲ್ಲಿ ಕುಳಿತಿರುತ್ತಿದ್ದನೋ–ಮಡದಿ ಲಕ್ಕಮ್ಮ ಮೆಲ್ಲನೆ ಎಚ್ಚರಿಸಿದಳು–

"ಕಾಯಕ ನಿಂದಿತ್ತು ಏಳಯ್ಯ ಎನ್ನಾಳ್ದನೆ ! ಭಾವಶುದ್ಧವಾಗಿ ಮಹಾ ಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು ನಿಶ್ಚೈಸಿ ಮಾಡಬೇಕು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ಬೇಗ ಹೋಗಿ ಮಾರಯ್ಯ !"

ಅಹುದು, ಪ್ರಭುದೇವರು ನಿರೂಪಿಸಿದ ಮೂರು ಮಾತುಗಳಲ್ಲಿ ಮಾಟವೇ ಮೊದಲನೆಯದು. ಮಾಟದಿಂದ ಅರಿವು, ಅರಿವಿನಿಂದ ನೆಮ್ಮಗೆ, ನೆಮ್ಮಗೆಯಿಂದ ಭ್ರಮೆಯ ನಿರಸನ, ಭ್ರಮೆಯ ನಿರಸನದಿಂದ ನಿಜಪದ ಪ್ರಾಪ್ತಿ ! ಮಾರಯ್ಯನೆದ್ದನು– ಶರಣರ ಮನೆಯತ್ತ ನಡೆದನು. ಲಕ್ಕಮ್ಮ ನೆನಪು ಕೊಟ್ಟಳು–

"ಅಂಗವರತ ಅರುವೆಯು ಅಂಗದಲ್ಲಿ ಬಯಕೆಯುರತ ಕೈಯಲ್ಲಿ ತಂಡುಲವನಾಯ್ದು ತನ್ನಿ. ಬಯಸಿ ಬಂದುದು ಅಂಗಭೋಗ. ಬಯಸಿ ಎನನ್ನೂ ತರದಿರಿ !"

ಮಾರಯ್ಯ ಮೊಗದಿರುಹಿ ಮಡದಿಯ ಮಾತಿಗೆ ಮುಗುಳ್ನಗೆ ನಕ್ಕು ಮುಂದೆ ನಡೆದ. ಲಕ್ಕಮ್ಮ ಗೃಹಕೃತ್ಯದಲ್ಲಿ ನಿರತಳಾದಳು.

ಅಂದು ಒಂದು ವಿಶೇಷ ನಡೆಯಿತು. ಅಂದು ಸರದಿಯ ಪ್ರಕಾರ ಆಯ್ದಕ್ಕಿ ಮಾರಯ್ಯನವರು ಬಸವಣ್ಣನವರ ಅರಮನೆಯ ಅಂಗಣದಲ್ಲಿ ಅಕ್ಕಿ ಆಯ್ದು ಒಯ್ಯಬೇಕಾಗಿದ್ದಿತು. ಅಣ್ಣನವರಿಗಿದು ತಿಳಿದು ಅಂಗಣದಲ್ಲಿ ಹೆಚ್ಚಾಗಿ ಅಕ್ಕಿಯನ್ನು ಹರಹಿಸಿದ್ದರು–ಮಾರಯ್ಯನವರ ಶ್ರಮ ಸ್ವಲ್ಪವಾದರೂ ಕಡಮೆಯಾಗಲೆಂದು. ಮಾರಯ್ಯನವರು ಎಷ್ಟು ಕಡಮೆ ಆಯ್ದರೂ ದಿನಕ್ಕಿಂತ ಹೆಚ್ಚಾಗಿಯೆ ಅಕ್ಕಿ ಸಂಗ್ರಹವಾದುವು ಅವರ ಉಡಿಯಲ್ಲಿ. ಉಪಾಯವಿಲ್ಲದೆ ಮನೆಗೆ ಮರಳಿದರು.

ಮಾರಯ್ಯನವರು ದಿನಕ್ಕಿಂತಲೂ ಹೆಚ್ಚು ಅಕ್ಕಿ ತಂದುದು ಲಕ್ಕಮ್ಮನಿಗೆ ತೋರುತ್ತಲೆ ಕೇಳಿದಳು–

"ಇಂದೇಕೆ ಇಷ್ಟೊಂದು ಅಕ್ಕಿ ಎನ್ನಾಳ್ದ?"

"ಇಂದು ಅಣ್ಣನವರ ಅಂಗಳದಲ್ಲಿ ಆಯುವುದಿದ್ದಿತು. ಅಲ್ಲಿ ಅಕ್ಕಿ ಹೇರಳವಾಗಿ
ಬಿದ್ದಿದ್ದಿತು. ಎಷ್ಟು ಕಡಮೆ ಆಯ್ದರೂ ಇಷ್ಟಾಗಿವೆ." "ಒಮ್ಮನವ ಮೀರಿ
ಇಮ್ಮನದಲ್ಲಿ ತಂದಿರಿ. ಇದು ನಿಮ್ಮ ಮನವೊ? ಬಸವಣ್ಣನ ಅನುಮಾನದ
ಚಿತ್ತವೊ? ಈ ಮಾತು ಮಾರಯ್ಯ ಪ್ರಿಯ
ಅಮರೇಶ್ವರ ಲಿಂಗಕ್ಕೆ ಸಲ್ಲದ
ಬೋನ. ಅಲ್ಲಿಯೆ ಸುರಿದು ಬನ್ನಿ ಮಾರಯ್ಯ !"

"ಮತ್ತೆ ಅಲ್ಲಿಯೆ ಸುರಿದು ಬರಲೆ? ಅಣ್ಣನವರು ಏನಂದುಕೊಂಡಾರು, ಎಷ್ಟು ನೊಂದುಕೊಂಡಾರು ! ನಾವು ಬಡವರೆಂದವರು ಅಂಗಣದಲ್ಲಿ ಬೇಕೆಂದೇ ಹೆಚ್ಚು ಅಕ್ಕಿ ಹಾಕಿಸಿದಂತಿದ್ದಿತು."

"ಬಡತನವೆಂಬ ಶಬ್ದ ನಿಮ್ಮ ಬಾಯಿಂದ ಬರಬೇಕೆ ಎನ್ನರಸ? ಬಡತನವೆಂದರೇನು? ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ? ಬೆಟ್ಟ ಬಲ್ಲಿತ್ತೆಂದರೆ ಉಳಿಯ ಮೊನೆಯಲ್ಲಿ ಬಡತನವಿದ್ದರೆ ಬಡೆಯದೆ? ಘನ ಶಿವಭಕ್ತರಿಗೆ ಬಡತನವಿಲ್ಲ; ಸತ್ಯರಿಗೆ ದುಷ್ಕರ್ಮಮಿಲ್ಲ; ಎನಗೆ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವುಳ್ಳನ್ನಕ್ಕ ಯಾರ ಹಂಗಿಲ್ಲ ಮಾರಯ್ಯ !"

"ಹಂಗಿನ ಪ್ರಶ್ನೆ ಇಲ್ಲೆಲ್ಲಿದೆ ಲಕ್ಕಾ? ಇದು ಅಣ್ಣನವರ ಮನೆಯ ಅಕ್ಕಿಯಲ್ಲವೆ? ಈ ಅಕ್ಕಿ ಒಂದಿಷ್ಟು ನಮ್ಮ ಮನೆಯಲ್ಲೂ ಉಳಿದು ಮನೆ ಪವಿತ್ರವಾಗಲೆಂಬ ಆಸೆಯಿಂದ ತಂದೆ."

"ಆಸೆಯೆಂಬುದು ಅರಿಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯ? ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯ? ಈಸಕ್ಕಿ ಯಾಸೆ ನಿಮಗೇಕೆ? ಈಶ್ವರನೊಪ್ಪ! ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ !"

"ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ !...."

ಮಡದಿಯ ಈ ಮಾತುಗಳು ಮಾರಯ್ಯನ ಕಿವಿಯಲ್ಲಿ ಕ್ವಣಿತವಾಗತೊಡಗಿದುವು. ಹೌದು, ಈಸಕ್ಕಿಗಾಗಿ ತೋರಿದ ಆಸೆಯೂ ಆಸೆಯೇ–ಅಷ್ಟೈಶ್ವರ್ಯಕ್ಕಾಗಿ ಹಾತೊರೆದರೂ ಆಸೆಯೆ ! ಆಸೆಯಲ್ಲಿ ಹಿರಿದು ಕಿರಿದುಂಟೆ/ 'ಕಾಣಿಯ ಲೋಣಭ ಕೋಟಿಯ ಲಾಭ ಕೆಡಿಸುವು'ದೆಂದು ಅಣ್ಣ ನಿಡಿದಿಲ್ಲವೆ? ಅರಿಷಡ್ವರ್ಗಗಳಲ್ಲಿ ಕಾಮವೇ ಮೊದಲನೆಯದಲ್ಲದೆ? ಕಂಡದ್ದನ್ನು ಬಯಸುವುದು ಕಾಮ; ಅದು ದೊರೆಯದಿದ್ದರೆ ಕ್ರೋಧ; ದೊರೆತರೆ ಇನ್ನಷ್ಟು ದೊರೆಯಲೆಂಬ ಲೋಭ; ಅದೂ ದೊರಕಿತೆಂದರೆ ಅದು ತನ್ನ ಕೈಬಿಟ್ಟು ಹೋಗದಿರಲೆಂಬ ಮೋಹ; ಅದು ಕೈಬಿಟ್ಟು ಹೋಗದೆ ತನ್ನಲ್ಲಿಯೇ ಉಳಿದರೆ ಅದು ತನ್ನೊಬ್ಬನಲ್ಲಿಯೇ ಇದೆಯೆಂಬ ಮದ; ತನ್ನೊಬ್ಬನಲ್ಲಿಯೇ ಇದೆಯೆಂದು ತಿಳಿದುದು ಇನ್ನೊಬ್ಬನಲ್ಲಿಯೂ ಇದೆಯೆಂದು ತಿಳಿದುಬಂದರೆ ಮತ್ಸರ ! ಹೀಗೆ ಕಾಮವೊಂದರಿಂದ ಆರು ವೈರಿಗಳು ರಕ್ತಬೀಜನ ಸಂತತಿಯಂತೆ, ಪೂತನಿಯ ಪೀಳಿಗೆಯಂತೆ ಹುಟ್ಟುವುದಿಲ್ಲವೆ? ಆದುದರಿಂದ ಈಸಕ್ಕಿಗಾಗಲಿ, ಏಸಕ್ಕಿಗಾಗಲಿ ಆಸೆ ಬೇಡವೆಂದು ಲಕ್ಕಮ್ಮ ಹೇಳುತ್ತಿರುವುದು ನಿಜವಲ್ಲವೆ?

ಮಾರಯ್ಯನ ಮನದ ಕದಡು ತಳಕಿಳಿಯಿತು. ಮನ ತಿಳಿಯಾಯಿತು;



**"ಇಂದೇಕೆ ಇಷ್ಟೊಂದು ಅಕ್ಕಿ ಎನ್ನಾಳ್ದ?"**

ಮತಿ ಶುಚಿಯಾಯಿತು. ತನ್ನ ಸತಿಯೆಂದು ತಾನು ತಿಳಿದಿದ್ದ ಲಕ್ಕಮ್ಮ ಕೇವಲ ಸತಿಯಲ್ಲ ಗುರುವೆಂಬ ಭಾವ ಬಲಿಯಿತು. ಪ್ರಾಂಜಲ ಮನಸ್ಸಿನಿಂದ ಹೇಳಿದ, "ಲಕ್ಕಾ, ನಿನ್ನಷ್ಟು ನಾನು ಜ್ಞಾನಿಯಲ್ಲ. ಇಂದು ನನಗೆ ನೀನು ನಿಜದ ನಿಲವನ್ನು ತೋರಿದೆ. ಹೇಳು, ಇನ್ನೊಮ್ಮೆ ಆ ನಿನ್ನ ಒಮ್ಮನ ಇಮ್ಮನದ ಸೂತ್ರವನ್ನು ಹೇಳು. ಹಿಂಜರಿಯಬೇಡ ಹೇಳು. ಮೈಕೂದಲೆಲ್ಲ ಕಿವಿಯಾಗಿ ಕೇಳಲು ನಿಮಿರಿ ನಿಂತಿವೆ. ಹೇಳು ಲಕ್ಕಾ, ಹೇಳು !"

"ಎದೆಯುರಸ, ಅವ ಬೀಜವ ಬಿತ್ತಿದರೂ ವೊಳೆಯು ಮುಖ ಹಿಂಚುಮುಂಚುಂಟೆ? ನೀನು ಮರೆದಲ್ಲಿ ನಾನರಿದಲ್ಲಿ ಬೇರೊಂದೊಡಲುಂಟೆ? ಮೂಲನಷ್ಟವಾದಲ್ಲಿ ಅಂಕುರ ನಿಂದಿತ್ತು. ಕೂಟಕ್ಕೆ ಸತಿಪತಿಯೆಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ? ಆದರೂ ಕೇಳುವೆಯಾಗಿ ಹೇಳುವೆ. ಭಕ್ತರು ಕಾಯಕವೆಂದು ದಾಯಗಾರಿಕೆಯಲ್ಲಿ ತಂದು ದಾಸೋಹವ ಮಾಡಬಹುದೆ? ಬಸವಣ್ಣನವರು ಭಕ್ತರಿಗೆಲ್ಲ ಬಂಧುಗಳು–ಎಲ್ಲರ ಅಣ್ಣ. ಅಣ್ಣನೆಂದು ಅವರ ಮನೆಯಿಂದ ಬಯಸಿ ಹೆಚ್ಚು ಅಕ್ಕಿ ತಂದರದು ದಾಯಗಾರಿಕೆಯಾಯಿತು, ಕಾಯಕವಲ್ಲ. ಒಮ್ಮನವ ತಂದು, ಒಮ್ಮನದಲ್ಲಿಯೇ ಮಾಡಿ, ಇಮ್ಮನವಾಗದ ಮುನ್ನವೆ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ಸಲ್ಲಬೇಕು ಮಾರಯ್ಯ?"

ಲಕ್ಕಮ್ಮನ ಅರಿವಿನ ಕಿರಣ ಮಾರಯ್ಯನ ಮನದ ವನಜವನ್ನು ಅರಳಿಸಿತು. ಆತ್ಯಂತಿಕ ಸತ್ಯವನ್ನೂ ಅವಳಿಂದಲೇ ತಿಳಿದುಕೊಂಡುಬಿಟ್ಟರಾಯಿತು. ಬೇರೆ ಗುರುಗಳು ಗೊಡವೆಯೇಕೆ ಎನ್ನಿಸಿರಬೇಕವನಿಗೆ, ತನ್ನ ಕುರುಡನ್ನು ಕಳೆದು ದೃಷ್ಟಿದಾನ ಮಾಡಲು ಅವಳೇ ಸಮರ್ಥಳೆಂದು ನಂಬಿ–

"ಅಂಧಕಂಗೆ ಜೀವವಿದ್ದಡೆ ಕಣ್ಣಿನಿಂದಲೆ ಕಂಡು ನಡೆಯಬಲ್ಲನೆ !

ನೀ ಸತಿಯಾಗಿ ನಾ ಪತಿಯಾಗಿ ಉಭಯ ಪ್ರಾಣ ಏಕರೂಪಾಗಿ ಯೋಗದ

ಅಂದನೆ, ಅಮರೇಶ್ವರಲಿಂಗವ ತೋರಾ !"

ಎಂದು ಕೇಳಿಯೇ ಬಿಟ್ಟ.

ಇದಕ್ಕೆ ಲಕ್ಕಮ್ಮನಿತ್ತ ಉತ್ತರ ಮನೋಜ್ಞವಾದುದು–

"ಕೈದುವ ಕೊಡುವರಲ್ಲದೆ ಕಲಿತನವ ಕೊಡುವರುಂಟೆ, ಅಯ್ಯ?.... ಸಸಿಗೆ ನೀರೆರೆದರೆ ಎಳಕುವುದಲ್ಲದೆ ನಷ್ಟ ಮೂಲಕ್ಕೆ ಹೊತ್ತು ನೀರ ಹೊಯ್ದರೆ ಎಳಕುವುದೆ ಮಾರಯ್ಯ?..... ಪ್ರತಿಷ್ಠೆಗೆ ಮಾಟವಲ್ಲದೆ ಸ್ವಯಂಭುವಿಗುಂಟೆ ಉಳಿ? ನನಗು ನಿನಗು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವನರಿವುದಕ್ಕೆ ಬೇರೊಂದು ಠಾವುಂಟೆ ಮಾರಯ್ಯ?"

ಮಾರಯ್ಯನಲ್ಲಿಗೆ ಮಾತು ಮುಗಿಸಿದ. ಮಾತರಿಯದ ಆನಂದ ಅವನ ಎದೆಯಲ್ಲಿ ತೆರೆತೆರೆಯಾಗಿ ಹರಿಯತೊಡಗಿದ್ದಿತು. 'ಮುಂದೇನು ಮಾಡಲಿ?' ಎಂಬಂತೆ ಸತಿಯತ್ತ ನೋಡಿದ. 'ಈ ಹೆಚ್ಚಿನ ಅಕ್ಕಿ ಅಣ್ಣನವರಿಗೆ ಹಿಂದಿರುಗಿಸಿ ಅಣ್ಣನವರನ್ನೂ ಅವರೊಡನೆ ಅಸಂಖ್ಯಾತ ಶರಣರನ್ನೂ ಆರೋಗಣೆಗೆ ಕರೆಯಿರಿ, ಎಂದು ಲಕ್ಕಮ್ಮ ಬೆಸಸಿದಳು.

ಮಾರಯ್ಯ ಅವಾಕ್ಕಾದ. ಲಕ್ಕಮ್ಮ ಗಂಡನ ಮೌನದ ಕಾರಣವನ್ನೂಹಿಸಿದಳು. ‘ಬಡವರಾದ ನಾವು ಅಸಂಖ್ಯಾತರಿಗೆ ಆರೋಗಣೆಯನ್ನೆಂತು ಮಾಡಿಸಬಲ್ಲೆವೆಂಬ ಸಂದೇಗದ ದಂದುಗದಲ್ಲವನು ಮಾತಿಲ್ಲದ ಮೂಗನಾಗಿರುವನೆಂದು ತಿಳಿದು ಹೇಳಿದಳು–

“ಅಂಜದಿರು ಎನ್ನಾಳ್ದ, ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ ಚಿತ್ತಶುದ್ಧದಲ್ಲಿ ಕಾಯಕವ ಮಾಡುವ ಸದ್‌ಭಕ್ತಂಗೆ ಎತ್ತನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು. ಮಾರಯ್ಯ ಪ್ರಿಯ ಅಮರೇಶ್ವರ ಲಿಂಗ ಸೇವೆಯಳ್ಳನ್ನಕ್ಕ !”

ಎಂದು ಧೈರ್ಯ ಹೇಳಿದಳು. ಮಾರಯ್ಯ ಮರುಮಾತನಾಡಲಿಲ್ಲ. ಲಕ್ಕಮ್ಮನ ಶಕ್ತಿ ಅವನಿಗೆ ಅದಾಗಲೇ ಅರ್ಥವಾಗಿತ್ತು. “ಸತ್ಯವೆಂಬ ತಟ್ಟೆಯಲ್ಲಿ ಚಿತ್ತಶುದ್ಧಿಯೆಂಬ ವಿಭೂತಿಯ ಬೈಚಿಟ್ಟು ಸಕಲ ಸಂಪದ ಪ್ರಮಥರು ಮುಂತಾಗಿ ಅಮರೇಶ್ವರ ಲಿಂಗದ ಆಶ್ರಯದಲ್ಲಿ ಪ್ರಸಾದವ ಕೊಂಬುದಕ್ಕೆ ಬಾರಾ ಸಂಗನ ಬಸವಣ್ಣ” ಎಂದು ಬಸವಣ್ಣನವರನ್ನೂ ಅವರೊಡನೆ ಸಕಲ ಶರಣರನ್ನೂ ಕರೆದು ತಂದ. ಲಕ್ಕಮ್ಮ ಆಯ್ದಕ್ಕಿಯ ಅನ್ನ ಮಾಡಿದ್ದಳು. ಅದನ್ನೇ ಎಲ್ಲರಿಗೂ ಎಡೆ ಮಾಡಿದಳೂ. ಎಲ್ಲರೂ ಆರೋಗಿಸಿ ಸಂತೃಪ್ತರಾದರು, ಸಂತುಷ್ಟರಾದರು. ಪ್ರಭುದೇವರು, “ಆರಾರ ನೇಮಕ್ಕೆ ಸಂದಿತ್ತು. ಇಚ್ಚಾಭೋಜನಕ್ಕೆ ಕೃತ್ಯವಾಯಿತ್ತು. ಮಹಾಘನದೊದಗ ಕಂಡೆಯಾ ಸಂಗನ ಬಸವಣ್ಣ? ಗುಹೇಶ್ವರ ಲಿಂಗಕ್ಕೆ ಆಶ್ಚರ್ಯವಾಯಿತ್ತು” ಎಂದು ಅಪ್ಪಣೆಕೊಡಿಸಿದರು. “ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು ! ಧನ ನೋಡಾ ಬಡವರು, ಘನಮನ ಸಂಪನ್ನರು ! ಕೂಡಲ ಸಂಗನ ಶರಣರು ಕರುಳಿಲ್ಲದ ಕಲಿಗಳು ! ಅರಿಗೆ ಉಪಮಿಸಬಹುದು?” ಎಂದು ಕೊಂಡಾಡಿದರು ಬಸವಣ್ಣನವರು. ಮಾರಯ್ಯ ನಿರಹಂ ಭಾವದಿಂದ ನುಡಿದ–

“ತನುವೀವಡೆ ತನುವೆನಗಿಲ್ಲ. ಮನವೀವಡೆ ಮನವೆನಗಿಲ್ಲ. ಧನವೀವಡೆ ಧನವೆನಗಿಲ್ಲ.

ತನುಮನಧನ ಸಕಲ ಸಂಪತ್ತುಳ್ಳ ನಿಮ್ಮ ಶರಣರ ತಪ್ಪಲಕ್ಕಿಯನಾಯ್ದು ತಂದು ಎನ್ನೊಡಲ

ಹೊರೆವೆನಾಗಿ ಅಮರೇಶ್ವರ ಲಿಂಗಕ್ಕೆ ನೀಡುವ ಬಯಕೆ ಎನಗಿಲ್ಲ ಸಂಗನ ಬಸವಣ್ಣ”

ಆ ನಿರಹಂಕಾರ ಶ್ರೀಯನ್ನು ಕಂಡು ಬಸವಣ್ಣನವರು ಮನದುಂಬಿ ನುಡಿದರು–

“ನಾ ನಡೆವುದೆಲ್ಲ ಅನಾಚಾರ, ನಾ ನುಡಿವುದೆಲ್ಲಾ ಅವಿಚಾರ. ನಡೆ ನುಡಿ ಶುದ್ಧವಿಲ್ಲದ ಅಪವಿತ್ರನ ತಂದು ನಿಮ್ಮೊಕ್ಕುದನಿಕ್ಕಿ ಸಲಹಿದಿರಾಗಿ ಎನಗಿನ್ನಾವ ಭಯವೂ ಇಲ್ಲ. ಕೂಡಲ ಸಂಗಮದೇವರು ಸಾಕ್ಷಿಯಾಗಿ ಆಯ್ದಕ್ಕಿಯ ಮಾರಯ್ಯನ ಮನೆಯ ಮಗ ನಾನು !”

ನೆರೆದ ಶರಣರೆಲ್ಲ ಸ್ವರಗೂಡಿಸಿದರಿದಕ್ಕೆ. ಮಾರಯ್ಯ ಎಲ್ಲರಿಗೂ ನತನಾಗಿ ಬೀಳ್ಕೊಟ್ಟ. ಲಕ್ಕಮ್ಮನನ್ನು ತೆಕ್ಕೆಯಲ್ಲಿ ಹಿಡಿದು ಹೇಳಿದ– ‘ಈ ಆರೋಗಣೆ ನಿನ್ನದು, ಈ ಅದ್ಭುತ ನಿನ್ನದು, ಈ ಪವಾಡ ನಿನ್ನದು !’

ಈ ಪವಾಡವನ್ನು ನಂಬಬಹುದೆ? ಏಕೆ ನಂಬಬಾರದು? ದ್ರೌಪದಿಯಲ್ಲಿ ಅಕ್ಷಯಪಾತ್ರೆ ಇದ್ದುದು ನಿಜವಾದರೆ ಲಕ್ಕಮ್ಮನ ಅಡುಗೆಯಲ್ಲಿ ಅಕ್ಷಯತೆ–ಯುಂಟಾದುದೂ ನಿಜವಿರಬಹುದು. ಇದು ನಿಜವಿಲ್ಲದಿದ್ದರೂ ಅವರ ಅನುಭವದ ಅಕ್ಷಯತೆ ಮಾತ್ರ ನಿಜವಾದುದು– ನೂರಕ್ಕೆ ನೂರರಷ್ಟು ನಿಜವಾದುದು. ಎಲ್ಲರಂತೆ ಮಾರಯ್ಯ ಲಕ್ಕಮ್ಮರೂ ಕಾಲಗರ್ಭದಲ್ಲಿ ಕರಗಿಹೋಗಿರುವರಾದರೂ ಅವರ ಅಮೃತವಾಣಿ ಇಂದಿಗೂ ನೊಂದೆದೆಗೆ ಆನಂದವನ್ನೀಯಬಲ್ಲುದಾಗಿದೆ. ಇದೋ, ಕೇಳಿ !

“ಗೆದಲು ಮನೆಯ ಮಾಡೆ ಸರ್ಪಂಗೆ ಇಂಬಾದಂತೆ, ನಾನತ್ತಣ ದ್ರವ್ಯದ ತಂದು ಇತ್ತಮಾಡಿದಡೆ ನನಗಿನ್ನತ್ತಣ ಮುಕ್ತಿ? ಘನಮಹಿಮ ಶರಣರ ಸಂಗದಿಂದ ಘನಕ್ಕೆ ಘನವೇದ್ಯವಾದ ಬಳಿಕ ಅರಿವರತು ಮರಹು ನಷ್ಟವಾಗಿ, ಅಮರೇಶ್ವರ ಲಿಂಗದಲ್ಲಿ ನಿಜಪದ ಬೆರಸಿ, ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.”

“ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು. ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ. ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ, ದೃಢವಿಲ್ಲದ ಭಕ್ತಿ ಅಡಿ ಬಡೆದ ಕುಂಭದಲ್ಲಿ ಸುಜಲವ ತುಂಬಿದಂತೆ, ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವ ಮುಟ್ಟದ ಭಕ್ತಿ.”

“ಮಾಡಿ ನೀಡಿ ಹೋದಹೆನೆಂಬಾಗ ಕೈಲಾಸವೇನು ಕೈಕೂಲಿಯೆ? ಮುಂದೊಂದ ಕಲ್ಪಿಸದೆ, ಹಿಂದೊಂದ ಭಾವಿಸದೆ ಸಲೆ ಸಂದಿದ್ದಾಗವೆ ಮಾರಯ್ಯಪ್ರಿಯ ಅಮೇಶ್ವರಲಿಂಗವಿದ್ದ ಠಾವೆ ಕೈಲಾಸ !”

ರಾಯಚೂರು ಜಿಲ್ಲೆಯ ಅಮರೇಶ್ವರದಲ್ಲಿ ಹುಟ್ಟಿ, ಬೀದರ ಜಿಲ್ಲೆಯ ಕಲ್ಯಾಣದಲ್ಲಿ ಬಾಳಿ ಬೆಳಕಾದ ಮಾರಯ್ಯ ಲಕ್ಕವ್ವೆಯರಂಥವರು ಲಕ್ಷಕ್ಕೊಬ್ಬರು ಹುಟ್ಟಿದರೂ ಭೂಲೋಕ ಸ್ವರ್ಗವಾದೀತು. ಆಸೆಯನ್ನು ಜೈಸಿ, ಭವಪಾಶವನ್ನು ಕತ್ತರಿಸಿ, ಕೈಲಾಸವನ್ನು ಕಾಯಕದಲ್ಲಿ ಕಂಡ ಅವರ ನೆನಹು ನಂದಾದೀಪವಾಗಿ ನಾಡನ್ನು ಬೆಳಗುತ್ತಲಿರಲಿ!

■

# ಕಾಯಕದ ಕೈಗನ್ನಡಿ ನುಲಿಯ ಚಂದಯ್ಯ

"ಸಂಸಾರ ಸಾಗರದ ಮಧ್ಯದೊಳಗೆ ಬೆಳೆದ ಹೊಡೆಕೆಯ ಹುಲ್ಲಕೊಯಿತಂದು, ಮತ್ತಮಾಕಣ್ಣ ತೆಗೆದು ಕಣ್ಣಿಯಮಾಡಿ, ಇಹಪರವೆಂಬ ಉಭಯದ ಗಂಟನಿಕ್ಕಿ, ತುದಿಯಲ್ಲಿ ಮಾಟಕೂಟವೆಂಬ ಮನದ ಕುಣಿಕೆಯೊಳಗೆ ಕಾಯಕವಾಯಿತ್ತು. ಇದು ಕಾರಣ ಚಂದೇಶ್ವರಲಿಂಗವೆಂಬ ಭಾವವೆನಗಿಲ್ಲ."

ಇವರೊಬ್ಬ ಅಸಾಧಾರಣ ಕಾಯಕಯೋಗಿಯೇ ಇರಬೇಕು. ಇವರು ನುಲಿಕಣ್ಣಿ ಹೊಸದು ಮಾರಿ  ಶರಣ ಜೀವನವನ್ನು ಸಾಗಿಸುತ್ತಿರಬಹುದು. ಆದರೆ ಬರಿ ನುಲಿಕಣ್ಣಿ ಹೊಸೆಯುವವರಾಗಿದ್ದರೆ ಮೇಲೆ ವಿವರಿಸಿದ ಇಹಪರವೆಂಬ ಉಭಯದ ಗಂಟನಿಕ್ಕುವ ಕಣ್ಣಿಯನ್ನೆಂತು ಹೊಸೆಯುತ್ತಿದ್ದರು? ವೃತ್ತಿ ತತ್ತ್ವಮಯವಾದಾಗಲೇ ಇದು ಸಾಧ್ಯ. ಇದನ್ನು ಸಾಧ್ಯವಾಗಿಸಿಕೊಂಡ ಸಿದ್ಧಪುರುಷರೇ ಆಗಿರಬೇಕಿವರು.

ಹೌದು. ಕಲ್ಯಾಣದ ಕೇರಿಯೊಂದರಲ್ಲಿ ಹುಲ್ಲಿನಿಂದ ಹಗ್ಗ ಹೊಸೆದು ಬದುಕುತ್ತಿದ್ದ ಇವರು ಕಾಯಕದ ಕಲ್ಪವೃಕ್ಷದ ಕೊಂಬೆಯೊಂದಾಗಿದ್ದರು. ಹೆಸರು ನುಲಿಯ ಚಂದಯ್ಯ. ನುಲಿಯಿಂದ ನೇಣುಹಾಕಿಕೊಳ್ಳಬಹುದು, ಕೈಲಾಸಕ್ಕೆ ಏಣಿಯನ್ನೂ ಹೊಸೆದುಕೊಳ್ಳಬಹುದು. ನುಲಿಯ ಚಂದಯ್ಯನವರು ತಮ್ಮ ನುಲಿಯಿಂದ ದೇವಲೋಕಕ್ಕೆ ಬಟ್ಟೆಯನ್ನು ಕಟ್ಟಿದರು.

ಅವರ ಕಾಯಕನಿಷ್ಠೆಯೇ ಅಂತಹದು. "ಗುರುವಾದರೂ ಕಾಯಕದಿಂದವೆ ಜೀಮನ್ಮುಕ್ತಿ ; ಲಿಂಗವಾದರೂ ಕಾಯಕದಿಂದವೆ ಶಿಲೆಯ ಕುರುಗು ಹರಿವುದು; ಜಂಗವವಾದರೂ ಕಾಯಕದಿಂದವೆ ತನ್ನ ವೇಷದ ಪಾಶ ಹರಿವುದು" ಎಂದು ಘಂಟಾಘೋಷವಾಗಿ ಸಾರಿದ ಧೀರರವರು.

'ಕಾಯಕದಿಂದಲೆ ಜೀವನ್ಮುಕ್ತಿ !' ನಿಜ: ಆದರೆ ಎಂಥ ಕಾಯಕ? ಅದರ ವ್ಯಾಖ್ಯೆಯನ್ನು ನುಲಿಯ ಚಂದಯ್ಯನವರಿಗಿಂತ ಚೆನ್ನಾಗಿ ಮಾಡಿರವರಿಲ್ಲ. ಕಾಯಕದ ಸೂತ್ರಕ್ಕೆ ಭಾಷ್ಯ ಬರೆದವರವರು:

"ಕಂದಿಸಿ ಕುಂದಿಸಿ ಬಂಧಿಸಿ ನೋಯಿಸಿ, ಕಂಡಕಂಡವರ ಬೇಡಿ ತಂದು ಜಂಗಮಲಿಂಗಕ್ಕೆ ಮಾಡಿದೆನೆಂಬ ದಂದುಗದ ಮಾಟ ಲಿಂಗ ನೈವೇದ್ಯಕ್ಕೆ

ಸಲ್ಲದು, ತನು ಕರಗಿ ಮನ ಬಳಲಿ, ಬಂದ ತೆರದನುವರಿದು ಸಂದಿಲ್ಲದೆ
ಸಂಶಯವಿಲ್ಲದೆ ಜಂಗಮಲಿಂಗಕ್ಕೆ ದಾಸೋಹವ ಮಾಡುವುದೆ ಮಾಟ.
ಕಾರೆಯಕಾಯಿ, ಕಾಡಸೊಪ್ಪಾದರೂ ಕಾಯಕದಿಂದ ಬಂದುದು
ಲಿಂಗಕ್ಕರ್ಪಿತವಲ್ಲದೆ ದುರಾಶೆಯಿಂದ ಬಂದುದು ಅನರ್ಪಿತ. ಇದು ಕಾರಣ
ಸತ್ಯಶುದ್ಧಕಾಯಕದ ನಿತ್ಯದ್ರವ್ಯವಾದರೆ ಚಂದೇಶ್ವರ ಲಿಂಗಕ್ಕೆ ನೈವೇದ್ಯ ಸಂದಿತ್ತು"

ಇನ್ನೂ ಕೇಳಿ :

"ಸತ್ಯಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತವಿಚ್ಛಂದವಾಗದಿರಬೇಕು.
ನೇಮದ ಕೂಲಿಯಂದಿನ ನಿತ್ಯನೇಮದಲ್ಲಿ ಸಂದಿರಬೇಕು, ನೇಮದ ಕೂಲಿಯ
ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ, ತಾ ಮಾಡುವ ಸೇವೆ
ನಷ್ಟವಯ್ಯ!"

ಇಂತು ನಿಜಕಾಯಕದ ನೆಲೆಯನ್ನು, ನಿಲವನ್ನು ತಿಳಿಸಿ ನುಲಿಯ ಚಂದಯ್ಯನವರು ಅದಕ್ಕೆ ನಿದರ್ಶನ ತಾವಾಗಿ ಹಸನಾದ ಬಾಳು ಸಾಗಿಸುತ್ತಿದ್ದರು. ನಿತ್ಯವೂ ಪ್ರಾತಃಕಾಲದ ಪೂಜೆಯನ್ನು ಮುಗಿಸಿ ಹಳ್ಳಕ್ಕೆ ಹೋಗುವುದು. ಅಲ್ಲಿ ನಳವಳಿಸಿ ಬೆಳೆದು ಹುಲ್ಲನ್ನು ಕುಯ್ದು ತರುವುದು; ಅದರಿಂದ ನುಲಿ, ಕಣ್ಣಿ, ಹಗ್ಗ ಹೊಸೆಯುವುದು; ಅವುಗಳನ್ನು ಮಾರುವುದು; ಬಂದ ಹಣದಿಂದ ಜಂಗಮಾರಾಧನೆ ನಡೆಸುವುದು. ಇದು ಅವರ ಪವಿತ್ರ ಜೀವನದ ದಿನಚರಿ.

ಒಮ್ಮೆ ಎಂದಿನಂತೆ ಹಳ್ಳದಲ್ಲಿ ಹುಲ್ಲು ಕುಯ್ಯುತ್ತಿರುವಾಗ ಅವರ ಅಂಗದ ಮೇಲಿನ ಲಿಂಗ ಜಾರಿ ನೀರಿನಲ್ಲಿ ಬಿದ್ದಿತು. ನುಲಿಯ ಚಂದಯ್ಯನವರದನ್ನು ಗಮನಿಸದೆ ತಮ್ಮ ಕಾಯಕದಲ್ಲಿ ತಲ್ಲೀನರಾಗಿದ್ದರು. ಹುಲ್ಲು ಹೊರೆಮಾಡಿ ಕಟ್ಟಿ ಹೊತ್ತುಕೊಂಡು ಹೊರಟರು. ಹಾದಿಯಲ್ಲಿ ಮಡಿವಾಳ ಮಾಚಯ್ಯನವರು ಬಟ್ಟೆ ತೊಳೆಯುತ್ತಿದ್ದರು. ಅವರನ್ನು ಕಂಡು ಶರಣೆಂದರು. ಮಾಚಯ್ಯನವರೂ ಚಂದಯ್ಯನವರನ್ನು ಕಂಡು, ಆನಂದದಿಂದ ಶರಣೆಂದರು. ಚಂದಯ್ಯನವರು ಮಾಚಯ್ಯನವರಿಗೆ ತಮ್ಮ ಇಷ್ಟಲಿಂಗ ಜಾರಿ ನೀರಲ್ಲಿ ಬಿದ್ದುದನ್ನೂ ತಾವದನ್ನು ಗಮನಿಸದೆ ಹುಲ್ಲು ಕುಯ್ಯುವ ಕಾಯಕ ಮುಗಿಸಿ ಹೊರಟು ಬಂದುದನ್ನೂ ವಿವರಿಸಿದರು. ಮಾಚಯ್ಯನವರು ಚಂದಯ್ಯನವರ ನಡೆಯನ್ನು ಒಪ್ಪಲಿಲ್ಲ. ಅಂಗವಿರುವ ತನಕ ಲಿಂಗಪೂಜೆಯೂ ಇರಲೇಬೇಕೆಂದು ತಿಳಿಸಿ ಹೇಳಿದರು. ನುಲಿಯ ಚಂದಯ್ಯನವರಲ್ಲಾದರೋ ಕಾಯಕನಿಷ್ಠೆ ಜಂಗಮದಾಸೋಹ ಎರಡಿದ್ದರೆ

ಸಾಕು ಎಂಬ ನಂಬುಗೆ ನೆಲೆಯಾಗಿ ನಿಂತುಬಿಟ್ಟಿದ್ದಿತು. ಶಿವಪೂಜೆಯೆಂದರೇನು?



**'ಕಾಯಕದಿಂದ ಜೀವನ್ಮುಕ್ತಿ'**

**"**ಆವಾವ ಕಾಯಕದಲ್ಲಿ ಬಂದರೂ ಭಾವಶುದ್ಧವಾಗಿ ಗುರುಲಿಂಗ ಜಂಗಮಕ್ಕೆ ಮಾಡುವುದೆ ಶಿವಪೂಜೆ. ಈ ಉಭಯಕ್ಕತೀತ ಜಂಗಮಲಿಂಗ ದಾಸೋಹ. ಮೇಲಾಗಿ ಲಿಂಗವೆಂಬುದು ಗುರುವಿನ ಹಂಗು; ಗುರುವೆಂಬುದು ಲಿಂಗದ ಹಂಗು. ಈ ಉಭಯಕ್ಕತೀತ ಜಂಗಮಲಿಂಗ ದಾಸೋಹ. ಅದೇ ಚಂದೇಶ್ವರಲಿಂಗಕ್ಕೆ ಕಟ್ಟುಗೊತ್ತು ಕಾಣಾ ಮಡಿವಾಳಯ್ಯ !**"**

ಎಂದು ವಾದಿಸಿದರು.

ಇಲ್ಲಿ ಮುಖ್ಯ ಪ್ರಶ್ನೆ ಇದು : ಕಾಯಕ, ಜಂಗಮಾರಾಧನೆ ನಡೆಸಿದರೆ ಸಾಕೆ ಇಲ್ಲವೆ ಇವುಗಳೊಡನೆ ಲಿಂಗಪೂಜೆಯೂ ಬೇಕೆ? ಚಂದಯ್ಯನವರ ದೃಷ್ಟಿಯಲ್ಲಾದರೋ "ಭಾವಶುದ್ಧವಾಗಿಪ್ಪುದೆ ಗುರುಪೂಜೆ ; ಜ್ಞಾನಶುದ್ಧವಾಗಿಪ್ಪುದೆ ಲಿಂಗಪೂಜೆ ; ತ್ರಿಕರಣ ಶುದ್ಧವಾಗಿ–ತ್ರಿವಿಧ ಮಲಶುದ್ಧವಾಗಿ ನಿಂದುದೆ ಜಂಗಮ ಪೂಜೆ.

ಮಡಿವಾಳಯ್ಯನ ಮತ ಬೇರೆ.

"ಅರಿವನರಿದಿಹೆನೆಂದು ಕ್ರಿಯೆಯ ಬಿಡಬಹುದೆ? ಮಧುರಕ್ಕೆ ಮಧುರ ಒದಗಲಾಗಿ ಆ ಸವಿಗೆ ಸವಿಕೊರತೆಯುಂಟೆ? ದ್ರವ್ಯಕ್ಕೆ ದ್ರವ್ಯ ಒದಗಲಾಗಿ ಬಡತನಕಡಹುಂಟೆ? ಮಾಡುವ ಮಾಟ, ಶಿವಪೂಜೆಯ ನೋಟ ಭಾವವಿರಬೇಕು. ಅದು ಕಲಿದೇವಯ್ಯನ ಕೂಟವಲ್ಲವೆ ಚಂದಯ್ಯ?"

ಎಂಬುದು ಅವರ ಪ್ರಶ್ನೆ.

ಇಷ್ಟಾದರೂ ಈ ತೊಡಕು ಬಿಡಲಿಲ್ಲ. ಅನುಭವಮಂಟಪದಲ್ಲಿಯೇ ಅದರ ಇತ್ಯರ್ಥವಾಗಲೆಂದು ಇಬ್ಬರೂ ಅಲ್ಲಿಗೆ ಹೋದರು. ಚಂದಯ್ಯ ಬಿನ್ನವಿಸಿಕೊಂಡ:

"ಗುರುವಿಂದ ಲಿಂಗಕ್ಕೆ ಮಾಡಿ ಹಿಂದಣ ಮುಂದಣ ಸಂದೇಹಕ್ಕೀಡಾಗದೆ ಜಂಗಮಲಿಂಗಕ್ಕೆ ಮನಸಂದು ಧನವ ಕೊಟ್ಟು , ಸರ್ವ ಪದಾರ್ಥವ ಅರ್ಪಿತವ ಮಾಡಲಾಗಿ ಚಂದೇಶ್ವರಲಿಂಗಕ್ಕೆ ಹಿಂದುಮುಂದೆಂಬುದಿಲ್ಲ"

ಪ್ರಭುದೇವರಿದನ್ನು ಒಪ್ಪಲಿಲ್ಲ.

"ಪರುಷವಾದರೂ ಒಂದರಲ್ಲಿ ಇರಿಸಿರಬೇಕು. ರತ್ನವಿಶೇಷವಾದರೂ ಕುಂದಣದಲ್ಲಿ ಬಂಧಿಸಿ ಸಂದಿರಬೇಕು. ಲಿಂಗವ ಹಿಡಿದಲ್ಲಿ ಪೂಜಿಸುವ ಅಂಗವಿರಬೇಕು. ಇದು ಕಾರಣ ಗುಹೇಶ್ವರಲಿಂಗವನರಿದು ಮರೆಯಲಿಲ್ಲ ಕಾಣಾ ಚಂದಯ್ಯ"

ಎಂದು ನಿರೂಪಿಸಿದರು.

ನುಲಿಯ ಚಂದಯ್ಯ ಅಪ್ರತಿಭನಾಗಲಿಲ್ಲ. "ಗುರುಸೇವೆಯ ಮಾಡಿದರೆ ಇಹದಲ್ಲಿ ಸುಖ. ಲಿಂಗಸೇವೆಯ ಮಾಡಿದರೆ ಪರದಲ್ಲಿ ಸುಖ. ಜಂಗಮ ಸೇವೆಯ ಮಾಡಿದರೆ ಇಹಪರವೆಂಬ ಭಯ ನಾಸ್ತಿ. ಇದು ಚಂದೇಶ್ವರಲಿಂಗದ ಭಾವ ಕಾಣಾ ಪ್ರಭುವೆ !"

ಎಂದೂ "ತನುಭಾವವನರಿದಿಪ್ಪುದು ಗುರುಭಕ್ತಿ ; ಮನಭಾವನರಿದಿಪ್ಪುದು ಲಿಂಗಭಕ್ತಿ; ಎರಡೂ ಭಾವವನೂ ಮರೆದಿಪ್ಪುದು ಜಂಗಮ ಭಕ್ತಿ. ಈ ಗುಣ ನಿಶ್ಚಯವಾಗಿ ನಿಂದುದು, ಸಂಗನ ಬಸವಣ್ಣ ಪ್ರಿಯ ಚಂದೇಶ್ವರ ಲಿಂಗವನರಿದುದು" ಎಂದೂ ಬಿನ್ನವಿಸಿಕೊಂಡನು.

ಪ್ರಭುದೇವರು ಬಸವಣ್ಣನವರತ್ತ ನೋಡಿದರು–ಇದಕ್ಕೆ ಸರಿಯಾದ ಉತ್ತರವೀಯಲೆಂದು. ಆದರೆ ಬಸವಣ್ಣನವರೆಂದು ಇನ್ನೊಬ್ಬರಿಗೆ ಬುದ್ಧಿ ಹೇಳಿದ್ದರು? ತಾವೇ ಎಲ್ಲರಿಗಿಂತಲೂ ಕಿರಿಯರೆಂದು ತಿಳಿದು ಅದರಂತೆ ಆಚರಿಸುತ್ತದ್ದ ಅವರು ವಿನಮ್ರರಾಗಿ ಉತ್ತರವಿತ್ತರು :

"ಜಂಗಮ ಸೇವೆಯ ಗುರುಪೂಜೆಯೆಂದರಿದ; ಜಂಗಮಸೇವೆಯ ಲಿಂಗ ಪೂಜೆಯೆಂದರಿದ; ಜಂಗಮಸೇವೆಯೆ ತನ್ನರವೆಂರಿದ; ಜಂಗಮ ಸೇವೆಯೆ ತನ್ನ ನಿಜವೆಂದರಿದ ಜಂಗಮುಸೆವೆಯೆ ಸ್ವಯುವೆಂದರಿದ: ಜಂಗಮುಸೆವೆಯೇ ನಿತ್ಯಪರವೆಂದರಿದ. ಇದು ಕಾರಣ ನಮ್ಮ ಕೂಡಲ ಸಂಗಮದೇವರಲ್ಲಿ ಜಂಗಮಪ್ರಾಣಿಯಾದ ಚಂದಯ್ಯನ ಹಳೆಯ ಮಗನಾಗಿ ಆತನ ಶ್ರೀಚರಣಕ್ಕೆ ಶರಣೆಂದು ಶುದ್ಧನು. ಆ ಮಹಾಮಹಿಮನ ಘನವ ನಾನೆತ್ತ ಬಲ್ಲೆನಯ್ಯಾ ಪ್ರಭುವೆ?"

ಸರಿ, ಮಾತೇ ಮುಗಿಯಿತಲ್ಲ. ಪ್ರಭುದೇವರು ಚೆನ್ನಬಸವಣ್ಣನವರತ್ತ ದೃಷ್ಟಿ ಹೊರಳಿಸಿದರು. ಚೆನ್ನಬಸವಣ್ಣನವರು ತಡಮಾಡಲಿಲ್ಲ– ತಕ್ಷಣ ತೀರ್ಮಾನವಿತ್ತರು:

"ಜಂಗಮವೆ ಪರವೆಂದರಿದಡೇನು? ಆ ಜಂಗಮದಂಗವಲ್ಲವೆ ಲಿಂಗ? ಆ ಲಿಂಗಚೈತ್ಯದರಿವೆಲ್ಲವು ಜಂಗಮವಲ್ಲವೆ? ಅಂಗವಿಲ್ಲದ ಜೀವ, ಆತ್ಮ ನಿಲ್ಲದಂಗಕ್ಕೆ ಸರ್ವಭೋಗ ಸುಖವುಂಟೆ? ಮಣ್ಣಿಲ್ಲದೆ ಮರನುಂಟೆ? ಮರಿನಿಲ್ಲದ ಹಣ್ಣುಂಟೆ? ಹಣ್ಣಿಲ್ಲದ ಸ್ವಾದವುಂಟೆ? ಹೀಂಗೆ ಅರಿವುದಕ್ಕೆ ಕ್ರಮ. ಅಂಗವೆ ಮಣ್ಣು, ಲಿಂಗವೆ ಮರನು, ಫಲವೆ ಜಂಗಮ, ರುಚಿಯೆ ಪ್ರಸಾದ. ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ ಸಾಕಾರಲಿಂಗವೆ ಜಂಗಮದಂಗವಯ್ಯಾ ಪ್ರಭುವೆ !"

ಬೋಧೆ ಬೆಳಗಿನ, ವಾದ ನಿಂತಿತು, ಹಾದಿ ದೊರೆಯಿತು, ಅಂಗ–ಲಿಂಗ–ಜಂಗಮ–ಪ್ರಸಾದ ಪರಸ್ಪರಾವಲಂಬಿಗಳು. ಒಂದರಿಂದ ಇನ್ನೊಂದು ಒಡಮೂಡುತ್ತ ಹೋಗುವುವು. ಒಂದಿಲ್ಲದಿದ್ದರೆ ಇನ್ನೊಂದಿಲ್ಲ ಫಲದ ಸ್ವಾದಬೇಕು, ಫಲ ಬೇಡವೆಂದರೆ ಆಗದು; ಫಲ ಬೇಕು, ಮರ ಬೇಡವೆಂದರೆ ಸಾಧ್ಯವಿಲ್ಲ; ಮರ ಬೇಕು, ಮರಬೆಳೆಸಿದ ಮಣ್ಣು ಬೇಡವೆಂದರೆ ನಡೆಯದು. ಹಾಗೆ ಜಂಗಮ ಬೇಕು, ಲಿಂಗಬೇಡವೆಂದರೆ ಸಲ್ಲದು. ಅಂಗಭೂವಿಯಲ್ಲಿ ಲಿಂಗಭೂರುಹ ಬೆಳೆದಾಗಲೇ ಜಂಗಮದ ಫಲ ದೊರೆತೀತು, ಇಲ್ಲದಿದ್ದರೆ ಇಲ್ಲ.

ಚಿಕ್ಕದಣ್ಣಾಯಕರ ಈ ಯುಕ್ತಿಯುಕ್ತ ತರ್ಕಶುದ್ಧ ಉತ್ತರ ನುಲಿಯ ಚಂದಯ್ಯನವರ ಸಂಶಯಚ್ಛೇದಮಾಡಿ ಲಿಂಗಪೂಜೆಯಲ್ಲಿ ವಿಶ್ವಾಸವನ್ನು ಹುಟ್ಟಿಸಿತು. ನುಲಿಯ ಚಂದಯ್ಯನವರು ಮತ್ತೆ ಲಿಂಗ ಧರಿಸಿದರು. ಲಿಂಗಪೂಜೆ ಮಾಡತೊಡಗಿದರು. ಆರೆ ಅವರು ತೋರಿದ ವಿಚಾರ ಸ್ವಾತಂತ್ರ್ಯದ ಕೆಚ್ಚು ಇಂದಿಗೂ ಅನುಕರಣೀಯವಾಗಿದೆ.

ನುಲಿಯ ಚಂದಯ್ಯನವರು ನೀರಿನಲ್ಲಿ ಬಿದ್ದು ಇಷ್ಟಲಿಂಗವನ್ನು ಅಲ್ಲಿಯೇ ಬಿಟ್ಟು ಹುಲ್ಲ ಹೊರೆ ಹೊತ್ತು ಹೊರಡಲು ಇಷ್ಟಲಿಂಗವೂ ಅವರನ್ನು ಹಿಂಬಾಲಿಸಿ ಹೊರಟಿತೆಂದೂ, 'ನಾನು ಹೋಗೆನ್ನದೆ ಹೋಗಿರುವ ನಿನ್ನನ್ನು ಮರಳು ಸ್ವೀಕರಿಸಲಾರೆ'ನೆಂದು ನುಲಿಯ ಚಂದಯ್ಯನವರು ಹಾಗೆಯೇ ಹೊರಟರೆಂದೂ ಮಡಿವಾಳ ಮಾಚಯ್ಯನವರ ಮಧ್ಯಸ್ಥಿಕೆಯಿಂದ 'ಕಾಯಕದಲ್ಲಿ ನೆರವಾಗುವುದಾದರೆ ಮನೆಗೆ ಬರಲಿ' ಎಂದು ನುಲಿಯ ಚಂದಯ್ಯನವರು ಕರಾರು ಹಾಕಿದರೆಂದೂ ಲಿಂಗದೇವ ಅದಕ್ಕೊಪ್ಪಿ ತಾನೊಂದು ಕಣ್ಣೆ ಹೊಸೆದು ಯಾರೂ ಕೊಳ್ಳದಿರಲು ಬಸವಣ್ಣನವರ ಮನೆಗೆ ಹೋದನೆಂದೂ ಬಸವಣ್ಣನವರಿತ್ತ ಸಾವಿರ ಹೊನ್ನುಗಳನ್ನು ತಂದೀಯಲು 'ಇದು ಆಶೆಯಿಂದ ಬಂದ ಹೊನ್ನು, ಕಾಯಕಕ್ಕೆ ಸಲ್ಲ'ದೆಂದು ಚಂದಯ್ಯ ಒಂದು ಹಾಗವನ್ನು ಮಾತ್ರ ಉಳಿಸಿಕೊಂಡು ಉಳಿದುದನ್ನು ಬಸವಣ್ಣನವರಿಗೆ ಹಿಂದಿರುಗಿಸಿದನೆಂದೂ ಪುರಾಣಗಳು ತಿಳಿಸುತ್ತವೆ. ಇದ್ದರೂ ಇರಬಹುದು; ಇಲ್ಲದಿದ್ದರೂ ಕುಂದಿಲ್ಲ ಚಂದಯ್ಯನವರ ಚರಿತ್ರೆಗೆ. ನಿಸ್ಪೃಹ ಚಕ್ರವರ್ತಿ ನುಲಿಯ ಚಂದಯ್ಯನವರು ತಮ್ಮ ನಿಜಕಾಯಕನಿಷ್ಠೆಯಿಂದ, ನಿರ್ಭೀತ ವಿಚಾರಸರಣಿಯಿಂದ, ನಿರ್ಮಲವಾದ ನಡೆನುಡಿಯಿಂದ, ನಿರಹಂಕಾರ ವೃತ್ತಿಯಿಂದ, ನಿಷ್ಕಲ್ಮಷ ಜೀವನದಿಂದ ನಿಜದ ರೂಪಾಗಿ ನಿಶ್ಶೇಷ ಕೀರ್ತಿಯನ್ನು ಗಳಿಸಿದ್ದಾರೆ. ಕೀರ್ತಿಕಾಯದಲ್ಲಿ ನಿಂತು ಮುಮುಕ್ಷುಗಳಿಗೆಲ್ಲ ಸಾರಿಸಾರಿ ಹೇಳುತ್ತಲಿದ್ದಾರೆ :

"ಕೈದ ಹಿಡಿದಾಡುವವರೆಲ್ಲ ಇರಿವರೆ?
ಸಾಧನೆಯ ಮಾಡುವರೆಲ್ಲ ಕಾದಬಲ್ಲರೆ?
ಅರ್ಥಿಗೆ ಮಾಡುವ ಕೃತ್ಯವಂತರೆಲ್ಲ ಭಕ್ತರಪ್ಪರೆ?
ಅದು ಚಂದೇಶ್ವರ ಲಿಂಗಕ್ಕೆ ಮುಟ್ಟದ ಮಾಟ !"
"ನುಡಿದ ಮಾತಿಂಗೆ ತಡಬಡಬಂದಲ್ಲಿ ನುಡಿದ ಭಾಷೆಗೆ ಭಂಗ ನೊಡಾ!
ಹಿಡಿದ ಕುಳಕ್ಕೆ ಹಾನಿಬಂದಲ್ಲಿ ಒಡಲನಿರಿಸುವುದೆ ಭಂಗ ನೋಡಯ್ಯಾ!
ಇದು ಕಾರಣ ನಡೆನುಡಿಶುದ್ಧವಿಲ್ಲದಿದ್ದರೆ ಚಂದೇಶ್ವರ ಲಿಂಗವಾದರೂ
ತಪ್ಪನೊಳಕೊಳ್ಳೆ ಕಾಣಾ ಮಡಿವಾಳ ಮಾಚಯ್ಯ !"

■

# ಅಜೇಯವೀರ ಮಡಿವಾಳ ಮಾಚಯ್ಯ

ನ್ಯಾಯನಿಷ್ಠುರವಾಕ್ಯ ಬಿಜ್ಜಳ
ರಾಯ ಕರ್ಮಾಶಕ್ಯ ಭಕ್ತಿ
ಶ್ರೀಯುತ ಗುಣೋತ್ಸುಕ್ಕ ಗುರುತರ ಶಾಶ್ವತ ಶಿವೈಕ್ಯ
ಆಯತೋತ್ತಮ ಶೀಲ ಭಕ್ತಸ–
ಹಾಯಲೋಲ ಗತಾಘಜಾಲ ಅ–
ಜೇಯ ವೀರ ಗಣಾನುಕೂಲಾ ಎಮ್ಮ ಮಡಿವಾಳಾ ॥ ಬ.ಪು.

ವಿಜಾಪುರ ಜಿಲ್ಲೆಯ ಹಿಪ್ಪರಗಿ, ದೇವರ ಹಿಪ್ಪರಗಿಯಾದುದು ಮಾಚಯ್ಯನಿಂದ; ಅಲ್ಲಿಯ ಕಲ್ಲಿನಾಥ, ಕಲಿದೇವರ ದೇವನಾದುದು ಮಾಚಯ್ಯನಿಂದ; ಕಲ್ಯಾಣದಲ್ಲಿ ಶರಣಗಣಕ್ಕೆ ಗಣಾಚಾರದ ಗುಟ್ಟು ಗೊತ್ತಾದುದು, ಮಾಚಯ್ಯನಿಂದ; ಅಳಿಯ ಬಿಜ್ಜಳನ ದಾಳಿಗಳನ್ನೆದುರಿಸಿ, ಶರಣ ಸಂತಾನ ಉಳಿದು ಉಳಿವೆಯಲ್ಲಿ ಮತ್ತೆ ತತ್ತ್ವಮಂಪಟ ಕಟ್ಟಿದುದು ಮಾಚಯ್ಯನಿಂದ; ಸೃಷ್ಟಿಯಲ್ಲಿ ಶಿವನ ತೇಜ ವಿರಾಜಿಸಿದುದು ಮಾಚಯ್ಯನಿಂದ. ಅವನು ಸತ್ಯಶುದ್ಧಕಾಯಕದ ನಾಯಕ, ದಿಟ್ಟದ ಭಟ, ಗಣಾಚಾರದ ಘಂಟಾನಾದ.

ಹುಟ್ಟಿದ ಊರು ಹಿಪ್ಪರಗಿ, ತಂದೆ ಪರ್ವತಯ್ಯ, ದೀಕ್ಷಾಗುರು ಮಲ್ಲಿಕಾರ್ಜುನ, ಹಿಡಿದ ಕಾಯಕ ಮಡಿವಳಿಕೆ.

ಮಡಿವಾಳ ಮಾಚಣ್ಣ ಕಡುಭಕ್ತ ತಾನಾಗಿ,
ಹಡೆದವರ ಕೆಲಸ ಕೈಕೊಂಡ : ಊರೊಳಗೆ
ಬಡವರಿಗೆ ಭಾಗ್ಯನಿಧಿಯಾದ
ಮನೆಗೆಲಸ ಮಡಿವಾಳ ದಿನಗೆಲಸ ಶಿವಭಕ್ತಿ
ಮನಬೆರೆತ ಲಿಂಗದೇಹದಲಿ–ಬಲು ಒಪ್ಪಿ
ಕನಕ ಜನಕಾಗಿ ಬಾಳುವೆಯು ॥

ಹೀಗೆ ಹುದುವಾಳಿಕೆಯಲ್ಲಿದ್ದ ಮಾಚಯ್ಯನಿಗೆ ಅಂತರಂಗದಲ್ಲಿ ಆವುದೋ

ಅತೃಪ್ತಿ. ಹಿಪ್ಪರಿಗೆಯಲ್ಲಿಯೇ ಹುಟ್ಟಿ ಅಲ್ಲಿಯೇ ಬಾಳಿ ಹೋಗಲು ಬಂದ ಆತ್ಮವಲ್ಲ ಅದು. ಅದು ಅರಸುತ್ತಿದ್ದುದು ಮಹತ್ತು. ಬೃಹತ್ತು. ಅದರ ಕರೆಯೂ ಬಂದಿತು.

ಬಸವ ಬೋಧೆಯು ಬೆಳದು ವಸುಧೆಯಲಿ ಹಬ್ಬುತಲಿ
ಹಸುಗೂಸು ಕೇಳಿ ಕಿವಿಗೊಟ್ಟು ಚಣದೊಳಗೆ
ಹೊಸಮತವು ಉದಿಸಿ ಭೂಜನಕೆ ॥

ಆ ಬೋಧೆಯ ನಾದ ಹಿಪ್ಪರಿಗೆಗೂ ಕೇಳಿಸುತ್ತದೆ. 'ಹಸುಗೂಸು ಕೇಳಿ ಕಿವಿಗೊಟ್ಟ' ಮೇಲೆ ಹಸಿದ ಆತ್ಮ ಮಾಚಯ್ಯ ಕಿವಿಗೊಡದಿರುವನೆ" ಹೊರಟೇ ಬಿಡುತ್ತಾನೆ.

ಹಾದಿಯಲ್ಲಿ : ಭೀಮೆ ತುಂಬಿ ಭೋರ್ಗರೆಯುತ್ತಾ ಹರಿಯುತ್ತಲಿದ್ದಾಳೆ. ಆಚೆಯ ದಂಡೆಯವರು ಅತ್ತಲೇ, ಈಚೆಯ ದಂಡೆಯವರು ಇತ್ತಲೆ ಆಗಿ, ಪ್ರವಾಹ ಇಳಿಯುವ ದಾರಿ ಕಾಯುತ್ತಿದ್ದಾರೆ. ಆದರೆ ಯಾವಾಗ ಕಲ್ಯಾಣ ಕಾಣುವೆನೋ ಎಂದು ತವಕಿಸುತ್ತಲಿದ್ದ ಮಾಚಯ್ಯ ಪ್ರವಾಹ ಇಳಿವವರೆಗೆ ತಡೆಯಬಲ್ಲನೆ? ಸಾಹಸದ ಶಿಶುವಾಗಿ ಧುಮುಕಿಬಿಡುತ್ತಾನೆ–ಭೋರ್ಗರೆವ ಭೀಮೆಯ ಭೀಮ ಪ್ರವಾಹದಲ್ಲಿ ! ಈಸುತ್ತಾನೆ, ಈಸಿ ಜೈಸುತ್ತಾನೆ. ಶರವೇಗದಿಂದ ಹೊರಟು ಕಲ್ಯಾಣಪುರ ದ್ವಾರಕ್ಕೆ ಬರುತ್ತಾನೆ. ಬಾಗಿಲಲ್ಲಿ ಕೈಮುಗಿದು ಒಳಗೆ ಪ್ರವೇಶಿಸುತ್ತಾನೆ. ಬಸವಣ್ಣನವರ ಬಳಗವನ್ನು ಸೇರುತ್ತಾನೆ. ಅಲ್ಲಿ ತನ್ನ ವೀರವೃತ್ತಿಯಿಂದ ಬೆಳಗುತ್ತಾನೆ.

ನೂರೊಂದು ಸ್ಥಲಗಳಿಗೆ ನೂರೊಂದು ಶರಣರು
ವೀರಮಾಚಣ್ಣ ಕರವಾಳು–ಬಸವನಿಗೆ
ಧೀರ ಕಾಯಕದ ಹುರಿಯಾಳು

ಆಗುತ್ತಾನೆ.

ಬಸವಾದಿ ಪ್ರಮಥರು ಬಹುಬೇಗ ಮಾಚಯ್ಯನ ಮಹೋನ್ನತಿಯನ್ನು ಗುರುತಿಸಿಕೊಳ್ಳುತ್ತಾರೆ. ನಾ ಮುಂದೆ ನೀ ಮುಂದೆ ಎಂದು ಅವನನ್ನು ಕೊಂಡಾಡುತ್ತಾರೆ.

"ಅಷ್ಟತನುವಿನ ಘಟ್ಟಿಯ ಕರಿಗಿಸಿ, ಕಟ್ಟುಗ್ರದ ಕಾಮಕ್ರೋಧ ಲೋಭ ಮೋಹ ಮದಮತ್ಸರಂಗಳೆಂಬುದು ಸುಟ್ಟುರುಹಿ, ತನುವಿನ ಅವಲೋಹವ ಕೆಡಿಸಿ, ಮನದ ಸಂಚಲನ ನಿಲಿಸಿ, ಸಕಲ ಕರಣಂಗಳ ಅರಿವಿಂಗಾಹುತಿಯನಿಕ್ಕಿ, ಸುಜ್ಞಾನ ಪ್ರಭೆಯನುಟ್ಟು, ಸುಜ್ಞಾನ ಪ್ರಭೆಯ ಹೊದೆದು, ಸುಜ್ಞಾನ ಪ್ರಭೆಯ ಹಾಸಿ, ಮಹಾಜ್ಞಾನದಲ್ಲಿ ನಿರ್ಭಾವ ಸಂಪನ್ನನಾದ ಮಡಿವಾಳ ಮಡಿಯ ಪ್ರಸಾದವ ನಾನು

ಹೊಡೆದ ಕಾರಣ ನಿರ್ಮಳನಾದೆನು, ನಿಜೈಕ್ಯನಾದೆನು, ನಿಶ್ಚಿಂತನಾದೆನು. ಇದು ಕಾರಣ ಗುಹೇಶ್ವರ ಲಿಂಗದಲ್ಲಿ ತೆರಹಿಲ್ಲದಿಪ್ಪ ಮಡಿವಾಳನ ಪ್ರಸಾದದಿಂದ ನಿಮ್ಮ ಘನವನರಿದು ಬದುಕಿದೆ ಕಾಣಾ ಸಂಗನ ಬಸವಣ್ಣಾ" "ನಿನ್ನನೂ ಮಡಿವಾಳನನೂ ನೀನೆಂದೆ ಕಂಡೆನಯ್ಯಾ ಬಸವಣ್ಣ"



**'ಮನೆಗೆಲಸ ಮಡಿವಾಳ ದಿನಗೆಲಸ ಶಿವಭಕ್ತಿ'**

ಎಂದು ಪ್ರಭುದೇವರು ಹಾಡಿದರೆ.

"ಎನ್ನ ಕಾಯವ ಶುದ್ಧವ ಮಾಡಿದಾತ ಮಡಿವಾಳ ; ಎನ್ನ ಮನದ ನಿರ್ಮಲದ ಮಾಡಿದಾತ ಮಡಿವಾಳ ; ಎನ್ನಂತರಂಗವ ಬೆಳಗಿದಾತ ಮಡಿವಾಳ ; ಎನ್ನ ಬಹಿರಂಗವ ಬಿಡಿಸಿದಾತ ಮಡಿವಾಳ–ಕೂಡಲಸಂಗಮದೇವಾ, ಎನ್ನ ನಿಮಗೆ ಯೋಗ್ಯನ ಮಾಡಿದಾತ ಮಡಿವಾಳ" ಎಂದು ಬಸವಣ್ಣನವರು ಬಣ್ಣಿಸುತ್ತಾರೆ.

"ಅಘಟಿತ ಘಟಿತವೆಂಬ ಮಹಾ ಘನವ ಸಾಧಿಸುವರೆ? ಮಡಿವಾಳನ
ಕೃಪೆಯಿಲ್ಲದನ್ನಕ್ಕರ ಎಂತರಿಯಬಪ್ಪುದು ನಿಜಲಿಂಗೈಕ್ಯವನು? ಎನ್ನ
ಆರೂಢಿಯ ಅರಿವಿಂಗೆ ನೀನೆ ಶೃಂಗಾರ. ಕೂಡಲ ಚೆನ್ನಸಂಗಮದೇವರಲ್ಲಿ
ಮಡಿವಾಳನ ಕೈಯಸ್ವಾಯತವಾದೆನು ಕಾಣಾ ಪ್ರಭುವೆ"

ಎಂದು ಚೆನ್ನಬಸವಣ್ಣನವರು ಪ್ರಶಂಸಿಸುತ್ತಾರೆ.

ಮಾಚಯ್ಯ ಮಾತ್ರ 'ಮಹಾಜ್ಞಾನಕ್ಕೆ ನಿರಹಂಕಾರವೇ ಶೃಂಗಾರ, ನಿರಹಂಕಾರಕ್ಕೆ ಭಕ್ತಿಯೇ ಶೃಂಗಾರ'ವೆಂಬ ತನ್ನ ಚೆನ್ನುಡಿಯಂತೆ ನಿರಹಂಕಾರದ ಮೂರ್ತಿಯಾಗಿ, 'ಒಡಲೆ ಬಸವಣ್ಣ , ಪ್ರಾಣವೆ ಚೆನ್ನಬಸವಣ್ಣ , ಎನ್ನ ಮಹಾಜ್ಞಾನವೆ ನೀವು ನೋಡಾ' ಎಂದು ಪ್ರಭುದೇವರಿಗೆ ನಿವೇದಿಸಿಕೊಳ್ಳುತ್ತಾನೆ;

"ಎತ್ತೆತ್ತ ನೋಡಿದೊಡತ್ತತ್ತ ಬಸವನೆಂಬ ಬಳ್ಳಿ, ಎತ್ತನೋಡಿದಡೆ ಲಿಂಗ
ವೆಂಬ ಗೊಂಚಲು, ಒತ್ತಿ ಹಿಂಡಿದಡೆ ಭಕ್ತಿಯೆಂಬ ರಸವಯ್ಯ"
ಎಂದು ಬಸವಣ್ಣನಿಗೆ ಬಿನ್ನವಿಸಿಕೊಳ್ಳುತ್ತಾನೆ.

"ಅಂಗವೆ ಲಿಂಗವಾಗಿ, ಲಿಂಗವೆ ಪ್ರಾಣವಾಗಿ, ಜಂಗಮನೆ ಸಂಗವಾಗಿ, ಸಂಗವೆ ಸುಸಂಗವಾಗಿ, ಪ್ರಾಣಿವೆ ಪ್ರಸಾದವಾಗಿ, ಪ್ರಸಾದವೆ ಪ್ರಾಣವಾಗಿ, ಇಂತೀ ತ್ರಿವಿಧದಲ್ಲಿ ಸಂಪನ್ನನಾದ ಸಮತಾ ಪ್ರಸಾದಿ, ಸನ್ನಿಹಿತೆ ಪ್ರಸಾದಿ, ಸಮಾಧಾನ ಪ್ರಸಾದಿ, ಕಲಿದೇವಯ್ಯಾ, ಚೆನ್ನಬಸವಣ್ಣನ ಪ್ರಸಾದವಕೊಂಡು ನಾನು ಬದುಕಿದೆನು ಕಾಣಾ ಪ್ರಭುವೆ"

ಎಂದು ಚೆನ್ನಬಸವಣ್ಣನ ಹಿರಿಮೆಯನ್ನು ಹಾಡುತ್ತಾನೆ. ಈ ಎಲ್ಲವನ್ನೂ ಮೇಳುವಿಸಿ,

"ಎನ್ನಂಗದಾಚಾರದಲ್ಲಿ ಸಂಗನ ಬಸವಣ್ಣನ ಕಂಡೆನು. ಎನ್ನ ಮನದ ಅರಿವಿನಲ್ಲಿ ಚೆನ್ನಬಸವಣ್ಣನ ಕಂಡೆನು. ಎನ್ನ ಭಾವವ ಕೊನೆಯ ಮೊನೆಯ ಮೇಲೆ ಅಲ್ಲಮ ಪ್ರಭುದೇವರ ಕಂಡೆನು. ಎಲೆ ಕಲಿದೇವಯ್ಯ , ನಿಮ್ಮ ಶರಣರ ಘನವನು ಎನ್ನ ಸರ್ವಾಂಗದಲ್ಲಿ ಕಂಡು ನಮೋ ನಮೋ ಎನುತಿರ್ದೆನಯ್ಯ !"

ಎಂದು ತನ್ನ ಧನ್ಯತೆಯನ್ನು ಹಾಡುತ್ತನೆ.

ಮಾಚಯ್ಯನ ಕಾಯಕಲೀಲಾವಿಲಾಸ ಮುಂದುವರಿಯುತ್ತದೆ. ಸೂರ್ಯೋದಯಕ್ಕೆ ಮುನ್ನವೆ ಶರಣರುಟ್ಟು ಬಿಟ್ಟ ಬಟ್ಟೆಗಳನ್ನು 'ಮಡಿವಳಗುಂಡ'ವೆಂದು ಇಂದಿಗೂ ಪರಮ ಪವಿತ್ರವೆನಿಸಿ ಮೆರೆಯುತ್ತಲಿರುವ ಗುಂಡಕ್ಕ ಕೊಂಡೊಯ್ಯುವುದು, ಅಲ್ಲಿ ಅವುಗಳನ್ನು ಮಡಿಗೊಳಿಸಿ ಒಣಗಿಸಿ ಗಳಿಗೆ ಮಾಡಿ ಗಂಟು ಕಟ್ಟುವುದು, ಆ ಗಂಟನ್ನು ತಲೆಯ ಮೇಲಿಟ್ಟುಕೊಂಡು ವೀರಘಂಟೆ ನುಡಿಸುತ್ತ ಬಸವಣ್ಣನವರ ಅರಮನೆಗೆ ಬರುವುದು.

"ಜಡರುಗಳಿರಾ ತೊಲಗಿ ಭೋ ಎನು
ತಡಿಗಡಿಗೆ ಜಯಘಂಟೆಯನು ಹೊಯಿ
ದೆಡೆಗೆಡೆಗೆ ಸಾರುತ್ತ ಶರಣನು ಮಠಕೆ ನಡೆತಂದು
ಮಡಿಗಳಂ ಮೃದುವಾಗಿ ಘಟ್ಟಿಸಿ
ಮಡಿಯ ಬಡೆಯರು ಬಂದು ಬೇಡಲು
ಕೊಡುವನೆಂತಹ ವಸ್ತವಾದೊಡು ನಮಿಸಿ ಮಾಚಯ್ಯ ॥ ಬ.ಪು.

ಕುಹಕರು ಎಲ್ಲೆಡೆಯಲ್ಲಿಯೂ ಇರುತ್ತಾರೆ, ಕಲ್ಯಾಣದಲ್ಲಯೂ ಇದ್ದರು. ಅವರಲ್ಲೊಬ್ಬ ಸುಮ್ಮಸುಮ್ಮನೆ ಒಮ್ಮೆ ಮಾಚಯ್ಯನನ್ನು ಹಾದಿಯಲ್ಲಿ ಕೆಣಕುತ್ತಾನೆ ; ಕೆಣಕಿ ಸಾವಿನ ಉಡಿಯಲ್ಲಿ ಬೀಳುತ್ತಾನೆ. ಬಿಜ್ಜಳ ಭೂಪಾಲನಿಗೆ ದೂರು ಹೋಗುತ್ತದೆ. 'ಅಗಸನಿಗೆ ಇಷ್ಟು ಅಹಂಕಾರವೆ!' ಎಂದು ಬಿಜ್ಜಳ ಗರ್ಜಿಸುತ್ತಾನೆ. 'ಬಸವನಾಡಿದ ಮಾತ ಕಸಕ್ಕಿಂತ ಕಡೆಮಾಡಿ' ಮಾಚಯ್ಯನನ್ನು ತುಳಿದೊರೆಸಿಬರಲು ಜಟ್ಟಿಗಳನ್ನೂ ಪಟ್ಟದಾನೆಯನ್ನು ಕಳಿಸುತ್ತಾನೆ.

ಮರುದಿನವೆ ನಸುಕ್ಹರಿದು ಹರಿಸಿದನು ದಿನದೊಡೆಯ
ಶರಣ ಮಾಚನಿಗೆ ಬಲುಬೆಳಕ । ಕಾಯಕದ
ಕಿರಣ ಬೆಳಗೆಂದು ಜಗಕೆಲ್ಲ ॥ –ಹಂತಿಯ ಪದ

ಜಟ್ಟಿಗಳೂ ಪಟ್ಟದಾನೆಯೂ ಮಡಿವಾಳ ಮಾಚಿದೇವನ ದಿವ್ಯಶಕ್ತಿಗೆ ಆಹುತಿಯಾಗುತ್ತವೆ. ಬಿಜ್ಜಳನಿಗೆ ಅರಿವು ತಲೆದೋರುತ್ತದೆ. 'ಮಾಚಯ್ಯ ಕ್ಷಮಿಸೆ'ನ್ನುತ್ತಾನೆ. 'ಕ್ಷಮಾ ವೀರಸ್ಯ ಭೂಷಣಂ' ಎಂಬಂತೆ ಮಾಚಯ್ಯ ಕ್ಷಮಿಸಿಬಿಡುತ್ತಾನೆ* ಸತ್ತ ಆನೆಯನ್ನೂ ಮಾವುತನನ್ನೂ ಜಟ್ಟಿಗಳನ್ನೂ ಬದುಕಿಸುತ್ತಾನೆ.

---

* ಜನಪದಗೀತೆ ಇನ್ನೂ ಮುಂದೆ ಹೋಗುತ್ತದೆ. ಬಿಜ್ಜಳ ಇನ್ನೂ ರೊಚ್ಚಿಗೆದ್ದು 'ನೀರು ಸಿಗದಂತೆ ಮಾಡುವೆನು–ಮಾಚನಿಗೆ, ಚಾರಕಾವಲನು ಜಲಕಿಡಿಸಿ' ಎಂದು

ಭಕ್ತಿಯ ಬೆಳ್ಳಸವನ್ನು ಎಣ್ಣೆಸೆಗೆ ಹರಡುತ್ತಾನೆ.
ಮುಂದೆ ಮಡಿವಾಳ ಮಾಚಯ್ಯನು–
ಮೂದಲಿಸಲುಂ ಮನಸುಗಳನಾ
ರೈದೊರೆದು ನೋಡಲು ಜಡತೆಯಂ
ಛೇದಿಸಲು ಭಾಷೆಗಳನೊದಗಿಸಲಸಮ ಭಕ್ತಿಯನು
ವೇದಿಸಲು ಶಿವನಾಜ್ಞೆಯಂ ಸಂ
ಪಾದಿಸಲು ಪಾಲಿಸಲಖಿಳರಂ...
ತಿಷ್ಟರುಗಳಂ ಕೃಪೆಮಾಡಿ ಸಲಹಲು

ಪ್ರಾರಂಭಿಸುತ್ತಾನೆ. "ಈ ಮಣಿಹವಾಗಿಳೆಗೆ ಬಂದ ಮಹಾಮಹಿಮ ಹರಮೂರ್ತಿ ಜಗದುದ್ಧಾಮ ವಿಶ್ರುತಕೀರ್ತಿ ತೇಜಸ್ಫೂರ್ತಿ ಮಾಚಯ್ಯ' ಸತ್ಯನಿಷ್ಠುರ. ತಪ್ಪೆಲ್ಲಿದ್ದರೂ ತೋರಿಸದೆ ಬಿಡುವವನಲ್ಲ.

ನುಲಿಯ ಚಂದಯ್ಯನವರೊಮ್ಮೆ ಕೆರೆಯಲ್ಲಿ ಹುಲ್ಲನ್ನು ತೊಳೆಯುತ್ತಿರುವಾಗ ಅವರ ಇಷ್ಟಲಿಂಗ ಜಾರಿ ಕೆರೆಯೊಳಗೆ ಬೀಳುತ್ತದೆ. "ತಾನಾಗಿಯೇ ಬಿದ್ದು ಹೋದ ಲಿಂಗನವನ್ನು ಮತ್ತೇಕೆ–ಧರಿಸುವುದು? ನಾನು ಭಾವಲಿಂಗವೊಂದನ್ನೇ ಪೂಜಿಸುವೆನು" ಎಂದು ಚಂದಯ್ಯನವರು ಇಷ್ಟಲಿಂಗವಿಲ್ಲದೆ ಇರುತ್ತಾರೆ. ಮಡಿವಾಳ ಮಾಚಯ್ಯನವರು, 'ಸವಿ ಸಾಕು, ಹಣ್ಣು ಬೇಡವೆನ್ನಬಹುದೆ? ಹಣ್ಣು ಇದ್ದರಲ್ಲವೆ ಸವಿ? ಇಷ್ಟಲಿಂಗ ಬೇಡ, ಭಾವಲಿಂಗ ಬೇಕೆಂಬುದು ಭ್ರಮೆ. ಅರಿವನರಿದಿಹೆನೆಂದು ಕ್ರಿಯೆಯ ಬಿಡಬಹುದೆ? ಕಚ್ಚುವ ತಗಣಿಗಾಗಿ ಮನೆಯ ಸುಟ್ಟವರುಂಟೆ? ಗುರುಪೂಜೆಯನರಿದೆನೆಂದು ಲಿಂಗಪೂಜೆಯ ಬಿಡಲಾಗದು. ಲಿಂಗಪೂಜೆಯನರೆದೆನೆಂದು ಜಂಗಮಪೂಜೆಯ ಬಿಡಲಾಗದು. ಜಂಗಮಪೂಜೆಯ ನರಿದಿಹೆನೆಂದು ಶರಣರ ಸಂಗವ ಬಿಡಲಾಗದು. ಇದು ಕಾರಣ ಶರಣರ ಸಂಗದ ಸಮ್ಯಜ್ಞಾನದಲ್ಲಲ್ಲದೆ ಕಲೀದೇವಯ್ಯನ ಕೂಡುವ ಕೂಟವ ಕಾಣಬಾರದು. ಹೋಹಬಾರ, ಚಂದಯ್ಯ' ಎಂದು ಚಂದಯ್ಯನನ್ನು ಅನುಭವ ಮಂಟಪಕ್ಕೆ ಎಳೆದು ತರುತ್ತಾನೆ. ಅಲ್ಲಿ ಚಂದಯ್ಯ ತಪ್ಪ ಒಪ್ಪಿ ಮತ್ತೆ ಇಷ್ಟಲಿಂಗ ಧರಿಸುತ್ತಾನೆ.

ಒಮ್ಮೆ ಬಸವಣ್ಣನವರ ಬಾಯಿಂದ, 'ಬೇಡುವ ಭಕ್ತರಿಲ್ಲದೆ ಬಡವಾದೆ'ನೆಂಬ ಉದ್ಗಾರ ಹೊರಡುತ್ತದೆ. ಭಕ್ತನೊಬ್ಬನ ಬಾಯಿಂದದು ಮಾಚಯ್ಯನ ಕಿವಿಯವರೆಗೂ

---

ಮಾಚಯ್ಯನಿಗೆ ವಸ್ತ್ರಗಳನ್ನೊಗೆಯಲು ನೀರೇ ಸಿಗದಂತೆ ಮಾಡುತ್ತಾನೆ. ಸಂಜೆಯವರೆಗೆ ಮಾಚಯ್ಯ ಮಡದಿಯೊಡನೆ ಎಲ್ಲೆಡೆಗಳನ್ನೂ ಸುತ್ತಿಯೇ ಸುತ್ತುತ್ತಾನೆ. 'ಮಡದಿಯನು

ಹೋಗುತ್ತದೆ. ಅದನ್ನು ಕೇಳಿ ಕಿವಿ ಮುಚ್ಚಿಕೊಳ್ಳುತ್ತಾನೆ ಮಾಚಯ್ಯ ! "ಬಸವಣ್ಣನವರಿಗೂ ಇಂಥ ಬಿಮ್ಮು ಬರಬೇಕೆ? ಶಿವಶಿವಾ, ಇದೇನನ್ನು ಕೇಳಿದೆ! ಇಂದೆಂಥ ಭಕ್ತಿಗ್ಲಾನಿ !" ಎಂದು ನೊಂದು ನುಡಿಯುತ್ತಾನೆ. ಈ ಸಂಗತಿಯನ್ನು ಕೇಳಿ ಬಸವಣ್ಣನವರು ಓಡಿಬರುತ್ತಾರೆ. ಮಾಚಯ್ಯನಿಗೆರಗಿ ಕ್ಷಮೆ ಬೇಡುತ್ತಾರೆ. 'ಬಸವಣ್ಣನವರೆ, ಉಳಿದ ಭಕ್ತರೆಲ್ಲ ಬೇಡುವುದಕ್ಕೇ ಹುಟ್ಟಿದ ಬಡ ಬಿಕನಾಸಿಗಳು; ನೀವು ಕೊಡಲಿಕ್ಕಾಗಿಯೇ ಹುಟ್ಟಿದ ಮಹೈಶ್ವರ್ಯದ ಮಹಾದಾನಿಗಳಲ್ಲವೆ?' ಎಂದು ಕಟಕಿ ನುಡಿಯುತ್ತಾನೆ ಮಾಚಯ್ಯ? ಬಸವಣ್ಣನವರು ಭೂಮಿಯಲ್ಲಿಳಿದುಬಿಡುತ್ತಾರೆ. 'ನಾನು ಮರವೆಯ ಮರುಳು, ನೀವು ಅರಿವಿನ ತಿರುಳು; ನಾನು ರಂಜಕ, ನೀವ್ ನಿರಂಜನರು. ನಾನು ಮರವೆಯಿಂದ ತಪ್ಪಿದ್ದನ್ನು ನೀವು ಅರಿವಿನಿಂದ ತಿದ್ದಬೇಕು' ಎಂದು ಬೇಡಿಕೊಳ್ಳುತ್ತಾರೆ. 'ವಿನಯ, ಶಾಂತಿ, ಇಂದ್ರಿಯನಿಗ್ರಹ, ನಿರ್ವಂಚನೆ, ಸತ್ಯ, ಸ್ಥಿರಬುದ್ಧಿ, ನಿಷ್ಕಪಟತ್ವ, ನಿರಹಂಕಾರ, ಕೈಂಕರ್ಯ, ಭೀತಿ, ಅನುಸರಣೆಗಳೇ ಭಕ್ತಿಯ ಕುರುಹುಗಳೆಂದು ಮಾಚಯ್ಯ ಭಕ್ತಿಯ ರಹಸ್ಯವನ್ನೊರೆದು ತನ್ನ ಕಾಯಕಕ್ಕೆ ಸಹಜವಾದ ರೀತಿಯಲ್ಲಿ ಬಸವಣ್ಣನವರನ್ನು ಸಮಾಧಾನಪಡಿಸುತ್ತಾನೆ. 'ಆಗಸ ಮುನಿವುದು ಮಲಿನಕ್ಕೆ, ವಸ್ತ್ರಕ್ಕಲ್ಲ, ಶರಣ ಮುನಿವುದು ಅವಗುಣಕ್ಕೆ, ಶಿವಭಕ್ತಗಲ್ಲ,

ನಾನೆಂಬುದನ್ನು ಮರೆತುಬಿಡಿರಿ. ಪುಟ್ಟವಿಟ್ಟ ಚಿನ್ನದಂತೆ ನಿಮ್ಮ ಭಕ್ತಿ ಇನ್ನಷ್ಟು ಥಳಥಳಿಸುತ್ತದೆ' ಎಂದು ಸಂತಯಿಸುತ್ತಾನೆ.

---

ಕರಕೊಂಡು ಕಡುಭಕ್ತಮಾಚಯ್ಯ । ಬಿಡದೆ ತಿರುಗಿದನು ಕೆರೆತೊರೆಯ । ಕಾವಲವು ನಡೆದಿತ್ತು ಎಲ್ಲಿ ಹೋದಲ್ಲಿ' ಹಿಡಿದ ಕಾಯಕ ಕೆಡುವುದಲ್ಲಾ' ಎಂದು ಮಡವಾಳ ಮಾಚಯ್ಯ ಮಿಡಮಿಡನೆ ಮಿಡುಕುತ್ತಾನೆ. 'ಹೊತ್ತು ಮುಳುಗುತ್ತ ಬಂತು, ಸತ್ಯ ನನ್ನದು ಹುಸಿಯಾಯ್ತು, ಕಾಯಕದ ಬುತ್ತಿ ತೀರತೈ ಈ ದಿನಕೆ' ಎಂದು ನೊಂದು ನಿಟ್ಟುಸಿರುಡುತ್ತಾನೆ. ಮಡದಿ ಮುಂದೆ ಬಂದು ಒಂದು ಉಪಾಯ ಸೂಚಿಸುತ್ತಾಳೆ. 'ಕಾಯಕ ಭಂಗಬೇಡ. ನನ್ನ ಎದೆಯನ್ನು ಇರಿಯಿರಿ. ಅಲ್ಲಿಂದ ಚಿಮ್ಮುವ ಕೆನ್ನೀರಿನಲ್ಲಿಯೇ ಇಂದು ವಸ್ತ್ರಗಳನ್ನು ಮಡಿ ಮಾಡಿರಿ' ಎನ್ನುತ್ತಾಳೆ. ಮಡದಿಯ ದೃಢಮನವನ್ನು ನೋಡಿ ಮಡಿವಾಳ ಮಾಚಯ್ಯ ಹಿಗ್ಗಿ, "ಹಡದಿಹಾಸಿದ ಮಾಚ ಮಡದಿಯೆದೆಯನೆ ಇರಿದು । ಒಡನೆ ಬಲುಚಿಮ್ಮಿ ಬಿಸಿರಗುತ ಹೊಳೆಯಾಗಿ । ಮಡುಗಟ್ಟಿ ನೀರಕೆರೆಮಾತು!" ಆ ಕೆರೆಯಲ್ಲಿ ಬಟ್ಟೆಗಳನ್ನು ತೊಳೆದು ಮಾಚಯ್ಯ ತನ್ನ ಕಾಯಕ ಕೊನೆಗಾಣಿಸುತ್ತಾನೆ. "ಮುತ್ತೈದೆ ನಿನಮರಣ ಎತ್ತಹೋದರು ಪೂಜೆ । ಕತ್ತುರಿಯ ನಾತವಿದ್ದಂತೆ– ಜಗದೊಳಗೆ । ಉತ್ತಮರ ಮನಕ್ಕೆ ಕಾಯಕವು!" ಆ ತಾಯಿ ತನ್ನ ಗಂಡನ ಕಾಯಕಕ್ಕಾಗಿ ತನ್ನನ್ನೇ ಬಲಿಕೊಟ್ಟು ಭುವನ ಪೂಜ್ಯಳಾಗುತ್ತಾಳೆ. "ಹಡದಿಹಾಸಿದ ಸ್ಥಳವು ಮಡದಿಯಾನೆತ್ತರವು! ಮಡುವು ಮಾಚಯ್ಯ ಕೆರೆಯೆಂದು–ಕಲ್ಯಾಣ । ಪಡುವಣಕೆ ಇಂದು ಮೆರೆಯುವುದು."

ಮುಂದೆ ಅಕ್ಕಮಹಾದೇವಿ ಆಗಮಿಸಲು ಆಕೆಯ ಆತ್ಮಶ್ರೀಗೆ ಮಾರು ಹೋಗಿ ಎದೆದುಂಬಿ ಹಾಡುತ್ತಾನೆ. "ಕಾಮಿಯಾಗಿ ನಿಃಕಾಮಿಯಾದಳು. ಸೀಮೆಯಲ್ಲಿರ್ದು ನಿಸ್ಸೀಮಳಾದಳು. ಭವಿಯ ಸಂಗವ ತೊರೆದು ಭವಬಾಧೆಯ ಹರಿಸಿದಳು. ಬಸವಣ್ಣ ಗತಿ ಎಂದು ಬರಲು ನಾನು ಮಡಿಯಹಾಸಿ ನಡೆಸಿದೆನು. ನಾನಡೆವುದಕ್ಕೆ ಹಾಸಿದ ಮಡಿಯ ಸರ್ವಾಂಗಕ್ಕೆ ಹೊದ್ದಳು. ಆ ಮಡಿಯ ಬೆಳಗಿನ ಬೆಳಗಿನೊಳಗೆ ನಿರ್ವಯಲಾದಳು. ಕಲಿದೇವಾ, ಮಹಾದೇವಿಯಕ್ಕಗಳ ನಿಲವ ಬಸವಣ್ಣನ ಕೃಪೆಯಿಂದಲರಿದೆನಯ್ಯಾ !"

ಇಂಥ ತೇಜಸ್ಸಿನ ಮುಂದೆ ತಲೆಬಾಗುವ ಮಾಚಯ್ಯನೇ ತಮಸ್ಸನ್ನು ಕಂಡಾಗ ಕೆಂಡವಾಗಿ ಕಿಡಿ ಸುರಿಸುತ್ತಾನೆ:

"ಅಯ್ಯಾ , ಕಡವ ತಿಂದು, ಹೆಂಡವ ಕುಡಿದು, ರಂಡೆಯ ಸಂಪರ್ಕವ ಮಾಡಿ ದಂಡವ ಕೊಡುವ ಜಗಭಂಡ ತಾಯ್ಗಂಡ ಹೆಂಡಗಾರರಿಗೆ ಸದ್ಭಕ್ತಿ ಶುದ್ಧವೀರ ಮಾಹೇಶ್ವರರೆಂದು ಮನದಲ್ಲಿ ಭಾವಿಸಿದರೆ ಹುಳಗೊಂಡದಲ್ಲಿಕ್ಕುವ ಕಾಣಾ ನಿಮ್ಮ ಶರಣ ಕಲಿದೇವರ ದೇವಾ" ಎಂದು ಗದ್ದರಿಸುವ ಮಾಚಯ್ಯ, 'ಕಾಯದ ಕರಸ್ಥಲದಲ್ಲಿ ಲಿಂಗ ಸ್ವಾಯತವ ಮಾಡುವೆ; ಕ್ರೋಧದ ನಯನದಲ್ಲಿ ಜಂಗಮ ಸ್ವಾಯತವ ಮಾಡುವೆ; ಜಿಹ್ವೆಯ ಕೊನೆಯಲ್ಲಿ ಪ್ರಸಾದ ಸ್ವಾಯತವ ಮಾಡುವೆ' ಎಂದು ಸೌಮ್ಯವಚನ ನುಡಿಯಲೂ ಬಲ್ಲ. ಅಂಗದ ಮೇಲೆ ಲಿಂಗವಿಲ್ಲದವರೆಲ್ಲ ಭವಿಗಳೆಂದು ತಿಳಿದು ಅವರನ್ನು ಮಾಚಯ್ಯ ದ್ವೇಷಿಸುತ್ತಿದ್ದನೆಂಬುದು ಮಿಥ್ಯಾಪವಾದ. ಮಾಚಯ್ಯನಿಗಿಂತಲೂ ಮನೋಜ್ಞವಾಗಿ ಭವಿತನದ ವ್ಯಾಖ್ಯೆಯನ್ನು ಬರೆದವರಿಲ್ಲ:

"ತನಗನ್ಯವಾದುದ ನೋಡಿದಡೆ ಭವಿಸಂಗ ;
ಸತ್ಯರು ಒಪ್ಪಿದುದನೊಪ್ಪದಿರ್ದಡೆ ಭವಿಸಂಗ ;
ಮಾಡಿಕೊಂಡ ವ್ರತವ ಮೀರಿದಡೆ ಭವಿಸಂಗ ;
ತಾ ಮಾಡಿದ ಭಕ್ತಿಯಾನಾಡಿಕೊಂಡಲ್ಲಿ ಭವಿಸಂಗ.
ಇಂತಿವನರಿದಡೆ ಸದ್ಭಕ್ತಿ ಕಲಿದೇವರದೇವಾ !"

**ಮನುಕುಲಕ್ಕೆ ಮಾಚಯ್ಯನಿತ್ತ ಸಂದೇಶವೂ ಅಷ್ಟೇ ಮನೋಜ್ಞವಾಗಿದೆ :**

"ವಾಯುಗುಣವ ಸರ್ಪ ಬಲ್ಲುದು;
ಮಧುರಗುಣವನಿರುವೆ ಬಲ್ಲುದು;
ಗೋತ್ರದ ಗುಣವ ಕಾಗೆ ಬಲ್ಲುದು,
ಇದು ಕಾರಣ, ಮನುಷ್ಯ ಜನ್ಮದಲ್ಲಿ ಬಂದು ಶಿವಜ್ಞಾನವರಿಯದಿದ್ದರೆ

ಆ ಕಾಗೆ ಕೋಳಿಗಳಿಂದ ಕರಕಷ್ಟಕಾಣಾ ಕಲಿದೇವರದೇವಾ !"

'ಶಿವಭಕ್ತಿನಾಗಿ ಹುಟ್ಟಿ ಭಕ್ತಿ ಪಕ್ಷವಿಲ್ಲದಿದ್ದಲ್ಲಿ ಕಾಗೆ ಕೋಳಿಗಳಿಂದ ಕರಕಷ್ಟ ಕಾಣಾ, ಕೂಡಲಸಂಗಮದೇವಾ' ಎಂದರು ಬಸವಣ್ಣನವರು; 'ಶಿವಜ್ಞಾನವರಿಯದಿದ್ದರೆ ಕಾಗೆಕೋಳಿಗಳಿಂದ ಕರಕಷ್ಟಕಾಣಾ, ಕಲಿದೇವರ ದೇವಾ, ಎಂದರು ಮಾಚಣ್ಣನವರು. ಇವರಿಬ್ಬರ ಸಂಯುಕ್ತ ಸಂದೇಶ–ಶಿವಭಕ್ತಿ +ಶಿವಜ್ಞಾನ–ಎಲ್ಲ ಕಾಲಕ್ಕೂ ಎಲ್ಲರೂ ಒಪ್ಪುವ ಸಂದೇಶ. ಬರಿಯ ಭಕ್ತಿಯಲ್ಲ, ಶಿವಭಕ್ತಿ; ಬರಿಯ ಜ್ಞಾನವಲ್ಲ, ಶಿವಜ್ಞಾನ. ಬರಿಯ ಜ್ಞಾನ ಸಾಧಕವಾಗದೆ ಬಾಧಕವಾಗಬಲ್ಲುದು. 'ತನು ನಿರ್ವಾಣ, ಮನ ಸಂಸಾರ; ಮಾತು ಬ್ರಹ್ಮ, ನೀತಿ ಅಧಮ; ಅದೇತರ ಅರಿವು, ಘಾತುಕನ ಕೈಯ ಕತ್ತಿಯಂತೆ' ಎಂದು ಮಾಚಯ್ಯನವರೇ ಎಚ್ಚರಿಸಿಲ್ಲವೆ?

ಮಾಚಯ್ಯನ ಮಾತುಗಳು ಜ್ಯೋತಿರ್ಲಿಂಗಗಳಾದುದೂ ಉಂಟು :

'ಮಾಡುವ ಭಕ್ತಂಗೆ, ಒಲಿವದೇವಂಗೆ ಭೇದ ಉಂಟೆ ಅಯ್ಯಾ?'

'ಅರಳುಗಂಗಳವರಿಗೆ ಹರಳುಗಂಗಳವರು ಸೈರಿಸದಂತೆ'

'ತಾನೆಂಬ ನುಡಿಗೆ ನಾಚಿ, ನೀನೆಂಬ ನುಡಿಗೆ ಹೇಸಿ, ತಾನುತಾನಾದ ಘನಮಹಿಮ'

'ನೋಟದಲ್ಲಿ ಅನಿಮಿಷ' ಕೂಟದಲ್ಲಿ ನಿಸ್ಸಂಗಿ, ಎಡೆಯಾಟದಲ್ಲಿ ನಿರ್ಗಮನ, ನಿಂದಲ್ಲಿ ನಿರಾಳ, ಸುರಾಳದಲ್ಲಿ ಪರಿಪೂರ್ಣ.'

'ಸಂಸಾರದ ಸಾರಾಯದ ತನಿರಸವ ಹಿಂಡಿ ಹಿಳಿದಾಡಿದರಯ್ಯ !'

'ಮಹಾಜ್ಞಾನದಲ್ಲಿ ಬೆಳಗುವುದು, ನಿಜನಿರಾಳದಲ್ಲಿ ನಿವಾಸಿಯಾಗಿಪ್ಪುದು'

'ನಿತ್ಯ ಸತ್ಯದೊಳಡಗಿ, ಸತ್ಯವಾಚಾರದೊಳಡಗಿ, ಆಚಾರ ಅನುಭಾವದೊಳಡಗಿ,

ಅನುಭಾವ ಜ್ಞಾನದೊಳಡಗಿ, ಮಹಾಜ್ಞಾನ ಮನೋಲಯದೊಳಡಗಿ, ಮನೋಲಯವೆ ಮಹಾ ಘನವಾಗಿತ್ತು–ಕಲಿದೇವರ ದೇವಾ, ನಿಮ್ಮ ನಿಜೈಕ್ಯವು !'

'ತನುನಷ್ಟ, ಮನನಷ್ಟ, ನೆನಹುನಷ್ಟ, ಭಾವನಷ್ಟ, ಜ್ಞಾನನಷ್ಟ–ಇಂತೀ ಪಂಚನಷ್ಟದೊಳಗೆ ನಾನಷ್ಟವಾದೆನು ಆ ನಷ್ಟದೊಳಗೆ ನೀನಷ್ಟವಾದೆ.'

'ಘಟದೊಳಗೆ ತೋರುವ ಸೂರ್ಯನಂತೆ ಸರ್ವರೊಳಗೆ ಶಿವಚೈತನ್ಯವಿದೆ.'

'ಅರಿದು ಆಚರಿಸಬಲ್ಲಾತನೇ ಅಚ್ಚ ಶರಣ'

'ಶಿವ ನಿಮ್ಮ ಮುಟ್ಟದ ಮನವಿದ್ದೋಡೇನಯ್ಯ ತನುವಿನೊಳಗೆ?'

ಹೀಗೆ ಇನ್ನೂ ಅನೇಕ ಆಣಿಮುತ್ತುಗಳನ್ನು ಉದಾಹರಿಸಬಹುದು.

ಮಾಚಯ್ಯನದು ಅನೇಕಮುಖಿ ವ್ಯಕ್ತಿತ್ವ. ಕಾಯಕರತಿ, ವೀರಶ್ರೀ, ಜ್ಞಾನಪ್ರಭೆ, ಸತ್ಯನಿಷ್ಠೆ, ನ್ಯಾಯನಿಷ್ಠುರತೆ, ನಿರಹಂಕಾರ, ನಿರ್ವಂಚಕತ್ವ–ಇತ್ಯಾದಿಗಳ ಸತ್ವಸಂಕಲನ ಆತನ ವ್ಯಕ್ತಿತ್ವ. ಕಲ್ಯಾಣದ ಕ್ರಾಂತಿಯಲ್ಲಿ ಆತನ ಪಾತ್ರ ಮಹತ್ತರವಾದುದು. ಶರಣರಿಗೆ ಗಂಡಾಂತರ ಕಾಲಬರಲು ಅವರ ಬೆನ್ಗೆ ಭೀಮ ರಕ್ಷೆಯಾಗಿ ನಿಲ್ಲುತ್ತಾನೆ. ಬೆನ್ನಟ್ಟಿ ಬಂದ ಅಳಿಯ ಬಿಜ್ಜಳನ ಸೇನೆಯನ್ನು ಕಾಲರುದ್ರನಂತೆ ಖಂಡಿಸುತ್ತ ಹೊರಡುತ್ತಾನೆ ಗಂಡುಗಲಿ ಮಾಚಯ್ಯ.

“ಕಾದರೊಳ್ಳಿಯ ಮುಂದೆ ಕಾದಿದರು ಜಂಗಮರು
ಕಾದಿ ಹಿಮ್ಮೆಟ್ಟಿ ಅರಿಗಳನು । ಮುರಗೋಡ
ಹಾದಿಯೊಳು ಮುರಿದ ಮಾಚಯ್ಯ “
ತುಂಡಜಂಗಮದಂಡು ದಂಡನಾಯಕ ಮಾಚ । ಕಂಡಕಂಡಲ್ಲಿ ವೈರಿಗಳ
ಚೆಲ್ಲಿದರು । ಚೆಂದಕಳಕೊಂಡ ಮರಿ ಅರಸ ॥
ಕೊನೆಗೊಮ್ಮೆ ಶರಣರ ಬೆಂಬತ್ತಿ ಬಂದಿದ್ದ ವಿಪತ್ತು ಪರಿಹಾರವಾಗುತ್ತದೆ.
ಉಳಿವೆಯಲ್ಲಿ ಮತ್ತೆ ತತ್ತ್ವಮಂಪಟ ಕಟ್ಟುತ್ತದೆ.
ಚೆನ್ನಬಸವೇಶ್ವರನು ಉನ್ನತನುಭಾವಿಗಳು
ಚಿನ್ಮಯವಾತು ಆ ಉಳಿವೆ.
ಆದರೆ ಮಾಚಯ್ಯ ಅಲ್ಲಿರಲಿಲ್ಲ.
‘ಶಿವನೆ ಶಿವಧೋ ಹರನೆ ಭವದೊಳಗೆ ಬೇಡಿನ್ನು
ತವಕದೊಯ್ಯೆಂದು ಮಾಚಯ್ಯ ಹಿಪ್ಪರಗಿ
ಗವಿಯ ಸಂಗನೊಳು ಒಂದಾದ !

ಇಂದಿಗೂ ಅಲ್ಲಿ ಆತನ ಜಾತ್ರೆ ನಡೆದಾಗ ನೆರೆದ ಜನ ಸಂಭ್ರಮದಿಂದ ಹಾಡುತ್ತಾರೆ;

‘ಹೊನ್ನೀಯ ಹುಳದಂಥ ಮುನ್ನೂರು ದೀವಟಿಗಿ
ಹೊನ್ನಹಿಪ್ಪರಿಗಿ ಬಯಲಾಗ–ಮಾಚಯ್ಯ
ಬನ್ನಿಯ ಮುಡಿದು ಬರತಾನೊ !’
‘ಹಿಪ್ಪರಿಗಿ ಶರಣನಿಗೆ ತಪ್ಪದಲೆಬಾಗುವೆವು
ಮುಪ್ಪಾಗದಿರಲಿ ನಮ್‌ಹಾಡು ! ಮಾಚಯ್ಯ
ಅಪ್ಪಿ ಹಾದಿಯನು ತೋರಿಸಲಿ !’

■

# ತ್ರಿಮಲದೂರ ತುರುಗಾಹಿ ರಾಮಣ್ಣ

"ನೇಮದಿಂದ ಶರಣರ ಬಾಗಿಲಲ್ಲಿ ಹೋಗಿ ಕಟ್ಟಿದ ಹಸು ಕೂಡಿದ ಹಸು ಬಿಡಿರೆ ಎಂದು ಕೂಗುತ್ತಿದ್ದೇನೆ. ಎನ್ನ ಕೂಗಿನ ದನಿಯಿಂದ ಮಹಾಶರಣರ ಸತಿ ಬಂದು ಕಟ್ಟಿದ ಹಸುವ ಬಿಟ್ಟು ಕೂಡಿದ ಎತ್ತ ಕಡಹಿ ನಾಳೆ ಕೊಡಿ ಎಂದು ಹೊಡೆವುತ್ತಿದ್ದೇನೆ, ಗೋಪತಿನಾಥ ವಿಶ್ವೇಶ್ವರ ಲಿಂಗದಡಿಗಾಗಿ !"

ತುರುಗಾಹಿಗೆ ಇಷ್ಟೊಂದು ಅಧ್ಯಾತ್ಮದಲ್ಲಿ ಆಸಕ್ತಿಯೆ? ಹೌದು, ಬಸವಣ್ಣನವರ ಭಕ್ತಿಪಕ್ಷಕ್ಕೆ ಸೇರಿ ಸರ್ವ ವೃತ್ತಿಯವರೂ ಶುದ್ಧರಾಗಿ ಸಿದ್ಧರಾದಂತೆ ತುರುಗಾಹಿ ರಾಮಣ್ಣನೂ ದನ ಕಾಯ್ದು ದಿವ್ಯಾನುಭವವನ್ನು ಪಡೆದ. ಮಾಡುವ ಮಾಟಕ್ಕೆ ಮಹತ್ವವಿಲ್ಲ. ಅದರ ಹಿಂದಿನ ಘನಮನಕ್ಕೆ ಮಹತ್ವವಿದೆಯೆಂಬುದನ್ನು ಉಳಿದ ಶರಣರು ತೋರಿದಂತೆ ತುರುಗಾಹಿ ರಾಮಣ್ಣನೂ ತೋರಿದ; ಇಹದ ಜೀವಿಕೆಯಲ್ಲಿ ದೇವಭಾವವನ್ನು ಅಳವಡಿಸಿಕೊಂಡು ಪರವ ಸಾಧಿಸಿಕೊಂಡು ಪರಮ ಪ್ರಕಾಶವಾದ.

"ಜ್ಞಾಣ ನೇತ್ರ ಮುಸುಕು ತೆಗೆ"ವುದಕ್ಕೆ ಸಾಧನವಾಯಿತು ಅವನ ಕಾಯಕ. ಊರ ದನಗಳನ್ನೆಲ್ಲ ಹುಲ್ಲು ಮೇಯಿಸಲು ಅಡವಿಗೆ ಕೊಂಡೊಯ್ಯುತ್ತಿರುವಾಗಲೂ ಅವನ ಮನಸ್ಸು ಅಧ್ಯಾತ್ಮಚಿಂತನೆಯಲ್ಲಿರುತ್ತಿದ್ದಿತೆಂಬುದಕ್ಕೆ ಅವನ ಈ ವಚನ ನಿದರ್ಶನ;

> "ಕೋಲೊಂದರಲ್ಲಿ ಹಲವು ಕುಲದ ಗೋವುಗಳ ಚಲಿಸದೆ ನಿಲಿಸುವಂತೆ
> ಏಕಚಿತ್ತನಾಗಿ ಸರ್ವವಿಕಾರಂಗಳ ಕಟ್ಟುವಡೆದು, ಇಂದ್ರಿಯಂಗಳ ಇಚ್ಛೆ
> ಯಲ್ಲಿ ತ್ರಿವಿಧವ ಹಿಡಿದಿರುಹುವರ ಸಂದಿಯಲ್ಲಿ ನುಸುಳದೆ ವಸ್ತುವಿನ
> ಅಂಗದಲ್ಲಿಯೆ ತನ್ನಂಗ ತಲ್ಲೀಯವಾಗಿಪ್ಪುದೆ ಮಹಾ ನಿಜದ ನೆಲೆ.
> ಗೋಪತಿನಾಥ ವಿಶ್ವೇಶ್ವರ ಲಿಂಗವನರಿವುದಕ್ಕೆ ಇದೇ ಬಟ್ಟೆ !"

ಅತ್ತಿತ್ತ ಹರಿವ ಹಸುಗಳು ಹಲವಾಗಿರಬಹುದು, ಹಲವು ಕುಲದವಾಗಿರಬಹುದು. ಅವುಗಳನ್ನು ನಿಲಿಸುವ ಕೋಲೊಂದೆ-ತುರುಗಾಹಿಯ ಕೈಯ ಕೋಲು ಮನದ ವಿಕಾರಗಳು ಹಲವು ಬಗೆಯವಾಗಿರಬಹುದು. ಅವುಗಳನ್ನು ನಿಲಿಸುವ ಸಾಧನವೊಂದೆ. ಇಂದ್ರಿಯಗಳ ಇಚ್ಛೆಯೆಂತೆ ಕುಣಿವವರ ಸಂಗ ಬಿಡಬೇಕು; ವಸ್ತುವಿನ ಅಂಗದಲ್ಲಿಯೆ

ತನ್ನಂಗ ತಲ್ಲೀಯವಾಗಿರಬೇಕು ; ಅಂಥ ಏಕಚಿತ್ತವನ್ನು ಗಳಿಸಿಕೊಳ್ಳಬೇಕು. ಇದೇ ಮಹಾನಿಜದ ನೆಲೆ; ಇದೇ ಲಿಂಗವನ್ನರಿವುದಕ್ಕೆ ಬಟ್ಟೆ!

ವೃತ್ತಿ ತತ್ತ್ವಮಯವಾದಾಗ ನೋಡಿದುದೆಲ್ಲ ದಿವ್ಯದರ್ಶನ, ನುಡಿದುದೆಲ್ಲ ದಿವ್ಯಾನುಭವವಾಗುವುದೆಂಬುದಕ್ಕೆ ಮೇಲಿನ ವಚನ ಉದಾಹರಣೆ. ಒಬ್ಬ ದನ ಕಾಯುವವನ ಅಂತರಂಗ ಅರಳಿ ಅವನಿಂದ ಇಂಥ ಆತ್ಮಗೀತೆಗಳು ಹೊರಬೀಳಬೇಕಾದರೆ ಅಂದಿನ ವಾಯುಮಂಡಲದಲ್ಲಿಯೇ ಆತ್ಮಜ್ಞಾನದ ತುಂತುರು ಹನಿಗಳು, ತುಷಾರಗಳು ನಿಬಿಡವಾಗಿ ನೆಲೆಗೊಂಡಿದ್ದುವೆಂದು ತೋರುತ್ತದೆ.

ತುರುಗಾಹಿ ರಾಮಣ್ಣನ ಐಹಿಕ ಜೀವನದ ಚರಿತ್ರೆಯನ್ನು ಎರಡು ಸಾಲುಗಳಲ್ಲಿ ಮುಗಿಸಿಬಿಡಬಹುದು–ಅಷ್ಟು ನಿರಾಡಂಬರ ಸುಂದರ ಅವನ ಜೀವನ. ಮೈಯುಬ್ಬಿಸುವ ಘಟನೆಗಳಿಂದ ತುಂಬಿದ ಜೀವನ ಅವನದಲ್ಲ. ಅವನು ರಾಜನಲ್ಲ, ಪವಾಡಪುರುಷನಲ್ಲ, ಧರ್ಮಸ್ಥಾಪಕನಲ್ಲ, ದೇಶವನ್ನು ಸಂಚರಿಸಿ ವಾದಗಳನ್ನು ಗೆದ್ದು ವಿಜಯ ಸ್ತಂಭವನ್ನು ನಿಲ್ಲಿಸಿದವನಲ್ಲ , ಧೀಮಂತನಲ್ಲ , ಶ್ರೀಮಂತನಲ್ಲ, ದಾನ ಧರ್ಮ ಯಜ್ಞಯಾಗಗಳನ್ನು ಮಾಡಿ ಧರ್ಮಾತ್ಮನೆಂದು ನೆಗಳ್ತೆ ಪಡೆದವನಲ್ಲ– ಊರ ದನಕಾಯ್ದು, ಪರಿಶುದ್ಧ ಕಾಯಕ ನಡಸಿ, ಸದ್ದಿಲ್ಲದೆ, ಗದ್ದಲವಿಲ್ಲದೆ, ಕಾನನದಿ ಮಲ್ಲಿಗೆಯು ಮೌನದಿಂ ಬಿರಿದು ನಿಜ ಸೌರಭವನೆಲ್ಲೆಡೆಗೆ ಸೂಸುವಂತೆ, ಎಲ್ಲಿಯೋ ಅಡವಿಯಲ್ಲಿ ಹಸುಗಳೊಡನೆ ಹಸುವಾಗಿ ಬಾಳಿ, ಹಸನಾಗಿ ಬಾಳಿ, ಭಕ್ತಿರಸದಲ್ಲಿ ಮಿಂದು, ಮಹದಲ್ಲಿ ನಿಂದು, ಲಿಂಗದಲ್ಲಿ ಒಂದಾದ ಜೀವ ಅದು ತನ್ನ ಸುತ್ತು ನೆರೆದ ಬಣ್ಣ ಬಣ್ಣದ ಹಸುಗಳನ್ನು ನೋಡಿ ಹಿಗ್ಗಿ, ಶ್ವೇತ ಪೀತ ಹರಿತ ತಪೋತ ಕೃಷ್ಣ ಗೌರವ ಮಾಂಜಿಷ್ಟ ಕಪಿಲ ಕರ್ಬುರ ಅಳಗ ಬೊಟ್ಟಳಗ– ಇಂತೀ ದಶವರ್ಣದ ಪಶುನಾವದ ಅನುವರಿತು ಸೌಜ್ಞೆ, ಘರ್ಜನೆ, ತ್ರಾಡನೆ ತ್ರಿವಿಧ ಭೇದಂಗಳಿಂದ ಕಾದೊಪ್ಪಿಸಬೇಕು–ಗೋಪತಿ ವಿಶ್ವೇಶ್ವರ ಲಿಂಗಕ್ಕೆ!"ಎಂದ ದಶವರ್ಣದ ಪಶುಗಳನ್ನೂ, ದಶೇಂದ್ರಿಯಗಳನ್ನೂ ಏಕಕಾಲಕ್ಕೆ ಕಾಯುತ್ತ, "ಆವಾದ ಭೇದಂಗಳಿಂದ ಬಂದಡೂ ಕಾವುದೊಂದೇ ಭೇದ. ಹೆಣ್ಣು, ಹೊನ್ನು, ಮಣ್ಣು ಕಾವಲ್ಲಿ ಸಜ್ಜನಂಗಲ್ಲದೆ ಅಶಕ್ಯ ನೋಡಾ. ಆವಕಾವಲ್ಲಿಯಾದಡೂ ಭಾವ ಶುದ್ಧವಾಗಿರಬೇಕು. ಈ ಗುಣ ಅರಿವಿನ ತುರುವಿನ ಹಾದಿ, ತುರುಗಾಹಿ ರಾಮನ ಪಥ, ಗೋಪತಿನಾಥ ವಿಶ್ವೇಶ್ವರ ಲಿಂಗವನರಿವುದಕ್ಕೆ ಸಪಥರ ಪಥ" ಎಂದು ದಾರಿ ತೋರಿದ ಧನ್ಯಾತ್ಮ ತುರುಗಾಹಿ ರಾಮಣ್ಣ.

"ಆವ ಕಾವಲ್ಲಿಯಾದಡೂ ಭಾವಶುದ್ಧವಾಗಿರಬೇಕು" ಎಂಬುದವನ ಜೀವನ ಸೂತ್ರ. ಆವಕಾವಲ್ಲಿಯೇ ಏಕೆ? ಯಾವ ಉದ್ಯೋಗದಲ್ಲಿಯಾದರೂ ಭಾವ

ಶುದ್ಧಿಬೇಕು. ಭಾವಶುದ್ಧಿಯಿಂದ ಮಾಡಿದ ಕರ್ಮ ನಿರ್ಮಳವಾಗಿ ಕಾಯಕವಾಗುತ್ತದೆ. ನಿಜಕ್ಕೆ ನಿಚ್ಚಣಿಕೆಯಾಗುತ್ತದೆ. ಇದನ್ನುಳಿದು ಶಾಸ್ತ್ರಪ್ರಮಾಣವನ್ನು ಮಾತ್ರ ಆಶ್ರಯಿಸಿದರೆ ಶಾಸ್ತ್ರವೇ ಶಸ್ತ್ರವಾಗುತ್ತದೆ. ರಾಮಣ್ಣನಿದನ್ನು ರಮಣೀಯವಾಗಿ ಚಿತ್ರಿಸಿದ್ದಾನೆ.

> "ಶಾಸ್ತ್ರ ಪ್ರಮಾಣವೆಂಬ ಬೆಟ್ಟದಲ್ಲಿ ವಾಚಾರಚನೆಯೆಂಬ ಉರಿಹುಟ್ಟಿ,
> ಅರಿದೆನೆಂಬ ಹಿರಿದಪ್ಪ ಬೆಟ್ಟದಲ್ಲಿ ಗೆಲ್ಲಸೋಲವೆಂಬ ಮತ್ತಗಜ ಹುಟ್ಟಿ,
> ಮೊನೆ ಮುಂಬರಿದು ಹರಿದ ಬೆಟ್ಟದಲ್ಲಿ ಪರಿಭ್ರಮಣದ ತೋಳ ಹುಟ್ಟಿ,
> ಹುಲಿಹುಲ್ಲೆಯ ಕೋಡಿನಲ್ಲಿ ಸತ್ತು, ಗಜಅಜದ ಮೆಲುಕಿನಲ್ಲಿ ಸಿಕ್ಕಿ,
> ತೋಳ ಮಿಡಿವಿನ ಕಣ್ಣಿನೊಳಡಗಿ ತಿರುವಿನ ಮುಂದೆ ಬರಿಕೆಯುತ್ತಿದೆ,
> ಗೋಪತಿನಾಥ ವಿಶ್ವೇಶ್ವರ ಲಿಂಗವನರಿದಿಹೆನೆಂದು."

ಅರಿದೆ ಅರಿದೆನೆಂಬವರ ತಲೆ ತುರಿಸಹಚ್ಚುತ್ತದೆ ತುರುಗಾಹಿ ರಾಮಣ್ಣನ ವಚನ ! ಶಾಸ್ತ್ರ ಪ್ರಮಾಣವೆಂಬ ಬೆಟ್ಟ, ಅರಿದೆನೆಂಬ ಬೆಟ್ಟ, ಮೊನೆ ಮುಂಬರಿದು ಹರಿದಬೆಟ್ಟ–ಅಲ್ಲಿ ವಾಚಾರನೆಯ ಉರಿ, ಗೆಲ್ಲಿಸೋಲವೆಂಬ ಮತ್ತಗಜ, ಪರಿಭ್ರಮಣದ ತೋಳ ! ಹೆಮ್ಮೆಯ ಹುಲಿ ಹುಲ್ಲೆಯ ಕೋಡಿನಲ್ಲಿ ಅಡಗುವ, ಮದದ ಗಜ ಅಜದ ಮೆಲುಕಿನಲ್ಲಿ ಸಿಕ್ಕಿ ಸಾಯುವ, ತಿಳಿದೆನೆಂಬ ತೋಳ ಮಿಡಿವಿನ ಕಣ್ಣಿನೊಳಡಗುವ ದೃಶ್ಯ ! ಹುಲಿಯ ಕ್ರೋಧ, ಆನೆಯ ಮದ, ತೋಳನ ಲೋಭ, ತುರುವಿನ ಅಹಿಂಸೆಯಲ್ಲಿ ಅಡಗುವ ದೃಶ್ಯ ! ಏನು ಬೇಕಾದರೂ ಅರ್ಥ ಮಾಡಿರಿ ಅನುಭಾವಿಯ ವಚನಕ್ಕೆ !

ವಾಚಾರಚನೆ ಬೇಡ, ಅರಿದೆನೆಂಬ ಗರುವಬೇಡ : "ಕಾವುದು, ಕಟ್ಟುವುದು, ಮೀರಿದಡೆ ಹೊಡೆವುದು" ಇಂದ್ರಿಯಗಳ ಪಶುಗಳನ್ನು ! "ಗಣ್ಣಿನ ಕೋಲ ಹಿಡಿದು ಗೋಮ ಕಾವುತ್ತಿರಲಾಗಿ ಕಾವಗಣ್ಣಿನಲ್ಲಿ ಕರ್ಮವಡಗಿ, ಕಟ್ಟುವ ಗಣ್ಣಿನಲ್ಲಿ ಧರ್ಮವಡಗಿ, ಮೀರುವ ಗಣ್ಣಿನಲ್ಲಿ ಮರ್ಮವಡಗಿ ತ್ರಿವಿಧವನೊಳಕೊಂಡ ಕೋಲುಗೋವಿನ ಬೆನ್ನಿನಲ್ಲಿ ಲಯವಾಯಿತ್ತು ಗೋಪತಿನಾಥ ವಿಶ್ವೇಶ್ವರಲಿಂಗವನರಿಯಲಾಗಿ !"

ಹೀಗೆ ಆವಕಾವಲ್ಲಿ ಕರ್ಮವಡಗಿತು, ಆವಕಟ್ಟುವ ಗಣ್ಣಿನಲ್ಲಿ ಧರ್ಮ ಅಡಗಿತು, ಮೀರುವ ಗಣ್ಣಿನಲ್ಲಿ ಮರ್ಮವಡಗಿತು. 'ಹಸುವಿಗೆ ಹಾಗ, ಎತ್ತಿಗೆ ಹಣವಡ್ಡ, ಕರಿವಿಗೆ ಮೂರು ಹಣ' ಕೂಲಿಯ ಕೊಂಡು, ಎಮ್ಮೆ ಕೋಣ, ಅಜ್ಞಾನ ಅಹಂಕಾರ, ಗಳಕುಲವ ಕಾಯದೆ, 'ಹಸುವಿಂಗೆ ಒಂದು ಕಚ್ಚು, ಎತ್ತಿಂಗೆ ಎರಡು ಕಚ್ಚು, ಕರುವಿಂಗೆ ಮೂರು ಕಚ್ಚು–ಇಂತಿವ ನೋಡಿ ಮೇಯಿಸಿಕೊಂಡು ತೊಂಡು ಹೋಗದಂತೆ ಕಾದೊಪ್ಪಿಸಿದ' ರಾಮಣ್ಣ ಆತ್ಮಾರಾಮ ವಿರಾಮಿಯಾದನು; ಉದಯದಲ್ಲಿ "ಬ್ರಹ್ಮನ ಕಾವೆ, ಮಧ್ಯಹ್ನಕ್ಕೆ ವಿಷ್ಣುವ ಕಾವೆ, ಅಸ್ತಮಯದಲ್ಲಿ ರುದ್ರನ

ಕಾವೆ. ಕತ್ತಲೆಯಾದ ಮತ್ತೆ ತಮ್ಮ ತಮ್ಮ ಮಂದೆಗೆ ಹೊಡೆದು, ಈ ಕಾವ ಕಟ್ಟಿಗೆಯನ್ನಿನ್ನೆಂದು ಬಿಡುವೆ? ಗೋಪತಿನಾಥ ವಿಶ್ವೇಶ್ವರ ಲಿಂಗವು ನಷ್ಟವಹನ್ನಕ್ಕ ಎನ್ನ ಕಯ್ಯ ಕಟ್ಟಿಗೆ ಬಿಡದು !" ಎಂದು ಕಾವಕಟ್ಟಿಗೆಯನ್ನು ಹಿಡಿದ ರಾಮಣ್ಣ ಕಾವನ ಸೊಕ್ಕು ಮುರಿದು ದೇವನ ಮೆಚ್ಚಿನ ಮಗನಾದನು; "ಹಸುವ ಕಾವಲ್ಲಿ ದೆಸೆಯನರಿತು, ಎತ್ತ ಕಾವಲ್ಲಿ ಪೃಥ್ವಿಯನರಿತು, ಕರುವ ಕಟ್ಟುವಲ್ಲಿ ಗೊತ್ತಕಂಡು, ಧನವ ಕಾವಲ್ಲಿ ಸಜ್ಜನನಾಗಿ, ಜೀವಧನದ ಕಂಡಲ್ಲಿ ಮನಮುಟ್ಟಿದೆ" ಹುಟ್ಟಳಿದು ಹೋದ ರಾಮಣ್ಣ ! "ಮೂರನರಿದು, ಮೂರು ಮರೆದು, ಮೂರವೇದಿಸಿ, ಅಯಿದ ಕಾಣಿಸಿಕೊಂಡು, ಆರರ ಅರಿಕೆ ಹಿಂಗಿ, ಮತ್ತಿಪ್ಪತ್ತೈದರ ಭೇದವಡಗಿ, ಮತ್ತೊಂದರಲ್ಲಿ ಕಂಡಿಹೆನೆಂಬ ಸಂದುಸಲೆ ಸಂದು ಒಂದಿ ಒಂದಾದ" ಆನಂದ ನಿಧಿ ರಾಮಣ್ಣ!

ಒಮ್ಮೆ ಕುದುರೆ ಹತ್ತಿ ಹೊರಟಿದ್ದನೆಂದು ತೋರುತ್ತದೆ ರಾಮಣ್ಣ. ತ್ವರಿತ ಗತಿಯಿಂದ ಓಡುತ್ತಲಿದ್ದ ಅಶ್ವ ರಾಮಣ್ಣ ಕರ ದೋರುತ್ತಲೆ ನಿಲ್ಲುತ್ತದೆ. ಸಾಕಿಷ್ಟು ಅವನ ಅಧ್ಯಾತ್ಮ ಚಿಂತನೆ ಚಿಗುರೊಡೆಯಲು ! ಅಶ್ವದಂಥ ಪಶು ಕೂಡ ತನ್ನ ವಾಹಕನ ಹೃದಯವನ್ನರಿತು ನಡೆಯುತ್ತದೆ ; ಆದರೆ ಈ ಮನುಜ ಚಿತ್ತವೇಕೆ ತನ್ನ ವಾಹಕನ ಹೃದಯವನರಿತು ನಡೆಯದೆ ತನ್ನ ಇಚ್ಛೆಯಲ್ಲಿ ಹರಿದಾಡಬೇಕು? 'ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆಳೆಯಿತೆಂಬಂತೆ" ತನ್ನ ವಾಹಕ ಒಂದು ಹೇಳಿದರೆ ತಾನೊಂದು ಮಾಡುತ್ತದೆ?

ಏರಿದ ವಾಜಿ ಓಹೋ ಎಂದು ಕರದೋರಿದಲ್ಲಿ ನಿಂದಿತ್ತು. ವಾಹನ ವಾಹಕನ ಹೃದಯವನರಿದು ವಸ್ತುವ ಮುಟ್ಟಿ ಆಡುವ ಚಿತ್ತ ನಿಜವಸ್ತುವಿನ ಗೊತ್ತನರಿಯದೆ ತನ್ನ ಇಚ್ಛೆಯಲ್ಲಿ ಹರಿದಾಡುತ್ತಿದೆ ನೋಡಾ. ಇದಕ್ಕೆ ಒಂದು ಕಟ್ಟಣೆಯ ಗೊತ್ತ ಲಕ್ಷಿಸಿ ಕಟ್ಟುವಡೆವೆಂತೆ ಮಾಡು ಗೋಪತಿನಾಥ ವಿಶ್ವೇಶ್ವರ ಲಿಂಗ!" ಎಂದು ಮೊರೆಯಿಟ್ಟ ತರುಗಾಹಿ ರಾಮನಿಗೆ ಆ ಚಿತ್ತದ ಕಟ್ಟಣೆಯ ಗೊತ್ತು ಸಿಕ್ಕು ಅವನ ಚಿತ್ತ ಕಟ್ಟುವಡೆಯಿತ್ತು. ಅವನ ಚಿತ್ತ ಸಂವಿತ್ತಾಯಿತು–ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

'ಕಾಲವೇಳೆಯನರಿದು, ತೃಣವಾರಿ ನೆಳಲು ನೆಲನವರಿದು ರಕ್ಷಿಸಿ 'ಗೋಮಕಾದ ರಾಮಣ್ಣ 'ಕ್ರಿಯೆಯಲ್ಲಿ ಶುದ್ಧ, ಪೂಜೆಯಲ್ಲಿ ನಿಷ್ಠ'ನಾಗಿ 'ನೆರೆ ಅರಿದು ತ್ರಿವಿಧದ ಬಿಡುಗಡೆಯ' ಪಡೆದ; 'ವಾಯುವಿನ ಕೈಯ ಗಂಧದಂತೆ' ಅಂದವಾಗಿ ಬಾಳಿದ; 'ನೀರಿಗೆ ಸಾರ ಬಂದು ರಸವಾದ ತೆರನಂತೆ, ಇರವ ಸಾಗಿಸಿದ; ಕಂಗಳ ದೃಷ್ಟದಿಂದ ಇಷ್ಟವ ಕಂಡು, ಮನದ ದೃಷ್ಟದಿಂದ ನಿಷ್ಠೆಯನರಿತು, ನಿಷ್ಠೆ ನಿಜದಲ್ಲಿ ನಿಂದು ದೃಷ್ಟಾರನಾದ.

ಅಯ್ಯಾ, ಏನನಹುದೆಂಬೆ, ಏನನಲ್ಲಾ ಎಂಬೆ? ಕಾಯವುಳ್ಳನಕ್ಕ ಕರ್ಮ ಬಿಡದು; ಜೀವವುಳ್ಳನಕ್ಕ ಕಾರ್ಪಣ್ಯ ಕೆಡದು; ಆರ ಕೇಳಿ ಅರಿಗೆ ಹೇಳಿಹೆನೆಂದಡೂ ಭಾವದ ಭ್ರಮೆ ಬಿಡದು; ಮಹಾ ಸಮುದ್ರವನೀಜುವವನಂತೆ ಕರಕಾಲು ಆಡುವನ್ನಕ್ಕ ಜೀವುನಭ್ರಮೆ ನಿಂದಲ್ಲಿ ನಿಂದಿತ್ತು ಭಾವದ ಭ್ರಮೆ. ಒಂದನರಿತು ಒಂದನರಿತಿಹೆನೆಂಬನ್ನಕ್ಕೆ ಬಂದಿತು ದಿನ ಅಂಗವ ಹರಿವುದಕ್ಕೆ ! ಈ ಸಂದೇಹದ ಸಂದಿಯಲ್ಲಿ ಕೆಡಹದೆ ನಿಜದಂಗವ ತೋರು ಗೋಪತಿನಾಥ ವಿಶ್ವೇಶ್ವರ ಲಿಂಗ !" ಎಂದು ಜೀವದ ಭ್ರಮೆ, ಭಾವದ ಭ್ರಮೆಯ ಬಯಲಾಗಿಸಿ, ಬಂದಿತ್ತು ದಿನ ! ಬಸವಣ್ಣ ಕಲ್ಲಿಗೆ, ಚೆನ್ನಬಸವಣ್ಣ ಉಳಿವೆಯಲ್ಲಿಗೆ, ಪ್ರಭು ಅಕ್ಕ ಕದಳಿ ದ್ವಾರಕ್ಕೆ, ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ಲಕ್ಷ್ಯಕ್ಕೆ ! ನಾನು ತುರುವಿನ ಬೆಂಗಳಿಯಲ್ಲಿ ಹೋದ ಮರೆಯಲ್ಲಿ ಅಡಗಿಹರೆಲ್ಲರೂ ಅಡಗಿದುದ ಕೇಳಿ ನಾ ಗೋಪತಿನಾಥ ವಿಶ್ವೇಶ್ವರಲಿಂಗದಲ್ಲಿಯೇ ಅಡುಗುವೆನು' ಎಂದು ಅಡಗಿಹೋದ.

ಎಲ್ಲಿಯಾದರೂ ತುರುಕರುಗಳು ಮೆಯ್ಯುತ್ತ ನಿಂತಿದ್ದುದನ್ನು ನೋಡಿದರೆ, ಕಣ್ಣೆದುರು ನಿಲ್ಲುವುದು ತುರುಗಾಹಿ ರಾಮಣ್ಣನ ಚಿತ್ರ. ಅವನು ಉಸಿರದ ವಚನಗಳು ಅವನ ಮಾತಿನಲ್ಲಿಯೇ ಹೇಳುವುದಾದರೆ, 'ಸುಖದ ಬೆಳೆ, ಸಾಧನ ಸಂಪತ್ತು.' ಬಲ್ಲವರಲ್ಲಿ ಬಲ್ಲಿದರಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಹೇಳುವಂತೆ, "ಇವನ ವಚನಗಳು ಒಂದು ರೀತಿಯಿಂದ ಬಹು ಮುಖ್ಯವಾದುವು. ಅವುಗಳೆಲ್ಲವೂ ಅವನ ಕಾಯಕವಾದ ದನಕಾಯುವ ಕೆಲಸದಿಂದ ಹೊಮ್ಮಿ ಬಂದುವು" ಅವುಗಳ ಅಂತರಾರ್ಥವಿದು :

"ಕ್ರಿಯಾಶುದ್ಧತೆಯಾದಲ್ಲಿ ಭಾವಶುದ್ಧವಾಗಿಪ್ಪುದು;
ಭಾವಶುದ್ಧವಾಗಿಪ್ಪಲ್ಲಿ ಸರ್ವೇಂದ್ರಿಯಗಳು ಏಕೇಂದ್ರಿಯವಾಗಿ
ಚಿತ್ತ ಶುದ್ಧವಾಗಿಪ್ಪುದು;
ಚಿತ್ತ ಶುದ್ಧಿ ಸಿದ್ಧಿಯಾದಲ್ಲಿ ಸರ್ವಜ್ಞಾನಸಂಪನ್ನನಪ್ಪನು;
ಆ ಗುಣನಿಜದ ನೆಲೆಯಾದಲ್ಲಿ ಗೋಪತಿನಾಥ
ವಿಶ್ವೇಶ್ವರಲಿಂಗವ ಬೆಚ್ಚಂತಿಪ್ಪನು."

■

# ಸಿದ್ಧಪುರುಷ ಸೊಡ್ಡಳ ಬಾಚರಸ

ಬಸವಣ್ಣನವರಿಗೆ ಬಹಳ ಹತ್ತಿರದವರಾಗಿ ಬಾಳಿ ಬೆಳಗಿದವರಲ್ಲಿ ಬಾಚರಸನೊಬ್ಬ. ಬಿಜ್ಜಳನ ಆನೆ ಕುದುರೆಗಳಿಗೆ ಧಾನ್ಯವನ್ನು ಅಳೆದು ಕೊಡುವುದವನ ಕಾಯಕವಾಗಿದ್ದಿತು. ಕಣಜಗಳಿಂದ ಧಾನ್ಯವನ್ನು ಅಳೆದು ಕೊಡುವುದು, ಕೊಟ್ಟುದರ ಲೆಕ್ಕ ಬರೆದಿಟ್ಟುಕೊಳ್ಳುವುದು ಅವನ ನಿತ್ಯದ ಕರ್ತವ್ಯ. ಆದರೆ ಅವನು ಲೆಕ್ಕ ಬರೆಯುತ್ತಿದ್ದ ರೀತಿಯೇ ಬೇರೆ :

ಕಂದುಗೊರಳನ ಭಕ್ತಿಯಂ ಮಾಡುತಾರರಿಯ
ದಂದದೊಳು ಪಂಚಾಕ್ಷರಿಯ ಮಂತ್ರಸಿದ್ಧಿ ಮನ
ಮಂದಿರದಿ ನೆಲೆಗೊಂಡು ಕಾರಣದಿ ಲೆಕ್ಕವನು ಬರೆದ ತೆರೆನೆಂತೆಂದೆನೆ
ತಂದದ್ದು ತಾರದ್ದು ಓಂ ನಮಃ ಶಿವಯೆಂದು
ಬಂದದ್ದು ಬಾರದ್ದು ಓಂ ನಮಃ ಶಿವಯೆಂದು
ಸಂದದ್ದು ಸಲ್ಲದ್ದು ಓಂ ನಮಃ ಶಿವಯೆಂದು ಬರೆದನೀತೆರದೊಳೆಲ್ಲ ॥*

ಯಾರೋ ಬಿಜ್ಜಳನಿಗೆ ಹೇಳಿದರು–ಬಾಚರಸ ಲೆಕ್ಕ ಬರೆಯುವುದುನ್ನು ಬಿಟ್ಟು ಮಂತ್ರ ಬರೆಯುತ್ತಲಿದ್ದಾನೆಂದು. ಬಿಜ್ಜಳನು ಲೆಖ್ಖಪತ್ರಗಳ ಪರಿಶೋಧನೆ ನಡೆದು ಸಂಜೆಯಾಗುವುದರೊಳಗಾಗಿ ವರದಿಯಾಗಬೇಕೆಂದು ಆಜ್ಞಾಪಿಸಿದನು. ಬಾಚರಸನು ಲೆಕ್ಕ ಸರಿಪಡಿಸಲು ಸಾಧ್ಯವಾಗುವಂತೆ ಹನ್ನೊಂದು ದಿನಗಳವರೆಗೆ ಸೂರ್ಯಾಸ್ತವೇ ಆಗಲಿಲ್ಲವಂತೆ . ಇದರರ್ಥ ಹನ್ನೊಂದು ದಿನಗಳಲ್ಲಿ ಆಗ ಬೇಕಾದುದನ್ನು ಬಾಚರಸ ಒಂದೇ ದಿನದಲ್ಲಿ ಮಾಡಿ ಮುಗಿಸಿದನೆಂದಿರಬೇಕು. 'ಬನ್ನಿ ಕರುಣಿಕರು ನೀವು ಲೆಕ್ಕವ ಹೇಳಿ, ಧನಧಾನ್ಯ ಸಂಚವನು' ಎಂದು ಬಾಚರಸ ಕರುಣಿಕರನ್ನು ಕರೆದು ಲೆಖ್ಖ ಒಪ್ಪಿಸಿದ. ಬಾಚರಸನ ಲೆಖ್ಖಪತ್ರಗಳ ವಿವರ ಬಿಜ್ಜಳನ ಮೆಚ್ಚುಗೆಗೆ ಪಾತ್ರವಾದುವು. ಬಾಚರಸನ ಕಾಯಕ ಎಂದಿನಂತೆ ಮುಂದುವರಿಯಿತು.

---

* ಪ್ರೌಢರಾಯನ ಕಾವ್ಯ, ಸಂ. ೧೬ : ಪ. ೩

ಬಾಚರಸ ಸೌರಾಷ್ಟ್ರ ಸೋಮೇಶ್ವರನ ಭಕ್ತ. ಪ್ರತಿ ವರ್ಷ ಶಿವರಾತ್ರಿಗೆ ಸೌರಾಷ್ಟ್ರ ಸೋಮನಾಥನ ದರ್ಶನಕ್ಕೆ ಹೋಗಿ ಬರುವ ಪರಿಪಾಠವನ್ನಿಟ್ಟುಕೊಂಡಿದ್ದ.

ಆಗಿನ ಕಾಲದಲ್ಲಿ ಕಲ್ಯಾಣದಿಂದ ಸೌರಾಷ್ಟ್ರಕ್ಕೆ ಹೋಗಿ ಬರಲು ಸಾಕಷ್ಟು ಸಮಯ ಬೇಕಾಗುತ್ತಿರಬೇಕು. ವರ್ಷವರ್ಷವೂ ಬಾಚರಸನು ಅಷ್ಟೊಂದು ಸಮಯವನ್ನು ಸೌರಾಷ್ಟ್ರಕ್ಕೆ ಹೋಗಿ ಬರುವುದರಲ್ಲಿ ಕಳೆಯುವುದು ಬಿಜ್ಜಳನಿಗೆ ಬೇಸರ ಹುಟ್ಟಿಸಿರಬೇಕು. ಇದನ್ನರಿತ ಬಾಚಸರ ಸಿದ್ಧರಾಮ ಶ್ರೀಶೈಲದ ಮಲ್ಲಿಕಾರ್ಜುನನನ್ನು ಸೊನ್ನಲಾಪುರಕ್ಕೆ ಬರಿಸಿಕೊಂಡಂತೆ, ಆದಯ್ಯ ಸೋಮನಾಥನನ್ನು ಪುಲಿಗೆರೆಗೆ ಬರಿಸಿಕೊಂಡಂತೆ ಸೌರಾಷ್ಟ್ರದ ಸೋಮನಾಥನನ್ನು ಕಲ್ಯಾಣಕ್ಕೆ ಬರಿಸಿಕೊಂಡನಂತೆ. ಅರ್ಥಾತ್ ಕಲ್ಯಾಣದಲ್ಲಿ ಸೊಡ್ಡಳ ಬಾಚರಸರ ಭಕ್ತಿಯಿಂದ ಸೋಮನಾಥ ಮಂದಿರವೊಂದು ಸಿದ್ಧವಾಯಿತು.

> ಮಗನೆ ಸೊಡ್ಡಳ ಬಾಚ । ಯ್ಯಗಳ ವಾದ ನಿಮಿತ್ತ ।
> ಬಗೆವೆಚ್ಚಿ ಸೌರಾಷ್ಟ್ರದಿಂದ ॥
> ಸೊಗಸೊಗೆವೆಂತೆ ಬಂ । ದೊಗೆದೆ ಕೊಠಾರದೊಳ್
> ಜಗವೆಲ್ಲವಿದು ಚೋದ್ಯವೆನಲು ॥*

ಇನ್ನೂ ಏನೇನೋ ಕಿರುಕುಳಗಳನ್ನವನು ಸಹಿಸಬೇಕಾಗಿ ಬಂದಿತೆಂದು ಹೇಳುತ್ತಾರೆ–ಬಾಡಿಕಾರರ  ಕಾರಣದಿಂದ. ಆದರೆ ಬೆಂಕಿಯಲ್ಲಿ ಸುಟ್ಟಷ್ಟೂ ಬಂಗಾರ ಹೊಳೆವಂತೆ ಬಾಡಿಕಾರರ ಕಾರಣದಿಂದ. ಆದರೆ ಬೆಂಕಿಯಲ್ಲಿ ಸುಟ್ಟಷ್ಟೂ ಬಂಗಾರ ಹೊಳೆವಂತೆ ಬಾಚರಸನೂ ಬೆಳಗುತ್ತಲೇ ನಡೆದನು. ಈ ಅಗ್ನಿಪರೀಕ್ಷೆಗಳಿಗೆ ಒಳಗಾಗಿ ಅವನ ಬಾಳು ಅಪರಂಜಿಯಾಯಿತು. ಅವನು ಮಲತ್ರಯ ದೂರನಾದನು, ಮಂತ್ರಸಿದ್ಧನಾದನು, ಅಂತರಂಗ ಬಹಿರಂಗ ಶುದ್ಧಿಯನ್ನು ಪಡೆದನು, ನಿಜಸುಖದ ಸಾರವನ್ನು ಹೀರಿದನು, ಅದರ ಸವಿಯನ್ನು ವಚನಗಳಲ್ಲಿ ತುಂಬಿ ತೂರಿದನು.

“ನೂರು ಮರ ನೂರು ಸ್ವರ ಒಂದಕ್ಕೊಂದು ಅತಿಮಧುರ’ ಎಂಬ ಅನುಭವ ಕಲ್ಯಾಣದ ಶರಣರ ಬಗೆಗೂ ಬರುತ್ತದೆ. ಅಲ್ಲಯೂ ನೂರು ಶರಣರು, ನೂರು ಸ್ವರಗಳು. ಆದರೆ ಒಂದೊಂದು ಸ್ವರಕ್ಕೂ ಒಂದೊಂದು ಸವಿಯಿದೆ, ಒಂದೊಂದು ವಿಶಿಷ್ಟ ವ್ಯಕ್ತಿತ್ವವಿದೆ. ಅದು ಅವರವರ ಸಾಧನಾ ವಿಶೇಷದ ಪರಿಪಾಕ, ಸ್ವಂತಿಕೆಯ ಅಮೃತಫಲ. ಸೊಡ್ಡಳ ಬಾಚರಸರ ಸ್ವರ ಅತಿಮಧುರ :

---

* ಭೈರವೇಶ್ವರಕಾವ್ಯ, ಸಂ. ೩. ಪು. ೧೧೯

“ಜವನಿದ್ದಾನೆ, ಜವನ ಪಟ್ಟಣವಿದೆ,
ಮಾಮರ ಹೂಮರನಿದೆ, ತೋಮರನಿದೆ ನೋಡಯ್ಯ !
ಆವಕಾರ್ಯವಾದಡೂ ದೇವಕಾರ್ಯವ ಮಡುವುದು.
ಸಾವಕಾರ್ಯತಪ್ಪದು ! ನೀನು ಕೆಡಬೇಡ ಕಂಡೆಯಾ !
ಬೇಗನಂಬಿ ಪೂಜಿಸು, ಸೊಡ್ಡಳದೇವನ ಮರುಳೇ !”

ಇದು ಎಂಥ ನೈಜ ಚಿತ್ರ !

“ಬಂಟತನವ ಮಾಡಬೇಕೆಂದು, ಬಟ್ಟೆಯ ಬಡಿಯಬೇಕೆಂದು,
ಕೆಟ್ಟುದನರಸಬೇಕೆಂದು, ಕೊಟ್ಟುದ ಬೇಡಬೇಕೆಂದು
ಮುಂಜಾವದಲೇಳುವರು ಹಲಬರು ಕೆಲಬರು ;
ಆಹಾರವನುಣಬೇಕೆಂದು ವ್ಯವಹಾರವ ಮಾಡಬೇಕೆಂದು
ಆ ಹೆಣ್ಣ ತರಬೇಕೆಂದು ಈ ಹೆಣ್ಣ ಕೊಡಬೇಕೆಂದು
ಮುಂಜಾವದಲೇಳುವರು ಹಲಬರು ಕೆಲಬರು ;
ತಂದೆ ಸೊಡ್ಡಳಂಗೆ ತೊತ್ತು ಸೇವೆಯ ಮಾಡಬೇಕೆಂದು
ಕಣ್ಣತೆರಪುತ್ತಲೇಳುವರು ಅಲ್ಲಿಗಲ್ಲಿಗೊಬ್ಬರು !”

ಜೀವನದ ಇಂಥ ಸತ್ಯಸುಂದರ ಚಿತ್ರಗಳನ್ನು ನೀಡುವವರೂ ‘ಅಲ್ಲಿಗಲ್ಲಿಗೊಬ್ಬರು.’

ಈ ಸೂತ್ರಗಳ ಸುರಳಿಯನ್ನು ನೋಡಿರಿ :

“ಶಿವಾಯೆಂದೋದದವಮ ಓದು ಗಿಳಿಯೋದು ;
ಶಿವ ನಿಮ್ಮನಾರಾಧಿಸದವನ ಮನೆ ಕೆಮ್ಮನೆ ;
ಶಿವ ನಿಮ್ಮ ನೋಡದವನ ಕಣ್ಣು ಹೀಲೆಯ ಕಣ್ಣು ;
ಶಿವ ನಿಮ್ಮ ಹಾಡದವನ ಬಾಯಿ ಕನ್ನದ ಬಾಯಿ ;
ಶಿವ ನಿಮ್ಮ ಹೊಗಳದವನ ನಾಲಗೆ ಭವಿಯ ನಾಲಗೆ.
ಬಚ್ಚಲ ತಂಪಿನ ಜವುಗಿನಲ್ಲಿ ಹುಟ್ಟಿದ ಜಿಗುಣೆಯಯ್ಯಾ !
ಶಿವ ನಿಮಗೆರಗದ ಕರ್ಮಿ ಶೂಲದ ಮೇಲಣ ಹೆಣನು ;
ಶಿವ ನಿಮ್ಮ ನೆನೆಯದವನ ದೇಹ ಸಂದೇಹ ;
ಶಿವ ನಿಮ್ಮ ಭಕ್ತನಲ್ಲದವನ ಭೋಗವು ವಿದ್ಯೆಯು
ಕುಲವು ಶ್ರೀಯು ಸಾಹಸ ಯಶಸ್ಸು ವಿಮಾನದ
ಮೇಲಣ ಶವದ ತೋರಿಕೆಯಯ್ಯ !
ಅವನೇತಕ್ಕೆ ಬಾತೆ?
ಇದು ಕಾರಣ, ಭವರೋಗನರಕಕ್ಕಾರದೆ



**ಬಾಚರಸರ ಲೆಕ್ಕ ಬಿಜ್ಜಳನಿಗೆ ಮೆಚ್ಚುಗೆಯಾಯಿತು**

ಶರಣುವೊಕ್ಕೆನಯ್ಯಾ ಸೊಡ್ಡಳಾ !"

ಈ ಪ್ರಶ್ನೆಮಾಲಿಕೆಯನ್ನು ಕೇಳಿರಿ :

"ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೇ?
ಚಂದನವಿದ್ದಂತೆ ದುರ್ಗಂಧವ ಪೂಸುವರೇ?
ಸುರಭಿ ಮನೆಯಲ್ಲಿ ಕರೆವುತ್ತಿರೆ ಹರಿವರೇ ಸೊಣಗನ ಹಾಲಿಂಗೆ?
ಬಯಸಿದಮೃತವಿದ್ದಂತೆ ಅಂಬಲವ ನೆರೆದುಂಬ
ಭ್ರಮಿತಮಾನವ ನೀನು ಕೇಳಾ :
ಪರಮ ಪದವಿಯನೀವ ಚೆನ್ನಸೊಡ್ಡಳನಿದ್ದಂಕೆ
ಸಾವದೇವರ ನೋಂತರೆ ಕಾವುದೆ?"

ಈ ಎಚ್ಚರಿಕೆಯ ಮಾತು ನೆನಪಿರಲಿ ;

"ಗಂಡನುಳ್ಳ ಹೆಂಡಿರ ಕಂಡು ಅಳುಪದಿರಾ ಮನವೆ !
ಬಂದ ಬಸಿರನು ಉಂಡ ಮೊಲೆಯನು ಕಂಡು
ಮರುಗದಿರಾ ಮನವೆ !
ಉದ್ದಂಡತನದಲಿ ನಡೆವ ಭಂಡರನು
ಹುಳುಗೊಂಡದಲ್ಲಿಕ್ಕದೆ ಬಿಡುವನೇ
ದೇವರಾಯ ಸೊಡ್ಡಳ?"

ಮತ್ಸರ ಸರ್ಪನ ಸಮತೆಯ ಗಾರುಡದಿಂದ ಗಾರುಪಡಿಸಬೇಕಂತೆ, ಹೊನ್ನು ಹೆಣ್ಣು ಮಣ್ಣು ಬಿಡದೆ ಅವಬಿಡದೊತ್ತಿ ತಲೆಯೆತ್ತಗುಡದೆ ಇಡಬೇಕಂತೆ, ಮಾತಿನ ಮಾಲೆಯಲ್ಲಿ ಶಿವಾಚಾರ ಸಿಲುಕದಂತೆ, ಭಾವನಿರ್ಭಾವ ನಿಷ್ಪತಿಯಾದಲ್ಲಿ ಸರ್ವನಿರ್ವಾಣವಂತೆ, ಈ ಸತ್‌ಕ್ರಿಯೆಗೆ ಈ ಫಲ, ಈ ಪುಣ್ಯಕ್ಕೆ ಈ ಫಲ–ಎಂಬ ಕೈಕೂಲಿಕಾರರೆಲ್ಲ ಕರ್ಮಿಗಳಂತೆ, ಒಡಲೊಡವೆ ಪಡೆದರ್ಥ ಮೃಡದೇವ ಎಂಬಾತ ಸೊಡ್ಡಳನಿಗೆ ಬೆಡಗಿನ ಪುತ್ರನಂತೆ, ಉಳಿದವರೆಲ್ಲ ಜಗದ ಮಿತ್ರರಂತೆ, ಒಡೆದ ಮುತ್ತು ನಾಣ್ಯಕ್ಕೆ ಸಲ್ಲದು, ಒಡೆದ ಹಾಲು ಅಮೃತಕ್ಕೆ ಸಲ್ಲದಂತೆ–ಹೀಗೆ ಬಾಚರಸನು ಅನೇಕ ಸಾರತರವಾದ ಸೂಕ್ತಿಗಳನ್ನು ಉಸಿರಿದ್ದಾನೆ.

"ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ,
ರುದ್ರಪದವಿಯನೊಲ್ಲೆ ಇಂದ್ರಪದವಿಯನೊಲ್ಲೆ
ಉಳಿದ ದೇವತೆಗಳ ಪದವಿಯನೊಲ್ಲೆ–
ಎಲ್ಲಕ್ಕೂ ಒಡೆಯನಾದ ಶಿವನ ಪ್ರಮಥ ಗಣಂಗಳ
ತಿಪ್ಪೆಯ ಮೇಲಣ ಹುಳುವಾಗಿ ಹುಟ್ಟುವ ಪದವಿಯ
ಕರುಣಿಸು ಮಹಾ ಮಹಿಮ ಸೊಡ್ಡಳಾ !"

ಎಂದು ಬೇಡಿಕೊಂಡ ಭಕ್ತರಾಜ ಬಾಚರಸ, ಅವನ ಭಕ್ತಿಗೆ ಉಕ್ಕು ಬಂದಾಗ ಅದು ಯಾವ ರೂಪ ತಳೆಯುವುದೆಂಬುದನ್ನು ಕೆಳಗಣ ವಚನಗಳಲ್ಲಿ ಕಾಣಬಹುದು:

"ಬರದಲ್ಲಿ ಅರಲುಗೊಂಡವಂಗೆ ಅಮೃತ ಸಿಕ್ಕಿದಂತೆ, ಜರಾಮರಣ ದುಃಖಿ ಮರು ಜೀವಣಿಯ ಕಂಡಂತೆ, ಭವದಬಾಗಿಲ ಹೊಗದೆ ಬದುಕಿದೆನಯ್ಯಾ , ನಿತ್ಯವ ಕಂಡು ! ಒಳಗೆ ಬೆಳಗುವ ಪ್ರಕಾಶ ಹೊರಗೆ ಮೂರುತಿಗೊಂಡಂತೆ ಕಂಗೆ ಮಂಗಳವಾಯಿತ್ತಯ್ಯಾ! ಮಹಾ ಘನದಲ್ಲಿ ಸಾಕಾರ ಸೊಡ್ಡಳನ ಶರಣ ಪ್ರಭುವಿಂತಗೆ ನಮೋ ನಮೋ ಎನುತಿರ್ದೆನು !"

"ಮನದ ಸಂಚದೋವರಿಯೊಳಗೆ ಮಿಂಚಿನಗೊಂಚಲು ಬಳ್ಳಿವರಿಯಿತ್ತಯ್ಯ! ಎನ್ನ ಕಾಯದ ಕಂಗಳೊಳಗೆ ನಿರುಪಮ ಸುಖ ಸಾಧ್ಯವಾಯಿತ್ತು. ಬಯಸುವ ಬಯಕೆ ಕೈಸಾರಿತ್ತು. ಅರಸುವ ಅರಕೆ ನಿಂದಿತ್ತು. ಆಹಾ, ಕರತಳಾಮಳಕವಾಯಿತ್ತಲ್ಲ! ಸತ್ಯ ಶರಣರ ದುರುಶನವೇನ ಮಾಡುದು?"

ತನ್ನ ಕಾಲದ ಬೆಳಗಿನ ಬಳಗದಲ್ಲಿ ತಾನು ಬದುಕಿದ್ದುದು ತನ್ನ ಭಾಗ್ಯವೆಂದೇ ಬಾಚರಸ ಬಗೆದಿದ್ದ. ತನ್ನ ಕಣ್ಣೆದುರಿಗೇ ಸತ್ಯಲೋಕದ ಬಾಗಿಲ ಕದ ತೆರೆದುದನ್ನು ಕಂಡು ಧನ್ಯನಾದನವನು :

“ನಿಜ ತತ್ತ್ವದ ನಿರ್ವಯಲು ನಿರವಯವಾಯಿತ್ತು. ನೆನವರ ಪುರುಷ ಘನವನೊಡಗಲಸಿತ್ತು. ಭಕ್ತರ ಭಾಗ್ಯ ಮುಕ್ತಿಯನ್ನೈದಿತ್ತು. ಬಸವಣ್ಣ–ಚೆನ್ನಬಸವಣ್ಣನ ಮಹಾ ಮನೆಯಲ್ಲಿ ಮಹಾದಾನಿ ಸೊಡ್ಡಳನ ಶರಣ ಪ್ರಭುದೇವರ ನಿರವಯಲ ಬೆರಿಸಲೊಡನೆ ಸತ್ಯಲೋಕದ ಬಾಗಿಲ ಕದ ತೆರೆಯಿತ್ತು !”

“ಶ್ರುತಿತತಿಗಳ ಶಿರದ ಮೇಲೆ ಒಪ್ಪುತಿಪ್ಪ
ಅತ್ಯತಿಷ್ಠದ್ದಶಾಂಗುಲನನ ಕಂಡೆನಯ್ಯ !
ಅಣುವಿಂಗೆ ಅಣು ಮಹತ್ತಿಂಗೆ ಮಹತ್ತಾದ
ತ್ರಿಣಯನ ಮೂರ್ತಿಯ ಕಂಡೆನಯ್ಯಾ ! ವಾಙ್ಮನ
ಕ್ಕಗೋಚರವಾದ ನಿರವಯ ಬ್ರಹ್ಮವ ಕಂಡೆನಯ್ಯ !
ನಿತ್ಯನೇಕೋರುದ್ರನದ್ವಿತೀಯನ ಕಂಡೆನಯ್ಯ !
ಎನ್ನ ಕರಸ್ಥಳದೊಳಗೆ ಮಹಾದಾನಿ ಸೊಡ್ಡಳನ ಕಂಡೆನಯ್ಯ !”

ಈ ಧನ್ಯತೆಯಲ್ಲಿಯೇ ಬಯಲಾದ ಬಾಚರಸ :

“ಎನ್ನ ಕಾಯವೆಂಬ ಸಿಂಹಾಸನದಲ್ಲಿ ಪ್ರಾಣವೆಂಬ ಲಿಂಗವ ಮೂರ್ತ
ಗೊಳಿಸಿ, ಧ್ಯಾನವೆಂಬ ಹಸ್ತದಲ್ಲಿ ಮುಟ್ಟಿ ಪೂಜಿಸುತ್ತಿರಲು ಮೆಲ್ಲ
ಮೆಲ್ಲನೆ ಸುತ್ತಿ ಮುತ್ತಿದ ಸಂಸಾರ ಬಯಲು ಬೆರಸಿ ನೀ ನಾನೆಂಬ ಭೇದ
ವಳಿದು ಮಹಾದಾನಿ ಸೊಡ್ಡಳನಲ್ಲಿ ನಿಜಲಿಂಗೈಕ್ಯವಾಯಿತ್ತು !”

“ಕೂಡಲಸಂಗನಶರಣರ ಸೊಡ್ಡಳ ಬಾಚರಸ ಕರುಣ ಉಳ್ಳನ್ನಕ್ಕರ ಇನ್ನು ನಾನು ಅಂಜುವವನಲ್ಲ ಕಾಣಾ ಚನ್ನಬಸವಣ್ಣಾ” ಎಂದು ಹೆಮ್ಮೆಯಿಂದ ಹೇಳಿಕೊಂಡದ್ದ ಬಸವಣ್ಣನವರಿಗೆ ಬಹಳ ದುಃಖವಾಯಿತು. ಅವರ ವ್ಯಾಕುಲ ವಚನವಾಗಿ ಹೊರಬಿದ್ದಿತು :

“ಎಮ್ಮವರಿಗೆ ಸಾವಿಲ್ಲ. ಎಮ್ಮವರು ಸಾವನರಿಯರು. ಲಿಂಗದಲ್ಲಿ ಉದಯವಾದ ನಿಜೈಕ್ಯವರಿಗೆ ಆ ಲಿಂಗದಲ್ಲಿ ಅಲ್ಲದೆ ಬೇರೆ ಮತ್ತೊಂದೆಡೆ ಇಲ್ಲ. ಕೂಡಲಸಂಗಮದೇವರ ಶರಣ ಸೊಡ್ಡಳ ಬಾಚರಸನು ನಿಜ ಲಿಂಗದ ಒಡಲೊಳಗೆ ಬಗೆದು ಹೊಕ್ಕಡೆ ಉಪಮಿಸಬಲ್ಲವರ ಕಾಣೆನು!”

ಶರಣ ಬಾಚಯ್ಯನಿಗೆ ಸಾವಿಲ್ಲ. ಸಾವರಿಯದ ಜೀವನ ಅವನದು. ಎಂದೆಂದಿಗೂ ಬಾಳು ಬಾಚರಸ !

■

## ನಿಜದಿ ಬೆರೆದ ಗಜೇಶ ಮಸಣಯ್ಯ

ಈ ವಿರಹಿಣಿಯ ಚಿತ್ರವನ್ನು ನೋಡಿ ತರಹರಿಸದವರಾರು?

"ಕೋಗಿಲೆಯ ಗಳಹು ಹೋದ ಬನದಂತಾದೆ ನೋಡವ್ವ !...
ಜವ್ವನ ಬಳಲ್ದ ಸ್ತ್ರೀಯರ ಮುಖಶಾಂತಿಯಂತಾದೆ ನೋಡವ್ವ !
ಪರಿಮಳವಿಲ್ಲದ ಪುಷ್ಪದಂತಾದೆ ನೋಡವ್ವ !
ಚಂದ್ರಮನಿಲ್ಲದ ಇರುಳಿನಂತಾದೆ ನೋಡವ್ವ !
ಮಹಾಲಿಂಗ ಗಜೇಶ್ವರನನಗಲುವುರಿಂದ
ಸಾವುದು ಸುಖ ನೋಡವ್ವಾ !"
ಗಿಡುಮರದ ಕುರುಬಿತಿಯ ಜವ್ವನದಂತೆ
ನುಡಿಯಲರಿಯದೆ ಮುಗ್ಧೆಯಾಗಿರ್ದೆನವ್ವ !
ಹಗಲನರಿಯದ ಜಕ್ಕವಕ್ಕಿಯಂತೆ
ಮನಬಯಸುತ್ತಿರ್ದೆನವ್ವಾ !
ಹಲವುಕಾಲ ಎಲವದ ಎಲವನ ಮರನ ಸಾರಿರ್ದ
ಅರಗಿಳಿಯಂತಾದೆನವ್ವ !
ಇಂದೆಮ್ಮ ಮಹಾಲಿಂಗ ಗಜೇಶ್ವರನ ಕಾಣದೆ
ಇವರೆಲ್ಲರ ವಿಧಿಯ ಹೊತ್ತೆನವ್ವ !"

ಯಾರೀ ವಿರಹಿಣಿ?

"ಋತುಕಾಲ ತಪ್ಪಿದ ಕೋಗಿಲೆಯಂತೆ ನುಡಿಯದಂತಿರ್ದಳಲ್ಲಾ ! ಪರಿಮಳ ತಪ್ಪಿದ ಭ್ರಮರನಂತೆ ಸುಳಿಸುಳಿಗೊಳುತಿಪ್ಪಳಲ್ಲಾ ! ಫಲವು ತಪ್ಪಿದ ಬಂಜೆಬನದೊಳಗಣ ಅರಗಿಳಿಯಂತಿದ್ದಳಲ್ಲಾ ! ದುರುದುರದ ಜವ್ವನದಲ್ಲಿ ತೋರಣದೆಲೆಯಂತೆಯಾದಳಲ್ಲಾ ! ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ ಮರುಳುಗೊಂಡಳಲ್ಲಾ !"

ಏನನೋ ನುಡಿಯುತ್ತಿರುವಂತಿದೆ. ಕಿವಿಗೊಟ್ಟು ಕೇಳಿ :

"ಆಲಿಕಲ್ಲು, ಮರದ–ಗಿರಿಯಲಿಹ–ಮಗಮಗಿಸುವ ಗಾಳಿ,
ಉಂಡು ಉರವಣಿಸುವ ಪಕ್ಷಿಗಳು, ಸರಗೈವ ಕೋಗಿಲೆ,
ಗಗನದ ಚಂದ್ರನು–ನೀವತ್ತಸಾರಿರೇ !
ಅಗಲಲಾರೆನು ಸಖಿಯೆ ! ಬೆಳುದಿಂಗಳು ಬಿಸಿಲಾಯಿತ್ತು,
ಅಗಲಲಾರೆನೆನ್ನಿನಿಯನ ! ದಶಾವಸ್ಥೆಗೊಂಡೆನು–
ಮಹಾಲಿಂಗಗಜೇಶ್ವರನುಳಿದಡೆ !"

ವಿರಹದ ವಿಕಳತೆ ಅಳತೆಗೆಟ್ಟಂತಿದೆ. ಆಗದೇನು?

"ಕಂಗಳಕಳೆ, ನೋಟದ ಮಸಕ, ಮಿಂಚಿನಗೊಂಚಲು ತಾಗಿದಂತಾದೆ
ನವ್ವ ! ತಾರಕಿ ತಾರಕಿ ತಳಿತಂತೆ? ಅರಗಿನ ಬಳ್ಳಿ ಹಬ್ಬಿದಂತವ್ವಾ !
ಐದುರೂಹನೊಂದುಮಾಡಿ ಕಾದಿಗೆಲಿದು ಸೋತು ಹೊರವೊಂಟು
ಹೋದನವ್ವಾಮಹಾಲಿಂಗಗಜೇಶ್ವರ ಕಂಗಳ ಕಾಳಗದ ಮಾಸಾಳು !"

ಆದುದರಿಂದಲೇ ಮಾಘಮಾಸದ ನವಿಲಿನಂತಾಗಿದ್ದಾಳೆ ; ಇರುಳು ತೊಳಲುವ ಜಕ್ಕವಕ್ಕಿಯಂತೆ ಹಲುಬುತ್ತಲಿದ್ದಾಳೆ ; ವಾಗಿಯು ಕೋಗಿಲೆಯಂತೆ ಮೂಗೆಯಾಗಿದ್ದಾಳೆ ; ತುಪ್ಪಳವನಿಕ್ಕಿದ ಹಂಸೆಯಂತಾಗಿದ್ದಾಳೆ ; ಚಕೋರನಂತೆ ದಿನವನೆಣಿಸುತ್ತಿದ್ದಾಳೆ ; ಮೋಡಂಬೊಕ್ಕ ಚಂದ್ರನಂತಿದ್ದಾಳೆ ; ಇರುಳಿನ ತಾವರೆಯಂತೆ ಮುಖಬಾಡಿ, ಇರುಳಿನ ನೈದಿಲೆಯಂತೆ ಕಣಣ ಮುಚ್ಚದೆ, ಇರುಳಿನ ಸಮುದ್ರದಂತೆ ಘನವಾಗಿ, ಸಲೆಯುಮ್ಮಳಿಸಿ ಅಳಸಿ ಬಳಲುತ್ತಿದ್ದಾಳೆ : ಅವುಗೆಯ ಕಿಚ್ಚಿನಂತಾಗಿದ್ದಾಳೆ!

ಸಖಿ ಸಂತೈಸುತ್ತಲಿದ್ದಾಳೆ :

"ಸೈರಿಸು, ಸೈರಿಸು ಸಖಿ, ಸೈರಿಸು ! ವಿರಹವೇದನೆಯನ್ನು ಸೈರುಸು.
ನನಸಿನಲ್ಲಿ ಬರದ ನಿನ್ನ ನಲ್ಲ ನಿನ್ನ ಕನಸಿನಲ್ಲಾದರೂ ಬಂದಾನು !"

ಅವಳ ಉತ್ತರ ಕೇಳಿದಿರಾ?

"ಅಗಲಿದ ನಲ್ಲನ ಕನಸಿನಲಪ್ಪಿ ಸುಖಿಯಾದಿರವ್ವಾ ! ಕಂಡ ಕನಸು ದಿಟ
ವಾದಡೆ ಅವ ನಮ್ಮ ನಲ್ಲ. ಮನಸುಳ್ಳವರು ನೀವು ಪುಣ್ಯಗೈದಿರವ್ವ !
ಮಹಾಲಿಂಗ ಗಜೇಶ್ವರದೇವನಗಲಿದಡೆ ನಿದ್ರೆ ಎಮಗಿಲ್ಲ. ಕನಸೆಲ್ಲಿಂದ
ಬಹುದವ್ವಾ?"

ಈ ಉತ್ತರ ಕೇಳಿದ ಕೆಳದಿ ನಿರುತ್ತರಳಾದಳು. ವಿಷಯಾಂತರವನ್ನಾದರೂ ಮಾಡಿ ಮುಗುದೆಯ ಮನವನ್ನು ತಣಿಸಬೇಕೆಂದು, 'ನಿನ್ನ ನಲ್ಲ ಅಷ್ಟು ಚೆಲುವನೇನೇ ಚೆನ್ನ?' ಎಂದು ಕೇಳಿದಳು. ಉತ್ತರವಿತ್ತಳಾ ಚೆನ್ನೆ :

"ತಮ್ಮ ತಮ್ಮ ಗಂಡರು ಚೆಲುವರೆಂದು ಕೊಂಡಾಡುವ ಹೆಣ್ಣುಗಳು
ಪುಣ್ಯಜೀವಗಳವ್ವಾ! ನಾನು ಎನ್ನ ನಲ್ಲನೆಂತಹನೆಂದರಿಯೆನವ್ವಾ ! ಮಹಾ
ಲಿಂಗ ಗಜೇಶ್ವರ ನಿರಿಯ ಸೆರಗ ಸಡಲಿಸಲೊಡನೆ ಆನೇನೆಂದರಿಯೆನವ್ವಾ!"
"ಕಳ್ಳಿ, ನಿಜ ಹೇಳು ! ನಿನ್ನ ನೆರೆದವನನ್ನೇ ನೀನು ನೋಡದಿರುವಿಯಾ?
ಏಕೆ ಸುಳ್ಳು ಹೇಳುವೆ? ನನಗೂ ಒಂದಿಷ್ಟು ವಿವರಿಸಿ ಹೇಳು ಅವನ
ರೂಪವನ್ನು ! ನಾನೇನೂ ಕಣ್ಣು ಬಿಡುವುದಿಲ್ಲವನಿಗೆ !"
"ಆತನ ನೋಡಿದಂದು ದೆಸೆಗಳ ಮರೆದೆನಿನ್ನೆಂತವ್ವಾ !
ಆತನು ನುಡಿಸಿದಡೆ ಮೈಯೆಲ್ಲಾ ಬೆಮರ್ದುದಿನ್ನೆಂತವ್ವಾ !
ಆತ ಕೈಹಿಡಿದಡೆ ಎನ್ನನಿರಿಗಳು ಸಡಲಿದುವಿನ್ನೆಂತವ್ವಾ !
ಮಹಾಲಿಂಗಗಜೇಶ್ವರನಪ್ಪಿದನೆಂದಡೆ, ನಾನಪ್ಪ ಮರೆದೆ ಇನ್ನೆಂತವ್ವಾ?"

ಇನ್ನೇಂತು? ಎಂತೋ ! "ಅಂದು ಹೋದವನೆಲ್ಲಿ ಉಳಿದನೆಂದರಿಯೆನವ್ವಾ! ಅನಂತಕಾಲ ಅನಂತಕಾಲ ನಿಗ್ಯವೆಂಬಿರಿ. ಇದು ಹುಸಿ, ಇದು ಹುಸಿ ! ಇಂದಿನಿಂದಿನ ಸುಖವಿಂದಿಂಗೆ ಪರಿಣಾಮ ! ಬಾರಾ, ಹೊಸ ಮದುವೆಯ ಹಸೆಯಡಗದ ಮುನ್ನ, ಹೂಸಿದ ಅರಿಶಿನ ಬಿಸಿಲಿಂಗೆ ಹರಿಯದ ಮುನ್ನ ಬಾರಾ, ನೀರ ! ಏತಕೆನ್ನ ಮರೆದೆ?" "ಕಂಗಳ ಬಲದಲ್ಲಿ ಮುನಿದಿಹನೆಂಬೆನೆ–ಕಂಗಳು ತನ್ನನಲ್ಲದೆ ನೋಡುವು ! ಮನದ ಬಲದಲ್ಲಿ ಮುನಿದಿಹನೆಂಬೆನೆ–ಮನದೊಡೆಯನು ತಾನು ! ತನುವಿನ ಬಲದಲ್ಲಿ ಮುನಿದಿಹನೆಂಬೆನೆ–ತನು ತಾಳಲಾರದು. ಇಂತಹ ಮನಪ್ರೇಕರ ಮನಚೋರಕನೆ ತಾನಧೀನವಾಗಿ ಮನದವಳ ಮೆಚ್ಚುವನವ್ವಾ ! ಮನದಲ್ಲಿ ಬೆರೆಸುವೆ, ಭಾವದಲ್ಲಿ ಬೆರೆಸುವೆ ! ಮೇಲೆ, ಪ್ರಾಣನಾಥನಾಗಿ ಮಹಾಲಿಂಗ ಗಜೇಶ್ವರದೇವ ಮುನಿಸಿಂಗೆ ಮನಸತರಲೀಸನವ್ವಾ !"

ಹೌದು, ಅಂಗಗುಣಕ್ಕೆ ನಿಲುಕನವನು. ಭಾವದಲ್ಲಿ ಬೆರೆವೆನವನ.
"ಒಳಗೆ ಶೋಧಿಸಿ ಹೊರಗೆ ಧವಳಿಸಿ
ಭಾವದಿಂದ ಗುಡಿತೋರಣವ ಕಟ್ಟಿದೆನಯ್ಯ !
ಲಿಂಗ ಬಾರಯ್ಯ, ಎನ್ನದೇವ ಬಾರಯ್ಯ !
ಎನ್ನಂತರಂಗದ ಪರಂಜ್ಯೋತಿಯೇ
ನಿಮ್ಮ ನಾನೆದಿರುಗೊಂಬೆ, ನೀ ಬಾರಯ್ಯ !
ಎನ್ನ ಮಹಾಲಿಂಗ ಗಜೇಶ್ವರಾ, ನೀಬಾರಯ್ಯ !"

ಕೊನೆಗವಳ ಕೂಗು ಕೇಳಿತು ಲಿಂಗದೇವನಿಗೆ. ಅಂಗದ ಕೂಗು ಅಂತರಂಗದ



**ಕಂಜಿಗೆಯಿಂದ ಹೊರಟ ಮಸಣಯ್ಯ ತೊರೆಯೊಂದರ ಬಳಿ ಲಿಂಗಪೂಜೆಗೆ ಕುಳಿತ**

ಕೂತಾಗುತ್ತಲೆ ಸಾಗಿ ಬಂದ ಲಿಂಗಯ್ಯ–

"ಎನ್ನ ಕಡೆಗಣ್ಣು ಕೆಂಪಾಗಿತ್ತವ್ವಾ !
ಎನ್ನ ನಳಿತೋಳು ಉಡುಗಿದುವವ್ವಾ !
ಇಕ್ಕಿದ ಹವಳದ ಸರ ಬೆಳುಪಾದುವವ್ವ !

ಮುಕ್ತಾಫಳಹಾರದಿಂದಾನು ಬೆಂದೆನವ್ವಾ !
ಇಂದು ಮಹಾಲಿಂಗ ಗಜೇಶ್ವರನು
ಬಹಿರಂಗವನೊಲ್ಲದೆ ಅಂತರಂಗದಲ್ಲಿ ನೆರೆದ ಕಾಣಾ ಅವ್ವಾ !"

ಮಂಗಲಮಸ್ತು–ಈ ಅಂತರಂಗ ಸಂಗಕ್ಕೆ !

ವಚನ ಸಾಹಿತ್ಯದಲ್ಲಿ ಸತಿಪತಿ ಭಾವದ ವಚನಗಳಿಗೆ ಕೊರತೆಯಿಲ್ಲ. ಆದರೆ ಅವೆಲ್ಲ ಒಂದೇ ಎತ್ತರದಲ್ಲಿಲ್ಲ. ಈ ವಚನ ವಿಧಾನದಲ್ಲಿ ಎತ್ತರವನ್ನು ಉಳಿಸಿಕೊಳ್ಳುವುದು ಸುಲಭವಲ್ಲ! ಅದನ್ನುಳಿಸಿಕೊಂಡವರು ಅಲ್ಲೊಬ್ಬ ಅಕ್ಕಮಹಾದೇವಿ; ಇಲ್ಲೊಬ್ಬ ಬಸವಣ್ಣ, ಅಲ್ಲೊಬ್ಬ ಉರಿಲಿಂಗದೇವರ, ಇಲ್ಲೊಬ್ಬ ಗಜೇಶ ಮಸಣಯ್ಯ–ಹೀಗೆ ಹಲವರು ಮಾತ್ರ ಮೇಲೆ ವಿವರಿಸಿದ ಶರಣಸತಿಯ ಚಿತ್ರ ಗಜೇಶ ಮಸಣಯ್ಯನದು. ಭಾವಭಾಷೆಗಳ ಸೌಂದರ್ಯದಲ್ಲಿ ಅಕ್ಕಮಹಾದೇವಿಯ ವಚನಗಳಿಗೆ ಹೊಯಿಕೈಯಾಗಿ ನಿಲ್ಲಬಲ್ಲ ವಚನಗಳನ್ನು ನೀಡುರುವ ಮಹಾತ್ಮನೀತ. ಇವರಿಬ್ಬರೂ ಕನ್ನಡ ನುಡಿಯ ಮಾಧುರ್ಯಕ್ಕೆ ಕಳಸವಿಟ್ಟವರು–ಶರಣಸತಿ ಲಿಂಗಪತಿ ಭಾವದ ಸೀಮೆಯನ್ನು ವಿಸ್ತರಿಸಿದವರು.

ಅಕ್ಕಮಹಾದೇವಿ ಎಷ್ಟೆಂದರೂ ಹೆಣ್ಣಾಗಿ ಹುಟ್ಟಿದಾಕೆ. ಸತಿಪತಿ ಭಾವ ಆಕೆಗೆ ಸಹಜವಾದುದು. ಆದರೆ ಗಂಡಾಗಿ ಹುಟ್ಟಿದ ಗಜೇಶ ಮಸಣಯ್ಯ ಈ ಭಾವದಲ್ಲಿ ಆಕೆಯ ಎತ್ತರಕ್ಕೆ ಏರಿರುವುದು ಕೌತುಕಗಳಲ್ಲಿ ಕೌತುಕ. ಈತನ ವಚನಗಳು ಎಲ್ಲ ಸಿಕ್ಕಿವೆಯೋ, ಇನ್ನೂ ಉಳಿದಿವೆಯೋ ಗೊತ್ತಿಲ್ಲ. ದೇವರ ದಯದಿಂದ ಅವನ ಇನ್ನಷ್ಟು ವಚನಗಳು ಉಪಲಬ್ಧವಾದರೆ ಭಾವಗೀತಗಳ ಯಾವ ಕವಿಗೂ ಅವನ ಸರಿಸಮಾನನಾಗಿ ನಿಲ್ಲುತ್ತಾನೆ.

ಗಜೇಶ ಮಸಣಯ್ಯನಿಗೆ ಜನ್ಮವಿತ್ತ ಪುಣ್ಯ ಅಕ್ಕಲಕೋಟೆಗೆ ಸಮೀಪದಲ್ಲಿರುವ ಕರಜಗಿ ಗ್ರಾಮಕ್ಕೆ. ಅಲ್ಲಿ ಗಜೇಶ್ವರ ದೇವಾಲಯವಿದೆ. ಅಲ್ಲಿಂದ ೪೦ ಮೈಲಿಗಳ ಮೇಲಿರುವ ಆಳಂದ ತಾಲ್ಲೂಕಿನಲ್ಲಿ ಮನವಳ್ಳಿಯಲ್ಲಿ ಮಸಣಯ್ಯನ ದೇವಾಲಯವೂ ಇದೆ. ಪ್ರತಿವರ್ಷ ಅವನು ಜಾತ್ರೆಯೂ ನಡೆಯುತ್ತದೆ. ಇದಕ್ಕೆ ಮನಸಯ್ಯನ ದೃಢಭಕ್ತಿಯ ಬಲವೇ ಕಾರಣ. ಮಸಣಯ್ಯನ ಲಿಂಗಪೂಜಾರತಿ ಪ್ರಸಿದ್ಧವಾದುದು.ಬಿಸಿಲು, ಚಳಿ, ಮಳೆ, ಗಾಳಿ, ಹಸಿವೆ, ನೀರಡಿಕೆ, ನಿದ್ರೆಗಳಾವುವೂ ಅವನ ಲಿಂಗಪೂಜೆಗೆ ಅಡ್ಡಬರಲಾರವು. ಇಷ್ಟ–ಪ್ರಾಣ–ಭಾವ ಲಿಂಗಗಳ ಅನುಸಂಧಾನದಿಂದ ಅವುಗಳಾಚೆಯ ನಿಷ್ಕಲಲಿಂಗ, ಶೂನ್ಯಲಿಂಗ, ನಿಶ್ಶೂನ್ಯಲಿಂಗಗಳ ನಿಲುವನ್ನೂ ನಿಲುಕಿಸಿಕೊಂಡಿದ್ದ ಮಸಣಯ್ಯ.

ಒಮ್ಮೆ ಗಜೇಶ ಮಸಣಯ್ಯನ ಲಿಂಗಭಕ್ತಿಯ ಪರೀಕ್ಷೆ ನಡೆಯಿತು. ಗುರು ದರ್ಶನಕ್ಕೆಂದು ಗಜೇಶ ಮಸಣಯ್ಯ ಕರಜಿಗೆಯಿಂದ ಹೊರಟು ದಾರಿಯಲ್ಲಿ ಹೊಳೆಯೊಂದರ ಹತ್ತಿರ ಲಿಂಗಪೂಜೆಗೆ ಕುಳಿತ. ಆ ಪ್ರಶಾಂತ ವಾತಾವರಣ, ಸುಂದರ ಸನ್ನಿವೇಶ ಅವನನ್ನು ಆಕರ್ಷಿಸಿದುವು. ಆ ತೊರೆ ಬೆಣ್ಣೆತೊರೆಯೇ ಆಗಿರಬೇಕೆಂದು ಬಲ್ಲವರು ತರ್ಕಿಸಿದ್ದಾರೆ.

ಶಿವಪೂಜೆಯೊಳಗೆ ಹುಟ್ಟಿದ ಸುಧಾಕರನಂತೆ ಮಸಣಯ್ಯ ಮೈಮರೆತು ಕುಳಿತು– ಶಿವಪೂಜೆಯಲ್ಲಿ. ಮೋಡಗವಿಯಿತು, ಗುಡುಗು ಗದ್ದರಿಸಿತು, ಮಿಂಚು ಕೋರೈಸಿತು, ಸಿಡಿಲು ಖಡಿಲ್ ಎಂದಿತು. ಮಸಣಯ್ಯನಿಗೆ ಎಚ್ಚರವೇ ಇಲ್ಲ. ಮಳೆ ಸುರಿಯತೊಡಗಿತು. ಇನ್ನೂ ಎಚ್ಚರವಿಲ್ಲ. ಹೊಳೆತುಂಬಿ ಭೋರ್ಗರೆಯುತ್ತ ಹರಿಯತೊಡಗಿತು. ಆಗಲೂ ಎಚ್ಚರವಿಲ್ಲ. ಹೊಳೆಗೆ ನೆರೆಬಂದು ಹೊನಲು ಮಸಣಯ್ಯನ ಮೇಲ್ವಾಯ್ದು ಹೋಯಿತು. ಅಷ್ಟಾದರೂ ಎಚ್ಚರಿಲ್ಲ ! ಪ್ರಕೃತಿಯೇ ಸೋತು ಶರಣಾಗತವಾಯಿತವನಿಗೆ. ಮಳೆ ನಿಂತಿತ್ತು, ಹೊಳೆ ಇಳಿಯಿತು, ಮಸಣಯ್ಯನ ಕೀರ್ತಿ ಮಾತ್ರ ಏರಿತು–ಎಂಟು ದಿಕ್ಕುಗಳಿಗೆ!

ಬಸವಣ್ಣನವರಿಗೆ ಬಹುಶಃ ಸಮಕಾಲೀನನಾದ ಮಸಣಯ್ಯ ನಿಜದಲ್ಲಿ ಬೆರೆದು ಅಜರಾಮರನಾದ. ಅವನ ಆತುಮದ ಓಜಸ್ಸು ಅವನ ಮಾತುಗಳಲ್ಲಿ ನಿಂತು ಇಂದಿಗೂ ನಮ್ಮ ಮನಗಳ ಮಂದಿರಗಳನ್ನು ಬೆಳಗುತ್ತಿವೆ :

"ಒಲಿವವರ ಕೊಲುವೊಡೆ ಮಸೆದ ಕೂರಲಗೇಕೆ–ಒಲ್ಲೆನೆಂದಡೆ ಸಾಲದೆ?"

"ಇದ್ದಿಲ್ಲ ಮಿಡಿದಡೆ ರಸವುಂಟೆ?"

"ಒಲಿದವರನಗಲಿದರೆ ಸರ್ವಾಂಗಬೇವುದವ್ವಾ"

"ಮಾತಂಗಿಯ ಹೊಳೆಯಲಿ ಉತ್ತಮನ ನೆಳಲು ಸುಳಿದಡೆ ರೂಹು ಹೊಲೆಯನಾಗಬಲ್ಲುದೆ?"

"ಉಪ್ಪಿಲ್ಲದೂಟ ಸಪ್ಪೆಕಾಣಿರೆ"

"ಸಾಕಾರದಲ್ಲಿ ಸವೆದು ನಿರಾಕಾರದಲ್ಲಿ ಅರ್ಪಿಸಿದಡೆ ಮಹಾಲಿಂಗ ಗಜೇಶ್ವರ ದೇವನುಮೇಶ್ವರನಾಗಿರ್ದನವ್ವಾ"

"ಹಮ್ಮಿನ ಕಳೆಯ ಪುಳಕದಲ್ಲಿ ತಾರಕಿ ತಳಿತಂತೆ"

"ಮದಾಳಿಯ ನಾಸಿಕದಂತೆ ಸುಳಿದು ಸುಖಬಿಡುವೆ"

"ಮುನಿಸು ಮುನಿದಡೆ ಸಿರಿಗಂಧದ ಮುರುಡಿನಹಾಗಿರಬೇಕವ್ವಾ ! ತೆಗೆ ದಪ್ಪಿದರೆ ಚಂದನದ ಶೀತಲದ ಹಾಗಿರಬೇಕವ್ವಾ ! ಹೆಣಗುವಲ್ಲಿ ಮೈ

ಯೆಲ್ಲ ಕೈಯಾಗಿ ಹೆಣಗಬೇಕವ್ವಾ ! ಮಹಾಲಿಂಗ ಗಜೇಶ್ವರನ ನೆರೆವ
ಭರದಿಂದ ನೊಂದು ಅಂಕದ ಮೇಲೆ ಬಿದ್ದಹಾಗಿರಬೇಕವ್ವಾ !"

ಮುಂತಾದ ಮಿಂಚಿನ ಮಾತುಗಳಲ್ಲಿ ಮಸಣಯ್ಯನ ಆತ್ಮವಿನ್ನೂ ಮಿನಮಿನಮಿನ ಮಿಂಚುತ್ತಿರುವುದಿಲ್ಲವೆ?

"ಪರಮ ಪದವಿಯ ನೀವೆಲ್ಲ ಕೊರಳಲ್ಲಿ ಕಟ್ಟಿಕೊಳ್ಳಿ !
ಪರಮ ಪದವಿಯ ನಿಮ್ಮ ತಲೆಯಲ್ಲಿ ಸುತ್ತಿಕೊಳ್ಳು !
ಎನಗೆ ನಿಮ್ಮ ತೊತ್ತಸೇವೆಯೇ ಸಾಕು !
ಮಹಾಲಿಂಗ ಗಜೇಶ್ವರದೇವಾ, ಪರಮ ಪದವ
ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ !"

ಎಂದು ತನ್ನಾಳ್ದನ ತೊತ್ತು ಸೇವೆಯನೇ ನಿತ್ಯಗೈದು ನಿಜದಿ ಬೆರದ ಗಜೇಶ ಮಸಣಯ್ಯ. ಅವನು ಬೇಡವೆಂದರೂ ಪರಮ ಪದವಿ ಅವನನ್ನು ಅರಿಸಿಕೊಂಡು ಬಂದಿತು. ಅವನೇ ಹೇಳಿಲ್ಲವೆ?

ನೀನೊಲಿದು ಕೂರ್ತವರು
ನಿಮಗೊಲಿದು ಕೂರ್ತವರು
ನಿಮ್ಮ ಪರಿಯೇ ಅವರು
ನಿಮ್ಮ ರೂಹೇ ಅವರು !
ಆಳಾರು ಅರಸಾರು
ಎಂದರಿಯಲಾರದು ;
ನಿಮ್ಮ ರೂಹೇ !

"ಮಹಾಲಿಂಗಗಜೇಶ್ವರನೊಲಿದು ಪೂಜಿಸಿದವರು
ಸಾಲೋಕ್ಯ ಸಾಮೀಪ್ಯ ಸಾಯುಜ್ಯ ಪದವಿಗಳ ಪಡೆದರು.
ಎನಗೆ ನಿಮ್ಮ ತೊತ್ತು ಸೇವೆಯೇ ಸಾಕು !"

ತತ್ತ್ವಕ್ಕೆ ತೊತ್ತಾಗಿ, ಸತ್ಯಕ್ಕೆ ತೊತ್ತಾಗಿ, ನಿತ್ಯಕ್ಕೆ ತೊತ್ತಾಗಿ ಬಾಳಿ ಮುಕ್ತರಾದವರ ಮಾಲಿಕೆಯಲ್ಲಿ ಮಸಣಯ್ಯನವರಿಗೊಂದು ಮನ್ನಣೆಯ ಸ್ಥಾನವಿದೆ.

■

# ದಯವೆ ದೇಹ ಧರಿಸಿದಂತಿದ್ದ ದಸರಯ್ಯ–ವೀರಮ್ಮರು

ಶರಣಧರ್ಮದ ಸುವರ್ಣಸೂತ್ರ–ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು, ದಯವೇ ಧರ್ಮದ ಮೂಲವೆಂದು ತಿಳಿವುದು. ಎಲ್ಲ ಶರಣರೂ ಈ ಸುವರ್ಣ ಸೂತ್ರವನ್ನೇ ಅನುಸರಿಸಿ ನಡೆದಿದ್ದಾರೆ. ದಸರಯ್ಯನಾದರೋ ಈ ಸೂತ್ರಕ್ಕೆ ತನ್ನ ಬಾಳಿನಿಂದಲೇ ಭಾಷ್ಯ ಬರೆದು ಹೋಗಿದ್ದಾನೆ.

ರಾಮಗೊಂಡೆಯಲ್ಲಿ ಹುಟ್ಟಿ ಹುಟ್ಟಗೆಟ್ಟು ಹೋದ ದಸರಯ್ಯ ಸರ್ವಭೂತ ಹಿರವೇ ತನ್ನ ವ್ರತವೆಂದು ತಿಳಿದು ನಡೆದನು. ಅಹಿಂಸೆ ಆತನ ಉಸಿರು, ಸರ್ವಭೂತಹಿತರತಿ ಆತನ ಕಣ್ಣಾಗಿದ್ದುವು. ಎಲ್ಲವನ್ನೂ ಓದಿ, ಎಲ್ಲವನ್ನೂ ಅರಿದು ಅವನಿದೇ ತೀರ್ಮಾನಕ್ಕೆ ಬಂದಿದ್ದನು–'ಜೀವಿಯ ನೋವೆ ಲಿಂಗದ ನೋವು !'

ಆದುದರಿಂದ ಸುತ್ತಿನಿಂದೆಗಳಿಗಾಗಲಿ ಸುಖದುಃಖಗಳಿಗಾಗಲಿ ಆತ ಮನಗೊಡುತ್ತಿರಲಿಲ್ಲ. ಇವರು ಹಿತರು, ಇವರು ಅಹಿತರು, ಇವರು ತನ್ನವರು, ಇವರು ಅನ್ಯರು, ಇವರು ಬೇಕಾದರು, ಇವರು ಬೇಡವಾದವರು–ಎಂಬ ಭಾವನೆಯನ್ನು ಬಳಿಗೆ ಬರಗೊಡುತ್ತಿರಲಿಲ್ಲ. ಕ್ಷಮೆ, ಶಮೆ, ದಮೆ, ಶಾಂತಿ, ಸದಾಚಾರ, ಸದ್ಭಕ್ತಿ, ಸರ್ವಪ್ರೀತಿಗಳೇ ಅವನ ಸರ್ವಸ್ವವಾಗಿದ್ದುವು.

ಅವನ ಅಹಿಂಸೆ ಸಚರಾಚರಗಳನ್ನೆಲ್ಲ ವ್ಯಾಪಿಸಿತ್ತು. ತನ್ನಿಂದ ತರುವರಾದಿಗಳಿಗೂ ನೋವಾಗಬಾರದೆಂದು ಪೂಜೆಗೆ ಪುಷ್ಪಗಳನ್ನು ಕೂಡ ಮೆಲ್ಲನೆ ಎತ್ತಿ ತರುತ್ತಿದ್ದನು. ಮರದ ರೆಂಬೆಗಳನ್ನು ಬಲವಾಗಿ ಬಾಗಿಸಿದರೆ ಅವುಗಳಿಗೂ ನೋವಾದೀತೆಂದು ಮೆಲ್ಲನೆ ಅವುಗಳನು ಬಾಗಿಸಿ ನವುರಾಗಿ ಹೂಗಳನ್ನೆತ್ತಿಕೊಂಡು ಬರುತ್ತಿದ್ದನು.

ಒಮ್ಮೆ ಅವನ ಅಹಿಂಸೆಯೂ ಅಗ್ನಿಪರೀಕ್ಷೆಗೆ ಒಳಗಾಯಿತು. ಹೂದೋಟದಲ್ಲಿ ಒಮ್ಮೆ ಹೂಗಿಡದಿಂದ ಹೂ ಬಿಡಿಸಿಕೊಳ್ಳುತ್ತಿರಲು ಹೂ ನೊಂದು 'ಹಾ !' ಎಂದಹಾಗಾಯಿತು, ಹಾಗೆ ಹೂ ನಿಜವಾಗಿ ಹಾಗುಟ್ಟಿರಲಿಕ್ಕಿಲ್ಲ. ಆದರೆ ಸರ್ವಜೀವ ದಯಾಪಾರಿಯಾದ ದಸರಯ್ಯನ ಸುಪ್ತಚೇತನದಲ್ಲಿ ಹುದುಗಿದ್ದ 'ಹೂಗಳನ್ನು

ಬಿಡಿಸಿಕೊಳ್ಳುವಾಗ ತನ್ನಿಂದ ಅವುಗಳಿಗೆ ಎಲ್ಲ ನೋವಾಗುತ್ತದೆಯೋ' ಎಂಬ ಅವನ ಆಳುಕು ಅಂದು ಬಲವಾಗಿ ಅವನ ಕಿವಿಗೆ ಹೂವು 'ಹಾ' ಎಂದಂತೆ ಕೇಳಿಸಿರಬೇಕು.

ದಸರಯ್ಯನ ಮೈ ನಡುಗಿತು–ತನ್ನಿಂದ ಹೂವಿನ ಹೃದಯಕ್ಕೆ ನೋವಾಯಿತೆಂದು ಹೂವನ್ನು ಎತ್ತಿಕೊಂಡ ಸ್ಥಳವನ್ನು ನೋಡಿದನು–ಅಲ್ಲಿ ತುಂಬಿನರಸ ರಕ್ತ ಕಂಡಂತೆ ಕಾಣಿಸಿತವನಿಗೆ ! ದಸರಯ್ಯನ ಕಣ್ಣುಗಳಿಗೆ ಕತ್ತಲುಗೂಡಿಸಿದಂತಾಯಿತು. ಹೃದಯ ಝಲ್ಲೆಂದಿತು. ಮರುದಿಂದ, ಬಳ್ಳಿಯಿಂದ ಪೂಜೆಗೆ ಬೇಕಾದ ಹೂಗಳನ್ನು ಎತ್ತಿಕೊಳ್ಳುವುದೂ ಹಿಂಸೆಯೇ ಎಂದವನಿಗೆ ಎನಿಸಿತು.

ಅಂದಿನಿಂದ ಹೂಗಳನ್ನು ಹರಿಯುವುದುನ್ನು ಬಿಟ್ಟೇಬಿಟ್ಟ, ತಾವಾಗಿ ತಂಗಾಳಿಗೆ ಉದುರಿ ಬಿದ್ದ ಹೂಗಳನ್ನೇ ಆಯ್ದು ತಂದು ಪೂಜೆ ನಡೆಸುತ್ತಿದ್ದ. ಆಯ್ದು ತಂದ ಹೂಗಳನ್ನು ಲಿಂಗಕ್ಕೆ ಅರ್ಪಿಸಿ,

> "ಉದುರಿಬೀಳುವನ್ನಕ್ಕ ನಿನ್ನ ಹಂಗಯ್ಯ ! ಉದುರಿ ಬಿದ್ದ ಬಳಿಕ
> ಎನ್ನೊಡವೆಯ್ಯ ತಂದೆ!.....ತರುಲತೆ ಸ್ಥಾವರ ಜೀವಂಗಳೆಲ್ಲ ನಿನ್ನ
> ಕಾರುಣ್ಯದಿಂದ ಒಗೆದುವು. ಅವ ಹರಿದು ಇನ್ನಾರಿಗರ್ಪಿಸುವೆ–
> ತೊಟ್ಟು ಬೀಳುವನ್ನಕ್ಕ?"

ಎಂದು ಬೇಡಿಕೊಳ್ಳುತ್ತಿದ್ದನು. ಬಿದ್ದು ಬಾಡಿದ ಹೂಗಳನ್ನು ಅರ್ಪಿಸಿದುದಕ್ಕಾಗಿ ಲಿಂಗಯ್ಯನೆಲ್ಲಿ ತಪ್ಪು ತಿಳಿದುಕೊಳ್ಳುವನೋ ಎಂದು–

> "ನಾಪೂಜಿಸುವನ್ನಕ್ಕ ನೀ ದೇವ; ಎನ್ನ ಪೂಜೆಗೊಳಗಾದಲ್ಲಿ ನೀಭಕ್ತ,
> ನಾನಿತ್ಯನಯ್ಯ , ಮರೆಯದಿರು"

ಎಂದು ಎಚ್ಚರಿಸುತ್ತಿದ್ದನು. ಹೂಗಳು ಮರದಲ್ಲಿರುವವರೆಗೆ, ಬಳ್ಳಿಯಲ್ಲಿರುವವರೆಗೆ ಅವು ನಿನ್ನ ಹಂಗು. ಅಲ್ಲಿಯವರೆಗೆ ಅವು ನನ್ನವಲ್ಲ, ನಿನ್ನವು: ಆದರೆ ಉದುರಿಬಿದ್ದ ಮೇಲೆ ಅವು ನಿನ್ನವಲ್ಲ, ಮರದವಲ್ಲ, ಬಳ್ಳಿಯವಲ್ಲ, ನನ್ನವು. ಆಗ ಮಾತ್ರ ಅವುಗಳನ್ನು ನಾನು ನನ್ನವೆಂದು ನಿನಗರ್ಪಿಸಬಲ್ಲೆ. ಬಾಡಿದ ಹೂ ಬೇಡ, ಮರದ ಹೂವೇ ಬೇಕೆಂದು ನೀನು ಬಯಸಿದರೆ ನಿನ್ನಲ್ಲೂ ಆಸೆಮೂಡಿ ನೀನು ದೇವತ್ತ್ವ ಕಳೆದುಕೊಳ್ಳುವಿ–ನೀನೇ ಭಕ್ತನಾಗುವಿ. ನೆನಪಿರಲಿ, ಎಂದು ಎಚ್ಚರಿಸುವನು. ಶಿವನ ಕಲ್ಯಾಣಗುಣಗಳು ನೆನಪಾಗಿ,

> "ಸರ್ವದಯಾವಸ್ತು ಬೀಜನಲಾ ನೀನು; ಮಲತ್ರಯ ದೂರನೆ,
> ಸವಾಂಗ ಸಂತೋಷಿಯೇ, ನಿಗರ್ವಿಯೆ, ದಸರೇಶ್ವರ ಲಿಂಗವೇ–ತಥ್ಯ

ಮಿಥ್ಯವ ಬಿಟ್ಟೆನಗೆ ಕಾರುಣ್ಯ ಪ್ರಸಾದವ ಕರುಣಿಸಯ್ಯ !"
ಎಂದು ಕೋರುತ್ತಿದ್ದನು.

ಬರುಬರುತ್ತ ದಸರಯ್ಯನ ದಯಾದೃಷ್ಟಿ ವಿಶ್ವವ್ಯಾಪಕವಾಗುತ್ತ ನಡೆಯಿತು; ಅವನ ಅಹಿಂಸೆ ಅನಂತವಾಗುತ್ತ ನಡೆಯಿತು. ದಾರಿಯಲ್ಲಿ ನಡೆವಾಗ ಕೂಡ ಕ್ರಿಮಿಕೀಟಕಾದಿ ಜೀವಹತ್ಯೆಯಾದೀತೆಂದು ಮೆಲ್ಲನೆ ನಡೆಯುವನು; ಯಾರ ಮನಸ್ಸಿಗೂ, ಮೈಗೂ ನೋವಾಗದಂತೆ ಹಿತಕರವಾದುದನ್ನೇ ನುಡಿವನು, ಹಿತಕರವಾಗಿಯೇ ನಡೆವನು. ಬಲವಾಗಿ ಕೈ ಬೀಸಿದರೆಲ್ಲಿ ಗಾಳಿಯಲ್ಲಿರುವ ಅಗೋಚರ ಪ್ರಾಣಿಗಳಿಗೆ ಹಿಂಸೆಯಾಗುವುದೋ ಎಂದು ಕೈ ಬೀಸುವಾಗಲೂ ಎಚ್ಚರಿಕೆಯಿಂದ ಬೀಸುವನು.ಮಲಗುವಾಗ, ಕುಳಿತುಕೊಳ್ಳುವಾಗ, ಏಳುವಾಗ, ನಡೆವಾಗ, ನುಡಿವಾಗ– ಒಟ್ಟಿನಲ್ಲಿ ಉಸಿರಾಡಿಸುವಾಗಲೂ ತನ್ನಿಂದ ಹಿಂಸೆ ಜರುಗದಂತೆ ಅಹಿಂಸೆಯ ಅಪರಾತವತಾರಿಯಾಗಿ ವರ್ತಿಸತೊಡಗಿದನು. ಇದಕ್ಕೆ ಈ ವಚನ ಸಾಕ್ಷಿ :

"ನುಡಿಯಲ್ಲಿ ಕಿಂಕರತ್ವವನರಿದು, ಕರವ ಬೀಸುವಲ್ಲಿ ತುಷಾರಕೀಟವ
ನರಿದು, ಅಡಿಯಿಡುವಲ್ಲಿ ಪೊಡವಿಯಲ್ಲಿ ಹೊರಹೊಮ್ಮಿದ ಜೀವನ
ಚೇತ
ನಾದಿಗಳನರಿದು, ಮತ್ತೆ ಗಿಡವ ಹಿಡಿವಲ್ಲಿ, ಮತ್ತೊಂದ ಒಡಗೂಡುವಲ್ಲಿ,
ಒಡಗೂಡಿ ಬಿಡುವಲ್ಲಿ ಸರ್ವದಯಕ್ಕೆ ಪುಡಿಪುಚ್ಚವಿಲ್ಲದಿರಬೇಕು ! ಇಂತೀ
ಸಡಗರದ ಚಿತ್ತ ದಸರೇಶ್ವರ ಲಿಂಗವನೊಡಗೂಡುವ ಭಕ್ತಿ."

ಅವನ ಅಹಿಂಸೆ ಶ್ರದ್ಧೆಯಲ್ಲಿ ಉದ್ಭವಿಸಿದುದು ಮಾತ್ರವಲ್ಲ, ಬುದ್ಧಿಯಲ್ಲಿ ಬೆಳೆದುದೂ ಅಹುದು. ಅವನು ಕಂಡ ದಿವ್ಯದರ್ಶನವಿದು:

"ಸರ್ವವನರಿದಲ್ಲಿ, ಸರ್ವಜ್ಞನಾದಲ್ಲಿ ಇದಿರೆಲ್ಲ ತನ್ನಲ್ಲಿ, ತಾನೆಲ್ಲ ಇದಿರಲ್ಲಿ!
ತನ್ನ ಭಿನ್ನಭಾವ ಅನ್ಯರಲ್ಲಿ ತೋರಿ ಆ ಗುಣ ತನ್ನನೆ ಅನ್ಯವೆನಿಸುವುದು!
ತನ್ನಯ ಶಾಂತಿ ಅನ್ಯರಲ್ಲಿ ತೋರಿ ಅಲ್ಲಿ ಭಿನ್ನಭಾವವಿಲ್ಲದಿರೆ ಅವರನ್ಯರಲ್ಲ
–ಎಮ್ಮವರೆಂಬರು. ಅದು ತನ್ನ ಗುಣ, ಅನ್ಯವಿಲ್ಲ ಎಂಬುದನರಿದಲ್ಲಿ
ತನ್ನೊಪ್ಪ ದರ್ಪಣದಲ್ಲಿ ತೋರುವಂತೆ, ಇದಕ್ಕೆ ಸಂದೇಹವಿಲ್ಲ.
ದಸರೇಶ್ವರ ಲಿಂಗವನರಿವುದಕ್ಕೆ."

ಇದೊಂದೇ ವಚನವನ್ನು ದಸರಯ್ಯ ಬರೆದು ಹೋಗಿದ್ದರೂ ವಚನ ಸಾಹಿತ್ಯದಲ್ಲಿ ಆತನಿಗೊಂದು ಸ್ಥಾನವಿದ್ದೇ ಇರುತ್ತಿದ್ದಿತೆಂದು ಹೇಳಬಹುದು. ಇದರಲ್ಲಿ ಮಾನವತೆಯ ಮೂಲಸೂತ್ರವನ್ನೇ ಬಿತ್ತರಿಸಿದ್ದಾನೆ ದಸರಯ್ಯ. ನಾವು ಯಾವ ರೂಪವಾಗಿರುವೆವೋ

ಅದನ್ನೇ ದರ್ಪಣ ಪ್ರತಿಬಿಬಿಸುತ್ತದೆ. ಇನ್ನೊಬ್ಬರ ಮನದ ಮುಕುರದಲ್ಲಿ ನಾವು ಬೀರಿದ ಭಾವವೇ ಬಿಂಬಿಸುತ್ತದೆ. ತನ್ನವರು ಅನ್ಯರೆಂಬುದು ತನ್ನನ್ನೇ ಅವಲಂಬಿಸಿದೆ. ತಾನು ಎಲ್ಲರೂ ತನ್ನವರೆಂದು ತಿಳಿದರೆ ತನ್ನವರಾಗುತ್ತಾರೆ, ಅನ್ಯರೆಂಬುದು ತಿಳಿದರೆ ಅನ್ಯರಾಗುತ್ತಾರೆ. ಮುಖ್ಯವಾಗಿ ಬೇಕಾದುದು ಸಮದರ್ಶನ, ಸಮದರ್ಶನ ಸಿದ್ಧಿಸಿದರೆ ಸಹಜೀವನ ತಾನಾಗಿಯೇ ತಲೆದೋರುತ್ತದೆ. ಆ ಸಮದರ್ಶನವೇ ದಸರಯ್ಯನಾಗಿ ಹುಟ್ಟಿದ್ದಿತು :

> "ಸರ್ವಮಯ ನೀನಾದಲ್ಲಿ ಅವುದನಹುದೆಂಬೆ? ಅವುದನಲ್ಲವೆಂಬೆ?
> ಸರ್ವಚೈತನ್ಯ ನಿನ್ನ ತಂತ್ರಗಳಿಂದಾಡುವುವಾಗಿ ಅವುದು ಕಾಯುವೆ–
> ಇನ್ನಾವುದ ಕೊಲುವೆ?"

ಎಂದು ಕೇಳುವ ದಸರಯ್ಯನವರ ದರ್ಶನವಿಶುದ್ಧಿಯನ್ನೇನು ವರ್ಣಿಸುವುದು?

ಇಷ್ಟು ಎಚ್ಚರದಿಂದ ನಡೆದರೂ ಹಿಂಸೆಯನ್ನು ಪೂರ್ಣವಾಗಿ ತಪ್ಪಿಸುವುದು ಸಾಧ್ಯವಾಗದುದನ್ನು ಕಂಡು ದಸರಯ್ಯನವರು ದುಃಖಿಸುತ್ತಾರೆ. ಹೊರಗಿನ ಜೀವಿಗಳನ್ನು ಹಿಂಸಿಸದೆ ಹೇಗಾದರೂ ಬದುಕಬಹುದು. ಆದರೆ ತನ್ನ ತನುವಿನಲ್ಲಿಯೇ ಹುಟ್ಟಿ, ಶರೀರ ಧರ್ಮದಿಂದ ಸಾಯುವ ಕ್ರಿಮಿಜಂತುಗಳ ಹಿಂಸೆಯನ್ನು ಹೇಗೆ ಹೋಗಲಾಡಿಸುವುದು?

> "ಎಲು, ನರ, ಚರ್ಮ, ಮಜ್ಜೆ, ಮಾಂಸದೊಳಗಾದ ಕ್ರಿಮಿ ಎನ್ನಂಗ
> ದೊಳು ಹುಟ್ಟಿ ಮಲ, ಹುಣ್ಣು, ಹುಗುಳುಗಳಲ್ಲಿ ಬೀಳುವುದ ಕಂಡು
> ಅವನು ನಾ ರಕ್ಷಿಸಿದೆನೆ? ಅವು ಬೀಳುಬೇಕೆಂದು ನಾ ಶಿಕ್ಷಿಸಿದೆನೆ?
> ಇಂತೀಜೀವದ ದೃಷ್ಟವ ಕಂಡು ಎನಗಿದೆತ್ತಣ ಸರ್ವಜೀವದಯೆ?
> ಇದರ ಲೇಪನ ಬಿಡಿಸಾ ಚನ್ನದಸರೇಶ್ವರಲಿಂಗಾ !"

ಎಂದು ಮೊರೆಯಿಡುತ್ತಾರೆ. ಅವರು ಕಂಡ ಜೀವ ದೃಷ್ಟ–ಜೀವನದ ದೃಶ್ಯಜೀವಿ ಜೀವವ ತಿಂದು ಜೀವಿಸುವ ಜೀವನ ದೃಶ್ಯ ನಿಜವಾಗಿಯೂ ಮೈ ನಡುಗಿಸುವಂತಹುದು! ಇಂಥ ಜೀವನ ಸಂಗ್ರಾಮದಲ್ಲಿ ನಾನು ಸರ್ವಜೀವದಯಾಭರಿತನಾಗಿ ಬದುಕಲಾರೆ, ಈ ಹಿಂಸಾಮಯವಾದ ಜೀವನದಿಂದ ಬೇಗ ಮುಕ್ತನನ್ನಾಗಿ ಮಾಡು–ಎಂಬುದನ್ನು ಬೇಡಿಕೊಳ್ಳುವ ದಸರಯ್ಯನ ದಯಾದ್ರ ಹೃದಯಕ್ಕೆ ನಮೋ, ನಮೋ ಎನ್ನಬೇಕೆನಿಸುತ್ತದೆ !

ಇಂಥ ಅಹಿಂಸೆಯ ಮೂರ್ತಿಗೂ ಹಿಂಸೆ ತಪ್ಪಲಿಲ್ಲ ಈ ಕ್ರೂರ–ಕುಟಿಲ–ಕುಹಕ ಲೋಕದಲ್ಲಿ 'ಇವನ ಅಹಿಂಸೆಯನ್ನೊಮ್ಮೆ ಒರೆಗೆ ಹಚ್ಚಿ ನೋಡಲೇಬೇಕು'

ಎಂದು ಸಿದ್ಧರಾದರು ಕೆಲವು ಮಲಿನ ಮತಿಗಳು. ಅವರು ಸಿದ್ಧರಾದರೆನ್ನುವುದಕ್ಕಿಂತ ಶಿವನವರನ್ನು ಸಿದ್ಧಮಾಡಿದ–ದಸರಯ್ಯನ ಕೊನೆಯ ಪರೀಕ್ಷೆಗೆ ಎಂದು ಬೇಕಾದರೆ ಹೇಳಬಹುದು.

ಆ ಊರಲ್ಲಿ ಒಬ್ಬ ದುರಾತ್ಮನಿದ್ದನು. ಕಳವು ಮಾಡಿ ಸಿಕ್ಕು ಕೈ ಕಡಿಸಿಕೊಂಡಿದ್ದ ಅವನ ಹೆಸರು ಮೋಟ ಮಲ್ಲುಗ.

ಪರಪೀಡೆಯೇ ಕ್ರೀಡೆಯಾಗಿದ್ದ ಆ ಸುಜನೋಪದ್ರವಜೀವಿಗಳು ದಸರಯ್ಯನ ಸತ್ವ ಪರೀಕ್ಷೆಗಾಗಿ ಆ ಮೋಟ ಮಲ್ಲುಗನನ್ನು ಹುರಿದುಂಬಿಸಿದರು. ಅವನೂ ಆನಂದದಿಂದ ಒಪ್ಪಿಕೊಂಡ. ಕೈ ಕಡಿಸಿಕೊಂಡಿದ್ದರೂ ಅವನ ಮನಕ್ಕೆ ಬೆಳೆದಿದ್ದ ಪಾಪದ ಕೈಗಳಿನ್ನೂ ಮೊಂಡಾಗಿರಲಿಲ್ಲ. ಆ ಕೇಡಿಗಳೆಲ್ಲ ಸೇರಿ ಮೋಟ ಮಲ್ಲುಗಣ ಮಂಡೆ ಬೋಳಿಸಿ ಅವನಿಗೆ ಕಾವಿ ಉಡಿಸಿದರು, ಭಸ್ಮ ಬಳಿದರು, ರುದ್ರಾಕ್ಷಿ ಸರ ಸುತ್ತಿದರು, ಸುಳ್ಳು ಸನ್ಯಾಸಿಯನ್ನಾಗಿ ಮಾಡಿದರು. ಬರಿದಾದ ಲಿಂಗದ ಕಾಯಿಯನ್ನು ಕೊರಳಿಗೆ ಕಟ್ಟಿ ಕಪಟ ಜಂಗಮನನ್ನಾಗಿ ಮಾಡಿ ಕಳಿಸಿದರು.

ಮೋಟ ಮಲ್ಲುಗ ಬಂದು ವಂದಿಸಿದ ದಸರಯ್ಯನನ್ನು ನೆವವಿಲ್ಲದೆ ತನ್ನ ಮೋಟುಗೈಗಳಿಂದ ಗುದ್ದತೊಡಗಿದನು. ಆಗ ದಸರಯ್ಯನ ಅಹಿಂಸೆ ಅಗ್ನಿಪರೀಕ್ಷೆಗೆ ಗುರಿಯಾಯಿತು. ನಿಷ್ಕಾರಣವಾಗಿ ತನ್ನನ್ನು ಹಿಂಸಿಸತೊಡಗಿದ್ದ ಆ ದುಷ್ಟನನ್ನು ದಂಡಿಸುವುದು ಧರ್ಮವಲ್ಲವೆ? ಅಧರ್ಮಿಗಳೊಡನೆಯೂ ಧರ್ಮದಿಂದ ನಡೆಯಬೇಕೆ? ಹಿಂಸಾಕರ್ಮವನ್ನೂ ಅಹಿಂಸೆಯಿಂದ ತಾಳಿಕೊಳ್ಳಬೇಕೆ? ಇತ್ಯಾದಿ ಪ್ರಶ್ನೆಗಳು ದಸರಯ್ಯನ ದಯಾಬುದ್ಧಿಯನ್ನೂ ಕೆಣಕಿ ಕಲಕಿರಬೇಕು. ಎಂತಲೇ ಈ ವಚನವನ್ನವನು ಉಸಿರಿದ್ದಾನೆ ;

> "ಸರ್ವಜೀವ ನಿನ್ನಹಾಹೆ ಎಂಬೆನೆ? ಅದು ಭಿನ್ನಭಾವ ! ತ್ರಿಗುಣಾತ್ಮಕ
> ರುಂಟು : ಅವರು ನಿನಗನ್ಯರೆಂಬೆನೆ? ಆ ತ್ರಿಗುಣಾತ್ಮಕರೂ ನಿನ್ನ
> ತಿಲಾಂಶ ! ಇಂತೀ ಸರ್ವಭೂತಕ್ಕೆ ನಿನ್ನ ದಯೆ. ಎನಗಿದೇತಕ್ಕೆ ಗೆಲ್ಲ
> ಸೋಲವೆಂಬ ಖುಲ್ಲತನ? ಎಲ್ಲ ಜೀವಕ್ಕೂ ಸರಿ, ಅದು ಅರುಣೋ
> ದಯದಂತೆ ! ಎನ್ನ ಚಿತ್ತದಲ್ಲಿ ಸರ್ವಜೀವಕ್ಕೆಲ್ಲಕ್ಕೂ ದಯೆಯನೇ ಮಾಡು,
> ಚೆನ್ನ ದಸರೇಶ್ವರಲಿಂಗಾ !"

ಧನ್ಯ ದಸರಯ್ಯ ! ನಿನ್ನಂಥ ಅಹಿಂಸಾಮೂರ್ತಿಗಳು ಶತಮಾನಕ್ಕೊಬ್ಬರು ! "ಜೀವಿಗಳೆಲ್ಲ ತ್ರಿಗುಣಾತ್ಮಕರು. ಆ ತ್ರಿಗುಣಾತ್ಮಕರೂ ಶಿವನ ತಿಲಾಂಶರೇ ! ಅವರು ಅನ್ಯರೆ? ಮೋಟ ಮಲ್ಲುಗ ತ್ರಿಗುಣಗಳಲ್ಲೊಂದಾದ ತಾಮಸದಿಂದ ಈ ತಾಮಸೀ

ಕೃತ್ಯ ನಡೆಸಿದ್ದಾನೆ. ಅವನು ಗೆದ್ದ, ನಾನು ಸೋತೆನೆಂಬ ಖುಲ್ಲತನ ನನಗೇಕೆ? ಸರ್ವ ಭೂತಗಳಿಗೂ ಶಿವನ ದಯೆ ಸಮಾನವಾಗಿದೆ. ಅದು ಅರುಣೋದಯದಂತೆ. ಪಾಪಿಗಳು ಪುಣ್ಯವಂತರೆನ್ನದೆ, ಗುಡಿ–ಗುಡಿಸಲುಗಳೆನ್ನದೆ ಎಲ್ಲರ ಮೇಲೂ ತನ್ನ ಬಂಗಾರದ ಬೆಳಕನ್ನು ಚೆಲ್ಲುವ ಬಾಲದಿನಮಣಿಯಂತೆ ಶಿವನ ಕರುಣೆ. ಆದುದರಿಂದ ಶಿವನೆ, ನನ್ನ ಚಿತ್ತದಲ್ಲಿ ಸರ್ವ ಜೀವಕ್ಕೆಲ್ಲ ದಯೆಯೊಂದೆ ಉಳಿಯುವಂತೆ



**ನೆವವಿಲ್ಲದೆ ಮೋಟ ಮಲ್ಲುಗ ದಸರಯ್ಯನನ್ನು ಗುದ್ದತೊಡಗಿದ**

ಅನುಗ್ರಹಿಸು!" ಎಂದು ಮೋಟ ಮಲ್ಲುಗನಿಂದ ಮೈಯೆಲುವು ಮುರಿಯುವಂತೆ ಗುದ್ದಿಸಿಕೊಳ್ಳುತ್ತಲಿರುವಾಗಲೂ ಕೇಳಿಕೊಂಡ ದಸರಯ್ಯ, ಅಹಿಂಸೆಗೊಂದು ಹೆಸರಾಗಿ ಉಳಿದ.

ಹೊಡೆದು ಹೊಡೆದು ಸಾಕಾಗಿ ಸುಮ್ಮನಾದ ಮೋಟ ಮಲ್ಲುಗ. ದಸರಯ್ಯ ಧಾವಿಸಿ, 'ಅಣ್ಣಾ, ನಿನ್ನ ಕೈಗಳೆಷ್ಟು ನೊಂದುವಲ್ಲ ! ಏಕೆ ಇಷ್ಟು ಬಳಲಿದೆ?' ಎನ್ನುತ್ತ ಅವನ ಕೈಗಳನ್ನು ಕಾಲುಗಳನ್ನು ಮೆತ್ತಗೆ ಒತ್ತಹತ್ತಿದನು. ಮೋಟ ಮಲ್ಲುಗನ ಕಲ್ಲೆದೆ ಕರ್ರನೆ ಕರಗಿ ಹರಿಯಿತು. ದಸರಯ್ಯನ ಕಾಲಿಗೆ ಬಿದ್ದು ಕ್ಷಮಿಸೆಂದು ಕೋರಿದನು. ಕಪಟವೇಷದ ಜಂಗಮ ನಿಜವಾದ ಜಂಗಮನಾಗಿ ಮಾರ್ಪಟ್ಟನು.ದಸರಯ್ಯನ ಕೀರ್ತಿ ದಶದಿಕ್ಕುಗಳಿಗೆ ಹರಿಡಿತು.

ದಸರಯ್ಯನ ಧರ್ಮಪತ್ನಿ ವೀರಮ್ಮ ಅವಳೂ ಶಿವಾನುಭವಿ, ಶರಣೆ, ಸುಕೃತಾ ಚರಣೆ, ಗುಣಮಣಿಭರಣೆ ! ಪರಮಾರ್ಥಕ್ಕೊಲಿದ ಪತಿಗಳಿಗೆ ಪ್ರತಿಕೂಲಸತಿಯರು ಸಿಕ್ಕುವುದು ಅಪರೂಪವೇನಲ್ಲ. ಆದರೆ ಶರಣರ ಜೀವನದಲ್ಲಿ ಇಂಥ ಉದಾಹರಣೆ ವಿರಳ. ಘಟ್ಟಿವಾಳಯ್ಯನೊಬ್ಬ ಅಪವಾದ.

ವೀರಮ್ಮನೂ ವಚನಕಾರಳು. 'ಗುರುಶಾಂತೇಶ್ವರಾ' ಎಂಬುದವಳ ಅಂಕಿತ, ಶರಣೆಯರಲ್ಲಿ ಸಾಮಾನ್ಯವಾಗಿ ಪತಿಯ ಅಂಕಿತಕ್ಕೇ 'ಪ್ರಿಯ' ಶಬ್ದವನ್ನು ಸೇರಿಸಿ, ತಮ್ಮ ಅಂಕಿತವನ್ನಾಗಿ ಅಂಗೀಕರಿಸುವುದು ಹೆಚ್ಚು. ವೀರಮ್ಮ ಪತಿಗೆ ಭಿನ್ನವಾದ ಅಂಕಿತವನ್ನು ಅಂಗೀಕರಿಸಿರುವುದರಿಂದ ಗುರುಶಾಂತೇಶ್ವರ ಇಲ್ಲವೇ ಶಾಂತೇಶ್ವರ ಅವಳ ಗುರುವಾಗಿರಬೇಕು.

ಮೀರಮ್ಮ ಪಾದೋದಕದ ವಿಚಾರದಲ್ಲಿ ಪರಿಣತಳೆಂದು ತೋರುತ್ತದೆ. ಉಪಲಬ್ಧವಾದ ಅವಳ ಒಂದೆರಡು ವಚನಗಳಲ್ಲಿ ಪಾದೋದಕ ವಿಚಾರವೇ ತುಂಬಿದೆ. ಆದರೂ, 'ಮನವೇ ಲಿಂಗ, ಬುದ್ಧಿಯೇ ಶಿವಜ್ಞಾನ, ಚಿತ್ತವೇ ಶಿವದಾಸೋಹ, ಅಹಂಕಾರದಲ್ಲಿ ಶಿವಚಿಂತನೆಯುಳ್ಳವನಾಗಿ ಸಲ್ಲಿಸಿದ್ದೇ ಅಂತಃಕರಣ ವಿರಹಿತ ಪ್ರಸಾದ' ಎಂದು ಮುಂತಾಗಿ ಅವಳು ಹೇಳುವಾಗ ಅವಳ ಆತ್ಮಶ್ರೀ ಅರಳಿ ಮಗಮಗಿಸುತ್ತದೆ.

ದಸರಯ್ಯ–ವೀರಮ್ಮ, ಇಬ್ಬರೂ ನಿರ್ಮಲಜೀವನ ನಡೆಸಿ, ನಿರವಯಲಾದರು; ಶರಣರ ತಾರಾಗಣದಲ್ಲಿ ತೊಳಗಿ ಬೆಳಗುವ ತಾರೆಗಳಾದರು. ದಸರಯ್ಯನ ದಯಾಮಯ ಹೃದಯದಿಂದ ಹರಿದು ಬಂದ ಈ ವಚನ ನೆನಪಿರಲಿ :

"ಎಲ್ಲವನರಿದಲ್ಲಿ ಕಡೆಯಲ್ಲಿ ಕೊಲ್ಲಬೇಕೆಂಬುದೊಂದು ಭೇದ ಉಂಟೆ !
ಶಾಸ್ತ್ರವನೆಲ್ಲ ಕಲಿತಲ್ಲಿ ಗೆಲ್ಲ ಸೂಲಕ್ಕೆ ಹೋರಬೇಕೆಂಬುದು ಕಡೆಯಲ್ಲಿ

ಒಂದು ಸೊಲ್ಲುಂಟೆ? ಪುರಾಣವನೆಲ್ಲವನೋದಿದಲ್ಲಿ ಸರ್ವಜೀವವ ಕೊಲ್ಲು, ಕೊರೆ–ಎಂಬುದೊಂದು ದಳ್ಳುರಿಯುಂಟೆ? ಶ್ರುತಿಯ ಕೇಳು ವಲ್ಲಿ, ಸತ್ಕೃತಿಯನಂಗೀಕರಿಸುವಲ್ಲಿ ಸರ್ವಹತವ ಮಾಡಬೇಕೆಂಬು ದೊಂದು ಗತಿಯುಂಟೆ? ಇಂತೀ ಆತ್ಮದಲ್ಲಿ ಸರ್ವಭೂತಹಿತವುಳ್ಳವಂಗೆ ಆತ ಅತೀತ ಸ್ವಯವಸ್ತು–ದಸರೇಶ್ವರಲಿಂಗವು !"

■

# ದೇವಮಾನವ ಡೋಹರ ಕಕ್ಕಯ್ಯ

ಮಾಳವ ದೇಶವು ಕಲ್ಯಾಣಕ್ಕೆ ಕೊಟ್ಟ ಕಾಣಿಕೆ ಕಕ್ಕಯ್ಯ. ಡೋಹರರ ಕುಲದಲ್ಲಿ ಹುಟ್ಟಿ ಶರಣ ಧರ್ಮವನ್ನು ಸೇರಿ, ಶ್ರೇಷ್ಠ ಶಿವಾನುಭವಿಯಾಗಿ ಬಸವಣ್ಣನವರ ಅತ್ಯಂತ ಪ್ರೀತಿಯ ಆತ್ಮೀಯರಲ್ಲೊಬ್ಬರಾಗಿ ಅಮರರಾದರು ಡೋಹರ ಕಕ್ಕಯ್ಯನವರು. ಬಸವಣ್ಣನವರಿಂದ ಬಹಳವಾಗಿ ಹೊಗಳಲ್ಪಟ್ಟವರಲ್ಲಿ ಕಕ್ಕಯ್ಯನವರೂ ಒಬ್ಬರು.

"ಸೆಟ್ಟಿ ಎಂಬೆನೆ ಸಿರಿಯಾಳನ ? ಮಡಿವಳನೆಂಬೆನೆ ಮಾಚಯ್ಯನ?
ಡೋಹರನೆಂಬೆನೆ ಕಕ್ಕಯ್ಯನ? ಮಾದರನೆಂಬೆನೆ ಚೆನ್ನಯ್ಯನ ಆನು
ಹಾರುವನೆಂದೊಡೆ ಕೂಡಲ ಸಂಗಯ್ಯ ನಗುವನಯ್ಯ !"

ಎಂಬ ವಚನದಲ್ಲಿ ಬಸವಣ್ಣನವರು ಕಕ್ಕಯ್ಯನನ್ನು ಸಿರಿಯಾಳಸೆಟ್ಟಿ, ಮಡಿವಾಳ ಮಾಚಯ್ಯ, ಮಾದರ ಚೆನ್ನಯ್ಯರ ಪಂಕ್ತಿಯಲ್ಲಿ ನಿಲ್ಲಿಸಿದ್ದಾರೆ. ಇಷ್ಟೇ ಅಲ್ಲ, ತಮ್ಮ ವಂಶಾವಳಿಯನ್ನು ಹೀಗೆ ಹೇಳಿಕೊಂಡಿದ್ದಾರೆ–

"ಹಿರಿಯಯ್ಯ ಶ್ವಪಚಯ್ಯ, ಕಿರಿಯಯ್ಯ ಡೋಹರ ಕಕ್ಕಯ್ಯ,
ಅಯ್ಯಗಳಯ್ಯ ನಮ್ಮ ಮಾದರ ಚೆನ್ನಯ್ಯ. ಕೂಡಲ ಸಂಗಮದೇವಾ,
ನಿಮ್ಮಶರಣರು ನನ್ನ ಸಲುಹುವರಾಗಿ!"

"ಅಪ್ಪನು ನಮ್ಮ ಮಾದಾರ ಚೆನ್ನಯ್ಯ , ಬೊಪ್ಪನು ನಮ್ಮ ಡೋಹರ
ಕಕ್ಕಯ್ಯ, ಚಿಕ್ಕಯ್ಯ ನೆಮ್ಮಯ್ಯ – ಕಾಣಿರಯ್ಯ–ಅಣ್ಣನು ಕಿನ್ನರಿ ಬ್ರಹ್ಮಯ್ಯ!"

ಬಸವಣ್ಣನವರು ಭಕ್ತಿಭಿಕ್ಷೆ ಬೇಡಿದುದು ದಾಸಯ್ಯನ ಮನೆಯಲ್ಲಿ, ಚೆನ್ನಯ್ಯನ ಮನೆಯಲ್ಲಿ, ಕಕ್ಕಯ್ಯನ ಮನೆಯಲ್ಲಿ.

"ಅಪ್ಪನು ಡೋಹರ ಕಕ್ಕಯ್ಯನಾಗಿ ಮುತ್ತಯ್ಯ ಚೆನ್ನಯ್ಯನಾದರೆ ಆನು ಬದುಕುವೆ"

ಎಂದು ಹಾರೈಸುತ್ತಾರೆ. 'ಕಕ್ಕಯ್ಯನೊಕ್ಕುದನಿಕ್ಕು ನೋಡಯ್ಯ' ಎಂದು ಬೇಡಿಕೊಳ್ಳುತ್ತಾರೆ.

"ಎನಗಾರು ಇಲ್ಲ, ಎನಗಾರು ಇಲ್ಲವೆಂಬರು. ಬಾಣನವ ನಾನು,

ಮಯೂರನವ ನಾನು, ಕಾಳಿದಾಸನವ ನಾನು. ಕಕ್ಕಯ್ಯ
ಹಿರಿಯಯ್ಯ. ಚಿಕ್ಕಯ್ಯ ಚೆನ್ನಯ್ಯ ಎತ್ತಿ ಮುದ್ದಾಡಿಸಿದರೆನ್ನ"
ಎಂದು ನೆನಪು ಕೊಡುತ್ತಾರೆ. ಇದಿಷ್ಟೂ ಸಾಲದೆ ಭಾವಾವೇಷದಲ್ಲಿ–

"ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರೂ ಹೊಲದಲು ಬೆರಣಿಯನಾಯಹೋಗಿ, ಸಂಗವ ಮಾಡಿದರು. ಅವರಿಬ್ಬರಿಗೆ ಹುಟ್ಟಿದ ಮಗ ನಾನು–ಕೂಡಲಸಂಗಮದೇವ ಸಾಕ್ಷಿಯಾಗಿ !" ಎಂದು ತಮ್ಮ ಚೆನ್ನಯ್ಯ–ಕಕ್ಕಯ್ಯ ಪ್ರೇಮಕ್ಕೆ ಕಳಸವನ್ನೇ ಏರಿಸಿದ್ದಾರೆ.

ಒಮ್ಮೆ ಬಸವಣ್ಣನವರು ಬಿಜ್ಜಳನ ಓಲಗಕ್ಕೆ ಹೊರಟಿದ್ದಾಗ ಕಕ್ಕಯ್ಯನವರ ಪುಣ್ಯಾಂಗನೆ ಪ್ರಸಾದ ಸ್ವೀಕರಿಸಲು ಕರೆದಳೆಂದೂ ಅವಸರದಲ್ಲಿದ್ದ ಬಸವಣ್ಣನವರು ಮತ್ತೆ ಬರುವುದಾಗಿ ಹೋದರೆಂದೂ ಅದು ಪ್ರಸಾದಕ್ಕಾದ ಅಪಮಾನವೆಂದು ಕುಪಿತನಾದ ಕ್ಕಯ್ಯ ಬಸವಣ್ಣನವರು ಮತಯ್ತೆ ಹತ್ತು ಸಲ ಬಂದು ಬೇಡಿದರೂ, ಪ್ರಸಾದ ಕೊಡುವುದಿರಲಿ, ಬಾಗಿಲು ಸಹ ತೆರೆಯಲಿಲ್ಲವೆಂದೂ ನಿತ್ಯವೂ ಬಾಗಿಲ ಕಾಯ್ದು ಬಸವಣ್ಣನವರಿಗೆ ಒಮ್ಮೆ ಕಕ್ಕಯ್ಯನ ಮನೆಯೊಳಗಿನಿಂದ ಅನ್ನದ ಅಗುಳೊಂದನ್ನು ಹೊತ್ತು ಹೊರಗೆ ಹೊರಟಿದ್ದ ಇರಿವೆಯಿಂದ ಕಕ್ಕಯ್ಯನ ಪ್ರಸಾದ ಲಭಿಸಲು, (ಬಸವಣ್ಣನಿತ್ತ ಸಕ್ಕರೆಯನ್ನು ಕಚ್ಚಿ, ಅದು ಅನ್ನವನ್ನು ಬಿಟ್ಟು ಹೋದ ಕಾರಣ) ಅತ್ಯಾನಂದದಿಂದ ಮನೆಗೆ ತಂದು ಲಿಂಗಾರ್ಚನೆ ಮುಗಿಸಿ ಸೇವಿಸಬೇಕೆಂದಿರಲು ಅಕ್ಕ ನಾಗಲಾಂಬಿಕೆಯೇ ಸೇವಿಸಿಬಿಟ್ಟಳೆಂದೂ ಚನ್ನಬಸವಣ್ಣ ಕಕ್ಕುಯ್ಯನ ಪ್ರಸಾದ ಸೇವೆನೆಯ ಪುಣ್ಯದಿಂದ ಪ್ರಾದುರ್ಭವಿಸಿದನೆಂದೂ ಬಸವೇಶ್ವರ ವಚನದ ಕಥಾಸಾರ, ಪ್ರೌಢರಾಯನ ಕಾವ್ಯ ಮೊದಲಾದ ಗ್ರಂಥಗಳಲ್ಲಿ ಹೇಳಿದೆ. ಸಿಂಗಿರಾಜ ಪುರಾಣ ನಾಗಲಾಂಬಿಕೆ ವಿವಾಹಿತಳೆಂದೂ ಶಿವಸ್ವಾಮಿಯೇ ಪತಿಯೆಂದೂ ಹೇಳುತ್ತದೆ.

ಅದೇನೇ ಇರಲಿ, ಬಸವಣ್ಣನವರು ಕಕ್ಕಯ್ಯನ ಪ್ರಸಾದ ಪವಿತ್ರತಮವಾದುದೆಂದು ತಿಳಿಯುತ್ತಿದ್ದರೆಂಬುದು ನಿಸ್ಸಂದಿಗ್ಧವಾದ ವಿಷಯ. 'ಕಕ್ಕಯ್ಯನೊಕ್ಕುದನಿಕ್ಕುನೋಡಯ್ಯ!' ಎಂದು ಪ್ರಾರ್ಥಿಸಿಯೇ ಇದ್ದಾರೆ. ಈ ಪಾವನತೆ ಧರ್ಮ ಹದಮಾಡುವ ಕಾಯಕದ ಕಕ್ಕಯ್ಯನವರಿಗೆ ಬರಬೇಕಾದರೆ ಅವರ ಬಾಳು ಅದೆಷ್ಟು ಉನ್ನತವಾದುದಿರಬೇಕು? ಇದು ಹೇಗೆ ಸಾಧ್ಯವಾಯಿತೆಂಬುದನ್ನು ಅವರೇ ಹೇಳಲಿ !

"ಎನ್ನ ಕಷ್ಟಕುಲದ ಸೂತಕ ನಿಮ್ಮ ಹಸ್ತಮುಟ್ಟಿದಲ್ಲಿ ಹೋಯಿತ್ತು !
ತಟ್ಟಿದ ಮುಟ್ಟಿದ ಸುಖಂಗಳನೆಲ್ಲವ ಲಿಂಗಮುಖಕ್ಕೆ ಅರ್ಪಿಸಿದೆನಾಗಿ

ಎನ್ನ ಪಂಚೇಂದ್ರಿಯಂಗಳು ಬಯಲಾದುವು ! ಎನ್ನಂತರಂಗದಲ್ಲಿ ಜ್ಞಾನ
ಜ್ಯೋತಿಯೆಡೆಗೊಂಡುದಾಗಿ ಒಳಗೂ ಬಯಲಾಯಿತ್ತು ! ಸಂಸಾರದ
ಸಂಗದ ಅವಸ್ಥೆಯ ಮೀರಿದ ಕ್ರೀಯಲ್ಲಿ ತರಹವಾಯಿತ್ತಾಗಿ ಬಹಿರಂಗ
ಬಯಲಾಯಿತ್ತು ! ಅಭಿನವ ಮಲ್ಲಿಕಾರ್ಜುನಾ, ನಿಮ್ಮ ಮುಟ್ಟಿದ ಕಾರಣ
ನಾನೂ ಬಯಲಾದೆ."

ಪಂಚೇಂದ್ರಿಯಗಳು ಬಯಲಾಗಿ, ಅಂತರಂಗ ಬಯಲಾಗಿ, ಬಹಿರಂಗ ಬಯಲಾಗಿ, ಕೊನೆಗೆ ತಾನು ಬಯಲಾಗಿ ನಿಂದ ಈ ಮಹಾತ್ಮನನ್ನು ಕುರಿತು, "ಡೋಹರನೆಂಬೆನೆ ಕಕ್ಕಯ್ಯನ?" ಎಂದು ಬಸವಣ್ಣನವರು ಕೇಳಿದ್ದರೆ ಅಚ್ಚರಿಯೇನೆ? ಅಂತರಂಗದಲ್ಲಿ ಜ್ಞಾನಜ್ಯೋತಿಯೆಡೆಗೊಂಡ ಈ ಮಹಾನುಭಾವನು ಪರಮಸುಖಿಯಾದುದು ಸಹಜವೇ :

"ನೆನೆಯಲರಿಯೆ, ನಿರ್ಧರಿಸಲರಿಯೆ–ಮನವಿಲ್ಲಾಗಿ;
ಭಾವಿಸಲರಿಯೆ, ಬೆರಸಲರಿಯೆ–ಭಾವನಿರ್ಭಾವವಾಯಿತ್ತಾಗಿ;
ಧ್ಯಾನಮೌನವನರಿಯೆ–ಧ್ಯಾನಾತೀತ ತಾನೆಯಾಯಿತ್ತಾಗಿ;
ಜ್ಞಾತೃ–ಜ್ಞಾನ–ಜ್ಞೇಯಂಗಳೆಲ್ಲವ ಮೀರಿ
ಅಭಿನವ ಮಲ್ಲಿಕಾರ್ಜುನನಲ್ಲಿ ಪರಮಸುಖಿಯಾಗಿರ್ದೆ"
ಎಂದು ಅವರೇ ಒಪ್ಪಿಕೊಂಡಿಲ್ಲವೆ?

ಇಷ್ಟಾದರೂ ಅಷ್ಟಮದಗಳಲ್ಲಿ ಒಂದೂ ಒಮ್ಮೆಯೂ ಕಕ್ಕಯ್ಯನವರ ಸಮೀಪಕ್ಕೆ ಸುಳಿಯಲಿಲ್ಲ. ತನ್ನನ್ನು ಉನ್ನತಿಗೇರಿಸಿದವರು ಯಾರು ಎಂಬುದನ್ನವರು ಮರೆಯಲಿಲ್ಲ:

"ಕಷ್ಟಕುಲದಲ್ಲಿ ಹುಟ್ಟಿದ ಕರ್ಮವ ಕಳೆದು, ಮುಟ್ಟಿ ಪಾವನವ ಮಾಡಿ
ಕೊಟ್ಟನಯ್ಯ ಎನ್ನ ಕರಸ್ಥಲಕ್ಕೆ ಲಿಂಗವ. ಆ ಲಿಂಗ ಬಂದು ಸೋಂಕ
ಲೊಡನೆ ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯ ! ಎನ್ನ ತನುವಿ
ನಲ್ಲಿ ಗುರುವ ನೆಲೆಗೊಳಿಸಿದ ; ಎನ್ನ ಮನದಲ್ಲಿ ಜಂಗಮನ ನೆಲೆಗೊಳಿಸಿದ;
ಎನ್ನ ಅರಿವಿನಲ್ಲಿ ಪ್ರಸಾದವ ನೆಲೆಗೊಳಿಸಿದ. ಇಂತೀ ತ್ರಿವಿಧ
ಸ್ಥಾನವ ಶುದ್ಧವ ಮಾಡಿದ ಬಸವಣ್ಣನ ಕರುಣದಿಂದ"

ತಾವು ಆತ್ಮೋನ್ನತಿಯನ್ನು ಕಂಡೆವೆಂದು ಹಿಗ್ಗಿನಿಂದ ಹಾಡಿದ್ದಾರೆ.

"ಆಸೆಯಾಮಿಷವಳಿದು

ಹುಸಿವಿಷಯಂಗಳೆಲ್ಲ ಹಿಂಗಿ
ಸಂಶಯ ಸಂಬಂಧವಾಯಿತ್ತು ನೋಡಾ !
ಎನ್ನ ಮನದೊಳಗೆ ಘನಪರಿಣಾಮವ ಕಂಡು
ಮನಮಗ್ನವಾಯಿತ್ತಯ್ಯ !
ಅಭಿನವ ಮಲ್ಲಿಕಾರ್ಜುನಾ, ನಿಮ್ಮ ಶರಣ
ಪ್ರಭುದೇವರ ಕರುಣದಿಂದ ಬದುಕಿದೆ"

ಎಂದು ಪ್ರಭುದೇವರಿಗೂ ಭಕ್ತಿಯ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಈ ರೀತಿಯಾಗಿ ನಿರ್ವಿಷಯನಾಗಿ, ನಿರಂಗನಾಗಿ, ನಿರ್ಮನನ್ನಾಗಿ, ನಿರ್ವಿಕಾರನಾಗಿ, ಕರ್ಮ ನಿರ್ಮಳನಾಗಿ ಬಾಳಿದ ಕಕ್ಕಯ್ಯನು ಕೊನೆಯ ಗಳಿಗೆಯವರೆಗೆ ಶರಣಧರ್ಮಕ್ಕಾಗಿಯೇ ಜೀವಿಸಿದನು. ಬಸವಣ್ಣನವರು ಕಲ್ಯಾಣ ಬಿಟ್ಟು ಹೋದ ಮೇಲೆ, ಕಲ್ಯಾಣದಲ್ಲಿ ಬಿಜ್ಜಳನ ವಧೆಯಾಗಿ ವಿಪ್ಲವ ಕಿಡಿಗೆದರಿಂದ ತರುವಾಯ ಚೆನ್ನಬಸವಣ್ಣ, ನಾಗಲಾಂಬಿಕೆ, ಮಡಿವಾಳ ಮಾಚಯ್ಯ, ಕಿನ್ನರಿ ಬ್ರಹ್ಮಯ್ಯನವರ ನೇತೃತ್ವದಲ್ಲಿ ಉಳಿವೆಯತ್ತ ಹೊರಟ ಶರಣ ಸಮೂಹದಲ್ಲಿ ಕಕ್ಕಯ್ಯನೂ ಒಬ್ಬ ಪ್ರಮುಖನಾಗಿದ್ದ. ಕಾಯಕದಲ್ಲಿ ನಿರತವಾಗಿದ್ದ ಕೈ ಕಾಳಗದಲ್ಲೂ ತನ್ನ ಶಕ್ತಿ ತೋರಿತು. ಅಳಿಯ ಬಿಜ್ಜಳನೊಂದಿಗೆ ನಡೆದ ಪ್ರತಿಯೊಂದು ಕಾಳಗದಲ್ಲಿ ಕಕ್ಕಯ್ಯ ಉಕ್ಕಿನ ವೀರನಂತೆ ಕಾದಿ ಶಿವಶರಣರಿಗೆ ರಕ್ಷಾಕವಚವಾಗಿ ಮೆರೆದನು.

ಕಾತರವಳ್ಳಿಯ ಕಡುತರವಾದ ಕಾಳಗವಾದ ಮೇಲೆ ಚೆನ್ನಬಸವಣ್ಣ, ನಾಗಲಾಂಬಿಕೆ, ಕಿನ್ನರಿ ಬ್ರಹ್ಮಯ್ಯ ಮತ್ತು ಸಂಗಡಿಗರು ಸುರಕ್ಷಿತವಾಗಿ ಉಳಿವೆ ಮುಟ್ಟಲೆಂದು ಕಕ್ಕಯ್ಯ ಕೆಲವು ಶರಣರೊಡನೆ ಕಕ್ಕೇರಿಯತ್ತ ಹೋಗಿ ವೈರಿಗಳನ್ನು ಇಬ್ಭಾಗ ಮಾಡಿರಬೇಕೆಂದೂ ಅವರೊಡನೆ ಕಲಿತನದಿಂದ ಕಾದುತ್ತ ಕಕ್ಕೇರಿಯಲ್ಲಿಯೇ ಕೊನೆಗಂಡಿರಬೇಕೆಂದೂ ಊಹಿಸಲಾಗಿದೆ. ಕಕ್ಕೇರಿಯಲ್ಲಿ ಕಕ್ಕಯ್ಯನ ದೇವಾಲಯವಿರುವುದಾಗಿಯೂ ಅದಕ್ಕೆ ಸಮೀಪದಲ್ಲಿ ಕಕ್ಕಯ್ಯನ ಕೆರೆ, ಕಕ್ಕಯ್ಯನ ಬಾವಿಗಳೆಂಬ ಎರಡು ಜಲಾಶಯಗಳಿರುವುವೆಂದೂ ಕಕ್ಕಯ್ಯನ ಸಮಾಧಿಯೂ ಅಲ್ಲಿ ಸಿಕ್ಕಿದೆಯೆಂದೂ ತಿಳಿದುಬಂದಿದೆ. ಇದು ನಿಜವಾದರೆ ಚೆನ್ನಬಸವಣ್ಣ ಅಕ್ಕ ನಾಗಮ್ಮರನ್ನು ಗಂಡಾಂತರದಿಂದ ತಪ್ಪಿಸಲು ಸ್ವಸಂತೋಷದಿಂದಲೇ ಅವರಿಂದ ಬೇರೆಯಾಗಿ ವೈರಿಗಳ ಲಕ್ಷ್ಯವನ್ನು ಉಳಿವಿಯ ಕಡೆಯಿಂದ ಕಕ್ಕೇರಿಯ ಕಡೆಗೆ ತಿರುಗಿಸಿ, ತಾನು ಯುದ್ಧದಲ್ಲಿ ಮಡಿದು ತನ್ನನ್ನು ಮೇಲಕ್ಕೆತ್ತಿದ್ದ ಬಸವಣ್ಣನವರ ಅಕ್ಕ ಮತ್ತು ಸೋದರಳಿಯ ಅಕ್ಕನಾಗಮ್ಮ ಚೆನ್ನಬಸವಣ್ಣನವರಿಗಾಗಿ ಆತ್ಮಾರ್ಪಣಮಾಡಿದ ಅಮರಕೀರ್ತಿ ಕಕ್ಕಯ್ಯನದಾಗುತ್ತದೆ. ಕಲ್ಯಾಣದಲ್ಲಿ ಕೂಡಿದ್ದ ಶವಶರಣರಲ್ಲಿ ತೇಜಃಪುಂಜ ತಾರಕೆಯಂತೆ ಬೆಳಗುತ್ತಿರುವ ಮಹಾನುಭಾವ ಕಕ್ಕಯ್ಯ!



**ಶರಣ ಧರ್ಮದಲ್ಲಿಯೇ ಜೀವಿಸಿದ ಡೋಹರ ಕಕ್ಕಯ್ಯ**

ಆತನ ಉಜ್ವಲಚರಿತ್ರೆ ಗಂಗೆಯಂತೆ ಪವಿತ್ರ, ಹಿಮಾಲಯದಂತೆ ಉನ್ನತ ! ದೇವಮಾನವನಾಗಿ ದೇವರನ್ನೊಲಿಸಿಕೊಂಡ ಡೋಹರ ಕಕ್ಕಯ್ಯ ಬಸವಣ್ಣನವರೊಬ್ಬರಿಗೇ ಅಲ್ಲ, ಭಕ್ತರೆಲ್ಲರಿಗೆ ಹಿರಿಯಯ್ಯ !

■

# ಬಹುರೂಪಿ ಚೌಡಯ್ಯ

ಶಿವಲೀಲೆ ಹೆಪ್ಪಾಗಿ ಶಿವಶರಣ ಚೌಡಾಗಿ
ಭವದೊಳಗೆ ಹುಟ್ಟಿ ಶಿವನುಡಿಯ । ಸಾರಿದನು
ಶಿವಗಂಗೆ ಸುತ್ತ ಹರಿದಂತೆ ॥
ಭರತ ವಿದ್ಯೆಯ ಕಲಿತು ನುರಿತು ಬಲು ನಿಪುಣಾದ
ಹರನೆಂದು ಹಾಡಿ ಮೈಮರೆತು । ಚೌಡಯ್ಯ
ಅರಿತು ಕುಣಿಯುವನು ಶಿವಲೀಲೆ ॥ –ಹಂತಿಯ ಹಾಡು

ನೀಲಗಿರಿ ಪರ್ವತ ಪ್ರದೇಶದ ಕೊಟ್ಟಗಿರಿಯ 'ಅರಸನಂಗಳ ಮುಂದೆ ಪರಿಸಿಕೂಡಿ'ದೆ. ಅಟ್ಟದಮೇಲಿಬ್ಬರು ನಾಮೇಲು ನೀಮೇಲು ಎಂದು ಕುಣಿಯತೊಡಗಿದ್ದಾರೆ.

ಧಿಮ್ಮಯ್ಯ ಧಿತ್ತಯ್ಯ ದಮ್ಮಡಿಯು ಢಮ್ಮೆಂದು
ದಿಮ್ಮು ಕಣಕಣಿಸಿ ಕುಣಿತದೊಳು । ಜೈಯಾಕ
ಝುಮ್ಮೆಂದು ನುಡಿಯೆ ಜನತುಂಬಿ–

ಕೊಟ್ಟಗಿರಿಯೆಲ್ಲ ಕಣ್ಣಾಗಿ ನೋಡುತ್ತಲಿದೆ, ಕಿವಿಯಾಗಿ ಕೇಳುತ್ತಲಿದೆ. ನೋಡದೇನು, ಕೇಳದೇನು? ಇಂಥ ಕುಣಿತ, ಇಂಥ ನೋಟ ಮತ್ತೆಮತ್ತೆ ಸಿಕ್ಕುವುವೆ? ಇಲ್ಲಿ ಕುಣಿಯುತ್ತಿರುವವರಲ್ಲಿ ಒಬ್ಬ ಶ್ರೀಧರಗಣೇಶ್ವರನ ಅವತಾರವೆನಿಸಿದ ಬಹುರೂಪಿ ಚೌಡಯ್ಯ, ಇನ್ನೊಬ್ಬ ಕೊಟ್ಟಗಿರಿ ರಾಮದೇವ ಭೂಪಾಲನ ಆಸ್ಥಾನ ಕಲಾವಿದ 'ಗಾನ ವಿದ್ಯಾ ಗಜೇಂದ್ರಸಿಂಹ' ಅಚ್ಯುತ. ಬಹುರೂಪಿ ಚೌಡಯ್ಯನನ್ನು ಭರತನಾಟ್ಯದಲ್ಲಿ ಸೋಲಿಸುವೆನೆಂಬ ಶಪಥಗೈದು ಅಟ್ಟವೇರಿದ್ದಾನೆ. ಇಂಥ ನಾಟ್ಯ ಸ್ಪರ್ಧೆ ಎಂದೋ ಒಮ್ಮೆ ಜರುಗುತ್ತದೆ ಇತಿಹಾಸದಲ್ಲಿ.

ಗಾಯನ, ನರ್ತನ, ಜಾತಿಗಾರ ವಿದ್ಯೆಗಳಲ್ಲಿ ಇಬ್ಬರಿಗೂ ಬೆಳಗಾಗುವತನಕ ಸ್ಪರ್ಧೆ ನಡೆಯಿತು.

ಆಡಿದರು ಅಚ್ಚುತನು ಚೌಡಯ್ಯ ರೂಪಗಳ

ನೋಡಿ ಜಗವೆಲ್ಲ ಬೆರಗಾಯ್ತು । ಅಚ್ಚುತನು
ಆಡಿ ತೋರಿಸಿದ ದಶರೂಪ ॥

ಕುಣಿದ ರೂಪಗಳುಟ್ಟು ಮಣಿದು ಹಾಡಿದ ಚೌಡ
ದಣಿವೆ ಕಾಯಕವು ಶರಣರಿಗೆ । ದಿನಮಣಿಗೆ
ಪಣವೆ ಈ ಜಗವ ಬೆಳಗುದಕೆ ॥

ಕಲೆಯೊಂದು ಕಾಯಕವೆಂದು ತಿಳಿದು ಕುಣಿಯುತ್ತಿದ್ದ ಚೌಡಯ್ಯನಿಗೆ ಕಲೆಯು ಖ್ಯಾತಿ ಲಾಭಗಳಿಗಾಗಿಯೆಂದು ನಂಬಿದ್ದ ಅಚ್ಚುತ ಸೋಲುತ್ತಾನೆ.

ಕೋಣೋಡಿ ಬಲುದಣಿದು ಊನಾಗಿ ಬೀಳ್ವಂತೆ
ಜಾಣ ತಾನೆಂಬ ಹೆಮ್ಮೆಯಲಿ । ಅಚ್ಚುತನು
ಗೋಣು ಕೆಳಗಾಗಿ ನೆಲಕುರುಳಿ !

ಸೋತೆನೆಂಬ ಖ್ಯಾತಿ ಅಚ್ಯುತನಗಿಲ್ಲ :

ಸೋತ ಅಚ್ಚುತನೆದ್ದು ನೀತಿಯಲಿ ಮಾತಾಡಿ
ಜ್ಯೋತಿ ನೀ ಗುರುವು ಚೌಡಯ್ಯ । ಕೈಮುಗಿದು
ಜೀತೆಂದು ಮೇಳಸೇರಿದನು !

ಛಲದ ಮೇಲೆ ಕಲೆಯು ವಿಜಯವನ್ನು ಪಡೆಯಿತು ! ಕನ್ನಡ ಕಲೆಯೆಂದು ಗಂಗಾ–ಯಮುನಾ ಸಂಗಮವಾಗಿ ಶೋಭಿಸಿತು ! ಚೌಡಯ್ಯನ 'ಮೇಲೆ' ಬೆಳೆಯ ತೊಡಗಿತು.

ಛಪ್ಪನ್ನದೇಶದಲಿ ಒಪ್ಪಿದರು ಜಾತಿಗರು
ತಪ್ಪದಲೆ ಕಲಿತು ಕುಣಿವುದಕೆ । ಶಿವರೂಪ
ಬೆಪ್ಪಾಯ್ತು ಜನವು ಶರಣರಿಗೆ ॥

ರೇಕಳಿಕೆಯಲ್ಲಿ ಜನವಶ್ಯ ಧರ್ಮಪತಿಯ ಮಗನಾಗಿ ಜನಿಸಿ, ರೇಕನಾಥಾ–ಚಾರ್ಯರಿಂದ ವೀರಶೈವ ದೀಕ್ಷೆಯನ್ನು ಪಡೆದು, ಅವರಿತ್ತ ಕಾಯಕವಾದ ಕುಣಿತವನ್ನು ಬಾಳ ಉಸಿರನ್ನಾಗಿ ಮಾಡಿಕೊಂಡಿದ್ದ ಬಹುರೂಪಾ ಚೌಡಯ್ಯನಿಗೆ

ಕುಣಿಯುವದೆ ಕಾಯಕವು ತಣಿಯುವದೆ ದಾಸೋಹ
ತಣಿದ ಜಂಗಮರ ಶಿವಕೂಟ । ಚೌಡನಿಗೆ
ಗಣಶಿವನು ಕುಣಿವ ಶಿವಲೋಕ–

ವಾಗಿ ಬಿಡುತ್ತದೆ. ಬೆಳಗಿನಿಂದ ಸಂಜೆಯವರೆಗೆ ಶಿವಲೀಲೆಗಳನ್ನು ಹಾಡುತ್ತ ಆಡುತ್ತ ಶಿವಭಕ್ತಿಯ ಹೊನಲನ್ನು ಹರಿಸುತ್ತ ತಿರುಗತೊಡಗುತ್ತಾನೆ.

ಆಡಿದನು ಶಿವಲೀಲೆ ನಾಡೆಲ್ಲ ಹೂವಾಯ್ತು
ಮೂಡಿ ಶಿವಭಕ್ತಿ ಹಣ್ಣಾಯ್ತು ! ಶಿವನುಡಿಯು
ಕೋಡಿರಸ ಹರಿದು ಜನ ಕುಡಿದು !

ಹೀಗಿರಲು 'ವಿದ್ಯಾಶರಭಭೇರುಂಡ'ನೆಂದು ಹೆಸರಾಗಿದ್ದ ಯಕ್ಷನಾಥನೆಂಬ ಇನ್ನೊಬ್ಬ ಬಹುರೂಪ ಚೌಡಯ್ಯನೊಡನೆ ಸತ್ವಪರೀಕ್ಷೆಗೆ ನಿಲ್ಲುತ್ತಾನೆ.

ಜಕ್ಕಯ್ಯ ಬಹುರೂಪ ತಕ್ಕೊಂಡು ಮೇಳಗಳ
ಸೊಕ್ಕಿನಲಿ ಗಂಡಭೇರುಂಡ । ಕುಣಿತದೊಳು
ಮಿಕ್ಕಿದೆನು ಎಂದು ಪುರಹೊಕ್ಕ ॥

ನಾನು ಚೌಡಯ್ಯನಿಗೆ ಸೋತರೆ ಮೂರು ದಿನ ಕಾಡಿನಲ್ಲಿ ಕತ್ತೆಗಳನ್ನು ಕಾಯುವೆನೆಂದು ಮಾತುಕೊಡುತ್ತಾನೆ, ಭಾಷೆ ತೊಡುತ್ತಾನೆ. ಇಬ್ಬರೂ ಅಟ್ಟವನ್ನೇರುತ್ತಾರೆ. ಜಕ್ಕಯ್ಯ ಮೊದಲು ತನ್ನ ಸಾಮರ್ಥ್ಯವನ್ನು ತೋರಿಸುತ್ತಾನೆ. ಕುಳಿತವರೆಲ್ಲ ಬೆಕ್ಕಸಬೆರಗಾಗುತ್ತಾರೆ. ಆಮೇಲೆ ಚೌಡಯ್ಯ ಕುಣಿಯತೊಡಗುತ್ತಾನೆ.

ಶಿವಲೀಲೆ ಆಡುತಲಿ ಶಿವನ ತಾಂಡವ ಕುಣಿದ
ಶಿವನೆಂದು ಚೌಡ ಎದೆನಡುಗಿ । ಜಕ್ಕಯ್ಯ
ಕವಳೇರಿ ಬಿದ್ದ ಭೂತಳಕೆ ॥
ಮದ್ದಳೆಯ ಸಪ್ಪುಳಕೆ ಬಿದ್ದ ಜಕ್ಕನು ಎದ್ದು
ಹುದ್ದೆ ಬೇಡೆಂದು ಎರಗಿದನು । ಚೌಡನಿಗೆ
"ಉದ್ಧರಿಸು ಗುರುವೆ ಸೇವಕನ !" ॥

ಚೌಡಯ್ಯನ ಕೀರ್ತಿ ಇನ್ನಷ್ಟು ದಿಗಂತ ವಿಶ್ರಾಂತವಾಯಿತು. ಅವನ ಮೇಳಗಳು ಇನ್ನೂ ಹೆಚ್ಚಿದುವು.

ಜಗಮೆಲ್ಲ ಕೇಳುತಲಿ ಯುಗದೊಳಗೆ ಜಾತಿಗರ
ಮಿಗಿಲಾದ ಚೌಡಶರಣೆಂದು । ಕೂಡಿದುವು
ಜಗದ ಬಹುರೂಪ ಮೇಳಗಳು ॥
ಕಾಡಸಿದ್ಧರು ಕೇಳಿ ನಾಡ ಬುಡಬುಡಕಿಗಳು
ಓಡಿ ಶಂಕಯ್ಯ ಸುಡುಗಾಡ । ಸಿದ್ಧರೆಲೆ
ನೀಡಿದರು ಸೇವೆ ಚೌಡನಿಗೆ

ಇಷ್ಟೆಲ್ಲ ಇದ್ದರೂ ಚೌಡಯ್ಯನು ಮತ್ತನಾಗಲಿಲ್ಲ, ವಿತ್ತದಾಸೆಗೆ ಬಲಿಬೀಳಲಿಲ್ಲ.

ಬಂದುದನ್ನೆಲ್ಲ ಶರಣರ, ಶಿರಣರ, ಶಿವಭಕ್ತರ ದಾಸೋಹಕ್ಕಾಗಿ ಧಾರೆಯೆರೆದುಬಿಡುತ್ತಿದ್ದನು.

ಆಡಿದನು ಬಹುರೂಪ ನೋಡಿ ಭಕ್ತರು ಮೆಚ್ಚಿ
ನೀಡಿದರು ಜನರು ಧನಮನವ । ಚೌಡಯ್ಯ
ಮಾಡುತಲಿ ನಿತ್ಯ ದಾಸೋಹ ॥

ಈ ದಾಸೋಹವನ್ನೆಷ್ಟು ಮಾಡಿದರು ತೃಪ್ತಿಯಿಲ್ಲ ಚೌಡಯ್ಯನಿಗೆ. ಒಮ್ಮೆ ದೊಡ್ಡದೊಂದು ಗಣಪರ್ವವನ್ನೇ ಮಾಡಬೇಕೆಂಬ ಆಸೆ ಮೂಡಿತು ಮನದಲ್ಲಿ ಕಾಸಿಲ್ಲದೆ ಆಸೆ ಈಡೇರುವುದೆ? ತಾನು ಏನನ್ನು ಕೊಟ್ಟು ಕಾಸು ತರಬೇಕು? ಏನಿಲ್ಲದಿದ್ದರೂ ಆತನಲ್ಲಿ ಅಮೂಲ್ಯ ವಸ್ತುವೊಂದಿದ್ದಿತು. ಅದೇ ಅವನ ರಾಮಕ್ರಿಯಾರಾಗ. ಅವನಂತೆ ಅದನ್ನು ಹಾಡಿದವರೇ ಇಲ್ಲ.

ಪ್ರೇಮದಲಿ ಹಾಡುವನು ರಾಮರಾಗವ ಚೌಡ
ಸೀಮೆ ದಾಟುವನು ಲಿಂಗದೊಳು । ಶಿವಪೂಜೆ
ನೇಮಾಯ್ತು ನಿತ್ಯ ಬೆಳಗಿನಲಿ ॥
ಲಿಂಗಪೂಜೆಗೆ ರಾಗ ಸಂಗಜೋಡಣೆಯಾಗಿ
ಲಿಂಗದೊಳು ಅಂಗ ಬೆರೆದಂತೆ । ಚೌಡನಿಗೆ
ಅಂಗಲಿಂಗಾಯ್ತು ಈ ರಾಗ ॥

ಬೇರೆ ದಾರಿ ಕಾಣದೆ ಗಣಪರ್ವಕ್ಕೆ ಬೇಕಾಗುವ ಹತ್ತು ಸಾವಿರ ಹೊನ್ನು ಕೊಡಬೇಕೆಂದು ಅರಸನನ್ನು ಕೇಳಿಕೊಂಡ ಚೌಡಯ್ಯ.

ಹಣ ಹತ್ತು ಸಾವಿರವು ಗಣಪರ್ವ ಮಾಡುದಕೆ
ಎಣಿಕೆಯಲಿ ಸಾಲ ಮೂವರುಷ ! ತಪ್ಪಿದರೆ
ಋಣವ ಇಮ್ಮಡಿಗೆ ತೀರಿಸುವೆ–

ಎಂದು ಮಾತುಕೊಟ್ಟ. 'ಇದೆಲ್ಲ ಸರಿ, ನಿನ್ನಲ್ಲಿ ಇರಿಸುದಕೆ ಈಡು ಏನುಂಟು?' ಎಂದು ಅರಸ ಕೇಳಿದ. "ಆಡುವುದು ಶಿವರೂಪ, ಹಾಡುವುದು ಶಿವನುಡಿಯು, ಮಾಡುವುದು ನಿತ್ಯ ಶಿವಪೂಜೆ : ಶರಣರಿಗೆ ಈಡು ಜಗದೊಳಗೆ ಏನುಂಟು ದೊರೆಯೆ? ನನ್ನಲ್ಲಿರುವ ಸೊತ್ತೊಂದೆ. ಅದೇ ನನ್ನ ರಾಮಕ್ರಿಯಾರಾಗ. ಅದನ್ನೇ ಬೇಕಾದರೆ ಒತ್ತೆಯಿಡುವೆ"ನೆಂದು ಚೌಡಯ್ಯ ಉತ್ತರವಿತ್ತ. "ಹಾಡು ಹಾಗಾದರೆ ಅದನ್ನು. ಕೇಳಿ ನಿರ್ಣಯಿಸುತ್ತೇನೆ" ಎಂದ ಅರಸ. ಚೌಡಯ್ಯ ಹಾಡಿದ.

"ಕೇಳಿತಲಿ ಅರಸನಿಗೆ ತೋಳುಗಳ ಬಲತುಂಬಿ
ತಾಳಿ ಸಪ್ತೇಳು ಸಾಗರದ । ಬುಡವನ್ನು
ಏಳ್ಹೆಡೆಯ ಸರ್ಪಹೊತ್ತಂತೆ"

ಅರಸನಿಗೆ ಅನುಭವವಾಯಿತು. ಮರುಮಾತಾಡದೆ ಹತ್ತು ಸಾವಿರ ಹಣ ಎಣಿಸಿ ಬಿಟ್ಟ. ಚೌಡಯ್ಯ ಆ ಹಣದಿಂದ ಮಹಾಗಣಾರಾಧನೆಯನ್ನು ಮಹಾ ವೈಭವದಿಂದ ಮಾಡಿ, ಅರಸನಿಗೆ ಮಾತುಕೊಟ್ಟಂತೆ ಒತ್ತೆಬಿದ್ದ ರಾಮಕ್ರಿಯಾರಾಗವಿಲ್ಲದೆ ಶಿವಪೂಜೆ ಮಾಡತೊಡಗಿದ.

ನಾದಪ್ರಿಯ ಶಿವನಿಗೆ ಬಿರಿ ಬಂದಿತು. ರಾಮಕ್ರಿಯಾರಾಗಾಲಾಪವಿಲ್ಲದ ಪೂಜೆ ಅವನಿಗೆ ರುಚಿಸದಂತಾಯಿತು.

ಅತುರತೆ ಹೆಚ್ಚಾಗಿ ಕಾತರಿಸಿ ಶಿವಬಂದ
ಬೇತಿನಲಿ ತೊಟ್ಟು ಜಂಗಮನ । ನಿಜರೂಪ
ನೀತಿಯಲಿ ರಾಗ ಕೇಳುದಕೆ ॥

ಮನೆಗೆ ಬಂದ ಈ ಜಂಗಮನನ್ನು ಪರಮ ಚಿತ್ಕಳೆಯೆಂದು ಆದರಿಸಿ ಬಹುರೂಪಿ ಚೌಡಯ್ಯ ಬರವ ಕೇಳಿದ. 'ನಾನು ಇನ್ನೇನನ್ನೂ ಬಯಸಿ ಬಂದಿಲ್ಲ ಬಹುರೂಪಿ ಚೌಡಯ್ಯ. ನಿನ್ನ ರಾಮಕ್ರಿಯಾರಾಗದ ಖ್ಯಾತಿಯನ್ನು ಕೇಳಿ ಬಂದಿದ್ದೇನೆ. ಅದನ್ನೊಮ್ಮೆ ಹಾಡು. ಕೇಳಿ ಹೋಗುವೆ" ಎಂದು ಉತ್ತರವಿತ್ತ ಆ ಧೂರ್ತ ಜಂಗಮ. 'ಆ ರಾಗ ಹತ್ತು ಸಾವಿರ ಹಣಕ್ಕೆ ಒತ್ತೆಬಿದ್ದಿದೆ. ಒತ್ತೆ ಬಿಡುವನಕ ನನಗೆ ಬಾಯಿಲ್ಲ. ಇನ್ನು ಮೂರು ವರುಷ ದಯವಿಟ್ಟು ಇದೊಂದನ್ನು ಕೇಳಬೇಡಿ' ಎಂದು ಬಿನ್ನವಿಸಿಕೊಂಡ ಚೌಡಯ್ಯ. ಜಂಗಮನು ಬಹಳ ಪೀಡಿಸಲು,

ಜಂಗಮನೆ ನಾಗಯ್ಯ ತಂಗಿಲ್ಲಿ ಮೂವರುಷ
ಹಿಂಗಿಸುವೆ ನಿನ್ನ ಹಿರಿಯಾಸೆ । ಮರುದಿನವೆ
ಹಂಗೀಗ ರಾಗ ಬೇಡೆಂದ ॥

"ಹಾಡಿನಾಸೆಗೆ ಒಪ್ಪಿ ಬೀಡಿಟ್ಟ ಜಂಗಮ." ನಾಗಿನಾಥನೆಂಬ ನಾಮ ಧರಿಸಿದ್ದ ಈ ಜಂಗಮ ಚೌಡಯ್ಯನಿಗೆ ಗೂಢ ಶಿವತತ್ತ್ವವನ್ನು ಬೋಧಿಸತೊಡಗಿದನು. ಚೌಡಯ್ಯನ ಹಿಗ್ಗು ಹಾಡಾಗಿ ಹರಿಯಿತು :

ದೀಕ್ಷೆ ಗುರು ರೇಕಯ್ಯ ಮೋಕ್ಷಗುರು ನಾಗಯ್ಯ
ಶಿಕ್ಷಣಕೆ ಗುರುವು ಶಿವಮತವು । ಜಗದೊಳಗೆ
ಭಿಕ್ಷವೆನಗಾಯ್ತು ಕಾಯಕವು ॥



**ಕಲೆಯೊಂದು ಕಾಯಕವೆಂದು ತಿಳಿದು ಕುಣಿಯುತ್ತಿದ್ದ ಬಹುರೂಪಿ ಚೌಡಯ್ಯ**

ಗುರು ನಾಗಿನಾಥಯ್ಯ ಶಿಷ್ಯ ಚೌಡಯ್ಯನಿಗೆ ನಡೆಸಲು ಕಾಯಕದ ಗುಟ್ಟನ್ನೂ ಕುಣಿವುದಕ್ಕೆ ಶರಣರ ಚರಿತ್ರೆಗಳನ್ನೂ ಹೇಳಿಕೊಡುತ್ತಾನೆ. ಇನ್ನು ನೀನು ಶರಣರ ಚರಿತ್ರೆಗಳನ್ನೇ ಹಾಡಿ ಆಡಿ ಬೀರುತ್ತ ಹೋಗು. ಜಗದೊಳಗೆ ಶಿವಬೆಳಕು ಹೊನಲಾಗಿ ಹರಿಯುವುದು' ಎಂದು ಬೋಧಿಸುತ್ತಾನೆ. ಅದರಂತೆ ಚೌಡಯ್ಯ ಶರಣಶರಣರ ಜೀವನವನ್ನೇ ನಾಟ್ಯವಾಡಿ, ಹಾಡಿ ಹರಡಿಸತೊಡಗುತ್ತಾನೆ.

ಮೊರನ ವೇಮನರೂಪ ಬರಡು ಬಂಕನ ರೂಪ
ಶರಣೆ ಕಾರಿಕಾಲಮ್ಮೆಯರ । ನಿಜರೂಪ

ಹರನುಂಡರೂಪಮಾದರಲಿ ॥

ಮೊದಲಾದ ರೂಪಗಳನ್ನು ಧರಿಸಿ ಚೌಡಯ್ಯನು ಕುಣಿಯತೊಡಗುತ್ತಾನೆ.

ಚೌಡಯ್ಯ ರೂಪಗಳ ಆಡಿ ಕುಣಿಯಲು ಲೋಕ
ನೋಡಿ ಶಿವಮತದ ಬೆಳೆ ಬಂತು । ಜನವೆಲ್ಲ
ನೀಡಿ ಕಾಯಕಕೆ ಹಣಗೂಡಿ–

ಚೌಡಯ್ಯ ಅರಸನ ಸಾಲ ತೀರಿಸಿ ಒತ್ತೆ ಬಿದ್ದಿದ್ದ ರಾಮಕ್ರಿಯಾರಾಗವನ್ನು ಬಿಡಿಸಿಕೊಳ್ಳುತ್ತಾನೆ. ಅದನ್ನು ಕೇಳಲೆಂದೇ ಮೂರು ವರ್ಷಗಳಿಂದ ಮೈಯೆಲ್ಲ ಕಿವಿಯಾಗಿ ಮೈಕೂದಲೆಲ್ಲ ನಿರೀಕ್ಷೆಯಾಗಿ ಕುಳಿತಿದ್ದ ನಾಗಿನಾಥ ಆ ರಾಗ ಹಾಡೆಂದು ಹಂಬಲಿಸುತ್ತಾನೆ. ಮೂರು ವರ್ಷಗಳಿಂದ ಅದನ್ನು ಆಲಾಪಿಸದೆ ಕಳವಳದ ಕಾರಂಜಿಯಾಗಿದ್ದ ಚೌಡಯ್ಯ ಅದನ್ನಂದು ಭಾವಪೂರಿತವಾಗಿ ಹಾಡುತ್ತಾನೆ; ಮೈಮರೆದು ತನ್ಮಯನಾಗಿ ಹಾಡುತ್ತಾನೆ; ನಾದಲೀಲಾಲೋಲನಾಗಿ ಗಾನಸಮಾಧಿಯನ್ನೈದಿ ಹಾಡುತ್ತಾನೆ. ನಾಗಿನಾಥನದನ್ನು ಪರವಶನಾಗಿ ಕೇಳುತ್ತಾನೆ. ಅವನ ಹುಸಿವೇಷದ ತೆರೆ ಸರಿಯುತ್ತದೆ. ನಿಜರೂಪವನ್ನು ತೋರಿ, 'ನಡೆ, ಕೈಲಾಸಕ್ಕೆ' ಎನ್ನುತ್ತಾನೆ.

"ನಡೆ ಚೌಡ ಹೋಗೋಣ ಕೊಡೆ ನಿನಗೆ ನಾಹಿಡಿವೆ.
ದೃಢಭಕ್ತ ನಿನಗೆ ಸರಿಯಾರು । ಹೊಸಮತಕೆ
ಹೊಡೆಯದಿ ಬೆಳಸು ಹುಲುಸಾಯ್ತು !"

ಎಂದು ಕರೆಯುತ್ತಾನೆ. ಈ ಕರೆಗೆ ಚೌಡಯ್ಯನಿತ್ತ ಉತ್ತರ ಹತ್ತುಸಾವಿರ ಗ್ರಂಥಗಳ ಸಾರವಾಗಿದೆ :

ಬೇಡೆನಗೆ ಕೈಲಾಸ ನೀಡೆನಗೆ ಶಿವಭಕ್ತಿ
ಮಾಡುವೆನು ಸೇವೆ ಶಿವಮತಕೆ । ಶರಣರಿಗೆ
ನಾಡ ಕಾಯಕವೆ ಕೈಲಾಸ ! ॥

ಇದೇ ಅಮರವಾಣಿ ಅದೇ ಕಾಲಕ್ಕೆ ಕಲ್ಯಾಣದ ಕೊರಳಿನಿಂದಲೂ ಹೊರಟಿತ್ತು:

"ಲಿಂಗದಲ್ಲಿ ಸಮ್ಯಕ್ಕರು, ಲಿಂಗದಲ್ಲಿ ಸದರ್ಥರು
ಲಿಂಗದ ಸೊಮ್ಮು ಸಂಬಂಧವನರಿತ
ಸ್ವಾಮಿಭೃತ್ಯರೆಲ್ಲರು–ನಿಮ್ಮಬೇಡೆನಂಜದಿರಿ !
ಎನಗೆ ಮರ್ತ್ಯಲೋಕದ ಮಹಾಗಣಂಗಳುಂಟು ;

ಇದು ಕಾರಣ, ಕೂಡಲ ಸಂಗಮದೇವನ ಲೋಕವ
ಹಂಚಿಕೊಳ್ಳಿ ನಿಮನಿಮಗೆ !"

ಈ ಅಮೃತವಾಣಿ ಹೊರಟ ಕಲ್ಯಾಣದತ್ತ ಚೌಡಯ್ಯ ಹೊರಡುತ್ತಾನೆ. ಅಲ್ಲಿ ಬಸವಾದಿ ಪ್ರಮಥರ ದರ್ಶನ ಪಡೆದು ಧನ್ಯನಾಗುತ್ತಾನೆ; ಅನುಭವ ಮಂಟಪವನ್ನು ಸೇರಿ ಜೀವನ್ಮುಕ್ತನಾಗುತ್ತಾನೆ.

ಷಡಚಕ್ರದ ವಳಯದಲ್ಲಿ ನಾನಾಡುವೆ ಬಹುರೂಪ ;
ಕುಂಡಲಿಯ ಭ್ರೂಮಧ್ಯದಲ್ಲಿ ನಾನಾಡುವೆ ಬಹುರೂಪ ;
ಹೃದಯಕಮಲಬ್ಜಸ್ವರದ ಮಣಿಪೂರಕದ ಮೇಲೆ
ನಾನಾಡುವೆ ಬಹುರೂಪ ;
ಬಯಲ ಬೆರಸಿದ ಮರೀಚಿಯಂತೆ ನಾನಾಡುವೆ ಬಹುರೂಪ ;
ಉರಿಯುಂಡ ಕರ್ಪುರದಂತೆ ನಾನಾಡುವೆ ಬಹುರೂಪ ;
ರೇಕಣ್ಣ ಪ್ರಿಯನಾಗಿನಾಥಾ, ಬಸವಣ್ಣನಿಂದಾನು ಬದುಕಿದೆನಯ್ಯಾ"

ಎಂದು ತನ್ನ ಕಾಯಕವನೇ ತನ್ನ ತತ್ತ್ವಭೂಮಿಕೆಯನ್ನಾಗಿ ಮಾಡಿಕೊಂಡು ಕುಣಿಕುಣಿದು ಶರಣಗಣವನ್ನು ತಣಿಸುತ್ತಾನೆ.

"ಬಂದ ಬಹುರೂಪಿನಲ್ಲಿ ಸಂದಿಲ್ಲದೆ ಆಟವಾಡುತ್ತ
ಬಂದ ಬಂದವರ ಮೆಚ್ಚಿಸುತ್ತ ಅವರವರಂದಕ್ಕೆ ಕೊಂಡಾಡಿ
ಬಂದುದ ಕೈಕೊಂಡೆ ರೇಕಣ್ಣ ಪ್ರಿಯನಾಗಿನಾಥನಲ್ಲಿ"

ಎಂದು ತಾನು ಬಾಳಿದ ಬಗೆಯನ್ನು ಬಿತ್ತರಿಸುತ್ತಾನೆ :

"ಹುಟ್ಟುವಾತ ಮದ್ದಳೆಯ ಕಟ್ಟಿದ; ನಡೆವಾತ ತಾಳವ ನೋಡಿದ ;
ಬಿಡುವಾತ ಶ್ರುತಿಯನೆತ್ತಿದ ; 'ತತ್ಥಾತಿತ್ಥಿ' ಎಂಬಾಟ ಎತ್ತಲೆ
ಉಳಿಯಿತ್ತು, ರೇಕಣ್ಣ ಪ್ರಿಯನಾಗಿನಾಥಾ"

ಎಂದು ಅನುಭವವನ್ನು ಉಸಿರುತ್ತಾನೆ :

"ಎನ್ನಾಡುವೆ ಜಂಗಮ ಬಹುರೂಪ. ಈ ಲೋಕಕ್ಕೆ ಬಂದಿನ್ನು ಆನು
ಹೋದೆನಯ್ಯ ! ಇನ್ನು ಆನು ಹೋದೆನಾದರೆ ಎನಗಿಹ ಠಾವಿಲ್ಲ.
ಮುನ್ನ ಹೋದವರೆಲ್ಲರೂ ತಗಹಿನಲ್ಲಿ ಕುಳ್ಳಿರ್ದರು. ಆನು ಗಹನವ
ನರಿತೆನಾಗಿ ಬಲ್ಲದೆ ಬಂದೆನಿಲ್ಲಿಗೆ. ಇಲ್ಲೆಲ್ಲೋ ಮದ್ದಳಿಗ ! ಒಲ್ಲೆನೆನ್ನೋ
ಕಹಳೆಕಾರ ! ಬಿಂದು ಹರಿದು ನಿಂದು ಹಾಕಿರೋ ಹಣತಿಯರಿರಾ.

ತಾಳವಿತಾಳವಾಯಿತ್ತಲ್ಲಾ ! ನಾದಸುನಾದವಾಯಿತ್ತಲ್ಲಾ ! ಕೆಳಗಾಗಿ
ಶೂನ್ಯವಾಯಿತ್ತಲ್ಲಾ ! ರೇಕಣ್ಣ ಪ್ರಿಯನಾಗಿನಾಥ ಬಸವನಿಂದ
ಬದುಕಿತೀ ಲೋಕವೆಲ್ಲ"

ಎಂದು ಬೆಡಗನ್ನು ನುಡಿಯುತ್ತಾನೆ.

"ಕೈಯ ಮರೆದು ಕಾದುವ ಅಂಕವದೇಕೋ?
ಭಾವ ಮರೆದು ನೋಡುವ ನೋಟವದೇಕೋ?
ಭಯವ ಮರೆದು ಮಾಡುವ ಭಕ್ತಿಯದೇಕೋ?
ಏಕಾಂತದ ಸುಖಕ್ಕೆ ಲೋಕಾಂತವದೇಕೋ?
ರೇಕಣ್ಣ ಪ್ರಿಯ ನಾಗಿನಾಥನಲ್ಲಿ ಗುರುವ ಮರೆದು
ಲಿಂಗವನೊಲಿಸೇನೆಂದಡೆ ಆ ಗುರುಲಿಂಗವೆರಡೂ ಇಲ್ಲ"

ಎಂಬುದನ್ನರಿತ ಅವನು ದೀಕ್ಷಾಗುರು ರೇಕನಾಥ ಮೋಕ್ಷಗುರು ನಾಗಿನಾಥ ಇಬ್ಬರ ಒಬ್ಬುಳಿಯಾದ 'ರೇಕಣ್ಣಪ್ರಿಯ ನಾಗಿನಾಥ' ಎಂದು ಅಂಕಿತವನ್ನು ಆಯ್ದುಕೊಂಡು ವಚನವನ್ನು ರಚಿಸುತ್ತಾನೆ ; ಕೊನೆಗೆ,

"ಆಡಿದೆನಿವರನೊಡಗೂಡಿ;
ಮಾಡಿದೆ ಸರ್ವಸಂಗವ;
ನಾನೀನೆಂಬ ಭೇದವನಳಿದು
ಕೂಡಿದೆ ಕೇಡಿಲ್ಲದ ಕೂಟವ.
ಆಟವಾಯಿತ್ತಾಗಿ ನೋಟತೀರಿತ್ತು.
ರೇಕಣ್ಣ ಪ್ರಿಯ ನಾಗಿನಾಥನಲ್ಲಿ"–

ಎಂದು ಹಾಡುತ್ತ ಕಲ್ಯಾಣದ ಸುತ್ತಲಿನ ಬಯಲಿನಲ್ಲಿ ಬೆರೆತು ಬಯಲಾಗುತ್ತಾನೆ!

ಹೀಗೆ ಜನ್ಮದಿಂದ ಬ್ರಾಹ್ಮಣನಾಗಿ, ಆಸಕ್ತಿಯಿಂದ ವೀರಶೈವನಾಗಿ, ಕಾಯಕದಿಂದ ಬಹುರೂಪಿಯಾಗಿ, ಅನುಭವದಿಂದ ವಚನಕಾರನಾಗಿ, ಚಾರಿತ್ರ್ಯದಿಂದ ಶರಣನಾಗಿ ಚೌಡಯ್ಯ ಬಾಳಿ ಬೆಳಗುತ್ತಾನೆ. 'ಶಿವಪಾರಿಜಾತ' ಕನ್ನಡಕ್ಕೆ ಆತನ ಕೊಡುಗೆಯೆಂದು ಹೇಳುತ್ತಾರೆ. ರಾಮಕ್ರಿಯಾರಾಗ ಹಾಡುಗಾರಿಕೆಗೆ ಆತನ ಕೊಡುಗೆ ಎನ್ನುತ್ತಾರೆ. ಅದೇನೇ ಇರಲಿ, ಬಹುರೂಪಿ ಚೌಡಯ್ಯ ಕನ್ನಡ ಕಲೆಗಾರರೆಲ್ಲ ಹೆಮ್ಮೆಪಡಬಹುದಾದ ಕಲಾವಿದ: ಭಕ್ತರೆಲ್ಲ ಹೆಮ್ಮೆಪಡಬಹುದಾದ ಶರಣ.

ಶಿವರೂಪ ಕಾಯಕವೇ ಶಿವಶರಣ ಚೌಡಯ್ಯ
ಭವದೊಳಗೆ ಮಾಡಿ ಹೆಸರಾದ । ಶರಣನಿಗೆ
ಶಿವಮೆಚ್ಚಿಕೊಟ್ಟ ಶಿವಪದವ ॥
ಚೌಡ ಕುಣಿಯುವ ಹಾಡ ಹಾಡಿ ಹೊಲಹದ ಮಾಡಿ
ಮೋಡಮಳೆಗರೆಯೆ ಒಕ್ಕಲಿಗ । ಬಿತ್ತಿದರೆ
ನಾಡೆಲ್ಲ ಬೆಳಸು ಹುಲುಸಾಗಿ ॥ ಹಂತಿಯ ಪದ

■

# ರಾಯಸದ ಮಂಚಣ್ಣ – ರಾಯಮ್ಮರು

ಈ ತೊಳೆದ ಮುತ್ತಿನಂಥ ಮಾತುಗಳನ್ನು ಕೇಳಿರಿ :

"ತೊಳೆದಡೆ ಮಡಿ, ಮಾಸಿದಡೆ ಮೈಲಿಗೆ. ಅರಿದಡೆ ತಾನು, ಮರೆದಡೆ ಜಗದೊಳುಗು–ಎಂಬುದನರಿ. ಹಿಡಿದು ಬಿಟ್ಟು ಕೈ ಮೀರಿದಡೆ, ಮತ್ತೆ ಮರುಗಿದಡಿಲ್ಲ–ಜಾಂಬೇಶ್ವರಾ !"

ಈ ವಚನವನ್ನು ಉಸಿರಿದಾತ ರಾಯಸದ ಮಂಚಣ್ಣ–ಬಸವಣ್ಣನವರ ನಂಬಿಗ. ಅವರ ಅಭಿಪ್ರಾಯಗಳನ್ನು, ಆಲೋಚನೆಗಳನ್ನು ಅನುಭವಗಳನ್ನು ಇತರರಿಗೆ ತಿಳಿಸುವ ಮತ್ತು ಇತರರು ತಿಳಿಸುವ ವಿಚಾರಗಳನ್ನು ಅಣ್ಣನವರಿಗೆ ಅರುಹುವ ಹಿರಿಯ ಕಜ್ಜ ಆತನದು. ಎಂಥ ಹೊಣೆಗಾರಿಕೆಯ ಹೊರೆಯಿದು ! ನೂರಾರು ಶರಣರ ಲಕ್ಷಾವಧಿ ಭಕ್ತರ ಆರಾಧ್ಯಮೂರ್ತಿಯಾಗಿದ್ದ ಅಣ್ಣನವರ ಹೃದಯಸಂಪತ್ತಿನ ಧರ್ಮದರ್ಶಿತ್ವ, ವಿಶ್ವಸ್ತಿಕೆ ಸಾಮಾನ್ಯ ಕೆಲಸವೆ?

ರಾಯಸದ ಮಂಚಣ್ಣ ಮತ್ತೊಂದು ದೃಷ್ಟಿಯಿಂದಲೂ ಭಾಗ್ಯಶಾಲಿಯಾಗಿದ್ದ. ಹಗಲೆಲ್ಲ ಅಣ್ಣನವರ ಸಾನ್ನಿಧ್ಯ , ಶರಣರ ಮಧ್ಯದಲ್ಲಿ ಬೆಳಕಿನ ಬಾಳು–ಮನೆಗೆ ಬರುತ್ತಲೆ ತನ್ನಂತೆಯೇ ಶರಣಮಾರ್ಗವನ್ನು ನಂಬಿ ನಡೆದ ಮಡದಿ ರಾಯಮ್ಮನ ನಸುನಗೆಯ ಸ್ವಾಗತ. ಇನ್ನೇನು ಬೇಕು ಬಾಳು ಬಂಗಾರವಾಗಲು?

ಆಗಿನ ಶರಣರಲ್ಲಿ ಸತಿಪತಿಗಳಿಬ್ಬರೂ ವಚನಕಾರರಾಗಿದ್ದುದು ಅಪರೂಪವೇನಲ್ಲ. ಆದರೆ ಸತಿಪತಿಗಳಿಬ್ಬರೂ ಬೇರೆ ಬೇರೆ ಅಂಕಿತಗಳನ್ನು ಆರಿಸಿಕೊಂಡು ವಚನ ರಚನೆ ಮಾಡಿರುವುದು ಅಪರೂಪ. ಮಂಚಣ್ಣನ ಅಂಕಿತ 'ಜಾಂಬೇಶ್ವರಾ' ಎಂದಿದ್ದರೆ ರಾಯಮ್ಮನ ಅಂಕಿತ 'ಅಮುಗೇಶ್ವರಾ' ಎಂದಿದೆ. ಸತಿಪತಿಗಳಾದರೂ ಸಾಧನ ಪಥದಲ್ಲಿ ಸ್ವತಂತ್ರರಲ್ಲವೆ ಶರಣರು? ಸ್ವತಂತ್ರಶೀಲರಾದ ಶರಣರು ಸತಿಪತಿ ಭಾವದ ಬಂಧನಕ್ಕೊಳಗಾಗಿ ಸಾಧನರಂಗದಲ್ಲಿ ಬಾಧೆಗಳನ್ನೊಡ್ಡುವರೆ? ರಾಯಮ್ಮ ಪ್ರಾಯಶಃ ಅಮುಗಿದೇವನನ್ನು ಗುರುವೆಂದು ಭಾವಿಸಿರಬೇಕು. ಸರಿ, 'ಅಮುಗೇಶ್ವರಾ' ಎಂಬ ಅಂಕಿತ ಅವಳಿಗೆ ಇಷ್ಟವಾಯಿತು. ಮಂಚಣ್ಣನದಕ್ಕೆ ಅಡ್ಡ ಬರಲಿಲ್ಲ. ಇಷ್ಟೇ ಅಲ್ಲ,

ಆನಂದಿಂದದನ್ನು ಸ್ವಾಗತಿಸಿದ. ಸಮರಸವೇ ಜೀವನವೆಂದು ನಂಬಿದ್ದ ಶರಣರಿಗಿದು ಅರಿದಾದುದೇನಲ್ಲ.

ಬಸವಣ್ಣನವರ ಓಲೆಗಳನ್ನು ಒಯ್ದು ಮುಟ್ಟಿಸುವ, ಉತ್ತರಗಳನ್ನು ಪಡೆದು ಒಪ್ಪಿಸುವ ಬಿಡುವಿಲ್ಲದ ಕೆಲಸದಲ್ಲಿಯೂ ಅಧ್ಯಾತ್ಮ ಚಿಂತನೆ ನಡೆಸುತ್ತಿದ್ದ ಮಂಚಣ್ಣ ತನು ಕಾಯಕದಲ್ಲಿ ಮನಮಹದಲ್ಲಿ. ಇದು ಶರಣಮಾರ್ಗದ ಹಿರಿಮೆ. ಅಂತೆಯೇ ಎಂಥ ಕಾಯಕವಿದ್ದರೂ ಅಂಥ ವಚನಕಾರರಾಗಿ ಮೆರೆದವರು.

ಮಂಚಣ್ಣನೂ ತನ್ನ ಅನುಭವ ರಸಾಯನವನ್ನು ನಮಗಾಗಿ ವಚನಗಳ ಕಲಶಗಳಲ್ಲಿ ತುಂಬಿಸಿ ಹೋಗಿದ್ದಾನೆ. ಸಂಖ್ಯೆಯಲ್ಲಿ ಸ್ವಲ್ಪವಾಗಿದ್ದರೂ ಸವಿಯಲ್ಲಿ ಮೇಲಾಗಿರುವ ಈ ವಚನಗಳಲ್ಲಿ ಒಂದೆರಡನ್ನಾದರೂ ಇಲ್ಲಿ ಉದ್ಧರಿಸಲೇಬೇಕು.

> "ಊರ ವಂಕದ ಹೊರಗಿರ್ದು ಮನೆಯ ಬಾಗಿಲ ಕಾಣೆನೆಂದು ಅರಸುವನಂತೆ,
> ಇದಿರಲ್ಲಿ ತೋರುವ ಕುರುಹ ಮರೆದು ಅರಿವನೊಳಕೊಂಡೆನೆಂಬವನಂತೆ,
> ಜಂಬುಕ ಶಸ್ತ್ರದ ಫಳವನುಂಗಿ ಜಂಬೂ ದ್ವೀಪವೆಲ್ಲ ಪ್ರಳಯವಾಯಿತ್ತೆಂದಡೆ
> ಅದು ಚಂದವೆ ಜಾಂಬೇಶ್ವರಾ?"

> "ಮರಾಳಂಗೆ ಹಾಲು ನೀರನೆರೆದಲ್ಲಿ ನೀರನುಗುಳಿ ಹಾಲು ಕೊಂಬ ಭೇದವ ನೋಡಾ!
> ಎಣ್ಣೆ ನೀರ ಕೂಡಿದಲ್ಲಿ ಎಣ್ಣೆ ತನ್ನಿಂದಲೇ ಬೆಳೆದು ತನ್ನ ತಪ್ಪಿಸಿಕೊಂಡು ಉರಿಯದ ಭೇದವ ನೋಡಾ !
> ಹೊನ್ನು ಮಣ್ಣಿನಲ್ಲಿ ಬೆಳೆದು ತನ್ನ ತಪ್ಪಿಸಿಕೊಂಡು ಬೆಲೆಯಾದ ಪರಿಯ ನೋಡಾ!
> ತನ್ನೊಳಗೆ ತಾನಿರ್ದು ತನ್ನನರಿಯದೆ ತೊಳಲುವ ಬಿನ್ನಾಣವ ನೋಡಾ!
> ಚೆನ್ನಾಗಿ ನುಡಿವ ಅಣ್ಣಗಳೆಲ್ಲರೂ ಹೆಣ್ಣು ಹೊನ್ನು ಮಣ್ಣೆಂಬ ಬಲೆಗೆ
> ಸಿಕ್ಕಿ, ಜಗವುಳ್ಳ ಅಣ್ಣಗಳ ಬಾಗಿಲಲ್ಲಿ ನಿಂದು ಬಣ್ಣಗೆಟ್ಟುದ ಕಂಡು
> ಚುನ್ನವಾಗಿ ನಗುತಿರ್ದೆ ಜಾಂಬೇಶ್ವರಾ !"

ರಾಯಸಗಳನ್ನು ಕೊಂಡೊಯ್ವ ಕಾಯಕ ಬಗೆಬಗೆಯ ಜನರ ಸಂಪರ್ಕವನ್ನು ಒದಗಿಸಿರಬೇಕು ಮಂಚಣ್ಣನಿಗೆ. ಹೆಣ್ಣು ಹೊನ್ನು ಮಣ್ಣೆಂಬ ಬಲೆಗೆ ಸಿಕ್ಕುವರ ಕಂಡು ಚುನ್ನವಾಡುತ್ತ ತಿರುಗುವ ಮಂಚಣ್ಣ ತನ್ನೊಳಗೆ ತಾನಿರ್ದು ತನ್ನನರಿಯದೆ ತೊಳಲುವ ಬಿನ್ನಾಣವನ್ನು ಬಣ್ಣಿಸಿರುವುದು ಬಗೆಗೊಳ್ಳುವಂತಿದೆ.

ಕೈಕೊಂಡ ಕಾಯಕ ಮಂಚಣ್ಣನನ್ನು ಮುತ್ಸದ್ದಿಯನ್ನಾಗಿ ಮಾರ್ಪಡಿಸಿದ್ದಿತು. ಚತುರತನವನ್ನಾತ ಅನಿವಾರ್ಯವಾಗಿ ಅಳವಡಿಸಿಕೊಳ್ಳಬೇಕಾಗಿದ್ದಿತು. ಅದರ ಛಾಯೆ ಈ ವಚನದಲ್ಲಿದೆ–

"ಕೈದು ಮೊನೆದೋರುವುದಕ್ಕೆ ಮೊದಲೇ ಕಟ್ಟಬಲ್ಲಡೆ ಕೈದುವೇನ ಮಾಡುವುದು?

ಹಾವು ಬಾಯ ಬಿಡುವುದಕೆ ಮೊದಲೆ ಹಿಡಿದ ಮತ್ತೆ ವಿಷವೇನ ಮಾಡುವುದು

ಮನ ವಿಕಾರಿಸುವುದಕ್ಕೆ ಮೊದಲೆ ಮಹದಲ್ಲಿ ನಿಂದ ಮತ್ತೆ ಇಂದ್ರಿಯಗಳೇನ ಮಾಡಲಾಪವು, ಜಾಂಬೇಶ್ವರಾ?"

ಮನವಿಕಾರಿಸುವುದಕ್ಕೆ ಮೊದಲೆ ಮಹದಲ್ಲಿ ನಿಲ್ಲಬೇಕಂತೆ! ಎಂಥ



**ಬಸವಣ್ಣನವರ ನಂಬಿಗ –ರಾಯಸದ ಮಂಚಣ್ಣ**

ಅರ್ಥಗರ್ಭಿತವದ ಸೂತ್ರವಿದು! ಇಂಥದೇ ಸೂತ್ರಪ್ರಾಯವಾದ ವಚನ ಇನ್ನೊಂದನ್ನು ಉಸಿರಿದ್ದಾರೆ ಮಂಚಣ್ಣನವರು. ಸಿದ್ಧರಾಮದೇವರು ಇಷ್ಟಲಿಂಗದ ಆವಶ್ಯಕತೆಯೇನೆಂದು ಪ್ರಶ್ನಿಸಿದ ಪ್ರಸಂಗವದು. ಆಗ ರಾಯಸದ ಮಂಚಣ್ಣನವರು."ಉಂಬರೆ ಬಂದು, ಬಾಯ ಮರೆದೆನೆಂದು ಮೊರೆಯಿಡುತಿರ್ಪ ಅರಿಕೆ ಹೀನನ ತೆರನಂತಾಯಿತ್ತು. ಅರಿಕೆಯನರಿಯೆಂದು ಕುರುಹು ಕೊಟ್ಟರೆ, ಆ ಕುರುಹ ಮರೆದು ಅರಿದೆನೆಂಬ ಕುರುಬರ ನೋಡಾ ಜಾಂಬೇಶ್ವರಾ !" ಹೀಗೆಯೇ ಮಂಚಣ್ಣ, "ಮನ ಘನದಲ್ಲಿ ಮೆಚ್ಚಿ , ಮನ ಆ ಘನವೇ ತಾನಾಗಿ ನೆನೆಯಲಿಲ್ಲದ ಮತ್ತೆ ತಾನು ತಾನೇ ಜಾಂಬೇಶ್ವರಾ" ಎಂಬ ಮಾತಿನಲ್ಲಿ ಅನುಭವದ ತುತ್ತತುದಿಯನ್ನು ತೋರಿದ್ದಾನೆ.

"ಅರಿವಿನ ಪ್ರಸಂಗಕ್ಕೆ ಮತ್ಸರವೇಕೆ? ಮಹಾನುಭಾವಿಗೆ ಮನ್ನಣೆ ಮಾಡರೆಂಬ ಭೀಷ್ಮತೆಯೇಕೆ?

ತನ್ಮಯ ತಾನಾದ ಮತ್ತೆ ತನಗನ್ಯವಿಲ್ಲ ಎಂದೆ ಜಾಂಬೇಶ್ವರಾ"

ಎಂದು ಹೇಳಿ ಮಹಾನುಭಾವರೆಂದುಕೊಳ್ಳುತ್ತಾ ಮನ್ನಣೆಗಾಗಿ ಹಸಿದವರ ಮೂಗು ಕೊಯ್ದಿದ್ದಾನೆ ಮಂಚಣ್ಣ.

ರಾಯಮ್ಮನ ನುಡಿಗಳೂ ಅವಳ ಅಂತರಂಗದ ಕಿಡಿಗಳು, ಜ್ಞಾನದ ಮಾತನ್ನಾಡುವ ಅಜ್ಞಾನಿಗಳನ್ನು ಕಂಡರೆ ಆಕೆಗೆ ಆಗದು. ಎಷ್ಟು ಸುಲಭವಾಗಿ ಜ್ಞಾನದ ಮಾತೆತ್ತುವವರಲ್ಲ? "ಜ್ಞಾನವೆಂಬುದು ಬೀದಿಯ ಪಸಾರವೆ? ಬೊಕ್ಕಣ್ಣದೊಳಗಣ ಹುರುಳಿಯೆ? ಚೀಲದೊಳಗಣ ಜೀರಿಗೆಯೆ? ಗಾಣದೊಳಗಣ ಹಿಂಡಿಯೆ? ಜ್ಞಾನವೆಂಬುದು ಎಲ್ಲರೊಡನೆ ಬೀರದಿರಬೇಕು ! ಗೆಲ್ಲ ಸೋಲಿನ ಮಾತು ಬಂದಡೆ ಗೆಲವ ನುಡಿಯದಿರಬೇಕು. ಹೀಗಿರಬಲ್ಲಡೆ ಶರಣನೆಂಬೆನು– ಅಮುಗೇಶ್ವರ ಲಿಂಗವೆಂಬೆನು !"

ಗೆಲ್ಲವ ನುಡಿಯದಿರಬೇಕು. ಸೋಲನ್ನೇ ಗೆಲವೆಂದು ಭ್ರಮಿಸಿ ನುಡಿದು ಪರಿಭ್ರಣಕ್ಕೊಳಗಾದವರೇ ಹೆಚ್ಚು ಈ ಹುಚ್ಚು ಜಗತ್ತಿನಲ್ಲಿ. ನಿಜವಾಗಿ ನೋಡಿದರೆ ಗೆದ್ದವನೇ ಸೋತವ, ಸೋತವನೇ ಗೆದ್ದವ ಅನೇಕ ಸಲ. ಗೆಲವ ನುಡಿವುದು ಗರ್ವದ ಗುಣ. ಗರ್ವವಿದ್ದಲ್ಲಿ ಶರ್ವನಿಲ್ಲ, ಶರ್ವನೊಲಿಯದೆ ಶರಣ ಹೇಗಾಗುವ? ಇದೊಂದು ಅಮೃತವಚನ ಕೇಳಿ–

"ಅಂಗಕ್ಕೆ ಆಚಾರ. ಮನಕ್ಕೆ ಜ್ಞಾನ, ಸಮರಸಾದ್ವೈತವಾದ ಮತ್ತೆ ಪುನರ್ ದೀಕ್ಷೆಯುಂಟೆ? ಗರುಡಿಯಲ್ಲಿ ಕೋಲಲ್ಲದೆ ಕಾಳಗದಲ್ಲಿ ಉಂಟೆ ಕೋಲು?"

ರಾಯಮ್ಮ ನಿಜವಾಗಿ ಅನುಭವದ ತಾಯಮ್ಮ, 'ವಿಶ್ವಮಯ ರೂಪಾಗಿ ಬಂದೆಯಯ್ಯ !' ಎಂದು ಆಕೆ ಗುರುವಿನ ಬರವನ್ನು ಬಣ್ಣಿಸುವಾಗ ಆಕೆಗೂ ಈಶ್ವರನ ವಿಶ್ವರೂಪದರ್ಶನವಾಗಿದ್ದಿತೆಂದು ಒಪ್ಪಲೇಬೇಕಾಗುತ್ತಾದೆ.

ಒಟ್ಟಿನಲ್ಲಿ ಇವರಿಬ್ಬರ ಬಾಳು ಬೇಳೆಯಾಗದ ಇಡಿಗಾಳಿನ ಬಾಳು. 'ಜೀವಸಲು ಬೀಜ ಸಾವಂತೆ' ಇವರಿಬ್ಬರೂ ಕಲ್ಯಾಣದಲ್ಲಿ ಕೆಲಕಾಲ ಬಾಳಿ ಮಣ್ಣಾದರು. ಆದರೆ ಆ ಬೀಜ ಮಣ್ಣಾಗಿ ಅಮರ ಜೀವನವಾಗಿ ಅಂಕುರಿಸಿದೆ. ಅದು ಎಂದೆಂದೂ ಕಮರದ ಅಮೃತದ ಅಂಕುರ.

■

# ದಂಭದ ವೈರಿ ಅಂಬಿಗರ ಚೌಡಯ್ಯ

"ತಡೆನೆಲೆಯಿಲ್ಲದ ಮಹಾನದಿಯಲ್ಲಿ ಒಡಲಿಲ್ಲದಂಬಿಗೆ ಬಂದಿದ್ದೇನೆ. ಹಿಡಿದ ಬಿಡುವ ಮನವ ಬೆಲೆಗೊಟ್ಟೊಡೆ ಕಡೆಗಾಣಿಸಿ ಹಾಯಿಸುವೆ, ಮಹಾ ಹೊಳೆಯ. ನುಡಿಯಿಲ್ಲದ ನಿಸ್ಸೀಮ ಗ್ರಾಮದಲ್ಲಿರಿಸುವೆನೆಂದಾತ ಅಂಬಿಗರ ಚೌಡಯ್ಯ!"

ಎಂಥೆಂಥವರೂ ಹೌಹಾರುವ ಹೊಳೆಯಿದು–ಹುಟ್ಟು ಸಾವಿನ ಹೊಳೆ, ಸಂಸಾರದ ಹೊಳೆ. ಇದನ್ನು ದಾಟಿಯೇ ತೀರುವೆನೆಂಬ ಎದೆಗಾರಿಕೆ ಯಾರಿಗಿದೆ? ಹೀಗಿದ್ದೂ ಅಂಬಿಗನೊಬ್ಬ "ನಾನು ದಾಟಬಲ್ಲೆ, ನಿಮ್ಮನ್ನೂ ದಾಟಿಸಬಲ್ಲೆ. 'ಚಂದ ಗೆಟ್ಟವರೆಲ್ಲ ಬಂದೇರಿ ದೋಣಿಯನು ; ಶಿವನೊಂದೆ ಠಾವಿಗೊಯ್ದುಳುಹುವೆ" ಎಂದು ಎದೆ ತಟ್ಟಿ ಹೇಳಿದರೆ ಅದಕ್ಕೇನೆನ್ನಬೇಕು" ಸಣ್ಣಬಾಯಿ ದೊಡ್ಡಮಾತೆಂದೆ?

ಹಾಗೆನ್ನಲೂಬಾರದೆಂದು ತೋರುತ್ತದೆ. ಎಲ್ಲ ಅಂಬಿಗರಂತಲ್ಲ ಈ ಅಂಬಿಗ. ಇವನು ಬೇಡುವ ಬೆಲೆಯೂ ಬೇರೆ ಬಗೆಯದು. ಹಿಡಿದ ಬಿಡುವ ಮನವ ಬೆಲೆಗೊಟ್ಟೊಡೆ ತಡೆನೆಲೆಯಿಲ್ಲದ ಮಹಾನದಿಯ ಕಡೆಗಾಣಿಸಿ ಹಾಯಿಸಿ ನುಡಿಯಿಲ್ಲದ ನಿಸ್ಸೀಮ ಗ್ರಾಮದಲ್ಲಿರಿಸುವನಂತೆ! ಅಬ್ಬಾ , ಅದೆಂಥ ಅಂಬಿಗನಿವ ! ಒಡಲಿಲ್ಲದ ಅಂಬಿಗ, ಕಡೆಗಾಣಿಸುವ ಅಂಬಿಗ, ಕಾಸಿನ ಆಸೆಯಿಲ್ಲದ ಅಂಬಿಗ, ಆತ್ಮವಿಶ್ವಾಸದ ಅಂಬಿಗ, ಆಧ್ಯಾತ್ಮ ಸಂಪದದ ಅಂಬಿಗ, ಅನುಭಾವಿಯಾದ ಅಂಬಿಗ!

ಉಚ್ಚಸ್ವರದಿಂದ ಎಚ್ಚರಿಸುತ್ತಲಿದ್ದಾನೆ : ಕೇಳಿ ಕಿವಿಗೊಟ್ಟು–

> "ಗಾಳಿ ಬಿಟ್ಟಲ್ಲಿ ತೂರಿಕೊಳ್ಳಿರಯ್ಯಾ, ಗಾಳಿ ನಿನ್ನಧೀನವಲ್ಲವಯ್ಯ :
> ನಾಳೆ ತೂರಿಹೆನೆಂದರೆ ಇಲ್ಲವಯ್ಯ ! ಶಿವಶರಣ ಎಂಬುದೊಂದು ಗಾಳಿ
> ಹಡದಲ್ಲಿ ಬೇಗ ತೂರೆಂದು ಅಂಬಿಗರ ಚೌಡಯ್ಯ !"

ಹೊರಗೆ ಗಾಳಿ ಬಿಟ್ಟಾಗ ಹೊಟ್ಟು ತೂರಿಕೊಳ್ಳುವುದು; ಒಳಗೆ ಗಾಳಿಯಾಡುತ್ತಿರುವಾಗಲೇ, ಉಸಿರಾಡುತ್ತಿರುವಾಗಲೇ ಹುಟ್ಟಿನ ಹೊಟ್ಟು ತೂರಿ ಮುಕ್ತಿನ ರಾಶಿ ಮಾಡಿಕೊಳ್ಳುವುದು. ಬಸಿರಿನಲ್ಲಿ ಅಲೆಯುವ ಉಸಿರು ನಿನ್ನಾಧೀನವೆ? ಹೊರಗೆ ಹೋದ ಉಸಿರು ಮರಳಿ ಬಸಿರೊಳಗೆ ಬರುವುದೆಂಬ ಭರವಸೆ ಇದೆಯೆ

ನಿನಗೆ? ನಾಳೆ ತೂರಿಕೊಳ್ಳುವೆನೆಂದರೆ ಯಾತು ಬಲ್ಲರು–ನಾಳೆ ಗಾಳಿ ಬಿಡುವುದೋ ಇಲ್ಲವೋ ! ಅದು ಶಿವಶರಣೆಂಬ ಗಾಳಿ !

ಈ ಎಚ್ಚರಿಕೆಯನ್ನೀಯುತ್ತಿರುವವನು ಯಾರೆಂದು ಪ್ರಶ್ನಿಸುವ ಕಾರಣವಿಲ್ಲ. ಎಲ್ಲರಂತೆ ಅವನು ದೇವರ ಅಂಕಿತವನ್ನು ಆಯ್ದುಕೊಂಡಿಲ್ಲ. ತನ್ನ ಹೆಸರನ್ನೇ ಅಂಕಿತವನ್ನಾಗಿ ಅಂಗೀಕರಿಸಿಕೊಂಡಿದ್ದಾನೆ. ವೃತ್ತಿಯಿಂದ ಅಂಬಿಗನಾದರೂ ಪ್ರವೃತ್ತಿಯಿಂದ ಕ್ಷತ್ರಿಯನೆಂಬಂತೆ ಇದ್ದಾನೆ ಅಂಬಿಗರ ಚೌಡಯ್ಯ. ಮುಚ್ಚುಮರೆಯಿಲ್ಲದ ಬಿಚ್ಚುಮನಸ್ಸು, ಕಂಡುದನ್ನು ಕಂಡಂತೆ ಹೇಳುವ ಕೆಚ್ಚು, ದಂಭಾಚಾರವನ್ನು ಕಂಡರೆ ಸಾತ್ವಿಕವಾದ ರೊಚ್ಚು–ಇದು ಅವನ ವ್ಯಕ್ತಿತ್ವದ ಪಡಿಯಚ್ಚು ! ನೋಡುವ ನೋಟ ಎರಡು ಬಗೆಯದು : ಎಲ್ಲರಲ್ಲೂ 'ಶಿವನಿದ್ದಾನೆ' ಎಂದು ಎಲ್ಲೆಲ್ಲೂ ಶಿವನನ್ನು ಕಾಣುವ ನೋಟ ಒಂದು ಬಗೆ ; (ಬಸವಣ್ಣ ಮೊದಲಾದವರೀ ನೋಟದವರು) 'ಎಲ್ಲರಲ್ಲೂ ಶಿವದ ಜತೆಗೆ ಸೈತಾನನ್ನೂ ಇದ್ದಾನೆ' ಎಂದು ಸೈತಾನನ ಚಪಲ ಚೇಷ್ಟೆಗಳನ್ನು ಕಾಣುವ ನೋಟವಿನ್ನೊಂದು ಬಗೆ. (ಅಂಬಿಗರ ಚೌಡಯ್ಯ ಮಡಿವಾಳ ಮಾಚಯ್ಯ ಈ ನೋಟದವರು) ಎರಡರಲ್ಲಿ ಯಾವುದು ಹೆಚ್ಚು ಹಿತಕರವಾದುದೆಂದು ಹೇಳಲು ಬಾರದು. ಎರಡೂ ನೋಟಗಳ ಹಿಂದಿರುವ ಹೃದಯ ಹೇಗೋ ಹಾಗೆ ಬೆಲೆಕಟ್ಟಬೇಕವುಗಳಿಗೆ, ಹೃದಯ ವಿಶುದ್ಧವಾಗಿದ್ದರೆ, ನಿಜವಾದ ಶಿವರತಿಯಿಂದ ಪ್ರಚೋದಿತವಾಗಿದ್ದರೆ, ಜನ ಕಲ್ಯಾಣದ ಕಳಕಳಿಯಿಂದ ಕೂಡದುದಾಗಿದ್ದರೆ ಯಾವ ನೋಟವಿದ್ದರೂ ಸರಿಯೆ. ಅದಿಲ್ಲದೆ ಎಂಥ ನೋಟವಿದ್ದರೂ ವಿಫಲವೇ. ಎಲ್ಲೆಲ್ಲಿಯೂ ಶಿವನಿರುವುದೂ ಸತ್ಯ: ಶಿವನ ಹಿಂದೆ ಹಿಂದೆಯೇ ಸೈತಾನನಿರುವುದೂ ಸತ್ಯ. ಈ ಎರಡನೆಯ ಸತ್ಯದ ಅರಿವೇ ಅಂಬಿಗರ ಚೌಡಯ್ಯನನ್ನು ಇಂತು ಉಗ್ಘಡಿಸಲು ಉತ್ತೇಜಿಸುತ್ತದೆ.

"ಬಡತನಕ್ಕೆ ಉಂಬುವ ಚಿಂತೆ ; ಉಣಲಾದರೆ ಉಡುವ ಚಿಂತೆ ;
ಉಡಲಾದರೆ ಇಡುವ ಚಿಂತೆ ; ಇಡಲಾದರೆ ಹೆಂಡಿರ ಚಿಂತೆ ;
ಹೆಂಡಿರಾದರೆ ಮಕ್ಕಳ ಚಿಂತೆ ; ಮಕ್ಕಳಾದರೆ ಬದುಕಿನ ಚಿಂತೆ ;
ಬದುಕಾದರೆ ಕೇಡಿನ ಚಿಂತೆ ; ಕೇಡಾದರೆ ಮರಣದ ಚಿಂತೆ ;
ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು.
ಶಿವಚಿಂತೆಯಲ್ಲಿ ಇದ್ದವರನೊಬ್ಬರನೂ ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು !"

"ಇದೆಂಥ ಅವಿನಯ, ಔದ್ಧತ್ಯ, ಅಹಂಕಾರ!" ಎಂದೆನಿಸಬಹುದು ಸಕೃದ್ದರ್ಶನಕ್ಕೆ. ಆದರೆ ಒಳಹೊಕ್ಕು ನೋಡಿದರೆ ಇದರಲ್ಲಾವ ಅವಿನಯವೂ ಇಲ್ಲವೆಂಬುದು

ಗೋಚರಿಸದಿರದು. 'ಒಬ್ಬರನೂ ಕಾಣೆ, ನಾನೊಬ್ಬನೇ ನಿಜ ಶರಣ' ಎನ್ನುವಲ್ಲಿ ನಿರ್ದೇಶಿತರಾದವರು ಜನಸಾಮಾನ್ಯರು, ಬಸವಾದಿ ಪ್ರಮಥರಲ್ಲ; ಜನಸಾಮಾನ್ಯರಲ್ಲಿಯೂ ದಾಂಭಿಕರು, ಶಂಭುಭಕ್ತರಲ್ಲ. ಈ ವೇಷಧಾರಿಗಳನ್ನಿಷ್ಟು ನೋಡಿರಿ :

ಉದಯದಲೆದ್ದು ಪತ್ರಪುಷ್ಪಗಳಿಗೆ ಹೋಗುವ ಅಣ್ಣಗಳು ನೀವು ಕೇಳಿರೋ!
ನೀವು ಗಿಡದ ವೈರಿಗಳೋ, ದಾಯಾದಿಗಳೊ?....ಅರಕ್ಯಾರು ಬಿತ್ತಿದ
ಗಿಡದ ಹೂವನೇ ಕೊಯ್ದು, ಊರಲ್ಲಿ ಕಟ್ಟಿದ ನೀರನೇ ತಂದು,
ನಾಡೆಲ್ಲ ನೋಡಲೆಂದು ಪೂಜಿಸುವ ಆ ಹೂವಿಗೋ, ಆ ನೀರಿಗೋ,
ನಾಡೆಲ್ಲ ನೋಡಲೆಂದು ಪೂಜಿಸಿದಾತಗೋ?

ಚೌಡಯ್ಯನ ಈ ಪ್ರಶ್ನೆಗೆ ಉತ್ತರ ಹೇಳುವ ವಿಶ್ವಾಸ ಎಷ್ಟು ಜನರಿಗಿದೆ? 'ತುತ್ತಿನಾಸೆಗೆ ಲಿಂಗವ ಕೊಟ್ಟು ಹೋಗುವ' ಗುರುಗಳು, 'ಕಾಮನಾಟಕದಲ್ಲಿ ಸಿಲುಕಿ ಮಾತಿನಲ್ಲಿ ನೀತಿಯ ಸೇರಿಸುತ್ತ' ಅಲೆವ ಭಕ್ತರು, 'ಉಚ್ಚಂಗೀ ದುರ್ಗಿಗೆ ಬಿಟ್ಟ ಪೋತರಾಜನಂತೆ ಮೂರು ಮೂರು ಜಡೆಗಳ ಬಿಟ್ಟು....ಆಡಿನೊಳಗಿರುವ ಹೋತಿನಂತೆ ಮೊಳೆ ಮೊಳೆ ಗಡ್ಡಗಳ ಬಿಟ್ಟು' ಜನರನ್ನು ಮರುಳುಗೊಳಿಸಿ 'ಕೊಟ್ಟೊಡೆ ಹೊಗಳಿ ಕೊಡದಿದ್ದರೆ ಬೊಗಳುವ ಜಂಗಮರು' ಎಲ್ಲರೂ ಅಂಬಿಗರ ಚೌಡಯ್ಯನ ತೀಕ್ಷ್ಣ ವಿಮರ್ಶೆಗೆ ಗುರಿಯಾಗಿದ್ದಾರೆ. ಅತ್ಯಂತ ಕಟು ವಿಮರ್ಶೆ ಅಂಬಿಗರ ಚೌಡಯ್ಯನದು. ಕಟುವಾದರೂ ದಿಟವನ್ನೇ ನುಡಿಯಬೇಕೆನ್ನುವ, ಸಟೆಯೆಲ್ಲಿದ್ದರೂ ಕಟುವಾಗಿ ಖಂಡಿಸಬೇಕೆನ್ನುವ ಅಂಬಿಗರ ಚೌಡಯ್ಯ ಒಮ್ಮೊಮ್ಮೆ ರೊಚ್ಚಿಗೆದ್ದು ಕಿಚ್ಚು ಕಾರುತ್ತಾನೆ. ಅವನ ಅನೇಕ ವಚನಗಳಲ್ಲಿ ಈ ಕಿಚ್ಚು ಕಂಡುಬರುತ್ತದೆ. ಆದರೆ ಸತ್ಕವಿ ಶಿವರುದ್ರಪ್ಪನವರು ಹೇಳಿರುವಂತೆ, ಅವನ ಈ ವಚನಗಳು, "ಅನರ್ಥಸಾಧಕವಾದ ಕೋಪದಿಂದ ಹೊರಟಬಲ್ಲ, ಸದರ್ಥ ಸಾಧಕವಾದ ಸತ್ಕೋಪದಿಂದ ಹೊಮ್ಮಿದುವುಗಳು...ನಿಜವಾಗಿಯೂ ಅಂಬಿಗರ ಚೌಡಯ್ಯ ವಚನಕಾರರಲ್ಲಿ ಒಬ್ಬ ಕ್ರಾಂತಿಪುರುಷ. ನಿಷ್ಠುರ ಮನುಜ."

ಚೌಡಯ್ಯ ಚಾಟಿಯೇಟನ್ನು ಕೊಡುವುದರಲ್ಲಿಯೇ ಕೃತಕೃತ್ಯನಾದನೋ ತಾನೊಂದು ತಿಳಿವಿನ ಹಾದಿಯನ್ನೇನಾದರೂ ತೋರಿದನ್ನೋ ಎಂಬ ಪ್ರಶ್ನೆ ಏಳುವುದು ಸಹಜ. ಯಾಕೆಂದರೆ ಅನ್ಯರ ತಪ್ಪನ್ನು ಎತ್ತಿ ತೋರಿಸುವುದು ಸುಲಭ; ತಪ್ಪಾಗದಂತೆ ಮಾಡುವ ಒಪ್ಪಿನ ಬಟ್ಟೆಯನ್ನು ತೋರುವುದು ಸುಲಭವಲ್ಲ. ತಪ್ಪನ್ನು ಮಾತ್ರ ತೋರಿ ಒಪ್ಪನ್ನು ತೋರದವರಿಗೆ ಹೆಚ್ಚಿನ ಬೆಲೆಯಿಲ್ಲ. ಬಹಳವಾದರೆ ಅವರಿಗೆ ಸೂಕ್ಷ್ಮದರ್ಶಕಯಂತ್ರವೆನ್ನಬಹುದು. ಚೌಡಯ್ಯನು ಒಪ್ಪಿನ

ದಾರಿಯನ್ನೇನಾದರೂ ತೋರಿದ್ದಾನೆಯೆ? ತೋರಿದ್ದಾನೆ :

"ಗತಿ ಪಥದ ಜ್ಞಾನದಲ್ಲಿದ್ದು ನೀಗಿರೋ ನಿಮ್ಮ ಭವ ಬಂಧನದ ಸಾಗರವನ್ನು! ಪ್ರಾಣತ್ಯಾಗವು ಈಗಲೋ ಆಗಲೋ ಎಂದರಿಯಬಾರದು. ರೋಗರುಜಿನಗಳಿಗೆ ಅಗರವು ನಿಮ್ಮ ಒಡಲು. ತನುಮನ ಪ್ರಾಣವ ನೆಚ್ಚದಿರು. ನಾಗಭೂಷಣನ ಪಾದಪೂಜೆಯ ಮಾಡಿ, ಶಿವಯೋಗದಲ್ಲಿ ಲಿಂಗವನೊಡಗೂಡಿ ಸಾಗಿಹೋದವರ ಭವಗೇಡಿ ಎಂದಾತ ನಮ್ಮ ಅಂಬಿಗರ ಚೌಡಯ್ಯ."



**ನಿಜದ ನಗಾರಿ, ನಿರ್ಭಯತೆಯ ಭೇರಿ–ಅಂಬಿಗರ ಚೌಡಯ್ಯ**

ಭಕ್ತನಾಗಿ ಭವಗೇಡಿಯಾಗಬೇಕು. ಇದು ಗುರಿ. ಭವಗೇಡಿಯಾಗದವ ಬುದ್ಧಿಗೇಡಿ ಹರಣ ಹಾರುವುದು ಈಗಲೋ ಆಗಲೋ ! ತನುಮನ ಪ್ರಾಣಗಳನ್ನು ನೆಚ್ಚಿದರೆ ಕೇಡು ತಪ್ಪದು. ನಾಗಭೂಷಣನ ಪೂಜೆ. ಶಿವಯೋಗ ಸಾಧನೆ–ಇವೆರಡೇ ಲಕ್ಷ್ಯವಾಗಿರಬೇಕು. ಭವಿತನದ ಸೀಮೆಯನ್ನು ದಾಟಿ ಭಕ್ತಿಯ ಲೋಕವನ್ನು ಸೇರಬೇಕು. ಅದಕ್ಕೆ ಗುರುವಿನ ಮಾರ್ಗದರ್ಶನ ಬೇಕು. ನಿಜವಾದ ಗುರು ಬೇಕು, ಇಲ್ಲದಿದ್ದರೆ 'ತೊರೆಯಲದ್ದಿಹೋಹನ ಈಸಲರಿಯದವ ತೆಗೆದಂತಾ'ಗುತ್ತದೆ. ಲಿಂಗ ಬರಿ ಕುರುಹಲ್ಲ. ಅದು 'ಈರೇಳು ಭುವನಗಳನೊಳಕೊಂಡ ಮಹಾಲಿಂಗ'ದ ಕುರುಹು. ನಿಷ್ಠೆಯಿಂದ ಈ ಕುರುಹಿನ ಬೆಂಬಳಿವಿಡಿದು ಸಾಧನಪಥದಲ್ಲಿ ಮುಂದುವರಿದರೆ ಅರಿವು ಕಣ್ಣೆರೆಯುತ್ತದೆ. ಈ ಕಟ್ಟಿದ ಲಿಂಗವಿರಲು ಬೆಟ್ಟದ ಲಿಂಗಕ್ಕೆ ಹೊಟ್ಟೆಯಡಿಯಾಗಿ ಬೀಳಬಾರದು. ಜನರಂಜನೆಗಾಗಿ ಏನನ್ನೂ ಮಾಡಬಾರದು. ಜನರು "ಉಂಡರೆ ಭೂತನೆಂಬರು; ಉಣದಿದ್ದರೆ ಚಕೋರಿ ಎಂಬರು; ಭೋಗಿಸಿದರೆ ಕಾಮಿ ಎಂಬರು; ಭೋಗಿಸದಿದ್ದೊಡೆ ನಪುಂಸಕನೆಂಬರು." ಆದುದರಿಂದ ಜನಸಾಕ್ಷಿಯಾಗಿ ನಡೆಯಬಾರದು. 'ಮಾಡುವ ಭಕ್ತನಿಗೆ ಮನವೇ ಸಾಕ್ಷಿ' ಮನಸಾಕ್ಷಿಯಾಗಿ ಮುಂದುವರಿಯಬೇಕು. ಹಾದಿಗಳಲ್ಲಿ ಕಷ್ಟಗಳು ಬರುವುವು. ಅವುಗಳಿಗೆ ಅಂಜಬಾರದು. "ಕಷ್ಟಗಳು ತಮ್ಮಿಂದ ತಾವೇ ಬರಲರಿಯವು" ಅವೂ ಶಿವನ ಅಪ್ಪಣೆಯಂತೆಯೇ ಬರುವುವು.

ಶಿವನು ಭಕ್ತರ ಹಿತಕ್ಕಾಗಿಯೇ ಅವರನ್ನು ಕಷ್ಟಗಳ ಅಗ್ನಿಯಲ್ಲಿ ಪರೀಕ್ಷಿಸುವನು. ಆದುದರಿಂದ ಇಷ್ಟವಾದುದು ಶಿವನ ಕೃಪೆಯೆಂದು ಭಾವಿಸುವಂತೆ ಅನಿಷ್ಟವಾದುದು, ಕಷ್ಟವಾದುದು ಸಹ ಶಿವನ ದಯೆಯೆಂದೇ ಭಾವಿಸಬೇಕು. ಅವುಗಳನ್ನೂ ನಗುತ್ತಲೇ ಸ್ವಾಗತಿಸಬೇಕು ಸಂದೇಹಗಳು ಸಂಧಿಸಿದಲ್ಲಿ ಗುರುವಿನ ಮಾರ್ಗದರ್ಶನ ಪಡೆಯಬೇಕು. ತ್ರಿವಿಧ ದಾಸೋಹದಿಂದ ಗುರುಲಿಂಗಜಂಗಮ ಸೇವೆ ಮಾಡಬೇಕು. ನಾಡೆಲ್ಲಾ ನೋಡಲೆಂದಲ್ಲ, ಎದೆಯ ಕತ್ತಲೆ ಓಡಲೆಂದು. ತೀರ್ಥಕ್ಷೇತ್ರಗಳನ್ನು ಸುತ್ತಿ ತೊಳಲಬೇಕಾಗಿಲ್ಲ. ಅಂಗದಲ್ಲಿಯೇ ಲಿಂಗದ ಪ್ರಕಾಶ ಪಸರಿಸುವಂತೆ ಮಾಡಬೇಕು. ಹಾಗೆ ಅಂಗದಲ್ಲಿ ಲಿಂಗದ ಗುಣ ಪ್ರಕಾಶಿಸಬೇಕಾದರೆ ಮೊದಲು ಕಾಯದ ಗುಣ ಕೀಳಬೇಕು. 'ಒಡೆಯದೆ ತೆಂಗಾಯ ಮೆದ್ದವರುಂಟೆ?' ಆದುದರಿಂದ ಕಾಯದ ಅಹಂಕಾರದ ಚಿಪ್ಪನ್ನೊಡೆದು ಲಿಂಗಾನುಭವದ ಅಮೃತವನ್ನು ಆಸ್ವಾದಿಸಬೇಕು. ಆಗ 'ಸಸಿಗೆ ನೀರನೆರೆದಡೆ ಹಸಿರಾದಂತೆ, ಬೇರಿನ ಬಾಯಿ ತುಂಬಿ, ಸಸಿಯ ಬಡಲು ತುಂಬಿ, ಆವಿಸಕದ ತೆರನಂತೆ'ಲಿಂಗದ ಗುಣ ಅಂಗದಲ್ಲಿ ಅಳವಡುತ್ತದೆ. ಅಂಗನು 'ಅರುಣನ ಕಿರಣದಲ್ಲಿ ಅರತ ಸಾರದಂತೆ' ಆಗುತ್ತಾನೆ. 'ಹುಸಿ ಮಸಕ' ಮಾಯವಾಗಿ ಸುಜ್ಞಾನೋದಯವಾಗುತ್ತದೆ.

ಇದು ಅನುಭವ ಮಂಟಪದಲ್ಲಿ ಅಂಬಿಗರ ಚೌಡಯ್ಯ ಚೆನ್ನಬಸವಣ್ಣನವರಿಂದ ಅರಿತುಕೊಂಡ ಅನುಭವವೇದ್ಯವಪ್ಪ ಅರಿವಿನ ದಾರಿ. ಈ ದಾರಿಯಲ್ಲಿ ನಡೆದವರ ಅಡಿಗೆರಗುತ್ತ, ಈ ದಾರಿಯನ್ನು ಮೀರಿ ನಡೆದವರನ್ನು ಖಂಡಿಸುತ್ತ ಡಾಂಭಿಕರ ವೈರಿಯಾಗಿ ಅಂಬಿಗರ ಚೌಡಯ್ಯ ನಡೆದ. ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿಯಾದ ವಚನಗಳನ್ನು ಉಸಿರಿ ಹೋದ. ಇಂದಿಗೂ ಹಳ್ಳಿಗರಿಗೆ ಅವನ ವಚನಗಳೆಂದರೆ ಪಂಚಪ್ರಾಣ. ಅವುಗಳಲ್ಲಿ ಅವರಿಗೆ ತಮ್ಮ ಅಂತರಂಗದ ಸರಳಗೆ, ನ್ಯಾಯನಿಷ್ಠುರತೆ, ಒರಟುತನ, ಸತ್ಯವಾದಿತ್ವಗಳು ಪ್ರತಿಬಿಂಬಿಸಿರುವುದು ಕಂಡು ಬರುತ್ತದೆ. ಅವನ ಸಿಂಹಗರ್ಜನೆ ಇವರನ್ನು ಹುರಿದುಂಬಿಸುತ್ತದೆ. ಯಾವಾಗಲೂ ವೀಣೆ ವೇಣುಗಳಿಂದಲೇ ಜೀವನ ಸಾಗುವುದಿಲ್ಲ–ಆಗಾಗ ನಗಾರಿ ಭೇರಿಗಳೂ ಬೇಕಾಗುತ್ತವೆ. ಅಂಬಿಗರ ಚೌಡಯ್ಯ ನಿಜದ ನಗಾರಿ, ನಿರ್ಭಯತೆಯ ಭೇರಿ.

ಯಾವಾಗಲೂ ಭೇರಿಯಾಗಿಯೇ ಭೋರ್ಗರೆವುದಿಲ್ಲ ಚೌಡಯ್ಯ. ಆಗಾಗ ವಿಪಂಚಿಯಾಗಿಯೂ ಇಂಚರ ಬೀರುತ್ತಾನೆ. ಆಗ ಅವನ ಅನುಭವರಸಾಯನ ರಸಾತ್ಮಕವಾಗಿ ಹೊಮ್ಮುತ್ತದೆ.

ಈ ಪರಮಾತ್ಮನ ಸ್ವರೂಪ ವರ್ಣನೆಯನ್ನು ನೋಡಿರಿ :

> "ಅಸುರ ಮಾಲೆಗಳಿಲ್ಲ: ತ್ರಿಶೂಲ ಢಮರುಗವಿಲ್ಲ;
> ಬ್ರಹ್ಮ ಕಪಾಲವಿಲ್ಲ; ವೃಷಭ ವಾಹನವಿಲ್ಲ;
> ಋಷಿಯ ಮಗಳೊಡನಿರ್ದಾತನಲ್ಲ;
> ಎಸಗುವ ಸಂಸಾರದ ಕುರುಹಿಲ್ಲದಾತಂಗೆ
> ಹೆಸರಾವುದೆಂದನಂಬಿಗರ ಚೌಡಯ್ಯ"

ಈ ಆತ್ಮನ ಏಕತ್ವದ ವಿವರಣೆಯನ್ನೋದಿರಿ :

> "ಮೊಲೆ ಮುಡಿ ಬಂದರೆ ಆ ಪಿಂಡವನು ಹೆಣ್ಣೆಂಬರು;
> ಗಡ್ಡಮೀಸೆಗಳು ಬಂದರೆ ಆ ಪಿಂಡವನು ಗಂಡೆಂಬರು;
> ಆ ಇಬ್ಬರ ನಡುವೆ ಸುಳಿವ ಆತ್ಮನು ಹೆಣ್ಣು ಅಲ್ಲ,
> ಗಂಡು ಅಲ್ಲ ನೋಡಾ! ಇದರಂತುವ ತಿಳಿದು ನೋಡಿಹೆ
> ನೆಂದರೆ ಶ್ರುತಿಗಳಿಗಗೋಚರವೆಂಬಾತ ನಮ್ಮ ಅಂಬಿಗರ ಚೌಡಯ್ಯ"

ಈ ದಿಟದ ದಿಟ್ಟತನ :

> ತನ್ನುವ ಮರೆದು ದೇವರ ಕಂಡೆನೆಂಬ ಕಾರಣ
> ಹರಿಸುರ ಬ್ರಹ್ಮಾದಿಗಳು ತಲೆಕೆಳಗಾಗಿ ಹೋದರು!

ಆ ದೇವರ ಮರೆದು ತನ್ನುವನರಿದುದುಂಟಾದರೆ
ತಾನೆ ದಿಟವೆಂದನಂಬಿಗ ಚೌಡಯ್ಯ!"

"ತನ್ನುವ ಹುಸಿಮಾಡಿ ಇನ್ನೊಂದು ದಿಟಮಾಡುವ ಅಣ್ಣಂಗೆ ನಂಬುಗೆ ಇನ್ನಾವುದಯ್ಯಾ? ತನ್ನೊಳಗಿರ್ದ ಘನವ ತಾ ತಿಳಿಯಲರಿಯದೆ ಪರಬ್ರಹ್ಮಕ್ಕೆ ತಲೆಯಿಕ್ಕಿ ತೆಗೆದೆನೆಂಬ ಅಣ್ಣ ಗಾವಿಲನೆಂದನಂಬಿಗ ಚೌಡಯ್ಯ!"

ಇಲ್ಲಿ ಅನುಭವ ಮಗಿಲಿನೆತ್ತರಕ್ಕೆ ಮುಟ್ಟಿದೆ, ಎಂದೆಂದೂ ಮಾಸದ ಮೀಸಲು ಹೂ ಬಿಟ್ಟಿದೆ. ಅಂಬಿಗರ ಚೌಡಯ್ಯ ದಂಭದ ವೈರಿಯೂ ಹೌದು; ಅನುಭವ ವಿಹಾರಿಯೂ ಅಹುದು; ಚಿನ್ಮಯ ಚಕೋರಿಯೂ ಅಹುದು. ಒಟ್ಟಿನಲ್ಲಿ ದಿಟ್ಟ ಧೀರ ಅಧ್ಯಾತ್ಮಸಾಸ ಅಂಬಿಗರ ಚೌಡಯ್ಯ. ಅವನ ಈ ಕೊನೆಯೆಚ್ಚರಿಕೆ ನೆನಪಿರಲಿ: "ವಿತ್ತ ಸುತ್ತಿ ಬಂದಡಂ ಊರೆಬಪ್ಪುದೆ ತಪ್ಪುದು, ಮೂರು ಮಲವ ಮರೆದಿರಬೇಕು. ಹೊಲಬುದಪ್ಪಿ ಮೃಗ ಬಲೆಯೊಳಗೆ ಬಿದ್ದಂತಾಗಬೇಡ. ಇದನ್ನರಿತು ಬದುಕೆಂದನಂಬಿಗರ ಚೌಡಯ್ಯ."

■

# ಮೈ-ಮನಕೆ ಮದ್ದನಿತ್ತ ವೈದ್ಯ ಸಂಗಣ್ಣ

ಜೀವವಿರುವನಕ ದೇಹದ ಒಡನಾಟ ತಪ್ಪಿದ್ದಲ್ಲ ಧರ್ಮಸಾಧನಕ್ಕೂ ಶರೀರವೇ ಆದಿಯಾದುದು. ಅದನ್ನು ಒಲಿಯುವುದೂ ತಪ್ಪು, ಹಳಿಯುವುದೂ ತಪ್ಪು. ಅದು 'ಕೂಡಲಸಂಗಮದೇವರನೊಲಿಸ ಬಂದ ಪ್ರಸಾದ ಕಾಯ'ವೆಂದು ತಿಳಿದು ಅದನ್ನು ಕೆಡಿಸದಂತೆ ಸದುಪಯೋಗ ಮಾಡಿಕೊಳ್ಳಬೇಕು. 'ಹಾವಿನ ಹಲ್ಲ ಕಳೆದು ಹಾವನಾಡಿಸುವಂತೆ' ಕಾಯದ ಕಿಲ್ಮಿಷವ ಸುಟ್ಟು ಕಾಯದ ಸಂಗ ಮಾಡಬೇಕು. ಈಗ ಶಹಾಪುರ ತಾಲ್ಲೂಕಿನಲ್ಲಿರುವ ಸಗರ ಗ್ರಾಮದಲಾಗಿ ಹೋದ ಸಗರದ ಬ್ರಹ್ಮಯ್ಯನು ಹೇಳಿದಂತೆ, "ಕಾಯದ ಗುಣದಲ್ಲಿದ್ದು ಕರಣಂಗಳಂತಾಡದಿರ್ದರೆ ಕಾಯದ ಸಂಗವೇ ಲೇಸು. ಇಂದ್ರಿಯಂಗಳ ಸಂಸರ್ಗದಲ್ಲಿದ್ದು ಮುಟ್ಟುವ ಸಂಗವ ಬಲ್ಲಡೆ ಆ ಗುಣದಲ್ಲಿದ್ದು ಅರಿವುದೇ ಲೇಸು....ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರ ಲಿಂಗವು ಕೂಡಿಕೂಟವಾದ ಮೇಲೆ."


ಆದರೆ ಶರೀರವಿದ್ದಲ್ಲಿ ರೋಗರುಜೆಗಳು ಅನಿವಾರ್ಯ. ಆಗ ವೈದ್ಯಶಾಸ್ತ್ರಕ್ಕೆ ಶರಣುಹೋಗಲೇಬೇಕು. 'ದೇಹ ಚಿರಂಜೀವಿಯಾದಡೆ ಕಪಿಲಸಿದ್ಧ ಮಲ್ಲಿಕಾರ್ಜುನ ಬ್ರಹ್ಮವೆಂಬ ಶಬ್ದ ಬೇರುಂಟೆ? ದೇಹ ಚಿರಂಜೀವಿಯಾಗುವುದೆಂದರೇನು?" ಚಿರಂಜೀವಿಯೆಂದರೆ ನಿರೋಗಿ, ಚಿರಂಜೀವಿಯೆಂದರೆ ಸಶಕ್ತನು; ಚಿರಂಜೀವಿ ಎಂದರೆ ಪ್ರಳಯವ ಮೀರುವವನಲ್ಲ' ಶರೀರ ನಿರೋಗಿಯಾಗಿರಬೇಕು, ಸಶಕ್ತವಾಗಿರಬೇಕು, ಚಿರಕಾಲ, ಕನಿಷ್ಠ ಶತ ಶರದಗಳವರೆಗೆ ಬಾಳುವಂತಿರಬೇಕು. ಒಪ್ಪಬೇಕಾದ ಮಾತು. ಆದರೆ ರೋಗ ಬಂದರೆ, ವ್ಯಾಧಿ ಆವರಿಸಿದರೆ ಏನು ಮಾಡಬೇಕು?

ತಲೆ ನೋಯುತ್ತಲಿದೆಯೆಂದು ತಲೆ ಕಾಯಿಸಿಕೊಳ್ಳುತ್ತಲಿದ್ದ ಸಗರದ ಬ್ರಹ್ಮಯ್ಯನ ಸತಿ ಶಿವದೇವಿ ಕೇಳಿದಳು. "ಬೇನೆ ಬಂದರೆ ಪ್ರಸಾದವೇ ಮದ್ದೆಂದು ನಂಬಿದ್ದ ನಿಮ್ಮ ನಂಬುಗೆ ಎಲ್ಲಿ ಹೋಯಿತು? ಈಗ ಕಿಚ್ಚೇ ನಿಮಗೆ ವೈದ್ಯನಾಗಲಿಲ್ಲವೆ?" ಬ್ರಹ್ಮಯ್ಯ ಬೆಚ್ಚಿಬಿದ್ದ: "ಹೌದು, ತನ್ನ ಪೂಜೆಯಲ್ಲಿ, ಪ್ರಸಾದದಲ್ಲಿ ಏನೋ ಕುಂದುಂಟಾಗಿದೆ. ಆದುದರಿಂದಲೇ ತಲೆನೋವು ಬಂದಿದೆ" ಎಂದು ಭಾವಿಸಿ ಮಂತ್ರ ಜಪಿಸಿ ತಲೆನೋವು ಕಳೆದುಕೊಂಡ.

ಎಂದರೆ ವೈದ್ಯಶಾಸ್ತ್ರಕ್ಕೆ ಬಹಿಷ್ಕಾರವೆ? ಮಡಿವಾಳ ಮಾಚಯ್ಯನ ಮತವಿಂತಿದೆ: "ತದ್ದು, ತುರಿ, ತಲೆಬೇನೆ, ಮೈಕೆಟ್ಟು ಶೀತ, ವಾತ, ಬಹುಜ್ವರ, ಹೊಟ್ಟೆಯಬೇನೆ, ಕೆಟ್ಟ ಹುಣ್ಣು ಮೊದಲಾದ ಮುನ್ನೂರರುವತ್ತು ವ್ಯಾಧಿಯನು ಶಿವ ಹರಿಯಬಿಟ್ಟು ನೋಡುವ. ಇವೆಲ್ಲವು ಶಿವನ ಕರುಣವಾದಲ್ಲದೆ ಹೋಗವು. ನಾರುಬೇರು ನೆಚ್ಚಿದ ವಿದ್ಯಾಸಾಧಕರೆಲ್ಲ ಹತವಾಗಿ ಹೋದರು. ಲೋಕದ ಬುದ್ಧಿಗೇಡಿ ಮನುಜರೆಲ್ಲರು ಚಿತ್ತಶುದ್ಧವುಳ್ಳ ಜಂಗಮಲಿಂಗದ ಮಾತ ಕೇಳದೆ ಅದ್ದನ ಜೋಳ ಅರಮಾನ ಎಣ್ಣೆಯ ಕೊಂಡು ನೋಟಗಾತಿಯರ ಮನೆಗೆ ಹೋಗಿ ಅವರು ಹೇಳಿದ ತಾತು ಭೂತದ ತೋಟಲೆಗೊಳಗಾಗಿ ಕೈಕೊಂಡು ಬಂದು ಅವಕ್ಕೆ ಊಟವನಿಕ್ಕಿ ಮಿಕ್ಕ ಕೊಳ ತಮ್ಮ ಲಿಂಗಕ್ಕೆ ತೋರುವ ಲಿಂಗದ್ರೋಹಿಯ ಮಾತ ಕೇಳಲಾಗದು ಕಲಿದೇವರ ದೇವಯ್ಯಾ."

ಇದರರ್ಥ ಏನು? ವೈದ್ಯಶಾಸ್ತ್ರ, ವೈದ್ಯ, ರೋಗನಿದಾನ, ರೋಗಚಿಕಿತ್ಸೆ ಯಾವುದೂ ಬೇಡವೆ? ವ್ಯಾಧಿ ಬಂದಾಗ ವೈದ್ಯನನ್ನೇ ಸಂಪೂರ್ಣವಾಗಿ ಆಶ್ರಯಿಸುವ ಪ್ರವೃತ್ತಿಯ ಪ್ರತಿಕ್ರಿಯೆ ವೈದ್ಯನೇ ಬೇಡ–ಶಿವನೇ ಸಾಕೆಂದಾಯಿತೆ? ಎನ್ನ ಕಾಲೇ ಕಂಭ. ದೇಹವೇ ದೇಗುಲ, ಶಿರವೇ ಸುವರ್ಣಕಲಶ'ವೆಂದ ಶರಣರು ಹೀಗೆ ಒಂದು ಪವಿತ್ರ ಶಾಸ್ತ್ರವನ್ನು ಕಡೆಗಣಿಸಿ ಬಿಟ್ಟಿರಲಿಕ್ಕಿಲ್ಲ. ಕಡೆಗಣಿಸಲಿಲ್ಲವೆಂಬುದಕ್ಕೆ ನಿದರ್ಶವಾಗಿ ನಿಂತಿದ್ದಾನೆ ಮೈ–ಮನಗಳೆರಡಕ್ಕೂ ಮದ್ದು ಕೊಟ್ಟು ಶುದ್ಧಬದ್ಧನಾದ ವೈದ್ಯ ಸಂಗಣ್ಣ.

"ಮಯೂರನಾಡಿ, ಮುಂಡಕನಾಡಿ, ಭಲ್ಲುಕನಾಡಿ, ಅಹಿಗತಿನಾಡಿ, ಮಂಡಲಕನಾಡಿ, ದೀರ್ಘನಾಡಿ, ಅಧಮನಾಡಿ, ಉತ್ತರನಾಡಿ, ಪೂರ್ವನಾಡಿ, ಪಶ್ಚಿಮನಾಡಿ, ಗಜಗಮನನಾಡಿ, ಅಚ್ಚೊತ್ತುನಾಡಿ, ವಿಕ್ರಮನಾಡಿ, ಸೂತ್ರನಾಡಿ, ಸಂಚುನಾಡಿ, ಸಂಚಲನಾಡಿ, ಶೈತ್ಯನಾಡಿ, ಉಷ್ಣನಾಡಿ, ವಿಹಂಗನಾಡಿ, ಕೂರ್ಮನಾಡಿ ಮರ್ಕಟನಾಡಿ, ಪಿಪೀಲಿಕನಾಡಿ, ದಂಷ್ಟ್ರನಾಡಿ, ಮಕರನಾಡಿ, ಕರ್ಕೋಟಕನಾಡಿ, ಸಮರನಾಡಿ, ಸಂತೋಷನಾಡಿ–ಇಂತೀ ನಾಡಿಗಳೊಳಗಾದ ಶರೀರದಲ್ಲಿ ತೋರುವ ನಾಡಿ ಜೀರ್ಣಪರ್ಣದಂತೆ. ರೋಮಛಿದ್ರದಲ್ಲಿ ಸೂಸುವ ವಾಯುವನೊಡಗೂಡಿ ವ್ಯಾಧಿಕ್ರಮವನರಿತಿಹೆನೆಂದೊಡೆ ಅದಾರಿಗೂ ಅಸಾಧ್ಯ. ಅಯ್ಯ , ನಾನು ಮೂರು ನಾಡಿಯಬಲ್ಲೆ. ಉತ್ಪತ್ತಿ ಒಂದು, ಸ್ಥಿತಿ ಒಂದು, ಲಯ ಒಂದು, ಭಕ್ತಿಯೆಂಬ ಕೈಯ ಹಿಡಿದು ನೋಡಲಾಗಿ ಗುರುನಾಡಿ...ಲಿಂಗನಾಡಿ ಸಂದಿಯೊಳಗೆ ಸೂಸಿತಿದೆ. ಜಂಗಮನಾಡಿ ಮೂರರ ಹಂಗಬಿಟ್ಟು ಮಹದಲ್ಲಿ ಸಂದಿರುತ್ತದೆಕೋ. ಇದು ಲಿಂಗಾಂಗಿಗಳ ವೈದ್ಯ !" ಎಂದು ಬಹಿಃಶರೀರದ ಚಿಕಿತ್ಸೆಯೊಡನೆ ಅಂತಃಶರೀರದ ಚಿಕಿತ್ಸಯನ್ನೂ ಮೇಳವಿಸಿರುವ ಸಂಗಣ್ಣ ವೈದ್ಯ ಪ್ರಪಂಚದ ಅಪೂರ್ವ



**ಮೈ-ಮನಕೆ ಮದ್ದನಿತ್ತ ವೈದ್ಯ ಸಂಗಣ್ಣ**

ವ್ಯಕ್ತಿಯಾಗಿದ್ದಾನೆ. ಬಸವಣ್ಣನೊಡನೆಯೇ ಬಂದೆನೆಂದು ಹೇಳಿಕೊಳ್ಳುತ್ತಾನೆ. "ಸಂಗನಬಸವಣ್ಣ ಬಾಹಾಗ ತನ್ನವರಿಗೆ ವೈದ್ಯನೆಂದು ಎನ್ನಕೊಂಡು ಬಂದ. ಈ ವೈದ್ಯದ ವಚನದ ಚೀಲವ ಹೊತ್ತು ಗಸಣಿಗೊಳ್ಳುತ್ತಿದ್ದೇನೆ. ಈ ಕಾಯಕದ ದೇಸಿಯೊಡಗೂಡಿ ಕರುಣಪ್ರಸಾದವ ಕೊಟ್ಟು ಮರುಳಶಂಕರ ಪ್ರಿಯ ಸಿದ್ಧರಾಮೇಶ್ವರಲಿಂಗಾ, ನಿಮ್ಮಡಿಯೊಳಗೆನ್ನನಿಂಬಿಡಯ್ಯ' ಎಂದು ಕೋರುತ್ತಾನೆ. ಮರುಳುಶಂಕರದೇವರನ್ನು ಗುರುವನ್ನಾಗಿ ಮಾಡಿಕೊಂಡಿದ್ದನೋ ಏನೋ.

ಬೇನೆ ಬಂದಾಗ ಬಾಹ್ಯ ಚಿಕಿತ್ಸೆ ಮಾಡಿಸಿಕೊಳ್ಳಲೇಬೇಕೆಂದೂ ಆಗ ಸ್ನಾನ ಉಪವಾಸಾದಿಗಳಿಂದ ಪ್ರಾಣಕ್ಕೆ ಅಪಾಯವನ್ನು ತಂದುಕೊಳ್ಳಕೂಡದೆಂದೂ ವೈದ್ಯಸಂಗಣ್ಣ ಹೇಳುತ್ತಾನೆ. "ಐದು ತತ್ತ್ವಗಳಿಂದಾದ ದೇಹಕ್ಕೆ ರೋಗರುಜೆಯಹುದೇ ಕಾರ್ಯ. ತತ್ತ್ವಂಗಳ ಗೊತ್ತಿನಲ್ಲಿ ನಿಂದು ಅವರವರ ಚಿಕಿತ್ಸೆಯಲ್ಲಿ ಹೊತ್ತು ನಿತ್ತರಿಸುವುದೇ ಕ್ರಮ. ಅದೆಂತೆಂದೊಡೆ ಭಕ್ತಿನಿಷ್ಠೆ, ವಿಶ್ವಾಸನಿಷ್ಠೆ, ಜ್ಞಾನನಿಷ್ಠೆ–ಇಂತೀ ಸದ್ಭಾವ ನೆಲೆಗೊಳ್ಳದ ಕಾರಣ ತನುವಿಂಗನುಪಾನವ ಮಾಡಬೇಕು. ಇದರ ಮೇಲೆ ಅರಿದಡೆ, ಮನವು ಮಹದಲ್ಲಿ ನಿಲ್ಲಬೇಕು. ಇದು ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವನೊಡಗೂಡುವ ಪರಿ."

ಈ ವಚನದಿಂದ ಸಂಗಣ್ಣ ಮೇಲೆ ವಿವರಿಸಿದ ಸಗರದ ಬ್ರಹ್ಮಯ್ಯ ಮತ್ತು ಮಡಿವಾಳ ಮಾಚಯ್ಯನವರ ಶಿವಕಾರುಣ್ಯ ಚಿಕಿತ್ಸೆಗೂ ವೈದ್ಯಶಾಸ್ತ್ರದ ತನುವಿನ ಅನುಪಾನದ ಚಿಕಿತ್ಸೆಗೂ ತಳುಕುಹಾಕಿರುವಂತೆ ತೋರುತ್ತದೆ. ಶಿವನಲ್ಲಿ ವಿಶ್ವಾಸವಿದ್ದರೆ ಶಿವಕಾರುಣ್ಯ ಚಿಕಿತ್ಸೆ, ಇಲ್ಲದಿದ್ದರೆ ದೇಹ ಚಿಕಿತ್ಸೆ–ಬೇಕಾದರೆ ಎರಡೂ ಏಕಕಾಲದಲ್ಲಿ.

"ಪಿಂಡ, ಪ್ರಾಣ, ಆರೋಗ್ಯಗಳ ಚಿಕಿತ್ಸೆಯನರಿದು ವೈದ್ಯವ ಮಾಡಬಲ್ಲೊಡೆ ಪಂಡಿತನಪ್ಪ" ಸಂಗಣ್ಣನು ಇಂಥ ಪಂಡಿತನಾಗಿದ್ದನೆಂಬುದಕ್ಕೆ ಅವನ ವಚನಗಳೇ ಸಾಕ್ಷಿ. 'ಘಟತ್ರಯದ ಭೇದವನರಿದು ಮಾಡುವ ಕ್ರಮವೆಂತುಟೆಂದರೆ' ಎಂದು ಮೊದಲುಮಾಡಿ ಕಟಿ, ಅಂಗುಲಿ, ಪಕ್ಕೆ, ಕರ ಜಿಹ್ವೆ, ಕಪೋಲ, ಊರ್ಧ್ವನಾಳ ಮುಂತಾದ ಶರೀರದ ಸರ್ವಾಂಗಗಳ ವಿವರ ತಿಳಿಸಿ, "ಅವಕ್ಕೆ ಚಿಕಿತ್ಸೆಯಪ್ಪ ಅನ್ನ, ಔಷಧಿ, ಪಯ, ಪಾನ, ಉದಕ ಮುಂತಾದ ತೆರನನರಿತಡೆ ಆತ ಇರವನರಿತವ. ಇಂತು ಕಾಯಕದ ವೈದ್ಯವ ಮಾಡಬಲ್ಲವ ಮೇಲನರಿದ ಕೀಳು ಮರೆಯಬಲ್ಲಡೆ ಆತ ವೈದ್ಯಪಂಡಿತನೆಂಬೆ" ಎಂದು ಹೇಳುತ್ತಾನೆ. ಇಷ್ಟೆಲ್ಲ ಶಾಸ್ತ್ರಜ್ಞಾನವಿದ್ದರೂ ಕೇವಲ ವೈದ್ಯಶಾಸ್ತ್ರದಿಂದಲೇ ವ್ಯಾಧಿ ಪರಿಹಾರವೆಂದು ಅವನು ನಂಬಿಲ್ಲ "ನಾನಾ ರೋಗಂಗಳು ಬಂದು ದೇಹದ ಹಿಡಿದಲ್ಲಿ ಶಿವಾರ್ಚನೆಯ ಬೇರೆ ಕೊಳ್ಳಿ.....ಪಂಚಾಕ್ಷರಿಯ ಪ್ರಣವವ ತಪ್ಪದೆ ತ್ರಿಸಂಧಿಯಲ್ಲಿ ನೆನಹುಗೊಳ್ಳಿ ಇದರಿಂದ ರುಜೆ ದರ್ಪಂಗೆಡುಗು, ಮರುಳುಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ ಸಾಕ್ಷಿಯಾಗಿ" ಎಂದು ಈಶ್ವರಾನುಗ್ರಹವನ್ನೂ ಯಾಚಿಸಿರೆಂದು ಹೇಳುತ್ತಾನೆ. ಆದರಿಂದ ರುಜೆಯ ದರ್ಪ ಇಳಿಯುವುದಂತೆ. ಆಗ ವೈದ್ಯನ ಔಷಧ ಶೀಘ್ರ ಫಲಕಾರಿಯಾಗುವುದೆಂದು ಅವನ ಅಭಿಮತ.

ವ್ಯಾಧಿ ಶರೀರಕ್ಕೆ ಮಾತ್ರ ಬರುವುದಿಲ್ಲ, ಶರೀರಸ್ಥ ಆತ್ಮಕ್ಕೂ ಬರುತ್ತದೆ ಎಂದು ಅವನ ಅಭಿಪ್ರಾಯವಾಗಿದೆ. ನಿರೋಗಿಯಾದ ಶರೀರದಲ್ಲಿಯೇ ನಿರೋಗಿಯಾದ

ಮನವಿರಬಲ್ಲುದು–ಎಂಬುದು ಎಷ್ಟು ನಿಜವಾದುದೋ ಅಷ್ಟೇ ನಿರೋಗಿಯಾದ, ಮನವಿದ್ದರೆ ನಿರೋಗಿಯಾದ ಶರೀರವೂ ಸಾಧ್ಯವೆಂಬುದೂ ನಿಜ. ಇದು ಇಂದಿನ ವೈದ್ಯಶಾಸ್ತ್ರ ಕಂಡುಹಿಡಿದಿರುವ ವ್ಯಾಧಿ ರಹಸ್ಯ. "ಅಷ್ಟೋತ್ತರ ಶತವ್ಯಾಧಿಗಳ ಧರಿಸಿಕೊಂಡಿಪ್ಪುದು ಆತ್ಮನೋ ಘಟವೋ? ಆತ್ಮನೆಂದಡೆ ಅದು ಸಾವಿಲ್ಲದ ಚಿತ್ತು; ಘಟವೆಂದಡೆ ಅದು ಆತ್ಮನಿಲ್ಲದೆ ಅರಿಯದು...ಒಂದು ಕಳೆದು ಒಂದಕ್ಕೆ ಔಷಧಿಯ ಕೊಟ್ಟಿಹೆನೆಂದೊಡೆರುಜೆ" ಹಿಂಗದೆನ್ನುತ್ತಾನೆ ಸಂಗಯ್ಯ. "ಎರಡರ ವ್ಯಾಧಿಯನ್ನೂ ಕಳೆವ ಮದ್ದೇನಾದರೂ ಇದೆಯೆ ನಿನ್ನಲ್ಲಿ?" ಎಂದು ಕೇಳಿದರೆ 'ಇದೆ' ಎನ್ನುತ್ತಾನೆ ಸಂಗಯ್ಯ. ಯಾವ ಮದ್ದದು? "ಆಧಾರದಲ್ಲಿ ಮೂಲಿಕೆಯ ಬೇರನರಿದು, ಐದಿಂದ್ರಿಯವ ಕೂಡಿಕೊರ್ಘುಡು, ಮಲಮೂರು ಮುಟ್ಟದ ತಟ್ಟೆಯಲ್ಲಿ ಅದನು ಕೊಳ್ಳಿ. ಆ ಮದ್ದು ವಾಂತಿಗೆ ಸಲ್ಲ; ವಿರೋಚನವಿಲ್ಲ. ಇದು ಸಿದ್ಧಾಂತ. ಇದನು ಸಾಧಿಸಿಕೊಳ್ಳಿ : ಎಂದೆಂದಿಗೂ ರುಜೆಯಿಲ್ಲ; ಸಂದು ಸಂಶಯವಿಲ್ಲ" ಎಂದು ಆಶ್ವಾಸನವೀಯುತ್ತಾನೆ ಸಂಗಯ್ಯ!

ಇದು ಕೈಕೊಂಡ ವೃತ್ತಿಯನ್ನೇ ಆತ್ಮಸಾಧನಸಂಪತ್ತಿಯನ್ನಾಗಿಸಿಕೊಳ್ಳುವ ಕೌಶಲ್ಯ. ಆ ಕಾಲದ ಶರಣರೆಲ್ಲ ತಮ್ಮ ತಮ್ಮ ಕಾಯಕಗಳನ್ನು ತಮ್ಮ ಅಧ್ಯಾತ್ಮ ಸಾಧನೆಗೆ ಸಾಧನಗಳನ್ನಾಗಿ ಮಾಡಿಕೊಂಡ ರೀತಿ ನಿಜವಾಗಿಯೂ ಆಶ್ಚರ್ಯಕರವಾದುದಾಗಿದೆ. ಕೇವಲ ಶರೀರವನ್ನೇ ಲಕ್ಷ್ಯವನ್ನಾಗಿರಿಸಿಕೊಂಡ ವೈದ್ಯಶಾಸ್ತ್ರಕ್ಕೂ ಆತ್ಮನ ಸಂಬಂಧ ಹಚ್ಚಿದ ಸಂಗಣ್ಣನ ರೀತಿ ಇನ್ನೂ ಅಚ್ಚರಿಯನ್ನುಂಟುಮಾಡುವಂತಹುದು. ಇನ್ನೂ ಕೇಳಿ :

"ತ್ರಿದೋಷದ ಗುಣದಿಂದ ಬಹ ನಾನಾ ತಾಪತ್ರಯದ ವ್ಯಾಧಿಯ ಚಿಕಿತ್ಸೆಯನಾದರೂ ಅರಿಯರಲ್ಲಾ! ತನುವಿಂಗೆ ವಾತ, ಪಿತ್ತ, ಶ್ಲೇಷ್ಮ ; ಆತ್ಮಂಗೆ ಅಣವ, ಮಾಯಾ, ಕಾರ್ಮಿಕ! ಇಂತೀ ತ್ರಿವಿಧ ಮಲತ್ರಯ ರೋಗರುಜೆಯಡಸಿ ಬಂಧನದಲ್ಲಿ ಸಾಯುತ್ತಿದೆ ಅಂಗ ! ಈ ರೋಗ ನಿರೋಗವಹುದಕ್ಕೆ ನಾ ಮೂರು ಬೇರೆ ತಂದೆ. ಒಂದು ಅಂಗದಲ್ಲಿ ಮರ್ದಿಸಿ, ಒಂದು ಆತ್ಮನಲ್ಲಿ ಮಥನಿಸಿ, ಒಂದರುವಿನಲ್ಲಿ ಪಾಕವ ಮಾಡಿ ಈ ರೋಗ ಹರಿವುದು! ಇದಕ್ಕನುಪಾನ ಇದಿರೆಡೆಯಿಲ್ಲ. ಮರುಳು ಶಂಕರಪ್ರಿಯ ಸಿದ್ಧರಾಮೇಶ್ವರ ಲಿಂಗಸಂಗಿ."

ಇದೆಂಥ ರೋಗನಿದಾನ, ಇದೆಂಥ ಅನುಪಾನ! ತನುವಿಗೆ ತ್ರಿದೋಷಗಳಿಂದ ರೋಗ ; ಆತ್ಮನಿಗೆ ತ್ರಿಮಲಗಳಿಂದ ರೋಗ. ಎರಡೂ ರೋಗಗಳಿಗೆ ಮೂರು ಬೇರಿನ ಅನುಪಾನ–ಒಂದನ್ನು ತನುವಿನಲ್ಲಿ ಮರ್ದಿಸಬೇಕು, ಒಂದನ್ನು ಆತ್ಮನಲ್ಲಿ ಮಥನಿಸಬೇಕು, ಒಂದನ್ನು ಅರಿವಿನಲ್ಲಿ ಪಾಕಗೊಳಿಸಬೇಕು! ಈ ಮೂರು

ಬೇರುಗಳಾವುವೆಂದು ಸಂಗಯ್ಯ ಸ್ಪಷ್ಟವಾಗಿ ಹೇಳಿಲ್ಲ. ಇವು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳಾಗಿರಬಹುದು: ಇಲ್ಲವೆ ಶಿವಭಕ್ತಿ ಶಿವಜ್ಞಾನ, ಶಿವಧ್ಯಾನಗಳಿರಬಹುದು; ಇಲ್ಲವೆ ಸತ್-ಚಿತ್-ಆನಂದಗಳಾಗಿರಬಹುದು. ತೋಡಿದಷ್ಟೂ ಅರ್ಥ ಹೊರಡುತ್ತದೆ ಈ ಮೂರು ಬೇರುಗಳೆಂಬ ಮಾತಿನಲ್ಲಿ !

ಬಹಳ ಮಾತಾಡುವವನಲ್ಲ ವೈದ್ಯಸಂಗಣ್ಣ– 'ಭಕ್ತಗೊಂದೇ ವಾಕ್ಯ, ಬಾಳಿಗೊಂದೇ ಫಲ' ಎಂಬುದವನ ಸುವರ್ಣಸೂತ್ರ. ತನ್ನ ಪಾಲಿನ ಕಾಯಕವನ್ನು ಶುದ್ಧಮನದಿಂದ ಮಾಡಿ, ಸದ್ದಿಲ್ಲದೆ ಮಾಡಿ, ಉಪದ್ರವವಿಲ್ಲದೆ ಮಾಡಿ ಅದರಲ್ಲಿಯೇ ಆತ್ಮೋನ್ನತಿಯನ್ನು ಸಾಧಿಸಿ ಆದರ್ಶನಾದವ ವೈದ್ಯ ಸಂಗಯ್ಯ! ವೈದ್ಯರೆಲ್ಲ ಅವನ ಆದರ್ಶ ಅನುಸರಿಸಿದರೆ ಇದೇ ಲೋಕ ದೇವಲೋಕವಾದೀತು!

■

# ನಗೆಯ ಮಾರಿ ತಂದೆ

ಮಾರಿ ತಂದೆ ಎಂಬ ಹೆಸರಿನ ಶಿವಶರಣರು ಅನೇಕರಾಗಿ ಹೋಗಿದ್ದಾರೆ. ಬೆಸ್ತರ ಕಾಯಕದ ಕಂಭದ ಮಾರಿ ತಂದೆ, ಸತ್ತಿಗೆಯ ಕಾಯಕದ ಮಾರಿ ತಂದೆ, ಕನ್ನದ ಮಾರಿ ತಂದೆ, ಕೂಗಿನ ಮಾರಿ ತಂದೆ, ಮೋಳಿಗೆಯ ಮಾರಿ ತಂದೆ, ಹೆಂಡದ ಮಾರಯ್ಯ ಇತ್ಯಾದಿ. ಇವರೆಲ್ಲರೂ ಕಾಯಕ ಯೋಗಿಗಳು, ಲಿಂಗ ಭೋಗೋಪಭೋಗಿಗಳು, ತೇನ ತ್ಯಕ್ತೇನ ಭುಂಜೀಥಾಃ ಎಂಬ ತತ್ವಾನುರಾಗಿಗಳು. ಆದರೆ ನಗೆಯ ಮಾರಿ ತಂದೆಯ ಕಾಯಕ ಎಲ್ಲರಿಗಿಂತ ಭಿನ್ನವಾದುದು, ಎಲ್ಲರಿಗೂ ಪ್ರಿಯವಾದುದು. ನಗಿಸುವುದು ಅವನ ಕಾಯಕ.

ನಗೆ ಯಾರಿಗೆ ಬೇಡ? ನಗದೆ ಬದುಕುವುದು ಸಾಧ್ಯವೇ ಇಲ್ಲ. ಬಡವ ಬಲ್ಲಿದರೆನ್ನದೆ, ಸ್ತ್ರೀಪುರುಷರೆನ್ನದೆ, ಬಾಲಕ ಮುದುಕರೆನ್ನದೆ, ನಗೆಯು ಎಲ್ಲರಿಗೂ ಬೇಕು. ಕರತೆರಿಗೆಯ ಭಯವಿಲ್ಲದ ಸಿರಿಯು ಅದೊಂದೆ ಬಾಳಿನಲ್ಲಿ. ಶಿವನು ಧ್ಯಾನಮಗ್ನನಾಗಿ ಕುಳಿತಿರುವಾಗಲೂ ಅವನ ಮುಖದಲ್ಲಿ ಮೆಲ್ನಗೆ, ಮೃದುಸ್ಮಿತ ನಲಿದಾಡುತ್ತಲೇ ಇರುತ್ತದೆ. ನಗಿಸಲವನಿಗೆ ಭೃಂಗಿ ಬೇಕೇಬೇಕು. ಶಿವನ ಸಂಸಾರವೇ ನಗೆಯ ಚಿಲುಮೆ. ಇದೊಂದು ಚಿತ್ರ ಭಾವಚಿಂತಾರತ್ನದಲ್ಲಿ ಬಂದಿದೆ.

ಗಿರಿಜೆಯ ಮೊಗಂ ನೀಲಕುಟ್ಟಿಮದೊಳಂ ಪೊಳೆಯೆ
ಸರಸಿಯೊಳ್ ಮೆರೆವ ತಾವರೆಯೆಂದು ಕೈ ನೀಡಿ
ಶಿರವೆತ್ತೆ ಸಿಂಹಾಸ್ಯ ಗಣವರನ ಕಂಡೋಡೆ ಬರ್ಪ ತಮ್ಮನ ನವಿಲಿಗೆ
ಉರಗನಳ್ಕುತ ಸರಿಯೆ ಕಟ್ಟಳಿದು ಪೊಡೆಯೊಡೆದು
ಸುರಿಯಲುಂಡಲಿಗೆ ಬಂದಪ್ಪಿ ಹೊಟ್ಟೆಯ ಕಟ್ಟಿ
ಕರಿಮುಖನ ಮುದ್ದು ಬೇಡಲ್ಕೆ ಸುಂಡಿಲ ನೀಡೆ ನಗುವ ಶಿವರಕ್ಷಿಸೆಮ್ಮಂ॥

ಈ ನಗುವ ಶಿವನಿಗೆ 'ಮಂದಸ್ಮಿತದೆ ಕುವರರಂ ವೀಕ್ಷಿಸುವ' ಪಾರ್ವತಿ ಸತಿ. ಆ ಕುವರರೂ ಕಿಡಿಗೇಡಿಗಳು. ಷಣ್ಮುಖನ ಕಣ್ಣುಗಳನ್ನು ಗಣಪನ ಸುಂಡಿಲದ ಅಳತೆ ಮಾಡ ಹೋದರೆ ಗಣಪ ಷಣ್ಮುಖನ ಕಣ್ಣುಗಳನ್ನು ಎಣಿಸಿ ಕೆಣಕುತ್ತಾನೆ. ಇಬ್ಬರೂ ಗುದ್ದಾಡಿ ಅವ್ವನ ಹತ್ತಿರ ಅಳುತ್ತ ಬರುತ್ತಾರೆ. ಕಾರಣ ತಿಳಿದ ತಾಯಿ

ನಗಬೇಕೋ ಅಳಬೇಕೋ? ನಗದೇನು ಮಾಡಿಯಾಳು? 'ತಾಯಿ ತೊಡೆಯನ್ನೇರಿದಳು. ಮಲತಾಯಿ ತಲೆಯನ್ನೇರಿ ಕುಳಿತುಬಿಟ್ಟಳು. ಮೋಹವಿಲ್ಲದೆ ತಂದೆಯ ತಲೆ ಜಡೆಗಟ್ಟಿತು. ಮೈಯೊಣಗಿತು. ಆತನನ್ನು ಕೇಳುವವರೇ ಇಲ್ಲವೆಂದು ಮಿಡುಕುವ ಗುಹನನ್ನು ನೋಡಿ ಶಿವ ನಕ್ಕನಂತೆ. ಆ ನಗುವ ಶಿವ ನಮ್ಮನ್ನು ರಕ್ಷಿಸಲೆಂದು ಕವಿ ಮಲ್ಲಣಾರ್ಯ ಪ್ರಾರ್ಥಿಸುತ್ತಾನೆ.

ಶಿವನಿಗೆ ನಗೆ ಸೇರುವುದೆಂದಮೇಲೆ ಶಿವಶರಣರಿಗೆ ನಗೆ ಸೇರದಿರುತ್ತದೆಯೆ? ಶರಣಕುಲಲಲಾಮರಾದ ಬಸವಣ್ಣನವರೇ ಹೇಳಿದ್ದಾರೆ "ಸಂಸಾರದಲ್ಲಿ ಹುಟ್ಟಿ ಮತ್ತೊಂದು ಬಯಸಲೇಕಯ್ಯ? ನಗುವುದ, ನುಡಿವುದು ಶಿವಭಕ್ತರೊಡನೆ" ಎಂದು. "ನಕ್ಕು ನಗಿಸುವಾ ನಗೆ ಲೇಸು' ಎಂದ ಸರ್ವಜ್ಞ ನಗುವ ಮೊಗ ಜಗದ ಸಿರಿ ಸಂಪತ್ತು. ಅದಕ್ಕಿಂತ ಆನಂದದಾಯಕವಾದುದು ಇನ್ನಾವುದೂ ಇಲ್ಲ. "ಹುಸಿನಗುತ ಬಂದೇವ ನಸುನಗುತ ಬಾಳೋಣ ತುಸುನಗುತ ತೆರಳೋಣ ! ಬಡನೂರು ವರುಷವ ಹರುಷದಿ ಕಳೆಯೋಣ ಯಾಕಾರೆ ಕೆರಳೋಣ !" ಎಂದರು ಅಂಬಿಕಾತನಯದತ್ತರು.

ಹೌದು, ನಗುನಗುತ್ತಲೇ ಬಾಳಬೇಕು. ಮೊಗದ ಬಳ್ಳಿಯಲ್ಲಿ ನಗೆಮಲ್ಲಿಗೆ ಅರಳಲು ಯಾರ ಅಪ್ಪಣೆಯೂ ಬೇಕಿಲ್ಲ : ನಗೆಯನ್ನು ರೊಕ್ಕ ಕೊಟ್ಟು ಕೊಂಡು ತರಬೇಕಾಗಿಲ್ಲ. ಏನೊಂದೂ ವೆಚ್ಚವಿಲ್ಲದೆ, ಯಾವುದೂ ಶ್ರಮವಿಲ್ಲದೆ ಯಾವಾಗಲೂ ನಗುತ್ತಲೇ ಇರಬಹುದು–ಮೆಲ್ನಗೆ, ಮುಗುಳ್ನಗೆ, ನಸುನಗೆ ಇತ್ಯಾದಿ ನೂರು ಬಗೆಯ ನಗೆಯನ್ನು ಮೊಗದ ಮೇಲೆ ನಲಿಸುತ್ತಲೇ ಇರಬಹುದು.

ಆದರೂ ನಗೆ ನಮ್ಮ ಬಾಳಿನಲ್ಲಿ ಅಪರೂಪ ವಸ್ತು. ಆಗೊಮ್ಮೆ ಈಗೊಮ್ಮೆ ನಗೆ. ಉಳಿದೆಲ್ಲ ವೇಳೆಯಲ್ಲಿ ಹೊಗೆ, ಧಗೆ ! ಇದು ನರನ ಬಾಳು! ಇದೆಂಥ ವಿಧಿ ವಿಲಾಸ ! ಇಷ್ಟು ಸುಲಭವಾಗಿ ಸಿಕ್ಕುವ ನಗೆಗೂ ನಿಯಂತ್ರಣವಿರಬೇಕೆ ಬಾಳಿನಲ್ಲಿ? ಹುಟ್ಟುವ ಕೂಸು ನಗುತ್ತಲೇ ಹುಟ್ಟುತ್ತದೆ. ಹಾಗಾದರೆ ಬರುಬರುತ್ತ ಅದರ ನಗೆ ಎಲ್ಲಿ ಅಡಗಿ ಹೋಗುತ್ತದೆ. 'ಬಿಸಿಲುಗುದುರೆಯನೇರಿ ನಿನ ನಗೆಯ ಸವ್ವಾರಿ' ಹೊರಟುಹೋಯಿತೆಲ್ಲಿಗೆ?

ನಗುವ ಮನಸ್ಸಿದ್ದರೂ ಜಗದ ವೈಚಿತ್ರ್ಯದಿಂದ ಮಿಡುಕುತ್ತಲೇ ದುಡಿವ ಜನಕ್ಕೆ ಬೇಕಾಗುತ್ತಾರೆ ನಕ್ಕುನಗಿಸುವ ನಗೆಗಾರರು. ನಗೆಯ ಮಾರಿ ತಂದೆ ಅಂಥ ನಗೆಗಾರರಿಗೆಲ್ಲ ಗುರು. ನಗಿಸುವ ಕಾಯಕವನ್ನು ಕೈಕೊಂಡು, ಭಕ್ತರ ಮನೆಗಳಿಗೆ ಹೋಗಿ, ಏನಾದರೊಂದು ಹಾಸ್ಯದ ಚಟಾಕಿಯನ್ನು ಹಾರಿಸಿ, ವಿನೋದದ ಚಕಮಕಿಯನ್ನು ಕಟೆದು, ಮ್ಲಾನ ಮುಖದಲ್ಲಿ ಮಂದಹಾಸವನ್ನು ಉಕ್ಕಿಸುವುದೇ

ಅವನ ಕಾಯಕವಾಗಿದ್ದಿತು. ಅವನ ವಿನೋದ ವಿನ್ಯಾಸದಿಂದ ನಕ್ಕು ಆನಂದ ಹೊಂದಿದ ಭಕ್ತರು ಸ್ವಸಂತೋಷದಿಂದ ಏನಾದರೂ ಕೊಟ್ಟರೆ ಅದನ್ನು ಭಕ್ತಿಯಿಂದ ಸ್ವೀಕರಿಸಿ, ಅದರಲ್ಲಿಯೇ ಉದರ ನಿರ್ವಾಹ ಪೂರೈಸಿ, ಉಳಿದುದರಲ್ಲಿ ದಾಸೋಹ ಮಾಡುತ್ತಿದ್ದನಾ ಧನ್ಯಾತ್ಮ.

ಸುಖದಲ್ಲಿದ್ದಾಗ ನಗುವುದು ಎಲ್ಲರಿಗೂ ಸಾಧ್ಯ; ಆದರೆ ಸಂಕಟಗಳು ಸುತ್ತುಗಟ್ಟಿರುವಾಗ, ದುಃಖಗಳು ದಾಳಿಯಿಟ್ಟಾಗ, ಎಡರುಗಳು ತೊಡರಿದಾಗ, ಸೋಲುಗಳು ಶೂಲವಾಗಿ ಇರಿದಾಗ ನಗುವುದು ಎಲ್ಲೋ ಒಬ್ಬರಿಗೆ ಸಾಧ್ಯ. ಸಾವಿನ ಸುಮ್ಮುಖದಲ್ಲಿಯೂ ಸರಸವಾಡುವವರು ಶರಣರು. ಅವರಿಗೆ ಮರಣವೇ ಮಹಾನವಮಿ. ಎಲುದೋರಿದರೂ, ನರ ಹರಿದರೂ, ಕರುಳು ಕುಪ್ಪಳಿಸಿದರೂ ಶಿರಹರಿದು ಅಟ್ಟೆ ನೆಲಕ್ಕೆ ಬಿದ್ದರೂ ಧೃತಿಗೆಡದ ಸ್ಥಿತಪ್ರಜ್ಞರವರು. ಹಾಗಿಲ್ಲದಿದ್ದರೆ ಜೀವನದಲ್ಲಿ ನಗುವುದೂ ಸಾಧ್ಯವಿಲ್ಲ. ನಗಿಸುವುದೂ ಸಾಧ್ಯವಿಲ್ಲ.

ನಗೆಯ ಮಾರಿ ತಂದೆ ಅಂಥ ಸ್ಥಿತಿಪ್ರಜ್ಞ . ಒಮ್ಮೆ ಅವನು ಬೇರೂರಿಗೆ ಹೊರಟಿದ್ದಾಗ ಧೋ ಧೋ ಎಂದು ಮಳೆ ಸುರಿಯತೊಡಗಿತು. ಮಳೆಯಲ್ಲಿ ತೊಯ್ದು ನೆನೆದುಹೋದ ನಗೆಯ ಮಾರಿ ತಂದೆ. ಸಾಲದುದಕ್ಕೆ ಹಾದಿಯಲ್ಲಿದ್ದ ಹೊಳೆ ತುಂಬಿ ಹರಿಯತೊಡಗಿತು–ರಭಸದಿಂದ ಭೋರ್ಗರೆಯುತ್ತ ಆರ್ಭಟಿಸುತ್ತ ಹರಿಯತೊಡಗಿತು. ಹಿಂದಿರುಗಿ ಹೋಗುವಂತೆಯೂ ಇಲ್ಲ ಮೇಲೆ ಮಳೆ ಸುರಿಯುತ್ತಲೇ ಇದೆ. ಯಾರಾದರೂ ಎದೆಗೆಡುವ ಸನ್ನಿವೇಶವದು. ಆದರೆ ನಿಜವಾದ ನಗೆಗಾರನಾದ ಮಾರಿ ತಂದೆ ಆಗಲೂ ತನ್ನ ಮುಖದ ಮೇಲೆ ಚಿಂತೆಯ ಛಾಯೆಯನ್ನು ಸುಳಿಯಗೊಡಲಿಲ್ಲ, ದುಗುಡದ ನೆರಳನ್ನು ಬೀಳಗೊಡಲಿಲ್ಲ. ಆಗಲೂ ಅಚ್ಚಳಿಯದ ಆನಂದದಿಂದಲೇ ಇದ್ದನು. ಆಗಲೂ ಅಲ್ಲಿಗೆ ಬಂದ ಇನ್ನೊಬ್ಬ ಹಾದಿಕಾರನನ್ನು ಹಾಸ್ಯದಿಂದ ನಗಿಸಿಯೇ ನಗಿಸಿದನು.

ತಮ್ಮ ಎದೆಯಲ್ಲಿ ಸುಖದುಃಖಗಳ ತುಮುಲ ನಡೆದಿದ್ದರೂ ಎಲ್ಲರಂತೆ ಅವುಗಳಿಗೆ ಈಡಾಗಿ ವ್ಯಥೆ ಪಡದೆ ತಮ್ಮ ಸಂಯಮ ಬಲದಿಂದ ಸಮದರ್ಶನದಿಂದ, ಸಾಮ್ಯಯೋಗದಿಂದ ಅವುಗಳನ್ನು ಹತ್ತಿಕ್ಕಿ ಅನ್ಯರ ಆನಂದಕ್ಕಾಗಿ ನಗೆಗಾರರಾಗಿ ನಡೆವ ನರ್ಮ ಸಚಿವರು ನಾಡಿನ ಪುಣ್ಯದ ಪ್ರಸೂನಗಳು. ಅವರು ಆನಂದದ ಅರವಟ್ಟಿಗೆಯನ್ನಿಟ್ಟು ಬಾಳಬಟ್ಟೆಯನ್ನು ತುಳಿದು, ಬಾಯಾರಿ ಬಂದವರಿಗೆಲ್ಲ ಆನಂದರಸಾಯನವನ್ನೆರೆದು ಧನ್ಯರಾಗುವರು.

ನಗೆಯ ಮಾರಿ ತಂದೆಯು ಭಕ್ತರನ್ನು ನಗಿಸುವಾಗ ನುಡಿದ ಚುಟಕಗಳನ್ನು ವ್ಯಂಗ್ಯೋಕ್ತಿಗಳನ್ನು, ರಸೋಕ್ತಿಗಳನ್ನು, ನಗೆನುಡಿಗಳನ್ನು ಯಾರೂ ಕಾಯ್ದಿರಿಸಿಲ್ಲ.

ಇದು ಕನ್ನಡ ಸಾಹಿತ್ಯದ ದುರ್ದೈವ. ಇರಿಸಿದ್ದರೆ ಕನ್ನಡ ಸಾಹಿತ್ಯದಲ್ಲಿ ವರಲವಾಗಿರುವ ಹಾಸ್ಯ ಸಾಹಿತ್ಯ ಹೆಚ್ಚುತ್ತಿದ್ದಿತು. ಉಪಲಬ್ಧವಿರುವ ಆತನ ೮೮ ವಚನಗಳಲ್ಲಿ ಎಲ್ಲಿಯೂ 'ನಗೀನವಿಲು' ನರ್ತಿಸುವುದಿಲ್ಲ. ಜೀವನಾದ್ಯಂತ ಶಿವಭಕ್ತರನ್ನು ನಗಿಸಿ ನಗಿಸಿ ಶಿವನನ್ನೊಲಿಸಿಕೊಂಡ ಶಿವಶರಣನ ವಚನಗಳಲ್ಲಿ ನಗೆಯ ಮಿಂಚು ಮೂಡಲಿಲ್ಲೇಕೆ?

ಮೇಲೆ ಸೂಚಿಸಿದಂತೆ ನಗೆಗಾರರು ನಿಜವಾಗಿಯೂ ಅಂತರಂಗದಲ್ಲಿ ಸದಾ ಸುಖಿಗಳೇನಲ್ಲ. ಅವರಿಗೂ ಎಲ್ಲರಿಗಿರುವಂತೆ ಸುಖದುಃಖಗಳ ನೆಳಲು ಬೆಳಕಿನಾಟ ತಪ್ಪಿದ್ದಲ್ಲ. ಆದರೆ ಅನ್ಯರ ಆನಂದಕ್ಕಾಗಿ ಅವರು ತಮ್ಮೆದೆಯ ಅಳಲನ್ನು ಇಂಗಿಸಿ ಹಿಗ್ಗನ್ನೂ ಹೊಮ್ಮಿಸುತ್ತಾರೆ. ಅಲ್ಲದೆ, ಹೊರಗೆ ನಗುತ್ತಲಿದ್ದರೂ ಒಳಗೆ ಗಂಭೀರರಾಗಿರಬೇಕೆಂಬುದು ಅವರ ಅಂತರಾರ್ಥವಾಗಿರಬೇಕು. ತೊರೆಯ ತೆರೆಯ ನೊರೆ ನಗುತ್ತಲಿದ್ದರೂ ಅದರ ಕೆಳಗಣ ನೀರು ಮೊರೆಯುತ್ತ ಹರಿಯುತ್ತ ಹೋಗಲೇಬೇಕು. ಹಾಗೆಯೇ ಮೊಗ ನಗುತ್ತಿದ್ದರೂ ಬಗೆ ಚಿಂತಿಸುತ್ತಲೇ ಇರಬೇಕು– ಬಾಳಿನ ಗುರಿಗಮ್ಯಗಳ ಬಗ್ಗೆ ಗಂಭೀರವಾಗಿ, ಅಳವಾಗಿ, ವಿವರವಾಗಿ.

ನಗೆಯ ಮಾರಿ ತಂದೆ ತೋರಿಕೆಗೆ ನಗೆಗಾರನಾಗಿದ್ದರೂ ಒಳಗೆ ಅವನೊಬ್ಬ ಬಗೆಗಾರನಾಗಿದ್ದನೆಂದು ತೋರುತ್ತದೆ. ಅವನ ವಚನಗಳು ಇದಕ್ಕೆ ಸಾಕ್ಷಿ. ಶ್ರೀ ಡಿ.ಎಲ್. ನರಸಿಂಹಾಚಾರ್ಯರು ಹೇಳುವಂತೆ, ಅವು ಸಂಗ್ರಹವಾಗಿಯೂ ಹಿತಕರವಾಗಿಯೂ ಸವಿಯಾಗಿಯೂ ಇವೆ. ಅವುಗಳಲ್ಲಿ ಪಾಂಡಿತ್ಯದ ಪ್ರದರ್ಶನವಿಲ್ಲ. ಸಾಮಾನ್ಯ ಜನರಿಗಾಗಿ ಬಹಳ ಸರಳ ಶೈಲಿಯಲ್ಲಿ ಈ ವಚನಗಳು ರಚಿತವಾಗಿವೆ. ಈತನ ವಚನಗಳ ಕನ್ನಡವು ತಿಳಿಗನ್ನಡ, ಉದಾಹರಣೆಗಾಗಿ ಒಂದೆರಡು ವಚನಗಳನ್ನು ಉದ್ಧರಿಸಬಹುದು.

"ನಡೆವ ಕಾಲು, ಅನುವ ಕೈ, ಬೇಡುವ ಬಾಯಿ–
ಸರ್ವವ ಕೊಡುವ ಮನವುಡುಗಿ,
ಘನಲಿಂಗದಲ್ಲಿ ತಲ್ಲೀಯವಾದವನಂಗ
ಮರುಳು ಕಂಡ ಕನಸಿನಂತೆ, ಮೂಗಿನ ಕಾವ್ಯದಂತೆ,
ಜಲಲಿಪಿಯಂತೆ, ಉರಿಯ ಧೂಮದಂತೆ ;
ಇದಾರಿಗೂ ಅಸಾಧ್ಯ, ಆತುರ ವೈರಿ ಮಾರೇಶ್ವರ!"

ಸೊಗಸಾದ ಭಾವ, ಸೊಗಸಾದ ಭಾಷೆ, ಸೊಗಸಾದ ಉಪಮೆಗಳು– ಅಲ್ಲವೇ? ಇಲ್ಲಿ ನೋಡಿ,

"ಹರಿಗೋಲು ಹರಿದ ಮತ್ತೆ ಹೊಳೆ ಏನ ಮಾಡುವುದು?



**ಆಡಿ ಆಡಿ 'ಘನಲಿಂಗ'ದಲ್ಲಿ ತಲ್ಲೀನವಾದ ನಗೆಯ ಮಾರಿ ತಂದೆ**

ಇರಿದವನಿದ್ದಂತೆ, ಕೈದೇನ ಮಾಡುವುದು?
ಎಚ್ಚವನಿದ್ದಂತೆ, ಅಂಬಿಗೆ ಮುನಿವರೆ?
ಎನ್ನ ಚಿತ್ತದಲ್ಲಿ ತಲೆದೋರಿ ನೀನಾಡಿಸಿದಂತೆ ಆಡಿದೆ;
ನೀ ಕೊಟ್ಟ ಕಾಯಕವ ಹೊತ್ತೆ; ನೀ ಹೇಳಿದ ಬಿಟ್ಟೆಯ ಮಾಡಿದೆ ;
ಕುಳದವನಾದ ಮತ್ತೆ  ಮಾನ್ಯರ ಒಲವರವ ಎನಗೊಂದು ಗುಣವಿಲ್ಲ
ನೀ ಆಡಿಸಿದಂತೆ ಆಡಿದೆ, ಆತುರ ವೈರಿ ಮಾರೇಶ್ವರಾ!"

ಉಚಿತವಾದ ದೃಷ್ಟಾಂತಗಳು, ಉಚಿತವಾದ ಆತ್ಮವೃತ್ತ, ಅಲ್ಲವೆ? ಇನ್ನೂ ಕೇಳಿ :

"ತಾ ಹೊಂದುವಾಗ ಕೈದು "ಬಾ" ಎಂದು ಕರೆದುದುಂಟೆ ಅಯ್ಯ?
ತಡಿಯಲ್ಲಿದ್ದು ಮಡುವಿನಲ್ಲಿ ಬೀಳುವಾಗ ಆ ಮಡು 'ಒಡಗೂಡುವ ಬಾ'

ಎಂದು ಕರೆಯಿತ್ತೆ? ತಮವಡಸಿದ ನಿಳಯಕ್ಕೆ ತೆರೆಯಿತ್ತೆ ಜ್ಯೋತಿಯ?
ನೀ ಬಂದ ಮಣಿಹಕ್ಕೆ ಎನ್ನ ಇರಲೀಸೆಯೆಂದು ಆಕಸ್ಮಿಕದಲ್ಲಿ ಆತುರ
ವೈರಿ ಮಾರೇಶ್ವರಾ!"

ನಗೆಯಮಾರಿ ತಂದೆ ತನ್ನ ಚಿತ್ತದಲ್ಲಿ ತಲೆದೋರಲು ಕೊಟ್ಟ ಕಾಯಕವೆಂದದನ್ನು ಹೊತ್ತ ಶಿವನು ಆಡಿಸಿದಂತೆ ಆಡಿದನು. ಆಡಿ ಆಡಿ 'ಘನಲಿಂಗ'ದಲ್ಲಿ ತಲ್ಲೀಯವಾದನು. ಎಲ್ಲರಂತೆ ಮಾಡಿ ಮನಗುಂದಲಾರೆ, ಅರಿತು ಮರೆಯಲಾರೆ, ಕಂಡು ಕಾಣದಂತಿರಲಾರೆ, ಎಂದು ಹಸನಾಗಿ ಬಾಳಿದನು. ನಮಗೆ ಅವನು ಕೊಟ್ಟಿರುವ ಜೀವನಸೂತ್ರವು ಸಾರಗರ್ಭಿತವಾದರೂ, ಸಂಕ್ಷೇಪವಾದರೂ ಬ್ರಹ್ಮಾಂಡದಷ್ಟು ಅರ್ಥವನ್ನು ಒಳಕೊಂಡಿರುವುದು.

"ಕಂಗಳ ಮುಂದಣ ಕಾಮವ ಕೊಂದು
ಮನದ ಮುಂದಣ ಆಸೆಯ ತಿಂದು
ಆತನನರಿ–ಆತರ ವೈರಿ ಮಾರೇಶ್ವರನ !"

ಎಂಥ ಸೂತ್ರಪ್ರಾಯವಾದ ಸಂದೇಶವಿದು. ಕಣ್ಣು ನೋಡಿ ಕಾಮಿಸುತ್ತದೆ, ಕಣ್ಣು ಕಾಮಿಸಿದುದನ್ನು ಮನಸ್ಸು ಬಯಸುತ್ತದೆ. ಇವೆರಡರ ಕಾಮನೆ–ಆಸೆಗಳಲ್ಲಿಯೇ ಬಾಳಿನ ಗೋಳಿನ ಸೆಲೆಯಿದೆ. ಇವೆರಡನ್ನೂ ನಿಗ್ರಹಿಸಿದರೆ, ನಿಯಂತ್ರಿಸಿದರೆ ಆತನನ್ನರಿವುದು ಸಾಧ್ಯವಾಗುವುದು. ಆತನನ್ನರಿವುದೇ ಗುರಿ; ಕಂಗಳ ಮುಂದಣಕಾಮ, ಮನದ ಮುಂದಣ ಆಸೆಗಳನ್ನು ಸುಡುವುದೇ ದಾರಿ.

ಶರೀರವೊಂದು ಕುಂಭವಂತೆ, ಆ ಕುಂಭದ ರೂಪಕವನ್ನಷ್ಟು ಕೇಳಿರಿ. "ಕುಂಭದಲ್ಲಿ ಕುದಿವ ರೂಪ ಮುಚ್ಚುಳದಂಗವ ತೆರೆದಲ್ಲದೆ ಪಾಕದ ಸಂಗವನರಿಯಬಾರದು. ಶರೀರದ ಕುಂಭದಲ್ಲಿ ಕುದಿವ ಜೀವನ ಇಂದ್ರಿಯಂಗಳ ಹಿಂಗಿದಲ್ಲದೆ ಲಿಂಗಸಂಗಿಯಲ್ಲ, ಪ್ರಾಣಲಿಂಗಿಯಲ್ಲ. ಈ ಸುಭೇದವನರಿಯದೆ ಸುಸಂಗಿಯಲ್ಲ. ಇಂತಿವನರಿವುದಕ್ಕೆ ಪಶುಪತಿಯ ಶರಣರಲ್ಲೊಸೆದು ಸಂಗವ ಮಾಡಿ ಅರಿ. ಅಸುವ ಹರಿ, ತೂತ ತೆರೆ, ಸಂದೇಹದ ಭಾವವನರಿ, ಘನಲಿಂಗದಲ್ಲದೊರಗು, ಕರಿಗೊಂಡೊರುಗು, ಆತುರ ವೈರಿ ಮಾರೇಶ್ವರಾ!"

ಶರೀರದ ಕುಂಭದಲ್ಲಿ ಕುದಿವ ಜೀವನ ಇಂದ್ರಿಯಗಳ ಹಿಂಗಿಸದೆ ಲಿಂಗಸಂಗಿಯಾಗೆಯೆಂದು ಸ್ಪಷ್ಟವಾಗಿ ಹೇಳಿದ್ದಾನೆ ಮಾರಿತಂದೆ. ಆತನು ನಿಜವ ಕಂಡುಂಡು ನಿರ್ಮಲ ಜ್ಞಾನಿ–'ಮಣ್ಣೆಂಬುದೇ ದೇಹ, ಹೊನ್ನೆಂಬುದೇ ಕಾಂಕ್ಷೆ, ಹೆಣ್ಣೆಂಬುದೇ ಸುಕರ ಭೋಗಂಗಳು' ಎಂದು ಮಣ್ಣು ಹೊನ್ನು ಹೆಣ್ಣುಗಳಿಗೆ

ಹೊಸ ಅರ್ಥ ಹೇಳಿದ ಸುಜ್ಞಾನಿ; "ಗುರುವಿನಲ್ಲಿ ಗುಣವಿಲ್ಲದಿರ್ದಡೆ ಪೂಜ್ಯನಾಗಿ ಪೊಡಮಡಿಸಿಕೊಳಲೇಕೆ? ಲಿಂಗದಲ್ಲಿ ಲಕ್ಷಣವಿಲ್ಲದಿರ್ದಡೆ ತ್ರಿಕಾಲದಲ್ಲಿ ಪೂಜಿಸಿಕೊಳಲೇಕೆ? ಜಂಗಮದಲ್ಲಿ ಜಾತಿ ಇಲ್ಲದಿರ್ದಡೆ ಹಿರಿದು ಕಿರಿದೆಂದು ಹೊರಲೇತಕ್ಕೆ?" ಎಂದು ಗುಣಲಕ್ಷಣಗಳಿಲ್ಲದಿದ್ದರೆ ಗುರುಲಿಂಗ ಜಂಗಮವನ್ನೂ ಜಡಿದು ಝುಂಕಿಸಿದ, ನಿಷ್ಠುರ ಜ್ಞಾನಿ.

ಇದು ಮಾರಿ ತಂದೆಯೊರೆದ ಜೀವನ ಮೀಮಾಂಸೆ :
"ಭಕ್ತಿಯ ಭಾಂಡದಲ್ಲಿ ಸತ್ಯವೆಂಬ ಅಕ್ಕಿಯ ಹೊಯ್ದು,
ನಿರ್ಮಲವೆಂಬ ಉದಕವನೆರೆದು,
ತ್ರಿಗುಣವೆಂಬ ಮೂರೊಲೆಗುಂಡ ಸಂಬಂಧಿಸಿ,
ಆತುರದ ಸೌದೆಯನೊಟ್ಟಿ
ಸುಡುವ ಬೆಂಕಿಯಲ್ಲಿ ಉರುಹಲಾಗಿ ಓಗರ ಬೆಂದಿತ್ತು.
ಇಕ್ಕುವರಿಲ್ಲದೆ ಉಂಡು
ಪ್ರಸಾದವಿಲ್ಲದ ಪ್ರಸಾದವೆನಗಿತ್ತ
ಆತುರ ವೈರಿ ಮಾರೇಶ್ವರ!"

ಭಕ್ತಿಯೇ ಎಲ್ಲವನ್ನೂ ಧರಿಸುವ ಭಾಂಡ ; ಸತ್ಯವೇ ಅಟ್ಟುಣ್ಣಬೇಕಾಗಿರುವ ಅಕ್ಕಿ ; ಅದು ಕುದಿಯಬೇಕಾದರೆ ನೈರ್ಮಲ್ಯವೆಂಬ ಉದಕ ಬೇಕು–ಅಶುದ್ಧೋದಕದಲ್ಲಿ ಸತ್ಯದ ಅಕ್ಕಿ ಕುದಿಯಲಾರದು ; ತ್ರಿಗುಣಗಳನ್ನು ಹಿಡಿಯುವಂತೆಯೂ ಇಲ್ಲ, ಬಿಡುವಂತೆಯೂ ಇಲ್ಲ; ಅವುಗಳನ್ನೇ ಒಲೆಗುಂಡುಗಳನ್ನಾಗಿ ಮಾಡಿ ಅವುಗಳ ಮೇಲೆಯೇ ಭಕ್ತಿಯ ಭಾಂಡವನ್ನಿಟ್ಟು ಸತ್ಯದ ಅಕ್ಕಿಯನ್ನೂ ನಿರ್ಮಲದ ಉದಕವನ್ನೂ ಹಾಕಿ ಆತುರದ ಸೌದೆಯನ್ನು ಕೆಳಗೆ ಸುಡಬೇಕು–ಆತುರ ವೈರಿ ಮಾರೇಶ್ವರನನ್ನು ಒಲಿಸಲು ಆತುರದ ಸೌದೆ ಸುಡಬೇಕು ! ಹೆಣ್ಣು ಹೊನ್ನು ಮಣ್ಣುಗಳ ಆತುರ, ಅಷ್ಟೈಶ್ವರ್ಯಗಳ ಆತುರ, ಸಿದ್ಧಿಯ ಆತುರ, ಸ್ಥಾನಮಾನಗಳ ಆತುರ, ಅಷ್ಟಮದಗಳ ಆತುರ–ಇನ್ನು ಏನೇನೊ ಆತುರ ಈ ಜೀವಿಗೆ. ಈ ಎಲ್ಲ ಆತುರಗಳ, ಕಾತುರಗಳ ಸೌದೆಯನ್ನು ಸುಡಬೇಕು ತ್ರಿಗುಣಗಳ ಒಲೆ ಗುಂಡುಗಳ ನಡುವೆ. ಆಗ ಸತ್ಯದ ಅನ್ನ ಸಿದ್ಧವಾಗುವುದು. ಅದನ್ನು ಇಕ್ಕುವರಿಲ್ಲದೆ ಉಣ್ಣಬೇಕು. ತಾನೇ ಸತ್ಯದರ್ಶನ ಮಾಡಿಕೊಳ್ಳಬೇಕು ಅದು ಪ್ರಸಾದವಿಲ್ಲದ ಪ್ರಸಾದ. ಆ ಪ್ರಸಾದನವನ್ನು ಸವಿಯುವುದೇ ಬಾಳಿನ ಪರಮ ಪ್ರಯೋಜನ, ಪರಮೋಚ್ಚ ಆದರ್ಶ. ಇದು ನಗೆಯ ಮಾರಿ ತಂದೆಯ ಪ್ರಸಾದವಾಣಿ. ಇದನ್ನರಿತು ಆಚರಣೆಯಲ್ಲಿ ಆಳವಡಿಸಿಕೊಳ್ಳಬೇಕು. ಇಲ್ಲದಿದ್ದರೆ ಆತನೇ ಹೇಳಿದಂತೆ –

ಸಮತೆಯ ಸಮಾಧಾನವ ಹೇಳುವ ಪುಸ್ತಕ ಎತ್ತಿನ ಮೇಲೆ–
ಹೊಯಿ ದೊಣ್ಣೆ ಕೈಯ್ಯಲ್ಲಿ ಲೇಸಾಯಿತ್ತು !
ಈತನಿರವು ಮಾತಿನಲ್ಲಿ ಆಗದು– ಇದು ನೀತಿಯಲ್ಲ–
ಆತುರದ ವೈರಿ ಮಾರೇಶ್ವರ !

■

# ಮಂಗಳ ತರಂಗ ಉರಿಲಿಂಗದೇವ, ಉರಿಲಿಂಗಪೆದ್ದಿ–ಕಾಳವ್ವೆಯರು

ಶಿವಭಕ್ತವದನ ತಾಮರಸ ಪ್ರಭಾಕರಂ
ಶಿವರೂಪನುರಿಲಿಂಗದೇವನೆಂಬಾಚಾರ್ಯ
ನವಸೆ ಕಂದಾರಪುರದಲ್ಲಿ ಬಹುಮಾನದಿಂ ಜಸವಡೆಯ ರಾಜಿಸುತ್ತ
ಭವಭಕ್ತವೃಂದಕ್ಕೆ ವೀರಶೈವೋಪದೇ–
ಶವನೀವುದಕ್ಕೆ ತಾವೇ ಗುರುಗಳಾಗಿರುತ
ಭವದಬೇರಂ ಕಿತ್ತು ಧರಣಿಯೊಳ್ ಮೆರೆವುತ್ತ ಭಕ್ತರಂಪೊರೆವುತಿರಲು॥*

ಈಗ ನಾಂದೇಡ್ ಜಿಲ್ಲೆಯಲ್ಲಿರುವ ಕಂದಹಾರ್ (ಕಂಧಾರ್) ಪಟ್ಟಣದಲ್ಲಿದ್ದರು ಉರಿಲಿಂಗದೇವರು. ಅವರು ಸದಾ ಶರಣಸತಿ–ಲಿಂಗಪತಿ ಭಾವಸ್ಥಿತಿಯಲ್ಲಿರುತ್ತಿದ್ದರು. ಎಂಥ ಬಿರಿ ಬಂದರೂ ಯಾವ ಭಯ ಆವರಿಸಿದರೂ ಎಂಥ ವಿಪತ್ತು ಮುತ್ತಿದರೂ ಅವರ ಲಿಂಗಾನಂದಕ್ಕೆ ಚ್ಯುತಿ ಬರುತ್ತಿರಲಿಲ್ಲ. ಒಮ್ಮೆ ಆಗದವರು ಅವರು ವಾಸಿಸುತ್ತಿದ್ದ ಚಪ್ಪರ ( ಪರ್ಣಕುಟಿ)ವನ್ನೇ ಸುಟ್ಟರು. ಸುಟ್ಟವರೇ ಕೆಟ್ಟರಾಗಲಿ ಉರಿಲಿಂಗದೇವರು ವಿಚಲಿತರಾಗಲಿಲ್ಲ. ಅಚಲವಾದ ಪರ್ವತವೂ ವಿಚಲಿತವಾಗಬಹುದು; ಆದರೆ ಉರಿಲಿಂಗದೇವರ ಮನ ಕದಲುವುದು, ಕದಡುವುದು, ಕನಲುವುದು ಕಷ್ಟ.

ಒಂದು ದಿನ ಉರಿಲಿಂಗದೇವರು ನಂದವಾಡಕ್ಕೆ (ಈಗಿನ ನಾಂದೇಡ್ ಇರಬಹುದು) ಆಗಮಿಸಿದರು. ಸೂರಯ್ಯನೆಂಬ ಭಕ್ತನಿಗೆ ದೀಕ್ಷೆ ಕೊಡಲು. ಅಂದು ರಾತ್ರಿ ಅದಕ್ಕಾಗಿ ರಚಿಸಿದ್ದ ಮಂಟಪದಲ್ಲಿ ದೀಕ್ಷಾ ಕಾರ್ಯ ಪ್ರಾರಂಭವಾಯಿತು. ಆಗ ಒಂದು ವಿಚಿತ್ರ ನಡೆಯಿತು. ಪೆದ್ದಣ್ಣನೆಂಬ ಕಳ್ಳ ಆ ರಾತ್ರಿ ಅದೇ ಮನೆಗೆ ಕನ್ನವಿಕ್ಕಲು ಬಂದನು. ಮನೆಯಲ್ಲಿ ದೀಪ ಉರಿಯುತ್ತಿರುವುದನ್ನು ಕಂಡು, ಎಲ್ಲರೂ ಎಚ್ಚರಿದ್ದು ಏನನ್ನೋ ನಡೆಸಿರುವುದುನ್ನು ತಿಳಿದು ಏನಿದೆಯೋ ನೋಡಬೇಕೆಂದು ಮಾಳಿಗೆ ಹತ್ತಿ ಬೆಳಕಿಂಡಿಯೊಳಗಿಂದ ಒಳಗೆ ನೋಡಿದನು.

---

* ಅದೃಶ್ಯ ಕವಿಚರಿತ ಪ್ರೌಢರಾಯನ ಕಾವ್ಯ ಸಂ.೭ ಪ.೩೮

ಅವನ ಕಣ್ಣಿಗೆ ಕಂಡುದು ಅವನ ಮನವನ್ನು ಸೆಳೆದುಬಿಟ್ಟಿತು. ಆಚಾರ್ಯ ಉರಿಲಿಂಗದೇವರು ಕಾಷಾಯಭಸ್ಮರುದ್ರಾಕ್ಷಧಾರಿಗಳಾಗಿ ಗದ್ದುಗೆಯ ಮೇಲೆ ಕುಳಿತಿದ್ದಾರೆ; ಶಿಷ್ಯ ಸೂರಯ್ಯನೂ ಸ್ನಾನವಮಾಡಿ, ಮಡಿ ವಸ್ತ್ರ ಧರಿಸಿ, ಭಸ್ಮೋದ್ಧೂಲಿತನಾಗಿ ಗುರಿವಿನ ಮುಂದೆ ಬಾಗಿ ಕುಳಿತಿದ್ದಾನೆ. ಕ್ರಮವಿಡಿದು ದೀಕ್ಷಾ ವಿಧಾನದಂತೆ ಒಂದೊಂದೇ ಕ್ರಿಯೆ ನಡೆದು ಕೊನೆಗೆ, ಸೂರಯ್ಯನಿಗೆ ಉರಿಲಿಂಗ ದೇವರಿಂದ ಮೂಲಮಂತ್ರೋಪದೇಶವಾಗುತ್ತದೆ. ಇದೆಲ್ಲವನ್ನೂ ನೋಡಿ ಪೆದ್ದಣ್ಣನ ಮೈ ನವಿರೇಳುತ್ತದೆ, ಪ್ರಾಣಪುಲಕಿತವಾಗುತ್ತದೆ. ಬಾವನಿರ್ಭರನಾಗಿ ಮಾಳಿಗೆಯಿಂದಿಳಿದು ಕಳುವ ಕಾರ್ಯಕ್ಕೆ ಬಂದವನು ತಿಳಿವನ್ನು ಪಡೆದು ಮನೆಗೆ ಮರುಳುತ್ತಾನೆ.

ಮಾರನೆಯ ದಿನದಿಂದ ಉರಿಲಿಂಗದೇವರ ಮನೆಗೆ ಹೇಳದೆಯೇ ಕಟ್ಟಿಗೆಯ ಹೊರೆಯೊಂದು ಬರತೊಡಗುತ್ತದೆ. ಯಾರು ತರುವವರು? ಗೊತ್ತಿಲ್ಲ. ಇದೆಂಥ ಗುರುಭಕ್ತಿ, ಇದೆಂಥ ಧರ್ಮರತಿ, ಇದೆಂಥ ನಿಯಮನಿಷ್ಠೆ ! ಯಾರಿವರು?

ಉರಿಲಿಂಗದೇವರಿಗೆ ಉಚಿತವಾಗಿ ಬರುತ್ತಿದ್ದ ಉರುವಲ ಉಪಯೋಗಿಸಲು ಇಷ್ಟವಿಲ್ಲ. ಒಂದು ದಿನ ಸದ್ದಿಲ್ಲದಂತೆ ಸೌದೆ ತರುತ್ತಲಿದ್ದ ಆ ಅಜ್ಞಾತ ಶಿಷ್ಯನನ್ನು ಗೊತ್ತುಹಚ್ಚಿಯೇಬಿಟ್ಟರು. ಪೆದ್ದಣ್ಣ ಉದ್ದಕ್ಕೆ ಬಿದ್ದು, 'ಉದ್ಧರಿಸು ಗುರುವೆ, ಉದ್ಧರಿಸು' ಎಂದು ಬೇಡಿಕೊಂಡ, ಉರಿಲಿಂಗದೇವರು ಅವನ ನಿರ್ಮಲ ಭಕ್ತಿಗೆ ಬೆರಗಾದರು.

ಪೆದ್ದಣ್ಣನ ಪೂರ್ವಾಪರವನ್ನು ತಿಳಿದಮೇಲಂತೂ ಉರಿಲಿಂಗದೇವರಿಗೆ ಆಶ್ಚರ್ಯವಾಯಿತು. ಪ್ರೀತರಾಗಿ ನುಡಿದರು, "ಪೆದ್ದಣ್ಣ, ನೀನು ನಿತ್ಯ ಮಠಕ್ಕೆ ಕಟ್ಟಿಗೆಹೊರೆ ತರಲು ನಮಗೆ ಆಕ್ಷೇಪವಿಲ್ಲ. ಆದರೆ ನೀನದಕ್ಕಿ ಬೆಲೆಯನ್ನು ತೆಗೆದುಕೊಳ್ಳಲು ಒಪ್ಪಬೇಕು. ಬೆಲೆಗೊಡದೆ ಶ್ರಮವನ್ನು ಸ್ವೀಕರಿಸುವುದು ಶರಣ ಧರ್ಮವಲ್ಲ."

ಪೆದ್ದಯ್ಯ ಪ್ರಾರ್ಥಿಸಿದ್ದ, "ಗುರುವೆ, ನಂದವಾಡದ ಸೂರಯ್ಯನಿಗೆ ದೀಕ್ಷೆಯಿತ್ತಂತೆ ನನಗೂ ದೀಕ್ಷೆಯಿತ್ತು ಉದ್ಧಾರಮಾಡಿರಿ."

"ಸೂರಯ್ಯನಿಗೆ ದೀಕ್ಷೆ ಇತ್ತುದು ನಿನಗಿನ್ನೂ ನೆನಪಿದೆಯಲ್ಲ ಪೆದ್ದಣ್ಣ ! ಅದರಲ್ಲೇನು ವಿಶೇಷ ಕಂಡೆ?"

"ಅದರಲ್ಲಿ ಮುಕ್ತನಾಗುವ ಮಾರ್ಗವನ್ನೇ ಕಂಡೆ ಗುರುದೇವ" ಎಂದು ಪೆದ್ದಣ್ಣ ಅಂದು ನಡೆದ ದೀಕ್ಷಾ ವಿಧಾನದ ವಿವರಗಳನ್ನೆಲ್ಲ ಒಂದೂ ತಪ್ಪದಂತೆ ಹೇಳಿದ. ಗುರುಗಳಿಗೆ ಅಚ್ಚರಿಯಮೇಲಚ್ಚರಿಯಾಯಿತು. ಆದರೂ ಪೆದ್ದಣ್ಣನ ಹೃದಯ ಪರಿವರ್ತನೆ ಕ್ಷಣಿಕವಾದುದೋ ಶಾಶ್ವತವಾದುದೋ–ನೋಡಬೇಕೆಂದು




**ಉರಿಲಿಂಗದೇವರು ಕಾಷಾಯ ಭಸ್ಮ ರುದ್ರಾಕ್ಷಧಾರಿಗಳಾಗಿ ಗದ್ದುಗೆಯ ಮೇಲೆ ಕುಳಿತಿದ್ದಾರೆ**

"ಶಿವನಪ್ಪಣೆಯಾಗಲಿ ಪೆದ್ದಣ್ಣ" ಎಂದು ಹೇಳಿ ಕಳಿಸಿದರು.

ಪೆದ್ದಣ್ಣ ನಿತ್ಯ ಕಟ್ಟಿಗೆ ಹೊರೆ ತರುವುದೂ ದೀಕ್ಷೆ ಅನುಗ್ರಹಿಸಿರೆಂದು ಉರಿಲಿಂಗದೇವರನ್ನೂ ಕಾಡುವುದೂ ನಡೆಯಿತು. ಉರಿಲಿಂಗದೇವರಿಗೆ ಉತ್ತರವಿತ್ತು, ಸಮಾಧಾನ ಹೇಳಿ ಹೇಳಿ ಸಾಕಾಯಿತು. ಒಮ್ಮೆ ಪೆದ್ದಣ್ಣ ಬಹಳ ಪೀಡಿಸಲು,

'ಘೇ ದಗಡಿ ಜಾ'ಯೆಂದು ನಿಜಕರದೊಳಿಹ ಕಲ್ಲ
ಬೈದುಕೊಡೆ ದ್ವಯಹಸ್ತದಿಂದ ಪಿಡಿದು ಜಯತೆಂದು

ಸಾದರದಿ ಮರಳಿ ತನ್ನಯ ಮನೆಗೆ ಬಂದು
ಗುರುಧ್ಯಾನದಿಂದ ನಿತ್ಯಬಿಡದೆ
'ಘೇ ದಗಡಿ ಜಾ'ಯೆಂದು 'ಜಾ ದಗಡಿ ಘೇ'ಯೆಂದು
ಸಾದರದೊಳೆನಗೆ ಗುರುಬೋಧಿಸಿದ ಮಂತ್ರವೆಂ–
ದಾದರದೊಳಾವಾಗಲುಂ ಪಠಿಸೆ ದೃಢಭಾವದಿಂದ–
ಲದು ಲಿಂಗವಾಯ್ತು!

ಪೆದ್ದಣ್ಣನ ಪಾಲಿಗೆ ಗುರುವಿತ್ತ ಆ ಶಿಲೆಯೇ ಲಿಂಗವಾಯಿತು, "ಘೇ ದಗಡಿ ಜಾ–ತೆಗೆದುಕೊ ಕಲ್ಲನ್ನು, ಹೊರಟು ಹೋಗು" ಎಂಬ ಗುರುವಚನವೇ ಮಂತ್ರವಾಯಿತು. ಸಮಯ ಸಿಕ್ಕಾಗಲೆಲ್ಲ ಆ ಶಿಲೆಗೆ ಶುದ್ಧೋದಕವನ್ನೆರೆದು, ಭಸ್ಮ ಧರಿಸಿ, ಹೂವೇರಿಸಿ, 'ಘೇ ದಗಡಿಜಾ–ಜಾದಗಡಿ ಘೇ' ಎಂದು ಪಠಿಸುತ್ತ ಪೂಜೆ ಮಾಡುವನು. ಅವನ ಶುದ್ಧ ಭಕ್ತಿಯಿಂದ, ಶ್ರದ್ಧೆಯಿಂದ ಆ ಶಿಲೆ ಲಿಂಗ, ಆ ಮಾತು ಮಂತ್ರವಾದುದೇನಾಶ್ಚರ್ಯ? ಇಷ್ಟಲಿಂಗವೂ ಶಿಲೆತಾನೆ? ಉಳಿದ ಮಂತ್ರಗಳೂ ಮೂಲತಃ ಶಬ್ದತಾನೆ?

ಮುಂದೆ ಮತ್ತೊಂದು ಮಹತ್ವದ ಘಟನೆ ನಡೆಯಿತು. ಆ ಊರಿನ ಅರಸನಾದ ನಂದರಾಜನು ಒಂದು ದೊಡ್ಡ ಕೆರೆಯನ್ನು ಕಡಿಸತೊಡಗಿದನು. ಆಗ ಒಂದು ದೊಡ್ಡ ಹಾಸುಬಂಡೆ ಹತ್ತಿ ಎಷ್ಟು ಒಡೆದರೂ ಒಡೆಯಲಿಲ್ಲ. ಶಿಲ್ಪಿಗಳನ್ನು ಕರೆಸಿ ಕೇಳಲು, 'ಹಾಸುಬಂಡೆ ಹೋಗದೆ ನೀರು ಬಾರದು; ಈ ಹಾಸುಬಂಡೆ ಹೋಗುವುದು ದುಸ್ಸಾಧ್ಯ'ವೆಂದು ಹೇಳಿಬಿಟ್ಟರು.

ನಂದರಾಜನಿಗೆ ಹಿಡಿದ ಕಾರ್ಯ, ಅದೂ ಜನಹಿತದ ಕಾರ್ಯ ಪೂರೈಸಲಿಲ್ಲವಲ್ಲ–ಎಂದು ಅತೀವ ವ್ಯಾಕುಲವಾಯಿತು. ಉರಿಲಿಂಗದೇವರ ಖ್ಯಾತಿಯನ್ನು ಕೇಳಿದ್ದಾನಾಗಿ ಅವರ ಪವಿತ್ರ ಪಾದಸ್ಪರ್ಶದಿಂದೇನಾದರೂ ಆಗಲಾರದುದು ಆಗಬಹುದೆಂದು ಅವರಿಗೆ ತನ್ನ ಕೋರಿಕೆಯನ್ನು ಕಳಿಸಿದನು. ಉರಿಲಿಂದೇವರು ಶಿಷ್ಯ ಪೆದ್ದಣ್ಣನೊಡನೆ ಆಗಮಿಸಿದರು.

ಅರಸನು ಗುರುಶಿಷ್ಯರನ್ನು ಎದುರುಗೊಂಡು ಉಚಿತಾಸನದಲ್ಲಿ ಕುಳ್ಳಿರಿಸಿ, ತನ್ನ ಮನದ ಅಭಿಲಾಷೆಯನ್ನು ನಿವೇದಿಸಿಕೊಂಡನು. ಉರಿಲಿಂಗದೇವರು ಶಿಷ್ಯ ಪೆದ್ದಣ್ಣನ ಸತ್ವಪ್ರಕಾಶಕ್ಕೆ ಸಮಯವಿದೆಂದು ಭಾವಿಸಿದರು. ತಾವಿತ್ತ ಶಿಲೆಯನ್ನೇ, ನುಡಿದ ಮಾತನ್ನೇ ನಂಬಿ ಪೆದ್ದಣ್ಣ ಸಾಧಿಸಿದ್ದ ಆತ್ಮೋನ್ನತಿಯನ್ನು ಅವರದಾಗಲೇ ಅರಿತಿದ್ದರು. ಶಿಷ್ಯನತ್ತ ನೋಡಿ, 'ಘೇ ದಗಡಿ ಜಾ !' ಎಂದರು.

ಪೆದ್ದಣ್ಣಗೆ ಗುರವರ್ಾಜ್ಞೆಗೆ ತಲೆಬಾಗಿ ಹಾಸುಬಂಡೆಯ ಹತ್ತಿರ ಹೋದನು. ಗುರುವಿನ ಅನುಗ್ರಹದಿಂದ, ತನ್ನ ಶ್ರದ್ಧೆಯ, ಸಾಧನೆಯ ಶುದ್ಧಿಯ ಬಲದಿಂದ ಆ ಹಾಸುಬಂಡೆಯನ್ನು ಒಡೆದೊಗೆದನು. (ಅವನ ಕೈಯ ದಗಡಿ–ಶಿಲೆಯೇ ಹೋಗಿ ಹಾಸುಬಂಡೆಯನ್ನು ಕಿತ್ತು ಹೊತ್ತು ತಂದಿತೆಂದು ಪುರಾಣ ಪ್ರತಿಪಾದಿಸುತ್ತದೆ.) ಕೆರೆಯಲ್ಲಿ ನೀರು ಏರಿ ಬಂದಿತು. ಅರಸನು ಆನಂದತುಂದಿಲನಾಗಿ ಅವರಿಬ್ಬರನ್ನೂ ಗೌರವಿಸಿ ಬೀಳ್ಕೊಟ್ಟನು.

ಪೆದ್ದಣ್ಣಗೆ ದೀಕ್ಷೆ ಕೊಡುವುದನ್ನು ಇನ್ನು ತಡೆಯಬಾರದೆಂದು ಉರಿಲಿಂಗದೇವರಿಗೆನಿಸಿತು. ಅಂತ್ಯಜನಾಗಿ ಹುಟ್ಟಿ ಕಳ್ಳನಾಗಿ ಬಾಳಿ, ಪಾಪಿಯೆಂದು ತಿರಸ್ಕರಿಸಲ್ಪಟ್ಟಿದ್ದ ಪೆದ್ದಣ್ಣ ದೀಕ್ಷೆ ಹೊಂದಿ ಉರಿಲಿಂಗಪೆದ್ದಿಯಾದ. ಗುರುವಿಗೆ ತಕ್ಕ ಶಿಷ್ಯನಾದ. ವೇದಾಗಮೋಪನಿಷತ್ತುಗಳಲ್ಲಿ, ಪುರಾಣೇತಿಹಾಸಗಳಲ್ಲಿ, ಸಕಲ ಶಾಸ್ತ್ರಗಳಲ್ಲಿ ಪಾರಂಗತನಾದ. ಎಂದೆಂದಿಗೂ ಅಳಿಯದ ವಚನಗಳನ್ನು ರಚಿಸಿದ. ಅವನ ವಚನಗಳಲ್ಲಿ ಬರುವ ಸಂಸ್ಕೃತ ಶ್ಲೋಕಗಳ ಸುರಿಮಳೆ ಎಂಥ ವಿದ್ವಾಂಸರನ್ನೂ ಚಕಿತರನ್ನಾಗಿ ಮಾಡುತ್ತದೆ. ಎಂಥ ಅದ್ಭುತ ಪರಿವರ್ತನೆ !

ಉರಿಲಿಂಗದೇವರು ತಾವು ಹಿಂದೆ ಸರಿದು ಶಿಷ್ಯನನ್ನೇ ಗುರುಪೀಠದ ಮೇಲೆ ಕುಳ್ಳಿರಿಸಿ ತಮ್ಮ ಶಿಷ್ಯ ತಮಗಿಂತ ಶ್ರೇಷ್ಠ ಜ್ಞಾನಿಯಾದುದನ್ನು ನೋಡಿ ಹಿರಿಹಿರಿ ಹಿಗ್ಗಿದರು. ಗುರುಬೇಡುವುದೇನು? ಶಿಷ್ಯನಿಂದ ಪರಾಜಯವನ್ನಲ್ಲವೆ? ಉರಿಲಿಂಗಪೆದ್ದಿ ಅದನ್ನೇ ತನ್ನ ಗುರುದಕ್ಷಿಣೆಯನ್ನಾಗಿ ನೀಡಿದ್ದನು–ಪತಿತನಾದ ತನ್ನನ್ನು ಹಿಡಿದೆತ್ತಿ ಜ್ಞಾನಾಮೃತವನ್ನಿತ್ತು ಉದ್ಧರಿಸಿದ್ದ ಗುರು ಉರಿಲಿಂಗದೇವರಿಗೆ.

ಉರಿಲಿಂಗದೇವರ ವ್ಯಕ್ತಿತ್ವ ಮಧುರವಾದರೆ ಉರಿಲಿಂಗಪೆದ್ದಿಯ ವ್ಯಕ್ತಿತ್ವ ಪ್ರಖರ. ಉರಿಲಿಂಗದೇವರಲ್ಲಿ ಶಿವಶಾಂತಿ ಕಳೆ ಹೊಳೆಯುತ್ತಿದ್ದರೆ ಉರಿಲಿಂಗಪೆದ್ದಿಯಲ್ಲಿ ಜ್ಞಾನಪ್ರಭೆ ಪ್ರಜ್ವಲಿಸುತ್ತಿದ್ದಿತು. ಉರಿಲಿಂಗ ದೇವರದು ಸತಿಪತಿ ಭಾವದ ಸಮರಸ ಜೀವನ; ಉರಿಲಿಂಗಪೆದ್ದಿಗಳದು ಜ್ಞಾನೋಪಾಸನೆಯ ತೈಜಸ ಜೀವನ. ಒಂದು ಮಾಗಿದ ಹಣ್ಣು. ಇನ್ನೊಂದು ಮಿಂಚುವ ದೋರೆಕಾಯಿ.

ಇದು ಉರಿಲಿಂಗದೇವರ ಎದೆಯ ಸೊದೆ :

> "ಎಮ್ಮ ನಲ್ಲನವ್ವಾ ! ನಲ್ಲರಿಗೆ ನಲ್ಲನು. ವಂಚನೆಗೆ ನೆರೆಯನು.
> ನಿರ್ವಂಚನೆಗೆ ನೆರವನು, ಎನ್ನ ಉರಿಲಿಂಗದೇವನು."

> "ನಲ್ಲನನೊಲ್ಲೆನೆಂದು ಮುನಿದು ನಾನಗಲಲು
> ಅಗಲುವ ಠಾವೆಲ್ಲ ತಾನೆ, ಎಲೆಗವ್ವಾ !

ನಲ್ಲನಿಲ್ಲದೆಡೆಯಿಲ್ಲ ; ಆಗಲಿಕೆಗಿಂಬಿಲ್ಲ ;
ಮುನಿದು ನಾನೇನಾಗುವೆನು?
ಶರಣುಗತಿಯಾಗುವೆನು, ಉರಿಲಿಂಗದೇವನ !"
"ಆತನ ಬಿರುದೆನ್ನ ಉರದಲ್ಲಿದೆ ನೋಡಿರಯ್ಯ !
ಏಕೆ ಬಂದಿರೋ, ಎಲೆ ಅಣ್ಣಗಳಿರಾ?
ನಿಮಗಪ್ಪುವುದಕ್ಕೆಡೆಯಿಲ್ಲ !
ನೀವಪ್ಪುವೊಡೆ ಅಡ್ಡಬಂದಿಹನೆನ್ನ ನಲ್ಲ !
ಏಕೆ ಬಂದಿರೋ ಉರಿಲಿಂಗದೇವನಪ್ಪಿದ ಹಿಪ್ಪೆಗೆ !"
"ಎನ್ನ ನಲ್ಲನು ಒಲ್ಲೆನೆಂದು ಹೇಳಿದಡೆ
ಇಲ್ಲಿಯೇ ಅರಸುವೆನವನ!
ಗಂಗೆಯ ನೋನೆನು, ಗೌರಿಯ ನೋನೆನು.
ಇಲ್ಲಿಯೇ ಅರಸುವೆನವ್ವ!
ಎನ್ನಂತರಂಗದ ಆತ್ಮಜ್ಯೋತಿಯೇ ಉರಿಲಿಂಗದೇವ–
ಎಂದು ಇಲ್ಲಿಯೇ ಅರಸುವೆನವ್ವಾ!"
"ಕಾಮಿಗೆ ಕಾಮಿನಿಗೆ ಎರಡು ಗುರಿ, ಒಂದು ಸರಳು!
ಎಸುಗೆಯ ಮಾಡು ಕಾಮಾ!
ಎಸೆಯಲು ಎರಡೊಂಡಪ್ಪುದು ಗಡಕಾಮಾ!
ಎನಗೆಯೂ ಉರಿಲಿಂಗ ದೇವಗೆಯೂ ತೊಟ್ಟೆಸು!
ಎರಡೊಂದಾದಡೆ ಬಿಲ್ಲಾಳಹೆಯೋ ಕಾಮಾ!"

ಯಾವ ಕವಿಯೂ ಹೆಮ್ಮೆಪಟ್ಟುಕೊಳ್ಳಬಹುದಾದ ಉರಲಿಂಗದೇವರ ಇಂಥ ಮಧುರ ಮನೋಜ್ಞ ವಚನಗಳನ್ನು ಹೀಗೆಯೇ ಉದಾಹರಿಸುತ್ತ ಹೋಗಬೇಕೆನ್ನಿಸುತ್ತದೆ. ಅವರ ಪರಿಪಕ್ವ ಹೃದಯ, ವಿಶ್ವವಿಶಾಲದೃಷ್ಟಿಗೆ ಇದಕ್ಕೂ ಇನ್ನೆಂಥ ಸಾಕ್ಷಿಬೇಕು?

"ಆರ ಪರಿಯಲ್ಲ ನಮ್ಮನಲ್ಲನು. ವಿಶ್ವವೆಲ್ಲವು ಸತಿಯರು. ಚೋದ್ಯದ ಪುರುಷನು. ಅವರವರ ಪರಿಯಲ್ಲಿ ಅವರವರ ನೆರೆವನು. ಅವರವರಿಗೆ ಅವರಂತೆ ಸುಖಮಯ ನೋಡಾ! ಅವರೆಲ್ಲರ ವಂಚಿಸಿ ಎನ್ನನಗಲದ ಪರಿಯ ಹೇಳಾ, ಕೆಳದಿ! ನೀನೊಳ್ಳಿದಳಾದಡೆ, ಮಹಾಮಂತ್ರವ ಜಪಿ–ಸಲು, ನಿನ್ನನಗಲ ನಿನ್ನಾಣೆ, ಉರಿಲಿಂಗದೇವ ತನ್ನಾಣೆ!"

ಎಂಥ ಪತಿ, ಎಂಥ ಸತಿ, ಎಂಥ ದರ್ಶನ, ಎಂಥ ವರ್ಣನ! 'ನೀನೊಳ್ಳಿದಳಾದಡೆ,

ಮಹಾಮಂತ್ರ ಜಪಿಸೆ, ನಿನ್ನನಗಲ!" ಎಂಥ ಆಶ್ವಾಸನ! ಈ ವಿಶ್ವಸಾಮರಸ್ಯ ಸುಮ್ಮನೆ ಸಿದ್ಧಿಸುವುದೆ?

> "ನಲ್ಲನ ರೂಪೆನ್ನ ನೇತ್ರ ತುಂಬಿತ್ತು ; ನಲ್ಲನ ನುಡಿ ಎನ್ನ ಶ್ರೋತ್ರ ತುಂಬಿತ್ತು;
> ನಲ್ಲನ ಸುಗಂಧವೆನ್ನನಾಸಿಕ ತುಂಬಿತ್ತು ; ನಲ್ಲನ ಚುಂಬನವೆನ್ನ ಜಿಹ್ವೆ ತುಂಬಿತ್ತು ;
> ನಲ್ಲನ ಆಲಿಂಗನವೆನ್ನ ಸರ್ವಾಂಗ ತುಂಬಿತ್ತು ;
> ನಲ್ಲನ ಪ್ರೇಮವೆನ್ನ ಮನ ತುಂಬಿತ್ತು ;
> ನಲ್ಲನ ಅಂತರಂಗ ಬಹಿರಂಗದಲ್ಲಿ ನೆರೆದು ಸುಖಿಯಾದೆ ಸಖಿಯೆ!"

ಆ ಸುಖದ ಸವಿಯನ್ನೂ ಈ ಶರಣಸತಿಯ ಬಾಯಿಂದಲೇ ಕೇಳೋಣ:

> "ಎನ್ನ ನಲ್ಲನ ಕೂಡಿದ ಸುಖದ ಸುಗ್ಗಿಯನ್ನೇನೆಂಬೆ? ಕೇಳಾ ಕೆಳದಿ!
> ಸುಖದ ಸವಿ ಸ್ರವಿಸಿ ಹರಿಯಿತ್ತು!
> ಹೇಳಲು ನಾಚಿಕೆ, ಕೇಳಲು ನಾಚಿಕೆ !
> ಕೇಳು ಕೆಳದಿ, ಸುಖದ ರಸ ಮಡುಗಟ್ಟಿದುದು.
> ಉರಿಲಿಂಗದೇವನ ಕೂಡಿ ಸುಖಸಾಗರದಲ್ಲಿ ಕ್ರೀಡಿಸುತಿರ್ದೆ ಕೆಳದಿ !"

ಈ ಸುಖ ಸುಮ್ಮನೆ ಸಿಕ್ಕುವುದೆ?

> "ಹಾಡುವೆನಲ್ಲನ ; ಬೇಡುವೆನಲ್ಲನ ; ಕೂಡುವೆನಲ್ಲನ
> ನಿಚ್ಚ ನಿಚ್ಚ ! ಕೇಳಾ ಕೆಳದಿ, ಅವನೇ ಸುಖನೆನಗೆ,
> ಅವನೇ ಸಖನೆನಗೆ, ಅವನೇ ಪ್ರಾಣವು ಕೇಳಾ, ಕೆಳದಿ !
> ಉರಿಲಿಂಗದೇವನೆನಗೆ ಸಂಜೀವನ ಕೇಳಾ ಕೆಳದಿ !"

ಈ ತಪಕ್ಕೆ ಇದು ಫಕ ; ಈ ಒಲ್ಮೆಗೆ ಇದು ಸಂಭಾವನೆ :

> "ಇಂಬಿನ ಚುಂಬನವಮೃತಾಹಾರ ; ಆಲಿಂಗನವೇ ಆಭರಣ ;
> ಸೋಂಕೇ ಸುವಸ್ತ್ರ ; ನೋಟವೇ ಕೂಟ ;
> ಒಡನಾಟವೇ ಅಷ್ಟಭೋಗವೆನಗೆ!
> ಉರಿಲಿಂಗದೇವನ ಕೂಟ ಪರಾತ್ಪರ, ವಾಙ್ಮನಾತೀತ,
> ಪರಮಸುಖವನೇನೆಂಬೆನವ್ವಾ!"

ಹೀಗೆ ಸುಖದ ಸುಗ್ಗಿಯಲ್ಲಿ ಹಿಗ್ಗಿನಿಂದ ಬಾಳಿ ಬಯಲಾದರು ಉರಿಲಿಂಗದೇವರು. ಅದನ್ನು ಅವರು ಅನನುಕರಣೀಯವಾಗಿಯೇ ಬಿತ್ತರಿಸಿದ್ದಾರೆ:

"ಎಲೆ ಅವ್ವಾ , ಎನ್ನ ನಲ್ಲನ ಕೂಡಿದ ಕೂಟವ
ಇದಿರಿಂಗೆ ಹೇಲಬಾರದವ್ವಾ !
ನೀವೆಲ್ಲಾ ನಿಮ್ಮ ನಲ್ಲನ ಕೂಡಿದ ಸುಖವ
ಬಲ್ಲಂಕೆ ಬಣ್ಣಿಸಿರಿ !
ಉರಿಲಿಂಗದೇವ ಬಂದೆನ್ನ ಸೀರೆಯಸೆರಗ
ಹಿಡಿಯಲೊಡನೆ ನಾನೋ ತಾನೋ ಏನೆಂದರಿಯೆನವ್ವಾ !"

ಗುರು ಉರಿಲಿಂಗದೇವರು ನಿರವಯರಾದುದು ಉರಿಲಿಂಗಪೆದ್ದಿಯ ಮೇಲೆ ದೊಡ್ಡ ಆಘಾತವನ್ನು ಮಾಡಿರಬೇಕು. ಆದುದರಿಂದಲೇ ಕಂಧಾರದಲ್ಲಿ ಇರಲಾರದೆ ಅವರು ಕಲ್ಯಾಣಕ್ಕೆ ಹೋಗಿ ಅಲ್ಲಿಯೇ ತಮ್ಮ ಕೊನೆಯ ದಿನಗಳನ್ನು ಕಳೆದಂತೆ ತೋರುತ್ತದೆ. ಅಲ್ಲಿ ಅವರದೊಂದು ಮಠವೂ, ಸಮಾಧಿಯೂ ಇದೆ ಎಂದು ಹೇಳುತ್ತಾರೆ. ಕಲ್ಯಾಣ, ಸೇಡಮದ ಹತ್ತಿರದ ಕೊರಳಿ, ಬೇವಿನ ಚಿಂಚೋಳಿ ಮತ್ತು ಭಾಲ್ಕಿಗಳಲ್ಲಿ ಇಂದಿಗೂ ಉರಿಲಿಂಗಪೆದ್ದಿಗಳ ಮಠಗಳಿವೆಯೆಂದೂ ಅವೆಲ್ಲವುಗಳಿಗೂ ಹರಿಜನರೇ ಭಕ್ತರೆಂದೂ ಮಠಾಧಿಕಾರಿಗಳು ಮಾತ್ರ ಲಿಂಗಾಂಗಿಗಳೆಂದೂ ತಿಳಿದು ಬಂದಿದೆ.

ಉರಿಲಿಂಗಪೆದ್ದಿಯೂ ಗುರುವಿನಂತೆ ಉಜ್ವಲ ವಚನಗಳನ್ನು ಬರೆದಿದ್ದಾನೆ. ಇವನ ವಚನಗಳನ್ನು ಸೇರಿಸದ ವಚನ ಸಂಕಲನಗಳೇ ಇದುವರೆಗೂ ಹುಟ್ಟಿಲ್ಲ. ಬುದ್ಧಿಭಾವಗಳ ವಿದ್ಯುದಾಲಿಂಗನವನ್ನು ಅವುಗಳಲ್ಲಿ ಕಾಣಬಹುದಾಗಿದೆ :

"ಎನ್ನಂಗದಲ್ಲಿ ನಿನಗೆ ಮಜ್ಜನ; ಎನ್ನ ಲಲಾಟದಲ್ಲಿ ನಿನಗೆ ಗಂಧಾಕ್ಷತೆ; ಎನ್ನ ತುರುಬಿನಲ್ಲಿ ನಿನಗೆ ಕುಸುವ ಪೂಜೆ; ಎನ್ನ ನೇತ್ರದಲ್ಲಿ ನಿನಗೆ ನಾನಾ ರೂಪು ವಿಚಿತ್ರ ವಿನೋದ; ಎನ್ನ ಶ್ರೋತ್ರದಲ್ಲಿ ನಿನಗೆ ಪಂಚ ಮಹಾ ವಾದ್ಯ ಕೇಳಿರೆ ! ಎನ್ನ ನಾಸಿಕದಲ್ಲಿ ನಿನಗೆ ಸುಗಂಧ ಧೂಪ ಪರಿಮಳ; ಎನ್ನ ಜಿಹ್ವೆಯಲ್ಲಿ ನಿನಗೆ ಷಡ್ರಸಾನ್ನ ನೈವೇದ್ಯ; ಎನ್ನ ತ್ವಕ್ಕಿನಲ್ಲಿ ನಿನಗೆ ವಸ್ತ್ರಾಭರಣ ಅಲಂಕಾರಪೂಜೆ; ಎನ್ನ ಸಚ್ಚಿದಾನಂದವೆಂಬ ಸಜ್ಜೆಯ ಗೃಹದಲ್ಲಿ ನೀನು ಸ್ಪರ್ಶನಂಗೈದು ನೆರೆದಿಪ್ಪೆಯಾಗಿ, ನೀನಾನೆಂ– ಬೆರಡಳಿದು ತಾನುತಾನಾದ ಘನವನೇನೆಂಬೆನು–ಉರಿಲಿಂಗಪೆದ್ದಿ ಪ್ರಿಯ ಪಿಯ ವಿಶ್ವೇಶ್ವರಾ!"

ಶಿವನಿಗೂ ಸವಾಲು ಹಾಕುವ ಸತ್ವೋತ್ಕರ್ಷ ಉರಿಲಿಂಗಪೆದ್ದಿಯದು :

"ಪಾಪ ನನ್ನದು, ಪುಣ್ಯ ನಿನ್ನದೆ ಅಯ್ಯ? ದ್ವಂದ್ವ ಕರ್ಮ ಎನಗೆ
ಬೇಕಾದ ಪರಿ ಎಂತಯ್ಯ? ನಾನು ಲಿಂಗಪ್ರಾಣಿ, ನೀನು ಭಕ್ತ ಕಾಯನು.

ಇದು ಕಾರಣ ದ್ವಂದ್ವ ಕರ್ಮ ಮುನ್ನವೇ ನಾಸ್ತಿ ! ಇನ್ನು ಭಾವಭೇದ
ವೆಂದಡೆ ನಗೆಗೆಡೆಯಪ್ಪುದು. ಹೆಚ್ಚು ಕುಂದು ಎನ್ನದಲ್ಲ, ನಿನ್ನದಯ್ಯ
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರ !"

ಈ ಕೆಚ್ಚಿನ ಹಿಂದೆ ಕೆಚ್ಚಿಗೆ ಕಾರಣವಾದ ಅಚ್ಚ ಅರುಹಿದೆ :

"ಎನ್ನ ಗತಿ ನಿನ್ನ ಗತಿ; ಎನ್ನ ಕೇಳಿಕೆ ನಿನ್ನ ಕೇಳಿಕೆ;
ಎನ್ನ ನೋಟ ನಿನ್ನ ನೋಟ; ಎನ್ನಂಗ ಸ್ಪರ್ಶನ ನಿನ್ನಂಗಸ್ಪರ್ಶನ:
ಎನ್ನ ಸುಖ ಭೋಗವೆಲ್ಲ ನಿನ್ನ ಸುಖ ಭೋಗ:
ಎನ್ನೊಳಗೆ ನೀನು, ನಿನ್ನೊಳಗೆ ನಾನು;
ಎನ್ನ ಪ್ರಾಣ ನೀನು ನಿನ್ನ ಪ್ರಾಣ ನಾನಾದ ಕಾರಣ
ಎನ್ನ ಸೋಂಕಿತ್ತೆಲ್ಲ ನಿನ್ನ ಪೂಜೆಯಯ್ಯ,
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ!"

ಉರಿಲಿಂಗಪೆದ್ದಿಯನ್ನು ಉಪನಿಷದ್ರುಷಿಗಳು ಬಳಿಗೆ ಕರೆದು ಕುಳ್ಳಿರಿಸಿಕೊಂಡಿರಬೇಕು–ಅವನು ಬಯಲ ಬೆರೆತು ಅವರಿರುವಲ್ಲಿಗೆ ಹೋದಾಗ; ಶರಣರು ಸಂತಸದಿಂದ ಉಬ್ಬಿ ತಬ್ಬಿಕೊಂಡಿರಬೇಕು!

"ನೀ ನಡಸಿದಂತೆ ನಡೆದೆ; ನೀ ನುಡಿಸಿದಂತೆ ನುಡಿದೆ; ನೀ ನೋಡಿಸಿದಂತೆ ನೋಡಿದೆ; ನೀನಾಡಿಸಿದಂತೆ ಆಡಿದೆ; ನೀ ಮಾಡಿಸಿದಂತೆ ಮಾಡಿದೆ–ಈ ಪುಣ್ಯಪಾಪ ಸುಖದುಃಖಾತ್ಮಕನು ನೀನೆ ಅಯ್ಯ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ!"

ಈ ವಚನ ಅವನ ಅಂತರಂಗದ ಕನ್ನಡಿಯಂತಿಲ್ಲವೆ?

ಆಶೆಯೇ ದಾಸತ್ವ , ನಿರಾಶೆಯೇ ಈಶತ್ವ ,
ನಿರಾಶೆಯಾಗಿಪ್ಪುದೆ ಈಶಪದವಯ್ಯ
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ!

ಇದು ಉರಿಲಿಂಗಪೆದ್ದಿಯ ವಾದಸರಣಿ :

"ಶಿವ ಜಗವಾಗಬಲ್ಲ, ಜಗವಾಗದಿರಲೂ ಬಲ್ಲ;
ಶಿವ ರೂಪವಾಗಬಲ್ಲ, ರೂಪವಾಗದಿರಲೂ ಬಲ್ಲ;
ಶಿವನಜಾಂಡ ಕೋಟಿಗಳ ಮಾಡಬಲ್ಲ, ಮಾಡದಿರಲೂ ಬಲ್ಲ;
ಶಿವ ಕೆಡಿಸಬಲ್ಲ, ಕೆಡಿಸದಿರಲೂ ಬಲ್ಲ;

ಶಿವ ಜಂಗಮವಾಗಿ ಶಿನ ಪೂಜಿಸಬಲ್ಲ, ಲಿಂಗವಾಗಿ ತಾನೇ ಪೂಜಿಸಿ ಕೊಳ್ಳಬಲ್ಲ;

ಶಿವ ಹೊರಗಾಗಿ ಅನ್ಯವುಂಟೆಂಬ ವೇದವುಂಟೇ? ಇಲ್ಲ,
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರನು ವಿಶ್ವಕ್ಕೆಲ್ಲ ಮಾತಾಪಿತನು!"
ದೃಷ್ಟಾಂತ ಬೇರೆ ಬೇಕೆ? ಇಲ್ಲಿದೆ :
"ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕಾಗಿ, ಮರಳಿ ಅರಸನಾಗಬಲ್ಲ."

ಉರಿಲಿಂಗಪೆದ್ದಿ ನಾಲ್ಕು ಸಾಲುಗಳಲ್ಲಿ ನಿತ್ಯಸತ್ಯವನ್ನು ನಿಲ್ಲಿಸಲೂ ಬಲ್ಲ, ನಾಲ್ಕು ಪುಟಗಳಲ್ಲಿ ಹತ್ತಾರು ಗ್ರಂಥಗಳನ್ನು ಉದ್ಧರಿಸಿ ವಾದಭೂಮಿಯನ್ನು ಸೃಷ್ಟಿಸಲೂ ಬಲ್ಲ. ಅವನು ಬರೆದುದಕ್ಕಿಂತ ಅವನ ಬಾಳು ದೊಡ್ಡದು.

"ಅಮೃತಕ್ಕೆ ಹಸಿವುಂಟೆ? ಜಲಕ್ಕೆ ತೃಷೆಯಂಟೆ?
ಮಹಾಘನ ಪುರುಷಂಗೆ ವಿಷಯವುಂಟೆ?
ಸದ್ಗುರು ಕಾರುಣ್ಯವಂ ಪಡೆದು ಲಿಂಗಾರ್ಚನೆಯಂ ಮಾಡುವ
ಮಹಾಶರಣಂಗೆ ಮುಕ್ತಿಯ ಬಯಕೆಯುಂಟೆ?
ಅವರುಗಳಿಗೆ ಅದು ಸ್ವಯಂಭು ಸಹಜ ಸ್ವಭಾವ.
ಇನ್ನೂ ತೃಪ್ತಿ ಆಪ್ಯಾಯನ ಮುಕ್ತಿ ಅರಸಲುಂಟೆ
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ?"

ಅವನಿಗೆ ಸದ್ಗುರು ಕಾರುಣ್ಯ ಲಭಿಸಿ ಲಿಂಗಾರ್ಚನೆಯ ಸೌಭಾಗ್ಯ ಸಿಕ್ಕಿದ್ದಿರು. ಅದರಲ್ಲಿಯೇ ತೃಪ್ತನಾಗಿ, ಅದರಲ್ಲಿಯೇ ಆನಂದ ಹೊಂದಿ, ಅದರಲ್ಲಿಯೇ ತಲ್ಲೀನನಾಗಿ ಬಾಳಿ ಬೆಳಕಾದನವನು.

"ಎನ್ನೊಳಗೆ ನೀನು ಪ್ರವೇಶ, ನಿನ್ನೊಳಗೆ ನಾನು ಪ್ರವೇಶ!
ದೇವ ನೀನಲ್ಲದಿಲ್ಲ, ಭಕ್ತನಾನಲ್ಲದಿಲ್ಲ !
ಈ ಪರಿಯಲ್ಲಿ ಮಾಡುವರಿನ್ನಾರು ಹೇಳಾ?
ಎನಗೆ ನೀನೆ ಗತಿ ನಿನಗೆ ನಾನೇ ಗತಿ–
ಇನ್ನೇಕೆ ಜವನಿಕೆ? ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ!"

ಎಂದವನು ಕರೆಯಲು ಓಗೊಟ್ಟನಾ ಶಿವ. ಜವನಿಕೆ ಸರಿಯಿತು. ಇಬ್ಬರೂ ಒಂದಾದರು! 'ಈ ಪರಿಯಲ್ಲಿ ಮಾಡುವರಿನ್ನಾರು ಹೇಳಾ?' ಎಂಬ ಪ್ರಶ್ನೆ ಇಂದಿಗೂ ಕಲ್ಯಾಣದ ಕಣಕಣದಲ್ಲಿ ನಿನದಿಸುತ್ತಿರಬೇಕು.

ಗುರುವಿಗೆ ತಕ್ಕ ಶಿಷ್ಯ ದೊರೆವುದೇ ದುರ್ಲಭ. ಗುರುವಿಗೆ ತಕ್ಕ ಶಿಷ್ಯ, ಶಿಷ್ಯನಿಗೆ ತಕ್ಕ ಸತಿ ಸಿಕ್ಕರೆ ಏನೆನ್ನಬೇಕು? ಇಂಥ ಸೋಜಿಗ ನಡೆದಿದೆ ಉರಿಲಿಂಗಪೆದ್ದಿಯ ಜೀವನದಲ್ಲಿ. ಅವನಿಗೆ ಉರಿಲಿಂಗದೇವರಂಥ ಗುರುಪುಂಗವರಷ್ಟೇ ಅಲ್ಲ,

ಕಾಳವ್ವೆಯಂಥ ಸತೀ ಶಿರೋಮಣಿಯೂ ದೊರೆತಿದ್ದಳು! ಅವನ ಭಾಗ್ಯಕ್ಕೆ ಎಣೆಯೇ ಇಲ್ಲ ಕಾಳವ್ವೆಯೂ ಶಿವಾನುಭವಿ, ವಚನಕಾರ್ತಿ, ಶರಣಮಾರ್ಗಾನುಯಾಯಿ! ಉರಿಲಿಂಗದೇವ–ಉರಿಲಿಂಗಪೆದ್ದಿ–ಕಾಳವ್ವೆ–ಈ ಮೂವರ ಅನುಭವಾಮೃತ ಗಂಗೆಯಮುನೆ ಸರಸ್ವತಿಯರ ಸಂಗಮವಾಗಿ ಹರಿದುದು ಎಂಥ ಅಭೂತಪೂರ್ವವಾದ ಘಟನೆ !

"ತುಮರಿಯ ಕೊಳ್ಳಿಯಂತೆ ಉರಿವಾತ ಭಕ್ತನೆ?
ಹುಸಿದು ತಂದು ಮಾಡುವಾತ ಭಕ್ತನೆ?
ಭಕ್ತರ ಕುಲವೆತ್ತಿ ನಿಂದಿಸುವಾತ ಬಕ್ತನೆ?"

ಎಂದು ಕೇಳುತ್ತಾಳೆ ಕಾಳವ್ವೆ! 'ತುಮರಿಯ ಕೊಳ್ಳಿಯೆಂತೆ ಉರಿವಾತ' ಎಂಬ ಉಪಮೆಯನ್ನು ಗೃಹಿಣಿಯಾದವಳೇ ಉಪಯೋಗಿಸಬಲ್ಲಳು. ಎಣ್ಣೆ ಇಲ್ಲದೆಯೇ ಧಗಧಗ ಉರಿವ ತುಮರಿಯ ಕೊಳ್ಳಿಯನ್ನು ಕ್ರೋಧಕ್ಕೆ ಹೋಲಿಸಿರುವುದು ಅದೆಷ್ಟು ಸಮಂಜಸ, ಸಮುಚಿತ!

"ವ್ರತವೆಂಬುದು ನಾಯಕರತ್ನ;
ವ್ರತವೆಂಬುದು ಸುಪ್ಪಾಣಿಯ ಮುತ್ತು;
ವ್ರತವೆಂಬುದು ಜೀವದ ಕಳೆ;
ವ್ರತವೆಂಬುದು ಸುಯಿಧಾನ;
ವ್ರತ ತಪ್ಪಲು ಉರಿಲಿಂಗಪೆದ್ದಿಗಳರಸ ಒಲ್ಲನವ್ವಾ"

ಎಂದಿದ್ದಾಳೆ ಕಾಳವ್ವೆ. ಆಭರಣವೇ ಜೀವವೆಂದಿರುವ ಅಂಗನೆಯರ ಬಾಯಿಂದ 'ವ್ರತವೇ ಮುತ್ತು ರತ್ನ'ವೆಂದು ಮಾತು ಬರುವುದು ಅದೆಷ್ಟು ಸೋಜಿಗ:

"ಅರ್ಥ ಪ್ರಾಣಾಭಿಮಾನದ ಮೇಲೆ ಬಂದರೂ ಬರಲಿ,
ವ್ರತಹೀನನ ನೆರೆಯಲಾಗದು!
ನೋಡಲಾಗದು, ನುಡಿಸಲಾಗದು!"
ಎಂದು ಉಗ್ಘಡಿಸುತ್ತಾಳೆ ಕಾಳವ್ವೆ!

ಯಾವ ದೃಷ್ಟಿಯಿಂದ ನೋಡಿದರೂ ಕಾಳವ್ವೆ ಉರಿಲಿಂಗಪೆದ್ದಿಗೆ ತಕ್ಕ ಸತಿ; ಉರಿಲಿಂಗದೇವರಿಗೆ ತಕ್ಕ ಶಿಷ್ಯೆ! ಉರಿಲಿಂಗಪೆದ್ದಿ ಪೀಠಾರೋಹಣ ಮಾಡಿದ ಮೇಲೆ ಕಾಳವ್ವೆ ಪೂರ್ಣ ವಿರಾಗಿಣಿಯಾಗಿ ಪಾವನ ಶರಣೆಯಾಗಿರಬೇಕು. ಅವಳು ಉರಿಲಿಂಗಪೆದ್ದಿಯೊಡನೆ ಕಲ್ಯಾಣಕ್ಕೆ ಹೋದಳೋ ಅದಕ್ಕೆ ಮೊದಲೇ ಶಿವಪದ ಸೇರಿದಳೋ ತಿಳಿಯದು. ಕಂದಹಾರದ ಪಾಲಿಗೇ ಅವಳ ಪಾರ್ಥಿವ ಶರೀರದ

ರಾಜವನ್ನು ತನ್ನ ಉಡಿಯಲ್ಲಿ ಉಳಿಸಿಕೊಳ್ಳುವ ಭಾಗ್ಯ ದೊರೆತಿದ್ದರೂ ದೊರೆತಿರಬಹುದು.

"ಮಂಗಳಮಯ ಲಿಂಗದ ಸಂಗಿಯಾಗಿ ಮಹಾಲಿಂಗದ ಪ್ರಸಂಗಿಯಾಗಿಪ್ಪಾತನ ಅಂಗವೆನಗೆ ಮಂಗಳತರಂಗ"ವೆಂದು ಉರಿಲಿಂಗದೇವರು ಹಾಡಿದರು.ಉರಿಲಿಂಗದೇವ– ಉರಿಲಿಂಗಪೆದ್ದಿ–ಕಾಳವ್ವೆ, ಮೂವರೂ ಮಂಗಳ ತರಂಗರು, ಲಿಂಗಲೀಲಾ ವಿಲಾಸಿಗಳು.

ಉರಲಿಂಗದೇವರ ಶಿವಲೆಂಕ ಮಂಚಣ್ಣನ ಮಗನೆಂದು ನೀಲಕಂಠಾಚಾರ್ಯನ (ಸು. ೧೪೮೫) ಆರಾಧ್ಯ ಚರಿತ್ರೆಯಲ್ಲಿ ಹೇಳಿದೆ. ಇದು ನಿಜವಾದರೆ ವೀರಶೈವ ಪಂಡಿತತ್ರಯರಲ್ಲಿ ಒಬ್ಬನಾದ ಶಿವಲೆಂಕ ಮಂಚಣ್ಣನೇ ಈ ಪೀಠದ ಪ್ರವರ್ತಕನಾಗುತ್ತಾನೆ. ಇವನ ಅಜ್ಜನು ಸೋಮಶಂಭುದೇಶಿಕ, ತಂದೆ 'ಕಾಮಿಕಾದ್ಯಖಿಳ ಶಿವಕಥಿತ ತಂತ್ರಾವಳಿಗೆ ಪ್ರೇಮದಿಂವೃತ್ತಿ ದೀಪಿಕೆಗಳಂ ಬಿತ್ತರಿಸಿ ! ಸೋಮಧರ ಸವಯುರ್ಮ ಧರಣಿಯುಳ್ ನಿಜಿಸಿದ' ಸಕಲಾಗಮಾಚಾರ್ಯನೆಂದು ನೀಲಕಂಠಾಚಾರ್ಯನೇ ತನ್ನ ಆರಾಧ್ಯ ಚರಿತ್ರೆಯಲ್ಲಿ ತಿಳಿಸಿದ್ದಾನೆ.

ಶಿವಲೆಂಕ ಮಂಚಣ್ಣನೂ ಸಾಮಾನ್ಯನಲ್ಲ. ಕಾಶೀ ಕ್ಷೇತ್ರದಲ್ಲಿ ಶಿವಸರ್ವೋತ್ತಮತ್ವವನ್ನು ಸ್ಥಾಪಿಸಿದನೆಂದು ಶಂಕರಾಧ್ಯನ ಸಂಸ್ಕೃತ ಬಸವ ಪುರಾಣದಲ್ಲಿ ಹೇಳಿದೆ. ಇವನು ತನ್ನ ಹತ್ತೂ ಬೆರಳುಗಳನ್ನು ಕಾಶಿಯ ವಿಶ್ವೇಶ್ವರನಿಗೆ ಅರ್ಪಿಸಿ ಮರಳಿ ಪಡೆದನೆಂದು ಕನ್ನಡ ಬಸವ ಪುರಾಣದಲ್ಲಿ ಹೇಳಿದೆ. ಕಲ್ಯಾಣಕ್ಕೆ ಬಂದು ಬಸವಣ್ಣನನ್ನು ನೋಡದಂತೆ ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಕರದಲ್ಲಿ ಹೇಳಿದೆ.

ಇವನ ಪವಾಡಗಳೇನೇ ಇರಲಿ, ಇಬನೊಬ್ಬ ದೊಡ್ಡ ವಿದ್ವಾಂಸ, ದೊಡ್ಡ ಶಿವಾನುಭವಿಯೆಂಬುದರಲ್ಲಿ ಸಂದೇಹವಿಲ್ಲ. ಉಪಲಬ್ಧವಿರುವ ಇವನ ವಚನಗಳೇ ಇದಕ್ಕೆ ಸಾಕ್ಷಿ.

"ಅಂಗವನರಿವನ್ನಕ್ಕ ಶಿವಲಿಂಗಪೂಜೆಯ ಮಾಡಲೇಬೇಕು;
ಆತ್ಮನ ಕ್ಷುಧೆಯುಳ್ಳನ್ನಕ್ಕ ಬಂದ ಪದಾರ್ಥವ ಲಿಂಗಾರ್ಪಿತವ ಮಾಡಲೇಬೇಕು;
ಇದು ಅರುವಿನ ಬಿತ್ತು, ಜ್ಞಾನದ ಗೊತ್ತು , ಸರ್ವಸಮಯದ ಯುಕ್ತಿ ,
ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗವನರಿವ ಶಕ್ತಿ "

ಎಂದು ಹೇಳಿರುವ ಶಿವಲೆಂಕ ಮಂಚಣ್ಣನ ವಚನಗಳೂ,

'ಅರಿವಿನ ಬಿತ್ತು, ಜ್ಞಾನದ ಗೊತ್ತು'

ಇದು ವ್ರತ–ಶೀಲ–ನೇಮಗಳ ವ್ಯಾಖ್ಯೆ :

"ಪರಧನವನೊಲ್ಲದಿಪ್ಪುದೇ ವ್ರತ; ಪರಸ್ತ್ರೀಯರ ಮುಟ್ಟದಿಪ್ಪುದೇ ಶೀಳ; ಸರ್ವಜೀವವ ಕೊಲ್ಲದಿಪ್ಪುದೇ ನೇಮ; ತಥ್ಯ ಮಿಥ್ಯವನಳಿದಿಪ್ಪುದೇ ನಿತ್ಯನೇಮ, ಇಂತಿದು ಸಂದೇಹವಿಲ್ಲದ ವ್ರತ–ಈಶಾನ್ಯಮೂರ್ತಿ ಮಲ್ಲಿ–ಕಾರ್ಜುನ ಲಿಂಗವನರಿವುದಕ್ಕೆ."

"....ಪರದ್ರವ್ಯ, ಪರಸತಿ, ಹುಸಿ, ಕೊಲೆ, ಕಳವು, ಅತಿಕಾಂಕ್ಷೆಯಂ ಬಿಟ್ಟು, ಬಂದುದನಿದ್ದಂತೆ ಕೊಂಡು, ಬಾರದುದಕ್ಕೆ ಕಾಂಕ್ಷೆಯ ಮಾಡಿದಿಪ್ಪುದೇ ಆರುವತ್ತು ನಾಲ್ಕು ಶೀಲ, ಐವತ್ತಾರು ವ್ರತ, ಮೂವತ್ತೆರಡು ನೇಮ...."

"...ಬಾಯ್ಯದಲ್ಲಿ ಶೀಲ, ಅಂತರ್ಯಾಮಿಯಲ್ಲಿ ದುಶ್ಶೀಲ; ಹೊರಗೆ ವ್ರತ, ಒಳಗೆ ಗತಕ–ಇನ್ನಾರಿಗೆ ಹೇಳುವೆ?"

ಇದು ಪಂಚವಕ್ತ್ರ ಪರಮೇಶ್ವರನ ರೂಪ :

"ರಸವನರಿವುದಕ್ಕೆ ಜಿಹ್ವೆಯಾಗಿ ಬಂದು, ಗಂಧವನರಿವುದಕ್ಕೆ ನಾಸಿಕವಾಗಿ ಬಂದು, ರೂಪವನರಿವುದಕ್ಕೆ ನೇತ್ರವಾಗಿ ಬಂದು, ಶಬ್ದವನರಿವುದಕ್ಕೆ ಶ್ರೋತ್ರವಾಗಿ

ಬಂದು, ಸ್ಪರ್ಶವನರಿವುದಕ್ಕೆ ತ್ವಕ್ಕಾಗಿ ಬಂದು–ಇಂತೆನ್ನ ಘಟದ ಮಧ್ಯದಲ್ಲಿ ನಿಂದು ಪಂಚವಕ್ತ್ರನಾದೆಯಲ್ಲಾ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವೆ!"

ಇದು ಅವನ ಪೂಜೆ :

"ಎನ್ನ ಕಾಯವೇ ದೇಗುಲವಾಗಿ, ಕುರುಹಿಟ್ಟು ಕೊಟ್ಟ ಕುರುಹೇ ಪ್ರಾಣಲಿಂಗವಾಗಿ, ನೋಡುವ ಕಣ್ಣೇ ಪೂಜಿಸುವ ಪುಷ್ಪವಾಗಿ, ಆನಂದಾಶ್ರುಗಳೇ

ಸಕಲ ಭೋಗವಾಗಿ, ಅಷ್ಟವಿಧಾರ್ಚನೆ, ಷೋಡಶೋಪಚಾರ ವರತುದೇ ಅಡ್ಡವಣಿಗೆ ಪರಿಯಾಣವಾಗಿ, ಪರಿಣಾಮವೇ ನೈವೇದ್ಯವಾಗಿ, ಅಖಂಡ ಭಕ್ತರತಿಯೇ ತಾಂಬೂಲವಾಗಿ ಪೂಜಿಸುತ್ತಿರ್ದನಯ್ಯ ! ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವೇ, ಎನ್ನ ಪ್ರಾಣ ಪೂಜೆ ನಿಮಗೆ."

ಇಂಥ ಪ್ರಾಣಪೂಜೆಯನ್ನು ಮಾಡಿಯೇ ಶಿವಲೆಂಕ ಮಂಚಣ್ಣನು 'ಶಿವಲೆಂಕ ಹಾಕಿದ ಮುಂಡಿಗೆಯ ನೀನೆತ್ತಮ್ಮದೆ ಎನ್ನ ಕೈಯೊಳಗಾದೆಯಲ್ಲಾ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವೆ?' ಎಂದು ಹೇಳಲು ಸಮರ್ಥನಾದನು; 'ನೀ ಎನ್ನಬಟ್ಟೆ,

ನಾನಿನ್ನ ಬಟ್ಟೆ–ಉಭಯವೂ ಒಂದೇ ಬಟ್ಟೆಯಾದೆಯೆಲ್ಲಾ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವೇ!' ಎಂದು ಘೋಷಿಸಲು ಶಕ್ತನಾದನು.

ಉರಿಲಿಂಗದೇವನ ಪೂರ್ವ ಪರಂಪರೆ ಉಜ್ವಲವಾಗಿರುವಂತೆ ಅವನ ಉತ್ತರ ಪರಂಪರೆಯೂ ಪ್ರಕಾಶಮಾನವಾಗಿದೆ. ಉರಿಲಿಂಗದೇವನ ಶಿಷ್ಯ ಉರಿಲಿಂಗಪೆದ್ದಿ, ಅವನ ಶಿಷ್ಯ ವಿಶ್ವೇಶ್ವರಪೆದ್ದಿ, ಅವನ ಶಿಷ್ಯಪರಂಪರೆಯಲ್ಲಿಯೇ ಮುಂದೆ ಸದಾಶಿವದೇವರು, ಸಂಹಿತೆಯ ಕಾಳಿದಾಸಭಟ್ಟರು, ಸರ್ವೇಶ್ವರದೇವರು, ಪ್ರಣಿಮಿ ದೇವರು, ಈಶಾನ್ಯದೇವರು, ಚೆನ್ನಿ ದೇವರು, ಚೆನ್ನ ಸೋಮಯ್ಯದೇವರು, ಬಾಗಿಯ ಬಂಕನಾಥದೇವರು, ಶಂಕರದೇವರು, ಗಂಗಾಧರದೇವರು, ಬಂಕನಾಥದೇವರು, ಪುರಾಣದ ಮಾಯಿದೇವ ಪಂಡಿತರು, ಬಂಕಯ್ಯದೇವರು, ಮಹಾಲಿಂಗದೇವರು ಕುಮಾರ ಬಂಕನಾಥದೇವರು, ಭಕ್ತಿ ಭಂಡಾರಿ ಜಕ್ಕಣ್ಣನವರು ಉದಯಿಸಿದರೆಂದು ಮಹಲಿಂಗನ ಏಕೋತ್ತರ ಶತಸ್ಥಲದಿಂದ ತಿಳಿದು ಬರುತ್ತಿದೆ. ಇವರೆಲ್ಲರೂ ಅನುಭಾವಿಗಳಿರಬೇಕು. ಮಹಾಲಿಂಗದೇವರು, ಶಿಷ್ಯಕುಮಾರ ಬಂಕನಾಥದೇವರು, ಶಿಷ್ಯ ಜಕ್ಕಣ್ಣನವರಂತೂ ಪ್ರೌಢರಾಯನ ಕಾಲದ ಜೀವಜ್ಯೋತಿಗಳೆಂದು ಪ್ರಸಿದ್ಧರಾಗಿದ್ದಾರೆ.

ಹೀಗೆ ನೂರಾರು ವರ್ಷಗಳವರೆಗೆ ಆರದೆ ಉಳಿದ ಅನುಭಾವ ಜ್ಯೋತಿಯನ್ನು ಹೊತ್ತಿಸಿದವರು ಶಿವಲೆಂಕ ಮಂಚಣ್ಣ–ಉರಿಲಿಂಗದೇವ–ಉರಿಲಿಂಗಪೆದ್ದಿ–ಕಾಳವ್ವೆಯರು, ಆ ಅನುಭಾವ ಜ್ಯೋತಿಗೆ ನಮ್ಮದೆ ಪ್ರಣತಿಯಾಗಲಿ !

■

# ಶೀಲಸಾರ್ವಭೌಮ ಸೋಮನಾಥ
# ೧೧೯೦-೧೨೪೦

ಕಾಮಾದಿ ಷಡ್‌ವರ್ಗರಹಿತ ಸುಹಿತಾಹಿತಂ
ತಾಮಸಾದಿಗಳಿಳಿದಭಂಗ ಮಹಿಮೋತ್ತುಂಗ
ರಾಮಣೀಯಕಪುಣ್ಯರೂಪ ನಿರ್ಗತತಾಪ ತತ್ತ್ವ ವಿದ್ಯಾಕಲಾಪ
ಆಮಯಾಸದ್ ಘನಸಮೀರ ಕವಿತಾಸಾರ
ಭೋಮಿಯೊಳು ಸದ್‌ವ್ರತಾಚಾರ ಸೌಖ್ಯಾಗಾರ
ಪ್ರೇಮಿ ಜಂಗಮಲಿಂಗಶೇಷ ಪಾಲ್ಕುರಿಕೆ ಸೋಮೇಶನಾ ಚಿದ್ವಿಲಾಸ ॥

–ಗುರುರಾಜ ಚಾರಿತ್ರ ೧೨. ೧೭

ವೀರಶೈವ ವೇದವ್ಯಾಸನೆಂದು ಸಂಸ್ತುತನಾದ ಸೋಮನಾಥನ ಹುಟ್ಟೂರು ಆಂಧ್ರದೇಶದ ಗೋದಾವರಿ ಜಿಲ್ಲೆಯಲ್ಲಿರುವ 'ಪಾಲ್ಕುರಿಕೆ' ಎಂದು ಕವಿ ಚರಿತ್ರೆಕಾರರೂ ತುಮಕೂರು ಜಿಲ್ಲೆಯ 'ಹಾಲ್ಕುರ್ಕಿ' ಎಂದು ಡಾ॥ ಚಿಲಕೂರಿ ನಾರಾಯಣರಾಯರೂ ನಲಗೊಂಡ ಜಿಲ್ಲೆಯ 'ಪಾಲಕುರಕಿ' ಎಂದು ವಿಮರ್ಶಕಾಗ್ರೇಸರ ಬಂಡಾರು ತಮ್ಮಯ್ಯನವರೂ ಹೇಳುತ್ತಾರೆ. ಗೋದಾವರಿ ಜಿಲ್ಲೆಯಲ್ಲಿ ಈ ಹೆಸರಿನ ಗ್ರಾಮವೇ ಇಲ್ಲವೆಂದು ಡಾ॥ ಹಳಕಟ್ಟಿಯವರು ಹೇಳುತ್ತಾರೆ. ಇನ್ನುಳಿದ ಎರಡರಲ್ಲಿ ಒಂದು ಇವನ ಹುಟ್ಟೂರಾಗಿರಬೇಕು. ನಲಗೊಂಡ ಜಿಲ್ಲೆಯಲ್ಲಿರುವ ಪಾಲಕುರಕಿಯೇ ಇವನ ಹುಟ್ಟೂರಾಗಿರುವುದು ಹೆಚ್ಚಿಗೆ ಸಂಭವನೀಯವಾಗಿದೆ. ಅಲ್ಲಿ ಬೆಟ್ಟದ ಮೇಲೆ ಸೋಮೇಶ್ವರ ದೇವಾಲಯವಿದೆ.ಸೋಮನಾಥನ ಪೂರ್ವಿಕರು ಆ ಸೋಮೇಶ್ವರ ಲಿಂಗದ ಅರ್ಚಕರಾಗಿದ್ದರಂತೆ. ಅದಕ್ಕೆ ಸಮೀಪದಲ್ಲಿ ಎಲಕುರ್ಕಿ, ಉರುಕುರ್ಕಿ ಎಂಬ ಹೆಸರಿನ ಹಳ್ಳಿಗಳಿವೆ. ಕಾಕಿತೀಯ ರುದ್ರದೇವನ ಕಾಲದ ಧರ್ಮಸಾಗರಶಾಸನ, ಕಾಕತೀಯ ಗಣಪತಿದೇವನ ಕಾಲದ ಕೊಂಡಪರ್ತಿ ಶಾಶನಗಳಲ್ಲಿ ಈ ಹಳ್ಳಿಗಳ ನಾಮನಿರ್ದೇಶವಿದೆ. ಕಾಕತೀಯರ ರಾಜಧಾನಿ ಓರುಂಗಲ್ಲು ಇಲ್ಲಿಗೆ ಹನ್ನೆರಡು ಹರಿದಾರಿಗಳ ದೂರದಲ್ಲಿದೆ. ಕಾಕತೀಯ ದೊರೆಗಳಿಂದ ಸನ್ಮಾನಿತನಾದ ಸೋಮನಾಥನು, ಆಂಧ್ರ ಸಾಹಿತ್ಯದ ಸೀಮಾಪುರಷುರಲ್ಲೊಬ್ಬನಾದ ಸೋಮನಾಥನು

ಇದೇ ಊರಿನಲ್ಲಿ ಜನಿಸಿದುದು ಹೆಚ್ಚು ಸಹಜ, ಸಂಭವನೀಯವೆಂದು ತೋರುತ್ತದೆ. ತೋಂಟದ ಸಿದ್ಧಲಿಂಗ ಶಿವಯೋಗಿಗಳು ತಮ್ಮ ಸೋಮೇಶ್ವರ ಪುರಾಣದಲ್ಲಿ ಪಾಲ್ಕುರಿಕೆಯು ಆಂಧ್ರ ದೇಶದಲ್ಲಿದೆಯೆಂದೇ ಹೇಳಿದ್ದಾರೆ.

ತನ್ನ ಪ್ರಥಮ ಕೃತಿಯಾದ 'ಅನುಭವಸಾರ'ದಲ್ಲಿ ಪಾಲ್ಕುರಿಕೆ ಸೋಮನಾಥ ತನ್ನ ವಿಷಯದಲ್ಲಿ–

"ಭೃಂಗಿರಿಟಿ ಗೋತ್ರಡುನು ಗುರು–
ಲಿಂಗ ತನೂಜಂಡ ಶಿವಕುಲೀನುಂಡ ದುರ್ವ್ಯಾ–
ಸಂಗ ವಿವರ್ಜಿತ ಚರಿತುಡ
ಜಂಗಮ ಲಿಂಗ ಪ್ರಸಾದ ಸತ್ಪ್ರಾಣುಂಡನ್"

"ನಾನು ಬೃಂಗಿರಿಟಿ ಗೋತ್ರದವ, ಗುರುಲಿಂಗನ ಮಗ, ಶಿವಕುಲೀನ, ದುರ್ವ್ಯಸನ ದೂರ ಚಾರಿತ್ರ್ಯವುಳ್ಳವ, ಲಿಂಗ ಜಂಗಮ ಪ್ರಸಾದ ಪ್ರಾಣಿ" ಎಂದು ಹೇಳಿಕೊಂಡಿದ್ದಾನೆ. ತಂದೆಯ ಹೆಸರು ಗುರುಲಿಂಗನೆಂದಾಯಿತು. ತಾಯಿಯ ಹೆಸರು? ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರರತ್ನಾಕರದಲ್ಲಿ ತಂದೆಯ ಹೆಸರು ರಾಮಿತಂದೆ ಮತ್ತು ತಾಯಿಯ ಹೆಸರು ಮಹಾದೇವಿಯಮ್ಮ–ಎಂದು ಹೇಳಿದೆ. ಆದರೆ ತೋಂಟದ ಸಿದ್ಧಲಿಂಗ ಶಿವಯೋಗಿಯು ಪಾಲ್ಕುರಿಕೆ ಸೋಮೇಶ್ವರ ಪುರಾಣದಲ್ಲಿ ಗುರುಲಿಂಗ ಮಂಗಲಾಂಬೆಯರೆಂದು ಹೇಳಿದೆ. ತಂದೆಯ ಹೆಸರನ್ನು ಸರಿಯಾಗಿ ಹೇಳಿರುವ ತೋಂಟದ ಸಿದ್ಧಲಿಂಗಯೋಗಿಗಳು ತಾಯಿಯ ಹೆಸರನ್ನೂ ಸರಿಯಾಗಿ ಹೇಳಿರುವರೆಂದು ಊಹಿಸಬಹುದಾಗಿದೆ. ಆದುದರಿಂದ ಗುರುಲಿಂಗ ಮಂಗಳಾಂಬೆಯರೇ ಸೋಮನಾಥನ ತಂದೆತಾಯಿಗಳೆಂದಿಟ್ಟುಕೊಳ್ಳಬಹುದಾಗಿದೆ. ಇಲ್ಲಿ ತನುಜನೆಂಬುದಕ್ಕೆ ಶಿಷ್ಯನೆಂದೇ ಅರ್ಥಮಾಡಬೇಕೆಂದೂ ಗುರುಲಿಂಗ ಸೋಮನಾಥನ ಗುರು, ತಂದೆಯಲ್ಲ; ತಾಯಿಯ ಹೆಸರು ಶ್ರೀ ಮಹಾದೇವಿಯಮ್ಮ; ಮಂಗಲಾಂಬೆ ಎಂಬುದಕ್ಕೆ ಯಾವ ಅರ್ಥವೂ ಇಲ್ಲವೆಂದು ಬಂಡಾರು ತಮ್ಮಯ್ಯನವರು ಬರೆದಿದ್ದಾರೆ. ಗುರುಲಿಂಗ ಸಾಮಾನ್ಯನಲ್ಲ–

"ಮಿಸುಪ ಸತ್ಪುಣ್ಯವಂತಂ ಪವಿತ್ರಾತ್ಮಕಂ
ಜಸವೆತ್ತ ಮಹಿಮಾನ್ವಿತಂ ತತ್ವಕೋವಿದಂ
ಶಶಿಕಲಾಧರಮೂರ್ತಿ ಕಾರುಣ್ಯಶೀಲನವಿರಳ ಚಿತ್ಸುಖಾವೇಶನು
ಅಸಮಚರಿತಂ ಗುಣತ್ರಯದೂರನತುಳಸಾ–
ಹಸಿ–ಸರ್ವಲೋಕ ವಂದ್ಯಂ ನಿತ್ಯಮುಕ್ತಂ ವಿ–
ಲಸದಮಳ ಗುರುಕುಲಲಲಾಮ ಗುರುಲಿಂಗಾರ್ಯ"ನು.



**ಪಾಲ್ಕುರಿಗೆ ಸೋಮನಾಥರು**

ಮಂಗಲಾಂಬೆಯ ಪತಿಗೆ ತಕ್ಕ ಸತಿ. "ಸಕಲ ಗುಣಮಣಿ, ಸರ್ವಕಾಮಿನೀನಿಕರದ ಶಿರೋಮಣಿ, ಪವಿತ್ರಾಮಳ ಚರಿತ್ರೆ, ಉತ್ಪಲನೇತ್ರೆ, ವಿಮಳತರಗಾತ್ರೆ, ಸುಜ್ಞಾನಯುಕ್ತೆ, ಶ್ರೀ ಮಹಾದೇವಾರ್ಚನಾಸಕ್ತೆ, ಭಕ್ತಿ ವಿಶ್ರಾಮೆ, ಬಂಧುರ ಪತಿವ್ರತೆ, ಶೀಲಸಂಪನ್ನೆ"ಯಾಗಿ ಶೋಭಿಸುತ್ತಿದ್ದಳು.

ಇವರಿಗೆ ಮಕ್ಕಳಾಗದಿರಲು ಕೊಲ್ಲಿಪಾಕಿಗೆಯ್ತಂದು ಶ್ರುತಿತತಿಗಳ ಮತಿಗೆ ಸಿಲ್ಕದ ಕುಂದದಾನಂದ ಸಂದೋಹನ, ಶರಣಜನ ಮಂದಾಕರನ, ಸೋಮೇಶನ ಪೂಜೆಗೈದು ಸಂತಾನವನ್ನು ಬೇಡಿದರೆಂದು ಸೋಮೇಶ್ವರ ಪುರಾಣದಲ್ಲಿ ಹೇಳಿದೆ. ಪಾಲ್ಕುರಿಕೆಯ ಸೋಮನಾಥನನ್ನೇ ಪ್ರಾರ್ಥಿಸಿಕೊಂಡರೆಂದು ಬಂಡಾರು ತಮ್ಮಯ್ಯನವರು ಹೇಳುತ್ತಾರೆ. ಅದೇನೇ ಇರಲಿ, ಸೋಮನಾಥನ ವರದಿಂದ ಹುಟ್ಟಿದ ಶಿಶುವಿಗೆ 'ಸೋಮನಾಥ'ನೆಂದೇ ನಾಮಕರಣ ಮಾಡಿದರು ಗುರುಲಿಂಗ ಮಂಗಲಾಂಬೆಯರು. ಭೃಂಗೀಶ್ವರನೇ ತನಯನಾಗಿ ಅವರಿಗೆ ದೊರೆತನಂತೆ. ಭೃಂಗೀಶ್ವರನ ಅವತಾರವಿರಲಿ, ಬಿಡಲಿ, ಹುಟ್ಟಿದ ಕಂದನು ಅಗಣಿತೋಜ್ವಲ ಮಹಾಜ್ಞಾನಿಯಾಗಿ ಬೆಳೆದನು. ನಾಲ್ಕು

ವೇದಗಳು, ೨೫ ದಿವ್ಯಾಗಮಗಳು, ಉಪನಿಷತ್ತು ಪುರಾಣಗಳು, ಕಾವ್ಯ, ನಾಟಕ, ಅಲಂಕಾರ, ವ್ಯಾಕರಣ, ತರ್ಕ, ನ್ಯಾಯ ಮೊದಲಾದ ಶಾಸ್ತ್ರದರ್ಶನಗಳು 'ನೆನೆಯಲನಿತರೊಳೆ ರಸನೆಯೊಳು ನೆಲೆಗೊಂಡವಾಗುರುವರ್ಯಗೆ'

ಅಮಲ ಬುದ್ಧಿ, ಭಾವಶುದ್ಧಿಗಳ ಸಿದ್ಧಿಯಾಯಿತು ಸೋಮೇಶ್ವರನಿಗೆ. ಪಾಲ್ಕುರಿಕೆ ಸೋಮನು ಶಿವಸಮಯಶರಧಿ ವರ್ಧನ ಸೋಮನಾಥನು, ಸನ್ಮಾರ್ಗ ವಿಶ್ರಾಮನಾದನು, ಷಡ್ವರ್ಗಭೀಮನಾದನು, ಶರಣಕುಲ ಲಲಾಮನಾದನು. ಯಾರ ಕೃಪೆಯಿಂದ? ಸೋಮೇಶ್ವರ ಪುರಾಣದ ಪ್ರಕಾರ, 'ಅತುಳಿತ ಮಹಾಮಹಿಮ, ಆಗಮ ವಿಚಾರ, ಉನ್ನತ, ಅಸದೃಶ, ಪಂಚಪಾಶವಿರಹಿತ, ನಿರ್ಜಿತ ಪಾಪ, ಜನ್ಮಜಾಡ್ಯದೂರ ಕಾಲಕಾಮ ಭಯ ನಿರ್ಧೂತ, ಶಿವಧರ್ಮತತ್ಪರ, ಅಮಳಕೀರ್ತಿ ವಿಶ್ರುತ, ಅಭವಸಮರೂಪ, ಲೋಕಪೂಜ್ಯವೇಮನಾರಾಧ್ಯ'ರೆಂಬ ಗುರುಪುಂಗವರಿದ್ದರು ಪಾಲ್ಕುರಿಕೆಯಲ್ಲಿ ಅವರ ತನಜಾತನೇ ಗುರುಲಿಂಗ; ಗುರುಲಿಂಗನ ತನುಜ ಸೋಮನಾಥ ಸೋಮನಾಥನು ವೇಮನಾರಾಧ್ಯರ ಮೊಮ್ಮಗನಲ್ಲ. ವೇಮನಾರಾಧ್ಯರ ಮೊಮ್ಮಗನಿಂದ ದೀಕ್ಷೆ ಪಡೆದವನೆಂದು ಹೇಳುವವರೂ ಉಂಟು.

ಈ ವೇಮನಾರಾಧ್ಯರೇ ಪೋರಾಂಡಲ ಪಟ್ಟಣದ ಪುಷ್ಪಾಚಯದಲ್ಲಿ ಅಡಿಗೆರಗಿದ ಪುರದರಸು ಸಾರಂಗರಾಜನನ್ನೂ ಅವನ ನೂತನ ರಾಣಿಯನ್ನೂ ಹರಿಸದೆ ಮರುದಿನ ಮಧ್ಯಾಹ್ನದೊಳಗಾಗಿ ಅರಸನಿಗೆ ಮರಣವಿರುದ ಕಾರಣ ಆಶೀರ್ವದಿಸಲಿಲ್ಲವೆಂದು ಹೇಳಿದ ವೇಮನಾರಾಧ್ಯರೆಂದು ಸೋಮೇಶ್ವರ ಪುರಾಣದಲ್ಲಿ ಹೇಳಿದೆ. ಈ ವೇಮನಾರಾಧ್ಯರು ಕಲ್ಯಾಣಕ್ಕೆ ಹೋಗಿ ಬಸವಣ್ಣನವರೊಡನೆ ಶಿವಾನುಭವಗೋಷ್ಠಿಗಳನ್ನು ನಡೆಸಿದರೆಂದೂ ತಿಳಿದುಬಂದಿದೆ.[೧] ಅಲ್ಲಿಂದ ಪಾಲ್ಕುರಿಕೆಗೆ ಬಂದರೆಂದು ಹೇಳುತ್ತಾರೆ. ಈ ವೇಮನಾರಾಧ್ಯ. ಗಣಸಹಸ್ರದಲ್ಲಿ ಬರುವ ಬೆಲ್ದೇವಿ ವೇಮನಾರಾಧ್ಯ, ಸೋಮನಾಥನ ಪಿತಾಮಹ ಇಲ್ಲವೆ ಅವನ ಗುರುವಿನ ಪಿತಾಮಹ ವೇಮನಾರಾಧ್ಯ ಮೂವರೋ, ಒಬ್ಬರೋ ಇಲ್ಲವೆ ಭಿನ್ನರೋ ಎಂಬುದು ಸಂಶೋಧಿಸಲ್ಪಡಬೇಕಾದ ಅಂಶವಾಗಿದೆ.

---

೧ ವೇಮನಾರಾಧ್ಯ ತೋಂಟದೊಳು ಪೂಗೊಯ್ಯುತಿರೆ । ಭೂಮೀಶ ಶರಣೆನಲ್ಕವನ ಮರಣವನರಿದು। ಸಾವಾನ್ಯವರಿ ಮಾಡಿ ಪರಸದಿರೆ ಮನೆಗೆಯ್ದಿಪಾವಗಿದು ಸಾಯಲೊಡನೆ ॥ ವೇಮಯ್ಯ ನಿಮಗೆ ವಂದಿಸಿದವಗೆ ಮರಣವೋ । ಪ್ರೇಮದಿಂ ಸಲಹೆಂದು ಹೆಣನ ಮುಂದಿಡಲಾಗ । ಲಾ ಮಹಾಮಹಿಮ ಪ್ರಾಣವನಿತ್ತು ಪೊರೆಯನೇ ವಂದಿಸಿದ ಫಲ ಪುಸಿವುದೆ ॥ ಗು.ರಾ.ಜಾ. ಸಂ. ೭ ಪ. ೯೫೧

ಒಟ್ಟಿನಲ್ಲಿ ಹೇಳುವುದಾದರೆ ಸೋಮನಾಥನು ಸದ್ಗುರುವಿನಿಂದ ಸಕಲ ಶಾಸ್ತ್ರ ಕಲೆಗಳನ್ನು ಕಲಿತು ದಿವ್ಯಜ್ಞಾನಿಯಾದನು. ಕಟ್ಟಕೂರ ಪೋತಿ ದೇವಯ್ಯನಿಂದ ಲಿಂಗಾಂಗಸಾಮರಸ್ಯ ರಹಸ್ಯವನ್ನು ಅರಿತನು. ಬಸವಣ್ಣನಲ್ಲಿ ನಿಸ್ಸೀಮ ಭಕ್ತಿಯುಳ್ಳನಾಗಿ ಬಸವಸ್ತುತಿಯಲ್ಲಿಯೇ, ಬಸವನ ಜಸವನ್ನು ಪಸರಿಸುವ ಕಾರ್ಯದಲ್ಲಿಯೇ ತನ್ನ ಅಮೋಘವಾದ ಕವಿತಾಶಕ್ತಿಯನ್ನೂ ಅದ್ವಿತೀಯವಾದ ಪಂಡಿತ್ಯವನ್ನೂ ಅಪಾರವಾದ ಆತ್ಮತೇಜಸ್ಸನ್ನೂ ವಿನಿಯೋಗಿಸಿದನು. ಆಂಧ್ರ ದೇಶದಲ್ಲಿ ಬಸವ ಭಕ್ತಿಯನ್ನು ಬಿತ್ತಿದ ಶ್ರೇಯಸ್ಸು ಆತನದು. ಅಷ್ಟೇಕೆ, ಬಸವ ಚರಿತ್ರೆಯನ್ನು ವಸುಧೆಗೆ ಮೊದಲು ನೀಡಿದಾತನೂ ಆತನೇ. ಬಸವಣ್ಣನವರು ಐಕ್ಯರಾದ ಐವತ್ತು ವರ್ಷಗಳೊಳಗಾಗಿಯೆ ಬಸವ ಪುರಾಣವನ್ನು ಬರೆದ ಆತನು ಅದಿಕವಿ ಬಸವ ವಾಙ್ಮಯಕ್ಕೆ. ಕಲ್ಯಾಣದ ದುರಂತದ ಮೊದಲೂ ತರಯವಾಯದಲ್ಲಿಯೂ ಅಲ್ಲಮಪ್ರಭು, ಅಕ್ಕಮಹಾದೇವಿ, ಮುಕ್ತಿಮುನಿ ಮೊದಲಾದವರು ಶ್ರೀಶೈಲಕ್ಕೆ ಪಯಣ ಬೆಳೆಸಿದ್ದರು. ಶ್ರೀಶೈಲವು ಶರಣರ ಕೇಂದ್ರವಾಯಿತು. ಅಲ್ಲಿಂದ ದೊರೆತ ಅಧಿಕೃತ ಸಂಗತಿಗಳ ಆಧಾರದಿಂದ ೧೧೯೦ರಲ್ಲಿದ್ದ ಸೋಮನಾಥನು ಬಸವಾದಿ ಪ್ರಮಥರ ಮತ್ತು ಪಂಡಿತಾರಾಧ್ಯರ ಚರಿತ್ರೆಗಳನ್ನು ಹೆಣೆದನಾಗಿ ಅವು ಹೆಚ್ಚು ಅಧಿಕೃತವೆನಿಸಿವೆ. ಹಂಪೆಯ ಹರಿಹರನು ಕಲ್ಯಾಣ, ಶ್ರೀಶೈಲಗಳೆರಡರಿಂದಲೂ ಬಹುದೂರದಲ್ಲಿದ್ದನಾಗಿ ಆತನು ಉಲ್ಲೇಖಿಸಿರುವ ಕೆಲವು ವಿಷಯಗಳು ವಿವಾದಾಸ್ಪದವಾಗಿ ಉಳಿದಿವೆ.

ಸೋಮನಾಥನ ಸೀಮೆಯರಿಯದ ಬಸವ ಭಕ್ತಿಗೆ ಅವನ ಕೆಳಗಣ ಶ್ಲೋಕ ಸಾಕ್ಷಿ :

"ಬಸವನಿ ಪುತ್ರುಂಡ ಬಸವಗೋತ್ರುಂಡ ಬಸವೇಶು ಶ್ರೀಪಾದ ಪದ್ಮಸಖರುಡ

ಬಸವನಿ ಬೊಗಡ ಬಾಲ್ಪಡು ಕವೀದ್ರುಂಡ ಬಸವನ್ನ ಬೊಗಡ ಬಾಲ್ಪದು ಪಾದಕುಂಡ

ಬಸವನ್ನ ದೂತನೇ ಬಸವನ್ನ ಬಂಟ ಬಸವನ್ನಯಿಲು ಪುಟ್ಟ ಬಾನಿಸ ಕೊಡುಕ

ಬಸವನ್ನಲೆಂಕನೇ ಬಸವನ್ನಲಿಂಗಿ ಬಸವನ್ನ ತನ್ನಲ ಪನ್ನಗಾವುನನು"

(ಬಸವೇಶ್ವರನ ಮಗ, ಬಸವಗೋತ್ರಜ, ಬಸವಪಾದಸೇವಕ, ಬಸವನನ್ನು ವರ್ಣಿಸಲಾಗದ ಕವಿ, ಬಸವದೂತ, ಬಸವನ ಬಂಟ, ಬಸವಲಿಂಗ ಪೂಜಕ– ಬಸವನನ್ನು ಶರಣುಹೊಕ್ಕು ನನ್ನನ್ನು ರಕ್ಷಿಸು.)

ಇದೆಂಥ ಬಸವ ಭಕ್ತಿ ! ಇನ್ನೂ ಕೇಳಿ–

| | | |
|---|---|---|
| ಬಸವನಿ | ಶರಣನ್ನಂ | ಪಾಪಕ್ಷಯಂಬು |
| ಬಸವನಿ | ಶರಣನ್ನಂ | ಪರಮುಪಾವನಮು |
| ಬಸವನಿ | ಶರಣನ್ನ | ಬ್ರತ್ಯಕ್ಷಸುಖಮು |
| ಬಸವನಿ | ಶರಣನ್ನ | ಭವರೋಗ ಹರಮು |
| ಬಸವನಿ | ಶರಣನ್ನ | ಭಪ್ತ ಚೇಕೂರು |
| ಬಸವನಿ | ಶರಣನ್ನ | ಬಂಧ ಮುಲ್ವಾಯು |
| ಬಸವನಿ | ಶರಣನ್ನ | ಭಾಗ್ಯಂಬುಪೊಂದು |
| ಬಸವನಿ | ಶರಣನ್ನ | ಬಾಯುನಾಪದಲು |
| ಬಸವನಿ | ಶರಣನ್ನ | ನೊಸಲಾರುಕೀರ್ತಿ |
| ಬಸವನಿ | ಶರಣನ್ನ | ಫಲಯಿಂಚುಗೋರ್ಕೆ |
| ಬಸವನಿ | ಶರಣನ್ನ | ಮೊಸಂಗು ವಾಕ್ಸಿದ್ಧಿ |
| ಬಸವನಿ | ಶರಣನ್ನ | ಭ್ರಾಜಿಲ್ಲು ಬುದ್ಧಿ– |

ಆದಿಯಿಲ್ಲ, ಅಂತ್ಯವಿಲ್ಲ ಅವನ ಬಸವ ಭಕ್ತಿಗೆ, ಅದನ್ನುಸುರುವ ಕಾವ್ಯಶಕ್ತಿಗೆ, ತೆಲುಗು, ತಮಿಳು, ಕನ್ನಡ, ಮರಾಠಿ, ಸಂಸ್ಕೃತ ಭಾಷೆಗಳೆಲ್ಲವನ್ನೂ ಬಳಸಿಕೊಂಡು ಅವನು ರಚಿಸಿರುವ ವೃಷಾಧಿಪಶತಕ ಅವನ ಬಸವಭಕ್ತಿಯ ಬಾಂದೊರೆ, ಆಂಧ್ರಶತಕ ಸಾಹಿತ್ಯದ ಸೀಮಂತ ರತ್ನ.

ಶ್ರೀ ಗುರು ಲಿಂಗಮೂರ್ತಿ! ಸವಿಶೇಷ ಮಹೋಜ್ವಲ ಕೀರ್ತಿ । ಸತ್ಕ್ರಯೋ।
ದ್ಯೋಗಕಳ ಪ್ರಮೂರ್ತಿ! ಯವಧೂತ ಪುನರ್ಭವಜಾರ್ತಿ! ಪಾಲತಾ ।
ಭ್ಯಾಗತ ಸಂಶ್ರೀತಾರ್ತಿ! ಕವಿ ಪಂಡಿತಗಾಯಕ ಚಕ್ರಮರ್ತಿ! ದೇ ।
ವಾ ಗತಿ ನೀವೆ ಮಾಕು ಬಸವಾ ಬಸವಾ ಬಸವಾ ವೃಷಾಧಿಪಾ ॥

“ಅಷ್ಟಭಾಷಾ ಸುಕವಿತ್ವ ರಚನಾ ಚತುರ”ನೆಂದು ಪ್ರಸಿದ್ಧನಾಗಿರುವ ಪಾಲ್ಕುರಿಕೆ ಸೋಮನಾಥನು ವೃಷಾಧಿಪ ಶತಕದಲ್ಲಿ ಹಲವು ಭಾಷೆಗಳನ್ನು ಉಪಯೋಗಿಸಿರುವುದಲ್ಲದೆ ಪಂಡಿತಾರಾಧ್ಯ ಚರಿತ್ರೆಯಲ್ಲಿ ಶ್ರೀಶೈಲಯಾತ್ರೆಯನ್ನು ವರ್ಣಿಸುವಾಗಲೂ ಹಲವು ಭಾಷೆಗಳನ್ನು ಉಪಯೋಗಿಸಿ ಅಷ್ಟಭಾಷಾದಿಗ್ಗಜಗಳಲ್ಲಿ ಒಬ್ಬನೆನಿಸಿದ್ದಾನೆ.

ಎಂಥ ಕೃತಿರಾಶಿ ಇವನದು! ಹದಿನಾಲ್ಕನೆಯ ಶತಮಾನದಲ್ಲಿ ಸೋಮನಾಥನ ದ್ವಿಪದಿ ಬಸವಪುರಾಣವನ್ನು ಪದ್ಯಕಾವ್ಯವಾಗಿ ರಚಿಸಿ ಅದನ್ನು ತನ್ನ ವಂಶ ಗುರು ಸೋಮನಾಥನಿಗೇ ಸಮರ್ಪಿಸಿದ ಪಿಡುಪರ್ತಿ ಸೋಮನಾಥ ಕವಿಯು–

"ಬಸವಪುರಾಣಂಬು ಪಂಡಿತಾರಾಧ್ಯುಲ ಚರಿತಂಬು ನನುಭವ ಸಾರಮುನಚ!

ತುರ್ವೇದ ಸಾರ ಸೂಕ್ತಲು ಸೋಮನಾಥ ಭಾಷ್ಯಮ್ಮು ಶ್ರೀ ರುದ್ರಭಾಷ್ಯಮ್ಮು, ಬಸವರಗಡ, ಗಂಗೋತ್ಪತ್ತಿರಗಡ, ಶ್ರೀ ಬಸವಾಢ್ಯರಗಡಮು, ಸದ್ಗುರುರಗಡ ಚನ್ನಮುಲ್ಲು ಸೀಸಮುಲು, ನಮಸ್ಕಾರ ಗದ್ಯಮು, ವೃಷಾಧಿಪ ಶತಕಂಬುನಾಕ್ಷರಾಂಕ ಗದ್ಯಪದ್ಯಮುಲ್, ಪಂಚಪ್ರಕಾರಗದಯ ಯಷ್ಟಕ ಪಂಚಕಮುನುದಾಹರಣ ಯುಗ್ಮ! ಮಾದಿಯಗುಕೃತಲ್ ಭಕ್ತಿ ಹಿತಾರ್ಥಬುದ್ಧಿ ಚೆಪ್ಪನಾರಿ ಭಕ್ತ ಸಭಲಲೋ ಚೆಲ್ಲುಚುಂಡು– ಸೋಮನಾಥನು ಭಕ್ತ ಹಿರಾರ್ಥವಾಗಿ ಬಸವಪುರಾಣ ಪಂಡಿತಾರಾಧ್ಯ ಚರಿತ್ರೆ, ಅನುಭವಸಾರ, ಚತುರ್ವೇದಸಾರ ಸೂಕ್ತಿ, ಸೋಮನಾಥಭಾಷ್ಯ , ಶ್ರೀ ರುದ್ರಭಾಷ್ಯ, ಬಸವರಗಳೆ, ಗಂಗೋತ್ಪತ್ತಿ ರಗಳೆ, ಶ್ರೀ ಬಸವಾಢ್ಯರಗಳೆ, ಸದ್ಗುರುಗಳೆ ಚೆನ್ನಮಲ್ಲಸೀಸ ಪದ್ಯಗಳು, ನಮಸ್ಕಾರ ಗದ್ಯ, ವೃಷಾಧಿಪರತಕ, ಅಕ್ಷರಾಂಕಗದ್ಯ, ಪಂಚಪ್ರಕಾರಗದ್ಯ, ಅಷ್ಟಕ ಪಂಚಕ, ಉದಾಹರಣಯುಗ್ಮ ಮೊದಲಾದ ಕೃತಿಗಳನ್ನು ಬರೆದನೆಂದು ಹೇಳುತ್ತಾನೆ. ಹೀಗೆ ದ್ವಿಪದಿ, ಪದ್ಯಕಾವ್ಯ ಶತಕ, ಸೀಸಪದ್ಯರಗಳೆ, ಗದ್ಯ–ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲಿಯೂ ಶೇಷ್ಠ ಕೃತಿಗಳನ್ನು ಸೃಷ್ಟಿಸಿ ಆಂಧ್ರಸಾಹಿತ್ಯದ ಅನೇಕ ಮುಖ ಪ್ರತಿಭೆಯ ಏಕಮೇವಾ ದ್ವಿತೀಯ ಮಹಾಕವಿಯಾಗಿದ್ದಾನೆ ಸೋಮನಾಥ.

ಹರಿಹರ ರಾಘವಾಂಕರು ಕನ್ನಡ ಸಾಹಿತ್ಯದ ಕ್ರಾಂತಿಪುರುಷರಾಗಿ ಮೆರೆದರೆ ಪಾಲ್ಕುರಿಕೆ ಸೋಮನಾಥನು ಆಂಧ್ರ ಸಾಹಿತ್ಯದ ಕ್ರಾಂತಿಪುರುಷನಾಗಿ ಕಂಗೊಳಿಸುತ್ತಿದ್ದಾನೆ. ಸಂಸ್ಕೃತ ವೃತ್ತಗಳನ್ನುಳಿದು ಹರಿಹರನಂತೆ ದ್ವಿಪದಿ, ರಗಳೆ, ಸೀಸಪದ್ಯ, ಶತಕ, ಗದ್ಯ ಮೊದಲಾದ ಸಾಮಾನ್ಯಜನ ಸುಲಭವಾದ ಜಾತೀಯ ಛಂದೋರೂಪಗಳಲ್ಲಿ ಕೃತಿರಚಿಸಿದ ಕೀರ್ತಿ ಅವನದು; ಸಂಸ್ಕೃತಪದಭೂಯಿಷ್ಠವಾದ ಪ್ರೌಢಕಾವ್ಯಪರಂಪರೆಯನ್ನುಳಿದು ಜಾನುತೆಲುಗಿನಲ್ಲಿ ಕೃತಿರಚನೆ ಮಾಡಿ ತೆಲುಗು ಭಾಷೆಗೆ ಸ್ವಂತಿಕೆಯನ್ನೂ ಶಕ್ತಿಯನ್ನೂ ಸ್ವಾತಂತ್ರ್ಯವನ್ನೂ ತಂದುಕೊಟ್ಟು ಖ್ಯಾತಿ ಅವನದು; ಜನಸಾಮಾನ್ಯರ ಬಾಯಲ್ಲಿ ತಲೆಮಾರುಗಳಿಂದ ಪಳಗಿ ಅನುಸ್ಯೂತವಾಗಿ ಬಂದಿದ್ದ ಗೇಯಸಾಹಿತ್ಯವನ್ನು ಉದ್ಧರಿಸಿ ಅದನ್ನು ಮಹಾಕಾವ್ಯದ ಮಾಧ್ಯಮವನ್ನಾಗಿ ಮಾಡಿದ ದಿಟ್ಟತನ ಅವನದು; ಛಂದೋ ವೈಶಿಷ್ಟ್ಯ, ಪ್ರಾಸವೈಶಿಷ್ಟ್ಯ, ಭಾಷಾವೈಶಿಷ್ಟ್ಯ ವಸ್ತುವೈಶಿಷ್ಟ್ಯಗಳ ಮೂಲಕ ನೂತನ ವಾಙ್ಮಯ ಪ್ರಪಂಚವನ್ನೇ ನಿರ್ಮಿಸಿದ ಅಘಟಿತ ಘಟನಾಶಕ್ತಿ ಅವನದು ; ಕರ್ಣಾಟಕಾಂಧ್ರ ಸಂಸ್ಕೃತ ಕವಿಗಳಿಂದ ಕೀರ್ತಿತನಾಗಿ,

ತೋಂಟದ ಸಿದ್ಧಲಿಂಗ ಶಿವಯೋಗಿಗಳಂಥ ಮಹಿಮರಿಂದ ತನ್ನ ಚರಿತ್ರೆ ಬರೆಸಿಕೊಂಡ ಭಾಗ್ಯ ಅವನದು. ಆಂಧ್ರಕವಿ ಸಾರ್ವಭೌಮ ಶ್ರೀನಾಥನು ಇವನ ಪಂಡಿರಾಧ್ಯ ಚರಿತ್ರೆಯನ್ನು ಮತ್ತೆ ಬರೆದಿರುವನೆಂದಮೇಲೆ ಸೋಮನಾಥನ ಸೌಭಗ್ಯವನ್ನೇನು ವರ್ಣಿಸುವುದು?

ಸೋಮನಾಥನು ಹರಿಹರನಂತೆ ಶಿವಶರಣರ ವಿಶ್ವಕೋಶಕಾರ. ಬಸವ ಪುರಾಣದಲ್ಲಿ, ಪಂಡಿತಾರಾಧ್ಯ ಚರಿತ್ರೆಯಲ್ಲಿ ಅನೇಕ ಶಿವಶರಣರ ಚರಿತ್ರೆಗಳನ್ನು ನಿರೂಪಿಸಿರುವುದಲ್ಲದೆ, ಗಣಸಹಸ್ರದಲ್ಲಿ ೪೬೫ ಪ್ರಮಥಗಣಗಳ, ೧೭೧ ರುದ್ರ ಗಣಗಳ, ೨೮ ಯೋಗಾಚಾರ್ಯರ, ೬೩ ಪುರಾತನರ ಮತ್ತು ೨೭೩ ಶಿವಶರಣರ ನಾಮನಿರ್ದೇಶಮಾಡಿ, ಅವರ ಸ್ಥಳನಿರ್ದೇಶಮಾಡಿ ಎಂದೆಂದಿಗೂ ಮರೆಯಲಾಗದ. ಮಹೋಪಕಾರವನ್ನು ಮಾಡಿದ್ದಾನೆ. ಈ ಕಾರ್ಯವನ್ನು ಅವನು ಮಾಡದೇ ಹೋಗಿದ್ದರೆ ಅನೇಕ ಶಿವಶರಣರ ಹೆಸರುಗಳು, ಅವರು ವಾಸಿಸಿದ ಸ್ಥಳಗಳ ಹೆಸರುಗಳು ಮರೆತುಹೋಗುವ ಸಂಭವವಿದ್ದಿತು.

ಈ ಅದ್ಭುತವಾದ ಕಾರ್ಯವನ್ನು ಸೋಮನಾಥನು ಸಾಧ್ಯವಾಗಿಸಿದುದು ಹೇಗೆ? ಅವೆಲ್ಲ ಸ್ಥಳಗಳಿಗೂ ಹೋಗಿ ವಿಷಯ ಸಂಗ್ರಹಿಸಿದನೆ? ಇಲ್ಲವೆ ತನ್ನ ಸಂದರ್ಶನಕ್ಕಾಗಿ ಬರುತ್ತಿದ್ದ ವಿವಿಧ ಪ್ರದೇಶಗಳ ಜನರಿಂದ ಸಂಗ್ರಹಿಸಿದನೆ? ಶ್ರೀಶೈಲ ಯಾತ್ರಿಕರಿಂದ ಸಂಗ್ರಹಿಸಿದನೆ? ಈ ಎಲ್ಲ ಮಾರ್ಗಗಳಿಂದಲೂ ಸಂಗ್ರಹಿಸಿರಬಹುದು. ಆತನ ವೃಷಾಧಿಪ ಶತಕದಲ್ಲಿ "ದೇವ ಪರೀ ತುಮ್ಹೀಚ ಗುರುದೇವ ಮ್ಹಣೂನ ತಿರೀ ತುಮ್ಹೀಚ ಗೋ! ಸಾವಿತರೀ ತುಮ್ಹೀಚ" ಇತ್ಯಾದಿ ಮರಾಠೀ ಶ್ಲೋಕವೊಂದಿದೆಯೆಂದು ನಾನು ಹೈದರಾಬಾದಿನ ನನ್ನ ಮಹಾರಾಷ್ಟ್ರ ಮಿತ್ರರ ಗಮನಕ್ಕೆ ತಂದಾಗ ಅವರ ಆಶ್ಚರ್ಯಾನಂದಗಳಿಗೆ ಪಾರವೇ ಇರಲಿಲ್ಲ. ಆಗ ಪುಲಿಗೆರೆಯಲ್ಲಿ ದೇವಗಿರಿ ಯಾದವರ ಮಾಂಡಳಿಕರಾಗಿ ರಾಜ್ಯಭಾರ ಮಾಡುತ್ತಲಿದ್ದ ಮಲ್ಲ. ಅವನ ತಮ್ಮ ಬೀಚುಗ, ಮಲ್ಲನ ಮಗ ಚಾವುಂಡರ ಕಾಲದಲ್ಲಿ ಮರಾಠೀ ಭಾಷೆ ಪ್ರಚಾರದಲ್ಲಿ ಬಂದಿರುವುದು ಸಾಧ್ಯವಿದೆಯಾದರೂ ಅಷ್ಟು ಬೇಗನೆ ಈ ಹೊಸ ಭಾಷೆಯನ್ನು ಕಲಿತು ಅದರಲ್ಲಿ ಶ್ಲೋಕ ರಚಿಸುವಷ್ಟು ಸಾಮರ್ಥ್ಯವನ್ನು ಪಡೆದ ಸೋಮನಾಥನಿಗೇನೆನ್ನೋಣ?

ಸೋಮನಾಥನ ಇನ್ನೊಂದು ಘನಕಾರ್ಯಶೀಲಗಳ ಸಂಯೋಜನೆ, 'ಶೀಲ ಸಂಪಾದನೆ'ಯ ರಚನೆ. ಇದರಲ್ಲಿ ಶರಣಮಾರ್ಗಾನುಯಾಯಿಗಳಿಗೆ ಸಾಧನ ಸಂಪತ್ತಾಗಬಲ್ಲ ೬೪ ಶೀಲಗಳ ವಿವರಣೆಯಿದೆ. ಅವುಗಳಲ್ಲಿ ಕೆಲವು ಆಚರಿಸಲು ಅತಿ ಕಠಿಣವಾದುವುಗಳು : ಕೆಲವು ಈಗಿನ ಕಾಲಕ್ಕೆ ಅನುಗುಣವಾದುವುಗಳಲ್ಲ.

ಆದರೂ ನಿಷ್ಠಾವಂತ ಸಾಧಕನ ಆತ್ಮೋನ್ನತಿಗೆ ಅವು ಸಹಾಯಕಗಳಾಗಿದ್ದು–ವೆಂಬುದರಲ್ಲಿ ಸಂದೇಹವಿಲ್ಲ. ಉದಾಹರಣೆಗಾಗಿ ಒಂದೆರಡು ಶೀಲಗಳನ್ನು ನೋಡಬಹುದು.

ಗುರುಲಿಂಗಜಂಗಮದೊಲತಿ ದೃಢಶ್ರದ್ಧೆಯುಳ್ಳವನಾಗಿ ಲಿಂಗಾರ್ಚನಾಸಕ್ತಿಯಿಂದಿರ್ಪುದೊಂದನೆಯ ಶೀಲಂ"

"ಅನೃತವಸ್ಥಿರವಾಕ್ಯ ವಂಚನಂ ಪಜ್ಞೆಭೇದನಮುದಾಸೀನ ನಿರ್ದಯವೆಂಬ ಷಡ್ವಿಧದ –ಲೌಕಿಕ ಮಾರ್ಗವಳಿಯಲೆರಡನೆಯ ಶೀಲಂ"

"ಪೂರ್ವ ಕರ್ಮದ ಬಿಡುಗಡೆಯದೈದನೆಯ ಶೀಲಂ."

"ತನ್ನ ಯುವತಿಗೆ ಗುರೂಪದೇಶಕ್ರಮದೆ ತನ್ನ ಶೀಲದ ಸಮನೆನಿಸಯುಂಟುಮಾಳ್ಪುದೇ ಪತ್ತನೆಯ ಶೀಲಂ."

"ಜಾತಿ ಸೂತಕವ ಶಿವಭಕ್ತರೊಳರಸರ್ಪುದೋತು ಪದಿನೈದನೆಯ ಶೀಲಂ"

"ಲವಣಮಂ ಸಲೆ ಬಿಡುವುದಿರ್ಪತ್ತನೆಯ ಶೀಲಂ."

"ತೊದಳಿಲ್ಲದಿರ್ಪುದೆ ಇಪ್ಪತ್ತನಾಲ್ಕನೆಯ ಶೀಲಂ."

"ಗುರುಲಿಂಗಜಂಗಮಕೆ ತನುಮನಧನಗಳಂ ವಂಚನೆಯಿಲ್ಲದೀಪುದೇ ಇರ್ಪತ್ತೈದನೆಯ ಶೀಲಂ."

"ಲಿಂಗವ ಬಯಸಿ ಬೇಡದುದೆ ಮುವತ್ತುವೊಂಬತ್ತನೆಯ ಶೀಲಂ."

"ದಾಂಭಿಕತ್ವದೆ ಶಿವಾರ್ಚನೆಯನಾಶೆಯೊಳು ದೀಕ್ಷೆಯ ಮಾಡದಿರ್ಪುದೇ ನಾಲ್ವತ್ತೊಂದನೆಯ ಶೀಲಂ.

"ತನುವಿಗಾಚಾರವಾಶ್ರಯವಾಗಿ, ಸುಜ್ಞಾನ ಮನಕೆಯಾಶ್ರಯವಾಗಿ, ಆಚಾರವೆಂಬುದೇ ಗುರುವಾಗಿ, ಅರಿವೇ ಜಂಗಮಸ್ವರೂಪವಾಗಿರ್ಪುದದು ಭಾವಿಸೆ ನಾಲ್ವತ್ತೈದನೆಯ ಶೀಲಂ."

"ನೆಗಳ್ದ ದಶವಾಯುಗಳ ಮಾರ್ಗಕ್ಕೆ ಚಲನದಿಂದ ಪುಗದಿರ್ಪುದೈವತ್ತನೆಯ ಶೀಲಂ."

"ಕಾಲ ಕಲ್ಪಿತಂಗಳನತಿಗಳವುದೆ ಐವತ್ತೆರಡನೆಯ ಶೀಲಂ."

"ಇಂದ್ರಿಯನಿಕರಂಗಳಂ ಲಿಂಗಮುಖಮಂ ಮಾಡಿ ಸಕಲ ಸುಖ ಪರಿಣಾಮಮಂ

ಲಿಂಗ ಮುಂತಾಗಿ ಸುಖಿಪುದೈವತ್ತಾರನೆಯ ಶೀಲಂ."

"ಸಲೆ ನಿರಂತರ ಸಾವಧಾನಿ ತಾನಾಗಿ ಷಟ್ಸ್ಥಲ ಮಾರ್ಗ ಸಂಪನ್ನನೆನಿಸಿಯಾಚರಿಪು ದೈವತ್ತೇಳನೆಯ ಶೀಲಂ."

"ಬಯಸಿ ಬಂದುದೆ ಅಂಗ ಭೋಗವಾಗಿ, ಬಯಸದೆ ಬಂದುದದು ತಾನೆ ಉಜ್ವಲಲಿಂಗ ಭೋಗವೆಂದರಿದು ಅನುಭವಿಸುವುದೇ ಐವತ್ತೆಂಟನೆಯ ಶೀಲಂ."

"ಆಹ್ವಾನವ ವಿಸರ್ಜನವನಳಿದಂಗ ಲಿಂಗವೆಂದು ತಿಳಿದನಾರತಂ ಲಿಂಗಾನುಭವಿಯಾಗಿಹುದೆ ಆರುವತ್ತನೆಯ ಶೀಲಂ."

"ತಾನಿದಿರೆಂಬುದಂ ಮರೆದು ಅಂತರ್ಬಾಹ್ಯಗಳೊಳು ಶಿವಲಿಂಗ ಸನ್ನಿಹಿತನಾಗಿ ಎಸೆದಿರ್ಪುದದೆ ಆರುವತ್ತೊಂದನೆಯ ಶೀಲಂ."

"ಶಿವಕೃತ್ಯವಲ್ಲದೇನುವ ಮನದೊಳು ನೆನೆಯದುದೆ ಆರವತ್ತೆರಡನೆಯ ಶೀಲಂ."

"ತನುವಿಡಿದು, ತನುಗುಣಗಳಿಲ್ಲದೆ, ಅಸುವಿಡಿದು ಪ್ರಾಣಧಮಂ ಅಣಮಿಲ್ಲದೆ, ಮನವಿರ್ದು ಸಂಕಲ್ಪನೆನಹೆಂಬುದಿಲ್ಲದೆ, ಅಂಗವೆ ಲಿಂಗವಾಗಿ, ಲಿಂಗವೆ ಅಂಗವಾಗಿ, ಆ ಮಹಾಘನಲಿಂಗವೇ ಪ್ರಾಣವಾಗಿ ಆ ಪ್ರಾಣವೇ ಘನಲಿಂಗವಾಗಿ ಸಹಭೋಜನಂಗೆಯ್ವುದು ಅರವತ್ತು ಮೂರನೆಯ ಶೀಲಂ."

"ತನ್ನಿಂದಿತರವಿಲ್ಲವಾಗಿ, ತೋರುವ ದೃಶ್ಯವಂ ಮಿಥ್ಯೆಯೆಂದರಿದು....ಶೀಲವೇ ಮಹಾಜ್ಞಾನವಾಗಿ–ಜ್ಞಾನವೇ ಶೀಲವಾಗಿ, ನನ್ನಿಯಿಂ ಭೇದಾಭೇದಗಳನುಳಿದು ಅಭಿನ್ನ ಪರಮಾನಂದರೂಪನಾಗಿರ್ಪುದು ಅರವತ್ತುನಾಲ್ಕನೆಯ ಶೀಲಂ.

ಇಂದೆಂಥ ಶೀಲಸಂಪಾದನೆ! ಕಲ್ಯಾಣದ ಶಿವಶರಣರು ಶೂನ್ಯಸಂಪಾದನೆಯ ಮಾರ್ಗ ತೋರಿ ಜಗದ್ವಂದ್ಯರಾದರೆ ಪಾಲ್ಕುರಿಕೆಯ ಸೋಮನಾಥನು ಶೀಲ ಸಂಪಾದನೆಯ ಹಾದಿಯನ್ನು ತೋರಿ ಮಹಾನುಭಾವನಾದನು. ಈ ಶೀಲಗಳಲ್ಲಿ ಕೈನೂಲಿನ ಬಟ್ಟೆಯನ್ನೇ ತೊಡಬೇಕೆಂಬುದೂ ಒಂದು ಶೀಲವಾಗಿದೆ. ಕದಿರೆ ರೆಮ್ಮವ್ವೆ ಕೈನೂಲಿನ ಕೀರ್ತಿಯನ್ನು ಕೊಂಡಾಡಿ ಕೃತಕೃತ್ಯಳಾಗಿದ್ದರೆ ಪಾಲ್ಕುರಿಕೆ ಸೋಮನಾಥ ಕೈಬಟ್ಟೆಯ ಕೀರ್ತಿಧ್ವಜವನ್ನು ಮೆರೆಸಿ ಧನ್ಯನಾಗಿದ್ದಾನೆ.

೬೪ ಶೀಲಗಳನ್ನು ಸಂಯೋಜಿಸಿ ಸುಮ್ಮನಾಗಲಿಲ್ಲ ಸೋಮೇಶ್ವರ. ಅವುಗಳನ್ನು ತಾನೇ ಮೊದಲು ಆಚರಿಸಿ ತೋರಿಸಿದನು. ಅದೆಷ್ಟು ಕಷ್ಟನಷ್ಟಗಳು ಎದುರಾದರೂ ಅದೆಂಥ ಅನಾನುಕೂಲತೆಗಳು ಅಡ್ಡ ಬಂದರೂ ಈ ಶೀಲಸಂಪಾದನೆಯ ದುರ್ಗಮವಾದ ಮಾರ್ಗವನ್ನು ಏಕಾಂತವೀರನಾಗಿ ತುಳಿದು ಶೀಲಸಾರ್ವಭೌಮನಾಗಿ

ಶೋಭಿಸಿ ಸೋಮನಾರಾಧ್ಯ–ಬಸವ ಕೃಪೆಗೆ ಪಾತ್ರನಾಗಿದ್ದ ಪಾಲ್ಕುರಿಕೆಯ ಸೋಮನಾರಾಧ್ಯ.

ಪಾಲ್ಕುರಿಕೆ ಸೋಮನಾಥನು ಪಾಲ್ಕುರಿಕೆ ಸೂರನಾಮಾತ್ಯನನ್ನು ತನ್ನ ಪಂಡಿತಾರಾಧ್ಯ ಚರಿತ್ರೆಗೆ ಶ್ರೋತೃವನ್ನಾಗಿ ಮಾಡಿಕೊಂಡಿದ್ದಾನೆ. ಅವನನ್ನು ತನ್ನ ಮುದ್ದು ಮೈದುನನೆಂದು ಸಂಬೋಧಿಸಿದ್ದಾನೆ. ಇವರಿಬ್ಬರ ಆತ್ಮೀಯ ಸಂಬಂಧ ವಿಶಿಷ್ಟವಾದುದು. ಸೂರನಾಮಾತ್ಯನೂ ಸಾಮಾನ್ಯನಲ್ಲ. ಪಂಡಿತಾರಾಧ್ಯ ಚರಿತ್ರೆಯಲ್ಲಿ–

ಸೀಸ ಪದ್ಯ – ವೀರ ಪೋಚೇಶ್ವರ ವಿಶ್ರುತಾಚಾರ್ಯ
ಕಾರುಣ್ಯ ಹಸ್ತಾಬ್ದ ಗರ್ಭ ಸಂಭವುಡ
ಚರಲಿಂಗ ಗುರುಲಿಂಗ ಸಾಹಿತ್ಯಲಿಂಗ
ಚಿರಸಮಯ ನಿಷ್ಠೈಕ ಶೀಲವರ್ಧನುಡ
ಕಡುಮಿಂಚಿ ಶಿವುನಕು ಗನ್ನು ಲರ್ಪಿಂಚಿ
ಪಡಿಸಿಸಿನ ದೃಢವೀರ ಭಕ್ತಿವರ್ಧನುಡ
ನೀ ದೃಗರ್ಪಿತ ಪುನರಾದಾನ ರತಿಕಿ
ನೀ ದಾನಧರ್ಮ ವಿನೀತಿಕಿ ಮೆಚ್ಚಿ
ನಸದೃಶಲೀಲ ಮಾಕನುಗಲಂಬನಿಯು ॥
ಮಚ್ಚಿಕ ನಾ ಮುದ್ದು ಮರಿದಿ ವೀವನಿಯು
ನೆಚ್ಚಿಲಿ ಕಾಡವು ನೀವ ಕಾವನಿಯು
ಚಾತುರ್ಯ ಸಾಹಿತ್ಯ ಶಾಲಿವೀವನಿಯು
ಶ್ರೋತೃತ್ವ ಮುನಕು ಬಾತ್ರುಂಡ ವೀವನಿಯು ॥

"ಸೂರನಾಮಾತ್ಯ, ನೀನು ಪ್ರಸಿದ್ಧನಾದ ವೀರ ಪೋಚೇಶ್ವರಾಚಾರ್ಯನ ಕರಕಮಲಸಂಜಾತ; ಚರಲಿಂಗ ಗುರುಲಿಂಗ ಸಾಹಿತ್ಯಲಿಂಗಗಳಲ್ಲಿ ಚಿರಸಮಯ ನಿಷ್ಠೈಕಶೀಲ; ಭಕ್ತಿಯ ಭರದಲ್ಲಿ ಶಿವನಿಗೆ ನಿನ್ನ ಕಣ್ಣುಗಳನ್ನೇ ಅರ್ಪಿಸಿ ದೃಢವಾದ ಭಕ್ತಿ ನಿಧಿಯನ್ನು ಪಡೆದೆ; ನಯನಾರ್ಪಣದಾನಕ್ಕೆ ಮೆಚ್ಚಿದ ಅವನ ಅಸದೃಶ ಲೀಲೆಯಿಂದ ನಿನಗೆ ಮತ್ತೆ ನೇತ್ರ ಪ್ರಾಪ್ತಿಯಾಯಿತು. ನನಗೆ ಮುದ್ದು ಮೈದುನನೂ ಆಪ್ತಮಿತ್ರನೂ ಸಾಹಿತ್ಯಶಾಲಿಯೂ ಆದ ನೀನೆನ್ನ ಕೃತಿಗೆ ಶ್ರೋತೃವಾಗಲು ಪಾತ್ರನಾಗಿರುವೆ" ಎಂದು ಸೋಮನಾಥನೇ ಸೂರನಾಮಾತ್ಯನನ್ನು ಪ್ರಶಂಸಿಸಿದ್ದಾನೆ.

ಇಂಥ ಸೂರನಾಮಾತ್ಯನಿಗೆ ಒಮ್ಮೆ ಸೋಮನಾಥನು ಬಸವಪುರಾಣದೊಳಗಿನ ಸಕಲೇಶಮಾದರಸರ ಕಥೆಯನ್ನೋದುತ್ತ ಶ್ರೀಗಿರಿಯ ವರ್ಣನೆಯನ್ನು ತನ್ನ

ಕವಿಸಹಜವಾದ ವಾಣಿಯಲ್ಲಿ ಮನಂಬುಗುವಂತೆ ಮಾಡಿದನು. "ಅಲ್ಲಿ ತರುಮರಗಳೂ ನದನದಿಗಳೂ ಬೆಟ್ಟತಿಟ್ಟುಗಳೂ ಖಡಮೃಗಗಳೂ ಕೊಳ ಕಾಲವೆಗಳೂ ದರಿಕರಂದರಗಳೂ ಗುರುರೂಪ, ಲಿಂಗರೂಪ, ಜಂಗಮರೂಪ, ವಿಭೂತಿ ರುದ್ರಾಕ್ಷಿ ರೂಪದಲ್ಲಿಯೇ ತೋರುವುವು. ಅಲ್ಲಿ ಮರವೊಂದರಲ್ಲಿ ಹಲವು ಬಗೆಯ ಹೂಗಳಿರುವು, ಹಲವಂದದ ಹಣ್ಣುಕಾಯಿಗಳಿರುವುವು" ಎಂದು ಭಾವಪರವಶವಾಗಿ ಬಣ್ಣಿಸಿದನು.

ಸೂರನಾಮಾತ್ಯನದಕ್ಕೆ ನಗುತ್ತ ನುಡಿದ, "ಇನಿತು ತೊದಳಂ ಪೇಳ್ವುದೇ ಭಾವ? ಇದಂ ಕೇಳ್ದೊಡೆ ಅಖಿಳಜನ ತೆಗಳದಿರ್ಪರೆ?" ಸೋಮನಾಥ ಸೂರನಾಮಾತ್ಯನ ಶಂಕೆಯನ್ನು ಸಮಾಧಾನಗೊಳಿಸಲೆಂದು, 'ಹಿಂದೆ ಹಿತ್ತಲದಲ್ಲಿ ಹತ್ತಿರ ಗಿಡವಿದೆ. ಅದಕ್ಕೆ ಚಂಪಕಾ, ಮಲ್ಲಿಕಾ, ಜಾಜಿ, ಕಮನ, ಕಣಿಗಿಲ ಹೂ ಬಿಟ್ಟಿವೆ. ತಿರಿದುತಾ' ಎಂದು ಹೇಳಿದನಂತೆ. ಸೂರನಾಮಾತ್ಯನು ಹೋಗಿ ನೋಡಲು ಹತ್ತಿಯ ಮರಕ್ಕೆ ಈ ಐದು ಬಗೆಯ ಹೂ ಬಿಟ್ಟಿರುವುದನ್ನು ಕಂಡು ಬೆಕ್ಕಸಬೆರಗಾದನಂತೆ.

ಇದು ಸೋಮನಾಥನು ಪವಾಡಪುರುಷನೆಂಬುದನ್ನು ಸಿದ್ಧಗೊಳಿಸಲು ಹೊಸೆದ ಕಗ್ಗವೆಂದು ಹಲವರು ಹೇಳಬಹುದು. ಆದರೆ ಭಾವಜ್ಞರಾದ ಅವರಿಬ್ಬರ ಕಣ್ಣಿಗೆ ಹತ್ತಿಯ ಮರದಲ್ಲಿ ಹಲವು ಬಗೆಯ ಹೂ ಕಾಣುವುದಂತಿರಲಿ, ಸಕಲ ವಿಶ್ವವೇ ಪುಷ್ಪಮಯವಾಗಿ, ಮಧುಮಯವಾಗಿ ತೋರಿದರೆ ಅದರಲ್ಲಿ ಆಶ್ಚರ್ಯವೇನಿದೆ? "ಮಧುವಾತಾ ಋತಾಯತೇ ಮಧುಕ್ಷರಂತಿ ಸಿಂಧವಃ" ಎಂದು ಹಾಡಿದ ನಾಡಿನಲ್ಲಿ ಇದಾವ ಚೋದ್ಯ?

ಸೋಮನಾಥನ ಶೀಲಸಂಪನ್ನತೆ, ಪ್ರತಿಭೆ, ಪಾಂಡಿತ್ಯ, ವ್ಯಕ್ತಿತ್ವಗಳ ಪ್ರಭಾವ ದಶದಿಶೆಗಳಲ್ಲಿ ಪಸರಿಸುತ್ತದೆ. ಓರುಂಗಲ್ಲಿನ ಕಾಕತೀಯ ಭೂಪಾಲ ಪ್ರತಾಪರುದ್ರದೇವನನ್ನು ರಾಜಧಾನಿಗೆ ಕರೆಸಿಕೊಂಡು ಸತ್ಕರಿಸಿ ಬೀಳ್ಕೊಡುತ್ತಾನೆ. ಆ ಸುದ್ದಿ ಚಕ್ರಪಾಣಿ ರಂಗನಾಥನೆಂಬ ವೈಷ್ಣವ ಪಂಡಿತೋತ್ತಮನ ಕಿವಿಗೆ ಮುಟ್ಟಿ ಅವನು ಸೋಮನಾಥನೊಡನೆ ವಾದಕ್ಕೆ ಬರುತ್ತಾನೆ. ಚಕ್ರಪಾಣಿ ರಂಗನಾಥನೂ ಸಾಮಾನ್ಯನಲ್ಲ. ವಿಷ್ಣುವಿನ ಅವತಾರವೆಂದು ವಿಖ್ಯಾತನಾಗಿದ್ದನು. ಅವನನ್ನು ವಾದದಲ್ಲಿ ಜಯಿಸುವುದು ಸುಲಭವಾಗಿರಲಿಲ್ಲ. ಆದರೆ ಸೋಮನಾಥನು ತನ್ನ ಮಗನಾದ ಚತುರ್ಮುಖ ಬಸವೇಶನಿಂದಲೇ ರಂಗನಾಥನನ್ನು ಸೋಲಿಸಿದನು. ಚತುರ್ಮುಖ ಬಸವೇಶ ತಂದೆಗೆ ತಕ್ಕ ಮಗ. ಅವನು 'ಚಾರುತರ ವೀರಶೈವಾಚಾರ ಮಾರ್ತವಿಸ್ತಾರನು, ಅಮಳಿನ ಸುಖಾಕಾರನು, ಅಗಣಿತ ಮಹೋದಾರನು, ಅನುಪಮ

ಕೃಪಾಪೂರನು, ಉದ್ಧತ ಕೀರ್ತಿಹಾರನು, ಅಚಲಿತ ಧೀರನು, ಸಾರಮಹಿಮಾಧಾರನು, ಅಧಿಕ ಭಕ್ತಿವಿಹಾರನು, ಶರಣ ಮಂದಾರನು, ಅತ್ಯಧಿಕ ಗಂಭೀರನು.'

ಅವನಿಂದ ಪರಾಜಿತನಾದ ರಂಗನಾಥನು ಶ್ರೀಶೈಲಕ್ಕೆ ಹೋಗಿ, ಶ್ರೀಶೈಲನಾಥಾಂಕಿತ ಪಂಚರತ್ನವನ್ನು ಪಠಿಸಿದನು.

'ಆಶ್ವೀಕೃತ ಸ್ವೀಕೃತ ವೇದರಾಶಿಃ
ಅಸ್ತೀಕೃತ ಸ್ತ್ರೀಕೃತ ದಾನವಾರಿಃ
ನಾಂಗೀಕೃತಾಂಗೀಕೃತ ಶಂಬರಾರಿಃ'
ಪಾಯಾತ್ ಸದಾ ದೈವತ ಸಾರ್ವಭೌಮಃ'

ಎಂದು ಅನನ್ಯಶರಣತೆಯಿಂದ ಪ್ರಾರ್ಥಿಸಿದನು. ಪಾಲ್ಕುರಿಕೆ ಸೋಮನಾಥನನ್ನು ಸೋಲಿಸುವ ಶಕ್ತಿಯನ್ನು ನೀಡೆಂದು ಬೇಡಿದನು. ಆದರೆ ಅಶರೀರವಾಣಿ ಹೇಳಿತು : "ರಂಗನಾಥ, ಸೋಮನಾಥನನ್ನು ನೀನು ಸೋಲಿಸಲಾರೆ. ಅವನ ಶಿಷ್ಯತ್ವವನ್ನು ವಹಿಸಿ ಪದ್ಗತಿ ಪಡೆ" ಎಂದು.

ರಂಗನಾಥನು ಪಾಲ್ಕುರಿಕೆಗೆ ಹಿಂದಿರುಗಿದನು ಸೋಮನಾಥನಿಗೆ ನತನಾಗಿ "ಶರಣವರೇಣ್ಯ , ಸದ್ಭಕ್ತಿಗಣ್ಯ , ನಿಖಿಲಶರಣ್ಯ , ನಿರ್ಜಿತ ತ್ರೈಗುಣ್ಯ, ಪರಮಶಿವ ತತ್ವ ಪ್ರಬುದ್ಧ ಸೌಖ್ಯಸಮೃದ್ಧ, ಶೀಲವ್ರತಾಚಾರ ಸಂಸಿದ್ಧ, ಸುಜ್ಞಾನವಿಸ್ಫುರಣ, ಭವಭಯೋತ್ತರಣ, ನಿರ್ಮಲಾಂತಃಕರಣ, ಸರಸಶೈವಾಚಾರವರ್ತಿ, ದೇಶಿಕ ಚಕ್ರವರ್ತಿ, ಸತ್ಪುಣ್ಯಮೂರ್ತಿ ಸಲಹೆಂ"ದು ಹಲುಬಿದನು ಸೋಮನಾಥನು ತನ್ನ ಮಗ ಚತುರ್ಮುಖ ಬಸವೇಶನಿಂದ ರಂಗನಾಥನಿಗೆ ಶಿವದೀಕ್ಷೆಯನ್ನು ಕೊಡಿಸಿ, ಶಿಷ್ಯನನ್ನಾಗಿ ಪರಿಗ್ರಹಿಸಿದನು. ರಂಗನಾಥನು ವೀರಭದ್ರ ವಿಜಯ, ಶರಭ ಚಾರಿತ್ರಗಳೆಂಬ ಕೃತಿರತ್ನಗಳನ್ನು ರಚಿಸಿ ಗುರುಪಾದಕ್ಕೆ ಸಮರ್ಪಿಸಿ ಧನ್ಯನಾದನು.

ಇದಾದಮೇಲೆ ಒಂದು ದಿನ ಚರಮೂರ್ತಿಯೊಬ್ಬನು ಸೋಮನಾಥನಿದ್ದೆಡೆಗೆ ಬಂದು ಕರ್ನಾಟಕದಲ್ಲಿ ಕಕುದ್ಗಿರಿಯ ದಕ್ಷಿಣಭಾಗದಲ್ಲಿರುವ ತಾರಕಾಚಲದಲ್ಲಿ ಕಲ್ಲೆಯವೆಂಬ ಪುರವೊಂದಿದೆ. ಅಲ್ಲಿ ತಾರಕಾಸುರನ ಸುತರು ಪೂಜಿಸಿ ತ್ರಿಪುರುಗಳನ್ನು ಪಡೆದ ಕಲ್ಲೇಶ್ವರ ಲಿಂಗವಿದೆ. ಅಲ್ಲೀಗ ಚೆನ್ನಮ್ಮನೆಂಬ ಒಬ್ಬ ಉಜ್ವಲಭಕ್ತೆ ಸರ್ವಶೀಲಸಂಪನ್ನೆಯಾಗಿ ಶಿವಭಕ್ತಿಯೇ ಸಾಕಾರವಾಗಿರುವುದೋ ಎಂಬಂತೆ ಇರುತ್ತಿದ್ದಾಳೆ–ಎಂದು ಅರುಹಿದನು. ಆ ಮಹಾಭಕ್ತೆಯನ್ನು ಯಾವಾಗ ನೋಡುವೆನೋ ಎಂದು ಉತ್ಕಂಠಿತನಾದ ಸೋಮನಾಥ ಅಂದೇ ಸೂರನಾಮಾತ್ಯ, ರಂಗನಾಥ ಮತ್ತು ಇನ್ನುಳಿದ ಶಿಷ್ಯಪ್ರಕರದೊಡನೆ ಕಲ್ಲೆಯಕ್ಕೆ ಪ್ರಯಾಣ ಬೆಳೆಸಿದನು.

ಚೆನ್ನಮ್ಮನ ಆನಂದದ ಉದಧಿ ಉಕ್ಕೇರಿತು. ಭಕ್ತಿಪಾರವಶ್ಯದಿಂದ ಪಾಲ್ಕುರಿಕೆಯ ಸೋಮನನ್ನು, ಶರಣಕುಲಲಾವನನ್ನು ಇದಿರ್ಗೊಂಡು ಮನೆಗೆ ಕರೆದೊಯ್ದಳು. ಅಲ್ಲಿ ಸೋಮನಾಥನು ಕೆಲದಿನಗಳನ್ನು ಲಿಂಗಾರ್ಚನ, ಗ್ರಂಥ ಲೇಖನ, ಶಿವಾನುಭವ ಪ್ರವಚನಗಳಲ್ಲಿ ಆನಂದವಾಗಿ ಕಳೆದನು. ಪಾಲ್ಕುರಿಕೆಗೆ ಹಿಂತಿರುಗಿ ಹೋಗುವೆನೆಂದು ಹೇಳಲು ಚೆನ್ನಮ್ಮ ಒಪ್ಪಿಲಿಲ್ಲ. ಇಂಥ ಸರ್ವಶೀಲ ಸಾರ್ವಭೌಮನನ್ನು ಕಳಿಸಲು ಆ ಸರ್ವಶೀಲ ಸಂಪನ್ನೆ ಹೇಗೆ ಒಪ್ಪುವಳು? ಆದರೂ ಸೋಮನಾಥ ಹೊರಟುನಿಂತನಂತೆ. ಆದರೆ ಬಂಡಿಗೆ ಕಟ್ಟಿದ ಬಸವಗಳು ಏನು ಮಾಡಿದರೂ ಮುಂದಕ್ಕೆ ಹೆಜ್ಜೆಯನ್ನೇ ಇಡಲಿಲ್ಲವಂತೆ! ಅದೆಂಥ ಭಕ್ತಿ ಚೆನ್ನಮ್ಮನದು!

ಸೋಮನಾಥ ಚೆನ್ನಮ್ಮನ ಕಲ್ಲೆಯ ಗ್ರಾಮದಲ್ಲಿಯೇ ಕೊನೆಯ ದಿನಗಳನ್ನು ಕಳೆದ. ಮಾಗಡಿಯಿಂದ ೫–೬ ಮೈಲಿಗಳಿರುವ ಈ ಗ್ರಾಮಕ್ಕೆ ಆ ಭಾಗ್ಯ ದೊರೆಯಿತು. ಶಿವನಿಂದ ಕೈಲಾಸಕ್ಕೆ ಬರಲು ಕರೆಯೂ ಬಂದಿತಂತೆ. ಆದರೆ ಅದಕ್ಕೆ ಸೋಮನಾಥ, ತಂದೆ, ನನ್ನ ಅಂಗದಲ್ಲಿ ಆಚಾರ್ಯ ನೆಲೆಸಿದೆ. ಈ ಅಂಗ ಲಿಂಗದಲ್ಲಿಯೇ ಲಯವಾಗಬೇಕು. ಲಿಂಗದಲ್ಲಿ ಬೆರೆಯುವುದನ್ನು ಬಿಟ್ಟು ನಿನ್ನ ಲೋಕಕ್ಕೆ ಬರಲಾರೆನು' ಎಂದು ಉತ್ತರವಿತ್ತನಂತೆ! ಎಂಥ ಲಿಂಗಾನುಭಾವಿ, ಲಿಂಗಪ್ರಾಣಿಯಾತ !

ಮುಂದೆ ಕೆಲವು ದಿನಗಳು ಕಳೆದ ಮೇಲೆ ಸೋಮನಾರಾಧ್ಯ ಶಿಷ್ಯರನ್ನು ಕರೆದು ಹೇಳಿದನಂತೆ–'ಇಂದಿಗೆ ೨೧ ದಿನಗಳಲ್ಲಿ ನನಗೆ ಶಿವಯೋಗ ಸಮಾಧಿ' ಎಂದು, ಕಲ್ಲೇಶ್ವರನ ರಾಜಾಂಗಣದಲ್ಲಿ ಮಕುಟಾಗಮದಲ್ಲಿ ವಿವರಿಸಿರುವ ಪ್ರಕಾರ ಅವನಿಗಾಗಿ ಸಮಾಧಿ ನಿರ್ಮಿತವಾಯಿತಂತೆ. ೨೧ನೆಯ ದಿನ ಸೋಮನಾಥನು ಸಮಾಧಿಯಲ್ಲಿಳಿದು ವೇದಿಕೆಯ ಮೇಲೆ ಕುಳಿತು ಲಿಂಗಾರ್ಚನೆ ಮುಗಿಸಿ ಪಂಚಾಕ್ಷರ ಮಂತ್ರವನ್ನು ಜಪಿಸುತ್ತ ಲಿಂಗದಲ್ಲಿ ಬಯಲಾದನಂತೆ. ಓರುಂಗಲ್ಲಿಗೆ ಸಮೀಪದ ಪಾಲ್ಕುರಿಕೆಯಲ್ಲಿಯೇ ಸಮಾಧಿಸ್ಥನಾದನೆಂದೂ ಆ ಸಮಾಧಿಯ ಮೇಲೆ ಇಂದಿಗೂ ಅವನ ಹೆಸರು ಕಂಗೊಳಿಸುತ್ತಿದೆಯೆಂದೂ ಚತುರ್ಭಾಷಾ ಪಂಡಿತ ಟಿ.ಎಚ್.ಎಂ. ಸದಾಶಿವಯ್ಯನವರು ತಿಳಿಸಿದರು.

ಮಹಾಕವಿ, ಮಹಾಶರಣ, ಮಹಾಶೀಲ ಸಂಪನ್ನ, ಮಹಾಗುರು ಸೋಮನಾರಾಧ್ಯ ಬಸವಾಯಣವನ್ನು ಬರೆದ ವಾಲ್ಮೀಕಿ, ಶರಣಚರಿತವನ್ನು ಬರೆದ ವ್ಯಾಸ, ಶರಣಕುಲದೀಪಕರಲ್ಲೊಬ್ಬ, ದಕ್ಷಿಣಭಾರತದ ಮಹಾಪುರುಷರಲ್ಲಿ ಒಬ್ಬ. ಸದ್ಭಕ್ತರ, ಶೀಲವ್ರತಿಗಳ, ಪೂಜಾನುರಕ್ತರ, ಮುಕ್ತರ, ಅನುಭವಲೋಲರ, ಜಿತಕಾಲರ, ಸತ್ಯರ, ನಿತ್ಯರ, ಸುದ್ಗುಣ ವಿಹಾರರ, ಭವದೂರರ ಧ್ರುವ ನಕ್ಷತ್ರ, ಅವನ ಸೈಪಿನ ಸುಗ್ಗಿಯನ್ನೇನು ವರ್ಣಿಸುವುದು?

ಪರಿಕಿಸಲ್ಮುಕ್ತಿ ಸಾಧನವಲ್ಲದಿರ್ಪ ಬಲು
ತೆರದ ದುಷ್ಕವಿತೆಗಳನೊಡರಿಸದೆ ಪರಶಿವನೊ
ಳಿರವಳಿದು ಬೆರೆದ ಪರಮಾನಂದವೀವ ಶಿವಶರಣಸಚ್ಚಾರಿತ್ರಮಂ
ಒರೆದಿಳಾತಳದೊಳ್ಜಸಂಬಡೆದು ಸನ್ಮಾರ್ಗ
ಚರಿತರೆಂದೆನಿಸಿ ಕೈವಲ್ಯವನಿತೆಯೊಳೆಯ್ದೆ
ನೆರೆಯಲೆಳಸಿದ ಮಹಾಕವಿವರರ ಸ್ಮೈಪಿನಚ್ಚರಿಯನೇನೆಂದುಸಿರ್ವೆನು?

■

# ಕವೀಶ್ವರ ಹರೀಶ್ವರ

ಸುತ್ತಲೂ ಸಾಲುಸಾಲಾಗಿ ನಿಂತಿರುವ ಹೇಮಕೂಟ ಮತಂಗ ಮೊದಲಾದ ಪರ್ವತಗಳು. ಆ ಪರ್ವತಶಂಕರರ ತೊಡೆಯನ್ನಲಂಕರಿಸಿರುವ ವನಗೌರಿ, ನಡುವೆ ಶುಭದ ಮುದ್ರೆಯಾಗಿ ಹರಿವ ತುಂಗಭದ್ರೆ, ಮುಂದೆ ಮುಗಿಲನ್ನು ಮುತ್ತಿಡುತ್ತಿರುವ ವಿರೂಪಾಕ್ಷನ ಗೋಪುರ, ಅಲ್ಲಿ ಶಿವಭಕ್ತ ಸಮೂಹ–ಇದು ಮಂಗಲದ ರಂಗಭೂಮಿ ಪಂಪಾಕ್ಷೇತ್ರ ! ಪೆಂಪಿನಂಗಡಿ ಪಂಪಾಪುರ!

ಪೆಸರುಗೊಂಡರಘವನೊಣಗಿಪ ಪಂಪಾಪುರಂ
ಅಸಮಾಕ್ಷನಲ್ಲಿ ಕೂಡಿಸುವ ಪಂಪಾಪುರಂ
ವಾರಾಣಾಸಿಗೆಯು ಮಿಗಿಲಾದ ಪಂಪಾಪುರಂ
ಮಾರಾರಿಗಂತು ಪುಗುಲಾದ ಪಂಪಾಪುರಂ ೧

ಎಂತಲೇ 'ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ'ವೆಂದರು ಬಸವಣ್ಣನವರು. ಸಕಲ ಪುಣ್ಯಂಗಳೋಲಗಿಪ ಪಂಪಾಪುರವದು.....

ಹದಿಮೂರನೆಯ ಶತಮಾನದ ಆದಿಯಲ್ಲಿ ಅಲ್ಲೊಬ್ಬ ಅಸಾಮಾನ್ಯ ಶರಣ ಕವಿ ಉದಯವಾದ. ಹರನ ಕರುಣೋದಯವಾದಂತೆ ಅರುಣೋದಯ ಅವನಿಗೆ. ನಿತ್ಯ ಮುಂಜಾವಿನಲ್ಲಿ ವಿರೂಪಾಕ್ಷನನ್ನು ಸ್ಮರಿಸುತ್ತ ಎದ್ದು ಭಸಿತೋದ್ಧಳನವ ಮಾಡಿ, 'ಪರಿಮಳ ಒಸರದಂತಗೆ ಬಿಗಿದು ನೆಯ್ದ ಹರಿವರಿಯ ಕರಡಿಗೆ'ಯನ್ನು ಹಿಡಿದುಕೊಂಡು , ವಿರೂಪಾಕ್ಷನ

'ಗೀರಂಗಳಂ ಹರುಷದಿಂ ಪಾಡುತಂ, ಅವನ ಪದ್ಯಂಗಳಂ ಪುಳಕಿಸುತ್ತೋ
ದುತಂ, ಪರಿಮಳದ ಸುಗ್ಗಿ ಸೌರಭದ ಸಂದಣಿ'ಯೆನಿಪ ಹೂದೋಟಕ್ಕೆ
ಬರುವುದು, ಅದನ್ನು ಕಾಣುತ್ತಲೆ 'ಸೋಂಪೇರಿ, ನಲವೇರಿ, ಪುಟವೇಳುತ
ಡ್ಡಮಂ ತ್ರಿಗುಟಮಂ ಪರಿದಾಡ, ನಟನಂತಿರುಗ್ಗಡಿಸಿ ಕುಣಿಕುಣಿದು

---

೧ ಪಂಪಾಕ್ಷೇತ್ರದ ಸ್ತೋತ್ರ–ಹರಿಹರ.

ಕೊಂಡಾಡ....ಪೂಗಳಂ ನಡೆನೋಡುತಾಹಾವಿರೂಪಾಕ್ಷ' ಎಂದೆನುತೆ ಚಂದ ಚಂದದಿ ಕುಸುಮ ವೃಂದವನು ನೋಡುತ್ತೆ 'ಎನಗಿಂತು ಕರುಣಿಸಿದನೇ ಸದಾಶಿವ'–ಎನುತ 'ಅಳಿಯೆರಗದ, ಅನಿಲನಲುಗದ', 'ರವಿಕರಂ ಪುಗದ' ಇರವಂತಿಯನ್ನು ಕಂಡು–

ಪರಶಿವಂಗೋಲ್ಯೆ ಪೂವ ನೀಡೌ ಎಂದು

ನನೆ ಮುಗುಳ್ ಕೊನೆಮಗಳ್ ಬಿರಿದಿರೆ ಮುಗುಳ್ಗಳಂ
ತನಿಗುಂಪು ತೀವಿರ್ದ ಪೊಚ್ಚಪೊಸಪೂಗಳಂ
ಕೊಂಡು ಕುಕಿಲಿರಿವುತಂ ಕುಣಿವುತಂ ನಡೆತಂದು
ಕಂಡು ಸಂಪಿಗೆಯ ಮರನಿರ್ದೆಡೆಗೆ ಪರಿತಂದು
ಏನವ್ವ ಸಂಪಿಗೆಯೆ ಶಿವನ ಸಿರಿಮುಡಿಗಿಂದು
ನೀನೀವ ಪೊಸಕುಸುಮವಂ ನೀಡು ನೀಡೆಂದು
ದೇವಂಗೆ ದೇವರ ಶಿಖಾಮಣಿಯ ಜಡೆಮುಡಿಗೆ
ಸೇವಂತಿ ನಿನ್ನಯಾ ಪೂವನೀಯೌ ಎನಗೆ...೨

ಎಂದು ಹೂಗಳನ್ನು ಬೇಡಿ ಪಡೆಯವುದು, ಆಮೇಲೆ ನಿರ್ಮಲಸ್ಥಾನವೊಂದನ್ನು ನೋಡಿ ಬಾಲಚೂತದ ಕೆಳಗೆ ಚಂದ್ರಕಾತದ ಶಿಲೆಯ ಮೇಲೆ ಕುಳಿತು ಬಾಳೆಲೆಗಳನ್ನು ಹಾಸಿ ಹೂ ಸುರಿದು ಹೂಮಾಲೆಗಳನ್ನು ಕಟ್ಟಿ ಶಿವನ ಮನೆಗೆ ಹೋಗುವುದು. ಅಲ್ಲಿ ಶಿವನೇಳುವವರೆಗೆ ಬಾಗಿಲಲ್ಲಿ ತಡೆದಿರುವುದು, ಆಮೇಲೆ 'ತಂದ ಪೊಸ ಸೇವಂತಿಯರಲ ಪನ್ನೀರಿನಿಂದವನ ಮುಖ ತೊಳೆದು, ಪೊಸಪರಾಗದ ವಿಭೂತಿಯನ್ನು ಹಚ್ಚಿ,

ಮಿಗೆ ನೇಹದಿಹ ನೋಡಿ ಮನದೊಳಗೆ ತೂಪಿರಿದು
ಮಘಮಘಿಪ ಕೇತಕಿಯ ನುಣ್ಣೆಸಳ್ಗಳಂ ಪಿಡಿದು
ಸಿರಿಮುಡಿಯನೊಯ್ಯನೆ ಸಡಿಲ್ಚಿನಯದಿಂದೊರಸಿ
ಪರಪರಿಯ ನೀಳ್ದ ಕೆಂಜೆಡೆಗಳನಲಂಕರಿಸಿ
ಎಳೆಯ ಶಶಿಕಳೆ ನೋಯದಂತೆ ಮೆಲ್ಲನೆ ಪಿಕ್ಕಿ
ಹೊಳೆವ ಸುರನದಿ ತುಳ್ಕದಂತೆ ಮೆಲ್ಲಗೆ ಸಿಕ್ಕಿ
.................................................................

೨ ಪುಷ್ಪದ ರಗಳೆ–ಹರಿಹರ.

ಭಕ್ತಿಸುಖದಿಂದಿತರ ಸುಖವದೆಲ್ಲಿಯದೆನಿಸಿ
ಮುಕ್ತಿಸುಖದಿಂದಧಿಕವಿದಕೆ ಪಡಿಯಿಲ್ಲೆನಿಸಿ
ತವೆ ಗದ್ಗದವುಮುಣ್ಮಿ ಪೊಣ್ಮಿ ಕರಗುತೆ ನಿಂದು
ವಿವೀ ರು ರೂ ಪಾ ಕ್ಷ ಕ್ಷವೆಂದೆನುತೆ ಮರವಂದು

ನಿಲ್ಲುವುದು, ತೂಗುವುದು, ಬೀಗುವುದು, ತೊನೆದಾಡುವುದು, ತೂಪಿರಿಯುವುದು,ರಿಂಗಣ ಗುಣಿವುದು, ಕುಕಿಲಿರಿಯುವುದು ಅವನ ದಿನಚರಿ. ಏನವನ ಭಕ್ತಿಯ ಪರಕಾಷ್ಠತೆ !

"ಮನವು ನಿಮ್ಮಡಿಗೆರಗಿ ಬುದ್ಧಿಯದು ತರ್ಕೈಸಿ



**ಶರಣ ಕವೀಶ್ವರ ಋಷಿವರ ಹರಿಹರ**

ನೆನಹು ನಿಮ್ಮೊಳು ಮುಗಲು ಚಿತ್ತವೆರಡಿಲ್ಲೆನಿಸಿ
ನಿನ್ನ ನಿಜವೆನ್ನ ಜೀವವನಿಂಬುಗೊಂಡಿರಲು
ನಿನ್ನ ರೂಪೆನ್ನ ಕಣ್ಗಳನಿಂಬುಗೊಂಡಿರಲು
ನಿನ್ನ ನುತಿಯೆನ್ನ ಜಿಹ್ವೆಯನಿಂಬುಗೊಂಡಿರಲು
ನಿನ್ನ ಜಪವೆನ್ನ ಕರ್ಣವನಿಂಬುಗೊಂಡಿರಲು
ನಿನ್ನಂಗವೆನ್ನ ಸರ್ವಾಂಗಮಂ ಪರ್ಬಿರಲು
ಅರ್ಚಿಸುತ್ತಿರ್ಪುದಂ ಕರುಣಿಸುವುದೆಲೆದೇವ!"

ಎಂದು ಬೇಡಿಕೊಳ್ಳುತ್ತಾನೆ ಆ ಭಕ್ತಿ ಶ್ರೀಮನೋವಲ್ಲಭ! ನೈವೇದ್ಯವನ್ನು ಮುಂದೆ ಚಾಚಿ–

'ಚೆನ್ನಯ್ಯ ನಿಕ್ಕಿದಂಬಲಿಯಿದಾರೈಸಯ್ಯ
ಕನ್ನೆ ನಿಮಗೆರೆದ ಹಾಲೆಂದು ಹಾರೈಸಯ್ಯ
ಚೋಳಿಯಕ್ಕನ ಬಾಯ ತುತ್ತೆಂದುಕೊಳ್ಳಯ್ಯ
ಚೋಳನಿಮಗಿತ್ತನ್ನವೆಂದು ಕೈಕೊಳ್ಳಯ್ಯ'

ಎಂದು ಭಕ್ತಿಮೀರಿ ಬೇಡುವನಾ ಭಕ್ತಿಭಾನು, ಆಮೇಲೆ ಹೃದಯ ರಸ ಉಕ್ಕೇರಿ ಹರಿಯತೊಡಗಲು.

"ನಿಂದೊಮ್ಮೆ ಹಾಡಿನೋಡುವೆನೆಂದು ಮನನಟ್ಟು
ಲಲಿತ ಬಂಗಾಳದಿಂದೊಲಿದು ನಿಮ್ಮಂ ಹಾಡಿ
ಮಲಹರಿ ವರಾಳಿಯಿಂದೊಲಿದು ನಿಮ್ಮಂ ಹಾಡಿ
ದೇಶಿಗುಜ್ಜರಿಗಳಿಂದೀಶ ನಿಮ್ಮಂ ಹಾಡಿ
ದೇಶಾಕ್ಷಿಗೌಳದೆ ಮಹೇಶ ನಿಮ್ಮಂ ಹಾಡಿ
ಬತ್ತೀಸರಾಗದಿಂದ ಕರ್ತು ನಿಮ್ಮಂ ಹಾಡಿ
ಚೆನ್ನಯ್ಯನಂ ಹಾಡಿ ಹೊನ್ನಯ್ಯನಂ ಹಾಡಿ
ಕಕ್ಕಯ್ಯನಂ ಹಾಡಿ ಚಿಕ್ಕಯ್ಯನಂ ಹಾಡಿ
ನಚ್ಚಿನರುವತ್ತು ಮೂವರನಸಂಖ್ಯಾತರಂ !"

ಹಾಡಿ ನಲಿಯುತ್ತಾನೆ. ಅವನು ಹಾಡಿದ ಹಾಡುಗಳೆಷ್ಟೋ ಯಾರು ನಿಷ್ಕರ್ಷಿಸಬೇಕು? ಅವುಗಳ ನಿಷ್ಕರ್ಷೆಗಾಗಿಯೇ ಪ್ರಗಲ್ಭ ಪ್ರಬಂಧ ಬರೆದರೊಬ್ಬರು.

---

೧ ಲಿಂಗಾರ್ಚನೆಯ ರಗಳೆ–ಹರಿಹರ

ಅವನು ಹಾಡಿದ ರಗಳೆಗಳ ಸಂಖ್ಯೆ ೧೦೬ ಎಂದು ನಿರ್ಧರಿಸಿದರು. ಮತ್ತೆ ಕೆಲವರು ರಾಘವಾಂಕ ಚರಿತೆಯಲ್ಲಿ ಬರುವ.

'...................... ಮದ್ಭಕ್ತ
ಸಾಂಗ ಚರಿತದೊಳೊರ್ವನಾಚರಣೆಯುಸುರೆ ವರು–
ಷಂಗಳ ಪರಿಮಿತಂಗಳಾಗಬೇಕದರಿಂದೆ ಸಪ್ತಶತಸಪ್ತಕಗಳ
ವರ ಪುರಾತನದ ಸುಚರಿತ್ರಗಳೊಳಾಂ ನಿನಗೆ
ಕಿರಿಕಿರಿದನೊರೆದು ರಗಳೆಯ ಪೇಳಿಸಿದೆನಿವಂ
ವರ ಭಕ್ತರಾಕರ್ಣನಂಗೆಯ್ವುತ್ತೈಹಿಕಾಮುಷ್ಮಿಕ ಮಹಾಸುಖಕ್ಕೆ
ಗುರಿಯಾಗಲೆಂಬ ಬಗೆಯಿಂದೊರೆದೆ ನೀನುಮುಂ"

ಎಂದು ಉಲ್ಲೇಖನದ ಆಧಾರದಿಂದ ಅವನು ಹಾಡಿದುದು ೭೭೦ ರಗಳೆಗಳೆಂದು ಪ್ರತಿಪಾದಿಸಿದ್ದಾರೆ. ಎಷ್ಟು ಹಾಡಿದನೋ ಅವನಿಗೇ ಗೊತ್ತು. ಶ್ರೀ ವಿರೂಪಾಕ್ಷನಿಗೇ ಗೊತ್ತು. ಎಂಥ ಅದ್ಭುತಶಕ್ತಿ ಅವನದು ! ಎಂಥ ಅಕ್ಷುಣ್ಣ ಪ್ರತಿಭೆ ಅವನದು ! ಎಂಥ ನಿರರ್ಗಳ ಕಾವ್ಯಧಾರೆ ಅವನದು ! ನೂರಾರು ರಗಳೆಗಳು, ಗಿರಿಜಾಕಲ್ಯಾಣ ಮಹಾ ಪ್ರಬಂಧ, 'ನವೀನ ನಿಜಭಕ್ತಿ ತರಂಗಿಣಿ ಮೀರುತುಬ್ಬರಂಬರಿಯುತ ಮೇಲೆ ಮಡುಗಟ್ಟಿದಂತಿ'ರುವ ಪಂಪಾಶತಕ ರಕ್ಷಾಶತಕಗಳು, ಮುಡಿಗೆಯ ಅಷ್ಟಕ–ಇನ್ನೂ ಏನೇನೂ । ೭೭೦ ಶರಣರ ಕಥೆಗಳನ್ನು ಸಂವಿಧಾನಗೊಳಿಸಿ, ಹೆಣೆದ ಅವನ 'ರಘಟಾ ಪ್ರಬಂಧ'ವು 'ಬೃಹತ್ತು ಮಹತ್ತುಗಳಲ್ಲಿ ರಾಮಾಯಣ ಮಹಾಭಾರತಗಳಿಗೆ ಸರಿದೂಗುವ ಕಾವ್ಯರಾಶಿ' ಎಂದು ಅಭಿಪ್ರಾಯ ಪಟ್ಟವರೂ ಉಂಟು.[೧]

ಇಷ್ಟೆಲ್ಲ ಪೂಜೆ, ಕೃತಿರಚನೆ, ಭಕ್ತಿಪಾರವಶ್ಯಗಳ ಉದ್ದೇಶವೇನು? ಅಭಿಲಾಷೆಯೇನು?

"ಆವ ಜಾತಿಗಳೊಳಗೆ ಹುಟ್ಟಿಸಿದೊಡೆಲೆದೇವ
ನೀವಲ್ಲದರಿಯದಂತಿರಿಸೆನ್ನನೆಲೆ ದೇವ !"

ಎಂಬುದೇ ಪ್ರಾರ್ಥನೆ, ಅದೇ ಆಸೆ, ಆಭಿಲಾಷೆ ಈ ಮಹಾತ್ಮನಿಗೆ !

'ಉರವಣಿಪ ಪರಮ ಭಕುತಿಯ ಸೊಕ್ಕು ತಲೆಗೇರಿ'

ಮಹೋತ್ಸಾಹದಿಂದ ಉಸುರಿದ ಇವನ ಮಹಾಕೃತಿಗಳಲ್ಲಿ ಹೊಸದೊಂದು ಪ್ರಪಂಚವೇ ರೂಪುಗೊಂಡಿದೆ. ಅದೊಂದು ವಿಸ್ಮಯಕರ ಪ್ರಪಂಚ. ಅದರಲ್ಲಿ

---

೧ ಸರ್ವಶ್ರೀ ಎಲ್. ಬಸವರಾಜು ಮತ್ತು ಬಿ.ಎನ್.ಶಾಸ್ತ್ರಿ–'ಹರಿಹರನು ಕಂಡ ಜ್ಯೋತಿರ್ಲಿಂಗದ ಮೂರು ಮುಖಗಳು'

'ಇಲ್ಲಿ ಜಗಕ್ಕೆ ಪೂಜಿತರುಂ ಅಲ್ಲಿ ಪರಕ್ಕೆ ವಿಶೇಷ ಪೂಜಿತರ್–ಇಂತು ಇಲ್ಲಿಯುಂ ಅಲ್ಲಿಯುಂ ಮೆರೆವ' ಅಸಂಖ್ಯಾತರ ಅಮರ ಚಿತ್ರಗಳಿವೆ. ಅಲ್ಲಿ

"ತಾನಿರ್ದಲ್ಲಿಗೆ ನಡೆತಂ
ದಾನರ್ಚಿಸೆ ಕಾಮಮ್ಮೈರಿ ನುಡಿಯಿಸದಂತ–
ರ್ಧಾನಕ್ಕೆ ಸಂದನದರಿಂ–
ದಾನಿರ್ದಲ್ಲಿಗೆ ಸಮಂತು ತನ್ನವೆ ತರ್ಪೆಂ"

ಎಂದು ಘೋರತಪವನ್ನಾಚರಿಸಿ, ನಿಸ್ಸೀಮ ಭಕ್ತಿಯಿಂದ, ಅಚಲಶ್ರದ್ಧೆಯಿಂದ, ನಿಷ್ಠುರನಿಷ್ಠೆಯಿಂದ ಶಿವನೇ ತನ್ನಲ್ಲಿಗೆ ಬರುವಂತೆ ಮಾಡಿದ 'ಬಲ್ಪಿನಭಾವುಕಿ, ಚಲದ ಲಲನೆ , ಗಿರಿಜೆಯಿದ್ದಾಳೆ ; ನಡೆದುದೇ ಬಟ್ಟೆಯಾದುದು ಶಿವನ ಮದಕರಿಗೆ, ನುಡಿದುದೇ ವೇದವಾದುದು ಲಿಂಗವಂತಂಗೆ !' ಎಂಬ ಅಗ್ಗಳಿಕೆಯ ಅಲ್ಲಮ ಪ್ರಭುದೇವರಂಥ ಸಿದ್ಧಪುರುಷರಿದ್ದಾರೆ ;

"ಮನವೆಂಬ ಭೂಮಿಯೊಳ್ ಭಕ್ತಿ ಬೀಜವನಿರಿಸಿ
ಅನುನಯದಿ ಪಂಚಾಕ್ಷರಿಯ ವೃಕ್ಷವವತರಿಸಿ
ಶಿವನ ನೆನಹೆಂಬ ಫಲವಂ ಪಡೆದು ಜೀವಿಪ
ಶಿವನ ಪರಮ ಸ್ನೇಹರಸಮುಮಂ ಸೇವಿಪ"

ರುದ್ರಪಶುಪತಿಯಂಥ ಮುಗ್ಧ ಶರಣರಿದ್ದಾರೆ :

"ಹಾಲ್ಗುಡಿಯದಿರ್ದೊಡೆಮ್ಮವ್ವೆ ಬಡಿದಪಳಯ್ಯ
ಹಾಲ್ಗುಡಿಯದಿರೆ ಮನೆಗೆ ಹೋಗಲಂಜುವೆನಯ್ಯ
ಹಾಲನೆರೆಯದೆ ತಾಯನೆಂತು ನೋಡುವೆನಯ್ಯ
ಹಾಲನೆಂತಾದೊಡಂ ಕುಡಿಯಯ್ಯ ಕುಡಿಯಯ್ಯ
ಎಂದತ್ತ ನಿಂದತ್ತು ನೆನೆದತ್ತು ಮುನಿದತ್ತು
ಸಂದಣಿಪನೇಹದಿಂದತ್ತತ್ತು ಮತ್ತತ್ತು"

ಗೋಗರೆವ ಕೊಳೂರ ಕೊಡಗೂಸಿನಂಥ ಸರಳಭಾವದ ತರಳೆಯರಿದ್ದಾರೆ:

"ಸಮಚಿತ್ತವೆಂಬ ಭೂಮಿಯನೆ ಹಸನಾಗಿರಿಸಿ
ಅಮರ್ದ ಶಂಕರನ ನೆನಹೆಂಬ ನೇಗಿಲನಿರಿಸಿ
ಅರಿಷಟ್ಕಮಂ ತಂದು ಹೊಡುವೆತ್ತಂ ಮಾಡಿ
ಹರಿವ ಮನವಂ ಕಟ್ಟಿ ಹಿಡಿವ ಹಗ್ಗಂ ಮಾಡಿ

ಗರ್ವಿಸುವಹಂಕಾರಮುಮನಚ್ಚುವಂ ಮಾಡಿ
ಸರ್ವೇಶನಿಷ್ಠೆಯಂ ತಳಿವ ಬೀಜಂ ಮಾಡಿ
ಸುರಚಿರ ಶಿವಜ್ಞಾನ ಸಸಿಗಳಂಕುರಿಸುತಿರೆ
ಹರನ ಪರಮಾನಂದರಸದ ಮಳೆಗರೆವುತಿರೆ”

ಶಿವನ ಸದ್ಭಕ್ತಿ ಸಸಿಗಳಂ ಬಿತ್ತಿಬೆಳೆವ, ಕ್ಷುತ್ಪಿಪಾಸಾದಿ ಕಳೆಗಳಂ ಕಿತ್ತು ಕಳೆವ ಇಳೆಯಾಂಡ ಗುಡಿಮಾರರಂಥ ಒಕ್ಕಲಿಗರಿದ್ದಾರೆ :

“ಪಾಪವೆಂಬ ಮಲಿನ ಮನದ ಸೀರೆಯ ತೆರಳ್ಚಿಕಟ್ಟಿ
ಕೋಪವೆಂವ ಕತ್ತೆ ನಿಲಲು ಬೆನ್ನಮೇಲೆ ಮಾಣದೊಟ್ಟಿ
ನಡೆದು ಭವನ ಭಕ್ತರಸದ ಹೊಳೆಯ ತಡಿಯ ಬಳಿಗೆ ಬಂದು
ಮೃಡನೆ ಶರಣೆನುತ್ತೆ ದೇಹಮೆಂಬ ಕಲ್ಲ ಬಳಿಗೆ ಬಂದು
ತಾಪತ್ರಯಗಳೆಂಬ ಕಿಚ್ಚಿನಿಂದೆ ಕುದಿಸೆ ಕುದಿವುತಿರಲು
ತಾಪವಾರೆ ವಸ್ತ್ರಕುಲಮನಲ್ಲಿ ಪಿಡಿದು ತೊಳೆವುತಿರು”ವ

ತಿರುಕುರುಂಪೆ ತೊಂಡನಂಥ ಅಗಸರಿದ್ದಾರೆ;

“ಬೋನಮಂ ಮಾಡುವೆಡೆ ದೇವಾರ್ಚನಾಸ್ಥಳಂ
ಏನೆಂಬೆನಲ್ಲಿ ಸಿಂಹಾಸನಂ ಕರತಳಂ
ನೆನೆವ ಘನಚಿಂತೆ ಸಕಲ ಸ್ತೋತ್ರವಭವಂಗೆ
ಮನದ ನಿರ್ಮಳವಗ್ಗವಣಿ ಮಹಾದೇವಂಗೆ
ಕೆಯ್ಯ ಕೀರೆಯ ಪರಿಮಳದ ಪುಷ್ಪವಭವಂಗೆ
ಸುಯ್ಯ ಕಂಪೇ ಗುಗ್ಗುಳಧೂಪವಾಮಹಿಮಂಗೆ
ನೋಟವೇ ಬೆಳಗಿನಾರತಿ ಶಂಕರಂಗಲಿ
ಊಟವಲ್ಲಿಯೆ ಸಮೆದ ಬೋನದೋಗರವಲ್ಲಿ
ಇಂತಾರುಮರಿಯದಂತಿರೆ ಶಿವನನರ್ಚಿಪ”

ಕಾರಿಕಾಲಮ್ಮೆಯಂಥ ಏಕಾಂತ ಭಕ್ತೆಯರಿದ್ದಾರೆ;

‘ರಾಗರಸದೊಳಗೆ ಪಂಚಾಕ್ಷರಿಗಳೇಳುತಿರೆ
ವದನದೊಳ್ವೇಣುವಿನೋಳ್ಳೆದಕ್ಕರಂಗಳಿರೆ
ಹೃದಯದೊಳಗುಸಿರೊಳಗೆ ಶಂಕರಂ ಸಿಲ್ಕುತಿರೆ
. . . . . . . . . . . . . . . . . . . . . . . . . .

ತಾನೆ ಕೊಳಲೂದಿ ತಾನೇ ಹಿಗ್ಗಿ ಹೆಚ್ಚುತಂ
ನಾನಾ ರಸಂಗಳಂ ಸವಿಸವಿದು ಪೊಂಗುತುಂ'
'ತನ್ನ ಗೋವಂಕಾವ ಇದಿರಗೋವಂ ಸೋವ,
ಭವನಿಚ್ಚೆ ತಾನಾಗಿ, ತನ್ನಿಚ್ಚೆ ಭವನಾಗಿ'

ಮರೆವ ಅನಯನಾರನಂಥ ಗೋವಳರಿದ್ದಾರೆ ;

'ಭೂಮಿ ಮುಸುಂಕಿದ ನಿಧಾನದ ತೆರದಿಂ
ತಾಮಸ ಮುಸುಕಿದ ಸತ್ಯದ ತೆರದಿಂ
ಶಿವಪೂಜಾಪರನತಿಗುಣಯುಕ್ತಂ
ಭವಭಯರಹಿತಂ ಕಾಲವಿಮುಕ್ತಂ'

ಆಗಿದ್ದ ಅತಿಭಕ್ತನಂಥ ಮೀನುಗಾರರಿದ್ದಾರೆ ;

'ಇಂತು ಕೂಲಿಗೆ ಕೊಯ್ವನಂತು ಪರಮಂಗೀವ
ಇಂತಿಂತು ಎಂತುವುಂ ಶಿವನತ್ತಲೇ ಭಾವ'ವಾಗಿರ್ದ

ಅತಿವಾಳ್ತಾಂಡನಂಥ ಭತ್ತ ಕೊಯ್ಯುವ ಕೂಲಿಕಾರರಿದ್ದಾರೆ ;

'ನಡೆ ಬಸವ ಕೈಲಾಸಗಿರಿಗೆ ಪುಷ್ಪಕದೊಳಗೆ
ಪೊಡವಿಯೊಳಗಿರಿವು ಸಾಲ್ವುದು ಬಾ ಮಗನೆ ನಿನಗೆ'

ಎಂದು ಶಿವ ಕರೆದಾಗ,

'ಶರಣರೊಕ್ಕುದರ ಸವಿ ಕೈಲಾಸದೊಳಗುಂಟೆ?
ಶರಣ ಸಂಗದ ಸುಖಂ ಕೈಲಾಸದೊಳಗುಂಟೆ?'

ಎಂದು ಕೇಳುವ ಬಸವಣ್ಣನವರಂಥ ಭಕ್ತಜನಭಾಗ್ಯಶುಭೋದಯರಿದ್ದಾರೆ :

'ಎಲೆಲೆ ಕೌಶಿಕ, ಹೋಗು ನೀನೇಕೆ ನಾನೇಕೆ
ನೆಲನರಿಯೆ ನಿನ್ನೊಡನೆ ಪುದುವಾಳ್ವುದೆನಗೇಕೆ
ತಮನೆತ್ತ ಬೆಳಗೆತ್ತ ಶಿಖಿಯೆತ್ತ ತಂಪೆತ್ತ
ಭ್ರಮೆಯೆತ್ತ ತಿಳಿವೆತ್ತ ಬಿಸಿಲೆತ್ತ ಶಶಿಯೆತ್ತ
ನೀನೆತ್ತ ನಾನೆತ್ತ ಪೋಗುಪೋಗೆಲೆ ಮರುಳೆ'

ಎಂದು ಜಡಿದು ನುಡಿದ ಮಹಾದೇವಿಯಂಥ ವೈರಾಗ್ಯಜ್ಯೋತಿಗಳಿದ್ದಾರೆ !

"ಹರಿಹರನ ಶಿವಗಣ ಪ್ರಪಂಚದ ವಿಭಿನ್ನ ವ್ಯಕ್ತಿಗಳ, ಸ್ವಭಾವದ, ಸ್ಥಾನ ಮಾನದ,

ವೃತ್ತಿಗಳ ನಿರೂಪಣೆಯಲ್ಲಿ ಅವರಿವರೆನ್ನದೆ ಎಲ್ಲರಿಗೂ ಸ್ಥಾನವಿದೆ. ಮನ್ನಣೆಯಿದೆ. ಅನೇಕ ವೈವಿಧ್ಯಗಳಿಂದ ಕೂಡಿದ ಭಿನ್ನಭಿನ್ನ ವ್ಯಕ್ತಿಗಳ ಸ್ವಾರಸ್ಯಕರವಾದ ಮೆರವಣಿಗೆಯು ಹರಿಹರನ ರಗಳೆಗಳಲ್ಲಿ ರೂಪುಗೊಂಡಿದೆ. ಇವರನ್ನೆಲ್ಲ ಬಂಧಿಸುವ ಏಕಸೂತ್ರವೆಂದರೆ, ಅವರೆಲ್ಲರೂ ಭಕ್ತರು, ನಿಷ್ಠಾವಂತರು, ಪರಮಾತ್ಮನಲ್ಲಿ ಅಚಲವಾದ ನಿಷ್ಠೆಯುಳ್ಳವರು, ಸಮರ್ಪಣಭಾವವುಳ್ಳವರು, ದೈವೀಕೃಪೆ ಪಡೆಯುವಲ್ಲಿ ಎಂಥ ಸಾಹಸಕ್ಕೂ ಕಷ್ಟಸಹಿಷ್ಣತೆಗೂ ತ್ಯಾಗಕ್ಕೂ ಹಿಂಜರಿಯದವರು. ಕೊನೆಗೆ ದೈವೀಕೃಪೆಗೆ ಪಾತ್ರರಾಗುವವರು."[೧]

ವೈವಿಧ್ಯವೊಂದರಲ್ಲೇ ಅಲ್ಲ. ಭಾಷೆಯ, ಬಣ್ಣನೆಯ, ನಿರೂಪಣೆಯ ನಾವೀನ್ಯದಲ್ಲಿಯೂ ಇದು ಅದ್ಭುತವದ, ಅನುಪಮವಾದ ಪ್ರಪಂಚ. ಏನಾಭಾಷೆಯ ಬೆಡಂಗು, ಓಘ, ಓಜಸ್ಸುಗಳು ! 'ಆ ರಭಸ, ಆ ವೇಗ, ಆ ಉಪಮಾನ, ಆ ಉತ್ಪ್ರೇಕ್ಷೆಗಳ ಪರಂಪರೆ ಅಪ್ರತಿಹತ !'[೨] ಅದು ಅವನ ಕಾವೇರಿಯ ವರ್ಣನೆಯಂತೆಯೇ ಇದೆಯೆಂದರೆ ತಪ್ಪಾಗದು :

ಕಾವೇರಿ ಸೋಂಕಿದರ ಪಾಪಮಂ ಸೋವೇರಿ
ಕಾವೇರಿ ಸಕಲ ಸಸ್ಯಾದಿಗಳ ಕಾವೇರಿ
ಹರಿದಳಾ ದೇಶದೊಳ್ ಹರಭಕ್ತಿರಸದಂತೆ
ಧರಣೀತಳಕ್ಕಮೃತ ವಿಮಳವಾರುಧಿಯಂತೆ[೩]

ಇದು ಇಳೆಯಾಂಡ ಗುಡಿಮಾರನ ಉದಾರ ಚಾರಿತ್ರ್ಯದ ಉದಾತ್ತ ಚಿತ್ರಣ:

"ಇನಿತೆನಿತು ಭೂಮಿಕ್ರಯದಿಂ ಮಾರಿ ಕಿರಿದಾಗೆ
ಅನಿತನಿತು ತನ್ನಯ ಮನಂ ಪೆರ್ಚಿ ಪಿರಿದಾಗೆ !"

ಇದು ತಿರುನಾಳ್ವೋವರನ ಯಥಾರ್ಥ ಮನೋಹರ ವರ್ಣನೆ :

"ಕುಲದೊಳ್ಕಿರಿಯಂ ಮನದೊಳ್ಪಿರಿಯಂ
ನೆಲದೊಳ್ಕಿರಿಯಂ ಪರದೊಳ್ಪರಿಯಂ

ಇದು ಪದ್ಮಾವತಿಯ ಯೌವನೋದಯದ ಸಾರವತ್ತಾದ ವರ್ಣನೆ :

"ನಡು ನಡೆ ನುಡಿಗಳು ಕಿರಿದಾಗುತ್ತಿರೆ
ಮುಡಿ ಮೊಲೆ ಜಘನಂ ಪಿರಿದಾಗುತ್ತಿರೆ"

---

೧ ಹರಿಹರನ ರಗಳೆಯಲ್ಲಿ ಜೀವನ ದರ್ಶನ: ಪು. ೨೨ – ಪ್ರೋ. ಸ.ಸ. ಮಾಳವಾಡ
೨ ದಿವಂಗತ ಎಂ.ಆರ್.ಶ್ರೀ.
೩ ಚೆನ್ನಯ್ಯನ ರಗಳೆ.

ಇದು ಶಂಕರದಾಸಿಮಯ್ಯನ ಪಾಲನೇತ್ರದ ಚಿತ್ರ :

'ಹೊಸಮಸೆಯ ತಿಸುಲಕ್ಕೆ ನೊಸಲಕಣ್ಣೊಗೆದಂತೆ–
ಅಸಮನಯನಕ್ಕೆ ಕರಚರಣ ಒಲ್ದೊಗೆದಂತೆ
ಉರಿವಗ್ನಿ ಹೆರೆನೊಸಲ ಹಸೆಯೇರಿ ನಿಂದಂತೆ
ತರಣಿ ಬಿಂಬದ ಹಿಂಡು ನೊಸಲ ಮರೆಹೊಕ್ಕಂತೆ'

ಇದು ರೇವಣಸಿದ್ಧನ ನಿಲವಿನ ನಿರೂಪಣೆ :

"ಲೋಕಕ್ಕೆ ತಾ ಮರುಳು ತನಗೆ ಲೋಕಂ ಮರುಳು
ಲೋಕದೊಳ್ ಸುಜನರ್ಗೆ ಶಿವನ ತತ್ವದ ಪುರುಳು"

ಇದು ಕಾಮಲತೆಯ ರಾಮಣೀಯಕ ವರ್ಣನೆ :

"ಮುಸುಕಿನೊಳು ಸಿಲುಕಿ ನಿಲುವರ್ ಭ್ರಮಿಸಿಯಲ್ಲಲ್ಲಿ
ನಸು ನೋಟದೊಳ್ ಸೋಲ್ವ ನವಯುವರ್ ಕೆಲರಲಿ
ನೇವುರದ ನುಣ್ಣನಿಯೊಳೆಳೆವುತಿರ್ಪರ್ ಕೆಲರು
ಭಾವಕದ ನಡೆಯೊಳಗೆ ಸಿಕ್ಕಿ ನಿಲುವರ್ ಕೆಲರು"

ಇದು ಪರಿಮಳವೆತ್ತು ಬಂದ ಪತಿ ತಿರುನೀಲಕಂಠರನ್ನು ಸಂಶಯ ಮುತ್ತಿದ ಸತಿ ಮುತ್ತೈದೆ ಸ್ವಾಗತಿಸುವ ನೋಟ :

"ಮನದೊಳಗೆ ಮುತ್ತೈದೆ ಮುಳಿದು ಸಿಡಿಮಿಡಿಗೊಂಡು
ಎನಲಮ್ಮದೊಳಗೊಳಗೆ ಜಿನುಗಿ ಗುಜಗುಜುಗೊಂಡು
ನಯನದೊಳಗಕ್ಕೆಯಂ ನೋಟದೊಳು ಮುನಿಸುಮಂ
ಬಯಕೆಯೊಳು ಬರನುಮಂ ಮೌನದೊಳು ನುಡಿಯುವಂ
ಮನದೊಳಗೆ ಚಿಂತೆಯಂ ನೇಹದೊಳು ಕೋಪಮಂ
ನೆನಹಿನೊಳು ಬೆರಗುಮಂ ತನುವಿನೊಳು ಬಿಸುಪುಮಂ
ಬಯ್ತಿಡುತೆ ಬಂದು ಮಾನಿನಿ ಪತಿಯ ಕಾಲ್ತೊಳೆದು
ಸಯ್ತಾಗಲೆಡೆಮಾಡಿ ಬೋನಂಗಳಿಂ ಪಿಡಿದು. . . . . .'

ಇದು ತಿರುನೀಲಕಂಠ ಮುತ್ತೈದೆಯರ ಮುಪ್ಪಿನ ಒಪ್ಪುವ ವರ್ಣನೆ ;

ಶಿವಭಕ್ತಿ ಸೋಪಾನದಂತೆ ತೆರೆಗಳು ಮಸಗೆ.
ಶಿವನಲ್ಲದಾರುಮಿಲ್ಲೆಂಬಂತೆ ತಲೆ ನಡುಗೆ'

ಇದು ಕಣ್ಣಪ್ಪನ ಪೂಜೆಯೋಜೆ :

"ಬಾಗುತುಂ ಕೈಚಪ್ಪಳಿಕ್ಕುತುಂ ಬೀಗುತುಂ
ಕೂಗುತುಂ ತೊನೆಯುತೊಂದೇ ಕಾಲೊಳಾಡುತುಂ
ಉಬುಬೆಂದು ಬೊಬ್ಬಿಟ್ಟು ಕೋ ಎಂದು ಕೂಗಿಟ್ಟು
ಅಬುಬೆಂದು ನಿಂದಾರ್ದು ನಾಲ್ದೆಸೆಗೆ ಕೊಣಕಿಟ್ಟು
ಕರಡಿಯಂದದೆ ಕುಪ್ಪಿಕುಪ್ಪಿ ಕೆಲೆಕೆಲೆದಾಡಿ
ಉರವಣಿಸಿ ಹಲ್ಲೆ ಗುಂತಿಕ್ಕಿ ನೆಗೆನೆಗೆದಾಡಿ
ಅಡಲರಿಯದೆ ಕಾಲ್ಗೆ ಬಂದಂತೆಯಾಡುತುಂ
ಪಾಡಲರಿಯದೆ ಎನ್ನವನೆ ಎಂದು ಪಾಡುತುಂ
ಬೆರಿಕೆ ಇಲ್ಲದ ಬಚ್ಚ ಬರಿಯ ಭಕ್ತಿಯೊಳಾಡಿ
ನೆರವಿಲ್ಲಬೇಕಾಂತ ಶಾಂತಭಕ್ತಿಯೊಳಾಡಿ
ದಿನದಿನಕೆ ಗಳಿಗೆಗಳಿಗೆಗೆ ನೇಹವೇರುತುಂ
ತನುಮನಕೆ ತನುಕಣ್ಗೆ ಪೊಸತು ಪಲ್ಲವಿಸುತುಂ"

ಇದು ಅನಾಯನಾರನ ಕೊಳಲದನಿ ಕೇಳಿ ಮೈಮರೆತು ನಿಂತ ಗೋವುಗಳ ಭಾವಜ್ಞ ಮನೋಹರ ಚಿತ್ರ :

"ಬಾರಿಸುವ ಕೊಳಲದನಿಗೆಯ್ತಂದು ಗೋಕುಲಂ
ಮೇರೆಗೆಟ್ಟರಿವುಗೆಟ್ಟು ಸಲೆ ನಿರಾಕುಳಂ
ಎಳಲ್ವ ಕಿವಿ ಮುಗಿದ ಕಣ್ಣೆತ್ತಿದ ಮುಖಂ ಮೆರೆಯೆ
ಇಳಿದ ಕಟವಾಯ ಹೊಸನೊರ ಗರುಂಕೆಗಳೆಸೆಯೆ
ಜೋಮ್ಮಿಸುತೆ ಜೋಲುತ್ತೆಯೊಂದನೊಂದಂ ನೆಮ್ಮಿ
ಸುಮ್ಮಾನವೇರಿ ಮೆಯ್ನಿಮಿರಿ ಸುಖಮಂ ಹೊಮ್ಮಿ
ಇಂತುಗೋಕುಲಮೆಲ್ಲ ಮರೆದು ಕೇಳುತ್ತಮಿರೆ !"

ಇದು ವೈಜಕ್ಕನು ಆಟ್ಟ ಅಡುಗೆಯ ಬೆಡಗು–

"ಹಾಲಲವುಗು ಹಾಲುಲುಂಡೆ ಹಾಲಮಂಡಿಗೆಗಳನಟ್ಟು
ಮೇಲೆನಿಪ್ಪ ತರಗಪೂಷಣಂಬುಮಂ ತೆರಳ್ಕೆ ಇಟ್ಟು
ಲಡ್ಡುಗೆಗಳನೆಸೆವ ಬೀಸು ಹೋರಿಗೆಗಳನೆಯ್ದೆ ಸಾರ್ಚಿ
ಇಡ್ಡಲಿಗೆಯನಣ್ಣೆವಾಲ ಪಾಯಸಂಗಳಂ ನಿಮಿರ್ಚಿ

ಮಧುರವಾಮ್ಲ ಕಟುಕತಿಕ್ತ ಲವಣಕೃಪೆ ಹೆಸರನುಳ್ಳ
ಮಧುಗೆ ವಿಧುಗೆ ಸುಧೆಗೆ ಮಿಗಿಲೆನಿಪ್ಪ ರುಚಿಯರೂಪನುಳ್ಳ
ಸಕಲ ಸುಖವನಾಂತ ಷಡುರಸಾಯಂಗಳೊಪ್ಪ ಮಾಡಿ."

ಇದು ಭೃಂಗಿಯ ನಾಟ್ಯವರ್ಣನೆ :

"ಧಿಧಿ ಕಾರವನುಗುಳಲ್ಮದ್ದಳೆಗಳ್
ಸುಧೆಯ ಸೂಸುತ್ತಿರಲಾವುಜಗಳ್
ಸುಗತಿಯನುಗುಳುತ್ತಿರೆ ಕಹಳೆಗಳುಂ
ಸೊಗಸಂ ಸೊಂಪಿಸುತಿರೆ ಕರಡೆಗಳುಂ
ಕೈಸಾಳಂ ಸನ್ನೆಯೊಳೊತ್ತುತ್ತಿರೆ
ದೇಸಾಳಂ ನುಡಿಯೊಳೆ ಬಳೆವುತ್ತಿರೆ
ತಾಳಂ ನರ್ತನವಂ ಕರೆವುತ್ತಿರೆ
ಮೇಳವಣೆಗೆ ಶಬ್ದಂ ಕೊಡುತ್ತಿರೆ
ಬಿಂಕದ ಕಾಳಾಸಂ ತುಳ್ಕಾಡಲ್
ಭೋಂಕನೆ ಮುಂದಣ ಜವನಿಕೆಯೋಡಲ್
ಹೊಗೆ ತಗ್ಗಿದ ಹುತವಹನಂತಿರ್ದಂ
ಮುಗಿಲೋಸರಿಸಿದ ರವಿಯಂತಿರ್ದಂ
ಛಾಯೆಯಡಂಗಿದ ಜ್ಯೋತಿಯೊಲಿರ್ದಂ
ಮಾಯೆಯಡಂಗಿದ ಹರನಂತಿರ್ದಂ
ಇರಲೊಪ್ಪಿತು ಭೃಂಗಿಯ ಶೃಂಗರಂ
ಸಿರಿಮಧ್ಯದ ಲಿಂಗದ ವಿಸ್ತಾರಂ
ಕೆಯ್ಯೊಳಗೊಪ್ಪಲ್ ನರ್ತನ ದಂಡಂ
ಮೆಯ್ಯೊಳ್ ಹೊಳೆಯಲ್ಗತಿಗಳ ತಂಡಂ
ಮೊಯ್ಯೊಳ್ ಸರ್ವಾಂಗದೊಳೆ ಸುಗತಿಗಳ್
ಬೆಳೆಯಲ್ ತ್ರಿಭಂಗಿಗೊಂಡಾಕೃತಿಗಳ್
ಅಡಿತೆ ಗತಿ ನಿಂದುದೆ ಕಾಳಾಸಂ
ನೋಡಿತೆ ಸೊಗಸಿರ್ದುದುದೆ ವಿಳಾಸಂ
ತಾನಾಗಿರೆ ರಸಮಯನಾಗುಡುತೆ
ನಾನಾವಿಧ ಬಹುಗತಿಗಳ್ ತೋರುತೆ"

ಇದು ವಾದ್ಯಸಂಭ್ರಮ :

ತಂದೊಂ ಧಿತ್ತೊಂ ಧೋಮೆಂದೆನುತಂ
ದಿಂ ದಿಂ ' ಧಿಮಿಧೀ ಧಿಮಿತೆಂದೆನುತಂ
ದುಮುದುಮು ತತ್ತೋಂ ತತ್ತೊಂಗೆನುತಂ
ಚಮಕಂ ತಕನಕ ತಕ ಎಂದೆನುತುಂ
ಝುಂ ಝುಂ ಝುಂ ಝುಂ ತಕತಕ ಎನುತುಂ
ಝುಂ ಝುಂ ಧಿಕ್ಕಟ ತಕ್ಕಟ ಎನುತುಂ
ಝಾಂದ್ರಂಕಟ ಝೋಂದ್ರಂಕಟ ಎನುತುಂ
ಸಂಗೀತಧ್ವನಿ ಯುಮ್ಮಳಿಸುತ್ತಲ್
ಜಂಗಮನಾದಂ ನಭಮಂ ಮುಟ್ಟಲ್[೧]

ಈ ಮಹಾನುಭಾವನಿಗೆ ನಿಲುಕದ ವಿಷಯವೇ ಇಲ್ಲ. ಕರತಲಾಮಲಕವಾಗದ ಕಲೆಯೇ ಇಲ್ಲ, ಕೈವಶವಾಗದ ಕಾವ್ಯ ಗುಣಾಲಂಕಾರಗಳೇ ಇಲ್ಲ, ಓತು ಬಂದೆರಗದ ಮಾತಿನ ರೀತಿಗಳೇ ಇಲ್ಲವೆಂದು ತೋರುತ್ತದೆ. 'ಅವನ ಹಾಗೆ ಹವಣಿನ ಬೆಲೆಯನ್ನರಿತಿರುವ ಕವಿಗಳು ಇಡೀ ಕನ್ನಡ ಸಾಹಿತ್ಯದಲ್ಲಿಯೇ ನಾಲ್ಕಾರು ಜನರು ಕೂಡ ದೊರೆಯಲಾರರೆಂದರೆ ತಪ್ಪಾಗದು' ಎಂದು ಅ.ನ. ಕೃಷ್ಣರಾಯರೆಂದರೆ, 'ದುರ್ದಮನೀಯವಾದ ಅಂತರಾವೇಶದ ಬಲುಮೆಯಿಂದ, ಗಂಭೀರವಾದ ಆತ್ಮವಿಶ್ವಾಸದ ಶಕ್ತಿಯಿಂದ ಹೊಸದಾರಿಯನ್ನು ಮಾಡಿಕೊಂಡು ನಡೆದ 'ಅಘಟಿತ ಘಟನಾ ನೂತನ ಬ್ರಹ್ಮ'ರಲ್ಲಿ ಒಬ್ಬನವನೆಂದು ಎಂ. ಆರ್. ಶ್ರೀ ಅಭಿಪ್ರಾಯ ಪಡುತ್ತಾರೆ.

'ಅವನು ಕನ್ನಡದ ಮಹಾಕವಿಗಳಲ್ಲಿ ಒಬ್ಬ' ಎಂದು ಡಿ. ಎಲ್. ನರಸಿಂಹಾ–ಚಾರ್ಯರೆಂದರೆ, 'ವಿಶೇಷವಾಗಿ ವ್ಯಕ್ತಿಸಂಪತ್ತಿಯನ್ನು ಪಡೆದು, ಸಾಹಿತ್ಯ ಸಂಪತ್ತಿಯಲ್ಲಿ ಅದನ್ನು ಪಡಿಮೂಡಿಸಿದ ಮಹಾ ಕವಿಯವನು' ಎಂದು ಡಾ॥ ಮುಗಳಿಯವರು ನುಡಿಯುತ್ತಾರೆ. 'ಈ ಮಹಾಕವಿಯ ಪಾಂಡಿತ್ಯ– ದಿಂದೊಡಗೂಡಿದ ಪ್ರತಿಭೆ, ಈ ಶ್ರೇಷ್ಠ ಭಕ್ತನ ತಲ್ಲೀನತೆ, ಈ ಎದೆಗಾರ ಕ್ರಾಂತಿಪುರಷನ ಭಾಷೆಯ ಇಂಪು, ಇವುಗಳ ಮುಪ್ಪುರಿಯು ಕನ್ನಡಿಗರಿಗೆ ಎಂದೂ ಬತ್ತದ ಸೊಗಸಿನ ಬುಗ್ಗೆಯಾಗಿವೆ' ಎಂದು ಬಸವನಾಳೆರೆಂದರೆ ಇನ್ನೊಬ್ಬ ಮಹಾಕವಿ ಷಡಕ್ಷರದೇವ– 'ಅವಂಗೆ, ಅತ್ಯಧಿಕ ಶಿವಕವೀಂದ್ರಂಗೆ ಅದಾರ್ ಸಾಟಿಯಪ್ಪರ್?' ಎಂದು ಉಗ್ಘಡಿಸುತ್ತಾನೆ.

---

೧ ತಿರುನಾಳ್ವೊರ ಮಹಾತ್ಮೆ

'ನವರಸಗಳನ್ನು ಪರಿಪಕ್ವಗೊಳಿಸಿ ಕಾವ್ಯಸೌಂದರ್ಯವನ್ನು ಎಲ್ಲೆ ಮೀರಿಸುವಲ್ಲಿ ಈತನು ಅಸದೃಶನು'ಎಂದು ಕುಂದಣಗಾರರು ಕುಂದಣವಿಟ್ಟಂತೆ ನುಡಿಯುತ್ತಾರೆ.

ಇದೆಲ್ಲ ಸರಿ. ಇದುವರೆಗೂ ಇವನ ಹೆಸರನ್ನೇ ಹೇಳಿಲಿಲ್ಲವಲ್ಲ? ಇದೆಂಥ ಹದನ?

ಹೆಸರು ಹರಿಹರ–ಕವಿವರ ಋಷಿವರ ಹರಿಹರ; ರಸವಿಸರಪ್ರಕಾಶ, ರಸಿಕ ಚಕ್ರಿ ಹರಿಹರ; 'ಹರೀಶ್ವರಸ್ವೇನ ಸಮಃ ಕವಿಃ ಕಃ' ಎಂದು ಕವಿಕರ್ಣರಸಾಯನದಲ್ಲಿ ಸಂಸ್ತುತನಾಗಿರುವ ಹರಿಹರ; ಹರಿಹರ ಮಾರ್ಗವೆಂಬ ಹೊಸ ಮಾರ್ಗವನ್ನು ತನ್ನ ಪ್ರತಿಭಾಶಕ್ತಿಯಿಂದ ನಿರ್ಮಾಣ ಮಾಡಿದ ಹರಿಹರ; ವರ್ಣಕಕವಿಕರ್ಣಾವತಂಸ ವಸ್ತುಕಕವಿಮಸ್ತಕನ್ಯಸ್ತ ಕವಿಕಳಾವಿದರರಸ ಕರ್ನಾಟಕಕಾವ್ಯಲಕ್ಷಣ ದೀಕ್ಷಾಚಾರ್ಯ ಹರಿಹರ!

ಪುಣ್ಯಕ್ಷೇತ್ರವಾದ ಪ್ರಕೃತಿಶ್ರೀಯ ಆಡುಂಬೊಲವಾದ ಪಂಪಾಪುರದಲ್ಲಿ ಪಾವನ ಗುರುಪರಂಪರೆಯಲ್ಲಿ ಉದಿಸಿ ಬಂದ ಸುಕೃತ ಹರಿಹರನದು. ಅತಿವಿಖ್ಯಾತರಾಗಿದ್ದ ಹಂಪೆಯ ಶಂಕರದೇವರು ಕುಲಗುರುಗಳು. ಅವರು ಶೈವಾಗಮಸಿದ್ಧರು, ಜಿತೇಂದ್ರಿಯರು, ಆರೂಢಲೌಕಿಕವಂಟದ ಅಪ್ರತಿಮರು, ಸಹಸ್ರಮುಖ ಜೀವಾನುಕಂಪಿಗಳು. ಈ ಶಂಕರದೇವರಿಂದ ಪಾಶಚ್ಛೇದಮನಿಂಬುಗೊಂಡು, ಅವರ ಶಿಷ್ಯರಾದವರು ಹಂಪೆಯ ಮಾದಿರಾಜರು. ಇವರು ಪಂಚಾಕ್ಷರೀವೇಶರು, ಸಕಲಾಗಮಾರ್ಚರು, ಅನಂತವೇದಾರ್ಥಸಾಧಕರು, ಶಾಪಾನುಗ್ರಹ ಸಮರ್ಥರು,ಈ ಗುಪ್ತಲಿಂಗ ಪ್ರೇಮಿಯಾದ ಮಾದಿರಾಜರ 'ಮನೋದುಗ್ಧಾಬ್ಧಿ ಚಂದ್ರ'ರೇ ಹಂಪೆಯ ಮಾಯಿದೇವರು. ಈ ಹಂಪೆಯ ಮಾಯಿದೇವರು ಹರಿಹರನ ಗುರುಗಳು.

ಹರಿಹರನು ತನ್ನ ಗುರುಪರಂಪರೆಯನ್ನು ಹೆಮ್ಮೆಯಿಂದ ಹೊಗಳಿದ್ದಾನೆ. ಶಂಕರದೇವರು 'ಸುರುಚಿರ ಮೂರ್ತಿ, ಸತ್ಯತರ ಮೂರ್ತಿ, ಕೃಪಾಕರ ಮೂರ್ತಿ, ಪುಣ್ಯವಿಸ್ತರ ಗುರುಮೂರ್ತಿ, ಶಾಂತಿಮಯಮೂರ್ತಿ, ಮುಕ್ತಿಸುಖ ಮೂರ್ತಿ'ಯೆಂತೆ; 'ಪರಮಶ್ರೀ ಶಂಕರಾಚಾರ್ಯ'ರಂತೆ; ಅವರ ಶಿಷ್ಯ ಮಾದಿರಾಜರು 'ರಸಾರ್ದ್ರಚಿತ್ರಯುತ–ಹೃದ್ರಾಜೀವನಸಂಪೂರ್ಣ ಸಂಕಾಶಂ' ಅಂತೆ; ಅವರ ಶಿಷ್ಯ ಮಾಯಿದೇವರು 'ಶಿವಂ ಶಾಂತಂ ಶೈವಸುಭಗಂ ಸಾಕಾರ ಸರ್ವೇಶ್ವರಂ, ಪ್ರತ್ಯಕ್ಷ ಪಂಚಾನನಂ ಸಂತಂ ಹಂಪೆಯ ಮಾಯಿದೇವಂ ಶೈವಸಾರೋದಯಂ' ಅಂತೆ. ಇಷ್ಟೇ ಅಲ್ಲ;

"ಶ್ರೀ ಗುರು ಪರಮಗುರು ಘನಮಹಿ–
ಮಾಗುರು ಮಾಧುರ್ಯಗುರು ಮಹಾಗುರು ವರವಿ–

ದ್ಯಾಗುರು ಸುಖ್ಯೆಕಗುರು ವಸು–
ಧಾಗುರು ಶೈವಗುರು ಶಾಂತಗುರು ಮಾಯ್ದೇವಂ ॥"
ಈ ಮೂವರು ಮಹಾನುಭಾವರ ಕರುಣದ ಕಂದ ಹರಿಹರ–
ಹಂಪೆಯ ಗುರು ಮಾದಿರಾಜ ದೇವರ ಮತ್ತಾ
ಹಂಪೆಯ ಮಾದರಸರ ದಯೆ–
ಯಿಂ ಪೇಳ್ದಂ ರಸಿಕಚಕ್ರಿ ಹರಿಹರ ದೇವಂ ॥

ಈ 'ಹಂಪೆಯ ಮಾದರಸರ ಕಾರುಣ್ಯದ ಶಿಶುವಪ್ಪ' ಹರಿಹರ ಮೊದಲು 'ಸರಸ–ಮೃದು–ಮಧುರೋಪಮೆಗಳಿಂದ ವಸ್ತುಕ ವಾರ್ಣಕದಿಂದ ಶಿವನಂ ಶಿವಗಣಂಗಳನು ರಗಳೆಗಳಿಂದ ನುತಿಸಿ ವಚನದ ರಚನೆ ಹೆಚ್ಚುವಂತೆ ಗಿರಿಜಾ ಕಲ್ಯಾಣವಂ ರಚಿಸಿದನು' ಎಂದು ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರ ಹೇಳುತ್ತದೆ. ಚೆನ್ನಬಸವ ಪುರಾಣದಲ್ಲಿಯೂ ಹೀಗೆಯೇ ಹೇಳಿದೆ. ರಗಳೆಗಳನ್ನು ಬರೆದ ಹರಿಹರನನ್ನು ಜನರು, ರಗಳೆಯ ಕವಿ'ಯೆಂದು ಹಾಸ್ಯಮಾಡಲು ಗಿರಿಜಾ ಕಲ್ಯಾಣವೆಂಬ ಪ್ರೌಢಚಂಪೂ ಕಾವ್ಯವನ್ನು ಬರೆದು ಪಂಡಿತಮಾನ್ಯನಾದನೆಂಬುದು ದಂತಕಥೆ. ದಂತಕಥೆಯೇಕೆ–ಕುಮಾರ ರಾಮನ ಸಾಂಗತ್ಯದಲ್ಲಿಯೇ ಹೀಗೆ ಹೇಳಿದೆ:

"ರಗಳೆಯ ಕವಿಯೆಂದು ತೆಗಳೆ ವಾದಿಗಳುರೆ । ಸೊಗಸೊತುವಂತೆ ವಸ್ತುಕವ
ನೆಗಳಿದ ಹಂಪೆಯ ಹರಿಯಣ್ಣನ ಪದ । ಯುಗಳಕೆರಗುವನಳ್ತಿಯೊಳು"

ಆದರೆ ದಿವಂಗತ ಟಿ.ಎಸ. ವೆಂಕಣ್ಣಯ್ಯನವರು ಹೇಳುವಂತೆ, "ರಗಳೆಗಳನ್ನು ಬರೆದುದಕ್ಕಾಗಿ ಹರಿಹರನು ತಲೆತಗ್ಗಿಸಬೇಕಾದದ್ದೇನೂ ಇರಲಿಲ್ಲ. ಒಂದು ವೇಳೆ ಅತನು ಗಿರಿಜಾ ಕಲ್ಯಾಣವನ್ನು ರಚಿಸದೆ ಹೋಗಿದ್ದರೂ ಆತನಿಗೆ ಕನ್ನಡ ಸಾಹಿತ್ಯದಲ್ಲಿ ದೊರೆತಿರುವ ಸ್ಥಾನಕ್ಕೆ ಏನೂ ಚ್ಯುತಿ ಬರುತ್ತಿರಲಿಲ್ಲ. ಸಾಹಿತ್ಯ ದೃಷ್ಟಿಯಿಂದ ಈ ರಗಳೆಗಳು ಅನೇಕ ಚಂಪೂ ಗ್ರಂಥಗಳಿಗಿಂತಲೂ ಹೆಚ್ಚು ಆದರಣೀಯವೂ ಗೌರವಾರ್ಹವೂ ಆಗಿವೆ." ಶಿವಗಣದ ರಗಳೆಗಳು ಹರಿಹರಿನ ವ್ಯಕ್ತಿತ್ವಸಿದ್ಧಕಿಯ ಪತಾಕೆಗಳು." ಇವುಗಳನ್ನು ಬರೆದೇ ಅವನು 'ಜಾಣಂ ರಸಿಕಂ ಸುಜನಪ್ರಾಣಂ ಕವಿತಾ ನಿಧಾನಂ' ಎಂಬ ನೆಗಳ್ತೆಗೆ ತಕ್ಕವನಾದನು.

ಹರಿಹರನು ಮದುವೆಯಾಗಿದ್ದನೆ? ಇಲ್ಲವೆನ್ನುತ್ತಾರೆ ಪ್ರೋ ॥ ಕುಂದಣಗಾರರು. "ಹರಿಹರನು ಮದುವೆಯಾಗಿ ಗೃಹಸ್ಥ ಧರ್ಮವನ್ನು ಸ್ವೀಕರಿಸಿದಂತೆ ಆಧಾರಗಳು ಎಲ್ಲಿಯೂ ದೊರೆಯುವುದಿಲ್ಲ. ಅ ವಿಷಯವನ್ನು ಸಿದ್ಧನಂಜೇಶನು ರಾಘವಾಂಕ ಚಾರಿತ್ರದಲ್ಲಿ ಎತ್ತಿಲ್ಲ. ಪದ್ಮಣಾಂಕನು ಪದ್ಮರಾಜ ಪುರಾಣದಲ್ಲಿ ಹೇಳಿಲ್ಲ. ರಾಘವಾಂಕನು

ತನ್ನ ಹರಿಶ್ಚಂದ್ರ ಕಾವ್ಯದಲ್ಲಿಯೂ ಸೋಮನಾಥ ಚರಿತ್ರೆಯಲ್ಲಿಯೂ ತನ್ನ ಗುರು ಪರಂಪರೆಯಲ್ಲಿ ಕೆಲವರ ಲಗ್ನವಾಗಿತ್ತೆಂದು ಹೇಳಿ ಹರಿದೇವನ ವಿಷಯದಲ್ಲಿ ಮೌನವಾಗಿದ್ದಾನೆ..... ಇದಲ್ಲದೆ ಪದ್ಮರಾಜ ಪುರಾಣದಲ್ಲಿ–

"ಸ್ಮರಕಾಲ ಮಾಯಾದಿಗಳ್ಗೆಡದ ಪದದೊಳ್ತೊ–
ಡರನಿಕ್ಕಿ ಡಂಗುರಂ ಬೊಯ್ಸಿ ವರ್ತಿಸುವವಂ
ಹರಮಂತ್ರ ಸಿದ್ಧಂ"

ಎಂದು ಹೇಳುರುವುದರಿಂದ ಹರಿಹರದೇವನು ಬ್ರಹ್ಮಚಾರಿಯು, ಯೋಗಿಯು ಎಂದೇ ಸಿದ್ಧವಾಗುತ್ತದೆ."[೧]

ಆದರೆ ಹರಿಹರನ 'ಸಂಸಾರವ್ಯಾಮೋಹನಿರಸನ ರಗಳೆ'ಯಲ್ಲಿ ಬರುವ,

"ಬಳಿಕ ಯೌವನಮಾಗೆ ತಾಯ್ತಂದೆಗಳ್ ಕಂಡು
ತಿಳಿದೊಂದು ಮದುವೆಯಂ ಮಾಡಲ್ ಮನಂದಂದು
ಹಾಳೂರ ಕೋಳಮಂ ಕೊರಲೊಳಿಕ್ಕುವ ತೆರದಿ
ಕೇಳೆ ಹೆಳವಂಗೆ ಸಂಕಲೆಯ ಬಂಧಿಪ ತೆರದಿ
ದೈತೆಯಂ ತಂದೊರ್ಬಳಂ ಮದುವೆಯಂ ಮಾಡೆ'

ಮುಂತಾದ ಭಾಗವನ್ನು ಆಧರಿಸಿ, 'ಈ ರಗಳೆಯಲ್ಲಿ ಜೀವನು ಶೈಶವ–ಕೌಮಾರ–ಯೌವನ–ವಾರ್ಧಕ್ಯಗಳಲ್ಲಿ ಹೇಗೆ ಶಿವನನ್ನು ಮರೆತು, ಅಶಿವ ಬಾಧೆಯಲ್ಲಿ ಬಳಲಿ ತೊಳಲುತ್ತಾನೆನ್ನುವುದನ್ನು ವರ್ಣಿಸುವಾಗ ಹರಿಹರನು ಆ ವರ್ಣನೆಯಲ್ಲಿ ತನ್ನ ಆತ್ಮೀಯ ಲೌಕಿಕ ಜೀವನದ ಬವಣೆಯನ್ನು ಪವಣಿಸಿದ್ದಾನೆನ್ನಲವಕಾಶವಿದೆ' ಎಂದು ಒಂದು ಊಹೆ[೨] ಬಂದಿದ್ದರೆ ರಕ್ಷಾಶತಕ, ಸಂಸಾರವ್ಯಾಮೋಹನಿರಸನ ರಗಳೆ ಪಂಪಾಶತಕಗಳ ಕಥಾಸಾರವು ಕವಿಯ ಆತ್ಮಕಥೆಯೇ ಆಗಿದೆಯೆಂದು ನಿರ್ಣಯಿಸಿ 'ದೈತೆಯೊಬ್ಬಳೊಡನೆ, ಮದುವೆಯಾಗಿ, ವಿಷಮ ವಿವಾಹದ ವಿರಸ, ಪ್ರಾಯದ ಗರ್ವ, ದುರ್ಬೋಧರ ಸಹವಾಸದಿಂದ ಮನಸಂದು ಮತಿಗೆಟ್ಟು ಮೈಮರೆತು ಚೇಷ್ಟಿಸಿ, ತನ್ನ ಚೆನ್ನುಂ ಚರಿತ್ರೆಯುಂ ಕನ್ನೆಯರ ಪಾಲಾಗಿ, ಹೊನ್ನುಂ ವಿಳಾಸಮುಂ ವಿಷಯಕ್ಕೆ ಹಾಳಾಗಿ, ಬಡತನ ಅಡಿಯಿಟ್ಟು, ಹೊತ್ತು ಹೊತ್ತಿಗಿಲ್ಲದೆ ಸಂಕಟದಿಂದ ಇರುವಾಗ ಹುಟ್ಟವ ಮಕ್ಕಳ ಸಂಖ್ಯೆ ಸಾಲಿಟ್ಟು, ಉತ್ತು ನೋಡಿ

---

೧ ಹರಿಹರದೇವ. ಪು. ೧೨–೧೪,

೨ ಶ್ರೀ ಎಲ್. ಬಸವರಾಜು–'ಹರಿಹರನು ಕಂಡ ಜ್ಯೋತಿರ್ಲಿಂಗದ ಮೂರು ಮುಖಗಳು' ಮುನ್ನುಡಿಯಲ್ಲಿ :

ಬಿತ್ತಿನೋಡಿ ಮತ್ತಾವ ಪ್ರತಿಫಲವೂ ತೋರದೆ ಹಗಲು ದುಡಿದು ಇರುಳು ದುಡಿದು ಸಾಲದೆ ತಿರಿದು, ಕಳವಿನಿಂದಾದರೂ ತರಲು ಹೊಂಚು ಹಾಕಿ ಸಾಧ್ಯವಾಗದೆ ಹೇಗೆ ಹೇಗೋ ಹಳೆಯಬೀಡನ್ನು ಸೇರಿ ಕರಣಿಕನಾದನು'[೨] ಎಂದು ಊಹಿಸಿದವರೂ ಉಂಟು.

ಆದರೆ ಸಂಸಾರವ್ಯಾಮೋಹನಿರಸನ ರಗಳೆ ಷೇಕ್ಸ್‌ಪಿಯರನ 'ಜೀವನದ ಸಪ್ತಾವಸ್ಥೆಗಳು' ಎಂಬ ಕವನದಂತೆ ವಸ್ತುನಿಷ್ಠವಾದುದೇ ಹೊರತು ವ್ಯಕ್ತಿನಿಷ್ಠವಾದುದಲ್ಲ. ಅದೇ ರಗಳೆಯಲ್ಲಿ ಮುಂದೆ.

'ಇಂತಪ್ಪ ಭವಮಾಲೆಯೊಳಗೆ ಬಂದೇಂ ದೇವ?
ಇಂತಿಂತು ಸತ್ತು ಪುಟ್ಟುತ್ತಮಿರ್ದೇಂ ದೇವ?
ಆನಿಯಿಸುವ ಕಷ್ಟವಿದು ಬದುಕುವ ನಿರೋಧವಿದು
ಅನುಗೆಟ್ಟುಸಾವ ಸಂಕಟದೊಂದವಸ್ಥೆಯಿದು'

ಎಂದು ಸ್ಪಷ್ಟವಾಗಿ ಹೇಳಿದ್ದಾನೆ ಹರಿಹರ. ಹೀಗಿಲ್ಲದಿದ್ದರೆ ಮುಂದೆ ಮುಪ್ಪಿನಲ್ಲಿಯೂ ಹರಿಹರನು–

'ನರರಂ ಸೇವಿಪ ಜೀಯಜೀಯೆನುತಮಿರ್ಪೆನೆಂದೊಡಂ ದೈನ್ಯಮು–
ಬ್ಬರಿಸುತ್ತುಂ ತನುಗುಂದಿಯುಂ ತನಗೆ ತಾನೆಂತಕ್ಕೆಯುಂ ಬೇಡುತಿ
ರ್ಪಿರವಂ ಸುಟ್ಟು ಬಿಸುಟ್ಟು ಭಕ್ತಿಯೊಳಗೋಲಾಡಲ್ ಮನಂದಂದು ಶಂ–
ಕರನಂ ಶಾಶ್ವತನಂ ಕೃಪಾಜಲಧಿಯಂ ಕಂಡೆಂ ವಿರೂಪಾಕ್ಷನಂ'

ಎಂದು ಪಂಪಾಶತಕದಲ್ಲಿ ಉದ್ಘೋಷಿಸಿದಂತೆ ವಿರೂಪಾಕ್ಷ ಸಾಕ್ಷಾತ್ಕಾರವನ್ನು ಪಡೆಯದೆ, 'ಸಂಸಾರವ್ಯಾಮೋಹನಿರಸನ ರಗಳೆ'ಯ ಕೊನೆಯ ಭಾಗದಲ್ಲಿ ಹೇಳಿದಂತೆ–

'ಇಂತು ಮುಪ್ಪಿನೊಳಿರಲು ಯಮಕಿಂಕರರ್ ಬರಲು
ಸಂತತಂ ಯಮನವರ ಭಯದಿ ನಡುಗುತ್ತಿರಲು
ಮುಪ್ಪು ಮೀರುತ್ತಾಯು ತೀರುತ್ತಮಿರಲಿಲ್ಲ
ಒಪ್ಪವಳಿಯುತ್ತೆ ಧರಣಿಗೆ ಬಿಳ್ದು ಕೆಡುವಲ್ಲಿ
..............................................................

೧ ಸತ್ಕವಿಕುಲಚಕ್ರವರ್ತಿ ಹಂಪೆಯ ಹರಿಹರದೇವ ವಿರಚಿತ ಶತಕದ್ವಯದ ಪೀಠಿಕೆಯಲ್ಲಿ ಪಂಡಿತ ಶ್ರೀ ಸ.ಹಾ. ಶಿವಮೂರ್ತಿಗಳು.

ಮೇಲುಸಿರ್ ಮಿಕ್ಕೇಳೆ ನುಡಿವ ನಾಲಿಗೆ ಬೀಳೆ
ಕಾಲನವರರಿವಾಗೆ ಬಾಯೊಳ್ ಸುರಿಯೆ ಲೋಳೆ
ಅಂತಲ್ಲಿ ಜೀವಮಂ ಯವದೂತರೆಳೆಯುತಿರೆ!

ದುರ್ಮರಣ ಹೊಂದಿದನೆಂದು ಹೇಳಬೇಕಾಗುತ್ತದೆ ! ಇದು

'ಎನ್ನಾನಂದ ಸುಧಬ್ಧಿವರ್ಧನ ಕಳಾ ಸಂಪನ್ನನಂ ಚೆನ್ನನಂ
ಮುನ್ನಾರುಂ ನೆಲೆ ಕಾಣಬಾರದ ಲಸತ್ಕಾಪಾಲಿಯಂ ಶೂಲಿಯಂ
ಭಿನ್ನಾಖಭಿನ್ನಮೆನಲ್ಕೆ ತೋರಿದ ಮಹಾ ನಿಸ್ಸೀಮನಂ ಭೀಮನಂ
ಚೆನ್ನಂಗಂದುರೆ ತನ್ನನಿತ್ತ ವಿಭುವಂ ಕಂಡೆಂ ವಿರೂಪಾಕ್ಷನಂ'

ಎಂಬ ಅವನ ಉದ್ಗಾರಕ್ಕೆ ಎಷ್ಟು ವಿಸಂಗತವೆನಿಸುತ್ತದೆ !

ಇಷ್ಟು ಮಾತ್ರ ನಿಜ, ಹರಿಹರನು ದ್ವಾರಸಮುದ್ರದ ನರಸಿಂಹ ಬಲ್ಲಾಳರಾಯನ ಕರಣಿಕಕುಲತಿಲಕನಾಗುವ ಹೊತ್ತಿಗೆ ಹಂಪೆಯ ಮಾಯ್ದೇವರ ಹಸಾದದಿಂದ ವೇದವೇದಾಂಗಾದಿ ಸಕಲಶಾಸ್ತ್ರಗಳಲ್ಲಿ ಪಾರಂಗತನಾಗಿದ್ದ ; ಶಿವಾನುಭವಿಯೆಂದು ಹೆಸರಾಗಿದ್ದ ; ವೈರಾಗ್ಯ ವಿಭುವೆಂಬ ಕೀರ್ತಿಪಡೆದಿದ್ದ. ಅಲ್ಲಿ ಅವನಿಗೆ ಇನ್ನೊಬ್ಬ ಪ್ರಮಥಪುಂಗವನ ಪರಿಚಯವಾಯಿತು–ಪರಿಚಯ ಮೈತ್ರಿಯಲ್ಲಿ ಪರ್ಯವಸಾನ ಹೊಂದಿತು. ಕೆರೆಯ ಪದ್ಮರಸನೇ ಆ ಪ್ರಮಥ ಪುಂಗವ. ಅವನು ನರಸಿಂಹ ಬಲ್ಲಾಳನ ಪ್ರಧಾನಿ, ಶಿವಜ್ಞಾನಿ, ಲಿಂಗಪ್ರಾಣಿ, ಶಿವಯೋಗಿ ಮಲ್ಲರಸ, ಸಕಲೇಶ ಮಾದರಸರ ವಂಶೋದ್ಭವ, ಪ್ರಪಂಚದಲ್ಲಿದ್ದು ಪರಮಾರ್ಥವನ್ನು ಸಾಧಿಸಿದ ಪುರುಷಪುಂಗವ. ಮಾಯಿದೇವ ವಿಭುಮಂಗಳ ದೇವಿಯರಿಗೆ ಮಗನಾಗಿ ಜನಿಸಿ ತ್ರಿಭುವನ ತಾತನನ್ನು ವಾದದಲ್ಲಿ ಸೋಲಿಸಿ, 'ಶಿವಾದ್ವೈತ ಸಾಕಾರ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ'ನೆನಿಸಿದವ.

ನಡೆವಲ್ಲಿನುಡಿವಲ್ಲಿಯುಡುವಲ್ಲಿಯುಣ್ಬಲ್ಲಿ
ಪೊಡರ್ವ ನಿದ್ರಾವಸ್ಥೆಯಲ್ಲಿ ದರ್ಶನದಲ್ಲಿ
ಪಿಡಿವಲ್ಲಿ ಬಿಡುವಲ್ಲಿ ಕೊಡುವಲ್ಲಿ ಕೊಳ್ವಲ್ಲಿ ಯಡಸಿದುದ್ಯೋಗದಲ್ಲಿ
ತೊಡುವಲ್ಲಿ ಪೊದೆವಲ್ಲಿ ಸಡಗರದ ಸಮಯದ
ಲ್ಲೊಡನೆ ಕುಳ್ಳಿರ್ಪಲ್ಲಿ ಯೇಳ್ವಲ್ಲುಳಿದ ಕೃತ್ಯ
ದೆಡೆಯಲ್ಲಿ ಮೃಡಮಂತ್ರವವನಿಡಿದಡಸಿ ಬಿಡದಿರ್ಪುದೇ ವಶಮಾದುದೋ![೧]

---

೧ ಪದ್ಮರಾಜ ಪುರಾಣ ಸಂ. ೨. ಪ. ೭೭

ಹೀಗೆ ಶಿವಾನುಭಾವವಳವಟ್ಟು ಶಿವಮಂತ್ರ ಮನವನ್ನು ವ್ಯಾಪಿಸಿದುದರಿಂದ ಕೆರೆಯ ಪದ್ಮರಸ ಭಕ್ತಿ, ಶಾಂತಿ, ಸಚ್ಚರಿತ್ರೆಗಳೇ ಮೂರ್ತಿಯಾದಂತಿದ್ದ; ಕೃಪಾಳುತ್ವ, ನಿಷ್ಠೆ, ಬಾಷೆ, ಮಹಾಸತ್ವಗುಣ, ಕವಿತಾಗುಣ, ಸಮ್ಯಕ್‌ದೃಷ್ಟಿ, ಕಿಂಕರತ್ವಗಳೇ ಮೈವೆತ್ತಂತಿದ್ದು ಶಾಂತಿಸಾಮ್ರಾಜ್ಯದ ಸಾರ್ಮಭೌಮನಾಗಿದ್ದ :

ಶಿವನಿಷ್ಠೆ ಶಿವಪೂಜನಂ ಶಿವೈಕ್ಯರ ಸೇವೆ
ಶಿವವೃತ್ತಿ ಶಿವವೀಕ್ಷಣಂ ಶಿವಕಥಾ ಪ್ರಸಂ–
ಗ ವಿನೋದ ಗೋಷ್ಠಿ ಶಿವನಿಜಗುಣಸ್ತೋತ್ರಾನುಭಾಷಣಂ ಶಿವವೈಭವಂ
ಶಿವ ತತ್ತ್ವನಿರ್ಣಯ ವಿಚಾರಂ ಶಿವೋತ್ಸವಂ
ಶಿವಕಥಾವೇಶಂ ಶಿವಾವಧಾನಾದಿಗಳಿ
ವವನೊಳಂಕುರಿಸಿ ಪಲ್ಲವಿಸಿ ಕುಸುಮಿತವಾಗಿ ಫಲಿಸಿದುವದೇಂ ಶಾಂತಿಯಾ!

ಇಷ್ಟಾದರೂ 'ಅಖಿಳ ವಸ್ತುಚಯಮಂ ಮಲಹರನ ಭಕ್ತತತಿಗಿತ್ತು ನುತಿಸುತ ಉದ್ಧಾಮರಿರ, ನಿಮ್ಮ ಬಾಗಿಲ್ಲಾಪಿನಾಳ್, ನಿಮ್ಮ ಕೋಮಲಾಂಘ್ರಿಯ ಕೆರ್ಪುದಳೆವವಂ, ನಿಮ್ಮ ಭೃತ್ಯರ ಭೃತ್ಯತತಿಯ ಭೃತ್ಯಂ' ಎಂದು ನಿವೇದಿಸಿಕೊಳ್ಳುವ ನಿರಹಂಭಾವಿ. ತಂದೆಯಿತ್ತ ಉಪದೇಶದಂತೆ ಹೇಮ, ಭೂಮಿ, ಭಾಮೆ ಇವು ಮೂರು ಮಾಯಿಕವಲ್ಲ, ಶಿವಜ್ಞಾನಿಯ ಕೈಯಲ್ಲಿ ಅವು ಶಿವನಿಮಿತ್ತವಾಗುತ್ತವೆ, ಪ್ರಸಾದವಾಗುತ್ತವೆ. ಮಾತ್ರವಲ್ಲ, ಅವನ್ನು ಸ್ವೀಕರಿಸದ ದಾಸೋಹವೇ ಬೆಳೆಯದಂತಾಗುತ್ತದೆ ಎಂದು ನಂಬಿ ಅದರಂತೆ ಆಚರಿಸಿದವನು; ಜೀವನದ ಸಾರಸಾರಾಯವನ್ನೆಲ್ಲ ಶಿವಾರ್ಪಿತ ಭಾವನೆಯಿಂದ ಸ್ವೀಕರಿಸಿ ಬೇಕು ಬೇಡಗಳನ್ನು ಮೀರಿ ಒಳಹೊರಗೊಂದಾದ ಮಹಾಶರಣ. ತನ್ನ ಕೃತಿ ರತ್ನ 'ದೀಕ್ಷಾಬೋಧೆ'ಯಲ್ಲಿ,

'ಒಡವೆಯಾರದು ಒಡೆಯರಾರೆಂಬುದನು ಅರಿಯ
ಕಡುಲೋಭಿ ಜಡನೆಯಕಟರಿಯಲಾ ನರಗುರಿಯೆ
ಕಟ್ಟೊಡೆಯತನವ ಬಲಿದಿಂತು ಹೋರುವೆ ನೀನು
ಹುಟ್ಟುವಾಗಲೇ ಧನವ ಕಟ್ಟಿ ತಂದೆಯೊ ನೀನು?
ನೀ ತಾರದೊಡೆ ನಿನ್ನ ತಾತ ತಂದನೊ ಇದಂ
ಏತರಿಂದಾಯ್ತು ನಿನಗೊಡೆತನಂ ಪೇಳಿದಂ

.................................

ಇದು ಕಾರಣಂ ನಿನ್ನ ಸೊಮ್ಮಲ್ಲ ಎಲೆ ಮರುಳೆ
ಕುದಿದು ಕೋಟಲೆಗೊಂಡೊಡಂ ಇಲ್ಲ ಎಲೆ ಮರುಳೆ'

ಎಂದು ಸಾರಿ ಒಡೆತನದ ಬುಡಕ್ಕೇ ಕೊಡಲಿಯೇಟನ್ನಿಟ್ಟ, ಸೊಮ್ಮಿನ ಹಮ್ಮಿಗೇಕಿಚ್ಚನ್ನಿಕ್ಕಿದ ಈ ಭಕ್ತ ಬಂಧು ಕಾರುಣ್ಯಸಿಂಧು. ಒಮ್ಮೆ ಅವನು ಶಿವನಿತ್ತ ಪಡಿಹೊನ್ನುಗಳನ್ನು ತೀರ್ಥಭಾಜನದಿಂದ ತೆಗೆದು, ಉಚಿತ ವಸ್ತುಗಳನ್ನು ಸಂಗ್ರಹಿಸಲು ಆ ಹೊನ್ನುಗಳನ್ನು ಕೊಡುತ್ತಿರುವಾಗ ನೆರೆಮನೆಯಲ್ಲಿ ಅಳುವ ಸ್ವರ ಕೇಳಿಸಿತು. ಆ ಪ್ರಲಾಪ ಪದ್ಮರಸನ ಹೃದಯವನ್ನು ಕರ್ರನೆ ಕರಗಿಸಿ ಬಿಟ್ಟಿತು. ಶಿಷ್ಯರನ್ನು ಕಳುಹಿಸಿ ಆ ಅಳುವ ಅಬಲೆಯನ್ನು ಬರಮಾಡಿಕೊಂಡನು. ಮಗನೊಡನೆ ಬಂದ ಆ ವಿಧವೆ ಪದ್ಮರಸನ ಪಾದಗಳಲ್ಲಿ ಧೊಪ್ಪನೆ ಕೆಡೆದು ಕಂಬನಿಯ ಕಾಲುವೆಯನ್ನು ಹರಿಸತೊಡಗಿದಳು. ಅವಳ ಬಾಳು ಗೋಳಿನ ಮಾಲೆಯಾಗಿದ್ದಿರು. ಗಂಡನನ್ನು ಕಳೆದುಕೊಂಡು, ಕೊಟ್ಟಣವನ್ನು ಕುಟ್ಟಿ, ನೀರು ಹೊತ್ತು, ಒಪ್ಪೊತ್ತು ಊಟಮಾಡಿ, ಮಗನನ್ನು ಸಲಹುತ್ತ, ಹೇಗೋ ಹನ್ನೆರಡು ಹೊನ್ನು ಉಳಿಸಿ ಅಕ್ಕಿಯ ಪಾತ್ರೆಯಲ್ಲಿ ಬಚ್ಚಿಟ್ಟಿದ್ದಳು. ಅಂದು ಮಚ್ಚಳ ತೆಗೆದು ನೋಡಿದರೆ ಅದು ಬಚ್ಚಬರಿಯದಾಗಿ ಬಿಟ್ಟಿದ್ದಿತು ! ಪದ್ಮರಸನಿಗೆ ಏನೋ ಸಂಶಯ ಬಂದು ತಮಗೆ ಶಿವನಿತ್ತಿದ್ದ ಪಡಿ ಹೊನ್ನು ತರಿಸಿ, ಆ ಅನಾಥೆಗೆ ತೋರಿಸಿ, 'ಇವು ನಿನ್ನವಹುದೊ? ಅಂಜದೆ ಹೇಳು?' ಎಂದು ಕೇಳಿದನು. ಆ ಅನಾಥೆ ಅಹುದೆಂದು ಹೇಳಲು ಅವುಗಳನ್ನು ಆಕೆಗಿತ್ತು ಕಳಿಸಿ, 'ಶಿವನು ನನಗಾಗಿ ಬಡವೆಯ ಬಾಯ ತುತ್ತನ್ನು ಪರಿಹರಿಸಬೇಕೆ? ಇದಾವ ನ್ಯಾಯ? ನನಗಿನ್ನು ಶಿವನ ಪಡಿಹೊನ್ನೇ ಬೇಡ !' ಎಂದು ಮಲಗಿಬಿಟ್ಟನು. ಕನಸಿನಲ್ಲಿ ಗುರು ವಿಶ್ವಪತಿ ಕಾಣಿಸಿಕೊಂಡು, 'ಮಗನೆ, ಧನನಿಮಿತ್ತವಾಗಿ ಹೀಗೆ ಮಾಡಲಿಲ್ಲ. ನೀನು ಮರ್ತ್ಯಕ್ಕೆ ಬಂದು ಶಿವಸಮಯವನ್ನು ಉದ್ಧರಿಸಿದೆ; ಸ್ಥಿರಬೋಧವೆಂಬ ಮಳೆಗರೆದು; ಸುಜನರ ಅಂತರಂಗವೆಂಬ ಸುಕ್ಷೇತ್ರವನ್ನು ಶುದ್ಧಿಗೈದು, ಸತ್ಕ್ರಿಯೆಗಳೆಂಬ ಬೀಜಗಳನ್ನು ಬಿತ್ತಿ, ಮರಹೆಂಬ ಕಳೆ ತೆಗೆದು, ನಿಯಮವೆಂಬ ಕಾಪಿಟ್ಟು, ಮುಕ್ತಿಯೆಂಬ ಫಲವನ್ನು ಪಡೆದು, ಭಕ್ತಿಯ ಭರವನ್ನು ಅಲೆದು, ಸುಖವನ್ನುಂಟುಮಾಡಿ, ಲೋಕವನ್ನು ಪೊರೆದೆ. ಇನ್ನು ನಿನ್ನ ಮಗನಿಗೆ ನೀನು ಆಚಾರ್ಯ ಪಟ್ಟವನ್ನು ಕಟ್ಟಿ ಕಾಶಿಗೆ ಹೊರಡು' ಎಂದು ಹೇಳಿ ಅಂತರ್ಧಾನನಾದನು.

ಪದ್ಮರಸನಿಗೆ ಮರ್ತ್ಯಲೋಕದ ಮಣಿಹ ಪೂರೈಸಿದುದರ ಅರಿವಾಯಿತು. ಅಷ್ಟು ಹೊತ್ತಿಗೆ ಅವನು ತ್ರಿಭುವನತಾತನನ್ನು ವಾದದಲ್ಲಿ ಸೋಲಿಸಿ, ಶಿವಮತದ ಉತ್ಕರ್ಷಕ್ಕೆ ಕಾರಣನಾಗಿದ್ದನು; ಬೇಲೂರಿನ ಕೆರೆಯನ್ನು ಧರೆಬೆರಗಾಗೆ ಬೆಳಗಾಗುವುದರೊಳಗಾಗಿ ಕಟ್ಟಿಸಿ, ಕೆರೆಯ ಪದ್ಮರಸರೆಂದು ಖ್ಯಾತಿವೆತ್ತಿದ್ದನು; 'ಸಾನಂದ ಚರಿತೆ' 'ದೀಕ್ಷಾಬೋಧೆ'ಯನ್ನು ರಚಿಸಿ ಶಿವಕವಿಶ್ರೇಷ್ಠನಾಗಿದ್ದನು; 'ಕುಲಹೀನನಂ ಕುಷ್ಠನಂ ಶ್ರೇಷ್ಠನೆಂದು ನಿರ್ಮಲ ತನುವನಿತ್ತು ಮಹಾಸತ್ವ'ವನ್ನು ಮೆರೆದಿದ್ದನು;

ಶರಣಮಾರ್ಗದ ಸಾರೋದ್ಧಾರ ಮಾಡಿದ ಕೀರ್ತಿ ಪಡೆದಿದ್ದನು. ಅವನ ಸೊಮ್ಮು ಶಿವನಿಗೆ ಸಲ್ಲಿಸಿ, ಭವರಹಿತರಾಗುವ ದಾರಿಯನ್ನು ತೋರಿ, ಸರ್ವವಂದ್ಯರಾಗಿದ್ದರು. ಇನ್ನೇನಾಗಬೇಕು? ಮಗನೂ ಮಹಾಸತ್ವನಾಗಿಯೇ ಬೆಳೆದಿದ್ದ. ಸರಿ, ಅವನಿಗೆ ಅಧಿಕಾರ ಒಪ್ಪಿಸಿ ಹೊರಟನು.

ಕುಮಾರ ಪದ್ಮರಸನು ತಂದೆಗೆ ತಕ್ಕ ಮಗ. ತ್ರಿಭುವನ ತಾತನೊಡನೆ ತಂದೆಯ ಪರವಾಗಿ ವಾದಿಸಿ, ತಂದೆಯ ಅಜ್ಞಾನುಸಾರವಾಗಿ ಸಾನಂದ ಚರಿತೆಯನ್ನು ರಚಿಸಿ, ಜ್ಞಾನರತ್ನಾಕರನೆಂದು ಅದಾಗಲೇ ಹೆಸರಾಗಿದ್ದನವನು. ಇವರ ಮಕ್ಕಳು ಆರ್ಯಪ್ರಸರ ಚಕ್ರವರ್ತಿ ವಿಶ್ವಾರಾಧ್ಯರು, ಅವರ ಮಕ್ಕಳು ನೂರೊಂದು ಪಾದದ ಗದ್ಯ ಬರೆದ ಗೌರಾರ್ಯರು, ಅವರ ಮಕ್ಕಳು ದೇಶಿಕಚಕ್ರವರ್ತಿ ದೇವಾರ್ಯರು, ಅವರ ಮಕ್ಕಳು ಸಮಸ್ತಾಗಮಾಚಾರ್ಯರಾದ ವೀರಣಾಚಾರ್ಯರು, ಅವರ ಮಕ್ಕಳು ಪದ್ಮಣಾರ್ಯ ಚಾಮುಂಡಾರ್ಯರು, ಪದ್ಮಣಾರ್ಯರ ಮಕ್ಕಳೇ ಪದ್ಮರಾಜ ಪುರಾಣವನ್ನು ಬರೆದ ಪದ್ಮಣಾಂಕ.

ಹೀಗೆ ಶಿವಯೋಗ ಮಲ್ಲರಸನಿಂದ ಪ್ರಾರಂಭವಾಗಿ ಎರಡು ಶತಮಾನಗಳವರೆಗೆ ಶಿವಾನುಭವಿಗಳ, ಕವಿಗಳ ಅವಿಚ್ಛಿನ್ನವಾದ ಪರಂಪರೆಯನ್ನು ಪಡೆದ ಪಾವನ ವಂಶದಲ್ಲಿ ಪವಾಡ ಪುರುಷನಾಗಿ, ಪ್ರಧಾನಿಯಾಗಿ, ಜ್ಞಾನಿಯಾಗಿ, ಕವಿಯಾಗಿ, ಶಿವಾನುಭವಿಯಾಗಿ ಕೆರೆಯ ಪದ್ಮರಸ ಪ್ರಕಾಶಿಸಿದ. ಅವನೊಡನೆ ಬಲ್ಲಾಳರಾಯನಲ್ಲಿ ಸೇವಾವೃತ್ತಿಯನ್ನು ಕೈಕೊಂಡಿದ್ದ ಹರಿಹರ ಅವನಿಗೆ ಮೊದಲೇ.

> 'ಪೋಗೆನೆ ಪೋಪ ಬಾರೆಲ್ಲವೊ ಬಾರೆನೆ ಜೀವ ಹಸಾದವೆಂದು ಬೇ-
> ಳಾಗುತೆ ಬರ್ಪ ಮಾಣೆಲವೊ ಸುಮ್ಮನಿರೆಂದೊಡೆ ಸುಮ್ಮನಿರ್ಪ ಮ-
> ತ್ತಾಗಳೆ ಝುಂಕಿಸಲ್ ನಡುಗಿ ಬೀಳುವ ಸೇವೆಯ ಕಷ್ಟವೃತ್ತಿಯಂ'

ನೀಗಿ ಹೊರಟ್ಟಿದ್ದ. ಪಂಜರದೊಳಗಿನ ಕವಿಕೇಸರಿ ಬಂಧನವನ್ನು ಹರಿದೊಗೆದು ಸ್ವಾತಂತ್ರ್ಯದ ಸಿಂಹನಾದವನ್ನು ಮಾಡುತ್ತ ಹೊರಬಿದ್ದಿತು. ಸೇವಾವೃತ್ತಿಯಲ್ಲಿರುವಾಗಲೂ ಸಿಂಹ ಸಿಂಹವಾಗಿಯೇ ಬಾಳಿದ್ದಿತು. ಎಲ್ಲರಂತೆ ಲೆಕ್ಕಬರೆಯದೆ 'ಮದನಹರ ವಿರೂಪಾಕ್ಷ' ಎಂಬ ಮಂತ್ರವರ್ಣಗಳಲ್ಲಿಯೇ ಎಲ್ಲ ಲೆಕ್ಕಗಳನ್ನು ಅಡಗಿಸಿ ಬರೆದು ಆಕ್ಷೇಪಿಸಿದ ಅರಸನಿಗೆ ಹನ್ನೆರಡು ವರ್ಷಗಳ ಎಲ್ಲ ಲೆಕ್ಕವನ್ನು ಶಿವಲಿಖಿತದಿಂದ ಸೊಲ್ಲಿಸಿದ್ದ ಸಿಂಹವದು. ಲೆಕ್ಕ ಹೇಳುತ್ತಿರುವಾಗಲೇ ತನ್ನ ಎರಡೂ ಕೈಗಳನ್ನು ಇದ್ದಕ್ಕಿಂದ್ದಂತೆಯೇ 'ಉದ್ದಕೆ ನೆಗಪಿ ದುರ್ಭವದ ಮಸಕಮಂ ಕಯ್ಯಾರೆ ಒರೆಸುವಂತೆ' ಬಯಲನ್ನು ತಿಕ್ಕಿ 'ಪಂಪಾವಲ್ಲಭನ ತೆರೆಯ ಸುವಸನವಾ ಮುಹೂರ್ತದೊಳುರಿವುತಿರೆ ನಂದುವವೊಲು ಒರೆಸಿದೆ' ಮಹಾಮಹಿಮನಾತ. 'ಅಷ್ಟು ದೂರದ ತೆರೆಯನ್ನು

ಇಲ್ಲಿಂದ ಒರೆಸಿದೆನೆಂದು ಹೇಳುತ್ತಾನೆ ಈ ಹರಿಹರ. ಇದು ಸತ್ಯವೆ?' ಎಂಬ ಸಂಶಯದಿಂದ ನರಸಿಂಹ ಹಂಪೆಗೆ ಚರರನ್ನಟ್ಟುತ್ತಾನೆ. ಚರರು ಹೋಗಿ ಅರ್ಚಕರನ್ನು ವಿಚಾರಿಸಲು, 'ಹೋದ ರವಿವಾರ ಆರತಿಯೆತ್ತುವಾಗ ಉರಿ ತಗುಲಿ ಜ್ವಾಲೆಯಾವರಿಸಿ ಬೇವಲ್ಲಿ ಓರ್ವಂ ದಯಾರಸಭರಿತಲೋಚನಂ, ದಾಕ್ಷಿಣ್ಯವಿಲಸಿತಮುಖಂ, ಸುಶೀಲಂ ಲಸಿತಭಸಿತ ತ್ರಿಪುಂಡ್ರಾವಳೀಪ್ರಯುತಾಂಗಂ,ರುದ್ರಾಕ್ಷಮಾಲಾರಂಜಿತಗ್ರೀವನ್, ಎಸೆವ ಧೋತ್ರದಿನ್ ಉಜ್ವಲಿಪ ಕಟಿದೇಶನ್, ಅವದಾತ ವಸ್ತ್ರೋತ್ತರೀಯಂ ಸಾತ್ವಿಕೋದಯ ಶರೀರಂ ಮಿಸುಪೋಲೆ–ಕಂಠಮಂ ಬಿಸುಟು ಇದನೊರಸಿ ಪೋದಂ' ಕಂಠಮಂ ಬಿಸುಟು ಇದನೊರಸಿ ಪೋದಂ'ಎಂದರು

ಬಲ್ಲಾಳನಿದನ್ನು ಕೇಳಿ ಬೆರಗಾದ. 'ಖಂಡೇಂದುಧರನಲ್ಲದಮಮ ಹರಿಯಣ್ಣನೇರಿ ಜಾವಳನೆ? ಈ ವಿಶ್ವರೂಪ ಹರಿಹರನಿಂದೆ ಸೇವೆಯಂ ನಾವು ಕೈಕೊಂಬುದನುಚಿತ" ಎಂದು ಬಗೆದು ಹರಿಹರನಿಗೆ, "ನಿಮ್ಮ ಜೀವಿತಕ್ಕೆ ಎರಡರಷ್ಟು ಹೊನ್ನನ್ನು ನೀವಿದ್ದೆಡೆಗೇ ಕಳಿಸುತ್ತೇನೆ. ನೀವಿಲ್ಲಿರುವುದು ಬೇಡ. ಪಂಪಾವಿರೂಪಾಕ್ಷನ ಸಮಕ್ಷಮದೊಳಗಿರಿ ಎನ್ನ ದೂಸರಿಂದಾದ ಲೆಕ್ಕದ ತಪ್ಪನ್ನು ಮನ್ನಿಸಿರಿ" ಎಂದು ಮತ್ತೆ ಮತ್ತೆ ಕಾಲ್ಗೆರಗಿ ಕನಕಾಭಿಷೇಕಕ್ಕೆ ಹೊನ್ನುಗಳನ್ನು ತರಿಸಿದನು. ಹರಿಹರನಾಗ ಅದೊಂದನ್ನೂ ಒಲ್ಲದೆ ಮನೆಗೆಯ್ದಿ ಇದ್ದುದನ್ನೆಲ್ಲ ಭಕ್ತರಿಗೆ ಆರಾಧಿಸಿಕೊಟ್ಟು ಕೆರೆಯ ಪದ್ಮರಸಾದಿ ಶರಣರಿಗೆ ಶರಣೆಂದು ಅವರ ಕರುಣೆಯನ್ನು ಪಡೆದು ಕಳುಹಿಸಿಕೊಂಡು ವೀರವಿರಕ್ತನಾಗಿ ವಿರೂಪಾಕ್ಷಸೇವಾಸಕ್ತನಾಗಿ ಪಂಪಾಪುರಾಭಿಮುಖನಾಗಿ ಹೊರಟನು.

ಬೇಲೂರಿನಲ್ಲಿ ಕುಹಕಿಗಳಿಗೆ ತನ್ನ ಭಕ್ತಿಯ ಶಕ್ತಿಯನ್ನು ತೋರಿ, ಗುಹಾರಣ್ಯದ ಹರಿಹರಲಿಂಗ ಸ್ಥಾನದಲ್ಲಿ ಶಾಪಗ್ರಸ್ತನಾಗಿ ಬ್ರಹ್ಮರಾಕ್ಷಸನ ರೂಪದಲ್ಲಿದ್ದ ಗಂಧರ್ವನಿಗೆ ಶಾಪವಿಮೋಚನೆಗೈದು ಶಿವಪುರಕ್ಕೆ ಬಂದು, ಸೋಮನಾಥನ ಸದುನ್ನತಸ್ಥಾನದಲ್ಲಿ ತಂಗಿದನು. ತನ್ನ ಮೀಸಲು ಮಗನು ಬಂದುದನ್ನರಿತು ಶ್ರೀ ವಿರೂಪಾಕ್ಷನೇ ತನ್ನ ನಿಯೋಗದಲ್ಲಿದ್ದ ಎಪ್ಪತ್ತೆರಡು ತೆರದವರಿಗೆ ಮತ್ತು ಅಧಿಕಾರಿಗಳೆಲ್ಲರಿಗೆ 'ಹರಿಹರನನ್ನು ಪಲ್ಲಕ್ಕಿಯಲ್ಲಿ ಪಂಪಾಪುರಕ್ಕೆ ತರುವುದೆಂದು' ಹೇಳಿದನಂತೆ. ಆದರೆ ಹರಿಹರನು ಪಲ್ಲಕ್ಕಿಯನ್ನೇರದೆ ಶ್ರೀ ವಿರೂಪಾಕ್ಷನ ಶ್ರೀ ಮುಖವನ್ನದರಲ್ಲಿ ಇರಿಸಿ, ತಾನೇ ಪಲ್ಲಕ್ಕಿಯನ್ನು ಹೊತ್ತು ಹಂಪೆಗೆ ಹೋದನಂತೆ. ಹಾದಿಯಲ್ಲಿ ಹಾಡುತ್ತ ಹೋದುದೇ ಪಂಪಾಶತಕವಾಯಿತಂತೆ.

ಪಂಪಾಪುರನಿವಾಸಿಗಳು ಹರಿಹರನಿಗೆ ಅಭೂತಪೂರ್ವವಾದ ಸ್ವಾಗತವನ್ನು ನೀಡಿದ್ದರು. ಆ ಪುಣ್ಯನಗರದ ಪುತ್ರನೊಬ್ಬನು ಪರಂಜ್ಯೋತಿಪ್ರಕಾಶನಾಗಿ ಹಿಂದಿರಗಿದುದು ಅವರ ಆನಂದವನ್ನು ಉಕ್ಕೇರಿಸಿದ್ದಿತು. ಗುರು ವಿರೂಪಾಕ್ಷನನ್ನು

ಕಂಡು ಹರಿಹರನು ರೋಮಾಂಚಕಂಚುಕಿತನಾದ. ಸೆರೆಬಿಗಿದು ಕೊರಲು ಗದುಗದಿಸಿತು.

> ನಿಮಗೆನ್ನಂ ಮಾರುಗೊಟ್ಟೆಂ ಹರಹರ ನಿಮಗೆನ್ನನ್ನೇ ತಾನೊತ್ತುಗೊಟ್ಟೆಂ
> ನಿಮ್ಮಗೆನ್ನಂ ಸೂರೆಗೊಟ್ಟೆಮ ನಿಮಗೆ ಹರುಷದಿಂ ದೊಚ್ಚತಂಗೊಡ್ವೆನಾಹಾ
> ನಿಮಗೆನ್ನಂ ಮಚ್ಚಗೊಟ್ಟೆಂ ಗುರುವೆ ಘನವೆ ಸಂತೋಷದಿಂದೊಪ್ಪು
> ಗೊಟ್ಟೆಂ
> ನಿಮ್ಮಗೆನ್ನಂ ದೇವ ಪಂಪಾಪುರದರಸ ವಿರೂಪಾಕ್ಷರಕ್ಷಿಪ್ಪುದೆನ್ನಂ

ಎಂದು ಎದೆದುಂಬಿ ದುಂಬಿಯಂತೆ ಹಾಡಿದನು. ಅವನ ನಿವಾಸಕ್ಕಾಗಿ 'ನಾಗನಾಥನ ಪುರೋವರ್ತಿಯಾದ ವಾಹನಗೃಹ'ವು ತೆರವು ಮಾಡಲ್ಪಟ್ಟಿತು. ಹರಿಹರನು ಅಲ್ಲಿ ವಾಸಿಸತೊಡಗಲು ಅಲ್ಲಿ ಬಂದಿಳಿದವರನೆಲ್ಲ ತಿಂದು ಬದುಕಿದ್ದ ಬ್ರಹ್ಮರಾಕ್ಷಸವೊಂದು ತನಗಿನ್ನು ಉಳಿಗಾಲವಿಲ್ಲವೆಂದು ಹೊರಬಾಗಿಲ ಬಳಿ ಅಳತೊಡಗಿತಂತೆ. ಆ ಆರ್ತನಾದವನ್ನು ಕೇಳಿ ಬಂದ ಸರ್ವಭೂತಹಿತೈಷಿಯಾದ ಹರಿಹರನು, 'ಅಂಜದಿರು, ನಾನು ವಿರೂಪಾಕ್ಷನನ್ನು ಬೆರಸುವ ಮುನ್ನ ನಿನಗೂ ಐಕ್ಯವನ್ನು ಕೊಡಿಸುತ್ತೇನೆ. ಮರದೊಳಗೆ ಮನೆಗಟ್ಟಿ, ಶಿವಭಕ್ತತತಿಗಂಜಿ, ದುಷ್ಟಜನರಿಲ್ಲಿಗೆ ಬರದಂತೆ ಕಾಪಾಗಿರು" ಎಂದು ಅಭಯವನ್ನಿತ್ತನಂತೆ

ಹರಿಹರನ ಹರಭಕ್ತಿಗೆ ಮಹಾಪೂರ ಬಂದಿತು. ಯಾವಾಗಲೂ ಪಂಪಾವಿರೂಪಾಕ್ಷನ ಪೂಜೆ, ಇಲ್ಲವೆ ಸ್ತುತಿ; ಯಾವಗಲೂ ಹರಶರಣರ ಚರಿತೆಗಳ ರಚನೆ, ಇಲ್ಲವೆ ಪ್ರವಚನ. ಶಿವನ, ಶಿವಶರಣರ ಸ್ಮರಣೆಯೇ ಅವನ ಉಸಿರಾಯಿತು. ಅವನು ಬರೆದ, ಬರೆದ ಶಿವಗಣದ ರಗಳೆಗಳು ಶಿವಭಕ್ತರಿಗೆಲ್ಲ ಕಾಮಧೇನು ಕಲ್ಪವೃಕ್ಷಗಾಳಾಗಿ ಮೆರೆದುವು. ದೂರದೂರದಿಮದ ಹರಿಹರನ ದರುಶನಕ್ಕಾಗಿ ಧಾವಿಸತೊಗಿದರು ಶಿವಾಚಾರದವರು. ಹಾಳಾದ ಕಲ್ಯಾಣ ಹಂಪೆಯಲ್ಲಿ ಉದಯವಾದಂತಾಯಿತು. ಇಂದು ಈ ರಗಳೆ, ನಾಳೆ ಇನ್ನೊಂದು ರಗಳೆ–ಬರೆವ ಹರಿಹರನ ಕೈಗೆ ದಣಿವಿಲ್ಲ, ಒರೆವ ಹರಿಹರನ ಜಿಹ್ವೆಗೆ ತಣಿವಿಲ್ಲ. ಅತ್ತ ತುಂಗಭದ್ರೆಯ ನೀರು ಹರಿಯುತ್ತಿತ್ತು–ಇತ್ತ ಹರಿಹರನ ಕಾವ್ಯಪ್ರವಾಹ ಹರಿಯುತ್ತಿತ್ತು–ನಿರರ್ಗಳವಾಗಿ, ನಿರಂತರವಾಗಿ, ನಿತಾಂತ ಸುಂದರವಾಗಿ !

ಹರಿಹರನ ರಗಳೆಗಳು ಹಂಪೆಯಲ್ಲಿಯೇ ಸೀಮಿತವಾಗಿ ಉಳಿಯಲಿಲ್ಲ–ದೂರದ ದೇಶಗಳಿಗೂ ಮುಟ್ಟಿದುವು. ಎಲ್ಲೆಲ್ಲೂ ಅವುಗಳನ್ನು ಮುಕ್ತ ಕಂಠದಿಂದ ಕೊಂಡಾಡಿದರು ಕಾವ್ಯಪ್ರೇಮಿಗಳು. ಹೀಗಿರಲು ತಿಗುಳದೇಶದೊಳಗೆಸೆವ ತಿರುವಾಲೂರ ತ್ಯಾಗರಾಯನ ಸೇವೆಯ ನಾಗವಾಸದ ಮೇಳದೊಡತಿಯಾದ

ಮಾದೇವಿ ಎಂಬುವಳು ನಂಬಿಯಣ್ಣನ ರಗಳೆಯನ್ನು ಕೇಳಿ, ಅದರಲ್ಲಿ ಉಕ್ಕಿದ್ದ ಹರಿಹರನ ಕವಿತಾರಸಕ್ಕೂ ಮೋಹನಕಾರಿಯಾದ ಕಲಾಪ್ರೌಢಿಮೆಗೂ ಮಿನುಗುವ ಊಹೆಗಳಿಗೂ ಕಮನೀಯ ಕಲ್ಪನೆಗಳಿಗೂ ಮಾರುವೋಗಿ, ಮೋಹಮುಗುಳ್ತು ಬೇಟ ಬಲಿತು, 'ಆತನೊಡನೆ ಅಮರ್ದು ಮನ್ಮಥ ಸುಖಸುಧಾಂಬುನಿಧಿಯೊಳು ಓತು ಮುಳುಗುವೆನೆಂ'ದು ಮನದಂದು ಪಂಪಾವಿರೂಪಾಕ್ಷನ ದರ್ಶನದ ನೆಪದಿಂದ ಪಯಣದ ಮೇಲೆ ಪಯಣ ಹೊರಟು ಪಂಪಾಪುರವನ್ನು ಪ್ರವೇಶಿಸಿದಳು. ತಾನು ತಂದ ಧನಕನಕ ದಿವ್ಯವಸನರತ್ನಾಭರಣಗಳೊಡನೆ ಪರಿಚಾರಕಿಯರಿಂದ ಪರಿವೇಷ್ಟಿತಳಾಗಿ ಪಂಪಾವಿರೂಪಾಕ್ಷನ ದೇವಾಲಯದ ದ್ವಾರದಲ್ಲಿ ನಿಂತು ಹರಿಹರನನ್ನು ಅರಸತೊಗಿದಳು. ಅದೇ ವಿರೂಪಾಕ್ಷನ ಪೂಜೆ ಮುಗಿಸಿ ಹೊರಟಿದ್ದ ಹರಿಹರನನ್ನೇ 'ಹರಿಹರನೆಲ್ಲಿ'? ಎಂದು ಕೇಳಿದಳು. 'ವಿರೂಪಾಕ್ಷನನ್ನೇ ಕೇಳು' ಎಂದು ಹೊರಟು ಹೋದ ಹರಿಹರ.

ಅವನೇ ಹರಿಹರನೆಂದು ಗೊತ್ತಾಗಲು ಮಾದೇವಿಯ ಮನೊರಂಗವು ಪರಸ್ಪರ ವಿರುದ್ಧ ಭಾವಗಳ ತುಮುಲ ರಂಗವಾಯಿತು ! 'ಇವನೇ ನಂಬಿಯಣ್ಣನ ರಗಳೆಯಲ್ಲಿ ಶೃಂಗಾರದ ಬಂಗಾರದ ಸೌಧವನ್ನು ಕಡೆದ ಹರಿಹರನೆ? ಬಯಸಿ ಬಂದುದೇನು– ಇಲ್ಲಿ ಕಂಡುದೇನು! ಬಯಕೆಗೂ ವಸ್ತುಸ್ಥಿತಿಗೂ ಅದೆಂಥ ಅಜಗಜಾಂತರ ! ಆಗಲಿ, ಪೊರ್ದಲೆಳೆಸಿ ಬಂದೆನು. ಇನ್ನಾದುದಾಗಲಿ. ಆತನು ಹೇಗಿದ್ದರೂ ನನ್ನ ಮನವನ್ನು ಸೂರೆಗೊಂಡವನು. ಆತನೇ ನನಗಿನ್ನು ಗತಿಮತಿ!' ಎಂದು ಮಾದೇವಿ ಅವರಿವರನ್ನು ಕೇಳುತ್ತ ಹರಿಹರಾಶ್ರಮವನ್ನು ಹುಡುಕಿಕೊಂಡು ಹೋದಳು.

ಅರ್ಧರಾತ್ರಿ. ಹಾಲ್ ಬೆಳದಿಂಗಳು ಹರಡಿದ್ದಿತು–ಹೃದಯ ಶರಧಿ ಉಕ್ಕೇರುವಂತೆ. ಮಾದೇವಿಯ ಮನದಲ್ಲಿ ಕಾಂಕ್ಷೆ ಕವಲೊಡೆಯಿತು, ಕಾಮನೆ ಕೊನರಿ ಕುಣಿಯಿತು. ಬೇಟ ಬಲಿದು ನಲಿಯಿತು. ಮಧುರ ಸಮಾಗಮದ ಮಾದಕ ಸ್ವಪ್ನಗಳನ್ನು ಕಾಣುತ್ತ ಮುಂದುವರಿದಳವಳು. ಮುಂದೆ ಕಾಣಿಸಿತು ಧ್ಯಾನ ಮಗ್ನನಾಗಿದ್ದ ಹರಿಹರನ ತಪೋಮಯ ತೇಜಃಪುಂಜರಂಜಿತಮೂರ್ತಿ–

> "ವಿಭೂತಿ ರುದ್ರಾಕ್ಷೋಜ್ಜ್ವಲಾಂಗದಿಂ, ನಸುಗಾವಿಯಿಂ, ಮಿರುಗುವು
> ಷ್ಣೀಷ ಬೃಹತಿಕೆಗಳಿಂ, ಧೋತ್ರದಿಂದುರದೆ ದೃಢಪದ್ಮಾಸನಂಗೈದು
> ಶಾಂತಿರಸದೆರಕದಿಂ ಸಮೆದ ಪುತ್ಥಳಿಯೆನಲ್ ಬೆರಗುವಟ್ಟಂತಮರ್ಮುಖಾಕ್ಷಿ
> ಯುಗಳದಿಂ ತೊಳಗುವೆರ್ದೆದಾವರೆಯ ನಡುವೆ ಥಳಥಳಿಸಿ ಘುಳುಘುಳಿ
> ಸುವ ಪರಂಜ್ಯೋತಿರಾಕಾರಲಿಂಗಮಂ ಬಳಸಿ ಬಗೆದೊಳಪೊಕ್ಕು ತಾನೆಂ
> ಬುದನರಿಯದೆ ಅನುಪಮ ಸುಖಾವೇಶದಿಂ ಮಿಳಿರ್ವ ಶಿವಯೋಗಿ"

ಯ ಪಾವನಮೂರ್ತಿ !

ಅಪವಿತ್ರ ಮೂರ್ತಿಯನ್ನು ಕಾಣುತ್ತಲೆ ಮಾದೇವಿಯ ಅನುರಕ್ತಿ ವಿರಕ್ತಿಯಾಗಿ ಮಾರ್ಪಟ್ಟಿತ್ತು; ಕಿವಿವರೆಗೆ ಕುಸುಮ ಬಾಣವನ್ನು ಸೆಳದು ಸಿದ್ಧನಾಗಿದ್ದ ಕಾಮನು ಕೋದಂಡವನ್ನು ಕೆಳಗಿಳಿಸಿದನು; ರತಿ ವಿರತಿಯಾಯಿತು ! ಮನಸಿಜ ವೈರಿಯ ಭಕ್ತನೆದುರು ಮನಸಿಜನಾಟವೆ? ಮಾದೇವಿ ಮಾರಮಂತ್ರವನ್ನು ಮರೆತು ಹರಿಹರ ಸ್ತೋತ್ರವನ್ನು ಹಾಡತೊಡಗಿದಳು. ಅದನ್ನು ಕೇಳಿ ಧ್ಯಾನದಿಂದೆಚ್ಚೆತ್ತ ಗುರುಹರಿಹರನು 'ತನಗೋತು ಕಾಮಲಂಪಟೆಯಾಗಿ ಬಂದು ತನ್ನ ರೂಪನೆ ನೋಡಿ, ವೈರಾಗ್ಯಮಂ ತಳೆದಳು; ಇವಳನು ಪಾವನೆಯ ಮಾಡುವೆನು' ಎಂದು ಮನದಂದು ಬಂದು, 'ನೀನಾರು ನಾರಿ? ನಟ್ಟಿರುಳಿನಲ್ಲಿ ಇಲ್ಲಿಗೇಕೆ ಬಂದೆ?' ಎಂದು ಕೇಳಿದನು. ತನಗೆ ಗುರುವಾಗಬೇಕಾದ ಅವನ ಅಂತರಂಗವನ್ನು ಇನ್ನಷ್ಟು ಒರೆದು ನೋಡುವ ಲವಲವಿಕೆಯಿಂದ ಮಾದೇವಿ ನುಡಿದಳು, "ನಿನ್ನ ಕವಿತೆಯು ಮನವೆಲ್ಲವನು ಆಕರುಷಣಂಗೆಯ್ಯಲು 'ಕೂಟದಲ್ಲಿ ಹೆರೆಹಿಂಗನು' ಎಂಬ ವಿಶ್ವಾಸದಿಂದಲೇ ಬಂದೆ. ಬಂದ ಬಯಕೆಯನ್ನು ಪೂರ್ಣಮಾಡಿ ಕಾಯುವುದು!" ಎಂದು ಕಾಲಿಗೆರಗಿದಳು; "ತಲ್ಲಣಂಗೊಂಡೆ ಶೃಂಗಾರದೊಳು-ತಡಮಾಡದಿರು" ಎಂದು ಹಲುಬಿ ಹಂಬಲಿಸಿದಳು.

ಅರ್ಧರಾತ್ರಿ, ಬೆಳದಿಂಗಳು. ಏಕಾಂತಸ್ಥಳ. ಎದುರಿಗೆ ಸುರಸುಂದರಿ ತಾನಾಗಿ ಒಲಿದುಬಂದು ನಿಂತು ಅಂಗಲಾಚಿ ಅನಂಗರಂಗಕ್ಕೆ ಆಹ್ವಾನಿಸುತ್ತಿದ್ದಾಳೆ. ಹರಿಹರನ ಹೃದಯಪರೀಕ್ಷೆಯ ಸಮಯವದು ! ಅವನಿತ್ತ ಉತ್ತರ ಕವಿಕುಲಕ್ಕೇ ಕೀರ್ತಿ ತರುವಂತಹದು: "ಸನ್ನಿಧಿಗೆ ಸಲ್ಲದ ಬಯಕೆ ನಿನಗಾಯಿತು. ಅದು ಸಮನಿಸದು. ಪೆಂಡಿರ್ಗೆ ಪೆಂಡಿರ್ ಓತೊಂದಿದವರೇನುಂಟೆ? ನಾನು ಶಿವನಿಗೆ ಗಂಡುದೊತ್ತಾಗಿದ್ದೇನೆ. ಇಂತು ಬರ್ಪರೆ? ಬಳಲ್ದಾ ತಾಯೆ ! ಪೋಗು !"

ಮಾದೇವಿಯ ಹಿಗ್ಗುಬುಗ್ಗೆಯಾಗಿ ಚಿಮ್ಮಿತು-ಹರಿಹರನು ಗುರುಮಾತ್ರನಲ್ಲ, ಪರಮಗುರುವೆಂಬುದನ್ನು ಕಂಡು. 'ಪಶುಪತಿಗೆ ಗಂಡುದೊಳ್ತಾಗಿ ನೀನಿರ್ಪೊಡೆ ಆಂ ನಿನಗೆ ಪೊರಗುಂಡನಾಗಿರ್ಪೆನು. ಕರುಣಿಪುದು !' ಎಂದು ಯಾಚಿಸಿಕೊಂಡಳು. ಹರಿಹರನ ಕರುಣೆ ಅಪಾರವಾದುದು. ಅವಳ ಇಷ್ಟದಂತೆ ಅಲ್ಲಿರಲು ಅವಳಿಗೆ ಅನುಮತಿಯಿತ್ತನು. ಮಾದೇವಿ ತಾನು ತಂದಿದ್ದ ಅನರ್ಘ್ಯರತ್ನಗಳನ್ನು ಗುರುವಿಗೆ ಕಾಣಿಕೆಯಾಗಿ ಕೊಡಲು ಹೋದಳು. ಹರಿಹರನಿಗೆ ಹಣದಾಸೆಯ? ಅವನ ಇಚ್ಛೆಯಂತೆ ಮಾದೇವಿ ಶ್ರೀ ವಿರೂಪಾಕ್ಷನ ದೇವಾಲಯಕ್ಕೆ, ಶ್ರೀ ವಿರೂಪಾಕ್ಷನ ಭಕ್ತರಿಗೆ ತಾನು ತಂದಿದ್ದ ಧನಕನಕ ರತ್ನಗಳನ್ನೆಲ್ಲ ಸೂರೆಮಾಡಿಬಿಟ್ಟಳು. ಕಾಷಾಯ

ವಸನವನ್ನುಟ್ಟು ಆತ್ಮಸಂತೋಷದಿಂದ ಕೈಯಲ್ಲಿ ಪೊರಕೆಯನ್ನು ಹಿಡಿದು ಹರಿಹರನ ಆಶ್ರಮವನ್ನೂ ವಿರೂಪಾಕ್ಷನ ಅಂಗಣವನ್ನೂ ಉಡುಗುವ ಕಾಯಕದಲ್ಲಿ ನಿರತಳಾದಳು!

ಜಗತ್ತಿನ ಕವಿಗಳ ಜೀವನ ಚರಿತ್ರೆಯಲ್ಲಿಯೇ ಜಾಜ್ವಲ್ಯಮಾನವಾದ ಘಟನೆಯಿದು. ಎಲ್ಲಿಯೋ( ಒಬ್ಬಿಬ್ಬ ಭೋಗಲಾಲಸೆಯ ಕವಿಗಳಿಂದ ಕವಿ ಕುಲಕ್ಕೆ ಕಲಂಕವೇನಾದರೂ ಅಂಟಿದ್ದರೆ ಕವೀಶ್ವರ ಹರೀಶ್ವರನ ಈ ಪಾವನ ಜೀವನದ ಪವಿತ್ರಗಂಗಾಜಲದಿಂದ ಅದು ತೊಳೆದು ಹೋಗುತ್ತದೆಯಲ್ಲವೆ?

ಒಂದು ಸಲ ಶನಿವಾರ ತ್ರಯೋದಶಿಯಲ್ಲಿ ತನ್ನೊಡನೆ ಹಲವರು ದ್ವಿಜರು ಸವ್ಯಾಪಸವ್ಯ ಪ್ರದಕ್ಷಿಣೆಯನ್ನು ಮಾಡುತ್ತಿರಲು, ತಾನು ತಲೆಬಾಗಿ ವಿಷಮನೇತ್ರ ವಿರೂಪಾಕ್ಷನನ್ನು ನಿಟ್ಟಿಸುತ್ತಿರುವಾಗ ಹರಿಹರನ ಮಂಡೆಯಲ್ಲಿದ್ದ ರುದ್ರಾಕ್ಷಿಯ ಟೊಪ್ಪಿಗೆಯು ಕೆಳಗೆ ಬಿದ್ದಿತಂತೆ. ಅದನ್ನು ಕಂಡು ಕುಹಕಿಗಳು ಕೆಲವರು ಗಹ ಗಹಿಸಿ ನಕ್ಕು 'ಹರಿಯರಸನೇತಕ್ಕೆ ಮುಡಿಗೆಯನಿಕ್ಕಿದನೋ' ಎಂದು ಹಗುರಾಗಿ ಹಾಸ್ಯಮಾಡಿದರಂತೆ. ಅದನ್ನು ಕೇಳಿ ಹರಿಹರನು ದೃಢನಿಶ್ಚಲ ದುಂದುಭಿ ಗಂಭೀರ ವಾಣಿಯಿಂದ ಮುಡಿಗೆಯ ಅಷ್ಟಕವನ್ನು ಹಾಡಿದನಂತೆ.

ಮುಡಿಗೆ ಗುರುವಿಂ ಪರಾತ್ಪರವಿಲ್ಲವೆಂಬುದಕೆ
ಮುಡಿಗೆ ಜಂಗಮವು ಸಾಕ್ಷಾತ್ಮಂಬುವೆಂಬುದಕೆ
ಮುಡಿಗೆ ಹರಿವಿಧಿಸುರೇಂದ್ರಾದಿಗಳು ಪಶುಗಳೆಂಬುದಕೆ ತತ್ಪಶುನಿಕರವ
ಮುಡಿಗೆ ಮಾಯಾಪಾಶದಿಂ ತಿರುಗಿಸುವುದಕ್ಕೆ
ಮುಡಿಗೆ ತತ್ಪತಿ ಶ್ರೀ ವಿರೂಪಾಕ್ಷನೆಂಬುದಕೆ
ಮುಡಿಗೆಯಿದ ತಪ್ಪದೆತ್ತುವರೊಳರೆ ದೇವಮನುಜಾಸುರರೊಳೆಂದುಸುರ್ದನು[೧]

ಈ ಮುಡಿಗೆಯ ಅಷ್ಟಕ ಮುಗಿಯುತ್ತಲೆ ಕೆಳಗೆ ಬಿದ್ದಿದ್ದ ಮುಡಿಗೆ ಹರಿಹರನ ಶಿರಸ್ಸನ್ನು ಅಲಂಕರಿಸಿತಂತೆ !

ಹರಿಹರನು ಬಸವ ಇಪ್ಪತ್ತೈದು ಸ್ಥಲದ ರಗಳೆಯನ್ನು ಬರೆದು ಭಕ್ತಿಯಿಂದ ವಿರೂಪಾಕ್ಷ ಸನ್ನಿಧಿಗೆ ಒಪ್ಪಿಸಲು ವಿರೂಪಾಕ್ಷನು 'ಇನಿದು ಮಿಗಿಲಾದುದೆಂದು'ಚೆನ್ನೆಯಿತ್ತ ಪಾಲ್ಗುಡಿದಂತೆ ಹೊತ್ತಗೆಯನ್ನು ಅರೆನುಂಗಿದನಂತೆ! ಅದು ಅಪೂರ್ಣವಾಗಿ ಸಿಕ್ಕಿರುವುದಕ್ಕೆ ಇದೊಂದು ಕಾರಣವಿದ್ದರೂ ಇರಬಹುದು.

---

೧ ರಾಘವಾಂಕ ಚಾರಿತ್ರ.

ಇದುವರೆಗೆ ಹರಿಹರನಿಗೆ ಬ್ರಹ್ಮರಾಕ್ಷಸ ಮಾದೇವಿಯರೆಂಬ ಇಬ್ಬರೇ ಶಿಷ್ಯರಿದ್ದರು. ಈಗ ಮೂರನೆಯ ಶಿಷ್ಯೋತ್ತಮನೂ ಮೂಡಿ ಬಂದ. ಹರಿಹರನ ಅಕ್ಕರುದ್ರಾಣಿಯ ಪತಿ ಮಹಾದೇವಭಟ್ಟ. ಅವರ ಮಗನಾದ ರಾಘವಾಂಕನೇ ಆ ಶಿಷ್ಯೋತ್ತಮ. ಮಹಾದೇವಭಟ್ಟ ರುದ್ರಾಣಿಯರು 'ನಮಗೊರ್ವ ಶಿವಶಾಸ್ತ್ರ ಕಲೆಗಾರ, ಸಲೆಧೀರ, ತಲೆದೋರದಘದ ಕುವರನಂ' ಕರುಣಪುದು ಎಂದು ಪಂಪಾವತಿಯನ್ನು ಪ್ರಾರ್ಥಿಸಿಕೊಂಡು ಪಡೆದ ಪುತ್ರರತ್ನನವನು. ಸಾಲದುದಕ್ಕೆ ಹರೀಶ್ವರನಂಥ ಮಹಾಗುರು ದೊರೆತನವನಿಗೆ ವಂಶಗುರು ಹರಿಹರನ ಚರಣ ಸನ್ನಿಧಿಯಲ್ಲಿ ತಮ್ಮ ಕುವರನನ್ನಿರಿಸಿ,"ಕರುಣಿಪುದಯ್ಯ ನಿಮ್ಮ ಕರುಣೋದಯದ ಕಂದಂಗೆ ಶೈವೋಪದೇಶವ ಅಮ್ನಾಯ ಮತದಿಂದೆ" ಎಂದು ಮಹಾದೇವಭಟ್ಟ ರುದ್ರಾಣಿಯರು ಕೋರಿದ್ದರು. ಹರಕಳೆಯಿಂದ ಶೋಭಿಸುತ್ತಿದ್ದ ಹಸುಳೆಯದನ್ನು ನೋಡಿ ಹರಿಹರನು ಹಿಗ್ಗಿ ಅದರ ಹಣೆಯಲ್ಲಿ ಭಸಿತವನ್ನು ಹೂಸಿ ದೀಕ್ಷೆಯನ್ನಿತ್ತು ಲಿಂಗ ಪ್ರಸಾದವನ್ನೂಡಿ ಶಿಷ್ಯನನ್ನಾಗಿ ಪರಿಗ್ರಹಿಸಿದನು.

ಹರಿಹರನು ಗುರವಾಗಿ ದೊರೆತಮೇಲೆ ರಾಘವಾಂಕನ ವಿದ್ಯಾಭ್ಯಾಸದ ಪ್ರಗತಿಯನ್ನೇನು ಬಣ್ಣಿಸುವುದು? ಸೂಕ್ಷ್ಮಮತಿಯಾದ ರಾಘವಾಂಕನು ಬಹುಬೇಗ ಚತುರ್ದಶ ವಿದ್ಯೆಗಳಲ್ಲಿ ಪಾರಂಗತನಾಗಿಬಿಟ್ಟನು.

ಸಕ್ಕದದ ಕನ್ನಡದ ಭಾಷಾ ಲಸತ್ಕವಿ
ತ್ವಕ್ಕೆ ತಾನಧಿಪತಿ ಯಲಂಕೃತಿಗಳಿಗೆ ನಾಟ–
ಕಕ್ಕೆ ವ್ಯಾಕರಣಕ್ಕೆ ಭಾಣಕ್ಕೇ ಪ್ರಹಸನಕೆ–ನವರಸಗಳಿಗೆ ತನ್ನೊಳು
ಧಿಕ್ಕರಿಪ ಕವಿಯಿಲ್ಲದಿರೆ ನೋಡೊ ಮರ್ತ್ಯಲೋ–
ಕಕ್ಕಿವನೆ ಕವಿಶರಭಭೇರುಂಡನೆಂದು ಪೆಸ–
ರಿಕ್ಕಿ ಕರೆದರು ಕವಿನಿಕರವಾ ಹರೀಶ್ವರನ ಕೃಪೆಯೊದವನುಸುರಲಳವೆ?
–ರಾ.ಚಾ.

ಉಭಯಕವಿ ಕಮಲರವಿ ರಾಘವಾಂಕ ಪಂಡಿತನು ತಾರುಣ್ಯದಲ್ಲಿಯೇ ಶಿವಕಾರುಣ್ಯವನ್ನು ಪಡೆದು ಸತ್ಕವಿಯಾಗಿ ಕವಿ–ಗಮಕಿ–ವಾದಿ–ವಾಗ್ಮಿ–ರಸಿಕ ಜನಮಾನ್ಯನಾಗಿ ಮೆರೆದ. ಸಾಲದುದಕ್ಕೆ ಅವನ ಹರಿಶ್ಚಂದ್ರ ಕಾವ್ಯ ಹಂಪೆಯ ದೇವರಾಜನ ಮೆಚ್ಚುಗೆಯನ್ನು ಪಡೆಯಿತು. ಅದನ್ನವನು ಹೊನ್ನ ಹರಿವಾಣದಲ್ಲಿರಿಸಿ ಪಲ್ಲಕ್ಕಿಯೊಳಗಿಟ್ಟು ರಾಘವಾಂಕನನ್ನು ಆನೆಯ ಮೇಲೆ ಕುಳ್ಳಿರಿಸಿ ನಗರದ ರಾಜಬೀದಿಗಳಲ್ಲೆಲ್ಲ ಮೆರೆಸಿದನು. ತಾರುಣ್ಯಸಹಜವಾದ ಉದ್ರೇಕ, ಹಮ್ಮು ಈ ಮಾನಸನ್ಮಾನಗಳಿಂದ ಇನ್ನೂ ಚಿರುರೊಡೆದಿರಬೇಕು ರಾಘವಾಂಕನಲ್ಲಿ. ಮೆರವಣಿಗೆ

ಮುಗಿದ ಮೇಲೆ ತನ್ನ ಕಾವ್ಯವನ್ನು ಗುರು ಹರಿಹರನಿಗೆ ತೋರಿಸಿದ. ಗುರುವಿನಿಂದಲೂ ಹೊಗಳಿಸಿಕೊಳ್ಳಬೇಕೆಂಬ ಹವ್ಯಾಸ ಅವನಿಗೆ. ಹರಿಹರನದನ್ನು ನೋಡಿ ಸುಮ್ಮನಿದ್ದುಬಿಟ್ಟ ರಾಘವಾಂಕನಿಗೆ ಅಸಮಾಧಾನವಾಯಿತು. "ದೇವ, ನಿಮ್ಮಿಂದಲೀ ಕಾವ್ಯ ಜಸವಡೆವುದೀ ಜಗದೊಳಗೆಯೆಂದಾನು ತರೆ ಸುಮ್ಮನಿರ್ಪುದೇಂ ಕಾರಣ?" ಎಂದು ದೈನ್ಯದಿಂದ ಕೇಳಿದನು. "ಮೃಡ ಶರಣ ಕಥನಕಲ್ಲದೆ ರಾಜ ಕಥೆಗೊಡಂಬಡದೆನ್ನ ಮನ" ಎಂದು ಹರಿಹರ. ಅವನ ಪ್ರತಿಜ್ಞೆ ಪ್ರಸಿದ್ಧವಾಗಿಯೇ ಇದೆ :

ಮನುಜರಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ
ತನತನಗಿಂದ್ರ ಚಂದ್ರ ರವಿ ಕರ್ಣದಧೀಚಿ ಬಲೀಂದ್ರನೆಂದು ತಾ
ನನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ
ನೆನೆ ಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ ॥

ರಾಘವಾಂಕನ ತಾರುಣ್ಯದ ಉಬ್ಬು ಹರಿಹರನ ನಿರ್ಣಯುವನ್ನು ಮರುಮಾತನಾಡದೆ ಒಪ್ಪಲು ಸಿದ್ಧವಿರಲಿಲ್ಲ. "ನೀವು ಚೋಳಾದಿ ರಾಜರ ಕಥೆಯನ್ನೇಕೆ ಹೇಳಿದಿರಿ?" ಎಂಬು ಮರು ಪ್ರಶ್ನೆ ಕೇಳಿಯೇಬಿಟ್ಟ. ಹರಿಹರನು ವಾತ್ಸಲ್ಯದಿಂದ, ಆದರೂ ದೃಢನಿಶ್ಚಲ ಅಧಿಕಾರವಾಣಿಯಿಂದ ಉತ್ತರವಿತ್ತ–'ತರಳ, ನೀನರಿಯೆ. ಅವರಿಗೆ ಶಿವನೊಲಿದಾಗ ಕೈವಲ್ಯದಿರವಿಂಗೆ ಅವರು ಮನವೀಯದಿರಲು ಅವರನ್ನು ಕುರಿತು ನಾನು ಬರೆದೆ. ಆದರೆ ನಿನ್ನ ಕಾವ್ಯದ ನಾಯಕಕನಾದ ಹರಿಶ್ಚಂದ್ರನು ವಿಶ್ವೇಶ್ವರನನ್ನು ಒಲಿಸಿಯೂ ಮತ್ತೆ ರಾಜ್ಯದ ಸಿರಿಯ ಮೇಲೆ ಮನವಿಟ್ಟನು. ಆದುದರಿಂದ ಅವನು ನಿಜಭಕ್ತನಲ್ಲ.'

ಗುರು ಹರಿಹರನು ಇಷ್ಟು ಸಾಧಾರವಾಗಿ, ಸಯುಕ್ತಿಕವಾಗಿ ತನ್ನ ತೀರ್ಪನ್ನು ತಿಳಿಸಿ ಹೇಳಿದರೂ ರಾಘವಾಂಕನು ಯೌವನದ ಉದ್ರೇಕದಲ್ಲಿ ಅದಕ್ಕೆ ತಲೆ ಬಾಗಲಿಲ್ಲ. 'ಗುರುವೆ, ಚೋಳಾದಿಗಳು ಹರಿಶ್ಚಂದ್ರನಿಗಿಂತ ಕಿರಿಯರು !" ಎಂದು ಮತ್ತೆ ಗುರುವಚನವನ್ನು ವಿರೋಧಿಸಿದನು. ಹರಿಹರನ ಹೃದಯ ತಲ್ಲಣಿಸಿ ಹೋಯಿತು–ತನ್ನ ಶಿಷ್ಯನೇ ತನಗೆ ತಿರುಗುಪ್ಪು ಕೊಟ್ಟನೆಂದಲ್ಲ–ಶಿವಭಕ್ತರ ನಿಂದೆಯನ್ನು ಕೇಳಿದೆನಲ್ಲ ಎಂದು! 'ಇನ್ನು ಬದುಕಿ ಪ್ರಯೋಜನವೇನು?' ಎನ್ನುವ ಮಟ್ಟಿಗೆ ಅವನಿಗೆ ವ್ಯಥೆಯಾಯಿತು. ಇತ್ತ ವಿರೂಪಾಕ್ಷ ದೇವಾಲಯದಲ್ಲಿ ಕುಳಿತು ಹರೆಯ ಮಬ್ಬಳಿದು ತಾನು ಗೈದ ಅನುಚಿತ ಕಾರ್ಯವನ್ನು ನೆನೆ ನೆನೆದು ರಾಘವಾಂಕನೂ ದುಃಖಿಸಿದ. 'ಹರ ಮುನಿದರೆ ಗುರು ಕಾಯ್ವ–ಗುರು ಮುನಿದರೆ ಹರನೂ ಕಾಯನೆಂಬುದನ್ನು ತಿಳಿದೂ ನಾನೆಂಥ ಮದೋದ್ಧತನಾಗಿ ವರ್ತಿಸಿದೆ?' ಎಂಬ ಅರಿವಾಗಿ ಓಡಿಹೋಗಿ

ಗುರುವಿನ ಚರಣಗಳಲ್ಲಿ ಕೆಡೆದು ಕ್ಷಮೆಯ ಭಿಕ್ಷೆಯನ್ನು ಬೇಡಿದನು. ಆಗಲೂ ಗುರು ಹರಿಹರ ಸುಮ್ಮನಿದ್ದುದನ್ನು ಕಂಡು ರಾಘವಾಂಕನು, "ಎಲ್ಲ ತೆರದಿ ಬಿನ್ನವಿಸಿದೆ ನಾಂ, ನನಗೆ ದೇಹಾಂತವಲ್ಲದಿನ್ನೊಂದು ಗತಿಯಿಲ್ಲ. ತಿರುಗಣೆ ಮಡುವಿನಲ್ಲಿ ಬೀಳುವುದಕ್ಕಪ್ಪಣೆಯೆ?" ಎಂದು ಕಡುದೈನ್ಯದಿಂದ ಕೇಳಿದನು. 'ಸರ್ವಭೂತ ಹಿತಕರ ಹರೀಶ'ನದನ್ನು ಕೇಳಿ ಕರಗಿ ಹೋದನು. ಕರುಣವು ಕಲಕಿ ಕಣ್ಣುಗಳಲ್ಲಿ ತುಳಿಕಿತೆನ್ನುವಂತೆ ಕಂಬನಿ ಸುರಿಯಿತವನ ಕಣ್ಣುಗ್ಗಳಿಂದ. ಎರಗಿದ್ದ ರಾಘವನನ್ನೆತ್ತಿ ಬರಸೆಳೆದಪ್ಪಿ ತಲೆದಡವಿ ಸಂತೈಸಿದನು. 'ಇನ್ನಾದರೂ ಶಿವನನ್ನೂ ಶಿವಶರಣರನ್ನೂ ಸುತ್ತಿಸಿ ಸದ್ಗತಿಯನ್ನು ಪಡೆ'ಯೆಂದು ಹಿತೋಪದೇಶವನ್ನು ಮಾಡಿದನು.

ರಾಘವಾಂಕನು ಗುರ್ವಾಜ್ಞೆಯನ್ನು ಚಾಚೂ ತಪ್ಪದಂತೆ ನಡೆಸಿದನು. ಸೋಮನಾಥ ಸತ್ಕಾವ್ಯ, ಸಿದ್ಧರಾಮಚಾರಿತ್ರ, ವೀರೇಶ ಚರಿತೆ, ಶರಭ ಚಾರಿತ್ರ, ಹರಿಹರ ಮಹತ್ವಗಳೆಂಬ ಶಿವಕಾವ್ಯಗಳನ್ನು ಬರೆದು ಕನ್ನಡ ಕಾವ್ಯ ಪ್ರಪಂಚದಲ್ಲಿ ಷಟ್ಪದೀ ಸಂಪ್ರದಾಯದ ಸ್ಥಾಪನಾಚಾರ್ಯನಾಗಿ ಮೆರೆದನು. ಓರುಂಗಲ್ಲಿನ ಕಾಕತೀಯ ಪ್ರಭುಗಳ ಓಲಗದಲ್ಲಿ ಏಕದಂಡಿ, ದ್ವಿದಂಡಿ, ತ್ರಿದಂಡಿಗಳನ್ನು ಜಯಿಸಿದನು; ತ್ರಿಭುವನ ತಾತನೊಡನೆ ನಡೆದ ವಾದದಲ್ಲಿ ಕೆರೆಯ ಪದ್ಮರಸ ಕುಮಾರ ಪದ್ಮರಸರಿಗೆ ನೆರವಾದನು; ಜನರ ಬಾಳನ್ನು ಹಸನಗೊಳಿಸಿದ ಸುಧಾರಕನಾಗಿ, ಕನ್ನಡ ಕಾವ್ಯವಾಹಿನಿಯ ದಿಶೆಯನ್ನು ಬದಲಿಸಿದ ಕ್ರಾಂತಿಕಾರನಾಗಿ, ಶ್ರೇಷ್ಠ ಭಕ್ತನಾಗಿ, ಪಂಡಿತನಾಗಿ, ಶಿವಶಾಸ್ತ್ರ ಕಲೆಗಾರನಾಗಿ, ಸಲೆಧೀರನಾಗಿ ಕನ್ನಡಿಗರಿಗೆಲ್ಲ ಅತ್ಯಂತ ಪ್ರೀತಿಯ ಕವಿಗಳಲ್ಲೊಬ್ಬನಾದನು. ಅಪಾರವಾದ ಆತ್ಮವಿಶ್ವಾಸ, ಸ್ವತಂತ್ರ ಮನೋವೃತ್ತಿ, ನವೀನ ಕಾವ್ಯಾರಂಭದ ಕೆಚ್ಚು, ಜನಬದುಕಲೆಂಬ ಉದಾರದೃಷ್ಟಿ, ನಿರಪೇಕ್ಷಭಾವ, ಉಜ್ವಲ ವ್ಯಕ್ತಿತ್ವದಿಂದ ಒಡಮೂಡಿದ ವಿಶಿಷ್ಟ ಸ್ವತಂತ್ರ ಶೈಲಿ, ಭಾಷೆಯ ಬೆಡಗು, ಭಾವದ ಸೊಗಸು, ಬಂಧದ ಅಂದಗಳಿಂದ ಅವನ ಕಾವ್ಯಗಳು ರಸಿಕರಿಗೆ ರಸದ ಚಿಲುಮೆಗಳಾಗಿವೆ.

'ನಡೆವರೆಡಹದೆ ಕುಳಿತರೆಡಹುವರೆ?' ಎಂಬ ಅವನ ಮಾತಿನಲ್ಲಿ ಹೊಸ ಹಾದಿಯಲ್ಲಿ ನಡೆಯಬೇಕೆಂಬ ಸಹಾಸ ಪ್ರವೃತ್ತಿಯ, ಧೀರತನದ, ಧೈರ್ಯದ ಮೊಳಗಿದೆ; 'ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು' ಎಂಬ ಅವನ ಸಂದೇಶದಲ್ಲಿ ಉದಾತ್ತ ಜೀವನ ದರ್ಶನವೊಂದು ಅಡಕವಾಗಿದೆ; 'ಭಕ್ತಿಗಂ ಕೂಲಿ ಬೇಡುವವ ಭಕ್ತನೆ?' ಎಂಬ ಅವನ ಪ್ರಶ್ನೆಯಲ್ಲಿ ನಿಷ್ಕಾಮ ಭಕ್ತಿಯ ನಿಲವಿದೆ; "ಕೆಡುವ ಈ ದೇಹವುಳ್ಳಲ್ಲಿ ಪುಣ್ಯಮಂ ಪಡೆವುದೆ ಲೇಸು" ಎಂದು ಹೇಳುವಲ್ಲಿ ಬಾಳಿಗೊಂದು ಗುರಿ ತೋರುವ ಗರುವತನವಿದೆ; "ಹುಸಿಯಿಲ್ಲ, ಹುರುಡಿಲ್ಲ, ಹಳಿವಿಲ್ಲ, ಹಗೆಯಿಲ್ಲ, ಹಸಿವಿಲ್ಲ, ಹಜ್ಜೆಯಿಲ್ಲ, ಅಳುಪಿಲ್ಲ, ಮುಳಿಸಿಲ್ಲ, ತೃಷೆಯಿಲ್ಲ, ಮದವಿಲ್ಲ, ಮರಹಿಲ್ಲ,

ಕರೆಯಿಲ್ಲ, ಕುಂದಿಲ್ಲ, ನಿಂದೆಯಿಲ್ಲ, ಬೆಸನವಿಲ್ಲ, ಆರ್ತವಿಲ್ಲ, ಆಸೆಯಿಲ್ಲ, ಪಳಿವಿಲ್ಲುಸಿರ್ ಇಡುವುದಿಲ್ಲ, ಮತ್ಸರವಿಲ್ಲ, ನೆರವಿಲ್ಲ" ಎಂಬ ಸಿದ್ಧರಾಮನ ಚಿತ್ರದಲ್ಲಿ ಮಹಾ ಮಾನವನ ರಮ್ಯ ಕಲ್ಪನೆಯಿದೆ; "ಘನ ಸತ್ಯವೇ ಜೀವೆಂದಿರ್ದ ನಿನ್ನ ಹೊಲೆಯನ ಸೇವೆ ಗುರುಸೇವೆ, ಹೊತ್ತ ಹೊಲೆವೇಷ ಪಾವನ ಪುಣ್ಯವೇಷ ! ಅತಿ ಹುಸಿವಯತಿ ಹೊಲೆಯ, ಹುಸಿಯದಿಹ ಹೊಲೆಯನುನ್ನತ ಯತಿವರನು" ಎಂಬ ಮಿಂಚಿನ ಮಾತುಗಳಲ್ಲಿ ಶರಣಧರ್ಮದ ಸಾರವಿದೆ; "ಏಳುವರ್ ಆರವರ್ ಪರಮಸುಖವಳವಟ್ಟು, ದುರ್ನೀತಿ ಬಿಟ್ಟು, ಶಂಕರ ಭಕ್ತ ಅಳವಟ್ಟು, ಧನ್ಯರ್ ಅಪ್ಪಂದದಿಂ, ಕಾವ್ಯಗಳನ್ನು ರಚಿಸುವ ನಿರ್ಧಾರದಲ್ಲಿ ಅವನ ಕಳಂಕರಹಿತ ಕಾವ್ಯೋದ್ದೇಶ ವ್ಯಕ್ತವಾಗಿದೆ.

ಈ ಗುರುಶಿಷ್ಯರ ಜೋಡಿ ಕನ್ನಡ ಸಾಹಿತ್ಯದಲ್ಲಿಯೇ ಅನ್ಯಾಸದೃಶವಾದುದು. ಇಬ್ಬರೂ ಪ್ರತಿಭೆ ಪಾಂಡಿತ್ಯಗಳ ಪರಮೋನ್ನತಿಯನ್ನು ಪಡೆದವರು; ಇಬ್ಬರೂ ನಿಸ್ಸೀಮ ಭಕ್ತರು, ನಿಜಭಕ್ತರು; ಇಬ್ಬರೂ ಹೊಸ ಹಾದಿಯನ್ನು ತುಳಿದವರು, ಹೊಸ ಕಾವ್ಯೋದ್ದೇಶವನ್ನು ಕಂಡುಹಿಡಿದವರು; ಹೊಸ ವಸ್ತುಛಂದಸ್ಸುಗಳನ್ನು ಒಳಸಿಕೊಂಡು 'ಪೊಸಕಾವ್ಯಕನ್ನಿಕೆ'ಯರಂ ಪಡೆದು ಹಂಪೆಯರಸನಿಗೆ ಕೊಟ್ಟು ಧನ್ಯರಾದವರು; ಇಬ್ಬರೂ ಸ್ವಾತಂತ್ರ್ಯಪ್ರಿಯರು; ಇಬ್ಬರೂ ನಿರಂಕುಶ ಮತಿಗಳು. ತನ್ನ ಗುರುವಿನ ಬಗ್ಗೆ ರಾಘವಾಂಕ.

"ಆ ಮಹಾದೇವನುದರದೊಳು ಗುರುಭಕ್ತಿನಿ
ಷ್ಕಾಮವರಿವಾಚಾರ ನೀತಿ ದಯೆ ಜಂಗಮ
ಪ್ರೇಮ ಶಮೆದಮೆ ಶಾಂತಿ ದಾಂತಿ ಚಾತುರ್ಯಸತ್ಯವುದಾರವೇಕನಿಷ್ಠೆ
ಸಾಮರ್ಥ್ಯವೆಲ್ಲಾ ಕಲಾಪ್ರೌಢಿಮೆ ಸದ್ಗುಣ
ಸ್ತೋಮವೆಲ್ಲಂ ನೆರೆದು ರೂಪಾದುದೆನಿಸುವ ಮ–
ಹಾ ಮಹಿಮ ಹಂಪೆಯ ಹರೀಶ್ವರನ ಮೂರ್ತಿನೆಲಸಿರ್ಕೆನ್ನಚಿತ್ತದೊಳಗೆ"

ಎಂದು ಹೃದಯವುಕ್ಕಿ ಹಾಡಿದ್ದಾನೆ. ತನ್ನ ಬಗ್ಗೆ–

"ಪರರೊಡವೆಯಂ ಕೊಂಡು ಕೃತಿಯ ಪೇಳದ ಭಾಷೆ
ಪರರ ಕಾವ್ಯಾರ್ಥಂಗಳಂ ಛಿದ್ರಿಸದ ಭಾಷೆ
ಪರರ ದೈವವ ನುತಿಸದಿಪ್ಪಭಾಷೆ ಪರರ ಕ್ಲೇಶವೀಕ್ಷಿಸದ ಭಾಷೆ
ಪರರನಿಂದಿಸಿ ತನ್ನ ಹೊಗಳಿಕೊಳ್ಳದ ಭಾಷೆ
ಪರರ ವಧುವಂ ಕಂಡು ಮನವೆಳಸದಿಹ ಭಾಷೆ

ಪರರ ವಸ್ತುವ ತೃಣಕೆ ಸರಿಯೆಂಬ ಭಾಷೆಯಿದು ರಾಘ
ವಾಂಕಗೆ ಸಂದುದು

ಎಂದು ಸಲ್ಲುವಂತೆಯೇ ಹೇಳಿಕೊಂಡಿದ್ದಾನೆ. ಎಂತಲೇ ಸಿದ್ಧನಂಜೇಶ ಅವನ ಚರಿತ್ರೆಯನ್ನು ಬರೆದು ಅವನಿಗೆ ಅಪೂರ್ವ ಗೌರವ ಸಲ್ಲಿಸಿದ. 'ಹಂಪೆಯ ರಾಘವಾಂಕನೇಂ ಕೃತಕೃತ್ಯನೋ !'

ಕನ್ನಡಿಗರ ದುರ್ದೈವದಿಂದ ರಾಘವಾಂಕ ಬಹಳ ವರ್ಷ ಬದುಕಲಿಲ್ಲ. ಬಹಳವಾದರೆ ೩೫–೪೦ ವರ್ಷ ಬದುಕಿರಬೇಕು. ಇಷ್ಟು ಚಿಕ್ಕವಯಸ್ಸಿನಲ್ಲಿಯೇ ಕನ್ನಡದ ಮಹಾಕವಿಗಳ ಮಾಲಿಕೆಯಲ್ಲಿ ತನಗೊಂದು ಗಣ್ಯಸ್ಥಾನವನ್ನು ಗಳಿಸಿಕೊಂಡು ಬಯಲಾದ. ಬೇಲೂರಿನಲ್ಲಿ ಅವನ ಸಮಾಧಿ ಇದೆಯಂತೆ. ಹರಿಹರನಿಗೆ ತನ್ನ ಕಾರುಣ್ಯದ ಶಿಶು, ಸೋದರಳಿಯ ಶಿಷ್ಯ, ತನ್ನ ಕಣ್ಣ ಮುಂದೆಯೇ ಕಣ್ಣು ಮುಚ್ಚಿದುದು ಸಹಿಸಲಾಗದ ಶೋಕವನ್ನುಂಟುಮಾಡಿರಬೇಕು. ತನಗೂ ವಿರೂಪಾಕ್ಷನ ಆಜ್ಞೆ ಬರಬಹುದೆಂಬ ನಿರೀಕ್ಷೆಯಲ್ಲಿಯೇ ಇದ್ದ. ಅಷ್ಟರಲ್ಲಿ ಕಾಶೀಯಾತ್ರೆಗೆ ಹೊರಟ ಕೆರೆಯ ಪದ್ಮರಸರು ಹಂಪೆಗೆ ಆಗಮಿಸಿದರು. ಹರಿಹರ ಪದ್ಮರಸರು ಒಬ್ಬರನ್ನೊಬ್ಬರು ಕಂಡು ಹಿಗ್ಗಿ ಹೋದರು. ಏಳೆಂಟು ದಿನಗಳವರೆಗೆ ಹಗಲಿರುಳೆನ್ನದೆ ಶಿವಾನುಭವ ಸುಖವನ್ನು ಸವಿದರು. ಅವರ ಶಿವಾನುಭವಸಲ್ಲಾಪಗಳು ತುಂಗಭದ್ರೆಯ ತರಂಗ ಸಂಗೀತದಲ್ಲಿ ಬೆರೆತು ಹರಿದುವು. ಅವರಿಬ್ಬರ ದರ್ಶನದಿಂದ ಧನ್ಯರಾದರು ಹಂಪೆಯ ಜನರು.

ಕೆರೆಯ ಪದ್ಮರಸನು ಹಂಪೆಯಿಂದ ಹೊರಡುವ ಮುನ್ನ ಹರಿಹರನನ್ನು ಏಕಾಂತಕ್ಕೆ ಕರೆದು, "ಉಮಾವರಂ ನಿಮ್ಮನ್ ಇಂದಿಗೆಂಟನೆಯ ದಿನಕೆ ತನ್ನೊಳ್ ನೆರಪಲಿರ್ದಪಂ; ಅಂತರಿಂ ನೀವೀಗಳೊರೆವೀ ಮಹಾಕಾವ್ಯಮಂ ತಡೆಯದನಿತರೊಳ್ ಪಾರವೆಯ್ದಿಪುದು" ಎಂದು ಹೇಳಿ ಬೀಳ್ಕೊಂಡರು. ಹರಿಹರನಿಗೆ ಸಂತಸದ ಸುಗ್ಗಿ ಸಾಗಿ ಬಂದಂತಾಯಿತು. ಹಗಲಿರುಳು ಬರೆದು ಮಹಾಕಾವ್ಯವನ್ನು ಮುಗಿಸಿದನು. ಈ ಮಹಾಕಾವ್ಯವಾವುದೊ? ಬಸವರಾಜದೇವರ ರಗಳೆಯಾಗಿರದು. ಅದು ಮೊದಲೇ ಮುಗಿದಿದ್ದಿತು. ಗಿರಿಜಾಕಲ್ಯಾಣವಾಗಿರದು. ಅದು ಪ್ರಾಯಶಃ ಅವನ ಪ್ರಥಮ ಕೃತಿ. ನಂಬಿಯಣ್ಣನ ರಗಳೆಯಾಗಿರದು. ಅದನ್ನು ಕೇಳಿಯೇ ಮಾದೇವಿ ಮೋಹಿಸಿ ಬಂದದ್ದು. 'ಶಿವಗಣದ ರಗಳೆ' ಎಂಬ ಒಟ್ಟು ಕೃತಿರಾಶಿಯೇ ಆದಾಗಿರಬಹುದೆ?

ಆ ಎಂಟನೆಯ ದಿನ ಬಂದಿತು. ಹರಿಹರನು ಎಂದಿನಂತೆ ಹೂದೋಟಕ್ಕೆ ಹೋಗಿ ಹೂಗಳನ್ನು ತಿರಿದು ತಂದು ಮಾಲೆಮಾಡಿ ಶ್ರೀ ವಿರೂಪಾಕ್ಷನನ್ನು ಮನ

ದಣಿಯೆ ಪೂಜಿಸಿದನು; 'ನೆನೆವುತ್ತುಂ ಪೂಜಿಸುತ್ತುಂ ಚರಣದೊಳೆರಗುತ್ತುಂ ಮರಳ್ದೀಕ್ಷಿಸುತ್ತುಂ ಮುನಿವುತ್ತುಂ ಮುದ್ದಿಸುತ್ತುಂ ತೊನೆದು ತವಕಿಸುತ್ತುರ್ವುತುಂ ಗರ್ವಿಸುತ್ತುಂ ಜಿನುಗುತ್ತುಂ ಜೀವಿಸುತ್ತಂ ತಣಿದಣಿಯರದಿಂದಾಡುತುಂ ಪಾಡುತುಂ 'ಕೇಳಿದನು:

"ಕರೆವುದದೆಂದು? ಕಾಲ್ವಿಡಿಸಿಕೊಳ್ಳುದದೆಂದು? ದಯಾಕಾಟಾಕ್ಷದಿಂ ಪೋರೆವುದೆಂದು? ಮೆಲ್ನುಡಿಗಳಿಂ ಮುದವೇರಿಪುದೆಂದು? ಸೋಂಕಿನಿಂದೊರೆವುದದೆಂದು? ಸಂತಸದ ಪೆರ್ಚಿಪುದೆಂದು? ಅಮರ್ದಪ್ಪಿನೊಳ್ ಕರಂಕರಿಗೆಪುದೆನ್ನನೆಂದು? ಒಸೆದುಪೇಳೆನಗಿಂದೆಲೆ ಹಂಪೆಯಾಳ್ದನೇ !"

ಹೇಳದಿರಲು ಹಂಪೆಯರಸನಿಗೆ ಸಾಧ್ಯವಿರಲಿಲ್ಲ. ವಿರೂಪಾಕ್ಷಲಿಂಗ ಬಾಯ್ದೆರೆಯಿತಂತೆ. ಹರಿಹರನು ಮೊದಲು ಬ್ರಹ್ಮರಾಕ್ಷಸನನ್ನೂ ಆಮೇಲೆ ಮಾದೇವಿಯನ್ನು ಒಳಗಿಳಿಸಿ, ಆಮೇಲೆ ತಾನೂ ಶಿವಗರ್ಭದಲ್ಲಿಳಿದು ಮರೆಯಾದನಂತೆ. ನೆರೆದ ಭಕ್ತ ಸಮೂಹವೆಲ್ಲ,

"ಆವನೆನಬಹುದು ಮತ್ತಾವಗಳವಟ್ಟಹುದು
ಆವನೊಳಗಿಹುದು ಕವಿತಾನುಭಾವ
ಆವನೊಳಗಾಗಿ ಸಿದ್ಧಪುದು ಶಿವಕವಿತೆ ಹರಿ
ದೇವ ಕವಿಸಮಯಕಗ್ಗಳನೆನಿಪ ಬಿರುದು"

ಎಂದು ಹಾಡಿ ಹರಸಿದರು. ಕಾವ್ಯಜ್ಯೋತಿ ವಿಶ್ವಜ್ಯೋತಿಯಲ್ಲಿ ವಿಲೀನವಾಯಿತು! ಈಶನ ಮೀಸಲಪ್ಪ ಭಕ್ತ ಈಶ್ವರಾರ್ಪಿತವಾದನು !ಪಂಪಾವಿರೂಪಾಕ್ಷ ಸಾಕ್ಷತ್ ಸುಪುತ್ರನು ತಂದೆಯಲ್ಲಿ ಒಂದಾಗಿ ಹೋದನು !

ಮುಂದೆ ಕೆಲದಿನಗಳಲ್ಲಿ ಕೆರೆಯ ಪದ್ಮರಸರೂ ವಿಶ್ವನಾಥನಲ್ಲಿ ಬೆರೆದನೆಂದು ತೋರುತ್ತದೆ. ಈ ಮೂವರು ಮಹಾನುಭಾವರು ಶರಣಮಾರ್ಗದ ಜ್ಯೋತಿರ್ಧರರಾಗಿ, ಕನ್ನಡ ಕಾವ್ಯಪ್ರಪಂಚದ ಕೀರ್ತಿಪತಾಕೆಗಳಾಗಿ, ಮಾನವ್ಯದ ಮಹಾಸಿದ್ಧಿಯ ಪ್ರತೀಕರಾಗಿ ಬಾಳಿ ಬೆಳಗಿದರು. ಮೂವರೂ ಜಗತ್ತಿಗೆ ಸಾರಿದ ಸಂದೇಶವೊಂದೇ–ಸತ್ಯ ಪ್ರೀತಿಗಳ ಸಂದೇಶ–ಪ್ರೇಮಮಾರ್ಗದಿಂದ ಸತ್ಯಸಾಕ್ಷಾತ್ಕಾರ ಮಾಡಿಕೊಳ್ಳಿರೆಂಬ ಸಂದೇಶ. ಜೀವನೋಪಾಯಕ್ಕಾಗಿ ಯಾವ ವೃತ್ತಿಯನ್ನು ಅನುಸರಿಸಿದರೂ ಸರಿಯೆ, ತನ್ನ ಸತ್ಯಪ್ರಜ್ಞೆಯು ಭಕ್ತಿಯ ಬಲ್ಪಿನಿಂದ ವಿಶ್ವಂಭರ ಪ್ರಜ್ಞೆಯಾಗಿ ಪಸರಿಸಿ ವಿಶ್ವಾತೀರವಾಗಿರುವ ರಹಸ್ಯವನ್ನು ಕಂಡುಕೊಳ್ಳುವುದು ಎಲ್ಲರಿಗೂ ಸಾಧ್ಯವಿದೆ. ನಿನ್ನ ಅಲ್ಪಶಕ್ತಿಯನ್ನು ಅವನ ಅಪಾರಶಕ್ತಿಯೊಂದಿಗೆ ಸಂಯೋಜಿಸಿಕೋ.ನಿನ್ನ ಕ್ರಿಯೆಗಳೆಲ್ಲ ಲಿಂಗಕ್ರಿಯೆಗಳಾಗುವುದು, ನೀನೂ

ಲಿಂಗವಾಗುವಿ ಎಂಬ ನಂಬುಗೆಯನ್ನಿತ್ತವರು ಈ ಮೂವರು ಮಹಾನುಭಾವರು.

ಮೂವರೂ ಕುಲಮದ ನಿರಸನಕ್ಕಾಗಿ ಹೋರಾಡಿದರು–

"ಕುಲಮಂ ವಿಚಾರಿಪೊಡೆ ಸೆಲವಿಲ್ಲ ಫಲವಿಲ್ಲ
ನೆಲೆಯನರಿವೊಡೆ ಶುದ್ಧ ಹೊಲೆಯ್ಯೆಸೆ ಕುಲವೆಲ್ಲ
ಕಾಯಕ್ಕೆ ಕುಲವೊ ಜೀವಕ್ಕೆ ಕುಲವೋ ಪೇಳು
ಈ ಯೆರಡರೊಳಗೆ ಇನ್ನಾವುದಕೆ ಕುಲ ಪೇಳು"

ಎಂದು ಪ್ರಶ್ನಿಸಿದ ಪದ್ಮರಸ ;

"ಹುಸಿಯೆಂಬುದೇ ಹೊಲೆ"

ಎಂದು ಉಗ್ಘಡಿಸಿದ ರಾಘವಾಂಕ ;

"ಆತನೊಲ್ದುದೆ ವೇದಾಗಮನೀತಿ"

ಎಂದು ಉದ್ಘೋಷಿಸಿದ ಹರಿಹರ !

ಮೂವರೂ ಪ್ರೇಮಮಾರ್ಗವನ್ನು ಪುರಸ್ಕರಿಸಿದರು ;

"ಉಚ್ಚಾಹ ಶಿವಭಕ್ತಿಯಚ್ಚಳಿಯದಿರಬೇಕು
ನಿಚ್ಚಟದ ನಿಷ್ಠೆ ದೃಢ ಕೆಚ್ಚುಗೊಂಡಿರಬೇಕು"

ಎಂದು ಸಾರಿದ ಪದ್ಮರಸ ;

"ಪಂಪಾವಿರೂಪಾಕ್ಷನೆಮಗೀಗೆ ಭಕ್ತಿಜ್ಞಾನ ಸಂಪದವನು"

ಎಂದು ಬೇಡಿಕೊಂಡ ರಾಘವಾಂಕ ;

"......ನಲಿದುರ್ಬ್ಬಿ ಬೊಬ್ಬಿಡುತೆ ಕೊರ್ಬುತೆ ಕೂಗುತೆ ಪಾಡುತಾಡುತ–
ಬ್ಬರಿಸುತೆ ಬೀಗಿ ತೂಗುತೊಸೆದರ್ಚಿಸು ಮಾನವ ಹಂಪೆಯಾಳ್ದನಂ"

ಎಂದು ಹೇಳಿ ಹರಿಹರ.

ಅವನು ಗಳಿಸಿದ 'ಸದ್ಭಕ್ತಿ ಸಪ್ತಾಂಗರಾಜ್ಯ'ದ ವೈಭವವೆಂತಹುದು?

"ಸತಿ ಕಾರುಣ್ಯಂ ಕುಮಾರಂ ಮತಿ ಸಖನರು ಸತ್ಯಂ ಪ್ರಧಾನಂ ವಿವೇಕಂ
ಸ್ತುತಿ ಭಂಡಾರಂ ಸಧರ್ಮಂ ಕರಿತುರಗ ರಥಾಖ್ಯಂ ನಿರಾಶಂ ಸ್ವದೇಸಂ
ಸತತಂ ತಾನಾಗೆ ಶಾಂತಿಸ್ಥಲದೊಳೆಸೆವ ಸದ್ಭಕ್ತಿ ಸಪ್ತಾಂಗರಾಜ್ಯ–
ಸ್ಥಿತನಾಗಿಪ್ಪಂತೆ ಪಂಪಪುರದಸರ ರಕ್ಷಿಪ್ಪುದೆನ್ನಂ !"

ಮೂವರೂ ಸತ್ಯವನ್ನು ಸಾಕ್ಷತ್ಕರಿಸಿಕೊಳ್ಳಿರೆಂದು ಬೋಧಿಸಿದರು :

"ಒಳಗೆಂದೊಡಂ ತಾನು ಹೊರಗೆಂದೊಡಂ ತಾನು
ಒಳಗು ಹೊರಗಳಿದ ಬರು ಬೆಳಗಿನ ಬೆಳಗು ತಾನು"

ಎಂದು ನಿರೂಪಿಸಿದ ಪದ್ಮರಸ;

"ಸತ್ಯವನು ನುಡಿದು ಪಾಲಿಸು...ಶಿವಭಕ್ತಿಯಲಿ ನಡೆಯಿ"

ರೆಂದು ರಾಘವಾಂಕ;

"ಜಗದೊಳಗೆಲ್ಲ ನೋಡುವಡೆ ಸತ್ಯಮೆ ತೀವಿ ತುಳುಂಕುತಿರ್ಪುದೈ
ಬಗೆವೊಡೆ ಭಕ್ತನೊರ್ವನದರೊಳ್ ನೆರೆಸತ್ಯಮನಡಲಾತನೇ
ಪಗೆಯೆನಿಸಿರ್ಪುದೇಕೆಲ? ಅಸತ್ಯಮೆ ತಾಂ ಪಿರಿದಾಗೆ–ಅಂತದಂ
ಬಗೆಯದೆ, ಸತ್ಯಮಂ ನುಡಿಯುತಚಿಸುತಿರ್ಪುದು ಹಂಪೆಯಾಳ್ದನಂ"

ಎಂದು ಸಾರಿಸಾರಿ ಹೇಳಿದ ಹರಿಹರ.

ಸತ್ಯವನ್ನಾಶ್ರಯಿಸು, ಭಕ್ತಿಯನ್ನಾಶ್ರಯಿಸು, ದೈವೀಶಕ್ತಿಯನ್ನು ಆವಿಷ್ಕರಿಸು, ಶಿವನನ್ನು ಸಾಕ್ಷಾತ್ಕರಿಸಿಕೋ–ಎಂಬುದೇ ಈ ಮೂವರೂ ಮಹಾನುಭಾವರ ಸಂಯುಕ್ತ ಸಂದೇಶ.

ಕೊನೆಯದಾಗಿ ದೇವಕವಿಕಳಾವಿದರರಸ ಹರಿಹರನ ಸೊಳ್ನುಡಿಯೊಂದನ್ನು ಕೇಳೋಣ :

"ಇದು ದಲಪೂರ್ವಮೀ ಮನುಜ ಜನ್ಮದೊಳುದ್ಭವಿಸಿದ್ದು ಮೂಗನಾ
ಗದೆ ಸಲೆಯಂಧನಾಗದೆಲೆ ಪಂಗುವುಮಾಗದೆ ಕೊನದೇಹ ನಾ–
ಗದೆ ವಿಕಟಾಂಗನಾಗದೆ ಕಿವುಂಡನುಮಾಗದೆ ಹೀನವರ್ಣನಾ–
ಗದೆ ಮೆರೆವಲ್ಲಿ ಮಾನವ ಮಹೋತ್ಸವದಿಂ ನೆನೆ ಹಂಪೆಯಾಳ್ದನಂ"

■

# ಮಹಾಮಹಿಮ ಮಾದೇಶ್ವರ

ಬೇಡಿದ ವರವನು ಕೊಟ್ಟು ಮಾದೇಶ್ವರ
ರೂಢಿಯ ಜನರಿಗೆ ಬೇಗ
ಆಡಿದ ಲೀಲೆಯಿಂದಲಿ ಮಲೆಯೊಳು ಹೆರೆ
ಸೂಡಿದ ಅಭವನೊಪ್ಪಿರ್ದ ॥ *

ಪೂರ್ವಘಟ್ಟಗಳ ಪ್ರಕೃತಿ ಸೌಂದರ್ಯವನ್ನೇನು ವರ್ಣಿಸುವುದು? ಅದರಲ್ಲಿಯೂ ಕಾವೇರಿ ತೀರದ ಪೋನ್ನಾಚಿ ಬೆಟ್ಟದ ತಪ್ಪಲು ಅವರ್ಣನೀಯವಾದುದು. ಆತಪ್ಪಲಿನಲ್ಲಿರುವ ಆನೆಮಲೆ, ಕಾನಮಲೆ, ಗುತ್ತಿಮಲೆ, ಜೇನುಮಲೆ, ಪಚ್ಚೆನೀಲಿಮಲೆ, ತುಳುವಮಲೆ,ಪದುಮಮಲೆ, ಗೌಳಮಲೆ, ಚೆರುವವಲೆ, ಗಾಳಿಪೂಜೆಮಲೆ, ಮಂಜುಮಲೆಗಳ ಮಧ್ಯದಲ್ಲಿ ನಡುಮಲೆಯು ಕಡುಬೆಡಗಿನ ಬೀಡಾಗಿ ಮೆರೆಯುತ್ತಿದೆ. ಅದೇ ಮಹಾಮಹಿಮ ಮಾದೇಶ್ವರ ಸ್ವಾಮಿಯ ತಪೋನಂದನ. ಅಂದು ಅವರ ತಪೋವನವಾಗಿದ್ದ ಅದು ಇಂದು ಕರ್ನಾಟಕ ಮತ್ತು ತಮಿಳುನಾಡುಗಳ ಲಕ್ಷಾವಧಿ ಭಕ್ತರಿಗೆ ಪವಿತ್ರ ಕ್ಷೇತ್ರವಾಗಿದೆ. ಶಿವರಾತ್ರಿ ಕಾರ್ತೀಕಗಳ ಸಮಯದಲ್ಲಿ ಲಕ್ಷೋಪಲಕ್ಷ ಜನರು ಇಲ್ಲಿ ಸೇರಿ ಪರಿಷೆ ನಡೆಸುತ್ತಾರೆ. ಮಾದೇಶ್ವರರ ಬಗ್ಗೆ ಹಳ್ಳಿಗರು ಕಟ್ಟಿರುವ ನೂರಾರು ಜನಪದಗಳನ್ನು ಹಾಡುತ್ತ ನಲಿಯುತ್ತಾರೆ.

ಕೊಳ್ಳೇಗಾಲದಿಂದ ಪೂರ್ವಮುಖವಾಗಿ ಮಧುವನಹಳ್ಳಿ, ಸಿಂಗಾನಲ್ಲೂರು, ಕಾಮಗೆರೆ, ಹನೂರು, ಅಜ್ಜೀಪುರ, ರಾಮಪುರ, ಕೌದಳ್ಳಿ ಮಾರ್ಗವಾಗಿ ಈ ಪವಿತ್ರ ಕ್ಷೇತ್ರಕ್ಕೆ ಮಾರ್ಗವಿದೆ. ಕೌದಳ್ಳಿಯಿಂದ ಮುಂದೆ ಅರಣ್ಯಮಾರ್ಗವಾಗಿ ಹತ್ತು ಮೈಲಿಹೋದರೆ ಶ್ರೀ ಮಲೆಯ ಮಾದೇಶ್ವರಸ್ವಾಮಿಯ ಬೆಟ್ಟದ ತಪ್ಪಲು 'ತಾಳಬೆಟ್ಟ' ಸಿಕ್ಕುತ್ತದೆ. ಅಲ್ಲಿಂದ ಏಳುಬೆಟ್ಟಗಳನ್ನು ಹತ್ತಿ ಇಳಿದರೆ ನಡುಮಲೆ ಕಂಗೊಳಿಸುತ್ತದೆ. ತಾಳಬೆಟ್ಟದಿಂದ ನಡುಮಲೆಗೆ ಎರಡು ದಾರಿಗಳಿವೆ : ಒಂದು ಬಸವನದಾರಿ,ಇನ್ನೊಂದು ಸರ್ಪನ ದಾರಿ. ಮೊದಲನೆಯದು ಕಡಿದಾಗಿದೆ; ಎರಡನೆಯದು ಸುಗಮವಾಗಿದೆ.

---

* ಗುರುಸಿದ್ಧ ಕವಿಕೃತಮಾದೇಶ್ವರ ಸಾಂಗತ್ಯದಿಂದ

೩೦–೪೦ ಮೈಲಿಗಳ ವಿಸ್ತೀರ್ಣದ ಈ ರಮಣೀಯ ಸ್ಥಳವು ಮಾದೇಶ್ವರನ ಪುಣ್ಯಾಶ್ರಮವೂ ಆತನ ಅರ್ಚಕರಾದ ತಮ್ಮಡಿಗಳ ನೆಲೆವೀಡೂ ಆಗಿದೆ. ಸಾಲದುದಕ್ಕೆ ಸಾಲೂರು ಮಠ, ಶೇಷಣ್ಣೊಡೆಯರ ಸ್ಥಾನ, ಅಂತರಗಂಗೆ, ನಾಗಮಳೆ ಇತ್ಯಾದಿ ಮಹತ್ವದ ಸ್ಥಳಗಳೂ ಇವೆ. ಇದಲ್ಲದೆ ಇಲ್ಲಿಗೆ ಅನತಿದೂರದಲ್ಲಿಯೇ, ಅಂದರೆ ಕೊಳ್ಳೇಗಾಲಕ್ಕೆ ಎಂಟು ಮೈಲಿ ದೂರದಲ್ಲಿ ಶ್ರೀ ಮಾದೇಶ್ವರರ ಗುರುಗಳಾದ ಶ್ರೀ ಆದಿಗಣನಾಥರ ಗದ್ದುಗೆ ಇದೆ. ಈ ಬೆಟ್ಟದ ಬುಡದಲ್ಲಿ ಮಾದೇಶ್ವರರು ಮಂಡಿಯೂರಿದ ಸ್ಥಳವಿದೆ. ಈ ಪ್ರಭುಸ್ವಾಮಿ ಬೆಟ್ಟದ ಸಮೀಪದಲ್ಲಿಯೇ ನಿರುಪಮ ನಿಜಗುಣ ಶಿವಯೋಗಿಗಳೂ ಮಹಾನುಭಾವಿ ಮುಪ್ಪಿನ ಷಡಕ್ಷರ ಶಿವಯೋಗಿಗಳೂ ತಪಸ್ಸು ಮಾಡಿದ ಶಂಭುಲಿಂಗನ ಬೆಟ್ಟವಿದೆ. ಇವೆಲ್ಲ ಈ ಭಾಗವು ಮಹಿಮಾಯುತವಾದ ಯೋಗಭೂಮಿಯೆಂಬುದನ್ನು ತೋರಿಸುತ್ತವೆ.

ಮೈಸೂರು, ಕೊಳ್ಳೇಗಾಲ, ನೀಲಗಿರಿ, ಕೋಯಮತ್ತೂರು ಮೊದಲಾದ ಕಡೆಗಳಲ್ಲಿ ಹಲವಾರು ಮಾದೇಶ್ವರ ಗದ್ದುಗೆಗಳೂ ದೇವಾಲಯಗಳೂ ಇವೆ. ಇವೆಲ್ಲ ಅವರ ತೋರ–ಗದ್ದುಗೆಗಳೆಂದು ತೋರುತ್ತದೆ. ಈ ಭಾಗದಲ್ಲಿ ಮನೆ ಮನೆಗೂ ಮಾದಯ್ಯ ಮಾದಪ್ಪ ಎಂಬ ಹೆಸರು ಸಿಕ್ಕುತ್ತವೆ. ಬೆಂಗಳೂರು ಜಿಲ್ಲಾ ರೇವಣಸಿದ್ಧೇಶ್ವರ ಬೆಟ್ಟದ ಪಕ್ಕದಲ್ಲೊಂದು ಮಾದೇಶ್ವರ ಬೆಟ್ಟವಿದೆ. ಸುತ್ತೂರು ಮಠದಲ್ಲಿ ಮಾದೇಶ್ವರ ಗದ್ದುಗೆ, ಅಲ್ಲಿಯ ಸೋಮೇಶ್ವರ ದೇವಾಲಯದಲ್ಲಿ ಮಾದೇಶ್ವರರು ಬೀಸಿದ ಪವಾಡದ ರಾಗೀಕಲ್ಲು ಇವೆ. ಹೈದರಆಲಿಯು ಶ್ರೀ ಮಾದೇಶ್ವರ ಸನ್ನಿಧಿಗೆ ಶಾಲಿವಾಹನ ಶಕೆ ೧೬೭೮ನೇ ದುರ್ಮುಖಿ ಸಂವತ್ಸರದ ಶ್ರಾವಣಶುದ್ಧ ೩ರಲ್ಲಿ ಬರೆಸಿಕೊಟ್ಟ ತಾಮ್ರ ಶಾಸನದಲ್ಲಿ ಮಾದೇಶ್ವರರನ್ನು ಕುರಿತು "ಶ್ರೀ ಮಹಾಜಗದ್ಗುರವಾದ ಮಾದೇಶ್ವರಸ್ವಾಮಿ" ಎಂದು ಭಕ್ತಿಯಿಂದ ಬರೆಸಿದ್ದಾನೆ. ೧೮೪೨ನೇ ಫೆಬ್ರವರಿ ೧೬ರ ಕಂಪನಿಯವರ ತಹನಾಮೆಯಲ್ಲಿ ಶ್ರೀ ಮಾದೇಶ್ವರ ದೇವಾಲಯಕ್ಕೆ ಕಾಡುಮಾದ ತಮ್ಮಡಿಯನ್ನು ಧರ್ಮಕರ್ತನನ್ನಾಗಿ ನಿಯಮಿಸಿದ ವಿಷಯ ಬರುತ್ತದೆ. ಪುಣ್ಯ ಶ್ಲೋಕರಾದ ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯವರು ಶ್ರೀ ಸ್ವಾಮಿಯವರಿಗೆ ಶಾಲಿವಾಹನ ಶಕ ೧೮೩೮ರಲ್ಲಿ ಬಂಗಾರದ ಕವಚವನ್ನು ಮಾಡಿಸಿ ಕೊಟ್ಟಿದ್ದಾರೆ. ಅದೇ ಸಂದರ್ಭದಲ್ಲಿ ಅವರ ರಾಣೀವಾಸದಿಂದ ಬೆಲೆಯುಳ್ಳ ಆಭರಣಗಳು ಅರ್ಪಿತವಾಗಿವೆ. ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರು ಆ ಬಂಗಾರದ ಕವಚವನ್ನು ಶಕೆ ೧೮೫೨ರಲ್ಲಿ ರತ್ನಖಚಿತ ವಿಭೂತಿ ತಾಟುಕ, ಸರ್ಪಕುಂಡಲ, ಗಂಗೆ ಅಲಂಕಾರ ಮೊದಲಾದುವುಗಳಿಂದ ಕಂಗೊಳಿಸುವಂತೆ ಸಿಂಗರಿಸಿ ಸುಂದರ ನೂತನ ರಥವನ್ನು ಮಾಡಿಸಿದರು. ಶ್ರೀಮಜ್ಜಯಚಾಮರಾಜ ಒಡೆಯರು ಧರ್ಮಶಾಲೆ ಕಟ್ಟಿಸಿದ್ದಾರೆ.



**ಮಲೆಯ ಮಾದೇಶ್ವರ**

ಮಾದೇಶ್ವರರು ಎಂಥ ಮಹಾತ್ಮರೆಂಬುದಕ್ಕೆ ಇದೆಲ್ಲ ನಿದರ್ಶನ. ಅವರಂತಹ ಮಹಾತ್ಮರೇ ಅಹುದು. ಪ್ರಭುದೇವರಿಂದ ಪ್ರಾರಂಭವಾದ ಶೂನ್ಯಪೀಠದ ಗುರು ಪರಂಪರೆಯಲ್ಲಿ ಶ್ರೀ ಮಾದೇಶ್ವರರು ಆರನೆಯ ಪಟ್ಟದ ಜಗದ್ಗುರುಗಳೆಂದು ನಿರಂಜನವಂಶರತ್ನಾಕರದಲ್ಲಿ ಹೇಳಿದೆ. ಇವರ ಗುರು ಆದಿಗಣೇಶ್ವರರು, ಅವರ ಗುರು ಅನಾದಿ ಗಣನಾಥರು, ಅವರ ಗುರು ಸಿದ್ಧರಾಮೇಶ್ವರರು, ಅವರ ಗುರು ಚನ್ನಬಸವೇಶ್ವರರು, ಅವರ ಗುರು ಪ್ರಭುದೇವರು–ಹೀಗಿದೆ ಈ ಉಜ್ವಲ ಗುರು ಪರಂಪರೆ.

ಮಾದೇಶ್ವರರ ಗುರುಪರಂಪರೆಯಷ್ಟೇ ಉಜ್ಜಲವಾಗಿಲ್ಲ, ಇವರ ಶಿಷ್ಯ ಪರಂಪರೆಯೂ ಅಷ್ಟೇ ಉಜ್ವಲವಾದುದಾಗಿದೆ. ಇವರ ಶಿಷ್ಯರಾದ ನಿರಂಜನ ಸ್ವಾಮಿಗಳು ನೆಲ್ಯಾಣ ಸೀಮೆಯ ಅರಸನಿಗೂ ಅವನ ಬಂಧು ಬಾಂಧವರಿಗೂ ಲಿಂಗಧಾರಣೆ ಮಾಡಿ, ನೀಲಗಿರಿ, ಕೊಯಮತ್ತೂರು, ಸೇಲಂ ಜಿಲ್ಲೆಗಳಲ್ಲಿ ಶರಣ ಧರ್ಮವನ್ನು ಹರಡಿದರು. ಅವರ ಶಿಷ್ಯರು ಜ್ಞಾನಾನಂದ ಸ್ವಾಮಿಗಳು, ಅವರ ಶಿಷ್ಯರು ಆತ್ಮಗಣವರದು, ಅವರ ಶಿಷ್ಯರು ರುದ್ರಮುನಿಸ್ವಾನಿಗಳು. ಮುಂದೆ ಇದೇ ಪರಂಪರೆಯಲ್ಲಿ ಗೋಸಲ ಸಿದ್ಧೇಶ್ವರರು, ಗೋಸಲ ಚೆನ್ನಬಸವೇಶ್ವರರು. ತೋಂಟದ ಸಿದ್ಧಲಿಂಗೇಶ್ವರರು, ಗುಮ್ಮಳಾಪುರದ ಸಿದ್ಧಲಿಂಗಯತಿಗಳು ಮೊದಲಾದ ಮಹಾನುಭಾವರು ಉದಿಸಿ ಮಹಾಪ್ರಭೆಯನ್ನು ಬೀರಿದರು.

ಇಂಥ ಗುರುಪರಂಪರೆ ಶಿಷ್ಯಪರಂಪರೆಯುಳ್ಳ ಮಾದೇಶ್ವರರ ಪುಣ್ಯಕ್ಷೇತ್ರವು ಇಂದಿಗೂ ಭಕ್ತರಿಗೆ ಭಾಗ್ಯೋದಯ ಸ್ಥಾನವಾಗಿ ಮೆರೆಯುತ್ತಿದ್ದರೆ ಆಶ್ಚರ್ಯವೇನು? ಇಂದಿಗೂ ಅಲ್ಲಿ ಸತಿಪತಿಗಳೂ ಸಹ ಸಂಪರ್ಕ ಮಾಡುವುದಿಲ್ಲ ; ಸುರಾಮಾಂಸಾದಿಗಳ ಸೇವನೆಯಿಲ್ಲ ! ಇದ್ದಕ್ಕೆ ವಿರುದ್ಧವಾಗಿ ವರ್ತಸಿದರೆ ವಿನಾಶ ನಿಶ್ಚಿತ. ಸ್ವಾಮಿಯ ವಾಹನ ಹುಲಿ. ಆ ಹುಲಿ ಇಂಥ ದುರ್ವರ್ತನಶೀಲರನ್ನು ಶಿಕ್ಷಿಸುತ್ತದೆಯೆಂಬ ನಂಬಿಕೆ ನಡೆದುಬಂದಿದೆ.

ಬೆಳೆಯ ಗುಣ ಮೊಳಕೆಯಲ್ಲಿ ; ಮನುಜನ ಗುಣ ಜನನದಲ್ಲಿ ; ಶರಣರ ಗುಣ ಮರಣದಲ್ಲಿ. ಮಾದೇಶ್ವರ ಸ್ವಾಮಿಗಳ ಜನನ ಮರಣಗಳೆರಡೂ ವಿಸ್ಮಯ ಜನಕವಾದವುಗಳು. ಇವರು ಎಲ್ಲಿ ಹುಟ್ಟಿದರು, ಯಾರಿಗೆ ಮಗುವಾಗಿ ಹುಟ್ಟಿದರು, ಯಾರಿಂದ ಲಿಂಗಧಾರಣವಾಯಿತು ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ. 'ಸುತ್ತೂರು ಗುರುಪರಂಪರೆ' ಎಂಬ ಷಟ್ಪದೀ ಕಾವ್ಯದ ಪುಟ ೭೧ರಲ್ಲಿ ಕೆಳಗಿನ ಪದ್ಯ ದೊರೆಯುತ್ತದೆ.

"ಪರಶಿವನ ಪರಮಾಂಶಮಂದ್ಯೆ
ತರುತ ಬಾಲಕರೂಪಿನಿಂದವ
ತರಿಸಿ ಮಾದೇಶ್ವರ ನಾಮದಿ ನಿಂದುದರ್ತಿಯಲಿ"

ಮುಂದೆ ಒಮ್ಮೆಗೆ ಮೈಸೂರು ಜಿಲ್ಲೆಯ ಕಪಿಲಾನದೀ ತೀರದ ಸುತ್ತೂರಿನ ವೀರ ಸಿಂಹಾಸನ ಮಠದಲ್ಲಿ ಶ್ರೀ ಸಿದ್ಧನಂಜದೇಶಿಕರ ಸನ್ನಿಧಿಯಲ್ಲಿ ಬಾಲ ಮಾದೇಶ್ವರರು ಕಾಣುತ್ತಾರೆ. ಶ್ರೀ ಸಿದ್ಧನಂಜುದೇಶಿಕರ ಪಾಂಡಿತ್ಯವೂ ಲೋಕಾನುಗ್ರಹ ಶಕ್ತಿಯೂ ಶ್ರೀಮಠದ ದಾಸೋಹವೂ ಆಗ ನಾಡಿನಲ್ಲೆಲ್ಲ ಹೆಸರಾಗಿದ್ದುವು. ಪ್ರಾಯೇಣ–

ಶ್ರೀ ಶೈಲದಲ್ಲಿ ಜಂಗಮರ ಮುಖದಿಂದ ಅವರ ಕೀರ್ತಿಯನ್ನು ಕೇಳಿಯೇ ಮಾದೇಶ್ವರರು ಅಲ್ಲಿಗೆ ಆಗಮಿಸಿರಬಹುದೆಂದು ತೋರುತ್ತದೆ.

ಅವರ ಪ್ರಾರಂಭದ ವಿದ್ಯಾಭ್ಯಾಸ ಅಲ್ಲಯೇ ಆಗಿರಲು ಸಾಕು. ಆದರೆ ಈ ಶಿಷ್ಯ ಗುರುಗಳನ್ನೇ ತನ್ನ ಮಹಿಮೆಗಳಿಂದ ಬೆರಗುಗೊಳಿಸುತ್ತಾನೆ. ಆ ಎಳೆವರೆಯದಲ್ಲಿಯೇ ಆ ಪ್ರದೇಶದ ದನಗಳಿಗೆ ಬಂದಿದ್ದ ರೋಗವನ್ನು ನಿವಾರಿಸುತ್ತಾನೆ; ರಾಗಿಯ ಕಲ್ಲು ತನ್ನಿಂದ ತಾನೇ ತಿರುಗಿ ರಾಗಿ ಬೀಸುವಂತೆ ಮಾಡುತ್ತಾನೆ ! ಆ ರಾಗಿಯ ಕಲ್ಲು ಇಂದಿಗೂ ಆ ಮಠದಲ್ಲಿ ಪೂಜೆಗೊಳ್ಳುತ್ತಿದೆ.

ಶಿಷ್ಯನು ಅಸಾಮಾನ್ಯನೆಂಬುದನ್ನು ಅರಿತ ಸಿದ್ಧನಂಜದೇಶಿಕರು ಅವನನ್ನು ಶೂನ್ಯಪೀಠದ ಐದನೆಯ ಜಗದ್ಗುರುಗಳೂ ಯೋಗೀಶ್ವರರೂ ಆಗಿದ್ದ ಆದಿಗಣನಾಥರಲ್ಲಿಗೆ ಕಳಿಸಿಕೊಟ್ಟರು. ಆದಿಗಣನಾಥರು ಪ್ರಭುಲಿಂಗನ ಬೆಟ್ಟದಲ್ಲಿ ಗಣ ಸಮೂಹದೊಡನೆ ಜ್ಞಾನದಾಸೋಹ ನಿರತರಾಗಿದ್ದರು. ಅಲ್ಲಿಗೆ ಮಾದೇಶ್ವರರು ಆಗಮಿಸಲು ಅದಿಗಣನಾಥರು ಆನಂದ ತುಂದಿಲರಾಗುತ್ತಾರೆ. ಈ ಮಹಿಮಾ–ಶಾಲಿಯಾದ ಶಿಷ್ಯನಿಗೆ ಶಿವಾನುಭವ ಮಾರ್ಗವನ್ನು ಬೋಧಿಸುತ್ತಾರೆ. ಅಲ್ಲಿಯೇ ಮಾದೇಶ್ವರರು ಕಲ್ಲು ಹರಳುಗಳನ್ನು ಪುಷ್ಪಗಳನ್ನಾಗಿ ಪರಿವರ್ತಿಸುವುದು, ಬರಡು ಹಯನಾಗುವಂತೆ ಮಾಡುವುದು ಮೊದಲಾದ ಮಹಿಮೆಗಳನ್ನು ಮೆರೆಯುತ್ತಾರೆ. ಇದನ್ನು ಕಂಡು ಆದಿಗಣನಾಥರು ಮಾದೇಶ್ವರರಿಗೆ ಪೀಠದ ಆರನೆಯ ಜಗದ್ಗುರು ಪಟ್ಟವನ್ನು ಕಟ್ಟಿ ಪ್ರಭುಲಿಂಗನ ಬೆಟ್ಟದಲ್ಲಿಯೇ ಬಯಲಾಗುತ್ತಾರೆ. ಶ್ರೀ ಶೈಲಾಭಿಮುಖರಾಗಿ ಹೊರಟಿದ್ದ ಪ್ರಭುದೇವರು ಕೆಲದಿನ ತಪಸ್ಸು ಮಾಡಿದ ಸ್ಥಳವೆಂದು ಪ್ರಸಿದ್ಧವಾಗಿದ್ದ ಪ್ರಭುಲಿಂಗನ ಬೆಟ್ಟವು ಆದಿಗಣನಾಥರ ಸಮಾಧಿ ಸ್ಥಳವಾಗಿ ಇನ್ನಷ್ಟು ಪ್ರಸಿದ್ಧ ಪುಣ್ಯ ಕ್ಷೇತ್ರವಾಗುತ್ತದೆ.

ಶ್ರೀ ಮಾದೇಶ್ವರರು ಪಟ್ಟಾಭಿಷಿಕ್ತರಾಗಿ ಜಗದ್ಗುರು ನಿರ್ಮಾಯ ಗಣೇಶ್ವರರೆಂಬ ಅಭಿಧಾನದಿಂದ ಪೀಠದ ಪವಿತ್ರಕಾರ್ಯವನ್ನು ಮುಂದುವರಿಸುತ್ತಾರೆ. ಆದರೆ ಗುರುಗಳು ಕುರುಹಿಟ್ಟು ತೋರಿದ್ದ ತಮ್ಮ ಜೀವಯೋಗದಲ ನೆಲೆಯಾದ ನಡುಮಲೆ ಅವರನ್ನು ಕ್ಷಣಕ್ಷಣಕ್ಕೂ ಕೈಮಾಡಿ ಕರೆಯತೊಡಗುತ್ತದೆ. ಆಗ ತಮ್ಮ ಕೃಪೆಗೆ ಪಾತ್ರರಾಗಿದ್ದ ಶ್ರೀ ನಿರಂಜನ ಸ್ವಾಮಿಗಳವರಿಗೆ ಶೂನ್ಯಪೀಠದ ಏಳನೆಯ ಜಗದ್ಗುರು ಪಟ್ಟವನ್ನು ಕಟ್ಟಿ ತಾವು ನಡುಮಲೆಯತ್ತ ನಡೆಯುತ್ತಾರೆ.

ಪ್ರಭುಲಿಂಗಬೆಟ್ಟದ ಪುಣ್ಯವೇ ಪುರುಷರೂಪಿನಿಂದ ಪೊರಮಟ್ಟಂತೆ ನಿರ್ಮಾಯ ಗಣೇಶ್ವರರು ಹೊರಡುತ್ತಾರೆ, ಅಪಾರವಾದ ಭಕ್ತ ಸಂದೋಹ ಅತಿ ವ್ಯಥೆಯಿಂದ ಅವರನ್ನು ಬೀಳ್ಕೊಡುತ್ತದೆ. ಪ್ರಭುಲಿಂಗನ ಬೆಟ್ಟದಿಂದಿಳಿದು ಶ್ರೀ ಮಾದೇಶ್ವರರು

ನಡುಮಲೆಯ ಕಡೆಗೆ ನೋಡುತ್ತಾರೆ. ಅವರ ಅಂತರಂಗದ ಅಭಿಲಾಷೆಯೇ ಅಲ್ಲಿ ಬೆಟ್ಟವಾಗಿ ಗಟ್ಟಿಗೊಂಡಂತೆ ತೋರಿರಬೇಕು. ಅದಕ್ಕೆ ಮೊಳಕಾಲೂರಿ ನಮಸ್ಕರಿಸುತ್ತಾರೆ. ನಮಸ್ಕರಿಸಿ, ಎಲ್ಲರನ್ನೂ ಆಶೀರ್ವದಿಸಿ ಹೊರಡುತ್ತಾರೆ.ಅವರು ಮೊಳಕಾಲೂರಿದ ಸ್ಥಳವೂ ಪವಿತ್ರ ಕ್ಷೇತ್ರವಾಗಿ ಇಂದಿಗೂ ಶೋಭಿಸುತ್ತಲಿದೆ.

ಸದ್ಭಕ್ತ ಸಂಸಾರಿ ಸಂಗಪ್ಪನೊಬ್ಬ ಶ್ರೀ ಸ್ವಾಮಿಗಳ ಜೊತೆಗೆ ಹೊರಡುತ್ತಾನೆ. ಇಬ್ಬರೇ ಆನೆಮಲೆ, ಕಾನಮಲೆ, ಗುತ್ತಿಮಲೆ, ಜೇನುಮಲೆ, ಪಚ್ಚೆನೀಲಿ ಮಲೆ, ತುಳುವಮಲೆ, ಪದುವಮಲೆ, ಗೌಳಮಲೆ, ಚೆರವಮಲೆ, ಗಾಳಿಪೂಜೆಮಲೆ, ಮಂಜುಮಲೆ ಮೊದಲಾದುವುಗಳನ್ನು ದಾಟಿ ಮುಂದೆ ನಡೆಯುತ್ತಾರೆ. ನಿಬಿಡಾರಣ್ಯದ ನಡುವೆ, ಕಾಡು ದಾರಿಯಲ್ಲಿ ಹೊರಟ್ಟಿದ್ದ ಅವರು ಹುಲಿ, ಕರಡಿ, ಮದ್ದಾನೆ, ಕಾಡುಕೋಣ ಮೊದಲಾದುವುಗಳನ್ನು ನೋಡುತ್ತ, ಸುತ್ತಲೂ ಸೂರೆಯಾಗಿದ್ದ ಸೃಷ್ಟಿ ಸೌಂದರ್ಯವನ್ನು ಅವಲೋಕಿಸುತ್ತ, ಎಲ್ಲೆಡೆಗೂ ಆ ಜಗದ್ಭರಿತನ ತೇಜಾಂಶವನ್ನೇ ಕಾಣುತ್ತ ನಡುಮಲೆಗೆ ಬರುತ್ತಾರೆ.

ನಡುಮಲೆಯಲ್ಲಿ ಆಗ ಸೋಲಿಗರು ಎಂಬ ಕಾಡುಜನರು ವಾಸವಾಗಿರುತ್ತಾರೆ. ಕಾರಯ್ಯ ಆಗಿನ ಸೋಲಿಗರ ಹಿರಿಯ. ಅವನು ಶ್ರೀ ಮಾದೇಶ್ವರರನ್ನು ಕಾಣುತ್ತಲೇ ಅವರ ಭಕ್ತನಾಗಿಬಿಡುತ್ತಾನೆ. ಶ್ರೀ ಸ್ವಾಮಿಗಳಲ್ಲಿ ತಪಸ್ಸಿಗೆ ನಿಲ್ಲುತ್ತರೆ. ಸೋಲಿಗರಿಗೆ ಹಿಡಿಸಲಾರದಷ್ಟು ಹಿಗ್ಗಾಗುತ್ತದೆ. ಬಹು ಬೇಗನೆ ಕುರುಬರ ಬಿಲ್ಲಯ್ಯ, ಜಮೀನದಾರ ಕಾಯಣ್ಣ, ಬಂಡಹಳ್ಳಿ ಆಚಾರಿ ಮೊದಲಾದ ಮುಖಂಡರು ಮಾದೇಶ್ವರರ ಶಿಷ್ಯರಾಗುತ್ತಾರೆ. ಕಾಯಣ್ಣನಿತ್ತ ಭೂದಾನದಿಂದ ಧಾನ್ಯ ಬರುತ್ತದೆ. ದಾಸೋಹ ನಡೆಯುತ್ತದೆ. ಸರಗೂರು ಸ್ವಾಮಿಗಳು ಗುರು ದರ್ಶನಕ್ಕೆ ಬರುತ್ತಾರೆ. ಅದೇ ಸಮಯಕ್ಕೆ ಈ ಕಾಡುಜನರಿಗೆಲ್ಲ ಶಿವದೀಕ್ಷೆಯಾಗುತ್ತದೆ. ಅವರ ಹೊಸ ಜೀವನ ಪ್ರಾರಂಭವಾಗುತ್ತದೆ.

ಶ್ರೀ ಮಾದೇಶ್ವರರು ಪ್ರಭುಲಿಂಗನ ಬೆಟ್ಟದಲ್ಲಿದ್ದಾಗ ಒಂದು ಬಸವ, ಒಂದು ಸರ್ಪ ಅವರ ಶಿಷ್ಯರಾಗಿದ್ದುವು. ಬಸವ ಅವರ ವಾಹನ; ಸರ್ಪ ಅವರ ಶಿವ ಪೂಜೆಯ ಕಾಲಕ್ಕೆ ಹೆಡೆಯೆತ್ತಿ ನಿಲ್ಲುತ್ತಿದ್ದ ಪರಿಚಾರಕ. ಇವೆರಡನ್ನೂ ಮಾದೇಶ್ವರರು ಪ್ರಭುಲಿಂಗನ ಬೆಟ್ಟದಲ್ಲಿಯೇ ಬಿಟ್ಟು ಬಂದಿದ್ದರು. ಅವುಗಳಿಗೆ ಗುರುವಿನ ಅಗಲಿಕೆಯನ್ನು ಸಹಿಸಿಕೊಂಡು ಅಲ್ಲಿರಲಾಗಲಿಲ್ಲ. ಅಲ್ಲಿಂದ ಹೊರಟು ಅಡವಿ ಅಡವಿ ಅಲೆಯುತ್ತ ನಡುಮಲೆಗೆ ಬಂದೇಬಿಟ್ಟುವು ! ಬಂದು ಗುರುವಿನ ಅಡಿಗಳಿಗೆ ಎರಗಿದಾಗ ಎಲ್ಲರ ಆಶ್ಚರ್ಯಕ್ಕೆ ಪಾರವೇ ಇಲ್ಲದಾಯಿತು. ಆ ಬಸವ ಬಂದ ದಾರಿಯೇ ಇಂದಿಗೂ ಬಸವನ ದಾರಿಯೆಂದು ಹೆಸರಾಗಿದೆ; ಆ ಸರ್ಪ ಬಂದ ದಾರಿಯೇ

ಇಂದಿಗೂ ಸರ್ಪನದಾರಿಯೆಂದು ಪ್ರಸಿದ್ಧವಾಗಿದೆ. ಮುಂದೆ ಈ ಎರಡು ಗುರುಸೇವೆಯಲ್ಲಿಯೇ ಕಾಲ ಕಳೆದು ಅಲ್ಲಯೇ ದೇಹಬಿಟ್ಟು ದಿವ್ಯತ್ವವನ್ನು ಪಡೆದುವು.

ಬಸವನೆಂದುಸುರಿದೊಡೆ ಸಾಲದೆ
ಪಶುವಿಗಾದೊಡೆ ಭಕ್ತಿ ದೊರಕುಗು
ಬಸವನೆಂದುಸುರಿದೊಡೆ ಸಾಲದೆ ಶಿಶುಗಹುದು ಭಕ್ತಿ
ಬಸವ ಬಸವಾ ಎಂಬ ಭಕ್ತರ
ದೆಸೆಯನೀಕ್ಷಿಸುತಿರ್ಪ ಪಕ್ಷಿ
ಪ್ರಸರಕಾದೋಡೆಯೆಸೆಯದೇ ಶಿವಭಕ್ತಿ ವಸುಧೆಯಲಿ?

ಎಂಬ ಬಸವ ಪುರಾಣದಲ್ಲಿ ಬಸವಣ್ಣನವರ ಭಕ್ತಿಯ ಬಣ್ಣನೆ ಬರುತ್ತದೆ. ಶ್ರೀ ಮಾದೇಶ್ವರ' ಎಂದುಸುರಿದರೂ ಪಶುಗಳಿಗೂ ಸಹಿತ ಭಕ್ತಿ ಅಳವಡುತ್ತಿದ್ದಿತೆಂಬುದಕ್ಕೆ ಈ ಬಸವ ಸರ್ಪಗಳ ನಿಸ್ಸೀಮ 'ಭಕ್ತಿಯೇ ನಿದರ್ಶನ. "ಹಾವಾದೊಡೇನು, ಗೋವಾದೊಡೇನು ಭಾವ ಮುಖವೆಂಗುದನ್ನಿವು ಸಾರಿ" ಸದ್ಗತಿ ಪಡೆದುವು.

ದಿನಗಳೆದಂತೆ ಮಹಾಗುರು ಮಾದೇಶ್ವರರ ಭಕ್ತ ಸಂಖ್ಯೆ ಬೆಳೆಯತೊಡಗಿತು. ಲಿಂಗಧಾರಿಗಳಾಗಿ ಬಲ್ಲದ ಭಕ್ತರೆನಿಸಿದ್ದ ಬಿಲ್ಲಯ್ಯ ಅನ್ನಸಾಲಮ್ಮ ದಂಪತಿಗಳಿಗೆ ಶೋಷಣ್ಣೊಡೆಯ ಎಂಬ ಸತ್ಪುತ್ರನು ಸ್ವಾಮಿಯ ಅನುಗ್ರಹದಿಂದ ಜನಿಸಿದನು. ಈ ಸಾಧ್ವಿ–ಅನ್ನಸಾಲಮ್ಮ–ತಮ್ಮಡಿಗಳ ಕುಲಕ್ಕೆ ಗಂಗೋತ್ರಿ ಎಂದು ತಾಮ್ರ ಶಾಸನದಲ್ಲಿ ವರ್ಣಿತಳಾಗಿದ್ದಾಳೆ. ಇವಳ ಮಗ ಶೋಷಣ್ಣೊಡೆಯ ಮಹಿಮಾಶಾಲಿಯೆನಿಸಿ, ಮಾದೇಶ್ವರ ದೇವಾಲಯದ ಸಮೀಪದಲ್ಲಿಯೇ ಸ್ಥಳ ಪಡೆದಿದ್ದಾನೆ. ಅವನ ವಂಶದಲ್ಲಿ ಎಲ್ಲ ತಮ್ಮಡಿ ಎಂಬ ಪ್ರಸಿದ್ಧ ಪುರುಷ ಹುಟ್ಟಿದನು. ಹೊನ್ನಿದೇವ, ತಮ್ಮಡಿ ದುಂಡಯ್ಯ ಎಂಬ ಇನ್ನಿಬ್ಬರು ಭಕ್ತರು ಪ್ರಸಿದ್ಧರಾದರು. ಇವರೆಲ್ಲರೂ ಸ್ವಾಮಿಯ ಕೃಪೆಯಿಂದ 'ದೇವರಹಳ್ಳಿ' ಎಂಬ ಗ್ರಾಮವನ್ನು ಕಟ್ಟಿ ಅಲ್ಲಿ ವಾಸಿಸತೊಡಗಿದರು.

ರಾಯಣ್ಣ ರಾಜನ ಮಗಳು ದೇವಕಿ ದಿವ್ಯಸುಂದರಿಯಾಗಿದ್ದಳು. ಅವಳ ಸೌಂದರ್ಯದ ಖ್ಯಾತಿ ತಮಿಳುನಾಡಿನ ಅರಸನೊಬ್ಬನ ಕಿವಿಗೆ ಬೀಳಲು ಕೊಂಗರ ಸೈನ್ಯವನ್ನು ಕಟ್ಟಿಕೊಂಡು ಅವನು ನಡುಮಲೆಗೆ ನುಗ್ಗಿದನು. ಸ್ವಾಮಿಯ ಕೃಪೆಯಿಂದ ರಾಯಣ್ಣ ಕೊಂಗರ ಸೈನ್ಯವನ್ನು ಸೋಲಿಸಿ ಓಡಿಸಿದನು. ರಾಯಣ್ಣನ ವಿಜಯ ಮಾದೇಶ್ವರ ಮಹಿಮೆಯ ಮಂದಿರಕ್ಕೆ ಮತ್ತೊಂದು ಸುವರ್ಣ ಕಲಶವಾಗಿ ಕಂಗೊಳಿಸಿತು.

ಸದ್ಭಕ್ತ ಶಿರೋಮಣಿ ಸಂಸಾರಿ ಸಂಗಪ್ಪ ಸಾಲೂರು ಸ್ವಾಮಿಗಳ ನೆರವಿನಿಂದ ಸಾಲೂರು ಮಠವನ್ನು ಕಟ್ಟಿಸಿದ; ಏಳು ಮಲೆಗಳ ನಿವಾಸಿಗಳನ್ನೆಲ್ಲ ಲಿಂಗಧಾರಿಗಳನ್ನಾಗಿ ಮಾಡಿದ; ದಾಸೋಹ ಮಠವನ್ನು ಅಭಿವೃದ್ಧಿಗೆ ತಂದು ಅಲ್ಲಿಯೇ ಅಮರ ಜೀವನವನ್ನು ಪಡೆದ. ಇಂದಿಗೂ ಸಂಗಪ್ಪನ ಸ್ಥಳ ಉಳಿದಿದೆ. ಮಹಾ ಗುರುವಿಗೆ ತಕ್ಕ ಮಹಾಶಿಷ್ಯನೀತ.

ಶ್ರೀ ಮಾದೇಶ್ವರರು ನಡುಮಲೆಯಲ್ಲಿ ತಮ್ಮ ಶಿವಯೋಗ ಸಾಧನೆಯನ್ನು ಮುಂದುವರಿಸಿ ಮತ್ತೆ ಹಲವು ಮಹಿಮೆಗಳನ್ನು ಮೆರೆದರು. ಆ ಪರ್ವತಾವಳಿಯಲ್ಲಿ ನೆಲೆಸಿ, ಜನರಿಗೆ ತೊಂದರೆಕೊಡುತ್ತಿದ್ದ ಬೇವಿನಕಾಳಿಯೆಂಬ ಮಾರಿಯನ್ನು ನಿಗ್ರಹಿಸಿದರು ; ಸವಣನ ಸೆರೆಯಲ್ಲಿದ್ದ ೭೭ ಮಂದಿ ಜಂಗಮರನ್ನು ಬಿಡಿಸಿದರು; ಜೋಯಿಸನಾದ ಒಡ್ಡಿನ ರಂಗನಾಥನನ್ನು ಕಾಪಾಡಿದರು. ಒಂದು ದಿನ ಮಾದೇಶ್ವರರು ಪರ್ವತದ ಒಂದು ಕಡೆಗೆ ಶಿವಯೋಗ ಸಮಾಧಿಯಲ್ಲಿದ್ದಾಗ ಅವರ ಮೇಲೆ ಬಿಸಿಲು ಬೀಳದಿರಲೆಂದು ಆನೆಗಳು ತಮ್ಮ ಸೊಂಡಿಲುಗಳ ಕೊಡೆ ಹಿಡಿದಿದ್ದುವಂತೆ. ಆ ಸ್ಥಳವು ಇಂದಿಗೂ 'ಆನೆ ತಲೆದಿಂಬು' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಅವರು ೧೨ ವರ್ಷಗಳ ಕಾಲ ನಡುಮಲೆ ನಾಗಮಲೆಗಳಲ್ಲಿ ಕಟ್ಟುಗ್ರವಾದ ತಪಸ್ಸನ್ನಾಚರಿಸಿದುದರ ಫಲವಾಗಿ ಹಿಂಸ್ರ ಪಶುಗಳೂ ಅಹಿಂಸೆಯನ್ನು ಆಚರಿಸತೊಡಗಿದುವು. ಒಂದು ಹುಲಿ ನಿತ್ಯ ಬಂದು ಸ್ವಾಮಿಗೆ ಸಾಷ್ಟಾಂಗವೆರಗಿ ಹೋಗುತ್ತಿತ್ತು. ಸ್ವಾಮಿಗೆ ಹುಲಿಯೇ ವಾಹನವೆನಿಸಿದೆ.

ಶ್ರೀ ಮಾದೇಶ್ವರರ ಜನನದಂತೆ ಅವರ ಮರಣವೂ ರಹಸ್ಯವಾಗಿ ಉಳಿದಿದೆ. ಅವರು ಎಂದು ಎಲ್ಲಿ ಎಂತು ಲಿಂಗವಾದರೆಂಬ ವಿಷಯ ಎಲ್ಲಿಯೂ ಉಕ್ತವಾಗಿಲ್ಲ. ಶ್ರೀ ಮಾದೇಶ್ವರಲಿಂಗವು ಗೋಚರಿಸಿದ ರೀತಿ ಕೆಳಗಿನಂತಿದೆಯೆಂದು ಹೇಳುತ್ತಾರೆ.

ಒಂದು ದಿನ ಭಕ್ತ ಬಿಲ್ಲಯ್ಯನು ಸೌದೆಯನ್ನು ತರಲು ಮೊಚ್ಚು ಕೊಡಲಿಗಳೊಡನೆ ಕಾಡಿಗೆ ಹೋಗುತ್ತಾನೆ. ಅಲ್ಲಿ ಸೀಗೆಮೆಳೆಯೊಂದನ್ನು ಕಡಿಯುತ್ತಿರುವಾಗ ಅವನ ಮೊಚ್ಚು ಅಲ್ಲಿದ್ದ ಶಿವಲಿಂಗಕ್ಕೆ ತಗುಲುತ್ತದೆ. ಆ ಕ್ಷಣವೇ ಅವನು ಅಲ್ಲಿಯೇ ಮೂರ್ಛಿತವಾಗಿ ಮಲಗುತ್ತಾನೆ. ಸತಿ ಅನ್ನಸಾಲಮ್ಮ ಓಡಿಬಂದು ಗಂಡನ ಸ್ಥಿತಿಯನ್ನು ಕಂಡು ಕಂಬನಿಯ ಕೋಡಿ ಹರಿಸುತ್ತಾಳೆ. ಜನರ ಗೊಂದಲ ಹೆಚ್ಚಾಗಲು ಕಣಿಯನ್ನು ಹೇಳುವ ಹೆಂಗಳೆಯೊಬ್ಬಳು ಅಲ್ಲಿಗೆ ಬಂದು–"ಚಿಂತಿಸಬೇಡ ಅನ್ನಸಾಲಮ್ಮ, ನಿನ್ನ ಗಂಡನಿಗೆ ಶ್ರೀಮಾದೇಶ್ವರನು ಒಲಿದನು. ಇದುವರೆಗೆ ಜಂಗಮರೂಪಿಯಾಗಿದ್ದ ಸ್ವಾಮಿ ಇಂದು ಲಿಂಗರೂಪವಾಗಿದ್ದಾನೆ. ನೀನೂ ನಿನ್ನ ಗಂಡನೂ ಮಲೆಯ ಸಮಸ್ತ ಜನರೂ ಮಾದೇಶ್ವರಲಿಂಗವನ್ನು ಪೂಜಿಸಿ ಧನ್ಯರಾಗಿರಿ" ಎಂದು ಹೇಳಿ

ಅಂತರ್ಧಾನಳಾದಳು. ಭಕ್ತ ಬಿಲ್ಲಯ್ಯ ಎಚ್ಚತ್ತು ಕುಳಿತ. ನಡೆದ ಸಂಗತಿಯನ್ನು ಕೇಳಿ ಗುರುವಿನ ಅಗಲಿಕೆಯನ್ನು ತಡೆಯಲಾಗದೆ ಕಣ್ಣೀರ ಕಾಲುವೆ ಹರಿಸಿದ. ಮಾದೇಶ್ವರಲಿಂಗವೂ ತನ್ನ ಮನೆದೇವರೆಂದೂ ಆ ಮಲೆದೇವರೆಂದೂ ಸಾರಿ ಆತನ ಸೇವೆಯಲ್ಲಿಯೇ ಉಳಿದ ಆಯುಷ್ಯ ಸವೆಸಿ ಶಿವ ಸಾಯುಜ್ಯವನ್ನು ಹೊಂದಿದ.

ಬಂಡಿ ಹಳ್ಳಿಯ ಆಚಾರಿ ಮಾದೇಶ್ವರ ಲಿಂಗದ ಮುಂದೆ ನಂದಿಯ ಪ್ರತಿಷ್ಠಾಪನೆಮಾಡಿ ಮಾದೇಶ್ವರ ಜಾತ್ರೆಗಾಗ ಬಸವನ ವಾಹನ ಮಾಡಿಸಿ ಕೊಟ್ಟ. ಬರಗೂರು ವೀರಭದ್ರ , ಪಾಲಿಮಲೆಯ ಸಿದ್ಧೇಶ್ವರ, ಪೊನ್ನಾಚಿಮಲೆಯ ಪರಮೇಶ್ವರ–ಈ ಮೂವರೂ ಶ್ರೀಮಲೆಯ ಮಾದೇಶ್ವರ ಕ್ಷೇತ್ರರ ರಕ್ಷಕರಾಗಿ ನಿಂತರು. ನಂಜುನಗೂಡು, ಎರಗಂಬಳ್ಳಿ ಸುತ್ತೂರು, ಹೊಂಡರಬಾಳು, ಕುಂತೂರು, ಕನಕಗಿರಿ ಮೊದಲಾದ ಮಠಾಧೀಶರೂ ವಿರಕ್ತ ಹಂಪಯ್ಯನವರೂ ಜಗದ್ಗುರು ನಿರಂಜನ ಸ್ವಾಮಿಗಳೂ ನಡುಮಲೆಗೆ ಬಂದು ಶ್ರೀಮಾದೇಶ್ವರ ಲಿಂಗಕ್ಕೆ ಭಕ್ತಿ ಸಲ್ಲಿಸಿದರು. ಬಿಲ್ಲಯ್ಯನ ವಂಶಜರೇ ತಮ್ಮಡಿಗಳಾಗಿ ಇಂದಿಗೂ ಅರ್ಚನೆಯನ್ನು ಸಲ್ಲಿಸುತ್ತಲಿದ್ದಾರೆ. ಶಿವರಾತ್ರಿ, ನವರಾತ್ರಿ, ದೀಪಾವಳಿಗಳಲ್ಲಿ ನಡೆಯುವ ಜಾತ್ರೆಗಳಿಗೂ ಉಳಿದ ದಿನಗಳಲ್ಲಿಯೂ ಲಕ್ಷಾವಧಿ ಭಕ್ತರು ಇಂದಿಗೂ ಶ್ರೀ ಸ್ವಾಮಿಯ ದರ್ಶನದಿಂದ ಇಷ್ಟಾರ್ಥಗಳನ್ನು ಪಡೆಯುತ್ತಗಲಿದ್ದಾರೆ. ದಿನಗಳೆದಂತೆ ಶ್ರೀ ಮಾದೇಶ್ವರರ ಮಹಿಮೆ ಹೆಚ್ಚುತ್ತಲೇ ನಡೆದಿದೆ.

ಸೃಷ್ಟಿಗಧಿಕ ಕೈಲಾಸವೆನಿಪ ನಡು
ಬೆಟ್ಟದೊಳಗೆ ನೆಲೆಸಿರ್ಪ
ಇಷ್ಟಾರ್ಥವರವನು ಬೇಗದಿ ಜನರಿಗೆ
ಕೊಟ್ಟನು ಮಾದೇಶ್ವರನು ॥
(ಮಾದೇಶ್ವರ ಸಾಂಗತ್ಯ)

* * *

ಆನೆಮಲೆ, ಜೇನುಮಲೆ, ಮುದ್ದುಮಲೆ
ಗುಂಜುಮಲೆ, ಗುಲಿಗಂಜಿಮಲೆ, ಎಪ್ಪತ್ತೇಳು ಮಲೆ
ತಪ್ಪದೆ ನಾಟ್ಯವಾಡುವವನ ಮಾದೇಶ್ವರನ ಪಾದಕ್ಕೆ ಉಘೇ !

* * *

ಚೆನ್ನಾದ ಗುಡಿಯೋನೆ ಮುತ್ತಿನ ರಥದೋನೆ
ಗಂಡ್ದುಲಿಯ ಮೇಲೆ ಮೆರೆಯೋನೆ–ಮಾದಯ್ಯ
ಸೋಲಿಸಬೇಡ ಗೆಲಿಸಯ್ಯ !

(ಜನಪದಗೀತೆ)

■

# ನಿರುಪಮ ಜ್ಞಾನಿ ನಿಜಗುಣ ಶಿವಯೋಗಿ

ನೂರಾರು ವರ್ಷಗಳಾಚೆ–ಹದಿಮೂರು ಹದಿನೈದನೆಯ ಶತಮಾನಗಳ ಮಧ್ಯದಲ್ಲಿ ಎಂದೋ ಒಮ್ಮೆ*–ಕೊಳ್ಳೇಗಾಲದಲ್ಲಿರುವ ಶಂಭುಲಿಂಗನ ಬೆಟ್ಟದ ಮೆಟ್ಟಲುಗಳನ್ನೇರುತ್ತಲಿದ್ದ ಭವ್ಯಾತ್ಮನೊಬ್ಬ. ಅವನ ಕಾಲುಗಳು ಮೆಟ್ಟಲುಗಳನೇ–ರುತ್ತಿದ್ದಂತೆ ಅವನ ಮಸ್ತಕದಲ್ಲಿ ಪಲ್ಲವಿಯೊಂದು ಪ್ರತಿಧ್ವನಿಸುತ್ತಲಿತ್ತು–'ಆರು ನಾನೆಂದು ವಿಚಾರಿಸು.' ಸಾಕ್ರಟೀಸನೆಂದು'–'ನಿನ್ನ ನೀನು ತಿಳಿ' ಶಿವಶರಣರೆಂದರು 'ತನ್ನ ತಾನರಿದರೆ ಅರಿವೆ ಗುರು'. ಈ ವ್ಯಕ್ತಿಯೆಂದಿತು–'ಆರು ನಾನೆಂದು ವಿಚಾರಿಸು!' ಯಾಕೆ? "ಆರು ನಾನೆಂದು ವಿಚಾರಿಸಿ ತಿಳಿಯೆ ಸಂಸಾರ ಸಾಗರವನುತ್ತರಿಪುದರಿದೆ?"

'ಆರು ನಾನೆಂದು ವಿಚಾಸಲು' ಬೇಕಾಗಿದ್ದರವನಿಗೆ ಪ್ರಕೃತಿ. ಶ್ರೀಯ ಸಾನ್ನಿಧ್ಯ, ಏಕಾಂತ ಚಿಂತನೆ, ಅಂತರ್ಮುಖತೆ, ಅಧ್ಯಯನ, ಮನನ, ಅನುಸಂಧಾನ! ಪಾವನತೆ ರಮಣೀಯತೆಗಳ ಹೃದಯಸಂಗಮ ಸಂಗಮದಂತಿದ್ದ ಶಂಭುಲಿಂಗನ ಬೆಟ್ಟಕ್ಕೆ ಬಂದುದು ಇದಕ್ಕಾಗಿಯೇ. ಜನನ, ಮರಣ, ರುಜೆ, ಭಯ, ಶೋಕ, ಜರೆ, ಬಡತನ, ಪರಸೇವೆ, ಯಾಚನೆ, ಹಾನಿ, ಲಾಭಮ ಸ್ತುತಿ, ನಿಂದೆ, ಮುನಿಸು, ವಿಷಯರತಿ, ವಿರಹ, ಸಂತಾಪಾದಿ ವಿಕಾರಗಳ, ಹಿತ–ಅಹಿತ ಭೋಗ–ರೋಗ, ವಿದ್ಯೆ–ದಾರಿದ್ರ್ಯ, ಸಂಪತ್ತು–ಅತೃಪ್ತಿ, ಸಂತೋಷ–ಅತಿಯಾಸೆ, ಶಮೆ–ಮೋಹ, ಜ್ಞಾನ, ಅಹಂಕಾರ, ಮನುಜತ್ವ–ಮುಕ್ತಿಯ ಒಲವಿನ ಅಭಾವ, ತನುದಂಡನೆ–ಚಿತ್ತದೊಳಗಣ

---

* ನಿಜಗುಣರ ಕಾಲನಿರ್ಣಯ ನಿರ್ವಿವಾದವಾಗಿ ಇನ್ನೂ ಆಗಿಲ್ಲ. ೧೨ನೆಯ ಶತಮಾನದ ಕೊನೆಯಲ್ಲಿದ್ದ ಕನ್ಯಕುಬ್ಜಾಧಿಪತಿ ಜಯಂತಚಂದ್ರನ ಆಸ್ಥಾನಕವಿ ಹರ್ಷಮಿತ್ರನ ಹೆಸರನ್ನು ವಿವೇಕಚಿಂತಾಮಣಿಯಲ್ಲಿ ಉಲ್ಲೇಖಿಸಿರುವುದರಿಂದ ೧೨ನೆಯ ಶತಮಾನದಿಂದೀಚೆಗೆ ಇದ್ದನೆಂದೂ ಮಹಾಕವಿ ಷಡಕ್ಷರ ದೇವನು (೧೬೫೪) ಇವರನ್ನು ಸುತ್ತಿಸಿರುವುದರಿಂದ ೧೬೫೪ ಕ್ಕೆ ಹಿಂದೆ ಇದ್ದನೆಂದೂ ಸದ್ಯಕ್ಕೆ ಸ್ಥೂಲವಾಗಿ ಹೇಳಬಹುದಾಗಿದೆ. ನಿಜಗುಣ ಶಿವಯೋಗಿಯ ವಿವೇಕಚಿಂತಾಮಣಿಯು ಶಾಂತಲಿಂಗನಿಂದ ಶಕೆ ೧೫೨೬ರಲ್ಲಿ ಮರಾಠಿಗೆ ಭಾಷಾಂತರಿತವಾಗಿದೆ. ಅದಕ್ಕೂ ನೂರಾರು ವರ್ಷಗಳ ಹಿಂದಾದರೂ ಅದು ಕನ್ನಡದಲ್ಲಿ ರಚಿತವಾಗಿರಬೇಕು. ಆದುದರಿಂದ ನಿಜಗುಣ ಶಿವಯೋಗಿಗಳು ೧೪ನೆಯ ಶತಮಾನದಿಂದೀಚೆಗೆ ಇದ್ದಿರಲಾರರು.



**ನಿಜಗುಣ ಶಿವಯೋಗಿಗಳು**

ಕಾಮ, ಮುನಿವರ್ತನೆ–ಲೋಕರಂಜನೆ ಮೊದಲಾದ ದ್ವಂದ್ವಗಳ ಜಡಜಗತ್ತನ್ನು ತೊರೆದು ತಿಳಿವು ತೆರೆಮಸಗುವ ಅರಿವಿನ ತೊರೆಯಲ್ಲಿ ಈಸಿ ಜೈಸಲು ಬಂದದ್ದು.

ಯಾರಿವನು? ಯಾರಿಗೆ ಮಗನಾಗಿ ಎಲ್ಲಿ ಜನಿಸಿದ? ಯಾರಲ್ಲಿ ವಿದ್ಯೆ ಕಲಿತ? ಇದುವರೆಗೆ ಯಾವ ವೃತ್ತಿಯಲ್ಲಿದ್ದ? ಕೊಳ್ಳೇಗಾಲದ ಸುತ್ತುಮುತ್ತಲಿನ ಪ್ರದೇಶಕ್ಕೆ ಅರಸನಾಗಿದ್ದು ಬುದ್ಧನಂತೆ ಮಾನವ ಜೀವನದ ಹೀನತೆ ಕಣ್ಣಿಗೆ ಕಂಡಾಗ ವಿರಕ್ತಿ ಹುಟ್ಟಿ ರಾಜ್ಯ ಬಿಟ್ಟು ಬಂದನೆ? ಇರಬಹುದು. ಕನ್ನಡನಾಡಿನ ಲಕ್ಷಾಂತರ ಜ್ಞಾನಭಿಕ್ಷುಗಳು ಹೀಗೆಯೇ ನಂಬಿದ್ದಾರೆ.

ಹಲಕೆಲವು ಹೆಸರುಗಳು, ಹಲಕೆಲವು ತಿಥಿವಾರ ನಕ್ಷತ್ರಗಳು–ಇವುಗಳ ಸಿಂಪುಗಳಲ್ಲಿ ಅಡಗಬಲ್ಲ ಸ್ವಾತಿಯ ಹನಿಗಳಂತಲ್ಲ ಮಹಾಮಾನವರ ಚರಿತ್ರೆ. ಅದು ಉಗಮಪರ್ಯವಸಾನಗಳ ವಿವರ ಗೊತ್ತಿಲ್ಲದವರಿಗೂ ಮಹತ್ವನ್ನು ತೋರಬಲ್ಲ ಮಹಾ ನದಿಯಂತೆ ಶಂಭುಲಿಂಗನ ಬೆಟ್ಟವನ್ನೇರಿ ಅಲ್ಲಿ ನಿಜವನರಿದು ನಿಜವನರುಹಿ ನಿಜದೊಡಗೂಡಿಹೋದ ಈ ವ್ಯಕ್ತಿಯು ಮಹಾಮಾನವ. ಹೆಸರು ನಿಜಗುಣ ಶಿವಯೋಗಿ–ನಿರುಪಮಜ್ಞಾನಿ ನಿಜಗುಣ ಶಿವಯೋಗಿ. ಶಂಭುಲಿಂಗನ ಬೆಟ್ಟದ ಶಿಖರದಿಂದ ಉಚ್ಚಸ್ವರದಲ್ಲಿ–

ಶ್ರೀಗುರುವಚನದಿಂದಧಿಕ ಸುಧೆಯುಂಟೆ?
ರಾಗದಿಂ ಬೇರಿನ್ನು ಭವಬೀಜಮುಂಟೆ?
ನರಜನ್ಮದಿಂದಿಹದೊಳು ಮಿಗಿಲುಂಟೆ?
ಕರಣವಿಜಯದಿಂದೆ ಕಲಿತನಮುಂಟೆ?
ಧರೆಯೊಳು ಯಾಚನೆಯಿಂದ ಅಘುತರಮುಂಟೆ?
ಪರಬೊಮ್ಮದರಿವಿನಿಂದುರೆ ಜಾಣ್ಮೆಯುಂಟೆ?
ಕಡುಲೋಭದಿಂದೆ ದುರ್ಗುಣಮನ್ಯ ಮುಂಟೆ?
ಪಡೆದಪವಾದದಿಂ ಮರಣವಿನ್ನುಂಟೆ?
ಎಡೆಬಿಡದಿಹ ಸತ್ಯದಿಂ ತಪಮುಂಟೆ?
ಕೆಡಸದಿಪ್ಪಭಿಮಾನದಿಂ ಧನಮುಂಟೆ?
ತನುವಿದನುಳಿದಿಂದ್ರಜಾಲದಾಟಗಳುಂಟೆ?
ನನೆಗೋಲಿನಿಂದ ನೋಯಿಸುವಲಗುಂಟೆ?
ವಿನಮಿತನಹುದರಿಂದುಪಚಾರಮುಂಟೆ?
ತನಗಿಂತ ಪ್ರಿಯವಾದ ವಿಷಯವುಂಟೆ?
ಶಮೆಯಿಂದೆ ಮುಕುತಿಸಾಧನ ಪೆರತುಂಟೆ?
ವಿಮಲ ಮಾನಸದಿಂದೆ ಶುಭತೀರ್ಥಮುಂಟೆ?
ಕ್ರಮತಪ್ಪಿ ನಡೆವುದರಿಂದ ಕರಕಷ್ಟಮುಂಟೆ?
ಮಮಕಾರದಿಂ ಮಿಕ್ಕಿನ ಬಂಧಮುಂಟೆ?
ಕರುಣದಿಂದತಿಶಯವಹ ಧರ್ಮಮುಂಟೆ?
ವಿರತಿಯಿಂದಿತರ ಸಂಪದ ಸುಖಮುಂಟೆ?

ವರಭಕ್ತಿಯಿಂದೆ ಸಚ್ಚರಿತಮುಂಟೆ?
ಗುರು ಶಂಭುಲಿಂಗದಿಂ ಪರದೈವಮುಂಟೆ?"

ಎಂದು ಸಕಲಾನುಭವಸಾರ ಸಂಗ್ರಹವಾಗಿ ಘೋಷಿಸಿದ ಈ ಮಹಾತ್ಮ ಕನ್ನಡ ನಾಡಿನ ಅದ್ಭುತ ವ್ಯಕ್ತಿಗಳಲ್ಲಿ ಒಬ್ಬನು. ಆಗಾಧ ವಿದ್ವತ್ತಿನಿಂದಲೂ ದೀರ್ಘ ತಪಶ್ಚರ್ಯೆಯಿಂದಲೂ ಜ್ಞಾನದ ತುತ್ತತುದಿಯನ್ನೇರಿ ಕೆಳಗಿಳಿದು ಬಂದು ತರತರದ ಗದ್ಯಪದ್ಯದಲ್ಲಿ ಕನ್ನಡ ಜನಕ್ಕೆ ತನ್ನ ಅರಿವನ್ನು ಹಂಚಿಕೊಟ್ಟವನು.

"ಕಾವ್ಯದ ತಿರೆಯ ಮೇಲೆ ನಿಂತು, ಅಧ್ಯಾತ್ಮದ ಮುಗಿಲನ್ನು ಮುಟ್ಟಿದ್ದ ***ಈ ಉನ್ನತಜ್ಞಾನಿ, ಗಣ್ಯಕವಿ ಬಳಸದ ಗದ್ಯಪದ್ಯ ಪ್ರಕಾರಗಳೇ ಇಲ್ಲವೆಂದರೂ ಸಲ್ಲುವುದು ಹಾಡುಗಬ್ಬ, ದ್ವಿಪದಿ, ತ್ರಿಪದಿ, ಸಾಂಗತ್ಯ, ಕಂದ, ರಗಳೆ, ಗದ್ಯ ಎಲ್ಲವನ್ನೂ ಏಕಪ್ರಕಾರವಾದ ಸಹಜತೆ ಸುಭಗತೆಯಿಂದ ಬಳಸಿಕೊಂಡ ಹೆಗ್ಗಳಿಕೆ ನಿಜಗುಣರದು. ಇವರು ಒಂದು ದೃಷ್ಟಿಯಿಂದ ವೀರಶೈವ ಕವಿಗಳ ವೈವಿಧ್ಯದ ಪ್ರತೀಕದಂತಿದ್ದಾರೆಂದು ಹೇಳಬಹುದಾಗಿದೆ."

ಛಂದೋವೈವಿಧ್ಯದಲ್ಲಷ್ಟೇ ಅಲ್ಲ, ವಿಷಯವೈವಿಧ್ಯದಲ್ಲೂ ಇವರನ್ನು ಸರಿಗಟ್ಟುವವರಿಲ್ಲ. ಭಕ್ತಿ, ಜ್ಞಾನ, ವೈರಾಗ್ಯ, ಯೋಗ, ನೀತಿ, ವ್ಯವಹಾರ, ವಿವೇಕ, ಮತೀಯವಾದ ಹಾಗೂ ಮತಾತೀತವಾದ ವಿವಿಧ ವಿಷಯಗಳು–ಹೀಗೆ ಬೆರಗುಗೊಳಿಸುವ ವಿಷಯವೈವಿಧ್ಯವನ್ನು ತೋರಿ ನಿರುಪಮ ನಿಜಗುಣ ಶಿವಯೋಗಿ ಎಂಬ ನೆಗಳ್ತೆ ಪಡೆದರಿವರು. ಇವರ ಏಳು ಕನ್ನಡ ಕೃತಿಗಳು ಉಪಲಬ್ಧವಾಗಿದ್ದು ಅನೇಕ ಸಂಸ್ಕರಣಗಳನ್ನು ಕಂಡಿವೆ ಕೈವಲ್ಯ ಪದ್ಧತಿಯು ಹೃದಯಸ್ಪರ್ಶಿಯಾದ ಹಾಡುಗಬ್ಬಗಳಿಂದ ಕೂಡಿದೆ. ಅದರಲ್ಲಿ ಅವರೇ ಹೇಳಿದಂತೆ ಅದು 'ಯೋಗಿ ನಿಜಾನಂದದೊಳು ನುಡಿಸುವ ವೀಣೆ ರಾಗರಸದ ತರಂಗಿಣಿ'ಯಾಗಿ ಹರಿದಿದೆ. ಅವರು ಗುರು ಶಂಭುಲಿಂಬ 'ಸರಸ ಸಂಗೀತ ಸಾಹಿತ್ಯಸಲ್ಲಾಪ'ನಾದ ಶಂಭುಲಿಂಗ, 'ಶರಣಸತಿಯನೊಲಿಸುವ ಸತ್ಕಲಾಪ' ಶಂಭುಲಿಂಗ ಆದುದರಿಂದ ಈ ಹಾಡುಗಬ್ಬದಲ್ಲಿ ಮನಂಬುಗುವ ಭಕ್ತಿಶ್ರೀ ಚಿತ್ತವನ್ನು ಸೂರೆಗೊಳ್ಳುವ ಸಂಗೀತ ಶ್ರೀಯಲ್ಲಿ ಸಮ್ಮಿಲಿತವಾಗಿ ಸಮ್ಮೋಹಕವಾಗಿ ಹೊರಬಿದ್ದಿದೆ. ವೈದಿಕ ಧರ್ಮಾನುಯಾಯಿಗಳು ವೇದಮಂತ್ರಗಳಿಗೆ ಕೊಡುವಷ್ಟು ಪಾವಿತ್ರ್ಯವನ್ನು ವೀರಶೈವರು ಈ ಹಾಡುಗಳಿಗೆ ಕೊಡುತ್ತಾರೆ.

---

* (೧) ಡಾ ॥ ರಂ. ಶ್ರೋ ಮುಗಳಿ 'ಕನ್ನಡ ಸಾಹಿತ್ಯ ಚರಿತ್ರೆ' ಪು (೩೨೩)
(೨) ಶ್ರೀ ಅ.ನ. ಕೃಷ್ಣರಾಯರು "ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ"
(೩) ಪ್ರೊ. ಸ.ಸ. ಮಾಳವಾಡ "ಸಾಹಿತ್ಯ ಸಂಸ್ಕೃತಿ ದರ್ಶನ"

"ಪರಮಾನುಭವ ಬೋಧೆ" ಯಾಜ್ಞವಲ್ಕ್ಯ ಮೈತ್ರೇಯಿಯರ ಸಂವಾದವೇ ಕನ್ನಡವಾದ ಕೃತಿ ಸಾಂಗತ್ಯದಲ್ಲಿದೆ. ಇದರ ಬಗ್ಗೆ:

"ಪರಮ ವಿವೇಕಿಗಳೊಲಿದೊಡಂಬಡುವಂತೆ
ಪರತತ್ವ ಬೋಧಯಮೃತದ
ಸರಿಸುರಿವಂತೆ ಕೇಳ್ವರ ಕರ್ಣದೊಳಗಿದ
ನೊರೆವೆ ನಾನುಪನಿಷನ್ಮತದಿಂದ"

ಎಂದು ನಿಜಗುಣರೇ ನುಡಿದಿದ್ದಾರೆ. ಇದು ಉಪನಿಷನ್ಮತದ ತಿರುಳು. ಸಂವಾದ ರೂಪದಲ್ಲಿರುವುದರಿಂದ ಚಿತ್ತಾಕರ್ಷಕವಾಗಿದೆ; ಸಾಂಗತ್ಯದಲ್ಲಿ ಸರಳಸುಂದರವಾಗಿ ನಿರೂಪಿತವಾಗಿರುವುದರಿಂದ ಗೇಯತೆಯಿಂದೊಡಗೂಡಿ ನಿತ್ಯಪಠನೀಯವಾಗಿದೆ.

ಪರಮಾರ್ಥ ಗೀತೆಯ ಪ್ರಾರಂಭದಲ್ಲಿ ಅವರೇ

"ಕೇಳೆಲೆ ವಾಸಿಷ್ಠಾದಿಗಳಲ್ಲಿ
ಪೇಳಿದ ತತ್ತ್ವಾರ್ಥವ ನಿಂದಿಲ್ಲಿ
ನಿನಗರುಪುವೆ ನಾನೀ ಗೀತೆಯೊಳು
ತನುಜನೆ ಕೇಳ್ಶೈತಿಳಿದೊಲವಿನೊಳು"

ಎಂದು ಹೇಳಿರುವುದರಿಂದ ಇದು ಯೋಗವಾಸಿಷ್ಠಾದಿಗಳಲ್ಲಿ ಪ್ರತಿಪಾದಿತ– ವಾಗಿರುವ ತತ್ತ್ವಾರ್ಥದ ಕನ್ನಡ ರೂಪಾಂತರ. ಇದು ಲಲಿತರಗಳೆಯಲ್ಲಿದೆ. ಅಲ್ಲಲ್ಲಿ ಕಂದಗಳೂ ಕಂಗೊಳಿಸುತ್ತವೆ.

'ಅನುಭವಸರ'ದಲ್ಲಿ ಉಪನಿಷದ್ವೇದಾಂತ ತ್ರಿಪದಿಯ ರೂಪದಲ್ಲಿ ನಿರೂಪಿತವಾಗಿದೆ.

"ವೇದಾಂತದೊಳು ಗೋಪ್ಯವಾದರ್ಥಮಂ ತ್ರಿವಿಧಿ
ಯಾದೀ ಪ್ರಕರಣವನೆ ಮಾಳ್ಪೆನಾತ್ಮಜ್ಞ
ರಾದರದೊಳಾಲಿಸುವ ಪಾಂಗು"
ಎಂದು ಅವರೇ ಹೇಳಿದ್ದಾರೆ ಆದಿಯಲ್ಲಿ.

'ಪಾರಮಾರ್ಥ ಪ್ರಕಾಶಿಕೆ'ಯೋಗಶಾಸ್ತ್ರವನ್ನು ಪ್ರತಿವಾದಿಸುವ ಗ್ರಂಥ ಗದ್ಯದಲ್ಲಿದೆ. ಯೋಗದ ಅಷ್ಟಾಂಗಗಳನ್ನೂ ಯೋಗ ಪ್ರಭೇದಗಳಾದ ಮಂತ್ರ, ಲಯ ಹಠ, ರಾಜಯೋಗಗಳನ್ನೂ ವಿವರಿಸಿ ಅವೆಲ್ಲವುಗಳಿಗೂ ಶ್ರೇಷ್ಠವಾದ ಶಿವಯೋಗವನ್ನು ವಿವರಿಸಿರುವರು. ಇದನ್ನು ಶ್ರೀ ಚೆನ್ನಸದಾಶಿವಯೋಗೀಂದ್ರರು ಸಂಸ್ಕೃತದಲ್ಲಿ

ಬರೆದಿರುವ 'ಶಿವಯೋಗ ಪ್ರದೀಪಿಕೆ'ಯನ್ನು ಆಧರಿಸಿ ಬರೆದಿರುವರು. ಅಲ್ಲಲ್ಲಿ ಮೂಲವನ್ನು ವಿಸ್ತರಿಸಿ ವಿಶದೀಕರಿಸಿ ಬರೆದಿರುವರು.[೧]

"ಆರುವತ್ತುಮೂರು ಪುರಾತನರ ತ್ರಿವಿಧಿ'ಯು ಹೆಸರೇ ಸೂಚಿಸುವಂತೆ ಆರುವತ್ತುಮೂವರು ಪುರಾತನರ ಸ್ತುತಿರೂಪವಾದ ಕೃತಿ ತ್ರಿಪದಿಯಲ್ಲಿದೆ. ಇದು ಸರ್ವಜ್ಞನ ತ್ರಿಪದಿಯ ತರುವಾಯ ಅತ್ಯಂತ ಜನಪ್ರಚುರವಾಗಿರುವ ಕೃತಿ. ಹಳ್ಳಿಹಳ್ಳಿಗೂ ಹೆಣ್ಣುಗಂಡುಗಳಿದನ್ನು ಹಾಡಿ ಹಿಗ್ಗುತ್ತಾರೆ.

"ವಿವೇಕ ಚಿಂತಾಮಣಿ' ನಿಜಗುಣ ಶಿವಯೋಗಿಯ ಹೆಬ್ಬೊತ್ತಿಗೆ. ಕನ್ನಡ ಜನಕ್ಕೆ ಅವನು ನೀಡಿದ ಜ್ಞಾನಭಂಡಾರ. ಇದರಲ್ಲಿ ಅಂದಿನ ಎಲ್ಲ ತಾತ್ತ್ವಿಕ, ಭೌಗೋಲಿಕ, ಸಾಹಿತ್ಯಕ ವಿಷಯಗಳ ಜ್ಞಾನವು ಸಂಗ್ರಹವಾಗಿ ತೆನೆಗಟ್ಟಿ ನಿಂತಿದೆ. ವೇದಪುರಾಣ ಶಾಸ್ತ್ರದೊಳ್ ನೇಮಿಸಿ ತೋರ್ಪ ವಿಶ್ವ ವಿಷಯಂಗಳ ಸಂಸ್ಥಿತಿಯಂ ವಿವೇಕ ಚಿಂತಾಮಣಿಯೆಂಬ ಸಲ್ವ ಪೆಸರಿಟ್ಟು...ಆಗಮಾಮ್ನಾಯ ಸಂಮತದಿ...ಸ್ಮೃತಿ ಪುರಾಣೇತಿಹಾಸ ಪುರಾಣೋಕ್ತಿಗಳನು ಸಾರದಿಂದನುಭವಿಗಳಹುದೆಂಬಂತೆ ಸ್ವಕಪೋಲಕಲ್ಪಿತಮಲ್ಲದ ಸಾರತರವಾದ ಸತ್ಯಾರ್ಥಂಗಳನೆ ಸಂಗ್ರಹಿಸಿ .....ಮುಮುಕ್ಷುಜನಂಗಳು...ಬಳಲದೆ ಅಭಿವ್ಯಕ್ತಮಾಗಿಲ್ಲಿಯೆ ಸಲೀಲೆಯೆಂದರಿತು ಕೃತಾರ್ಥರಾಗಲೆಂದು ನಿಜಗುಣ ಶಿವಯೋಗಿ ಬೆಳುಗನ್ನಡವಾದ ವಚನ ರಚನೆಗಳಿಂದ ರಚಿಸಿರುವ ಈ ಉದ್ಗ್ರಂಥ ಒಂದು ಮತದ ಇಲ್ಲವೆ ತತ್ವದ ಜ್ಞಾನಕೋಶವಲ್ಲ. ಇಲ್ಲವೆ ವಿದ್ಯಾರಣ್ಯರ 'ಸರ್ವದರ್ಶನ ಸಂಗ್ರಹ'ದಂತೆ ದಾರ್ಶನಿಕ ಮಾತ್ರವಲ್ಲ. ಮತಾತೀತವಾದ ಸಕಲಜ್ಞಾನಕೋಶವೆಂಬ ಸ್ವರೂಪದಲ್ಲಿ ಇದು ಕನ್ನಡ ವಾಙ್ಮಯದಲ್ಲಿ ಅದ್ವಿತೀಯವಾದ ಗದ್ಯಗ್ರಂಥ"[೧] ಅಂತೆಯೇ ಇದು ಸಂಸ್ಕೃತ, ತಮಿಳು ಮತ್ತು ಮರಾಠೀ ಮೊದಲಾದ ಭಾಷೆಗಳಲ್ಲಿ ಪರಿವರ್ತಿತವಾಗುವ ಅಪೂರ್ವ ಗೌರವಕ್ಕೆ ಪಾತ್ರವಾಗಿದೆ.

ಈ ಏಳು ಕನ್ನಡ ಕೃತಿಗಳನ್ನಲ್ಲದೆ ನಿಜಗುಣರು 'ದರ್ಶನಸಾರಂ' ಮತ್ತು 'ಆತ್ಮತರ್ಕ ಚಿಂತಾಮಣಿಃ'ಎಂಬೆರಡು ಸಂಸ್ಕೃತ ಕೃತಿಗಳನ್ನು ರಚಿಸಿದ್ದಾರೆಂದು ಪ್ರತೀತಿಯಿದೆ.[೨] ಆದರೆ ಆ ಎರಡು ಕೃತಿಗಳು ಇದುವರೆಗೂ ಉಪಲಬ್ಧ–ವಾಗದಿರುವುದು ವಿಷಾದದ ಸಂಗತಿ. ಉಪಲಬ್ಧವಾಗಿದ್ದರೆ ಇದಾಗಲೇ

---

* (೧) ಡಾ ॥ ಶಿ.ಚಿ. ನಂದೀಮಠರು–ಪಾರಮಾರ್ಥ ಪ್ರಕಾಶಿಕೆಯ ಮುನ್ನುಡಿಯಲ್ಲಿ.
(೧) ಡಾ ॥ ರಂ.ಶ್ರೀ. ಮುಗಳಿ–'ಕನ್ನಡ ಸಾಹಿತ್ಯ ಚರಿತ್ರೆ' ಪು. ೨೨೫–೩೬.
(೨) "ವಾದ ಕಾಂಕ್ಷಿಗಳಿಗಿದ–ಆತ್ಮತರ್ಕ ಚಿಂತಾಮಣಿಯೊಳ್ ಉಸಿರಿರ್ಪೆಂ"

ಹಿಮಾಲಯದೆತ್ತರಕ್ಕೆ ಏರಿ ನಿಂತಿರುವ ನಿಜಗುಣರ ವ್ಯಕ್ತಿತ್ವವು ಇನ್ನೂ ಉನ್ನತವಾಗಿ ಕಂಗೊಲಿಸುತ್ತಿತ್ತು.

ನಿಜಗುಣರ ಕಾವ್ಯೋದ್ದೇಶವೂ ಅವರ ವ್ಯಕ್ತತ್ವದಷ್ಟೇ ಉನ್ನತವಾದುದು. "ಅನಿಮಿತ್ತ ಬಂಧುತ್ವದಿಂ ನೆನೆದು ನೋಡಿ ಸಂಸ್ಕೃತ ಶಬ್ದ ವ್ಯಾಕರಣ ಪ್ರಮಾಣಾದಿಗಳ ಲಕ್ಷಣ ಶಿಕ್ಷೆಗಳಿಲ್ಲದೆ ಮೋಕ್ಷ ಮಾತ್ರಾಪೇಕ್ಷಿತರಾದ ಸಾಧು ಜನಂಗಳ್ ಆಯಾಸಮಿನಿತಿಲ್ಲದೋದಿ ಕೇಳಿ ತಿಳಿದು ಕೃತಾರ್ಥರಾಗಲೆಂದು "....ಎಂದು ಪಾರಮಾರ್ಥಪ್ರಕಾಶಿಕೆಯಲ್ಲಿಯೂ "ಮುಮುಕ್ಷು ಜನಂಗಳೇ ಜಗತ್ತಿನ ಸ್ಥಿತಿಗತಿಗಳಾವ ಪ್ರಕಾರದಿಂದಿಹವೆಂದು ಅರಸಿ ಬಳಲದೆ ಅಭಿವ್ಯಕ್ತಮಾಗಿಲ್ಲಿಯೇ ಸಲ್ಲೀಲೆಯಿಂದರಿದು ಕೃತಾರ್ಥರಾಗಲೆಂದು..... ಪೇಳ್ದಂ" ಎಂದು 'ವಿವೇಕ ಚಿಂತಾಮಣಿ'ಯಲ್ಲಿಯೂ "ಅಬಾಲವೃದ್ಧರಿಗಾಯಾ–ಸವಿನಿತಿಲ್ಲದಂತೆ ಸಮ್ಯಜ್ಞಾನಿಗಳೊಡಂಬಡುವಂತೆ" ಎಂದು ಕೈವಲ್ಯ ಪದ್ಧತಿಯ ಕೊನೆಯಲ್ಲಿಯೂ 'ಲೋಕ ಹಿತಾರ್ಥವೆನಲುಪೇಳ್ದಂ' ಎಂದು ಪರಮಾನುಭವ–ಬೋಧೆಯಲ್ಲಿಯೂ 'ಸಕಲ ವೇದಾಂತ ಸಾರವನೇ ತಿಳಿವಂತೆ ಸಾಧಕರಿಗೀ ಪ್ರಕರಣದೊಳೊಲಿದೊರೆಮೆ'ನೆಂದು ಅನುಭವಸಾರದಲ್ಲಿಯೂ ಅವರ ವಿಶುದ್ಧವಾದ ಮಹೋದಾತ್ತವಾದ ಕಾವ್ಯೋದ್ದೇಶ ವ್ಯಕ್ತವಾಗಿದೆ. ತಮ್ಮ ಕೃತಿಗಳಲ್ಲೆಲ್ಲ ತಮ್ಮ ಬಗ್ಗೆ ನಿಷ್ಠುರ ನಿರ್ಲಿಪ್ತತೆಯನ್ನು ತೋರಿರುವ ನಿಜಗುಣರೂ ಒಮ್ಮೆ ತಮ್ಮ ಬಗ್ಗೆ ಉದ್ಗಾರ ತೆಗೆದಿದ್ದಾರೆ :

"ಅನಿಮಿತ್ತ ಬಾಂಧವನು, ಅನುಪಮಾನಂದಾಬ್ಧಿ
ವಿನಯಾದಿ ಗುಣಗಣಮಂಡನ
ಜನನವಿದೂರ, ಅಧಿಕ ವಿದ್ಯಾಸಂಪನ್ನ
ನೆನಿಸಿರಾಜಿಪ ನಿಜಗುಣಯೋಗಿ![೧]

ಇದು ವೃಥಾಭಿಮಾನವಲ್ಲ, ಯಥಾರ್ಥ ವರ್ಣನೆಯೆಂಬುದನ್ನು ನಿಜಗುಣರ ಗ್ರಂಥಗಳನ್ನು ಅವಲೋಕಿಸಿದವರೆಲ್ಲರೂ ಒಪ್ಪುತ್ತಾರೆ.

ನಿಜಗುಣ ಶಿವಯೋಗಿಗಳು ಬಹುಮುಖವಾದ ಪ್ರತಿಭೆಯನ್ನು ಪಡೆದಿದ್ದ ಮಹಾಪುರುಷರು. ಶಾಸ್ತ್ರ–ಸಾಹಿತ್ಯ, ಲೌಕಿಕ–ಪಾರಮಾರ್ಥಿಕ, ಜ್ಞಾನ–ಭಕ್ತಿ, ದೊರೆತನ–ವಿರತಿ, ಕಾವ್ಯ–ಸಂಗೀತ, ವ್ಯಷ್ಟಿ–ಸಮಷ್ಟಿ, ಸ್ವಮತನಿಷ್ಠೆ–ಪರಮತ ಸಹಿಷ್ಣುತೆ–ಹೀಗೆ ಅನೇಕ ಮುಖಿಯಾಗಿ ಅವರ ಪ್ರತಿಭೆ, ಅರಳಿ ನರುಗಂಪು ಸೂಸಿತು. ಆದುದರಿಂದ ವಿದ್ವತ್ತಿನಲ್ಲಿ, ಶಿವಯೋಗದಲ್ಲಿ, ವೇದಾಂತ ಶಾಸ್ತ್ರದಲ್ಲಿ, ಶಿವಾನುಭವ ವಿದ್ಯೆಯಲ್ಲಿ,

---

೧ ಪಾರಮಾನುಭವಬೋಧೆ.

ಲೌಕಿಕ ವ್ಯಾವಹಾರದಲ್ಲಿ, ಪಾರಮಾರ್ಥಿಕ ಜೀವನದಲ್ಲಿಯೂ ಇವರನ್ನು ಸರಿಗಟ್ಟುವವರು ಯಾರು ಇಲ್ಲವೆಂದು ಧೈರ್ಯದಿಂದ ಹೇಳಬಹುದು.೧ "ಕರ್ನಾಟಕದಲ್ಲಿ

ಯಾವನಾದರೂ ಗ್ರಂಥಕಾರನು ಧಾರ್ಮಿಕ ತೇಜುಸ್ಸನ್ನು ಸ್ಥಿರಿಗೊಳಿಸಲಿಕ್ಕೆ ಕಾರಣನಾಗಿದ್ದರೆ ಅವನು ನಿಶ್ಚಯವಾಗಿ ನಿಜಗುಣ ಶಿವಯೋಗಿಯೇ ಇರುತ್ತಾನೆ."೨ "ಪ್ರಸಿದ್ಧ ಅದ್ವೈತ ಮತಸ್ಥಾಪಕರಾದ ಭಗವಾನ್ ಶಂಕರಾಚಾರ್ಯರಿಗಿಂತಲೂ ಶ್ರೀ ನಿಜಗುಣರು ಯಾವ ರೀತಿಯಿಂದಲೂ ಕಡಿಮೆಯವರಾಗಿಲ್ಲ."೩

ಈ ದೃಷ್ಟಿ ವೈಶಾಲ್ಯ

"ಹರಿಪಿತಾಮಹ ರುದ್ರ ವರ ಸದಾಶಿವ ಮಹೇ
ಶ್ವರ ಮುಖ್ಯರಾವನೊಡಲೊಳಿರುತಿರ್ಪರಾ
ಗುರುವೆ ಬಿನ್ನಪವನವಧರಿಸು!" (ಅನುಭವಸಾರ)
"ಈ ಪರಿಯವಸ್ಥೆಯೊಳೇವೊತ್ತು ಜೀವನಿಹ
ನಾ ಪರಮನಲ್ಲಿ ಹರಿ ಪಿತಾಮಹ ರುದ್ರರೂಪಿ
ನಿ ಪ್ರೇರಿಪನು ನೋಡು!" (ಅನುಭವಸಾರ)
"ಆರೊಡನೆ ವೈರ ಮತ್ತಾರೊಡನೆ ಮಿತ್ರತ್ವ
ವಾರನ್ಯನೆನಗೆ ಗುರುವರನೆ ತವಪಾದ
ವಾರಿಜದೊಳೊಂದಿದೆನಗಿನ್ನು?" (ಅನುಭವಸಾರ)

ಈ ಮೊರೆ– ರಾಗ ; ಶಂಕರಾಭರಣ

ನೋಡಲಾಗದೆ ದೇವ ನೋಡಲಾಗದೆ
ಕೂಡೆ ನಿನ್ನ ದಿಟ್ಟೆ ಮೂರು ನಾಡೆ ಲೇಸುಮಾಡಲೆನ್ನ ನೋಡಲಾಗದೆ?
ಮಿಸುಕಲೀಯದೆನ್ನ ಮೋಹವಿರಸವೆಂಬ ವನವನುರುಹಿ
ಭಸಿತವೆನಿಸಿ ರುದ್ರ ನಿನ್ನ ನೊಸಲವಹ್ನಿನೇತ್ರದಿಂದೆ ನೋಡಲಾಗದೆ?
ಕಲುಷ ತಿಮಿರ ಮುಸುಕಿ ಮುಗಿದು ನಲಿಯದೆನ್ನ ಹೃದಯನಳಿನ
ವಲರೆ ದಿವ್ಯರೂಪ ನಿನ್ನ ಬಲದ ಭಾನು ನಯದಿಂದೆ ನೋಡಲಾಗೆದೆ?
ಕರಣಕುಲಚಕೋರಿ ತಣಿಯೆ ಹರುಷ ಶರಧಿ ಮೀರಲೆನ್ನ

---

೧ ಡಾ ॥ ಶಿ.ಚೆ. ನಂದೀಮಠ–'ಪಾರಮಾರ್ಥ ಪ್ರಕಾಶಿಕೆ'ಯ ಪ್ರಸ್ತಾವನೆಯಲ್ಲಿ.
೨ ಡಾ॥ ಪಿ.ಜಿ. ಹಳಕಟ್ಟಿ–'ಶಿವಾನುಭವ' ಸಂ. ೧. ಸಂ. ೧
೩ ಅಭಿನವ ಅಲ್ಲಮ ಶ್ರೀ ಮಹಾದೇವಸ್ವಾಮಿಗಳು

ವರದ ಶಂಭುಲಿಂಗ ನಿನ್ನ ವರಸುಧಾಕರಾಕ್ಷಿಯಿಂದ ನೋಡಲಾಗದೆ?

ಈ ಆತ್ಮಬೋಧೆ–ರಾಗ : ತೋಡಿ.

ಕೋಗಿಲೆ, ಚೆಲ್ವ ಕೋಗಿಲೆ, ಮುದ್ದು ಕೋಗಿಲೆ, ಜಾಣ ಕೋಗಿಲೆ ॥
ಹಿಂದೆ ತಪದೊಳೀಶನೊಂದಿರುತಿರಲೆಚ್ಚು
ಬೆಂದ ಕಾಮನಬಿಟ್ಟು ಕೋಗಿಲೆ
ಬಂದು ಬೇಗದೊಳು ಬಾಲೇಂದುಧರನಕೂಡಿ
ಕುಂದದೆ ನೀ ಬಾಳು ಕೋಗಿಲೆ ॥
ದುರುಳ ಕಂತುವಿನೊಡನಿರೆ ಲೋಕದೊಳು ನಿನ್ನ
ಪರಪುಟ್ಟನೆಂಬುದು ಕೋಗಿಲೆ
ಧರೆಗೆ ಜನಕನಾದ ಗುರು ಶಂಭುಲಿಂಗದ
ಚರಣ ಪಲ್ಲವ ಪಿಡಿ ಕೋಗಿಲೆ !

ಈ ಜೀವ ಸಂಬೋಧೆ–ರಾಗ : ಶಂಕರಾಭರಣ.

ಸುಮ್ಮನೆ ಕಾಲವನು ಕಳೆದು ಸಾವುದುಚಿತವೆ
ನೆಮ್ಮಿ ನಿಜವನು ಮುಕ್ತಿ ಪಡೆಯದೆ ಮನುಜ?

ರಾಗ : ಭೈರವಿ.

ಪಡೆವೆ ನೀನೆಂದಿಗೆ ಪರಮುಕ್ತಿ ಸುಖವನು
ಕೆಡುವ ಕಾಯದ ಮೋಹವನು ಮಾಣಿ ಮನುಜ?

ರಾಗ : ಗೌರಿ.

ಬೇಡ ಬೇಡ ಭೋಗದೊಡನಾಟ
ನೋಡು ನಂಜುವೆರಸಿದ ಸವಿಯೂಟ
ಕೇಡು ಕಡೆಯೊಳಹುದು ಮಾಯೆಯ ಕೈಯಾಟ ॥

"ಆವ ಬಲವಿಡಿದು ಅಳುಕದೆ ಅಖಿಳ ದಿರಿತವನೆಳಸಿ ಭಾವಿಸುವೆ? ಮಾಜದುಸಿರೆಲೆ ಮಾನವಾ! ನರಕವಿಲ್ಲವೆ? ಯಮನಿಗೆ ಅಧಿಕಾರ ತಪ್ಪಿತೆ? ಮೃತ್ಯು ಪರಮಧರ್ಮವನು ಪಿಡಿದಳೆ? ಯಮನಭಟರು ಕರುಣ ರಸಮಯರೆ? ಮರವೆಯೆ ಚಿತ್ರಗುಪ್ತರಿಗೆ? ಚಲಿಸಿ ನಿಂದುದೆ ಕಾಲ? ಕೇಡು ಕಡೆಗಂಡು ನಿಂದುವೆ? ರುಜೆಗಳು ಇಹವನುಳಿದು ಓಡಿದವೆ? ಜರೆಯನು ಒಡಲೊಳು ಒಡಗೂಡದಂತೆ ಮಾಡಿದರೆ ಶಿಕ್ಷೆಯನು? ಭವಮರಣವಲಸಿಹವೆ? ಚಿಂತೆ ಬಂದಡಿಗಡಿಗೆ ಮುಸುಕದೆ ಅತಿಸುಖವನೋರಂತೆ ನೇಮಿಸಲು ಕಲಿತುದೆ? ವಿಧಿವಿಕಾರಸಂತತಿಯನಗಲಿದುವೆ

ಸಕಲ ವಿಷಯಾಳಿ? ಆವ ಬಲವಿಡಿದು ಅಳುಕದಿಹೆ ಎಲೆ ಮಾನವಾ?"

ಈ ಸಂಸಾರ ನಾಟಕ ಚಿತ್ರ – ರಾಗ ; ಪೂರ್ವಿ.

ಆಡುತ್ತೈದಳೆ ಮಾಯೆಯೆಂಬ ಕಾಮಿನಿ ಬಿಡದೆ
ನೋಡಿ ಬಲ್ಲವರು ಸಂಸಾರ ನಾಟಕವ !
ಶಿವಶಕ್ತಿಯೆಂಬ ರಂಗದೊಳು ನರನಾಗದೇವತಾದಿ ಪೆಸರಿನ ತನುಗಳೆಂಬ
ವಿವಿಧ ರೂಪಿನ ಬೊಂಬೆಗಳಿಗಾತ್ಮನೆಂಬ ಸೂತ್ರವನು
ಹವಣಿಸಿ ಮೋಹದೊಡನೆ ಮೇಳೈಸಿ !
ಮೂರವಸ್ಥೆಯ ಮರೆಯೊಳಿದ್ದು ತಾನಲ್ಲಲ್ಲಿ
ಆರು ವಿಕೃತಿಗಳು ನವಗುಣಗತಿಗಳೆಂಬ
ಬೇರುವಡೆದಿಹ ಭಾವರಸ ಚಿತ್ರರಚನೆ ಕೆಲ್
ಜಾರದಂತಭಿನಯಿಸಿ ತೋರಿ ನಿಯತಿಯೊಳು ॥

ಈ ಬೇಡಿಕೆ– ರಾಗ : ಗೌರಿ.

ಬೇಡುವೆನಭವ ನಿಮ್ಮನು ಭವಭವದೊಳು
ಮಾಡೆನಗೊಲಿದಿಂತು ಸುಗುಣ ಸಂತತಿಯನು
ಎಡರಡಸಿದ ವೇಳೆಯೊಳು ಧೈರ್ಯವನು ಸಿರಿ
ವಡೆದು ಜೀವಿಸುವೆಡೆಯೊಳು ವಿನಯವನು
ಕಡು ಜವ್ವನದೊಳು ವಿಕೃತಿದೋರದಿಹುದನು
ಪಿಡಿದ ನೇಮವನೆಡಿವಿಡಿವತಿ ಛಲವನು
ಅಸುವಳಿಯಲಿ–ದೇಹಿಯೆನ್ನದಧಟನು
ಪುಸಿಯನೆಲ್ಲಿಯು ನುಡಿಯದ ಸತ್ಯವನು
ಮಸಳಿಸದಿಹ ಪುಣ್ಯಮಯ ಕೀರ್ತಿಯನು ಶಾಂತ
ರೊಸೆದಹುದೆಂದು ಬಣ್ಣಿಸುವ ವರ್ತನವನು ॥
ವಿತರಣದೊಡನೆ ಭೋಗಿಸುವರ್ಥದೊದವನು
ಹಿತವಚನವೆ ತೊಡವೆನಿಪ ದಾನವನು
ಶ್ರುತಿ ಬೋಧನೆಯೊಳುಪರತಿಯಿಲ್ಲದಿರವನು
ನುತಿವೆತ್ತು ಕೈಸಾರುತಿಹ ಮನೋರಥವನು ॥
ಕೋಪವಂಟದ ತಪವನು, ಪರವಧುವಿನ
ರೂಪು ಕಂಡೆಳಸದ ಕರಣ ವಿಜಯವನು

ತಾಪವಡರಿ ಕೆಡದ ಸಾರಸುಖವನು
ಕಾಪಟ್ಯವಿಲ್ಲದಾಶ್ರಮ ಧರ್ಮರತಿಯನು ॥
ಧರೆಯೊಳತ್ಯಧಿಕವೆನಿಪ ಶಾಂತಿಮತವನು
ಕರುಣ ವಿದ್ಯೆಗಳುಳ್ಳ ಗುರುಭಜನೆಯನು
ಪರತರ ಮುಕ್ತಿದೋರುವ ಶಾಸ್ತ್ರವನು ಕಂತು–
ಹರ ಶಂಭುಲಿಂಗ ನಿಮ್ಮಡಿಯ ಭಕ್ತಿಯನು ॥

ಈ ಕಾಣ್ಕೆ – ರಾಗ : ದೇಸಿ

ಕಣ್ಣ ಮುಂದೆ ಕಾಣಿಸುತ್ತಿದೆ ಪರವಸ್ತುವಿದ
ನಣ್ಣಗಳರಸಿ, ಬೇರ ಬಳಲುವರದೇಕೆ?

ಈ ಸಿದ್ಧಿ–

"ಬಚ್ಚಬರಿಯ ಚಿತ್ಸುಧಾ ರಸಾಂಬುನಿಧಿಯೊಳು ಮುಳುಗಿ
ಯೆಚ್ಚರಿಲ್ಲದಮಳ ಸುಖದ ಸುಗ್ಗಿವಡೆಯುತ
ಬೆಚ್ಚಿ ಬೇರೆದೋರದಂತೆ ಶಂಭುಲಿಂಗವನಪ್ಪಿ
ಯೆಚ್ಚರಡಗಿದೆಚ್ಚ ಪರವಶದೊಳು ನಿಂದೆನು!"

ನಿಜಗುಣ ಶಿವಯೋಗಿಗಳ ಬಗ್ಗೆ ಹತ್ತಾರು ಪುಟಗಳಲ್ಲಿ ಬರೆಯುವೆನೆಂಬುದು ಹುಚ್ಚರ ಹವ್ಯಾಸ. ಎಷ್ಟು ಬರೆದರೂ ಮುಗಿಯದ ಮಹಾ ಜೀವನವದು, ಮಹಾಸಾಧನೆ ಅವರದು. 'ನಿಮಿಷವಾಗಲಿ ನಿಮ್ಮ ನೆನಹು ನಿಂದೊಡೆ ಮುಕ್ತಿ!' ಎಂಬ ನಂಬುಗೆಯ ನುಡಿಯನ್ನಾಡಿದ ಅರು ಸಾಮಾನ್ಯರಿಗೂ ಸುಲಭೋಪಾಯವನ್ನು ಸೂಚಿಸದಿರಲಿಲ್ಲ–

"ತನುವ ದಂಡಿಸಬೇಡ ಮನವ ನಿಲ್ಲಿಸಬೇಡ
ಧನವ ನೀಗಿರಬೇಡ ಮನೆಮಾರು ತೊರೆದು
ವನವಾಸ ಬೇಡ! ನಿನಗಿನಿತು ತತ್ತ್ವಜ್ಞಾನ ಸಂ
ಜನಸಲಘವೆಲ್ಲವನು ಕೆಡಿಸುವುದರಿಂದೆ"

ಇನಿಸು ತತ್ತ್ವಜ್ಞಾನ ಸಾಕು. ಹೌದು. 'ಜ್ಞಾನದಿಂದ ಮರವೆಯಳಿಯುವುದು, ಮರವೆಯ ಹಾನಿಯಿಂದ ಭೇದಬುದ್ಧಿ ಕೆಡುವುದು; ಕೆಡಲು ಮಾನಸ ವಿಕೃತಿಪೋಪುದು; ಪೋಗಲೊಡನೆ ರಾಗವಿರಾಗದರಿವು ತೊಲಗಿ, ಮಾಡಲಹುದಾಗದೆಂಬ ವಿಧಿನಾಶವೈದಿ, ಅದು ನಾಶವಾಗೆ ಕರ್ಮಲಯವಾಗಿ, ಅದು ಲಯವಾಗೆ ದೇಹಭಾವ ನಷ್ಟವಾಗಿ, ಅದು ನಷ್ಟವಾಗೆ ಸಂಸ್ಕೃತಿಗೆ ನಿರಾಕರಣವಾಗಿ ಅದಾಗೆ ಉತ್ತಮ ಸಹಜವೆನಿಪ ಅವಸ್ಥೆ, ಬಳಿಕ ಬಿತ್ತರಿಸಲರಿದಾದ

ಸುಖ–ಅದೀಗ ಶಂಭುಲಿಂಗ ತಾನಾಗಿ ತಾನಿರ್ಪ ಇರವು.

ಅಂತೆ ಜ್ಞಾನದ ಹೆಚ್ಚಳವನ್ನು ಹೆಚ್ಚಾಗಿಯೇ ಸಾರಿದ್ದಾರೆ ನಿಜಗುಣರು–ಅದು

'ದುರಿತ ಕಾನನವಹ್ನಿ, ಪರಿಭವಘನಚಂಡಮಾರುತ
ಅಜ್ಞಾನ ತಿಮಿರ ತರಣಿ, ಮಾನಸ ಕುಲಗಿರಿ ವಜ್ರ
ಅನುತಾಪಸರಸಿಜಹಿಮ, ಸಾರ ಸುಖದ ಸುಧಾವಾರಿಧಿ,
ಸುಕೃತ ಮೇರು, ಮುಕ್ತಿಯ ಜನ್ಮಭೂಮಿ.'

ಎಂದ ಮೇಲೆ ನಿರುಪಮ ಜ್ಞಾನಿ ನಿಜಗುಣ ಶಿವಯೋಗಿಗಳವರ ಕೃತಿಗಳಲ್ಲಿ ಜ್ಞಾನಜ್ಯೋತಿ ಬೆಳಗುತ್ತಿರುವುದಾವ ಅಚ್ಚರಿ?

"ಜ್ಯೋತಿ ಬೆಳಗುತಿದೆ, ವಿಮಲ ಪರಂಜ್ಯೋತಿ ಬೆಳಗುತಿದೆ.
ಮಾತು ಮನಂಗಳಿಂದತ್ತತ್ತ , ಮೀರಿದ
ಸಾತಿಶಯದ ನಿರುಪಾಧಿಕ ನಿರ್ಮಲ ಜ್ಯೋತಿ ಬೆಳಗುತಿದೆ!"

ಜ್ಞಾನಜ್ಯೋತಿ. ನಿಜ. ಆದರೆ ಎಂಥ ಜ್ಞನ? ನಿಜದ ಜ್ಞನ. 'ನಿಜ' ವೆಂದು ಶಬ್ದ ನಿಜಗುಣರಿಗೆ ಪರಮಪ್ರಿಯವಾದ ಶಬ್ದ. "ಪಡೆದು ಜಪಿಸಿನೋಡಿ, ಕೇಳಿ, ನೆನೆದು, ನಿಜದೊಡಗೂಡಿ ಸುಖಿಸಬಲ್ಲಡೆ ಮುಕ್ತನಹನು" ಎಂಬುದರ ಮುಕ್ತಿಯ ವ್ಯಾಖ್ಯೆ. ನಿಜವನರಿದೇ, ನಿಜದ ಮರ್ಮವನರಿದೇ ಅವರು ನಿಜಗುಣ ಶಿವಯೋಗಿಯಾಗಿದ್ದರು, ಹಾಗಾದರೆ ನಿಜವೆಂದರೇನು? ಅವರನ್ನೇ ಕೇಳೋಣ;

ರಾಗ : ದೇಶಿ

"ನಾವರಿದೆವರಿದೆವು ಎಂಬಿರಿ ನಿಜವನು ಅದು ನಿಮ್ಮ
ಭಾವನೆಗೆ ಬಂದ ಪರಿಯನು ಪೇಳಿರೈ?
ದೇಹದಿರಿವಿನೊಳು ಸೋಜಿಗವೆನಿಸಿಹುದು ನಿಜವೊ?
ದೇಹದೊಳಗಾಡಿ ನೋಡುವುದು ನಿಜವೋ?
ದೇಹ ಕರಣಾದಿಗಳಿಗಾಧಾರವಾದಸು ನಿಜವೊ?
ದೇಹಭಿಮಾನವೆನಿಸಿದ ಮನವೆ ನಿಜವೊ?
ನಾನೆಂಬುದೆಡೆಬಿಡದೆ ಪೊರಗನರಿವುದು ನಿಜವೊ?
ನಾನೆಂಬುದಡಗಿದಾನಂದ ನಿಜವೊ?
ಆನಂದವದು ತೋರ್ಪುದೇನು ವಿಡಿದುದು ನಿಜವೊ?
ಆನಂದವೆಂಬುದಡಗಿದ ನಿಲವೆ ನಿಜವೊ?
ಸಗುಣರೂಪನೆ ತನ್ನ ಸಹಜವಾದುದು ನಿಜವೊ?

ಸಗುಣ ನಿರ್ಗುಣ ತತ್ತ್ವ ತಾನೆ ನಿಜವೊ?
ಸಗುಣ ನಿರ್ಗುಣವನಚ್ಚಳಿದ ಪದೆವದು ನಿಜವೊ?
ಸುಗುಣಾಳಿಗಳ ಸೋಂಕದಿಹುದೆ ನಿಜವೊ?
ಬಗೆಯ ಕುರುಪಿನ ಕಲಾಬಿಂದು ನಾದವೆ ನಿಜವೊ?
ಬಗೆಯು ಬಣ್ಣಿಸೆ ಬಾರದಿಹುದೆ ನಿಜವೊ?
ಜಗದ ನಾನಾತ್ತ್ವದೊಡನಗಲದಿರ್ಪುದೆ ನಿಜವೊ?
ಮಗುಳೆಯೂ ಜಗಕನ್ಯವಹುದು ನಿಜವೊ?"

ಯಾವುದು ನಿಜ? ಇವಾವುವೂ ನಿಜವಲ್ಲವೆ? ಹಾಗಾದರೆ ನಿಜವಾವುದು? ಈ ಪ್ರಶ್ನೆಗೆ ಉತ್ತರವೇ ಇಲ್ಲವೆ? ಇದೆ. ಕೇಳಿ!

"ಪಲವು ಮತ–ಭೇದ–ವಾದವನುಳಿದು, ಸಂಶಯದ
ಹೊಲಬಿಲ್ಲದೆ ಆನು ನೀನೆಂಬುದಳಿದು
ಸಲೆ ನೇಮ–ಸೀಮೆದೋರದ ಶಂಭುಲಿಂಗವಾದ
ಉಳುಮೆ ಚಿನ್ಮಾತ್ರವದು ನಿಜಕಾಣಿರೈ!"

ಇದು ನಿಜವನಿರಿದ ನಿಶ್ಚಿಂತ, ಮರಣವ ಗೆಲಿದ ಮಹಂತ ನಿಜಗುಣಯೋಗಿ ಕಂಡ ನಿಜದ ಸ್ವರೂಪ. ತಾನು ಕಂಡ ನಿಜವನ್ನು ಸೂರೆಮಾಡಿದನಾತ ಸಮಸ್ತರಿಗಾಗಿ. ಅದೂ ಎಂಥ ಮಾತುಗಳಲ್ಲಿ. ಎಷ್ಟು ಮಾರ್ಮಿಕವಾಗಿ, ಎಷ್ಟು ಮನೋಜ್ಞವಾಗಿ! ಈ ಮುತ್ತಿನ ಮಾತುಗಳ ಬಗ್ಗೆ ಯಾವ ಕವಿ ಹೆಮ್ಮೆ ಪಡಲಿಕ್ಕಿಲ್ಲ?

"ಅಲರುವುದು ನಳಿನ, ಉತ್ಪಲವೆ ಮುಗಿವುದು, ಮಣ್ಣು ಬಲಿವುದು
ಮೇಣವದು ಕರಗುವುದು, ನಿರಾಕುಲ ಭಾನುಸನ್ನಿಧಿಯೊಳ್"
"ಮುಗಿಲೋಡೆ ಚಂದ್ರಮಂ ಮಿಗಿಯೋಡುವಂತಿರ್ಪ
ಬಗೆಯಲ್ಲದೋಡದಂತಹಮಿನಿಂ ಜೀವನಿಗೆ ವಿಕರವೆ ಸಹಜವಲ್ಲ"
"ಹಡಗನೇರಿದವಂಗೆ ತಡಿಯೊಳಿರ್ಪಚಲಂಗಳೆಡೆಯಾಡುವಂತೆ
ಜಡಮತಿಗೆ ವಿಕೃತಿಯಂ ಪಡೆದಂತೆ ತೋರುತಿಹನಾತ"
"ಪರಮಾತ್ಮನೆಂಬರ್ಕನಿರೆ ಪ್ರಕೃತಿಮಣಿಯಲ್ಲಿ ಸ್ಫುರಿಸುತಿರುವಖಿಳ
ತತ್ತ್ವವೆಂಬನಲ ನಿಂತಿರಲು ಸರ್ವೇಶನವಿಕಾರಿ"
"ಕನಸಿನೊಳರಸಿಗೆ ಬಡತನವಾಗಿ, ತಜ್ಜನಿತ ದುಃಖವನೆಚ್ಚರೊಳು ನೀಗಿದಂತೆ"
"ಬೆಳಗು ಕತ್ತಲೆಗಳನು ತಳೆದೊಡಾಗಸದ ನಿರ್ಮಲವಳಿಯದಂತೆ"

“ಮನೆಯ ಕಂಡಿಯೊಳೈದಿ ದಿನಕಿರಣದಲ್ಲಿ ಕರ
ವನು ಚಲಿಸೆ ನೇಸರು ಚಲಿಸಿತೆಬಂತೆ”
“ಮರದಳಿರ ಚಂದಲಾಂತರದ ಚಂದ್ರಿಕೆಗಳಂತೆ
ತೋರಿ ಕೆಡುವ ಸುಖದನುಭವಂಗಳು”
“ಕನಸು ಪುಸಿಯಾದೊಡಂ ತನಗಲ್ಲಿ ಸುರತದಿಂ
ಜನಿತವಹ ರೇತುವದು ಸತ್ಯವಾದಂತೆ”
“ಮುಕುರ ಬಿಂಬಂ ಮುಖದ ಸಕಲ ಸೌಂದರತೆಯಂ
ಪ್ರಕಟಿಸುವ ಪಾಂಗು”
“ರಾಹುವಿಡಿದಿಂದುವ ರಾಹುವಂ ಬೆಳಗುವಂತೆ”
“ಸುಪ್ತಿಯಳಿದಲ್ಲದಾ ಸ್ಮರಣವಿಲ್ಲವೆಂಬ ವಿಧಿ ಬೇಡ”
“ನಡೆ ದೇವಯಾತ್ರೆ, ನಿಂದೆಡೆ ವಾರಣಾಸಿ, ಮನಪಿಡಿದುದೇ ಸುಮತ್ವಹುದು
ಯೋಗಿಶ್ವರಂ ನುಡಿದುದೇ ಸುಮಂತ್ರವೆನಿಸುವುದು”

ಹೀಗೆ ಲೆಕ್ಕವಿಲ್ಲದಷ್ಟು ಮಿಂಚಿನ ಮಾತುಗಳು ಮಿನುಗಿ ಹೋಗುತ್ತವೆ. ಅವರ ಕೃತಿಗಳಲ್ಲಿ.

‘ಅದರಿಂ ನಿನ್ನಿಂ ಬೇರೊಂದಿಲ್ಲ । ವಿದಿತಂ ತಿಳಿ ಬಂಧಂ ನಿನಗಿಲ್ಲ ॥
ಪ್ರತ್ಯಕ್ಷಾದಿಕಮಂ ನೆರೆಬಿಟ್ಟು । ನಿತ್ಯಸುಖದೊಳಿದು ನಿಜವಳವಟ್ಟು’

ಎಂಬುದರ ಸಂದೇಶದ ಸಾರ. ಆದರೂ ಭಕ್ತಿಯನ್ನವರು ಬಿಟ್ಟಿಲ್ಲ. “ಶರಣ ಸತಿಯ ಮದುವೆಯ ಸಂಭ್ರಮವನು ನೋಡಿರಮ್ಮ! ಪರಮಾನಂದ ಪಯೋನಿಧಿಯೊಳಗೋಲಾಡಿರಮ್ಮ” “ಸತಿಪತಿಗಳಿವರ ಸಮರತಿ ಸುಖದ ಬಾಳುವೆಗೆ ಪ್ರತಿಯುಂಟೆ ಲೋಕದೊಳು ನೋಡೆ ಲಲಿತಾಂಗಿ” ಮುಂತಾದ ಹಾಡುಗಳಲ್ಲಿ ಶರಣಸತಿತ್ವದ ಸೊಗಸು ಸೂರೆಯಾಗಿದೆ. ಕರ್ಮವನ್ನು ಹಳಿದಿಲ್ಲ–ಕೇವಲಾ ದ್ವೈತಿಗಳಂತೆ “ವಿಹಿತ ಕರ್ಮಂಗಳಿಂದಹಮಾದಿ ಶುದ್ಧಿಯಹುದು” ಎಂದು ಹೇಳಿ ಜ್ಞಾನ–ಭಕ್ತಿ–ಕರ್ಮಗಳ ಸಮನ್ವಯವನ್ನು ಸಾಧಿಸಿದ ಸಮನ್ವಯಾಚಾರ್ಯರಾಗಿದ್ದಾರೆ ನಿಜಗುಣರು. ಇಷ್ಟಾದರೂ ಅವರ ವಿನಿಯಶ್ರೀ ಅನುಪಮವಾದುದು : “ಶ್ರೀಮದನೇಕ ಭುವನ ಭವನಾರಂಭ ಮೂಲಸ್ತಂಭರೂಪ ಶಂಭುಲಿಂಗವಾದಿಯಾಗಿ ನಿರಾಭಾರಿ ದೇಶಿಕೋತ್ತಮ ಪರ್ಯಂತ ಮಹಾ ಗುರುಪರಂಪರೆಗೆ ಮನೋವಾಕ್ಕಾಯಂ–ಗಳಿಂದಭಿವಂದಿಸಿ”ಯೇ ಮುಂದುವರಿಯುತ್ತಾರೆ. ತಮಗೆ ಅನುಪಮ ಹರುಷವಾದುದಕ್ಕಾಗಿ ಗುರುವಿನ ಚರಣಗಳನ್ನು ಸ್ಮರಿಸಿ. “ಸಕಲ ಮಂಗಲವಕ್ಕು

ಸಕಲಜನಂಗಳಿಕಲಂಕಶಂಭು ಸತ್ಕೃಪೆಯಿಂದ" ಎಂದು ಜಗದಗಲ ಮಿಗೆಯಗಲವಾದ ತಮ್ಮ ಬಗೆಯಲ್ಲಿ ಹಾರೈಸಿ ಹೋಗಿದ್ದಾರೆ.

ಅವರು ಶಂಭುಲಿಂಗದಲ್ಲಿ ಬೆರೆದು ಅರೆ ಸಾವಿರ ವರ್ಷ ಮೇಲಾದರೂ ಅವರ ಪ್ರಭಾವ ಕನ್ನಡನಾಡಿನ ಮುಮುಕ್ಷುಗಳ ಮೇಲೆ ಅಚ್ಚಳಿಯದೆ ಉಳಿದಿದೆ. ಅವರ ಸಮಕಾಲೀನರಾದ ಮುಪ್ಪಿನ ಷಡಕ್ಷರಿಯಿಂದ ಎಳಂದೂರ ಬಸವಲಿಂಗಸ್ವಾಮಿಗಳವರು, ಹಾನಗಲ್ಲ ಕುಮಾರಸ್ವಾಮಿಗಳವರು, ಹುಬ್ಬಳ್ಳಿಯ ಸಿದ್ಧಾರೂಢರು ಹಾಗೂ ಅವರ ಶಿಷ್ಯಪರಂಪರೆಗೆ ನಿಜಗುಣರು ನಿಜದ ನಂದಾದೀಪ.

ಸುಜನವರನತಪದನ, ಸದ
ಸುಜನವರದನತುಳನಾದ ರಸಿಕನ ವಿಳಸ
ನ್ನಿಜಗುಣಯೋಗಿಯ, ನಿರುಪನು
ನಿಜಗುಣಯೋಗಿಯ ಪದಾಬ್ಜಕಾನತನಪ್ಪೆ ॥ ಷಟಕ್ಷರದೇವ

(ರಾಜಶೇಖರ ವಿಳಾಸ: ಅ.೧. ಪ.೧೬)

ಸುಜನರೊಪ್ಪುವ ತೆರದೆ ಶ್ರುತಿಗಳ
ನಿಜ ರಹಸ್ಯವ ತೋರಿ ಮನುಜರ
ವೃಜಿನವನು ನೆರೆ ಕಳೆದು ಶುದ್ಧಾದ್ವೈತ ಮಾರ್ಗದಲಿ
ರಜತಗಿರಿ ಪತಿಯೊಡನೆ ಬೆರೆದಿಹ
ನಿಜಗುಣಾರ್ಯನು ಎನ್ನ ಹೃದಯಾಂ
ಬುಜದೊಳಗೆ ನೆಲಸಿರಲಿ ಬಿಡದನವರತ ಮುದದಿಂದೆ ॥

ವೇದಾಂತದ ಶಿವರಾಮಶಾಸ್ತ್ರಿ – 'ಬ್ರಹ್ಮಾನಂದ ಬೋಧೆ'ಯಲ್ಲಿ

■

# ಮಧುರ ಭಕ್ತಿಯ ಮುಪ್ಪಿನ ಷಡಕ್ಷರಿ

ಅದೇ ಶಂಭುಲಿಂಗನ ಬೆಟ್ಟದ ಇನ್ನೊಂದು ಬದಿ. ಅಲ್ಲಿ ಇನ್ನೊಂದು ಗವಿ. ಅಲ್ಲಿಂದ ಹೊನಲಾಗಿ ಹರಿಯುತ್ತಲಿತ್ತು ಈ ಹಾಡು– ಅದೇ ಸಮಯಕ್ಕೆ :



**ಮುಪ್ಪಿನ ಷಡಕ್ಷರಿ**

ರಾಗ : ಪೂರ್ವಿ – ತಾಳ : ರೂಪಕ

ಕಾಡಲೇಕೆ ನರರುಗಳು
ಬೇಡಿ ಬಳಲಲೇಕೆ ಮನವೆ
ಮೊಢಿಗೀಶನೆಮಗೆ ದೈವವಾಗಿ ಇರುತಿರೆ? ॥ಪ॥
ಮೃಡನ ಪೂಜೆ ಮಾಡುವುದಕೆ
ಮಡುವಿನಗ್ಗವಣಿಗಳುಂಟು
ಅಡವಿಯಲ್ಲಿ ಕಾಡಪತ್ರಿ ಪುಷ್ಪವುಂಟೆಲ್ಲೈ
ಒಡಲಿಗನ್ನ ದುಡಿದರುಂಟು
ಗುಡಿಗಳುಂಟು ಶಯನಕೆನಗೆ
ಒಡೆಯವರುಗಳು ಬಿಸುಟಿದರುವೆ ಶೀತಕುಂಟೆಲ್ಲೈ!

ಇದೊಂದು ಪೂರ್ವಪರಿಚಿತ ಸ್ವರ. ಇದಾಗಲೇ ಎಲ್ಲಿಯೋ ಕೇಳಿದಂತಿದೆ. ಎಲ್ಲಿರಬಹುದು? ನೆನಪಾಯಿತು : ಶ್ರೀಶೈಲದಲ್ಲಿ–

"ಹಸಿವಾದಡೆ ಭಿಕ್ಷಾನ್ನಗಳುಂಟು;
ತೃಷೆಯಾದಡೆ ಕೆರೆಹಳ್ಳ ಬಾವಿಗಳುಂಟು;
ಶಯನಕ್ಕೆ ಹಾಳು ದೇಗುಲಗಳುಂಟು;
ಚೆನ್ನಮಲ್ಲಿಕಾರ್ಜುನಯ್ಯ, ಆತ್ಮಸಂಗಾತಕ್ಕೆ ನೀನೆನಗುಂಟು."

ಅಹುದು ; ಅದೇ ಸ್ವರ. ಮುಂದೆ ಕೇಳಿ–

ರಾಗ; ಸುರುಟಿ – ತಾಳ : ರೂಪಕ

ಧರೆಯ ಸುಖದ ಭೋಗವೆನಗೆ
ಹರಿದು ಹೋಗಲಯ್ಯ ನಿಮ್ಮ
ಚರಣ ಕಮಲದಲ್ಲಿ ಮನವು ಮಗ್ನವಾಗಲಿ ॥ಪ॥
ಒಡೆದ ಗಡಿಗೆ ಹರಿದ ಜೋಳಿ
ಗೆಡದ ಕೈಯ ಮುರಿದ ಕೋಲು
ಹಿಡಿದ ಊರನೆಲ್ಲ ತಿರಿದು ತಂದು ನೋಡಲು
ಒಡಲಿಗಾಗದಂತೆ ಮಾಡು....
ಊರನೆಲ್ಲ ತಿರಿದು ತಂದು
ಪೂರನುಂಬೆನೆನಲು ಮಧ್ಯ

ದಾರಿಯಲ್ಲಿ ತಿರಿದುದೆಲ್ಲ ಚೆಲ್ಲಿ ಹೋಗಲಿ!
ಹಳೆಯ ಅರಿವೆ ರಗಟೆಗಳನು
ಬಿಲಿದು ಗಂಟನಿಕ್ಕಿ ಹೊದೆಯೆ
ಚಳಿಯದಾಗಲೊಂದು ಕಡೆಗೆ ಸಾಲದಂದದಿ
ಕಳೆಯುತಿರಲು ಅದರೊಳರ್ಥ
ಇಲಿಗಳೆಳೆದು ಒಯ್ಯುತಿರಲಿ...!

ಈ ಸ್ವರವೂ ಹಿಂದೆ ಪ್ರತಿಧ್ವನಿಸಿತ್ತು ಶ್ರೀಶೈಲದ ಕೊಳ್ಳದಲ್ಲಿ :

"ಮನೆ ಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ ; ಬೇಡಿದರೆ
ಇಕ್ಕದಂತೆ ಮಾಡಯ್ಯ; ಇಕ್ಕಿದಡೆ ನೆಲಕ್ಕೆ ಬೀಳುವಂತೆ ಮಾಡಯ್ಯ ;
ನೆಲಕ್ಕೆ
ಬಿದ್ದೊಡೆ ನಾನೆತ್ತಿಕೊಂಬುದಕ್ಕೆ ಮುನ್ನವೆ ಶುನಿ ಎತ್ತಿಕೊಂಬಂತೆ
ಮಾಡಯ್ಯ – ಚೆನ್ನಮಲ್ಲಿಕಾರ್ಜುನಾ!"

ನಿಸ್ಸಂಶಯವಾಗಿ ಇದು ಅದೇ ಸ್ವರ. ಅಂದು ಶ್ರೀಶೈಲದಲ್ಲಿ ಸ್ತ್ರೀರೂಪವನ್ನು ತೊಟ್ಟು ನುಡಿದಿದ್ದ ಶರಣಸತಿತ್ವ ಇಂದು ಶಂಭುಲಿಂಗನ ಬೆಟ್ಟದಲ್ಲಿ ಪುರುಷರೂಪವನ್ನು ತೊಟ್ಟು ನುಡಿಯುತ್ತಲಿದೆ. ಎರಡೂ ಸ್ವರಗಳಲ್ಲಿಯೂ ಲಿಂಗಪತಿಯ ಬಗ್ಗೆ ಅದೇ ಆತುರ, ಅದೇ ಕಾತರ :

ಇದು ಶ್ರೈಶೈಲದ ಸ್ವರ :

ಕಳವಳದ ಮನವು ತಲೆಕೆಳಗಾದುದವ್ವಾ !
ಸುಳಿದು ಬೀಸುವ ಗಾಳಿ ಉರಿಯಾಯಿತ್ತವ್ವಾ !
ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ !
ಹೊಳಲ ಸುಂಕಿಗನಂತೆ ತೊಳಲುತ್ತಿದ್ದೆನವ್ವಾ !
ತಿಳುಹೌ ಬುದ್ಧಿಯ; ಹೇಳಿ ಕರೆತಾರೆಲಗೌ –
ಚೆನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವಾ !

ಇದು ಶಂಭುಲಿಂಗನ ಬೆಟ್ಟದ ಸ್ವರ :

ರಾಗ : ಸಾಳಂಗ – ತಾಳ : ಝಂಪೆ

ಹೆಮ್ಮಗಳು ನಾನಿಮ್ಮ
ನೆಮ್ಮಿಕೊಂಡಿರುವೆನ್ನೈ

ಗಮ್ಮನೇ ಎನ್ನನ್ನು ಕರೆಯ ಬನ್ನಿ ! ॥ಪ॥
ನೀರಹೊಳೆಯಲಿ ನಿಂದು
ದಾರಿಯನು ನೋಡುವೆನು
ಬಾರದಿರೆ ಮನದೊಳಗೆ ಕರಗಿ ಕೊರಗಿ
ಆರೈದು ಮತ್ತೊಮ್ಮೆ
ದೂರದೃಷ್ಟಿಯನಿತ್ತು
ಸಾರಿ ನೋಡುವೆ ನಿಲುಕಿ ಅಳಲಿ ಬಳಲಿ ॥
ಬಂದವರ ಬರುವವರ
ನಿಂದವರ ನೆರೆದವರ
ಕುಂದದಲೆ ಕೇಳುವೆನು ನಮ್ಮವರನು
ಹಿಂದಾದ ದುಃಖದಲಿ
ನೊಂದನ್ನೆ ನಮ್ಮವರು
ಎಂದಿಗೇ ಎನ್ನನ್ನು ಕರೆಯಬಹರೋ !
ಹಿಂದುಳಿಯಿತಮವಾಸ್ಯೆ
ಮುಂದೆ ಹುಣ್ಣಿಮೆ ಬಂತು
ಎಂದಿಗೇ ಎನ್ನನ್ನು ಕರೆಯಬಹರೋ !
ನೊಂದು ಸುಯ್ಯಗರೆಯುವೆನು
ಬೆಂದು ಬೆಂಡಾಗುವೆನು
ಚೆಂದವೇ ತಮಗೆನ್ನ ನೋಡದಿಹುದು? ॥
ತರಗಲೆಯು ಗಿರುಕೆನಲು
ಹೊರಗೆ ನಾನಾಲಿಸುವೆ
ಬರವಿಲ್ಲದಿರೆ ಮನದಿ ಸುಯ್ಯಗರೆವೆನು !

ಕೊನೆಯ ಚರಣದಲ್ಲಿ ಮತ್ತೊಬ್ಬ ಶರಣ ಸತಿಯ ಸವಿದನಿ ಮಾರ್ದನಿಸಿದೆ:

"ಗಿಳಿಯ ಪಂಜರವಿಕ್ಕಿ, ಸೊಡರಿಂಗೆಣ್ಣೆಯನೆರದು, ಬತ್ತಿಯನಿಕ್ಕಿ ಬರವ
ಹಾರುತ್ತಿದ್ದೆ ನೆಲಗವ್ವ ; ತರಗೆಲೆ ಗಿರಿಕೆಂದಡೆ ಹೊರಗನಾಲಿಸುವೆ!"

ಇದು ಕಲ್ಯಾಣದ ಸ್ವರ; ಅದು ಶ್ರೀಗಿರಿಯ ಸ್ವರ; ಇನ್ನೊಂದು ಶಂಭುಲಿಂಗನ ಬೆಟ್ಟದ ಸ್ವರ! ಎಂಥ ಸ್ವರ–ಸಮ್ಮೇಳವಿದು ! ಎಂಥ ಸ್ವರ–ಸಾಮರಸ್ಯವಿದು!

ನೀರ ಹೊಳೆಯಲಿ ನಿಂದು ನೀರನ ದಾರಿಯನ್ನು ನೋಡುತ್ತಿದ್ದ ಈ ನೆರೆದ ನೀರೆ ಇನ್ನಾರೂ ಅಲ್ಲ–ನಿಜಗುಣನ ಸಮಕಾಲೀನ ಷಡಕ್ಷರಿ ಯತಿ. ಮುಪ್ಪಿನ ಷಡಕ್ಷರಿಯೆಂದು ಹೆಸರಾದ ಈ ಅನುಭಾವಿ ಮುಪ್ಪರಿಯದ ಹಾಡುಗಳನ್ನು–ಭಾವ, ಭಾಷೆ, ಸಂಗೀತಗಳ ಮುಪ್ಪುರಿಯಾದ ಹಾಡುಗಳನ್ನು ಹೆಣೆದು ಹೋಗಿದ್ದಾನೆ. 'ಸುಬೋಧಸಾರ'ವೆಂಬ ಸುಂದರ ಶೀರ್ಷಿಕೆಯೊಡನೆ ಅಚ್ಚಾದ ಈ ಹಾಡುಗಳ ಅಚ್ಚಳಿಯದ ಅಂದಚೆಂದಗಳಿಗೆ ಮರುಳಾಗದವರೇ ಇಲ್ಲ.

"ನಿಜಗುಣ ಶಿವಯೋಗಿಯಲ್ಲಿ ಜ್ಞಾನಪ್ರಧಾನವಾದ ಭಾವಶಾಂತಿಯಿದ್ದರೆ ಮುಪ್ಪಿನ ಷಡಕ್ಷರಿಯಲ್ಲಿ ಭಕ್ತಿ ಪ್ರಧಾನವಾದ ಭಾವಕ್ಷೋಭೆಯಿದೆ, ಉತ್ಕಟವಾದ ಮೊರೆಯಿದೆ"[೧] ಎಂಬುದು ಬಹ್ವಂಶ ನಿಜವಾದರೂ ಭಾವಶಾಂತಿಯ ಸೊಗಸು ಇವರಲ್ಲಿ ಇಲ್ಲವೇ ಇಲ್ಲವೆನ್ನಲಾಗದು.

"ಬಂದನು ಮರ್ತ್ಯಕಿನ್ನುದ್ಧಾರವನು ಮಾಳ್ಪ
ಇಂದುಧರ ಓಂ ನಮಃಶಿವಾಯ ನಾಮದಲಿ ॥ ಪ ॥
ಹರಿಗೆ ಹೇಳದೆ ಸರಸಿಜೋದ್ಭವಗೆ ಸೂಚಿಸದೆ
ವರವೀರ ಪ್ರಮಥರಿಗೆ ಸನ್ನೆಮಾಡಿ
ನರಲೋಕ ನಾಟಕವ ನೋಡಬೇಕೆಂದನೆನುತ
ಸರಸದಿಂದ ಬಂದಂ ಷಡಕ್ಷರಿಯ ದೇವ"

ಎಂಬ ಸಾಕ್ಷಾತ್ಕಾರದ ಸಂತಸದಲ್ಲಿ,

"ಗಗನಗಿರಿಯ ಶಿಖರದ ಮೇಲೆ–ಅಲ್ಲಿ
ಸೊಗಸುವ ರತ್ನ ಮಂಟಪದೊಳು
ಝಗಝಗಿಸುವ ಶಶಿಸೂರ್ಯ ಪ್ರಭೆ–ಅಲ್ಲಿ
ಅಗಲದೆ ಬೆಳಗುವ ತೇಜ"– ಎಂದು

ಬೆಳಗಿನೊಳಗಳ ಬೆಳಗನ್ನು ಕಂಡ ಸಂಭ್ರಮದಲ್ಲಿ,

"ಶಂಖ ಕಿನ್ನರಿ ನಾಗಸರ ವೀಣೆ ಅಲ್ಲಿ
ಝೇಂಕರಿಸುವ ಘಂಟೆ ಜಾಗಟೆ
ಕಿಂಕಣಿಭೇರಿ ದುಂದುಭಿ ಅಲ್ಲಿ
ಓಂಕಾರನಾದವಾಗುತ್ತಿದೆ"

---

೧ ಕನ್ನಡ ಸಾಹಿತ್ಯ ಚರಿತೆ–ರಂ. ಶ್ರೀ. ಮುಗಳಿ.

ಎಂಬ ದಿವ್ಯಧ್ವನಿಯನ್ನು ಕೇಳಿದ ಧನ್ಯತೆಯಲ್ಲಿ ಭಾವಶಾಂತಿ ಅಧ್ಯಾತ್ಮದ ಅಚ್ಛೋದ ಸರಸಿಯ ಮೇಲೆ ಅರಳಿದ ಆತ್ಮ ಕಮಲದ ಪರಿಮಳದಂತೆ ಹರಿದು ಬರುತ್ತದೆ.

ಆದರೆ ಈ ಅವಸ್ಥೆ ಅಳವಡುವ ಮುನ್ನ ಸಾಧನೆಯ ಕಳವಳ, ತಳಮಳ,

ಸಹಜ–ಸ್ವಾಭಾವಿಕ. ಅವರವರ ಸಾಧನಪಥ ಅವರವರ ಅಭಿರುಚಿಯಂತೆ ಮುಪ್ಪಿನ ಷಡಕ್ಷರಿಗಾದರೋ ಸತಿಪತಿಭಾವದ ಮಧುರ ಮಾರ್ಗವೇ ಪ್ರಿಯವೆನಿಸಿತು.

ರಾಗ : ಲಹರಿ – ತಾಳ : ಆಟಾ

"ಸೆರಗನೊಡ್ಡಿ ಬೇಡಿಕೊಂಬೆನು ಶಿವಶಿವಾ
ಮರೆದು ಹೋಗಬೇಡವೆನ್ನನು ಶಿವಶಿವಾ ॥ ಪ ॥
ನಿನ್ನ ಕರೆದು ಎನಗೆ ಕೊಟ್ಟರು ಗುರುಸ್ವಾಮಿ
ಎನ್ನ ಕರೆದು ನಿಮಗೆ ಕೊಟ್ಟರು ॥
ಎನ್ನನೊಲ್ಲದಿರ್ದೊಡೆ ನೀನು ಶಿವಶಿವಾ
ಎನ್ನ ಮುನ್ನದೇಕೆ ಕೂಡಿದೆ?
ಎನ್ನ ಬಿಡಿವೆನೆಂದೊಡೆ ನೀನು ಶಿವಶಿವಾ
ನಿನ್ನ ಬಿಡೆನು ಗುರುವಿನಾಜ್ಞೆಗೆ ಶಿವಶಿವಾ" ಎಂಬ

ಹಂಬಲವೆ ಸಂಬಳಿಗೋಲಾಯಿತವರಿಗೆ. ಜಡಜಾಕ್ಷಿಯರಿಗೆ ಕಡು ಜವ್ವನವು ಬಂದೊದಗುವಂತೆ ಮೃಡಶರಣರಿಗೂ ಭಕ್ತಿಯ ಯೌವನ ಬಂದೊದಗುತ್ತದೆ. ಆಗ ಅಂಗನೆಯರು ಪ್ರಿಯರ ಸಂಗಸುಖಕ್ಕಾಗಿ ಹಾರೈಸುವಂತೆ ಶರಣರು ಅನಂಗ ಭಂಗನ ಸಂಗಸುಖಕ್ಕಾಗಿ ಹಂಬಲಿಸುತ್ತಾರೆ. ಇದು ಭಕ್ತಿಯೌವನದ ಬಯಕೆ.

ರಾಗ : ಮಲಹರಿ

ತಂದುತೋರೆ ಎನ್ನಮನಘನಪ್ರಿಯನ
ಇಂದುಧರ ಕಡುಚೆಲುವ ಮನದತ್ತ ಸುಳಿಯನು ॥ ಪ ॥
ಹೃದಯ ಕೋಣೆಗಳಲ್ಲಿ ಮನದ ಮಂಚವ ಹಾಸಿ
ಪದುಳದಿ ಭಾವದ ಗುಡಿ ಕಟ್ಟಿದೆ
ಸದಮಲ ಜ್ಞಾನಜ್ಯೋತಿಯ ಬೆಳಗಿದೆನೆ
ಮ್ಮದು ಭಕ್ತಿಯೌವನದಾಸೆ ಕೆಳದಿ ॥ ೧ ॥

ಈ ಆಸೆ ಈಡೇರದಿದ್ದಾಗ ಭಾವಕ್ಷೋಭೆ, ಉತ್ಕಟವಾದ ಮೊರೆ ಅನಿವಾರ್ಯ;

ಅಂಗಜಾರಿಗೆ ಮೆಚ್ಚಿ ಮರುಳಾ

ಗಂಗಭಾವವ ತೊರೆದು ಕೃತ್ಯವ
ಹಿಂಗಿ ಹೊರಗನು ಮರೆವ ಸುಖವದು ಎಂದಿಗಾದಪುದೊ?
ಕಂತು ಕೋಟಿಯ ರೂಪ ಪಾದದೊ
ಳಾಂತ ಚೆಲುವಿನ ಶಿವ ಷಡಕ್ಷರ
ಕಾಂತನಿಗೆ ನಾ ಸಿಕ್ಕಿ ಹೊರಗನು ಮರೆದು ಮರುಳಾಗಿ
ನಿಂತೊಡೆಲ್ಲಿಯು ಕುಂತೊಡೆಲ್ಲಿಯು
ಭ್ರಾಂತನಂದದಿ ಕಲ್ಲು ಮರನಾ
ಗಿಂತು ಪರವಶದಂಗಭಾವವು ಎಂದಿಗಾದಪುದೋ–

ಎಂಬ ದಂದುಗ ಅಪರಿಹಾರ್ಯ ;

ರಾಗ : ವಸಂತ – ತಾಳ : ರೂಪಕ

ಪನ್ನ ಗೇಂದ್ರಭರಣ ಕೇಳು
ನಿನ್ನ ವಿಕಳವಸ್ಥೆಯಲ್ಲಿ
ಎನ್ನ ಪ್ರಾಣ ಬಿಡುವ ಹಾಗೆ ಎಂದಿಗಪ್ಪುದೋ ॥
ಎಲ್ಲಿ ಮೆಚ್ಚು ಎಲ್ಲಿ ಮೋಹ
ಎಲ್ಲಿ ಪ್ರೀತಿ ಎಲ್ಲಿ ಪ್ರೇಮ
ಅಲ್ಲಿ ಅವರ ವಿಕಳತೆಯಲಿ ಸಾವ ತೆರದೊಳು
ಇಲ್ಲಿ ಹಿಂದು ಮುಂದು ಮರೆದು
ಅಲ್ಲಿ ಷಡಕ್ಷರಿಯ ಲಿಂಗ
ದಲ್ಲಿ ಪ್ರಾಣಬಿಡುವ ಹಾಗೆ ಎಂದಿಗಪ್ಪುದೋ ॥

ಎಂಬ ವಿಕಳತೆ, ವಿಹ್ವಲತೆ ಸಹಜ;

ನಾನು ಒಲಿದು ಫಲವದೇನು
ನೀನು ಒಲಿಯದನಕ ಶಿವನೆ?

ಎಂಬ ತಳಮಳ ಸ್ವಾಭಾವಿಕ,

ತಾನು ಒಲಿಸಲೆಳಸುವ ಪತಿ ಸುಲಭ ಸಾಧ್ಯನಲ್ಲವೆಂದು ಅರಿವಿದೆ ಈ ಶರಣ ಸತಿಗೆ. 'ಎಲ್ಲರ ಗಂಡರ ಪರಿಯಂತಲ್ಲವ್ವ ಎನ್ನ ಗಂಡ' 'ಮನೆಯ ಗಂಡನ ಮನೆ ವಾರ್ತೆಯನೇನ ಹೇಳುವೆನವ್ವ! ಅಂಗವಿದ್ಯೆಯನೊಲ್ಲ. ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ; ಕೈಯ ತೊಳೆದಲ್ಲದೆ ಮುಟ್ಟಲೀಯ, ಕಾಲತೊಳೆದಲ್ಲದೆ

ಹೊಂದಲೀಯ' ಎಂದಿಲ್ಲವೆ ಬಸವಣ್ಣನವರು?

ನೀ ಮುಗ್ಧೆ, ನಿನ್ನಾಳ್ದ
ಕಾಮಾರಿ ! ಆತ್ಮಗಿಣಿ–
ರಾಮನನು ಓದಿಸೌ ಹೊರಗಾಡದೆ !
ಕಾಲ ಪಿಡಿವೊಡೆ ಅವಗೆ
ಕಾಲಿಲ್ಲ, ಮೇಲ್ವಾಯ್ದು
ಬಾಲೆ ನೀ ಹಿಡಿವೊಡವಗೊಡಲೆ ಇಲ್ಲ !

ಹಾಗಾದರೆ ಏನು ಮಾಡಬೇಕು?

ಮೂರು ಕೋಣೆಗಳೊಳಗೆ
ಮೂರು ಜ್ಯೋತಿಯ ಬೆಳಗು
ಆರೈದು ಮಧ್ಯ ಕೋಣೆಯ ಮನೆಯೊಳು
ಮಾರಾರಿಯನು ನೀನ
ಪಾರಸುಖದೊಳು ಹೊಂದಿ
ನಾರಿ ನೀನಿರು ಇಹವ ಪರವರಿಯದೆ ॥

ಮಾತುಮಾತಿನಲ್ಲಿ ಆತುಮದ ಓಜಸ್ಸನ್ನು ತುಂಬಿ ತೋರುತ್ತಿರುವ ಈ ನಾರಿ ಯಾರು? ಎಲ್ಲಿ ಹುಟ್ಟಿದಳು? ಎಲ್ಲಿ ಬೆಳೆದಳು? ಹೇಗೆ ಬೆಳೆದಳು? ಯಾರ ಆಶ್ರಯದಲ್ಲಿ ಬೆಳೆದಳು? ಬೆಳಯುವಾಗಿವಳ ಭಾವತರಂಗಗಳೇನಿದ್ದುವು?...... ಉತ್ತರವಿಲ್ಲ ಈ ಪ್ರಶ್ನೆಗಳಿಗೆ. ಒಮ್ಮೆಗೆ ಹೆಮ್ಮೆಗಳಾಗಿಯೇ ಶಂಭುಲಿಂಗನ ಬೆಟ್ಟದಲ್ಲಿ ಕಾಣಿಸಿಕೊಳ್ಳುತ್ತಾಳೆ ಇವಳು.

ನಂಜನಗೂಡು, ಸುತ್ತೂರು, ವಂಡರಬಾಳು, ಕುಂತೂರು, ಎರಗಂಬಳ್ಳಿಯಲ್ಲಿದ್ದ ಪಂಚಮಠಗಳು ಬಹಳ ಗಣ್ಯತೆಯನ್ನು ಪಡೆದ ಮಠಗಳಾಗಿದ್ದುವೆಂದು ಹೈದರಆಲಿ ಶಾಸನದಿಂದಲೂ ಮಾದೇಶ್ವರ ಸಾಂಗತ್ಯದಿಂದಲೂ ತಿಳಿದುಬರುತ್ತದೆಂದೂ ಪ್ರಖ್ಯಾತ ಹಾಡುಗಬ್ಬಕಾರನಾದ ಮುಪ್ಪಿನ ಷಡಕ್ಷರಿಸ್ವಾಮಿಯು ಎರಗಂಬಳ್ಳಿ ಮಠದವನೆಂದು ತಿಳಿದುಬಂದಿದೆಯೆಂದೂ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಬರೆದಿದ್ದಾರೆ.[೧]

ಯರಗಂಬಳಿಯ ಸಿದ್ಧ
ವರಲಿಂಗ ನಾಮದಿಂ

---

೧ ಶ್ರೀ ಮಾದೇಶ್ವರ ಚರಿತ್ರೆ–ಅನುಬಂಧ ೧ ವೈರಾಗ್ಯದಲರು–ಪುಟ ೨೫೩–೨೫೬

ಹರನೆ ನೀನೆನಗೆ ದೀಕ್ಷೆಯ ಮಾಡಿದೆ ॥

ಎಂಬ ಮುಪ್ಪಿನಾರ್ಯರ ಹಾಡಿನಿಂದ ಇದಕ್ಕೆ ಪುಷ್ಟಿ ದೊರೆಯುತ್ತದೆ. ಈ ಸಿದ್ಧಲಿಂಗ ಶಿವಯೋಗಿಗಳೂ ಮಹಿಮಾಶಾಲಿಗಳಾಗಿದ್ದರೆಂದೂ ೧೩೯೬ರಲ್ಲಿ ಆರಂಭವಾಗಿ ೧೨ ವರ್ಷಗಳವರೆಗೆ ಹಾಹಾಕಾರವನ್ನು ಹಬ್ಬಿಸಿದ ದುರ್ಗಾದೇವಿಯ ಬರದಲ್ಲಿ ಅವರಿದ್ದು ಕಂಬಳಿ ಬೀಸಿ ಮಳೆ ತರಿಸಿರಬಹುದೆಂದೂ ಅಂದಿನಿಂದ ಎರೆ (ಕರಿ) ಗಂಬಳಿಯ ಗುರು ಸಿದ್ಧಲಿಂಗರೆಂದು ಹೆಸರಾಗಿ ಎರಗಂಬಳಿ ಮಠದ ಮೂಲ ಪುರುಷರಾಗಿರಬಹುದೆಂದೂ ಡಾ॥ ಬಿ.ಎಸ್. ಗದ್ದಿಗಿಮಠರು ತರ್ಕಿಸಿದ್ದಾರೆ;

ಕರೆಗಂಬಳಿಯ ಗುರುಸಿದ್ಧ ಗುರುಸಿದ್ಧ
ಕಂಬಳಿ ಬೀಸಲು ಸುರಿಮಳೆಯೇ ಸುರಿಮಳೆಯೇ ॥

ಎಂಬ ಜಾನಪದ ಗೀತದಲ್ಲಿ ಇದಕ್ಕೆ ಅಂತಸ್ಥ ಆಧಾರವನ್ನು ಕಂಡುಹಿಡಿದಿದ್ದಾರೆ.

ಸಮಗ್ರವಾದ ಸಾದ್ಯಂತವಾದ ಜೀವನಚರಿತ್ರೆ ದೊರೆಯದಿದ್ದರೂ ಇವರ ಮಧುರಭಕ್ತಿಯ ಮನೋಜ್ಞ ಹಾಡುಗಳಲ್ಲಿ ಇವರ ನಿರ್ಮಲ ವ್ಯಕ್ತಿತ್ವವು ನಿತಾಂತಮನೋಹರವಾಗಿ ರೂಪಗೊಂಡಿದೆ. "ಎನಗೆ ಭೋಗ ಭಾಗ್ಯ ಬೇಡ, ಎನಗೆ ಜಪವು ತಪವು ಬೇಡ, ಎನಗೆ ನಿಮ್ಮ ತೊತ್ತಸೇವೆ ನಿತ್ಯವಾಗಲೈ" ಎಂಬುದೇ ಅವರ ಕೋರಿಕೆಯ, ಬಯಕೆ; "ಕಟ್ಟುತ್ತ ಬೀಸುತ್ತ ನೆಟ್ಟನೇ ತನ್ನ ಒಡಹುಟ್ಟಿದವರನು" ಹಾಡುವುದೇ ದಿನದ ಕಜ್ಜ ; "ಬಂದವರ ಬರುವವರ ನಿಂದವರ ನೆರೆದವರ ಕುಂದದಲೆ ತಮ್ಮವರನು" ಕೇಳುವುದೇ ಹಿಗ್ಗಿನ ಹೋರೆ!

ಕೆರೆತೊರೆ ಮಡುಜೋಣೆ ಪರಿವಾ ನಿರ್ಝರ
ಗಿರಿಗುಹೆ ವನಲತೆ ಪರ್ಬಿದ ಕಾನನ
ಸರರುಹ ಕೊಳದೊಳು ಧುಮುಕುವ ನದಿ ತಟ
ದೊಳು ಶಶಿ ಶಿಲೆಯೊಳಗೆ
ಅರೆಯೊಳು ಪುಳಿನಸ್ಥಳದೊಳು ನಿರ್ಮಳ
ಪರಮಸುಖಸ್ಥಳದೊಳು ಘನಶಿವಲಿಂಗಕೆ
ಹರುಷದಿ ಪೂಜೆಯ ಮಾಡುವ ಶಿವಸುಖವೆಂದಿಗೆ
ದೊರಕುವುದೊ

ಎಂಬ ಪ್ರಕೃತಿಯ ಮಡಿಲಿನಲ್ಲಿ ಪರಮಪುರುಷನ ಪೂಜೆ ಮಾಡಿ ಪರಮಾನಂದ ಪಯೋನಿಧಿಯಲ್ಲಿ ಓಲಾಡಿ ತೇಲಾಡಿ ಲೋಲಾಡಬೇಕೆಂಬ ಅವರು ಪ್ರಭುಲಿಂಗನ ಬೆಟ್ಟದ ಪಕ್ಕದ ಶಂಭುಲಿಂಗನ ಬೆಟ್ಟವನು ಆಶ್ರಯಿಸುತ್ತಾರೆ. ಕಪನಿ ಕಾವೇರಿ ತೀರದ

ತಲಕಾಡು ಮಾನಂಗಿಗೆ ಸಮೀಪದ, ನಿಜಗುಣರ ನಿಜಯೋಗ ಸಾಧನೆಯ ಪುಣ್ಯಾಶ್ರಮವಾಗಿದ್ದ ಶಂಭುಲಿಂಗನ ಬೆಟ್ಟ ಸಹಜವಾಗಿಯೇ ಅವರನ್ನು ಆಕರ್ಷಿಸಿರಬೇಕು. ಅಲ್ಲಿ ತನ್ನ ಕಾಯವನ್ನೇ ಶಿವನ ಉನ್ನತಾಲಯಮಾಡಿ ತನ್ನ ಸರ್ವಾಂಗಗಳನ್ನೂ ಮನಪ್ರಾಣಗಳನ್ನೂ ಚೆನ್ನಷಡಕ್ಷರಿಗೆ ಸಮರ್ಪಿಸಿ, ಶಿವಸುಖ ಸುಧಾಂಬುಧಿಯಲ್ಲಿ ಮುಳುಗಿದವರು ಮುಪ್ಪಿನ ಷಡಕ್ಷರೀ ಯತಿಗಳು. ಅವರ ಪೂಜಾ ಸಾಮಗ್ರಿಗಳಾದರೂ ಎಂಥವು ;

ಎನ್ನ ಸಮತೆಯ ಜಲವು
ಎನ್ನ ಸದ್ಗುಣ ಗಂಧ
ಎನ್ನ ನಿತ್ಯತ್ವವೇ ಅಕ್ಷತೆಗಳು
ಎನ್ನ ಜ್ಞಾನವೆ ಪುಷ್ಪ
ಎನ್ನ ಭಕ್ತಿಯೆ ಬೋನ
ಎನ್ನ ಮನವೇ ನಿಮಗೆ ಪೂಜಾತಿಯು !

ತನ್ನನ್ನು ಶರಣರ ಶಿಶುವೆಂದು ಭಾವಿಸಿ, ‘ಅಕ್ಕನಾಗಮ್ಮ ಸತ್ಯಕ್ಕ, ಚೆಂಗಳಿ ಚೆಲ್ವೆ ಅಕ್ಕ ಮಹಾದೇವಿ ಸುಗ್ಗವ್ವೆಯ ಚಿಕ್ಕ ಕೊಡಗೂಗಿನವರಕ್ಕರೆಯ ತೊತ್ತಿನ ಮಕ್ಕಳೆಂದು ತಿಳಿದು. “ಅವರ ವಿತ್ತಾಗಿ, ಅವರ ತೊತ್ತಾಗಿ, ಅವರ ಪಶುವಾಗಿ ಸುಖದಿಂದಿದ್ದು” “ಅವರುಂಡು ಮಿಕ್ಕುದನು, ಅವರುಟ್ಟು ಬಿಟ್ಟುದನು, ಅವರುಗಿದ ತಂಬುಲವ ಸವಿದು, ಅವರಂಗಳವ ಗುಡಿಸಿ, ಅವರ ಬಾಗಿಲಕಾಯ್ದು, ಅವರ ಕೀಳಿಲಿ ಸೇರಿಕೊಂಡಿರ್ಪ” ವರವನ್ನೇ ಕೋರುವ ಶರಣ ಸೇವಾ ಭಕ್ತಿಯ ಪರಕಾಷ್ಠತೆ, ಪರಿಪಕ್ವತೆ, ಪರವಶತೆ ಮುಪ್ಪಿನಾರ್ಯರದು.

ಬಸವಣ್ಣನವರಂತೆ ಭಕ್ತಿಯಿಲ್ಲದ ಬಡವ ತಾವೆಂದು ತಿಳಿದು, ಎಲ್ಲರಲ್ಲಿ ಒಂದೊಂದು ವರವ ಬೇಡಿಕೊಂಡು, ನಡೆವ ನುಡಿವ ಕೊಡುವ ಕೊಂಬ ಉಡುವ ಕೊಡುವ ಪಡೆದ ಉಂಬ ಪ್ರಾಣ ಬಿಡುವ ಸಮಯದಲ್ಲಿ ಶಿವನ ನೆನೆವ ನಮವನೆ ಬಯಸಿ “ಹಿರಿಯರಿವರು ಕಿರಿಯರಿವರು, ಅರಿಗಳಿವರು, ಮಿತ್ರರಿವರು, ಅರಸರಿವರು, ತಿರುಕರಿವರು” ಎಂಬ ಹಿರಿದು ಕಿರಿದಿನ ಭಾವವನ್ನು ನೀಗಿ, ‘ಇದುವೆ ಸುಖವು ಇದುವೆ ದುಃಖ, ಇದುವೆ ಮೃದುವು, ಇದುವೆ ಕಠಿನ, ಇದುವೆ ಶೀತ, ಇದುವೆ ಉಷ್ಣ’ ಎಂಬ ದ್ವಂದ್ವಗಳನ್ನು ಮೀರಿ ದ್ವಂದ್ವಾತೀತರಾಗಿ ‘ಕರಣ ಹರಣವೆಲ್ಲ ಲಿಂಗ ಕಿರಣವಾಗಿ ಹೊರಗೆ ಮೆರೆದು ಬಂದೊಡರಿಯದೆ ನಿಂತೊಡೆಲ್ಲಿಯು, ಕೂತೊಡೆಲ್ಲಿಯು ಭ್ರಾಂತನಂದದಿ ಕಲ್ಲುಮರನಾಗಿಂತು ಪರವಶದಂಗಭಾವವನ್ನು ತಳೆದು, ಕಾಡುವ ಮಾಯೆಯ ಓಡಿಸಿ, ಭವವವಿಭಾಡಿಸಿ, ಕಾಲನನೇಡಿಸಿ, ಮರವೆಯ

ಕಾಡಿಗೆ ವಹ್ನಿಯ ಪರವೇಷ್ಠಿಸಿ ನೋಡುತ ಲಿಂಗವ ಮೂಡುತ ಗದ್ಗದ, ಪಾಡುತ ಸುಖಜಲವಾಡುತ ನೇತ್ರದಿ" "ಇಲ್ಲಿ ಹಿಂದ ಮುಂದ ಮರೆದು ಅಲ್ಲಿ ಷಡಕ್ಷರಿಯ ಲಿಂಗದಲ್ಲಿ ಪ್ರಾಣಬಿಡುವ" ಹಿರಿದು ಹಂಬಲ ಮುಪ್ಪಿನಾರ್ಯರದು.

ಎನ್ನ ಕಂದಿಸುತ್ತ ಬಹಳ
ಎನ್ನ ಬಾಧಿಸುತ್ತ ಬಿಡದೆ
ಎನ್ನನೊಂದು ನೆವಗಳಿಂದ ಕಾಡಿದವರಿಗೆ
ಎನ್ನ ಕೊಂದೊಡವರಿಗೆಲ್ಲ
ಎನ್ನ ಪೂಜೆ ಫಲಗಳೆಲ್ಲ
ಉನ್ನತದೊಳವರಿಗಾಗಿ ಸುಖದಿ ಬಾಳಲಿ !
ಹಿಂದೆಯೆನ್ನ ಬೈದವರಿಗೆ
ಮುಂದೆಯೆನ್ನ ಬೈದವರಿಗೆ
ಕುಂದದೆಲ್ಲ ಜನರ ನಡುವೆ ಬೈದಡವರಿಗೆ
ಇಂದುಧರನ ಕರುಣದಿಂದ
ಅಂದಣವನು ಏರುವಂತೆ
ಕುಂದದೊಲೆದು ಅವರಿಗೆಲ್ಲ ಭೋಗವಾಗಲಿ !
ಹಿಂಗದೆನ್ನ ನಿಂದಿಸಿದ ಜ–
ನಂಗಳೆಲ್ಲ ಸುಖದೊಳಿರುವ
ಹಾಂಗೆ ಶಿವನು ಅವರಿಗೆಲ್ಲ ಭಾಗ್ಯವೀಯಲಿ !
ಮಂಗಳಾತ್ಮ ಷಡಕ್ಷರಿಯ
ಲಿಂಗ ನಿನ್ನ ತೊತ್ತು ಸೇವೆ
ಸಾಂಗಮಾಗಿಯೆನಗೆ ಬಿಡದೆ ನಿತ್ಯವಾಗಲಿ !

ಮಹಾತ್ಮ ಏಸುಕ್ರಿಸ್ತ ಬೆಟ್ಟದ ಮೇಲಿನ ಬೋಧೆಯಂತಿದೆ ಮುಪ್ಪಿನಾರ್ಯರ ಈ ಶಂಭುಲಿಂಗನ ಬೆಟ್ಟದ ಮೇಲಿನ ಬೋಧೆ! ಈ ಸಮದರ್ಶನ, ಸತ್ಯಧರ್ಮದ ಅರಿವು, ಅನುಭಾವದೆತ್ತರಗಳಿಗೆ ಹೊಂಗಳಸವಿಟ್ಟಂತಿದೆ ಕೆಳಗಣ ಹಾಡು.

ರಾಗ : ಸಾರಂಗ – ತಾಳ : ಝಂಪೆ

ಸಕಲಕೆಲ್ಲಕೆ ನೀನು
ಅಕಲಂಕ ಗುರುವೆಂದು
ನಿಖಿಲ ಶಾಸ್ತ್ರವು ಪೇಳುತಿರಲರಿದೆನು

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರುವು ನೀನೊಬ್ಬನೆ
ಅವರವರ ಭಾವಕ್ಕೆ
ಅವರವರ ಪೂಜೆಗಂ
ಅವರವರಿಗೆಲ್ಲ ದೇವ ನೀನೊಬ್ಬನೆ?
ಹೋರಾಟವಿಕ್ಕಿಸಲು
ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆ ದೇವನೆ
ಆರು ಅರಿಯರು ನೀನು
ಬೇರಾವ ಪರಿಗಳನು
ಮಾರಾರಿ ಶಿವಷಡಕ್ಷರಿ ಲಿಂಗವೆ !

ಶಂಭುಲಿಂಗನ ಬೆಟ್ಟಕ್ಕಿಂತಲೂ ಬೆಳ್ಳಿ ಬೆಟ್ಟಕ್ಕಿಂತಲೂ ಬಹಳ ಎತ್ತರಕ್ಕೆ ಏರಿದ್ದಾರೆ ಮುಪ್ಪಿನಾರ್ಯರು.

ಮುಪ್ಪಿನಾರ್ಯರ ಹಾಡುಗಳಲ್ಲಿ ಶೈಲಿಯ ಸೊಬಗಿದೆ, ಭಾವದ ಬೆಡಗಿದೆ, ಕಾವ್ಯದ ಕಮನೀಯತೆಯಿದೆ. ಅವು ಮುಗ್ಧ ಮಧುರ ಭಕ್ತಿಯ ತಾದಾತ್ಮ್ಯ ತನ್ಮಯತೆಗಳಲ್ಲಿ ಅವರ ದೇಹವೀಣೆಯಿಂದ ಹೊಮ್ಮಿದ ಮಂಜುಳ ಮನೋಹರ ಆಲಾಪಗಳು. ಅಲ್ಲಿ ಭಾವವೆಲ್ಲ ಅನುಭಾವ ಅನುಭಾವ, ರಸವೆಲ್ಲ ಸಮರಸ, ರುಚಿಯೆಲ್ಲ ಶುಚಿ. ಸಾಯುಜ್ಯೋನ್ಮುಖರಿತಿಯ ಸೌಂದರ್ಯ, ಅಪರೋಕ್ಷಜ್ಞಾನದ ಬೆಳಕು, ಸರ್ವಾರ್ಪಣಭಾವದ ಸೌಕುಮಾರ್ಯ, ವೀರವಿರತಿಯ ಗಾಢಿ, ಮಧುರ ಭಕ್ತಿಯ ಮನೋಜ್ಞತೆಗಳಲ್ಲಿ ಲಲಿತಲಾಸ್ಯವನ್ನಾಡುತ್ತಿವೆ; ಸತ್ಯ, ಸೌಂದರ್ಯ, ಆತ್ಮಾ–ವಿಷ್ಕರಣ, ಅನುಭವಗಳಲ್ಲಿ ರಿಂಗಣಗುಣಿಯುತ್ತಿವೆ; ಉದಾತ್ತಭಾವದ, ವಿಶಾಲ ಹೃದಯದ ದರ್ಶನ ವಿಶುದ್ಧಿಯು ಅಲ್ಲಿ ನಲಿದಾಡುತ್ತಿದೆ.

"ಮುನ್ನ ನಮ್ಮ ಶರಣರುಗಳು ನಿನ್ನ ಕಾಡಿದುದಕೆ ಈಗ ಎನ್ನಮೇಲೆ ಹಗೆಯ ಮಗುಚುತಿಹಿರೊ?" "ಇಂತಪ್ಪವರ ಬಂಟನಿಂತು ಭವದಲಿ ಬಂದನಂತೆಯೆಂದೊಡೆ ನಿಮಗೆ ಕೊರತೆಯಯ್ಯ" "ಎನ್ನ ಕರದೊಳಗಿದ್ದ ಎನ್ನೊಳು ನುಡಿಯನು ಕೇಳು ಸಖಿಯೆ : ತನ್ನ ನಾವು ಏನು ಬೇಡಿದೆವವ್ವ ಕೇಳು ಸಖಿಯೆ" ಇವೇ ಮೊದಲಾದ ಅನೇಕ ಅನುಪಮ ಸುಂದರ ಪಂಕ್ತಿಗಳಲ್ಲಿ ಅಪೂರ್ವವಾದ ಭಾವನಾವೀನ್ಯವನ್ನೂ

ಮೆರೆದಿದ್ದಾರೆ ಮುಪ್ಪಿನಾರ್ಯರು. ಶಿವಯೋಗಿಗಳಿಗೆ ಶಿವನ ಕರೆ ಬರುತ್ತದೆ :

ರಾಗ : ಧನ್ಯಾಸಿ ತೋಡಿ

ನಮ್ಮ ದೇಶಕೆ ಹೋಹ ದಿನ ಬಂತು ಮುಂದೆ
ಗಮ್ಮನೆಲ್ಲರನೊಬ್ಬುಳಿ ಮಾಡು ॥ ಪ ॥
ಬಿಡು ತನುವಿನ ಮೇಲಣಾಸೆಯನು ಮುಂದೆ
ಹಿಡಿ ಶಿವಶರಣರ ಭಾಷೆಯನು
ಮೃಡ ಷಡಕ್ಷರಾಧೀಶನನು ಮುಂದೆ
ಯೊಡಗೂಡು ಭವಪಾಶನಾಶನನು

ಎಂದು ಹಾಡುತ್ತಾರೆ.

ರಾಗ : ಪಂತುವರಾಳಿ

ಹಾರು ಕಂಡ್ಯಾ ಹಂಸ ಹಾರು ಕಂಡ್ಯಾ ನೀನು
ಮೂರು ಬಲೆಗಳೊಳಗೆ ಸಿಲುಕದೆ ॥ ಪ ॥
ಸಾಸಿರದಳ ಕಮಲದ ಕರ್ಣಿಕೆಯೊಳು–ಅಲ್ಲಿ
ಭಾಸುರ ಪ್ರಣಮದ ಪ್ರಭೆಯೊಳು
ವಾಸಿವಾಗಿರ್ಪ ಷಡಕ್ಷರ ವರ ಮಹಾ
ಧೀಶನ ನೀ ಹೋಗಿ ನೆರೆ ಕಂಡ್ಯಾ ॥

ಅವರ ಆತ್ಮ ಹಂಸ ಹಾರುತ್ತದೆ. ಷಡಕ್ಷರ ಲಿಂಗವನ್ನು ಬೆರೆಯುತ್ತದೆ!

ಕಪ್ಪುಗೊರಲಿನಿಗೊಪ್ಪುವ ಸತಿಯಾಗಿ ಶೋಭಿಸಿದ ಮುಪ್ಪಿನಾರ್ಯರು ಮಹವನ್ನೈದುತ್ತಾರೆ; ಶಿವನ ನಿಜವನರಿತು ಭವದ ಕಡೆಯ ಕಾಣುತ್ತಾರೆ; ಭಾವದೊಳು ಲಿಂಗ ನೆಲಸಿ ದೇವತ್ವವನ್ನು ಪಡೆಯುತ್ತಾರೆ.

■

# ಶಿವಾನುಭವವಿಭು ಮಾಯಿದೇವಪ್ರಭು
# ೧೪೩೦

ಕೇವಲ ಪರಂಜ್ಯೋತಿ ಲಿಂಗಮಂ ನಿಜದಿಂ ಕ–
ಳೇವರದೊಳಾಂತರ್ಗೆ ಭವಬಂಧವಿಲ್ಲೆಂದು
ಭೂವಳಯದೊಳ್ನೆಳಲ್ ಸೂಸದಂದದೆ ಜಯಸ್ತಂಭಮಂ ನಟ್ಟು ಬಳಿಕೆ!
ಶ್ರೀ ವೀರಶೈವ ಷಟ್‌ಸ್ಥಲದ ಸನ್ಮಾರ್ಗಮಂ
ತೀವಿ ಪರಿಕಲಿಸಿ ರಾಜಿಸುವ ಮಗ್ಗೆಯ ಮಾಯಿ
ದೇವ ಪ್ರಭುವನಸ್ರಂ ಪೊಗಳ್ವೆನವಿರಳಾನಂದಂ ಮಿಗಲ್ಕಣಿಯರಂ
–ಪಾಲ್ಕುರಿಗೆ ಸೋಮೇಶ್ವರ ಪುರಾಣ : ಸಂ.೧. ಪ. ೯

ಬಸವಯುಗದ ತರುವಾಯ ಪ್ರಮಥಜೀವನಪ್ರವಾಹವು ಗುಪ್ತಗಾಮಿನಿಯಾಗಿ ಹರಿಯುತ್ತ ಆಗೊಮ್ಮೆ ಈಗೊಮ್ಮೆ ಅಲ್ಲಸ್ವಲ್ಪ ಮೊಗದೋರುತ್ತಿದ್ದು ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಮತ್ತೆ ಬೃಹದಾಕಾರವನ್ನು ತಾಳಿ ಹೊರಬಿದ್ದಿತು– ನೂರೊಂದು ವಿರತರ ರೂಪ ಧರಿಸಿ* ಪ್ರಮಥ ಪ್ರೇಮಿಯಾದ ಪ್ರೌಢದೇವರಾಯನು ರಾಜ, ಪ್ರಮಥ ಮಾರ್ಗಪ್ರದೀಪಕರಾದ ಲಕ್ಕಣ್ಣ ದಂಡೇಶ, ಜಕ್ಕಣಾಚಾರ್ಯರು ಪ್ರಧಾನಮಾತ್ಯ ಮತ್ತು ಮಹಾ ದಂಡನಾಯಕರು; ಅವರಿಗೆ ಮಾರ್ಗದರ್ಶಕರಾಗಿ ನೂರೊಂದು ವಿರತರು! ಎಂಥ ಜ್ಯೋತಿರ್ಮಯ ತೇಜೋಗರ್ಭ ಕಾಲಖಂಡವದು! ಪ್ರೌಢರಾನ ಬಗ್ಗೆ ಪ್ರೌಢರಾಯನ ಕಾವ್ಯ ಹುಟ್ಟಿದೆ; ಲಕ್ಕಣ್ಣದಂಡೇಶರು ೨೨೨೧ ಪದ್ಯಗಳುಳ್ಳ ಶಿವತತ್ವ ಚಿಂತಾಮಣಿಯೆಂಬ 'ಗುರುವಚನದಮೃತಮಂ, ಶ್ರುತಿಪುರಾಣಾಗಮದ ಪರಮಾರ್ಥದಮೃತಮಂ, ವರಪುರಾತನ ವಚನ ಪರಿಯಾಯದಮೃತಮಂ, ಶಿವತಾಂತ್ರಿಕರು ಪೇಳ್ದ ಸಿದ್ಧಾಂಥವೆನಿಪಮೃತಮಂ,

---

* ಹರರೂಪರಾದ ನೂರೊಂದು ಸುವಿರಕ್ತರುರೆ ಕರಸ್ಥಲದ ನಾಗಿದೇವನು ಕಲ್ಲಮಠದ ಪ್ರಭು–ವರರನು ವೀರಣ್ಣೊಡೆಯರುಂ ಚಾಮರಸರಾದಿ ಶಿವಭಕ್ತಿರತಿಯುನೆರೆದು ॥ ಪ್ರೌಢರಾಯನ ಕಾವ್ಯ : ಸಂ. ೧, ಪ. ೪೨

ಪರಮಾನುಭಾವದನುಪಮ ಗೋಷ್ಠಿಯಮೃತದೊಳು ಬೆರಸಿ ಮಥನಿಸಿ ಪಡೆದ, ಪ್ರೌಢಕಾವ್ಯವನ್ನು ಬರೆದಿದ್ದಾನೆ; ಜಕ್ಕಣಾರ್ಯನು ಏಕೋತ್ತರ ಶತಸ್ಥಲವನ್ನು



**ಮೊಗ್ಗೆಯ ಮಾಯಿದೇವಪ್ರಭು**

ರಚಿಸಿದ್ದಾನೆ; ನೂರೊಂದು ವಿರತರಲ್ಲಿ ಕೆಲವರು ಸ್ವತಂತ್ರ ಗ್ರಂಥಗಳನ್ನು ಬರೆದಿದ್ದಾರೆ. ಬಸವಯುಗದಲ್ಲಿ ನೆರೆಬಂದ ತೊರೆಯಾಗಿ ಹರಿದಿದ್ದ ವಚನವಾಹಿನಿಯನ್ನು ಕಂಡು ಹಿಡಿದು, ಅಣೆಕಟ್ಟು ಕಟ್ಟಿ, ಸಂಕಲನಗಳ, ಸಂಗ್ರಹಗಳ , ಸಂವಾದಗಳ ಕಾಲುವೆಗಳನ್ನು ಕೊರೆದು ಜೀವಿಗಳ ಹೃದಯ ಕ್ಷೇತ್ರಗಳನ್ನು ಸಸ್ಯಶ್ಯಾಮಲಗೈಯಲು ಹರಿಯಬಿಟ್ಟಿದ್ದಾರೆ–ಈ ಬೆಳಗಿನ ಬಳಗದವರು.

ಈ ನೂರೊಂದು ವಿರತರ ಹೆಸರುಗಳೆಲ್ಲವನ್ನೂ ಕಂಡುಹಿಡಿಯಲು ಕಳೆದ ಐದು ವರ್ಷಗಳ ಅವಧಿಯಲ್ಲಿ ಮಾಡಿದ ಪ್ರಯತ್ನಕ್ಕೆ ಫಲ ದೊರೆತಿರಲಿಲ್ಲ. ಇತ್ತೀಚೆಗೆ ಸುಪ್ರಸಿದ್ಧ ವಿದ್ವಾಂಸರೂ ಸಂಶೋಧಕರೂ ಆದ ಡಾ॥ ಆರ್. ಸಿ. ಹೀರೇ ಮಠರು ನೂರೊಂದು ವಿರತರ ಹೆಸರುಗಳನ್ನು ಹೊರಗೆಡಹಿದ್ದಾರೆ. ಅವರೆಲ್ಲರೂ ಅನುಭಾವಿಗಳೇನೋ ಆಗಿರಲೇಬೇಕು; ಆದರೆ ಅವರೆಲ್ಲರೂ ಕೃತಿಕಾರರಲ್ಲವೆಂದು

ತೋರುತ್ತದೆ. ಅಂತೆಯೇ ಕಾಲನು ಕೃತಿಕಾರರನ್ನಷ್ಟೇ ಉಳಿಸಿ ಉಳಿದವರನ್ನು ತನ್ನಲ್ಲಿ ಗರ್ಭೀಕರಿಸಿಕೊಂಡುಬಿಟ್ಟಿದ್ದಾನೆ.

ಉಪಲಬ್ಧವಿರುವ ಹೆಸರುಗಳನ್ನು ನೋಡಿದರೂ ಅದೆಂಥ ಪ್ರತಿಭಾ ಪ್ರಭಾವಳಿ ಏಕಕಾಲಕ್ಕೆ ಮೈದೋರಿತೆಂಬುದರ ಬಗ್ಗೆ ಅಚ್ಚರಿಯುಂಟಾಗುತ್ತದೆ. "ಪುರಿಗೆರೆಯ ಪುರವರಾಧೀಶ್ವರ, ಅಪೂರ್ವಸ್ವಯಂಭು ಪ್ರಸನ್ನ ಚೆನ್ನದಕ್ಷಿಣ ಶ್ರೀ ಸೋಮನಾಥದೇವರ ದಿವ್ಯ ಶ್ರೀ ಪಾದಪದ್ಮಾರಾಧಕ, ತ್ರಿಕಾಂಡನಿಷ್ಠ, ಪರಮ ವೀರಶೈವಾಗಮಾಚಾರ್ಯ, ವಾರಣಾಸೀಂದ್ರ, ಪ್ರಭುದೇವರ ಷಡ್ಸ್ಥಲ ಜ್ಞಾನಚಾರಿತ್ರದ ವಚನಗಳ ಟೀಕಾಕಾರ, ಏಕೋತ್ತರ ಶತಸ್ಥಲವನ್ನು 'ತಮ್ಮ ಪರಮ ಜ್ಞಾನಾನುಭಾವ ಪ್ರಸನ್ನ ಪ್ರಕಾಶದಿಂ' ರಚಿಸಿ ಭಕ್ತ ಭಾಂಡಾರಿ ಜಕ್ಕಣಾಚಾರ್ಯಂಗೆ ಹೇಳಿದ ಮಹಾಗುರು ಮಹಾಲಿಂಗದೇವರು, ಅವರ ಶಿಷ್ಯ ಹಾಗೂ ಷಡ್ಸ್ಥಲೋಪದೇಶ, ಪ್ರಭುದೇವರ ಟೀಕಿನ ವಚನಗಳ ಕರ್ತೃ, ದಂಡನಾಥ ಜಕ್ಕಣಾರ್ಯನ ಗುರು ಕುಮಾರ ಬಂಕನಾಥ, 'ವೀರಶೈವಾಚಾರ್ಯಸಾರೋದ್ಧಾರ' ಪ್ರಭುಲಿಂಗ ಲೀಲಾ ಕರ್ತೃ ಚಾಮರಸ, 'ಅಂದಿನ ಚಿತ್ಪ್ರಭು ತಾನೆ ತನ್ನಂಗದಲ್ಲಿ ಒಡೆದು ಮೂಡಿ ಬೆಳಗುತ್ತಿರ್ದ' ಲಿಂಗಲೀಲಾವಿಲಾಸದ ಸಂಗ್ರಾಹಕ, ಪ್ರಭುದೇವರ ಮಂತ್ರಗೋಪ್ಯದ ಟೀಕಾಕಾರ ಕಲ್ಲಮಠದ ಪ್ರಭುದೇವ, ನಾಗಿದೇವ ತ್ರಿವಿಧಿಯ ಕರಸ್ಥಳದ ನಾಗಿದೇವ, ಕರಸ್ಥಳದ ವೀರಣ್ಣೊಡೆಯ, 'ಶಿವಯೋಗಿಜನಸೇವಿತ ಚರಣಾರವಿಂದ, ಷಡ್ಸ್ಥಲಜ್ಞಾನಪ್ರಭಾ-ಪುಂಜರಂಜಿತಾಂತರಂಗ' ಸಪ್ತ ಕಾವ್ಯ ಕರ್ತೃ ಗುರುಬಸವ, ಶಿವಾನುಭವವಿಭು ಮಾಯಿದೇವಪ್ರಭು – ಇವರೇ ನೂರೊಂದು ವಿರತರಲ್ಲಿ ಪರಮೋನ್ನತಿಯನ್ನು ಪಡೆದವರು. ಇವರಲ್ಲಿ ಒಬ್ಬೊಬ್ಬರೂ ಒಂದೊಂದು ದೃಷ್ಟಿಯಿಂದ ವಂದ್ಯರು. ಚಾಮರಸನು ಬಯಲಿಗನಾದ, ಮೀರಿ ಮೀಸಲನಾದ, ಮಾಯಾತೀತನಾದ, ಮಹಾಯೋಗಿಯಾದ ಅಲ್ಲಮಪ್ರಭುವಿನ ಚರಿತ್ರೆಯನ್ನು ತನ್ನ ಪ್ರತಿಭೆ-ವ್ಯಕ್ತಿತ್ವಗಳ ಪರಿಪಾಕದಿಂದ ಪ್ರಾಸಾದಿಕ ಪ್ರವಾಹವನ್ನಾಗಿ ಹರಿಸಿ ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬನಾಗಿ, 'ಭಾಮಿನೀ ಷಟ್ಪದಿಯ ನಿರರ್ಗಳವಾದ ಬಳಸುವಿಕೆಯಲ್ಲಿಯೂ ರೂಪಕಸಂಪತ್ತಿಯಲ್ಲಿಯೂ ಕುಮಾರವ್ಯಾಸ'ನಗೆ ಹೊಯಿಕೈಯಾಗಿ ಹೋಗಿದ್ದರೆ[೧] ಸಪ್ತಕಾವ್ಯಗಳ ಗುರುಬಸವನು ಶಿವಯೋಗಾಂಗ ಭೂಷಣ, ಸದ್ಗುರು ರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತಗೀತೆ, ಮನೋವಿಜಯಗಳೆಂಬ ತನ್ನ ಏಳುಕೃತಿ ರತ್ನಗಳಲ್ಲಿ 'ನಿಖಿಲಾಗಮ ತತ್ವರಹಸ್ಯ'ವನ್ನು ಸಾಮಾನ್ಯರಿಗಾಗಿ ಸುಲಭ ಹೃದ್ಯವಾಗಿ ಬಿತ್ತರಿಸಿ ಕೃತ ಕೃತ್ಯನಾಗಿದ್ದಾನೆ.

---

೧ ಕನ್ನಡ ಸಾಹಿತ್ಯ ಚರಿತ್ರೆ ಪು. ೨೨೬

"ಹಸಿಯದೆ ಹುಸಿಯದೆ ನೆಸೆಯದೆ ।
ಹಸಗೆಡದಖಿಳರೊಳಗೆ ಕಾರುಣ್ಯಂ ।
ಮಸಳಿಸದುದ್ರೇಕಿಸದೆ ವೃಥಾ ದೈನ್ಯದಿ ವಿಷಯಂಗಳೊಳು ॥
ಪಸರಿಸಿ ಹರಿದಾಡದೆ ತಾಕಿಕರಿಂದ ।
ವಸನಾಗಿರದೆ ಮನಸ್ಸಂಸಾರದ ।
ಬೆಸುಗೆಯಳಿದು ಸುಳಿಯುತ್ತಿಹನಿಯೊಳಗೆಂದನು ದೇಶಿಕನು ॥"

ಎಂದು ಶಿವಯೋಗಾಂಗಭೂಷಣದಲ್ಲಿ ಬರೆದ ಅವನು ಅದರಲ್ಲಿ ತನ್ನ ಚಿತ್ರವನ್ನೇ ಕೊಟ್ಟಿರುವನೇನೋ ಎಂಬ ಭಾವನೆ ಬರುವಂತಿದೆ. ಅವನು 'ಪರಮ ಸಮಾಧಿ ಶಾಂಭವ ಸತ್ಯಸಮ್ಯಗ್ಬೋಧಲೀಲಾಲೋಲಶೀಲ'ನು. 'ಪ್ರಳಯಾರ್ಕನ ದೀಪ್ತಿಯನೊಳಕೊಂಡುಜ್ವಲಿಸುವ ಲಿಂಗದ್ಯುತಿ ಸರ್ವಾಂಗವ ಬಳಸಿ ಮಹಾತೇಜಃಪುಂಜೀ ಕೃತವಾಗಿ ಬಹಿಷ್ಕರಿಸಿ, ಮಲೆಯುತ ದಳವೇರುತ ಥಳಥಳಿಸುತ ಘುಳುಘಳಿಸುತ ಘೂರ್ಮಿಸುತ ಸಮಸ್ತಮ ಸುಳಿಸುಳಿಗೊಳುತಿಹ ಮಹಾಸಿದ್ಧಿ'ಯನ್ನು ಪಡೆದು, 'ಅನುಭವದೊಳು ಆಡುತ, ಗುರು ವಚನವ ಪಾಡುತ, ಮನೋದೃಷ್ಟಿಯೊಳೊಲವಿಂ ನೋಡುತ ಲಿಂಗವ, ಚಿತ್ತಾಂತರ್ಗತವಹ ಬಹುಬಾಧೆಗಳಂ ಝಾಡಿಸಿ, ಸತ್ಯಾನಂದಾಂಬುಧಿ ತುಳುಕಾಡುತ, ನಿಜವಿಶ್ರಾಂತಿಯೊಳು ನಿರುಪಮ ಸುಖದಿಂದ' ಇದ್ದ ಸ್ವಾನುಭವಸಿದ್ಧನು. "ತತ್ವ ಅನುಭಾವ, ಸಾಹಿತ್ಯ ಇವು ಮುಪ್ಪುರಿಯಾಗಿ ಸತ್ಕಾವ್ಯವನ್ನು ಬಹುಭಾಗದಲ್ಲಿ ಒದಗಿಸಿದ ಕನ್ನಡ ಗ್ರಂಥಕಾರರಲ್ಲಿ ಇವನಿಗೆ ಮನ್ನಣೆಯ ಸ್ಥಾನವಿದೆ."

ಇವರೆಲ್ಲರಲ್ಲಿ ಮೊಗ್ಗೆಯ ಮಾಯಿದೇವರ ಸ್ಥಾನ ವಿಶಿಷ್ಟವಾದುದು. ಸಕ್ಕದದ ಕನ್ನಡದ ಬೊಕ್ಕಸಗಳಿಗೆ ಶ್ರೇಷ್ಠ ಕೃತಿಗಳನ್ನು ನೀಡಿ ಕೃತಾರ್ಥರಾದ ಜ್ಞಾನ ಯೋಗಿಗಳವರು. ಸಂಸ್ಕೃತದಲ್ಲಿ ಶಿವಾನುಭವಸೂತ್ರ, ವಿಶೇಷಾರ್ಥ ಪ್ರಕಾಶಿಕೆ ಎಂಬ ಎರಡು ಕೃತಿರತ್ನಗಳನ್ನೂ ಕನ್ನಡದಲ್ಲಿ ಪ್ರಭುಗೀತೆ, ಏಕೋತ್ತರ ಶತಸ್ಥಲ ಷಟ್ಪದಿ, ಷಟ್ಸ್ಥಲಗದ್ಯ, ಶತಕತ್ರಯ, ಮಗ್ಗೆಯ ಮಾಯಿದೇವರ ವಚನ ಎಂಬ ಕೃತಿ ಪಂಚಕವನ್ನೂ ಬರೆದ ಮಾಯಿದೇವಪ್ರಭು ಹುಟ್ಟಿದುದು ಮಲಾಪಹಾರೀ ತೀರದಲ್ಲಿರುವ ಇತಿಹಾಸಪ್ರಸಿದ್ಧ ಐಮುರಿ ಕ್ಷೇತ್ರದಲ್ಲಿ. ವಂಶಪರಂಪರೆ ಹೀಗಿದೆ : ಉಪಮನ್ಯು ಶಿವಾಚಾರ್ಯ ಸೋಮನಾಥನ ವರಪತ್ರ. ಅವನ ಮಗ ಭೀಮನಾಥ, ಅವನ ಮಗ ಕಳೇಶ್ವರ, ಅವನ ಮಗ ಬೊಪ್ಪನಾಥ, ಅವನ ಮಗ ನಾಕರಾಜ, ಅವನ ಶಿಷ್ಯ

---

೧ ಕನ್ನಡ ಸಾಹಿತ್ಯ ಚರಿತ್ರೆ ಪು.೩೨೨

ಸಂಗಮೇಶ್ವರ, ಅವನ ಮಗ ಮಾಯಿದೇವ. ಇವರಲ್ಲಿ ಉಪಮನ್ಯು ಸಾಕ್ಷಾಚ್ಛಿವಸ್ವರೂಪನಂತೆ, ಭೀಮನಾಥನು ಐಪುರ ಸೋಮನಾಥ ಪಾದಾರವಿಂದ ಪ್ರವಣೈಕಚೇತನನಂತೆ, ಕಳೇಶ್ವರನು ವಿದ್ಯಾವಿಲಾಸ ವಿಭವಾಕೃತಿ ಪಾತ್ರಗಾತ್ರನಂತೆ, ಆಚಾರ್ಯಲಕ್ಷಣಪರಿಸ್ಫುಟ ಸಚ್ಚರಿತ್ರನಂತೆ ಬೊಪ್ಪನಾಥನು ಶೈವಾದ್ವೈತಶಿರೋವ್ರತಾಂಗ ಸಮಯಾಚಾರ ಕ್ರಿಯಾದೇಶಿಕನಂತೆ ನಾಕರಾಜನು ಶ್ರೀ ಶೈವೋತ್ತರ ತತ್ತ್ವ ಯೋಗರಸಿಕನಂತೆ, ಸಂಗಮೇಶ್ವರನು ಶಿವೈಕಾಗತ ಮಾನಸಚಾರುಚೇಪ್ಪನಂತೆ. ಮಾಯಿದೇವನು? ಎಂದು ಸ್ವತಃ

> "ಸತ್ಯ ಶುದ್ಧಶಿವಾದ್ವೈತವಿದ್ಯಾತಂತ್ರ ಸ್ವತಂತ್ರಧೀಃ
> ಕಲ್ಯಾಣದಾಹ್ವಯಃ ಶ್ರೀಮಾನ್ ಮಾಯಿದೇವ ಮಹಾಪ್ರಭುಃ[೧]

ಮಾಯಿದೇವರೇ ಶಿವಾನುಭವ ಸೂತ್ರದಲ್ಲಿ ತಮ್ಮ ಬಗ್ಗೆ ಹೇಳಿಕೊಂಡಿರುವಂತೆ ಅವರು ಸತ್ಯಶುದ್ಧಶಿವಾದ್ವೈತ ಸಿದ್ಧಾಂತದಲ್ಲಿ ಅದ್ವಿತೀಯ ಪಂಡಿತೂ ಸ್ವತಂತ್ರ ಮತಿಗಳೂ ಆಗಿದ್ದರು. ಇಷ್ಟೇ ಅಲ್ಲ,

> "ಜಯಂತಿ ಪರಮ ಶೈವಃ ಸ್ವಾತ್ಮ ವಿದ್ಯಾಧಿದೈವಃ
> ಕುಮತ ಮತ ವಿಭೇದೀ ಷಟ್‌ಸ್ಥಲ ಬ್ರಹ್ಮವಾದೀ
> ಗುರುಪದ ನಿಜಭಕ್ತಃ ಕೇವಲೋನಾದಿ ಮುಕ್ತಃ
> ಸುಚರಿತ ಶಿವವರ್ತ್ಮಾ ಮಾಯಿದೇವರೋ ಮಹಾತ್ಮ !"[೩]

(ಮಾಯಿದೇವನು ಮಹಾತ್ಮ, ಪರಮಶೈವ, ಸ್ವಾತ್ಮವಿದ್ಯಾ ವಿಭೂಷಣ, ಕುಮತವಿಭೇದಿ, ಷಟ್‌ಸ್ಥಲ ಬ್ರಹ್ಮವಾದಿ, ಗುರುಚರಣ ಭಕ್ತ , ಅನಾದಿಮುಕ್ತ, ಶಿವಮಾಗವರ್ತಿ)

ಈ 'ಪರಂಪರಾ ಪಾವನ ಸಂಪ್ರದಾಯ'ನು ಕಲ್ಯಾಣದ ಮಾಯಿದೇವನೆಂದು ಪ್ರಸಿದ್ಧನಾಗಿದ್ದಾನೆ. 'ಕಲ್ಯಾಣದ' ಎಂದರೇನು?

> "ಮಾಹೇಶಾನಾಂ ಸ್ವಭಕ್ತಾನಾಂ ಕಲ್ಯಾಣಪದ ಕಾಂಕ್ಷಿಣಾಂ
> ದದಾತಿ ನಿತ್ಯ ಕಲ್ಯಾಣಂ ತೇನ ಕಲ್ಯಾಣದಃ ಶ್ರುತಃ"[೧]

(ಕಲ್ಯಾಣಪದಕಾಂಕ್ಷಿಗಳಿಗೆ ನಿತ್ಯ ಕಲ್ಯಾಣವನ್ನು ಕೊಡುವವನಾದ ಕಾರಣ ಕಲ್ಯಾಣದನು–ಆ ಮಾಯಿದೇವ ಪ್ರಭು)

---

೧ ಶಿವಾನುಭವ ಸೂತ್ರ, ಪ್ರಥಮಾಧಿಕರಣ–೨೨.

೨ ಶಿವಾನುಭವ ಸೂತ್ರ, ಪ್ರಥಮಾಧಿಕರಣ–೨೩.

೩ ಶಿವಾನುಭವ ಸೂತ್ರ, ಪ್ರಥಮಾಧಿಕರಣ –೧೯

ಈ ‘ಸ್ವಾನುಭೂತಿವಿಭವಾನುಗಾಹಿ’ಯಾದ ಮಹಾತ್ಮನು ಐಪುರಿಯ ಸೋಮನಾಥನ ಭಕ್ತನು. ಏಕೆ?

“ನಮಃ ಶಬ್ದ ಉಮಾ ಸಾಕ್ಷಾಚ್ಛಿವಶಬ್ದಃ ಶಿವಃ ಸ್ವಯಂ
ಆಯ ಶಬ್ದಸ್ತಯೋರ್ಯೋಗಸ್ಸೋಮ ತತ್ತ್ವಮುಪಾಸ್ಮಹೇ”

(‘ನಮಃಶಿವಾಯ’ ಎಂಬ ಶಿವಪಂಚಾಕ್ಷರೀ ಮಂತ್ರದಲ್ಲಿ ‘ನಮಃ’ ಶಬ್ದವೇ ಉಮೆ; ‘ಶಿವ’ ಶಬ್ದವೇ ಶಿವನು; ‘ಅಯ’ ಶಬ್ದವೇ ಉಮಾಶಿವರ ಸಂಯೋಗದ ಸಂಕೇತ. ಆದುದರಿಂದ ಆ ಉಮಾಸಹಿತ (ಸ+ಉಮಾ) ಸೋಮ ತತ್ತ್ವವನ್ನೇ ನಾನು ಉಪಾಸಿಸುತ್ತಿರುವೆನು) ಎಂದು ಅವರೇ ಹೇಳಿದ್ದಾರೆ.

ಮುಮುಕ್ಷುಗಳಿಗೆ ಕಲ್ಯಾಣದರಾಗಿದ್ದ ಮಾಯಿದೇವರು ನೂರೊಂದು ವಿರತರಲ್ಲಿ ಮನ್ನಣೆಯ ಸ್ಥಾನವನ್ನು ಪಡೆದಿದ್ದುದಲ್ಲದೆ ಪ್ರೌಢದೇವರಾಜನಿಂದಲೂ ಪೂಜೆವಡೆದಿದ್ದರೆಂದು ವಿರೂಪಾಕ್ಷ ಪಂಡಿತ (೧೫೮೪) ನು ಹೇಳುತ್ತಾನೆ.

ಎಲೆ ರಾಮ ಕೇಳಿನ್ನು ಸಕಲಾಗಮಂಗಳಿಗೆ
ನೆಲೆಯೆನಿಸಿ ಪ್ರೌಢನಿಂ ಪೂಜೆಯಂ ಕೊಂಡು ಷಟ್-
ಸ್ಥಲಮಾರ್ಗಮಂ ಸಕಲ ಶಿವಭಕ್ತ ಸಂತತಿಗೆ ಕರತಲಮಲಕವಾಗಿ
ಘಳಿವೊಲನುಭವಸೂತ್ರವಾದಿ ಶಾಸ್ತ್ರಂಗಳಂ
ಗೆಲವಿನಿಂ ಪೇಳ್ದು ನಿಜಶಿವಸಮಾಧಿಯಲಿ ಮಿಗೆ
ನಲವಿನಿಂದಲ್ಲಿ ಮೊಗ್ಗೆಯ ಮಾಯಿದೇವಪ್ರಭುವರನಿರದೆ ಮುಕ್ತನಹನು.

ಚನ್ನಬಸವಪುರಾಣ–ಸ. ೬೩, ಪ. ೩೮

ಯಾರಾದರೂ ಹೆಮ್ಮೆಪಟ್ಟುಕೊಳಬಹುದಾದ ಪಾವನ ಪರಂಪರೆಯನ್ನು ಪಡೆದು, ಸಕಲ ಶಾಸ್ತ್ರಪಾರಂಗತರಾಗಿ, ಉಭಯಕವಿತಾವಿಶಾರದರಾಗಿ, ರಾಜ ಪೂಜಿತರಾಗಿ ರಾರಾಜಿಸುತ್ತಿದ್ದರೂ ಮೊಗ್ಗೆಯ ಮಾಯಿದೇವರು ಮಾನವೀಯತೆಯ ಆರಾಧಕರು. ಶಿವಾವಲ್ಲಭ ಶತಕದಲ್ಲಿ–

“ಪರರಾರ್ತನ್ನವರಾರ್ ವಿವೇಕಿಸೆ? ನಿಜಸ್ತ್ರೀ ಪುತ್ರ ಮಿತ್ರರ್ ಸ್ವಕೀ
ಯರೆ? ಮಿಕ್ಕಾದವರನ್ಯರೇ ತನಗೆ? ನಾನೇನೆಂಬೆನಿಂತಪ್ಪ ಮೂ
ರ್ಖರನಯ್ಯೋ ಸ್ವಪರಾದಿಕಂ ಗುರುಮತಂ ದೇಹಾದಿತಾನನ್ಯ ವೆಂ
ದಿರೆ ಮತ್ತಿನ್ನುಳಿದರ್ಗೆ ಪೇಳ್ವ ಕಥೆಯಂ ನೋಡಾ ಶಿವಾವಲ್ಲಭಾ”

---

೨ ಅದೇ., ಅಷ್ಟಮಾಧಿಕರಣ–೯೦

(ವಿವೇಕಿಸಿ ನೋಡಿದರೆ ಪರರಾರು, ತನ್ನವರಾರು? ಹೆಂಡತಿ ಮಕ್ಕಳು ಮಿತ್ರರಷ್ಟೇ ಸ್ವಕೀಯರೆ, ಮಿಕ್ಕಾದವರು ಅನ್ಯರೆ ತನಗೆ? ಇವರು ತನ್ನವರು ಅವರು ಪರರು ಎಂದು ಭಾವಿಸಿಕೊಳ್ಳುವ ಮೂಢರಿಗೇನೆನ್ನಬೇಕು? ತನ್ನ ದೇಹಾದಿ ಕರಣಗಳೇ ತನಗೆ ಅನ್ಯವಾದುವುಗಳೆಂದು ಗುರುಗಳಾದರು ಹೇಳುತ್ತಿರುವಾಗ ಉಳಿದವರು ತನಗೆ ಅನ್ಯರೆಂದು ಹೇಳುವುದು ಹುಚ್ಚುತನವಲ್ಲವೆ?) ಎಂದು ಸಾರಿ ತನ್ನವರು ಅನ್ಯರೆಂಬ ಭೇದಬುದ್ಧಿಗೇ ಕೊಡಲಿಯೇಟನ್ನು ಕೊಟ್ಟಿದ್ದಾರೆ. ಮಹದೈಪುರೀಶ್ವರ ಶತಕದಲ್ಲಿ,

"ತನ್ನವರೆಂದೊಡೇಂ ಕೆಲಬರುಂಟೆ ವಿಚಾರಿಸೆ? ಲೋಗರೆಂದು ತಾ–
ನನ್ಯರ ನೋಳ್ಪರುಂಟೆ? ಸಕಲರ್ ಪರರಲ್ಲ! ವಿಭೇದ ಬುದ್ಧಿಯಿಂ
ತನ್ನವರೆಂಬುದೊಂದು ಮಮಕಾರಮೆ ತನ್ನದು, ವಿಕ್ಕರೆಲ್ಲರುಂ
ಮುನ್ನಮೆ ಲೋಗರಯ್ಯ ಪರಮಪ್ರಭುವೇ ಮಹದೈಪುರೀಶ್ವರಾ"

(ವಿಚಾರಪರನಾಗಿ ನೋಡಿದರೆ ಕೆಲವರು ಮಾತ್ರ ತನ್ನವರು, ಉಳಿದವರು ಹೆರವರೆಂಬುದುಂಟೆ? ಯಾರು ಹೆರವರಲ್ಲ! ಹಾಗಾದರೆ ತನ್ನವರು ಅನ್ಯರೆಂಬ ಭಾವನೆ ಬಂದಿತೆಂತು! ವಿಭೇದ ಬುದ್ಧಿಯಿಂದ, ಕೆಲವರೇ ತನ್ನವರೆಂಗು ಮಮಕಾರದಿಂದ!) ಎಂದು ವಿವರಿಸಿ ವಿಭೇದ ಬುದ್ಧಿಯ ಬೇರುಗಳಿಗೇ ಪೆಟ್ಟನ್ನಿಟ್ಟಿದ್ದಾರೆ.

ಇನ್ನೂ ಮುಂದೆ ಹೋಗಿ–

"ತನ್ನವರನ್ಯರೆಂಬುಭಯ ಭಾವಮದಿಲ್ಲದೆ, ನೋಳ್ಪೊಡೆಲ್ಲರುಂ
ನಿನ್ನವರೆಂದವರ್ಗಳೊಲಿದಿತ್ತ ಜಲಪ್ರಸವಾದಿ ವಸ್ತುವಿಂ
ನಿನ್ನನೆ ಪೂಜಿಪಾತನವನೇ ಸುಖಿ; ಮಿಕ್ಕವನೆಯ್ದೆ ದುಃಖಿ; ಮ
ತ್ತಿನ್ನು ವಿಚಾರಮೇನು ಪರಮ ಪ್ರಭುವೇ ಮಹದೈಪುರೀಶ್ವರಾ"

(ತಂದೆ, ತನ್ನವರು–ಅನ್ಯರು ಎಂಬ ಉಭಯಭಾವವಿಲ್ಲದೆ, ಎಲ್ಲರೂ ನಿನ್ನವರೆಂದು ತಿಳಿದು, ಅವರಿತ್ತ ಜಲ ಪುಷ್ಪಾದಿಗಳಿಂದ ನಿನ್ನನ್ನು ಪೂಜಿಸುವವರೇ ಸುಖಿಗಳು; ಉಳಿದವರು ದುಃಖಿಗಳು–ಇನ್ನಿದರ ಮೇಲೆ ಮತ್ತೊಂದು ವಿಚಾರವಿಲ್ಲ) ಎಂದು ವಿಶದೀಕರಿಸಿ ಸುಖದುಃಖಗಳ ಮೂಲವೂ ಮಾನವ ಮಾನವರಲ್ಲಿ ಭೇದ ಭಾವವನ್ನು ಕಲ್ಪಿಸುವ ವಿಭೇದ ಬುದ್ಧಿಯಲ್ಲಿ ಮಮಕಾರದಲ್ಲಿ–ಎಂದು ಎಚ್ಚರಿಸಿದ್ದಾರೆ. ಎಲ್ಲರೂ ಸುಖವನ್ನೇ ಬಯಸಿ ಸುಖವನ್ನೇ ಶೋಧಿಸುತ್ತಾರೆ; ಆದರೆ ಪಡೆಯುವುದು ಮಾತ್ರ ದುಃಖವನ್ನೇ ಪಡೆಯುತ್ತಾರೆ! ಇದೆಂಥ ವಿಧಿವಿಲಾಸ!

"ಸುಖಮಂ ಕಾಂಕ್ಷಿಪರ್ಯೆಸೆ ಸರ್ವರುಮನೇಕಾಯಾಸದಿಂ ಯತ್ನದಿಂ

ದಖಿಲೋಪಾಯದಿಂ; ಅಲ್ಲದೆ ಊಹಿಪರೆ ನಾನಾ ಯುಕ್ತಿಯಿಂ ದುಃಖಮಂ
ಸುಖಿಕೆಂದಿಟ್ಟ ಸೋಡರ್ ನಿಮಿರ್ದು ಮನೆಯಂ ಸುಟ್ಟಂದದಿಂ ದುಃಖಮಂ
ಸುಖಕಾಮತ್ವದೆ ಮಾಳ್ಪೊಡಂತದು ಭವತ್ಕೃತಂ ಶಿವಾವಲ್ಲಭಾ"

(ಎಲ್ಲರೂ ಬಹು ಪ್ರಯಾಸದಿಂದಲೂ ನಾನಾ ಪ್ರಯತ್ನಗಳಿಂದಲೂ ವಿವಿಧೋಪಾಯಗಳಿಂದಲೂ ಸುಖವನ್ನೇ ಬಯಸಿ ಸುಖವನ್ನೇ ಆರಸುವವರಲ್ಲದೆ ದುಃಖವಾಗಲಿ–ಎಂದು ಯಾರಾದರೂ ಅಪೇಕ್ಷಿಸುವರೆ? ಇಲ್ಲ. ಆದರೆ ಸುಖಕ್ಕಾಗಿ ಇಟ್ಟ ದೀಪವು ಮುನ್ನುಗ್ಗಿ ಮನೆಯನ್ನೇ ಸುಟ್ಟಹಾಗೆ, ಸುಖ ಕಾಮಿಯಾಗಿ ಮಾಡುವುದು ದುಃಖವನ್ನೇ ಉಂಟುಮಾಡಿದರೆ ಅದು ನೀನು ಮಾಡಿದ ಮಾಟ!) ಎಂಥ ಉದಾಹರಣೆ, ಎಂಥ ವಿಶ್ಲೇಷಣೆ!

ಹಾಗಾದರೆ ಹಾದಿಯಾವುದು ದುಃಖ ಕ್ಷಯಕ್ಕೆ! ಮಾಯಿದೇವರಿಗೂ ಈ ಪ್ರಶ್ನೆ ಕಾಡದಿರಲಿಲ್ಲ!

"ಆರಿಗೆ ಪೇಳ್ವೆನಾರಿಗೆ ಪಲುಂಬುವೆನಾರಿಗೆತೋಪೇನೆನ್ನ ಸಂ–
ಸಾರದುರಾಪ್ತದುಃಖಭಯಮಂ ನಿನಗಲ್ಲದೆ ಭಕ್ತ ಲೋಕಮಂ–
ದಾರ, ವರಾಭಯಪ್ರದ?"

ಎಂದು ಹಲುಬಿದ್ದಾರೆ; "ದಿನದೆಡೆಯುಂಟೆ ಸೂರ್ಯನುದಯಕ್ಕೆ ತಮೋವಿಲಯಕ್ಕೆ? ಅಚ್ಚಕಬ್ಬುನದಳಿವಿಂಗೆ ಸಿದ್ಧರಸದಾಕ್ರಮಣಕ್ಕೆ? ಎಲೆ ದೇವ ದೇವ, ನೀನನುಕರಿಸಿರ್ದುವುಂ ದುರಿತದುಃಖಭಯಕ್ಷಯಕಿಂದು ನಾಳೆಯೆಂಬ ಇನಿತು ವಿಳಂಬಮೇಕೆ?" ಎಂದು ಪರಮಾತ್ಮನನ್ನು ಪ್ರಶ್ನಿಸಿದ್ದಾರೆ; "ಆಮಯ ಘಾತಿ–ಯಿಂ, ವಿಷಯದಂಡಲೆಯಿಂ, ಬಹುದುಃಖದೊಗ್ಗಿನಿಂ, ತಾಮಸದಿರ್ಕೆಯಿಂ ನೆರೆಮುದಂಗೆಡುತ್ತೈದೆನೆ ! ದೇವ, ಭಕ್ತಕಾಯೋ ಮಮಕಾಯವೆಂಬ ವಚನಂ ದಿಟವಾದೊಡೆ ರಕ್ಷಿಸೆನ್ನುವಂ ಕಾಮಪುರಾಂತಕಾರ ಪರಮ ಪ್ರಭುವೇ ಮಹಾದ್ಯೈಪುರೀಶ್ವರಾ!" ಎಂದು ಅನನ್ಯ ಶರಣತೆಯಿಂದ ಬೇಡಿಕೊಂಡಿದ್ದಾರೆ. 'ಸುಖಕಾಮತ್ವದೆ ದುಃಖಮಂ ಮಾಳ್ಪೊಡೆ ಅದು ಭವತ್‌ಕೃತ್ಯ' ಎಂದು ಹೇಳಿದ ಅವರು ಶಿವನಿಗೆ ಮೊರೆಹೊಕ್ಕುದು ಸಹಜವೇ ಆಗಿದೆ. ಹೌದು, ಭಕ್ತಿಯೊಂದೇ ಆಧಾರ. ಮಾಯಿದೇವರ ದೃಷ್ಟಿಯಲ್ಲಿ ಅದು ಪಂಚಮ ಪುರುಷಾರ್ಥ :

ಪಂಚಮಃ ಪರುಷಾರ್ಥೋऽಹಿ ಭಕ್ತಃ ಶೈವೀ ಸನಾತನೀ
ಲೋಕಯೋರುಭಯೋರ್ರೈಹಿಕಾಮುಷ್ಮಿತ ಪದಾರ್ಥಯೋಃ

(ಶಿವಾನುಭವ ಸೂತ್ರ–ಅಷ್ಟಮಾಧಿಕರಣ. ೭೮ ಸೂತ್ರ)

"ಏನೆನಲುಂಟು ಭಕ್ತಿಯ ಮಹಾತ್ಮತೆಯಂ ಶ್ರುತಿಶಾಸ್ತ್ರ ಪಂಙ್ತಯೋ–
ಗೇನಪರಾ ಎನುತ್ತಮಳ ಭಕ್ತಿಯ ವೈಭವಮಂ ಪೊಗಳ್ದು ಸ–
ನ್ಮಾನಿಸಿತಾಗಿ ಯೋಗಪದದಿಂದುಪರಿಷ್ಠವೆನಿಪ್ಪ ಭಕ್ತಿ ಸೌ–
ಖ್ಯಾನುಭವೈಕ ನಿಷ್ಕಳ ಪದಕ್ಕೆಣೆ ಯಾವಪದಂ ಶಿವಾಧವಾ"

ಎಂದು ಭಕ್ತಿಯ ಮಹಿಮೆಯನ್ನು ಬಣ್ಣಿಸಿದ್ದಾರೆ. 'ಭಕ್ತಿ ಸೌಖ್ಯವೇ ಸೌಖ್ಯ; ಭಕ್ತಿ ಸೌಖ್ಯಾನುಭವೈಕ ಪದಕ್ಕೆ ಸಮನಾದ ಪದ ಇನ್ನೊಂದಿಲ್ಲ' ಎಂಬುದು ಅವರ ತೀರ್ಮಾನ.

ಭಕ್ತಿಯೆಂದರೇನು? ಅದು ನಿರಹಂಭಾವ ನಿರಹಂಕೃತಿಯೆ, ಅಹಂಭಾವದಿಂದ ದುಃಖ, ನಿರಹಂಭಾವದಿಂದ ಸುಖ; ಅಹಂಕೃತಿಯಿಂದ ದುಃಖ, ನಿರಹಂಕೃತಿಯಿಂದ ಸುಖ. 'ನಾನು ನನ್ನದು, ನಾನು ಮಾಡುವವ, ಎನ್ನುವಲ್ಲಿ ದುಃಖದ ಉಗಮ; 'ನೀನು, ನಿನ್ನದು, ನಿನ್ನ ಕೃತಿ, ಎಂಬಲ್ಲಿ ಸುಖದ ಸೆಲೆ. ಈ ನಿರಹಂಭಾವ, ನಿರಹಂಕೃತಿ ಕ್ರಿಯೆ ನೆಲೆಗೊಂಡರೆ ಇನ್ನಾವ ಜಪತಪ ಯೋಗಯಾಗಗಳು ಬೇಕಿಲ್ಲ;

"ನಿರಹಂಭಾವಮದುಳ್ಳೊಡೆಲ್ಲವರೊಳೇನುಂ ಬೇಡ : ದಾನಂ, ತಪ–
ಶ್ಚರಣಂ ಪೂಜನಮಂತದಿಲ್ಲದೊಡದೆಲ್ಲಂ ಬಂಧಹೇತು ಕ್ರಿಯಾ–
ಕರಣಂ, ಕೊಟ್ಟೊಡಮಾಹ ಪೂಜಿಸಿದೊಡಂ ನೋಡಾ ತಪಂ ಗೈದೊಡಂ
ಪರಮಾರ್ಥಂ ನಿರಹಂಕೃತಿಕ್ರಿಯೆ ಬಳಿಕ್ಕೆಲ್ಲಂ ಶಿವಾವಲ್ಲಭಾ!"

(ನಿರಹಂಭಾವವಿದ್ದೊಡೆ ಸಾಕು; ದಾನ, ತಪಸ್ಸು, ಪೂಜೆಗಳೊಂದೂ ಬೇಕಿಲ್ಲ; ಆ ನಿರಹಂಭಾವವಿಲ್ಲದೆ ಯಾವ ದಾನ ಮಾಡಿದರೂ ಯಾವ ಪೂಜೆ ಮಾಡಿದರೂ ಯಾವ ತಪಸ್ಸನ್ನಾಚರಿಸಿದರೂ ಅವೆಲ್ಲ ಬಂಧನಕಾರಕಗಳಾಗುವುದು. ನಿರಹಂಕೃತಿ ಕ್ರಿಯೆಯೇ ಪರಮಾರ್ಥ)

ಇಂಥ ಪರಮಾರ್ಥದ ಪರಮರಹಸ್ಯವನ್ನು ತಿಳಿಸಿದ ಮಾಯಿದೇವ ಪ್ರಭು 'ಜ್ಞಾನಿಯೋ ಕರ್ಮಿಯೋ ಭವಿಯೋ ಭಕ್ತನೋ ಬದ್ಧನೋ ಮುಕ್ತನೋ ಶಿವಂ ತಾನೋ?' 'ವಿವೇಕದಿಂ ತಿಳಿದು ನೋಡೆ ಮಹಾ ಘನಲಿಂಗಯೋಗಿ!' ಅವರು

ಘನಲಿಂಗಯೋಗವೆಂದರೇನು/

"ನುಡಿವೆಡೆಯಲ್ಲಿ ನೋಡುವೆಡೆಯಲ್ಲಿ ರಮಿಪ್ಪೆಡೆಯಲ್ಲಿ ವಸ್ತುವಂ
ಪಿಡಿವೆಡೆಯಲ್ಲಿ ಭೋಗಿಪೆಡೆಯಲ್ಲಿ ಸುಖಂಬಡೆವಲ್ಲಿ ದೇಹಮಂ
ಬಿಡುವೆಡೆಯಲ್ಲಿ ಲಿಂಗಕಳೆ ಲಿಂಗಗುಣಂ ಘನಲಿಂಗಯೋಗ ಮಾ
ದೊಡೆ ಬಳಿಕಾ ಮಹಾತ್ಮನನದೇನೆನಬರ್ಪುದದಂ ಶಿವಾಧವಾ"

(ನುಡಿವಾಗ, ನೋಡುವಾಗ, ಕ್ರೀಡಿಸುವಾಗ, ಪದಾರ್ಥವನ್ನು ಗ್ರಹಿಸುವಾಗ, ವಿಷಯವನ್ನು ಭೋಗಿಸುವಾಗ, ಸುಖವನ್ನು ಅನುಭವಿಸುವಾಗ, ದೇಹವನ್ನು ತ್ಯಜಿಸುವಾಗ–ಎಲ್ಲ ಸಮಯಗಳಲ್ಲಿಯೂ ಮಹಾಲಿಂಗವೇ ಕರ್ತೃವಲ್ಲದೆ ತಾನಲ್ಲವೆಂದು ತಿಳಿದು ಆ ಲಿಂಗಪ್ರಸಾದ ಸುಖವನ್ನು ಅನುಭವಿಸುವ ಮಹಾತ್ಮನೇ ಘನಲಿಂಗಯೋಗಿ.) ಮಾಯಿದೇವರೂ ಮಹಾ ಘನಲಿಂಗಯೋಗಿಗಳು. ಅವರು ಅದ್ವೈತಿಗಳೆಂದು ಕೆಲವರು ಹೇಳುವರಲ್ಲ ಹಾಗಾದರೆ? ಅವರೇ ಉತ್ತರ ಕೊಡಲಿ;

“ತನ್ನಂದನ್ಯಮನೇನುಮಂ ಬಗೆಯನಾಗಿ ದ್ವೈತಹೀನಂ ; ಸುಸಂ
ಪನ್ನಂ ತಾನೆನಿಪೊಂದಹಂತೆ ತನಗಿಲ್ಲಂತಾಗಲದ್ವೈತ ಹೀ–
ನಂ; ನಿರ್ವಾಣಪದ ಪ್ರಸಿದ್ಧ ಶರಣಂ ದ್ವಂದ್ವಾತಿಗಂ; ವಾಕ್ಕ್ರಿಯಾ
ಭಿನ್ನಾಚಾರ ವಿಶಿಷ್ಟ ಷಟ್‌ಸ್ಥಲ ಪರಬ್ರಹಂ ಶಿವಾವಲ್ಲಭಾ”

“ತನಗೆ ಭಿನ್ನಾವಾಗಿ ವಸ್ತುವಾವುದನ್ನೂ ಕಾಣನಾಗಿ ಅವನು ದ್ವೈತಿಯಲ್ಲ ; ಅಹಂ ಎಂಬುದೇ ಇಲ್ಲವಾಗಿ, ಶಿವೋಹಂ” ಎಂಬ ಅದ್ವೈತಿಯಲ್ಲ; ನಿರ್ವಾಣಪದ ಪ್ರಸಿದ್ಧನಾದ ಶರಣನು ದ್ವೈತಾದ್ವೈತಗಳೆಂಬ ದ್ವಂದ್ವಾತೀತನು; ಅವನು ನಡೆ ನುಡಿಗಳೊಂದಾದ ಷಟ್‌ಸ್ಥಲಪರಬ್ರಹ್ಮ ಸ್ವರೂಪನು.

ಮಾಯಿದೇವರೂ ಷಟ್‌ಸ್ಥಳ ಬ್ರಹ್ಮಸ್ವರೂಪರಾಗಿ ಶಿವನನ್ನು ಬೆರೆದ ಮಹಾತ್ಮರು. ಶ್ರೇಷ್ಠ ಸಾಹಿತಿಗಳಾದ ಅ.ನ. ಕೃಷ್ಣರಾಯರು ತಮ್ಮ “ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ” ಎಂಬ ಪುಸ್ತಕದಲ್ಲಿ “ಇವರ ಶತಕಗಳಲ್ಲಿ ಅಪಾರವಾದ ಅನುಭಾವ ಮತ್ತು ಪಾಂಡಿತ್ಯ ಕಂಡುಬರುತ್ತವೆ” ಎಂದು ಬರೆದಿದ್ದಾರೆ. ನಿಜ, ಮೊಗ್ಗೆಯ ಮಾಯಿಪ್ರಭು, ಅಲ್ಲಮಪ್ರಭು ನಿಜಗುಣರ ಸಾಲಿನಲ್ಲಿ ನಿಲ್ಲತಕ್ಕವರು. ಅವರ ಹೃದಯ ವಿಶ್ವದಷ್ಟೇ ವಿಶಾಲ; ಅವರ ದೃಷ್ಟಿ ಅದಕ್ಕೂ ವಿಸ್ತಾರ; ಅವರ ಬಾಳು ಸಾಗರದ ಆಳಕ್ಕೂ ಹಿಮಾಲಯದ ಎತ್ತರಕ್ಕೂ ಮುಟ್ಟಿದ ಬಾಳು. ಶಿವನಲ್ಲಿ ಬೇಡಿಕೊಂಡುದಾದರೂ ಏನನ್ನು ಈ ‘ಭಕ್ತಿ ಪರಾನುಭೂತಿಶಿವಯೋಗ ಜ್ಞಾನನಿಷ್ಪನ್ನ ಷಟ್‌ಸ್ಥಲ ಲಿಂಗಾಂಗ ನಿಜೈಕ್ಯದೃಷ್ಟಿ’ಯನ್ನು ಪಡೆದಿದ್ದ ದ್ರಷ್ಟಾರನು? ‘ಎಲ್ಲಂ ತನ್ನೊಳು ತಾನದೆಲ್ಲವರೊಳೇಕಾಕಾರಮಾಗಿರ್ದು, ಮತ್ತಿಲ್ಲೆಂಬಂತೆ ತದನ್ಯನಾಗಿ ಚರಿಸಿದ’ ‘ಷಟ್‌ಸ್ಥಳ ನಿಷ್ಕಳಾಮಳ ಪರಬ್ರಹ್ಮಾಂಗಲಿಂಗೈಕ್ಯ’ನು?

“ಸುಖವೆ ಸುಖಾಭಿವೃದ್ಧಿಯೆ ಸುಖೋನ್ನತಿಯೇ ಸುಖಸಾರಸಿದ್ಧಿಯೇ
ಸುಖ ಪರಿಪೂರ್ತಿಯೇ ಸುಖಕಳಾಕೃತಿಯೇ ಸುಖಚಕ್ರವರ್ತಿಯೇ
ಸುಖಮುಖ ಬಂಧುವೇ ಸುಖರಸಾಮೃತಸಿಂಧುವೆ ನಿನ್ನವರ್ಗೆ ನೀಂ
ಸುಖಮನೆ ಮಾಳ್ಪುದಯ್ಯ ಪರಮ ಪ್ರಭುವೇ ಮಹದೈಪುರೀಶ್ವರಾ!”

ಇದಕ್ಕಿಂತ ಉದಾತ್ತವಾದ ಪ್ರಾರ್ಥನೆ ಇನ್ನೆಲ್ಲಿ ಸಿಕ್ಕೀತು? ಈ ಪ್ರಾರ್ಥನೆಯೊಂದೇ ಸಾಲದೆ, ಮೊಗ್ಗೆಯ ಮಾಯಿದೇವರ ಮಹೋನ್ನತ ವ್ಯಕ್ತಿತ್ವವನ್ನು ಅರಿಯುವುದಕ್ಕೆ?

■

# ತೋಂಟದ ಸಿದ್ಧಲಿಂಗೇಶ್ವರ
# ೧೪೭೦

ದುರಿತಮಃಪತಂಗನಮಳಾರ್ಥವಿವೇಚನಸತ್ಪ್ರಸಂಗನೀ ।
ಶ್ವರಲಸದಂತರಂಗನಭವಾಗಮವಾರಿಜ ದಿವ್ಯ ಭೃಂಗನ ॥
ಕ್ಷರಪರಲಿಂಗಸಂಗತಿಶಾಂತನಿರಸ್ತಜಡಾನುಷಂಗನೋ ।
ಲ್ಲುರುತರ ಸಿದ್ಧಲಿಂಗಯತಿತುಂಗನೊಡರ್ಚುಗೆ ಸಜ್ಜನೇಷ್ಟಮಂ ॥
ಪವಿತ್ರ ಸ್ವಗಾತ್ರಂ ಬುಧಸ್ತೋತ್ರಪಾತ್ರಂ
ನಿಕೃತ್ತಾವರೋಧಂ ನಿಸರ್ಗಾವ ಬೋಧಂ
ಚಿದಾಮೋದಭಾಜಂ ಚರಾಚಾರ್ಯರಾಜಂ
ಮಹಾಲಿಂಗಸಂಗಂ ಭಜೇ ಸಿದ್ಧಲಿಂಗಂ

–ಮಹಾಕವಿ ಷಡಕ್ಷರದೇವ

ಪರತರ ಸುಷಟ್‌ಸ್ಥಲ ಬ್ರಹ್ಮಸ್ವರೂಪ ನಿಜ
ಶರಣ ಶಾಶ್ವತನನಘನಪ್ರತಿಮ ಷನಮಹಿಮ
ಸುರುಚಿರ ಶಿವಜ್ಞಾನಿ ಕರ್ಮಪಾಪಚ್ಛೇದಿ ಸಂಸಾರದುಃಖಾಪಹಂ ॥
ದುರಿತ ದಾರಿದ್ರ್ಯತುಲಮೇಘ ಝುಂಝಾವಾತ
ಸರಸ ಭಕ್ತಿ ಜ್ಞಾನ ವೈರಾಗ್ಯ ಸಂಪನ್ನ
ಪರಮ ಸದ್ಭಕ್ತಾಂತರಂಗ ತೋಂಟದ ಸಿದ್ಧಲಿಂಗ ಕರುಣಾಪಾಂಗನು ॥

(ಗುರುರಾಜಚಾರಿತ್ರ ೧೩–೮೬)

ವಿಜಯನಗರದ ಪ್ರೌಢದೇವರಾಯನ ಕಾಲದ ನೂರೊಂದು ವಿರತರ ತರುವಾಯ ಶರಣಸುರಭೂಜನವನಕ್ಕೆ ಮತ್ತೆ ಬಂದಳಿಕೆ ಬಂದಿತು. ಆಗೊಬ್ಬ ಯುಗಪುರುಷನ ಉದಯವಾಯಿತು. ಆ ಮಹಾಮಹಿಮನು ಪ್ರತ್ಯಕ್ಷ ನಿರಂಜನ ಗಣೇಶ್ವರನ ಅಪರಾವತಾರಿಯೆಂದೂ ಖಿಲವಾಗುತ್ತಲಿದ್ದ ಶರಣಧರ್ಮವನ್ನು ಪುನರುಜ್ಜೀವನ–ಗೊಳಿಸಲೆಂದು ಏಳುನೂರು ಗಣೇಶ್ವರರೊಡನೆ ಭೂಲೋಕದಲ್ಲಿ ಪರಶಿವನ

ಅಪ್ಪಣೆಯ ಮೇರೆಗೆ ಅವತರಿಸಿದನೆಂದೂ ಆತನ ಅಸಂಖ್ಯಾತ ಭಕ್ತರು ಇಂದಿಗೂ ನಂಬಿದ್ದಾರೆ.

"ಆಲಿಸಾ ಪೌಢರಾಯಂ ಪೋದ ಕೆಲದಿನದ ।
ಮೇಲಿರದನಚಾರವೇ ಪೆರ್ಚಿ ಧರೆಯೊಳಗೆ ।
ಮೇಲಾದ ವೀರಶೈವಾಚಾರವಡಗಿ ಪರವಾದಿಗಳೇ ಘನವಾಗಲು ॥
ಕೈಲಾಸಕ್ಕೈದಿ ನಾರದ ಬಿನ್ನವಿಸಲೀಶಂ"

ನಿರಂಜನ ಗಣೇಶ್ವರನೊಡನೆ ವರಗಣೇಶ್ವರರೇಳ್ನೂರರಂ ಕೂಡಿಕೊಂಡು ಭೂಮಿಯಲ್ಲಿ ಉದಿಸಬೇಕೆಂದು ಹೇಳಿದನು

(ಚ.ಬ.ಪು.)

ಇಂಥ ಅಘಟಿತ ಘಟನಾಶಕ್ತಿಯುಳ್ಳ ಮಹಾತ್ಮನ ಆವಶ್ಯಕತೆಯೂ ಇದ್ದಿತು ಆಗ . ನೂರೊಂದು ವಿರತು ವೀರಶೈವ ಮತಾಭಿಮಾನಿಯಾದ ಪರಮಪ್ರತಾಪಿ ಪ್ರೌಢದೇವರಾಯನ ಕಾಲದಲ್ಲಿದ್ದು ವೀರಶೈವೋಜ್ಜೀವನಕಾರ್ಯಗೈದರು. ಆದರೆ ತೋಂಟದ ಸಿದ್ಧಲಿಂಗೇಶ್ವರರಿದ್ದುದು ವಿಜಯನಗರದ ವಿರೀಪಾಕ್ಷರಾಯನ ಕಾಲದ ಅಶಾಂತಿ ಪರ್ವದಲ್ಲಿ. ಆಗಿನ ಅನಾಯಕತ್ವ, ಅರಾಜಕತೆ, ಅಶಾಂತಿ, ಅನೀತಿಗಳ ಉಲ್ಬಣದಲ್ಲಿ ದಿಕ್ಕುತಪ್ಪಿದ ಜನತೆಗೆ ದಾರಿತೋರಲು ಇಂಥ ಪವಾಡಪುರುಷರೇ ಬೇಕಾಗಿದ್ದರು. ಅವರೂ ಉದಯಿಸಿದರು.

ಸಕಲ ಲೋಕ ಜನ ಹಿತಾರ್ಥವಾಗಿ ಸರ್ವ ಜನರುಗಳಿಗೆ
ಮುಕುತಿಗೊಡುವೆನೆಂದು ಬಂದು ಚರಿಸಿ ಮೆರೆದ ಸಿದ್ಧಲಿಂಗ

(ತೋಂಟದಾರ್ಯ ರಗಳೆ)

ಇವರು ಇಹಲೋಕಕ್ಕೆ ಇಳಿದ ರೀತಿಯೂ ಅಚ್ಚರಿಯನ್ನುಂಟು ಮಾಡುವಂತಹದಾಗಿದೆ. "ಈ ನಿರಂಜನ ಜಂಗಮವೆ ಎಂಟು ವರುಷದ ಶಿಶುರೂಪವಂ ತಾಳ್ದು ಆ ಶಿಶುವು ಭಸ್ಮ ರುದ್ರಾಕ್ಷ ಲಿಂಗಧಾರಣ ಸಮೇತವಾಗಿ ಆ ವಾಣಿಜ್ಯಪುರ ಗೋಸಲ ಚೆನ್ನಬಸವ ಸ್ವಾಮಿಗಳವರ ಸನ್ನಿಧಾನಕ್ಕೆ ಕೈಲಾಸದಿಂ ಅಂತರಿಕ್ಷ ಮಾರ್ಗದಿಂ.....ಪುರಜನರು ಕಾಣ್ಬಂತೆ ಕೋಟಿ ಸೂರ್ಯಪ್ರಕಾಶವಾಗಿ ಬರುವ ಕಾಲದಿ ಜನರು ಕೇಳ್ವಂತೆ, ನೋಳ್ಪಂತೆ ಅಂತರಿಕ್ಷದಿ ಜಯದುಂದುಭಿ ವಾದ್ಯಗಳಾದುವು; ಪುಷ್ಪದ ಮಳೆ ಸುರಿಯುತು."

(ನಿರಂಜನ ವಂಶರತ್ನಾಕರ)

ಸಿದ್ಧೇಶ್ವರ ಪುರಾಣದಲ್ಲಿಯೂ ಸಿದ್ಧಲಿಂಗೇಶ್ವರರು ಹರದನಹಳ್ಳಿಯ ಮಠಕ್ಕೆ ತಾವಾಗಿಯೇ ಬಂದು ಗುರು ಚೆನ್ನಬಸವೇಶ್ವರ ಸ್ವಾಮಿಗಳನ್ನು ತಮಗೆ ದೀಕ್ಷೆಯನ್ನು ಕೊಡಬೇಕೆಂದು ಕೇಳಿಕೊಂಡರೆಂದೇ ಹೇಳಿದೆ. ಚೆನ್ನಬಸವೇಶ್ವರ ಪುರಾಣದಲ್ಲಿಯಾದರೋ, "ಪರಮಗೋಸಲ ಚೆನ್ನಬಸವೇಶ್ವರ ಹಸ್ತಸರಸಿರುಹದಿಂದಾ ನಿರಂಜನ ಗಣೇಶ್ವರಂ ಹರುಷದಿಂದೊಗೆದು" ಎಂದಿದೆ. ಇದು, "ಗುರುಕರುಜಾತರು ನಮ್ಮವರು, ಭವಮರಣವ ಗೆಲಿದರು ಎಮ್ಮವರು" ಎಂಬ ಘನಮಠದಾರ್ಯರ ಅನುಭವೋಕ್ತಿಗೆ ಅನುಗುಣವಾಗಿಯೇ ಇದೆ.

ಗುರು ಗೋಸಲ ಚೆನ್ನಬಸವೇಶ್ವರರೂ ಸಾಮಾನ್ಯರಲ್ಲ. ಶೂನ್ಯ ಸಿಂಹಾಸನಕ್ಕೆ ೧೮ನೆಯ ಅಧಿಪತಿಗಳಾಗಿದ್ದ ಇವರ ಕೃತಿಯೆಂದು ತಿಳಿದು ಬಂದಿದೆ. ಇಂದಿಗೂ ಗುಬ್ಬಿಯಲ್ಲಿರುವ ಇವರ ದೇವಾಲಯವು ಪವಿತ್ರ ಯಾತ್ರಾಸ್ಥಾನವಾಗಿದೆ. ಈಗಲೂ ಅಲ್ಲಿ ಪೂಜಾ ರಥೋತ್ಸವಗಳು ನಡೆಯುತ್ತಿವೆ. "ಈಗಲೂ ಆ ಗದ್ದುಗೆಗೆ ಆ ಸೀಮೆಯ ಶಿವಭಕ್ತರಾದ ಪ್ರಜೆಗಳಲ್ಲಿ ಮಕ್ಕಳಿಲ್ಲದವರು, ಗ್ರಹಪೀಡಿತರು, ರೋಗಿಗಳು" ನಡೆದುಕೊಂಡು ಇಷ್ಟಾರ್ಥಸಿದ್ಧಿಯನ್ನು ಪಡೆಯುತ್ತಿದ್ದಾರೆ.

ಇಂಥ ಪರಮಾರಾಧ್ಯರ ಪವಿತ್ರ ಕರಸಂಜಾತರಾದ ಶ್ರೀಮದನಾದಿ ಸಿದ್ಧಲಿಂಗೇಶ್ವರರು ಒಮ್ಮೆಗೆ ಎಂಟು ವರ್ಷದ ಶಿಶುಗಳಾಗಿಯೇ ಅವರ ಸನ್ನಿಧಿಗೆ ಬಂದುದು ಅಚ್ಚರಿಯೇನೂ ಅಲ್ಲ. ಆದರೆ ಸಿದ್ಧಲಿಂಗೇಶ್ವರನು ಹರಿದನಹಳ್ಳಿಯ ಉಪವನದಲ್ಲಿದ್ದ ಸರಸ್ತೀರದ ರತ್ನಮಂಟಪಕ್ಕಿಳಿದು ಧ್ಯಾನಸ್ಥನಾಗಿ ಕುಳಿತಿದ್ದನೆಂದೂ ಪುತ್ರಾಪೇಕ್ಷೇತರಾಗಿ ತಪಸ್ಸನ್ನು ಆಚರಿಸುತ್ತಲಿದ್ದ ಆ ಊರಿನ ಸತಿಪತಿಗಳಾದ ಮಲ್ಲಿಕಾರ್ಜುನ–ಜ್ಞಾನಾಂಗನೆಯರಿಗೆ ಪರಿಶಿವನು ಪ್ರತ್ಯಕ್ಷನಾಗಿ ಶಿಶುರೂಪದಲ್ಲಿದ್ದ ಸಿದ್ಧಲಿಂಗೇಶ್ವರನನ್ನೇ ಪುತ್ರನಾಗಿ ದಯಪಾಲಿಸಿದನೆಂದೂ ಪ್ರತ್ಯಕ್ಷನಾಗಿ ಶಿಶುರೂಪದಲ್ಲಿದ್ದ ಮಹಿಮೆಗಳನ್ನು ಮೆರೆದ ಈ ಕಾರಣಿಕ–ಶಿಶುವನ್ನು ಆ ಶರಣದಂಪತಿಗಳು ತಮ್ಮ ಹರಕೆಯಂತೆ ಗುರು ಗೋಸಲ ಚೆನ್ನಬಸವೇಶ್ವರರಿಗೆ ಒಪ್ಪಿಸಿದದರೆಂದೂ ಕಥಾಂತರವಿದೆ.

(ಶ್ರೀ ಗುರುದತ್ತ ವಿರಚಿತ ಎಡೆಯೂರು ಸಿದ್ಧಲಿಂಗೇಶ್ವರ ವಿಜಯ)

ಗುರು ಚೆನ್ನಬಸವೇಶ್ವರರಿಂದ ಸಿದ್ಧಲಿಂಗೇಶ್ವರನಿಗೆ ಶಿವದೀಕ್ಷೆ, ಶಿವಮಂತ್ರೋಪದೇಶಗಳಾದುವು. ಬಾಲಬ್ರಹ್ಮನಂತಿದ್ದ ಸಿದ್ಧಲಿಂಗೇಶ್ವರನು ಗುರುಸೇವೆಯಲ್ಲಿಯೂ ಘನಮಹಿಮೆಗಳನ್ನು ಮೆರೆದನು. ಎಲ್ಲರಂತೆ ಹೂಪತ್ರೆಗಳನ್ನೆತ್ತುತ್ತಿರಲಿಲ್ಲ. ನೀರು ತುಂಬುತ್ತಿರಲಿಲ್ಲ. ಮರಗಳಿಗೆ ಪುಷ್ಪಕರಂಡವನ್ನು ನೇತುಹಾಕಿ, ಬಿಂದಿಗೆಯನ್ನು ನೀರಮೇಲೆ ತೇಲಿಬಿಟ್ಟು ಲೀಲಾವಿನೋದದಲ್ಲಿರುತ್ತಿದ್ದನು. ಉಳಿದ ವಟುಗಳು

ಹೊತ್ತಾಯಿತೆಂದು ಎಚ್ಚರಿಸಿದಾಗ ತಾವಾಗಿಯೇ ತುಂಬಿದ ಕರಂಡ ತುಂಬಿದ ಬಿಂದಿಗೆಗಳು ಸಿದ್ಧಲಿಂಗೇಶ್ವರನ ಕೈಸೇರುತ್ತಿದ್ದುವು. ಇದಕ್ಕೆ ಕಾರಣ ಕೈಲಾಸದ ದ್ವಾರಪಾಲಕರಾದ ಚಂಡಿ ಪ್ರಚಂಡಿಗಳು ಶಾಪಗ್ರಸ್ಥರಾಗಿ ಶಾಪವಿಮೋಚನಾರ್ಥವಾಗಿ ಸಿದ್ಧಲಿಂಗೇಶ್ವರನ ಸೇವೆಯಲ್ಲಿದ್ದುದೇ ಎಂದು ಹೇಳಲಾಗಿದೆ.



**ತೋಂಟದ ಸಿದ್ಧಲಿಂಗೇಶ್ವರರು**

ಸಿದ್ಧಲಿಂಗೇಶ್ವರನು ಬಸವೇಶ್ವರ ಪೂಜೆಗೆ ಕುಳಿತನೆಂದರೆ ದೀಪಕ್ಕೆ ಎಣ್ಣೆ ಬೇಕಾಗುತ್ತಿರಲಿಲ್ಲ. ನೀರೇ ಎಣ್ಣೆಯಾಗಿ ಉರಿಯುವುದು. ಎಲ್ಲರಂತೆ ನೈವೇದ್ಯ ಹಿಂದಿರುಗಿ ಬರುತ್ತಿರಲಿಲ್ಲ. ಈ ಕಾರಣಿಕನು ತಂದ ನೈವೇದ್ಯವನ್ನು ಸಮರ್ಪಿಸಲು ಬಸವೇಶವರನ ಶಿಲಾಮೂರ್ತಿಯೇ ಬಾಯ್ದೆರೆದು ಸೇವಿಸುತ್ತಿದ್ದಿತು. ಇದನ್ನರಿತ ಗುರು ಗೋಸಲ ಚೆನ್ನಬಸವೇಶ್ವರರು ಇನ್ನು ಈ ಮಹಿಮರಿಂದ ಸೇವೆ ಸ್ವೀಕರಿಸುವುದು ಉಚಿತವಲ್ಲವೆಂದರಿತು ಸಿದ್ಧಲಿಂಗೇಶ್ವರನಿಗೇ ಪೀಠಾಧಿಕಾರ ಕೊಡ ಹೋದರು.

ಆದರೆ ಮುಂದೆ ಮಹಾಗುರುವಾಗಲಿದ್ದ ಸಿದ್ಧಲಿಂಗೇಶ್ವರನು ಆಗ ಮಹಾಶಿಷ್ಯನಂತೆ ನಡೆದುಕೊಂಡನು. ಗುರುಪಟ್ಟವನ್ನು ಗುರುವಿಗೇ ಬಿಟ್ಟು ತಾಯಿ ತಂದೆಗಳಿಗೆ ಸ್ಮರಿಸಿದಾಗ ಕಾಣಿಸಿಕೊಳ್ಳುವೆನೆಂದು ವಚನವಿತ್ತು ಲೋಕಸಂಚಾರಕ್ಕೆ ಹೊರಟುಬಿಟ್ಟನು.

"ಈಷಣತ್ರಯಕ್ಕತೀತನೆನಿಸಿ ಜನರ ಕ್ಲೇಶಪಂಚಕಗಳನ್ನು ದಹಿಸಲು, ರೋಷ ಪಾಶಗಳನ್ನು ಹಿಟ್ಟುಗುಟ್ಟಲು" ಸಿದ್ಧಲಿಂಗೇಶ್ವರರು ಲೋಕಸಂಚಾರಕ್ಕೆ ಹೊರಡಲು ಅವರೊಡನೆ ಏಳುನೂರು ಗಣವರರೂ ಹೊರಟರು–ರಾಕಾಸುಧಾಕರನನ್ನು ಬೆಂಬತ್ತಿ ಹೊರಟ ತಾರಕಾನಿವಹದಂತೆ. ಅವರಲ್ಲಿ ಘನಲಿಂಗದೇವರು, ಶಾಂತ ಮಲ್ಲಿಕಾರ್ಜುನ, ಬತ್ತಲೇಶ, ರಾಚವಟ್ಟಿದೇವರು, 'ಶಿವಪೂಜೆಯಾರ್ಯ ಅಥವಾ ಬೋಳಬಸವೇಶ್ವರ, ಸಿದ್ಧನಂಜೇಶ್ವರ, ಕಂಬಳಿಯದೇವರು, ಚೆನ್ನದೇವರು, ದೊಡ್ಡ ಸಿದ್ಧಲಿಂಗೇಶ್ವರ, ಕಂಬಳಿಯದೇವರು, ಚೆನ್ನದೇವರು, ದೊಡ್ಡ ಸಿದ್ಧಲಿಂಗೇಶ್ವರ, ಕಂಕಣದೇವರು, ಲಂಬಕರ್ಣದೇವರು, ಸಿದ್ಧಮಲ್ಲೇಶ್ವರ, ಗುಮ್ಮಳಾಪುರದ ವರದಸಿದ್ಧಲಿಂಗೇಶ್ವರ, ಎಡತೊರೆಯ ಪುರದ ಗುರುಸಿದ್ಧ ವೀರಣ್ಣೊಡೆಯರು ಶಿವಘನಲಿಂಗದೇವರು, ಚಿಕ್ಕಮಲ್ಲೇಶ್ವರರು, ಮರುಳ ಸಿದ್ದೇಶ್ವರ, ಚಂದ್ರಶೇಖರರು, ಶಿವಸುರಗಿಯಾರ್ಯ, ಬೆಡಗಿನ ಪರ್ವತೇಶ್ವರ, ಪಟ್ಟಣದ ದೇವರು, ಜಗುನಿಯ ಮರುಳುದೇವರು, ಸಪ್ಪೆಯಾರ್ಯ ಮಳೆಯ ದೇವರು, ಉಪ್ಪಿನಹಳ್ಳಿಯಾರ್ಯ, ಜೋಲಿಯಾ ಬಸವೇಶ್ವರ, ರಾಚವಟ್ಟಿಯ ಕೋರಿಯ ಸಿದ್ಧಬಸವೇಶ್ವರ, ಹಿರಣ್ಯಾರ್ಯ, ಶೀಲವಂತಾರ್ಯ, ಕೊಡಗಿಯ ಹಳ್ಳಿಯಾರ್ಯ, ಕಿತ್ತಾವರದ ಚೆನ್ನಮಲ್ಲೇಶ್ವರ, ಘಟ್ಟಿಸಿದ್ಧಯ್ಯ, ಚಿಟ್ಟಿಗ ಯತೀಶ್ವರ, ಕಟ್ಟೆಯಪುರದ ನಂಜದೇವ, ಹುಚ್ಚು ಪರ್ವತದೇವ, ದೊಡ್ಡಸಿದ್ದಯ್ಯ, ರೇವಣ ಸಿದ್ಧದೇವರು ಮೊದಲಾದವರು ಮುಖ್ಯರು.* ಇವರಲ್ಲಿ ಅನೇಕರು ಮಹಿಮಾಶಾಲಿಗಳು, ವಚನಕಾರರು, ಶರಣಕುಲದೀಪಕರು.

ಇವರಲ್ಲಿ ಕೆಲವರ ನಾಮನಿರ್ದೇಶವು ಎಡೆಯೂರಿನ ಸಿದ್ಧಲಿಂಗೇಶ್ವರ ದೇವಾಲಯದ ಪ್ರಾಕಾರದಲ್ಲಿ ಸು. ೧೫೦೦ ರಲ್ಲಿ ಬರೆದ ಶಿಲಾಶಾಸನದಲ್ಲಿ ಬಂದಿದೆ. ಅದರಲ್ಲಿ ತೋಂಟದ ಸಿದ್ಧಲಿಂಗೇಶ್ವರನ ಘನಮಹಿಮೆಯನ್ನು ವರ್ಣಿಸಲಾಗಿದೆ :

"ಇಂತಪ್ಪ ಅನಾದಿ ಜಂಗಮವೇ ಜಗದ್ಧಿತಾರ್ಥವಾಗಿ ಚರಿಸಿದ ಕ್ರಮವಂತೆಂದೆಡೆಜ್ಞಾನ ಕ್ರಿಯಾಸ್ವರೂಪನುಂ, ಸರ್ವಾಂಗಲಿಂಗಿ, ಷಟ್‌ಸ್ಥಲ ಜ್ಞಾನಿ, ಸರ್ವಾಚಾರಸಂಪನ್ನ, ಪಾದೋದಕ ಪ್ರಸಾದ ಪ್ರತಿಷ್ಠಾಚಾರ್ಯನುಂ,

---

* ಚೆನ್ನಬಸವ ಪುರಾಣ, ಸಿದ್ಧೇಶ್ವರ ಪುರಾಣ, ನಿರಂಜನವಂಶರತ್ನಾಕರ, ತೋಂಟದಾರ್ಯ ರಗಳೆಯ ಪ್ರಸ್ತಾವನೆಗಳಿಂದ ಶೇಖರಿಸಿದುದು.

ಅಷ್ಟಾವರಣಾಲಂಕಾರ, ದ್ವೈತಾದ್ವೈತತಿಮಿರಮಾರ್ತಂಡನುಂ, ಇಂತಪ್ಪ ದಿವ್ಯ ಶಿವಯೋಗಿ ಸಿದ್ಧಲಿಂಗೇಶ್ವರಂಗೆ ಸಮ್ಯಗ್ ಜ್ಞಾನೋದಯವಾಗಿ ಸಂಸಾರ ಹೇಯಮಂಮಾಡೆ ಶರಣುಹೊಕ್ಕ ಶಿಷ್ಯಜನಗಳ ನಾಮಪರಿಕ್ರಮಗಳೆಂತೆಂದಡೆ– ಸಪ್ಪೆದೇವರು, ಉಪ್ಪಿನಹಳ್ಳಿಯ ಸ್ವಾಮಿ ಸಿದ್ಧದೇವರು, ನಂಜೆದೇವರು, ಬೋಳ ಬಸವರಾಜದೇವರು, ಗುಮ್ಮಳಾಪುರದ ಸಿದ್ಧಲಿಂಗದೇವರು, ಪಟ್ಟಣದೇವರು, ರೇವಣಸಿದ್ಧದೇವರು, ಶೀಲವಂತದೇವರು, ಚಿಟ್ಟಿಗದೇವರು–ಇಂತ ಇವರು ಮುಖ್ಯವಾದ ಭಕ್ತಿಮಾಹೇಶ್ವರರ್ಗೆ ಷಟ್ಸ್ಥಲಜ್ಞಾನ ಲಿಂಗಾಂಗ ಸಂಬಂಧ ಸಮರಸೈಕಾರ್ಥಮಂ ಬೋಧಿಸಿ ಮುಕ್ತರಂ ಮಾಡಿ, ಷಟ್ಸ್ಥಲೈಕಾರ್ಥವಾಗಿ ಮಾಡುವ ಕ್ರಿಯೆಗಳೆಲ್ಲ ನಿಷ್ಪತ್ತಿಯಾಗಿ......"

ದಿವ್ಯಶಿವಯೋಗಿ ಸಿದ್ಧಲಿಂಗೇಶ್ವರರು ಷಟ್ಸ್ಥಲೈಕಾರ್ಥವಾಗಿಯೇ ಸರ್ವಕ್ರಿಯೆಗಳನ್ನು ಮಾಡಿದರು. ಆದುದರಿಂದ ಅವರು ಕೈಕೊಂಡಿದ್ದ ಲೋಕಸಂಚಾರವೂ ಷಟ್ಸ್ಥಲೈಕಾರ್ಥವಾಗಿಯೇ ಇದ್ದಿತು. ಅವರೊಡನೆ ಏಳ್ನೂರು ಗಣವರರೂ ಇದೇ "ಷಟ್ಸ್ಥಲಜ್ಞಾನ ಲಿಂಗಾಂಗ ಸಂಬಂಧ ಸಮರಸೈಕಾರ್ಥ"ವನ್ನೇ ಬೋಧಿಸಿ ಮೆರೆದರು.

ಅಲ್ಲಲ್ಲಿ ನಾನಾ ಪವಾಡಮಂ ಮೆರೆವುತಿರ
ಲ್ಲಲ್ಲಲ್ಲಿ ಗಣನಾಥರುದಿಸಿ ಚರರೂಪಿನಿಂ
ದಲ್ಲಲ್ಲಿ ಪೂಜೆಗೊಳುತ್ತೈದಿ ತೋಂಟದ ಯತಿಯ ಸಾರಲತಿಪ್ರೀತಿಯಿಂದೆ
ಮೆಲ್ಲಮೆಲ್ಲನೆ ತೋಂಟದಾರ್ಯರಾ ವಿರತರೊಳ್
ಬಲ್ಲ ಬಲ್ಲರೊಳು ತತ್ತ್ವಾನುಭಾವಂಗಳಿಂ
ಸೊಲ್ಲು ಸೊಲ್ಲಿಗೆ ಪರಮ ಷಟ್ಸ್ಥಲವನುಸಿರ್ವರ್...॥

(ಚ.ಬ.ಪು. ೬೩–೬೪)೬೩–೬೪

ಮಹಾಶಿವಯೋಗಿ ಸಿದ್ಧಲಿಂಗೇಶ್ವರರ ಲೋಕಸಂಚಾರವು ಅವರ ದಿಗ್ವಿಜಯವಾಗಿಯೇ ಪರಿಣಮಿಸಿತು. ಸಂಚಾರದಲ್ಲಿ "ಜೋತಿನಾಥರು, ಸಿದ್ಧರು, ವೈಷ್ಣವ, ಬೌದ್ಧ, ಚಾರ್ವಾಕ, ಕಾಳಾಮುಖ ಮುಂತಾದವರು ಶಾಸ್ತ್ರಮುಖದಿಂ ಮಹತ್ವದಿಂದ ಗೆಲಿದು, ಅವರಿಗೆ ಶಿವಭಕ್ತಿಯನ್ನುಂಟುಮಾಡುತ್ತ, ಕೆಲವು ಜನರಿಗೆ ಲಿಂಗಧಾರಣವಂ ಮಾಡಿಸಿ ವೀರಶೈವವಂ ಉದ್ಧರಿಸುತ್ತ, ಸತ್ತವರಿಗೆ ಪ್ರಾಣವಂ ಕೊಡುತ್ತ, ಬಂಜೆಯರಿಗೆ ಮಕ್ಕಳ ಫಲವಂ ಕೊಡುತ್ತ, ಕುಷ್ಠರೋಗ ಮುಂತಾದ ಅನೇಕ ವ್ಯಾಧಿ ಪೀಡಿತರು, ಬ್ರಹ್ಮರಾಕ್ಷಸ, ಪಿಶಾಚ, ಭೂತ, ಪ್ರೇತ ಮುಂತಾದ ಪೀಡಿತರು ಬಂದು ಶರಣಾಗತರಾದಲ್ಲಿ ಅವುಗಳನ್ನು ದೂರಮಾಡುತ್ತ ಶರಣಗಣರಿಗೆ

ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ಮೋಕ್ಷಮಾರ್ಗವನೀವುತ್ತ ಸಕಲದೇಶಂಗಳ ಸಂಚರಿಸಿದರು."* ಅವರು ಆಗ ಮೆರೆದ ಪವಾಡಗಳಲ್ಲಿ ಪ್ರಮುಖವಾದುವು ಇವು:

ದಾರಿಯಲ್ಲಿ ಒಮ್ಮೆ ಬೆಟ್ಟದಾವರೆಯ ಮರ ತಲೆಬಾಗಿ ಸಿದ್ಧಲಿಂಗೇಶ್ವರರ ಶಿಷ್ಯರಿಗೆ ಹೂ ನೀಡಿತು. ಅದರ ತುದಿಗೊಂಬೆಯಲ್ಲಿ ಗೂಡುಕಟ್ಟಿಕೊಂಡಿದ್ದ ಜೇಡ ದಂಪತಿಗಳ ಶಾಪವಿಮೋಚನವಾಗಿ ಮುನ್ನಿನ ಗಂಧರ್ವ ಜನ್ಮವನ್ನು ಪಡೆದರು. ಕಂಚಿ, ಕಾಳಹಸ್ತಿ, ಚಿದಂಬರ ಮೊದಲಾದ ಕ್ಷೇತ್ರಗಳಿಗೆ ಮೊದಲು ಚಿತ್ತೈಸಿ ಸಿದ್ಧಲಿಂಗೇಶ್ವರರು ಅರುಣಾಚಲ ದೇವಾಲಯಕ್ಕೆ ದಯಮಾಡಿಸಿದರು. ಅಲ್ಲಿ ಅರ್ಧರಾತ್ರಿಯವರೆಗೂ ಅರುಣಾಚಲೇಶ್ವರನನ್ನು ಅನನ್ಯ ಭಕ್ತಿಯಿಂದ ಪೂಜಿಸಿದರು. ಅರುಣಾಚಲೇಶ್ವರನು ತನ್ನ ಪಂಚತಾವಡವೆಂಬ ಅಮೂಲ್ಯ ರತ್ನಾಭರಣವನ್ನು ಸಿದ್ಧಲಿಂಗೇಶ್ವರರ ಕೊರಳಿಗೆ ಹಾಕಿದನು. ಅರ್ಚಕರು ರಾಜನಿಗೆ ದೂರು ಹೇಳಲು ರಾಜನೆದುರಿಗೆ ಸಿದ್ಧಲಿಂಗೇಶ್ವರರು ಪಂಚತಾವಡವನ್ನು ಮತ್ತೆ ಅರುಣಾಚಲೇಶ್ವರನ ಕೊರಳಿಗೆ ಹಾಕಿದರು. ಆದರೆ ಅದು ಮತ್ತೆ ಬಂದು ಸಿದ್ಧಲಿಂಗೇಶ್ವರರ ಕೊರಳನ್ನು ಅಲಂಕರಿಸಿತು. ರಾಜನೂ ಅರ್ಚಕರು ಸಿದ್ಧಲಿಂಗೇಶ್ವರನಿಗೆ ಶರಣಾಗತರಾದರು.+

ಅಲ್ಲಿಂದ ಸಿದ್ಧಲಿಂಗೇಶ್ವರರು ಗೋದಾವರಿ ತೀರಕ್ಕೆ ದಯಮಾಡಿಸಿದರು– 'ಕಾವೇರಿಯಡಿಯ ಗೋದಾವರಿಯ ಮುಡಿಯ' ಕರ್ನಾಟಕದ ಶಿರೋಭಾಗದಲ್ಲಿ ಶೋಭಿಸುವವರಿವರು–ಎಂಬುದನ್ನು ಪ್ರತ್ಯಕ್ಷಪಡಿಸುವಂತೆ. ಅಲ್ಲಿ ದ್ವಜರಿಗೆ ಪ್ರಸಾದಮಹತ್ವವನ್ನು ಪ್ರತ್ಯಕ್ಷ ತ್ರಿಯಂಬಕೇಶ್ವರನಿಂದ ಹೇಳಿಸಿದರು. "ತ್ರಿಯಂ ಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ ಉರ್‍ವಾರುಕಮಿವ ಬಂಧನಾತ್ ಮೃತ್ಯೋರ್ ಮುಕ್ಷೀಯಮಾವೃತರ್ಮ" ಎಂದು ತ್ರಿಯಂಬಕೇಶ್ವರವನ್ನವರು ಪ್ರಾರ್ಥಿಸಿದಾಗ ಗೋದಾವರಿಯ ಅಲೆಗಳೆಲ್ಲ ಅದಕ್ಕೆ ಮಾರ್ದನಿಗೊಟ್ಟು ನಲವಿನಿಂದ ನರ್ತಿಸಿರಬೇಕು. ಇಲ್ಲಿಯೇ ಹತನಾದ ತುರುಷ್ಕರಾಜನಿಗೆ ಪ್ರಾಣದಾನವೂ ನಡೆಯಿತು.

ಅಲ್ಲಿಂದ ಮುಂದೆ ಮಹಾಬಲೇಶ್ವರನ ದರ್ಶನ. ಸಹ್ಯಾದ್ರಿಯಲ್ಲಿ ಮಹಾಬಲೇಶ್ವರಲಿಂಗದ ಮೇಲ್ಭಾಗದಲ್ಲಿ ಹುಟ್ಟಿ ಹರಿದು ಬರುತ್ತಿದ್ದ ಕೃಷ್ಣವೇಣಿ ಎಂಬ ನದಿಯನ್ನು ಕಂಡು, ಲಿಂಗದ ಮೇಲ್ಭಾಗಕ್ಕೆ ಹತ್ತಿ ತಮ್ಮ ಪಾದಗಳನ್ನು ತೊಳೆದು ತಮ್ಮ ಪಾದೋದಕದಿಂದಲೇ ಮಹಾಬಲೇಶ್ವರನಿಗೆ ಅಭಿಷೇಕ ಮಾಡುತ್ತಿದ್ದರು. ಅದನ್ನು ಅರ್ಚಕರು ಕಂಡು ರೇಗಲು ಸಿದ್ಧಲಿಂಗೇಶ್ವರರು ನಗುತ್ತ ಹೊರಗೆ ಬಂದು

---

* ನಿರಂಜನ ವಂಶರತ್ನಾಕರ

\+ ಸಿದ್ಧೇಶ್ವರ ಪುರಾಣದಲ್ಲಿ ಕಥೆ ಕೊಂಚ ಬೇರೆಯಾಗಿದೆ.

ಮರದ ಕೆಳಗೆ ಕುಳಿತರು. ಆಗ ಲಿಂಗದ ಉತ್ತಮಾಂಗದಿಂದ ಬರುತ್ತಿದ್ದ ಗಂಗೆಯು ಬತ್ತಿ ಹೋಯಿತು. ಸಿದ್ಧಲಿಂಗೇಶ್ವರರ ಅನಾಚಾರದಿಂದಲೇ ಹೀಗಾಯಿತೆಂದು ಭ್ರಮಿಸಿದ ಅರ್ಚಕರು ಅದರ ನಿವಾರಣೆಗೆ ಶಾಂತಿ ಕರ್ಮಗಳನ್ನೂ ಹೋಮ ಹವನಾದಿಗಳನ್ನೂ ಮಾಡಿಸಿದರು. ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ, ಅವರು ವ್ಯರ್ಥ ಬಳಲುತ್ತಿರುವುದನ್ನು ಕಂಡು ಮಹಾಬಲೇಶ್ವರನು "ವಿಪ್ರರೆ ಸಿದ್ಧಲಿಂಗೇಶ್ವರನನ್ನು ನೋಯಿಸಿ ನನಗೆ ಪೂಜಿಸಿದಲ್ಲಿ ಫಲವೇನು? ಆತನು ಅಗಣಿತಮಹಿಮನು. ಆತನನ್ನು ಕರೆತಂದು ನನ್ನ ತಲೆಯಮೇಲೆ ನಿಲ್ಲಿಸಿರಿ" ಎಂದು ಹೇಳಿದನು. ವಿಪ್ರರು ಅದರಂತೆ ಮಾಡಲು ಮತ್ತೆ ಗಂಗಾಧಾರೆ ಹೊರಟಿತು.

ಮುಂದೆ ಓಜೇಶ್ವರದಲ್ಲಿ ಉತ್ತುಂಗಯೋಗಿ ಮೊದಲಾದ ಭೈರವೋಪಾಸಕರ ಗರ್ವಹರಣಮಾಡಿ, ಉಳುವೆಯ ಮಹಾಮನೆಗೆ ಹೋಗಿ ಶರಣರು ಮುಕ್ತರಾದ ಅವಿಮುಕ್ತ ಕ್ಷೇತ್ರಗಳನ್ನು ಸಂದರ್ಶಿಸಿ, ಜನಾರ್ದನ ಜೀವನೆಂಬವನ ಮದಮರ್ದಿಸಿ, ತುಳುವ ದೇಶಕ್ಕೆ ಹೋಗಿ ಕಾರ್ಕಳದಲ್ಲಿ ಜೈನರಿಗೆ ಸನ್ಮತಿಯನಿತ್ತು, ವಾಯುಪೂಜಾ ನಗಪರ್ವತದಲ್ಲಿ ಶೀತಾಳ ಮಲ್ಲೇಶನಿಂದ ಸತ್ಕರಿತರಾಗಿ 'ಸೂರಿಜನ ಹರ್ಷವಿಸ್ತಾರಿ, ಬರನೆರ್ದೆಗಂ ಕಠಾರಿ' ಕಾವೇರಿಗೆ ಬಂದರು. ಅಲ್ಲಿ ಆನಂದದಿಂದ ಲಿಂಗಾರ್ಚನೆಗೈದು ಮುಂದುವರಿಯುತ್ತಲಿರುವಾಗ ಅವರಿಗಾಗಿ ಎಡೆ ಹೊತ್ತು ಹೊರಟ್ಟಿದ್ದ ವನಿತೆಯೊಬ್ಬಳನ್ನು ಮದ್ದಾನೆಯೊಂದು ಹಿಂದಿನಿಂದ ಬಂದು ಸೊಂಡಲಿನಿಂದ ಸುತ್ತಿ ಮೇಲೆತ್ತಿತು. ಆಕೆಯು 'ಸಿದ್ಧಲಿಂಗಾ ಸಲಹು' ಎಂದು ಮೊರೆಯಿಡಲು ಆ ಮದ್ದಾನೆಯು ಆಕೆಗಿನಿಸೂ ನೋವಾಗದಂತೆ ಆಕೆಯನ್ನು ತಂದು ಸಿದ್ಧಲಿಂಗೇಶ್ವರನ ಸನ್ನಿಧಿಯಲ್ಲಿಳಿಸಿ ತಾನು ನಮಸ್ಕರಿಸಿ ಸಿದ್ಧಲಿಂಗೇಶ್ವರನನ್ನು ಸೊಂಡಿಲಿನಿಂದೆತ್ತ ತನ್ನ ಬೆನ್ನಿನಮೇಲೆ ಕುಳ್ಳಿರಿಸಿಕೊಂಡು ಹೊರಟಿತು. ಶರಣರೆಲ್ಲ ಹಿಂಬಾಲಿಸಿದರು. ಮದ್ದಾನೆಯು ತುಂಬಿ ಹರಿಯುವ ಕಾವೇರೀ ನದಿಯನ್ನೇ ಪ್ರವೇಶಿಸಿಬಿಟ್ಟಿತು. ಕಾವೇರಿಯು ಇಬ್ಭಾಗವಾಗಿ ದಾರಿ ಬಿಟ್ಟಿತು. ಎಲ್ಲರೂ ನದಿ ದಾಟಿದರು. ಮೇಲಿನಿಂದ ತುಂಬೆಯ ಹೂಗಳ ಮಳೆ ಸುರಿಯಿತು. ಆ ಭಕ್ತೆಯು ತಂದಿದ್ದ ಬುತ್ತಿಯೇ ಎಲ್ಲ ಶರಣರಿಗೂ ಸಂತೃಪ್ತಿಯನ್ನುಂಟುಮಾಡಿತು–ಸಿದ್ಧಲಿಂಗೇಶ್ವರನ ಮಹಿಮೆಯಿಂದ. ಮುಂದೆ ಹೊರಟಿರಲು ಎಂಟು ದಿನಗಳಿಂದ ದಂಟು ಕಚ್ಚದೆ ನಿಂತಿದ್ದ ಗೂಳಿಯೊಂದು ಕಣ್ಣಿಗೆ ಬಿದ್ದಿತು. ಅದಕ್ಕೆ ಒಕ್ಕಲಿಗನೊಬ್ಬನು ತನ್ನ ಹೊಲದ ಬೆಳೆಯನ್ನು ತಿಂದ ತಪ್ಪಿಗಾಗಿ ಸಿದ್ಧಲಿಂಗೇಶ್ವರನ ಆಣೆಯನ್ನಿಟ್ಟಿದ್ದ ಗೂಳಿ, ಮದ್ದಾನೆ, ನದಿ, ಶಿಲೆ–ಯಾವುದಾದರೇನು–ಸಿದ್ಧಲಿಂಗೇಶ್ವರನ ಹೆಸರೆತ್ತಿದರೆ ಸಾಕು, ತಲೆಬಾಗುತ್ತಿದ್ದುವೆಂದ–ಮೇಲೆ ಆ ಮಹಾಮಹಿಮನ ಶಕ್ತಿಯನ್ನಾರು ಬಣ್ಣಿಸಬಲ್ಲರು?

ತನ್ನ ಆಣೆಗೆ ತಲೆಬಾಗಿ ಹುಲ್ಲು ಕಚ್ಚದೆ ನಿಂತಿದ್ದ ಗೂಳಿಯನ್ನು ಕಂಡು ಸಿದ್ಧಲಿಂಗೇಶ್ವರನ ಅಪಾರ ಕರುಣೆಯು ಉಕ್ಕಿ ಬಂದಿತು. ಪ್ರೀತಿಯಿಂದದರ ಮೈದಡವಿ "ಅಣೆ ಬಿಟ್ಟಿತು ನಂದೀಶ್ವರಾ, ಮೇವು ಸೇವಿಸುವವನಾಗು" ಎಂದು ಅಭಯವಿತ್ತರು. ಕೂಡಲೆ ಗೂಳಿಯು ದೇವರಿಗೆ ಬಾಗಿ ಮೇವು ತಿನ್ನಲು ಪ್ರಾರಂಭಿಸಿತು. ಮುಂದೆ ಶ್ರೀಶೈಲದಾಚೆಯ ಕುಂತಳ ದೇಶದ ರಾಜ್ಯದ ರಾಜವಂಶದಲ್ಲಿ ಪೂರ್ವಜನ್ಮದ ಕರ್ಮದಿಂದ ಕುರುಡಿಯಾಗಿ, ಕುಷ್ಟರೋಗಿಯಾಗಿ ಹುಟ್ಟಿದ್ದ ಸುಶೀಲೆಗೆ ಭಸ್ಮವಿತ್ತು ಕುಷ್ಟ ಕಳೆದು, ಕಣ್ಣು ಕೊಟ್ಟು ರಾಮೇಶ್ವರಕ್ಕೆ ಬಂದರು. ಅಲ್ಲಿ ತನ್ನ ಭಕ್ತರಿಗೆ ರಾಮಲಿಂಗ, ಹನುಮಲಿಂಗಗಳ ಪೂರ್ವವಿಚಾರವನ್ನು ತಿಳಿಸಿ, ಮಲೆಯಾಳಕ್ಕೆ ಹೋಗಿ ಅಲ್ಲಿಯ ರಾಜನಿಗೂ ಪ್ರಜೆಗಳಿಗೂ ಸನ್ಮಾರ್ಗ ತೋರಿ ಶಿವಮಂತ್ರೋಪದೇಶ ಮಾಡಿ, ಸ್ತ್ರೀರಾಜ್ಯಕ್ಕೆ ಹೋಗಿ ಅಲ್ಲಿಯ ಕಾಮಿನಿಯರಿಗೆ ಶಿವಭಕ್ತಿ ಮಾರ್ಗವನ್ನು ತೋರಿಸಿ ಕೊಡಗು, ಕೊಂಕಣಗಳ ಕ್ಷೇತ್ರಗಳನ್ನೂ ಉಡುಪಿಯ ಕೃಷ್ಣ, ಶಂಕರನಾರಾಯಣ, ಕೊಲ್ಲೂರು ಮೂಕಾಂಬಿಕಾ ಇತ್ಯಾದಿ ಕ್ಷೇತ್ರಗಳನ್ನೂ ಸಂದರ್ಶಿಸಿ ಪ್ರಜಾಪೀಡಕನಾಗಿದ್ದ ಇರುಲನೆಂಬ ವ್ಯಾಧನನ್ನು ಸನ್ಮಾರ್ಗಕ್ಕೆ ಹಚ್ಚಿ ಪರಶುರಾಮ ಕ್ಷೇತ್ರಕ್ಕೆ ಬಂದರು.

ಪರಶುರಾಮಕ್ಷೇತ್ರದಲ್ಲಿ ಒಬ್ಬ ಶಿವಭಕ್ತನ ಶಿವಸರ್ವೋತ್ತಮತ್ವ ಪ್ರತಿಪಾದನೆಯಿಂದ ರೇಗಿದ ಚಾರ್ವಾಕರು ಅವನ ಮನೆಗೆ ಬೆಂಕಿ ಹಚ್ಚಿದರು. ಅವನ ಮನೆಯೇನೋ ಸುಟ್ಟು ಬೂದಿಯಾಯಿತು. ಆದರೆ ಆ ಶಿವಭಕ್ತನು ಮಾತ್ರ ಸಿದ್ಧಲಿಂಗೇಶ್ವರನ ಕರುಣೆಯಿಂದ ಕೂದಲು ಸಹ ಕೊಂಕಾಗದೆ ತನ್ನ ಶಿವಗ್ರಂಥಗಳೊಡನೆ ಉಳಿದುಕೊಂಡಿದ್ದನು. ಅತ್ತ ಚಾರ್ವಾಕರಿಟ್ಟ ಬೆಂಕಿಯು ಅವರ ಮನೆಗಳಿಗೆ ತಗುಲಿ ಧಗಧಗಿಸಿಉರಿಯತೊಡಗಿತು. ಶರಣಾಗತರಾದ ಚಾರ್ವಾಕರಿಗೆ ಸಿದ್ಧಲಿಂಗೇಶ್ವರನು ಆಶೀರ್ವಾದಿಸಿ ಭಸ್ಮಗಳನ್ನು ದಯಾಪಾಲಿಸಿದನು. ಅವುಗಳನ್ನವರು ಪೂಜಿಸಲು ಲಿಂಗಾಗಳಾದವು; ಅವರು ಶಿವಭಕ್ತರಾದರು.

ಸಿದ್ಧಲಿಂಗೇಶ್ವರರು ಅಲ್ಲಿಂದ ಉತ್ತರಾಭಿಮುಖವಾಗಿ ಹೊರಟರು. ದಾರಿಯಲ್ಲಿ ಒಬ್ಬ ಬಂಜೆಗೆ ಪಾದೋದಕ ನೀಡಿ ಪುತ್ರನನ್ನಿತ್ತರು. ಅದಕ್ಕೆ ಅಪಹಾಸ್ಯ ಮಾಡಿದ ಕ್ಷುದ್ರನ ಬಾಯಲ್ಲಿ ಹುಳುಗಳು ಸುರಿಯಲು ಮೊರೆಹೊಕ್ಕ ಅವನಿಗೂ ಪಾದತೀರ್ಥವಿತ್ತು ರಕ್ಷಿಸಿದರು. ಮುಂದೆ ಮ್ಲೇಚ್ಛರ ರಾಜ್ಯದಲ್ಲಿ ಶೂಲಗಳನ್ನು ಚಿಗುರಿಸಿ ಮ್ಲೇಚ್ಛರಾಜನಿಗೆ ಕರುಣಿಸಿ ಜಗಜ್ಜನನಿಜಾಹ್ನವಿಯಿಂದ ಭಿಕ್ಷೆ ಪಡೆದು ಕಾಶಿಯಲ್ಲಿ ಹರಿಶ್ಚಂದ್ರರಾಯನ ಸ್ಥಾನವನ್ನು ಕಂಡು ಹಿಮವತ್ಪರ್ವತ ಪ್ರದೇಶಕ್ಕೆ ಬಂದರು.

ಅಲ್ಲಿ ಶರಣರಿಗೆ ಕೇದಾರೇಶ್ವರಾವತಾರ, ಗೌರೀ ಜನನ, ದಕ್ಷಯಾಗ ಧ್ವಂಸ ಇತ್ಯಾದಿಗಳನ್ನು ವಿವರಿಸಿದರು. ಆಗ ಎಲ್ಲರೂ ಕೇಳುವಂತೆ ಒಂದು ಕರುಣ ಕ್ರಂದನ ಕೇಳಿಬಂದಿತು. ಅದು ಇನ್ನೂರು ಗಾವುದಗಳಾಚೆಯ ಒಬ್ಬ ಗೊಲ್ಲನ ಧ್ವನಿ. ಹುಲಿಯ ಬಾಯಿಗೆ ಸಿಕ್ಕ ತನ್ನ ಗೋವನ್ನು ರಕ್ಷಿಸಲು ಅವನು ಕೂಗಿ ಕೊಂಡಿದ್ದ. ಸಿದ್ಧೇಶ್ವರಲ್ಲಿಗೆ ನಿಮಿಷಾರ್ಧದಲ್ಲಿ ಮುಟ್ಟಿ ಗೊಲ್ಲನ ಗೋವು ರಕ್ಷಿಸಿದರು.

ಆ ಗೊಲ್ಲನು ತನ್ನ ದೊಡ್ಡಿಯಲ್ಲಿ ಒಂದು ಕರಿಯ ಕಲ್ಲನ್ನು ಪ್ರಾಣಲಿಂಗವೆಂದು ಪರಿಭಾವಿಸಿ ಪೂಜಿಸುತ್ತಿದ್ದನು. ಹಗಲಿರುಳು ಆ ಕರುಗಲ್ಲೇಶನ ಧ್ಯಾನದಲ್ಲಿಯೇ ಕಾಲಕಳೆಯುತ್ತಿದ್ದನು. ನಿತ್ಯ ಗೋವುಗಳು ಮನೆಗೆ ಬಂದಲ್ಲದೆ, ಕರುಗಲ್ಲೇಶನನ್ನು ಪೂಜಿಸಿದಲ್ಲದೆ ಅನ್ನಪಾನಗಳನನ್ನು ಸೇವಿಸುತ್ತಿರಲಿಲ್ಲ. ಹೀಗಿರುತ್ತಿರಲು ಒಂದು ದಿನ ಅವನ ಎಳಗುಂದಿ ಗೋವೊಂದು ದಾರಿ ತಪ್ಪಿಸಿಕೊಂಡು ದೊಡ್ಡಿಗೆ ಬರದೆಹೋಯಿತು. ಗೊಲ್ಲನು ಅದು ಬರುವವರೆಗೆ ಅನ್ನ ನೀರು ಮುಟ್ಟುವುದಿಲ್ಲವೆಂದು ಶಪಥ ಮಾಡಿ ಹುಡುಕಲು ಹೊರಟನು. ಎಂಟು ದಿನಗಳವರೆಗೆ ಉಪವಾಸದಿಂದಿದ್ದು ಅಲೆದಾಡಿ ಮೂರ್ಛೆ ಬಂದು ಬಿದ್ದುಬಿಟ್ಟನು. ಆಗ ಶಿವನು ಬಾಲಕನ ರೂಪಿನಲ್ಲಿ ಬಂದು ಗೊಲ್ಲನನ್ನು ದೊಡ್ಡಿಗೆ ಕರೆತಂದು ಅವನ ಭಕ್ತಿಗೆ ಮೆಚ್ಚಿ ವರವ ಬೇಡೆಂದನು. ಗೊಲ್ಲನು 'ನನ್ನ ಗೋವುಗಳನ್ನು ಕಾಯ್ದುಕೊಂಡಿರು' ಎಂದು ಕೇಳಿಕೊಂಡನು. ಆಗಲೆಂದು ಶಿವನು ಅಂತರ್ಧಾನನಾದನು. ಸಿದ್ಧಲಿಂಗೇಶರು ಹುಲಿಯಿಂದ ಗೋವನ್ನು ರಕ್ಷಿಸುವ ನೆಪದಿಂದ ಗೊಲ್ಲನಲ್ಲಿಗೆ ಹೋಗಿ ಹನ್ನೆರಡು ವರುಷ ಅವನ ಗೋವುಗಳನ್ನು ಕಾಯ್ದು ಅವನ ಇಷ್ಟಾರ್ಥವನ್ನು ಸಲ್ಲಿಸಿ ಮತ್ತೆ ತಮ್ಮ ಶರಣರ ಬಳಗವನ್ನು ಕೂಡಿಕೊಂಡರು. ವಿದ್ಯಾನಗರದಲ್ಲಿ ಸೋಮವಾರ ಬಸವಮ್ಮನೆಂಬ ಶರಣೆಯ ಸತ್ಕಾರವನ್ನು ಸ್ವೀಕರಿಸಿ ಅಲ್ಲಿ ಗಂಗೆಗಿಂತ ಜಂಗಮ ಪಾದೋದಕವೆ ಶ್ರೇಷ್ಠವಾದುವೆಂಬುದನ್ನು ಸಿದ್ಧಪಡಿಸಿದರು.

ಅಲ್ಲಿಂದ ಆಂಧ್ರ ದೇಶಕ್ಕೆ ಹೋಗಿ ನೀರ್ಗಂಟಿಯೊಬ್ಬನಿಗೆ ಅನುಗ್ರಹಿಸಿ ಪಂಪಾ ವಿರೂಪಾಕ್ಷನ ದರ್ಶನ ಹೊಂದಿ, ವಿರೂಪಾಕ್ಷನೆಂಬ ಜಂಗಮನಿಗೆ ಉಪದೇಶವಿತ್ತು, ಮಳೆಗರೆದು ಅಲ್ಲಿಯ ಕ್ಷಾಮವನ್ನು ಪರಿಹರಿಸಿ, ಕಣಿಯ ಕಲ್ಲೂರ ಭೂಪನ ಅಹಾಂಕಾರನಿರಸನಮಾಡಿ ಗೂಳೂರು ಮಠಕ್ಕೆ ಬಂದರು. ಆಗ ಅವರ ಗುಂಪಿನವರಲ್ಲಿ ಒಬ್ಬನು, 'ನಮ್ಮ ಸಿದ್ಧಲಿಂಗೇಶ್ವರಗೆ ಸರಿಯಾದ ಜಂಗಮರು ಇನ್ನೊಬ್ಬರಿಲ್ಲ ಎಂದು ಸಾರಿದನು. ಆಗ ಅವನ ಬಾಯಿಯೇ ಬಿದ್ದುಹೋಯಿತು. ಸಿದ್ಧಲಿಂಗೇಶ್ವರರು ಅವನಿಗೆ "ಶಿವಭಕ್ತರೆಲ್ಲರೂ ಒಂದೇ, ಅದರಲ್ಲಿ ಹಿರಿದು ಕಿರಿದನ್ನೆಣಿಸಬಾರ"ದೆಂದು ಬುದ್ಧಿ ಹೇಳಿ ಬಾಯಿ ಕೊಟ್ಟರು. ಮುಂದೆ ಕೇತ್ಸಮುದ್ರವೆಂಬ ಗ್ರಾಮದ ಹತ್ತಿರದ ಅರೆಕಲ್ಲು ಬಂಡೆಯಲ್ಲಿ ಪಾದಸ್ಪರ್ಶದಿಂದ ಗಂಗೆಯನ್ನು ಬರಿಸಿ

ದ್ರಾವಿಡ ದೇಶದಿಂದ ಬಂದ ವೀರಣ್ಣಾರ್ಯನಿಗಿದ್ದ ವಿಷವ್ಯಾಧಿಯನ್ನು ಈ ಸಿದ್ಧಗಂಗೆಯಲ್ಲಿ ಸ್ನಾನ ಮಾಡಿಸಿ ಕಳೆದು ಅವನಿಗೆ ಕನ್ನಡ ಭಾಷೆಯ ಜ್ಞಾನವನ್ನು ದಯಪಾಲಿಸಿದರು.

ಮುಂದೆ ಕನ್ನಡ ನಾಡಿನಲ್ಲಿ ಸಂಚರಿಸತೊಡಗಿದರು. ಹೋದ ಹೋದಲ್ಲೆಲ್ಲ ಮಠಗಳ ಸ್ಥಾಪನೆ, ವಿರಕ್ತರ ನಿಯಾಮಕ, ಭಕ್ತಿಯಿಂದ ಕರೆದವರಿಗೆ ಕೂಡಲೇ 'ಓ' ಎಂದು ಅವರವರ ಕೋರಿಕೆಗಳನ್ನು ಪೂರೈಸುವುದು, ನೆನೆದವರಿಗೆ ಅವರೆಲ್ಲಿಯೇ ಇರಲಿ ಪ್ರತ್ಯಕ್ಷರಾಗಿ ಪರಮಾನುಭವವನ್ನು ಬೀರುವುದು, ಕಸವನ್ನು ಕಂಡವರವನ್ನಾಗಿ ಮಾಡುವುದು.....ಇದು ಅವರ ನಿತ್ಯಕಾಯಕ.

ಕನ್ನಡ ನಾಡಿನ ಯಾತ್ರೆ ಕಲ್ಯಾಣಕ್ಕೆ ಹೋಗದೆ ಮುಗಿವುದೆಂತು? ಅದು ಕನ್ನಡಿಗರ ಕಾಶಿಯಲ್ಲವೆ? ನಿಂತಿದ್ದಂತೆಯೇ ಸಿದ್ಧಲಿಂಗೇಶ್ವರರು ಕಲ್ಯಾಣದ ಬಸವೇಶ್ವರ ದೇವಾಲಯದಲ್ಲಿ ಬಂದಿಳಿದರು. ಕಲ್ಯಾಣ ನಿವಾಸಿಗಳಿಗೆ ಸಂಭ್ರಮವೇ ಸಂಭ್ರಮ ಹಿಂದೆ ಪ್ರಭುದೇವರು ಬಂದಾಗ ಎಂಥ ಸಂಭ್ರಮ ಜರುಗಿದ್ದಿತೋ ಅಷ್ಟೇ ಸಂಭ್ರಮ ಅಲ್ಲಿಗೆ ಅಲ್ಲಮನ ಅಪರಾವತಾರಿ ಸಿದ್ಧಲಿಂಗೇಶ್ವರರು ಬಂದಾಗ ಜರುಗಿತು. ದೊಡ್ಡ ಉತ್ಸವವಾಯಿತು. ನಿತ್ಯ ವೃಷಭಾಲಯದಲ್ಲಿ ಪೂಜೆ ನಡೆಯಿತು. ಒಂದು ದಿನ ಒಬ್ಬ ಕನ್ಯೆ ಬಂಗಾರದ ಬಟ್ಟಲಿನಲ್ಲಿ ಹಾಲು ತುಪ್ಪವನ್ನು ತಂದು ದೇವಾಲಯದ ಕಲ್ಲು ನಂದಿಯ ಮುಂದಿರಿಸಿದಳು. ಸಿದ್ಧಲಿಂಗೇಶ್ವರನ ಅಪೇಕ್ಷೆಯಂತೆ ಆ ಶಿಲಾವೃಷಭನು ನಿಜರೂಪಧಾರಣೆ ಮಾಡಿ ಆ ಹಾಲು ತುಪ್ಪ ಸವಿದನು; ಆ ಬಟ್ಟಲನ್ನು ಕಂಠದಲ್ಲಿರಿಸಿಕೊಂಡನು. ಕಲ್ಯಾಣಕ್ಕೆ ಕಲ್ಯಾಣವೇ ಕುಣಿದಾಡಿತು.

ತುಮಕೂರಿನಲ್ಲಿ ತುಂಬೆಯ ಹೂವಿನ ಮಳೆಗರೆದು, ದೇವರಾಯನದುರ್ಗ, ಚನ್ನರಾಯಪಟ್ಟಣ, ಗೂಳೂರು ಮೊದಲಾದ ಸ್ಥಳಗಳಿಗೆ ಒಂದೇ ರಾತ್ರಿ ದರ್ಶನವಿತ್ತು, ಹಾಗಲವಾಡಿಯ ಮುದಿಯ ಭೂಪಾಲನನ್ನು ಅನುಗ್ರಹಿಸಿ, ಕುಣಿಗಲ್ಲಿನಲ್ಲಿ ಲಿಂಗಣ್ಣೊಡೆಯನೆಂಬ ಕುಹಕನು ಕೊಟ್ಟ ಎರಡು ಸಾವಿರ ಎಳನೀರುಗಳನ್ನು ಭೂತಗಳಿಗೆ ಕುಡಿಸಿ, ಪುಳಿಯೂರ ದುರ್ಗದಲ್ಲಿಯೂ ಸಿದ್ಧಗಂಗೆಯನ್ನು ಬರಿಸಿದರು. ಅಲ್ಲಿ ಹರಯೋಗಿಯೆಂಬ ಸತ್ಯ ಶರಣನು ಮೃತನಾಗಿರಲು ಅವನ ಪುಣ್ಯಾಂಗನೆ ಪತಿಯ ಮೃತದೇಹದೊಡನೆ ರುದ್ರಭೂಮಿಯ ಕಡೆಗೆ ಹೊರಟಿದ್ದಳು. ಸಿದ್ಧಲಿಂಗೇಶ್ವರರು ಅಲ್ಲಿಗೆ ಬರಲು ಆ ಸಾಧ್ವಿ ನಮಸ್ಕರಿಸಿದಳು. ಸಿದ್ಧಲಿಂಗೇಶ್ವರರು "ಮುತ್ತೈದೆಯಾಗಿ ಬಾಳು" ಎಂದು ಆಶೀರ್ವದಿಸಿದರು ! ಹರಯೋಗಿಗೆ ಹರಣ ಬಂದಿತು. ಇದನ್ನು ಕಂಡು ಸೈರಿಸಲಾಗದೆ ಚಾರ್ವಾಕರು ಒಬ್ಬನನ್ನು ಸುಳ್ಳೇ ಸತ್ತಿರುವನೆಂದು ತಂದರು. ಸಿದ್ಧಲಿಂಗೇಶ್ವರರು 'ಕರ್ಮಫಲವನ್ನೆಲ್ಲರೂ

ಅನುಭವಿಸಿಯೇತೀರಬೇಕು' ಎಂದುಸುರಿದರು. ಅವನ ಹರಣ ಹಾರಿಹೋಯಿತು. ಅವನ ಸತಿಯ ಮೊರೆಯನ್ನು ಕೇಳಿ ಮತ್ತೆ ಪ್ರಾಣವನ್ನಿತ್ತರು !

ಮುಂದೆ ಹೊಳಲಗುಂದದ ಮಾಯದೇವಿಯ ಮಂದಿರದಲ್ಲಿ ದೇವಿಯಿಂದ ಭಿಕ್ಷವನ್ನು ಪಡೆದರು. ಹರಪನಹಳ್ಳಿಗೆ ಮರಳಿ ತಂದೆತಾಯಿಗಳಿಗೆ ದರ್ಶನವನ್ನಿತ್ತರು. ತಮ್ಮ ಗುರುಗಳು ಸನ್ನಿಧಿಗೆ ಹೋಗಿ ನಮಸ್ಕರಿಸಿದರು. ಅವರು ಆನಂದಪರವಶರಾಗಿ ಸಿದ್ಧಲಿಂಗೇಶ್ವರನ ಸತ್ಕೀರ್ತಿ ಪ್ರಭೆಯು ಆಚಂದ್ರಾರ್ಕವಾಗಿ ಪೃಥ್ವಿಯಲ್ಲೆಲ್ಲ ಪಸರಿಸುತ್ತಿರಲೆಂದು ಆಶೀರ್ವದಿಸಿದರು.

ಹರಪನಹಳ್ಳಿಯಲ್ಲಿ ಕೆಲದಿನವಿದ್ದು ಮತ್ತೆ ದೇಶಸಂಚಾರಕ್ಕೆ ಹೊರಟರು. ಸಿದ್ಧಗಂಗೆಯನ್ನು ಹತ್ತಿ ವಂದಿಸಿದವರ ಬಂಧನಗಳನ್ನು ಹರಿಯುತ್ತ ಬಂಡಿಹಳ್ಳಿಗೆ ಬಂದರು. ಅಲ್ಲಿ ಲೋಕಕಂಟಕವಾಗಿ ನೆಲೆಸಿದ್ದ ಘೋರ ಸರ್ಪವು ಅವರ ಪಾದಗಳಿಗೆರಗಿ ಅವರಿಗೆ ಹೆಡೆಯೆತ್ತಿ ಕೊಡೆವಿಡಿದು ನಿಂತಿತು. ಸಿದ್ಧಲಿಂಗೇಶ್ವರರು ಅದಕ್ಕೆ ಪಾತಾಳಕ್ಕೆ ಹೋಗಲು ಆಜ್ಞೆಯಿತ್ತರು. ಅದರಂತೆ ಅದು ಪಾತಾಳಕ್ಕೆ ಪ್ರಯಾಣ ಬೆಳೆಸಿತು. ಸಿದ್ಧಲಿಂಗೇಶ್ವರ ಮಹಿಮೆ ಮಹಿಯಲ್ಲೆಲ್ಲ ಹರಡಿತು.

ಅಲ್ಲಿಂದ ಸಿದ್ಧಲಿಂಗೇಶ್ವರರು ಕಡುಬೆಡಗಿನ ಕಗ್ಗೆರೆಗೆ ಬಂದರು. ಊರ ಹೊರಗಿನ ಉಪವನದಲ್ಲಿ ತಂಗಿದರು. ಆಗ ಶಿವಭಕ್ತಿ ಪಾರಾಯಣನಾದ ನಿಂಬಿ ಶೆಟ್ಟಿಯು ಬಂದು ಸಾಷ್ಟಾಂಗವೆರಗಿ ಬಿನ್ನಹ ಮಾಡಿಕೊಂಡನು. ತ್ರಿಕಾಲಜ್ಞಾನಿಗಳಾದ ತೋಂಟದ ಸಿದ್ಧಲಿಂಗೇಶ್ವರರು ಮುಂದಾಗುವುದನ್ನರಿತು ಬೇಡೆವೆಂದರೂ ಕೇಳಲಿಲ್ಲಾ ಭಕ್ತ. 'ತಥಾಸ್ತು' ಎಂದರು. ಅವನು ಆನಂದದಿಂದ ಒಂದು ಮಾವಿನ ಮರದ ಕೆಳಗೆ ಗದ್ದಿಗೆ ಹಾಕಿ ಈ ಚರ್ಿಚಕ್ರೇಶ್ವರರನ್ನು ಕುಳ್ಳಿರಿಸಿ ತನ್ನ ಊರೊಳಗೆ ಹೋಗಿ ದೈವದವರೊಡನೆ ಬಂದು ಕರೆದೊಯ್ಯುವೆನೆಂದು ಹೇಳಿ ಹೋದನು. ಆದರೆ ಅಷ್ಟರಲ್ಲಿ ವಾಲ್ಮೀಕಿಯ ಕುಲದರಸನಾದ ರತ್ನಗಿರಿಯ ದೊರೆಯ ದಂಡು ಕಗ್ಗೆರೆಗೆ ಲಗ್ಗೆಯಿಟ್ಟಿತು. ನಿಂಬಿಸೆಟ್ಟಿಯು ಗಣಾರಾಧನೆಗಾಗಿ ಮಾಡಿದ್ದ ಸಿದ್ಧಪಾಕವನ್ನೆಲ್ಲ ಒಂದು ಹಗೆಯಲ್ಲಿ ಹಾಕಿ ಮುಚ್ಚಿ ಎಲ್ಲರೊಡನೆ ತಾನೂ ಊರು ಬಿಟ್ಟು ನಿಡುಗಲ್ಲರಸನ ಸೀಮೆಗೆ ಓಡಿಹೋಗಿಬಿಟ್ಟನು. ಸಿದ್ಧಲಿಂಗೇಶ್ವರರ ಶಿಷ್ಯರೂ ಓಡಿಹೋದರು. ಆದರೆ ನಿಂಬೆಣ್ಣಸೆಟ್ಟಿಯು ಬಿನ್ನಹವನ್ನು ಸ್ವೀಕರಿಸಿದ್ದ ಸಿದ್ಧಲಿಂಗೇಶ್ವರರು ಅದು ಪೂರ್ತಿಯಾಗುವವರೆಗೆ ಅಲ್ಲಿಯೇ ಇರುವುದೆಂದು ನಿಶ್ಚಯಿಸಿ ಅಲ್ಲಿಯೇ ಇಷ್ಟಪ್ರಾಣ ಭಾವಲಿಂಗ ಪೂಜಾನುಷ್ಠಾನದಲ್ಲಿ ಚಿತ್ರದೊಳಗಣ ಬೊಂಬೆಯಂತೆ ಕುಳಿತುಬಿಟ್ಟರು. ಹಸಿವು, ತೃಷೆ ನಿದ್ರೆಗಳು ಕಾಲ್ದೆಗೆದುವು; ಈ ಲೋಕವ್ಯಾಪಾರಗಳೆಲ್ಲ ಮೈಗರೆದುವು; ಕರಣವೃತ್ತಿಗಳೆಲ್ಲ ಅಡಗಿದುವು. ಸಾಕಾರ ಶಿವಯೋಗವಾಗಿಬಿಟ್ಟರು.

ಹೀಗೆಯೇ ಏಳೆಂಟು ವರ್ಷಗಳು ಕಳೆದುವು. ಸುತ್ತಲೂ ಹುತ್ತ ಬೆಳೆಯಿತು. ಈ ಶಿವಯೋಗ ಸಾರ್ವಭೌಮನ ಮೇಲೆ ಗೆದ್ದಲುಗಳು ಗುಡಿಗೋಪುರ ಕಟ್ಟಿದುವು; ಜಡೆ, ಗಡ್ಡಗಳಲ್ಲಿ ಕಣಜದ ಹುಳುಗಳು ಗೂಡು ಕಟ್ಟಿದುವು; ಸರ್ಪಗಳು ಮನೆ ಮಾಡಿದುವಲ್ಲಿ; ವೃಶ್ಚಿಕಗಳು ವಸತಿಮಾಡಿದುವಲ್ಲಿ ! ಶಿವಯೋಗಿ ಮಾತ್ರ ಚಲಿಸಲಿಲ್ಲ. ಬದ್ಧ ಪದ್ಮಾಸನದಲ್ಲಿ ಇಷ್ಟಲಿಂಗದಲ್ಲಿ ದೃಷ್ಟಿನೆಟ್ಟು ಕುಳಿತವರು ನಿಗ್ರಹಾನುಗ್ರಹದ ವಿಗ್ರಹದಂತೆ ಕುಳಿತುಬಿಟ್ಟರು.

ಕಗ್ಗೇರಿಯ ಓಡಿಹೋದ ಜನ ಹಿಂದಿರುಗಿದರು. ನಿಂಬೆಣ್ಣಸೆಟ್ಟಿಯೂ ಅವರೊಡನೆ ಹಿಂದಿರುಗಿದ. ತೋಟದಲ್ಲಿ ಸಿದ್ಧಲಿಂಗೇಶ್ವರರಿಗೆ ತಾನು ಮಾಡಿ ಬಂದಿದ್ದ ಬಿನ್ನಹದ ವಿಷಯ ಎಂದೋ ಮರೆತುಹೋಗಿದಿತವನಿಗೆ. ಆದರೂ ಸಿದ್ಧಲಿಂಗೇಶ್ವರರಲ್ಲಿ ಶಿವಯೋಗಸಮಾಧಿಯಲ್ಲಿದ್ದ ಕಾರಣ ಆ ಊರಲ್ಲಿ ಆ ವರುಷ ಮಳೆ ಬೆಳೆ ಸಮೃದ್ಧಿಯಾಯಿತು. ಹಿಂದಿನ ವನವಾಸ ಮರೆತು ಮಂದಿಯೆಲ್ಲ ಆನಂದದಿಂದಿದ್ದರು.

ಹೀಗಿರುವಲ್ಲಿ ನಿಂಬೆಣ್ಣಸೆಟ್ಟಿಯ ಹಸುವೊಂದು ನಿತ್ಯವೂ ಶಿವಯೋಗಿಗಳ ಮೇಲೆ ಬೆಳೆದ ಹುತ್ತದ ಮೇಲೆ ಹಾಲು ಕರೆದು ಬರತೊಡಗಿತು. ಹಗಲೆಲ್ಲ ಹಸಿರು ಮೆಯ್ದು ಮನೆಗೆ ಹಾಲಿಲ್ಲದೆ ಬರುವ ಈ ಹಸುವನ್ನು ಕಂಡು ಮನೆಯವರಿಗೆಲ್ಲ ಸೋಜಿಗವೆನಿಸತೊಡಗಿತು. ಒಂದು ದಿನ ದನಗಾಹಿ ಅದರ ಹಿಂದೆ ಹಿಂದೆಯೇ ಹೋಗಿ ನೋಡಿ ನಿಜಸ್ಥಿತಿಯನ್ನು ಮನೆಯವರಿಗರುಹಿದನು. ಮಾರನೆಯ ದಿನ ನಿಂಬೆಣ್ಣನೂ ಅವನ ಮನೆಯವರೂ ಈ ಅಚ್ಚರಿಯನ್ನು ಕಣ್ಮುಟ್ಟ ನೋಡಿದರು. ಹುತ್ತವನ್ನು ಅಗೆಯಲು ಒಳಗಿನಿಂದ ಸರ್ಪವೂ ಸರ್ಪಗಳ ಮರಿಗಳೂ ಹೊರಟುವು. ಆಮೇಲೆ ಧ್ಯಾನಮಗ್ನ ಮಹಾಯೋಗಿಯ ದರ್ಶನವಾಯಿತು. ನೆರೆದ ಜನರೆಲ್ಲ ಹರ್ಷಾತೀರೇಕದಿಂದ 'ಉಘೇ, ಉಘೇ' ಎಂದರು. ಶಿವಯೋಗಿಗಳು ಕಣ್ದೆರೆದು ನೋಡಿ, ಹುತ್ತವನ್ನು ಒಡೆಯುತ್ತಿದ್ದ ಜನರನ್ನು ತಡೆದು, "ಇಲ್ಲಿ ಗೂಡು ಕಟ್ಟಿಕೊಂಡಿರುವ ಪ್ರಾಣಿಗಳು ಇಲ್ಲಿ ಮೊಟ್ಟೆ ಮರಿಗಳನ್ನಿಟ್ಟಿವೆ. ಇನ್ನು ಎಂಟು ಹತ್ತು ದಿನಗಳಲ್ಲಿ ಅವು ಬಲಿತು ಬೇರೆಡೆಗೆ ಹೋಗಲಿ. ಆ ಮೇಲೆ ಹುತ್ತವನ್ನು ಒಡೆಯಿರಿ" ಎಂದು ಹೇಳಿದರು. ಇದಲ್ಲವೇ ಸರ್ವಜೀವದಯಾಪಾರಿತ್ವ?

ಎಂಟು ಹತ್ತು ದಿನಗಳಾದ ಮೇಲೆ ಕ್ಷೀರಧಾರೆಯನ್ನೆರೆದು ಆ ಹುತ್ತವನ್ನು ಕರಗಿಸಲಾಯಿತು. ಮಹಾವೈಭವದೊಡನೆ ಶಿವಯೋಗಿಗಳನ್ನು ನಿಂಬೆಣ್ಣನ ಮನೆಗೆ ಕರೆದೊಯ್ಯಲಾಯಿತು. ಶಿವಯೋಗಿಗಳ ಶಿವಾರ್ಚನೆ, ಪಾದಪೂಜೆ ಮುಗಿದ ಬಳಿಕ ಮಾಡಿದ ಶಾಕಪಾಕವನ್ನು ಎಡೆ ಮಾಡುವುದಕ್ಕೆ ಸಾಷ್ಟಾಂಗ ಹಾಕಲು ಶಿವಯೋಗಿಗಳು ಮತ್ತೊಂದು ಅಚ್ಚರಿಯನ್ನುಂಟುಮಾಡಿದರು. "ನಿಂಬೆಣ್ಣ, ನೀವೆಲ್ಲ ಕಗ್ಗರೆ ಬಿಟ್ಟು

ಹೋಗುವ ಮುನ್ನ ನಮಗಾಗಿ ಮಾಡಿ ಹಗೆಯಲ್ಲಿ ಮುಚ್ಚಿಟ್ಟು ಹೋದ ಶಾಕಪಾಕಗಳನ್ನೇ ತೆಗೆಸು: ಅವು ಲಿಂಗಾರ್ಪಿತವಾಗದೆ ಉಳಿಯಬಾರದು" ಎಂದರು. ಎಲ್ಲರೂ ದಿಙ್ಮೂಢರಾದರು. ಅಪ್ಪಣೆಯಂತೆ ಹಗೆ ತೆಗೆಸಿನೋಡಲು ಹನ್ನೆರಡು ವರ್ಷಗಳಿಗೆ ಮೊದಲು ಮಾಡಿರಿಸಿದ್ದ ಅಡುಗೆ ಅದೇ ಮಾಡಿದಂತಿದ್ದಿತು.

ಬೋಳಬಸವೇಶ್ವರಾದಿ ಶಿಷ್ಯರಿಗೆ ಅವರು ಕೊನಯದಾಗಿತ್ತ ಶ್ರೀ ವಿಭೂರಿಯನ್ನು ಆ ಗವಿಮಠದ ಮೇಲ್ಭಾಗದಲ್ಲಿ ಪ್ರತಿಷ್ಠಾಪಿಸಿದ್ದಾರೆ. ಶಿವಯೋಗಿಗಳು ತಾವಿತ್ತ ಅಭಯವಚನದಂತೆ ಇಂದಿಗೂ ನಂಬಿದವರನ್ನೆಲ್ಲ ಇಷ್ಟಾರ್ಥಗಳನ್ನಿತ್ತು ರಕ್ಷಿಸುತ್ತಲಿದ್ದಾರೆ.

ಆಗಣಿತ ಮಹಿಮಾಶಾಲಿಯಾದ ಶ್ರೀ ಸಿದ್ಧಲಿಂಗೇಶ್ವರರು ಶ್ರೇಷ್ಠವಚನಕಾರರೂ ಆಹುದು. ಇವರ ವಚನಗ್ರಂಥಕ್ಕೆ 'ಷಟ್‌ಸ್ಥಳ ಜ್ಞಾನಸಾರಾಮೃತ' ಎಂಬ ಸಾರ್ಥಕ ಹೆಸರಿದೆ ಬಸವಯುಗದಿಂದೀಚೆಗೆ ಆಗಿಹೋದ ವಚನಕಾರರಲ್ಲಿ ಇವರಿಗೇ ಅಗ್ರಸ್ಥಾನ. ಇವರು ಎಲ್ಲ ದೃಷ್ಟಿಯಿಂದಲೂ ಎರಡನೆಯ ಪ್ರಭುದೇವರು. ವಚನಗಳಲ್ಲಿಯೂ ಅದೇ ಆಳ, ಅದೇ ಗಹನಗಂಭೀರತೆ : "ತನುವೆಂಗ ಹುತ್ತಕ್ಕೆ ಒಂಬತ್ತು ಬಾಗಿಲು;

ತಾಮಸವೆಂಬ ಸರ್ಪಕ್ಕೆ ತಲೆ ಹದಿನಾಲ್ಕು, ಒಡಲಾರು;
ಬಾಲ ಬ್ರಹ್ಮಲೋಕಕ್ಕೆ ಇಟ್ಟು ಶಿರವ ಹರಿಯದ್ವಾರದಲ್ಲಿರಿಸಿ
ಕರಣೇಂದ್ರಿಯಂಗಳೆಂಬ ಕಾಳಕೂಟವನೆ ಉಗುಳುತ್ತಿದೆ ನೋಡ!
ಆ ವಿಷವು ಶಿವಶರಣರಲ್ಲದವರನ್ನೆಲ್ಲ ಸುಡುವುದ ಕಂಡೆ,
ಮಹಲಿಂಗಗುರುಶಿವಸಿದ್ಧೇಶ್ವರಪ್ರಭುವೆ"
ಈ ಪೂರ್ಣೋಪಮೆಯ ಔಚಿತ್ಯ :

"ಬಯಲು ಮೂರ್ತಿಯ ಮಾಡಿ ಎನ್ನ ಕರಸ್ಥಲಕ್ಕೆ ಕೊಟ್ಟನಯ್ಯ ಶ್ರೀಗುರು; ಬಯಲ ಮೂರ್ತಿಯ ಅಮೂರ್ತಿಯ ಮಾಡಿ ಎನ್ನ ಪ್ರಾಣದೊಳಗಿರಿಸಿದನಯ್ಯ ಶ್ರೀಗುರು; ಬಯಲು ಬಯಲನೇ ಬಯಸಿ ಬಯಲೆಂದೆನಿಸಿ ಎನ್ನ ಭಾವದಲ್ಲಿರಿಸಿದನಯ್ಯ ಶ್ರೀಗುರು. ಇದು ಕಾರಣ ಎನ್ನ ಕರಸ್ಥಲ, ಮನಸ್ಥಲ, ಭಾವಸ್ಥಲದಲ್ಲಿ ಧರಿಸಿ ನಾನು ಅಂಗಲಿಂಗ ಸಂಬಂಧಿಯಾದೆನಯ್ಯ ಮಹಲಿಂಗ–ಗುರುಶಿವಸಿದ್ಧೇಶ್ವರ ಪ್ರಭುವೆ."

ಈಗುಹ್ಯಾದ್ಗುಹ್ಯ ವಿಷಯ ವಿವೇಚನಾವೈಖರಿ :

"ಮುಖದಲ್ಲಿ ಮಂತ್ರ , ಹೃದಯದಲ್ಲಿ ಧ್ಯಾನ, ಪ್ರಾಣದಲ್ಲಿ ಲಿಂಗದ ನೆನಹು ಕರಿಗೊಂಡ ಶಿವಾತ್ಮ ಶರಣನ ಹೃದಯವೇ ಪರಮೇಶ್ವರಂಗೆ ನಿವಾಸಸ್ಥಾನ,

ನೆಲೆಮನೆಯಾಗಿಪ್ಪುದಯ್ಯ . ಆ ಪರಮೇಶ್ವರನೊಳಗಣ ಸಮರಸ ಭಾವನೆ ಆ ಶರಣಂಗೆ ನಿತ್ಯ–ನೇಮ–ಪೂಜೆಯಾಗಿಪ್ಪುದಯ್ಯ. ಇದೇ ಪೂರ್ಣ ಶರಣರ ಭಾವ. ಅಲ್ಲಿಯೇ ಲಿಂಗಸಿದ್ಧಿ, ಘನ ಪದಸ್ಥಿತಿ, ಲಿಂಗಪೂಜೆ , ಮತ್ತಲ್ಲಿಯೇ ನಿಶ್ಚಯ; ಅದೇ ಪರಮಾರ್ಥ. ಇದಲ್ಲದೆ ಅನ್ಯಮಪ್ಪೆಲ್ಲವು ಆತ್ಮ ದುಃಖಕಾರಣ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ. "

ಈ ನಿಶ್ಚಿತ ಜ್ಞಾನದ ನಿತಾಂತಮನೋಹರ ಆವಿಷ್ಕಾರ:

"ಕತ್ತಲೆಯನೊಳಕೊಂಡ ಬೆಳಗಿನಂತೆ, ಪಕ್ಷಿಯನೊಳಕೊಂಡ ತತ್ತಿಯಂತೆ, ಮುತ್ತನೊಳಕೊಂಡ ಚಿಪ್ಪಿನಂತೆ, ಸಾಗರವನೊಳಕೊಂಡ ಶಶಿಯಂತೆ, ಜಗವನೊಳ ಆಕಾಶದಂತೆ ಎನ್ನ ನೀವು ಒಳಕೊಂಡಿರಾಗಿ ನಾನೋ ನೀನೋ ಏನೆಂದರಿಯೆನಯ್ಯ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೆ."

ಈ ಸಾದೃಶ್ಯಮಾಲೆಯ ಸೌಂದರ್ಯ :

"ಕಣ್ಣಿನಲ್ಲಿ ಕಾಮ, ಮನದಲ್ಲಿ ಕ್ರೋಧ, ಪ್ರಾಣದಲ್ಲಿ ಲೋಭ, ಬುದ್ಧಿಯಲ್ಲಿ ಮದ, ವಿವೇಕದಲ್ಲಿ ಮತ್ಸರ, ಅರುಹಿನಲ್ಲಿ ಮಾಯೆಯುಳ್ಳನ್ನಕ್ಕರ ಎಂತು ಮಹೇಶ್ವರನೆಂಬೆ, ಎಂತು ಪ್ರಸಾದಿಯೆಂಬೆ ಎಂತು ಅನುಭಾವಿಗಳೆಂಬೆ?"

ಈ ಮನೋಜ್ಞ ವಿಶ್ಲೇಷಣ :

"ಪರುಷ ಸೋಂಕಿಯು ಲೋಹ ಶುದ್ಧವಾಗದಿದ್ದರೆ ಆ ಪರುಷದ ಗೊಡವೆಯೇತಕಯ್ಯ? ಅಗ್ನಿಯು ಸೋಂಕಿ ಕಾಷ್ಠದ ಗುಣವಳಿಯದಿದ್ದರೆ ಆ ಅಗ್ನಿಯ ಗೊಡವೆಯೇತಕಯ್ಯ? ಗರುಡನಿದ್ದು ಸರ್ಪದ ಭಯ ಹಿಂಗದಿದ್ದರೆ ಆ ಗರುಡನ ಗೊಡವೆ ಯಾತಕಯ್ಯ? ವಜ್ರದಂಗಿಯ ತೊಟ್ಟು ಬಾಣದ ಭಯ ಹಿಂಗದಿದ್ದರೆ ಆ ವಜ್ರದಂಗಿಯ ಗೊಡವೆ ಯಾತಕಯ್ಯ? ಆನೆಯ ನೋಡಿ ಶ್ವಾನನ ಭಯ ಹಿಂಗದಿದ್ದರೆ ಆ ಆನೆಯ ಗೊಡವೆಯೇತಕಯ್ಯ? ಜ್ಯೋತಿಯಿದ್ದು ಕತ್ತಲೆ ಹರಿಯದಿದ್ದರೆ ಆ ಜ್ಯೋತಿಯ ಗೊಡವೆಯೇತಕಯ್ಯ? ಅಂಗದ ಮೇಲೆ ಚಿದ್ಘನ ಲಿಂಗವ ಧರಿಸಿದ್ದು ತನುಮನಗಳ ಅವಗುಣ ಹಿಂಗದಿದ್ದರೆ ಆ ಲಿಂಗದ ಗೊಡವೆ ಏತಕಯ್ಯ? ಮಹಾಲಿಂಗಗುರುಶಿವ ಸಿದ್ಧೇಶ್ವರಪ್ರಭುವೆ, ನೀವು ಸೋಂಕಿಯು ಭವ ಹಿಂಗದಿದ್ದರೆ ನಿಮಗೆ ಕುಂದಯ್ಯ !"

ಎಂಬ ಪರಮನಿಗೇ ತಿರುಗುಪ್ಪು ಕೊಡುವ ಜಾಣ್ಮೆ–ಇವೆಲ್ಲ ಸಿದ್ಧಲಿಂಗೇಶ್ವರರು ಎರಡನೆಯ ಪ್ರಭುದೇವರೆಂಬುದಕ್ಕೆ ನಿದರ್ಶನಗಳು. ಇವೂ ಸಾಲದೆನಿಸಿದರೆ ಇವರು ಕಟ್ಟಿದ ಈ ಕೆರೆಯನ್ನು ಪ್ರಭುದೇವರು ಕಟ್ಟಿದ ಕೆರೆಗೆ ಹೋಲಿಸಿ ನೋಡಿರಿ:

“ಕಾಯವೆಂಬ ಕೆರೆಗೆ ಮನವೆಂಬ ಕಟ್ಟೆಯ ಕಟ್ಟಿ
ದೃಢವೆಂಬ ತೂಬನಿಕ್ಕಬೇಕಯ್ಯ;
ಸ್ವಾನುಭಾವವೆಂಬ ಸೋಪಾನವ ಮಾಡಬೇಕಯ್ಯ ;
ಆ ಕೆರೆಯ ಏರಿಯ ಮೇಲೆ ಆಚಾರವೆಂಬ ವೃಕ್ಷವ ಬೆಳೆ.
ಅರುಹೆಂಬ ಹೂವ ಅದ್ವೈತವೆಂಬ ಹಸ್ತದಿಂದ ಕೊಯ್ದು
ಅನುಪಮ ಲಿಂಗಕ್ಕೆ ಪೂಜಿಸಬಲ್ಲೊಡೆ ಲಿಂಗಾರ್ಚಕರೆಂಬೆ.
ಈ ಭೇದವನರಿಯದೆ ಹುಸಿಯನೇ ಪೂಜಿಸಿ ಘಸಣಿ
ಗೊಳಗಾಗುವ ಪಿಸುಣಿಗರನೆಂತು ಪೂಜಕರೆಂಬೆನಯ್ಯ
ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೆ?”

ಈ ಅರುಹಿನ ಮಹಾಜ್ಯೋತಿ ಇಂದಿಗೂ ಪರಮಪ್ರಕಾಶವನ್ನು ಬೀರುತ್ತಲೇ ಇದೆ–ಎಡೆಯೂರಿನ ಪುಣ್ಯಕ್ಷೇತ್ರದಲ್ಲಿ. ಷಟ್‌ಸ್ಥಲ ‘ಜ್ಞಾನಸಾರಾಮೃತ’ ಗ್ರಂಥದಲ್ಲಿ:
”ಅರುಹಿನ ಜ್ಯೋತಿಯೆದ್ದಿತ್ತು ;
ಶರೀರವನ್ನೆಲ್ಲ ತುಂಬಿತ್ತು ;
ಮರವೆಯ ತಮವ ಹರಿದಿತ್ತು ;
ಕರಣಂಗಳ ಖಂಡಿಸಿತ್ತು ;
ವಿಷಯಂಗಳ ಶಿರವನಿರಿಯಿತ್ತು ;
ದಶವಿಧೇಂದ್ರಿಯ ದಾಳಿಯ ನಿಲಿಸಿತ್ತು ;
ಪಂಚ ಮಹಾಭೂತಗಳ ಪ್ರಪಂಚವ ಪರಿಹರಿಸಿತ್ತು ;
ಬ್ರಹ್ಮವೆ ತಾನೆಂಬ ಕುರುಹ ಮೈಗಾಣಿಸಿತ್ತು ;
ತಾನೆಂಬ ಕುರುಹನಳಿದು ಅವಿರಳ ಸಹಜನ
ಭಕ್ತನ ಮಾಡಿತ್ತು ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೆ”

ಈ ಅರಿವಿನ ಜ್ಯೋತಿಗೆ ಅನಂತ ಪ್ರಣಾಮಗಳು.

■

# ಕಾಡಸಿದ್ಧೇಶ್ವರ–ಸ್ವತಂತ್ರ ಸಿದ್ಧಲಿಂಗೇಶ್ವರ

ಇವರಿಬ್ಬರ ವಚನಗಳೂ ಶ್ರೀ ಜಗದ್ಗುರು ಮೂರು ಸಾವಿರ ಮಠದ ಗ್ರಂಥ ಮಾಲೆಯಲ್ಲಿ ಪ್ರಕಟವಾಗಿವೆಯಾಗಿ ಇಬ್ಬರ ಚರಿತ್ರೆಗಳನ್ನು ಒಂದೆಡೆಗೆ ಸಂಗ್ರಹಿಸುವುದು ಸೂಕ್ತವೆನಿಸದಿರದು.



**ಕಾಡ ಸಿದ್ಧೇಶ್ವರರು**

ಇವರಲ್ಲಿ ವಚನಕಾರ ಕಾಡಸಿದ್ಧೇಶ್ವರರು ಸಿದ್ಧಗಿರಿಯ ಮೂಲ ಕಾಡಸಿದ್ಧೇಶ್ವರರ ಪರಂಪರೆಯ ಪೀಠಾಧಿಪತಿಗಳಲ್ಲೊಬ್ಬರು; ಸ್ವತಂತ್ರ ಸಿದ್ಧ ಲಿಂಗೇಶ್ವರರು ತೋಂಟದ

ಸಿದ್ಧಲಿಂಗೇಶ್ವರರ ಶಿಷ್ಯರು. ಮೂಲ ಕಾಡಸಿದ್ಧೇಶ್ವರರ ಚರಿತ್ರೆಯನ್ನಿಲ್ಲಿ ಸಂಗ್ರಹಿಸುವುದು ಸಮಯೋಚಿತವೆನಿಸದಿರದು.

ಮೂಲ ಕಾಡಸಿದ್ಧೇಶ್ವರರು ಈಗಿನ ಮೈಸೂರು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಸಂಚರಿಸಿ, ಲಕ್ಷಾಂತರ ಶಿಷ್ಯರಿಗೆ ಗುರುಗಳಾಗಿ, ಅನೇಕ ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಸಿದ ಮಹಾತ್ಮರು. ಸಿದ್ಧಗಿರಿ, ಎಡೂರು, ಗುಂಡೇವಾಡಿ, ಕೊಣ್ಣೂರು, ಚಂದೂರು, ರಬಕವಿ, ಕುಂಡಲ, ಬಸ್ತ್ವಾಡ, ನೇಜ, ಮಾವನೂರು, ಹೊರ್ತಿ, ರಾಮನಕೊಪ್ಪ, ಕೇಶವಾಪೂರ, ಕುಸಗಳ, ಕರ್ಜಗಿ, ಸವದತ್ತಿ, ನವಿಲಗುಂದ, ಹಲಿಕಟ್ಟೆ, ನಗರ ಸಿದ್ಧಗಿರಿ, ಹುಬ್ಬಳ್ಳಿ, ಗೋಕಾಕ, ಧೂಮ (ಜಿ.ಸತಾರಾ) ಮುಂತಾದ ಸ್ಥಳಗಳಲ್ಲಿ ಇಂದಿಗೂ ಅವರು ಸ್ಥಾಪಿಸಿದ ಮಠಗಳು ಕಂಗೊಳಿಸುತ್ತಿವೆ. ಕೊಣ್ಣೂರು ಮಠದ ಕೆಂಪಯ್ಯ ಸ್ವಾಮಿಗಳು ಮತ್ತು ಗುರುಸಿದ್ಧ ಸ್ವಾಮಿಗಳಂತೆ ಈ ಮಠಗಳಲ್ಲಿಯೂ ಅನೇಕ ತಪಸ್ವಿಗಳು ಆಗಿಹೋಗಿದ್ದಾರೆ. ಚಿಕ್ಕೋಡಿ ತಾಲ್ಲೂಕಿನ ಎಡೂರಿನ ಪ್ರಸಿದ್ಧ ವೀರಭದ್ರೇಶ್ವರ ದೇವಾಲಯಕ್ಕೂ ಕಾಡದೇವರೇ ಗುರುಗಳು. ಸಿದ್ಧಗಿರಿ ಮಠಕ್ಕೆ ಛತ್ರಪತಿ ಶಿವಾಜಿ ಮಹಾರಾಜರೂ ಔರಂಗಜೇಬ ಬಾದಷಹರೂ ಎಡೂರಿನ ಮಠಕ್ಕೆ ಕೊಲ್ಲಾಪುರದ ರಾಜಾರಾಯ ಮಹಾರಾಜರೂ ಆವರ ಪತ್ನಿ ತಾರಾಬಾಯಿಯವರೂ ಕೊಟ್ಟ ಸನದುಗಳಿವೆ. ಅವುಗಳಲ್ಲಿ ಮೂಲ ಕಾಡದೇವರ ಬಗ್ಗೆ ಭಕ್ತಿ ವಿಶ್ವಾಸಗಳನ್ನು ವ್ಯಕ್ತಪಡಿಸಲಾಗಿದೆ. ಇದಲ್ಲದೆ ಪ್ರಖ್ಯಾತರಾದ ಸಿರಸಂಗಿ, ಕೊಣ್ಣೂರು, ಕೊಕಟನೂರು, ಕಾಗತಿಗಳ ದೇವಾಲಯಗಳಲ್ಲಿ ಕಾಡಸಿದ್ಧೇಶ್ವರರೇ ಕುಲಗುರುಗಳು. ೧೭೧೬ರಿಂದ ೧೭೮೦ ವರೆಗಿದ್ದ ಸಿರಸಂಗಿಯ ಜಾಯಪ್ಪ ದೇಸಾಯಿಯವರು ತಮ್ಮ ಕರ್ನಾಟಕ ಕುವಲಯಾನಂದದಲ್ಲಿ ತಮ್ಮ ಕುಲಗುರುಗಳೂ ಕುಲದೇವರೂ ಆದ ಕಾಡಸಿದ್ಧೇಶ್ವರರನ್ನು ಸ್ತುತಿಸಿದ್ದಾರೆ. ಕುಸುಗಲ್ಲು, ಸವದತ್ತಿ, ನವಿಲುಗುಂದಗಳ ಕೋಟೆಗಳನ್ನು ಕಟ್ಟಿಸಿ, ಬಹುಭಾಷಾ ಪಾರಂಗತರೂ ರಾಜಕಾರಣ ಧುರಂಧರರೂ ಆಗಿ ನರಗುಂದದಲ್ಲಿ ಶಿವಾಧೀನರಾದ ಈ ಪುರುಷ ಪುಂಗವರಿಂದ ಸಂಸ್ತುತನಾದ ಮೂಲ ಕಾಡಸಿದ್ಧೇಶ್ವರನು ಮಹಾಶರಣನೆಂಬುದರಲ್ಲಿ ಸಂಶಯವಿಲ್ಲ. ಮುಂಬೈ ಗೆಝೆಟೀಯರ್ ಪ್ರಕಾರ ಸಿದ್ಧಗಿರಿ ಮಠವು ಪಶ್ಚಿಮ ಸಿಂಹಾಸನ. ಸಾಮಾಜಿಕ ವ್ಯಾಜ್ಯಗಳ ನಿರ್ಣಯಕ್ಕೆ ಆ ಮಠದ ಸ್ವಾಮಿ ಆ ಪ್ರಾಂತದ ಮುಖ್ಯ ಜಂಗಮರು. ಡೋಹರರೂ ಬುರುಡರೂ ಮಾಳಿಗಳೂ ಈ ಮಠದ ಶಿಷ್ಯರು. ಕಾಡಸಿದ್ಧೇಶ್ವರರು ಅವರ ಕುಲಗುರುಗಳು, ಕುಲದೇವರು.

ಮೂಲ ಕಾಡುದೇವರು ಶೇಗುಣಸಿಯ ಗೌಡರ ಮನೆತನದಲ್ಲಿ ಜನಿಸಿ* ಗುಂಡೇವಾಡಿ ಮೊದಲಾದ ಸ್ಥಳಗಳಲ್ಲಿ ತಪಸ್ಸು ಮಾಡಿ ಕೊನೆಗೆ ಶ್ರೀ ಸಿದ್ಧಗಿರಿ ಕ್ಷೇತ್ರದಲ್ಲಿ ನೆಲೆಸಿ ಶತಾಯುಗಳಾಗಿ ಶಿವಸಾಯುಜ್ಯವನ್ನು ಹೊಂದಿದರು. ಈ ಸಿದ್ಧಗಿರಿ

ಕ್ಷೇತ್ರವು ಕೊಲ್ಲಾಪುರದ ದಕ್ಷಿಣಕ್ಕೆ ಆರು ಮೈಲಿಗಳ ಮೇಲಿದೆ. ನಿಪ್ಪಾಣಿಯಿಂದ ಕೊಲ್ಲಾಪುರಕ್ಕೆ ಹೋಗುವ ಹಾದಿಯಲ್ಲಿ ಗೋಕುಲ-ಶಿರಗಾಂವ್ ಎಂಬ ಗ್ರಾಮದಿಂದ ಎರಡು ಮೈಲಿಯಲ್ಲಿದೆ. ಇಲ್ಲಿ ಕಣೇರಿ ಎಂಬ ಹಳ್ಳಿಯಿದೆ. ಅಲ್ಲಿ ಸುಮಾರು ಇನ್ನೂರು ಅಡಿ ಎತ್ತರವಿರುವ ಬೆಟ್ಟದ ಮೇಲೆ ಕಾಡದೇವರ ಮಠವಿದೆ. ಸಿದ್ಧರು ತಪಸ್ಸು ಮಾಡಿದ ಈ ಗಿರಿಗೆ ಸಿದ್ಧಗಿರಿ ಎಂದು ಸಲ್ಲುವ ಹೆಸರು ಬಂದಿವೆ. ಗಿರಿಯ ಸುತ್ತಲೂ ತಗ್ಗು-ಅದರ ತುಂಬ ನೀರಿನ ಝರಿಗಳು, ಅದರಾಚೆ ಅನೇಕ ಸಣ್ಣ ಸಣ್ಣ ದಿಣ್ಣೆಗಳು. ನಿಸರ್ಗ ಮನೋಹರವಾದ ಈ ಸ್ಥಳದಲ್ಲಿ ಶಿವಯೋಗಸಿದ್ಧಿಯನ್ನು ಪಡೆದರು ಕಾಡಸಿದ್ಧೇಶ್ವರರು.

ಎಂದು? ನಿಸ್ಸಂದಿಗ್ಧವಾಗಿ ಹೇಳಲು ಆಗದು, ಉಪಲಬ್ಧ ಸಾಹಿತ್ಯದ ಆಧಾರದ ಮೇಲೆ. ಕಾಡುಸಿದ್ದೇಶ್ವರ ವಚನಗಳ ಪ್ರಸ್ತಾವನೆಯಲ್ಲಿ "ಶ್ರೀಮಾನ್ ಶಿವಪ್ಪ ಛಪ್ರೆ ಇವರು ತಮ್ಮ (ಶ್ರೀ ಕ್ಷೇತ್ರ ಎಡೂರು) ಎಂಬ ಪುಸ್ತಕದಲ್ಲಿ ಕಾಡುಸಿದ್ಧೇಶ್ವರ ಬಸವೇಶ್ವರನ ಸಮಕಾಲದವರೆಂದು ಹೇಳಿರುವುದು ಸರಿಯಾಗಿರುವುದಿಲ್ಲ. ಅದಕ್ಕೆ ತಕ್ಕ ಆಧಾರಗಳು ಇರುವುದಿಲ್ಲ. ಬಸವಣ್ಣನವರ ಸಮಕಾಲದವರಾಗಿದ್ದರೆ ಅನೇಕ ಗ್ರಂಥಗಳಲ್ಲಿ ಅವರ ಉಲ್ಲೇಖ ಬರುತ್ತಿತ್ತು. ಬಸವೇಶ್ವರನ ಸಮಕಾಲೀನರೆಂದು ಯಾವ ಗ್ರಂಥಗಳಲ್ಲಿಯೂ ಕಂಡುಬರುವುದಿಲ್ಲ" ಎಂದು ಒಂದು ಕಡೆಗೂ ಮತ್ತು "ಕೊಕಟನೂರ ದೇಸಾಯರ ಮೂಲಪುರುಷರು ೧೩೦೨ರಲ್ಲಿ ಇದ್ದರೆಂದು ಈ ಮೊದಲು ಬರೆಯಲಾಗಿದೆ ಮತ್ತು ಮೂಲ ಕಾಡದೇವರು ನೂರು ವರ್ಷಗಳವರೆಗೆ ಜೀವಿಸಿದ್ದರೆಂತಲೂ ಪ್ರಬಲವಾದ ವದಂತಿ ಇದೆ. ಹೇಗೆ ಇದ್ದರೂ ಸರಿಯ-ಇತಿಹಾಸಕಾರರಿಗೆ ಸಮ್ಮತವಾಗುವಂತೆ ನಾವು ಕಾಡಸಿದ್ಧೇಶ್ವರ ಮಠದ ವಂಶಾವಳಿಯ ಲೆಖ್ಖವನ್ನು ಮಾಡಿ ನೋಡಿದರೂ ಶ್ರೀ ಕಾಡಸಿದ್ಧರು ೧೨ನೆಯ ಶತಮಾನದಲ್ಲಿದ್ದರೆಂದು ಹೇಳಲು ಅಡ್ಡಿ ಇಲ್ಲವರು. ಆದರೆ ಹನ್ನೆರಡನೆಯ ಶತಮಾನದ ಆದಿಯಲ್ಲಿದ್ದರೋ ಅಥವಾ ಅಂತ್ಯದಲ್ಲಿದ್ದರೋ ಹೇಳುವುದು ಕಷ್ಟಸಾಧ್ಯವಾದುದ್ದು" ಎಂದು ಮತ್ತೊಂದೆಡೆಯಲ್ಲಿಯೂ ಹೇಳಿದೆ. ಕೊನೆಗೆ 'ರೇವಣಸಿದ್ಧರೆಂದರೆ ಕಾಡ ಸಿದ್ಧರು, ಕಾಡ ಸಿದ್ಧರೆಂದರೆ ರೇವಣ ಸಿದ್ಧರೆಂತಲೂ ಊಹಿಸಲು ಸಾಧ್ಯವಿರುತ್ತದೆ. ಅರ್ಥಾತ್ ಅದೇ ಕಾಲದಿಂದಲೇ ಶ್ರೀ ಕಾಡಸಿದ್ಧನ ಸಂಪ್ರದಾಯವು ಪ್ರಾರಂಭವಾಗಿರಬೇಕೆಂದು ತಿಳಿಯಬಹುದಾಗಿದೆ' ಎಂಬ ಊಹೆಯನ್ನೂ ಮಂಡಿಸಿದ್ದಾರೆ. ಆದರೆ ಕಾಡಸಿದ್ಧೇಶ್ವರನ ಜೀವನದಲ್ಲಿ ಬರುವ ಪವಾಡಗಳಿಗೂ ರೇವಣಸಿದ್ಧೇಶ್ವರನ ಜೀವನದಲ್ಲಿ ಘಟಿಸಿದ ಪವಾಡಗಳಿಗೂ ಸಾಮ್ಯವಿಲ್ಲ. ಕವೀಶ್ವರ

* ಅಥಣಿ ತಾಲ್ಲೂಕಿನ ಗುಂಡೇವಾಡಿಯಲ್ಲಿ ಜಂಗಮ ಕುಟುಂಬದಲ್ಲಿ ಕ್ರಿ.ಶ. ೧೧೨೦ರಲ್ಲಿ ಹುಟ್ಟಿರುವರೆಂದು ಛಪ್ರೆ ಹೇಳುತ್ತಾರೆ. ಶ್ರೀ ಕ್ಷೇತ್ರಯಡೂರು-ಪು.೩೦೭

ಹರೀಶ್ವರನು ತನ್ನ ಕಾಡಸಿದ್ಧರದೇವರಗಳೆಯಲ್ಲಿ ಅವರ ಲೀಲೆಗಳನ್ನು ಸುಂದರವಾಗಿ ಸಂಗ್ರಹಿಸಿದ್ದಾನೆ. ಅದರ ಪ್ರಕಾರ ಕೈಲಾಸದಲ್ಲಿ ದಾರುಕನನ್ನು ದಾಟಿದ ತಪ್ಪಿಗಾಗಿ ರೇಣುಕ ಗಣನಾಥರು ಕೊಲ್ಲಿಪಾಕಿಯ ಅಮೃತಮಯ, ಅನುಪಮ ಸೋಮನಾಥ ಮಹಾಲಿಂಗದಿಂದ ಉದ್ಭವಿಸುತ್ತಾರೆ. ಭೂಲೋಕದಲ್ಲಿ 'ಅರಿದೇಳುನೂರು ಅರಿಯದೇಳ್ನೂರು ವತ್ಸರಂ' ಇದ್ದು ಅನೇಕ ಲೀಲೆಗಳನ್ನೆಸಗಿ ಮತ್ತೆ ಸೋಮನಾಥ ಲಿಂಗದಲ್ಲಿ ಐಕ್ಯರಾಗುತ್ತಾರೆ. ಅಗಸ್ತ್ಯನಿಗೆ ಶಿವತತ್ತ್ವೋಪದೇಶ ಮಾಡುತ್ತಾರೆ; ಚೋಳ ರಾಜನ ಪ್ರಾರ್ಥನೆಯಂತೆ ವಿಷ್ಣುಪ್ರತಿಮೆಯ ಕಂಪನವನ್ನು ನಿಲ್ಲಿಸುತ್ತಾರೆ; ಮಾಸನೂರಿನಲ್ಲಿ ಶಾಪಗ್ರಸ್ಥ ರಾಕ್ಷಸ ಮಿಥುನವನ್ನು ಫಾಲನೇತ್ರ ಜ್ವಾಲೆಯಿಂದ ಸುಟ್ಟು ಉಕ್ಕಿನ ಗುಂಡುಗಳನ್ನಾಗಿಸಿ, ಹೆಣ್ಣು ಗುಂಡಿನಿಂದ ಕಠಾರಿಯೊಂದನ್ನೂ ಗಂಡು ಗುಂಡಿನಿಂದ ಸುರಗಿಯೊಂದನ್ನೂ ಮಾಡಿಸಿ, ಸುರಗಿಯನ್ನು ಮಾಸನೂರು ನದಿಯ ಮಡುವಿನಲ್ಲಿ ಚೆಲ್ಲಿ, 'ಇನ್ನೆಲ್ಲಿಗಂ ಮಿಸುಕದಾರ್ಗಂ ಚಲಿಸದಿಲ್ಲಿಯೆ ನಿಲ್' ಎಂದು ಆಜ್ಞಾಪಿಸಿ ಕಠಾರಿಯನ್ನು ವಿಕ್ರಮಾದಿತ್ಯನಿಗೆ ಕೊಡುತ್ತಾರೆ; ಅಲ್ಲಿಂದ ಕಲ್ಯಾಣದ ಕಲ್ಲಿಸೆಟ್ಟಿಯ ಗಾಣದ ಕೊಟ್ಟಿಗೆಗೆ ಬಂದು ಅವನ ಭಕ್ತಿಗೆ ಮೆಚ್ಚಿ ಕೆಲವು ದಿನ ಅವನ ಗಾಣವನ್ನು ತಿರುಗಿಸುತ್ತಾರೆ; ಮುಂದೆ ಮಂಗಳವಾಡಕ್ಕೆ ಬಂದು, 'ಧನದೊಳ್ ಬಡವೆ, ರೂಪು ಗುಣದೊಳ್ ಸಿರಿವಂತೆಯಪ್ಪ ಮಾಯಿದೇವಿಯೆಂಬ ಪುಣ್ಯಾಂಗನೆಯಲ್ಲಿ ಕೆಲವು ಕಂಬಿಯಗ್ಘವಣಿಯನ್ನು ತರುವ ಕಾಯಕ ಮಾಡುತ್ತಾರೆ;ವೀಭೀಷಣನ ಪ್ರಾರ್ಥನಾನುಸಾರವಾಗಿ ತ್ರಿಕೋಟಿಲಿಂಗ ಪ್ರತಿಷ್ಠಾಪನೆ ಮಾಡುತ್ತಾರೆ; ಮತ್ತೆ ಮಂಗಳವಾಡಕ್ಕೆ ಬಂದು ಕುದಿವ ಓಗರವನ್ನಿಕ್ಕಿದ ಬಿಜ್ಜಳನ ಅರಮನೆಯ ಕಂಭಕ್ಕೆ ಕೈದೊಡೆದು ಅರಮನೆಯೇ ಉರಿವಂತೆ ಮಾಡಿ ಶರಣಾಗತನಾದ ಅವನನ್ನು ಕ್ಷಮಿಸಿ ಅರಮನೆಯನ್ನು ಉಳಿಸುತ್ತಾರೆ; ಅಲ್ಲಿಂದ ನೆಗೆದು ಕೊಲ್ಲಾಪುರಕ್ಕೆ ಹೋಗಿ ಗೋರಕ್ಷನಾಥನ ಗರ್ವಭಂಗಮಾಡುತ್ತಾರೆ; ಅಲ್ಲಿಂದ ವಾರಣಾಸಿಗೆ ಹೋಗಿ ಅಲ್ಲಿರುವಾಗ ಮಾಸೂರ ನದಿಯ ಮಡುವಿನಲ್ಲಿ ಅವರಿರಿಸಿ ಹೋಗಿದ್ದ ಸುರಗಿಯನ್ನು ಹೊರದೆಗೆಯಲು ಕಪ್ಪರನೆನಿಪ್ಪ ಕಲಿಕೇತನದ ಕಲುಜೋಗಿಯ ಮಾತಿಗೆ ಮರುಳಾಗಿ ಹನ್ನೆರಡು ಸಾವಿರ ಕನ್ನೆಯರ ಬಲಿಕೊಡಲು ಸಿದ್ಧನಾದ ಬಿಜ್ಜಳನ ಭಟರು ಮಾಯಿದೇವಿಯ ಮಗಳಾದ ಚೆನ್ನ ರೇವಣದೇವಿಯನ್ನು ಸೆರೆಹಿಡಿಯುತ್ತಾರೆ; ಮಾಯಾದೇವಿಯ ಆರ್ತಸ್ವರವನ್ನು ಕೇಳಿ 'ದುರಿತ ಕುಲವಿರುದ್ಧಂ, ಶಿವಧ್ಯಾನ ಪ್ರಬುದ್ಧಂ, ಲೋಕ ಪ್ರಸಿದ್ಧಂ, ರೇವಣ ಸಿದ್ದಂ' ಬಿಜ್ಜಳನ ಸಭೆಗೆ ಬಂದು ಹನ್ನೆರಡು ಸಾವಿರ ಕನ್ನೆಯರನ್ನೂ ಬಿಡಿಸಿಬಿಡುತ್ತಾರೆ; ತಾವೇ ಬಿಜ್ಜಳನನ್ನು ಕರೆದೊಯ್ದು ಆ ಸುರಗಿಯನ್ನು ತೋರಿ ಮತ್ತೆ ಅಲ್ಲಿಯೇ ಮಡುವಿನಲ್ಲಿ ಮಡಗುತ್ತಾರೆ; ಬಿಜ್ಜಳನ ಮಗಳನ್ನು ಮದುವೆಯಾಗುತ್ತಾರೆ; ಮಂಗಳವಾಡದಲ್ಲಿ ಕೆಲವು ದಿನ ಕಳೆದು ಚೋಳ

ದೇಶಕ್ಕೆ ಹೋಗಿ ರಾಜೇಂದ್ರಚೋಳನಿಗೆ ದರ್ಶನವಿತ್ತು, ಚೋಳಕುಮಾರಿಯನ್ನು ಮದುವೆಯಾಗಿ ಚೀರ–ಮಲೆಯಾಳ–ಗೌಳ–ಗುರ್ಜರ–ನೇಪಾಳ ಮೊದಲಾದ ದೇಶಗಳನ್ನು ಸುತ್ತಿ 'ಅಲ್ಲಲ್ಲಿ ರಾಜಪುತ್ರಿಯರಂ ಪರಿಣಯನಮಾಗುತ್ತುಂ, ತಟಾಕಂಗಳನೆತ್ತಿಸುತ್ತುಂ, ಶಿವಪುರಂಗಳಂ ಮಾಡಿಸುತ್ತುಂ, ಸತ್ರಗಳಂ ನಿರ್ಮಿಸುತ್ತುಂ, ಹೆಳವರ್ಗೆ ಕಾಲ್ಗಳಂ, ಕುರುಡರ್ಗೆ ಕಣ್ಗಳಂ, ಬಂಜೆಯರ್ಗೆ ಮಕ್ಕಳಂ ಕೊಟ್ಟು, ಅರಸು ಮಕ್ಕಳ್ಗೆ ರಾಜ್ಯಮಂ, ಕಂಡ ಕಂಡ ಬಡವರಿಗೆ ಸಂಪದಮನೀಯುತ್ತುಂ, ನೋಡಿದುದೆ ಜಗತ್ಪಾವನಂ, ಮುಟ್ಟಿದುದೆ ಪುರುಷಂ, ಮೆಟ್ಟಿದುದೆ ದಿವ್ಯಕ್ಷೇತ್ರಂ, ನಡೆದುದೆ ಪುಣ್ಯಮಾರ್ಗಂ, ನುಡಿದುದೆ ಪರಮತತ್ವಂ, ಇರ್ದುದೆ ದೇವಸಭೆ, ಸಾರ್ದುದೆ ಸುರತರುವೆನಿಪ್ಪ ನಿರ್ಮಳ ಕೀರ್ತಿಯಂ ಪಡೆದು' ಒಂದು ದಿನ ಸಕೃಲ್ಲಿ ಲಾಹೃದಯಂ, ಮಂಗಳವಾಡದ ಪೊರವಳಲ ನಂದನಮಂ ನಿರೀಕ್ಷಿಸುತ್ತುಂ ಬರುತ್ತೊಂದು ನಿರುಪಮ ಮಹಾ ತಟಾಕ ಸ್ಥಳಮಂ ಕಂಡು ಅಲ್ಲಿ ಸಕಲ ಪ್ರಾಣಿಗಳ್ಗೆ ಹಿತಕರಮಪ್ಪ ತಟಾಕಮಂ ನಿರ್ಮಿಸಬೇಕೆಂದು ಕಾರ್ಯಾರಂಭ ಮಾಡುತ್ತಾರೆ; ಮಡದಿ ಚೋಳಕುಮಾರಿ ಮೂರು ತಿಂಗಳ ಗರ್ಭದ ನೀರೆ ಎಲ್ಲರೊಡನೆ ಕೆರೆಗೆ ಮಣ್ಣು ಹೊರಲಾಗದೆ ಹುಯ್ಯಲಿಡುತ್ತಾಳೆ; ರೇವಣ ಸಿದ್ಧೇಶ್ವರರು ಕರುಣದಿಂದ ನೋಡಿ ಆಕೆಯ ಗರ್ಭವನ್ನು ಭೂಮಿಯಲ್ಲಿ ಬಚ್ಚಿಟ್ಟು ಚೋಳಪುತ್ರಿಯನ್ನು ತವರಿಗೆ ಕಳಿಸಿ ಕೆರೆಯ ಕಾರ್ಯ ಮುಗಿಸುತ್ತಾರೆ–ಆರು ತಿಂಗಳಲ್ಲಿ; ಆ ಮೇಲೆ ಭೂಮಿಯಗೆದು ನವಮಾಸಗಳು ತುಂಬಿದ ತಮ್ಮ ಕುಮಾರನನ್ನು ಹೊರದೆಗೆಯುತ್ತಾರೆ; ರುದ್ರಮುನಿ ಎಂದವನಿಗೆ ನಾಮಕರಣ ಮಾಡುತ್ತಾರೆ; ತಾವೇ ಬೆಳಸಿ ತಾವೇ ಶೈವೋಪದೇಶವನ್ನು ಕರುಣಿಸಿ, ರುದ್ರಮುನಿಯಿಂದ ಹಾವಿನಹಾಳ ಕಲ್ಲಯ್ಯನಿಗೆ 'ಕರುಣಮಂ ಮಾಡಿಸುತೆ' ಸೊನ್ನಲಾಪುರಕ್ಕೆ ಬಂದು ಚಾಮಲದೇವಿಗೆ ಕರುಣಿಸಿ, ಮುದ್ದುಗೌಡನ ಮನೆಗೆ ನಡೆದುಕೊಂಡೇ ಹೋಗಿ, ಸುಗ್ಗಲಾದೇವಿಯ ಗರ್ಭಕ್ಕೆ ಭಸ್ಮಧಾರಣೆಗೈದು, ಅವಳ ಉದರದಿಂದ ಸಿದ್ಧರಾಮನು ಜನಿಸುವನೆಂಬ ವಾರ್ತೆಯನ್ನು ಸಾರಿ ಮತ್ತೆ ಕೊಲ್ಲಿಪಾಕಿಯ ಸೋಮನಾಥ ಲಿಂಗದಲ್ಲಿ ಅಡಗುತ್ತಾರೆ.

ಹೀಗೆ,

"ವರಸುಕೃತದಂತೆ ಸತ್ಯದ ತೆರದೆ ಸುಳಿಯುತುಂ।
ಉರುಶಾಂತಿಯಂತೆ ನಿತ್ಯದ ತೆರದೆ ಸುಳಿಯುತುಂ।
ಧರೆಯೊಳಗನಂತ ದೃಷ್ಟಾಂತನುಂ ತೋರುತುಂ।
ಹರುಷದಿಂದ ಹಲವು ಸಾಮರ್ಥ್ಯಮಂ ಬೀರುತುಂ"

ಮೆರೆದ 'ಸಿದ್ಧಕುಲಪತಿ, ಶಿವಭಾವಸಿದ್ಧ, ಜ್ಞಾನನಿಧಿ, ಮಹಿಮಾಂಬುರಾಶಿ,

ಧರ್ಮಧ್ವಜಂ, ದಯಾಮೇರು, ಸತ್ಯಭೂಷಣ, ಸಾಮರ್ಥ್ಯ ಸಾಗರ, ಶಿವಭಕ್ತವನವಸಂತ, ಶಿವಯೋಗಿಲಲಾಮ, ಸಿದ್ಧಕುಲಕಮಲ, ಕಮನೀಯ ಭಾಸ್ಕರ, ಮನುಗಳಮನೆದೈವಂ, ಮುನಿಗಳ ಮೂರ್ತಿಜ್ಯೋತಿ, ಸಿದ್ಧರ ಸಿದ್ಧರಸ, ಅಶೇಷಮಂ ಸಮುದ್ಧರಿಸುವ ಸಿದ್ಧ' ರೇವಣಸಿದ್ಧನ ಜೀವನಕ್ಕೂ ಕಾಡಸಿದ್ಧನ ಜೀವನಕ್ಕೂ ಹೆಚ್ಚು ಸಾಮ್ಯವಿಲ್ಲ. ಶ್ರೀಕರ ವೀರಪ್ಪಾ ಶಿವಪ್ಪಾ ಛಪ್ರೆಯವರು ಹೇಳುವಂತೆ ರೇವಣಸಿದ್ಧರೇ ಕಾಡಸಿದ್ಧರಿಗೆ ಮಂತ್ರೋಪದೇಶ ಮಾಡಿದ ಗುರುಗಳೆಂಬುವುದೂ ಖಚಿತವಾಗಿಲ್ಲ.* ಯಾಕೆಂದರೆ ರೇವಣ ಸಿದ್ಧೇಶ್ವರರ ಬಗೆ–ಉಪಲಬ್ಧವಿರುವ ಯಾವ ಕೃತಿಯಲ್ಲಿಯೂ ಈ ಘಟನೆಯ ಉಲ್ಲೇಖವಿರುವಂತೆ ತೋರಲಿಲ್ಲ.

ಅದೇನೇ ಇರಲಿ, ಕಾಡಸಿದ್ಧೇಶ್ವರರು ಬಸವಯುಗದ ತರುವಾಯ ಆಗಿ ಹೋದವರೆಂದು ಈಗಿನಮಟ್ಟಿಗೆ ಅಂಗೀಕರಿಸಿಕೊಳ್ಳಬಹುದು. ಹದಿಮೂರನೆಯ ಶತಮಾನದಲ್ಲಿ ಬಹುಶಃ ಇವರು ಆಗಿಹೋಗಿರಬಹುದು. ಮಿರ್ಜಿಯ ಮೀರಾ ಸಾಹೇಬರೂ ಕಾಡಸಿದ್ಧೇಶ್ವರರೂ ಸಮಕಾಲೀನರೆಂದೂ ಸ್ನೇಹಿತರೆಂದೂ ಹೇಳುತ್ತಾರೆ. ಕೊಲ್ಲಾಪುರ ಗೆಝೆಟಿಯರ್ ಪ್ರಕಾರ ಮೀರಾ ಸಾಹೇಬರ ದರಗಾ ೧೪೯೧ರಲ್ಲಿ ಕಟ್ಟಲ್ಪಟ್ಟಿತು. ಅದಕ್ಕೆ ಹಿಂದೆ ಅವರು ಇದ್ದಿರಬೇಕು. ಎಷ್ಟು ಹಿಂದೆ ಎಂಬುದನ್ನು ನಿರ್ಧರಿಸಲು ಈಗಿರುವ ಆಧಾರಗಳು ಸಾಲವು. ಅವರ ಪರಂಪರೆಯಲ್ಲಿ ಈಗಿರುವ ಪೀಠಾಧಿಕಾರಿಗಳು ೨೬ನೆಯವರು. ಈ ದೃಷ್ಟಿಯಿಂದಲೂ ಮೂಲ ಕಾಡದೇವರು ಹದಿಮೂರನೆಯ ಶತಮಾನದಲ್ಲಿದ್ದಿರಬಹುದೆಂದು ಸ್ಥೂಲವಾಗಿ ಹೇಳಬಹುದು. ದೇವಗಿರಿಯ ಸಿಂಘಣನೂ ಮೂಲ ಕಾಡದೇವರ ದರ್ಶನ ಹೊಂದಿದ್ದನೆಂದೂ ಅವನಿಂದಲೇ ಕಾಡಸಿದ್ಧರು ಯೆಡೂರ ವೀರಭದ್ರ ದೇವಾಲಯದ ಜೀರ್ಣೋದ್ಧಾರ ಮಾಡಿಸಿದರೆಂದೂ ಹೇಳುತ್ತಾರೆ. ಇದೂ ಹದಿಮೂರನೆಯ ಶತಮಾನವನ್ನೇ ಸ್ಥಿರೀಕರಿಸುತ್ತದೆ.

ಒಟ್ಟಿನಲ್ಲಿ ಮೂಲ ಕಾಡಸಿದ್ಧೇಶ್ವರರು ಮಹಾರಾಷ್ಟ್ರ ಕರ್ನಾಟಕಗಳೆರಡರಲ್ಲಿಯೂ ವಿಖ್ಯಾತರಾದ ಮಹಾಪುರುಷರು. ಅವರ ಬಳಿವಿಡಿದು ಬಂದು, ಬಹುಶಃ ವಿಜಾಪುರ ಆದಿಲಷಾಹೀ ಅರಸರ ಕಾಲದಲ್ಲಿ ಕೀರ್ತಿವೆತ್ತ ಮತ್ತೊಬ್ಬ ಕಾಡಸಿದ್ಧೇಶ್ವರರು ವಚನಕಾರರಾಗಿದ್ದಾರೆ. ಅವರ ವಚನಗಳು ಮುಕ್ಕಾಲುಭಾಗ ಬೆಡಗಿನ ವಚನಗಳು. ಬೆಡಗಿನ ವಚನಗಳೆಂದೊಡನೆ ನೆನಪಾಗುವವರು ಪ್ರಭುದೇವರು ಮತ್ತು

---

* "ನಂತರ್ ರೇವಣಸಿದ್ಧಾನೀ ತ್ಯಾಂನಾ ಮಂತ್ರೋಪದೇಶ ಕರೂನ್ ವೀರಶೈವ ಮತೋದ್ಧಾರ ರೂಪೀ ಅವತಾರ ಕಾರ್ಯ ಕರಣ್ಯಾಚೀ ಆಜ್ಞಾ ದೇವೂನ್ ಅಂತರ್ಧಾನ ಸಾವಲೇ"–ಶ್ರೀ ಕ್ಷೇತ್ರ ಯೆಡೂರ್ ಪು. ೩೩೧.

ಕಾಡಸಿದ್ಧೇಶ್ವರರು. ಅವುಗಳಲ್ಲಿ ಅವರೀವರ್ತರೂ ಕಟ್ಟಿರುವ ಸಾಂಕೇತಿಕ ರೂಪಕಗಳ ರಾಶಿ ಬೆರಗುಗೊಳಿಸುವಂತಹುದು. ಆದರೆ ಬೆಡಗಿನ ವಚನಗಳೂ ಬೆಡಗಿನ ವಚನಗಳೇ. ಟೀಕೆಗಳಿಲ್ಲದೆ ತಿಳಿಯವವು. ಟೀಕೆಗಳನ್ನು ಆಧರಿಸಿ ಓದಿದರೂ ಅವುಗಳಿಂದ ಬುದ್ಧಿಗೆ ವ್ಯಾಯಮ ಒದಗುವುದೇ ಹೊರತು ಹೃದಯಕ್ಕೆ ಹಿಗ್ಗು ದೊರೆಯದು. ಆದರೂ ಅಲ್ಲಲ್ಲಿ ಬೆಡಗಿನ ವಚನಗಳೂ ಹೆಸರಿಗೆ ತಕ್ಕಂತೆ ಬೆಡಗಿನ ವಚನಗಳೇ ಆಗಿವೆ. ಉದಾಹರಣೆಗಾಗಿ "ಎರಡು ಕೊಟ್ಟು ಒಂದು ಕೊಂಡೆ ಒಂದು ಕೊಟ್ಟು ಏನೂ ಕೊಳ್ಳಲಿಲ್ಲ ; ಮೂರು ಹಣವ ಕೊಟ್ಟು ಮೂರು ರತ್ನವ ಕೊಂಡೆ; ಮೂರು ಕೊಂಡು ಆರು ಮಂದಿಗೆ ಹೇಳಿದೆ. ಏಳರಲ್ಲಿ ಸತ್ತು ಸಂಸಾರ ಮಾಡುತಿರ್ದ–ನಿಮ್ಮ ಶರಣ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ" ಎಂಬ ವಚನವನ್ನು ನೋಡಬಹುದು. ಇದರಲ್ಲಿರುವ 'ಬೆಡಗಿನ' ಅರ್ಥ ತಿಳಿಯದಿದ್ದರೂ ಇದರ ನಡಿಗೆಯ ಬೆಡಗು ಚಿತ್ತವನ್ನು ಆಕರ್ಷಿಸದಿರದು; "ಇಬ್ಬರ ಸಂಗದಲಿ ಹುಟ್ಟಲಿಲ್ಲ; ಒಬ್ಬರ ಸಂಗದಲ್ಲಿ ನಿಲ್ಲಲಿಲ್ಲ; ಮೂವರ ಕೂಡ ಮಾತಾಡಲಿಲ್ಲ; ನಾಲ್ವರ ಕೂಡ ನಡೆಯಲಿಲ್ಲ; ಐವರ ಕೂಡ ಉಣಲಿಲ್ಲ ; ಕೈಕಾಲಿಲ್ಲದ ಕುರುಡಿಯಾಗಿ ಸಂಘದಲ್ಲಿ ಸಂಸಾರವ ಮಾಡುತಿರ್ದೆ....." 'ಕಾಡಸಿದ್ಧೇಶ್ವರ ಸ್ವಾಮಿಗಳು ನಿರೂಪಿಸಿದ ವೀರಶೈವ ಷಟ್‌ಸ್ಥಲದೊಳಗೆ ಕುಲಕ್ಕೊಬ್ಬ ಗಣಂಗಳು ಕಾಯಕವಿಡಿದಾಚರಿಸಿ ನಿರ್ವಯವಾದ ವಚನವು ಎಂದು ಪ್ರಾರಂಭವಾಗುವ ಈ ವಚನಗಳಲ್ಲಿ ಅನೇಕ ಕಾಯಕ ಯೋಗಿಗಳ ಉಲ್ಲೇಖವಿದ್ದು ಅವರ ಕಾಯಕಗಳನ್ನೇ ಆಧರಿಸಿ ಬರೆದ ಉತ್ತಮವಾದ ವಚನಗಳಿರುವುದೊಂದು ವಿಶೇಷ. ಒಕ್ಕಲಿಗರ ಮುದ್ದಯ್ಯ, ಕಾಮಾಟದ ರಾಯಿ ತಂದೆಗಳು, ಸಾವಕಾರ ಮಲ್ಲಬೊಮ್ಮಣ್ಣನವರು, ಗಣಾಚಾರಿ ವೀರ ಬಸವಂತಯ್ಯಗಳು, ಯಾತ್ರೆಯ ಸಂಕಣ್ಣಗಳು, ಬೇಡರ ಕಣ್ಣಪ್ಪಗಳು, ಚರಿಕೇರಿ ಕಾಮಣ್ಣಗಳು, ಕೊರವರ ಸಂಕಣ್ಣಗಳೂ, ಚತ್ರಿಯರ ಮಹಾಲಿಂಗ ಶಬರಿಗಳು, ಶಬರಿ ಕಬ್ಬಿನ ಕಾಳಣ್ಣವರು, ವಡ್ಡರ ತಿಮ್ಮಯ್ಯಗಳು, ಡೋಹರ ಕಕ್ಕಯ್ಯಗಳು, ಚನ್ನಯ್ಯನವರ ಶೆಟ್ಟಣ್ಣಗಳು, ಹರಳಯ್ಯನವರು, ಸಮಗಾರ ಸಾಬಣ್ಣಗಳು, ಕೋಮಟಿಗರ ಕಾಳಣ್ಣಗಳು, ಬಡಿಗೇರೆ ಬಾಬಣ್ಣಗಳು, ಕಮ್ಮಾರ ಕಾಸಣ್ಣಗಳು, ವೀರಘಂಟೆ ಮಡಿವಾಳಯ್ಯಗಳು, ಜೋಯಿಸರ ಗುಂಡಯ್ಯಗಳು, ಪತ್ತಾರ ಬಾಳಣ್ಣಗಳು, ಬಳೆಗಾರ ಬಸವಂತಯ್ಯಗಳು, ಜೋಯಿಸರ ಗೋವಿಂದಭಟ್ಟರು, ಶಾನುಭೋಗ ರಾಮಯ್ಯಗಳು, ಸಿಂಪಿಗರ ಸಂಗಣ್ಣಗಳು, ಚಿತ್ರಗಾರ ಸೋಮಯ್ಯಗಳು, ಸುಣ್ಣಗಾರ ಕೇತಯ್ಯಗಳು, ಗಾಣಿಗರ ಕಲ್ಲಪ್ಪಗಳು, ಬಿಳಿಮಗ್ಗದ ಗುರುಬಸವಯ್ಯಗಳು, ಪಿಂಜಾರ ಮಮದಖಾನಯ್ಯಗಳು, ಒಲ್ಸೀ ಪೀರಣ್ಣಯ್ಯಗಳು, ಜೀರರ ಸಂಕಣ್ಣಗಳು, ಮೇದರ ಕೇತಯ್ಯಗಳು, ಸಂಕದ

ಸೋಮಯ್ಯಗಳು, ಗೊಲ್ಲರ ನಾಗಣ್ಣಗಳು, ಮಜೂರಿ ಸಂಗಣ್ಣಗಳು, ಹಾದರದ ಬ್ರಹ್ಮಯ್ಯನವರು, ಮರುಳ ಶಂಕರದೇವರು, ಬೋಗಾರ ಕಾಸಣ್ಣಗಳು, ಉಪ್ಪಣಿಗೆ ಭರಮಣ್ಣಗಳು, ತೋಟಿಗರ ಮಲ್ಲಣ್ಣಗಳು, ಬಣ್ಣಗಾರ ಬಸವಯ್ಯನವರು ಆವಟಿಗ ಮಲ್ಲಣ್ಣಗಳು, ಗಾಣದ ಕನ್ನಪ್ಪಗಳು, ಹೊಡೆಹುಲ್ಲ ಬಂಕಣ್ಣಗಳು, ಸೂಳೆ ಚೋಳಕ್ಕನವರು, ಸೂಳೆ ನಿಂಬೆವ್ವನವರು, ಇಂಗಳಗಿ ವೈಜಕ್ಕವ್ವೆಗಳು, ನಪೂರಿ ಸಂಗಣ್ಣಗಳು, ಗೌಳಿಗರ ನಾಗಣ್ಣಗಳು, ಸುಪ್ಪಿ ಶಿವಯ್ಯಗಳು, ಕಲಹದ ಖ್ಯಾತಿ ಮುರಿಗಿಸ್ವಾಮಿಗಲು–ಇಷ್ಟು ಕಾಯಕಗಳನ್ನು ಅವಲಂಬಿಸಿ ವಚನಗಳನ್ನು ಬರೆದಿದ್ದಾರೆ ಈ ಕಾಡಸಿದ್ಧೇಶ್ವರರು. ಇವರಲ್ಲಿ ಹಲವರಂತೂ ಹೆಸರಾಗಿಯೇ ಇದ್ದಾರೆ. ಉಳಿದವರು ಯಾರೋ ತಿಳಿಯದು.

'ನೆಲದೊಳಗಿನ ಮಧುರದಂತೆ, ಶಬ್ದದೊಳಗಣ ನಿಶ್ಶಬ್ದದಂತೆ ಮುಗಿಲೊಳಗಣ ಕ್ಷಣಿಕದಂತೆ' ಇರುವ ಚೆನ್ನಕದಂಬಲಿಂ 'ಆಕಾರವಿಲ್ಲ–ನಿರಾಕಾರವಿಲ್ಲ, ಅಡಿಯಿಲ್ಲ–ಅಂತರವಿಲ್ಲ, ಎಡನಿಲ್ಲ–ಬಲನಿಲ್ಲ, ಹಿಂದಿಲ್ಲ–ಮುಂದಿಲ್ಲ, ಒಳಗಿಲ್ಲ–ಹೊರಗಿಲ್ಲ, ಈರೇಳರಲ್ಲಿಲ್ಲ–ಮಧ್ಯದಲ್ಲಿಲ್ಲ'ವಂತೆ. ಆ ಲಿಂಗವನ್ನರಿಯುವುದೇ ಗುರಿಯಂತೆ–ಉಳಿದುದೆಲ್ಲಾ ಸಟೆಯಂತೆ. "ಆಕಾಶದಲ್ಲಿ ಮೋಡ ಬಂದು ಸುಳಿ–ಗಾಳಿ ಬೀಸಲು ಗಿರಿಯೊಳಗಿರ್ದ ನವಿಲು ತನ್ನ ಪುಕ್ಕವ ಬಿಚ್ಚಿ ಹರುಷಾನಂದದಲ್ಲಿ ಆಡುವುದು; ಪ್ರೇಮದಿಂದಲ್ಲಿ ಕುಣಿಯುವುದು. ಕುಣಿದರೇನು? ಚಂಡವಾಯುವಿನಿಂದ ಆಕಾಶದೊಳಗಣ ಕಾರಮುಗಿಲು ಹಾರಿಹೋದಾಗ ನವಿಲು ಅಡ್ಡ ಬಂದಿತ್ತೆ? ಇಲ್ಲ! ಗಿರಿಯೊಳಗಣ ಮಯೂರನನ್ನು ವ್ಯಾಧನು ಬಂದು ಬಲೆಬೀಸಿ ಕೊಲ್ಲುವಾಗ ಆ ಮೋಡ ಅಡ್ಡ ಬಂದಿತ್ತೆ? ಇಲ್ಲ! ಇದರ ಹಾಗೆ ನಿಮಗೆ ಬಾಲ್ಯದಲ್ಲಿ ಮಾತಾಪಿತರ ಮೋಹ; ಪ್ರಾಯದಲ್ಲಿ ಸ್ತ್ರೀ ಪುತ್ರ ಮೋಹ; ಮಧ್ಯಪ್ರಾಯದಲ್ಲಿ ಧನಧಾನ್ಯದ ಮೋಹ. ಈ ಪರಿಯಲ್ಲಿ ಅಳಲಿ, ಬಳಲಿ, ಕುಸಿದು, ಕುಗ್ಗಿ, ಮುಪ್ಪಡರಿ ಮರಣಕಾಲಕ್ಕೆ ಯಮದೂತರು ಬಂದು ಹಿಂಡಿ ಹಿಪ್ಪೆಯ ಮಾಡಿ ಒಯ್ಯುವಾಗ ಮೂವರೊಳಗೊಬ್ಬರಾದರೂ ಅಡ್ಡ ಬಂದರೆ? ಬಂದುದಿಲ್ಲ ! ಅವರ ಸಂಕಟಕ್ಕೆ ನೀವಿಲ್ಲ. ನಿಮ್ಮ ಸಂಕಟಕ್ಕೆ ಅವರಿಲ್ಲ. ನಿಮ್ಮ ಪುಣ್ಯಪಾಪಕ್ಕೆ ಅವರಿಲ್ಲ, ಅವರ ಪುಣ್ಯಪಾಪಕ್ಕೆ ನೀವಿಲ್ಲ. ನಿಮ್ಮ ಸುಖದುಃಖಕ್ಕೆ ಅವರಿಲ್ಲ, ಅವರ ಸುಖದುಃಖಕ್ಕೆ ನೀವಿಲ್ಲ; ನಿಮಗವರಿಲ್ಲ, ಅವರಿಗೆ ನೀವಿಲ್ಲ!' ಹೀಗಿರಲು ಹಗಲು ಹಸಿವೆಗೆ ಆಳಾಗಿ ಇರುಳು ನಿದ್ರೆಗೆ ಆಳಾಗಿ 'ಮದವೇರಿದ ಆನೆಯ ಹಾಗೆ, ಮಸ್ತಿಗೆ ಬಂದ ಕೋಣನ ಹಾಗೆ, ಮಚ್ಚರಕ್ಕೆ ಬಂದ ಟಗರಿನ ಹಾಗೆ' ತಿರುಗುವುದು ತರವಲ್ಲ, ಗುರಿಯಲ್ಲ, ಲಿಂಗವನರಿವ ಪರಿಯಲ್ಲ . ಬದುಕಿದರೆ ಹೀಗೆ ಬದುಕುವುದು– "ನೀರಲ ಫಲ, ಉತ್ತತ್ತಿ ಮಾವಿನಹಣ್ಣಿನಂತೆ ಇರುವವರು ಮರ್ತ್ಯರು; ಹಲಸು, ತೆಂಗು,

ದಾಳಿಂಬೆಯಂತೆ ಇರುವವರು ಸ್ವರ್ಗದವರು; ಹಾಲು, ತುಪ್ಪ, ಸಕ್ಕರೆ, ಬೆಲ್ಲದಂತಿರುವವರು ನಿಮ್ಮವರು–ಕಾಡಿನೊಳಗಾದ ಶಂಕರ ಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೆ." ಮೇಲೆ ಸವಿ, ಒಳಗೆ ಕಠಿಣವಾಗಿ, ಇಲ್ಲವೆ ಮೇಲೆ ಕಠಿಣವಾಗಿ ಬದುಕದೆ ಒಳಗೂ ಹೊರಗೂ ಸವಿಯಾಗಿ ಬದುಕಬೇಕೆಂದು ಹೇಳುತ್ತಾರೆ ಕಾಡಸಿದ್ಧೇಶ್ವರರು. ಎಂಥ ಸಾದೃಶ್ಯಗಳು, ಎಂಥ ಸದ್ಬೋಧೆ !

ಇದನ್ನುಳಿದು 'ರೂಪಕ್ಕ ಹರಿದಾಡುವಾತ ಭಕ್ತನಲ್ಲ, ರುಚಿಗೆ ಹರಿದಾಡುವಾತ ಜಂಗಮನಲ್ಲ.' ಅವರ ಇರವು ಬೇವಿನ ಇರವು. 'ಬೇವಿನಮರಕ್ಕೆ ಬೆಲ್ಲದ ಕಟ್ಟೆಯ ಕಟ್ಟಿ ಚಿನ್ನಿ ಸಕ್ಕರೆಯ ಖಾಡ (ಗೋಬ್ಬರ)ವ ಹಾಕಿ ಜೇನುತುಪ್ಪ, ನೊರೆವಾಲೆಂಬ ನೀರೆರೆದರೆ ಬೇವಿನ ಮರವಳಿದು ಬೆಲ್ಲದ ಮರನಾಗಬಲ್ಲದೆ?" ಲಿಂಗದಲ್ಲಿ ಲಿಂಗದಿಂದ ಲಿಂಗಕ್ಕಾಗಿ ಬದುಕುವವ ಶರಣ. ಶರಣನಾಗುವುದು ಸುಲಭವಲ್ಲ–

"ಶರಣನಾದೊಡೆ ಅಚ್ಚೊತ್ತಿದ ಅರಿವೆಯಂತಿರಬೇಕು! ಶರಣನಾದೊಡೆ ಮುರಿದ ಬಂಗಾರ, ಬೆಳ್ಳಾರದಲ್ಲಿ ಬೆಚ್ಚಿದಂತಿರಬೇಕು; ಶರಣನಾದೊಡೆ ಪುಷ್ಪ ಪರಿಮಳದಂತೆ, ಪ್ರಭೆ ಪಾಷಾಣದಂತೆ, ಜ್ಯೋತಿ–ಪ್ರಕಾಶದಂತೆ ಇರಬೇಕು; ಲಿಂಗದಲ್ಲಿ ಶರಣನಾದೊಡೆ ಸೂರ್ಯನ ಕಿರಣದಂತೆ, ಚಂದ್ರನ ಕಾಂತಿಯಂತೆ, ಗಾಳಿ ಗಂಧದಂತೆ, ಜಾಗಟೆ ನಾದದಂತೆ ಇರಬೇಕು. ಲಿಂಗದಲ್ಲಿ ಇಷ್ಟವುಳ್ಳಾತನೇ ಶರಣ–ಕಾಡಿನೊಳಗಾದ ಶಂಕರ ಪ್ರಿಯ ಚನ್ನ ಕದಂಬ ಲಿಂಗ ನಿರ್ಮಾಯ ಪ್ರಭುವೆ!"

ಆ ಚಿಂತೆ, ಈ ಚಿಂತೆ, ಇಂದಿನ ಚಿಂತೆ, ನಾಳಿನ ಚಿಂತೆ–ಇಂತು ಚಿಂತೆಗಳ ಸಂತೆ ನರನ ಬಾಳು. ಯಾವ ಚಿಂತೆ ತ್ಯಾಜ್ಯ–ಯಾವ ಚಿಂತೆ ಪೂಜ್ಯ?

"ಇಂದಿನ ಚಿಂತೆಯುಳ್ಳವರೆಲ್ಲ ಹಂದಿಗಳು; ನಾಳಿನ ಚಿಂತೆಯವರೆಲ್ಲ ನಾಯಿಗಳು; ತನ್ನ ಚಿಂತೆಯುಳ್ಳವರೆಲ್ಲ ಜೋಗಿಗಳು; ನಿನ್ನ ಚಿಂತೆಯುಳ್ಳವರೆಲ್ಲ ಯೋಗಿಗಳು– ನೋಡಾ ಕಾಡಿನೊಳಗಾದ ಶಂಕರಪ್ರಿಯ ಚನ್ನ ಕದಂಬಲಿಂಗ ನಿರ್ಮಾಯ ಪ್ರಭುವೆ!"

ಅಂದು ಇಂದು ಮತ್ತೊಂದೆನಬೇಡ–ದಿನವೊಂದೇ ಶಿವಶರಣೆಂಬುದಕ್ಕೆಂದರು ಅಣ್ಣನವರು. "ನಿನ್ನಿನವರೂ ಇಂದಿನವರೂ ನಾಳಿನವರೂ ಹೋದ ದಾರಿ ಒಂದಲ್ಲದೆ ಎರಡಿಲ್ಲ ನೋಡೆಂ"ದರು ಕಾಡಸಿದ್ಧೇಶ್ವರರು.

ಇನ್ನು ಸ್ವತಂತ್ರ ಸಿದ್ಧಲಿಂಗೇಶ್ವರರ ಸಂದೇಶವಾವುದೆಂಬುದನ್ನಷ್ಟು ನೋಡೋಣ. 'ಜಂಗಮರಗಳೆ', 'ಮಕ್ತ್ಯಂಗಣಾ ಕಂಠಮಾಲೆ' ಮತ್ತು ವಚನಗಳನ್ನು ರಚಿಸಿರುವ ಈ ಶಿವಭಾವಸಿದ್ಧರು 'ಮುಕ್ತ್ಯಂಗನಾ ಕಂಠಮಾಲೆ'ಯ ವ್ಯಾಖ್ಯಾನಕಾರರು ವರ್ಣಿಸಿರುವಂತೆ, 'ತಮ್ಮ ವಂಶೀಭೂತರಾದ ಗಣಂಗಳರಿದು ಆನಂದಿಸಲು ತಮ್ಮ

ನಿಜಾನುಭಾವವದ ವಚನಾಮೃತ ಶರಧಿಯೊಳಗೆ ಅನರ್ಘ್ಯರತ್ನಂಗಳನೆ ತೆಗೆದು ಸರಂಗೊಳಿಸಿ....ಮುಮುಕ್ಷು ಜನಂಗಳ ಹೃದಯಾಂತರಾಳವನೆ ತೊಳಗಿ ಬೆಳಗಿ'ದವರು. ಜಗದ ಜೀವಿಗಳನ್ನು ಉದ್ದೇಶಿಸಿ–

"ವೇಷವ ಧರಿಸಿ, ಭಾಷೆಯ ಕಲಿತು, ದೇಶದ ಸುತ್ತಿ ಬಳಲಬೇಡ–
ಜಗದೀಶನ ಪಾದವನೊಲಿದು ಪೂಜಿಸಿರಣ್ಣಾ। ಸವಿಯೂಟದಾಸೆಗೆ
ಮನವೆಳಸಬೇಡ, ಪರಮೇಶನ ಪಾದವ ನೆನೆದು ಸುಖಿಸಿರಣ್ಣಾ।
ತರ್ಕಶಾಸ್ತ್ರಾಗಮಜಾಲದ ಹೋರಟೆಯ ಹೋಗದೆ
ಮೂಲ ಮಂತ್ರವ ಮರೆಯದೆ ಸ್ಮರಿಸಿರಣ್ಣಾ। ಸಂಸಾರಿಗಳ ಸಂಗದೊಳಗಿರ
ಬೇಡ, ಸದ್ಭಾವರ ಸಂಗದೊಳಿದ್ದು ನಿತ್ಯವ ಸಾಧಸಿಕೊಳ್ಳಿರಣ್ಣಾ।
ಪರರ ಯಾಚಿಸಿ ತನುವ ಹೊರೆಯಬೇಡ, ಶಿವನಿಕ್ಕಿದ ಭಿಕ್ಷೆಯೊಳಿದ್ದು
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನನೊಲಿಸಿರಣ್ಣಾ।"

ಎಂದು ಉಚ್ಚ ಸ್ವರದಿಂದ ಕರೆಯಿತ್ತರು. 'ಸಂಸಾರಿಗಳ ಸಂಗ ಬೇಡ' ಎಂದರು. ಗಿರಿಗುಹೆಗಳನ್ನು ಸೇರೆಂದು ಸಾರಿದರೆ? ಸಂಸಾರವೆಂದರೇನು?

"ಸಂಸಾರವೆಂಬ ವಿಷವೃಕ್ಷಕ್ಕೆ ಪಂಚೇಂದ್ರಿಯಂಗಳೇ ಶಾಖೆಗಳು;
ಪಂಚ ಕ್ಲೇಶಂಗಳೇ ಫಲಗಳು; ಪಂಚ ವಿಷಯಂಗಳೇ ರಸವು !
ಈ ಫಲವ ಬಯಸಿ ಮೆದ್ದವರೆಲ್ಲ ಮರಣಕ್ಕೊಳಗಾದರು.

ಅದನರಿದು ಆ ಫಲವ ನಾನು ಮುಟ್ಟೆನು ಕಾಣಾ–ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ."

ಇದೆಂಥ ಫಲ ! ಆದಮನು ಬೇಡವೆಂದರೂ ತಿಂದು ಸ್ವರ್ಗದಿಂದ ತಳ್ಳಲ್ಪಟ್ಟು ಮರ್ತ್ಯಕ್ಕೆ ಬಂದ ನಿಷಿದ್ಧಫಲ (Forbidden fruit)ವೇ ಇದಾಗಿರಬಹುದಲ್ಲವೆ? ಈ ಫಲದ ಬಯಕೆಯೇ ಸಂಸಾರ–ಸತಿಯೊಡನೆ ಶಿವನಿಗೆ ಹಿತವಾಗಿ ಬಾಳುವುದು ಸಂಸಾರವಲ್ಲ.

ಆದರೂ, 'ಎಲ್ಲರೂ ಸಂಸಾರ ವಿಷಯ ರಸದಲ್ಲಿ ಸಾವುತ್ತಿದಾರೆ! ಆ ವಿಷಯದ ಗಾಳಿ ಸೋಂಕಿ ನಾನೂ ಬಳಲುತ್ತದೇನಯ್ಯ ! ನಿಮ್ಮ ಕೃಪಾಪ್ರಸಾದವೆಂಬ ನಿರ್ವಿಷವ ಕೊಟ್ಟು ರಕ್ಷಿಸಯ್ಯ – ಎನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ !' "ಮನವಿದು ಒಮ್ಮೆ ಪ್ರಪಂಚದತ್ತ ಹರಿವುದು, ಒಮ್ಮೆ ಪಾರಮಾರ್ಥದತ್ತ ತಿರುಗುವುದು; ಒಂದ ಹಿಡಿಸಿ ಬಂದ ಬಿಡಿಸುವುದು. ಇಂತೀ ಸಂದೇಹವನಿಕ್ಕಿ, ದಂದುಗಗೊಳಿಸಿ, ಮುಂದುಗೆಡಿಸಿ ಕಾಡುತ್ತಿದೆ ! ಈ ಮನದ ಮರುಳುತನವ ಬಿಡಿಸಿ ನಿಮ್ಮ

ಶ್ರೀಪಾದದಲ್ಲಿರಿಸೆನ್ನ ಎನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ!" "ಈ ಮನವ ನಿಲಿಸುವುದೆನ್ನ ಅಳವಲ್ಲ. ಅಗಡೆತ್ತು ಹಗ್ಗವ ಹರಿದುಕೊಂಡಂತಾಯಿತ್ತು ! ಸದ್ಬೋಧೆಯೆಂಬ ಮೇವ ಕೊಟ್ಟು ಈ ಮನವ ತಿದ್ದಯ್ಯ–ನಿಮ್ಮ ಧರ್ಮ !"

ಈ ಮನದ ಅಸ್ತ್ರ ಅವುದು? ಆಶೆ ! "ಆಶೆಯೆಂಬ ವೇಶ್ಯೆ ಆರನಾದರೂ ತನ್ನತ್ತ ಕರೆವಳು !" "ಆಶೆಯೆಂಬ ಸ್ತ್ರೀಗೆ ಮನಸೋತವರೆಲ್ಲ ಕೆಟ್ಟಕೇಡನೇನೆಂಬೆನಯ್ಯ?" "ಬಂದುದ ಕಿರಿದುಮಾಡಿ ಬಾರದುದು ಹಿರಿದುಮಾಡಿ ಆವಾಗಲೂ ಚಿಂತಿಸಿ ಬಳಲು"ವಂತೆ ಮಾಡುತ್ತದೆ ಆಶೆ ! "ಇರುವೆ ಆರು ತಿಂಗಳ ದವಸವ ಕೂಡಹಾಕುವಂತೆ–ತಾ ಕಿರಿದಾದರೂ ಆಸೆ ಹಿರಿದಾಯಿತ್ತು!" ಹಾಗಾದರೆ ಪರಿಹಾರವಾವುದು? "ಸ್ಥೂಲಕಾಯವಾದ ಮದಗಜಕ್ಕೆ ಮುಂದೇನು ಬೇಕೆಂಬ ಆಸೆಯುಂಟೆ? ಇಲ್ಲ. ಇರುವೆ ಆನೆಯ ಅಂತರವ ನೋಡಿರಣ್ಣಾ ! ಸಲಹುವ ಶಿವನಿರುವಾಗ ಬರಿದೆ ಆಸೆಯಿಂದೇಕೆ ಸಾಯುವಿರಿ–ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಾಧೀನವವನರಿಯದೆ?"

"ತಾವಾರೆಂದರಿಯದೆ ನೋವುತ್ತ ಬೇವುತ್ತ ಸಾವುತ್ತಿಪ್ಪವರಿಗೆ, ಮಾಡಬಾರದ ಕರ್ಮವ ಮಾಡಿ, ಬಾರದ ಭವದಲ್ಲಿ ಬಂದು, ಉಣ್ಣದ ಪೇಯವನು ಉಂಡು, ಕಾಣದ ದುಃಖವ ಕಂಡು ಸತ್ತು ಹೋಹರಿಗೆ" ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರರ ಸದ್ಬೋಧೆ ಸಂಜೀವಿನಿಯಾಗಿದೆ. 'ಹುಸಿಯಿಲ್ಲದ ಶಿಷ್ಯನು ಮರಹಿಲ್ಲದ ಗುರುವಿನ ಪಾದವ ಹಿಡಿದಡೆ , ಇರವು ಅರಿವಾಗದಿರುವುದೆ?

"ಕೊರಳುದ್ದಕ್ಕೆ ಹೂಳಿಸಿಕೊಂಡು ಮುಗಿಲುದ್ದಕ್ಕೆ ನೆಗೆದಿಹೆ"ನೆಂಬುವರ ನೋಡಿ ನಗುವ ಸ್ವತಂತ್ರ ಸಿದ್ಧಲಿಂಗೇಶ್ವರ. ಮುಗಿಲೆತ್ತರದ ಮಾತುಗಳೇಕೆ? 'ವಾಹಕನ ಇಚ್ಛೆಯಲ್ಲಿ ನಡೆವ ವಾಹನದ ಹಾಗೆ ದೇಹ ಧರ್ಮದಿಚ್ಛೆಯಲ್ಲಿ ಹೋಗದೆ ತನ್ನ ವಶಕ್ಕೆ ತಂದು ನಡೆಸಿದರೆ' ಸಾಕು. ಇದನುಳಿದ ಜಪತಪ ವ್ಯರ್ಥ."

> "ತಪವೆತ್ತ, ಹೆರರ ಕೇಡಿಂಗೆ ಬಗೆವುದೆತ್ತ?
> ಆಪವೆತ್ತ , ಶರಣರ ಮೇಲೆ ಅನೃತವ ನುಡಿವುದೆತ್ತ?
> ಪಂಚಾಚಾರವೆತ್ತ, ಪಾತಕಕ್ಕೆ ಮನವ ಬಗೆವುದೆತ್ತ?
> ಇಂತೀ ಹೊರಬಳಕೆಯ ಲೋಕರಂಜನೆಯಲ್ಲಿಪ್ಪವರಿಗೆ ನಾನಂಜುವೆ !
> ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನೀನೂ ಅಂಜಿ ದೂರದಲ್ಲಿ ಓಡುವೆ!"

ಲೋಕರಂಜನೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರು ಏನನ್ನು ತಾನೆ ಮಾಡರು?

"ಆಚಾರವನನಾಚಾರಮಾಡಿ ನುಡಿವರು;
ಅನಾಚಾರವನಾಚಾರಮಾಡಿ ನುಡಿವರು;
ಸತ್ಯವನಸತ್ಯವಮಾಡಿ ನುಡಿವರು;
ಅಸತ್ಯವ ಸತ್ಯವ ಮಾಡಿ ನುಡಿವರು;
ವಿಷವ ಅಮೃತವೆಂಬರು, ಅಮೃತವ ವಿಷವೆಂಬರು;
ಸಹಜವನರಿಯದ ಅಸಹಜರಿಗೆ ಶಿವನೊಲಿಯೆಂದರೆ ಎಂತೊಲಿವನಯ್ಯ?"

ಸಹಜವನರಿದು ಶಿವನನ್ನೊಲಿಸು; ಅಸಹಜನಾಗಿ, ಅಸ್ವಾಭಾವಿಕನಾಗಿ, ಲೋಕರಂಜಕನಾಗಿ, ಆಶಾಪಾಶನಿಬ್ಧನಾಗಿ, ಮನದ ಹಿಂದೆ ಅಲೆವ ಮರುಳನಾಗಿ ಕೆಮ್ಮನೆ ಕೆಡಬೇಡ. "ನಾನೆಲ್ಲಿಂದ ಬಂದೆ? ನನಗೀ ದೇಹ ಬಂದ ಪರಿ ಯಾವುದು? ಇನ್ನು ಮುಂದೆಯೆಯ್ದುವ ಗತಿ ಯಾವುದು–ಎಂಬ ನಿತ್ಯ ನಿತ್ಯ ವಿಚಾರದಲ್ಲಿರು. ನೀನೇನು ಹುಲುಗಿಳಿಗಿಂತಲೂ ಕೀಳನೆ? 'ಕಾಡೊಳಗಣ ಹುಲುಗಿಳಿಯ ತಂದು, 'ಓಂ ನಮಃ ಶಿವಾಯ, ಹರ ಹರ, ಶಿವ ಶಿವ' ಎಂದು ಓದಿಸಿದರೆ ಓದದೆ ನಿಚ್ಚ ನಿಚ್ಚ? ನರಾರಣ್ಯದೊಳಗಿದ್ದ ಮನುಷ್ಯರ ಹಿಡಿದು ತಂದು ಹಿರಿದು ಪರಿಯಲ್ಲಿ ಉಪದೇಶವ ಮಾಡಿ ಶಿವಮಂತ್ರೋಪದೇಶವ ಹೇಳಿದೊಡೆ ಅದ ಮರೆದು ಕಾಳ್ನುಡಿಯನೇ ನುಡಿವರು!" ಏಕೆ?

"ಜೊಳ್ಳು ಮಾತೆಂದರೆ ನಲಿನಲಿದು ನುಡಿವರು;
ಕಾಳುಗೆಲಸವೆಂದಡೆ ನಲಿನಲಿದು ಮಾಡುವರು;
ಶ್ರೀ ಗುರುಸೇವೆಯೆಂದೊಡೆ ನಿತ್ಯ ಲಿಂಗಾರ್ಚನೆಯೆಂದೊಡೆ
ಮತ್ತ ಪಂಚಾಕ್ಷರಿ ಜಪವೆಂದೊಡೆ ಅಳಲುವರು, ಬಳಲುವರು !
ಇಂತಪ್ಪ ದುರುಳರಿಗೆ ದುಃಖವೇ ಪ್ರಾಪ್ತಿಯಲ್ಲದೆ ನಿಜಸುಖವೆಂಬುದಿಲ್ಲ!"

ನಿಜಸುಖ ಬೇಕೋ ದುಃಖ ಬೇಕೋ? ದುಃಖ ಬೇಡವಾಗಿದ್ದರೆ ಮೋಹಕವೆನಿಸಿದರೂ ಕೆಡುಕಿನ ಕರೆಗೆ ಕಿವಿಗೂಡಬೇಡ, ಸುಖ ಬೇಕಿದ್ದರೆ ಆಕರ್ಷಕವಿಲ್ಲದಿದ್ದರೂ ಒಳಿತಿನ ಕರೆಗೆ ಓಗೊಡು! ಇದು ಸ್ವತಂತ್ರ ಸಿದ್ಧಲಿಂಗೇಶ್ವರರ ಸಂದೇಶ. ಈ ಸುಜ್ಞಾನವೆಂಬ ಹಡಗನೇರಿದ ಗುರು ತನ್ನನಾಶ್ರಯಿಸಿದ ಶಿಷ್ಯನ ಸಂಸಾರವೆಂಬ ಸಮುದ್ರವ ದಾಂಟಿಸು'ವನು. ಅವನ 'ಕೈಯಲ್ಲೊಂದು ಅಮೃತ ಫಲವಿದೆ ನೋಡಾ ! ಆ ಫಲವ ಮೆದ್ದವರೆಲ್ಲ ಅಮರರಾದುದ ಕಂಡು ನಾನು ಬೆರಗಾದೆನು!'

■

# ಘನತೆವೆತ್ತ ಘನಲಿಂಗದೇವ

ಈ ಹೆಣ್ಣುದನಿಯನ್ನು ಆಲಿಸಿರಿ!

“ಇನ್ನೇವೆನಿನ್ನೇವೆನೆಲೆ ತಂದೆ ! ಹೆಣ್ಣು ಬಾಲೆಯ ಮೊರೆಯ ಕೇಳಯ್ಯಾ : ಮುನ್ನ ಹುಟ್ಟಿದ ಒಂಭತ್ತು ಮಕ್ಕಳ ನಗೆನುಡಿಯ ಕೇಳಲಾರೆ ! ಮನೆಯ ಗಂಡನ ಬೆಡಗು ಬಿನ್ನಾಣವ ನೋಡಲಾರೆ. ಎನಗೊಂದು ಮಗುವ ಕೊಡಯ್ಯ ಗುರವೆ! ಆ ಮಗುವಿನ ಕೈಯಿಂದ ಗಂಡನ ತಲೆಯ ಹೊಡೆಯಿಕ್ಕಿಸು ! ಮಕ್ಕಳ ಕೊರಳ ನರಿಯಿಸು ; ಎನ್ನ ದಂಡವ ಕೊಳಿಸು ; ಪಟ್ಟಣಕ್ಕೆ ಹೋಗುವ ಹಾದಿ ಮೂರು ಬಟ್ಟೆಯ ಕೂಡಿದ ಮಧ್ಯದಲ್ಲಿ ಮಣಿಹವ ಮಾಡುತಿಪ್ಪ ಕೈಕಾಲಿಲ್ಲದ ಮೋಟಂಗೆ ಮೆಚ್ಚಿ ಮರುಳಾದ ಪತಿವ್ರತೆಯಯ್ಯಾ ನಾನು ! ಎನ್ನ ಕೊಂಡುಹೋಗಿ ಅವನಿಗೆ ಮದುವೆಯ ಮಾಡಯ್ಯ. ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ !”

ಯಾರಿವಳು ಹದಿಬದೆ? ಎಲ್ಲ ಗರತಿಯರ ಪರಿಯಂತಲ್ಲ ಇವಳ ರೀತಿ. ಮಗನ ಕೈಯಿಂದಲೇ ಗಂಡನ ತಲೆ ಹೊಡೆಸಬೇಕೆನ್ನುತ್ತಾಳೆ. ಆದರೂ ಆ ಕೈಕಾಲಿಲ್ಲದ ಮೋಟನೊಡನೆ ತನ್ನ ಮದುವೆ ಮಾಡೆಂದು ಗುರುವಿಗೆ ಮೊರೆಯಿಡುತ್ತಲಿದ್ದಾಳೆ. ಯಾರೆಂದು ಅವಳನ್ನೇ ಕೇಳಿ ನೋಡೋಣ.

“ಎಲೆ ತಂಗಿ, ಶರಣಸತಿ ಲಿಂಗಪತಿಯಾದ ಪತಿವ್ರತಾಭಾವದ ಚಿಹ್ನೆ! ನಿನ್ನ ನಡೆನುಡಿಯಲ್ಲಿ ಹೊಗರುದೋರುತ್ತಿದೆ; ನಿನ್ನ ಪೂರ್ವಾಪರವಾವುದಮ್ಮಾ?”

“ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು ಭಂಡಾರಿ ಬಸವಪ್ಪೊಡೆಯರು; ಆ ಭಂಡಾರಿ ಬಸವಪ್ಪೊಡೆಯರ ಶಿಷ್ಯರು ಕೂಗಲೂರು ನಂಜಯ್ಯ ದೇವರು; ಆ ನಂಜಯ್ಯದೇವರ ಕರಕಮಲದಲ್ಲಿ ಉದಯವಾದ ಶರಣವೆಣ್ಣಯ್ಯಾ ನಾನು ? ಎನ್ನ ಗುರುವಿನ ಪರಮಗುರು ಪರಮಾರಾಧ್ಯ ತೋಂಟದಾರ್ಯನಿಗೆ ಗುರುಭಕ್ತಿಯಿಂದ ಎನ್ನ ಶರಣು ಮಾಡಿದರು. ಆ ತೋಂಟದಾರ್ಯನು ತನ್ನ ಕೃಪೆಯೆಂಬ ತೊಟ್ಟಿಲೊಳಗೆ ಮಲಗಿಸಿ, ಪ್ರಮಥಗಣಂಗಳ ವಚನ ಸ್ವರೂಪಾರ್ಥವೆಂಬ ಹಾಲು ತುಪ್ಪವಂ ಸದಾ ದಣಿಯಲೆರೆದು ಅಕ್ಕರಿಂದ

ರಕ್ಷಣೆಯಂ ಮಾಡಿ 'ಘನಲಿಂಗಿ' ಎಂಬ ನಾಮಕರಣಮಂ ಕೊಟ್ಟು ಪ್ರಾಯಸಮರ್ಥೆಯಂ ಮಾಡಿ, ಸತ್ಯಸದಾಚಾರ ಜ್ಞಾನಕ್ರಿಯೆಗಳೆಂಬ ದಿವ್ಯಾಭರಣಗಳಂ ತೊಡಿಸಿ, ಅರುಹೆಂಬ ಬಣ್ಣವನಿರಿವಿಡಿದುಡಿಸಿ, ಅರ್ಥಿಯ ಮಾಡುತಿಪ್ಪ ಸಮಯದಲ್ಲಿ...."

"ಏನಾಯಿತು?"

"(ಲಜ್ಜೆಯಿಂದ ಘನಲಿಂಗಿ ಮೋಹದ ಚೆನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು ಬೇಡಿ ಕಳುಹಲು ಎಮ್ಮವರು ಅವರಿಂಗೆ ಮಾತನಿಕ್ಕಿದರಮ್ಮ!"

"ನೀನು ಗಂಡೆಂದು ಭಾವಿಸಿದ್ದೆವಲ್ಲ?"

"ಗಂಡಾಗಿಯೇ ಹುಟ್ಟಿದೆ. ಆದರೆ ಕಾಸೆಯನಳಿದು ಸೀರೆಯನುಟ್ಟು ಗಂಡು ಹೆಣ್ಣಾಗಿ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನನನ್ನು ಮದುವೆಯಾದೆ!"

ಗಂಡು ಹೆಣ್ಣಾಗುವುದುಂಟೆ?"

"ಆಗುವುದುಂಟು. ಈ ಜನ್ಮದಲ್ಲಿ ಪಿಂಡೋತ್ಪತ್ತಿಯಲ್ಲಿಯೆ 'ಶರಣಸತಿ ಲಿಂಗಪತಿ' ಎಂಬ ಜ್ಞಾನ ತಲೆದೋರಿ ನಾನು ಶರಣವೆಣ್ಣಾಗಿ ಹುಟ್ಟಿದೆನಯ್ಯಾ? ಎನಗೆ ಅವನ ಬಯಕೆಯೆಂಬ ಸಿಂಗಾರದ ಸಿರಿಮುಡಿ ಮೂಡಿತು; ಅವನ ನೋಡುವೆನೆಂಬ ಮುಗುಳೋಲೆ ಮೂಡಿದುವು : ಅವನೊಡನೆ ನುಡಿಯಬೇಕೆಂಬ ಉರುವಣೆಯ ಸಂಪದದ ಜವ್ವನ ಕುಡಿವರಿಯಿತ್ತು; ಅವನ ನೊಲಿಸಬೇಕೆಂಬ ಆಭರಣಗಳಾದುವು!"

"ಇದಾವ ಹಾದಿ ಹಿಡಿದೆ ತಂಗಿ? ಬೇರೆಯ ದಾರಿ ಸಿಕ್ಕಲಿಲ್ಲವೆ ನಿನಗೆ !"

"ಅಣ್ಣಾ, ಎನ್ನ ಪ್ರಾಣ ಷಟ್‌ಸ್ಥಲಕ್ಕೆ ಸಲೆಸಂದ ಅಕ್ಕಮಹಾದೇವಿಯರು ಹೋದ ಬಟ್ಟೆಯಲ್ಲಿ ನಡೆವುದಲ್ಲದೆ ಕಿರುಬಟ್ಟೆಯಲ್ಲಿ ನಡೆಯದು !"

"ಅಕ್ಕಮಹಾದೇವಿ ಕೌಶಿಕನ ಕಣ್ಣು ಕುಕ್ಕಿಸಿದ, ಮಲ್ಲಿನಾಥನ ಮನವ ಮೋಹಿಸಿದ ಚೆಲುವೆ. ಅವಳ ಹಾದಿಯಲ್ಲಿ ಹೋಗುವಷ್ಟು ಎದೆಯಿದೆಯೆ ನಿನಗೆ?"

'ಶರಣ ಸತಿ ಲಿಂಗಪತಿ' ಎಂದು ಬಣ್ಣಿಸಿ ಒಪ್ಪವಿಟ್ಟು ನುಡಿದುಕೊಂಬ ಕುಟಿಲವೆಣ್ಣಲ್ಲವಯ್ಯಾ ನಾನು ! ಸೋರ್ಮುಡಿಯ ಸೊಬಗಿನ ನಿಡುಹುಬ್ಬಿನ ಕಡುಜಾಣೆ; ಅಲರ್ಗಣ್ಣ ಅಂಬುಜಮುಖಿ; ಮುಗುಳ್ನಗೆಯ ಸೊಬಗುವೆಣ್ಣು; ಬಂದುಗೆಯ ಬಾಯ ಅಂದವುಳ್ಳವಳು; ನಳಿದೋಳ ನಾಯಕಿ; ಕಕ್ಕಸ ಕುಚದ ಸೊಕ್ಕು ಜವ್ವನೆ; ಸೆಳೆನಡುವಿನ ಸಿರಿಕುಂಭಸ್ಥಳದ ನಿತಂಬಿನಿ, ಪೊಂಬಾಳೆದೊಡೆಯ ಕಂಬು ಕಂಧರೆ, ಚೆಂದಳಿರ ಚರಣದ ಮಂದಗಮನೆ–ಇಂತಪ್ಪ ಚೆಲುವಿನ ಕೋಮಲಾಂಗಿ !"

"ಹಾಗಾದರೆ ಹಿಗ್ಗಿ ನಲಿಯದೆ ಹಲುಬಿ ಹಂಬಲಿಸುತ್ತಿರುವೆಯೇಕೆ?

"ಭಕ್ತಿಯೆಂಬ ವಿರಹಾಗ್ನಿ ಎನ್ನ ಹೃದಯ ಕಮಲದಲ್ಲಿ ಬಳೆದು ಬೀಗಿ ಬೇರುವರಿದು ನಿಂದಲ್ಲಿ ನಿಲಲೀಸದಯ್ಯಾ, ಕುಳಿತಲ್ಲಿ ಕುಳ್ಳಿರಲೀಸದಯ್ಯಾ!"

"ಏಕೆ? ನಿನ್ನ ಕೈಹಿಡಿದವ ನಿನ್ನನ್ನು ಮರೆತುಬಿಟ್ಟನೆ?"

"ಇಲ್ಲದಿದ್ದರೆ ನಾನು ಧರೆಯೊಳುಳಿವುದರಿಂದು. ಪ್ರೇಮದಿಂ ಬಂದು, ಕಣ್ಣುಂಬಿ ನೋಡಿ, ಮನವೊಲಿದು ಮಾತಾಡಿ, ಕರುಣದಿಂದ ಕೈವಿಡಿದು, ಅಕ್ಕರದಿಂದಾಲಿಂಗಿಸಿ, ದಿಟ್ಟಿಸಿ ಬೊಟ್ಟಾಡಿ, ಲಲ್ಲೆವಾತಿಂ ಗಲ್ಲವ ಪಿಡಿದು, ಪುಷ್ಪ ಪರಿಮಳದಂತೆ, ನಾನು ನೀನೆಂಬುಭಯವಿಲ್ಲದಂತೆ ಕೂಡೆನ್ನ ಪ್ರಾಣೇಶನೇ !' ಎಂದು ಒರಲುತ್ತಿದ್ದೆನೆ ನಾನು? 'ಕೂಡದಿರ್ದೊಡೆ ಗಲ್ಲವ ಪಿಡಿ ಪಿಡಿಯದಿರ್ದೊಡೆ ಬೊಟ್ಟಾಡು, ಬೊಟ್ಟಾಡದಿರ್ದೊಡೆ ಆಲಿಂಗಿಸು, ಆಲಿಂಗಿಸದಿರ್ದೊಡೆ ಕೈವಿಡಿ, ಕೈವಿಡಿಯದಿರ್ದೊಡೆ ಮಾತಾಡು, ಮಾತಾಡದಿರ್ದೊಡೆ ನೋಡು, ನೋಡದಿರ್ದೊಡಿ ಸುಮ್ಮನೆ ಬಾ, ಬಾರದಿರ್ದೊಡೆ ಪ್ರಮಥ ಗಣಂಗಳೊಡನೆ ಎನ್ನವಳೆಂದು ನುಡಿ, ನುಡಿಯದಿರ್ದೊಡೆ ನಿನ್ನ ಮನದಲ್ಲಾದರೂ ನನ್ನವಳೆಂದು ಭಾವಿಸು!' ಎಂದು ಬೇಡಿ ಬಳಲುತ್ತಿದ್ದೆನೆ?"

"ಇಂಥ ಕಲ್ಲೆದೆಯವನನ್ನೇಕೆ ಸುಮ್ಮನೆ ಒಲಿದು ಬಳಲುತ್ತಿರುವೆ? ಬಿಟ್ಟು ಬಿಡು!"

"ಹಾಗೆನ್ನದಿರಣ್ಣ ! ಎಂತಾದರೂ ಎನ್ನ ಗಂಡನ ಹೆಂಡತಿಯೆನಿಸಿಕೊಂಬೆನು! ಎನ್ನ ಗಂಡ ಆಳಲಿ, ಆಳದೆ ಹೋಗಲಿ, ಪತಿಭಕ್ತಿಯ ಬಿಡೆಕಣಾ, ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ!"

"ನೀನು ನಿಟ್ಟೈದೆ, ಕಟ್ಟುಗರತಿ! ನಿನಗಾವ ಹರಕೆ ಕೊಡಲಿ? ನಿನ್ನ ಬಲವಿಗೆ ಗೆಲವಾಗಲಿ !ಮಂಗಲಮಸ್ತು !"

ಕೊನೆಗೂ ಘನಲಿಂಗಿಯ ಪತಿವ್ರತಾಧರ್ಮಕ್ಕೆ ಜಯ ದೊರೆಯಿತು. "ನಿನ್ನ ನೆನೆನೆನೆದು ಎನ್ನ ಮನ ಬೀಗಿ ಬೆಳೆದು ತಳಿರಾಗಿ ಹೂಮಿಡಿಗೊಂಬುದಯ್ಯ ! ನಿನ್ನ ಹಾಡಿ ಹಾಡಿ ಜಿಹ್ವೆ ಅಮೃತ ಸಾಗರದೊಳೋಲಾಡುತ್ತಿಪ್ಪುದಯ್ಯ !" ಎಂಬ ಧನ್ಯರೆ ಕ್ರಮಕ್ರಮವಾಗಿ ಅಳವಟ್ಟಿತು. "ಎನ್ನ ಕೇಡಿಂಗೆ ಕಡೆಯಿಲ್ಲ ! ಕಾಯ ವಿಕಾರವಂಬ ಕತ್ತಲೆ ಕವಿಯಿತು; ಮನೋವಿಕಾರವೆಂಬ ಹುಚ್ಚುನಾಯಿಗಳು ಕಚ್ಚಿ ಒದರುತ್ತಿವೆ; ಇಂದ್ರಿಯ ವಿಕಾರವೆಂಬ ಕಾಳರಕ್ಕಸಿ ಆಗಿದಗಿದು ನುಂಗುವಳು ! ಕಾಯಲಾಗದೆ ದೇವಾ ! ಅನ್ಯಸಮಯದ ಗುಮ್ಮಟನ ಕೈವಿಡಿದೆತ್ತಿಕೊಂಡೆ, ನಿನ್ನ ಸಮಯದ ಶಿಶು ಬಾವಿಯಲ್ಲಿ ಬೀಳ್ವುದ ನೋಡುತಿಪ್ಪರೆ ಕರುಣಿ?" ಎಂದು ಹುಯಿಲು ಬರುಬರುತ್ತ 'ಭೋಗವೆಂಬ ಸೂಚಿ ಮುರಿದು ನಾಲ್ಕು ಕರಣವೈದಿಂದಿಯವೆಂಬ ಒಂಭತ್ತು

ದಾರಮಂ ತುಂಡು ತುಂಡಿಗೆ ಹರಿಯಲೊಡನೆ ತನು ಪ್ರಕೃತಿಯ ಕೂಡಿತ್ತು, ಪ್ರಾಣ ಪರಬ್ರಹ್ಮನ ಕೂಡಿತ್ತು !" ಎಂಬ ಉದ್ಗಾರವಗಿ ಮಾರ್ಪಟ್ಟಿತು; "ಮತಿಗೆಟ್ಟು ಮಾನವಲೋಕಕ್ಕೆ ಬಂದೆ ! ಬಂದ ಬರವಿನಲ್ಲಿಯೆ ಭವವೆಂಬ ಭೂಪತಿ ಎನ್ನ ಸೆರೆ ವಿಡಿದು ಕಾಲಿಕಾಮರವಶಕ್ಕೆ ಕೊಟ್ಟನಯ್ಯಾ ! ಕಾಲಂಗೆ ಕಾಯದ ದಂಡ ತೆತ್ತುದು ಲೆಕ್ಕವಿಲ್ಲ; ಮನಸಿಜಂಗೆ ಮನವ ದಂಡ ತೆತ್ತುದು ಲೆಕ್ಕವಿಲ್ಲ !...... ಎನ್ನ ಸೆರೆಯ ಬಿಡಿಸಿಕೊಳ್ಳಿರಯ್ಯ ಬಸವಾದಿ ಪ್ರಮಥರೇ ನಿಮ್ಮ ಸೆರೆಗೊಡ್ಡಿ ಬೇಡಿಕೊಂಬೆನಯ್ಯಾ!' ಎಂಬ ಕರುಳಿನ ಕೂಗು." 'ಕ್ರಿಯೆಯೆಂಬ ಬೀಜದಲ್ಲಿ ಸಮ್ಯಕ್‌ಜ್ಞಾನವೆಂಬ ವೃಕ್ಷ ಪಲ್ಲವಿಸಿತು ; ಆ ವೃಕ್ಷಕ್ಕೆ ಭಕ್ತಿಯೆಂಬ ಹೂವಾಯಿತು; ಆ ಹೂವು ಲಿಂಗ ನಿಷ್ಠೆಯೆಂಬ ಕಾಯಾಗಿ, ಅಕಾಯ ಮುಕ್ತಿಯೆಂಬ ಹಣ್ಣಾಯಿತು. ಆ ಹಣ್ಣಿನ ಅಮೃತಸಾರಮಂ ನಾನು ದಣಿಯಲುಂಡು ಬಸವಾದಿ ಪ್ರಮಥರ ಪಡುಗ ಪಾದರಕ್ಷೆಯಂ ಹಿಡಿಯುವುದಕ್ಕೆ ಯೋಗ್ಯನಾದೆನಯ್ಯಾ !' ಎಂಬ ಸಂತೃಪ್ತಿಯ ಸ್ವರವಾಗಿ ಪರಿಣಮಿಸಿತು; 'ನೀಯೆನ್ನ ಅಂಗದ ಮೇಲೆ ಬಂದೆ ಎಂಬ ಸಂತೋಷಕ್ಕೆ ಉಬ್ಬಿ ಕೊಬ್ಬಿ ಅಹಂಕರಿಸಿ ಹಾಡಿದೆನಲ್ಲದೆ ನುಡಿದಂತೆ ನಡೆಯಲಿಲ್ಲ, ನಡೆದಂತೆ ನುಡಿಯಲಿಲ್ಲ. ಇದು ಕಾರಣ ಎನ್ನ ಮನದ ಕಾಳಿಕೆಯ ಕರುಣದಿಂದ ಕಳೆದು ಅವಸ್ಥಾತ್ರಯಂಗಳಲ್ಲಿ ನಿನ್ನನಪ್ಪಿ ಅಗಲದಂತೆ...ಮಾಡಯ್ಯ!' ಎಂಬ ಬಿನ್ನಪ, "ಘನಕ್ಕೆ ಘನವಾದ ಮಹಾಘನಲಿಂಗವ ನಿಟ್ಟಿಸಿಕಟ್ಟಕ್ಕರಿಂ ನೋಡಿ ಮನನಲಿದು ಆನಂದಾಶ್ರುಜಲ ಸುರಿದು ಪುಳಕಂಗಳುಣ್ಮಿ ರೋಮಾಂಚನ ಗುಡಿಗಟ್ಟಿ ಪ್ರಣವದ ನುಡಿ ತಡೆಬಡಿಸಿ ನಡೆದಟ್ಟಣಿಸುವ ಕಾಲದಲ್ಲಿ ಕರ್ಪೂರದ ಪುತ್ತಳಿ ಒಂದು ಉರಿಯ ಪುತ್ತಳಿಯನಾಲಿಂಗಿಸಿದಂತೆ ಆ ಘನಲಿಂಗಮಂ ಅಸಮರ್ದಪ್ಪಿ ಘನಲಿಂಗಿ ತಾನೆಯಾದ ಮಹಾಗುರು ಸಿದ್ಧೇಶ್ವರ ಪ್ರಭುವಿನ ಚರಣಮಂ ನಾನು ಕರಸ್ಥಳದಲ್ಲಿ ಪಿಡಿದು ಪೂಜೆಯಂ ಮಾಡಲೊಡನೆ ಪಂಚಪ್ರಾಣವೇ ಪರಬ್ರಹ್ಮವಾಯಿತು. ಪ್ರವೃತ್ತಿಯ ಬಟ್ಟೆ ಹುಲ್ಲು ಹುಟ್ಟಿತು; ನಿವೃತ್ತಿಯ ಬಟ್ಟೆ ನಿರ್ಮಲವಾಯಿತು; ಉಯ್ಯಾಲೆಯ ಮಣೆ ನೆಲೆಗೆ ನಿಂದಂತೆ ಆದೆನಯ್ಯಾ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ!' ಎಂಬ ಆನಂದಲಹರಿಯಾಗಿ ಹರಿಯಿತು. "ತೊಟ್ಟು ಬಿಟ್ಟು ಹಣ್ಣಾಗಿ ಎನಗೆ ನಿಜೈಕ್ಯದ ಬಟ್ಟೆ ನಿರುತವಾಯಿತಯ್ಯಾ. ಪರಭವಕ್ಕೆ ತರುವ ಪಂಚಭೂತಗಳ ಪಂಚಬ್ರಹ್ಮಕ್ಕೊಪ್ಪಿಸಿದೆ......ತ್ರಿಭುವನವೆಂಬ ತ್ರಿಪುರಮಂ ಸುಟ್ಟು ಸಂಸಾರವೆಂಬ ಸಪ್ತ ಸಮುದ್ರಗಳಂ ದಾಂಟಿದೆ! ಉನ್ಮನಿಯಪುರದ ಬಚ್ಚ ಬರಿಯ ಬೆಳಗಿನ ಬಯಲ ಬ್ರಹ್ಮವನೊಳಹೊಕ್ಕೆನಯ್ಯಾ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ!' ಎಂಬ ಅಮೃತಾನುಭವ ಅರಳಾಗಿ ಉರುಳಿತು !

ಮೈಸೂರು ಜಿಲ್ಲೆಯಲ್ಲಿ ಕಪಿಲಾನದಿಯ ತೀರದಲ್ಲಿರುವ ಪ್ರಾಚೀನವಾದ ಶ್ರೀ ಸುತ್ತೂರು ವೀರಸಿಂಹಾಸನದ ಗುರುಪರಂಪರೆಯಲ್ಲಿ ಗಣಸಹಸ್ರದಲ್ಲಿ ಗಣಿತರಾಗಿರುವ ಶಿವರಾತ್ರೀಶ್ವರರು, ಕಂಚಿಯ ರಾಜೇಂದ್ರ ಚೋಳನಿಂದ ಪೂಜೆಗೊಂಡ ಈಶಾನೇಶ್ವರ

ಒಡೆಯರು, ಪರಮಶಿವಾಧಿಕ್ಯಶಿಖಾಮಣಿಯನ್ನು ಬರೆದ ಸಿದ್ಧನಂಜದೇಶಿ–ಕೇಂದ್ರರು, ವೃಷಭೇಂದ್ರವಿಜಯ ಪುರಾಣವನ್ನು ಬರೆದ ಇಮ್ಮಡಿ ಶಿವರಾತ್ರೀಶ್ವರರು, ಚೋಳ ರೇಣುಕ ಸಂವಾದಕ್ಕೆ ಟೀಕೆ ಬರೆದ ಚೆನ್ನಬಸವ ಶಿವಾಚಾರ್ಯರು, ಎರಡು ಕೋಟಿ ಶಿವಮಂತ್ರಗಳನ್ನು ಬರೆದು ಬೆಳಕಾಗಿರುವ ಈಗಿನ ಶ್ರೀ ಪಟ್ಟದ ಶ್ರೀ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರೂ ಹೆಸರಾಂತಿರುವಂತೆ ಘನಲಿಂಗದೇವನೂ ಘನತೆವೆತ್ತಿದ್ದಾನೆ. ಪರಮಗುರು ತೋಂಟದ ಸಿದ್ಧಲಿಂಗೇಶ್ವರರ



**ಅನುಭವದ ಮಧುಕೋಶ ಪರಮಾರ್ಥಪೀಯೂಷ ಘನಲಿಂಗದೇವ**

ಕರುಣದ ಕಂದನಾಗಿ ಬೆಳೆದು ಶರಣಮಾರ್ಗದ ಮೈಲಿಗಲ್ಲಾಗಿ ಮೆರೆದ ಘನಲಿಂಗದೇವನು ವಚನ ವಾಙ್ಮಯದಲ್ಲಿಯೂ ಉಚ್ಚಸ್ಥಾನದಲ್ಲಿ ವಿರಾಜಿಸುತ್ತಿದ್ದಾನೆ. "ಭಕ್ತಿಗೆ ಭಂಡಾರವಾಗಿಪ್ಪ ಸಂಗನ ಬಸವಣ್ಣ, ಎನಗೆ ಹಾಗತೂಕ ಭಕ್ತಿಯ ಕೊಡಯ್ಯಾ! ಪ್ರಸಾದವೆ ಚಿತ್ಪಿಂಡ ಸ್ವರೂಪನಾದ ಚೆನ್ನಬಸವಣ್ಣಾ, ಎನಗೆ ಹಾಗ ತೂಕ ಜ್ಞಾನವ ಕೊಡಯ್ಯಾ ! ಮಾಯಾಕೋಲಾಹಲನಪ್ಪ ಅಲ್ಲಮ ಮಹಾಪ್ರಭುವೆ, ಎನಗೆ ಹಾಗತೂಕ ವೈರಾಗ್ಯವ ಕೊಡಯ್ಯಾ ! ಬೆಟ್ಟದ ಗುಂಡ ತಂದು ಇಷ್ಟಲಿಂಗದಲಿ ಐಕ್ಯಮಾಡಿದ ಘಟ್ಟಿವಾಳಲಿಂಗವೇ, ಎನಗೆ ಹಾಗತೂಕ ಲಿಂಗವ ಕೊಡಯ್ಯಾ !' ಎಂದು ಎಲ್ಲರಿಂದ ಒಂದೊಂದ ಬೇಡಿಕೊಂಡ ಘನಲಿಂಗದೇವ. ಅನುಭಾವದ ಮಧುಕೋಶವಾದ, ಪರಮಾರ್ಥದ ಪೀಯೂಷವಾದ ! "ನಾನು ಜೀವತ್ವಮಂ ಆಳಿದು ಶರಣತ್ವಮಂ ಕೈವಿಡಿದೆ; ಎನ್ನೊಳಗೆ ನೀನು ನನೆಯೊಳಗಣ ಪರಿಮಳದಂತೆ ಹುದುಗಿಪ್ಪೆಯಾಗಿ ನಾನೂ ನೀನೂ ಗೋಳಕಾಕಾರ ಸ್ವರೂಪವಾದ ನಿಷ್ಕಲ ಬ್ರಹ್ಮದಲ್ಲಿ ಉದಯವಾದ ಸಹೋದರರು !' ಎಂದು ಸಾರಲು ಸಮರ್ಥನಾದ.

ಬಸವಯುಗದ ತರುವಾಯ ವಚನಕಾರರು ಹೆಚ್ಚಾಗಿ ಉದಾಯಿಸಲಿಲ್ಲ. ಉದಯಿಸಿದ ಕೆಲವೇ ವಚನಕಾರರಲ್ಲಿ ಘನಲಿಂಗದೇವನೂ ಒಬ್ಬ ಶ್ರೇಷ್ಠ ವಚನಕಾರ. ಅವರ 'ವಚನಗಳಲ್ಲಿ ಘನವಾದ ಭಾವಶಕ್ತಿಯಿದೆ, ಮೇಲಾದ ಕಲ್ಪನಾಶಕ್ತಿಯಿದೆ' ಎಂದು ಡಾಕ್ಟರ್ ರಂಗನಾಥ ಮುಗುಳಿ ಮುಂತಾದವರು ಹೇಳಿರುವುದು ಸೂಕ್ತವಾಗಿದೆ. "ಕಂಬಳಕ್ಕೆ ಹೋಗಿ ಕನಕದ ಕೊಡವ ಕಂಡಂತೆ, ಮೂಗಿನಾಭರಣವ ಕಿವಿಗಿಕ್ಕಿ ಕಿವಿಯಾಭರಣವ ಮೂಗಿಗಿಕ್ಕುವಂತೆ ಅಂದಿನ ಕಾಲದ ಹನುಮ ಕಡಲ ದಾಟಿದೆನೆಂದು ಇಂದಿನ ಕಾಲದ ಕಪಿ ಹಳ್ಳ ದಾಟಿದಂತೆ, ಅರಸುವೆಣ್ಣು ಉಪ್ಪರಿಗೆಯನೇರಿದಳೆಂದು ತೊತ್ತು ತಿಪ್ಪೆಯನೇರಿದಂತೆ, ಕುಮಾರ ಕುದುರೆಯನೇರಿದನೆಂದು ಗುಲಾಮ ಕುನ್ನಿಯನೇರಿದಂತೆ, ಬಂಜೆ ಮಕ್ಕಳ ಬಯಸಿ ಬಟ್ಟೆಯ ಬೊಮ್ಮಂಗೆ ಹರಿಸಿಕೊಂಡಂತೆ, ಕೋಗಿಲೆ ಸರಗೈಯಿತೆಂದು ಕಾಗೆ ಕರ್ ಎಂದಂತೆ, ಆನೆ ಮದವೆದ್ದು ಸೋಮವೀಧಿಯ ಸೂರೆಮಾಡಿತೆಂದು ಆಡು ಮದವೆದ್ದು ಬೇಡಗೇರಿಗೆ ಹೋಗಿ ಕೊರಳ ಮುರಿಸಿಕೊಂಡಂತೆ, ಉಯ್ಯಾಲೆಯ ಮಣೆ ನೆಲೆಗೆ ನಿಂದಂತೆ" ಮುಂತಾದ ಮುತ್ತಿನಂತಹ ಮಾತುಗಳಿಂದ ಅವರ ವಚನಗಳಿಗೆ ಕಳೆಕಟ್ಟಿದೆ.ಅಲ್ಲಲ್ಲಿ ನವುರಾದ ಹಾಸ್ಯವೂ ಇಣಿಕಿದೆ. ಮನವಾಡಿದಂತೆ ನೀನಾಡಬೇಡ. ಮನವಾಡಿದಂತೆ ಆಡುವವಂಗೆ ಭಕ್ತಿಯೆಲ್ಲಿಯದು? ಜ್ಞಾನವೆಲ್ಲಿಯದು? ವೈರಾಗ್ಯವೆಲ್ಲಿಯದು? ಎಂಬ ಅವರ ಮಾತು ದಾರಿದೀಪದಂತಿದೆ ನಮಗೆ.

■

# ಮಹಾಯೋಗಿ ಮನ್ಮಥಸ್ವಾಮಿ

ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿ ಮಹಾರಾಷ್ಟ್ರವು ಮೂವರು ಮಹಾನುಭಾವರಿಗೆ ಜನ್ಮವಿತ್ತಿತು–ಏಕನಾಥ, ಶಾಂತಲಿಂಗ, ಮನ್ಮಥಸ್ವಾಮಿ ಇವರೇ ಆ ಮೂವರು ಮಹಾನುಭಾವರು. ಏಕನಾಥನ ಚರಿತ್ರೆ ಪ್ರಸಿದ್ಧವಾದುದೆ ಆಗಿದೆ. ಆದರೆ ಇನ್ನಿಬ್ಬರ ಬಗ್ಗೆ ಈ ಮಾತು ಅನ್ವಯಿಸುವುದಿಲ್ಲ. ಅವರಿಬ್ಬರೂ ಮಹವನರಿದ ಮಹಂತರಾದರೂ ಅವರ ಚರಿತ್ರೆ ಅಷ್ಟು ಪ್ರಚಾರದಲ್ಲಿಲ್ಲ.

ಸಂತ ಶಿರೋಮಣಿ ಶಾಂತಲಿಂಗ ಶಿವಯೋಗಿಯು ಮಹಾರಾಷ್ಟ್ರದ ಶಾಂತ ಪರಂಪರೆಯ ಪ್ರವರ್ತಕ; ನೀಲಕಂಠನ ಶಿಷ್ಯ; ಕೃಷ್ಣಪ್ಪ, ಜಯರಾಮಸ್ವಾಮಿ ವಡಗಾಂವ್‌ಕರ್ ಎಂಬ ಬ್ರಾಹ್ಮಣ ಸಂತರ ಗುರು.[೧] 'ಆದ್ಯ ಶಾಂತೇಶ್ವರ ಪ್ರಸಿದ್ಧ ಸಕಳಂ' ಎಂಬ ನೆಗಳ್ತೆಗೆ ಪಾತ್ರನಾದವನು; ಮಹಾರಾಷ್ಟ್ರದಲ್ಲಿ ವೀರಶೈವ ತತ್ತ್ವಜ್ಞಾನವನ್ನು ವಿಶಾಲ ಭಾವನೆಯಿಂದೊಡಗೂಡಿ ಪ್ರಸಾರವಾಡಿ ಪ್ರಖ್ಯಾತನಾದವನು; ಹರಿ–ಹರ ಐಕ್ಯತೆಯನ್ನು ಬೋಧಿಸಿ ಹರಿ–ಹರರಿಬ್ಬರ ಭಕ್ತರನ್ನೂ ಒಂದುಗೂಡಿಸಲು ಪ್ರಯತ್ನಿಸಿದವರನು. ಅವನಿದ್ದ ಸಾತಾರಾ ಜಿಲ್ಲೆಯ ಶಿಖಾರ್ ಸಿಂಗಪುರದ ಪ್ರಸಿದ್ಧ ಶಂಭು ಮಹಾದೇವ ದೇವಾಲಯದಲ್ಲಿರುವ ಎರಡು ಶಿವಲಿಂಗಗಳಲ್ಲಿ ಒಂದಕ್ಕೆ ಬಿಲ್ವದಳಗಳಿಂದಲೂ ಒಂದಕ್ಕೆ ತುಲಸೀದಳಗಳಿಂದಲೂ ಇಂದಿಗೂ ಪೂಜೆ ನಡೆಯುತ್ತಲಿರುವುದು ಶಾಂತಲಿಂಗನ ಹರಿ–ಹರ ಸಾಮರಸ್ಯ ಪ್ರಯತ್ನದ ಜೀವಂತ ಪ್ರತೀಕವಾಗಿದೆ. ಶಿಷ್ಯ ಕೃಷ್ಣಪ್ಪನೊಡನೆ ಶಾಂತಲಿಂಗನು ಉತ್ತರದಲ್ಲಿ ಪ್ರವಾಸ ಮಾಡುತ್ತಿದ್ದಾಗ ವೃಂದಾವನದಲ್ಲಿ ಕೃಷ್ಣಪ್ಪನಿಗೆ ರಾಸಲೀಲೆಯ ದಿವ್ಯದೃಶ್ಯವನ್ನು ತೋರಿಸಿದ್ದನಂತೆ. 'ಅವಿಭಕ್ತಂ ವಿಭಕ್ತೇಷು' ಇದೇ ಶಾಂತಲಿಂಗ ಪ್ರವರ್ತಿತ ಶಾಂತ ಪರಂಪರೆಯ ಗುರುಯಾಗಿದ್ದುದರಿಂದ ದೇಶದಲ್ಲಿ ವಾದವಿವಾದಗಳು ಬಹುಮಟ್ಟಿಗೆ ಹಿಮ್ಮೆಟ್ಟಿದುವು; ಸಾಮಾಜಿಕ ಶಾಂತಿ

---

೧ "ಶಾಂತಲಿಂಗ ಶ್ರೀಕೃಷ್ಣಯೋಗಿಯಾ ಕೃಷ್ಣದಾನ ಜಯರಾಯ್" (ಜಯರಾಮ ಸೂತ್ರ) "ನೀಲಕಂಠ ಶಾಂತಲಿಂಗ ಜಯರಾಮ ಶ್ರೀಕೃಷ್ಣ ಅಭಂಗ ಗೋಪಾಳಸ್ವಾಮಿ ನಿಸ್ಸಂಗ ಗುರುಭಕ್ತ ಸಾಮ್ಯಾ ಸರ್ವಸ್ಸಂ ॥ ರಂಗನಾಥ

ಪ್ರಸ್ಥಾಪಿತವಾಯಿತು; ಶಾಂತಲಿಂಗನ ಕೀರ್ತಿ ಮನೆಮನೆಗೂ ಮುಟ್ಟಿತು.

ಶಾಂತಲಿಂಗನು ಮಾಡಿದ ಮತ್ತೊಂದು ಮಹತ್ಕಾರ್ಯವೆಂದರೆ ನಿಜಗುಣ ಶಿವಯೋಗಿಗಳ ವಿವೇಕಚಿಂತಾಮಣಿ ಮತ್ತು ಶ್ರೀ ಚೆನ್ನಬಸವೇಶ್ವರರ ಕರಣ ಹಸಿಗೆಗಳನ್ನು ಮರಾಠಿಗೆ ಅನುವಾದಿಸಿದುದು.

ಚೆನ್ನಬಸವೇಶ್ವರೋಕ್ತಿ । ವರಮೀ ಬೋಲಲಿ ಅನುಭೂತಿ ।
ಪ್ರೀತಿ ಪಾವೋ ವಿದ್ಯಾಪಾರಂಗತಿ । ಮ್ಹಣೆ ಶಾಂತನೀಲಕಂಠ ॥
ಎಂದು ಕರಣಹಸಿಗೆಯಲ್ಲಿಯೂ
"ನಿಜಗುಣಾಚೇನಿ ಯೋಗೀಶ್ವರೇ । ಜೇ ಸಾಕ್ಷತ್ ಶಂಭೂಚಾ ಪುತ್ರೆ ।
ತಯಾಚೀಯೆಮುಕ್ತಿವರೇ । ಮೀ
ಪ್ರಾಕೃತಭಾಷಾ ಬೋಲಿಯೋವೈಖರಿ ।
ತೋ ಪ್ರೀತಿಪಾವೊ ಸರ್ವೇಶ್ವರಿ।
ಶ್ರೀ ಶಂಭೋನೀಲಕಂಠ (೧ ೧೨ ೧೦)
ಎಂದು ವಿವೇಕಚಿಂತಾಮಣಿಯಲ್ಲಿಯೂ ಹೇಳಿದ್ದಾನೆ. ತನ್ನ ವಿಷಯದಲ್ಲಿ–
"ಆಶ್ರಮ ವಿಸ್ಫೂರ್ಜಿತ ನಿಜಾನಂದ ಸಾನಂದಶ ಸಕ್ತೆ.

ಜಿತ್ತೋಪವೇತ ಶಾಂತಲಿಂಗ ಶಿವಯೋಗಿ ವಿರಚಿತ ವಿವೇಕ ಚಿಂತಾಮಣಿ" (೧೦– ೧೯)

(೧೦–೧೬) ಎಂದು ಹೇಳಿಕೊಂಡಿದ್ದಾನೆ. "ಶಾಂತಲಿಂಗನು ಅನುವಾದ ಕಾರ್ಯವನ್ನು ಬಹು ಉಚ್ಚಮಟ್ಟದಲ್ಲಿ ಮಾಡಿರುವನು. ಮೂಲ ವಿಷಯವು ಕಾವ್ಯಾನುಕೂಲವಿಲ್ಲದಿದ್ದರೂ ಕಾವ್ಯಶೈಲಿಯಲ್ಲಿ ಬರೆದ ಶ್ರೀಯಸ್ಸು ಕವಿಗೆ ಸೇರಿದುದಾಗಿದೆ" ಎಂದು ಪ್ರಾ. ಪಂಡಿತ ಅವಳಿಕರರು ಶಾಂತಲಿಂಗನ ಕಾವ್ಯಶಕ್ತಿಯನ್ನು ಕೊಂಡಾಡಿದ್ದಾರೆ.

ಇತ್ತ ಸಾತಾರಾ ಜಿಲ್ಲೆಯ ಶಿಖಾರ್‌ಸಂಗಪುರದ ಶಂಭುಮಹಾದೇವ ಮಂದಿರದಿಂದ ಶಾಂತಲಿಂಗನ ಕಾವ್ಯವಾಣಿ ಕೇಳಬರುತ್ತಲಿದ್ದಾಗ ಅತ್ತ ಬೀಡ ಜಿಲ್ಲೆಯ ಭೂಕೈಲಾಸ೧ ನಿಸರ್ಗ ರಮಣೀಯ ಕಪಿಲಾಧಾರ ಕ್ಷೇತ್ರದಿಂದ ಮನ್ಮಥಸ್ವಾಮಿಗಳ ಅಭಂಗಗಳ ಮಂಗಲಸ್ವರ ಕೇಳಬರುತ್ತಿದ್ದಿತು.

---

೧ ಕಪಿಲಾಧಾರ ಭೂಕೈಲಾಶೀ । ಅರಣ್ಯಸ್ಥಾನ ರಮ್ಯ ಮಾನಸೀ ಗ್ರಂಥ ಸಂಪವಿಲಾ ಅವಿನಾಶೀ । ಜನ್ಮಸಾರ್ಥಕ ಹೋಚಿ ಪೈ ॥ (ಪರಮರಹಸ್ಯದಲ್ಲಿ ಮನ್ಮಥಸ್ವಾಮಿ)

ಜಟಾಜೂಟ ಗಂಗಾ ವ್ಯಾಘ್ರಚರ್ಮಧಾರೀ
ತ್ಯಾಚೀ ಸೇವಾ ಬಿರೀ ವಾಟೇ ಜೀವಾ ॥ ೧ ॥
ವಾಮಾಂಗೀ ಪಾರ್ವತೀ ಅಂಗಾಶೀ ವಿಭೂತಿ
ತೇಥೇ ಮಾಝೀ ಮತಿ ಬೈಸಲೀಸೇ ॥ ೨ ॥
ತಯಾ ವೀಣ ತುಜೇ ನಯೇ ಮಾಝೀ ಮನಾ
ಚಾತಕಾಶೀ ಜಾಣಾ ಮೇಘ ಜೈಸಾ ॥ ೩ ॥
ಮಚ್ಛಾ ಲಾಗೀ ಜೈಸೇ ಜಳೀ ಜೀವಪಣ
ತಮಾತೇ ಸಾಡೂನ್ ವಾಂಚೇ ಕೇವಿ ॥ ೪ ॥
ಜನ್ಮಾಚಿಯಾ ಪೂರ್ವೀ ಶಿವಾರ್ಪಣ ಪಿಂಡ
ವ್ರತೇ ಹೀ ಅಖಂಡ ಝಾಲೀ ಆಸೇ ॥ ೫ ॥
ಮನ್ಮಥ ಶಿವಲಿಂಗ ಮ್ಹಣೇ ಐಸಾ ನೇಮ
ಅಂತರೀಚಾ ಪ್ರೇಮ ಸದಾಶಿವ ॥ ೬ ॥

ಹೀಗೆ ಬಂದಲ್ಲ, ಎರಡಲ್ಲ ನೂರಾರು ಸಾವಿರಾರು ಅಭಂಗಗಳು ಅವರ ಶ್ರೀಮುಖದಿಂದ ಹೊರಟು ಜನರ ಹೃದಯ ಕುಹರಗಳಲ್ಲಿ ಪ್ರತಿಧ್ವನಿಸಿದುವು. ಅವುಗಳ ಅಚ್ಚ ಸರಳತೆ, ನಿರಾಭರಣ ಸುಂದರತೆ, ಮಧುರ ಮಾರ್ದವತೆ, ನಿತಾಂತ ಮನೋಹರ ನಿಜಾನುಭೂತಿ–ಸಂವೇದನಶೀಲತೆಗಳು ಜನಮನವನ್ನು ಇಂದ್ರಜಾಲದಂತೆ ಆಕರ್ಷಿಸಿ, ಗಂಗಾಜಲದಂತೆ ಶುದ್ಧೀಕರಿಸಿ, ಮಂದಾನಿಲನಂತೆ ಅರಳಿಸಿದುವು.

ಸಾರ ಸಕಳತೀರ್ಥಾಚೆ । ವಂದ್ಯ ಪಾವುಲ ಗುರೂಚೆ ॥ ೧ ॥
ನಲಗೇ ಕಾಶೀ ಲಾಗೀ ಜಾವೇ । ರೂಪ ಹೃದಯೀ ಧರಾವೆ ॥ ೨ ॥
ತೇಣೇ ಸುಖ ಹೋಯ್ ಜೀವಾ । ನಪಡೇ ಸಂಸಾರಾಚೀ ಗೋವಾ ॥ ೩ ॥
ನಲಗೇ ಯೋಗಮುದ್ರಾಧ್ಯಾನ । ಧ್ಯಾವಾ ಗುರೂಂಚೇ ಚರಣ ॥ ೪ ॥
ಮ್ಹಣೇ ಮನ್ಮಥ ಶಿವಲಿಂಗ । ಗುರುರೂಪ ಹೋಯ್ ಅಂಗ ॥ ೫ ॥

ಇಂಥ ಸರಳತೆ ಸಹಜತೆ, ಸುಭಗತೆಗೆ ಮಾರುಹೋಗದವರಾರು? ಶಿವನು ಪಾರ್ವತಿಗೆ ಹೇಳುವನಂತೆ–

ಪಾರ್ವತೀಶೀ ಮ್ಹಣೇ ಶಿವಭಕ್ತಾ ಚೇ ಘರೀ
ರಹಾವಯಾಚೀ ಥೋರೀವಾಟೀ ಮಜ ॥ ೧ ॥

ನಾವಡೇ ಕೈಲಾಸ ನಕೋ ಮಂದ್ರಾಗಿರಿ
ಅವಿಮುಕ್ತಿಪುರಿ? ತಿಹಿ ನಕೋ ! ॥ ೨ ॥
ನಾವಡೆ ಶ್ರೀಶೈಲಗಾಷ್ಠೀ ವಾಸ
ಹಿಮಾಲಯೀ ತ್ರಾಸ ಆಲಾ ಮಲಾ ॥ ೩ ॥
ಮಖೀನಾಮ ಗಾತೀ ಸದ್ಭಾವೇ ಅರ್ಚಿತೀ
ಕೀರ್ತನೀ ನಾಚತೀ ಆನಂದಾನೇ ॥ ೪ ॥
ತೇ ಭೀ ಚೇ ಹೇಸುಖ ನಬೋಲಾವೆ ವಾಚೆ
ಮೀಹೀ ತೈ ಸಾ ನಾಚೇ ಪ್ರೇಮಭರೇ ! । ೫ ॥

(ಪಾರ್ವತಿ, ಶಿವಭಕ್ತರ ಮನೆಯಲ್ಲಿರುವಾಗ ನನಗಾಗುವ ಆನಂದ ಇನ್ನೆಲ್ಲಿಯೂ ದೊರೆಯದು. ಬೇಡೆನಗೆ ಕೈಲಾಸ, ಬೇಡ ! ಹಿಮಾಲಯದಿಂದಂತೂ ಬೇಸತ್ತು ಹೋಗಿದ್ದೇನೆ ! ಭಕ್ತರ ಮನೆಯೇ ಬೇಕೆನಗೆ. ಅವರಲ್ಲಿ ಮುಖದಿಂದ ನನ್ನ ನಾಮ ಹಾಡುತ್ತ, ಸದ್ಭಾವದಿಂದ ಅರ್ಚಿಸುತ್ತ, ಕೀರ್ತನದಲ್ಲಿ ಆನಂದದಿಂದ ಕುಣಿಯುತ್ತಾರೆ. ಆ ಸುಖವನ್ನು ಮಾತಿನಲ್ಲಿ ಹೇಳಲಾಗದು. ಅದನ್ನು ನೋಡಿದಾಗ ಪ್ರೇಮಭರದಲ್ಲಿ ನನಗೂ ಕುಣಿಯಬೇಕೆನ್ನಿಸುತ್ತದೆ !) 'ಶಿವನಂ ಕಂಡಾ ಗಣಪತಿ ಕುಣಿಯಲು– ಸರ್ವಸ್ಥಾವರ ಜಂಗಮ ಕುಣಿಯಲು' ಎಂಬ ಹರಿಹರನ ಅನುಭವ ಮನ್ಮಥಸ್ವಾಮಿಗಳ ಅನುಭವವೂ ಆಗಿದೆ.

ಜನಸಾಮಾನ್ಯರಿಗೆ ಸುಲಭಮಾರ್ಗ ಬೇಕು. ಯಜ್ಞಯಾಗಾದಿಗಳವರಿಗೆ ನಿಲುಕವು; ಜಪತಪಗಳವರಿಗೆ ಸಾಧ್ಯವಾಗುವು; ಯೋಗಮಾರ್ಗ ದುರ್ಗಮವವರಿಗೆ; ಜ್ಞಾನಮಾರ್ಗ ದುಸ್ಸಾಧ್ಯ ಅವರಿಗೆ. ಸುಲಭಮಾರ್ಗವಾವುದು ಶ್ರೀಸಾಮಾನ್ಯರಿಗೆ? ಅವರ ರೋಗಕ್ಕೆ ಸುಲಭವಾದ ಔಷಧವೇನಾದರೂ ಇದೆಯೆ? 'ಇದೆ' ಎಂದು ಹೇಳುತ್ತಾರೆ ಮನ್ಮಥಸ್ವಾಮಿಗಳು. ಏನದು?

ಭವರೋಗ ಜಾಮ ಜೇಣೇಂ । ಐಸೇ ರಸಾಯನ ಘೇಣೇಂ ॥ ೧ ॥
ನಕಾ ಜಾವೂ ಆಡವಾಟೀ । ಖೋಟೇ ಸರ್ವಉಪಾಯ ॥ ೨ ॥
ತುಮ್ಹಾಂ ಸಾಂಗತೋ ಸ್ವಹಿತ । ಠೇವಾ ಚಿತ್ತ ಯಾ ಬೋಲಾ ॥ ೩ ॥
ನಾಮ ಮಾತ್ರ ಪ್ರೇಮರಸೇ । ಘೇತಾ ನಾಸೇ ಭವರೋಗ ॥ ೪ ॥
ಮನ್ಮಥ ಮ್ಹಣೇ ಸುಖೀ ಹೋಯಿ । ಮುಖೀ ಶಂಕರ ಹೇ ಗಾಯೀ ॥ ೫ ॥

“ಭವರೋಗ ಹೋಗಲು ತೆಗೆದುಕೋ ಈ ರಸಾಯನವನ್ನು. ಅಡ್ಡದಾರಿ ಹಿಡಿಯಬೇಡ. ವ್ಯರ್ಥ ಉಳಿದ ಉಪಾಯಗಳು. ನಿಮ್ಮ ಹಿತವಾವುದೆಂಬುದನ್ನು ಹೇಳುತ್ತೇನೆ. ಈ ಮಾತಿನಲ್ಲಿ ಚಿತ್ತವಿರಲಿ ! ಪ್ರೇಮಪುರಸ್ಸರವಾಗಿ ನಾಮ ಮಾತ್ರ ಸ್ಮರಿಸಿದರೆ ಸಾಕು–ಭವರೋಗ ಹೋಗುವುದು. ಮನ್ಮಥ ಹೇಳುತ್ತಾನೆ–ಮುಖದಲ್ಲಿ ‘ಶಂಕರ ಶಂಕರ’ ಎಂದು ಹಾಡಿ ಸುಖಿಗಳಾಗಿರೆಂದು.”

ಈ ನೇರದಾರಿ, ಸುಲಭ ಸುಪಥ ಶ್ರೀಸಾಮಾನ್ಯರನ್ನೆಲ್ಲ ತನ್ನತ್ತ ಸೆಳೆಯಿತು. ಮನ್ಮಥಸ್ವಾಮಿಗಳ ಹೆಸರು ಮನೆಮಾತಾಯಿತು. ಅವರ ವಾಣಿ ಜನವಾಣಿಯಾಯಿತು. ಜನವಾಣಿ ದೇವವಾಣಿಯಾಯಿತು.

ಶ್ರೀ ಮನ್ಮಥಸ್ವಾಮಿಗಳವರು ಬಸವಣ್ಣನವರ ವಚನಗಳನ್ನೂ ಓದಿದ್ದರೋ ಏನೋ. ತಮ್ಮ ಗುರುಗಳಾದ ಮಾನೂರ ಮಠಾಧೀಶ ಶ್ರೀ ನಾಗೇಶ್ವರರನ್ನು ವರ್ಣಿಸುತ್ತ–

“ಯಾಲಾಗೀ ಶಿವ ತೋಚೀ ಹಾ ನಾಗೇಶ್ವರೂ । ಪರಂಪರೇ ಚೀ ಬಸವರಾಜ

ಶ್ರೀ ಗುರೂ । ಮನೂರಮಠ ಸಿಂಹಾಸನಾಧಿಕಾರೂ । ಅಸೇ ಜಾಣ ಜಯಾಶೀ”

ಎಂದು ಹೇಳಿದ್ದಾರೆ. ಇದಲ್ಲದೆ ಅಭಂಗವೊಂದರಲ್ಲಿ–

“ಸರ್ಪಜೀಭಾಡೀ ಚಾ ಬೇಡೂಕ ಆವಡೀ

ಮಕ್ಷಿಕಾ ಸಾಂಡವೀ ಜೈಸಾ ಪರೀ”

ಎಂಬ ಉಪಮೆಯನ್ನು ಉಪಯೋಗಿಸಿದ್ದಾರೆ. ಇದು ‘ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಶೆ ಮಾಡುವಂತೆ’ ಎಂಬ ಬಸವೋಕ್ತಿಯನ್ನು ನೆನಪಿಗೆ ತರುತ್ತದೆ. ಅಲ್ಲದೆ,

ಪುಸು ನಯೆ ಜಾತಿಕುಳ । ಶೋಧ ನಯೆ ತ್ಯಾಚೇ ಮೂಳ ॥

ಎಂಬ ಮನ್ಮಥಸ್ವಾಮಿಗಳ ವಚನ ‘ಕುಲವನರಸದಿರಿ ಭೋ’ ಎಂಬ ಅಣ್ಣನ ಕೂಗಿನ ಮರುಕೂಗು ಮಾತ್ರವಲ್ಲವೆ?

ಇವರ ‘ಪರಮ ರಹಸ್ಯ’ವಂತೂ

‘ಅಸಂಖ್ಯಾತ ಶಿವಗಣ । ಆದಿ ಅನಾದಿತೇ ಜಾಣ । ನಿತ್ಯನಂದೀ ವಿರಾಜಮಾನ।

ಭಕ್ತಾಪಾವನ ಕರಿತಸೇ ॥ ಸಾತಸೇ ತ್ರೇಸಷ್ಠಗಣ । ಅವತೀರ್ಣ ಜೇ ಪುರಾತನ।

ನೂರಂದಯ್ಯಾದಿ ಶರಣ । ಮಹಾವಿಖ್ಯಾತಜೇ ॥

ಎಂದೇ ಆರಂಭವಾಗುತ್ತದೆ. ಶರಣರನ್ನು ಸ್ಮರಿಸುವುದಲ್ಲದೆ ಮನ್ಮಥಸ್ವಾಮಿಗಳು ಪಂಚಾಚಾರ್ಯರನ್ನೂ ಸ್ಮರಿಸಿ ತಮ್ಮ ಗುರು ನಾಗೇಶ್ವರರನ್ನು

"ಅನಾಮ ತು ಅಪರಂಪರಾ । ಶ್ರೀ ಗುರುಮೂತಿ ನಾಗೇಶ್ವರಾ । ನಾಗೇಶ
ಹೇ ಅಡ ನಾಂವ ಜೀ ದಾತಾರ । ಏರವೀ ಅನಾಮತೂ ॥

ಎಂದು ಸ್ತುತಿಸಿ.

"ಸ್ಫೂರ್ತಿ ಉನ್ಮೇಷ ದೇವೂನ । ಸ್ವಯೇ ವಾಚಾಚಿವಾಚ ಹೋವೂನ ।
ಪ್ರೇಮರಸಾತೇಂ ಓಘಳೂನ । ಅಕ್ಷರ ವದವೀ ಸ್ವಾಮಿ ॥

ಎಂದು ಪ್ರಾರ್ಥಿಸುತ್ತಾರೆ.


ಈ ನಾಗೇಶ್ವರರಾರು? 'ಸಂಕಟ ಹರಣೀ' ಶಿವಗ್ರಂಥವನ್ನು ಬರೆದ ವಡವಾಳ ಸಿದ್ಧನಾಗೇಶನಾಗಿರಲಾರನು. ಅವನಿದ್ದುದು ಶಕೆ ೧೨೯೦–೧೩೪೦ರಲ್ಲಿ ಸೊಲ್ಲಾಪುರ ಜಿಲ್ಲೆಯ ಮೊಹೋಲ್ ಸಮೀಪದ ವಡನಾಳದಲ್ಲಿ. ಆದುದರಿಂದ ಶಕೆ ೧೫೨೨*ರಲ್ಲಿದ್ದ ಮನ್ಮಥಸ್ವಾಮಿಯ ಗುರು ಅವನಾಗಿರಲಾರನು. ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿ ಆಗಿಹೋದ ಅಜ್ಞಾನ ಸಿದ್ಧನೂ ಅವನಾಗಿರಲಾರನು. ಅಹಮದನಗರ ಜಿಲ್ಲೆಯ ಮಾಣೂರ ಮಠಾಧ್ಯಕ್ಷ ನಾಗೇಶ ಇವರಿಂದ ಭಿನ್ನವಾದವನು. ಈ ಷಟ್‌ಸ್ಥಲಬ್ರಹ್ಮ ಮಾಣೂರಕರ ಮಠಾಧ್ಯಕ್ಷ ಶ್ರೀ ನಾಗೇಶ್ವರ ಸ್ವಾಮಿಗಳ ಅನುಗ್ರಹದಿಂದಲೇ ಶ್ರೀ ಮನ್ಮಥಸ್ವಾಮಿಗಳು ಹುಟ್ಟಿದರಂತೆ ಕಪಿಲಾಧಾರ ಕ್ಷೇತ್ರದಲ್ಲಿ.

ಬೀಡ ಜಿಲ್ಲೆಯಲ್ಲಿರುವ ಕಪಿಲಾಧಾರ ಕ್ಷೇತ್ರವು ಅತ್ಯಂತ ನಿಸರ್ಗರಮಣೀಯವಾದ ಪವಿತ್ರಸ್ಥಳವಾಗಿದೆ. ಅಲ್ಲಿ ಮನೋಹರವಾದ ಮಲೆಯಲ್ಲಿ ಕಪಿಲೆಯ ಕೆಚ್ಚಲಿನಿಂದಿಳಿವ ದುಗ್ಧಧಾರಾದ್ವಯಗಳಂತೆ ಎರಡು ಶಿವಗಂಗಾ ಪ್ರಪಾತಗಳು ಕೊಳ್ಳವೊಂದರಲ್ಲಿ ಬೀಳುತ್ತಿವೆ. ಅಲ್ಲಿ ಶ್ರೀ ಮನ್ಮಥಸ್ವಾಮಿಗಳವರು ತಪಸ್ಸು ಮಾಡಿದ ಸ್ಥಳದಲ್ಲಿಯೆ ಅವರ ದೇವಾಲಯವು ಕಟ್ಟಲ್ಪಟ್ಟಿದ್ದು ಪ್ರತಿವರ್ಷ ಕಾರ್ತಿಕ ಶುದ್ಧ ೧೫ ರಿಂದ ಕಾರ್ತಿಕ ವದ್ಯ ೫ರವರೆಗೆ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಸೊಲ್ಲಾಪುರ, ಪಂಢರಪು, ವಾರ್ಸಿ, ಲಾತೂರ ಪರಳಿ, ವಾಸೀ, ಭೂಮ ಮೊದಲಾದ ಸ್ಥಳಗಳಿಂದ ಸಕಲ ಜಾತಿಮತಗಳ ಜನರೂ ಅವರ ಅಭಂಗಗಳನ್ನು ಹಾಡುತ್ತ ಜಾತ್ರೆಗೆ ಬರುತ್ತಾರೆ. ಪವಿತ್ರಾತ್ಮರಾಗಿ ಹಿಂದಿರುಗುತ್ತಾರೆ.

---

* ಶಕೆ ಪಂಧರಾಶೇಬಾವೀಸ । ವಿಕ್ರಮನಾಮ ಸಂವತ್ಸರಾಸ । ಶುದ್ಧತ್ರಯೋದಶಿ ಮಾಘಮಾಸ । ಗ್ರಂಥಪೂರ್ಣ ಝಾಲಾಸೇ ॥ – ಪರಮರಹಸ್ಯದಲ್ಲಿ

ಇಂಥ ಮಹಾವಿಭೂತಿಯ ಸಾದ್ಯಂತವಾದ ಚರಿತ್ರೆ ಸಿಕ್ಕದಿರುವುದು ವಿಷಾದದ ಸಂಗತಿ. ಉಪಲಬ್ಧವಿರುವ ಚರಿತ್ರಾಂಶಗಳಿಷ್ಟು. ಕಪಿಲಾಧಾರ ಗ್ರಾಮದ ಮಾಹೇಶ್ವರ



**ಆಡಿ ಆಡಿ 'ಘನಲಿಂಗ' ದಲ್ಲಿ ತಲ್ಲೀನವಾದ ನಗೆಯ ಮಾರಿ ತಂದೆ**

ಕುಲೀನ ಸದಾಚಾರಸಂಪನ್ನ ಸಾಧ್ವಿಯೊಬ್ಬಳು ತನ್ನ ಗೆಳತಿಯೊಡನೆ ಲಿಂಗಪೂಜೆಗಾಗಿ ಕಪಿಲಾಧಾರ ಕ್ಷೇತ್ರದಲ್ಲಿ ಬಿಲ್ವಗಳನ್ನು ಎತ್ತುತ್ತ ಸಂತಾನವಿಲ್ಲದುದಕ್ಕಾಗಿ ಒಳಗೊಳಗೇ ಕೊರಗುತ್ತಲಿರುವಾಗ ಶ್ರೀ ನಾಗೇಶ್ವರ ಸ್ವಾಮಿಗಳು ಹಠಾತ್ತಾಗಿ ಅಲ್ಲಿಗೆ ಬಂದರು. ಆ ಸಾಧ್ವಿಗೆ ತಮ್ಮ ಜೋಳಿಗೆಯೊಳಗಿನಿಂದ ಭಸ್ಮವನ್ನು ತೆಗೆದಿತ್ತರು. ಅವಳ ಗೆಳತಿಗೂ ಮಕ್ಕಳಾಗಿರಲಿಲ್ಲ. ಆಕೆಗೂ ಭಸ್ಮವನ್ನಿತ್ತು. ಆ ಭಸ್ಮವನ್ನು ಸೇವಿಸಿದರೆ ಇಬ್ಬರಿಗೂ ಮಕ್ಕಳಾಗುವುದೆಂದು ಹೇಳಿ ಹೊರಟುಹೋದರು.

ಆ ಸಾಧ್ವಿಗೆ ಭಸ್ಮವನ್ನು ಸೇವಿಸಿದರೆ ಸಂತಾನವಾಗುವುದೆಂಬ ಶ್ರದ್ಧೆ ಜನಿಸಲಿಲ್ಲ. ಆಕೆ ಭಸ್ಮ ಪ್ರಸಾದವನ್ನು ಸೇವಿಸಲಿಲ್ಲ. ಅವಳ ಗೆಳತಿ ಮಾತ್ರ ವಿಶ್ವಾಸದಿಂದ ಸೇವಿಸಿದಳು. ಅವಳು ಗರ್ಭಿಣಿಯಾಗಿಬಿಟ್ಟಳು. ಆಗ ಆ ಮಾಹೇಶ್ವರ ಸಾಧ್ವಿಗೆ ಪಶ್ಚಾತ್ತಾಪವಾಯಿತು. ಆದರೆ ಮಾಡುವುದೇನು? ಕಾಲ ಕೈಮೀರಿ ಹೋಗಿದ್ದಿತು.

ಐದು ವರ್ಷಗಳು ಉರುಳಿದುವು. ಮತ್ತೊಮ್ಮೆ ಅದೇ ಮಾಹೇಶ್ವರ ಮಹಿಳೆ ತನ್ನ ಸಪುತ್ರ ಸಖಿಯೊಡನೆ ಅದೇ ಬಿಲ್ವವನದಲ್ಲಿ ಪತ್ರಿಗಳನ್ನು ಎತ್ತುತ್ತ ದುಃಖದಿಂದ ಬಿಕ್ಕಿ ಬಿಕ್ಕಿ ಅಳುತ್ತಲಿದ್ದಳು. ಆಗ ಮತ್ತೆ ಮಾಣೂರ ಮಠಾಧೀಶ್ವರ ನಾಗೇಶ್ವರರು ಕಾಣಿಸಿಕೊಂಡರು. ಮಾಹೇಶ್ವರ ಮಹಿಳೆಯ ಕಣ್ಣುಗಳಿಂದ ದುಃಖಾಶ್ರುಗಳೂ ಅವಳ ಸಖಿಯ ನೇತ್ರೆಗಳಿಂದ ಆನಂದಾಶ್ರುಗಳೂ ಧಾರೆ ಧಾರೆಯಾಗಿ ಹರಿದುವು. ದಯಾಮಯರಾದ ನಾಗೇಶ್ವರ ಸ್ವಾಮಿಗಳೂ ಮಾಹೇಶ್ವರ ಮಹಿಳೆಯ ತಪ್ಪನ್ನು



**ತ್ರಿಪುಂಡ್ರಧಾರಿಯೂ ತೇಜಸ್ವಿಯೂ ಆದ ಬಾಲಕನು ಧಾವಿಸಿ ಬಂದು ಶ್ರೀ ಗುರುಚರಣಗಳಿಗೆ ನಮಸ್ಕರಿಸಿದನು**

ಕ್ಷಮಿಸಿ, 'ನೀನು ಶ್ರೀ ವಿಭೂತಿಯನ್ನು ಚೆಲ್ಲಿದ ಸ್ಥಳದಲ್ಲಿ ನಿಂತು ನಿನಗೆ ಅತ್ಯಂತ ಪ್ರಿಯವಾದ ಹೆಸರುಗೊಂಡು ಮೂರು ಸಲ ಕರೆ' ಎಂದು ಹೇಳಿದರು. ಮಾಹೇಶ್ವರ ಮಹಿಳೆಯು ಗುರುಗಳೊಡನೆ ಆ ಸ್ಥಳಕ್ಕೆ ಹೋಗಿ ಮಾತೃ ಹೃದಯದ ಆಳದಿಂದ 'ಮನ್ಮಥಾ, ಮನ್ಮಥಾ, ಮನ್ಮಥಾ' ಎಂದು ಮೂರು ಸಲ ಕೂಗಿದಳು. ತ್ರಿಪುಂಡ್ರಧಾರಿಯೂ ತೇಜಸ್ವಿಯೂ ಆದ ಬಾಳಕನೊಬ್ಬನು ಧಾವಿಸಿ ಬಂದು ಶ್ರೀಗುರು ಚರಣಗಳಿಗೆ ನಮಸ್ಕರಿಸಿದನು. ಗುರುಗಳು ಅವನ ಮಸ್ತಕದ ಮೇಲೆ ಹಸ್ತವನ್ನಿರಿಸಿ ಆಶೀರ್ವದಿಸಿ 'ಇವನು ಮಗ' ಎಂದು ಆ ಮಾಹೇಶ್ವರ ಮಹಿಳೆಗೆ ಆ ಬಾಲಕನನ್ನು ಒಪ್ಪಿಸಿ, ಅವಳ ಗೆಳತಿಯನ್ನೂ ಅವಳನ್ನೂ ಆಶೀರ್ವದಿಸಿ ಹೊರಟುಹೋದರು.

ಮನ್ಮಥಸ್ವಾಮಿಯ ಬಾಲಲೀಲೆಗಳೆಲ್ಲ ಭಕ್ತಲೀಲೆಗಳೇ ಆಗಿದ್ದುವು.ಯಾವಾಗಲೂ ಶಿವನಾಮಸ್ಮರಣ, ಶಿವಮಂತ್ರ ಪಠನ, ಶಿವಪೂಜನ, ಶಿವಧ್ಯಾನಗಳಲ್ಲಿ ತನ್ಮಯರಾಗಿರುತ್ತಿದ್ದರವರು. ತಾರುಣ್ಯೋದಯವಾಯಿತು. ಅದರೊಡನೆ ಮಾತಾಪಿತೃಗಳಿಗೆ ಅವನ ಮದುವೆಯನ್ನು ಮಾಡುವ ಇಚ್ಛೆಯೂ ಮೂಡಿ ಬಂದಿತು. ಆದರೆ ಮನ್ಮಥಸ್ವಾಮಿ ಮದುವೆಗೆ ಒಪ್ಪಲಿಲ್ಲ. ಕಪಿಲಾಧಾರ ಕಂದರದಲ್ಲಿ ಶಿವಯೋಗ ಸಾಧಕನಾಗಿ ಕುಳಿತುಬಿಟ್ಟನು. ಕುಳಿತ ಸ್ಥಳವೇ ಕ್ಷೇತ್ರವಾಯಿತು. ಅಲ್ಲಿಂದ ಹೊರಟ ಆತನ ಅಭಂಗವಾಹಿತಿ ಜನಜಂಗುಳಿಗೆ ಗಂಗಾವಗಾಹನವಾಗಿ ಪರಿಣಮಿಸಿತು. ಸಾವಿರಾರು ಜನರು ಅವರಿಂದ ದೀಕ್ಷೆ ಪಡೆದುಕೊಂಡು ಶಿವಭಕ್ತರಾದರು; ಅಸಂಖ್ಯಾತರು ಅವರ ದರ್ಶನಾಶೀರ್ವಾದಗಳಿಂದ ಪುನೀತರಾದರು.

ಅವರಿದ್ದ ಕಾಲ ಶ್ರೀಕ್ಷೇತ್ರ ಪಂಢರಪುರದ ವಾರಕರೀ ವೈಷ್ಣವಮತೀಯರಿಗೂ ಶಿವಮತದವರಿಗೂ ಸಂಘರ್ಷ ನಡೆದಿದ್ದ ಕಾಲ. ಇಂಥ ವಿಷಮ ಸಮಯದಲ್ಲಿ ಅತ್ತ ಸಂತ ಶಾಂತಲಿಂಗನೂ ಇತ್ತ ಮರೆಯಲಾಗದ ಮನ್ಮಥಸ್ವಾಮಿಗಳೂ ಹರಿ-ಹರ ಭಕ್ತರಲ್ಲಿ ಸಾಮರಸ್ಯವನ್ನು ಉಂಟುಮಾಡಲು ಸಫಲಪ್ರಯತ್ನ ಗೈದರು. ಪಂಢರಪುರದ ವಿಠ್ಠಲನ ಮೂರ್ತಿಯಲ್ಲಿ ಸದಾಶಿವಮೂರ್ತಿಯು ಕಾಣುವಂತೆ ಮಾಡಿ, ಆ ವಿಠ್ಠಲ ಮಂದಿರದಲ್ಲಿರುವ ಗಣಪತಿ ವಿಗ್ರಹದಿಂದ ಶಿವತತ್ತ್ವೋಪದೇಶವನ್ನು ಮಾಡಿಸಿ 'ಸಬ ಸಂತನ ಕಾ ನಾಥ' ಎಂಬ ಬಿರುದನ್ನು ವಾರಕರೀ ಜನರಿಂದಲೇ ಪಡೆದರು. ಶೈವ ವೈಷ್ಣವ ಧರ್ಮಗಳಲ್ಲಿ ಸಮನ್ವಯವನ್ನು ಸಾಧಿಸಿ ಸಕಲ ಜನಾದರಣೀಯರಾದರು.

ಅವರು ಬರೆದಿರುವ ಸಾವಿರಾರು ಅಭಂಗಗಳೂ ಪರಮರಹಸ್ಯ ಗುರುನಾಗೌ, ಗುರುಪ್ರಸಾದ ಮೊದಲಾದ ಗ್ರಂಥಗಳೂ ಅವರ ಆತ್ಮೋನ್ನತಿಯ ಗೆಲವುಗಂಬಗಳಾಗಿ

ಉಳಿದಿವೆ. ಅವರ ಮಾತೆಯ ಗೆಳತಿ ಗುರು ನಾಗೇಶ್ವರರ ಪ್ರಸಾದದಿಂದ ಪಡೆದ



**ಕಪಿಲಾಧಾರ ಕ್ಷೇತ್ರದಲ್ಲಿ ತಪೋನಿರತರಾದ ಮನ್ಮಥಸ್ವಾಮಿಗಳು**

ಮಗುವೇ ಮುಂದೆ ಮನ್ಮಥಸ್ವಾಮಿಯ ಶಿಷ್ಯನಾಗಿ ಪ್ರಸಿದ್ಧನಾದನು. 'ದೀನೋದ್ಧಾರ' ಎಂಬ ಸಾರ್ಥಕನಾಮದಿಂದ ಖ್ಯಾತನಾದ ಈ ಪುರುಷಶ್ರೇಷ್ಠನೂ ಮನ್ಮಥಸ್ವಾಮಿಗಳ ಸಮಾಧಿಗೆ ಸಮೀಪದಲ್ಲಿಯೇ ಸಮಾಧಿ ಹೊಂದಿದ್ದಾನೆ. ಅವರೊಡನೆ ತಾನೂ ಅಮರನಾಗಿದ್ದಾನೆ.

ಮನ್ಮಥಸ್ವಾಮಿಗಳು ಸಿಂಹವಾಹನರೆಂದು ಪ್ರಸಿದ್ಧರಾಗಿದ್ದಾರೆ. ಕಪಿಲಾಧಾರ ಕ್ಷೇತ್ರದಲ್ಲಿ ಒಂದು ಬೇವಿನ ಮರವಿದೆ. ಅದಕ್ಕೆ ಕಲ್ಲಿನಿಂದಿಟ್ಟರೆ ಅದರಿಂದ ಆಲದ ಮರದಿಂದ ಬರುವ ಹಾಲಿನಂಥ ಹಾಲು ಹೊರಡುತ್ತದೆ. ಅದು ಬಹಳ ಸವಿಯಾಗಿರುತ್ತದೆ. ಪ್ರತಿ ಆಷಾಢವದ್ಯ ೩೦ಕ್ಕೆ ನಾರಿಕೇಳವನ್ನಿಟ್ಟರೆ ಅದು ತನ್ನಿಂದ

ತಾನೆ ಎರಡು ಹೋಳಾಗುತ್ತದಂತೆ. ಕಪಿಲಾ ಹಸುವು ಮನ್ಮಥಸ್ವಾಮಿಗಳಿಗೆ ನಿತ್ಯ ದರ್ಶನವೀಯುವುದೆಂದೂ ಈಗಲೂ ಅವರ ಯೋಗಸಮಾಧಿಯ ಮೇಲೆ ಸರ್ಪವೊಂದು ಆಗಾಗ ಫಣಿಯೆತ್ತಿ ನಿಲ್ಲುವುದೆಂದೂ ಜನರು ನಂಬಿದ್ದಾರೆ.

ಮನ್ಮಥಸ್ವಾಮಿಗಳು ಶಿವನನ್ನು ಬೇಡಿದುದು ಇಷ್ಟೆ :

"ಗುರು ಆಣಿ ಲಿಂಗ ಜಂಗಮಾಚಿ ಸೇವಾ । ದೇಯಿ ಮಜ ದೇವಾ ಜನ್ಮೋ ಜನ್ಮೀ॥ ರುದ್ರಾಕ್ಷಾಚಾ ಮಾಳಾ ಭಸ್ಮ ಲಾಗೂಂ ಭಾಳಿ । ಹೇಚಿ ಚಂದ್ರಮೌಳಿ ದೇಯಿ ಮಜ॥ ತೀರ್ಥ ಆಣಿ ಪ್ರಸಾದ ಮಂತ್ರ ಷಡಾಕ್ಷರ । ಧ್ಯಾವೊಂ ಉಮಾರಮಣ ಜನ್ಮೋಜನ್ಮೀ॥ ಅಹೋ ದೀಪರೆ ಪತಂಗ । ಸುಖೇ ಜಳೀ ಆ ಪುಲೆ ಅಂಗ ॥

ಎಂದು ಅವರೇ ಉದ್ಗಾರ ತೆಗೆದಂತೆ 'ಅಜ್ಞಾನ ಜನಾ ಉತ್ತಮಗತಿ' ದೊರೆಯಲು ತಮ್ಮ ಅಂಗವನ್ನು ಸವೆಸಿದ ಮಹಾತ್ಮರವರು. ತುಝೀಚಾ ಸೇವೇಚಾ ನಸಾವಾ ವಿಯೋಗ । ಇಚ್ಛಿತೋ ಸಂಯೋಗ ಜನ್ಮೋ ಜನ್ಮಿ ॥ ತ್ರೈಲೋಕ್ಯಾಚಾ ಸ್ವಾಮಿ ದಾತಾ ತೂ ಉದಾರ । ಮಾಗತೀ ತುಝು ಸ್ವರ್ಗ ಮೋಕ್ಷ॥ ಮಜ ದುರ್ಬಳಾಸಿ ಇತಕೇಚದೇಯೀ । ವಿನವತೋಡೋಯಿ ಠೇವೂನಿ ಪಾಯಾ ॥

"ನಿನ್ನ ಸೇವೆಯ ವಿಯೋಗ ಬೇಡ; ಜನ್ಮ ಜನ್ಮಕ್ಕೂ ನಿನ್ನ ಸೇವೆಯ ಸಂಯೋಗ ಸಿಕ್ಕಲಿ. ತ್ರೈಲೋಕ್ಯದಸ್ವಾಮಿ, ಉದಾರ ದಾತಾರ, ನನಗೆ, ಸ್ವರ್ಗ ಮೋಕ್ಷ ಬೇಡ. ಈ ದುರ್ಬಲನಿಗೆ ಇದಿಷ್ಟನ್ನೇ ಅನುಗ್ರಹಿಸು. ನನ್ನ ನತ ಮಸ್ತಕ ನಿನ್ನ ಪಾದದಲ್ಲಿ ನಿಲ್ಲುವಂತೆ ದಯಾಪಾಲಿಸು." ಶಿವನು ಅವರ ಈ ಪ್ರಾರ್ಥನೆಯನ್ನು ಸಲ್ಲಿಸಿದನು. ಕಪಿಲಾಧಾರದಲ್ಲಿ ಅವರ ಫಾಲ ಅವನ ಶ್ರೀಪಾದದ ಮೇಲೆ ನಿರಂತರವಾಗಿ ನಿಂತಿತು.

"ಕಪಿಲಾಧಾರ ಹೇ ಮಂಗಳಗ್ರಾಮ-ಭಜನ ನಿರಂತರ ಮನ್ಮಥನಾಮ" ಎಂಬ ಸೊಲ್ಲು ಇಂದಿಗೂ ಅಲ್ಲಿ ಪ್ರತಿಧ್ವನಿಸುತ್ತಿದೆ.

■

---

(೧) ಪರಮರಹಸ್ಯ-ಲಾತೂರ ಆವೃತ್ತಿ.
(೨) ಅಭಂಗಗಳು (ಹಸ್ತಪ್ರತಿ)
(೩) Journal of the karnatak University, Vol. 11, No.2
(೪) ಶ್ರೀ ಮನ್ಮಥಸ್ವಾಮಿ ಪಂಚ ಕಮಿಟಿ ರಿಪೋರ್ಟ್ ಸನ್ .........
(೫) ಪಂಡಿತ ಅವಳೀಕರರ ಲೇಖನಗಳು-ಶರಣಸಾಹಿತ್ಯದಲ್ಲಿ.
(೬) ರಾನ ಬಸವರಾಜಕೃತ.

# ಸ್ವಾನುಭವ ಸಾರ್ವಭೌಮರು

ತಮಿಳಿನ ತಿರುವಳ್ಳುವರ್, ತೆಲುಗಿನ ವೇಮನ, ಕನ್ನಡದ ಸರ್ವಜ್ಞ ಇವರು ಸ್ವಾನುಭವ ಸಾರ್ವಭೌಮರು. ಇವರು ಅನುಕ್ರಮವಾಗಿ ದ್ವಿಪದಿ, ಚೌಪೆಇ, ತ್ರಿಪದಿಗಳಲ್ಲಿ ಇಹಲೌಕಿಕ, ಪರಾಲೌಕಿಕ ವಿಷಯಗಳೆಲ್ಲವುಗಳ ಬಗ್ಗೆ ತ್ರಿಕಾಲಾಬಾಧಿತುವಾದ ಸ್ವಾನುಭವ ಸಾಹಿತ್ಯವನ್ನು ಸೃಜಿಸಿ ಹೋಗಿದ್ದಾರೆ. ತಿರುವಳ್ಳುವರ್ ಬರೆದ 'ಕು*ಳ್'. ವೇಮನದ



**ಸ್ವಾನುಭವ ಸಾರ್ವಭೌಮ–ಯೋಗಿ ವೇಮನ**

ವಚನಗಳು, ಸರ್ವಜ್ಞನ ವಚನಗಳು ತಮಿಳು, ತೆಲುಗು, ಕನ್ನಡ ಸಾಹಿತ್ಯಗಳಲ್ಲಿ ಗಣ್ಯಸ್ಥಾನ ಪಡೆದಿವೆಯಲ್ಲದೆ ವಿಶ್ವಸಾಹಿತ್ಯಕ್ಕೂ ಭೂಷಣಪ್ರಾಯವಾಗಿವೆ. ತಿರುಕ್ಕು*ಳ್ ೧೩೩೦ ಸಾಲುಗಳ, ೧೩೩ ಅಧಿಕಾರಗಳ, ಧರ್ಮ–ಅರ್ಥ ಕಾಮಗಳೆಂಬ ಮೂರು ಭಾಗಗಳ ತಮಿಳು ವೇದ. ಅದು ಭಾರತೀಯ ಭಾಷೆಗಳಲ್ಲಿ ಅನುವಾದಿತವಾಗಿರುವುದಲ್ಲದೆ ಲ್ಯಾಟಿನ್, ಜರ್ಮನ್, ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಗಳಿಗೂ ಪರಿಮರ್ತಿತವಾಗಿದೆ.

ತಿರುವಳ್ಳುವರ್ ಅವರ ಕಾಲ ಬಹಳ ಹಿಂದಿನದು. ಕ್ರಿ.ಶ. ಪೂರ್ವ ಎರಡನೆಯ ಶತಮಾನದಿಂದ ಕ್ರಿ.ಶ. ೬ನೆಯ ಶತಮಾನದವರೆಗೆ ಆತನ ಕಾಲವನ್ನು ಎಳೆದಾಡುತ್ತಲಿದ್ದಾರೆ ಸಂಶೋಧಕರು. ಇವನು ಜೈನನೆಂದು ಕೆಲವರೂ ವೈಷ್ಣವನೆಂದು ಕೆಲವರೂ ಶೈವನೆಂದು ಕೆಲವರೂ ಪ್ರತಿಪಾದಿಸುತ್ತಾರೆ. 'ವಳ್ಳುವರ್'* ಎಂಬುದೊಂದು ಪ್ರಾಚೀನ ತಮಿಳುನಾಡಿನ ಅಂತ್ಯಜ ಜಾತಿ. ಆದುದರಿಂದ ಅವನು ಅಂತ್ಯ–ಜನೆನ್ನುವವರಿದ್ದಾರೆ. ಕಬೀರನಂತೆ ಅವನು ನೆಯ್ಗೆಯ ಕಾಯಕ ಮಾಡುತ್ತಿದ್ದನೆಂದೂ ಹೇಳಲಾಗಿದೆ. "ಮದ್ರಾಸ್ ಪಟ್ಟಣದ ಮೈಲಾಪುರದಲ್ಲಿರುವ ಈತನ ಸಮಾಧಿಯನ್ನು ಶತಮಾನಗಳಷ್ಟು ಹಿಂದಿನಿಂದ ವೀರಶೈವ ಅರ್ಚಕರೇ ಪೂಜಿಸಿಕೊಂಡು ಬರುತ್ತಿರುವುದು ಇಲ್ಲ ಗಮನಾರ್ಹವಾಗಿದೆ. ಅಲ್ಲಿರುವ ತಿರುವಳ್ಳುವರ್ ವಿಗ್ರಹದ, ಆತನ ಹೆಂಡತಿಯ ವಿಗ್ರಹದ ತಲೆಯಲ್ಲಿ ಲಿಂಗಧಾರಣ ಚಿಹ್ನವಿದೆ" ಎಂದು ಪಂಡಿತ ರತ್ನಂ ಬಿ. ಶಿವಮೂರ್ತಿ ಶಾಸ್ತ್ರಿಗಳು ಹೇಳುತ್ತಾರೆ. (ವೀ.ಸಾ.ಇ. ಭಾಗ ೨, ಪುಟ ೪.)

"ಇಷ್ಟೊಂದು ದಿವ್ಯಜ್ಞಾನವನ್ನೊಳಗೊಂಡ ಸೂತ್ರಗಳನ್ನುಳ್ಳ ಇನ್ನೊಂದು ಗ್ರಂಥವು ವಿಶ್ವಸಾಹಿತ್ಯದಲ್ಲಿಯೇ ವಿರಲ"* ಎಂಬ ಖ್ಯಾತಿಗೆ, "ವಿಷ್ಣು ಕುಱಳಾಗಿ (ಕುಳ್ಳನಾಗಿ–ವಾಮನನಾಗಿ) ಭೂ, ಗಗನಗಳನ್ನು ಎರಡು ಪಾದಗಳಿಂದ ಅಳೆದಂತೆ ತಿರುವಳ್ಳುವರ್ ತನ್ನ ಕುಱುಳ್ (ಸಣ್ಣ) ಪದ್ಯಗಳ ಎರಡು ಪಾದಗಳಿಂದ ಪ್ರಪಂಚವನ್ನೆಲ್ಲಾ ಅಳೆದಿದ್ದಾನೆ" ಎಂಬ ನೆಗಳ್ತೆಗೆ ಯೋಗ್ಯವಾಗಿರುವ, 'ಸಾಸಿವೆ ಕಾಳಿನಲ್ಲಿ ಸಪ್ತಸಮುದ್ರಗಳನ್ನು ಸೆರೆಹಿಡಿದಂತೆ' ಎಂಬ ಅಗ್ಗಳಿಕೆಗೆ ಪಾತ್ರವಾದ್ ಕುಱಳ್ ವೇಮನ ಸರ್ವಜ್ಞರ ಮೇಲೆ ಪರಿಣಾಮವನ್ನೇನಾದರೂ ಮಾಡಿದೆಯೆ ಎಂಬುದು ನಿಶ್ಚಿತವಾಗಿಲ್ಲ. ಮೂವರೂ ಜಾತಿ ಮತ ಪಂಥಗಳನ್ನು ಗಣಿಸದೆ ಗುಣಕ್ಕೆ ಪ್ರಾಧಾನ್ಯವನ್ನಿತ್ತವರು,

---

* Tiruvalluvar's poem is one of the select number of great works which have entered into the very soul of a hole people and which can never die."-Rev. G.U.pope.

ನೀತಿಗೆ ಪಟ್ಟಗಟ್ಟಿದವರು, ಗೃಹಸಂಸಾರದಿಂದ ಪ್ರಾರಂಭಿಸಿ ವಿಶ್ವರಹಸ್ಯದವರೆಗೆ ಎಲ್ಲ ವಿಷಯಗಳ ಬಗೆಗೆ ಎಂದೆಂದಿಗೂ ಮರೆಯಲಾಗದಂಥ ಸುವರ್ಣಸೂತ್ರಗಳನ್ನು ಹೇಳಿ ಹೋಗಿರುವವರು. ಹೃದಯ ಪರಿಶುದ್ಧಿ, ನೀತಿಯ ನೆಲಗಟ್ಟಿನ ಮೇಲೆ ನಿಂತ ಜೀವನ, ಮಾನವ ಮಾನವರಲ್ಲಿ ಭೇದವನ್ನೆಣಿಸದ ಸಮದರ್ಶಿತ್ವ, ಎಲ್ಲರೊಡನೆ ಅವೈರ, ಸರ್ವರೊಡನೆ ಮೈತ್ರಿ, ಸಕಲ ಜೀವಿಗಳಲ್ಲಿ ಕರುಣೆ, ಎಲ್ಲ ಕೃತಿಗಳಲ್ಲಿ ಅಹಿಂಸೆ, ಎಲ್ಲ ಕಾಲದಲ್ಲಿಯೂ ಸತ್ಯ–ಇವು ಅವರು ಎತ್ತಿಹಿಡದ ತತ್ತ್ವಗಳು. ತಿರುವಳ್ಳುವರ್ 'ಎಲ್ಲ ಜೀವಿಗಳ ಬಗ್ಗೆ ಪ್ರೇಮ, ಎಲ್ಲ ಕೆಡುಕಿನಿಂದ ದೂರವಿರುವಿಕೆ, ದಾನ, ಕ್ಷಮೆ ಮತ್ತು ಸತ್ಯಗಳೇ ಪುಣ್ಯ ಮಂದಿರದ ಪಂಚ ಸ್ತಂಭಗಳು' ಎಂದು ಹೇಳಿದ್ದಾರೆ. 'ನಿಮಗೆ ಕೆಡುಕು ಮಾಡಿದವರಿಗೂ ನೀವು ಒಳಿತು ಮಾಡಿರಿ, ನಿಮಗೆ ಕೆಡುಕು ಮಾಡಿದವರಿಗೆ ಪ್ರತಿಯಾಗಿ ಒಳಿತನ್ನೇ ನೀವು ಮಾಡಿದಿದ್ದರೆ ನಿಮ್ಮ ಪರಿಪೂರ್ಣತ್ವವೆಂತು? ಒಳಿತು ಮಾಡಿದುದನ್ನು ನೆನಪಿಡುವುದೇನೋ ಸರಿ, ಆದರೆ, ಕೆಟ್ಟುದು ಮಾಡಿದುದನ್ನು ಮರೆಯಬೇಕಾದುದೂ ಅಷ್ಟೇ ಅಗತ್ಯವಾದುದು' ಎಂದು ಬೋಧಿಸಿದ್ದಾರೆ–ಬುದ್ಧನಂತೆ. 'ಒಳ್ಳೆಯವನಾಗಿರು, ಒಳ್ಳೆಯದನ್ನೇ ಮಾಡು' ಇದು ಅವರ ಉಪದೇಶ ಸಾರವಾಗಿದೆ.

ವೇಮನ ಸರ್ವಜ್ಞರೂ ಇದನ್ನೇ ಎತ್ತಿಹಿಡಿದಿದ್ದಾರೆ. ಶಿವದೀಕ್ಷೆಯಾದಮೇಲೆ ಹಿಂದಿನ ಜಾತಿಯಿಲ್ಲ–

> ಕಟ್ಟಿಪೇರು ತೋಡಗಟ್ಟಿ ಚೆಪ್ಪಗರಾದು
> ಕಾನರಾದು ಲೋನಿ ಕಲಿತನಂಬು
> ಜಂಗಮೈಮಿನ ಪಿದಪ ಜಾತಿ ನೆಂಚಗರಾದು
> ವಿಶ್ವದಾಭಿರಾಮ ವಿನುರ ವೇಮ

ಎಂದು ವೇಮಣ್ಣನು ಸಾರಿದರೆ,

> "ನಡೆವುದೊಂದೇ ಭೂಮಿ, ಕುಡಿವುದೊಂದೇ ನೀರು
> ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ
> ನಡುವೆ ಎತ್ತಣದು?"

ಎಂದು ಸರ್ವಜ್ಞ ಕೇಳುತ್ತಾನೆ. ಪರಮಾತ್ಮನ ಪಿತೃತ್ವ ಮಾನವನ ಭ್ರಾತೃತ್ವವನ್ನು ಎತ್ತಿ ಹಿಡಿದು–

---

1 "There hardly exists in the literature of the world a collection of maxims in which we find so much lofty wisdom" – Albert Schweitzer.

"ತಲ್ಲಿ ಗೌರಿ ತನಕು ತಂಡ್ರಿಯೇ ಶಂಭುಂಡು
ಪ್ರಮಥ ಗಣಮುಲಖಿಲ ಬಾಂಧವುಲುನು
ತನಕು ಪುಟ್ಟಿನಿಲ್ಲು ತನರು ಕೈಲಾಸಂಬು
ವಿಶ್ವದಾಭಿರಾಮ ವಿನುರ ವೇಮ"

ಎಂದು ಹೇಳಿದ ಯೋಗಿ ವೇಮಣ್ಣ :

"ಊರೆಲ್ಲ ನೆಂಟರು ಕೇರಿಯೆಲ್ಲವು ಬಳಗ
ಧಾರುಣಿಯೆ ನನ್ನ ಕುಲದೈವವಾಗಿರಲು
ಯಾರನ್ನು ಬಿಡಲಿ?"

ಎಂದು ಕೇಳಿದ ಸರ್ವಜ್ಞ, ಇವರಿಬ್ಬರೂ ಸಮಕಾಲೀನರಿರಬೇಕು. ವೇಮನನ ಕಾಲ ೧೫ನೆಯ ಶತಮಾನವೆಂದು ಕೆಲವರೂ ೧೬ನೆಯ ಶತಮಾನವೆಂದು ಕೆಲವರೂ ಹೇಳುತ್ತಾರೆ. ಸರ್ವಜ್ಞನ ಕೆಲವು ವಚನಗಳನ್ನು ಸಂಪಾದನೆಯ ಸಿದ್ಧವೀರಾಚಾರ್ಯ (ಸುಮಾರು ೧೪೦೦)ರು ತಮ್ಮ ಸಂಪಾದನೆಯಲ್ಲಿ ಸೇರಿಸಿಕೊಂಡಿರುವುದರಿಂದ ಸರ್ವಜ್ಞ ಕ್ರಿ.ಶ. ೧೪೦೦ ಕ್ಕೆ ಹಿಂದೆ ಇದ್ದನು. ಇಷ್ಟು ಹಿಂದೆ–ಇದ್ದನೆಂಬುದು ಗೊತ್ತಾಗಿಲ್ಲ–ಎಂದು ಎಲ್ಲರೂ ಹೇಳುತ್ತಾರೆ. ಇವರಿಬ್ಬರ ಒಂದೇ ಅರ್ಥದ ಪದ್ಯಗಳನ್ನು ಒಟ್ಟುಗೂಡಿಸಿ "ಸರ್ವಜ್ಞ–ವೇಮನ–ಸಂವಾದ" ವೆಂಬ ಪುಸ್ತಕವೊಂದು ಪ್ರಕಟವಾಗಿದೆ. ಇವರಿಬ್ಬರೂ ಎಲ್ಲಿಯಾದರೂ ಒಂದೆಡೆಗೆ ಕೂಡಿ ಮಾತನಾಡಿದ್ದರೆ? ತಿಳಿಯದು. ಆದರೆ 'ನಮ್ಮ ಸರ್ವಜ್ಞನ ಪ್ರಭಾವವು ವೇಮನನ ಮೇಲೆ ಬಹಳವಾಗಿ ಬಿದ್ದಿದೆ' ಎಂಬ ಹೇಳಿಕೆ ಇನ್ನೂ ಹೆಚ್ಚಿನ ಸಂಶೋಧನೆಯಿಂದ ಸಿದ್ಧವಾಗಬೇಕು. ಇಬ್ಬರೂ ಒಬ್ಬರಿಂದೊಬ್ಬರು ಪ್ರಭಾವಿತರಾಗಿದ್ದರೂ ಆಗಿರಬಹುದು.

೧೩೨೬ರಲ್ಲಿ ಕಾಕತೀಯ ಸಾಮ್ರಾಜ್ಯವು ಅಸ್ತಂಗತವಾದಮೇಲೆ ಪ್ರತಾಪ ರುದ್ರನ ಸೇನಾಪತಿಗಳಲ್ಲೊಬ್ಬನಾದ ಪ್ರೋಲಯ ವೇಮಾ (ಹೇಮ) ರೆಡ್ಡಿಯು ಸ್ವತಂತ್ರನಾಗಿ ವಿನುಕೊಂಡ ರಾಜ್ಯವನ್ನು ಆಕ್ರಮಿಸಿಕೊಂಡು ೧೩೫೯ ರವರಿಗೆ ರಾಜ್ಯಭಾರ ಮಾಡಿದನು. ಅವನ ಮಗನಾದ ದೇಸಟಿ ವೇಮಾರೆಡ್ಡಿ (ಅನವೇಮಾರೆಡ್ಡಿ)ಯು ಕ್ರಿ.ಶ. ೧೩೭೪–೧೩೫೦ರವರೆಗೆ ರಾಜ್ಯಭಾರ ಮಾಡಿದನು.ಇವನು 'ವೀರ ಮಾಹೇಶ್ವರ ಚಕ್ರವರ್ತಿಯೆಂದು ಆಂಧ್ರಮಹಾಕವಿ ಶ್ರೀನಾಥನಿಂದ ಸಂಸ್ತುತನಾದ ಅವಚಿ ದೇವಯ್ಯ ಸೆಟ್ಟಿಯ ಸಹಾಯದಿಂದ ಶ್ರೀಶೈಲ ಪರ್ವತಕ್ಕೆ ಸೋಪಾನವನ್ನು ಕಟ್ಟಿಸಿದನು. ಅವನ ತರುವಾಯ ಅನಪೋತ ಭೂಪಾಲ, ಅನವೇಮಾರೆಡ್ಡಿ, ಕುಮಾರ ಗಿರಿರೆಡ್ಡಿಯರು ರಾಜ್ಯವಾಳುತ್ತಾರೆ. ಕುಮಾರ ಗಿರಿರೆಡ್ಡಿ ಅಸಮರ್ಥನಾಗಿದ್ದುದರಿಂದ

ಅನವೇಮಾರೆಡ್ಡಿಯ ಮೊಮ್ಮಗ ಪೆದಕೋಟಿ ವೇಮಭೂಪಾಲನು ಅವನ ರಾಜ್ಯವನ್ನು ಆಕ್ರಮಿಸಿಕೊಳ್ಳುತ್ತಾನೆ. ಕುಮಾರ ಗಿರಿರೆಡ್ಡಿ ತನ್ನ ಮಕ್ಕಳೊಡನೆ ಸಿದ್ಧಾಪುರಕ್ಕೆ ಹೋಗಿ ನೆಲಸುತ್ತಾನೆ. ಈತನಿಗೆ ಕೋಮಟಿ ವೆಂಕಾರೆಡ್ಡಿ, ನಾಗೇಂದ್ರರೆಡ್ಡಿ, ಭರಮರೆಡ್ಡಿ ವೇಮರೆಡ್ಡಿ (ವೇಮಣ್ಣ) ಮುಂತಾದ ಐವರು ಮಕ್ಕಳಿದ್ದರೆಂದು ತಿಳಿದು ಬರುತ್ತದೆ. ಇವರಲ್ಲಿ ಮೂರನೆಯವನಾದ ಭರಮರೆಡ್ಡಿ ದಡ್ಡನಾಗಿದ್ದನು. ಮುಗ್ಧ ಸಂಗಯ್ಯನವನು. ಮೋಸ ವಂಚನೆಗಳನ್ನು, ಏರುಪೇರುಗಳನ್ನು ಅರಿಯದವನು.

ಅತ್ತ ಶ್ರೀಶೈಲಕ್ಕಿ ದಕ್ಷಣದಲ್ಲಿರುವ ವೆಲ್ಲಟೂರು ಪ್ರಾಂತಕ್ಕೆ ಸೇರಿದ್ದ ರಾಮಾಪುರ ಗ್ರಾಮನಿವಾಸಿಗಳಾಗಿದ್ದ ವೇಮನ ನಾಗರೆಡ್ಡಿ ಅವನ ಸತಿ ಗೌರಮ್ಮರು ಶ್ರೀಶೈಲನಾಭನನ್ನು ಭಜಿಸಿ ಪುತ್ರೀರತ್ನವನ್ನು ಪಡೆಯುತ್ತಾರೆ. ಅವಳಿಗೆ ಮಲ್ಲಮ್ಮನೆಂಬ ಹೆಸರಿಡಿತ್ತಾರೆ. ಅವಳು ಯುಕ್ತ ವಯಸ್ಕಳಾಗಲು ಸಿದ್ಧಾಪುರದ ಕುಮಾರ ಗಿರಿರೆಡ್ಡಿಯ ಮೂರನೆಯ ಮಗನಾದ ಭರಮರೆಡ್ಡಿಗೆ ಕೊಟ್ಟು ಮದುವೆ ಮಾಡುತ್ತಾರೆ.

ಐದು ಮಂದಿ ಅಣ್ಣತಮ್ಮಂದಿರು ಅವರ ಹೆಂಡಂದಿರೂ ಒಂದೇ ಮನೆಯಲ್ಲಿ ವಾಸಿಸುತ್ತಲಿದ್ದ ಆ ಅವಿಭಕ್ತ ಕುಟುಂಬದಲ್ಲಿ ಮಲ್ಲಮ್ಮನ ಸತ್ವಪರೀಕ್ಷೆ ನಡೆಯುತ್ತದೆ. ಈಕೆ ಸಜ್ಜನೆ, ಶಿವಭಕ್ತೆ, ಪತಿಪಾದ ಸೇವಾಸಕ್ತೆ.

"ತನ್ನಂತೆ ತಿಳಿವಳನ್ಯರನು ಸದ್ಭಾವಸಂ–
ಪನ್ನೆ ಮಲ್ಲಮ್ಮ; ಇತರರ ಹಿಂಸೆಯಂ ಸಹಿಸಳು ;
ಅನ್ನಮಂ ಕರುಣದಿಂದ ಕೊಡುವಳು ಅರ್ಥಿಜನಕ್ಕೆ; ಶಕ್ತಿಗನುಸಾರವಾಗಿ
ಪನ್ನಗ ವಿಭೂಷಣನ ಭಕ್ತರಂ ಮನದಿಂದ
ಮನ್ನಿಸುವಳು, ಅಪವಾದವು ಅಂಟದಂತಿಹಳು, ಆಕೆಯ
ಉನ್ನತ ಮನಸ್ಸಿನ ಪವಿತ್ರತೆಯನುಸುರುವೊಡೆ ಜಿಹ್ವೆಯೊಂದಕೆ ಸಾಲ್ಗುಮೆ?"

ಮಲ್ಲಮ್ಮನ ಆಗಮನದಿಂದ ಹೇಮರೆಡ್ಡಿಯ ಮನೆತನವಷ್ಟೇ ಅಲ್ಲ, ಸಮಗ್ರ ಸಿದ್ಧಾಪುರ ಗ್ರಾಮವೇ ಸುಖ ಸಮೃದ್ಧಿಗಳಿಂದ ತುಂಬಿ ತುಳುಕುತ್ತದೆ. ಆಕೆಯ ಪುಣ್ಯ ಜೀವನದ ಪರಿಮಳ ಸುತ್ತಲೂ ಹರಡುತ್ತದೆ. ಇದು ಆಕೆಯ ನೆಗೆವಣ್ಣೆ (ಅತ್ತಿಗೆ–ನಾದುನಿ)ಯರಿಗೆ ಸರಿಬೀಳಲಿಲ್ಲ. ಅವರು ದಿನಬೆಳಗಾದರೆ ಮಲ್ಲಮ್ಮನಿಗೆ ಹಿಂಸೆಯ ಮೇಲಡ ಹಿಂಸೆ ಕೊಡತೊಡಗುತ್ತಾರೆ.

"ನೆಗೆವೆಣ್ಣೆಯರು ದುರುಳತನದೆ ಮತ್ಸರಗೊಂಡು
ಹಗೆತನವನಿವಳೊಡನೆ ಬೆಳಸಿ ಸುಮ್ಮನೆ ಮುನಿದು
ಬಗೆಬಗೆಯ ನೆವದಿಂದ ಬೈವುತಂ ಮುಳಿವುತಂ ಭಂಗಿಸುತ ಹಂಗಿಸುತ"

ಕೀಟಲೆ ಕೊಡಲಾರಂಭಿಸುತ್ತಾರೆ. "ಇವಳ ಕೈಯಿಂದ ಒಂದೂ ಕೆಲಸವಾಗುವುದಿಲ್ಲ. ಹಗಲೆಲ್ಲ ಸಾರಣೆ, ಕಾರಣೆ, ಸ್ನಾನ, ಪೂಜೆ, ದಾನ, ಧರ್ಮಗಳಲ್ಲಿಯೇ ಮಗ್ನಳಾಗಿರುತ್ತಾಳೆ. ಮನೆ ಹಾಳುಮಾಡುತ್ತಾಳೆ" ಎಂದು ಅತ್ತೆಯ ಹತ್ತಿರ ದೂರು ಹೇಳಿಹೇಳಿ ಆಕೆಯ ಮನಸ್ಸನ್ನೂ ಕಹಿಗೊಳಿಸಿ ಕೆಡಿಸಿದರು.

"ಸೊಸೆಯರುಸಿರಿದು ಮಾತನಾಲಿಸಿ ಕನಲ್ದು ಅತ್ತೆ
ಪುಸಿಯಲ್ಲ ಇದು, ಎಮಗಚ್ಚಿ ಬಾರದು, ಈ ಬಡಿವಾರ
ವೆಸಗುವುದದೇತಕೆ? ಸಾರಣೆಯೇಕೆ? ವ್ರತವೇಕೆ? ಶುಚಿಯೇಕೆ?
ಸ್ನಾನವೇಕೆ?"

ಎಂದು ಅತ್ತೆಯೂ ಚಿತ್ರಹಿಂಸೆ ಕೊಡಲಾರಂಭಿಸಿದಳು. ಗಂಡ ಮುಗ್ಧ ಸಂಗಯ್ಯ. ಅತ್ತೆ ಚಿತ್ರಹಿಂಸೆ ಕೊಡತೊಡಗಿದಳು, ನೆಗೆವೆಣ್ಣೆಯರು ಬಗೆಬಗೆಯಿಂದ ಕಾಡಿ ಪೀಡಿಸತೊಡಗಿದರು. ಮಲ್ಲಮ್ಮನ ಜೀವನವು ನರಕಯಾತನೆಯಾಯಿತು.ಆಕೆ ನಿಂತರೆ ತಪ್ಪು, ಕುಳಿತರೆ ತಪ್ಪು, ಮಾತನಾಡಿದರೆ ತಪ್ಪು, ಸುಮ್ಮನಿದ್ದರೆ ತಪ್ಪು, ಕೆಲಸ ಮಾಡಿದರೆ ತಪ್ಪು, ಕೆಲಸ ಮಾಡದಿದ್ದರೆ ತಪ್ಪು ! ಒಲ್ಲದ ಅತ್ತೆಗೆ ಮೊಸರಿನಲ್ಲಿ ಕಲ್ಲು ! ಅತ್ತೆ ಸೊಸೆಯರು ಸಾಧ್ವಿ ಮಲ್ಲಮ್ಮನಿಗೆ ಕೊಡುತ್ತಲಿದ್ದ ಕುರುಕುಳವನ್ನು ಕಂಡು ಮಾವನು ಒಳಗೊಳಗೇ ಕೊರಗುತ್ತಿದ್ದನು. ಆದರೆ ಅವರನ್ನು ನಿಯಂತ್ರಿಸುವಷ್ಟು ಮನೋದಾರ್ಢ್ಯ ಅವನಲ್ಲಿರಲಿಲ್ಲ. ಮಲ್ಲಮ್ಮನಿಗೆ ಮಲ್ಲಿಕಾರ್ಜುನನೇ ಆಧಾರವಾಗಿ ಉಳಿದನು. ಅವನೇ ಅವಳ ತಂದೆತಾಯಿ, ಬಂಧುಬಳಗವಾಗಿಬಿಟ್ಟನು. ಎಲ್ಲ ಕಿರುಕುಳಗಳನ್ನೂ ಮಲ್ಲಯ್ಯನ ನೆನಹಿನ ನಂದಾದೀಪದಲ್ಲಿ ಉರಿಸಿಬಿಟ್ಟಳು. ಮೌನದಿಂದಲೇ ದಾರುಣವಾದ ದುಃಖವನ್ನು ಸಹಿಸಿದಳು.

ಈ ಕಿರುಕುಳ ಅಲ್ಲಿಗೇ ನಿಲ್ಲಲಿಲ್ಲ. ಮಲ್ಲಮ್ಮನ ಮೇಲೆ ಅಲ್ಲದ ಸಲ್ಲದ ದೋಷಾರೋಪಣೆಯೂ ಪ್ರಾರಂಭವಾಯಿತು! ಅವಳನ್ನು ಮನೆಬಿಡಿಸಿ ಅಡವಿಗೆ ದಬ್ಬಿಕೊಟ್ಟರು. ಅಲ್ಲಿ ದನಕಾಯುವ ಕಾಯಕ ಅವಳದಾಯಿತು. ಅದನ್ನೂ ಆನಂದದಿಂದಲೇ ಆ ಶುಭ್ರಶೀಲೆ ಮಾಡತೊಡಗಿದಳು. ಮಲ್ಲಿನಾಥನ ಧ್ಯಾನ, ಗೋಸೇವೆಗಳಲ್ಲಿ ತನ್ನೆದೆಯ ಅಳಲೆಲ್ಲವನ್ನೂ ಮರೆತು ಇರತೊಡಗಿದಳು.

ಇಷ್ಟರಿಂದಲೂ ತೃಪ್ತರಾಗಲಿಲ್ಲ ದುಷ್ಟ ನೆಗೆವೆಣ್ಣೆಯರು. ಅವಳ ಮೇಲೆ ವ್ಯಭಿಚಾರದ ಆರೋಪ ಹೊರಿಸಿ ಅವಳ ಗಂಡನನ್ನೇ ಅವಳನ್ನು ಕೊಲ್ಲಲು ಕಳಿಸಿದರು. ಆದರೆ ಆ ಅಗ್ನಿಪರೀಕ್ಷೆಯಲ್ಲಿ ಮಲ್ಲಮ್ಮ ಇನ್ನಷ್ಟು ಉಜ್ವಲವಾಗಿ ಹೊಳೆದಳು. ಅತ್ತೆ–ಅತ್ತಿಗೆಯರಿಗೆ ಸುಜ್ಞಾನೋದಯವಾಯಿತು. ಮಲ್ಲಮ್ಮನ ಚರಿತ್ರೆ ಮನೆ ಮಾತಾಯಿತು. ಮಲ್ಲಮ್ಮ ಗೃಹಿಣಿಯರಿಗೆಲ್ಲ ಗುರುವಾದಳು. ಮಹಾದೇವಿ–ಮೀರಾಬಾಯಿಯಂತೆ

ಪತಿಯನ್ನೂ ಪತಿಗೃಹವನ್ನೂ ನಿರಾಕರಿಸಿ ವೀರ ವೈರಾಗ್ಯದ ಪಥದಲ್ಲಿ ಸದ್ಗತಿಯನ್ನು ಪಡೆವ ಮಾರ್ಗವೊಂದು; ಗೃಹಿಣಿಯಾಗಿ ಗೃಹಜೀವನದ ನಂಜು ನುಂಗಿ ನಂಜುಂಡನನ್ನೊಲಿಸುವ ಮಾರ್ಗವಿನ್ನೊಂದು. ಹೇಮರೆಡ್ಡಿಯ ಮಲ್ಲಮಾಂಬೆ ಈ ಎರಡನೆಯ ಮಾರ್ಗದ ಧ್ರುವತಾರೆ, ದೀಪಸ್ತಂಭ, ದಿಶಾದರ್ಶಕಿ, ಕೇಡು ಬಗೆದವರಿಗೇ ಲೇಸಲು ಬೇಡಿ, ಅಸೂಯೆಯ ವಿಷವನ್ನು ಮತ್ಸರದ ನಂಜನ್ನು ಕ್ಷಮೆಯ ಗಾರುಡದಿಂದ ಅಮೃತವನ್ನಾಗಿ ಮಾಡಿದ ಅಮೃತಮತಿಯಾಕೆ.

ಸ್ವಾರ್ಥಮಂ ಬಯಸುತಿಹರಲ್ಲದೀ ಮರ್ತ್ಯರ್ಪರ–
ರಾರ್ಥಮಂ ಬಯಸುವವರತಿ ವಿರಳವೀವನಿತೆ
ಸ್ವಾರ್ಥವಂ  ಬಯಸದೆ ಪರಾರ್ಥಕೋಸುಗಮಾಗಿ ದೇವಾರ್ಥಮಂ ಭಾವಿಸಿ
ಅರ್ಥಿಸಿದಳೀಕೆಗಾರ್ಸಾಟಿ ಸುರನರರೊಳ್? ಕೃ
ತಾರ್ಥನಾಗನೆ ಮೇದಿನಿ ಮಂಡಲದೊಳು ಧ–
ರ್ಮಾರ್ಥಕಾಮಾಮೃತಗಳಾಶೆಯಿಲ್ಲದ ಮಲ್ಲಮಾಂಬೆಯಂ ನೆನೆದ ನರನು?

ಮಲ್ಲಮ್ಮನು ಮಾನವ ಕುಲಕ್ಕೆ ಮಾಡಿರುವ ಮಹೋಪಕಾರವು ಇನ್ನೊಂದಿದೆ. ಆಕೆಯ ಭಕ್ತಿಯ ಫಲವಾಗಿ ಶ್ರೀಗಿರಿ ಮಲ್ಲಿಕಾರ್ಜುನ ದೇವಾಲಯ, ಪ್ರಾಕಾರ, ಮೂರು ಗಾವುದದವರೆಗಿನ ಮಾರ್ಗ, ಪಾತಾಳಗಂಗೆಯವರೆಗಿನ ಸೋಪಾನ ಮುಂತಾದ ಮಹತ್ಕಾರ್ಯಗಳು ಜರುಗಿದುವಲ್ಲದೆ ಆಂಧ್ರ ಸಾಹಿತ್ಯಕ್ಕೆ ತನ್ಮೂಲಕ ಮಾನವಕುಲಕ್ಕೆ 'ವೇಮನ ಜ್ಞಾನಮಾರ್ಗ ಪದ್ಯಮುಲು'ಎಂಬ ೩೦೦೨ ಪದ್ಯಗಳ ಅಮೂಲ್ಯ ಭಂಡಾರ ದೊರೆಯಿತು ಎಂಬುದು ಜನಜನಿತವಾಗಿ ಬಂದಿದೆ.

ಮಲ್ಲಮ್ಮನ ಮೈದುನನಾಗಿದ್ದ ವೇಮಣ್ಣ (ವೇಮರೆಡ್ಡಿ) ವಿಷಯಾಸಕ್ತನಾಗಿದ್ದನು. ಓರ್ವ ವೇಶ್ಯೆಯಲ್ಲಿ ಅನುರಕ್ತನಾಗಿದ್ದನು. ಅವಳ ಮೋಹಕ್ಕೆ ಒಳಗಾಗಿ ಮನೆಯಲ್ಲಿದ್ದ ಹಣವನ್ನೆಲ್ಲಾ ಒಯ್ದು ಅವಳಿಗೆ ಕೊಡುತ್ತಿದ್ದನು. ಮನೆಯಲ್ಲಿ ಏನೂ ದೊರೆಯದಿದ್ದರೆ ಅಣ್ಣನ ಹೆಂಡತಿಯಾದ ಮಲ್ಲಮ್ಮನನ್ನು ಕೇಳಿ ಆಕೆಯ ಒಡೆಯ ವಸ್ತುಗಳನ್ನು ಒಯ್ದು ಕೊಡುತ್ತಿದ್ದನು. ಎಂದಾದರೊಂದು ದಿನ ಅತ್ತಿಗೆಯು 'ಇಂದು ಬೇಡ ನಾಳೆ ಕೊಡುತ್ತೇನೆ' ಎಂದು ಹೇಳಿದರೆ ಆಕೆ ಕೊಡುವವರೆಗೂ ಉಪವಾಸವಿರುತ್ತಿದ್ದನು. ಬಹುಶಃ ಅವನೇ ಅನ್ನ ಸತ್ಯಾಗ್ರಹದ ಆದ್ಯ ಪ್ರವರ್ತಕ. ಅವನು ಉಪವಾಸ ಒಣಗುವುದನ್ನು ನೋಡಲಾಗದೆ ದಯಾರ್ದ್ರ ಹೃದಯಳಾದ ಮಲ್ಲಮ್ಮ ಅವನು ಕೇಳಿದುದನ್ನು ಕೊಟ್ಟುಬಿಡುತ್ತಿದ್ದಳು.

ತಾನು ಕೇಳಿದುದೆಲ್ಲ ಕೂಡಲೇ ತನ್ನ ಕೈಗೆ ಬರುತ್ತಿದ್ದುದನ್ನು ಕಂಡು ಆ ವೇಶ್ಯೆಯ ಆಶೆಯೂ ಇಮ್ಮಡಿಸಿತು ಹೀಗಿರಲು,

ಇರುತೊಂದು ದಿನದೊಳಾ ಸೂಳೆ ನೀರಂ ಪೊತ್ತು
ತರುವಾಗ  ಬೀದಿಯೊಳು ಮಲ್ಲಮಾಂಬೆಯ ಕಿವಿಯ
ಹರಳಿನೋಲೆಯ ಕಂಡು ಮನದೊಳಗೆ ಬಯಸಿ ತರಹರಿಸುತ್ತ ಮನೆಗೆ ಬಂದು
ಭರದೆ ತನ್ನಯ ಮಿಂಡನಂ ಕೂರ್ತು ಕೇಳೆನ್ನ
ಪುರಷ ನಿನ್ನತ್ತಿಗೆಯ ರನ್ನದೋಲೆಯನಿಂದು
ತರದೊಡೆನ್ನಯ ಮನೆಗೆ ಬರಬೇಡವೆಂದುಸುರಲದಕೆ ಯೋಚನೆಗೈಯದೆ–

ಅತ್ತಿಗೆಯ ಹತ್ತಿರಕ್ಕೆ ಓಡಿಬಂದ ವೇಮಣ್ಣ. ಕೈ ಮುಗಿದು ಹೇಳಿದ, 'ಅತ್ತಿಗೆ ನಿನ್ನ ಕಿವಿಯ ಹರಳಿನೋಲೆಗಳನ್ನೇ೧ ಬಯಸಿ ಬೇಡಿದ್ದಾಳೆ ಸೂಳೆ. ನೀನವುಗಳನ್ನು 'ಕೊಡದೊಡಸುವಳಿವುದೌ, ಸುಳ್ಳಲ್ಲವೆನ್ನಾಣೆ, ನಿನ್ನಾಣೆ !'

ಮಲ್ಲಮ್ಮನು ನಿರುಪಾಯಳಾದಳು. ಕೊಡದಿದ್ದರೆ ಬಿಡುವವನಲ್ಲ ವೇಶ್ಯೆಗೆ ಮರುಳಾದ ಮೈದುನ. ಒಂದು ಉಪಾಯವನ್ನು ನೆನೆದು ಹೇಳಿದಳು, "ಆರಿಗುಂ ತಿಳಿಯಗೊಡದೆ ನಿನಗೀವೆನೋಲೆಗಳ ಮೈದುನ, ಆದರೆ ಒಂದು ಕರಾರಿಗೆ ನೀನು ಒಪ್ಪಬೇಕು.

ಇಂದಿನಿರುಳೊಳು ನಿನ್ನ ಸೂಳೆ ಬತ್ತಲೆಯಾಗಿ
ಬಂದು ನಿನ್ನಯ ಮಂಚಮಂ ಮೂರುಬಾರಿ ಮುದ–
ದಿಂದ ದೀಪದ ಬೆಳಕಿನೊಳು ಸುತ್ತಿ ಬಂದ ಬಳಿಕೀಯೋಲೆಗಳನವಳಿಗೆ
ಕುಂದದಿತ್ತುಪಚರಿಸು !

ಅತ್ತಿಗೆಯನ್ನು ತನ್ನ ತಾಯಿಯೆಂದೇ ತಿಳಿದಿದ್ದ ವೇಮಣ್ಣ ಈ ಕರಾರಿಗೆ ಒಪ್ಪಿ ಓಲೆಗಳನ್ನು ತೆಗೆದುಕೊಂಡು ಹೋದನು. ಸೂಳೆಗೆ ಆ ಕರಾರನ್ನು ಹೇಳಿದನು. ಅವಳು ಹೇಳಿ ಕೇಳಿ ಬೆಲೆವೆಣ್ಣು. "ಪರಮ ಸಂತೋಷದಿಂದಿರುಳಿನೊಳು ಪುರುಷನನುಮತಿಯಂತೆ ನಗ್ನದಿಂ ಮಂಚಮಂ ನೆರೆ ಸುತ್ತುವರಿವುದಂ ನೋಡಿ, ಮನದೊಳು ನಾಚಿ, ಮತ್ತಂ ಜುಗುಪ್ಸೆಗೊಂಡು, ಹರಹರಾ, ಚೀನಾಂಬರಗಳಿಂ

---

೧ ವೇಶ್ಯೆ ಮೂಗುತಿಯನ್ನು ಕೇಳಿದಳೆಂದು ಕಥಾಂತರವುಂಟು. ನೀರ ದಾರಿಯಿಂದ ಹೊರಟಿದ್ದ ವಾರಾಂಗನೆಯ ಕಣ್ಣಿಗೆ ಕಿವಿಯ ಓಲೆಗಳಿಗಿಂತ ಮೂಗಿನ ಮೂಗುತಿ ಕಂಡಿರುವುದು ಹೆಚ್ಚು ಸಂಭವನೀಯವಾಗಿದೆ.

ಮುಚ್ಚಿ ಸುಂದರವಾಗಿ ಕಾಣ್ಬ ತರುಣೀಶರೀರದ ಪರಿಯನರಿಯದಲೆ ಮರುಳತನದಿಂದ ಮೋಹಿಸಿ ಕೆಟ್ಟೆನೆಂದು ದಿಗ್ಭ್ರಮಣೆಗೊಂಡು ಉಸುರ್ಗರೆದನು!"

ರಾಗ ವಿರಾಗವಾಯಿತು, ಮೋಹ ನಿರ್ಮೋಹವಾಯಿತು, ವಿಷಯ

ನಿರ್ವಿಷಯವಾಯಿತು. ಮರವೆಯ ತೆರೆ ಸರಿಯಿತು; ಅರುವಿನ ಬೆಳಕು ತೂರಿ ಬಂದಿತು. ಅತ್ತಿಗೆಯ ಹತ್ತಿರಕ್ಕೆ ಓಡಿ ಬಂದು."ಅವ ಜನ್ಮದ ಪುಣ್ಯವೋ ತಾಯೆ, ನಿನ್ನ ಕೃಪೆ ಈ ವಿಧದೊಳೆನಗಾಯ್ತು ! ಪಾವನಚರಿತ್ರೆ, ಚಿತ್ಪ್ರಕಾಶದೆ ತಂದೆಯೆನ್ನ" ಎಂದು ಎದೆದುಂಬಿ ಅತ್ತಿಗೆಯನ್ನು ಕೊಂಡಾಡಿದನು. ಮಲ್ಲಮ್ಮನ ಉಪಾಯ ಫಲಿಸಿತು. ಫಲಿಸದೇನು? ಅದು ಸಾಧ್ವಿಶಿರೋಮಣಿಯ ಸತ್ ಸಂಕಲ್ಪದಿಂದ ಹೊರಟ ಉಪಾಯವಲ್ಲವೇ?

ಅಂದು ಮಲ್ಲಮ್ಮ ಮೈದುನನನ್ನು ಸೂಳೆಗೇರಿಯಿಂದ ಸತ್ಯದ ದಾರಿಗೆ ಎಳೆಯದಿದ್ದರೆ ಜಗತ್ತಿಗೆ ವೇಮನ ಯೋಗಿನ ಜ್ಞಾನಗೀತೆಗಳು ದೊರೆಯುತ್ತಿರಲಿಲ್ಲ. ಒಬ್ಬ ಉನ್ಮತ್ತ ಕಾಮುಕನನ್ನು ಉದಾತ್ತ ಯೋಗಿಯನ್ನಾಗಿ ಉಪಾಯದಿಂದಲೇ, ಅಹಿಂಸೆಯಿಂದಲೇ ಪರಿವರ್ತಿಸಿದ ಮಲ್ಲಮ್ಮ ನಾರೀ ಲೋಕದ ದಾರಿದೀಪ, ನಾರೀ ಕುಲಕ್ಕೆಲ್ಲ ಗೌರವ ತಂದ ಮಹಾಮಾತೆ, ಪೂತೆ, ಖ್ಯಾತೆ, ಅಂತೆಯೇ ಹಳ್ಳಿಗೂ "ಹೆಣ್ಣುಮಕ್ಕಳೊಳಗೆ ಹೇಮರೆಡ್ಡಿ ಮಲ್ಲಮ್ಮ ಮೇಲ ತನ್ನ ದೇಹವ ಪುಡಿಮಾಡಿ–ಕಟ್ಟಿಸ್ಯಾಳ ಪರ್ವತ ಮಲ್ಲನ ಹೊಸ ಕಳಸ" ಎಂದು ಹಾಡುತ್ತಿದ್ದಾರೆ.

ವೇಮಣ್ಣನು ತಾನು ವೇಮನ ಯೋಗಿಯಾದ ಸನ್ನಿವೇಶವನ್ನು ಈ ರೀತಿ ಹಾಡಿಕೊಂಡಿದ್ದಾನೆ ;

"ಜಾರು ಚನುದೊಯಿ ಬಯಿಕೆತ್ತಿ ಚೇರಬಿಗಿಚಿ
ಕಂಚುಕಮು ಗಟ್ಟು ಕಾಮಿನೀ ಕಪಟ ವೇಷ
ಧಾರಿ ವಲಲೋನ ಬಡಿ ನೀವು ದಗುಲು ಕೊನಕು
ವಿಮಲಗುಣ ರಾಜಯೋಗೀಂದ್ರ ವೇಮನಾರ್ಯ"

(ವೇ.ಜ್ಞಾ, ಭಾಗ ೩, ಪ. ೩೫)

ಮುಂದೆ ಸೋಮಶೇಖರನೆಂಬ ಸದ್ಗುರುವಿನ ಸದುಪದೇಶದಿಂದ ನೀತಿ, ಧರ್ಮ, ಜ್ಞಾನಗಳನ್ನರಿತು ತನ್ನ ಜ್ಞಾನಮಾಗ್ ಪದಗಳಿಂದ ಮಾನವರನ್ನು ಪರಿಪೂತರನ್ನಾಗಿ ಮಾಡಿ ವಿಖ್ಯಾತನಾಗುತ್ತಾನೆ. ಅವರ ಅಂಧಶ್ರದ್ಧೆಗಳನ್ನು ಅಳಿದು ಅರಿವಿನ ಅಮೃತವನ್ನು ಉಣಿಸುತ್ತಾನೆ; ತಣಿಸುತ್ತಾನೆ. ತಾನೇ ಹೇಳಿಕೊಂಡಂತೆ "ಶ್ರೀಕರ ಶಿವತತ್ತ್ವಶೀಲುಡಾ ವೇಮನ" ಆಗುತ್ತಾನೆ. "ಆರುಮತಮುಲ ಪಯಿನಧಿಕಮ್ಮೈನ

ಮತಮು, ಲಿಂಗಮತಮು ಕಂಟೆಲೇದು ಜಗತಿ' ಎಂದು ಹೇಳಿ ಕೊಂಡಿದ್ದರೂ 'ಅಂಗದ ಮೇಲೆ ಲಿಂಗ ಕಟ್ಟಿ ಲಿಂಗ ಭಕ್ತಿಯಿಲ್ಲದಿದ್ದರೆ ಕಳ್ಳದನದ ಕೊರಳಿಗೆ ಗುದ್ದಿ ಕಟ್ಟಿದಂತೆ (ಅಂಗಮಂದು ಲಿಂಗಮತಿಶಯಂಬುಗಗಟ್ಟಿ । ಲಿಂಗ ಮಂದು ಭಕ್ತಿಲೇಕಯನ್ನ । ದೊಂಗ ಗೊಡ್ಡುಮೆಡನು ದುಂಗ ಗಟ್ಟಿನರೀತಿ । ವಿಶ್ವಾದಾಭಿರಾಮ ವಿನುರ ವೇಮಾ) ಎಂದು ಲಿಂಗಭಕ್ತಿವಿಹೀನರನ್ನೂ ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗುವವರನ್ನೂ (ಅರುತ ಲಿಂಗಮುಂಡ ನದಿಯೆರುಂಗಕಲೇಕ । ಪರ್ವತಂಬು ವೆದಕು ಪನಸ ಕೊಡುಕು । ಪಾಮರಾನಿ ಲಿಂಗ ಪ್ರಾಣಮೇಗದ ಚೂಡ । ವಿ.ವಿ. ವೇಮ) ಖಂಡಿಸದೆ ಬಿಟ್ಟಿಲ್ಲ. ಅಂಗ ಲಿಂಗಗಳ ಅರಿವಿಲ್ಲದೆ ವೀರಶೈವನಾಗಬಾರದೆಂದೇ ಹೇಳಿದ್ದಾನೆ. (ಆ ಚರಾಚರಮುಲ ನಂಗಾಲ ಲಿಂಗಾಲ। ಸರಣಿ ದೆಲಿಯನಟ್ಟಿ ಶೈವಮೇಲ? । ಅಷ್ಟ ತನುವು ಮುಯುಡು ಹರು ಡೌಟ ನೆರುಗರೋ । ವಿ.ವಿ. ವೇಮ); ನಿಷ್ಠೆಯಿಲ್ಲದೆ ಇಷ್ಟಲಿಂಗ ಕೊರಳಿಗೆ ಬಿಗಿದರೆ ಫಲವಿಲ್ಲವೆಂದೇ ಸಾರಿದ್ದಾನೆ. ಸ್ತ್ರೀಪುರುಷ ರೂಪವಾದ ಲಿಂಗಭೇದವನ್ನು ತೊಲಗಿಸಿ ಈರ್ವರ ಅಂಗದಲ್ಲಿ ಲಿಂಗಧಾರಣೆಮಾಡಿ ಲಿಂಗಾಂಗ ಸಾಮರಸ್ಯವನ್ನು ಅನುಭವಿಸುವುದೇ ಸತ್ಯಮಾರ್ಗವೆಂದು ಸಾರಿದ್ದಾನೆ. (ಲಿಂಗ ಜೀವುಲರೆಂಟಿನಿ ಭಂಗಪೆಟ್ಟಿ । ಅಂಗಮಂದುನು ಲಿಂಗಂಬು ನನವು ಪರಚಿ । ಸಂಗ ಮೇರ್ಪಡ ಜೂಚುಟೇ ಸತ್ಯ ಮಗುನು । ವಿ.ವಿ. ವೇಮ) ಒಟ್ಟಿನಲ್ಲಿ ಅವನು ಬೋಧಿಸಿದುದು ಉದಾರವಾದ ಶಿವಾದ್ವೈತ ಸಿದ್ಧಾಂತ.

"ಅಂಗಮೋಡ ಬುಟ್ಟೆ ಲಿಂಗಮೋಡ ಬುಟ್ಟೆ
ಯೆಂಗಿಲೆಂಗಿಲನುಚು ನೆಗ್ಗುಲು ಪಡನೇಲ
ವಿ. ವಿ. ವೇಮ"
"ಲಿಂಗಮೇ ಭವುಡೈನ ನಂಗಂಬು ಜೀವುಂಡು
ಜೀವಿಸ್ವಚ್ಛ ಮೈನ ಜೇರುಗಿವುನಿ !"

"ಅಂಗವೆಲ್ಲಿ ಹುಟ್ಟಿತು? ಲಿಂಗವೆಲ್ಲಿ ಹುಟ್ಟಿತು? ಎಂಜಲು ಹುಟ್ಟಿದುದೆಲ್ಲಿ? ಎಲ್ಲವೂ ಶಿವಸ್ವರೂಪವಾಗಿ ಏಕವಾದಮೇಲೆ ಎಂಜಲು, ಎಂಜಲು ಎಂದು ಎಗ್ಗು ಮಾಡುವುದೇಕೆ?" ಇದು ವೇಮನನ ನಿಲವು. ಆ ಎತ್ತರದಲ್ಲಿ ನಿಂತು ಎಲ್ಲವನ್ನೂ ನೋಡಿ ಅನುಭವಾಮೃತವನ್ನು ನೀಡಿ ಶಿವನೊಳಗೆ ಕೂಡಿ ಹೋದಾತ ವೇಮನ. ಇಂದಿಗೂ ಗೋಪಾಲನಿಂದ ಭೂಪಾಲನವರೆಗೆ, ಬಡವನಿಂದ ಬಲ್ಲದನವರೆಗೆ ಅವನ ವಚನಗಳನ್ನು ಓಡಿ ಆನಂದಿಸದವರೇ ಇಲ್ಲ. ಲಕ್ಷ್ಮಣ ಕವಿ, ಎಲ್ಲ ನಾಯಕ, ಶಿವಯೋಗೀಂದ್ರ, ತುರುಗಾ ರಾಮ, ನರಸಿಂಹದಾಸರಂಥ ಸತ್ಕವಿಗಳು ವೇಮನನ್ನು ಸ್ಮರಿಸಿದ್ದಾರೆ.

ಮಾನವಲೋಕಕ್ಕೆ ಮಾರ್ಗದರ್ಶಕವಾದ ವೇಮನನ ಪದ್ಯಗಳು ಅವನೇ ಹೇಳಿಕೊಂಡಿರುವಂತೆ–

ವೇಮನ ಚೆಪ್ಪಿನ ಪದ್ಯಮು
ಸಾಮಂಬುನ ಸಕಲವೇದ ಸಾರಂಬುಗದಾ
ಸಾಮೆತ ಪಂಚಾಕ್ಷರಿಲೋ
ನೀಮಹಿಮಲು ದೆಲಿಯತಕುನ್ನನಿಂಪಾ ವೇಮ–

ಸಕಲ ವೇದಸಾರಗಳಾಗಿವೆ, ಅನುಭವಸಾರವಾಗಿವೆ. ಸುಲಲಿತವೂ ಸಮೀಚೀನವೂ ಆದ ಇವನ ಹಿತವಚನಗಳು ಲೋಕಾನುಭವವನ್ನೂ ಶಿವಾನುಭವವನ್ನೂ ಸಮಾನ ಸಫಲತೆಯಿಂದ ಸೆರೆಹಿಡಿದಿವೆ. ಅಂತೆಯೇ ಮುಮುಕ್ಷುಗಳ, ಜ್ಞಾನ ಭೀಕ್ಷುಗಳ ಮನಗಳನ್ನೂ ಸೆರೆಹಿಡಿದಿವೆ. ಕದರಿ ತಾಲ್ಲೋಕಿಗೆ ಸೇರಿದ 'ಕಠಾರುಪಲ್ಲಿ'ಯಲ್ಲಿರುವ ಅವನ ಸಮಾಧಿ ಜ್ಞಾನೋಪಾಕರಿಗೆ, ಆತ್ಮದರ್ಶನಾಕಾಂಕ್ಷಿಗಳಿಗೆ ಪವಿತ್ರ ಯಾತ್ರಾಸ್ಥಾನವಾಗಿದೆ.

ಕನ್ನಡ ಜಾನಪದ ಕವಿಚಕ್ರರ್ತಿ ಸರ್ವಜ್ಞನ ಜನನದ ಬಗ್ಗೆ ಜನಜನಿತವಾದ ಐತಿಹ್ಯವಿದು. ಧಾರವಾಡ ಜಿಲ್ಲೆಯ ಮೈಸೂರು ಗ್ರಾಮದಲ್ಲಿದ್ದ ಬಸವರಸ ಎಂಬ ಆರಾಧ್ಯ ಬ್ರಾಹ್ಮಣನು ತನ್ನ ಪತ್ನಿ ಮಲ್ಲಮ್ಮನು ಮಕ್ಕಳಿಲ್ಲದೆ ದುಃಖಿಸುತ್ತಿರಲು ಪುತ್ರಪ್ರಾಪ್ತಿಗಾಗಿ ಕಾಶೀಯಾತ್ರೆಗೆ ಹೋದನು. ಅಲ್ಲಿ ಭಗವಾನ್ ವಿಶ್ವನಾಥನ ಅನುಗ್ರಹವನ್ನು ಪಡೆದು ಸ್ವಗ್ರಾಮಕ್ಕೆ ಹಿಂದಿರುಗುತ್ತಿದ್ದಾಗ ದಾರಿಯಲ್ಲಿ ಅಂಬಲೂರಿನಲ್ಲಿ ಬಂದಿರುಳು ಕಳಡದನು. ಅಲ್ಲಿ, ಕಾಲಕರ್ಮಸಂಯೋಗದಿಂದ ಕುಂಬಾರ ಮಾಳಿಯೆಂಬುವಳ ಸಂಗಮಾಡಿದನು. ಆ ಮಾಳಿಯ ಉದರದಿಮದ ಸರ್ವಜ್ಞ ಜನಿಸಿದನು.

ಈ ಕಥೆಯನ್ನು ಒಪ್ಪದವರೂ ಇದ್ದಾರೆ. ಸ್ವತಃ ಸರ್ವಜ್ಞನೇ–
ತಂದೆ ವಿಪ್ರನು ಅಲ್ಲ ತಾಯ ಮಾಳಿಯು ಅಲ್ಲ ।
ಚಂದ್ರಶೇಖರನ ವರದಿಂದ ಹುಟ್ಟಿದ । ಕಂದ ತಾನೆಂದ ಸರ್ವಜ್ಞ॥

ಎಂದು ಹೇಳಿಕೊಂಡಿದ್ದಾನೆ. "ಗಂಡು ತನ್ನದು ಎಂದು ಲಂಡೆಸುತನೆಂಬುವಳು। ಖಂಡಪರಶುವಿನ ವರಪುತ್ರ ಆನುನೆರೆ । ಕಂಡುದನೆ ನುಡಿವೆ ಸರ್ವಜ್ಞ॥ ಎಂದು ತನ್ನ ನಿರಂಕುಶಮತಿಯನ್ನು ವ್ಯಕ್ತಿಗೊಳಿಸಿದ್ದಾನೆ. "ತಾ, ಯೆಂಬೆನಲ್ಲದೆ ತಾಯಿತಾನೆಂಬೆನೆ? । ತಾಯಿಯೆಂದಾನು ನುಡಿದೇನು, ಪರಸ್ತ್ರೀಯು । ತಾಯಿಯೆಂದೆಂಬೆ । ಸರ್ವಜ್ಞ" ಎಂದು ಸರ್ವ ಸ್ತ್ರೀಯರೂ ತನ್ನ ತಾಯಿಯೆಂದೆಂಬ ಹೃದಯವೈಶಾಲ್ಯವನ್ನು ತೋರಿದ್ದಾನೆ.

ಬಹುಶಃ ಇವನ 'ಕಂಡುದನೆ ನುಡಿವ' ಕೆಚ್ಚು ಮನೆಯುವರಿಗೆಲ್ಲ ಅಪ್ರಿಯುವಾಯಿತೆಂದು ತೋರುತ್ತದೆ. ಕಾರಣ, "ನೂಕಿದರು ಅವರಾಗ ಕುಹಕತನದೋಳು ಬೇಗ । ಲೋಕದೊಳಗೆಲ್ಲ ಕಂಡುದನು ನುಡಿದು ತಾ । ನೇಕವಾಗಿಹನು ಸರ್ವಜ್ಞ" ಎಂದು ನುಡಿದಿದ್ದಾನೆ.

ಹೀಗೆ ಕುಂಬಾರಸಾಲೆಯಿಮದ 'ಹಿಂಡನಗಲಿದ ಗಜದಂತೆ ಹೊರಟು' ಮಂಡೆ ಬೋಳಿಸಿಕೊಂಡು, ತುಂಡುಗಂಬಳಿ ಹೊದೆದು,ಕರಡಿ ಕಪ್ಪರ ಹಿಡಿದು, ಊರೂರು ತಿರುಗುತ್ತ, ಕಂಡುದನೆ ನುಡಿಯುತ್ತ, 'ತಿರಿವರಿಂ ಸಿರಿವಂತರಾರು?' ಎಂದು ಉಗ್ಘಡಿಸುತ್ತ ನಡೆದನಾ ಕ್ರಾಂತಿಪುರುಷ. ಕನ್ನಡನಾಡನ್ನೆಲ್ಲ ಸುತ್ತಿದ, ಲೋಕ ಜೀವನವನ್ನೆಲ್ಲ ತುತ್ತಿದ, 'ಸರ್ವರೊಳಗೊಂದೊಂದು ನುಡಿ ಕಲಿತು ವಿದ್ಯದ ಪರ್ವತವೆ' ತಾನಾದ. ತಾನು ಕಂಡುಂಡ ಅನುಭವವನ್ನು ಸಾವಿರಾರು ಸುವರ್ಣ ಸೂತ್ರಗಳಲ್ಲಿ ಎರಕಹೊಯ್ದು. ತಿರುವಳ್ಳುವರ್-ಪಾಲ್ಕುರಿಕೆ ಸೋಮನಾಥರ ಕೈಯಲ್ಲಿ ದ್ವಿಪದಿ, ವೇಮನ-ರತ್ನಕರವರ್ಣಿಗಳ ಕೈಯಲ್ಲಿ ಚೌಪದಿ ತ್ರಿಪದಿ, ಹರಿಹರನ ಕೈಯಲ್ಲಿ ರಗಳೆ, ರಾಘವಾಂಕ-ಕುಮಾರವ್ಯಾಸರ ಕೈಯಲ್ಲಿ  ಷಟ್ಪದಿ ಮಹೋನ್ನತಿಯನ್ನು ಪಡೆದಂತೆ ಸರ್ವಜ್ಞನ ಕೈಯುಲ್ಲಿ ತ್ರಿಪದಿ ಪರವೋನ್ನತಿಯುನ್ನು ಪಡೆದುಕೊಂಡಿತು.ತಿರುಳ್ಗನ್ನಡದಲ್ಲಿ, ತ್ರಿಪದಿಯಂಥ ಜಾನಪದ ಛಂದಸ್ಸಿನಲ್ಲಿ ಜೀವನಾನುಭವ, ಶಿವಾನುಭವ, ನೀತಿ, ಧರ್ಮ, ಶಾಸ್ತ್ರ, ಒಗಟು, ಕಾಲ, ಜ್ಞಾನ ಇತ್ಯಾದಿ ಅನೇಕ ವಿಷಯಗಳ ತಿರುಳು ದೊರೆಯಿತು ಜನಸಾಮಾನ್ಯರಿಗೆ. ಅವನ ವಚನಗಳು ಜನಪದ ವೇದವಾಗಿ ಉಳಿದಿವೆ. ಸರ್ವಜ್ಞ ಪಂಡಿತರ ಕವಿಯಲ್ಲ. ಪಾಮರರ ಪ್ರವಾದಿ. ಆದರೆ ನಾನೀನೆಂಬ ಪಂಡಿತರೂ ಅವನ ಪ್ರತಿಭೆಗೆ ತಲೆದೂಗಿದ್ದಾರೆ. "ಸರಸ ಕನ್ನಡದಲ್ಲಿ ಬೆರಸಿ ಸಿಡಿಲಿನ ನೀರ । ಸುರಿಸಿದನು ಮಿಂಚಿನ ವಚನಗಳನ್ನು ಸಿರಿಗನ್ನ । ಡರಸ ನಿವನೊಬ್ಬ ಸರ್ವಜ್ಞ॥" ಎಂದರು ನಾಡಕವಿ ಅಂಬಿಕಾತನಯದತ್ತರು; 'ಇವನು ಕರ್ನಾಟಕದ ಮೃಗೇಂದ್ರ, ಜೇನುದುಂಬಿ, ಕೋಕಿಲ'ವೆಂದರು ಉತ್ತುಂಗ ಸಾಹಿತಿ ಉತ್ತಂಗಿಯವರು; 'ಸರ್ವಜ್ಞನು ಸಿಡಿಲುಣಿ...ಅವನ ಕೂಗು ನರಿಯ ಕೂಗಲ್ಲ, ಸಿಂಹಾನಾದ' ಎಂದರು ತಿರುಮಲೆ ತಾತಾಚಾರ್ಯ ಶರ್ಮರು; "ಸರ್ವಜ್ಞನ ವಚನಗಳೆಂದರೆ ಅದೊಂದು ಚಿಕ್ಕ ವಿಶ್ವಕೋಶ" ವೆಂದರು ಚಿಚ್ಚಕೋರರು; "ಸರ್ವಜ್ಞನು ಕನ್ನಡಿಗರ 'ತಿರುವಳ್ಳುವರ್' ಎಂದರು ಪಂಡಿತ ಪ್ರಕಾಂಡ ಎ.ಆರ್.ಕೃಷ್ಣಶಾಸ್ತ್ರಿಗಳು; "ಧರ್ಮದ ಬಗ್ಗೆ ಅವನು ತಳೆದಿದ್ದ ಉದಾರ ದೃಷ್ಟಿ, ಹೊಲೆಯರೇ ಮೊದಲಾದ ಸಮಾಜಬಾಹಿರರ ಬಗ್ಗೆ ತಳೆದಿದ್ದ ಅಪಾರ ಕರುಣೆ, ಮಾನವಪ್ರೇಮ, ಆತ್ಮಜ್ಞಾನ, ಅನುಭವಗಳಿಗೆ ಕೊಟ್ಟಿದ್ದ ಪ್ರಾಶಸ್ತ್ಯ ಸರ್ವಜ್ಞನನ್ನು ಸ್ಥಿತಪ್ರಜ್ಞರಾದ ಮಹಾನುಭಾವರ ಪಜ್ತಿಗೆ ಸೇರುಸುತ್ತವೆ"



**ಸ್ವಾನುಭವ ಸಾರ್ವಭೌಮ– ಸರ್ವಜ್ಞ**

ಎಂದರು ಅ.ನ. ಕೃಷ್ಣರಾಯರು; "ಇವನಲ್ಲಿ ಮಹಾಕವಿಗಳಿಗೆ ಬೇಕಾಗುವ ರಚನಾ ಸೌಮನಸ್ಯ, ವಾಗ್ಮಿತ್ವ ಮೊದಲಾದ ಗುಣಗಳು ಬೇಕಾದಷ್ಟಿವೆ. ಕನ್ನಡ ವಾಙ್ಮಯದಲ್ಲಿ ಇಷ್ಟರ ಕವಿಯೇ ಇಲ್ಲವೆಂದು ಕಂಠೋಕ್ತವಾಗಿ ಹೇಳಬಹುದು" ಎಂದರು ಸಿದ್ಧವ್ವನಹಳ್ಳಿ ಕೃಷ್ಣಶರ್ಮರು; "ಇವನಷ್ಟು ಲೋಕಪ್ರಿಯ ಕವಿಯು ಕನ್ನಡದಲ್ಲಿ ಯಾರೂ ಆಗಿಹೋಗಿಲ್ಲವೆಂದು ಹೇಳಿದರೆ ತಪ್ಪಾಗದು" ಎಂದುರು ಡಾ॥ ಹಳಕಟ್ಟಿಯವರು; "ವೇದ ಶಾಸ್ತ್ರಂಗಳನು ಸಾಧಿಸುವ ಶ್ರಮವೇಕೆ। ಸಾಧು ಸರ್ವಜ್ಞ ಮೂರುತಿಯ ವಚನಗಳ । ನಾದರಿಸಿ ಕೇಳಿ ಸರ್ವಜ್ಞ ॥"ಎಂದರು 'ಶೂಲಪಾಣಿ'ಯವರು; 'ತೆಲುಗಿನಲ್ಲಿ ವೇಮನನಿಗೂ ಮರಾಠಿಯಲ್ಲಿ ನಾಮದೇವ–ತುಕಾರಾಮರಿಗೂ ಇರುವ

ಸ್ಥಾನವೇ ಕನ್ನಡದಲ್ಲಿ ಸರ್ವಜ್ಞನಿಗಿದೆಯೆಂದರು ಈ.ಪಿ. ರೈಸ್ ಸಾಹೇಬರು. ಹೀಗಿದ್ದರೂ 'ಸರ್ವಜ್ಞನು ಕವಿಯೆ?' ಎಂಬ ಪ್ರಶ್ನೆಯನ್ನು ಎತ್ತಿದ ಪುಣ್ಯಾತ್ಮರೂ ಇದ್ದಾರೆ, ಅದಕ್ಕೆ ಹಲ್ಲು ಮುರಿವಂತೆ ಉತ್ತರಕೊಟ್ಟ ಸತ್ಯಾಶ್ರಯರೂ ಇದ್ದಾರೆ ಕನ್ನಡ ನಾಡಿನಲ್ಲಿ.

ಆಡು ಮುಟ್ಟದ ಗಿಡವಿಲ್ಲ–ತಿರುವಳ್ಳುವರ್–ವೇಮನ–ಸರ್ವಜ್ಞರು ಮುಟ್ಟದ ವಿಷಯವಿಲ್ಲ. ಮುಟ್ಟಿದುದನ್ನೆಲ್ಲ ಚಿನ್ನ ಮಾಡಿದ ರಸಸಿದ್ಧರವರು. ಅವರ ದೃಷ್ಟಿಯೇ ಸ್ವತಂತ್ರ ದೃಷ್ಟಿ. ಅಂತೆಯೇ ಅವರ ಸೃಷ್ಟಿಯೂ ಸ್ವತಂತ್ರ ಸೃಷ್ಟಿ. ಅಲ್ಲಿ ಎಲ್ಲವೂ ನವೀನ, ಎಲ್ಲವೂ ಸಮೀಚೀನ. ಸಂಪ್ರದಾಯಶರಣತೆ, ಅನುಕರಣೆ, ಚರ್ವಿತಚರ್ವಣಗಳು ಅವರತ್ತ ಸುಳಿದೇ ಇಲ್ಲ. ಯಾರ ಬಗ್ಗೆಯೂ ಉಪೇಕ್ಷೆಯಿಲ್ಲ, ಯಾರು ದಾಕ್ಷಿಣ್ಯವೂ ಇಲ್ಲ ಅವರಿಗೆ, 'ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೆ?' 'ಯಾತರದ ಹೂವೇನು ನಾತರದು ಸಾಲದೆ?' 'ಆವಯವಗಳೆಲ್ಲರಿಗೆ ಸಮನಾಗಿ ಇರುತಿರಲು, ಭವಿ, ಭಕ್ತ, ಶ್ವಪಚ, ಶೂದ್ರರಿವರೆಂತೆಂಬ । ಕವನವೆತ್ತಣದು?' "ಹಸಿವು ತೃಷೆ ನಿದ್ರೆಗಳು ವಿಷಯ, ಮೈಥುನ, ಬಯಕೆ। ಪಶು, ಪಕ್ಷಿ, ನರಗೆ ಸಮನಿರಲು ಕುಲವೆಂಬ । ಘಸಣೆಮೆತ್ತಣದು?" ಎಂಬ ಅವನ ವಚನಗಳಲ್ಲಿ ಅವನ ಸರ್ವಸಮತೆ, ಸರ್ವಮಮತೆ ಮೈವೆತ್ತ ನಿಂತಿದ್ದರೆ, 'ಕೊಲುವ ಕೈಯೊಳು ಪೂಜೆ, ಮೆಲುವ ಬಾಯೊಳು ಮಂತ್ರ, ಸಲೆಪಾಪವೆರೆದ ಮನದೊಳಗೆ ಪೂಜಿಪನು। ಹೊಳೆಯ ಕಾಣಯ್ಯ!' "ಎಣಿಸುತಿರ್ಪುದು ಬೆರಳು ಗುಣಿಸುತಿರ್ಪುದು ಜಿಹ್ವೆ, ಮನಹೋಗಿ ಹಲವ ನೆನೆದವರದು ಹಾಳೂರ । ಶುನಕನಂತಕ್ಕು" "ಕತ್ತೆ ಬೂದಿಲಿ ಹೊರಳಿ ಮತ್ತೆ ಯತಿಯಪ್ಪುದೆ?" "ಅತ್ತಿಮರ ತಾ ಕಾಯ ಹೊತ್ತಿದ್ದ ತೆರನಂತೆ । ತತ್ತ್ವಭೇದವನು ಅರಿಯದಲೆ ರುದ್ರಾಕ್ಷಿ । ಹೊತ್ತು ಫಲವೇನು?" "ನಿತ್ಯ ಹತ್ತದೇಕೆಂದ", "ಮಟ್ಟಿಶ್ರೀಗಂಧವನು ಇಟ್ಟು ನೊಸಲೊಳಗೆ, ನೆಟ್ಟನೆಯೆ ಸ್ವರ್ಗ ಪಡೆವಡೆ ಸಾಣೆಕಲ್। ಕೆಟ್ಟ ಕೇಡೇನು?" "ಮೂರೆಳೆಯನುಟ್ಟಾತ ಹಾರುವೊಡೆ ಸ್ವರ್ಗಕ್ಕೆ । ನೂರೆಂಟು ಎಳೆಯ ಕವುದಿಯನು ಹೊದ್ದಾತ ! ಹಾರನೇಕಯ್ಯ?" ಮುಂತಾದ ವಚನಗಳಲ್ಲಿ ಡಂಭಾಚಾರದ ಕಟು ವಿಡಂಬನೆ ಕಾಯ ತೊಟ್ಟು ನಿಂತಿದೆ. ಅವನ ಯಾವ ವಚನಗಳನ್ನು ಉದ್ಧರಿಸಬೇಕು, ಯಾವುದನ್ನು ಬಿಡಬೇಕು? ಎಲ್ಲವೂ ಆಣಿಮುತ್ತುಗಳು, ಅಪರಂಜಿಯಲ್ಲಿ ಮಡಗಿದ ರನ್ನದ ಮಣಿಗಳು, ಅರಿವಿನ ಕಣಿಗಳು. ಸಾಮಾಜಿಕ ವಿಚಾರ, ವೈದ್ಯ ವಿಚಾರ, ರಾಷ್ಟ್ರವಿಚಾರ, ಯೋಗ–ಭೋಗಗಳ ವಿಚಾರ, ಧರ್ಮ–ನೀತಿಗಳ ವಿಚಾರ–ಎಲ್ಲವನ್ನೂ ಒಳಗೊಂಡ ತಿಳಿವಿನ ತೆನೆಗಳು. ಕೆಲವನ್ನಾದರೂ ಉದ್ಧರಿಸದೆ ತೃಪ್ತಿಯಾಗದು.

ಕಸ್ಮೈದೇವಾಯ?

ಆದೇವ ಈದೇವ ಮಾದೇವ ನೆನಬೇಡ
ಆ ದೇವರ ದೇವ, ಭುವನದ ಪ್ರಾಣಿಗಳೀ
ಗಾದವನೆ ದೇವ–ಸರ್ವಜ್ಞ॥

ವೇದವಾವುದು?

ವೇದವೇ ಹಿರಿದೆಂದು ವಾದವನು ಮಾಡುವಿರಿ
ವೇದದಲೇನು ಅರಿದಿಹುದು? ಅನುಭವಿಯ
ವೇದವೇ ವೇದ, ಸರ್ವಜ್ಞ॥

ಸ್ವರ್ಗ–ನರಕಗಳೆಲ್ಲಿ?

ಎಲ್ಲ ಆಶೆಯ ಬಿಟ್ಟರಿಲ್ಲಿಯೇ ಕೈಲಾಸ
ಎಲ್ಲವನು ಬಯಸಿ ಭ್ರಮಿಸಿದರೆ ನರಕ ತಾ
ನಿಲ್ಲಿಯೇ ನೋಡ ಸರ್ವಜ್ಞ॥

ಕೈಲಾಸದ ಬಟ್ಟೆಯಾವುದು?

ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದಡೆ ಕೈಲಾಸ । ಬಿನ್ನಾಣವಕ್ಕು ಸರ್ವಜ್ಞ॥

ಸ್ವರ್ಗ ಸುಲಭವಲ್ಲ

ಖಂಡಿಸದೆ ಕರಣವನು ದಂಡಿಸದೆ ದೇಹವನು
ಉಂಡುಂಡು ಸ್ವರ್ಗಕೆಯ್ದಲ್ಕೆ ಅದನೇನು । ರಂಡೆಯಾಳುವಳೆ? ಸರ್ವಜ್ಞ॥

ಸಾವು ಜೀವಗಳಾವುವು ?

ಜೀವಿ ಜೀವವ ತಿಂದು ಜೀವಿಗಳ ಪುಟ್ಟಿಸಿರೆ
ಸಾವು ಎಲ್ಲಿಹುದು? ಸ್ವಾರ್ಥವೆ ಜಗದೊಳಗೆ
ಸಾವೆಂದು ತಿಳಿಯೋ–ಸರ್ವಜ್ಞ
ಸಾವು ಜೀವಗಳೆರಡು ಭಾವಿಸಲು ಒಂದಯ್ಯ ।
ಜೀವಿಸಲು ಬೀಜ ಸಾವಂತೆ ಜಗಹಿತಕೆ
ಸಾವುದೇ ಜೀವ–ಸರ್ವಜ್ಞ

ತನಗಾವುದು, ಪರರಿಗಾವುದು?

"ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ
"ಕೊಟ್ಟದ್ದು ಕಟ್ಟಿತೆನಬೇಡ ಅದು ಮುಂದೆ
ಕಟ್ಟಿಹುದು ಬುತ್ತಿ ಸರ್ವಜ್ಞ"

ಹೋಲಿಸಿ :

"ಈತ್ತವಕ್ಕು ಮಿನ್ಪಮಚಿಯಾರ್ ತೋ*ಮುಡ್ಯೆಮ್ಯೆ
ವೃತ್ತಿ*ಕ್ಕುರ್ಮ ವನ್ಗಣವರ್ "
(ಇತ್ತು ನಲಿಯುವ ಸುಖವನರಿಯರೋ ಏನೊ
ತಮ್ಮೊಡವೆಯನು ಬಚ್ಚಿಟ್ಟುಕಳೆದ ಕಡುಮನಸಿನವರು)
–ತಿರುವಳ್ಳುವರ್

ಜಡ–ಚೇತನಗಳಾವುವು?

ಜೀವಿ ಜೀವನ ತಿಂದು ಜೀವಿಪುದು ಜಗವೆಲ್ಲ
ಜೀವದಿಂದ ಹೊರಗೆ ತಿಂಗುವರ ನಾಕಾಣೆ । ಜೀವವೀ ಜಗವು–
ಸರ್ವಜ್ಞ ॥
ಚರಜೀವವನು ತಿಂದು ಚಲಿಸುವುದು ಜಗವರ್ಥ ।
ಚರಸದ ಜೀವಗಳ ತಿಂದು ಜಗವರ್ಥ । ಚರಿಸುವುದು ನೋಡ–
ಸರ್ವಜ್ಞ ॥

ಗುರಿಯಾವುದು?

ಅಡಿಯ ಮುಂದಿಡೆ ಸ್ವರ್ಗ ಅಡಿಯ ಹಿಂದಿಡೆ ನರಕ
ಅಡಿಗಶ್ವಮೇಧಫಲ ಸ್ವಾಮಿ ಕಾರ್ಯಕ್ಕೆ । ಮಡಿಯಲೇ ಬೇಕು–ಸರ್ವಜ್ಞ ॥

■

# ಶಿಷ್ಟಜನಮಂದಾರ ಕೊಟ್ಟೂರ ಬಸವೇಶ್ವರ

ಪರಮಶಾಂತಿಯ ಸದನ, ಪುಣ್ಯದೊಬ್ಬುಳಿ ದುಃಖ
ದುರಿತ ದೂರಂ, ಮುಕ್ತಿಕೋಶ, ಮಹಿಮಾಸ್ಪದಂ,
ವರದಯಾನಿಧಿ, ಧರ್ಮರೂಪ, ಕಾಮಾದಿ ಷಡ್ವರ್ಗಪಾಶಚ್ಛೇದಕಂ
ವರದ ಶಾಶ್ವತ ಷಟ್‌ಸ್ಥಲಬ್ರಹ್ಮಿ ಸರ್ವಜ್ಞ
ಪರಿಜಿತೇಂದ್ರಿಯ ನಿರತ ನಿರ್‌ಮಲ ನಿರಾವರಣ
ಶರಣ ಸಂತಾನ ಚಿದ್‌ಧೀಶ ಕೊಟ್ಟೂರ ಬಸವೇಶನಾ ಸುಪ್ರಕಾಶಂ

ಗುರುರಾಜ ಚಾರಿತ್ರ ಸಂ.೧೪-ಪ. ೩೦

ಕಲ್ಯಾಣ ಬಸವೇಶ್ವರನ ಅಪರಾವತಾರವೆಂದು ಪ್ರಖ್ಯಾತರಾಗಿರುವ ಈ ಮಹಾಮಹಿಮರು ಮೊದಲು ಸರಸೀಪುರದಲ್ಲಿ ಕೆಲವು ದಿನವಿದ್ದು ಅಲ್ಲಿ ವಾದಕ್ಕೆ ಬಂದ ವಿಪ್ರರನ್ನು ಸೋಲಿಸಿ ಶಿಷ್ಯರನ್ನಾಗಿ ಮಾಡಿಕೊಂಡರೆಂತಲೂ ಮುಂದೆ ಸದಮಲಾತ್ಮಕನಾದ ಸುಜ್ಞಾನಿದೇವನಿಗೆ ಪಟ್ಟಕಟ್ಟಿ ಶಿವಕ್ಷೇತ್ರಗಳನ್ನು ನೋಡುತ್ತ ಹೊರಟರೆಂದೂ ಹೇಳುತ್ತಾರೆ. ಕಾಶಿ, ರಾಮೇಶ್ವರ, ಶ್ರೀಶೈಲ, ಹಂಪಿ ಮೊದಲಾದ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಕೊಟ್ಟೂರಿಗೆ ಬಂದು ಅಲ್ಲಿ ಮುಕ್ಕಾಲು (ಮೂರು ಮೂರು ಕಲ್ಲು) ಗಳಿಂದ ರಚಿತವಾದ ದೇವಾಲಯದಲ್ಲಿ ವಾಸ ಮಾಡುತ್ತಾರೆ. ಅದು ಈಗಲೂ ಅಲ್ಲಿ ಶೋಭಿಸುತ್ತಿದೆ.

ಗುರುಬಸವ ಶಿವಯೋಗಿಗಳು ಲೀಲಾವಿಲೋಲರು. ಬಾಲಕರಲ್ಲಿ ಬಾಲಕನಾಗಿ ಆಡುವರು; ತರುಣರಲ್ಲಿ ತರುಣರಾಗಿ ವಿಹರಿಸುವುರು; ವೃದ್ಧರಲ್ಲಿ ವೃದ್ಧರಾಗಿ ವರ್ತಿಸುವರು. ಒಮ್ಮೊಮ್ಮೆ ಹುಚ್ಚರಂತೆ ಅಲೆಯುವರು. ಆಗ ಕಿಡಿಗೇಡಿಗಳು ಕಲ್ಲಿನಿಂದಿಟ್ಟುದೂ ಉಂಟು. ಆದರೆ ಶಿವಯೋಗಿಗಳಿಗೆ ಕಲ್ಲಿನೇಟು ತಾಗದೆ ಹೊಡೆದವರಿಗೇ ಪೆಟ್ಟು ತಗಲುತ್ತಿದ್ದಿತಂತೆ. ಕಲ್ಲಿನಿಂದಿಟ್ಟವರನ್ನೇ ಕರುಣಿಸುತ್ತಿದ್ದರಂತೆ, ಆ ಕರುಣಾಸಾಗರರು.

ಬಾಲನಂತೊಪ್ಪಚ್ಚಿ , ಹುಚ್ಚನಂತೊಪ್ಪಚ್ಚಿ
ಯಾ ಲಲಿತ ಸದ್‌ಗುಣಗ್ರಾಹಿಯಪ್ಪಚಿ ಸುವಿ

ಶಾಲ ಮಹಿಮಾಭರಣನಂತೆ ನೋಳ್ಪರ ಕಣ್ಗೆ ತೋರುವಪ್ರತಿಮನೊಮ್ಮೆ
ಬಾಲೆಯರು ನೀರ್ಗೆ ಪೋಪೆಡೆಯೊಳು ದಿಗಂಬರದಿ
ಲೋಲಮತಿಯಿರೆ ಸತಿಯರೆಲ್ಲ–

ತಮ್ಮ ಸೀರೆಯನ್ನು ಹರಿದು ಕೌಪವ ಕಟ್ಟಿ ಕಳಿಸುತ್ತಿದ್ದರಂತೆ. ಹೀಗೆ ಸೀರೆಯ ಸೆರಗನ್ನು ಹರಿದು ಶಿವಯೋಗಿಗೆ ಕೌಪೀನ ಕಟ್ಟಿ ಮನೆಗೆ ಹೋದ ವನಿತೆಯೊಬ್ಬಳನ್ನು ಅತ್ತೆಮಾವಂದಿರು ಆಕ್ಷೇಪಿಸಲು ಅವಳು 'ಕೊಟ್ಟೂರ ಬಸವೇಶಾ–ನೀನೇ ಗತಿ' ಎಂದು ಮೊರೆಯಿಟ್ಟಳಂತೆ. ಅವಳ ಹರದ ಸೆರಗು ಸರಿಯಾಯಿತಂತೆ.

ಈ ಮಹಾತ್ಮರು ಮೆರೆದ ಇಂಥ ಮಹಿಮೆಗಳಿಗೆ ಲೆಕ್ಕವಿಲ್ಲ. ಅವರ ದರ್ಶನಕ್ಕೆ 'ಉರ್ವಿಬೆಸಲಾದುದೆಂಬಂತೆ ದೆಸೆದೆಸೆಗಳಿಂ ಸರ್ವಜನ' ಬರತೊಡಗಿದರು. ಒಮ್ಮೆ ಅವರ ದರ್ಶನಾರ್ಥಿಗಳಾಗಿ ಹೊರಟಿದ್ದ ಭಕ್ತರನ್ನು ಹಾದಿಯಲ್ಲಿ ಬೇಡರು ಸುಲಿದರಂತೆ. ಭಕ್ತರು ಶಿವಯೋಗಿಗಳಿಗೆ ಮೊರೆಯಿಡಲು ಬೇಡರಿಗೆ ಕಣ್ಣುಗಳೇ ಕಾಣದಂತಾದುವಂತೆ. ಅವರು ಭಯಭೀತರಾಗಿ ಭಕ್ತರ ಸೊಮ್ಮು ಭಕ್ತರಿಗೆ ಸಲ್ಲಿಸಿ ಕೊಟ್ಟೂರಿಗೆ ಬಂದು ಶಿವಯೋಗಿಗಳ ಶಿಷ್ಯರಾದಂತೆ. ಹೆಚ್ಚೇನು?

ಕೊರಡು ಕೊನರಿತು, ಬರಡು ಹಯನಾಯ್ತು, ಪೆರ್ಬುಲಿಯು
ಯೆರಳೆಯೊಳು ನಿಂದುದು, ಮೊರೆವ ಪೆರ್ವಾವು ತಾಂ
ಸರವಿಯಾದುದು, ಉರಿವ ಕಿಚ್ಚು ಸೀತಳವಾಯ್ತು ,
ಭಯವಳಿದು ನಯವಾದುದು–
'ವರದ ಕೊಟ್ಟೂರ ಬಸವೇಶ'ಯೆಂದಾಕ್ಷಣದಿ! ॥

ಶಿವಯೋಗಿಗಳ ಶಿಷ್ಯಕೋಟಿಯಲ್ಲಿ ಹೆಸರಾದವರು ಹಲವರಿದ್ದರು, ಅವರಲ್ಲಿ ಕೋಲಾಶಾಂತೇಶ, ಭಿಕ್ಷದ ಮಹಾಂತೇಶ, ಎರಗಂಬಳ್ಳಿಯ ಗುರುದೇವ, ಕಿನ್ನರಿಯ ಕೆಂಚವೀರೇಶ, ಚನ್ನಂಜೇಶ, ವೋಟೆಯ ಮಹೇಶ, ಶೂಲಪಾಣೀಶ, ನಾಟ್ಯ ನಮಶ್ಶಿವಾಯ, ಮದ್ದಾನೆಯ ಸಿದ್ಧೇಶ, ಬಿರುಗಲ್ಲುದೇವ, ಬಾಸೊರ ಹುಚ್ಚ ಸಿದ್ಧರಾಮೇಶ ಇವರೇ ಪ್ರಮುಖರು. ಇವರೆಲ್ಲರೂ ಶಿವಯೋಗಿಗಳ ಕೃಪೆಯಿಂದ ಪುಣಿತರಾಗಿ ಪುಣ್ಯಚರಿತರಾಗಿದ್ದರು.

ಕೆರೆಯಲ್ಲಿ ತಾವರೆ ಅರಳಿದರೆ ಎಲ್ಲೆಲ್ಲಿಂದಲೋ ದುಂಬಿಗಳು ಬಂದು ಅದರ ಮಧುವನ್ನು ಸವಿದು ಹೋಗುತ್ತವೆ. ಆದರೆ ಅದರ ಕೆಳಗೇ ಇರುವ ಕೃಪೆ ತಳದ ಒಂಡುನೀರನ್ನೇ ಕುಡಿದು ಬದುಕುತ್ತದೆ ! ಹಾಗೆಯೇ ಮಹಾತ್ಮರು ಉದಯಿಸಿದ ಸ್ಥಳಕ್ಕೆ ಎಲ್ಲೆಲ್ಲಿಂದಲೋ ಆಸ್ತಿಕರು ಆಗಮಿಸಿ ಅವರ ದರ್ಶನಾಶೀರ್ವಾದಗಳನ್ನು

ಪಡೆದು ಪವಿತ್ರರಾಗಿ ಹೋಗುತ್ತಾರೆ. ಅದರೆ ಅದೇ ಸ್ಥಾನದಲ್ಲಿ ವಾಸಿಸುವ ಕೆಲವು ನಿರ್ಭಾಗ್ಯರು ಎಂದಿನಂತೆ ವಿಕಾರಗಳ ಒಂಡುನೀರನ್ನೇ ಕುಡಿದು ತೃಪ್ತರಾಗುತ್ತಾರೆ. ಕೊಟ್ಟೂರಿನಲ್ಲಿಯೂ ಇಂಥ ಕೆಟ್ಟವರು ಇಲ್ಲದಿರಲಿಲ್ಲ. ಆದರೆ ಜಾತಿ ಮತ ಕುಲಗೋತ್ರಾದಿಗಳನ್ನು ನೋಡದೆ ನಂಬಿಬಂದ ಎಲ್ಲರನ್ನೂ ಶಿವಯೋಗಿಗಳು ಉದ್ಧರಿಸತೊಡಗಲು ಕುಜನರೂ ಸುಜನರಾದರು. ಶಿವಯೋಗಿಗಳಿಂದ ಸದ್ಗತಿಯನ್ನು ಪಡೆದವರಲ್ಲಿ ಭೈರವೇಂದ್ರ, ಕರವೂರು ಸೊಂಡುರು, ಹರಪನಹಳ್ಳಿಗಳ ಅರಸರಂಥ ಅರಸರಿದ್ದಾರೆ, ತಿರುಕರಿದ್ದಾರೆ, ಬೇಡರಿದ್ದಾರೆ, ಶಿವಭಕ್ತರಿದ್ದಾರೆ, ಹರಿಜನರಿದ್ದಾರೆ, ಹರಿದಾಸರಿದ್ದಾರೆ, ಬಿಲ್ಲೆಯಾಖಾನರಂಥ ಮಹಮ್ಮದೀಯರಿದ್ದಾರೆ. ಗೋವಿಂದನಂಥ ಬ್ರಾಹ್ಮಣರಿದ್ದಾರೆ. ಗೌರವಾಂತಕನಂಥ ಕವಿಗಳಿದ್ದಾರೆ. ದಿಲ್ಲಿಯ ಅಕಬರ, ಬೀದರ–ಭಾಗಾನಗರ–ವಿಜಯನಗರಗಳ ರಾಜರೂ ಶಿವಯೋಗಿಗಳಿಗೆ ಭಕ್ತಿಯ ಕಾಣಿಕೆಯನ್ನು ಸಲ್ಲಿಸಿದರೆಂದು ಹೇಳುತ್ತಾರೆ.ಅಕಬರನ ಪ್ರಸ್ತಾಪ ಕೊಟ್ಟೂರ ಬಸವೇಶ್ವರ ಪುರಾಣದಲ್ಲಿದೆ, ಗುರುರಾಜ ಚಾರಿತ್ರದಲ್ಲಿಲ್ಲ.ಅಲ್ಲಿ 'ಕುತುಮಶಾಹನ ಮನೆಯೊಳು ನಿಜಾಮಲುಕ್' ಎಂದು ಹೇಳಿದೆ. ನಿಜಾಮುಲ್ ಮುಲ್ಕ್ ಆಸಫ ಜಾಹೀ ಮನೆತನದ ಮೂಲಪುರುಷ, ಕುತುಬ್‌ಷಾಹಿ ವಂಶಜನಲ್ಲ. ಮೇಲಾಗಿ ಅಕಬರನ ಕಾಲಕ್ಕೂ ನಿಜಾಮುಲ್ ಮುಲ್ಕನ ಕಾಲಕ್ಕೂ ಮಹದಂತರವಿದೆ. ಪ್ರಾಯಶಃ ಬೀದರ್ ಭಾಗಾನಗರ (ಇಂದಿನ ಹೈದರಾಬಾದು)ಗಳ ಮಹಮ್ಮದೀಯ ಅರಸರಾರಾದರೂ ಇರಬೇಕು.

ಇವರಲ್ಲಿ ಕವಿ ಗೌರವಾಂಕನು ಕಾವ್ಯವೊಂದನ್ನು ರಚಿಸಿ ಗಾಯಕನ ಮುಖಾಂತರ ಕೊಟ್ಟೂರ ಬಸವೇಶ್ವರರ ಸನ್ನಿಧಿಗೆ ಅದನ್ನು ಕಳುಹಿದಂತೆಯೂ ಅಡಿಗೆ ಮಾಡಿದವಳು ತಾನೇ ನೀಡಬೇಕಲ್ಲದೆ ಅನ್ಯರಿಂದ ನೀಡಿಸುವುದು ಕಡುಜಾಣರ ಒಲವಿಗೆ ಕಾರಣವಲ್ತು ಎಂದು ಗುರು ಕೊಟ್ಟೂರೇಶ್ವರರು ನುಡಿದಂತೆಯೂ ಆ ನುಡಿಯನಾಲಿಸಿ ಗೌರವಾಂಕನು ತಾನೇ ಆ ಗುರುವರನಲ್ಲಿಗೆ ಹೋಗಿ–

"ಜಯ ಜಯ ಪರಂಧಾಮಧಾಮಸೂನೃತ ಸೀಮ
ಜಯ ಜಯ ಚಿದಾಕಾಶಕಾಶಮಾನ ದಿನೇಶ
ಜಯ ಜಯ ಮಹಾಸ್ಥೂಲ ಲಕ್ಷ ಲಕ್ಷ ಲಕ್ಷಿತಾತೀತಕ್ಷಯಾ
ಜಯ ಜಯ ನಿರಾಮಯ ವಿಮಾಯ ವಿನುತಾಮ್ನಾಯ
ಜಯ ಜಯ ದಯಾರಾಮ ರಾಮಣೀಯಕನಾಮ
ಜಯ ಜಯ ಬಸವರಾಜ ರಾಜ ರಾಜ ಪ್ರಿಯ ಮತಾಂಬೋಧಿರಾಜ
ವಿಜಯ"

ಎಂದು ಸ್ತುತಿಸಿ ಗುರುಕೃಪೆಗೆ ಪಾತ್ರನಾದನೆಂದೂ ಕೊಟ್ಟೂರ ಬಸವೇಶ್ವರ

ಚಾರಿತ್ರದಲ್ಲಿ ಹೇಳಿದೆ. ಕೊಟ್ಟೂರು ಬಸವೇಶ್ವರರ ಕೃಪೆಯಿಂದಲೇ ಕವಿ ಗೌರವಾಂಕ ಮೋಳಿಗೆಯ್ಯನ ಪುರಾಣ ರಚಿಸಿದ.

ಒಮ್ಮೆ ಶಿವಯೋಗಿಗಳು ಬಾಲಕರೊಡನೆ ಬಾಲಲೋಲಾಲೋಲರಾಗಿದ್ದು ಒಮ್ಮೆಗೆ ಕೆರೆಯ ಕಡೆಗೆ ಓಡತೊಡಗುತ್ತಾರೆ. ಬಾಲಕರು ಬೆಂಬೆತ್ತಿ ಓಡುತ್ತಾರೆ. ಎಲ್ಲರೂ ಕೆರೆಯ ದಂಡೆಗೆ ಬರುತ್ತಾರೆ. ಶಿವಯೋಗಿಗಳು ಅಲ್ಲಿಗೂ ನಿಲ್ಲದೆ ಕೆರೆಯೊಳಗೇ ನುಗ್ಗಿ ಬಿಡುತ್ತಾರೆ. ಎಲ್ಲ ಬಾಲಕರೂ ಭೀತರಾಗಿ ದಂಡೆಯ ಮೇಲೆಯೇ ನಿಂತುಬಿಡುತ್ತಾರೆ. ಆದರೆ ಸಂಗಸೆಟ್ಟಿಯ ಮಗ ಲಿಂಗಣ್ಣ ದಿಟ್ಟತನದಿಂದ ಶಿವಯೋಗಿಗಳ ಹಿಂದೆ ಹಿಂದೆ ಹೋಗುತ್ತಾನೆ. ಹಾಹಾಕಾರ ಹಬ್ಬುತ್ತದೆ. ಲಿಂಗಣ್ಣನ ತಂದೆತಾಯಿಗಳು ಮಗನಿನ್ನು ಮರಳಿಬಾರನೆಂದು ಆಕಾಶ ಕಳಚಿ ಬೀಳುವಂತೆ ಆಕ್ರೋಶಗೈಯುತ್ತಾರೆ. ಏಳು ದಿನಗಳ ತರುವಾಯ ಶಿವಯೋಗಿಗಳೂ ಲಿಂಗಣ್ಣನೂ ಕೆರೆಯಿಂದ ಹೊರಗೆ ಬರುತ್ತಾರೆ–ಸುರಕ್ಷಿತವಾಗಿ, ಸುಖರೂಪವಾಗಿ, ಸುಕ್ಷೇಮವಾಗಿ!

ಸದ್ಭಕ್ತ ಸಮೂಹವೆಲ್ಲ ಶಿವಯೋಗಿಗಳ ಮಹಿಮೆಗೆ ಬೆರಗಾಗಿ ಸಂಭ್ರಮದಿಂದ ಅವರನ್ನು ಸ್ವಾಗತಿಸಿದರು. ಅವರ ಮೇಲೆ ಹೂಮಳೆಗರೆದರು; ಅಂಗನೆಯರು ಆರತಿಯೆತ್ತಿದರು ; ಯುವಕರು ರಿಂಗಣಗುಣಿದರು : ಊರಿಗೆ ಊರೇ ಉತ್ಸಾಹದಿಂದ ನರ್ತಿಸಿತು. ಅವರಲ್ಲಿ ಗೌರಾಯಿಯೆಂಬ ದಾಸಿಯು ತನ್ನ ದಾಸೀ ಜೀವನಕ್ಕೆ ಹೇಸಿ ಶಿವಯೋಗಿಗಳ ಸೇವೆಯಿಂದ ಶುದ್ಧಳಾಗಬೇಕೆಂದು ಹೂಮಾಲೆಯೊಂದನ್ನು ಹೆಣೆದು ತಂದಿದ್ದಳು. ಆದರೆ ಶಿವಯೋಗಿಗಳು ತನ್ನಂಥ ಪತಿತರ ಕೈಯ ಪುಷ್ಪಾಹಾರವನ್ನು ಸ್ವೀಕರಿಸುವರೋ ಇಲ್ಲವೊ ಎಂಬ ಸಂಶಯದಿಂದ ದೂರದಲ್ಲಿ ದೀನವದನಳಾಗಿ ನಿಂತಿದ್ದಳು. ಶಿವಯೋಗಿಗಳ ಕರುಣಾಕಟಾಕ್ಷ ಅವಳ ಮೇಲೆ ಬಿದ್ದಿತು. ಅವಳ ಮನದ ನಿಜಭಕ್ತಿಯನ್ನು ಅರಿತ ಆ ದಯಾಸಾಗರರು ಅವಳನ್ನು ಹತ್ತಿರ ಕರೆದು ಅವಳ ಭಕ್ತಿಯನ್ನು ಸ್ವೀಕರಿಸಿದರು. "ಶಿವಲಿಂಗ ಪೂಜೆ ಮಾಡು; ಗುರು ಜಂಗಮರ ಸೇವೆಗೈ, ನಿನಗೆ ಸದ್ಗತಿ ದೊರೆಯುವುದು" ಎಂದು ವರವಿತ್ತು ಕಳಿಸಿದರು. ಅವಳು ಅದರಂತೆ ವರ್ತಿಸಿ ಸದಮಲ ಶರಣೆಯಾದರಳು. ಇದಲ್ಲವೆ ಮಹಾತ್ಮರ ಮಾರ್ಗ?

ಶಿವಕ್ಷೇತ್ರಗಳಲ್ಲಿ ಶ್ರೇಷ್ಠವಾದ ಶಿವಗಂಗೆಯ ಕಕುದ್ಗಿರಿಯ ಸಮೀಪದ ದೇವಾರಾಯನದುರ್ಗದಲ್ಲಿ ಬೇಡರ ಚಿಕ್ಕಯ್ಯನೆಂಬೊಬ್ಬ ಚೊಕ್ಕ ಭಕ್ತನಿದ್ದನು. ಕಿರಾತರಂತೆ ನುಡಿಯಿದ್ದರೂ ಪುರಾತರಂತೆ ನಡೆಯುಳ್ಳ ಶಿವಭಕ್ತನಾತ. ಕೊಟ್ಟೂರ ಬಸವೇಶ್ವರರ ಅವನ ಕನಸಿನಲ್ಲಿ ಕಾಣಿಸಿಕೊಂಡು ಹೇಳಿದರು, "ನಾಳೆ ನಿನ್ನ ಕೊನೆಯ ಬೇಟೆ. ನಾಳೆ ನೀನು ಕೊಲ್ಲುವ ಹರಿಣಗಳ ಹೊಟ್ಟೆಯಲ್ಲಿ ನಿನಗೆರಡು ಲಿಂಗಗಳು ದೊರೆಯುವುವು. ಅವುಗಳನ್ನೊಯ್ದು ಗುಮ್ಮಳಾಪುರದ ಹಿರಿಯ ಮಠದ

ಪಟ್ಟಾಧಿಕಾರಿಗಳಿಂದ ನೀನೂ ನಿನ್ನ ಸತಿಯೂ ದೀಕ್ಷೆ ಪಡೆದು ಧರಿಸಿ ಕೃತಾರ್ಥರಾಗಿರಿ."

ಚಿಕ್ಕಯ್ಯನ ಆನಂದ ಉಕ್ಕೇರಿ ಹರಿಯಿತು–ಲಿಂಗಗಳನ್ನು ಕಂಡಾಗ. ಗುಮ್ಮಳಾಪುರದ ರುದ್ರಮುನಿಗಳಿಂದ ಲಿಂಗಧಾರಣೆಯಾದ ದಿನ ಅವನಿಗೂ ಅವನ ಹೆಂಡತಿಗೂ ಸಂತೋಷದ ಸುಗ್ಗಿಯಾಯಿತು. ಗುರುವಿನ ಅಪ್ಪಣೆಯಂತೆ ಮೋಳಿಗೆಯ ಮಾರಯ್ಯನ ಕಾಯಕವಾದ ಕಟ್ಟಿಗೆ ಮಾರುವ ಕಾಯಕವನ್ನು ಕೈಕೊಂಡು ಶರಣಜೀವನವನ್ನು ಸಾಗಿಸತೊಡಗಿದನು. ಸತಿಪತಿಗಳೊಂದಾದ ಭಕ್ತಿ ಹಿತವಾಯಿತು ಲಿಂಗಕ್ಕೆ. ಅವರಿಬ್ಬರೂ ಆದರ್ಶ ದಂಪತಿಗಳಾದರು. ಅವರಿಬ್ಬರ ಕೀರ್ತಿ ಸುತ್ತಲೂ ಸೂರೆಯಾಗತೊಡಗಿತು.

ಅವರಿಬ್ಬರೂ ಕೊಟ್ಟೂರು ಬಸವೇಶ್ವರರ ದರ್ಶನಾರ್ಥಿಗಳಾಗಿ ಹೊರಟರು. ದಾರಿಯಲ್ಲಿ ಸೀರೆಯ ಹಿರಿಯ ಮಠದ ಗುರುಗಳು ಅನೇಕ ಮಹೇಶ್ವರರೊಡನೆ ಅವರನ್ನು ಇದಿರ್ಗೊಂಡು ಕರೆದೊಯ್ಯರು ತಮ್ಮ ಮಠಕ್ಕೆ. ಎಂಥ ಗುಣಗೌರವ! ಕೆಲದಿನಗಳ ಹಿಂದೆ ಬೇಡನಾಗಿದ್ದ ಚಿಕ್ಕಯ್ಯನನ್ನು ಹಿರಿಯ ಮಠದ ಗುರುಗಳೇ ಇದಿರ್ಗೊಂಡು ಮಠಕ್ಕೆ ಕರೆದೊಯ್ಯ ಮನ್ನಿಸುತ್ತಾರೆ! ಇದಲ್ಲವೆ ಶರಣಮಾರ್ಗ?

ಅಲ್ಲಿ ಶಿವಾನುಭವಸುಖಂಕಥಾವಿನೋದದಲ್ಲಿ ಕೆಲವು ದಿನಗಳು ಕಳೆಯುತ್ತವೆ.ಅಲ್ಲಿಯೂ ಚಿಕ್ಕಯ್ಯ ತನ್ನ ಕಟ್ಟಿಗೆಯ ಕಾಯಕವನ್ನು ಚಾಚೂ ತಪ್ಪದೆ ನಡೆಸುತ್ತಾನೆ. ಆದರೆ ಒಂದು ದಿನ ಚಿಕ್ಕಯ್ಯನಿಗೆ ಕಾಡಿನಲ್ಲಿ ಕಟ್ಟಿಗೆಗಳೇ ಸಿಕ್ಕುವುದಿಲ್ಲ– ಎಷ್ಟು ಅಲೆದರೂ, ಎಲ್ಲಿ ಅರಿಸಿದರೂ. ಆಗ ನೆನಪಾಗುತ್ತದೆ ಅವನಿಗೆ–ತಾನು ಹೊರಟ ಉದ್ದೇಶ. "ಕೊಟ್ಟೂರ ಯತಿವರ, ಇಂದು ನನ್ನ ಕಾಯಕ ಪೂರೈಸಿದರೆ ನಾಳೆಯೇ ನಾನು ನಿನ್ನ ದರ್ಶನಕ್ಕಾಗಿ ಹೊರಡುತ್ತೇನೆ" ಎಂದು ಮೊರೆಯಿಡುತ್ತಾನೆ. ಕಟ್ಟಿಗೆಗಳು ದೊರೆತು ಕಾಯಿಕವು ಪೂರೈಸುತ್ತದೆ. ಚಿಕ್ಕಯ್ಯನಿಗೂ ಅವನ ಧರ್ಮಾಂಗನೆಗೂ ಹಾರಿಹೋದ ಹರಣ ಮರಳಿದಂತಾಗುತ್ತದೆ. ಮರುದಿನವೇ ಅವರು ಕೊಟ್ಟೂರಿಗೆ ಪ್ರಯಾಣ ಬೆಳೆಸುತ್ತಾರೆ. ಹಿರಿಯ ಮಠದ ಗುರುಗಳೂ ಸಕಲ ಸದ್ಭಕ್ತರೂ ಅವರನ್ನು ಖಿನ್ನರಾಗಿ ಕಳಿಸಿಕೊಡುತ್ತಾರೆ. ಅದೆಂಥ ಭಕ್ತಿಬಾಂಧವ್ಯ?

ಕೊಟ್ಟೂರಿಗೆ ಬಂದು ಚಿಕ್ಕಯ್ಯನೂ ಅವನ ಸತಿಯೂ ಶಿವಯೋಗಿಗಳ ಚರಣ ಸನ್ನಿಧಿಗೆ ಸಾಷ್ಟಾಂಗಪ್ರಣತರಾಗುತ್ತಾರೆ. ಅವರ ಆಗಿನ ಆನಂದದ ಸ್ಥಿತಿಯನ್ನು ಯಾರು ಬಣ್ಣಿಸಬಲ್ಲರು? ಶಿವಯೋಗಿಗಳು ಸಂತಸದ ಸಂಭ್ರಮದಿಂದ "ಬಾರೆನ್ನ ಸಂಗಡಿಗ ಮೋಳಿಗಯ್ಯ !" ಎಂದು ಬಿಗಿದಪ್ಪುತ್ತಾರೆ ಚಿಕ್ಕಯ್ಯನನ್ನು. ಆ ಅಪೂರ್ವ ಸನ್ನಿವೇಶವನ್ನು ಚಿತ್ರಿಸಲು ಶಬ್ದಗಳಿಗೆ ಶಕ್ತಿಯಿಲ್ಲ. ಭಾವಶ್ರಯದಲ್ಲಿ ಹುಟ್ಟಿ

ಶಿವಾಶ್ರಯವನ್ನು ಪಡೆದ ಚಿಕ್ಕಯ್ಯ ಸಾಕ್ಷಾತ್ ಕೊಟ್ಟೂರೇಶ್ವರನ ಬಾಹುಗಳಲ್ಲಿ ಬಂಧಿತನಾಗಿದ್ದಾನೆ ! ಅದನ್ನು ಕಂಡು ಕುಲಮದ ಕಾಲುಕಿತ್ತಿತು, ವಿದ್ಯಾಮದದ ಸದ್ದಡಗಿತು. ಧನಮದದ ದರ್ಪ ಅಡಗಿತು, ರೂಪಮದದ ಸೊಕ್ಕು ಕರಗಿತು. ಅಷ್ಟಮದಗಳ ಧಾರ್ಷ್ಟ್ಯ ನಷ್ಟವಾಯಿತು ! ಶುದ್ಧ ಶಿವಾನುಭವ ಪರಮಪ್ರಕಾಶವನ್ನು ಬೀರಿತು ! 'ಕುಲವೇ ಶಿವಕುಲವೈ, ಭಕ್ತನ ಕುಲವೇ ಶಿವಕುಲವೈ ! ಮಲ ಸಂಭೂತರಿಗೆ ಜಗದಲಿ ಕುಲದ ಹಂಗವರಿಗೆ' ಎಂಬ ಘನಮತ ಶಿವಯೋಗಿಗಳ ಉದಾರವಾಣಿಗೆ ನಿದರ್ಶನವಾಗಿ ಉಳಿಯಿತು. ಆ ಗುರುಶಿಷ್ಯರ ಗಾಢಾಲಿಂಗನ ! 'ಅಂಗದೊಳು ಲಿಂಗ ಸಂಬಂಧವುಳ್ಳವರುಗಳ ಲಿಂಗವೆಂದೇ ಕಾಣ್ಬುದು' ಎಂದು ಶ್ರೀಮದನಾದಿ ತೋಂಟದ ಸಿದ್ಧಲಿಂಗೇಶ್ವರರ ವಚನಕ್ಕೆ ಉದಾಹರಣೆಯಾಗಿ ಉಳಿಯಿತು ಕೊಟ್ಟೂರೇಶನ ಶಿಷ್ಯವಾತ್ಸಲ್ಯ.

ಕಾಡು ಬೇಡನನ್ನು ನಾಡ ನಂದಾದೀಪವನ್ನಾಗಿ ಮಾಡಿದ ಶ್ರೀ ಗುರು ಬಸವೇಶ್ವರರು,

> "ದಿಟ್ಟ ಮಾಯಾ ಪಾಶಮಂ ಪರಿದು, ಸಂಸ್ಕೃತಿಯ
> ನಿಟ್ಟೊರಸಿ, ಪ್ರಾರಬ್ಧಕರ್ಮಕಾಂತಾರಮಂ
> ಸುಟ್ಟು ಬೂದಿಯ ಮಾಡಿ ಸಕಲ ದುಃಖಗಳಂ ತುಟ್ಟಿ ಹುಡಿಗೆಯ್ದು ಮುದದಿಂ
> ಕೊಟ್ಟೂರಪುರದಲ್ಲಿ ನಿಂದು ಶರಣಾಗತರ
> ಮುಟ್ಟಿ ರಕ್ಷಿಸುತ್ತ"

ಅಸಂಖ್ಯಾತರ ಉದ್ಧಾರ ಮಾಡಿದರು. ಅವರು ಭೈರವೇಂದ್ರರಾಜನ ಮಗ ಅಯ್ಯಣೇಂದ್ರನಿಗೆ ಉಪದೇಶಿಸಿದ ಸುಭೋಧಸುಧೆಯನ್ನು ಕುಡಿದ ಯಾರಾದರೂ ಭವದೂರರಾಗಿ ಶಿವನನ್ನು ಸಾರಬಹುದಾಗಿದೆ. "ಶಿವನಲ್ಲಿ ನಂಬುಗೆ, ಭಕ್ತರಲ್ಲಿ ಕಿಂಕರಭಾವ, ಮೃದುವಚನ, ಇಂದ್ರಿಯವಿಕಾರದಮನ, ಕಾಮಾದಿ ಅರಿಷಡ್ ವರ್ಗದ ಉಪಶಮನ, ಸರ್ವಜೀವಿಗಳಲ್ಲಿ ಕರುಣ, ಶಿವಭಕ್ತಿಗಂಗಾವಗಾಹನ" ಇವು ಅವರ ಉಪದೇಶದ ಮುಖ್ಯಾಂಶಗಳು. ಇವು ಯಾರಿಗೆ ಬೇಡ?

ವೀರಕ್ತಶ್ರೇಷ್ಠನಾದ ಚೆನ್ನಂಚೇಶ್ವರಾಚಾರ್ಯನಿಗೆ ಅವರು ಮಾಡಿದ ಉಪದೇಶವೆಷ್ಟು ಮಾರ್ಮಿಕವಾದುದು–"ನೀನು ನನ್ನ ಶರೀರ, ಕೋಲಶಾಂತೇಶನೆನ್ನ ಪ್ರಾಣ, ಸಕಲವಿರಕ್ತರೆನ್ನ ಕರಣಗಳು, ಭಕ್ತರೆನ್ನ ಬಳಗ, ನಿಜವಾಗಿ ನಿಮಗೂ ನಮಗೂ ತಿಳಮಾತ್ರ ಭೇದವಿಲ್ಲ. ಸಚ್ಚಿದಾನಂದ ಪರವಸ್ತುವೇ ಗುರುಲಿಂಗ ಜಂಗಮ ರೂಪವನ್ನು ತಾಳಿತು. ಸದ್ರೂಪವೇ ಬಸವಣಣ ಚಿದ್ರೂಪವೇ ಚೆನ್ನಬಸವಣ್ಣ, ಆನಂದರೂಪವೇ



**ಕೊಟ್ಟೂರಿಗೆ ಬಂದು ಚಿಕ್ಕಯ್ಯನೂ ಅವನ ಸತಿಯೂ ಬಸವೇಶ್ವರರಿಗೆ ಪ್ರಣತರಾದರು**

ಪ್ರಭುದೇವ. ಶರಣರೇ ಅಂತರ್ಬಹಿಷ್ಕರಣಗಳಲ್ಲಿ ನೆಲೆಸಿರುವವರು! ಶಿವಜ್ಞಾನಭರಿತವಾದ ದೇಹದಲ್ಲಿ ದೇಹಗುಣಗಳಿಲ್ಲ; ಜ್ಞಾನ ಸ್ವರೂಪ ಲಿಂಗವು ಮನದಲ್ಲಿ ನೆಲೆಸಲು ಮನದ ಗುಣಗಳು ಉಳಿವುದಿಲ್ಲ; ಜಂಗಮವು ಭಾವದಲ್ಲಿ ಭರಿತವಾಗಲು ಭಾವನೆಯ ವಾಸನಾಕ್ಷಯವಾಗುವುದು. ಹೀಗೆ ಪ್ರಾಣವು ಪ್ರಸಾದಮಯವಾಗಲು ಪ್ರಪಂಚದಿಂದ ಮುಕ್ತಿ !"

ಹೀಗೆ ಉದಾತ್ತವಾದ ಉಪದೇಶದಿಂದ, ಕೊನೆಯರಿದಯ ಕಾರುಣ್ಯದಿಂದ ಬಳಿಗೆ ಬಂದವರನ್ನೆಲ್ಲ ಉದ್ಧರಿಸಿ ಶ್ರೀ ಗುರುಬಸವೇಶ್ವರರು ಕೊಟ್ಟೂರಿನಲ್ಲಿಯೇ ಶಿವನನ್ನು ಬೆರೆದರು, ಇಂದಿಗೂ ಆಶ್ರಯಿಸುವ ಭಕ್ತರಿಗೆಲ್ಲ ಭಾಗ್ಯದೇವತೆಯಾಗಿರುವರು.

“ಮನುಜರಂ ಬೇಡದಿಹ ನಿಸ್ಪೃಹತೆಯಂ, ಮನದಿ
ವನಿತೆಯರ ನೋಡಿ ಕಾಂಕ್ಷಿಸದ ನಿರ್ಮೋಹಮಂ,
ಕನಸಿನಲ್ಲನ್ಯಥಾ ಕಾರ್ಯಮಂ ಮಾಡದಿರ್ಪತುಳ ನಿರ್ಮಳ ಭಾವಮಂ
ನೆನೆದುದೆಲ್ಲಂ ಸಿದ್ಧಿಯಪ್ಪ ಸಾಮರ್ಥ್ಯಮಂ
ಘನತೆಯಿಂ ಕುಂದೊಂದನಘಸತ್ಕೀರ್ತಿಯಂ
ಎನಿತಾದೊಡಂ ನಿಮ್ಮನಿತಿಪ ಮತಿಯಿತ್ತು ಪೊರೆ ಕೊಟ್ಟೂರ ಬಸವೇಶ್ವರ!”

■

# ಋಷಿಕವಿ ಶಿವಪ್ರಕಾಶ ಸ್ವಾಮಿಗಳ್

**ಹದಿನಾರನೆಯ ಶತಮಾನದ ಕೊನೆಯ ಭಾಗದಲ್ಲಿ ತಮಿಳು ಸಾಹಿತ್ಯದ ಕ್ಷಿತಿಜದ ಮೇಲೆ ಮಹಾಕವಿಯೊಬ್ಬ ದಿನಮಣಿಯಂತೆ ಮೂಡಿದ. ಕೇವಲ ೩೨ ವರ್ಷಗಳ ಅಲ್ಪಾಯುವಿನಲ್ಲಿಯೇ ತಮಿಳು ಕಾವ್ಯ ಪ್ರಪಂಚದ ನೂತನ ಬ್ರಹ್ಮನಾಗಿ ತೊಳಗಿ ಬೆಳಗಿ ಹೋದ. ಅವನೇ ಶಿವಪ್ರಕಾಶಸ್ವಾಮಿ. ತಮಿಳುನಾಡಿನಲ್ಲಿ ಶಿವಪ್ರಕಾಶವನ್ನು ಪಸರಿಸಿದವರಲ್ಲಿ ಶಿವಪ್ರಕಾಶಸ್ವಾಮಿಗಳಿಗೂ ಮಹೋನ್ನತವಾದ ಸ್ಥಾನವು ಮೀಸಲಾಗಿದೆ.**

ಶಿವಪ್ರಕಾಶಸ್ವಾಮಿಗಳ ಹುಟ್ಟೂರೆಂಬ ಹೆಮ್ಮೆ ಕಾಂಚೀಪುರಕ್ಕೆ ದೊರೆಯಿತು. ಇವರನ್ನು ಮಗನನ್ನಾಗಿ ಪಡೆದ ಮಹದ್ಭಾಗ್ಯವು ಶ್ರೀ ಕುಮಾರಸ್ವಾಮಿ ದೇಶಿಕರದಾಯಿತು. ಇವರನ್ನು ಅಣ್ಣನನ್ನಾಗಿ ಪಡೆದ ಪುಣ್ಯ ವೇಲಪ್ಪರ್ ಮತ್ತು ಕರುಣೈಪ್ಪ್ರಕಾಶರ್ ಎಂಬ ಇಬ್ಬರು ತಮ್ಮಂದಿರು ಮತ್ತು ಜ್ಞಾನಾಂಬಿಕೆ ಎಂಬ ತಂಗಿಯದಾಯಿತು. ತಾಯಿ ಯಾರೋ ತಿಳಿಯಲಿಲ್ಲ.

ಚೊಚ್ಚಲು ಮಗನಾಗಿ ಹುಟ್ಟುವುದು ಹೊಣೆಗಾರಿಕೆಯನ್ನು ಹೊರುವುದಕ್ಕಾಗಿಯೇ ಸರಿ. ಶಿವಪ್ರಕಾಶಸ್ವಾಮಿಗಳೂ ಹಿರಿಯ ಮಗನಾಗಿ ಹುಟ್ಟಿದ ತಪ್ಪಿಗಾಗಿ ಮನೆತನದ ಹೊರೆಯನ್ನು, ಹೊಣೆಗಾರಿಕೆಯನ್ನು ಹೊತ್ತರು–ಬಹಳ ಚಿಕ್ಕ ವಯಸ್ಸಿನಲ್ಲಿಯೇ ಹೊತ್ತರು. ಅವರಿನ್ನೂ ಚಿಕ್ಕವರಿರುವಾಗಲೇ ಅವರ ತಂದೆ ತೀರಿಹೋದ ಕಾರಣ ತಬ್ಬಲಿಗಳಾದ ತಮ್ಮಂದಿರನ್ನೂ ತಂಗಿಯರನ್ನೂ ಸಾಕಿಸಲಹಲು ಶಿವಪ್ರಕಾಶಸ್ವಾಮಿಗಳು ಟೊಂಕ ಕಟ್ಟಿದರು. ಸ್ವಗ್ರಾಮವನ್ನು ತೊರೆದು ಆಸರೆಯನ್ನು ಅರಸುತ್ತ ತಿರುವಣ್ಣಾಮಲೆಗೆ ಹೋದರು–ಕುಟುಂ ಬ ಸಮೇತ. ಅಲ್ಲಿ ದೇವಾಲಯದ ಸುತ್ತಲೂ ತಮ್ಮ ತಮ್ಮಂದಿರು ಮತ್ತು ತಂಗಿಯೊಡನೆ ಪ್ರದಕ್ಷಿಣೆಮಾಡುತ್ತಲಿರುವಾಗ ತಮ್ಮ ಪ್ರಥಮ ಕೃತಿ, ಶತಶ್ಲೋಕೀ 'ಶೋಣಶೈಲಮಾಲೈ'ಯನ್ನು ಉಸುರಿದರು.

ಅಲ್ಲಿಂದ ಅವರು ತುಜ್ಯೆ ಮಂಗಲಕ್ಕೆ ಪ್ರಯಾಣ ಬೆಳಸಿದರು; ಅಲ್ಲಿ ನೆಲೆಯಾಗಿ ನಿಂತರು. ಅಲ್ಲಿ ಅವರಿಗೆ ಅಣ್ಣಾಮಲೈರೆಡ್ಡಿಯಾರ್ ಎಂಬ ಸದ್ಭಕ್ತನ ಸೇವೆ ಮತ್ತು ಆಶ್ರಯಗಳು ಲಭಸಿದುವು. ಅವನು ಶಿವಪ್ರಕಾಶಸ್ವಾಮಿಗಳಿಗೆ ಚೆನ್ನಬಸವಯ್ಯ ಮಠಕ್ಕೆ

ಸಮೀಪದಲ್ಲಿಯೇ ಮನೆಮಾಡಿ ಕೊಟ್ಟನು. ಅಲ್ಲಿಯೇ ಶಿವಪ್ರಕಾಶ ಸ್ವಾಮಿಗಳು ಶಿವಚಿಂತನೆಯಲ್ಲಿ ಇರತೊಡಗಿದರು.

ಕೆಲದಿನಗಳಾದ ಮೇಲೆ ಶಿವಪ್ರಕಾಶಸ್ವಾಮಿಗಳಿಗೆ ವ್ಯಾಕರಣ ವಿದ್ಯಾಪರಿಣತ–ರಾಗಬೇಕೆಂಬ ಇಚ್ಛೆಯಾಯಿತು. ಗುರುವನ್ನು ಅರಸುತ್ತ ತಿರುನೆಲ್ವೇಲಿಗೆ ಹೋದರು.




**ಋಷಿಕವಿ ಶಿವಪ್ರಕಾಶ ಸ್ವಾಮಿಗಳ್**

ಅಲ್ಲಿ ವೆಳ್ಳಿಯಂಬಲವಾಣತ್ತಂಬಿರ್ರಾ ಎಂಬ ಗುರುಗಳು ದೊರೆತರು. ಗುರುಗಳು ಈ ನೂತನ ಶಿಷ್ಯನ ಶಕ್ತಿ ಪರೀಕ್ಷೆ ಮಾಡಲು ಈಶ್ವರನ ಸ್ಥಳ ಮುಂತಾದುವನ್ನು ತಿಳಿಸುವುದಾಗಿದ್ದು 'ಕು' ಎಂಬ ಅಕ್ಷರವು ಮೊದಲು, ಮಧ್ಯೆ ಮತ್ತು ಕೊನೆಯಲ್ಲಿ ಬರುವಂತೆ ಒಂದು ಪದ್ಯ (ವೇಣ್ಬಾ ಎಂಬ ಪದ್ಯವಿಶೇಷ)ವನ್ನು ರಚಿಸುವಂತೆ ತಿಳಿಸಿದರು. ಅವರ ಅಜ್ಞೆಗೆ ತಲೆಬಾಗಿ ಶಿವಪ್ರಕಾಶಸ್ವಾಮಿಗಳು ಈ ಪದ್ಯವನ್ನು ಹೇಳಿದರು:

ಕುಡಕ್ಕೋಡು ಮಾನೆಯಿಱ ಕೊಂಡಾರ್ಕ್ಕು ಕ್ಕೇಱಿಲ್
ಮುಡಕೋಡು ಮುನ್ನಮಣಿ ವಾರ್ಕ್ಕು – ವಡಕ್ಕೋಡು
ತೇರುಡೈಯಾನ್ ತೆವ್ವುಕ್ಕುತ್ತಿಲ್ಲೈತೋಲ್ ಮೇಱ್ಕೊಳ್ಳಲ್
ಊರುಡೈಯಾನ ಎನ್ನುಮೆ ಉಲಕು (ಹು ಎಂದು ಉಚ್ಚರಿಸಬೇಕು)

[ಪಶ್ಚಿಮಾಭಿಮುಖವಾಗಿ ನಡೆದ ಸೂರ್ಯನ ಹಲ್ಲುಗಳನ್ನು (ದಕ್ಷನ ಯಾಗದಲ್ಲಿ ಉದುರಿಸಿ) ಕೊಂಡವನ್ನೂ ವಿಷ್ಣುಹತ್ತಿದ ವರಾಹವತಾರದ ಬಾಗಿದ ಕೋರೆ ಹಲ್ಲುಗಳನ್ನು (ಮಾಲಿಕೆಯಾಗಿ) ಧರಿಸಿಕೊಂಡವನೂ ಬಡಗಣ ಗಾಳಿಯನ್ನು ರಥವನ್ನಾಗಿ ಉಳ್ಳ ಮನ್ಮಥನಿಗೆ ಹಗೆಯಾದವನೂ (ದಹನ ಮಾಡಿದವನು) ಆದವನು (ಹುಲಿಯ) ಚರ್ಮವನ್ನು ಧರಿಸಿರುವವನು, ವಾಹನವಾಗಿ ಋಷಿಭವನ್ನುಳ್ಳವನು (ಮತ್ತು) ಅವನು ನೆಲೆಸಿರುವ ಸ್ಥಳ ತಿಲ್ಲೈ (ಚಿದಂಬರಕ್ಷೇತ್ರ)ಎಂಬುದಾಗಿ ಲೋಕವು (ಪ್ರಾಜ್ಞರು) ಹೇಳುವುದು.]

ಗುರುವು ಸಂತೋಷಗೊಂಡು ಸ್ವಾಮಿಗಳಿಗೆ ವ್ಯಾಕರಣ ಶಾಸ್ತ್ರವನ್ನು ಹದಿನೈದು ದಿನಗಳಲ್ಲಿ ಪಾಠ ಹೇಳಿದರು. ಅವರಿಗೆ ಗುರುಕಾಣಿಕೆಯಾಗಿ ಅವರ ಆಜ್ಞೆಯಂತೆ ಅವರನ್ನು ಹೀಯಾಳಿಸುತ್ತ ಅವರ ಆಗ್ರಹಕ್ಕೆ ಪಾತ್ರನಾದ ಒಬ್ಬ ಹೊಳ್ಳು ಕವಿಯ ಗರ್ವವನ್ನು ಅಡಗಿಸಲು ಆತನಿದ್ದ ತಿರುಚ್ಚೆಂದೂರಿಗೆ ಹೋದರು. ಅಲ್ಲಿ ಸ್ವಾಮಿಗಳಿಗೂ ಆ ಕವಿಗೂ ಒಂದು ಸ್ಪರ್ಧೆ ಏರ್ಪಟ್ಟಿತು. ಆತನ ಮಾತಿನಂತೆ ಅಲ್ಲಿನ ಷಣ್ಮುಖ ಸ್ವಾಮಿಯನ್ನು ಕುರಿತು 'ನೀರೋಟ್ಟ ಯಮಕ ಅಂತಾದಿ'–೩೦ ಪದ್ಯಗಳನ್ನು ಇಬ್ಬರೂ ರಚಿಸಬೇಕೆಂದು ನಿರ್ಧರವಾಯಿತು. ಆತನು ಒಂದು ಪದ್ಯ ಮಾಡಿ ಮುಗಿಸುವುದರಲ್ಲಿ ಸ್ವಾಮಿಗಳು ೩೦ ಪದ್ಯಗಳನ್ನೂ ಪೂರ್ತಿಮಾಡಿದರು. ಕವಿಯು ಸೋಲ ನ್ನೊಪ್ಪಿಕೊಂಡು ಸ್ವಾಮಿಗಳ ಜೊತೆಯಲ್ಲಿ ಹೊರಟು ಅವರ ಗುರುಗಳನ್ನು ನಮಸ್ಕರಿಸಿ ಅವರಿಗೆ ಗುಲಾಮನಾದನು.

ಗುರುಗಳಿಂದ ಅನುಗ್ರಹೀತರಾಗಿ ತುಜ್ವಿಮಂಗಳಕ್ಕೆ ಮರಳಿ ಬಂದರು ಸ್ವಾಮಿಗಳು. ತಮ್ಮ ತಮ್ಮಂದಿರ ಮದುವೆಯನ್ನು ಮಾಡಿದರು. ಹೊತ್ತ ಹೊರೆಯಿಳಿದು ತಲೆಯ ಭಾರ ಹಗುರಾಗಲು ಜ್ಞಾನೋಪಾಸನೆ ಕಾವ್ಯೋಪಾಸನೆಗಳಿಗಾಗಿಯೇ ಮೀಸಲಾಗಿಸಿದರು ತಮ್ಮ ಸಮಯವನ್ನೆಲ್ಲ. ದಿವ್ಯಕ್ಷೇತ್ರಗಳನ್ನೆಲ್ಲ ಸಂದರ್ಶಿಸಿದರು. ಚಿದಂಬರದಲ್ಲಿರುವಾಗ, 'ಶಿವ ಪ್ರಕಾಶ ವಿಕಾಸಮ್', 'ತರುಕ್ಕ (ತರ್ಕ) ಪರಿಭಾಷೈ', 'ಸತ್ಯಮಣಿಮಾಲೈ', 'ನಾಲ್ವರ್ ನಾನ್ಮಣಿ ಮಾಲೈ' ಎಂಬ ನಾಲ್ಕು ಕೃತಿಗಳನ್ನು, ತಿರುವೆಂಗೈಮಾನಗರದಲ್ಲಿದ್ದಾಗ.'ತಿರುವೆಂಗೈಕ್ಕೋವೈ', 'ತಿರುವೆಂಗೈಕ್ಕಲಂಬಕರ್ಮ', 'ತಿರುವೆಂಗೈಯುಲಾ', ತಿರುವೆಂಗೈ ಅಲಙ್ಕಾರಮ್' ಎಂಬ ಪ್ರಬಂಧಗಳನ್ನು ಅಲ್ಲಿನ

ಸ್ವಾಮಿಯಾದ ಪರಮಲ್ಯೆಸಾಥರನ್ನು ಕುರಿತು ರಚಿಸಿದರು. ಕಾಂಚೀಪುರಕ್ಕೆ ಮತ್ತೆ ಹೋದಾಗ ಹಾದಿಯಲ್ಲಿ ಶಾಂತಲಿಂಗಸ್ವಾಮಿಗಳನ್ನು ಸಂಧಿಸಿದರು. ಅವರನ್ನು ಕೂಡಿಕೊಂಡು ಅವರ ಗುರುಗಳಾದ ಶಿವಜ್ಞಾನಪಾಲ್ಯೆಯ ದೇಶಿಕರ ದರ್ಶನಕ್ಕೆ ಹೋದರು. ಅವರ ಸ್ತುತಿಯನ್ನು ರಚಿಸಿ ಹಾಡಿ ಅವರ ಅನುಗ್ರಹಕ್ಕೆ ಪಾತ್ರರಾದರು. ಅವರ ಆದೇಶದಂತೆ ಶಾಂತಲಿಂಗಸ್ವಾಮಿಗಳು ಶಿವಪ್ರಕಾಶಸ್ವಾಮಿಗಳ ತಂಗಿಯಾದ ಜ್ಞಾನಾಂಬಿಕೆಯ ಪಾಣಿಗ್ರಹಣ ಮಾಡಿದರು. ಶಿವಪ್ರಕಾಶಸ್ವಾಮಿಗಳ ಮೇಲಿದ್ದ ಮತ್ತೊಂದು ಹೊಣೆ ಮುಗಿಯಿತು. ಅವರಿನ್ನೂ ಏಕಾಗ್ರತೆಯಿಂದ ಶಿವಚಿಂತನೆ, ಶಿವಕಾವ್ಯ ರಚನೆಗಳಲ್ಲಿ ಮಗ್ನರಾದರು.

ಶಿವಪ್ರಕಾಶ ಸ್ವಾಮಿಗಳವರ ಜೀವನದಲ್ಲಿದು. ಅತ್ಯಂತ ಮಹತ್ವದ ಕಾಲ. ಗುರುಸಾನ್ನಿಧ್ಯದಲ್ಲಿವರು ಕನ್ನಡ, ತೆಲುಗು ಭಾಷೆಗಳನ್ನೂ ಕಲಿತರು. ಸಂಸ್ಕೃತದಲ್ಲಿ ಪಾರಂಗತರಾದರು. ನಿಜಗುಣಶಿವಯೋಗಿಗಳ ವಿವೇಕ ಚಿಂತಾಮಣಿಯನ್ನೂ ಚಾಮರಸನ ಪ್ರಭುಲಿಂಗಲೀಲೆಯನ್ನೂ ಶಿವಯೋಗಿ ಶಿವಾಚಾರ್ಯನ ಸಿದ್ಧಾಂತ ಶಿಖಾಮಣಿಯನ್ನೂ ತಮಿಳು ಭಾಷೆಗೆ ಪರಿವರ್ತಿಸಿದರು. ವೇದಾನ್ತ ಚೂಡಾಮಣಿಯ ಅನುವಾದವನ್ನೂ ಮಾಡಿ ಮುಗಿಸಿದರು.

ಬೋಮ್ಮೆಯ ಪಾಳ್ಯೆಯ'ದಲ್ಲಿ ಗುರುಗಳಾದ ಶಿವಜ್ಞಾನದೇಶಿಕರು ಶಿವಯೋಗ ಸಮಾಧಿಯನ್ನೈದಿದರೆಂದು ಕೇಳಿ ವಿಹ್ವಲರಾಗಿ ಬೊಮ್ಮೈಯ ಪಾಳ್ಯೆಯಕ್ಕೆ ಧಾವಿಸಿದರು ಶಿವಪ್ರಕಾಶಸ್ವಾಮಿಗಳು. 'ಕುಲಂವಕ'ವನ್ನು ಕಟ್ಟಿ ಹಾಡಿದರು. ಗುರುಗಳಿಗೆ ಭಕ್ತಿಯ ಕಾಣಿಕೆಯನ್ನು ಅರ್ಪಿಸಿದರು. ಅಲ್ಲಿರುವಾಗ ಒಮ್ಮೆ ಸಾಗರ ತೀರದ ಮಳಲಿನ ಮೇಲೆ ಕಾವ್ಯಸಮಾಧಿಯಲ್ಲಿ ಕುಳಿತಿದ್ದರು. ಆ ರಸಪರವಶತೆಯಲ್ಲಿ ಮಳಲ ಮೇಲೆಯೇ ನಾಲ್ವತ್ತು ನೀತಿಪರ ಶ್ಲೋಕಗಳನ್ನು ಬರೆದರು ! ಅವರ ತಮ್ಮಂದಿರಾದ ಕರುಣೈಪ್ರಕಾಶರವನ್ನು ಬರೆದಿರಿಸಿಕೊಂಡರು. ಆ ನಾಲ್ವತ್ತು ಶ್ಲೋಕಗಳೇ ನಡಿವೆಣ್ಬಾ' ಎಂಬ ಹೆಸರಿನಿಂದ ತಮಿಳು ಸಾಹಿತ್ಯದಲ್ಲಿಯೇ ಅಜರಾಮರ ಕೃತಿಯಾಗಿ ನಿಂತುವು. ಪ್ರಾಜ್ಞರೀಕೃತಿಯನ್ನು 'ಸಂಘ'ಯುಗದ ಇನ್ನೆರಡು ಲೋಕಪ್ರಸಿದ್ಧ ನೀತಿಕೃತಿಗಳಾದ 'ತಿರುಕ್ಕುಱಳ್' 'ನಾಲಡಿ ನಾನೂಱು' ಗಳಿಗೆ ಸಮಾನ ಕೃತಿಯೆಮದು ಹೊಗಳಿದ್ದಾರೆ. ಇಂಥ ಲೋಕೋತ್ತರವಾದ ಕೃತಿಯನ್ನು ಹಲಗೆಬಳಪವ ಹಿಡಿಯದೆ ಮಳಲ ಮೇಲೆಯೇ ಅಪ್ರಯತ್ನಿತವಾಗಿ ಬರೆದುದು ಶಿವಪ್ರಕಾಶಸ್ವಾಮಿಗಳವರ ಆಗಾಧವಾದ ಕವಿತಾಶಕ್ತಿಗೆ ಅಪಾರವಾದ ಲೋಕಾನುಭವಕ್ಕೆ ವಿಸ್ಮಯಜನಕವಾದ ವಿವೇಕೋನ್ನತಿಗೆ ನಿದರ್ಶನವಾಗಿದೆ.

ದಿವ್ಯಕ್ಷೇತ್ರಗಳ ಯಾತ್ರೆಯಲ್ಲಿದ್ದಾಗ ಶಿವಪ್ರಕಾಶ ಸ್ವಾಮಿಗಳು ಫಾದರ್ ಬೆಶ್ಚಿ(ವೀರಮಾಮುನಿವರ್)ಯವರನ್ನು ಭೇಟಿಯಾಗಿದ್ದರು. ಬೆಶ್ಚಿಯವರು ತಮಿಳುನಾಡಿನಲ್ಲಿ ಕ್ರೈಸ್ತಮತ ಪ್ರಸಾರ ಮಾಡಲು ಪ್ರಯತ್ನಿಸುತ್ತಲಿದ್ದರು. ಅವರೊಡನೆ ಶಿವಪ್ರಕಾಶಸ್ವಾಮಿಗಳು ವಾದಿಸಿ 'ಏಸು ಮತ ನಿರಾಕರಣಮ್' ಎಂಬ ಕೃತಿಯನ್ನೇ ಬರೆದುಬಿಟ್ಟರು.

ಮುಂದೆ ಕೆಲವು ದಿನಗಳಲ್ಲಿ ಅವರ ತಮ್ಮಂದಿರಾದ ಕರುಣೈಪ್ಪ್ರಕಾಶರು ತಮ್ಮ ಹದಿನೆಂಟು ವರ್ಷದ ವಯಸ್ಸಿನಲ್ಲಿಯೇ, 'ಇಷ್ಟಲಿಂಗ ಅಹಮಲ್' ಎಂಬ ಕೃತಿಯನ್ನು ಪೂರ್ತಿಯಾಗಿಯೂ 'ಕಾಳತ್ತಿ ಪುರಾಣವ್' ಎಂಬ ಕೃತಿಯನ್ನು ಅಪೂರ್ಣವಾಗಿಯೂ ರಚಿಸಿ ಶಿವಾಧೀನರಾದರು. ಮುಂದೆ ಬದುಕಿದ್ದರೆ ಹಿರಿಯಣ್ಣನಂತೆಯೇ ಮಹಾಕವಿಯಾಗಬಹುದಾಗಿದ್ದ ಅಣ್ಣ ಕರುಣೈಪ್ಪ್ರಕಾಶದ ನಿಧನದಿಂದ ನಿತ್ತರಿಸಲಾರದೆ ಬಿಕ್ಕಿ ಬಿಕ್ಕಿ ಅಳುತ್ತಲಿದ್ದ ಕಿರಿಯ ತಮ್ಮ ವೇಲಪ್ಪನನ್ನು ಸಮಾಧಾನಪಡಿಸಿ ಶಿವಪ್ರಕಾಶಸ್ವಾಮಿಗಳು ನಲ್ಲಾವೂರಿಗೆ ಹೋದರು. ಅಲ್ಲಿ ಮಠದಲ್ಲಿ ಕೊನೆಯ ದಿನಗಳನ್ನು ಕಳೆದರು–ಶಿವಧ್ಯಾನದಲ್ಲಿ, ಶಿವಜ್ಞಾನಪೂರ್ಣ ಕಾವ್ಯರಚನೆಯಲ್ಲಿ.

ಅವರ ಕೊನೆಯ ಕೃತಿಗಳಿವು :

೧. ಶಿವನಾಮ ಮಹಿಮೆ

೨. ಅಭಿಷೇಕ ಮಾಲೆ

೩. ನೆಡುಂಕಲಿ ನೇಟಿಲ್

೪. ಕುಱುಂಕಲು ನೇಟಿಲ್

೫. ನಿರಂಜನಮಾಲೆ

೬. ಕೈತಳಮಾಲೆ

೭. ಕಾಳತ್ತಿ ಪುರಾಣ (ಸ್ವಲ್ಪ ಭಾಗ)

ಸಂಸಾರ ತಾಪತ್ರಯಗಳಲ್ಲಿ ಸಿಕ್ಕಿ ಸುಣ್ಣವಾಗಿದ್ದರೂ ಚಿಕ್ಕಂದಿನಲ್ಲಿ ತಂದೆಯನ್ನು ಕಳೆದುಕೊಂಡು ಇಬ್ಬರು ತಮ್ಮಂದಿರನ್ನೂ ಒಬ್ಬ ತಂಗಿಯನ್ನೂ ಜೋಪಾನ ಮಾಡಲು ಊರೂರು ಅಲೆದು ಬಳಲಿದರೂ ಕೇವಲ ೩೨ ವರ್ಷಗಳ ಅಲ್ಪಾಯುವನ್ನು ಪಡೆದಿದ್ದರೂ ೧೮ನೆಯ ವರ್ಷದಲ್ಲಿಯೇ ಪ್ರತಿಭೆಯ ಪ್ರಕಾಶವನ್ನು ಬೀರಿದ್ದ ತಮ್ಮನನ್ನು ಕಳೆದುಕೊಂಡರೂ ಇಷ್ಟೊಂದು ಶ್ರೇಷ್ಠ ಕೃತಿಗಳನ್ನು ರಚಿಸಿ ತಮಿಳು ಭಾಷೆಯ ಸರ್ವಮಾನ್ಯ ಕವಿಗಳಲ್ಲೊಬ್ಬರಾಗಿ ಮೆರೆದು, ಮಹಾಶರಣರಾಗಿ ಬದುಕಿ ಲಿಂಗದಲ್ಲಿ ಲಯವಾದ ಶಿವಪ್ರಕಾಶಸ್ವಾಮಿಗಳು ನಿತ್ಯ ಪ್ರಾತಃಸ್ಮರಣೀಯರಾದ ಪರಂಜ್ಯೋತಿ–

ಸ್ವರೂಪರಲ್ಲಿ ಒಬ್ಬರು. ತಮಿಳು ಭಾಷೆಯಲ್ಲಿ ಕವಿಯಾಗಬಯಸುವವರೆಲ್ಲ ಇವರ ಅಡಿಗಳಿಗೆ ಎರಗಿಯೇ ಮುಂದುವರಿದರು.

ದೇವತಾಸ್ವರೂಪರಾಗಿದ್ದ ಅಣ್ಣ ಶಿವಪ್ರಕಾಶಸ್ವಾಮಿಗಳು ಶಿವನನ್ನು ಬೆರೆಯಲು ತಮ್ಮ ವೇಲಪ್ಪನವರು ತಬ್ಬಲಿಗಳಂತೆ ರೋದಿಸಿದರು.

"ಅಲ್ಲಿಮಲರ್ಪ್ಪಣ್ಣವನು ಮಾರಾದ್ನುಡಿ ಕವಿತ್ಶೈ
ಶೊಲ್ಲು ಮಿರುವರಿಡ್ಶೈ ತ್ತೋನ್ರಿಯ ಯಾನ್ ಮುಲ್ಲೈ
ಯರುಂಬಿಱ್ ಪೊಲಿಯು ಮಣಿ ಮು*ವ ನಲ್ಲಾಯ್ !

ಎಂದು ಅಳಲಿದರು.

[ಸ್ವಾಮಿಯೂ ಯೋಚಿಸಿ ತಿಳಿಯುವ ಕವಿತೆಗಳನ್ನು ಹಾಡುವ ಈರ್ವರ ಮಧ್ಯೆ ಹುಟ್ಟಿದ ನಾನು ಕಬ್ಬಿನ ಪರ್ವದಂತನಾಗಿರುವೆನು–ಎಂದು ತಾತ್ಪರ್ಯ.] ಕಿರಿಯಣ್ಣ ಕರುಣೈಪ್ರಕಾಶರಿಂದ ಆರಂಭಿಸಲ್ಪಟ್ಟು ಹಿರಿಯಣ್ಣ ಶಿವಪ್ರಕಾಶ ಸ್ವಾಮಿಗಳಿಂದಲೂ ಅಪೂರ್ಣವಾಗಿ ಉಳಿದಿದ್ದ ಕಾಳತ್ತಿ ಪುರಾಣವನ್ನು ಪೂರ್ತಿಗೊಳಿಸಿದರು. ಬಹುಶಃ ಜಗತ್ತಿನ ಕಾವ್ಯರಾಶಿಯಲ್ಲಿಯೇ ಮೂವರು ಸೋದರರು ಕೂಡಿ ಮುಗಿಸಿದ ಕಾವ್ಯವಿದೊಂದೇ ಎಂದು ತೋರುತ್ತದೆ. ಮೂವರೂ ಕವಿಗಳು, ಮೂವರೂ ಭಕ್ತರು, ಮೂವರೂ ಮುಕ್ತರು.

ಕೆಳಗಣ ಉಕ್ತಿಗಳಿಂದ ಶಿವಪ್ರಕಾಶಸ್ವಾಮಿಗಳು ಎಂಥ ಅನುಪಮ ಕವಿಗಳೆಂಬುದು ವ್ಯಕ್ತವಾಗುತ್ತದೆ !

೧ ಅಱ್ಪುದ ಕಱ್ಪಿನ್ಶೈ ಪೊಱ್ಪಿಲಂಕಾರಮ್ ಶೊಱ್ಪು ವೈ
ಪೊರುಟ್ಟು ವೈಯಿಱ್ ಪೊಲಿಂದು ಓಂಗುಂ ಮುಪ್ಪಾನಿರುನೂಲ್
ಪೊಱ್ಪುಱವಿಯಚಿಱ ಮಹಿತಲತ್ತೆನುಱಂ ಪುಹಱುಡಲ್
ನಿಱೀಇಯ ಶಿವಪ್ರಕಾಶಪ್ಪೆರುನ್ದಹೈ
–ತಿರುಪೋರೂರ್ ಮಹಾಸನ್ನಿಧಾನಂ ತಿರುಮಱಶ್ಶೈ
ಶಿವಪ್ರಕಾಶ ಸ್ವಾಮಿಗಳ್

[ಅದ್ಭುತವಾದ ಸುಂದರವಾದ ಅಲಂಕಾರ, ನುಡಿಸೊಬಗು, ಅರ್ಥ ಮಾಧುರ್ಯಗಳಿಂದ ತುಂಬಿರುವ ಉತ್ತಮವಾದ ತ್ರಿವರ್ಗ ವಿಚಾರವಾದ ಉತ್ತಮ ಕಾವ್ಯದಿಂದ ಕೀರ್ತಿಯನ್ನು ಭೂಮಿಯಲ್ಲಿ ಚಿರಸ್ಥಾಯಿಯಾಗಿ ಉಳಿಸಿದ ಶಿವಪ್ರಕಾಶರೆಂಬ ಮಹಾತ್ಮರು.]

೨ ದೆಯ್ವ ವಾಕ್ಕಿಯನ್ ಅರುನ್ದುೞುಮಂಗಲ ಶಿವಪ್ರಕಾಶ ದೇವನ್
–ಈರ್ಕಾಡು ರತ್ನವೇಳು ಮುದಲಿಯಾರ್

೩ ಆಲಂಕಾರಿ ಸಾರ್ವಭೌಮರಾನ (ರಾದ) ಶಿವಪ್ರಕಾಶ ಮುನಿವರ್
–ಶ್ರೀ ಪಂಡಿತ ನಾರಾಯಣ್ಯೈಂಗಾರ್
ಶೆನ್ದಮಿೞು ಸಂಪಾದಕರು, ಮಧುರೆ

೩ 'ತವಮ್ ಪೞುತ್ತ ತುೞುವುಡ್ಯೆಯಾನ್ ತಮಿೞು ಪೞುತ್ತವುಳ ಮುಡ್ಯೆಯಾನ್
ಶಿವಮ್ ಪೞುತ್ತ ಉಣ್ಮೈಯಿನ್ಯೆಪ್ಪತ್ತಿನಯಂಪಲನಾಟ್ಟಿತ್ತೆಳಿವುಕೊಟ್ಟ
ನವರ್ಮ ಪೞುತ್ತ ತಮಿೞುನೂಲ್ಪಲ್ ನಲ್ಗು ಶಿವಪ್ರಕಾಶ ನೞುವತ್ತೋನ್।
ಕಾ. ನಮಶ್ಶಿವಾಯ ಮುದಲಿಯಾರ್

[ಉತ್ತಮ ತಪಸ್ಸುಳ್ಳ ಸನ್ಯಾಸಿಯೂ ತಮಿಳು ತುಂಬಿಹಣ್ಣಾದ ಮನವುಳ್ಳವರು, ಶಿವಭಕ್ತಿ ತತ್ತ್ವವನ್ನು ಸೊಗಸಾಗಿ, ತಿಳಿಯಾಗಿ, ಮನಸ್ಸಿಗೆ ಚೆನ್ನಾಗಿ ನಾಟುವಂತೆ ನೂತನವಾದ ಅನೇಕ ತಮಿಳು ಕೃತಿಗಳನಿತ್ತವರು ಶಿವಪ್ರಕಾಶಸ್ವಾಮಿಗಳು].

■

# ಗುಡಗುಂಟೆಯ ಅಮರೇಶ್ವರ

"ಪೇಳುತಿಹೆ ಅಮರೇಶ ಚರಿತೆಯ
ಕೇಳಿರೈ ಶಿವಭಕ್ತ ಜನರೇ
ತಾಳಿರೈ ಸಂತೋಷ......"*

ಈಗಿನ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಎರಡೋಣಿಯೆಂಬ ಹಳ್ಳಿಯಿದೆ. ಅಲ್ಲಿ ಒಂದು ಶಿವಭಕ್ತರ ಕುಟುಂಬದಲ್ಲಿ ಆದಯ್ಯನೆಂಬ ಸದ್ಭಕ್ತನು ಜನಿಸಿದನು. ಎಷ್ಟು ವರ್ಷಗಳ ಹಿಂದೆ ಎಂಬುದು ಖಚಿತವಾಗಿ ಗೊತ್ತಾಗುವುದಿಲ್ಲ. ಸುಮಾರು ನಾಲ್ಕನೂರು ವರ್ಷಗಳ ಹಿಂದೆ ಹುಟ್ಟಿರಬಹುದು. ವೃತ್ತಿಯಿಂದ ಒಕ್ಕಲಿಗೆ, ಪ್ರವೃತ್ತಿಯಿಂದ ಭಕ್ತ. ಹೊಲ ಸಾಗುವಳಿ ಮಾಡಿ ಬಂದದ್ದರಲ್ಲಿ ಗುರು–ಲಿಂಗ–ಜಂಗಮಾರಾಧನೆಯನ್ನು ನಡೆಸಿ ತಾನೂ ಬದುಕುತ್ತಿದ್ದನು. ಅವನಿಗೆ ಅನುರೂಪಳಾದ ಸತಿ ಮಾಳಗುಂಡಮ್ಮ. ಅವರಿಬ್ಬರ ಸಂಸ್ಕೃತಿ ರಥ ಸಂಸ್ಕೃತಿ ಪಥದ ಮೇಲೆ ಸಾಗಿದ್ದಿತು.

ಬಹುಶಃ ಭಕ್ತರೆಲ್ಲರಿಗೆ ತಡವಾಗಿ ಮಕ್ಕಳಾಗುತ್ತಾರೆ; ಇಲ್ಲವೆ ಲೋಕರೂಢಿಗೆ ಅಪವಾದವಾದ ರೀತಿಯಲ್ಲಿ ಮಕ್ಕಳಾಗುತ್ತಾರೆ. ಅವರ ಉದರದಿಂದ ಅಸಾಮಾನ್ಯರಾದ ಮಕ್ಕಳು ಹುಟ್ಟಿ ಮಾನವಕೋಟಿಗೆ ಮಂಗಳವನ್ನುಂಟು ಮಾಡುವವರಾದ ಕಾರಣ ಹೀಗಾಗುತ್ತಿರಬಹುದು. ನಕ್ಷತ್ರಗಳು ಹುಟ್ಟಲು ಯಾರ ಆತಂಕವೂ ಇಲ್ಲ; ಆದರೆ ಪೂರ್ಣ ಚಂದ್ರ ಹುಟ್ಟುವುದು ಪೌರ್ಣಿಮೆಗೊಮ್ಮೆಯೇ.ಒಳ್ಳೆಯದು ಎಲ್ಲವೂ ಆಗೊಮ್ಮೆ ಈಗೊಮ್ಮೆ.

ಶಿವನಲ್ಲಿ ನಿಷ್ಠೆ, ಶಿವನಲ್ಲಿ ನಂಬುಗೆಯುಳ್ಳ ಆದಯ್ಯ ಮಾಳಗುಂಡಮ್ಮನವರು ಮಕ್ಕಳಾಗಲಿಲ್ಲವೆಂದು ಮರುಗಲಿಲ್ಲ. ತಮ್ಮ ಸತ್ಯ ಶುದ್ಧ ಕಾಯಕದಲ್ಲಿ ನಿತ್ಯನಿರತರಾಗಿ ತಮ್ಮಿಂದಾದಷ್ಟು ಹರ ಗುರು ಚರಸೇವೆಯನ್ನು ಮಾಡುತ್ತ ನಡೆದಿದ್ದರು. ಮನೆಗೆ ಯಾರೇ ಅತಿಥಿಯಾಗಿ ಬಂದರೂ ಅವರು ಅತಿಥಿಯ ವೇಷದಲ್ಲಿ ಬಂದ ದೇವರೆಂದೇ

---

* ವೈಶ್ಯ ಕುಲಭೂಷಣ ವೆಂಕಯ್ಯ ಕವಿ ವಿರಚಿತ ಶ್ರೀ ಅಮರೇಶ್ವರ ಮಹಾಪುರಾಣ.

ತಿಳಿದು ಶಕ್ತಿಮೀರಿ ಸತ್ಕರಿಸುತ್ತಿದ್ದರು. ಅತಿಥಿಯ ವೇಷದಲ್ಲಿ ಬಂದ ದೇವರೆಂದೇ ತಿಳಿದು ಶಕ್ತಿಮೀರಿ ಸತ್ಕರಿಸುತ್ತಿದ್ದರು. ದಿನಗಳೆದಂತೆ ಅವರ ಭಕ್ತಿ ಪಕ್ವವಗುತ್ತ ಪ್ರಬಲವಾಗುತ್ತ ನಡೆಯಿತು. ಆದರೂ ಅವರಿಗೆ ಮಕ್ಕಳಾಗಲಿಲ್ಲ.

ಹೀಗೆ ಅನೇಕ ವರ್ಷಗಳು ಕಳೆದುವು. ಮೆಲ್ಲಮೆಲ್ಲನೆ ಮುಪ್ಪು ಬಂದು ಅವರಿಸಿ ತೊಡಗಿತು ಆ ಆದರ್ಶ ದಂಪತಿಗಳನ್ನು. ಮಕ್ಕಳಾಗುವ ಸಂಭವವೂ ಕಡಮೆಯಾಗುತ್ತ ನಡೆಯಿತು. ಆದರೂ ಅವರೇನೂ ಎದೆಗೆಡಲಿಲ್ಲ; ತಮ್ಮ ಭಕ್ತರತಿಯನ್ನು ಬಿಡಲಿಲ್ಲ. ಇವರ ದೃಢಭಕ್ತಿಯನ್ನು ನೋಡಿ ದೇವರಿಗೇ ದಿಗಿಲು ಉಂಟಾಗಿರಬೇಕು. ಒಮ್ಮೆ ಆದಯ್ಯನು ಕನಸು ಕಂಡನು. ಕನಸಿನಲ್ಲಿ ಒಬ್ಬ 'ಜಟಾವಲ್ಕಲಧಾರಿಯೂ ಭಸ್ಮೋದ್ಧೂಳಿತ ಶರೀರೀಯೂ' ಆದ ಮಹೇಶ್ವರನು ಕಾಣಿಸಿಕೊಂಡು, "ಆದಯ್ಯ, ಈ ಬಾಲಕನನ್ನು ತೆಗೆದುಕೋ. ಈತನಿಂದ ನಿನ್ನ ಅಭೀಷ್ಟ ಈಡೇರುವುದು" ಎಂದು ಹೇಳಿ ಕಾಣದಾದನು.

ಆದಯ್ಯನು ಎಚ್ಚತ್ತು ಅಚ್ಚರಿಯಿಂದ ಮಾಳಗುಂಡಮ್ಮನಿಗೂ ಸೂಜಿಗದ ಕನಸನ್ನು ಹೇಳಿದನು. ಮಾಲಗುಂಡಮ್ಮನಿಗೆ ಆ ಕನಸಿನ ಕಂದನು ನಿಜವಾಗಿಯೂ ತನ್ನ ತೋಳು ತೊಡೆಗಳ ಸಿಂಗಾರವಾಗಿ ಮೂಡಿ ಬರಬಹುದೆ? ಎಂದು ಎನಿಸಿತು. ಆಕೆಯು ಸುಪ್ತವಾದ ಮಾತೃಭಾವವು ಜಾಗ್ರತವಾಯಿತು. ಆ ಕಾಣದ ಕಂದನಿಗಾಗಿ ಆಕೆಯ ಹೃದಯದಲ್ಲಿ ಹಂಬಲ ಹೊಮ್ಮಿ ಹರಿಯತೊಡಗಿತು. "ಒಮ್ಮೆ ಕನಸಿನಲ್ಲಿ ಮಾತ್ರ , ಅದೂ ತನ್ನ ಪತಿಯ ಕನಸಿನಲ್ಲಿ ಮಾತ್ರ ಕಾಣಿಸಿಕೊಂಡ ಕಂದನೇ ಇಷ್ಟು ಆನಂದಪ್ರದನಾದಮೇಲೆ ನಿಜವಾದ ಕೂಸು ಅದೆಷ್ಟು ಆನಂದ ಪ್ರದನಾಗಲಿಕ್ಕಿಲ್ಲ?" ಎಂದು ಮಾಳಗುಂಡಮ್ಮನು ಏಣಿಕೆ ಹಾಕಿ ಮನದ ಬಯಕೆಯಿಂದ ಇನ್ನಷ್ಟು ಹಣ್ಣಾದಳು. ಇನ್ನು ದೇವರ ನ್ಯಾಯ ದೊರೆಯಲೇ ಬೇಕಲ್ಲವೆ? ದೊರೆಯಿತು– ಆದರೆ ಲೋಕರೂಢಿಗೆ ಅಪವಾದವಾದ ಶರಣರ ರೀತಿಯಲ್ಲಿ ದೊರೆಯಿತು.

ಒಂದು ದಿನ ಎರಡೋಣೀಗ್ರಾಮದ ಕೋಟೆಯ ಬಾಗಿಲಲ್ಲಿ ಅನಾಥ ಬಾಲಕನು ಕಾಣಿಸಿಕೊಂಡನು. ದಿಕ್ಕಿಲ್ಲದವನಂತೆ ಬಿಕ್ಕಿಬಿಕ್ಕ ಅಳುತ್ತಲಿದ್ದನು. ಲಕ್ಷ್ಮೀಶನ ಜೈಮಿನಿ ಭಾರತವನ್ನೋದಿದವರಿಗೆ ಆ ಬಾಲಕನನ್ನು ನೋಡಿ ಚಂದ್ರಹಾಸನ ನೆನಪಾಗಿರಬೇಕು. ಹೀಗೆ ಅನಾಥನಂತೆ ಅಳುತ್ತಲಿದ್ದ ಆ ಬಾಲಕನನ್ನು ನೋಡಿ ಊರ ಜನರು ಅವನನ್ನು ಸಂತೈಸಲು ಮುಂದೆ ಬಂದರು. ಯಾರು ಬಾಲಕನನ್ನು ಎತ್ತಿ ಇಳಿಸಿದರು; ಯಾರು ಹಾಲು, ಹಣ್ಣು ಕೊಡಹೋದರು; ಯಾರು ಕಂಬನಿ ತೊಡೆದು ರಮಿಸಲು ಯತ್ನಿಸಿದರು; ಯಾರು ತಮ್ಮ ಮಕ್ಕಳನ್ನು ಮುಂದೆಮಾಡಿ ಅವರಿಂದ ಆ ಬಾಲಕನನ್ನು ಸಮಾಧಾನಗೊಳಿಸಲು ಹವಣಿಸಿದರು. ಯಾರು ಎಷ್ಟು ಪರಿಯಿಂದ ಉಪಚರಿಸಿದರೂ

ಆ ಬಾಲಕನ ರೋದನ ನಿಲ್ಲಲಿಲ್ಲ. ಸಮಾಧಾನಪಡಿಸಿದಂತೆಲ್ಲ ಶೋಕ ಹೆಚ್ಚಾಯಿತು. ಊರವರು ಕಿಂಕರ್ತವ್ಯ ವಿಮೂಢರಾಗಿ ಗ್ರಾಮಾಧಿಕಾರಿಯೇ ಈ ಬಾಲಕನ ವ್ಯವಸ್ಥೆ ಮಾಡಲೆಂದು ಬಾಲಕನನ್ನು ಚಾವಡಿಗೆ ಕರೆದೊಯ್ದರು. ಆದರೆ ಅವನು ಕಾರಣಿಕ ಕುಮಾರ. ಗ್ರಾಮಾಧಿಕಾರಿಯ ಉಪಾಯ ವೇದಾಂತಕ್ಕೆ ಒಳಗಾಗುವನೆ? ಗ್ರಾಮಾಧಿಕಾರಿಗೂ ಏನೂ ತೋಚದಾಯಿತು. ಊರವರೆಲ್ಲರನ್ನೂ ಕರೆಸಿ ಆ ಬಾಲಕನ ತಂದೆತಾಯಿ ಬಂಧು ಬಳಗ, ಊರು ಕೇರಿ, ದೇಶಕೋಶಗಳ ಬಗ್ಗೆ ವಿಚಾರಿಸಿದನು. 'ತಂದೆ ತಾಯಿ ಇಲ್ಲದೆ ಹುಟ್ಟಿದ ಕಂದ'ನಾಗಿದ್ದ ಬಾಲಕನ ತಂದೆ ತಾಯಿಗಳ ಗುರುತನ್ನಾರು ಹೇಳಬೇಕು?

ಕೊನೆಗೊಬ್ಬ ಅಟ್ಟುಂಡ ಅಜ್ಜನೆದ್ದು ಹೇಳಿದನು, "ಇವನು ಸಾಧಾರಣ ಬಾಲಕನಂತೆ ತೋರುವುದಿಲ್ಲ. ಯಾವನೋ ಕಾರಣಿಕ ಕುಮಾರನೇ ಇರಬೇಕು, ಇದನ್ನು ನಾವು ಕಂಡುಹಿಡಿಯಲಾರೆವು. 'ಹಾವಿನಡಿಗಳ ಹಾವೆ ಬಲ್ಲುವು.' ಈ ಶರಣಶಿಶುವನ್ನು ಶರಣನಾದವನೇ ಗುರುತಿಸಬೇಕು. ಈ ಊರ ಸದ್ಭಕ್ತ ಆದಯ್ಯನು ಶರಣಪಥದಲ್ಲಿ ನಡೆದಿರುವ ಶರಣ ಸ್ವರೂಪನು. ಆತನಿಗೆ ಇದುವರೆಗ ಮಕ್ಕಳೂ ಆಗಿಲ್ಲ. ಆದುದರಿಂದ ಸತಿಪತಿಗಳಿಬ್ಬರೂ ಈ ಬಾಲಕನನ್ನು ಅಕ್ಕರತೆಯಿಂದ ಅಪ್ಪಿಕೊಳ್ಳಬಹುದು. ಆಗ ಈ ಬಾಲಕನೂ ತನಗೆ ಅನುರೂಪರಾದ ತಂದೆ ತಾಯಿಗಳೂ ಸಿಕ್ಕಿ ಹಿಗ್ಗಿನಲ್ಲಿ ಅಳುವುದನ್ನು ನಿಲ್ಲಿಸಿ ಆನಂದದಿಂದ ನಲಿಯಬಹುದು. ಆದಯ್ಯಕನನ್ನು ಕರೆಸಿ ನೋಡಿರಿ."

ಅಜ್ಜನ ಅಭಿಪ್ರಾಯ ಎಲ್ಲರಿಗೂ ಸರಿದೋರಿತು. ಗ್ರಾಮಾಧಿಕಾರಿಯು ಆದಯ್ಯನನ್ನು ಕರೆಸಬೇಕೆನ್ನುತ್ತಿರುವಷ್ಟರಲ್ಲಿ ಆದಯ್ಯನೇ ಎತ್ತುಗಳನ್ನು ಹೊಡೆದುಕೊಂಡು, ಹೆಗಲಮೇಲೆ ಒಕ್ಕಲುತನದ ಉಪರಕರಣಗಳನ್ನು ಹೊತ್ತುಕೊಂಡು ಅತ್ತಕಡೆಗೇ ಬಂದನು. ಆತನು ತನ್ನ ಕೃಷಿ ಕಾಯಕಕ್ಕಾಗಿ ಹೊಲಕ್ಕೆ ಹೊರಟಿದ್ದನು. ಗ್ರಾಮಾಧಿಕಾರಿಯು ಆದರದಿಂದ ಆದಯ್ಯನನ್ನು ಬರಮಾಡಿಕೊಂಡು, ಸಮೀಪದಲ್ಲಿ ಕುಳ್ಳಿರಿಸಿಕೊಮಡು, "ಶಿವಭಕ್ತಶ್ರೇಷ್ಠ ಆದಯ್ಯ, ಈ ಬಾಲಕನು ಎಲ್ಲಿಂದ ಬಂದನೆಂಬುದು ಯಾರಿಗೂ ತಿಳಿಯದು; ಯಾರ ಮಗನೆಂಬುದು ಯಾರಿಗೂ ತಿಳಿಯದು; ಏಕೆ ಆಳುತ್ತಿರುವನೆಂಬುದೂ ಯಾರಿಗೂ ತಿಳಿಯದು. ಈತನನ್ನು ರಮಿಸಲೆಂದು ನಾವು ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾದುವು. ಆದುದರಿಂದ ಊರ ದೈವದವರು 'ಈ ಬಾಲಕನನ್ನು ಆದಯ್ಯನ ಉಡಿಯಲ್ಲಿ ಹಾಕಿಬಿಡುವುದೇ ಉಪಾಯ'ವೆಂದು ತೀರ್ಮಾನಿಸಿದ್ದಾರೆ. ಬಾಗಿಲಿಗೆ ಬಂದವರೆಲ್ಲ ಶಿವಸ್ವರೂಪವೆಂದು ತಿಳಿದು ಆದರಾತಿಥ್ಯ ಮಾಡುತ್ತ ಬಂದಿರುವ ನೀನು ಈ ಬಾಲಕನನ್ನು ನಿರಾಕರಿಸಲಾರೆಯೆಂದು ನಂಬಿದ್ದೇವೆ" ಎಂದು ಹಿತ ವಚನಗಳನ್ನು ಹೇಳಿದನು.



**ಗ್ರಾಮಾಧಿಕಾರಿಯು ಅದಯ್ಯನನ್ನು ಆದರಿಸಿ ಬಾಲಕನನ್ನು ಅವನಿಗೆ ವಹಿಸಿದನು**

ಆದಯ್ಯನ ಆನಂದಕ್ಕೆ ಪಾರವೇ ಇಲ್ಲವಾಯಿತು. ಬಾಗಿ ಆ ಬಾಲಕನನ್ನೆತ್ತಿ ಎದೆಗವಚಿಕೊಂಡು ಕುಣಿದಾಡಿದನು. ಆತನು ಎತ್ತಿಕೊಳ್ಳುತ್ತಲೇ ಆ ಬಾಲಕನ್ನು ಆಳುವುದನ್ನು ನಿಲ್ಲಿಸಿ ಆನಂದಕಂದನಾಗಿ ಶೋಭಿಸದನು. ಊರವರೆಲ್ಲರಿಗೆ ತಲೆಯ ಮೇಲಿನ ಹಿರಿಯ ಹೊರೆ ಇಳಿದಂತಾಗಿ "ಕಟ್ಟೆಯ ಕಲ್ಲು ಕಟ್ಟೆಗೆ ಹೊಂದಿತು"

ಎನ್ನುತ್ತ ಅವರೆಲ್ಲರೂ ತಮ್ಮ ತಮ್ಮ ಮನೆಯ ಹಾದಿ ಹಿಡಿದರು. ಆದಯ್ಯನು ಆಕಸ್ಮಾತ್ತಾಗಿ ಅನಿರೀಕ್ಷಿತವಾಗಿ ಅನಪೇಕ್ಷಿತವಾಗಿ ಸಿಕ್ಕ ಬಾಲಕನನ್ನು, ಸ್ವಪ್ನದಲ್ಲಿ ಶಿವನೆಂದಂತೆ ಜಾಗರದಲ್ಲಿ ಜಗತ್ತು ಅಚ್ಚರಿ ಪಡುವ ರೀತಿಯಲ್ಲಿ ದೊರೆತ ಕುಮಾರನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಮನವೆಲ್ಲ ತನನನವೆನ್ನುತ್ತಿರಲು ಹೊಲದ ಕಡೆಗೆ ಹೊರಟನು.

ಅಂದು ಆದಯ್ಯನಿಗೆ ಸಮಸ್ತ ಸೃಷ್ಟಿಯೇ ಆನಂದಮಯವಾಗಿ ಕಂಡಿತು. ಹೊಲ, ನೆಲ, ಜಲ, ಸ್ಥಲ, ಕಾಲಗಳೆಲ್ಲ ಹಿಗ್ಗಿನ ಬುಗ್ಗೆಯಾಗಿ ತೋರಿದುವು. ಮನಸ್ಸಿಲ್ಲದ ಮನಸ್ಸಿನಿಂದ ಬಾಲಕನನ್ನು ಕೆಳಗಿಳಿಸಿ ಗಳೆ ಹೂಡಿ ಹೊಲ ಹರಗಲನುವಾದನು. ಬಾಲಕನು ತಂದೆಯನ್ನು ತಡೆದು, "ಅಪ್ಪಾ, ನೀನು ಇಷ್ಟುದಿನ ಹರಗಿ ಹರಗಿ ಹಣ್ಣಾಗಿ ಹೋಗಿರುವಿ. ಇನ್ನು ಎಷ್ಟುದಿನ ಹೀಗೆಯೇ ನವೆಯುವಿ? ಇದುವರೆಗಂತೂ ಯಾರೂ ಇದ್ದಿಲ್ಲ. ಈಗ ನಾನು ಬಂದಿರುವೆನಲ್ಲ? ನಾನಿದ್ದೂ ನೀನೇ ಹರಗುವುದು ಯಾವ ನ್ಯಾಯ? ಕಾರಣ, ಇಂದಿನಿಂದ ನಾನೇ ಹೊಲಗೆಲಸಗಳನ್ನೆಲ್ಲ ಮಾಡಿಕೊಂಡು ಹೋಗುವೆನು" ಎಂದು ಆದಯ್ಯನನ್ನು ಸರಿಸಿ ತಾನೇ ಬಂದು ಒಳ್ಳೆಯ ಒಕ್ಕಲಿಗನಂತೆ ಹರಗತೊಡಗಿದನು.

ಆದಯ್ಯನು ತನ್ನ ಕಣ್ಣುಗಳನ್ನು ತಾನೇ ನಂಬದಾದನು. ಮಿಂಚಿನ ವೇಗದಿಂದ ನಡೆದ ಈ ಅಘಟಿತ ಘಟನೆಗಳನ್ನು ಕಂಡು ನಿಬ್ಬೆರಗಾಗಿ ನಿಂತನು. ಇಷ್ಟು ಚಿಕ್ಕ ವಯಸ್ಸಿನ ಈ ಬಾಲಕನಿಗೆ ಇಷ್ಟುಬೇಕ ಅದೆಷ್ಟು ಮರುಕ ಹುಟ್ಟಿದೆ ತಂದೆಯ ಬಗ್ಗೆ? ಈ ವಯಸ್ಸಿಗೆ ಈ ವಿವೇಕ ಸಾಧ್ಯವೆ? ಎಷ್ಟು ಚನ್ನಾಗಿ ಹರಗುತ್ತಿರುವನಲ್ಲ! ಏನಿದಚ್ಚರಿ?" ಎಂದು ವಿಚಾರಿಸುತ್ತಿರುವಾಗಲೇ ಅವನಿಗೆ ಜೋಲಿ ಬಂದು ಮಲಗಿಬಿಟ್ಟನು. ಆನಂದದ ಅತಿರೇಕವದು. ಮಲಗುತ್ತಲೆ ಮೆಲ್ಲನೆ ಕಣ್ಣು ಮುಚ್ಚಿದುವು. ನಿದ್ರಾದೇವಿ ಅವನನ್ನು ತನ್ನ ತೊಡೆಯ ತೊಟ್ಟಿಲಲ್ಲಿಟ್ಟು ತೂಗಿದಳು.

ಆದರೆ ಆದಯ್ಯ ಬಹಳ ಹೊತ್ತು ಮಲಗಲಿಲ್ಲ. ಅವನ ಹೃದಯದ ಹಡಗ ಹಿಗ್ಗಿನ ಕಡಲಿನ ಮೇಲೆ ಎಡೆಬಿಡದೆ ಹೊಯ್ದಾಡುತ್ತಲೇ ಇದ್ದಿತು. ಆ ಹೊಯ್ದಾಟಕ್ಕೆ ನಿದ್ರೆಯ ಮುದ್ರೆಯನ್ನೊಡೆದು ಕಣ್ಣೆವೆಗಳು ತೆರೆದುವು. ಕಣ್ತೆರೆದು ನೋಡುತ್ತಾನೆ– ತಾನು ಅವೇ ಎತ್ತುಗಳಿಂದ ಹದಿನೈದು ದಿನ ಹರಗಿದರೂ ಮುಗಿಯದ ಹೊಲವನ್ನೆಲ್ಲ ಹದಿನೈದು ನಿಮಿಷಗಳಲ್ಲಿ ಹರಗಿ ಮುಗಿಸಿದ್ದ ಆ ಬಾಲಕ ! ಆದಯ್ಯನು ಆಶ್ಚರ್ಯಸಾಗರದಲ್ಲಿ ಮುಳುಗಿದನು. ಮಗನನ್ನು ಸೆಳೆದಪ್ಪಿ ಮುಂಡಾಡಿ 'ಎತ್ತುಗಳಿಗೆ ನೀರು ಕುಡಿಸಿಕೊಂಡು ಬಾ' ಎಂದು ಹೇಳಿದನು. ಹಾಗೆಯೇ ಆಗಲೆಂದು ಬಾಲಕನು ಎತ್ತುಗಳನ್ನು ಹೊಡದುಕೊಂಡು ಹೋದನು. ನೀರು ಕುಡಿಸಿಕೊಂಡು ಹಿಂದಿರುಗಿ ಬಂದಾಗ ಮೊದಲಿದ್ದ ಮುದಿ ಎತ್ತುಗಳು ಮಾಯವಾಗಿ ಹರೆಯದ ಹೋರಿಗಳಾದ್ದುವು!

ಆದಯ್ಯನು ಆ ಹೊಸ ಹೋರಿಗಳನ್ನು ನೋಡಿ ಇನ್ನಷ್ಟು ಆಶ್ಚರ್ಯಚಕಿತನಾದನು. ಆ ಬಾಲಕನು ತನ್ನ ಮುದಿ ಎತ್ತುಗಳನ್ನು ಎಲ್ಲಿಯೋ ಬಿಟ್ಟು ಇನ್ನೊಬ್ಬರ ಹೊಸ ಹೋರಿಗಳನ್ನು ಹೊಡೆದುಕೊಂಡು ಬಂದಿರಬಹುದೆ–ಎಂಬ ಸಂಶಯದಿಂದ, "ಮಗು, ನಮ್ಮ ಎತ್ತುಗಳನ್ನು ಎಲ್ಲಿ ಬಿಟ್ಟು ಬಂದೆ? ಇವರ ಹೋರಿಗಳು?

ಇವುಗಳನ್ನೇತಕ್ಕೆ ಇಲ್ಲಿಗೆ ತಂದೆ? ಅವುಗಳ ಒಡೆಯರು ನೋಡಿದರೆ ಏನೆಂದಾರು? ನಿನಗೇಕೆ ಇಂಥ ಬುದ್ಧಿ ಬಂದಿತು?" ಎಂದು ಕೇಳಿದನು.

ಆ ಬಾಲಕನು ಎಳ್ಳಷ್ಟೂ ಎದೆಗೆಡದೆ ಉತ್ತರವಿತ್ತನು "ಅಪ್ಪಾ, ಇವು ಅನ್ಯರ ಎತ್ತುಗಳಲ್ಲ, ನಮ್ಮ ಎತ್ತುಗಳೇ."

"ಇವು ಹೇಗೆ ನಮ್ಮವಾಗುವುವು? ನಮ್ಮವು ಮುದಿ ಎತ್ತುಗಳು. ಇವಾದರೋ ಉಕ್ಕಿಹರಿವ ಹೋರಿಗಲು."

"ಹಾಗಲ್ಲ ತಂದೆ, ಆ ಮುದಿ ಎತ್ತುಗಳೇ ಮತ್ತೆ ಹರೆಯದ ಹೋರಿಗಳಾಗಿವೆ."

"ಅದು ಹೇಗೆ?"

"ಮುಂದೆ ಕಾಣುವ ಕೆರೆಯಲ್ಲಿ ಒಂದು ಗುಂಡವಿಲ್ಲವೆ?"

"ಇದೆ"

"ಅದರ ನೀರು ಕುಡಿಯುತ್ತಲೇ ನಮ್ಮ ಮುದಿ ಎತ್ತುಗಳೇ ಹರೆಯದ ಹೋರಿಗಳಾಗಿ ಮಾರ್ಪಟ್ಟುವು."

"ಇದು ಎಂದೂ ಆಗದ ಮಾತು. ಇದು ನಿಜವಾದುವೆಂಬುದನ್ನು ಸಿದ್ಧಮಾಡಿ ಕೊಡು ನಡೆ."

ಆದಯ್ಯನು ಆ ಬಾಲಕನೂ ಹೊರಟು ಆ ಗುಂಡದ ಸಮೀಪಕ್ಕೆ ಬಂದರು. ಏನೊಂದೂ ಅನುಮಾನವನ್ನು ತೋರಿಸದೆ ಬಾಲಕನೆಂದನು, "ಅಪ್ಪಾ, ಇದೇ ಆ ಗುಂಡ. ಇದರ ನೀರನ್ನು ಕುಡಿಯುತ್ತಲೇ ಮುದಿ ಎತ್ತುಗಳು ಹೋರಿಗಳಾದುವು."

"ಇದೇನು ನಾನು ನೋಡದ ಗುಂಡವೆ? ಇದರ ಈ ಶಕ್ತಿ ಎಂದಿನಿಂದ ಬಂದಿತು?"

"ಸುಮ್ಮನೆ ಸಂಶಯವೇಕೆ? ನೀನೂ ಈ ನೀರು ಕುಡಿದುನೋಡು!"

ಮರುಮಾತನಾಡದೆ ಆದಯ್ಯನು ಆ ಗುಂಡದ ನೀರನ್ನು ಕುಡಿದನು. ಮತ್ತೊಂದು ಅದ್ಭುತ ಜರುಗಿತು. ಅವನೂ ಮುಪ್ಪನ್ನು ಕಳೆದೊಗೆದು ನವ ಯೌವನವನ್ನು ಆಲಿಂಗಿಸಿದ್ದನು ! ಈಗ ಅವನಿಗೆ ಅದೆಲ್ಲ ಶಿವನ ಮಹಿಮೆಯೆಂದೂ ಆ ಬಾಲಕನು ಶಿವನ ಬೆಸನದಿಂದ ಭುವಿಗೆ ಬಂದ ಕಾರಣಿಕ ಕುಮಾರನೆಂದೂ ಮನವರಿಕೆಯಾಯಿತು. "ಶಿವಶಿವಾ, ಆಯುಷ್ಯವೆಲ್ಲಾ ಶಿವಭಕ್ತನಾಗಿ ಕಳೆದರೂ ಶಿವಲೀಲೆಯನ್ನು ಗುರುತಿಸಲು ಇಷ್ಟು ತಡವಾಯಿತಲ್ಲ ! ಹದಿನೈದು ದಿನಗಳಲ್ಲಿ ಹರಗುವ ಹೊಲವನ್ನು ಹದಿನೈದು

ನಿಮಿಷಗಳಲ್ಲಿ ಈ ಎಳೆಯ ಬಾಲಕನು ಹರಗಿದಾಗಲೇ ಹರನ ಕರುಣಾ ವಿಶೇಷವದೆಂದು ನಾನು ತಿಳಿದುಕೊಳ್ಳಬೇಕಾಗಿದ್ದಿತು.ಮುದಿ ಎತ್ತುಗಳು ಹೋರಿಗಳಾಗಿ ಹಿಂದಿರುಗಿದಾಗಲಾದರೂ ತಿಳಿದುಕೊಳ್ಳಬೇಕಾಗಿದ್ದಿತು. ಆಗಲೂ ಸಂಶಯತಾಳಿ ನನ್ನ ಮೇಲೆಯೇ ಶಿವಭಕ್ತಿಯ ಪ್ರಯೋಗವಾಗುವವರೆಗೆ ಸಂದೇಹಪಟ್ಟ ಪಾಪಿ ನಾನು" ಎಂದು ಪರಿತಪಿಸುತ್ತಿರುವಾಗಲೇ ಆದಯ್ಯನ ಹೆಂಡತಿ ಮಾಳಗುಂಡಮ್ಮನು ಬುತ್ತಿಯನ್ನು ಹೊತ್ತುಕೊಂಡು ಹೊಲಕ್ಕೆ ಬಂದಳು.

ಅವಳಿಗೆ ತಮ್ಮ ಹೊಲದಲ್ಲಿ ಆ ಹರೆಯದ ಆದಯ್ಯ, ಅರಿಯದ ಬಾಲಕ, ಹರೆಯದ ಹೋರಿಗಳು ಬೀಡು ಬಿಟ್ಟಿರುವುದನ್ನು ಕಂಡು ಸೋಜಿಗವೆನಿಸಿತು. "ಆದಯ್ಯನೆಲ್ಲಿ?" ಎಂದು ಆದಯ್ಯನನ್ನೇ ಕೇಳಿದಳು. ಆದಯ್ಯನು ನಕ್ಕು ನಡೆದ ಅದ್ಭುತಗಳಲನ್ನೆಲ್ಲ ವಿವರಿಸಿ ಅವಳಿಗೂ ಗುಂಡದ ನೀರು ಕುಡಿಸಿದನು. ಆವಳೂ ತರುಣಿಯಗಿ ಮೆರೆದಳು. ಆದಯ್ಯ ಮಾಳಗುಂಡಮ್ಮರು ಆನಂದ ಭರಿತರಾಗಿ ಇದೆಲ್ಲ ಈ ಬಾಲಕನ ಪ್ರಭವದಿಂದಲೇ ಸಾಧ್ಯವಾಯಿತೆಂದು ಅವನನ್ನು ಅಪ್ಪಲು ಮುಂದಾದರು. ಆಗ ಆ ಬಾಲಕನು ಅವರ ಕೈಗೆ ಸಿಕ್ಕದೆ, "ನಾನಿಲ್ಲಿಯೇ ವಾಸಮಾಡುವೆನು ; ನನಗೆ ಇಲ್ಲಿಯೇ ಚೆನ್ನಾಗಿದೆ" ಎನ್ನುತ್ತ ಆ ಗುಂಡದ ಬಳಿಯಲ್ಲಿದ್ದ ಮಳಲಿನಲ್ಲಿ ಇಳಿಯತೊಡಗಿದನು. "ಆಯ್ಯೋ ಬಾಲಕನು ಮಳಲಿನಲ್ಲಿ ಮುಳುಗಿ ಹೋತುವನು" ಎನ್ನುತ್ತ ಸತಿಪತಿಗಳಿಬ್ಬರೂ ಆ ಬಾಲಕನನ್ನು ಉಳಿಸಿಕೊಳ್ಳಲು ಮುಂದಾದರು. ಬಾಗಿ ಮಳಲಿನಲ್ಲಿ ಮುಳುಗುತ್ತಲಿದ್ದ ಬಾಲಕನನ್ನು ಹಿಡಿದೆತ್ತಹೋದರು. ಆದರೆ ಅವರ ಕೈಗೆ ಆ ಬಾಲಕನ ಕೂದಲು ಕೂಡ ಅಮರಲಿಲ್ಲ. ಅಷ್ಟರಲ್ಲಿಯೇ ಅಲ್ಲಿ ಶಿಲಾರೂಪನಾಗಿ ಮೈದೋರಿದ್ದನು. ಆದಯ್ಯ ಗುಂಡಮ್ಮರ ಕೈಗೆ ಅಮರನಾದ ಆ ಬಾಲಕನು ಅಮರೇಶ್ವರಲಿಂಗವಾಗಿ ಶೋಭಿಸಿದನು.

ನಾನೀನೆನ್ನುವುದರೊಳಗಾಗಿ ಈ ಸುದ್ದಿ ಸುತ್ತಲು ಹಬ್ಬಿತು. ವಿಕಾಲಾಂಗರೂ ರೋಗಿಗಳೂ ವೃದ್ಧರೂ, ಸಂಸಾರವಿದಗ್ಧರೂ ಗುಂಪುಗುಂಪಾಗಿ ದೇವರ ದರ್ಶನಕ್ಕೆ ಧಾವಿಸಿದರು. ಅಲ್ಲಿ ಗುಂಡದಲ್ಲಿ ಮುಳುಗಿ ಎದ್ದು ತಾರುಣ್ಯವನ್ನು ಲಾವಣ್ಯವನ್ನೂ ಪಡೆದು ಮರಳಿದರು. ಅಂದಿನಿಂದ ಇಂದಿನವರೆಗೂ ಈ ಕ್ಷೇತ್ರವು ಮುಮುಕ್ಷುಗಳಿಗೆ ಪವಿತ್ರ ಯಾತ್ರಾಸ್ಥಾನವಾಗಿ ಉಳಿದಿದೆ.

■

# ಮೂವರು ಮಹಾನುಭಾವರು

ಹದಿನೇಳನೆಯ ಶತಮಾನದ ಉತ್ತರಾರ್ಧ ಮತ್ತು ಹದಿನೆಂಟನೆಯ ಶತಮಾನದ ಪೂರ್ವಾರ್ಧದಲ್ಲಿ ಮೂವರು ಮಹಾನುಭಾವರು ಉದಯಿಸಿ ಕನ್ನಡ ನಾಡಿನ ಪುಣ್ಯ ಪುರುಷರಾಗಿ ಪ್ರಕಾಶಿಸಿದರು. ಅವರೇ ಸಾವಳಗಿಯ ಶಿವಲಿಂಗೇಶ್ವರ, ಅರಭಾವಿ ದುರದುಂಡೀಶ್ವರ ಮತ್ತು ಮಹಾಲಿಂಗಪುರದ ಮಹಾಲಿಂಗೇಶ್ವರರು. ಇವರಲ್ಲಿ ಅರಭಾವಿ ದುರದುಂಡೀಶ್ವರರೂ ಮಹಾಲಿಂಗಪುರದ ಮಹಾಲಿಂಗೇಶ್ವರರೂ ಸಮಕಾಲೀನರು, ಸಹಪಾಠಿಗಳು. ಇಬ್ಬರೂ ಢಪಳಾಪುರೀಕ್ಷೇತ್ರದ ಶಿವಯೋಗಿ ಗುರುಲಿಂಗಾರ್ಯರಲ್ಲಿ ಶಿವಾನುಭವವನ್ನು ಅರಿತವರು. ಸಾವಳಗಿಯ ಶಿವಲಿಂಗೇಶ್ವರರೂ ಇವರ ಸಮಕಾಲೀನರೆಮದೇ ತೋರುತ್ತದೆ. ಮುತ್ತಿಗಿ ಖಾನಾಪುರವನ್ನು ಶ್ರೀ ಶಿವಲಿಂಗೇಶ್ವರರಿಗೆ ಸಮರ್ಪಿಸಿ ಅದರ ಸಮೀಪದ ಎತ್ತರದ ಸ್ಥಾನದಲ್ಲಿ ಅವರ ಅನುಷ್ಠಾನಕ್ಕೆ ಮಠವನ್ನು ಕಟ್ಟಿಸಿಕೊಟ್ಟ ಗೋಕಾವಿ ಪರಗಣೆ ಕುರುಬೆಟ್ಟದ ನಾಡಗೌಡ ಮುಷ್ಠಗಿ ದೊರೆ ಸಿದ್ಧರಾಮನಾಯಕ ಮತ್ತು ಅವರ ಸತಿ ಶಿವಭಕ್ತಿ ಸಂಪನ್ನೆ ಸೌ॥ ರಮಾಬಾಯಿ ದೇಸಾಯಿಣಿಯರೇ ಅರಭಾವಿಯ ಶ್ರೀ ಶಿವಲಿಂಗೇಶ್ವರ ಮುನಿನಾಥರನ್ನೂ ತಮ್ಮ ಕುರುಗಿರಿಯ ಅರಮನೆಗೆ ಕರೆದೊಯ್ದು ಆರಾಧಿಸಿದಂತೆ ಬಸವ ಕವಿಕೃತ ದುರದುಂಡಿ ಮಹೇಶ್ವರ ಪುರಾಣದಲ್ಲಿ ಹೇಳಿದೆ. ಹೀಗೆ ಈ ಮೂವರೂ ಹೆಚ್ಚು ಕಡಿಮೆ ಸಮಕಾಲೀನರಾಗಿ ಜನಕಲ್ಯಾಣವನ್ನು ಗೈದರೆಂದು ಹೇಳಬಹುದು.

ಇವರಲ್ಲಿ ಮಹಾಲಿಂಗ ಮುನಿನಾಥನು ಗೌಳ, ದ್ರಾವಿಡ ಮೊದಲಾದ ದೇಶಗಳನ್ನು ಸಂಚರಿಸುತ್ತ, ಕಾಶಿ, ರಾಮೇಶ್ವರ, ಅರುಣಾದ್ರಿ, ಶಿವಗಂಗೆ, ಉಳಿವೆ, ಗೋಕರ್ಣ ಮೊದಲಾದ ಶಿವಕ್ಷೇತ್ರಗಳನ್ನು ಸಂದರ್ಶಿಸುತ್ತ ಗಾರ್ಘ್ಯ ತಟಿನೀ ತಟದಲ್ಲಿ ತಟ್ಟೇಶ್ವರಲಿಂಗವನ್ನೂ ಗೋರಕ್ಷ ಪಟ್ಟಣದಲ್ಲಿ ಗೋಳಕೇಶ್ವರ ಲಿಂಗವನ್ನೂ ಸ್ಥಾಪಿಸಿ ದಂಡಕಾರಣ್ಯಕ್ಕೆ ಬಂದು ಅಲ್ಲಿ ಕೆಲದಿನ ತಪವಿದ್ದು ಢಪಳಾಪುರೀಕ್ಷೇತ್ರಕ್ಕೆ ಬರುತ್ತಾನೆ. ಶ್ರೀ ಶಿವಲಿಂಗೇಶ್ವರ ಯತೀಶ್ವರರೂ ಲಾಳ, ಮಾಳವ, ನೇಪಾಳ, ಘೂರ್ಜರ, ತುರುಗಾಣ್ಯ, ಕಾಂಭೋಜ, ಕಾಶ್ಮೀರ, ಹಮ್ಮೀರ, ಮಾಗಧಿ, ಲಾಟ, ಘೋಟಕ,

ಬರ್ಬರ ಬಂಗಾಲ, ಪಾಂಚಾಲ, ಕಾಳಿಂಗ ದ್ರಾವಿಡ, ತುಳುವ, ಮಲೆಯಾಳ, ಕುಂತಳಗಳಲ್ಲಿ ಸಂಚರಿಸಿ, ಕಾಶಿ, ರಾಮೇಶ್ವರ, ಶ್ರೀಶೈಲ, ಪೊನ್ನಾಂಬಲ, ಕಾಂಚಿ, ಗೋಕರ್ಣ, ಕೇದಾರ, ಪಂಪಾಕ್ಷೇತ್ರ, ಶಿವಗಂಗೆ, ಕಾಳಹಸ್ತಿ, ಸೌರಾಷ್ಟ್ರಾದಿ ಹರಕ್ಷೇತ್ರಗಳನ್ನು ಸಂದರ್ಶಿಸಿ, ಅರುಣಾಚಲೇಶ್ವರನ ನಿರೂಪದಂತೆ ಢಪಳಾಪುರಕ್ಕೆ ಬರುತ್ತಾರೆ.

ಇಂತು 'ಪಂಚಕೃತ್ಯಾಧೀಶ, ಪಂಚೇಂದ್ರಿಯಾತೀತ, ಸಂಚಿತಾಗಾಮಿ ಪ್ರಾರಬ್ಧ ಕರ್ಮಹರ, ಪಂಚಮುದ್ರಾಧೀಶ, ಪಾವನಾಂಗ ಮಹೇಶ, ಪಾಪಾಳಿವನ ಪಾಲಕ, ಪಂಚಾಸ್ತ, ಮದಲೋಪ, ಪಂಚಾಕ್ಷರಾಕಾರ, ಪಂಚತತ್ವಾತೀತ' ಗುರುಪುಂಗವ ಗುರುಲಿಂಗಯೋಗಿಗಳಲ್ಲಿ ಶಿವಲಿಂಗ ಮಹಾಲಿಂಗರ ಲಿಂಗಾಂಗ ಸಾಮರಸ್ಯ–ಸಿದ್ಧಾಂತಾಧ್ಯಯನ ಪ್ರಾರಂಭವಾಯಿತು. ಗುರುಲಿಂಗ ವಿಭುಗಳಿಗೆ 'ಎತ್ತಣಿಂ



**ಅರಭಾವಿ ದುರದುಂಡೀಶ್ವರರು**

ಮಹಲಿಂಗನಾಗಮವು, ಎತ್ತಣಿಂ ಶಿವಲಿಂಗ ಜಂಗಮನ ಬರುವು' ಎಂದು ಕೌತುಕವೆನಿಸಿತು. ಎಲ್ಲವೂ ಶಿವನಾಜ್ಞೆಯೆಂದು ಭಾವಿಸಿ ಬಲ್ಲಂತಗೆ ಆ ಶಿವಾಂಶಕರಿಬ್ಬರಿಗೂ ಶಿವಾನುಭವೋಪದೇಶವನ್ನಿತ್ತರು. ಅವರ ಸದ್ಬೋಧ ಚಂದ್ರಿಕೆಯನ್ನು ಕುಡಿದು ಮಹಲಿಂಗ ಶಿವಲಿಂಗರ ಚಿತ್ತಚಕೋರಗಳು ತಣಿದುವು. ಅವರ ಅಂಗಗಳು ಲಿಂಗಮಯವಾದುವು, ಕರಣಂಗಳೆಲ್ಲ ಲಿಂಗಕರಣಂಗಳಾದುವು. ಜೀವಭಾವವಳಿದು ದೇವಭಾವ ಬೆಳೆಯಿತು. ಇಂತು ಕೆಲದಿನಗಳು ಕಳೆಯಲು ಇಬ್ಬರೂ ಗುರುಲಿಂಗ ಗುರುಗಳ ಚರಣಗಳಿಗೆರಗಿ ಬಿನ್ನವಿಸಿದರು.

> "ನಿರುಪಮ, ನಿರಾಲಂಬ, ನಿಗಮಾಗಮಾತೀತ,
> ನಿರಭ, ನಿರಹಂಕಾರ, ನಿರ್ಮಲ, ನಿರಾತಂಕ,
> ನಿರಪೇಕ್ಷೆ, ನಿರ್ಮಾಯ, ನಿರ್ಭೇದ, ನಿರ್ಜಾತ, ನಿರ್ಲಕ್ಷ, ನಿರುಪಾಧಿಕ
> ಶರಣ ಜನ ಸಂತಾನ"

ಗುರುಲಿಂಗ ಗುರುವರ, ನಿಮ್ಮ ಚರಣಾಂಬು ಶೇಷಗಳನ್ನು ಪಡೆದು ಪುನೀತರಾದೆವು ನಾವು. ಅವಿರಳಾನಂದದಿಂ ನುಡಿದ ನುಡಿಯೆಮಗೆ ಮಂತ್ರವಾಯಿತು. ತಮ್ಮ ನಡೆಯೆಮಗೆ ಶಿವತಂತ್ರವಾಯಿತು, ನಾವು ಧನ್ಯವಾದೆವು."

ಗುರುನಾಥ ಗುರುಲಿಂಗರು ಉತ್ತರವಿತ್ತರು: "ನೀವಿಬ್ಬರೂ ಸ್ವಯಂಸಿದ್ಧರು. ನಾನು ನಿಮಿತ್ತಮಾತ್ರಕ್ಕೆ ಗುರು. ನಿಮಗೆ ಯಾರ ಉಪದೇಶವೂ ಬೇಕಿಲ್ಲ. ನಾರಿಕೇಳಂಗಳೊಳು ಅಮೃತಮಂ ಎರೆಪರಾರು? ಕ್ಷೀರದೊಳು ಮಧುರಮಂ ಬೆರೆಸುವವರಾರು? ಸಾರ ಕಸ್ತೂರಿಯೊಳು ಕಂಪುಮಂ ಸೇರಿಸುವರಾರು? ನಿಮಗೆ ಶಿವತತ್ತ್ವೋಪದೇಶವನ್ನು ಮಾಡುವವರಾರು?"

"ಹಾಗೆನ್ನದಿರಿ ಗುರುವರ ! ತಮ್ಮ ಚರಣ ಸೋಂಕಿ ನಮ್ಮ ಕರಣವರಳಿದುವು. ನಾವಿನ್ನು ಶಿವನಾಜ್ಞೆಯಂತೆ ಭುವಿಜೀವಿಗಳ ಸೇವೆಗಾಗಿ ಹೊರಡುತ್ತೇವೆ. ನಾವೆಲ್ಲಿದ್ದರೂ ತಮ್ಮ ಆಶೀರ್ವಾದವೆಮ್ಮ ರಕ್ಷಾಕವಚವಾಗಿರಲಿ!"

"ಮಹಾಲಿಂಗ ಶಿವಲಿಂಗರೆ, ಕತ್ತಲೆಗೆ ದಿನಪ ಮುಂಗಾಣದಿರೆ ಸತ್‌ಪ್ರಭೆಯ ಬಿತ್ತರದಿ ತೋರ್ಪರಾರು? ಮರುತನು ಉಬ್ಬಸದಳೆಯೆ ವ್ಯಜನವಾತದಿ ಬೀಸಿ ತಾಪವುಂ ಪರಿಹರಿಪರಾರು? ಗರಳದಿಂ ಗರುಡನ ಅಸುವಳಿಯೆ ಮಂತ್ರಸುವವರಾರು? ನಿಮಗೆ ಸಂದೆಗ ಬಂದರೆ ಮಾರ್ಗದರ್ಶನ ಮಾಡುವವರಾರು? ನೀವು ನರ ಕುರುಗಳಲ್ಲ, ಶಿವನ ಮದಕರಿಗಳು ! ನಿಮಗೆ ದಾರಿ ತಪ್ಪುವ ಭಯವೇ ಇಲ್ಲ. ಹೊರಡಿರಿನ್ನು ಹರನಾಜ್ಞೆಯನ್ನು ಪೂರೈಸಲು. ನಿಮಗೆ ಜಯವಾಗಲಿ !"

ಮನಸ್ಸಿಲ್ಲದ ಮನಸ್ಸಿನಿಂದ ಗುರು ಸನ್ನಿಧಿಯನ್ನು ತೊರೆದು ಹೊರಟರು ಆ ಜಂಗಮಪುಂಗವರು–ಕಲಿಯುಗದ ಕರ್ಮಾಂಧಕಾರವನ್ನು ಕಳೆಯುತ್ತ, ತುಳಿದ ನೆಲವನ್ನು, ಮುಟ್ಟಿದ ಜಲವನ್ನು ಕ್ಷೇತ್ರ ತೀರ್ಥಗಳನ್ನಾಗಿ ಪರಿವರ್ತಿಸುತ್ತ, ಕಂಡ ಜನರನ್ನು ಭಕ್ತರನ್ನಾಗಿ ಮಾಡುತ್ತ, ಮುಂದೆ 'ವಿಪುಲ ಕರ್ನಾಟಕದ ಪುಣ್ಯಮಯ ರಸದಂತೆ , ಎಸೆವ ಕೃಷ್ಣಾನದಿ ಕಾಣಿಸಿತು.

"ಎಡೆವಿಡದೆ ಸಾಗುತಿಹ ತೆರೆಗಳಿಂದ ನೊರೆಗಳಿಂ
ದಡಿಗಡಿಗೆ ಸಿಡಿದೇಳ್ವ ಕಣಗಳಿಂದ ಫಣಿಗಳಿಂ
ಬಿಡದಿರ್ಪ ಜಂತುಗಳ ಕೂರ್ಮೆಯಮ ಪೇರ್ಮೆಯಿ
ದಿಡಿದಂಬುಜದ ಸೊಂಪಿನಿಂ
ತಡಿವಿಡಿದು ಬೆಳೆದಿರ್ದ ಗಿಡಗಳಿಂದ ಮಡುಗಳಿಂ
ಕಡುರಮ್ಯಮಾಗಿ ಮೃಡರೂಪರಿಗೆ ಭಕ್ತಿಯಿಂ
ಪೊಡವುಡುವುದೆಂಬಂತೆ ಕಂಗೆಡ್ಡ"ಮಾದ

ಕೃಷ್ಣಾನದಿಯ ಹೆಸರುಗೊಂಡರೆ ಸಾಕು, 'ಬಾಡುವುವು ಭವಲತಾ ಮೂಲಗಳು!' ಆ ನದಿಯ ನೋಡಿದೊಡೆ ದೋಷಂಗಳೋಡುವುವಂತೆ, ಮುಟ್ಟಿದೊಡೆ ಮುನ್ನ ಮಾಡಿರ್ದ ಪಾಪಗಳು ಲೋಪವಾಗುವುವಂತೆ, ಅದರಲ್ಲಿ ಈಸಾಡಿದೊಡೆ ಏಸೊ ಜನ್ಮಗಳ ದುರಿತಾಳಿಗಳು ಕರಿಗಿಹೋಗುವುವಂತೆ!

ಅಂಥ ಪಾವನ ಕೃಷ್ಣೆಯಲ್ಲಿ ಮಿಂದು ಲಿಂಗಾರ್ಚನೆಯನ್ನು ಮುಗಿಸಿ ಇಬ್ಬರೂ ತೇರದಾಳಿಗೆ ಹೋಗುತ್ತಾರೆ. ಅಲ್ಲಿ ಅಲ್ಲಮಪ್ರಭುವಿನ ಕರುಣವನ್ನು ಕೋರುತ್ತಾರೆ. ಅವರಿಗೆ ಅಲ್ಲಮಪ್ರಭುವಿನ ದರ್ಶನವಾಗಿ 'ಎಚ್ಚರಡಗಿದ ಮಹಾ ನಂದಾಬ್ಧಿ ಹೆಚ್ಚುತ್ತದೆ. ಅಲ್ಲಮನ ಆಜ್ಞೆಯಂತೆ ಮಹಾಲಿಂಗ ಮುನಿನಾಥನು ಚನ್ನಗಿರಿಗೂ ಶಿವಲಿಂಗ ಯತಿಪತಿಯು ಕುರುಕ್ಷೇತ್ರಗಿರಿಗೂ ಹೊರಡುತ್ತಾರೆ.

"ಅಲ್ಲಮನು ಸೂಚಿಸಿದ ಮಾಳ್ಕೆಯಿಂ ಚನ್ನಗಿರಿ
ಯಲ್ಲಿ ನೆಲೆಸಿರ್ಪುದೇ ಶಿವನಾಜ್ಞೆ ನಿಮಗಿನ್ನು
ಸಲ್ಲುವ ಕುರುಕ್ಷೇತ್ರ ಗಿರಿಯಲ್ಲಿ ನಾವಿನ್ನು ಸಂತೋಷದಿಂದಿರ್ಪೆವು"

ಎಂದು ಶಿವಲಿಂಗ ಶಿವಯೋಗಿಗಳು ನುಡಿಯಲು ಮಹಾಲಿಂಗ ಮುನಿಗಲು ಚನ್ನಗಿರಿಗೆ ತೆರಳುತ್ತಾರೆ. ಶಿವಲಿಂಗ ಶಿವಯೋಗಿಗಳು ವಿಟಪಾ ನದೀತೀರದ ಕುರುಶೈಲಕ್ಕೆ ತೆರಳುತ್ತಾರೆ.

ಆಮೇಲೆ ಅವರಿಬ್ಬರ ಜೀವನವೂ ಸಮಾನಂತರ ರೇಖೆಗಳಂತೆ ಸಾಗುತ್ತ ಮಹಾಲಿಂಗ ಯೋಗಿಗಳು 'ಎಡಬಲದೊಳೊಪ್ಪುತಿಹ ಜರಿಗಳಿಂ, ದರಿಗಳಿಂ. ಬಿಡದೆ ಕಂಗೊಳಿಸಿರ್ದ ಮರೆಗಳಿಂ, ಅರೆಗಳಿಂ ಕಡುರಮ್ಯವಾದ ಪೆರ್ಗಿಡುಗಳಿಂ ಜಡುಗಳಿಮ, ಸಂತತಂ ಪರಿದೊಪ್ಪುವ ಎಡೆವಿಡದ ನಿರ್ಝರದ ವಾರಿಯಿಂ ಧಾರಿಯಿಂ, ತೊಡಕಿಂದ ಬಳ್ಳಿಗಳ ಸೊಂಪಿನಿಂದ ತಂಪಿನಿಂ'ಮೆರೆವ ಚನ್ನಗಿರಿಯಲ್ಲಿ ಯೋಗಸ್ಥನಾಗಿ,

"ಪಂಚೇಂದ್ರಿ ವಿಷಯಗಳನತಿಗಳೆದು ಶೀಘ್ರದಿಂ
ಮುಂಚುವ ದಶೇಂದ್ರಿಯದ ಸಂಚಲವ ನೆರೆಮುರಿದು
ಸಂಚಿತುಪಕಾಂಕ್ಷೆಗಳನೀಡಾಡಿ ಶ್ರೀಯೋಗಿ ಗುರುನಾಥನಂ ಧ್ಯಾನಿಸಿ
ಮಿಂಚುತಿಹ ಮಲತ್ರಯವ ಮುನ್ನವೇ ಕೀಳ್ಪಡಿಸಿ
ಸಂಚಿತಾಗಾಮಿ ಪ್ರಾರಬ್ಧಗಳ ಕಡೆ ನೊಂಕಿ
ಮಿಂಚುವ ಮಹಾಬೆಳಗು"

ತಾನಾಗುತ್ತಾನೆ. ಆತ್ತ ಶಿವಲಿಂಗ ಶಿವಯೋಗಿಗಳು ಮೊರೆಹೊಕ್ಕ ಭಿಲ್ಲರನ್ನುದ್ಧರಿಸಿ, ಕುರುಬೆಟ್ಟದ ಸಿದ್ಧರಾಮೇಂದ್ರ ದೊರೆಯ ಬಿನ್ನಹದಂತೆ ಅವನ ಅರಮನೆಗೈದಿ ಅವನ ಭಕ್ತಿಯನ್ನು ಸ್ವೀಕರಿಸಿ ಓರ್ವ ವಿಪ್ರಾಂಗನೆಯ ತನಯನನ್ನು ಬದುಕಿಸಿ, ಅರಭಾವಿ ಕ್ಷೇತ್ರದಲ್ಲಿ ನಿರ್ಮಾಯರಾಗಿ ನೆಲಸುತ್ತಾರೆ.

ಆತನಂಘ್ರಿಯ ಭಜಿಸಿ ಧನ್ಯರಾಗದರಿಲ್ಲ
ಖ್ಯಾತನುರುಲೀಲೆಯಂ ಬಣ್ಣಿಸದರಿಲ್ಲ ಮ
ತ್ತಾತನ ಸುಕೀರ್ತಿಯಂ ವಾರ್ತೆಯಂ ಲಾಲಿಸದರಿಲ್ಲ
ಪೂತ, ವಿಖ್ಯಾತ, ನಿರ್ಜಾತನೆಂದೆನಿಸಿ ಮೆರೆದಿರ್ದನಾತ.

ನರಕಾಲವಾಲದ ನಾಗಾಖ್ಯ ಭಕ್ತಕುಲದೀಪಕನ, ಅವನ ಸತಿ 'ಪುಣ್ಯಮಾರ್ಗ ವಿಹಾರೆ, ಕರುಣಾಂಬುರಸಪೂರೆ, ನಿರುತ ಚಿದ್ರಸಪೂರೆ, ಸುಗುಣಮನಿಗಣಹಾರೆ ಮುಪ್ಪಿನ ಮಹಾತಾಯಿ'ಯರ ಭಕ್ತಿ 'ತನು ಧರ್ಮಗಳ ಮೀರಿ, ತಾಮಸವ ನೆರೆ ತೂರಿ, ಮನದ ಮಾಯವ ಮೀತಿ, ಮಲತ್ರಯಂಗಳ ಕೇರಿ, ಜನನ ಮರಣವ ಮೆಟ್ಟಿ, ಕಾಲಕರ್ಮವ ಕುಟ್ಟಿ ಮಿನುಪ' ಮಹಾಲಿಂಗದೇವರನ್ನು ಕರೆದೊಯ್ದರೆ ಕುರುಶೈಲಹಟ್ಟಿಯ ಶಿವಭಕ್ತಿ ಸಂಜೀವನೆ, ಸುವಿಚಾರಸಂಚಾರೆ ರುದ್ರಾಣಿ, ಅವಳ ಪತಿ ಚಿದ್ರಸಾಮೃತಹಂಸ ಬಸವಾಂಕರ ಭಕ್ತಿ ಶಿವಲಿಂಗ ಶಿವಯೋಗಿಯನ್ನು ಕುರುಹಟ್ಟಿಗೆ ಕರೆದೊಯ್ಯುತ್ತದೆ; ಮುಧೋಳ ಸಂಸ್ಥಾನದ ಅಧಿಪತಿಯಾದ ಮಾಲೋಜಿ ರಾಜನನ್ನು ಶ್ರೀ ಮಹಾಲಿಂಗದೇವರು ಉದ್ಧರಿಸಿದರೆ,



**ಮಹಲಿಂಗೇಶ್ವರರು ಗಂಗಾಂಬೆಯ ಬಾಲಕನನ್ನು ಬದುಕಿಸಿದರು–ಅವರು ಇಂತಹ ಮಹಿಮೆಗಳು ಅನೇಕ**

ಟೀಪುಸುಲ್ತಾನನಿಂದ ಸೆರೆಹಿಡಿಯಲ್ಪಟ್ಟು ನಳದುರ್ಗದಲ್ಲಿ ಬಂಧಿತನಾಗಿದ್ದ ಕಿತ್ತೂರ ಭೂಪಾಲ ಮಲ್ಲಸರ್ಜನನ್ನು ಶ್ರೀ ಶಿವಲಿಂಗಯೋಗಿಗಳು ಉದ್ಧರಿಸುತ್ತಾರೆ ; ಮಹಾಲಿಂಗದೇವರು ಚೆನ್ನಗಿರಿಯ ನೆರೆಯಲ್ಲಿ ಭಕ್ತಮಣಿಗಳಾದ ನಾಗಪತಿ, ತೊಂಡಿಕಟ್ಟಿ ಬಸವಪ್ಪಯ್ಯ, ಎಡವಣ್ಣ ಮೊದಲಾದವರಿಂದ ರಾಮಲಿಂಗೇಶ್ವರ ದೇವಾಲಯವನ್ನು ಕಟ್ಟಿಸಿದರೆ ಶಿವಲಿಂಗದೇವರು ಭಕ್ತಗಿರಿವಾಗಿ ಮಲಕಾಖ್ಯನಿಂದ ಕೊಟ್ಟೂರ ಬಸವೇಶ್ವರನ ಮಂದಿರವನ್ನು ಕಟ್ಟಿಸುತ್ತಾರೆ; ಸುಟರಟ್ಟೆ ಹಳ್ಳಿಯ ಶಿವಭಕ್ತ

ಗಂಗಾಖ್ಯನು ಮಾಡಿದ ಗಣಾರಾಧನೆಯಲ್ಲಿ ಮಾಡಿದ ಅಡಿಗೆ ಸಾಲದಿರಲು ಮಹಾಲಿಂಗದೇವನು ತನ್ನ ನಿಜ ಹಸ್ತಸ್ಪರ್ಶದಿಂದ ಅದು ಸರ್ವರಿಗೂ ಸಾಲುವಂತೆ ಮಾಡಿದರೆ, ಮಮಕಾರದಿಂದ ಮಾಡಿದ ಮಲಕಾಖ್ಯನ ಗಣಾರಾಧನೆಯ ಅಡಿಗೆ ಸಾಲದಂತೆ ಮಾಡಿ ಅರಭಾವಿಯ ಹಸಿಬಿ ಗುರುಭಕ್ತನ ಅಂಬಲಿ ಮಜ್ಜಿಗೆ ತರಿಸಿ ಸರ್ವರೂ ಸಂತೃಪ್ತರಾಗುವಂತೆ ಶಿವಲಿಂಗದೇವರು ಮಾಡುತ್ತಾರೆ; ಮಾಲೋಜಿರಾಜನ ತಮ್ಮನಾದ ಸಕರೋಜಿಗೆ ಮಹಾಲಿಂಗದೇವರು ಶ್ರೀ ವಿಷ್ಣುಮೂರ್ತಿಯಾಗಿ ತೋರಿ ಅವನ ಶಿವದ್ವೇಶವನ್ನು ತವಿಸಿದರೆ ಶಿವಲಿಂಗದೇವರು ಚಿದಂಬರ ದೀಕ್ಷಿತರಿಗೆ ಹರಿಹರ ರೂಪವನ್ನು ತೋರಿ ಸನ್ಮತಿ ನೀಡುತ್ತಾರೆ. ಹೀಗೆ ಅವರಿಬ್ಬರ ಜೀವನಗಳಲ್ಲಿಯೂ ಅನೇಕ ಸಾಮ್ಯಗಳಿವೆ. ಇಬ್ಬರೂ ಮಹಾಮಹಿಮರು, ಮಹಾತಪಸ್ವಿಗಳು, ಮಹಾಯೋಗಿಗಳು.

ಮುಧೋಳದ ಘೋರ್ಪಡೆ ವಂಶಕ್ಕೆ ಮಹಾಲಿಂಗಮುನಿಗಳು ಕುಲಗುರುಗಳು. ಮಾಲೋಜಿರಾಜನಿಂದ ಪೂಜೆವಡೆದು ಆತನ ತಮ್ಮ ಸಕರೋಜಿ, ಮಗ ಗೋಮಿಂದರಾಜು, ಕೇದಾರಭಾವ, ಮೊಮ್ಮಗ ನಾರಾಯಣ–ಇವರೆಲ್ಲರನ್ನು ಉದ್ಧರಿಸಿದ ಸದ್ಗುರುಗಳವರು. ಕ್ರಿ.ಶ. ೧೭೭೩ರಲ್ಲಿ ಮಾಲೋಜಿರಾಜನ ಮೊಮ್ಮಗ ನಾರಾಯಣರಾಯನು ಮಹಾಲಿಂಗೇಶ್ವರನ ಮಠಕ್ಕೆ ಕೊಟ್ಟ ಸನದು ಮಹಾಲಿಂಗೇಶ್ವರನಲ್ಲಿ ಘೋರ್ಪಡೆ ರಾಜವಂಶದವರು ಇಟ್ಟಿದ್ದ ನಿಸ್ಸೀಮ ಭಕ್ತಿಗೆ ನಿದರ್ಶನವಾಗಿದೆ. ಇದರ ಪ್ರಕಾರ ಮಹಾಲಿಂಗಪುರದ ಸರ್ವ ಹಕ್ಕುಗಳು–ಎಲ್ಲ ಧಾರ್ಮಿಕ ಸಂಸ್ಕಾರಗಳ ಹಕ್ಕುಗಳು, ತಪ್ಪು ಮಾಡಿದವರಿಗೆ ದಂಡ ವಿಧಿಸುವ ಹಕ್ಕು, ನಷ್ಟಸಂತತಿಯಾದವರ ಆಸ್ತಿಯನ್ನು ಪಡೆವ ಹಕ್ಕು ಇತ್ಯಾದಿ ಎಲ್ಲ ಹಕ್ಕುಗಳು ಮಹಾಲಿಂಗಪುರದ ಮಹಾಲಿಂಗೇಶ್ವರ ಮಠಕ್ಕಿವೆ. ಮಹಾಲಿಂಗಪುರವು ಮಹಾಲಿಂಗೇಶ್ವರನ ಸೃಷ್ಟಿಯಷ್ಟೆ? ಮುಸಲ್ಮಾನ ದೊರೆಯಾದ ಇಬ್ರಾಹಿಮ ಬಾದಷಾಹನೂ ಮಹಾಲಿಂಗೇಶ್ವರ ಮಠಕ್ಕೆ ಸನದು ಕೊಟ್ಟಿರುವುದು ಆ ಮಹಾತ್ಮನ ಘನತೆಯ ಗುರುತಲ್ಲವೆ?

ಮಹಾಲಿಂಗೇಶ್ವರನು ಮೆರೆದ ಮಹಿಮೆಗಳು ಅನೇಕ. ಒಂದನ್ನಿಲ್ಲಿ ವಿವರಿಸಬಹುದು. ಮಹಾಲಿಂಗ ಮುನಿನಾಥನ ದರ್ಶನಾರ್ಥವಾಗಿ ಮಾಲೋಜಿರಾಜನು ನರಗಟ್ಟೆಗೆ ಬರುತ್ತಲಿದ್ದಾಗ ಆ ಊರಿನ ಮಹಾಲಿಂಗನೆಂಬ ಬಾಲಕ ಅರಸನ ಆನೆಯ ಶುಂಡಾಲಕ್ಕೆ ಸಿಲುಕಿ ಸತ್ತುಹೋಗುತ್ತಾನೆ. ಆ ಬಾಲಕನ ತಾಯಿ, 'ಗಂಡನಿಲ್ಲದ ಬಾಲೆ' ಗಂಗಾಂಬೆ ಹೊಟ್ಟೆ ಹೊಸೆದು ಹಲುಬತೊಡಗುತ್ತಾಳೆ. ಮುನಿದರ್ಶನಕ್ಕಾಗಿ ಹೊರಟ ತನ್ನಿಂದ ಶಿಶುಹತ್ಯೆ ಘಟಿಸಿದುದನ್ನು ಕಂಡು ಮಾಲೋಜಿರಾಜ ಮಮ್ಮಲನೆ ಮರುಗುತ್ತಾನೆ. ಮುನಿನಾಥನ ಸನ್ನಿಧಿಗೆ ಬಂದು,

'ಈ ಲೋಕಾಪವಾದವನ್ನು ಹೊರಲಾರೆ ಗುರುವೆ ! ಹರಭಕ್ತದ್ರೋಹಕ್ಕೆ : ಹರಣ ಕೊಡುವುದೆ ಧರ್ಮ ! ಆದರೆ ಆ ಚೋಳಾದಿಗಳ ಧೈರ್ಯವೆನಗಿಲ್ಲ. ಗುರುವೆ ಪೊರೆವುದು' ಎಂದು ಮೊರೆಯಿಟ್ಟನು. ಗೋಗರೆಯುತ್ತಿರುವ ಗಂಗಾಂಬೆಯನ್ನು ಕರುಣದಿಂದ ನೋಡಿ ಮಹಾಲಿಂಗೇಶ್ವರನು ನುಡಿದನು :

"ಅಳಿದ ಮಗನಿಗಾಗಿ ಆಳುವುದೇಕೆ ತಾಯೆ. ಅವನು ನಿನ್ನೊಬ್ಬಳ ಮಗನೆ? ಹಿಂದೆ ಯಾರಾರಿಗೆ ಮಗನಾಗಿದ್ದನೊ !

"ಎಷ್ಟು ಜನ್ಮಾಂತರದಿ ಸುತನಾದನೋ ನಿನ್ನ
ಎಷ್ಟು ಜನ್ಮಾಂತರದಿ ಸಹಜಾತನಾದನೋ
ಎಷ್ಟು ಜನ್ಮಾಂತರದಿ ಪಿತನಾಗಿ ನಿನಗೆ ಸಂಭವಿಸಿದನೊ ಭೂತಳದಲಿ
ಎಷ್ಟು ಜನ್ಮಾಂತರದಿ ಬಳಲಿಸಿದನೋ ನಿನ್ನ
ಎಷ್ಟು ಜನ್ಮಾಂತರದಿ ಅನ್ಯರಿಗೆ ಜನಿಸಿದನೊ
ಸೃಷ್ಟಿಲೀಲೆ ಬಲ್ಲವರಾರು ಜಗದೊಳಗೆ? ಗಾಸಿಯಾಗದಿರು !
ನೀನೆಷ್ಟು ಭವದಲ್ಲಿ ಜನನಿಯಾಗಿರ್ದೆಯೋ
ತಾನೆಷ್ಟು ಭವದಲ್ಲಿ ಸುತನಾಗುಳಿದನೋ ! ನೀನೇಕೆ
ಚಿಂತಿಸುವೆ ತಾಯೆ !"

ಆತ್ಮಜ್ಞನ ಅಮೃತೋಕ್ತಿಗಳಿವು. ಆದರೆ ತಾಯಿಯ ಬೆಂದೊಡಲ, ನೊಂದೆದೆಯ ಸಂತಾಪವಾರುವುದೆ ಇವುಗಳಿಂದ? ಮಹಾಲಿಂಗ ಮಹಾಯೋಗಿಯಿದನ್ನು ಬಲ್ಲನು. ಅಂತೆಯೇ ಅವಳ ಮಡಿದ ಮಗ ಮಹಾಲಿಂಗನನ್ನು ಬದುಕಿಸಿ ಗಂಗಾಂಬೆಯ ಕಳೆಬರದಲ್ಲಿ ಮತ್ತೆ ಜೀವ ಬರುವಂತೆ ಮಾಡಿದನು.

ಮಹಾಲಿಂಗಪುರದಲ್ಲಿ ಬಸವ ತೀರ್ಥವೆಂಬ ಬಾಬಿಯನ್ನು ಕಟ್ಟಿಸಿದುದು, ಆನೆಕಾಲ ಭೂಪತಿಯ ರಾಜ್ಯದಲ್ಲಿ ಬಸವಪುರವನ್ನು ಸ್ಥಾಪಿಸಿದುದು ಮುನಿನಾಥನ ಬಸವ ಭಕ್ತಿಗೆ ನಿದರ್ಶನ. ಶಿವಲಿಂಗ ಶಿವಯೋಗಿಗಳಂತೂ ಕೊಟ್ಟೂರ ಗುರು ಬಸವೇಶ್ವರನ ಮಂದಿರವನ್ನೇ ಕಟ್ಟಿಸಿ ತಮ್ಮ ಬಸವ ಭಕ್ತಿಯನ್ನು ಬೆಳಗಿಸಿದರು.

ಶಿವಯೋಗಿ ಶಿವಲಿಂಗೇಶ್ವರರೂ ಕರುಣಾಸಾಗರರು. ತುರುಗಾಹಿ ಬಾಲಕರ ಬಯಕೆಯಂತೆ ಗೋವುಗಳನ್ನು ಕಾಯುತ್ತಾರೆ; ತಾವೇ ಹಾಲು ಕರೆಕರೆಯ ಬಾಲಕರಿಗೆ ಕುಡಿಸುತ್ತಾರೆ; ಬಾಲಣ್ಣನಿತ್ತ ಕಂಬಳಿಯನ್ನು ಸ್ವೀಕರಿಸಿ ಅವನ ಕುರಿಗಳನ್ನು ಕಾಯುತ್ತಾರೆ– 'ಚೈಯ ಚೈ ಚೈಯೆಂದು ಕರೆಯುತ್ತ.' ಕುರಿಗಳನ್ನು ತಿನ್ನಲು ಬಂದ ತೋಳಗಳಿಗೆ ಬೀರಪ್ಪನಾಣೆಯಿಟ್ಟು ನಿಲ್ಲಿಸುತ್ತಾರೆ ! 'ಎಂಥ ಸರಳ ಹೃದಯವೋ

ಶಿವಯೋಗಿಗೆ! ಅವರ ಚರಣವನ್ನು ಮೊರೆಹೊಕ್ಕು ಕೊಲ್ಲಾಪುರ ರಾಜನ ಕುದುರೆ ಕದ್ದ ಚೋರನೂ ಸದ್ಭಕ್ತಿಸಾರನಾಗುತ್ತಾನೆ.

ಈ ಮಹಾನುಭಾವರಿಬ್ಬರೂ ಇದೇ ರೀತಿ ಅಗಣಿತ ಭಕ್ತರನ್ನು ಉದ್ಧರಿಸಿ ಮಹಾಲಿಂಗಪುರ ಅರಭಾವಿಗಳಲ್ಲಿ ಪರಮಾತ್ಮನನ್ನು ಬೆರೆಯುತ್ತಾರೆ. ಮಹಾಲಿಂಗ ಮುನಿವರನು ಸಿದ್ಧಿಯಿಯೆಂಬ ಸದ್ಭಕ್ತೆಗೆ ಅನುಗ್ರಹಿಸಿದ್ದ ಜಡೆ ಇಂದಿಗೂ ವರ್ಧಿಸುತ್ತ ಪೂಜೆಗೊಳ್ಳುತ್ತಲಿದೆ ಮಹಾಲಿಂಗೇಶ್ವರ ಮಠದಲ್ಲಿ ; ಶ್ರೀ ಶಿವಲಿಂಗ ಶಿವಯೋಗಿಗಳನ್ನು ಕುರುಹಾಗಿ ಉಳಿಸಿ ಹೋದ ಶ್ರೀ ವಿಭೂತಿ ಇಂದಿಗೂ ಅರ್ಚಿಸಲ್ಪಡುತ್ತಿದೆ ಸುಕ್ಷೇತ್ರ ಅರಭಾವಿಯಲ್ಲಿ. ಇಂದಿಗೂ ಎರಡೂ ಕ್ಷೇತ್ರಗಳು ಮುಮುಕ್ಷುಗಳಿಗೆಲ್ಲ ಮಂದಾರವಾಗಿ ನಿಂದಿವೆ. ಮಹಾಲಿಂಗೇಶವರನ ತರುವಾಯ ಮುರಗಿ ಮಹಾರುದ್ರಸ್ವಾಮಿಗಳು, ಮಲ್ಲಿಕಾರ್ಜುನಸ್ವಾಮಿಗಳು, ಮಹಾಲಿಂಗ ಸ್ವಾಮಿಗಳು, ಬಸವಲಿಂಗಸ್ವಾಮಿಗಳು ಮಹಾಲಿಂಗೇಶ್ವರ ಮಠದ ಪೀಠವನ್ನು ಅಲಂಕರಿಸಿದ್ದಾರೆ. ಈಗಿರುವ ಗುರುಲಿಂಗಸ್ವಾಮಿಗಳೂ ೧೯೩೬ರಿಂದ ಅಧಿಕಾರಾರೂಢರಾಗಿದ್ದಾರೆ. ಶ್ರೀ ಶಿವಲಿಂಗೇಶ್ವರರ ತರುವಾಯ ಕೊಳ್ಳದಾರ್ಯರು (ಶಿವಯೋಗ ಮಂಟಪವನ್ನು ಕಟ್ಟಿಸಿದವರು) ಸಿದ್ಧರಾಮಸ್ವಾಮಿಗಳು, ಘಟ್ಟಿವಾಳಯ್ಯ (ಶರಣಾರ್ಯ)ರು, ಸಿದ್ಧಲಿಂಗಸ್ವಾಮಿಗಳು, ಹಗದಾರ್ಯರು, ಶಿವಲಿಂಗ ಸ್ವಾಮಿಗಳು, ಸಿದ್ಧಲಿಂಗಸ್ವಾಮಿಗಳು ಸಂಪೂಜ್ಯರಾಗಿ ಹೋಗಿದ್ದಾರೆ. ಈಗಿರುವ ಪರಮಪೂಜ್ಯ ಮಹಾಂತ ಶಿವಯೋಗಿಗಳು ಮಹಾತಪಸ್ವಿಗಳು ಪರಮ ವೈರಾಗ್ಯಶೀಲರೂ ಶಿವಯೋಗಿವರೇಣ್ಯರೂ ಆಗಿದ್ದಾರೆ.

ಸಾವಳಗಿ ಶಿವಲಿಂಗೇಶ್ವರರು ಕಲಬುರಗಿಗೆ ಸಮೀಪದ ಕೊಳ್ಳೂರಿನ ಹಿರೇಗೌಡರ ಮನೆತನದಲ್ಲಿ ಲಿಂಗಬಸವಣ್ಣ ಮಲ್ಲಮ್ಮನವರಿಗೆ ಮಗನಾಗಿ ಹುಟ್ಟಿದರು. ಏಳೆಂಟು ವರುಷಗಳವರೆಗೆ ಪಾಠದತ್ತ ಗಮನಿವೀಯದೆ ಆಟಪಾಟಗಳಲ್ಲಿ ಕಾಲ ಕಳೆದರು. ಊಟದ ಪರಿವೆಯೂ ಇರಲಿಲ್ಲ. ಆಕಳುಗಳೊಡನೆ ಅಡ್ಡಾಡಿ ಬಂದರಾದರೂ ಊಟವನ್ನು ಬೇಡಬಹುದೆಂದೂ ಬಗೆದು ತಂದೆತಾಯಿಗಳು ಹಸುಗಳಣ್ನು ಕಾಯಲು ಕಳಿಸಿದರು.

'ಶಿವಲಿಂಗೇಶ್ವರನು ತುರುಗಳನ್ನು ಕಾಯ್ದುದೂ ವಿಚಿತ್ರವಾದುದು. ತಾಯಿ ಕಟ್ಟಿ ಕಳಿಸಿದ ಬುತ್ತಿಯನ್ನು ಜೋಡಿಯ ಹುಡುಗರಿಗೆ ಕೊಟ್ಟುಬಿಟ್ಟು ತಾನು ಮಾತ್ರ ಹತ್ತಿರದ ಮರಡಿಯನ್ನೇರಿ ಹುತ್ತದ ಬಳೀ ಮಲಗಿಬಿಡುವನು. ಹುತ್ತದಿಂದ ಸರ್ಪವೊಂದು ಬಂದು ಅವನಿಗೆ ನೆರಳಾಗಿ ಹೆಡೆಯೆತ್ತಿ ನಿಲ್ಲುವುದು. ಅವನ ನಿದ್ದೆಹೋದಾಗ ತುರುಗಳು ಊರ ಪಿಂಜಾರನ ಹೊಲ ಹೊಕ್ಕು ಬೆಳೆ ತಿಂದು



**ಸಾವಳಗಿಯ ಶಿವಲಿಂಗೇಶ್ವರರು**

ಬಿಡುವುದು ಹೊಲದಲ್ಲಿ ದುಡಿದ ಆಳುಗಳಿಗೆ ಕೂಲಿಯ ಕಾಳು ಕೊಡುವ ಕೆಲಸಕ್ಕೆ ಹಚ್ಚಲು ಕಣಜದ ಬಾಯಿ ತೆರೆದು ಬೇಕಾದಷ್ಟು ಕೊಂಡೊಯ್ಯಿರೆಂದು ಹೇಳಿ ಕಣಜವನ್ನೇ ಬರಿದುಮಾಡಿಬಿಡುವನು !

ಲಿಂಗಬಸವಪ್ಪನವರ ತಲೆ ಕಾಯಿತು. ಈ ಮಗನು ಹೀಗೆಯೇ ಬಿಟ್ಟರೆ ಮನೆ ಹಾಳುಮಾಡಿಬಿಡುವನೆಂದು ಬಗೆದು ಸಿಟ್ಟಿನ ಭರದಲ್ಲಿ ಶಿವಲಿಂಗನಿಗೆ ಮನೆಬಿಟ್ಟು ಹೋಗೆಂದು ಗದ್ದರಿಸುವನು. ಆಗಲೆಂದು ಆ ಕ್ಷಣವೇ ಶಿವಲಿಂಗೇಶನು ಮನೆ ಬಿಟ್ಟು ಹೊರಟುಹೋಗುವನು. ತಾಯಿ ಮಲ್ಲಮ್ಮನ ಕರುಳಿನ ಕೂಗೂ ತಡೆಯದಾಯಿತು ಆ ಬಾಲ ಶಿವಯೋಗಿಯನ್ನು ಹೊರಟನಾತ–ಗುರುಕರುಣವನು ಕೋರಿ, ಭವಮಾಯೆಯನ್ನು ಮೀರಿ, ದೃಢ ವಿರತಿಯನ್ನು ತೋರಿ.

ಮುಂದೆ ಕಾಣಿಸಿತು ಒಂದು ಆಲದ ಮರ. ಅದರ ಕೆಳಗೆ ಕುಳಿತ ಶಿವಲಿಂಗೇಶ್ವರ ಹಸಿವೆ. ನೀರಡಿಕೆ, ನಿದ್ರೆಗಳನ್ನು ಮರೆತು ಕುಳಿತ; ಶಿವಯೋಗದಲ್ಲಿ ಬೆರೆತು ಕುಳಿತ; ತನ್ನತಾನರಿತು ಕುಳಿತ. ಉರುಳಿದುವು ಹಗಲಿರುಳುಗಳು. ಶಿವಲಿಂಗೇಶನ ಸಮಾಧಿ ಸಡಿಲಲ್ಲಿಲ್ಲ. ಶಿಯೋಗನಿದ್ರಾಮುದ್ರೆಯಲ್ಲಿದ್ದ ಆ ರುದ್ರಾಕ್ಷಿಗೆ ಭದ್ರಾಂಗನಿಗೆ, ಭಸಿತದ ಸಸಿಗೆ, ಭಕ್ತಿಯ ಬಳ್ಳಿಗೆ, ಮುಕ್ತಿಯ ಮುಖಕ್ಕೆ ಗುರುಸಿದ್ಧೇಶ್ವರನು ಕಾಣಿಸಿಕೊಂಡು ಕರುಣಪ್ರಸಾದವನ್ನು ನೀಡಿ, ವರಬಸಿತವನ್ನು ತೀಡಿ, ಶಿವಮಂತ್ರವನ್ನು ಊದಿ, ಶಿವಭಕ್ತಿರಸವನೂಡಿ, ಅನುಗ್ರಹವ ಮಾಡಿ ಮರೆಯಾದನು.

ಅಷ್ಟರಲ್ಲಿ ಅಲ್ಲಿಗೆ ಆ ಕಂದನನ್ನು ಹುಡುಕುತ್ತ ತಂದೆತಾಯಿಗಳು ಬರುವರು. ಲಿಂಗಬಸವಪ್ಪ ಮಲ್ಲಮಾಂಬೆಯರು ಆಲದ ಮರದಡಿಯಲ್ಲಿ ಬಾಲತಪಸ್ವಿಯಂತೆ ರಾರಾಜಿಸುತ್ತಲಿದ್ದ ತಮ್ಮ ಮಗನನ್ನು ಕಂಡು, 'ನಮ್ಮ ಸಿಡುಕಿನ, ದುಡುಕಿನ ನುಡಿಗಳನ್ನು ಮರೆತು ಮನೆಗೆ ಬಾ ಕಂದಾ! ನೀನಿಲ್ಲದೆ ಮನಗೆ ಮಸಣದಂತಾಗಿದೆ ನಮ್ಮ ಆನಂದಾ!' ಎಂದು ಅಂಗಲಾಚಿ ಬೇಡುವರು. ಶಿವಲಿಂಗೇಶನಿಗೆ ಅದಾಗಲೇ ಗುರುಗಳ ಆಶೀವಾಗದವಾಗಿ ಅವರ ಆಜ್ಞೆಯಾಗಿ ಹೋಗಿದ್ದಿತು–'ನೀನು ಮನೆ ಮಾರುಗಳಿಗಾಗಿ, ಧನಕನಕ ಭೂಮಿ ಕಾಮಿನಿಯರಿಗಾಗಿ ಹುಟ್ಟಿಲ್ಲ–ಹುಟ್ಟು ಸಾವಿನ ಗುಟ್ಟನರಿಯಲು ಹುಟ್ಟಿರುವೆ ; ಅಷ್ಟಮದಗಳ ಹಿಟ್ಟುಗುಟ್ಟಲು ಹುಟ್ಟಿರುವೆ ; ಜಗದ ಜಂಜಡದಲ್ಲಿ ಸಿಲುಕಿ ತೊಳಲುವ ಜನಜಂಗುಲಿಯ ಭವನ ಸುಟ್ಟು ಹಾಕಲು ಹುಟ್ಟಿರುವೆ ! ಎಂಬ ಅವರ ಆದೇಶ ದೊರೆತಿದ್ದಿತು.

ಎಂದಮೇಲೆ ಹಿಂದಿರುಗುವನೆ ಆ ಇಂದುಧರಶರಣ? ತಾಯ ತಂದೆಗಳನ್ನು ಸಂತೈಸುತ್ತ ನುಡಿದ, "ವ್ಯಾಕುಲರಾಗದಿರಿ ತಂದೆ ತಾಯಿಗಳೆ! ನಿಮಗೆ ಇನ್ನಿಬ್ಬರು ಸದ್ಗತಿದಾಯಕರಾದ ಸುತರು ಜನಿಸಿ ನಿಮ್ಮನ್ನು ಹಿಗ್ಗಿನ ಜೋಕಾಲಿಯಲ್ಲಿ ಜೀಕವಾಡಿಸುವರು. ನನ್ನನ್ನು ನನ್ನ ದಾರಿಗೆ ಬಿಟ್ಟುಬಿಡಿರಿ. ಶಿವಧ್ಯಾನ ಶಿವ ಚಿಂತನೆಗಳಲ್ಲಿ ಉಳಿದ ಆಯುಷ್ಯವನ್ನು ಕಳೆದು ಶಿವನ ಕೃಪೆಗೆ ಪಾತ್ರರಾಗಿರಿ !"

ತಮ್ಮ ತನಯನು ಅಧ್ಯಾತ್ಮದ ಹಾದಿಯಲ್ಲಿ ಆದಾಗಲೇ ಬಹುದೂರ ಹೋಗಿರುವನೆಂಬುದು ಲಿಂಗಬಸವಪ್ಪ ಮಲ್ಲಮಾಂಬೆಯರಿಗೆ ಮನವರಿಕೆಯಾಯಿತು. ಅವರು ನಿರುತ್ತರರಾಗಿ ಮನೆಗೆ ಮರಳಿದರು. ಶಿವಲಿಂಗೇಶನಿಗಾಗಿ ಸಾವಳಿಗಿಯಲ್ಲಿ ಮಠವು ಸಿದ್ಧವಾಗುವುದು. ಅಲ್ಲಿ ಅವನ ಶಿವಯೋಗಸಾಧನೆ ಮುಂದುವರಿಯುವುದು. ಸಾವಳಗಿ ಸುಕ್ಷೇತ್ರವಾಗುವುದು. ಪತಿತೋದ್ಧಾರದ ಪತಾಕೆಯನ್ನೆತ್ತಿ ಶಿವಲಿಂಗೇಶ್ವರನು ಪತಿತಪಾವನನಾಗುವನು.

ಲಿಂಗಮ್ಮನೆಂಬ ಹೆಣ್ಣುಮಗಳು ಸ್ವಾಮಿಯ ಮಠದಲ್ಲಿ ಕಸಗುಡಿಸುವ ಕಾಯಕವನ್ನು ಕೈಕೊಂಡಿದ್ದಳು. ಒಮ್ಮೆ ಸ್ವಾಮಿಯ ಕೃಪಾದೃಷ್ಟಿ ಅವಳ ಮೇಲೆ ಬಿದ್ದಿತು. ಕೇಳಿದರು.

"ಅವ್ವಾ ನೀನಾರು?"

"ನಾನೊಬ್ಬ ಹೀನಕುಲದವಳು ತಂದೆ."

"ನಿನಗೆ ಮಕ್ಕಳಿದ್ದಾರೆಯೆ?"

"ಒಬ್ಬ ಮಗ. ಒಬ್ಬ ಸೊಸೆ ಇರುವವರು ಸ್ವಾಮಿ."

"ನೀವೆಲ್ಲರೂ ಶಿವದೀಕ್ಷೆ ಹೊಂದಿ ಶಿವಮತವನ್ನು ಸ್ವೀಕರಿಸುವಿರಾ?"

"ಅದು ಹೇಗಾದೀತು ತಂದೆ. ನಾವು ಹೀನಕುಲದವರು."

"ಬಿದ್ದವರನ್ನು ಉದ್ಧರಿಸುವುದಕ್ಕಾಗಿಯೇ ಧರ್ಮವಿದೆ ತಾಯಿ ! ಗೆದ್ದವರು ಬಾಲ ಹಿಡಿವ ಧರ್ಮವೊಂದು ಧರ್ಮವೆ?"

ಲಿಂಗಮ್ಮನ ಆನಂದಕ್ಕೆ ಪಾರವಿಲ್ಲದಾಯಿತು. ತನ್ನ ಮಗ ಸೊಸೆ ಸಮೇತ ಶಿವದೀಕ್ಷೆ ಹೊಂದಿ ಶಿವಮತವನ್ನಪ್ಪಿ ಸದ್ಗತಿಯನ್ನು ಪಡೆದಳು.

ಬುಳ್ಳಾನವರ ಮಲ್ಲಣ್ಣ ಮತ್ತು ಅವನ ಸತಿ ಬಸವಮ್ಮ ಪುತ್ರ ಸಂತಾನವನ್ನು ಬೇಡಲು ಶಿವಯೋಗಿ ಶಿವಲಿಂಗೇಶ್ವರರ ಸನ್ನಿಧಿಗೆ ಬಂದರು. ಮೊದಲು ಹುಟ್ಟಿದ ಮಗನನ್ನು ಮಠಕ್ಕೆ ಒಪ್ಪಿಸಬೇಕೆಂಬ ಕಟ್ಟು ಹಾಕಿ ಶಿವಯೋಗಿಗಳು ಸತಿಪತಿಗಳನ್ನು ಆಶೀರ್ವದಿಸಿದರು. ಬುಳ್ಳಾ ಬಸವಮ್ಮನು ಗರ್ಭಿಣಿಯಾಗಿ ನವಮಾಸ ತುಂಬಲು ಗಂಡುಕೂಸನ್ನು ಹಡೆದಳು. 'ಮಹಾವೀರ'ನೆಂದವನಿಗೆ ಶಿವಯೋಗಿಗಳು ನಾಮಕರಣ ಮಾಡಿದರು.

ಆದರೆ ಪುತ್ರಮೋಹದಿಂದ ಕೊಟ್ಟ ಭಾಷೆಗೆ ತಪ್ಪಿದರು ಬುಳ್ಳಾದಂಪತಿಗಳು. ಆದುದರಿಂದ ಒಂದು ದಿನ ಇದ್ದಕ್ಕಿದ್ದಹಾಗೆ ತೊಟ್ಟಿಲ್ಲ ಮಲಗಿದ್ದ ಕೂಸು ಮೃತವಾಗಿಬಿಟ್ಟಿತ್ತು. ಬುಳ್ಳಾದಂಪತಿಗಳು ಹೌಹಾರಿದರು. "ಶಿವಲಿಂಗೇಶ್ವರಾ, ನಮ್ಮ ತಪ್ಪು ಮನ್ನಿಸು. ಕೂಸನ್ನು ಬದುಕಿಸು. ಈ ಕ್ಷಣವೇ ನಿನ್ನ ಸನ್ನಿಧಿಗೆ ಒಪ್ಪಿಸುವೆವು!" ಎಂದು ಬೇಡಿಕೊಂಡರು. ಕೂಸು ಕಣ್ದೆರೆಯಿತು. ಮಠ ಸೇರಿತು.

ಆ ಕಾಲದಲ್ಲಿ ಕಲಬುರಗಿಯಲ್ಲಿ ಹೆಸರಾದ ಮಹಮ್ಮದೀಯ ಸತ್ಪುರುಷರಾಗಿದ್ದ ಖಾಜಾ ಬಂದೇ ನವಾಜರಿಗೂ ಗುರು ಶಿವಲಿಂಗೇಶ್ವರರಿಗೂ ಬಹಳ ಸ್ನೇಹವಿದ್ದಿತು. ಶ್ರೀ ಶಿವಲಿಂಗೇಶ್ವರರ ಕೀರ್ತಿಯನ್ನು ಕೇಳಿ ಅವರನ್ನು ನೋಡಲು ಖಾಜಾಬಂದೇ ನವಾಜರು ಹುಲಿಯನ್ನೇರಿ ಬಂದರಂತೆ. ಅದನ್ನು ತಿಳಿದು ಶಿವಲಿಂಗೇಶ್ವರರು ಕುಳಿತ ಕಟ್ಟೆಯನ್ನೇ ನಡೆಸಿಕೊಂಡುಹೋಗಿ ಅವರನ್ನು ಇದಿರ್ಗೊಂಡರಂತೆ. ಆಗ

ಬಂದೇ ನವಾಜರು ಶಿವಲಿಂಗೇಶ್ವರರ ಮಹಿಮೆಯನ್ನು ಮೆಚ್ಚಿದವರಾಗಿ ಅವರನ್ನು ಕಲಬುರಗಿಯ ಉರಿಸಿಗೆ ಆಮಂತ್ರಿಸಿದರಂತೆ. ಶ್ರೀ ಶಿವಲಿಂಗೇಶ್ವರರು ಉರಸಿಗೆ ಹೋಗಿ ಅಲ್ಲಿಯೂ ಮಹಿಮೆಯನ್ನು ಮೆರೆದು ಬಂದರಂತೆ. ಇದರ ಸ್ಮಾರಕವಾಗಿ ಇಂದಿಗೂ ಸಾವಳಗಿ ಶಿವಲಿಂಗೇಶ್ವರ ಮಠದಲ್ಲಿ ವಿಶೇಷ ಸಂದರ್ಭಗಳಲ್ಲಿ ಮಹಮ್ಮದೀಯ ಗುರುಗಳ ಲಾಂಛನವಾದ ಹಸಿರು ಸಿಲೇಮನಿ, ಶಮನ, ಟೊಪ್ಪಿಗೆಗಳು ಧಾರಣೆಯಾಗುತ್ತದೆ; ಬಂದೇ ನವಾಜರ ದರಗಾದಲ್ಲಿ ರುರುಸಿದ್ಧೇಶ್ವರನಿಗೂ ಭಕ್ತಿ ಸಲ್ಲುತ್ತದೆ.

ಇದಾದ ಮೇಲೆ ಶಿವಲಿಂಗೇಶ್ವರರು ದೇಶಸಂಚಾರಕ್ಕೆ ಹೊರಡುತ್ತಾರೆ. ವಟು ಮಹಾಂತೇಶನನ್ನು ಗೊಬ್ಬೂರಗೌಡರ ಮನೆಯ ಮಲ್ಲಮ್ಮನೆಂಬ ಸದ್ಭಕ್ತೆಯ ವಶಕ್ಕೆ ಕೊಟ್ಟು ಹೊರಡುತ್ತಾರೆ. ಹೋದಲ್ಲೆಲ್ಲ ದುಃಖಪೀಡಿತರ ಅರ್ತಿನಾಶನ ಗೈಯುತ್ತ ಹೋಗುತ್ತಾರೆ. ಎಲ್ಲೆಲ್ಲೊ ಶಿವಲಿಂಗೇಶ್ವರ ಮಠಗಳು ಹುಟ್ಟಿಕೊಳ್ಳುತ್ತವೆ. ಮುನ್ನೂರಕ್ಕಿಂತ ಹೆಚ್ಚು ಮಠಗಳು ಮೂಡಿ ನಿಲ್ಲುತ್ತವೆ. ಬಾಳಖೇಡಿನಲ್ಲಿ ಕೆಲದಿನವಿದ್ದು, ನರವಣಿಯದೇವೀರಿ ಗೊಲ್ಲತಿಯನ್ನು ನೇರದಾರಿಗೆ ತಂದು, ಬರಗಾರದಲ್ಲಿ ದಾಸೋಹ ನಡೆಸಿ ಲಕ್ಷಾವಧಿ ಜನರಿಗೆ ಅನ್ನ ನೀಡಿ, ಸುರಪುರದ ದೊರೆಯನ್ನು ಹರಸಿ ಏಕಚಿಂತೆ ಗ್ರಾಮವನ್ನು ಕಾಣಿಕೆಯಾಗಿ ಪಡೆದು, ತಮ್ಮ ಆಶ್ರಮದಲ್ಲಿ ಬೆಳೆದಿದ್ದ, ಅಳಿದ ಏಕಚಿಂತೆ ದೇಸಾಯರ ಪುತ್ರ ಮರಿಯಪ್ಪ ದೇಸಾಯಿಗಿತ್ತು ಬಿಜಾಪುರ ಜಿಲ್ಲೆಯನ್ನು ಪ್ರವೇಶಿಸಿದರು. ಸಾವಳಿಗಿಯ ಭಕ್ತರನೇಕರು ಹಿಂಬಾಲಿಸಲು ಮನೆಗೊಬ್ಬರಂತೆ ಬರಬಹುದೆಂದು ಅನುಮತಿಯಿತ್ತರು. ತುಬಚಿಯಲ್ಲಿ ತಂಗಿ, ಮುಂದುವರಿದು ಗೋಕಾವಿಯ ಹತ್ತಿರ ಮೆರಕನಟ್ಟಿ ಬಳಿಬಿಡಾರ ಮಾಡಿದರು. ಕುರುಬೆಟ್ಟದ ಸಿದ್ಧರಾಮನಾಯಕ ಸತಿ ರಮಾಬಾಯಿಯರ ಭಕ್ತಿಯನ್ನು ಕೈಕೊಂಡು ಉತ್ತರವಾಹಿನಿಯಾಗಿ ಹರಿವ ಘಟಪ್ರಭೆಯ ತಟದ ಪ್ರಶಾಂತ ಪ್ರದೇಶದಲ್ಲಿರುವ ಮುತ್ತಿಗಿ ಖಾನಾಪುರದ ಸಮೀಪದ ಸ್ಥಳದಲ್ಲಿ ಶಿವಯೋಗಸಿದ್ಧಿಗಾಗಿ ಅನುಷ್ಠಾನಕ್ಕೆ ಕುಳಿತರು. ಸಾವಳಗಿಯಿಂದ ಭಕ್ತರನ್ನು ಹಿಂದಿರುಗಿ ಕಳಿಸಿ ಮಹಾಂತೇಶನನ್ನು ಸಾವಳಗಿ ಮಠದ ಉತ್ತರಾಧಿಕಾರಿಯನ್ನಾಗಿ ನಿಯಮಿಸಿ ಕಳಿಸಿದರು. ಎಲ್ಲರಿಗೂ ಆಶೀರ್ವದಿಸಿ 'ನಾವಿನ್ನು ಶಿವಯೋಗ ಸಮಾಧಿಯಲ್ಲಿ ಐದು ದಿನವಿರುವೆವು. ಯಾರು ಕದವನ್ನು ತೆಗೆಯಬೇಡಿರಿ' ಎಂದು ಹೇಳಿ ಗುಹೆಯನ್ನು ಪ್ರವೇಶಿಸಿದರು.

ಮೂರು ದಿನಗಳಲ್ಲಿ ಭಕ್ತರ ಕುತೂಹಲ ಕೆರಳಿತು. ನಾಲ್ಕನೆಯ ದಿನ ಮಲ್ಲಮ್ಮನು ಭಕ್ತಿಯ ಭ್ರಮೆಯಲ್ಲಿ ದುಡುಕಿ ಕದವನ್ನು ತೆರೆಯಲು ಅಲ್ಲಿ ಶ್ರೀ ವಿಭೂತಿ, ಮಲ್ಲಿಗೆ, ಉರಿವ ಕರ್ಪೂರ ಜ್ಯೋತಿ–ಇಷ್ಟು ಮಾತ್ರ ಉಳಿದಿದ್ದುವು. ವಿಭೂತಿಯ ಬಲಭಾಗ ಹಿರಿಯ ಸಾವಳಿಗೆಗೂ ಎಡಭಾಗ ಮುಷ್ಟಗಿ ಸಿದ್ಧರಾಮನಿಗೂ ಮಧ್ಯಭಾಗವು

ಅಲ್ಲಿಯೇ ಕಿರಿಯ ಸಾವಳಿಗೆಗೂ ಸಲ್ಲಿತು. ಅವರ ಅಮರ ತೇಜುಸ್ಸು ಅಲ್ಲಿ ಅಡಗಿ ಪವಿತ್ರ ಕ್ಷೇತ್ರಗಳಾಗಿವೆ. ಮಹಾಂತೇಶ್ವರರು ಹಿರಿಯ ಸಾವಳಿಗೆಯ ಮಠಕ್ಕೆ ಅಧಿಪತಿಗಳಾದರು, ಮಹಾಲಿಂಗಾಸ್ವಾಮಿಗಳು ಕಿರಿಯ ಸಾವಳಿಗಿಯ ಮಠಕ್ಕೆ ಅಧಿಕಾರಗಳಾದರು. ಮಹಾಲಿಂಗಸ್ವಾಮಿಗಳ ತರುವಾಯ ನಂದಗಾಂನ ಖಾನಾಪುರದ ಷಡಕ್ಷರಸ್ವಾಮಿಗಳು, ಸಿಂಧೇ ಮುನವಳ್ಳಿಯ ಪ್ರಭು ಸ್ವಾಮಿಗಳು, ಸವದತ್ತಿ ಕರಿಕಟ್ಟೆಯ ಅನ್ನದಾನಸ್ವಾಮಿಗಳು, ನಿಡಸೋಸಿಯ ಶಾಂತಲಿಂಗಸ್ವಾಮಿಗಳು, ಶಿರಸಿ ಇಸಳೂರ ಶಂಕರಸ್ವಾಮಿಗಳು, ಅವರಗೊಳ್ಳದ ಶಿವಲಿಂಗಸ್ವಾಮಿಗಳು, ಕ್ರಿ.ಶ. ೧೯೫೭ವರೆಗೆ ಮಠಾಧಿಕಾರಿಗಳಾಗಿ ಹೋದರು. ಈಗ ಶ್ರೀ ಸಿದ್ಧರಾಮಸ್ವಾಮಿಗಳು ಮಠದ ಘನತೆಗಾಗಿ ಶ್ರಮಿಸುತ್ತಲಿದ್ದಾರೆ.

ಶ್ರೀ ಶಂಭುವೆ ಭೂಮಾನವ
ರಾಶಿಯನುದ್ಧರಿಪ ಕತದಿ ಸಾವಳಗಿ ಪುರಾ–
ಧೀಶ ಶಿವಲಿಂಗ ಶಿವಯೋ–
ಗೀಶನ ಪೆಸರಿಂದ ಲೆಸೆವನವನೀತದೊಳ್ ॥

■

# ಸ್ವಯಂಜ್ಯೋತಿ ಷಣ್ಮುಖ ಶಿವಯೋಗಿ
# (೧೭೦೬-೧೭೭೮)

ದ್ವೀಪ ಏಳರೊಳಗೆ ವ್ಯಾಪಿಸಿಕೊಂಡಿರ್ಪುದು
    ಒಂದೇ ಜ್ಯೋತಿ ನೋಡಾ;
    ಅದು ರೂಪಲ್ಲ, ನಿರೂಪಲ್ಲ-
ಸರ್ವವ್ಯಾಪಾರ ಹೊದ್ದದ ಸ್ವಯಂ ಜ್ಯೋತಿ ನೋಡಾ :
    ಅದೇ ಎನ್ನ ಪ್ರಾಣಲಿಂಗವೆಂಬ
ಪರತರ ಪರಂಜ್ಯೋತಿ ಪರಮಾನಂದ ನೋಡಾ ಅಖಂಡೇಶ್ವರಾ !

ಅಖಂಡೇಶ್ವರ ವಚನ - ೧೧೨

ಪ್ರಾಣಲಿಂಗದ ಪ್ರಕಾಶಪುಷ್ಪವಾಗಿ ಅರಳಿ ಪರಂಜ್ಯೋತಿಯಾಗಿ ಬೆಳಗಿದ ಶ್ರೀ ಷಣ್ಮುಖ ಶಿವಯೋಗಿಗಳು ಗುರು ಅಖಂಡೇಶ್ವರರ ಕರಕಂಜ ಸಂಜಾತರು. ಶ್ರೀ ಅಖಂಡೇಶ್ವರರು ಬೆಳಗಾವಿಯತ್ತಣಿಂದ ಬಂದವರೆಂದು ಪ್ರತೀತಿಯಿದೆ. ಕಲ್ಯಾಣವನ್ನು ಕಾಣಲು ಹೊರಟ ಅವರು ಜೇವರಿಗೆಯ ಜನರ ಭಕ್ತಿಗೆ ಒಲಿದು ಅಲ್ಲಿಯೇ ನೆಲೆಸಿಬಿಟ್ಟರು.

ಜೇವರಿಗೆಯು ಅಂಥ ಸ್ಥಳವೂ ಅಹುದು. ಅದರ ಸುತ್ತಮುತ್ತು ಶರಣರ ಸ್ಥಾನಗಳಿವೆ. ಶ್ರೀ ಶರಣಬಸವೇಶ್ವರರ ಕಲಬುರುಗಿ, ಗದ್ದುಗೆಯ ಕರುಣಪ್ಪನವರ ಅಂದೇಲಿ, ಮಡಿವಾಳಪ್ಪನವರ ಕಡಕೋಳ, ಬಕ್ಕಪ್ಪನವರ ರಾಮಪುರ, ಸಜ್ಜನ ಸಂಗಪ್ಪನವರ ಗುಡುರೂ, ಶರಣ ಬಸವೇಶ್ವರರ ಜನ್ಮಸ್ಥಾನ ಅರಳಗುಂಡಿಗೆ- ಇವುಗಳ ಮಧ್ಯದಲ್ಲಿರುವ ಜೇವರಿಗೆ ಶರಣಸ್ಥಾನವಾಗದೆ ಉಳಿಯುವುದೆ? ಅಖಂಡೇಶ್ವರರ ಆಗಮನದಿಂದ ಅದೂ ಶರಣಸ್ಥಾನವಾಗಿಬಿಟ್ಟಿತು.

ಅಲ್ಲಿಯ ಅಖಂಡೇಶ್ವರರತ ಮಠ ಕಟ್ಟಿದುದು ಶಕೆ ೧೬೩೧ರಲ್ಲಿ ಎಂದು ಹೇಳುತ್ತಾರೆ. ಮುಂದೆ ಎಂಟೇ ವರ್ಷಗಳಲ್ಲಿ ಈ ಮಠವನ್ನು ವಚನ ಮಂಟಪವನ್ನಾಗಿ ಮಾರ್ಪಡಿಸಿದ ಮಹಾನುಭಾವನು ಹುಟ್ಟಿದನು, ಅವನೇ ಷಣ್ಮುಖ ಶಿವಯೋಗಿ,

ಪರಮ ವಿರಾಗಿ, ವಚನರಚನಾನುರಾಗಿ.

ಜೇವರಿಗಿಯ ನಿವಾಸಿಗಳಾಗಿದ್ದ ಮಲ್ಲಸೆಟ್ಟಪ್ಪ ಮತ್ತು ದೊಡ್ಡಮಾಂಬೆಯರೆಂಬ ದಂಪತಿಗಳು ಅಖಂಡೇಶ್ವರರ ಅನುಗ್ರಹದಿಂದ ಗಂಡು ಕೂಸೊಂದನ್ನು ಪಡೆದರು. ಷಣ್ಮುಖನೆಂದು ನಾಮಕರಣವಾಯಿತಾ ಕೂಸಿಗೆ. ಅಖಂಡೇಶ್ವರರಿಂದಲೇ ಲಿಂಗದೀಕ್ಷೆಯಾಯಿತು. ವಿದ್ಯಾಭ್ಯಾಸವೂ ಅವರಲ್ಲಿಯೇ ನಡೆಯಿತು, ಗುರುಕಾರುಣ್ಯದ ಶಿಶುವಾಗಿ ಬೆಳದ ಷಣ್ಮುಖನು ಗುರುವಿಗೇ ಸಮರ್ಪಿತನಾಗಿ ಬಿಟ್ಟನು.

ಷಣ್ಮುಖನು ಗುರುಗಳಿಂದ ಶಿವಾನುಭವ ಶಾಸ್ತ್ರವನ್ನು ಕಲಿತನು, ಶಿವಯೋಗದ ನೆಲೆಯನ್ನು ಅರಿತನು, ಷಟ್‌ಸ್ಥಳದ ಅರಿವನ್ನು ಅಳವಡಿಸಿಕೊಂಡನು, ಶಿವಯೋಗಿಯಾಗಿಬಿಟ್ಟನು. ಗುರುಗಳ ಅಪ್ಪಣೆ ಪಡೆದು ಶಿವಶರಣರ ಸ್ಥಾನಗಳನ್ನು ನೋಡುತ್ತ ಹೊರಟನು. ಹೋದಲ್ಲೆಲ್ಲ ಆಯಾ ಶರಣರ ಆತ್ಮಪ್ರಭೆಯನ್ನು ಅರಸಿ ಆರಾಧಿಸಿದನು.



**ಪ್ರಾಣಲಿಂಗ ಪ್ರಕಾಶಪುಷ್ಪ ಷಣ್ಮುಖ ಶಿವಯೋಗಿಗಳು**

"ಸಂಗನ ಬಸವಣ್ಣನಂತೆ ಸದ್ಭಕ್ತನೆಂದೆನಿಸಯ್ಯ ಎನ್ನ
ಮಡಿವಾಳ ಮಾಚಯ್ಯನಂತೆ ವೀರಮಾಹೇಶ್ವರನೆಂದೆನಿಸಯ್ಯ ಎನ್ನ
ಚೆನ್ನಬಸವಣ್ಣನಂತೆ ಪರಮಪ್ರಸಾದಿಯೆನಿಸಯ್ಯ ಎನ್ನ
ಸಿದ್ಧರಾಮನಂತೆ ಶುದ್ಧಪ್ರಾಣಲಿಂಗಿಯೆಂದೆನಿಸಯ್ಯ ಎನ್ನ
ಉರಿಲಿಂಗ ಪೆದ್ದಯ್ಯಗಳಂತೆ ಉರುತರ ಶರಣನೆಂದೆನಿಸಯ್ಯ ಎನ್ನ
ಅಜಗಣ್ಣ ತಂದೆಗಳಂತೆ ನಿಜಲಿಂಗೈಕ್ಯನೆಂದೆನಿಸಯ್ಯ ಎನ್ನ
ನಿಜಗುಣಯೋಗಿಗಳಂತೆ ಪರಮ ಆರೂಢನೆಂದೆನಿಸಯ್ಯ ಎನ್ನ
ಅಕ್ಕಮಹಾದೇವಿಯಂತೆ ನಿಷ್ಕಾಮಿಯೆಂದೆನಿಸಯ್ಯ ಎನ್ನ
ಪ್ರಭುದೇವರಂತೆ ಪರಿಪೂರ್ಣನೆಂದೆನಿಸಯ್ಯ ಎನ್ನ
ಇಂತಿವರ ಕಾರುಣ್ಯದ ನಿಲವನೇ ಕರುಣಿಸಿ
ನಿಮ್ಮಗಣಂಗಳ ಸಮ್ಮೇಳನದಲ್ಲಿರಿಸಯ್ಯ ಎನ್ನ ಅಖಂಡೇಶ್ವರಾ !"

ಎಂದು ಬೇಡಿಕೊಂಡರು. ಎಂಥ ಬೇಡಿಕೆ ಇವರದು !

ಹೋದಹೋದಲ್ಲಿ ಅವರ ಕಣ್ಣಿಗೆ ಕಂಡುದೇನು? ಕಾಲ, ಕಾಮ, ಮಾಯೆಯರ ಬಲೆಯಲ್ಲಿ ಸಿಕ್ಕು ವಿಲಿವಿಲಿ ಒದ್ದಾಡುವ ಜನಗಳ ದಾರುಣ ಚಿತ್ರ :

"ಕಾಲನೆಂಬ ಜಾಲಗಾರನು ಕರ್ಮವೆಂಬ ಬಲೆಯ ಬೀಸಿ
ಸಂಸಾರ ಶರಧಿಯಲ್ಲಿಪ್ಪ ಸಕಲಪ್ರಾಣಿಗಳೆಂಬ ಮೀನುಗಳ
ಹಿಡಿಸು ಕೊಲ್ಲುತ್ತಿದ್ದಾನೆ !
ಕಾಮನೆಂಬ ಬೇಟೆಗಾರನು ಕಂಗಳ ತೋಡಿನಲ್ಲಿ ನಿಂದು
ಕಳವಳದ ಬಾಣವನೆಸೆದು ಭವವೆಂಬ ಬಲೆಯಲ್ಲಿ
ಸಕಲ ಪ್ರಾಣಿಗಳ ಕೆಡಹಿ ಕೊಲ್ಲುತ್ತಿದ್ದಾನೆ !
ಮಾಯೆಯೆಂಬ ರಕ್ಕಸಿ ಸಕಲಪ್ರಾಣಿಗಳ ಸಾರವ ಹೀರಿ
ಹಿಪ್ಪೆಯ ಮಾಡಿ
ಉಃ ಫೆಂದು ಊದುತ್ತಿದ್ದಾಳೆ !
ಇಂತೀ ತ್ರಿವಿಧ ಮುಖದಲ್ಲಿ ಕಾಡುವ ನಿಮ್ಮ ಮಾಯೆಯ
ಗೆಲುವೊಡೆ ಅರಳವಲ್ಲ, ಅಖಂಡೇಶ್ವರಾ–
ನೀವು ಕರುಣಿಸದನ್ನಕ್ಕ !

ಇಹ ಜೀವನದ ಎಂಥ ಯಥಾರ್ಥ ಚಿತ್ರವಿದು ! ಕಾಲ–ಕಾಮ–ಮಾಯೆ, ಈ ತ್ರಿವಿಧ–ಮುಖದ ಚಿತ್ರಹಿಂಸೆಗೆ ಸಿಕ್ಕ ನರನ ಬಾಳು ಎಷ್ಟು ದುಃಖಮಯವಾದುದು!

ನಿಮ್ಮ ಮಾಯೆಯ ಗೆಲುವೊಡೆ ಅರಳವಲ್ಲ ! 'ಮಮಮಾಯಾ ದುರತ್ಯಯಾ!' ಹಾಗಾದರೆ ಹಾದಿಯೇ ಇಲ್ಲವೆ? ಇದೆ. ಮಾಯೆ ಅಜೇಯೆ. ಎಲ್ಲಿಯವರೆಗೆ?'ನೀವು ಕರುಣಿಸಿದರೆ ಆ ಮಾಯೆ ಎಷ್ಟರವಳು?'

ಅಹುದು, ಅವನ ಕರುಣೆಗೇ ಶರಣು ಹೋಗಬೇಕು. ಅದನ್ನು ಪಡೆಯುವವರೆಗೆ ಈ ತ್ರಿವಿಧ ಹಿಂಸೆ ತಪ್ಪದು. ತಕ್ಷಣ ನಡೆದರು ತಪೋವನಕ್ಕೆ ಜೇವರಗಿಯಿಂದ ಉತ್ತರಕ್ಕೆ ಆರು ಮೈಲಿಗಳ ಅಂತರದಲ್ಲಿ ಕೋಳತೂರ ಎಂಬ ಗ್ರಾಮವಿದೆ. ಅಲ್ಲಿಗೆ ನಾಲ್ಕಾರು ಫರ್ಲಾಂಗುಗಳ ಅಂತರದಲ್ಲಿ ಎರಡು ಬೆಟ್ಟಗಳ ಮಧ್ಯದಲ್ಲಿ ಭಯಾನಕವಾದ ಕೊಳ್ಳವಿದೆ. ಇದಕ್ಕೆ ಇಂದಿಗೂ ಜೋಗಿಯ (ಯೋಗಿಯ) ಕೊಳ್ಳವೆಂಬ ಸಲ್ಲುವ ಹೆಸರಿದೆ. ಇಲ್ಲಿ ನಮ್ಮ ನಾಡಿನ ಪುಣ್ಯನದಿಗಳಲ್ಲೊಂದಾದ ಭೀಮೆ ಭೀಮರಮಣೀಯವಾಗಿ ಹರಿಯುತ್ತಿದ್ದಾಳೆ. ದುರ್ಗಮವಾದ, ಜನ ನಿಬಿಡವಾದ, ನಿಸರ್ಗರಮ್ಯವಾದ, ಚೇತೋಹಾರಿಯಾದ ಈ ಕೊಳ್ಳದಲ್ಲಿ ಷಣ್ಮುಖ ಶಿವಯೋಗಿಗಳು ಯೋಗಸಾಧನೆ ನಡೆಸುತ್ತಾರೆ. ಇಲ್ಲಿಯೇ ಅವರ ವಚನ–ವಾಣಿ ಹೊರಹೊಮುತ್ತದೆ– ಅಖಂಡೇಶ್ವರ ವಚನಗಳಾಗಿ.

ಇವರ ವಚನಗಳಲ್ಲಿ ಯೋಗದ ವಿವಿಧ ಪ್ರಕಾರಗಳ ಮನೋಜ್ಞವಾದ ನಿರೂಪಣೆಯಿದೆ. ಇವರೆಷ್ಟು ಯೋಗಪರಿಣತರಾದರೆಂಬುದಕ್ಕೆ ಇವರ ವಚನಗಳಲ್ಲಿಯೇ ನಿಸ್ಸಂದಿಗ್ಧವಾದ ನಿದರ್ಶನ ದೊರೆಯುತ್ತದೆ. ಮಂತ್ರಯೋಗ, ಲಯ ಯೋಗ, ಹಠಯೋಗಮ, ರಾಜಯೋಗಗಳೆಂಬ ಚತುರ್ವಿಧ ಯೋಗಗಳ ಭೇದವನ್ನು ತಿಳಿಸಿ, ಯಮ, ನಿಯಮ, ಅಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ, ಸಿದ್ಧಿ, ಅಂತರ್ಲಲಕ್ಷ್ಯ, ಬಹಿರ್ಲಕ್ಷ್ಯ, ಮಧ್ಯಲಕ್ಷ್ಯ, ಶಾಂಭವೀ ಮುದ್ರೆ, ಜೀವನ್ಮುಕ್ತನ ಲಕ್ಷಣಗಳ ವಿಶದೀಕರಣಗೈದು, ಶಿವಯೋಗದ ಅತಿಸುಂದರವಾದ ನಿರೂಪಣೆಯನ್ನು ನೀಡಿರುವ ಷಣ್ಮುಖ ಶಿವಯೋಗಿಗಳು ನಿಜವಾಗಿಯೂ ಯೋಗಸಿದ್ಧರು. ಇವರ ೮೩೧ನೆಯ ವಚನವನ್ನಂತೂ ಪೂರ್ಣ ಓದಿಯೆ ಆನಂದಿಸಬೇಕು. ಕೆಳಗಣ ವಚನ ಮಾದರಿ ಮಾತ್ರ.

ಅಯ್ಯ , ನಿಮ್ಮನೆನ್ನ ಕರಸ್ಥಳದಲ್ಲಿ ನೋಡಿದೊಡೆ
ನೀವೆನ್ನ ಕಂಗಳ ಕೊನೆಯಲ್ಲಿ ತೋರುತಿರ್ಪಿರಿ :
ಇದಾವ ನಿಮ್ಮ ಗಾರುಡವಯ್ಯ?
ಅಯ್ಯ, ನಿಮ್ಮನೆನ್ನ ಕಂಗಳ ಕೊನೆಯಲ್ಲಿ ನೋಡಿದೊಡೆ

ನೀವೆನ್ನ ಮನದ ಕೊನೆಯಲ್ಲಿ ತೋರುತಿರ್ಪಿರಿ :
ಇದೇನು ನಿಮ್ಮ ಗಾರುಡವಯ್ಯ?
ಅಯ್ಯಾ, ನಿಮ್ಮನೆನ್ನ ಮನದ ಕೊನೆಯಲ್ಲಿ ನೋಡಿದೊಡೆ
ನೀವೆನ್ನ ಪಂಚಮುಖದಲ್ಲಿ ತೋರುತಿರ್ಪಿರಿ :
ಇದೆಂಥ ನಿಮ್ಮ ಗಾರುಡವಯ್ಯ?
ಅಯ್ಯ ನಿಮ್ಮನೆನ್ನ ನೆನಹಿನ ಪಂಚಮುಖದಲ್ಲಿ ನೋಡಿದೊಡೆ
ನೀವೆನ್ನ ನವಚಕ್ರದಲ್ಲಿ ತೋರುತಿಪಿರ್ತಿರಿ :
ಇದೇನು ನಿಮ್ಮ ಗಾರುಡವಯ್ಯ?
ಅಯ್ಯ, ನಿಮ್ಮನೆನ್ನ ನವಚಕ್ರದಲ್ಲಿ ನೋಡಿದೊಡೆ
ನೀವೆನ್ನ ಸರ್ವಾಂಗದಲ್ಲಿ ತುಂಬಿರ್ಪಿರಿ !
ಇದೇನು ನಿಮ್ಮ ಗಾರುಡುವಯ್ಯ? ಅಖಂಡೇಶ್ವರಾ !

ಶಿವಯೋಗಸಾಧನೆ ಮುಂದುವರಿಯಿತು– ಪೂರ್ಣಸಿದ್ಧಿ ಪಡೆದೇ ಪೂರ್ಣವಾಗ ಬೇಕೆಂಬ ಛಲದಿಂದ ಮುಂದುವರೆಯಿತು. ಕೊನೆಗೊಮ್ಮೆ ಮಹಾಸಿದ್ಧಿ ದೊರೆಯಿತು. ಅದು ದೊರೆತು ಆನಂದವೇ ವಚನವಾಗಿ ಹೊಮ್ಮಿದಂತಿಲ್ಲವೆ ಇದು?

ತನುವಿನ ಗುಣಂಗಳ ತರಿದೊಟ್ಟಿ
ಮನದ ಮಾಯಾವಿಕಾರದ ಬಾಯಟೊಣೆದು
ಕರಣಂಗಳ ಕತ್ತಲೆಯ ಕಡೆಗೊದ್ದು
ಎಡಬಲಂಗಳ ತಡಹಿ ನಡುಮಧ್ಯದ ಮಾರ್ಗವಿಡಿದು
ಸುಷುಮಾಗಿರಿಯನಡರಿ ಕಡೆಮೊದಲಿಲ್ಲದ
ಬೆಳಗಿನಲೊಡಗಿ ಬೆಳಗುತಿರ್ದೆನಾಗಿ ನಾನು
ಪರಮಶಿವಯೋಗಿಯಾದೆನಯ್ಯ ಅಖಂಡೇಶ್ವರಾ !

ಸಾಧನೆಯ ಹೋರಾಟ ಸಿದ್ಧಿಯ ಸಂತೃಪ್ತಿಗಳೆರಡೂ ಸೇರಿ ಈ ಸುಂದರ ವಚನವಾಗಿದೆ. ಇಲ್ಲಿಗೆ ಯೋಗಿಕೊಳ್ಳದ ಏಕಾಂತವಾಸ, ಯೋಗಸಾಧನೆ ಮುಗಿಯುತ್ತವೆ. ಶಿವಯೋಗಿಗಳು ಜೇವರಗಿಗೆ ಮರುಳುತ್ತಾರೆ. ಜನರು ಸಂಭ್ರಮದಿಂದ ಸ್ವಾಗತಿಸುತ್ತಾರೆ. ಗುರು ಅಖಂಡೇಶ್ವರರು ಆನಂದತುಂದಿಲರಾಗುತ್ತಾರೆ. ಶಕೆ ೧೬೪೫ರಲ್ಲಿ ಮಠದ ಅಧಿಕಾರವನ್ನು ಷಣ್ಮುಖ ಶಿವಯೋಗಿಗಳಿಗೆ ಒಪ್ಪಿಸಿ ೧೬೪೫ ರಲ್ಲಿ ಲಿಂಗದೊಳಗಾಗುತ್ತಾರೆ.

ಗುರುಗಳಾದ ಅಖಂಡೇಶ್ವರರ ಬಗ್ಗೆ ಷಣ್ಮುಖ ಶಿವಯೋಗಿಗಳಿಗೆ ಅಸೀಮ ಭಕ್ತಿ. ಇವರ ವಚನಗಳ ಅಂಕಿತ ಅಖಂಡೇಶ್ವರ. ಅಖಂಡೇಶ್ವರ ವಚನಗಳೆಂದೇ ಇವುಗಳ ಪ್ರಸಿದ್ಧಿ. ಜನಪ್ರಿಯತೆಯಲ್ಲಿ ಇವು ಯಾವ ಪುರಾತನ ಪ್ರಮಥರ ವಚನಗಳಿಗೂ ಕಡಮೆಯಿಲ್ಲ. ಪುರಂತರು ಪ್ರೀತಿಯಿಂದ ಹೇಳುವ ವಚನಗಳಿವು; ಒಕ್ಕಲಿಗರು ಕಕ್ಕುಲತೆಯಿಂದ ಹಾಡುವ ವಚನಗಳಿವು ; ಯೋಗಿಗಳು ಅನುರಾಗದಿಂದ ಓದುವ ವಚನಗಳಿವು.

"ಅಡವಿಯಲ್ಲಿದ್ದ ಗೋವು ಮನೆಯಲ್ಲಿದ್ದ ಕರುವಿಂಗೆ ಚಿಂತಿಸಿ
ಬಂದು ಹಾಲನೂಡಿ ಮೋಹ ಮಾಡುವುದಲ್ಲದೆ ಆ ಕರುವೆತ್ತಬಲ್ಲುದಯ್ಯಾ?
ನಾನು ಕರ್ಮದೇಹವಿಡಿದು ಪರಿಭವದಲ್ಲಿ ತೊಳಲುತ್ತಿರಲು
ದಯಹುಟ್ಟಿ ಎನ್ನಮರವೆಯ ಸಂಸಾರವ ತೊಲಗಿಸಿ
ಕರುಣದಿಂದ ಸಲಹಬೇಕೆಂಬ ಚಿಂತೆ ನಿನಗಲ್ಲದೆ
ನಾನೆತ್ತ ಬಲ್ಲೆನಯ್ಯ ಅಖಂಡೇಶ್ವರಾ !"

ಎಂಬ ನಂಬುಗೆಯ ನಿಲುವು

"ಗುರುವ ನೋಡಿರೊ, ಲಿಂಗ ಹಾಡಿರೋ, ಜಂಗಮಕ್ಕೆ ನೀಡಿರೋ, ಅಂಗಜ ವೈರಿ ಅಖಂಡೇಶ್ವರನ ಕೂಡಿರೊ"

ಎಂಬ ಸೂತ್ರರೂಪದ ಆಹ್ವಾನ ಧ್ವನಿ ;

"ಶಿವ ಶಿವಾ, ಎನ್ನ ಮನದ ಆಳಾಪವ ಅವಧರಿಸಯ್ಯ ಸ್ವಾಮಿ;
ಎನಗೆ ಭಕ್ತಿ ಬೇಡ, ಎನಗೆ ಜ್ಞಾನ ಬೇಡ, ಎನಗೆ ವೈರಾಗ್ಯ ಬೇಡ !
ನಿಮ್ಮ ಶರಣರು ಉಟ್ಟುಬಿಟ್ಟ ಮೈಲಿಗೆಯ ಬಟ್ಟೆ
ಉಗುಳಿದ ತಾಂಬೂಲ, ಒಕ್ಕುಮಿಕ್ಕ ಪ್ರಸಾದವನೆ ಕರುಣಿಸಿ
ಅವರ ಪಡುಗ ಕಾಯ್ವಂತೆ, ಪಾದರಕ್ಷೆಯ ಹಿಡಿವು
ದಕ್ಕೆ ಯೋಗ್ಯನಪ್ಪಂತೆ, ಅವರ ಕಡೆಯ ಬಾಗಿಲನೆ
ಕಾಯುವಂತೆ ಮಾಡಯ್ಯ ಎನ್ನ ಅಖಂಡೇಶ್ವರಾ !"

ಎಂಬ ಕಿಂಕರ ಭಾವ ;

"ದಯವಿರಬೇಕು ಸಕಲ ಪ್ರಾಣಿಗಳಲ್ಲಿ
ಭಯವಿರಬೇಕು ಗುರುಲಿಂಗ ಜಂಗಮದಲ್ಲಿ
ಸ್ವಯವಿರಬೇಕು ಸಕಲ ಗುಣಂಗಳಲ್ಲಿ
ನಯವಿರಬೇಕು ನುಡಿಗಡಣದಲ್ಲಿ"

ಎಂಬ ಲಯಬದ್ಧ ವಾಕ್ಯರಚನೆಯ ಸೊಗಸು;

"ಕುಂಭ ಸಹಸ್ರ ಉದಕದೊಳಗೆ
ಬಿಂಬಿಸಿ ತೋರುವ ಸೂರ್ಯನೊಬ್ಬನಲ್ಲದೆ
ಮತ್ತೆ ಹಲವರುಂಟೆ ಅಯ್ಯ?
ಸಕಲ ದೇಹಗಳೊಳಗೆ ಸಂಭ್ರಮಿಸಿ ತುಂಬಿರ್ಪ
ಪರವಸ್ತು ನೀನೊಬ್ಬನಲ್ಲದೆ ಮತ್ತಾರನು ಕಾಣೆನಯ್ಯ
ಅಖಂಡೇಶ್ವರಾ !"

ಎಂಬ ಸಮದರ್ಶಿತ್ವ :

"ದೇಹವೆಂಬ ದೇಗುಲದೊಳಗೆ
ಭಾವ ಸಿಂಹಾಸನವಿಕ್ಕಿ
ಜೀವದೊಡೆಯನ ಪೂಜಿಸಬಲ್ಲೊಡೆ
ದೇವರಿಗೆ ದೇವರೆಂಬನಯ್ಯ ಅಖಂಡೇಶ್ವರಾ"

ಎಂಬ ಕಾಣ್ಕೆ :

"ನೋಡಿರೆ, ನೋಡಿರೆ, ಬಂದು ವಿಚಿತ್ರವ;
ಶಿಷ್ಯನೆಂಬ ಹೆಂಡತಿಯ ಶ್ರೀಗುರುವೆಂಬ ಗಂಡನು
ಹಸ್ತಮಸ್ತಕ ಸಂಯೋಗವೆಂಬ ಕೂಟವ ಕೂಡಲು
ಷಡಕ್ಷರ ಮಂತ್ರವೆಂಬ ವೀರ್ಯವು ಚಲನೆಯಾಗಿ
ಆ ಶಿಷ್ಯನೆಂಬ ಹೆಂಡತಿಯ ಕರ್ಣವೆಂಬ ಗರ್ಭವ ಪ್ರವೇಶಿಸಲು
ಮನ ಬಸುರಾಗಿ ಕಂಗಳೆಂಬ ಯೋನಿಯಲ್ಲಿ
ಲಿಂಗವೆಂಬ ಮಗನ ಹಡೆದು ಅಂಗೈಯೆಂಬ ತೊಟ್ಟಿಲಲ್ಲಿಕ್ಕಿ
ಮಂಗಳಸೂತ್ರವೆಂಬ ಜೋಗುಳ ಹಾಡಿ
ಅಖಂಡೇಶ್ವರನೆಂಬ ಹೆಸರಿಟ್ಟರು ನೋಡಾ !
ಇದು ಕಾರಣ ನೀವೀಗ ಎನಗೆ ಮಗನಾದಿರಿ,
ನಾ ನಿಮಗೆ ತಾಯಾದೆನಯ್ಯ, ಅಖಂಡೇಶ್ವರಾ !"

ಎಂಬ ರೂಪಕದ ಸೊಬಗು,

"ಮನವೆಂಬ ಒರಳಿಗೆ ಸಕಲ ಕರಣಂಗಳೆಂಬ ತಂಡುಲವ ಹಾಕಿ
ಸುಜ್ಞಾನವೆಂಬ ಒನಿಕೆಯ ಪಿಡಿದು

ಪರಮಪರಿಣಾಮದೊಳಗೋಲಾಡುತ್ತ ಕುಟ್ಟಿ
ಅಜ್ಞಾನವೆಂಬ ತೌಡಕೇರಿ ಚಿತ್ಕರಣಂಗಳೆಂಬ ಅಕ್ಕಿಯ
ಸದ್ಭಾವವೆಂಬ ಭಾಂಡದಲ್ಲಿ ತುಂಬಿ
ಪರಮಾನಂದಜಲವೆಂಬ ಎಸರಿಟ್ಟು
ಘ್ರಮಟಿಯೆಂಬ ಒಲೆಯ ಹೂಡಿ ಚಿದಗ್ನಿಯೆಂಬ ಬೆಂಕಿಯ ಪುಟವನಿಕ್ಕಿ
ಅರಿಷಡ್ವರ್ಗಗಳೆಂಬ ಸೌದೆಯ ಹೊತ್ತಿಸಿ
ಮಹಾಜ್ಞಾನವೆಂಬ ಪಾಕವ ಮಾಡಿ
ಪರಿಪೂರ್ಣವೆಂಬ ಪರಿಯಾಣದಲ್ಲಿ ಗಡಣಿಸಿಕೊಂಡು
ಅಖಂಡ ಪರಿಪೂರ್ಣ ಮಹಾ ಘನಲಿಂಗಕ್ಕೆ
ನೀಡಬಲ್ಲಾತನೆ ಶರಣನು"

ಎಂಬ ನವೀನ ಪಾಕಶಾಸ್ತ್ರದ ರಮ್ಯತೆ ;

"ತಾ ಒಳ್ಳೆಯವನಾದೊಡೆ ಸರ್ವರೂ ತನಗೆ ಒಳ್ಳೆಯವರಾಗಿರ್ಪರು;
ತಾ ಹೀನನಾದೊಡೆ ಸರ್ವರೂ ತನಗೆ ಹೀನರಾಗಿರ್ಪರು;
ತಾ ಒಳ್ಳೆಯವನಾಗಿ ಸರ್ವರೂ ತನಗೆ ಹೀನರಾದೊಡೆ
ಅದು ತನ್ನ ಪೂರ್ವಕರ್ಮ;
ತಾ ಹೀನನಾಗಿ ಸರ್ವರೂ ತನಗೆ ಒಳ್ಳೆಯವರಾದಡೆ
ಅದು ತನ್ನ ದೈವದ ಬಲವು ನೋಡು, ಅಖಂಡೇಶ್ವರಾ"

ಎಂಬ ಸ್ವಾನುಭವ ಸಾರಸರ್ವಸ್ವ–ಇವರ ವಚನಗಳಲ್ಲಿ ವೆಗ್ಗಳವಾಗಿ ಸಿಕ್ಕುವ ಸುಪ್ಪಾಣಿಯ ಮುತ್ತುಗಳು. ಕೆಲವೆಡೆಗಳಲ್ಲಿ ಮಾತಿನ ಸೊಗಸು ಮೇರೆಯನ್ನು ಮುಟ್ಟಿದೆ.

"ಹಾಲ ಹರಿವಿಯ ಮೇಲೆ ಮಜ್ಜಿಗೆಯ ತುಂಬಿರಿಸಿದೊಡೇನು–
ಹೆಪ್ಪಾಗಬಲ್ಲುದೆ?"
"ಬಲ್ಲವರ ಬೆಸಗೊಂಡೊಡೆ ಸೊಲ್ಲನಾರೈದು ಮೆಲ್ಲಗೆ ನುಡಿಯಬೇಕು"
"ಅಲ್ಲದುದದ ಹಿಡಿವನಲ್ಲ ಶರಣ, ಇಲ್ಲದುದ ನುಡಿವನಲ್ಲ ಶರಣ,
ಗೆಲ್ಲ ಸೋಲಿಂಗೆ ಹೋರವವನಲ್ಲ ಶರಣ"
"ಇರುಳು ಕಂಡ ಕಮರಿಯ ಹಗಲು ಬೀಳುವರೆ?"
"ಅಂದೊಬ್ಬ ದೇವ ಇಂದೊಬ್ಬ ದೇವನೆಂದು

ಸಂದೇಹಗೊಳ್ಳಬೇಡ ಮನವೆ"

"ಬಾಳೆಯ ಎಲೆಯ ಮೇಲೆ ತುಪ್ಪವ ತೊಡೆದಂತೆ,
ಒಪ್ಪವಿಟ್ಟು ವಚನವ ನುಡಿದೆನಲ್ಲದೆ ನಡೆಯಲ್ಲಿ
ಒಪ್ಪವಿಟ್ಟು ನಡೆಯಲ್ಲಿಲ್ಲವಯ್ಯ ನಾನು"
"ಸತ್ಯದ ಮನೆಯಲ್ಲಿ ಶಿವನಿಪ್ಪ"
"ಕಾಮವುಳ್ಳವರಿಗೆ ಲಿಂಗಪ್ರೇಮವಿನ್ನೆಲ್ಲಿಯದೊ?"
"ತೆಂಗಿಗೆ ನೀರನೆರೆದರೆ ಅಂಗೈಯಲ್ಲಿ ಫಲ"
"ಬಯಲು ಬಯಲು ಬೆರೆದಲ್ಲಿ ಮೇರೆಯುಂಟೆ ಅಯ್ಯ?"
"ಜಡೆಯ ಬಿಟ್ಟೊಡೇನು, ಆಲದಮರಕ್ಕೆ ಬೇರಿಳಿದಂತೆ;
ಭಸ್ಮವ ಹೂಸಿದಡೇನು, ಚಪ್ಪರದ ಮೇಲೆ ಕಗ್ಗುಂಬಳ
ಕಾಯ ಬಿದ್ದಂತೆ; ರುದ್ರಾಕ್ಷಿಧರಿಸಿದಡೇನು ಏರಂಡ
ಗಿಡ ಗೊನೆಯ ಬಿಟ್ಟಂತೆ?"

"ಮುರಿದ ಬಂಗಾರವ ಬೆಳಗಾರದಲ್ಲಿ ಬೆಚ್ಚಂತಿರಬೇಕು"

"ಅಂಗಕ್ಕೆ ಆಚಾರವೇ ಚೆಲುವು,
ಮನಕ್ಕೆ ಮಹಾನುಭಾವವೇ ಚೆಲುವು,
ಆತ್ಮಂಗೆ ಅರುಹೆ ಚೆಲುವು"

ಇಂಥ ರಸಾತ್ಮಕ ವಾಕ್ಯಗಳು ಹೇರಳವಾಗಿವೆ ಇವರ ವಚನಗಳಲ್ಲಿ. "ಬಸವಣ್ಣನ ಹಾಸಿಕೊಂಡು, ಬಸವಣ್ಣನ ಹೊದ್ದುಕೊಂಡು, ಬಸವಣ್ಣನ ತೊಂತಿಕೊಂಡು, ಬಸವಣ್ಣನ ಧರಿಸಿಕೊಂಡು, ಬಸವಾಕ್ಷರವೆಂಬ ಹಡಗವನೇರಿ ಬಸವ, ಬಸವ, ಬಸವಾ ಎಂದು ಭವಸಾಗರವ ದಾಟಿದ" ಇವರಿಗೆ ಈ ತೆರದ ಮಾತಿನ ಸಿದ್ಧಿ ದೊರೆಕೊಂಡುದೇನೋ ಅಚ್ಚರಿಯಲ್ಲ.

ಹೀಗೆ ಬಳಿಗೆ ಬಂದವರನ್ನು ಭಕ್ತರನ್ನಾಗಿ ಮಾಡುತ್ತ, ನಂಬಿ ಬಂದವರಿಗೆ ನಿಜವ ತೋರುತ್ತ ಷಣ್ಮುಖ ಶಿವಯೋಗಿಗಳು ೭೨ ವರ್ಷಕಾಲ ಬಾಳಿ ಬೆಳಗಿದರು. ಶಕೆ ೧೭೧೧ ವೈಶಾಖ ಬಹುಳ ೫ರಂದು ಜೇವರಗಿಯಲ್ಲಿ 'ಅವಿರಳ ಸಮರಸ ನಿಜೈಕ್ಯ ನಿರವಯಲ ಪದವಿಯನ್ನು' ಪಡೆದರು. ಇಂದಿಗೂ ಪ್ರತಿ ವರ್ಷ ವೈಶಾಖ ಬಹುಳ ಪಂಚಮಿಗೆ ಅವರ ರಥೋತ್ಸವ ವೈಭವದಿಂದ ಜರುಗುತ್ತಿದೆ. ಅವರು ಬರೆದ ಜೋಗುಳ ಪದಗಳೂ ಇದ್ದು ನಾಡಿಗರ ನಾಲಿಗೆಯ ಮೇಲೆ ನಲಿದಾಡುತ್ತಿವೆ. ಒಂದು ಜೋಗುಳ ಪದದ ಈ ನುಡಿಯನ್ನು ಅವರಿಗೇ ಅರ್ಪಿಸೋಣ.

"ಜೋ ಜೋ ಆದಿ ಮಧ್ಯಾಂತ ದೂರ
ಜೋ ಜೋ ವೇದವೇದಾಂತ ಸಾರ
ಜೋ ಜೋ ನಾದಬಿಂದು ಕಳೆಪೂರ । ನಿತ್ಯ ।
ಜೋ ಜೋ ತತ್ವಜ್ಞಾನ ಶೃಂಗಾರ ಜೋ ಜೋ......"

■

# ಕರುಣಾಕರ ಶರಣಬಸವೇಶ್ವರ

"ಪರಿಭವಾಟವಿ ವೀತಿಹೋತ್ರ ಸು ।
ಚರಿತ ಮಂಗಳ ಗಾತ್ರ ಸಂಸೃತಿ ।
ಶರಧಿತಾರಕಭೈತ್ರ ಶಿವಶರಣೌಘವನಚೈತ್ರ ॥
ದುರಿತಭೂಜಖನಿತ್ರ ಮಾಯಾ ।
ವರಣವಸ್ತ್ರಲವಿತ್ರ ನಿರ್ಮಲ ।
ವರದ ಕಲಬುರಿಗಿಯ ಶರಣ ಬಸವೇಶ ಕೃಪೆಯಾಗು"॥*

ಶ್ರೀ ಬಸವೇಶ್ವರರು ದ್ವಿತೀಯ ಶಂಭುವೆಂದು ಹೆಸರಾಗಿರುವಂತೆ ಶ್ರೀ ಶರಣ ಬಸವೇಶ್ವರರು ದ್ವಿತೀಯ ಬಸವೇಶ್ವರರೆಂದು ಹೆಸರಾಗಿದ್ದಾರೆ. ಬಸವೇಶ್ವರರ ಕಾರ್ಯಕ್ಷೇತ್ರ ಕಲ್ಯಾಣವಾದರೆ ಶರಣಬಸವೇಶ್ವರರ ಕಾರ್ಯಕ್ಷೇತ್ರ ಕಲಬುರಗಿ. ಶರಣಬಸವೇಶ್ವರರು ಕಲ್ಯಾಣಾಭಿಮುಖವಾಗಿ ಹೊರಟವರು ಕಾರಣಾಂತರಗಳಿಂದ ಕಲಬುರಿಗಿಯಲ್ಲಿಯೇ ನಿಂತುಬಿಟ್ಟರು. ತಾವು ಕಲ್ಯಾಣಕ್ಕೆ ಹೋಗುವುದು ಸಾಧ್ಯವಾಗದಾಗಲು ಕಲ್ಯಾಣವೇ ಕಲಬುರಿಗಿಗೆ ಬರುವಂತೆ ಮಾಡಿಬಿಟ್ಟರು ! ಇಂದಿಗೂ ಕಲಬುರಿಗಿಗೆ ಕಲ್ಯಾಣದ ಕಡೆಯ ಬಾಗಿಲವೆಂದು ಕೀರ್ತಿ ಶರಣ ಬಸವೇಶ್ವರರ ಮಹಿಮಾಪ್ರಭಾವದಿಂದಲೇ ದೊರೆತಿದೆ.

ಬಸವೇಶ್ವರ ಶರಣಬಸವೇಶ್ವರರ ಜೀವನಸಾದೃಶ್ಯ ಇಷ್ಟಕ್ಕೇ ಮುಗಿಯುವುದಿಲ್ಲ. ಅವರಿಬ್ಬರೂ ದಾಸೋಹಜೀವಿಗಳು, ಭಕ್ತಿಭಂಡಾರಿಗಳು, ಪವಾಡಪುರುಷರು, ಪತಿತಪಾವನರು, ದೀನರ, ದುಃಖಿತರ, ದಲಿತರ ಉದ್ಧಾರಕರು. ಸಂಸಾರಿಗಳಾಗಿಯೇ ಜೀವನ ನಡೆಸಿ ಸ್ವಪರ ಸದ್ಗತಿಯನ್ನು ಸಾಧಿಸಿದವರು.

ಅವರಿಬ್ಬರು ಒಂದೆರಡು ವಿಷಯಗಳಲ್ಲಿ ಮಾತ್ರ ವಿಭಿನ್ನರಾಗಿದ್ದಾರೆ. ಬಸವೇಶ್ವರರಂತೆ ಶರಣಬಸವೇಶ್ವರರು ಮಂತ್ರಿಗಳಾಗಲಿಲ್ಲ, ಹೊಸ ಸಮಾಜ ಕಟ್ಟಲಿಲ್ಲ, ವಚನಗಳನ್ನು ಉಸಿರಲಿಲ್ಲ. ಮಹಾಮೌನವೇ ಅವರ ಜೀವನದ

* ಪಂಡಿತ ಕಲ್ಲಿನಾಥಶಾಸ್ತ್ರಿ ಪ್ರಣೀತ ಶ್ರೀ ಶರಣಬಸವೇಶ್ವರ ಪುರಾಣದಿಂದ

ಜೀವನಾಡಿಯಾಗಿದ್ದಿತು. ಸಾಕ್ರಿಟಿಸನಂತೆ ಏನನ್ನೂ ಬರೆದಿಡದೆ ಅನೇಕರನ್ನು ಉದ್ಧರಿಸಿದ ಮಹಾತ್ಮರು ಶರಣಬಸವೇಶ್ವರ.

ಸಾಕ್ರಟೀಸನಿಗೆ ಪ್ಲೇಟೋನಂಥ ಮಹಾಮೇಧಾವಿಯಾದ ಶಿಷ್ಯ ಸಿಕ್ಕಂತೆ ಶರಣಬಸವೇಶ್ವರರಿಗೆ ಕಡಕೋಳ ಮಡಿವಾಳಪ್ಪನವರಂಥ ಮಹಾನುಭಾವಿಯಾದ ಶಿಷ್ಯರು ದೊರೆತರು. ಆದರೆ ಪ್ಲೇಟೋನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳುವಲ್ಲಿ ಸಾಕ್ರಿಟೀಸನಿಗೆ ಸಮಾಜದ ವಿರೋಧವನ್ನು ಎದುರಿಸುವ ಪ್ರಸಂಗವೇನೂ ಬರಲಿಲ್ಲ; ಶರಣಬಸವೇಶ್ವರರಿಗೆ ಅಂಥ ಪ್ರಸಂಗ ಬಂದರೂ ಅವರು ಅದನ್ನು ಲೆಕ್ಕಿಸದೆ ಶಿಷ್ಯನನ್ನು ಎತ್ತಿಹಿಡಿದರೆಂಬುದು ಅವರ ಕೆಳಗಣ ಚರಿತ್ರೆಯಿಂದ ಗೊತ್ತಾಗುವುದು.

ಕಲಬುರಗಿಯ ದಕ್ಷಿಣ ದಿಕ್ಕಿಗೆ ೩೦–೩೨ ಮೈಲುಗಳ ಅಂತರದಲ್ಲಿ ಅರಳಗುಂಡಿಗೆಯೆಂಬ ಗ್ರಾಮವಿದೆ. ಅಲ್ಲಿ ಸಾಲೋಕ್ಯಾನ್ವಯಸಂಭೂತರಾದ ಆದಯ್ಯ–ಮಡಿಯಮ್ಮರೆಂಬ ದಂಪತಿಗಳು 'ಸತ್ಯದಲ್ಲಿ, ಸದ್ಭಕ್ತಿಯಲಿ, ಸಚ್ಚರಿತದಲಿ' ಆ ಭಾಗಕ್ಕೆ ಎಣೆಯಿಲ್ಲದವರಾಗಿ ಜಾಣ್ಮೆಯಿಂದ ಲೌಕಿಕ ಪರಮಾರ್ಥವೆರಡನ್ನೂ ಹೊಂದಿಸಿ ಅಂದವಾದ ಬಾಳ್ವೆಯನ್ನು ಸಾಗಿಸಿದ್ದರು.

ನೋಡುವವರಿಗೇನೋ, "ಸತಿಪತಿಗಳಿವರ ಸಮರತಿಸುಖದ ಬಾಳುವೆಗೆ ಪ್ರತಿಯುಂಟೆ ಲೋಕದೊಳು" ಎಂದು ಎನಿಸುತ್ತಿದ್ದರೂ ಸಂತಾನವಿಲ್ಲದ ಚಿಂತೆ ಅವರ ಶಾಂತಜೀವನಸರಿಸಿಯ ಮೇಲೆ ಆಗಾಗ ವ್ಯಾಕುಲದ ಬುದ್ಬುದಗಳನ್ನು ಹುಟ್ಟಿಸದಿರಲಿಲ್ಲ. 'ದಾನವಿಲ್ಲದ ಧರ್ಮ, ವಿಷಯಧ್ಯಾನವಿಲ್ಲದ ತಪವು, ಜೀವ ಸ್ಥಾನದನುಸಂಧಾನವಿಲ್ಲದ ಯೋಗದಭ್ಯಾಸ, ಜ್ಞಾನವಿಲ್ಲದ ಸಿದ್ಧಿ ವರಸಂತಾನವಿಲ್ಲದ ಬಾಳ್ಕೆಯಿಂ' ಫಲವೇನೆಂದು ಆಗಾಗ ನಿಜವನರಿದ ನಿಶ್ಚಿಂತ ಆದಯ್ಯನೂ ಯಾವಾಗಲೂ ಮಡಿಯಮ್ಮನೂ ಕಳವಳಿಸುತ್ತಲಿದ್ದರು.

ಅನಾಸಕ್ತನ ಅರ್ಧಾಂಗಿಯಾಗಿಯೂ ಮಡಿಯಮ್ಮ ಹೆಂಗರುಳಿನ ತಾಯಿಯಲ್ಲವೆ? ಒಂದು ದಿನ ತಡೆಯಲಾರೆದೆ "ಕಂದನ ಕೊಡು ಶಿವನೆ ಬಂಧನ ಪಡಲಾರೆ" ಎಂದು ಬೇಡಿಯೇಬಿಟ್ಟಳು. ಬೇಡುವುದು ಶರಣಮಾರ್ಗಕ್ಕೆ ಸಲ್ಲದ ವಿಷಯ. ಅದು ಭಕ್ತಿಯ ಕೂಲಿ ಬೇಡಿದಂತೆ. ಆದಯ್ಯ ಕುಪಿತನಾಗಿ ಹೇಳಿದ

"ಬೇಡುತಿರುವುದೆ ಕಾಮವದು ಕೈ ।
ಗೂಡದಿರುವುದೆ ಕ್ರೋಧವಂತದು ।
ಕೇಡಹುದೆ ಲೋಭತ್ವವಂದರಿಂ ಮರೆದಿಹುದೆ ಮೋಹಂ ॥
ನಾಡೆ ಮೋಹದೊಳಾಡುವುದೆ ಮದ ।

ಮೂಡಿದಾ ಮದ ಬಲಿಯೆ ಮತ್ಸರ ।
ಬೇಡುವೊಂದರೊಳಿಷ್ಟು ಪಾಪಂ, ಬೇಡುವುದೆ ಬೇಡ?"॥
–ಪಂಡಿತ ಕಲ್ಲಿನಾಥಶಾಸ್ತ್ರಿ ಪ್ರಣೀತ ಪುರಾಣ

ಸರಿ, ಮೊದಲೇ ಮೌನವಲ್ಲರಿಯ ಮಿಡಿಯಾಗಿದ್ದ ಮಡಿಯಮ್ಮನು ಇನ್ನೂ ಮೌನವಾಗಿಬಿಟ್ಟಳು. ಇನ್ನು ಬಂತಲ್ಲ ಬರಿ ಹರನಿಗೆ ! ಮಡಿಯಮ್ಮನ ಕನಸಿನಲ್ಲಿ ಕಾಣಸಿಕೊಮಡ : "ವತ್ಸೆ, ನಿನ್ನ ಭಾವನ ಸತಿ ಸಂಗಮ್ಮನುದರದಲ್ಲಿ ಜನಿಸುವ ಮಗನೇ ನಿನಗೆ ಮಗನಾಗುವನು. ಅವನ ಹೆಸರು ಶರಣಬಸವ." ಅಂದೇ ಸಂಗಮ್ಮನಿಗೂ ಸ್ವಪ್ನ. ಸ್ವಪ್ನದಲ್ಲಿ ಶಂಕರ– "ನಿನಗೆ ಮಗ ಹುಟ್ಟುವನು. ಆದರೆ ಅವನು ನಿನ್ನ ಮಗನಲ್ಲ–ಮಡಿಯಮ್ಮನ ಮಗನೆಂದು ತಿಳಿದು ಆಕೆಗೆ ಒಪ್ಪಿಸಿಬಿಡು!" ಎಂದು ಆಣತಿಯಿತ್ತು ಅಂತರ್ಧಾನನಾದ.

ಶರಣರು ಉದಯವಾಗುವ ರೀತಿಯೇ ವಿಚಿತ್ರವಾದುದು. ಆದಯ್ಯ ಅಮರೇಶ್ವರನ ಭಕ್ತ. ಅಮರೇಶ್ವರನು ಉದಿಸಿದುದೇ ವಿಚಿತ್ರವಾಗಿದ್ದಿತೆಂದ ಮೇಲೆ ಆತನ ವರದಿಂದ ಹುಟ್ಟಿದ ಶರಣಬಸವೇಶ್ವರರು ಒಬ್ಬರು ಉದರದಲ್ಲಿ ಉದಿಸಿ ಇನ್ನೊಬ್ಬರಿಗೆ ಮಗುವಾಗಿ ಬೆಳದು ಇಳೆಯನ್ನು ಬೆಳಗಿದುದೇನಾಶ್ಚರ್ಯ !

ಹರನ ಹಸಾದದಂತೆ ಶರಣ ಬಸವೇಶ್ವರರು ಸಂಗಮ್ಮನ ಪುಣ್ಯೋದರದಿಂದ ಶಾ.ಶ. ೧೬೬೮ (ಕ್ರಿ.ಶ. ೧೭೪೬), ಪೌಷ್ಯಮಾಸ ಉತ್ತರಾಯಣ ಹೇಮಂತ ಋತು ಕೃಷ್ಣಪಕ್ಷ ಅಷ್ಠಮೀ ಚಂದ್ರವಾರ ಚಿತ್ತಾನಕ್ಷತ್ರದಲ್ಲಿ ಉದಯವಾದರು. ಶಿವನ ನಿರೂಪದಂತೆ ಸಂಗಮ್ಮನು ಈ ಕಾರಣಿಕ ಶಿಶುವನ್ನು ಮಡಿಯಮ್ಮನಿಗೆ ಒಪ್ಪಿಸಿ ಕೃತಾರ್ಥಳಾದಳು.

ಕಲಕೇರಿ ಹಿರೇಮಠದ ಮರುಳಸಿದ್ಧದೇವರಿಂದ ದೀಕ್ಷೆಯಾಯಿತು. ತಕ್ಕಷ್ಟು ವಿದ್ಯಾಭ್ಯಾಸವೂ ಆಯಿತು. ಮಾಶಾಳ ಗ್ರಾಮದ ಭಾವೀಮನಿ ಶಾಂತಲಿಂಗಪ್ಪನವರ ಮಗಳಾದ ಮಹಾದೇವಮ್ಮನೊಡನೆ ಮದುವೆಯೂ ಆಯಿತು. ಶರಣ ಬಸವನೂ ಸಂಸಾರಿಯಾದ.

ಆದರೆ ಎಲ್ಲ ಸಂಸಾರಿಗಳಂತಲ್ಲ ಈ ಸಂಸಾರಿ. "ಇಂದಿಂಗೆ ನಾಳಿಂಗೆಂದು ಚಿಂತಿಸಲೇಕೆ, ತಂದಿಕ್ಕುವ ಶಿವಂಗೆ ಬಡತನವೆ?" ಎಂಬ ಶರಣಧರ್ಮ ಸೂತ್ರದಿಂದ ಬದ್ಧರಾಗಿದ್ದ ಶರಣಬಸವಣ್ಣನವರು ಬಂದು ಬೇಡಿದವರಿಗೆಲ್ಲ ಕೊಟ್ಟು ಮನೆ ಬರಿದು ಮಾಡಿಬಿಡುತ್ತಿದ್ದರು. ಇದು ಇವರ ಅಣ್ಣತಮ್ಮಂದಿರ ಮನಸ್ಸಿಗೆ ಬರಲಿಲ್ಲ. ನಾವು ದುಡಿದದ್ದನ್ನು ದಾನಮಾಡಿ ಹೆಸರುಗಳಿಸುವುದಾವಚೋದ್ಯ? ಶರಣಬಸವನು

ಸ್ವತಃ ದುಡಿದು ಗಳಿಸಿ ದಾನವಾಡಿ ತೋರಿಸಲಿ–ಎಂದು ಎಲ್ಲರೂ ಬೇರೆಯಾಗಿಬಿಟ್ಟರು.

ಶರಣನ ಪಾಲಿಗೆ ಎಲ್ಲರೂ ಆರಿಸಿಕೊಂಡು ಬಿಟ್ಟದ್ದ ಹಾಳುಮನೆ, ಒಂದು ಕರಿಕೆಯ ಹೊಲ ಬಂದುವು. ಅವನ್ನೇ ಶಿವಪ್ರಸಾದವೆಂದು ಭಾವಿಸಿ ಶರಣರು ಎಲ್ಲಕ್ಕೂ ಮೊದಲು ಆ ಕರಿಕೆಯ ಹೊಲದ ನಾಲ್ಕು ಕಡೆಗೆ ನಾಲ್ಕು ನೀರು ತುಂಬುವ ರಂಜಣಿಗಳನ್ನು ಕಟ್ಟಿದರು. ನಿತ್ಯವೂ ಅವುಗಳನ್ನು ನೀರಿನಿಂದ ತುಂಬುವುದೇ ಈ ಸತಿಪತಿಗಳಿಬ್ಬರ ಆದ್ಯ ಕರ್ತವ್ಯವಾಗಿಬಿಟ್ಟಿತು. ಈ ನೀರು ಯಾರಿಗಾಗಿ? ಇವರ ಹೊಲವನ್ನು ಮೇಯಬರುವ ಪಶುಪಕ್ಷಿಗಳಿಗಾಗಿ ! ಪಾಪ, ಅವು ನೀರು ಹುಡುಕುತ ಬೇರೆ ಕಡೆಗೇಕೆ ಹೋಗಬೇಕು? ಇಂದಿಗೂ ಅರಳ ಗುಂಡಿಗೆಯ ಶರಣರ ಹೊಲದಲ್ಲಿ ಈ ರಂಜಣಿಗೆಗಳಿವೆ–ಪವಿತ್ರ ಅವಶೇಷಗಳಾಗಿ!

ಶರಣನ ಸಾಗುವಳಿಯನ್ನೇನು ಹೇಳುವುದಿದೆ 'ಶರೀರವೆಂದೆಂಬುವ ಹೊಲವ ಹಸನಮಾಡಿ ಪರತತ್ತ್ವಬೆಳೆಯನ್ನು ಬೆಳೆದುಣ್ಣು'ವುದರಲ್ಲಿ ನಿಮಗ್ನರಾಗಿದ್ದ ಶರಣರಿಗೆ ಮಣ್ಣಿನ ಹೊಲ ಸಾಗುಮಾಡಲು ಸಮಯವೆಲ್ಲಿ ಸಿಕ್ಕಬೇಕು? ಸರಿ, ಕುರುಬರ ಸಗರಪ್ಪನಿಗೆ ಹೊಲ ಕೋರಿಗೆ ಕೊಟ್ಟು ತಾವೂ ಒಂದೆರಡು ತಾಸು ಹೊಲಗೆಲಸ ಮಾಡುತ್ತಿದ್ದರು.

ಎಲ್ಲರ ಹೊಲಗಳಲ್ಲಿ ಹೊಂಗಾಳು ತುಂಬಿದ ತೆನೆಗಳು ಕಂಗೊಳಿಸುತ್ತಿದ್ದರೆ ಶರಣನ ಹೊಲದಲ್ಲಿ ಹಕ್ಕಿ ಕುಕ್ಕಿ ಬಕ್ಕಿದ ಕಂಕಿಗಳೇ ಕಾಣುತ್ತಿದ್ದುವು. ಆದರೇನು–

"ಸುಂಕರೂಪದ ತೆನಿಯ ಶಂಕೆಯಿಲ್ಲದೆ ಮುರಿಸಿ
ಕಂಕಣವ ಕಟ್ಟಿ ಸಗರಪ್ಪ । ಹಾಕಿಸಲು
ಕಂಕಿ ಹುಲುಸಾಗಿ, ಕಣ ತುಂಬಿ !"

ಆ ಕಂಕಿಗಳಿಂದಲೇ ಕಾಳು ಸುರಿದು ಕಣ ತುಂಬಿತು. ಸಾಲದುದಕ್ಕೆ ಸಾಧ್ವೀ ಶಿರೋಮಣಿ ಮಹಾದೇವಿಯ ಪಾದಸ್ಪರ್ಶ ಪ್ರಭಾವ ಬೇರೆ–

"ಸುಂಕರಾಶಿಯ ಕಣಕೆ ಸಂಕದೇವನ ಬಲವು
ಕಂಕಿಯ ಕಣಕೆ ನಿನ ಬಲವು । ಮಹಾದೇವಿ
ಸೋಂಕಿದರೆ ರಾಶಿ ಕಣತುಂಬಿ !"

ಗಾಳಿಯು ಸಹ ಶರಣನ ರಾಸಿ ಹುಲುಸಾಗುವಂತೆ ಬೀಸಿತು–

"ರಾಶಿ ಗಾಳಿಯು ಬೀಸಿ ಸೂಸಿ ಹರಿಯಿತು ಕಣವು
ಕೂಸು ಕೋಳೂರ ಕಡೆಗಾಳಿ । ಬೀಸಿಂದು

ಮೀಸಲೀ ರಾಶಿ ಜಂಗಮಕೆ !"

ಇದೆಂಥ ರಾಶಿ ! ಜೋಗಿಗಳು, ಜಂಗಮರು, ಆಯದವರು, ಬಡವರು, ಊರವರು, ದೂರದವರು ಬಂದು ಒಯ್ದೇ ಒಯ್ಯುತ್ತಲಿದ್ದಾರೆ–ಆದರೆ ರಾಶಿ ಸವೆಯುವ ಮಾತೇ ಇಲ್ಲ ! ಶರಣರನ್ನು ಅಸೂಯೆಯಿಂದ ಹೊರಗಟ್ಟಿ ಬೆಳೆ ಬಣಗಿ ಬರಿಗೈಯವರಾಗಿದ್ದ ಶರಣರ ಅಣ್ಣತಮ್ಮಂದಿರೂ ಹೇರುಗಟ್ಟಳೆ ಕಾಳು ಹೇರಿಸಿಕೊಂಡು ಹೋಗುತ್ತಾರೆ. ಆದರೂ ರಾಶಿ ಅವಿನಾಶಿ ! ಸಗರಪ್ಪನ ಸಡಗರವನ್ನೇನು ಹೇಳುವುದು.



**ಕರುಣಾಕರ ಶರಣಬಸವೇಶ್ವರರ ದಾಸೋಹಕ್ಕೆ ಆ ವಿತ್ತಾಪಹಾರಕರು ನಿಧಿ ಸಲ್ಲಿಸಿದರು**

ಶರಣರ ಶಿವಾರ್ಚನೆ, ಜಂಗಮ ದಾಸೋಹ, ತುದಿ ಮೊದಲಿಲ್ಲದ ದಾನಧಾರೆ, ಸರ್ವಜೀವಹಿತರತಿ, ಸತ್ಯೋಪಾನೆ ಇತಿಮಿತಿಯಿಲ್ಲದೆ ನಡೆಯುತ್ತಿವೆ. ಪ್ರತಿನಿತ್ಯ ಪ್ರಾತಃಕಾಲ ಶರಣರು ಹಿಪ್ಪರಿಗೆಯ ಬಿಲ್ವವನದಿಂದ ಲಿಂಗಾರ್ಚನೆಗಾಗಿ ಬಿಲ್ವಗಳನ್ನು ತರುತ್ತಿದ್ದರು. ಒಂದು ದಿನ ಪದ್ಧತಿಯಂತೆ ಶರಣರು ಹಿಪ್ಪರಿಗೆಯ ಬಿಲ್ವ ವನದಲ್ಲಿ ಬಿಲ್ವಗಳನ್ನಾಯುತ್ತಲಿದ್ದಾಗ ಅವರ ಮಹಿಮೆಯನ್ನರಿಯದ ಕಳ್ಳರು ಅವರನ್ನು ಸುತ್ತಿದರು. ಮನುಜ ಹೃತ್ತಾಪಹಾರಕರಾಗಿದ್ದ ಶರಣರು ಈ ವಿತ್ತಾಪಹಾರಕರನ್ನು ಕಂಡು ಕನಿಕರ ಹುಟ್ಟಿ ಮನೆಗೆ ಹೋಗಿ ಹಣ ತಂದುಕೊಡುವೆನೆಂದು ಕಳ್ಳರಿಗೆ ಹೇಳಿದರು. ಶರಣರು ಸುಳ್ಳು ಹೇಳದವರೆಂದು ಆ ಪಾಪಿಗಳಿಗೂ ಮನವರಿಕೆಯಾಗಿ ಹೋಗಗೊಟ್ಟರು. ಅತ್ತ ಶರಣರು ಮನೆಯ ಕಡೆಗೆ ಹೊರಟರು; ಇತ್ತ ಕಳ್ಳರು ಶರಣರು ತಂದುಕೊಡಲಿರುವ ಹಣವನ್ನು ಹೂಳಲೆಂದು ನೆಲವನ್ನಗೆಯತೊಡಗಿದರು. ಆಶ್ಚರ್ಯ–ಅವರಗೆದ್ದ ಸ್ಥಳದಲ್ಲಿಯೇ ದೊಡ್ಡ ನಿಕ್ಷೇಪ ದೊರೆಯಿತವರಿಗೆ. ಇದು ಶರಣರ ಮಹಿಮಾಪ್ರಭಾವವೆಂದೇ ಅವರೆಲ್ಲರೂ ಅರಿತು ಪಶ್ಚಾತ್ತಾಪವಿದಗ್ಧರಾಗಿ ಆ ನಿಧಿ ನಿಕ್ಷೇತಸಹಿತ ಶರಣರ ಸನ್ನಿಧಿಗೆ ಹೋಗಿ ಆ ನಿಧಿಯನ್ನು ಶರಣರ ದಾಸೋಹಕ್ಕೆ ಸಲ್ಲಿಸಿ ಪಾಪಮಾರ್ಗವನ್ನು ತ್ಯಜಿಸಿ ಪುಣ್ಯಮಾರ್ಗವಲಂಬಿಗಳಾದರು. ಇದು ಬಸವಣ್ಣನವರು ತಮ್ಮ ಮನೆಗೆ ಕನ್ನಹಾಕಿದ ಕಳ್ಳರನ್ನೇ ಸಾತ್ವಿಕರನ್ನಾಗಿ ಮಾಡಿದ ಸಂದರ್ಭವನ್ನು ನೆನಪಿಗೆ ತರುತ್ತದೆ.

ಒಂದು ದಿನ ಬಿದನೂರಿನ ಮಲ್ಲಿಕಾರ್ಜುನಪ್ಪಗೌಡನೆಂಬ ತರುವನು ತಮ್ಮೂರಿನಲ್ಲಿ ಸಮಾಜದ ದೃಷ್ಟಿಯಲ್ಲಿ ಸಲ್ಲವ ರೀತಿಯಲ್ಲಿ ಹುಟ್ಟಿದ್ದ ಮಡಿವಾಳಪ್ಪನೆಂಬುವರನ್ನು ಕರೆದುಕೊಂಡು ಬಂದು ಶರಣರಡಿಯ ಹುಡಿಯಲ್ಲಿ ಹೊರಳಿ, “ತಂದೆ, ಇದು ತಿಪ್ಪೆಯಲ್ಲಿ ಹುಟ್ಟಿದ ಪತ್ರಿಯ ಗಿಡ–ಇದರ ಪತ್ರಿಗಳು ಪೂಜೆಗೆ ಯೋಗ್ಯವಾಗಬಲ್ಲುವೆ?” ಎಂದು ಕೇಳಿದನು.

ಫಳಿಗಣ್ಣಿನಿಂದ ಎಲ್ಲವನ್ನೂ ತಿಳಿದವರಾದ ಶರಣರು ಅಭಯವಾಣಿಯಿಂದ, “ಮಲ್ಲಿಕಾರ್ಜುನಪ್ಪ, ಕಲಂಕಿಯೂ ಕ್ಷಯರೋಗಿಯೂ ಮಿತ್ರೋದಯದಲ್ಲಿ ಕಳೆಗುಂದುವ ಮಿತ್ರದೋಹಿಯೂ ಆದ ಚಂದ್ರನನ್ನೇ ಶಿವನು ಮನ್ನಿಸಿ ಮುದಲೆಯಲ್ಲಿರಿಸಿಕೊಂಡಿದ್ದಾನೆ. ಮಡಿವಾಳಪ್ಪನ ತಪ್ಪೇನು ಇದಕ್ಕೂ ಘನವಾದುದೆ? ನಮ್ಮ ದೃಷ್ಟಿಯಲ್ಲಿ ಹುಟ್ಟಿಗೆ ಮಹತ್ವವಿರಬಹುದು; ಆದರೆ ಹುಟ್ಟಿಸುವ ಸೃಷ್ಟಿಕರ್ತನ ದೃಷ್ಟಿಯಲ್ಲಿ ಹುಟ್ಟಿಗೆ ಬೆಲೆಯಿಲ್ಲ, ಸದ್ಭಕ್ತಿಗೆ ಬೆಲೆಯಿದೆ. ಕಾರಣ ಮಡಿವಾಳಪ್ಪನವರಿಗೆ ಶಿವದೀಕ್ಷೆ ಮಾಡಲೇಬೇಕು.”

ಈ ಅಭಯದಾನದಿಂದ ಮಲ್ಲಿಕಾರ್ಜುನಪ್ಪ ಮಡಿವಾಳಪ್ಪ ಇಬ್ಬರೂ ಉಬ್ಬಿನೆಗೆದರು. ಗುರು ಮರುಳಸಿದ್ಧರಿಂದ ಮಡಿವಾಳಪ್ಪನವರಿಗೆ ಶಿವದೀಕ್ಷೆಯೂ ಆಯಿತು–ಅಂಥ ಸಮಾಜದ ಅಜ್ಞವಿರೋಧವನ್ನು ಅತಿಕ್ರಮಿಸಿ !* ಆದರೆ ಊರ ದೈವದವರು ಮಡಿವಾಳಪ್ಪನವರಿಗೂ ಶರಣ ಬಸವೇಶ್ವರರಿಗೂ ಬಹಿಷ್ಕಾರ ಹಾಕಿದರು–ಕುರುಡರು ಕೂಡಿ ಸೂರ್ಯ ಚಂದ್ರರಿಗೆ ಬಹಿಷ್ಕಾರ ಹಾಕಿದಂತೆ ! ಆದರೆ ಮಡಿವಾಳಪ್ಪನವರ ಆತ್ಮತೇಜಸ್ಸು ಬಹುಬೇಗ ಈ ಬಹಿಷ್ಕಾರದ ಮಬ್ಬು ಗತ್ತಲೆಯನ್ನು ಹೊಡೆದೋಡಿಸಿಬಿಟ್ಟಿತು. ಶರಣರ ಕೃಪೆಗೆ ಪಾತ್ರರಾದ ಮಡಿವಾಳಪ್ಪನವರು ಅಸಾಧಾರಣವಾದ ಅಪರೋಕ್ಷಾನುಭವಿಗಳಾಗಿ ಹಳ್ಳಿಗರ ಮಾತಿನಲ್ಲಿಯೇ ಎಲ್ಲರೂ ತಲೆದೂಗುವಂತಹ ಹಾಡುಗಬ್ಬಗಳನ್ನು ರಚಿಸಿ ಶರಣರ ಕೀರ್ತಿಯು ಇನ್ನಷ್ಟು ಪ್ರಜ್ವಲಿಸುವಂತೆಸಗಿದರು, ಇಂದಿಗೂ ಕಲಬುರಗಿ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲಿ ಇವರ ಅನುಭವ ಪದಗಳು ಹಳ್ಳಿಗರ ನಾಲಿಗೆಯ ಮೇಲೆ ನಲಿದಾಡುತ್ತಲಿವೆ. ಕೆಳಗಣ ಒಂದು ಹಾಡಿನಿಂದಲೇ ಅವರು ಎಷ್ಟು ಎತ್ತರಕ್ಕೆ ಏರಿದ್ದರೆಂಬುದು ವಿದಿತವಾಗುವುದು :

ತನ್ನ ತಾನು ತಿಳಿದಮೇಲೆ ಇನ್ನೇನಿನ್ನೇನಿನ್ನೇನೋ ।
ತನ್ನಂತೆ ಸರ್ವರ ಜೀವ ಮನ್ನಿಸಿ ಮೂಕಾದಮೇಲೆ,
ಇನ್ನೇನಿನ್ನೇನಿನ್ನೇನ್ನೋ ॥ ಪ ॥
ತಾನೆ ಪೃಥ್ವಿ ಅಪ್ಪು ತೇಜ, ತಾನೆ ವಾಯು ಆಕಾಶಾತ್ಮಾ
ತಾನೆ ಸೂರ್ಯ ಚಂದ್ರ ತಾರೆ ತಾನೇ ಬ್ರಹ್ಮಾಂಡದ ಮೇಲೆ
ಇನ್ನೇನಿನ್ನೇನಿನ್ನೇನೋ ॥
ತಾನೆ ಘ್ರಾಣ ಜಿಹ್ವೆ ನೇತ್ರ ತಾನೆ ತ್ವಕ್ಕು ಶ್ರೋತ್ರ ಹೃದಯ
ತಾನೆ ಕಾಯ ಕರಣ ಹರಣ ತಾನೆ ಪಿಂಡಾಂಡಾದ ಮೇಲೆ
ಇನ್ನೇನಿನ್ನೇನಿನ್ನೇನೋ ॥

---

* ಲೇಖಕನ ಸಂಗ್ರಹದಲಿರುವ ಕಡಕೋಳ ಮಡಿವಾಳಪ್ಪನವರ ಅಪ್ರಕಟಿತ ಕೃತಿ 'ಮಹಂತನಿಜಲೀಲಾನುಭವ'ದ ಹಸ್ತಪ್ರತಿಯಲಿ ಶ್ರೀ ಗುರುನಾಥಮಾಸ್ತರಯತ್ನಾಳ ಎಂಬುವರು ಚಿಣಮಗೇರು ಮಠಾಧೀಶ ಮಹಾಂತಸ್ವಾಮಿಯುವರು ಮಡಿವಾಳಪ್ಪನವರಿಗೆ ಶಿವದೀಕ್ಷೆ ಮಾಡಿದರೆಂದೂ ಅಂತೆಯೇ ಅವರ ಅಂಕಿತದಿಂದಲೇ ಇವರು ಕೃತಿ ರಚನೆ ಮಾಡಿದರೆಂದೂ ಹೇಳಿದೆ.
* ಅರಿತ, ಬೆರೆತ, ಮರೆತ

ತಾನೆ ಹೆತ್ತ ಸತ್ತ ಅತ್ತ ತಾನೆ ನಿತ್ಯ ಸ್ತುತ್ಯ ಸತ್ಯ
ತಾನೇ ಅರ್ತ ಬೆರ್ತ ಮರ್ತ* ತಾನೇ ಸರ್ವನಾದ ಮೇಲೆ
ಇನ್ನೇನಿನ್ನೇನಿನ್ನೇನೋ ॥
ತಾನೆ ಲಕ್ಷ ಸಾವಿರನೂರ ತಾನೆ ಹತ್ತೊಂಬತ್ತೆಂಟು ಏಳು
ತಾನೆ ಆರೈದು ನಾಲ್ಕು ಮೂರು ತಾನೇ ಎರಡೊಂದಾದಮೇಲೆ
ಇನ್ನೇನಿನ್ನೇನಿನ್ನೇನೋ ॥
ತಾನೇ ನೀನು ನೀನೇ ತಾನು ತಾನೇ ಅಲ್ಲ ತಾನೇ ಇಲ್ಲ
ತಾನೇ ಮಹಂತ ತಾನೇ ತಾನು ಏನೋ ಏನೊಂದಾದ ಮೇಲೆ
ಇನ್ನೇನಿನ್ನೇನಿನ್ನೇನೋ ॥

ಮಡವಾಳಪ್ಪನವರು ಹಾಡುಗಳನ್ನಲ್ಲದೆ 'ಶ್ರೀಮಹಾಂತ ನಿಜಲೀಲಾನುಭವ'ವೆಂಬ ವಚನ ಗ್ರಂಥವನ್ನೂ ಬರೆದಿದ್ದಾರೆ. 'ನಿರುಪಮ ನಿರಾಲಮತ್ತ್ರಭು ಮಹಾಂತಯೋಗಿ' ಎಂಬ ಅಂಕಿತದೊಡನೆ. ಏನೂ ಬರೆದಿಡದ ಶರಣಬಸವೇಶ್ವರರಿಗೆ ಇಷ್ಟೆಲ್ಲ ಬರೆದ ಮಡವಾಳಪ್ಪನವರು ಅನುಯಾಯಿಗಳಾಗಿ ಸಿಕ್ಕುದುದು ರಾಮಕೃಷ್ಣ ಪರಮಹಂಸರಿಗೆ ವಿವೇಕಾನಂದರು ಸಿಕ್ಕಿದುದುನ್ನು ಸ್ಮರಣೆಗೆ ತರುವುದಿಲ್ಲವೆ?

ಶರಣರ ಮಹಾಜೀವನದ ಸೂಜಿಗಲ್ಲು ದಿನದಿನಕ್ಕೂ ಹೆಚ್ಚು ಹೆಚ್ಚು ಶಕ್ತಿಶಾಲಿಯಾಗುತ್ತ ದೂರ ದೂರದ ಮುಮುಕ್ಷುಗಳನ್ನು ತನ್ನತ್ತ ಆಕರ್ಷಿಸತೊಡಗಿತು. ಬಂದವರಿಗೆಲ್ಲ ದಾಸೋಹ ನಡೆಸಿದ್ದ ಶರಣರಿಗೂ ಒಮ್ಮೆ ಧನ ಸಾಲದೆ ಸಾಲತರುವ ಪ್ರಸಂಗ ಬಂದಿತು. ದೇವನೂರಿನ ಮೋರಟಗಿ ಗಿರಿಲಿಂಗಪ್ಪನೆಂಬ ಸಾಹುಕಾರರಲ್ಲಿ ಶಿವನಿತ್ತಾಗ ಸಾಲ ತೀರಿಸುವೆವೆಂದು ಹೇಳಿ ಶರಣರು ಒಂದು ಸಾವಿರ ರೂಪಾಯಿ ಸಾಲ ತಂದರು. ಎಷ್ಟೆಂದರೂ ಸಾಹುಕಾರರು ಸಾಹುಕಾರರೇ, ಕೆಲವು ದಿನ ದಾರಿಕಾಯ್ದು ಗಿರಿಲಿಂಗಪ್ಪನವರು ತಮ್ಮಲ್ಲಿದ್ದ ರಾಮಜಿದಾದಾ ಎಂಬ ಮರಾಠಾ ಸಿಪಾಯಿಯನ್ನು ಹಣ ವಸೂಲಿಗಾಗಿ ಕಳಿಸಿದರು. ಹಣವಿಲ್ಲದೆ ಹಿಂದಿರುಗ ಕೂಡದೆಂದು ಕಟ್ಟಪ್ಪಣೆಯಿತ್ತು. ಕಳಿಸಿದರು. ರಾಮಜಿ ಬಂದು ಶರಣರ ಮನೆಯ ಮುಂದೆ ಹಣ ಕೊಡದೆ ಅನ್ನ ಕಚ್ಚೆನೆಂದು ಕುಳಿತುಬಿಟ್ಟನು? ಶರಣರೂ ಸಾಧ್ವಿ ಮಹಾದೇವಮ್ಮನವರೂ "ಎನ್ನ ಮಾನಾಪಮಾನ ನಿಮ್ಮವಯ್ಯ, ಎನ್ನ ಯೋಗಕ್ಷೇಮ ನಿಮ್ಮವಯ್ಯ, ಎನ್ನ ಹಾನಿವೃದ್ಧಿ ನಿಮ್ಮವಯ್ಯ" ಎಂದು ಶಿವನನ್ನೇ ಸ್ಮರಿಸುತ್ತ ಕುಳಿತುಬಿಟ್ಟರು. ಅಂದೇ ರಾತ್ರಿ 'ಶಿವಯ್ಯ' ನಾಮಕ ವ್ಯಕ್ತಿಯೋರ್ವನಿಂದ ಗಿರಿಲಿಂಗಪ್ಪನವರಿಗೆ ಒಂದು ಸಾವಿರ ರೂಪಾಯಿ ಮತ್ತು ಬಡ್ಡಿ ಸಂದಾಯವಾದುವು. ಈ 'ಶಿವಯ್ಯ'ನಾರೋ ಶಿವನೇ ಬಲ್ಲ ! ಇಂದಿಗೂ ಮೋರಟಗಿ ಗಿರಿಲಿಂಗಪ್ಪನವರ

ಮನೆಯಲ್ಲಿ ಆ ವರ್ಷದ ಖಾತೆ ಕಿರ್ದಿಗಳು ಪೂಜೆಗೊಳ್ಳುತ್ತಿವೆ ! ಈ ಘಟನೆಯಿಂದ ಹೃದಯಪರಿವರ್ತನೆ ಹೊಂದಿದ ರಾಮಜಿ ಶರಣರ ಅತ್ಯಂತ ನಿಷ್ಠೆಯ ಶಿಷ್ಯನಾಗಿಬಿಟ್ಟ, ಕೊನೆಯವರೆಗೂ ಅವರ ನೆರಳಾಗಿ ಹಿಂಬಾಲಿಸಿದ.

ಶರಣರ ಭಕ್ತಿರತಿ ಬಹು ಉಗ್ರವಾದುದು. ಬಾಪೂಜಿಗೆ 'ಬಾ' ಇದ್ದಂತೆ ಶರಣರಿಗೆ ಮಾತಾಯಿ ಮಹಾದೇವಮ್ಮನವರಿದ್ದರು. ಅಂಥವರಿಗೂ ಅಗ್ನಿ ಪರೀಕ್ಷೆ ತಪ್ಪಲಿಲ್ಲ. ನವಮಾಸ ತುಂಬಿದ್ದ ಸಮಯದಲ್ಲಿ ಒಮ್ಮೆ ಜಂಗಮರೊಬ್ಬರಿಗೆ ತಡ ಮಾಡಿ ಭಿಕ್ಷೆ ನೀಡಿದಳೆಂದು ಶರಣರು ಸಿಡಿಮಿಡಿಗೊಂಡರು ಆ ಸಾಧ್ವಿಯಮೇಲೆ! ಇದು ಆಭರಣಗಳನ್ನು ಅಪಹರಿಸಲೆತ್ನಿಸಿದ ಕಳ್ಳರ ಕೈ ಕೊಡಹಿದ ನೀಲಾಂಬಿಕೆಯ ಮೇಲೆ, 'ಒಡನಿರ್ದ ಸತಿಯೆಂದು ನೆಚ್ಚಿದ್ದೆನಯ್ಯ. ಅವರ ಕೈಯೆಷ್ಟುನೊಂದುದೋ!' ಎಂದು ರೇಗಿದ್ದ ಬಸವಣ್ಣನವರ ಜೀವನ ಘಟನೆಯನ್ನು ನೆನಪಿಗೆ ತರುವುದಲ್ಲವೆ?

ಈ ಒಬ್ಬರ ಜೀವನ ಘಟನಾಸಾದೃಶ್ಯ ಇಲ್ಲಿಯೇ ಮುಗಿಯಲಿಲ್ಲ. ಬಸವಣ್ಣನ ಮಗ ಬಾಲ ಸಂಗಯ್ಯ ಬಾಲ್ಯದಲ್ಲಿಯೇ ಶಿವಸಾಯುಜ್ಯವನ್ನು ಹೊಂದಿದಂತೆ ಶರಣರ ಮಗ 'ಗುರು–ಲಿಂಗ–ಜಂಗಮ–ನೂ 'ಶೈಶವಾಸ್ಥೆಯಲ್ಲಿಯೇ ಶಿವನ ಸನ್ನಿಧಿಗೆ ಸಂದನು. ಮಾತಾಯಿ ಮಹಾದೇವಿಯಮ್ಮನವರೂ ಶಿವನಡಿಯನ್ನು ಸೇರಿಬಿಟ್ಟರು. ಶರಣರ ಸಂಸಾರನಾಟಕದ ಕೊನೆಯ ಅಂಕವೂ ಮುಗಿದುಬಿಟ್ಟಿತು!

ಇದುವರೆಗೆ ಕಲ್ಯಾಣವನ್ನು ಕಾಣಬೇಕೆಂದಿದ್ದ ಶರಣರ ಆಕಾಂಕ್ಷೆಯು ಅದೆಂತೋ ಅಡಗಿ ಕುಳಿತಿದ್ದಿತು. ಇನ್ನು ಅದಕ್ಕೆ ತಡೆ ಹಾಕುವುದು ಯಾರಿಂದಲೂ ಸಾಧ್ಯವಿರಲಿಲ್ಲ. ಶರಣರು ಹೊರಟರು–ಹುಟ್ಟೂರಾದ ಅರಳುಗುಂಡಿಗೆಯನ್ನು ಬಿಟ್ಟು ಹೊರಟರು. ಮಡದಿ ಮಕ್ಕಳ ಸ್ಮೃತಿ–ಸಮಾಧಿಗಳನ್ನು ಬಿಟ್ಟು ಹೊರಟರು, ತಾವೇ ಉತ್ತು ಒಕ್ಕಿದ ಹೊಲ, ತಾವೇ ದಾಸೋಹಮಠವನ್ನಾಗಿ ಮಾರ್ಪಡಿಸಿದ್ದ ಮನೆಗಳನ್ನು ಬಿಟ್ಟು ಹೊರಟರು ; ನಾನು, ನನ್ನದು ಎಂಬ ಭಾವ–ಭ್ರಮೆಯನ್ನು ಬಿಟ್ಟು ಭಾವಾತೀತರಾಗಿ, ದ್ವಂದ್ವಾತೀತರಾಗಿ ಹೊರಟರು; ಅಡ್ಡಾಡುವ ಆತ್ಮಶ್ರೀಯಾಗಿ ಹೊರಟರು ; ಸಂಚಾರಿ ಸುಕೃತರಾಶಿ–ಸೈಪಿನ ಕಣಿಯಾಗಿ ಹೊರಟರು !

ಅವರು ಅಡಿಯಿಟ್ಟ ಮಡು ಪಾವನ ತೀರ್ಥವಾಯಿತು; ಅವರು ನಡೆದ ನೆಲ ಪುಣ್ಯಕ್ಷೇತ್ರವಾಯಿತು ; ಅವರು ನುಡಿಸಿದ ಜನ ಭಕ್ತರಾದರು ; ಅವರು ಆಡಿದುದೆಲ್ಲ ಮಂತ್ರವಾಯಿತು ; ಅರು ಮಾಡಿದುದೆಲ್ಲ ಪೂಜೆಯಾಯಿತು ! ಹರವಾಳದ ಹತ್ತಿರ ಹುಚ್ಚು ಹೊನಲಾಗಿ ಹರಿಯುತ್ತಲಿದ್ದ ಭೀಮಾನದಿಯ ಮೇಲೆ ಶಿವಪೂಜೆಯ ಕಂಬಳಿ ಹಾಸಿ ತಾವೂ ರಾಮಜಿ ಇಬ್ಬರೂ ಅದರ ಮೇಲೆ ಕುಳಿತರು ! ಕುಲಿತು ನದಿಯನ್ನು ದಾಟಿದರು. ಬೆಳಗುಂಪಿಗೆ ಬಂದರು. ಅಲ್ಲಿಂದ ಬಸವಪಟ್ಟಣ

ಕೋಬಾಳಗಳಿಗೆ ಹೋಗಿ ಅವರಾದಿಗೆ ಬಂದರು. ಅಲ್ಲಿ ದಂಡರಾಯಗೌಡನ ಮನೆಯಲ್ಲಿ ಲಿಂಗಾರ್ಚನೆ ಜಂಗಮ ದಾಸೋಹ ನಡೆಯಿತು ಒಂದು ದಿನ ದಾಸೋಹಕ್ಕೆ ಉರವಲು ಕಡಮೆ ಬೀಳಲು ಆ ಮಹಾರಾಯ–ದಂಡರಾಯಗೌಡ ತನ್ನ ಮನೆಯನ್ನೇ ಬಿಚ್ಚಿಸಿ ತೊಲೆ ಕಂಬಗಳನ್ನು ಕಡಿಸಿ ಉರವಲನ್ನಾಗಿ ಮಾಡಿಕೊಟ್ಟನಂತೆ ! ಇಂದಿಗೂ ಆ ಮನೆಗೆ ಶರಣರ ದಾಸೋಹದ ಮನೆಯೆಂಬ ಹೆಸರಿದೆ !*

ಅಲ್ಲಿಂದ ಪರ್ವತಾಬಾದಿಗೆ ಆಗಮಿಸಿದರು. ಮುಂದೆ ಕಲ್ಯಾಣಕ್ಕೆ ಹೋಗುವ ಸಂಕಲ್ಪವಿದ್ದಿತು. ಆದರೆ ಶಿವನ ಸಂಕೇತ ಬೇರೆಯಾಗಿದ್ದಿತು. ಇಂದಿಗೂ ನೆನೆದರೆ ಮೈನಡುಗುವ ಡೋಗಿಯ ಬರ ಆ ಭಾಗದಲ್ಲಿ ಮಾರಿಗೌತಣವನ್ನಿತ್ತಿತು. ಆ ಬರಗಾಲದ ಭೀಕರತೆಯನ್ನೇನು ಬಣ್ಣಿಸುವುದು?

"ಊರ ಬಿಡಿಸಿತು ಕೆಲವರಂ ಮನೆ । ಮಾರುಗಳ ಮಾರಿಸಿತು ಕೆಲವರ
ನಾರ ಸುತರನ್ನಗಲಿಸಿತು
ಕೆಲವರ್ಗೆ ಮನೆಯೊಳಿಹ ॥ ಊರೊಳಿಹ ದೇವರನು ಕದಿಯುವ ।
ದಾರಿ ಹಿಡಿಸಿತು ಕೆಲರ್ಗೆ
ಕುಲವಂ । ಮೀರ ಹಬ್ಬಿತು ಹಡೆದ ಮಕ್ಕಳ ಮಾರಿಸಿತು ಕೆಲರ ॥"

ಆ ಸಾವಿನ ಮೇಜವಾನಿ ನಡೆದಿರುವಾಗ ಕಲ್ಯಾಣ ಯಾತ್ರೆ ಮುಂದುವರಿಯ ಬಲ್ಲುದೆ? ಜನಕಲ್ಯಾಣದಲ್ಲಿಯೇ ನಿಜವಾದ ಕಲ್ಯಾಣಕ್ಷೇತ್ರ ಅವಿತಿದೆಯೆಂಬುದನ್ನರಿತ ಶರಣರು ಕ್ಷಾಮಪೀಡಿತರಿಗಾಗಿ ಪರ್ವತಾಬಾದಿನಲ್ಲಿ ಮಹಾದಾಸೋಹವನ್ನು ಪ್ರಾರಂಭಿಸಿದರು. ತಿಂಗಳುಗಟ್ಟಲೆ ಲೆಕ್ಕವಿಲ್ಲದಷ್ಟು ಹಸಿದ ಜನಗಳಿಗೆ ಅನ್ನದಾನ ನಡೆಯಿತು. ಎಲ್ಲಿಂದ ಎಲ್ಲ ಸಾಮಗ್ರಿ ಒದಗುತ್ತಲಿದ್ದಿತೋ, ಯಾರು ಅಡಿಗೆ ಮಾಡುತ್ತಿದ್ದರೋ? ಯಾರು ನೀಡುತ್ತಿದ್ದರೋ? ಯಾರು ಹೇಳಬೇಕು? ಈ ಲಕ್ಷೋಪಲಕ್ಷ ದುಃಖತಪ್ತರ ಅರ್ತಿನಾಶನ ಕಾರ್ಯದಿಂದ ಶರಣರು ಪ್ರಮಥರ ದಯಾಧರ್ಮ ಮಂದಿರಕ್ಕೆ ಇನ್ನೊಂದು ಹೊನ್ನಕಲಶ ಏರಿಸಿದರು!

ಬರಗಾಲ ಬಯಲಾಗುತ್ತಲೆ ಮತ್ತೆ ಶರಣರಚಿತ್ತಭಿತ್ತಿಯ ಮೇಲೆ ಕಲ್ಯಾಣದ ಚಿತ್ರ ಒಡಮೂಡಿತು. ಆದರೆ ಕಲ್ಯಾಣಕ್ಕೆ ಅವರು ಹೋಗುವುದು ಈಶ್ವರನ ಇಚ್ಛೆಯಾಗಿರಲಿಲ್ಲವೆಂದು ತೋರುತ್ತದೆ. ಕಲಬುರಗಿಯ ಬ್ರಹ್ಮಪುರದ ದೊಡ್ಡಪ್ಪ ಗೌಡರ ಮತ್ತು ಅವರ ಧರ್ಮಪತ್ನಿ ಸಾಧ್ವೀಮಣಿ ನೀಲಮ್ಮನವರು ಶ್ರದ್ಧಾಭಕ್ತಿಯು

* ಪಂ.ಕಲ್ಲಿನಾಥಶಾಸ್ತ್ರಿ ಪ್ರಣೀತ ಪುರಾಣದಿಂದ.

ಅವರನ್ನು ಕಲ್ಯಾಣಕ್ಕೆ ಹೋಗಗೊಡದಂತೆ ಕಲಬುರಗಿಯಲ್ಲಿಯೇ ತಡೆದು ನಿಲ್ಲಿಸಿಬಿಟ್ಟಿತು !

ಸರಿ, ಕಲಬುರಗಿಯು ಪ್ರತಿಕಲ್ಯಾಣವಾಗಿಬಿಟ್ಟಿತು. ನಿತ್ಯವೂ ಶಿವಾರ್ಚನೆ, ಶಿವಕಥಾಕಾಲಕ್ಷೇಪ, ಶಿವಮಂತ್ರಘೋಷಗಳಿಂದ ಕಲಬುರಗಿಯು ಪುಣ್ಯದ ಪುಂಗ, ಭಕ್ತಿಯ ಬೀಡು, ಮುಕ್ತಿಯ ತವರ್ಮನೆಯಾಯಿತು. ಶರಣರ ಜೀವನದಲ್ಲಿ ಅಯತ್ನಿತವಾಗಿ ಜರುಗಿದ ಪವಾಡಗಳಿಗೆ ಲೆಕ್ಕವಿಲ್ಲ. ಯಾವ ಪವಾಡವೂ ನಿಗ್ರಹಾರ್ಥವಾಗಿ ಘಟಿಸಲಿಲ್ಲ ; ಎಲ್ಲವೂ ಭವಿ–ಭಕ್ತ ಭೇದವೆನ್ನದೆ, ಮಿತ್ರ–ಶತ್ರು ಭೇದವೆನ್ನದೆ, ಬಳಿಗೆ ಬಂದ ಎಲ್ಲರ ಕಲ್ಯಾಣಕ್ಕಾಗಿಯೇ ಅನಿಚ್ಛಿತವಾಗಿ, ಅನಪೇಕ್ಷಿತವಾಗಿ ಘಟಿಸಿದುವು.



**ಕರುಣಾಕರ ಶರಣಬಸವೇಶ್ವರ ಸ್ಥಾಪನಾಮೂರ್ತಿ, ಕಲಬುರ್ಗಿ**

ಇಂಥ ಪವಾಡಗಳಲ್ಲಿ ಸಂತಾನಪ್ರದಾನವೂ ಒಂದು. ದಾಸೋಹಕ್ಕೆ ಸಾವರ ರೂಪಾಯಿ ಸಲ್ಲಿಸಿದವರಿಗೆ ಗಂಡು ಸಂತಾನ, ಐದುನೂರು ರೂಪಾಯಿ ಸಲ್ಲಿಸಿದವರಿಗೆ ಹೆಣ್ಣು ಸಂತಾನ ! ಈ ಮಹಿಮೆ ಇಂದಿಗೂ ನಡೆಯುತ್ತಲೇ ಇದೆ. ಶರಣರ ದಾಸೋಹಕ್ಕೆ ಈ ರೀತಿ ಕಾಣಿಕೆ ಸಲ್ಲಿಸಿ ಸಂತಾನ ಪಡೆದವರ ಸಾವಿರಾರು ಉದಾಹರಣೆಗಳು ಇಂದಿಗೂ ಉಪಲಬ್ಧವಿವೆ.

'ಕರುಣೆಗೇತಕ್ಕೆ ಕರಭಾರ?'ಎಂದು ಕೇಳಬಹುದು. ಪಾಪಮಾರ್ಗದಿಂದ ಸಂಚಿತವಾದ ಧನ, ಸಂತಾನ ನಿರೋಧಗ್ಯೆಯುತ್ತದೆಯೆಂದು ಹೇಳಲಾಗಿದೆ. ಈ ಪಾಪಕ್ಷಯವಾಗುವವರೆಗೆ ಸಂತಾನವಾಗದೆಂದು ತಿಳಿದ ಶರಣರು ದಾಸೋಹಕ್ಕೆ ಕಾಣಿಕೆ ಸಲ್ಲಿಸುವುದರ ಮೂಲಕ ಪಾಪ–ಕ್ಷಯದ ಮಾರ್ಗ ತೋರಿಸಿದರು.

ಇಂಥ ಪವಿತ್ರ ಪವಾಡಕ್ಕೂ ಪರೀಕ್ಷೆಯ ಸಂದರ್ಭ ಒದಗಿ ಬಂದಿತು. ಒಮ್ಮೆ ಕಲಬುರಗಿಯ ಮಕ್ತುಂಪುರದ ಒಮ್ಮನದವರ ಮನೆಯ ಮುಪ್ಪಾದ ದಂಪತಿಗಳು ಶರಣರಿಗೆ ಸಾಷ್ಟಾಂಗ ನಮಿಸಿ ಸಾವಿರ ರೂಪಾಯಿ ಕಾಣಿಕೆ ಸಲ್ಲಿಸಿ ಗಂಡು ಸಂತಾನ ಬೇಡಿಕೊಂಡರು. ಶರಣರು ತೊಟ್ಟಿಲಲ್ಲಿ ಆಡುತ್ತಲಿದ್ದ ದೊಡ್ಡಪ್ಪ ಗೌಡರ ಪುತ್ರನನ್ನೇ ಈ ಮುದುಕ ದಂಪತಿಗಳ ಉಡಿಯಲ್ಲಿ ಹಾಕಿಬಿಟ್ಟರು ! ಇದನ್ನು ಕಂಡು ದೊಡ್ಡಪ್ಪ ಗೌಡರೂ ನೀಲಮ್ಮನವರೂ ಕನಲಲಿಲ್ಲ, ಕಳವಳಿಸಲಿಲ್ಲ ! ಆನಂದಾತಿರೇಕದಿಂದ ನಲಿದರು. ವೃದ್ಧ ದಂಪತಿಗಳ ಸಂತಾನಾಪೇಕ್ಷೆಯೂ ಪೂರ್ಣವಾಯಿತು ; ದೊಡ್ಡಪ್ಪಗೌಡ–ನೀಲಮ್ಮರ ದೊಡ್ಡತನವೂ ಪ್ರಕಟವಾಯಿತು.

'ಶರಣರ ಸಂತಾನ ದಾನಕ್ಕೆ ಶ್ರೀಮಂತರೇ ಪಾತ್ರರಾಗಬಲ್ಲರು, ಬಡವರ ಗತಿಯೇನು?' ಎಂದು ಕೇಳಬಹುದು. ಸಾವಿರ ರೂಪಾಯಿಯ ಕಾಣಿಕೆ ಸಡಿಲಿಸಲಾಗದ ಸುಗ್ರೀವಾಜ್ಞೆಯೇನೂ ಅಲ್ಲ. ಒಮ್ಮೆ ಒಬ್ಬ ಮುದುಕಿ ಒಂದು ಸಾವಿರ ಬೆರಣಿಗಳನ್ನೇ ಶರಣರ ದಾಸೋಹಕ್ಕೆ ಸಲ್ಲಿಸಿ ಮೊಮ್ಮಗನನ್ನು ಪಡೆದಳು. ಶಿವನಂತೆ ಶವಶರಣರೂ 'ಭಕ್ತಿ ಕಂಪಿತ'ರು.

ಶರಣ ಬಸವೇಶ್ವರರು ತಾವು ಲಿಂಗೈಕ್ಯರಾಗುವ ದಿನವನ್ನು ಮೊದಲೇ ಭಕ್ತದಿಗಳಿಗೆ ತಿಳಿಸಿದರು. ಶ್ರೀ ನೃ.ಶಾ.ಶಕ ೧೭೪೪ನೆಯ (ಕ್ರಿ.ಶ. ೧೮೨೨) ಚಿತ್ರಭಾನು ಸಂವತ್ಸರ ಫಾಲ್ಗುಣ ತೃ॥ ೧, ಗುರುವಾರ, ಉತ್ತರಾ ನಕ್ಷತ್ರ ರಾತ್ರಿ ೧೨ ಗಂಟೆಗೆ ಶರಣತು ಲಿಂಗೈಕ್ಯರಾದರು ! ಅಂದು ಅವರ ಅಂತಿಮ ಲಿಂಗಪೂಜೆಯ ಕಾಲಕ್ಕೆ ಬೆಳಗಿಸಿದ್ದ ನಂದಾದೀಪವು ಇಂದಿಗೂ ಅಖಂಡಜ್ಯೋತಿಯಾಗಿ ಪ್ರಕಾಶ ಬೀರುತ್ತಲಿದೆದ.

ಲಿಂಗೈಕ್ಯರಾದಮೇಲೂ ಮೊದಲು ವಚನವಿತ್ತಿದ್ದ ಕೆಲವು ಭಕ್ತರ ಅಭೀಷ್ಟವನ್ನು

ಪೂರ್ಣಗೊಳಿಸಲು ಹುಮನಾಬಾದು ಸುಲ್ತೈಪೇಟೆಗಳಲ್ಲಿ ಶರೀರಧಾರಿಗಳಾಗಿ ಕಾಣಿಸಿಕೊಂಡರು. ಅವರ ಭಕ್ತ ರಾಮಜಿಯು ಬ್ರಹ್ಮಪುರದ ಮಠಪತಿಯವರ ಮನೆಯಲ್ಲಿ ಒಂಭತ್ತು ವರ್ಷವಿದ್ದು ಶಾ.ಶ. ೧೭೫೩ನೇ ಮನ್ಮಥನಾಮ ಸಂವತ್ಸರದಲ್ಲಿ ಶಿವಾಧೀನನಾದನು. ಆವನ ಸಮಾಧಿಯೂ ಬ್ರಹ್ಮಪುರದಲ್ಲಿಯೇ ಇದ್ದು ಮಳೆ ಬೇಕಾದಾಗ ಮಳೆ ತರಿಸುವ ಮಹಿಮಾಸ್ಥಾನವಾಗಿದೆ.

ಶರಣರು ಲಿಂಗೈಕ್ಯರಾದ ಮೇಲೆ ಅವರ ಇಚ್ಛೆಯಂತೆ ದೊಡ್ಡಪ್ಪಗೌಡರೇ ಅವರ ಉತ್ತರಾಧಿಕಾರಿಗಳಾಗಿ ೩೦ ವರ್ಷಗಳವರೆಗೆ ಲೋಕಕಲ್ಯಾಣಕ್ಕಾಗಿ ಅಖಂಡದಾಸೋಹ ನಡೆಸಿ ದುಡಿದು ಕೀರ್ತಿಶೇಷರಾದರು. ಅಂದಿನಿಂದ ಇಂದಿನವರೆಗೂ ತ್ರಿಕಾಲ ಪೂಜಾನಿಷ್ಠರೂ ದಾಸೋಹಜೀವಿಗಳೂ ಪವಿತ್ರಾತ್ಮರೂ ಆದ ಅಧಿಪತಿಗಳು ಈ ಶರಣರ ಸ್ಥಾನದ ಮಹಾತ್ಮ್ಯವನ್ನು ಕಾಪಾಡುತ್ತ ಬಂದಿದ್ದಾರೆ. ಈಗಿರುವ ಯಜಮಾನರಾದ ಪೂಜ್ಯ ದೊಡ್ಡಪ್ಪಾ ಅಪ್ಪಾ ಅವರಂತೂ ತಮ್ಮ ಶರಣ ಜೀವನದಿಂದ ಈ ಶರಣರ ಸ್ಥಳದ ಕೀರ್ತಿ ದೂರದೂರದವರೆಗೆ ಹರಡುವಂತೆ ಮಾಡಿದ್ದಾರೆ.

■

# ಪರಮಗುರು ಮರಿಸ್ವಾಮಿಗಳು, ವರಶಿಷ್ಯ ಕರಡೆಪ್ಪನವರು

ಮತ್ತೆ ಕಲ್ಯಾಣದ ಕಡೆಯ ಬಾಗಿಲವಾದ ಕಲಬುರಗಿಗೆ ಹೋಗುವ–ಸುಮಾರು ಎರಡುನೂರು ವರ್ಷಗಳಿಗೆ ಮೊದಲಿನ ಕಲಬುರಿಗಿಗೆ. ಆಗ ಅರಳಗುಂಡಿಗೆಯಲ್ಲಿ ಅದೇ ಶ್ರೀ ಶರಣಸವೇಶ್ವರರ ಜನನವಾಗಿರಬಹುದು. ಅಥವಾ ಅವರು ಉದಿಸಿ ಒಂದೆರಡು ವರ್ಷಗಳಾದರೂ ಆಗಿರಬಹುದು. ಆಗ ಕಲಬುರಿಗಿಯಲ್ಲಿ ಅಲ್ಲಿಯ ಬೃಹನ್ಮಠದ ಗುರುಪುಂಗವರಾಗಿದ್ದ ಬಸವೇಶದೇವರು ಸತಿ ಗಂಗಮ್ಮರಿಗೆ 'ಶಿವನ ಧರ್ಮದ ತಿರುಳೆ ಇವರಿಗೆ ಕುವರನೆನಿಸುತೆ ಜನಿಸಿತೋ' ಎಂಬಂತೆ ಒಬ್ಬ ಮಗನು ಹುಟ್ಟುತ್ತಾನೆ. ಮರಿಸ್ವಾಮಿಯೆಂದು ಹೆಸರಿಡುತ್ತಾರೆ. ಶರಣಬಸವೇಶ್ವರರು ಅರಳಗುಂಡಿಗೆಯಲ್ಲಿ ಹುಟ್ಟಿ ಕಲ್ಯಾಣಕ್ಕೆಂದು ಹೊರಟು ಕಲಬುರಿಗಿಯಲ್ಲಿ ನಿಂತು ಮಹಿಮೆಗಳನ್ನು ಮೆರೆದರೆ ಈ ಬಾಲಕನು ಕಲಬುರಗಿಯಲ್ಲಿ ಹುಟ್ಟಿ ಬೆಂಗಳೂರಿಗೆ ಹೋಗಿ ಬಳ್ಳಾರಿಗೆ ಬಂದು ಭಕ್ತೋದ್ಧಾರಕನಾಗಿ ಬೆಳಗುತ್ತಾನೆ.

ಮಹಿಮಾಶಾಳಿಯಾಗಲೆಂದೇ ಹುಟ್ಟಿದ ಈ ಮಗು 'ಮುನಿಮನದ ಶಿವಚಿಂತನೆಯು ಸಜ್ಜನದ ನಡತೆಯ ವಿಮಳತೆಯು ಬಳೆವ ಮಾಳ್ಕೆಯೊಳು' ಬೆಳೆಯುತ್ತಾನೆ. ಆದರೆ ಐದನೆಯ ವರ್ಷದಲ್ಲಿ ತಾಯಿ ತಂದೆಗಳನ್ನು ಕಳೆದುಕೊಂಡು ತಂದೆ ತಾಯಿಗಳಿಲ್ಲದ ಕಂದನಾಗುತ್ತಾನೆ. ಬಳಗದ ಒಬ್ಬಳು ಭಕ್ತರ ಬಯಕೆಯಂತೆ ಅವನನ್ನು ಸಾಕತೊಡಗುತ್ತಾಳೆ. ಅವಳು ಹೆಣ್ಣು ಹೃದಯವಿಲ್ಲದ ಹೆಂಗಳೆ. ಬಾಲಕನು ತನ್ನ ಕೋಟಲೆಗಳನ್ನು ತಾಳದೆ ತಾನಾಗಿ ಮನೆ ಬಿಟ್ಟು ಹೋಗಲೆಂದು ಅವನನ್ನು ಅತ್ಯಂತ ನಿರ್ದಯತೆಯಿಂದ ನಡೆಸಿಕೊಳ್ಳುತ್ತಾಳೆ ; ಬೈಯುತ್ತಾಳೆ, ಬಡಿಯುತ್ತಾಳೆ, ತಂಗೂಳನ್ನುಡಿಸಿ, ಬಿಕ್ಕೆ ಬೇಡುವುದಕ್ಕೆ, ಕೀಳ್ಗೆಲಸಕ್ಕೆ ಕಳಿಸುತ್ತಾಳೆ. ಆದರೆ ಆಕೆಯ ಕ್ರೌರ್ಯವನ್ನೆಲ್ಲ ಆ ಬಾಲಕ ಮೌನವಾಗಿಯೇ ಸಹಿಸುತ್ತಾನೆ ; ಅವಳಿಕ್ಕಿದ ತಂಗೂಳನ್ನೇ ಪರಮಪ್ರಸಾದವೆಂದು ಪರಮಾನಂದದಿಂದ ಸ್ವೀಕರಿಸುತ್ತಾನೆ.

ಏನು ಮಾಡಿದರೂ ಮೌನವಾಗಿಯೇ ಇರುವ ಈ ಬಾಲಕ ತಾನಾಗಿಯೇ ಮನೆ ಬಿಡುವ ಆಸೆ ಉಳಿಯದಿರಲು ಆ ನಿಷ್ಕರುಣಿ ತಾನೇ ತಪ್ಪು ಹೊರಿಸಿ ಅವನನ್ನು ಹೊರಗೆ ಹಾಕುತ್ತಾಳೆ. ಅದಕ್ಕೂ ಮರುಗದೆ ಕೊರಗದೆ ಮರಿಸ್ವಾಮಿ ತಂದೆಯಿದ್ದ ಮಠಕ್ಕೆ ಬಂದು ಮಲಗಿಬಿಡುತ್ತಾನೆ. ಭಕ್ತರು ಬಂದು ಅವಳೇಕೆ ಮನೆಬಿಟ್ಟು ಹೊರಗೆ ಹಾಕಿದಳೆಂದು ಕೇಳಿದರೆ, 'ಆಕೆ ನನ್ನನ್ನು ಪ್ರೀತಿಯಿಂದ ಸಲಹಿದ ತಾಯಿ. ಆಕೆಯದೇನೂ ತಪ್ಪಿಲ್ಲ. ನಾನೇ ತಪ್ಪು ಮಾಡಿ ಹೊರಗೆ ಬಂದೆ' ಎಂದು ಹೇಳುತ್ತಾನೆ. ಭಕ್ತನೊಬ್ಬನು ತನ್ನ ಮನೆಗೆ ಕರೆದೊಯ್ಯುತ್ತಾನೆ. ಎಂಟನೆಯ ವರ್ಷದಲ್ಲಿ ದೀಕ್ಷೆಯಾಗುತ್ತದೆ. ಓದು ಸಾಗುತ್ತದೆ. ಊರಲ್ಲೆಲ್ಲ ಮರಿಸ್ವಾಮಿಯ ಕೀರ್ತಿ ಪ್ರಸರಿಸುತ್ತದೆ.

ಮರಿಸ್ವಾಮಿ ಮರಿಶಿವಯೋಗಿಯಾಗಿಬಿಡುತ್ತಾನೆ. ಯಾವಾಗಲೂ ಶಿವಧ್ಯಾನ, ಶಿವಪೂಜೆಗಳಲ್ಲಿಯೇ ಮೈಮರಿತು ಕೂಡುತ್ತಾನೆ... "

ಒರೆವೆನೇಂ ಧ್ಯಾನಕ್ಕೆ ಮನೆಗೂ
ಟ್ಟಿರುವ ಮರಿದೇವನು ಕರಾಬ್ಜದೊ
ಳಿರುವ ಶಿವಲಿಂಗದ ನಿರೀಕ್ಷಣದಿಂದ ಜನಿಸಿರ್ದಾ
ಹರುಷಗಡಲೊಳು ಮುಳುಗಿ ಬಾಹ್ಯವ
ಮರೆವನೆನಿತೋ ಕಾಲವಿಂತೆಳೆ
ವರೆಯದೊಳೆ ಶಿವಯೋಗಿವರನೆನಿಸಿದನು..."

ಈ ಬಾಲಶಿವಯೋಗಿಯ ಬಾಲಲೀಲೆಗಳು ಭಕ್ತರಿಗೆ ಕಾಮಿತಪ್ರದಗಳಾಗಿ ಮುಂದುವರಿಯುತ್ತವೆ. ಅಷ್ಟರಲ್ಲಿ ಬೆಂಗಳೂರಿನಿಂದ ಅಲ್ಲಿಗೆ ವ್ಯವಹಾರನಿಮಿತ್ತ ಬಂದಿದ್ದ ಲಿಂಗಣ್ಣನೆಂಬೊಬ್ಬ ಧೂರ್ತ ಈ ಬಾಲಶಿವಯೋಗಿಯನ್ನು ಕರೆದೊಯ್ದು ಅವನ ಹೆಸರಿನಲ್ಲಿ ಹಣ ಸಂಪಾದಿಸಿಕೊಳ್ಳಬೇಕೆಂಬ ಕುಕರ್ಮಕ್ಕೆ ಮನಸೋಲುತ್ತಾನೆ. ಕಪಟ ಭಕ್ತಿಯನ್ನು ತೋರಿ ಕುಟಿಲವರಿಯದ ಮರಿಸ್ವಾಮಿಗಳನ್ನು ಯಾರೂ ಅರಿಯದಂತೆ ಅಲ್ಲಿಂದ ಕರೆದೊಯ್ಯುತ್ತಾನೆ.

ದಾರಿಯಲ್ಲಿ ಉದ್ದಕ್ಕೂ ಮರಿಸ್ವಾಮಿಗಳ ಮಹಿಮೆ ಪ್ರಕಟವಾಗುತ್ತ ಹೋಗುತ್ತದೆ.

"ದಿಟ್ಟಿಸಲು ಗುರುವಳಿದುದ್ಯೆರುಜೆ
ಮುಟ್ಟೆಕಣ್ಗಳ ಮಬ್ಬು ಪರಿದುದು
ಕೊಟ್ಟ ಭಸಿತವ ಧರಿಸಿದೊಡೆ ಬಡತನವು ಬಯಲಾಯ್ತು
ಇಟ್ಟಡಿಯ ತೊಳೆದಂಬುವೀಂಟಲು

ಬಿಟ್ಟು ಹೋದುದು ಬಡಿತ ಭೂತವು
ಹುಟ್ಟರೇಂ ಸತ್ಪತ್ರರಾ ಮಹಿಮನ ಕೃಪಾಬಲದೆ?"

ಧೂತವರ್ತಕ ಈ ಬಾಲಶವಯೋಗಿಗೆ ತಿಳಿಯದಂತೆಯೇ ಬಂದವರಿಂದ ಕಾಣಿಕೆಯೆತ್ತುತ್ತ ನಡೆಯುತ್ತಾನೆ. ಶಿವಲಿಂಗ ಶೆಟ್ಟಿಯೆಂಬ ಸದ್ಭಕ್ತ ಪರಮಾದರದಿಂದ ಈ ಪಾವನ ಮೂರ್ತಿಯ ಪಾದಪೂಜೆಮಾಡಿ ರನ್ನದುಂಗರ, ಕಂಠಿಸರ, ಹೊನ್ನ ಕರಡಿಗೆ, ಕಿವಿಯ ಚೌಕಳು, ಜರದ ವಸ್ತ್ರಾದಿಗಳನ್ನು ಕೊಡುತ್ತಾನೆ. ಲಿಂಗಣ್ಣ ಅವೆಲ್ಲವುಗಳ ನುಂಗಣ್ಣನಾಗುತ್ತಾನೆ. ಬೆಂಗಳೂರಿಗೆ ಬಂದು ಈ ಮೋಸದ ಹಣದಿಂದ ಅಂಗಡಿ ತೆರೆಯುತ್ತಾನೆ. ಶ್ರೀಮಂತನಾಗುತ್ತಾನೆ.

ಸಿರಿ ಹೆಚ್ಚದಂತೆಲ್ಲ ಮರಿಸ್ವಾಮಿಗಳನ್ನು ಮರೆಯುತ್ತ ಹೋಗುತ್ತಾನೆ. ಕೊನೆಗೆ ಅವರನ್ನು ಹಸುಗಳನ್ನು ಕಾಯಲು ಅಡವಿಗೆ ಅಟ್ಟುತ್ತಾನೆ. ಸ್ವಾಮಿ ಗೋವಳರ ಗುಂಪುಕಟ್ಟಿಕೊಂಡು ಅವರೊಡನೆ ಅವಿರಳಾನಂದದಲ್ಲಿದ್ದು ಬಿಡುತ್ತಾನೆ. ಬರುಬರುತ್ತ ಮನೆಗೆ ಬರುವುದನ್ನೂ ನಿಲ್ಲಿಸಿ ಕಾಡನ್ನೇ ಬೀಡನ್ನಾಗಿ ಮಾಡಿಕೊಂಡುಬಿಡುತ್ತಾನೆ. ಸಂಜೆಗೆ ಹಸುಗಳು ತಾವಾಗಿಯೇ ಮನೆಗೆ ಬರುತ್ತವೆ; ಮುಂಜಾನೆ ಓಡಿ ಸ್ವಾಮಿಯ ಹತ್ತಿರ ಬರುತ್ತವೆ. ಅವೂ ಅಗಲಿರಲಾರವು ಆ ಮಹಾತ್ಮನನ್ನು.

ಸ್ವಾಮಿ ಆಗಾಗ ಬೆಂಗಳೂರಿಗೆ ಬಂದು ಒಂದೊಂದು ಹಿಡಿ ಲಾಜೆಗಳನ್ನು ತರುತ್ತಾನೆ. ಗೋವಳರೆಲ್ಲರೂ ಅವುಗಳನ್ನು ತಿಂದೇ ತಿನ್ನುತ್ತಾರೆ. ಅವರ ಹಸ್ತ ಅಕ್ಷಯಪಾತ್ರೆ. ತೆಲುಗ ಗೋವಳನೊಬ್ಬ 'ಬುರಗುಲಯ್ಯಾರಾ' ಎಂದೊಮ್ಮೆ ಸ್ವಾಮಿಯನ್ನು ಕರೆಯುತ್ತಾನೆ. ಅದೇ ಹೆಸರೇ ಸ್ಥಿರವಾಗಿಬಿಡುತ್ತಾದೆ. ಬುರಗುಲಯ್ಯನ ಬೆಳಕು ಹೆಚ್ಚುತ್ತ ಹೋಗುತ್ತದೆ. ಗೋವಳರೆಲ್ಲ ಭಾವಜಾರಿಯ ಭಕ್ತರಾಗಿಬಿಡುತ್ತಾರೆ.

ತುಂಬಿಯನು ನೆನೆಯುತ್ತಿರುವ ಪುಳು
ತುಂಬಿಯಾದಂತಖಿಳ ಬಾಲರು
ಸಾಂಬರೂಪದೆ ಬೆಳಗಿದರು ಮರಿಗುರುವಿನಾ ಕಣ್ಗೆ ॥

ಸ್ವಾಮಿ ಕೆಂಗೇರಿ ದಾರಿಯ ಹಳ್ಳಕ್ಕೆ ಸೇತುವೆಯನ್ನು ಕಟ್ಟುವ ಕಾರ್ಯವನ್ನು ಕೈಕೊಳ್ಳುತ್ತಾನೆ. ಈ ತೇಜಸ್ವಿ ಬಾಲಕನ ಕರೆಗೆ ಓಗೊಟ್ಟು ಅನೇಕರು ಕೆಲಸಕ್ಕೆ ಬರುತ್ತಾರೆ. ಸಂಜೆಯವರೆಗೆ ಸೇತುವೆಯ ಕೆಲಸ ಮಾಡಿ ಅಲ್ಲಿಯೇ ಮಣ್ಣನ್ನು ಕೆದರಿದರೆ ಅವರ ಕೆಲಸಕ್ಕೆ ತಕ್ಕ ಕೂಲಿ ಅವರಿಗೆ ಸಿಕ್ಕುತ್ತ ಹೋಗುತ್ತದೆ. ಬುರಗುಲಯ್ಯನ ಹೆಸರು ಎಲ್ಲೆಡೆಗೂ ಮನೆಮಾತಾಗಿಬಿಡುತ್ತದೆ.

ಲಿಂಗಣ್ಣ ಬುರಗುಲಯ್ಯನೇ ಮರಿಸ್ವಾಮಿಯೆಂಬುದನ್ನರಿತು ಭಯಭೀತನಾಗುತ್ತಾನೆ, ತನ್ನ ಕಪಟ ಬಯಲಿಗೆ ಬಂದರೆ ತನಗೆ ಈ ಮಹಿಮನಿಂದ ಕೇಡಾದೀತೆಂದು ತಿಳಿದು ಅವರು ಈ ಊರಲ್ಲಿರಕೂಡದೆಂದು ನಿಷ್ಠುರವಾಗಿ ನುಡಿದುಬಿಡುತ್ತಾನೆ. ಅವನ ದುರುಕ್ತಿಗಳನ್ನು ಕೇಳಿಯೂ ವಿಕಲಿತಚಿತ್ತರಾಗದೆ ಮರಿಸ್ವಾಮಿಗಳು ಬೆಂಗಳೂರನ್ನು ಬಿಟ್ಟು ಹೊರಡುತ್ತಾರೆ.

ಕೊರಗಿದರು ತುರುಗಾವ ಬಾಲರು
ಸುರಿಸಿದುವು ಕಣ್ಣೀರ ತುರುಗಳು
ಪುರದವರು ಪಳ್ಳಿಗಳವರುಮರೆನೆನೆದು ಮರುಗಿದರು ।

ನಿಜಗಲ್ ಸಂತೆಯನ್ನು ಮಾಡಿ ಜನರು ನರಸಸೆಟ್ಟಿಯ ಬಾವಿಯೆಡೆಗೆ ಬರುತ್ತಲಿದ್ದಾರೆ. ಅಲ್ಲಿ ರಾತ್ರಿ ತಂಗಿ ಮುಂದೆ ಹೋಗಲು ಅನುವಿದೆ. ಅಲ್ಲಿಗೇ ಮರಿಸ್ವಾಮಿಗಳು ಬರುತ್ತಾರೆ. ಅಲ್ಲಿಯೇ ಯೋಗನಿದ್ರಾಮುದ್ರಿತರಾಗಿ ಮಲಗಿಬಿಡುತ್ತಾರೆ. ಉಳಿದ ಜನರು ಬೆಳಗಿನಲ್ಲೆದ್ದು ತಂತಮ್ಮ ಊರುಗಳಿಗೆ ಹೋಗಿಬಿಡುತ್ತಾರೆ. ಆದರೆ ಸ್ವಾಮಿಯಿನ್ನೂ ಎದ್ದಿಲ್ಲ. ಅಷ್ಟರಲ್ಲಿ ಹರೆಯದ ಹೋರಿ ಬಂದು ಶಿಲೆಯ ಮರೆಗೆ ಮಲಗಿದ್ದ ಶಿವಯೋಗಿಯ ತೊಡೆಯನ್ನು ಕೊಂಬಿನಿಂದ ಬಲವಾಗಿ ತಿವಿಯುತ್ತದೆ. ಗಾಯವಾಗಿ ರಕ್ತಧಾರೆ ಚಿಮ್ಮುತ್ತದೆ. ಆದರೂ ಸ್ವಾಮಿ 'ಹಾ' ಯೆನ್ನುವುದಿಲ್ಲ. ಉಟ್ಟಬಟ್ಟೆಯನ್ನೇ ಹರಿದು ಗಾಯಕ್ಕೆ ಕಟ್ಟುತ್ತಾನೆ. 'ತನ್ನ ತಾಯಿ ಗೋಮಾತೆಯ ಸೇವೆಯನ್ನು ಬಿಟ್ಟು ಬಂದುದಕ್ಕಾಗಿ ಸಿಟ್ಟು ಬಂದಂತಿದೆ ಬಸವನಿಗೆ' ಎಂದು ನಗುತ್ತ ಮತ್ತೆ ಮಲಗಿಬಿಡುತ್ತಾನೆ. ಜ್ವರ ಏರುತ್ತದೆ. ವೇದನೆ ಹೆಚ್ಚುತ್ತದೆ. ಆದರೂ ಅಳುಕದೆ ಮಲಗಿರುತ್ತಾನೆ. ನಿಜಗಲ್ಲ ಭಕ್ತರು ಬಂದು ಮೆಲ್ವಾಸಿನ ಮೇಲೆ ಮಲಗಿಸಿ ಹೆಗಲಮೇಲೆ ಹೊತ್ತುಕೊಂಡು ದೊಡ್ಡಬಳ್ಳಾಪುರದತ್ತ ಹೊರಡುತ್ತಾರೆ.

ದಾರಿಯಲ್ಲಿ ದೊಡ್ಡ ಅಧಿಕಾರಿ ಅರುಣಾಚಲಯ್ಯ ಇವರನ್ನು ನೋಡಿ ಕನಿಕರಿಸಿ ದೊಡ್ಡಬಳ್ಳಾಪುರದ ದೇಶದ ಮಠಕ್ಕೆ ಕಳಿಸಿ ತಾನೂ ತನ್ನ ಕಾರ್ಯ ಬೇಗ ಮುಗಿಸಿ ಬಂದುಬಿಡುತ್ತಾನೆ. ಯಾರೆಷ್ಟು ಔಷಧ ತಂದರೂ ಮರಿಸ್ವಾಮಿಗಳು ಮಾತ್ರ ಭಸ್ಮವೊಂದನ್ನೇ ಗಾಯಕ್ಕೆ ಲೇಪಿಸುತ್ತಾ ಹೋಗುತ್ತಾರೆ. ಎಲ್ಲರೂ ಅಚ್ಚರಿಪಡುವಂತೆ ಆ ಗಾಯ ಅದಕ್ಕೇ ಮಾಯ್ದು ಹೋಗುತ್ತದೆ. ಊರೆಲ್ಲ ಅವರ ಮಹಿಮೆಗೆ ಮಾರುಹೋಗುತ್ತದೆ. ಶಿವಲಿಂಗಸೆಟ್ಟಿ ಅವರನ್ನೇ ಅರಸುತ್ತ ಅಲ್ಲಿಗೆ ಬರುತ್ತಾನೆ. ಇನ್ನೇನು ಅವನೊಡನೆ ಅಲ್ಲಿಂದ ಹೊರಡಬೇಕು. ಕೂಡಲಿ ಪೀಠದ ಗುರುಪುಂಗವರು ಕುಂಬಳಕಾಯ ಯೋಗಿಗಳನ್ನು ಕಳಿಸಿ ಕರೆಸಿಕೊಳ್ಳುತ್ತಾರೆ. ಬರಲು ಆದರದಿಂದ ಅಪ್ಪಿ ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಕೆಲದಿನ ತಮ್ಮೊಡನೆ ದೇಶಾಟನಕ್ಕೆ ಬರಲು

ಕರೆಯುತ್ತಾರೆ. ಅವರಿಷ್ಟದಂತೆ ಇವರೂ ಒಪ್ಪುತ್ತಾರೆ. ಕೆಲದಿನ ಈ ಮೂವರೂ ಮಹಾತ್ಮರು ಕೂಡಿ ಸಂಚರಿಸಿ ಜಾತಿಮತ ಪಂಥಗಳೆನ್ನದೆ ಬಂದೆರಗಿದವರನ್ನೆಲ್ಲ ಪಾವನಗೊಳಿಸುತ್ತಾರೆ.

ಮುಂದೆ ಮರಿಸ್ವಾಮಿಗಳು ಶಿವಲಿಂಗ ಸೆಟ್ಟಿಯನ್ನು ಬೀಳ್ಕೊಟ್ಟು ಶಿವಗಂಗೆಗೆ ದಯಮಾಡಿಸುತ್ತಾರೆ. ಅಲ್ಲಿ ಶಿವಯೋಗಾನಂದದಲ್ಲಿರುವಾಗ ಗಂಗಾಧರೇಶ್ವರನ ರಥೋತ್ಸವಕ್ಕೆ ಬೆಂಗಳೂರಿನ ಭಕ್ತರು ಬರುತ್ತಾರೆ. ಅಲ್ಲಿ ಮರಿಸ್ವಾಮಿಗಳನ್ನು ಗುರುತಿಸಿ ಸತ್ಯಾಗ್ರಹ ಹೂಡಿ ಮರಿಸ್ವಾಮಿಗಳನ್ನು ಮತ್ತೆ ಬೆಂಗಳೂರಿಗೆ ಕರೆದೊಯುತ್ತಾರೆ. ಈ ಸುದ್ದಿ ಕೇಳುತ್ತಲೇ ಲಿಂಗಣ್ಣ ಬೆಂಗಳೂರು ಬಿಡುತ್ತಾನೆ.

ಬೆಂಗಳೂರಿನಲ್ಲಿ ಮರಿಸ್ವಾಮಿಗಳ ಭಕ್ತೋದ್ಧರಣಕಾರ್ಯ ಮತ್ತೆ ಪ್ರಾರಂಭವಾಗುತ್ತದೆ. ದಿವಾನ ಪೂರ್ಣಯ್ಯನವರ ಕಿವಿಗಳವರೆಗೂ ಇವರ ಕೀರ್ತಿ ಮುಟ್ಟುತ್ತದೆ. ಅವರೂ ಬಂದು ದರ್ಶನಾಶೀರ್ವಾದಗಳನ್ನು ಹೊಂದಿ ಮೈಸೂರಿನ ರಾಜವಂಶದ ಮುಂದಿನ ಅಭ್ಯುದಯಕ್ಕಾಗಿ ಅವರ ಆಶೀರ್ವಾದ ಪಡೆಯುತ್ತಾರೆ. 'ರಾಣಿ ಲಕ್ಷ್ಮಮ್ಮಣ್ಣಿಯವರ ಪುಣ್ಯ ಬೇಗ ಫಲಿಸುವುದು. ಕೃಷ್ಣಭೂವರಿನಿಗೆ ಬೇಗ ಪಟ್ಟವಾಗುವುದು. ಮುಂದೆ ಮೈಸೂರು ಮಾದರಿ ರಾಜ್ಯವಾಗುವುದು' ಎಂದು ಅಶೀರ್ವದಿಸಿ ಕಳಿಸುತ್ತಾರೆ. ಪೂರ್ಣಯ್ಯನವರ ಪ್ರೀತ್ಯರ್ಥವಾಗಿ ಸಕಲ ಬಿರುದಾವಳಿಗಳೊಡನೆ ಬೆಂಗಳೂರಿನಲ್ಲಿ ಸ್ವಾಮಿಯ ಸಂಭ್ರಮದ ಮೆರವಣಿಗೆ ನಡೆಯುತ್ತದೆ.

ಬೆಂಗಳೂರಿನ ಉಳಿದ ಮಠದಯ್ಯಗಳಿಗೆ ಬಿರಿ ಬರುತ್ತದೆ. ಅವರ ಪುಂಗಿ ಬಂದಾಗುತ್ತದೆ. ಎಲ್ಲರೂ ಸೇರಿ ದುರಾಲೋಚನೆ ಮಾಡಿ ಮತ್ತೆ ಸ್ವಾಮಿಯನ್ನು ಬೆಂಗಳೂರು ಬಿಡಿಸುತ್ತಾರೆ. ಕಳವಾಗಿ ಎಲ್ಲವನ್ನೂ ಕಳಕೊಂಡಿದ್ದ ಲಿಂಗಣ್ಣ ಮತ್ತೆ ಸುಳ್ಳು ಭಕ್ತಿಯು ಸೋಗುಹಾಕಿ ಹಿಂಬಾಲಿಸುತ್ತಾನೆ. ಮತ್ತೆ ಭಕ್ತರನ್ನು ಸುಲಿಯತೊಡಗುತ್ತಾನೆ. ಅದನ್ನು ಕಂಡು ಹೇಸಿ ಇನ್ನು ಏಕಾಂತವಾಸಿ ಗಳಾಗುವೆವೆಂದು ಮರಿಸ್ವಾಮಿಗಳು ನುಡಿಯುತ್ತಾರೆ. ಎಂತಾದರೂ ಇವರನ್ನು ಅಂಕಿತದಲ್ಲಿಟ್ಟು–ಕೊಳ್ಳಬೇಕೆಂದು ಆ ಧೂರ್ತ ಓರ್ವ ಸುಂದರ ಯುವತಿಯನ್ನು ಮುಂದೆ ಮಾಡುತ್ತಾನೆ. ವಿವಾಹವಾಗಲು ಒತ್ತಾಯಪಡಿಸುತ್ತಾನೆ. ನನಗೆ 'ಸತಿಯಾಗಬಲ್ಲ ಬಾಲೆ ಬಳ್ಳಾರಿ ಪ್ರಾಂತದಲ್ಲಿ ಜನಿಸುವಳು' ಎಂದು ಹೇಳಿ ಸ್ವಾಮಿ ನಿರಾಕರಿಸುತ್ತಾನೆ. ನೋಡನೋಡುತ್ತಲೇ ಮಾಯವಾಗಿಬಿಡುತ್ತಾನೆ.

ಮುಂದೆ ರಾಯಪುರದ ಹತ್ತಿರ ಮರದ ಕಟ್ಟೆಯಮೇಲೆ ಕೆಲದಿನ ಕಳೆದು ಬೂದಿಹಾಳಿಗೆ ಬರುತ್ತಾರೆ. ಅಲ್ಲಿ ಕಟ್ಟೆ ಬಸವನ ಕೆಲದ ಪೆರ್ಮರದಡಿಯಲ್ಲಿ

ಮಲಗಿರುವಾಗ ಆ ಊರಿನ ಗ್ರಾಮಣಿಯ ಸತಿ, ತುಂಬಿದ ಬಸಿರೆ ಬಸವಮ್ಮ ಆ ಬಾವಿಗೆ ನೀರು ಒಯ್ಯಲು ಬರುತ್ತಾಳೆ. ತುಂಬಿದ ಕೊಡ ಎತ್ತದಿರಲು ಅಲ್ಲಿಯೇ



**ದಿವಾನ ಪೂರ್ಣಯ್ಯನವರು ರಾಜವಂಶದ ಅಭ್ಯುದಯಕ್ಕೆ ಮರಿಸ್ವಾಮಿಗಳ ದರ್ಶನಾಶೀರ್ವಾದ ಪಡೆದರು**

ಮಲಗಿದ್ದ ಆ ಸ್ವಾಮಿಯನ್ನು ಕೊಡ ನೆಗಹಲು ಕೋರುತ್ತಾಳೆ. ಸ್ವಾಮಿ ಮುಗುಳುನಗೆಯಿಂದ, 'ನಿನ್ನುದರದಿಂದ ಹೆಣ್ಣು ಹುಟ್ಟುವುದು. ಆ ಹೆಣ್ಣು ನನಗೆ ಮದುವೆಮಾಡಲೊಪ್ಪಿದರೆ ಕೊಡ ನೆಗಹುವೆನು' ಎಂದು ನುಡಿಯುತ್ತಾರೆ.

'ಮಗಳಾದರೂ ಹುಟ್ಟಲಿ, ಕೊಡುವೆ'ನೆಂದಾ ಸುದತಿ ನಗುತ್ತ ಹೋಗುತ್ತಾಳೆ. ಆಕೆಯ ಪತಿ ಬಂದು ಶಿವಾರ್ಚನೆಗೆ ಕರೆಯುತ್ತಾನೆ. 'ಒಬ್ಬ ಜಂಗಮರು ನನಗಾಗಿ ಕಾದಿದ್ದಾರೆ. ನಾನು ಹೋಗುವೆ, ನಿನ್ನ ಮನೆಯ ಮದುವೆಯ ಮಂಗಳ ಕಾರ್ಯಕ್ಕೆ ತಪ್ಪದೆ ಬರುವೆ'ನೆಂದು ಹೇಳಿ ಹೊರಡುತ್ತಾನೆ. ಹೊರಟು ಹರಿಹರ ಸೇರುತ್ತಾರೆ.

ಅವರನ್ನು ಕರೆತರಲಿಕ್ಕಾಗಿ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಕಳಿಸಲ್ಪಟ್ಟಿದ್ದ ಕೆಂಗೇರಿ ಬಂಡೆಯ ಮಠದ ಚರಮೂರ್ತಿ ಮರಿಕರಿಬಸವದೇವರಿಗೂ ಮರಿಸ್ವಾಮಿಗಳಿಗೂ ಹರಿಹರದಲ್ಲಿ ಭೆಟ್ಟಿಯಾಗುತ್ತದೆ. ಅವರ ಅಪೇಕ್ಷೆಯಂತೆ ಮೈಸೂರಿಗೆ ಹೋಗಿ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ದರ್ಶನವಿತ್ತು. ಅವರಿಗೆ ಯೋಗದ ನೆಲೆಕಲೆಗಳನ್ನು ತಿಳಿಸಿ ಅವರ ವಿಘ್ನಪರಂಪರೆ ಮುಗಿದು ಅವರ ಏಳ್ಗೆ ಬೇಗ ಆಗುವುದೆಂದು ಆಶೀರ್ವದಿಸುತ್ತಾರೆ. ಅವರು ಅರಮನೆಯಲ್ಲಿಯೇ ಇರುವಂತೆ ಒತ್ತಾಯಪಡಿಸಲು, 'ಚರಿಸಿ ನಲಿಯುವ ಪಕ್ಷಿಯನು ನೀ। ವರಮನೆಯ ಪಂಜರದೆ ಬಂಧಿಸಬೇಡಿರೆಂದು ಹೇಳಿ ಚಾಮುಂಡೀದೇವಿಯ ದರ್ಶನಾನುಗ್ರಹ ಪಡೆದು ಹೊರಡುತ್ತಾರೆ. 'ಬೂದಿಹಾಳಿನಲ್ಲಿ ನಿನ್ನ ಹಿಂದಿನ ಜನ್ಮದ ಸತಿ ಹುಟ್ಟಿ ಬೆಳೆಯುತ್ತಲಿದ್ದಾಳೆ ; ಅವಳ ಕೈ ಹಿಡಿದು ಬಳ್ಳಾರಿಯಲ್ಲಿದ್ದು ಭಕ್ತರನ್ನುದ್ಧರಿಸು' ಎಂದು ತಾಯಿ ಚಾಮುಂಡಿಯ ಆದೇಶವಾಗುತ್ತದೆ.

ಮುಂದೆ ಕೆಂಗೇರಿ ಮಠದಲ್ಲಿ ಕೆಲದಿನವಿದ್ದು ಮರಿಕರಿಬಸವದೇವರಿಗೆ ಶಿವಾನುಭವದ ಸತ್ಯಮಾರ್ಗವನ್ನು ತಿಳಿಸುತ್ತಾರೆ. ಅಲ್ಲಿಂದ ಅವರು ಹೊರಡಲು ಮರಿಕರಿಬಸವದೇವರೂ ಮಠಮಾನ್ಯಗಳನ್ನು ಬಿಟ್ಟು ಕಂಬಳಿಯೊಂದನ್ನು ಹೊದ್ದು ಅವರನ್ನು ಹಿಂಬಾಲಿಸುತ್ತಾರೆ.

ಬೂದಿಹಾಳಿಗೆ ಬಸವಗೌಡನ ಹಿರಿಯಮಗಳು ಗೌರಮ್ಮನ ಮದುವೆಯ ಸಮಯಕ್ಕೆ ಬರುತ್ತಾರೆ. ಕಿರಿಯ ಮಗಳು ನೀಲಗಂಗಾಂಬಿಕೆಯೇ ಸ್ವಾಮಿಯ ಪೂರ್ವಜನ್ಮದ ಸತಿ. ಚಾಮುಂಡೇಶ್ವರಿಯ ಆದೇಶದಂತೆ ಅವಳ ಕೈ ಹಿಡಿಯ ಬೇಕಾಗಿದ್ದಿತು. ಮರುದಿನ ಮುಂಜಾನೆ ಒಬ್ಬ ವೃದ್ಧ ಜಂಗಮನ ರೂಪತಾಳಿ ಕಂಗಳಯ್ಯನೊಡನೆ ಬಸವನಗೌಡನ ಮನೆಗೆ ಹೋಗಿ ನೀಲಗಂಗೆಯೊಡನೆ ನನ್ನ ಪಾಣಿಗ್ರಹಣವಾಗಬೇಕೆಂದು ಹೇಳುತ್ತಾನೆ. ನೀಲಗಂಗಾಂಬಿಕೆಯ ತಾಯಿತಂದೆಗಳು ಕಕ್ಕಾವಿಕ್ಕಿಯಾಗುತ್ತಾರೆ. ಆದರೆ ನೀಲಗಂಗಾಂಬಿಕೆಯು ತನ್ನ ನಿಜವಲ್ಲಭನಿವನೆಂದು ಗುರುತಿಸುತ್ತಾಳೆ. 'ನಿನಗಿವರೇ ಪತಿ, ಇವರೇ ಗತಿಯೆಂ'ದು ಹಟ ಹಿಡಿಯುತ್ತಾಳೆ. ಮದುವೆಯಾಗುತ್ತದೆ. ಮದುವೆಯ ಮದುವೆಯ ಮಂಡಪದಲ್ಲಿ ಕಂಡವನು ವೃದ್ಧ ಜಂಗಮನಲ್ಲ, ತಪಸ್ಸಿನ ತೇಜಸ್ಸಿನಿಂದ ಹೊಳೆಹೊಳೆವ ತರುಣ ತಪಸ್ವಿ ಮರಿಸ್ವಾಮಿಗಳು!

> ಇದು ಸುಭಕ್ತಿಯ ಮಾತೆಯನು ಸಂ–
> ಮುದದೊಳರ್ಚಿಪ ಕರಸರೋರುಹ
> ವಿದು ಮದಾಶ್ರಿತ ರಕ್ಷಣೆಗೆ ದೊರೆತಭಯಹಸ್ತವಲಾ

ಇದು ವಿಮಳ ದಾಂಪತ್ಯಧರ್ಮಾ–
ಭ್ಯುದಯವಲ್ಲಿಗೆ ನೀರೆರೆವ ಕೈ–
ಯಿದನು  ಬಿಡೆನೆಂದೊಲಿದು ಗುರು ಕೈವಿಡಿದನಾ ಸತಿಯಾ ॥

ಈಗ ಆದುದು ಎರಡು ಮನಗಳ ಲಗ್ನ ; ಎರಡು ತನುಗಳ ಲಗ್ನವಲ್ಲ, ಇದು ತನ್ನ ಕೈಹಿಡಿದಾಕೆಗೆ ಒಪ್ಪಿತವಿದೆಯೋ ಇಲ್ಲವೋ ಎಂಬ ಸಂಶಯದಲಲ್ಲಿದ್ದ ಮರಿಸ್ವಾಮಿಗಳಿಗೆ ಆ ತಾಯಿ ಉತ್ತರವೀಯುತ್ತಾಳೆ :

ವಿರತಿ ಮೂರ್ತಿಯೆ ನಿನ್ನ ಸೇವೆಯೊ
ಳಿರುತೆ ಭಕ್ತರ ಪೊರೆಯುತವರೊಳು
ಹಿರಿಯರಿಗೆ ಮಗಳಾಗಿ ಕಿರಿಯರ ತಾಯೆನಿಸಿ ಕಡೆಗೆ
ಪರತರದ ನಿನ್ನಾತ್ಮದೊಳು ನಾಂ
ಬೆರೆಯಲೆಳಸುವೆನಂಗಗಳು ತ–
ಳ್ತಿರುವ ಸುಖದಾಶೆಗೆ ತಿಲಾಂಜಲಿಯಿತ್ತೆನೀದಿನದೆ ॥

ಅಲ್ಲಿಂದ ನನ್ನಿ ನಲ್ಮೆಗಳಂತೆ ಹೊರಟು ಬಳ್ಳಾರಿಗೆ ಬರುತ್ತಾರೆ. ಅಲ್ಲಿ ನಗರಕ್ಕೆ ದಕ್ಷಿಣದಲ್ಲೊಂದು ಪರ್ಣಕುಟಿಯಲ್ಲಿ ಈ ಗುರುದಂಪತಿಗಳು ನೆಲೆಸುತ್ತಾರೆ. 'ಕಂಬಳಿ ಸ್ವಾಮಿ'ಗೆ

ಗೊಂಗಡಿಯನಿದ ಹೊದ್ದು ಮಠದಾ
ಹಂಗುದೊರೆದ್ಯೆತಂದ ಕತದಿಂ
ಜಂಗಮನೆ ನೀಂ ಕಂಬಳಿಸ್ವಾಮಿಯ ಸುನಾಮದೊಳೇ
ಮಂಗಳಾಕರ ಭಕ್ತಿರಿಗೆ ಲಿಂಗ
ಗಂಗಯೋಗದ ನಿಜವನುಸಿರುತ
ತುಂಗಮಹಿಮೆಯೊಳಿನ್ನು ಮೈಸೂರವನಿಯೊಳು ಬೆಳಗು

ಎಂದು ಆಶೀರ್ವದಿಸಿ ಬೀಳ್ಕೊಡುತ್ತಾರೆ.

ಬಳ್ಳಾರಿಯು ಭಕ್ತರ ಭಾಗ್ಯೋದಯದ ಬೀಡಾಗುತ್ತದೆ. ಗುರುದಂಪತಿಗಳ ದರ್ಶನಾಶೀರ್ವಾದಗಳಿಂದ ಅವರ ಅಭೀಷ್ಟಗಳು ಈಡೇರುತ್ತ ಹೊರಡುತ್ತವೆ.

ಶಿವನ ಕಣ್ಣನು ಧರಿಸಿ, ಕೆಲರಿಗೆ
ಶಿವನ ಬಣ್ಣವ ಬಳಿದು ಕೆಲರಿಗೆ
ಶಿವನ ಮನುವನು ಕಲಿಸಿ ಕೆಲರಿಗೆ ವರನೆಲ್ಲರನು

ಶಿವನನೇ ನೆನೆನೆನೆದು ನಿರುತಂ
ಶಿವಮನರು ತಾವೆನಿಸಿ ಕಡೆಯೊಳು
ಶಿವಸುಖಿಗಳಾಗಿಸಿದನಾ ಶಿವಯೋಗಿವಲ್ಲಭನು ।

ಬಲಾರಿಯ ಪುರವು ಸುರಪತಿಯ ಹೆಸರನ್ನು ಹೊತ್ತದು ಸಾರ್ಥಕವಾಗುತ್ತದೆ. ಒಮ್ಮೆ ಒಬ್ಬ ಮುಗ್ಧೆ ಗುರುದಂಪತಿಗಳ ದರ್ಶನಕ್ಕೆ ಬರುತ್ತಾಳೆ. ಯುವತಿಯೂ ಸ್ಫುರದ್ರೂಪಿಯೂ ಆದ ಗುರುಮಾತೆ ಏನೆಂದೂ ಬಡವೆಗಳಿಲ್ಲದಿರುವುದನ್ನು ಕಂಡು ಆಕೆಗೆ ಕನಿಕರ ಉಂಟಾಗುತ್ತದೆ. ತನ್ನ ಆಭರಣಗಳನ್ನೆಲ್ಲ ಆಕೆಗೆ ಕೊಡಲು ಮುಂದಾಗುತ್ತಾಳೆ. ಪರಮಗುರು ಮರಿಸ್ವಾಮಿಗಳದನ್ನು ಕಂಡು ನಕ್ಕು , ಇವಳಿಗೂ ಆಭರಣಗಳಿವೆಯಮ್ಮ. ತಡೆ, ತೋರಿಸುತ್ತೇನೆ' ಎಂದು ಒಂದು ಸರ್ಪವನ್ನು ತಂದು ನೀಲಗಂಗಾಂಬೆಯರ ಕೊರಳಿಗೆ ಹಾಕುತಾರೆ. ಆ ಮುಗ್ಧೆ ಹೌಹಾರುತ್ತಾಳೆ. ಆದರೆ ಆಕೆಯ ಭಯವೂ ಮಾಯಾವಾಗುವಂತೆ ಆವಳಿಂದಲೂ ಆ ಸರ್ಪ ಮುಟ್ಟಿಸುತ್ತಾರೆ. ಬಂದು ನೋಡಿದವರೆಲ್ಲ ಬೆರಗಾಗುತ್ತಾರೆ.

ಬಲಾರಿಯ ಸದ್ಭಕ್ತರಾದ ಸಕ್ಕರಿ ಸಂಗನಬಸವಪ್ಪ ಗಂಗಾಂಬೆಯರಿಗೆ ಮರಿಸ್ವಾಮಿಗಳ ಅನುಗ್ರಹದಿಂದ ವರ ಶಿಶುವೊಂದು ಜನಿಸುತ್ತದೆ–ತ್ಯಾಗದಿಂದ ಪುಣ್ಯ, ಯೋಗದಿಂದ ಸಿದ್ಧಿ, ಸತ್ಕ್ರಿಯೆಯಿಂದ ಶಿವಭಕ್ತಿ ಸಂಪದ ಜನಿಸುವಂತೆ. ಗುರು ದಂಪತಿಗಳೇ ಬಂದು ಬಸವನೆಮದು ಹೆಸರಿಡುತ್ತಾರೆ. ಪೌರರ ಪುಣ್ಯಲತೆಯಂತೆ ಬಾಲಕನು ಬೆಳೆಯುತ್ತಾನೆ. ಬಾಲ್ಯದಲ್ಲಿಯೇ ಅವನಿಗೆ ಶಿವಭಕ್ತಿಯೇ ಉಸಿರಾಗುತ್ತದೆ, ಅಸುವಾಗುತ್ತದೆ.

ಹರುಷವೀಯುವ ವಸ್ತುವನು ಕಂ
ಡುರದೆ ಬಿಗಿಯಪ್ಪುವ ಕರಡಿವೋಲ್
ಹರಸುಭಕ್ತಿಯ ತೆಕ್ಕೆಗೊಳ್ಳುವ ಕರಡಿ ಬಾರೆಂದು
ಕರೆಕರೆದು ದಿನದಿನದೆ ನಲಿದಾ
ತರುಳನನು ತಳ್ಕೈಸುತಿರೆ ತಾಂ
ಬರಬರುತೆ ತದ್ಬಾಲಕನಿಗಾ ಹೆಸರೆ ಸ್ಥಿರವಾಯ್ತು ।

ಸಕ್ಕರಿಯ ಬಸವಪ್ಪ ಸಕರೆಯ ಕರಡೆಪ್ಪನೆಂಬ ಹೆಸರಿನಿಂದ ಹೆಸರಾಗ ತೊಡಗುತ್ತಾನೆ. ಮೊದಲು ಮದುವೆಗೆ ಒಲ್ಲೆನೆಮದು, ಗುರುಗಳು ವೀರಶೈವ ದಾರಿಯನ್ನು ತೋರಿದ ಮೇಲೆ ನಿಂಬಗಲ್ಲಿನ ಗಂಗಾಂಬಿಕೆಯನ್ನು ಮದುವೆಯಾಗುತ್ತಾನೆ. ಮನೆಯ ಕಾಯಕವಾದ ವ್ಯಾಪಾರದಲ್ಲಿ ಮನಸ್ಸು ಹಾಕುತ್ತಾನೆ. ಮುಟ್ಟಿದ್ದೆಲ್ಲ ಚಿನ್ನವಾಗತೊಡಗುತ್ತದೆ.

ಸಿರಿ ಬೆಳೆದಂತೆ ಹರಗುರುಚರಮುಂಗವರ ಆರಾಧನೆ, ಅನ್ನದಾನ, ವಿದ್ಯಾದಾನ ಕಾರ್ಯಗಳನ್ನೂ ಹೆಚ್ಚಿಸುತ್ತ ಹೋಗುತ್ತಾನೆ. ಅನ್ನಪೂರ್ಣಾದೇವಿಯೇ ಕರಡೆಪ್ಪನ ಮನೆಯಲ್ಲಿ ನೆಲಸಿದಳೋ ಎಂಬಂತೆ ದಿನಾಲು ಸಾವಿರಾರು ಜನರಿಗೆ ಸಂತರ್ಪಣೆ ಸಾಗತೊಡಗುತ್ತದೆ. ಸಂಸ್ಕೃತ ಪಾಠಶಾಲೆ ಪ್ರಾರಂಭವಾಗುತ್ತದೆ– ಕರಡೆಪ್ಪನವರ ಚೌಕಿಯೆಂದು ಈಗಲೂ ಶೋಭಿಸುತ್ತಿರುವ ಸ್ಥಳದಲ್ಲಿ. ಅಲ್ಲಿ ಚಿಕ್ಕಬಳ್ಳಾಪುರದ ಅಣ್ಣಂಯ್ಯಾಚಾರ್ಯರು, ವಿದ್ವಾನ್ ಶಂಕರ ಶಾಸ್ತ್ರಿಗಳೂ, ವಿದ್ವದ್ರಾಜ ಗೋಪಾಲಾಚಾರ್ಯರೇ ಮೊದಲಾದ ಪಂಡಿತೋತ್ತಮರಿಂದ ಅನೇಕ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಂಸ್ಕೃತ, ಜ್ಯೋಗಿಷ, ಸಂಗೀತ ಮೊದಲಾದುವುಗಳ ಅಭ್ಯಾಸ ನಡೆಯುತ್ತದೆ. ಇಲ್ಲಿ ಓದಿದ ಮುದಗಲ್ಲು ಅಮರಪ್ಪಶಾಸ್ತ್ರೀ, ಕಂದ ಗಲ್ಲು ಪರ್ವತಶಾಸ್ತ್ರೀ, ಹರಪನಹಳ್ಳಿ ಬಸವಲಿಂಗಶಾಸ್ತ್ರೀ, ಕೊಟ್ಟೂರು ರೇವಣ್ಣಶಾಸ್ತ್ರೀ ಮೊದಲಾದವರು ಘನವಿದ್ವಾಂಸರಾಗಿ ಮೆರೆದರು.

ಒಮ್ಮೆ ಮಧ್ಯರಾತ್ರಿಯಲ್ಲಿ ಓರ್ವ ಮಾಹೇಶ್ವರರು ಕರಡೆಪ್ಪನವರ ಮನೆಗೆ ಬಂದು ಆ ಅಪರಾತ್ರಿಯಲ್ಲಿ ಶಿವಾರ್ಚನೆ ತೀರಿಸಿಕೊಂಡು ಧೋ ಎಂದು ಸುರಿಯುತ್ತಿರುವ ಮಳೆಯಲ್ಲಿಯೇ ಮರಿಸ್ವಾಮಿಗಳ ಮಠಕ್ಕೆ ಹೋಗುವೆವೆಂದು ಹೋಗಿಬಿಡುತ್ತಾರೆ. ಆದರೆ ಮರಿಸ್ವಾಮಿಗಳ ಮಠಕ್ಕೇನೂ ಅವರು ಹೋಗಿರಲಿಲ್ಲ. ತ್ರಿಕಾಲಜ್ಞಾನಿಗಳಾದ ಮರಿಸ್ವಾಮಿಗಳವರು ಇದರ ಇಂಗಿತವನ್ನರಿತು ಕರಡೆಪ್ಪನವರಿಗೆ,'ಮಗನೆ, ಇನ್ನು ಮುಂದೆ ನಿನಗೆ ಅನೇಕ ವಿಪತ್ತುಗಳೂ ಒದಗುವುವು. ಅಧೀರನಾಗದೆ ಅವುಗಳನ್ನೆದುರಿಸಿ ಶಿವಸಾಯುಜ್ಯವನ್ನು ಹೊಂದು. ನಾವಿನ್ನು ಈ ಮರ್ತ್ಯದ ಮಣಿಹವನ್ನು ಮುಗಿಸುವೆವು' ಎಂದು ತಮ್ಮ ಮಠದ ಮುಂದಿನ ಮೂರು ಪೀಳಿಗೆಗಳ ಇತಿಹಾಸವನ್ನು ಮೊದಲೇ ತಿಳಿಸಿ ಶಾ.ಶ. ೧೭೬೪ಳ ಶೋಭನ ಸಂ. ಆಷಾಢ ಶುದ್ಧ ತದಿಗೆಗೆ ಶಿವಯೋಗ ಸಮಾಧಿಯನ್ನೈದುತ್ತಾರೆ. ಗುರುಮಾತೆಗೂ ಗುರುಪುತ್ರನಿಗೂ ದುಃಖ ಉಕ್ಕಿಬರುತ್ತದೆ. ಆದರೂ ಗುರುವಿನ ಆಜ್ಞೆಯಂತೆ ಮುಂದಿನ ಮಣಿಹಕ್ಕೆ ಅಣಿಯಾಗುತ್ತಾರೆ.

ಪಿಲ್ಲೆದೊರೆಯೆಂಬುವರು ಮರಿಸ್ವಾಮಿಗಳವರ ಮಠ ಕಟ್ಟಿಸಲು ಪ್ರಾರಂಭಿಸುತ್ತಾರೆ. ಚೊಕ್ಕಲಿಂಗಂ ಮುದಲಿಯಾರ್ ಕಟ್ಟುವವರು. ಕಂಬಳಿ ಸ್ವಾಮಿಗಳನ್ನು ಮತ್ತೆ ಕಳಿಸಿ ಮುಮ್ಮಡಿ ಕೃಷ್ಣರಾಜ ಒಡೆಯರು ಗುರುಮಾತೆ ನೀಲಗಂಗಾಮ್ಮನವರನ್ನು ಅರಮನೆಗೆ ಕರೆಸಿಕೊಂಡು ಮಣಿಮಕುಟಾದಿ ಕಾಣಿಕೆಗಳನ್ನು ಕೊಟ್ಟು ಕಳಿಸುತ್ತಾರೆ.ಬಳ್ಳಾರಿಯಲ್ಲಲ್ಲದೆ ಭೈರಾಪುರ, ಆಲೂರು ಮೊದಲಾದ ಸ್ಥಳಗಳಲ್ಲಿಯೂ ಮರಿಸ್ವಾಮಿಗಳವರ ಮಠಗಳ ಒಡಮೂಡುತ್ತವೆ. ಅವರ ಬೆಳ್ಜಸ ಬೆಳ್ದಿಂಗಳಿನಂತೆ ಎಲ್ಲೆಡೆಗೆ ಹರಡುತ್ತದೆ.

ಆದರೆ ಕರಡೆಪ್ಪನವರ ವಿಪತ್ಪರಂಪರೆ ಪ್ರಾರಂಭವಾಗುತ್ತದೆ. ಪತ್ನಿ ಗಂಗಾಂಬಿಕೆಯು ಪರಂಧಾಮವನ್ನೈದುತ್ತಾಳೆ. ಗುರುಮಾತೆಯ ಆಜ್ಞೆಯಂತೆ ಬಿದರಕೊಂತ ಗ್ರಾಮದ ಕರಿಬಸವಮ್ಮ ದೊಡ್ಡನಗೌಡರು ಪುತ್ರಿ ನೀಲಾಂಬಿಕೆಯ ಕೈಹಿಡಿಯುತ್ತಾರೆ. ಆದರೆ ಇದ್ದೊಬ್ಬ ಮಗ–ಮರಿಬಸವ–ಮೃತನಾಗುತ್ತಾನೆ ! ವ್ಯವಹಾರದಲ್ಲಿ ನಷ್ಟ ಬರುತ್ತದೆ! ಸಾಲದುದಕ್ಕೆ ಸರಕಾರಕ್ಕೆ ಒಮ್ಮೆಗೇ ಲಕ್ಷಗಟ್ಟಲೆ ಹಣ ಕಟ್ಟಬೇಕಾಗಿ ಬರುತ್ತದೆ ! ಇನ್ನೇನು, ಕರಡೆಪ್ಪನವರು ಬೆಳಗಾದರೆ ಹಣ ಕಟ್ಟಬೇಕು, ಇಲ್ಲವೆ ಹೊಲಮನೆಗಳು ಲಿಲಾವಿಗೆ ಸಿದ್ಧರಾಗಬೇಕು. ಅಂದು ರಾತ್ರಿ ಗುರುದರ್ಶನವಾಗುತ್ತದೆ. ಗುರು ಅಭಯವನ್ನೀಯುತ್ತಾನೆ. ಮಾರನೆಯ ದಿನ ಹಣ ಕಟ್ಟಬೇಕಾಗಿಲ್ಲವೆಂಬ ಸರಕಾರದ ಕಾಗದ ಕೈಸೇರುತ್ತದೆ!

ಕರಡೆಪ್ಪನವರ ಕೊನೆಯ ಸತ್ವಪರೀಕ್ಷೆಯೂ ಸನ್ನಿಹಿತವಾಗುತ್ತದೆ. ರಾಕ್ಷಸ ಸಂವತ್ಸರದ ರಾಕ್ಷಸನಂತಹ ಬರಗಾಲ ಬರುತ್ತದೆ. ಎಲ್ಲೆಲ್ಲಿಂದಲೋ ಅನ್ನಾನ್ನ ಗತಿಕರಾಗಿ ನಿತ್ಯವೂ ಸಾವಿರಾರು ಜನರು ಕರಡೆಪ್ಪನವರ ಕೀರ್ತಿಯನ್ನು ಕೇಳಿ ಅವರ ಮನೆಗೆ ಬರತೊಡಗುತ್ತಾರೆ. ಕರಡೆಪ್ಪನವರು ಕಂಗೆಡದೆ ಅವರಿಗೆ ಪ್ರಸಾದ ಒದಗಿಸಲು ಟೊಂಕ ಕಟ್ಟಿ ನಿಲ್ಲುತ್ತಾರೆ. ನಿತ್ಯ ಹತ್ತು ಸಾವಿನ ಜನರಿಗೆ ಒಬ್ಬರೇ ಎಷ್ಟು ದಿನ ಊಟ ಮಾಡಿಸುವರು? ಅವರಲ್ಲಿದ್ದುದೆಲ್ಲ ತೀರಿಹೋಗುತ್ತದೆ. ಆಗ ಯಾರಾರೋ ಅವರ ನೆರವಿಗೆ ಬರುತ್ತಾರೆ. ಕೆಲವು ತಿಂಗಳವರೆಗೆ ಹೀಗೆಯೇ ಅನ್ನಸಂತರ್ಪಣೆ ನಡೆಯುತ್ತದೆ. ಲಕ್ಷಾವಧಿ ಜನರು ಬರದ ದವಡೆಯೊಳಗಿಂದ ಪಾರಾಗಿ ಕರಡೆಪ್ಪನವರನ್ನು ಕೊಂಡಾಡುತ್ತ ಹೋಗುತ್ತಾರೆ. ಕರಡೆಪ್ಪನವರು ಗುರುಗಳ ಆದೇಶದಂತೆ ಭಸ್ಮ ಮತ್ತು ಲಿಂಗಗಳ ಕಣಜವೊಂದನ್ನು ಮಠದಲ್ಲಿ ಕಟ್ಟಿಸಿ ಶಾ.ಶ. ೧೮೬೭ ಯುವ ಸಂ. ಕಾರ್ತಿಕ ಶು.೧೨ಕ್ಕೆ ಶಿವನಲ್ಲಿ ಬೆರೆಯುತ್ತಾರೆ. ತನ್ನ ದೇಹವ ಭೂಮಿಗಿತ್ತು ತನ್ನ ಗುಣಗಳ ಪೌರರಿಗಿತ್ತು, ತನ್ನ ಸಚ್ಚರಿತ್ರವನ್ನು ಕಬ್ಬಿಗರಿಗಿತ್ತು , ತನ್ನ ಭಕ್ತಿಯನ್ನು ಪತ್ನಿಗಿತ್ತು, ತನ್ನ ಚಿತ್ತವನ್ನು ಮಂತ್ರಕ್ಕಿತ್ತು, ತನ್ನ ಆತ್ಮವನ್ನು ಗುರುವಿಗಿತ್ತು ಮರೆಯಾಗುತ್ತಾನೆ. ಇದಾದ ತರುವಾಯ ಶಾ. ಶ. ೧೮೦೨ ವಿಕ್ರಮ ಸಂ. ಭಾದ್ರಪದ ಮಾಸದಲ್ಲಿ ಮಹಾಸತಿ ನೀಲಗಂಗಮ್ಮನವರೂ ಲಿಂಗದಲ್ಲಿ ಬೆರೆಯುತ್ತಾರೆ. ಈ ಮೂವರು ಮಹಾನುಭಾವರ ಲಿಂಗಲೀಲಾವಿಲಾಸ ಮುಗಿದು ಬಳ್ಳಾರಿ ಭಣಭಣವೆನ್ನತೊಡಗುತ್ತದೆ. ಆದರೆ ಅವರ ಆತ್ಮಗಳ ಅಮರತೇಜಸ್ಸು ಇನ್ನೂ ಅಲ್ಲಿ ದಾರಿ ತಪ್ಪಿದವರ ಧ್ರುವತಾರೆಯಾಗಿ ಬೆಳಗುತ್ತಿದೆ.

■

# ಸಮ್ಯಕ್‌ಜ್ಞಾನಿ ಸರ್ಪಭೂಷಣ ಶಿವಯೋಗಿಗಳು
# ೧೭೯೫–೧೮೩೯

"ಅದೇನ್ರಿ ಬುದ್ದಿ ಬರೀತಾ ಇರೋದು?"

"ಏನೋ ಒಂದು ತತ್ತ್ವಗ್ರಂಥ ಬರೆಯುತ್ತಿದ್ದೇನೆ."

"ಕನ್ನಡದಲ್ಲೋ ಸಂಸ್ಕೃತದಲ್ಲೋ ಬರೆಯೋದು?"

"ಸಂಸ್ಕೃತದಲ್ಲಿ ಬರೆದರೆ ಬಹಳ ಜನರಿಗೆ ತಿಳಿಯುವುದಿಲ್ಲ ಬುದ್ಧಿ, ಬಹಳ ಜನರು ಓದಿ ಆನಂದಿಸಲೆಂದು ಕನ್ನಡದಲ್ಲಿ ಬರೆಯುತ್ತಲಿದ್ದೇನೆ."

"ಕನ್ನಡದಲ್ಲಾದರೆ ನಿಜಗುಣಪ್ಪನು ಬರೆದ ಕೈವಲ್ಯಪದ್ಧತಿ ಕಲ್ಪವೃಕ್ಷ ಇದ್ದ ಹಾಗೆ ಇದೆಯಲ್ಲ? ಮತ್ತೆ ನೀವೇಕೆ ಬರೆಯುತ್ತೀರಿ?"

"ನಾನು ಬರೆಯುತ್ತಿರುವುದೂ ಬೇರೆ ಅಲ್ಲ ಬುದ್ಧಿ; ಆ ಕಲ್ಪವೃಕ್ಷಕ್ಕೆ ನಾನೊಂದು ಬಳ್ಳಿ ಹಬ್ಬಿಸುತ್ತಿದ್ದೇನೆ ಅಷ್ಟೆ."

"ಹೀಗೋ, ಹಾಗಾದರೆ ಸರಿ, ನಿಜಗುಣರ ಕಲ್ಪವೃಕ್ಷಕ್ಕೆ ತಮ್ಮದು ಕಲ್ಪವಲ್ಲರಿ. ಧನ್ಯ ಧನ್ಯ."

ಈ ಸಂಭಾಷಣೆ ನಡೆದದ್ದು ಬೆಂಗಳೂರಿನಲ್ಲಿ–ಮೈಸೂರು ಜಿಲ್ಲಾ ನಂಜನಗೂಡು ತಾಲ್ಲೂಕು ಕಾರ್ಯಗ್ರಾಮದ ಪ್ರಭುಸ್ವಾಮಿಗಳು ಮತ್ತು ಸರ್ಪಭೂಷಣ ಶಿವಯೋಗಿಗಳ ನಡುವೆ. ಒಬ್ಬರು ಲಿಂಗನಾಯಕನ ಹಳ್ಳಿಯ ಗುರುಕುಲದಲ್ಲಿ ಬಾಲಲೀಲಾ ಮಹಾಂತ ಶಿವಯೋಗಿಗಳ ಸಹಪಾಠಿಗಳಾಗಿದ್ದ ಮೈಸೂರು ಗವಿಮಠದ ಶಿವಬಸವಸ್ವಾಮಿಗಳ ಕೃಪಾಪಾತ್ರರು, ಇನ್ನೊಬ್ಬರು ಬೆಂಗಳೂರಿನ ತಿಪ್ಪಶೆಟ್ಟರು ಮಠದ ಗುರುಸಿದ್ಧಯತಿಗಳ ಕರಜಾತರು. ಈ ಗುರುಸಿದ್ಧಯೋಗಿಗಳು ಮೈಸೂರು ಚಾಮುಂಡಿ ಬೆಟ್ಟದ ಪಶ್ಚಿಮದ ತಪ್ಪಲಿನ ಗವಿಮಠದಲ್ಲಿ ಶಿವಾನುಭವ ಸಾಮ್ರಾಜ್ಯವನ್ನಾಳುತ್ತಿದ್ದ ಶ್ರೀ ಮಹಾಲಿಂಗಸ್ವಾಮಿಗಳ ಕೃಪಾಪಾತ್ರರು.

ಇವರಿಬ್ಬರ ಸಮಾಗಮ ಕ್ರಿಯಾಜ್ಞಾನ ಸಮನ್ವಿತ ಭಕ್ತಿ ಮತ್ತು ವೈರಾಗ್ಯಗಳ ಸಮಾಗಮದಂತಿದ್ದಿತು. ಮುಂದೆ ಇವರಿಬ್ಬರ ಶಿವಾನುಭವಗೋಷ್ಠಿಯೇ 'ಜ್ಞಾನ ಶತಕ'ವೆಂಬ ಸರ್ಪಭೂಷಣರ ಸಂಸ್ಕೃತ ಸತ್ಕೃತಿಯಲ್ಲಿ ಪರ್ಯವಸಾನವನ್ನು ಹೊಂದಿತು.'ಕೈವಲ್ಯ ಕಲ್ಪವಲ್ಲರಿ'ಯನ್ನು ಕನ್ನಡ ತಾಯ ಅತ್ಯಾನಂದದಿಂದ ಸ್ವೀಕರಿಸಿದಳು;

"ಜ್ಞಾನಶತಕ"ವನ್ನು ಸಂಸ್ಕೃತಮಾತೆ ಸಂತೋಷಾತಿಶಯದಿಂದ ಸ್ವೀಕರಿಸಿದಳು; ಎರಡನ್ನೂ ಮುಮುಕ್ಷುಗಳೆಲ್ಲ ನತಮಸ್ತಕರಾಗಿ ಸ್ವೀಕರಿಸಿದರು.

ಬೆಂಗಳೂರಿಗೆ ಒಂಬತ್ತು ಮೈಲು ದೂರದಲ್ಲಿರುವ ಚಿಕ್ಕಬಾಣಾವರ ಗ್ರಾಮದಲ್ಲಿದ್ದ ಕಾಯಕ-ಜೀವಿ ಮಲ್ಲಿಕಾರ್ಜುನಪ್ಪನವರು ತನ್ನ ಪುಣ್ಯಾಂಗನೆ ಚೆನ್ನಮ್ಮ'ನೊಡನೆ ಬೆಂಗಳೂರಿಗೆ ಬಂದು ಬೆಳ್ಳಿ ಬಸವೇಶ್ವರ ದೇವಾಲಯದ ಸಮೀಪದಲ್ಲಿ ಒಂದು ಅಡಿಕೆ ಅಂಗಡಿಯನ್ನು ಆರಂಭಿಸಿದರು. ಅವರ ಐದನೆಯ ಮಗನೇ ಸಪ್ಪಯ್ಯ- ಮುಂದೆ ಸರ್ಪಭೂಷಣ ಶಿವಯೋಗಿಯಾಗಿ ಮೆರೆದವ. ಅಲ್ಲಿ, ಮೈಸೂರಿನ ಅರಮನೆಯಲ್ಲಿ, ಮೈಸೂರಿನ ಪುನರೋದಯದ ಪ್ರತೀಕವಾಗಿ ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ. ೧೭೯೪ರಲ್ಲಿ ಹುಟ್ಟುತ್ತಾರೆ; ಬೆಂಗಳೂರಿನ ಬಾಣಾವರದವರ ಮನೆಯಲ್ಲಿ, ಶರಣಸಮಾಜದ ಪುನರುತ್ಥಾನದ ಪ್ರತೀಕವಾಗಿ ಸರ್ಪಭೂಷಣ ಶಿವಯೋಗಿಗಳು ಕ್ರಿ.ಶ. ೧೭೯೫ರಲ್ಲಿ ಹುಟ್ಟುತ್ತಾರೆ.

ಸಪ್ಪಯ್ಯ ಮೂರುವರ್ಷದವನಿದ್ದಾಗ ಒಂದು ಆಶ್ಚರ್ಯ ನಡೆಯುತ್ತದೆ. ತಿಪ್ಪಶೆಟ್ಟಿಯ ಮಠದ ಹಿತ್ತಲಿನ ಜಗುಲಿಯಮೇಲೆ ಸಪ್ಪಯ್ಯನನ್ನು ಕುಳ್ಳಿರಿಸಿ ತಾಯಿ ಶ್ರೀಗಳ ದರ್ಶನಕ್ಕೆ ಹೋಗುತ್ತಾಳೆ. ಇತ್ತ ಕಾಳಸರ್ಪವೊಂದು ಸಪ್ಪಯ್ಯನ ಕೊರಳುಸುತ್ತಿ ಹೆಡೆಯೆತ್ತಿ ಆಡತೊಡಗುತ್ತದೆ. ಶ್ರೀಗಳು ನೋಡಿ ಸಂತಸಪಟ್ಟು 'ಇವನು ಸಪ್ಪಯ್ಯನಲ್ಲ, ಸರ್ಪಭೂಷಣ'ಎನ್ನುತ್ತಾರೆ. ಅಂದಿನಿಂದ ಸಪ್ಪಯ್ಯನು ಸರ್ಪಭೂಷಣನಾಗುತ್ತಾನೆ.

ಗುರುಸಿದ್ಧಯತಿಗಳಲ್ಲಿ ವಿದ್ಯಾಭ್ಯಾಸ ಮಾಡಿ ಸರ್ಪಭೂಷಣರು ಅವರ ಶಿಷ್ಯರಾಗಿಬಿಡುತ್ತಾರೆ. ಮದುವೆ ಮಾಡಬೇಕೆಂಬ ಮಾತಾಪಿತೃಗಳ ಸಂಕಲ್ಪ ವಿಕಲ್ಪವಾಗುತ್ತದೆ. ಹುಟ್ಟು ವಿರಾಗಿಗಳಾದ ಸರ್ಪಭೂಷಣರು ಮದುವೆಯನ್ನು ನಿರಾಕರಿಸಿಬಿಡುತ್ತಾರೆ. ವಿರಕ್ತಾಶ್ರಮವನ್ನು ಸ್ವೀಕರಿಸಿ ಗುರುಗಳ ಅಪ್ಪಣೆ ಪಡೆದು

---

* 'ಮಹದೇವಮ್ಮ' ಎಂದು ಶ್ರೀ. ಬಿ. ಶಿವಮೂರ್ತಿ ಶಾಸ್ತ್ರಿಗಳವರು ಬರೆದಿದ್ದಾರೆ- "ವೀರಶೈವ ಮಹಾಪುರುಷರು-ಭಾಗ ೧" ಮೂರನೆಯ ಮಗನೆಂದು ಇದೇ ಗ್ರಂಥದಲ್ಲಿ ಹೇಳಿದೆ.

ತಮ್ಮ ೨೨ನೆಯ ವಯಸ್ಸಿನಲ್ಲಿ ದೇಶಾಟನೆಗೆ ಹೊರಡುತ್ತಾರೆ.

ಚಿತ್ರದುರ್ಗ, ದಾವಣಗೆರೆ, ಹರಿಹರ, ಹಾವೇರಿ, ಹಾನಗಲ್, ಹುಬ್ಬಳ್ಳಿ, ಕಾಶಿ, ಸೊನ್ನಲಾಪುರ, ಕೂಡಲಸಂಗಮ, ಹುನಗುಂದ, ಇಳಕಲ್, ಗುಳೇದಗುಡ್ಡ, ಕಪ್ಪಡಿ ಬಾಗೇವಾಡಿ, ದುರದುಂಡೇಶ್ವರ, ಪಟ್ಟದಕಲ್ಲು, ಐಹೊಳೆ, ಶಿರೂರು, ಬಾಗಿಲಕೋಟೆ, ನರಗುಂದ, ಮುನವಳ್ಳಿ, ಸವದತ್ತಿ, ಬೈಲಹೊಂಗಲ, ಗದಗು, ಸಂಗಮ, ಹಂಪೆ, ಕೊಪ್ಪಳ, ಯಾದವಗಿರಿ, ನಾರದಗಡ್ಡೆ, ಸುರಪುರ, ಬಳ್ಳಾರಿ, ಆದವಾನಿ, ರಾಯಚೂರು, ದೊಡ್ಡ ಬಾಣಾವರ, ಎಡೆಯೂರು, ಕಗ್ಗೆರೆ, ಸಿದ್ಧಗಂಗೆ ಇತ್ಯಾದಿ ಅನೇಕ ಸ್ಥಳಗಳನ್ನವರು ಸಂದರ್ಶಿಸಿ ಬೆಂಗಳೂರಿಗೆ ಹಿಂದಿರುಗಿದರು.

ಈ ದೇಶಸಂಚಾರದಲ್ಲಿ ಶಿವಶರಣರ ಸ್ಥಾನಗಳನ್ನು ಅವರು ಸಂದರ್ಶಿಸಿ ಅವರ ಕರುಣೆಯನ್ನು ಕೋರಿದರು ; ಗುರುಮಠಗಳಲ್ಲಿ ವಾಸಮಾಡಿ ಅವರ ಅನುಗ್ರಹವನ್ನು ಪಡೆದರು ; ಅನೇಕರಿಗೆ ಅರಿವಿನ ಅನ್ನವನ್ನಿಕ್ಕಿ ಜ್ಞಾನದಾಸೋಹ ನಡೆಸಿದರು.

ಹನ್ನೆರಡು ವರ್ಷಗಳವರೆಗೆ ನಡೆದ ಈ ಪಾದಪರ್ಯಟನೆಯಲ್ಲಿ ನಡೆದ ಕೆಲವು ಮುಖ್ಯ ಘಟನೆಗಳನ್ನಾದರೂ ಇಲ್ಲಿ ವಿವರಿಸುವುದಗತ್ಯ. ಈ ಪ್ರವಾಸದಲ್ಲಿ ಚಿತ್ರದುರ್ಗದ ಬೃಹನ್ಮಠ, ಹುಬ್ಬಳ್ಳಿಯ ಮೂರುಸಾವಿರ ಮಠ ಇವೆರಡರ ಅಧಿಪತಿಗಳಿಂದಲೂ ಉತ್ತರಾಧಿಕಾರಿಯಾಗೆಂದು ಶ್ರೀ ಸರ್ಪಭೂಷಣರಿಗೆ ಕರೆ ಬಂದಿತು. ಆದರೆ ಪರಮ ವೈರಾಗ್ಯಶೀಲರಾದ ಸರ್ಪಭೂಷಣರು ಅಧಿಕಾರಕ್ಕೆ ಆಸೆ ಪಡೆಲಿಲ್ಲ.

ಬಾಗಿಲಕೋಟೆಯಲ್ಲಿದ್ದಾಗ ಒಮ್ಮೆ ಸರ್ಪಭೂಷಣರು ಮಲಗಿದ್ದಾಗ ಪರೀಕ್ಷಿಸಲೆಂದು ಅವರ ಅಂಗದಿಂದ ಲಿಂಗವನ್ನು ಬೇರ್ಪಡಿಸಲು ಅವರ ಪ್ರಾಣವೂ ಅದರೊಡನೆ ಗಮಿಸಿತು. ಮತ್ತೆ ಕ್ರಿಯಾಮೂರ್ತಿಗಳನ್ನು ಕರೆದು ತಂದು ಪಾದೋದಕ ಪ್ರಸಾದಕ್ರಿಯೆಗಳಿಂದ ಲಿಂಗವು ಚೈತನ್ಯ ಹೊಂದಲು ಅವರ ಅಂಗವೂ ಪ್ರಾಣ ಪಡೆಯಿತು.

ಬಾಗಿಲಕೋಟೆ ಸೆಟ್ಟರು ಮಡಿದ ಮಡದಿಯೊಡನೆ ತನ್ನನ್ನೂ ಹುಗಿಯಿರೆಂದು ಹಲುಬುತ್ತಿದ್ದಾಗ ಸರ್ಪಭೂಷಣರು ಅವರ ಮೋಹನಿರಸನ ಮಾಡಿದರು; ಒಂದು ಕೌಪಿನ ಬೇಡಿದಾಗ ಭಕ್ತರು ಎರಡು ಕೌಪೀನ ತಂದು ಕೊಡಲು, 'ಇನ್ನೊಂದನ್ನು ನಾನೆಲ್ಲಿ ಕಾಯಲಿ, ಕಾಪಾಡಲಿ?' ಎಂದು ಒಂದನ್ನೇ ಸ್ವೀಕರಿಸಿದರು; ಕಲಾದಗಿ ಹಿರಿಯಮಠದ ಮತ್ತು ಬೀಳಗಿ ಹಿರಿಯಮಠದ ಪಟ್ಟಾಧ್ಯಕ್ಷರಿಗೆ ವೀರಶೈವ–ನಿಜಾಚರಣೆಯ ಮರ್ಮವನ್ನು ತಿಳಿಸಿದರು.

ಅನಂತಪುರಜಿಲ್ಲಾ ಗುತ್ತಿತಾಲ್ಲೂಕಿನ ಉರವಕೊಂಡದ ಗವಿಮಠಕ್ಕೆ ಶ್ರೀ ಸರ್ಪಭೂಷಣ ಶಿವಯೋಗಿಗಳು ಆಗಮಿಸಿದಾಗ ಅಲ್ಲಿ ಮಹಾತಪಸ್ವಿಗಳಾದ ಶ್ರೀ ಕರಿಬಸವ ಸ್ವಾಮಿಗಳವರು ಅಧಿಪತಿಗಳಾಗಿದ್ದರು. ಶ್ರೀ ಸರ್ಪಭೂಷಣರ ದಿವ್ಯ ತೇಜಸ್ಸನ್ನೂ ಜ್ಞಾನಸಂಪತ್ತನ್ನೂ ಕಂಡು ಸಂತೋಷಭರಿತರಾದ ಅವರು ಸರ್ಪಭೂಷಣರ ಶಿವಯೋಗಾನುಷ್ಠಾನಕ್ಕಾಗಿ ತಮ್ಮ ಗವಿಮಠದ ಬಲಭಾಗದಲ್ಲಿ ಒಂದು ಚಿಕ್ಕ ಮಠವನ್ನು ಪ್ರತ್ಯೇಕವಾಗಿ ಕಟ್ಟಿಸಿಕೊಟ್ಟರು. ಇಂದಿಗೂ ಅದಕ್ಕೆ 'ಸಪ್ಪಣ್ಣಾರ್ಯರ ಗವಿ'ಎಂದು ಹೆಸರು ಗವಿಮಠದಲ್ಲಿ ಸರ್ಪಭೂಷಣರು ಪ್ರಾರಂಭಿಸಿದ 'ವಿದ್ಯಾನಿಧಿ'ಯೆಂಬ ಹೆಸರಿನ ಪ್ರಾಚೀನ ಗ್ರಂಥಸಂಗ್ರಹಾಲಯವು ಇಂದಿಗೂ ಪರಿಶೋಭಿಸುತ್ತಿದೆ.

ಸರ್ಪಭೂಷಣರು ಶ್ರೀಶೈಲಕ್ಕೆ ಹೋದಾಗ ಅಲ್ಲಿ ಅವರ ತೇಜಃಪುಂಜ ವ್ಯಕ್ತಿತ್ವಕ್ಕೆ ಅನೇಕರು ಅನುಯಾಯಿಗಳಾದರು.ಅವರಲ್ಲಿ ಶ್ರೀಫಾಲಲೋಚನರು ಪ್ರಮುಖರು–ಅವರು ಸರ್ಪಭೂಷಣರ ಶಿಷ್ಯೋತ್ತಮರೆನಿಸಿ ಅವರ ತರುವಾಯ ಸರ್ಪಭೂಷಣಮಠಾಧಿಕಾರಿಗಳಾದರು. "ಶ್ರೀಗಿರಿಯ ಸುಕ್ಷೇತ್ರಕ್ಕೆಂದು ಹೋಗಿ ಯಾತ್ರೆಯ ಮಾಡಿ ಬಂದೆ । ಶ್ರೀಗಿರಿಯು ಶರೀರದೊಳಗುಂಟು । ಓಂ ಶ್ರೀ ಗುರುಸಿದ್ಧ । ಯೋಗಿ ಜನರಿಗೆ ಮರ್ಮವು ಬೇರುಂಟು" ಎಂದು ಹಾಡುಕಟ್ಟಿ ಶ್ರೀಶೈಲದ ತುಟ್ಟ ತುದಿಯ ಮೆಟ್ಟಿ ಶ್ರೀ ಸರ್ಪಭೂಷಣರು ಹಾಡಿದಾಗ ಕೆಳಗಿನ ಕಂದರದಗಳೆಲ್ಲ ಮಾರ್ದನಿಗೊಟ್ಟಿರಬೇಕು. ಅವರು ಸಂಗೀತದಲ್ಲಿಯೂ ಬಲ್ಲಿದರಾಗಿದ್ದರು, ಯೋಗಿ, ಕವಿ ಸಂಗೀತಜ್ಞ, ಸ್ಫುರದ್ರೂಪಿ–ಇನ್ನೇನುಬೇಕು?

ಹೀಗೆಯೇ ಹಂಪೆಯಲ್ಲಿ ಶ್ರೀ ವಿರೂಪಾಕ್ಷನ ರಥೋತ್ಸವವನ್ನು ನೋಡುತ್ತಾ "ತೇರು ಸಾಗಿತಮ್ಮಾ ನೋಡಿರೆ । ಈ ದೇಹವೆಂಬ । ತೇರು ಸಾಗಿತಮ್ಮಾ ನೋಡಿರೆ" ಎಂದು ಹಾಡಿದರು. ಎಲ್ಲಿ ಯಾವ ಕ್ಷೇತ್ರ ನೋಡಿದರೂ ಆ ಕ್ಷೇತ್ರ ಶರೀರದಲ್ಲಿಯೂ ಇದೆಯೆಂಬ ಭಾವ ಬಲಿಯಿತು. ಈ ಕ್ಷೇತ್ರಯಾತ್ರೆಯ ಫಲವೇ ಈ ಹಾಡೆಂದು ತೋರುತ್ತದೆ :

ಕಾಣರಲ್ಲಾ ಶಿವನ ಕಾಣರಲ್ಲಾ
ಕ್ಷೋಣಿಯ ಸರ್ವಕ್ಷೇತ್ರವ ತಿರುಗಿ ಬೆಂದು ಬೆಂಡಾಗಿ ನರರು ॥ ಪಲ್ಲವಿ॥
ತನುವೆ ಪಂಪಾಕ್ಷೇತ್ರ ತನ್ನ
ಮನವೆ ದೇವಸ್ಥಾನವಲ್ಲಿ
ಮಿನುಪ ಜೀವನೆ ವಿರೂಪಾಕ್ಷೇಶ
ನೆನಿಪ ಸಮ್ಯಜ್ಞಾನವ ಮರೆದು                ಕಾಣರಲ್ಲಾ ಶಿವನ....

ಕಂಗಳ ಮಧ್ಯವೆ ಕಾಶೀಸ್ಥಳವು
ಶೃಂಗಾಟಕವೆ ಪಂಚಕ್ರೋಶ
ತುಂಗ ಪ್ರಣವವೆ ಶ್ರೀ ವಿಶ್ವೇಶ–
ಲಿಂಗವೆಂಬುವೀ ಮರ್ಮವ ಮರೆದು– ಕಾಣರಲ್ಲಾ ಶಿವನ....
ಶಿರವೆ ಶ್ರೀಗಿರಿ ಗುರು ಸಿದ್ಧೇಶ್ವರ–
ನಿರವು ಬ್ರಹ್ಮ ರಂಧ್ರವೆ ಗುಡಿಯು
ಮೆರೆವ ಜ್ಯೋತಿಪ್ರಭೆಯೆ ಮಲ್ಲೇ–
ಶ್ವರನೆಂದೆಂಬುವ ಭಾವವ ಮರೆದು– ಕಾಣರಲ್ಲಾ ಶಿವನ...

ಈ ಪರಮೋನ್ನತ ಸ್ಥಿತಿಗೆ ಮುಟ್ಟಿದ ಸರ್ಪಭೂಷಣರು ಸುರಪುರದ ಸಮೀಪದಲ್ಲಿದ್ದ ಹೊಲೆಯರ ಬಾವಿಯೊಂದರಲ್ಲಿಯೇ ಮುಖಮಜ್ಜನಾದಿಗಳನ್ನು ಮುಗಿಸಿದುದೂ ಸುರಪುರ ದೊರೆಯು ಮಂತ್ರಿ ಲಿಂಗಣ್ಣನವರು ಪ್ರವಾದವಾಯಿತೆಂದಾಗ ಪ್ರವಾದವೇನೂ ಘಟಿಸಿಲ್ಲ, ಈ ಬಾವಿ ತೀರ್ಥವಾಯಿತೆಂದುದೂ ಅಚ್ಚರಿಯಲ್ಲ. "ಹೊಲೆಯರ ಬಾವಿಯಲ್ಲೊಂದು ಎಲುವು ನೆಟ್ಟಿದ್ದರೆ ಹೊಲೆ ಹೊಲೆಯೆಂಬುದೀ ಲೋಕವೆಲ್ಲ. ಹಲವು ಎಲುವುಳ್ಳ ಬಾಯಲಿ ಅಲವಾದುದ ನುಡಿದೊಡೆ ಹೊಲೆಯರ ಬಾವಿಗಿಂತ ಕರ ಕಷ್ಟ ಕಾಣಾ" ಎಂಬ ಶರಣ ಮಾರ್ಗಾನುಯಾಯಿಗಳಲ್ಲವೆ ಆವರು?

ಬಳ್ಳಾರಿಯಲ್ಲಿ ಮರೆಯಲಾಗದ ಘಟನೆಯೊಂದು ನಡೆಯಿತು. ಸರ್ಪಭೂಷಣರು ತಮ್ಮ ದಿನಚರಿಯಂತೆ ಮನೆಯೊಂದರ ಮುಂದೆ ನಿಂತು ಅಂದಿನ ಶಿವಾರ್ಚನೆಗೆ ಅನುಕೂಲ ಮಾಡಿಕೊಡಬೇಕೆಂದು ಆ ಮನೆಯವರನ್ನು ಕೇಳಿಕೊಂಡರು. ಆ ಮನೆಯ ಯಜಮಾನ ತೀರಿಹೋದ ಕಾರಣ ಆತನ ಹೆಂಡತಿಯು ಈ ಮಹಾನುಭಾವರ ದಿವ್ಯತೇಜಸ್ಸಿಗೆ ಬಾಗಿ ಭಕ್ತಿಯಿಂದ ಸತ್ಕರಿಸಿದಳು. ಆಕೆಯ ಅಸೀಮ ಭಕ್ತಿಯ ಬಿನ್ನಹದಂತೆ ಸರ್ಪಭೂಷಣರು ನಾಲ್ಕಾರು ದಿನಗಳವರೆಗೆ ಆ ಮನೆಯಲ್ಲಿಯೇ ಶಿವಾರ್ಚನೆ ನಡೆಸಿದರು. ನಿಂದಕರ ನಾಲಗೆಗಳೂ ಚಿಗುರಿದವು. ಆ ಸಾಧ್ವಿ ಈ ಶಿವಯೋಗಿಗಳ ಬಗ್ಗೆ ಸಲ್ಲದ ಸೊಲ್ಲುಗಳನ್ನಾಡತೊಡಗಿದರು. ಅದನ್ನು ಕೇಳಿದ ಆ ಸಾಧ್ವಿಯೇ ವ್ಯಥೆಯಿಂದ ಶಿವಯೋಗಿಗಳಿಗೆ ಆ ಸುದ್ದಿಯನ್ನು ಅರುಹಿದಳು. ಜನಗಳ ಮೂಢತನವನ್ನು ಕಂಡು ಶಿವಯೋಗಿಗಳಿಗೆ ಕನಕರ ಉಂಟಾಯಿತು.

"ಹೆಣ್ಣಿ ಗಿಚ್ಛೈಸುವರೆ ಮೂಢಾ । ಇದನು
ಕಣ್ಣು ಕಿವಿ ಮೈಗಳಿಂ ಸೋಂಕ ಬೇಡಾ"

ಎಂಬ ಹಾಡನ್ನು ಹಾಡುತ್ತ ಹೊರಬಿದ್ದು ಹೊರಟುಹೋದರು. ಸ್ವಲ್ಪ ದೂರ ಹೋಗಿರಬೇಕು ಸರ್ಪಭೂಷಣರು ಅಷ್ಟರಲ್ಲಿಯೇ ಅವರನ್ನು ಕುರಿತು ಕುಹಕವನ್ನು ನುಡಿದವರಿಗೆಲ್ಲ ವಾಂತಿ ಭೇದಿ ಪ್ರಾರಂಭವಾಗಿ ಒಬ್ಬೊಬ್ಬರೇ ಪ್ರಾಣ ಬಿಡತೊಡಗಿದರು. ಊರವರೆಲ್ಲರೂ ಓಡಿಹೋಗಿ ಶಿವಯೋಗಿಗಳ ಪಾದಗಳಿಗೆರಗಿ ಕ್ಷಮೆಯನ್ನು ಕೋರಿ ಅವರನ್ನು ಮತ್ತೆ ಬಳ್ಳಾರಿಗೆ ಬರಲು ಪ್ರಾರ್ಥಿಸಿಕೊಂಡರು.

ಇಂಥ ಅನರ್ಥ ಉಂಟಾದೀತೆಂದು ಕನಸಿನಲ್ಲಿಯೂ ಎಣಿಸಿರಲಿಲ್ಲ ಸರ್ಪಭೂಷಣರು, ತಮ್ಮ ದೂಷಕರೇ ಆಗಲೊಲ್ಲರೇಕೆ, ಅವರಿಗೇಕೆ ಇಂಥ ಭಯಂಕರ ಬೇನೆ ಬಂದಿತೆಂದು ಮರುಗಿ ತಕ್ಷಣವೇ ಬಳ್ಳಾರಿಗೆ ಪುನರಾಗಮಿಸಿದರು. ಆ ಕ್ಷಣವೇ ಎಲ್ಲರ ಬೇನೆ ಬಯಲಾಯಿತು. ಮತ್ತೆ ಎಲ್ಲರ ಅಪೇಕ್ಷೆಯಂತೆ ಶಿವಯೋಗಿಗಳು ಆ ಸಾಧ್ವಿಯ ಮನೆಯಲ್ಲಿಯೇ ಮೂರು ತಿಂಗಳುಗಳವರೆಗೆ ಶಿವಪೂಜೆ ನಡೆಸಿದರು. ಕೊನೆಗೆ ಆಕೆಯು ತನ್ನಲ್ಲಿದ್ದ ಹದಿನಾರು ಸಾವಿರ ರೂಪಾಯಿಗಳನ್ನು ಶಿವಯೋಗಿಗಳಿಗೆ ಕಾಣಿಕೆಯಾಗಿ ಅರ್ಪಿಸಿದಳು. ಆ ಹಣವನ್ನವರು ಅಲ್ಲಿಯೇ ಓರ್ವ ಶ್ರೀಮಂತರಾದ ರೊಟ್ಟಿ ವಿರೂಪಾಕ್ಷಪ್ಪನವರಲ್ಲಿಯೇ ಇಟ್ಟು ಅಪೇಕ್ಷಿಸಿದಾಗ ಕಳಿಸಿರೆಂದು ಹೇಳಿ ಮುಂದೆ ನಡೆದರು.

ದಾರಿಯಲ್ಲಿ ದೊಡ್ಡಬಾಣಾವರದ ಸಿದ್ಧಮಲ್ಲಪ್ಪ ಶರಣರನ್ನು ಕಾಣಲು ಹೋದರು. ಅವರು ಆರೂಢ ಮಾರ್ಗಿಗಳು. ಅವರ ಅಂಗದ ಮೇಲೆ ಲಿಂಗವಿಲ್ಲದುದನ್ನು ಕಂಡು ಸರ್ಪಭೂಷಣರು 'ಅರಿವನರಿದಿಹೆನೆಂದು ಕ್ರಿಯೆಯ ಬಿಡಲಾಗ'ದೆಂಬ ಶರಣ ತತ್ತ್ವವನ್ನು ಅವರಿಗೆ ತಿಳಿಸಿ ಮುಂದೆ ಸಾಗಿದರು.

ಎಡೆಯೂರು, ಕಗ್ಗೆರೆ ಹಾಗೂ ಸಿದ್ಧಗಂಗೆಗಳಿಗೆ ಹೋಗಿ ಅಲ್ಲಿ ಮಹಾಮಹಿಮ ಶ್ರೀ ತೋಂಟದ ಸಿದ್ಧಲಿಂಗೇಶ್ವರರಿಗೆ ತಮ್ಮ ಭಕ್ತಿಯ ಮುಡಿಪ್ಪನ್ನು ಸಲ್ಲಿಸಿ ಸರ್ಪಭೂಷಣರು ಬೆಂಗಳೂರಿಗೆ ಮರಳಿದರು. ಗುರುಗಳಾದ ಗುರು ಸಿದ್ಧಯತಿಗಳಿಗೂ ಭಕ್ತಸಮಾಜಕ್ಕೂ ಆನಂದ ಉಕ್ಕೇರಿತು. ಗುರುಗಳಿಗೆ ಶಿವನ ಅಪ್ಪಣೆ ಬಂದಿತು. ತಂದೆ ಮೊದಲೇ ಕಾಲವಾಗಿದ್ದರು. ಈಗ ಸರ್ಪಭೂಷಣರ ಶಿವಾರಾಧನೆಗೆ ಮಹಾಪೂರ ಬಂದಿತು. ಗ್ರಂಥಾವಲೋಕನ, ಶಿವಾನುಭವ ಪ್ರವಚನ, ಗ್ರಂಥ ಲೇಖನ ಕಾರ್ಯಗಳು ಭರದಿಂದ ನಡೆದುವು. ಅವರ ಕೀರ್ತಿ ದಶದಿಕ್ಕುಗಳಲ್ಲಿ ಹಬ್ಬಿತು; ಅವರ ಶಿಷ್ಯಕೋಟಿ ದಿನದಿನಕ್ಕೆ ಬೆಳೆಯಿತು. ಅವರಿಗಾಗಿ ಪ್ರತ್ಯೇಕ ಮಠದ ಕಟ್ಟಡದ ಕಾರ್ಯವೂ ಓಂಕಾರೇಶ್ವರ ದೇವಾಲಯದ ನಿರ್ಮಾಣ ಕಾರ್ಯಗಳೂ ಪ್ರಾರಂಭವಾದುವು–ಫಾಲಲೋಚನರ ನೇತೃತ್ವದಲ್ಲಿ.

ಆದರೆ ಮಠದ ಕಾರ್ಯ ಮುಗಿವ ಮೊದಲೇ ಸರ್ಪಭೂಷಣರಿಗೆ ನಾಗಭೂಷಣ ಶಿವನ ಕರೆಬಂದಿತು. ಒಂದು ದಿನ ನಡುಹಗಲಿನ ಉರಿಬಿಸಿಲಿನಲ್ಲಿಯೇ ನಿಂತು ಮಠದ ಕಟ್ಟಡದ ಮೇಲ್ವಿಚಾರಣೆ ಮಾಡುತ್ತಲಿದ್ದ ಶಿಷ್ಯ ಫಾಲಲೋಚನರನ್ನು ಕಂಡು ಶಿವಯೋಗಿಗಳಿಗೆ ಕನಿಕರ ಉಂಟಾಯಿತು. "ಇನ್ನೊಂದು ವಾರದೊಳಗೆ ಈ ಮಠದ ಕಳಸವೇ ಕಳಚಿ ಬೀಳುವುದಿದೆ. ನೀವೇಕೆ ಸುಮ್ಮನೆ ಶ್ರಮ ಪಡುತ್ತಿರುವಿರಿ?" ಎಂದು ನುಡಿದರು.

ಕಾರ್ಯದ ಪ್ರಭುಸ್ವಾಮಿಗಳೂ ಫಾಲಲೋಚನರೂ ಈ ಮಾತಿನ ಮರ್ಮವನ್ನರಿತು ಕಳವಳಿಸಿ ಕಂಗೆಟ್ಟರು. ಆದರೆ ಅವರ ಕಳವಳದಿಂದ ಅಗುವುದೇನೂ ತಪ್ಪಲಿಲ್ಲ. ಕ್ರಿ.ಶ. ೧೮೪೯ ರಲ್ಲಿ ಒಂದು ಸಂಜೆ. ಅಂದು ಶ್ರೀ ಸರ್ಪಭೂಷಣರೂ ಅಸ್ತಂಗತರಾಗುವರೆಂಬುದನ್ನರಿತ ಸಂಜೆಯ ಸೂರ್ಯನು ತಳಮಳದಿಂದ ಕಾಯ್ದುಕೆಂಪಾಗಿ ತಾನೂ ಅಸ್ತಂಗತನಾಗುತ್ತಲಿದ್ದಾನೆ. ಸರ್ಪಭೂಷಣರು ಅಂದಿನ ಪ್ರದೋಷಕಾಲದ ಪೂಜೆಗೆ ಕುಳಿತುಕೊಳ್ಳುತ್ತಾರೆ. ಮತ್ತೆ ಮೇಲೇಳುವುದಿಲ್ಲ. ಲಿಂಗಪೂಜೆ ಮಾಡುತ್ತ ಮಾಡುತ್ತ ತಾವೂ ಲಿಂಗವಾಗಿಬಿಡುತ್ತಾರೆ. ಕೇವಲ ೪೫ ವರ್ಷಗಳ ವಯಸ್ಸಿನಲ್ಲಿ ಕನ್ನಡ ನಾಡನ್ನೆಲ್ಲ ತೊಳಗಿ ಬೆಳಗಿದ ಈ ಸಮ್ಯಜ್ಞಾನಜ್ಯೋತಿ ವಿಶ್ವಜ್ಯೋತಿಯಲ್ಲಿ ಲೀನವಾಗಿಬಿಡುತ್ತದೆ.

ಅವರ ಅಂತ್ಯಕಾಲದಲ್ಲಿಯೂ ಒಂದು ಅದ್ಭುತ ನಡೆಯುತ್ತದೆ. ಶಿವಯೋಗಿಗಳ ಶಿಷ್ಯವೃಂದದಲ್ಲಿ ಇಬ್ಬರಾದ ಗುಡೇಮಾರನಹಳ್ಳಿ ಮಲ್ಲಿಕಾರ್ಜುನಪ್ಪ ಮತ್ತು ರೊಟ್ಟಿರುದ್ರಪ್ಪ ಎಂಬುವರು ಬೆಂಗಳೂರಿಗೆ ಸುಮಾರು ೪೦-೪೫ ಮೈಲಿಗಳ ದೂರವಿರುವ ಮೊರಳೆ ಎಂಬ ಗ್ರಾಮದಲ್ಲಿದ್ದರು- ಆ ದಿನ ಅಲ್ಲಿಯೂ ಒಬ್ಬ ಮಹಾತ್ಮರಿದ್ದರು ಆಗ. ಅವರ ಹೆಸರು ಹುಚ್ಚಪ್ಪಸ್ವಾಮಿ. ಅವರಂದು ಶಿವ ಪೂಜೆಗೆ ಕುಳಿತಾಗ , ಸರ್ಪಭೂಷಣರು ದಿವ್ಯ ವಿಮಾನಾರೂಢರಾಗಿ ಕೈಲಾಸಕ್ಕೆ ಹೊರಟ ದೃಶ್ಯ ಅವರಿಗೆ ತಮ್ಮ ಕರದಿಷ್ಟಲಿಂಗದಲ್ಲಿಯೇ ಕಾಣಿಸಿತು. 'ಧನ್ಯ' ಸರ್ಪ್ಪಣ್ಣಾ. ನೀನೇ ಧನ್ಯ' ಎಂಬ ಉದ್ಗಾರ ಅವರ ಮುಖದಿಂದ ಹೊರಟಿತು. ಆಗಲೇ ಅವರೂ ಈ ಶಿಷ್ಯರೂ ಬೆಂಗಳೂರಿಗೆ ಶ್ರೀ ಸರ್ಪಭೂಷಣರ ಅಂತ್ಯದರ್ಶನಕ್ಕಾಗಿ ಹೊರಟರು. ಶ್ರೀ ಸರ್ಪಭೂಷಣರ ದೇಹವನ್ನು ಸಮಾಧಿಯಲ್ಲಿಟ್ಟು ಮಂಗಳಾರತಿಯನ್ನು ಬೆಳಗುವ ಸಮಯಕ್ಕೆ ಸರಿಯಾಗಿ ತಲ್ಪಿದರು. ಅಂತ್ಯದರ್ಶನ ಪಡೆದರು.

ಸರ್ಪಭೂಷಣರಿಗೆ ಶಿವದರ್ಶನ ಎಂದೋ ಅಗಿಹೋಗಿದ್ದಿತು. ಆ ಆನಂದವೇ ಈ ಗೀತೆಯಾಗಿ ಹೊಮ್ಮಿದೆ :

### ರಾಗ – ಮಧುಮಾಧವಿ

ಮುನ್ನ ನಾನೇನು ಪುಣ್ಯಗಳ ಮಾಡಿರ್ದೆನೊ
ನನ್ನ ನಿಜವ ನಾನೇ ತಿಳಕೊಂಡೆನಲ್ಲಾ ಪಲ್ಲವಿ
ಶರೀರವೆ ನಾನೆಂದು ದೃಢದಿಂದೆ ನೆರೆನಂಬಿ
ಪರವಸ್ತುವನು ಮುನ್ನ ಮರೆದಿರ್ದ ತೆರದಿ
ಶರೀರವ ಮರೆದೀಗ ಕರಣತ್ರಯದೆ ನಾನೆ
ಪರವೆಂಬ ನಂಬುಗೆ ಕರಿಗೊಂಡಿತಲ್ಲಾ ೧

ನಾನು ಗೋವುಗಳ ಹಾಲೊಂದೆ ರೂಪಾದಂತೆ
ನಾನಾ ವ್ಯಕ್ತಿಗಳಲ್ಲಿ ಪರಿಪೂರ್ಣನಾಗಿ
ನಾನಿರ್ಪೆ ಹಾನಿವೃದ್ಧಿಯು ದೇಹಕಹುದೆನ್ನೊ
ಳೇನಿಲ್ಲವೆಂಬೂಹೆ ತಲೆದೋರಿತಲ್ಲಾ ೨

ಬಯಲೊಳು ಮನೆಗಳುದಿಸಿ ಬಿದ್ದು ಹೋಗಲಾ
ಬಯಲೇನು ಕೆಡದಂತೆ ಕಮಲಜಾಡಗಳು
ಲಯಿಸುದಿಸುದಿಸಿ ಲಯಿಸಲುವೆನ್ನೊಳು ನಾನು
ಲಯಿಸೆನೆಂಬುವ ಬುದ್ಧಿ ಕುಡಿಸಾಗಿತಲ್ಲಾ ೩

ಕುರಿಯ ಹೊತ್ತದನು ಮರೆದು ಸುತ್ತಲರಸುವ
ಕುರುಬನಂದದೊಳದ್ರಿ ಗುಹೆ ಗುಲ್ಮಗಳೊಳು
ಅರೆ ಹುಚ್ಚರರಸಿ ಕಾಣದ ವಸ್ತು ಸರ್ವತ್ರ
ವಿರುವುದೆಂಬರಿವೆನ್ನೊಳಡಿಯಿಟ್ಟಿತಲ್ಲಾ ೪

ಕುರುಡರಾನೆಯ ಮುಟ್ಟಿ ಮನಕೆ ಬಂದಂದದಿಂ
ದರಿವಂತೆ ಷಣ್–ಮತಸ್ಥರು ಬೇರೆ ಬೇರೆ
ಬರೆವ ಕಲ್ಪನೆಯ ಮೀರರ್ದ ವಸ್ತುವು ತಾನೆ
ಗುರುಸಿದ್ಧನೆಂಬಾಸ್ಥೆಯಳವಟ್ಟಿತಲ್ಲಾ ೫

ಇದು ಸಮ್ಯಕ್‌ಜ್ಞಾನದ ಸಾರಸರ್ವಸ್ವವಲ್ಲವೆ?

ಗೀತಾದಿ ಮೋಹನಕಲಾ ಜಠರಾವನಾಯ
ತರ್ಕಾದಿ ಧೋರಣ ಕಲಾ ಜನಗೌರವಾಯ
ವೇದಾದಿ ಪಾವನಕಲಾ ಪರಭಾವುಕಾಯ

ತತ್ತ್ವಾವಬೋಧನಕಲಾ ಭವತ್ಯೇಮೃತಾಯ–

ಗಾಯನಾದಿ ಮೋಹನಕಲೆಗಳು ಉದರಪೋಷಣೆಗಾಗಿ, ತರ್ಕಾದಿ ಧೋರಣಕಲೆಗಳು ಜನಗೌರಮಕ್ಕಾಗಿ, ವೇದಾದಿ ಪಾವನಕಲೆಗಳು ಪರಲೋಕ ಸುಖಕ್ಕಾಗಿ, ತತ್ತ್ವಾವಬೋಧನಕಲೆ ಮಾತ್ರ ಅಮೃತತ್ವಕ್ಕಾಗಿ–ಎಂದು ಜ್ಞಾನಶತಕದಲ್ಲಿ ಉದ್ಘೋಷಿಸಿರುವ ಸರ್ಪಭೂಷಣರು ಪ್ರಸ್ಥಾನತ್ರಯಕಾಂತಾರವನ್ನು ಪ್ರವೇಶಿಸಲು ಸಾಮರ್ಥ್ಯವಿಲ್ಲದ ಸಾಮನ್ಯರಿಗಾಗಿ ಸಾಮಾನ್ಯರ ನುಡಿಯಲ್ಲಿಯೇ ತತ್ವ ಪ್ರಕಾಶವನ್ನು ಬೀರಿ ಹೋಗಿದ್ದಾರೆ.

ಇದು ಅಬಲೆಯರಿಗಾಗಿ–

**ರಾಗ–ಎರಕಲಕಾಂಬೋಧಿ**

"ಅನುಭಾವದಡುಗೆಯ ಮಾಡಿ । ಅದ–
ಕ್ಕನುಭಾವಿಗಳು ಬಂದು ನೀವೆಲ್ಲ ಕೂಡಿ ಪ
ತನುವೆಂಬ ಭಾಂಡವ ತೊಳೆದು । ಕೆಟ್ಟ
ಮನದ ಜಂಜಡವೆಂಬ ಮುಸುರೆಯ ಕಳೆದು
ಘನವೆಂಬ ಮನೆಯನೆ ಬಳಿದು । ಅಲ್ಲಿ
ಬಿನುಗು ತ್ರಿಗುಣವೆಂಬುವೊಲೆಗುಂಡ ತುಳಿದು ॥

ಇದು ಗರಡಿ ಸಾಧಕರಿಗಾಗಿ–

ತನುವೆಂಬ ಗರಡಿಯೊಳನುಭವಧೀರರು
ಘನಯೋಗ ಸಾಧನೆಯನು ಮಾಡಿರೊ
ಮನುಜರೊಲಿವ ನಿಮ್ಮ ಬಿನುಗು ಸಾಧನೆಯಿಂದೆ
ಜನನ ಮರಣವಾಜಿ ಓಡುವುವೆ? ಪ

ಸ್ಥಿರಬುದ್ಧಿಯೆಂದೆಂಬ ಸಮನಾದ ನೆಲದೊಳು
ಗುರುಬೋಧೆಯೆಂಬ ದಂಡೆಗಳನೊತ್ತಿ
ಪರತತ್ತ್ವವಿವರದ ಬಸಿಗೆಗಳನೆ ಹಾಕು–
ತರಿವೆಂಬ ಕೊಣತವನೊತ್ತಿ ಕಟ್ಟಿ ೧

ಇದು ನೇಗಿಲಯೋಗಿಗಳಿಗಾಗಿ–

ಶರೀರವೆಂದೆಂಬುವ ಹೊಲನ ಹಸನಮಾಡಿ
ಪರತತ್ತ್ವ ಬೆಳೆಯನೆ ಬೆಳೆದುಣ್ಣಿರೋ ಪ

ಇದು ಧನಿಕರಿಗಾಗಿ–

ಏಕೆ ಧನವಿರ್ದು ಲೋಭವನು ಮಾಳ್ಪೆ ಎಲೆ ಮನುಜ
ಸಾಕು ನಿನಗಿದರಿಂದಲೇನು ಫಲವಹುದು? ಪ

ಇದು ಬೇಟೆಗಾರರಿಗೆ–

ಕಾಯಕಾಂತಾರವ ಹೊಕ್ಕು ಬೇಟೆಯನಾಡಿ
ಮಾಯಾ ಮೋಹದ ಮೃಗಗಳ ಕೊಲ್ಲಿರೋ ॥

ಇದು ಮೊಸರು ಕಡೆವಾಕೆಗೆ–

ಕಡೆದು ಸಾರವ ತೆಗೆದು ಸವಿವುದೀ ಪರಿ ತಂಗಿ
ಜಡಕೃತ್ಯದಿಂದೆ ಫಲವೇನು ಲಲಿತಾಂಗಿ
ತನುವೆಂಬ ಭಾಂಡದೊಳು ಮನವೆಂಬ ಮಂತನಿ–
ಟ್ಟನುಭವರಸವೆಂಬ ದಧಿಯ ತುಂಬಿ
ಘನಶೈವ ಭಕ್ತಿಯೆಂದೆಂಬ ಹಗ್ಗವ ಸುತ್ತಿ
ವಿನಯ ವಿರತಿಗಳೆಂಬ ಕೈಗಳಿಂ ಪಿಡಿಸು ॥

ಇದು ಹಿರಿತನದ ಹುಚ್ಚು ಹಿಡಿದವರಿಗೆ–

ಹೊರಗೆ ಹಿರಿಯರಾಗಿ ನಿಜವರನಿಯದವರೆ ಕಿರಿಯ
ರೊಳಗ । ನರಿದು ಕಿರಿಯರಾದೊಡವರೆ ಜಗಕೆ ಹಿರಿಯರು ॥
ನೂರು ವರ್ಷ ಬಾಳ್ದು ತತ್ತ್ವ । ಸಾರವರಿಯದೆಮನಪುರದ ।
ದಾರಿಯಲ್ಲಿ ಒದಿಸಿಕೊಂಬುವವರೆ ಕಿರಿಯರು ।
ಮೂರು ವರುಷವಾದೊಡೇನು । ಪಾರಮಾರ್ಥವರಿದು ಭವದ ।
ಬೇರ ಕಿತ್ತು ಬಿಸುಡಬಲ್ಲೊಡವರೆ ಹಿರಿಯರು ॥

ಇದು ವೈದ್ಯರಿಗೆ–

ಶ್ರೀಗುರುವೆಂದೆಂಬ ವೈದ್ಯನೆನ್ನಯ ಭವ–
ರೋಗಕೌಷಧವನಿಂತಿತ್ತು ಬದುಕಿಸಿದ ಪ
ಘನ ತತ್ತ್ವಮಸಿಯೆಂಬ ಚಂದ್ರೋದಯವನಿಟ್ಟು
ಮನವೆಂಬುವ ಪಥ್ಯವನ್ನೇ ಹಿಡಿಸಿ
ಮಿನುಪ ನಿಧಿದ್ಯಾಸದುಪಚಾರದಿಂ ಮುಕ್ತಿ–
ಯನುಪಮ ಸುಖವೆಂಬುವಾರೋಗ್ಯವನೆ ನೀಡಿ ॥

ಇದು ಭೂಷಣಪ್ರಿಯರಿಗೆ–

ಗುಣಗಳೆ ಭೂಷಣವಲ್ಲದೆ ಸರ್ವಕ್ಕು
ಮಣಿ ಹೇಮಾದಿಗಳು ಭೂಷಣವಲ್ಲವು

ಇದು ಬಾಹ್ಯಾಡಂಬರದವರಿಗೆ–

ಬಿಡುಬಾಹ್ಯದೊಳು ದಂಭವ । ಮಾನಸದೊಳ–
ಗೆದೆವಿಡದಿರು ಶಂಭುವ ॥
ಒಡಲೊಳು ವಂಚಿಸಿ ಹೊರಗೆ ನೀ ಕೀರ್ತಿಯ
ಪಡೆದರೆ ಶಿವ ನಿನಗೊಲಿವನೆ ಮರುಳೆ? ಪ

ಜನಮೆಚ್ಚೆ ನಡಕೊಂಡರೇನುಂಟು ಲೋಕದಿ
ಮನಮೆಚ್ಚೆ ನಡೆಕೊಂಬುವುದೆ ಚೆಂದವು
ಜನರೇನು ಬಲ್ಲರು ಒಳಗಾಗೊ ಕೃತ್ಯವ
ಮನವರಿಯದ ಕಳ್ಳತನವಿಲ್ಲವಲ್ಲಾ ೧

ಇಂದು ಪ್ರಜಾಪ್ರಭುತ್ವವಾದಿಗಳೆಲ್ಲ ಜನಮೆಚ್ಚೆ ನಡಕೊಳ್ಳಬೇಕೆಂದು ಸಾರುತ್ತಿದ್ದರೆ ಶ್ರೀ ಸರ್ಪಭೂಷಣರು ಜನರ ಮೆಚ್ಚುಗೆಗೆ ಬೆಲೆಯಿಲ್ಲ, ಮನಮೆಚ್ಚೆ ನಡೆದರೆ ಮಾತ್ರ ಅದಕ್ಕೆ ಬೆಲೆಯಿದೆಯೆಂದು ಬೋಧಿಸಿದ್ದಾರೆ. ಒಂದಿಲ್ಲೊಂದು ದಿನ ಈ ಜನರ ಮೆಚ್ಚಿಸುವ ಗೀಳು ಕಡಮೆಯಾಗಿ ಮನವ ಮೆಚ್ಚಿಸುವ ಇಚ್ಛೆ ಬಲಿದಾಗಲೇ ಪ್ರಪಂಚದ ಪ್ರಶ್ನೆಗಳಿಗೆ ಪರಿಹಾರ ದೊರೆವುದೆಂದು ತೋರುತ್ತದೆ.

ಜನರು ಮೆಚ್ಚಲೆ ನಿನ್ನ ಕೈಲಾಸ ಕೋಯ್ವರೆ
  ಜನರು ಮೆಚ್ಚದಿರೆ ಶಿವ ಬಿಡುತಿಹನೆ?
ಜನರಿಲ್ಲಿ ನಿನ್ನನು ದೊಡ್ಡಾತನೆಂದರೆ
  ಚಿನುಮಯ ಶಿವನಲ್ಲಿ ಅರಿಯನೆ ಮರುಳೆ?

ಜನಮೆಚ್ಚಿ ಶುದ್ಧರಲ್ಲದೆ ಮನಮೆಚ್ಚಿ ಶುದ್ಧರಲ್ಲದವರಿಗೆ ಇದೊಂದು ಕಣ್ದೆರೆಸುವ ಅಮೃತಾಂಜನ.

ಮನದೊಳು ಶಿವ ತಾನು ಮನೆಮಾಡಿಕೊಂಡಿಹ
  ಮನಮೆಚ್ಚೆ ನಡೆದರೆ ಶಿವಮೆಚ್ಚುವ
ಮನಕಂಜಿ ನಡೆಯದೆ ಜನಕಂಜಿ ನಡೆದರೆ
  ಮನದಾಣ್ಮ ಗುರುಸಿದ್ಧ ಮರೆಯಾಗೊನಲ್ಲ ॥

ಕೈವಲ್ಯ ಕಲ್ಪವಲ್ಲರಿಯ ಒಂದೊಂದು ಹಾಡೂ ಒಂದು ಅನರ್ಘ್ಯ ರತ್ನ. ಯಾವುದನ್ನು ಉದ್ಧರಿಸಬೇಕು, ಯಾವುದನ್ನು ಬಿಡಬೇಕು? ಎಲ್ಲರಿಗೂ ಎಚ್ಚರಿಕೆಯ ಗಂಟೆಯಂತಿರುವ ಇದೊಂದನ್ನಾದರೂ ಉದ್ಧರಿಸದೆ ತೃಪ್ತಿಯಿಲ್ಲ :

ಇಂದು ನಾಳೆಯು ಎನ್ನದೀಗಲೇ ಸುಕೃತವಡೆ
ಮುಂದಾವ ಗಳಿಗೆಗೇನಹುದೊ ಮನುಜಾ ॥
ತನುವೇನು ಶಾಶ್ವತವೆ? ಮನಕೆ ನಿಶ್ಚಲವಿಹುದೆ?
ಧನವು ಕುಲಗಿರಿಯೆ? ಯತ್ನವಭಂಗಮಯವೆ?
ವನಿತೆಯನುಕೂಲಿಯೆ? ತನಯನಾಜ್ಞಾಧರನೆ?
ಜನರೊಲುಮೆ ನಿಜವೆ? ವಾಸನೆ ಏಕ ಮುಖಿಯೆ? ೧

ಕುಜನರಲಿಸಿದರೆ? ವಿಘ್ನಂಗಳಕ್ಷಿಯೆ ಹೋಯ್ತೆ?
ರುಜೆಗೆ ಮೈಮರವೆ? ದುಃಖಕೆ ಮೂರ್ಛೆ ಬಂತೆ?
ನಿಜ ಬಂಧುವಳಿಯದುದೆ? ಪೈಶೂನ್ಯವಡಗಿತ್ತೆ? ೨

ಕಾಲಸ್ವಜನವೆಂದರೀ ದೋಷವದರಿಂದೆ
ಹಾಲಿದ್ದ ಕಾಲದಲೆ ಹಬ್ಬವೆಂದರಿದು
ಕೇಲದಾರನು ಯಥಾಶಕ್ತಿಯಿಂ ಧರ್ಮಪರಿ
ಪಾಲನೆಯಮಾಡಿ ಗುರುಸಿದ್ಧನನು ಒಲಿಸೈ ೩

ಕೈವಲ್ಯ ಕಲ್ಪವಲ್ಲರಿ ಕನ್ನಡಿಗರು ಸರ್ಪಭೂಷಣರಿಂದ ಪಡೆದ ಅನುಭವದ ಅಕ್ಷಯ ಭಾಂಡಾರ. "ಸುಖವಳಿದು ಕಷ್ಟವಾಯ್ತೆಂದಳದಿರು' 'ಮನವೆಂಬ ಮರ್ಕಟವ' 'ಪಾಲಿಸಯ್ಯ ಪಾರ್ವತೀಶ್ವರಾ' 'ಇನ್ನಾದರೀಭವಕೆ ಹೇಸಬಾರದೆ ಮನುಜ"ಬೇಡಿಕೊಂಬುವೆನಭವ' 'ಕೋಳಿ ಕೂಗಿತು ಮಗಳೆ ಬೆಳಗಾಯಿತೇಳಮ್ಮ' 'ಕೇಳಿ ಕಾಲಜ್ಞಾನವ' ಇತ್ಯಾದಿ ಅವರ ಹಾಡುಗಳ ಹಳ್ಳಿಗರ ನಾಲಗೆಯ ಮೇಲೆ ನಲಿಯುತ್ತಿವೆ. ಜ್ಞಾನಶತಕದಲ್ಲಿ ಮುಮುಕ್ಷುಲಕ್ಷಣಗಳನ್ನವರು ಇಂತು ವರ್ಣಿಸಿದ್ದಾರೆ.

ಆರ್ತಪ್ರೀತಿರ್ವಿಷಯ ವಿರತಿರ್ನಿಷಾದೋ ವಿಪತ್ತೌ
ಕರ್ಮಾನಾಸ್ಥಾ ತನು ಪರಿಭವಃ ಪುತ್ರ ದಾರಾದ್ಯಮೋಹಃ
ಪ್ರಾಪ್ತೇ ತುಷ್ಟಿಸ್ಸಕಲ ಸಮತಾ ತತ್ವವಿದ್ಯಾ ವಿಮರ್ಶ
ಸ್ತಜ್ಞೈಸ್ಸಂಗೋ ಗುರುಕುಲರತಿರ್ಲಕ್ಷಣಂ ಸ್ಯಾನ್ಮುಮುಕ್ಷೋಃ

"ಅರ್ತಜನರಲ್ಲಿ ಪ್ರೀತಿ, ವಿಷಯವೈರಾಗ್ಯ ವಿಪತ್ತುಗಳಲ್ಲಿ ವಿಷಾದಿಸದಿರುವುದು, ಕರ್ಮಗಳಲ್ಲಿ ನಿರಾಸಕ್ತಿ , ದೇಹದ ಬಗ್ಗೆ ಮೋಹವಿಲ್ಲದಿರುವುದು, ಸತಿಸುತರಲ್ಲಿ ನಿರ್ಮೋಹ, ದೊರೆತಷ್ಟರಲ್ಲಿ ತೃಪ್ತಿ, ಸಕಲಸಮತೆ, ಸದಾ ತತ್ವಚಿಂತನೆ, ಜ್ಞಾನಿಗಳೊಡನೆ ಒಡನಾಟ, ಗುರುಸ್ಥಾನದಲ್ಲಿ ನಿಷ್ಠೆ–ಇವು ಮುಮುಕ್ಷುಗಳ ಲಕ್ಷಣಗಳು."

ಇವೆಲ್ಲ ಲಕ್ಷಣಗಳಲ್ಲದೆ ಸಮರಸಸಿದ್ಧ ಸರ್ಪಭೂಷಣರಲ್ಲಿ ಶಿವಯೋಗಿಯ ಸಕಲ ಲಕ್ಷಣಗಳೂ ಸಾಂದ್ರವಾಗಿ ನೆಲೆಸಿದ್ದುವು. ಅನುಪಮ ಗುರುಭಕ್ತಿಯಿಂದ ಅವರ ತಮ್ಮ ಗುರುಗಳ ಬಗ್ಗೆ ಹಾಡಿದ ಹಾಡನ್ನು ಅವರಿಗೀ ಅನ್ವಯಿಸಿ ನಮಿಸೋಣ.

ಶ್ರೀ ಗುರುವರೇಣ್ಯ ಭವದಂಘ್ರಿಪಂಕೇರುಹಗ
ಳೀಗಳೆನ್ನದೆಗೊಳದೊಳಗಲದಿರುತಿರ್ಕೆ ॥ಪ॥
ಹರಚರಣ ನಿಷ್ಠೆಯೊದುವಿಸಿ ಸುಕರ್ಮದ ವಿಧಿಯ
ನೊರೆದು ಕಲುಷಗಳಿಗಳುಕಿಸಿ ಭೂತಗಳೊಳು ॥
ಕರುಣಮೊಗೆಯಿಸಿ ಸತ್ಯವಿಡಿಸಿ ಮನಮಯ ಸುಧೆಯ
ನೆರೆದು ಸುಕೃತದ ಸರಣಿಗೆನ್ನ ತಿರುಗಿಸಿದ ॥ ಶ್ರೀ ಗುರು
ಹಿತವಿದಹಿತವಿದೆಂದು ತಿಳಿಪಿಯನೃತವನಳಿಸಿ
ಮತಿಯ ಮಲಿನವ ತೊಳಿದು ಸಮತೆಯಳವಡಿಸಿ
ಶ್ರುತಿಸೂಕ್ತಿಯೊಲವಿತ್ತು ವಿಕೃತಿಯನು ಕೆಡಿಸಿ ಸದು
ಗತಿಯಪೇಕ್ಷೆಯನ್ನೆನ್ನಮನದೆ ಮೊಳೆಯಿಸಿದ ॥ ಶ್ರೀ ಗುರು

■

# ಬಾಲಲೀಲಾ ಮಹಾಂತ ಶಿವಯೋಗಿಗಳು, ಮುಳಗುಂದ ಕ್ರಿ.ಶ. ೧೮೨೩–೧೮೫೯

"ಇಂದುಧರ ಶರಣರೆಲ್ಲರು ತಮ್ಮ ಪಾದದಿಂ
ಬಂದ ರೇಣುವ ತೆಗೆದು ಒಂದು ಗೊಂಬೆಯ ಮಾಡಿ
ಬಿಂದು ನಾದ ಕಳೆಯ ತುಂಬಿ ಮರ್ತ್ಯಕ್ಕೆ ಎನ್ನ ಕಳುಹಿದರು ಗುರುರಾಯನೇ"
–'ಕೈವಲ್ಯ ದರ್ಪಣ'ದಿಂದ

ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನಲ್ಲಿರುವ ಮುಳಗುಂದ ಗ್ರಾಮವು ಇತಿಹಾಸದ ಏರಿಳಿತಗಳ ನಾಟಕಕ್ಕೆ ನಿತ್ಯ ಪ್ರೇಕ್ಷಕವಾಗಿ ನಡೆದುಬಂದ ಐತಿಹಾಸಿಕ ಗ್ರಾಮ. ಅಲ್ಲಿ ಇಂದಿಗೂ ಕಾಲಭೈರವ ಗುಡಿ, ಕುಂಭೇಶ್ವರ, ನಗರೇಶ್ವರ, ಪೇಟೆ ಬಸಪ್ಪನ ಗುಡಿ, ಸಿದ್ಧೇಶ್ವರನ ಗುಡಿ, ರಾಮದೇವರ ಗುಡಿ ಮೊದಲಾದ ಹಿಂದೂ ದೇವಾಲಯಗಳೂ ಶ್ರೀ ಕಲ್ಮಠ ಹಾಗೂ ಅನ್ನದಾನಸ್ವಾಮಿಯವರ ಮಠಗಳೇ ಮೊದಲಾದ ವೀರಶೈವ ಮಠಗಳು ಚಂದ್ರನಾಥ, ಪಾರ್ಶ್ವನಾಥ, ಹಿರಿಬಸದಿ ಮೊದಲಾದ ಜೈನಬಸದಿಗಳು ಮುಳುಗುಂದದ ಪ್ರಾಚೀನತೆಯ, ಪವಿತ್ರತೆಯ ಕುರುಹಾಗಿ, ಕಲೆಯ ನೆಲೆಯಾಗಿ ಮೆರೆಯುತ್ತಲಿವೆ. ಅದಕ್ಕೆ ಸಮೀಪದಲ್ಲಿಯೇ ಚಿಂಚಲಿ ಗುಡ್ಡದ ಬಂಡೆಯೊಂದರಲ್ಲಿ ಬೆಳಗಿನ ಸೂರ್ಯನ ಕಿರಣ ಬಿದ್ದಾಗ ಮಾತ್ರ ಮೂಡಿ ಮಾಯವಾಗುವ 'ಛಾಯಾ ಚಂದ್ರನಾಥ' ಇಲ್ಲಿಯ ಶಿಲ್ಪಗಳ ಗೆಲವುಗಂಬವಾಗಿ ನಿಂತಿದ್ದಾನೆ.

ಶ್ರೀ ಗುರು ಮಹಾಂತಲಿಂಗಶಿವಯೋಗಿಗಳೆಂಬವರು ಶಾಲಿವಾಹನ ಶಕ ೧೭೩೪–೩೫ರಲ್ಲಿ ಇಲ್ಲಿನ ಕಲ್ಮಠದ ಅಧಿಕಾರ ವಹಿಸಿದರು. ಅದೊಂದು ದೈವೀಕ್ಷಣ ಅಂದಿನಿಂದಲೇ ಮುಳಗುಂದದ ಮುಳುಗಿದ ಭಾಗ್ಯರವಿ ಮತ್ತೆ ಉದಯವಾದನೆಂದು ಹೇಳಬಹುದು. ಈ ಘನ ವೈರಾಗ್ಯಶೀಲರು ಶಿವಾನುಭವ ತತ್ತ್ವೋಪದೇಶ ಮಾಡುತ್ತ ಭಕ್ತರನ್ನು ಉದ್ಧರಿಸುತ್ತ ವಿಜಾಪುರ ಜಿಲ್ಲೆಯ ಯರಿನಾಳ (ಆಲಮಟ್ಟಿ) ಗ್ರಾಮಕ್ಕೆ ದಯುಮಾಡಿಸುವರು. ಅಲ್ಲಿ ಹಿರಿಯುಮಠದ ಚೆನ್ನಮಲ್ಲಿಕಾರ್ಜುನ ಅನ್ನಪೂರ್ಣಾಂಬೆಯರೆಂಬ ಪುತ್ರಹೀನ ದಂಪತಿಗಳ ಭಕ್ತಿಗೆ ಮೆಚ್ಚಿ ಅನ್ನ

ಪೂರ್ಣಾಂಬೆಯನ್ನು ಕರೆದು, "ಬಾ ಮಗಳೆ, ಈ ಕೂಸನ್ನು ನಿನ್ನ ಉಡಿಯಲ್ಲಿ ಹಾಕುವೆ ; ಪರಶಿವನು ಅಮ್ಮವ್ವೆಗೆ ಶಿಶುವಾಗಿ ಬಂದಂತೆ ಇವನು ನಿನಗೆ ಮಗನಾಗಿ ಬಂದಿರುವನು. ಈತನು ಅಭವಗಣವರನು. ಎಂಟು ವರ್ಷಗಳವರೆಗೆ ನಿನಗೆ ಮಗನಾಗಿ ಮಹಾನಂದಗೊಳಿಸಿ ಆಮೇಲೆ ವಿರಾಗ ವಿಭುವಾಗಿ ವಿಭೂತಿ ಪುರಷನಾಗಿ ನಿನಗೂ ಅಸಂಖ್ಯರಿಗೂ ಸದ್ಗತಿಯನ್ನು ನೀಡುವನು" ಎಂದು ಹೇಳಿ ತಮ್ಮ ಬಳಿಯಿದ್ದ ಕೂಸೊಂದನ್ನು ಆಕೆಗೆ ಆಶೀರ್ವದಿಸುವರು. ಇದೇ ಕೂಸೇ ಎಂಟು ವರ್ಷ ಅವರ ಮೋಹದ ಮಗನಾಗಿ ಬೆಳೆದು ಮುಂದೆ ಬಾಲಲೀಲಾ ಮಹಾಂತ ಶಿವಯೋಗಿಯಾಗಿ ಕನ್ನಡ ನಾಡನ್ನು ಬೆಳಗುವುದು.

ಎಂಟು ವರ್ಷಗಳವರೆಗೆ ಮಾತೃಪಿತೃಗಳ ಕಣ್ಣಿಳ ಪುಣ್ಯವಾಗಿ, ಮನದ ಸಿರಿಯಾಗಿ, ಮನೆಯ ಬೆಳಕಾಗಿ ಮಹಾಂತಲಿಂಗನು ವೈರಾಗ್ಯದ ಕರೆಗೆ ಓಗೊಟ್ಟು ಮನೆಬಿಟ್ಟು ಹೊರಡುತ್ತಾನೆ. ಕೇವಲ ೩೬ ವರ್ಷಗಳ ವಯೋಮಾನದಲ್ಲಿ ಬುವಿ ಬೆಕ್ಕಸಬೆರಗಾಗುವಂತೆ ಬಾಳಬೇಕಾಗಿದ್ದ ಈ ಕಾರಣಿಕಶಿಶು ಎಂಟನೆಯ ವರ್ಷದಲ್ಲಿಯೇ ಮನೆ ತೊರೆದುದು ಅರಿದಾದ ವಿಷಯವಲ್ಲ. ಬಸವಣ್ಣನವರೂ ಎಂಟಕ್ಕೆ ಮನೆ ತೊರೆದು ೩೬ರಲ್ಲಿ ಮರ್ತ್ಯದ ಮಣಿಹ ಪೂರೈಸಿ ಮಹವ ಬೆರೆಯಲಿಲ್ಲವೆ?

ತುಂಗಭದ್ರಾ ತೀರದ ಲಿಂಗನಾಯಕನಹಳ್ಳಿ ಅಲ್ಲೊಬ್ಬ ಮಹಾಗುರು ಮಹಾ ಶಿಷ್ಯರನ್ನೊಡಗೊಂಡು ಮಹಾನುಭಾವ ಪ್ರಸಂಗ ನಡೆಸುತ್ತಲಿದ್ದಾನೆ. ಕೊಟ್ಟೂರ ಗುರುಬಸವರಾಜದೇಶಿಕೇಂದ್ರರ ಕೃಪಾ ಪಾತ್ರನಾಗಿದ್ದ ಹರಪುರಿಯ ಬಾಗಳಿ ಸಂಸ್ಥಾನಾಧಿಪರಿ ದಾದಿನಾಯಕರು ಕಟ್ಟಿಸಿದ ನೂರೊಂದು ವಿರಕ್ತ ಮಠಗಳಲ್ಲಿ ಮಧ್ಯಮಣಿಯಂತೊಪ್ಪುತ್ತಿದ್ದ ಗೋಸಾವಿಗುಡ್ಡದ ಬದಿಯ ಅರಣ್ಯಾಂತರ್ಗತ ಹಾಲವರ್ತಿ ವಿರಕ್ತಮಠದ ಪುಣ್ಯದ ಫಲವಾಗಿ ಹೊಳೆದು, ಹರಪನಹಳ್ಳಿಯ ದೊರೆ ಸೋಮಶೇಖರನ ಗುರುವಾಗಿ ಮೆರೆದು, ಕಲ್ಲಹಳ್ಳಿಯಲ್ಲಿ ಕೆಲದಿನ ಆತ್ಮಜ್ಯೋಗಿಯಾಗಿ ಬೆಳಗಿ, ಕೊನೆಗೆ ಲಿಂಗನಾಯಕನ ಹಳ್ಳಿಯಲ್ಲಿ ಕೆಲದಿನ ಆತ್ಮಜ್ಯೋತಿಯಾಗಿ ಬೆಳಗಿ, ಕೊನೆಗೆ ಲಿಂಗನಾಯಕನ ಹಳ್ಳಿಯಲ್ಲಿ ಶರಣರ ಗುರುಕುಲ ನಡೆಸುತ್ತಲಿದ್ದ ಈ ಮಹಾಗುರುವಿನ ಹೆಸರು ಶ್ರೀ ಚೆನ್ನವೀರ ದೇಶಿಕೇಂದ್ರ, ಬನ್ನಿಬಟ್ಟೆ ಚೆನ್ನಪ್ಪನವರು, ಮೈಸೂರು ಕಡೆಯ ಶಿವಬಸವಸ್ವಾಮಿಗಳು, ಶಾಂತವೀರೇಶ ಚರಮೂರ್ತಿಗಳು, ರಾಚೋಟಿಸ್ವಾಮಿಗಳು, ಮೈಲಾರದ ಬಸವಲಿಂಗಶರಣರು, ಹೊಳಲು ಲಿಂಗಪ್ಪಶರಣರು–ಇವರೆಲ್ಲ ಆ ಗುರುಕುಲದ ವಿದ್ಯಾರ್ಥಿಗಳು !

ಮನೆಬಿಟ್ಟು ಹೊರಟ ಮಹಾಲಿಂಗ ದೇಶಿಕನು ನಿಜಗುರುವನ್ನು ಅರಸುತ್ತ ಇದೇ ಗುರುಕುಲಕ್ಕೆ ಬರುತ್ತಾನೆ. ಅಲ್ಲಿ ತನ್ನ ಅಂತರಂಗದ ಆರಾಧ್ಯನಾಗಬಲ್ಲ

ಪರಮಗುರುವನ್ನು ಕಂಡು ಹರುಷದ ಹೊಳೆಯಲ್ಲಿ ಮೀಯುತ್ತಾನೆ. ಶ್ರೀಚೆನ್ನವೀರ ಶಿವಯೋಗಿಗಳು ಶ್ರೀ ಶಾಂತವೀರಸ್ವಾಮಿಗಳ ಮುಖಾಂತರ ಮಹಾಲಿಂಗ ಸಂಗಿ ಮಹಾಂತಲಿಂಗನಿಗೆ ಇಷ್ಟಲಿಂಗೋಪದೇಶವನ್ನೂ ಪ್ರಾಣಭಾವಲಿಂಗಾನು ಸಂಧಾನರಹಸ್ಯವನ್ನೂ ಲಿಂಗಾಂಗಸಾಮರಸ್ಯದ ಗುಟ್ಟು ಗುರಿಗಳನ್ನೂ ಬೋಧಿಸುತ್ತಾರೆ. ಮಹಾಂತಲಿಂಗನಿಗೆ ಮಹದಾನಂದವಾಗುತ್ತದೆ. ಧನ್ಯತೆಯು ಹಾಡಾಗಿ ಹೊರಹೊಮ್ಮುತ್ತದೆ :

**ರಾಗ–ರೇಗುಪ್ತಿ**

ಧನ್ಯನಾದೆನು ಶಾಂತವೀರಸ್ವಾಮಿ
ನಿನ್ನ ಪಾದಾರವಿಂದವಂ ಕಂಡುದ್ಧಾರ ॥

ಆಮೇಲೆ ಲಿಂಗತಪಸ್ಸಿಗಾರಂಭ, ಹಗಲಿರುಳು,

'ಲಿಂಗಮಾಂ ಪಾಹಿ ಪಾಹಿ । ಶ್ರೀ ಗುರು ಮಹಂತ
ಲಿಂಗಮಾಂ ಪಾಹಿ ಪಾಹಿ ।'

ಎಂದು ಲಿಂಗಜಪ, ಲಿಂಗತಪ ಹೀಗೆ ಹಲವು ದಿನಗಳು ಕಳೆಯುತ್ತವೆ.

ಆ ಮೇಲೆ ಒಂದು ದಿನ, ತುಂಗಭದ್ರೆ ಮೈತುಂಬಿ ಮನತುಂಬಿ ಭಾವದುಂಬಿ ಹರಿಯುತ್ತಾಲಿದ್ದಾಳೆ. ಈ ಗುರುಕುಲದ ಶರಣಸಂದೋಹ ತುಂಗಾ ಸಲಿಲದಲ್ಲಿ ನಲಿನಲಿದು ಜಳಕ ಮಾಡುತ್ತಲಿದೆ. ತಾಯಿ ತುಂಗಭದ್ರೆ ಶರಣರೊಡನೆ ಸರಸವಾಡಿದಳೋ ಎಂಬಂತೆ ಮಹಾಂತಲಿಂಗನ ಕೊರಳ ಲಿಂಗವು ನೀರ ಪಾಲಾಗುತ್ತದೆ. ಉಳಿದವರೇ ನೀರಲ್ಲಿ ಮುಳುಗಿ ಮುಳುಗಿ ಅದನ್ನು ಅರಸಿ ತೊಳಲಿದರು. ಆದರೆ ಮಹಾಂತಲಿಂಗನಿಗದರ ಪರವೆಯಿದ್ದಂತೆ ತೋರಲಿಲ್ಲ. ಬಹಿರಂಗದ ಲಿಂಗ ಹೋದರೆ ಅಂತರಂಗದ ಲಿಂಗವಿಲ್ಲವೆ? ಆ ಅಂತರಂಗದ ಲಿಂಗದಲ್ಲಿ ಲೀನರಾಗಿ ಬಾಹ್ಯಪ್ರಪಂಚಪ್ರಜ್ಞಾಹೀನರಾಗಿ ಕುಳಿತುಬಿಟ್ಟರು. ನದಿಯಲ್ಲಿ ನೀರೇರುತ್ತಲಿದ್ದಿತು. ಕೊನೆಗೆ ಮಹಾಪ್ರವಾಹವು ಉಕ್ಕಿ ಮೇಲ್ವರಿದು ಮಹಾಂತಲಿಂಗನನ್ನೇ ಮುಚ್ಚಿಬಿಟ್ಟಿತು. ಆಗಲೂ ನಿಶ್ಚಲನಾಗಿ ಅವಿಕಲಧ್ಯಾನಮಗ್ನನಾಗಿಯೇ ಇದ್ದ ಮಹಾಂತಲಿಂಗ. ಗುರು ಚೆನ್ನವೀರೇಶ್ವರರು ಬಂದು ಎಚ್ಚರಿಸಿದರು. ಮುಳುಗಿಹೋದ ಲಿಂಗ ಅವರೆದುರಿಗೇ ತೆರೆಗಳ ಕರಕಂಜದಲ್ಲಿ ಕಾಣಿಸಿತು. ಆದರೆ ನಿಷ್ಕಾರಣವಾಗಿ ತನ್ನನ್ನು ತೊರೆದು ಹೋಗಿದ್ದ ಲಿಂಗವನ್ನು ತಿರುಗಿ ತೆಗೆದುಕೊಳ್ಳಲು ನುಲಿಯ ಚಂದಯ್ಯನವರಂತೆ ಮಹಾಂತಲಿಂಗನೊಪ್ಪಲಿಲ್ಲ. ಗುರುಗಳು ಒಪ್ಪಿಸಲು ಒಪ್ಪಿ ಸ್ವೀಕರಿಸಿದ.

ಈ ಗುರುಭಕ್ತಿಮಹಿಮೆ ಇನ್ನೊಂದು ಪ್ರಸಂಗದಲ್ಲಿ ಪ್ರಖರವಾಗಿ ಪ್ರಕಟವಾಗುತ್ತದೆ. ಮೈಲಾರದ ಬಸವಲಿಂಗ ಶರಣರು ಒಮ್ಮೆ ಗುರು ಚೆನ್ನವೀರೇಶ್ವರರ ಅಭಿಪ್ರಾಯಕ್ಕೆ ವಿರುದ್ಧವಾದ ಅಭಿಪ್ರಾಯ ವ್ಯಕ್ತಗೊಳಿಸಿ ಪರಿತಾಪಕ್ಕೀಡಾಗಿಡಿದ್ದರು. ಶ್ರೀ ಮಹಾಂತಲಿಂಗರ ಪ್ರೇರಣೆಯಿಂದ 'ಗುರು ಕರುಣ' ತ್ರಿವಿಧಿಯನ್ನು ಬರೆದು ಗುರುಕಾರುಣ್ಯ ಗಳಿಸಿಕೊಂಡರು.

ಗುರು ಚೆನ್ನವೀರೇಶ್ವರರು ಪರಮನಲ್ಲಿ ಬೆರೆಯುತ್ತಾರೆ. ಅಲ್ಲಿದ್ದ ಶರಣ ಸಮೂಹ ತಂತಮ್ಮ ಸ್ಥಾನಗಳಿಗೆ ಹೊರಡುತ್ತದೆ. ಮಹಾಲಿಂಗನಿಗೆ ತನ್ನದೆನ್ನುವ ತನ್ನದಲ್ಲದ ಸ್ಥಳವಾವುದು? "ಮಾತಾಚ ಪಾರ್ವತೀದೇವಿ ಪೀತಾದೋವೋ ಮಹೇಶ್ವರಃ। ಬಾಂಧವಾಃ ಶಿವಭಕ್ತಾನಾಂ ಸ್ವದೇಶಂ ಭುವನತ್ರಯಂ" ಎಂದು ಹೊರಡುತ್ತಾರೆ. ಬಿದರಹಳ್ಳಿಗೆ ಬರುತ್ತಾರೆ. ಅಲ್ಲಿ ರಾಮಲಿಂಗಪ್ಪನೆಂಬ ಭಕ್ತ ಬಾವಿ ತೋಡುತ್ತಲಿದ್ದಾನೆ. ಎಷ್ಟು ತೋಡಿದರೂ ನೀರು ಬೀಳಲೊಲ್ಲದು. ಚಿಂತಾಕ್ರಾಂತನಾಗಿದ್ದಾನೆ. ಇದಾಗಲೇ ಶಿವಯೋಗಸಿದ್ಧಿಯನ್ನು ಪಡೆದಿದ್ದ ಮಹಾಂತ ಶಿವಯೋಗಿಗಳ ಮನ ಕರಗಿ ತಾವೇ ಗುದ್ದಲಿ ಎನ್ನುತ್ತಾರೆ. ಇಂದು ತೋರಿಕೆಗಾಗಿ, ಪ್ರಚಾರಾಪೇಕ್ಷೆಯಿಂದಾಗಿ ಅನೇಕರು ಗುದ್ದಲಿ ಹಿಡಿಯುವುದನ್ನು ನೋಡುತ್ತಲಿದ್ದೇವೆ. ಆದರೆ ಶಿವಯೋಗಿಗಳು ಗುದ್ದಲಿ ಎತ್ತಿದ್ದ ಭಕ್ತವಾತ್ಸಲ್ಯದಿಂದ. ಅವರು ಅಗೆಯುತ್ತಲೇ ಸೆಲೆ ಚಿಮ್ಮುತ್ತದೆ. ರಾಮಲಿಂಗಪ್ಪನ ಹರುಷದ ಪಾತ್ರೆ ತುಂಬಿದಂತೆ ಬಾವಿ ತುಂಬುತ್ತದೆ. ಆಗ ಶಿವಯೋಗಿಗಳಿತ್ತ ಉಪದೇಶ ಸಾರ್ವಕಾಲಿಕ ಸತ್ಯ :

ಬಯಸಿ ಮಾಡುವ ಸರ್ವಧರ್ಮ ಕಾರ್ಯವನು ಮಾ ।
ಯೆಯ ಕಾಟವಡ್ಡಾಗಿ ಕೆಡಿಸುತಿಹುದೇನೊಂದು
ಬಯಕೆಯಿಲ್ಲದೆ ಮಾಳ್ಪ ತತ್ಕಾರ್ಯಕನುಕೂಲಮಾಗಿ
ನಡಸುವನುಭವನು ॥

ಭಯಮುಂಟು ಕಾಮ್ಯಕ್ಕೆ ವಿಮಲ ನಿಷ್ಕಾಮ್ಯಕ್ಕೆ
ಜಯಮುಂಟು ಜಗದೊಳದರಿಂದ ನೀನೇನುವಂ
ಬಯುಸದೆಸಗಿಂತಹ ಸುಕರ್ಮಗಳನೆಂದೊರೆದು
ಪೋದನೀ ಯೋಗಿ ಮತ್ತೆ॥[೧]

ಮತ್ತೆ ಶಿವಯೋಗಿಗಳೊಮ್ಮೆ ಹೊಳೆ ದಾಟಬೇಕಾಗಿದೆ. ನಾವಿಕರು ಇವರಾರೋ

---

೧ ಲಿಂಗೈಕ್ಯ ಕವಿರತ್ನ ಚೆನ್ನಕವಿಕೃತ ಬಾಲಲೀಲಾ ಮಹಾಂತೇಶ್ವರ ಪುರಾಣ ಸಂಧಿ ೮, ಪದ ೧೨.

ಬಡ ಬೈರಾಗಿಯೆಂದು ತಿಳಿದು ಉದಾಸೀನ ಮಾಡುತ್ತಾರೆ. ಸರಿ, ಶಿವಯೋಗಿಗಳು ತಮ್ಮ ಟೊಪ್ಪಿಗೆಯನ್ನೇ ಹೊಳೆಯಲ್ಲಿ ಹರಿಗೋಲನ್ನಾಗಿ ಮಾಡಿ ಅದರಲ್ಲಿ ಕುಳಿತು ಆನಂದದಿಂದಲೇ ಆಚೆಯ ದಂಡೆಗೆ ಹೋಗಿಬಿಡುವರು. ಇವರನ್ನು ಕುಳ್ಳಿರಿಸಿಕೊಳ್ಳದೇ ಹೊರಟ ಆ ನಾವಿಕರ ನೌಕೆ ನಡು ಹೊಳೆಗೆ ಬಂದು ನಿಂತು ಬಿಡುವುದು. ಪಶ್ಚಾತ್ತಾಪಪಟ್ಟ ನಾವಿಕರನ್ನು ಕರುಣಿಸಿ ಶಿವಯೋಗಿಗಳು ಶ್ರೀಶೈಲಕ್ಕೆ ತೆರಳುವರು. ಅಲ್ಲಿ ಮುನಿಗಳಿಗೆ ಏಕೋತ್ತರ ಶತಸ್ಥಲದ ಅಂತರಾರ್ಥವನ್ನು ಅರುಹಿ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ದೊಡ್ಡ ಬೇನೆಯನ್ನು ಕಳೆಯುವರು. ಕಳೆದ ತಕ್ಷಣ ಅಲ್ಲಿಂದ ಮಾಯವಾಗುವರು. ಅರಸನ ಪರಿಚಾರಕರು ಅರಸಿ ನಿರಾಶರಾಗುವರು.

ಶಿವಯೋಗಿಗಳು ತಮ್ಮನ್ನು ಬಾಲ್ಯದಲ್ಲಿ ಅನುಗ್ರಹಿಸಿದ ಗುರು ಮಹಾಂತ ಲಿಂಗದೇಶಿಕರು ಮುಳಗುಂದದಲ್ಲಿರುವರೆಂಬ ವಾರ್ತೆಯನ್ನು ಕೇಳಿ ಮುಳಗುಂದಕ್ಕೆ ಬರುವರು. ಆದರೆ ಅಷ್ಟರಲ್ಲಿಯೇ ಅವರು ತಮ್ಮ ಭಕ್ತರಿಗೆಲ್ಲ ತಮಗಿಂತ ಸಮರ್ಥರೊಬ್ಬರು ತಾವಾಗಿಯೇ ಅಲ್ಲಿಗೆ ಬಂದು ತಮ್ಮ ಉತ್ತರಾಧಿಕಾರಿ ಯಾಗುವರೆಂದು ತಿಳಿಸಿ ಬಯಲಾಗಿಬಿಟ್ಟಿದ್ದರು. ಶಿವಯೋಗಿಗಳು ಮೊದಲು ಊರ ಹೊರಗಿರುವ ಸುಡುಗಾಡಿನಲ್ಲಿ–ಅಯ್ಯನ ಗದ್ದೆಯಲ್ಲಿರುವ ಮೇಲಿನ ಮಠದಲ್ಲಿ ವಾಸಿಸಿದರು. ಆಮೇಲೆ ಭಕ್ತರ ಕೋರಿಕೆಯಂತೆ ಗವಿಮಠದಲ್ಲಿ ವಾಸಿಸತೊಡಗಿದರು. ಸರ್ವಸಂಗಪರಿತ್ಯಾಗಿಗೆ ಮಸಣವೇನು, ಮಠವೇನು? ಮುಂದೆ ಚಿತ್ರದುರ್ಗದ ಜಗದ್ಗುರುಗಳ ಆದೇಶದ ಮೇರೆಗೆ ಕಲ್ಮಠದ ಅಧಿಕಾರವನ್ನೂ ವಹಿಸಿಕೊಂಡರು.

ಆದರೆ ಅವರು ಹೆಸರಿಗೆ ಮಾತ್ರ ಮಠಾಧಿಪತಿಗಳು. ಯಾವಾಗಲೂ ಬಾಲಲೀಲಾಲೋಲರಾಗಿರುತ್ತಿದ್ದರು. "ಮುಗ್ಧ ಮಗುವಿನ ವೇಷಭೂಷಣಗಳನ್ನು ಧರಿಸುವುದು ತೊಟ್ಟಿಲಲ್ಲಿ ಮಲಗುವುದು, ಕೂಸುಗಳಂತೆ ಶೂನ್ಯ ದೃಷ್ಟಿಯಿಂದ ಬಾಹ್ಯ ಜಗತ್ತನ್ನು ಅವಲೋಕಿಸುವುದು, ಎಷ್ಟೋ ಹೊತ್ತು ಮೌನವೃತ್ತಿಯಲ್ಲಿ ಮಗ್ನರಾಗಿರುವುದು–ಇವೆಲ್ಲ ಅವರ ನಿತ್ಯದ ಆಚರಣೆಗಳೆಂದು ಹೇಳುವುದುಂಟು. ಅಂತರಾತ್ಮ ಸ್ಫುರಿಸಿದಾಗ ಹೊರಹೊಮ್ಮಿದ ಹಾಡುಗಳನ್ನು ನಿಂತುಕೊಂಡೇ ಮಠದ ಬೋದು ಹಾಗೂ ತೊಲೆಗಳ ಮೇಲೆ ಬರೆಯುತ್ತಲಿದ್ದರೆಂಬ ಪ್ರವಾದವಿದೆ. ಇಷ್ಟು ದೀರ್ಘಕಾಯರಾದರೂ ಭಾವಚಿತ್ರದಲ್ಲಿ ಬಾಲರಂತೆ ತೋರುವುದು ಶಿವಯೋಗದ ಲೀಲೆಯಲ್ಲದೆ ಮತ್ತೇನು?"*

---

* ಲಿಂಗೈಕ್ಯ ಶ್ರೀ. ಶಿ.ಶಿ. ಬಸವನಾಳರು–ಕೈವಲ್ಯದರ್ಪಣದ ಮುನ್ನುಡಿಯಲ್ಲಿ.



**ಬಾಲಲೀಲಾ ಮಹಾಂತ ಶಿವಯೋಗಿಗಳು**

ಅವರ ಬಾಲಲೀಲೆಗೆ ಉಕ್ಕುಬರುವಂತಹ ಘಟನೆಯೊಂದು ಜರುಗಿತು. ಮುಳಗುಂದದ ಪ್ರಸಿದ್ಧವಾಗ ಫಿರಂಗಿ ಮನೆತನದಲ್ಲಿ ನಡೆದ ಘಟನೆಯದು. ಫಿರಂಗಿ ಶಂಕರಪ್ಪನವರ ಸಹೋದರಿ ಬಸವಾಂಬೆ ಸದ್ಗುಣಕದಂಬೆ. ಆಕೆಯ ಗಂಡನ ಮನೆ ನರಗುಂದದಲ್ಲಿ. ಇಬ್ಬರು ಗಂಡಮಕ್ಕಳಾದುವು ಆಕೆಗೆ. ಆ ಹಿಗ್ಗಿನ ಸಗ್ಗದಲ್ಲಿದ್ದ ಆಕೆ ಒಮ್ಮೆಗೆ ದುಃಖದ ನರಕಕ್ಕಿಳಿದಳು ! ಆಕೆಯ ಪತಿ ತೀರಿಹೋದನು. ದಿಕ್ಕುಗಾಣದೆ ಎರಡು ಮಕ್ಕಳನ್ನೂ ಕಟ್ಟಿಕೊಂಡು ತವರು ಮನೆಯಲ್ಲಿಯೇ ಕಾಲವನ್ನು ನೂಕತೊಡಗಿದಳು. ಕ್ರೂರ ವಿಧಿಗೆ ಇನ್ನೂ ತೃಪ್ತಿಯಾಗಿರಲಿಲ್ಲವೆಂದು ತೋರುತ್ತದೆ. ಒಂದು ಬೆಳ್ದಿಂಗಳ ರಾತ್ರಿಯಲ್ಲಿ ಬಸವಾಂಬೆಯ ಮಕ್ಕಳಿಬ್ಬರೂ ಗುಳುಗಳು ಗುಪ್ಪಂಡಿಯಾಟಕ್ಕಾಗಿ ಮಣ್ಣು ತರಲು ಹೋಗಿ ಹುತ್ತದಲ್ಲಿ ಕೈ ಹಾಕಿ ಹಾವು ಕಚ್ಚಿ ಸಾಯುತ್ತಾರೆ. ಬಸವಾಂಬೆಯ ಹಡೆದೊಡಲು ಹುಡಿಯಾಗುತ್ತದೆ. 'ಬಡ ತಾಯಿಯಂ

ತೊರೆದು ಹಡೆದಾತನಂ ಕೂಡಿಕೊಂಡಿರಾ ಮಕ್ಕಳೇ' ಎಂದು ಭೋರ್ಗರೆದು ಅಳುತ್ತಾಳೆ ! ಆ ದಾರುಣವಾದ ದುಃಖವನ್ನು ಪರಿಹರಿಸಬಲ್ಲವರಾರು!

ಶಿವಯೋಗಿಗಳು ಗವಿಮಠದಿಂದ ಹೊರಗೆ ಬರುತ್ತಾರೆ. "ತನಯರಿಬ್ಬರು ಹೋದರೆಂದು ಅಳಬೇಡ ತಾಯೆ. ನಿನಗೆ ಮಕ್ಕಳಿಲ್ಲ, ನನಗೆ ತಾಯಿಯಿಲ್ಲ, ಇಂದಿನಿಂದ ನಾನೇ ನಿನ್ನ ಮಗ. ನನ್ನನ್ನೇ ಜೋಪಾನ ಮಾಡು ತಾಯೆ" ಎಂದು ತಮ್ಮನ್ನು ತಾವೇ ಆ ತಾಯಿಗೆ ಒಪ್ಪಿಸಿಕೊಳ್ಳುತ್ತಾರೆ. ಅಂದಿನಿಂದ ಶಿವಯೋಗಿಗಳ ಬಾಲಲೀಲೆಗೆ ಹೊಸದೊಂದು ಮುಖ ಹುಟ್ಟಿಕೊಳ್ಳುತ್ತದೆ. ಎಲ್ಲ ತಾಯಂದಿರನ್ನು ಅವರವರ ಮಕ್ಕಳು ಹೇಗೆ ಕಾಡಿ ಬೇಡುವರೋ ಹಾಗೆ ಶಿವಯೋಗಿಗಳೂ ಈ ಶರಣ ತಾಯಿಯನ್ನು ಕಾಡಿ ಬೇಡುತ್ತಾರೆ, ಕರಕರಿ ಮಾಡುತ್ತಾರೆ, ಸೆಡವು ಮಾಡುತ್ತಾತರೆ, ಹಟಮಾರಿತನ ತೋರುತ್ತಾರೆ. ಆ ತಾಯಿ ನಿಜವಾದ ತಾಯಿಯಂತೆಯೇ ನಗುನಗುತ್ತಲೇ ಇದೆಲ್ಲವನ್ನೂ ಸಹಿಸಿಕೊಂಡು ಈ ಕಾರಣಿಕಕೂಸಿನ ಲಾಲನೆ ಪಾಲನೆ ಮಾಡುತ್ತಾಳೆ. ಬಾಲಕನಿಗುಚಿತವಾದ ಬಟ್ಟೆ ತೊಡಿಸುತ್ತಾಳೆ, ಹಾಲು ಕುಡಿಸಿ ಬೆಣ್ಣೆ ತಿನಿಸಿ ದೃಷ್ಟಿ ತೆಗೆಯುತ್ತಾಳೆ, ತೊಟ್ಟಿಲಲ್ಲಿಟ್ಟು ತೂಗುತ್ತಾಲೆ–ಜಗದೋದ್ಧಾರನ ತೂಗಿದಳೋ ಬಸವಾಂಬೆ, ಜಗದೋದ್ಧಾರನ ! ಎಂಥ ತಾಯಿ, ಎಂಥ ಶಿಶು, ಎಂಥ ಮಾತೃಲೀಲೆ, ಎಂಥ ಬಾಲಲೀಲೆ ! ಕಂಡ ಕಣ್ಣು ಕೃತಾರ್ಥವಾದುವು, ಕೇಳಿದ ಕವಿ ಪುನೀತವಾದುವು ಈ ತಾಯಿ ಮಕ್ಕಳ ಕಥೆಯನ್ನು !

ತಮ್ಮ ರೋಗವನ್ನು ವಾಸಿಮಾಡಿದ ಮಹಾತ್ಮರು ಮುಳಗುಂದದಲ್ಲಿರುವರೆಂಬುದು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ತಿಳಿಯುತ್ತದೆ. ಅವರ ದರ್ಶನದ ಉತ್ಕಟೇಚ್ಛೆ ಅವರಲ್ಲಿ ಉಕ್ಕಿ ಬರುತ್ತದೆ. ಶಿವಯೋಗಿಗಳನ್ನು ಕರೆತರಲು ವೆಂಕಟರಾಯನೆಂಬ ರಾಯಭಾರಿಯನ್ನು ಕಳಿಸುತ್ತಾರೆ. ಶಿವಯೋಗಿಗಳು 'ನಾಳೆ ನೋಡೋಣ' ಎಂದು ಹೇಳಿ ಮತ್ತೆ ಲೀಲಾವಿನೋದದಲ್ಲಿ ಮಗ್ನರಾಗುತ್ತಾರೆ. ನಿತ್ಯ ವೆಂಕಟರಾಯನ ಪ್ರಾರ್ಥನೆ, ನಿತ್ಯ ಅದೇ ಉತ್ತರ 'ನಾಳೆ ನೋಡೋಣ !' ಈ ನಾಳೆಗೆ ಕೊನೆಯುಂಟೆ? ತಿಂಗಳೆರಡು ಕಳೆಯುತ್ತವೆ. ಮಹಾರಾಜರಿಗೆ ಇದು ಗೊತ್ತಾಗಿ ಚಿತ್ರಕಲ್ಲ ಜಗದ್ಗುರುಗಳಿಂದಲೂ ಒತ್ತಾಯ ಬರುವಂತೆ ಮಾಡುತ್ತಾರೆ. ಜಗದ್ಗುರುವಿನ ಆಜ್ಞೆಗೂ ಉತ್ತರ ಅದೇ–'ನಾಳೆ ನೋಡೋಣ!' ಈ ಶಿವನ ಮದಕರಿಗೆ ಆರ ಆಜ್ಞೆ ಅಂಕುಶವಾದೀತು!

ಕೊನೆಗೆ ತಾಯ ಬಸವಾಂಬೆಯೇ ಒಂದು ದಿನ ಸಿಟ್ಟು ಮಾಡುತ್ತಾಳೆ–"ಬೇಕಾದರೆ ಹೋಗಬೇಕು ; ಸಾಕಾದರೆ ಬಿಡಬೇಕು. 'ನಾಳೆ' ಎಂದರೇನು–ಹುಚ್ಚ?" ರಾಜಾಜ್ಞೆಯನ್ನು ಗಣಿಸದ, ಗುರ್ವಾಜ್ಞೆಗೆ ಮಣಿಯದ ಶಿವಯೋಗಿಗಳು ತಮ್ಮ

ತಾಯಿ ಸಿಟ್ಟು ಮಾಡಲು ಪಿಟ್ಟೆನ್ನಲಿಲ್ಲ. 'ನೀನೂ ಬಂದರೆ ಹೋಗುತ್ತೇನೆ' ಎಂದರು ಎಲ್ಲ ಮಕ್ಕಳಂತೆ ಎಲ್ಲ ತಾಯಂದಿರಂತೆ ಆಕೆಯೂ 'ಆಗಲಿ' ಎಂದಳು ಸರಿ, ಆರಮನೆಗೆ ಪ್ರಯಾಣ.

ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಗುರು, ಜಂಗಮ, ಯತಿಗಳಲ್ಲಿ ತಮ್ಮ ಪೂರ್ವಜರಂತೆ ಪೂಜ್ಯಭಾವ ಬಹಳ. ಅದರಲ್ಲಿಯೂ ತಮ್ಮ ರೋಗ ಕಳೆದ ಮಹಾಂತ ಶಿವಯೋಗಿಗಳು, ಕೇಳುವುದೇನು? ಸಕಲ ವೈಭವದೊಡನೆ ಸ್ವಾಗತಿಸಿದರು. ರತ್ನಪೀಠದ ಮೇಲಡ ಕುಳ್ಳಿರಿಸಿ ಪಾದಪೂಜೆ ಮಾಡಿದರು. ಆಗ ಶಿವಯೋಗಿಗಳು ಹಾಡಿದ ಗೀತೆ ಕನ್ನಡಿಗರ ಆತ್ಮಗೀತೆಯಾಗಿ ಉಳಿದಿದೆ–

ಜಯಮಂಗಳಂ ನಿತ್ಯ ಶುಭ ಮಂಗಳಂ
ಜಯ ಜಯತು ಶಿಶು ಮಹಂತಲಿಂಗೇಶಗೆ ಪ

ಧರೆಯ ಭಕ್ತರ ಮಹೇಶ್ವರರುಗಳ ಪುತ್ರನಿಗೆ
ಶರಣ ಬಸವಾದಿ ಪ್ರಮಥರ ಕಂದಗೆ
ಪರಶಿವನ ಪಾರ್ವತಿಯ ತೊಡೆಯ ಮೇಲಾಡುತಲಿ
ಹರುಷಾಬ್ಧಿ ಹೆಚ್ಚಿಸುವ ಗುರುಪುತ್ರಗೆ ॥ ಜಯಮಂಗಳಂ

ಆಕಾಶವನು ಮೋಡ ಮುಸುಕಿಕದರೆ ಕೆಡದಂತೆ
ಏಕಾಗ್ರ ಚಿತ್ತದಲ್ಲಿ ಮನವನುಡುಗಿ
ಬೇಕು ಬೇಡೆಂಬೆರದು ಭವ ಬೀಜಗಳ ಹುರಿದು
ಲೋಕದೊಳಗಿದ್ದು ಇಲ್ಲದ ಮಹಿಮೆಗೆ ॥ ಜಯಮಂಗಳಂ

ಹ್ಯಾಂಗೆ ಮಾಳ್ಪರು ಹಾಂಗೆ ಸಕಲ ಉಪಚಾರಗಳ
ಮಂಗಳದ ಶಿಶುವಾಗಿ ಕೈಕೊಳುತಲಿ
ಬಂಗಾರ ಕಬ್ಬುನವು ಹಿರಿಕಿರಿದು ಸಮಗಂಡ
ಲಿಂಗ ಮಹಂತೇಶ ಮಹಾ ಜಗತ್ಪುತ್ರಗೆ ॥ ಜಯಮಂಗಳ

ಮಹಾರಾಜರು ಮಹಾಂತಯೋಗಿಗಳಿಗೆ ಮಣಿಕನಕಾದಿ ಅಮೂಲ್ಯ ವಸ್ತುಗಳನ್ನು ಕಾಣಿಕೆಯಾಗಿ ಒಪ್ಪಿಸುತ್ತಾರೆ. ಶಿವಯೋಗಿಗಳು ಅವೆಲ್ಲವನ್ನೂ ನಿರಾಕರಿಸಿ ಮಹಾರಾಜರ ಪ್ರೀತ್ಯರ್ಥವಾಗಿ ಅವುಗಳೊಳಗಿನ ಒಂದು ಕುಂಬಳಕಾಯಿಯ ಬುರುಡೆಯೊಂದನ್ನು ಮಾತ್ರ ಸ್ವೀಕರಿಸುತ್ತಾರೆ. ಇಂದಿಗೂ ಮುಳಗುಂದದ ಗವಿ ಮಠದಲ್ಲಿ ಆ ಬುರುಡೆಯಿದೆ–ಶಿವಯೋಗಿಳಗಳ ಅನುಪಮವಾದ ಆಶಾರಹಿತತ್ವದ ಕುರುಹಾಗಿ. ಮಹಾರಾಜರು ಪರಿಪರಿಯಿಂದ ಹೇಳಿಕೊಂಡ ಮೇಲೆ ಮಾತೆ

ಬಸವಾಂಬೆಯೂ ಪೀತಾಂಬರವೊಂದನ್ನು ಸ್ವೀಕರಿಸುತ್ತಾಳೆ. ಆದರೆ ಮುಳುಗುಂದಕ್ಕೆ ಬಂದೊಡನೆಯೇ ಅದನ್ನು ಮಾರಿ ಬಂದ ಹಣದಿಂದ ಗವಿಯ ಪಕ್ಕದಲ್ಲಿ ಆರಂಕಣದ ಗುರುಮಠವನ್ನು ಕಟ್ಟಿಸುತ್ತಾಳೆ. ಮಗನಿಗೆ ತಕ್ಕ ತಾಯಿ, ತಾಯಿಗೆ ತಕ್ಕ ಮಗ !

ಮಹಾಮಾತೆ ಬಸವಾಂಬೆಯು ಲಿಂಗಪೂಜೆ ಮಾಡುತ್ತಲೇ ಶಾ.ಶ. ೧೭೭೨ರಲ್ಲಿ ಲಿಂಗದಲ್ಲಿ ಬೆರೆಯುತ್ತಾಳೆ. ಶಿವಯೋಗಿಗಳು ತಾಯಿಯಿಲ್ಲದ ತಬ್ಬಲಿಗಳಾಗಿ ಲೌಕಿಕರಿಗಿಂತಲೂ ಮಿಗಿಲಾಗಿ ಶೋಕಿಸುತ್ತಾರೆ. ಅವರ ಶೋಕ ಶ್ಲೋಕವಾಗಿ ಹೊರಹೊಮ್ಮುತ್ತದೆ.

ಶ್ರೀ ಶರಣು ಬಸವಾಂಬಿಕೆ ಮಾತೆ ಗುರುಭಕ್ತಿ
ವಾಸನಾ ಸಮೇತೆ ಗುರುಕರಜಾತೆ ಲಿಂಗ ಪ್ರೀತೆ
ಈಶ ನಮ್ಮ ತಂದೆಯ ಬಡತನವದೇನೊರೆವೆ ನಿನ್ನಿಂದ ಸಕಲ ಕಂಡೆ !
ಪರಪರಿಯ ಕಾಡಿದೆನು ಪರಿಪರಿಯ ಬೇಡಿದೆನು
ಪರಿಪರಿಯ ಪಣ್ಣು ಫಲ ಮೋದಕವ ಕೆಡಿಸಿದೆನು
ಪರಿಪರಿಯ ವಸ್ತ್ರಮಂಪರಿಪರಿದು ಹಾಕಿದೆನು ಇಂತು ಕಾಡಿಸಿಕೊಂಡೆ ನೀ!
ಪರಿಪರಿಯ ಕಬ್ಬು ಫಲ ಬೆಳಸಿದಗೆ ಸುಖವಲ್ತೆ
ಪರಿಪರಿಯ ಕಬ್ಬು ಫಲಗಳಿಗೇನು ಸುಖವುಂಟು
ಶರಣು ಬಸವಾಂಬಿಕೆಯೆ ನಿನ್ನ ಸದ್ಗತಿಗೆನ್ನ ಪಡಕೊಂಡು ನಡುವೆ ಬಿಟ್ಟೆ!

ಎಲ್ಲ ಕರುಣರಸದಂತಲ್ಲವಿದು–ಇದು ಯೋಗಿಯ ಎದೆಯ ಬಾಗಿಲನ್ನೊಡೆದು ಹರಿದುಬಂದ ಕರುಣ ರಸ. ಇಂಥ ಶರಣಗುರುವಿನಿಂದಲೇ ಶರಣರೆನ್ನಿಸಿಕೊಂಡ ಆ ಶರಣಮಾತೆ ಎಷ್ಟು ಕೃತಕೃತ್ಯಳು !

ಇನ್ನು ಈ ತಬ್ಬಲಿಗೆ ಮರೆಯಲಾಗದ ಮರಿದೇವರೇ ತಂದೆ ತಾಯಿ, ಬಂಧು ಬಳಗವಾದರು, ಹಸಬಿ ಗಣಂಗಳಪ್ಪನವರೇ ಊರುಗೋಲಾದರು. ಗಣಂಗಳಪ್ಪನವರ ಮರಿದೇವರ ಭೃತ್ಯಾಚಾರಗಳು ಶಿವಯೋಗಿಗಳ ಪಾದಯುಗ್ಮವಾಗಿ ಮುಂದುವರಿದುವು. ಆದರೆ ಶಿವಯೋಗಿಗಳ ಜೀವನದಲ್ಲಿ ಮತ್ತೊಂದು ಮಾರ್ಪಾಟಾಯಿತು. ಇದುವರೆಗೆ ತಾಯಿ ಬಸವಾಂಬೆಯಿದ್ದಳು. ಆಕೆ ತಾಯಿಯಾಗಿದ್ದಾಗ ಇವರು ಮಗುವಾಗಿ ಮೆರೆದರು. ಈಗ ತಾವೇ ತಾಯಿಯಾಗಿ ಪರಬ್ರಹ್ಮವನ್ನೇ ಶಿಶುವನ್ನಾಗಿ ಮಾಡಿಕೊಂಡರು. ಇದುವರೆಗೆ ಬಸವಾಂಬೆಯಲ್ಲಿ ತಾಯ್ತನದ ಶಿಕ್ಷಣ ಪಡೆದುದನ್ನು ಪ್ರತ್ಯಕ್ಷಗೊಳಿಸಿಬಿಟ್ಟರು !

ಹಿಂದೆ ಯಶೋದೆ ಬಿಜ್ಜ ಮಹಾದೇವಿಯರು ಪರಮಾತ್ಮನನ್ನೇ ಪುತ್ರನೆಂದು ಭಾವಿಸಿ ವಾತ್ಸಲ್ಯ ಭಕ್ತಿಯ ಪರಾಕಾಷ್ಠತೆಯನ್ನು ತೋರಿದ್ದಾರೆ. ಆದರೆ ಎಷ್ಟೆಂದರೂ ಅವರು ಮಹಿಳೆಯರು. ತಾಯ್ತನವು ಅವರ ಹುಟ್ಟುಗುಣ. ಮೀರಾ, ಅಕ್ಕಮಹಾದೇವಿಯರ ಹೃದಯದಿಂದ ಪರಮಾತ್ಮನೇ ಪತಿಯೆಂಬ ಭಾವ ಹೊಮ್ಮಿದಂತೆ ಇವರ ಹೃದಯಗಳಿಂದ ಪರಮಾತ್ಮನೇ ಸುತನೆಂಬ ಭಾವ ಚಿಮ್ಮಿದುದು ಅಪರೂಪವಾದರೂ ಅಸಹಜವೇನಲ್ಲ. ಆದರೆ ಪುರುಷ ಹೃದಯದಿಂದ ಮಾತೃಭಾವ ಹರಿಯುವುದು ಮಾತ್ರ ಸೋಜಿಗಗಳಲ್ಲಿ ಸೋಜಿಗ. ಬಾಲಲೀಲಾ ಮಹಾಂತ ಶಿವಯೋಗಿಗಳು ಇಂಥ ಸೋಜಿಗವನ್ನೂ ಮಾಡಿ ತೋರಿಸಿದರು.

ಇನ್ನು ಮೇಲಿನ ಇವರ ಹಾಡುಗಳೆಲ್ಲ, "ನೀಲಾಂಬಮ್ಮವ್ವೆ ಮಹಾದೇವಿ ಮುಕ್ತಾಯಿಯರ ಓಲಗದೊಳಾಡುವ ಚಿದ್ಬಾಲಕ"ನಿಗೆ "ಸಂನಿನಿನಿ ನಿಧಪ ಝೇಂಕೃತ ಧಿಮಿಕಿಟ ತಕತೋಂ ಪ್ರಣಮದ ಲಾಲಿ"ಗಳಾಗಿಬಿಟ್ಟಿವೆ. ಇವರ ಹಾಡುಗಳನ್ನೆಲ್ಲ ಓದಿ ಮುಗಿಸಿದ ಮೇಲೆ ಇವರೇ ಉಸುರಿದ–

> ಮಸಣವಾಸನೆ ಮಾತಾಡೊ ಮಾಯೆಗೆ ಸಿಲ್ಕ– ।
> ದಸಮನೆ ಮಾತನಾಡೋ ॥
> ವಸುಧೆಯೊಳಗೆ ಒಬ್ಬ ವನಿತೆಯ ಮೋಹದ
> ಶಿಶುವೆ ನೀ ಮಾತನಾಡೋ ॥

ಎಂಬ ಚರಣ ನೆನಪಾಗಿ, ಆ ಒಬ್ಬ ವನಿತೆ ಯಾರಾಗಿರಬಹುದೆಂಬ ಬಗ್ಗೆ ಸಂದೇಹವೇ ಉಳಿಯದಂತಾಗುತ್ತದೆ.

ಶಿವಯೋಗಿಗಳಿಗೀಗ ಕಾಣುವವನು ಬರಿ ಮಹಂತಲಿಂಗನಲ್ಲ, ಶಿಶು ಮಹಂತಲಿಂಗ. ಈ ಶಿಶು ಎಲ್ಲ ಶಿಶುಗಳಂತಲ್ಲ :

> ಭಕ್ತಿಯು ಜ್ಞಾನ ವೈರಾಗ್ಯ ಮಂಡಲ ಮೀರಿ
> ಮುಕ್ತಿ ಮಂಟಪದೊಳು ತೂಗಾಡುತಿರುವ
> ಶಕ್ತಿಯರ ಷಡ್ವಿಧಂಗಯ್ಯ ತೊಟ್ಟಿಲೊಳು
> ಯುಕ್ತಿಯಿಂದ ಕುಣಿವ ವಿರಕ್ತಿಯ ಶಿಶು !
> ಹಲವು ಕಲ್ಲೊಳು ಪುರಷ ಎಲೆಯ ಮರೆಯಲಿ ಕಾಯಿ
> ನೆಲದ ಮರೆ ನಿಕ್ಷೇಪವಡಗಿದಂತೆ
> ಇಳೆಯ ಜನರೊಳಗಡಗಿ ತಿಳಿಗೊಡದೆ ಶಿವ–
> ಕಳೆಯ ಸುಳಿದ ಶ್ರೀಗುರು ಮಹಂತಲಿಂಗ ಮಹಾಶಿಶು !

ಇಂಥ ಮಹಾಶಿಶುವಿನುಪಚಾರಗಳ ತಾಯಿಯಂತೆ ಬೇಸರಿಲ್ಲದೆ ಮಾಡಿದರು ಮಹಾಂತ ಶಿವಯೋಗಿಗಳು :

ಕೈಯ ಕಾಲ ಮೈಯ ತೊಳೆದು । ಜೀಯ ಉಣಿಸಿ ಹಾಸಿ ಹೊಚ್ಚಿ
ದೈಯ ತೊಟ್ಟಿಲೊಳಗೆ ತೂಗಿ ಹಾಡಿ ಹರಸಿದೆ !

ಹೀಗೆ ಹಾಡಿ ಮಲಗಿಸದಿದ್ದರೆ ಮಲಗುವ ಕೂಸೆ ಇದು? ಬಲು ಕರಕರಿಯ ಮಾಡುವ ಕೂಸು. ಸಾಮಾನ್ಯ ಕೂಸುಗಳೇ ಒಬ್ಬ ತಾಯಿಗೆ ತೀರದಷ್ಟು ಕರಕರಿ ಮಾಡುವಾಗ ಈ ಕಾರಣಿಕ ಶಿಶು ಅದೆಷ್ಟು ಕರಕರಿಯನ್ನು ಮಾಡಲಿಕ್ಕಿಲ್ಲ?

ಕರಿಕರಿಯ ಮಾಡುವುದು ಪರಮ ಶಿವಯೋಗಿ ಶಿಶು
ಪರಿಪರಿಯ ಭಕ್ತ ತಂದೆ ತಾಯಿಗಳಿಗೆ ॥

ಏನೆಂದು ಕರಕರಿಯ ಮಾಡುವುದು? ಸಾಮಾನ್ಯ ಶಿಶುಗಳಂತೆ ಕಂಡುದಕೆ ಕೈ ನೀಡಿ ರೋರಾಡಿ ರೋದಿಸುವುದೆ? ಇಲ್ಲ :

ಶರಣ ಭಕ್ತರ ಪಾದ ಸ್ಮರಣೆಯೆಂಬುವ ಹಾಲ
ಭರದಿ ಕುಡಿದೇನೆಂದು ತವಕಿಸುವುದು ।
ಹರಜ್ಞಾನ ರಸತುಂಬಿ ಪರಿಪಕ್ವಮಾದಸಮ
ಪರಮ ಮುಕ್ತಿಯ ಹಣ್ಣ ಬೇಡುತಿಹುದು ॥

ಇದನ್ನುಳಿದು ಇನ್ನೇನನ್ನೂ ಒಲ್ಲದೀ ಕೂಸು :

ಕಾಯ ಕರ್ಪುರವೊಲ್ಲ ಹಣ್ಣು ಸಕ್ಕರೆಯೊಲ್ಲ
ತಾಯ್ದೇರು ಬಂದ್ಹಾಡಿ ತೂಗಿದರೆ ನಲಿವ
ಚಿನ್ನ ಬೆಳ್ಳಿಯನ್ನೊಲ್ಲ ರನ್ನ ಮುತ್ತುಗಳೊಲ್ಲ
ಮನ್ನಿಸಿ ಮನಮುಟ್ಟಿ ತೂಗಿದರೆ ನಲಿವ ॥

ಆದುದರಿಂದ :

ಬಾರೆ ಮುಕ್ತಾಯಕ್ಕ ಬಾರೆ ಮಹಾದೇವಿ
ಬಾರೆ ಬಸವನ ರಾಣಿ ನೀಲಲೋಚನೆಯೆ
ಬಾರೆ ಸತ್ಯಕ್ಕ ಬಾರೆ ಚೋಳಕ್ಕ
ಬಾರೆ ಅಮ್ಮವ್ವೆ ನೀ ಕರೆಸಿಕೊಳ್ಳುವರೇನೆ?

ಯಾತಕ್ಕಾಗಿ?

ತೂಗುವ ಬನ್ನಿರೆ ಇವನ ಮಹಾಗುರು ಶಾಂತೀಶ್ವರನ

ರಾಗದ ಪುತ್ರ ಮಹಾಂತನ !

ಯಾವ ಲಾಲಿ?

ಲಾಲಿ ಲಾಲಿಯು ಪರಬ್ರಹ್ಮದ ಶಿಶುವೆ !
ಮಾಲೆಯ ಧರಿಸುವೆ ಮಲ್ಲಿಗೆ ಹೂವಿನ ॥ ಲಾಲಿ...
ಅಷ್ಟದಳದ ಕಮಲ ತೊಟ್ಟಿಲೊಳಗೆ ಮಲಗಿ
ಶ್ರೇಷ್ಠ ಸದ್ಗುಣ ಹಸ್ತ ಪದಗಳನಾಡುತ
ನೆಟ್ಟನೆ ನಿಟಲ–ಭ್ರೂಮಧ್ಯದ ಜ್ಯೋತಿಯ
ದಿಟ್ಟಿಸಿ ನೋಡಿ ಕುಲು ಕುಲು ನಗುತಿಹ ॥ ಲಾಲಿ...
ಪ್ರಣವ ಘೋಷದ ನಾಗಸ್ವರ ವೇಣಿ ವಾಸುಕಿ
ಝಣ ಝಣಂ ಫಲ್ಗೆಜ್ಜೆ ತಾಳ ಮೃದಂಗ ಭೇರಿ
ಢಣ ಢಣೆಂಬುವ ಘಂಟೆ ಜಾಗುಟೆ ನಾದವ
ಬಣ್ಣಿಸಲಿವ ಶಿವ ಸುಖಮಯ ಕಂದನ ॥ ಲಾಲಿ...
ಫಲಪದಗಳ ಮೀರಿ ಶಿವಪದವೆಂಬುವ
ಹೊಳೆವ ಮೇಲುಪ್ಪರಿಗೆ ಮೇಲೆ ಕುಳಿತು ಮಾಯಾ
ಕಲಿಯುಗ ನರ್ತಕಿಯಾಟವ ನೋಡುತ
ನಲಿವ ಪರಶಿವ ಮಹಂತಲಿಂಗ ಶ್ರೀ ಬಾಲಕ ॥ ಲಾಲಿ....

ಎಂಥ ಶಿಶು, ಎಂಥ ತೊಟ್ಟಿಲು, ಎಂಥ ತಾಯಿ, ಎಂಥ ಲಾಲಿ । ಇಂಥ ಲಾಲಿ ಜಗತ್ತಿನಲ್ಲಿ ಇದೊಂದೆ. ಇದು ಮಹಾಂತ ಶಿವಯೋಗಿಗಳು ತೊಟ್ಟಿಲಲ್ಲಿ ಕಂಡ ವಿಶ್ವದರ್ಶನ ! ಇಂಥ ಲಾಲಿಯನ್ನು ಕೇಳಿದ ಕೂಸು ಮಲಗದಿರುವುದೆ? ಅದೋ, ಕೂಸು ಮಲಗಿತು.

ಮಗು ಮಲಗಿ ಬಹಳ ಹೊತ್ತಾಯಿತು. ಇನ್ನೂ ಏಳಲಿಲ್ಲವೇಕೆ? ತಾಯಿಗೆ ಕೂಸು ಮಲಗದಿದ್ದರೂ ಚಿಂತೆ, ಬಹಳ ಮಲಗಿದರೂ ಚಿಂತೆ. ಹಸಿವೆಯಾಗಿರ ಬಹುದೀಗ ಮಗುವಿಗೆ. ಎಬ್ಬಿಸಬೇಕು. ಹೇಗೆ? ಹಾಡಿ.

ಏಳಯ್ಯ ನಿಮ್ಮ ತಾಯಿ ತಂದೆಗಳು ಬಂದಿಹರು
ಭಾಳಾಕ್ಷ ಶಿಶು ಮಹಂತಲಿಂಗ ದೊರೆಯೆ !

ಯಾರು ಆ ತಾಯಿ ತಂದೆಗಳು? ಅವರೇ ಉತ್ತರ ಹೇಳುತ್ತಾರೆ. “ಬಸವ ಮಡಿವಳ ಚೆನ್ನಸಿದ್ಧರಾಮ, ಪ್ರಭು ಅಜಗಣ್ಣ ತಂದೆಗಳು; ಗೌರಿ ಮಹಾದೇವಿ, ಮುಕ್ತಾಯಿ, ನೀಲಮ್ಮ ಮುಖ್ಯ ತಾಯಿಗಳು” ಎಂದು. ಈ ತಾಯಂದಿರ ಹೆಸರುಗಳ

ಜೊತೆಗೆ ಇನ್ನೊಂದು ಹೆಸರನ್ನೂ ಸೇರಿಸಬೇಕು. ಅದೇ ಬಾಲಲೀಲಾ ಮಹಾಂತ ಶಿವಯೋಗಿಯ ಹೆಸರು.

ಹೀಗೆ ಬಾಲಲೀಲೆ ಮಾತೃಲೀಲೆಗಳೆರಡನ್ನೂ ಮರೆದು ಶಾ.ಶ. ೧೭೮೦ನೆಯ ಸಿದ್ಧಾರ್ಥ ಸಂವತ್ಸರ ಮಾಘ ಶು. ೧೩ ಸೋಮವಾರ ಮುಂಜಾನೆ ಬಯಲನ್ನು ಬೆರೆದರು ಶಿವಯೋಗಿಗಳು. ಅವರ ಆ ಪ್ರಣವದ ಲಾಲಿ ಮಾತ್ರ ಇಂದಿಗೂ ಎಲ್ಲರ ಕಿವಿಗಳಲ್ಲಿ ನಿನದಿಸುತ್ತಲಿವೆ.

■

# ಮೈಲಾರ ಬಸವಲಿಂಗಶರಣರು

ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಮೈಲಾರ ಗ್ರಾಮದಲ್ಲಿ ಮೈಲಾರಲಿಂಗನ ಜಾತ್ರೆ ನಡೆದಿದೆ. ಅಲ್ಲಿ ಒಂದು ಚಿಕ್ಕ ಅಂಗಡಿಯಲ್ಲಿ ಕುಳಿತು ಜಾತ್ರೆಯನ್ನು ನೋಡಿ ಭಾವೋದ್ರೇಕದಿಂದ ಒಬ್ಬ ವ್ಯಾಪಾರಿ ಹಾಡುತ್ತಲಿದ್ದಾನೆ.

ನೋಡಿರಮ್ಮಾ ಮೈಲಾರಲಿಂಗನಜಾತ್ರೆಯಾಗುತಿದೆ
ನಾಡ ಜನರಿಗೆ ತಿಳಿಯದು ಇದರ ಗೋಷ್ಠ ಬೇರಿದೆ ಪ

ಧರೆಯಾಕಾರಕೆ ಮರಸೋಂಕದ ಘನತೇರು ಕಾಣುತಿದೆ
ಪರಿಕಿಸಿ ನೋಡಲು ನವನನೆಗಳ ಕೀಲೊಂದು ಕಾಣುತಿದೆ
ಹುರಿಗೂಡಿದ ಮಿಣಿ ಹತ್ತರಿಂದ ಬಿಗಿದೊಪ್ಪಿ ತೋರುತಿದೆ
ಗೊರವಮಂಡಲದತ್ತ ನೋಡಲುರೆ ಕಳಸವೆಸೆಯುತಿದೆ ॥

ಸಾವಿರಾರು ಜನರು ಮೈಲಾರಲಿಂಗನ ತೇರು ಸಾಗಿರುವ ಸಂಭ್ರಮವನ್ನು ನೋಡುತ್ತಲಿದ್ದಾರೆ. ಆದರೆ ಈ ವ್ಯಾಪಾರಿ ಅದನ್ನು ನೋಡಿದ ನೋಟವೇ ಎಲ್ಲರಿಂದ ಭಿನ್ನವಾದುದಾಗಿದೆ. "ಎತ್ತಣ ಬೆಟ್ಟ ನೆಲ್ಲಿಕಾಯಿ ಎತ್ತಣಿಂದೆತ್ತ ಸಂಬಂಧವಯ್ಯ? ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯಾ?" ಎತ್ತಣ ವ್ಯಾಪಾರ, ಎತ್ತಣ ಶಿವಾನುಭವ ಎತ್ತಣಿಂದೆತ್ತ ಸಂಬಂಧವಯ್ಯ? ಇಂಥಸಂಬಂಧ ಹಚ್ಚಿಕೊಂಡು ಅಂಗಡಿ ನಡಸುತ್ತಿರುವ ಇವರು ಯಾರಾಗಿರಬಹುದು?

ಹಗಲು ಮನಸೆಲ್ಲ ಶಿವನ ನನಸಾಗಿ ಬಾಳುವ ಈ ವ್ಯಾಪಾರಿ ರಾತ್ರಿ ಶರಣ ಸತಿಯಾಗಿ ಕನಸು ಬೇರೆ ಕಾಣುತ್ತಾಳೆ.

**ರಾಗ : ನೀಲಾಂಬರಿ**

ಎಂಥ ಕನಸ ಕನಸ ಕಂಡೆನೆ । ಕೇಳೌ ಸುಜಾಣೆ
ಕಾಂತ ಮುನಿಸುಗೊಂಡನೆ !

..................................

ಈ ರೀತಿ ಕನಸಿನೊಳು ನಿಬ್ಬೆರಗಿ । ನಿಂ

ದೊರ್ವಳೆ ಒರಗಿರ್ದೆನೆ
ಸಾರಸುಂದರ ಚೆನ್ನವೀರನಪ್ಪಲು । ನಿದ್ರೆ
ಹಾರಿ ಕಣ್ದೆರೆದೆನಲ್ಲೆ । ಇಂತಾಯಿತಲ್ಲೆ
ಎಂಥ ಕನಸು ಕಂಡೆನೆ ॥

ಈ ಚೆನ್ನವೀರನಾರು? ಇವನನ್ನು ಇಷ್ಟು ಹಾಡಿ ಹೊಗಳಿದರೂ ತೃಪ್ತಿಯಿದ್ದಂತೆ ತೋರುವುದಿಲ್ಲ ಈ ವ್ಯಾಪಾರಿಗೆ.

**ರಾಗ : ಸಾರಂಗ**



**ಮೈಲಾರ ಬಸವಲಿಂಗ ಶರಣರು**

ಪರಮ ಪಾವನ ಪರಬ್ರಹ್ಮ ಸ್ವರೂಪನೆ । ಚೆನ್ನವೀರ
ನಿರುಪಮ ನಿರಘ ನಿರ್ದ್ವಂದ್ವ ನಿರ್ಲೇಪನೆ । ಚೆನ್ನವೀರ
ಈ ಚೆನ್ನವೀರನನ್ನೇ ನಂಬಿ
"ವರಸತ್ಯ ಶುದ್ಧ ಕಾಯಕದಿಂದ ಬಂದ
ಪರಣಾಮ ದ್ರವ್ಯವೆಲ್ಲವನು ಶ್ರದ್ಧೆಯೊಳು
ಗುರುಲಿಂಗ ಜಂಗಮಕ್ಕೈದೆ ದಾಸೋಹವ
ಹರುಷದಿಂ ಮಾಡಿ ನೀಡುವುದೆ ಸದಾಚಾರ" ವೆಂದೊರೆದು
ಅದರಂತೆ ಆಚರಿಸುತ್ತ
ಪರಮ ಪಾವನ ಶ್ರೀಗುರು ಕೊಟ್ಟ ಕಾಯಕ ಸತ್ಯವಣ್ಣ
ಶರಣ ಸಂತತಿಗೆ ಸದ್ಯೋನ್ಮೇಷದಾಯಕ ಸತ್ಯವಣ್ಣ ।

ಎಂದು ಸಾರುತ್ತ ತನ್ನ ಅನುಭವಗಳನ್ನು ಹಾಡಾಗಿ ಹರಿಸುತ್ತ ಬಾಳಿದ ಈ ವ್ಯಾಪಾರಿ 'ಚೆನ್ನವೀರ'ನನ್ನೇ ತನ್ನ ಅಂಕಿತವನ್ನಾಗಿ ಗ್ರಹಿಸಿದ್ದಾನೆ ; ಅವನ ಸ್ತುತಿ ರೂಪವಾಗಿ ೩೩೩ ತ್ರಿಪದಿಗಳ ಗುರುಕರುಣ ತ್ರಿವಿಧಿಯನ್ನೇ ರಚಿಸಿದ್ದಾನೆ; ತನ್ನ ಗುರು ಚೆನ್ನವೀರನ ಚರಿತೆಯನ್ನು ಎದೆತುಂಬಿ ಹಾಡಿದ್ದಾನೆ.

ಎರಡನೆಯ ಕೈಲಾಸವೆನಿಪ ಹರಪುರದ
ದೊರೆ ಸೋಮಶೇಖರ ನರೇಂದ್ರನಕ್ಕರದ
ಅರಸಿ ಬಸವಮ್ಮಾಜಿ ಭಕ್ತಿಯೊಳು ಮೆರೆದ
ಶರಣ ಸಂತತಿಗಳಿಗೆ ಸಲೆ ಮೋಕ್ಷವರದ

..............................................................

ಇಂತೆಸೆವ ಚರಮೂರ್ತಿ ಚನ್ನವೀರೇಶ
ಅಂತರಂಗವೆ ಮಹಾಲಿಂಗ ಪ್ರಕಾಶ
ಮುಂತೆ ಬಹಿರಂಗ ಷಣ್ಮಂತಮಯ ಕೋಶ
ಸಂತತಾಚಾರದನುಭಾವ–ವುಲ್ಲಾಸ
ಮಗಳೋತ್ಕರ ಶಿಲಾಪಳ್ಳಿ ಮಠದಿಂದ
ಲಿಂಗನಾಯಕ ಪುರಕ್ಕಾಗಿ ನಡೆತಂದ
ಪುಂಗಪುರಾಣದಯ್ಯನ ಭಕ್ತಿಯಿಂದ
ತುಂಗಭದ್ರಾ ನದಿಯ ತೀರದೊಳು ನಿಂದ

ಅವರಲ್ಲಿ ಅಡಿಯಿಟ್ಟೊಡನೆ ಮಠವೆದ್ದು ನಿಂತಿತು. ಗಣಾರಾಧನೆ ನಡೆಯಿತು. ಗುರುಕುಲ ಪ್ರಾರಂಭವಾಯಿತು. ಆ ಗುರುಕುಲದಲ್ಲಿ ಶರಣಕುಲ ಸಿದ್ಧವಾಗತೊಡಗಿತು. ಗುರು ಚೆನ್ನವೀರೇಶರು ಮಠದ ಸುತ್ತು ವನವನ್ನು ಬೆಳೆಸಿದರಂತೆ. "ಚಂದದಿಂದಲಿ ವನವ ಹಾಕಿ ಪಾಲಿಸಿದ." ವನಮಹೋತ್ಸವದ ಕಲ್ಪನೆ ಮೂಡದ ಮುನ್ನವೇ ಈ ಮಹಾತ್ಮ ವನ ಬೆಳೆಸಿದ. ಆ ವನದ ಸೊಬಗಾದರೂ ಎಷ್ಟು :

ಆ ವನಾಂತರದ ವಿಸ್ತರವನೇನೆಂಬೆ
ಮಾವು ದಾಳಿಂಬದುರ್ಗಂಚಿ ನಿಂಬೆ
ಸೇವಂತಿಗೆಯು ಬಕುಳ ಕರವೀರ ಕಂಬಿ
ಅವ ಕಾಲದೊಳು ಓಂಕರಿಸುತಿಹ ತುಂಬಿ

ಗುರುಕುಲದ ವಾತಾವರಣವೇ ಅಷ್ಟು ಅಧ್ಯಾತ್ಮಮಯವಾದುದು. ಅಲ್ಲಿ ದುಂಬಿ ಕೂಡ ಝೇಂಕರಿಸುವುದಿಲ್ಲ, ಓಂಕರಿಸುತ್ತದೆ.

ಪಲ್ಲವಿಸಿ ಬೆಳೆದ ವೃಕ್ಷದ ನೆಳಲ ತಂಪು
ಮೊಲ್ಲೆ ಮಲ್ಲಿಗೆ ನಾಗಸಂಪಿಗೆ ಗುಂಪು
ಚೆಲ್ಲ ಮುಂಬರಿವುತಿಹ ನದಿಯುದಕದಿಂಪು
ಎಲ್ಲಿ ನೋಡೊದಡಲ್ಲಿ ಸೊಗಸುತಿಹ ಸೊಂಪು

ಇಂಥ ವನ ಬೆಳೆಸಿ ಅದರಲ್ಲಿ ಇಂಥ ಗುರುಕುಲ ನಡೆಸಿ, ಇಂಥ ಶಿಷ್ಯರನ್ನು ಸಿದ್ಧಗೊಳಿಸಿದ ಗುರು ಚೆನ್ನವೀರೇಶರು ಧನ್ಯರು. ಮೈಲಾರದ ಬಸವಪ್ಪಶೆಟ್ಟರು ಬಸವಲಿಂಗ ಶರಣರಾದುದು ಇಲ್ಲಿಯೇ. ಇಲ್ಲಿಯೇ ಅವರು ನರಸುತರಾಗಿ ಒಂದು ಗುರುಸುತರಾದರು. ಆ ನರಸುತ ಗುರುಸುತರಲ್ಲಿರುವ ಭೇದವನ್ನು ಅವರ ಮಾತಿನಲ್ಲಿಯೇ ಕೇಳೋಣ :

**ರಾಗ : ಮಾಳವ**

ನರಸುತ ಗುರುಸುತರಿರ್ವರ ಚರಿತೆಯ
ನರಿದು ಜನರು ವಿಚಾರಿಪುದು ॥ಪ॥

ಸಪ್ತ ವ್ಯಸನಗಳ ಚಿತ್ತದಿ ಕಾಮಿಸಿ
  ಗುಪ್ತಪಾತಕನಹ ನರಸುತನು
ಸಪ್ತ ವಿಧದ ಸದುಭಕ್ತಿಯೊಳಗೆ ಲೋ
  ಲುಪ್ತನೆನಿಸುತಿಹ ಗುರುಸುತನು ॥
ಧರೆಯೊಳಹಂಕಾರ ಮಮಕಾರಗಳೆಂ

ಬೆರಡರೊಳಿರುತಿಹ ನರಸುತನು
ಶರಣನೆ ಸತಿ ಶಿವಲಿಂಗವೆ ಪತಿ ಎಂ
ಬೆರಡರರುವಿನೊಳಿಹ ಗುರುಸುತನು ॥

ಹೀಗೆ ಗುರುಕರೋದ್ಭವರಾಗಿ ಗುರುಸುತರಾದ ಬಸವಲಿಂಗ ಶರಣರು ತಮ್ಮ ತಂದೆ ತಾಯಿಗಳು ಹೆಸರನ್ನೂ ಹೇಳದೆ ಹೋಗಿರುವುದು ಅಚ್ಚರಿಯೇನಲ್ಲ.

ಗುರುಗಳಲ್ಲಿ ಇಷ್ಟು ಅನನ್ಯ ಭಕ್ತಿಯಿದ್ದರೂ ಸ್ವತಂತ್ರಶೀಲಶರಣರಾದ ಬಸವಲಿಂಗರು ಒಮ್ಮೆ ಗುರುಗಳ ಅಭಿಪ್ರಾಯವೊಂದರ ಬಗ್ಗೆ ತಮ್ಮ ಮತಭೇದವನ್ನು ವ್ಯಕ್ತಪಡಿಸದಿರಲಿಲ್ಲ. ಸಹಪಾಠಿಗಳಾಗಿದ್ದ ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳು 'ಹರ ಮುನಿದರೆ ಗುರು ಕಾಯ್ವನು, ಗುರು ಮುನಿದರೆ ಹರ ಕಾಯನು' ಎಂಬುದನ್ನು ಮನವರಿಕೆ ಮಾಡಿಕೊಡಲು ಪಶ್ಚಾತ್ತಾಪ ಹುಟ್ಟಿ ಗುರುಕರುಣ ತ್ರಿವಿಧಿಯನ್ನು ರಚಿಸಿ ಹಾಡಿ, ಮತ್ತೆ ಗುರುಕಾರುಣ್ಯವನ್ನು ಪಡೆದರು.

ಲಿಂಗನಾಯಕನ ಹಳ್ಳಿಯ ಗುರುಕುಲದ ಕೀರ್ತಿ ದೂರದೂರದವರೆಗೆ ಹಬ್ಬಿದ್ದಿತು. ಲಿಂಗಕಿರಣದೊಬ್ಬುಳಿಯು ಸುಜ್ಞಾನಜ್ಯೋತಿಸ್ವರೂಪರಾಗಿದ್ದ ಗುರು ಚೆನ್ನವೀರಸ್ವಾಮಿಗಳಲ್ಲದೆ ಬಾಲಲೀಲಾ ಮಹಾಂತ ಶಿವಯೋಗಿಗಳು, ಮೈಲಾರ ಬಸವಲಿಂಗ ಶರಣರು, ಬನ್ನಿಮಟ್ಟೆ ಚೆನ್ನಪ್ಪನವರು, ಮೈಸೂರು ಪ್ರಾಂತದ ಶಿವಬಸವಸ್ವಾಮಿಗಳೇ ಮೊದಲಾದ ಶಿವಾನುಭವಿಗಳಲ್ಲಿ ಸಮ್ಮಿಲಿತರಾಗಿದ್ದರು. ಆದುದರಿಂದ ಅಲ್ಲಿಗೆ ಅನೇಕ ಹರಗುರುಚರಮೂರ್ತಿಗಳು ಬರತೊಡಗಿದರು. ಅವರಲ್ಲಿ ಕೆಲವರು ನಿಜಾನುಭವಿಗಳು, ಕೆಲವರು ಕೇವಲ ಲಾಂಛನಧಾರಿಗಳು. ಬಸವಲಿಂಗಶರಣರು ನಿಜದ ನೆನಹಿನಲ್ಲಿದ್ದವರಿಗೆ ಮಾತ್ರ ನತಮಸ್ತಕರಾಗಿ ಲಾಂಛನಧಾರಿಗಳನ್ನು ಕರೆದು, "ಲಾಂಛನಕ್ಕೆ ತಕ್ಕ ಶಿವಜ್ಞಾನವಿಲ್ಲದ ನೀವು, ಈ ಲಾಂಛನ ಧರಿಸುವುದು ಸರಿಯಲ್ಲ. ಈ ಲಾಂಛನವನ್ನು ತೆಗೆದಿಟ್ಟು ಗುರು ಚೆನ್ನವೀರೇಶರಿಂದ ಮೊದಲು ಶಿವಾನುಭವವನ್ನು ಶಿವಾಚಾರವನ್ನು ಕಲಿಯಿರಿ. ಸುಮ್ಮನೆ ಶಿಷ್ಯರನ್ನು ವಂಚಿಸುತ್ತ ಸಂಚರಿಸಬೇಡಿರಿ" ಎಂದು ಹೇಳಿ ಅವರ ಲಾಂಛನ ತೆಗೆದಿರಿಸಿ ಗುರುಸೇವೆಗೆ ತೊಡಗಿಸುತ್ತಿದ್ದರು. ಅವರು ತಕ್ಕಷ್ಟು ಅನುಭವವನ್ನು ಅಳವಡಿಸಿಕೊಂಡ ತರುವಾಯ ತಾವೂ ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಅವರು ಸದುತ್ತರ ಕೊಟ್ಟ ಮೇಲೆ ಸಂಪ್ರೀತರಾಗಿ, ಅವರ ಲಾಂಛನ ಅವರಿಗೆ ಮತ್ತೆ ಹೊಂದಿಸಿ ನಮಸ್ಕರಿಸಿ, 'ನೀವೀಗ ನಿಜವಾದ ಹರಗುರುಚರಮೂರ್ತಿಗಳಾದಿರಿ ಬುದ್ಧಿ, ನೀವಿನ್ನು ಭಕ್ತೋದ್ಧಾರಕ್ಕಾಗಿ ಹೊರಡಿರಿ' ಎಂದು ಹೇಳಿ ಕಳಿಸಿಕೊಡುತ್ತಿದ್ದರು.

ಅವರು ಜೀವನಾದ್ಯಂತವೂ ಕಾಯಕ ಯೋಗಿಗಳಾಗಿಯೇ ಬಾಳಿದರು.

'ಕಾಯಕವಿಡಿದು ಕರ್ಮವನತಿಗಳೆವುದೇ ಸತ್ಯವಣ್ಣ' ಎಂದು ಸಾರಿದ ಅವರು

ಸತ್ಯದಿಂ ಕ್ರಯ ವಿಕ್ರಯ ಮಾಡಿ । ಬಂದ
ಅರ್ಥಚರಗುರುವಿನುಭಯ
ನಿತ್ಯ ದಾಸೋಹಪ್ರಿಯ

ರಾಗಿ ಬಾಳಿದರು. ಮೈಲಾರಲಿಂಗ ದೇವಾಲಯಕ್ಕೆ ಹೋಗುವ ದಾರಿಯ ಎಡಭಾಗಕ್ಕೆ ದೇವಾಲಯಕ್ಕೆ ಸ್ವಲ್ಪಹತ್ತಿರದಲ್ಲಿಯೇ ಪೂರ್ವಾಭಿಮುಖವಾಗಿ ಇಂದಿಗೂ ಉಳಿದಿರುವ ಅವರ ಅಂಗಡಿಯಲ್ಲಿ ಕುಳಿತು ಬಹಿರಂಗದಲ್ಲಿ ಕ್ರಯ ವಿಕ್ರಯದ ಕಾಯಕವನ್ನು ಮಾಡುತ್ತ, ಅಂತರಂಗದಲ್ಲಿ ಅವಿರಳ ಜ್ಞಾನಮೂರ್ತಿಯನ್ನು ನೆನೆಯುತ್ತ ದಿನಗಳೆದರು.

ದೊಡ್ಡ ಅಂಗಡಿಯಲ್ಲ, ದೊಡ್ಡ ಮನೆಯಲ್ಲ. 'ಮನೆ ನೋಡಾ ಬಡವರು ಮನ ನೋಡಾ ಸಿರಿವಂತರು.' ಒಂಭತ್ತು ಅಂಕಣದ ಮನೆ. ಮೊದಲನೆಯ ಮೂರಂಕಣದಲ್ಲಿ ಎಡೆಗಡೆಗೆ ಎರಡಂಕಣದ ಅಂಗಡಿ, ಒಂದಂಕಣದ ಓಡಾಡುವ ದಾರಿ, ಹಿಂದೆ ಎರಡಂಕಣದ ನಡುಮನೆ. ಬಲಬದಿಗೆ ಒಂದಂಕಣದ ಸ್ನಾನದ ಮನೆ, ಅಡುಗೆ ಮನೆ, ಇನ್ನೊಂದಂಕಣದಲ್ಲಿ ಸರಿಕಿನ ಕೋಣೆಯ ಹಿಂಬದಿಗೆ ಲಿಂಗ ಪೂಜೆಯ ಕೋಣೆ. ಅಲ್ಲಿ ಪೂಜೆಗೆ ಕುಳಿತರೆ ಬಾಹ್ಯ ಜಗತ್ತಿನ ಗಜಿಬಜಿ ಕೇಳುವುದಿಲ್ಲವಂತೆ.

ಈ ಚಿಕ್ಕ ಮನೆ ಚಿಕ್ಕ ಅಂಗಡಿಯ ಒಡೆಯರಾಗಿದ್ದ ಬಸವಲಿಂಗಶರಣರು ಇಂದು ಕನ್ನಡ ನಾಡಿನ ಪುಣ್ಯಪುರುಷರಲ್ಲಿ ಗಣ್ಯ ಸ್ಥಾನಕ್ಕೆ ಒಡೆಯರಾಗಿದ್ದಾರೆ– ತಮ್ಮ ನಿರ್ಮಲ ಚಾರಿತ್ರ್ಯದಿಂದ, ಗುರುಕರುಣತ್ರಿವಿಧಿ, ಷಟ್‌ಸ್ಥಲ ನಿರಾಭಾರ ವೀರಶೈವ ಸಿದ್ಧಾಂತ, ಶಿವಾನುಭವದರ್ಪಣ, ಲಿಂಗಪೂಜಾ ವಿಧಾನಗಳೆಂಬ ತಮ್ಮ ಕೃತಿ ಚತುಷ್ಟಯಗಳಿಂದ. ಇವುಗಳಲ್ಲಿ ಪ್ರತಿಪಾದಿತವಾದ ವಿಷಯಗಳು ವೀರಶೈವ ಸಿದ್ಧಾಂತ, ವೀರಶೈವ ಆಚರಣೆಗಳಿಗೆ ಸಂಬಂಧಪಟ್ಟರೂ ಇವುಗಳಲ್ಲಿ ವೀರಶೈವೇತರರೂ ಮೆಚ್ಚುವ ಮಾತುಗಳಿವೆ.

ಹೆಪ್ಪಿನೊಳು ಹಾಲಡಗಿದಂತೆಯೊಂದಾನೊಂದು
ನೆಪ್ಪಿನೊಳಗರಿವು ಮರವೆಗಳಡಗಿದಂತೆ ಕಣ್
ಕಪ್ಪಿನೊಳು ಸೂರ್ಯ ಚಂದ್ರಾಗ್ನಿ ಪ್ರಕಾಶಂಗಳಡಗಿ ಕಾಣಿಸದಂದಿದಿ
ಮುಪ್ಪಿನೊಳು ಬಾಲ್ಯ ಯೌವನವಡಗಿದಂತಿರೆ
ಅರ್ಪಿತವಧಾನ ಮೊದಲಾದ ಕ್ರಿಯೆಗಳೆಲ್ಲ

ನಿಷ್ಪತಿಯನ್ನೈದಿ ನಿಜವಾದ ಸದ್‌ಭಕ್ತರಿಗೆ ಭಾವಲಿಂಗಾಚಾರವು–ಎಂದು

ಭಾವಲಿಂಗಾಚಾರವನ್ನು ಬಣ್ಣಿಸುವಾಗ,

ಶಿಲೆಯ ತೆಪ್ಪವನೇರಿ ಜಲವ ದಾಟುವೆನೆಂಬ
ಬಲು ಮೂಶತನವ ತೊಲಗಿಸಿ ನೀನೆನ್ನ
ಸಲಹೊ ಶ್ರೀ ಗುರುವೆ ಕೃಪೆಯಾಗು–ಎಂದು

ಗುರುಕಾರುಣ್ಯವನ್ನು ತೋರುವಾಗ,

'ತೂಗಿರೆ ಶರಣಸತಿಯರು ಶಿವ–
ಯೋಗ ಸಂಪದದೊಳು ಬಿಡದೆ ಲಿಂಗವನು' ಎಂದು

ಶರಣ ಸತಿಯರನ್ನು ಕರೆವಾಗ,

ಕರೆದಳು ಲಿಂಗಪತಿಯ । ಶರಣಸತಿ
ಕರೆದಳು ಲಿಂಗಪತಿಯ–ಎಂದು

ಬರೆಯುವಾಗ,

ಶರಣರೊಡವೆರೆಸೆನ್ನನು । ದುರಿತ ದುರ್
ಮರಣ ಜನರೊಡವೆರಸದೆ ಗುರುವೆ–ಎಂದು

ಬೇಡುವಾಗ,

'ಪುಸಿಯನಾಡುವುದಿಲ್ಲವಣ್ಣ । ನೀವು
ಹಸನಾಗಿ ಶೋಧಿಸಿ, ತಿಳಿಕೊಳ್ಳಿರಣ್ಣ'

ಎಂದು ಎಚ್ಚರಿಸುವಾಗ ಅವರು ಎಲ್ಲರ ಎದೆಗಳಲ್ಲಿ ಆಗಾಗ ಏಳುವ ಭಾವ ತರಂಗಗಳನ್ನೇ ತಮ್ಮ ಹೃದಯತಂತಿಯಿಂದ ಹೊರಡಿಸಿದ್ದಾರೆಂಬುದು ಹೊಳೆಯದಿರದು.

ಹೀಗೆ ಪುರುಷಾರ್ಥ ಪರಮಾರ್ಥಗಳನ್ನು ಕೂಡಿ ನಡಸುತ್ತ, 'ಸ್ವಾನುಭವದ ನೆಲೆಯ ನಾನೇನು ಬಲ್ಲೆನೈ ನೀನೊಳಪೊಕ್ಕು ಏನ ನುಡಿಸಿದೊಡದನೆ ಗುಡಿಯಂತೆ ಗಂಟೆಯಂತೆ ವೀಣೆಯಂತೆ ಜಾಣ ಶ್ರೀಗುರುವೆ ನಾ ಮಾಣದಲೆ ನುಡಿವೆ' ಎಂದು ಸ್ವಾನುಭವವನ್ನೇ ಹಾಡುಗಳನ್ನಾಗಿ ಹರಸುತ್ತ , ಅಂಗಡಿಗೆ ಬರಹೋಗುವ ನೊಂದ ಜೀವಿಗಳಿಗೆ ಧರ್ಮ ತಿಳಿಸಿ ಧೈರ್ಯವೀಯುತ್ತ ಬಸವಲಿಂಗಶರಣರು ಬಾಳತೊಡಗಲು ದಿನದಿನಕ್ಕೆ ಅವರ ಸತ್ಕೀರ್ತಿ ಸುಗಂಧದಂತೆ ಸುತ್ತಲೂ ಹರಡತೊಡಗಿತು. ಅದನ್ನು ಸಹಿಸದ ಹಲವರು ವಿಷ್ಣುಭಕ್ತರಾದ ಅಧಿಕಾರಿಗಳು ಬಂದಾಗ ಇವರು

ವಿಷ್ಣುನಿಂದಕರಿರುವರೆಂದು ದೂರು ಹೇಳಿದರು. ಅವರು ಕೋಪಾವಿಷ್ಟರಾಗಿ ಬಸವಲಿಂಗಶರಣರನ್ನು ಕರೆದು ಗದ್ದರಿಸಿದರು. ಬಸವಲಿಂಗಶರಣರು ನಾವು ವಿಷ್ಣುನಿಂದಕರಲ್ಲವೆಂದು ಎಷ್ಟು ಹೇಳಿದರೂ ಆ ಅಧಿಕಾರಿಗಳಿಗೆ ಮನವರಿಕೆಯಾಗಲಿಲ್ಲ. ವಿಷ್ಣನಿಂದಕರಲ್ಲದಿದ್ದರೆ ಒಂದು ವಿಷ್ಣುಸ್ತುತಿ ಬರೆದುಕೊಡಬೇಕೆಂದು ಹಟ ಹಿಡಿದರು. ಆಗ ಬಸವಲಿಂಗಶರಣರು ಕೆಳಗಣ ಪದ್ಯವನ್ನು ಬರೆದುಕೊಟ್ಟು ತಮ್ಮ ಶಿವಣಭಕ್ತಿಯನ್ನೂ ಉಳಿಸಿಕೊಂಡರು, ವಿಷ್ಣಭಕ್ತರು ಸಂತೋಷಕ್ಕೂ ಕಾರಣರಾದರು.

"ಹರಿಯೆ ಬ್ರಹ್ಮಾಂಡ ಪಿಂಡಾಂಡ ದಶದಿಗ್ಭರಿತ
ಹರಿಯೆ ತ್ರೈಭುವನ ಅಟ್ಟುಂಬ ಸಕಲ ಜೀವಕ್ಕಾದಿ
ಹರಿಯ ಬಿಟ್ಟರಗಳಿಗೆ ಜೀವಿಸುವರಾರಿಲ್ಲ ಲೋಕದೊಳಗದು ಕಾರಣಂ
ಹರಿಭಕ್ತನಹುದು ಹರಭಕ್ತನಲ್ಲ ನಾಂ
ನರಸಿಂಹ ಮಧುಸೂದನ ಸಿರಿಯರಸ ವಾ
ಸರ ವೆಂಕಟಾಚಲಾದಿ ಪ್ರಣವ ಸ್ಮರಣೆಯೊಳಗಿರ್ಪೆಂ ಸದಾ"॥

ಇಷ್ಟಾದರೂ ಕೆಲವು ಕುಹಕಿಗಳು ಇವರು ವಿಷ್ಣುನಿಂದಕರೆಂಬ ಅಪಪ್ರಚಾರವನ್ನು ಮಾಡುತ್ತಲೆ ಇದ್ದರು. ಅವರಿಗೆ ಸಮಾಧಾನವಾಗಲೆಂದು ಬಸವಲಿಂಗಶರಣರು ಕೆಳಗಣ ಹಾಡು ಕಟ್ಟಿದರು :

ಗೋವಿಂದನಾದಿ ಗೋವಿಂದ । ನಮ್ಮ
ಗೋವಿಂದಲಾದ ಪಾವನ ಪಾಂಡುರಂಗ ಪ

ಶ್ರೀ ವಿಭೂತಿಯು ಪಂಚ ಗೋವಿಂದ । ವೀರ
ಶೈವಾಗಮೋಕ್ಷವು ಗೋವಿಂದ
ಪೀವ ಪಂಚಾಮೃತ ಗೋವಿಂದ । ಜಗ
ಜ್ಜೀವ ಸಂತೃಪ್ತಿಯು ಗೋವಿಂದ ॥

ಹವ್ಯಕವ್ಯಗಳೆಲ್ಲ ಗೋವಿಂದ । ಷಡು
ಗವ್ಯ ಸಮ್ಮಾರ್ಜನೆ ಗೋವಿಂದ
ದ್ರವ್ಯ ಸಂಗಳಿಕೆಯು ಗೋವಿಂದ । ಮಹ
ದಿವ್ಯ ಪ್ರಕಾಶವು ಗೋವಿಂದ

ಗೋತ್ರ ಹೋತ್ರವು ನಮ್ಮ ಗೋವಿಂದ । ಪುಣ್ಯ
ಕ್ಷೇತ್ರ ಯಾತ್ರೆಗಳೆಲ್ಲ ಗೋವಿಂದ
ಧಾತ್ರಿ ಪಾವನಗಾತ್ರಿ ಗೋವಿಂದ
ಪಿತ್ರ ಚಾರಿತ್ರವು ಗೋವಿಂದ ॥

ಅಭವ ವಾಹನವು ತಾ ಗೋವಿಂದ । ಬಹು
ಶುಭ ಮಂಗಲೆಯ ಜಾತ ಗೋವಿಂದ
ವಿಭುಧಗಮನ ಶ್ವೇತ ಗೋವಿಂದ । ಕೃಷ್ಣ
ನುಭಯಾಂಬಕವು ತಾ ಗೋವಿಂದ ॥
ಮೂರು ತಾಪವಿನಾಶ ಗೋವಿಂದ । ಸುವಿ
ಚಾರ ಮೋಕ್ಷವಿಲಾಸ ಗೋವಿಂದ
ಸಾರಸುಖ ವಿಶೇಷ ಗೋವಿಂದ । ಚೆನ್ನ
ವೀರ ಮದ್‌ಗುರುವಾಸ ಗೋವಿಂದ ॥

ಹಿಂದೂ ಜನರಿಗೆಲ್ಲ ಪರಮ ಪವಿತ್ರವೆನಿಸಿದ ಗೋಮಾತೆಯ ಸ್ತುತಿಯನ್ನು ಬರೆದು ಗೋವಿಂದ ಭಕ್ತರನ್ನೂ ಸಮಾಧಾನ ಪಡಿಸಿದ ಬಸವಲಿಂಗಶರಣರ ಜಾಣ್ಮೆಗೆ ತಲೆದೂಗಲೇಬೇಕು.

ಹೀಗೆ ಶಿವಾನುಭವದಲ್ಲಿ ಮಿಂದು, ಶರಣಪಥದಲ್ಲಿ ನಿಂದು ಶಿವಜಗನ್ಮಯತ್ವದ ಅರಿವಿನಲ್ಲಿಯೇ ಇರವನ್ನು ಮುಗಿಸಿ ಮರೆಯಾದರು ಮಹಾನುಭಾವಿ ಮೈಲಾರದ ಬಸವಲಿಂಗಶರಣರು. 'ಎಲೆ ಮನವೆ ನೀ ನಿನ್ನ ನಿಜವ ತಿಳಿವೊಡೆ ಹೇಳುವೆ ಕೇಳು, ಅದು ಕೇವಲ ಜ್ಯೋತಿ' ಎಂದುದು ಪ್ರಭುದೇವರ ಪ್ರಸಾದವಾಣಿ. ಬಸವಲಿಂಗ ಶರಣರೂ ಜ್ಯೋತಿಗಳಾಗಿ ಜ್ಯೋತಿಯ ಬರೆದುಬಿಟ್ಟರು.

**ರಾಗ : ನಾದರಾಮಕ್ರಿಯೆ**

"ತಾನೆ ಬೆಳಗುತಿದೆ ಸ್ವಯಂ ಜ್ಯೋತಿ । ತಾನೆ ಬೆಳಗುತಿದೆ
ಮಾನಸವಾಚಕಕಾಯಕದೊಳು ತನ್ನ ॥ಪ॥
ತನ್ನ ವಾಮಕರ ಪೀಠ ಪಾತ್ರೆಯೊಳು । ನಿರ್
ಭಿನ್ನ ಭಕ್ತಿಯ ರಸತೈಲ ತೀವಿ
ಸನ್ನುತ ನಡೆನುಡಿ ಭಕ್ತಿವಿಡಿದು । ಸುಪ್ರ
ಸನ್ನ ಪ್ರಕಾಶ ಸತ್-ಕ್ರಿಯಾ ಜ್ಯೋತಿ ॥
ಪರತತ್ವ ಹೃದಯ ಪ್ರಣತಿಯೊಳು । ಷಣ್ಮಂತ್ರ
ದಿರುವೆಂಬ ಸುರಸತೈಲವ ಹೀರುತ
ವರದೃಢ ಚಿತ್ತಭಕ್ತಿಯ ಕೊನೆಯೊಳು । ಲಿಂಗ
ಕಿರಣದೊಬ್ಬುಳಿಯ ಸುಜ್ಞಾನ ಜ್ಯೋತಿ"

■

# ಚಿನುಮಯ ಘನಮತ ಶಿವಯೋಗಿ
# ೧೮೨೮–೧೮೮೮

ಯಾರೀ ತೇಜೋಮೂರ್ತಿ? ಎತ್ತರವಾದ ನಿಲುವು, ದೃಢವಾದ ಕಾಯ, ಪ್ರಭಾಪುಂಜರಂಜಿತವಾಗಿ ಶಿವಭಾವವನ್ನೇ ಸೂಸುವ ಮುಖ, ತ್ರಿಪುಂಡ್ರ ಧಾರಣ, ಕಾಷಾಯವಸನ, ಬೆನ್ನಿನಮೇಲೆ ಬಸವಣ್ಣನವರ ವಚನ ಗ್ರಂಥ–ಬಹು ಭವ್ಯಮೂರ್ತಿ! “ಬಸವಾದಿ ಪ್ರಮಥರಾಚಾರವಿಡಿದು ಭವದೂರನಾಗಿ ಪಾರಮಾರ್ಥದಲ್ಲಿರುವವಗೆ ಆರ ಗೊಡವೆ ಇನ್ನೇನು?” ಎಂದು ಹಳ್ಳಿಯಿಂದ ಹಳ್ಳಿಗೆ ಪಯಣದ ಮೇಲೆ ಪಯಣ ನಡೆಸುತ್ತ ಮರಹಿನಲ್ಲಿ ಮೈಮರೆತು ಜನರನ್ನು ತಮ್ಮ ತತ್ತ್ವ ಪದಗಳಿಂದ ಎಚ್ಚರಿಸುತ್ತ–

“ದೂಷಣೆ ಮಾಡಲದೊಂದೇ–ಜನರತಿ
ಭೂಷಣೆ ಮಾಡಲದೊಂದೇ :
ಈಷಣ ತ್ರಯದಾ ದೋಷವಳಿದು ನರ್
ದೋಷಿಯಾದ ಪರದೇಶಿಗೆ ಜಗದೊಳು”

ಎಂದು ಉಗ್ಘಡಿಸುತ್ತ ಹೊರಟ ಈ ಉಜ್ವಲ ವ್ಯಕ್ತಿ ಯಾರಾಗಿರಬಹುದು ಯೋಗಕಲಾಕುಶಲರಷ್ಟೇ ಅಲ್ಲ, ಕಾವ್ಯಕಲಾಕುಶಲರೂ ಅಹುದೆಂದು ತೋರುತ್ತದೆ. ಅವರ ಸಂದೇಶದ ಸಾರವಾದರೂ ಏನು?

“ಈ ಶಿವಸಮಯ ಮಾನಿಸ ಜನ್ಮವಿ–
ನ್ನೇಸು ಕಾಲಕೆ ಸಿಗದೀ ಸಮಯದೆ ನೀ
ಮೃತ್ಯಂಜಯನಾಗೋ ಎಲೊ ಎಲೊ ಮೃತ್ಯಂಜಯನಾಗೋ
ಮೃತ್ಯುಂಜಯನಾಗತ್ಯುಕ್ತಿಲಿ ಗುರುಪುತ್ರನಾಗಿ ಸಲೆ ಸತ್ಯವಿಡಿದು ನೀ
ಮೃತ್ಯುಂಜಯನಾಗೋ ॥ಪ॥
ಆಲಸ್ಯದಿ ಬೆರೆದು ಸುಮ್ಮನೆ ಕಾಲವನತಿಗಳೆದು
ಕಾಲಕಿಂಕರರಿಗಾಳಾಗದೆ ನಿಜ ಮೂಲ ಮಂತ್ರದೊಳು ಲೋಲನಾಗಿ ನೀ



**ಚಿನುಮಯ ಘನಮಠ ಶಿವಯೋಗಿಗಳು**

ಮೃತ್ಯುಂಜಯನಾಗೋ...?

ಆಶಾಪಾಶವಳಿದು ರಾಗದ್ವೇಷ ವಾಸನಳಿದು
ಸಾಸಿರದಳ ಪದ್ಮಾಸನನಾಗಿಹ ದೇಶಿಕ ಘನಮಠ ವಾಸನೊಳೈದಿ ನೀ
ಮೃತ್ಯುಂಜಯನಾಗೋ...

'ಮೃತ್ಯುಂಜಯನಾಗು !' ಎಂಥ ಸ್ಫೂರ್ತಿದಾಯಕ, ಚೈತನ್ಯದಾಯಕ ಸಂದೇಶ! ಎಲ್ಲರಿಗೂ ಇರುವ ಭಯ ಒಂದೇ–ಮೃತ್ಯವಿನ ಭಯ. 'ಜಾತಸ್ಯ ಮರಣಂ ಧ್ರುವಂ.' ಆ ಮೃತ್ಯುವನ್ನು ಮುಂದಕ್ಕೆ ದೂಡಲು ಮಾನವನು ಮಾಡುವ ಯತ್ನಗಳೆಷ್ಟು? ವೈದ್ಯಶಾಸ್ತ್ರ, ಆರೋಗ್ಯಶಾಸ್ತ್ರ, ಕಾಯಕಲ್ಪ, ಯಂತ್ರ ತಂತ್ರ ಮಂತ್ರ ತಾಯಿತ–

ಆಯ್ಯೊ, ಏನು ಮಾಡಿದರೂ 'ಬೆನ್ನ ಬಿಡುವಳೆ ಮೃತ್ಯು ವ್ಯರ್ಥ ಜೀವಾತ್ಮಾ' ! ಆದರೂ ಮೃತ್ಯುಂಜಯರಾಗಿರೆಂದು ಹೇಳುತಿರುವನಲ್ಲ ಈ ಮಹಾತ್ಮ? ಆಗಬಹುದು, ಮೃತ್ಯಂಜಯನಾಗಬಹುದು. ಹೇಗೆ?

ಏಳಿ ಮನುಜರಿರಾ ಶಿವಲಿಂಗ ಪೂಜೆಯ ಮಾಳ್ಪ
ವೇಳೆಯಾಯಿತು ಮೋಹನಿದ್ರೆಯದು ಸಾಕಿನ್ನು
ಕಾಲಹರನಂ ಭಜಿಸಲಿಷ್ಟಾರ್ಥ ಸಿದ್ಧಿ ನಿಮಗಹುದು ಸದ್ಭಕ್ತಿಯಿಂದ !
ಶಿವಲಿಂಗ ಪೂಜೆ ಮಾಳ್ಪರಿಗೆ ಭವಭಯವಿಲ್ಲ
ಶಿವಲಿಂಗ ಪೂಜೆ ಮಾಳ್ಪರಿಗೆ ಮೃತ್ಯುಗಳಿಲ್ಲ !

ಎಂಥ ಅಭಯವಾಣಿಯಿದು :

"ಶಿವಲಿಂಗ ಪೂಜೆ ಮಾಳ್ಪವ ಶ್ವಪಚನಾದೊಡಂ
ತವನೆ ಮುನಿ ಮುಖ್ಯ , ಶಿವಲಿಂಗ ಪೂಜೆ ಮಾಡದವನೆ
ಭವಿ, ಚಾಂಡಾಲ !"

ಇದು ಶರಣವಾಣಿ–ಆದಿಯಿಂದ

"ಪುಸಿಯಿಂದಲಾಗೆ ಪರಿಹಾಸದಿಂದಾದೊಡಂ
ವ್ಯಸನದಿಂದಾ ಮೋಹ ಭಯದಿಂದಲಾಗೆ ಪರ
ವಶದಿಂದಲಾಗೆ ಶಿವಲಿಂಗಪೂಜೆಯ ಮಾಳ್ಪ ಮಾನವರ್ ಜಗದಿ ಮತ್ತೆ
ನಿಶಿದಿವದೊಳನುಗೈದ ದೋಷವದು ತೊಲಗಿ, ಪು–
ಣ್ಯ ಶರೀರಗಳುಮೆನಿಸಿ....ಅಸಮ ಕೈಲಾಸ
ದೊಳಿರ್ಪರಾನಂದಿಂದೆ ನಿಶ್ಚಿಂತರಾಗಿ !"

ಇದು 'ಅಭೀಃ' ಅಭೀಃ ಎಂಬ ಅಮೃತವಾಣಿ ! ಏಳಿರಿ ಎಚ್ಚರಾಗಿರಿ, ಕಾಲ ಕಳೆಯದಿರಿ–ಇಂದು ನಾಳೆಂದು :

ದಿನವಿಂದೆ ಶಿವಲಿಂಗ ಕರುಣಮಂ ಪಡೆವಂಗೆ
ದಿನವಿಂದೆ ದುಷ್ಕರ್ಮ ಪಾಶಮಂ ಕಡಿವಂಗೆ
ದಿನವಿಂದೆ ಸದ್‌ಭಕ್ತಿ ಸಾಮ್ರಾಜ್ಯವಾಳ್ಪ ಸುವ್ರತವ ನೆಡೆವಿಡಿವವಂಗೆ
ದಿನವಿಂದೆ ಹಣೆಯ ದುಲಿಖಿತಮಂ ತೊಡೆವಂಗೆ
ದಿನವಿಂದೆ ಚಾಂಚಲ್ಯ ಮನವ ನೆರೆ ತಡೆವಂಗೆ
ದಿನವಿಂದೆ ತನ್ನ ತಾನರಿದು ಭೋಂಕನೆ ಪಾರಮಾರ್ಥದಿಂ ನಡೆವವಂಗೆ !

ಈ ವಿವೇಕವಾಣಿ, ಗಂಭೀರ ಸ್ವರ, ಕನ್ನಡ ನಾಡಿನ ಹಳ್ಳಿಹಳ್ಳಿಗಳಲ್ಲಿ ಪ್ರತಿಧ್ವನಿಸುತ್ತಿತ್ತು–ಕೇವಲ ಅರವತ್ತು ವರ್ಷಗಳ ಹಿಂದೆ. ಈಗಲೂ ಅವರ ಹಾಡುಗಳು ಹಳ್ಳಿಗರ ಹೃದಯಗಳಲ್ಲಿ ಕುಣಿದಾಡಿ ನಾಲಗೆಗಳ ಮೇಲೆ ನಲಿದಾಡುತ್ತಲಿವೆ. ಆ ಭವ್ಯಮೂರ್ತಿಯನ್ನು ಕಣ್ಣಾರೆ ಕಂಡವರು ಕೆಲವರು ಇನ್ನೂ ಬದುಕಿದ್ದಾರೆ. ಘನಮಠದಪ್ಪಗಳೆಂದು ಕನ್ನಡನಾಡಿನ ಹಳ್ಳಿಗರ ಹೆಮ್ಮೆಯ ಗುರುಗಳಾಗಿರುವ ನಾಗಭೂಷಣ ಘನಮಠದಾರ್ಯರು ಹುಟ್ಟು ಕನ್ನಡಿಗರಲ್ಲ, ಅವರು ಹುಟ್ಟಿದುದು ಕನ್ನಡನಾಡಿನಲ್ಲಲ್ಲ ! ಇದು ಅಚ್ಚರಿಯಲ್ಲವೆ? ಅಹುದು, ಇದು ಅವರ ಜೀವನದಲ್ಲಿ ನಡೆದ ಅಚರಿ.

ಇಂದಿನ ಆಂಧ್ರಪ್ರದೇಶದ ಅತ್ರಾಫ್‌ಬಲ್ದಾ (ಈಗ ಹೈದರಾಬಾದು) ಜಿಲ್ಲೆಯಲ್ಲಿ ದೋರ್ವಾಡ ಎಂಬ ಹಳ್ಳಿಯಲ್ಲಿ ಕ್ರಿ.ಶ. ೧೮೨೮ರಲ್ಲಿ ಶ್ರೀ ನಾಗಭೂಷಣರು ಜನಿಸಿದರು. ತಂದೆ ಜಂಗಮಾಗ್ರಗಣ್ಯರಾದ ವೀರಯ್ಯನವರು, ತಾಯಿ ವೀರಾಂಬೆ. ಇವರಿಗೆ ವೀರವಿರಾಗಿ ನಾಗಭೂಷಣರು ಮಗನಾಗಿ ಹುಟ್ಟಿದುದು ಸಹಜವೇ.ಏಳನೆಯ ವರ್ಷದಲ್ಲಿ ದೀಕ್ಷೆಪಡೆದು ಹನ್ನೆರಡನೆಯ ವರ್ಷದಲ್ಲಿ "ಅನಾದಿ ವೃಷಭನ ಸ್ಮರಿಸಿ ಪ್ರಸನ್ನತೆಯ ಮಾಡಿಕೊಂಡು ಅಂದಿನನಿಮಿಷಂಗೆ ಲಿಂಗವನಿತ್ತ ಗುಹೇಶ್ವರ–ನೀತನೆಂದರಿತಾತನಿಂದನುಗ್ರಹಮಂ" ಪಡೆದರು೧. ೨೧ ವರ್ಷಗಳವರೆಗೆ ಗೃಹಸ್ಥರಾಗಿ ಬಾಳಿದರು. ಆಮೇಲೆ "ಅಖಿಳ ಜಂಜಡವ ಪರಿದೊತ್ತಿ ಭುವನದೊಳು ಭಕ್ತರೆಲ್ಲಿರ್ಪರಲ್ಲಲ್ಲಿ ಸಂಚರಿಸ" ತೊಡಗಿದರು.

"ಶ್ರೀಕಂಠಸಮಯಾಬ್ಧಿಕೋಕುನದಪ್ರಿಯ"ನಾದ ಬಸವಣ್ಣನವರ ದಿವ್ಯ ಜೀವನವು ಅವರ ಇರವನ್ನೆಲ್ಲ ಇಂಬುಗೊಂಡುದರಿಂದ ಅವರು ಕಲ್ಯಾಣದ ಸುತ್ತು ಮುತ್ತಲಿನ ಕಲಬುರುಗಿ, ವಿಜಾಪುರ, ರಾಯಚೂರು ಜಿಲ್ಲೆಗಳಲ್ಲಿಯೇ ಹೆಚ್ಚಾಗಿ ಸಂಚರಿಸಿದರು "ಕಲ್ಯಾಣಮಂಡಲದ ನಾಲ್ವತ್ತೆಂಟು ಗಾವುದ ವಿಸ್ತೀರ್ಣವಾಗಿ ಪೂರ್ವಪಶ್ಚಿಮ ಸಮುದ್ರದವರೆಗೂ ಭಕ್ತ ಜನೋಪಕಾರಾರ್ಥವಾಗಿ ಸದ್ಬೋಧೆಯಂ ಬೋಧಿಸುತ್ತ ಸ್ವತಂತ್ರದಿಂ ಚರಿಸಿ"ದರೆಂದು ಅವರ ಕರಕಂಜ ಸಂಜಾರತೂ ಅವರನ್ನು 'ನೂತನಲ್ಲಮ ಪ್ರಭುದೇವರವತಾರ' ಎಂದು ನಂಬಿದವರೂ ಆದ ಸಿದ್ಧರಾಮಪ್ಪ ಕುನ್ನಾಳರು ಕೃಷಿಜ್ಞಾನದೀಪಿಕೆಯಲ್ಲಿ ತಿಳಿಸುತ್ತಾರೆ.

---

೧ ಸಿದ್ಧರಾಮಪ್ಪ ಕುನ್ನಾಳ ವಿರಚಿತ ಕೃಷಿಜ್ಞಾನಪ್ರದೀಪಿಕೆ. ಶ್ರೀ ಜಡೆಯ ಸ್ವಾಮಿಗಳು ಅನುಗ್ರಹಿಸಿದರೆಂದು ಗುರುಲಿಂಗ ಪಾಖ್ಯ ಪ್ರಣೀತ ಪುರಾಣದಲ್ಲಿಯೂ 'ಊರೊಳಿಹ ಘನಮಠದ ಚರವರ್ಯ ಸದ್ಗುರು' ಎಂದು ಮಸ್ಕಿಬಸವಪ್ಪಶಾಸ್ತ್ರಿ ಪ್ರಣೀತ ಪುರಾಣದಲ್ಲಿಯೂ ಹೇಳಿದೆ.

ಆಂಧ್ರವನ್ನು ಬಿಟ್ಟು ಕರ್ನಾಟಕದಲ್ಲಿ ಕಾಲಿಟ್ಟೊಡನೆಯೇ ಶ್ರೀ ನಾಗಭೂಷಣರಿಗೆ ಕನ್ನಡವನ್ನು ಕಲಿಯುವ ಅಪೇಕ್ಷೆಯುಂಟಾಯಿತು. ಯರಗೋಳ ಮಠದ ರೇವಣಸಿದ್ಧಯ್ಯನೆಂಬವರಲ್ಲಿ ಕೆಲವು ದಿನ ಕನ್ನಡ ಕಲಿತರೆಂದು ಹೇಳುತ್ತಾರೆ. ಲಿಂಗೈಕ್ಯ ಬಸವಪ್ಪಶಾಸ್ತ್ರಿಗಳು ಮಸ್ಕಿ ಬರೆದಿರುವ ಶ್ರೀ ನಾಗಭೂಷಣ ಶಿವಯೋಗಿಗಳ ಪುರಾಣದಲ್ಲಿ ಈ ವಿಷಯ ಉಲ್ಲಿಖಿತವಾಗಿದೆ.

"ತೆಲುಗ ದೇಶದಿ ಹುಟ್ಟಿ ಬಲುಸೊಗಸಿನಿಂ ಬಾಳಿ
ತಿಳಿಯ ಕನ್ನಡದ ನುಡಿಗಳನಾಡುವ ಜನರ
ಬಳಕೆ ಬಂದವರಾಡುತಿಹ ಕನ್ನಡದ ನುಡಿಗಳು....
ತಿಳಿದೊಂದು ತಿಳಿಯದಂತಾಗಿರಲು
ಬಲುಕೊರತೆಯೊದಗೆ...ಯರಗೋಳದಾ
ಚೆಲುವ ಮಠಕೈದಿ ಮಠದೊಡೆಯ ರೇವಣಸಿದ್ಧಪಾರ್ಯ
ನೊಲುಮೆಯೊಳು ತಾನು...
ನೇಮದಿಂ ಕನ್ನಡದೊಳೋದು ಬರೆಹವ ಕಲಿಯು
ತಾ ಮಹಾಶರಣರ ಪುರಾಣಗಳ ಸಾರವನು ತಿಳಿದ...
ಇಂತು ಕೆಲದಿನಗಳಲ್ಲಿದ್ದು ಕನ್ನಡವಂ ಸ
ಮಂತು ಕಲಿಯಲು ತನ್ನ ಸತ್ಕ್ರಿಯಾ ಫಲದಿಂದ–
ಲಂತರಂಗದೊಳೊಂದು ವಿಧದ ಕವಿತಾಶಕ್ತಿಯುಂಟಾದುದು
...ಹರಗುರು ಭಕ್ತಿ ಪರವಾದ ಪದವನೊಂದೊಂದ ರಚಿಸುತಲಿದ್ದ
ಈ ತೆರದೊಳಿರಲು ಬಸವೇಶ್ವರನ ವಚನ
ದಾ ತಿರುಳನೊಲಿದೊಮ್ಮೆ ಸಾಂಗವೆನೆ ತಿಳಿದು ಪ್ರೇ
ಮಾತಿಶಯದಿಂದಲಾ ವಚನವಂ ಸಂಗ್ರಹಿಸಿ ಬೆನ್ನಿನೊಳು ಧರಿಸುತಲಿ
ತಾ ತೆರಳಿದಲ್ಲಿ ಕುಳಿತಲ್ಲಿ ತದ್ಗ್ರಂಥವಂ
ಸೈತಿರದೆ ಬಿಚ್ಚಿನೋಡುವನು ಸುಜನರು ಬಂದ
ರೋತು ಮೆಲ್ನುಡಿಯಿಂದಲದರ ಸುವಿಚಾರಮಂ ತಿಳಿವಂತೆ ಪೇಳುತಿಹನು॥"

ಘನಮಠ ಶಿವಯೋಗಿಗಳ ಕನ್ನಡದ ಮೇಲಿನ ಮಮತೆ, ಬಸವಣ್ಣನವರ ವಚನಗಳ ಮೇಲಿನ ಭಕ್ತಿ ಇಂದಿಗೂ ಅನುಕರಣೀಯವಾಗಿವೆ. ತೆಲುಗರಿಗೂ ಕನ್ನಡ ಕಲಿಯಹಚ್ಚಿದ ಬಸವಾದಿ ಪ್ರಮಥರು ಇಲ್ಲಿ ಜನಿಸದೆ ಹೋಗಿದ್ದರೆ ಕನ್ನಡವುಇನ್ನೂ ಎಷ್ಟು ಕರಿಗಿಹೋಗುತ್ತಿತೋ ಏನೋ !

ಕಲಬುರಗಿ, ಸೊನ್ನಲಾಪುರ, ಬೆಂಡೇಬೆಂಬಳಿ, ಗೂಗಲ್ಲು, ಬಿಜಾಸ್ಪುರ, ಚಿತ್ರಾಲಿ, ಗೋನವಾರ, ಸಂಗಮೇಶ್ವರ, ತಾಳಿಕೋಟೆ, ಬಾಗೇವಾಡಿ, ಮುದ್ದೇಬಹಾಳ, ಮುದಗಲ್ಲು, ಲಿಂಗಸುಗೂರು, ಚಿಂಚೋಳಿ, ನಾರಾಯಣಪೇಟೆ, ನೀರಡಗುಂಭ, ಜಾಲಹಳ್ಳಿ ಹೇರೂರು, ರೊಟ್ನಡಗಿ, ಬಳ್ಳಾರಿ, ಬಾಗೇವಾಡಿ, ಕುಂಟೋಜಿ, ಮದರಿ, ತವಡಿಮುಟ್ಟಿ ಬಸರಕೋಡಳ, ಬೆಳವಾಟ, ಹುನಗುಂದ, ಇಲುಕಲ, ಮೊದಲಾದ ಗ್ರಾಮಗಳಿಗೆ ಶ್ರೀ ಘನಮಠರು ಹೋದ ಉಲ್ಲೇಖ ಸಿಕ್ಕುತ್ತವೆ. ಎಲ್ಲಿಗೆ ಹೋದರೂ ಅವರ ನಿತ್ಯದ ದಿನಚರಿ ಒಂದೇ–ಶಿವಾರ್ಚನೆ, ಜಂಗಮದಾಸೋಹ, ಶಾಸ್ತ್ರಧ್ಯಯನ, ವಚನಗ್ರಂಥವ್ಯಾಸಂಗ, ಜನರಿಗೆ ಧರ್ಮ, ನೀತಿ, ಭಕ್ತಿಜ್ಞಾನ, ವೈರಾಗ್ಯಗಳ ಬೋಧೆ, ಭಕ್ತಿಗೀತೆಗಳ ರಚನೆ, ಪುರಾಣ ಪ್ರವಚನ ಪುರಾಣ ಹೇಳಿ, ಪ್ರವಚನ ಮಾಡಿ, ಪದಪದ್ಯಗಳನ್ನು ರಚಿಸಿ ಹಾಡಿ ಹಗಲಿರುಳು ಬಿಡುವಿಲ್ಲದಂತೆ ಸಮಾಜದಲ್ಲಿ ಭಕ್ತಿ ಬೀಜವನ್ನು ಬಿತ್ತಲು ಹೆಣಗಿದರು. ಮರುಭೂಮಿಯಲ್ಲಿ ಬಿದ್ದ ಬೀಜದಂತೆ ಆ ಭಕ್ತಿ ಬೀಜವು ಕೆಲವೆಡೆ ಫಲಿಸದಿರಲು ಅವರ ಹೃದಯ ಆಗಾಗ ನೊಂದಿರಬೇಕು. "ನರರಿಗೆಂತಹುದಯ್ಯ ಹರಭಕ್ತಿ" ಮುಂತಾದ ಹಾಡುಗಳಲ್ಲಲ್ಲದೆ ಕೃಷಿ ಜ್ಞಾನ ಪ್ರದೀಪಕೆಯಲ್ಲಿಯೂ ಇದಕ್ಕೆ ಆಧಾರ ದೊರೆಯುತ್ತವೆ.

ಘನಮಠದಾರ್ಯರಿಗೆ ಬಸವಣ್ಣನವರಲ್ಲಿ ನಿಸ್ಸೀಮ ಭಕ್ತಿ. ಬಸವಣ್ಣನವರನ್ನು ಎಷ್ಟು ಸ್ತುತಿಸಿದರೂ ಅವರಿಗೆ ತೃಪ್ತಿಯಿಲ್ಲ. 'ಸಮಾನ ದೈವವದಾರೋ ಬಸವ ನಿನ್ನ ಸಮಾನ ದೈವವದಾರೋ "ಶಿವನೆ ಬಸವಂ ಬಸವನೆ ಶಿವ' ಹರಿನಿಂದಲಧಿಕ ಸದ್ಗುರು ಬಸವ' 'ಪುರಾರಿ ಹೃದಯದಿ ವಿರಾಜಿಸುವ ಬಸವ' 'ಇನ್ನಂಜೆ ಭವಭಯಕ್ಕಂಜೆ ನಾಂ ಗುರುಬಸವಾ'– ಹೀಗೆ ಹಾಡಿದ್ದೇ ಹಾಡಿದ್ದು. ಈ ಬಸವ ಭಕ್ತಿ ಅವರನ್ನು ಎಲ್ಲ ಅಡೆತಡೆಗಳಿಂದ ಪಾರುಮಾಡಿತು. ಕಲಬುರಿಗಿ ಜಿಲ್ಲೆಯ ಚಿಂಚೋಳಿಯಲ್ಲಿ ಬಸವಪುರಾಣ ಸಮಾಪ್ತಿಯ ಮೆರವಣಿಗೆಯ ಕಾಲಕ್ಕೆ ಅಡ್ಡಿ ಆತಂಕಗಳು ಬಂದಾಗ ನಿಂತಲ್ಲಿಯೆ "ಬಸವ ಪೂರ್ಣಸಶಿವ" ಎಂಬ ಹನ್ನೊಂದು ನುಡಿಯ ಶಕ್ತಿಯುಕ್ತವಾದ ಸ್ತೋತ್ರವನ್ನು ರಚಿಸಿ ಹಾಡಿದರು. ಅಡ್ಡ ತಂದೊಡ್ಡಿದವರಿಗೆ ಮತಿಭ್ರಮೆಯಾಯಿತಂತೆ. ಅವರು ಶರಣುಬಂದರಂತೆ. ಘನಮಠದಾರ್ಯರು ಅವರಿಗೆ ಮತ್ತೆ ಸನ್ಮತಿಯನಿತ್ತು ಸದ್ಗತಿಯನ್ನು ಕರುಣಿಸಿದರಂತೆ. ಎಲ್ಲರೂ ಸೇರಿ ಮೆರವಣಿಗೆಯನ್ನು ಹುರುಷಿನಿಂದ ಸಾಂಗಗೊಳಿಸಿದರಂತೆ. ವಿಜಾಪುರ ಜಿಲ್ಲೆಯ ಕುಂಟೋಜಿಯಲ್ಲಿ ತಾವೇ ಆನಂದದಿಂದ ಕುಣಿಕುಣಿದು ಹೇಳಿದ ೬೩ ಪುರಾತನರ ಪುರಾಣದ ಪರಿಸಮಾಪ್ತಿಯ ಸ್ಮಾರಕವಾಗಿ ೬೩ ಮಂಟಪಗಳ ನಿರ್ಮಾಣಕಾರ್ಯ ನಡೆದಾಗ ಹಣಕ್ಕಾಗಿ ಹೌಹಾರಿದವರಿಗೆ "ಭಕ್ತಿಂಗೆ ಬಡತನವೇ" ಎಂದು ಧೈರ್ಯದುಂಬಿ ಆ ಕಾರ್ಯವನ್ನು ಪೂರ್ಣಗೊಳಿಸಿದರಂತೆ.

ಸೊಲ್ಲಾಪುರದಲ್ಲಿ ಸಿದ್ಧರಾಮೇಶ್ವರನ ದರ್ಶನಕ್ಕೆ ಹೋದಾಗ ಗುಡಿಯ ಪೂಜಾರಿಗಳು ಯಾವನೋ ಒಬ್ಬ ಬೈರಾಗಿಯೆಂದು ಬಗೆದು ಗುಡಿಯ ಕದ ತೆರೆಯದಿರಲು ಮುಚ್ಚಿದ ಬಾಗಿಲ ಮುಂದೆಯೇ ನಿಂತು ತಮ್ಮ "ಸಿದ್ಧರಾಮ ಹೋ ನಿಜಗುರು ಸಿದ್ಧರಾಮ ಹೋ" ಎಂಬ ೪೧ ನುಡಿಗಳ ಸ್ತೋತ್ರವನ್ನು ಹಾಡಿ ಸಿದ್ಧರಾಮನನ್ನು ಒಲಿಸಿಕೊಂಡರಂತೆ.

ದೇವದುರ್ಗ ತಾಲ್ಲೂಕಿನ ಜಾಲಿಹಾಳಿನಲ್ಲಿ ವೀರಭದ್ರಶಾಸ್ತ್ರಿಗಳೆಂಬುವವರು ವಚನಶಾಸ್ತ್ರದ ಬಗ್ಗೆ ಅಪಹಾಸ್ಯ ಗೈದರು. ಅವರಿಗೆ ರೋಗವೊಂದು ಉತ್ಪನ್ನವಾಯಿತು. ಆ ರೋಗ ನಿವಾರಣೆಗಾಗಿ ಘನಮಠರ ಸಲಹೆಯಂತೆ ಶಾಸ್ತ್ರಿಗಳು ಪುರಾತನರ ಪುರಾಣವನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿದರು. ರೋಗಮುಕ್ತರಾದರು.

ಘನಮಠದಾರ್ಯರ ವ್ಯಕ್ತಿತ್ವದ ಇನ್ನೊಂದು ಮುಖ ಅವರಿಗೆ ಒಕ್ಕಲಿಗರ ಬಗ್ಗೆ ಇದ್ದ ಅಸೀಮವಾದ ಅಕ್ಕರತೆ. ಒಕ್ಕಲುತನದ ವಿಶೇಷ ಜ್ಞಾನ ಅವರಿಗಿದ್ದಿತೆಂದು ತೋರುತ್ತದೆ. ಅನೇಕ ಕಡೆಗೆ ಅವರು ರೈತರಿಗೆ ಬಾವಿಗಳನ್ನು ತೋಡುವಲ್ಲಿ ಸೂಕ್ತ ಸಲಹೆಗಳನ್ನಿತ್ತಿದ್ದಾರೆ. ತೆಲುಗು ದೇಶದವರಾದ ಅವರಿಗೆ ಕೆರೆ ಬಾವಿ ಒಕ್ಕಲುತನಗಳ ಬಗ್ಗೆ ಸಹಜವಾಗಿಯೇ ಸಾಕಷ್ಟು ಜ್ಞಾನವಿರಲೇಬೇಕು. ಬಳ್ಳಾರಿಯಲ್ಲಿ ಸಕ್ಕರೆ ಕರಡೆಪ್ಪನವರ ಆದರ ಸತ್ಕಾರ ಸ್ವೀಕರಿಸಿ ಅವರು ಕುಂಟೋಜಿಯ ಕಡೆಗೆ ಹೊರಟಾಗ ಹಾದಿಯಲ್ಲಿ ಇಂದ್ರಾಳೆಂಬ ಗ್ರಾಮ ಬಂದಿತು. ಅಲ್ಲಿ ಸುತ್ತಲೂ ಸವುಳುಭೂಮಿ. ಆ ಊರಿನಲ್ಲಿ ಸವಿ ನೀರೆಂದರೆ ಬಂಗಾರವಾಗಿಬಿಟ್ಟಿದ್ದಿತು. ಆ ಊರಿನ ಬಡ ಭಕ್ತರ ಮೊರೆಯನ್ನು ಕೇಳಿ ಕರುಣ ಹುಟ್ಟಿ ಘನಮಠರು ಆ ಊರ ಸುತ್ತಲೆಲ್ಲ ತಿರುಗಾಡಿ ಅವರಿಗೆ ಸವಿ ನೀರು ಬೀಳುವ ಸ್ಥಳವೊಂದನ್ನು ತೋರಿಸಿದರು. ಅಲ್ಲಿ ಬಾವಿ ಅಗೆಯಲು ಸವಿ ನೀರಿನ ಸೆಲೆ ಚಿಮ್ಮಿತು–ಎಲ್ಲೆಲ್ಲೂ ಆನಂದ ಹೊಮ್ಮಿತು. ಇದೇ ರೀತಿ ಕುಂಟೋಜಿಯಲ್ಲಿ ಸಜ್ಜನರ ಚೆನ್ನಪ್ಪನೆಂಬಾತನು ಬಾವಿಯನ್ನು ತೋಡಿ ನೀರು ಬೀಳದೆ ಮೊರೆ ಹೋಗಲು

> ಘನಮಠೇಶನು ತೆಗೆದ ಬಾವಿಯನು ಬಿದ್ದ ಮ–
> ಣ್ಣನು ನೋಡಿ ಹೊಲದ ಕಡೆಗೇತಕ್ಕೆ ತೋಡಿದಿರಿ
> ಘನವಪ್ಪ ಜಲವಿರುವ ತಾಣವನು ಹೊಲದ ಮಧ್ಯದೊಳು
> ತೋರಿದ್ದೆವಾವು
> ಅನುನಯದೊಳಲ್ಲಿ ತೋಡಿಸದೆ ಮತ್ತಿತ್ತ ಬರಿ
> ದಣುವಿಕೆಯ ಮಾಡಿಕೊಂಡಿರುವಿರಿನ್ನೇನಿರಲಿ
> ಜನರ ಕೆಲವರನಿಲ್ಲಿ ಬಿಟ್ಟು ಭೋಜನದ ಸಾಹಿತ್ಯವಂ ತಹುದೆಂದನು ॥

ಅದಕವರು ಹಿಗ್ಗಿ ಗ್ರಾಮಕೆ ಪೋಗಿ ಬಹು ವಿಧದ
ಪದಪದಾರ್ಥಗಳ ಸಂಗ್ರಹಿಸಿಕೊಳುತಿರಲಿತ್ತ
ಬುಧರೆತಿರೆಯನಾದ ಘನಮಠದೇವನಲ್ಲಿದ್ದ ಜನವ ಬಾವಿಯೊಳಿಳಿಸುತ
ಉದಯಾದಿ ಮೂರು ದಿಕ್ಕುಗಳನ್ನು ಬಿಟ್ಟುತ್ತ
ರದೊಳು ತೆಳಗಿಪ್ಪೊಂದು ಗುಂಡನುಂ ತೆಗೆಯಿಸಿದ
ನದು–ಭುತವೆನಲ್ ಜಲವು ಸಳಸಳನೆ ಸುರಿದು
ಬರೆ ಜನರು ಮೇಲಕೆ ಬಂದರು ॥

ಚಿನುಮಯ ಘನಮಠ ಶಿವಯೋಗಿಗಳ ಕನ್ನಡಪ್ರೇಮ, ಕೃಷಿಪ್ರೇಮ ಕನ್ನಡಿಗರಿಗೆ ಕೊನೆಯವರೆಗೂ ದಾರಿ ದೀಪಗಳು. ಕನ್ನಡಿಗರು ಕನ್ನಡದಲ್ಲಿಯೇ ತಿಳಿದು ತಮ್ಮೊಳು ತಮ್ಮ ಮೋಕ್ಷನ ಗಳಿಸಿಕೊಳ್ಳಲನುವಾಗುವಂತೆ 'ಭಕ್ತಿಸುಧಾಸಾರ'ವನ್ನು ಬರೆದು ಹೋಗಿದ್ದಾರೆ; ಕನ್ನಡಿಗರು ಕೃಷಿಜ್ಞಾನ ಸಂಪನ್ನರಾಗಿ ಸುಖ ಶಾಂತಿಗಳಿಂದ ಬಾಳಲೆಂದು 'ಕೃಷಿಜ್ಞಾನದೀಪಿಕೆ'ಯನ್ನು ತಮ್ಮ ಶಿಷ್ಯ ಸಿದ್ಧರಾಮಪ್ಪ ಕುನ್ನಾಳರಿಂದ ತಾವೇ ವಿಷಯಪರಿಜ್ಞಾನವಿತ್ತು ಬರೆಸಿ ಹೋಗಿದ್ದಾರೆ. ಒಮ್ಮೆ ಕುಂಟೋಜಿಯಲ್ಲಿ ಮಳೆಗಾಲದಲ್ಲಿ ಮಳೆಯಾಗದಿರಲು ಒಣ ನೆಲದಲ್ಲಿಯೆ ಬೀಜಗಳನ್ನು ಬಿತ್ತಿಸಿ ಬೆಳೆಯುವಂತೆ ಮಾಡಿದ ಈ ಮಹಾತ್ಮರು ಒಕ್ಕಲಿಗರಿಗೆ ಅಕ್ಕರೆಯ ಗುರುಗಳಾದುದು ಅದಾವ ಅಚ್ಚರಿ !

ಕುಂಟೋಜಿಯುಲ್ಲಿರಲು ಆರಂಭಿಸಿ ಬಹಳ ದಿನಗಳಾದುವೆಂದು ವೈರಾಗ್ಯಶೀಲರಾದ ನಾಗಭೂಷಣರು ಅಲ್ಲಿಂದ ಹೊರಟು ಅಲ್ಲಲ್ಲಿ ಆಶ್ರಿತಭಕ್ತರನ್ನು ಅನುಗ್ರಹಿಸಿ ಲಿಂಗಸುಗೂರ ತಾಲ್ಲೂಕಿನ ಸಂತೆಕೆಲ್ಲೂರಿಗೆ ಬರುವರು. ಅಲ್ಲಿ ಅವರಿದ್ದ ಕಾಲ ಅತ್ಯಲ್ಪ. ಕೊನೆಯ ದಿನ ನೀರಡಗುಂಭದ ಚೆನ್ನಬಸವಸ್ವಾಮಿಗಳಿಗೂ ಅವರಿಗೂ ಶಂಕರಪ್ಪಗೌಡರ ಮನೆಯಲ್ಲಿ ಕರುಣಪ್ರಸಾದ ಪಡೆದುಕೊಳ್ಳುವ ಸಮಯದಲ್ಲಿ ವಾದ ನಡೆಯಿತು. ಘನಮಠರು ಕೊನೆಗೆ ಕೊನೆಗೆ 'ವಾದದ ನಿರ್ಣಯವು ಕೈಲಾಸದಲ್ಲಿಯೇ ಆಗಲಿ–ಶಂಕರಪ್ಪಗೌಡರು ಸಾಕ್ಷಿ ಹೇಳಲಿ' ಎಂದು ಹೇಳಲು ಚೆನ್ನಬಸವಸ್ವಾಮಿಗಳು ಒಡನೆಯೇ ಲಿಂಗೈಕ್ಯರಾದರಂತೆ. ಅವರು ಕೈಲಾಸಕ್ಕೆ ಹೋದರು, ನಾವೂ ಅಲ್ಲಿಗೆ ಹೋಗುವೆವೆಂದು ಘನಮಠರೂ ಲಿಂಗೈಕ್ಯರಾದರಂತೆ–ಶಾಲಿವಾಹನ ಶಕ ೧೮೦೨ರ ಪುಷ್ಯ ಶು. ೪ ಬುಧವಾರ (೧೮೮೦)ದಂದು. ೧

ಹೀಗೆ ಶಿವಭಕ್ತಿ, ಶಿವಜ್ಞಾನ, ಶಿವಾನುಭವ, ಶಿವಾಚಾರಗಳ ಪ್ರಚಾರಕ್ಕಾಗಿ ಮೂವತ್ತು ಮೂವತ್ತೈದು ವರುಷಗಳವರೆಗೆ ಅವಿಶ್ರಾಂತವಾಗಿ ದುಡಿದ ಘನಮಠದ

ಶಿವಯೋಗಿಗಳು ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿ ಮನದಲ್ಲಿ ಮನೆ ಮಾಡುತ್ತಾರೆ. ಸಂದರ್ಭ ಸನ್ನಿವೇಶಗಳಿಗನುಗುಣವಾಗಿ ಭಾವೋದ್ರೇಕದಿಂದಲೇ ಹೊರಹೊಮ್ಮಿರುವ ಅವರ ಭಕ್ತಿಗೀತೆಗಳಲ್ಲಿ ಅವರ ಅಂತರಂಗ ಮಿಡಿಯುತ್ತಿದೆ. ಬಹಿರಂಗದ ಕುರುಹಾಗಿ ಕುಂಟೋಜಿಯಲ್ಲಿ ಅವರ ಪಾದುಕೆಗಳೂ ಸಂತೆಕೆಲ್ಲೂರಿನಲ್ಲಿ ಅವರ ಗದ್ದುಗೆಯೂ ಉಳಿದಿವೆ.

ಹೊತ್ತಿರಲಿಕೆ ಊರಿಗೆ ಸೇರೋ । ದಾರಿ
ಕತ್ತಲೆಯೊಳಗರುಪುವರಾರೊ–

ಎಂದು ಹಾಡಿದ ಅವರು ಹೊತ್ತಿರುವುದರೊಳಗಾಗಿಯೇ ತಮ್ಮ ಊರನ್ನು ಸೇರಿದರು!

ಸಾಗರಕೆ ಸಮನಾದ ಗಂಭೀರಗುಣನ ಮಿಗೆ
ತ್ಯಾಗದೊಳು ಸುರಕುಜದ ಪೆರ್ಮೆಯಂ ಧರಿಸಿದನ
ಭೂಗಗನದೊಳು ತುಂಬ ಕೀರ್ತಿಯುಳ್ಳವನ ಗಿರಿರಾಜನಂಕ ಚಲನ
ಭೋಗಸಂತಾನದ ವಿರಾಗದಿಂದ ಶೋಭಿಪನ
ಶ್ರೀಗುರು ಹರಾರ್ಚನ ನಿಮಗ್ನ ಸನ್ಮಾನಸನ
ನಾಗಭೂಷಣನೆಂಬ ಯೋಗಿವರನಡಿಗಳನು ನಂಬಿ ನೆನೆಯುವೆನನುದಿನ॥

–ಲಿಂ. ಮಸ್ಕಿ ಬಸವಪ್ಪಶಾಸ್ತ್ರೀ

ಅಡಿದಾವರೆಯನಿಡುತ್ತೀ
ಪೊಡವಿಯ ಪಾವನವನೆಸಗಿ ಸಲೆಮಿಸುಪಜಸಂ
ಬಡೆದೆಸೆವ ಮಹಿತ ಸಾಕ್ಷಾ
ನ್ಮೃಡನೆನಿಸುವ ಘನಮತಾರ್ಯ ಜಯಗಣವರ್ಯ ॥

–ಉಂತಕಲ್ಲು ಶಿಖಾಮಣಿ ಮಠದ ವಿರೂಪಾಕ್ಷಶಾಸ್ತ್ರಿಗಳು

■

೧ ಶಾಲಿವಾಹನ ಶಕ ೧೮೦೭ ಪಾರ್ಥಿವ ಸಂವತ್ಸರದ ಪುಷ್ಯ ಶು । ೫ ಗುರುವಾರ ರಾತ್ರಿ ಕಡೆಯ ಜಾವದಲ್ಲಿ–ಎಂದು ಮಸ್ಕಿ ಬಸವಪ್ಪಶಾಸ್ತ್ರಿಗಳು ಕಂಡುಹಿಡಿದಿದ್ದಾರೆ, ಅವರು ಬರೆದ ಪುರಾಣದ ಪ್ರಸ್ತಾವನೆಯಲ್ಲಿ.

# ಜಂಗಮಜ್ಯೋತಿ ಮುರುಘೇಂದ್ರ ಮಹಾಶಿವಯೋಗಿಗಳು ಕ್ರಿ.ಶ. ೧೮೩೬–೧೯೨೧

ಭವರೋಗ ವೈದ್ಯನಂ ಶಿವಯೋಗ ಹೃದ್ಯನಂ
ಶವಲಿಂಗ ಪೂಜಕನ ನವಲಿಂಗ ಯೋಜಕನ
ಭುವನಸುಖಕಾರಕನ ಭುವನಾಳಿ ತಾರಕನ ದುರಿತಪರಿಹಾರಕನ ನಾಂ
ಶಿವಯೋಗಿಕುಲಮಣಿಯ ಶಿವನ ಚಿಂತಾಮಣಿಯ
ಶಿವಕಾರ್ಯಧುರ್ಯನಂ ಭುವನಗುರುವರ್ಯನಂ
ಶಿವಭಕ್ತ ಸುರತರುವ ಶರಣರಿಷ್ಟವನೆರೆವ ಮುರುಘೇಶ ಗುರುವನುತಿಪೆ॥
(ಪಂಡಿತ ಸದಾಶಿವ ಕವಿಕೃತ ಶಿವಯೋಗೀಶ್ವರ ಚಾರಿತ್ರದಿಂದ)

ಶರಣವಂಶತರಂಗಿಣಿಯು ಇಂದಿಗೂ ಅವಿಚ್ಛಿನ್ನವಾಗಿ ಹರಿಯುತ್ತಲೇ ಇದೆಯೆಂಬುದಕ್ಕೆ ಶಾಲಿವಾಹನ ಶಕೆ ೧೭೫೮ರಿಂದ ೧೮೪೩ರವರೆಗೆ ಪ್ರಮಥಾಚಾರದ ಪರಂಜ್ಯೋತಿಸ್ವರೂಪವಾಗಿ ಪ್ರಕಾಶಿಸಿದ ಪ್ರಣವಸ್ವರೂಪಿ ಮುರುಘೇಂದ್ರ ಮಹಾಶಿವಯೋಗಿಗಳೂ ಅವರ ಕರಕಂಜಸಂಜಾತರಾಗಿ ಮೈದೋರಿ ಇಂದಿಗೂ ಅವರ ಜೀವನದ ಜ್ಯೋತಿರ್ಧರರಾಗಿ ಮೆರೆಯುತ್ತಲಿರುವ ಮಹಾಶಿವಯೋಗಿ ಮೃತ್ಯುಂಜಯ ಮಹಾಸ್ವಾಮಿಗಳವರೂ ನಿದರ್ಶನವಾಗಿದ್ದಾರೆ. ಒಂದೊಂದು ಕಾಲಕ್ಕೆ ಒಬ್ಬೊಬ್ಬ ಮಹಾಶಿವಶರಣರು ಉದಯವಾಗಿ ಶರಣಮಾರ್ಗಕ್ಕೆ ಹಲವರನ್ನು ತಿರುಗಿಸಿ, ಶರಣ ತತ್ತ್ವಪ್ರದೀಪವು ನಂದದಂತೆ ಅದಕ್ಕೆ ತಮ್ಮ ಜೀವನರಸವನ್ನೇ ಧಾರೆಯೆರೆಯುತ್ತ ಬಂದುದನ್ನು ಇದುವರೆಗೆ ಅವಲೋಕಿಸಿದೆವು. "ಅವರು ಚುಂಬಕವಾಗಿ ಸಮಾಜವನ್ನು ಆಕರ್ಷಿಸಿದರು; ಪರುಷವಾಗಿ ಹಲವರನ್ನು ಪರಿವರ್ತನಗೊಳಿಸಿದರು; ಪ್ರದೀಪನಾಗಿ ಕೆಲವರನ್ನು ಪ್ರಕಾಶಗೊಳಿಸಿದರು."* ಅವರ ಪ್ರಸಾದವಾಣಿಯ ಪ್ರಬಾವದಿಂದ, ಅವರ ಕೃಪಾದೃಷ್ಟಿಯ ಬಲದಿಂದ, ಅವರ

* ಹಾವೇರಿಯ ಹೊಸ ಮಠಾಧ್ಯಕ್ಷ ಪೂಜ್ಯ ಪಂಡಿತ ಮಲ್ಲಿಕಾರ್ಜುನನ ದೇವರು ಈಗ ಚಿತ್ರದುರ್ಗದ ಜಗದ್ಗುರುಗಳವರು.

ಆಶೀರ್ವಾದದ ಪರಿಣಾಮವಾಗಿ ಆತ್ಮಶಕ್ತಿಯನ್ನು ಅರಳಿಸಿಕೊಂಡವರು ಒಬ್ಬಿಬ್ಬರಲ್ಲ–ಹಲವರು. ಲಿಂಗೈಕ್ಯ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು, ಪರಮ ಪೂಜ್ಯರಾದ ಶ್ರೀ ಸಿದ್ಧಲಿಂಗಸ್ವಾಮಿಗಳು, ಪ್ರಾತಃಸ್ಮರಣೀಯರಾದ ಹಾನಗಲ್ಲ ಕೂಮಾರಸ್ವಾಮಿಗಳು, ಹಾಗೂ ಬಿದರಿ ಕುಮಾರಸ್ವಾಮಿಗಳು, ಇಂದಿನ* ಚಿತ್ರದುರ್ಗದ ಹಾಗೂ ಶ್ರೀಶೈಲದ ಜಗದ್ಗುರುಗಳವರು, ಪೂಜ್ಯಪಾದ ಮೃತ್ಯುಂಜಯ ಮಹಾಸ್ವಾಮಿಗಳವರು, ಲಿಂಗೈಕ್ಯರಾದ ಹರ್ಡೇಕರ್ ಮಂಜಪ್ಪನರು, ದಾವಣಗೆರೆ ಚಂದ್ರಶೇಖರಶಾಸ್ತ್ರಿಗಳು, ರಾವ್‌ಬಹದ್ದೂರ್ ಗುರುಸಿದ್ದಪ್ಪ ಗಿಲಗಂಟಿ ರಾವ್‌ಬಹದ್ದೂರ್ ವಾರದ ಮಲ್ಲಪ್ಪನವರು, ಬಾಗಲಕೋಟೆ ವೈರಾಗ್ಯ ಮಲ್ಲಣಾರ್ಯರು, ಬೆಂಗಳೂರಿನ ಮಂಡಿ ಹರಿಯಣ್ಣ, ಎಡೇಹಳ್ಳಿ ಮಲ್ಲಪ್ಪದೇಶಾಯಿ, ರೈನಾಪುರ ಮಲ್ಲಿಕಾರ್ಜುನ ಪಂಡಿತರು–ಇನ್ನೂ ಅನೇಕರು ಈ ಮಹಾಮಹಿಮರ ತಪಃಪ್ರಭಾವಕ್ಕೊಳಗಾದವರು. ಇವರನ್ನು ಇಪ್ಪತ್ತನೆಯ ಶತಮಾನದ ಪ್ರಭುದೇವರೆಂದೂ ಅಥಣಿಯ ಗಚ್ಚಿನಮಠದ ಯೋಗಮಂಟಪವನ್ನು ನೂತನ ಶಿವಾನುಭವ ಮಂಟಪವೆಂದೂ ಕರೆಯಬಹುದು.

ಕೃಷ್ಣಾತಟದಲ್ಲಿದೆ ಇಂಗಳಗಾವಿಯೆಂಬ ಗ್ರಾಮ. ಅಲ್ಲಿ ರಾಚಯ್ಯನವರೆಂಬ ಮಠಾಧಿಪತಿಗಳೀದ್ದರು. ಅವರಿಗೆ ನೀಲಾಂಬೆ ಅನುರೂಪಳಾದ ಸತಿಯಾಗಿದ್ದಳು. ಶಿವಯೋಗಿ ಹುಟ್ಟಿದ ವಂಶದ ಉದ್ಧಾರವಾಗುವುದೆಂದು ನಂಬಿದ್ದ ಆ ದಂಪತಿಗಳು ಶಿವಯೋಗಿಯಾಗಿ ಭವದುಃಖವನ್ನು ನೀಗಬಲ್ಲ ಮಗನೇ ಬೇಕೆಂದು ಹಾರೈಸಿದರು. ಅವರ ಹಾರೈಕೆ ಹಣ್ಣಿ ಶಾಲಿವಾಹನ ಶಕ ೧೭೫೮ನೆಯ ದುರ್ಮುಖಿ ಸಂವತ್ಸರದ ವೈಶಾಖ ಮಾಸ ಶುಕ್ಲಪಕ್ಷ ೧೧ ಬೆಳಗಿನ ೫ ಗಂಟೆಗೆ ಮಹಾಮಂಗಳದ ಶಿಶುವೊಂದು ಜನಿಸಿತು. ಸಚರಾಚರಕ್ಕೆ ಸಂತೋಷವಾಯಿತು.

ಗುರುಲಿಂಗಜಂಗಮದ ಪರಮಪ್ರಸಾದದಿಂದ ಜನಿಸಿದ ಶಿಶುವಿಗೆ ಗುರುಲಿಂಗಾರ್ಯನೆಂದು ನಾಮಕರಣವಾಯಿತು. ಆಗ ಅಥಣಿಯಲ್ಲಿ ಗಚ್ಚಿನ ಮಠದಲ್ಲಿ ಮರಳಶಂಕರ ಯೋಗಿಗಳಿದ್ದರು. ರಾಚಾರ್ಯರು ಐದು ವರ್ಷದ ಬಾಲಕ ಗುರುಲಿಂಗಾರ್ಯನನ್ನು ಆ ಯೋಗಿಗಳ ಅಡಿಗಳಿಗೆ ಅರ್ಪಿಸಿಬಿಟ್ಟರು. ಗುರುಲಿಂಗಾರ್ಯನ ಘನತೆಯನ್ನವರು ಗುರುತಿಸಿ ಆತನಿಗೆ ವಿಶೇಷವಾದ ವಿದ್ಯಾಭ್ಯಾಸದ ಏರ್ಪಾಡು ಮಾಡಿದರು. ತೆಲಸಂಗದ ಶಿವಬಸವದೇವರಲ್ಲಿ ವಿದ್ಯಾಭ್ಯಾಸಕ್ಕೆ ಆರಂಭವಾಯಿತು. ಶಿಷ್ಯನ ಪ್ರಭಾವದಿಂದ ಗುರುಗಳ ರುಜೆ

---

* ಮೊನ್ನೆ ತಾನೆ ಲಿಂಗೈಕ್ಯರಾದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯವಿಭವ ಮಹಾಸ್ವಾಮಿಗಳವರು

ಮಾಯಾವಾಯಿತು. ಮುಂದೆ ಮಮದಾಪುರದ ಮಹಾಯೋಗಿಗಳಲ್ಲಿ ಶಾಸ್ತ್ರಾಧ್ಯಯನ, ಅಥಣಿಯ ಗುರುಶಾಂತಯೋಗಿಗಳಿಂದ ಷಟ್‌ಸ್ಥಳ ಬ್ರಹ್ಮೋಪದೇಶ ನಡೆದುವು. ಗುರುಲಿಂಗಾರ್ಯನು ಮುರುಘೇಶನೆಂಬ ನಾಮ ಧರಿಸಿ ನಿರಾಭಾರಿಯಾದನು.

ಇಪ್ಪತ್ತು ವರ್ಷ ವಯಸ್ಸಾಗುವವರೆಗೆ ಮುರುಘೇಂದ್ರದೇವರು ಸ್ವಯಜಂಗಮಾಚರಣೆಯನ್ನು ನಿಸ್ಸೀಮ ನಿಷ್ಠೆಯಿಂದ ನಡೆಸಿದರು. ಹರಪೂಜೆ, ಗುರುಸೇವೆ, ಬ್ರಹ್ಮಚರ್ಯ, ಬ್ರಹ್ಮಜ್ಞಾನಾದಿಗಳಲ್ಲಿ ನಿರತರಾಗಿದ್ದರು. ಇಪ್ಪತ್ತನೆಯ ವಯಸ್ಸಿನಲ್ಲಿ ಗುರುಗಳ ಅಪ್ಪಣೆ ಪಡೆದು ಚರಜಂಗಮಾಚರಣೆಯ ಪಾಲನೆಗಾಗಿ ತೀರ್ಥಯಾತ್ರೆಗೆ ಹೊರಟರು. ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿಯಂತೆ ಸಂಚರಿಸುತ್ತ. ಭಿಕ್ಷಾನ್ನವು ಮೋಕ್ಷಕ್ಕೆ ಸಾಧನವೆಂದು ಲಿಂಗಾಂಗಿಗಳಲ್ಲಿ ಮಾತ್ರ ಒಂದೇ ವೇಳೆ ಭಕ್ತಿಯ ಭಿಕ್ಷೆಯನ್ನು ಬೇಡುತ್ತ, ಬಂದುದನ್ನು ಶಿವಪ್ರಸಾದವೆಂದು ಭಾವಿಸಿ ಸ್ವೀಕರಿಸುತ್ತ, ಇಪ್ಪತ್ತು ವರುಷಕಾಲ ಪಾದಚಾರಿಗಳಾಗಿಯೇ ಸಾವಿರಾರು ಗ್ರಾಮಗಳಲ್ಲಿ ಸಂಚರಿಸಿದರು. ಸೊನ್ನಲಾಪುರ, ಕಲ್ಯಾಣ, ಗೋಕರ್ಣ, ಬನವಾಸಿ, ಹರಿಹರ, ಹಂಪಿ, ಶ್ರೀಶೈಲ, ಕಂಚಿ, ಕಾಳಹಸ್ತಿ, ರಾಮೇಶ್ವರ, ಕಲಬುರಗಿ ಸಂಗಮ, ಐಹೊಳೆ, ಪಟ್ಟದಕಲ್ಲು, ಶಿವಗಂಗೆ, ಶಂಭುಲಿಂಗನ ಬೆಟ್ಟ, ಗರಪುರಿ ಮೊದಲಾದ ದಕ್ಷಿನ ಭಾರತದ ಕ್ಷೇತ್ರಗಳನ್ನೆಲ್ಲ ಈ ಸಂಚಾರದಲ್ಲಿ ಸಂದರ್ಶಿಸಿದರು.

ಹೀಗೆ ಸಂಚರಿಸುತ್ತ ಹಿಪ್ಪರಗಿ ಗ್ರಾಮಕ್ಕೆ ಶಿವಯೋಗಿಗಳು ಆಗಮಿಸಿದರು. ಅಲ್ಲಿ ಒಬ್ಬ ಶಿವಭಕ್ತನ ಮನೆಗೆ ಶಿವಯೋಗಿಗಳು ಪ್ರಭುದೇವರಂತೆ ಬಂದು "ಸಮತೆಯೆಂಬ ಕಂಥೆಯ ತೊಟ್ಟು ಸುಬುದ್ಧಿಯೆಂಬ ಟೊಪ್ಪರವನಿಕ್ಕಿ, ವಿಷಯವೆಂಬ ಹಾವುಗೆಯ ಮೆಟ್ಟಿ, ತಮಂಧವೆಂಬ ಕುಳಿಯ ಬೀಳದೆ, ವೈರಾಗ್ಯವೆಂಬ ಕೊರಡನೆಡಹದೆ, ಮರವೆಂಬ ಚಳ ಮೆಟ್ಟದೆ ಗುಹೇಶ್ವರನ ಶರಣಬಂದೆನು, ಭಕ್ತ ಭಿಕ್ಷೆಯನಿಕ್ಕು ಸಂಗನ ಬಸವಣ್ಣ" ಎಂದು ಭಕ್ತಿಭಿಕ್ಷೆ ಬೇಡಿದರು. ಆದರೆ ಅಲ್ಲಿ ಬಸವಣ್ಣನವರಂಥ ಭಕ್ತನೇನೂ ಭಕ್ತನೇನೂ ಇರಲಿಲ್ಲ. ಆತನು ಒಂದು ಹಿಡಿ ಜೋಳವನ್ನು ನೀಡಿದನು. ಶಿವಯೋಗಿಗಳು ಆ ಜೋಳವನ್ನೇ ಪರಮ ಪ್ರಸಾದವೆಂದು ಭಾವಿಸಿ ಅರೆದು ಹಿಟ್ಟುಮಾಡಿ ಸ್ವೀಕರಿಸಿದರು ! ಚರಜಂಗಮಾಚರಣೆಯ ಪರಕಾಷ್ಠತೆಯನ್ನು ಬೀರಿದರು !

ಮುಂದೆ ಸವದೆ ಗ್ರಾಮದ ಹತ್ತಿರ ಗುಹೇಶ್ವರ ಗವಿಯಲ್ಲಿ ಆರು ವರುಷ ಶಿವಯೋಗಾನುಸಂಧಾನಕ್ಕೋಸ್ಕರ ಏಕಾಂತ ವಾಸದಲ್ಲಿದ್ದರು. ದರ್ಶನಕ್ಕಾಗಿ ಬಂದ ಭಕ್ತರು ಅಲ್ಲಿ ಹೆಡೆ ನಾಗರವೊಂದು ತೂಗಿ ತೊನೆಯುತ್ತಿದ್ದುದನ್ನು ನೋಡಿ ಅಂಜಿದರು. 'ಅದೇನು ಮಾಡುತ್ತದೆ' ಎಂದು ಶಿವಯೋಗಿಗಳು ಅವರನ್ನು ಸಂತೈಸಿದರು. ತಮ್ಮ

ಗ್ರಾಮಕ್ಕೆ ದಯಾಮಾಡಿಸಬೇಕೆಂದ ಅವರ ಪ್ರಾರ್ಥನೆಯನ್ನು ಒಪ್ಪಿದ ಶಿವಯೋಗಿಗಳು ಆ ಗವಿಯಲ್ಲಿಯೇ ಶಿವಯೋಗಸಾಧನೆಯನ್ನು ಮುಗಿಸಿದರು.

ಶ್ರೀ ಶಿವಯೋಗಿಗಳು ಗುಹೇಶ್ವರ ಗವಿಯಿಂದ ಮಹಾತಪಸ್ವಿಗಳಾಗಿದ್ದ ಅಂಕಲಗಿಯ ಅಡವಿಯಸ್ವಾಮಿಗಳವರ ದರ್ಶನಕ್ಕಾಗಿ ಹೊರಟರು. ದಟ್ಟಡವಿಯೊಳಗಿನ ಬಟ್ಟೆವಿಡಿದು ಹೋಗುತ್ತಿದ್ದಾಗ ಕಟ್ಟುಗ್ರ ವ್ಯಾಘ್ರವೊಂದು ಎದುರಾಯಿತು. ಶಿವಯೋಗಿಗಳು ಅದಕ್ಕೂ ಉತ್ತತ್ತಿಯ ಪ್ರಸಾದವನ್ನೆಸೆದರು.ಅದೂ ಭವತನವನ್ನು ನೀಗಿ ಭಕ್ತನಾಯಿತು. ಶಿವಯೋಗಿಗಳವರ ಆಗಮನವನ್ನು ಮೊದಲೇ ಅರಿತಿದ್ದ ಅಡವಿಯಸ್ವಾಮಿಗಳು ಮಠದ ಮಹಾದ್ವಾರದಲ್ಲಿಯೇ ನಿಂತಿದ್ದರು.ಉಭಯ ವಿಭೂತಿಗಳ ಸಮಾಗಮವು ಗಂಗಾ ಯಮುನೆಯರ ಸಂಗಮದಂತೆ ಹೃದಯಂಗಮವಾಗಿದ್ದಿತು.

ಶಿವಯೋಗಿಗಳು ಅಲ್ಲಿಂದ ಅಥಣಿಗೆ ಆಗಮಿಸಿದರು. ಅಷ್ಟರಲ್ಲಿ ಮರುಳ ಶಂಕರಯೋಗಿಗಳೂ ಗುರುಶಾಂತಸ್ವಾಮಿಗಳೂ ಲಿಂಗೈಕ್ಯರಾಗಿ ಚೆನ್ನಬಸವ ಸ್ವಾಮಿಗಳು ಅಧಿಕಾರಾರೂಢರಾಗಿದ್ದರು. ಅವರು ಶಿವಯೋಗಿಗಳಿಗೆ ಮಠದ ಅಧಿಕಾರ ವಹಿಸಿಕೊಳ್ಳಲು ಕೇಳಿಕೊಂಡರು. ಶಿವಯೋಗಿಗಳು, 'ಈ ಮಠಮಾನ್ಯಗಳ ಅಧಿಕಾರ ಬೇಡ ನನಗೆ, ತಮ್ಮ ಪಾದಸೇವೆಯೇ ಸಾಕು' ಎಂದು ಬಿನ್ನವಿಸಿಕೊಂಡರು. ಅವರ ವೀರವಿರತಿಯನ್ನರಿತ ಚೆನ್ನಬಸವಸ್ವಾಮಿಗಳು ಮುಂದೆ ವಿಷಯ ಬೆಳಸಲಿಲ್ಲ. 'ಇನ್ನು ಎಲ್ಲಿಗೂ ಹೋಗದೆ ಇಲ್ಲಿಯೇ ಇದ್ದು ಲಿಂಗಾನಂದವನ್ನನುಭವಿಸಬೇಕು' ಎಂದು ಕೇಳಿಕೊಂಡರು. ಶಿವಯೋಗಿಗಳು ಸಮ್ಮತಿಸಿದರು. ಅಂದಿನಿಂದ ಅಥಣಿಯ ಗಚ್ಚಿನಮಠದ ಯೋಗಮಂಟಪವೇ ಶಿವಯೋಗಿಗಳ ಪರ ಜಂಗಮಾಚರಣೆಯ ಪವಿತ್ರ ಕ್ಷೇತ್ರವಾಯಿತು.

ಅಂದಿನಿಂದ ಶಿವಯೋಗಿಗಳ ಸರ್ವಶಕ್ತಿ, ಸರ್ವವೃತ್ತಿ, ಸರ್ವಭಾವನೆಗಳೆಲ್ಲ ಶಿವಮಯವಾಗತೊಡಗಿದುವು, ಲಿಂಗಪೂಜೆಯಲ್ಲಿ ಲಯವಾಗತೊಡಗಿದುವು. ಪ್ರತಿನಿತ್ಯ ಪ್ರಾತಃಕಾಲ ೪ ಗಂಟೆಗೆ ಶಿವನಾಮಸ್ಮರಣ ಮಾಡುತ್ತ ಉಪ್ಪಡಿಸುವುದು, ಆಮೇಲೆ ಪ್ರಾತರ್ವಿಧಿಗಳನ್ನು ಮುಗಿಸಿ ಯೋಗಮಂಟಪವನ್ನೂ ಅದರ ಸುತ್ತಲಿನ ಸ್ಥಳವನ್ನೂ ತಾವೇ ಬಹು ಶುಚಿಯಾಗಿ ಉಡುಗುವುದು, ಅನಂತರ ಊರ ಹೊರಗೆ ಸಂಚರಿಸಿ ಸ್ನಾನಮಾಡಿ ತಮ್ಮ ಬಟ್ಟೆಗಳನ್ನು ತಾವೇ ತೊಳೆದುಕೊಂಡು, ಹೂದೋಟದಲ್ಲಿ ಪತ್ರಿಪುಷ್ಪಗಳನ್ನು ತರುಲತೆಗಳಿಗೆ ನೋವಾಗದಂತೆ ಹಿತಮಿತವಾಗಿ ಎತ್ತಿ ತಂದು ಪ್ರಾತಃಕಾಲದ ಪೂಜೆಯನ್ನು ಪೂರೈಸಿವುದು, ಆಮೇಲೆ ಮಧ್ಯಾಹ್ನದ ಪೂಜೆಯನ್ನು ಪೂರೈಸುವುದು, ಆಮೇಲೆ ಅಪ್ಪನವರ ವಚನಾನುಭವ,

(ಶಿವಯೋಗಿಗಳವರಿಗೆ ಬಸವಣ್ಣನವರ ವಚನಗಳಲ್ಲಿ ಅಸೀಮ ಭಕ್ತಿ ; ಎಂತಲೇ ಅವುಗಳನ್ನು ಅಪ್ಪನವರ ವಚನಗಳೆಂದು ಕರೆಯುತ್ತಿದ್ದರು ; ಬಸವಣ್ಣನವರ ವಚನಗಳೆಂದು ಎಂದೂ ಕರೆಯುತ್ತಿರಲಿಲ್ಲ), ಆ ಬಳಿಕ ಸಾಯಂಕಾಲದ ಪೂಜೆ– ಇದು ಅವರ ಚಾಚೂ ತಪ್ಪದ ನಿತ್ಯದ ದಿನಚರಿ.



**ಜಂಗಮಜ್ಯೋತಿ ಅಥಣಿ ಮುರುಘೇಂದ್ರ ಮಹಾಶಿವಯೋಗಿಗಳು**

ಲಿಂಗಪೂಜೆಯಲ್ಲಿ ಎಂದೂ ಎಳ್ಳಷ್ಟೂ ಆಲಸಿಕೆಯಾಗಕೂಡದು. ಲಿಂಗ ಪೂಜೆಯ ಸಾಮಗ್ರಿಗಳನ್ನು ತಾವೇ ತೊಳೆದುಕೊಳ್ಳಬೇಕು, ಹತ್ತು ಮೈಲು ಹೋಗಿಯಾದರೂ ಪತ್ರಿಗಳನ್ನು ತಾವೇ ಎತ್ತಿ ತರಬೇಕು, ತಮ್ಮ ಮಂಟಪವನ್ನು ತಾವೇ ಉಡುತಿಕೊಳ್ಳಬೇಕು. ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳಬೇಕು.

ಯಾರಾದರೂ ಸಹಾಯಕ್ಕೆ ಬಂದರೆ, 'ಬೇಡ, ಶಿವನು ಕೈಕಾಲುಗಳನ್ನು ಕೊಟ್ಟಿದ್ದಾನೆ, ಅವು ದುಡಿಯಬೇಕು' ಎನ್ನುತ್ತಿದ್ದರು. ಹೂ ಪತ್ರಿಗಳನ್ನು ತರುವಲ್ಲಿಯೂ ಅತಿಯು ಅವರಿಗೆ ಸೇರುತ್ತಿರಲಿಲ್ಲ, ಮಿತಿಯೇ ಸೇರುತ್ತಿತ್ತು. 'ಶಿವನು ಕೊಟ್ಟಿದ್ದಾನೆಂದು ಹೀಗೆಲ್ಲ ಕೆಡಿಸಬಾರದು' ಎಂದು ಹೇಳುತ್ತಿದ್ದರು. ಬೇಕು ಬೇಡೆಂಬೆರಡು ಭವಬೀಜಗಳನ್ನೇ ಹುರಿದಿದ್ದ ಅವರಿಗೆ ಬೇಕು ಬೇಡೆಂಬುವೆರಡೂ ಇರಲಿಲ್ಲ. ಲಿಂಗಾರ್ಪಿತಕಾಲಕ್ಕೆ ತಾನಾಗಿ ಏನೇ ಬಂದರೂ ಅದನ್ನೇ ಶಿಪ್ರಸಾದವೆಂದು ಸ್ವೀಕರಿಸುತ್ತಿದ್ದರು, ಎಡೆಯು ಬರಲೆಂದು ಕಾದು ಕುಳಿತುಕೊಳ್ಳುತ್ತಿರಲಿಲ್ಲ. ಸಕಾಲಕ್ಕೆ ಬಾರದಿದ್ದರೆ ಶಿವನಿಚ್ಛೆಯಿಲ್ಲವೆಂದು ಭಾವಿಸಿ ತಮ್ಮ ಮುಂದಿನ ಕ್ರಿಯೆಗಳನ್ನು ಮುಗಿಸಿಬಿಡುತ್ತಿದ್ದರು. ಎಡೆ ಬರಲಿಲ್ಲವೆಂದು ಯಾರ ಮೇಲೂ ಹರಿಹಾಯುತ್ತಿರಲಿಲ್ಲ. ಎಡೆ ತಪ್ಪಿತೆಂದು ಅನ್ಯರು ಕಳವಳಿಸಿದರೆ, "ನೀವೇಕೆ ಚಿಂತಿಸುವಿರಿ? ನಿಮ್ಮಿಚ್ಛೆಯೆ? ಶಿವನಿಚ್ಛೆಯಿರಲಿಲ್ಲ" ಎಂದು ಹೇಳಿ ಸಮಾಧಾನ ಪಡಿಸುತ್ತಿದ್ದರು. ಎಡೆಯು ಸಕಾಲಕ್ಕೆ ಬಂದರೂ ಅದು ದೂರದಲ್ಲಿದ್ದರೆ ಬಾಗಿ ಕೈಚಾಚಿ ಅದನ್ನು ತೆಗೆದುಕೊಳ್ಳುತ್ತಿರಲಿಲ್ಲ.

ಎಡೆಯು ತಾವಿದ್ದೆಡೆಯಲ್ಲಿಯೇ ಇರಬೇಕು. ಬಾಗಿ ಕೈ ನೀಡಿ ತೆಗೆದು–ಕೊಂಡದ್ದಾದರೆ ಅದು ಅಂಗದಾಸೆ; ಅದು ಅಂಗ ಭೋಗ, ಲಿಂಗ ಭೋಗವಲ್ಲ. ಆದುದರಿಂದ ಶಿವಯೋಗಿಗಳು 'ಬಂದುದ ಕೈಕೊಳ್ಳಬಲ್ಲೋಡೆ ನೇಮ' ಎಂಬ ಅಪ್ಪನವರ ವಚನದಂತೆ ಕೈಗೆ ನಿಲುಕುವಷ್ಟರಲ್ಲಿಯೇ ಎಡೆಯಿದ್ದರೆ ಮಾತ್ರ ತೆಗೆದುಕೊಳ್ಳುತ್ತಿದ್ದರು. ಆಡುಗೆಯವರ ಅಜಾಗರೂಕತೆಯಿಂದ ಅನೇಕ ಸಾರೆ ಎಡೆತಪ್ಪಿದುದುಂಟು. ಆಗಲೂ ಅವರು ಸುಪ್ರಸನ್ನರಾಗಿಯೇ ತಮ್ಮ ನಿತ್ಯಕರ್ಮಗಳನ್ನು ನೆರವೇರಿಸುತ್ತಿದ್ದರು.

ಬೇಕೆನ್ನುವುದು ಭೋಗವಾದರೆ ಬೇಡವೆನ್ನುವುದು ವೈರಾಗ್ಯ. ಎರಡೂ ಶರಣರ ನಡೆಗೆ ಸಲ್ಲವು. ಆದುದರಿಂದ ಶಿವಯೋಗಿಗಳು ಬಂದುದ ಕೈಕೊಳ್ಳುವ ನೇಮವಿಡಿದು ತಿಥಿವಾರಗಳನ್ನಾಗಲೀ ಉಪವಾಸ ವ್ರತಗಳನ್ನಾಗಲೀ ಆಚರಿಸದೆ ಕೂಡಲಸಂಗನನ್ನೊಲಿಸ ಬಂದ ಪ್ರಸಾದಕಾಯವನ್ನು ಕೆಡಿಸದೆ ಶಿವಯೋಗ ಸಾಮ್ರಾಜ್ಯದ ಸಾಮ್ರಾಟರಾದರು.

ಇಂಥವರಿಗೆ ಹೊನ್ನು ಹೆಣ್ಣು ಮಣ್ಣುಗಳು ಮಲತ್ರಯವಾಗಿ ಕಂಡಿದ್ದರೆ ಏನಾಶ್ಚರ್ಯ? ಒಂದು ದಿನ ಶಿವಯೋಗಿಗಳು ತಮ್ಮ ನೆಚ್ಚಿನ ಶಿಷ್ಯರೊಬ್ಬರನ್ನು ಕರೆದು, 'ಚೇಳಿದೆ, ಕಸಬರಿಗೆ ತೆಗೆದುಕೊಂಡು ಬಾ' ಎಂದು ಹೇಳಿದರು. ಅವರು ಅವಸರವಸರವಾಗಿ ಪೊರಕೆಯನ್ನು ತಂದು ಚೇಳನ್ನು ಕಾಣದೆ ಅರಸುತ್ತಿರಲು ಶಿವಯೋಗಿಗಳು ಯೋಗಮಂಟಪದ ಮುಂದೆ ಬಿದ್ದಿದ್ದ ರೂಪಾಯಿಯೊಂದನ್ನು

ತೋರಿಸಿ, 'ಇದೇ ಚೇಳು, ಇದನ್ನು ಬಳಿದೊಗೆದುಬಿಡು' ಎಂದು ನುಡಿದು ನಿಜಾನಂದದಿಂದ ನಕ್ಕರು ಒಂದು ಸಾರೆ ೬೩ ಪುರಾತನರ ಪೂಜೆಯ ಶಿವಯೋಗಿಗಳ ಸನ್ನಿಧಿಯಲ್ಲಿ ಅಭೂತಪೂರ್ವ ವೈಭವದೊಡನೆ ನಡೆಯಿತು. ಸಹಸ್ರಾವಧಿ ಜನರಿಗೆ ಅನ್ನದಾನ, ವಸ್ತ್ರದಾನ, ವಿತ್ತದಾನ ನಡೆಯಿತು. ಶಿವಯೋಗಿಗಳು ಬಾಯಿಬಿಟ್ಟು ಬೇಡದೆ ಎಲ್ಲವೂ ತನ್ನಿಂದ ತಾನೇ ಒದಗಿತು. ಅಂದು ಹಣತಂದು ಅರ್ಪಿಸಿದ ಧನಿಕರಿಗೆ ಲೆಕ್ಕವೇ ಇಲ್ಲ. ಅದನ್ನೆಲ್ಲ ವ್ಯವಸ್ಥಾಪಕರು ಸ್ವೀಕರಿಸುತ್ತಿದ್ದರು. ಸಾಯಂಕಾಲ ಜನರ ಗದ್ದಲ ತಗ್ಗಿದ ಮೇಲೆ ಯಾರೋ ಶಿವಯೋಗಿಗಳ ಮುಂದೆ ಹಣವಿಟ್ಟು ಹೋದರು. ಶಿವಯೋಗಿಗಳ ಪರಿಚಾರಕನೊಬ್ಬನನ್ನು ಕರೆದು, "ಅಕೋ ಅಲ್ಲಿ ಒಬ್ಬರು ನಿಂತಿದ್ದಾರೆ. ಶಿವನೂ ಇಲ್ಲಿ ರೂಪಾಯಿ ಕೊಟ್ಟಿದ್ದಾನೆ. ಅವರಿಗೆ ಕೊಟ್ಟುಬಿಡು" ಎಂದು ಹೇಳಿದರು. ತ್ಯಾಗವೀರ ಶಿರಸಂಗಿಯ ಲಿಂಗರಾಜರು ತಮ್ಮ ಸಕಲ ಸಂಪತ್ತನ್ನೆಲ್ಲ ಸಲ್ಲಿಸಲು ಮುಂದಾದಾಗ, ಶಿವಯೋಗಿಗಳು ನಿರಾಕರಿಸಿ ಜನಹಿತ ಕಾರ್ಯಕಗಳಿಗಾಗಿ ಅದನ್ನು ವಿನಿಯೋಗಿಸಿರಿ ಎಂದರು. ಇಂದೆಂಥ ಆಶಾರಹಿತತ್ವ!

ಶಿವಯೋಗಿಗಳು ಒಂದು ರಾತ್ರಿ ಪವಡಿಸಿದ್ದಾಗ ಸೇವಕನೊಬ್ಬನು ಸಂದಿಗೊಂದಿಯ ಕಸಗೂಡಿಸತೊಡಗಿದನು. ಶಿವಯೋಗಿಗಳು ಆ ಸದ್ದಿಗೆ ಎದ್ದು, "ನೊಣ, ನೊರಜು, ಗುಂಗಾಡುಗಳೆಲ್ಲ ಮಕ್ಕಳನ್ನು ಕಕ್ಕುಲತೆಯಿಂದ ಪಕ್ಕದಲ್ಲಿರಿಸಿಕೊಂಡು ವಿಶ್ರಮಿಸುತ್ತಿರುವ ಹೊತ್ತಿದು. ಅವುಗಳನ್ನೆಬ್ಬಿಸಿ ಅವುಗಳಿಗೆ ತೊಂದರೆ ಕೊಡಬೇಡ" ಎಂದು ಕಸಗೂಡಿಸುವುದನ್ನು ನಿಲ್ಲಿಸಿದರು ! ಇದೆಂಥ ಸಕಲಜೀವ ದಯಾಪಾರಿತ್ವ?

ಇಂಥ ಆಶಾರಹಿತತ್ವ , ಇಂಥ ಸರ್ವಜೀವದಯಾಪಾರಿತ್ವವಿರುವಲ್ಲಿ ಚಿಂತೆಯ ಬೆಂತರವು ಎಂದಾದರೂ ಎಂತಾದರೂ ಸುಳಿದೀತೆ? ಒಮ್ಮೆ ಮಠದಲ್ಲಿ ಮಹಾಗಣಾರಾಧನೆ ನಡೆಯಬೇಕಾಗಿದ್ದಿತು. ಮಾರನೆಯ ದಿನ ಬೆಳಗಾದರೆ ಸಹಸ್ರಾವಧಿ ಜನಸಮೂಹ ನೆರೆಯುವುದಿದ್ದಿತು. ಅವರಿಗೆಲ್ಲ ಪ್ರಸಾದ ವಿನಿಯೋಗವಾಗಬೇಕು. ಆದರೆ ಮಠದಲ್ಲಿ ಒಡಕು ಕಾಳಿಲ್ಲ. ಲಿಂಗಸ್ವರೂಪಿ ಶಿವಯೋಗಿಗಳಿಗೆ ಅಂಗ ಸ್ವರೂಪಿಗಳಾಗಿದ್ದ ಸಿದ್ಧಲಿಂಗ ಸ್ವಾಮಿಗಳವರಿಗೋ 'ಕಾಗತಿಃ' ಎಂಬ ದಿಗಿಲು. ರಾತ್ರಿ ಹನ್ನೊಂದು ಗಂಟೆಯವರೆಗೂ ಇದೇ ಚಿಂತೆಯಲ್ಲಿ ಪರಿತಪಿಸಿದರು. ಇಷ್ಟಾದರೂ ಎಲ್ಲಿಂದಲೂ ಒಡಕು ಕಾಳು ಬರಲಿಲ್ಲ. ಅವರ ಶಕ್ತಿ ಮೀರಿತು. ಶಿವಯೋಗಿಗಳ ಸನ್ನಿಧಿಗೆ ಧಾವಿಸಿದರು. ಚಿಂತೆಯಿಂದ ಉದ್ವಿಗ್ನರಾಗಿ ಬಂದಿದ್ದ ಅವರನ್ನು ಅಪ್ಪನವರ ವಚನ ಓದುತ್ತ ಕುಳಿತಿದ್ದ ಶಿವಯೋಗಿಗಳು ಕಂಡು ಅನುದ್ವಿಗ್ನರಾಗಿಯೇ ನುಡಿದರು, 'ಇದೇನು ಅಪರಾತ್ರಿಯಲ್ಲಿ ಆಗಮನ?' ಸಿದ್ಧಲಿಂಗ

ಸ್ವಾಮಿಗಳು ತಮ್ಮ ಪಾಡು ತೋಡಿಕೊಂಡರು. ಸಸ್ಮಿತರಾಗಿ ಶಿವಯೋಗಿಗಳು ನುಡಿದರು,–'ಸಿದ್ಧಲಿಂಗಪ್ಪನವರೇ, ಕಳೆದ ಇಪ್ಪತ್ತು ವರ್ಷಗಳಿಂದಲೂ ಈ ಮಠದಲ್ಲಿ ನಿತ್ಯ ದಾಸೋಹ ನಡೆದಿದೆ. ಅದನ್ನು ನೀವೇ ನಡಸಿರುವಿರೆಂದು ನಿಮಗೆನಿಸುತ್ತಿದ್ದರೆ ಕುಳಿತು ರಾತ್ರಿಯೆಲ್ಲ ಚಿಂತೆಮಾಡಿರಿ. ನಡೆಸಿದವ ನಾನಲ್ಲ, ಶಿವನು–ಎಂಬ ನಂಬಿಕೆಯಿದ್ದರೆ ಹೋಗಿ ನಿಶ್ಚಿಂತರಾಗಿ ಮಲಗಿರಿ !' ಸಿದ್ಧಲಿಂಗ ಸ್ವಾಮಿಗಳಿಗೆ ಮುಂದೆ ಮಾತೇ ಹೊರಡಲಿಲ್ಲ. ಹೋಗಿ ಹೊದ್ದು ಮಲಗಿಬಿಟ್ಟರು. ಬೆಳಗಾಗುತ್ತಲೇ ಒಂದು ರೈಲ್ವೆ ರಸೀದಿ ಸಿದ್ಧಲಿಂಗಸ್ವಾಮಿಗಳವರಿಗೆ ತಲುಪಿತು. ಬೆಂಗಳೂರಿನ ಭಕ್ತರೊಬ್ಬರು ದಾಸೋಹಕ್ಕಾಗಿ ಒಂದು ವ್ಯಾಗನ್ ತುಂಬ ಅಕ್ಕಿ ಕಳಿಸಿದ್ದರು. ಸಕಾಲಕ್ಕೆ ಶಿವನು ಕೊಟ್ಟನೆಂದು ಸಿದ್ಧಲಿಂಗದೇವರಿಗೆ ಹಿಡಿಸಲಾರದಷ್ಟು ಹಿಗ್ಗಾಗಯಿತು. ಓಡಿಹೋಗಿ ಶಿವಯೋಗಿಗಳಿಗೆ ಈ ಸುದ್ದಿ ತಿಳಿಸಿದರು. ಮತ್ತೆ ಮೃದುವಾಗಿ ನಕ್ಕು ಶಿವಯೋಗಿಗಳು ನುಡಿದರು, "ಸಿದ್ಧಲಿಂಗಪ್ಪನವರೇ, ನಿನ್ನೆ ಶಿವನು ಕೊಡಲು ಸ್ವಲ್ಪ ತಡಮಾಡಿದನೆಂದು ಕುಗ್ಗಿ ಹೋಗಿದ್ದಿರಿ; ಇಂದು ಕೊಟ್ಟನೆಂದು ಹಿಗ್ಗಿ ನಲಿದಾಡುತ್ತಿರುವಿರಿ. ಈ ಹಿಗ್ಗಿ ಕುಗ್ಗುಗಳ ನಡುವೆ ಒಂದು ತಗ್ಗಿದೆ. ಹಿಗ್ಗುಕುಗ್ಗು ಈ ಎರಡರಲ್ಲಿ ಯಾವ ಕಡೆಯಿಂದ ಬಂದರೂ ಆ ತಗ್ಗಿನಲ್ಲಿ ಬೀಳುವುದು ತಪ್ಪುವುದಿಲ್ಲ. ಆದುದರಿಂದ ಈ ಎರಡೂ ಹಾದಿ ಬಿಟ್ಟು ಸದಾ ಸಮಾಧಾನದ ಬೀದಿಯಲ್ಲಿ ತಿರುಗಿರಿ!" ಶಿವಯೋಗಿಗಳ ಈ ಉಪದೇಶದಲ್ಲಿ ಸರ್ವಧರ್ಮಗಳ ಸಾರವಿದೆ, ಸರ್ವ ಸಮಸ್ಯೆಗಳ ಪರಿಹಾರವಿದೆ.

ಒಮ್ಮೆ ವೃದ್ಧ ಜಂಗಮರೊಬ್ಬರು ಶಿವಯೋಗಿಗಳ ಹತ್ತಿರ ಬಂದು, ಶಿವಯೋಗಿಗಳನ್ನು ಏಕವಚನದಿಂದಲೇ ಮಾತನಾಡಿಸಿ, 'ನಮಗೆ ಹೋಳಿಗೆ ಸೀಕರಣೆ ಉಣಿಸಬೇಕು' ಎಂದು ಬಯಸಿ ಏನೇನೋ ಮಾತನಾಡಿದರು. ಅವರ ಸ್ಥಿತಿಗತಿಗಳೂ ಹೇಗೆ ಹೇಗೋ ಇದ್ದುವು. ಆದರೂ ಶಿವಯೋಗಿಗಳು, 'ಸ್ನಾನಪೂಜೆ ಪೂರೈಸಿರಿ, ಶಿವನು ಕೊಟ್ಟಂತಾಗಲಿ' ಎಂದು ಅರಿಕೆ ಮಾಡಿಕೊಂಡರು. ಅತ್ತ ಆ ವೃದ್ಧ ಜಂಗಮರು ಸ್ನಾನಕ್ಕೆ ತೆರಳಿದರು. ಇತ್ತ ಮುಂಬೈಯಿಂದ ಭಕ್ತರೊಬ್ಬರು ಕಳಿಸಿದ ಮಾವಿನಹಣ್ಣಿನ ಬುಟ್ಟಿಯೂ ಸೇಡಬಾಳ ಸ್ಟೇಶನ್ನಿನಿಂದ ಬಂದಿತು. ಆ ಸಂಗತಿ ತಿಳಿಯಲು ಶಿವಯೋಗಿಗಳೆಂದರು, 'ಒಳ್ಳೆಯದಾಯಿತು. ಆ ಜಂಗಮರೂ ಕೇಳಿದ್ದರು; ಶಿವನೂ ಕೊಟ್ಟ !' ಇದು ನಡೆದುದು ಕಾರ್ತಿಕದಲ್ಲಿ. ಆಗ ಮುಂಬೈಯಲ್ಲಿ ಮಾತ್ರ ಮಾವಿನಹಣ್ಣು ದೊರೆಯುತ್ತವೆ.

ಒಮ್ಮೆ ನಿಪ್ಪಾಣಿಗೆ ಹೋಗುವ ಹಾದಿಯಲ್ಲಿ ಹಳ್ಳಿಯೊಂದರಲ್ಲಿ ಶಿವಾರ್ಚನೆಯನ್ನು ಮಾಡುತ್ತಿರುವಾಗ ಸೇವಕರು ಅಜಾಗರೂಕತೆಯಿಂದ ಉಂಡೆ ಕರ್ಪುರವನ್ನು ಮರೆತು ಬಂದಿದ್ದುದು ಪ್ರಕಟವಾಯಿತು. ಯಾವಜ್ಜೀವನ ಸಂಕಲ್ಪಿತ ಶಿವಪೂಜೆಗೆ

ಕೊರತೆಯಾಯಿತಲ್ಲ–ಎಂದು ಶಿವಯೋಗಿಗಳು ಯೋಚಿಸುತ್ತಿದ್ದಾಗಲೇ ಅಂಚೆಯ ಆಳೊಬ್ಬನು ಪಾರ್ಸಲ್ ಪೆಟ್ಟಿಗೆಯೊಂದನ್ನು ತಂದಿತ್ತನು. ಒಡೆದು ನೋಡಲಾಗಿ ಉಂಡೆ ಕರ್ಪೂರ ತುಂಬಿದ್ದಿತು ! ಸರ್ವರೂ ಶಿವಯೋಗಿಗಳ ಶಿವಪೂಜೆಗೆ ಶಿವನೇ ಕರ್ಪೂರ ತಂದಿತ್ತನೆಂದು ಕೊಂಡಾಡಿದರು !

ಶಿವಯೋಗಿಗಳಿಗೆ ಶಿವನಲ್ಲಿ ನಿಷ್ಠೆ ಬಲಿದಂತೆ ಜನರಿಗೆ ಶಿವಯೋಗಿಗಳಲ್ಲಿ ನಿಷ್ಠೆ ಬೆಳೆಯತೊಡಗಿತು. ಅವರ ಪಾಲಿಗೆ ಶಿವಯೋಗಿಗಳೇ ಶಿವನಾಗಿ ತೋರಿದರು. ಕೃಷ್ಣಾತಟದ ದರೂರಗ್ರಾಮದ ಸದ್ಭಕ್ತ ಶಿರೋಮಣಿ ಶಿವಪನ ಶೀಲಪರೀಕ್ಷೆ ಶಿವಯೋಗಿಗಳ ಬಗ್ಗೆ ಜನರಿಗಿದ್ದ ನಿಷ್ಠೆಯ ನಿದರ್ಶನ. ಅವನ ನಿರ್ಗತಿಕತೆಯನ್ನು ಕಂಡು ಕನಿಕರಿಸಿ ಶಿವಯೋಗಿಗಳು ಅವನಿಗೊಂದು ಆಕಳು ಆಶೀರ್ವದಿಸಿದ್ದರು. ಅವನಿಗದು ಕಾಮಧೇನುವಾಗಿ ಪರಣಮಿಸಿ ಅವನ ಬಡತನ ಬಯಲಾಯಿತು. ಇದರಿಂದ ಭಕ್ತಿ ನಿರ್ಭರನಾದ ಶಿವಪ್ಪನು ಪ್ರತಿ ಸೋಮವಾರವೂ ಶಿವಯೋಗಿಗಳ ಪೂಜೆಗೆ ಕೃಷ್ಣಾನದಿಯ ನೀರನ್ನು ಒದಗಿಸುವ ವ್ರತವನ್ನು ಹಿಡಿದಿದ್ದನು. ಕಾಲಕ್ರಮದಲ್ಲಿ ಶಿವಪ್ಪನಿಗೆ ಮುಪ್ಪಡರಿತು, ರುಜೆಯಡಸಿತು. ಸಾಲದುದಕ್ಕೆ ಶಾಲಿವಾಹನ ಶಕೆ ೧೮೩೯ನೆ ಆನಂದ ಸಂವತ್ಸರದ ಅಷಾಢ ಬಹುಳ ತ್ರಯೋದಶಿ ಭನುವಾರ ಸೂರ್ಯೋದಯದೊಳಗಾಗಿ ಹಿಂದೆಂದೂ ಆಗಿರದ ಅತಿವೃಷ್ಟಿಯಾಗಿ ಕೃಷ್ಣಾನದಿಗೆ ಮೇರೆದಪ್ಪಿದ ಮಹಾಪೂರವು ಬಂದಿತು! ಬೆಳಗಾದರೆ ಸೋಮವಾರ! ಶಿವಪ್ಪನ ಸತ್ವಪರೀಕ್ಷೆಯ ಕಾಲ ಚಿಂತಾಕ್ರಾಂತನಾಗಿದ್ದ ತಂದೆಯ ಬಳಿಗೆ ಅವನ ಮೂವರು ಮಕ್ಕಳೂ ಬಂದು ಚಿಂತೆಯ ಕಾರಣವನ್ನು ಕೇಳಿದರು. ಶಿವಪ್ಪನು ಸೋಮವಾರವ್ರತಕ್ಕೊದಗಿದ ಘೋರ ವಿಘ್ನವನ್ನು ವಿವರಿಸಿದನು. “ಈ ದಿನವೇ ನದಿಯನ್ನು ದಾಟಿ ಆಚೆಯ ದಡೆ ಸೇರದಿದ್ದರೆ ನಾಳೆ ಸೋಮವಾರ ಶಿವಯೋಗಿಗಳ ಶಿವಪೂಜೆಗೆ ಸರಿಯಾಗಿ ಕೃಷ್ಣಾಜಲವನ್ನು ಸಮರ್ಪಿಸಲು ಸಾಧ್ಯವಾಗದು. ಈಗಾಗಲೇ ಮಹಾದ್ಭುತವಾದ ಮಹಾಪೂರವು ಭೋರ್ಗರೆಯುತ್ತಿದೆ ! ಹೇಗೆ ನದಿಯನ್ನು ದಾಟಲಿ? ದಾಟದಿದ್ದರೆ ಹಿಡಿದ ನೇಮವನ್ನು ತಪ್ಪಿಸಿ ಹೇಗೆ ಬದುಕಲಿ?”

ಮೂವರು ಮಕ್ಕಳೂ ನಾ ಮುಂದೆ ನೀ ಮುಂದೆ ಎಂದು ನದಿ ದಾಟಲು ಸಿದ್ಧರಾದರು. ಶಿವಪ್ಪನ ನಡುವಿನ ಮಗ ಶಿವರಾಯಪ್ಪ ಮಹಾ ಧೈರ್ಯಶಾಲಿ. ಅವನಿಗೇ ತಂದೆಯ ಅನುಮತಿ ಸಿಕ್ಕಿತು. ಶಿವಯೋಗಿಯನ್ನು ಸ್ಮರಿಸುತ್ತ ಧುಮುಕಿದ ಶಿವರಾಯಪ್ಪ–ಆ ಪ್ರಳಯಜಲರಾಶಿಯಲ್ಲಿ ! ಯಾವ ಶಕ್ತಿಯೋ ಅವನನ್ನು ಆಚೆಯ ದಡಕ್ಕೆ ಮುಟ್ಟಿಸಿತು. ಇದನ್ನು ಕಂಡ ಜನ ಬೆರಗಾಗಿ ಬೆರಳು ಕಚ್ಚಿದರು. ಪ್ರವಾಹದಲ್ಲಿ ತೇಲಿ ಬರುತ್ತಲಿದ್ದ ಮುಳ್ಳಿನ ಮರಗಳ ಕೊರೆತದಿಂದ ಮೈಯೆಲ್ಲ ಗಾಯವಾಗಿ ರಕ್ತ ಹರಿಯುತ್ತಿದ್ದರೂ ಸೋಮವಾರದ ಶಿವಪೂಜೆಯ ಸಮಯಕ್ಕೆ ಸರಿಯಾಗಿ

ಕೃಷ್ಣಾಜಲವನ್ನು ಹೊತ್ತು ತಂದಿದ್ದ ಶಿವರಾಯಪ್ಪನನ್ನು ಕಂಡು ಶಿವಯೋಗಿಳಗಳು ಮಮ್ಮಲ ಮರುಗಿದರು; ಮೈದಡವಿ ಸಂತೈಸಿದರು, ಹೃದಯ ತುಂಬಿ ಹರಸಿದರು!

ಶಿವಯೋಗಿಗಳ ಜೀವನದಲ್ಲಿ ಇಂಥ ಅದ್ಭುತಗಳು ಅನೇಕ ನಡೆದುವು– ಅವರು ಅಪೇಕ್ಷಿಸದೆ. ಅವರ ಗುರುಗಳು ಪಕ್ಷಿಗಳಾಗಿ ಬಕುಲವೃಕ್ಷದಲ್ಲಿ ಕಾಣಿಸಿಕೊಂಡುದು, ಸವದತ್ತಿಗೆ ಹೋಗುವಾಗ ಬಂಡಿಗಾಲಿಗೆ ಸಿಕ್ಕರೂ ಹೊಲ ಕಾಯುವವನು ಸಾಯದಿದ್ದುದು, ಸಭೆಯಲ್ಲಿ ಬಂದು ನಮಸ್ಕರಿಸಿದ ಚೆನ್ನವೀರ ದೇಶಿಕರಿಗೆ ಜಗದ್ಗುರುವಾಗುವಿಯೆಂದು ಆಶೀರ್ವದಿಸಿದುದು, ಅಲ್ಲ ಭಕ್ತಮಾಹೇಶ್ವರರು ಬಯಲಲ್ಲಿಯೇ ಭೋಜನಕ್ಕೆ ಕುಳಿತಾಗ ಬಂದು ಮಳೆಯನ್ನು ತಡೆದುದು, ಅಥಣಿಯಲ್ಲಿ ಮಳೆ ಬರಿಸಿದುದು, ಮಾರಿಕಾರೋಗವನ್ನು ಮಾಯಗೊಳಿಸಿದುದು, ಅವರ ಪಟ್ಟಶಿಷ್ಯರಾದ ಮೃತ್ಯುಂಜಯ ಮಹಾಸ್ವಾಮಿಗಳು ಗಾಡಿ ಉರುಳಿ ಸತ್ತ ರಾಚಯ್ಯನನ್ನು ಶಿವಯೋಗಿಗಳ ನಾಮಸ್ಮರಣೆಯಿಂದ ಬದುಕಿಸಿದುದು, ಅಥಣಿಯ ಮೌನಪ್ಪನಿಗೆ ಕಣ್ಣುಗಳನ್ನು ಕೊಟ್ಟುದು, ಇತ್ಯಾದಿ ಅನೇಕ ಮಹಿಮೆಗಳನ್ನವರು ಮೆರೆದರು.

ಇದಲ್ಲದೆ ಇವರಿರುವಾಗ ಗಚ್ಚಿನ ಮಠಕ್ಕೆ ಬಂದು ಶಿವಯೋಗಿಗಳ ದರ್ಶನ ಹೊಂದಿ ಧನ್ಯರಾದವರಿಗೆ ಲೆಕ್ಕವುಂಟೆ? ಅಲ್ಲಿ ನಿತ್ಯ ನಡೆದ ದಾಸೋಹಕ್ಕೆ ಸೀಮೆಯುಂಟೆ? ಅಲ್ಲಿ ಜರುಗಿದ ಶಿವಪುರಾಣ ಪ್ರವಚನ, ಶಿವಕೀರ್ತನ, ಶಿವಭಜನಾದಿ ಕಾರ್ಯಕ್ರಮಗಳಿಗೆ ಪ್ರತಿಯುಂಟೆ? ಎಲ್ಲ ಮತಗಳ ಎಲ್ಲ ಮತಿಗಳ ಜನರಿಗೂ ಅದೊಂದು ಅವಿಮುಕ್ತಕ್ಷೇತ್ರವಾಗಿಬಿಟ್ಟಿದ್ದಿತು.

ಶಾಲಿವಾಹನ ಶಕ ೧೮೪೨ನೆಯ ರೌದ್ರಿ ಸಂವತ್ಸರದ ಕಾರ್ತಿಕಮಾಸ. ಮೈಮುಪ್ಪಾಗಿದ್ದರೂ ಘನವನಪ್ಪಿದ್ದ ಮಹಾಮನ ಮುಪ್ಪಾಗದಿದ್ದ ಮುರುಘೇಂದ್ರ ಶಿವಯೋಗಿಗಳು ಎಂದಿನಂತೆ ಪ್ರಾತಃಕಾಲ ಶಿವಾರ್ಚನೆಗೆಂದು ಮೆಲ್ಲಮೆಲ್ಲನೆ ಹೂಗಳನ್ನೆತ್ತುತ್ತಿದ್ದರು. ಏಕೋ ಎಂತೋ ಅವರಿಗೆ ಸ್ವಲ್ಪ ಜೋಲಿ ಹೋಯಿತು. ವೃದ್ಧಾಪ್ಯದಿಂದ ಹೀಗಾಗಿರಬಹುದೆಂದು ನೋಡಿದವರೆಂದರು. ಆದರೆ ಅವರಿಗೇನು ಗೊತ್ತು–ಅದು ತುರೀಯಾವಸ್ಥೆಯ ಪರಜಂಗಮಲೀಲೆಯ ನಾಂದಿಯೆಂದು?

ಅಂದಿನಿಂದ ಶಿವಯೋಗಿಗಳು ಸಂಪೂರ್ಣವಾಗಿ ಅಂತರ್ಮುಖಿಗಳಾದರು. ಆಗಾಗ ಬಾಲಲೀಲೆ, ಮರುಕ್ಷಣದಲ್ಲಿ ಯೋಗಲೀಲೆ, ಒಮ್ಮೆ ಪೂರ್ಣ ಪ್ರಜ್ಞಾವಸ್ಥೆ, ಒಮ್ಮೆ ಅರ್ಧ ಪ್ರಜ್ಞಾವಸ್ಥೆ, ಒಮ್ಮೆ ಅಂತಃಪ್ರಜ್ಞಾವಸ್ಥೆ, ಜಾಗೃತ್ ಸ್ವಪ್ನ ಸುಷುಪ್ತಿಗಳಲ್ಲಿಯೂ ಶಿವಧ್ಯಾನ, ಶಿವಾರ್ಚನೆ, ಶಿವಾನುಭವ ! ಕಾಳರಾತ್ರಿಯಲ್ಲಿ ಕುಳಿತು, 'ಅಹಾ, ಏನು ಹೊಳಪು, ಎಂಥ ಬೆಳಕು' ಎನ್ನುತಿದ್ದರು; ಹೂಗೊಂಚಲನ್ನು ಕಂಡು, 'ಅಹಾ, ಲಿಂಗಪೂಜೆ ಎಷ್ಟು ಸೊಗಸಾಗಿ ನಡೆದಿದೆ' ಎಂದು ಉದ್ಗಾರ ತೆಗೆಯುತ್ತಿದ್ದರು ;

ಪರಿಚಿತರನ್ನು ಸಹ, 'ನೀವಾರು? ಎಲ್ಲಿಂದ ಬಂದಿರಿ?' ಎಂದು ಕೇಳುತ್ತಿದ್ದರು; ಯೋಗಮಂಟಪವನ್ನು ನೋಡಿ, 'ಇದಾರ ಮನೆ?' ಎಂದು ಪ್ರಶ್ನಿಸುತ್ತಿದ್ದರು ; ಹಸ್ತದಲ್ಲಿ ಲಿಂಗದೇವನ್ಯಸ್ತವಾಗಿರದಿದ್ದರೂ ಲಿಂಗಪೂಜೆ ನಡೆದೇ ಇರುತ್ತಿದ್ದತು ; ಶಿವಯೋಗಿಗಳು ಜಲವನೆರೆದಂತೆ, ಭಸ್ಮ ಧರಿಸಿದಂತೆ, ಪತ್ರಿಪುಷ್ಪಗಳನ್ನರ್ಪಿಸಿದಂತೆ, ನೈವೇದ್ಯವನ್ನು ತೋರಿಸಿದಂತೆ ಮಾಡುತ್ತಿದ್ದರು. ಅದು ನಿಜವಾಗಿಯೂ ಶಿವಮಾನಸ ಪೂಜೆ, ಮಹಾಪೂಜೆ–ಲಿಂಗವೇ ಲಿಂಗಾರ್ಚನೆಯನ್ನು ಮಾಡುವ ಮಹಾಪೂಜೆ! ಇಷ್ಟಲಿಂಗದ ರೂಹಿನಲ್ಲಿ ನಯನ, ಪ್ರಾಣಲಿಂಗ ಧ್ಯಾನದಲ್ಲಿ ಮನ, ಭಾವಲಿಂಗದಲ್ಲಿ ನಿಜಭಾವ ನಿಮಗ್ನತೆ. ಇಲ್ಲಿಂದ ಮುಂದೆ ಶಬ್ದವಿಲ್ಲ ! ಅದು ಅವರ್ಣನೀಯ ಸ್ಥಿತಿ!

ಈ ಸ್ಥಿತಿಯಲ್ಲಿ ಕೊನೆಯ ನಾಲ್ಕಾರು ತಿಂಗಳುಗಳನ್ನು ಕಳೆದು ಲಿಂಗಾಂಗ ಸಾಮರಸ್ಯವನ್ನು ಬೆಳೆದ ಶಿವಯೋಗಿಗಳು ತಮ್ಮ ೮೫ನೆಯ ವಯಸ್ಸಿನಲ್ಲಿ ಶಾಲಿವಾಹ ಶಕೆ ೧೮೪೩ನೆಯ ದುರ್ಮುಖಿ ಸಂವತ್ಸರದ ಚೈತ್ರಮಾಸ ಕೃಷ್ಣಪಕ್ಷ ಪ್ರತಿಪದ ಶನಿವಾಗ ಹನ್ನೊಂದು ತಾಸಿನ ವೇಳೆಗೆ ಲಿಂಗಾರ್ಚನೆಗೆ ಕುಳಿತರು. ಮತ್ತೆ ಮೇಲೇಳಲಿಲ್ಲ. ಲಿಂಗದಲ್ಲಿ ದೃಷ್ಟಿಯಿಟ್ಟು ಲಿಂಗೈಕ್ಯರಾಗಿಬಿಟ್ಟರು. ಬ್ರಹ್ಮರಂಧ್ರದ ಊರ್ಧ್ವ ಮಾರ್ಗದಿಂದ ಅವರ ದಿವ್ಯಾತ್ಮವು ಪರಮಾತ್ಮನನ್ನು ಸೇರಿ ಸಮರಸವಾಯಿತು. ಜಂಗಮ ಜ್ಯೋತಿಯು ೮೫ ವರ್ಷಗಳವರೆಗೆ ಪರಮಾತ್ಮ ಭಾವದ ಪ್ರಕಾಶವನ್ನು ಬೀರಿ ಶಾಂತವಾಯಿತು !

ಇಲ್ಲ, ಶಾಂತವಾಗಿಲ್ಲ, ಇನ್ನೂ ಪ್ರಜ್ವಲಿಸುತ್ತಿದೆ–ಧಾರವಾಡದ ಮುರಘಾಮಠದಲ್ಲಿ–ಮೃತ್ಯಂಜಯ ಮಹಾಶಿವಯೋಗಿಗಳ ಮಂತ್ರದೇಹದಲ್ಲಿ! ಅದೇ ಪರಜಂಗಮಲೀಲೆ, ಅದೇ ಸಹಜಾನಂದ ಸ್ಥಿತಿ, ಅದೇ ನಿತ್ಯತೃಪ್ತ ನಿರೀಹಂಭಾವ, ಅದೇ ಪರವನೊಳಕೊಂಡ ಪರಿಣಾಮಿತ್ವ.

ಶ್ರೀದಂ ಚಿಜ್ಜಲಧಿಂ ಕೃಪಾರಸನಿಧಿಂ ವೈರಾಗ್ಯಭಾಗ್ಯೋದದಿಂ ।
ಶಾಂತ್ಯೈಶ್ವರ್ಯ ವಿಭೂಷಣಂ ಶುಭಗುಣಂ ಮಾರಾಬ್ಜ ಸದ್ವಾರಣಂ ॥
ವಂದೇಹಂ ಮುರುಘೇಶ್ವರಂ ಗುರುವರಂ ಖ್ಯಾತಾಥಣೇ ಪತ್ತನ ।
ಪ್ರೋದ್ದಾಮೋಲ್ಲಸದಿತ್ಯಗಚ್ಚಿನಮಠಾಧೀಶಂ ಚರೇಶಂ ಸದಾ ॥

–ಕೈ. ಮಾಗಡಿ ವೀರಪ್ಪಶಾಸ್ತ್ರೀ

■

# ಪುರಾತನ –ನೂತನಗಳ ಸೇತುವೆ

ಶರಣ ಪರಂಪರೆಯ ಸತ್ವವೆನಿತೊ, ಇಂದಿಗೂ ಜೀವಂತವಾಗಿ ಉಳಿದಿದೆಯದು. ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿದ್ದ ಬಾಲಲೀಲಾ ಮಹಾಂತ ಶಿವಯೋಗಿಗಳು, ಘನಮಠದ ನಾಗಭೂಷಣ ಶಿವಯೋಗಿಗಳು, ಸರ್ವಭೂಷಣ ಶಿವಯೋಗಿಗಳ ಚರಿತ್ರೆಗಳನು ಅವಲೋಕಿಸಿದುದಾಯಿತು. ಆ ಕಾಲದಲ್ಲಿಯೂ ತರುವಾಯವೂ ಮಲ್ಲನಮೂಲೆ ಕಂಬಳಿಸ್ವಾಮಿಗಳು, ಬೆಟ್ಟದ ಪುರದ ಚಿಕ್ಕವೀರ ದೇಶೀಕೇಂದ್ರರು, ಸಿದ್ಧರಹಟ್ಟಿ ಗವಿಮಠದ ಶಿವಯೋಗಿ ಸದಾ ಶಿವರುದ್ರಸ್ವಾಮಿಗಳು, ಕಾನಕಾನಹಳ್ಳಿ ತಾಲ್ಲೂಕು ಮೊರಳೇ ಮಠದ ಶಿವರುದ್ರ ಸ್ವಾಮಿಗಳು, ಮೈಸೂರು ಅರಮನೆ ಪಂಚಗವಿಮಠದ ಮಹಾಲಿಂಗಸ್ವಾಮಿಗಳು, ರಾಜಾಪುರಮಠದ ರಾಜೇಶ್ವರಸ್ವಾಮಿಗಳು, ಸಿದ್ಧಗಂಗಾಕ್ಷೇತ್ರದ ಆಟವೀ ಸ್ವಾಮಿಗಳು ಹಾಗೂ ಮುಪ್ಪಿನ ಸ್ವಾಮಿಗಳು, ಉದ್ದಾನ ಶಿವಯೋಗಿಗಳು, ಮತುಕೂರು ನಂಜುಂಡ ಶಿವಯೋಗಿಗಳು, ಎಳಂದೂರು ಬಸವಲಿಂಗಸ್ವಾಮಿಗಳು, ಸುತೂರು ಸಿದ್ಧಲಿಂಗ ಸ್ವಾಮಿಗಳು, ನಿಡುಮಾಮಿಡಿ ಶ್ರೀಗುರು ಕರಿಬಸವರಾಜು ದೇಶಿಕೇಂದ್ರರು, ಹುಬ್ಬಳ್ಳಿ ಮೂರುಸಾವಿರ ಮಠದ ಗಂಗಾಧರರಾಜ ಯೋಗೀಂದ್ರ ಮಹಾರಾಜರು ನಂಜನಗೂಡು ಕನಕಗಿರಿಮಠದ ಕೆಂಡಗಣ್ಣ ಸ್ವಾಮಿಗಳು, ಹಲಗುಮೂಲೆ ಸಪ್ಪೆಸ್ವಾಮಿಗಳು, ಹಾಲಕೆರೆ ಅನ್ನದಾನಸ್ವಾಮಿಗಳು, ಕೊಪ್ಪಳ ಗವಿಸಿದ್ಧೇಶ್ವರ ಸ್ವಾಮಿಗಳು, ನೀರಲಕೇರಿ ಬಸವಲಿಂಗ ಶಿವಯೋಗಿಗಳು, ಶಹಾಪೂರ ಅನವಾರ ಮಠದ ಚರಬಸವೇಶ್ವರರು, ಹಂಸಭಾವಿ ಕೋರೀಟೋಪಿಮಠದ ಸಿದ್ಧಲಿಂಗ ಶಿವಯೋಗಿಗಳು, ಸಖರಾಯ ಪಟ್ಟಣದ ಶ್ರೀ ಗುರು ಹಾಲುಸ್ವಾಮಿಗಳು, ಸುಲ್ಪೈಪೇಟೆ ಖಟ್ವಾಂಗ ಯತಿಗಳು, ಅಡವೀಂದ್ರ ಸ್ವಾಮಿಗಳು ಕಲ್ಲೂರು, ಚನ್ನಬಸವ ಶಿವಾಚಾರ್ಯರು, ಘನಮಠ, ಹಾರಕೋಡಿ, ಚರಲಿಂಗಸ್ವಾಮಿಗಳು, ಕಲ್‌ಬುರುಗಿ, ನಾವರಗಿ ರೇವಪ್ಪಯ್ಯನವರು, ಅವರಾದಿ ಫಲಹಾರೇಶ್ವರ ಶಿವಯೋಗಿಗಳು, ತೋಪಿನ ಮಠದ ಷಡಕ್ಷರ ಸ್ವಾಮಿಗಳು, ಕಾನಾಮಡು ಶರಣರು, ಸೋಮೇಕಟ್ಟೆ ಕರಿವೃಷಭೇಂದ್ರರು, ಬೆಲವಂತ ಚನ್ನ ಬಸವೇಶ್ವರ ಶಿವಯೋಗಿಗಳು, ಶಾಲ್ಯದ ಅರಸರು, ಗದ್ದಿಗೆ ಮರುಳಸಿದ್ಧ, ಬಿಜ್ಜಾವರಿ ತೋಂಟದ ಭೂಪಾಲ, ಹಾಗಲ್ವಾಡಿಯ ಜಿಕ್ಕಭೂಪಾಲ,

ಹುಚ್ಚೇಶ್ವರ, ಕಂಬಳಿಹಾಳ ದೊಡ್ಡಬಸವೇಶ್ವರ ಇತ್ಯಾದಿ ಅನೇಕರು ಶರಣಧರ್ಮ ದೀಪಕರಾಗಿ ಹೋಗಿದ್ದಾರೆ. ಅವರೆಲ್ಲರ ವಿಷಯ ವಿವರಿಸಲು ಅವಕಾಶವಿಲ್ಲ. ಆದರೆ ಇನ್ನಿಬ್ಬರ ಉಲ್ಲೇಖ ಮಾಡದೆ ಪ್ರಕೃತ ಗ್ರಂಥ ಪರಿಸಮಾಪ್ತವಾಗದೆಂದು ತೋರುತ್ತದೆ. ಶ್ರೀ ಗುರುಮಲ್ಲೇಶ್ವರರು ಮತ್ತು ಕುಮಾರ ಸ್ವಾಮಿಗಳೇ ಆ ಇಬ್ಬರು.

ಇಬ್ಬರೂ ತಾರಾಗಣದ ನಡುವಣ ಚಂದ್ರನಂತೆ ಪರಿಶೋಭಿಸಿದವರು. ಒಬ್ಬರು ಪರಮ ದಾಸೋಹ ಮೂರ್ತಿಗಳಾದರೆ ಒಬ್ಬರು ಯೋಗಶಕ್ತಿಯಿಂದ ಸಮಾಜದಲ್ಲಿ ಹೊಸ ಚೈತನ್ಯವನ್ನು ಹುಟ್ಟಿಸಿದ ಕ್ರಿಯಾವೀರರು. ಒಬ್ಬರು ಸಂಸಾರಿಗಳಾಗಿದ್ದು ಶಿವಸ್ವರೂಪರಾದವರು, ಒಬ್ಬರು ವೀರಸನ್ಯಾಸಿಗಳಾಗಿದ್ದು ವಿವೇಕಾನಂದರಂತೆ ನಿದ್ರಿತ ಸಮಾಜವನ್ನು ಜಾಗೃತಗೊಳಿಸಿ ಅಭವಸ್ವರೂಪರಾದವರು. ಒಬ್ಬರಿಂದ ಮೈಸೂರುಜಿಲ್ಲೆಯ ದಕ್ಷಿಣಭಾಗದಲ್ಲಿರುವ ದೇವನೂರು ಪವಿತ್ರ ಕ್ಷೇತ್ರವಾಗಿ ಇಂದಿಗೂ ಜಾಗೃತ ಸ್ಥಾನವೆನಿಸಿದೆ ; ಒಬ್ಬರಿಂದ ಮಹಾಕೂಟದ ಹತ್ತಿರ ಮಲಾಪಹಾರೀ ನದೀತೀರದಲ್ಲಿ ಶಿವಯೋಗ ಮಂದಿರವು ಮೈದೋರಿ ಇಂದಿಗೂ ಕರ್ನಾಟಕದ ಏಕಮೇವ ಅಧ್ಯಾತ್ಮ ವಿದ್ಯಾಕೇಂದ್ರವಾಗಿ ಕಂಗೊಳಿಸುತ್ತಿದೆ.

ಶಿವಮೊಗ್ಗಾ ಜಿಲ್ಲೆಯಲ್ಲಿ ನೇಮತಿ ಎಂಬ ಊರಿದೆ. ಧರ್ಮಾತ್ಮ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಆ ಊರಿನ ಮಠಾಧಿಪತಿ ನಂದಿ ಬಸವಾರ್ಯರ ಸತ್ಪುತ್ರ ಶರಣಬಸವಯ್ಯನವರು ಹೆಸರಿಗೆ ತಕ್ಕಂತೆ ಶರಣರಾಗಿ ಶೋಭಿಸಿದರು. ಅವರಿಗೆ ಶಿವಮ್ಮ, ಶರ್ವಾಣಮ್ಮ ಎಂಬ ಇಬ್ಬರು ಸತಿಯರು. ಆದರೂ ಶರಣ ಬಸವಯ್ಯನವರು ಶರಣಜೀವಿಗಳು, ಶಿವಾನುಭವಿಗಳು. ಅವರ ಕೀರ್ತಿ ಆ ಭಾಗದಲ್ಲೆಲ್ಲ ಪಸರಿಸಿದ್ದಿತು.

ಅವರು ಉಭಯ ಪತ್ನಿಯರು ಮತ್ತು ಕೆಲವರು ಶಿಷ್ಯರೊಡನೆ ಕಾಶಿ, ಪ್ರಯಾಗ, ಹರದ್ವಾರ, ಶ್ರೀಶೈಲ, ಗೋಕರ್ಣ ಇತ್ಯಾದಿ ಕ್ಷೇತ್ರಗಳನ್ನು ಸಂದರ್ಶಿಸಿ ಮೈಸೂರಿಗೆ ಬಂದರು. ಅಲ್ಲಿ ಮಹಲಿಂಗಪ್ಪನ ಮಠದಲ್ಲಿ ಉಳಿದುಕೊಂಡರು. ಆಗ ಅಲ್ಲಿ ಮಹಾತ್ಮರಾಗಿದ್ದ ಶಿವಯೋಗಿ ಗುರುಮಲ್ಲೇಶರ ಅನುಗ್ರಹಕ್ಕೆ ಪಾತ್ರರಾಗಿ ಪುತ್ರನೊಬ್ಬನನ್ನು ಪಡೆದು ಅವನಿಗೆ 'ಗುರುಮಲ್ಲೇಶ'ನೆಂದೇ ನಾಮಕರಣ ಮಾಡಿದರು.

ಮುಂದೆ ಕೆಲವು ದಿನಗಳಲ್ಲಿ ಶಿವಯೋಗಿ ಗುರುಮಲ್ಲೇಶರೂ, ತಂದೆ ಶರಣ ಬಸವಯ್ಯನವರೂ ತಾಯಿ ಶರ್ವಾಣಮ್ಮ (ನೀಲಮ್ಮ?)ನವರೂ ಶಿವಸಾಯುಜ್ಯವನ್ನು ಹೊಂದಿದರು. ದೀವಟಿಗೆ ಬೀದಿಯಲ್ಲಿದ್ದ ಬೆತ್ತಲಗುಂಡೆಸ್ವಾಮಿಗಳಿಂದ ಗುರುಮಲ್ಲೇಶರಿಗೆ ಅನುಗ್ರಹವಾಯಿತು. ಅವರ ಗುರುಕಾರುಣ್ಯದ ಶಿಶುವಾಗಿ, ಆಗಿನ ಅಧ್ಯಾತ್ಮ ವೀರರಾದ ಮುಪ್ಪಿನ ಸ್ವಾಮಿಗಳು ಮಹಾಲಿಂಗಪಾದರು ಮತ್ತು

ಕೂಡಲಿಸ್ವಾಮಿಗಳವರ ಕೃಪಾಶೀರ್ವಾದಗಳಿಗೆ ಪಾತ್ರರಾಗಿ ಗುರುಮಲ್ಲೇಶ್ವರರು ಬೆಳೆದರು–ಭಕ್ತಿಯ ಬಳ್ಳಿ ಬೆಳೆದಂತೆ ಬೆಳೆದರು, ಮುಕ್ತಿಯ ಮರ ಬೆಳೆದಂತೆ ಬೆಳೆದರು. ಆಗ ಅರಮನೆಯ ಭಕ್ಷಿಗಳಾಗಿದ್ದ ಹೊಸಳ್ಳಿ ಶಿವಪ್ಪನವರು ಶರಣ ದಂಪತಿಗಳಲ್ಲಿ ಭಕ್ತಿಯುಳ್ಳವರಾಗಿದ್ದರು. ಗುರುಮಲ್ಲಪ್ಪನವರಿಗಂತೂ ಎರಡೂ ಹೊತ್ತು ಅವರಲ್ಲಿಯೇ ಊಟವಾಗುತ್ತಿತ್ತು. ಸರ್ವಶ್ರೀ ದೇವಪಾರ್ಥಿವ ಬಹಾದ್ದೂರ್ ನಂಜರಾಜ ಬಹಾದ್ದೂರರೂ ಅವರ ಬಗ್ಗೆ ಆದರಭಾವವನ್ನು ತಾಳಿದ್ದರು.

ಗುರುಮಲ್ಲಪ್ಪನವರು ಚಾಮುಂಡಿ ಬೆಟ್ಟದಲ್ಲಿ ಹನ್ನೆರಡು ವರ್ಷಗಳವರೆಗೆ ಅನುಷ್ಠಾನ ಮಾಡಿ ಸಿದ್ಧಿಯನ್ನು ಪಡೆದುಕೊಂಡರು. ಆಗಲೂ ಅವರು ಕಾಯಕವನ್ನು ಬಿಟ್ಟಿರಲಿಲ್ಲ. ನಿತ್ಯದಲ್ಲೂ ಕಂತೆಭಿಕ್ಷೆಮಾಡಿ ದಾಸೋಹವನ್ನು ನಡೆಸಿದರು. ಅವರಿಗೂ ಕಾಯಕವೇ ಸತ್ಯವಾಯಿತು. ದಾಸೋಹವೇ ನಿತ್ಯವಾಯಿತು.

ಒಮ್ಮೆ ಮಹಾಲಿಂಗಪ್ಪನವರ ಮಠದಲ್ಲಿ ಬಸವಪುರಾಣ ಪ್ರವಚನ ನಡೆಯಿತು.ಯಾರೋ ಅಪಸ್ವರ ಎತ್ತಿದರು–'ಇವೆಲ್ಲ ಪವಾಡಗಳು ಕಟ್ಟು ಕಥೆಗಳು. ಈಗ ಯಾರಾದರೂ ಇಂಥ ಪವಾಡ ಮಾಡಿ ತೋರಿಸಿದರೆ ಮಾತ್ರ ಇವುಗಳನ್ನು ನಂಬಬಹುದು.'

ಪುರಾಣ ಪ್ರವಚನ ಕೇಳುತ್ತ ಕುಳಿತಿದ್ದ ಗುರುಮಲ್ಲಪ್ಪನವರು ಎದ್ದುನಿಂತರು. ಎಲ್ಲರ ಬೆರಗುನೋಟಗಳೂ ಅತ್ತ ಹೊರಳಿದುವು. ಏನು ಮಾಡುವರೋ ಎಂದು ಎಲ್ಲರೂ ಉಸಿರುಕಟ್ಟಿ ನೋಡುತ್ತಿರಲು ಬಾಕುವನ್ನು ತೆಗೆದುಕೊಂಡು ಬಸಿರನ್ನು ಬಗೆದುಕೊಂಡುಬಿಟ್ಟರು ! ಕರುಳು ಹೊರಚೆಲ್ಲಿ ರಕ್ತ ಹರಿಯತೊಡಗಿತು. ಅರಮನೆಗೆ ಸುದ್ದಿ ಹೋಯಿತು. ರಾಜ ವೈದ್ಯರು ಧಾವಿಸಿ ಬಂದರು. ಆದರೆ ಗುರುಮಲ್ಲಪ್ಪನವರು ಔಷಧ ಲೇಪಿಸಲು ಒಪ್ಪಲಿಲ್ಲ. ಹರ್ಷಚಿತ್ತರಾಗಿಯೇ ಕುಳಿತುಬಿಟ್ಟಿದ್ದರು. ಆಗ ಅವರ ತಾಯಿಯವರು ಜಂಗಮ ಪಾದೋದಕ ತಂದು ಹೊರಬಿದ್ದ ಕರುಳುಗಳನ್ನು ಕೈಯಿಂದ ಒಳಗೆ ತಳ್ಳಿ ಗಾಯಕ್ಕೆ ಪಾದೋದಕ ಸಿಂಪಡಿಸಿದರು. ಆ ಗಾಯ ಅಷ್ಟರಿಂದಲೇ ಮಾಯಿತು. ಎಲ್ಲರಿಗೂ ವಿಸ್ಮಯವಾಯಿತು. ನಿಂದಕನು ವಂದಿಸಿ ಕ್ಷಮೆ ಕೋರಿದನು. ನಿರ್ವೈರವೇ ನಿಜಾಚಾರಣೆಯಾಗಿದ್ದ ಗುರುಮಲ್ಲೇಶರು ಅವನನ್ನೂ ಅನುಗ್ರಹಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಗುರುಮಲ್ಲೇಶರು ಮಹಾತ್ಮರೆಂಬುದು ಮನವರಿಕೆಯಾಯಿತು. ತೋಳಬಾಪುರಿ, ಕಾಲಬಂದಿ, ಬೆರಳುಗಳಿಗೆ ನವರತ್ನ ಖಚಿತ ಉಂಗುರಗಳು, ಕೊರಳಿಗೆ ಮೂವತ್ತೆರಡು ರುದ್ರಾಕ್ಷಿಗಳ ಕುಪ್ಪಿಗೆ ಹಾಕಿಸಿ, ಜೊತೆಗೆ ಗೌರೀಶಂಕರವನ್ನು ಸೇರಿಸಿ ಮಾಡಿಸಿದ ಹಾರ–ಇವಿಷ್ಟನ್ನು ಗುರು

ಮಲ್ಲೇಶರಿಗೆ ಭಕ್ತಿಯಿಂದ ಅರ್ಪಿಸಿದರು. ಅವುಗಳನ್ನು ನೋಡಿ ನಸುನಕ್ಕು ಗುರುಮಲ್ಲೇಶ್ವರೆಂದರು–'ದೊರೆಗಳೆ, ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದೇ ಲಿಂಗಕ್ಕೆ ಅರ್ಪಿತವಲ್ಲದೆ ಕಾಯಕದಿಂದ ಬಾರದುದು ಅನರ್ಪಿತ !'

ಮಹಾಪ್ರಭುಗಳು ಮಹಾಶರಣರ ಇಂಗಿತವನ್ನು ಅರಿತು ಹಿಂದಿರುಗಿದರು. ಮಾರನೆಯ ದಿನ ಮರಳಿ ಬಂದರು. ಗುರುಮಲ್ಲೇಶರಿಗೆ ನಮಸ್ಕರಿಸಿ ನಾಲ್ಕಾಣೆಯ ನಾಣ್ಯವೊಂದನ್ನು ಅರ್ಪಿಸಿದರು.

'ಇದು ಕಾಯಕದಿಂದ ಬಂದುದೆ?' ಎಂದು ಕೇಳಿದರು ಮಹರ್ಷಿಗಳು.

'ಹೌದು ಗುರುವರ, ನಾನು ಕೊಡಲಿ ಹೊತ್ತು ಹೋಗಿ ಸೌದೆ ತಂದು ಸಂಪಾದಿಸಿದ ನಾಲ್ಕಾಣೆಯಿದು' ಎಂದು ಉತ್ತರವಿತ್ತರು ರಾಜರ್ಷಿಗಳು.

ಮಹಾರಾಜರ ಮಾತುಗಳನ್ನು ಕೇಳಿ ಗುರುಮಲ್ಲೇಶರಿಗೆ ಪರಮಾನಂದವಾಯಿತು. ಆ ಆದರ್ಶ ಪ್ರಭುಗಳನ್ನು ಹೃದಯ ತುಂಬಿ ಹರಿಸಿದರು. ತಾವೇ ಮಾತು ಮುಂದುವರಿಸಿ ಹೇಳಿದರು, 'ನೀವು ಈ ಮೊದಲು ಅರ್ಪಿಸಿರುವ ತೊಡವುಗಳನ್ನು ನಾನು ಪ್ರತಿವರ್ಷವೂ ಗೌರೀಹಬ್ಬದಲ್ಲಿ ಭಕ್ತರ ಮನೆಬಾಗಿಲಿಗೆ ಗುರು ಕಾರುಣ್ಯಭಿಕ್ಷಕ್ಕೆ ಹೋಗುವಾಗ ಧರಿಸುವೆನು.' ಶ್ರೀಗೌರೀಕರುಣಾಮೃತಸರ ಸೀರುಹಭೃಂಗರಾಗಿದ್ದ ಶ್ರೀಮನ್ಮಹಾರಾಜರಿಗೆ ಅದೆಷ್ಟು ಆನಂದವಾಗಿರಲಿಕ್ಕಿಲ್ಲ? 'ಅನುಗೃಹೀತನಾದೆ' ಎಂದು ಅಡ್ಡ ಬಿದ್ದರು. ಅದರಂತೆ ಗುರುಮಲ್ಲೇಶರು ಗೌರೀ ಹಬ್ಬಕ್ಕೊಮ್ಮೆ ಅವುಗಳನ್ನು ಧರಿಸಿಯೇ ಭಿಕ್ಷಕ್ಕೆ ಹೋಗುತ್ತಿದ್ದರು. ಇಂದಿಗೂ ಅದೇ ಪರಿಪಾಠ ದೇವನೂರಿನ ಮಠದಲ್ಲಿ ನಡೆದಿದೆ.

ಗುರುಹಿರಿಯರ ಮತ್ತು ತಂದೆತಾಯಿಗಳ ಮಾತು ಮೀರಲಾರದೆ ಗುರು ಮಲ್ಲೇಶ್ವರರು ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು. ಶಂಕರಮ್ಮ, ಭದ್ರಮ್ಮ ಎಂಬ ಇಬ್ಬರು ಪತ್ನಿಯರನ್ನು ಪರಿಗ್ರಹಿಸಿಯೂ ಶರಣಸ್ಥಲದಲ್ಲಿ ನೆಲೆಯಾಗಿ ನಿಂತರು. ಸಂಸಾರವು ಶರಣಜೀವನಕ್ಕೆ ತೊಡಕಾಗದೆ ತೊಡವಾಗಬಲ್ಲುದೆಂಬುದನ್ನು ತೋರಿಸಿಕೊಟ್ಟರು–ಸಿರಿಯಾಳನಂತೆ, ದಾಸಿಮಯ್ಯನಂತೆ, ಬಸವಣ್ಣನವರಂತೆ, ಮೋಳಿಗೆಯ ಮಾರಯ್ಯ, ಹಡಪದ ಅಪ್ಪಣ್ಣ ಹರಳಯ್ಯಾದಿಗಳಂತೆ, ಪಂಡಿತಾರಾಧ್ಯ ರೇವಣಸಿದ್ಧರಂತೆ ಅವರ ಅನುಗ್ರಹದಿಂದ ಏನೂ ಬರದ ಶಿವಪ್ಪನು ಶಿವಪ್ಪಶಾಸ್ತ್ರಿಯಾಗಿ ವಿಖ್ಯಾತ ವಿದ್ವಾಂಸನೆನಿಸಿದನು. ಅವರ ಶಿಷ್ಯರ ಸಂಖ್ಯೆ ಬೆಳೆಯತೊಡಗಿತು. ಅವರೊಡನೆ ಅವರ ಅನುವರ್ತಿಗಳಾಗಿದ್ದ ಮುಪ್ಪಿನ ಸ್ವಾಮಿಗಳವರ ಮಹಿಮೆಯೂ ಬೆಳೆಯತೊಡಗಿತು.

ಆಗ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ದೇವನೂರ ಗ್ರಾಮದಲ್ಲಿ ಪಟೇಲ್ ಸುಬ್ಬಣ್ಣನವರೆಂಬ ಸುಪ್ರತಿಷ್ಠಿತ ಭೂಮಿದಾರರಿದ್ದರು. ಅವರ ಪತ್ನಿ ಶಂಕರಮ್ಮನವರಿಗೆ ಬ್ರಹ್ಮಪಿಶಾಚಿ ಬೆನ್ನುಹತ್ತಿದ್ದಿತು. ಏನು ಮಾಡಿದರೂ ಬಿಟ್ಟಿರಲಿಲ್ಲ. ಗುರುಮಲ್ಲೇಶ್ವರರ ಕೀರ್ತಿ ಕೇಳಿ ಸುಬ್ಬಣ್ಣನವರು ಸ್ನೇಹಿತರೊಡನೆ ಮೈಸೂರಿಗೆ ಬಂದರು. ಗುರುಮಲ್ಲೇಶ್ವರರಿಗೆ ನಿತ್ಯವೂ ಬೆಳಗಿನಲ್ಲಿ ಮೊಸರು ಅನ್ನ ಊಟಮಾಡಿಸುತ್ತಿದ್ದ ಚಿಕ್ಕಲಿಂಗಮ್ಮನನ್ನು ಕಂಡು ತಮ್ಮ ಕರುಣ ಕಥೆಯನ್ನು ತೋಡಿಕೊಂಡರು. ಶಂಕರಮ್ಮನು ಪಡುತ್ತಿದ್ದ ಸಂಕಟವನ್ನು ಕೇಳಿ ಚಿಕ್ಕಲಿಂಗಮ್ಮನ ಕರುಳು ಕರಗಿತು. ಅಗತ್ಯವಾಗಿ ಗುರುಮಲ್ಲೇಶನನ್ನು ದೇವನೂರಿಗೆ ಕಳಿಸುವೆನೆಂದು ವಚನವಿತ್ತಳಾಕೆ. ಹೆಣ್ಣಿಗೆ ಹೆಣ್ಣು ನೆರವಾಗುವುದು ಸಹಜವೇ.

ಮರುದಿನ ಗುರುಮಲ್ಲೇಶರು ಬೆಳಗಿನ ಮೊಸರನ್ನದೂಟ ಮಾಡುತ್ತ ಕುಳಿತಿದ್ದಾಗ 'ಗುರುಮಲ್ಲಪ್ಪಾ' ಎಂದಳು ಲಿಂಗಮ್ಮ. 'ಏನವ್ವಾ' ಎಂದರು ಗುರುಸ್ವಾಮಿಗಳು. ಆಕೆಗೆ 'ಅವ್ವಾ' ಎಂದು ಕರೆದರೇ ಅವರಿಗೆ ಸಮಾಧಾಮ.

> 'ನನ್ನದೊಂದು ಮಾತು ನಡೆಸಿಕೊಡುತ್ತೀಯಾ ಗುರುಮಲ್ಲಪ್ಪ?'
>
> ಅದೇನಿದ್ದರೂ ನಡೆಸಿಕೊಡುವೆ ಹೇಳವ್ವಾ–ನೀನು ನನ್ನನ್ನು ಉಣಿಸಿ ಬೆಳಸಿದ ತಾಯಿ. ನಿನ್ನ ಮಾತು ಮೀರುವೆನೆ?'

ಚಿಕ್ಕಲಿಂಗಮ್ಮನಿಗೆ ಧೈರ್ಯಬಂದಿತು. ದೇವನೂರಿನ ಸುಬ್ಬಣ್ಣನ ಸುದ್ದಿ ಹೇಳಿದಳು. ಗುರುಮಲ್ಲೇಶ್ವರಿಗೆ ಮೈಸೂರು ಬಿಟ್ಟು, ಚಿಕ್ಕಲಿಂಗಮ್ಮ, ಬಕ್ಷಿ ಶಿವಪ್ಪನವರಂಥ ಸದ್ಭಕ್ತರನ್ನು ಬಿಟ್ಟು ಹೋಗಲು ಹೇಗೆಹೇಗೋ ಎನಿಸಿತು. ಆದರೆ ಹರನಿರೂಪ ಹಾಗೆಯೇ ಇರಬಹುದೆಂದು ದೇವನೂರಿಗೆ ಹೋಗಲು ಒಪ್ಪಿದರು. ಮಾತಾಪಿತೃಗಳು ಲಿಂಗೈಕ್ಯರಾಗಿ ಅದೆಷ್ಟೋ ದಿನಗಳಾಗಿದ್ದುವು. ಪುತ್ರಿಯರಾದ ಆಲಮ್ಮ ನಿಜಲಿಂಗಮ್ಮರ ವಿವಾಹವೂ ಆಗಿಹೋಗಿದ್ದಿತು. ಸರಿ, ತಮಗೆ ಪ್ರಿಯವಾದ ಈ ಪದವನ್ನು ಹಾಡುತ್ತಾ ಹೊರಟರು.

> ಮಾಡಿದನೆನ್ನ ಫಕೀರನ । ಸದ್ಗುರು । ಮಾಡಿದನೆನ್ನ ಫಕೀರನ ।
> ನೋಡಲಿಕಾಶ್ಚರ್ಯ ಪ್ರಪಂಚ ಕಳೆದು । ನಾಮ । ರೂಪಕೆ ದೂರಾದ ಗುರು ॥ಪ॥
>
> ಅನುಭವ ಕಪ್ಪರ ಹೃದಯದ ಜೋಳಿಗೆ–
> ಎನ್ನಯ ಕಂಕುಳೊಳ್ ಇಟ್ಟ ಗುರು
> ಅನಿಮಿಷ ದೃಷ್ಟಿ ಅರುಹಿನ ಕಪಿನಿ–
> ಅಮೃತ ಕಮಂಡಲ ಕೊಟ್ಟ ಗುರು ॥೧॥

ನಾದದ ಕಿನ್ನರಿ ಧೈರ್ಯ ಮುಖಾರಿ
ನಿಸ್ಸಂಗ ಟೋಪಿಯನಿಟ್ಟ ಗುರು
ಬೋಧದ ಭಂಗಿ ನಿರ್ಗುಣ ಲುಂಗಿ
ಸೈರಣೆ ಗುಟುಕನು ಕೊಟ್ಟ ಗುರು ॥೨॥

ಈ ಪರಿಯನೆ ಮಾಡಿ ಬಯಲನೆ ಹಿಡಿಯೆಂದು
ಕರವನು ನೆತ್ತಿಯೊಳು ಇಟ್ಟ ಗುರು
ಭೂಪಚಿದಾನಂದ ಫಕೀರನಾಗೆಂದು
ತಿರುಗೆಂದಪ್ಪಣೆ ಕೊಟ್ಟ ಗುರು ॥೩॥

ಈ ಮಹಾತ್ಮನಿಗೆ ಮುಂಜಾನೆ ಮೊಸರನ್ನ ಉಣ್ಣಿಸುವ ಪುಣ್ಯ ತೀರತಲ್ಲ– ಎಂದು ಚಿಕ್ಕಲಿಂಗಮ್ಮ ದುಃಖಿಸಿದಳು. ಕೊನೆಯವರೆಗೂ ಗುರುಮಲ್ಲೇಶ್ವರನ ಧ್ಯಾನದಲ್ಲಿಯೇ ದಿನಗಳೆದಳು. ಮುಂದೆ ಗುರುಮಲ್ಲೇಶ್ವರರು ಭವವನ್ನು ಬೆರೆತ ಮೇಲೆ ಒಮ್ಮೆ ಚಿಕ್ಕಲಿಂಗಮ್ಮನ ಕನಸಿನಲ್ಲಿ ಕಾಣಿಸಿಕೊಂಡು, 'ಅವ್ವಾ, ಮೊಸರನ್ನ ಉಣ್ಣುವ ಆಸೆಯಾಗಿದೆ' ಎಂದರೆಂತೆ. ಅದನ್ನು ನೆನೆದು, ತನ್ನನ್ನು ಮೊದಲು ಕಳಿಸದೆ ತಾನೆ ಮೊದಲು ಶಿವನೆಡೆಗೆ ಹೋದುದನ್ನು ನೆನೆದು ಮಮ್ಮಲ ಮರುಗಿ ಆ ಮಾತಾಯಿ ತಾನಿರುವವರೆಗೂ ಗುರುಸ್ವಾಮಿಗಳವರ ಸಮಾಧಿಗೆ ಮುಂಜಾನೆ ಮೊಸರನ್ನದ ನೈವೇದ್ಯ ಸಮರ್ಪಿಸಿದಳಂತೆ ಎಂಥ ತಾಯಿ, ಎಂಥ ಮಗ !

ಗುರುಮಲ್ಲೇಶ್ವರರು ಸುಬ್ಬಣ್ಣನವರ ಮನೆಯನ್ನು ಪ್ರವೇಶಿಸುತ್ತಲೆ ಶಂಕರಮ್ಮನವರು ಬ್ರಹ್ಮಪಿಶಾಚಿಯಿಂದ ಮುಕ್ತರಾದರಂತೆ. ಸುಬ್ಬಣ್ಣನವರು ತಮ್ಮದೊಂದು ಮನೆ ತೆರವು ಮಾಡಿಸಿ ಅದನ್ನೇ ಮಠವನ್ನಾಗಿ ಪರಿವರ್ತಿಸಿದರಂತೆ. ಅಲ್ಲಯೇ ಗುರುಮಲ್ಲೇಶ್ವರರು ಇದ್ದು ನಿತ್ಯ ಕಂತೆ ಭಿಕ್ಷಮಾಡಿ ದಾಸೋಹ ನಡೆಸಿದುದರಿಂದ ಅದು ಭಿಕ್ಷದ ಮಠವಾಗಿ ಬೆಳೆದು ಇಂದಿನ ಪವಿತ್ರ ಕ್ಷೇತ್ರವಾಗಿ ಕಂಗೊಳಿಸುತ್ತಲಿದೆ.

ಶ್ರೀಗುರುವಿನ ಆಗಮನದಿಂದ ಆ ಭಾಗದಲ್ಲಿ ಶಿವಭಕ್ತಿಗೆ ಉಕ್ಕು ಬಂದಿತು. ಅವರು ನಂಜನಗೂಡು, ಚಾಮರಾಜನಗರ, ಹೆಗ್ಗಡದೇವನಕೋಟೆ, ಗುಂಡಲಪೇಟೆ, ತಿರುಮಕೂಡಲು ನರಸೀಪುರ, ಕೊಳ್ಳೇಗಾಲ, ಮಳವಳ್ಳಿ ತಾಲ್ಲೂಕುಗಳಲ್ಲಿಯೂ ಗೋಪಸೆಟ್ಟ ಪಾಳ್ಯ, ಬೆಂಗಳೂರು ಭಾಗಗಳಲ್ಲಿಯೂ ಸಂಚರಿಸಿ ಶಿವಮತವನ್ನು ಉದ್ಧರಿಸಿದರು. ಬಿಗಿಯಾದ ನಾಡಿ ಹಾಕಿದ ಷರಾಯಿ, ಮೇಲೊಂದು ಕಸೆಯ ಅಂಗಿ ಧರಿಸಿ, ತಲೆಗೆ ಒಂದು ಥಾನು ಬಟ್ಟೆಯನ್ನು ಪಾಗುಸುತ್ತಿ, ಕಾಲಿನಲ್ಲಿ ಪಾಪಾಸು ಮೆಟ್ಟಿ, ಬಲದ ತೋಳಿನಲ್ಲಿ ಒಂದು ತೋಳಬಳೆಯನ್ನಿಟ್ಟು, ಕರದಲ್ಲಿ ಕರಟ ಹಿಡಿದು

ಹೊರಟರೆಂದರೆ ಶಿವಭಕ್ತಿಯ ದಿಗ್ವಿಜಯಕ್ಕೆ ಹೊರಟಂತೆ ಹೊರಡುತ್ತಿದ್ದರು. ತಾವು ಸ್ವಂತ ಗರಡಿಮನೆಯ ಅಂಗಸಾಧಕರಾಗಿದ್ದು ಹೋದಲ್ಲೆಲ್ಲ ಗರಡಿಮನೆಗಳನ್ನು ಸ್ಥಾಪಿಸುತ್ತಿದ್ದ ಅವರ ಭವ್ಯವಾದ ಆಕಾರ, ತೇಜಃಪುಂಜ ಮುಖ ಮುದ್ರೆ, ಅಪಾರವಾದ ಅನುಕಂಪ, ಅನಂತವಾದ ಅಧ್ಯಾತ್ಮ ಶ್ರೀ, ಅಸೀಮವಾದ ಶಿಷ್ಯವಾತ್ಸಲ್ಯಗಳು ನೋಡಿದವರನ್ನೆಲ್ಲ ಭಕ್ತರನ್ನಾಗಿ ಮಾಡಿಕೊಳ್ಳುತ್ತಿದ್ದುವು.

ದೇವನೂರು, ಕುದೇರು, ಕುರುಬೂರು, ಉಡೀಗಾಲ, ಮೂಗುರು, ಕಾಮಗೆರೆಗಳನ್ನು ಕೇಂದ್ರಗಳನ್ನಾಗಿ ಮಾಡಿಕೊಂಡು ಸುತ್ತಲೂ ಸಂಚರಿಸಿ ಅಲ್ಲಿಯ ಜನತೆಯಲ್ಲಿ ಹೊಸ ಹುಟ್ಟಿನ ಸಂಚಾರ ಮಾಡಿಸಿದರು ಗುರುಮಲ್ಲೇಶ್ವರರು. ದೇವನೂರು ಪಟೇಲ ಸುಬ್ಬಣ್ಣ, ಕುದೇರಿನ ಸುಬ್ಬಣ್ಣ, ಕುರುಬೂರಿನ ಕರಿಬಸವಪ್ಪ, ಉಡೀಗಾಲದ ಬಂಡಿಮರಪ್ಪ, ಮೂಗೂರಿನ ಬೆಕ್ಕಲು ಮಾದಪ್ಪ, ಮೈಸೂರಿನ ಕಂತೆ ಸಿದ್ದಪ್ಪ, ಕಾಮಗೆರೆಯ ಹೊನ್ನಪ್ಪ ಹೆತ್ತಯ್ಯ, ಹಿರಿಯೂರಿನ ಸಪ್ಪೆ ವೀರಪ್ಪ ಮೊದಲಾದ ಸದಾಚಾರಿಗಳಾದ ಸದ್ಭಕ್ತರು ಅವರಿಗೆ ಈ ಕಾರ್ಯದಲ್ಲಿ ನೆರವಾದರು.

ಶ್ರೀ ಗುರುಮಲ್ಲೇಶ್ವರರು ದುರ್ಮಾರ್ಗಿಗಳನ್ನು ಸನ್ಮಾರ್ಗಪ್ರವರ್ತಕರನ್ನಾಗಿ ಪರಿಪರ್ತಿಸುತ್ತಿದ್ದ ಬಗೆ ಯಾವುದೆಂಬುದನ್ನು ಅವರು ಸಪ್ಪೆವೀರಪ್ಪನನ್ನು ಶಿವಪಥಕ್ಕೆ ತಂದ ಸಂಗತಿಯಿಂದ ತಿಳಿಯಬಹುದಾಗಿದೆ. ಹಿರಿಯೂರಿನಲ್ಲಿ ಚಿಟಿಗೈಯನ ಪಕ್ಷ. ಮಣೇಗಾರರ ಪಕ್ಷ ಎಂಬ ಎರಡು ಬಣಗಳಿದ್ದುವು. ಈ ಎರಡೂ ಬಣಗಳಲ್ಲಿ ಮಸೆದಾಟವಿದ್ದಿತು. ಚಿಟಿಗೈಯನ ಗುಂಪಿನ ಜನಬಲವಿದ್ದರೆ ಮಣೇಗಾರರ ಗುಂಪಿಗೆ ಧನಬಲವಿದ್ದಿತು. ಸಪ್ಪೆವೀರಪ್ಪ ಚಿಟಿಗೈಯನ ಗುಂಪಿನ ಹಿರಿ ಹುದ್ದರಿ, ಆಜಾನುಬಾಹು–ಮಹಾಶಕ್ತಿಶಾಲಿ. ಅವನ ಕಪ್ಪುದಪ್ಪದೇಹ, ಗಿರಿಲು ಮೀಸೆ, ಕರಿಕಂಬಳಿ, ದೊಣ್ಣೆಗಳು ನೋಡಿದವರ ಮನದಲ್ಲಿ ಭಯಭೀತಗಳನ್ನು ಹುಟ್ಟಿಸುತ್ತಿದ್ದವು. ಮಣೇಗಾರ ಪಕ್ಷದವರಂತೂ ಅವನ ಹೆಸರೆತ್ತಿದ್ದರೆ ಸಾಕು, ಹೆದರಿ ಹವ್ವನೆ ಹಾರುತ್ತಿದ್ದರು.

ಹೀಗಿರಲು ಒಮ್ಮೆ ಗುರುಸ್ವಾಮಿಗಳು ಆ ಊರಿನ ಮಣೇಗಾರರ ಗುಂಪಿನ ಬಿನ್ನಹವನ್ನು ಮನ್ನಿಸಿ ಆಗಮಿಸಿ ಅವರಲ್ಲಿ ಉಳಿದರು. ಇದನ್ನು ಕೇಳಿ ಚಿಟಿಗೈಯನ ಗುಂಪಿನವರಿಗೆ, ವಿಶೇಷವಾಗಿ ಗುಂಪಿನ ಸರದಾರ ಸಪ್ಪೆವೀರಪ್ಪನಿಗೆ ಪಿತ್ಥಪ್ರಕೋಪವಾಯಿತು. ಗುರುಸ್ವಾಮಿಗಳು ಚಾವಡಿಯ ಮುಂದಿನಿಂದ ಹೋಗುತ್ತಿದ್ದಾಗ ಅಲ್ಲಿ ಕುಳಿತಿದ್ದ ಸಪ್ಪೆವೀರಪ್ಪ ಬುದ್ಧಿಪೂರ್ವಕವಾಗಿ ಕಾಲ ಮೇಲೆ ಕಾಲುಹಾಕಿ ಗುರುಸ್ವಾಮಿಗಳವರತ್ತ ದುರುದುರನೆ ನೋಡಿ ಹೂಂಕರಿಸಿದ. ಸ್ವಾಮಿಗಳದನ್ನು ಗಮನಿಸದೇ ಹೊರಟುಹೋದರು.

ಮಣೇಗಾರರ ಗುಂಪಿನವರಿಗೆ ಬಹಳ ಖೇದವಾಯಿತು–ಈ ನೀಚ, ಗುರುಗಳನ್ನು ಗಣನೆಗೆ ತಾರದೆ ಅಸಭ್ಯವರ್ತನೆ ತೋರಿದನಲ್ಲಾ ಎಂದು. ತಡೆಯಲಾಗದೆ ನಡೆದುದನ್ನು ತಿಳಿಸಿದರು ಗುರುಮಲ್ಲೇಶ್ವರರಿಗೆ. ನಾಳೆ ಅವನನ್ನು ನನಗೆ ತೋರಿಸಿದರೆಂದರು ಗುರುಮಲ್ಲೇಶರು. ಮಾರನೆಯ ದಿನವೂ ಚಾವಡಿಯ ಮುಂದೆ ಹೋಗುತ್ತಿದ್ದಾಗ ಮತ್ತೆ ಸೆಪ್ಪೆಯ ವೀರಪ್ಪ ಮುನ್ನಿನ ದಿನದಂತೆಯೇ ದುರಹಂಕಾರದಿಂದ ವರ್ತಿಸಿದನು. ಗುರುಮಲ್ಲೇಶ್ವರರು ಅವನ ಕಲ್ಲೆದೆ ಕರಗುವಂತೆ ನಸುನಕ್ಕು ಅವನ ಮನದ ಕತ್ತಲೆ ಹರಿದೋಡುವಂತೆ ಅವನತ್ತ ನೋಡಿದರು. ವೀರಪ್ಪನ ತಾಮಸೀ ಶಕ್ತಿ ಕ್ಷಣಾರ್ಧದಲ್ಲಿ ವಿಮಲ ಭಕ್ತಿಯಾಗಿ ಮಾರ್ಪಟ್ಟಿತು. ಓಡಿಹೋಗಿ ಗುರುಸ್ವಾಮಿಯ ಚರಣತಲದಲ್ಲಿ ದೊಪ್ಪನೆ ಕೆಡೆದು ಬಿಕ್ಕಿಬಿಕ್ಕಿ ಅಳತೊಡಗಿದನು. ಗುರುಸ್ವಾಮಿಗಳು ಕರುಣೆಯಿಂದ ಸಂತೈಸಿದರು. ಸರಿ ಅಂದು ಅವರ ಭಕ್ತಿ ಬಳಗಕ್ಕೆ ಸೇರಿದ ವೀರಪ್ಪ ಕೊನೆಯವರೆಗೂ ಅವರ ಅಚಲನಾದ ಭಕ್ತನಾಗಿ ಉಳಿದ.

ಇದರಂತೆ ಶ್ರೀಮಂತರಾಗಿದ್ದ ಕುರುಬೂರು ಮಣೇಗಾರ ಪಟೇಲ ಮಲ್ಲಿಕಾರ್ಜುನಪ್ಪನವರನ್ನು ಕರದಿ ಕಪ್ಪರ ಹಿಡಿಸಿ ಕಂತೆಭಿಕ್ಷ ಮಾಡಿಸಿ ಭಕ್ತನನ್ನಾಗಿ ಪರಿವರ್ತಿಸಿದರು. ಅವರ ಅನುಗ್ರಹಕ್ಕೆ ಪತ್ರನಾದ ಮೌಲಾನಾ ಪೀರ್ ಎಂಬ ಮುಸಲ್ಮಾನ ಭಕ್ತನು ಮಹಿಮಾಶಾಲಿಯೆನಿಸಿ ಮೆರೆದನು. ಮೈಸೂರಿನಲ್ಲಿರುವ ಆತನ ಸಮಾಧಿಗೆ ಇಂದಿಗೂ ಹಿಂದೂ ಮುಸ್ಲಿಮರಿಬ್ಬರೂ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಧರ್ಮದಾನಿ ಬುದ್ಧನಂತೆ ಗುರುಮಲ್ಲೇಶರು ಕುಲ್ಗಾಣದ ಪುಟ್ಟಮ್ಮನೆಂಬ ವಾರಾಂಗನೆಯನ್ನು ಸಹ ಉದ್ಧರಿಸಿದರು. ಅವರ ಕರುಣೆಯ ಕಣ್ಣಿಗೆ ಕುಲ–ಗೋತ್ರ–ಜಾತಿ–ಮತ–ವಯ–ಉದ್ಯೋಗ–ಲಿಂಗ ಭೇದಗಳಾವುವೂ ಕಾಣಿಸುತ್ತಿರಲಿಲ್ಲ. ಸರ್ವಜೀವ ದಯಾಪರರಾಗಿದ್ದ ಅವರಿಗೆ ಅವರಿವರೆಂಬ ಭೇದ ಭಾವನೆ ಎಲ್ಲಿಂದ ಬರಬೇಕು? ಅವರ ಶಿಷ್ಯವೃಂದದಲ್ಲಿ ಚಿತ್ರಗಾರ ರಂಗಣ್ಣ, ಸಂಗೀತಗಾರ ಮೂಗೂರು ಸುಬ್ಬಣ್ಣ, ಬ್ರಾಹ್ಮಣ ನಂಜುಂಡಶಾಸ್ತ್ರಿಗಳು, ಮಧುವಿನಹಳ್ಳಿ ಮಹಮ್ಮದೀಯ ಮೌಲಾನಾಪೀರ, ಬೆಲವೇಣ್ಣು ಕುಲ್ಗಾಣದ, ಪುಟ್ಟಮ್ಮ–ಹೀಗೆ ನಾನಾ ಜಾತಿಗಳ, ನಾನಾ ವೃತ್ತಿಗಳ ಜನರಿದ್ದರು. ಅದೊಂದು ಅವರ ಶಿಷ್ಯ ವೃಂದದ ವೈಶಿಷ್ಟ್ಯ.

ಪರಮ ವೈರಾಗ್ಯಶೀಲರೂ ತಪಸ್ವಿಗಳೂ ಆಗಿದ್ದ ತಿರುಮಕೂಡಲ ನರಸೀಪುರಕ್ಕೆ ಸಮೀಪದಲ್ಲಿರುವ ಸಿದ್ಧರಹಳ್ಳಿಯ ಸದಾಶಿವ ರುದ್ರಸ್ವಾಮಿಗಳೂ ಮಳವಳ್ಳಿ ತಾಲ್ಲೂಕು ಮಡೇನಹಳ್ಳಿಗೆ ಸಮೀಪದಲ್ಲಿರುವ ಹೊಂದಲಗೆರೆಮಠದ ಮಲ್ಲಿಕಾರ್ಜುನ ಸ್ವಾಮಿಗಳೂ ಕಾನಕಾನಹಳ್ಳಿ ಮೊರಲೇ ಮಠದ ಶಿವರುದ್ರಸ್ವಾಮಿಗಳೂ ಗುರು ಮಲ್ಲೇಶ್ವರರ ಸಮಕಾಲೀನರು. ಇವರೆಲ್ಲ ಆಗಾಗ ಒಂದೆಡೆಗೆ ಸೇರುತ್ತಿದ್ದರೆಂದೂ

ಶಿವಾನುಭವ ಚರ್ಚೆ ನಡೆಸುತ್ತಿದ್ದರೆಂದೂ ತಿಳಿದುಬಂದಿದೆ. ಇದೇ ರೀತಿ ಬೆಳಗಾವಿ ಖಾರದ ಸ್ವಾಮಿಗಳೂ, ಬೆಟ್ಟದಪುರದ ಚಿಕ್ಕವೀರದೇಶಿಕೇಂದ್ರರು, ಮಲ್ಲನಮೂಲೆ ಮರಿಕಂಬಳಿಸ್ವಾಮಿಗಳು, ದೇವನೂರಿನ ಭಿಕ್ಷ ಮಠದಲ್ಲಿಯೇ ವಾಸಿಸಿದ್ದ ಕಪಿ ಸ್ವಾಮಿಗಳು, ಬೂದಿಸ್ವಾಮಿಗಳೂ, ಧೂಪದಸ್ವಾಮಿಗಳು, ವೀರಾತಸ್ವಾಮಿಗಳು, ಹೆತ್ತಯ್ಯನವರು, ಗಣಿಗನೂರಿನ ಮುರುಘರಾಜೇಂದ್ರಸ್ವಾಮಿಗಳು ಮೊದಲಾದವರು ಗುರುಮಲ್ಲೇಶರನ್ನು ಗೌರವದಿಂದ ಕಾಣುತ್ತಿದ್ದರು. ಮಲ್ಲನಮೂಲೆ ಕಂಬಳಿ ಸ್ವಾಮಿಗಳೂ ನಂಜನಗೂಡಿನ ಕೆಂಡಗಣ್ಣ ಸ್ವಾಮಿಗಳೂ ಆ ಕಾಲದ ಇನ್ನಿಬ್ಬರು ಮಹಾತ್ಮರು. ಅವರಿಗೂ ಗುರುಮಲ್ಲೇಶರಿಗೂ ಭೇಟಿಯಾದ ಉಲ್ಲೇಖ ದೊರೆತಿಲ್ಲವಾದರೂ ಆಗಿರಬಹುದೆಂದು ಅನುಮಾನಿಸಬಹುದಾಗಿದೆ.

ಮುಂದೆ ಮುಪ್ಪಿನವರು, ಸುಬ್ಬಣ್ಣನವರು ಶಿವೈಕ್ಯರಾದರು. ಗುರುಸ್ವಾಮಿಯವರೂ ಬೇಗ ಶಿವಸನ್ನಿಧಿಗೆ ಹೊರಡಲು ನಿರ್ಧರಿಸಿದರು. ವ್ಯಾಧಿಗ್ರಸ್ತರಾದರು. ಇನ್ನೇನು, ಅವಸಾನ ಸಮೀಪಿಸಿತು ಎನ್ನುವ ಹೊತ್ತಿಗೆ ಉಂಡುಂಡೆ ಸ್ವಾಮಿಗಳು ಆಗಮಿಸಿ ಮದ್ದನಿಕ್ಕಿ ಉಳಿಸಿದರು. ಮುಂದೆ ಕೆಲವು ದಿನಗಳವರೆಗಿದ್ದು ಭಕ್ತರನ್ನು ಉದ್ಧರಿಸಿದರು. ಇಷ್ಟರಲ್ಲಿ ಮಲೆಯ ಮಾದೇಶ್ವರರ ನಿರೂಪ ಬಂದಿತು. ಗುರು ಮಲ್ಲೇಶ್ವರರು ಶಾಲಿವಾಹನ ಶಕೆ ೧೮೨೦ ಜೇಷ್ಠ ಬಹುಳ ತದಿಗೆ ಸೋಮವಾರದ ದಿವಸ ತಮ್ಮ ತೊಂಬತ್ತಾರನೆಯ ವರುಷದಲ್ಲಿ ಶಿವಯೋಗ ಸಮಾಧಿಯನ್ನೈದಿದರು. ಅವರ ತರುವಾಯ ಅವರ ಮೊಮ್ಮಕ್ಕಳಾದ ಚೆನ್ನಬಸವಸ್ವಾಮಿಯವರಿಗೆ ಬೆಟ್ಟದಪುರದ ಚಿಕ್ಕವೀರ ಯತಿಗಳು, ಉಂಡುಂಡೆಸ್ವಾಮಿಗಳು, ಮಲ್ಲನಮೂಲೆ ಮರಿಕಂಬಳಿ ಸ್ವಾಮಿಗಳವರ ಸಮ್ಮುಖದಲ್ಲಿ ದೇವನೂರು ಮಠದ ಅಧಿಕಾರವಾಯಿತು. ಮೂಗೂರಿನ ರಾಚಪ್ಪಸ್ವಾಮಿಗಳವರು, ಗುರುಸ್ವಾಮಿಗಳಿಗೆ ಅತ್ಯಂತ ಪ್ರಿಯವಾದ ಭಿಕ್ಷದ ಕಾಯಕವನ್ನು ಅತ್ಯಂತ ನಿಷ್ಠೆಯಿಂದ ನಡಸಿ ಭಿಕ್ಷದ ರಾಚಪ್ಪ ಸ್ವಾಮಿಗಳವರೆಂದು ವಿಖ್ಯಾತರಾದರು. ಅವರು ಮಹಾಕರುಣಿಗಳು. ಅವರ ಕಾಲದಲ್ಲಿ ಮಠವು ಅತ್ಯಂತ ಊರ್ಜಿತ ಸ್ಥಿತಿಗೆ ಬಂದಿತು. ಈಗಿನ ಮಠಾಧ್ಯಕ್ಷರಾದ ತೋಂಟದಾರ್ಯ ಮಹಾಸ್ವಾಮಿಗಳೂ ಅವರ ಪಾವನ ಪರಂಪರೆಯನ್ನು ಮುಂದುವರಿಸಿದ್ದಾರೆ.

ತೋಪಿನಮಠದ ಶಿವಯೋಗಿಗಳು 'ನಮ್ಮ ಆಚರಣೆ ಗುರುಮಲ್ಲಪ್ಪನ ಆಚರಣೆಯಾಗಿರಬೇಕು, ಸಪ್ಪಣ್ಣಪ್ಪಣ ಆಚರಣೆಯಾಗಿರಬೇಕು, ಅಥಣಿ ಅಪ್ಪನ ಅಚರಣೆಯಾಗಿರಬೇಕು, ಎಂದು ಅನ್ನುತ್ತಿದ್ದರಂತೆ. ನಿಜ, ಈ ಮೂವರ ಆಚರಣೆ ನಿಜವಾಗಿಯೂ ಪ್ರಮಥರ ನಿಜಾಚರಣೆ.

ಗುರುಮಲ್ಲೇಶಪ್ರಣೀತವಾದುದೆಂದು ತಿಳಿದುಬಂದಿರುವ ಕೆಳಗಿನ ಪದವನ್ನು ಉದ್ಧರಿಸಿ ಈ ಮಹಾತ್ಮನ ಚರಿತ್ರೆಯನ್ನು ಇಲ್ಲಿಗೆ ಮುಗಿಸಬಹುದೆಂದು ತೋರುತ್ತದೆ;

ಜ್ಞಪ್ತಿ ಚಿದ್ದಯಲನ್ನೆ ಸೇರು ಕಂಡ್ಯಾ–ಶುದ್ಧ
ಜ್ಞಪ್ತಿ ತಾನಾಗೆ ಮುಕ್ತಿ ಕಂಡ್ಯಾ ॥ ೧ ॥

ಶಬ್ದವೆಂಬುವುದೆಲ್ಲ ಪ್ರಣವ ಕಂಡ್ಯಾ–ಪ್ರಣವ
ಶಬ್ದವ ಕರ್ಣದಿ ಕೇಳು ಕಂಡ್ಯಾ ॥ ೨ ॥

ಶಬ್ದಕ್ಕೆ ಸಾಕ್ಷಿ ನೀನಾಗು ಕಂಡ್ಯಾ–ನಿಃ
ಶಬ್ದ ಬ್ರಹ್ಮವೆ ಆಗಿ ನಿಲ್ಲು ಕಂಡ್ಯಾ ॥ ೩ ॥

ಜೀವ ಪರಮರಿಬ್ಬರಿಲ್ಲ ಕಂಡ್ಯಾ–ನಿ ॥ ೪ ॥

ಆಕಾರ ನಾಮವು ಸ್ವಪ್ನ ಕಂಡ್ಯಾ–ನಿ
ರಾಕಾರ ವಸ್ತುವು ನೀನೆ ಕಂಡ್ಯಾ ॥ ೫ ॥

ಲೋಕ ಕಲ್ಪಿತವು ನಿನ್ನೊಳಗೆ ಕಂಡ್ಯಾ–ಜಗ
ದೇಕ ಪ್ರಕಾಶನು ನೀನೆ ಕಂಡ್ಯಾ ॥ ೬ ॥

ಬೋಧ ಸದ್ಗುರು ಚೆನ್ನ ನೀನೆ ಕಂಡ್ಯಾ–ಬಹು
ವಾದ ಭೇದಕೆ ದೂರ ನೀನು ಕಂಡ್ಯಾ ॥ ೭ ॥

ವರಾಗವಿಭು ಹಾನಗಲ್ಲ ಕುಮಾರಸ್ವಾಮಿಗಳವರು ರಾಣೇಬೆನ್ನೂರು ತಾಲ್ಲೂಕಿನ ಜೋಯಿಸರ ಹರಳಹಟ್ಟಿಯಲ್ಲಿ ಕ್ರಿ.ಶ. ೧೮೮೭ರಲ್ಲಿ ಜನ್ಮವೆತ್ತಿದ್ದರು. ತಂದೆ ತಾಯಿಗಳು ಬಸವಯ್ಯ–ನೀಲಮ್ಮನವರು. ಸಚ್ಛೀಲರು, ಸದಾಚಾರಿಗಳು, ಧರ್ಮಪರಾಯಣರು. ಆದರೆ ಬಡವರು. ಬಡತನದ ಮೂಲಕ ಶ್ರೀಗಳವರ ವಿದ್ಯಾಭ್ಯಾಸ ಸರಿಯಾಗಿ ಸಾಗಲಿಲ್ಲ. ಆದರೆ ಅದಮ್ಯವಾದ ಅರಿವಿನ ಹಂಬು ಆರಲಿಲ್ಲ. ಅವರು ಪ್ರಬುದ್ಧರಾದ ಮೇಲೆ ಸ್ವಾಧ್ಯಾಯದಿಂದಲೇ ಷಟ್‌ಶಾಸ್ತ್ರಗಳನ್ನು ಕರತಲಾಮಲಕ ಮಾಡಿಕೊಂಡು ಮಹಾಶಿವಾನುಭವಿಗಳಾದರು, ತತ್ವವೇತ್ತರಾದರು.

ಅವರ ತೆಳುವಾದ, ಎತ್ತರವಾದ ಮೈಕಟ್ಟಿನಲ್ಲಿ ತಾರುಣ್ಯವು ತುಳುಕಿತು ; ಅವರ ಹೊಳೆವ ಕಣ್ಣುಗಳು ಇನ್ನೂ ಪ್ರಕಾಶಪೂರ್ಣವಾಗಿ ಮಿಂಚಿದುವು ; ಆ ದೇದೀಪ್ಯಮಾನ ಮುಖಮಂಡಲ ಇನ್ನೂ ತೇಜೋಮಯವಾಗಿ ರಾರಾಜಿಸಿತು. ಅವರ ತಾಯಿ ನೀಲಮ್ಮನವರಿಗೆ ಅವರಿಗೆ ಮದುವೆ ಮಾಡಬೇಕೆಂಬ ಮಾತೃಸಹಜವಾದ ಆಸೆ ಉದಿಸಿತು. ಆಗ ಲಿಂಗನಹಳ್ಳಿಯಲ್ಲಿ ಹಗಲು ಶಿಕ್ಷಕರಾಗಿ ಹಗಲಿರುಳೂ ಉಜ್ವಲ

ವ್ಯಾಸಂಗಿಗಳಾಗಿ ಜೀವನ ರಥವನ್ನು ಶಿವಪಥದಲ್ಲಿ ನಡೆಸಿಕೊಂಡು ಹೊರಟಿದ್ದರು ಹಾಲಯ್ಯನವರು–ಮುಂದೆ ಕುಮಾರಸ್ವಾಮಿಗಳೆಂದು ಅಮರರಾದ ಅಮೃತಪುತ್ರರು. ತಾಯಿಯು ಮದುವೆಯ ಮಾತೆತ್ತಲು ನಕ್ಕು ನುಡಿದರು. 'ತಾಯೆ, ನಾನಿದಾಗಲೇ ಸಂಸಾರಿಯಾಗಿಬಿಟ್ಟಿದ್ದೇನೆ. ಆದರೆ ಈ ಸಂಸಾರದ ಪರಿಯೇ ಬೇರೆ. ಇದನ್ನು ನಿಜಗುಣ ಶಿವಯೋಗಿಗಳು ಇಂತು ಬಣ್ಣಿಸಿದ್ದಾರೆ.




**ವಿರಾಗವಿಭು ಹಾನಗಲ್ ಕುಮಾರಸ್ವಾಮಿಗಳು**

ಯೋಗಿಗೆ ಸಕಲ ಸಂಸಾರ ಸಂಗವದಿಲ್ಲ
ವಾಗಿ ತಿಳಿವರದು ಪುಸಿನೋಡು ತಾಯೇ ॥
ವರವಿದ್ಯೆಯೆಂಬ ಕುಲವನಿತೆಯುಂಟು, ಅಗಲದ
ಪರಿತೋಷವೆಂಬ ಮೋಹದಣುಗನುಂಟು
ವಿರತಿಯೆಂಬನುಕೂಲ ಜನಮುಂಟು ಕ್ಷಮೆಯೆಂಬ
ಚರನುಂಟು, ಶಾಂತಿಯೆಂಬ ಸಖನ ಸರಸಮುಂಟು ॥
ನುತಭಕ್ತಿಯೆಂಬ ಮಾತೆಯುಂಟು, ಸುಚರಿತ್ರವೆಂಬ
ಪಿತನುಂಟು ಸತ್ಯವೆಂಬ ಕುವರಿಯುಂಟು
ಹಿತವಾದ ನಂಬಿಗೆಯೆಂಬಾಪ ಜನರ ಸೇವೆಯುಂಟು
ಮತಿಯೆಂಬ ಗೇಹಮುಂಟು, ಆಚಾರವೆಂಬ ಕ್ಷೇತ್ರಮುಂಟು ॥
ದಾಸಿಯುಂಟು ಅಹಿಂಸೆಯೆಂಬ, ದಾಸನುಂಟು ಅಸ್ತೇಯವೆಂಬ
ಲೇಸನೀವ ಧರ್ಮವೆಂಬ ವಾಹನಮುಂಟು
ಭಾಸುರ ಮೈತ್ರಾದಿಯೆಂಬ ಪೌತ್ರರುಂಟು, ಮುಕ್ತಿಯೆಂಬ
ದೇಶಮುಂಟು, ಗುರು ಶಂಭುಲಿಂಗವೆಂಬ ಗುರುತನಗುಂಟು ॥

ಇಂಥ ಸಂಸಾರವನ್ನು ಇದಾಗಲೇ ಸ್ವೀಕರಿಸಿ ಬಿಟ್ಟಿರುವೆ ತಾಯೆ–ಮತ್ತೊಂದು ಸಂಸಾರವನ್ನು ಎಲ್ಲಿ ಕಟ್ಟಿಕೊಳ್ಳಲಿ? ಇದೊ, ನಾನು ಶಿಕ್ಷಕನಾಗಿ ಸಂಪಾದಿಸಿದ ಮುನ್ನೂರು ರೂಪಾಯಿಗಳಿವೆ. ಇವುಗಳನ್ನು ಮಗನ ಕಿರಿಯ ಕಾಣಿಕೆಯೆಂದು ಸ್ವೀಕರಿಸಿ ಸಂತುಷ್ಟಳಾಗಿ ಹೋಗು. ಇನ್ನು ಮುಂದೆ ಮಗನೆಂಬ ಮೋಹದಿಂದ ಮತ್ತೆ ನನ್ನ ಹತ್ತಿರ ಬರಬೇಡ !'

ನೀಲಮ್ಮನವರು ನಿರುಪಾಯರಾಗಿ ಹೊರಟು ಹೋದರು. ಹಾಲಯ್ಯನವರು ಜ್ಞಾನ ಭಿಕ್ಷುಗಳಾಗಿ ಹೊರಟರು. ಆಗ ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಗಳವರ ಯಶೋದುಂದುಭಿ ಮೊಳಗುತ್ತಿದ್ದಿತು. ಅಲ್ಲಿಗೆ ಹೋದರು. ಸಿದ್ಧಾರೂಢರ ಸನ್ನಿಧಿಯಲ್ಲಿ ತಮಗೆ ಅತ್ಯಂತ ಪ್ರಿಯವಾಗಿದ್ದ ನಿಜಗುಣ ಶಿವಯೋಗಿಗಳ ಷಟ್‌ಶಾಸ್ತ್ರಗಳ ಆಳವಾದ ಅಧ್ಯಯನ ನಡೆಸಿದರು. ಸಿದ್ಧಾರೂಢರ ವೇದಾಂತ ಪ್ರವಚನ ವೈಖರಿ ಅವರ ಚಿತ್ತವನ್ನು ಆಕರ್ಷಿಸಿತಾದರೂ ಅವರ ಇಷ್ಟಲಿಂಗ ತ್ಯಾಗವು ಇವರಿಗೆ ಒಪ್ಪಿಗೆಯಾಗಲಿಲ್ಲ. ಆದುದರಿಂದ ಅಲ್ಲಿಯ ರುದ್ರಾಕ್ಷಿಮಠದಲ್ಲಿ ಸ್ನಾನ ಲಿಂಗಾರ್ಚನಾದಿಗಳನ್ನು ಪೂರೈಸುತ್ತ, ಭಿಕ್ಷಾನ್ನದಿಂದ ಜೀವಿಸುತ್ತ, ಪಾಠಪ್ರವಚನಗಳಿಗಾಗಿ ಮಾತ್ರ ಸಿದ್ಧಾರೂಢರ ಮಠಕ್ಕೆ ಬರುತ್ತ ಕಾಲ ಕಳೆಯ ತೊಡಗಿದರು.

ಹೀಗೆ ಬಾಳು ಸಾಗಿರಲು ಒಂದು ದುರ್ಘಟನೆ ನಡೆಯಿತು. ಎಂದಿನಂತೆ ಅವರು ಭಿಕ್ಷಾನ್ನಕ್ಕಾಗಿ ಭಕ್ತರ ಮನೆಗೆ ಹೋದಾಗ ಮನೆಯೊಂದರಲ್ಲಿ ಕಾಮಿನಿಯೊಬ್ಬಳು ಅವರ ಗಂಡುಗಾಡಿಯನ್ನು ಕಂಡು ಮನಸೋತು ಲಜ್ಜೆಗೆಟ್ಟು ಅವರ ಜೋಳಿಗೆಯನ್ನೇ ಹಿಡಿದು ಬಳಗೆಳೆದಳು. ಶ್ರೀಗಳವರು ಅವಳ ಕಾಮ ಪಿಪಾಸೆಗೆ ಹೇಸಿ ಆ ಜೋಳಿಗೆಯನ್ನು ಅವಳ ಕೈಯಲ್ಲಿಯೇ ಬಿಟ್ಟು ಹಿಂದರುಗಿದರು. ಅನಿರೀಕ್ಷಿತವಾಗಿ ನಡೆದ ಆ ಸತ್ವಪರೀಕ್ಷೆಯಲ್ಲಿ ತೇರ್ಗಡೆಯಾದರು, ವೈರಾಗ್ಯ ವಿಜಯವನ್ನು ಮೆರೆದರು.

ಮೊದಲೇ ಸಿದ್ಧಾರೂಢರ ಇಷ್ಟಲಿಂಗವಿರಹಿತ ಆಚರಣೆಯನ್ನು ಒಪ್ಪದೆ ಮನಸ್ಸಿಲ್ಲದ ಮನಸ್ಸಿನಿಂದ ಹುಬ್ಬಳ್ಳಿಯಲಿದ್ದ ಅವರಿಗೆ ಈ ಘಟನೆಯಿಂದ ಇನ್ನೂ ಬೇಸರವೆನಿಸಿತು. ಅಲ್ಲಿಯ ಎರಡಿಟ್ಟಿನ ಮಠಾರ್ಯರ ಸಲಹೆಯ ಮೇರೆಗೆ ಆಗ ಶರಣವರೇಣ್ಯರೆಂದು ಹೆಸರಾಗಿದ್ದ ಎಮ್ಮಿಗನೂರ ಜಡೆಯಸಿದ್ಧರ ದರ್ಶನಕ್ಕೆ ಹೊರಟರು. ದಾರಿಯುದ್ದಕ್ಕೂ ಅವರ ಪಾವನಮೂರ್ತಿಯನ್ನು ಕಂಡು ಧನ್ಯರಾಗದವರಿಲ್ಲ.

ಬಿಳಿಗಂಬಳಿಯ ಕೊಪ್ಪೆಯಿಂದ ಕೌಪೀನದಿಂ
ಥಳಿಗಾವಿಯಂಗಿಯಿಂ ಶಾಟಿ ಪಾವುಡಗಳಿಂ
ಹೊಳೆವ ತಂಬಿಗೆಯಿಂದ ಭೂತಿರುದ್ರಾಕ್ಷಮಾಲೆಗಳಿಂದ ಬೆತ್ತದಿಂದ
ಬಲಿದ ತೋಳಾಧಾರದಿಂದ ರಾಜಿಸಿ ಪೋಪ
ಬೆಲುವ ಹರೆಯದ ಸತ್ಯಶೋಧಕನ ವೇಷಮಂ
ನೆಲದೊಳೀಕ್ಷಪರ ಕಂಗಳ್ತಣಿಯವೇ ಸತ್ವಭಾವನವಒರ್ಪೊಂದರೇ?
(ಚೆನ್ನಕವಿಕೃತ ಹಾನಗಲ್ಲ ಕುಮಾರೇಶ್ವರ ಪುರಾಣ ಸಂ. ೪, ಪ.೨೦)

ಜಡೆಯ ಸಿದ್ಧರ ದರ್ಶನವಾಯಿತು. ಆವರ ನಿರಂಕುಶ ಸದ್ವೃತ್ತಿಯನ್ನೂ ವಿಶೇಷ ವೈರಾಗ್ಯಮಯ ಲಕ್ಷಣಗಳನ್ನೂ ಬಾಹ್ಯಕ್ರಿಯಾನಿವಹ ವಿಸ್ಮೃತಿಯನ್ನೂ ನಿಜಾನಂದಭಾವವನ್ನೂ ನೋಡಿ ಹಾಲಯ್ಯನವರ ಹರುಷ ಹಾಲುಗಡಲಾಗಿ ಉಕ್ಕಿ ಹರಿಯಿತು. ಅವರ ಅನುಗ್ರಹವನ್ನು ಪಡೆದು ಸಂಕೇತರೂಪವಾಗಿ ಸಂಶಯ ನಿವಾರಣೆಯನ್ನೂ ಪಡೆದರು. ತರುವಾಯ ಪರಮ ತಪಸ್ವಿಗಳೂ ಶಿವಯೋಗ ಸಿದ್ಧರೂ ಶಿವಾನುಭವಸಾಗರರೂ ಆಗಿದ್ದ ಎಳಂದೂರಿನ ಬಸವಲಿಂಗಸ್ವಾಮಿಗಳವರ ಶಿಷ್ಯತ್ವವನ್ನು ವಹಿಸಿದರು. ಎಳಂದೂರ ಬಸವಲಿಂಗಸ್ವಾಮಿಗಳು ಮೊದಲು ಗದಗಿನ ಜಗದ್ಗುರು ಶ್ರೀ ತೋಂಟದಾರ್ಯಮಠದ ಮರಿದೇವರು. ವೈರಾಗ್ಯದ ಕರೆಗೆ ಓಗೊಟ್ಟು ಶ್ರೀ ನಿಜಗುಣಶಿವಯೋಗಿಗಳ ತಪೋಭೂಮಿಗೆ ಬಂದು ತಿರುಮಕೂಡಲ ನರಸೀಪುರದ ಕಪಿಲಾ–ಕಾವೇರೀ ಸಂಗಮದಲ್ಲಿ ಅನುಷ್ಠಾನ ಮಾಡಿದರು. ನಿಜಗುಣರ ಕೃತಿಗಳ ಆಳವಾದ ಆಭ್ಯಾಸ ಮಾಡಿದರು. ಅವುಗಳನ್ನು ಆಚರಣೆಯಲ್ಲಿ ತಂದು

ಶಿವಯೋಗ ಸಿದ್ಧರಾದರು.



**ಹಾನಗಲ್ ಕುಮಾರಸ್ವಾಮಿಗಳು ಜಡೆಸಿದ್ಧೇಶ್ವರನನ್ನು ಸಂದರ್ಶಿಸುವುದು**

ಇಂಥ ಸದ್ಗುರು ಕುಮಾರೇಶನಂಥ ಶಿಷ್ಯರ ಸಮಾಗಮವಾದುದು ಕಬ್ಬಿಗೆ ಜೇನು ಇಟ್ಟಿಂತಾಯಿತು. ಗುರೂಪದೇಶವನ್ನು ಹೊಂದಿ ಕುಮಾರೇಶರು ಶಂಭುಲಿಂಗನ ಬೆಟ್ಟದ ನಿಜಗುಣರ ಗವಿಯಲ್ಲಿ ಅನುಷ್ಠಾನ ಮಾಡಿ ಆತ್ಮಸಾಕ್ಷಾತ್ಕಾರ ಮಾಡಿಕೊಂಡರು. ಗುರು ಬಸವಲಿಂಗಸ್ವಾಮಿಗಳು ಶಿಷ್ಯನ ಆಧ್ಯಾತ್ಮಕಿ ಪ್ರಗತಿಯನ್ನು ನೋಡಿ ಹಿರಿಹಿರಿ ಹಿಗ್ಗಿ ಕ್ರಿಯೋಪದೇಶವನ್ನು ಮಾಡಿ ಲಿಂಗೈಕ್ಯರಾದರು. ಕುಮಾರೇಶರು ತಾಯಿಯಿಲ್ಲದ ತಬ್ಬಲಿಗಳಂತಾಗಿ ಸೊರಬ ಪ್ರಾಂತದಲ್ಲಿರುವ ಷಟ್‌ಕಾವ್ಯಕರ್ತೃ ಗುರುಬಸವಸ್ವಾಮಿಗಳವರ ಕ್ಯಾಸನೂರಲ್ಲಿರುವ ಗದ್ದಿಗೆಯ ಬಳಿ ಅನುಷ್ಠಾನ ಮಾಡುತ್ತ ಕುಳಿತರು.

ಅತ್ತ ಹಾನಗಲ್ಲಿನ ವಿಖ್ಯಾತ ವಿರಕ್ತಾಶ್ರಮವಾದ ಕುಮಾರಸ್ವಾಮಿಗಳ ಮಠದಲ್ಲಿದ್ದ ಶ್ರೀ ಫಕೀರಸ್ವಾಮಿಗಳು ತಪೋನಿಷ್ಠರೂ ವಾಕ್‌ಸಿದ್ಧಿಯುಳ್ಳವರೂ ಎನಿಸಿ ಅನೇಕರ ಉದ್ಧಾರ ಮಾಡಿ ವೃದ್ಧಾಪ್ಯ ಆವರಿಸಲು ಒಬ್ಬ ಯೋಗ್ಯ ಉತ್ತರಾಧಿಕಾರಿಯ ಶೋಧನೆಯಲ್ಲಿದ್ದರು. ಶ್ರೀ ಕುಮಾರೇಶನ ಕೀರ್ತಿಯನ್ನು ಸೊರಬ ಪ್ರಾಂತದ ಸದ್ಭಕ್ತರಿಂದ ತಿಳಿದು ಕುಮಾರೇಶರನ್ನು ಕರೆಸಿಕೊಂಡು ತಮ್ಮ ಉತ್ತರಾಧಿಕಾರಿಗಳಾಗಲು ಒಡಂಬಡಿಸಿದರು. ಶ್ರೀಫಕೀರಸ್ವಾಮಿಗಳವರು ಲಿಂಗೈಕ್ಯರಾಗಲು ಜಮಖಂಡಿ ತಾಲ್ಲೂಕಿನಲ್ಲಿ ಕೃಷ್ಣಾನದಿಯ ತೀರದಲ್ಲಿರುವ ಬಿದರಿಯ ಮುಧೋಳ ಮಠದ ಚೆನ್ನಬಸವಯ್ಯ–ಶಿವಲಿಂಗಮ್ಮನವರಿಗೆ ಪುತ್ರರಾಗಿ ಜನಿಸಿ, ಸವದತ್ತಿಯ ಚೌಕೀಮಠದ ಶ್ರೀ ಶಿವಲಿಂಗಸ್ವಾಮಿಗಳವರ ಕೃಪಾದೃಷ್ಟಿಗೆ ಪಾತ್ರರಾಗಿ, ಬಂದರದ ರುದ್ರಪ್ಪನವರಲ್ಲಿ ಶಿವಾನುಭವಶಾಸ್ತ್ರ ನಿಷ್ಣಾತರಾಗಿ, ಅಥಣಿಯಶೆಟ್ಟರ ಮಠದ ಶ್ರೀ ಮರುಸಿದ್ಧ ಶಿವಯೋಗಿಗಳಿಂದ ಅನುಗ್ರಹ ಅಧಿಕಾರ ಪಡೆದು, ನವಿಲುತೀರ್ಥದಲ್ಲಿ ತಪಸ್ಸುಮಾಡಿ ಪರಮತಪಸ್ವಿಗಳಾಗಿ ಅಥಣಿ ಶಿವಯೋಗಿಗಳ ವಿಶ್ವಾಸದ ಸಂಗಡಿಗರಾಗಿ ವಿಖ್ಯಾತರಾಗಿದ್ದ ಬಿದರಿ ಕುಮಾರಸ್ವಾಮಿಗಳಿಂದ ಕುಮಾರೇಶರಿಗೆ ಹಾನಗಲ್ಲ ಮಠದ ಅಧಿಕಾರಪ್ರಧಾನ ಜರುಗಿತು. ಆಗ ಸದಾಶಿವ ಸ್ವಾಮಿಗಳೆಂಬ ಅಭಿದಾನ ಪ್ರಾಪ್ತವಾದರೂ ಹಾನಗಲ್ಲ ಕುಮಾರಸ್ವಾಮಿಗಳೆಂಬ ಹೆಸರೇ ಕೊನೆಯವರೆಗೆ ಜನರ ರಸನೆಯಲ್ಲಿ ಉಳಿಯಿತು.

ಶ್ರೀಗಳವರ ಅಂತವಿಲ್ಲದ ಕರ್ತೃತ್ವಶಕ್ತಿಗೆ ಮಹಾಪೂರ ಬಂದಿತು. ಮೊದಲು ಹಾನಗಲ್ಲ ಮಠದಲ್ಲಿಯೇ ಸಂಸ್ಕೃತ ಪಾಠಶಾಲೆ ಪ್ರಾರಂಭವಾಯಿತು. ೧೯೦೪ರಲ್ಲಿ ಅವರ ದೂರದರ್ಶಿತ್ವ ಹಾಗೂ ಅದ್ವಿತೀಯ ಕರ್ತೃತ್ವಗಳಿಂದ ಧಾರವಾಡದಲ್ಲಿ ವೀರಶೈವ ಮಹಾಸಭೆ ತ್ಯಾಗವೀರ ಲಿಂಗರಾಜು ಸಿರಸಂಗಿ ಅವರ ಘನ ಅಧ್ಯಕ್ಷತೆಯಲ್ಲಿ ಜರುಗಿತು. ಅಲ್ಲಲ್ಲಿ ವಿದ್ಯಾಸಂಸ್ಥೆಗಳೂ ವೀರಸನ್ಯಾಸಿಗಳೂ ಸಮಾಜ ಸಂಸ್ಕರಣ ಕಾರ್ಯಗಳೂ ಅತ್ಯಂತ ಉತ್ಸಾಹದಿಂದ ಉದಯವಾದುವು. ಸಮಾಜದ

ಉದ್ಧಾರಕ್ಕಾಗಿಯೇ ತಮ್ಮನ್ನು ಮುಡಿಪಾಗಿಡಬಲ್ಲ ಶಿವಯೋಗ ಸಿದ್ಧರ ಸಮೂಹವೊಂದು ಸಿದ್ಧವಾಗುವವರೆಗೆ ಸಮಾಜದ ಉದ್ಧಾರ ಸಾಧ್ಯವಿಲ್ಲವೆಂಬುದನ್ನು ಮನಗಂಡು ಕುಮಾರೇಶರು ಅಂಥ ಸಾಧಕರನ್ನು ಸಿದ್ದಗೊಳಿಸುವ ಸಂಸ್ಥೆಯೊಂದನ್ನು ಸ್ಥಾಪಿಸಲು ಮನಸ್ಸು ಮಾಡಿದರು. ಪಟ್ಟದಕಲ್ಲಿನಲ ಹತ್ತಿರ ಭದ್ರನಾಯಕನ ಜಾಲಿಹಾಳೆಂಬ ಸಣ್ಣ ಗ್ರಾಮದಲ್ಲಿ ಬಡ ಭಕ್ತನೊಬ್ಬನ ಮಗನಾಗಿ ಹುಟ್ಟಿ, ಬಾಗಲಕೋಟೆಯ ಮನಗೂಳಿ ವಿರೂಪಾಕ್ಷಯ್ಯನವರ ಸಾಕುಮಗನಾಗಿ ಬೆಳೆದು, ಅಲ್ಲಿಯ ಪ್ರಸಿದ್ಧ ಶಿವಾನುಭವಿಗಳಾಗಿದ್ದ ಕಿಣಗಿ ಬಸವ ಲಿಂಗಪ್ಪನವರ ಪ್ರಭಾವದಿಂದ ಅಧ್ಯಾತ್ಮದತ್ತ ಒಲಿದು, ಇಳಿಕಲ್ಲ ಹತ್ತಿರದ ಕೊಡಗಲಿಯ ವಿರಕ್ತ ಮಠದಲ್ಲಿದ್ದ ಮಹಾತಪಸ್ವಿ ಮಹಾಲಿಂಗಸ್ವಾಮಿಗಳವರಿಂದ ಉಪದೇಶ ಪಡೆದು, ನಾಡಿನಲ್ಲಿ ಸಂಚರಿಸಿ ತಮ್ಮ ಅಸ್ಖಲಿತ ವಾಣಿಯಿಂದ ಅದ್ಭುತವಾದ ಪುರಾಣ ಪ್ರವಚನ ಕೀರ್ತನ ಕಲೆಯಿಂದ ಸ್ವಮತ ಪರಮತಗಳ ಆಸ್ತಿಕರೆಲ್ಲರ ಆದರಕ್ಕೆ ಪಾತ್ರರಾಗಿ ವಿರಾಗವಿಭುವೆಂದು ಹೆಸರಾಗಿದ್ದ ವೈರಾಗ್ಯದ ಮಲ್ಲಣಾರ್ಯರಿಂದ ಶ್ರೀಗಳವರ ಈ ಯೋಜನೆಗೆ ಬೆಂಬಲ ಸಿಕ್ಕಿತು. ೧೯೦೮ ರಲ್ಲಿ ಬಾಗಲಕೋಟೆಯಲ್ಲಿ ಕೀರ್ತಿಶೇಷ ರಾಜಾ ಲಖಮನ ಗೌಡಾ ಬಸವಪ್ರಭು ಸರದೇಸಾಯಿ ಒಂಟಿಮುರಿ ಅವರ ಘನ ಅಧ್ಯಕ್ಷತೆಯಲ್ಲಿ ಜರುಗಿದ ನಾಲ್ಕನೆಯ ವೀರಶೈವ ಮಹಾಸಭಾಧಿವೇಶನದ ಕಾಲಕ್ಕೆ ಧರ್ಮಾವತಾರಿಗಳಾದ ವಾರದ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಆಲೋಚನಾ ಸಭೆ ಸೇರಿ ಆ ಬಗ್ಗೆ ಅಂತಿಮ ನಿರ್ಣಯವನ್ನು ಅಂಗೀಕರಿಸಲಾಯಿತು. ಆಗ ಮಹಾತಪಸ್ವಿಗಳೆನಿಸಿದ್ದ ಇಳಕಲ್ಲ ಮಹಾಂತಸ್ವಾಮಿಗಳವರು ತೋರಿಸಿದ ಸ್ಥಳದಲ್ಲಿ 'ಶಿವಯೋಗ ಮಂದಿರ'ವೆಂಬ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದು ನಿರ್ಣಯವಾಯಿತು.

ಅರಸೀಕೆರೆ ತಾಲ್ಲೂಕಿನ ಸಸಿವಾಳ ಗ್ರಾಮದಲ್ಲಿ ಹಿರಿಯಮಠದ ವೀರಯ್ಯ–ಗೌರಮ್ಮರಿಗೆ ಮಳೆಯಪ್ಪಾರ್ಯನೆಂಬ ನಾಮದಿಂದ ಮಗನಾಗಿ ಶಾ.ಶ. ೧೭೭೨ರಲ್ಲಿ ಜನಿಸಿ, ಬಳ್ಳಾರಿಯ ಸಕ್ಕರಿ ಕರಡೆಪ್ಪನವರ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾರ್ಜನೆ ಮಾಡಿ, ಹುನಗುಂದ ತಾಲ್ಲೂಕಿನ ಚಿತ್ತರಗಿಯ ಶಿವಯೋಗ ಪೀಠವನ್ನೇರಿ ವಿಜಯುಮಹಾಂತ ಶಿವಯೋಗಿಗಳಾಗಿ ಮಹಾತ್ಮರಾದವರು ಇಳಕಲ್ಲ ಮಹಾಂತಸ್ವಾಮಿಗಳವರು. 'ಶಮೆ, ದಮೆ, ವಿವೇಕ, ವೈರಾಗ್ಯ, ಪರಿಪೂರ್ಣ ಭಾವ, ಶಾಂತಿ, ಕಾರುಣ್ಯ, ಶ್ರದ್ಧೆ, ಸತ್ಯ ಸದ್ಭಕ್ತಿ, ಶಿವಜ್ಞಾನ, ಶಿವಾನಂದ'ಗಳೇ ಸಾಕಾರವಾಗಿದ್ದ ಮಹಾತ್ಮರಾದವರು. ಮಠದ ಆಳುಗಳು ಪ್ರಮಾದವಶದಿಂದ ಸರಕಾರದ ಮರಗಳನ್ನು ಕಡಿದು ದಂಡನೆಗೆ ಗುರಿಯಾಗುವ ಪರಿಸ್ಥಿತಿಯಲ್ಲಿರುವಾಗ ತಾನೇ ತಾಲ್ಲೂಕು ಆಫೀಸಿಗೆ ಹೋಗಿ 'ತಪ್ಪು ತಮ್ಮದೇ, ಶಿಕ್ಷೆ ತಮಗೆ ವಿಧಿಸಬೇಕೆಂದು' ಹೇಳಿದ

ಮಹಾನಭಾವರವರು. ವಾರದ ಮಲ್ಲಪ್ಪನವರು ಕಾಣಿಕೆಯೆಂದು ಹಣತುಂಬಿದ ತಾಟನ್ನು ಎದುರಿಗಿರಿಸಿದಾಗ ಹಣವನ್ನು ತೃಣವೆಂದು ಕಂಡು,'ಬಸವಣ್ಣನವರ ವಚನಗಳ ತಿರುಳನ್ನು ತಿಳಿದು ನಡೆಯುತ್ತೇನೆ' ಎಂಬ ವಚನಭಿಕ್ಷೆಯನ್ನು ನೀಡೆಂದು ಅವರನ್ನು ಕೇಳಿದ ಆಶಾರಹಿತ ಆದ್ಯಾತ್ಮವೀರರವರು. ಸರ್ವಧರ್ಮ ಸಮನ್ವಯ ದೃಷ್ಟಿಯನ್ನಿರಿಸಿಕೊಂಡು ಸಕಲ ಮತದವರಿಗೂ ಶ್ರೇಯಪ್ರೇಮಗಳನ್ನು ಅನುಗ್ರಹಿಸಿ ಅಮರವಾದ ಅನುಭಾವಿಗಳವರು.

ಅಂಥ ಮಹಾತ್ಮರು ತೋರಿಸಿದ, ಹಿಂದೆ ಮಹಾಮಹಿಮ ಕೊಟ್ಟೂರು ಬಸವೇಶ್ವರರ ತಪೋವನವಾಗಿದ್ದ, ಇಂದು ಬನಶಂಕರಿ, ನಾಗನಾಥ ಮಹಾಕೂಟ, ವಾತಾಪಿಪುರ (ಬಾದಾಮಿ) ಪಟ್ಟದಕಲ್ಲು ಮತ್ತು ಐಹೊಳೆಗಳ ಮಧ್ಯದಲ್ಲಿರುವ ಪವಿತ್ರಸ್ಥಾನದಲ್ಲಿ ಶಿವಯೋಗಮಂದಿರ ಸಂಸ್ಥೆಯು ಕ್ರಿ.ಶ. ೧೯೦೮ ರಲ್ಲಿ ಸ್ಥಾಪಿತವಾಯಿತು. ಸ್ವತಃ ಇಳಕಲ್ಲ ಮಹಾಂತಸ್ವಾಮಿಗಳವರೇ ವೈ.ಶು. ೭ ಗೆ. ಲಿಂಗಮುದ್ರೆಗಳನ್ನು ಸ್ಥಾಪಿಸಿದರು. ವಟುಗಳು ಬಂದರು, ಯೋಗಪಟುಗಳಾಗ ತೊಡಗಿದರು. ಶಾಸ್ತ್ರಕಾರರು, ಕಲೆಗಾರರು, ಕವಿಗಳು, ವೈದ್ಯರು, ಸಿದ್ಧರು, ಸಾಧಕರು, ಭಕ್ತರು, ಮುಕ್ತರು ಸಾಲು ಸಾಲಾಗಿ ಶಿವಯೋಗ ಮಂದಿರಕ್ಕೆ ಬರತೊಡಗಿದರು. ಶಿವಯೋಗಮಂದಿರವು ಶಿವಜೀವೈಕ್ಯ ವಿದ್ಯೆಯ ಕೇಂದ್ರವಾಯಿತು. ಗ್ರಂಥಸಂಗ್ರಹ–ಸಂಶೋಧನ–ಪ್ರಕಾಶನಕಾರ್ಯ ನಡೆಯಿತು; ಶಿವಯೋಗಸಾಧನೆ ಶಾಸ್ತ್ರೋಕ್ತವಾಗಿ ಸಾಮೂಹಿಕವಾಗಿ ನಡೆಯತೊಡಗಿತು; ಉಪದೇಶಕರು, ಸಂಗೀತಗಾರರು, ಕವಿಗಳು, ಕೀರ್ತನಕಾರರು ಸಿದ್ಧರಾಗತೊಡಗಿದರು ಸಮಾಜ ಜಾಗೃತಿಗಾಗಿ, ಪುನರುಜ್ಜೀವನಕ್ಕಾಗಿ. ವೈದ್ಯಶಾಸ್ತ್ರದ ವ್ಯಾಸಂಗ ಸಂಶೋಧನೆಗಳೂ ನಡೆದುವು ; ಭಸ್ಮ–ಲಿಂಗಗಳ ನಿರ್ಮಾಣ, ಕೃಷಿ ಸಂವರ್ಧನ, ಪಶುಸಂಗೋಪನ ಗ್ರಾಮೋದ್ಯೋಗಗಳ ಪುನರುತ್ಥಾನ, ಗೋಸಂವರ್ಧನ, ಖಾದಿ ಪ್ರೋತ್ಸಾಹನ–ಹೀಗೆ ಹಲವು ಮುಖವಾಗಿ ರಾಷ್ಟ್ರ ನಿರ್ಮಾಣಕಾರ್ಯ ಭರದಿಂದ ಸಾಗಿತು ; ಶಿಕ್ಷಣ ಪ್ರಸಾರ, ಸಾಹಿತ್ಯ ಪ್ರಚಾರಗಳಿಗೆ ನೆರೆಬಂದಿತು; ವಾಣಿಯ್ಯ ವ್ಯಾಪಾರಗಳಿಗೂ ಉತ್ತೇಜನ ದೊರೆಯಿತು. ಪತ್ರಿಕೆಗಳೂ ಪ್ರಕಟವಾಗತೊಡಗಿದುವು. ಒಟ್ಟಿನಲ್ಲಿ ಹೊಸಹುಟ್ಟೊಂದು ತಲೆದೋರಿತು.

ಎಂಥ ಹೊಸಹುಟ್ಟದು ! ಎಳಂದೂರ ಬಸವಲಿಂಗಸ್ವಾಮಿಗಳು, ಬಿದರಿ ಕುಮಾರಸ್ವಾಮಿಗಳು, ಬಾಗಲಕೋಟೆಯ ವೈರಾಗ್ಯದ ಮಲ್ಲಣಾರ್ಯರು, ಚಿತ್ತರಗಿಯ ಮಹಾಂತಶಿವಯೋಗಿಗಳು, ಮಲ್ಲನ ಕೆರೆಯ ಚನ್ನಬಸವಸ್ವಾಮಿಗಳು, ಹುಬ್ಬಳ್ಳಿಯ ಮೂರುಸಾವಿರ ಮಠದ ಗಂಗಾಧರ ಮಹಾಸ್ವಾಮಿಗಳವರು, ಅನಂತಪುರದ ಜಗದ್ಗುರು ಗುರುಬಸವ ಮಹಾಸ್ವಾಮಿಗಳು ಮತ್ತು ಜ. ಲಿಂಗ ಮಹಾಸ್ವಾಮಿಗಳು, ಗದಗಿನ ತೋಂಟದಾರ್ಯ ಮಠದ ಜ. ಸಿದ್ದೇಶ್ವರಸ್ವಾಮಿಗಳು, ಹಾವೇರಿಯ

ಹುಕ್ಕೇರಿಮಠದ ಶಿವಬಸವ ಮಹಾಸ್ವಾಮಿಗಳು, ಶಾಂತವೀರ ಸ್ವಾಮಿಗಳು ಕರವೀರ ಮಠ ಬಾಗಲಕೋಟೆ, ಕೆಳದಿಯ ಹಿರಿಯ ಮಠದ ರೇವಣಸಿದ್ಧ ಪಟ್ಟಾಧ್ಯಕ್ಷರು, ಸೊಲ್ಲಾಪುರದ ವೀರೇಶ್ವರ ಶರಣರು, ಕಬ್ಬೂರ ಶರಣರು, ಹಾಲಕೆರೆಯ ಅನ್ನದಾನಸ್ವಾಮಿಗಳು, ಗುತ್ತಲದ ರುದ್ರಸ್ವಾಮಿಗಳು, ಸೂಡಿಯ ಪಟ್ಟಾಧ್ಯಕ್ಷಾರು, ಮೊದಲಾದ ಶರಣಕುಲದೀಪಕರ ಸಂಯುಕ್ತ ಪ್ರಭಾವಲಯದಲ್ಲಿ ಉದ್ಭವಿಸಿ ಕುಮಾರಸ್ವಾಮಿಗಳ ಆತ್ಮತೇಜದಲ್ಲಿ ತೊಳಗಿ ಬೆಳಗಿದ ಆ ಹೊಸಹುಟ್ಟು ಅವಿಸ್ಮರಣೀಯವಾದುದು. ಅದು ಇತ್ತ ಅಮೃತ ಫಲಗಳಾದರೂ ಎಂಥವು ! ಬಾಗಲಕೋಟೆಯ ಶಿವಮೂರ್ತಿಸ್ವಾಮಿಗಳು, ಕಂಚುಕಲ್ಲ-ಬಿದರೆ'ಯೋಗಿರಾಜ' ಪ್ರಭುಕುಮಾರ ಪಟ್ಟಾಧ್ಯಕ್ಷರು, ವ್ಯಾಕರಣಾಳ ಶ್ರೀ ಸಿದ್ಧಲಿಂಗ ಪಟ್ಟಾಧ್ಯಕ್ಷರು, ನವಿಲುಗುಂದದ ಗವಿಮಠದ ಬಸವಲಿಂಗ ಶಿವಯೋಗಿಗಳು, ನಿಡಮಾಮಿಡಿ ಜಗದ್ಗುರುಗಳ (ಜ.ಚ.ನಿ), ಬಂಥನಾಳ ಶಿವಯೋಗಿಗಳು, ಕುರವತ್ತಿಯ ತೋಂಟದಾರ್ಯ (ಮಹಾದೇವ) ಸ್ವಾಮಿಗಳು, ಐಹೊಳೆಯ ಸದಾಶಿವದೇವರು, ಚಿತ್ತರಗಿ ಇಳಕಲ್ಲ ಪೀಠದ ಗುರು ಮಹಾಂತಸ್ವಾಮಿಗಳು, ಸಂಪಗಾವಿಯ ನೀಲಕಂಠ ಶಿವಾಚಾರ್ಯರು, ಹಾನಗಲ್ಲ ಮಹೇಶ್ವರಸ್ವಾಮಿಗಳು, ಹಾಲಕೆರೆಯ ಅನ್ನದಾನಸ್ವಾಮಿಗಳು, ಜಡೆಯ ಸಿದ್ಧಬಸವಸ್ವಾಮಿಗಳು, ಕಲ್ಯಾಣದ ಸಿದ್ಧಲಿಂಗಸ್ವಾಮಿಗಳು, ಬನವಾಸಿಯ ಸಿದ್ಧವೀರಸ್ವಾಮಿಗಳು, ಕುಷ್ಟಗಿಯ ಪಟ್ಟದ ಕರಿಬಸವ ಶಿವಾಚಾರ್ಯರು ಸಖರಾಯಪಟ್ಟಣದ ಸದಾಶಿವ ಪಟ್ಟಾಧ್ಯಕ್ಷರು, ಹುಬ್ಬಳ್ಳಿಯ ಮೂರುಸಾವಿರ ಮಠದ ಹಿಂದಿನ ಜಗದ್ಗುರುಗಳವರು, ಅನಂತಪುರದ ಜ. ಸಚ್ಚಿದಾನಂದ ಮುರುಘರಾಜೇಂದ್ರಸ್ವಾಮಿಗಳು, ಹಾನಗಲ್ಲ ಸದಾಶಿವ ಸ್ವಾಮಿಗಳು, ಅಂಕಲಗಿಯ ಸಿದ್ಧರಾಮ ಸ್ವಾಮಿಗಳು, ಮುಂಡರಗಿಯ ಅನ್ನದಾನ ಸ್ವಾಮಿಗಳು, ಹಾರ್ನಹಳ್ಳಿ, ತಾವಕೆರೆ, ತೆಳಸಂಗ, ಬೇವಿನಕಟ್ಟೆ, ಬೇಳಗಿ, ನಿಡಗುದಿಕೊಪ್ಪ, ಮೊರಬ, ಕಪ್ಪನಳ್ಳಿ, ನಾಗನೂರು, ಕೆರೂರು, ರಾವೂರು, ಗುಳೇದ ಗುಡ್ಡ, ಸಾಲೂರು, ಭಾಲ್ಕಿ, ಬಾರಂಗಿ ಕೂಡ್ಲಿ, ಮುಳ್ಳಳ್ಳಿ, ಕಡಕೋಳ, ಹೊಸಳ್ಳಿ, ಅಮೀನಗಢ, ಸಿಂದಗಿ ಶಿರ್ಶಿ, ನಿಲಗುಂದ, ಹಾಸನ, ಸವದತ್ತಿ, ಪಡುಸಲಗಿ, ಗುಡಗೇರಿ, ಚಿಕ್ಕಸುಗೂರ, ತುಪ್ಪದ ಕರಹಟ್ಟಿ ಕನ್ನೂರು, ಚಿಂಚಣೀ, ಗುಳೇದ ಗುಡ್ಡ, ಗೊಗ್ಗಿ ಹಳ್ಳಿ, ಕಾಪನಹಳ್ಳಿ, ಬೇನಾಳ, ರಾಮಗಡ್ಡಿ, ಬಾಣಾವರ, ಬೀಳಗಿ, ದೊಡ್ಡಮೇಟಿ ಕುರಿಕೆ, ಹಾಲ್ವಿ, ಗೌರಿಕೆರೆ, ಬಬಲೇಶ್ವರ, ಸವಣೂರು, ತಡಸ ಮೊದಲಾದ ಸ್ಥಳಗಳ ಶ್ರೀಗಳವರು, ಉಭಯ ಗಾನವಿಶಾರದ ಪಂಚಾಕ್ಷರ ಗವಾಯಿಗಳು ಅವರ ಸ್ಥಳಗಳ ಶ್ರೀಗಳವರು, ಉಭಯ ಗಾನವಿಶಾರದ ಪಂಚಾಕ್ಷರ ಗವಾಯಿಗಳು ಅವರ ಷಟ್ಟ ಶಿಷ್ಯರಾದ ಪುಟ್ಟಯ್ಯನವರು, ಸಂಗೀತಸುಧಾಕರ ಬಸವರಾಜ ರಾಜಗುರು, ಸಂಗೀತ ವಿದ್ವಾನ್ ಕರೂರು

ಗುರುಬಸವಾರ್ಯ ಹಿರೇಮಠರು, ಸಂಗೀತ ಸುಧಾಕರ ಸಿದ್ಧರಾಮ ಜಂಬಲದಿನ್ನಿ ಮೊದಲಾದ ಸಂಗೀತ ವಿದ್ವಾಂಸರು, ಕವಿ ರತ್ನ ಚೆನ್ನಕವಿಗಳು ದ್ಯಾಂಪುರ, ಗಂಗಾಧರಶಾಸ್ತ್ರಿಗಳು ಚಿತ್ತರಗಿ, ಬಸವಲಿಂಗಶಾಸ್ತ್ರಿಗಳಂತ ಕೀರ್ತನಾಚಾರ್ಯರು– ಹೀಗೆ ಎಣಿಕೆಗೆ ಎಟುಕದಷ್ಟು ಅಮೃತ ಫಲಗಳನ್ನು ಕೊಟ್ಟಿತು ಕುಮಾರೇಶನು ತಂದು ಹೊಸಹುಟ್ಟು.

ವೀರವೈರಾಗ್ಯವನ್ನಪ್ಪಿದರೂ ಕುಮಾರೇಶರು ಕರುಣರಸಭರಿತರು, ಉದಾರಚರಿತರು. ಅವರ ವಟುವಾತ್ಸಲ್ಯ, ದೀನಬಂಧುತ್ವ, ಸರ್ವಧರ್ಮ ಸಮನ್ವಯ ದೃಷ್ಟಿ, 'ಸರ್ವೇಜನಾಸ್ಸುಖಿನೋ ಭವಂತು' ಎಂಬ ವಿಶ್ವವಿಶಾಲ ಹೃದಯ ಇತ್ಯಾದಗಳು ಅವರ್ಣನೀಯವಾದುವುಗಳು. ಶಿವಯೋಗ ಮಂದಿರದಲ್ಲಿ ಒಮ್ಮೆ ನವಿಲುಗುಂದದ ಬಸವಲಿಂಗಸ್ವಾಮಿಗಳವರು ಭಾಷಣ ಮಾಡುತ್ತ 'ಜಗತ್ತಿನಲ್ಲಿ ವೀರಶೈವ ಮತವೇ ಶ್ರೇಷ್ಠ'ವೆಂದು ಸಾರಲು ಶ್ರೀ ಕುಮಾರಯೋಗಿಗಳು ಅವರನನ್ನು 'ಜಗತ್ತಿನ ಯಾವ ಯಾವ ಧರ್ಮಗಳ ಬಗೆಗೆ ಓದಿಕೊಂಡಿರುವೆ?' ಎಂದು ಕೇಳಿದರಂತೆ. ಬಸವಲಿಂಗಸ್ವಾಮಿಗಳವರಿಂದ 'ಇಲ್ಲ'ವೆಂಬ ಉತ್ತರ ಬರಲು, ಕೇವಲ ನಿನ್ನ ಧರ್ಮದ ಬಗ್ಗೆ ಮಾತ್ರ ಓದಿಕೊಂಡು ಜಗತ್ತಿನ ಎಲ್ಲ ಧರ್ಮಗಳಿಗಿಂತ ನಿನ್ನ ಧರ್ಮವೇ ಶ್ರೇಷ್ಠವಾದುದೆಮದು ಹೇಗೆ ಹೇಳಿದೆ? ಅದಕ್ಕೆ ಆಧಾರವೇನು? ಎಲ್ಲರಿಗೂ ತಮ್ಮ ಧರ್ಮ ಪ್ರಿಯವಾಗುತ್ತದೆ. ನಮ್ಮ ಧರ್ಮವೇ ಶ್ರೀಷ್ಠವೆಂದು ಸಾರಿ ಅನ್ಯರ ಮನ ನೋಯಿಸುವುದು ಉಚಿತವೆ? ಎಲ್ಲ ಧರ್ಮಗಳನ್ನೂ ತುಲನಾತ್ಮಕ ದೃಷ್ಟಿಯಿಂದ ಅರಿತುಕೊಳ್ಳಬೇಕು. ಎಲ್ಲ ಧರ್ಮಗಳ ಬಗೆಗೂ ಸಹಿಷ್ಣುತೆ ಇರಬೇಕು. ಸ್ವಮತ ಶ್ರದ್ಧೆಯು ಅನ್ಯಮತಗಳ ಅವಹೇಳನೆಗೆ ಆಸ್ಪದವೀಯಬಾರದು !' ಎಂದು ಶ್ರೀಗಳವರ ಉದಾರವಾಣಿ ವಚಿಸಿತಂತೆ. ಅವರ ಪ್ರಭಾವದಿಂದಲೇ ಇಂದಿಗೂ ನವಿಲುಗುಂದದ ಗವಿಮಠದಲ್ಲಿ ಸರ್ವಧರ್ಮ ಸಮ್ಮೇಳನ ನಡೆಯುತ್ತಿದೆ.

ಅಸ್ಪೃಶ್ಯತೆಯ ನಿವಾರಣೆಗಾಗಿ ಹೆಣಗಿದರವರು. ಶ್ರೀಮಂತ ಸೌಧಗಳಿಗೆ ಹೋಗುವುದನ್ನು ಬಿಟ್ಟಾದರೂ ಬಡವರ ಮನೆಗಳಿಗೆ ಹೋಗುತ್ತಿದ್ದರವರು. ಸರಳ ಜೀವನ ಉನ್ನತ ಆದರ್ಶಗಳೇ ಉಸಿರಾಗಿದ್ದರವರು. ಖಾದಿಗೆ ಪ್ರೋತ್ಸಾಹವನ್ನಿತ್ತರವರು. ಅನೇಕ ಹೃದಯಸ್ಪರ್ಶಿಯಾದ ಭಾವಗೀತೆಗಳನ್ನು ರಚಿಸಿ ನವೀನ ನಿಜಭಕ್ತಿತರಂಗಿಣಿಯನ್ನು ಹರಿಸಿದವರು ಅವರು. ಶುದ್ಧ ಭಕ್ತಿಯಿಂದ ಬಡ ಕುರುಬನೊಬ್ಬನು ತಂದಿದ್ದ ಹಾಲನ್ನು ಸ್ವೀಕರಿಸುವುದೋ ಬಿಡುವುದೋ ಎಂದು ಉಳಿದವರು ವಿವಂಚನೆಗೆ ಉಳಗಾಗಿದ್ದಾಗ ನಿಜಭಕ್ತಿ ಬೆರೆತ ಆ ಹಾಲೇ ಅಮೃತವೆಂದು ಅದನ್ನು ಸ್ವೀಕರಿಸಿದವರು ಆ ಮಹಾತ್ಮರು. ಸೊಲ್ಲಾಪುರದ ವೀರೇಶ್ವರ ಶಿವಶರಣರು ಲಿಂಗೈಕ್ಯರಾಗಲಿರುವರೆಂಬ ಸುದ್ದಿ ತಿಳಿಯುತ್ತಲೆ ವ್ರತಭಂಗವನ್ನೂ

ಗಮನಿಸದೆ ಉಗಿಬಂಡಿಯಲ್ಲಿ ಪ್ರವಾಸಮಾಡಿದವರು ಆ ಕೃಪಾಸಿಂಧುಗಳು. ಅವರು ಏನು ಅಹುದು? ಏನು ಅಲ್ಲ?

'ಭಕ್ತಿಯಲ್ಲಿ ಬಸವ ನೀನಯ್ಯ ! ಜ್ಞಾನದಲ್ಲಿ ಚೆನ್ನಬಸವ ನೀನಯ್ಯ !
ವಿರತಿಯಲ್ಲಿ ಅಲ್ಲಮ್ಮಪ್ರಭು ನೀನಯ್ಯ ! ಶಿವಯೋಗದಲ್ಲಿ ಸಿದ್ಧರಾಮ ನೀನಯ್ಯ!
ಐಕ್ಯದಲ್ಲಿ ಅಜಗಣ್ಣ ನೀನಯ್ಯ । ಉಳಿದ ಕಾಯಕಂಗಳಲ್ಲಿ
ಎಲ್ಲ ಶಿವಶರಣರಂಶ ನೀನಯ್ಯ । ಶ್ರೀ ನಿಡುಮಾಮಿಡಿ ಶ್ರೀಗಿರಿ
ಸೂರ್ಯ ಸಿಂಹಾಸನಾಧೀಶವಾಶ ಕುಮಾರೇಶ್ವರ'

ಎಂಬ ಜ.ಚ.ನಿ.ಯವರ ವಚನ ರತ್ನವನ್ನು ಉದ್ಧರಿಸಿಬಿಟ್ಟರೆ ಸಾಕೆಂದು ತೋರುತ್ತದೆ.

ಕಾಯವಿಕಾರಮಿಲ್ಲ ಮನದುಲ್ಬಣಮಿಲ್ಲ ಮದಾಳಿಯಿಲ್ಲವಾ
ವಾಯು ಗುಣಗಳಿಲ್ಲ ನಿಖಿಲೇಂದ್ರಿಯ ಚೇಷ್ಟೆಗಳಿಲ್ಲ ವಾನಗಂ
ಮಾಯೆಯ ಕಾಟಮಿಲ್ಲ ವಿಷಯಂಗಳ ಲಾಲಸೆಯಿಲ್ಲ ಜೀವನಾ-
ಪಾಯಮದಿಲ್ಲ ನಿನ್ನೊಳೆ ಮಹಾ ಪ್ರಭುಲಿಂಗ ಕುಮಾರಯೋಗಿಯೆ ॥

ಲಿ. ಕವಿರತ್ನ ಚೆನ್ನಕವಿಗಳು

ಗುರುಮಲ್ಲೇಶ್ವರರು ಸನಾತನ, ಕುಮಾರಸ್ವಾಮಿಗಳು ನೂತನ-ಇವರಿಬ್ಬರ ಚರಿತ್ರೆ ಸನಾತನ-ನೂತನಗಳ ಸೇತುವೆ. ಸೇತುವೆ. ಒಬ್ಬರು ಶಕೆ. ೧೮೨೦ರಲ್ಲಿ ಲಿಂಗೈಕ್ಯರಾದರು. ಇನ್ನೊಬ್ಬರು ೧೮೫೧ರಲ್ಲಿ ಲಿಂಗೈಕ್ಯರಾದರು. ಒಬ್ಬರು ದಾಸೋಹ ಮೂರ್ತಿಗಳು, ಇನ್ನೊಬ್ಬರು ಶಿವಯೋಗಮೂರ್ತಿಗಳು. ಒಬ್ಬರು ಹಳೆಯ ಮೈಸೂರಿನವರು, ಇನ್ನೊಬ್ಬರು ಉತ್ತರ ಕರ್ನಾಟಕದವರು. ಹಳೆಯ ಮೈಸೂರಿನ ದಾಸೋಹ, ಉತ್ತರ ಕರ್ನಾಟಕದ ಯೋಗ, ಹೈದರಾಬಾದು ಕರ್ನಾಟಕದ ಭಕ್ತಿ ಮುಪ್ಪುರಿಗೊಂಡು ಮೈದೋರಿರುವ ವಿಶಾಲ ಮೈಸೂರು ಎಂದೆಂದಿಗೂ ಆತ್ಮಸಂಪತ್ತಿನ ನೆಲೆಯಾಗಿರಲಿ, ಸೈಪಿನ ಸೆಲೆಯಾಗಿರಲಿ !

■

# ಹಿಮ್ಮಾತು

ಇದುವರೆಗೆ ಶರಣತತ್ತ್ವಪ್ರಕಾಶದಲ್ಲಿ ಶರಣಜೀವನದ ವ್ಯಾಪ್ತಿ ವಿಸ್ತಾರಗಳನ್ನು ಅಳೆದೆವು–ಅಳವಿನಲ್ಲಿ ಬಂದಷ್ಟು ; ಅದರ ಸೊಬಗನ್ನು ಸವಿದೆವು, ಅಮೃತವನ್ನು ಆಸ್ವಾದಿಸಿದೆವು ; ಅದರ ಸ್ವಯಂಭುಶೋಭೆಗೆ ಶರಣೆಂದು ಶುದ್ಧರಾದೆವು. ಏನದರ ಮನೋಹರತೆ, ಎನಿತದರ ಪಾವನತೆ, ಎಷ್ಟದರ ಆಗಾಧತೆ ! ಯಾವ ನಿಟ್ಟಿನಿಂದ ನೋಡಿದರೂ ಯಾವ ದಿಟ್ಟಿಯಿಂದ ನೋಡಿದರೂ ನಿತ್ಯ ನವೀನವಾಗಿ ತೋರುವುವು ಅದರ ಚಾರುತೆ, ಉದಾರತೆ, ಉದಾತ್ತತೆಗಳು. ಈ ಗ್ರಂಥದಲ್ಲಿ ಬಂದಿರುವುದು ಅಂಜುಲಿ ಸಲಿಲ ಮಾತ್ರ. ಅದಷ್ಟನ್ನೇ ಸೇವಿಸಿದರೂ ಸಾಕು, ಬದುಕು ಬಂಗಾರವಾಗುವುದು.

ಶರಣರದೊಂದು ಪಂಥವಲ್ಲ, ಪಥ; ವರ್ಗವಲ್ಲ, ಮಾರ್ಗ. ವಾದವಲ್ಲ, ಹಾದಿಯೆಂಬುದು ಇದಾಗಲೇ ವಿದಿತವಾಗಿರಬೇಕು ಓದುಗರಿಗೆ. ಇದನ್ನೇ 'ಮುನ್ನಿನವರು ಹೋದ ದಾರಿ'ಯೆಂದು, 'ಶಿವಪಥ'ವೆಂದು ಬಸವಣ್ಣನವರು ಕರೆದಿದ್ದಾರೆ. ಈ ಶಿವಪಥದ ಪಥಿಕರಾಗಿ ಪರಿಪೂರ್ಣದೆಡೆಗೆ ಪಯಣ ಬೆಳೆಸುವುದೇ ಗುರಿಗಳಲ್ಲಿ ಗುರಿ. ಆ ಗುರಿಯ ಮರೆತು ಕಗ್ಗುರಿಗಳಾಗಿ 'ಕಬ್ಬಿನ ಹೊರಗಣೆಲೆಯನೆ ಮೆಯ್ಯುತ ಅಲ್ಪ ಸುಖಕ್ಕೆ' ಸೋಲಬಾರದು. 'ಭಕ್ತಿಗಜ'ವಾಗಿ ಕಬ್ಬಿನೊಳಗಣ ರಸವ ನೆರೆ ಸವಿಯಬೇಕು, ಶರಣ ಮಾರ್ಗದಲ್ಲಿ ಮುನ್ನಡೆಯಬೇಕು, ಕೇಡಿಲ್ಲದ ಪದವಿಯ ಪಡೆಯಬೇಕು.

'ಶರಣರ ದಾರಿ ಶರಣರಿಗೆ ನಮಗೆ ಸಾಧ್ಯವೇ?' ಎಂಬ ಪ್ರಶ್ನೆ ಉದ್ಭವಿಸುವುದು ಅಸಂಭಾವ್ಯವೇನಲ್ಲ. 'ಆನೆ ಆ ಹಾದಿಯಲ್ಲಿ ಹೋಯಿತ್ತೆಂದೊಡೆ ಆಡು ಆ ಹಾದಿಯಲ್ಲಿ ಹೋಗಬಹುದೆ ಅಯ್ಯ?' ಎಂಬ ಬಸವಣ್ಣನವರ ಮಾತಿನಲ್ಲಿಯೇ ಮುಗುಳೊಡೆಯಬಹುದು ಇಂಥ ಪ್ರಶ್ನೆ. ಅದರ ಅರ್ಥ ಇಷ್ಟೆ : ಆನೆ ಮಾತ್ರ ಹೋಗಬಲ್ಲ ಹಾದಿಯಲ್ಲಿ ಆಡು ಮುಂದಾಗಿ ಹೋಗಬಾರದು. ಆನೆ ಅಡ್ಡಬಂದ ಬೇಲಿಗಳನ್ನೆಲ್ಲ ದಾಟಿ ಹೋಗುತ್ತದೆ ; ಮುಳ್ಳಿನ ಮರಗಳನ್ನು ಕಿತ್ತೆಸೆದು ಹೋಗುತ್ತದೆ; ಹಳ್ಳಕೊಳ್ಳಗಳನ್ನೆಲ್ಲ ಈಸಿ ಜೈಸಿ ಹೋಗುತ್ತದೆ. ಆಡು ಆ ರೀತಿ ಹೋಗಲಾರದು,

ಹೋಗಬಾರದು. ಆದರೆ ಆನೆ ಒಮ್ಮೆ ಹಾಯ್ದುಹೋದ ಹಾದಿಯಲ್ಲಿ ಆಡು ನಿರಾಯಾಸವಾಗಿ ಹೋಗುಬಲ್ಲುದು. ಆನೆ ಹೋದುದೇ ಹಾದಿ. 'ನಡೆದುದೇ ಮಾರ್ಗವಾದುದು ಶಿವನ ಮದಕರಿಗೆ' ಎಂದು ಅಲ್ಲಮನನ್ನು ಕುರಿತು ಹರಿಹರನು ಹಾಡಿಲ್ಲವೆ? ಆನೆ ಹೋದ ಹಾದಿಯಲ್ಲಿ ಆಡು ಹೋಗಲಿ, ಕರಿ ಹೋದ ದಾರಿಯಲ್ಲಿ ಕುರಿ ಹೋಗಲಿ–ಆದರೆ ಆನೆ ಹೋಗಬಲ್ಲ ಹಾದಿಯಲ್ಲಿ ಆಡು ಹೋಗದಿರಲಿ ! ಹೊಸ ಹಾದಿಯನ್ನು ಹುಡುಕುವುದು, ಹೊಸ ದಾರಿಯನ್ನು ಕೊರೆಯುವುದು ಆನೆಯ ಕೆಲಸ; ಹೊಸ ಹಾದಿಯ ಹವ್ಯಾಸವನ್ನು ಬಿಟ್ಟು ಆನೆ ಹೋದ ಹಾದಿಯನ್ನು ಹಿಡಿದು ಗುರಿ ಮುಟ್ಟುವುದು ಆಡಿನ ಕೆಲಸ.

ಶರಣರು ಶಿವನ ಮದಕರಿಗಳಾಗಿ ನಡೆದು ಶರಣ ಮಾರ್ಗವನ್ನು ರಚಿಸಿದರು. ಅವರಂತೆ ಅನ್ಯ ಅನುಭಾವಿಗಳೂ ಹೊಸ ಹೊಸ ಮಾರ್ಗಗಳನ್ನು ಹುಡುಕಿದ್ದಾರೆ. ಆದರೆ ಎಲ್ಲರೂ ಹೊಸ ಹಾದಿ ಹಾಕಹೋಗುವುದು ಹುಚ್ಚುತನ. ಹಾಗಾದರೆ ಹಾದಿಕಾರರಿಗಿಂತ ಹಾದಿಗಳೇ ಹೆಚ್ಚಾಗಿ ಹೋದಾವು ! ಅವಶ್ಯಕತೆಯ ಒತ್ತಡ ಹೆಚ್ಚಾದಾಗ ಹೊಸ ಹಾದಿ ಮೂಡಿಯೇ ಮೂಡುತ್ತದೆ. ಅನಾವಶ್ಯಕವಾಗಿ ಹಾದಿಗಾಗಿ ಹಾದಿಯನ್ನು ಹುಡುಕುವುದು ಹುಚ್ಚುತನ.

ಬೇರೆ ದಾರಿಗಳು ಇವೆ, ಶರಣರ ಶಿವಪಥವೂ ಇದೆ. ಯಾರಿಗೆ ಯಾವ ದಾರಿ ರುಚಿಸುವುದೋ ಅವರು ಆ ದಾರಿಯನ್ನು ಹಿಡಿಯಲಿ. 'ಊರಿಂಗೆ ದಾರಿಯನು ಯಾರು ತೋರಿದರೇನು, ಸಾರಾಯದಾ ಪದವ ತೋರಿಸುವ ಸದ್ಗುರುವು ಯಾರಾದರೇನು?' ಎಂದು ಸರ್ವಜ್ಞ ಸಾರಿಯೇ ಇದ್ದಾನೆ. ದಾರಿ ಹಲವು, ಸೇರುವ ಗುರಿ ಒಂದೇ.

ಈ ಗ್ರಂಥದ ಉದ್ದೇಶವಿಷ್ಟೇ : "ಇಲ್ಲೊಂದು ದಾರಿಯಿದೆ, ಶರಣರ ದಾರಿ. ಇಂದೊಂದು ನೇರವಾದ, ನಿರ್ಭಯವಾದ, ನಿಸ್ಸಂದಿಗ್ಧವಾದ, ಅಡ್ಡಿ ಆತಂಕಗಳಿಲ್ಲದ ದಾರಿ; ಸುಲಭವಾದ, ಸುಗುಮವಾದ, ಸುರಕ್ಷಿತವಾದ ದಾರಿ ; ಬೇಗ ಗುರು ಮುಟ್ಟಿಸುವ ಶಂಭುಶರಣರ ನಂಬಿಗೆಯ ದಾರಿ. ಸರಿದೋರಿದರೆ ಇದನ್ನೊಮ್ಮೆ ತುಳಿದು ನೋಡಿ !"

'ಅಂದಿನವರಿಗೆ ಇಂದಿನವರು ಸರಿಯೆ?' ಎಂಬ ದಂದುಗ ಬೇಡ, ಸಂದೆಗ ಬೇಡ. ಆದಯ್ಯನಿದಕ್ಕೆ ಸರಿಯಾದ ಉತ್ತರವನ್ನಿತ್ತಿದ್ದಾನೆ : "ಅಂದಿನವರು ಇಂದಿನವರೆಂದು ಸಂದೇಹಿಗಳಿಗೆ ಸಂದೇಹ ಮುಂದುಗೊಂಡಿಪ್ಪುದು ನೋಡಾ ! ಅಂದೊಂದು ಪರಿ ಇಂದೊಂದು ಪರಿಯೆ ಗುರುಲಿಂಗ ಜಂಗಮ? ಅಂದೊಂದು ಪರಿ ಇಂದೊಂದು ಪರಿಯೆ ಪಾದೋದಕ ಪ್ರಸಾದ? ಅಂದೊಂದು ಪರಿ

ಇಂದೊಂದು ಪರಿಯೆ ಶರಣಲಿಂಗ ಸಂಬಂಧ? ಅಂದೊಂದು ಪರಿ ಇಂದೊಂದು ಪರಿಯೆ ಅರಿವು ಆಚರಣೆ? ಅಂದೊಂದು ಪರಿ ಇಂದೊಂದು ಪರಿಯೆ ಸ್ಥಳಕುಳಂಗಳು? ಅಂದೊಂದು ಪರಿ ಇಂದೊಂದು ಪರಿಯೆ ಸೌರಾಷ್ಟ್ರ ಸೋಮೇಶ್ವರಲಿಂಗವು?" ಆ ಲೋಕ ಈ ಲೋಕವೆಂಬ ವ್ಯಾಕುಲವೂ ಬೇಡ. ಲಿಂಗಮ್ಮ ಎಚ್ಚರಿಸಿದ್ದಾಳೆ;

"ಕೈಲಾಸ ಮರ್ತ್ಯಲೋಕವೆಂಬರು. ಕೈಲಾಸವೆಂದರೇನೊ? ಮರ್ತ್ಯಲೋಕ ವೆಂದರೇನೊ? ಅಲ್ಲಿಯ ನಡೆಯು ಒಂದೇ, ಇಲ್ಲಿಯ ನಡೆಯು ಒಂದೇ ಕಾಣಿರಯ್ಯ! ಕೈಲಾಸದವರೇ ದೇವರ್ಕಳೆಂಬರು; ಮತ್ಯಲೋಕದವರೇ ಮಹಾಗಣಂಗಳೆಂಬರು. ಸುರಲೋಕದೊಳಗೆ ಸಾಸಿರಕಾಲಕ್ಕಲ್ಲದೆ ಅಳಿವಿಲ್ಲವೆಂಬರು; ನರಲೋಕದೊಳಗೆ ಸತ್ತು ಹುಟ್ಟುತ್ತಿಹರೆಂಬರು. ಇದು ಕಂಡು ನಮ್ಮ ಶಿವಶರಣರು ಸುರಲೋಕವನು ನರಲೋಕವನು ತೃಣವೆಂದು ಭಾವಿಸಿ ಭವವದಾಂಟಿ ತಮ್ಮ ತಮ್ಮ ಹುಟ್ಟನರಿದು ಮಹಾಬೆಳಗನೇ ಕೂಡಿ ಬೆಳಗಿನಲ್ಲಿ ಬಯಲಾದರಯ್ಯ !"

ಕಾರಣ ಬೆಳಗಿನಲ್ಲಿ ಬಾಳಿ ಬೆಳಗಿನಲ್ಲಿ ಬಯಲಾಗು ! ಆ ಲೋಕ ಈ ಲೋಕವೆಂಬ ವ್ಯಾಕುಲಕ್ಕೊಳಗಾಗಬೇಡ ! ಈ ಲೋಕವು ಆ ಲೋಕದಷ್ಟೇ ಪವಿತ್ರ.

ಈ ಲೋಕದಲ್ಲಿಯೂ 'ಅಲ್ಲಿ, ಇಲ್ಲಿ, ಎಲ್ಲಿ' ಎಂಬ ತಿರುಗಣಿಯಲ್ಲಿ ಸಿಕ್ಕು ಒದ್ದಾಡಬೇಡ ! ಆ ಕ್ಷೇತ್ರ ಈ ತೀರ್ಥವೆಂದು ತಿರುಗಿ ತೊಳಲಬೇಡ. ಹೃದಯ ಕ್ಷೇತ್ರದಲ್ಲಿ ಪ್ರೇಮತೀರ್ಥವಿದೆ. ಅಲ್ಲಿ ಸ್ನಾನಮಾಡಿ ಶುದ್ಧನಾಗು, ಸಿದ್ಧನಾಗು, ಬುದ್ಧನಾಗು! ತನುವಿನೀಕಾಶಿಯಲ್ಲಿ ಮನವೇ ಲಿಂಗವಾಗಿ ಮೂರ್ತಗೊಂಡಿದೆ. ಅಲ್ಲಿ ಪೂಜೆಯಮಾಡಿ ಪವಿತ್ರಾತ್ಮನಾಗು. ಪ್ರಭುದೇವರ ಪ್ರಬೋಧೆ ಮರೆಯದಿರಲಿ:

> ಇಹಲೋಕ ಪರಲೋಕ ತಾನಿದ್ದಲ್ಲಿ ; ಗಗನ ಮೇರುಮಂದಿರ ತಾನಿದ್ದಲ್ಲಿ;
> ಸಕಲಭುವನ ತಾನಿದ್ದಲ್ಲಿ ; ಸತ್ಯನಿತ್ಯನಿರಂಜನ ಶಿವತತ್ತ್ವ ತಾನಿದ್ದಲ್ಲಿ ;
> ಉತ್ತರೋತ್ತರ ಚತುರ್ವಳಯ ತಾನಿದ್ದಲ್ಲಿ ; ಚಂದ್ರ
> ಸೂರ್ಯ ತಾರಾಮಂಡಲ ತಾನಿದ್ದಲ್ಲಿ ; ಅಂತರ ಮಹದಂತರ
> ತಾನಿದ್ದಲ್ಲಿ ; ಸ್ವತಂತ್ರಗುಹೇಶ್ವರಲಿಂಗ ತಾನಿದ್ದಲ್ಲಿ !'

ಆದುದರಿಂದ ಅತ್ತಿತ್ತ ವ್ಯರ್ಥವಾಗಿ ಅಲೆಯಬೇಡ, ಸುತ್ತಿಸುತ್ತಿ ದಣಿಯಬೇಡ:

> 'ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷಗಂಗೆಯ ಮಿಂದಡಿಲ್ಲ,
> ತುಟ್ಟತುದಿಯ ಮೇರುಗಿರಿಯ ಮೆಟ್ಟಿಕೂಗಿದಡಿಲ್ಲ,

ನಿತ್ಯನೇಮದಿಂದ ತನುವ ಮುಟ್ಟಿಕೊಂಡಡಿಲ್ಲ !
ನಿಚ್ಚಕ್ಕೆ ನಿಚ್ಚ ನೆನೆವ ಮನವ , ಅಂದಂದಿಂಗೆ ಅತ್ತಲಿತ್ತ ಹರಿವ ಮನವ
ಚಿತ್ತದಲ್ಲಿ ನಿಲಿಸಬಲ್ಲಡೆ ಬಚ್ಚಬರಿಯ ಬೆಳಗು, ಗುಹೇಶ್ವರಲಿಂಗವು !'

'ಅಲ್ಲಿ ಇಲ್ಲಿ ಎಲ್ಲಿ' ಎಂಬ ಸೊಲ್ಲೂ ಬೇಡ; 'ಅಂದು, ಇಂದು, ಎಂದು' ಎಂಬ ಸಂದೇಹವೂ ಬೇಡ. "ಅಂದು ಇಂದು ಮತ್ತೊಂದೆನಬೇಡ–ದಿನವೊಂದೇ, ದಿನವಿಂದೇ, ಶಿವಶರಣೆನ್ನುವಂತೆ ; ನಿಲವು ಒಂದೇ ಕೂಡಲ ಸಂಗಮದೇವಾ, ನಿಮ್ಮ ಮಾಣದೆ ನೆನೆವಂಗೆ, ಎಮದು ಎಚ್ಚರಿಸಿದರು ಬಸವಣ್ಣನವರು. ಅವರ ತರುಬಾಯ ಆರೇಳು ನೂರು ವರ್ಷಗಳು ಕಳೆದ ಮೇಲೆ ಮತ್ತೆ ನೆನಪುಕೊಟ್ಟರು ಘನಮಠದಾರ್ಯರು:

'ದಿನವಿಂದೆ ಶಿವನ ಕರುಣವಂ ಪಡೆವಂಗೆ
ದಿನವಿಂದೆ ದುಷ್ಕರ್ಮ ಪಾಶಮಂ ಕಡಿವಂಗೆ
ದಿನವಿಂದೆ ಸದ್ಭಕ್ತಿ ಸಾಮ್ರಾಜ್ಯವಾಳ್ವ ಸುವ್ರತವನೆಡೆವಿಡಿವವಂಗೆ !
ದಿನವಿಂದೆ ಹಣೆಯ ದುರ್ಲಿಖಿತಮಂ ತೊಡೆವಂಗೆ
ದಿನವಿಂದೆ ಚಾಂಚಲ್ಯ ಮನವ ನೆರೆ ತಡೆವಂಗೆ
ದಿನವಿಂದೆ ತನ್ನತಾನರಿದು ಭೋಂಕನೆ ಪಾರಮಾರ್ಥದಿಂ ನಡೆವವಂಗೆ !

ದಿನವೊಂದೇ, ದಿನವಿಂದೇ ಘನಮನವನ್ನು ಪಡೆಯಲು, ಶರಣತನವನ್ನು ಸಾಧಿಸಲು. ಆದುದರಿಂದ, 'ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯ! ಇಂದಿನ ದಿನಕೀಗಿನ ಕ್ಷಣ ಲೇಸೆಂದು ಹೇಳಿರಯ್ಯ !'

ಬರಿ ಹೇಳಿದರೆ ತೀರದು, ಶರಣಮಾರ್ಗದಲ್ಲಿ ಮುಂದೆ ಸಾಗುವ ಮನವೂ ಬೇಕು. ಮನವಿಲ್ಲದಿದ್ದರೆ ಎಂಥ ಸುಲಭ ಸುಪಥವಿದ್ದರೇನು? ತನ್ನಿಂದ ತಾನೇ ದಾರಿ ಸಾಗುವುದೆ? ನಡೆವ ಮನಬೇಕು, ನಡೆಯಬೇಕು, ಗುರಿ ಮುಟ್ಟಬೇಕು ! ಬೆಳಗಾಗುವುದರೊಳಗಾಗಿ ರಾಜ್ಯ ಸಂಪಾದಿಸಬಹುದು–ರಾಜ್ಯಕ್ರಾಂತಿಯಲ್ಲಿ, ಸಮರಭೂಮಿಯಲ್ಲಿ ; ಬೆಳಗಾಗುವುದರೊಳಗಾಗಿ ಶ್ರೀಮಂತರಾಗಬಹುದು–ಸಟ್ಟಾವ್ಯವಹಾರದಲ್ಲಿ ಕಾಳಸಂತೆಯುಲ್ಲಿ, ಲಾಟರಿಯುಲ್ಲಿ, ಜೂಜಿನಲ್ಲಿ, ಬೆಳಗಾಗುವುದರೊಳಗಾಗಿ ಪ್ರಸಿದ್ಧ ಪುರುಷನೂ ಆಗಬಹುದು ಯಾವುದೋ ವಿಶೇಷ ಪ್ರಸಂಗದಲ್ಲಿ. ಆದರೆ ಬೆಳಗಾಗುವುದರಲ್ಲಿ ಶರಣನಾಗುವುದು ಮಾತ್ರ ಸಾಧ್ಯವಿಲ್ಲ ! ಸತತ ಸಾಧನೆಯಿಲ್ಲದೆ ಶರಣತನವಿಲ್ಲ ;

"ಭಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ
ಯುಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ ;
ಸಾರಿ ಶರಣವೆನಿಸುವೆನಯ್ಯಾ ಮೆಲ್ಲಮೆಲ್ಲನೆ ;

ಎಡಹುಗುಳಿಗಳ ದಾಂಟಿ ಬರ ಬರ ಲಿಂಗೈಕ್ಯನೆನಿಸುವೆನಯ್ಯಾ ;
ಕೂಡಲ ಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯಾ ;

ಇದು ಮಾತ್ರ–ವಿಕಸನದ ಮಾರ್ಗ. ಮೆಲ್ಲಮೆಲ್ಲನೆ ಗಾಳಿ ತೀಡತ್ತದೆ ; ಮೆಲ್ಲಮೆಲ್ಲನೆ ಮೊಗ್ಗೆ ತುಟಿಗಳನ್ನು ತೆರಯುತ್ತದೆ; ಮೆಲ್ಲಮೆಲ್ಲನೆ ಮಿಡಿಯಾಗಿ ಮೆಲ್ಲಮೆಲ್ಲನೆ ಮಾಗಿ ಹಣ್ಣಾಗುತ್ತದೆ. ಹಾಗೆಯೇ ಆತ್ಮಕಮಲವೂ ಸತತ ಸಾಧನೆಯ ಸುಳಿಗಾಳಿಯಿಂದಲೇ ಅರಳಿ ಸೌರಭವನ್ನು ಸೂಸೀತು.

ಈ ಸತತ ಸಾಧನೆಯ ಕರೆ ಯಾವಾಗಲೂ ಮೊರೆಯುತ್ತಲೇ ಇರುತ್ತದೆ. ಆದರೆ ಎಲ್ಲರಿಗೂ ಆ ಕರೆಯನ್ನು ಕೇಳುವ ಕಿವಿ ಇರಬೇಕಲ್ಲ. ಜೀವನದ ಕಠಿಣ ಕರ್ಕಶ ಸ್ವರಗಳನ್ನು ಕೇಳಿ ಕೇಳಿ ಮರವಟ್ಟ ಮರಗಿವಿಗಳಿಗೆ ಈ ಅಂತರಂಗದ ನವುರಾದ ಕರೆ ಕೇಳಿಸುವುದೆಂತು? ಅಂತೆಯೇ, 'ಹುಣಸೆಯ ಹೂವೆಲ್ಲ ಕಾಯಾಗುವುದಿಲ್ಲ'ವೆಂದು ದೇವರ ದಾಸಿಮಯ್ಯ ಹೇಳಬೇಕಾಯಿತು; 'ಸಗಣಿಯ ಬೆನಕಂಗೆ ಸಂಪಿಗೆಯ ಅರಳಲ್ಲಿ ಪೂಜಿಸಿದರೆ ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣ' ಎಂದು ಬಸವಣ್ಣ ಬಿಸುಸುಯ್ಯ ಬೇಕಾಯಿತು; ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ' ಎಂದು ಚನ್ನಬಸವಣ್ಣ ಲೆಕ್ಕ ಮಾಡಬೇಕಯಿತು.

ಇದುವರೆಗಿನ ವಿವರಣೆಯಿಂದ ಕೋಟಿಗೊಬ್ಬರಲ್ಲ–ಅನೇಕ ಶರಣರು ಈ ನಾಡಿನಲ್ಲಿ ಉದಿಸಿ ಇದನ್ನು ಬೆಳಕಿನ ಭೂಮಿಯನ್ನಾಗಿ ಮಾಡಿ ಹೋಗಿರುವರೆಂಬುದು ಮನವರಿಕೆಯಾಗಿರಬೇಕು. ಸಂಖ್ಯೆಯಲ್ಲಿ ಇದಕ್ಕೂ ಇಮ್ಮಡಿ, ಮುಮ್ಮಡಿ, ನಾಲ್ಮಡಿ ಇರುವ ದೇಶದಲ್ಲಿ, ಜನಾಂಗದಲ್ಲಿ ಇಷ್ಟೊಂದು ಜನರು ಶರಣ ಪದವಿಯನ್ನು ಪಡೆದಿರುವರೋ ಇಲ್ಲವೋ ಹೇಳಲಾಗದು. ಶಿವಶರಣರು ಮಾತ್ರ ಉದಯವಾಗುವುದೇ ನಕ್ಷತ್ರ ಸಮೂಹದಂತೆ ಉದಯವಾಗಿ, ತೊಳಗಿ ಬೆಳಗಿ, ಪ್ರತಿಯೊಂದು ಶತಮಾನದಲ್ಲಿಯೂ ತರತಮಭಾವದಿಂದ ತಲೆದೋರಿ, ಇಂದಿಗೂ ಜೀವಂತ ಪರಂಪರೆಯಾಗಿ, ಜೀವಂತ ತತ್ತ್ವಪ್ರಣಾಲಿಯಾಗಿ ಉಳಿದಿದ್ದಾರೆ. ಇದನ್ನು ನೆನೆದಾಗ ಈ ಪುಣ್ಯಭೂಮಿಯ ಪಾವನ ಗರ್ಭವು ಅದೆಂಥ ರತ್ನಗರ್ಭವೆಂದು ಅಚ್ಚರಿಯುಂಟಾಗುತ್ತದೆ. ಆ ಬಸಿರು ಇನ್ನೂ ಬಂಜೆಯಾಗಿಲ್ಲ ! ಇನ್ನೂ ಇಂಥ ಶರಣರು ಅದೇ ಬಸಿರಿನಿಂದ ಬರಬಹುದು, ಬರುತ್ತಲಿದ್ದಾರೆ, ಬರಲಿ ! ಬಂದು ಈ ನಾಡನ್ನು ಮತ್ತೆ ಸ್ವೈಪಿನ ಬೀಡನ್ನಾಗಿ ಮಾಡಲಿ !

'ಏಳು ಮಲಗಿದೆಯೇಕೆ ಶರಣನಾಡೆ!'

–ಅಂಬಿಕಾತನಯದತ್ತ

■

# ಮುಗಿಸುವ ಮುನ್ನ ಮೆಲುಕು ಹಾಕೋಣ ಮನದಲ್ಲಿ

"ಹೊಯ್ದರೆ ಹೊಯ್ಗಳು ಕೈಯ ಮೇಲೆ !
ಬಯ್ದರೆ ಬಯ್ಗಳು ಕೈಯ ಮೇಲೆ !
ಹಿಂದಣ ಜನನವೇನಾದೊಡಾಗಲಿ,
ಇಂದಿನ ಭೋಗವು ಕೈಯ ಮೇಲೆ !
ಕೂಡಲಸಂಗಮದೇವಯ್ಯಾ,
ನಿಮ್ಮ ಪೂಜಿಸಿದ ಫಲ ಕೈಯ ಮೇಲೆ !"

"ಉಂಬ ಬಟ್ಟಲು ಬೇರೆ ಕಂಚಲ್ಲ;
ನೋಡುವ ದರ್ಪಣ ಬೇರೆ ಕಂಚಲ್ಲ;
ಭಾಂಡ ಬಂದೆ, ಭಾಜನ ಒಂದೆ;
ಬೆಳಗೆ ಕನ್ನಡಿಯೆನಿಸಿತ್ತಯ್ಯಾ !
ಅರಿದರೆ ಶರಣ : ಮರೆದರೆ ಮಾನವ !
ಮರೆಯದೆ ಪೂಜಿಸು ಕೂಡಲ ಸಂತಯ್ಯನ !"

"ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ ;
ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯಾ ;
ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯಾ ;
ಪುರುಷದ ಬಲದಿಂದ ಅವಲೋಹದ ಕೇಡ ನೋಡಯ್ಯಾ ;
ಕೂಡಲ ಸಂಗನ ಶರಣರ ಅನುಭಾವದಿಂದ ಎನ್ನ ಮನದ ಕೇಡ
ನೋಡಯ್ಯಾ!"

"ಎನ್ನ ಮನದ ಅವಗುಣವ ಕಳೆದು
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು
ಕೂಡಲ ಸಂಗಮದೇವಾ !"

ಶಿವಮಸ್ತು ಸರ್ವಜಗತಾಂ !"

---------ಸಮಾಪ್ತ---------

■

## ಅನುಬಂಧ – ೧

# ಸಹಾಯಕ ಸಾಹಿತ್ಯ ಸೂಚಿ

| | | |
|---|---|---|
| ೧ | ಸಿದ್ಧಾಂತ ಶಿಖಾಮಣಿಃ (ಸಂ)* | " ಶಿವಯೋಗಿ ಶಿವಾಚಾರ್ಯ |
| ೨ | ಶ್ರೀಕರಭಾಷ್ಯಂ | " ಶ್ರೀಪತಿ ಪಂಡಿತ |
| ೩ | ಕ್ರಿಯಾಸಾರಃ | " ನೀಲಕಂಠ ಶಿವಾಚಾರ್ಯ |
| ೪ | ಶಿವಾದ್ವೈತ ಮಂಜರೀ | " ಸ್ವಪ್ರಭಾನಂದ ಶಿವಾಚಾರ್ಯ |
| ೫ | ಅನುಭವ ಸೂತ್ರಂ | " ಮಗ್ಗೆಯ ಮಾಯಿದೇವ |
| ೬ | ವಿಶೇಷಾರ್ಥ ಪ್ರಕಾಶಿಕಾ | " ಮಗ್ಗೆಯ ಮಾಯಿದೇವ |
| ೭ | ವೇದಾಂತಸಾರ ವೀರಶೈವ ಚಿಂತಾಮಣಿ | " ನಿಟ್ಟೂರು ನಂಜಣಾಚಾರ್ಯ |
| ೮ | ಲಿಂಗಧಾರಣ ಚಂದ್ರಿಕಾ | " ನಂದಿಕೇಶ್ವರ ಶಿವಾಚಾರ್ಯ |
| ೯ | ವೀರಶೈವಾನಂದ ಚಂದ್ರಿಕಾ | " ಮರಿತೋಂಟದಾರ್ಯ |
| ೧೦ | ಸಿದ್ಧಾಂತ ಸಾರಾವಲಿಃ | " ತ್ರಿಲೋಚನ ಶಿವಾಚಾರ್ಯ |
| ೧೧ | ವೀರಶೈವ ಪ್ರದೀಪಿಕಾ | " ಮರಿತೋಂಟದಾರ್ಯ |
| ೧೨ | ಶಿವಯೋಗ ಪ್ರದೀಪಿಕಾ | " ಚೆನ್ನ ಸದಾಶಿವಯೋಗಿ |
| ೧೩ | ವೀರಶೈವ ಧರ್ಮ ಶಿರೋಮಣಿಃ | " ಷಡಕ್ಷರ ಮಂತ್ರಿ |
| ೧೪ | ವೀರಮಾಹೇಶ್ವರಾಚಾರ ಸಂಗ್ರಹಃ | " ನೀಲಕಂಠ ನಾಗನಾಥಾಚಾರ್ಯ |
| ೧೫ | ಅನಾದಿ ವೀರಶೈವಾಚಾರ ಸಂಗ್ರಹಃ | " ಗೂಳೂರು ಸಿದ್ಧವೀರಣಾಚಾರ್ಯ |

---

ಸಂ ಸಂಸ್ಕೃತ, ಕ. ಕನ್ನಡ, ತೆ. ತೆಲುಗು, ತ. ತಮಿಳು, ಮ. ಮರಾಠಿ

೧೬ ಪಾರಮೇಶ್ವರಾಗಮಃ ”

೧೭ ಸೂಕ್ಷ್ಮಾಗಮಃ ”

೧೮ ಮಕುಟಾಗಮಃ ”

೧೯ ಶಿವತತ್ತ್ವ ರತ್ನಾಕರಃ ” ಕೆಳದಿ ಬಸವರಾಜ

೨೦ ಶಿವಸೂತ್ರಾಣ (ಸಂ) ವಸುಗುಪ್ತ

೨೧ ವೀರಸೈವೋತ್ಕರ್ಷ ಪ್ರದೀಪಿಕಾ ” ಶ್ರೀಮಚ್ಚೆನ್ನಬಸವೇಶ್ವರ ದೇಶಿಕ

೨೨ ಕಾರಣಾಗಮಃ ”

೨೩ ಸುಪ್ತಬೋಧಾಗಮ ”

೨೪ ತಾತ್ಪರ್ಯ ಸಂಗ್ರಹ ”

೨೫ ಅನಾದಿ ವೀರಶೈವ ಸಾರಸಂಗ್ರಹ ” ಸಿದ್ಧವೀರ ಶಿವಯೋಗಿ

೨೬ ಕೈವಲ್ಯಸಾರ (ಸಂ) ಮರಿತೋಂಟದಾರ

೨೭ ವೀರಶೈವಾಚಾರ್ಯ ನಿರ್ಣಯ ಚಿಂತಾಮಣಿ ”

೨೮ ಶಿವಪುರಾಣ ” ವ್ಯಾಸ

೨೯ ಶಿವಾಧಿಕ್ರ ” ಅಪ್ಪಯ್ಯದೀಕ್ಷಿತ

೩೦ ಶಿವಚರಿತ ” ಕವಿವಾದಿಶೇಖರ

೩೧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣ ”

೩೨ ಬಿಲ್ವಾಷ್ಟೋತ್ತರಮ್ ”

೩೩ ವೀರಶೈವಾಚಾರ ಪ್ರದೀಪಿಕಾ ”

೩೪ ಶ್ರೀಮದ್ವೀರಶೈವ ಸದಾಚಾರ ಸಂಗ್ರಹಃ”

೩೫ ತಂತ್ರ ಸಂಗ್ರಹ ”

೩೬ ಲಿಂಗಾಧಾರಣವಿಧಿಃ ”

೩೭ ವೀರಶೈವೋತ್ಕರ್ಷ ಸಂಗ್ರಹಃ ” ಕೈ.ಪಿ.ಆರ್. ಕರಿಬಸವಶಾಸ್ತ್ರೀ

೩೮ ಶೈವಾದ್ವೈತ ಪರಿಭಾಷಾ ” ನೀಲಕಂಠ ಶಿವಾಚಾರ್ಯ

೩೯ ಗಣಸಹಸ್ರ ನಾಮಾವಳಿಃ ” ಮಲ್ಲಿಕಾರ್ಜುನ ಪಂಡಿತಾರಾಧ್ಯ

೪೦ ವೀರಶೈವಾನ್ವಯ ಚಂದ್ರಿಕಾ ” ಆರಾಧ್ಯ ವೀರೇಶ್ವರಶಾಸ್ತ್ರಿ

| | | | |
|---|---|---|---|
| ೪೧ | ದಶೋಪನಿಷತ್ತುಗಳು | ” | |
| ೪೨ | ಭಗವದ್ಗೀತಾ | ” | |
| ೪೩ | ಶಿವಗೀತಾ | ” | |
| ೪೪ | ಋಗ್ವೇದ | ” | |
| ೪೫ | ಈಶ್ವರಪ್ರತ್ಯಭಿಜ್ಞಾ ಶಾಸ್ತ್ರಂ | ” | ಮಹಾಮಾಹೇಶ್ವರ ಉತ್ಪಲದೇವ |
| ೪೬ | ಶ್ರೀ ಶಿವದೃಷ್ಟಿಃ | ” | ಮಹಾಮಾಹೇಶ್ವರ ಸೋಮಾನಂದ |
| ೪೮ | ಶಿವಜ್ಞಾನ ದೀಪಿಕಾ | (ಸಂ) | ಮಲ್ಲಿಕಾರ್ಜುನಾರಾಧ್ಯ |
| ೪೯ | ಶಿವಾದ್ವೈತ ದರ್ಪಣಃ | ” | ಶಿವಾನುಭವ ಶಿವಾಚಾರ್ಯ |
| ೫೦ | ಶವಸೂತ್ರಪಾಠಃ | ” | ಸಂ.ಪಂ. ಕೈಲಾಸಲಿಂಗ ಶಿವಾಚಾರ್ಯಸ್ವಾಮೀ |
| ೫೧ | ವೀರಶೈವಾಚಾರ ಕೌಸ್ತುಭಃ | ” | ಮೌನಪ್ಪ ಪಂಡಿತ |
| ೫೨ | ಭಕ್ತಾಧಿಕ್ಯ | ” | ಷಡಕ್ಷರದೇವ |
| ೫೩ | ಶಿವಾಧಿಕ್ಯ | ” | ಷಡಕ್ಷರದೇವ |
| ೫೪ | ಪಂಡಿತಾರಾಧ್ಯ ಚರಿತಂ | ” | ಗುರುರಾಜ ಕವಿ |
| ೫೫ | ಶೂನ್ಯ ಸಂಪಾದನೆ | (ಕ) | ಗೂಳೂರು ಸಿದ್ಧವೀರಣಾಚಾರ್ಯ |
| ೫೬ | ಲಿಂಗಲೀಲಾ ವಿಲಾಸಚಾರಿತ್ರ | ” | ಕಲ್ಮಠದ ಪ್ರಭುದೇವ |
| ೫೭ | ಗಣಭಾಷಿತ ರತ್ನಮಾಲೆ | ” | ಗುಬ್ಬಿಯ ಮಲ್ಲಣಾರ್ಯ |
| ೫೮ | ಆಚರಣೆಯ ವಚನ | ” | ಚೆನ್ನಂಜೆ ದೇವರು |
| ೫೯ | ವಚನಶಾಸ್ತ್ರಸಾರ ಭಾಗ ೧, ೨, ೩ | ” | ಸಂ. ಡಾ. ಫ. ಗು. ಹಳಕಟ್ಟಿಯವರು |
| ೬೦ | ವೀರಶೈವಾಮೃತ ಮಹಾಪುರಾಣ | ” | ಗುಬ್ಬಿಯ ಮಲ್ಲಣಾಚಾರ್ಯ |
| ೬೧ | ಶಿವತತ್ತ್ವ ಚಿಂತಾಮಣಿ | ” | ಲಕ್ಕಣಾಮಾತ್ಯ |
| ೬೨ | ಏಕೋತ್ತರ ಶತಸ್ಥಲ | ” | ಸಿದ್ಧಲಿಂಗೇಶ್ವರ |

| | | | |
|---|---|---|---|
| ೬೩ | ಬಸವಪುರಾಣ | " | ಭೀಮಕವಿ |
| ೬೪ | ವೃಷಭೇಂದ್ರ ವಿಜಯ | " | ಷಡಕ್ಷರದೇವರ |
| ೬೫ | ಪ್ರೌಢರಾಯ ಕಾವ್ಯ | " | ಅದ್ರೀಶಕವಿ |
| ೬೬ | ಗುರುರಾಜ ಚಾರಿತ್ರ | " | ಸಿದ್ಧನಂಜೇಶ |
| ೬೭ | ಅಷ್ಟಾವರಣ ವಿಚಾರದರ್ಪಣ | " | ಮಾಗಡಿ ಎಸ್. ವೀರಪ್ಪಶಾಸ್ತ್ರಿಗಳು |
| ೬೮ | ವೀರಶೈವ ಸಾಹಿತ್ಯ ಮತ್ತು ಇತಿಹಾಸ ಭಾಗ ೧, ೨ | " | ಪಂಡಿತರತ್ನಂ ಬಿ. ಶಿವಮೂರ್ತಿ ಶಾಸ್ತ್ರಿ |
| ೬೯ | ವೀರಶೈವ ಮಹಾಪುರುಷರು | " | ಪಂಡಿತರತ್ನಂ ಬಿ. ಶಿವಮೂರ್ತಿ ಶಾಸ್ತ್ರಿ |
| ೭೦ | ಶಿವಯೋಗ | " | ಸರ್ವದರ್ಶನತೀರ್ಥ ವೈ.ನಾಗೇಶ ಶಾಸ್ತ್ರಿಗಳು |
| ೭೧ | ಪಂಚಾಚಾರ ಪ್ರಕಾಶಿಕೆ | (ಕ) | ಸರ್ವದರ್ಶನತೀರ್ಥ ವೈ. ನಾಗೇಶ ಶಾಸ್ತ್ರಿಗಳು |
| ೭೨ | ಷಟ್‌ಸ್ಥಲ ತತ್ತ್ವದರ್ಪಣ | " | " |
| ೭೩ | ಅಷ್ಟಾವರಣ ವಿವೇಕ | " | " |
| ೭೪ | ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ | " | ಲಿಂ. ಪಂಡಿತ ಕಾಶೀನಾಥ ಶಾಸ್ತ್ರಿಗಳು |
| ೭೫ | ವೀರಶೈವ ಸಿದ್ಧಾಂತ ಪ್ರವೇಶಿಕಾ | " | ಶ್ರೀ. ಚಂದ್ರಶೇಖರಶಾಸ್ತ್ರಿ ಛತ್ರದಹಳ್ಳಿ |
| ೭೬ | ಶಿವಶರಣರ ಅಹಿಂಸಾಧರ್ಮ | " | ಸಂ. ಡಾ. ಫ. ಗು. ಹಳ್ಳಕಟ್ಟಿಯವರು |
| ೭೭ | ಶ್ರೀ ಪೂವಲ್ಲಿ (ಹೂಲಿ)ಯ ಸಿಂಹಾಸನ ಬೃಹನ್ಮಠದ ಸಂಕ್ಷಿಪ್ತ ಇತಿಹಾಸ | " | ಶ್ರೀ ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳು |
| ೭೮ | ಆಗಮಪರಿಜ್ಞಾನ | " | ಶ್ರೀ ಶಂಭುಲಿಂಗ ಶಿವಾಚಾರ್ಯರು ವಿಜಾಪುರ |

| | | | |
|---|---|---|---|
| ೭೯ | ಷಟ್‌ಸ್ಥಳ ತತ್ವಾರ್ಥ ಸಂಗ್ರಹ | ” | ಶ್ರೀ ಶಂಕರಾನಂದ ಸ್ವಾಮಿಗಳು, ಸಾಗರ |
| ೮೦ | ಗುರುಧರ್ಮ ನಿರೂಪಣೆ | ” | ವೀರಪ್ಪ ಬಸಪ್ಪ ಬಿಳಿ ಅಂಗಡಿ |
| ೮೧ | ಶಿವಮಹಿಮಾ ಶತಕ | ” | ಚನ್ನಮಲ್ಲದೇವ ಕವಿ |
| ೮೨ | ವೀರಶೈವರಲ್ಲಿ ಜಾತಿ ಭೇದಗಳಿಲ್ಲ | ” | ವೀರಪ್ಪ ಬಸವಪ್ಪ ಬಿಳಿ ಅಂಗಡಿ |
| ೮೩ | ಷಟ್‌ಸ್ಥಲ | ” | ಶ್ರೀ ಜ. ಚ. ನಿ. |
| ೮೪ | ಶಿವಾನುಭವ ಶಾಸ್ತ್ರವು | ” | ಪ್ರ. ಶ್ರೀ ಸಿದ್ಧಲಿಂಗಸ್ವಾಮಿಗಳು ಕವಿತಾಳ |
| ೮೫ | ವೀರಶೈವ ರತ್ನ | ” | ಪಂ. ಕಾಶೀನಾಥ ಶಾಸ್ತ್ರಿಗಳು |
| ೮೬ | ಸೀಳ್ನುಡಿ | ” | ಶ್ರೀ ಜ. ಚ. ನಿ |
| ೮೭ | ಹರಿಹರನ ರಗಳೆಗಳು (ಉಪಲಬ್ಧವಿರುವ ಎಲ್ಲ ರಗಳೆಗಳು) | ” | ಹರಿಹರ |
| ೮೮ | ಕರ್ನಾಟಕದ ಕಲಚುರಿಗಳು | ” | ಶ್ರೀ ದೇಸಾಯಿ ಪಾಂಡುರಂಗ ರಾಯರು |
| ೮೯ | ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ | ” | ಶ್ರೀ. ಅ. ನ. ಕೃಷ್ಣರಾಯರು |
| ೯೦ | ವಚನಶಾಸ್ತ್ರ ರಹಸ್ಯ | (ಕ) | ಶ್ರೀ ರಂ. ರಾ. ದಿವಾಕರರು |
| ೯೧ | ವಚನ ಧರ್ಮಸಾರ | ” | ಎಂ.ಆರ್. ಶ್ರೀನಿವಾಸಮೂರ್ತಿಗಳು |
| ೯೨ | ಬಾಳಬಟ್ಟೆ | ” | ಸಿಂಪಿ ಲಿಂಗಣ್ಣನವರು |
| ೯೩ | ಕಲ್ಯಾಣದ ಕ್ರಾಂತಿಕಾರರು | ” | ಶ್ರೀ. ಎಂ. ಜೀವನ |
| ೯೪ | ಶಿವಶರಣರು | ” | ಶ್ರೀ. ಎಂ ಜೀವನ |
| ೯೫ | ಅನುಭವ ಮಂಟಪದ ಐತಿಹಾಸಿಕತೆ | ” | ರೆ. ಚ. ಉತ್ತಂಗಿ |
| ೯೬ | ಹಿಂದೂ ಸಮಾಜದ ಹಿತಚಿಂತಕ | ” | ರೆ. ಚ. ಉತ್ತಂಗಿ |
| ೯೭ | ವೀರಶೈವ ತತ್ತ್ವಪ್ರಕಾಶ | ” | ಸಂ. ಶಿ.ಶಿ. ಬಸವನಾಳರು |
| ೯೮ | ಶಿವಾನುಭವ ಸತ್ಯಮಾರ್ಗ | ” | ಡಾ. ಹಳಕಟ್ಟಿ |
| ೯೯ | ಶಿವಾನುಭವ ಶಬ್ದಕೋಶ | ” | ” |

| | | |
|---|---|---|
| ೧೦೦ | ವೀರಶೈವ ದರ್ಶನ | " ಶ್ರೀ ಶ್ರೀ ಕುಮಾರಸ್ವಾಮಿಗಳು, ನವಕಲ್ಯಾಣ ಮಠ, ಧಾರವಾಡ |
| ೧೦೧ | ಭೈರವೇಶ್ವರ ಕಾವ್ಯ | " ನಂಜುಂಡದೇವ |
| ೧೦೨ | ಶರಣಲೀಲಾಮೃತ | " ಚೆನ್ನಪ್ಪಕವಿ |
| ೧೦೩ | ಭೈರವೇಶ್ವರ ಕಥಾಸಾಗರ | " ಉತ್ತರ ದೇಶದ ಬಸವಲಿಂಗದೇವ |
| ೧೦೪ | ಬಸವೇಶ್ವರ ಪುರಾಣದ ಕಥಾಸಾಗರ | " ಉತ್ತರ ದೇಶದ ಬಸವಲಿಂಗದೇವ |
| ೧೦೫ | ಭೈರವೇಶ್ವರ ಕಥಾಸೂತ್ರ ರತ್ನಾಕರ | " ಶಾಂತಲಿಂಗದೇವ |
| ೧೦೬ | ಶ್ರೀ ಬಸವನಾಳರ ಸ್ಮಾರಕ ಗ್ರಂಥ | " |
| ೧೦೭ | ಶ್ರೀ ಹರ್ಡೇಕರ್ ಮಂಜಪ್ಪನವರ ಸ್ಮಾರಕಗ್ರಂಥ | " " |
| ೧೦೮ | ವೀರಶೈವ ಮತ ತತ್ತ್ವ | " ಹರ್ಡೇಕರ್ ಮಂಜಪ್ಪ |
| ೧೦೯ | ವೀರಶೈವ ಮತಬೋಧೆ | " " |
| ೧೧೦ | ವಚನಕಾರರ ಸಮಾಜ ರಚನೆ | " " |
| ೧೧೧ | ಕಾಯಕವೇ ಕೈಲಾಸ | " " |
| ೧೧೨ | ಅಖಿಲ ಭಾರತ ಶಿವಾನುಭವ ಸಮ್ಮೇಳನ ವರದಿಗಳು | " " |
| ೧೧೩ | ಕರ್ನಾಟಕ ಕವಿಚರಿತೆ ಭಾಗ (ಕ) ೧. ೨. ೩ | ರಾ.ಬ.ಆರ್. ನರಸಿಂಹಾಚಾರ್ಯರು |
| ೧೧೪ | ಕನ್ನಡ ಸಾಹಿತ್ಯ ಚರಿತ್ರೆ | " ಡಾ॥ ರಂ.ಶ್ರೀ. ಮುಗಳಿ |
| ೧೧೫ | ನಾನು ನೀನು | " ಶ್ರೀ ಜ. ಚ. ನಿ. |
| ೧೧೬ | ವೀರಮಾಹೇಶ್ವರ ಚಂದ್ರಿಕೆ | " ವೇ । ಮಹಾದೇವಯ್ಯನವರು |
| ೧೧೭ | ವೀರಶೈವಾಚಾರ ವಿಧಿ | " ಪಂ. ಶ್ರೀ ವೃಷಭಲಿಂಗ ಶಾಸ್ತ್ರಿಗಳು |

| | | |
|---|---|---|
| ೧೧೮ ಶ್ರೀ ಚಿದ್ಗುರು ಪ್ರಶಂಸೆ | ” | ಶ್ರೀ ಸದಾಶಿವ ಶಿವಾಚಾರ್ಯ |
| ೧೧೯ ಕನ್ನಡ ಸಾಹಿತ್ಯ ಸಂಸ್ಕೃತ ದರ್ಶನ | ” | ಪ್ರೋ ॥ ಮಾಳವಾಡರು |
| ೧೨೦ ವೀರಶೈವ ಸಾಹಿತ್ಯ | ” | ಶ್ರೀ. ಬಿ.ವಿ. ಶ್ರೀನಿವಾಸರಾವ್ |
| ೧೨೧ ಪರಮಹಂಸ | ” | ಶ್ರೀ ಜ. ಚ. ನಿ. |
| ೧೨೨ ಯೋಗಕ್ಷೇಮ | ” | ಶ್ರೀ ಜ. ಚ. ನಿ. |
| ೧೨೩ ಹಣ್ಣುಕಾಯಿ | ” | ಶ್ರೀ ಜ. ಚ. ನಿ. |
| ೧೨೪ ವೀರಶೈವ ಧರ್ಮಾಚರಣೆ | ” | ಶಂಕರಶಾಸ್ತ್ರೀ ಹಿರೇಮಠ |
| ೧೨೫ ರೇಣುಕವಿಜಯ ಪುರಾಣ | ” | ನಂಜನಗೂಡು ಶ್ರೀಕಂಠಶಾಸ್ತ್ರಿಗಳು |
| ೧೨೬ ಶಿವಮಂತ್ರ ಜಪವಿಧ | ” | ಜ. ಮೂರುಸಾವಿರ ಮಠದ ಪ್ರಕಟಣೆ |
| ೧೨೭ ಶಿವಮಂತ್ರ ಮಹಿಮೆ | ” | ಜಗದ್ಗುರು ಪಟ್ಟದ ಶಿವರಾತ್ರಿಸ್ವಾಮಿಗಳು |
| ೧೨೮ ಕನ್ನಡ ಶತಕಸಾಹಿತ್ಯ | ” | ಶರಣರ ಸಾಹಿತ್ಯ ಗ್ರಂಥಮಾಲೆ |
| ೧೨೯ ವೀರಶೈವ ಧರ್ಮಬೋಧಿನಿ | ” | ಪಂ. ವೈ. ನಾಗೇಶಶಾಸ್ತ್ರಿಗಳು |
| ೧೩೦ ಗಣಸಹಸ್ರನಾಮಾವಳಿ | ” | ಶರಣ ಸಾಹಿತ್ಯ ಗ್ರಂಥಮಾಲೆ |
| ೧೩೧ ಇಷ್ಟಲಿಂಗೋಪಾಸನಾಕ್ರಮ | ” | ಪಂ. ವೈ. ನಾಗೇಶಶಾಸ್ತ್ರಿಗಳು |
| ೧೩೨ ಇಷ್ಟಲಿಂಗ ವಿಜ್ಞಾನ | ” | ಅಕುಲಯ್ಯ ದೀಕ್ಷಿತರು |
| ೧೩೩ ಶಿವಾದ್ವೈತ ಪರಿಭಾಷಾ | ” | ಶ್ರೀ ನೀಲಕಂಠ ಶಿವಾಚಾರ್ಯರು |
| ೧೩೪ ನಿರಂಜನ ವಂಶ ರತ್ನಾಕರ | ” | ಶಿವಾನುಭವ ಗ್ರಂಥಮಾಲೆ |
| ೧೩೫ ಬಸವೇಶ್ವರ ವಚನದ ಕಥಾಸಾರ | ” | ಶಿವಾನುಭವ ಗ್ರಂಥಮಾಲೆ |
| ೧೩೬ ಶಿವಾನುಭವ ಶಬ್ದಕೋಶ | ” | ಶಿವಾನುಭವ ಗ್ರಂಥಮಾಲೆ |
| ೧೩೭ ಅರ್ಥವೇದ | (ಕ) | ಶ್ರೀ ಸಿ.ಜಿ. ಪುರುಷೋತ್ತಮ |
| ೧೩೮ ಬಸವರಾಜ ವಿಜಯ (ಗದ್ಯ) | ” | ಶ್ರೀ ಎನ್.ಆರ್. ಕರಿಬಸವಶಾಸ್ತ್ರಿಗಳು |

| | | |
|---|---|---|
| ೧೩೯ | ಶ್ರೀಲವಂತಯ್ಯಗಳ ತ್ರಿವಿಧಿ ಮತ್ತು ಗುರು ರಗಳೆ | " ಸಂ. ಶ್ರೀ ಸದಾಶಿವಚಾರ್ಯ ಸ್ವಾಮಿಗಳು |
| ೧೪೦ | ಹರಿಹರನು ಚಿತ್ರಿಸಿರುವ ಕೆಲವು ಶರಣರು | " ಶ್ರೀ ತ. ಶ್ರೀಕಂಠಯ್ಯ ಎಂ.ಎ. |
| ೧೪೧ | ವೀರಶೈವ ಚರಿತ್ರೆ | " ಶ್ರೀ ಬಿ.ವಿ.ಶ್ರೀನಿವಾಸರಾವ್ ಎಂ.ಎ. |
| ೧೪೨ | ವೀರಶೈವ ರಹಸ್ಯ | " ವೇ । ಮಹಾದೇವಯ್ಯನವರು |
| ೧೪೩ | ವೀರಶೈವ ಕರದರ್ಪಣ | " |
| ೧೪೪ | ವೀರಶೈವ ಕೈಗನ್ನಡಿ | " ಶ್ರೀ ಬಸವಲಿಂಗಸ್ವಾಮಿ ಪಂಚಾಕ್ಷರಿಮಠ |
| ೧೪೫ | ಪರಿಷ್ಕೃತ ಭಕ್ತಿಗೀತೆಗಳು | " ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ |
| ೧೪೬ | ಸಮರ್ಪಣ | " ಕಲ್ಪನಾ ಗ್ರಂಥಮಾಲೆ |
| ೧೪೭ | ಶಿವದೇವ ವಿಜಯಂ | " ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರು |
| ೧೪೮ | ವೀರಶೈವಾಚಾರ ಬೋಧೆ | " ವೇ. ನಂ. ಶಿವಪ್ಪಶಾಸ್ತ್ರಿಗಳು |
| ೧೪೯ | ಶೈವೋಪನಿಷತ್ಸಂಗ್ರಹಃ | " ಕಾಶೀನಾಥ ಗ್ರಂಥಮಾಲಾ |
| ೧೫೦ | ಶಿವಶಕ್ತಿ ವಿಲಾಸ | " ಶ್ರೀ ಶಂಭುಲಿಂಗ ಶಿವಾಚಾರ್ಯರು |
| ೧೫೧ | ಶಿವಯೋಗ ರಹಸ್ಯ | " ವೇ. ನಂ. ಶಿವಪ್ಪಶಾಸ್ತ್ರಿಗಳು |
| ೧೫೨ | ನಂದಿಕೇಶ್ವರ ಕಾರಿಕಾ | (ಸಂ) ನಂದಿಕೇಶ್ವರ |
| ೧೫೩ | ವೈದಿಕ ವಾಙ್ಮಯ ರಹಸ್ಯ | (ಕ) ಶ್ರೀ ಶಂಭುಲಿಂಗಶಿವಾಚಾರ್ಯರು |
| ೧೫೪ | ವೀರಶೈವ ವರ್ಣಾಶ್ರಮ ಧರ್ಮವಿಚಾರವು | " ವೇ. ನಂ ಶಿವಪ್ಪಶಾಸ್ತ್ರೀ |
| ೧೫೫ | ಉಪನ್ಯಾಸ ಸಂಗ್ರಹ | " ಸಿರಸಿ ಗುರುಶಾಂತಶಾಸ್ತ್ರೀ |
| ೧೫೬ | ಋಕ್ಸಂಹಿತೆ ಭಾಗ | " ಶ್ರೀ ಜಿ.ಎನ್. ಚಕ್ರವರ್ತಿ ಎಂ.ಎ., |
| ೧೫೭ | ವೀರಶೈವ ಮಠಾಚಾರ್ಯರ ಕಾಲನಿರ್ಣಯ | " ಶ್ರೀ ಕರ್ಲಮಂಗಲಂ ಶ್ರೀಕಂಠಯ್ಯ |

೧೫೮ ಪಂಚಾಚಾರ್ಯರ ಪ್ರಾಚೀನತ್ವ ” ಕಾಶೀನಾಥ ಗ್ರಂಥಮಾಲೆ

೧೫೯ ಶ್ರೀಪತಿ ಪಂಡಿತಾರಾಧ್ಯರ
ಕಾಲನಿರ್ಣಯ ”

೧೬೦ ಬಸವೇಶ್ವರನ ಕಾಲ ” ಶ್ರೀ ಚನ್ನಮಲ್ಲಿಕಾರ್ಜುನ

೧೬೧ ಶ್ರೀ ರೇವಣಸಿದ್ಧರು ”

೧೬೨ ಸ್ವರ್ಗದೋಲೆಗಳು ” ಸಿಂಪಿ ಲಿಂಗಣ್ಣ

೧೬೩ ಸನ್ಯಾಸಿದಿಬ್ಬ ”

೧೬೪ ಕನ್ನಡ ತಾಯನೋಟ ” ಪ್ರೋ ॥ ಹಿರೇಮಲ್ಲೂರು
ಈಶ್ವರನ್

೧೬೫ ಚೇರಮಕಾವ್ಯಂ ” ಚೇರಮಾಂಕ

೧೬೬ ಉದ್ಭಟಕಾವ್ಯಂ ” ಸೋಮರಾಜ

೧೬೭ ಶ್ರೀ ಶಿವಾನುಭೂತಿ ಪ್ರಕಾಶಿಕಾ ” ಪಂ. ಕೈಲಾಸಲಿಂಗ
ಶಿವಾಚಾರ್ಯರು

೧೬೮ ಅನುಭವಮಂಟಪದ ಐತಿಹಾಸಿಕತೆ ” ಚ. ಉತ್ತಂಗಿ

೧೬೯ ವೀರಶೈವ ಮಹಾತ್ಮರು ” ಕಾಶೀನಾಥ ಗ್ರಂಥಮಾಲಾ

೧೭೦ ಮಲ್ಲಿಕಾರ್ಜುನ ಪಂಡಿತ ”
ವಿಜಯಮು (ತೆ) ಮುದಿಗೊಂಡು ವೀರಭದ್ರಮೂರ್ತಿ

೧೭೧ ಮಣಿಮುಕುರಂ (ಕ) ಶ್ರೀ ಜ. ಚ. ನಿ.

೧೭೨ ಮಣಿಕಾಂತಿ ” ಶ್ರೀ ಜ. ಚ. ನಿ.

೧೭೩ ೭೭೦ ಅಮರಗಣಂಗಳ ಚರಿತ್ರೆಗಳು” ಡಾ. ಹಳಕಟ್ಟಿ

೧೭೪ ಶ್ರೀ ಶರಣ ಚರಿತ ಮಾನಸ ” ಸಂ. ಶ್ರೀ ಹೆಚ್. ತಿಪ್ಪೇರುದ್ರಸ್ವಾಮಿ
ಎಂ.ಎ.

೧೭೫ ಜ್ಯೋತಿರ್ಮಯ ಶಾಂಭವ
ಜ್ಞಾನದೀಕ್ಷಾ ಬೋಧೆ ” ಸದ್ಧರ್ಮ ಗ್ರಂಥಮಾಲೆ

೧೭೬ ಶಿವಯೋಗದರ್ಪಣ ” ”

೧೭೭ ಪುರಾತನದೇವಿಯರ ತ್ರಿವಿದಿ ” ”

| | | |
|---|---|---|
| ೧೭೮ | ಶಿವಾನುಭವ ದೀಪಿಕೆ | " " |
| ೧೭೯ | ಲಿಂಗೋಪನಿಷತ್ | " " |
| ೧೮೦ | ಶಿವಶರಣರ ಚರಿತ್ರೆಗಳು ಭಗ್ಯ ೧, ೨, ೩ | " ಡಾ. ಹಳಕಟ್ಟಿ |
| ೧೮೧ | ಶಿವಶರಣೆಯರ ಚರಿತ್ರೆಗಳು | " ಡಾ. ಹಳಕಟ್ಟಿ |
| ೧೮೨ | Sri Basaveswara & His Contemporaries (ಇಂ.) | Sri. A.R. Jayaram |
| ೧೮೩ | The Lingayat Movement | " Dr. S.m. Hunsahal |
| ೧೮೪ | Hand book of Virasaivism | " Dr. S.C. Namdimath |
| ೧೮೫ | The Veerashaiva Social Philosophy | " Dr. S.M. Hunashal |
| ೧೮೬ | The Veerashaiva Philosophy and Mysticism | " Shri. Kumaraswamiji |
| ೧೮೭ | The Veerashaiva Weltanschaung | " " |
| ೧೮೮ | Sri Sankara's Select Works | " G.A. Natesan & Co. |
| ೧೮೯ | Works of Sri Aurobindo Dr. Radhakrishnan, Swami Vivekananda, Swami Ramathirtha, Ramakrishna Paramahamsa, Vinobaji & Gandhiji | " |
| ೧೯೦ | ವೇದವ್ಯಾಸರ ವೇದಾಂತ ಮತ್ತು ಸಮಗ್ರದೃಷ್ಟಿಯೋಗ | (ಕ) ಆಚಾರ್ಯ ಆಲೂರ ವೆಂಕಟರಾಯರು |
| ೧೯೧ | ಧರ್ಮಪದ (ಸಂಸ್ಕೃತ ಹಿಂದೀ) | ಶ್ರೀ ಅವಧ ಕಿಶೋರ ನಾರಾಯಣ |

| | | |
|---|---|---|
| ೧೯೨ | ತೋಂಪಿನ ಮಠದ ಶಿವಯೋಗಿಗಳು | (ಕ) ಶ್ರೀ ಸ್ವಾಮಿ, ಮೈಸೂರು |
| ೧೯೩ | ಗರಗದ ಮಡಿವಾಳೇಶ್ವರ ಚರಿತ್ರೆ | " ರಾಮಚಂದ್ರ ಬಾಳಕೃಷ್ಣ ಎಲಿಗಾರ |
| ೧೯೪ | ಶ್ರೀ ಶೈಲ ಪಂಡಿತಾರಾಧ್ಯ | (ತೆ) ಪ್ರ. ಶ್ರೀ ಜ. ಚ. ನಿ. ಪುಸ್ತಕ ಭಂಡಾರ |
| ೧೯೫ | ಶ್ರೀ ಸಿದ್ಧಮಲ್ಲೇಶ್ವರ ಪುರಾಣ | (ಕ) ಶ್ರೀ ಸಿದ್ಧಮಲ್ಲ ಶಿವಾಚಾರ್ಯರು |
| ೧೯೬ | ಸಾರಂಗ ಮಠಾಧೀಶ್ವರರು | " ಶಿವಾನುಭವ ಗ್ರಂಥಮಾಲೆ |
| ೧೯೭ | ಜಗದ್ಗುರು ಸಿದ್ಧಲಿಂಗ ವಿಜಯ | " ಪುರಾಣ ಪಂ. ಜಗದೀಶ ಶಾಸ್ತ್ರಿಗಳು ನಾಲ್ವಾರ |
| ೧೯೮ | ನಿಡುಮಾಮಿಡಿ ಇಮ್ಮಡಿ ಕರಿಬಸವೇಂದ್ರರ ಒಸಗೆ | (ಕ) ಶ್ರೀ ಜ. ಚ. ನಿ |
| ೧೯೯ | ಶ್ರೀ ಚನ್ನಬಸವೇಶ್ವರ ಪುರಾಣ | " ವಿದ್ವಾನ್ ಎಂ. ಚಂದ್ರಶೇಖರ ಶಾಸ್ತ್ರಿಗಳು |
| ೨೦೦ | ಹಂಸಭಾವಿ ಸಿದ್ಧಲಿಂಗ ಶಿವಯೋಗಿಗಳ ಜೀವನ ಚರಿತ್ರೆ | " ಶ್ರೀ ಟಿ.ಜಿ. ಉಗ್ರಾಣಕರ ಎಂ.ಎ.ಬಿ.ಟಿ. |
| ೨೦೧ | ಚಿರಸ್ಮರಣೀಯರಾದ ಚರಲಿಂಗ ಸ್ವಾಮಿಗಳು | " ಶ್ರೀ ಮ.ಮ. ಮಿರ್ಜಿ |
| ೨೦೨ | ೬೩ ಪುರಾತನರು | " " |
| ೨೦೩ | ರೇವಪ್ಪಯ್ಯನವರ ಪುರಾಣ | " ಚೆನ್ನಕವಿ ಮಹಾಗಾಂವ್ |
| ೨೦೪ | ಗವಿಸಿದ್ಧೇಶ್ವರ ಪುರಾಣ | " ಪಂ. ವೈ ನಾಗೇಶಶಾಸ್ತ್ರಿ |
| ೨೦೫ | ಶ್ರೀಗುರು ಹಾಲುಸ್ವಾಮಿಗಳು | " ಆಸ್ಥಾನ್ ವಿದ್ವಾನ್ ಎಂ.ಜಿ, ನಂಜುಂಡಾರಾಧ್ಯರು |
| ೨೦೬ | ಶ್ರೀ ಚೆನ್ನಬಸವಸ್ವಾಮಿಗಳ ಪುರಾಣ | " ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು |
| ೨೦೭ | ಶ್ರೀ ಮಲೆಯ ಶಾಂತೇಶ್ವರ ಪುರಾಣ | " ಶ್ರೀ ಬಸವಪ್ಪಶಾಸ್ತ್ರಿಗಳು ಮಸ್ಕಿ |

| | | | |
|---|---|---|---|
| ೨೦೮ | ಶ್ರೀ ವಿಜಯ ರುದ್ರದೇವ ಪುರಾಣ | ” | ವಿದ್ವಾನ್ ಎಂ. ಚಂದ್ರಶೇಖರಶಾಸ್ತ್ರಿಗಳು |
| ೨೦೯ | ಶ್ರೀ ಬನದೇಶ್ವರ ಪುರಾಣ | ” | ಅಮರ ಕವಿ |
| ೨೧೦ | ಶ್ರೀ ಮಲ್ಲಾರಿ ಮಹಾತ್ಮೆ | ” | ವಿರೂಪಾಕ್ಷ ಕವಿ |
| ೨೧೧ | ಶ್ರೀ ಫಲಾಹಾರ ಶಿವಯೋಗೀಶ್ವರ ಪುರಾಣ | ” | ಪಂ. ವೈ. ನಾಗೇಶಶಾಸ್ತ್ರಿಗಳು |
| ೨೧೨ | ಅಂಕಲಗಿ ಅಡವೆಪ್ಪನವರ ಚರಿತ್ರ | ” | ಶ್ರೀ ಕಲ್ಲೋ ಗಣೇಶ ವಿಜಾಪುರ |
| ೨೧೩ | ಭಾರತ ಕೀ ಕಹಾನಿ (ಹಿಂದಿ) | ” | ಭಾರತ ಸರ್ಕಾರ |
| ೨೧೪ | ವೀರಶೈ ಧರ್ಮ | ” | ಸ್ವಾಮಿ ಶ್ರೀ ಚೆನ್ನಬಸವ ಬಿ.ಎ. |
| ೨೧೫ | ಮನೋವಿಜಯಂ | ” | ಗುರುಬಸವ ಕವಿ |
| ೨೧೬ | ಶಿವತತ್ತ್ವ ಸಾರಮು | (ತೆ) | ಪಂಡಿತಾರಾಧ್ಯರು |
| ೨೧೭ | ಪಂಡಿತಾರಾಧ್ಯ ಚರಿತ್ರಮು | ” | ಪಾಲ್ಕುರಿಕೆ ಸೋಮನಾಥ |
| ೨೧೮ | ಬಸವ ಪುರಾಣಮು | ” | ” |
| ೨೧೯ | ಚುತುರ್ವೇದ ಸಾರಮು | ” | ” |
| ೨೨೦ | ಅನುಭವ ಸಾರಮು | ” | ” |
| ೨೨೧ | ತಿರುವಾಚಕಂ | (ತ) | ಮಾಣಿಕ್ಯ ವಾಚಕರು |
| ೨೨೨ | ಪೆರಿಯ ಪುರಾಣಂ | ” | ಶೆಕ್ಕೀರಾರ್ |
| ೨೨೩ | ತಿರುಕ್ಕುರುಳ್ | ” | ತಿರುವಳ್ಳುವರ್ |
| ೨೨೪ | ಸಿದ್ಧಾಂತ ಶಿಖಾಮಣಿ | ” | ಶಿವಪ್ರಕಾಶ ಸ್ವಾಮಿಗಳ್ |
| ೨೨೫ | ಪ್ರಭುಲಿಂಗ ಲೀಲೈ | ” | ” |
| ೨೨೬ | ಷಟ್ ಸ್ಥಲಾಗಮಮ್ | ” | ” |
| ೨೨೭ | Veerashiva Philosophy Of the Shivagamas | (E) | Sri. S.D. Pavate |
| ೨೨೮ | VeerAshaivism | ” | Sri. T.H.M. Sadasivayya |
| ೨೨೯ | VeerAshaivism Chandrike | ” | Sri. M.R. Sakhare |

೨೩೦ ಕನ್ನಡ ಸಾಹಿತ್ಯ ಚರಿತ್ರೆ
ಭಾಗ ೧, ೨ (ಕ)ಕನ್ನಡ ಸಾಹಿತ್ಯ ಪರಿಷತ್ತು

೨೩೧ ಕಾಲಜ್ಞಾನದ ವಚನಗಳು

೨೩೨ ಶಿವಾನುಭವ, ಶರಣ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಪ್ರಬುದ್ಧ ಕರ್ಣಾಟಕ, ಸಾಹಿತ್ಯ ಸಮಿತಿ ಪತ್ರಿಕೆ

ಸದ್ಧರ್ಮದೀಪಿಕೆ ಮೊದಲಾದ ಮಾಸಪತ್ರಿಕೆಗಳು, ಪ್ರಕಟಿತ ಅಪ್ರಕಟಿತ ಜನಪದ ಸಾಹಿತ್ಯ ಇತ್ಯಾದಿ.

## ಮಾದಾರ ಚೆನ್ನಯ್ಯ

೨೩೩ ಮಾದಾರ ಚೆನ್ನಯ್ಯ ವಚನಗಳು

೨೩೪ ಹರಿಹರನ ರಗಳೆ

೨೩೫ ಶಿವಾನುಭವ ಸಂ. ೧೨, ಸಂ.೧

೨೩೬ ಶಿವಶರಣರ ಚರಿತ್ರೆಗಳು ಭಾ. ೨

೨೩೭ ಜನಪದ ಸಾಹಿತ್ಯ

## ಕುಂಬಾರ ಗುಂಡಯ್ಯ

೨೩೮ ಹರಿಹರನ ರಗಳೆ

೨೩೯ ಹಂತಿಯ ಪದ

೨೪೦ ಹರಿಹರನ ರಗಳೆಯಲ್ಲಿ ಜೀವನ ದರ್ಶನ–ಪ್ರೊ. ಮಾಳವಾಡ

೨೪೧ ಹಂಪೆಯ ಹರಿಹರ–ಪ್ರೊ. ಡಿ. ಎಲ್. ನರಸಿಂಹಾಚಾರ್

## ಕೋಳೂರ ಕೊಡಗೂಸು

೨೪೨ ಹರಿಹರನ ರಗಳೆ

೨೪೩ ವೃಷಭೇಂದ್ರ ವಿಜಯ

೨೪೪ ಹಂತಿಯ ಹಾಡು (ನಾಲ್ಕು ನಾಡ ಹಾಡುಗಳು)–ಡಾ. ಗದ್ದಿಗಿಮಠ

## ಮೆರೆಮಿಂಡದೇವ–ನಂಬಿಯಣ್ಣ

೨೪೫ ಕನ್ನಡ ಜಾನಪದ ಗೀತೆಗಳು–ಕ.ರಾ. ಕೃ

೨೪೬ ಮೆರೆಮಿಂಡದೇವನ ವಚನಗಳು–ಶಿವಾನುಭವ ಗ್ರಂಥಮಾಲೆ

೨೪೭ ನಂಬಿಯಣ್ಣನ ರಗಳೆ–ಹರಿಹರ

೨೪೮ ಬಸವ ಪುರಾಣ ವೃಷಭೇಂದ್ರ ವಿಜಯ

೨೪೯ ನಿಜಗುಣರ ತ್ರಿವಿಧಿ–ಶ.ಸಾ. ಗ್ರಂಥಮಾಲೆ

## ದೇವರ ದಾಸಿಮಯ್ಯ–ಶಂಕರ ದಾಸಿಮಯ್ಯ–ಢಕ್ಕೆಯ ಮಾರಯ್ಯ

೨೫೦ ದೇವರ ದಾಸಿಮಾರ್ಯ ಪ್ರಶಸ್ತಿ–ಸಂ. ಜ. ಚ. ನಿ.

೨೫೧ ಶಂಕರದಾಸಿಮಯ್ಯನ ರಗಳೆ–ಹರಿಹರ

೨೫೨ ಶಂಕರ ದಾಸಿಮಯ್ಯ ಪುರಾಣ–ಸಂ. ವ್ಹಿ. ಬಿ. ಹಾಲಭಾವಿ

೨೫೩ ಶಿವಶರಣ ವಿಲಾಸ

೨೫೪ ಬಸವೇಶ್ವರ ವಚನ ಕಥಾಸರಿತ್ಸಾಗರ

೨೫೫ ಕೆಲವರು ವಚನಕಾರರು–ದೊ.ಲ. ನರಸಿಂಹಾಚಾರ್ (ಪ್ರ.ಕ. ೧೭–೪)

## ರಾಗಯೋಗಿ ರಾಗದ ಸಂಕಣ್ಣ

೨೫೬ ಗುರುರಾಜ ಚಾರಿತ್ರ

೨೫೭ ಶಿವಶರಣರ ಚರಿತ್ರೆಗಳು ಭಾಗ ೧

ಇಳಿಹಾಳ ಬೊಮ್ಮಯ್ಯ

೨೫೮ ಹಂತಿಯ ಪದ

೨೫೯ ಶಿವಶರಣರ ಚರಿತ್ರೆಗಳು ಭಾಗ ೨

## ಏಕಾಂತರಾಮಯ್ಯ

೨೬೦ ಹರಿಹರನ ರಗಳೆ

೨೬೧ ಶರಣ ಸಾಹಿತ್ಯ ಸಂ. ೧೦, ಸಂ. ೯

೨೬೨ ಏಕಾಂತರಾಮಯ್ಯನ ವಚನಗಳು
೨೬೩ ಅಬ್ಬಲೂರ ಶಾಸನ

**ಕೊಂಡಗುಳಿ ಕೇಶಿರಾಜ–ತೆಲುಗು ಜೊಮ್ಮಯ್ಯ**

೨೬೪ ಹರಿಹರನ ರಗಳೆ
೨೬೫ ಷಡಕ್ಷರ ಮಂತ್ರ ಮಹಿಮೆ–ಶ.ಸಾ.ಗ್ರಂಥಮಾಲೆ
೨೬೬ ಶರಣ ಸಾಹಿತ್ಯ ಸಂ. ೧೦–ಸಂ. ೫
೨೬೭ ಶವಶರಣರ ಚರಿತ್ರೆಗಳು ಭಾ. ೨–೩

**ಬಸವಣ್ಣ**

೨೬೮ ಬಸವಣ್ಣನವರ ಮತ್ತು ಅನೇಕರ ವಚನಗಳು
೨೬೯ ಬಸವ ಚರಿತ್ರೆ–ಹರ್ಡೇಕರ್ ಮಂಜಪ್ಪನವರು
೨೭೦ ಭಕ್ತಿಭಾಂಡಾರಿ ಬಸವಣ್ಣನವರು–ಎಂ.ಆರ್. ಶ್ರೀನಿವಾಸ ಮೂರ್ತಿಗಳೂ
೨೭೧ ಬಸವಣ್ಣನವರ ಅಮೃತವಾಣಿ–ಅ.ನ. ಕೃಷ್ಣರಾಯರು
೨೭೨ ಅಣ್ಣನ ಬದುಕು–ಜ.ಚ.ನಿ.
೨೭೩ ಬಸವರಾಜ ದೇವರ ರಗಳೆ–ಹರಿಹರ
೨೭೪ ಸಿಂಗಿರಾಜ ಪುರಾಣ– ಸಿಂಗಿರಾಜ
೨೭೫ ಬಸವಪುರಾಣ–ಭೀಮಕವಿ
೨೭೬ ಬಸವಪುರಾಣಮು (ತೆ)–ಪಾಲ್ಕುರಿಕೆ ಸೋಮನಾಥ
೨೭೭ ಸಂಸ್ಕೃತ ಬಸವಪುರಾಣ–ವಾರದ ಗ್ರಂಥಮಾಲಾ
೨೭೮ ಬಸವೇಶ ವಿಜಯಂ–ಕಂಚಿ ಶಂಕರಾರಾಧ್ಯ
೨೭೯ ಶರಣ ಸಾಹಿತ್ಯ, ಸಾಹಿತ್ಯ ಸಮಿತಿ ಪತ್ರಿಕೆ ಮತ್ತು ಜಯಕರ್ನಾಟಕಗಳ ಬಸವ ಜಯಂತಿ ಸಂಚಿಕೆಗಳು
೨೮೦ ಬಸವ ತತ್ವಪರಿಮಳ–ಪ್ರೇಮದ ಬಳ್ಳಿಯ ಬಳಗ, ದಾವಣಗೆರೆ
೨೮೧ ಬಸವೇಶ್ವರನ ತತ್ವಗಳು–ಡಾ. ಹಳಕಟ್ಟಿ

೨೮೨ ಯುಗಪ್ರವರ್ತಕ ಬಸವಣ್ಣನವರು–ಚಿಂತಾಮಣಿ
೨೮೩ ಬಸವಣ್ಣ–ಓ.ಎನ್. ಲಿಂಗಣ್ಣಯ್ಯ
೨೮೪ ಸರ್ವೋದಯ ಸಾಧಕರು–ಎನ್. ಬಸವಾರಾಧ್ಯ, ಎಸ್. ಈ. ರೇವಣಸಿದ್ಧಪ್ಪ
೨೮೫ ಭಕ್ತರಾಜ ಬಸವಣ್ಣ–ಸಿಂಪಿ ಲಿಂಗಣ್ಣ
೨೮೬ ಬಸವಭಾಷೆ–ಮಹಾಲಿಂಗಯ್ಯನವರು ಹಿರೇಮಠ, ದ್ಯಾಂಪುರ
೨೮೭ ಶ್ರೀ ಬಸವಣ್ಣನವರ ೫೦ ತೆರದ ಆಚಾರಗಳು–ಪ್ರ. ಅಡಿವೆಪ್ಪ ಗೋಲಗೇರಿ

## ಮೃತ್ಯುಂಜಯ ತುಮಕೂರು

೨೮೮ ಬಸವೇಶ್ವರ ವಚನ ಸಂಗ್ರಹ–ಸಂ. ಎಲ್. ಬಸವರಾಜು
೨೮೯ ಸಮಾಜೋದ್ಧಾರಕ ಬಸವಣ್ಣನವರು–ಪ್ರೊ॥ ಗ.ಸ. ಹಾಲಪ್ಪನವರು
೨೯೦ ಇದುವೆ ಬಸವನ ಬದುಕು–ರವಿ
೨೯೧ ಬಸವಣ್ಣನವರ ಲೋಕಪ್ರಿಯ ವಚನಗಳು–ವಚನ ಮಂಟಪ, ಬೆಳಗಾವಿ
೨೯೨ ಶ್ರೀ ಬಸವೇಶ್ವರ ಚರಿತ್ರೆ–ಸಿಂದಗಿ ಸಿದ್ದಪ್ಪ
೨೯೩ ಜಗಜ್ಯೋತಿ ಬಸವೇಶ್ವರ ನಾಟಕ–ಅ.ನ. ಕೃಷ್ಣರಾಯರು
೨೯೪ ವಿಶ್ವಬಂಧು ಬಸವಣ್ಣ–ಅ.ನ. ಕೃಷ್ಣರಾಯರು
೨೯೫ ಬಸವೋದಾಹರಣ್, ವೃಷಾಧಿಪ ಶತಕಂ ಇತ್ಯಾದಿ–ಪಾಲ್ಕುರಿಕೆ

## ಸೋಮನಾಥ

೨೯೬ ದಕ್ಷಿಣ ಭಾರತ (ಹಿಂದೀ ಮಾಸಪತ್ರಿಕೆ,–ವರ್ಷ ಸಂ. ೫)
೨೯೭ ಭಕ್ತಿ ಭಂಡಾರಿ ಮತ್ತು ಇತರ ನಾಟಕಗಳು–ಆರ್.ಸಿ. ಭೂಸನೂರಮಠ
೨೯೮ Musings of Basava-Prof. S.S. Basavanal and Dr. K.R. Srinivasa Iyengar
೨೯೯ ವೃಷಭೇಂದ್ರ ವಿಜಯ–ಷಡಕ್ಷರದೇವ
೩೦೦ ಉದಯರವಿ ಮತ್ತು ರಾಜ್ಯಪಾಲ–ಶ್ರೀ ಬಿ. ಪುಟ್ಟಸ್ವಾಮಯ್ಯ
೩೦೧ ಬಸವ ಭಾನು–ಸಿದ್ಧರಾಮಪ್ಪ ಪಾವಟೆ

೩೦೨ ಬಸವೇಶ್ವರನೂ ಕರ್ನಾಟಕದ ಅಭ್ಯುದಯವೂ–ಚೆನ್ನಬಸಪ್ಪ ಮುರಿಗೇಂದ್ರಪ್ಪ ಹಾಲಪ್ಪನವರು

೩೦೩ ಡಾ. ಮುಗಳಿಯವರ ಸಾಹಿತ್ಯ ಚರಿತ್ರೆಯ ಅಭ್ಯಾಸ ಸೂಚಿಯಲ್ಲಿ ಉಲ್ಲಿಖಿತವಾಗಿರುವ ಮತ್ತು ಇತ್ತೀಚೆಗೆ ಬಂದಿರುವ ಲೇಖನಗಳು

## ಪ್ರಭುದೇವ

೩೦೪ ಪ್ರಭುಲಿಂಗಲೀಲಾ–ಚಾಮರಸ

೩೦೫ ಪ್ರಭುದೇವರ ಪುರಾಣ–ಎಳಂದೂರು ಹರೀಶ್ವರ

೩೦೬ ಪ್ರಭುದೇವರ ರಗಳೆ–ಹರಿಹರ

೩೦೭ ಅಲ್ಲಮನ ವಚನ ಚಂದ್ರಿಕೆ–ಎಲ್. ಬಸವರಾಜು ಎಂ.ಎ.

೩೦೮ ಅಲ್ಲಯ್ಯನ ಬೆಳಕು–ಜ.ಚ.ನಿ.

೩೦೯ ಆತ್ಮಜ್ಞಾನಿ ಅಲ್ಲಮಪ್ರಭು–ಓ.ಎನ್. ಲಿಂಗಣ್ಣಯ್ಯ

೩೧೦ ಪ್ರಭುವಿನಪ್ರಭೆ–ಮನೋಹರರಾವ್ ದೇಶಪಾಂಡೆ

೩೧೧ ಅಲ್ಲಮಪ್ರಭು–ಅ.ನ. ಕೃಷ್ಣರಾಯರು

೩೧೨ ಅಲ್ಲಮಪ್ರಭು–ಜಿ.ಪಿ. ರಾಜರತ್ನಂ

೩೧೩ ಪರಿಪೂರ್ಣದೆಡೆಗೆ–ತಿಪ್ಪೇರುದ್ರಸ್ವಾಮಿ

೩೧೪ ಅಲ್ಲಮವ್ಯೋಮ–ಸಿದ್ಧರಾಮಪ್ಪ ಪಾವಟೆ

೩೧೫ ಶ್ರೀಮದನಾದಿ ಅಲ್ಲಮಪ್ರಭು–ಬುದ್ಧಯ್ಯಸ್ವಾಮಿ ಪುರಾಣಿಕ

೩೧೬ ಶೂನ್ಯಸಂಪಾದನೆ–ಸಂ. ಹಳಕಟ್ಟಿ ಮತ್ತು ಭೂಸನೂರಮಠರು

೩೧೭ ಅಲ್ಲಮಪ್ರಭು–ಪ್ರಭುಶಂಕರ

೩೧೮ ಅನೇಕ ಲೇಖನಗಳು, ವಿಮರ್ಶೆಗಳು, ಹಮ್ಮೀರಕಾವ್ಯ

## ಚೆನ್ನಬಸವಣ್ಣ

೩೧೯ ಚೆನ್ನಬಸವ ಪುರಾಣ–ವಿರೂಪಾಕ್ಷಪಂಡಿತ

೩೨೦ ಚೆನ್ನಬಸವ ಸಾಹಿತ್ಯ–ಸಂ. ಅ. ಕ. ಪುರಾಣಿಕ

೩೨೧ ಚೆನ್ನಬಸವೇಶ್ವರ ವಚನಗಳು–ಶಿವಾನುಭವ ಗ್ರಂಥಮಾಲೆ

೩೨೨ ಸಮ್ಯಜ್ಞಾನಿ ಚೆನ್ನಬಸವಣ್ಣ–ಜ. ಚ. ನಿ.

೩೨೩ ಶಿವಶರಣೆಯರ ಚರಿತ್ರೆಗಳು–ಡಾ. ಹಳಕಟ್ಟಿ

೩೨೪ ಚೆನ್ನಬಸವಣ್ಣನ ನಿಲವು–ವಿನೀತ ರಾಮಚಂದ್ರರಾಯರು

೩೨೫ ಶ್ರೀಮಚ್ಚೆನ್ನಬಸವ ಪುರಾಣಂ–ಕುಮಾರಸ್ವಾಮಿಶಾಸ್ತ್ರೀ

೩೨೬ ಚೆನ್ನಬಸವ ತೈಜಸ–ಸಿದ್ಧರಾಮಪ್ಪ ಪಾವಟೆ

೩೨೭ ಚೆನ್ನಬಸವ ಪುರಾಣಮು (ತೆ)–ಅತ್ತಲೂರಿ ಪಾಪಯ್ಯ ಕವಿ

೩೨೮ ಲೋಕ ಗೀತೆಗಳು–ಡಾ. ಗದ್ದಿಗಿಮಠ

## ಸಿದ್ಧರಾಮ

೩೨೯ ಸಿದ್ಧರಾಮ ಚಾರಿತ್ರ–ರಾಘವಾಂಕ

೩೩೦ ಸಿದ್ಧರಾಮೇಶ್ವರ ವಚನಗಳು–ಶಿವಾನುಭವ ಗ್ರಂಥಮಾಲೆ

೩೩೧ ಸಿದ್ಧರಾಮ ಸಾಹಿತ್ಯ–ಸಂ. ಉತ್ತಂಗಿ

೩೩೨ ಕರ್ಮಯೋಗಿ–ಜಿ.ಎಸ್. ಶಿವರುದ್ರಪ್ಪ

೩೩೩ ಸಿದ್ಧರಾಮ–ರಾ.ಮೊ.ವಿಶ್ವಾಮಿತ್ರ

೩೩೪ ಶಿವಯೋಗಿ ಸಿದ್ಧರಾಮ–ಓ.ಎನ್. ಲಿಂಗಣ್ಣಯ್ಯ

೩೩೫ ಸಿದ್ಧರಾಮ–ಶಾಂತರಸ ಮತ್ತು ಅಮರಾನಂದ

೩೩೬ ಶಿವಾನುಭವ–ಸಂ. ೧. ಸಂ.೨

೩೩೭ Epigraphica Indica Vol. 23, Page 189

೩೩೮ ಹಾವಿನಹಾಳ ಕಲ್ಲಯ್ಯನ ವಚನಗಳು–ಸಂ. ಹಳಕಟ್ಟಿ

೩೩೯ ಹಾವಿನಹಳ ಕಲ್ಲಯ್ಯನ ಚರಿತ್ರೆ–ಪಂ. ಬಸವರಾಜಶಾಸ್ತ್ರಿಗಳೂ ಕೋಡೀಕೊಪ್ಪ ಮಠ (ಶ.ಸಾ. ಸಂ. ೧೧–ಸಂ. ೮)

೩೪೦ ಸಿದ್ಧವಾಣಿ–ಜಯದೇವಿ ತಾಯಿ ಲಿಗಾಡೆ

೩೪೧ ಸಿದ್ಧರಾಮಾಂಚಿ ತ್ರಿವಿಧಿ–ಜಯದೇವಿ ತಾಯಿ ಲಿಗಾಡೆ

## ಅಕ್ಕಮಹಾದೇವಿ

೩೪೨ ಅಕ್ಕನ ಬಾಳು ಮತ್ತು ಸಾಹಿತ್ಯ–ಜ.ಚ.ನಿ.

೩೪೩ ಅಕ್ಕಮಹಾದೇವಿ ಸಾಹಿತ್ಯ–ಮಲ್ಲಾಬಾದಿಯವರ ಪ್ರಕಟನೆ

೩೪೪ ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ–ಅ.ನ. ಕೃಷ್ಣರಾಯರು

೩೪೫ ಗಿರಿಯ ನವಿಲು–ಬಸವರಾಜ ಕಟ್ಟೀಮನಿ

೩೪೬ ಅಕ್ಕನ ಹಂಬಲ (ನಾಟಕ)–ಟಿ.ಎಚ್.ಎಂ. ಸದಾಶಿವಯ್ಯನವರು

೩೪೭ ಅಕ್ಕಮಹಾದೇವಿ (ನಾಟಕ)–ರಂ. ಶ್ರೀ. ಮುಗಳಿ

೩೪೮ ಅಕ್ಕಮಹಾದೇವಿ (ನಾಟಕ)–ಬಿ. ಪುಟ್ಟಸ್ವಾಮಯ್ಯ

೩೪೯ ಅಕ್ಕಮಹಾದೇವಿ–ಪಂ. ಹೆಚ್. ಎಂ. ವೀರಭದ್ರಯ್ಯ

೩೫೦ ತತ್ವಶಿಖಾಮಣಿ ಅಕ್ಕಮಹಾದೇವಿ–ಮಾ.ನಂ. ನಂಜಪ್ಪ

೨೫೧ ವೈರಾಗ್ಯನಿಧಿ ಅಕ್ಕಮಹಾದೇವಿ–ಓ. ಎನ್. ಲಿಂಗಣ್ಣಯ್ಯ

೩೫೨ ಮಹಾದೇವಿಯಕ್ಕ–ಕೆ.ಜಿ. ಕುಂದಣಗಾರ

೩೫೩ ಮಹಾದೇವಿಯಕ್ಕನ ರಗಳೆ–ಹರಿಹರ

೩೫೪ ಅಕ್ಕಮಹಾದೇವಿ–ಎಸ್.ವಿ. ಪರಮೇಶ್ವರಭಟ್ಟ

೩೫೫ ವಿರಾಗಿಣಿ (ನಾಟಕ)–ಕಂಠಿ ಸಿದ್ಧಲಿಂಗಪ್ಪ

೩೫೬ ಮಹಾದೇವಿಯಕ್ಕಗಳ ಪುರಾಣ–ಚೆನ್ನಬಸವಾಂಕ

೨೫೭ ಮಹಾದೇವಿಯಕ್ಕಗಳ ಸಾಂಗಯ್ಯ–ರಾಚಯ್ಯ ಕವಿ

೩೫೮ ಮುಗಳಿಯವರ ಸಾಹಿತ್ಯ ಚರಿತ್ರೆಯ ಅಭ್ಯಾಸ ಸೂಚಿಯಲಿ ಉಲ್ಲಿಖಿತವಾಗಿರುವ ಮತ್ತು ಇತ್ತೀಚಿನ ಲೇಖನ–ವಿಮರ್ಶೆಗಳು

## ಮಲ್ಲರಸ–ಮಾದರಸ–ಮಾದಯ್ಯ

೩೫೯ ಪದ್ಮರಾಜ ಪುರಾಣ–ಪದ್ಮಣಾಂಕ

೩೬೦ ಸಕಲೇಶ ಮಾದರಸನ ವಚನಗಳು

೩೬೧ ಗುರುರಾಜ ಚಾರಿತ್ರ–ಸಿದ್ಧನಂಜೇಶ

೩೬೨ ಹಂತಿಯ ಪದ–ರಾಚಯ್ಯ

೩೬೩ ಶರಣಲೀಲಾಮೃತ ಇತ್ಯಾದಿ

## ಹರಳಯ್ಯ–ಮಧುವರಸ

೩೬೪ ಹರಳಯ್ಯನ ತ್ರಿವಿಧಿ–ಶಿವಾನುಭವ ಗ್ರಂಥಮಾಲೆ

೩೬೫ ಹಂತಿಯ ಪದ–ರಾಚಯ್ಯ

೩೬೬ ಮಧುವರಸನ ವಚನಗಳು–ಶಿವಾನುಭವ ಗ್ರಂಥಮಾಲೆ

೩೬೭ ಆತ್ಮಾರ್ಪಣ (ನಾಟಕ)–ಕಾವ್ಯಾನಂದ

## ಕಿನ್ನರಿಯ ಬ್ರಹ್ಮಯ್ಯ–ಕಲಕೇತ ಬ್ರಹ್ಮಯ್ಯ

೩೬೮ ಬಸವ ಪುರಾಣಾದಿಗಳು

೩೬೯ ಶಿವಶರಣರ ಚರಿತ್ರೆಗಳು ಭಾಗ ೩–ಡಾ ॥ ಹಳಕಟ್ಟಿ

೩೭೦ ಹಂತಿಯ ಹಾಡು–ರಾಚಯ್ಯ

೩೭೧ ಪ್ರಬುದ್ಧ ಕರ್ನಾಟಕ–ಸಂ. ೧೯–ಸಂ. ೪

## ಮೇದಾರ ಕೇತಯ್ಯ

೩೭೨ ಶಿವಶರಣರ ಚರಿತ್ರೆಗಳು ಭಾಗ–೨–ಡಾ. ಹಳಕಟ್ಟಿ

೩೭೩ ಹಂತಿಯ ಪದ–ರಾಚಯ್ಯ

೩೭೪ ಸಿಂಗಿರಾಜ ಪುರಾಣ–ಸಿಂಗಿರಾಜ

೩೭೫ ಕೇತಯ್ಯನ ವಚನಗಳು–ವಿವಿಧ ಸಂಗ್ರಹಗಳಲ್ಲಿ ಬಂದುವು

೩೭೬ ಶಿವಾನುಭವ ಸಂ. ೯, ಸಂ. ೬, ಸಂ. ೧೦, ಸಂ. ೫, ಸಂ. ೧೩, ಸಂ.೬

೩೭೭ ಹಂತಿಯ ಹಾಡು–ರಾಚಯ್ಯ

೩೭೮ ಶಿವಶರಣರ ಚರಿತ್ರೆಗಳು ಭಾಗ ೨–ಡಾ. ಹಳಕಟ್ಟಿ

೩೭೯ ಅಮುಗಯ್ಯನ ವಚನಗಳು–ವಿವಿಧ ಸಂಗ್ರಹಗಳಿಂದ

## ಸುಜ್ಞಾನಿದೇವ

೩೮೦ ಶಿವಶರಣರ ಚರಿತ್ರೆ ಭಾಗ–೨

೩೮೧ ವೀರಶೈವಾಮೃತ ಪುರಾಣ

### ಮರುಳು ಶಂಕರದೇವ

೩೮೨ ಶೂನ್ಯ ಸಂಪಾದನೆ

೩೮೩ ಪ್ರಭುಲಿಂಗಲೀಲೆ

೩೮೪ ಮರುಳುದೇವರ ಕಂದ

### ಅಜಗಣ್ಣ ಮುಕ್ತಾಯಕ್ಕ

೩೮೫ ಕನ್ನಡ ತಾಯಿ ನೋಟ–ಹಿರೇಮಲ್ಲೂರು ಈಶ್ವರನ್

೩೮೬ ಶೂನ್ಯ ಸಂಪಾದನೆ

೩೮೭ ಪ್ರಭುಲಿಂಗಲೀಲೆ

೩೮೮ ಶಿವಶರಣೆಯರ ಚರಿತ್ರೆಗಳು–ಡಾ. ಹಳಕಟ್ಟಿ

### ಹಡಪದ ಅಪ್ಪಣ್ಣ–ಲಿಂಗಮ್ಮ

೩೮೯ ಹಡಪದ ಅಪ್ಪಣ್ಣಗಳ ವಚನಗಳು–ಶಿವಾನುಭವ ಗ್ರಂಥಮಾಲೆ

೩೯೦ ಲಿಂಗಮ್ಮನ ವಚನಗಳು–ಶಿವಾನುಭವ ಗ್ರಂಥಮಾಲೆ

೩೯೧ ಶಿವಾನುಭವ ಸಂ. ೧೨–ಸಂ. ೭

### ಘಟ್ಟಿವಾಳಯ್ಯ

೩೯೨ ಶೂನ್ಯ ಸಂಪಾದನೆ

೩೯೩ ಪ್ರೌಢರಾಯನ ಕಾವ್ಯ–ಅದೃಶ್ಯ ಕವಿ

೩೯೪ ಅವನ ವಚನಗಳು–ವಿವಿಧ ಆಕರಗಳಿಂದ

ಮೋಳಿಗೆಯ ಮಾರಯ್ಯ–ಮಹಾದೇವಿಯರು

೩೯೫ ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು–ಸಂ. ಪ್ರೊ. ಭೂಸನೂರಮಠ

೩೯೬ ಮೋಳಿಗೆಯ್ಯನ ಪುರಾಣ–ಕವಿ ಗೌರಾಂಕ

೩೯೭ ಚೋರಬಸವ ಪುರಾಣ–ಕವಿ ಶಂಕರ

೩೯೮ ಶಿವತತ್ವ ಚಿಂತಾಮಣಿ–ಲಕ್ಕಣ್ಣ ದಂಡೇಶ
೩೯೯ ಕಲ್ಯಾಣ ಕ್ರಾಂತಿಯಲ್ಲಿ ಕಾಯಕಗೀತೆ–ಗಂಗಪ್ಪಾವಾಲಿ
೪೦೦ ಕನ್ನಡ ನುಡಿ ಸಂ. ೨೦, ಸಂ. ೮

## ಆಯ್ದಕ್ಕಿ ಮಾರಯ್ಯ–ಲಕ್ಕಮ್ಮ

೪೦೧ ಆಯ್ದಕ್ಕಿ ಮಾರಯ್ಯ–ಜ. ಚ. ನಿ.
೪೦೨ ಅವನ ವಚನಗಳು–ವಿವಿಧ ಆಕರಗಳಿಂದ

## ನುಲಿಯ ಚಂದಯ್ಯ

೪೦೩ ನುಲಿಯ ಚಂದಯ್ಯನ ವಚನಗಳು–ವಿವಿಧ ಆಕರಗಳಿಂದ
೪೦೪ ನುಲಿಯ ಚಂದಯ್ಯನ ಶಾರದ–ಸದ್ಧರ್ಮ ಗ್ರಂಥಮಾಲೆ

## ಮಡಿವಾಳ ವಾಚಯ್ಯ

೪೦೫ ಮಡಿವಾಳ ಮಾಚಿದೇವನ ವಚನಗಳು
೪೦೬ ಮಾಚಿದೇವ ಚರಿತಾಮೃತ–ಮಾ.ನಂ. ನಂಜಪ್ಪ
೪೦೭ ಹಂತಿಯ ಹಾಡು
೪೦೮ ಬಸವ ಪುರಾಣಾದಿಗಳು

## ತುರುಗಾಹಿ ರಾಮಣ್ಣ

೪೦೯ ತುರುಗಾಹಿ ರಾಮಣ್ಣನ ವಚನಗಳು–ಶ.ಸಾ. ಗ್ರಂಥಮಾಲೆ
೪೧೦ ಶರಣ ಸಾಹಿತ್ಯ ಸಂ. ೧೨–ಸಂ. ೨
೪೧೧ ಕೆಲವು ವಚನಕಾರರು–ಡಿ.ಎಲ್. ನರಸಿಂಹಾಚಾರ್ (ಪ್ರ.ಕ.)
೪೧೨ ಸೊಡ್ಡಳ ಬಾಚರಸನ ವಚನಗಳು
೪೧೩ ಪ್ರೌಢರಾಯನ ಕಾವ್ಯ

## ಗಣೇಶ ಮಸಣಯ್ಯ

೪೧೪ ಗಜೇಶ ಮಸಣಯ್ಯನ ವಚನಗಳು–ಶಿವಾನುಭವ ಗ್ರಂಥಮಾಲೆ

೪೧೫ ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ

## ದಸರಯ್ಯ–ವೀರಮ್ಮ

೪೧೬ ದಸರಯ್ಯನ ವಚನಗಳು–ವಿವಿಧ ಆಕರಗಳಿಂದ

೪೧೭ ವೀರಮ್ಮನ ವಚನಗಳು–ವಿವಿಧ ಆಕರಗಳಿಂದ

೪೧೮ ವೀರಶೈವಾಮೃತ ಮಹಾಪುರಾಣ ಮತ್ತು ವೃಷಭೇಂದ್ರವಿಜಯ

## ಡೋಹರ ಕಕ್ಕಯ್ಯ

೪೧೯ ಡೋಹರ ಕಕ್ಕಯ್ಯನ ವಚನಗಳು–ವಿವಿಧ ಆಕರಗಳಿಂದ

೪೨೦ ಪ್ರೌಢರಾಯನ ಕಾವ್ಯ

೪೨೧ ಬಸವನಾಳರ ಸ್ಮಾರಕ ಗ್ರಂಥದಲ್ಲಿ 'ವೀರಶೈವದ ಹುಟ್ಟು ಬೆಳವಣಿಗೆ–ಪ್ರೊ. ಬಸವನಾಳ

## ಬಹುರೂಪ ಚೌಡಯ್ಯ

೪೨೨ ಬಹುರೂಪಿ ಚೌಡಯ್ಯನ ವಚನಗಳು– ವಿವಿಧ ಆಕರಗಳಿಂದ

೪೨೩ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಸಂ. ೪೨, ಸಂ. ೨ರಲ್ಲಿ ಡಾ. ಗದ್ದಿಗಿಮಠದ ಲೇಖನ– 'ಕನ್ನಡ ಬಯಲಾಟ'

೪೨೪ ಹಂತಿಯ ಪದ–ರಾಚಯ್ಯ

## ರಾಯಸ ಮಂಚಣ್ಣ ರಾಯಮ್ಮರು

೪೨೫ ಅವರಿಬ್ಬರ ವಚನಗಳು–ವಿವಿಧ ಆಕರಗಳಿಂದ

೪೨೬ ಶಿವಶರಣರ ಚರಿತ್ರೆಗಳು ಭಾಗ೨ – ಡಾ. ಹಳಕಟ್ಟಿ

## ಅಂಬಿಗರ ಚೌಡಯ್ಯ

೪೨೭ ಅಂಬಿಗರ ಚೌಡಯ್ಯನ ವಚನಗಳು–ಶಿವಾನುಭವ ಗ್ರಂಥಮಾಲೆ

೪೨೮ ಶರಣ ಸಾಹಿತ್ಯ ಸಂ. ೧೧ – ಸಂ. ೧೦–೧೧

## ವೈದ್ಯಸಂಗಣ್ಣ

೪೨೯ ಅವನ ವಚನಗಳು–ವಿವಿಧ ಆಕರಗಳಿಂದ

೪೩೦ ಶಿವಶರಣರ ಚರಿತ್ರೆಗಳು ಭಾಗ ೨ – ಡಾ. ಹಳಕಟ್ಟಿ

## ನಗೆಯ ಮಾರಿತಂದೆ

೪೩೧ ನಗೆಯ ಮಾರಿತಂದೆಯ ರಗಳೆ–ಗುರು ವಿರೂಪಾಕ್ಷ

೪೩೨ ಪ್ರಬುದ್ಧ ಕರ್ಣಾಟಕ ೧೯–೪

೪೩೩ ನಗೆಯ ಮಾರಿತಂದೆಯ ವಚನಗಳು– ವಿವಿಧ ಸಂಗ್ರಹಗಳಿಂದ

## ಉರಿಲಿಂಗದೇವ –ಉರಿಲಿಂಗಪೆದ್ದಿ–ಕಾಳವ್ವೆ

೪೩೪ ಉರಿಲಿಂಗದೇವರ ವಚನಗಳು–ಶಿವಾನುಭವ ಗ್ರಂಥಮಾಲೆ

೪೩೫ ಉರಿಲಿಂಗಪೆದ್ದಿಯ ವಚನಗಳು–ಶಿವಾನುಭವ ಗ್ರಂಥಮಾಲೆ

೪೩೬ ಶಿವಲೆಂಕ ಮಂಚಣ್ಣನ ವಚನಗಳು–ಶಿವಾನುಭವ ಗ್ರಂಥಮಾಲೆ

೪೩೭ ಕಾಳವ್ವೆಯ ವಚನಗಳು– ವಿವಿಧ ಸಂಗ್ರಹಗಳಲ್ಲಿ

೪೩೮ ಆರಾಧ್ಯ ಚರಿತ್ರೆ–ನೀಲಕಂಠಾಚಾರ್ಯ

## ಪಾಲ್ಕುರಿಕೆ ಸೋಮನಾಥ

೪೩೯ ಪಾಲ್ಕುರಿಕೆ ಸೋಮನಾಥ (ತೆ)–ವಿಮರ್ಶಕಾಗ್ರೇಸರ ಬಂಡಾರು ತಮ್ಮಯ್ಯಗಾರು

೪೪೦ ಪಾಲ್ಕುರಿಕೆ ಸೋಮೇಶ್ವರ ಪುರಾಣ–ತೋಂಟದ ಸಿದ್ಧಲಿಂಗ ಶಿವಯೋಗಿ

೪೪೧ ಸೋಮನಾಥನ ಕೃತಿಗಳು

೪೪೨ Srisailankita Pancharatnam of Chakrapani Ranganath- Edited by Prof. C. Mahadevappa

೪೪೩ ಗುರುರಾಜ ಚಾರಿತ್ರೆ–ಸಿದ್ಧನಂಜೇಶ

೪೪೪ ವೀರಶೈವ ಸಾಹಿತ್ಯ ಮತ್ತು ಇತಿಹಾಸ–ಭಾ ೨. ಪಂಡಿತರತ್ನಂ ಬಿ. ಶಿವಮೂರ್ತಿ ಶಾಸ್ತ್ರೀ

**ಹರಿಹರ– ರಾಘವಾಂಕ–ಕೆರೆಯ ಪದ್ಮರಸರು**

೪೪೫ ಮೂವರ ಉಪಲಬ್ಧವಿರುವ ಎಲ್ಲ ಕೃತಿಗಳು

೪೪೬ ಹರಿಹರದೇವ–ಸಂ. ಕೆ.ಜಿ. ಕುಂದಣಗಾರ

೪೪೭ ಹಂಪೆಯ ಹರಿಹರ–ಡಿ.ಎಲ್. ನರಸಿಂಹಾಚಾರ್

೪೪೮ ಹರಿಹರನ ರಗಳೆಗಳಲ್ಲಿ ಜೀವನದರ್ಶನ– ಪ್ರೊಫೆಸರ್ ಎಸ್.ಎಸ್. ಮಾಳವಾಡ

೪೪೯ ಪದ್ಮರಾಜಪುರಾಣ–ಪದ್ಮಣಾಂಕ

೪೫೦ ರಾಘವಾಂಕ ಕಾವ್ಯ–ಸಿದ್ಧನಂಜೇಶ

೪೫೧ ಹರಿಹರನ ಗಿರಿಜಾಶಂಕರರು

೪೫೨ ಹರಿಹರನು ಕಂಡ ಜ್ಯೋತಿರ್ಲಿಂಗದ ಮೂರು ಮುಖಗಳು– ಎಲ್. ಬಸವರಾಜು

೪೫೩ ಶತಕದ್ವಯ–ಸ.ಹಾ. ಶಿವಮೂರ್ತಿಗಳು

೪೫೪ ರಕ್ಷಾಶತಕ–ಕೋ.ಚೆನ್ನಬಸಪ್ಪನವರು

೪೫೫ ಕವಿ ರಾಘವಾಂಕ–ಎಚ್.ಎಂ. ಶಂಕರನಾರಾಯಣರಾವ್

೪೫೬ ಮಹಾಕವಿ ರಾಘವಾಂಕ–ಆರ್. ಸಿ. ಹಿರೇಮಠ

೪೫೭ ತುಂಗಭದ್ರಾ–ಎಚ್. ದೇವೀರಪ್ಪ

೪೫೮ ಕನ್ನಡ ಸಾಹಿತ್ಯ ಚರಿತ್ರೆಯ ಅಭ್ಯಾಸಸೂಚಿಯಲ್ಲಿ ಉಕ್ತವಾಗಿರುವ ತರುವಾಯ ಬಂದಿರುವ ಲೇಖನಗಳು

## ಮಾದೇಶ್ವರ

೪೫೯ ಮಾದೇಶ್ವರ ಸಾಂಗತ್ಯ–ಗುರುಸಿದ್ಧ ಕವಿ

೪೬೦ ಮಾದೇಶ್ವರ ಚರಿತ್ರೆ ಪಂಡಿತರತ್ನಂ ಬಿ. ಶಿವಮೂರ್ತಿಶಾಸ್ತ್ರಗಳು

೪೬೧ ಸುತ್ತೂರು ಗುರುಪರಂಪರೆ

೪೬೨ ನಿರಂಜನ ವಂಶರತ್ನಾಕರ

೪೬೩ ಹೈದರಾಲಿಯ ತಾಮ್ರಶಾಸನ ಮತ್ತು ಈಸ್ಟ್ ಇಂಡಿಯಾ ಕಂಪೆನಿಯ

## ತಹನಾಮೆ

೪೬೪ ಜನಪದ ಸಾಹಿತ್ಯ– ವಿವಿಧ ಆಕರಗಳಿಂದ

೪೬೫ ಶರಣಸಾಹಿತ್ಯ–ಸಂ. ೧೫–ಸಂ. ೧೨

೪೬೬ ನಿಜಗುಣರ ಸಪ್ತಕೃತಿಗಳು

೪೬೭ ಶ್ರೀ ಶಿವಯೋಗಿ ನಿಜಗುಣರ ಸ್ವರೂಪದರ್ಶನ–ವಿವಿಧ ಲೇಖಕರು

೪೬೮ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ–ಸಂ. ೩೯. ಸಂ. ೧–೨

೪೬೯ ಶರಣಸಾಹಿತ್ಯದಲ್ಲಿ ಪಂ. ಅವಳೀಕರರ ಲೇಖನ– ಮರಾಠಿ
ವಿವೇಕಚಿಂತಾಮಣಿಯ ಬಗ್ಗೆ

೪೭೦ ಪಾರಮಾರ್ಥ ಪ್ರಕಾಶಿಕೆ–ಸುಕುಮಾರ ಗ್ರಂಥಮಾಲೆ

೪೭೧ ಶಿವಾನುಭವ–ಸಂ. ೧, ಸಂ. ೧

೪೭೨ ೬೩ ಪುರಾತನರ ತ್ರಿವಿಧಿ–ಶ.ಸಾ. ಗ್ರಂಥಮಾಲೆ

೪೭೩ ವಾಗ್ಭೂಷಣ–ಹೊಸ ಸಂಪುಟ ೧, ೨, ೪

೪೭೪ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಪತ್ರಿಕೆ– (ಸಂ. ೧ – ಸಂ. ೩)

## ಮುಪ್ಪಿನ ಷಡಕ್ಷರಿ

೪೭೫ ಸುಬೋಧಸಾರ–ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ

೪೭೬ ಮುಪ್ಪಿನಾರ್ಯರ ಭಾವಪಾತ್ರಗಳು–ಜ. ಚ. ನಿ.

೪೭೭ ಹೆಮ್ಮಗಳು–ಚ. ಚ. ನಿ.

೪೭೮ ವೈರಾಗ್ಯದಲರು– ಬಾ. ಲೀ, ಮ. ಶಿ. ಗ್ರಂಥಮಾಲೆ

## ಮಗ್ಗೆಯ ಮಾಯಿದೇವ

೪೭೯ ಶಿವಾನುಭವಸೂತ್ರ, ಶತಕತ್ರಯ, ವಿಶೇಷಾರ್ಥ ಪ್ರಕಾಶಿಕೆಗಳು–ಮಾಯಿದೇವ

೪೮೦ ಪ್ರೌಢರಾಯನ ಕಾವ್ಯ

೪೮೧ ಗುರುರಾಜಚಾರಿತ್ರ

೪೮೨ ಚೆನ್ನಬಸವಪುರಾಣ

೪೮೩ ಪಾಲ್ಕುರಿಕೆ ಸೋಮೇಶ್ವರ ಪುರಾಣ

೪೮೪ ಶಿವಾನುಭವ, ಶರಣ ಸಾಹಿತ್ಯಗಳಲ್ಲಿ ಲೇಖನಗಳು–ಮುರಿಗೆಪ್ಪ ಸಿದ್ಧಪ್ಪ ಗುಡ್ಡದ ಮತ್ತು ಬಿ. ಶಿವಮೂರ್ತಿಶಾಸ್ತ್ರಿಗಳಿಂದ

## ತೋಂಟದ ಸಿದ್ಧಲಿಂಗೇಶ್ವರ

೪೮೫ ಸಿದ್ಧೇಶ್ವರ ಪುರಾಣ–ಮರಿತೋಂಟದಾರ್ಯರು

೪೮೬ ಸಿದ್ಧಲಿಂಗೇಶ್ವರ ಸಾಂಗತ್ಯ–ಹೇರಂಬ ಕವಿ

೪೮೭ ಸಿದ್ಧಲಿಂಗೇಶ್ವರ ವಿಜಯ–ವೇ. ನಂ. ಶಿವಪ್ಪಶಾಸ್ತ್ರಿ

೪೮೮ ಎಡೆಯೂರು ಸಿದ್ಧಲಿಂಗೇಶ್ವರ ವಿಜಯ–ಎಸ್. ಗುರುದತ್ತ

೪೮೯ ತೋಂಟದಾರ್ಯ ರಗಳೆ–ಶಿವಾನುಭವ ಗ್ರಂಥಮಾಲೆ

೪೯೦ ನಿರಂಜನ ವಂಶರತ್ನಾಕರ

೪೯೧ ಸಿದ್ಧೇಶ್ವರ ವಚನ–ಹುಬ್ಬಳ್ಳಿಯ ಜಗದ್ಗುರು ಮೂರುಸಾವಿರ ಮಠದ ಪ್ರಕಟನೆ

೪೯೨ ಗುರುರಾಜಚಾರಿತ್ರ

೪೯೩ ಚೆನ್ನಬಸವ ಪುರಾಣ

## ಕಾಡಸಿದ್ಧೇಶ್ವರ ಸ್ವತಂತ್ರ ಸಿದ್ಧಲಿಂಗೇಶ್ವರ

೪೯೪ ಕಾಡಸಿದ್ಧೇಶ್ವರ ವಚನಗಳು–ಮೂರುಸಾವಿರ ಮಠದ ಪ್ರಕಟಣೆ

೪೯೫ ಸ್ವತಂತ್ರ ಸಿದ್ಧಲಿಂಗೇಶ್ವರ ವಚನಗಳು–ಮೂರುಸಾವಿರ ಮಠದ ಪ್ರಕಟನೆ

೪೯೬ ಶ್ರೀ ಕ್ಷೇತ್ರ ಯಡೂರು (ಮರಾಠಿ)–ಕರಿವೀರಪ್ಪಾ ಶಿವಪ್ಪಾ ಛಪ್ರೆ

೪೯೭ ಶಿವಾನುಭವ–ಸಂ. ೧೧ – ಸಂ. ೧೦–೧೧

೪೯೮ ರೇವಣಸಿದ್ಧೇಶ್ವರ ರಗಳೆ–ಹರಿಹರ

## ಘನಲಿಂಗದೇವ

೪೯೯ ಘನಲಿಂಗದೇವನ ವಚನಗಳು–ಶಿವಾನುಭವ ಗ್ರಂಥಮಾಲೆ, ಶರಣಸಾಹಿತ್ಯ ಗ್ರಂಥ ಮಾಲೆ

೫೦೦ ಕನ್ನಡ ಸಾಹಿತ್ಯ ಚರಿತ್ರೆ – ಡಾ. ಮುಗಳಿ

## ಮನ್ಮಥಸ್ವಾಮಿ

೫೦೧ ಪರಮರಹಸ್ಯ(ಸಂಸ್ಕೃತ–ಮರಾಠಿ)–ಲಾತೂರ ಆವೃತ್ತಿ

೫೦೨ ಮನ್ಮಥಸ್ವಾಮಿಗಳ ಅಭಂಗಳು–(ಅಪ್ರಕಟಿಕ–ಲೇಖಕನ ಸ್ವಾಧೀನದಲ್ಲಿ)

೫೦೩ Journal of the Karnataka Universitiy –Vol. 11-No. 2

೫೦೪ ಶ್ರೀ ಮನ್ಮಥಸ್ವಾಮಿ ಪಂಚಕಮಿಟಿ ರಿಪೋರ್ಟು (ಮರಾಠಿ)

೫೦೫ ಪಂ. ಅವಳೀಕರರ ಲೇಖನಗಳು–ಶರಣಸಾಹಿತ್ಯದಲ್ಲಿ

## ತಿರುವಳ್ಳುವರ್–ವೇಮನ–ಸರ್ವಜ್ಞರು

೫೦೬ ತಿರುಕ್ಕುರುಳ್ (ಇಂ.) ಡಾ. ಪಿ. ಸುಬ್ಬರಾಯನ್

೫೦೭ ವೇಮನ ಜ್ಞಾನಮಾರ್ಗದ ಪದಗಳು–ವಿ. ಭೀಮರಾಜು

೫೦೮ ಹೇಮರೆಡ್ಡಿ ಮಲ್ಲಮ್ಮ– ರಾಜಯೋಗಿ ವೇಮಣ್ಣ–ಎಂ.ಜಿ. ನಂಜುಂಡಾರಾಧ್ಯ

೫೦೯ ಸರ್ವಜ್ಞನ ವಚನಗಳು–ಸಂ. ಉತ್ತಂಗಿ

೫೧೦ ಸರ್ವಜ್ಞನ– ಎ.ಆರ್. ಕೃಷ್ಣಶಾಸ್ತ್ರಿ

೫೧೧ ಸರ್ವಜ್ಞನ ಸಂದೇಶ–ಚಿಟ್ಟಕೋರ

೫೧೨ ಸರ್ವಜ್ಞಮೂರ್ತಿ–ಬಿ. ಶಿವಮೂರ್ತಿಶಾಸ್ತ್ರೀ

೫೧೩ ಹೇಮರೆಡ್ಡಿ ಮಲ್ಲಮ್ಮ ಪುರಾಣ–ಚೆನ್ನಕವಿಗಳು

೫೧೪ Vemana : the Andhra poet-Saint-Shudhananda Bharati ( Illustrated Weekly of India May 5, 1960).

**ಕೊಟ್ಟೂರ ಬಸವೇಶ್ವರ**

೫೧೫ ಕೊಟ್ಟೂರ ಬಸವೇಶ್ವರ ಪುರಾಣ–ಬಸವಲಿಂಗ ಕವಿ

೫೧೬ ಗುರುರಾಜಚಾರಿತ್ರ

೫೧೭ ಕೊಟ್ಟೂರು ಬಸವೇಶ್ವರ ಚರಿತ್ರ–ಅಯ್ಯನಗೌಡ ಮಲ್ಲೇಶಗೌಡ ಪಾಟೀಲ

**ಶಿವಪ್ರಕಾಶ ಸ್ವಾಮಿಗಳ್**

೫೧೮ ಶ್ರೀಮತಿ ಟಿ.ಕೆ. ನಾಗಾಂಬಾಳ್ ಅವರು ಕಳಿಸಿದ ಲೇಖನ

೫೧೯ ಅವರ ಕೃತಿಗಳು

**ಅಮರೇಶ್ವರ**

೫೨೦ ಅಮರೇಶ್ವರ ಮಹಾಪುರಾಣವು–ವೈದ್ಯಕುಲಭೂಷಣ ವೆಂಕಯ್ಯ ಕವಿ

೫೨೧ ಶ್ರೀ ಅಮರೇಶ್ವರ ಚರಿತ್ರೆ–ಬಸವಲಿಂಗಸ್ವಾಮಿ ಪಂಚಾಕ್ಷರಿ ಮಠ

೫೨೨ ಶರಣಸಾಹಿತ್ಯ ಸಂ. ೨೨ ಸಂ. ೧೦

**ಶಿವಲಿಂಗೇಶ್ವರ–ಮಹಾಲಿಂಗೇಶ್ವರ–ದುರದುಂಡೀಶ್ವರರು**

೫೨೩ ಮಹಾಲಿಂಗಲೀಲೆ–ಬಸವ ಕವಿ

೫೨೪ ದುರದುಂಡಿ ಮಹೇಶ್ವರ ಪುರಾಣ–ಬಸವ ಕವಿ

೫೨೫ ಸಾವಳಗಿ ಶಿವಲಿಂಗೇಶ್ವರ ಚರಿತ್ರೆ–ಮಲ್ಲಾಬಾದಿ ವೀರಭದ್ರಪ್ಪ

೫೨೬ ಅನೇಕ ಚಿಕ್ಕ ಹೊತ್ತಗೆಗಳು, ಪದ, ಪದ್ಯಗಳು, ನಾಮಾವಳಿಗಳು ಇತ್ಯಾದಿ

**ಷಣ್ಮುಖ ಶಿವಯೋಗಿ**

೫೨೭ ಅಖಂಡೇಶ್ವರ ವಚನ–ಬಾ. ಲೀ. ಮ. ಶಿ. ಗ್ರಂಥಮಾಲೆ

೫೨೮ ಷಣ್ಮುಖ ಶಿವಯೋಗಿಗಳ ಜೀವನಚರಿತ್ರೆ–ಬಿ. ಸುಂದರೇಶ್ವರ

೫೨೯ ಕನ್ನಡ ನುಡಿ–೨೦–೨೧

## ಶರಣಬಸವೇಶ್ವರ

೫೩೦ ಶರಣಬಸವೇಶ್ವರ ಪುರಾಣ–ಮಾವನೂರ ಚೆನ್ನಬಸವ ಕವಿ

೫೩೧ ಶರಣಬಸವೇಶ್ವರ ಪುರಾಣ–ಗುರುಲಿಂಗ ಸಿದ್ಧಕವಿ

೫೩೨ ಶರಣಬಸವೇಶ್ವರ–ಪಂ. ಕಲ್ಲಿನಾಥಶಾಸ್ತ್ರಿಗಳು

೫೩೩ ಶ್ರೀ ಶರಣಬಸವೇಶ್ವರ ಚರಿತ್ರೆ–ಪಿ.ಎಸ್. ಪಲ್ಲಾಪುರ ಮಠ

೫೩೪ ಶ್ರೀ ಶರಣಬಸವೇಶ್ವರ ಚರಿತ್ರೆ–ವೀರನಗೌಡಾ ಡಿ.ಎಸ್. ಪಾಟೀಲ ಮೆಣಸಿಗಿ

೫೩೫ ಶ್ರೀ ಶರಣಬಸವೇಶ್ವರ ಸಾಧುಮಹಾರಾಜ (ಉರ್ದು) – ನಾರಾಯಣರಾವ್ ಬಲ್ಲೊರಗಿ

೫೩೬ ಜನಪದ ಸಾಹಿತ್ಯ

೫೩೭ ಕೈವಲ್ಯ ವಾಕ್ಯಾಮೃತ–ಕಡಕೋಳ ಮಡಿವಾಳಪ್ಪ

೫೩೮ ಮಹಾಂತನಿಜಲೀಲಾನುಭವ (ಅಪ್ರಕಟಿತ)

## ಬಳ್ಳಾರಿ ಮರಿಸ್ವಾಮಿಗಳು–ಸಕ್ಕರೆ ಕರಡೆಪ್ಪನವರು

೫೩೯ ಶ್ರೀ ಮರಿಯೋಗೀಶ್ವರ ಪುರಾಣವು–ಪಂ. ವೈ. ನಾಗೇಶಶಾಸ್ತ್ರಿಗಳು

೫೪೦ ವೀರಶೈವ ಮಹಾಪುರುಷರು ಭಾ. ೧–ಪಂ. ಬಿ. ಶಿವಮೂರ್ತಿಶಾಸ್ತ್ರಿಗಳು

೫೪೧ ಮೈಸೂರು ಸ್ಟಾರ್ (೭–೬–೧೯೦೯ನೆಯ ಸಂಚಿಕೆ)

೫೪೨ ಗುಂತಕಲ್ ವಿರೂಪಾಕ್ಷಶಾಸ್ತ್ರಿ ಮತ್ತು ಬಸವರಾಜಶಾಸ್ತ್ರಿಗಳು ಬರೆದ ಚರಿತ್ರೆಗಳು

## ಸರ್ಪಭೂಷಣ ಶಿವಯೋಗಿ

೫೪೩ ಕೈವಲ್ಯಕಲ್ಪವಲ್ಲರಿ–ಬಾ. ಲೀ. ಮ. ಶಿ. ಗ್ರಂಥಮಾಲೆ

೫೪೪ ಜ್ಞಾನಶತಕ (ಸಂಸ್ಕೃತ) ಸಂ ॥ಬ॥ ಶ್ರೀ ಶಂಕರಾನಂದಸ್ವಾಮಿಗಳು

೫೪೫ ಸರ್ಪಭೂಷಣ ಶಿವಯೋಗಿಗಳ ಜೀವನಚರಿತ್ರೆ–ಮಲ್ಲಾಬಾದಿ

## ವೀರಭದ್ರಪ್ಪನವರು

೫೪೬ ವೈರಾಗ್ಯದಲರು–ಬಾ.ಲೀ.ಮ.ಶಿ ಗ್ರಂಥಮಾಲೆ

೫೪೭ ವೀರಶೈವ ಮಹಾಪುರುಷರು ಭಾಗ ೧–ಪಂ. ಬಿ. ಶಿವಮೂರ್ತಿಶಾಸ್ತ್ರಿಗಳು

## ಬಾಲಲೀಲಾ ಮಹಾಂತ ಶಿವಯೋಗಿಗಳು

೫೪೮ ವೈರಾಗ್ಯದಲರು–ವಿವಿಧ ಲೇಖಕರು

೫೪೯ ಕೈವಲ್ಯದರ್ಪಣ–ಬಾ. ಲೀ. ಮ. ಶಿ. ಗ್ರಂಥಮಾಲೆ

೫೫೦ ಬಾಲಲೀಲಾ ಮಹಾಂತೇಶ್ವರ ಪುರಾಣ–ಲಿಂ. ಚೆನ್ನಕವಿಗಳು

೫೫೧ ಶರಣಸಾಹಿತ್ಯ (೨೧–೮)

## ಮೈಲಾರ ಬಸವಲಿಂಗ ಶರಣರು

೫೫೨ ಮೈಲಾರ ಬಸವಲಿಂಗ ಶರಣರ ಕೃತಿಗಳು–ಬಾ.ಲೀ.ಮ.ಶಿ. ಗ್ರಂಥಮಾಲೆ

೫೫೩ ವೈರಾಗ್ಯದಲರು–ಬಾ.ಲೀ.ಮ.ಶಿ. ಗ್ರಂಥಮಾಲೆ

## ಘನಮಠ ಶಿವಯೋಗಿ

೫೫೪ ಭಕ್ತಿಸುಧಾಸಾರ–ಬಾ.ಲೀ.ಮ.ಶಿ. ಗ್ರಂಥಮಾಲೆ

೫೫೫ ನಾಗಭೂಷಣ ಶಿವಯೋಗಿಗಳ ಪುರಾಣ–ಲಿಂ. ಬಸವಪ್ಪಶಾಸ್ತ್ರೀ ಶಾಲಾಮಠ ಮಸ್ಕಿ

೫೫೬ ಹೈದರಾಬಾದ ವೀರಶೈವರ ಕೈಗನ್ನಡಿ–ಬಸವಲಿಂಗಸ್ವಾಮಿ ಪಂಚಾಕ್ಷರಿ ಮಠ

೫೫೭ ಕೃಷಿಜ್ಞಾನ ಪ್ರದೀಪಿಕೆ–ಶಿವಾನುಭವ ಗ್ರಂಥಮಾಲಾ

೫೫೮ ಘನಮಠ ಶಿವಯೋಗಿಗಳ ಪುರಾಣ–ದೇವಣಗಾವ
ಗುರುಲಿಂಗಪಾಖ್ಯ ಕವಿ

೫೫೯ ಘನಮಠದಾರ್ಯರ ಧಾರ್ಮಿಕ ವಿಚಾರಗಳು–ಶಿವಾನುಭವ

## ಅಥಣಿಯ ಶಿವಯೋಗಿಗಳು

೫೬೦ ಶ್ರೀಮದಥಣಿ ಶಿವಯೋಗೀಶ್ವರ ಚಾರಿತ್ರ–ದಾವಣಗೆರೆ

**ಚಂದರಶೇಶರಶಾಸ್ತ್ರಿಗಳು**

೫೬೧ ಶ್ರೀಮದಥಣಿ ಶಿವಯೋಗೀಶ್ವರ ಚಾರಿತ್ರ–ಪಂ. ಸದಾಶಿವ ಕವಿ

೫೬೨ ಪ್ರಮಥಾಚಾರ ದೀಪಿಕೆ–ಹರ್ಡೆಕರ್ ಮಂಜಪ್ಪನವರು

೫೬೩ ಶಿವಯೋಗೀಶ್ವರ ರಗಳೆ–ಬ್ಯಾಳಿ ಕಲ್ಯಾಣಪ್ಪನವರು

೫೬೪ ವೀರಶೈವ ಮಹಾಪುರುಷರು ಭಾಗ ೧–ಬಿ. ಶಿವಮೂರ್ತಿಶಾಸ್ತ್ರಿಗಳು

೫೬೫ ಶ್ರೀಮನ್ನಿರಂಜನ ಮುರುಘೇಂದ್ರದೇವ ಶಿವಯೋಗೀಶ್ವರ ಗುರುಭಜನಂ ಮಾಗಡಿ ಎಸ್. ವೀರಪ್ಪಶಾಸ್ತ್ರಿಗಳು

**ಗುರುಮಲ್ಲೇಶ್ವರರು–ಕುಮಾರಯೋಗಿಗಳು**

೫೬೬ ಶ್ರೀ ಶಿವಯೋಗಿ ಮಂದಿರದ ಬೆಳಗು–ವಿವಿಧ ಲೇಖಕರು

೫೬೭ ಹಾನಗಲ್ಲ ಕುಮಾರೇಶ್ವರ ಪುರಾಣ–ಲಿಂ. ಚೆನ್ನಕವಿಗಳು

೫೬೮ ಮಹಾತ್ಮಾ ಗುರುಮಲ್ಲೇಶ್ವರರು–ಸ್ವಾಮಿ ಮಹಾಮನೆ

೫೬೯ ಕಾರಣಿಕ ಕುಮಾರಯೋಗಿ–ಜ. ಚ. ನಿ

೫೭೦ ಶ್ರೀ ಕುಮಾರಸ್ವಾಮಿಗಳವರ ಸ್ಮಾರಕ ಚಂದ್ರಿಕೆ–ವಿವಿಧ ಲೇಖಕರು.

ಈ ಸೂಚಿ ಸಿದ್ಧವಾದುದು ೬ ವರ್ಷಗಳ ಹಿಂದೆ. ಅಲ್ಲಿಂದೀಚೆಗೆ ಮತ್ತೆ ಕೆಲವು ಮಹತ್ವದ ಹೊತ್ತಗೆಗಳು ಹೊರಬಿದ್ದಿವೆ. ಇದಕ್ಕೂ ಮೊದಲು ಪ್ರಕಟವಾಗಿದ್ದು ಲೇಖಕನ ದೃಷ್ಟಿಗೆ ಬೀಳದಿದ್ದ ಗ್ರಂಥಗಳು ಹಲವು ಈಚೆಗೆ ಅವರ ದೃಷ್ಟಿಗೆ ಬಿದ್ದಿವೆ. ಈ ಸೂಚಿಯಲ್ಲಿ ಈ ಗ್ರಂಥಗಳನ್ನು ಸೇರಿಸಲು ಆಗದಿದ್ದುದಕ್ಕಾಗಿ ಆ ಗ್ರಂಥಕರ್ತರ ಕ್ಷಮೆಯನ್ನು ಕೋರುತ್ತೇನೆ.

■

## ಅನುಬಂಧ ೨

# ಶರಣ ವಂಶವಲ್ಲರಿ

**ಅ**

ಅಗ್ಗಣಿಯ ಹಂಶಿದೇವರು೨
ಅಗ್ಗಣಿಯ ಹೊನ್ನಯ್ಯ ೨
ಅಘ್ಘಣಿ ಹೊನ್ನಿತಂದೆ
ಅಜಗಣ್ಣ
ಅಜ್ಜಿದಾಸಯ್ಯ
ಅಡಿಸಿದ್ಧೇಶ್ವರ ಸ್ವಾಮಿಗಳು
ಅಣತಿಯ ಚಂದಯ್ಯ
ಅಣ್ಣಮ
ಅಣ್ಣಲದೇವಿ
ಅಣ್ಣಮರಾಜ
ಅಣ್ಣಬ್ರಹ್ಮಯ್ಯ
ಅಣ್ಣನಾಚಯ್ಯ
ಅಣ್ಣಾಮಲ್ಲೇಶ್ವರ
ಅಣ್ಣಾಜಿ
ಅಣ್ಣಾಜಿ
ಅಣ್ಣಾಭಕ್ತ
ಅಣುವಗೆರೆಯ ಚಾಕವ್ವ
ಅಣುಪುರ ಸಿದ್ಧಯೋಗಿ
ಅಣುಮೂರ್ತಿ

ಅತಿಥಿ ದೇವರು

ಅಥಣಿ ಶೆಟ್ಟರ ಮಠದ ಮರುಳಸಿದ್ಧ ಸ್ವಾಮಿಗಳು

ಅಥಣಿ ಮುರುಘೇಂದ್ರ ಶಿವಯೋಗಿಗಳು

ಅದೃಶ್ಯಕವಿ

ಅಧ್ಯಾತ್ಮ ಗಣನಾಥ

ಅನಲಾಯಿ

ಅನ್ನದಾನಿ ಮಲ್ಲಿಕಾರ್ಜುನಯ್ಯ

ಅನಾದಿ ಗಣನಾಥ

ಅನಾಮಿಕ ನಾಚಯ್ಯ

ಅನಿಮಿಷಕೇಶಿ

ಅನುಮಿಷಯ್ಯ

ಅನಂತಪುರದ ಗುರುಬಸವ ಸ್ವಾಮಿಗಳು

ಅನಂತದೇವ

ಅಪ್ಪಣ್ಣ

ಅಪ್ಪಯ್ಯ

ಅಮರನೀತಿಗಳು

ಅಮರಗುಂಡದ ಮಲ್ಲಿಕಾರ್ಜುನ ತಂದೆ

ಅಮರಯ್ಯ

ಅಮಾತ್ಯ ಮಲ್ಲಯ್ಯ

ಅಮುಗಿದೇವಯ್ಯ

ಅಮೃತನಾಥ ಬಡೆಯರು

ಅರಭಾವಿ ದುರಂದುಂಡೀಶ್ವರರು

ಅರಮನೆಯ ಹೂವಿನ ಶಿವಲಿಂಗದೇವರ

ಅರಸವ್ವೆ

ಅರಬಸ್ಥಾನದ ಮಕ್ಕೇಶ್ವರ

ಅರಿಯಮ್ಮ

ಅರಿಯಮರಾವ

ಅರಿವಿನ ಮಾರಿತಂದೆ

ಅರಿವಳ್ತಾಂಡಾರಿ
ಅರಿಯರಾಜಯ್ಯ
ಅರುಟಾಳು ಕಲ್ಲವ್ವ
ಅರೆಯೂರು ಚೆಲ್ಲವ್ವ
ಅಲ್ಲಮಪ್ರಭು
ಅಲ್ಲಯ್ಯ
ಅಡಗಡ ಬಸವಯ್ಯ
ಅವರಸದ ರೇಕಣ್ಣ
ಅವಿನಾಶಿಯ ಕಲ್ಯಾಣಮ್ಮ
ಅಸಗೊಂಡ ಮಲ್ಲರಸ
ಅಹಂಕಾರ ಭೀಮಯ್ಯ
ಅಂಕಲಗಿ ಅಡವಿಸ್ವಾಮಿಗಳು
ಅಂಗರಾಯಣ್ಣಾ
ಅಂದೂರು ಕೆರೆಯ ದಾಸೋಹದ ಲಿಂಗಸ್ವಾಮಿ

## ಆ

ಆಚಾರ ಭೀಮದೇವಯ್ಯ
ಆಣತಿಯ ಚಂದಯ್ಯ
ಆಣವಗೆರೆಯ ನಾಗಮ್ಮ
ಆತ್ಮಗಣವರ
ಆತ್ಮದೇವಯ್ಯ
ಆದಯ್ಯ
ಆದಿಗಣೇಶ್ವರ
ಆದಿಮಯ್ಯ
ಆದಿಲಿಂಗ ಸ್ವಾಮಿಗಳು
ಆದಿಶೆಟ್ಟೆ ಯೇಳಪ್ಪಯ್ಯ
ಆನಂದ ಬಸವಲಿಂಗ ಶಿವಯೋಗಿ

ಆಯಮ್ಮ
ಆಯ್ದಕ್ಕಿ ಮಾರಯ್ಯ
ಆಲೂರು ಚೆನ್ನಬಸವಯ್ಯ
ಆಸಗೋಡ ಮಲ್ಲಯ್ಯ

## ಇ

ಇಡಗೂಡೆ ರುದ್ರಕವಿ
ಇಡುಗುಡಿಯ ಪೆರ್ಮಾಡಿ
ಇಡುಪಿದೇವರ ತಿಪ್ಪದೇವನು
ಇಪ್ಪಿದೇವ
ಇಬ್ಬಳಕ್ಕಿ ಹಳ್ಳಿಯ ನೂಲಕಾಯಕದ ನಾಗಣ್ಣ
ಇಮ್ಮಡಿ ತೋಂಡದಯ್ಯ
ಇಮ್ಮಡಿ ಮರಿಗೆಸ್ವಾಮಿ
ಇರಭಕ್ತ
ಇರುಬುದೋಲೆ ನಾಗಪ್ಪಯ್ಯ
ಇಲಕಲ್ಲ ಮಹಾಂತ ಶಿವಯೋಗಿಗಳು
ಇಹಃ ಪಗೆಲಾಂಡಿ
ಇಳಿಹಾಳ ಬೊಮ್ಮಯ್ಯ
ಇಳೆಯಾಂಡ ಗುಡಿಮಾರ
ಇಂಡಿ ಸೋಮಯ್ಯ
ಇಂಡಿಯ ಶಾಂತಯ್ಯ
ಇಂಡೆಯ ಬೊಮ್ಮಯ್ಯ

## ಈ

ಈಶಾನದೇವರು

## ಉ

ಉಗ್ಗಡಿಸುವ ಬಬ್ಬಿದೇವಯ್ಯ
ಉಜ್ಜೈನೀಶ
ಉಡುವಣಿ ಪೆರುಮಾಳ
ಉಡುವಂಕ ನಾಡಪ್ರಭು
ಉತ್ತಮಾಂಗದ ಕೇಶಿ
ಉತ್ತರದೇಶದ ಬಸವಲಿಂಗದೇವ
ಉತ್ತಾರೇಶ್ವರ
ಉತ್ತುಂಗ ಚೋಳ
ಉತ್ತೂರು ಶರಣರು
ಉದರದ ರಾಮಯ್ಯ
ಉದ್ಧಟಯ್ಯ
ಉದ್ದನೆಯ ವೀರೇಶ
ಉದಾಸಿಯ ಚನ್ನವೀರೇಶ
ಉದ್ಯಾನ ಸಿದ್ಧಲಿಂಗದೇವ
ಉಪ್ಪರಗುಡಿಯ ಸೋಮಿದೇವಯ್ಯ
ಉಪ್ಪಲಗುಡಿಯ ಸಂಗಮೇಶ
ಉಪ್ಪಲಿಕರ ಗುಡಿಯ ಸಂಗಮೇಶ
ಉಪ್ಪಲಿಗರ ಅಪ್ಪಣ್ಣ
ಉರಗ ರಾಯಣ್ಣ
ಉರಿಲಿಂಗದ ದಾಸ
ಉರಿಲಿಂಗದೇವಯ್ಯ
ಉರಿಲಿಂಗಪೆದ್ದಯ್ಯ
ಉರುವಪಲ್ಲಿ ಕಾಮಯ್ಯ
ಉಂಡು ಉಪವಾಸಿ

## ಎ

ಎಕ್ಕಪ್ಪ ತಂದೆ
ಎಕ್ಕಪ್ಪಯ್ಯ
ಎಗ್ಗುಂದದ ಕಲ್ಲಿನಾಥ
ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ
ಎಚ್ಚರಿಕೆ ಮುಕ್ತಣ್ಣ
ಎಡೆಮಠದ ನಾಗಿದೇವ
ಎತ್ತಕಯ್ಯ
ಎಮ್ಮಿಗನೂರು ಜಡೆಯಪ್ಪನವರು
ಎಮ್ಮಬಸವ
ಎರಡನೆಯ ಚನ್ನಬಸವ
ಎಲೆನಾಡ ಚೋಳ
ಎಲೆಯ ಕೆಂಪಯ್ಯ
ಎಲೆಯ ಭಾಮಯ್ಯ
ಎಲೇಶ ಕೇತಯ್ಯ
ಎಳಮಲೆಯ ಸಿದ್ಧನಂಜೇಶ
ಎಳವಂದೂರು ಅಂಕವ್ವ
ಎಳೆಮಲೆಯ ಗುರುಶಂಕರದೇವ
ಎಳಂದೂರು ಚೆನ್ನೊಣ್ಣೊಡೆಯರು
ಎಳಂದೂರು ಬಸವಲಿಂಗಸ್ವಾಮಿಗಳು

## ಏ

ಏಕಪಾದ ರುದ್ರ
ಏಕವಾಕ್ಯದ ಕಲ್ಲಪ್ಪ
ಏಕಾಂಬ ಬಸವೇಶ
ಏಕಾಂತರಾಮೇಶ
ಏಕೋಬಾಹು ಶಿವಕವಿಪ

ಏಕೋರಾಮತಂದೆ
ಏಕೋರಾಮಾರಾಧ್ಯ
ಏಣಾದಿನಾಥ
ಏಲೇಶ್ವರಕೇತಯ್ಯ

**ಒ**

ಒಕ್ಕಲು ಮುದ್ದಯ್ಯ
ಒಮ್ಮಣದ ನಾಗಪ್ಪ
ಒರತೆಯ ಬೊಮ್ಮಿದೇವ
ಒಂಕೈಯ್ಯ

**ಓ**

ಓದಿಸುವ ವೀರಣ್ಣಯ್ಯ
ಓದುವ ಗಿರಿಯ
ಓಲೆಯ ಶಾಂತಯ್ಯ
ಓಹಿಲ ದೇವಯ್ಯ

**ಕ**

ಕಕ್ಕಯ್ಯ
ಕಟ್ಟಿಗೆಯ ಗುರುವ ಸಂಗಯ್ಯ
ಕಡಗೊಳ್ಳದ ಮಡಿವಾಳಪ್ಪ
ಕಡಗದ ಮಲ್ಲಯ್ಯ
ಕಡವಲ ನಂದಿ
ಕಡವೂರ ಕಾರಿ
ಕಣ್ಣಪ್ಪ
ಕದಿರೆತಿಮ್ಮವ್ವೆ
ಕದಿರೆರೇಮವ್ವ

ಕನಕದನಾಚಯ್ಯ
ಕನಕ ನೀರಾಜನ
ಕನ್ನದಕಾಯಕದ ತಿಮ್ಮಮ್ಮ
ಕನ್ನದಕಾಯಕದ ತಿಮ್ಮಣ್ಣ
ಕನ್ನದ ಚಾಮಯ್ಯ
ಕನ್ನದ ಬ್ರಹ್ಮಯ್ಯ
ಕನ್ನದ ಬ್ರಹ್ಮಿದೇವ
ಕನ್ನದ ಮಾರಿತಂದೆ
ಕನ್ನದ ವೀರಮಾಚಯ್ಯ
ಕನ್ನಪ್ಪ
ಕನ್ನಲ್ಲಿ ಮೆಣಸಿನ ಪುಟ್ಟಯ್ಯ
ಕನ್ನಿದೇವಯ್ಯ
ಕರ್ನಾಕೆ
ಕಪ್ಪಯ್ಯ
ಕಪ್ಪಿನಿ
ಕಪ್ಪುರ ನಿವಾಳಿಯ ಸಂಗಯ್ಯ
ಕಬ್ಬಿನಕಾಯಕದ ವೀರಣ್ಣ
ಕಬ್ಬಿನಕಾಯಕದ ಪೋತಯ್ಯ
ಕಬ್ಬುಕಲ್ಲು ಸಿದ್ದಯ್ಯ
ಕಬ್ಬುಗಲ್ಲಿನ ಸಿದ್ಧವೀರೇಶ್ವರ
ಕಮಳವ್ವೆ
ಕಮ್ಮಾರ ವಿಭು
ಕರಪೂರ ದಾಸಯ್ಯ
ಕರವೀರ
ಕರಸಳದ ವೀರಣ್ಣ
ಕರಸ್ಥಲದ ವೀರೇಶ್ವರ
ಕರಸ್ಥಲದ ನಾಗಯ್ಯ
ಕರಿಕಾಲ ಚೋಳ

ಕರಿಕಾಮದೇವ
ಕರಿಯನಾರ
ಕರಿಯ ಬಸವ
ಕರಿಯ ಬಸವೇಶನು
ಕರಿಯ ಬಸವೇಶ್ವರ
ಕರಿಯಪುರದ ಮುಮ್ಮಡಿಭಕ್ತ
ಕರುಳಕೇತಯ್ಯ
ಕರುಳ ಪರ್ವತಯ್ಯ
ಕಲಕೇತ ಬ್ರಹ್ಮಯ್ಯ
ಕಲಕೇತಯ್ಯ
ಕಲವತ್ತಿ
ಕಲ್ಲಕ್ಕಿ ವೀರಾರ್ಯರು
ಕಲ್ಲಪ್ಪ
ಕಲ್ಲಪ್ಪಯ್ಯ
ಕಲ್ಲಮಠದ ಪ್ರಭುದೇವ
ಕಲ್ಲಯ್ಯ
ಕಲ್ಲರಸ
ಕಲಾವತಿ
ಕಲಿಕಂಬರು
ಕಲಿಕಂಬರಾಯ
ಕಲಿದೇವಯ್ಯ
ಕಲಿಗಣ
ಕಲಿಚಿಟ್ಟಾಂಡರು
ಕಲಿಸೋಮ
ಕಲಿಸೋಮದೇವಯ್ಯ
ಕಲಿಯಾರು
ಕಲ್ಲಿನಾಥ ಭೀಮಯ್ಯ
ಕಲ್ಲಿದೇವ

ಕಲ್ಲಿಬಸವ
ಕವಿಚೆನ್ನ
ಕವಿನಂಜಯ್ಯ
ಕವಿಮಾದಣ್ಣ
ಕವಿಲಿಂಗ
ಕವಿಲೆ ಬ್ರಹ್ಮಯ್ಯ
ಕಸವಿಕೋಟೆಯ ಬಸವಯ್ಯ
ಕಸ್ತೂರಿಸಿದ್ಧ
ಕಳಚೆಂಗಂಪೆರುಮಾಳೆ
ಕಳಲಿಯ ಕಂಚಿದೇವರು
ಕಳಲೆಯ ಬೀರಪ್ಪ
ಕಳಲೆಯ ಚಿಕ್ಕವೀರಯ್ಯ
ಕಳೆಚಂಗರು
ಕಳ್ಳಿಯಹಾಳ ಬಸವಣ್ಣ
ಕಾಕಂಡಿಕೆಯ ಶಿವಮುಗ್ಧ
ಕಾಕೊಳಲ ಮಸಣ ಜಾತ ತೊಗೂರ ದೇವಪ್ಪ
ಕಾಚಣ್ಣ
ಕಾಚಿರಾಜ
ಕಾಡಸಿದ್ಧೇಶ್ವರ
ಕಾಡಲೆ
ಕಾಣಕಾರಹಳ್ಳಿಯ ಶೀಲವಂತೆ
ಕಾನಾಪುರದ ಮರಳ ಸಿದ್ಧೇಶ
ಕಾಮಣ್ಣ
ಕಾಮಲದೇವಿ
ಕಾಮಾಟದ ಭೀಮಣ್ಣ
ಕಾಯಕದ ಸಂಗಣ್ಣ
ಕಾರಿಕಾಲಮ್ಮೆ
ಕಾರಿಗೆಹಳ್ಳಿಯ ಶಾಂತಯ್ಯ

ಕಾರುಗಹಳ್ಳಿ ಶಾಂತಯ್ಯ
ಕಾಲಾಗ್ನಿರುದ್ರ
ಕಾಲಿಗೆಯ ಜಾನಪ್ಪ
ಕಾಲುಕಣ್ಣೆಯ ಕಾಯಮ್ಮ
ಕಾಶಿಗಾವದ ಸಂಗಣಯ್ಯ
ಕಾಶಿಯ ಕಲ್ಲು ಕೆಲಸದ ಮರ್ತ್ರಾಭಕ್ತ
ಕಾಶಿರುದ್ರಮುನಿ ಗುರು ಗುಹೇಶ್ವರ
ಕಾಳವ್ವ
ಕಾಳಿದೇವ
ಕಾಳಿಮರಸ
ಕಾಳಿಂಗ
ಕಾಳ್ವೊರತೆ ದೊಲ್ಲಿದೇವಯ್ಯ
ಕಿತ್ತನೆಲ್ಲಿಯ ಶೀಲವಂತರ ತಿಮ್ಮಯ್ಯ
ಕಿನ್ನರಯ್ಯ
ಕಿನ್ನರಿ ಬೊಮ್ಮಿದೇವಿ
ಕಿನ್ನಾರಿ ಬ್ರಹ್ಮಯ್ಯ–ಕಿತ್ತೂರ ಬಸವಲಿಂಗ ಸ್ವಾಮಿ
ಕೀಶರಾಜ
ಕುಪ್ಪುಸದ ಸಂಗಯ್ಯ
ಕುಮಾರ ಚೆನ್ನಬಸವ
ಕುಮಾರ ಪದ್ಮರಸ
ಕುಮಾರ ಪಾಲಗುರ್ಜರ
ಕುರವಂಟದೇವ
ಕುಲಶ್ಚರಿಯರು
ಕೂಕಟಪಳ್ಳಿಯ ರಾಚಾಯಿಯರು
ಕೂಗಿನಮಾರಿ ತಂದೆ
ಕೂಚಿರಾಜ
ಕೂಬಣದ ಬಂಗಿಗಂಗಾಧರ
ಕೂರಂಗಿ ಕೋಟೆಯ ವರಧಾನ್ಯ ಶಬರ

ಕೂಲಿಯಯ್ಯ
ಕೂಲಿಯ ಬಡ ಭಕ್ತಯ್ಯ
ಕೆತ್ತಪೊಡೆಯರು
ಕೆನ್ನಡಿ ಕಾಮರಣ
ಕೆರೆಯ ಪದ್ಮರಸ
ಕೆರೆಯೂರು ಬ್ರಹ್ಮಯ್ಯ
ಕೆಸಮು ತೂರನ ಆಗಮ್ಯಕಮ್ಮ
ಕೇತಿದೇವ
ಕೇದಾರಗುರು
ಕೇದಾರ ಬಾಡಯ್ಯ
ಕೇರಳ ಪಾಂಡ್ಯ
ಕೇಶಿರಾಜ
ಕೈವಲ್ಯ ಸ್ವಯಸಾರ
ಕೊಚಿರಾಜ–ಕೊಂಡಗೋಳಿ ಕೇಶಿರಾಜ
ಕೊಟ್ಟಣದ ಸೋಮವ್ವೆ
ಕೊಟ್ಟಣದ ಸೋಮಯ್ಯ
ಕೊಟ್ಟೂರ ಬಾಚಯ್ಯ
ಕೊಟ್ಟೂರು ಧೂಪದೊಡೆಯರು
ಕೊಟ್ಟೂರು ಬಸವೇಶ್ವರ
ಕೊಡಗದ ಮಾರಣ್ಣ
ಕೊಪ್ಪದ ತಿಮ್ಮಣ್ಣ
ಕೊಲ್ಲಾಂಬೆ, ಕೊಡಗಿನ ಹಳ್ಳಿಯಾರ್ಯ
ಕೊಲ್ಲಿಪಾಕಿ ಮಾರಯ್ಯ
ಕೋಗಿಲೂರು ವೀರಪ್ಪ
ಕೋರನ್ನದಾರ್ಯ
ಕೋಲ ಶಾಂತಯ್ಯ
ಕೋವೂರು ಬ್ರಹ್ಮಯ್ಯ
ಕೋಳೂರು ತರಳೆ

ಕಂಕರಿ ಕೆಕ್ಕೆಯ್ಯ
ಕಂಕಣದೇವರು
ಕಂಗಳ ಬಸವಣ್ಣ
ಕಂಜನೂರಾಂಡಿ
ಕಂಟಿವೀರಪ್ಪಯ್ಯ
ಕಂಡಪಾವಡ ಶೀಲದ ಸಪ್ಪೆಯ ದೇವರು
ಕಂದಳದ ಬೈಯಣ್ಣ
ಕಂಬಕಾರ ಹೊನ್ನಯ್ಯ
ಕಂಬಳಾಶ್ವತರು
ಕಂಬಳಿಯ ನಾಗಯ್ಯ
ಕಂಬಾಳ ಮರುಳ
ಕಂಬಾಳೆ ಶಾಮತಮಲ್ಲೇಶ
ಕಂಬಳುದೇವರು
ಕಂಬಿಕೂರ ಸಿರಿಗಿರಿರೆಡ್ಡಿ
ಕಂಭದ ಮಾರಯ್ಯ
ಕುಂದೂರು ಸಿದ್ಧೇಶ–ಕುಮಾರ ಬಂಕನಾಥ
ಕುಂಬಾರರ ಅಪ್ಪಕೂಲಲ ವೋಲು
ಕುಂಬಾರ ಗುಂಡಯ್ಯ
ಕೆಂಜರೆ ನಾಮಣ್ಣನಾಯಕ
ಕೆಂಭಾವಿ ಭೋಗಣ್ಣ
ಕೊಂಗಲಿಯ ಕಲಿಯಾರು
ಕೊಂಡ ಮಲ್ಲೈಯ್ಯ
ಕೊಂಡಲದ ಹೊಂಗಾಯಿ
ಕೊಂಡೇ ಮಂಚಣ್ಣ

## ಖ

ಖಟ್ವಾಂಗ ಯೋಗೀಶ್ವರರು
ಖಾನಾಮಡಗು ಶರಣರು

## ಗ

ಗಗನದಾರ್ಯ

ಗಜೇಶ ಮಸಣಯ್ಯ

ಗಜೇಶ್ವರ

ಗಟ್ಟಿಯ ವಿಶ್ವನಾಥಯ್ಯ

ಗಡ್ಡಿಶಾಂತವೀರಪ್ಪನವರು

ಗಣತತಿ

ಗಣಮೂರ್ತಿ

ಗರಗದ ಮಡಿವಾಳ ಸ್ವಾಮಿಗಳು

ಗಾಣದ ಕನ್ನಪ್ಪಯ್ಯ

ಗ್ರಾಮದ ಹಾಳಪ್ಪಯ್ಯ

ಗಾವುದಿ ಮಾಚಯ್ಯ

ಗಾವೂರ ವೀರಯ್ಯ

ಗಿರಿಜಾತೆ

ಗುಡ್ಡವ್ವೆ

ಗುಡಿಪ್ರಭೆಯ ವಾರಣಾಸಿ ದೇವರು

ಗುಡಿಪಾಡಿ ರಾಚಯ್ಯ

ಗುಡ್ಡುವಳಲೆಯ ಭೀಷದಾರ್ಯ

ಗುಪ್ಪವ್ವೆ

ಗುಪ್ತಮಂಚಣ್ಣ

ಗುಬ್ಬಿಯ ಮಲ್ಲಣ್ಣ

ಗುಮ್ಮಳಾಪುರದ ಚೊಕ್ಕದೇವಪ್ಪತಯ್ಯ

ಗುಮ್ಮಳಾಪುರದ ಸಪ್ಪೆಯ ಶಾಂತದೇವರು

ಗುಮ್ಮಳಾಪುರದ ಶಿವನಪ್ಪಯ್ಯ

ಗುಮ್ಮಳಾಪುರದ ಸಿದ್ಧಲಿಂಗೇಶ್ವರ

ಗುರವ್ವ

ಗುರುಕೋಡು ಉಜ್ಜಲಪ್ಪೊಡೆಯರು

ಗುರುದೇವ

ಗುರುನಂಜಯ್ಯ
ಗುರುಬಸವ
ಗುರುಬಸವಾರೂಢ
ಗುರುಭಕ್ತ
ಗುರುಭಕ್ತಯ್ಯ
ಗುರುಭಕ್ತಯ್ಯ ಭಂಡಾರಿ
ಗುರುಲಿಂಗಸ್ವಾಮಿ
ಗುರುಲಿಂಗ ವಿಭು
ಗುರುವೀರ ಬಿಂಕಯ್ಯ
ಗುರುಶಂಕರೇಶ
ಗುರುಶಾಂತ ನಂಜೇಶ
ಗುರುಶಾಂತ ದೇವಯ್ಯ
ಗುರುಸಿದ್ಧ ದೇಶಿಕೇಂದ್ರಸ್ವಾಮಿಗಳು
ಗುರುಸಿದ್ಧ ವೀರಣ್ಣೊಡೆಯರು
ಗುರುಸಿದ್ಧರಾಮಯ್ಯ
ಗುರುಸಿದ್ಧಪ್ಪ
ಗುರುಹಳ್ಳಿಯ ಮರುಳಮ್ಮ
ಗೆಜ್ಜೆಕಾಯಕದ ತಿಪ್ಪಣಯ್ಯ
ಗೊಗ್ಗವ್ವೆ ಗೊಗ್ಗಯ್ಯ
ಗೊಗ್ಗದೊರತೆ
ಗೊಲ್ಲಳರಾಯ
ಗೋಣಿಮಾರಯ್ಯ
ಗೋರಕ್ಷ
ಗೋವಿಂದ ಭಟ್ಟಾರಕ
ಗೌಡದೇವರು
ಗೌತಮ
ಗೌರಮ್ಮ
ಗೌಳಭಟ್ಟಾರಕ

ಗಂಗಮಲ್ಲಯ್ಯ
ಗಂಗಾದೇವಿ
ಗಂಗಾಧರಯ್ಯ
ಗಂಗಾಧರಾಚಾರ್ಯ
ಗಂಗಾಪುರದ ಬಸವಯ್ಯ
ಗಂಗಾಸುದೇವಿ
ಗಂಗಾಯಿ
ಗುಂಡಗತ್ತರಿ ನಾಚಯ್ಯ
ಗುಂಡ ಬ್ರಹ್ಮಯ್ಯ
ಗುಂಡ ಬೊಮ್ಮಿಗಳು
ಗುಂಡಯ್ಯ
ಗುಂಡು ಬೊಮ್ಮಯ್ಯ
ಗೊಂಡಲ ಮಲ್ಲಿದೇವಯ್ಯ

**ಘ**

ಘಟ್ಟಿವಾಳಯ್ಯ
ಘನಮಠದಾರ್ಯ
ಘನಲಿಂಗದೇವಯ್ಯ
ಘಳಿಗೆಯ ಕಾಲಕಂಠಯ್ಯ
ಘಂಟಾಕರ್ಣ
ಘಂಟೆಯ ಪೆಮ್ಮಣ್ಣಯ್ಯ

**ಚ**

ಚಕ್ರಪಾಣಿ ಗಂಗನಾಥ
ಚತುರ್ಮುಖ ಬೊಮ್ಮರಸ
ಚತುರಾಸ್ಯ ಬೊಮ್ಮರಸ
ಚನ್ನಪಟ್ಟಣದ ಮಲ್ಲಣ್ಣ

ಚನ್ನಬಸವ ಚನ್ನವೀರೇಶ ಶಿವಾಚಾರ್ಯರು
ಚನ್ನಬಸವ ತಾತನವರು
ಚನ್ನಬಸವೇಶ
ಚನ್ನಬಸವಸ್ವಾಮಿಗಳು
ಚನ್ನಬಸವರಾಜೇಂದ್ರ
ಚನ್ನಯ್ಯ
ಚನ್ನವೀರಾಸ್ವಾಮಿಗಳು
ಚನ್ನವೀರಾರ್ಯರು
ಚರಲಿಂಗದೇವರು
ಚರಸಿದ್ಧಯ್ಯ–ಚಂದಯ್ಯ
ಚಲದಂಕ ಬಲ್ಲಯ್ಯ
ಚಲ್ಲಪ್ಪ ತಂದೆ
ಚಾಕಲಮ್ಮ
ಚಾಮನದೇವ
ಚಾಮಯ್ಯ
ಚಾಮರಸಿ
ಚಾಮಲದೇವಿ
ಚಾಳುಕ್ಯ ಭೋಗಯ್ಯ
ಚಿಕ್ಕಣಾರ್ಯ
ಚಿಕ್ಕಣಾರಾಧ್ಯ–ಚಿರುತೊಣೆ
ಚಿಕ್ಕದೇವ
ಚಿಕ್ಕಬಸವೇಶ್ವರ
ಚಿಕ್ಕಮಲ್ಲೇಶ–ಚಿರುಪುಲಿಯರು
ಚಿಕ್ಕರಾಚಮಲ್ಲಯ್ಯ
ಚಿಕ್ಕಲಿಂಗಣ್ಣ–ಚಿಂದಂಬರಯ್ಯ
ಚಿಕ್ಕಲಿಂಗಪ್ಪಯ್ಯ– ಚಿಕ್ಕಮಾದಣ್ಣ
ಚಿಕ್ಕಸ್ವಾಮಿದೇವರು
ಚಿಟ್ಟಾಭಕ್ತ

ಚಿಟ್ಟಾರಕ
ಚಿಣ್ಣಪ್ಪ
ಚಿತ್ಸಿಂಧು ಲಿಂಗೇಶ
ಚಿದಾನಂದ ಯೋಗಿ
ಚಿನ್ನಕಾಯಕದ ಬೊಮ್ಮಣ್ಣ
ಚಿನ್ನದ ಕಂಥೆಯಯ್ಯ
ಚಿರುಪುನಾರೆ
ಚಿಲ್ಲಾಳ
ಚಿಲುಕುಚಿ ಸಿದ್ಧಬಸವರಾಜ
ಚೀಲಾಳಯ್ಯ
ಚೆನ್ನಡಣಾಯಕ
ಚೆನ್ನತಿರುಚೆಟ್ಟಿಪಳ್ಳಿಯ ಶಿವನೋಲೆಗಾಯಕದ ತಿಪ್ಪಣ್ಣ
ಚೆನ್ನಬಸಪ್ಪ
ಚೆನ್ನಬಸವಯೋಗಿ
ಚೆನ್ನಬಸವಾಂಕ
ಚೆನ್ನಮಲ್ಲಿಕಾರ್ಜುನ
ಚೆನ್ನವೀರ
ಚೆನ್ನವೀರಗೌಡ
ಚೆಲ್ಲಪ್ರತಂದೆ
ಚೆವಿದ
ಚೇರಮರಾಯ
ಚೇರಮರಾಜ
ಚೇರಮಾಂಕ
ಚೊಕ್ಕದೇವಯಪ್ಪ
ಚೊಕ್ಕರಿಭಕ್ತ
ಚೊಲ್ಲಡಿನಾಚಿ
ಚೋರಚಿಕ್ಕಯ್ಯ
ಚೋಳ

ಚೋಳಿಯಕ್ಕ
ಚೌಡಯ್ಯ
ಚೌಡಿದೇವಯ್ಯ
ಚಂಗಳವ್ವೆ
ಚಂಗಳೆ
ಚಂಡಗಣೇಶ
ಚಂಡೇಶ
ಚಂದಸೋಮವ್ವೆ
ಚಂದ್ರಕವಿ
ಚಂದ್ರಶೇಖರ
ಚಂದ್ರಗುಂಡದ ವಿರುಪಾಕ್ಷಯ್ಯ
ಚಂದಿಮರಸು
ಚಂದೇಶಮಾರಯ್ಯ
ಚಾಂಗು ಛಲಾದೇವ
ಚಾಂಗು ಬೊಲ್ಲಯ್ಯ
ಚಿಂದರಹಳ್ಳಿಯ ಮಾಣಿಕಶೆಟ್ಟಿ

## ಛ

ಛಲದಾಲಕಮಲ್ಲ

## ಜ

ಜಕ್ಕಣಾರ್ಯ
ಜಕುನಿಯ ಮರಳುದೇವರು
ಜಗತಾವಿಗುತಿಯ ಚನ್ನಬಸವಣ್ಣ
ಜಗದೇವ
ಜಟ್ಟಿಮಾರಯ್ಯ
ಜಟ್ಟೂರು ಮಲ್ಲಿದೇವ

ಜಟೆಲಟ್ಟಿ ಸೋಮಯ್ಯ
ಜಡೆಯ ಶಂಕರ
ಜತ್ತರದ ಸೋಮಣ್ಣ
ಜಯಘಂಟೆ ಕಾಯಕದ ಬಸವಣ್ಣೊಡೆಯರು
ಜಾನಾಯಿ
ಜಾನೆಕಲ್ಲು ಸದ್ಗುರು ವಿಜಯರುದ್ರ ಸ್ವಾಮಿಗಳು
ಚಿನುಗುಬೊಮ್ಮ
ಚಿಮೂತಯ್ಯ
ಜೇಡರ ಚೌಡಪ್ಪ
ಜೇಡರ ಚಂದ್ರಶೇಖರ
ಜೊಮ್ಮಯ್ಯ
ಜೋಮ್ಮವ್ವೆ
ಜೋದರ ಮಾಯಣ್ಣ
ಜ್ಯೋತಿರಾಮಣ್ಣೊಡೆಯರು
ಜಂಗುಳಿ ವೀರಪ್ಪ
ಜಂಬೂರ ಮಹಾಕಾಳ
ಜಂಬೂರ ಸತ್ಯಕ್ಕ

## ಟ

ಟೀಕಿನ ಕಲಕೇತಯ್ಯ

## ಡ

ಡಕ್ಕೆಯ ಬೊಮ್ಮಣ್ಣ
ಡಾವಣಗೆರೆಯ ಚಾರಿಬಕ್ಕಪ್ಪ
ಡೋಹರ ಕಕ್ಕಯ್ಯ [ಸ್ವಾಮಿಗಳು]

## ಢ

ಢಕ್ಕೆಯ ಬ್ರಹ್ಮದೇವ
ಢಕ್ಕೆಯ ಮಾರಯ್ಯ
ಢಕ್ಕೆಯ ಮಾರಿತಂದೆ
ಢವಳೇಶ್ವರ

## ತ

ತಗಡೂರ ಕಪ್ಪಯ್ಯ
ತಮ್ಮಣ್ಣ
ತರಳೆಪತ್ರಿ
ತಳವಾರ ಕಾಮಿದೇವ
ತಾಯೂರ ಮಲ್ಲಯ್ಯ
ತಾಳಕಾಸನದ ಲಿಂಗಯ್ಯ
ತಾಳಿಕೋಟೆಯ ಶಿವದೇವ
ತಿಪ್ಪಣ್ಣಯ್ಯ
ತಿಮ್ಮಣ್ಣ
ತಿಮ್ಮಸೆಟ್ಟಿ
ತಿರಮೂಲ
ತಿರುವೂರು ಓಲೆಯ ತಿಮ್ಮಣ್ಣ
ತಿರಜ್ಞಾನ ಸಂಬಂಧಿ
ತ್ರಿಭುವನ ತಾತಾ
ತಿರುಕುರುಪ ತೊಂಡರು
ತಿರುಚೆಟ್ಟ
ತಿರುಚಿಟ್ಟಂಬಲ್ಲೇಶ್ವರ
ತಿರುನಾಳ್ಪೋರ
ತಿರುನೀಳಕಂಠಯ್ಯ
ತಿರವಲ್ಲಿ

ತಿರುವಲಯ ಭಕ್ತ
ತಿಲಕವ್ವೆ
ತುರುಕು ಹುಚ್ಚುದೇವರು
ತುರುಹುಣಿಸೆ ವೀರಪ್ಪ
ತೆರಕಣಂಬೆಯ ನಂಜಮ್ಮ
ತೆರಿಕಣಂಬೆಯ ಕೆಂದಿರಾಜ
ತೆಲುಗು ಬೊಮ್ಮಯ್ಯ
ತೆಲುಗರ ಮಸಣಯ್ಯ
ತೆಲುಗು ದೇವರು
ತೆಲುಗು ಶಿವರಾತ್ರಿದೇವರು
ತೆಲುಗೇಶ ಮಸಣಯ್ಯ
ತೈಲದ ಮರುಳಪ್ಪ
ತೊಂಗಿನ ಮಹಾದೇವಿ
ತೋಂಟದ ಸಿದ್ಧಲಿಂಗೇಶ್ವರ
ತೋಂಟದ ಸಿದ್ಧೇಶ್ವರ
ತಂಗಟೂರು ಮೊರಯ್ಯ
ತಂಬಳಬೀಡು ಪರ್ವತಯ್ಯ

## ದ

ದಸರಯ್ಯ
ದಾತ ಬಸವಪ್ಪ
ದಾರಯ್ಯ
ದಾವಲಾಪುರದ ನಂಜುಂಡ
ದಾಸನೂರಯ್ಯ
ದಾಸ್ಮೈಯ್ಯ
ದಾಸಿಕೇಶಯ್ಯ
ದಿಬ್ಬೂರು ಪವಾಡದ ವೀರಾಣ್ಣರು

ದೀಪದಕಲಿ ದಿವ್ಯ ಲಿಂಗೇಶ್ವರ ಸ್ವಾಮಿಗಳು
ದುಗ್ಗಳೆ
ದುರ್ಗದ ಬೊಮ್ಮಿಯಪ್ಪ
ದುಮ್ಮೆಯ ವೀರಪ್ಪಯ್ಯ
ದೇವಾಜ್ಜಿ
ದೇವನಾಯಕ
ದೇವನೂರು ಗುರುಮಲ್ಲೇಶ್ವರರು
ದೇವಮ್ಮ
ದೇವಯ್ಯ
ದೇವರು ಕೊಂಡೆಯ ವೀರಾಭಕ್ತ
ದೇವರ ದಾಸಿಮಯ್ಯ
ದೇವರಾಜೇಂದ್ರ
ದೇವರಾಪುರದ ನಂಜುಂಡ
ದೇವಾಯಮ್ಮ
ದೇಶಾರಾವೃತ
ದೊಳ್ಳಯ್ಯ
ದಂಡಿಪ್ರಸನ್ನ ಬಸವಣ್ಣ
ದಿಂಡನೂರ ನಾಗಭಕ್ತೆ–ದಿಗಂಬರ ಮುಕ್ತಿಮುನಿ

## ಧ

ಧರೆಪುರದ ಪುರಾತಯ್ಯ
ಧೂಳಾಭಕ್ತ

## ನ

ನಕ್ಕಣಹಳ್ಳಿ ಫಲಾಹಾರ ದೇವರು
ನಕ್ಕಲೂರಿನ ನುಲಿಯಕೆಲ್ಲಪ್ಪ
ನಗೆಯ ಮಾರಿತಂದೆ

ನನ್ನಯ್ಯ
ನಮಿನಂದಿ
ನರಗೆಲೆ ಶಿವಬಸಪ್ಪಶಾಸ್ತ್ರಿ
ನರಸಿಂಗ ಮೊಗೆಯಾರು
ನರೇಂದ್ರಚೋಳ
ನಲ್ಲಾಭಕ್ತ
ನಲ್ಲೂರು ಚೆಲ್ಲಯ್ಯ
ನಲ್ಲೂರ ವೇದಾಂತಿ
ನಲ್ಲೂರು ಮಾಳಿಗೆಯ ಎಳೆಯೂರು ಶೆಟ್ಟಿ
ನವಚಿಂತಯ್ಯ
ನಳಧರ್ಮರಾಜ
ನಾಕಿದೇವಯ್ಯ
ನಾಗಣ್ಣಯ್ಯ
ನಾಗಪ್ಪಯ್ಯ
ನಾಗಭೂಷಣ ಘನಮಠದಾರ್ಯರು
ನಾಗಯ್ಯ
ನಾಗರಗಡ್ಡೆಯಸ್ವಾಮಿ
ನಾಗವ್ವೆ
ನಾಗಾರ್ಜುನಯ್ಯ
ನಾಗಾಯಿ
ನಾಗಾಂಬಿಕೆ
ನಾಗಿದೇವ
ನಾಗಿನಾಥ
ನಾಚಿಯರು
ನಾರಕಂಥೆಯ ದೇವರು
ನಾರಸಿಂಹ
ನಾಲಪಟ್ಟದ ಮಧುವರಸ
ನಾವಡಿಗೆಯ ಗುಡ್ಡಮ್ಮ

ನಾವಲಗಿ ರೇವಪ್ಪ
ನಿಜಲಿಂಗ ಚಿಕ್ಕಯ್ಯ
ನಿಟ್ಟೂರು ನಂಜಯ್ಯ
ನಿಡುಬಾನಾಥ ತಿಪ್ಪಯ್ಯ
ನಿತ್ಯಶಿವರಾತ್ರಿ ವೀರಯ್ಯ
ನಿರ್ಮಾಣ ಚೋೞೇಶ್ವರ
ನಿರಶರ ಚೋೞಬಸವೇಶ್ವರ
ನಿರಾಲಂಬ ದೇವ
ನಿರಂಜನ ದೇವ
ನಿರಂಜನ ಸ್ವಾಮಿಗಳು
ನಿರ್ಲಜ್ಜಯ್ಯ
ನಿರ್ಲಜ್ಜ ಶಾಂತಯ್ಯ
ನಿರ್ವಾಣಮಂತ್ರಿ
ನಿರ್ವಾಣ ಸಾರಂಗದೇವ
ನಿವೃತ್ತಿ ಸಂಗಯ್ಯ
ನಿಸ್ಸಂಗಿ ದೇವಯ್ಯ
ನಿಳಿಹಾಳ ಬ್ರಹ್ಮಯ್ಯ
ನೀಲಕಂಠಯ್ಯ
ನೀಲಕಂಠಾಚಾರ್ಯ
ನೀಲಕಂಠಾರಾಧ್ಯ
ನೀಲಮ್ಮ
ನುಲಿಯ ಚಂದಯ್ಯ
ನೇಲೂರು ಶೀಲವಂತ ಕೆಂಪಯ್ಯ
ನೈನಾರು
ನೈಸರ
ನೈಷದೇವ
ನಂಜರಾಯ
ನಂಜನಾಥಾಚಾರ್ಯ

ನಂಜುಂಡ
ನಂದಪ್ಪ
ನಂಜಣಾಚಾರ್ಯ
ನಂದಿನಾಥ
ನಂದಿಯ ಸಿದ್ಧೇಶ
ನಂದೀಶ
ನಂದೀಶಕವಿ
ನಂಬಣ್ಣ
ನಂಬಿಯಣ್ಣ
ನಿಂಗುಳಿಗೆ ವೈಜಕ್ಕೇವೆ
ನಿಂಬೆಕ್ಕ
ನಿಂಬಾಕಾದ ಗಣೇಶ್ವರ

## ಪ

ಪಗಡದಿನ್ನ ಮಠದ ನನ್ನಪ್ಪಶಾಸ್ತ್ರಿ
ಪಗಲ್ತೋಣೆಯಾಂಡಿ
ಪಗಲ್ತೋಳರಾಯ
ಪಟ್ಟಗಂಬಳಿ ಸಿದ್ಧಲಿಂಗಸ್ವಾಮಿ
ಪಟ್ಟೇಶ್ವರದ ರಾಮಬಸವಣ್ಣ
ಪಡವಿಡದ ಮುತ್ತಿನ ವೀರಣ್ಣ
ಪಡಿಹಾರಿ ಬ್ರಹ್ಮಯ್ಯ
ಪಡಿಹಾರಿ ಉತ್ತಣ್ಣ
ಪಡಿಹಾರಿ ಬಸವಯ್ಯ
ಪಡಿಹಾರಿ ಬಸವೇಶ
ಪದ್ಮಣಾಂಕ
ಪದ್ಮರಸ
ಪದ್ಮರಾಜಯ್ಯ
ಪರದ ಸೌಂದರರು

ಪರಮಭಕ್ತ
ಪರಮೇಶ್ವರಯ್ಯ
ಪರಮಹಂಸಯ್ಯ
ಪರ್ವತಯ್ಯ
ಪರವೆನಾಚಿ
ಪ್ರದ್ಯೋತಯ್ಯ
ಪ್ರಭಾಕರಯ್ಯಗಳೂ
ಪ್ರಭಾತಯ್ಯ
ಪ್ರಭಾವಯ್ಯ
ಪ್ರಭುದೇವರು
ಪ್ರರಾರೀದೇವಯ್ಯ
ಪ್ರಸಾದದ ಚನ್ನವೀರೇಶ
ಪ್ರಸಾದದ ಭೀಮಯ್ಯ
ಪ್ರಸಾದದ ವೀರೇಶ
ಪ್ರಸಾದಿ ದಾಸಯ್ಯ
ಪ್ರಸಾದಿ ಬಂಕಯ್ಯ
ಪ್ರಸಾದಿ ಭೋಗಣ್ಣ
ಪ್ರಸಾದಿ ಲೆಂಕಬಂಕಣ್ಣ
ಪ್ರಹರ ಸೋಮನಾಥಯ್ಯ
ಪಲ್ಲವರಾಯ
ಪರ್ವತನಾಥ
ಪರ್ವತ ಶಿವಯೋಗಿ
ಪಶುಪತಿ
ಪಾದಪೂಜೆಯ ಸುದೇವರು
ಪಾದರಾಯಕ್ಕ
ಪಾಣಿಪಾತ್ರೆಯ ಶಂಕರದೇವ
ಪಾರಿಡೇಶ್ವರ ಬೊಮ್ಮಿದೇವಯ್ಯ
ಪಾಲಕಿಯ ದೇವರೂಟದ ಶಿವರಾತ್ರಯ್ಯ

ಪಾಲ್ಕುರಿಕೆಯಯ್ಯ
ಪಾಲ್ಕುರಿಕೆ ಸೋಮೇಶ
ಪಿಟ್ಟವ್ವೆ
ಪಿಳ್ಳೆಯನಾರು
ಪುಡುಯಲ ಹಾಲು ಮೊಸರು ವ್ಯಾಪಾರದ ಓಬಳಕ್ಕ
ಪುರದ ನಾಗಣ್ಣ
ಪುರಾತಯ್ಯ
ಪುಲಿಗೆರೆಯ ಸೋಮಯ್ಯ
ಪುಷ್ಪದ ಸೋಮಯ್ಯ
ಪೂಗಿ ನಾದಿಡುಗುಡಿಲ ದಾಗಾ ನಾಗಾಯಮ್ಮ
ಪೂಟನಾರ್ಝು ಪಡುಭಕ್ತ
ಪೂಸಲಯ್ಯ
ಪೆದ್ದಯ್ಯ
ಪೆದ್ದಿಗ ದೇವಯ್ಯ
ಪೆಮ್ಮಣಯ್ಯ
ಪೆಮ್ಮಣಿಯಪ್ಪೊಡೆಯರು
ಪೆರುಮೊಗೆಯ ದೇಮಾಯಿ
ಪೊನ್ನಾಂಬಲದ ಮೇಳಾದೇವಿ
ಪೊನ್ನಾಂಬಲೇಶ್ವರ
ಪೋಚಲೆ
ಪೋತಿದೇವಯ್ಯ
ಪಂಚಾಕ್ಷರದೇವ
ಪಂಚಾಕ್ಷತಿ ಜಪದಯ್ಯ
ಪಂಚಾಗಿ ಸೂರ್ಯ ಉದ್ಭಟ
ಪಂಚಿಕ ನಮಶ್ಶಿವಾಯಾರ್ಯರು
ಪಂಡಕೂರು ಬಡಗಿ ಚನ್ನಯ್ಯ
ಪಂಡಿತ ಪ್ರಭುವಪ್ಪ
ಪಂಡಿತಾರಾಧ್ಯ

ಪಂಡಿತ ಮಲ್ಲಿಕಾರ್ಜುನ
ಪೆಂಡಿಲ ಅಣ್ಣೆಶೆಟ್ಟಿ
ಪೈಜಾಂಬೆ

## ಬ

ಬಡಗ ಮಲದರಸ
ಬಡಿಹೋರಿ ಬ್ರಹ್ಮಯ್ಯ
ಬಣಜಿಗಳ ಪೋಲಯ್ಯ
ಬತ್ತಲೇಶ್ವರ
ಬತ್ತಲೊಡೆಯರು
ಬನಹಟ್ಟಿ ರುದ್ರಸ್ವಾಮಿಗಳು
ಬಯಲ ಪ್ರಭುದೇವರು
ಬಯಲ ಲಿಂಗಣ್ಣ
ಬಯ್ಯಣ್ಣಯ್ಯ
ಬರಗಿರಿಯ ದೇವನಾಯರ್
ಬ್ರಹ್ಮಚಾರಿದೇವರು
ಬಲದೇವಯ್ಯ
ಬಲ್ಲಮ
ಬಲ್ಲಾಳ
ಬಲ್ಲಾಳ ದೇವಯ್ಯ
ಬಲೆಗಾರ ಮಾರಯ್ಯ
ಬಸವಕವಿ
ಬಸವಣ್ಣ ತಂದೆ
ಬಸವಪ್ಪ ನಾಯಕ
ಬಸವಪ್ಪಯ್ಯ
ಬಸವಪ್ಪಶಾಸ್ತ್ರಿ
ಬಸವಪ್ರಭು

ಬಸವಪ್ರಭುಸ್ವಾಮಿಗಳು
ಬಸವಪುರಾಣದ ಸಿದ್ಧಮಲ್ಲೇಶ
ಬಸವರಾಜ
ಬಸವಲಿಂಗ
ಬಸವಲಿಂಗ ಕವಿ
ಬಸವಲಿಂಗದೇವ
ಬಸವಲಿಂಗ ಶಿವಯೋಗಿ ನೀರಲಕೇರಿ
ಬಸವ ಶಂಕರದೇವರು
ಬಸವ ಸಂಗಯ್ಯ
ಬಸವಾಭಕ್ತ
ಬಸವಾಯಿ ಬಸವಾರಾಧ್ಯ
ಬಸವಾಂಕ
ಬಸಿದೇವ ವೇಮನಾರಾಧ್ಯ
ಬಹುರೂಪಿ ಚೌಡಯ್ಯ
ಬಳ್ಳಾರಿ ಮರಿಸ್ವಾಮಿಗಳು
ಬಳ್ಳಾರಿ ಸಕ್ಕರಿ ಕರಡೆಪ್ಪನವರು
ಬಳೇಶ ಮಲ್ಲಯ್ಯ
ಬಳ್ಳೇಶ ಮಲ್ಲಯ್ಯ
ಬಾಗಲಕೋಟೆ ವೈರಾಗ್ಯ ಮಲ್ಲಯ್ಯ
ಬಾಗುಳಿಯ ಕೇಶದರಾಜ
ಬಾಚಯ್ಯ ಬಾಚರಸ
ಬಾಚಿ ರಾಜಯ್ಯ
ಬಾಣವಾಡದ ಮೌನಿದೇವರು
ಬಾಣಸಿಗ ಭೀಮಯ್ಯ
ಬಾಣಾವರದ ಸಿದ್ಧಪ್ಪ
ಬಾಣಾಸುರ
ಬಾವೂರ ಬ್ರಹ್ಮಯ್ಯ
ಬಾಲಲೀಲಾ ಮಹಾಂತ ಶಿವಯೋಗಿಗಳು

ಬಾಲಲಿಂಗಣ್ಣ
ಬಾಲಸಂಗಯ್ಯ
ಬಾಲಿ ಬ್ರಹ್ಮಯ್ಯ
ಬಾಹೂರು ಬೊಮ್ಮಣ್ಣ
ಬಿಕ್ಕಣಗೌಡ
ಬಿಕ್ಕಣಸೆಟ್ಟಿ
ಬಿಜ್ಜಮಹಾದೇವಿ
ಬಿಜ್ಜಳದಾಸ
ಬಿದರೆಯ ಕುಮಾರಸ್ವಾಮಿ
ಬಿಬ್ಬಬಾಚಯ್ಯ
ಬಿಬ್ಬಚಾರ್ಯ ಗೊಬ್ಬೂರ
ಬಿಲ್ಲಮರಾಳ
ಬಿಲ್ಲಮ್ಮ
ಬಿಸಿಗೆಲಸದ ರೇವಣ್ಣ
ಬಿಳುವರದ ದಂಡಪ್ಪರಾಜ
ಬಿಳಿಗೆರೆಯ ಗಂಗೇಶ
ಬೀಚಲಾಪುರದ ರಾಮಭಕ್ತ
ಬೀಚಲೆ
ಬೀಳಲಿಗೆ ಸಿದ್ಧರಾಮಯ್ಯ
ಬೀಳೂರು ಗುರುಬಸವಸ್ವಾಮಿಗಲೂ
ಬುಕ್ಕರಾಯ
ಬುದ್ಧ ಬ್ರಹ್ಮಯ್ಯ
ಬೆರಳಿನ ಮಾರಯ್ಯ
ಬೆಲಿದೇವಿಯ ವೇಮನಾರಾಧ್ಯ
ಬೆಳವಾರ್ಡಿಯ ದೇವರು
ಬೆಟವಾಡದ ವರಧಾನ್ಯದ ಬಸವಣ್ಣಯ್ಯ
ಬೆಡಗಿನ ಪರ್ವತೇಶ್ವರ
ಬೆಡಗಿನ ಸುಂದರಯ್ಯ

ಬೇಗುರ ಮಲ್ಲಪ್ಪ
ಬೇರಿದೇವಿ
ಬೇಳಿ ವೀರಣ್ಣೊಡೆಯರು
ಬೇಳೆಯಯ್ಯ
ಬೈತಲೆಯ ಮಾಯಿದೇವಯ್ಯ
ಬೊಕ್ಕಸದ ರೇಚಣ್ಣ
ಬೊಪ್ಪದೇವ ರಾಣಿ
ಬೊಪ್ಪಣ್ಣ
ಬೊಬ್ಬಿದ ಚಿಕ್ಕೊಡೆಯರು
ಬೊಮ್ಮಣ್ಣ
ಬೊಮ್ಮರಸ
ಬೊಮ್ಮಿದೇವ
ಬೊಮ್ಮಿ ಲಿಂಗಯ್ಯ
ಬೊಲ್ಲವ್ವೆ
ಬೊಲಾಳಕುಪ್ಪೇಶ ಶಿವನಾಗಮಯ್ಯ
ಬೊಲ್ಲಿದೇವ
ಬೋಳಬಸವೇಶ್ವರ
ಬಂಕನಾಥ
ಬಂಕಯ್ಯ
ಬಂಕಿದೇವ
ಬಂಡದ ನಂಜಯ್ಯ
ಬ್ರಾಂಹ್ಮಣರ ಸೋಮಣ್ಣ
ಬೆಂಗಳೂರಿನ ಮುದ್ದವೀರಸ್ವಾಮಿ
ಬೆಂಗಳೂರು ಮಲ್ಲಣ್ಣ
ಬೊಂಬೆಯ ಲಕ್ಕ
ಬೊಂತಾದೇವಿ
ಬೊಂಬೆಯ ಆಟದ ಸಿದ್ಧಯ್ಯ

## ಭ

ಭಕ್ತಿಗಣಪುರದ ಪೋಕಿಶೆಟ್ಟಿ
ಭದ್ರಗಾಯ ದೇವ
ಭದ್ರಯ್ಯ
ಭರತನೂರ ಗುರುನಂಜೇಶ್ವರ ಯತಿಗಳು
ಭರಿತಾರ್ಪಣದ ಚೆನ್ನಬಸವಣ್ಣ
ಭಾನುದೇವಯ್ಯ
ಭಾಸ್ಕರದೇವ
ಭಿಕ್ಷದ ಪರ್ವತೇಶ
ಭೀಕ್ಷದ ಸೋಮೇಶ
ಭಕ್ಷದ ಹಲಿಗೆದೇವರು
ಭಿಕ್ಷಾವೃತ್ತಿರಾಯ
ಭೀಮಕವಿ
ಭೀಮಪ್ಪ
ಭೀಮರಸ
ಭೀಮೇಶ
ಭುಜಂಗಯ್ಯ
ಭೂಮಿಗಮ್ಮಾಯಿ
ಭೂಷದೋಣಿಯ ಮಠದ ಮುತ್ತಿನ ಕಂಥೆಯಯ್ಯ
ಭೈರವದೇವ
ಭೈರವೇಶ್ವರ
ಭೋಗಣ್ಣ
ಭೋಗಯ್ಯ
ಭೋಗಿದೇವ
ಭೋಜ

## ಮ

ಮಕರಶೆಟ್ಟಿ
ಮಗ್ಗೆಯ ಮಾಯಿದೇವ
ಮಚ್ಚಿಯ ಬೋಳಮ
ಮಡಿವಾಳ ಮಾಚಯ್ಯ
ಮಡಿವಾಳಯ್ಯ
ಮಣಕವಾಡದ ಅನ್ನದಾನಸ್ವಾಮಿಗಳು
ಮದ್ದಗಿರಿ ನಂಜಪ್ಪ
ಮದ್ದಣ್ಣ
ಮದಿಗೆರೆಯ ಚಿಕೊರತೆಯ ರಾಮಣ್ಣ
ಮಧುರ ಕೋಟೆಯ ಬೊಮ್ಮಲಿಂಗಣ್ಣ
ಮಧುವರಸ
ಮನಮುಗಿ ಗುಮಟೇಶ್ವರ
ಮನಸಂದ ಮಾರಿತಂದೆ
ಮನಚೋಳ
ಮಮಗೆಯ ಪ್ರಭು
ಮಯವಳ್ಳಿ ದೇವಪ್ಪ
ಮಯೂರ
ಮರಳಸವ್ವ
ಮರುಳು ಶಂಕರದೇವ
ಮರುಳುಸಿದ್ಧ
ಮರುಳುಸಿದ್ಧೇಶ
ಮರಿಯಕ್ಕ
ಮರಿ ರಾಚಟ್ಟೇಶ
ಮರುಳಸಿದ್ಧೇಶ ಗುರುರಾಯ
ಮರುಳುದೇವ
ಮಲಹರ ಕಾಮರದ ಚಿಕ್ಕದೇವಯ್ಯ
ಮಲ್ಲಣ್ಣ

ಮಲ್ಲಿಣಾಚಾರ್ಯ
ಮಲ್ಲಪ್ಪ ತಂದೆ
ಮಲ್ಲಯ್ಯ
ಮಲ್ಲಿರಾಜ
ಮಲ್ಲಿಶೆಟ್ಟಿ
ಮಲ್ಲಿಕಾರ್ಜುನ
ಮಲ್ಲಿಕಾರ್ಜುನ ಕವಿ
ಮಲ್ಲಿಕಾರ್ಜುನ ಕೇರಿ
ಮಲ್ಲಿಕಾರ್ಜುನರಾಯ
ಮಲುವಳ್ಳಿಯ ಬಸವಣ್ಣ
ಮಲುಹಣ
ಮಲೆಯ ರಾಚಯ್ಯ
ಮಲೆಯ ರಾಜಯ್ಯ
ಮಲೆಯ ಶಾಂತೇಶ್ವರ ಸ್ವಾಮಿಗಳು
ಮಸಣಮ್ಮ
ಮಹತ್ತಯ್ಯ
ಮಹದೇವ
ಮಹಬಲ ದೇವಯ್ಯ
ಮಹಾದೇವಲಿಂಗ
ಮಹಾದೇವಿ
ಮಹಾದೇವಿಯಕ್ಕ
ಮಹಾಬಳದೇವಯ್ಯ
ಮಹಾಮೂರ್ತಿ
ಮಹಾಲಿಂಗದೇವ
ಮಹಂತಿ ಕಾಳಯ್ಯ
ಮಹಂತೇಶ ಕಡಕೋಳ ದಂಡಿವಾಳಪ್ಪ
ಮಹೇಂತಸ್ವಾಮಿ
ಮಳಲವಾಡಿಯ ಭೀಮಯ್ಯ

ಮಳೆಯ ಮಲ್ಲೇಶ್ವರ
ಮಳೆಯರಾಜ
ಮಾಚಲದೇವಿ
ಮಾಚಾಡ ತಿರುನಾಯ್ಕರು
ಮಾಡಿದ ಭೋಗಣ್ಣ
ಮಾಡಿನಹಳ್ಳಿ ಮಲ್ಲಪ್ಪ
ಮಾತಂಗತಮ
ಮಾದರ ಧೂಳಯ್ಯ
ಮಾದರಸಯೋಗಿ
ಮಾದಾರ ಚೆನ್ನಯ್ಯ
ಮಾದಾರ ದೊಡ್ಡಯ್ಯ
ಮಾದಿರಾಜಯ್ಯ
ಮಾದೇಶ್ವರೊಡೆಯರು
ಮಾನಕಂಜರ
ಮಾನವೀರಪ್ಪ
ಮಾನುಗಲ್ಲ ನಾಗಪ್ಪಯ್ಯ
ಮಾನಂಗಿ ಶಿಖರಪ್ಪ
ಮಾನಂಗಿ ಶಿಬಿರಪ್ಪ
ಮಾಯಾಣ್ಣ
ಮಾಯಿತಾಯಿ
ಮಾಯಿದೇವ ಪ್ರಭು
ಮಾಯಿದೇವಯ್ಯ
ಮಾರಕಾಪುರದ ಕೇತಯ್ಯ
ಮಾರಗೌಡ
ಮಾರಣ್ಣ
ಮಾರಯ್ಯ
ಮಾರುಡಿ
ಮಾರುಡಿಗೆಯ ನಾಚಯ್ಯ

ಮಾಹತ್ತಯ್ಯ
ಮಾಳಾಯಿ
ಮಾಳಿಂಗಯ್ಯ
ಮಿಡಿಬಲಿ ಶಾಂತಿದೇವರು
ವಿಮಳಾದೇವಿ
ಮುಕ್ತಿ ಭಿಕ್ಷಾವೃತ್ತಿರಾಯರು
ಮುಕ್ತಿಮನಿ
ಮುಕ್ಕೊಡಳ ಜವಳ ಬಸವಯ್ಯ
ಮುಕ್ಕೊಡಲಿ ಜವಳಿ ಬಸವಯ್ಯ
ಮುಖಚೋಳ ಸಿದ್ಧರಾಮಯ್ಯ
ಮುಖಲಿಂಗದೇವರು
ಮುಗ್ಧರೆಪುರದ ಸಣ್ಣವೀರಣ್ಣ
ಮುಗ್ಧ ಸಂಗಯ್ಯ
ಮುತ್ತಯ್ಯ
ಮುತ್ತಿಲ ಕಾಯಕದ ರಡಮ್ಯ
ಮುದನೂರ ದಾಸಯ್ಯ
ಮುದ್ದಯ್ಯ
ಮುದ್ದು ಸಂಘಪ್ಪ
ಮುಧೋಳ ಚರಮೂರ್ತಿಗಳು
ಮುಪ್ಪಿನಯ್ಯ
ಮುಮ್ಮಡಿ ಕಾಯೇಂದ್ರ
ಮುಮ್ಮಡಿ ತಮ್ಮ
ಮುಮ್ಮಡಿ ಭಕ್ತ
ಮುರಿಗೆಯ ಕರಿಯಬಸವೇಶ
ಮುರಿಗೆ ದೇಶಿಕೇಂದ್ರ
ಮುರಿಗೆಯ ಶಾಂತವೀರ
ಮುರುಕುಣಿಯಮಲ್ಲಿಕಾರ್ಜುನೇಶ
ಮುರುಘರು

ಮುಷ್ಟಿಯ ಚೌಡಿರಾಜಯ್ಯ
ಮುಸುಟೆ ಚೌಡಯ್ಯ
ಮುಳಾಯಿ
ಮುಳಿವಾಗಿಲ ರುದ್ರಶೆಟ್ಟಿಯ ಮಲ್ಲಣ್ಣ
ಮುಂಡಬ್ರಹ್ಮಯ್ಯ
ಮೂರುಜಾವ ದೇವಯ್ಯ
ಮೂವಾಡ ತಿರುನಾಯ್ಕರು
ಮೆರೆಮಿಂಡ ದೇವಯ್ಯ
ಮೇದಾರ ಕೇತಯ್ಯ
ಮೇಧಾವಿ ಮುದ್ದಯ್ಯ
ಮೈದುನ ರಾಮಯ್ಯ ಮೈಲಾರದ ಬಸವ
ಮೊನೆಯಿಡುನಾರು
ಮೊಗ್ಗೆಯ ಮಾಯಿದೇವ ಪ್ರಭು
ಮೊರದವೇಮಯ್ಯ
ಮೊರನದೇವಯ್ಯ
ಮೊರಟದ ಬಂಕಯ್ಯ
ಮೊರನ ಪೀಯಮ್ಮ
ಮೊರಬದ ನೀಲಮ್ಮ
ಮೊರಾಟದ ಬಂಕಿದೇವ
ಮೊಲ್ಲೆಯ ಬೊಮ್ಮಯ್ಯ
ಮೊಸೆಯಧರ
ಮೊಳದೆಯ ಮಾರಯ್ಯ
ಮೊಳವಾರ ಪೊಂಸಾವಾಡಿ
ಮೋಟಮಲ್ಲಿ ದಸರಯ್ಯ
ಮೋನಿಧರ
ಮೋಳಿಗಯ್ಯ
ಮೋಳಿಗೆ ಮಾರಯ್ಯ
ಮೌಳಿದೇವ

ಮಂಗಪ್ಪರಸು
ಮಂಗಳ ನಿರಾಳಯ್ಯ
ಮಂಗಾಯಕ್ಕರಸಿ
ಮಂಚಯ್ಯ
ಮಂಟೆಯವಯ್ಯ
ಮಂತಕೂರ ನಂಜುಂಡ ಶಿವಯೋಗಿ
ಮಂಡೆ ಮಧ್ಯೆಯ್ಯ
ಮಾಂಡಯ್ಯ
ಮಿಂಡದ ಬ್ರಹ್ಮಯ್ಯ
ಮಿಂಡಮಲ್ಲಯ್ಯ
ಮಿಂಡಸಂಗಯ್ಯ

## ಯ

ಯಜಮಾನ ಸಿದ್ಧಲಿಂಗಪ್ಪ
ಯಠಾಭಕ್ತಿ
ಯಲ್ಲಭಕ್ತ
ಯವಾಯಿನಗರದ ಸಿದ್ಧಮ್ಮ
ಯಾಬಳಿಯಕ್ಕ
ಯೇಕೊರಾಮತಂದೆ
ಯೇಕೋಪಾದತಂದೆ
ಯೇರೋರಾಮತಂದೆ
ಯೋಬಳಿಯಕ್ಕ

## ರ

ರಕ್ಕಸ ಬ್ರಹ್ಮಯ್ಯ
ರತ್ನದ ರಾಚಯ್ಯ
ರಾಗದ ಸಂಕಣ್ಣ

ರಾಘವಾಂಕ
ರಾಗರಸಾಂಕ
ರಾಚಮಲ್ಲಯ್ಯ
ರಾಜಬ್ರಹ್ಮಯ್ಯ
ರಾಜಮಹೇಂದ್ರವರದಪೋಲಯ್ಯಗಳು
ರಾಜಾರ್ತ ರಾಯಣ್ಣ
ರಾಜೀವಟ್ಟಿಯಯ್ಯ
ರಾಚಮಲ್ಲಯ್ಯ
ರಾಜೇಂದ್ರಚೋಳ
ರಾಮಗಿರಿ ಪರ್ವತಯ್ಯ
ರಾಮರಸ
ರಾಮನಾಥ
ರಾಮಿದೇವಯ್ಯ
ರಾಮಿ ಸಾಹಿಣಿ ವರಗುಂಡ ಚಕ್ರವರ್ತಿ
ರಾಯಮ್ಮ
ರಾಯಪುರದ ಸಿದ್ಧಯ್ಯ
ರಾಯಸದ ಮಂಚಣ್ಣ
ರಾಯಬಾಗಿಯ ನಂದಯ್ಯ
ರಾಯಸೆಟ್ಟಿ
ರಾವಣಾಸುರ
ರಾಳಸೂರಾಭಕ್ತ
ರುದ್ರದೇವ
ರುದ್ರಮುನಿಸ್ವಾಮಿಗಳು
ರುದ್ರಪಶುಪತಿ
ರುದ್ರಕ್ಷೆಯಾರ್ಯ
ರೂಪಗೊಂಡೆಯ ಅಣ್ಣಭಕ್ತ
ರೆಮ್ಮೆವ್ವೆ
ರೇಕನಾಥಾಚಾರ್ಯ

ರೇಕವ್ವೆ
ರೇಚಮಲ್ಲಯ್ಯ
ರೇಚಯ್ಯ
ರೇಚವ್ವೆ
ರೇಚಿಘಟ್ಟದ ಚೆನ್ನಬಸಪ್ಪ
ರೇಮತಂದೆ
ರೇಮಯ್ಯ
ರೇಣುಕ
ರೇವಣಾರಾಧ್ಯ
ರೇವಣದೇವರು
ರೇವಣಸಿದ್ಧ
ರೇವಣ ಸಿದ್ಧೇಶ್ವರ ರಟಿಗಲ್ಲ
ರೇಣುಕ ಗಣನಾಥ
ರೇವಯ್ಯ
ರೇವಯ್ಯದೇವ

## ಲ

ಲಕ್ಕಣದಂಡೇಶ
ಲಕ್ಕಮ್ಮ
ಲಕ್ಕಯ್ಯ
ಲಕ್ಷ್ಮಮ್ಮ
ಲಕ್ಷ್ಮಾಪಾದ
ಲಕ್ಕೂರಿನ ಶೀಲವಂತ ಮಲ್ಲಯ್ಯ
ಲೀಲೆಯ ರಾಮಣಯ್ಯ
ಲೆಕ್ಕದ ಸ್ವಾಮಿ
ಲಂಬಕರ್ಣದೇವರು
ಲಿಂಗತೀರ್ಥದ ಸಿದ್ಧದೇವನಂಜೇಶ

ಲಿಂಗದೇವಯ್ಯ
ಲಿಂಗನಾಯಕನಹಳ್ಳಿ ಚೆನ್ನವೀರಸ್ವಾಮಿಗಳು
ಲಿಂಗಪಾದ
ಲಿಂಗಮಂತ್ರಿ
ಲಿಂಗಮ್ಮ
ಲಿಂಗಯ್ಯ
ಲಿಂಗಸತ್ಯಣ್ಣ
ಲಿಂಗ ಸೋಂಕಿದ ಲಿಂಗತಂದೆ
ಲಿಂಗಾರತಿ
ಲಿಂಗಾಸುದೇವಿ
ಲಿಂಗವಧೂತ
ಲಿಂಕ ಬೊಮ್ಮಯ್ಯ

## ವ

ವಚನ ಭಂಡಾರಿ ಶಾಂತರಸ
ವಡಬಾಗ್ನಿ ತಿಲಕಯ್ಯ
ವನಿಪುರ ಶಂಕರದೇವ
ವರದಾಗಿ ಗುಡ್ಡಮ್ಮ
ವರಧಾನ್ಯದ ಪರಮೇಶ
ವರಧಾನ್ಯದ ಸದಾಶಿವಭಕ್ತ
ವರದಾನಿಯಮ್ಮ
ವರದಾನಿ ರಾಮಯ್ಯ
ವರಪಲ್ಲಿಯ ಕಾಮಿದೇವಯ್ಯ
ವಲ್ಲ ಘಂಡಾಮೂರ್ತಿ
ವಸಂಗ ಮಲ್ಲೇಶ
ವಾಗೀಶ
ವಾಗೀಶ್ವರಯ್ಯ

ವಾಮದೇವಾರ್ಯ
ವಾಯನಾರ
ವಾರತ ಸೋಮಣ್ಣ
ವಿಕ್ರಮ ಚೋಳ
ವಿಜಯಪುರದ ನಂಜಯ್ಯ
ವಿಜಯಪುರದರಸು ಸೋಮೇಶ
ವಿಮರ್ಶೆ
ವಿಮಳಾದೇವಿ
ವಿಮಳಿದೇವಯ್ಯ
ವಿರಕ್ತ ತೋಂಟದಾರ್ಯ
ವಿರಕ್ತದೇವ
ವಿರತ್ತದೇವ
ವಿರತಬಸಪ್ಪ
ವಿರತ ಮಹಾಲಿಂಗದೇವ
ವಿರುಪಕಯ್ಯ
ವಿರುಪಣಯ್ಯ
ವಿರುಪರಾಜ
ವಿರೂಪಾಕ್ಷ
ವಿರೂಪಾಕ್ಷಯ್ಯ
ವಿರುಪಾಕ್ಷ ಪಂಡಿತ
ವಿಲ್ಲೂರು ಮಲ್ಲಿಶೆಟ್ಟಿ
ವಿಶ್ವನಾಥ
ವೀರ ಕಲ್ಲಯ್ಯ
ವೀರ ಗುಡ್ಡಯ್ಯ
ವೀರ ಗೊಲ್ಲಾಳಯ್ಯ
ವೀರಚಿಕ್ಕಲಿಂಗನಾಚಯ್ಯ
ವೀರಚಂದಣ್ಣ
ವೀರಚೋಳ

ವೀರಜನಿಪತಿ
ವೀರಜಾತಿದೇವಯ್ಯ
ವೀರಣ್ಣ
ವೀರಣ್ಣಯ್ಯ
ವೀರಣಾರ್ಯ
ವೀರಣ್ಣೊಡೆಯರು
ವೀರತಿಮ್ಮವ್ವೆ
ವೀರದೇವ
ವೀರದೇವಮ್ಮ
ವೀರದೇವಯ್ಯ
ವೀರನಾಗಯ್ಯ
ವೀರನಾಚಯ್ಯ
ವೀರಪ್ಪಯ್ಯ
ವೀರಪ್ಪಾರಾಧ್ಯ
ವೀರಪಾಂಡ್ಯ
ವೀರಬಲದೇವ
ವೀರಬ್ರಹ್ಮ
ವೀರಬ್ರಹ್ಮಯ್ಯ
ವೀರಬೊಮ್ಮಯ್ಯ
ವೀರಬಂಕಣ್ಣ
ವೀರಭಕ್ತ ಶಿವಾರಾತ್ರಿ ಅಪ್ಪಯ್ಯ
ವೀರಭದ್ರ
ವೀರಭದ್ರಯ್ಯ
ವೀರಭದ್ರರಾಜ
ವೀರಮ್ಮ
ವೀರಮಾಚಯ್ಯ
ವೀರಮಾಹೇಶ್ವರ
ವೀರಮುದ್ದಯ್ಯ

ವೀರರೇಕವ್ವೆ
ವೀರವರ ದಂಡಿ
ವೀರಶೆಟ್ಟ
ವೀರಸಂಕರದಾಸ
ವೀರಶಂಕರದೇವ
ವೀರಷಡಕ್ಷರಯ್ಯ
ವೀರಸಂಗಯ್ಯ
ವೀರಸಂಗವ್ವೆ
ವೀರಾಭಕ್ತ
ವೀರೇಶ್ವರ
ವೀರೇಶ್ವರಶಾಸ್ತ್ರಿ
ವೆಲ್ಲಗೊಂಡದ ಮಹಾದೇವಯ್ಯ
ವೆಲ್ಲಗೊಂಡದ ಮಹಾದೇವಿ
ವೇದಮೂರ್ತಿ ಸಂಕಣ್ಣ
ವೇದಮೂರ್ತಿ ಸಂಗಣ್ಣ
ವೇಮನಾರಾಧ್ಯ
ವೇಮಯ್ಯ
ವೇಳುತ್ತಯ್ಯೆ
ವೈಜಮಾಂಬೆ
ವೈಜಯ್ಯ
ವೈಜವ್ವೆ
ವೆಂಗಿಶಂಕರ
ವೆಂಗಿಸಂಗಯ್ಯ

**ಶ**

ಶರಣಕವಿಗಳು ಮಹಾಗಾಂವ
ಶಶರಣ ಚಾಮಯ್ಯ

ಶರಣಮ್ಮನವೆರುಸಜ್ಜಲಗುಡ್ಡ
ಶ್ವಪಚಯ್ಯ
ಶಾಮೋಲ
ಶಾಲಿಚೆನ್ನಬಸವ
ಶಿಖರೇಷು ಮಲ್ಲಯ್ಯ
ಶಿವಕುಮಾರ
ಶಿವಕುಮಾರಯ್ಯ
ಶಿವಗಂಗೆಯ ಫಲಾಹಾರ ದೇವರು
ಶಿವಕಿಂಕರಯ್ಯ
ಶಿವಚಿತ್ತಯ್ಯ
ಶಿವದೇವಯ್ಯ
ಶಿವನ ಸಮುದ್ರದ ಮೋಳಿಗಯ್ಯನವರು
ಶಿವಭಕ್ತ ನಾಗರಸ
ಶಿವಯ್ಯ
ಶಿವರಾತ್ರಿ ಅಪ್ಪಿದೇವಯ್ಯ
ಶಿವರಾತ್ರಿ ಸಂಗಯ್ಯ
ಶಿವದೇವಿ
ಶಿವಭದ್ರಯ್ಯ
ಶಿವಯೋಗಿದೇವ
ಶಿವಲಿಂಗದೇವ
ಶಿವಲೆಂಕ ಮಂಚಣ್ಣ
ಶಿವಶಾಸನಯ್ಯ
ಶ್ರೀಕೋಟಿ ಪಂಡಿತ
ಶ್ರೀಕೋಟಿ ಮಲ್ಲಯ್ಯ
ಶ್ರೀಗೂರ ಚಂದ್ರಯ್ಯ
ಶ್ರೀಧರಾಂಕ
ಶ್ರೀನಂದಿ
ಶೀಲವಂತಯ್ಯ

ಶ್ರೀಪತಿ ಪಂಡಿತ
ಶೂಲದ ಬ್ರಹ್ಮಯ್ಯ
ಶೂಲಾಯುಧಯ್ಯ
ಶೂಲಿಯಯ್ಯ
ಶೆಟ್ಟಿಪುರದ ರಾಮತಿಮ್ಮಯ್ಯ
ಶ್ವೇತಯ್ಯ
ಶಂಕರಕವಿ
ಶಂಕರದಾಸ
ಶಂಕರ ದಾಸಯ್ಯ
ಶಂಕರ ದಾಸಿಮಯ್ಯ
ಶಂಕರಾಚಾರ್ಯಸ್ವಾಮಿಗಳು
ಶಂಕರೊಡೆಯರು
ಶಂಕಿ ತೊಂಡಿ
ಶಂಕರಶೆಟ್ಟಿ
ಶಾಂತವೀರ ದೇಶಿಕ
ಶಾಂತಯ್ಯ
ಶಾಂತರಾಮ
ಶಾಂತಶೆಟ್ಟಿ
ಶಾಂತಿ ಮಲ್ಲಿಕಾರ್ಜುನದೇವರು

**ಷ**

ಷಡಕ್ಷರ ಕವಿಗಳು
ಷಣ್ಮುಖ ಶಿವಯೋಗಿಗಳು

**ಸ**

ಸಕ್ಕರೆ ಶಾಂತ
ಸಕಲ ದೇವಯ್ಯ

ಸಕಳೇಶ ಮಾದರಸ
ಸಗರದ ಬ್ರಹ್ಮಯ್ಯ
ಸಚ್ಚಿದಾನಂದದೇವ
ಸಣ್ಣಹ ವೀರಣೊಡೆಯರು
ಸತ್ಯಕ್ಕ
ಸತ್ಯಣ್ಣ
ಸತ್ಯಭಕ್ತ
ಸತ್ತಿಗೆ ಕಾಯಕದ ಇಟ್ಟಿಪಯ್ಯ
ಸತ್ಯೇಂದ್ರಚೋಳ
ಸದ್ಭಕ್ತಸಿದ್ಧಯ್ಯ
ಸದಾಚಾರದ ವರಧಾನ್ಯದೊಡೆಯರು
ಸದಾಶಿವಯೋಗಿ
ಸದೇದೇವಿ
ಸದ್ಯೋಜಾತ ದೇವರು
ಸದಂದರ ನಾಚಿ
ಸನ್ಯಾಸಿ ಮಾಚಯ್ಯ
ಸನ್ಯಾಸಿ ಮಂಚಯ್ಯ
ಸಪ್ಪೆ ಅಲ್ಲಮ್ಮ
ಸಪ್ಪೆಯಯ್ಯ
ಸಮಾಧಿಯ ಸೋಮನಾಥ
ಸ್ವಯಸ್ಥಲದ ವೀರೇಶ
ಸ್ವಯಸ್ಥಳದ ಸಿದ್ಧವೀರೇಶ
ಸ್ವಯಂಭುರವು
ಸರಗೂರ ಕೈತ್ಯಲಿಂಗೇಶ
ಸರ್ವಜ್ಞ
ಸರ್ವೇಶ್ವರಯ್ಯ
ಸರ್ವೇಶರಯ್ಯ
ಸಹದೇವಿ

ಸಾಗರ್ ಬೊಮ್ಮಿದೇವ್
ಸಾನಂದ ಮುನಿ
ಸಾನಂದ ಶಿವಯೋಗಿ
ಸಾಮವೇದಿಗಳು
ಸಾರಕೆಯ ಸಿದ್ಧರಾಮ
ಸಾವಳಗಿ ಶಿವಲಿಮಗಸ್ವಾಮಿಗಳು
ಸಾಸಲ ಚಿಕ್ಕಣಾರಾಧ್ಯ
ಸಾಸಲಯ್ಯ
ಸಾಸಿಲ ಭೈರದೇವಯ್ಯ
ಸಾಸಿಲಯ್ಯ
ಸಾಹಿತ್ಯ ಬೊಮ್ಮಿದೇವಿ
ಸಾಂಬ್ಯದೇವಿ
ಸಿಗುರಿ ಚಂದಯ್ಯ
ಸಿದ್ಧಕುಲಪತಿ
ಸಿದ್ಧಗಂಗೆಯ ಅಡವಿ ಸ್ವಾಮಿಗಳು
ಸಿದ್ದಣ್ಣ
ಸಿದ್ಧದೇವಮ್ಮ
ಸಿದ್ಧದೇವಿ
ಸಿದ್ಧನಂಜಲೆ
ಸಿದ್ಧರರು
ಸಿದ್ಧರಾಮೇಶ
ಸಿದ್ಧಲಿಂಗ ಶಿವಯೋಗಿ
ಸಿದ್ಧಮರಿನಾಯಕ
ಸಿದ್ಧರಾಮ
ಸಿದ್ಧವೀರದೇವ
ಸಿದ್ಧ ಬಸವಯ್ಯ
ಸಿದ್ಧ ಬಸವೇಶ್ವರ
ಸಿದ್ಧ ಬಉದ್ಧಯ್ಯ

ಸಿದ್ಧ ಭಿದ್ರೇಶದೇವ
ಸಿದ್ಧಲಿಂಗೇಶ್ವರ
ಸಿದ್ಧವೀರಯ್ಯ
ಸಿದ್ಧವೀರ ಸ್ವಾಮಿಗಳೂ
ಸಿದ್ಧಸೋಮ
ಸಿದ್ಧಾಂತಿ ವೀರಸಂಗಯ್ಯ
ಸಿದ್ಧೇಂದ್ರ
ಸಿಮ್ಮಲಿಗೆಯ ಚೆನ್ನಯ್ಯ
ಸಿರಿನಾಮಧೇಯ
ಸಿರಪತಿ ಪಂಡಿತ
ಸಿರಿಗಿರಿ ಭಕ್ತ
ಸಿರಿನಾಮಧೇಯ
ಸಿರಿಯಾಳಯ್ಯ
ಸಿರಿಯಾಳ ಶೆಟ್ಟಿ
ಸಿಂಗಿದೇವಯ್ಯ
ಸಿಂಗಿ ಬೊಪ್ಪಯ್ಯ
ಸಿಂಥ ನಂಜೇಶ
ಸಿಂಧುದೇಶದ ರಾಯ
ಸಿಂಧುಬಲ್ಲಾಳ
ಸಿಂಧುಮರಾಳ
ಸಿಂಧುರಾಮ
ಸಿಂಧುಸೇನ
ಸುಕುಮಾರ ಚೆನ್ನಬಸವೇಶ್ವರ
ಸುಕುಮಾರ ರಾಮ
ಸುಗ್ಗನಹರ್ಳಿ ಅಜ್ಜಿಯ ಬಸವಶೆಟ್ಟಿ
ಸುಗ್ಗಳೆ ಅಥವಾ ಸುಗ್ಗಲದೇವಿ
ಸುಜ್ಞಾನಿದೇವ
ಸುಪ್ರಸಾದಿದೇವ

ಸುರುಗಿಯ ಚೌಡಯ್ಯ
ಸುರಗಿಯಾರ್ಯ
ಸುರಂಗ
ಸುವರ್ಣದೇವಿ
ಸುಂಕದ ಬಂಕಯ್ಯ
ಸುಂಕದ ಸೋಮಯ್ಯ
ಸೂಚಿಕಾಯಕದ ನಾಗಪ್ಪ
ಸೂಚಿಕಾಯಕದ ರಾಮಿತಂದೆ
ಸೂರಸುನಿ
ಸೂರಾಂಬೆ
ಸೂರಸಾನಂಬೆ
ಸೆಜ್ಜೆಯ ನಾಗಪ್ಪಯ್ಯ
ಸೆಜ್ಜೆಯ ಸಿದ್ಧಲಿಂಗಾರ್ಯ
ಸೆಟ್ಯಾಣ ಶೆಟ್ಟಿ
ಸೇಡುಬಳದ ನಂಜಯ್ಯ
ಸೇದಿರಾಜ
ಸೇವಾರ ಬಸವಪ್ಪ
ಸೇವಿಕೆ ಗೌರವ್ವೆ
ಸೊಡ್ಡಳ ಬಾಚರಸ
ಸೊಪ್ಪಿಯ ಬಸವಪ್ಪ
ಸೊಲ್ಲಾಪುರದ ಕಿರೀಟಮಠದ ಸ್ವಾಮಿಗಳು
ಸೊಲ್ಲಾಪುರದ ವೀರೇಶ್ವರ ಶರಣರು
ಸೋದಿರಾಜಸೂಮಲ್ಲ
ಸೋನ ಬೊಪ್ಪಯ್ಯ
ಸೋಮಣ್ಣ
ಸೋಮಣ್ಣ ತಂದೆ
ಸೋಮನಾಥ
ಸೋಮಪ್ಪ

ಸೋಮರಾಜ
ಸೋಮಲದೇವಿ
ಸೋಮವರ್ಣ
ಸೋಮಶೇಖರ ಶಿವಯೋಗಿ
ಸೋಮಾಸಿಮಾರ್
ಸೋಮಿಸೇವಾದಿ
ಸೋಯಿ (ಹಿ) ದೇವರು
ಸೋವಣ್ಣ
ಸೋವರಸಿ
ಸೋವಳೆಯ ಸೋಮಮ್ಮ
ಸೋಹಳೆಯ ಸೋಮವ್ವೆ
ಸೋಸಲೆ ರೇವಣಾಚಾರ್ಯ
ಸೋಹಳಿಯ ಸೋಮಪ್ಪ
ಸೋಹಳೆಪುರದ ವೀರಸೋಮವ್ವೆ
ಸೌರಾಷ್ಟ್ರಪತಿ
ಸೌಂದರ ಗಣೇಶ್ವರ
ಸೌಂದರ ಪೆರುಮಾಳೆ
ಸೌಂದರಿಯ ನಾಚಯ್ಯ
ಸಂಗನ ಬಸವೇಶ್ವರ
ಸಂಗಣ್ಣನಂಕರಸಲು
ಸಂಗಪ್ಪ
ಸಂಗಮನಾಥ
ಸಂಗಮೇಶ
ಸಂಡಿಗೆಯ ಸಿದ್ಧಪ್ಪ
ಸ್ವತಂತ್ರ ಸಿದ್ಧಲಿಂಗೇಶ್ವರ
ಸಂತೆಯ ನಾವಲೂರ ಪೀಚಾ ಪೋಲಯ್ಯ
ಸಂಪಗೆಯ್ಯ ರಾಚೀವಟ್ಟದೇವರು
ಸಂಪಾದನೆಯ ಗುರುಲಿಂಗದೇವ

ಸಂಪಾದನೆಯ ಚೆನ್ನಂಜದೇವ
ಸಂಪಾದನೆಯ ಪರ್ವತೇಶ್ವರ
ಸಂಪಾದನೆಯ ಸಿದ್ಧವೀರಣಾಚಾರ್ಯ

**ಹ**

ಹಕ್ಕಲಿ ಕಾಯಕದ ಕುರೆಗಾರಮ್ಮ
ಹಗಹಡೂರ ಡೋಳಾಮಹಿಮ
ಹಡಪದ ಅಪ್ಪಣ್ಣ
ಹಪಡದ ರೇಚಯ್ಯ
ಹಡಪದ ರೇಚಿದೇವಯ್ಯ
ಹಡಪದ ಲಿಂಗಮ್ಮ
ಹತ್ತರ್ಣಣ
ಹರತಿಯ ತೀರ್ಥದ ಲಿಂಗೇಶ
ಹರಳೈಯ್ಯ
ಹರಿಗೆಯ ದೇವಪ್ಪಯ್ಯ
ಹರಿನಾಗಿದೇವ
ಹರಿಯಪ್ಪರಾಣಿ
ಹರಿಸಮುದ್ರದ ವೀರಪ್ಪಣ್ಣ
ಹರಿಹರ
ಹಲಾಯುಧಯ್ಯ
ಹಲಿಗ
ಹಲಿಗೈಯ್ದುಗಾರ
ಹಸಿಯ ಮಸ್ತಕದ ಮಾಚಯ್ಯ
ಹಾಗಲವಾಡಿ ಸಿದ್ಧರಾಮಪ್ಪ
ಹಾದರದ ಬೊಮ್ಮಯ್ಯ
ಹಾನಗಲ್ ಕುಮಾರಸ್ವಾಮಿಗಳು
ಹಾಲಕುರಿಕೆ ಉಜ್ಜಪ್ಪಯ್ಯ
ಹಾವಿನಹಾಳ ಕಲ್ಲಯ್ಯ

ಹಾಳಕೆರೆಯ ಅನ್ನದಾನಸ್ವಾಮಿಗಳು
ಹಿಪ್ಪರಿಗೆಯ ಮಲ್ಲಿಕಾರ್ಜುನ
ಹಿಮಗಿರೀಶ
ಹಿರಿಯಣ್ಣ
ಹಿರಿಯ ಮಲ್ಲಯ್ಯ
ಹಿರಿಯ ರಾವೂರ (ತ) ಯ್ಯ
ಹಿರಿಯ ಶಂಕರದೇವರು
ಹೀಲಿಗನ ಮನ್ಯಪ್ಪೊಡೆಯರು
ಹುಚ್ಚಣ್ಣ
ಹುಚ್ಚದೇವರು
ಹುಚ್ಚರಾಮೇಶ
ಹುಚ್ಚ ವಿರೂಪಾಕ್ಷ
ಹುಚ್ಚಸಿದ್ಧರಾಮೇಶ
ಹುಣಜಿಗೆಯ ಮಾರಪ್ಪ
ಹುಣಿಂಗೆಯ ಅಣ್ಣಪ್ಪ
ಹುಣಿಂಗೆರೆಯ ಲಿಂಗಪ್ಪ
ಹುಬ್ಬಳ್ಳಿಯ ಸಂಗಯ್ಯ
ಹುಲಕೂರ ಪರ್ವತಯ್ಯ
ಹುಲಿಗೆರೆಯ ಸೋಮಣ್ಣ
ಹುಲುವಳ್ಳಿಯ ಕಾಮಣ್ಣ
ಹುಲುವಳ್ಳಿಯ ರಾಮಣ್ಣ
ಹುಲುವಳ್ಳಿ ಶಿವರಾತ್ರಿದೇವರು
ಹುಲುವಾಡಿ ವೀರೇಶ
ಹುಳಿಯಂಗೆರೆಯ ಶೀಲವಂತ ಮಲ್ಲಯ್ಯ
ಹೆಗ್ಗವಾಡಿಯ ಕೆಂಪಯ್ಯ
ಹೆಗ್ಗವೆಯ ದೇವಾಂಗಮ್ಮ
ಹೆಜ್ಜಾಜಿಯ ಗಣನಾಥದೇವರು
ಹೆಬ್ಬಾಳ ರುದ್ರಸ್ವಾಮಿಗಳು

ಹೆಟಿಯ ಮರುಳು
ಹೇರೂರ ಗೂಕಯ್ಯ
ಹೇರೂರ ನಾಗಯ್ಯ
ಹೊಟ್ಟಲಕೆರೆಯ ವೀರಚೋಳಪ್ಪ
ಹೊಟ್ಟೆಮಯ್ಯ
ಹೊಡೆಯಲ್ಲ ಬಂಕಣ್ಣ
ಹೊಡಹುಲ್ಲ ಬಂಕಣ್ಣ
ಹೊನ್ನಕಾಯಕದ ಆಚಾರಿ
ಹೊನ್ನಕಾಯಕದ ಚಾಗಿ
ಹೊನ್ನಕಾಯಕದ ತಿಮ್ಮಯ್ಯ ಶರಣ
ಹೊನ್ನಕಾಯಕದ ಬೈಯಣ್ಣ
ಹೊನ್ನಕಾಯಕದ ಲಿಂಗಣ್ಣ
ಹೊನ್ನಕಾಯಕದ ಲಿಂಗಯ್ಯ
ಹೊನ್ನಬ್ರಹ್ಮಯ್ಯ
ಹೊನ್ನ ಮಲ್ಲಯ್ಯ
ಹೊನ್ನಯ್ಯ
ಹೊನ್ನವಳ್ಳಿಯ ಲಿಂಗಯ್ಯ
ಹೊನ್ನ ಸಂಗಯ್ಯ
ಹೊನ್ನಾಳಿ ಪಟ್ಟದಸ್ವಾಮಿಗಳು
ಹೊನ್ನುಕು ಕಡಗದ ಕಾಯಕದ ವೀರಣ್ಣ
ಹೊನ್ನೂರು ಕಡಗದ ಕಾಯಕದ ವಿರುಪಣ್ಣ
ಹೊರೂರ ನಾಚಯ್ಯ
ಹೊಸದುರ್ಗದ ಕಲ್ಲಪ್ಪ
ಹೋಳಿನ ಸಿದ್ಧಪ್ಪ
ಹೋಳಿನ ಸಿದ್ಧಶೆಟ್ಟಿ
ಹೋಳಿನ ಹಂಪೆರುದ್ರ
ಹಂಪಯ್ಯ
ಹಂಪಿದೇವಯ್ಯ

ಹಂಪೆಯ ಹರಿಯಣ್ಣ
ಹಂಪೆಯ ಹರೀಶ
ಹಂಸಯ್ಯ
ಹೆಂಡದ ಮಾರಯ್ಯ

**ಕ್ಷ**

ಕ್ಷೇತ್ರನಾಥ

**ಜ್ಞ**

ಜ್ಞಾನಾನಂದ ಸ್ವಾಮಿಗಳೂ

■

## ಅನುಬಂಧ – ೩

# ಹಿಂದಿನ ಆವೃತಿಗಳ ಪ್ರಕಾಶಕರ ಮಾತು

## ನಮ್ಮ ಮಾತು (ಮೊದಲ ಮುದ್ರಣ)

ಮಾನವಕೋಟಿಯ ಸುಖ–ದುಃಖಗಳ ಕಾರ್ಪಣ್ಯಗಳ ಬೇರು ತೀರ ಆಳವಾದುದು. ಈ ಜೀವನವೇ ಒಂದು ಮಹಾಪ್ರಸಂಗ, ನಿರಂತರ ಹರಿಯುವ ಹೊನಲು. ಈ ಮಹಾನದಿಯನ್ನು ಪರಮಾರ್ಥ ಸಾಧನೆ, ಶಿವಾನುಭವ, ಶಿವಭಕ್ತಿಗೆ ಪೂರಕವಾದ ಕಾಯಕ, ಶಿವನಾಮಸ್ಮರಣೆ, ದಾಸೋಹಗಳಷ್ಟೇ ದಾಟಿಸಬಲ್ಲುವು. ಭಗವತ್ಸಂಕಲ್ಪವೋ ಏನೋ, ಭಕ್ತಿಮಾರ್ಗ, ಧರ್ಮಮಾರ್ಗ, ಜ್ಞಾನಮಾರ್ಗಗಳನ್ನು ತೋರಿಸಿಕೊಟ್ಟ ಶಿವಶರಣರು ಈ ಪುಣ್ಯಭೂಮಿಯಲ್ಲಿ ಜನ್ಮವೆತ್ತಿ ತಮ್ಮ ಕಾಯಕದಿಂದ, ದಾಸೋಹಗಳಿಂದ ವಚನಗಳಿಂದ ನಮ್ಮನ್ನು ಉದ್ಧರಿಸಿದ್ದಾರೆ.

ನಮ್ಮ ಜನತೆಗೆ, ಇಂದು, ಅವರ ವಿವೇಕಕ್ಕೆ, ವೈರಾಗ್ಯಕ್ಕೆ, ಧರ್ಮಚರ್ಯೆಗೆ ಇಂಬುಕೊಡಬಲ್ಲ, ವಿದ್ಯಾಸಂಪನ್ನತೆ, ಸತ್ಕರ್ಮಿಗಳಾಗಿ ಜೀವಿಸುವಂತೆ ಮಾಡಬಲ್ಲ ಜ್ಞಾನಪ್ರಪತ್ತಿ ದೊರಕಬೇಕಾಗಿದೆ. ಶರಣ ಮಾರ್ಗವನ್ನು ಅನುಸರಿಸುವುದರಿಂದ ಇದು ಸಾಧ್ಯ.

ವ್ಯಕ್ತಿಗತ ಜೀವನಕ್ಕೆ ಹೆಚ್ಚಿನ ಪ್ರಾಶಸ್ತ್ಯ ಸಂದಿರುವ ನಮ್ಮ ನಾಡಿನಲ್ಲಿ, ಇಂದಿನ ಯುಗದಲ್ಲಿ ವಿದ್ಯಾವಂತರು ಸಂಖ್ಯೆ ಹೆಚ್ಚಬೇಕು. ವ್ಯಕ್ತಿಯ – ಸಮಾಜದ ಸರ್ವತೋಮುಖವಾದ ಬೆಳವಣಿಗೆ ವಿದ್ಯೆಯೊಂದರಿಂದಲೇ ಸಾಧ್ಯ. ಈ ವಿದ್ಯೆ ಹೇಗಿರಬೇಕು? ಇಂದಿನ ಯುಗಧರ್ಮಕ್ಕೆ ಹೊಂದಿಕೊಂಡಂತೆ ವಿಜ್ಞಾನ ಪ್ರಧಾನವಾಗಿರಬೇಕೆ? ಮತ ಧರ್ಮಗಳೇ ಆಧಾರವಾದ ಸಂಸ್ಕೃತಿ ಪ್ರಧಾನವಾಗಿರಬೇಕೆ? ಇಲ್ಲಿ ಪಾಶ್ಚಿಮಾತ್ಯರ ಅನುಭವಗಳನ್ನು ಗಣನೆಗೆ ತಂದುಕೊಳ್ಳೋಣ: ಅವರು ವಿಜ್ಞಾನವನ್ನು ಅತ್ಯುಚ್ಚಮಟ್ಟಕ್ಕೆ ಬೆಳೆಸಿದ್ದಾರೆ; ಅವರ ಸಂಸ್ಕೃತಿಯೂ ವಿಜ್ಞಾನ ಪ್ರಧಾನವಾದುದೇ; ಸಂಪತ್ಸಮೃದ್ಧಿಯೂ ಇದೆ. ಆದರೆ, ಅವರು ತಮ್ಮ ಇಹಲೋಕ ಜೀವನದಲ್ಲಿ ಸುಖ–ಶಾಂತಿಗಳನ್ನು ಕಂಡಿದ್ದಾರೆ ಎಂಬುದು ಸಂಶಯಾಸ್ಪದ ಬರಿಯ ಐಹಿಕ ಸಂಪತ್ತೇ ಮನಸ್ಸಿಗೆ ನೆಮ್ಮದಿಯನ್ನೂ ಶಾಂತಿಯನ್ನೂ

ಕೊಡುವಂತಿದ್ದರೆ ಜೀವನ ಹೊಯ್ದಾಟಗಳಿಗೆ ಸಿಲುಕುತ್ತಲೇ ಇರಲಿಲ್ಲ. ನಮ್ಮ ಜನತೆಗೆ ಅವಶ್ಯಕವಾದುದು ಸಂಸ್ಕೃತಿ ಪ್ರಧಾನವಾದ ಸುಜ್ಞಾನ.

ಕಳೆದ ಇಪ್ಪತ್ತಮೂರು ವರುಷಗಳಿಂದ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ನಾಡಿಗೆ ಜನತೆಗೆ ವಿದ್ಯಾದಾನ ಮಾಡುವ ಕಾರ್ಯ ಕೈಗೊಂಡಿದೆ. ಅವರವರ ಅನುಭವ, ಗ್ರಾಹಕಶಕ್ತಿ, ಮೇಧಾಶಾಕ್ತಿಗಳಿಗೆ ತಕ್ಕಂತೆ ಬೇರೆ ಬೇರೆ ಘಟ್ಟಗಳಲ್ಲಿ ವಿದ್ಯಾದಾನ ಮಾಡುತ್ತಿದೆ. ತೀರ ಅಕ್ಷರಜ್ಞಾನವೇ ಇಲ್ಲದವರಿಗೆ ಅಕ್ಷರಾಭ್ಯಾಸ ತರಗತಿಗಳಿವೆ; ಅಕ್ಷರಾಭ್ಯಾಸ ಮುಗಿದು 'ಓದಿನ ಹವ್ಯಾಸ ಇಟ್ಟುಕೊಂಡಿರಬೇಕು' ಎಂಬ ಆಸಕ್ತಿ ಇರುವವರಿಗೆ ವಿದ್ಯಾಮಂದಿರಗಳಿವೆ; ವಿದ್ಯಾಶಕ್ತಿ ನೆಲಸಿ, ಸಾಹಿತ್ಯಾಭಿರುಚಿಯನ್ನು ಬೆಳಸಿಕೊಂಡಿರುವವರ ಜ್ಞಾನತೃಷೆಯನ್ನು ತಣಿಸಲು ಪುಸ್ತಕ ಭಂಡಾರಗಳಿವೆ. ಓದು–ಬರೆಹ ಕಲಿತು ವಿದ್ಯಾವಂತರಾದವರು ರಾಮಾಯಣ, ಮಹಾಭಾರತ ಮತ್ತು ಭಾಗವತಗಳಂತಹ ಮಹಾಕಾವ್ಯಗಳನ್ನು ಕೋರಿದರು. ಅವರ ಕೋರಿಕೆಯನ್ನು ಈಡೇರಿಸುವ ಪ್ರಥಮ ಭಾಗ್ಯ ಸಮಿತಿಗೆ ಹದಿನಾಲ್ಕು ವರ್ಷಗಳ ಹಿಂದೆ ಒದಗಿತು. ಕನ್ನಡ ಸಾಹಿತ್ಯ ಶಕಪುರುಷರೂ ರಸಯೋಗಿಗಳೂ ಆದ 'ಕುವೆಂಪು' ಅವರು ವಾಲ್ಮೀಕಿ ರಾಮಾಯಣವನ್ನು ರಚಿಸಿಕೊಟ್ಟರು. ಈ ಮಹಾಕಾವ್ಯವನ್ನು ಜನಸಮುದಾಯ ಮಮತೆಯಿಂದ, ವಾತ್ಸಲ್ಯದಿಂದ ಸ್ವೀಕರಿಸಿತು.

ವಿದ್ಯಾಭಿವೃದ್ಧಿಗಾಗಿಯೇ ತಮ್ಮ ಜೀವನವಿಡೀ ಶ್ರಮಿಸುತ್ತಿರುವ ಶ್ರೀ ಎ.ಸಿ. ದೇವೇಗೌಡರು ಸಮಿತಿಯ ಈ ಪವಿತ್ರಕಾರ್ಯವನ್ನು ತುಂಬು ಮನಸ್ಸಿನಿಂದ ಮೆಚ್ಚಿಕೊಂಡು, ನಮ್ಮ ನಾಡಿನ ಶಿವಶರಣರ ಜೀವನ – ಸಾಧನೆಗಳನ್ನು ಕುರಿತು ಮಹಾ ಕೃತಿ ಒಂದನ್ನು ಪ್ರಕಟಿಸುವ ಸೂಚನೆಯನ್ನು ಸಮಿತಿಯ ಮುಂದಿಟ್ಟರು. ಈ ಮಹಾತ್ಕಾರ್ಯಕ್ಕಾಗಿ ತಮ್ಮ ಭ್ರಾತೃಗಳಾದ ಶ್ರೀ ಎ.ಸಿ. ನಿರ್ವಾಣೇಗೌಡರು., ಶ್ರೀ ಎ.ಸಿ. ನಂಜುಂಡೇಗೌಡರು. ಶ್ರೀ ಎ.ಸಿ ಶಾಂತಮಲ್ಲೇಗೌಡರು, ಶ್ರೀಎ.ಎಂ. ಬಸವೇಗೌಡರು ಮತ್ತು ಶ್ರೀ ಎ.ಸಿ ಶಿವೇಗೌಡರೊಡಗೂಡಿ ಐದು ಸಹಸ್ರ ರೂಪಾಯಿಗಳ ಕೊಡುಗೆಯನ್ನು ಉದಾರವಾಗಿ ನೀಡಿದರು. 'ದಾನ ಚಿಂತಾಮಣಿ'ಗಳೂ ಉಜ್ವಲ ಶಿವಭಕ್ತರೂ ವೀರಶೈವ ಸಾಹಿತ್ಯದಲ್ಲಿ ಅಖಂಡ ಆಸಕ್ತಿಯುಳ್ಳವರೂ ಆಗಿದ್ದ ತಮ್ಮ ಪೂಜ್ಯ ಪಿತೃಗಳಾದ ಧರ್ಮಪ್ರಕಾಶ ಶ್ರೀಎ. ಚಂದ್ರೇಗೌಡರ ಸವಿನೆನಪಿಗಾಗಿ ಈ ಕೃತಿರಚನೆಯಾಗಬೇಕು ಎಂಬ ತಮ್ಮ ಅಭೀಷ್ಟವನ್ನು ವ್ಯಕ್ತಪಡಿಸಿದರು.

ಈ ಪವಿತ್ರ ಗ್ರಂಥವನ್ನು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಿಸುವ ಸದವಕಾಶವನ್ನು ಅವರು ಕಲ್ಪಿಸಿಕೊಟ್ಟಿದ್ದಾರೆ. ಈ ಪುಣ್ಯಕಾರ್ಯದಲ್ಲಿ ಅವರೆಲ್ಲರೂ ತೋರಿರುವ ಔದಾರ್ಯಕ್ಕೆ ಕೃತಜ್ಞತಾಪೂರ್ವಕ ವಂದನೆಗಳು.

‘ಶಿವಶರಣರ ಬಗ್ಗೆ ಮಹಾಕೃತಿ ಒಂದನ್ನು ಬರೆದುಕೊಡಿ’ ಎಂದು ಕೋರಿದಾಗ ಶ್ರೀ ಸಿದ್ಧಯ್ಯ ಪುರಾಣಿಕರು ಆತುಳ ಸಂತೋಷದಿಂದ ಒಪ್ಪಿದರು; ಆ ಕಾರ್ಯವನ್ನು ಪ್ರಾರಂಭಿಸಿದರು. ಈ ಮಹಾಕೃತಿಯನ್ನು ರೂಪಿಸಿಕೊಟ್ಟ ಶ್ರೀ ಸಿದ್ಧಯ್ಯ ಪುರಾಣಿಕರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಸತ್ಕಾರ್ಯ ಒಂದರಲ್ಲಿ ತೊಡಗಿದಾಗ ಎಡರು–ತೊಡರುಗಳು ಬರುವುದು ಸಹಜ. ಸತ್ಕಾರ್ಯದಲ್ಲಿ ನಮಗೆ ಎಷ್ಟರಮಟ್ಟಿಗೆ ಶ್ರದ್ಧೆಯಿದೆ, ನಿಷ್ಠೆಯಿದೆ ಎಂಬುದನ್ನು ಪರವೇಶ್ವರನು ಪರೀಕ್ಷಿಸಿ ನೋಡುತ್ತಾನೊ ಎನಿಸುತ್ತದೆ. ಈ ಸತ್ವ ಪರೀಕ್ಷೆ ನಡೆದೇ ನಡೆಯಿತು. ಕೃತಿರಚನಾಕಾರ್ಯದಲ್ಲಿ ಬಂದೊದಗಿದ ವಿಘ್ನಗಳನ್ನು ಧೈರ್ಯದಿಂದ ನಿವಾರಿಸಿಕೊಂಡು ಈ ಮಹಾಕೃತಿಯನ್ನು ಸಮಿತಿ ಸಹೃದಯ ಜನತೆಯ ಮುಂದಿಟ್ಟಿದೆ.

ಸಮಿತಿಯ ಕಾರ್ಯಗಳಲ್ಲಿ ತೀವ್ರಾಸಕ್ತಿ ವಹಿಸಿರುವ ಕವಿವರ್ಯ ‘ಕುವೆಂಪು’ ಅವರು ಈ ಕೃತಿಗೆ ತಮ್ಮ ‘ಮುನ್ನುಡಿ’ಯ ತಿಲಕವಿಟ್ಟು ಆಶೀರ್ವದಿಸಿದ್ದಾರೆ. ಅವರಿಗೆ ಅನಂತಾನಂತ ವಂದನೆಗಳು.

ಪಠ್ಯಭಾಗ ಪುಷ್ಟವಾಗುವಂತೆ ವರ್ಣನಾತ್ಮಕ ರೇಖಾಚಿತ್ರಗಳನ್ನು ಬರೆದು ಕೊಟ್ಟ ಶ್ರೀಎಂ.ಇ. ಗುರು ಅವರಿಗೆ ನನ್ನ ವಂದನೆಗಳು.

ಶ್ರೀ ಕ್ರೋಧಿ ಸಂವತ್ಸರ, ಆಶ್ವಯುಜ
ಶುಕ್ಲಪಕ್ಷ ತೇದಿ ೧೭

**ಎ.ಎನ್. ರಾಮರಾವ್**
ಇನ್‌ಛಾರ್ಜ್ ಅಧ್ಯಕ್ಷ
ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಮೈಸೂರು

## ನಮ್ಮ ಮಾತು (ಎರಡನೆಯ ಮುದ್ರಣ)

ಇಂದಿನ ವಿಜ್ಞಾನದ ಮುನ್ನಡೆಯಿಂದ ಆರ್ಥಿಕವಾಗಿ, ಸಾಮಾಜಿಕವಾಗಿ ಏಳಿಗೆಯಾಗಿದ್ದರೂ ಮಾನಸಿಕ ಜನಜೀವನದಲ್ಲಿ ಏನೋ ಕೊರತೆ, ಅಶಾಂತಿ ಇದೆ ಎಂಬುದು ಪಾಶ್ಚಿಮಾತ್ಯ ಸಮಾಜದ ಜನಜೀವನವನ್ನು ಅವಲೋಕಿಸಿದಾಗ ತಿಳಿಯುತ್ತದೆ. ಮನಶಾಂತಿಗಾಗಿ ಭಾರತದ ಅಧ್ಯಾತ್ಮಿಕ ಪರಂಪರೆಯತ್ತ ಆ ಜನರ ಗಮನ ಸ್ವಾಭಾವಿಕವಾಗಿ ಹರಿಯುತ್ತಿರುವುದೇ ಒಂದು ಸಾಕ್ಷಿಯಾಗಿದೆ.

ಅಲ್ಲದೇ. ಭಾರತೀಯರಾದ ನಮಗೆ ಇದು ಎಚ್ಚರಿಕೆಯ ಮಾತಾಗಿದೆ. ಇಂದು ಭಾರತದ ಅಧ್ಯಾತ್ಮ ತತ್ವಗಳು ದಿನನಿತ್ಯದ ಕ್ಲಿಷ್ಟ ಸಮಸ್ಯೆಗಳಿಂದ ಜರ್ಜರಿತರಾಗುತ್ತಿರುವ ವಿಶ್ವದ ಜನತೆ ಆಸೆ ಆಕಾಂಕ್ಷೆಗಳ ಕೂಪಕ್ಕೆ ಬಿದ್ದು ನರಳದಂತೆ ಎಚ್ಚರಿಸುತ್ತಿವೆ.

ಆದುದರಿಂದ ಆಧ್ಯಾತ್ಮ ತತ್ವಗಳ ಆಗರಗಳಾಗಿರುವ ರಾಮಾಯಣ, ಮಹಾಭಾರತ ಭಗವದ್ಗೀತೆ ಕಾವ್ಯಗಳತ್ತ ಜನರ ಮನ ಒಲಿದಿರುವುದು ಸಹಜ. ಈ ದಿಸೆಯಲ್ಲಿ ಜನತೆಯ ಸೇವೆಯನ್ನು ಮಾಡುತ್ತಿರುವ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಕನ್ನಡ ನಾಡಿನ ಜನತೆಗೆ 'ಶರಣ ಚರಿತಾಮೃತ'ವನ್ನು ಒದಗಿಸಿ ಹೆಮ್ಮೆಪಡುವಂತಹ ಕಾರ್ಯವನ್ನೆಸಗಿದೆ. ಈ ಬಗ್ಗೆ ಜನತೆಯು ತೋರಿರುವ ಮಮತೆಗೂ ಸಮಿತಿಯು ಋಣಿಯಾಗಿದೆ.

ಶರಣ ಚರಿತಾಮೃತದ ಮೊದಲ ಮುದ್ರಣದ ಐದಯ ಸಾವಿರ ಪ್ರತಿಗಳು ಮುಗಿದಿದ್ದು ಈಗ ಎರಡನೆಯ ಮುದ್ರಣದ ಐದು ಸಾವಿರ ಪ್ರತಿಗಳು ಬಿಡುಗಡೆಯಾಗುತ್ತಿವೆ. ಈ ಕೃತಿಯ ಜನಪ್ರಿಯತೆ, ಅಲ್ಲದೆ ಓದುಗರ ಆದರದ ಸ್ವೀಕಾರದಿಂದಾಗಿ ಆದಷ್ಟು ಬೇಗ ಮೂರನೆಯ ಮುದ್ರಣಕ್ಕೆ ಎಡೆಮಾಡಿಕೊಡುತ್ತದೆಂದು ನಂಬಿದ್ದೇನೆ.

**ಡಿ. ಕರಿಯಪ್ಪಗೌಡ**
ಮೈಸೂರು ಅಧ್ಯಕ್ಷ
೧೯-೧-೧೯೭೮ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

## ಪ್ರಕಾಶಕರ ಮಾತು (ನಾಲ್ಕನೆಯ ಮುದ್ರಣ)

ಕನ್ನಡ ಓದುಗರಿಗೆ ಸುಲಭ ಬೆಲೆಯಲ್ಲಿ ಉತ್ತಮ ಕೃತಿಗಳು ಲಭ್ಯವಾಗಬೇಕೆನ್ನುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವಾರು ಪ್ರಕಟನಾ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯರೂಪಕ್ಕೆ ತರುತ್ತಿದೆ. ಪ್ರಸಕ್ತ, ಸಿದ್ಧಯ್ಯ ಪುರಾಣಿಕರ ಮಹತ್ವದ ಕೃತಿಗಳಲ್ಲಿ ಒಂದಾದ "ಶರಣ ಚರಿತಾಮೃತ" ಗ್ರಂಥವನ್ನು ಪ್ರಕಟಿಸಲಾಗುತ್ತಿದೆ. ಈ ಕೃತಿಯಲ್ಲಿ ಎಪ್ಪತ್ತೆಂಟು ಶಿವಶರಣರ ಸುಂದರ ಜೀವನಚರಿತ್ರೆಯನ್ನು ಹೃದಯಂಗಮವಾಗಿ ನಿರೂಪಿಸಲಾಗಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಕಾಣೆಯಾಗುತ್ತಿದ್ದ ಕಾಲದಲ್ಲಿ ಅದಕ್ಕೆ ಆಸರೆಯಾಗಿ ನಿಂತು ಕನ್ನಡವನ್ನು ಪುನರುಜ್ಜೀವನಗೊಳಿಸಿದ ಡಾ. ಸಿದ್ಧಯ್ಯ ಪುರಾಣಿಕರು ನಿರ್ಜೀವವಾಗುತ್ತಿದ್ದ ಕನ್ನಡ ಸಂಘ ಸಂಸ್ಥೆಗಳಿಗೆ ಜೀವತುಂಬಿದವರು, ಸರ್ಕಾರದ ಅಧಿಕಾರಿಯಾಗಿ ದಕ್ಷ, ಸ್ವಚ್ಛ ಮತ್ತು ನಿಸ್ಪೃಹ ಆಡಳಿತಗಾರರೆಂದು ಪ್ರಖ್ಯಾತಿ ಪಡೆದಿದ್ದರು.

ಡಾ. ಸಿದ್ಧಯ್ಯ ಪುರಾಣಿಕರು "ಕಾವ್ಯಾನಂದ" ಕಾವ್ಯನಾಮದಿಂದ ಕವಿತೆ, ಕಥೆ, ಕಾದಂಬರಿ, ಪ್ರಬಂಧ, ವಿಮರ್ಶೆ, ಜೀವನಚರಿತ್ರೆ, ನಾಟಕ, ವಚನ ಸಾಹಿತ್ಯ, ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸುಮಾರು ೩೮ ಕೃತಿಗಳನ್ನು ರಚಿಸಿದ್ದಾರೆ. ಉತ್ತಮವಾಗ್ಮಿ, ವಿಮರ್ಶಕ ಮತ್ತು ವಿದ್ವಾಂಸರಾಗಿದ್ದು ಡಾ. ಸಿದ್ಧಯ್ಯ ಪುರಾಣಿಕರಿಗೆ ಅನೇಕ ಸಮ್ಮೇಳನಗಳ ಅಧ್ಯಕ್ಷತೆಯ ಗೌರವ, ಆಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಬಿಲ್ವಾರ ಪ್ರಶಸ್ತಿ ಮುಂತಾದ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಅನೇಕ ಕೃತಿಗಳು ಇತರ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಡಾ. ಸಾ.ಸಿ. ಮರುಳಯ್ಯನವರು ಹೇಳುವಂತೆ ಕಸುವುಳ್ಳ ಕನ್ನಡ, ಬನಿಬೆರೆತ ಅನುಭವ, ಅನುಭವ ದೀಪ್ತನುಡಿ ಹಾಗೂ ಸುಭಗಶೈಲಿ ಇವು ಕನ್ನಡ ಸಾಹಿತ್ಯದಲ್ಲಿ ಸಿದ್ಧಯ್ಯ ಪುರಾಣಿಕರಿಗೆ ವಿಶಿಷ್ಟ ಸ್ಥಾನ ದೊರಕಿಸಿಕೊಟ್ಟಿವೆ. ಇಂಥ ವಿದ್ವಾಂಸರ "ಶರಣ ಚರಿತಾಮೃತ" ಕೃತಿ ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ,

ಜಂಟಿ ನಿರ್ದೇಶಕರು (ಸು.ಕ), ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು, ಪ್ರಕಟಣಾ ಶಾಖೆ ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು. ಈ ಕೃತಿಯನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಪ್ರಿಂಟ್ ಪಾರ್ಕ್ ಮುದ್ರಣಾಲಯದ ಮಾಲೀಕರಾದ ಶ್ರೀ ಜಿ.ಬಿ.ಪಾಟೀಲ್ ಮತ್ತು ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು.

ಕನ್ನಡ ಧೀಮಂತ ಕವಿ, ವಿಮರ್ಶಕರಲ್ಲಿ ಒಬ್ಬರಾದ ಡಾ. ಸಿದ್ಧಯ್ಯ ಪುರಾಣಿಕರ **"ಶರಣ ಚರಿತಾಮೃತ"** ಕೃತಿಯನ್ನು ಸುಲಭ ಬೆಲೆಯಲ್ಲಿ ಕನ್ನಡಿಗರಿಗೆ ಒದಗಿಸುವುದು ನಮ್ಮ ಆಶಯ. ಈ ಕೃತಿಯನ್ನು ಸಾಹಿತ್ಯಾಸಕ್ತರು ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

**ಮನು ಬಳಿಗಾರ್ ಕ.ಆ.ಸೇ**
ನಿರ್ದೇಶಕರು

# ಪ್ರಕಾಶಕರ ಮಾತು (ಐದನೆಯ ಮುದಣ)

ಕನ್ನಡ ಓದುಗರಿಗೆ ಸುಲಭ ಬೆಲೆಯಲ್ಲಿ ಉತ್ತಮ ಕೃತಿಗಳು ಲಭ್ಯವಾಗಬೇಕೆನ್ನುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯರೂಪಕ್ಕೆ ತರುತ್ತಿದೆ. ಇದರಲ್ಲಿ ಡಾ. ಚಂದ್ರಶೇಖರ ಕಂಬಾರರ ಸಮಗ್ರ ಸಾಹಿತ್ಯ, ಡಾ. ಯು.ಆರ್. ಅನಂತಮೂರ್ತಿಯವರ ಸಮಗ್ರ ಸಾಹಿತ್ಯ, ಹೀಗೆ ಪ್ರಮುಖ ಸಾಹಿತಿಗಳ ಸಮಗ್ರ ಸಾಹಿತ್ಯ ಹಾಗೂ ವಿಜಯನಗರದ ಕಲೆ ಮತ್ತು ಸಾಹಿತ್ಯ, ಎಸ್.ಡಿ. ಇಂಚಲರ ಸಮಗ್ರ ಕಾವ್ಯ ಮತ್ತು ರಾವ್‌ಬಹದ್ದೂರ್, ಎಲ್. ಬಸವರಾಜು ಹಾಗೂ ಗೌರೀಶ ಕಾಯ್ಕಿಣಿ ಅವರುಗಳ ಆಯ್ದ ಕೃತಿಗಳನ್ನು ಹೊರತರಲಾಗುತ್ತಿದೆ. ಈ ಯೋಜನೆಯಡಿ ಡಾ. ಸಿದ್ಧಯ್ಯ ಪುರಾಣಿಕರ ಮಹತ್ವದ ಕೃತಿಗಳಲ್ಲಿ ಬಂದಾದ 'ಶರಣ ಚರಿತಾಮೃತ' ಕೃತಿಯ ಮರುಮುದ್ರಣವೂ ಒಂದಾಗಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಕಾಣೆಯಾಗುತ್ತಿದ್ದ ಕಾಲದಲ್ಲಿ ಅದಕ್ಕೆ ಆಸರೆಯಾಗಿ ನಿಂತು ಕನ್ನಡವನ್ನು ಪುನರುಜ್ಜೀವನಗೊಳಿಸಿದ ಡಾ. ಸಿದ್ಧಯ್ಯ ಪುರಾಣಿಕರು ನಿರ್ಜೀವವಾಗುತ್ತಿದ್ದ ಕನ್ನಡ ಸಂಘ ಸಂಸ್ಥೆಗಳಿಗೆ ಜೀವತುಂಬಿದವರು, ಸರ್ಕಾರದ ಅಧಿಕಾರಿಯಾಗಿ ದಕ್ಷ, ಸ್ವಚ್ಛ ಮತ್ತು ನಿಸ್ಪೃಹ ಆಡಳಿತಗಾರರೆಂದು ಪ್ರಖ್ಯಾತಿ ಪಡೆದವರು.

ಡಾ. ಸಿದ್ಧಯ್ಯ ಪುರಾಣಿಕರು 'ಕಾವ್ಯಾನಂದ' ಕಾವ್ಯನಾಮದಿಂದ ಕವಿತೆ, ಕಥೆ, ಕಾದಂಬರಿ, ಪ್ರಬಂಧ, ವಿಮರ್ಶೆ, ಜೀವನಚರಿತ್ರೆ, ನಾಟಕ, ವಚನ ಸಹಿತ್ಯ, ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸುಮಾರು ೨೫ ಕೃತಿಗಳನ್ನು ರಚಿಸಿದ್ದಾರೆ. ಉತ್ತಮವಾಗ್ಮಿ, ವಿಮರ್ಶಕ ಮತ್ತು ವಿದ್ವಾಂಸರಾಗಿದ್ದು ಡಾ. ಸಿದ್ಧಯ್ಯ ಪುರಾಣಿಕರಿಗೆ ಅನೇಕ ಸಮ್ಮೇಳನಗಳ ಅಧ್ಯಕ್ಷತೆಯ ಗೌರವ, ಆಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಬಿಲ್ವಾರ ಪ್ರಶಸ್ತಿ ಮುಂತಾದ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಇವರ ಅನೇಕ ಕೃತಿಗಳು ಇತರ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಡಾ. ಸಾ.ಶಿ. ಮರುಳಯ್ಯನವರು ಹೇಳುವಂತೆ ಕಸುವುಳ್ಳ ಕನ್ನಡ, ಬನಿಬೆರೆತ ಅನುಭಾವ, ಅನುಭವ ದೀಪ್ತನುಡಿ ಹಾಗೂ ಸುಭಗಶೈಲಿ ಇವು ಕನ್ನಡ ಸಾಹಿತ್ಯದಲ್ಲಿ ಸಿದ್ಧಯ್ಯ ಪುರಾಣಿಕರಿಗೆ ವಿಶಿಷ್ಟ ಸ್ಥಾನ ದೊರೆಕಿಸಿಕೊಟ್ಟಿವೆ. ಇಂಥ ವಿದ್ವಾಂಸರ 'ಶರಣಚರಿತಾಮೃತ' ಕೃತಿಯನ್ನು ಹೊರತರಲು ಸಹಕರಿಸಿದ ಶ್ರೀಮತಿ ದುರ್ಗಾ ಸಿ. ಆವರ್ತಿ, ಜಂಟಿ ನಿರ್ದೇಶಕರು (ಕಾರ್ಯಕ್ರಮ) ಶ್ರೀಮತಿ ಎನ್. ಶಾಂತಮ್ಮ,

ಕಾರ್ಯಕ್ರಮ ಅಧಿಕಾರಿ, ಪ್ರಕಟನಾ ಶಾಖೆಯ ಶ್ರೀ ಹರೀಶ್ ಅವರಿಗೆ ಹಾಗೂ ಈ ಸಂಪುಟಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಅಭಿಮಾನಿ ಪ್ರಕಾಶನದ ಮಾಲೀಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಮತ್ತು ಈ ಕೃತಿಯನ್ನು ಮರು ಮುದ್ರಿಸಲು ಅನುಮತಿ ನೀಡಿದ ಶ್ರೀ ಪಿ.ಕೆ. ಪುರಾಣಿಕ ಅವರಿಗೆ ನನ್ನ ಕೃತಜ್ಞತೆಗಳು.

ಇಲಾಖೆಯಿಂದ ಎರಡನೆಯ ಭಾರಿ ಮರುಮುದ್ರಣವಾಗುತ್ತಿರುವ ಕನ್ನಡದ ಧೀಮಂತ ಕವಿ, ವಿಮರ್ಶಕರಲ್ಲಿ ಒಬ್ಬರಾದ ಡಾ. ಸಿದ್ಧಯ್ಯ ಪುರಾಣಿಕರ 'ಶರಣ ಚರಿತಾಮೃತ' ಕೃತಿಯಲ್ಲಿ ಎಪ್ಪತ್ತೆಂಟು ಶಿವಶರಣರ ಸುಂದರ ಜೀವನಚರಿತ್ರೆಯನ್ನು ಹೃದಯಂಗಮವಾಗಿ ನಿರೂಪಿಸಲಾಗಿದೆ. ಈ ಕೃತಿಯನ್ನು ಸುಲಭ ಬೆಲೆಯಲ್ಲಿ ಕನ್ನಡಿಗರಿಗೆ ಒದಗಿಸುವುದು ನಮ್ಮ ಆಶಯ. ಈ ಕೃತಿಯನ್ನು ಸಾಹಿತ್ಯಾಸಕ್ತರು ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ :

**(ಕೆ.ಆರ್. ರಾಮಕೃಷ್ಣ)**
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಅನುಬಂಧ – ೪

# ನಿವೇದನೆಗಳು

### ಬರೆದವನ ಬಿನ್ನಹ (ಮೊದಲನೆಯ ಮುದ್ರಣ)

ಜಾನೆವರಿ ೧೯೫೫ ದಿನಾಂಕ ೧೪–೧೫–ಇದ್ದಿರಬಹುದು. ಮೈಸೂರಿನ 'ವಯಸ್ಕರ ಶಿಕ್ಷಣ ಸಮಿತಿ'ಯಿಂದೊಂದು ಕಾಗದ ಬಂದಿತು – ಶಿವಶರಣರ ಬಗ್ಗೆ ಆರುನೂರು ಪುಟಗಳ ಹೆಬ್ಬೊತ್ತಿಗೆಯೊಂದನ್ನು ಪ್ರೊ॥ ಡಿ.ಕೆ. ಭೀಮಸೇನರಾಯರೂ ನಾನು ಕೂಡಿ ಬರೆದುಕೊಡಬೇಕೆಂದು. ನನಗೆ ದಿಗ್ಭ್ರಮೆ. ಯೋಚನಾಮಗ್ನನಾಗಿರುವಾಗಲೇ ಸಹೃದಯ ಸ್ನೇಹಿತಾದ ಪ್ರೊ॥ ಜಿ. ಎಸ್. ಹಾಲಪ್ಪನವರ ಕಾಗದವೂ ಬಂದಿತು – ಈ ಕಾರ್ಯ ಕೈಕೊಳ್ಳಲೇಬೇಕೆಂದು. ಗುರುಗಳಾದ ಡಿ.ಕೆ. ಭೀಮಸೇನರಾಯರು ಒಪ್ಪಲು ನಾನೂ ಒಪ್ಪಿದೆ.

ಆದರೆ ಇಬ್ಬರೂ ಕೂಡಿ ಈ ಕಾರ್ಯ ಪ್ರಾರಂಭಿಸುವ ಮುನ್ನವೇ ನನಗೆ ಹೈದರಾಬಾದಿನಿಂದ ವರ್ಗವಾಯಿತು. ರಾಜ್ಯಗಳ ಪುನರ್ರಚವೆ ಬಂದಿತು. ಇನ್ನೂ ಏನೇನೋ ! ತತ್ಪರಿಣಾಮವಾಗಿ ನಾನೊಬ್ಬನೇ ಈ ಕಾರ್ಯ ನಿರ್ವಹಿಸಬೇಕಾಗಿ ಬಂದಿತು! ಕಳೆಕ ಕಾಲು ಶತಮಾನದಿಂದಲೂ ಇದು ನನ್ನ ಮೆಚ್ಚಿಗೆಯ ವ್ಯಾಸಂಗ ವಿಷಯಾಗಿದ್ದರೂ ನನಗೆ ಅಧೈರ್ಯವೆನಿಸದಿರಲಿಲ್ಲ. ಒಂದು ವಿಶ್ವಾಸ: 'ಅಜ್ಜಂದಿರಾದ ಚೆನ್ನಕವಿಗಳು ನೂತನ ಶರಣನೇಕರ ಚರಿತ್ರೆಗಳನ್ನು ಪ್ರೌಢಕಾವ್ಯಗಳನ್ನಾಗಿ ರಚಿಸಿದ್ದಾರೆ; ತಂದೆಯವರಾದ ಪಡಿತ ಕಲ್ಲಿನಾಥಶಾಸ್ತ್ರಿಗಳವರು ಇನ್ನು ಕೆಲವು ಶರಣರ ಚರಿತ್ರೆಗಳನ್ನು ಕಾವ್ಯರೂಪದಲ್ಲಿ ರಚಿಸಿರುವುದಲ್ಲದೆ ಶರಣಸಂದೇಶವನ್ನು ಪುರಾಣ ಪ್ರವಚನ – ಶಿವಕೀರ್ತನಗಲ ಮೂಲಕ ಬಿತ್ತರಿಸುವುದರಲ್ಲಿ ತಮ್ಮ ಆಯುಷ್ಯವನ್ನೆಲ್ಲ ವಿನಿಯೋಗಿಸಿದ್ದಾರೆ; ಅವರ ಆಶೀರ್ವಾದ ಬಲವಿರಲು ನಾನಿದನ್ನು ನಿರ್ವಹಿಸಲಾರನೆ?' ಎಂಬ ವಿಶ್ವಾಸ ಅಂತೂ ಕಾರ್ಯ ಪ್ರವೃತ್ತನಾದೆ.

ಕೃತಿರಚನೆಗೆ ಕೈಯಿಕ್ಕುವ ಮುನ್ನ ಒಮ್ಮೆ ಈ ವಿಷಯದಲ್ಲಿ ಉಪಲಬ್ಧವಿರುವ ಎಲ್ಲಾ ಸಾಹಿತ್ಯವನ್ನೂ ನೋಡಬೇಕೆಂಬ ಲವಲವಿಕೆ ಸಹಜವಾಗಿಯೆ ಉತ್ಪನ್ನವಾಯಿತು. ಸರಿ. ಸಾಹಿತ್ಯಸಂಗ್ರಹ ಕಾರ್ಯ ಪ್ರಾರಂಭವಾಯಿತು. ಅದರಲ್ಲಿ ಅನುಭವಿಸಿದಯಾತನೆ ವರ್ಣನಾಶೀತವಾದುದು. ಒಬ್ಬ ಮನ್ಮಥಸ್ವಾಮಿಗಳ ಚರಿತ್ರಾಂಶಗಳನ್ನು ಸಂಗ್ರಹಿಸಲು

ಎಷ್ಟು ಜನರಿಗೆ ಎಷ್ಟು ಸಲ ಬರೆಯ ಬೇಕಾಯಿತು! ಕೊನೆಗೆ, ನಾಲ್ಕು ವರ್ಷಗಳ ನಿರಂತರ ಪ್ರಯತ್ನದ ಫಲವಾಗಿ, ಲಾತೂರಿನ ಡಾಕ್ಟರ್ ಸಿದ್ಧೇಶ್ವರ ಭಾನಾಪುರೆಯವರು ಅವರ ಚರಿತ್ರಾಂಶಗಳನ್ನೂ ಅವರ ಅಭಂಗಗಳನ್ನೂ ಕಳಿಸಿದಾಗ ಎಂಥ ಸಂತೋಷವೆನಿಸಿತು! ನಾನೇ ವಿಜಾಪುರ, ಧಾರವಾಡ, ಬೆಂಗಳೂರು, ಮೈಸೂರುಗಳಲ್ಲಿ ಶೋಧಿಸಿದರೂ ಕೆಲವು ಹೊತ್ತಿಗೆಗಳು ಸುರಪುರದ ಕೀರ್ತಿಶೇಷ ರೆವರೆಂಡ್ ನಾನಪ್ಪ ದೇಸಾಯಿರವರ ಮನೆಯಲ್ಲಿ ಅವರ ಚಿರಂಜೀವಿ ಭಾಸ್ಕರ ದೇಸಾಯಿಯವರ ಔದಾರ್ಯದಿಂದ ದೊರೆತಾಗ ಅದೆಷ್ಟು ಆನಂದವಾಯಿತು!

ಇಂದಿಗೂ ಆ ಸಾಮಗ್ರಿ ಸಂಗ್ರಹಕಾರ್ಯ ಮುಗಿದಿಲ್ಲ. 'ಈಗ ಸಂಗ್ರಹಿಸಿರುವುದು ಸಾಕು, ಇನ್ನು ಬರೆಯಲು ಮೊದಲು ಮಾಡಬೇಕು' ಎನ್ನುವ ಹೊತ್ತಿಗೆ ಹೊಸದೊಂದು ಹೊತ್ತಿಗೆ ಪ್ರಕಟವಾದ ಸುದ್ದಿ ಬಂದು ಅದನ್ನು ನೋಡಬೇಕೆಂಬ ಆಸೆ ಉದಿಸುತ್ತಿದ್ದಿತು. ಅದನ್ನು ತರಿಸಿ ನೋಡುವಷ್ಟರಲ್ಲಿ ಇನ್ನೊಂದು ಗ್ರಂಥ ಪ್ರಕಟವಾಗುತ್ತಿದ್ದಿತು. ಹೀಗಾಗಿ ಸಂಗ್ರಹ – ಸಂಶೋಧನೆಗಳಲ್ಲಿಯೇ ಬಹಳ ದಿನಗಳು ಕಳೆದವು.

ಇಷ್ಟಾದರೂ ಈ ವಿಷಯದ ವ್ಯಾಸಂಗ ಸರಿಯಾಗಿ ಮಾಡಿರುವೆನೆಂಬ ನಂಬಿಕೆ ನನಗಿಲ್ಲ. ಸರಕಾರದ ಸೇವೆಯಲ್ಲಿರುವ ನಾನು ಮೊದಲು ಸರಕಾರದ ಕಾರ್ಯವನ್ನು ತೃಪ್ತಿಕರವಾಗಿ ಮಾಡಲೇಬೇಕು – ಮಾಡುತ್ತಿದ್ದೇನೆ. ಯಾವಾಗಲೋ ಒಮ್ಮೆ ದೊರೆಯುವ ವಿರಾಮಕಾಲವನ್ನು ಇನ್ನಿತರ ಹವ್ಯಾಸಗಳಲ್ಲಿ ಕಳೆಯದೆ ಕನ್ನಡ ಸಾಹಿತ್ಯದ ಅಲ್ಪ ಅಧ್ಯಯನದಲ್ಲಿ ಕಳೆಯುತ್ತಲಿದ್ದೇನೆ. ಆದುದರಿಂದ ನನ್ನ ವ್ಯಾಸಂಗಕ್ಕೆ ಆ ವಿಶ್ವಾಸ ಎಲ್ಲಿಂದ ಬರಬೇಕು?

ಆದರೂ ಈ ಗ್ರಂಥ ಸಾಧ್ಯವಾದಷ್ಟು ಉಪಯುಕ್ತವಾಗಲೆಂದು ಶಕ್ಯವಿರುವಷ್ಟು ಶ್ರಮವಹಿಸಿದ್ದೇನೆ. ಶರಣರಸಾಹಿತ್ಯ ಅಪಾರವಾದುದು. ಆದರ ಬಹುಭಾಗವಿನ್ನೂ ಅಪ್ರಕಟಿತವಾಗಿಯೇ ಉಳಿದಿದೆ. ಪ್ರಕಟವಾಗಿರುವಷ್ಟು ಸಾಹಿತ್ಯದಲ್ಲಿಯೂ ವಿವಾದಾಸ್ಪದ ಅಂಶಗಳು ಅನೇಕವಾಗಿವೆ. ಅನೇಕ ಶರಣರ ಕಾಲದ ಬಗ್ಗೆ, ತಂದೆತಾಯಿಗಳ ಹೆಸರುಗಳ ಬಗ್ಗೆ, ಶೈವರೆ– ವೀರಶೈವರೆ ಎಂಬ ಬಗ್ಗೆ, ಕೃತಿಗಳ ಬಗ್ಗೆ, ಕಾರ್ಯಗಳ ಬಗ್ಗೆ, ಮದುವೆಯ ಬಗ್ಗೆ, ಸ್ಥಳದ ಬಗ್ಗೆ ಭಿನ್ನಭಿಪ್ರಾಯಗಳಿವೆ. ಅವುಗಳಲ್ಲಿ ಸಾಧ್ಯವಿರುವಷ್ಟು ಸಾಮಂಜಸ್ಯವನ್ನು ತರಲು ಸಾಧ್ಯವಾಗಬಹುದೇ ಹೊರತು, ಅವುಗಳನ್ನು 'ಇದಮಿತ್ಥಂ' ಎಂದು ನಿರ್ಣಯಿಸುವುದು ಈಗ ಉಪಲಬ್ಧವಿರುವ ವಾಙ್ಮಯದ ಆಧಾರದಿಂದ ಸಾಧ್ಯವಿಲ್ಲದಾಗಿದೆ. ಈ ವಿಷಯದಲ್ಲಿ ನನಗಿಂತ ಹೆಚ್ಚಿನ ಅಧ್ಯಯನ ಸಂಶೋಧನಗಳನ್ನು ನಡಸಿದವರೊಡನೆ ಸಮಾಲೋಚನೆ ಮಾಡಿದಾಗಲೂ ಇದೇ ಅಭಿಪ್ರಾಯ ದೃಢಪಟ್ಟಿತು.

ಇವೆಲ್ಲ ಭಿನ್ನಾಭಿಪ್ರಾಯಗಳು ಬಗೆಹರಿವವರೆಗೆ ಪ್ರಸ್ತುತ ಗ್ರಂಥವನ್ನು ಪೂರ್ಣಗೊಳಿಸದಿರುವುದು ಸಾಧ್ಯವೆ? ಮುಂಬರುವ ನಿರ್ವಿವಾದ ಕೃತಿಗಾಗಿ ಮುಂಗಾಣಿಕೆಯೆಂದಿದನ್ನು ಮುಗಿಸಲೇಬೇಕಾಯಿತಿ. ನನಗಿರುವ ಸಮಾಧಾನವಿಷ್ಟೇ: ಎಲ್ಲೆಡೆಯಲ್ಲಿಯೂ ನಿರ್ವಿವಾದವಾದುದನ್ನೇ ಬರೆದಿರುವೆನೆಂಬ ಎಂಟೆರ್ದೆ ನನಗೆಇಲ್ಲವಾದರೂ ಎಲ್ಲಿಯೂ ನಿರಧಾರವಾದುದನ್ನು ಬರೆದಿಲ್ಲವೆಂಬ ನಂಬಿಕೆಯೊಂದಿದೆ. ಕೊನೆಯಲ್ಲಿ ಕೊಟ್ಟಿಯಲ್ಲಿ ಕೊಟ್ಟಿರುವ ಸಹಾಯಕ ಸಾಹಿತ್ಯ ಸೂಚಿ ಇದಕ್ಕೆ ಸಾಕ್ಷಿ. ಒಂದೆರಡು ಉದಾಹರಣೆಗಳಿಂದ ನಾನು ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡ ರೀತಿನಿಂತಿಗಳನ್ನು ನಿಚ್ಚಳಗೊಳಿಸಬಹುದು.

ಬ್ರಹ್ಮಶಿವನ (ಸು. ೧೧೦೦) 'ಸಮಯ ಪರೀಕ್ಷೆ' ಹರಿಹರನ ಶಂಕರ ದಾಸಿಮಯ್ಯನ ರಗಳೆ, ಭೀಮಕವಿ(೧೩೬೯)ಯ ಬಸವ ಪುರಾಣಗಳ ಪ್ರಕಾರ ಜಯಸಿಂಹನ (೧೦೧೮–೧೦೪೨)ಕಾಲದಲ್ಲಿ ದೇವರ ದಾಸಿಮಯ್ಯನಿದ್ದನೆಂಬುದು ಸಿದ್ಧವಾಗುತ್ತದೆ. ಇವನು 'ಕ್ರಿ.ಶ.ಸು. ೯೮೦ರಲ್ಲಿ ಹುಟ್ಟಿ, ಕ್ರಿ.ಶ.ಸು. ೧೦೪೦ರಲ್ಲಿ ಶಿವೈಕ್ಯನಾಗಿರಬಹುದೆಂದು' ಊಹಿಸಲಾಗಿದೆ. (ದೇವರ ದಾಸಿಮಾರ್ಯ ಪ್ರಶಸ್ತಿ, ಪುಟ ೧೯೧–೧೯೨)ಇವನು ಸ್ಮರಿಸಿರುವ ಮಾದರ ಚೆನ್ನಯ್ಯ ಇವನಿಗಿಂತಲೂ ಹಿಂದೆ ಇರಲೇಬೇಕು. ಹರಿಹರನ ಸುರಗಿಯ ಚಾಂಡರಾಯನ ರಗಳೆಯಲ್ಲಿ ಬರುವ, "ಚೆನ್ನವ ಮನೋಹರನೇ ಆರೋಗಿಸೆಲೆ ದೇವ ! ಕನ್ನೆಯ ಮನೋರಥನೆ ಆರೋಗಿಸೆಲೆ ದೇವ" ಎಂಬ ಮಾದರ ಚೆನ್ನಯ್ಯನ ಪ್ರಸ್ತಾಪವಿದಕ್ಕೆ ಪುಷ್ಟಿಯನ್ನೀಯುತ್ತದೆ. ಆದುದರಿಂದ ಮಾದರ ಚೆನ್ನಯ್ಯ ಆಚಾರ್ಯ ಡಿ.ಎಲ್. ನರಸಿಂಹಾಚಾರ್ಯರು ಊಹಿಸಿರುವಂತೆ ೧೦೨೦ಕ್ಕೆ ಅಥವಾ ಅದಕ್ಕೂ ಹಿಂದೆ ಇದ್ದಿರಬೇಕು. ಇವನು ೧೦೭೦ರವರೆಗೆ ಆಳಿದ ಕರಿಕಾಲ ಚೋಳನ ಕಾಲದಲ್ಲಿ ಜೀವಿಸಿದ್ದನೆಂದು ಹೇಳುವುದು ಹೇಗೆ?

ಇಲ್ಲಿ ಮಾದರ ಚೆನ್ನಯ್ಯನ ಮಹಿಮೆ ಪ್ರಕಟವಾಗುವ ಮೊದಲು ಅವನು ಆರುವತ್ತು ವರ್ಷಗಳವರೆಗೆ ಹುಲ್ಲಿನ ಕಾಯಕವನ್ನು ಮಾಡಿದ್ದನೆಂಬುದನ್ನು ಸ್ಮರಿಸಿಕೊಂಡರೆ ಸಂದೇಹ ನಿವಾರಣೆಯಾಗುತ್ತದೆ. ಈ ಕಾಯಕವನ್ನು ಕೈಕೊಳ್ಳುವಾಗ ಮಾದರ ಚೆನ್ನಯ್ಯನಿಗೆ ಇಪ್ಪತ್ತು ವರ್ಷ ವಯಸ್ಸಾಗಿದ್ದಿತೆಂದು ಇಟ್ಟುಕೊಂಡರೆ ಅವನ ಎಂಬತ್ತನೆಯ ವರ್ಷದಲ್ಲಿ ಅವನಿಗೆ ಶಿವಸಾಕ್ಷಾತ್ಕಾರವಾಯಿತೆಂದು ತಿಳಿಯಬೇಕಾಗುತ್ತದೆ. ಇದು ೧೦೮೦ರಲ್ಲಿ ಸಂಭವಿಸಿರಬೇಕಾಗುತ್ತದೆ.

ಇದೇನೋ ಸರಿ. ಆದರೆ ಬಸವಣ್ಣನವರ ಸಮಕಾಲೀನನಾಗಿದ್ದ ಡೋಹರ ಕಕ್ಕಯ್ಯನು ದೇವರದಾಸಿಮಯ್ಯನಿಗಿಂತಲೂ ಹಿಂದೆ ಇದ್ದನೆಂದು ಹೇಳುವುದು

ಹೇಗೆ? 'ಕೀಳು ಡೋಹರ ಕಕ್ಕ' ಎಂಬ ದಾಸಿಮಯ್ಯನ ಉಕ್ಕಿಗೆ ಅವನಿಗಿಂತ ಡೋಹರ ಕಕ್ಕ ಹಿಂದೆ ಇದ್ದನೆಂದೇ ಅರ್ಥ ಮಾಡಬೇಕಿಲ್ಲ. ಡೋಹರ ಕಕ್ಕ ದೇವರ ದಾಸಿಮಯ್ಯನ ಕಿರಿಯ ಸಮಕಾಲೀನನಿದ್ದು ಎಳೆವರೆಯದಲ್ಲಿಯೇ ಸಾಕಷ್ಟು ಕೀರ್ತಿಶಾಲಿಯಾಗಿರಬೇಕು. ೧೦೮೦ರಲ್ಲಿ ಸುಮಾರು ೨೦-೨೫ವರ್ಷದವನಾ-ಗಿರಬಹುದಾದ ಡೋಹರ ಕಕ್ಕಯ್ಯನು ಬಸವಣ್ಣನವರ ಕಾಲವಾದ ೧೧೦೬-೧೧೬೮ (ಬಸವನಾಳ ಸ್ಮಾರಕ ಸಂಪುಟ, ಪುಟ೪೭೬)ರಲ್ಲಿ ೭೦-೮೦ ವರ್ಷಗಳ ವಯೋವೃದ್ಧ ಶರಣನಾಗಿ ಜೀವಿಸಿರುವುದು ಸಾಧ್ಯವಿದೆ. ಬಸವ ಕಾಲೀನ ಸಾಹಿತ್ಯದಲ್ಲಿ ಡೋಹರ ಕಕ್ಕಯ್ಯನು ವಯಸ್ಸಿನಲ್ಲಿ ಎಲ್ಲರಿಗಿಂತ ಹಿರಿಯನಾಗಿದ್ದನೆಂಬುದು ಅಂಗೀಕೃತವಾಗಿದೆ. ಆದುದರಿಂದ ಡೋಹರ ಕಕ್ಕಯ್ಯನು ದೇವರ ದಾಸಿಮಯ್ಯನ ಕಾಲ ಮತ್ತು ಬಸವಾದಿ ಪ್ರಮಥರ ಕಾಲವನ್ನು ಸಂಧಿಸುವ ಸೇತುವೆಯಾಗಿದ್ದಾನೆಂದರೆ ತಪ್ಪಾಗಲಿಲಿಕ್ಕಿಲ್ಲ.

ವಚನಕಾರ ಮೆರೆಮಿಂಡ ದೇವನು ನಂಬಿಯಣ್ಣನ ಸಮಕಾಲೀನನಾಗಿದ್ದ ಮೆರೆಮಿಂಡನಾಗಿರಲಾರನೆಂಬ ಅಭಿಪ್ರಾಯ ವ್ಯಕ್ತಿವಾಗಿದೆ. ನಂಬಿಯಣ್ಣನ (ಸು.೮ನೆಯ ಶತಮಾನ)ಸಮಕಾಲೀನನಾದ ಮೆರೆಮಿಂಡನಾರ್ ವಚನಕಾರ ಮೆರೆಮಿಂಡ-ದೇವನಿಗಿಂತ ಭಿನ್ನನೆಂದೂ ವಚನಕಾರ ಮೆರೆಮಿಂಡದೇವನ ಕಾಲ ಸುಮಾರು ೧೧೦೦ ಇರಬಹುದೆಂದೂ ಕೀರ್ತಿಶೇಷ ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಡುತ್ತಾರೆ. (ಕವಿಚರಿತೆ ಭಾಗ೧.ಪು.೨೦೨) ಹಿರಿಯರಾದ ಡಿ.ಎಲ್. ನರಸಿಂಹಾಚಾರ್ಯರೂ ಹರಿಹರನ ರಗಳೆಯ ಮೆರೆಮಿಂಡಯ್ಯ ಮತ್ತು ವಚನಕಾರ ಮೆರೆಮಿಂಡಯ್ಯ ಭಿನ್ನರೆಂದೇ ಅಭಿಪ್ರಾಯಪಡುತ್ತಾರೆ. (ಕೆಲವು ವಚನಕಾರರು-೨) ಆದರೂ ಮೆರೆಮಿಂಡದೇವನೂ ತಮಿಳುನಾಡಿನವ-ನಾದುದರಿಂದಲೂ ಅವನ ಕೆಲವು ವಚನಗಳು ಅವನ ಮತ್ತು ನಂಬಿಯಣ್ಣನ ನಡುವೆ ನಡೆದ ವಿವಾದಕ್ಕೆ ಹೊಂದಿಕೊಳ್ಳುವಂತೆ ತೋರಿದುದರಿಂದಲೂ ಡಾ॥ ಪಿ.ಜಿ. ಹಳಕಟ್ಟಿಯವರೂ ವಚನಕಾರ ಮೆರೆಮಿಂಡ ದೇವನೇ ನಂಬಿಯಣ್ಣನ ಸಮಕಾಲೀನನೆಂದು ಗ್ರಹಿಸಿ ಅವನ ಚರಿತ್ರೆಯನ್ನು ಬರೆದಿರುವುದರಿಂದಲೂ (ಶಿವಶರಣರ ಚರಿತ್ರೆಗಳು - ಭಾಗ೨, ಪುಟ ೧೫೦)ನಾನೂ ಅದನ್ನೇ ಅನುಸರಿಸಿದ್ದೇನೆ.

ಅಲ್ಲಮಪ್ರಭುವಿನ ಚರಿತ್ರೆಯಲ್ಲಿ ಕಾಮಲತೆಯ ಪ್ರಸಂಗವನ್ನು ಪ್ರಾಸಂಗಿಕವಾಗಿ ಚರ್ಚಿಸಿದ್ದೇನೆ. ಇಲ್ಲಿ ಅವನ ಅಂಕಿತದ ವಿಷಯವನ್ನು ಕುರಿತು ವಿವರಣೆಯನ್ನೀಯಬಹುದು. ಅವನ ಅಂಕಿತ 'ಗುಹೇಶ್ವರ' ಅಲ್ಲ, 'ಗೊಹೇಶ್ವರ'

ಎಂದು ಪ್ರತಿವಾದಿಸಲಾಗಿದೆ. (ಡಾ॥ ಗದ್ದಿಗಿಮಠರ ಇತ್ತೀಚಿನ ಲೇಖನದಲ್ಲಿ)'ಗೊಗ್ಗೇಶ್ವರ' ಎಂಬ ಅಂಕಿತವೂ ಬೇರೆ ಬೇರೆ ಓಲೆಗಳಲ್ಲಿ ಬೇರೆ ಬೇರೆ ರೂಪದಲ್ಲಿ ಕಂಡುಬರುವುದೆಂದು ಶ್ರೀ ಎಲ್. ಬಸವರಾಜು ಅವರು ತಿಳಿಸಿದ್ದಾರೆ. (ಅಲ್ಲಮನ ವಚನ ಚಂದ್ರಿಕೆ, ಪೀಠಿಕೆ, ಪುಟ ೧೮) 'ಗುಹ್ಯೇಶ್ವರ'ಎಂಬ ರೂಪವೂ ದೊರೆಯುತ್ತದೆ. ಇವುಗಳಲ್ಲಿ ಯಾವುದು ಅಲ್ಲಮನ ಅಂಕಿತ?

'ಗೋವೆ' ಪದದಿಂದ 'ಗೋಹೇಶ್ವರ' ಅಂಕಿತ ಬಂದಿದೆಯೆದು ಡಾ॥ ಗದ್ದಿಗಿಮಠರು ಅಭಿಪ್ರಾಯ ಪಡುತ್ತಾರೆ. "ಅಲ್ಲಮ ಪ್ರಭುಸ್ವಾಮಿಗಳವರು ತಮ್ಮ ಗೋಹೇಶ್ವರ ಲಿಂಗದಭಿಧಾನದಿಂ ಕೊಂಕಣದೇಶದ ಲವಣ ಸಮುದ್ರತೀರದ ತಟಿಯಲ್ಲಿ ರಚಿಸಿದ ಗೊಹೆ ಎಂಬ ಪರುದಿ ಇರುವ ಗೋಹೇಶ್ವರನ ಲಿಂಗದಾಲಯಕ್ಕೆ ಚಿತ್ತೈಸಿ" ಎಂದು 'ನಿರಂಜನವಂಶ ರತ್ನಾಕರ'ದಲ್ಲಿ ಉಲ್ಲೇಖಿಸಲಾಗಿದೆ (ಪು.೧೪-೧೫). ಹರಿಹರನ ರಗಳೆಯ ಪ್ರಕಾರ ಬಳ್ಳಿಗಾವಿಯ 'ಗೊಗ್ಗೇಶ್ವರ' ಎಂಬುದೇ ಅವನ ಅಂಕಿತ ವಾಗಿರಬೇಕೆಂಬ ಅಭಿಪ್ರಾಯವೂ ಇದೆ.

ನನಗೆ 'ಗುಹೇಶ್ವರ' ಎಂಬ ಅಂಕಿತವೇ ಸಮ್ಮತವಾಗಲು ಕಾರಣ ಅದಕ್ಕಿರುವ ಸಾಂಕೇತಿಕ ಅರ್ಥಸೌಂದರ್ಯ. ಅದನ್ನು ಚಾಮರಸ ಚೆನ್ನಾಗಿ ಚಿತ್ರಿಸಿದ್ದಾನೆ:

ಗುಹೆಯೆಲ್ಲೈ ಕೇಳಾತ್ಮನಂತಾ ।
ಗುಹೆಗೆ ಪತಿಯಾನೆನ್ನ ನಾಮದ ।
ಮಹಿಮೆ ತಾನು ಗುಹೇಶ್ವರಾಂಕಿತವಾದ ಕತದಿಂದೆ ॥
ಮಹಿಯಲೌಕಿಕರಲ್ಲಿ ಮರಹಿಸಿ
ವಿಹಿತವೆಂಬಂತಿರೆ ಗುಹೇಶ್ವರ
ಸಹಜ ನಾಮವ ನಟಿಸಿದೆನು ನಾನೆನ್ನ ಲೀಲೆಯಲಿ ॥
(ಪ್ರ. ಲಿಂ. ಲೀ. ಗೋರಕ್ಷನಗತಿ, ಪದ ೪೫)

ಚಾಮರಸನ ಸಮಕಾಲೀನನಾದ ಮಗ್ಗೆಯ ಮಾಯಿದೇವನೂ ತನ್ನ ಶಿವಾಧವಶತಕದಲ್ಲಿ 'ಪ್ರಭುವೆ ಮಹಾಗುರು ಪ್ರಭುವೆ ಲಿಂಗಕಳಾ ಪ್ರಭುವೇ ಚರಾಭಿದ ಪ್ರಭುವೆ ಶಿವಾತ್ಮ ವಿತ್ಪ್ರಭುವೆ ಯೋಗಿವರ ಪ್ರಭುವೇ' ಚಿದಂಗನಾ ಪ್ರಭುವೆ ಸದಾಮಲ್ಲಪ್ರಭುವೆ ರಕ್ಷಿಸು ದೇವ ಗುಹೇಶ್ವರಾಲ್ಲಮಪ್ರಭುವೆ ನಿರಂಜನ ಪ್ರಭುವೆ ಮತ್ಪ್ರಭುವೇ' ಎಂದು 'ಗುಹೇಶ್ವರ' ಪದವನ್ನೇ ಎತ್ತಿಹಿಡಿದಿದ್ದಾರೆ.

ಗುಹೇಶ್ವರಾಂಕಿತವು ನೂರೊಂದು ವಿರಕ್ತರ ಕಾಲದ ಕಲ್ಪನೆಯೆನ್ನಲೂ ಬರುವಂತಿಲ್ಲ. ವಚನ ಸಾಹಿತ್ಯದಲ್ಲಿಯೇ ಅದಕ್ಕೆ ಪುಷ್ಟಿ ದೊರೆಯುತ್ತಿದೆ. "ಐದರ

ಗುಹೆಯೊಳಗೆ ಗುಹೇಶ್ವರನಾದೆ" ಎಂಬ ಮನುಮುನಿಗುಮ್ಮಟಯ್ಯಗಳ ವಚನ, 'ಗುಹೇಶ್ವರಪ್ರಿಯ ನಿರಾಳಲಿಂಗ' ಎಂಬ ಇನ್ನೊಬ್ಬ ಅಜ್ಞಾತ ವಚನಕಾರನ ಅಂಕಿತದ ಶೋಧ, ಲಿಂಗಲೀಲಾ ವಿಲಾಸ ಚಾರಿತ್ರದಲಿ (ಪುಟ ೪೧೪) 'ದೇಹವೆಂಬ ಗುಹೆಗೆ ಈಶ್ವರನೆನೆಸಿಕೊಂಡು ಮಹಾಘನಲಿಂಗವು' ಎಂಬ ಕಲ್ಲುಮಠದ ಪ್ರಭುದೇವರ ವ್ಯಾಖ್ಯೆ 'ಗುಹೇಶ್ವರ'ನೆಂಬುದೇ ಹೆಚ್ಚು ಸಮರ್ಪಕವಾದ ಅಂಕಿತವೆಂಬುದನ್ನು ದೃಢಪಡಿಸುತ್ತವೆ. ಆದುದರಿಂದ ಈ ಗ್ರಂಥದಲ್ಲಿ ಇದೇ ಅಂಕಿತವನ್ನೇ ಅಂಗೀಕರಿಸಿಕೊಂಡಿದ್ದೇನೆ.

ಇನ್ನು ಅಕ್ಕಮಹಾದೇವಿಯ ಮದುವೆಯ ವಿಚಾರ. ಇದೊಂದು ಅತ್ಯಂತವಾದಗ್ರಸ್ಥ ವಿಷಯ. ಕನ್ನಡ ಸಾಹಿತ್ಯದಲ್ಲಿ ಹರಿಹರನ ಮಹಾದೇವಿಯಕ್ಕನ ರಗಳೆ, ಚೆನ್ನಬಸವಾಂಕನ ಪುರಾಣ, ಕೆಂಚವೀರಣ್ಣೊಡೆಯರ ಶೂನ್ಯಸಂಪಾದನೆಗಳು ಅವಳಿಗೆ ಮದುವೆಯಾಗಿದ್ದಿತೆಂದು ಹೇಳುತ್ತವೆ; ಚಾಮರಸನ ಪ್ರಭುಲಿಂಗಲೀಲೆ, ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ ಮತ್ತು ಉಳಿದ ವೀರಶೈವ ಪುರಾಣಗಳು ಮದುವೆಯಾಗಿರಲಿಲ್ಲವೆಂದು ಸಮರ್ಥಿಸುತ್ತವೆ. ತೆಲುಗು ವೀರಶೈವಸಾಹಿತ್ಯ ಮದುವೆಯಾಗಿರಲಿಲ್ಲವೆಂಬುದಕ್ಕೆ ಪುಷ್ಟಿಯನ್ನೀಯುತ್ತದೆ. ಅಕ್ಕಮಹಾದೇವಿಯ ವಚನಗಳಲ್ಲಿಯೇ ಮದುವೆಯಾಗಿದ್ದಿತೆಂಬುದಕ್ಕೆ ಕೆಲವು ವಿರೋಧಕವಾಗಿ, ಒಂದೆರಡು ಸಾಧಕವಾಗಿ ಇವೆ. ಇತರ ವಚನಕಾರರ ವಚನಗಳಲ್ಲಿ ಒಂದೆರಡು ಕಡೆಗೆ ಮದುವೆಯಾಗಿರಲಿಲ್ಲವೆಂಬ ಅಭಿಪ್ರಾಯ ಹೊರಟರೆ ಬಂದರೆಡು ಕಡೆಗೆ ಮದುವೆಯಾಗಿದ್ದಿತೇನೋ ಎಂಬ ಅನುಮಾನ ಹೊರಡುತ್ತದೆ.

ವೀರಶೈವ ಕವಿಗಳಲ್ಲಿ ಅತ್ಯಂತ ಪ್ರಾಚೀನನಾದ ಹರಿಹರನು ಮದುವೆ-ಯಾಗಿದ್ದಿತೆಂದು ಸ್ಪಷ್ಟವಾಗಿ ಬರೆದಿರುವಾಗ ಮದುವೆಯಾಗಿದ್ದಿತೆಂದು ಅಂಗೀಕರಿಸಿಕೊಳ್ಳಲು ಯಾವ ಅಭ್ಯಂತರವೂ ಇಲ್ಲ. ಆದರೆ ನಾನು ಹರಿಹರನು ನಿರೂಪಿಸಿದ ಅಕ್ಕಮಹಾದೇವಿಯ ಚರಿತ್ರೆಯನ್ನು ಅನುಸರಿಸದಿರಲು ಕಾರಣ ಅವನ ಮಹಾದೇವಿಯಕ್ಕನ ರಗಳೆಯಲ್ಲಿ ಬರುವ ಪಾತ್ರ ಸೃಷ್ಟಿಯಲ್ಲಿರುವ ವೈಪರೀತ್ಯಗಳು. 'ಎಲೆ ಮಗಳೆ ಮಗಳೆ ನಿನ್ನಯ ದೂಸರಿಂದೆಮಗೆ, ನೆಲಸಿತ್ತು ದುರ್ಮರಣವೇನೆಂಬೆ ವೃದ್ಧರಿಗೆ' ಎಂದು ಮಗಳ ಹಿತಕ್ಕಿಂತಲೂ ತಮ್ಮ ಜೀವಿತಕ್ಕಾಗಿ ಹಲುಬುವ ತಂದೆ ತಾಯಿಗಳು, 'ಮೂರು ತಪ್ಪುಗಳನ್ನು ಸೈರಿಸುವೆ – ಆಮೇಲೆ ನಾನೊಲಿದಂತೆ ಇರುವೆ' ಎಂಬ ಕರಾರಿನ ಮೇಲೆ ಕೌಶಿಕನನ್ನು ಮದುವೆಯಾಗಿ ಇರುವಷ್ಟು ದಿವಸವೂ ಅವನು ಪತಿಯಲ್ಲ – ಪಾತಕಿಯೆಂಬಂತೆ ಬಾಳಿ, ('ಘಡಘಡ ಪಚ್ಚೆ ಪಸಿಯ ಪಾತಕನೆ'.....ಕೌಶಿಕನ ಮೊಗಮಂ ಕಂಡಲಗಿನ ಮೊನೆಯಂ

ಕಂಡಂತಳ್ಕಿ'......ಇತ್ಯಾದಿ ಉಕ್ತಿಗಳಲ್ಲಿ ವ್ಯಕ್ತಿಪಟ್ಟಿರುವಂತೆ) ಕೊನೆಗೆ 'ಭವಿಸಂಗ ಬಳಸಾರ್ದುದು' ಎಂದು ಹೊರಟ ಮಹಾದೇವಿ, 'ಬಲ್ಪಿಂದ ಮೆಲ್ಪಿಂದಮೆಂತಾದೊಡಂ ಪೋಗಿ, ಕಲ್ಪಕುಜ ಪಲ್ಲವಾಧರೆಯನೆನಗನುವಾಗಿ ತನ್ನಿರೇ.....'ಎಂದು ಬಲಾತ್ಕಾರದಿಂದ ಅವಳನ್ನು ಮದುವೆಯಾಗಿ, ಅವಳು ತನ್ನನ್ನು ತ್ಯಜಿಸಿ ಹೋದ ಮೇಲೂ ಶ್ರೀಗಿರಿಯವರೆಗೆ ಬೆಂಬತ್ತಿ ಹೋಗಿ, 'ಕಲುಮಠದ ರಾಜಗುರುಗಳಿಗೆ ಹೊನ್ನೀವುತಂ। ಹುಲು ಮಠದ ಮುಖ್ಯರ್ಗೆ ಘನಲಂಚವೀವುತಂ' ತನ್ನ ಅವನತಿಯ ಆವಳನ್ನು ಸೂಚಿಸುವ ಕೌಶಿಕ, ಅವನ ಲಂಚಕ್ಕೆ ಒಳಗಾಗಿ ಅಳಿಗಜ್ಜಕ್ಕೆ ಒಪ್ಪುವ ಆ ಗುರುಗಳು– ಎಲ್ಲರೂ ವಿಪರೀತ ವ್ಯಕ್ತಿಗಳಾಗಿ ತೋರುವುದಿಲ್ಲವೆ ಹರಿಹರನ ರಗಳೆಯಲ್ಲಿ?

ಪ್ರಭುಲಿಂಗಲೀಲೆಯಲ್ಲಿಯಾದರೋ 'ಆಕೆಯನು ಕೇಳುವುದು ದಿಟಬಳಿ। ಕಾಕೆ ಸಣ್ಣಹ ಮಗಳೆ ಯದೆಜೆಂ । ದಾಕೆಯನೆ ನೆಜೆ ತಿಳಿದೊಡಂಬಡಿಸುವುದು ಬುದ್ಧಿಯಲಿ ॥' ಎಂಬ ತಂದೆತಾಯಿಗಳಿದ್ದಾರೆ ; 'ಲಲನೆ ಕೇಳೌ ನಿನ್ನ ಬಯಕೆಯ। ಸಲ್ಲಿಸುವೆನು ಮೊದಲಲ್ಲಿ ಬಳಿಕಾ । ನೋಲಿಸಿ ಕೊಂಬೆನು ನಿನ್ನನಂತಲ್ಲದೆ ದುರುಕ್ತಿಯಲಿ॥ ನೆಲನೊಡೆಯ ನಾನೆಂಬ ಗರ್ವದ ಬಲುಹುಗಿಲುಹನು' ಮಾಡೆನೆಂಬ ಕೌಶಿಕನಿದ್ದಾನೆ; ' 'ನೀನು ಸಲೆ ಶಿವಭಕ್ತನಾದೊಡೆ ಕೂಡುವೆನು ನಿನ್ನ' ಎಂದು ನಿಜವನ್ನೇ ನುಡಿದು, 'ನಮಗೆ ಶಿವಭಕ್ತಿಯನು ಮಾಡುವ ಸಮಯವಳವಡದೆಂದು ಕೌಶಿಕನು ನುಡಿಯಲು 'ನಮಗೆ ನಿಮ್ಮಯ ಸಂಗವಳವಡದು' ಎಂದು ನಿಷ್ಠುರವಾಗಿ ಹೇಳುವ ಮಹದೇವಿಯಕ್ಕನಿದ್ದಾಳೆ: ಅವಳನ್ನು 'ಮಹೀತನಾದೊಡೆ ಹೋಗಲೆನುತ ನಿರಾಸೆಯಿಂದಲಿ ಹೋಗಬಿಟ್ಟು ತಾನೊಬ್ಬ ವಿವೇಕಶೀಲನಾದ ದೊರೆಯೆಂಬುದನ್ನು ತೋರುವ ಕೌಶಿಕನಿದ್ದಾನೆ. ಆದುದರಿಂದ ನನ್ನ ಸಾಹಿತ್ಯಿಕ – ತಾತ್ವಿಕ ದೃಷ್ಟಿಗೆ ಚಾಮರಸನ ಪಾತ್ರ ಚಿತ್ರಣವೇ ಸರಿದೋರಿದ ಕಾರಣ ಅದನ್ನೇ ಅನುಸರಿಸಿದ್ದೇನೆ.

ಮೇಲೆ ವಿವರಿಸಿದ ಉದಾಹರಣೆಗಳಿಂದ ಈ ಚರಿತ್ರೆಗಳನ್ನು ಬರೆದ ನನ್ನ ದೃಷ್ಟಿ ಯಾವುದೆಂಬುದು ವಿದಿತವಾಗದಿರದು. ಅದು ವಿರೋಧಾಭಾಸಗಳಲ್ಲಿ ಸಮನ್ವಯವನ್ನೂ ಸಾಮಂಜಸ್ಯವನ್ನೂ ಕಾಣಲೆಳಸಿದ ದೃಷ್ಟಿ ; ವಕ್ರತೆಯಲ್ಲಿಯ ಸರಳತೆಯನ್ನು, ಅಸಹಜತೆಯಲ್ಲಿಯ ಸಹಜತೆಯನ್ನು, ಅಮಾನುಷದಲ್ಲಿಯ ಮಾನವೀಯತೆಯನ್ನು ನೋಡಬಯಸಿದ ದೃಷ್ಟಿ ಅದು ನೋಡಿ ನಂಬಿದುದೆಲ್ಲ ಸರಿಯೆಂಬ ಜಂಭ ನನಗಿಲ್ಲ. ತಪ್ಪುಗಳನ್ನು ತೋರಿಸಿದರೆ ಒಪ್ಪಿಕೊಳ್ಳಬೇಕೆಂಬ ಹಂಬಲವಿದೆ.

ಹರಿಹರನಿಂದ ಹಳಕಟ್ಟಿಯವರವರೆಗೆ ಅನೇಕರು ಸಾವಿರಾರು ಶರಣರ ಚರಿತ್ರೆಗಳನ್ನು ಬರೆದಿದ್ದಾರೆ. ಹರಿಹರನ ರಗಳೆಗಳೂ, ಪಾಲ್ಕುರಿಕೆ ಸೋಮನಾಥನ

ಕೃತಿಗಳು, ಶಿವತತ್ವಚಿಂತಾಮಣಿ, ಗುರುರಾಜ ಚಾರಿತ್ರ, ಪ್ರೌಢರಾಯನ ಕಾವ್ಯ, ವೀರಶೈವಾಮೃತ ಮಹಾಪುರಾಣ, ಚೆನ್ನಬಸವ ಪುರಾಣ, ವೃಷಭೇಂದ್ರ ವಿಜಯ, ಶರಣಲೀಲಾಮೃತ, ಭೈರವೇಶ್ವರ ಕಾವ್ಯ ಕಥಾಸೂತ್ರ ರತ್ನಾಕರ, ಭೈರವೇಶ್ವರ ಕಾವ್ಯ ಬಸವೇಶ್ವರ ವಚನದ ಕಥಾಸಾರ, ಬಸವೇಶ್ವರ ಪುರಾಣದ ಕಥಾಸಾಗರ, ಭೈರವೇಶ್ವರ ಕಾವ್ಯದ ಕಥಾಸಾಗರ, ೭೭೦ ಅಮರಗಣಾಧೀಶ್ವರರು, ಗಣಸಹಸ್ರ ಇತ್ಯಾದಿ ಅನೇಕ ಆಕರಗಳಿಂದ ಅತ್ಯಂತ ಪರಿಶ್ರಮಪೂರ್ವಕವಾಗಿ ನನ್ನ ಮಗಳು ಕು॥ ವಿಜಯಲಕ್ಷ್ಮೀ ಸಿದ್ಧಪಡಿಸಿರುವ ಅನುಬಂಧ ೨ರಿಂದ ಶರಣವಂಶದ ವಿಸ್ತಾರದ ಕಲ್ಪನೆಯಾಗದಿರದು. ಈ ಅನುಬಂಧದಲ್ಲಿ ಸೇರ್ಪಡೆಯಾಗದೆ ಉಳಿದವರು ಎಷ್ಟೆಂಬುದನ್ನು ಊಹಿಸುವುದು ಕಷ್ಟ. ಊರೂರಿಗೆ ಅವರ ಕುರುಹುಗಳಿವೆ, ಜನಜನಿತ ಐತಿಹ್ಯಗಳಿವೆ. ದಂತಕಥೆಗಳಿವೆ. ಸ್ಥಳಪುರಾಣಗಳಿವೆ – ಏನೇನೋ ಇವೆ. ಆದರೆ ಚರಿತ್ರೆಗಳಿಲ್ಲ. ಸಂಶೋಧನೆ ಮುಂದುವರಿದಂತೆ ಅನುಬಂಧ ೨ರಲ್ಲಿ ಇನ್ನೂ ಅನೇಕರ ಹೆಸರುಗಳನ್ನು ಸೇರಿಸಬೇಕಾಗಬಹುದು.

‘ಇವರಲ್ಲಿ ಈ ಗ್ರಂಥಕ್ಕಾಗಿ ಯಾರನ್ನು ಆರಿಸಿಕೊಳ್ಳುವುದು? ಎಂಬ ಪ್ರಶ್ನೆ ಎದುರಾಯಿತು. ಈ ಪ್ರಶ್ನೆ ಬಹಳ ತೊಡಕಿನದಾಗಿ ಒಬ್ಬೊಬ್ಬರ ಆತ್ಮಶ್ರೀ ಒಂದೊಂದು ವಿಧ. ಆದರೆ ಎಲ್ಲರ ಚರಿತ್ರೆಗಳನ್ನೂ ಈ ಗ್ರಂಥದ ಗಾತ್ರದಲ್ಲಿ ತರುವುದು ಸಾಧ್ಯವೆ? ಕೆಲವೊಂದು ಸಮುಚಿತ ಸೂತ್ರಗಳನ್ನು ಅವಲಂಬಿಸಿ, ಕೆಲವರನ್ನೇ ಆರಿಸಿಕೊಳ್ಳುವುದು ಅನಿವಾರ್ಯವಾಯಿತು. ಕೆಳಗಣ ಪಂಚಸೂತ್ರಗಳನ್ನು ಆಧರಿಸಿ ಅರುವತ್ತುಮೂವರನ್ನು ಆರಿಸಿಕೊಳ್ಳಲಾಯಿತು–

(೧) ಭಾರತದ ಎಲ್ಲ ಭಾಗಗಳ ಶರಣರೂ ಸೇರ್ಪಡೆಯಾಗಬೇಕು.

(೨) ಪ್ರಾರಂಭದಿಂದ ಇಂದಿನವರೆಗೆ ಎಲ್ಲ ಶತಮಾನಗಳ ಶರಣರೂ ಸೇರ್ಪಡೆಯಾಗಬೇಕು.

(೩) ಸಾಧ್ಯವಿರುವಷ್ಟು ಶರಣೆಯರೂ ಸಮಾವೇಶವಾಗಬೇಕು.

(೪) ಎಲ್ಲ ಕಾಯಕಗಳೂ ಪ್ರತಿನಿಧಿಸಲ್ಪಡಬೇಕು.

(೫) ಆಯ್ದುಕೊಂಡ ಚರಿತ್ರೆಗಳು ಪರಮತದೂಷಣೆ ಮೊದಲಾದುವುಗಳಿಂದ ನಿರ್ಲಿಪ್ತವಾಗಿರಬೇಕು.

ಸಕೃದ್ದರ್ಶನಕ್ಕೆ ಅರುವತ್ತುಮೂರರ ಚರಿತ್ರೆಗಳೆಂದು ತೋರಿದರೂ ನೂರಾರು ಶರಣರ ಚರಿತ್ರೆಗಳು ಸಮಾವೇಶವಾಗಿದೆ ಈ ಗ್ರಂಥದಲ್ಲಿ. ಗ್ರಂಥಮಾದಾರ ಚೆನ್ನಯ್ಯನಿಂದ ಮೊದಲಾಗುತ್ತದೆ. ಇದು

“ಗೋತ್ರನಾಮವ ಬೆಸಗೊಂಡರೆ

ಮಾತು ನೂಂಕದೆ ಸುಮ್ಮನಿದ್ದಿರದೇನಯ್ಯ?
ತಲೆಯ ಕುತ್ತಿ ನೆಲದ ಬರೆಯುತ್ತಿದ್ದಿರಿದೇನಯ್ಯಾ?
ಗೋತ್ರ ಮಾದಾರ ಚೆನ್ನಯ್ಯ,
ಡೋಹಾರ ಕಕ್ಕಯ್ಯನೆಂಬುದೇನು,
ಕೂಡಲ ಸಂಗಯ್ಯಾ?"

ಎಂಬ ಬಸವಣ್ಣನವರ ವಚನಕ್ಕೆ ಅನುಗುಣವಾಗಿಯೇ ಇದೆ. ಮಾದಾರ ಚೆನ್ನಯ್ಯನಿಂದ ಮೊದಲಾಗುವ ಈ ಗ್ರಂಥದಲ್ಲಿ ಮಂತ್ರಿಗಳಿದ್ದಾರೆ, ಮಹಾಕವಿಗಳಿದ್ದಾರೆ, ಸಂಸಾರಿಗಳಿದ್ದಾರೆ, ಸನ್ಯಾಸಿಗಳಿದ್ದಾರೆ, ಬಡವರಿದ್ದಾರೆ, ಬಲ್ಲಿದರಿದ್ದಾರೆ, ಕೊಡಗೂಸಿನಿಂದ ಮುಪ್ಪಿನ ಷಡಕ್ಷರಿಯವರಿಗೆ ಎಲ್ಲ ವಯಸ್ಸಿನವರೂ ಇದ್ದಾರೆ, ಶರಣೆಯರಿದ್ದಾರೆ, ಎಲ್ಲ ಬಗೆಯ ಅನುಭಾವಿಗಳಿದ್ದಾರೆ. ಆದುದರಿಂದ ಇದು ಎಲ್ಲ ಅಭಿರುಚಿಗಳಿಗೂ ಅಪ್ಯಾಯನವಾಗನಬಹುದೆಂದು ಆಶಿಸಿದ್ದೇನೆ.

ಇದರಲ್ಲಿ ಉಲ್ಲೆಖಿತವಾಗಿರುವ ಚರಿತ್ರೆಗಳಲ್ಲಿ ಸಾಧ್ಯವಿರುವಷ್ಟೂ ಪವಾಡಗಳನ್ನುಳಿದು ಮಾನವೀಯಾಂಶಗಳಿಗೆ ಮಹತ್ವಕೊಟ್ಟಿದ್ದೇನೆ. ಆದರೆ ಕೆಲವೆಡೆ ಅಪರಿಹಾರ್ಯವಾಗಿ ಪಾವಡಗಳು ಬಂದಿವೆ. ಅವರೇ ಬರೆದ ಇಲ್ಲವೆ ಅವರ ಬಗ್ಗೆ ಉಪಲಬ್ಧವಿರುವ ಕೃತಿಗಳಲ್ಲಿ ಪವಾಡಗಳನ್ನುಳಿದು ಚರಿತ್ರೆಯನ್ನು ರೂಪಿಸಲು ಸಾಕಾಗುವಷ್ಟು ಸಾಮಗ್ರಿ ಎಲ್ಲೆಲ್ಲಿ ದೊರೆಯಿತೋ ಅಲ್ಲಲ್ಲಿ ಪವಾಡಗಳನ್ನು ಪೂರ್ತಿಯಾಗಿ ಬಿಟ್ಟು ಚರಿತ್ರೆಯನ್ನು ನೆಯ್ಯಲಾಗಿದೆ. ಇಂಥ ಸಾಮಗ್ರಿ ಸಿಕ್ಕದೆ ಹೋದಲ್ಲಿ ಪವಾಡಗಳನ್ನು ಚರ್ವಿತಚರ್ವಣಕ್ಕೆಡೆಗೊಡದಂತೆ ಹಿತಮಿತವಾಗಿ ಬಳಸಿಕೊಳ್ಳಲಾಗಿದೆ ಜಗತ್ತಿನ ಯಾವ ಮಹಾಪುರುಷರ ಚರಿತ್ರೆಗಳೂ ಪವಾಡಗಳಿಗೆ ಅಪವಾದವಾಗಿ ಉಳಿದಿಲ್ಲ. ಮೇಲಾಗಿ, ವಿಜ್ಞಾನ ತತ್ತ್ವಜ್ಞಾನಗಳ ಸಮನ್ವಯದಿಂದ ಇಂದಿನ ದಾರ್ಶನಿಕ ಪ್ರಪಂಚಕ್ಕೇ ಹೊಸ ನೋಟವನ್ನು ನೀಡಿದ ಮಹಾಗುರು ಅರವಿಂದರು ಸಹ, "Great saints have performed miracles; greater saints have reiled at them; the greatest have both railed at them and performed them"

ಎಂದು ಅಪ್ಪಣೆ ಕೊಡಿಸಿರುವಾಗ ಅನಿವಾರ್ಯವೆನಿಸಿದೆಡೆಗಳಲ್ಲಿ ಪವಾಡಗಳನ್ನು–ಪಯೋಗಿಸಿಕೊಂಡುದು ಕ್ಷಮ್ಯವೆನಿಸಬಹುದೆಂದು ನಂಬಿದ್ದೇನೆ.

ಈ ಗ್ರಂಥದಲ್ಲಿ ಅನುಸರಿಸಿರುವ ಚರಿತ್ರ ನಿರೂಪಣ ಪದ್ಧತಿಯ ಬಗ್ಗೆ ಅಲ್ಪ ವಿವರಣೆ ಅಗತ್ಯ ಅವರೇ ಬರೆದ ಇಲ್ಲವೆ ಅವರ ಬಗ್ಗೆ ಅನ್ಯರು ಬರೆದ ಕೃತಿಗಳ

ಸಾರವತ್ತಾದ ಭಾಗಗಳನ್ನು ಸಾಧ್ಯವಿರುವೆಡೆಗಳಲ್ಲೆಲ್ಲ ಉದಾಹರಿಸಿದ್ದೇನೆ. ಜನಪದ ಸಾಹಿತ್ಯದಿಂದ ಶಾಸನಗಳವರೆಗೆ ಎಲ್ಲ ಬಗೆಯ ಸಾಹಿತ್ಯವನ್ನೂ ಬಳಿಸಿಕೊಂಡಿದ್ದೇನೆ.

ಆ ಎಲ್ಲವನ್ನೂ ಎಲ್ಲರೂ ಓದಿಕೊಳ್ಳುವುದು ಸಾಧ್ಯವಿಲ್ಲ. ಆದುದರಿಂದ ಇದೊಂದನ್ನೇ ಓದಿದರೂ ಆ ಎಲ್ಲ ಸಾಹಿತ್ಯದ ಸವಿ ಸ್ವಲ್ಪವಾದರೂ ಲಭಿಸಲಿ– ಎಂಬ ಉದ್ದೇಶದಿಂದ ಈ ಪದ್ಧತಿಯನ್ನು ಅನುಸರಿಸಿದ್ದೇನೆ. ಇದು ಸಾಮಾನ್ಯ ಓದುಗರಿಗೆ ಸ್ವಲ್ಪ ಜಡವಾಗಬಹುದು. ಆದರೆ ಇದರ ಕೆಲವು ಭಾಗಗಳನ್ನು ಹಳ್ಳಿಗರಿಗೆ ಓದಿ ಹೇಳಿ ಅವರ ಅಭಿಪ್ರಾಯ ಕೇಳಿದಾಗ, ಪರವಾ ಇಲ್ಲ. ಸ್ವಲ್ಪ ಕಠಿಣವಾದರೂ ಸರಿ. ಹೀಗೆಯೇ ಬರೆಯಿರಿ. ಒಮ್ಮೆ ಓದಿದರೆ ಅರ್ಥವಾಗದಿದ್ದರೆ ಹತ್ತು ಸಲ ಓದಿಕೊಳ್ಳುತ್ತೇವೆ. ಇಲ್ಲವೆ ಓದಿಸಿ ಕೇಳುತ್ತೇವೆ. ಇಂಥ ಪುಸ್ತಕ ಓದದೆ ಇನ್ನೆಂಥ ಪುಸ್ತಕ ಓದಬೇಕು?' ಎಂದು ಹೇಳಿ ಧೈರ್ಯವಿತ್ತರು. ಅವರ ಸೌಕರ್ಯಕ್ಕಾಗಿ ಕಾವ್ಯಭಾಗಗಳನ್ನು ಉದಾಹರಿಸುವಾಗ ರಳಕುಳಗಳ ಭೇದವನ್ನು ಬುದ್ಧಿಪೂರ್ವಕವಾಗಿ ಬಿಟ್ಟುಬಿಟ್ಟಿದ್ದೇನೆ. ಆದುದರಿಂದ ಅವರಿದನ್ನು ಮೆಚ್ಚುವರೆಂಬ ವಿಶ್ವಾಸವುಳ್ಳವನಾಗಿದ್ದೇನೆ.

'ಈ ಗ್ರಂಥದಲ್ಲಿ ಪಂಚಾಚಾರ್ಯರ ಚರಿತ್ರೆಗಳನ್ನು ಸೇರ್ಪಡಿಸುವುದೆ, ಬಿಡುವುದೆ?' ಎಂಬ ಪ್ರಶ್ನೆ ಎದುರಾಯಿತು. ಈ ಬಗ್ಗೆ ಯೋಚಿಸಿದಷ್ಟೂ ಸಂದಿಗ್ಧತೆ ಹೆಚ್ಚಾಗುತ್ತಾ ಹೋಯಿತು. ಕೊನೆಗೆ ಹಿತೈಷಿಗಳೂ 'ಪಂಚಾಚಾರ್ಯ ಪ್ರಭಾ' ಪತ್ರಿಕೆಯ ಸಂಪಾದಕರೂ ಆದ ಶ್ರೀ ಮಹಾದೇವಿಯ್ಯನವರನ್ನು ಕೇಳಿದೆ. 'ಅವರು ಸಾರಾಸಾರ ವಿಚಾರ ಮಾಡಿ ಶಿವಶರಣರ ಚರಿತ್ರೆಗಳ ಈ ಪುಸ್ತಕದಲ್ಲಿ ಆಚಾರ್ಯರ ಚರಿತ್ರೆಗಳನ್ನು ಸೇರಿಸದಿರುವುದೇ ಮೇಲು' ಎಂದು ಅಭಿಪ್ರಾಯಪಟ್ಟರು. ಅದರಂತೆ ಆಚರಿಸಿದೆ.

ಇದನ್ನು ಪ್ರಾರಂಭಿಸಿದಾಗ, 'ನನ್ನಿಂದ ನೀಗದ ಕಾರ್ಯವನ್ನು ಕೈಕೊಂಡೆ ; ಕೊನೆಗೂ ಅದು ನನ್ನಿಂದ ಕೊನೆಗಾಣುವುದೋ ಇಲ್ಲವೋ' ಎಂಬ ಸಂಶಯ ಕಲ್ಲೋಲಗಳು ಮನಸ್ಸಿನ ಮೇಲೆ ಮೂಡಿ ಮೂಡಿ ಮಾಯವಾಗುತ್ತಿದ್ದವು. ಆದರೆ ಕಾರ್ಯ ಮುಂದುವರಿದಂತೆ ಶರಣರ ಕರುಣೆಯಿಂದ, ಹಿರಿಯರ ಹರಿಕೆಯಿಂದ, ಸಂಶಯ ಕರಗುತ್ತ ನಂಬಿಕೆ ಬಲಿಯುತ್ತ ಹೋಯಿತು. ಕೊನೆಗೊಮ್ಮೆ ಇದನ್ನು ಮುಗಿಸಿದಾಗ ಎಂಥ ಕೃತಕೃತ್ಯತೆ ಮನವನ್ನಾವರಿಸಿತು ! ಎಂಥ ಧನ್ಯತೆಯ ಅನುಭವವಾಯಿತು !

ಈ ಧನ್ಯತೆಗೆ ದಾರಿಮಾಡಿಕೊಟ್ಟವರು ದಾನಶೂರರಾದ ನಿರ್ವಾಣೇಗೌಡರು– ದೇವೇಗೌಡರು, ಅವರ ಸಹೋದರರು, 'ವಯಸ್ಕರ ಶಿಕ್ಷಣ ಸಮಿತಿ'ಯ ಅಧಿಕಾರಿವರ್ಗದವರು, ಪ್ರೊ ॥ ಜಿ.ಎಸ್. ಹಾಲಪ್ಪನವರು. ಇವರೆಲ್ಲರೂ ನನ್ನಿಂದಲೇ

ಈ ಗ್ರಂಥ ಬರೆಸಬೇಕೆಂದು ನಿರ್ಧರಿಸಿ, ನಾನು ತಡಮಾಡಿದಷ್ಟೂ ತಾಳ್ಮೆಯನ್ನು ತೋರಿ ಆಗಾಗ ನೆನಪುಕೊಟ್ಟ ಬೆನ್ನುತಟ್ಟಿ ನನ್ನಿಂದ ಈ ಕಾರ್ಯವನ್ನು ಮಾಡಿಸಿದ್ದಾರೆ. 'ವಯಸ್ಕರ ಶಿಕ್ಷಣ ಸಮಿತಿ'ಯ ದಕ್ಷ ಅಧ್ಯಕ್ಷರಾದ ಶ್ರೀ ಭದ್ರಯ್ಯನವರಂತೂ ನನ್ನನ್ನು ತಮ್ಮ ತಮ್ಮನೆಂದೇ ತಿಳಿದು ಪದೇ ಪದೇ ಪ್ರೋತ್ಸಾಹಿಸಿದ್ದಾರೆ. ಸಮಿತಿಯ ಆಡಳಿತಗಾರರಾದ ಶ್ರೀ ಮುನಿಸ್ವಾಮಿಯವರು ಬೇಸರಿಲ್ಲದಂತೆ ಬರೆದು ಬರೆದು, ನನಗೆ ನೆನಪು ಕೊಟ್ಟು ನೆರವಾಗಿದ್ದಾರೆ. ಇವರೆಲ್ಲರಿಗೆ ನನ್ನ ನಮನಗಳು.

ಮಹಾಕಾವಿಗಳೂ ಮಹಾಮಾನವರೂ ಆದ ಪದ್ಮಭೂಷಣ ಡಾಕ್ಟರ್ ಕೆ.ವಿ ಪುಟ್ಟಪ್ಪನವರು ಕೃಪೆಯಿಟ್ಟು ತಮ್ಮ ಅತ್ಯಮೂಲ್ಯವಾದ ಮುನ್ನುಡಿಯಿಂದ ಈ ಕೃತಿಯ ಬೆಲೆಯನ್ನು ಹೆಚ್ಚಿಸಿದ್ದಾರೆ. ಅವರಿಂದ ನನ್ನ ಕೃತಿಯೊಂದಕ್ಕೆ ಮುನ್ನುಡಿ ಪಡೆಯಬೇಕೆಂದಿದ್ದ ನನ್ನ ಅನೇಕ ವರ್ಷಗಳ ಆಸೆ ಈಗ ಈಡೇರಿದೆ. ನನಗೆ ಅಪಾರವಾದ ಆನಂದವಾಗಿದೆ. ಅವರ ಈ ಔದಾರ್ಯಕ್ಕೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

ಸಲಹೆ ಸಾಹಿತ್ಯಗಳನ್ನು ನೀಡಿದವರ ಸಂಖ್ಯೆ ದೊಡ್ಡದು. ಪ್ರೋ ॥ ಡಿ.ಕೆ. ಭೀಮಸೇನರಾಯರು, ಡಾ॥ ಪಿ.ಜಿ. ಹಳಕಟ್ಟಿಯವರು, ರೆ. ಉತ್ತಂಗಿ ಚೆನ್ನಪ್ಪನವರು, ಡಾ॥ ಎಸ್.ಸಿ. ನಂದೀಮಠರು, ಎಚ್. ದೇವಿರಪ್ಪನವರು. ಡಾ॥ ಬಿ.ಎಸ್.ಗದ್ದಿಗಿಮಠರು, ಪಂಡಿರತ್ನ ಬಿ. ಶಿವಮೂರ್ತಿಶಾಸ್ತ್ರಿಗಳವರು, ಸಿ. ಮಹಾದೇವಪ್ಪನವರು, ಎ.ಎಲ್. ಹಿರೇಮಠರು, ಪಿತೃದೇವ ಪಂಡಿತ ಕಲ್ಲಿನಾಥಶಾಸ್ತ್ರಿಗಳವರು, ಅನುಜ ಅನ್ನದಾನಯ್ಯ ಪುರಾಣಿಕರು, ಪ್ರೊ॥ ಆರ್.ಸಿ. ಹಿರೇಮಠರು, ಪ್ರೊ ॥ ಪಾ.ಭೀ. ದೇಸಾಯಿಯವರು, ಧರ್ಮಜ್ಞಶೇಖರ ಟಿ.ಎಚ್.ಎಂ. ಸದಾಶಿವಯ್ಯನವರು, ಶ್ರೀ ಕೆ.ಎಸ್. ಧರಣೇಂದ್ರಯ್ಯನವರು ಸಲಹೆ ಇಲ್ಲವೆ ಸಾಹಿತ್ಯವನ್ನು ನೀಡಿ ನೆರವಾಗಿದ್ದಾರೆ. ಇವರೆಲ್ಲರಿಗೂ ನನ್ನ ವಂದನೆಗಳು.

ಕನ್ನಡ ನಾಡಿನಲ್ಲಿ ಸಮತೆ–ಸ್ಥೈರಣೆಗಳು, ಪ್ರೀತಿ ವಿಶ್ವಾಸಗಳು, ಸ್ನೇಹ ಸಹಕಾರಗಳು, ಉಚ್ಚವಿಚಾರ–ಆಚಾರಗಳು ಬಳೆವುದಕ್ಕೆ ಈ ಗ್ರಂಥವು ಸ್ವಲ್ಪವಾದರೂ ಸಹಾಯಕವಾದರೆ ನನ್ನ ಶ್ರಮ ಸಾರ್ಥಕವೆಂದು ಭಾವಿಸಿದ್ದೇನೆ.

**– ಸಿದ್ಧಯ್ಯ ಪುರಾಣಿಕ**

ಗಣೇಶ ಚತುರ್ಥಿ
೨೬–೮–೧೯೬೦

## ನನ್ನ ಬಿನ್ನಹ (ಎರಡನೆಯ ಮುದ್ರಣ)

'ಶರಣ ಚರಿತಾಮೃತ'ದ ಎರಡನೆಯ ಆವೃತ್ತಿ ಪ್ರಕಟವಾಗುತ್ತಿಲಿರುವುದು ನನಗೆ ಇಮ್ಮಡಿ ಆನಂದವನ್ನುಂಟು ಮಾಡಿದೆ : ಕೊನೆಗೊಮ್ಮೆ ಬಹಳ ಬೇಡಿಕೆಯಿದ್ದ ಈ ಕೃತಿ ಮರುಮುದ್ರಣ ಕಂಡಿತಲ್ಲ–ಎಂಬ ಆನಂದ ಒಂದು ; ಇದರ ಪ್ರತಿಗಳಿಗಾಗಿ ನನಗೆ ಬರುತ್ತಿದ್ದ ಕಾಗದಗಳು ಇನ್ನು ಬರುವುದಿಲ್ಲವೆಂಬ ಆನಂದ ಇನ್ನೊಂದು.

ಇದರ ಮರುಮುದ್ರಣ ಪ್ರಾರಂಭಿಸುವ ಮುನ್ನ ಇದರ ಪ್ರಕಾಶಕರಾದ 'ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ'ಯ ಪದಾಧಿಕಾರಿಗಳ ಪರವಾಗಿ ಸಮಿತಿಯ ಪ್ರತಿನಿಧಿಗಳಿಬ್ಬರು ನನ್ನಲ್ಲಿಗೆ ಬಂದು ಈ ಕೃತಿಯಲ್ಲಿ ಏನಾದರೂ ಮಾರ್ಪಾಟುಗಳನ್ನು ಮಾಡುವುದಿದ್ದರೆ ಮಾಡಿಕೊಡಬೇಕೆಂದು ಕೇಳಿದರು. ಈ ಕೃತಿ ಪ್ರಕಟವಾದ ಮೇಲೆ ಇದರಲ್ಲಿ ಸಮಾವೇಶಗೊಂಡಿರುವ ಶಿವಶರಣರ ಬಗ್ಗೆ ನೂರಾರು ಹೊಸ ಹೊತ್ತಗೆಗಳು ಹೊರಗೆ ಬಂದಿವೆ. ಅವೆಲ್ಲವುಗಳನ್ನೂ ಓದಿ ಇದರಲ್ಲಿ ಅಲ್ಲಲ್ಲಿ ತಿದ್ದುಪಡಿಗಳನ್ನು ಮಾಡಲು ಒಂದು ವರ್ಷವಾದರೂ ಶ್ರಮಪಡಬೇಕಾದೀತು. ಇದಾಗಲೇ ಸಾಕಷ್ಟು ತಡವಾಗಿದೆ–ಇದರ ಮರುಮುದ್ರಣಕ್ಕೆ, ಇನ್ನೂ ತಡವಾಗುವುದು ಬೇಡ. ಮೇಲಾಗಿ, ಮಾಡಬೇಕಾಗಬಹುದಾದ ಮಾರ್ಪಾಟುಗಳು ಈ ಶರಣರ ಸ್ಥಲಕಾಲಾದಿಗಳಿಗೆ ಸಂಬಂಧಿಸಬಹುದಾಗಲಿ, ಅವರ ಬೋಧನೆಗಳ ಬಗ್ಗೆ ಯಾವ ಬದಲಾವಣೆಗಳನ್ನೂ ನಾನು ಮಾಡಬಯಸುವುದಿಲ್ಲ. ಉದಾಹರಣೆಗಾಗಿ, ಬಸವಣ್ಣನವರ ಜನನ ವರ್ಷ ಕ್ರಿ.ಶ. ೧೨೨೫ ಎಂದು ಇದರಲ್ಲಿ ಉಲ್ಲೇಖಿಸಿದ್ದೇನೆ. ಆದರೆ ಇತ್ತೀಚಿನ ಸಂಶೋಧನೆಗಳ ಫಲವಾಗಿ ನಾನೇ ಅವರ ಜೀವಿತಕಾಲ ೧೧೩೦–೩೧ ರಿಂದ ೧೧೬೭ ರ ಕೊನೆಯವರೆಗೆ–ಎಂಬ ತೀರ್ಮಾನಕ್ಕೆ ಬಂದಿದ್ದೇನೆ–ಕರ್ನಾಟಕ ವಿಶ್ವವಿದ್ಯಾಲಯವು ಪ್ರಕಟಿಸಿರುವ ನನ್ನ 'ಬಸವಣ್ಣನವರ ಜೀವನ ಹಾಗೂ ಸಂದೇಶ' ಎಂಬ ಪುಸ್ತಕದಲ್ಲಿ. ಇದಲ್ಲದೆ ಈ ಕೃತಿಯಲ್ಲಿ ಬರುವ ಹಡಪದ ಅಪ್ಪಣ್ಣ–ಲಿಂಗಮ್ಮರ ಚರಿತ್ರೆಯಲ್ಲಿ 'ಪ್ರಭುದೇವರನ್ನು ಗುರುಗಿಸುವಲ್ಲಿ ಅಪ್ಪಣ್ಣನವರಿಗೇ ಅಗ್ರಾತಾಂಬೂಲ' ಎಂದು ಪ್ರಾರಂಭವಾಗಿ 'ದುಃಖದ ಉದ್ವೇಗ ಹೆಚ್ಚಲು ಹೃದಯ ವಿದ್ರಾವಕ ಹಾಡಿದ್ದನ್ನು ಹಾಡಿದರು' ಎಂದು ಮುಗಿಯುವ ಭಾಗ (ಪುಟಗಳು ೩೪೪–೩೪೨) ಎರಡು ಸಲ ಅಚ್ಚಾಗಿದೆ.

ಹುಡುಕಿದರೆ ಇಂಥ ಹಲವು ತಪ್ಪುಗಳು ತಲೆದೋರಬಹುದು. ಆದರೆ ಅವು ಓದುಗರೇ ಸರಿಪಡಿಸಿಕೊಳ್ಳಬಹುದಾದ ತಪ್ಪುಗಳು. ಆದುದರಿಂದ ಅವುಗಳ ಅರಸುವಿಕೆಯಿಂದಲೂ ವಿಲಂಬವಾಗದಿರಲೆಂದು ಮುದ್ರಣ ಪ್ರಾರಂಭಿಸಿಬಿಡಲು ಹೇಳಿದೆ.

ಹೀಗೆ ಮರುಮುದ್ರಣ ಪ್ರಾರಂಭವಾಗಿ ಮುಗಿದು ಇದರ ಪ್ರತಿಗಳಿಗಾಗಿ ಅನೇಕ ದಿನಗಳಿಮದ ಕಾದಿರುವ ಅನೇಕರ ಅಪೇಕ್ಷೆ ಈಡೇರಲಿದೆ. ಇದಕ್ಕಾಗಿ ಸಮಿತಿಯ ಪದಾಧಿಕಾರಿಗಳಿಗೆ ನನ್ನ ನೆನಿಕೆಗಳು. ಈ ಕೃತಿಗೆ ಓದುಗರು ತೋರಿರುವ ಆದರ ನನ್ನನ್ನು ವಿಸ್ಮಿತನನ್ನಾಗಿ ಮಾಡಿದೆ. ಅವರಿಗೂ ನನ್ನ ನಮನಗಳು.

**ಸಿದ್ಧಯ್ಯ ಪುರಾಣಿಕ**
ಡಿ.ಲಿಟ್., ಐ.ಎ.ಎಸ್. (ನಿವೃತ್ತ)

"ಶ್ರೀಗಿರಿ"
೪/೫ಎ, ಆಲಿ ಆಸ್ಕರ್ ರಸ್ತೆ
ಬೆಂಗಳೂರು – ೫೬೦ ೦೫೨
೧೯–೯–೧೯೭೭

## ಮೂರನೆಯ ಮುದ್ರಣಕ್ಕೆ ಮೂರು ಮಾತು

೧೯೬೪ರಲ್ಲಿ ಮೊದಲ ಮುದ್ರಣ ಕಂಡ ಈ ಕೃತಿ ಈಗ ಮೂರನೆಯ ಮುದ್ರಣವನ್ನು ಕಾಣುತ್ತಿರುವುದು ನನಗೆ ಸಂತಸದ ಸಂಗತಿ. ಇಷ್ಟು ವರ್ಷಗಳಿಂದ ಇದಕ್ಕೆ ಸತತವಾಗಿ ಬೇಡಿಕೆಯಿರುವುದು ನನ್ನ ಭಾಗ್ಯ. ಸಕಾಲಕ್ಕೆ ಮರು ಮುದ್ರಣಗಳು ನಡೆದಿದ್ದರೆ ಇನ್ನೂ ಒಂದೆರಡು ಆವೃತ್ತಿಗಳು ಪ್ರಕಟವಾಗುತ್ತಿದ್ದುವೇನೋ. ಆದರೆ ಇದರ ಹಕ್ಕುಗಳನ್ನು ಪಡೆದುಕೊಂಡ 'ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ'ಗೆ ತನ್ನವೇ ಆದ ಕೆಲವು ತೊಡಕುಗಳಿದ್ದಿರಬೇಕು. ಅವುಗಳನ್ನು ನಿವಾರಿಸಿಕೊಂಡು ಈ ಮೂರನೆಯ ಮುದ್ರಣವನ್ನು ಪ್ರಕಟಿಸುತ್ತಿರುವ ಈ ಸಮಿತಿಗೆ ನನ್ನ ಧನ್ಯವಾದಗಳು.

ಈ ಕೃತಿ ಪ್ರಕಟವಾದ ಮೇಲೆ ಶಿವಶರಣರ ಬಗ್ಗೆ ಬಹಳಷ್ಟು ಕೃತಿಗಳು ಬಂದಿವೆ. ಅವುಗಳನ್ನು ಓದಿ ಇದರಲ್ಲಿ ಸರಿಪಡಿಸಿಕೊಳ್ಳಬೇಕಾದ ಅಂಶಗಳು ಇರಬಹುದು. ಆದರೆ ಎರಡನೆಯ ಮುದ್ರಣಕ್ಕೆ ಬರೆದ ನನ್ನ ಬಿನ್ನಹದಲ್ಲಿ ಹೇಳಿರುವಂತೆ ಅವು ಸ್ಥಲ, ಕಾಲಾದಿಗಳ ಬಗ್ಗೆ ಆಗಬಹುದಾದ ಮಾರ್ಪಾಟುಗಳೇ ಹೊರತು ಅವರ ಜೀವನದ ಮುಖ್ಯ ಘಟನೆಗಳಿಗೆ, ಬೋಧೆಗೆ ಸಂಬಂಧಿಸಿದುವಲ್ಲ. ಆ ಕಾರಣದಿಂದ ಇದರ ಪ್ರಯೋಜನ ತಗ್ಗಬೇಕಿಲ್ಲ. ಈಗಲೂ ಇದಕ್ಕೆ ಕುಗ್ಗದ ಬೇಡಿಕೆಯಿರುವುದೇ ಇದಕ್ಕೆ ಸಾಕ್ಷಿ.

'ಏಳು, ಮಲಗಿದೆ ಮೇಕೆ ಶರಣನಾಡೆ !'

**ಸಿದ್ಧಯ್ಯ ಪುರಾಣಿಕ**

ಅನುಬಂಧ – ೫

# ಸಿದ್ಧಯ್ಯ ಪುರಾಣಿಕರ ಜೀವನ ವಿವರ

| ಇಸವಿ | ಘಟನೆಗಳು |
|---|---|
| ೧೯೧೮ | ಜನನ, ೧೮.೬.೧೮೧೮, ಕೊಪ್ಪಳ ಜಿಲ್ಲೆಯ ಯಲಬುರಗಿ ತಾಲ್ಲೂಕ್, ದ್ಯಾಂಪುರದಲ್ಲಿ ತಂದೆ ಕಲ್ಲನಾಥಶಾಸ್ತ್ರಿಯವರು, ತಾಯಿ ದಾನಮ್ಮನವರು. |
| ೧೯೩೨ | 'ಬೆಳಗು' ಕವನ ರಚನೆ |
| ೧೯೩೭ | ಹರ್ಡೇಕರ ಮಂಜಪ್ಪನವರೊಂದಿಗೆ ಅಲಮಟ್ಟಿಯಲ್ಲಿ ವಾಸ |
| ೧೯೪೩ | ತಹಸೀಲ್ದಾರ ತರಬೇತಿ, ನಾಂದೇಡ, ಹೈದರಾಬಾದ್ |
| ೧೯೪೪ | (೧೧.೫.೧೯೪೪)ರಲ್ಲಿ ವಿವಾಹ, ಗಿರಿಜಾದೇವಿಯ ವರೊಡನೆ |
| ೧೯೪೪ | ಅಸಿಸ್ಟೆಂಟ್ ಕಲೆಕ್ಟರ್, ನಾಂದೇಡ |
| ೧೯೪೫ | ಅಸಿಸ್ಟೆಂಟ್ ಕಲೆಕ್ಟರ್, ಲ್ಯಾಂಡ್ ರಿಕಾರ್ಡ್ಸ್ ವಿಭಾಗ, ಗುಲಬರ್ಗಾ |
| ೧೯೪೮ | ಅಸಿಸ್ಟೆಂಟ್ ಕಮಿಷನರ್ (ಜಾಗೀರಾತ್) |
| ೧೯೫೧ | ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ್ ಸಂಸ್ಥಾನ |
| ೧೯೫೨ | ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ |
| ೧೯೫೩ | ಕೃಷಿ ಯೋಜನೆ ಹಾಗು ಪೂರೈಕೆ ಇಲಾಖೆಯ ಸಚಿವರ, ಕಾರ್ಯದರ್ಶಿ |
| ೧೯೫೫ | ಡೆಪ್ಯೂಟಿ ಕಲೆಕ್ಟರ್, ತಾಂಡೂರ |
| ೧೯೫೭ | ಡೆಪ್ಯೂಟಿ ಕಲೆಕ್ಟರ್, ಯಾದಗಿರಿ |
| ೧೯೫೮ | ಭಾರತೀಯ ನಾಗರಿಕ ಸೇವೆ (ಐ.ಎ.ಎಸ್.) |

೧೯೬೦ ವಿದ್ಯಾಇಲಾಕೆಯ ಡೆಪ್ಯೂಟಿ ಸೆಕ್ರೆಟರಿ

೧೯೬೨ ನಿರ್ದೇಶಕರು, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

೧೯೬೪ ಅರ್ಥಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿ

೧೯೬೫ ಡೆಪ್ಯೂಟಿ ಕಮಿಷನರ್, ಮಡಿಕೇರಿ

೧೯೬೭ ಸಾರಿಗೆ ಕಮಿಷನರ್, ಬೆಂಗಳೂರು

೧೯೭೦ ಡೆಪ್ಯೂಟಿ ಕಮಿಷನರ್, ಬೆಳಗಾವಿ

೧೯೭೨ ಲೇಬರ್ ಕಮಿಷನರ್, ಬೆಂಗಳೂರು

೧೯೭೪ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೭೬ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ

೧೯೭೬ ನಿವೃತ್ತಿ ಹಾಗೂ ವಿಶ್ರಾಂತಿ ಜೀವನ

೧೯೭೮ 'ವಚನೋದ್ಯಾನ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಪುಸ್ತಕ ಪುರಸ್ಕಾರ

೧೯೭೯ ಬಸವ ಸಮಿತಿಯ ಸಂಶೋಧನ ಮತ್ತು ಪ್ರಕಟಣ ವಿಭಾಗದ ನಿರ್ದೇಶಕ; ಬಸವ ಪಥ (ಕನ್ನಡ ಮಾಸಿಕ), ಬಸವ ಜರ್ನಲ್ (ಇಂಗ್ಲೀಷ್ ತ್ರೈಮಾಸಿಕ) ಪತ್ರಿಕೆಗಳ ಪ್ರಧಾನ ಸಂಪಾದಕ.

೧೯೮೦ ಬಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು ಕಲ್ಕತ್ತಾ) 'ವಚನೋದ್ಯಾನ' ಕೃತಿಗೆ

೧೯೮೧ ಮಾಳವಾಡ ಪ್ರಶಸ್ತಿ (ಕರ್ನಾಟಕ ವಿಶ್ವವಿದ್ಯಾಲಯ)

೧೯೮೧ ರಾಜ್ಯಮಟ್ಟದ ಅಭಿನಂದನ ಸಮಿತಿಯ ಸತ್ಕಾರ, ಅಭಿನಂದನ ಗ್ರಂಥ, ನಿಧಿ ಸಮರ್ಪಣೆ

೧೯೮೩ 'ವಚನ ನಂದನ' ಪ್ರಕಟಣೆ

೧೯೮೫ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನ (ಧಾರವಾಡ)ದ ಅಧ್ಯಕ್ಷರು

೧೯೮೭ ಗುಲ್ಬರ್ಗಾದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ೫೮ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು.

೧೯೯೪ 'ವಚನ ಬ್ರಹ್ಮ' ಬಿರುದು–ಕಲಾಜ್ಯೋಗಿ ಸ್ನೇಹಿತರ ಸಂಘ ಹಾಗೂ ಸರ್ವಜ್ಞ ಕಲಾನಿಕೇತನ, ಬೆಂಗಳೂರು

೧೯೯೪ ಮರಣ (೫.೯.೧೯೯೪)

■

## ಅನುಬಂಧ – ೬

# ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ

**ಕವನ ಸಂಕಲನಗಳು**

| | | | |
|---|---|---|---|
| ೧. | ಜಲಪಾತ | ಸಂಗಡಿಗರ ಸಮಿತಿ, ರಾಯಚೂರು | ೧೯೫೩, ೬೪ |
| ೨. | ಕರುಣಾಶ್ರಾಣವ | ಸಹಜೀವನ ಪ್ರಕಾಶನ, ಕಾಚೀಗೂಡಾ ಹೈದರಾಬಾದ್ ದಕ್ಷಿಣ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಕೃಷ್ಣಮೂರ್ತಿ ಪುರಂ, ಮೈಸೂರು–೪ | ೧೯೫೫, ೬೭ |
| ೩. | ಮಾನಸ ಸರೋವರ | ಶಾರದಾ ಪ್ರಕಟನಾಲಯ, ಬೆಂಗಳೂರು | ೧೯೫೯ |
| ೪. | ಕಲ್ಲೋಲ ಮಾಲೆ | ತಾರಾಗ್ರಂಥ ಪ್ರಕಾಶನ, ಧಾರವಾಡ | ೧೯೬೮ |
| ೫. | ಮೊದಲು ಮಾನವನಾಗು | ತಾರಾಗ್ರಂಥ ಪ್ರಕಾಶನ, ಧಾರವಾಡ | ೧೯೬೯ |
| ೬. | ಚರಗ | ಶ್ರೀಗಿರಿ ಪ್ರಕಾಶನ, ಕುಡಿ–೩ | ೧೯೮೭ |
| ೭. | ಹಾಲ್ದೆನೆ | ಅನುಪಮ ಪ್ರಕಾಶನ, ಅಥಣಿ | ೧೯೯೦ |
| ೮. | ಮರುಳಸಿದ್ಧನ ಕಂತೆ | ಶ್ರೀಗಿರಿ ಪ್ರಕಾಶನ ಬೆಂಗಳೂರು, ಕುಡಿ–೭ | ೧೯೯೧ ೧೯೭೭ |
| ೯. | ಸಮಗ್ರ ಕಾವ್ಯ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೨೦೦೮ |

**ವಚನ ಸಂಗ್ರಹಗಳು:**

| | | |
|---|---|---|
| ೧. ವಚನೋದ್ಯಾನ | ಶ್ರೀಗಿರ ಪ್ರಕಾಶನ, ಬೆಂಗಳೂರು | ೧೯೭೭, ೨೦೦೦<br>೨೦೧೦, ೨೦೧೮ |
| ೨. ವಚನ ನಂದನ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೮೩, ೨೦೦೦ |
| ೩. ವಚನಾರಾಮ | ಶ್ರೀ ಅನ್ನದಾನ ವಿಜಯ<br>ವಿದ್ಯಾ ಪ್ರಸಾರಕ ಸಮಿತಿ,<br>ನರೇಗಲ್ಲ | ೧೯೯೨ |
| ೪. ಸಮಗ್ರ ವಚನ | ಶ್ರೀಗಿರಿ ಪ್ರಕಾಶನ,<br>ಬೆಂಗಳೂರು | ೨೦೦೯ |

**ನಾಟಕಗಳು:**

| | | |
|---|---|---|
| ೧. ಆತ್ಮಾರ್ಪಣ | ಹೈದರಾಬಾದು ವೀರಶೈವ<br>ತರುಣ ಸಂಘ | ೧೯೪೨ |
| ೨. ಭಾರತ ವೀರ | ನರೇಶ್ ಅಂಡ್ ಕಂಪನಿ,<br>ಮೌಂಟ್ ಜಾಯ್ ರಸ್ತೆ,<br>ಬೆಂಗಳೂರು–೧೯ | ೧೯೬೩<br>೬೪, ೭೭ |
| ೩. ರಜತ ರೇಖೆ | ಶ್ರೀ ಎಂ. ಬಿ. ತರುಮರಿ<br>ಕಾರ್ಯದರ್ಶಿ,<br>ಕರ್ನಾಟಕ ಸಹಕಾರಿ<br>ಸಾಹಿತ್ಯ ಸಂಘ ಲಿಮಿಟೆಡ್,<br>ಧಾರವಾಡ | ೧೯೬೨<br>೬೫ |
| ೪. ಭಗ್ನ ನೂಪುರ | ಕರ್ನಾಟಕ ಟ್ರೇಡಿಂಗ್<br>ಏಜನ್ಸೀಸ್,<br>ಬನಶಂಕರಿ ಎರಡನೇ ಹಂತ,<br>ಬೆಂಗಳೂರು–೭೦ | ೧೯೮೪ |
| ೫. ಸಮಗ್ರ ನಾಟಕಗಳು | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೨೦೧೦ |

**ಕಥಾ ಸಂಕಲನಗಳು:**

| | | | |
|---|---|---|---|
| ೧. | ಕಥಾಮಂಜರಿ | ಸತ್ಯಾಶ್ರಯ ಪ್ರಕಾಶನ ಮಂದಿರ ಹೈದ್ರಾಬಾದ್ | ೧೯೫೧ |
| ೨. | ತುಷಾರ ಹಾರ | ಶ್ರೀ ಗಿರಿ ಪ್ರಕಾಶನ, ಬೆಂ. | ೧೯೮೭ |

**ಕಾದಂಬರಿ:**

| | | | |
|---|---|---|---|
| ೧. | ತ್ರಿಭುವನ ಮಲ್ಲ | ಗುರು ಕುಮಾರಿ ಪ್ರಕಾಶನ, ೨೨೨೪ ಬಸವೇಶ್ವರ, ನಾಲ್ಕನೇ ಅಡ್ಡರಸ್ತೆ ಮೈಸೂರು–೫೭೦ ೦೦೪ | ೧೯೬೪ ೧೯೮೧ ೧೯೮೫ |

**ಮಕ್ಕಳ ಸಾಹಿತ್ಯ:**

| | | | |
|---|---|---|---|
| ೧. | ತುಪ್ಪಾ ರೋಟ್ಟಿ ಗೇ ಗೇಗೇ | ಕರ್ನಾಟಕ ಸಹಕಾರಿ ಪ್ರಕಾಶನ ಮಂಡಿರ | ೧೯೬೪, ೭೩ |
| ೨. | ಗಿಲ್ ಗಿಲ್ ಗಿಲಗಚ್ಚಿ | ಭಾರತೀ ಸಾಹಿಯ ಭಂಡಾರ, ವಿಜಾಪೂರ | ೧೯೭೮ |
| ೩. | ತಿರುಗೆಲೆತಿರುಗೆಲೆ ತಿರುಗು ಯ್ಯಾಲೆ | ಭಾರತೀ ಸಾಹಿತ್ಯ ಭಂಡಾರ, ವಿಜಾಪೂರ | ೧೯೮೧, ೧೯೮೯ |
| ೪. | ಬಣ್ಣ ಬಣ್ಣದ ಓಕುಳಿ | ನಿರ್ಮಲ ಪ್ರಕಾಶನ, ರಾಮಲಕ್ಷ್ಮಣ ನಿಲಯ, ಕೆ.ಆರ್. ಬಡಾವಣೆ, ತಿಪಟೂರು | ೧೯೮೭ |
| ೫. | ಭಾರತವೆಲಕೆ ಬಾವುಟವೊಂದೇ | ಶ್ರೀ ಗಿರಿ ಪ್ರಕಾಶನ, ಬೆಂಗಳೂರು, ಕುಡಿ–೭ | ೧೯೯೧ |
| ೬. | ಸಮಗ್ರ ಮಕ್ಕಳ ಸಾಹಿತ್ಯ | ಶ್ರೀಗಿರಿ ಪ್ರಕಾಶನ ಬೆಂಗಳೂರು | ೨೦೧೬ |
| ೭. | ಮಕ್ಕಳ ಹಾಡುಗಳು | ಹೇಮಂತ ಸಾಹಿತ್ಯ ಬೆಂಗಳೂರು | ೨೦೧೮ |

**ಮಕ್ಕಳ ನಾಟಕ:**

| | | | |
|---|---|---|---|
| ೧. | ನ್ಯಾಯ ನಿರ್ಣಯ | ಭಾರತಿಚ ವ ಸಾಹಿತ್ಯ ಭಂಡಾರ, ವಿಜಾಪೂರ | ೧೯೮೬ |

**ಮಕ್ಕಳ ಪ್ರವಾಸ ಸಾಹಿತ್ಯ**

| | | | |
|---|---|---|---|
| ೧. | ಮಕ್ಕಳ ಲೋಕ ಸಂಚಾರ | ಭಾರತೀ ಸಾಹಿತ್ಯ ಭಂಡಾರೆ ವಿಜಾಪುರ | ೧೯೮೯ |

**ಜೀವನ ಚರಿತೆಗಳು:**

| | | | |
|---|---|---|---|
| ೧. | ಶರಣ ಚರಿತಾಮೃತ | ವಯಸ್ಕರ ಶಿಕ್ಷಣ ಸಮಿತಿ, ಮೈಸುರು | ೧೯೬೪<br>೭೭, ೯೨ |
| | | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ೨೦೧೦<br>೨೦೧೩ |
| ೨. | ಸಿದ್ಧರಾಮ | ಭಾರತ–ಭಾರತಿ ಪುಸ್ತಕ ಸಂಪದ, ಬೆಂಗಳೂರು–೧೯ | ೧೯೭೪ |
| ೩. | ಬಸವಣ್ಣನವರ ಜೀವನ ಹಾಗೂ ಸಂದೇಶ | ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೭ |
| ೪. | ನಜೀರ್ ಅಕಬರಾಬಾದಿ | ಸಾಹಿತ್ಯ ಆಕಾಡೆಮಿ, ನವದೆಹಲಿ | ೧೯೭೮ |
| ೫. | ಹರ್ಡೇಕರ ಮಂಜಪ್ಪ | ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಗದಗ | ೧೯೭೮ |
| ೬. | ಮಿರ್ಜಾ ಗಾಲಿಬ್ | ಭಾರತ–ಭಾರತಿ ಪುಸ್ತಕ ಸಂಪದ, ಬೆಂಗಳೂರು–೧೯ | ೧೯೭೯ |
| ೭. | ಮಹಾದೇವಿ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೮೨<br>೨೦೦೩ |
| ೮. | ಅಲ್ಲಮ ಪ್ರಭು | ಬಸವ ಸಮಿತಿ, ಬೆಂಗಳೂರು–೧ | ೧೯೮೯ |

**ಸಂಪಾದಿತ ಕೃತಿಗಳು:**

| | | | |
|---|---|---|---|
| ೧. | ಸುಬೋಧ ಸಾರ | | ೧೯೩೬,೫೧ |
| ೨. | ಶ್ರೀಕಾರ | ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ್ | ೧೯೫೪ |
| ೩. | ಪ್ರಬಂಧ ಮಾಲೆ | ಕರ್ನಾಟಕ ಸಾಹಿತ್ಯ ಮಂದಿರ ಹೈದರಾಬಾದ್ | ೧೯೫೪ |
| ೪. | ಪದ್ಯ ರತ್ನಾಕರ | | |
| ೫. | ಮಹಾತ್ಮ ಕನಕದಾಸರ ಪ್ರಶಸ್ತಿ | ರಾಜ್ಯಸಮಿತಿ, ಶ್ರೀ ಕನಕದಾಸರ ನಾಲ್ಕನೇ ಶತಮಾನೋತ್ಸವ, ಬೆಂಗಳೂರು | ೧೯೬೫ |
| ೬. | ಶರಣ ಪ್ರಸಾವ | ನೃಪತುಂಗ ಪ್ರಕಾಶನ, ಕಲಬುರ್ಗಿ | ೧೯೬೯ |
| ೭. | ಸಿದ್ಧಗಂಗಾಶ್ರೀ | ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ಡಾ. ಶಿವಕುಮಾರ ಸ್ವಾಮಿಗಳ ಅಭಿನಂದನ ಗ್ರಂಥ ಸಮಿತಿ | ೧೯೮೧ |
| ೮. | ಮಣಿಹ | ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ (ರಿ) ೫೪ 'ಅರವಿಂದ' ೩ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ, ಬೆಂಗಳೂರು | ೧೯೮೨ |
| ೯. | ಬಸವದರ್ಶನ (ಹಿಂದಿ) | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು | ೧೯೮೩ |
| ೧೦ | ಬಸವ ಮತ್ತು ದಲಿತೋದಯ | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ ಬೆಂಗಳೂರು. | ೧೯೮೩ |
| ೧೧ | ಬಸವ ಮತ್ತು ವಿಚಾರವಾದ | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ ಬೆಂಗಳೂರು | ೧೯೮೪ |
| ೧೨ | ಮಳೆಯರಾಜ ಚಾರಿತ್ರ್ಯ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೮೯ |

**ಇತರ ಕೃತಿಗಳು:**

| | | | |
|---|---|---|---|
| ೧. | ವಿಕಾಸವಾಣಿ | ಸಹಜೀವನ ಪ್ರಕಾಶನ, ಕಾಚಿಗೂಡಾ, ಹೈದರಾಬಾದ್ | ೧೯೫೫ |
| ೨. | ಗ್ರಾಮ ಸ್ವರಾಜ್ಯ | ಸಹ್ಯಾದ್ರಿ ಪ್ರಕಾಶನ | ೧೯೮೨ |
| ೩. | ಚಿಂತನ ಲಹರಿ | ಶ್ರೀಗಿರಿ ಪ್ರಕಾಶನ, ಬೆಂಗಳೂರು, ಕುಡಿ–೫ | ೧೯೮೯ |
| ೪. | ಶರಣಸರಣಿ | ತರಳಬಾಳು ಪ್ರಕಾಶನ, ಸಿರಿಗೆರೆ | ೧೯೯೨ |

**ಆಯ್ದ ಕವನಗಳು**

| | | | |
|---|---|---|---|
| ೧. | ಕಾವ್ಯಾನಂದರ ಆಯ್ದ ಕವನಗಳು | ನರೇಶ್ ಅಂಡ್ ಕಂಪನಿ, ಹನುಮಂತನಗರ, ಬೆಂಗಳೂರು | ೧೯೮೨ |
| ೨. | ಆಯ್ದ ಕವನಗಳು | ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು) | ೧೯೮೨ |
| ೩. | ಕಾವ್ಯಾನಂದರ ಕವಿತೆಗಳು | ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು | ೨೦೦೧ |

■■

## ಡಾ. ಸಿದ್ಧಯ್ಯ ಪುರಾಣಿಕರ ಬಗ್ಗೆ ಪ್ರಕಟಿತ ಕೃತಿಗಳು

| | | |
|---|---|---|
| ೧. ಕಾವ್ಯಶ್ರೀ ಕಾವ್ಯಾನಂದ | ಸತ್ಯಾನಂದ, ಮೇಘಮಿತ್ರ ಸಂಭಾವನಾ ಗ್ರಂಥ ಕಾವ್ಯಾನಂದ ಸಮಿತಿ ಬಿಜಾಪೂರ | ೧೯೬೯ |
| ೨. ಜೀವನ ವಿಕಾಸ ವಿಶೇಷ ಸಂಚಿಕೆ | ಸಂ. ಸಹ ನಿರ್ದೇಶಕರು, ಶಿಕ್ಷಣ ಇಲಾಖೆ, ಕಲಬುರ್ಗಿ, ಸಂಪುಟ ೯ ಸಂಚಿಕೆ ೮–೯ | ೧೯೭೩ |
| ೩. ಕಾವ್ಯಾನಂದ | ಮಿರ್ಜಿ ಅಣ್ಣಾರಾಯ, ಕೃಷ್ಣಕೊಲ್ಲಾರ ಕುಲಕರ್ಣಿ, ಚಂದ್ರಗಂಗಾ ಜ್ಞಾನಪೀಠ, ಶೇಡಬಾಳ | ೧೯೭೩ |
| ೪. ಕಾವ್ಯಾನಂದ | ಸಾ.ಶಿ.ಮರುಳಯ್ಯ, ಸಿದ್ಧಯ್ಯ ಪುರಾಣಿಕರ ಅಭಿನಂದನ ಸಮಿತಿ, ಚಾಮರಾಜಪೇಟೆ, ಬೆಂಗಳೂರು–೧೮ | ೧೯೮೧ |
| ೫. ಸಹೃದಯ | ಟಿ.ಆರ್.ಮಹದೇವಯ್ಯ, ಪುರಾಣಿಕರ ಅಭಿನಂದನಾ ಸಮಿತಿ ಬೆಂಗಳೂರು–೧೮ | ೧೯೮೧ |
| ೬. ಸಾಹಿತಿಗಳ ಸಂಗದಲ್ಲಿ | ಲೇ: ದೇಜಗೌ | ೧೯೮೧ |
| ೭. ಕಾವ್ಯಾನಂದರ ಕಾವ್ಯ | ವೃಷಬೇಂದ್ರ ಅರ್ಕಸಾಲಿ, ಸಂಕ್ರಮಣ ಪ್ರಕಾಶನ, ಧಾರವಾಡ | ೧೯೮೭ |
| ೮. ಸಿದ್ಧಯ್ಯ ಪುರಾಣಿಕ | ಜಿ.ಎಸ್.ಸಿದ್ಧಲಿಂಗಯ್ಯ, ವೀರಶೈವ ಅಧ್ಯಯನ ಸಂಸ್ಥೆ, ಗದಗ | ೧೯೯೫ ೨೦೧೮ |

| | | | |
|---|---|---|---|
| ೯. | ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳು | ಎನ್.ಬಿ. ಬುಳ್ಳಾ, ಜ್ಯೋತಿಶ್ರೀ ಪ್ರಕಾಶನ, ಮಾಣಿಕೇಶ್ವರಿ ನಗರ, ಗುಲಬರ್ಗಾ | ೧೯೯೯ |
| ೧೦. | ಕಾವ್ಯಾನಂದ | ಡಾ. ಚೆನ್ನಬಸವ ಹಿರೇಮಠ ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ–೫೮೫೧೦೬ | ೨೦೦೫ |
| ೧೧. | ಕಾವ್ಯಾನಂದರ ಬದುಕು ಮತ್ತು ಕಾವ್ಯ | ಡಾ. ಪ್ರಕಾಶಗಿರಿ ಮಲ್ಲನವರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು | ೨೦೧೮ |

■■